Regd. No. M 4342 SADHVI, MYSORE 10—4—1953

ಕೊರಿಯಾ ಯುದ್ಧದಲ್ಲಿ

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಮೈಸೂರು ಪೇಟೆ ಧಾರಣೆ

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ಸಾಧ್ವಿ

ರಾಜಪ್ರಮುಖರ ಅಸ್ಥಿ ಮೇಲೆ ತೆರಿಗೆಗಾಗಿ ಶಾಸನ

KARNATAKA STATE ARCHIVES

ಅಲಿಕಲ್ಲು ರಾಶಿ !

Edited Printed and Published by A. R. Nagaraj... Press, ... Mysore

Regd No M 4342 SADHVI, MYSORE 10-4-1953

KARNATAKA STATE ARCHIVES

ಸಾಧ್ವಿ

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

ಬಳ್ಳಾರಿ ತಾಲ್ಲೂಕು

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಮೈಸೂರು ಪೇಟೆ ಧಾರಣೆ

ಅತಿ ರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ಆಲಿಕಲ್ಲು ರಾಶಿ !

Edited Printed and Published by ... at Sadhvi Press, ... Road Mysore

Regd No M 4342

SADHVI, MYSORE

10—4—1953

ಸಾಧ್ವಿ

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಮೈಸೂರು ಪೇಟೆ ಧಾರಣೆ

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

KARNATAKA STATE ARCHIVES

ಆಲಿಕಲ್ಲು ರಾಶಿ !

Regd No M 4342 SADHVI MYSORE 10—4—1953

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಮೈಸೂರು ಪೇಟೆ ಧಾರಣೆ

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ಸಾಧ್ವಿ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

KARNATAKA
STATE
ARCHIVES

ಆಲಿಕಲ್ಲು ರಾಶಿ !

Printed and Pub... Sadhvi Press, D Subb... Road, Mysore

ROLL 9
SADHVI PAPERS
CONT'D.

ಸಾಧ್ವಿ

ಸಂಪುಟ ೧೧] ಶನಿವಾರ ೧೧-೪-೧೯೫೩ [ಸಂಚಿಕೆ ೨೦೭

ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರು ನಗರ ... ನಗರದಿಂದ ಕೊಡಗಿಗೆ ರೈಲು ರಸ್ತೆ ... ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರ ಶಿಫಾರಸು ... ಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಶ್ರೀ ಡಿ. ದೇವರಾಜ ಅರಸಿನವರು ... ಮೈಸೂರು ಮತ್ತು ಕೊಡಗುಗಳ ನಡುವೆ ಜನ ಸಂಚಾರವು ಹೆಚ್ಚಿರುವುದರಿಂದ ರೈಲು ರಸ್ತೆಯ ಅವಶ್ಯಕತೆ ...

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

೧೯೫೧ನೇ ಜುಲೈನಲ್ಲಿ ಕೊರಿಯಾ ಶಾಂತಿ ಮಾತುಕತೆಯು ಪ್ರಾರಂಭವಾ... ಎರಡು ವರ್ಷಗಳಲ್ಲಿ ... ಜನರ ಸಾವುನೋವಿಗೆ ಈಡಾಗಿರುವರೆಂದು ವರದಿಯಾಗಿದೆ.

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಮದರಾಸಿನ ಮಾಜಿ ರೆವಿನ್ಯೂ ಮಂತ್ರಿ ಶ್ರೀ ... ಸೀತಾರಾಮರೆಡ್ಡಿ ...

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಅವರ ಮಂತ್ರಿಮಂಡಲದ ಬಹುಮಂದಿ ಸದಸ್ಯರು ಅಂಗ ಸಾಧನೆ, ಬಂದೂಕವನ್ನು ಹಾರಿಸುವುದು, ಮತ್ತು ಗ್ರೆನೇಡು ಮತ್ತು ಸಿಡಿತದ ವಸ್ತುಗಳನ್ನು ಪ್ರಯೋಗಿಸುವುದು ಇವೇ ಮುಂತಾದ ಸೈನ್ಯ ಶಿಕ್ಷಣವನ್ನು ಪಡೆಯುತ್ತಿರುವರು.

ವಸಂತ ಸಾಹಿತ್ಯೋತ್ಸವ

ಮೈಸೂರು ನಗರದ ಕರ್ನಾಟಕ ಸಂಘದ ... ತಿಂಗಳು ...

ಮೈಸೂರು ಪೇಟೆ ಧಾರಣೆ

ಪದಾರ್ಥ		
ಕಡಲೆಕಾಯಿ	[illegible]	[illegible]
ಎಳ್ಳು	[illegible]	
ಹರಳು	[illegible]	[illegible]
ಹುಚ್ಚೆಳ್ಳು	[illegible]	
ತೊಗರಿಬೇಳೆ	[illegible]	[illegible]
ಹುರುಳಿ	[illegible]	
ಹೆಸರು	[illegible]	
ಅವರೆ	[illegible]	
ಕಡಲೆ	[illegible]	[illegible]
ಉದ್ದು	[illegible]	
ಮೆಣಸಿನ		
ಕಾಯಿ	[illegible]	
ಕೊಬ್ಬರಿ	[illegible]	[illegible]
ತೆಂಗಿನಕಾಯಿ	[illegible]	[illegible]
ಬೆಲ್ಲ	[illegible]	
ಅಂಗಿಸಾಂಬು		

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ಐವತ್ತು ಸಾವಿರ ಜನರ ಉಪಸ್ಥಿತಿ

ಶೃಂಗೇರಿ ೧೧

... ದಿನಗಳಿಂದಲೂ ನಡೆಯುತ್ತಿದ್ದ ಅತಿರುದ್ರ ಮಹಾಯಾಗದ ಪೂರ್ಣಾಹುತಿ ಸಮಾರಂಭವು ನೆನ್ನೆ ಮಧ್ಯಾಹ್ನ ಎರಡೂವರೆ ಗಂಟೆಗೆ ಅತ್ಯಂತ ವೈಭವದಿಂದ ನೆರವೇರಿತು. ಕಿರಿಯ ಗುರುಗಳಾದ ಶ್ರೀ ವಿದ್ಯಾ ತೀರ್ಥ ಪ್ರಸನ್ನ ಸ್ವಾಮಿಗಳು ... ಈ ಕಾರ್ಯವನ್ನು ನೆರವೇರಿಸಿದರು. ಇವರಲ್ಲದೆ ಶ್ರೀ ಶ್ರೀಧರ ಸ್ವಾಮಿಗಳೂ, ... ಸ್ವಾಮಿಗಳೂ ... ಅನೇಕ ಸನ್ಯಾಸಿಗಳೂ ಬಂದಿದ್ದರು. ಸುಮಾರು ... ಜನ ಆಸ್ತಿಕರು ...

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ಜೂನ್ ತಿಂಗಳಲ್ಲಿ ಪರಿಶೀಲನೆ

ಸ್ವಂ ಸು. ಪ್ರೋ.] ಬೆಂಗಳೂರು ೧೧

ಈ ದಿನ ಕಿರಿಯ ಶಾಸನ ಸಭೆಯಲ್ಲಿ ... ಮೈಸೂರು ನಗರ ... ಆಸ್ತಿ ತೆರಿಗೆ ಮಸೂದೆಯನ್ನು ಮಂಡಿಸಿದರು. ... ಜೂನ್ ಅಧಿವೇಶನದಲ್ಲಿ ಅದನ್ನು ಪರಿಶೀಲಿಸಬಹುದೆಂದು ... ಸಭೆಯು ಮಸೂದೆಯನ್ನು ... ಒಪ್ಪಿದರು.

ಮೈಸೂರು ಮತ್ತು ಬೆಂಗಳೂರು ... ಶ್ರೀರಂಗ ಪಟ್ಟಣ ... ಆಸ್ತಿಗಳ ಮೇಲೆ ತೆರಿಗೆ ವಿಧಿಸುವುದು ಮಸೂದೆಯಲ್ಲಿ ಸೇರಿದ್ದಿತು.

... ಶಾಸನ ಸಭೆಯ ... ಆ ಸಭೆಯು ಮಸೂದೆಯನ್ನು ಒಪ್ಪಿಕೊಂಡೂ ಈ ಸಭೆಯೂ ಒಪ್ಪಬೇಕೆಂದೂ ತಿಳಿಸಿದರು.

ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ... ಕೇಂದ್ರ ಸರ್ಕಾರ ಮತ್ತು ಮಹಾರಾಜರಿಗೆ ... ಶಾಸನ ಸಭಾಧಿವೇಶನಕ್ಕೆ ಹೋಗಿ ...

ಹರೀಕ್ಷೆಯಲ್ಲಿ ಕಾಪಿ ಮಾಡಿದುದು ಪತ್ತೆ

ತುಂಗಾ ನದಿಯಲ್ಲಿ ಬಾಲಕನ ಮರಣ

ಶೃಂಗೇರಿ ೧೧

ಇಲ್ಲಿ ರುದ್ರ ಹೋಮ ಮತ್ತು ಚಂಡಿ ಹೋಮ ... ಕಾರ್ಯಗಳನ್ನು ... ಶ್ರೀ ಎಚ್. ಸುಂದರಂ ಅಯ್ಯರ್‌ರವರ ... ಶ್ರೀ ಶ್ರೀಕಂಠಯ್ಯರ್‌ರವರ ... ವರ್ಷ ವಯಸ್ಸಿನ ಕುಮಾರ ... ತುಂಗಾ ನದಿಯಲ್ಲಿ ... ಮುಳುಗುತ್ತಿದ್ದಂತೆಯೇ ... ಮೃತನಾದ ಬಾಲಕನ ಶರೀರವು ... ದೊರಕಿತು.

೧೫ ಅಡಿ ಎತ್ತರದ ಆಲಿಕಲ್ಲು ರಾಶಿ!

ಮದನಪಲ್ಲಿಯ ಬಳಿ ... ಹಳ್ಳಿಯಲ್ಲಿ ... ಭಾರಿ ಆಲಿಕಲ್ಲಿನ ಮಳೆಯಾಯಿತು ... ೧೫ ಅಡಿ ಎತ್ತರದ ...

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿ ... ಲಂಡನ್ನಿನಲ್ಲಿ ನಡೆಯುವ ... ಭೇಟಿಯಾಗುವರೆಂದು ವರದಿಯಾಗಿದೆ.

ಮೈಸೂರು ಶಾಸನ ಸಭೆಗಳಿಗೆ ಹೈಕೋರ್ಟಿನ ಮೇಲೆ ಶಕ್ತಿ ಇಲ್ಲ

ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

ಮಂಗಳೂರು ... ಕೋಳಿಕೋಡ್ ...

ಮೋತೀಲಾಲ್

ಮೈಸೂರು

ತಾ॥ 10 4 53 ರಿಂದ

ವಾಲ್ಮೀಕಿ

ವಾ ಕ

ಪರಂದಪಲ್ಲಿ

(ಹೂವಿನ ತೋಟ)

ಪಣಕ್ಕಾರಿ

ಪ್ರಭಾತ ★ ... ಪ್ರದರ್ಶನ ...

ತೀನ್ ಬತ್ತಿ ಚಾರ್ ರಾಸ್ತಾ

10 4 53

+ ದಿನಗಳ ಮಾತ್ರ

Edited Printed and Published by V. R. Nagaraja at Sadhvi Press, D Subbaiah Road, Mysore

ROLL 9

SADHVI PAPERS

CONT.

ಸಾಧ್ವಿ

ಪ್ರಭುಗಳ ಆಸ್ತಿ ತೆರಿಗೆ ಮಸೂದೆಗೆ ಮುಂದಕ್ಕೆ

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಮೈಸೂರು ಪೇಟೆ ಧಾರಣೆ

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ತುಂಗಾ ನದಿಯಲ್ಲಿ ಬಾಲಕನ ಮರಣ

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

ಗಣ ಅದಿ ಎತ್ತರದ ಆಲಿಕಲ್ಲು ರಾಶಿ !

ಪರೀಕ್ಷೆಯಲ್ಲಿ ಕಾಪಿ ಮಾಡಿದುದು ಪತ್ತೆ

ಮೋತೀಲಾಲ

ತಾ|| 10 4 53 ರಿಂದ

ಪಣಕ್ಕಾರಿ

Edited, Printed and Published by A R Nagarajan at Sadhvi Press, D. Subbiah Road, Mysore.

ROLL 9
SADHVI PAPERS
CONT.

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು —

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರು ನಗರ ಅಥವಾ ಕೃಷ್ಣರಾಜ ನಗರದಿಂದ ಕೊಡಗಿಗೆ ರೈಲು ರಸ್ತೆ ಹಾಕುವಂತೆ ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರು ಶಿಫಾರಸು ಮಾಡಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ...

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

... ಲಕ್ಷ ಜನರ ಸಾವುನೋವು ಉಂಟಾಗಿರುವದಾಗಿ ವರದಿಯಾಗಿದೆ

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಮದರಾಸಿನ ಮಾಜಿ ರೆವಿನ್ಯೂ ಮಂತ್ರಿ ಶ್ರೀ ... ಬಳ್ಳಾರಿ ...

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಅವರ ಮಂತ್ರಿಮಂಡಲದ ಬಹುಮಂದಿ ಸದಸ್ಯರು ಬಂದೂಕವನ್ನು ಹಾರಿಸುವುದು ಮತ್ತು ಗ್ರೆನೇಡು ಮತ್ತು ಸಿಡಿತದ ವಸ್ತುಗಳ ... ಪಡೆಯುತ್ತಿರುವರು

ವಸಂತ ಸಾಹಿತ್ಯೋತ್ಸವ

ಮೈಸೂರ ... ಕರ್ನಾಟಕ ಸಂಘದ ...

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಅಚ್ಚೆಳ್ಳು	[illegible]	[illegible]
ಎಳ್ಳು	[illegible]	
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	
ಶೇಂಗೇಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	
ಅವರೆ	[illegible]	
ಹಲಸಂದೆ	[illegible]	[illegible]
ಉದ್ದು	[illegible]	
ಮೆಣಸಿನ ಕಾಯಿ ಮುಣಕ್ಕೆ	[illegible]	
ಹುಣಸೇಹಣ್ಣು	[illegible]	[illegible]
ಹೀರೇಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

... ಇಂಡೋಚೀನಾದ ... ಫ್ರೆಂಚ್ ...

ಅತಿ ರುದ್ರ ಹೋಮದ ಪೂರ್ಣಾಹುತಿ ಸಮಾರಂಭ

... ಅಲಿಕಲ್ಲಿನಿಂದ ಕಾದಿದ ಮಳೆ

ಶೃಂಗೇರಿ ೧೧

... ನಡೆಯುತ್ತಿದ್ದ ಅತಿರುದ್ರ ಮಹಾ ಯಾಗದ ಪೂರ್ಣಾಹುತಿ ಸಮಾರಂಭವು ನೆನ್ನೆ ಮಧ್ಯಾಹ್ನ ಎರಡೂಮುಕ್ಕಾಲು ಗಂಟೆಗೆ ಅತ್ಯಂತ ವೈಭವದಿಂದ ನೆರವೇರಿತು. ಕಿರಿಯ ಗುರುಗಳಾದ ಶ್ರೀ ವಿದ್ಯಾ ತೀರ್ಥ ಪ್ರಸನ್ನ ಸ್ವಾಮಿಗಳು ಸ್ವತಃ ನಿಂತು ಈ ಕಾರ್ಯವನ್ನು ಜಗಮಾಡಿಸಿದರು. ಇದಲ್ಲದೆ ಶ್ರೀ ಶ್ರೀಧರ ಸ್ವಾಮಿಗಳೂ, ... ಸ್ವಾಮಿಗಳೂ ಮುಂತಾದ ಅನೇಕ ಸನ್ಯಾಸಿಗಳೂ ಬಂದಿದ್ದರು ...

ಫೋನ್ ನಂ. ೭೩೩ ವಂದೇ ಮಾತರಂ ಬಿಡಿಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೧-೪-೧೯೫೩ [ಸಂಚಿಕೆ ೨೦೩

ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ಜೂನ್ ತಿಂಗಳಲ್ಲಿ ಪರಿಶೀಲನೆ

ಸ್ವಂ ವ. ಪ್ರೋ] ಬೆಂಗಳೂರು ೧೧

ಈ ದಿನ ... ಸಭೆಯಲ್ಲಿ ... ಮೈಸೂರು ... ಮಸೂದೆಯನ್ನು ಮಂಡಿಸಿದರು ...

ಮೈಸೂರು ಮತ್ತು ಬೆಂಗಳೂರು ಅರಮನೆಗಳನ್ನು ಬಿಟ್ಟು ...

ಆರೋಗ್ಯ ಸಚಿವರು ...

ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ...

ಪೌಳಿಯ ಪೀಠಿಕೆ

...

ತುಂಗಾ ನದಿಯಲ್ಲಿ ಬಾಲಕನ ಮರಣ

ಶೃಂಗೇರಿ ೧೧

ಇಲ್ಲಿ ರುದ್ರ ಹೋಮ ಮತ್ತು ಚಂಡಿ ಹೋಮ ಮುಂತಾದ ಕಾರ್ಯಗಳನ್ನು ಬಹಳ ಮುತುವರ್ಜಿಯಿಂದ ನಡೆಸಲು ಮುಖ್ಯ ಕಾರಣಕರ್ತರಾದ ಶ್ರೀ ಎಚ್. ಸುಂದರಂ ಅಯ್ಯರ್‌ರವರ ... ಬಾಲಕರೊಡನೆ ಈ ದಿನ ಬೆಳಿಗ್ಗೆ ... ತುಂಗಾ ನದಿಗೆ ಸ್ನಾನಕ್ಕೆ ಹೋಗಿ ...

... ಈ ಬಾಲಕನು ಈಗ ಆರೋಗ್ಯವಾಗಿರುತ್ತಾರೆ

ಮೃತನಾದ ಬಾಲಕನ ಶರೀರವು ... ಗಂಟೆಕಾಲದ ನಂತರ ದೊರಕಿತು ...

೧೫ ಅಡಿ ಎತ್ತರದ ಆಲಿಕಲ್ಲು ರಾಶಿ !

ಮದನಪಲ್ಲಿಯ ಬಳಿ ... ಎಂಬ ಹಳ್ಳಿಯಲ್ಲಿ ಕಳೆದ ಭಾನುವಾರ ಸಂಜೆ ಭಾರಿ ಆಲಿಕಲ್ಲಿನ ಮಳೆಯಾಯಿತು ...

ಪರೀಕ್ಷೆಯಲ್ಲಿ ಕಾಪಿ ಮಾಡಿದಾತ ಪತ್ತೆ

ರಾಜಧಾನಿಯಲ್ಲಿ ಇತ್ತೀಚಗೆ ನಡೆದ ಪರೀಕ್ಷೆಗಳಲ್ಲಿ ಬಿ. ಎಸ್‌ಸಿ. ತರಗತಿಯ ವಿದ್ಯಾರ್ಥಿಯೂ, ಎಲ್. ಎಸ್. ಪರೀಕ್ಷೆಯ ಒಬ್ಬ ವಿದ್ಯಾರ್ಥಿನಿಯೂ ಕಾಪಿ ಮಾಡುತ್ತಿದ್ದಾಗ ಪತ್ತೆ ಮಾಡಲ್ಪಟ್ಟದಾಗಿ ವರದಿಯಾಗಿದೆ ...

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳವರುಗಳ ಭೇಟಿಯು ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ನಡೆಯುವ ಸಂಭವವಿರುವುದೆಂದು ವರದಿಯಾಗಿದೆ

ಮೈಸೂರು ಶಾಸನ ಸಭೆಗಳಿಗೆ ಹೈಕೋರ್ಟಿನ ಮೇಲೆ ವ್ಯಾಪ್ತಿ ಇಲ್ಲ

...

ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

...

ಸರ್ಕಾರಿ ಅತಿಥಿ ಭವನಗಳ ಮೇಲ್ವಿಚಾರಣೆ

...

ಮೋತೀಲಾಲ್ ...

ತಾ॥ 10 4 53 ರಿಂದ

... (ಹ್ಯಾನ ಬಾಳು)

ಪಣಕ್ಕಾರಿ

ಪ್ರಭಾ ★ ... ಪ್ರದರ್ಶನ ...

ತೀನಾ ಬತ್ತ್ ಚಾರ್ ರಾಸ್ತಾ

4 ದಿನಗಳ ಮಾತ್ರ

Edited Printed and Published by A R Nagarajan at Sadhvi Press, D Subb...ah Road Mysore

ROLL 9

SADHVI PAPERS

CONTD.

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು — ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರು ನಗರ ಅಥವಾ ಕೃಷ್ಣರಾಜ ನಗರದಿಂದ ಕೊಡಗಿಗೆ ರೈಲು ರಸ್ತೆ ಹಾಕುವಂತೆ ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರು ಶಿಫಾರಸು ಮಾಡಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ...

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

... ಶಾಂತಿ ಮಾತುಕತೆಯು ಪ್ರಾರಂಭವಾದಾಗಿನಿಂದ ಇದುವರೆಗೆ ಎರಡು ಕಡೆಗಳಲ್ಲೂ ೫ ಲಕ್ಷ ಜನರು ಸಾವುನೋವಿಗೆ ಈಡಾಗಿರುವರೆಂದು ವರದಿಯಾಗಿದೆ

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಅವರ ಮಂತ್ರಿಮಂಡಲದ ಬಹುಮಂದಿ ಸದಸ್ಯರು ... ಸೈನ್ಯ ಶಿಕ್ಷಣವನ್ನು ಪಡೆಯುತ್ತಿರುವರು

ವಸಂತ ಸಾಹಿತ್ಯೋತ್ಸವ

ಮೈಸೂರು ಪೇಟೆ ಧಾರಣೆ

ಅತಿ ರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ಶೃಂಗೇರಿ ೧೧ — ... ಶ್ರೀ ವಿದ್ಯಾತೀರ್ಥ ಸ್ವಾಮಿಗಳು ... ಶ್ರೀ ಶ್ರೀಧರ ಸ್ವಾಮಿಗಳೂ ... ಅನೇಕ ಸನ್ಯಾಸಿಗಳೂ ಬಂದಿದ್ದರು ...

ಸಾಧ್ವಿ

ಸಂಪುಟ ೧೧] ಶನಿವಾರ ೧೧-೪-೧೯೫೩ [ಸಂಚಿಕೆ ೨೦೭

ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ಬೆಂಗಳೂರು ೧೧ — ...

ತುಂಗಾ ನದಿಯಲ್ಲಿ ಬಾಲಕನ ಮರಣ

ಶೃಂಗೇರಿ ೧೧ — ...

ಅಮೋಘ ಹರಾ

ಸರ್ಕಾರಿ ಅತಿಥಿ ಭವನಗಳ ಮೇಲ್ವಿಚಾರಣೆ

ಕಾರ್ಮಿಕ ಮಂತ್ರಿ ...

ಮೋತೀಲಾಲ

(ಮೈಸೂರು)

ತಾ॥ 10 4 53 ರಿಂದ

ಸಾಕ್ಷಿ ಪೆಂಡ್ಯಾಲ (ಹಸ್ತಿನ ಬಾಳು)

ಬರುತ್ತದೆ — ...

ಪಣಕ್ಕಾರಿ

ಪ್ರಭಾ ★ ...

ತೀನಾ ಬತ್ತಿ ಚಾರ್ ರಾಸ್ತಾ

Edited Printed and Published by A R Nagarajan at Sadhvi Press, D Subbaiah Road Mysore

ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಮಂತ್ರಿಗಳ ಭೇಟಿಯು ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ನಡೆಯುವ ಸಂಭವವಿರುವುದೆಂದು ವರದಿಯಾಗಿದೆ

ಮೈಸೂರು ಶಾಸನ ಸಭೆಗಳಿಗೆ ಹೈಕೋರ್ಟಿನ ಮೇಲೆ ವ್ಯಾಪ್ತಿ ಇಲ್ಲ

೧೫ ಅಡಿ ಎತ್ತರದ ಆಲಿಕಲ್ಲು ರಾಶಿ !

ಪರೀಕ್ಷೆಯಲ್ಲಿ ಕಾಪಿ ಮಾಡಿದುದು ಪತ್ತೆ

ROLL 9

SADHVI PAPERS

CONTD.

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

[illegible]

ಕೊರಿಯಾ ಯುದ್ಧದಲ್ಲಿ ೩ ಲಕ್ಷ ಜನರ ಸಾವುನೋವು

[illegible]

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

[illegible]

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

[illegible]

ವಸಂತ ಸಾಹಿತ್ಯೋತ್ಸವ

[illegible]

ಮೈಸೂರು ಪೇಟೆ ಧಾರಣೆ

[illegible]

ಅತಿರುದ್ರ ಹೋಮದ ಪೂರ್ಣಾಹುತಿ ಸಮಾರಂಭ

[illegible]

ಸಾಧ್ವಿ

ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

[illegible]

ತುಂಗಾ ನದಿಯಲ್ಲಿ ಬಾಲಕನ ಮರಣ

[illegible]

ಅನ್ನೋನ್ಯ ಹರಾ

12 4 53 ನೇ [illegible]

[illegible]

ವಿದ್ಯಾ ಸುಂದರರಾಜ ಸಮಿತಿ ವರದಿ ತಡೆಯುವಂತೆ ಸೂಚನೆ

[illegible]

ಸರ್ಕಾರಿ ಅತಿಥಿ ಭವನಗಳ ನೋಲ್ವಿಚಾರಣೆ

[illegible]

ಮೋತೀಲಾಲ

ತಾ॥ 10 4 53 ರಿಂದ

ನಾ ಕ

ಪೆರಂಡವಳ್

(ಹೆಣ್ಣಿನ ಬಾಳು)

ಪಣಕ್ಕಾರಿ

ಪ್ರಭಾ ★ ಜಯಪ್ರದ 3 ನೇ ವಾರ

[illegible]

10-4 53 ರಿಂದ 4 ದಿನಗಳು ಮಾತ್ರ

Edited, Printed and Published by A R Nagarajan at Sadhvi Press, D Subbiah Road Mysore

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

[illegible]

ಗಂಡಸನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

[illegible]

ಮೈಸೂರು ಶಾಸನ ಸಭೆಗಳಿಗೆ ಕೈಕೋರ್ತನ ಪೋಲಿ ಪ್ರಾಪ್ತಿ ಇಲ್ಲ

[illegible]

೧೫ ಅಡಿ ಎತ್ತರದ ಆಲಿಕಲ್ಲು ರಾಶಿ !

[illegible]

ಹರಿಜನ್ನರಿಯಲ್ಲಿ ಕಾಪಿ ಮಾಡಿದುದು ಪತ್ತೆ

[illegible]

ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು —

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರು ನಗರ ಅಥವಾ ಕೃಷ್ಣರಾಜನಗರದಿಂದ ಕೊಡಗಿಗೆ ರೈಲು ರಸ್ತೆ ಹಾಕುವಂತೆ ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರ ಶಿಫಾರಸು ಮಾಡಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಶ್ರೀ ಡಿ ದೇವರಾಜ ಅರಸಿನವರು ಮಾತನಾಡಿ ಮೈಸೂರು ಮತ್ತು ಕೊಡಗುಗಳ ನಡುವೆ ಜನ ಸಂಚಾರವು ಹೆಚ್ಚಿರುವುದರಿಂದ ರೈಲು ರಸ್ತೆಯ ಅವಶ್ಯಕವೆಂದು ತಿಳಿಸಿದರು. ರೆವಿನ್ಯೂ ಮಂತ್ರಿಗಳು ಮಾತನಾಡಿ ಸಧ್ಯದಲ್ಲೇ ಕೇಂದ್ರದವರು ಈ ರಸ್ತೆ ಹಾಕಲಾರರೆಂದ ಅಭಿಪ್ರಾಯಪಟ್ಟರು. ನಿರ್ಣಯ ... ತವ ... ಕ್ಯ ತರ ... ದ ಸೂಚಿಸಿದರು.

ಚಕ್ರಬಂಧ ಸ್ಪರ್ಧೆಗಳಲ್ಲಿ ೩೦,೦೦೦ ರೂ ಪ್ರದಾನ ಬಹುಮಾನ ನಿಗದಿ

ಚಕ್ರಬಂಧ ಸ್ಪರ್ಧೆಗಳಲ್ಲಿ ... ಸಾವಿರ ರೂ ... ಪ್ರದಾನ ಬಹುಮಾನದ ಏರ್ಪಾಟು ... ಸರ್ಕಾರದವರ ... ವಾಗಿ ಕಿರಿಯ ಶಾಸನ ಸಭೆಯಲ್ಲಿ ... ಮಂತ್ರಿಗಳು ತಿಳಿಸಿದರು.

ವಿದ್ಯಾ ಸುಧಾರಣಾ ಸಮಿತಿ ವರದಿ ತಡೆಯುವಂತೆ ಸೂಚನೆ

ಕೇಂದ್ರ ಸರ್ಕಾರದವರು ... ವ ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿಯ ವರದಿಯ ... ಮೈಸೂರು ಸಂಸ್ಥಾನದ ವಿದ್ಯಾ ... ಸಮಿತಿಯ ವರದಿಯನ್ನು ಜಾರಿಗೆ ಕೊಡದಂತೆ ತಡೆಯಬೇಕೆಂದು ಕೇಂದ್ರ ಸರ್ಕಾರದವರ ಮೈಸೂರು ಸರ್ಕಾರಕ್ಕೆ ಸೂಚಿಸಿರುವರೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸಿರುತ್ತಾರೆ.

ಸರ್ಕಾರಿ ಅತಿಥಿ ಭವನಗಳ ಮೇಲ್ವಿಚಾರಣೆ

ಮೈಸೂರ ಮತ್ತು ಬೆಂಗಳೂರು ನಗರಗಳಲ್ಲಿರುವ ಸರ್ಕಾರಿ ಅತಿಥಿ ಭವನಗಳ ಹತೋಟಿ ಮತ್ತು ಮೇಲ್ವಿಚಾರಣೆಯನ್ನು ಬರುವ ತಿಂಗಳು ... ದೀಶರವರಿಗೆ ... ವಹಿಸಲಾಗುವುದು.

ಕಾಫಿ ಬೆಳೆಯವರ ... ಮದ್ಯಪಾನ ...

... ಮದ್ಯಪಾನ ನಿಷೇಧದ ... ಬಗ್ಗೆ ... ನಿಷೇಧ ... ಮಂತ್ರಿಗಳು ತಿಳಿಸಿರುತ್ತಾರೆ ... ಸಾಕೇಕ್ಕೆ ಪ್ರವಾಸಿಗರ ಭೇಟಿಯಿಂದ ಬಹಳ ಮಟ್ಟಿನ ವರಮಾನ ಬರುವುದರಿಂದಲೂ ಮತ್ತು ಪ್ರವಾಸಿಗರಿಗೆ ಮದ್ಯದ ಅವಶ್ಯಕತೆಯಿರುವುದರಿಂದಲೂ ಈ ನಿಷೇಧಕ್ಕೆ ಬರಲಾಗಿದೆಯೆಂದು ಅವರು ಹೇಳುವರು.

ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

... ಜೂಲೈನಲ್ಲಿ ಕೊರಿಯಾ ಶಾಂತಿ ಮಾತುಕತೆಯ ಪ್ರಾರಂಭವಾದಾಗಿನಿಂದ ಇದುವರೆಗೆ ಎರಡು ಕಡೆಗಳಲ್ಲೂ ೫ ಲಕ್ಷ ಜನರು ಸಾವುನೋವಿಗೆ ಈಡಾಗಿರುವರೆಂದು ವರದಿಯಾಗಿದೆ.

ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಮದರಾಸಿನ ಮಾಜಿ ರೆವಿನ್ಯೂ ಮಂತ್ರಿ ಶ್ರೀ ಹೆಚ್ ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದಲ್ಲಿ ಕಳೆದ ... ನಡೆದ ... ಆ ತಾಲ್ಲೂಕನ್ನು ಆಂಧ್ರ ಸಂಸ್ಥಾನಕ್ಕೆ ಸೇರಿಸಬೇಕೆಂದ ಭಾರತ ಸರ್ಕಾರವನ್ನು ಕೋರಲಾಯಿತು.

ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಅವರ ಮಂತ್ರಿಮಂಡಲದ ಬಹು ಮಂದಿ ಸದಸ್ಯರು ಬಂಗ ಸಾಧನೆ ಬಂದೂಕವನ್ನು ಹಾರಿಸುವುದು ಮತ್ತು ಗ್ರೆನೇಡು ಮತ್ತು ಸಿಡಿತದ ವಸ್ತುಗಳನ್ನು ಪ್ರಯೋಗಿಸುವುದು ಇವೇ ಮೊದಲಾದ ಸೈನ್ಯ ಶಿಕ್ಷಣವನ್ನು ಪಡೆಯುತ್ತಲಿರುವರು.

ವಸಂತ ಸಾಹಿತ್ಯೋತ್ಸವ

ಮೈಸೂರ ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ಬರುವ ತಿಂಗಳು ... ಮತ್ತು ... ತಾರೀಖುಗಳಲ್ಲಿ ವಸಂತ ಸಾಹಿತ್ಯೋತ್ಸವವನ್ನು ನಡೆಸಲು ವ್ಯವಸ್ಥೆಗಳಾಗುತ್ತಿವೆ. ಆ ಸಂದರ್ಭದಲ್ಲಿ ... ಗಳು ... ಗುಂಡಪ್ಪ ... ಮೊದಲಾದ ... ಗಳನ್ನು ಮಾಡುವ ನಿರೀಕ್ಷೆಯಿದೆ ... ಸಮ್ಮೇಳನವನ್ನು ... ಸಲಾಗುವುದು.

ಅನೋಖಾ ... ಮಹಾರಾಜ ... ಮಾರಾಟ

12 4 53 ನೇ ಭಾನುವಾರ ಬೆಳಗ್ಗೆ 10 ಘಂಟೆಗೆ

1 ... ಫಿಲಿಪ್ಸ್ ರೇಡಿಯೋ ... ಮಾರಾಟ ...

... ಮಾಡುತ್ತಾರೆ ...

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೨೫ ೧೪-೦	೨೬ ೬ ೦
ಎಳ್ಳು	೭೩ ೦ ೦	
ಕಡಲೆಬೇಳೆ	೩೫ ೬ ೦	೪೧-೦ ೦
ಹುಚ್ಚೆಳ್ಳು	೫೧ ೮-೦	
ತೊಗರಿಬೇಳೆ	೯ ೦ ೦	೩೨ ೮ ೦
ಹುರುಳಿ	೪೧ ೪ ೦	
ಹೆಸರು	೩೫ ೪ ೦	
ಅವರೆ	೩೫ ೦ ೦	
ಕಡಲೆಕಾಳು	೪೯ ೦ ೦	೫೯ ೦ ೦
ಉದ್ದು	೮೩ ೦ ೦	
ಮೆಣಸಿನ ಕಾಯಿ ಮದ್ರಾಸ್	೧೬ ೩ ೦	
ಮೆಣಸೀಹೆಣ	೩ ೫ ೦	೬ ೦
ಕೇಗೇಕಾಯಿ	೪ ೮ ೦	೪ ೧೨ ೦
ಬೆಲ್ಲ	೬ ೮ ೦	
ತೆಂಗಿನಕಾಯಿ ಸಾವಿರಕ್ಕೆ	೧೪೪ ೦ ೦	೨೫೫ ೦ ೦

ಕಳೆದ ವಾರ ಇಂಡೋಚೀನಾದ ... ದ ಬಳಿ ಫ್ರೆಂಚ್ ದೋಣಿಗಳು ... ಚಲಿಸುತ್ತಿದ್ದಾಗ ... ತಗುಲಿ ... ಸಿಡಿದ ಪರಿಣಾಮವಾಗಿ ೧೧೦ ಜನರು ಮೃತಪಟ್ಟು ... ಜನರು ತೀವ್ರ ಗಾಯಗೊಂಡರು.

ಆಕಾಶವಾಣಿ ನಾಟಕ ಕಾರ್ಯಕ್ರಮ

... ಸಂಗೀತ ... ಮೇಲ್ಗಡೆ ...

... ವೃದ್ಧಿ ಸಮಿತಿ ಮೈಸೂರು

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿ ... ಬಿಟ್ಟಿರುವ 14 ಮಾದರಿ ಮನೆಗಳ ... ಬೆಲೆಯು ... 1762 8 0 ... ನಲ್ಲಿ ದೊರೆಯುವ ... ಅರ್ಜಿ ... 4 1953 ರ ವರೆಗೆ ... ಪಡಿಸಲಾಗಿದೆ.

(...) ... ರಂಗಪ್ಪ, ... ಕ್ಷ

ಪ್ರಭಾತ ★ ... ನೇ ವಾರ

... ದಿನವು ...

ತೀನ್ ಬತ್ತಿ ಚಾರ್ ರಾಸ್ತಾ

... ಸ್ಪೆಷಲ್ ...

ಬೆಳಗಿನ ಪ್ರದರ್ಶನ 10 4 ... ರಿಂದ 4 ದಿನಗಳ ಮಾತ್ರ

ನ್ಯೂ ಥಿಯೇಟರ್ಸ್ ರವರ ವಾ ಪ ಸ್

Edited Printed and Published by A R Nagarajan at Sadhvi Press, D Subbaiah Road Mysore

ರೋ. ನಂ. ೯೩೬ ಪ್ರತಿ ಶನಿವಾರ ಪ್ರಕಟಣೆ ಒಂದರ ಬೆಲೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೧-೪-೧೯೫೩ [ಸಂಚಿಕೆ ೨೦೬

ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

ಅತಿ ರುದ್ರ ಹೋಮದ ಪೂರ್ಣಾಹುತಿ ಸಮಾರಂಭ

ಎಪ್ಪತ್ತೈದು ಸಾವಿರಕ್ಕೂ ಮೀರಿ ಜನ ಸೇರಿಕೆ

ಶೃಂಗೇರಿ ೧೦

೨೭ ದಿವಸಗಳಿಂದಲೂ ನಡೆಯುತ್ತಿದ್ದ ಅತಿ ರುದ್ರ ಮಹಾ ಯಾಗದ ಪೂರ್ಣಾಹುತಿ ಸಮಾರಂಭವು ನೆನ್ನೆ ಮಧ್ಯಾಹ್ನ ಎರಡೂವರೆ ಗಂಟೆಗೆ ಅತ್ಯಂತ ವೈಭವದಿಂದ ನೆರವೇರಿತು. ಶಿರಿಯ ಗುರುಗಳಾದ ಶ್ರೀ ವಿದ್ಯಾ ತೀರ್ಥ ಪ್ರಸನ್ನ ಸ್ವಾಮಿಗಳು ಸ್ವತಃ ನಿಂತು ಈ ಕಾರ್ಯವನ್ನು ಆಗಮಾಡಿಸಿದರು. ಇವರಲ್ಲದೆ ಶ್ರೀ ಶ್ರೀಧರ ಸ್ವಾಮಿಗಳೂ, ಕಾವಿ ಸ್ವಾಮಿಗಳೂ ಮತ್ತು ಅನೇಕ ಸನ್ಯಾಸಿಗಳೂ ಬಂದಿದ್ದರು. ಸುಮಾರು ೭೫ ಸಾವಿರ ಜನ ಆಸ್ತಿಕ ಮಹನೀಯರೂ ಮಹಿಳೆಯರೂ ಸೇರಿದ್ದರು. ಶ್ರೀ ಮೈ ನ್ಯಾಯಾಧೀಶರಾದ ಶ್ರೀ ಸಿ. ಮೇದಪ್ಪ, ಮದ್ರಾಸಿನ ಡಾ|| ಆಲಗಪ್ಪ ಚೆಟ್ಟಿಯಾರ್ ಮುಂತಾದವರೂ ಇದ್ದರು.

ಶ್ರೀ ರುದ್ರ ಸ್ವಾಹಾಕಾರವು ನಭೋಮಂಡಲವನ್ನು ಭೇದಿಸುವಂತೆ ಘೋಷವಾಗುತ್ತಿದ್ದಿತು. ಪೂರ್ಣಾಹುತಿಗೆ ಅನರ್ಘ್ಯವಾದ ವಸ್ತ್ರಾಭರಣಗಳೂ, ಧನ ಕನಕ ವಸ್ತುಗಳೂ, ರತ್ನಗಳೂ, ಸುಗಂಧ ಲೋಹಗಳೂ ವಿವಿಧವಾದ ಫಲಗಳೂ ಸಮರ್ಪಿಸಲ್ಪಟ್ಟವು.

ಯಜ್ಞವು ಆರಂಭವಾದಂದಿನಿಂದಲೂ ಆಗಿದ್ದ ಮಳೆಯು ಗಡಗು, ಮಿಂಚು, ಆಲಿಕಲ್ಲು ಗಳೊಡನೆ ಪೂರ್ಣಾಹುತಿಯಾದ ಒಡನೆ ಭಿಮಾನಿಗಳೆಲ್ಲರೂ ಹರಾತ್ತನೆ ಬಂದು ನಗರದಲ್ಲೆಲ್ಲಾ ಉದಯಿಸಿದ್ದ ವಿಶೇಷವಾದ ಕಷೆಯನ್ನು ನಿವಾರಿಸಿ ತಂಪಿನ ವಾತಾವರಣವನ್ನುಂಟುಮಾಡಿತು. ಇಷ್ಟು ಶ್ರದ್ಧಾ ಭಕ್ತಿಗಳಿಂದ ನಡೆದಿರುವ ಈ ಮಹಾ ಕಾರ್ಯದಿಂದ ದೇವತೆಗಳೂ ಸಹ ಸುಪ್ರೀತರಾಗಿರುವುದೆಂಬುದಕ್ಕೆ ಈ ಅಪೂರ್ವ ಶೀತವಾದ ಮಳೆಯೇ ಗುರುತೆಂದು ಎಲ್ಲರೂ ಹೇಳುತ್ತಿದ್ದರು.

ನೆನ್ನೆ ರಾತ್ರಿ ಶ್ರೀ ಶಾರದಮ್ಮನವರ ರಥೋತ್ಸವವನ್ನು ವಿಶೇಷ ವೈಭವದಿಂದ ನಡೆಸಲಾಯಿತು. ಇದೇ ಮೊಟ್ಟಮೊದಲನೆಯದಾಗಿ ರಥವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದ್ದಿತು.

ಇದರ ಮುಂಭಾಗದಲ್ಲಿ ಶ್ರೀ ಶ್ರೀಗಳವರು ವಜ್ರ ಪಲ್ಲಕ್ಕಿಯಲ್ಲಿ ಬಿಜಯ ಮಾಡಿ ಎಲ್ಲರಿಗೂ ದರ್ಶನವನ್ನೀಯುತ್ತಿದ್ದರು. ನಯನ ಮನೋಹರವಾಗಿತ್ತು. ನವರತ್ನ ಖಚಿತವಾದ ಕಿರೀಟವನ್ನು ಅಮೂಲ್ಯವಾದ ಪೀತಾಂಬರವನ್ನು ಅವರು ಧರಿಸಿದ್ದರು. ಬಂದಿದ್ದ ವೈದಿಕ ಶಿರೋಮಣಿಗಳು ವೇದ ಘೋಷಗಳನ್ನು ಮಾಡುತ್ತಿದ್ದರು.

ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

ಪಾವಗಡ ತಾಲ್ಲೂಕು ಹೊಸಕೋಟೆಯ ಒಬ್ಬ ಪ್ರೈವೇಟ್ ಕಾನ್ಸ್ಟೇಬಲ್ ಒಂದು ಗ್ರಾಮಕ್ಕೆ ಹೋಗಿ ಗಂಡ ಹೆಂಡತಿಯನ್ನು ಅಲ್ಲಿನ ಆಂಜನೇಯ ದೇವಸ್ಥಾನಕ್ಕೆ ಕರೆದೊಯ್ದು ಗಂಡನನ್ನು ಕಟ್ಟಿಹಾಕಿ ಅವನ ಎದುರಿನಲ್ಲಿಯೇ ಪತ್ನಿಯ ಮೇಲೆ ಅತ್ಯಾಚಾರ ಮಾಡಿರುವುದಾಗಿ ತಿಳಿದುಬಂದಿದೆ.

ನಗರದ ರೇಷನಿಂಗ್ ಸಿಬ್ಬಂದಿಯಲ್ಲಿ ಮೋಸ

ಮೈಸೂರು ೧೧

ರಾಜಧಾನಿಯ ರೇಷನಿಂಗ್ ಆಫೀಸಿನ ಸಿಬ್ಬಂದಿಯಲ್ಲಿ ನೆ|| ೫೦ ರಷ್ಟನ್ನು ಈ ಕೂಡಲೇ ಮೋಸ ಮಾಡುವಂತೆ ಸರ್ಕಾರದವರು ಮೈಸೂರು ಜಿಲ್ಲಾಧಿಕಾರಿಗಳಿಗೆ ಕಾಜ್ಞಾಪಿಸುವರೆಂದು ವರದಿಯಾಗಿದೆ.

ಬಳ್ಳಾರಿಯಲ್ಲಿ ಕನ್ನಡಿಗರ ಅಸಹಕಾರ ಚಳುವಳಿ

ಬಳ್ಳಾರಿ ಜಿಲ್ಲೆಯ ವಿಭಜನೆ ಮತ್ತು ಆಂಧ್ರಕ್ಕೆ ಸೇರಿಸುವ ಯೋಜನೆಗಳನ್ನು ಪ್ರತಿಭಟಿಸಲು ಅಸಹಕಾರ ಚಳುವಳಿಯನ್ನು ನಡೆಸುವುದೇ ಉಳಿದ ಏಕ ಮಾರ್ಗವೆಂದು ಬಳ್ಳಾರಿ ಕನ್ನಡಿಗರು ನಿರ್ಧರಿಸಿರುವುದಾಗಿ ವರದಿಯಾಗಿದೆ. ಈ ಟೌನಿನ ಹೋಟೇಲುಗಳಲ್ಲಿ ಅಧಿಕಾರಿಗಳಿಗೆ ಕಾಫಿ ತಿಂಡಿ ಒದಗಿಸಲ್ಲ ಈ ಪ್ರದೇಶದ ಸತ್ಯಾಗ್ರಹಿಗಳು ಕಂಬಾಯ ಖರೀದಿಸಿ ಹ್ಯಾಸ್ಸಿನ ನಿಷೇಧವೂ ಸಹ ಇರುವರು ಎಂದು ಕೇಳಲ್ಪಟ್ಟಿದೆ.

ಹರಪನಹಳ್ಳಿ, ನಗರಿ, ಮುಂತಾದ ಕಡೆ ಹೋಟೇಲುಗಳ ಸಹಿತ ತಂತಿ ಮಾರ್ಗಗಳನ್ನು ಕತ್ತರಿಸಲಾಗಿದೆಯೆಂದೂ ಪಟ್ಟಣದ ಪೋಸ್ಟ್‌ಆಫೀಸುಗಳ ನಡುವೆ ಕೈಲು ಕಂಬಿಗಳ ಕಿತ್ತು ಹಾಕಿ ಕೈಲು ಹಳಿಗಳನ್ನು ಕಿತ್ತು ಸ್ಟೇಷನ್‌ಗಳನ್ನು ಸುಟ್ಟು ಹಾಕುವ ಪ್ರಯತ್ನ ನಡೆದಿದೆಯೆಂದೂ ಸಹ ಹೇಳಲಾಗಿದೆ.

ಬಳ್ಳಾರಿಯ ಭವಿಷ್ಯದ ಬಗ್ಗೆ ಭಾರತ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಅಲ್ಲಿನ ಜನರ ಸಭೆಯ ಶಾಂತಿಯ ಮಾಡಲಾಗಿದೆ.

ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಮಂತ್ರಿಗಳ ಭೇಟಿಯು ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ನಡೆಯುವ ಸಂಭವವಿದೆಯೆಂದು ವರದಿಯಾಗಿದೆ.

ಮೈಸೂರು ಶಾಸನ ಸಭೆಗಳಿಗೆ ಪ್ರೊಪೋರ್ಶನ ಮೇಲೆ ಸ್ಥಾನ ಇಲ್ಲ

ಮೈಸೂರು ಶಾಸನ ಸಭೆಗಳಿಗೆ ಅಲ್ಲಿನ ಪ್ರೊಪೋರ್ಶನ ಮೇಲೆ ಸ್ಥಾನ ಇದೆ ಪ್ರತಿನಿಧಿತ್ವ ಕಲ್ಪಿಸಲು ಇರುವುದಾಗಿಯೂ, ವಾರ್ಡ್‌ಗಳಿಗೆ ಹೊಸ ವ್ಯವಸ್ಥೆ ಇರುವುದೆಂದೂ ಪ್ರೊಪೋರ್ಶನವರು ಸರ್ಕಾರಕ್ಕೆ ತಿಳಿಸಿರುವರೆಂದು ಮತ್ತು ನ್ಯಾಯ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಒಂದು ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ತಿಳಿಸಿರುತ್ತಾರೆ.

ತುಂಗಾ ನದಿಯಲ್ಲಿ ಬಾಲಕನ ಮರಣ

ಶೃಂಗೇರಿ ೧೦

ಇಲ್ಲಿ ರುದ್ರ ಹೋಮ ಮತ್ತು ಚಂಡಿ ಹೋಮ ಮುಂತಾದ ಕಾರ್ಯಗಳನ್ನು ಬಹಳ ಮುತುವರ್ಜಿಯಾಗಿ ನಡೆಸಲು ಮುಖ್ಯ ಕಾರಣಕರ್ತರಾದ ಶ್ರೀ ಎಚ್. ಸುಂದರಂ ಅಯ್ಯರ್‌ರವರ ತಮ್ಮಂದಿರು ಶ್ರೀ ಶ್ರೀಕಂಠಯ್ಯರ್‌ರವರ ೧೨ ವರ್ಷ ವಯಸ್ಸಿನ ಕುಮಾರ ಶ್ರೀನಿವಾಸನು ಇವರ ಮನೆಯ ಇತರ ಹುಡುಗರು ಜೊತೆಯಲ್ಲಿ ಈ ಬೆಳಿಗ್ಗೆ ಈಜಾಡಲು ಹೋಗಿ ಸುಳಿಗೆ ಸಿಕ್ಕಿ ಮೃತಪಟ್ಟನು. ಊರ ಇಲ್ಲಿಗೆ ಬಂದಿದ್ದ ಸಹಸ್ರಾರು ಜನ ಭಕ್ತಾದಿಗಳಿಗೆ ಅತ್ಯಂತ ವಿಷಾದವನ್ನುಂಟು ಮಾಡಿತು. ರುದ್ರ ಹೋಮದ ಪೂರ್ಣಾಹುತಿಯು ನೆನ್ನೆ ನಡೆದು ಬಾಲಕನ ದಹನ ಕ್ರಿಯೆಯು ಈ ದಿನ ಜರುಗಿದ ವಿಧಿವಿಲಾಸವನ್ನು ಕಂಡು ಎಲ್ಲರೂ ಕಂಬನಿಗರೆಯುತ್ತಿದ್ದರು.

ಇತರ ಹುಡುಗರು ಬಾಲಕನ ಶವ ಈಜಾಡುತ್ತಿದ್ದಾಗ ತೀರದ ಹುಡುಗರು ಹತ್ತಿರ ಯಲ್ಲಿ ಮುಳುಗುತ್ತಿದ್ದಂತೆಯೇ, ಅದನ್ನು ನೋಡಿದವರು ವೇಗವೇಗ ಅವನನ್ನು ಮೇಲಕ್ಕೆ ಎತ್ತಿ ಹಾಕಿ ಚಿಕಿತ್ಸೆ ಕೊಡಿಸಿದರು. ಈ ಬಾಲಕನು ಬಹಳ ಬಡವನಾಗಿರುತ್ತಾನೆ.

ಮೃತನಾದ ಬಾಲಕನ ಶರೀರವು ಸುಮಾರು ೧|| ಗಂಟೆಕಾಲದ ನಂತರ ದೊರಕಿತು. ಇದಕ್ಕಾಗಿ ನೂರಾರು ಜನರು ದೋಣಿಯಲ್ಲಿಯೂ, ಬಾಹಾಳಗರವರೂ ಮೂಲಕವೂ ಹುಡುಕಿಯೂ ಹುಡುಕಿಸಿದರು. ಬಂಡೆಗಳ ನಡುವೆ ಶವ ಸಿಕ್ಕಿಹೋಗಿದ್ದ ಈ ದುಃಖ ಸಂಭವಿಸಿರುವುದಕ್ಕಾಗಿ ಅತ್ಯಂತ ಮರುಗಿಹೋಗಿರುವ ಶ್ರೀ ಅಯ್ಯರ್‌ರವರ ಕುಟುಂಬದವರಿಗೆ ಅನುತಾಪವನ್ನು ಸಲ್ಲಿಸುತ್ತೇವೆ.

೧೫ ಅಡಿ ಎತ್ತರದ ಆಲಿಕಲ್ಲು ರಾಶಿ !

ಮದನಪಲ್ಲಿಯ ಬಳಿ ಒಂಟಿಮಿಟ್ಟ ಎಂಬ ಹಳ್ಳಿಯಲ್ಲಿ ಕಳೆದ ಭಾನುವಾರ ಸಂಜೆ ಭಾರಿ ಆಲಿಕಲ್ಲಿನ ಮಳೆಯಾಯಿತು. ಅಲ್ಲಿನ ಕೋಮಪ್ಪಂದಂದಲ್ಲಿ ವಿಪರೀತ ಆಲಿಕಲ್ಲು ಬಿದ್ದು ೧೫ ಅಡಿ ಎತ್ತರದ ಗಡ್ಡದ ಗಾತ್ರ ಕಾಣುತ್ತಿತ್ತು.

ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆಗಾಗಿ ಶಾಸನ

ಇನ್ನೂ ತಿಂಗಳಲ್ಲಿ ಚರ್ಚೆ

ಸ್ವಂ ಸು. ಪ್ರೋ] ಬೆಂಗಳೂರು ೧೧

ಈ ದಿನ ಶಾಸನ ಸಭೆ ಸಭೆಯ ಪ್ರಕಾರ ಶ್ರೀ ಟಿ. ಚನ್ನಯ್ಯನವರು ಮೈಸೂರು ನಗರ ಶಾಸಕರು ಒಂದು ಸಭೆ ಒತ್ತಾಯಿಸಿ ಸೂಚಿಸಿದ್ದನ್ನು ಮುಂದಿಟ್ಟರು. ಅವರ ಮೇಲೆ ವಿಷಯ ಚರ್ಚೆಯಾಗಿ, ಒಂದು ಅಧಿವೇಶನದಲ್ಲಿ ಅದನ್ನು ಪರಿಶೀಲಿಸಬಹುದೆಂದು ಸಭಾಧ್ಯಕ್ಷರು ಸೂಚಿಸಿದ ನಂತರ ನಮ್ಮ ಮಸೂದೆಯನ್ನು ಒಂದು ಪ್ರೈವೇಟ್ ಬಿಲ್ಲಾಗಿ ಪರಿಗಣಿಸಬೇಕೆಂದು ಸಭೆಯ ವರದಿಯನ್ನು ಅವಧಿಯಲ್ಲಿ ಕೊಡುವಂತೆ ಸಭಾಧ್ಯಕ್ಷರು ಒಪ್ಪುವುದಾಗಿ ಹೇಳಿದರು.

ಮೈಸೂರು ಮತ್ತು ಬೆಂಗಳೂರು ಅರಮನೆಗಳನ್ನು ಬಿಟ್ಟು ಶ್ರೀ ಮನ್ ಮಹಾರಾಜರಿಗೆ ಸೇರಿದ ಇತರ ಆಸ್ತಿಗಳ ಮೇಲೆ ತೆರಿಗೆ ವಿಧಿಸಬೇಕೆಂದು ಮಸೂದೆಯಲ್ಲಿ ಸೂಚಿಸಲಾಗಿದ್ದಿತು.

ಆರೋಗ್ಯ ಮಂತ್ರಿಗಳು ಮಾತನಾಡಿ ಅದು ತೆರಿಗೆ ಕೊಡಬೇಕಾದ ಪ್ರಶ್ನೆ ಇದರ ಸಭೆಯಲ್ಲಿ ಬಂದಿದ್ದರಿಂದಲೂ ಆ ಸಭೆಯು ಈ ಸಲಹೆಯನ್ನು ಒಪ್ಪಿದರಿಂದಲೂ ಈ ಸಭೆಯೂ ಒಪ್ಪಬೇಕೆಂದು ಕೋರಿದರು.

ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡಿ ಭಾರತ ಸರ್ಕಾರ ಮತ್ತು ರಾಜಪ್ರಮುಖರಿಗೆ ೬ ಒಡೆಯರು ಆಗಿದ್ದ ಒಪ್ಪಂದವಂತೆ ಅವುಗಳಿಗೆ ಯಾವ ತೆರಿಗೆ ವಿಧಿಸುವ ಶಕ್ತಿ ಅಸೂಯಕಲವಂತಹ ಪಾರ್ಲಿಮೆಂಟ್ ಕಾನೂನನ್ನು ಸರ್ಕಾರದವರು ತಿದ್ದುಪಡಿ ಮಾಡಬೇಕೆಂದು ತಿಳಿಸಿದರು. ಆ ವಿಷಯ ಸರ್ಕಾರಕ್ಕೆ ಸೇರಿದುದಾಗಿಯೂ, ಈ ಬಗ್ಗೆ ತೀರ್ಮಾನ ಅಂತಹ ತಿಳಿದು ಸಭೆಗೆ ಮಸೂದೆಯನ್ನು ಒಪ್ಪಲು ಸಾಧ್ಯವಿಲ್ಲವೆಂದೂ ಹೇಳಿದರು.

ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಮಾತನಾಡಿ, ಒಪ್ಪಂದವು ಕೇಂದ್ರ ಸರ್ಕಾರ ಮತ್ತು ಮಹಾರಾಜರಿಗೆ ಸಂಬಂಧಿಸಿರುವಂತಹದ್ದು, ಅದರ ವಿವರಗಳನ್ನು ಈ ಸಭೆಗೆ ತಿಳಿಸುವ ಸಾಧ್ಯವಿಲ್ಲವೆಂಬ ಅಂಶವನ್ನು ಪರಿಶೀಲಿಸಬೇಕಾಗಿದೆಯೆಂದು ಹೇಳಿದರು. ಶಾಸನ ಸಭಾಧಿವೇಶನಕ್ಕೆ ಮೋಟಿ ಮೌಲಿಕರಿಯು ಬೇಕಿದೆ.

ನಿಯತನ್ಯೂಬೀಯವರ ಮಾತು ಸ್ಪಷ್ಟವಾಗಿ ನೋಟೀಸು ಹಿರಿಯ ಶಾಸಕ ಸಭೆಯು ನಡೆಯುತ್ತಿದ್ದಾಗ ನೆನ್ನೆ ಸೇವಕನಾಗಿ ಸ ಭಾಧ್ಯಕ್ಷರ ಬಳಿ ಹೋಗಿ ತನಗೆ ಪ್ರಾಣ ಒದಗಿಸುವಂತೆ ಕೇಳಿದನೆಂದೂ, ಅವನು ರೊಳಗೆ ಸಭೆಯ ಉಸ್ತುವಾರಿ ಅಧಿಕಾರಿಗಳು ಅವನನ್ನು ಕರೆತಂದರೆಂದೂ ಹಠ ವಿಯೂಗಿದೆ ಇದನ್ನು ಕಂಡು ನೋಡಲು ದೇರಗಾಗಿದ್ದ ಶಾಸಕ ಸಭಾ ಸದಸ್ಯರು ನಂತರ ಸಹಾನುಭೂತಿ ಅರಿತು ತೆರಳಿಬಿಟ್ಟರು.

ಪರೀಕ್ಷೆಯಲ್ಲಿ ಕಾಪಿ ಮಾಡಿದುದು ಪತ್ತೆ

ರಾಜಧಾನಿಯಲ್ಲಿ ಇತ್ತೀಚೆಗೆ ನಡೆದ ಪರೀಕ್ಷೆಗಳಲ್ಲಿ ಬಿ. ಎಸ್‌ಸಿ. ತರಗತಿಯ ವಿದ್ಯಾರ್ಥಿಯೂ, ಎಲ್. ಎಸ್. ಪರೀಕ್ಷೆಯ ಒಬ್ಬ ವಿದ್ಯಾರ್ಥಿನಿಯೂ ಕಾಪಿ ಮಾಡುತ್ತಿದ್ದಾಗ ಪತ್ತೆ ಮಾಡಲ್ಪಟ್ಟುದಾಗಿ ವರದಿಯಾಗಿದೆ. ಅವರುಗಳ ಫೋಟೋಗಳನ್ನು ಸಹ ತೆಗೆದುಕೊಳ್ಳಲಾಗಿರುವುದೆಂದು ಹೇಳಲಾಗಿದೆ. ಫಸ್ಟ್ ಗ್ರೇಡ್ ಕಾಲೇಜಿನಲ್ಲೂ, ಮಹಾರಾಣಿ ಹೈಸ್ಕೂಲಿನಲ್ಲೂ ಈ ಪ್ರಸಂಗಗಳು ಪತ್ತೆ ಮಾಡಲಾಗಿದೆ.

ಆಂಧ್ರ ಪ್ರಾಂತ್ಯದ ಬಗ್ಗೆ ವಿಭಜನಾ ಸಮಿತಿ ನೇಮಕ

ಆಂಧ್ರ ಪ್ರಾಂತ್ಯ ರಚನೆಯ ಅಂಗವಾಗಿ ಮದರಾಸು ಸರ್ಕಾರದವರು ಶ್ರೀ ಎಸ್. ವೆಂಕಟೇಶ್ವರ್, ಪಿ. ಪುಲ್ಲಾರೆಡ್ಡಿ, ಟಿ. ಎ. ವರ್ಗೀಸ್ ಮತ್ತು ವಿ. ಕೆ. ರಾವ್ ಈ ಅಧಿಕಾರಿಗಳುಳ್ಳ ಸಮಿತಿಯೊಂದನ್ನು ರಚಿಸಿ, ಆಂಧ್ರಕ್ಕೆ ಎಷ್ಟು ಜನ ನೌಕರರು ಹೋಗಬೇಕೆಂಬುದನ್ನು ಪರಿಶೀಲಿಸಿ ಮಾಡುವಂತೆ ಸೂಚಿಸಿರುತ್ತಾರೆ

ಬಸ್ಸು ರಹದಾರಿಯ ಕಾಲ ೩ ವರ್ಷಗಳಿಗೆ ವಿಸ್ತರಣ

ಕಿರಿಯ ಶಾಸನ ಸಭೆಯಲ್ಲಿ ಮೊನ್ನೆ ರಸ್ತೆ ಸಂಚಾರ ವ್ಯವಸ್ಥಾ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಮೋಟಾರು ವಾಹನಗಳ ಶಾಸನಕ್ಕೆ ಮಂಡಿಸಿದ ತಿದ್ದುಪಡಿ ಮಸೂದೆಯು ಅಂಗೀಕೃತವಾಯಿತು. ಬಸ್ಸುಗಳ ರಾಷ್ಟ್ರೀಕರಣದ ನೀತಿಯನ್ನು ಮುಂದುವರಿಸುವ ಉದ್ದೇಶವನ್ನು ಸಫಲಗೊಳಿಸುವುದರ ಅಂಗವಾಗಿ ಖಾಸಗಿ ಬಸ್ಸುಗಳ ಸಂಚಾರದ ರಹದಾರಿಯನ್ನು ಮೂವರ್ಷದ ಅವಧಿಗೆ ಮಿತಿಗೊಳಿಸುವ ನಿಮಿತ್ತ ಮಸೂದೆಯನ್ನು ತರಲಾಗಿದ್ದಿತು

ರಾಮಾಯಣ ಪಾರಾಯಣ

ರಾಜಧಾನಿಯ ಚಾಮುಂಡಿಪುರದ ಬ್ರಹ್ಮಚೈತನ್ಯ ಬಾಲಕರ ಶ್ರೀ ರಾಮ ಮಂದಿರದಲ್ಲಿ ಶ್ರೀ ಲಕ್ಷ್ಮೀಪತಿಯವರಿಂದ ರಾಮಾಯಣವು, ಪ್ರತಿದಿನ ಸಂಜೆ ೬ ಘಂಟೆಗೆ ನೆನ್ನೆಯಿಂದ ಪುನಃ ನಡೆಸಲ್ಪಡಲಾಗಿದೆ

ಸಾಮೂಹಿಕ ಉಪವಾಸಕ್ಕೆ ಮನವಿ

ನಾಳೆ ದಿನ ಬೆಳಗ್ಗೆ ೬ ಘಂಟೆಯಿಂದ ಸಂಜೆ ೬ ಘಂಟೆ ವರೆಗೆ ಟೌನ್‌ಹಾಲ್ ಮೈದಾನದಲ್ಲಿರುವ ಸತ್ಯಾಗ್ರಹ ಶಿಬಿರದ ಮುಂದೆ ನಗರದ ಮಹಿಳೆಯರು, ಮಕ್ಕಳು ಅದಿಯಾಗಿ ಎಲ್ಲರೂ ಉಪವಾಸ ಸತ್ಯಾಗ್ರಹ ನಡೆಸುವಂತೆ ಆಹಾರ ಕ್ರಿಯಾ ಸಮಿತಿಯವರು ಪ್ರಾರ್ಥಿಸಿರುತ್ತಾರೆ.

ಮೈಸೂರು ಸೌತ್ ಸಾಹಿ ಕ್ರಿಲ್ಪ ಕೆಲಸಗಾರರ ಸಂಘದ ಸಭೆ

ಮೈಸೂರು ಸಂಸ್ಥಾನದ ಶಿಲ್ಪ ಕೆಲಸಗಾರರ ಸಂಘದ ಪ್ರೈಮರಿ, ಚೌಕ್‌ಸಾಹಿಯ ಅಡಳಿತ ವರ್ಗದ ಸಭೆಯು ನಾಳೆ ಅಪರಾಹ್ನ ಒಂದು ಘಂಟೆಗೆ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಸಂಘದ ಕಛೇರಿಯಲ್ಲಿ ಸೇರಿ ಸಂಘಕ್ಕೆ ಮಾನ್ಯತೆ ಪಡೆಯುವುದು ಎರೋಗ್ಯ ವಿಮ ಮತ್ತು ಇತರ ವಿಷಯಗಳ ಪರಿಶೀಲನೆ ನಡೆಸುವುದು

ನಗರದ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಭೆ

ಇಂಜಿನಿಯರಿಂಗ್ ಕಾರ್ಮಿಕರ ನಿಕ್ಕಿ ಟಿರಿಯಡ್ ನೈಸ್ಟ್ ನಿಷ್ಟ ಸಿಸುವ ಸಲುವಾಗಿಯೂ ಮತ್ತು ತೊಂದರೆಗೀಡಾಗಿರುವ ಕಾರ್ಮಿಕರಿಗೆ ಪರಿಹಾರ ದೊರಕಿಸುವ ಸಲುವಾಗಿಯೂ ನಗರದ ಎಲ್ಲ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಭೆಯು ನಾಳೆ ಬೆಳಗ್ಗೆ ೧೧ ಘಂಟೆಗೆ ಹೋಟೆಲು ಕೆಲಸಗಾರರ ಸಂಘದಲ್ಲಿ ಏರ್ಪಾಡಾಗಿದೆ ಕಾರ್ಮಿಕ ಮುಖಂಡರು ಸಹಕರಿಸಿ ಸಲಹೆಯನ್ನೀಯ ಬೇಕೆಂದು ಕೋರಲಾಗಿದೆ.

ಹಸುವಿನ ಕರುವಿಗೆ ಹಾಲು ಕೊಡುವ ನಾಯಿ

ಮುವನಹಳ್ಳಿಯ ಬಳಿ ಮೇಕಲ ವಾಂಡ್ಲಹಳ್ಳಿಯಲ್ಲಿ ಒಬ್ಬ ರೈತನ ಹಸುವು ಕರುವನ್ನು ಹಾಕಿ ಸತ್ತು ಹೋಯಿತು. ಅವನ ಮನೆಯಲ್ಲಿದ್ದ ಹೆಣ್ಣು ನಾಯಿಯು ಅದೇ ಸಮಯದಲ್ಲಿ ಮರಿಗಳನ್ನು ಹಾಕಿತ್ತು. ಅದರ ಮರಿಗಳು ಮುಖ್ಯಾಗಿ ಮೃತವಾದ ಅವುಗಳನ್ನ ಹೊರೆ ಎತ್ತಿಕೂ ಹಾಕೋಗಲು ನಾಯಿಯು ತಾಯಿ ಇಲ್ಲದ ಹಸುವಿನ ಕರುವಿಗೆ ಹಾಲನ್ನು ಕೊಟ್ಟು ಸಾಕುತ್ತಿದೆ ಸಾವಿರಾರು ಮಂದಿ ಇದನ್ನು ನೋಡಿ ಹೋಗುತ್ತಿದ್ದಾರೆ

ಪ್ರಭುಗಳೊಡನೆ ವಿ. ನಾರಾಯಣರಾಯರ ಭೇಟಿ

ರಾಜಧಾನಿಯ ಬನ್ನೂರ್ ಹಿಲ್ ಏಜೆಂಟರಾದ ಲೋಕಸೇವಾನಿರತ ವಿ. ನಾರಾಯಣರಾಯರು ನೆನ್ನೆ [illegible]

ಫುಟ್ ಬಾಲ್ ಕ್ಲಬ್ಬಿನ ಸಹಾಯಾರ್ಥ ಚಿತ್ರ ಪ್ರದರ್ಶನ

ರಾಜಧಾನಿಯ ಗ್ರೀನ್ ಇಲವೆನ್ಸ್ ಫುಟ್‌ಬಾಲ್ ಕ್ಲಬ್ಬಿನ ಸಹಾಯಾರ್ಥವಾಗಿ ನಾಳೆ ಬೆಳಗ್ಗೆ ೧೦ ಗಂಟೆಗೆ ನಗರದ ಮೋತೀಲಾಲ್ ಚಿತ್ರ ಮಂದಿರದವರು. ವೇಲಾ ಎಂಬ ಚಿತ್ರ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ. ಸರ್ವರೂ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಮಧ್ಯಭಾರತ ಸರ್ಕಾರದಿಂದ ೨ಲಕ್ಷ ಎಕರೆ ಭೂ ದಾನ

ಭೂದಾನ ಯಜ್ಞಕ್ಕಾಗಿ ಮಧ್ಯ ಭಾರತದ ಸರ್ಕಾರದವರು ೨ ಲಕ್ಷ ಎಕರೆ ಜಮೀನನ್ನು ಆಚಾರ್ಯ ವಿನೋಬಾ ಭಾವೆಯವರಿಗೆ ದಾನವಾಗಿ ಕೊಟ್ಟಿರುತ್ತಾರೆ

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ವಿದ್ವಾನ್ ಅರಕೆರೆ ನಾರಾಯಣರಾಯರ ಸಂಗೀತವು ಶ್ರೀ ಬಿ. ಕೆ. ಮೂರ್ತಿಯವರ ಪಿಟೀಲು ಮತ್ತು ವಿ॥ ವಿ. ನಾಗಭೂಷಣಾಚಾರ್ಯರ ಡೋಲಕ್ ಮತ್ತು ವಿ॥ ಟಿ. ಎಂ. ವೆಂಕಟೇಶ ದೇವರುರವರ ಮೃದಂಗಗಳೊಡನೆ ನಡೆಯುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಸಂಜೆ [illegible] ಮತ್ತು [illegible] ಮಂಗಳಂ ಮತ್ತು ೬ ಲಕ್ಷ, ಸಂಗೀತ [illegible] ಮತ್ತು ಎಸ್. ಎಲ್. ಶ್ರೀ [illegible] ಗಾಯನ ೬ ೩ ಎಂ [illegible] ಸುಬ್ರಹ್ಮಣ್ಯಂ [illegible] ಚಿತ್ರವಾಣಿ [illegible] ಪಟ್ಟಿಯವರ ಕ [illegible]

ಸೂಕ್ತ ಬಹುಮಾನ

ಒ ಟಿಕೆ ಚಿನ್ನದ ಸರವೊಂದು ಕಳೆದು ಹೋಗಿದೆ. [illegible] ಶ್ರೀ ಟಾಕೀಸ್ ಹತ್ತಿರ ಮೊಹಲ್ಲ ಮಂಡಿಮಗಡಿ ಫುಟ್ ಪಾತಿನ ಬಳಿ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಿದರೆ ಅದನ್ನು ಸಾಧ್ವಿ ಕಛೇರಿಗೆ ತಲುಪಿಸಿದಲ್ಲಿ ಸೂಕ್ತ ಬಹುಮಾನ ಕೊಡಲಾಗುತ್ತದೆ

ಕೊಟ್ಟಾಯದಲ್ಲಿ ನೀರಿನ ಕ್ಷಾಮ

ತಿರುವಾಂಕೂರಿನ ಬಳಿ ಕೊಟ್ಟಾಯಮ್ಮನಲ್ಲಿ ನೀರಿನ ಅಭಾವವು ಬಹಳವಾಗಿ, ಒಂದು ಗ್ಯಾಲನ್ನಿಗೆ ಆರು ಕಾಸಿನಂತೆ ಅದರ ಮಾರಾಟವಾಗುತ್ತಿರುವುದೆಂದೂ, ಕೆರೆ, ಕಟ್ಟೆ, ಬಾವಿಗಳೆಲ್ಲವೂ ಒಣಗಿ ಹೋಗಿರುವುವೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆಣೆ	ರೂ. ಆ
ಕಡಲೆಕಾಯಿ	೨೪ ೦ ೦	೨೬ ೦ ೦
ಎಳ್ಳು	೩೩ ೦ ೦	
ಹರಳುಬೀಜ	೩೩ ೦ ೦	೩೬-೦-೦
ಹುಚ್ಚೆಳ್ಳು	೨೮-೩-೦	
ಕೊಂಗೇಬೀಜ	೨೦ ೦ ೦	೨೨ ೮ ೦
ಹುರುಳಿ	೪ ೧೦ ೦	೪ ೬ ೦
ಅವರೆ	೩೫ ೦ ೦	
ಅಲಸಂದೆ	೪೪ ೦ ೦	
ಹಲಸಂದೆ	೪೫ ೦ ೦	೫೮-೦-೦
ಉದ್ದು	೫೩-೦-೦	
ಮೆಣಸಿನ		
ಕಾಯಿ ಮೆಣಸು	೧೬ ೩ ೦	
ಹುಣಸೇಹಣ್ಣು	೬ ೯ ೦	೩ ೧೦ ೦
ಬೆಲ್ಲ(ಕಾ)	೪-೭ ೦	೪ ೧೨ ೦
ಬೆಣ್ಣೆ	೩ ೬ ೦	
ಕೊಬರಿಕಾಯಿ		
ಗೋಧಿ	೨೨ ೦ ೦	೨೭ ೦ ೦

SRI GAYATHRI

TALKIES

From 12-4-53 For 2 Days

20th Century's

DIPLOMATIC COURIER

With Tyron Power, Patricia Neal

NEXT CHANGE—

GAS LIGHT

ಗೃಹಕೃತ್ಯದ ನೋಟೀಸು

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಬೆಸ್ತಗೇರಿ 507 ನೇ ನಂಬರು ಮನೆಯಲ್ಲಿರುವ ಲೇಟ್ ಬಸವಯ್ಯನವರ ಮಗ ಹಾಲಿನ ವ್ಯಾಪಾರದ ಮರಿಯಪ್ಪನ ಸರ್ವರಿಗೂ ತಿಳಿಯಪಡಿಸುವುದೇನೆಂದರೆ - ರಾಜಧಾನಿಯ ಚಾಮುಂಡಿಪುರದ ಹೊಸ ಬಂಡಿಕೇರಿಯ 2595 ನೇ ನಂಬರು ಮನೆಯಲ್ಲಿರುವ ಬೊಮ್ಮಾಡಹಳ್ಳಿ ಲಿಂಗಯ್ಯ, ಅವರ ಹೆಂಡತಿ ಲಕ್ಕಮ್ಮ ಇವರುಗಳ ಮಗ ಸಿದ್ದಯ್ಯ ಮತ್ತು ನನ್ನ ಅಕ್ಕ ಬೋರಮ್ಮ ಇವರುಗಳು ನನ್ನ ಹೆಂಡತಿ ಪುಟ್ಟಮ್ಮನನ್ನು ಅನೇಕ ಬಾರಿ ಕೇಳಿದಾಗ್ಯೂ ಕಳುಹಿಸದೆ ಇರುತ್ತಾರೆ

ಈ ಮೇಲ್ಕಂಡವರು ನನ್ನ ಪತ್ನಿ ಪುಟ್ಟಮ್ಮನನ್ನು ಇನ್ನು 8 ದಿನಗಳೊಳಗೆ ನನ್ನ ವಶಕ್ಕೆ ಒಪ್ಪಿಸಬೇಕು. ಇಲ್ಲವೇ ಪುಟ್ಟಮ್ಮನು ಸ್ವತಃ ನನ್ನ ಬಳಿಗೆ ಬರಬೇಕು. ಅದಕ್ಕೆ ತಪ್ಪಿದರೆ ನಾನು ಮುಂದೆ ಮಾಡಿಕೊಳ್ಳುವ ಬೇರೆ ವ್ಯವಸ್ಥೆಗಳಿಂದ ಸದರಿ ಪುಟ್ಟಮ್ಮನು ನನ್ನಿಂದ ಯಾವ ವಿಧವಾದ ಸಂಹಾರವನ್ನೂ ಪಡೆಯಲು ಅರ್ಹಳಾಗುವುದಿಲ್ಲ

ಮೈಸೂರು 10-4-53 } ಬಿ. ಮರಿಯಪ್ಪ

REMEMBER ABIDS AUCTION

To-morrow : at 10 A. M.

Furniture Marcellis 14 Electric Fan Oscillating Frigidaire Radios Cycles Etc

ಮೋತೀಲಾಲ್ ಟಾಕೀಸ್

(ಮಂಡಿ ಮೊಹಲ್ಲಾ, ಮೈಸೂರು)



ತಾ॥ 10-4-53 ರಿಂದ

ಅಮೋಘ ಪ್ರಾರಂಭ

[illegible]

ಪಾಠ ಪೆರಂದವಳ್

(ಹೆಣ್ಣಿನ ಬಾಳು)

ಪಾತ್ರ - ಶ್ರೀರಂಜನಿ, ಟಿ. ಆರ್. ರಾಜಕುಮಾರಿ, ಪಿ. ಎಸ್. ಸರೋಜ. ಸಂಗೀತಯ್ಯಾಯಿ ಟಿ. ಎಸ್. ಬಾಲಯ್ಯ, ಸಾರಂಗಪಾಣಿ

[ಸರ್ವರ ಏರ್ಪಾಡ್

ಪ್ರದರ್ಶನ - ಮ್ಯಾಟಿನಿ 2-45ಕ್ಕೆ, 1ನೇ ಆಟ 6-30ಕ್ಕೆ, 2ನೇ ಆಟ 10ಕ್ಕೆ

ಬರುತ್ತಿದೆ — ಉಜ್ವಲ ಮತ್ತು ಜಿ ಫಿಲಂಸ್‌ರವರ ಕನ್ನಡ ಚಿತ್ರ

ಪಣಕ್ಕಾರಿ

ಪಾತ್ರ - ವಿ. ನಾಗಯ್ಯ, ಎಂ. ವಿ. ರಾಜಮ್ಮ, ಚಂದ್ರ, ಟಿ. ಆರ್. ರಾಜಕುಮಾರಿ

Edited, Printed and Published by A R Nagarajan at Sadhvi Press, D. Subbiah Road, Mysore.

ರೋ. ನಂ. 792 WEEKLY EDITION ಬಿಡಿ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೩-೪-೧೯೫೩ [ಸಂಚಿಕೆ ೩೩

ಮಂಗಳೂರು ಖಜಾನೆಯಲ್ಲಿ ೧॥ ಲಕ್ಷ ರೂ. ದಸ್ತು

ಟೌನ್‌ಹಾಲ್ ಬಳಿ ಆಹಾರ ಸತ್ಯಾಗ್ರಹ

ಮೈಸೂರು ೧೨

ರಾಜಧಾನಿಯ ಆಹಾರ ಕ್ರಿಯಾ ಸಮಿತಿಯವರು ಪ್ರಾರಂಭಿಸಿದಂತೆ, ಈ ದಿನ ಬೆಳಿಗ್ಗೆ ೧೧ ಗಂಟೆಯಿಂದ ಹನ್ನೆರಡು ಗಂಟೆ ಕಾಲದ ಸಾಮೂಹಿಕ ಉಪವಾಸ ಸತ್ಯಾಗ್ರಹವನ್ನು ಟೌನ್‌ಹಾಲ್ ಮೈದಾನದಲ್ಲಿ ಆಚರಿಸಲಾಯಿತು. ಸತ್ಯಾಗ್ರಹ ಶಿಬಿರದ ಆವರಣದಲ್ಲಿ ಇಬ್ಬರು ಹುಡುಗರೂ, ಒಬ್ಬ ಮಹಿಳೆಯೂ ಸೇರಿ ಒಟ್ಟು ೩೫ ಮಂದಿ ಸತ್ಯಾಗ್ರಹವನ್ನು ಆಚರಿಸುತ್ತಿದ್ದರು. ಶ್ರೀ ಎಂ. ಆರ್. ಸಿ. ಬಸಪ್ಪನವರೂ ಸತ್ಯಾಗ್ರಹದಲ್ಲಿ ಭಾಗವಹಿಸಿರುವರು. ಶ್ರೀ ಎಂ. ಎಸ್. ತಿಮ್ಮಯ್ಯ ಮುಂತಾದ ಕ್ರಿಯಾ ಸಮಿತಿ ಸದಸ್ಯರು ಮೇಲ್ವಿಚಾರಣೆಯಲ್ಲಿರುವರು

ರಾಜಸ್ಥಾನದಲ್ಲಿ ಮತ್ತೆ ಮಂತ್ರಿಗಳ ರಾಜೀನಾಮೆ

ರಾಜಸ್ಥಾನದ ಮುಖ್ಯ ಮಂತ್ರಿ ಜೈನಾರಾಯಣ್ ವ್ಯಾಸ್‌ರವರು, ಉಪ ಮುಖ್ಯ ಮಂತ್ರಿ ಟೀಕಾರಾಂ ಪಲಿವಾಲ್ ಮತ್ತು ವಿದ್ಯಾ ಮಂತ್ರಿ ನಾಥೂರಾಂ ಮಿರ್ಧಾರವರ ರಾಜೀನಾಮೆ ಪತ್ರಗಳನ್ನು ರಾಜಪ್ರಮುಖರ ಮಂಜೂರಾತಿಗಾಗಿ ಒಪ್ಪಿಸಿರುತ್ತಾರೆಂದು ವರದಿಯಾಗಿದೆ. ಇಲ್ಲಿನ ಕೈಗಾರಿಕಾ ಮಂತ್ರಿ ರಾವ್ ಕೆಸ್ರೀಸಿಂಗ್‌ರವರು ತಾವು ಮಂತ್ರಿ ಮಂಡಲದಲ್ಲಿರಲು ಸಾಧ್ಯವಿಲ್ಲವೆಂದು ಮುಖ್ಯ ಮಂತ್ರಿಯವರಿಗೆ ತಿಳಿಸಿರುವುದಾಗಿಯೂ ಹೇಳಲಾಗಿದೆ

ಬಾರ್ ಕೌನ್ಸಿಲ್ಲಿಗೆ ಚುನಾವಣೆ

ಅಖಿಲ ಭಾರತ ವಕೀಲರುಗಳ ಸಂಘದ ಕೌನ್ಸಿಲ್ಲಿನ ಸಂಸ್ಥಾಪನದ ನಂತರ ನೆನ್ನೆ ಚುನಾವಣೆಯು ಇದೇ ಪ್ರಥಮವಾಗಿ ನಡೆದು, ೧೦ ಸ್ಥಾನಗಳಿಗೆ ೪೦ ಜನರು ಸ್ಪರ್ಧಿಸಿ ಕೆಳಗೆ ಕಂಡವರು ಆರಿಸಿ ಬಂದಿರುವರು —

ಶ್ರೀಗಳಾದ ವಿ.ಆರ್. ಇಕ್ಬಾಲ್ ಹುಸೇನ್, ಚಿಟ್ಲೂರು ಶ್ರೀನಿವಾಸರಾವ್, ಎಂ. ಪಿ. ಸೋಮಶೇಖರರಾವ್, ವಿ. ಕೃಷ್ಣಮೂರ್ತಿ, ಜಿ. ಯತಿರಾಜುಲು ನಾಯ್ಡು, ಹೆಚ್. ಲಿಂಗಪ್ಪ, ಡಿ. ಹೆಚ್. ಚಂದ್ರಶೇಖರಯ್ಯ, ಎಂ. ಲಕ್ಷ್ಮೀನಾರಾಯಣರಾವ್, ಎಂ. ಸದಾನಂದ ಸ್ವಾಮಿ ಮತ್ತು ಎಸ್. ಕೆ. ವೆಂಕಟರಂಗಯ್ಯಂಗಾರ್

ವಕೀಲರ ಸಮ್ಮೇಳನದ ಅಧ್ಯಕ್ಷರು

ಹಾಸನದಲ್ಲಿ ಬರುವ ತಿಂಗಳು ೨ ಮತ್ತು ೩ ನೇ ತಾ|| ಸೇರಲಿರುವ ಸಂಸ್ಥಾನದ ವಕೀಲರುಗಳ ಸಮ್ಮೇಳನದ ಅಧ್ಯಕ್ಷರಾಗಿ ಬೆಂಗಳೂರಿನ ಶ್ರೀ ಎಂ. ಪಿ. ಸೋಮಶೇಖರರಾಯರು ಆರಿಸಲ್ಪಟ್ಟಿರುತ್ತಾರೆ

ಆಹಾರ ಬೆಳೆಯ ಸ್ಪರ್ಧೆಗಾರರಿಗೆ ಸೂಚನೆ

ಸಂಸ್ಥಾನಗಳು ನಡೆಸುವ ಆಹಾರ ಬೆಳೆಯ ಸ್ಪರ್ಧೆಗಳಲ್ಲಿ ಭಾಗವಹಿಸಿ, ಅತ್ಯಧಿಕ ಬೆಳೆ ತೆಗೆದವರು ಮಾತ್ರ ಅಖಿಲ ಭಾರತ ಸ್ಪರ್ಧೆಯಲ್ಲಿ ಬಹುಮಾನ ಪಡೆಯಲು ಅರ್ಹರಾಗುವರೆಂದು ಸರ್ಕಾರದ ಪ್ರಕಟಣೆಯೊಂದರಲ್ಲಿ ಸೂಚಿಸಲಾಗಿದೆ. ಸ್ಪರ್ಧೆಯಲ್ಲಿ ನಮೂದಿಸದೆ ಇರುವ ಬೆಳೆಗಳನ್ನು ತೆಗೆದವರು ಬಹುಮಾನಕ್ಕೆ ಅರ್ಹರಾಗುವುದಿಲ್ಲ

ಮಂಗಳೂರು ಖಜಾನೆಯಲ್ಲಿ ೧॥ ಲಕ್ಷ ರೂ. ದಸ್ತು

ನಾಲ್ವರ ದಸ್ತಗಿರಿ

ಮಂಗಳೂರು ಖಜಾನೆಯಲ್ಲಿ ೧೯೫೧ನೇ ಸೆಪ್ಟೆಂಬರ್ ತಿಂಗಳಿಂದ ಮೊನ್ನೆವರೆಗೆ ೧,೪೦,೦೦೦ ರೂ ಗಳನ್ನು ದುರುಪಯೋಗಪಡಿಸಲಾಗಿರುವುದೆಂದೂ, ಈ ಸಂಬಂಧವಾಗಿ ಡೇವಿಡ್ ರಾಬರ್ಟ್ಸ್ ಮತ್ತು ವಿಶ್ವನಾಥ ಅಯ್ಯರ್ ಎಂಬ ಕಛೇರಿಯ ಇಬ್ಬರು ಗುಮಾಸ್ತರ ದಸ್ತಗಿರಿಯಾಗಿರುವುದಾಗಿಯೂ ಗೊತ್ತಾಗಿದೆ. ಇವರಲ್ಲದೆ ನಿವೃತ್ತ ತಹಸೀಲ್ದಾರ್ ವಿಕ್ಟರ್ ಸಾಲ್ಡಾನಾ ಮತ್ತು ಖಜಾನೆ ಷರಾಫ್ ಅನ್ವರ್ ಹುಸೇನರವರುಗಳನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡಲಾಗಿದೆ. ರಾಬರ್ಟ್ಸ್‌ರವರ ಮನೆಯಲ್ಲಿ ೬,೦೦೦ ರೂ ಬೆಲೆಯ ಒಡವೆ, ಮನೆಯ ಸಾಮಾನು ಮತ್ತು ರೇಡಿಯೊಗಳನ್ನೂ, ಬ್ಯಾಂಕು ಡಿಪಾಜಿಟ್, ಪ್ರಾಮಿಸರಿ ನೋಟು ಮುಂತಾದ ೬೨,೦೦೦ ರೂ ಬೆಲೆಯ ಕಾಗದ ಪತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ

ಸದರಿ ಗುಮಾಸ್ತೆಯು ತಿಂಗಳಿಗೆ ೧೦೦ ರೂ ವಿರಾಮ ವೇತನದ ಒಂದು ಪತ್ರವನ್ನು ಸೃಷ್ಟಿಸಿ, ೧೯೫೦ನೇ ಏಪ್ರಿಲ್ಲಿನಿಂದ ಹಣವನ್ನು ತಾನೇ ಪಡೆಯುತ್ತಿದ್ದ, ಒಂದು ಬಾರಿ ೧೫,೨೦೦ ರೂ ಗಳನ್ನು ತೆಗೆದುಕೊಂಡನೆಂದೂ, ಹೊಸ ಗುಮಾಸ್ತನೊಬ್ಬನ ಕೈಗೆ ಕಡೆಯ ರಶೀತಿಯು ಸಿಕ್ಕಿದಾಗ ಈ ಮೋಸದ ಪ್ರಸಂಗವು ಪತ್ತೆಯಾಯಿತೆಂದೂ ವರದಿಯಾಗಿದೆ

ಸೂಚನೆ

ಸೌರಮಾನ ಯುಗಾದಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಟಿ. ಚಲುವಾಚಾರ್ಯರ ಮನೆಯಲ್ಲಿ ಕಳ್ಳತನ

ರಾಜಧಾನಿಯ ಗಾಯತ್ರೀ ಟಾಕೀಸಿನ ಮಾಲೀಕರು, ಶ್ರೀ ಟಿ. ಚಲುವಾಚಾರ್ಯರ ಮನೆ ಕಿಟಕಿಯ ಸಲಾಕಿಯನ್ನು ಮುರಿದು ಮೊನ್ನೆ ರಾತ್ರಿ ಕಳ್ಳರು ನುಗ್ಗಿ, ಪೆಟ್ಟಿಗೆಯ ಬೀಗವನ್ನು ಒಡೆದು ೪,೫೫೦ ರೂ ಬೆಲೆ ಬಾಳುವ ಚಿನ್ನದ ನಗಗಳನ್ನು ಅಪಹರಿಸಿಕೊಂಡು ಹೋಗಿರುವುದಾಗಿ ಗೊತ್ತಾಗಿದೆ

ಎಂ. ಪಿ. ಕೊಯಿರಾಲಾ ಮತ್ತೆ ನೇಪಾಳದ ಪ್ರಧಾನಿ

ಮಾಜಿ ಪ್ರಧಾನಿ ಎಂ. ಪಿ. ಕೋಯಿರಾಲಾರವರ ಮುಖಂಡತ್ವದಲ್ಲಿ ಪಕ್ಷೇತರ ಮಂತ್ರಿಮಂಡಲವನ್ನು ಸ್ಥಾಪಿಸಲು ನೇಪಾಳದ ದೊರೆ ತ್ರಿಭುವನರು ನಿರ್ಧರಿಸಿರುತ್ತಾರೆ. ಮಂತ್ರಿಮಂಡಲದಲ್ಲಿ ೭ ಅಥವಾ ಒಂಬತ್ತು ಮಂದಿ ಸದಸ್ಯರಿರುವರು

ಜಾವಾದಲ್ಲಿ ಪರ್ವತದ ಚಲನೆ

ಮಧ್ಯ ಜಾವಾದಲ್ಲಿರುವ ಜೆಲಿರಿಕ್ ಎಂಬ ಬೆಟ್ಟವು ಕಳೆದ ೧೯ನೇ ತಾ|| ನಿಂದ ಗಂಟೆಗೆ ೧೭ ಸೆಂಟಿ ಮೀಟರಿನಂತೆ ಸರಿಯುತ್ತಿರುವುದೆಂದು ವರದಿಯಾಗಿದೆ. ಬೆಟ್ಟವು ಮುಂದಕ್ಕೆ ಬಂದಂತೆಲ್ಲಾ ೩೫ ಎಕರೆಯ ಬತ್ತದ ಗದ್ದೆಗಳೂ ಮರಗಳೂ, ಸಸ್ಯಗಳೂ ಮುಚ್ಚಿಹೋಗಿವೆ. ಒಂದು ಸೇತುವೆಯು ಅದೃಶ್ಯವಾಗಿದೆ. ಅತಿವೃಷ್ಟಿಯಿಂದ ಹೀಗಾಗಿರಬಹುದೆಂದು ಊಹಿಸಲಾಗಿದೆ. ಆದರೆ ಸ್ಥಳೀಯ ಜನರ ಹೇಳಿಕೆ ಪ್ರಕಾರ, ಬೆಟ್ಟದ ಅಡಿಯಲ್ಲಿರುವ 'ಉಲಾರ್ ಗ್ರಿಂಗ್ ಸಿಂಗ್' ಎಂಬ ಸರ್ಪ ದೇವತೆಯು ರೋಷದಿಂದ ಅದು ತೆವಳುತ್ತಿರುವುದರಿಂದ ಬೆಟ್ಟವು ಚಲಿಸುತ್ತಿದೆಯೆಂದು ಗೊತ್ತಾಗಿದೆ

ಇನಾಂ ಮಸೂದೆ ಸಮಿತಿಯ ಹಿರಿಯ ಸಭಾ ಸದಸ್ಯರು

ಇನಾಂ ಮಸೂದೆಯ ಪರಿಶೀಲನೆಗಾಗಿ ಏರ್ಪಟ್ಟಿರುವ ಎರಡು ಶಾಸನ ಸಭೆಗಳ ಜಂಟಿ ಚುನಾಯಿತ ಸಮಿತಿಗೆ ಹಿರಿಯ ಸಭೆಯಿಂದ ಕೆಳಗೆ ಕಂಡವರು ಆರಿಸಲ್ಪಟ್ಟಿರುತ್ತಾರೆ — ಶ್ರೀಗಳಾದ ಎ. ಎಸ್. ರಾಮರಾವ್, ಶ್ರೀ ಸಿ. ಜಿ. ದೇವನಾಥ್, ಎಸ್. ವೀರಬಸಪ್ಪ, ಎಸ್. ಪಿ. ಗೋವಿಂದಗೌಡ, ಆರ್. ಸಿ. ಕೇಶವಣ್ಣ ಮತ್ತು ಎಂ. ಎಸ್. ಜೋಯಿಸ್

ಯಕ್ಷಗಾನ

ಮೈಸೂರು ಮಂಡಿ ಮೊಹಲ್ಲೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಹನುಮಂತಪ್ಪ ಶಿಲ್ಪಿ ಶ್ರೀಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ಕೃಷ್ಣ ಸಂಧಿ ಎಂಬ ಹರಿಕಥೆಯು ಯಕ್ಷಗಾನ ರೂಪದಲ್ಲಿ ನಡೆಯುವುದು

ಮದ್ರಾಸಿನಲ್ಲಿ ಟ್ರಾಂ ಸಂಚಾರವಿಲ್ಲ

ಮದ್ರಾಸಿನಲ್ಲಿ ೫೫ ವರ್ಷಗಳಿಂದ ನಡೆದುಕೊಂಡು ಬಂದಿರುವ ಟ್ರಾಂ ಗಾಡಿಗಳ ಸಂಚಾರವು ಇಂದಿನಿಂದ ನಿಲ್ಲಿಸಲ್ಪಡುವುದೆಂದು ವರದಿಯಾಗಿದೆ. ಕಂಪೆನಿಯ ಪಾಲು ಹೋಲ್ಡರುಗಳ ಪರವಾಗಿ ನೇಮಕವಾಗಿರುವ ಧರ್ಮದರ್ಶಿಗಳ ಸೂಚನೆಯಂತೆ ರಿಸೀವರ್ ಬ್ರಾಕ್ಸ್‌ರವರು ಕಂಪೆನಿಯ ಆಸ್ತಿಪಾಸ್ತಿಗಳನ್ನು ವಹಿಸಿಕೊಳ್ಳಲಿರುವರೆಂದೂ, ಅವರು ಟ್ರಾಂಗಳನ್ನು ಓಡಿಸಲು ಸಮ್ಮತಿಸಿಲ್ಲವೆಂದೂ ಗೊತ್ತಾಗಿದೆ. ಕಂಪೆನಿಗೆ ಮಾಹೆಯಾನ ೪೦,೫೦ ಸಾವಿರ ರೂ ಗಳಷ್ಟು ನಷ್ಟ ಸಂಭವಿಸುತ್ತಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ. ಟ್ರಾಂಕಾರ್‌ಗಳನ್ನು ನಿಲ್ಲಿಸದೆ ನಡೆಸಿಕೊಂಡು ಬರುವಂತೆ ಪ್ರತಿಪಕ್ಷದವರಿಗೆ ಸರ್ಕಾರದವರು ತಿಳಿಸಿರುವರೆಂದೂ, ಪ್ರಾಯಶಃ ನಾಳಿದ್ದಿನಿಂದಲೇ ಅದು ಮತ್ತೆ ಪ್ರಾರಂಭವಾಗಬಹುದೆಂದೂ ಹೇಳಲಾಗಿದೆ

ತಿರುವಾಂಕೂರಿನಲ್ಲಿ ೫೦ ಸಾರಿ ಭೂಕಂಪ

ಕಳೆದ ಅಕ್ಟೋಬರಿನಿಂದ ತಿರುವಾಂಕೂರಿನ ಕೊಟ್ಟಾಯಂ ಬಳಿ ಇರುವ ಗುಡ್ಡ ಪ್ರದೇಶದಲ್ಲಿ ೫೦ ಕ್ಕೂ ಹೆಚ್ಚು ಬಾರಿ ಭೂಕಂಪನಗಳಾಗಿರುವುದಾಗಿ ವರದಿಯಾಗಿದೆ. ಕಳೆದ ಗುರುವಾರವೂ ಈ ಭೂಮಿಯು ನಡುಗಿ ಕಟ್ಟಡಗಳು ಅದುರಿತು. ಕೇಂದ್ರ ಸರ್ಕಾರದ ಭೂಗರ್ಭ ಇಲಾಖೆಯವರಿಂದ ತನಿಖೆ ನಡೆಯುತ್ತಿದೆ

ಪಬ್ಲಿಕ್ ಲೈಬ್ರರಿ ಕಾರ್ಯದರ್ಶಿ

ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರದ ಕಾರ್ಯಕಾರಿ ಸಮಿತಿಯ ಸಭೆಯು ಈ ದಿನ ಬೆಳಿಗ್ಗೆ ಶ್ರೀ ಹೆಚ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಸೇರಿ, ಪತ್ರಿಕೋದ್ಯೋಗಿಗಳಾದ ಶ್ರೀ ಎಸ್. ಶ್ರೀನಿವಾಸಮೂರ್ತಿಯವರನ್ನು ಸರ್ವಾನುಮತದಿಂದ ಕಾರ್ಯದರ್ಶಿಗಳಾಗಿ ಚುನಾಯಿಸಲಾಯಿತು.

ವೀರಣ್ಣಗೌಡರು ಮತ್ತು ಎಸ್. ಚೆನ್ನಯ್ಯನವರಿಗೆ ಸನ್ಮಾನ

ಮೈಸೂರು ತಾಲ್ಲೂಕಿನ ಮಹಾಜನರು ಕುಪ್ಪೇಗಾಲ ಗ್ರಾಮದಲ್ಲಿ ಇದೇ ೧೫ ನೇ ತಾ|| ಬುಧವಾರ ಸಂಜೆ ೬ ಗಂಟೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರಿಗೆ ಬಿನ್ನವತ್ತಳೆಯನ್ನೂ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರಿಗೆ ಸನ್ಮಾನ ಪತ್ರವನ್ನೂ ಅರ್ಪಿಸುವರು. ಅನಂತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಗ್ರಾಮದ ವಿದ್ಯುದ್ದೀಪಗಳ ಪ್ರಾರಂಭೋತ್ಸವವನ್ನು ನೆರವೇರಿಸುವರು.

○ ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರು ಶ್ರೀ ಎನ್. ಸಿ. ಚಟರ್ಜಿಯವರು ದೆಹಲಿಯಲ್ಲಿ ಸಭೆ ಮೆರವಣಿಗೆ ಮುಂತಾದುವುಗಳ ಬಗ್ಗೆ ಇರುವ ನಿರ್ಬಂಧಾಜ್ಞೆಯನ್ನು ಉಲ್ಲಂಘಿಸಿದ ಸಂಬಂಧವಾಗಿ ಅವರ ಮೇಲೆ ಹೂಡಲಾಗಿದ್ದ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಲಾಗಿದೆ

ವಾರ ಭವಿಷ್ಯ

೧೨-೪-೫೩ ರಿಂದ ೧೮-೪-೫೩ರ ವರೆಗೆ

ಮೇಷ—ಸಂಬಂಧಿಕರೊಬ್ಬರ ಮರಣದ ಮೂಲಕ ಭಾರಿ ಐಶ್ವರ್ಯ ದೊರೆಯುವ ಸಂಭವ. ವ್ಯಾಪಾರಿಗಳ ಸ್ಥಿತಿ ಸರಿಯಾಗಿರುವುದಿಲ್ಲ ಸಟ್ಟಾ ವ್ಯಾಪಾರದಿಂದ ನಾಶ, ಆಯಾಸದ ಪ್ರವಾಸ ಭಾಗ್ಯ ನಾಶ.

ವೃಷಭ—ನಿರುದ್ಯೋಗಿಗಳಿಗೆ ಉದ್ಯೋಗ, ವ್ಯಾಪಾರಗಾರರಿಗೆ ಹರ್ಷವಿರದು, ಬಹಳ ದಿನಗಳ ಯಾತ್ರೆ ಕೈಗೂಡುವುದು, ಧಾರ್ಮಿಕ ಕಾರ್ಯಗಳಲ್ಲಿ ಪಾತ್ರ

ಮಿಥುನ—ನ್ಯಾಯಕ್ಷೇತ್ರ ಮತ್ತು ವ್ಯಾಪಾರಿ ಸಂಬಂಧಗಳು ಉತ್ತಮ, ನೌಕರರ ಉನ್ನತಿ, ಹೊಸ ಉದ್ಯಮಗಳಲ್ಲಿ ಬಂಡವಾಳ ಹಾಕುವ [illegible] ಕಡೆಗಳಲ್ಲಿ ಹರ್ಷವಿರದ, ಪತಿ ಪತ್ನಿ [illegible] ನೌಕರರಿಂದ ತೊಂದರೆ

ಕರ್ಕ—[illegible] ವ್ಯವಹಾರ [illegible] ನೌಕರರಿಗೆ [illegible] ಮತ್ತು [illegible] ನಷ್ಟವಿಲ್ಲ [illegible]

ಸಿಂಹ—ದೂರ ಪ್ರವಾಸ [illegible] ಯಕ ಸಂಪರ್ಕ, ನೌಕರರಿಗೆ [illegible] ವಾರದ ಕಡೆಯಲ್ಲಿ ಉತ್ತಮ [illegible] ನ ಆದಾಯ

ಕನ್ಯಾ—[illegible] ಯು, ಸಂಬಂಧಿಕರ [illegible] ಭಾವನೆ, ವ್ಯಾಪಾರಿಗಳ [illegible] ಯಾಸದ ಪ್ರವಾಸ [illegible]

ತುಲಾ—[illegible] ಪತ್ನಿ ಪುತ್ರರಿಗೆ ಅನಾರೋಗ್ಯ [illegible] ವ್ಯಾಪಾರಿಗಳ [illegible] ಯುಲ್ಲಿ ಉತ್ತಮ

ವೃಶ್ಚಿಕ—ಒಳ್ಳೆಯ ದಿನಗಳು [illegible] ವೆ, ಪ್ರಭಾವ ಶಾಲಿ ಜನರ ಸಂಪರ್ಕ ನೌಕರರಿಗೆ ತೊಂದರೆ ವ್ಯಾಪಾರಿಗಳ ಉತ್ತೇಜನಕರ, [illegible] ಕ್ಷೇತ್ರದಲ್ಲಿ ತೃಪ್ತಿ

ಧನುಸ್ಸು—[illegible] ನೌಕರರಲ್ಲಿ [illegible] ವ್ಯಾಪಾರಿಗಳಿಗೆ ಲಾಭ, ಗೃಹಕೃತ್ಯದ [illegible] ಪ್ರಯಾಣ ಸಂಭವ

ಮಕರ—ವ್ಯಾಪಾರಿಗಳಿಗೆ [illegible] ಗಳ ಕಿರುಕುಳ, ನೌಕರರಿಗೆ [illegible] ತ್ರಿ, ಪತ್ನಿಗೆ ಉತ್ತಮ ಮಕ್ಕಳಿಗೆ [illegible]

ಕುಂಭ—[illegible] ನೌಕರರಲ್ಲಿ ಜಗಳ ವ್ಯಾಪಾರಿಗಳಿಗೆ ಲಾಭ, ಪತ್ನಿ ಪುತ್ರರಿಗೆ ಅನಾರೋಗ್ಯ

ಮೀನ—[illegible] ಲಾಭ, ಜಮೀನ [illegible] ನೌಕರರಿಗೆ [illegible] ಪ್ರಸಂಗ ವ್ಯಾಪಾರಿಗಳಿಗೆ ಉತ್ತೇಜನಕರ [illegible] ತ್ತವ, ಗೃಹಕೃತ್ಯದಲ್ಲಿ ಅನುಕೂಲ

ನಾಳೆ ಮಿಜಾನಿಗೆ ರಜಾ

[illegible] ಯುಗಾದಿ ಪ್ರಯುಕ್ತ ನಾಳೆ ಮೈಸೂರು ಜಿಲ್ಲಾ ಮಿಜಾನಿಗೆ ರಜಾ ಕೊಡಲಾಗಿದೆ

ಭಾರತೀ ಸ್ತ್ರೀ ಸಮಾಜದ ವಾರ್ಷಿಕೋತ್ಸವ

ಮೈಸೂರು ೧೨

ಒಂಟಿಕೊಪ್ಪಲಿನ ಭಾರತೀ ಸ್ತ್ರೀ ಸೇವಾ ಸಮಾಜದ ೧೮ ನೇ ವಾರ್ಷಿಕೋತ್ಸವವು ಕಳೆದ ಗುರುವಾರ ಸಮಾಜದ ಅಧ್ಯಕ್ಷಿಣಿ ಶ್ರೀಮತಿ ಎಂ ಚಲುವೇ ಅರಸಿನವರ ಅಧ್ಯಕ್ಷತೆಯಲ್ಲಿ ಜರುಗಿತು ಸಮಾಜದ ಶಿಶು ವಿಹಾರದ [illegible] ನೇ ವಾರ್ಷಿಕೋತ್ಸವವನ್ನೂ ಸಹ ನಡೆಸಲಾಯಿತು

ಮಕ್ಕಳಿಂದ ಪ್ರಾರ್ಥನೆ, ಸ್ವಾಗತಗಳಾದನಂತರ ಕಾರ್ಯದರ್ಶಿಯವರಾದ ಶ್ರೀಮತಿ ಕೆ ರಾಜಲಕ್ಷ್ಮಮ್ಮನವರು ವರದಿಯನ್ನೊಪ್ಪಿಸಿ. ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶಾಲಿನ ಕೇಂದ್ರದ ಆವಶ್ಯಕತೆಯನ್ನು ವಿವರಿಸಿದರು ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ವಿ[illegible]

[illegible]

ಇಂಟರ್ ಪರೀಕ್ಷೆ ವಿದ್ಯಾರ್ಥಿಗಳಿಗೆ ಸಂಗೀತ ತರಗತಿಗಳು.

[illegible] ಶ್ರೀ ವರಲಕ್ಷ್ಮೀ [illegible] ಸಂಗೀತ ವಿದ್ಯಾರ್ಥಿಗಳಿಗೆ [illegible] ತರಗತಿಗಳನ್ನು [illegible] ನವೆಂಬರ್ ಪ್ರಯೋಜನವನ್ನು ಪಡೆಯಬಹುದೆಂದು ತಿಳಿಸಲಾಗಿದೆ

೬೦ ಸಾವಿರ ರೂ. ಗಡಿಯಾರ

ವರ್ಷಕ್ಕೆ ೧ ಸೆಕೆಂಡಿನಷ್ಟು ವ್ಯತ್ಯಾಸವಾಗದ, ಬಹಳ ಕಾಲ ಕೂಡಿದ ವಿದ್ಯುಚ್ಛಕ್ತಿ ಗಡಿಯಾರವೊಂದನ್ನು ಕಾಶಿಯ ವೇಧಾ ಶಾಲೆಯಲ್ಲಿಡಲು ಉತ್ತರ ಪ್ರದೇಶ ಸರ್ಕಾರದವರು ಏರ್ಪಡಿಸಿರುತ್ತಾರೆ ಅದಕ್ಕೆ ೬೦ ಸಾವಿರ ರೂ. ಬೆಲೆಯಾಗುವುದು ಅದನ್ನು ಜರ್ಮನಿಯಲ್ಲಿ ತಯಾರಿಸಲಾಗಿದೆ

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯ

ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವ ಬಗ್ಗೆ ಶ್ರೀ ಎಸ್ ವಿ ರಾಮಮೂರ್ತಿಯವರು ಕೇಂದ್ರ ಸರ್ಕಾರಕ್ಕೆ ಈ ರೀತಿ ಸಲಹೆಯಿತ್ತಿರುವರು:—

ಗುಂಡ್ಲುಪೇಟೆ ತಾಲ್ಲೂಕು, ಕೆಂಪನ ಕೆರೆ ದುರಸ್ತು ಮುಂತಾದವುಗಳಿಗೆ [illegible] ಲಕ್ಷ ರೂ ; ಚಿತ್ರದುರ್ಗದ ನಾರಾಯಣಪುರದಲ್ಲಿ ಕಾಲಂಗಾರಿ ಕೆಲಸಗಳಿಗಾಗಿ ೧೦ ಲಕ್ಷ ರೂ ಮತ್ತು ಬಲ್ಲಾಳ್ [illegible] ಬಳಿ ಕಾಲಂಗಾರಿಗಾಗಿ ಅರ್ಧ ಲಕ್ಷ ರೂ [illegible] ಹಲವು ಕ್ಷೇತ್ರಗಳಲ್ಲಿ ಕಾಲಂಗಾರಿಗಳನ್ನು ಕೈಗೊಳ್ಳಲಾಗುವುದು

ಶ್ರೀ ವರಲಕ್ಷ್ಮೀ ಕುಶಲ ಕಲಾ ಮತ್ತು ಶಿಲ್ಪಕಲಾ ಮಂದಿರ

ಮೈಸೂರಿನ ಶ್ರೀ ವರಲಕ್ಷ್ಮೀ ಕುಶಲ ಕಲಾ ಕೇಂದ್ರದ ಆಶ್ರಯದಲ್ಲಿ ಕಳೆದ ಯುಗಾದಿ ಹಬ್ಬದ ದಿನದಿಂದ ಕುಶಲ ಮತ್ತು ಶಿಲ್ಪಕಲಾವಿಭಾಗದ ತರಗತಿಗಳನ್ನು ನಡೆಸಲಾಗುತ್ತಿದೆ ಮಹಾಜನರು ಎಂದಿನ ತಮ್ಮಂದಿರಕ್ಕೆ ಪ್ರೋತ್ಸಾಹಕೊಡಬೇಕೆಂದು [illegible] ಕಾರ್ಯದರ್ಶಿಗಳಾದ ಮೈಸೂರು [illegible] ಪ್ರಾರ್ಥಿಸುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ತನ್ನ ನಂತರ ಪತ್ನಿಯು ಆತಂಕದಿಂದ ಕೂಡಿ

ತಾನು ಮಡಿದ ಮೇಲೆ ತನ್ನ ವೃದ್ಧ ಪತ್ನಿಯು ಹೇಗೆ ಜೀವಿಸಿರುವಳೆಂಬ [illegible] ಕುರಿತು ನೋಡಿ [illegible] ಕೋರ್ಟುಗಳನ್ನಿತ [illegible] ಎಂಬ ೮೨ ವರ್ಷದ ವೃದ್ಧನು, ತನ್ನ ಪತ್ನಿಯು ತನ್ನನ್ನು ಹಿಡಿದು ಕೊಂಡುದಾಗಿ ಪೊಲೀಸರಿಗೆ ತಿಳಿಸಿರುತ್ತಾನೆ. ಕೆಲವು ದಿನಗಳ ಹಿಂದೆ ಇವರು ತಮ್ಮ ವಿವಾಹದ ಸುವರ್ಣ ಮಹೋತ್ಸವವನ್ನು ನಡೆಸಿದ್ದರು

ಗಂಥಾಲಕ್ಕೆ ಕಾಂಗ್ರೆಸ್ ಕಾರ್ಮಿಕರ ಸಂಘದ ಆದರದ ಸಗೀರ

ತೊಲ್ಲಂಡ ಸಂಘದ [illegible] ಚುನಾವಣೆಯು ಕಳೆದ ಗುರುವಾರ ನಡೆದು, ಪ್ರಕೃತ ಸಾಲಿಗೆ ಶ್ರೀ ಕೆ ಜಿ ನಂಜುಂಡನ್ ರವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ [illegible] ರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಸುಬ್ರಹ್ಮಣ್ಯಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀ ಎಸ್ ಎಲ್. [illegible] ಯವರು ಸಹಾಯಕ ಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಎ. [illegible] ಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು ಮತ್ತು ಕಾರ್ಯಕಾರಿ ಸಮಿತಿಗೆ ೧೦ ಮಂದಿ ಸದಸ್ಯರನ್ನು ಚುನಾಯಿಸಲಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ಪೈ
[illegible]	[illegible]	[illegible]
ಎಳ್ಳು	[illegible]	
ಹರಳುಬೀಜ	[illegible]	
ಹುಚ್ಚೆಳ್ಳು	[illegible]	[illegible]
ಕಡಲೆಕಾಯಿ	[illegible]	[illegible]
[illegible]	[illegible]	[illegible]
[illegible]	[illegible]	
ಅವರೆ	[illegible]	
[illegible]	[illegible]	[illegible]
ಉಪ್ಪು	[illegible]	
[illegible]		
[illegible]	[illegible]	
[illegible]	[illegible]	[illegible]
[illegible]	[illegible]	[illegible]
ಬೆಲ್ಲ	[illegible]	
[illegible]		
[illegible]	[illegible]	[illegible]

ಮುಸೆಗಳು ಕ್ರಯಕ್ಕಿವೆ

1	[illegible]	1275	[illegible]
2		1257	
3		2900	[illegible] III [illegible]
4		1667	[illegible]
5		[illegible]	[illegible]
6		[illegible]	[illegible]
7		[illegible]	[illegible]
8		[illegible]	[illegible]
9		[illegible]	[illegible]
10		[illegible]	[illegible]

[illegible]

ಜಯ ಅಂಡ್ ಕಂಪೆನಿ,

ಮನೆ, ಜಮೀನ, ಮತ್ತು [illegible] ಏಜೆಂಟರು

[illegible] ಮೈಸೂರು [illegible], ಮೈಸೂರು ಫೋನ್ 320

SRI GANESHA

TALKIES

From 12 4 53 [illegible]

VENGEANCE OF THE BLACK EAGLE

NEXT CHANGE—

THE STRANGE DOOR

(For Adults Only)

Edited, Printed and Published by A R Nagarajan at Sadhvi Press, D Subbiah Road, Mysore

ಲಗ್ನದ ಜವಳಿಗಳಿಗೆ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ — ಮೈಸೂರು ಸಿಲ್ಕ್, ಧರ್ಮಾವರಂ, [illegible] ಸಮೀಪ [illegible] (ಫೋನ್ 446)

★ M. V. ಭೋಜಯ್ಯ [illegible] ಮೈಸೂರು

ಪೋ. ನಂ. 752 ಪಂಪ್, ಮಹಾತ್ಮಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೪-೪-೧೯೫೩ [ಸಂಚಿಕೆ ೨೦೪

ಟ್ಯೂನಿಸ್ ಚುನಾವಣೆ ಬಹಿಷ್ಕಾರಕ್ಕಾಗಿ ಕರೆ

ವಿದ್ಯಾರ್ಥಿನಿಯರಿಂದ ಪೂರ್ತಿ ಫೀ ವಸೂಲಿ

ಮೈಸೂರು ೧೪

ಸಂಸ್ಥಾನದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳಲ್ಲಿ ಇನ್ನು ಮುಂದೆ ವಿದ್ಯಾರ್ಥಿನಿಯರಿಂದ ಪೂರ್ಣ ವಿದ್ಯಾಶುಲ್ಕವನ್ನು ವಸೂಲು ಮಾಡಲಾಗುವುದೆಂದು ತಿಳಿದುಬಂದಿದೆ. ಇದುವರೆಗೆ ಅರ್ಧ ಶುಲ್ಕವನ್ನು ವಿದ್ಯಾರ್ಥಿನಿಯರು ಕೊಡುತ್ತಿದ್ದರು. ಔದ್ಯೋಗಿಕ ಕಾಲೇಜುಗಳಲ್ಲಿ ಮಹಿಳೆಯರು ಕಳೆದ ವರ್ಷ ಅಕ್ಟೋಬರಿಂದಲೂ ಪೂರ್ತಿ ಫೀಜನ್ನು ಕೊಡುತ್ತಿದ್ದಾರೆ.

ಮೈಸೂರಿನವರ ಮತ್ತು ಇತರರ ವಿದ್ಯಾಶುಲ್ಕದ ವ್ಯತ್ಯಾಸದ ರದ್ದು

ಸಂಸ್ಥಾನದ ಔದ್ಯೋಗಿಕ ಶಾಲಾ ಕಾಲೇಜುಗಳಲ್ಲಿ ಮೈಸೂರಿನ ಮತ್ತು ಮೈಸೂರೇತರ ವಿದ್ಯಾರ್ಥಿಗಳಿಗೆ ವಿದ್ಯಾಶುಲ್ಕದ ಬಗ್ಗೆ ಇರುವ ತಾರತಮ್ಯವನ್ನು ತೆಗೆದು ಎಲ್ಲರಿಗೂ ಒಂದೇ ಸಮಾನ ಶುಲ್ಕವನ್ನು ವಿಧಾಯಿಸ ಮಾಡಿರುವುದಾಗಿ ವರದಿಯಾಗಿದೆ ಸಂಸ್ಥಾನದ ವಿದ್ಯಾರ್ಥಿಗಳಂತೆಯೇ ಹೊರಗಿನವರೂ ಎಲ್ಲ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳ ಸೌಲಭ್ಯಗಳನ್ನೂ ಪಡೆಯುವರು

ಜಿಲ್ಲಾ ಕಾರ್ಮಿಕರುಗಳ ಲೇಬರ್ ಸೆಕ್ರೆಟೇರಿಯಟ್

ಮೈಸೂರು ಜಿಲ್ಲೆಯಲ್ಲಿರುವ ನಾನಾ ಕಾರ್ಮಿಕರ ಸಂಘಗಳ ಲೇಬರ್ ಸೆಕ್ರೆಟೇರಿಯಟ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಲು ಮೊನ್ನೆ ಕಾರ್ಮಿಕರುಗಳ ಮುಖಂಡರ ಸಭೆಯಲ್ಲಿ ನಿರ್ಧರಿಸಲಾಯಿತು ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಎಸ್‌ಆರ್ ಷರೀಫ್ ಹುಸೇನರೂ, ಸಂಚಾಲಕರುಗಳಾಗಿ ಶ್ರೀಗಳು ವೇದಾಂತಂ ಹೆಪ್ಪಿಗೆ ಮತ್ತು ಪ್ರಸಾದ್ ರವರೂ ಆರಿಸಲ್ಪಟ್ಟರು. ಶ್ರೀಗಳಾದ ಎಲ್ ರಾಮಯ್ಯ, ಎಸ್ ಶೀವಣ್ಣ, ಎಸ್ ಆರ್ ಶಾಸ್ತ್ರಿ, ವರದಾಚಲಂ. ಕೃಷ್ಣಾಜಿರಾವ್, ಕೆ ವಿಶ್ವನಾಥ್, ಕಾಳಪ್ಪ, ಅಜೀಜ್ ಸೇಟ್, ಟಿ ಎಸ್. ಸುಬ್ಬಣ್ಣ ಇವರುಗಳುಳ್ಳ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು ಜಿಲ್ಲಾ ಕಾರ್ಮಿಕರುಗಳಲ್ಲಿ ಸಂಘಟನೆ ಮತ್ತು ಒಮ್ಮತವನ್ನುಂಟುಮಾಡುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಪ್ರಯಾಗದ ಹಿಂದಿ ಪರೀಕ್ಷಾ ಫಲಿತಾಂಶ

ಪ್ರಯಾಗದ ವಿಶ್ವವಿದ್ಯಾಲಯದವರು ೨೭ ನೇ ಡಿಸೆಂಬರಿನಲ್ಲಿ ಏರ್ಪಡಿಸಿದ್ದ ೧೯ನೇ ಪರೀಕ್ಷೆಗಳ ಫಲಿತಾಂಶವು ಹೊರಬಿದ್ದಿರುವುದರಿಂದ, ಚಾಮರಾಜಪೇಟೆಯಲ್ಲಿರುವ ಮೈಸೂರು ಹಿಂದಿ ಪ್ರಚಾರ ಸಭೆ ಕಛೇರಿಯಲ್ಲಿ ನೋಡಬಹುದೆಂದೂ ಸಭಾ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಮಹಾಸಭಾ ನಾಯಕರಿಗೆ ಕಾಶ್ಮೀರದ ಪ್ರತಿಬಂಧಕ

ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ವಿ ಜಿ ದೇಶಪಾಂಡೆ ಪಾರ್ಲಿಮೆಂಟಿನ ಸದಸ್ಯ, ಯು. ಎಂ. ತ್ರಿವೇದಿಯವರುಗಳು ಕಾಶ್ಮೀರಕ್ಕೆ ಪ್ರವೇಶಿಸಲು ಅನುಮತಿ ದೊರೆಯಲಿಲ್ಲವೆಂದು ವರದಿಯಾಗಿದೆ

ಶಂಕರಗೌಡರ ಸ್ಥಿತಿ ಚಿಂತಾಜನಕ

ಕರ್ನಾಟಕ ಏಕೀಕರಣಕ್ಕಾಗಿ ೧೫ ದಿನಗಳಿಂದ ಉಪವಾಸ ಮಾಡುತ್ತಿರುವ ಹುಬ್ಬಳ್ಳಿಯ ಶಂಕರಗೌಡ ಪಾಟೀಲರು ಅತ್ಯಂತ ನಿತ್ರಾಣರಾಗಿ ತೂಕದಲ್ಲಿ ೧೪ ಪೌಂಡಿನಷ್ಟು ಕಳೆದುಕೊಂಡಿರುವುದಾಗಿಯೂ, ಉಪವಾಸವನ್ನು ನಿಲ್ಲಿಸುವಂತೆ ಕರ್ನಾಟಕ ಕಾಂಗ್ರೆಸ್ ಮುಖಂಡರು ಇವರನ್ನು ಕೋರುತ್ತಿರುವರೆಂದೂ ವರದಿಯಾಗಿದೆ. ಉಪವಾಸ ನಿಲ್ಲಿಸುವಂತೆ ಸಲಹೆಗಳನ್ನು ಕೇಳಿ ಗೌಡರ ಮನಸ್ಸಿಗೆ ಬೇಸರವಾಗಿ, ಈಗ ಅವರು ಮೌನ ಪ್ರತಿಜ್ಞೆ ಮಾಡಿರುವುದಾಗಿ ಹೇಳಲಾಗಿದೆ ಇವರೊಡನೆ ಸಹಾನುಭೂತಿ ತೋರಿಸಲು ಪತ್ರಮುತ್ತಲವರು ಕೈಲಾಸದ ಸುಟ್ಟಿಗೆ ಉಪವಾಸ ನಡೆಸುತ್ತಿರುವರೆಂದು ಗೊತ್ತಾಗಿದೆ ೭೦ ವರ್ಷ ವಯಸ್ಸಿನ ಮುನೆವ್ವ ಎಂಬ ಹೆಂಗಸೂ, ಹನ್ನೆರಡು ವರದ ಸ್ವಾಮಿಗಳೂ ಉಪವಾಸ ನಡೆಸುತ್ತಿರುವರು

ಇವರ ಬಗ್ಗೆ ಸಹಾನುಭೂತಿ ತೋರಿಸಲು ಮೊನ್ನೆ ಬಹಿರಂಗ ಸಭೆಯೊಂದು ನಡೆದು, ಅಲ್ಲಿನ ಪೌರಸಭಾ ಸದಸ್ಯರು ರಾಜೀನಾಮೆ ಕೊಡಲು ಒತ್ತಾಯಪಡಿಸುವುದಕ್ಕಾಗಿ ಅವರ ಮನೆಗಳ ಎದುರಿಗೆ ಪಿಕೆಟಿಂಗ್ ನಡೆಸಲು ನಿರ್ಧರಿಸಲಾಯಿತು

ಕೇವಣ್ಣನವರಿಂದ ಆಮರಣಾಂತ ಉಪವಾಸ

ರಾಜಧಾನಿಯ ಆಹಾರ ಕ್ರಿಯಾ ಸಮಿತಿಯವರು ಆಹಾರ ಸತ್ಯಾಗ್ರಹವನ್ನು ನಿಲ್ಲಿಸಿರುವರಷ್ಟೆ ನಂಜನಗೂಡಿನ ಕಪಿಲಾ ಟೆಕ್ಸ್‌ಟೈಲ್ಸಿನ ಗಿರಣಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಕೇವಣ್ಣನವರು ಧಾನ್ಯದ ಬೆಲೆಯನ್ನು ಸರ್ಕಾರದವರು ಇಳಿಸದಿದ್ದರೆ ತಾವು ಆಮರಣಾಂತ ಉಪವಾಸ ಮಾಡುವುದಾಗಿ ತಿಳಿಸಿದ್ದಾರೆ ನೆನ್ನೆ ಅವರು ಸತ್ಯಾಗ್ರಹಕ್ಕೆ ಕುಳಿತಿದ್ದರು ಆದರೆ ಹಲವು ಮಿತ್ರರ ಸಲಹೆಯ ಪ್ರಕಾರ ಸರ್ಕಾರದವರು ಒಂದು ವಾರದೊಳಗೆ ಬೆಲೆ ಇಳಿಸಲು ಸಾಧಕವಾಗುವಂತೆ ಅವರು ಒಂದು ವಾರ ಕಾಲ ಸತ್ಯಾಗ್ರಹವನ್ನು ಮುಂದೆ ಹಾಕಿರುತ್ತಾರೆ.

ಸ್ಟಾಲಿನ್ ನೀತಿಗೆ ರಷ್ಯದ ತಿಲಾಂಜಲಿ

ಪಶ್ಚಿಮ ರಾಷ್ಟ್ರಗಳ ಬಗ್ಗೆ ಸ್ಟಾಲಿನ್ನರು ಕಲಿಸಿದ್ದ ನೀತಿಯನ್ನು ಈಗಿನ ಸರ್ಕಾರದವರು ತ್ಯಜಿಸಿರುವರೆಂದೂ, ಆದರೂ ಉಭಯ ಪ್ರದೇಶಗಳ ಮಧ್ಯೆ ಇರುವ ಮನಸ್ತಾಪವು ಮುಂದುವರಿಯುವುದೆಂದೂ ಯುಗೋಸ್ಲೇವಿಯದ ಪ್ರಧಾನಿ ಮಾರ್ಷಲ್ ಟಿಟೋರವರು ಹೇಳಿರುತ್ತಾರೆ ರಷ್ಯವು ಇನ್ನು ಮುಂದೆ ಏಷ್ಯದ ಕಡೆಗೆ ಹೆಚ್ಚು ಗಮನ ಕೊಡಲಿರುವುದಾಗಿ ಅವರು ಭಾವಿಸುತ್ತಾರೆ.

ಅಹಮದಾಬಾದಿನಲ್ಲಿ ಪೋಲೀಸರ ಗುಂಡು

ಗುಜರಾತಿನ ಕಾಸು ಜನರಾದ ಭಾರಾ ಸಂಗಡದವರ ಮೇಲೆ ಒಂದು ಕಡೆ ಪೋಲೀಸರು ಮೊನ್ನೆ ಗುಂಡು ಹಾರಿಸಿದ ಪರಿಣಾಮವಾಗಿ ಒಬ್ಬನು ಸತ್ತ. ಮತ್ತೊಬ್ಬ ಸ್ತ್ರೀಗೆ ಗಾಯವಾಗಿದೆ ಕಳ್ಳ ಭಟ್ಟಿ ಸಾರಾಯಿ ಪತ್ತೆಹಚ್ಚಲು ಏರ್ಪಾಡಾಗಿದ್ದ ಪೋಲೀಸು ಪಡೆಯನ್ನು ಗುಂಪು ಜನ ಕಾದು; ಜನರು ಅಲ್ಲಿಂದ ಹೊರಡುವಂತೆ ಆಜ್ಞೆ ಮಾಡಿದರೆಂದೂ, ಆದರೆ ಅವರು ಚದುರಬೇಕೆಂದು ಪೋಲೀಸರು ಅವರಿಗಿತ್ತ ಸೂಚನೆಯನ್ನು ವಿರೋಧಿಸಿ,ಪೋಲೀಸರನ್ನು ದೊಣ್ಣೆಗಳಿಂದ ಹೊಡೆದರೆಂದೂ, ಪೋಲೀಸರು ಗುಂಡು ಹಾರಿಸಬೇಕಾಯಿತೆಂದೂ ವರದಿಯಾಗಿದೆ

ಚಿರಾಪುಂಜಿಯಲ್ಲಿ ನೀರಿನ ಅಭಾವ

ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಮಳೆಯಾಗುವ ಅಸ್ಸಾಮಿನ ಚಿರಾಪುಂಜಿಯಲ್ಲಿ ನೀರಿನ ಅಭಾವ ಉಂಟಾಗಿರುತ್ತದೆ ಸಾಮಾನ್ಯವಾಗಿ ಅಲ್ಲಿ ನವೆಂಬರ್‌ನಿಂದ ಫೆಬ್ರವರಿ ವರೆಗೆ ನೀರಿನ ಅಭಾವವಿರುವುದು ೪೫೦೦ ಅಡಿ ಎತ್ತರವಿರುವ ಆ ಪ್ರದೇಶದಿಂದ ನೀರನ್ನು ಹುಡುಕಿಕೊಂಡು ಜನರು ಬಂಡೆಗಳ ಬುಡಕ್ಕೆ ನೂರು ಅಡಿ ಕೆಳಗಿಳಿದುಹೋಗಬೇಕಾಗಿ ಬಂದಿದೆ

○ ವಿಶ್ವ ಸಂಸ್ಥೆಯ ಸಾಧಾರಣ ಸಭೆಗೆ ಭಾರತದ ಪ್ರತಿನಿಧಿಗಳ ಮುಖಂಡರಾಗಿ ತೆರಳಿದ್ದ ವಿಜಯ ಲಕ್ಷ್ಮಿ ಪಂಡಿತರು ಭಾರತಕ್ಕೆ ಶೀಘ್ರದಲ್ಲೇ ವಾಪಸು ಬರಲಿರುವರು

ಟ್ಯೂನಿಸ್ ಚುನಾವಣೆಗಳಿಗೆ ಬಹಿಷ್ಕಾರ

ಟ್ಯುನೀಷಿಯಾದಲ್ಲಿ ಇದೇ ಮೊದಲಾಗಿ ನಡೆಯಲಿರುವ ಮಹಾ ಚುನಾವಣೆಗಳಿಗೆ ಬಹಿಷ್ಕಾರ ಹಾಕಬೇಕೆಂದು ಅಲ್ಲಿನ ಜನರಿಗೆ ರಾಷ್ಟ್ರೀಯ ಮುಖಂಡರುಗಳು ಸೂಚಿಸಿರುತ್ತಾರೆ ಆ ದೇಶಕ್ಕೆ ಹೆಚ್ಚು ಸ್ವತಂತ್ರಭುತ್ವದ ಅಧಿಕಾರ ಕೊಡುವ ಬಗ್ಗೆ ಫ್ರೆಂಚರು ತಯಾರಿಸುವ ಸುಧಾರಣೆಗಳ ಅಂಗವಾಗಿ ಈ ಚುನಾವಣೆಗಳು ಈ ದಿನ ನಡೆಯಲಿವೆ

ಫರೂಕರ ನಿವಾಸವನ್ನು ಸಿಡಿಸುವುದಾಗಿ ಬೆದರಿಕೆ

ಫ್ರಾನ್ಸ್ ಮತ್ತು ಇಟಲಿಗಳ ಗಡಿ ಪ್ರದೇಶದಲ್ಲಿರುವ ರಿವೀರಾ ಸಮುದ್ರದಲ್ಲಿ ಈಜಿಪ್ಟಿನ ಮಾಜಿ ದೊರೆ ಫರೂಕರು ಇಳಿದುಕೊಂಡಿರುವ ಹೋಟೆಲು ಭವನವನ್ನು ಅವರು ಬಿಡಬೇಕೆಂದೂ, ಇಲ್ಲವಾದರೆ ಅದನ್ನು ಬಾಂಬು ಹಾಕಿ ಸಿಡಿಸುವುದಾಗಿಯೂ ಬೆದರಿಕೆ ಹಾಕಲಾಗಿರುವುದೆಂದು ವರದಿಯಾಗಿದೆ ಹೋಟೇಲಿನ ಸುತ್ತ ಬಲವಾದ ಕಾವಲನ್ನಿಟ್ಟಿರುವುದಾಗಿ ಹೇಳಲಾಗಿದೆ

ಮಾಜಿ ಸೇವಕನಿಂದ ವೃದ್ಧ ದಂಪತಿಗಳಿಗೆ ಇರಿತ

ಮದ್ರಾಸಿನ ನಿವೃತ್ತ ವೈದ್ಯರಾದ ಡಾ|| ಕುಪ್ಪುಸ್ವಾಮಿ. ಮುದಲಿಯಾರ್ ಮತ್ತು ಅವರ ೭೦ ವರ್ಷದ ಪತ್ನಿ ಭಾಗ್ಯಂ ಅಮ್ಮಾಳ್ ಎಂಬುವರನ್ನು ಮೊನ್ನೆ ರಾತ್ರಿ ಅವರ ಮಾಜಿ ಸೇವಕ ೩೫ ವರ್ಷದ ರಾಜು ಎಂಬುವನು ಇರಿದು, ಕೊನೆಗೆ ತಾನೂ ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ ತನ್ನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಅವನು ಅವರನ್ನು ಪ್ರಾರ್ಥಿಸಿದನೆಂದೂ, ಆದರೆ ಅದಕ್ಕೆ ಒಪ್ಪದೆ ಆ ರಾತ್ರಿ ತಮ್ಮ ಮನೆಯಲ್ಲಿರಲು ಅವನಿಗೆ ಅವರು ಅವಕಾಶಕೊಡಲು, ರಾತ್ರಿಯೇ ಅವನು ಈ ಕೃತ್ಯವನ್ನು ನಡೆಸಿದನೆಂದೂ ಹೇಳಲಾಗಿದೆ ವೃದ್ಧ ಪತ್ನಿಯು ಆಸ್ಪತ್ರೆಯಲ್ಲಿ ಮಡಿದಿರುತ್ತಾರೆ

ಪೋಲೀಸ್ ಉಡುಪು ಧರಿಸಿ ಮೋಸದ ಪ್ರಯತ್ನ

ಶ್ರೀಮಂತ ತರುಣಿಯರೊಳಗೊಬ್ಬರನ್ನು ವಿವಾಹವಾಗುವ ಆಸೆಯಿಂದ ನೆಲ್ಲೂರಿನ ಒಬ್ಬ ೨೫ ವರ್ಷದ ತರುಣನು ಸಿ ಐ ಡಿ ಸಬ್‌ಇನ್ಸ್‌ಪೆಕ್ಟರಂತೆ ವೇಷ ತಾಳಿ, ಆ ಪ್ರಯತ್ನದಲ್ಲಿ ಪೋಲೀಸರಿಗೆ ಸಿಕ್ಕಿಬಿದ್ದನೆಂದು ವರದಿಯಾಗಿದೆ ಅವನು ಆ ವೇಷದಲ್ಲಿ ಬಟ್ಟೆ ಅಂಗಡಿಗಳಲ್ಲಿ ಸಾಲವನ್ನು ಪಡೆಯುವುದು, ಉಚಿತವಾಗಿ ಸಿನಿಮಾ ಮಂದಿರಗಳಿಗೆ ಹೋಗುವುದು ಇವೇ ಮುಂತಾದುವನ್ನು ಮಾಡುತ್ತಿದ್ದನೆಂದೂ ಹೇಳಲಾಗಿದೆ

ಬಾಬುರಾವ್ ಪೆಂಡಾರ್ಕರ್ ನಾಟಕ ರಂಗಕ್ಕೆ

ಸುಪ್ರಸಿದ್ಧ ಮರಾಠಿ ಚಲನ ಚಿತ್ರ ನಟರಾದ ಬಾಬುರಾವ್ ಪೆಂಡಾರ್ಕರ್ ರವರು ಚಲನ ಚಿತ್ರ ಪ್ರಪಂಚವನ್ನು ಬಿಟ್ಟು ನಾಟಕ ರಂಗವನ್ನು ಪ್ರವೇಶಿಸಲಿರುವರೆಂದು ವರದಿಯಾಗಿದೆ

ಅನ್ನ ಸತ್ಯಾಗ್ರಹದ ಮುಕ್ತಾಯ

ಉಗ್ರ ಚಳುವಳಿ ನಡೆಸುವುದಾಗಿ ಸರ್ಕಾರಕ್ಕೆ ಎಚ್ಚರಿಕೆ

ಮೈಸೂರು ಗಂ

ಮಾಂಟಿ ತೆಂಗೆ, ಆಸ್ಪತ್ರೆ ಸುಲ್ಕ ಮ ತ್ತು ಧಾನ್ಯಗಳ ಬೆಲೆಯನ್ನು ಏರಿಸಿರು ವುದು-ಇವುಗಳನ್ನು ಪ್ರತಿಭಟಿಸಿ ರಾಜ ಧಾನಿಯ ಆಹಾರಕ್ರಿಯಾ ಸಮಿತಿಯವ ರು ಟೌನ್‌ಹಾಲಿನಲ್ಲಿ ಸುಮಾರು [illegible] ಲಿಂದಲೂ ಆಚರಿಸುತ್ತಿದ್ದ ಅನ್ನ ಸತ್ಯಾ ಗ್ರಹವನ್ನು ನೆನ್ನೆ ಮುಕ್ತಾಯಗೊಳಿಸ ಲಾಯಿತು. ಮೊನ್ನೆ ದಿನ ಟೌನ್ ಹಾ ಲ್ ಮೈದಾನದಲ್ಲಿ ಸೇರಿದ್ದ ಒಂದು [illegible] ಸಭೆಯಲ್ಲಿ ನಿರ್ಣಯ ಮಾಡಿ ಇನ್ನು ಒ ದು ತಿಂಗಳೊಳಗೆ ಸರ್ಕಾರದವರು ಧಾ ನ್ಯದ ಬೆಲೆಯನ್ನು ಇಳಿಸದಿದ್ದರೆ ವಕ್ತ್ರ ಉಗ್ರ ಚಳುವಳಿಯನ್ನು ಪ್ರಾರಂಭಿಸ [illegible] ಸತ್ಯಾಗ್ರಹವನ್ನು [illegible] ಗಾರರು, [illegible] ಶಕರ [illegible] ರಾದ ಶ್ರೀ [illegible] ಗೌಡರು [illegible] ವಹಿಸಿದ್ದರು.

ಶ್ರೀಗಳಾದ [illegible] ಮುಸಿಲ್ಕೆ [illegible] ರವರುಗಳು ಭಾಷಣ ಮಾಡಿ [illegible] ನೀತಿಯನ್ನು ಖಂಡಿಸಿದರು.

ಅಧ್ಯಕ್ಷರು [illegible] ಗ್ರೆಸ್ಸಿನವರು [illegible] ರ ಜನತೆಯ [illegible] ತಿರುವರೆಂದೂ, ಸರ್ಕಾರದ ಹಣವನ್ನ ಶಿಕ್ಷ್ಯಯೋಜನೆಗಳ ಗಾಗಿ ವೆಚ್ಚಮಾಡಬೇಕೆಂದು [illegible] ದೂ ತಿಳಿಸಿದರು.

ಸತ್ಯಾಗ್ರಹಕ್ಕಾಗಿ [illegible] ತಟ್ಟೆ, ಗುಡಿಸಲು ಮುಂತಾದ [illegible] ವನ್ನು ತೆಗೆದು ಹಾಕಲಾಗಿದೆ.

೩೦ ಘನ ಅಡಿಯ ಆಲಿಕಲ್ಲು !

ಮದನಪಲ್ಲಿ [illegible] ಹೇಳಲಾಗಿದೆ [illegible] ಅಡಿಯ [illegible] ಅದು ಕರಗಲು [illegible] ದಿನಗಳಾದುವೆಂದೂ ವರದಿಯಾಗಿದೆ.

ಆಕಾಶವಾಣಿ [illegible] ಕಾರ್ಯಕ್ರಮ [illegible] ರಕ್ಷಣ, ಕನ್ನಡದಲ್ಲಿ [illegible] ಅರ್ [illegible] ೩೦ ಹಿನ್ನು ಮೆಚ್ಚಿನ ಗೀತೆಗಳು

ಅಜಾದರು ಕಾಂಗ್ರೆಸ್ ಪಕ್ಷದ ಉಪನಾಯಕರು

ಕೇಂದ್ರ ಸರ್ಕಾರದ ವಿದ್ಯಾ [illegible] ರಾದ ಮೌಲಾನಾ ಅಬುಲ್ ಕಲಾಂ ಅ ಜಾದರು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಆರಿಸಲ್ಪಟ್ಟಿ ರುವರು.

ಹಿಮಾಲಯದಲ್ಲೂ ಬದರಿನಾಥದಲ್ಲಿ ವಾಸ

ಹಿಮಾಲಯಾ ಪರ್ವತದಲ್ಲಿರುವ [illegible]

[illegible]

ಬಿಳ್ವಾ [illegible] ಪ್ರಸಾ [illegible]

[illegible] ಶ್ರೀ [illegible] ಗ್ರೆಸ್ಸಿನ [illegible] ಮಾಡಿ ದರು.

ಕೆ. ಭಾ. ಆಯುರ್ವೇದ ಆಡಳಿತ ಮಂಡಲಿ ಸಭೆ

[illegible] ಗ್ರೆಸ್ಸಿನ [illegible] ನೀತಿಯ ಕಾಲದಲ್ಲಿ ಒಂದು ಗ್ರಂಥವನ್ನ ಪ್ರಸಿದ್ಧಿಪಡಿಸಲು [illegible] ಯಾಂತ್ರಿಕ [illegible] ಪ್ರದರ್ಶಿಸಲಾಗುತ್ತ ದು. ತ್ರಿದೋಷ, ಪಂಚಭೂತ ಮುಂತಾದ ತತ್ವಗಳ ಗುಣವಿಶೇಷಗಳನ್ನ ಚಿತ್ರಗಳ ಮೂಲಕ ತೋರಿಸಲಾಗುವು ದು.

ರಷ್ಯಕ್ಕೆ ಇಂದಿರಾ ಗಾಂಧಿ ಭೇಟಿ

ಪ್ರಧಾನಿ ನೆಹರೂರವರ ಕುಮಾರಿ [illegible] ಇಂದಿರಾ ನೆಹರೂರವರು ರಷ್ಯಾ, [illegible] ರ್ಗ ಮತ್ತು ಸ್ವೀಡನ್ನುಗಳಲ್ಲಿ [illegible] ತಿಂಗ ಳ ಕಾಲ ಪ್ರವಾಸ ಕೈಗೊಳ್ಳಲು ನಾಳೆ ದಿಹಲಿಯಿಂದ ಪ್ರಯಾಣ ಬೆಳೆಸಲಿರುವ ರು. [illegible] ರಾಣಿಯವರ ಕಿರೀಟ [illegible] ರಷ್ಯಾ ಮತ್ತು ಇತರ ದೇಶಗಳಲ್ಲಿನ [illegible] ಸೇವಾ [illegible] ರ್ಯಗಳನ್ನು [illegible] ಪರಿಶೀಲಿಸುವರೆಂದು [illegible] ಸ್ಪಷ್ಟ ಹೇಳಿರುವರು [illegible] ಸ್ವಾತಂತ್ರ್ಯಕ್ಕೆ [illegible]

ರೇಡಿಯೋಗಳಲ್ಲಿ ಫಿಲಂ ಹಾಡಿನ ಬದಲು ಗೀತೆಗಳು

[illegible] ರೇಡಿಯೋಗಳಲ್ಲಿ ಚ [illegible] ಗೀತೆಗಳ [illegible] ಗಳಲ್ಲಿ ಒಂದೊ ದ [illegible]

[illegible] ವಿದ್ಯಾರ್ಥಿ ಸಂಘದ [illegible] ಮಹೋತ್ಸವ

[illegible] ವಿದ್ಯಾರ್ಥಿ [illegible]

ನಾಟಕ [illegible] ದಿನಾಚರಣೆ

[illegible] ನಗರ [illegible] ದಿನ [illegible] ಕೊಂಡು [illegible] ನಿದೆ.

ಚಂಡ ಮಾರುತದಿಂದ ನೂರಾರು ಮನೆಗಳ ನಾಶ

ದಕ್ಷಿಣ ಆಫ್ರಿಕದಲ್ಲಿರುವ [illegible] ಲಂಡನ್ನಿನಲ್ಲಿ ಮೊನ್ನೆ [illegible] ದ ಬಿರುಗಾಳಿಯು ಬೀಸಿದ ಪರಿಣಾ ಮವಾಗಿ ಸಾವಿರಾರು ಜನರು ಮನೆ ಮ ಠಗಳನ್ನು ಕಳೆದುಕೊಂಡರೆಂದೂ, ಅನೇ ಕರು ಗಾಯಗೊಂಡರೆಂದೂ ವರದಿಯಾ ಗಿದೆ. ಒಂದು ಚರ್ಚಿನಲ್ಲಿ ಪ್ರಾರ್ಥನೆ ನ ಡೆಯುತ್ತಿದ್ದಾಗ, ಅದರ ಮೇಲ್ಛಾವಣಿ ಯು ಕಿತ್ತುಕೊಂಡು [illegible] ದೂರಕ್ಕೆ ತಳ್ಳಲ್ಪಟ್ಟಿತು [illegible] ಅನೇಕ ಮರಗಳು ಉರುಳಿದುವು.

ಯಳಂದೂರು ಜಹಗೀರಿಯ ಬಗ್ಗೆ ಅಪಪ್ರಚಾರ

ಯಳಂದೂರು ಜಹಗೀರಿನ ರೈತರು ಗಳಿಗೆ ಉಂಟಾಗುವ ತೊಂದರೆಗಳ ಬ ಗ್ಗೆ ಶ್ರೀಗಳಾದ [illegible] ನವರು ಹೊರಡಿಸಿದ ಪ್ರಕಟನೆಗಳಿಗೆ ಉತ್ತರವಾಗಿ ಯಳಂ ದೂರಿನ ಎಂ. ಪಿ. [illegible] ದಕ್ಷರಾದ ಶ್ರೀ [illegible] ಕಾಂಗ್ರೆಸ [illegible] ಶ್ರೀ [illegible] ಪ್ರಕಟನೆಗಳನ್ನು ಹೊ [illegible] ಜಹಗೀರುದಾರ ರ [illegible] ವಿಷಯಗಳಲ್ಲಿ [illegible] ಜನ ಗಳ [illegible] ಸಹಾಯಗ ಳನ್ನೂ ಮಾಡುತ್ತಿರುವರೆಂದೂ ತಿಳಿಸಿರು ವರು. [illegible] ಸರ್ಕಾರವು [illegible] ಶಾಲೆ ಆಸ್ಪತ್ರೆಗಳ [illegible] ಕಾಂಗ್ರೆಸ್ [illegible] ಅವರಿಂದ ಶಾಂತ [illegible] ಹೇಳಿಕೆಯು [illegible] ಗಿದೆಯೆಂದು ಹೇ ಳಿದ್ದಾರೆ.

SRI GANESHA

TALKIES

[illegible] Days

THE STRANGE DOOR

[illegible] Laughton

[illegible] Only

SON OF ALIBABA

[illegible]

Edited, Printed and Published by [illegible] Nagarajan at [illegible] Press, D. Subbaiah Road, Mysore.

ಪ್ರಭುದೇವಾ ಟಾಕೀಸ್

13—4—53 ನೇ : : ಸೋಮವಾರದಿಂದ

ಜೆಮಿನಿಯವರ ತಮಿಳು ಚಿತ್ರ

ಅಪೂರ್ವ ಸಹೋದರರು

[illegible] ಎಂ. ಕೆ. ರಾಧಾ [illegible] ಎಂ. ಸಾವಿತ್ರಿ [illegible] ಮುಂತಾದವರು

ಫೋ. ನಂ. ೯೨೬ ... ಮೈಸೂರು ... ಪತ್ರಿಕೆ ೩ ಆಣೆ

ಸಾಧ್ವಿ

ಸಂಪುಟ ೧೧] ಬುಧವಾರ ೧೫ ೪ ೧೯೫೩ [ಸಂಚಿಕೆ ೨೦೯

ಪರ್ಷಿಯಾ ಷಹಾ ವಿರುದ್ಧ ದೊಂಬಿ; ಒಬ್ಬನ ಮರಣ

ಕನ್ಯಾಪಹಾರ ಮೊಕದ್ದಮೆ ಪುನಃ ವಿಚಾರಣೆಗೆ

ಮೈಸೂರು ೧೫

ರಂಗನಾಥಸ್ವಾಮಿ ದೇವಸ್ಥಾನದ ಅಗ್ರಹಾರದಲ್ಲಿರುವ ಶ್ರೀ ಪಿ ಆರ್ ನಾಗರತ್ನರವರ ಮಗಳು ಕು ಮಹಾದೇವಿ ಎಂಬ ಯುವತಿಯನ್ನು ಅಪಹರಿಸಿಕೊಂಡು ಹೋಗಿದ್ದನೆಂದ ಜಾರ್ಜ್ ಎಂಬ ಯುವಕನ ಮೇಲೆ ಹೂಡಿಕಲಾಗಿದ್ದ ಮೊಕದ್ದಮೆಯಲ್ಲಿ ... ವನನ್ನು ನಗರದ ... ನ್ಯಾಯಾಧಿಪತಿ ಬಿಡುಗಡೆ ಮಾಡಿ ತೀರ್ಪಿತ್ತಿದ್ದರು. ಈ ಸಂಬಂಧವಾಗಿ ... ತಂದೆಯವರು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ... ಅರ್ಜಿ ... ದವರ ಮೇಲೆ, ಈಗ ಪುನಃ ವಿಚಾರಣೆ ಮಾಡುವಂತೆ ನಗರದ ... ನ್ಯಾಯಾಧಿಪತಿಗೆ ಸೂಚಿಸಲಾಗಿರುವುದೆಂದು ವರದಿಯಾಗಿದೆ.

ಅಂಗಡಿ ಮಾಲೀಕರಿಗೆ ದಂಡ

ಸಂಸ್ಥಾನದ ಅಂಗಡಿ ಕಾನೂನನ್ನು ಉಲ್ಲಂಘನೆ ಮಾಡಿದರೆಂದು ಈ ಕೆಳಗೆ ಕಂಡ ಅಂಗಡಿ ಮಾಲೀಕರಿಗೆ ದಂಡವನ್ನು ವಿಧಿಸಲಾಗಿದೆ — ಜಗನ್ಮೋಹನ ಅರಮನೆ ಬೀದಿ ರಾಮಚಂದ್ರ ಭವನ್ ಶ್ರೀ ಸಿ ವೆಂಕಟರಾಮನ್ ೧೫ ರೂ. ಮಾರ್ಕೆಟ್ ರಸ್ತೆ ಶ್ರೀ ಗಣಲಕ್ಷ್ಮಿ ಮೆಟಲ್ ವರ್ಕ್ಸ್ ಶ್ರೀ ಅಬ್ದುಲ್ ೧೦ ರೂ. ನರಸಿಂಹರಾಜ ಮೊಹಲ್ಲಾ ... ಅಂಗಡಿ ಶ್ರೀ ರಾಮಯ್ಯ ೫ ರೂ., ... ರಸ್ತೆ ನ್ಯಾಷನಲ್ ಎಂಪೋರಿಯಂ ಶ್ರೀ ... ೧೦ ರೂ.

೧೨ ವರ್ಷದ ಬಾಲಕನ ಅದ್ಭುತ ಗಣಿತ ಶಕ್ತಿ

ಕೊಯಮತ್ತೂರಿನ ೧೨ ವರ್ಷದ ... ಗೋವಿಂದರಾಜ್ ಎಂಬುವನು ಕಾಗದ ಪೆನ್ಸಿಲ್ ಯಂತ್ರಗಳ ಸಹಾಯವಿಲ್ಲದೆ ಎಂತಹ ಲೆಕ್ಕವನ್ನಾದರೂ ತನ್ನ ಬುದ್ಧಿಶಕ್ತಿಯಿಂದಲೇ ಮಾಡಬಲ್ಲನೆಂದು ಹೇಳಲಾಗಿದೆ. ... ಸಂಖ್ಯೆಗಳವರೆಗೂ ... ಗುಣಾಕಾರವನ್ನು ಒಂದೇ ನಿಮಿಷದಲ್ಲಿ ಅವನು ಹೇಳಬಲ್ಲನು.

ಹಿಂದಿ ಪ್ರವೀಣ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರಿಗೆ ಸೂಚನೆ

ಹಿಂದೀ ಉಪಾಧ್ಯಾಯರುಗಳಿಗೆ ಪ್ರಚಾರಕ ಶಿಕ್ಷಣವು ಅವಶ್ಯಕವೆಂದು ಮೈಸೂರು ಸರ್ಕಾರದವರು ವಿಧಾಯಕ ಮಾಡಿರುವರ್ಷ್ಟು ... ಪ್ರವೀಣ ಪರೀಕ್ಷೆಗೆ ... ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ ... ವ್ಯಾಲಯಗಳ ಮೂಲಕ ಕುಳಿತುಕೊಳ್ಳಲು ... ವರ್ಷ ... ಮಾಡಲಾಗಿದೆ ... ಸಂಸ್ಥಾನದ ಹಿಂದಿ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ... ಏಪ್ರಿಲ್ ... ಒಂದು ವರ್ಷದ ಹಿಂದಿ ಪ್ರವೀಣ ಪ್ರಚಾರಕ ವಿದ್ಯಾಲಯವನ್ನು ನಡೆಸಲು ಬೆಂಗಳೂರಿನಲ್ಲಿ ಏರ್ಪಾಡಾಗಿದೆ. ಮೇಲ್ಕಂಡ ವಿದ್ಯಾಲಯಕ್ಕೆ ಸೇರಲು ... ಪತ್ರಗಳನ್ನು ... ಸೋಗೆ ... ಹಿಂದಿ ಪ್ರಚಾರ ಸಭೆ ... ಮಂತ್ರಿಗಳಿಗೆ ಕಳುಹಿಸಬೇಕ ... ಪತ್ರಗಳು ಬೆಂಗಳೂರಿನ ... ಹಿಂದಿ ಪ್ರಚಾರ ಸಮಿತಿ ಅಥವಾ ಬಸವನಗುಡಿ ಹಿಂದಿ ಪ್ರಚಾರ ವಿದ್ಯಾಲಯಗಳಲ್ಲಿ ದೊರೆಯುವುವು.

ರಷ್ಯಾ ಮತ್ತು ಚೀಣಾ ನೀತಿ ಬಗ್ಗೆ ನೆಹರೂ ಮೆಚ್ಚಿಗೆ

... ಚೀಣಾಗಳ ... ವರ್ತನೆಯನ್ನು ... ರವರ ಪ್ರಧಾನಿ ನೆಹರೂರವರು ಮೆಚ್ಚಿ ... ಇದರಿಂದ ಸಂಗ್ರಹದ ಪರಿಸ್ಥಿತಿಯ ಉಗ್ರತೆಯು ಕಡಿಮೆಯಾಗಿ ... ವೃದ್ಧಿ ... ಶಾಂತಿ ... ಯಾವುದೇ ಕ್ರಮ ... ಪರಿಶೀಲಿಸಿ, ... ಸ್ವಾಗತಿಸಬೇಕೆಂದೂ ... ಹೇಳಿರುತ್ತಾರೆ.

ಕಾವೇರಿ ವಿಭಾಗಕ್ಕೆ ವಿಲುಪಲು ೧೧ ವರ್ಷ

ಬಳ್ಳಾರಿಯಿಂದೊಬ್ಬರು ಬೆಂಗಳೂರು ನಗರದ ... ರಸ್ತೆಯ ... ಬರೆದ ... ಅಕ್ಟೋಬರ್ ೧೧ನೇ ತಾ|| ಬರೆದ ಪತ್ರವು ಮೊನ್ನೆ ವಿಳಾಸದಾರರ ಕೈಸೇರಿರುವುದಾಗಿ ವರದಿಯಾಗಿದೆ.

ಸಲಗನು ಬಾಲಕನನ್ನು ಸಿಗಿಯಿತು

ನೀಲಗಿರಿ ಬಳಿ ... ಎಂಬ ಊರಿನಲ್ಲಿ ಕಳೆದ ... ಸಲಗವೊಂದು ... ಬೆಳಗಿನ ... ಕಾಡಿನ ... ಒಂದು ಬಾಲಕನನ್ನು ಮುಟ್ಟಿ ... ಸಿಗಿದು ... ವರದಿಯಾಗಿದೆ ... ಹೋಗಿ, ... ದ ನಂತರ ... ಅಂತ್ಯಕ್ರಿಯೆಯನ್ನು ನಡೆಸಿದರೆಂದು ಹೇಳಲಾಗಿದೆ.

ಮೈಸೂರಿಗೆ ಹಾಲೆಂಡಿನಿಂದ ಬೀಜದ ಆಲೂಗೆಡ್ಡೆ

ಹಾಲೆಂಡಿನ ... ಬೀಜದ ಆಲೂಗೆಡ್ಡೆಯನ್ನ ೧೦ ಟನ್ನನ್ನು ... ತರಿಸಲಾಗಿರುವುದೆಂದು ... ಸರ್ಕಾರವನ್ನು ... ಇದಕ್ಕೆ ... ಸಂಸ್ಥಾನದ ... ಭಾಗಗಳಲ್ಲಿ ... ಪ್ರಯೋಗಾರ್ಥವಾಗಿ ಬಿತ್ತಲಾಗುವುದೆಂದೂ ವರದಿಯಾಗಿದೆ.

ನೇತಾಜಿ ಬೋಸರು ಬಂಧನದಲ್ಲಿರುವರೆ?

... ನೇತಾಜಿ ಸುಭಾಷ್ ಚಂದ್ರ ಬೋಸರು ... ಬಂಧಿಸಿರಬೇಕೆಂದು ... ವರದಿಯಾಗಿ ... ಮುಖ್ಯ ... ವಿಚಾರಣೆ ... ಪ್ರದೇಶ ... ಸಹಾಯವನ್ನು ... ಅಲ್ಲಿನ ಟೆಲಿಫೋನ್ ... ಪರಿಚಯ ... ರವರು ... ಹೇಳಿರುವರು.

ಪ್ರಯಾಣಿಕರ ಮೇಲೆ ಹೊಸ ತೆರಿಗೆ

ವಿಮಾನ, ಹಡಗು ಅಥವಾ ರೈಲುಗಳ ಮೂಲಕ ಪ್ರಯಾಣಮಾಡುವವರ ಮತ್ತು ಅವರ ಸಾಮಾನುಗಳ ಮೇಲೆ ಟರ್ಮಿನಲ್ ಟ್ಯಾಕ್ಸ್ ಎಂಬ ತೆರಿಗೆಯನ್ನು ವಿಧಿಸಲಾಗುವುದೆಂದು ಪಾರ್ಲಿಮೆಂಟಿನಲ್ಲಿ ಆರೋಗ್ಯ ಉಪಮಂತ್ರಿ ... ಚಂದ್ರಶೇಖರನ್‌ರವರು ... ರುತ್ತಾರೆ.

ಡಾನ್ ಪತ್ರಿಕೆ ಸುದ್ದಿ ಬಗ್ಗೆ ನೆಹರೂ ಆಕ್ಷೇಪಣೆ

ಕಾಶ್ಮೀರ ವಿಷಯ ... ಪಾಕಿಸ್ತಾನದ ಪ್ರಧಾನಿಯವರೊಡನೆ ಚರ್ಚಿಸಲು ಭಾರತದ ಪ್ರಧಾನಿ ನೆಹರೂರವರು ನಿರಾಕರಿಸಿರುವುದಾಗಿ ಕರಾಚಿಯ ಡಾನ್ ಪತ್ರಿಕೆಯಲ್ಲಿ ಬಂದಿರುವ ಸುದ್ದಿಯ ಬಗ್ಗೆ ನೆಹರೂರವರು ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನ್‌ರವರಿಗೆ ತಂತಿ ಕಳುಹಿಸಿ, ತಪ್ಪು ... ವರದಿಗಳು ... ಹರಡದಂತೆ ... ಕ್ರಮವನ್ನು ... ಕಳುಹಿಸಿರುವುದಾಗಿ ವರದಿಯಾಗಿದೆ.

ಪೌರಸಭೆಯ ಹೊಸ ಕಮಿಷನರ್

ಮೈಸೂರು ೧೫

ನಗರಸಭೆಯ ಪೌರಸಭೆಯ ಕಮಿಷನರಾಗಿ ಶ್ರೀ ಎಲ್ ಲಕ್ಷ್ಮಣರಾಯರು ಈ ದಿನ ಶ್ರೀ ಎಫ್ ಎಂ ಅಬ್ದುಲ್ ರಹೀಂರವರಿಂದ ಅಧಿಕಾರ ವಹಿಸಿಕೊಂಡರು.

ಇರಾನ್ ಅರಸರ ವಿರುದ್ಧದ ಗಲಭೆಯಲ್ಲಿ ಒಬ್ಬನ ಮರಣ

ಪರ್ಷಿಯಾದ ರಾಜಧಾನಿ ಟೆಹರಾನಿನಲ್ಲಿ ನೆನ್ನೆ ಷಹಾರವರ ವಿರುದ್ಧವಾಗಿ ನಡೆದ ಪ್ರದರ್ಶನಗಳನ್ನು ಪರ್ಷಿಯಾ ಸೈನ್ಯಗಳು ಮಟ್ಟಹಾಕಿದುವೆಂದೂ, ಈ ಸಂಬಂಧವಾಗಿ ಒಬ್ಬನು ಬಂದೂಕದ ಗುಂಡೇಟಿನಿಂದ ಸತ್ತನೆಂದೂ, ೩೦ ಜನರಿಗೆ ಗಾಯಗಳಾದುವೆಂದೂ ವರದಿಯಾಗಿದೆ. ಪೋಲೀಸರು ೬೦ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಅಲ್ಲಿನ ಕಮ್ಯೂನಿಸ್ಟ್ ಪ್ರಭಾವವುಳ್ಳ ಟುಡೇ ಪಕ್ಷವು ಷಹಾರವರ ಅಧಿಕಾರವನ್ನು ಮೊಟಕು ಮಾಡುವ ಶಾಸನವಾಗಬೇಕೆಂದು ಪಾರ್ಲಿಮೆಂಟ್ ಭವನದ ಮುಂದೆ ಪ್ರದರ್ಶನಕ್ಕಾಗಿ ಕರೆಯುತ್ತಿದ್ದಿತು. ಪ್ರದರ್ಶನಗಳು ಅಲ್ಲಿ ನಡೆಯುವಂತಾಗದೆ ಇತರ ಕಡೆಗಳಲ್ಲಿ ಆದುವು. ಷಹಾರವರ ... ರಾಣಿ ... ಸಹೋದರಿಯರ ಇಬ್ಬರು ದಾಯಾದಿಗಳನ್ನು, ದಕ್ಷಿಣ ಪರ್ಷಿಯದಲ್ಲಿ ... ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ.

ಸಹಕಾರ ರವರಿಗೆ ನಿಜಲಿಂಗಪ್ಪನವರ ತಂತಿ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಪ್ರಧಾನಿ ನೆಹರೂ ಮತ್ತು ಇತರ ಮಂತ್ರಿಗಳಿಗೆ ತಂತಿ ಕಳುಹಿಸಿ ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲಾ ವಿಭಜನೆ ಯೋಜನೆಯಿಂದ ಕರ್ನಾಟಕದಲ್ಲಿ ಕ್ಷೋಭೆ ಪರಿಸ್ಥಿತಿಯುಂಟಾಗಿರುವುದೆಂದೂ, ಮೈಸೂರಿಗೆ ಬಳ್ಳಾರಿ ಜಿಲ್ಲಾ ಕನ್ನಡ ಸೇರಿಸಲು ಕೂಡಲೇ ನಿರ್ಧರಿಸಿ, ಅಕ್ಟೋಬರ್ ೧ನೇ ತಾ|| ನೊಳಗೆ ಇತರ ಮೂರು ತಾಲ್ಲೂಕುಗಳ ಬಗ್ಗೆ ವರದಿಯೊಪ್ಪಿಸಲು ಗಡಿ ಸಮಿತಿ ರಚಿಸಬೇಕೆಂದೂ, ಕರ್ನಾಟಕ ಪ್ರಾಂತರಚನೆ ಬಗ್ಗೆಯೂ ಸಮಿತಿಯನ್ನು ರಚಿಸಬೇಕೆಂದೂ ಕೋರಿರುತ್ತಾರೆ.

ಕೊರಿಯದಲ್ಲಿ ಅಣು ಬಾಂಬು ಪ್ರಯೋಗ?

ಕೊರಿಯಾದಲ್ಲಿ ಅಣು ಬಾಂಬು ಉಪಯೋಗಿಸಿ ಇಷ್ಟರಲ್ಲೇ ಅಮೆರಿಕದ ... ಶಾಸನ ಸಭೆಯ ... ಸದಸ್ಯರು ಭಾವಿಸಿರುತ್ತಾರೆ. ಅಮೆರಿಕದಿಂದ ಅಣು ಬಾಂಬುಗಳನ್ನು ಯೂರೋಪಿಗೆ ಸಾಗಿಸಲು ವಿಮಾನಗಳು ಸಿದ್ಧವಾಗಿರುವುವೆಂದೂ ಹೇಳಲಾಗಿದೆ.

ಎಮ್ಮೆ ಬಾಲಕ್ಕೆ ಕಟ್ಟಿದ ಬಾಲಕನ ಮರಣ

ಮಧುಗಿರಿ ತಾಲ್ಲೂಕು ಗುಂಡುಗಲ್ಲು ಗ್ರಾಮದ ... ವರ್ಷದ ... ಎಂಬ ಹುಡುಗನನ್ನು ಅಲ್ಲಿನ ... ಹುಡುಗರು ಎಮ್ಮೆ ಬಾಲಕ್ಕೆ ಕಟ್ಟಿ, ... ಓಡಿಸಿ, ಅದನ್ನು ... ಎಳೆದುದರಿಂದ ಬಾಲಕನು ಮೃತಪಟ್ಟಿರುವುದಾಗಿ ಪೋಲೀಸರಿಗೆ ದೂರು ಕೊಡಲಾಗಿದೆ.

ರೈಲ್ವೆ ಕಪಮಾನೋತ್ಸವ

ನಾಳೆ ಸಂಜೆ ೫ ಘಂಟೆಗೆ ರಾಜಧಾನಿಯ ರೈಲ್ವೆ ಇನ್ಸ್‌ಟಿಟ್ಯೂಟಿನಲ್ಲಿ ರೈಲ್ವೆ ಕಪಮಾನೋತ್ಸವವು ಶ್ರೀ ಎಂ ಚಲುವೇ ಅರಸಿನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಮನೆ ಕಂದಾಯ ಹೆಚ್ಚಿಸಿರುವುದಕ್ಕೆ ಪ್ರತಿಭಟನೆ

ಮೈಸೂರು ೧೨

ರಾಜಧಾನಿಯಲ್ಲಿ ಮನೆಗಂದಾಯವನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಶ್ರೀ ಕಗಡೂರು ರಾಮಚಂದ್ರ ರಾಯರು ಮತ್ತೊಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಕಂದಾಯವನ್ನು ವಿಪರೀತ ಏರಿಸಿರುವುದಾಗಿಯೂ ವಿವೇಚನೆಯಿಲ್ಲದೆ ಒಂದೇ ನಿವೇಶನದಲ್ಲಿ ಒಂದು ಭಾಗಕ್ಕೊಂದು, ಮತ್ತೊಂದು ಭಾಗಕ್ಕೊಂದು ಈ ರೀತಿ ಕಂದಾಯವನ್ನು ಹಾಕಿರುವುದಾಗಿಯೂ ಅವರು ಹೇಳಿರುತ್ತಾರೆ. ಇದು ಜನರ ಮೇಲೆ ಕ್ರೂರದಬ್ಬಾಳಿಕೆಯನ್ನು ನಡೆಸಿದಂತಾಗುವುದೆಂದೂ ಅವರು ಹೇಳಿರುತ್ತಾರೆ. ನಗರದ ಪ್ರತಿ ಮೊಹಲ್ಲಾಗಳಲ್ಲೂ ಪ್ರತಿಭಟನಾ ಸಭೆಗಳು ನಡೆಯಬೇಕೆಂದೂ, ಪೌರಸಭಾ ಸದಸ್ಯರುಗಳು ರಾಜೀನಾಮೆ ಕೊಡುವಂತೆ ಕೇಳಬೇಕೆಂದೂ ಅವರು ಸೂಚಿಸಿರುತ್ತಾರೆ.

ಪತ್ರಿಕೆಗಳು ಮತ್ತು ಕಾನೂನು ಬಗ್ಗೆ ಭಾಷಣ

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರನ್ನುದ್ದೇಶಿಸಿ ವಕೀಲರುಗಳ ಸಂಘದ ಅಧ್ಯಕ್ಷರಾದ ಶ್ರೀ ಹೆಚ್. ಸುಬ್ಬರಾಯರು ಇದೇ ತಿಂಗಳ ೧೮ನೇ ತಾ. ಸಂಜೆ ... ಪತ್ರಿಕೆಗಳು ಮತ್ತು ಕಾನೂನು ... ವಿಷಯವಾಗಿ ಭಾಷಣ ಮಾಡುವರು.

೮೦೦೦ ಮೈಲಿ ದೂರ ಹೋಗಬಲ್ಲ ರಷ್ಯಾ ವಿಮಾನ

ಗಂಟೆಗೆ ೫೦೦ ಮೈಲಿ ವೇಗದ ಬಂಬರ್ ವಿಮಾನಗಳನ್ನು ರಷ್ಯದಲ್ಲಿ ತಯಾರಿಸಲಾಗಿರುವುದೆಂದೂ, ಅವು ೪೦ ಸಾವಿರ ಅಡಿ ಎತ್ತರದಲ್ಲಿ ಒಂದೇ ಸಾರಿಗೆ ೮೦೦೦ ಮೈಲಿಗಿಂತಲೂ ಹೆಚ್ಚು ದೂರ ಹೋಗಬಲ್ಲವೆಂದೂ ವರದಿಯಾಗಿದೆ. ಈ ವಿಷಯವನ್ನು ಕೇಳಿ ಅಮೆರಿಕದ ಅಧಿಕಾರಿಗಳಿಗೆ ಗಾಬರಿಯಾಗಿರುತ್ತದೆ.

ಇನಾಂದಾರರ ಸಭೆ

ಇನಾಂ ಗ್ರಾಮಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವ ಬಗ್ಗೆ ಶಾಸನ ಸಭೆಯಲ್ಲಿ ಮಸೂದೆಯೊಂದು ತರಲಾಗಿ ಅದರ ಮೇಲೆ ಚರ್ಚೆಯಾಗಿದೆಯಷ್ಟೆ. ಮುಂದಿನ ಜೂನ್ ತಿಂಗಳಲ್ಲಿ ಪುನಃ ಚರ್ಚೆಯಾಗಿ ಅದರ ಮೇಲೆ ತೀರ್ಮಾನವಾಗಲಿದೆ. ಮುಖ್ಯವಾಗಿ ಇನಾಂದಾರರುಗಳಿಗೆ ಕೊಡಬೇಕೆಂದಿರುವ ಪರಿಹಾರ, ನಾಯಿದೆ, ಪಾಸರ್ಗಿ ಜಮೀನುಗಳು ಇವೇ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಲು ಇನಾಂದಾರ್ ಸಂಘದ ಸಾಧಾರಣ ಸದಸ್ಯರ ಸಭೆಯು ಇದೇ ತಿಂಗಳು ೨೬ನೇ ಶನಿವಾರ ಭಾನುವಾರ ಬೆಳಿಗ್ಗೆ ೯.೩೦ ಗಂಟೆಗೆ ಬೆಂಗಳೂರಿನ ಆರ್ಯ ವಿದ್ಯಾ ಶಾಲೆಯ ಕಟ್ಟಡದಲ್ಲಿ ನಡೆಯಲಿದೆ. ಸದಸ್ಯರೂ, ಆಸಕ್ತಿಯುಳ್ಳ ಇನಾಂದಾರರೂ ಸಭೆಗೆ ಬರಬೇಕೆಂದು ಕೋರಲಾಗಿದೆ. ಸದಸ್ಯರಾಗದೆ ಇರತಕ್ಕ ಇನಾಂದಾರರು ಕೂಡಲೇ ಸಂಘಕ್ಕೆ ಸೇರಿ, ಕಷ್ಟ ಪರಿಸ್ಥಿತಿಯಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಪಾಕಿಸ್ತಾನದಲ್ಲಿ ಕ್ಷಾಮ ನಿವಾರಣೆಗೆ ಭಾರತದ ನೆರವು

ಪಾಕಿಸ್ತಾನದಲ್ಲಿ ಸಂಭವಿಸಿರುವ ಆಹಾರಾಭಾವ ಮತ್ತು ಇತರ ವಿಷಯಗಳನ್ನು ಕುರಿತು ಭಾರತದ ಅಧಿಕಾರಿಗಳೊಡನೆ ಚರ್ಚಿಸಲು ಪಾಕಿಸ್ತಾನದ ಹಲವು ಹಿರಿಯ ಅಧಿಕಾರಿಗಳು ದೆಹಲಿಗೆ ಮುಂದಿನ ವಾರ ಆಗಮಿಸುವರೆಂದು ವರದಿಯಾಗಿದೆ. ಭಾರತವು ಪಶ್ಚಿಮ ಪಾಕಿಸ್ತಾನಕ್ಕೆ ಕಾಲುವೆ ನೀರನ್ನು ತಪ್ಪಿಸಿರುವುದೆಂದೂ, ಇದರಿಂದ ಅಲ್ಲಿ ಆಹಾರ ಧಾನ್ಯ ಬೆಳೆಯಲು ತೊಂದರೆಯಾಗಿರುವುದಾಗಿ ಅಲ್ಲಿನ ಪತ್ರಿಕೆಗಳು ಅಪಪ್ರಚಾರ ಮಾಡುತ್ತಿರುವುವೆಂದೂ, ಇದರಿಂದಾಗಿ ಎರಡು ರಾಜ್ಯಗಳ ನಡುವೆ ಸೌಹಾರ್ದಕ್ಕೆ ಅವಕಾಶವಿಲ್ಲವೆಂದೂ ಹೇಳಲಾಗಿದೆ. ಮುಂದಿನ ವರ್ಷ ಪಾಕಿಸ್ತಾನಕ್ಕೆ ೧೦ ಲಕ್ಷ ಟನ್ ಧಾನ್ಯದ ಕೊರತೆ ಬೀಳುವುದಾಗಿ ಅಂದಾಜಾಗಿದೆ.

ಭಾವಸಾರಕ್ಷತ್ರಿಯ ಸಹಕಾರ ಸಂಘ

ರಾಜಧಾನಿಯ ಶ್ರೀ ಪಾಂಡುರಂಗ ... ರಲ್ಲಿ ಭಾವಸಾರ ಕ್ಷತ್ರಿಯರ ಸಹಕಾರ ಸಂಘದ ಅಧಿಕಾರ ವರ್ಗದವರ ಚುನಾವಣೆ ನಡೆದು ... ಶ್ರೀ ಎಸ್. ... ಅಧ್ಯಕ್ಷರಾಗಿಯೂ ಶ್ರೀ ಎಂ. ... [illegible] ... ಇನ್ನೂ ... ಜನರನ್ನು ಸಮಿತಿಗೆ ಆರಿಸಲಾಗಿದೆ.

ಬೆಂಗಳೂರು ಕಾರ್ಪೊರೇಷನ್ ಸದಸ್ಯರ ಸೋತಿ ಆಪಾದನೆ

ಬೆಂಗಳೂರು ಪೌರಸಭಾ ಕಾಂಗ್ರೆಸ್ ಪಕ್ಷದ ನಾಯಕ ... ಅನ್ಯಾಯದ ... ಪರಿಸ್ಥಿತಿಯನ್ನು ಕುರಿತು ಮೊನ್ನೆ ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಸದಸ್ಯರ ಸಭೆ ... ವನ್ನು ... ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀರಣ್ಣಗೌಡರು ಅಧ್ಯಕ್ಷತೆ ವಹಿಸಿದ್ದರು. ಸದಸ್ಯರ ಬಗ್ಗೆ ಅನೇಕ ದೂರುಗಳು ಬಂದಿರುವುದಾಗಿಯೂ ... ದನೆಗಳನ್ನು ಮಾಡಲಾಗಿರುವುದೆಂದೂ ಕಾರ್ಪೊರೇಷನ್ ಸಭೆಗಳಲ್ಲಿ ಕಾಂಗ್ರೆಸ್ ... ತ್ತಿರುವುದೆಂದೂ ... ಸದಸ್ಯರಲ್ಲಿ ... ಮನೋಭಾವವು ಬೆಳೆಯಬೇಕೆಂದೂ ಸೂಚಿಸಿದರು.

೬೦೦ ಜನ ಹೆಂಡತಿಯರು

ದಕ್ಷಿಣ ಆಫ್ರಿಕದ ಕಾಮರೂನ್ಸ್ ಪ್ರಾಂತದಲ್ಲಿ ಒಬ್ಬ ಆಫ್ರಿಕದ ನಾಯಕನಿಗೆ ೬೦೦ ಮಂದಿ ಪತ್ನಿಯರಿರುವರೆಂದು ವರದಿಯಾಗಿದೆ. ಅವನಿಗೆ ೮೦ ವರ್ಷ ವಯಸ್ಸೆಂದೂ, ಬಹುಕ್ರೂರ ಸ್ವಭಾವದವನೆಂದೂ ಒಬ್ಬೊಬ್ಬ ಪತ್ನಿಗೂ ಪ್ರತ್ಯೇಕ ಗುಡಿಸಲುಗಳನ್ನು ಏರ್ಪಡಿಸಿರುವನೆಂದೂ ಹೇಳಲಾಗಿದೆ.

ಕರ್ನಾಟಕ ಪ್ರಾಂತ ರಚನೆ

ಬೆಂಗಳೂರಿನಲ್ಲಿ ಈಗ ಎರಡು ವರ್ಷಗಳ ಹಿಂದೆ ನಡೆದ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನದಲ್ಲಿ ರಚಿತವಾದ ಸಮಿತಿಯೊಂದರ ಪರವಾಗಿ ಮೇಲ್ಕಂಡ ಶಿರೋನಾಮೆಯುಳ್ಳ ಗ್ರಂಥವನ್ನು ಪ್ರಕಟಿಸಲಾಗಿದೆ. ಅದರ ಪ್ರತಿಯೊಂದು ನಮ್ಮ ಹಸ್ತಗತವಾಗಿದೆ. ಪುಸ್ತಕದ ಮೊದಲಿನ ಪುಟಗಳಲ್ಲಿ ಕರ್ನಾಟಕಾಭಿಮಾನ ದೇವತೆ ಶ್ರೀ ಭುವನೇಶ್ವರಿ ದೇವಿ, ಶ್ರೀ ಮನ್ಮಹಾರಾಜರು, ಕರ್ನಾಟಕ ಪ್ರಾಂತ್ಯ, ನೆಹರೂ ಇವರುಗಳ ಚಿತ್ರವನ್ನು ಕೊಡಲಾಗಿದೆ. ಕರ್ನಾಟಕ ಪ್ರಾಂತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಮುನ್ನುಡಿಯನ್ನು ಬರೆದಿರುವರು. ಕರ್ನಾಟಕ ಪ್ರಾಂತ ರಚನೆಗಾಗಿ ದುಡಿದಿರುವ ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾಯರು ಮತ್ತು ಬೆನಗಲ್ ರಾಮರಾಯರೇ ಆದಿಯಾಗಿ ಅನೇಕ ಮುಂದಾಳುಗಳ ಚಿತ್ರಗಳನ್ನು ಪ್ರಕಟಿಸಿದೆ. ಕರ್ನಾಟಕ ಪ್ರಾಂತ ರಚನೆಯ ಆವಶ್ಯಕತೆಯ ಬಗ್ಗೆ ಹಲವು ವಿವರಗಳನ್ನು ಪುಸ್ತಕವು ಒಳಗೊಂಡಿದೆ. ಭಾಷಾ ಪ್ರಾಂತ ಪ್ರೇಮಿಗಳು ಅಗತ್ಯವಾಗಿ ಹೊಂದಿರಬೇಕಾದ ಗ್ರಂಥವಿದು. ಬೆಲೆ ರೂ. ೧-೦-೦. ಬೆಂಗಳೂರು ... ಕರ್ನಾಟಕ ಮುದ್ರಣಾಲಯದಲ್ಲಿ ಪ್ರತಿಗಳು ದೊರೆಯುತ್ತವೆ.

ಹೆಚ್. ಜಿ. ಇ. ಸಿ.
ರೇಡಿಯೋಗಳು
ಸುಲಭ ಕಂತಿನಲ್ಲಿ ದೊರೆಯುತ್ತವೆ
ಕಡಿಮೆ ಬೆಲೆ
ರೇಡಿಯೋ ಹೌಸ್,
370 ... ರಸ್ತೆ, ಮೈಸೂರು

ಜಪಾನಿಗೆ ಓಕಿನಾವಾ ದ್ವೀಪ ವಾಪಸು

ಎರಡನೇ ಮಹಾ ಯುದ್ಧದ ಸಮಯದಲ್ಲಿ ಜಪಾನಿನಿಂದ ಅಮೆರಿಕವು ಕಿತ್ತುಕೊಂಡಿದ್ದ ಶಾಂತ ಸಾಗರದ ಓಕಿನಾವಾ ದ್ವೀಪವನ್ನು ಜಪಾನಿಗೆ ವಾಪಸು ಕೊಡಲಾಗುವುದೆಂದು ವರದಿಯಾಗಿದೆ. ಇದಲ್ಲದೆ ಇನ್ನೂ ಹಲವು ದ್ವೀಪಗಳು ಜಪಾನಿಗೆ ಹಿಂದಿರುಗಿಸಲ್ಪಡುತ್ತವೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೇಕಾಯಿ	೧೮ ...	...
ಎಳ್ಳು	೭೬ ೦ ೦	
ಹರಳುಬೀಜ	೩೬ ೧೪ ೦	೩೯-೦-೦
ಹುಚ್ಚೆಳ್ಳು	೫೬-೪-೦	
ಹೊಂಗೆಬೀಜ	... ೧೦ ೦	೩೨-೧೨ ೦
ತೊಗರಿ	೪೭ ೧೨ ೬	೪೯ ೧೨ ೦
ಹೆಸರು	೬೫ ೦ ೦	೬೫-೧೦-೦
ಅವರೆ	೩೪ ೧೨ ೦	
ಹುರುಳಿ	೫೭ ೬ ೦	
ಉದ್ದು	೮೬-೦-೦	
ಮೆಣಸಿನ ಕಾಯಿ ಪುಡಿ	೧೪ ೧೦ ೦	೩೦-೪ ೦
ಹುಣಸೇಹಣ್ಣು	೪ ೫ ೦	೫-೮ ೦
ಕೊಬ್ಬರಿ	೪ ೪ ೦	೪ ೧೨ ೦
ಬೆಲ್ಲ	೬ ೦-೦	
ಕಡಲೇಬೇಳೆ		
...	೧೧೨ ೦ ೦	೧೨೬ ೦ ೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಎಂ. ಎಸ್. ಸುಬ್ಬುಲಕ್ಷ್ಮಿ ಅಯ್ಯಂಗಾರ್, ಸಂಗೀತ ... ನಾಗೇಂದ್ರಪ್ಪ, ... ಸಂಜೆ ೫.೩೦ ಎನ್. ... ಚಂದ್ರಶೇಖರ ... ೬.೧೦ ... ೭.೩೦ ... ಬೆಂಗಳೂರು ... ಸಂಗೀತ ... ಮತ್ತು ... ೮.೩೦ ... ವಿದ್ಯಾರ್ಥಿಗಳಿಗಾಗಿ ವಿವಿಧ ಕಾರ್ಯಕ್ರಮ.

ಒಲಿಂಪಿಯಾ ಟಾಕೀಸ್

16-4-53 ರಿಂದ ಪ್ರತಿದಿನ ೩ ಆಟಗಳು
ಅತ್ಯುತ್ತಮ ಸಂಗೀತ ಮತ್ತು ... ನಟನೆಗಳಿಂದ ... ಚಿತ್ರ

★ ಸ್ವಪ್ನ ★

... ಕೌಶಲ್, ... ಮತ್ತು ...
ಸಂಗೀತ - ... ಮತ್ತು ...
ನಿರ್ದೇಶನ ... ಖಾದಿರ್

ಬೆಳಗಿನ ಪ್ರದರ್ಶನ — ... ಗರೀಬ್

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ನಂಬರಿನ ಮನೆ. ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡ್ ಇದೆ. ಬೆಲೆ ಸುಮಾರು 5,000 ರೂ.
ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಚಾಮುಂಡೇಶ್ವರಿ ಟಾಕೀಸ್

ದಿನವಹಿ ೩ ಆಟಗಳು
17-4-53 ನೇ ಶುಕ್ರವಾರದಿಂದ ಅಪೂರ್ವ ಪ್ರದರ್ಶನಾರಂಭ
... ಮತ್ತು ... ಅವರ ಅತ್ಯುತ್ತಮ ... ಚಿತ್ರ

* ಮನಿದನ್ *
(ಮನುಷ್ಯ)

... ಕೃಷ್ಣ ಕುಮಾರಿ ಮತ್ತು ...
... ನಟ ... ಗಂ

SRI GAYATHRI TALKIE
From ... Days
COME FILL THE CUP
Starring James Cagney
NEXT CHANGE
FLAME AND THE ARROW
(In Technicolor)

Edited, Printed and Published by A R Nagarajan at Sadhvi Press, D Subbiah Road, Mysore

ನೋಂ. ನಂ. 792 ವಂದೇ ಮಾತರಂ ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧ } ಗುರುವಾರ ೧೩-೮-೧೯೫೩ { ಸಂಚಿಕೆ ೨೦೦

ಪ್ರಧಾನಿ ನೆಹರೂ ಬಗ್ಗೆ - ಬಿಳಿಯರ ಕೋಪ -

ಚನ್ನಪಟ್ಟಣದಲ್ಲಿ ವಿದ್ಯುದ್ದೀಪಗಳ ಆರಂಭ

ಪ್ರದೇಶ ಕಾಂ. ಅಧ್ಯಕ್ಷ ವೀರಣ್ಣಗೌಡರ ಭಾಷಣ

ಮೈಸೂರು ೧೩.

ಮೈಸೂರು ತಾಲ್ಲೂಕು ಶಟ್ಟೀಗಾಲ ಗ್ರಾಮದಲ್ಲಿ ವಿದ್ಯುದ್ದೀಪಗಳ ಆರಂಭೋತ್ಸವವನ್ನು ನೆನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀರಣ್ಣಗೌಡರು ನೆರವೇರಿಸಿದರು. ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಚ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಬಂದಿದ್ದ ಮುಖಂಡರುಗಳನ್ನು ಗ್ರಾಮಸ್ಥರು ಆದರದಿಂದ ಸ್ವಾಗತಿಸಿ ಮೆರವಣಿಗೆಯಲ್ಲಿ ಕರೆದೊಯ್ದರು.

ಶ್ರೀಮತಿ ಗಿರಿಜಮ್ಮನವರಿಂದ ಸಂಗೀತವು ನಡೆದಮೇಲೆ, ಶ್ರೀ ಕೆ ಕೆಂಪೇಗೌಡರು ಕಾಂಗ್ರೆಸ್ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ, ದೇಶಕ್ಕೆ ಅವರ ಸೇವೆಯನ್ನು ಕೊಂಡಾಡಿ, ಬಳ್ಳಾರಿ ಜಿಲ್ಲೆಯ ಹಲವು ತಾಲ್ಲೂಕುಗಳು ಮೈಸೂರು ಸಂಸ್ಥಾನಕ್ಕೆ ಸೇರುವುದರ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ವಿ ಚನ್ನಸ್ವಾಮಿಯವರು ಶ್ರೀ ಎಚ್ ಚನ್ನಯ್ಯನವರಿಗೆ ಸನ್ಮಾನ ಪತ್ರವೊಂದನ್ನು ಸಮರ್ಪಿಸಿದರು. ಶಟ್ಟೀಗಾಲ, ಕಿರಗೌಡನಹಳ್ಳಿ, ಮತ್ತು ಹಾಯೂರು ಗ್ರಾಮಗಳ ಆದಿಕರ್ನಾಟಕರು ಅಧ್ಯಕ್ಷರಿಗೆ ಮನವಿಯೊಂದನ್ನು ಸಲ್ಲಿಸಿ ಹರಿಜನರಿಗೆ ವಸತಿ ಗೃಹಗಳಿಗಾಗಿ ಬೊಂಬು ಮುಂತಾದ ಸಲಕರಣೆಗಳನ್ನು ಸರ್ಕಾರದಿಂದ ಒದಗಿಸಿಕೊಡುವಂತೆ ಕೋರಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಆಹಾರ ಧಾನ್ಯಗಳ ಬೆಲೆ ಹೆಚ್ಚಿರುವುದನ್ನು ಪ್ರಸ್ತಾಪಿಸಿ, ದೇಶದಲ್ಲಿ ಹೆಚ್ಚು ಬೆಳೆ ಬೆಳೆಗಳಾಗದಿರುವುದೇ ಅದಕ್ಕೆ ಕಾರಣವೆಂದೂ, ಸರ್ಕಾರದವರು ಆಹಾರ ಧಾನ್ಯಕ್ಕಾಗಿ ೧೦ ಕೋಟಿ ರೂ. ವೆಚ್ಚ ಮಾಡುವರೆಂದೂ, ರೈತರು ಧಾನ್ಯವನ್ನು ಶ್ರದ್ಧೆಯಿಂದ ಬೆಳೆದು ದೇಶದಲ್ಲಿ ಸುಭಿಕ್ಷ ಮಾಡುವಂತೆ ಮಾಡಬೇಕೆಂದೂ ಕೋರಿದರು. ಶ್ರೀ ಎಚ್ ಚನ್ನಯ್ಯನವರು ಭಾಷಣ ಮಾಡಿ, ರೈತರ ಅನಾನುಕೂಲಗಳು ಈಗ ಹೆಚ್ಚಾಗಿರುವುದೆಂದೂ ಅವರು ಸೇವಕರಾಗಿರಬೇಕೆಂದೂ ತಿಳಿಸಿದರು.

ಸ್ವದೇಶಕ್ಕೆ ಹಿಂತಿರುಗದ ಸೈದಿಗಳು ಸ್ವಿಟ್ಸರ್ಲೆಂಡಿಗೆ

ಸ್ವದೇಶಕ್ಕೆ ಹಿಂತಿರುಗಲು ಅಪೇಕ್ಷಿಸದ ಕಮ್ಯೂನಿಸ್ಟ್ ಸೈದಿಗಳನ್ನು ತಾಟಸ್ಥ್ಯ ರಾಷ್ಟ್ರವಾದ ಸ್ವಿಟ್ಸರ್ಲೆಂಡಿಗೆ ಕಳುಹಿಸಬೇಕೆಂದು ವಿಶ್ವ ಸಂಸ್ಥೆಯ ಸೇನಾನಿ ಶಿಫೇರಿಯ ಸಲಹೆ ಮಾಡಿರುವುದಾಗಿ ಗೊತ್ತಾಗಿದೆ.

ರಾಮರ್ ಶಾಲೆಗೆ ೫೦ ಸಾವಿರ ರೂ.

ಬೆಂಗಳೂರಿನಲ್ಲಿರುವ ಸಿ ವಿ ರಾಮನ್‌ರವರ ಸಂಶೋಧನಾ ಇನ್ಸಿಟ್ಯೂಟಿನಲ್ಲಿ ಅಧುನಿಕವಾದ ಪ್ರಯೋಗಶಾಲೆಯೊಂದಾರಂಭಿಸಲು ಸರ್ಕಾರದವರು ೫೦ ಸಹಸ್ರ ರೂ.ಗಳ ಸಹಾಯವನ್ನು ಮಂಜೂರು ಮಾಡಿರುವುದಾಗಿ ವರದಿಯಾಗಿದೆ.

ಬಳ್ಳಾರಿ ಭವಿಷ್ಯದ ಬಗ್ಗೆ ಅಧಿಕಾರಿಯ ನೇಮಕ

ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯ ಇತರ ಮೂರು ತಾಲ್ಲೂಕುಗಳ ಭವಿಷ್ಯವನ್ನು ನಿರ್ಧರಿಸಲು ಭಾರತ ಸರ್ಕಾರದವರು ಒಬ್ಬ ವಿಶೇಷಾಧಿಕಾರಿ ಅಥವಾ ಹೈಕೋರ್ಟ್ ನ್ಯಾಯಾಧೀಶರನ್ನು ಶೀಘ್ರದಲ್ಲೇ ನೇಮಿಸಲಿರುವರೆಂದು ವರದಿಯಾಗಿದೆ. ಆಂಧ್ರ ಪ್ರಾಂತ ರಚನೆಗೆ ಮುಂಚಿತವಾಗಿಯೇ ಈ ತಾಲ್ಲೂಕುಗಳ ಭವಿಷ್ಯವನ್ನು ಅವರಿಗೆ ನಿರ್ಧರಿಸುವುದು ಒಳ್ಳೆಯದೆಂದು ಕೇಂದ್ರ ಸರ್ಕಾರದವರು ಭಾವಿಸಿರುವಂತೆ ಕಾಣಬರುತ್ತದೆ. ರಾಯದುರ್ಗ, ಆಲೂರು ಮತ್ತು ಅದವಾನಿ ತಾಲ್ಲೂಕುಗಳಲ್ಲಿ ಸ್ವಲ್ಪ ಭಾಗವನ್ನು ಮೈಸೂರಿಗೆ ಸೇರಿಸಲಾಗುವುದೆಂದೂ ತಿಳಿದುಬಂದಿದೆ.

ಚುನಾವಣೆ ನ್ಯಾಯಾಧೀಶರ ತೀರ್ಪಿನ ಬಗ್ಗೆ ಹೈಕೋರ್ಟಿಗೆ ಅರ್ಜಿ

ಮಹಾ ಚುನಾವಣೆಗಳ ಸಂಬಂಧವಾಗಿ ಚನ್ನರಾಯಪಟ್ಟಣ ತಾಲ್ಲೂಕಿನಿಂದ ಸಂಸ್ಥಾನದ ಶಿಕ್ಷಣ ಶಾಸನ ಸಭೆಗೆ ನಡೆದ ಚುನಾವಣೆ ಸಂಬಂಧವಾಗಿ, ಚುನಾವಣಾ ನ್ಯಾಯ ಮಂಡಲದವರು ಶ್ರೀ ಕೆ ಲಕ್ಕಪ್ಪನವರ ಚುನಾವಣೆಯನ್ನು ರದ್ದುಗೊಳಿಸಿ ಕೊಟ್ಟಿರುವ ತೀರ್ಪನ್ನು ವಜಾ ಮಾಡಬೇಕೆಂದು ಶ್ರೀ ಕೆ ಲಕ್ಕಪ್ಪನವರು ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ನ್ಯಾಯಾಧೀಶರು ದಾಖಲುಮಾಡಿಕೊಂಡು ಚುನಾವಣಾ ನ್ಯಾಯಾಲಯದ ತೀರ್ಪಿಗೆ ತಾತ್ಕಾಲಿಕ ತಡೆ ಆಜ್ಞೆಯನ್ನು ಕೊಟ್ಟು ಸಂಬಂಧಪಟ್ಟವರಿಗೆ ನೋಟೀಸು ಕೊಡಲು ಸೂಚಿಸಿರುತ್ತಾರೆ.

ವಿಮಾನಾಪಘಾತದಲ್ಲಿ ೨ ಆನೆಗಳ ಮರಣ

ಮೊನ್ನೆ ದಿವಸ ಗೌಹಾತಿಯಿಂದ ಕಲ್ಕತ್ತೆಗೆ ಹೊರಟ ಏರ್‌ವೇಸ್ ಇಂಡಿಯಾ ಸಂಸ್ಥೆಯ ಸರಕೋಟು ವಿಮಾನವೊಂದು ಗೌಹಾತಿಗೆ ಸಮೀಪದ ಒಂದು ಜಾಗದಲ್ಲಿ ಅಪಘಾತಕ್ಕೀಡಾಯಿತೆಂದೂ, ೨೦ ಗಂಟೆಗಳ ಕಾಲ ಸತತ ಪ್ರಯತ್ನದ ನಂತರ ಅದರ ಅವಶೇಷಗಳನ್ನು ನೆನ್ನೆ ಬೆಳಿಗ್ಗೆ ಪತ್ತೆಹಚ್ಚಲಾಯಿತೆಂದೂ ವರದಿಯಾಗಿದೆ. ಆ ಕೋಟಾದಲ್ಲಿದ್ದ ಎರಡು ಆನೆ ಮರಿಗಳೂ ಮತ್ತು ಮೂವರು ವೈಮಾನಿಕರೂ ಮೃತಪಟ್ಟಿರುವುದಾಗಿ ಗೊತ್ತಾಗಿದೆ.

ಸಂಸ್ಥಾನದಲ್ಲಿ ಟಿಲಿವಿರ್ಷ ಸೆಟ್ ತಯಾರಿಕೆ

ಕೈಗಾರಿಕಾ ಡೈರೆಕ್ಟರ ಹೇಳಿಕೆ

ಬೆಂಗಳೂರು ೧೨

ಶೀಘ್ರದಲ್ಲೇ ಮೈಸೂರು ಸಂಸ್ಥಾನದಲ್ಲಿ ಟಿಲಿವಿರ್ಷ ಸೆಟ್ಟುಗಳನ್ನು ತಯಾರಿಸುವುದರ ಪ್ರಯತ್ನಗಳನ್ನು ನಡೆಸಲಿರುವುದಾಗಿಯೂ, ಹಾಗೆ ತಯಾರಿಸುವುದು ಸಾಧ್ಯವೆಂದೂ ಸಂಸ್ಥಾನದ ಕೈಗಾರಿಕಾ ಡೈರೆಕ್ಟರ್ ಶ್ರೀ ಎ ಗೋಪಾಲ ಅಯ್ಯಂಗಾರರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ. ಅಲ್ಲದೆ ಪ್ರದೇಶಗಳಲ್ಲಿರುವ ಜನರ ಪರಿಹಾರಕ್ಕಾಗಿಯೂ, ಅವರಿಗೆ ಉಪಕರಣಗಳನ್ನು ಒದಗಿಸುವುದಕ್ಕಾಗಿಯೂ, ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅಭಿವೃದ್ಧಿಗೊಳಿಸಲು ಸರ್ಕಾರದವರು ಕ್ರಮ ಕೈಗೊಂಡಿರುವರೆಂದೂ, ಮುಂದಿನ ಸರ್ಕಾರದ ಸಹಕಾರದಿಂದ ಕೋಲಾರ ಮತ್ತು ಉತ್ತರ ಕರ್ನಾಟ ಜಿಲ್ಲೆಗಳ ನಡುವೆ ಅರುವ ಜನ್ಮಭೂಮಿ ಒಂದರಲ್ಲಿ ಉಕ್ಕಿನ ಕಾರ್ಖಾನೆಯನ್ನು ತಯಾರಿಸುವ ಕೇಂದ್ರವನ್ನು ಸ್ಥಾಪಿಸಲಾಗುವುದೆಂದೂ, ಅವರು ಹೇಳಿರುತ್ತಾರೆ. ಕೈಗಾರಿಕಾ ಶಾಖೆಗಳಲ್ಲಿ ಮುಂದಿನ ಕೆಲಸಗಳನ್ನು ವಿಸ್ತರಿಸುವ ಉದ್ದೇಶದಲ್ಲಿ ಸೇರಿಸುವ ಅಲೋಚನೆ ಇರುವುದಾಗಿಯೂ ಅವರು ಹೇಳಿ ಶಾಸನ ಸಭೆಗಳಲ್ಲಿ ಪರಿಶೀಲಿಸಲು ಸಂಸ್ಥಾನದ ಹಲವು ಕಡತಗಳನ್ನು ವಿಶೇಷವಾಗಿ ಸಂಗ್ರಹಿಸಿ ಅಲೋಚಿಸಲಾಗುತ್ತಿದೆಯೆಂದೂ ತಿಳಿಸಿದರು.

ಕೊರಿಯ ಯುದ್ಧ ಸೈದಿಗಳ ಮುಕ್ತಿ

ಕೊರಿಯಾ ಯುದ್ಧ ಸೈದಿಗಳ ವಿನಿಮಯದ ಅಂಗವಾಗಿ ಸ್ವದೇಶಕ್ಕೆ ಮರಳುವಂತೆ ಮಾಡಲು, ಹಗಲಿನಲ್ಲಿ ಖಾಯಿಲೆ ಇರುವ ಮತ್ತು ಗಾಯಗೊಂಡ ಕಮ್ಯೂನಿಸ್ಟ್ ಸೈದಿಗಳನ್ನು ವಿಶ್ವ ಸಂಸ್ಥೆಯವರು ನೆನ್ನೆ ಪೂರ್ವಾರ್ಧಗಳಿಗೆ ಕಳಿಸಿದಾಗ ಹತ್ತಿರದಿಂದ ೭೦೦ ಸೈದಿಗಳು ಕೆಳಗಿಳಿಯಲು ಒಪ್ಪದೆ ಮುಷ್ಕರ ಹೂಡಿದರೆಂದು ವರದಿಯಾಗಿದೆ. ಮುಷ್ಕರಕ್ಕೆ ಕಾರಣವೇನೆಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಹಡಗಿನಿಂದ ರೋಗಿಗಳನ್ನು ಸ್ಟ್ರೆಚರಿನಲ್ಲಿ ಇಳಿಸಲಾಯಿತೆಂದೂ, ಆ ನಂತರ ಕಮ್ಯೂನಿಸ್ಟರು ಶಾಂತ ಇಳಿಯುವುದಿಲ್ಲವೆಂದು ಹೇಳಿದರೆಂದೂ ವರದಿಯಾಗಿದೆ.

ಏಕೀಕರಣ ವಿಚಾರವಾಗಿ

ಮೈಸೂರು ೧೩.

ಅಖಿಲ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಶಂಕರಗೌಡ ಪಾಟೀಲರವರ ಏಕೀಕರಣ ವಿಚಾರವನ್ನು ಅಂಗೀಕರಿಸಿದ ಸಭೆಯಲ್ಲಿ ನೆನ್ನೆ ಸಂಜೆ ಪ್ರೊಫೆಸರ್ ಬಿ. ಕುಪ್ಪುಸ್ವಾಮಿ, ಶ್ರೀ ಕೆ.ಎಂ.ಪಿ. ಪುಟ್ಟಸ್ವಾಮಿ, ಬಂಗಾರಪ್ಪ ಮತ್ತು ಮೈಸೂರಿನ ಪ್ರಮುಖರು ಸೇರಿ ಕರ್ನಾಟಕದ ಏಕೀಕರಣದ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಚರ್ಚಿಸಿದರು:—

ಏಕೀಕರಣದ ಬಗ್ಗೆ ನಡೆಯುತ್ತಿರುವ ಚಳುವಳಿಗೆ ಬೆಂಬಲ ನೀಡಬೇಕೆಂದೂ ಮತ್ತು ಬಳ್ಳಾರಿಯ ೧೧ ತಾಲ್ಲೂಕುಗಳನ್ನು ಆಡಳಿತದ ದೃಷ್ಟಿಯಿಂದ ಸೇರಿಸಿದ ಮತ್ತು ಹಿಂದುಳಿದ ತಾಲ್ಲೂಕುಗಳನ್ನು, ಮೈಸೂರಿಗೆ ಸೇರಿಸಬೇಕೆಂದು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು, ಬಳ್ಳಾರಿಯ ತಕ್ಕ ಜನಗಳನ್ನು ಒತ್ತಾಯಪಡಿಸಿದರು. ಏಕೀಕರಣಕ್ಕಾಗಿ ಉಪವಾಸ ಕೈಗೊಂಡ ಶ್ರೀ ಶಂಕರಗೌಡ ಪಾಟೀಲರಿಗೆ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುವುದು ಮತ್ತು ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭಾ ಸದಸ್ಯರುಗಳೂ ಮತ್ತು ಇತರ ಅಧಿಕಾರಿಸ್ಥಾನದಲ್ಲಿರುವ ಕನ್ನಡಿಗರೂ, ಆಂಧ್ರ ಪ್ರಾಂತ ರಚನೆಯ ಜೊತೆಯಲ್ಲಿಯೇ ಕರ್ನಾಟಕ ಪ್ರಾಂತ ರಚನೆಯನ್ನೂ ಮಾಡುವಂತೆ ತಮ್ಮ ಶಕ್ತಿಗಳನ್ನೆಲ್ಲಾ ಪ್ರಯೋಗಿಸಬೇಕೆಂದು ಅವರನ್ನು ಪ್ರಾರ್ಥಿಸುವುದು.

ಶ್ರೀ ಕೆ. ಎಸ್ ನಾರಾಯಣಸ್ವಾಮಿಯವರು ವಂದನಾರ್ಪಣೆ ಮಾಡಿದರು. ಸಭೆಯ ಆರಂಭದಲ್ಲಿ ಶ್ರೀ ಬಿ. ರಾಜಗೋಪಾಲ್‌ರವರು ಕೆಲವು ಕನ್ನಡ ಗೀತೆಗಳನ್ನು ಹಾಡಿದರು.

ಟಿ ಸುಬ್ರಹ್ಮಣ್ಯಶಾಸ್ತ್ರಿಯವರ ನಿಧನ

ಪ್ರಖ್ಯಾತ ಅಡ್ವೊಕೇಟ್‌ರವರಾಗಿದ್ದ ಶ್ರೀ ಟಿ ಸುಬ್ರಹ್ಮಣ್ಯಶಾಸ್ತ್ರಿಯವರು ನೆನ್ನೆ ಸಂಜೆ ೭-೩೦ ಘಂಟೆಗೆ ಹಠಾತ್ತನೆ ಹೃದಯಾಘಾತದಿಂದ ಒಂಟಿಕೊಪ್ಪಲಿನ ತಮ್ಮ ಮನೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೪ ವರ್ಷ ವಯಸ್ಸಾಗಿತ್ತು. ಅವರ ಕುಟುಂಬದವರಿಗಾಗಿ ಮೃತರ ಆತ್ಮಕ್ಕೆ ಶಾಂತಿ ಕೋರುತ್ತೇವೆ. ದು ಪ್ರಾರ್ಥಿಸುತ್ತೇವೆ.

ನೆಹರೂರವರ ಮೇಲೆ ಕೀನ್ಯಾ ಬಿಳಿಯರ ಆಕ್ರೋಶ !

ಪಂಡಿತ ನೆಹರೂ ಮತ್ತು ಭಾರತ ಸರ್ಕಾರದವರು ಕೀನ್ಯಾ ವ್ಯವಹಾರಗಳಲ್ಲಿ ಅನುಚಿತವಾಗಿ ಪ್ರವೇಶಿಸುತ್ತಿರುವರೆಂದು ಕೀನ್ಯಾದ ಏರೋಪ್ಯ ಮತದಾರರ ಸಂಘವು ಅಪಾದಿಸಿರುತ್ತದೆ. ಇದೇ ರೀತಿ ಹೆಚ್ಚುತ್ತಿರುವ ಈ ಕ್ರಮಗಳ ಬಗ್ಗೆ ಆ ಸಂಘದ ಅಧ್ಯಕ್ಷ ಲಾರ್ಡ್ ಡೆಲಾಮಿಯರ್‌ರವರು ಅತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ.

◯ ಅಮ್ಸರ್ ಪ್ರಾಂತದ ೭೦ ಇರುವ ಬುಗ್ ಹಲಾಯ್ ಎಂಬಲ್ಲಿ ಕೀಟಗಳನ್ನು ಗ್ರಾಮಸ್ಥರು ೩ ಆನೆಯುಂಡಿ ಹುಡುಕುತ್ತಿರುವುದಾಗಿ ವರದಿಯಾಗಿದೆ.

ಟೈಮ್ಸ್ ಪತ್ರಿಕೆ ಮೇಲೆ ಶಾಸನ ಸಭೆಯ ಆರೋಪಣೆ

ಮುಂಬಾಯಿ ಶಾಸನ ಸಭೆಯ ಹಕ್ಕು ಬಾಧ್ಯತೆಗೆ ಅಲ್ಲಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮತ್ತು ಅದರ ಸಂಪಾದಕ ಫ್ರಾಂಕ್ ಮೊರೆಯಾರವರು ಚ್ಯುತಿ ತಂದು ಸಭೆಗೆ ಅವಮಾನ ಮಾಡಿರುವರೆಂದು ಸಭೆಯ ಹಕ್ಕುಬಾಧ್ಯತಾ ಸಮಿತಿಯು ನಿರ್ಣಯ ಮಾಡಿದೆ. ಪ್ರಕೃತ ಪತ್ರಿಕಾ ಸಂಪಾದಕರ ವರ್ತನೆ ಮತ್ತು ಖಂಡಿತವಾಗಿದೆ ಪತ್ರಿಕೆಯು ಕಳೆದ ೨೦ನೇ ತಾ॥ನ ಸಂಚಿಕೆಯಲ್ಲಿ "ಕಂಟೆಂಪ್ಟಿಬಲ್" ಎಂಬ ಶಿರೋನಾಮೆಯಲ್ಲಿ ಬರೆಯಲಾಗಿದ್ದ ಅಗ್ರಲೇಖನದ ಬಗ್ಗೆ ಈ ರೀತಿ ಅಕ್ಷೇಪಣೆ ಮಾಡಲಾಗಿದೆ. ಪತ್ರಿಕೆಯು ಕ್ಷಮಾಪಣೆಯನ್ನು ಸಲ್ಲಿಸಿ, ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುವವರೆಗೆ ಅದಕ್ಕೆ ಎಲ್ಲ ಬಗೆಯ ಸೌಲಭ್ಯಗಳನ್ನೂ ನಿಲ್ಲಿಸುವಂತೆ ಸಮಿತಿಯು ಶಿಫಾರಸು ಮಾಡಿರುತ್ತದೆ.

ಅಕ್ರಮವಾಗಿ ಮನೆ ಕಟ್ಟಿದ ಅಪಾದನೆ ನಜಾ

ರಾಜಧಾನಿಯ ಮಿರ್ಜ ಅಸ್ಪತ್ರೆ ರಸ್ತೆಯಲ್ಲಿ [illegible] ನಂಬರು ಮನೆ ನಿವಾಸಿ ಶ್ರೀ ಟಿ ಶಿವ [illegible] ರವರ ಅಧಿಕಾರಿಯಲ್ಲಿದ್ದ ಕಟ್ಟಡ [illegible] ರಿಂದ ಅವರ ಮೇಲೆ ಪೌರ ಸಭೆಯ ವರು ನಗರದ [illegible] ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯ [illegible] ವಜಾ ಮಾಡಲಾಗಿದೆ

ಅಭರಣಗಳ ಕಳುವಿನ ಪತ್ತೆ ತರದ [illegible]

ರಾಜಧಾನಿಯ ಶ್ರೀ ಗಾಯತ್ರೀ ಕೇಸಿನ ಮಾಲೀಕರಿಂದ ಶ್ರೀ [illegible] ಚಲವಾಚಾರ್ಯರವ ಮನೆಯಲ್ಲಿ ಕಳೆದ ೧೦ನೇ ತಾರೀಖು ನಡೆದ ಅಭರಣಗಳ ಕಳುವಿನ ಸಂಬಂಧದಲ್ಲಿ ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ನಿನವರು ಬಹಳ ಚುರುಕುತನದಿಂದ ಪತ್ತೆ ಕಾರ್ಯಗಳನ್ನು ನಡೆಸುತ್ತಿರುವರು. ಮಾಲುಗಳನ್ನು ಪತ್ತೆ ಮಾಡಿಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದೆಂದು ಪ್ರಕಟಿಸಲಾಗಿದೆ. [illegible] ಬೆಳ್ಳಿ ತಟ್ಟೆಗಳು, ಒಂದು ಬೆಳ್ಳಿ [illegible], ಒಂದು ಬಂಗಾರದ [illegible] ಬಂಗಾರದ ಮಣಿಗೆ [illegible] ಮುತ್ತಿನ ಸರ, ೩ ಜೊತೆ [illegible] ಬಳೆಗಳು, ೩ ಜೊತೆ [illegible] ಗಳು ಮತ್ತು ಕೆಲವು ಬಟ್ಟೆಗಳು ಕಳವಾಗಿವೆ

ಜನತಾ ಶಿಕ್ಷಣ ಕೇಂದ್ರಕ್ಕೆ ಭೇಟಿ

ರಾಜಧಾನಿಯ [illegible] ಯಲ್ಲಿ ನಡೆಯುತ್ತಿರುವ ಜನತಾ ಶಿಕ್ಷಣ ಕೇಂದ್ರಕ್ಕೆ ಕಳೆದ ಸೋಮವಾರ ವಿದ್ಯಾಸಚಿವ ಶ್ರೀ [illegible] ಯವರು ಇಲ್ಲಿನ ವಯಸ್ಕರ ಶಿಕ್ಷಣ ಸಮಿತಿ ಅಧಿಕಾರಿಗಳೊಡನೆ ಭೇಟಿಯಿತ್ತು, ಗ್ರಾಮದಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣದ ಕಾರ್ಯಕ್ರಮವು ಮುಂತಾದುವನ್ನು ಪರಿಶೀಲಿಸಿ ಮೆಚ್ಚಿಗೆ ಸೂಚಿಸಿದರು. ಗ್ರಾಮ ಕಲಾ ಪ್ರದರ್ಶನ ಮತ್ತು ಚಲನ ಚಿತ್ರ ಪ್ರದರ್ಶನಗಳನ್ನು ಕಂಡು ಹರ್ಷವನ್ನು ವ್ಯಕ್ತಪಡಿಸಿದರು.

ಹೈದ್ರಾಬಾದಿನಲ್ಲಿ ಉರ್ದು ಕೋರ್ಟ್ ಭಾಷೆಯಾಗಿರಲಿ

ಹೈದರಾಬಾದಿನ ಮುನ್ಸೀಫ್ ಕೋರ್ಟು, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಸಬ್ ಜಡ್ಜರ ಕೋರ್ಟು ವ್ಯವಹಾರಗಳನ್ನು ಇನ್ನು ಮುಂದೆ ಇಂಗ್ಲೀಷಿನಲ್ಲಿ ನಡೆಸಬೇಕೆಂದು ಅಲ್ಲಿನ ಹೈಕೋರ್ಟು ಕಳೆದ ತಿಂಗಳು ೨೦ ನೇ ತಾರೀಖು ಸೂಚನೆ ಕಳುಹಿಸಿದ ಸಂಬಂಧವಾಗಿ ಹೈದರಾಬಾದ್ ಜಿಲ್ಲಾ ವಕೀಲರ ಸಂಘದ ಸಭೆಯು ಸೇರಿ ಈ ಆಜ್ಞೆಯಿಂದ ಅನೇಕ ವಕೀಲರು ನಿರುದ್ಯೋಗಿಗಳಾಗುವರೆಂದೂ ಮತ್ತು ಅವರ ಆರ್ಥಿಕ ಸ್ಥಿತಿಯು ಕೆಡುವುದೆಂದೂ ತಿಳಿಸಿ ಮೇಲ್ಕಂಡ ಆಜ್ಞೆಯನ್ನು ರದ್ದು ಮಾಡಬೇಕೆಂದು ಕೋರಿರುವರು. ಹಿಂದಿಯು ಕೋರ್ಟುಗಳ ಭಾಷೆಯಾಗಿ ಜಾರಿಗೆ ಬರುವವರೆಗೆ ಉರ್ದುವನ್ನೇ ಕೋರ್ಟು ಭಾಷೆಯಾಗಿರಬೇಕೆಂದೂ ಕೋರುವ ನಿರ್ಣಯ ಮಾಡಲಾಯಿತು (ಎ ಪಿ ಎಸ್)

ಅಪೆಕ್ಸ್ ಬ್ಯಾಂಕ್ ಅಧಿಕಾರ ವರ್ಗ

ಸಂಸ್ಥಾನದ ಅಪೆಕ್ಸ್ ಬ್ಯಾಂಕಿನ ಡೈರೆಕ್ಟರಗಳ ಸಭೆಯು ನಡೆದು ಶ್ರೀ ಸಿ ಎಲ್ [illegible] ರವರು ಅಧ್ಯಕ್ಷರಾಗಿಯೂ, ಶ್ರೀ ಹೆಚ್ ಎಸ್ ದೊರೆಸ್ವಾಮಿಯವರು ಉಪಾಧ್ಯಕ್ಷರಾಗಿಯೂ [illegible]

ಬ್ರಾಹ್ಮಣ ಧರ್ಮ ಸಹಾಯ ಸಭೆ

ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಭೆಯ [illegible] ದಿನೇ ರವಿವಾರ [illegible] ಗಂಟೆಗೆ ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿಯವರ ದೇವಾಲಯದಲ್ಲಿ ನಡೆಯುವುದು. ಶ್ರೀ [illegible] ಸುಬ್ರಹ್ಮಣ್ಯ ಅಯ್ಯರ್ ರವರು ಅಧ್ಯಕ್ಷತೆ ವಹಿಸುವರು. ಸಭೆಯವರು [illegible]

ಅಂಚೆಕಛೇರಿ ನಾಳೆ ಕಾರ್ಯಕ್ರಮ

[illegible]

೬೫ ಗಂಟೆಗೊಂದು ಕೊಲೆ

ಪಾಕಿಸ್ತಾನದ ಪಂಜಾಬಿನ ಗುಜರಾತ್ ಜಿಲ್ಲೆಯಲ್ಲಿ ಪ್ರತಿ ೬೫ ಗಂಟೆಗೊಂದು ಕೊಲೆಯಾಗುತ್ತಿರುವುದಾಗಿ ವರದಿಯಾಗಿದೆ. ಹೋದ ವರ್ಷ ೧೭೦ ಕೊಲೆಗಳೂ, ಈ ವರ್ಷ ಇದುವರೆಗೆ ೨೭ ಖೂನಿಗಳೂ ಆಗಿವೆ. ಮಗನು ತಂದೆಯನ್ನೂ, ಹೆಂಡತಿಯು ಗಂಡನನ್ನೂ, ಸೋದರರು ಸೋದರರನ್ನೂ ಕೊಲೆ ಮಾಡಿರುವರು. ಪ್ರಣಯ, ಸ್ತ್ರೀಯ ರಾಜಕೀಯ, ಮತ್ತು ಭೂ ವ್ಯವಹಾರ ಇವುಗಳೇ ಕೊಲೆಗೆ ಕಾರಣವಾಗಿವೆ

ಖಾದಿಗೆ ಉತ್ತೇಜನಕ್ಕಾಗಿ ಗಿರಣಿ ಬಟ್ಟೆಗೆ ತೆರಿಗೆ

ಖಾದಿ ಮತ್ತು ಕೈಮಗ್ಗದ ಬಟ್ಟೆಗಳ ಅಭಿವೃದ್ಧಿಗಾಗಿ ಗಿರಣಿಗಳಲ್ಲಿ ತಯಾರಾಗುವ ಬಟ್ಟೆಗಳ ಮೇಲೆ ತೆರಿಗೆಯನ್ನು ವಿಧಿಸುವ ಮಸೂದೆಯು ಕೇಂದ್ರದ ಶಾಸನ ಸಭೆಯಲ್ಲಿ ಅಂಗೀಕೃತವಾಗಿದೆ. ಈಗಾಗಲೇ ಕೆಳಗಿನ ಸಭೆಯು ಮಸೂದೆಗೆ ಒಪ್ಪಿಗೆ ಇತ್ತಿದ್ದಿತು. ಈಗ ಅದು ರಾಷ್ಟ್ರಾಧ್ಯಕ್ಷರ ಅಂಗೀಕಾರ ಪಡೆಯಬೇಕಾಗಿದೆ

ಗೋಮಟೇಶ್ವರ ಸ್ವಾಮಿಗೆ ೧೦೮ ಕಲಶಗಳ ಅಭಿಷೇಕ

ಶ್ರವಣಬೆಳಗೊಳದಲ್ಲಿ ಕಳೆದ ಸೋಮವಾರ ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ೧೦೮ ಕಲಶಗಳ ಪಂಚಾಮೃತ [illegible] ನಡೆಯಿತು. ೧೦ ಸಾವಿರ ಜನ [illegible] ನೆರೆದಿದ್ದರು. ಶ್ರೀ [illegible] ಈ ಸಮಾರಂಭಗಳನ್ನು ಮಾಡಿದರು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ ನವರು, ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯ, ಹಾಸನದ ಜಿಲ್ಲಾಧಿಕಾರಿಗಳಾದ ಶ್ರೀ ಕೆ ಬಾಲಸುಬ್ರಹ್ಮಣ್ಯಂರವರು ಹಾಜರಿದ್ದರು. ಸಂಸ್ಥಾನದಲ್ಲಿ ಜೈನ ದೇವಾಲಯಗಳನ್ನು ಪುನರುಜ್ಜೀವನಗೊಳಿಸುವಂತೆ ಶ್ರೀ ಭಟ್ಟಾರಕ ಸ್ವಾಮಿಗಳು ಮುಖ್ಯಮಂತ್ರಿಯವರನ್ನು ಪ್ರಾರ್ಥಿಸಿದರು. ಈ ವಿಷಯವಾಗಿ ಸಾಧ್ಯವಾದ ಪ್ರಯತ್ನವನ್ನು ಮಾಡುವುದಾಗಿ ಮುಖ್ಯಮಂತ್ರಿಯವರು ಭರವಸೆಯಿತ್ತರು

ಹೊಸ ಹೊಸ

ಮಡಿಸುವ ಕುರ್ಚಿಗಳು

[illegible]

ಅ ಬೀ ದ್ವ

[illegible], ಮೈಸೂರು

ಸಚಿವರಿಂದ ಎಳ್ಳಹದ ಅಂಗಡಿಯ ಉದ್ಘಾಟನೆ

ಹೈದರಾಬಾದಿನ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಶ್ರೀ ವಿನಾಯಕರಾವ್ ವಿದ್ಯಾಲಂಕಾರ್ ರವರು ಕಳೆದ ಸೋಮವಾರ ಅಲ್ಲಿನ ಅಬೀದ್ ರಸ್ತೆಯಲ್ಲಿರುವ 'ಭಲ್ಲಾ ಫ್ರುಟ್ ಪೇರ್'' ಎಂಬ ಎಳ್ಳಹದ ಅಂಗಡಿಯ ಉದ್ಘಾಟನೋತ್ಸವವನ್ನು ನೆರವೇರಿಸುವ ಕಾರ್ಯಕ್ರಮವು ಗೊತ್ತಾಗಿದ್ದಿತು (ಎ ಪಿ ಎಸ್)

ಕಂಟೆಂಪ್ಟ್ ಅಪಾದಿತರಿಗೆ ಸಜಾ ವಿನಾ ಶು

ರಾಜ ನಗರದ ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ೧೭ ಮಂದಿಯು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅನುಮತಿ ಬೇಡಿ ಸಲ್ಲಿಸಿದ್ದ ಅರ್ಜಿಯು ಶ್ರೀ [illegible] ನ್ಯಾಯಾಧೀಶರ ಸಮ್ಮುಖದಲ್ಲಿ ನೆನ್ನೆ ಪರಿಶೀಲನೆಗೆ ಬಂದು, ಅದರ ವಿಲೇ ಆಗುವವರೆಗೆ ಆ ಅಧ್ಯಕ್ಷರಿಂದ [illegible] ಅಬ್ದುಲ್ ಕರೀಂ ಮತ್ತು ಆ [illegible] ವನ್ನುನವನ್ನು ಜಾಮೀನಿನ ಮೇಲೆ ಬಿಡಲು ಆಜ್ಞೆಯಾಯಿತು. ಉಳಿದವರು ತಮಗೆ ವಿಧಿಸಲಾಗಿರುವ ದಂಡದ ಮೊಬಲಗನ್ನು ಠೇವಣಿ ಕೊಟ್ಟರೆ ಅರ್ಜಿಯು ವಿಲೇ ಆಗುವವರೆಗೆ ಅವರನ್ನು ಜಾಮೀನಿನ ಮೇಲೆ ಬಿಡುವಂತೆ ನ್ಯಾಯಾಧೀಶರು ಆಜ್ಞೆ ಮಾಡಿದರು

ಮೈಸೂರು ಪೇಟೆ ಧಾರಣೆ

ಪದಾರ್ಥ	[illegible]	[illegible]
ಕಡಲೇಕಾಯಿ	೨೨ ೦-೦	೨೪ ೮ ೦
ಎಳ್ಳು	೬೪ ೦ ೦	
ಹರಳುಬೀಜ	೩೯ ೦ ೦	
ಹುಚ್ಚೆಳ್ಳು	೫೩ ೦-೦	೫೫ ೪-೦
ಕೊಬ್ಬರಿ	೨೨ ೬ ೦	೨೩ ೦ ೦
ಸಕ್ಕರೆ	೪೩ ೪ ೦	೪೩ ೧೦ ೦
ಬೆಲ್ಲ	೬೪ ೦ ೦	೬೫-೧೦ ೦
ಅವರೆ	೪೯ ೧೭ ೦	
ಹುರುಳಿ	೫೦ ೩ ೦	
ಉದ್ದು	೮೪ ೦ ೦	
[illegible]		
[illegible]	೧೮ ೦ ೦	
[illegible]	೩ ೭ ೦	೩ ೧೪ ೦
[illegible]	೪ ೫ ೦	೪ ೧೩ ೦
ಚಿಕ್ಕ	೬-೦-೦	
[illegible]		
[illegible]	[illegible]	[illegible]

SRI GANESHA

TALKIES

GALA RELEASE

On 17-4-53

Universal's Spectacular Technicolor Extravaganza

SON OF ALIBABA

Featuring Tony Curtis Piper Laurie

The Most Sensational Stars o

THE PRINCE WAS A THIEF

ಚಾಮುಂಡೇಶ್ವರಿ ಟಾಕೀಸ್

ದಿನ ನಿತ್ಯ ೩ ಆಟಗಳು

17-4-53 ನೇ ಶುಕ್ರವಾರದಿಂದ · ಅನೋಘ ಪ್ರದರ್ಶನ ರಂಭ

[illegible]

* ಮನ್ನಿ ದ ನ್ *

(ಮನುಷ್ಯ)

ತಾರೆ — [illegible]

Edited, Printed and Published by A R Nagarajai at Sadhvi Press, D Subbaiah Road Mysore.

ಫೋನ್ ನಂ. 794 ವಂದೇ ಮಾತರಂ ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೭-೪-೧೯೫೩ [ಸಂಚಿಕೆ ೨೧೧

ಆಫ್ರಿಕಾ ಚುನಾವಣೆ; ಮಲಾನ್ ಪಕ್ಷಕ್ಕೆ ಜಯ

ರೈಲ್ವೆ ಶತಮಾನೋತ್ಸವ

ಕಾರ್ಮಿಕರಿಗೆ ಅಧಿಕಾರಿಗಳ ಅಭಿನಂದನೆ

ಮೈಸೂರು ೧೬

ಭಾರತದ ರೈಲ್ವೆ ಶತಮಾನೋತ್ಸವದ ಅಂಗವಾಗಿ ನೆನ್ನೆ ಇಲ್ಲಿನ ರೈಲ್ವೆ ವರ್ಕ್‌ಷಾಪಿನಲ್ಲಿ ಸಮಾರಂಭವೊಂದನ್ನು [illegible] ಶ್ರೀ ಎಂ. [illegible] ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದ ನಂತರ ಅಧ್ಯಕ್ಷರು [illegible] ಭಾರತದ ರೈಲ್ವೆಗಳ ಅಭಿವೃದ್ಧಿಯನ್ನು ಸಂಕ್ಷೇಪವಾಗಿ ವಿವರಿಸಿ [illegible]

ರೈಲ್ವೆಗಳ [illegible] ಪ್ರಗತಿಯು [illegible] ರೈಲ್ವೆಯು [illegible] ರೈಲುಗಳನ್ನು [illegible] ದಕ್ಷಿಣ ರೈಲ್ವೆ ವ್ಯವಸ್ಥೆಯು [illegible]

ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ನಂತರ ದೇಶದ ನೆಚ್ಚಿನ ನಾಯಕರು ಅಧಿಕಾರ [illegible] ಪ್ರಗತಿಯು ಸಾಧಿಸಲ್ಪಡುವುದು [illegible]

ರೈಲ್ವೆಗಳು [illegible] ಸೇವೆಯೇ [illegible] ರೈಲ್ವೆ ನೌಕರ [illegible] ಪ್ರಗತಿಯು ಸಾಧಿಸಲ್ಪಡಬೇಕಾದರೆ [illegible] ರೈಲ್ವೆಗೆ ಸೇರಿದವರೆಲ್ಲರೂ ಒಗ್ಗಟ್ಟಿನಿಂದ ದುಡಿಯಬೇಕು.

ಸಮಾರಂಭದ ನಿಮಿತ್ತವಾಗಿ [illegible] ರೈಲ್ವೆ ನೌಕರರ [illegible]

ಮದ್ರಾಸಿನ [illegible] ಸಂಗೀತ, ವಿವಿಧ ವೇಷ [illegible] ರೈಲ್ವೆ ನೌಕರರಿಂದ [illegible] ಸಮಾರಂಭವು ಮುಕ್ತಾಯವಾಯಿತು.

ನಂಜನಗೂಡಿನ ರೈಲ್ವೆ ಸ್ಟೇಷನ್ನಿನಲ್ಲಿ ದೀಪೋತ್ಸವವನ್ನು [illegible] ನೌಕರರಿಗೆ [illegible]

ಕೊಡಗಿನ ಧನಲಕ್ಷ್ಮಿ

ಆಹಾರ, ನೀರನ್ನು ಸೇವಿಸದ ಕೊಡಗಿನ ಧನಲಕ್ಷ್ಮಿಯು ಇದುವರೆಗೆ ವೈ[illegible] ತನ್ನ ಸಹೋದರಿಯ ಮನೆಯಲ್ಲಿದ್ದಾಳೆ [illegible] ಆಕೆಯು ಆಹಾರ ನೀರುಗಳನ್ನು ಸೇವಿಸುವುದು ಬಿಟ್ಟು ೧೫ ವರ್ಷಗಳು [illegible] ಆರೋಗ್ಯವಾಗಿರುವಳು. ಬೆಂಗಳೂರಿನಲ್ಲಿ ವೈದ್ಯ ಪರೀಕ್ಷೆಗಾಗಿ [illegible] ಕೊಡಗಿನ ಸರ್ಕಾರಕ್ಕೆ [illegible] ಬೆಂಗಳೂರಿಗೆ [illegible] ಒಪ್ಪುತ್ತಿಲ್ಲವೆಂದು ಹೇಳಲಾಗಿದೆ.

ದೆಹಲಿಯಲ್ಲಿ ರೈಲ್ವೆ ಶತಮಾನೋತ್ಸವ

ಭಾರತದ ರೈಲ್ವೆಗಳ ಶತಮಾನೋತ್ಸವವು ನೆನ್ನೆ ದೆಹಲಿಯಲ್ಲಿ ಮಹಾರಾಷ್ಟ್ರಪತಿ ಡಾ॥ ರಾಜೇಂದ್ರಪ್ರಸಾದರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. [illegible] ರೈಲ್ವೆಗಳು [illegible] ಪ್ರದೇಶಗಳನ್ನು ಹತ್ತಿರವಿರುವಂತೆ ಮಾಡಿ, ಆ ಮೂಲಕ ದೇಶದ ಏಕತೆಗೆ ಸಹಾಯಕವಾಗಿರುವುದಾಗಿ ಹೇಳಿದರು.

ಚಿನ್ನದ ಗಣಿ ಕುಸಿತದಲ್ಲಿ ಮೂವರ ಮರಣ

ಕೋಲಾರದ ಚಾಂಪಿಯನ್ ರೀಫ್ ಚಿನ್ನದ ಗಣಿಯ ಭೂಮಿಯೊಳಗೆ ಮೊನ್ನೆ ಬಂಡೆ ಕುಸಿದುದರ ಪರಿಣಾಮವಾಗಿ ೩ ಜನರು ಸತ್ತು, ಇನ್ನೊಬ್ಬರಿಗೆ ಗಾಯವಾಗಿದೆ.

ಅಸ್ಸಾಮಿನಲ್ಲಿ ಆನೆಗಳ ಹಿಂಡು

ಅಸ್ಸಾಮಿನ ಗೌಹಾತಿ [illegible] ಮೊನ್ನೆ ೬ ಆನೆಗಳ ಹಿಂಡೊಂದು [illegible] ಒಂದು ಮನೆಯನ್ನು [illegible] ಆನೆಗಳನ್ನು [illegible] ೧೧ ಸಾವಿರ ಪ್ರೇಕ್ಷಕರು [illegible]

ರೀಟಾಹೇವರ್ತಳಿಗೆ ೪೮,೦೦೦ ಡಾಲರ್ ವರ್ಷಾಶನ

ಅಗಾಖಾನರ ಮಗ ಅಲಿಖಾನರು [illegible] ಮಕ್ಕಳ [illegible] ರೀಟಾ ಹೇವರ್ತಳಿಗೆ ವರ್ಷಕ್ಕೆ ೪೮ ಸಾವಿರ ಡಾಲರುಗಳನ್ನು ಕೊಡುವಂತೆ [illegible] ಕೋರ್ಟಿನ [illegible] ಅವರಿಬ್ಬರ ಮಗುವಿನ [illegible] ವರ್ಷದವರೆಗೂ [illegible] ಈ ಹಣವನ್ನು ಕೊಡಬೇಕಾಗಿದೆ.

ಕರ್ನಾಟಕ ಪ್ರಾಂತ ರಚನೆಗಾಗಿ [illegible] ಅಮರಣಾಂತ ಉಪವಾಸ [illegible]

ಆಫ್ರಿಕಾ ಚುನಾವಣೆಯಲ್ಲಿ ಮಲಾನ್ ಪಕ್ಷಕ್ಕೆ ಜಯ

ದಕ್ಷಿಣ ಆಫ್ರಿಕದ ಶಾಸನ ಸಭೆಗೆ ಮೊನ್ನೆ ನಡೆದ ಚುನಾವಣೆಗಳಲ್ಲಿ ಅಲ್ಲಿನ ಪ್ರಧಾನಿ ಡಾ॥ ಮಲಾನರ ಪಕ್ಷಕ್ಕೆ ಬಹುಮತ [illegible] ಇನ್ನೂ ಐದು ವರ್ಷ ಕಾಲ ಅವರ ಪಕ್ಷವು ಅಧಿಕಾರದಲ್ಲಿರಲು ಅವಕಾಶವಾಗಿದೆ. ಅಲ್ಲಿ ವರ್ಣ ಭೇದದ ಶಾಸನವನ್ನು [illegible] ಪ್ರಧಾನಿ ಮಲಾನರು [illegible] ಚುನಾವಣೆಯನ್ನು [illegible]

ಬ್ಯೂನೊ ಏರ್ಸಿನಲ್ಲಿ ಗಲಭೆ: ಭವನಗಳಿಗೆ ಬೆಂಕಿ

ಅರ್ಜಂಟೈನಾ ಅಧ್ಯಕ್ಷ ಪೆರೋನರಲ್ಲಿ [illegible] ಬ್ಯೂನೊ ಏರ್ಸಿನಲ್ಲಿ [illegible] ಭವನದ ಮುಂದೆ [illegible] ಬಾಂಬುಗಳನ್ನು [illegible] ಅನೇಕ ಭವನಗಳಿಗೆ ಬೆಂಕಿ ಹಾಕಿದರೆಂದು ವರದಿಯಾಗಿದೆ. ಬಾಂಬುಗಳಿಂದ ೬ ಜನ ಸತ್ತು, ೭೫ ಮಂದಿಗೆ ಗಾಯವಾಗಿದ್ದಿತು.

ಮದ್ರಾಸ್ ರೈಲ್ವೆ ನಿಲ್ದಾಣದಲ್ಲಿ ಎಲೆಕ್ಟ್ರಿಕ್ ದೀಪೋತ್ಸವ

ರೈಲ್ವೆಗಳ ಶತಮಾನೋತ್ಸವದ ಸಂಬಂಧವಾಗಿ ಮದ್ರಾಸಿನ ಎಗ್ಮೋರ್ ನಿಲ್ದಾಣದಲ್ಲಿ ನೆನ್ನೆ ರಾತ್ರಿ ಎಲೆಕ್ಟ್ರಿಕ್ ದೀಪೋತ್ಸವವನ್ನು ನಡೆಸಲಾಯಿತು. ದೀಪಾವಳಿ [illegible] ನಿಲ್ದಾಣದಲ್ಲಿ [illegible]

ಬಳ್ಳಾರಿ ಭವಿಷ್ಯದ ನಿರ್ಧಾರಕ್ಕೆ ಹೈದ್ರಾಬಾದು ಅಧಿಕಾರಿಗಳು

ಬಳ್ಳಾರಿ ಜಿಲ್ಲೆಯ ತೆಲುಗು ಮತ್ತು ಕನ್ನಡ ಪ್ರದೇಶಗಳ [illegible] ಹೈದರಾಬಾದು ಹೈಕೋರ್ಟಿನ [illegible] ಸಂಧಾನ [illegible]

೭ ಜನರ ಕೊಲೆ ಮತ್ತು ಆತ್ಮಹತ್ಯೆ

ಅಮೆರಿಕದ ಮಸಾಚುಸೆಟ್ಸ್ [illegible] ಪೀಟರ್ [illegible] ಅಧ್ಯಕ್ಷತೆ [illegible] ೩ ವರ್ಷದ [illegible] ಮಕ್ಕಳು [illegible] ತನ್ನ ತಮ್ಮನನ್ನೂ [illegible] ಕೊಂದು ಆತ್ಮಹತ್ಯೆ ಮಾಡಿಕೊಂಡನು [illegible] ಆಯುಧ ಮತ್ತು [illegible] ಹೇಳಲಾಗಿದೆ.

ನಿರುದ್ಯೋಗಿಗಳ ಸ್ಥಿತಿ ೧೫ ಸಾವಿರ ಪದವೀಧರರು

ಕಳೆದ ವರ್ಷ ಡಿಸೆಂಬರ್ ಅಂತ್ಯದವರೆಗೆ ಉದ್ಯೋಗ ವಿನಿಮಯ ಸಂಸ್ಥೆಯಲ್ಲಿ ಹೆಸರು [illegible] ೧೫ ಸಾವಿರ ಪದವೀಧರರೂ, ೧೧,೯೦೦ ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರೂ, ೯೦ ಸಾವಿರ ಸ್ಕೂಲ್ ಫೈನಲ್ ಆದವರೂ ನಿರುದ್ಯೋಗಿಗಳಾಗಿ [illegible] ಪದವೀಧರರ [illegible] ಇಂಜಿನಿಯರಿಂಗ್ [illegible] ಡಿಗ್ರಿಗಳನ್ನು [illegible] ವೈದ್ಯ ಪದವೀಧರರೆಂದು ಹೇಳಲಾಗಿದೆ.

ನೀಲಗಿರಿ ಚನ್ನಮಿಗರ ಸಮ್ಮೇಳನ

ನೀಲಗಿರಿ ಜಿಲ್ಲೆಯನ್ನು [illegible] ಸರ್ಕಾರಿ [illegible] ಅಧ್ಯಕ್ಷರ [illegible] ಶ್ರೀ ಎಸ್. [illegible]

ರಾಜಧಾನಿಯಲ್ಲಿ ಮುಖ್ಯಮಂತ್ರಿ

ಮುಖ್ಯಮಂತ್ರಿ ಶ್ರೀ ಕೆ. [illegible] ಬೆಂಗಳೂರಿಗೆ ಹಿಂತಿರುಗುವರು. ೨೦ ಮತ್ತು ೨೧ ನೇ ತಾ॥ ರಾಜಧಾನಿಯಲ್ಲಿ ಮಂತ್ರಿಮಂಡಲದ ಸಭೆ ಸೇರುವುದು.

ಇಂಜಿನಿಯರಿಂಗ್ ಶಾಲಾ ಹಳೇ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಂಘದ ಅಧಿಕಾರ ವರ್ಗದ ಚುನಾವಣೆಯು ನಡೆದು ಶಾಲಾ ಮುಖ್ಯೋಪಾಧ್ಯಾಯರನ್ನು ಅಧ್ಯಕ್ಷರಾಗಿಯೂ, ಎಸ್. [illegible] ಉಪಾಧ್ಯಕ್ಷರಾಗಿಯೂ, ಶ್ರೀ [illegible] ಎಸ್. [illegible] ಮತ್ತು ಬಿ. ಬಿ. ರಾಮರಾವ್ ಕಾರ್ಯದರ್ಶಿಗಳಾಗಿಯೂ, ಶ್ರೀ [illegible] ಖಜಾಂಚಿಯಾಗಿಯೂ ಆರಿಸಲಾಯಿತು.

ಸ್ತ್ರೀಯನ್ನು ಕೊಂದದ್ದಕ್ಕೆ ಇಡೀ ಹಳ್ಳಿಗೆ ದಂಡ

ಹುಡುಗಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿ ಕೊಲೆಮಾಡಲಾಗಿದ್ದಕ್ಕಾಗಿ ಬಲಿ ಮಗ್ರಹಾಶ್ ಎಂಬ ಹಳ್ಳಿಯ ೧೪೦ ಗುಡಿಸಿಲುಗಳಿಗೆ ದಂಡವನ್ನು ಹಾಕಲಾಯಿತೆಂದೂ, ಇದರಿಂದ ೧೪೦೦ ಜನರಿಗೆ ಆಶ್ರಯವು ತಪ್ಪಿರುವುದಾಗಿಯೂ ವರದಿಯಾಗಿದೆ

ವಿದ್ಯಾರ್ಥಿಯ ಅರ್ಜಿ ಪರಿಶೀಲನೆಗೆ ಹೈಕೋರ್ಟಿನ ಒಪ್ಪಿಗೆ

ಬೆಂಗಳೂರು ಇಂಜನಿಯರಿಂಗ್ ಶಾಲೆಯ ಎರಡನೇ ಎಲೆಕ್ಟ್ರಿಕಲ್ ಇಂಜನಿಯರಿಂಗ್ ತರಗತಿಯ ಪರೀಕ್ಷೆಯನ್ನು ಹಳೆಯ ನಿಬಂಧನೆಗಳಿಗೆ ಅನುಸಾರವಾಗಿ ನಡೆಸುವಂತೆ ಸರ್ಕಾರ, ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರ್ ಮತ್ತು ಶಾಲೆಯ ಪ್ರಿನ್ಸಿಪಾಲರಿಗೆ ಸೂಚನೆ ಕೊಡುವಂತೆ ಶಾಲೆಯ ವಿದ್ಯಾರ್ಥಿ ಶ್ರೀ ಎ ಎನ್. ಕೃಷ್ಣವರ್ತಿಯವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಪ್ರಧಾನ ನ್ಯಾಯಾಧೀಶರು ಒಪ್ಪಿರುತ್ತಾರೆ ಎರಡನೇ ಎಲೆಕ್ಟ್ರಿಕಲ್ ಇಂಜನಿಯರಿಂಗ್ ಪರೀಕ್ಷೆ ನಿಲ್ಲಿಸಬೇಕೆಂದು ಅವರು ಕೋರಿ ಒಪ್ಪಿಸಿದ್ದ ಮತ್ತೊಂದು ಅರ್ಜಿಯನ್ನು ನಿರಾಕರಿಸಲಾಗಿದೆ

ಮೋತೀಲಾಲ್ ಟಾಕೀಸ್,

ಮೈಸೂರು

17-4-53 ರಿಂದ ಅನೋಖ 2ನೇ ವಾರ

ಪ್ರತಿ ದಿನ 3 ಆಟಗಳು

ಆರ್ ಆರ್. ಪಿಕ್ಚರ್ಸ್‌ರವರ ತಮಿಳು ಚಿತ್ರ

ವಾಳ ಪಿರಂದವಳ್

ತಾರೆ – ಶ್ರೀರಂಜಿನಿ, ಟಿ ಆರ್ ರಾಮಚಂದ್ರನ್, ಡಿ ಎಸ್ ಸರೋಜ, ಬಾಲಯ್ಯ

ವಿಶ್ವದಲ್ಲೇ ಅತ್ಯಂತ ಭಾರಿ ರೈಲ್ವೆ

೧೮೫೩ ನೇ ಏಪ್ರಿಲ್ ೧೬ ನೆ ತಾ|| ನಿಂದ ಪ್ರಾರಂಭವಾದ ಭಾರತದ ರೈಲ್ವೆ ಸಂಚಾರ ವ್ಯವಸ್ಥೆಯು ನೂರು ವರ್ಷಗಳು ಮುಗಿದನಂತರ ಈಗ ಇಡೀ ವಿಶ್ವದಲ್ಲೇ ಅತ್ಯಂತ ಭಾರಿಯದಾಗಿರುವುದಾಗಿ ತಿಳಿದುಬಂದಿದೆ ಅದರ ನಿರ್ಮಾಣಕ್ಕಾಗಿ ೮೫೦ ಕೋಟಿ ರೂ ವೆಚ್ಚಮಾಡಲಾಗಿದೆ ಒಟ್ಟು ೩೩,೩೮೩ ಮೈಲಿಯುಳ್ಳ ದ್ದಾಗಿದ್ದು, ವರ್ಷಕ್ಕೆ ೨೯೭ ಕೋಟಿ ರೂ ವರಮಾನ ಮತ್ತು ೨೨೬ ಕೋಟಿ ರೂ ವೆಚ್ಚದ ವಹಿವಾಟನ್ನು ಹೊಂದಿರುವುದು ಅದರಲ್ಲಿ ೧೦ ಲಕ್ಷ ಜನರು ನೌಕರರಾಗಿರುವರು

ನೀರಾವರಿ ಕಾಂಗಾರಿಗಳು ಗ್ರಾಮಸ್ಥರ ವಶಕ್ಕೆ

ಹೈದರಾಬಾದಿನ ವಾರಂಗಲ್ ಜಿಲ್ಲೆಯ ಸಣ್ಣ ನೀರಾವರಿ ಕಾಂಗಾರಿ ಕೆಲಸಗಳನ್ನು ಇನ್ನುಮುಂದೆ ಗ್ರಾಮಗಳ ಪ್ರತಿನಿಧಿಗಳಿಗೇ ವಹಿಸಿ, ಅವುಗಳ ನಿರ್ವಹಣೆಗೆ ಸರ್ಕಾರದಿಂದ ಅವರಿಗೆ ಸ್ವಲ್ಪ ಮಂಗಡ ಹಣ ಕೊಡುವ ಯೋಜನೆಯೊಂದು ಸಿದ್ಧವಾಗಿದೆ (ಎ ಐ ಎಸ್)

5 ರಿಂದ 10 ವಾಲ್ವಿನ

ಮರ್ಫಿ ರೇಡಿಯೋಗಳು

ಕಡಿಮೆ ಬೆಲೆಗೆ ಸಿಕ್ಕುತ್ತವೆ

ಅಧಿಕೃತ ವ್ಯಾಪಾರಿಗಳು

ಅ ಬೀ ದ್ಸ್

ಸ್ಟ್ಯಾಚ್ಯು ಚೌಕ, ಮೈಸೂರು

Edited, Printed and Published by A R Nagarajan at Sadhvi Press, D Subbaiah Road Mysore

ವಿಮಾನದಲ್ಲಿ ಮೃಗಪಕ್ಷಿಗಳ ರವಾನೆ

ಹಾಲೆಂಡಿನ ವಿಮಾನವೊಂದರಲ್ಲಿ ಎರಡು ಮರಿಯಾನೆಗಳು, ಒಂದು ಹೆಣ್ಣು ಹುಲಿ, ೩ ಕರಡಿ ಮರಿಗಳು, ೩ ಚಿಟ್ಟಾವುಗಳು, ೭ ಬಾವಲಿಗಳು, ೧೦ ಸಾವಿರ ಪಕ್ಷಿಗಳನ್ನು ಭಾರತದಿಂದ ವಿದೇಶಗಳಿಗೆ ಸಾಗಿಸಲಾಗುತ್ತಾಗಿದೆ ಹೆಣ್ಣು ಹುಲಿ ಮತ್ತು ಆನೆಗಳನ್ನು ಇಟಲಿಗೂ, ಇತರ ಪ್ರಾಣಿಗಳನ್ನು ಆಮ್‌ಸ್ಟರ್‌ಡ್ಯಾಂ, ಅಥವಾ ಬ್ರಸ್ಸೆಲ್ಸ್‌ಗಳಿಗೂ ಸಾಗಿಸಲಾಗುವುದು

SRI GANESHA

TALKIES

GALA RELEASE

On 17 4 53

Universal Spectacular
Technicolor Extravaganza

SON OF ALIBABA

Featuring - Tony Curtis
Piper Laurie

The Most Sensational Stars of

THE PRINCE WAS A THIEF

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆ ಪೈ	ರೂ ಆ ಪೈ
ಕಡಲೆಕಾಯಿ	೩೪ ೦-೦	೩೪ ೧೨ ೦
ಹರಳುಬೀಜ	೩೭ ೦ ೦	
ಹುಚ್ಚೆಳ್ಳು	೫೪-೮-೦	
ಹೊಂಗೇಬೀಜ	೧೯ ೮ ೦	೨೪ ೦ ೦
ಹುರುಳಿ	೪೩ ೩ ೦	೪೭-೧೨ ೦
ಹಲಸಂದೆ	೪೮ ೦ ೦	೫೪-೧೦-೦
ಮೆಣಸಿನ		
ಕಾಯಿ ಮುಚ್ಚಿ	೧೦ ೦-೦	೧೮-೪ ೦
ಹುಣಿಸೇಹಣ್ಣು	೪ ೧೦ ೦	೬-೭ ೦
ಕೊಬ್ಬರಿಕಾಯಿ	೪ ೫ ೦	೪ ೧೨ ೦
ಬೆಲ್ಲ	೫ ೮-೦	
ತೆಂಗಿನಕಾಯಿ		
೧,೦೦೦ಕ್ಕೆ	೧೨೬ ೦-೦	೨೬೦ ೦ ೦

ಪ್ರಭಾ 17–4–53 ರಿಂದ 4 ನೇ ವಾರ

ದಿನಚರಿ 3 ಪ್ರದರ್ಶನಗಳು

ರಾಜಾ ಶಂಕರ್‌ರವರ ಕೃಷ್ಣಸುಂದರಿಯರ ಸಾಮೂಹಿಕ ಗುಣಗಳನ್ನು ಕೃಷ್ಣನ ಮತ್ತು ಹೊಟ್ಟೆ ಹುಣ್ಣಾಗುವಂತೆ ನಗಿಸುವ ಹಾಸ್ಯಪೂರಿತ ಹಿಂದಿ ಚಿತ್ರ

ತೀನ್ ಬತ್ತಿ ಚಾರ್ ರಾಸ್ತಾ

ದಿಗ್ದರ್ಶನ – ವಿ ಶಾಂತಾರಾಂ

ಬೆಳಗಿನ ಪ್ರದರ್ಶನ 17 4-53 ರಿಂದ

3 ದಿನಗಳು ಮಾತ್ರ

ಮಧು ಬಾಲಾ ನಟಿಸಿರುವ **ನಾತಾ ನೀಗ**

ABIDS OUTRIGHT AUCTION SALE

ON Sunday the 19 4 53 at 10 A M : at Show-rooms

Furniture & Household effects including Cycles, MARELLI Italian make oscillating Table Fan in working order Primus Stove, Wrist watches, Single cots, Tables, arm & armless chairs upholstered Spring Sofa suites, Benches & Several other useful articles

ಮೈಸೂರು ಸರ್ಕಾರಿ ಗಂಧದೆಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರ್‌ರವರ ಆಫೀಸಿನಿಂದ

ಟೆಂಡರ್ ನೋಟೀಸ್

ತಾರೀಖು 11ನೇ ಏಪ್ರಿಲ್ 1953

ಸನ್ 1953 ನೇ ಇಸವಿ ಏಪ್ರಿಲ್ ಮಾಹೆ ತಾ|| 1 ರಿಂದ ಸನ್ 1954 ನೇ ಇಸವಿ ಮಾರ್ಚಿ ಮಾಹೆ 31 ನೇ ತಾರೀಖು ಪೂರ್ತಿ ಮೈಸೂರಿನ [illegible] ಮತ್ತು [illegible] ರೈಲ್ವೆ ಸ್ಟೇಷನಿಗೆ ತಪ್ಪಿಸುವುದಕ್ಕೆ [illegible] ಕಾರ್ಖಾನೆಯ [illegible] ಮಾಡಲ್ಪಟ್ಟ ಇದ್ದಿಲ ಚೂರುಗಳನ್ನು (Cinders) ಮತ್ತು ಬೂದಿಯನ್ನು [illegible] ವರ್ಷ [illegible] ಕೊಂಡುಹೋಗುವುದು ಅದಕ್ಕೆ ಒಪ್ಪಿ ಕೊಡುವ ಮೊಬಲಗನ್ನು [illegible] ಕರೆಯಲಾಗಿದೆ, ಸನ್ 1953 ನೇ ಇಸವಿ ಏಪ್ರಿಲ್ 21 ನೇ ತಾರೀಖಿನ ಮಧ್ಯಾಹ್ನ 3 ಘಂಟೆಯೊಳಗಾಗಿ ಈ ಆಫೀಸಿಗೆ [illegible] ಅಲ್ಲದೆ ಪ್ರತ್ಯೇಕವಾಗಿ ನಗದು 50 ರೂಪಾಯಿಗಳನ್ನು [illegible] ಕಾರ್ಖಾನೆಯ ಆಫೀಸಿಗೆ [illegible] ದರಖಾಸ್ತುಗಳನ್ನು [illegible] ನಿರಾಕರಿಸುವ [illegible] ಈ ಕಾರ್ಖಾನೆಯ ಸ್ಪೆಷಲ್ ಆಫೀಸರ್‌ರವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ [illegible] ಬಗೆ ಯಾವ ಕಾರಣ [illegible] ಕೊಡಲಾಗುವುದಿಲ್ಲ

ಈ [illegible] ದರಖಾಸ್ತುದಾರರು ಮೊಂಬತ್ತಿಯನ್ನು [illegible] ಒಂದೇ [illegible] ಮತ್ತು [illegible] ಮತ್ತು [illegible] ಕಾರ್ಖಾನೆಗೆ [illegible]

ದರಖಾಸ್ತುದಾರರು [illegible] ಸರ್ಟಿಫಿಕೇಟನ್ನು [illegible] ಅಧಿಕಾರಿಗಳು [illegible]

ಈ ದರಖಾಸ್ತಿನ ಪೂರ್ತಿ ವಿವರಗಳಿಗೆ [illegible] ಆಫೀಸಿನಲ್ಲಿ [illegible] ಬೆಳಿಗ್ಗೆ 11 ಘಂಟೆ [illegible] ಘಂಟೆಯೊಳಗೆ ಬಂದು [illegible] ಇತರ ಆವಶ್ಯಕ ಸಂಗತಿಗಳು [illegible]

ಜಿ ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್

ಚಾಮುಂಡೇಶ್ವರಿ ಟಾಕೀಸ್

ದಿನಚರಿ 3 ಆಟಗಳು

17-4-53 ನೇ ಶುಕ್ರವಾರದಿಂದ : ಅನೋಖ ಪ್ರದರ್ಶನಾರಂಭ

[illegible] ಮತ್ತು [illegible] ರವರ ಅತ್ಯುತ್ತಮ ಸಾಮಾಜಿಕ ಚಿತ್ರ

* ಮನ್ನಿದ್ದನ್ *

(ಮನುಷ್ಯ)

ತಾರೆ – ಸುಂದರಿ ಬಾಯಿ, ಕೃಷ್ಣ ಕುಮಾರಿ ಮತ್ತು [illegible]

[illegible]

ಮನೆಗಳು ಕ್ರಯಕ್ಕಿವೆ

1) ಡೋರ್ ನಂ. 1275 ಕೃಷ್ಣಮೂರ್ತಿಪುರಂ
2) ,, 1257 ,,
3) ,, 2960 ವಾಣಿವಿಲಾಸ ಮೊಹಲ್ಲಾ, III ಮೇನ್ ರೋಡ್
4) ,, 1665 ಒಲಂಪಿಯಾ ಟಾಕೀಸ್ ಎದುರು ರಸ್ತೆ
5) ,, 2933/1 ಸರಸ್ವತೀಪುರಂ
6) ,, 809/2 ಲಕ್ಷ್ಮೀಪುರಂ
7) ,, 203 ಶ್ರೀರಾಮ ಬೀದಿ, ಹಿಲ್ಲ ಮೊಹಲ್ಲಾ
8) ,, 1176 ಚಾಮರಾಜಪುರಂ
9) ,, 1243 ಕೃಷ್ಣಮೂರ್ತಿಪುರಂ
10) ,, 1047/13 ಸಿಮೆಂಟ್ ಬ್ಲಾಕ್

— ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಮನೆ, ಜಮೀನು ಮತ್ತು ಸಾಲ ಕೊಡಿಸುವ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು ಫೋನ್ 540

ಫೋನ್ ನಂ. 794 ವಂದೇ ಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೮-೪-೧೯೫೩ [ಸಂಚಿಕೆ ೨೦೨

ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರ ವಜಾ

ಪಾಕಿಸ್ತಾನದ ಪ್ರಧಾನ ಮಂತ್ರಿಯು ವಜಾ

ಹೊಸ ಮಂತ್ರಿ ಮಂಡಲದ ನೇಮಕ

ಪಾಕಿಸ್ತಾನದ ಪ್ರಧಾನ ಮಂತ್ರಿ ಖ್ವಾಜಾ ನಾಜಿಮುದ್ದೀನರವರ ಮಂತ್ರಿ ಮಂಡಲವನ್ನು ಇಲ್ಲಿನ ಗೌರ್ನರ್ ಜನರಲ್ ಗುಲಾಂ ಮಹಮದ್‌ರವರು ನೆನ್ನೆ ವಜಾ ಮಾಡಿದರು. ಆವ ರೀತಿಯಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಮಹಮದ್ ಅಲಿಯವರ ನೆನ್ನೆ ರಾತ್ರಿ ಕರಾಚಿಯಲ್ಲಿ ಹೊಸ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಹೊಸ ಮಂತ್ರಿ ಮಂಡಲವನ್ನು ರಚಿಸಿದರು. ನಾಜಿಮುದ್ದೀನರು ಪಾಕಿಸ್ತಾನದ ಆಹಾರಾಭಾವ ಮತ್ತು ಆರ್ಥಿಕ ಮುಗ್ಗಟ್ಟನ್ನು ತಹಬಂದಿಗೆ ತರಲು ಅಸಮರ್ಥರಾಗಿರುವರೆಂದು ಗೌರ್ನರ್ ಜನರಲ್ಲರು ಭಾವಿಸಿರುತ್ತಾರೆ. ಅಲ್ಲಿ ನ್ಯಾಯ ಮತ್ತು ಶಿಸ್ತು ಪಾಲನೆಗೆ ಧಕ್ಕೆ ಸಂಭವಿಸಿ, ಜರೂರು ಪರಿಸ್ಥಿತಿಯೊದಗಿ, ಪಾಕಿಸ್ತಾನಕ್ಕೆ ಅನ್ವಯಿಸಿಕೊಂಡಿರುವ ೧೯೩೫ರ ಭಾರತ ಶಾಸನದ ವಿಧಿಯ ಪ್ರಕಾರ ವಿಶೇಷಾಧಿಕಾರವನ್ನು ಪ್ರಯೋಗಿಸಿ, ನಾಜಿಮುದ್ದೀನರ ಮಂತ್ರಿ ಮಂಡಲವನ್ನು ಅಧಿಕಾರದಿಂದ ನಿವೃತ್ತಿಗೊಳಿಸಲಾಗಿದೆ

ಹೊಸ ಮಂತ್ರಿಮಂಡಲದಲ್ಲಿ ಪ್ರಧಾನಿ ಮಹಮದ್ ಅಲಿಯವರ ಜೊತೆಗೆ, ಜಫರುಲ್ಲಾಖಾನ್, ಮಹಮದ್ ಅಲಿ ಮುಷ್ತಾಕ್ ಅಹಮದ್ ಗುರ್ಮಾನಿ, ಸರ್ದಾರ್ ಬಹದ್ದೂರ್ ಖಾನ್, ಡಾ|| ಎ ಎಂ ಮಲ್ಲಿಕ್, ಡಾ|| ಐ ಹೆಚ್ ಖುರೇಷಿ ಮತ್ತು ಎ ಕೆ ಬರೋಹಿಯವರುಗಳು ಮಂತ್ರಿಗಳಾಗಿರುವರು

ಗಡಿನಾಡಿನ ಮುಖ್ಯ ಮಂತ್ರಿ ಖಯೂಂ ಖಾನ್ ಮತ್ತು ಭಾರತದಲ್ಲಿ ರಾಯಭಾರಿಯಾಗಿರುವ ಸಾಹಿಬ್ ಖುರೇಷಿಯವರುಗಳನ್ನೂ ಮಂತ್ರಿಗಳಾಗಿ ನೇಮಿಸಿಕೊಳ್ಳಲಾಗುವುದು

ರೇಡಿಯೋವಿನಲ್ಲಿ ಲಂಡನ್ ಮತ್ತು ದೆಹಲಿ ಸಂಭಾಷಣೆ ಪ್ರಸಾರ

ದೆಹಲಿಯಿಂದ ಲಂಡನ್ನಿನವರೊಡನೆ ಸಂಭಾಷಣೆ ನಡೆಸುವ ಕಾರ್ಯಕ್ರಮವನ್ನು ಮೈಸೂರು ರೇಡಿಯೋವಿನಲ್ಲಿ ಪ್ರಸಾರ ಮಾಡುವ ಏರ್ಪಾಡು ನಾಳೆ ರಾತ್ರಿ ೮|| ಗಂಟೆಗೆ ಇದೆ. ಭಾರತದ ಮಾಜಿ ಹಣಕಾಸಿನ ಮಂತ್ರಿ ಡಾ|| ಜಾನ್ ಮತಾಯ್ ಮತ್ತು ಎರಿಕ್ ಡಿಕಾಸ್ಟ್ರಾರವರು ಇಂಗ್ಲೆಂಡಿನ ಮಾಜಿ ಹಣಕಾಸಿನ ಮಂತ್ರಿ ಹ್ಯೂ ಗೇಟ್ಸ್‌ಕೈಲ್ ಮತ್ತು ಫಿಲ್ ವೇಂಬರ್ಸ್‌ರವರೊಡನೆ "ಯೋಜನೆ ಹಲವು ಅಂಶಗಳು" ಎಂಬ ವಿಷಯವಾಗಿ ಆಯಾ ಸ್ಥಳಗಳಲ್ಲಿ ಕುಳಿತು ಸಂಭಾಷಣೆ ನಡೆಸುವರು

ಪ್ರಭುಗಳ ಅಧ್ಯಕ್ಷತೆಯಲ್ಲಿ ಫುಟ್‌ಬಾಲ್ ಪಂದ್ಯ

ನಾಟಕರತ್ನ ಜಿ ಎಚ್ ವೀರಣ್ಣನವರ ದಕ್ಷಿಣ ಭಾರತ ಚಾಂಪಿಯನ್‌ಷಿಪ್ ಫುಟ್‌ಬಾಲ್ ಪಂದ್ಯದ ಫೈನಲ್ಸ್ ಕ್ರೀಡೆಯು ನಾಳೆ ಸಂಜೆ ೫ ಗಂಟೆಗೆ ದೊಡ್ಡಕೆರೆ ಮೈದಾನದಲ್ಲಿ ಬೆಂಗಳೂರು ೨೧೫ ಕ್ಲಬ್ಬಿನವರಿಗೂ ಮೈಸೂರು ಮುಸ್ಲಿಂ ಕ್ಲಬ್ಬಿನವರಿಗೂ ನಡೆಯುವುದು. ಶ್ರೀಮನ್ಮಹಾರಾಜರು ಅಧ್ಯಕ್ಷತೆ ವಹಿಸುವರು.

ಮಂತ್ರಿ ಮಂಡಲದ ವಿಸ್ತರಣೆ ಸಂಭವ

ಸ್ವಂ ಸು ಫೋ|] ಬೆಂಗಳೂರು ೧೮

ಈಗಿರುವ ಆರು ಜನ ಮಂತ್ರಿಗಳಿಗೆ ಕೆಲಸವು ಹೆಚ್ಚಾಗಿರುವುದರಿಂದ ಮಂತ್ರಿ ಮಂಡಲದ ವಿಸ್ತರಣೆಯನ್ನು ಮಾಡಬೇಕಾಗಿರುವುದೆಂದೂ, ಹೆಚ್ಚು ಮಂತ್ರಿಗಳ ಸ್ಥಾನಗಳಿಗೆ, ಅಥವಾ ಉಪಮಂತ್ರಿಗಳ ಸ್ಥಾನಗಳಿಗೆ ನೇಮಿಸಬೇಕಾಗಿರುವುದೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದರು. ಆದರೆ ಬಳ್ಳಾರಿ ಜಿಲ್ಲೆ ಮತ್ತು ಕನ್ನಡ ಜಿಲ್ಲೆಗಳ ಕೊಳ್ಳೇಗಾಲ ಮುಂತಾದ ಪ್ರದೇಶಗಳು ಈ ಸ್ಥಾನಕ್ಕೆ ಸೇರಬೇಕಾದ ಪರಿಸ್ಥಿತಿಯಿರುವುದರಿಂದ, ಇನ್ನೂ ಯಾವುದನ್ನೂ ನಿಖರವಾಗಿ ಗೊತ್ತುಪಡಿಸುವುದು ಸಾಧ್ಯವಿಲ್ಲವೆಂದೂ, ಆ ಬಗ್ಗೆ ಆಲೋಚಿಸಬೇಕಾಗಿರುವುದೆಂದೂ ಅವರು ಹೇಳಿದರು.

ಆಹಾರದ ಹತೋಟಿಯ ಪೂರ್ಣ ರದ್ದಿನ ವಿಷಯ

ಸಂಸ್ಥಾನದಲ್ಲಿ ಆಹಾರದ ಹತೋಟಿಯನ್ನು ಪೂರ್ಣವಾಗಿ ರದ್ದುಗೊಳಿಸುವ ವಿಷಯವನ್ನು ಮೈಸೂರಿನಲ್ಲಿ ಸೇರುವ ಮಂತ್ರಿಮಂಡಲದ ಸಭೆಯಲ್ಲಿ ಚರ್ಚಿಸಲಾಗುವುದೆಂದು ಗೊತ್ತಾಗಿದೆ

ಕರ್ನಾಟಕ ಪ್ರಾಂತ ರಚನೆ ಬಗ್ಗೆ ನೆಹರೂ ಭರವಸೆ

ಕರ್ನಾಟಕದ ಪರಿಸ್ಥಿತಿಯನ್ನು ತಾವು ಪೂರ್ಣವಾಗಿ ಅರಿತಿರುವುದಾಗಿಯೂ, ಅಲ್ಲಿನ ಜನರು ಕರ್ನಾಟಕ ಪ್ರಾಂತ ರಚನೆ ಬಗ್ಗೆ ಹೊಂದಿರುವ ಆಶೆಯನ್ನು ಮನಗಂಡಿರುವುದಾಗಿಯೂ ಪ್ರಧಾನಿ ನೆಹರೂರವರು ಕೇಂದ್ರ ವಾಣಿಜ್ಯ ಸಚಿವ ಕರ್ಮಾರ್ಕರ್‌ರವರಿಗೆ ತಿಳಿಸಿ, ಕನ್ನಡಿಗರ ಉನ್ನತಿಯನ್ನು ಉದ್ದೇಶಿಸುವ ಬಗ್ಗೆ ತಾವು ಆಸಕ್ತಿ ಹೊಂದಿರುವುದಾಗಿ ಭರವಸೆಯನ್ನು ನೀಡಿರುತ್ತಾರೆ. ಆದರೆ ಈ ಪ್ರಶ್ನೆಯನ್ನು ಆಂಧ್ರ ಪ್ರಾಂತ ರಚನೆಯಾಗಿ ಅದು ಸ್ಥಿರವಾದ ಮೇಲೆ ಸ್ಥಾನಗಳ ಪುನರ್ವ್ಯವಸ್ಥೆ ಮಾಡುವ ಬಗ್ಗೆ ವಿಧಾನ ಮಾಡಬಹುದೆಂದೂ ಮತ್ತು ಈ ಬಗ್ಗೆ ವಿಧಾನ ಮಾಡಿ ಪುದಿಲ್ಲವೆಂದೂ ಅವರು ಸೂಚಿಸಿರುತ್ತಾರೆ

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರಿಗೆ ೪೮೦ ಮನೆಗಳು

ಸ್ವಂ ಸು ಫೋ|] ಬೆಂಗಳೂರು ೧೮

ಕಾರ್ಮಿಕರ ಗೃಹ ವಸತಿ ಸೌಕರ್ಯವನ್ನೇರ್ಪಡಿಸುವ ಸಲುವಾಗಿ, ಸರ್ಕಾರದವರು ರಚಿಸಿರುವ ಗೃಹ ನಿರ್ಮಾಣ ಸಮಿತಿಯವರು ಮೈಸೂರು ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರಿಗಾಗಿ ಈ ವರ್ಷ ೪೮೦ ಮನೆಗಳನ್ನು ತಲಾ ೩,೫೦೦ ರೂ. ವೆಚ್ಚದಲ್ಲಿ ನಿರ್ಮಿಸಲಿರುವರೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಈ ಮೊತ್ತದಲ್ಲಿ ೩೦೦ ರೂ ಬೆಲೆಯಾಗುವ ನಿವೇಶನ ದರವೂ ಸೇರಿರುವುದಾಗಿ ಅವರು ಹೇಳಿದರು

ಶಾಂತಿ ಸ್ಥಾಪನೆಗಾಗಿ ರಷ್ಯಕ್ಕೆ ಅಮೆರಿಕದ ಕರೆ

ನಿಶ್ಶಸ್ತ್ರೀಕರಣದ ಮೂಲಕ ಶಾಂತಿ ಸ್ಥಾಪಿಸಿ ಅಂತರ ರಾಷ್ಟ್ರೀಯ ಸಹಕಾರ ವೇರ್ಪಡಲು ಅಮೆರಿಕದೊಡನೆ ರಷ್ಯವು ಕೆಲಸ ಮಾಡುವಂತೆ ಅಧ್ಯಕ್ಷ ಐಸೆನ್‌ಹೋವರರು ತಿಳಿಸಿ, ಅದಕ್ಕೆ ಹಲವು ಷರತ್ತುಗಳನ್ನು ಹಾಕಿರುತ್ತಾರೆ. ಆಯುಧದ ತಯಾರಿಕೆಗಳನ್ನು ಕಡಿಮೆ ಮಾಡುವುದರ ಮೂಲಕ ಉಳಿಯುವ ಹಣವನ್ನು ಕಮ್ಯೂನಿಸ್ಟ್ ಪ್ರದೇಶಗಳೂ ಸೇರಿದ ಇಡೀ ಪ್ರಪಂಚದ ಪುನರ್ನಿರ್ಮಾಣಕ್ಕಾಗಿ ಉಪಯೋಗಿಸಬಹುದೆಂದೂ, ಮಾನವ ಕೋಟಿಯು ಮತ್ತೊಂದು ಘೋರ ಯುದ್ಧಕ್ಕೆ ಸಿಲುಕದಂತೆ ಮಾಡಬೇಕೆಂದೂ ಅವರು ಹೇಳಿ, ಶಾಂತಿಯು ಸಾಧಿಸಲ್ಪಡದಿದ್ದರೆ ಅಣು ಯುದ್ಧವೂ, ಪರಸ್ಪರ ಶಾಶ್ವತವಾದ ಭಯ ಬಿಕ್ಕಟ್ಟೂ ತಪ್ಪಿಸಲಸಾಧ್ಯವೆಂದೂ ಸೂಚಿಸಿರುತ್ತಾರೆ

ಕನ್ಯಕಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಮಹಾಸಭೆ

ರಾಜಧಾನಿಯ ಶ್ರೀರಾಮಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಸಾಮಾನ್ಯ ಸದಸ್ಯರ ವಾರ್ಷಿಕ ಸಭೆಯು ನಾಳೆ ಮಧ್ಯಾಹ್ನ ೩|| ಗಂಟೆಗೆ ದೇವಾಲಯದಲ್ಲಿ ಜರುಗುವುದು. ಮಾಜಿ ಜಿಲ್ಲಾ ನ್ಯಾಯಾಧಿಕಾರಿ ಶ್ರೀ ಕೆ ಆರ್ ತಿಮ್ಮರಾಯಶ್ರೇಷ್ಠಿಯವರು ಅಧ್ಯಕ್ಷತೆ ವಹಿಸುವರು

ಬಳ್ಳಾರಿ ಜನರಿಂದಲೇ ಅದರ ಭವಿಷ್ಯ ನಿರ್ಧಾರವಾಗಲಿ

ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ ಸು ಫೋ|] ಬೆಂಗಳೂರು ೧೮

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದು ಪತ್ರಿಕಾ ಗೋಷ್ಠಿಯೊಂದನ್ನು ಕರೆದು ಬಳ್ಳಾರಿ ಜಿಲ್ಲೆಯ ಭವಿಷ್ಯದ ವಿಷಯವಾಗಿ, ಮೈಸೂರು ಸರ್ಕಾರದ ನಿರ್ದಿಷ್ಟ ಅಭಿಪ್ರಾಯವನ್ನು ತಿಳಿಸಿದರು. ಪತ್ರಿಕಾ ಪ್ರತಿನಿಧಿಗಳು ಅವರಿಗೆ ನಾನಾ ಪ್ರಶ್ನೆಗಳನ್ನು ಹಾಕಿ, ಉತ್ತರ ಪಡೆದರು

ಜಿಲ್ಲೆಯ ಭವಿಷ್ಯವನ್ನು ನಿರ್ಧರಿಸುವ ಮುಂಚೆ, ಅಲ್ಲಿನ ಜನಗಳ ಅಭಿಮತವೇನೆಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ, ಜನರ ಅಭಿಮತವೇ ನಿರ್ಧಾರಕವಾಗಬೇಕಾಗಿರುವುದು ಸರಿಯೆಂದೂ ಅವರು ತಿಳಿಸಿದರು. ಆಡಳಿತವು ಸುಗಮವಾಗುವ ದೃಷ್ಟಿಯಿಂದಾಗಲಿ ಅಥವಾ ಭಾಷಾ ಭಾವನಾ ಪ್ರೇರಣೆಯಿಂದಲಾಗಲೀ, ಜನರು ಯಾವ ಪ್ರದೇಶಕ್ಕೆ ಸೇರಬೇಕೆಂದು ಇಚ್ಛಿಸಿದರೆ ಅದರಂತೆ ತೀರ್ಮಾನವಾಗಬೇಕಾದುದು ನ್ಯಾಯವಾಗಿರುವುದಾಗಿ ಅವರು ಅಭಿಪ್ರಾಯಪಟ್ಟರು. ಹೊರಗಿನವರ ತೀರ್ಮಾನಕ್ಕಿಂತಲೂ ಇದೇ ಸಾಧುವೆಂದು ಅವರು ಹೇಳಿ, ಈ ವಿಷಯದಲ್ಲಿ ಮೈಸೂರು ಸರ್ಕಾರದವರು ಯಾವ ಆಕ್ಷೇಪಣೆಗಳನ್ನೂ ಹೊಂದಿಲ್ಲವೆಂದು ಸ್ಪಷ್ಟಪಡಿಸಿದರು. ಬಳ್ಳಾರಿ ಬಗ್ಗೆ ಮೈಸೂರಿನವರಿಗೆ ಪ್ರಾದೇಶಿಕ ವಿಸ್ತರಣೆಯ ಆಸೆಯಿರುವುದಿಲ್ಲವೆಂದೂ ಸ್ಪಷ್ಟಪಡಿಸಿದರು

ಶ್ರೇಷ್ಠ ಕಾರ್ಯದರ್ಶಿ ಸ್ಥಾನಕ್ಕೆ ಬೇರೊಬ್ಬ ಅಧಿಕಾರಿ

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರಾಗಿರುವ ಶ್ರೀ ಎನ್ ಪುಟ್ಟರಂಗಸ್ವಾಮಿಯವರ ಬದಲು ಬೇರೊಬ್ಬ ಅಧಿಕಾರಿಯನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ

ಶಾಸನ ಸಭೆಯಲ್ಲಿ ಪತ್ರಿಕಾ ಸಂಪಾದಕರ ವಿಚಾರಣೆ

ಬೊಂಬಾಯಿಯ ಶಾಸನ ಸಭೆಯನ್ನು ಅವಹೇಳನ ಮಾಡುವ ಲೇಖನ ಬರೆದರೆಂಬ ಆರೋಪಣೆಯ ಬಗ್ಗೆ ನ್ಯೂಸ್ ಆಫ್ ಇಂಡಿಯಾ ಪತ್ರಿಕೆಯ ಸಂಪಾದಕ ಫ್ರಾಂಕ್ ಮೊರೇಸ್‌ರವರನ್ನು ಸಭೆಗೆ ಕರೆಸಿಕೊಂಡು ವಿಚಾರಣೆ ನಡೆಸಲಾಯಿತು. ಸಭೆಗೆ ಅವಮಾನ ಮಾಡುವುದು ತಮ್ಮ ಉದ್ದೇಶವಲ್ಲವೆಂದೂ, ತಾವು ಬರೆದ ಲೇಖನದಲ್ಲಿ ತಪ್ಪಿರುವುದಿಲ್ಲವೆಂದೂ ಅವರು ಹೇಳಿದರು. ಅವರು ಕ್ಷಮಾಪಣೆ ಸಲ್ಲಿಸಿ, ಪತ್ರಿಕೆಯಲ್ಲಿ ಪ್ರಕಟಿಸುವವರೆಗೆ ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ನಿಷೇಧಿಸಬೇಕೆಂದು ಸಭಾ ನಾಯಕ ಮೊರಾರ್ಜಿಯವರು ನಿರ್ಣಯವನ್ನು ಮಂಡಿಸಿದರು. ಅದು ಅಂಗೀಕೃತವಾಯಿತು. ಶಾಸನ ಸಭೆ ಇತಿಹಾಸದಲ್ಲಿ ಸಂಪಾದಕರೊಬ್ಬರನ್ನು ಈ ರೀತಿ ವಿಚಾರಿಸುತ್ತಿರುವುದು ಇದೇ ಮೊದಲೆಂದು ಹೇಳಲಾಗಿದೆ

ಹೈದರಾಬಾದಿನ ಸತ್ಯನಾರಾಯಣ ರಾವ್ ಎಂಬ ೨೦ ವರ್ಷದ ವಿದ್ಯಾರ್ಥಿಯೊಬ್ಬನು ಕುರುಪಿಯಲ್ಲಿ ಕಳೆದ ೧೧ನೇ ತಾ|| ೩೦ ಘಂಟೆಗಳ ಕಾಲ ಒಂದೇ ಸಮನಾಗಿ ಸೈಕಲ್ ಸವಾರಿ ಮಾಡಿದನೆಂದು ಗೊತ್ತಾಗಿದೆ

ವಿದೇಶೀ ಮತ ಪ್ರಚಾರ ಸಂಸ್ಥೆಗಳಿಗೆ ಅವಕಾಶವಿಲ್ಲ

ಭಾರತದಲ್ಲಿ ಪ್ರತಿಯೊಬ್ಬನೂ ತನ್ನ ಮತವನ್ನು ಪ್ರಚಾರ ಮಾಡಲು ಸ್ವಾತಂತ್ರ್ಯವನ್ನು ಹೊಂದಿದ್ದರೂ ಸಹ, ವಿದೇಶೀಯರು ಈ ದೇಶಕ್ಕೆ ಬಂದು ಪ್ರಚಾರ ನಡೆಸುವುದನ್ನು ಭಾರತ ಸರ್ಕಾರದವರು ಒಪ್ಪುವುದಿಲ್ಲವೆಂದು ಕೇಂದ್ರ ಗೃಹ ಮಂತ್ರಿ ಕಟ್ಜುರವರು ತಿಳಿಸಿರುತ್ತಾರೆ ಇದ ವಿದೇಶೀ ಕ್ರಿಸ್ತ ಸಂಘಗಳು ಭಾರತದಲ್ಲಿ ಪ್ರಚಾರ ನಡೆಸಲು ಅವಕಾಶ ಬೇಡುವುದೆಂದೂ, ಒಂದು ಸಂಸ್ಥೆಗೆ ಅವಕಾಶ ನೀಡಲಿಲ್ಲವಾಗಿಯೂ, ಉಳಿದ ಸಂಸ್ಥೆಗಳ ಮನವಿಯನ್ನು ಪರಿಶೀಲಿಸಲಾಗುತ್ತಿರುವುದೆಂದೂ ಗೃಹ ಶಾಖೆಯ ಉಪ ಮಂತ್ರಿ ಬಿ ಎನ್ ದಾತಾರ್‌ರವರು ಹೇಳಿರುತ್ತಾರೆ

ಪಂಜಾಬಿನಲ್ಲಿ ಆಹಾರದ ಹತೋಟಿ ರದ್ದು

ಪೂರ್ವ ಪಂಜಾಬು ಸರ್ಕಾರದವರು ಆಹಾರದ ಮೇಲಿನ ಹತೋಟಿಯನ್ನು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ವರದಿಯಾಗಿದೆ

ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನ

ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನವು ಇದೇ ತಿಂಗಳು ೨೦ನೇ ತಾ|| ನಗರದ ಟೌನ್ ಹಾಲಿನಲ್ಲಿ ಆರೋಗ್ಯ ಇಲಾಖಾ ಮುಖ್ಯಾಧಿಕಾರಿಗಳಾದ ಡಾ|| ಬಿ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಆರಂಭೋತ್ಸವವನ್ನು ನೆರವೇರಿಸುವರು

ಸಹಕಾರ ಸಮ್ಮೇಳನ

ಸಂಸ್ಥಾನದ ೩ನೇ ಸಹಕಾರ ಸಮ್ಮೇಳನವು ಮೇ ತಿಂಗಳು ೧೫ ಮತ್ತು ೧೬ನೇ ತಾರೀಖು ಮಂಡ್ಯದಲ್ಲಿ ಸೇರುವುದು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣ ಗೌಡರು ಅಧ್ಯಕ್ಷತೆ ವಹಿಸುವರು ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಆರಂಭೋತ್ಸವವನ್ನು ನೆರವೇರಿಸುವರು.

ಉದ್ಯೋಗ ವಿನಿಮಯ ಸಂಸ್ಥೆ ಕಛೇರಿ

ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ (ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್) ಕಛೇರಿಯನ್ನು ಇಲವಾಲದ ರಸ್ತೆಯಿಂದ ಗಾಂಧಿ ಚೌಕದಲ್ಲಿರುವ ವಿಶ್ವೇಶ್ವರಯ್ಯ ಭವನಕ್ಕೆ ಬದಲಾಯಿಸಲಾಗಿದೆ

ಅಸಿಸ್ಟೆಂಟ್ ಕಮೀಷನರುಗಳಾಗಿ ಬಡ್ತಿ

ಅಮಲ್ದಾರರಾದ ಶ್ರೀಗಳ ಎಸ್ ವಿ ಪುಟ್ಟಣ್ಣ, ಜಿ ಕೆ ರಂಗಯ್ಯನಾಯಕ್ ಮತ್ತು ಹೆಚ್ ಹಾಲಪ್ಪನವರನ್ನು ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಏರಿಸಲಾಗಿದೆ ಅವರನ್ನು ಕ್ರಮವಾಗಿ ಚಿತ್ರದುರ್ಗ, ಶಿವಮೊಗ್ಗ ಮತ್ತು ಹಾಸನ ಜಿಲ್ಲಾ ಬೋರ್ಡು ಅಧಿಕಾರಿಗಳಾಗಿ ನೇಮಿಸಲಾಗಿದೆ

ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವ

ಚಾಮರಾಜನಗರ ೧೬

ಈ ತಾಲ್ಲೂಕು ಚಂದಕವಾಡಿ ಸರ್ಕಲ್ ಉಪಾಧ್ಯಾಯರುಗಳ ಸಂಘದ ವಾರ್ಷಿಕೋತ್ಸವವು ಕಳೆದ ೩ನೇ ತಾ|| ಕದರಿ ಗ್ರಾಮದಲ್ಲಿ ನಡೆಯಿತು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರು ಅಧ್ಯಕ್ಷತೆ ವಹಿಸಿದ್ದರು ರೇಂಜ್ ಸ್ಕೂಲ್ ಇನ್ಸ್‌ಪೆಕ್ಟರ್ ಶ್ರೀ ಬಿ ಸೀತಾರಾಮ ಮೊದಲಿಯಾರ್‌ರವರು ಭಾಷಣ ಮಾಡಿ ಉಪಾಧ್ಯಾಯರಿಗೆ ಸೂಕ್ತ ತಿಳುವಳಿಕೆಯನ್ನಿತ್ತರು ಶ್ರೀಗಳಾದ ಕೆ ಎನ್ ಪುಟ್ಟಣ್ಣ ಮತ್ತು ಡಿ ವಿ ರಾಮಣ್ಣನವರುಗಳ ಭಾಷಣಗಳೂ ಆದುವು ನಿಶ್ಚಿತಾರ್ಥ ಎಂಬ ನಾಟಕವನ್ನು ಉಪಾಧ್ಯಾಯರುಗಳು ಅಭಿನಯಿಸಿದರು

ನೀರು ಸೇದಲು ಹೋಗಿ ಭಾವಿಗೆ ಬಿದ್ದು ಮರಣ

ತಿರುಮಕೂಡಲಿನ ರಾಜಗೋಪಾಲ್ ಎಂಬ ೨೪ ವರ್ಷದ ನೌಕರನೊಬ್ಬನು ಕಳೆದ ಮಂಗಳವಾರ ನೀರು ಸೇದುತ್ತಿದ್ದಾಗ ಜಾರಿ ಭಾವಿಗೆ ಬಿದ್ದು ಮರಣ ಹೊಂದಿದನೆಂದು ವರದಿಯಾಗಿದೆ

ಅಮೆರಿಕದ ಗೂಢಚಾರನಿಗೆ ಗಲ್ಲು

ಪೂರ್ವ ಜರ್ಮನಿಯ ಆಹಾರ ವ್ಯವಸ್ಥೆಯನ್ನು ಹದಗೆಡಿಸುವ ಸಲುವಾಗಿ ಅಲ್ಲಿ ಗೂಢಚರ್ಯೆಯಲ್ಲಿ ನಿರತರಾಗಿ ಇವರು ಕೃತ್ರಿಮ ರೇಷನ್ ಕಾರ್ಡುಗಳನ್ನು ತಯಾರಿಸುತ್ತಿದ್ದ ಎಂಟು ಮಂದಿ ಅಮೆರಿಕದ ಗೂಢಚಾರರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲಾಗಿತ್ತು ಅವರಲ್ಲಿ ಒಬ್ಬನಿಗೆ ಮರಣ ದಂಡನೆ, ಮತ್ತೊಬ್ಬನಿಗೆ ಜೀವಾವಧಿ ಸಜಾ ಮತ್ತು ಉಳಿದ ಆರು ಮಂದಿಗೆ ವಿವಿಧ ಕಾಲದ ಅವಧಿಯ ಸಜಾ ಶಿಕ್ಷೆಯನ್ನು ವಿಧಿಸಲಾಗಿದೆ.

ಜಗನ್ನಾಥರಾವ್ ಜೋಷಿಯವರ ಭಾಷಣ

ಭಾರತೀಯ ಜನ ಸಂಘದ ಮೈಸೂರು ಶಾಖೆ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ನಡೆಯುವುದು ಸಂಘದ ಕರ್ನಾಟಕ ಪ್ರಾಂತೀಯ ಪ್ರಚಾರಕ ಕಾರ್ಯದರ್ಶಿ ಶ್ರೀ ಜಗನ್ನಾಥ ರಾವ್ ಜೋಷಿಯವರು ಭಾಷಣ ಮಾಡುವರು. ಶ್ರೀ ಗೋಪಾಲ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ.

ಬೆಳಿಗ್ಗೆ ೭-೩೦ ಪಿ ಶ್ರೀ ಪಾಧುರ್ಯ [illegible] ಸುಬ್ರಹ್ಮಣ್ಯಂ ೧೨-೦ ಜಲತರಂಗ [illegible] ಎಮ್ [illegible] ಗೀತೆಗಳು [illegible] ೫-೦ ಮತ್ತು ೭-೦ [illegible] ಸಂಗೀತ [illegible] ಎಲ್ [illegible] ಶಾಸ್ತ್ರಿ [illegible] ಎಸ್ ಎ [illegible] ೮ ಕಾರ್ಯ [illegible] ೯-೦ [illegible] ಕನ್ನಡ ನಾಟಕ [illegible] ಸಂಘದವರಿಂದ ಎಂ ಎಲ್ ವಸಂತಕುಮಾರಿಯವರ ಸಂಗೀತ ಕಾರ್ಯಕ್ರಮದ ಪಲ್ಲವಿ [illegible] ಗಳನ್ನು ನಾಳೆ ರಾತ್ರಿ ೮ ಗಂಟೆಗೆ ಪ್ರಸಾರ ಮಾಡಲಾಗುವುದು.

ಚೀಣದ ಮೇಲೆ ಚಿಯಾಂಗರ ಧಾಳಿಯಿಲ್ಲವೇ

ಇತ್ತೀಚಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ನೋಡಿ ಚಿಯಾಂಗ್ ಕೈಷೇಕರವರು ಚೀನಾ ಪ್ರದೇಶದ ಮೇಲೆ ಧಾಳಿ ಮಾಡುವ ಅಭಿಲಾಷೆಯನ್ನು ಬಿಟ್ಟುಬಿಟ್ಟಿರುವರೆಂದು ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	[illegible]	[illegible]
ಕಡಲೆಕಾಯಿ	೨೬ ೦ ೦	೨೮ ೪ ೦
ಎಳ್ಳು	೬೫ ೦ ೦	೭೬ ೧೦ ೦
ಹರಳುಬೀಜ	೪೧ ೩ ೦	
ಹುಚ್ಚೆಳ್ಳು	೫೪-೩ ೦	
ಹೊಂಗೆಬೀಜ	೧೬ ೨ ೦	೨೨ ೦ ೦
ಹುರುಳಿ	೪೨ ೦ ೦	೪೭ ೬ ೦
ಹೆಸರು	೬೫-೧೦ ೦	
ಹಲಸಂದೆ	೪೮ ೪ ೦	೫೪ ೧೨ ೦
ಅವರೆ	೪೫ ೦ ೦	೪೭-೮ ೦
ಮೆಣಸಿನ ಕಾಯಿ ಮಂಡಕ್ಕೆ	೧೬ ೧೨ ೦	೧೮ ೧೨ ೦
ಹುಣಸೇಹಣ್ಣು	೪ ೯ ೦	೬-೦ ೦
ಸೀಗೇಕಾಯಿ	೪ ೧೨ ೦	
ಬೆಲ್ಲ	೫ ೮-೦	
ತೆಂಗಿನಕಾಯಿ ೧,೦೦೦ಕ್ಕೆ	೯೦ ೦ ೦	೨೩೬ ೨ ೦

೮೦ ದಿನಗಳ ಉಪವಾಸ

ಫರ್ಮಾನ್ ಎಂಬ ಇಟಲಿಯ ಉಪವಾಸ ಪ್ರವೀಣನೊಬ್ಬನು ೮೦ ದಿನಗಳ ಕಾಲ ಉಪವಾಸ ಮಾಡಿ, ಪ್ರಪಂಚದ ರಿಕಾರ್ಡನ್ನು ಸ್ಥಾಪಿಸಿರುತ್ತಾನೆ

SRI GAYATHRI

TALKIES

From 18-4-53 For 2 Days

Warners

FLAME & THE ARROW

(In Glorious Technicolor)

With Burt Lancaster & Virginia Mayo

— NEXT CHANGE —

THE SAVAGE

Edited, Printed and Published by A R Nagarajan at Sadhvi Press, D. Subbiah Road, Mysore

City Municipal Office,
Mysore, Dated 13-4-53

NOTIFICATION

Applications are hereby called for the post of the Municipal Advocate of the Mysore city Municipality from Legal Practitioners of not less than 5 years standing The emoluments will be Rs 150/- P M The period of appointment is up to end of 31st December 1953 from the date of appointment of the Legal Adviser after selection

The selected candidate should before entering on his duties enter into an agreement with the Municipal President to the effect

1) that he shall bind himself ordinarily in person to attend to all legal work of the Mysore City Municipal Council such as to appear and conduct all civil, criminal and land acquisition cases

2) that he shall appear and conduct all appeals, revisions and reviews relating to the Mysore city Municipal Council before all appellate and revision courts in Mysore city

3) that he shall give studied and written opinion on all questions referred to him by the Municipal Council or the Municipal President, or the Municipal Commissioner

4) that he shall draft all agreements, deeds etc, required of him by the Municipal Council or by the Municipal President or the Municipal Commissioner.

5) that one month's previous notice in writing shall be given by either party to the other in case it is found necessary to terminate the said agreement

6) that the Municipal Council shall be at liberty to employ another or additional legal adviser or advisers along with and instead of him in case of special importance

7) The last date for receipt of applications is Monday the 5th May 1953

(Sd) A S VENKATACHALAM
Municipal Commissioner I c

ರೋಜಿ ನಂ. 794 WEEKLY EDITION ಬಿಡಿ ಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೯-೪-೧೯೫೩ [ಸಂಚಿಕೆ ೩೪

ಸಿಂಹಳದಲ್ಲೇ ನೆಲೆಸಲು ಭಾರತೀಯರ ಸಂಕಲ್ಪ

ಸಿಂಹಳ ದ್ವೀಪದಲ್ಲೇ ಭಾರತೀಯರು ನೆಲೆಸುವರು

ಸಿಂಹಳದ ಭಾರತೀಯ ಕಾಂಗ್ರೆಸ್ ಸಂಸ್ಥೆ ಅಧ್ಯಕ್ಷ ಶ್ರೀ [illegible]ತಮಾರವರು ೧೯ನೇ ಕಾಂಗ್ರೆಸ್ ಅಧಿವೇಶನದಲ್ಲಿ ಶಪಥ ಮಾಡುತ್ತಾ ಅಲ್ಲಿ ನೆಲೆಸಿರುವ ಭಾರತೀಯರು ಆ ದ್ವೀಪದಲ್ಲೇ ವಾಸಿಸಲು ನಿಶ್ಚಯಿಸಿರುವುದಾಗಿಯೂ ಅಹಿಂಸಾತ್ಮಕ ರೀತಿಯಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸುವುದಾಗಿಯೂ ಹೇಳಿದ್ದಾರೆ. ಅವರುಗಳು ಹೋಗಲು ಬೇರೆ ಸ್ಥಳವು ಇಲ್ಲವೆಂದೂ, ಇದ್ದರೂ ಅಲ್ಲಿ ಹೋಗುವುದಿಲ್ಲವೆಂದೂ ಸ್ಪಷ್ಟಪಡಿಸಿರುವರು.

ಭಾರತದ ೪-ರಾಷ್ಟ್ರೀಯ ಮುಖಂಡರು

ಪುದುಚ್ಚೇರಿ ಫ್ರಾಂಚರ ಶಾಲಾ ಪೌರಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ರಾಷ್ಟ್ರೀಯ ಭಾರತ ಮುಖಂಡರ ಭಾವಚಿತ್ರಗಳನ್ನು ಇಡಬೇಕೆಂಬುವರ ಸಂದರ್ಭದಲ್ಲಿ ಅಲ್ಲಿನ ಸರ್ಕಾರದಲ್ಲಿ ಪ್ರತಿಭಟನೆಯೊಂದನ್ನು ಹೊರಡಿಸಿ, ಮಹಾತ್ಮಾ ಗಾಂಧಿ, ಭಾರತದ ಅಧ್ಯಕ್ಷರು, ಸರ್ದಾರ್ ಪಟೇಲ್ ಮತ್ತು ಪ್ರಧಾನಿ ನೆಹರೂ ಇವರುಗಳ ಚಿತ್ರಗಳನ್ನು ತಮ್ಮ ಕಟ್ಟಡಗಳಲ್ಲಿ ಸ್ಥಳೀಯ ಸಂಸ್ಥೆಗಳು ಹಾಕಬಹುದೆಂದು ಸೂಚಿಸಿರುತ್ತಾರೆ.

೧೪ ಪೋಸ್ಟ್‌ಮಾಸ್ಟರ್ ಸ್ಥಾನಗಳಿಗೆ ೬೦೦ ಅರ್ಜಿಗಳು

ಸರ್ಕಾರಿ ಅಂಚೆ ಇಲಾಖೆಯ ವಿಭಾಗದಲ್ಲಿ ಖಾಲಿ ಬಿದ್ದಿರುವ ೧೪ ಪೋಸ್ಟ್‌ಮಾಸ್ಟರ್ ಸ್ಥಾನಗಳಿಗೆ ೬೦೦ ಜನರು ಅರ್ಜಿ ಸಲ್ಲಿಸಿರುವರೆಂದೂ ಅವರಲ್ಲಿ ೪೦೦ ಮೆಟ್ರಿಕ್ಯುಲೇಷನ್ ಪರೀಕ್ಷೆಯಾಗಿರುವವರೆಂದೂ ಹೇಳಲಾಗಿದೆ.

ಒಂದು ಮನೆಯಲ್ಲಿ ಕಳ್ಳರ ಎರಡು ತಂಡ

ಹಾಸನದ ಶ್ರೀ ಓ. ಎಸ್. ರಾಜು ಎಂಬುವರ ಮನೆಗೆ ಕಳೆದ ೧೮ನೇ ತಾ|| ಒಬ್ಬ ಕಳ್ಳನು ಅವರ ಮೋಟಾರು ಗ್ಯಾರೇಜಿನಲ್ಲಿದ್ದ ಹಲವು ಹಳೆಯ ಟೈರುಗಳನ್ನು ಕದಿಯಲೆತ್ನಿಸಿದನೆಂದೂ, ಅದೇ ಹೊತ್ತಿಗೆ ಕಳ್ಳರ ಮತ್ತೊಂದು ತಂಡವು ಮನೆಗೆ ನುಗ್ಗಲು, ಮೊದಲು ಬಂದ ಕಳ್ಳನಿಗೂ, ಹೊಸಬರಿಗೂ ಜಗಳವಾಗಿ ಮೊದಲಿನವನಿಗೆ ಪೆಟ್ಟು ಬಿದ್ದಿತೆಂದೂ ಅಷ್ಟು ಹೊತ್ತಿಗೆ ಮನೆಯವರು ಎದ್ದು ಬರಲು ತಂಡದವರು ಓಡಿಹೋಗಿ, ಪೆಟ್ಟು ತಿಂದ ಕಳ್ಳನು ಸಿಕ್ಕಿಬಿದ್ದನೆಂದೂ ವರದಿಯಾಗಿದೆ.

ಬಿಳಿಗಿರಿರಂಗ ಸ್ವಾಮಿಯವರ ರಥೋತ್ಸವ

ಯಳಂದೂರು ತಾಲ್ಲೂಕು ಬಿಳಿಗಿರಿರಂಗನ ಬೆಟ್ಟದಲ್ಲಿ ಶ್ರೀ ರಂಗನಾಥ ಸ್ವಾಮಿಯವರ ರಥೋತ್ಸವವು ಇದೇ ತಿಂಗಳು ೨೮ನೇ ತಾ|| ಮಂಗಳವಾರ ನೆರವೇರುವುದು. ಅದರ ಅಂಗವಾಗಿ ನಾಳಿದ್ದಿನಿಂದ ಅಂಕುರಾರ್ಪಣ, ಧ್ವಜಾರೋಹಣ, ಶೇಷವಾಹನ, ಹಂಸವಾಹನ, ಮಂಟಪ ಮತ್ತು ಗರುಡೋತ್ಸವಗಳು ನಡೆಯುತ್ತವೆ.

ಲೋಕ ಕಲ್ಯಾಣಾರ್ಥವಾಗಿ ಶ್ರೀರಾಮ ಪಟ್ಟಾಭಿಷೇಕ

ಸೋಸಲೆ ೧೯

ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಸಲೆ ಗ್ರಾಮದ ಕೃಷ್ಣರಾಜಪುರ ಅಗ್ರಹಾರದ ಶ್ರೀ ಶ್ರೀನಿವಾಸ ಸ್ವಾಮಿಯವರ ದೇವಸ್ಥಾನದಲ್ಲಿ ಪ್ರತಿಷ್ಠಿತವಾಗಿರುವ ವೇಣುಗೋಪಾಲ ಸ್ವಾಮಿಯವರಿಗೆ ಕಳೆದ ೨೭ ವರ್ಷಗಳಿಂದಲೂ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವು ಬೆಳೆದು ಬಂದು, ಈ ವರ್ಷ ಇದೇ ೨೬ ನೇ ತಾ|| ಯಿಂದ ಮೇ ತಿಂಗಳು ೬ರ ವರೆಗೆ ಶ್ರೀರಾಮ ಸಾಮ್ರಾಜ್ಯ ಸತ್ರ ಮಹಾ ಪಟ್ಟಾಭಿಷೇಕ ಮಹೋತ್ಸವವು ಏರ್ಪಡಿಸಲ್ಪಟ್ಟಿರುತ್ತದೆ. ಉತ್ಸವದ ಕಾಲದಲ್ಲಿ ಪ್ರತಿ ನಿತ್ಯವೂ ವಿವಿಧ ಸೇವೆಗಳು ನಡೆಯಲಿವೆ. ವಿಶ್ವದಲ್ಲಿ ಕವಿದಿರುವ ಶ್ಯಾಮ ಡಾಮರ ಕಾರ್ಮೋಡಗಳು ಚೆದುರಿಯಾಗಿ ಜನರಲ್ಲಿ ಸೋದರ ಭಾವನೆಯು ಅಂಕುರಿಸಿ, ಶಾಂತಿ ಸೌಹಾರ್ದವುಂಟಾಗಲು ಭಗವಂತನ ಅನುಗ್ರಹದಿಂದಲೇ ಸಾಧ್ಯವೆಂದು ಮನಗಂಡು ಲೋಕ ಕ್ಷೇಮಾರ್ಥವಾಗಿ ಈ ಮಹೋತ್ಸವವನ್ನು ನೆರವೇರಿಸಲು ಉದ್ದೇಶಿಸಲಾಗಿದೆ. ಮತ್ತು ಅದಕ್ಕೆ ಆಸ್ತಿಕ ಮಹನೀಯರು ಉದಾರವಾಗಿ ಧನಸಹಾಯ ಮಾಡಬೇಕೆಂದು ಉತ್ಸವದ ಸಮಿತಿಯವರು ಪ್ರಾರ್ಥಿಸಿರುತ್ತಾರೆ.

ಬರ್ಮಾದಿಂದ ರಾಷ್ಟ್ರೀಯ ಚೀಣರು ವಾಪಸು

ಬರ್ಮಾದಲ್ಲಿರುವ ರಾಷ್ಟ್ರೀಯ ಚೀಣಾ ಸೈನ್ಯಗಳನ್ನು ಅಮೆರಿಕದವರ ಸಲಹೆಯಂತೆ ವಾಪಸು ಕರೆಸಿಕೊಳ್ಳಲು ಫಾರ್ಮೋಸದಲ್ಲಿರುವ ಚೀಣಾ ಸರ್ಕಾರದವರು ಒಪ್ಪಿರುವರೆಂದು ವರದಿಯಾಗಿದೆ.

ಪ್ರವೀಣ ಮತ್ತು ಸಾಹಿತ್ಯ ವಿಶಾರದ ತರಗತಿಗಳು

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಪ್ರವೀಣ ವಿದ್ಯಾಲಯ ಮತ್ತು ಸಾಹಿತ್ಯ ವಿಶಾರದ ತರಗತಿಗಳನ್ನು ತೆರೆಯುವ ಏರ್ಪಾಡು ಮಾಡಲಾಗಿದೆ. ಈ ತರಗತಿಗಳಿಗೆ ಸೇರಲಿಚ್ಛಿಸುವವರು ಇದೇ ೨೬ ನೇ ತಾ|| ಬುಧವಾರ ಸಂಜೆಯೊಳಗಾಗಿ ತಮ್ಮ ಹೆಸರುಗಳನ್ನು ಸಭಾ ಕಾರ್ಯಾಲಯದಲ್ಲಿ ಕೊಡಬೇಕೆಂದು ಕೋರಲಾಗಿದೆ.

ರೈಲು ತಡೆದ ರೈತರ ಟಿಕೆಟ್ಟಿಲ್ಲದ ಪ್ರಯಾಣ

ಕಮ್ಯುನಿಸ್ಟರ ಪ್ರೇರಣೆಯ ಮೇಲೆ ಆಂಧ್ರದ ಒಂದು ಕಡೆ ಏರ್ಪಾಡಾಗಿದ್ದ ರೈತರ ಸಮ್ಮೇಳನದ ಅಧಿವೇಶನಕ್ಕೆ ತೆರಳಲಿದ್ದ ಸಹಸ್ರ ಪ್ರತಿನಿಧಿಗಳು ನಿನ್ನೆ ಬೆಳಿಗ್ಗೆ ವಿಜಯವಾಡದಿಂದ ಕಲ್ಕತ್ತಾವಿಗೆ ಹೊರಟ ಮೇಲ್ ರೈಲು ಗಾಡಿಯನ್ನು ಪೆದವೆಲ್ಲಪುರಿ ಎಂಬ ನಿಲ್ದಾಣದಲ್ಲಿ ತಡೆದು ನಿಲ್ಲಿಸಿ, ಗಾಡಿಗಳಿಗೆ ಹತ್ತಿ ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದ ಪ್ರಸಂಗವು ವರದಿಯಾಗಿದೆ. ಗಾಡಿಗಳೊಳಗೂ, ಫುಟ್ ಬೋರ್ಡ್ ಮತ್ತು ಛಾವಣಿ ಮೇಲ್ಭಾಗದಲ್ಲೂ ಅವರು ಕುಳಿತು ರೈಲು ಹೊರಡುವುದಕ್ಕೆ ಅಡ್ಡಿ ಮಾಡಲು ರೈಲ್ವೆ ನೌಕರರು ಅಸಹಾಯಕರಾಗಿ ನಿಂತುಬಿಟ್ಟರು. ತರುವಾಯ ಗುಂಪಿನವರು ಕೃಷ್ಣಾ ನದಿ ಸೇತುವೆ ಮೇಲೆ ರೈಲನ್ನು ನಿಲ್ಲಿಸಿ ತಾವೆಲ್ಲರೂ ಅಲ್ಲಿ ಇಳಿಯಲು ಅವಕಾಶ ಕೊಡಬೇಕೆಂದೂ, ಟಿಕೆಟ್ಟಿಲ್ಲದ ಪ್ರಯಾಣಕ್ಕಾಗಿ ತಮ್ಮ ಮೇಲೆ ಕ್ರಮ ಜರುಗಿಸಬಾರದೆಂದೂ ಭರವಸೆ ಪಡೆದ. ರೈಲು ಮುಂದಕ್ಕೆ ಹೋಗಲು ಅವಕಾಶ ಕೊಟ್ಟರು. ಕೃಷ್ಣಾ ನದಿ ಸೇತುವೆಯನ್ನು ತಲಪುತ್ತಲೇ ರೈಲನ್ನು ನಿಲ್ಲಿಸಲಾಗಿ ಅವರೆಲ್ಲರೂ ಇಳಿದು, ಕಮ್ಯುನಿಸ್ಟ್ ಘೋಷಣೆಗಳನ್ನು ಕೂಗುತ್ತಾ, ಕೆಂಪು ಧ್ವಜವನ್ನು ಹಿಡಿದುಕೊಂಡು ಹೊರಟು ಹೋದರು.

ಮೈಸೂರಿಗೆ ವಿಶ್ವ ಸಂಸ್ಥೆ ಆಹಾರದ ಪ್ರವೀಣರು

ವಿಶ್ವ ಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಮಿತಿಯ ಮೂವರು ಪ್ರವೀಣರು ಶೀಘ್ರದಲ್ಲೇ ಮೈಸೂರಿಗೆ ಆಗಮಿಸಿ, ಇಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ಕೆಲಸದಲ್ಲಿ ತೊಡಗುವರು. ಆಲಯದಲ್ಲಿ ತಯಾರಾಗುವ ವಿವಿಧ ಆಹಾರ ಪದಾರ್ಥಗಳ ಬಗ್ಗೆ ಉಪಯೋಗಿಸುವ ಸಾಧನ, ತಯಾರಿಯ ವಿಧಾನ ಮತ್ತು ಆಹಾರ ಪದಾರ್ಥಗಳನ್ನಿಡಲು ಕಡಿಮೆ ಬೆಲೆಯ ಟಿನ್ನುಗಳ ತಯಾರಿಕೆ ಇವುಗಳ ಬಗ್ಗೆ ಅವರು ಇಲ್ಲಿನವರಿಗೆ ಸಲಹೆ ನೀಡಲಿರುವರೆಂದು ಹೇಳಲಾಗಿದೆ.

○ ಮುಂದಿನ ತಿಂಗಳು ೨೪ನೇ ತಾ|| ನಿಂದ ಜೂನ್ ೧೦ರ ವರೆಗೆ ರಾಜಧಾನಿಯಲ್ಲಿ ಕುದುರೆ ಪಂದ್ಯಗಳು ನಡೆಯುವವು.

ರಾಜೀನಾಮೆ ಕೊಡುವುದಿಲ್ಲ ಎಂದು ನಾಜಿಮುದ್ದೀನ್

ಪಾಕಿಸ್ತಾನದ ನ್ಯಾಯವಾದ ಪ್ರಧಾನಿ ನಾನೇ ಎಂದು ವಜಾ ಮಾಡಲ್ಪಟ್ಟ ಪ್ರಧಾನಿ ಖ್ವಾಜಾ ನಾಜಿಮುದ್ದೀನರು ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ. ರಾಜೀನಾಮೆ ಕೊಡುವಂತೆ ತಮ್ಮನ್ನು ಮೊನ್ನೆ ಗೌರ್ನರ್ ಜನರಲ್ಲರು ಕೇಳಿದಾಗ ತಾವು ನಿರಾಕರಿಸಿದುದಾಗಿಯೂ ಇದುವರೆಗೂ ರಾಜೀನಾಮೆಯನ್ನಿತ್ತಿಲ್ಲವೆಂದೂ ಅವರು ಹೇಳಿ, ಗೌರ್ನರ್ ಜನರಲ್ಲರ ವರ್ತನೆಯು ನ್ಯಾಯ ಮತ್ತು ರಾಜ್ಯಾಂಗಕ್ಕೂ, ಪ್ರಜಾಪ್ರಭುತ್ವದ ಮೂಲ ತತ್ವಗಳಿಗೂ ವಿರೋಧವಾಗಿರುವುದೆಂದು ಅವರು ಹೇಳಿರುತ್ತಾರೆ.

ನಾಜಿಮುದ್ದೀನರನ್ನು ವಜಾ ಮಾಡುವ ಮುಂಚೆ ಗೌರ್ನರ್ ಜನರಲ್ಲರು ಬ್ರಿಟಿಷ್ ರಾಣಿಯವರ ಅನುಮತಿ ಪಡೆದಿದ್ದರೆಂದು ಕೇಳಲಾಗಿದೆ.

"ನಾನೇ ರಾಜೀನಾಮೆ ಕೊಡುವವನಾಗಲೀ ಅಥವಾ ಮಂತ್ರಿಮಂಡಲವು ಜವಾಬ್ದಾರಿಯಾಗಿರುವ ಶಾಸನ ಸಭೆಯು ತನ್ನಲ್ಲಿ ಅವಿಶ್ವಾಸವನ್ನು ಸೂಚಿಸುವ ತನಕವಾಗಲೀ' ತಮ್ಮ ಸರ್ಕಾರವೇ ಕಾನೂನು ಪ್ರಕಾರ ಅಧಿಕಾರದಲ್ಲಿರುವುದಾಗಿ ಅವರು ಹೇಳಿರುತ್ತಾರೆ.

ತಮ್ಮ ದೇಶವು ಬಹಳ ಕಷ್ಟ ಸ್ಥಿತಿಗೆ ಸಿಕ್ಕಿಕೊಂಡಿರುವುದೆಂದೂ, ತಮ್ಮ ಸಲಹೆಯಂತೆ ನೇಮಕವಾದ ಗೌರ್ನರ್ ಜನರಲ್ಲರ ರಾಜ್ಯಾಂಗ ವಿರೋಧವಾದ ಮತ್ತು ಅಕ್ರಮ ನಡವಳಿಕೆಯಿಂದ ಈಗ ಪಾಕಿಸ್ತಾನವು ರಾಜ್ಯಾಂಗದ ಬಿಕ್ಕಟ್ಟನ್ನು ಸಹ ಎದುರಿಸಬೇಕಾಗಿರುವುದೆಂದು ನಾಜಿಮುದ್ದೀನರು ತಿಳಿಸಿರುತ್ತಾರೆ. ಪಾಕಿಸ್ತಾನದ ರಾಜ್ಯಾಂಗದ ಪ್ರಕಾರ ಗೌರ್ನರ್ ಜನರಲ್ಲರಿಗೆ ವಿವೇಚನಾಧಿಕಾರವಿರುವುದಿಲ್ಲವೆಂದೂ, ಅವರು ತಮ್ಮ ವೈಯಕ್ತಿಕವಾದ ನಿರ್ಧಾರ ಮಾಡಲು ಅವಕಾಶವಿಲ್ಲವೆಂದೂ, ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯ ಶಾಸನವು ಜಾರಿಗೆ ಬಂದಮೇಲೆ ಗೌರ್ನರ್ ಜನರಲ್ಲರ ವಿಶೇಷಾಧಿಕಾರಗಳೆಲ್ಲವೂ ಇಲ್ಲದೆ ಹೋದುದಾಗಿಯೂ ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ಪ್ರಧಾನಿ ಸ್ಥಾನದಿಂದ ತಮ್ಮನ್ನು ವಜಾ ಮಾಡಿರುವುದರಿಂದ ಮುಸ್ಲಿಂ ಲೀಗ್ ಸಂಸ್ಥೆಗೆ ತಾವು ಅಧ್ಯಕ್ಷರಾಗಿರುವುದಕ್ಕೆ ಅಡೆತಡೆಯುಂಟಾಗುವುದಿಲ್ಲವೆಂದು ಅವರು ಹೇಳಿರುತ್ತಾರೆ. ತಮ್ಮನ್ನು ವಜಾ ಮಾಡುವ ವಿಷಯವು ಮೊನ್ನೆ ಮಧ್ಯಾಹ್ನ ೪ ಗಂಟೆ ವರೆಗೂ ತಮಗೆ ತಿಳಿದಿರಲಿಲ್ಲವೆಂದೂ ಅವರು ಹೇಳಿರುತ್ತಾರೆ.

ಕಾಶ್ಮೀರ ರಾಜ್ಯಾಂಗ ಸಭಾ ಸದಸ್ಯ ಮುಖಕ್ಕೆ ಮಸಿ

ಕಾಶ್ಮೀರದ ರಾಜ್ಯಾಂಗ ಸಭೆಯ ಸದಸ್ಯ ಮೈನಿ ಎಂಬುವರು ಸಭೆಯ ಅಧಿವೇಶನವನ್ನು ಮುಗಿಸಿಕೊಂಡು ಮೊನ್ನೆ ದಿನ ತಮ್ಮ ಮನೆಗೆ ಹೋಗುತ್ತಿದ್ದಾಗ ಜಮ್ಮುವಿನ ಪ್ರಜಾ ಪರಿಷತ್ತಿನ ಸದಸ್ಯರೆಂದು ಹೇಳಲಾದ ಹಲವು ಯುವತಿಯರು ಅವರನ್ನು ತಡೆದು ಮುಖಕ್ಕೆ ಮಸಿ ಬಳಿದುದಲ್ಲದೆ, "ವ್ಯರ್ಥ ಸಭೆಯೊಂದರ ನಿರ್ಜೀವ ಪ್ರತಿನಿಧಿ" ಎಂದು ಬರೆದಿದ್ದ ಬೋರ್ಡನ್ನು ಕುತ್ತಿಗೆಗೆ ಹಾಕಿದರೆಂದು ವರದಿಯಾಗಿದೆ.

ವಾರ ಭವಿಷ್ಯ

೧೯-೪-೫೩ ರಿಂದ ೨೫-೪-೫೩ ರ ವರೆಗೆ

ಮೇಷ — ಉದ್ಯೋಗ ಸಂಬಂಧವಾದ ಸಹವಾಸದಲ್ಲಿ ತೊಂದರೆ, ವಿರಹ, ನೌಕರರು ಮತ್ತು ವ್ಯಾಪಾರಸ್ಥರು ಎಚ್ಚರಿಕೆಯಿಂದಿರಬೇಕು, ಹಣಕಾಸಿನ ವೃದ್ಧಿ ತೃಪ್ತಿಕರ, ಸಟ್ಟಾ ವ್ಯಾಪಾರ ಬೇಡ

ವೃಷಭ — ಮಕ್ಕಳಿಗೆ ಕ್ಲೇಶ, ಪತ್ನಿಯೊಡನೆ ಕಲಹ, ಮನೆಯಲ್ಲಿ ಜೀವನಕ್ಕೆ ಬೇಸರ, ಆಕಸ್ಮಿಕ ಧನಾಗಮ ಸಂಭವ, ನಿಂದನೆ ಮತ್ತು ಅವಮಾನ

ಮಿಥುನ — ಸಂತೋಷ, ಸಾಹಸ, ಸುಂದರಿಯರೊಡನೆ ಕಾಲಹರಣ, ಸಣ್ಣ ಪುಟ್ಟ ಪ್ರವಾಸ, ಆರೋಗ್ಯ ಚೆನ್ನಾಗಿರದು, ಹಣದ ಆದಾಯ ಸರಿಯಾಗಿರುವುದು, ವ್ಯಾಪಾರದ ಅಭಿವೃದ್ಧಿಗೆ ಉತ್ತಮ ಕಾಲ, ಭ್ರಾತೃವಿನ ವ್ಯವಹಾರದಿಂದ ಚಿಂತೆ. ಮಕ್ಕಳಿಗೆ ಅಪಘಾತ

ಕರ್ಕ — ನೌಕರರಿಗೆ ತುಂಬಾ ಕೆಲಸ, ಕೆಳಗಿನವರ ಸೇವೆ, ವ್ಯಾಪಾರಿಗಳಿಗೆ ಅಧಿಕಾರಿಗಳ ಕಿರುಕುಳ, ಮಕ್ಕಳ ಆರೋಗ್ಯಕ್ಕೆ ಧಕ್ಕೆ, ಸಂಬಂಧಿಕರೊಡನೆ ಮನಸ್ತಾಪ

ಸಿಂಹ — ಪ್ರತಿಷ್ಠೆ ಮತ್ತು ಜನಪ್ರಿಯತೆ ಹೆಚ್ಚುವುವು ಹಣದ ಆದಾಯ ಯಥೇಚ್ಛ, ಪತ್ನೀಪುತ್ರರ ಆರೋಗ್ಯ ಉತ್ತಮ, ಗೃಹಕೃತ್ಯದಲ್ಲಿ ಸಂತೋಷ ನೌಕರರ ಪ್ರಶಂಸೆ, ಸಂಬಳ ಹೆಚ್ಚುವುದು, ವ್ಯಾಪಾರಿಗಳಿಗೆ ಉತ್ತಮ

ಕನ್ಯಾ — ಶತ್ರು ಕಾಟ, ಮನಸ್ಸಿಗೆ ಜಿಗುಪ್ಸೆ, ನೌಕರಿಯಲ್ಲಿ ಉತ್ಸಾಹವಿಲ್ಲ, ಗೃಹಕೃತ್ಯದಲ್ಲಿ ತೊಂದರೆ ಹಣದ ಅಭಾವ, ಪತ್ನಿಗೆ ಕಾಯಿಲೆ

ತುಲಾ — ಸಂಬಂಧಿಕರೊಡನೆ ಕಲಹ, ಸ್ನೇಹಿತರ ಸಹಾಯ, ನೌಕರಿಯಲ್ಲಿ ಜಗಳ, ತೊಂದರೆ, ವ್ಯಾಪಾರಿಗಳಿಗೆ ಉತ್ತಮ, ಸಟ್ಟಾವಲ್ಲಿ ಲಾಭ ಗೃಹಕೃತ್ಯದಲ್ಲಿ ತೊಂದರೆ

ವೃಶ್ಚಿಕ — ಹಣಕಾಸಿನ ದೃಷ್ಟಿಯಿಂದ ಉತ್ತಮ. ಅನಿರೀಕ್ಷಿತ ಐಶ್ವರ್ಯ, ವಿವಾಹದ ಏರ್ಪಾಡಿಗಾಗಿ ಪ್ರವಾಸ, ವ್ಯಾಪಾರಿಗಳಿಗೆ ಉತ್ತಮ, ಮನೆಯ ಸ್ಥಿತಿ ತೃಪ್ತಿಕರ.

ಧನು — ಅದೃಷ್ಟಕರ ವಾರ, ಹೊಸ ಯೋಜನೆಗೆ ಸಕಾಲ, ವ್ಯಾಪಾರ ಹೆಚ್ಚುವುದು, ವಾರಾಂತ್ಯದಲ್ಲಿ ದೇಹಾಲಸ್ಯ

ಮಕರ — ವ್ಯಾಪಾರ ಮತ್ತು ಗೃಹಕೃತ್ಯದಲ್ಲಿ ತೊಂದರೆ, ಪತ್ನಿಗೆ ಅನಿರೀಕ್ಷಿತ ಹಣದ ಆದಾಯ

ಕುಂಭ—ಅವಕಾಶವನ್ನು ಉಪಯೋಗಿಸಿ, ಬಟ್ಟರೆ ನಿಮಗೇ ಇಲ್ಲ, ಪ್ರತಿಷ್ಠೆ ಹೆಚ್ಚುವುದು, ಮಕ್ಕಳಿಗೆ ಕ್ಲೇಶ, ನೌಕರಿಯಲ್ಲಿ ಬಡ್ತಿ, ವ್ಯಾಪಾರಿಗಳಿಗೆ ಉತ್ತಮ

ಮೀನ — ನಂಬಿಕೆಯಿಂದ ಹಾನಿ, ನೌಕರಿಯಲ್ಲಿ ಭಾರಿ ಜಗಳ, ರಾಜೀನಾಮೆ ಸಂಭವ, ಪತ್ನಿಗೆ ಅನಾರೋಗ್ಯ, ಮಕ್ಕಳಿಗೆ ಅಪಘಾತ, ಪ್ರಯಾಸ ಪ್ರವಾಸ, ಮರಣ ವಾರ್ತೆ ಶ್ರವಣ

ಆಯುರ್ವೇದ ಕಾಂಗ್ರೆಸ್ ಸಮಾರಂಭಗಳು

ಬೆಂಗಳೂರು, ೧೯

ಇದೇ ತಿಂಗಳು ೨೩, ೨೪, ೨೫ ಮತ್ತು ೨೬ ನೇ ತಾ|| ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಸಮಾರಂಭಗಳು ಇಲ್ಲಿ ನಡೆಯುವುವು ೨೩ ನೇ ತಾ|| ಬೆಳಿಗ್ಗೆ ಆಯುರ್ವೇದ ವಸ್ತು ಪ್ರದರ್ಶನವು ಶ್ರೀ ಹೆಚ್ ಬಿ ಗಂಗಪ್ಪಗೌಡರಿಂದ ಆರಂಭಿಸಲ್ಪಡುವುದು ೨೪ ನೇ ಸಂಜೆ ಕಿರಿಯ ಶಾಸನ ಸಭಾಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯನವರು ಆಯುರ್ವೇದದ ಪತ್ರಿಕೋದ್ಯಮಿಗಳ ಮತ್ತು ಗ್ರಂಥಕರ್ತರ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು ಹುಬ್ಬಳ್ಳಿಯ ಶ್ರೀ ದಾಮೋದರ ಅನಂತ ಹಲಸೀಕರ್ ರವರು ಅಧ್ಯಕ್ಷತೆ ವಹಿಸುವರು ೨೫ ನೇ ತಾ|| ಸಂಜೆ ಸಂಸ್ಥಾನದ ಆಯುರ್ವೇದದ ಕಾಂಗ್ರೆಸ್ ಮಹಾ ಸಭೆಯು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರಿಂದ ಆರಂಭವಾಗುವುದು. ಅ||ಭಾ|| ಆ|| ಕಾಂಗ್ರೆಸ್ ಅಧ್ಯಕ್ಷ, ಪಂಡಿತ ಶಿವಶರ್ಮರವರು ಅಧ್ಯಕ್ಷತೆ ವಹಿಸುವರು ೨೫ ನೇ ತಾ|| ಬೆಳಿಗ್ಗೆ ವಿಜ್ಞಾನ ಪರಿಷತ್ತನ್ನು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಆರಂಭ ಮಾಡುವರು ೨೬ ನೇ ತಾ|| ಸಂಜೆ ನೇರುವ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಆಡಳಿತ ಮಂಡಲಿಯ ಅಧಿವೇಶನದ ಆರಂಭೋತ್ಸವವನ್ನು ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ನೆರವೇರಿಸುವರು

ಪಾಕಿಸ್ತಾನದಲ್ಲಿ ವೀಳೆಯದೆಲೆಯ ಕಾಳಸಂತೆ

ಪಾಕಿಸ್ತಾನದಲ್ಲಿ ವೀಳೆಯದೆಲೆಯ ಅಭಾವವುಂಟಾಗಿ ಅದರಲ್ಲಿ ಕಾಳಸಂತೆಯನ್ನು ನಡೆಸಲಾಗುತ್ತಿದೆಯೆಂದೂ, ಕರಾಚಿಯಲ್ಲಿ ಅದರ ಬೆಲೆಯು ಒಂದಕ್ಕೆರಡರಷ್ಟು ಹೆಚ್ಚಿದೆಯೆಂದೂ, ಪಾಕಿಸ್ತಾನದಿಂದ ಚಿನ್ನ ಬೆಳ್ಳಿಗಳನ್ನು ಭಾರತಕ್ಕೆ ಕದ್ದು ತಂದು ಅವಕ್ಕೆ ಬದಲು ವೀಳೆಯದೆಲೆಯನ್ನು ತೆಗೆದುಕೊಂಡು ಹೋಗುತ್ತಿರುವುದಾಗಿಯೂ ವರದಿಯಾಗಿದೆ

ಸಮುದ್ರದಲ್ಲಿ ೭೪ ದಿನಗಳು ಇದ್ದವರ ರಕ್ಷಣೆ

ಹಿಂದೂ ಸಾಗರದಲ್ಲಿ ೭೪ ದಿನಗಳ ಪರ್ಯಂತ ಅನ್ನಾಹಾರಗಳಿಲ್ಲದೆ ಒಂದು ದೋಣಿಯಲ್ಲಿ ಅಲೆಯುತ್ತಿದ್ದ ಇಬ್ಬರು ಬಾಲಕರನ್ನು ಇಟಲಿಯ ಎಣ್ಣೆ ಸಾಗಿಸುವ ಹಡಗೊಂದು ರಕ್ಷಿಸಿರುತ್ತದೆ ಮಾಹೆ ರೇವು ಬಳಿಯಿಂದ ಆ ಬಾಲಕರೂ ಮತ್ತು ಇನ್ನೂ ೮ ಜನರೂ ಮೋಟಾರು ದೋಣಿಯಲ್ಲಿ ಕಳೆದ ಫೆಬ್ರವರಿ ೧ ನೇ ತಾ|| ಸಮುದ್ರ ಪ್ರಯಾಣ ಮಾಡಿದ್ದರು. ಇತರ ಎಂಟು ಜನರು ಮಡಿದಿರುತ್ತಾರೆ. ಸಾಗರದಲ್ಲಿ ದೊರೆಯುವ ಮೀನುಗಳನ್ನು ಹಿಡಿದು ಅವುಗಳ ರಸವನ್ನು ಹೀರಿ ಬಾಯಾರಿಕೆಯನ್ನು ಹಿಂಗಿಸಿಕೊಳ್ಳುತ್ತಲೂ, ಒಣ ಮೀನುಗಳನ್ನು ಸೇವಿಸುತ್ತಲೂ ಈ ಬಾಲಕರು ಜೀವಿಸುತ್ತಿದ್ದರು

ಹರಿಕಥೆ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಆಂಡಾಳ್ ಮಂದಿರದಲ್ಲಿ ಶ್ರೀ ಹರಿನಾರಾಯಣ ದಾಸರು ಈ ಸಂಜೆ ೭ ಘಂಟೆಗೆ ಬಾಲ ಭಕ್ತ ಧ್ರುವ ಎಂಬ ಹರಿಕಥೆಯನ್ನು ಮಾಡುವರು.

ಯಳಂದೂರು ಜಹಗೀರಿ ರದ್ದಾಗಲೆಂದರೆ ಅಪಪ್ರಚಾರವೇ ?

ಯಳಂದೂರು ತಾಲ್ಲೂಕಿನ ಶಿವರಹಳ್ಳಿಯ ಶ್ರೀ ಕೆ ಪಿ. ಶಾಂತಮೂರ್ತಿಯವರು ಆ ತಾಲ್ಲೂಕಿನ ಸಂಬಂಧವಾಗಿ ತಾವು ಅಪಪ್ರಚಾರ ಮಾಡುತ್ತಿರುವುದಾಗಿ ಶ್ರೀಗಳು ಡಿ ಸೂರ್ಯನಾರಾಯಣರಾವ್ ಮತ್ತು ನಂಜಪ್ಪನವರು ಇತ್ತಿರುವ ಹೇಳಿಕೆಗಳಿಗೆ ಉತ್ತರವಿತ್ತು, ಜಹಗೀರಿಯು ರದ್ದಾಗಬೇಕೆಂದು ಕೋರುವುದು ಅಪಪ್ರಚಾರವಾಗುವುದಿಲ್ಲವೆಂದು ತಿಳಿಸಿರುತ್ತಾರೆ ಇತರ ಸರ್ಕಾರಿ ತಾಲ್ಲೂಕುಗಳ ದರ್ಜೆಗೆ ಆ ತಾಲ್ಲೂಕನ್ನೂ ಸೇರಿಸಬೇಕೆಂದು ಕೇಳುವುದು ಪ್ರಗತಿಯ ಭಾವನೆಯೆಂದು ಅವರು ತಿಳಿಸಿರುತ್ತಾರೆ ಸರ್ಕಾರದವರು ಇನಾಂ ರದ್ದಿಯಾತಿ ಮಸೂದೆಯಲ್ಲಿ ಜಹಗೀರಿಯ ರದ್ದನ್ನು ಸೇರಿಸಿರುವ ಬಗ್ಗೆ ಅವರು ತೃಪ್ತಿ ಸೂಚಿಸಿರುತ್ತಾರೆ ತಾಲ್ಲೂಕು ಕಾಂಗ್ರೆಸ್ಸಿನವರು ಇತರ ಪಕ್ಷಗಳ ಕಾರ್ಯಕರ್ತರಲ್ಲಿ ದೋಷಗಳನ್ನು ಎಣಿಸದಿರಲೆಂದ ಅವರು ಆಶಿಸಿರುತ್ತಾರೆ

ಸೂಯೆಜ್ ಪ್ರದೇಶದಿಂದ ಬ್ರಿಟಿಷ್ ಸೈನ್ಯಗಳು ವಾಪಸು ?

ಸೂಯೆಜ್ ಕಾಲುವೆ ಪ್ರದೇಶದಿಂದ ಬ್ರಿಟಿಷ್ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳಲು ಒಪ್ಪಿರುವುದಾಗಿ ಬ್ರಿಟನ್ನು ಈಜಿಪ್ಟಿಗೆ ತಿಳಿಸಿರುವುದೆಂದು ವರದಿಯಾಗಿದೆ

ಫುಟ್ ಬೋರ್ಡ್ ಪ್ರಯಾಣದಲ್ಲಿ ೫ ಜನರ ಮರಣ

ಕಳೆದ ಗುರುವಾರ ಬೊಂಬಾಯಿಯಲ್ಲಿ ಕ್ರೈಸ್ತ ಶತಮಾನೋತ್ಸವದ ಅಂಗವಾಗಿ ವಿಕ್ಟೋರಿಯಾ ಸಿಲ್ಪಾನದಲ್ಲಿ ದೀಪೋತ್ಸವವನ್ನು ನೋಡಲು ಹೋಗಿದ್ದ ಹಲವರು ರೈಲುಗಳಲ್ಲಿ ತಮ್ಮ ಸ್ಥಳಗಳಿಗೆ ಹಿಂದಿರುಗುತ್ತಿದ್ದಾಗ ಫುಟ್ ಬೋರ್ಡ್ ಮೇಲೆ ನಿಂತಿದ್ದವರ ಪೈಕಿ ೫ ಜನರು ಕ್ರಮವಾಗಿ ಸಿಗ್ನಲ್ ಕಂಬಕ್ಕೆ ತಗುಲಿ ಬಿದ್ದು ಮೃತಪಟ್ಟರೆಂದು ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಎಂ ಎಸ್. ಸುಬ್ಬುಲಕ್ಷ್ಮಿ, ರಾಜಾಜಿ. ಮಧ್ಯಾಹ್ನ ೧ ೪೦ ಪಾಶ್ಚಾತ್ಯ ಚಿತ್ರ ಸಂಗೀತ ಸಂಜೆ ೫ ೪೦ ಮತ್ತು ಬಿ, ಎಸ್ ಮೂರ್ತಿ ಪಿಟೀಲು ೬, ಗಾನ ವಿಹಾರ ೭ ಭಜನೆ ೭.೩೦ ಗೀತಾಂಜಲಿ ೭.೪೦ ಜಿ ರಾಮಕೃಷ್ಣ ಶೆಟ್ಟಿ ಕನ್ನಡದಲ್ಲಿ ಭಾಷಣ ೮ ೪೦ ಮತ್ತು ೯.೪೦ ಡಾ. ಕೆ ಸರೋಜಮ್ಮ ಸಂಗೀತ ೯.೧೫ ಇಂಗ್ಲಿಷ್ ಭಾಷಣ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ಹಳೆ ಧಾರಣೆ	ಹೊಸ
ಕಡಲೇಕಾಯಿ	[illegible]	[illegible]
ಹರಳುಬೀಜ	[illegible]	
ಹುಚ್ಚೆಳ್ಳು	[illegible]	
ಹೊಂಗೇಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	
ಮೆಣಸಿನ		
ಕಾಯಿ ಮಂಡಿಗೆ	[illegible]	
ಸೂರ್ಯಕಾಂತಿ	[illegible]	[illegible]
ಬೇಳೆಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ		
೧,೦೦೦ಕ್ಕೆ	[illegible]	[illegible]

MURPHY RADIOS
5 to 10 Valves
at Reduced Prices
Authorised Dealers
A B I D S,
Statue Square Mysore

ರಾಜಕಮಲ್ ಮೈಸೂರು
17-4-53ರಿಂದ ಅವೋಘ ಪ್ರಾರಂಭ
★ ಪ್ರತಿಜ್ಞೆ ★
ಅಥವಾ ತೌರುಮನೆ (ತೆಲುಗು)

ಪ್ರಭುದೇವಾ ಟಾಕೀಸ್
20-4-53ನೇ ಸೋಮವಾರದಿಂದ ಅವೋಘ 2ನೇ ವಾರ
ಅಪೂರ್ವ ಸಹೋದರರು
ಪ್ರತಿ ದಿನ ಮೂರು ಆಟಗಳು

SUMMER CLASSES
IN
Type-writing,
Short-hand &
Accountancy
Admissions for the above are being received between
7-10 A. M. and 5-7 P. M
on all working days at
THE CHAMPION METROPOLITAN COLLEGE OF COMMERCE,
Co-operators Home,
100 Feet Road Mysore
P. Subbaraya Sastry,
Principal
M S Puttanna,
Vice Principal

Edited, Printed and Published by A R. Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ
ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ
ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ನೂಲಿನ (ಫೋನ್ 446)
★ M. V. ಭೋಜಯ್ಯ
ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರೀಜಿ ನಂ. 792 ವಂದೇ ಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೩೦-೮-೧೯೫೬ [ಸಂಚಿಕೆ ೨೦೩

ಹುಬ್ಬಳ್ಳಿಯಲ್ಲಿ ಪ್ರದರ್ಶನ; ಪೋಲೀಸರಿಂದ ಗುಂಡು

ಹುಬ್ಬಳ್ಳಿ ಕಾಂಗ್ರೆಸ್ ಸಭೆ ಮೇಲೆ ಧಾಳಿ

ನಿಜಲಿಂಗಪ್ಪನವರಿಗೆ ಕಲ್ಲೇಟು

ಪೋಲೀಸರಿಂದ ಗುಂಡು : ೩ ಜನರಿಗೆ ಗಾಯ.

ಹುಬ್ಬಳ್ಳಿಯ ಟೌನ್‌ಹಾಲಿನಲ್ಲಿ ನೆನ್ನೆ ಬೆಳಿಗ್ಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಭೆಯು ಸೇರಿದ್ದಾಗ ಸುಮಾರು ೩೦ ಸಾವಿರ ಜನರು ಪ್ರದರ್ಶನ ನಡೆಸಿ, ಕಲ್ಲುಗಳನ್ನೆಸೆದರೆಂದೂ, ಕಾಂಗ್ರೆಸ್ಸಿನ ಒಂದು ಮೋಟಾರು ಕಾರಿಗೆ ಬೆಂಕಿಯನ್ನಿಟ್ಟರೆಂದೂ ವರದಿಯಾಗಿದೆ. ಬೆಂಕಿಯನ್ನಾರಿಸಲು ಬಂದ ಅಗ್ನಿಶಾಮಕ ಯಂತ್ರವನ್ನು ಆ ಸ್ಥಳಕ್ಕೆ ಬರದೆ ಜನರು ತಡೆಯಲು ಪೋಲೀಸರು ಗುಂಪಿನವರ ಮೇಲೆ ಲಾಠಿ ಪ್ರಹಾರ ಮಾಡಿ ವಿಫಲರಾದುದರಿಂದ ಗುಂಡು ಹಾರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರೆಂದು ಗೊತ್ತಾಗಿದೆ. ಸಂಜೆ ಜನರ ಗುಂಪು ಒಂದು ಪೋಲೀಸ್ ವ್ಯಾನಿಗೆ ಕಲ್ಲು ಹೊಡೆಯಲು, ಪೋಲೀಸರು ಮತ್ತೆ ಗುಂಡು ಹಾರಿಸಿದರು. ಗುಂಡಿನೇಟಿನಿಂದ ಮೂವರೂ, ಲಾಠಿ ಮತ್ತು ಕಲ್ಲುಗಳ ಹೊಡೆತದಿಂದ ೨೫ ಮಂದಿಯೂ ಗಾಯಗೊಂಡಿರುವರೆಂದು ಹೇಳಲಾಗಿದೆ. ನಗರದಲ್ಲಿ ೧೫ ದಿನಗಳ ಕಾಲ ಸಭೆ, ಮೆರವಣಿಗೆಗಳನ್ನೂ ಮತ್ತು ಆಯುಧ ದೊಣ್ಣೆಗಳನ್ನು ಹಿಡಿದು ತಿರುಗುವುದನ್ನೂ ನಿಷೇಧಿಸಲಾಗಿದೆ. ಪೆಟ್ಟು ಬಿದ್ದವರಲ್ಲಿ ಇಬ್ಬರು ಪೋಲೀಸಿನವರ ಸ್ಥಿತಿಯು ಕಳವಳಕರವಾಗಿರುವುದೆಂದು ಅಧಿಕಾರಿ ಪ್ರಕಟಣೆಯು ತಿಳಿಸಿರುತ್ತದೆ. ಶಂಕರಗೌಡರ ಉಪವಾಸವನ್ನು ಮುಕ್ತಾಯ ಮಾಡಿಸಿ, ಅವರ ಜೀವವನ್ನು ಉಳಿಸುವಂತೆ ಮಾಡುವುದೇ ಗುಂಪಿನ ಉದ್ದೇಶ್ಯವಾಗಿದ್ದಿತು.

ಕಲ್ಲಿನೇಟಿನಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೂ ಪೆಟ್ಟು ಬಿದ್ದಿರುವುದಾಗಿ ಗೊತ್ತಾಗಿದೆ.

ಶ್ರೀಗಳಾದ ಟಿ. ಆರ್. ನೆಸ್ವಿ ಮತ್ತು ಬಿ. ಎ. ಪಾಟೀಲರಿಗೂ, ಹುಬ್ಬಳ್ಳಿಯ ಮಾಮಲೇದಾರ್ ಆರ್. ಎಲ್. ಆರ್. ನಾಯಕ್, ಡಿ. ಎಸ್. ಪಿ. ಕಂಬಳಿ ಮತ್ತು ಸಬ್ ಇನ್ಸ್‌ಪೆಕ್ಟರ್ ಕಬ್ಬಾದ್‌ರವರಿಗೂ ಏಟು ಬಿದ್ದಿದೆ.

ಸುತ್ತಮುತ್ತಲ ಹಳ್ಳಿಗಳಿಂದ ಸಾವಿರಗಟ್ಟಲೆ ಹೊರಟು ಜನರು ಗಾಡಿಗಳಲ್ಲಿ ಬಂದು ಕಾಂಗ್ರೆಸ್ ಸಮಿತಿ ಸಭೆಗೆ ಪ್ರವೇಶಿಸಿ, ಸಭೆಯನ್ನು ನಡೆಯಗೊಡದಂತೆ ಮಾಡಿದರು. ಬೀದಿಗಳಲ್ಲಿ ಕಪ್ಪು ಬಾವುಟಗಳ ಪ್ರದರ್ಶನವನ್ನು ನಡೆಸಲಾಯಿತು.

ಏಕನ್ಯಾಥ್ಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಜಿ. ಪಿ. ಹಳ್ಳಿಕೇರಿಯವರ ಕಾರ್ಯಕಾರಿ ಸಮಿತಿಯವರು ತೆಗೆದುಕೊಂಡಿದ್ದ ನಿರ್ಣಯವನ್ನು ಉಪವಾಸ ಮಾಡುತ್ತಿದ್ದ ಶ್ರೀ ಎಸ್. ಜಿ. ಪಾಟೀಲರಿಗೆ ತೋರಿಸಲು ಕಾರಿನಲ್ಲಿ ಹೋಗುತ್ತಿದ್ದಾಗ ಜನರು ಅವರನ್ನು ಅಡ್ಡಗಟ್ಟಿದರು. ಅವರು ಬಸ್ಸಿನಿಂದರ ಮೇಲೆ ಹತ್ತಿ ನಿರ್ಣಯದ ಅಂಶಗಳನ್ನು ತಿಳಿಸಿದ ಮೇಲೆ ಅವರನ್ನು ಮುಂದೆ ಹೋಗಗೊಟ್ಟರು. ನಿರ್ಣಯವನ್ನು ಪ್ರದೇಶ ಸಭೆಯು ಒಪ್ಪುವುದಕ್ಕೆ ಸಾಧ್ಯವಾಗದಂತೆ ಜನರು ಸಭೆಯನ್ನು ಬರಖಾಸ್ತು ಮಾ

ಶಂಕರಗೌಡರ ಉಪವಾಸ ಮುಕ್ತಾಯ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನಿರ್ಣಯದ ಪರಿಣಾಮ

ಈ ವರ್ಷಾಂತ್ಯದೊಳಗೆ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸುವಂತೆ ಸಾಧಕವಾಗುವಂತಹ ಘೋಷಣೆಯನ್ನು ಆಕ್ಟೋಬರೊಳಗೆ ಹೊರಡಿಸಲು ಕೇಂದ್ರ ಸರ್ಕಾರವನ್ನು ಒತ್ತಾಯ ಪಡಿಸುವ ನಿರ್ಣಯವು ನೆನ್ನೆ ಹುಬ್ಬಳ್ಳಿಯಲ್ಲಿ ನಡೆದ ಕೆ. ಪಿ. ಸಿ. ಸಿ. ಸಭೆಯಲ್ಲಿ ಅಂಗೀಕಾರವಾಗಿ ಅದರ ಪ್ರತಿಯೊಂದನ್ನು, ಉಪವಾಸ ಕೈಗೊಂಡಿರುವ ಶ್ರೀ ಶಂಕರಗೌಡ ಪಾಟೀಲರಿಗೆ ಕೊಟ್ಟು, ಅವರು ಉಪವಾಸವನ್ನು ನಿಲ್ಲಿಸುವಂತೆ ಕೋರಲಾಯಿತು. ತರುವಾಯ ಅವರು ಉಪವಾಸವನ್ನು ಮುಕ್ತಾಯ ಮಾಡಿದರು. ಶ್ರೀ ಗೌಡರು ೩ ವಾರಗಳ ಕಾಲ ಉಪವಾಸ ಮಾಡಿ ಬಹಳ ನಿಶ್ಶಕ್ತರಾಗಿ, ನೆನ್ನೆ ಅವರ ದೇಹಸ್ಥಿತಿ ವಿಷಮಿಸಿದ್ದಿತು.

ಪಶ್ಚಿಮ ಬಂಗಾಳದಲ್ಲಿ ೯೮ ಜನ ಹಳ್ಳಿಗರ ಬಂಧನ

ಪಶ್ಚಿಮ ಬಂಗಾಳದ ಮೊಗ್ರಹಾಟ್ ಎಂಬಲ್ಲಿ ಕಳೆದ ೧೦ ನೇ ತಾ|| ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಸಂಬಂಧವಾಗಿ ೯೮ ಜನರನ್ನು ದಸ್ತಗಿರಿ ಮಾಡಲಾಗಿದೆ. ಆ ದಿನ ಒಬ್ಬ ಹಿಂದೂ ವಿವಾಹಿತ ಯುವತಿಯು ದಾನೆಪೂ ರೈಲ್ವೆ ನಿಲ್ದಾಣದಿಂದ ಮೊಗ್ರಹಾಟ್ ಎಂಬಲ್ಲಿಗೆ ಬರುತ್ತಿದ್ದಾಗ ೪ ಜನ ಮುಸಲ್ಮಾನರು ಆಕೆಯ ಮೇಲೆ ಅತ್ಯಾಚಾರ ನಡೆಸಿದರೆಂದೂ, ಇದರಿಂದ ಕೋಪಗೊಂಡ ಹಿಂದುಗಳು ಹಲವು ಮುಸ್ಲಿಮರ ಗುಡಿಸಲುಗಳಿಗೆ ಬೆಂಕಿ ಹಚ್ಚಿದರೆಂದೂ ಹೇಳಲಾಗಿದೆ. ೩೩ ಗುಡಿಸಲುಗಳು ಸುಟ್ಟುಹೋಗಿವೆ. ಅತ್ಯಾಚಾರಿಗಳು ಪರಾರಿಯಾಗಿರುತ್ತಾರೆ.

ಶಿಕ್ಷಿತರು

ಪಾಟೀಲರು ಉಪವಾಸ ಮುಕ್ತಾಯ ಮಾಡಿದ್ದರೂ ಸಹ ಜನರು ಸುಮ್ಮನಾಗಲಿಲ್ಲ. ಕೆಲವು ಕಡೆ ಬೆಂಕಿ ಹೊತ್ತಿಸುವ ಪ್ರಸಂಗಗಳು ನಡೆದುದಾಗಿ ಹೇಳಲಾಗಿದೆ. ಗೌಡರ ಉಪವಾಸದಲ್ಲಿ ಸಹಾನುಭೂತಿ ತೋರಿಸಲು ಊರಿನ ಅನೇಕ ಅಂಗಡಿಗಳನ್ನು ಮುಚ್ಚಲಾಗಿದ್ದಿತು.

ರೇವಣ್ಣನವರ ಆಮರಣಾಂತ ಉಪವಾಸ

ಮೈಸೂರು ೩೦

ಕಪಿಲಾ ಟೆಕ್ಸ್‌ಟೈಲ್ಸ್ ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ರೇವಣ್ಣನವರು ಆಹಾರ ಧಾನ್ಯದ ಬೆಲೆ ಏರಿಕೆಯ ವಿರುದ್ಧವಾಗಿ ಈ ದಿನ ಬೆಳಿಗ್ಗೆ ೬ ಘಂಟೆಯಿಂದ ಟೌನ್‌ಹಾಲಿನಲ್ಲಿ ಆಮರಣಾಂತ ಉಪವಾಸವನ್ನು ಆರಂಭಿಸಿರುತ್ತಾರೆ. ಅವರು ಈ ವಿಷಯವಾಗಿ ಮೊದಲೇ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಉಪವಾಸವನ್ನು ಆರಂಭಿಸಿರುವ ವಿಷಯವನ್ನು ಮುಖ್ಯ ಮಂತ್ರಿಯವರ ಗಮನಕ್ಕೆ ತಂದಿರುವರು.

ಜಲತರಂಗ್

ರಾಜಧಾನಿಯ ಲಕ್ಷ್ಮೀಪುರದ ಸೀತಾರಾಮ ಮಂದಿರದ ಶ್ರೀ ಸೀತಾರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೬|| ಗಂಟೆಗೆ ವಿದ್ವಾನ್ ಬಿ. ಪಿ. ವೇಣುಗೋಪಾಲ್‌ರವರ ಜಲತರಂಗ್ ವಿದ್ವಾನ್ ಮುತ್ತಣ್ಣನವರ ಪಿಟೀಲು ಮತ್ತು ವಿ|| ಶೇಷಪ್ಪನವರ ಮೃದಂಗ ಕಛೇರಿಯು ಏರ್ಪಾಡಾಗಿದೆ.

ಕೆಟ್ಟ ನಡತೆಗಾಗಿ ಸಬ್ ಇನ್ಸ್‌ಪೆಕ್ಟರರ ಪದಕ ರದ್ದು

ಮದ್ರಾಸಿನ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಪ್ರಿನ್ಸ್ ಜಾರ್ಜ್ ಜಯರಾಜ್ ಎಂಬುವರಿಗೆ ಧೈರ್ಯ ಸಾಹಸಗಳಿಗಾಗಿ ಎರಡು ವರ್ಷಗಳ ಹಿಂದೆ ಭಾರತ ಸರ್ಕಾರದವರು ಕೊಟ್ಟಿದ್ದ ಪೋಲೀಸು ಪದಕವನ್ನು, ಅವರ ಕೆಟ್ಟ ನಡತೆಗಾಗಿ ಈಗ ರದ್ದು ಮಾಡಲಾಗಿದೆ.

ಬಿಹಾರಿನಲ್ಲಿ ಸರ್ಕಾರಿ ಸಿಬ್ಬಂದಿ ಖೋತಾ

ಬಿಹಾರಿನಲ್ಲಿ ೨೭ ಗೆಜೆಟೆಡ್ ಮತ್ತು ೧,೫೦೦ ನಾನ್ ಗೆಜೆಟೆಡ್ ನೌಕರರನ್ನು ಖೋತಾ ಮಾಡಲಾಗಿದೆ. ಇದರಿಂದ ಸರ್ಕಾರಕ್ಕೆ ಕಳೆದ ವರ್ಷ ೪ ಲಕ್ಷ ರೂ. ಉಳಿತಾಯವಾಗಿ ಈ ವರ್ಷ ೧೭ ಲಕ್ಷ ರೂ. ವಿಗುವುದೆಂದು ಹೇಳಲಾಗಿದೆ.

○ ಪುರಾತನವೂ, ಇತಿಹಾಸ ಪ್ರಸಿದ್ಧವೂ ಆದ ಚಿತ್ರದುರ್ಗದ ಕೋಟೆ ಕೊತ್ತಲುಗಳ ರಕ್ಷಣೆಯನ್ನು ಕೇಂದ್ರ ಸರ್ಕಾರವು ವಹಿಸಿಕೊಂಡಿದೆಯೆಂದು ಗೊತ್ತಾಗಿದೆ.

ಎಲ್ಲಾ ಕಡೆಯೂ ರೇಷನ್ ರದ್ದು

ಫೇರ್ ಪ್ರೈಸ್ ಡಿಪೋಗಳು ಮುಂದುವರಿಯುವುವು

ಮೈಸೂರು ೩೦

ಈ ದಿನ ಮಂತ್ರಿಮಂಡಲದ ಸಭೆಯು ಟೀ ಪ್ಯಾಲೇಸ್ ಭವನದಲ್ಲಿ ಸೇರಿ ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದ ಗಣಿ ಪ್ರದೇಶಗಳಲ್ಲಿಯೂ ಮೇ ೧ ನೇ ತಾ|| ನಿಂದ ರೇಷನ್ ಪದ್ಧತಿಯನ್ನು ರದ್ದು ಮಾಡುವಂತೆ ನಿರ್ಧರಿಸಿರುತ್ತದೆ. ಫೇರ್ ಪ್ರೈಸ್ ಡಿಪೋಗಳು ಮುಂದುವರಿಯುವುವು.

ಭಾರತದ ರೈಲ್ವೆ ಸಂಘಗಳ ಐಕ್ಯ

ಭಾರತದ ರೈಲ್ವೆ ನೌಕರರ ಎರಡು ಪ್ರಮುಖ ಸಂಘಗಳಾದ ಅ|| ಭಾ|| ರೈಲ್ವೆ ಮೆನ್ಸ್ ಫೆಡರೇಷನ್ ಮತ್ತು ಇಂಡಿಯನ್ ನ್ಯಾಷನಲ್ ರೈಲ್ವೆ ವರ್ಕರ್ಸ್ ಫೆಡರೇಷನ್ ಎಂಬುವು ಐಕ್ಯವಾಗಿ ಈಗ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ರೈಲ್ವೆ ಮೆನ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡಿವೆ. ಜೈಪ್ರಕಾಶ ನಾರಾಯಣ್, ಹರಿಹರನಾಥ ಶಾಸ್ತ್ರಿ, ಗುರುಸ್ವಾಮಿ, ಖಂಡೂಭಾಯಿ ದೇಸಾಯಿ ಇವರುಗಳಲ್ಲದೆ ಇನ್ನೂ ೩೦ ಜನರುಳ್ಳ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಗಿದೆ. ಅ|| ಭಾ|| ರೈಲ್ವೆ ಫೆಡರೇಷನ್ ಸಂಸ್ಥೆಯ ಸಾಧಾರಣ ಮಂಡಲಿಯು ಅಧಿವೇಶನವು ಮೈಸೂರಿನಲ್ಲಿ ಜೂನ್ ೧೫ ನೇ ತಾ|| ಸೇರಿ ಐಕ್ಯವಾದ ಬಗ್ಗೆ ತನ್ನ ಸಮ್ಮತಿಯನ್ನು ಸೂಚಿಸಲಿದೆ.

ಒಳ ಚರಂಡಿಯಲ್ಲಿ ಮುಳುಗಿದ್ದವನು ಪ್ರವಾಹಕ್ಕೆ ಆಹುತಿ

ಬೆಂಗಳೂರು ೩೦

ಮೊನ್ನೆ ದಿನ ಇಲ್ಲಿ ಬಲವಾದ ಮಳೆ ಬರುವಾಗ ಒಬ್ಬ ಮನುಷ್ಯನು ಒಳ ಚರಂಡಿಯೊಳಗೆ ಮಲಗಿ ನಿದ್ರಿಸುತ್ತಿದ್ದನೆಂದೂ, ಪ್ರವಾಹವು ಚರಂಡಿಯೊಳಗೆ ನುಗ್ಗಿ ಅವನು ಕೊಚ್ಚಿ ಹೋದನೆಂದೂ, ಅವನ ದೇಹವು ಹಾಳೆ ಕೆರೆಯಲ್ಲಿ ತೇಲುತ್ತಿದ್ದಿತೆಂದೂ ವರದಿಯಾಗಿದೆ.

ಆಸ್ಪತ್ರೆ ರೋಗಿಗಳಿಬ್ಬರ ಉಪವಾಸ

ಬೆಂಗಳೂರಿನ ಸರ್ಕಾರಿ ಟಿ. ಬಿ. ಸ್ಯಾನಿಟೋರಿಯಂ ಆಸ್ಪತ್ರೆಯಲ್ಲಿರುವ ಎಸ್. ಎಂ. ಪಾಲ್ ಮತ್ತು ಕೆ. ಎಂ. ಮುನಿಯಪ್ಪ ಎಂಬ ಇಬ್ಬರು ರೋಗಿಗಳು, ಜನರಲ್ ವಾರ್ಡುಗಳಲ್ಲಿ ರೋಗಿಗಳಿಗೆ ಕೊಡುತ್ತಿರುವ ಆಹಾರದ ಪ್ರಮಾಣವನ್ನು ಖೋತಾ ಮಾಡಿರುವ ಬಗ್ಗೆ ಪ್ರತಿಭಟನೆ ಸೂಚಿಸಲು ಬರುವ ತಿಂಗಳು ೧ ನೇ ತಾರೀಖಿನಿಂದ ಉಪವಾಸ ಮಾಡಲು ನಿರ್ಧರಿಸಿರುವುದಾಗಿ ವರದಿಯಾಗಿದೆ. ಶ್ರೀ ಎಸ್. ಎಂ. ಪಾಲ್‌ರವರು ಪ್ರಜಾ ಸಮಾಜವಾದಿ ಯುವಕರ ಸಂಘದ ಅಧ್ಯಕ್ಷರಾಗಿರುತ್ತಾರೆ.

ರಷ್ಯದಲ್ಲಿ ಮತ್ತೊಬ್ಬ ಮಂತ್ರಿಯ ದಸ್ತಗಿರಿ

ರಷ್ಯದ ಜಾರ್ಜಿಯಾ ಸಂಸ್ಥಾನದ ೬ ಭೂತಪೂರ್ವ ಮಂತ್ರಿ ರುಕಾಡ್ಜೆ ಎಂಬುವರನ್ನು, ಇನ್ನಿಬ್ಬರು ಕಮ್ಯೂನಿಸ್ಟ್ ಮುಖಂಡರನ್ನು ದಸ್ತಗಿರಿ ಮಾಡಲಾಗಿದೆ.

ಆಚಾರ್ಯರ ನಿಷ್ಠೆಯೇ ಮೋಕ್ಷಕ್ಕೆ ಸುಲಭೋಪಾಯ

ಶ್ರೀ ಶ್ರೀ ಪರಕಾಲಸ್ವಾಮಿಗಳವರ ಉಪದೇಶ

ಮೈಸೂರು ೧೮

ನಿನ್ನೆ ನಡೆದ ಶ್ರೀ ರಾಮಾನುಜಾಚಾರ್ಯರ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಶ್ರೀ ಶ್ರೀ ಪರಕಾಲಸ್ವಾಮಿಗಳವರು [illegible] ಉಪದೇಶ ಭಾಷಣವನ್ನು ದಯಪಾಲಿಸಿದರು. ಉಪದೇಶದ ಸಾರಾಂಶ ಈ ರೀತಿ ಇದೆ

ದೇವರು ಇದ್ದಾನೆ ದೇವರ ಇಲ್ಲ ಎಂಬ ವಾದವು ನಮ್ಮ ದೇಶದಲ್ಲಿ ಬಹಳ ಕಾಲದಿಂದ ನಡೆದು ಬಂದಿದೆ. ವೇದಗಳಲ್ಲಿನ ವಿಷಯಗಳಲ್ಲಿ ವಿಶ್ವಾಸವಿಲ್ಲದವರು ಇದರಲ್ಲಿ ಅನೇಕರು ಉದ್ಭವಿಸಿದರು. ಅದೇ ಕಾಲದಲ್ಲಿ [illegible] ದೇವರಿಲ್ಲವೆಂದು ವಾದಿಸುವ ಪಕ್ಷದವರು [illegible] ಸ್ವಲ್ಪ ವ್ಯಕ್ತಿ ಪ್ರಾಯೊಂದು ಜೀವನೂ [illegible] ಕಲ್ಪನೆಗಳನ್ನು ಪ್ರಸಾರ [illegible] ಶಂಕರಾಚಾರ್ಯರಿಂದ [illegible] ಕೋಳಿದು ಸ್ವಯಂಪ್ರಕಾಶ [illegible]

ನೀವು ಪ್ರಪಂಚವನ್ನು ನೋಡುವವರಿಗಲ್ಲಿ ದೇವರ ಇದ್ದೇ ಇರುವನೆಂಬ [illegible] ಸಂಶಯ ನಿಶ್ಚಯವೃತ್ತಿಯಲ್ಲಿ [illegible] ಶಕ್ತಿಯಾಗಲೇ [illegible] ಪರ ವಿಚಾರ [illegible] ಇವರಲ್ಲಿ [illegible] ಪರಂಪರೆ [illegible] ಮಧ್ವಾಚಾರ್ಯರ [illegible] ಮಾತ್ರದಿಂದ [illegible] ಸ್ಥಾಪಿಸಿದ್ದಾರೆ

ಶಂಕರಾಚಾರ್ಯರು ಪರಿಗಣಿಸಿದ್ದು ಸಗುಣ ಬ್ರಹ್ಮವನ್ನು ಒಪ್ಪಿಕೊಂಡಿರುವರು. ಶಂಕರಾಚಾರ್ಯರ ಪರಂಪರೆಯವರಾದ [illegible] ನಿರ್ಗುಣ [illegible] ಒಪ್ಪುವರು. ರಾಮಾನುಜಾಚಾರ್ಯರು ಸಗುಣವೇ ಪರಮವೆಂದು ಸ್ಥಾಪಿಸಿದ್ದಾರೆ. ಮಧ್ವಾಚಾರ್ಯರೂ ಸಗುಣ [illegible] ವಾದವನ್ನೇ ಸ್ಥಿರಪಡಿಸಿದ್ದಾರೆ

ಶ್ರೀ ರಾಮಾನುಜಾಚಾರ್ಯರು ಸಿದ್ಧಾಂತ ಮಾಡಿರುವ ವಿಶಿಷ್ಟಾದ್ವೈತದ ಪ್ರಕಾರ ಸಮಸ್ತ ಜೀವಕೋಟಿಗೂ ಮೋಕ್ಷವಾಗಿ [illegible] ಗುಣಗಳ [illegible] ಭಗವಂತನಲ್ಲಿ [illegible] ಪ್ರತ್ಯಕ್ಷೀಕರಿಸು (ಯಾವ [illegible]) [illegible] ಮೋಕ್ಷವನ್ನು [illegible] ಅವರಿಗೆ [illegible] ಸ್ವಾಮಿಗಳವರು [illegible] ಸಂಕಲ್ಪ [illegible] ಶ್ರೀನಿವಾಸ [illegible] ಬಹುದು [illegible] ಶ್ರೀ [illegible] ಅವನ ಶರಣ ಹೊಕ್ಕು [illegible] ಅವರ ಪಾದದಲ್ಲಿ ಸಮರ್ಪಿಸಿದರೆ ಮೋಕ್ಷಕ್ಕೆ ದಾರಿ ಮಾಡಿಕೊಳ್ಳುವನು. ಇದಕ್ಕೆ ಪ್ರಪತ್ತಿಯೆಂದು ಹೆಸರು. ಇದು ಅವರವರೆಂಬ ವ್ಯತ್ಯಾಸವಿಲ್ಲದೆ ಸರ್ವ ಮಾನವ ಕೋಟಿಗೂ ಸುಲಭ ಸಾಧ್ಯವಾದ ಮೋಕ್ಷೋಪಾಯ

ಆಸ್ಪತ್ರೆ ಕಟ್ಟಡದ ಆರಂಭೋತ್ಸವ

ಮೈಸೂರು ೧೮

ಕೃಷ್ಣರಾಜನಗರ ತಾಲ್ಲೂಕು ಗಂಧನಹಳ್ಳಿಯಲ್ಲಿ ಕರಿಲಕ್ಕೇಗೌಡರ ನೆನಪಿನಲ್ಲಿ ಅವರ ಮಕ್ಕಳ ಶ್ರೀ ಜವರೇಗೌಡರು ಧರ್ಮಾರ್ಥವಾಗಿ ಕಟ್ಟಿಸಿರುವ ಆಸ್ಪತ್ರೆ ಕಟ್ಟಡದ ಆರಂಭೋತ್ಸವವ ಮೊನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರು [illegible] ಸಿದರು

ಕಾಂಗ್ರೆಸ್ ಅಧ್ಯಕ್ಷರಿಗೂ, ಮಾಜಿ ಮಂತ್ರಿ ಶ್ರೀ ಟಿ ಮರಿಯಪ್ಪನವರಿಗೂ ಮತ್ತು ಶ್ರೀ ಜವರೇಗೌಡರಿಗೂ ಗ್ರಾಮಸ್ಥರು ಬಿನ್ನವತ್ತಳೆಗಳನ್ನು ಅರ್ಪಿಸಿದರು

ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಮಾತನಾಡಿ, ರೋಗ ನಿವಾರಣೆಗೆ ಸರ್ಕಾರ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಪಂಚಾಯಿತಿಗಳು [illegible] ಗಳನ್ನು [illegible] ಪ್ರಾಥಮಿಕ ಆಸ್ಪತ್ರೆಗಳ ಬಗ್ಗೆ ಇರುವ [illegible] ಹೆಚ್ಚು ಪ್ರೋತ್ಸಾಹವು [illegible] ತಿಳಿಸಿದರು

ಅಧ್ಯಕ್ಷರು ಮಾತನಾಡಿ ಆಯುರ್ವೇದಕ್ಕೆ ಹೆಚ್ಚಿನ ಪ್ರೋತ್ಸಾಹ ಅಗತ್ಯವೆಂದು ಸೂಚಿಸಿದರು. ಶ್ರೀ ಟಿ ಮರಿಯಪ್ಪನವರೂ, ಶ್ರೀ ಎಲ್ ಚನ್ನಯ್ಯನವರೂ ಸೂಕ್ತ ಹಿತೋಕ್ತಿಗಳನ್ನು ನುಡಿದರು

ನೌಕರಿಗೆ ಸೇರಲು ಪದವಿ ಅವಶ್ಯಕವಿಲ್ಲ

ಹಲವು ವಿಶೇಷ ರೀತಿಯ ಹುದ್ದೆಗಳನ್ನು ಬಿಟ್ಟು ಸಿವಿಲ್ ಸರ್ವಿಸ್ ನೌಕರಿಗೆ ಜನರನ್ನು ಸೇರಿಸಿಕೊಳ್ಳಲು ಪದವಿಗಳ [illegible] ಇರಬೇಕಾದ [illegible] ವಿಷಯವನ್ನು [illegible] ಕೇಂದ್ರ [illegible] ದ್ದರವರು ತಿಳಿಸಿರುತ್ತಾರೆ

ಉತ್ತಮ ಗೊಬ್ಬರದ ಸರಬರಾಜು

ರೈತರ [illegible] ಉಪಯೋಗಕ್ಕಾಗಿ ಉತ್ತಮವಾದ ಗೊಬ್ಬರವನ್ನು ಒದಗಿಸುವ ಬಗ್ಗೆ ಸರ್ಕಾರದವರು ಯೋಜನೆಯನ್ನು ಸೂಚಿಸಿ, ಗೊಬ್ಬರಕ್ಕೆ ಸೇರಿಸುವ ಪದಾರ್ಥಗಳ ಪ್ರಮಾಣವನ್ನು ನಿಗದಿ ಮಾಡಿರುವುದಲ್ಲದೆ ಅದರ ಬೆಲೆಯನ್ನೂ ಸಹ ಗೊತ್ತುಪಡಿಸಿರುತ್ತಾರೆ

ಮೂಗೂರು ಆಸ್ಪತ್ರೆಗೆ ೨೦೦೦ ರೂ ದಾನ

ಟಿ ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದಲ್ಲಿ ಆಸ್ಪತ್ರೆಯೊಂದರ ನಿರ್ಮಾಣಕ್ಕಾಗಿ ಸಾಹುಕಾರ್ ಬೋಗನಂಜಪ್ಪನವರು ೨೦೦೦ ರೂಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ಮಾಂಸದ ಸೊಪ್ಪು ಕಿತ್ತುದಕ್ಕೆ ಶಿಕ್ಷೆ

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಒಂದು ಹೂವಿನ ಗಿಡವನ್ನು ಕಿತ್ತುದಕ್ಕಾಗಿ ಕಾಳಿಯಪ್ಪ ಎಂಬುವನಿಗೆ ಬೆಂಗಳೂರಿನ ನಗರ ನ್ಯಾಯಾಧೀಶರು [illegible] ಜುಲ್ಮಾನೆ [illegible] ವಿಧಿಸಿದ್ದಾರೆ

ಮಹಾರಾಷ್ಟ್ರದಲ್ಲಿ ನೆಹರೂರವರ ಪ್ರವಾಸ

ಪ್ರಧಾನಿ ನೆಹರೂರವರು ಇದೇ ೨೮ ನೇ ತಾರೀಕಿನಿಂದ ಮಹಾರಾಷ್ಟ್ರದ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಒಂದು ವಾರದ ಕಾಲ ಪ್ರವಾಸವನ್ನು ಕೈಗೊಳ್ಳುವರು. ಅವರು ಬೆಳಗಾಂ, ರತ್ನಗಿರಿ, [illegible] ಸತಾರ, ಕೊಲ್ಹಾಪುರ, ಅಹಮದ್‌ನಗರ ಮತ್ತು ಔರಂಗಾಬಾದ್ ಜಿಲ್ಲೆಗಳಿಗೆ ಭೇಟಿ ಕೊಡುವರು

ಪಾನ ನಿರೋಧದಿಂದ ಅನೇಕರಿಗೆ ನಿರುದ್ಯೋಗ

ಬೊಂಬಾಯಿ ಸಂಸ್ಥಾನದಲ್ಲೆಲ್ಲಾ ಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತಂದಿರುವುದರ ಪರಿಣಾಮವಾಗಿ ಸುಮಾರು ೧೫,೬೦೦ ಮಂದಿಗೆ ನಿರುದ್ಯೋಗವುಂಟಾಗಿರುವುದಾಗಿ ವರದಿಯಾಗಿದೆ

ಕಣ್ಣು ಕಟ್ಟಿಕೊಂಡು ಮೋಟಾರು ಸೈಕಲ್ ಸವಾರಿ

ನಾಗಪುರದ ಜನಸಂದಣಿ ಇರುವ ಬೀದಿಗಳಲ್ಲೆಲ್ಲಾ ಕಲ್ಕತ್ತೆಯ ದೇವ ಕುಮಾರ್ ಎಂಬ ಯುಕ್ಲಿನೆಗಾರನು ಕೆಲವು ದಿನಗಳ ಹಿಂದೆ ಕಣ್ಣು ಕಟ್ಟಿಸಿಕೊಂಡು ವೇಗವಾಗಿ ಮೋಟಾರು ಸೈಕಲ್ ಸವಾರಿ ಮಾಡಿದನೆಂದು ಹೇಳಲಾಗಿದೆ. ಅಲ್ಲಿನ ಮೇಯರರೂ, ಇತರರೂ ಅವನ ಸಾಹಸವನ್ನು ನೋಡಿದರು. ಹಿಟ್ಟಿನ ಗೋಂದನ್ನು ಮಾಡಿ, ಅದನ್ನು ಬಳಿದ ಬಟ್ಟೆ, ಹತ್ತಿ ಇತ್ಯಾದಿಯನ್ನು [illegible] ಅವನ ಕಣ್ಣಿಗೆ ಕಟ್ಟಲಾಗಿತ್ತು

ಕಥಾಲೋಕ

[illegible] ರ್ಣಾಟಕ ಪಬ್ಲಿಕೇಷನ್ಸ್ [illegible] ಅವರ [illegible] ಸಂಪಾದಕತ್ವದಲ್ಲಿ [illegible] ಕಥಾಲೋಕ ಎಂಬ [illegible] ಪತ್ರಿಕೆಯ ೭ ಲ ನೇ ಸಂಚಿಕೆಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿರುತ್ತೇವೆ. ಇದರ ಬೆಲೆ ೦-೪-೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩ [illegible] ಮಂಗಳವಾದ್ಯ, [illegible] ವಾರ್ತೆಗಳು [illegible] ಸಂಜೆ [illegible] ಕಾಂತರಾಜು [illegible] ಗೀತ [illegible] ಕಾರ್ಯಕ್ರಮ [illegible] ಪ್ರೊ [illegible] ವಿಚಾರ ವೇದಿಕೆ [illegible] ಇಂಗ್ಲೀಷ್ ಭಾಷಣ [illegible] ಗಾನಾಮೃತ

ಕಲಾವಿದರಿಗೆ ಪ್ರಯಾಣದ ರಿಯಾಯಿತಿ

ನಾಟಕ, ನೃತ್ಯ, ಸರ್ಕಸ್, ಸಂಗೀತ ಮುಂತಾದ ಕಲೆಗಳಿಗೆ ಸಂಬಂಧಿಸಿದ ನಟನಟಿಯರು [illegible] ಜನರಿಗೆ [illegible] ಇಲ್ಲದಂತೆ ಎಲ್ಲಿಯಾದರೂ ಹೋಗಿ ಸಾರ್ವಜನಿಕವಾಗಿ ಸಮಾರಂಭಗಳನ್ನು ನಡೆಸುತ್ತಿದ್ದರೆ ಅಂತಹವರುಗಳಿಗೆ ರೈಲ್ವೆ ಪ್ರಯಾಣದ ದರದಲ್ಲಿ ರಿಯಾಯಿತಿಯನ್ನು ತೋರಿಸಲು ಭಾರತದ ರೈಲ್ವೆಯವರು ನಿರ್ಧರಿಸಿರುತ್ತಾರೆ

ಮದ್ದುಗುಂಡು ಕಾರ್ಖಾನೆಯ ನೌಕರರ ಖೋತಾ

ಭಾರತ ಸರ್ಕಾರದ ಮದ್ದು ಗುಂಡು ಕಾರ್ಖಾನೆಗಳಲ್ಲಿ ಹೆಚ್ಚಾಗಿರುವ [illegible] ಯನ್ನು ಮಿತವ್ಯಯದ ದೃಷ್ಟಿಯಿಂದ [illegible] ಲಾಗುವುದೆಂದು ಹೇಳಲಾಗಿದೆ. [illegible] ಲ್ಪಿರದಲ್ಲಿರುವ ಹಲವು ಕೆಲಸಗಾರರು [illegible] ಪ್ರತಿಭಟಿಸಲು ಉಪವಾಸ [illegible] ಹೂಡುವುದಾಗಿ ನಿರ್ಧರಿಸಿರುತ್ತಾರೆ

ಮಹಿಳಾ ಸ್ಯಾಂಡೋವಿನ ಅದ್ಭುತ ಶಕ್ತಿ

ಇಂಗ್ಲೆಂಡಿನ ಸಸೆಕ್ಸ್ ಪ್ರಾಂತದ ಬ್ಯಾರಿ ಎಂಬ ಹಳ್ಳಿಯ ೨೦ ವರ್ಷದ ಆಲೀಸ್ ಫ್ಲೋರೆನ್ಸ್ ಎಂಬ ಸ್ತ್ರೀಯು ಗಂಡಸರನ್ನು ಸೋಲಿಸುವ ಶಕ್ತಿಯುಳ್ಳವಳಾಗಿರುವಳೆಂದು ಹೇಳಲಾಗಿದೆ. ಆಕೆಯು ೬ ಅಡಿ ಎತ್ತರವಿರುತ್ತಾಳೆ. [illegible] ಅಂಗುಲ ದಪ್ಪವಿರುವ ಪುಸ್ತಕವನ್ನು ನಿರಾಯಾಸವಾಗಿ ಹರಿದುಹಾಕಬಲ್ಲಳು. ಒಂದು ಅಂಗುಲದ ಕಬ್ಬಿಣದ ಸಲಾಕಿಯನ್ನು ಸುಲಭವಾಗಿ ಬಗ್ಗಿಸುವ ಶಕ್ತಿ ಆಕೆಗಿದೆ. [illegible] ಉದ್ದದ ಮೊಳೆಗಳನ್ನು ಬೆರಳುಗಳಿಂದಲೇ ಮುರಿಯಬಲ್ಲಳು. ತನ್ನ ಶರೀರಾಕೃತಿಯನ್ನು ಎರಡು ವಿಭಾಗ ಮಾಡಿ ಒಂದೊಂದು ಭಾಗಕ್ಕೆ [illegible] ಪೌಂಡಿನಷ್ಟು ಭಾರದ ವಸ್ತುವನ್ನು ಕಟ್ಟಿ ನಿರಾಯಾಸವಾಗಿ ಎತ್ತಲು ಆಕೆಗೆ ಸಾಧ್ಯವಾಗಿದೆ

BRAND NEW
FOLDING CHAIRS
FOR SALE
Enquire at —
A B I D S,
Statue Square, Mysore

Edited, Printed and Published by A. R. Nagarajan at Sadhvi Press, D Subbiah Road, Mysore

ಹರಾಜು ಇಸ್ತಿಹಾರ್

ಚಾಲ್ತಿ ಏಪ್ರಿಲ್ ಮಾಹೆ ತಾ|| 25 ನೇ ಶನಿವಾರ ಬೆಳಿಗ್ಗೆ 10 ಘಂಟೆಗೆ ಮೈಸೂರು ಅರಮನೆ ಚಾಮುಂಡಿ ಪಂಜರಾಪೋಲ್ ಇಲಾಖೆಗೆ ಸೇರಿದ 26 ಟಗರು ಮತ್ತು 10 ಕುರಿಗಳನ್ನೂ ಸಹ ಮೇಲ್ಕಂಡ ಇಲಾಖೆಯಲ್ಲಿ (ರೇಸ್ ಕೋರ್ಸಿನಲ್ಲಿ) ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಿ [illegible] ಪಡೆಯಬಹುದು. ಹೆಚ್ಚಿಗೆ ವಿಷಯಗಳನ್ನು ಮೇಲ್ಕಂಡ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳತಕ್ಕದ್ದು

[illegible] ಮದನಗೋಪಾಲರಾಜ ಅರಸ್,
ಕರ್ನಲ್, [illegible]
[illegible]

ಫೋನ್ ನಂ 792 ವಂದೇ ಮಾತರಂ ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೧-೪-೧೯೫೩ [ಸಂಚಿಕೆ ೨೧೪

ಮದ್ರಾಸು ಟ್ರಾಂ ಕಂಪೆನಿ ಮೇಲೆ ಮೊಕದ್ದಮೆ

ಹುಬ್ಬಳ್ಳಿಯಲ್ಲಿ ಶಾಂತ ಪರಿಸ್ಥಿತಿ

೧೯೫೪ರಲ್ಲಿ ಕರ್ನಾಟಕ ಪ್ರಾಂತ ರಚನೆಗಾಗಿ ಕೆ ಪಿ ಸಿ ಸಿ ಕೋರಿಕೆ

ಹುಬ್ಬಳ್ಳಿ ...ನ್ನೆ ಮೂಕ ಪ್ರದರ್ಶನ, ...ರ ಗಲಭೆ, ...ರಿ ಹೂಡಿಕೆಗ ...ದ ಮೇಲೆ ನಿನ್ನೆ ಪರಿಸ್ಥಿತಿಯು ಶಾಂತವಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆ ಪುನಃ ಸೇರಿ ೧೯೫೪ ನೇ ಅಕ್ಟೋಬರೊಳಗೆ ಪ್ರಾಂತ ರಚನೆ ಮಾಡಬೇಕೆಂಬ ನಿರ್ಣಯವನ್ನು ಒಪ್ಪಿತು ಪ್ರಾಂತ ರಚನೆಯ ಬಗ್ಗೆ ಇದೇ ಅಕ್ಟೋಬರಿನಲ್ಲಿ ಘೋಷಣೆಯನ್ನು ಭಾರತ ಸರ್ಕಾರದವರು ಹೊರಡಿಸದಿದ್ದರೆ, ಶಾಸನ ಸಭೆಗಳಲ್ಲಿರುವ ಕನ್ನಡ ಪ್ರದೇಶಗಳ ಸದಸ್ಯರು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರು ರಾಜೀನಾಮೆ ಕೊಡುವಂತೆ ನಿರ್ಣಯದಲ್ಲಿ ಸೂಚಿಸಲಾಗಿದ್ದಿತು ಮೊನ್ನೆ ನಡೆದ ಗಲಭೆಗಳನ್ನು ಖಂಡಿಸಿ ಸಭೆಯು ನಿರ್ಣಯವನ್ನು ಮಾಡಿತು

...ಜಲಿಂಗಪ್ಪನವರು ಮಾತನಾಡಿ ...ರಿ ಜಿಲ್ಲೆಯನ್ನು ಮೈಸೂರಿಗೆ ...ರ್ ಪಟ್ಟಿಗ್ನ ಸಂಸ್ಥಾನವು ಒಪ್ಪಿರುವುದರಿಂದ ಇದರಿಂದ ಕರ್ನಾಟಕದ ರಚನೆಗೆ ಮೈಸೂರು ವಿರೋಧವಾಗಿದೆಂಬ ಭಾವವು ಹುಸಿಯೆಂದೂ ತಿಳಿಸಿದರು ...ವಾನಿ, ಆಲೂರು ಮುಂತಾದ ...ತಾಲ್ಲೂಕುಗಳ ಜನಿಸ್ಸದ ...ಗ್ಗೆ ...ಪ್ರಥಮ ಖಂಡರೊಡನೆ ...ರ ...ಒಪ್ಪಂದ ಮಾಡಿಕೊಂಡಿರುವ ...ದ ಅವರು ಸ್ಪಷ್ಟಪಡಿಸಿದರು

...ಗಳ ಸಂಬಂಧ ...ಇದೆ ...ನ ...ಲೀಸ ...ನಲು ...ವರು

ಕೊರಿಯಾ ಯುದ್ಧ ಖೈದಿಗಳ ವಿನಿಮಯದ ಆರಂಭ

ವಿಶ್ವಸಂಸ್ಥೆ ಮತ್ತು ಕಮ್ಯೂನಿಸ್ಟ್ ...ದ್ಧ ಖೈದಿಗಳಲ್ಲಿ ರೋಗಗ್ರಸ್ತರೂ ...ಯಗೊಂಡವರೂ ಆದವರ ವಿನಿಮಯ ...ತ್ತ ನಿನ್ನೆ ಬೆಳಿಗ್ಗೆ ಆರಂಭವಾಯಿತು ...೦ ಮಂದಿ ವಿಶ್ವಸಂಸ್ಥೆ ಸೈನಿಕರನ್ನು ಕಮ್ಯೂನಿಸ್ಟರು ವಾಪಸು ಕಳುಹಿಸಿರುತ್ತಾರೆ ಅವರಲ್ಲಿ ಬ್ರಿಟಿಷ್, ಅಮೆರಿಕ ...ತ ಆಫ್ರಿಕಾ, ಕೆನಡಾ ಗ್ರೀಕ್ ...ಲಿಪ್ಪೈನೆನವರು ಇರುವರು

ರಂಗೂನ್ ಬಳಿ ಚೀಣೀಯರ ದ್ವಿತೀಯ ರಣರಂಗ

...ರ್ಮದಲ್ಲಿರ ಪರಾಷ್ಟ್ರೀಯ ಚೀನಾ ...ರ ರಾಜಧಾನಿ ರಂಗೂನಿಗೆ ೭೦೦ ...ಬ್ಬರ ಆಗ್ನೇಯ ಭಾಗದಲ್ಲಿ ದ್ವಿತೀಯ ರಣರಂಗವನ್ನು ತೆರೆದು ಹೋರಾಟ ನಡೆಸುತ್ತಿರುವ ಪ್ರಾಗ... ವರದಿಯಾಗಿ

ಶ್ರೀರಾಮ ಸಪ್ತಾಹ

ರಾಜಧಾನಿಯ ...ಬಳಿ ...ರ್ ದೇವಸ್ಥಾನದ ರಸ್ತೆಯಲ್ಲಿನ ... ಶ್ರೀ ಸಮರು ...ಗೀಂ... ... ...ದಲ್ಲಿ ನಿನ್ನೆ ...ರ್ ... ತಾ|| ವರೆ ...ಶ್ರೀ ರಾಮ ... ಮಹೋತ್ಸವ ...ವಾಗಿದೆ ನಿತ್ಯವೂ ಸಂಜೆ ... ...ಉಪನ್ಯಾಸ ಸಂಗೀತ, ಪ್ರವ... ...ಗುವುವು ...ನೇ ತಾ|| ...ಪ್ಪಭಿಷೇಕವು ನಡೆಯುವುದು

ಮೈಸೂರು ಕಾಂಗ್ರೆಸ್ಸಿನಲ್ಲಿ ಐಕ್ಯತೆ ಸಾಧನೆ

ಮುಖಂಡರಿಗೆ ನೆಹರೂ ಸೂಚನೆ

ಮೈಸೂರು ೨೧

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ...ಸದಸ್ಯರ ...ಪ್ಪಿದ ...ವನ್ನು ತೋರಿದ ...ರೂ ಐಕಮತ್ಯದಿಂದ ...ದಿರುವ ನಾನಾ ಸಮಸ್ಯೆಗಳನ್ನು ...ಡಿ ...ಂದ ನಿನ್ನೆ ದಿನ ... ...ಸಭೆಯೊಂದು ನಡೆಯಿತು ...ಗಂಟೆಯ ...ರಾತ್ರಿ ...ಮಾತುಕತೆಗಳು ನಡೆದ ಬಳಿಕ ಹೇಳಲಾಗಿದೆ ಇನ್ನೂ ಯಾವ ನಿರ್ಣಯವನ್ನು ತೆಗೆದುಕೊಂಡ ...ಕೊಂಡುಬಂದಿ

...ಮಾತುಕತೆಗಳಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ, ಸಚಿವರುಗಳಾದ ಶ್ರೀಗಳು ಚೆನ್ನಯ್ಯ ಕಡಿದಾಳ್ ಮಂಜಪ್ಪ ಮತ್ತು ...ಸಿದ್ದವೀರಪ್ಪ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ... ಕೆ ವೀರಣ್ಣಗೌಡ, ಕಾರ್ಯದರ್ಶಿ ಶ್ರೀ ಟಿ ಮರಿಯಪ್ಪ, ಶ್ರೀಗಳಾದ ಎಸ್ ಚನ್ನಯ್ಯ, ವಿ ವೆಂಕಟಪ್ಪ, ಟಿ ಸಿದ್ದಲಿಂಗಯ್ಯ ...ಎಸ್ ರುದ್ರಪ್ಪ ...ಸುಬ್ರಹ್ಮಣ್ಯ, ಎಲ್. ಎಸ್ ವೆಂಕಾಜಿರಾವ್ ಮುಂತಾದವರು ಭಾಗವಹಿಸಿದ್ದರು

ಪ್ರಧಾನಿ ನೆಹರೂರವರು ಮುಖ್ಯಮಂತ್ರಿಯವರಿಗೆ ಪತ್ರವೊಂದನ್ನು ಬರೆದು ಕಾಂಗ್ರೆಸ್ ಪಕ್ಷದಲ್ಲಿನ ಭಿನ್ನತೆಗಳನ್ನು ...ಹೋಗಲಾಡಿಸಬೇಕೆಂದು ಸಲಹೆ ಮಾಡಿರುವ ...ತಿಳಿದುಬಂದಿದೆ

ಈಚಲು ಮರದಿಂದ ಸೂರ್ಯ ನಮಸ್ಕಾರ

...ಂಬೂರ ಜಿಲ್ಲೆಯ ...ಯ ನಡಿಂಬಟ್ಟಿ ...ಮರದ ಮೇಲಿನ ...ಟೊಂಗೆ ...ದು ... ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಸೂರ್ಯನಮಸ್ಕಾರ ಮಾಡುತ್ತಿರುವುದೆಂದೂ ...ವನ್ನು ನೋಡಲು ಸಾವಿರಾರು ಜನರು ಬಂದು ಸೇರುತ್ತಿರುವರೆಂದೂ ಮತ್ತು ಮರದ ಬಳಿ ಭಜನೆ ನಡೆಸಲಾಗುತ್ತಿದೆಯೆಂದೂ ವರದಿಯಾಗಿದೆ

ಮದ್ರಾಸು ಟ್ರಾಂ ಕಂಪೆನಿ ಮೇಲೆ ಮೊಕದ್ದಮೆ

ಮದ್ರಾಸಿನ ಟ್ರಾಂ ವೇ ಕಂಪನಿಯ ಮಾಜಿ ಮ್ಯಾನೇಜಿಂಗ್ ಡೈರೆಕ್ಟರೂ ಮತ್ತು ಈಗಿನ ...ರೂ ಆದ ಸಿ ಜಿ ...ಮತ್ತು ...ಮ್ಯಾನೇಜರ್ ...ಸರ್ ...ವರನ್ನು ಅಪಾದಿತರೆಂದು ಹೆಸರಿಸಿ, ಪ್ರೆಸಿಡೆನ್ಸಿ ನ್ಯಾಯಾಧೀಶರ ಕೋರ್ಟಿನಲ್ಲಿ ...ಪೊಲೀಸು ...ಗಳು ... ಶಾಸನದ ಹಲವು ವಿಧಿಗಳ ಪ್ರಕಾರ ಮೊಕದ್ದಮೆ ...ತ್ತಾರೆ ...ವಾಗಿ ಟ್ರಾಂ ...ಟನ್ನು ... ...ನ್ಯಾಯಾಲಯದವರ ...ಇರುವ ... ...ಇರುವ ...ಗಳನ್ನು ಬದಲಾಯಿ...ದ ...ವರನ್ನು ...ವಾಗಿದೆ

ಅಮೆರಿಕದಲ್ಲಿ ...ನೇ ಅಣು ಬಾಂಬಿನ ಪ್ರಯೋಗ

ಕಳೆದ ಶನಿವಾರ ...ವೆ ...ದ ನೆವಾಡಾ ಪ್ರದೇಶದಲ್ಲಿ ...ನೇ ಅಣು ಬಾಂಬಿನ ಪರೀಕ್ಷೆಯನ್ನು ನಡೆಸಲಾಯಿತು ಹೆಲಿಕಾಪ್ಟರ್ ವಿಮಾನಗಳಲ್ಲಿರುವ ವೈಮಾನಿಕರಿಗೆ ಇದರ ಅನುಭವವನ್ನು ಮಾಡಿಕೊಡಲಾಯಿತು ನಿರ್ದಿಷ್ಟವಾದ ಪ್ರದೇಶದಿಂದ ...೦೦೦ ಗಜ ದೂರದಲ್ಲಿ ...ಸಾವಿರ ಜನರನ್ನು ಭೂಮಿಯೊಳಗಣ ... ...ದು ನಿಲ್ಲಿಸಲಾಗಿದ್ದಿತು ...ಸಿಡಿತದ ಪ್ರದೇಶದಲ್ಲಿ ಇನ್ನೂ ... ...ದಲ್ಲಿ ...ಜನ ನಾಗರಿಕರನ್ನೂ ...ಜನ ಸೈನಿಕರನ್ನೂ ನಿಲ್ಲಿಸಲಾಗಿದ್ದಿತು ...ಈ ಸ್ಫೋಟದ ... ...ಕಳೆದ ...ಬಿರಿ ಮಾಡಿದ ಅಣು ...ಸಿಡಿತಕ್ಕಿಂತಲೂ ... ...ಮಾಡಿದ...ಯು ಅತ್ಯಂತ ಹೆಚ್ಚಿನ ... ...ದ್ದಾಗಿದ್ದಿತೆಂದೂ ಹೇಳಲಾಗಿದೆ

ವೈಕುಂಠ ಸಮಾರಾಧನೆ

ಧರ್ಮಪ್ರವರ್ತ ...ಬಹದ್ದೂರ್ ... ಪುಟ್ಟಯ್ಯನವರ ಆತ್ಮಶಾಂತಿಗಾಗಿ ವೈಕುಂಠ ಸಮಾರಾಧನೆಯು ನಿನ್ನೆ ನಡೆಯಿತು ಈ ಸಂಬಂಧವಾಗಿ ಬೆಳಿಗ್ಗೆ ಪೂರ್ತಿ ಮುಂತಾದ ದೇವತಾ ಕಾರ್ಯಗಳೂ ಸಮಾರಾಧನೆಯೂ, ರಾತ್ರಿ ಶ್ರೀ ...ರಾಮಕೃಷ್ಣ ಶಾಸ್ತ್ರಿಗಳಿಂದ ಹರಿಕಥೆಯೂ ಏರ್ಪಾಡಾಗಿದ್ದುವು

ಭಾರತ ಮತ್ತು ಅಮೆರಿಕಾ ಗಳಿಗೆ ಒಪ್ಪಂದ

ಅಮೆರಿಕದ ಪಾರಿಭಾಷಿಕ ಸಹಕಾರದ ಸಹಾಯದ ಅಂಗವಾಗಿ ಅಮೆರಿಕ ಸರ್ಕಾರದೊಡನೆ ಭಾರತ ಸರ್ಕಾರದವರು ...ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ ಬರುವ ...ವರ್ಷಗಳಲ್ಲಿ ಪಂಜಾಬು, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಟ್ಯೂಬ್ ಬಾವಿಗಳನ್ನು ...ಕೋಟಿ ...ಲಕ್ಷ ರೂ ವೆಚ್ಚದಲ್ಲಿ ತೆಗೆಯಲೂ, ದೆಹಲಿಯ ಕೇಂದ್ರ ಗೃಹ ಸಂಶೋಧನಾ ಶಾಲೆಯ ಆಶ್ರಯದಲ್ಲಿ ಭವನಗಳ ಸಾಮಗ್ರಿಗಳನ್ನು ಹೆಚ್ಚಾಗಿ ತಯಾರಿಸಲೂ ಮತ್ತು ಕಡಿಮೆ ಬೆಲೆಗಳಲ್ಲಿ ಗೃಹಗಳನ್ನು ನಿರ್ಮಿಸಿಕೊಳ್ಳಲು ಸೂಕ್ತ ಪ್ರದರ್ಶನವನ್ನು ನಡೆಸಲೂ ಈ ಒಪ್ಪಂದಗಳಾಗಿವೆ

೧೩ವರ್ಷ ಮರದಮೇಲೆ ವಾಸ

ಉತ್ತರ ಪ್ರದೇಶದಲ್ಲಿರುವ ಕುಶಿನಗರದ ಬೌದ್ಧ ವಿಹಾರಕ್ಕೆ ಸೇರಿದ ೧೩ ಎಕರೆ ಜಮೀನಿನ ಬಗ್ಗೆ ಜಿಲ್ಲಾಧಿಕಾರಿಗಳಿಗೂ ತಮಗೂ ೧೫ ವರ್ಷಗಳಿಂದ ನಡೆಯುತ್ತಿರುವ ವ್ಯಾಜ್ಯವನ್ನು ಇತ್ಯರ್ಥಗೊಳಿಸಬೇಕೆಂದು ...ವರ್ಷದ ...ದೇಶದ ಬೌದ್ಧ ಸನ್ಯಾಸಿಯೊಬ್ಬರು ಪ್ರಧಾನಿ ನೆಹರುರವರಿಗೆ ಮನವಿ ಮಾಡಿಕೊಂಡಿರ ...ತಿ ವ್ಯವಹಾರದ ಪರಿಣಾಮವಾಗಿ ಸನ್ಯಾಸಿಯು ೧೩ ವರ್ಷಗಳಿಂದಲೂ ಬುದ್ಧ ದೇವನ ಸಮಾಧಿಯ ಬಳಿ ಇರುವ ಭಾರಿ ಆಲದ ಮರದ ಮೇಲೆ ...ವನ್ನು ...ಮಾಡಿಕೊಂಡು ಅಲ್ಲಿ ವಾಸ ಮಾಡಿಕೊಂಡಿರುವುದಾಗಿ ಗೊತ್ತಾಗಿದೆ ...ಮೂರು ದಿನಗಳವರೆಗೂ ನೀರು ಮತ್ತು ಉಪ್ಪು ಮಾತ್ರ ...ಸಿ ಕಳೆದ ಎರಡು ವರ್ಷಗಳವರೆಗೂ ಮೈಮೇಲೆ ಬಟ್ಟೆಯು ...ತ್ತಿದ್ದರೂ ... ...ಪವಾಸವನ್ನು ಮಾಡುತ್ತಿದ್ದುದಾಗಿಯೂ ಗೊತ್ತಾಗಿದೆ

ಶ್ರೀರಾಮ ಸಾಮ್ರಾಜ್ಯ ಮಹಾ ಪಟ್ಟಾಭಿಷೇಕದ ಕಾರ್ಯಕ್ರಮ

...ನರಸೀಪುರ ತಾಲ್ಲೂಕು ಸೋಸಲೆಯ ಕೃಷ್ಣರಾಜಪುರ ಅಗ್ರಹಾರದಲ್ಲಿರುವ ಶ್ರೀ ಶ್ರೀನಿವಾಸಸ್ವಾಮಿಯವರ ದೇವಾಲಯದಲ್ಲಿ ನ ...ಯಿಂದ ಮೇ ೬ ನೇ ತಾ|| ವರೆಗೆ ಏರ್ಪಾಡಾಗಿರುವ ಶ್ರೀ ರಾಮ ಸಾಮ್ರಾಜ್ಯ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಪ್ರತಿದಿನವೂ ಸಹಸ್ರನಾಮಾರ್ಚನೆ ...ಶ್ರೀ ರಾಮ ...ಹೋಮ, ಶ್ರೀಮದ್ರಾಮಾಯಣ, ಭಗವದ್ಗೀತೆ ವೇದ ಇವುಗಳ ಪಾರಾಯಣ, ಪ್ರಬಂಧ ...ರ ವಾದ್ಯಗೋಷ್ಠಿ, ಹರಿಕಥೆ, ಸಂಗೀತ ಮುಂತಾದುವು ನಡೆಯುವುವು

ಕ್ಯಾಲಿಕಟ್ ಗಲಭೆ ಬಗ್ಗೆ ೬೭ ಮಂದಿ ಮೇಲೆ ಮೊಕದ್ದಮೆ

ಕೋಳಿಕ್ಕೋಡ್ ಬಳಿ ಕ್ಯಾಲಿಕಟ್ ...ದಲ್ಲಿ ಇತ್ತೀಚೆಗೆ ಆದ ಕೋಮುವಾರು ಗಲಭೆ ಸಂಬಂಧವಾಗಿ ಒಂದು ಕೋಮಿನ ...ಜನರ ಮೇಲೆ ೪ ಮೊಕದ್ದಮೆಗಳನ್ನು ಕೋಳಿಕ್ಕೋಡ್ ... ನ್ಯಾಯಾಸ್ಥಾನದಲ್ಲಿ ಹೂಡಲಾಗಿದೆ ಮಸೀದಿ, ಗೃಹ, ಶಾಲೆ ಮತ್ತು ಗೋರಿಗಳಿಗೆ ಅಪಾದಿತರು ಹಾನಿ ಮಾಡಿದರೆಂದು ಹೇಳಲಾಗಿದೆ

ಮನೆಗಂದಾಯ ಏರಿಸಿದ ಬಗ್ಗೆ ಪ್ರತಿಭಟನಾ ಸಭೆ

ಮೈಸೂರು, ೨೧

ರಾಜಧಾನಿಯ ಪೌರ ಸಭೆಯವರು ಮನೆಗಂದಾಯವನ್ನು ಏರಿಸಿರುವ, ಮತ್ತು ರೆವಿನ್ಯೂ ನೌಕರರು ಬಾಡಿಗೆ ಕಂದಾಯ ವಸೂಲು ಮಾಡುವ ನೀತಿಯನ್ನು ಪ್ರತಿಭಟಿಸುವ ಸಲುವಾಗಿಯೂ, ಈ ಬಗ್ಗೆ ಪೌರ ಸಭಾ ಸದಸ್ಯರುಗಳಿಗೆ ಎಚ್ಚರಿಕೆ ಕೊಟ್ಟು, ರೆವಿನ್ಯೂ ನೌಕರರ ಪಕ್ಷಪಾತವನ್ನು ಬಹಿರಂಗಪಡಿಸುವುದಕ್ಕಾಗಿಯೂ ನಾಳೆ ಸಂಜೆ ೬ ಗಂಟೆಗೆ ರಾಮಸ್ವಾಮಿ ಸರ್ಕಲ್ ಬಳಿ ಕೃಷ್ಣರಾಜ ಪ್ರಾಥಮಿಕ ಶಾಲಾ ಮೈದಾನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು. ಕೃಷ್ಣರಾಜ, ಬಿಲ್ಲ ಮತ್ತು ಚಾಮುಂಡಿಪುರದ ಮಹಾಜನರು ಭಾಗವಹಿಸಬೇಕೆಂದು ಸಭೆಯ ವ್ಯವಸ್ಥಾಪಕರಾದ ಶ್ರೀ ಎ ಎಸ್ ನಾರಾಯಣರಾವ್ ರವರು ಕೋರಿರುತ್ತಾರೆ.

ಕುಮಾರ್ ಪ್ರೆಸ್ ಮೇಲಿನ ಮೊಕದ್ದಮೆ ೨೯ಕ್ಕೆ

ರಾಜಧಾನಿಯ ಸಯ್ಯಾಜಿ ರಸ್ತೆಯಲ್ಲಿರುವ ಕುಮಾರ್ ಪ್ರೆಸ್ಸಿನ ತ್ರಿಗಳು ಮೆ॥ ಕೆ ಕುಮಾರಸ್ವಾಮಿ ಮತ್ತು ಮೆ॥ ಕೆ ಸುಬ್ಬಣ್ಣ ಇವರುಗಳ ಮೇಲೆ ಹೂಡಲಾಗಿರುವ ಮೊಕದ್ದಮೆಯು ನೆನ್ನೆ ೧ನೇ ನಗರ ನ್ಯಾಯಾಧೀಶ, ಶ್ರೀ ಶಿವನಂಜಪ್ಪನವರ ಮುಂದೆ ಬಂದು ಆಪಾದಿತರು ಹೇಳಿಕೆಗಳನ್ನು ಕೊಡಬೇಕಾಗಿದ್ದಿತು. ಅವರ ಪರ ವಕೀಲರು, ಅರ್ಜಿಯೊಂದನ್ನು ದಾಖಲು ಮಾಡಿ ತಮ್ಮ ಕಕ್ಷಿಗಾರರ ಹೇಳಿಕೆಗಳನ್ನು ತೆಗೆದುಕೊಳ್ಳಕೂಡದೆಂದೂ, ಮೊಕದ್ದಮೆಯನ್ನು ವಾರಂಟ್ ಕೇಸಿನಂತೆ ನಡೆಸಬೇಕೆಂದೂ ಕೋರಿದರು. ಈ ಬಗ್ಗೆ ವಾದ ಮಾಡಲು ಇದೇ ತಿಂಗಳು ೨೯ನೇ ತಾ॥ಗೆ ಮೊಕದ್ದಮೆಯನ್ನು ಮುಂದೆ ಹಾಕಲಾಯಿತು.

ಬ್ರಾಹ್ಮಣ ಧರ್ಮ ಸಹಾಯ ಸಭೆ

ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಂಘದ ವಾರ್ಷಿಕ ಸಭೆಯು ಕಳೆದ ಭಾನುವಾರ ನಡೆದ ಪ್ರಸಕ್ತ ಸಾಲಿಗೆ ಶ್ರೀ ಎ ಸುಬ್ರಹ್ಮಣ್ಯ ಅಯ್ಯಂಗಾರ್ ರವರು ಅಧ್ಯಕ್ಷರಾಗಿಯೂ, ಶ್ರೀಗಳು ಟಿ ರಾಮಸ್ವಾಮಿ, ಕೆ ಶೇಷಾದ್ರಿ ಮತ್ತು ಎಸ್ ಸುಬ್ಬಾರಾಯರು, ಉಪಾಧ್ಯಕ್ಷರುಗಳಾಗಿಯೂ, ಎ ಮ॥ ವಿದ್ವಾನ್ ರಂಗನಾಥ ಶ್ರೀ ದೀಕ್ಷಿತ ಶಾಸ್ತ್ರಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಶ್ರೀ ರಮಣ ಸಂಗೀತ ವಿದ್ಯಾಲಯ

1061 [illegible]

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ,
ಸಂಚಾಲಕ

ಸತ್ಯ ಪತ್ರಿಕೆ ಮೇಲೆ ಮೊಕದ್ದಮೆ

ಬೆಂಗಳೂರು ೨೦

"ಇನ್ನೊಂದು [illegible] ... ದರೋಡೆ" ಎಂಬ ಶೀರ್ಷಿಕೆಯ [illegible] ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಬಗ್ಗೆ ಹಲವು ಆರೋಪಣೆಗಳನ್ನು ಳ್ಳ ಲೇಖನವನ್ನು ಕಳೆದ ಫೆಬ್ರವರಿ ೧೩ನೇ ತಾ॥ ಪ್ರಕಟಿಸಿದ ಬಗ್ಗೆ ಇಲ್ಲಿನ 'ಸತ್ಯ' ದಿನ ಪತ್ರಿಕೆಯ ಪ್ರಕಾಶಕರೂ ಮತ್ತು ಸ್ಟಾರ್ ಪ್ರೆಸ್ ಒಡೆಯರೂ ಆದ ಶ್ರೀ ಸಿ ಜಿ ಗಿರಿಸ್ವಾಮಿಯವರ ಮೇಲೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಕೆ ಎಸ್ ನರಸಿಂಹ ಮೂರ್ತಿಯವರು ಸಿವಿಲ್ ಸ್ಟೇಷನ್ನಿನ ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿರುತ್ತಾರೆ. ಲೇಖನವು ಆಕ್ಷೇಪಣೀಯ ವಾಗಿರುವುದರಿಂದ ಪತ್ರಿಕಾ ಕರ್ತರನ್ನು ದಸ್ತಗಿರಿ ಮಾಡಿ [illegible] ಪ್ರಕಾರ ವಿಚಾರಣೆಯನ್ನು ನಡೆಸಬೇಕೆಂದು ಕೇಳಲು ಸಾಕಷ್ಟು ಆಧಾರಗಳಿರುವುದಾಗಿಯೂ ತಿಳಿಸಲಾಗಿದೆ. ನ್ಯಾಯಾಧೀಶರು ಆಪಾದಿತರಿಗೆ ನೋಟೀಸು ಕೊಟ್ಟಿರುತ್ತಾರೆ. [illegible] ನೇ ತಾ॥ಗೆ ವಿಚಾರಣೆ ಇದೆ.

ಹಿರಿಯ ಶಾಸನ ಸಭೆ ಓಟರುಗಳ ಪಟ್ಟಿ

ಹಿರಿಯ ಶಾಸನ ಸಭೆಯ ಉಪಾಧ್ಯಾಯರುಗಳ ಮತ್ತು ಪದವೀಧರರ ಕ್ಷೇತ್ರಗಳ ಚುನಾವಣೆ ಸಂಬಂಧವಾಗಿ ಆಯಾ ವರ್ಗದವರ ಓಟರುಗಳ ಪಟ್ಟಿ ಸಿದ್ಧವಾಗುತ್ತಿದ್ದು, [illegible] ಸ್ಥಳಗಳಲ್ಲಿ ಅವರ ಪ್ರಾರ್ಥನಾ ಪತ್ರಗಳಿಗಾಗಿ ಇದೆ. ಇಲಾಖಾ ಡೈರೆಕ್ಟರು ಅಥವಾ ವಿಶ್ವ ವಿದ್ಯಾಲಯದ ರಿಜಿಸ್ಟ್ರಾರರು ಇವರುಗಳಿಗೆ ಬರುವ ಜೂನ್ ೧ನೇ ತಾ॥ಗೆ ಮೀರದಂತೆ ಕಳುಹಿಸಿ ಕೊಡಬೇಕೆಂದು ಸೂಚಿಸಲಾಗಿದೆ.

ಹೆಣ್ಣು ಕೊಡದಿದ್ದುದಕ್ಕಾಗಿ ದ್ರಾವಕ ಎರಚಿದ

ಕಾಂಚೀಪುರದ ಪರಶುರಾಮ್ ಎಂಬ ತರುಣನು ಒಬ್ಬ ಯುವತಿಯನ್ನು ಪ್ರೇಮಿಸಿ ಅವಳನ್ನು ಮದುವೆಯಾಗಲು ಬಯಸಿದ್ದನಂತೆ, ಆದರೆ ಆಕೆಯ ತಂದೆ [illegible] ನ ಗರ್ ಎಂಬಾತ [illegible] ನ [illegible] ಗಳನ್ನು [illegible] ಕೆಡಹಲು [illegible] ಕರೆದು [illegible] ದ್ರಾವಕವನ್ನು ಎರಚಲು [illegible] ಆಸ್ಪತ್ರೆಗೆ ಸೇರಿಸಿ [illegible] ಸಲಾಗಿದೆ

ನಾಯಿ ಕೆಮ್ಮಿಗೆ ಔಷಧ
(WHOOPING COUGH REMEDY)

ಗೂರಲು, ಬ್ರಾಂಕೈಟಿಸ್, ಶರೀರಕಾರ್ಶ್ಯ ಮತ್ತು (COUGH) ಗಳಿಗೆ [illegible] ಔಷಧ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-8-0

ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ
ದಿವಾನರ ರಸ್ತೆ, ಮೈಸೂರು

ಸ್ವಾತಂತ್ರ್ಯ ಯೋಧನ ಸ್ಮಾರಕ ನಿಧಿ

ಭಾರತದ ಸ್ವಾತಂತ್ರ್ಯಕ್ಕಾಗಿ ೧೮೫೭ರಲ್ಲಿ ನಡೆದ ಪ್ರಥಮ ಯುದ್ಧದ ನಾಯಕರಾದ ಜಗದೀಶಪುರದ ಕುಬೇರ ಸಿಂಗ್ ಎಂಬಾತನ ಸ್ಮಾರಕಾರ್ಥವಾಗಿ ಬಿಹಾರ್ ಸರ್ಕಾರದವರು ೧ ಲಕ್ಷ ರೂ ನಿಧಿಯನ್ನು ಸೇರಿಸಲು ನಿರ್ಧರಿಸಿರುತ್ತಾರೆ.

ಜಮ್ಮು ಕಾಶ್ಮೀರ್ ದಿನಾಚರಣೆ

ಭಾರತೀಯ ಜನ ಸಂಘದ ರಾಜಧಾನಿಯ ಶಾಖೆಯ ಆಶ್ರಯದಲ್ಲಿ ಮೊನ್ನೆ ಟೌನ್ ಹಾಲ್ ಮೈದಾನದಲ್ಲಿ ಜಮ್ಮು-ಕಾಶ್ಮೀರ ದಿನಾಚರಣೆಯನ್ನು ನಡೆಸಲಾಯಿತು. ಸಂಘದ ಕರ್ನಾಟಕ ಪ್ರಾಂತೀಯ ಪ್ರಚಾರ ಕಾರ್ಯದರ್ಶಿ, ಶ್ರೀ ಜಗನ್ನಾಥರಾವ್ ಜೋಷಿಯವರು ಮಾತನಾಡಿ, ಕೂಡಲೇ ಕಾಶ್ಮೀರವನ್ನು ಭಾರತದಲ್ಲಿ ಐಕ್ಯ ಮಾಡಿಕೊಂಡು ಅದನ್ನು ಬೇರೆ ಸಂಸ್ಥಾನಗಳಂತೆ ಪರಿಗಣಿಸುವಂತಾಗಬೇಕೆಂದು ತಿಳಿಸಿದರು. ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ವರ್ತನೆಯನ್ನು ಟೀಕಿಸಿದರು. ಕಮ್ಯೂನಿಸ್ಟರ ನೀತಿಯನ್ನು ಖಂಡಿಸಿದರು. ಶ್ರೀ ಗೋಪಾಲಶಾಸ್ತ್ರಿಯವರು ಅಧ್ಯಕ್ಷತೆ ವಹಿಸಿದ್ದರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎಂ ಸಂಜಪ್ಪ, ನಾಗಸ್ವರ [illegible] ಮಧ್ಯಾಹ್ನ ೧ ೩೦ ಪಿಟೀಲು [illegible] ಸಂಜೆ ೬ [illegible] ಎಂ ಸಂಜಪ್ಪ, ನಾಗಸ್ವರ [illegible]

ಪ್ರಭಾ ★ ಶೀಘ್ರದಲ್ಲಿಯೇ ಬರಲಿದೆ

ಜೆಮಿನಿಯವರ ಹಿಂದಿ ಚಿತ್ರ

ಮಿಸ್ಟರ್ ಸಂಪತ್

Edited, Printed and Published by A R Nagarajan at Sadhvi Press, D Subbiah Road, Mysore

ಶನಿವಾರದಿಂದ ಕೊರಿಯಾ ಶಾಂತಿ ಸಂಧಾನ

ಕೊರಿಯದ ಶಾಂತಿಗಾಗಿ ವಿಶ್ವ ಸಂಸ್ಥೆ ಮತ್ತು ಕಮ್ಯೂನಿಸ್ಟ್ ಪ್ರತಿನಿಧಿಗಳಿಗೆ ಶನಿವಾರದಿಂದ ಮಾತುಕತೆಗಳು ಪುನಃ ಆರಂಭವಾಗುವುವು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ	ರೂ.
ಕಡಲೆಕಾಯಿ	[illegible]	[illegible]
ಎಳ್ಳು	[illegible] 0-0	
ಹರಳುಬೀಜ	[illegible]-0	[illegible]
ಹುಚ್ಚೆಳ್ಳು	[illegible]	
ಹೊಂಗೇಬೀಜ	[illegible]-0	[illegible]
ಹುರುಳಿ	[illegible]	
ಹೆಸರು	[illegible]-0-0	
ಅವರೆ	[illegible]-0	
ಹಲಸಂದೆ	[illegible]	[illegible]
ಮೆಣಸಿನ		
ಕಾಯಿ ಪುಡಿ	[illegible]	[illegible]
ಮುಸುಕಿನಜೋಳ	[illegible]	[illegible]
ಸೀಗೇಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ		
೧,೦೦೦ಕ್ಕೆ	[illegible] 0-0	[illegible]

ಚರ್ಚಾ ಕೂಟ

'ಸಿನಿಮಾಗಳಿಂದ ಸಮಾಜಕ್ಕೆ ಲಾಭಕ್ಕಿಂತ ಹೆಚ್ಚು ಹಾನಿಯೇ ಉಂಟಾಗುತ್ತದೆ' ಎಂಬ ವಿಷಯವಾಗಿ, ಮೈಸೂರು ಹಿಂದಿ ಪ್ರಚಾರ ಸಭೆಯ ವಾಣೀವಿಲಾಸ ಮೊಹಲ್ಲಾ ಕೇಂದ್ರದಲ್ಲಿ ಕಳೆದ ಶನಿವಾರ ಹಿಂದಿಯಲ್ಲಿ ಚರ್ಚೆ ನಡೆಯಿತು. ಶ್ರೀಮತಿ ಎಸ್ ಆರ್. ಲಲಿತರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷಿಣಿಯರು ಸುಂದರವಾದ ಹಿಂದಿಯಲ್ಲಿ ವಿಚಾರಪೂರಿತ ಭಾಷಣ ಮಾಡಿದರು. ಶಾಲಾ ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಒಲಂಪಿಯಾ ಟಾಕೀಸ್

23-4-53 ರಿಂದ : ಅಪೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಫೇಮಸ್ ಪಿಕ್ಚರ್ಸ್ ರವರ ಆಹ್ ಸೂ

ಪ್ರೇಮ, ಶ್ರದ್ಧೆ ಆಶೆ ಮತ್ತು ಪ್ರಾಣತ್ಯಾಗ ಮುಂತಾದ ಕಲಾತ್ಮಕವಾದ ಹೆಣ್ಣಿನ ಭಾವ ಶಕ್ತಿಗಳು ಎಂಬುವುಗಳನ್ನು ಚಿತ್ರಿಸುವ ಕಲಾಕೃತಿ

ಪಾತ್ರ — ಕಾಮಿನಿ ಕೌಶಲ್, ಶೇಖರ್, ಪ್ರಾಣ್ ನಸ್ ಬಾಬ್, ಅಮೀರ್ ಬಾಯಿ

ಕರ್ನಾಟಕ ಚಿತ್ರ ಶಾಲೆ

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಹುಡಿಕಲ್ ಮಾಡಿದ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇದೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಹರಾಜು ಇಸ್ತಿಹಾರ್

ಚಾಲ್ತಿ ಏಪ್ರಿಲ್ ಮಾಹೆ ತಾ॥ 25 ನೇ ಶನಿವಾರ ಬೆಳಗ್ಗೆ 10 ಘಂಟೆಗೆ ಮೈಸೂರು ಅರಮನೆ ಚಾಮುಂಡಿ ಜಂಬೂಸವಾರಿ ಇಲಾಖೆಗೆ ಸೇರಿದ 26 ಟಗರು ಮತ್ತು 10 ಕುರಿಗಳನ್ನೂ ಸಹ ಮೇಲ್ಕಂಡ ಇಲಾಖೆಯಲ್ಲಿ (ರೇಸ್ ಕೋರ್ಸಿನಲ್ಲಿ) ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಬಹುದು. ಹೆಚ್ಚಿಗೆ ವಿಷಯಗಳನ್ನು ಮೇಲ್ಕಂಡ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಡಿ ವ ವನಗೋಪಾಲರಾವ್ ಆರ್ಸ್,
ಕರ್ನಲ್, ಸರ್ದಾರ್,
ಅಫೀಸರ್, [illegible] ಚಾಮುಂಡಿ ಜಂಬೂಸವಾರಿ

ರಿಜಿ ನಂ 792 ವಂದೇ ಮಾತರಂ ದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೬-೫-೧೯೫೪ [ಸಂಚಿಕೆ ೨೧೫

ಇಂಡೋ ಚೀಣದಲ್ಲಿ ಫ್ರೆಂಚರ ಪರಾಜಯ

ಇಂಡೋ ಚೀಣದಲ್ಲಿ ಕಮ್ಯೂನಿಸ್ಟರ ಆಕ್ರಮಣ

ಇಂಡೋ ಚೀಣದ ಮೂರನೇ ಒಂದು ಭಾಗವಾದ ೩೦ ಸಾವಿರ ಚದರ ಮೈಲಿಯಷ್ಟು ಪ್ರದೇಶವನ್ನು ಕಮ್ಯೂನಿಸ್ಟರು ಆಕ್ರಮಿಸಿರುವುದಾಗಿ ವರದಿಯಾಗಿದೆ ಅವರು ೫೦ ಸಾವಿರ ಸೈನ್ಯಗಳನ್ನು ಕಳುಹಿಸಿರುವುದಾಗಿ ಹೇಳಲಾಗಿದೆ ಅವರ ಸೈನ್ಯಗಳ ಪೆಟ್ಟನ್ನು ಎದುರಿಸಲಾರದೆ ಫ್ರೆಂಚ್ ಸೈನ್ಯಗಳು ಮತ್ತೊಂದು ನಗರವನ್ನು ಖಾಲಿ ಮಾಡಿವೆ ಅದರ ಬಯಲು ಪ್ರದೇಶದಲ್ಲಿ ಕಮ್ಯೂನಿಸ್ಟರನ್ನು ಸೋಲಿಸುವ ಆಶೆಯನ್ನು ಫ್ರೆಂಚರು ಹೊಂದಿರುವರು.

ಮತಾಂತರ ಮಾಡದಂತೆ ವಿದೇಶಿಪಾದ್ರಿಗಳಿಗೆಎಚ್ಚರಿಕೆ

ವಿದೇಶೀ ಪಾದ್ರಿಗಳು ಭಾರತದಲ್ಲಿ ಸಾಮಾಜಿಕ ಸೇವೆ, ವೈದ್ಯ ಸಹಾಯ, ವಿದ್ಯಾ ಪ್ರಸಾರ ಮುಂತಾದ ಕೆಲಸಗಳನ್ನು ನಡೆಸಲು ಅವಕಾಶವಿರುವುದಾಗಿಯೂ, ಆದರೆ ಅವರು ಮತಾಂತರ ಮಾಡುವುದರಲ್ಲಿ ತೊಡಗುವುದು ಸರಿಯಲ್ಲವೆಂದೂ ಕೇಂದ್ರ ಗೃಹ ಮಂತ್ರಿ ಕಟ್ಜುರವರು ತಿಳಿಸಿರುತ್ತಾರೆ ಮಧ್ಯ ಪ್ರದೇಶದ ಹಲವು ಕಡೆಗಳಲ್ಲಿ ಹಣದ ಆಸೆ ತೋರಿಸಿ ಅಲ್ಲಿನ ಆದಿವಾಸಿಗಳನ್ನು ಮತಾಂತರಗೊಳಿಸಿರುವ ಬಗ್ಗೆ ಪಾರ್ಲಿಮೆಂಟಿನ ಸದಸ್ಯರೊಬ್ಬರು ಪ್ರಶ್ನೆ ಮಾಡಿದಾಗ, ಪಾದ್ರಿಗಳ ಆಕ್ಷೇಪಣೀಯ ಕಾರ್ಯ ಚಟುವಟಿಕೆಗಳನ್ನು ತಡೆಯಲಾಗುವುದೆಂದು ಅವರು ಹೇಳಿರುತ್ತಾರೆ.

ರೈಲು ಉರುಳಿ ೧೩ ಮರಣ; ೧೪೦ ಮಂದಿಗೆ ಗಾಯ

ಅಮೇರಿಕದ ದಕ್ಷಿಣ ಕ್ಯಾರೊಲೀನಾ ಸಂಸ್ಥಾನದಲ್ಲಿ ಒಂದು ಕಡೆ ಮೊನ್ನೆ ರಾತ್ರಿ ೧೭ ಗಾಡಿಗಳುಳ್ಳ ಒಂದು ಎಕ್ಸ್‌ಪ್ರೆಸ್ ರೈಲು ಅತಿವೇಗವಾಗಿ ಹೋಗುತ್ತಾ ಕಂಬಿ ತಪ್ಪಿ ಸುರುಳಿಯಂತೆ ಉರುಳಿಕೊಂಡಿತೆಂದೂ, ಕನಿಷ್ಠ ಪಕ್ಷ ೧೩ ಜನರು ಮಡಿದು ೧೪೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಹಿಂದಿ ಪ್ರಚಾರ ಸಭೆ ಅಧಿಕಾರ ವರ್ಗ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ವಾರ್ಷಿಕ ಅಧಿವೇಶನವು ಕಳೆದ ಭಾನುವಾರ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಪ್ರಸಕ್ತ ಸಾಲಿನ ಕಾರ್ಯಕಾರಿ ಸಮಿತಿಗೆ ಈ ಕೆಳಗೆ ಕಂಡವರು ಚುನಾಯಿತರಾಗಿರುವರು:— ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್, ಅಧ್ಯಕ್ಷರು ಶ್ರೀಗಳಾದ ಕೆ ವಿ ಶ್ರೀನಿವಾಸಮೂರ್ತಿ ಮತ್ತು ಪಿ ಗೋಪಾಲಕೃಷ್ಣ ಶೆಟ್ಟರು ಉಪಾಧ್ಯಕ್ಷರುಗಳು ಶ್ರೀ ಕೆ ಆರ್ ರಾವ್ ಕೋಶಾಧ್ಯಕ್ಷರು ಶ್ರೀ ಎಸ್. ರಂಗಾಚಾರ್ ಕಾರ್ಯದರ್ಶಿ ಶ್ರೀಗಳಾದ ಎನ್ ನಾಗಪ್ಪ, ಕೆ ವಿ ಶ್ರೀನಿವಾಸ ಮೂರ್ತಿ, ಎಂ. ಕೆ. ರಾಜಗೋಪಾಲ್, ಎಂ ದೇವೇಗೌಡ, ಎಂ ರಾಜೇಶ್ವರಯ್ಯ, ಆರ್ ತಾತಾಚಾರ್, ಜಿ ಶ್ರೀನಿವಾಸಯ್ಯಂಗಾರ್, ಮತ್ತು ಶ್ರೀಮತಿ ಪುಟ್ಟತಾಯಮ್ಮ ಸದಸ್ಯರುಗಳು

ಆಹಾರ ಧಾನ್ಯದ ಸಾಗಾಣಿಕೆ ಮತ್ತು ಸರಬರಾಜು ನೀತಿ

ಆಹಾರ ಸಚಿವ ಸಿದ್ದವೀರಪ್ಪನವರ ಹೇಳಿಕೆ

ಮೈಸೂರು ೨೫

ಯಾವ ಅಡ್ಡಿ ಆತಂಕವೂ ಇಲ್ಲದೆ ಸಂಸ್ಥಾನದ ಒಂದು ಕಡೆಯಿಂದ ಮತ್ತೊಂದಕ್ಕೆ ಸರಾಗವಾಗಿ ಆಹಾರ ಧಾನ್ಯವು ಸಾಗಬೇಕೆಂಬುದೂ, ತೀಕ ದರಿಯಲ್ಲದೆ ಬಹಿರಂಗವಾದ ವ್ಯಾಪಾರ ಕ್ಷೇತ್ರಗಳಲ್ಲಿ ಜನರಿಗೆ ಧಾನ್ಯವು ದೊರೆಯಬೇಕೆಂಬುದೂ ಸರ್ಕಾರದ ಆಶಯವಾಗಿವುದೆಂದು ಆಹಾರ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ತಿಳಿಸಿರುವರು ಈ ನೀತಿಯಿಂದ ರೈತರು ಮತ್ತು ವರ್ತಕರಿಗೆ ಉತ್ಸಾಹ ಕೊಡುವುದೆಂದು ಅವರು ಭಾವಿಸಿರುವರು

ರಾಮನೋತ್ಸವ

ರಾಜಧಾನಿಯ ಲಕ್ಷ್ಮೀಪುರಂ ಸೀತಾರಾಮರಾವ್ ರಸ್ತೆಯಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೭ ಘಂಟೆಗೆ ವಿದ್ವಾನ್ ಚಿಕ್ಕಸ್ವಾಮಿಯವರ ಸಂಗೀತವು ಏರ್ಪಾಡಾಗಿರುತ್ತದೆ.

ಬರ್ಮಾದಲ್ಲಿ ಭೀಕರ ಕಾಳಗ

ರಂಗೂನಿಗೆ ೩೦೦ ಮೈಲಿ ದೂರವಿರುವ ಟೆನ್ನಾಸರಿಂ ಪ್ರದೇಶದಲಿ ಬರ್ಮಾ ಸೈನಿಕರಿಗೂ ರಾಷ್ಟ್ರೀಯ ಚೀಣಾಗಿಗೂ ಭೀಕರ ಕದನ ನಡೆದು, ರಾಷ್ಟ್ರೀಯರ ಕಡೆ ೭೫ ಮಂದಿ ಮೃತಪಟ್ಟಿರುತ್ತಾರೆಂದು ವರದಿಯಾಗಿದೆ ಚೀಣರು ಮೌಲ್ಮೀನ್ ಮತ್ತು ಟವ್ಯಾಯ್ ನಗರಗಳ ನಡುವೆ ಮಾರ್ಗವನ್ನು ಕಡಿದು ಹಾಕಿರುವರು

ಆಡುತ್ತಿದ್ದ ಮಕ್ಕಳಿಗೆ ವಿದ್ಯುತ್ ತಗುಲಿ ಮರಣ

ಬೆಂಗಳೂರು ಗವಿಪುರ ಗುಟ್ಟಹಳ್ಳಿ ಶ್ಯಾನುಭೋಗರಾದ ಶ್ರೀ ನಾರಾಯಣರಾಯರ ೧೧ ವರ್ಷದ ಶ್ರೀನಿವಾಸ ಮತ್ತು ಅವನ ತಂಗಿ ಇಬ್ಬರೂ ವಿದ್ಯುಚ್ಛಕ್ತಿ ಕಂಬದ ಗೈ ತಂತಿಯನ್ನು ಹಿಡಿದು ಆಡುತ್ತಿದ್ದಾಗ ವಿದ್ಯುಚ್ಛಕ್ತಿಯು ಪ್ರವಹಿಸಿ, ಅವರಿಬ್ಬರೂ ಕೂಡಲೇ ಮೃತಪಟ್ಟರು ಅವರ ದೇಹಗಳು ಕಪ್ಪಾಗಿ ಹೋದುವು.

ಬಳ್ಳಾರಿ ಭವಿಷ್ಯದ ನಿರ್ಧಾರಕ್ಕಾಗಿ ನ್ಯಾಯಾಧೀಶರು

ಬಳ್ಳಾರಿ ತಾಲ್ಲೂಕಿನ ಭವಿಷ್ಯವನ್ನು ಕುರಿತು ಪರಿಶೀಲನೆ ನಡೆಸಲು ಹೈದರಾಬಾದು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಲಕ್ಷ್ಮಿ ಶಂಕರ್ ಮಿಶ್ರರವರನ್ನು ಭಾರತ ಸರ್ಕಾರದವರು ನೇಮಿಸಿರುತ್ತಾರೆ ಜೂನ್ ತಿಂಗಳು ೧೫ ರೊಳಗೆ ಅವರು ತಮ್ಮ ತನಿಖೆಯನ್ನು ಪೂರೈಸಿ ವರದಿಯನ್ನು ಒಪ್ಪಿಸುವಂತೆ ಅವರಿಗೆ ಸೂಚಿಸಲಾಗಿದೆ ಅನಂತರ ಭಾರತ ಸರ್ಕಾರದವರು ತಮ್ಮ ಅಂತಿಮ ತೀರ್ಮಾನವನ್ನು ಮಾಡಲಿರುವರು

ತೆಲುಗು ಬೋರ್ಡಿದ್ದ ಬಸ್ಸಿಗೆ ಕನ್ನಡಿಗರ ತಡೆ

ತೆಲುಗಿನಲ್ಲಿ ಬರೆಯಲ್ಪಟ್ಟ ಬೋರ್ಡನ್ನು ಹೊಂದಿದ ಬಸ್ಸೊಂದು ಅನಂತಪುರ-ಬಳ್ಳಾರಿ ರಸ್ತೆಯಲ್ಲಿ ಚಲಗುರ್ಕಿ ಎಂಬ ಹಳ್ಳಿಯ ಬಳಿ ಮೊನ್ನೆ ಬರುತ್ತಿದ್ದಾಗ ಅದನ್ನು ೩೦ ಜನರು ತಡೆದರೆಂದೂ, ಅದಕ್ಕಾಗಿ ಅವರನ್ನು ದಸ್ತಗಿರಿ ಮಾಡಲಾಯಿತೆಂದೂ ವರದಿಯಾಗಿದೆ ಕನ್ನಡ ಭಾಷೆಯಲ್ಲಿ ಬೋರ್ಡನ್ನು ಬರೆಯುವಂತೆ ಅವರು ಬಸ್ಸು ಮಾಲೀಕರಿಗೆ ಕೂಗುತ್ತಿದ್ದರೆಂದು ಹೇಳಲಾಗಿದೆ

ಹರಿಹರದಲ್ಲಿ ಪಬ್ಲಿಕ್ ಪರೀಕ್ಷೆ ನಡೆಯಲಿಲ್ಲ!

ಪ್ರತಿ ವರ್ಷವೂ ನಡೆಯುತ್ತಿರುವಂತೆ ಈ ವರ್ಷವೂ ನಡೆಯಬೇಕಾಗಿದ್ದ ಸಂಸ್ಕೃತ ಪ್ರಥಮ ಪರೀಕ್ಷೆಯು ಕಳೆದ ೧೪ ನೇ ತಾ॥ ಹರಿಹರದಲ್ಲಿ ನಡೆಯಲಿಲ್ಲವೆಂದೂ, ಅದಕ್ಕೆ ಕುಳಿತಿದ್ದ ೭ ವಿದ್ಯಾರ್ಥಿಗಳು ಸಕಾಲಕ್ಕೆ ಬಂದು ಬೆಳಗ್ಗೆ ೧೦-೩೦ ಗಂಟೆಯಿಂದ ಮಧ್ಯಾಹ್ನ ೨-೩೦ ರ ವರೆಗೆ ಭವನದ ಬಳಿ ಕಾದು ನಿಂತಿದ್ದರೂ, ಬಾಗಿಲು ತೆರೆಯಲಿಲ್ಲವೆಂದೂ, ಪರೀಕ್ಷೆಯ ಚೀಫ್ ಸೂಪರಿಂಟೆಂಡೆಂಟರೂ ಹಾಜರಾಗಲಿಲ್ಲವೆಂದೂ ಹೇಳಲಾಗಿದೆ ಇದರಿಂದ ಗಾಬರಿಗೊಂಡು ವಿದ್ಯಾರ್ಥಿಗಳು ಮೇಲಧಿಕಾರಿಗಳಿಗೆ ತಂತಿ ಕಳುಹಿಸಿದ್ದರು ಚಿತ್ರದುರ್ಗ ಜಿಲ್ಲೆಯ ವಿದ್ಯಾಧಿಕಾರಿಗಳು ಈ ವಿಷಯವನ್ನು ಪರಿಶೀಲಿಸುತ್ತಿರುವರು

ಜರ್ಮನಿಗೆ ಮೈಸೂರಿನ ಆರು ಆನೆಗಳು

ಬೆಂಗಳೂರು ೨೫

ಮೈಸೂರು ಸಂಸ್ಥಾನದ ಆರು ಆನೆ ಮರಿಗಳನ್ನು ಜರ್ಮನಿಯ ಒಂದು ಮೃಗಾಲಯಕ್ಕೆ ಕೇಂದ್ರ ಸರ್ಕಾರದವರು ಮಾರಿರುತ್ತಾರೆ ನೆನ್ನೆ ರಾತ್ರಿ ಅವುಗಳನ್ನು ಇಲ್ಲಿಂದ ಮದ್ರಾಸಿಗೆ ರವಾನಿಸಲಾಯಿತು ಆ ಪೈಕಿ ೫ ವರ್ಷದ ಗಾಯತ್ರಿ ಎಂಬ ಆನೆಯೂ ಇದೆ

ಮತದಾರರ ಪಟ್ಟಿಯ ಪುನಸ್ಸಿದ್ಧತೆ

ಈ ವರ್ಷಕ್ಕಾಗಿ ಮತದಾರರ ಪಟ್ಟಿಯನ್ನು ಪುನರ್ವಿಮರ್ಶೆ ನಡೆಸಲು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಪಾರ್ಲಿಮೆಂಟಿಗೆ ಕೋಲಾರ ಪ್ರಾಂತದಿಂದ ನಡೆಯುವ ಎಲ್ಲ ಅಸೆಂಬ್ಲಿ ಕ್ಷೇತ್ರಗಳು, ಬೆಂಗಳೂರು ನಗರದ ೭ ಕ್ಷೇತ್ರಗಳು, ಮೈಸೂರು ನಗರದ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳು, ಚನ್ನಪಟ್ಟಣ, ದಾವಣಗೆರೆ ಮತ್ತು ಎಲ್ಲಾ ಪೌರಸಭಾ ಕ್ಷೇತ್ರಗಳಲ್ಲೂ ಮನೆ ಮನೆಗೆ ಹೋಗಿ ಓಟರುಗಳ ಬಗ್ಗೆ ಕ್ರಮವಾಗಿ ಪರಿಶೀಲನೆ ನಡೆಸಲಾಗುವುದು. ಉಳಿದ ಕಡೆಗಳಲ್ಲಿ ಈಗಿರುವ ಪಟ್ಟಿಯ ಆಧಾರದ ಮೇಲೆ ಪುನರ್ವಿಮರ್ಶೆ ನಡೆಯುವುದು ಪಟ್ಟಿಯನ್ನು ಹಂಗಾಮಿಯಾಗಿ ಜುಲೈ ೭ ನೇ ತಾ॥ ಪ್ರಕಟಿಸಿ, ಅಂತಿಮವಾಗಿ ಸೆಪ್ಟೆಂಬರ್ ೩೦ರಂದು ಹೊರಗೆಡಹಲಾಗುವುದು

ರಾಜಕೀಯದಿಂದ ನಾಜೀಮ್-ಉದ್ದೀನರ ನಿವೃತ್ತಿ

ಪಾಕಿಸ್ತಾನದ ರಾಜಕೀಯದಿಂದ ನಿವೃತ್ತರಾಗಲು ಮಾಜಿ ಪ್ರಧಾನಿ, ನಾಜಿಮುದ್ದೀನರು ನಿರ್ಧರಿಸಿರುವರೆಂದು ವರದಿಯಾಗಿದೆ ಅವರು ಅಲ್ಲಿನ ಮುಸ್ಲಿಂ ಲೀಗ್ ಸಂಸ್ಥೆಯ ಅಧ್ಯಕ್ಷತೆಯನ್ನೂ ಬಿಟ್ಟುಬಿಡಲಿರುವರೆಂದು ಹೇಳಲಾಗಿದೆ.

ಮಂಡ್ಯ ಜಿಲ್ಲಾ ಬೋರ್ಡು ಕಟ್ಟಡದ ಆರಂಭ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಂಡ್ಯ ಜಿಲ್ಲಾ ಬೋರ್ಡ್ ಕಛೇರಿ ಕಟ್ಟಡದ ಆರಂಭೋತ್ಸವವನ್ನು ಶನಿವಾರ ನೆರವೇರಿಸುವರು.

ಕೃಷ್ಣಾಪುರದಲ್ಲಿ ರಥೋತ್ಸವ

ಟಿ. ನರಸಿಪುರ ತಾಲ್ಲೂಕಿನ ಕೃಷ್ಣಾಪುರದಲ್ಲಿ ಶ್ರೀ ಸನ್ಯಾಸ ಗೋಪಾಲಕೃಷ್ಣ ಸ್ವಾಮಿಯವರ ರಥೋತ್ಸವವು ಕಳೆದ ೧೫ ನೇ ತಾ॥ ವಿಜೃಂಭಣೆಯಿಂದ ನಡೆಯಿತು ಆದರೆ ರಥವು ಚಲಿಸುತ್ತಿದ್ದಾಗ ಅದರ ಕಲಶಕ್ಕೆ ತಂತಿ ಮರದ ಸೋಗೆ ತಗುಲಿ ಕಲಶವು ಕೆಳಕ್ಕೆ ಬಿತ್ತು ಅದಕ್ಕಾಗಿ ಶಾಂತಿ ಹೋಮವನ್ನು ನಡೆಸಲಾಯಿತು ರಥವು ಬಹಳ ಹಳೆಯದಾಗಿದೆ ಹೊಸ ರಥವನ್ನು ಮಾಡಿಸಲು ಭಗವದ್ಭಕ್ತರು ದ್ರವ್ಯ ಸಹಾಯ ಮಾಡಬೇಕೆಂದು ಕೋರಲಾಗಿದೆ ಶ್ರವಣ ನಕ್ಷತ್ರದಲ್ಲಿ ರಥೋತ್ಸವವು ಆಗುವುದು ಮೊದಲಿನಿಂದ ಅವಶ್ಯವು ನಡೆಯುವುದಕ್ಕಾಗಿ ಆ ನಕ್ಷತ್ರದಲ್ಲಿ ಆಸ್ತಿಕರು ವಿಶೇಷ ಸೇವೆಯನ್ನು ನಡೆಸಬೇಕೆಂದೂ ಸೂಚಿಸಲಾಗಿದೆ

ವಿದ್ಯಾರ್ಥಿ ಸಂಘದ ಆರಂಭೋತ್ಸವ

ಹೆಗ್ಗಡದೇವನಕೋಟೆ —

ಊರಿನ ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವವು ... ಚನ್ನಯ್ಯ ... ಹಸರವನ ... ನೆರವೇರಿಸಲ್ಪಟ್ಟಿತು ... [illegible]

ಚೀಫ್ ಎಲೆಕ್ಟ್ರಿಕ್ ... ಶ್ರೀ ... ಶಿವಪ್ರಕಾಶಂ, ಜಿಲ್ಲಾಧಿಕಾರಿ ಶ್ರೀ ... ಎಕ್ಸಿಕ್ಯೂಟಿವ್ ಇಂಜನಿಯರ್ ... ಅಧಿಕಾರಿಗಳು ... ಆಗಮಿಸಿದ್ದರು. ಪ್ರಾರ್ಥನೆಯಾದನಂತರ, ... ಸ್ವಾಗತ ಭಾಷಣ ಮಾಡಿ ಊರಿನ ಅನೇಕ ಅವಶ್ಯಕತೆಗಳ ... ಅರ್ಪಿಸಿದರು.

ಶ್ರೀ ಶಿವಪ್ರಕಾಶಂರವರು ಭಾಷಣ ಮಾಡಿ ವಿದ್ಯಾರ್ಥಿ ಸಂಘದ ಉಪಯೋಗ ... ಬಳಸುವ ಕ್ರಮಗಳ ... ತಿಳುವಳಿಕೆಗಳನ್ನಿತ್ತರು. ... [illegible]

ಕೋಳಿ ಮರಿಗಳ ಭಾಷೆ

ಕೋಳಿ ಮರಿಗಳು ಬಳಸುವ ಭಾಷೆಯನ್ನು ಅರಿಯಲು ... ವಿಶ್ವವಿದ್ಯಾಲಯಗಳ ... ಸಹಾಯದಿಂದ ... ಕೊಳ್ಳಲಾಗಿದೆ.

ವೆಸ್ಟ್‌ಲೇಕ್ ಭವನಕ್ಕೆ ಜಲಸನ್ನಿಧಿ ಎಂದು ನಾಮಕರಣ

ರಾಜಧಾನಿಯ ... ಜಲಸನ್ನಿಧಿ ಯೆಂದು ನಾಮಕರಣ ಮಾಡಲಾಗಿದೆ.

ಉಪನ್ಯಾಸ

... ಶ್ರೀ ... ಗಂಟೆಗೆ ... ಶಂಕರ ... ಮಾಡಿದರು. ಸರ್ವರಿಗೂ ಸ್ವಾಗತವಿದೆ. [illegible]

ಮದ್ರಾಸಿನ ಗ್ರಾಮಾಂತರ ಠಾಣೆಗಳಲ್ಲಿ ಕ್ಷಾಮ ...

[illegible]

೩೦ ವರ್ಷಗಳಿಂದ ನಿದ್ರೆ ಇಲ್ಲದ ಮನುಷ್ಯ

ಇಟಲಿಯ ... ಎಂಬಲಿ ... [illegible]

ರಾಜಪ್ರಮುಖರಿಗೆ ೨೦೦೦ ರೂ ಮಿರಾಮು ವೇತನ

[illegible] ... ೨೦೦೦ ರೂ ... ಸರ್ಕಾರ ... ಜನರಲ್ಲಿ ... [illegible]

ಇಟ್ಟಿಗೆ ಗೂಡಿನ ಕೆಳಗೆ ದೇವರ ಪ್ರತಿಮೆಗಳು

... ತಮಿಳು ನಾಡಿನ ... ಇಟ್ಟಿಗೆಗೂಡಿನ ... ಉತ್ತಮ ಶಿಲ್ಪ ಕಲಾ ಕೌಶಲ್ಯಗಳಿಂದ ... ದೊರೆತಿವೆ ... [illegible]

ನಿಮ್ಮ ಪತ್ರಿಕೆ

ಮೈಸೂರು ... ಪತ್ರಿಕೆ ... [illegible]

ವ್ಯವಸಾಯ ಇಲಾಖೆಯಿಂದ ಪ್ರಯೋಜನವಿಲ್ಲ

ಮಂತ್ರಿ, ಸಿದ್ದವೀರಪ್ಪನವರ ಹೇಳಿಕೆ ಚಿಕ್ಕಮಗಳೂರು ...

ಗ್ರಾಮಾಂತರ ಪ್ರದೇಶಗಳ ಜನರ ದೃಷ್ಟಿಯಲ್ಲಿ ವ್ಯವಸಾಯ ಇಲಾಖೆಯಿಂದ ಇದುವರೆಗೆ ಪರಿಣಾಮಕಾರಿಯಾದ ಯಾವ ನೆಲವೂ ದೊರೆತಿಲ್ಲವೆಂದೂ, ... ಲಾಖೆಯನ್ನು ರದ್ದು ಮಾಡುವಂತೆ ... ಶ್ರೀ ಸಿದ್ದವೀರಪ್ಪನವರು ಹೇಳಿರುವರು. ... ಅವರು ತಿಳಿಸಿದರು.

ಉರಿಗಾಂ ಕಾರ್ಮಿಕರಿಂದ ಹರತಾಳ

ಉರಿಗಾಂ ಚಿನ್ನದ ಗಣಿಯನ್ನು ಮುಚ್ಚಬೇಕೆಂದಿರುವುದಕ್ಕಾಗಿ ... ಪ್ರತಿಭಟನೆ ... ಹರತಾಳವನ್ನು ಆಚರಿಸಲಿರುವರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ	ರೂ
ಕಡಲೇಕಾಯಿ	೩೦ ೦ ೦	೩೫ ೦ ೦
ಎಳ್ಳು	೭೫ ೦ ೦	
ಹರಳು	೩೦ ೦ ೦	೩೫ ೦ ೦
ಹುಚ್ಚೆಳ್ಳು	೫೦ ೦ ೦	
ಹೊಂಗೆಬೀಜ	೧೮ ೦ ೦	೨೦ ೦ ೦
ಹುರುಳಿ	[illegible]	[illegible]
ಅವರೆ	[illegible]	
ಹೆಸರು	[illegible]	[illegible]
[illegible]	[illegible]	[illegible]
ಅಕ್ಕಿ ಮುಡಿ	[illegible]	[illegible]
ಹುಣಸೇಹಣ್ಣು	[illegible]	[illegible]
ತೆಂಗಿನಕಾಯಿ	[illegible]	[illegible]
ಬೆಲ್ಲ	[illegible]	

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ... ಸಂಗೀತ ... ರಾಮಚಂದ್ರ ... [illegible]

ಒಲಂಪಿಯಾ ಟಾಕೀಸ್

24-4-53 ರಿಂದ ಅನಿರೀಕ್ಷ ಪ್ರಾರಂಭ ಪ್ರತಿದಿನ ೩ ಆಟಗಳು

... ಪಿಕ್ಚರ್ಸ್ ರವರ **ಆರ್ ಪಾರ್**

ಪ್ರೇಮ, ... ವಾಗಿ ಚಿತ್ರಿಸುವ ಉತ್ತಮ ಕಲಾಕೃತಿ ... [illegible]

TRADE MARKS CAUTION NOTICE

8 Regd. No. [illegible] | **125** Regd. No. [illegible] Mys.

808 Regd. No. [illegible] Mys. | **B** Regd. No. 4016 Mys.

Notice is hereby given that the above mentioned Trade Marks adopted and shown as above, have been registered under the Trade Marks Act of 1940 in respect of Soaps falling in Class [illegible], of the Trade Marks Rules in the name of Messrs The Raja Soap Factory, Ldiga 2nd Div., Mysore, and is the exclusive property of the said firm, within the meaning of the Act. The Public is hereby warned that Legal Action will be taken against any person or persons or firms who use the Said Trade Marks or any other colour imitation thereof, upon or in relation to the aforementioned article anywhere in the Indian Union which will constitute an infringement of the Registered Proprietor's Statutory Rights to the use of the Said Trade Marks.

THE RAJA SOAP FACTORY,
Ldiga 2nd Division Mysore

Edited, Printed and Published by A R Nagarajan at Sadhvi Press, D Subbaiah Road, Mysore

ಫೋನ್ ನಂ 792 ವಂದೇ ಮಾತರಂ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೩-೪-೧೯೫೩ [ಸಂಚಿಕೆ ೨೦೬

ಬರ್ಮಾದಿಂದ ಚೀಣಾರ ಉಚ್ಚಾಟನೆಗೆ ಒಪ್ಪಿಗೆ

ಕಂದಾಯ ಇಳಿಸದಿದ್ದರೆ ರಾಜೀನಾಮೆ ಕೊಡಬೇಕು

ಬಹಿರಂಗ ಸಭೆಯಲ್ಲಿ ಪೌರಸಭಾ ಸದಸ್ಯರಿಗೆ ಒತ್ತಾಯ

ಮೈಸೂರು ೨೩

ಇಲ್ಲಿನ ಪುರಸಭೆಯವರು ಮನೆಗಂದಾಯವನ್ನು ಬಹಳವಾಗಿ ಏರಿಸಿರುವುದನ್ನು ಪ್ರತಿಭಟಿಸಲು ಕೃಷ್ಣರಾಜ, ವಿಲ್ಲಿ ಮತ್ತು ಚಾಮರಾಜ ಮೊಹಲ್ಲಾ ನಿವಾಸಿಗಳ ಸಭೆಯೊಂದು ನೆನ್ನೆ ಮಾನಂದವಾಡಿ ಸರ್ಕಲ್ ಬಳಿ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ವಿರಲಾನಂದ ಕುನ್ನನ್, ನರಸಿಂಹಮೂರ್ತಿ ವಿಶ್ವೇಶ್ವರಭಟ್ಟರು, ಎ ಎನ್ ಸೂರ್ಯನಾರಾಯಣರಾವ್ ಸೋಮಸುಂದರ ಶರ್ಮ, ಮತ್ತು ಡಾ|| ಶ್ರೀನಿವಾಸಯ್ಯಂಗಾರರು ಭಾಷಣ ಮಾಡಿ ಮನೆಗಂದಾಯವನ್ನು ಮಿತಿ ವಿಚಾರ ಮತ್ತು ಪಕ್ಷಪಾತದಿಂದ ಏರಿಸಿರುವ ಪುರಸಭೆಯ ನೀತಿಯನ್ನು ಕಟುವಾಗಿ ಟೀಕಿಸಿದರು ಈ ಕೆಳಗಿನ ನಿರ್ಣಯಗಳನ್ನು ಮಾಡಲಾಯಿತು,—

೧ ಬಾಡಿಗೆಗೆ ಕೊಡದೆ ಸ್ವತಃ ಬದಲಾವಣೆ ಮಾಡದೆ ಇರುವ ಮನೆಗಳಿಗೆ ಕಂದಾಯವನ್ನು ಏರಿಸಕೂಡದೆಂದು ಹಿಂದೆ ಪುರಸಭೆಯಲ್ಲಿ ಮಾಡಿರುವ ನಿರ್ಣಯವನ್ನು ಜಾರಿಗೆ ತರಬೇಕು

೨ ಬಾಡಿಗೆಗೆ ಕೊಟ್ಟಿರುವ ಮನೆಗಳ ಮೇಲೆ ಬಾಡಿಗೆ ಅಂದಾಜಿನ ಶೇ|| ೯ ರಷ್ಟು ಮತ್ತು ಮಾಲೀಕರೇ ವಾಸವಾಗಿರುವ ಮನೆಗಳ ಮೇಲೆ ಶೇ|| ೬ ರಷ್ಟು ಕಂದಾಯ ವಿಧಿಸಬೇಕು

೩ ಮನೆ ಬಾಡಿಗೆಯಲ್ಲದೆ ಮಾಲೀಕರಿಗೆ ಬೇರೆ ಜೀವನೋಪಾಯವಿಲ್ಲದಿರುವಂಥವರ ಮನೆಗಳಿಗೂ ಶೇ|| ೬ ರಂತೆ ಕಂದಾಯ ವಿಧಿಸಬೇಕು

೪ ಪ್ರತಿ ಮನೆಯ ಮುಂದೆಯೂ ೧೯೫೧-೫೨ ರಲ್ಲಿದ್ದ ಕಂದಾಯ ಮತ್ತು ಈಗ ವಿಧಿಸಿರುವ ಕಂದಾಯಗಳನ್ನು ಬರೆಯಬೇಕು

೫ ಇನ್ನು ಒಂದು ತಿಂಗಳೊಳಗೆ ಈ ಮೇಲಿನ ಕ್ರಮಗಳನ್ನು ಪುರಸಭೆಯವರು ಜಾರಿಗೆ ತರದಿದ್ದರೆ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕು

ಆಹಾರ ಧಾನ್ಯದ ಬೆಲೆಯನ್ನು ಇಳಿಸಲು ಸರ್ಕಾರಕ್ಕೆ ಮನವಿ

ರಾಜಧಾನಿಯ ಆಹಾರ ಕ್ರಿಯಾ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಎಂ ಎನ್ ತಿಪ್ಪಯ್ಯನವರು ಆಹಾರದ ಬಗ್ಗೆ ಸಂಸ್ಥಾನದಲ್ಲಿ ಹತೋಟಿಯನ್ನು ರದ್ದು ಮಾಡಿರುವುದನ್ನು ಸ್ವಾಗತಿಸಿರುತ್ತಾರೆ ಫೇರ್ ಪ್ರೈಸ್ ಡಿಪೋಗಳಲ್ಲಿ ಮಾರಾಟವಾಗುವ ಧಾನ್ಯದ ಬೆಲೆಯನ್ನು ಇಳಿಸಿ ಬಡವರಿಗೆ ಇರುವ ತೊಂದರೆಯನ್ನು ಪರಿಹರಿಸಬೇಕೆಂದು ಅವರು ಕೋರಿರುತ್ತಾರೆ ಹಾಗೆ ಬೆಲೆ ಇಳಿಸಲು ಸರ್ಕಾರದವರು ಸೂಕ್ತ ಭರವಸೆಯೀಯದಿದ್ದರೆ ಆಹಾರ ಕ್ರಿಯಾ ಸಮಿತಿಯವರು ಹಿಂದೆ ಕೊಟ್ಟಿರುವ ಎಚ್ಚರಿಕೆಯಂತೆ ಉಗ್ರ ಚಳುವಳಿಯನ್ನು ಹೂಡಬೇಕಾಗುವುದೆಂದು ತಿಳಿಸಿರುತ್ತಾರೆ

ಚಿಯಾಂಗರಿಗೆ ಅಮೆರಿಕಾ ಮನ್ನಣೆ ತಪ್ಪುವುದೇ?

ಚೀಣಾ ಜನರನ್ನು ಪ್ರತಿನಿಧಿಸಲು ಚಿಯಾಂಗರಿಗೆ ಸಾಧ್ಯವಿಲ್ಲವೆಂದು ಮನಗಂಡು, ಅವರ ಸರ್ಕಾರಕ್ಕೆ ಈಗ ಕೊಡಲಾಗಿರುವ ಮನ್ನಣೆಯನ್ನು ಅಮೆರಿಕ ಸರ್ಕಾರದವರು ವಾಪಸು ತೆಗೆದುಕೊಳ್ಳಲಿರುವರೆಂದೂ ಕೊರಿಯದಲ್ಲಿ ಗೌರವಯುತವಾದ ಒಪ್ಪಂದವು ನಡೆದರೆ ಇದು ಕಾರ್ಯಗತವಾಗುವುದೆಂದೂ ಹೇಳಲಾಗಿದೆ

ಪಾರಿವಾಳಗಳ ಮದುವೆ!

ಭೂಪಾಲ್ ನಗರದಲ್ಲಿ ಪಾರಿವಾಳಗಳ ವಿವಾಹವನ್ನು ವೈಭವದಿಂದ ನೆರವೇರಿಸಲಾಯಿತು 'ಮದುವಣಿಗ'ನ ಮಾಲೀಕರು ಭಾರಿ ವ್ಯವಸ್ಥೆ ಮಾಡಿದರು ವರನನ್ನು ಊರಿನಲ್ಲಿ ಮೆರವಣಿಗೆ ಮಾಡಿ ವಧುವಿನ ಮನೆಗೆ ಕರೆದೊಯ್ದು ಅಲ್ಲಿ ಶಾಸ್ತ್ರೋಕ್ತವಾಗಿ ಮದುವೆಯನ್ನು ನಡೆಸಲಾಯಿತು ಸಂಗೀತ ನರ್ತನ ಗೋಷ್ಠಿಯೂ ನಡೆದವು ಹೆಣ್ಣನ್ನು ಗಂಡನ ಮನೆಗೆ ಕರೆತರುವ ಶಾಸ್ತ್ರವೂ ಆಯಿತು ಈ ಸಮಾರಂಭಕ್ಕೆ ಅನೇಕರು ಬಂದಿದ್ದರು

ರೈಲಿಗೆ ಸಿಕ್ಕ ಯುವಕನ ಮರಣ

ನಂಜನಗೂಡು ಕಡೆಗೆ ಹೋಗುವ ರೈಲಿಗೆ ನೆನ್ನೆ ಮಧ್ಯಾಹ್ನ ಇಲವಾಲದ ರಸ್ತೆಯಲ್ಲಿರುವ ಸೇತುವೆ ಬಳಿ ಒಬ್ಬ ಯುವಕನು ಸಿಕ್ಕಿಕೊಂಡು ಮೃತಪಟ್ಟಿರುತ್ತಾನೆ ಅವನು ಯಾರೆಂಬುದು ತಿಳಿದುಬಂದಿಲ್ಲ ಶವವನ್ನು ಪರೀಕ್ಷೆಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕಳುಹಿಸಲಾಗಿದೆ

ಉದಕಮಂಡಲ ಮತ್ತು ಮಂಗಳೂರಿಗೆ ಮುಖ್ಯಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮುಂದಿನ ತಿಂಗಳು ೯ನೇ ತಾ|| ಉದಕಮಂಡಲಕ್ಕೆ ತೆರಳಿ ಅಲ್ಲಿ ೧೬ನೇ ತಾ|| ವರೆಗೆ ಇರುವರು ಇದಕ್ಕೆ ಮುಂಚೆ ೬ನೇ ತಾ|| ಅವರು ಮಂಗಳೂರಿಗೆ ಹೋಗಿ ಅಲ್ಲಿ ಮದ್ರಾಸು ಪ್ರಾಂತೀಯ ಶಿಕ್ಷಣ ಸಮ್ಮೇಳನದ ೪೩ನೇ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸುವರು ೭ನೇ ತಾ|| ಅವರು ಉಡುಪಿಗೆ ಭೇಟಿಯಿತ್ತು, ೮ನೇ ತಾ|| ಮಡಿಕೇರಿ ಮತ್ತು ಮೈಸೂರು ಮಾರ್ಗವಾಗಿ ನೀಲಗಿರಿಗೆ ಹೋಗುವರು

ಬರ್ಮಾದಿಂದ ರಾಷ್ಟ್ರೀಯ ಚೀಣಾರ ಉಚ್ಚಾಟನೆ

ವಿಶ್ವ ಸಂಸ್ಥೆಯ ರಾಜಕೀಯ ಸಮಿತಿಯು ಬರ್ಮಾದಲ್ಲಿರುವ ವಿದೇಶೀ ಸೈನ್ಯಗಳನ್ನು ನಿಶ್ಶಸ್ತ್ರೀಕರಿಸುವಂತೆ ಕೋರುವ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಿರುತ್ತದೆ ಅಲ್ಲದೆ ಆ ಸೈನ್ಯಗಳನ್ನು ಕೂಡಲೇ ಬರ್ಮಾದಿಂದ ರವಾನಿಸಲೂ ಸಹ ಅವರಲ್ಲಿ ಸೂಚಿಸಲಾಗಿದೆ ನಿರ್ಣಯಕ್ಕೆ ಸ್ಪಷ್ಟವಾದ ಬಲವಿತ್ತಿದೆ ಬರ್ಮಾ ಮತ್ತು ಚೀಣಾಗಳು ಮಾತ್ರ ಈ ತೀರ್ಮಾನದಲ್ಲಿ ಭಾಗವಹಿಸಲಿಲ್ಲ ಬರ್ಮಾದಲ್ಲಿ ರಾಷ್ಟ್ರೀಯ ಚೀಣಾರು ಇರುವ ಬಗ್ಗೆ ಬರ್ಮಾ ಸರ್ಕಾರದವರು ವಿಶ್ವಸಂಸ್ಥೆಗೆ ದೂರು ಕೊಟ್ಟಿದ್ದರು

ಶಿವಮೊಗ್ಗಾ ಬಳಿ ಚರಂಡಿ ದುರಂತದಲ್ಲಿ ೫ ಮರಣ

ಶಿವಮೊಗ್ಗೆಯ ಬಜಾರ್ ಅಂಚೆ ಕಛೇರಿ ಬಳಿ ನೆನ್ನೆ ಒಳ ಚರಂಡಿಗಾಗಿ ಭೂಮಿಯಲ್ಲಿ ೨೦ ಅಡಿ ಕೆಳಗೆ ಅಗೆಯುತ್ತಿದ್ದಾಗ ಮೇಲಿದ್ದ ರಾಶಿ ಮಣ್ಣು ಮಗುಚಿಕೊಂಡು ೫ ಅಥವಾ ೭ ಮಂದಿ ಪ್ರಾಣ ಬಿಟ್ಟಿರುವರೆಂದು ವರದಿಯಾಗಿದೆ ಚರಂಡಿಯೊಳಗೆ ಭಾರಿ ಕೊಳವೆಗಳನ್ನು ಹಾಕುವಾಗ ಈ ದುರಂತವು ನಡೆಯಿತು

ತುಂಗಭದ್ರಾ ಯೋಜನೆಗೆ ಮೈಸೂರು ಇಂಜನಿಯರು

ಸರ್ಕಾರದ ಮರಾಮತ್ತು ಮತ್ತು ವಿದ್ಯುಚ್ಛಕ್ತಿ ಇಲಾಖಾ ಕಾರ್ಯದರ್ಶಿ ಶ್ರೀ ಸಿ ಆರ್ ಕೃಷ್ಣಸ್ವಾಮಿ ಮುದಲಿಯಾರರನ್ನು ತುಂಗಭದ್ರಾ ಕಣಿವೆ ಯೋಜನೆಯ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಿಸಲಾಗಿದೆ

ಪ್ರಾರಂಭೋತ್ಸವ

ನಂಜನಗೂಡು ತಾಲ್ಲೂಕು ಹುರದಲ್ಲಿ ಯುವಕ ಸಂಘದ, ಪುಸ್ತಕ ಭಂಡಾರ ಮತ್ತು ವಾಚನಾಲಯದ ಆರಂಭೋತ್ಸವವು ನಾಳೆ ಸಂಜೆ ೪|| ಗಂಟೆಗೆ ನಡೆಯುವುದು ತಾಲ್ಲೂಕು ಅಮಲ್ದಾರರಾದ ಶ್ರೀ ಸಿ ಕೆ ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸುವರು ಶ್ರೀ ಕ ರಾ. ಸುಬ್ಬರಾಯರು ಆರಂಭ ಭಾಷಣ ಮಾಡುವರು

ಆಹಾರ ದಾಸ್ತಾನು ಮಾಡುವವರಿಗೆ ಸಚಿವರ ಎಚ್ಚರಿಕೆ

ಮೈಸೂರು ೨೩

ಆಹಾರ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಏನೇ ಆದರೂ ಸರ್ಕಾರದವರು ಪುನಃ ಹತೋಟಿಯನ್ನು ತರುವುದಿಲ್ಲವೆಂದು ತಿಳಿಸಿದ್ದಾರೆ

ಆಹಾರ ಧಾನ್ಯವನ್ನು ಮಾರುವವರು ರಹದಾರಿ ಪಡೆಯುವುದು ಅವಶ್ಯಕವೆಂದೂ, ಆದರೆ ಸಣ್ಣ ಸಣ್ಣ ವರ್ತಕರಿಗೆ ತೊಂದರೆಯಾಗದಿರುವಂತೆ ಸರ್ಕಾರದವರು ಸಾಧ್ಯವಾದಷ್ಟು ಕಾಲದವರೆಗೂ ರಹದಾರಿಯ ಬಗ್ಗೆ ಒತ್ತಾಯಪಡಿಸುವುದಿಲ್ಲವೆಂದೂ ಅವರು ಹೇಳಿ, ಪರಿಸ್ಥಿತಿಯನ್ನು ದುರುಪಯೋಗಿಸಿಕೊಂಡು, ಕೊಳ್ಳುವವರ ಹಿತದ ವಿರುದ್ಧವಾಗಿ ದಾಸ್ತಾನು ಮಾಡುವ ವರ್ತಕರು ಮತ್ತು ಸಮಾಜ ಘಾತಕರ ಮೇಲೆ ಕ್ರೂರ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು

ಉರ್ದು ಪತ್ರಿಕೆಯ ಸ್ಪರ್ಧೆಯ ಬಗ್ಗೆ ಎಚ್ಚರಿಕೆ

ರಾಜಧಾನಿಯ ಫಿಲಂ ಆವಾಜ್ ಎಂಬ ಉರ್ದು ಪತ್ರಿಕೆಯು ಶ್ರೀ ಅಬ್ದುಲ್ ಅಲ್ಲಿಖಾನ್ ಸಾಹಿದ್ ಮತ್ತು ಇಕ್ಬಾಲ್ ಅಲ್ಲಿಖಾನ್ ಮುರಾದಾಬಾದ್‌ರವರು ಮುರಾದಾಬಾದ್ ಮೌಮ ಎಂಬ ಹೆಸರಿನಲ್ಲಿ ಸ್ಪರ್ಧೆ ನಡೆಸುತ್ತಿರುವುದಾಗಿಯೂ, ಈ ಬಗ್ಗೆ ಬಹುಮಾನದ ವಿಚಾರದಲ್ಲಿ ನೊಂದವರು ಯಾರಾದರೂ ಇದ್ದರೆ, ನಗರದ ಕ್ರೈಂ ಬ್ರಾಂಚ್ ಪೋಲೀಸರಿಗೆ ತಿಳಿಸಬಹುದೆಂದೂ ಸೂಚಿಸಲಾಗಿದೆ

ಸಂಗೀತ

ರಾಜಧಾನಿಯ ಲಕ್ಷ್ಮೀಪುರದ ಸೀತಾರಾಮರಾವ್ ರಸ್ತೆಯಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ಶ್ರೀ ರಾಮೋತ್ಸವದ ಅಂಗವಾಗಿ ಈ ಸಂಜೆ ೭ ಗಂಟೆಗೆ ಕುಮಾರಿ ಗಿರಿಜಾರವರ ಸಂಗೀತವು ನಡೆಯುವುದು ನಾಳೆ ಹರಿಕಥೆಯು ಏರ್ಪಾಡಾಗಿದೆ ನಾಳಿದ್ದು ಮಾಸ್ಟರ್ ಶ್ರೀನಿವಾಸಮೂರ್ತಿಯವರ ವೀಣಾ ವಾದನವು ನಡೆಯುವುದು

ಹುಂಜ ಮೊಟ್ಟೆ ಇಟ್ಟ ಪ್ರಸಂಗ!

ಶ್ರೀನಗರದ ಪ್ರತಾಪ ಕಾಲೇಜಿನ ವಿದ್ಯಾರ್ಥಿಯೊಬ್ಬನು ಸಾಕಿದ ಒಂದು ಹುಂಜವು ಗುಂಡಾಗಿರುವ ೩ ಮೊಟ್ಟೆಗಳನ್ನು ಇಟ್ಟಿರುವುದಾಗಿ ವರದಿಯಾಗಿದೆ

ಬೆಂಗಳೂರು ಪಿಂಗಾಣಿ ಕಾರ್ಖಾನೆಗೆ ೭೫ ಲಕ್ಷ ರೂ-

ಬೆಂಗಳೂರಿನ ಪಿಂಗಾಣಿ ಕಾರ್ಖಾನೆಯಲ್ಲಿ ಹೈಟೆನ್ಶನ್ ಇನ್ಸುಲೇಟರುಗಳನ್ನು ತಯಾರಿಸುವ ಯೋಜನೆಗಾಗಿ ೭೫ ಲಕ್ಷ ರೂಗಳ ವೆಚ್ಚವಾಗಲಿರುವುದಾಗಿಯೂ ಈ ಕಾರ್ಖಾನೆಯು ಹಾಲಿ ಉತ್ಪತ್ತಿ ಮಾಡುತ್ತಿರುವ ೧೯೦ ಟನ್ ಸಾಮಾನನ್ನು ೨೨೦೦ ಟನ್‌ಗೆ ಹೆಚ್ಚಿಸಲಾಗುವುದೆಂದೂ ಕೇಂದ್ರ ವಾಣಿಜ್ಯ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ

○ ಜಿಲ್ಲಾಧಿಕಾರಿ ಶ್ರೀ ಮಹಮದ್ ಹಮೀದ್‌ರಿಗೆ ಈ ತಿಂಗಳ ಅಖೈರು ವರೆಗೆ ರಜಾ ಕೊಡಲಾಗಿದೆ

ಹರಿದ್ವಾರದಲ್ಲಿ ಕರ್ಣಾಟಕ ಭವನದ ಯೋಜನೆ

ಪವಿತ್ರವಾದ ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ಮತ್ತು ಗಂಗಾ ಭಾಗೀರಥೀ ನದಿಯ ದಂಡೆಯ ಮೇಲೆ ಸ್ಥಿತವಾದ ಪ್ರಸಿದ್ಧ ಹರಿದ್ವಾರವು ಭಾರತದ ಪ್ರಮುಖ ಕ್ಷೇತ್ರಸ್ಥಳಗಳಲ್ಲೊಂದು. ಉತ್ತರ ಖಂಡದ ಪವಿತ್ರ ಯಾತ್ರಾಸ್ಥಳಗಳಾದ [illegible] ಬದರೀನಾಥ ಕೇದಾರನಾಥಗಳ ಸಂದರ್ಶನಕ್ಕೆ ಹೋಗಲು ಹರಿದ್ವಾರವೇ ಹೆಬ್ಬಾಗಿಲು.

ದಕ್ಷಿಣ ಭಾರತದಿಂದ ವರ್ಷಂಪ್ರತಿ ಸಾವಿರಾರು ಯಾತ್ರಾರ್ಥಿಗಳು ಇಲ್ಲಿಗೆ ಬಂದು ಗಂಗಾ ಭಾಗೀರಥಿಯ ದರ್ಶನ ಪಡೆದು, ನಾಲ್ಕಾರು ದಿವಸಗಳು ವಿಶ್ರಮಿಸಿಕೊಂಡು ಮುಂದೆ ಉತ್ತರ ಖಂಡದ ಯಾತ್ರೆಗಳಿಗೆ ಹೊರಡುವ ಪದ್ಧತಿ. ಇಲ್ಲಿನ ಪ್ರಕೃತಿ ಸೌಂದರ್ಯ ಮತ್ತು ಶಾಂತಿಯುತ ವಾತಾವರಣಕ್ಕೆ ಮನಸೋತು ಬಂದವರು ದಿವಸಕ್ಕೆಂದು ಬಂದ ಜನ [illegible] ನಾಲ್ಕಾರು ದಿವಸಗಳು ತಂಗಿದ್ದು [illegible] ಮುಂದಕ್ಕೆ ಹೊರಡುವುದು ಸಾಮಾನ್ಯವಾದ ವಿಷಯ.

ಹರಿದ್ವಾರದಲ್ಲಿ ಭಾರತದ ನಾನಾ ಸ್ಥಳಗಳ ಮತ್ತು ಪ್ರಾಂತಗಳ ಜನರಿಂದ ಕಟ್ಟಲ್ಪಟ್ಟ ಅನೇಕ ಧರ್ಮಶಾಲೆಗಳೂ, ವಸತಿ ಗೃಹಗಳೂ ಇದ್ದರೂ ಸಹ, ದಕ್ಷಿಣ ಭಾರತೀಯರಿಗೆ, ವಿಶೇಷತಃ ಕನ್ನಡಿಗರಿಗೆ ಸರಿಯಾದ ವಸತಿ ಇಲ್ಲವೆಂದೇ ಹೇಳಬೇಕು. ಅಲ್ಲದೇ, ಸ್ಥಳದ ಭಾಷೆ, ಇಲ್ಲಿನ ರೀತಿ ನೀತಿಗಳ ಅರಿವು ಮತ್ತು ಅನನುಭವಗಳ ಫಲವಾಗಿ, ತೊಂದರೆ ಪಡುವ [illegible] ಕನ್ನಡಿಗರಿಗೆ [illegible] ಸಾಧಾರಣವಾದ ವಿಷಯ.

ಯಾತ್ರಾರ್ಥಿಗಳ ತೊಂದರೆಗಳನ್ನು ಕಂಡು [illegible] ವರ್ಷಗಳಿಂದ [illegible] ಶ್ರೀ ಪಿ. [illegible] ದಕ್ಷಿಣ ಭಾರತದ ಯಾತ್ರಾರ್ಥಿಗಳಿಗಾಗಿ ಒಂದು ಧರ್ಮಶಾಲೆಯನ್ನು [illegible] ಅನೇಕ [illegible] ಪ್ರಯತ್ನಪಟ್ಟರೂ ಕಾರಣಾಂತರ [illegible] ಬರಲಾಗಲಿಲ್ಲ. ಈಚೆಗೆ ಈ ಸ್ಥಳಕ್ಕೆ ಭೇಟಿ ಕೊಟ್ಟ ಶ್ರೀ [illegible] ರೆಡ್ಡಿ [illegible] ಪ್ರೋತ್ಸಾಹ ಮತ್ತು ಬೆಂಬಲಗಳ ಫಲವಾಗಿ ಈ ಯೋಜನೆಗೆ ಪುನಃ ಹೊಸ ಹುರುಪು ಬಂದಿದೆ. ಮತ್ತು ಶೀಘ್ರದಲ್ಲಿಯೇ ಕರ್ಣಾಟಕದ [illegible] ಸಹಾಯ ಮತ್ತು ಸಹಕಾರದಿಂದ ಯೋಜನೆ ಕಾರ್ಯರೂಪಕ್ಕೆ [illegible].

ದಕ್ಷಿಣ ಭಾರತದಿಂದ ವಿಶೇಷತಃ ಕರ್ಣಾಟಕದಿಂದ ಬರುವ ಯಾತ್ರಾರ್ಥಿಗಳಿಗೋಸ್ಕರ ಸುಮಾರು ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ "ಕರ್ಣಾಟಕ ಭವನ" ವನ್ನು ನಿರ್ಮಾಣ ಮಾಡುವ ಸಲುವಾಗಿ ಮತ್ತು ಯಾತ್ರಾರ್ಥಿಗಳಿಗೆ [illegible] ಅನುಕೂಲತೆಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ "ಕರ್ಣಾಟಕ ಧರ್ಮಶಾಲಾ ಸಂಸ್ಥೆ ಹರಿದ್ವಾರ" ಎಂಬ [illegible] ಸಂಸ್ಥೆಯು [illegible] ರಾಜ್ಯ [illegible] ಶ್ರೀ [illegible] ಶ್ರೀ [illegible] ಶ್ರೀ [illegible] (ಬಳ್ಳಾರಿ) [illegible] ಕನ್ನಡಿಗರು [illegible].

ಪಾಕಿಸ್ತಾನದಲ್ಲಿ ನೂಲಿನ ದಾಸ್ತಾನುಗಳಿಗೆ ಮೊಹರು

ಪಾಕಿಸ್ತಾನದಲ್ಲಿ ನೂಲಿನ ಎಲ್ಲಾ ದಾಸ್ತಾನುಗಳನ್ನೂ ಈ ಕೂಡಲೇ ಮೊಹರು ಮಾಡಬೇಕೆಂದು ಆಜ್ಞೆಯಾಗಿದೆ. [illegible] ನೂಲಿನ [illegible] ಉತ್ಪತ್ತಿ, ಹಂಚಿಕೆ, ಬೆಲೆ ಮತ್ತು ಸಾಗಾಣಿಕೆಗಳ ಮೇಲೆ ಹತೋಟಿಯನ್ನಿಡಲಾಗಿದೆ. [illegible] ಮತ್ತು ಹೊಸ್ಕೆರೆ [illegible] [illegible] ಬೆಲೆಗೆ [illegible] ಈ ಕ್ರಮ ಕೈಗೊಳ್ಳಲಾಗಿದೆ.

ಕೀರ್ತನಕಾರರ ಸಮ್ಮೇಳನ

[illegible] ಸಂಸ್ಕೃತಿ ಪ್ರಚಾರ ಕಾರ್ಯದ [illegible] ಕೀರ್ತನ [illegible] ಸಂಸ್ಥೆಗ [illegible] ಪ್ರತಿಯೊಬ್ಬ [illegible] ಸಮಾಜ ಸೇವೆಗ [illegible] ಕೀರ್ತನಕಾರರ [illegible] ಶ್ರೀ [illegible] ಸ್ವಾಮಿಯವರ ದೇವಾಲಯದಲ್ಲಿ ಕೀರ್ತನಕಾರರ ಸಮ್ಮೇಳನ [illegible] ಶ್ರೀ ಪಿ. [illegible] ರಂಗದಾಸರ ಕೀರ್ತನವನ್ನು ಏರ್ಪಡಿಸಿದೆ. [illegible] ಕೀರ್ತನಕಾರರೂ [illegible] ಶ್ರವಣ [illegible] ಸಹಾಯ ಮತ್ತು ಸಹಕಾರಗಳನ್ನು ನೀಡಬೇಕಾಗಿ ಸಂಘದ ಅಧ್ಯಕ್ಷರಾದ ಡಾ|| ಬಿ. ಜಿ. ದಾಸ್‍ರವರು ಪ್ರಾರ್ಥಿಸುತ್ತಾರೆ.

[illegible] ಸಭೆಯ ಆಜೀವ ಸದಸ್ಯರಾಗಿ [illegible] ದಕ್ಷಿಣದಿಂದ ಕಾಶಿ [illegible] ಕನ್ನಡಿಗರ [illegible] ಸಂಸ್ಥೆಯ ಅಧಿಕೃತ [illegible] ಶ್ರೀ [illegible] ದಕ್ಷಿಣ ಭಾರತ [illegible].

ಗಂಟಲಲ್ಲಿ ವಿಸಾನು ಸಿಕ್ಕಿ ಬೆಸ್ತರವಳ ಮರಣ

ಕಾರವಾರದ ಸಮುದ್ರ ತೀರದಲ್ಲಿ [illegible] ವಿಸಾನುಗಳನ್ನು ಹಿಡಿಯುವುದರಲ್ಲಿ ನಿಪುಣಳಾಗಿದ್ದ ಬೆಸ್ತರವಳೊಬ್ಬಳು, ಕಳೆದ [illegible] ವಿಸಾನುಗಳನ್ನು ಹಿಡಿಯುತ್ತಾ [illegible], ಒಂದು ವಿಸಾನನ್ನು ಹಲ್ಲಿನಲ್ಲಿ ಕಚ್ಚಿಕೊಂಡಳೆಂದೂ ಅದು [illegible] ಅವಳ ಗಂಟಲಲ್ಲಿ ಸಿಕ್ಕಿ [illegible] ಉಸಿರು ಕಟ್ಟಿ ಸತ್ತಳೆಂದೂ ವರದಿಯಾಗಿದೆ.

ವಯಸ್ಕರ ಶಿಕ್ಷಣ [illegible] ಸಭೆ

ಸಂಸ್ಥಾನದ ವಯಸ್ಕರ ಸಮಿತಿಯ ಪ್ರಾಂತ ಮತ್ತು ಜಿಲ್ಲಾ ಅಧಿಕಾರಿಗಳ ಸಭೆಯು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಕಳೆದ ೨೦ನೇ ತಾ|| ನಡೆಯಿತು. ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಭದ್ರಯ್ಯ [illegible] ಅಧ್ಯಕ್ಷತೆಯಲ್ಲಿ [illegible] ಕಳೆದ ಸಮಿತಿ ಕಾರ್ಯಕ್ರಮಗಳ ವರದಿಗಳನ್ನು ಒಪ್ಪಿಸಲಾಯಿತು. ಹೊಸ ವರ್ಷದ ಕಾರ್ಯಕ್ರಮವನ್ನು ಕುರಿತು ಚರ್ಚಿಸಲಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] [illegible] ಸಂಗೀತ [illegible] ಗಾನವಾರಿಧಿ.

SRI GANESHA
TALKIES
From 24-4-53 For 2 Days
TO-NIGHT AND
EVERY NIGHT
(In Technicolor)
With Rita Hayworth

From 26-4-53
VALENTINO
[In Technicolor]

ಕನ್ನಡ ವಿದ್ಯಾ ಸಂಘಕ್ಕೆ ೫೦ ಸಾವಿರ ರೂ. ದಾನ

ಬೊಂಬಾಯಿ ೨೧

ಇಲ್ಲಿನ ರಾಷ್ಟ್ರೀಯ ಕನ್ನಡ ವಿದ್ಯಾ [illegible] ಕಟ್ಟಡದ ನಿಧಿಗಾಗಿ [illegible] ಮತ್ತು ಧರ್ಮಕರ್ತರಾದ ಶ್ರೀ ಆರ್. [illegible] ಚಾರ್‌ರವರು ೫೦ ಸಾವಿರ ರೂಗಳನ್ನು ದಾನ ಮಾಡಿದ್ದಾರೆ. ಸಂಘದವರು ೭೦೦ ಕನ್ನಡಿಗ ವಿದ್ಯಾರ್ಥಿಗಳಿಗಾಗಿ ಪ್ರೌಢ ಶಾಲೆಯೊಂದನ್ನು ನಿರ್ಮಿಸಲಿರುವರು. ಚಾರ್‌ರವರು ಈ ಸಂಘದ ಅಧ್ಯಕ್ಷರಾಗಿರುವರು. ಸಂಘದಲ್ಲಿ ಸಂಘವು ನಡೆಸುತ್ತಿದ್ದ ಶಾಲೆಯಲ್ಲಿ ೧೭ ವಿದ್ಯಾರ್ಥಿಗಳಿದ್ದು, ಈಗ ಸಂಖ್ಯೆಯು ೭೦೦ಕ್ಕೆ ಹೆಚ್ಚಿದೆ. ಕನ್ನಡದಲ್ಲಿ ಪಾಠಗಳು ನಡೆಯುತ್ತಿವೆ.

ಚಾರ್‌ರವರು ಮೈಸೂರಿನವರು. ಇವರು ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಓದಿದ್ದರು.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ	
ಕಡಲೆಕಾಯಿ	೨೫ ೦-೦	೨೯ ೧೪ ೦
ಹರಳುಬೀಜ	೩೩-೧೦-೦	
ಹುಚ್ಚೆಳ್ಳು	೫೪-೧೪ ೦	
ಹೊಂಗೇಬೀಜ	೨೦ ೧೦ ೦	೨೧ ೧೪ ೦
ಜೋಳ	೪೨ ೮ ೦	
ಬೆ ಣ್ಣೆ		
[illegible]	೧೭ ೧೦ ೦	೧೦ ೨ ೦
ಹುಣಸೇಹಣ್ಣು	೪ ೧೦ ೦	೬ ೦ ೦
ಒಣಗೇರುಕಾಯಿ	೪ ೧೦	
ತೆಂಗಿನಕಾಯಿ		
೧,೧೦೦ಕ್ಕೆ	೬೩ ೦ ೦	೭೯ ೨ ೦

ಚಾಮುಂಡೇಶ್ವರಿ
ಟಾಕೀಸ್
24-4-53ರ ಶನಿವಾರ 2ನೇ ವಾರ
★ ಮನಿದನ್ ★

MORNING SHOWS
On Saturday & Sunday
PIGMY ISLAND
With Johnny Weissmuller

ನೋತೀಲಾಲ್ ಟಾಕೀಸ್
ಮೈಸೂರು
24-4-53 ರ ಶುಕ್ರವಾರದಿಂದ 3 ನೆಯ ವಾರ
ಪ್ರತಿ ದಿನ 3 ಆಟಗಳು
[illegible] ಚಿತ್ರ
ನಾಳೆ ಪಿರಂದವಳ್
[illegible] ಶ್ರೀರಾಮ್ [illegible] ಬಿ. ಎಸ್. ಸರೋಜ
[illegible]

ಕುರುಡು ಮೂಗರ ಪಾಠಶಾಲೆ, ಮೈಸೂರು

ಈ ಸಾಮಾನುಗಳು ನಮ್ಮ ಶಾಲೆಯ ವರ್ಕ್ ಷಾಪಿನಲ್ಲಿ ನಮ್ಮ ವಿದ್ಯಾರ್ಥಿಗಳಿಂದ ತಯಾರಾದುವು.—

1	ಕಬ್ಬಿಣ ದಾರ (ಹುರಿದಾದ ಸಣ್ಣದು)		1 ಪೌಂಡಿಗೆ ರೂ.	2-4-0
2	ದಗ್ಗ ಬಳ್ಳಿ (ತೊಟ್ಟಿಲು ಕಟ್ಟುವುದಕ್ಕೆ, ಬಟ್ಟೆ ಒಣಗಿ ಹಾಕುವುದಕ್ಕೆ)		ಪೌಂಡು	2-6-0
3	ಟವಲ್‍ಗಳು	36"x54"	1 ಕ್ಕೆ	1-4-0
4	,,	36"x72"	,,	1-12-0
5	ಗೂಡುಗೂಡ ಬೆಡ್‍ಷಿಟ್	36"x90"	1 ಕ್ಕೆ	2-4-0
6		41"x90"	1 ಕ್ಕೆ	2-12-0
7	[illegible] ಬೆಡ್‍ಷಿಟ್	44"x90"	,	2-13-0
8	ಪಂಚೆ (ಬಟ್ಟೆ)	44"x72"		2-4-0
9	ಬಣ್ಣಪಟ್ಟೆ ಮತ್ತು [illegible] ಮಾನುಗಳು			
10	ಬತ್ತದ ಸಾಮಾನ [illegible]			

ವ್ಯಾಪಾರದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆ ವರೆಗೆ
ಮಧ್ಯಾಹ್ನ 2 ರಿಂದ 4 ಗಂಟೆ ವರೆಗೆ

ಈ ಸಾಮಾನುಗಳನ್ನು ಕೊಂಡುಕೊಳ್ಳುವುದರ ಮೂಲಕ ಅಂಗಹೀನರಿಗೆ ಪ್ರೋತ್ಸಾಹ ಕೊಡಬೇಕಾಗಿ ಪ್ರಾರ್ಥನೆ.

Edited, Printed and Published by A. R. Nagarajan at [illegible] Press D. Subb[illegible] [illegible] Road Mysore

ರಿಜಿ ನಂ. 793 ವಂದೇ ಮಾತರಂ ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೮-೭-೧೯೫೦ [ಸಂಚಿಕೆ ೨೦೬

ದ. ಕೊರಿಯನ್ನರ ಮೇಲೆ ಅಮೆರಿಕನ್ನರ ಗುಂಡು

ಭಾರತದ ಬ್ಯಾಂಕುಗಳ ವಿಂಗಡಣೆ

ಭಾರತದಲ್ಲಿರುವ ಬ್ಯಾಂಕುಗಳನ್ನು ೪ ದರ್ಜೆಗಳಾಗಿ ವಿಂಗಡಿಸಿ ಪ್ರತಿಯೊಂದು ದರ್ಜೆಯಲ್ಲೂ ಪ್ರತ್ಯೇಕವಾದ ಕನಿಷ್ಠಾಂಶದ ಸಂಬಳಗಳ ಸ್ಕೇಲನ್ನು ಗೊತ್ತುಪಡಿಸಿ, ಅಖಿಲ ಭಾರತ ಬ್ಯಾಂಕು ವಿವಾದದ ನ್ಯಾಯಾಸ್ಥಾನದವರು ತೀರ್ಪನ್ನು ಕೊಟ್ಟಿರುತ್ತಾರೆ. ನ್ಯಾಯ ಮಂಡಲಿಯಲ್ಲಿ ನ್ಯಾಯಾಧೀಶ ಶ್ರೀ ಸಂಶಪಾಕೇಶ ಶಾಸ್ತ್ರಿ, ಬೊಂಬಾಯಿಯ ಎಂ. ಎಲ್. ಕರ್ನಿಕ ಮತ್ತು ಮೈಸೂರಿನ ಶ್ರೀ|| ಎ ಎಲ್ ಡಿಸೋಜಾರವರು ಇದ್ದರು. ಬ್ಯಾಂಕುಗಳ ನೌಕರರುಗಳಿಗೆ ಸಂಬಳದ ಶೇ|| ೩೩ ೧/೩ರಷ್ಟು ತುಟ್ಟಿ ಬತ್ತೆಯನ್ನೂ, ೭ ಲಕ್ಷ ಜನಸಂಖ್ಯೆಯ ಊರುಗಳಲ್ಲಿ ಮನೆ ಬಾಡಿಗೆ ಭತ್ಯವನ್ನೂ ಕೊಡುವಂತೆಯೂ, ಪ್ರತಿ ದಿನ ೬| ಗಂಟೆ ಮತ್ತು ಶನಿವಾರಗಳಲ್ಲಿ ೪ ಗಂಟೆಗಳಂತೆ ನೌಕರರಿಂದ ಕೆಲಸ ತೆಗೆದುಕೊಳ್ಳುವಂತೆಯೂ ತೀರ್ಪಿನಲ್ಲಿ ಸೂಚಿಸಲಾಗಿದೆ.

ಎಲ್ಲಾ ಬ್ಯಾಂಕುಗಳೂ ಪ್ರಾವಿಡೆಂಟ್ ನಿಧಿಯನ್ನು ಇನ್ನು ೬ ತಿಂಗಳೊಳಗೆ ಏರ್ಪಡಿಸುವಂತೆಯೂ ತಿಳಿಸಲಾಗಿದೆ. ೨೫ ಕೋಟಿ ರೂ ಅಥವಾ ಅದಕ್ಕೆ ಹೆಚ್ಚಾಗಿ ವಹಿವಾಟು ನಡೆಯಿಸುವ ಬ್ಯಾಂಕುಗಳನ್ನು ಎ ದರ್ಜೆಯವೆಂದೂ ೭|| ಕೋಟಿಯಿಂದ ೨೫ ಕೋಟಿ ವರೆಗಿನವನ್ನು ಬಿ ದರ್ಜೆಯವೆಂದೂ ೧ ರಿಂದ ೭|| ಕೋಟಿ ವರೆಗಿನವು ಸಿ ದರ್ಜೆಯವೆಂದೂ, ಉಳಿದವು ಡಿ ದರ್ಜೆಯವೆಂದೂ ವಿಂಗಡಿಸಲಾಗಿದೆ.

ಕುತುಬ್ ಮಿನಾರ್ ಸ್ತಂಭದಿಂದ ಬಿದ್ದು ಆತ್ಮಹತ್ಯೆ

ದೆಹಲಿಯ ಕಿರೋಡಿಮಲ್ ಕಾಲೇಜಿನ ಎಂಬುವ ವಕೀಲ [illegible] ಜಿಗುಪ್ಸೆ ಹೊಂದಿ ಮೊನ್ನೆ ಅಲ್ಲಿನ ಇತಿಹಾಸ ಪ್ರಸಿದ್ಧವಾದ ಕುತುಬ್ ಮಿನಾರ್ [illegible] ಮೇಲೆ ಹತ್ತಿ ಕೆಳಕ್ಕೆ ಧುಮುಕಿ ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ.

ಕ್ರಿಕೆಟ್ ಪ್ರಯಾಣದ ರಿಯಾಯಿತಿ

ಕ್ರಿಕೆಟ್ಟಿಗರ ಕಾಮನ್ವೆಲ್ತ್ ತಂಡ ಸಂಬಂಧವಾಗಿ ಭಾರತದ ರೈಲ್ವೆ ವರ್ಗ ಇದೇ ತಿಂಗಳು ೨೦ನೇ ತಾರೀಕಿನಿಂದ ಕೊಡುತ್ತಿದ್ದ ರಿಯಾಯಿತಿ [illegible] ಟಿಕೆಟ್ಟುಗಳನ್ನು ಬರುವ ಮೇ ತಿಂಗಳು ೧ ನೇ ತಾ|| ನಿಂದ ಮತ್ತೆ ಎರಡು ವಾರ ಕಾಲ ಕೊಡಲು ನಿರ್ಧರಿಸಿರುವರು.

ದಕ್ಷಿಣಕೊರಿಯನ್ನರ ಮೇಲೆ ಅಮೆರಿಕದವರ ಗುಂಡು

ಪ್ಯಾನ್‌ಮುಂಜಾನ್‌ನಲ್ಲಿ ನಡೆಯುತ್ತಿರುವ ಶಾಂತಿ ಸಂಧಾನಗಳನ್ನು ಆರಂಭಿಸಿದ ಬಗೆ ಪ್ರತಿಭಟಿಸಲು ನಗರದಲ್ಲಿರುವ ಅಮೆರಿಕಾ ರಾಯಭಾರಿ ಕಛೇರಿ ಮುಂದೆ ೫೦೦ ದಕ್ಷಿಣ ಕೊರಿಯನ್ನರು ಪ್ರತಿಭಟನಾ ಪ್ರದರ್ಶನವನ್ನು ನೆನ್ನೆ ನಡೆಸಿದಾಗ ಅವರ ಮೇಲೆ ಅಮೆರಿಕದ ಮಿಲಿಟರಿ ಪೋಲೀಸರು ಗುಂಡು ಹಾರಿಸಿದರು. ಅಲ್ಲಿನ ರಾಷ್ಟ್ರೀಯ ಸಭೆಯ ೧೦೦ ಸದಸ್ಯರು ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಆಯುರ್ವೇದಕ್ಕೆ ಪ್ರೋತ್ಸಾಹ ಅಗತ್ಯ

ಪ್ರದರ್ಶನದಲ್ಲಿ ಗುಂಡಪ್ಪಗೌಡರ ಭಾಷಣ

ಬೆಂಗಳೂರು ೨೮

ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪ ಗೌಡರು ನೆನ್ನೆ ಆಯುರ್ವೇದದ ವಸ್ತು ಪ್ರದರ್ಶನವನ್ನು ಆರಂಭಗೊಳಿಸಿದರು. ಅವರು ಮಾತನಾಡಿ ವಿದೇಶೀ ವೈದ್ಯ ಪದ್ಧತಿಗಳ ಅಭಾವವನ್ನು ತಡೆದುಕೊಂಡು ಬಂದಿರುವ ಆಯುರ್ವೇದಕ್ಕೆ ಪ್ರೋತ್ಸಾಹವಿ ಯುವುದು ಅಗತ್ಯವೆಂದು ಸೂಚಿಸಿದರು. ಆ ಮೂಲಕ ಹೊರಗಿನಿಂದ ಆಮದು ಮಾಡುವ ಔಷದಿಗಳಿಗಾಗಿ ಕೊಡುವ ಕೋಟ್ಯಾಂತರ ರೂ. ಮಿಗುವುದೆಂದು ಹೇಳಿದರು. ಸರ್ಕಾರದವರು ಪ್ರತಿ ಹಳ್ಳಿಯಲ್ಲೂ ಆರೋಗ್ಯ ಆಶ್ರಮಗಳನ್ನು ತೆರೆಯಬೇಕೆಂದು ಸಲಹೆ ಮಾಡಿದರು.

ಇಂಡೋಚೀಣದಲ್ಲಿ ಫ್ರೆಂಚ್ ಕೋಟೆಯ ಆಸ್ಫೋಟನೆ

ಇಂಡೋ ಚೀಣದಲ್ಲಿ ವಿಯಟ್‌ಮಿನ್ಹ್ ಸೈನಿಕರು ಹಾನಾಯಿಯ ಬಳಿ [illegible] ಕೋಟೆಯೊಂದನ್ನು ಮೊನ್ನೆ ಮದ್ದುಗುಂಡು ಉಪಯೋಗಿಸಿ ಸಿಡಿಸಿದರು. ಇದರಿಂದ ೬ ಜನ ಸೈನಿಕರೂ, ಐವರು ಮಹಿಳೆಯರೂ, ನಾಲ್ಕು ಬಾಲಕರೂ ನೃತಪಟ್ಟರು. ಫ್ರೆಂಚರ ಮೋಟಾರು ದೋಣಿಯೊಂದನ್ನೂ ಮುಳುಗಿಸಲಾಯಿತು.

ಮೈಸೂರು ಕರಗ

ರಾಜಧಾನಿಯ ಇಟ್ಟಿಗೆಗೂಡಿನ ಭಕ್ತ ಮಂಡಲಿಯವರು ಈ ವರ್ಷವೂ ಸಹ ವಾತಾವೂಲಿನಂತೆ ಶ್ರೀ ಮಾರಿಯಮ್ಮ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವವನ್ನು ಇಂದು ಮತ್ತು ನಾಳೆ ಏರ್ಪಡಿಸಿರುತ್ತಾರೆ. ನಾಳೆ ಸಂಜೆ ೭ ಗಂಟೆಗೆ ಉತ್ಸವವು ಅರಮನೆ ಕಛೇರಿ, ನೂರಡಿ, ನಾರಾಯಣಶಾಸ್ತ್ರಿ, ಶಿವರಾಂಪೇಟೆ, ಶಯ್ಯಾಜಿರಾವ್, ಇರ್ವಿನ್ ಮತ್ತು ಅಶೋಕಾ ರಸ್ತೆಗಳ ಮತ್ತು ನಜರ್‌ಬಾದಿನ ಮೂಲಕ ದೇವಸ್ಥಾನವನ್ನು ತಲುಪುವುದು. ೨೯ನೇ ತಾ|| ಬೆಳಿಗ್ಗೆ ಮತ್ತು ಸಂಜೆ ಇಟ್ಟಿಗೆಗೂಡಿನಲ್ಲಿಯೇ ಉತ್ಸವವುಂಟು.

ನೆಹರೂರವರೊಡನೆ ಕೆ.ಪಿ.ಸಿ.ಸಿ. ಸದಸ್ಯರ ಭೇಟಿ

ಪ್ರಧಾನಿ ನೆಹರೂರವರು ಮಹಾರಾಷ್ಟ್ರ ಪ್ರದೇಶದಲ್ಲಿ ಅಭಾವ ಪರಿಸ್ಥಿತಿಯನ್ನು ಪರಿಶೀಲಿಸುವುದಕ್ಕಾಗಿ ಬೆಳಗಾಂ ನಗರಕ್ಕೆ ಇದೇ ೨೮ನೇ ತಾ|| ಆಗಮಿಸುವರು. ಅಂದು ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರನ್ನು ಭೇಟಿ ಮಾಡಿ, ಬಳ್ಳಾರಿ ಪ್ರಶ್ನೆ ಮತ್ತು ಕರ್ನಾಟಕ ಪ್ರಾಂತ ರಚನೆ ಬಗ್ಗೆ ಭಾರತ ಸರ್ಕಾರದ ನಿಲುವೇನೆಂಬುದನ್ನು ಅವರಿಗೆ ವ್ಯಕ್ತಪಡಿಸುವರೆಂದು ವರದಿಯಾಗಿದೆ. ಮಹಾರಾಷ್ಟ್ರದ ಪ್ರವಾಸದನಂತರ ಕರ್ನಾಟಕದಲ್ಲಿ ಪ್ರವಾಸ ಕೈಗೊಳ್ಳಬೇಕೆಂಬ ಮನವಿಯನ್ನು ಅವರು ನಿರಾಕರಿಸಿರುತ್ತಾರೆ.

ಪೋಲೀಸು ಅಧಿಕಾರಿ ಗಡಿನಾಡು ಪ್ರಾಂತಕ್ಕೆ ಮಂತ್ರಿ

ಪಾಕಿಸ್ತಾನದ ಗಡಿನಾಡಿನ ಮುಖ್ಯ ಮಂತ್ರಿ ಖಾನ್ ಅಬ್ದುಲ್ ಖಯೂಂಖಾನರು ಪಾಕಿಸ್ತಾನದ ಮಂತ್ರಿಮಂಡಲಕ್ಕೆ ಸೇರಿದ ಪರಿಣಾಮ, ಗಡಿನಾಡಿನ ಮುಖ್ಯ ಮಂತ್ರಿ ಸ್ಥಾನಕ್ಕೆ ಅಲ್ಲಿನ ಪೋಲೀಸು ಇನ್ಸ್‌ಪೆಕ್ಟರ್ ಜನರಲ್ಲರಾದ ಸರ್ದಾರ್ ಅಬ್ದುಲ್ ರಷೀದ್‌ರವರು ಬರಲಿರುವರು. ತಮಗಿದ್ದ ಬಂಧವನ್ನು ತನ್ನು ಬದಲು ಮುಖ್ಯ ಮಂತ್ರಿಯಾಗಿ ನೇಮಿಸಲು ಖಯೂಂ ಖಾನರಿಗೆ ಅಧಿಕಾರವೀಯಲಾಗಿದೆ.

ಬೆಂಗಳೂರಿನಲ್ಲಿ ವಿದ್ಯುತ್ ತಗುಲಿ ಮುಕ್ತ್ಯಪ್ಪರ ಮರಣ

ಬೆಂಗಳೂರು ಮಲ್ಲೇಶ್ವರದ ಬಳಿ ನೆನ್ನೆ ಮುಂಜಾನೆ ಸಿಡಿಲಿನ ಬಡಿತದಿಂದ, ಸೈಲೋಲೈನಿನ ತಂತಿಯು ನೆಲದ ಮೇಲೆ ಬಿದ್ದಿತ್ತೆಂದೂ, ಅಮೃತೂರಿನ ಮುಕ್ತ್ಯಪ್ಪ ಎಂಬುವರು ಅಲ್ಲಿ ಹೋಗುತ್ತಿದ್ದಾಗ ತಂತಿಯನ್ನು ತುಳಿದು, ಕೂಡಲೇ ಮೃತಪಟ್ಟರೆಂದೂ ವರದಿಯಾಗಿದೆ.

ಚೂರಿ ಇರಿತದಿಂದ ಗಾಯ

ರಾಜಧಾನಿಯ ಶಾಸ್ತ್ರಾಪಾರ್ಲ್ಕೆ ಕ್ಲಬ್ ನೌಕರರಾದ ರಾಮಸ್ವಾಮಿ ನಾಯರ್ ಮತ್ತು ಗೋಪಾಲ ನಾಯರ್ ಎಂಬ ಇಬ್ಬರು ಕಾರ್ಮಿಕರಲ್ಲಿ ಮೊನ್ನೆ ಜಗಳವಾಗಿ ರಾಮಸ್ವಾಮಿ ನಾಯರ್‌ರವರನ್ನು ಚೂರಿ ಇರಿತಕ್ಕಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ಆರೋಗ್ಯದ ಕಡೆ ಹೆಚ್ಚು ಗಮನ ಅಗತ್ಯ

ಹೆಲ್ತ್ ಇನ್ಸ್‌ಪೆಕ್ಟರ್ ಸಮ್ಮೇಳನದಲ್ಲಿ ಚನ್ನಬಸಪ್ಪನವರ ಭಾಷಣ

ಮೈಸೂರು ೨೮

ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನವು ಈ ದಿನ ಬೆಳಿಗ್ಗೆ ಟೌನ್ ಹಾಲಿನಲ್ಲಿ ನಡೆಯಿತು. ಆರೋಗ್ಯ ಇಲಾಖಾ ಡೈರೆಕ್ಟರ್ ಡಾ|| ಟಿ. ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು.

ಶ್ರೀ ಬಿ. ಜಿ. ಪಾಲ್‌ರವರಿಂದ ಪ್ರಾರ್ಥನವಾದನಂತರ, ಆರೋಗ್ಯ ಇನ್ಸ್‌ಪೆಕ್ಟರುಗಳ ಸಂಘದ ಅಧ್ಯಕ್ಷ ಶ್ರೀ ಎಸ್. ಎ. ನಂಜುಂಡಯ್ಯನವರು ವರದಿಯನ್ನೊಪ್ಪಿಸಿದರು. ಶ್ರೀಗಳಾದ ಕೆ. ಹನುಮಂತಯ್ಯ, ಕೆ. ಟಿ. ಭಾಷ್ಯಂ, ಇಡಿಹಾಳ್ ಮಂಜಪ್ಪ ಮತ್ತು ಡಾ|| ಅನಂತಸ್ವಾಮಿರಾವ್‌ರವರುಗಳಿಂದ ಶುಭ ಸಂದೇಶಗಳು ಬಂದಿದ್ದುವು. ೧೦೦ ಜನ ಪ್ರತಿನಿಧಿಗಳು ಆಗಮಿಸಿದ್ದರು.

ಶ್ರೀ ಚನ್ನಬಸಪ್ಪನವರು ಮಾತನಾಡಿ, ಸಾರ್ವಜನಿಕ ಸೇವೆಯೇ ಇನ್ಸ್‌ಪೆಕ್ಟರುಗಳ ಗುರಿಯಾಗಿರಬೇಕೆಂದು ತಿಳಿಸಿದರು. ಗ್ರಾಮಾಂತರ ಪ್ರದೇಶದಲ್ಲಿ ಆರೋಗ್ಯದ ಕಡೆ ಹೆಚ್ಚು ಗಮನ ಕೊಡುವುದು ಸರ್ಕಾರದ ಕರ್ತವ್ಯವೆಂದೂ, ಅಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಸೂಚಿಸಿದರು. ಸಾಂಕ್ರಾಮಿಕ ರೋಗಗಳು ಹರಡುವ ಮುಖ್ಯ ಕಾರಣಗಳನ್ನು ಕಂಡುಹಿಡಿದು ಅವುಗಳನ್ನು ನಿವಾರಿಸಬೇಕೆಂದರು. ಕುಡಿಯಲು ಉತ್ತಮ ನೀರಿನ ವ್ಯವಸ್ಥೆ ಮಾಡಿದರೆ ಬಹುಮಟ್ಟಿಗೆ ಅಂಟು ರೋಗವು ತಾನಾಗಿಯೇ ಕಡಿಮೆಯಾಗುವುದೆಂದ, ಅವರು ಅಭಿಪ್ರಾಯಪಟ್ಟು, ಸಾರ್ವಜನಿಕ ಆರೋಗ್ಯಕ್ಕೆ ಸರ್ಕಾರದವರು ಅತ್ಯಂತ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಸಲಹೆ ಮಾಡಿದರು.

ಆರೋಗ್ಯ ಇನ್ಸ್‌ಪೆಕ್ಟರುಗಳನ್ನು ಆರೋಗ್ಯ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿಯೇ ನೇಮಿಸಬೇಕೆಂದೂ ಇತರ ಕೆಲಸಗಳಿಗೆ ನಿಯೋಜಿಸಕೂಡದೆಂದೂ ಅವರು ಸೂಚಿಸಿ, ಆರೋಗ್ಯ ಮತ್ತು ವೈದ್ಯ ಇಲಾಖೆಗಳನ್ನು ಒಂದುಗೂಡಿಸಬೇಕೆಂದು ಹೇಳಿ, ಆರೋಗ್ಯ ಇನ್ಸ್‌ಪೆಕ್ಟರುಗಳ ಸಂಬಳ ಮತ್ತು ಭತ್ಯಗಳು ಹೆಚ್ಚಬೇಕೆಂದೂ ತಿಳಿಸಿದರು.

ವಿಶಾಖಪಟ್ಟಣದಲ್ಲಿ ರೇವು ಕೆಲಸಗಾರರ ಮುಷ್ಕರ

ವಿಶಾಖಪಟ್ಟಣದಲ್ಲಿ ಹಿಂದೂಸ್ಥಾನ್ ಹಡಗು ಕಾರ್ಖಾನೆಯ ೩,೭೦೦ ಮಂದಿ ಕೆಲಸಗಾರರು ಮೊನ್ನೆಯಿಂದ ಮುಷ್ಕರ ಹೂಡಿರುವ ಸಂಬಂಧವಾಗಿ ಪಾರ್ಲಿಮೆಂಟಿನಲ್ಲಿ ಕೇಂದ್ರ ಕಾರ್ಮಿಕ ಮಂತ್ರಿ ಗಿರಿಯವರು ಮಾತನಾಡಿ, ಕಾರ್ಮಿಕರ ವಿವಾದ ಪರಿಶೀಲನೆಗಾಗಿ ಸರ್ಕಾರದವರು ಒಬ್ಬ ತೀರ್ಪುಗಾರರನ್ನು ನೇಮಿಸಿರುವುದಾಗಿ ತಿಳಿಸಿದರು.

ಬೆಂಗಳೂರಿನಿಂದ ತಿರುಪತಿ, ನೀಲಗಿರಿಗೆ ಸರ್ಕಾರಿ ಬಸ್

ಬೆಂಗಳೂರು ೨೩.

ಇಲ್ಲಿಂದ ಮೈಸೂರು ಮಾರ್ಗವಾಗಿ ಉದಕಮಂಡಲಕ್ಕೂ ಮತ್ತು ಇಲ್ಲಿಂದ ತಿರುಪತಿಗೂ ಬಸ್ಸು ಸಂಚಾರವನ್ನು ಸರ್ಕಾರದವರು ಏರ್ಪಡಿಸಲಿರುವರು. ಈ ಬಗ್ಗೆ ಎಲ್ಲಾ ವ್ಯವಸ್ಥೆಗಳೂ ಪೂರೈಸಿವೆ ಶೀಘ್ರದಲ್ಲೇ ಬಸ್ಸುಗಳು ಆ ಮಾರ್ಗವಾಗಿ ಓಡಾಡಲಿವೆ.

ಸಂಸ್ಥಾನದಲ್ಲಿ ಆಹಾರ ಧಾನ್ಯದ ಡಿಪೋಗಳು

ಸಂಸ್ಥಾನದಲ್ಲಿ ಈಗ [illegible] ಆಹಾರ ಧಾನ್ಯದ ಡಿಪೋಗಳಿವೆ [illegible] ಸರ್ಕಾರದವರು. ಸ್ವಂತವಾಗಿ [illegible] ಡಿಪೋಗಳನ್ನು ಇಟ್ಟಿರುವ [illegible] ಆಹಾರ ಧಾನ್ಯವನ್ನು ಜನಗಳಿಗಾಗಿ ಸರಬರಾಜು ಮಾಡಿ [illegible] ಆಹಾರ ಧಾನ್ಯ [illegible] ಭರವಸೆಯು [illegible] ಈ ಡಿಪೋಗಳು ಇರುವುವು ಎಂದು ಗೊತ್ತಾಗಿದೆ. ಕಳೆದ ವರ್ಷ ಆಹಾರದ ಇಲಾಖೆಗೆ [illegible] ಲಕ್ಷ ರೂ. ವೆಚ್ಚವಾಗಿದ್ದಿತು. [illegible] ನಗರಗಳಲ್ಲಿ ವಿಸಹ ಇತರ ಕಡೆಗಳಲ್ಲಿ ಪಡಿತರವು ರದ್ದಾದಮೇಲೆ ಸರ್ಕಾರಕ್ಕೆ [illegible] ಲಕ್ಷ ರೂ ಮಿಕ್ಕಿದೆ. ಈ ವರ್ಷ ಆಯವ್ಯಯದಲ್ಲಿ ಈ ಇಲಾಖೆಗಾಗಿ [illegible] ಲಕ್ಷ ರೂ ತೆಗೆದಿಡಲಾಗಿದೆ. ಪೂರ್ಣ ರೀತಿಯ ರದ್ದಿನಿಂದ ಈಗಲೂ ಇನ್ನೂ ಹಣ ಮಿಗುವುದೆಂದು ಹೇಳಲಾಗಿದೆ.

ಡ್ರಾಯಿಂಗ್, ಪೇಯಿಂಟಿಂಗ್‌ಗಳಲ್ಲಿ ಪರೀಕ್ಷೆ ನಡೆಸಬೇಕು

ಬೆಂಗಳೂರು ಲಲಿತ ಕಲಾ ಸಂಘದ ಸಭೆಯು ಕಳೆದ ಭಾನುವಾರ ಸೇರಿ ಡ್ರಾಯಿಂಗ್, ಪೇಯಿಂಟಿಂಗ್ ಮುಂತಾದುವುಗಳಲ್ಲಿ ಸಂಸ್ಥಾನ ಸರ್ಕಾರದವರು ಪಾರಿಭಾಷಿಕ ಪರೀಕ್ಷೆಗಳನ್ನು ನಡೆಸುವಂತೆ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಉಪಾಧ್ಯಾಯರುಗಳ ಶಿಕ್ಷಣ ಶಾಲೆಗಳಲ್ಲಿ ಡ್ರಾಯಿಂಗ್ ಮಾಸ್ತರುಗಳಿಗೆ ಶಿಕ್ಷಣ ಕೊಡುವಂತೆಯೂ ಕೋರಲಾಯಿತು.

ಕುದುರೆ ಜೂಜಿನ ಬೆಟ್ಟಿಂಗ್ ತೆರಿಗೆಯಲ್ಲಿ ಇಳಿತಾಯ

ಮೈಸೂರು [illegible]

ವಿದ್ಯಾರ್ಥಿ ವೇತನ [illegible]

[illegible] ಶಾಲೆಯಲ್ಲಿ [illegible] ವಿದ್ಯಾರ್ಥಿ ವೇತನ [illegible] ಬೆಂಗಳೂರಿನ ಶ್ರೀ ಜಿ. ಪಿ. ಕೃಷ್ಣರಾವ್ [illegible] ವಿಚಾರ [illegible] ಭಾರತ [illegible] ಕೆಲಸ [illegible] ವಿದ್ಯಾರ್ಥಿ [illegible]

ನಾಜಿಮುದ್ದೀನರಿಗೆ ಬಾಡಿಗೆಗೂ ಮನೆ ಸಿಕ್ಕಲಿಲ್ಲ

ಪಾಕಿಸ್ತಾನದ ಮಾಜಿ ಪ್ರಧಾನಿ ನಾಜಿಮುದ್ದೀನ್ ಮತ್ತು ಅವರ ಸಂಗಡಿಗರ ಭವಿಷ್ಯದ ಬಗ್ಗೆ ಕರಾಚಿ ಪತ್ರಿಕೆಗಳು ಬರೆಯಲುಪಕ್ರಮಿಸಿವೆ. ಮಾಜಿ ಪ್ರಧಾನಿಯವರು ಇನ್ನೂ ಸರ್ಕಾರಿ ಭವನದಲ್ಲೇ ಇರುವರೆಂದೂ, ಅವರಿಗೆ ಬಾಡಿಗೆ ಮನೆಯು ಸಿಕ್ಕಿಲ್ಲವೆಂದೂ, ಒಂದು ಕಡೆ ೨೦೦ ರೂ ಬಾಡಿಗೆ ೨೪ ಸಾವಿರ ರೂ ಪಗ್ರಿ ಹಣವನ್ನು ಅವರಿಂದ ಕೇಳಲಾಯಿತೆಂದೂ, ಆದರೆ ೩೦೦ ರೂ ಬಾಡಿಗೆ ಕೊಡುವುದಾಗಿ ಒಪ್ಪಿ, ಪಗ್ರಿ ಹಣ ಕೊಡಲು ನಾಜಿಮುದ್ದೀನರು ನಿರಾಕರಿಸಿದರೆಂದೂ ಹೇಳಲಾಗಿದೆ.

ಭಾರತದಲ್ಲಿ ಹೊಸ ಪಾಕಿಸ್ತಾನ್ ರಾಯಭಾರಿ

ಭಾರತದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿ ಐ. ಐ. ಚುಂದ್ರಿಗರ್‌ರವರನ್ನು ಸಾಹಿಬ್ ಖುರೇಷಿಯವರ ಸ್ಥಾನದಲ್ಲಿ ನೇಮಿಸಲಾಗಿದೆ. ಚುಂದ್ರಿಗರ್‌ರವರು ಅವಿಭಕ್ತ ಭಾರತವಿದ್ದಾಗ ಬೊಂಬಾಯಿಯಲ್ಲಿ ವರ್ತಕರಾಗಿದ್ದರು.

ಶ್ರವಣಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕ

ಶ್ರವಣಬೆಳಗೊಳದಲ್ಲಿ ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ೧೦೮ ಕಲಶದ ಮಹಾ ಮಸ್ತಕಾಭಿಷೇಕವು ಇದೇ ೨೬ನೇ ತಾ॥ ಭಾನುವಾರ ಮಧ್ಯಾಹ್ನ ೩॥ ಗಂಟೆಗೆ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರ ಸಮ್ಮುಖದಲ್ಲಿ ನಡೆಯುವಂತೆ ಮೈಸೂರು ಜೈನ ಮಂಡಲಿಯವರಿಂದ ಏರ್ಪಡಿಸಲಾಗಿದೆ.

ಮಾಜಿ ಪೌರಸಭಾಧ್ಯಕ್ಷ ಮತ್ತು ಕಮಿಷನರರಿಗೆ ಸತ್ಕಾರ

ಮೈಸೂರು ಸಿವಿಲ್ ಮತ್ತು ಸೋಷಿಯಲ್ ಪ್ರೋಗ್ರೆಸ್ ಸಂಘದವರು ಕಳೆದ ೨೦ನೇ ತಾ॥ ಮಾಜಿ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾವ್ ಮತ್ತು ನಿವೃತ್ತರಾಗಲಿರುವ ಕಮಿಷನರ್ ಶ್ರೀ ಎಫ್. ಎಂ. ಅಬ್ದುಲ್ ರಹೀಂರವರ ಗೌರವಾರ್ಥವಾಗಿ ತಮ್ಮ ಸಂಸ್ಥೆಯ ಕಟ್ಟಡದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಂಸ್ಥೆಯವರು ನಡೆಸುತ್ತಿರುವ ಕಾರ್ಯಕಲಾಪಗಳನ್ನು ಅತಿಥಿಗಳು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

SRI GAYATHRI
TALKIES
From 24-4-53 For 2 Days
J. Arthur Ranks
BROWNING VERSION
NEXT CHANGE:—
LES MISERABLES
—COMING SHORTLY:—
M.G.M.'s
QUO VADIS

ಸಕ್ಕರೆ ಉತ್ಪತ್ತಿಯಲ್ಲಿ ಖೋತಾ

ಈ ವರ್ಷ ದೇಶದಲ್ಲಿ ಕಬ್ಬಿನ ಬೆಳೆಯು ಕಡಿಮೆಯಾಗಿರುವುದರಿಂದ ಸಕ್ಕರೆಯ ಉತ್ಪನ್ನದಲ್ಲಿ ಖೋತಾ ಬದ್ದಿರುವುದೆಂದೂ, ಕಳೆದ ಸಾಲಿನಲ್ಲಿ 1497 ಲಕ್ಷ ಟನ್ ಇದ್ದುದು, ಈಸಾರಿ 1116 ಲಕ್ಷ ಟನ್ನಿಗೆ ಇಳಿದಿರುವುದಾಗಿಯೂ ಕೇಂದ್ರ ಸರ್ಕಾರದ ವ್ಯವಸಾಯ ಖಾತಾ ಸಚಿವ ಡಾ॥ ದೇಶಮುಖ್‌ರವರು ಲೋಕಸಭೆಯಲ್ಲಿ ನೆನ್ನೆ ತಿಳಿಸಿದರು.

ಹಸು ಮಾರಾಟದಿಂದ ಬಂದ ನೋಟು ಕತ್ತೆ ಬಾಯಿಗೆ

ಉತ್ತರ ಆಫ್ರಿಕದ ಮೊರಾಕೊ ದೇಶದಲ್ಲಿ ಒಬ್ಬ ಮೂರ್ ವಂಶಸ್ಥನು ತನ್ನ ಹಸುವನ್ನು ಮಾರಿ ಅದರಿಂದ ಬಂದ ೩೭ ಪೌಂಡು ಮೊತ್ತದ ನೋಟುಗಳನ್ನು ಮೇವಿನ ತೊಟ್ಟಿಯಲ್ಲಿಟ್ಟಿದ್ದನೆಂದೂ, ಆವನು ಸಾಕಿದ ಕತ್ತೆಯು ಅದನ್ನು ತಿಂದು ಹಾಕಿತೆಂದೂ ವರದಿಯಾಗಿದೆ.

ವಿಜಯಲಕ್ಷ್ಮೀ ಪಂಡಿತರ ಹೆಸರಿನಲ್ಲಿ ವಿದ್ಯಾರ್ಥಿ ವೇತನ

ಅಮೆರಿಕದ ನ್ಯೂ ಜರ್ಸಿಯ ಡಿರ್ಕಿಸ್ ಕಾಲೇಜಿನಲ್ಲಿ ವಿಜಯಲಕ್ಷ್ಮೀ ಪಂಡಿತರ ಹೆಸರಿನಲ್ಲಿ ಭಾರತದಿಂದ ಬಂದು ಓದುವ ವಿದ್ಯಾರ್ಥಿಗಾಗಿ ವೇತನವನ್ನು ಏರ್ಪಡಿಸಲಾಗಿದೆ. ವೇತನದ ಮೊತ್ತ ವರ್ಷಕ್ಕೆ ೧೨೦೦ ರೂ.

ಭಗವದ್ಗೀತಾ ಪ್ರವಚನ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕಬೀರ್ ಶ್ರೀರಾಮ ಮಂದಿರದಲ್ಲಿ ಬೆಂಗಳೂರಿನಿಂದ ಬಂದಿರುವ ಶ್ರೀ ಶಿವಾನಂದ ಸ್ವಾಮಿಯವರಿಂದ ನಿತ್ಯವೂ ಬೆಳಗ್ಗೆ ಮತ್ತು ಸಂಜೆ ಶ್ರೀಮದ್ಭಗವದ್ಗೀತಾ ಪ್ರವಚನವು ನಡೆಯುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಅರಿಯಕುಡಿ ರಾಮಾನುಜ ಅಯ್ಯಂಗಾರ್, ರಾಜೇಶ್ವರ ಮಧ್ಯಾಹ್ನ ೧-೪೦ ಗ್ರಿಟಿಂಗ್, ೨ ದಾಲ ಜಗತ್. ಸಂಜೆ ೫-೪೦ ಮತ್ತು ೭ ಎಂ. ಎಸ್. ಸುಬ್ಬಲಕ್ಷ್ಮಿ, ಪಿಟೀಲು. ೬-೧೦ ಪಾದಕ್ಷೀ ೭-೩೦ ಮಹಾ ವಿಚಾರ. ೮ ಎಲ್. ಲಕ್ಷ್ಮೀಶ, ಕಥಾ ಕಾಲಕ್ಷೇಪ ೯-೧೫ ಅನಂತಲಕ್ಷ್ಮಿ, ಪಟಗೋಜರ, ರಾಜೇಶ್ವರ ೯-೪೦ ಪಿ. ಲಕ್ಷ್ಮೀನಾರಾಯಣರ ಕಥೆ [illegible]

ಪ್ರಭಾ ಅಯ್ಯದ 5 ನೇ ವಾರ 24-4-53 ರಿಂದ
ದಿನವಹಿ 3 ಪ್ರದರ್ಶನಗಳು
ವಿ. ಶಾಂತಾರಾಂರವರ
ತೀನ್ ಬತ್ತಿ ಚಾರ್ ರಾಸ್ತಾ
ಬೆಳಗಿನ ಪ್ರದರ್ಶನ 24-4-53 ರಿಂದ
3 ದಿನಗಳು
ಬಲಿಯ ಕನ್ಯೆಯರು
ಮತ್ತು ಸ್ವಾಪ್ಸ್ ಅಲ್ ಸೀ
ಶೀಘ್ರದಲ್ಲಿಯೇ ನಿರೀಕ್ಷಿಸಿ
ಜೆಮಿನಿಯವರ ಹಿಂದಿ ಚಿತ್ರ
ಮಿಸ್ಟರ್ ಸಂಪತ್

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಆಣೆ	ರೂ.
ಕಡಲೆಕಾಯಿ	೨೯-೦-೦	೨೯-೬
ಹರಳುಬೀಜ	೪೫-೦-೦	
ಹುಚ್ಚೆಳ್ಳು	೪೦-೦-೦	೪೬-೦
ಹೊಂಗೆಬೀಜ	೨೦-೮-೦	೨೨-೦
ಕುರುಳಿ	೪೦-೬-೦	೪೩-೦
ಹೆಸರು	೬೫-೧೦-೦	
ಮೆಣಸಿನ		
ಕಾಯಿ ಪುಡಿ	೧೯-೧೦-೦	
ಜುಜನೇಪಲ್ಯ	೪-೧೪-೦	೫-೬-೦
ಸೀಗೇಕಾಯಿ	೪-೧೬-೦	೪-೧೫-೦
ತೆಂಗಿನಕಾಯಿ		
೧,೧೦೦ಕ್ಕೆ	೬೦-೦-೦	೫೧-೦-೦

ಪೌರಸಭಾ ಸದಸ್ಯರು ಕರ್ತವ್ಯ ಪಾಲನೆ ಮಾಡುವಂತಾಗಲಿ

ಮೈಸೂರು ನಗರದಲ್ಲಿ ಪೌರಸಭಾ ಕಂದಾಯವನ್ನು ಏರಿಸುವ ಸಂಬಂಧವಾಗಿ ಶ್ರೀ ತಗಡೂರು ರಾಮಚಂದ್ರರಾಯರು ಹೊರಡಿಸಿರುವ ಹೇಳಿಕೆಗಳಲ್ಲಿ ಕಂದಾಯವನ್ನು ಕಡಿಮೆ ಮಾಡಲು ಸಾಧ್ಯವಿಲ್ಲದಿದ್ದರೆ ಸದಸ್ಯರು ರಾಜೀನಾಮೆ ಕೊಡುವಂತೆ ಸೂಚಿಸಿರುವುದನ್ನು ರಾಜಧಾನಿಯ ಶ್ರೀ ಆರ್. ಎಸ್. ಮುರಳಿಯವರು ಟೀಕಿಸಿ, ರಾಜೀನಾಮೆ ಕೊಟ್ಟು ಮಾತ್ರಕ್ಕೆ ಕರ್ತವ್ಯ ಪಾಲನೆಯಾಗಲಿಲ್ಲವೆಂದೂ, ಅವರುಗಳು ಕರ್ತವ್ಯವನ್ನು ಮಾಡುವಂತೆ ಪ್ರೇರಿಸುವುದು ಅಗತ್ಯವೆಂದೂ, ಮಾರ್ಗ ತಪ್ಪಿ ಹೋಗುವ ಕುದುರೆಗೆ ಸರಿಯಾದ ಮಾರ್ಗವನ್ನು ತೋರಿಸುವ ಸವಾರನೇ ಬುದ್ಧಿವಂತನೇ ಹೊರತು, ಕುದುರೆ ಸವಾರಿಯನ್ನೇ ತ್ಯಜಿಸುವವನು ಬುದ್ಧಿವಂತನಲ್ಲವೆಂದೂ, ಶ್ರೀ ತಗಡೂರು ರಾಮಚಂದ್ರರಾಯರು ಆ ಕಡೆಗೆ ತಮ್ಮ ಗಮನವನ್ನು ಕೊಡಬೇಕೆಂದೂ ಸೂಚಿಸಿರುತ್ತಾರೆ.

ಪ್ಯಾಲಸ್ಟೈನಿನ ಜೆರೂಸಲೆಂ ನಗರದ ಮೇಲೆ ಯಹೂದ್ಯ ಸೈನ್ಯಗಳು ಎಲ್ಲ ಕಡೆಗಳಿಂದಲೂ ಧಾಳಿ ನಡೆಸಿದುವೆಂದೂ, ಆದರೆ ಅರಬ್ ಪಡೆ ಮತ್ತು ರಾಷ್ಟ್ರೀಯ ರಕ್ಷಣಾ ದಳದವರು ಧಾಳಿಯನ್ನು ಹಿಮ್ಮೆಟ್ಟಿಸಿದುದಾಗಿಯೂ ಗೊತ್ತಾಗಿದೆ.

SRI GANESHA
TALKIES
From 26-4-53 :: For 3 Days

Edited, Printed and Published by A. R. Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ಜರಿಯ ಸೀರೆಗಳಿಗೆ ಮತ್ತು ಶಾಕ್ಸ್ಕಿನ್ ಶಾಲುಗಳಿಗೆ ★ M.V. ಭೋಜಯ್ಯ (ಫೋನ್ 446) ಡಿ. ಎ. ಇಂಡಿಯ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ವಂದೇ ಮಾತರಂ ಅಂಚಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೫-೪-೧೯೫೩ [ಸಂಚಿಕೆ ೩೦೭

ಯೂರೋಪಿನ ರಕ್ಷಣೆಗೆ ೩೨ ಕೋಟಿ ಪೌಂಡು

ಸರ್ಕಾರಿ ಭವನಗಳಿಗೆ ಕನ್ನಡದ ಹೆಸರುಗಳು

ಮೈಸೂರು ೨೪

ಸರಕಾರಿ ಭವನಗಳಿಗೆಲ್ಲ ಕನ್ನಡದ ಹೆಸರುಗಳನ್ನಿಡಬೇಕೆಂದು ಮೈಸೂರು ಸರ್ಕಾರದವರು ನಿರ್ಧರಿಸಿ ರಾಜಧಾನಿಯ ಗೆಸ್ಟ್ ಹೌಸಿಗೆ "ಪ್ರವಾಸ ಭವನ" ಸೂಪರಿಂಟೆಂಡಿಂಗ್ ಇಂಜನಿಯರ ಆಫೀಸಿರುವ ಲೇಸಿಸ್ ಕ್ವಾರ್ಟರ್ಸ್‌ಗೆ "ಶಿಲ್ಪ ನಿಲಯ", ಶ್ರೀರಂಗಪಟ್ಟಣದ ಪ್ಯಾರೆಸ್ ಬಂಗಲೆಗೆ "ಪ್ರಾಕೃತ ವಿಲಾಸ", ಕಲವಾಲದ ಬಂಗಲೆಗೆ "ರಾಜ್ಯ ನಿಲಯ", ಉದಕಮಂಡಲದಲ್ಲಿರುವ ಅತಿಥಿ ಹೌಸಿಗೆ "ವನದರ್ಶಿನಿ" ಮತ್ತು ಗ್ಲೆನ್‌ವ್ಯೂ ಭವನಕ್ಕೆ "ಸುದರ್ಶನ" ಎಂಬುದಾಗಿ ನಾಮಕರಣ ಮಾಡಿರುತ್ತಾರೆ.

ಬಾಡಿಗೆ ಬೈಸಿಕಲ್ಲನ್ನು ಮಾರುವಾಗ ಬಂಧನ

ರಾಜಧಾನಿಯ ರೇಸ್ ಕೋರ್ಸಿನಿಂದ ೧೧೩ ಸಹಸ್ರ ರೂ. ಅನ್ನು ದುರುಪಯೋಗಪಡಿಸಿಕೊಂಡ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿರುವ ಶ್ರೀ ವೇದಾಂತ ದೇಶಿಕನ್ ಎಂಬುವರು ಕಳೆದ ಸೋಮವಾರ ಒಂದು ಬಾಡಿಗೆ ಬೈಸಿಕಲ್ಲನ್ನು ತೆಗೆದುಕೊಂಡು ದೊಡ್ಡಪೇಟೆಯಲ್ಲಿ ಮಾರುವ ಪ್ರಯತ್ನದಲ್ಲಿದ್ದಾಗ ಪೋಲೀಸರಿಗೆ ಸಿಕ್ಕಿಬಿದ್ದಿರುತ್ತಾರೆ. ಅವರು ಹಿಂದೆ ಇದೇ ರೀತಿ ೩ ಬೈಸಿಕಲ್ಲುಗಳನ್ನು ಮಾರಿದ್ದರೆಂದು ಹೇಳಲಾಗಿದೆ.

ಮಕ್ಕಳ ಶಿಕ್ಷಣದಲ್ಲಿ ತರಪೇತು

ಮಕ್ಕಳ ಶಿಕ್ಷಣದ ವಿಷಯದಲ್ಲಿ ಮಹಿಳೆಯರಿಗೆ ತರಪೇತು ಕೊಡಲು ೫ ವಾರಗಳ ಕಾಲ ರಾಜಧಾನಿಯ ಮಾನವ ವಿಕಾಸ ಮೊಹಲ್ಲದ ಮಹಾಜನಾ ವಿದ್ಯಾಸಂಸ್ಥೆ ಕೇಂದ್ರದಲ್ಲಿ ತರಗತಿಗಳನ್ನು ಏರ್ಪಡಿಸಲಾಗಿದೆ. ಮೇ ಒಂದನೇ ತಾರೀಖಿನಿಂದ ಅವು ಪ್ರಾರಂಭವಾಗುತ್ತವೆ. ಸೇರಲು ಇಚ್ಛಿಸುವವರು ವಿವರಗಳನ್ನು ಸಂಚಾಲಕರಿಂದ ಸ್ಥಳದಲ್ಲಿ ತಿಳಿಯಬಹುದು.

ಉಪವಾಸ ಮುಕ್ತಾಯ ವಂದನಾ ಸಭೆ

ಪ್ರಾರ್ಥನಾ ಸಭೆ

ಆಮರಣಾಂತ ಉಪವಾಸ ಕೈಗೊಂಡಿರುವ ಶ್ರೀ ರೇವಣ್ಣನವರು ಅದನ್ನು ನಿಲ್ಲಿಸುವಂತೆ ಪ್ರಾರ್ಥಿಸುವ ಸಲುವಾಗಿ ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲಿನಲ್ಲಿ ಪ್ರಜಾ ಮಂಡಲಿಯ ಆಶ್ರಯದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ.

ಕಾಲೇಜು ವಿದ್ಯಾರ್ಥಿಗಳಿಂದ ವರ್ಷಕ್ಕೆ ೫೦ ಗಂಟೆ ಕೆಲಸ

ವರ್ಷದಲ್ಲಿ ಕನಿಷ್ಠ ಪಕ್ಷ ೫೦ ಗಂಟೆಗಳ ಕಾಲವಾದರೂ ಪ್ರತಿಯೊಬ್ಬ ಕಾಲೇಜು ವಿದ್ಯಾರ್ಥಿಯೂ ದೇಹ ಶ್ರಮದ ಕೆಲಸವನ್ನು ಮಾಡಬೇಕೆಂದು ವಿಶ್ವವಿದ್ಯಾಲಯಗಳ ವೈಸ್ ಚಾನ್ಸೆಲರುಗಳ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ.

ಪೋಲಿಷ್ ಮಂತ್ರಿಯ ದಸ್ತಗಿರಿ

ಪೋಲೆಂಡಿನ ಉಪ ರಕ್ಷಣಾ ಮಂತ್ರಿ ಜನರಲ್ ಕೋಮರ್ಾರವರನ್ನು ದೇಶದ್ರೋಹ ಕೆಲಸದಲ್ಲಿ ತೊಡಗಿದ್ದರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲಾಗಿದೆ.

ವಿದೇಶಗಳಲ್ಲಿ ಉಪಾಧ್ಯಕ್ಷರ ಪ್ರವಾಸ

ವಿದೇಶಗಳಲ್ಲಿ ಎರಡು ತಿಂಗಳ ಕಾಲ ಪ್ರವಾಸಕ್ಕಾಗಿ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಮುಂದಿನ ತಿಂಗಳು ೧೮ ನೇ ತಾ|| ಭಾರತದಿಂದ ಅಮೆರಿಕಕ್ಕೆ ನೇರವಾಗಿ ವಿಮಾನದಲ್ಲಿ ತೆರಳುವರು. ಅವರು ಕೆನಡಾಕ್ಕೆ ಭೇಟಿ ಕೊಟ್ಟು ಪುನಃ ಅಮೆರಿಕದಲ್ಲಿ ಪ್ರವಾಸ ಮಾಡುವರು. ಅನಂತರ ಇಂಗ್ಲೆಂಡ್, ಹಾಲೆಂಡ್, ಬೆಲ್ಜಿಯಂ, ಆಸ್ಟ್ರಿಯಾ, ಯುಗೊಸ್ಲಾವಿಯಾ, ಇಟಲಿಗಳಿಗೆ ಭೇಟಿ ಕೊಡುವರು. ಜುಲೈ ೧ ನೇ ತಾ|| ಪ್ಯಾರಿಸ್ಸಿನಲ್ಲಿ ಸೇರುವ ವಿಶ್ವಸಂಸ್ಥೆಯ ಸಾಂಸ್ಕೃತಿಕ ವಿದ್ಯಾಭ್ಯಾಸ ಸಮಿತಿ ಸಭೆಯ ಅಧ್ಯಕ್ಷತೆ ವಹಿಸುವರು.

ಬೀಡಿ ಸೇದುತ್ತಿದ್ದ ಪತ್ನಿಯ ದಹನ

ಉತ್ತರ ಬೊಂಬಾಯಿಯ ಕಾರ್ಮಿಕನೊಬ್ಬನ ತನ್ನ ಪತ್ನಿಯು ಬೀಡಿ ಸೇದುತ್ತಿದ್ದುದನ್ನು ಸಹಿಸದೆ ನೆನ್ನೆ ಬೆಳಗ್ಗೆ ಆಕೆಯ ಬಟ್ಟೆಗೆ ಬೆಂಕಿ ಹತ್ತಿಸಿದ ಪರಿಣಾಮವಾಗಿ ಅವಳು ಮೃತಪಟ್ಟ ಸುದ್ದಿಯು ವರದಿಯಾಗಿದೆ. ಮೊನ್ನೆ ರಾತ್ರಿ ಇದೇ ಸಂಬಂಧದಲ್ಲಿ ಪತಿಪತಿಯರಿಗೆ ಜಗಳವಾಗಿ ನೆನ್ನೆ ಬೆಳಗ್ಗೆ ಪತ್ನಿಯು ಉಟ್ಟಿದ್ದ ಬಟ್ಟೆಗೆ ಬೆಂಕಿ ಹತ್ತಿಸಿದನೆಂದೂ, ತರುವಾಯ ಆಕೆಯು ಜ್ವಾಲೆಯಲ್ಲಿ ಉರಿಯುತ್ತಿದ್ದಂತೆಯೇ ಹತ್ತಿರದ ಪೋಲೀಸು ಠಾಣೆಯ ಕಡೆಗೆ ಓಡಲು ಉಪಕ್ರಮಿಸಿದಳೆಂದೂ, ಇಬ್ಬರು ಕಾನ್ಸ್‌ಟೇಬಲ್ಲುಗಳು ಅವಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲು ಮೂರು ಗಂಟೆಗಳ ತರುವಾಯ ಅವಳು ಮೃತಪಟ್ಟಳೆಂದೂ ಗೊತ್ತಾಗಿದೆ. ಪೋಲೀಸರು ಗಂಡನನ್ನು ದಸ್ತಗಿರಿ ಮಾಡಿರುತ್ತಾರೆ.

ನಾಳೆಯಿಂದ ಕೊರಿಯಾ ಕದನ ವಿರಾಮ ಮಾತುಕತೆ

ಇಂದು ನಡೆಯಬೇಕಾಗಿದ್ದ ಕೊರಿಯಾ ಕದನ ವಿರಾಮದ ಮಾತುಕತೆಗಳನ್ನು ಒಂದು ದಿನ ಮುಂದಕ್ಕೆ ಹಾಕಬೇಕೆಂದು ಕಮ್ಯೂನಿಸ್ಟರು ಕೋರಿದ್ದರಿಂದ ನಾಳೆ ಅದನ್ನು ಆರಂಭಿಸಲು ವಿಶ್ವಸಂಸ್ಥೆಯವರು ಒಪ್ಪಿಕೊಂಡಿರುವರು.

ಬರ್ಮಾ ಮತ್ತು ಭಾರತಗಳಿಗೆ ವಿನಿಮಯ ಒಪ್ಪಂದ

ಬರ್ಮವು ಭಾರತಕ್ಕೆ ಈ ವರ್ಷ ಅಕ್ಕಿಯನ್ನೊದಗಿಸುವ ಬಗ್ಗೆ ಪದಾರ್ಥ ವಿನಿಮಯದ ತತ್ವವನ್ನು ಅಂಗೀಕರಿಸಿರುತ್ತದೆ. ೪೦ ಕೋಟಿ ರೂ. ಬೆಲೆಯಷ್ಟು ಅಕ್ಕಿಯನ್ನು ಭಾರತವು ತರಿಸಿಕೊಳ್ಳಬೇಕಾಗುವುದು. ೨೪ ಕೋಟಿ ರೂ. ಬೆಲೆಯ ಯಂತ್ರ ಸಾಮಗ್ರಿ, ಸೆಣಬು ಮತ್ತು ಇತರ ಪದಾರ್ಥಗಳು ಬರ್ಮಕ್ಕೆ ಬೇಕಾಗಿವೆ. ಈ ಪದಾರ್ಥಗಳ ದರಗಳ ಬಗ್ಗೆ ಸ್ವಲ್ಪ ಕಾಲಾನಂತರ ಅಖೈರಾಗಿ ತೀರ್ಮಾನ ಮಾಡಲಾಗುವುದು.

೭೯ ಲಂಚ ರುಷುವತ್ತುಗಳ ಪ್ರಕರಣ

ದೆಹಲಿಯಲ್ಲಿ ನೆನ್ನೆ ಲೋಕ ಸಭೆಯು ಸೇರಿದ್ದಾಗ, ಮೈಸೂರಿನ ಶ್ರೀ ಎಂ. ಎಸ್. ಗುರುಪಾದ ಸ್ವಾಮಿಯವರ ಪ್ರಶ್ನೆಯೊಂದಕ್ಕೆ ಗೃಹ ಖಾತೆಯ ಉಪ ಮಂತ್ರಿ ಶ್ರೀ ಟಿ. ಎನ್. ದಾತಾರ್‌ರವರು ಉತ್ತರವಿತ್ತು ವಿಶೇಷ ಪೋಲೀಸ್ ಸಿಬ್ಬಂದಿಯವರು ದೇಶದಲ್ಲಿ ೭೯ ಲಂಚ ರುಷುವತ್ತು ಸಂಬಂಧದ ಪ್ರಕರಣಗಳನ್ನು ರಿಜಿಸ್ಟರ್ ಮಾಡಿಕೊಂಡಿರುವರೆಂದೂ, ಅವುಗಳ ಬಗ್ಗೆ ಇನ್ನು ಎರಡು ತಿಂಗಳೊಳಗಾಗಿ ವಿಚಾರಣೆಯು ಮುಗಿಯುವ ಸಂಭವವಿರುವುದೆಂದೂ ತಿಳಿಸಿದರು.

೩ ತಿಂಗಳ ಕಾಲ ಪೌರಸಭೆಗೆ ಬಾರದಿದ್ದ ಸದಸ್ಯರ ವಜಾ

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಪೌರ ಸಭಾ ಸದಸ್ಯರಾದ ಶ್ರೀಗಳು ಎಚ್. ವೈ. ರುದ್ರಣ್ಣ, ಕಂದಸ್ವಾಮಿ ಗೌಂಡರ್ ಮತ್ತು ಬಷೀರ್ ಅಹಮದ್‌ರವರು ಮೂರು ತಿಂಗಳ ಕಾಲ ಪೌರ ಸಭಾ ಅಧಿವೇಶನಗಳಿಗೆ ಹಾಜರಾಗದ ಪ್ರಯುಕ್ತ ಕಾನೂನು ಪ್ರಕಾರ ಅವರುಗಳನ್ನು ಸದಸ್ಯತ್ವದಿಂದ ವಜಾ ಮಾಡಿ, ಬರುವ ಜೂನ್ ೮ ನೇ ತಾ|| ಮರು ಚುನಾವಣೆ ನಡೆಯುವಂತೆ ಚಿತ್ರದುರ್ಗದ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುವರು.

ಕೊರಿಯಾ ಯುದ್ಧದಲ್ಲಿ ಸೆರೆ ಸಿಕ್ಕಿದ ರೋಗಗ್ರಸ್ತ ಮತ್ತು ಗಾಯಗೊಂಡ ಖೈದಿಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಖುಲಾಸೆ ಮಾಡುವುದಾಗಿ ಕಮ್ಯೂನಿಸ್ಟರೂ ಮತ್ತು ವಿಶ್ವ ಸಂಸ್ಥೆಯವರೂ ಪರಸ್ಪರ ಭರವಸೆ ನೀಡಿರುವರು.

ಅಖಿಲ ಮೈಸೂರು ಆಯುರ್ವೇದ ಸಮ್ಮೇಳನ

ಎಚ್. ಕೆ. ವೀರಣ್ಣಗೌಡರಿಂದ ಉದ್ಘಾಟನೆ

ಬೆಂಗಳೂರು ೨೪

ಅಖಿಲ ಮೈಸೂರು ಆಯುರ್ವೇದ ಕಾಂಗ್ರೆಸ್ಸಿನ ಮಹಾಧಿವೇಶನವು ನೆನ್ನೆ ದಿನ ಇಲ್ಲಿನ ವಾಸವೀ ಧರ್ಮಶಾಲೆಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರಿಂದ ಉದ್ಘಾಟಿಸಲ್ಪಟ್ಟಿತು. ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಶಿವಶರ್ಮರವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ಶರ್ಮರವರು ಭಾಷಣ ಮಾಡುತ್ತಾ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಿದ್ದಾಗ ಆಯುರ್ವೇದಕ್ಕೆ ಪ್ರೋತ್ಸಾಹ ದೊರೆಯದೆ, ಕಾಂಗ್ರೆಸ್ಸಿನ ಆಳ್ವಿಕೆಯು ಎಂದು ಬರುವುದೋ ಎಂದು ನಾವು ಎದುರು ನೋಡುತ್ತಿದ್ದೆವು. ಈಗ ಆಡಳಿತವು ಕಾಂಗ್ರೆಸ್ಸಿನವರಿಗೆ ಸಿಕ್ಕಿರುವಾಗಲೂ ಆಯುರ್ವೇದಕ್ಕೆ ಇತರೋಪತಿ ವೈದ್ಯಕ್ಕೆ ಸಿಕ್ಕಿರುವಷ್ಟು ಪುರಸ್ಕಾರವೂ ಸಹ ದೊರೆಯಲ್ಲದಿರುವುದು ಸಖೇದಾಶ್ಚರ್ಯವನ್ನುಂಟುಮಾಡಿದೆ ಎಂದು ಹೇಳಿ ಸರ್ಕಾರದವರು ಆಯುರ್ವೇದ ವೈದ್ಯದ ಬಗ್ಗೆ ಅನುಸರಿಸುತ್ತಿರುವ ನೀತಿಯನ್ನು ಟೀಕಿಸಿದರು.

ತರುವಾಯ ಶ್ರೀ ವೀರಣ್ಣಗೌಡರು ಸಮ್ಮೇಳನವನ್ನು ಉದ್ಘಾಟಿಸಿ ಭಾಷಣ ಮಾಡಿ ಆಯುರ್ವೇದದ ಬಗ್ಗೆ ತಮ್ಮ ಶ್ರದ್ಧಾ ಭಕ್ತಿಯನ್ನು ವ್ಯಕ್ತಪಡಿಸಿದರು. ನಮ್ಮ ದೇಶದ ಜನರ ಪ್ರಕೃತಿಗೆ ಆಯುರ್ವೇದ ಪದ್ಧತಿಯೂ ಅಂಟುವ ಮಟ್ಟಿಗೆ ಬೇರೆ ಯಾವ ವೈದ್ಯ ಪದ್ಧತಿಯೂ ಅಂಟುವುದಿಲ್ಲವೆಂದೂ, ಇಂತಹ ವಿದ್ಯೆಗೆ ಜನತೆಯ ಮತ್ತು ಸರ್ಕಾರದ ಪ್ರೋತ್ಸಾಹವು ಅಗತ್ಯವೆಂದೂ ಅವರು ನುಡಿದರು.

ಯೂರೋಪಿನ ರಕ್ಷಣೆಗಾಗಿ ೩೧.೭ ಕೋಟಿ ಪೌಂಡುವೆಚ್ಚ

ಮುಂದಿನ ಮೂರೂವರೆ ವರ್ಷಗಳಲ್ಲಿ ಯೂರೋಪಿನ ರಕ್ಷಣೆಗಾಗಿ ೩೧.೭ ಕೋಟಿ ಪೌಂಡು ವೆಚ್ಚದಲ್ಲಿ ಹೊಸ ವಿಮಾನ ನೆಲೆಗಳು ಮತ್ತು ಮಿಲಿಟರಿ ಕೇಂದ್ರಗಳನ್ನು ನಿರ್ಮಿಸಬೇಕೆಂದು ಉತ್ತರ ಅಟ್ಲಾಂಟಿಕ್ ಸಮಿತಿಯ ಸಭೆಯಲ್ಲಿ ನೆನ್ನೆ ತೀರ್ಮಾನಿಸಲಾಯಿತು. ರಷ್ಯದ ಶಾಂತಿ ಸಲಹೆಯು ಒಂದು ಕುಟಿಲ ನೀತಿಯೆಂದೂ, ಅದರ ವರ್ತನೆಯಲ್ಲಿ ಮೂಲ ಬದಲಾವಣೆಯೇನೂ ಆಗಿಲ್ಲವೆಂದೂ ಅಭಿಪ್ರಾಯಪಡಲಾಯಿತು.

ಕರಾಚಿ ಚುನಾವಣಾ ಗಲಭೆಯಲ್ಲಿ ಒಬ್ಬಳ ಮರಣ

ಕರಾಚಿಯ ನಗರ ಸಭೆಗೆ ನೆನ್ನೆ ಚುನಾವಣೆ ನಡೆಯುತ್ತಿದ್ದಾಗ ಅಲ್ಲಿ ಜನರ ಗುಂಪು ಮುಸ್ಲಿಂ ಲೀಗ್ ವಿರುದ್ಧ ಘೋಷಣೆಗಳನ್ನು ಮಾಡುತ್ತ ಪ್ರದರ್ಶನ ನಡೆಸಿದುವೆಂದೂ, ಆಗ ಪೋಲೀಸರು ಲಾಠಿ ಪ್ರಯೋಗ ಮಾಡಿದರೆಂದೂ ವರದಿಯಾಗಿದೆ. ಗಲಭೆಯ ಪರಿಣಾಮವಾಗಿ ಒಬ್ಬ ಹೆಂಗಸು ಸತ್ತು ೫ ಮಕ್ಕಳಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ.

ಅಂಗಡಿವಾರಾಗಿ ಎಕ್ಸೈಜು ಬಾಬಿನ ಹರಾಜು

ಪತ್ರಿಕಾ ಸಮ್ಮೇಳನದಲ್ಲಿ ಸಚಿವ ಚನ್ನಯ್ಯನವರ ವಿವರಣೆ

ಬೆಂಗಳೂರು ೨೫

ಸಂಸ್ಥಾನದ ಎಕ್ಸೈಜ ಖಾತೆಯ ಸಚಿವ ಶ್ರೀ ಟಿ ಚನ್ನಯ್ಯನವರು ನೆನ್ನೆ ಒಂದು ಪತ್ರಿಕಾ ಸಮ್ಮೇಳನವನ್ನು ಕರೆದು ಇನ್ನು ಮುಂದೆ ಸಂಸ್ಥಾನದ ಸೇಂದಿ ಹರಾಜಿನ ಬಗ್ಗೆ ಸರ್ಕಾರದ ನೀತಿಯನ್ನು ಕುರಿತು ವಿವರಣೆಯಿತ್ತರು ಸೇಂದಿ ಮತ್ತು ಇತರ ಎಕ್ಸೈಜು ಬಾಬುಗಳನ್ನು ಅಂಗಡಿವಾರಾಗಿ ಹರಾಜು ಹಾಕಲಾಗುವುದೆಂದೂ, ಸೇಂದಿ ಬಾಬನ್ನು ಮಾತ್ರ ಫರ್ಮವಾರಾಗಿ ಮಾರಾಟ ಮಾಡಲಾಗುವುದೆಂದೂ ಅವರು ತಿಳಿಸಿದರು ಸಂಸ್ಥಾನಾದ್ಯಂತ ಸಣ್ಣ ಪುಟ್ಟ [illegible] ಅನುಕೂಲವಾಗ [illegible] ಪೂರ್ಣವಾಗಿ ಭಾರಿ ಧನಿಕರ ಪಾಲಿಗೆ ಸೇರುತ್ತಿತ್ತೆಂದೂ, ಈಗಿನ ಕ್ರಮದಿಂದ ಸಂಸ್ಥಾನದ ಸುಮಾರು ೩೦೦ ೪೦೦ ಮಂದಿ ಸಣ್ಣ ಕಂಟ್ರಾಕ್ಟರುಗಳಿಗೆ ಸಹಾಯವಾಗುವುದೆಂದೂ ಸಚಿವರು ಹೇಳಿದರು ಅಂಗಡಿವಾರಾಗಿ ಹರಾಜು ಹಾಕುವ ಪದ್ಧತಿ ೩೦ ವರ್ಷಗಳ ಹಿಂದೆ ಜಾರಿಯಲ್ಲಿದ್ದಿತೆಂದೂ ಅವರು ಹೇಳಿದರು

ಪಾನನಿರೋಧ ಕ್ರಮದ ಅಂಗವಾಗಿ ಶೇಕಡ ೨೦ ರಷ್ಟು ಮದ್ಯದ ಅಂಗಡಿಗಳನ್ನು ಮುಚ್ಚತಕ್ಕದ್ದೆಂದು ಗೌರ್ನ್ಮೆಂಟ್ ತೀರ್ಮಾನಿಸಿ, ಒಂದು ವರ್ಷ ಕಾಲ ಆ ರೀತಿ ಮುಚ್ಚಲಾಯಿತೆಂದೂ ಮುಚ್ಚಲಾದ ಅಂಗಡಿಗಳನ್ನು ಈಗ ಪುನಃ ತೆರೆಯಲಾಗುವುದೆಂದೂ ಸಚಿವರು ನುಡಿದರು ರಾಜಧಾನಿಯಲ್ಲಿ ಸಂಬಳದ ಬಟವಾಡೆ ದಿನ ಮಧ್ಯಾಹ್ನ ಸೇಂದಿ ಅಂಗಡಿಗಳನ್ನು ಮುಚ್ಚಲಾಗುತ್ತಿದ್ದ ಪದ್ಧತಿಯನ್ನು ವಜಾ ಮಾಡಲಾಗುವುದೆಂದೂ ಅವರು ತಿಳಿಸಿದರು

ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ನಾರಾಯಿ [illegible] ಮೇಲೆ ವಿಧಿಸಲಾಗುತ್ತಿದ್ದ ರಿಜಿಸ್ಟ್ರೇಷನ್ ಶುಲ್ಕ ಮತ್ತು [illegible] ರದ್ದುಗೊಳಿಸಲಾಗುವುದೆಂದೂ ಸಚಿವ ಚನ್ನಯ್ಯನವರು ತಿಳಿಸಿದರು ಪಾನನಿರೋಧ ಜಾರಿ [illegible] ಲಕ್ಷ್ಮೀನಾರಾಯಣಪುರ [illegible] ಮತ್ತು [illegible] ಜಿಲ್ಲೆಗಳಾಗಿ [illegible]

ಕಲಾಗುವದೆಂದೂ, ಈ ವರ್ಷ ಎಕ್ಸೈಜ್ ಬಾಬಿನ ಹರಾಜಿನಿಂದ ಒಂದೂವರೆ ಕೋಟಿಗೂ ಹೆಚ್ಚಿನ ಆದಾಯ ಬರುವ ನಿರೀಕ್ಷೆಯಿರುವುದೆಂದೂ ಅವರು ಹೇಳಿದರು

SRI GANESHA
TALKIES
From 26-4-53 For 3 Days
Columbia's
VALENTINO
(Technicolor)

ವಿಶ್ವವಿದ್ಯಾಲಯಗಳ ದಶ ವಾರ್ಷಿಕ ಸಮ್ಮೇಳನ

ಮೈಸೂರು ೨೫

ಭಾರತದ ವಿಶ್ವವಿದ್ಯಾಲಯಗಳ ದಶ ವಾರ್ಷಿಕ ಸಮ್ಮೇಳನವು ಇಲ್ಲಿ ಬರುವ ಡಿಸೆಂಬರ್ ೨೨ ನೇ ತಾರೀಕಿನಿಂದ ಮೂರು ದಿನಗಳು ಸಮಾವೇಶಗೊಳ್ಳುವುದೆಂದು ತಿಳಿದುಬಂದಿದೆ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ಹಲವಾರು ವಿಷಯಗಳನ್ನು ಸಮ್ಮೇಳನದಲ್ಲಿ ಚರ್ಚಿಸಲಾಗುವುದು

ಹರಿಕಥೆ

ರಾಜಾರಾಮ ಅಗ್ರಹಾರದಲ್ಲಿ ಈ ದಿನ ರಾತ್ರಿ ೮ ಘಂಟೆಗೆ ವೇ|| ಬ್ರ|| ಶ್ರೀ|| ಕೊಣನೂರು ಸೀತಾರಾಮಶಾಸ್ತ್ರಿಗಳಿಂದ ಚಂದ್ರಹಾಸ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತೆ

ಆಮರಣಾಂತ ಸತ್ಯಾಗ್ರಹದ ಆರನೇ ದಿನ

ಶ್ರೀ ಎಸ್ ಶೀನಣ್ಣನವರ ಆಮರಣಾಂತ ಉಪವಾಸ ಸತ್ಯಾಗ್ರಹವು ಇಂದು ೬ನೇ ದಿನ ಮುಟ್ಟಿತು ಶ್ರೀಯುತರು ದಿನೇದಿನೇ ಬಲಹೀನರಾಗುತ್ತಿದ್ದಾರೆ

ಟ್ರಾಂ ಕಂಪೆನಿ ಅಧಿಕಾರಿಯ ಕಾರಿನ ಮೇಲೆ ಧಾಳಿ

ಮದರಾಸಿನಲ್ಲಿ ನಿರುದ್ಯೋಗಿಗಳಾಗಿರುವ ಹಲವು ಮಂದಿ ಟ್ರಾಂ ಕೆಲಸಗಾರರು ನೆನ್ನೆ ದಿನ ಕಂಪೆನಿಯ ಅಧಿಕಾರಿಯೊಬ್ಬರ ಕಾರಿನ ಮೇಲೆ ಧಾಳಿ ಮಾಡಿ ಅವರ ಗಾಜನ್ನು ಒಡೆದುಹಾಕಿದರೆಂದೂ, ಗಲಭೆ ಮತ್ತು ಹಿಂಸಾಕೃತ್ಯಗಳನ್ನು ನಡೆಸಿದ ೬೬ ಮಂದಿ ಕೆಲಸಗಾರರನ್ನು ಪೋಲೀಸರು ಬಂಧಿಸಿದರೆಂದೂ ವರದಿಯಾಗಿದೆ

ಉಪನ್ಯಾಸ

ನಂಜನಗೂಡು ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ಕ್ಕೆ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಆ|| ವಿ|| ವೇದಾಂತ ರತ್ನ ವೇ|| ಬ್ರ|| ಶ್ರೀ ಎಸ್ ವಿಠ್ಠಲ ಶಾಸ್ತ್ರಿಗಳವರು "ಶ್ರೀ ಶಂಕರಾಚಾರ್ಯರು ಮತ್ತು ಅವರ ಸಿದ್ಧಾಂತ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಭತ್ತ ಸಾಗಿಸಲು ಅನುಮತಿ

ಸಂಸ್ಥಾನದ ಒಂದು ಕಡೆಯಿಂದ ಮತ್ತೊಂದಕ್ಕೂ ಹೊರಗಡೆಗೂ ಭತ್ತವನ್ನು [illegible]ಕ್ಕಾಗಿ ಸಾಗಿಸುವ ಬಗ್ಗೆ ಅನುಮತಿಯನ್ನು ಸರ್ಕಾರದವರು ಆಹಾರ ಡೈರೆಕ್ಟರರಿಗೆ ಅಧಿಕಾರವಿತ್ತಿರುವರೆಂದು ವರದಿಯಾಗಿದೆ

ವಧೆಗೆ ಸಿಕ್ಕಿದ ಬಾಲಕನ ರಕ್ಷಣೆ

ಬೊಂಬಾಯಿಯ ಪಶ್ಚಿಮ ತೀರದ ಒಂದು ನಿರ್ಜನ ಪ್ರದೇಶದಲ್ಲಿ ಮೊನ್ನೆ ರಾತ್ರಿ ಉತ್ತರಪ್ರದೇಶದ ಮುರಾದಾಬಾದ್ ನಗರದ ೧೬ ವರ್ಷದ ಒಬ್ಬ ಬಾಲಕನ ವಧೆಯಾಗುವುದನ್ನು ಬೊಂಬಾಯಿ ಪೋಲೀಸರು ಸಕಾಲದಲ್ಲಿ ತಪ್ಪಿಸಿ ಅವನ ಪ್ರಾಣ ರಕ್ಷಣೆ ಮಾಡಿರುವುದಾಗಿ ವರದಿಯಾಗಿದೆ ಈ ಸಂಬಂಧವಾಗಿ ೩ ಜನರನ್ನು ಬಂಧಿಸಿ ಅವರಿಂದ ೨ ಚೂರಿಗಳನ್ನೂ ಮತ್ತು ೬ ಸಾವಿರ ರೂ ಗಳನ್ನೂ ವಶಪಡಿಸಿಕೊಳ್ಳಲಾಗಿದೆ ಮುರಾದಾಬಾದಿನ ವರ್ತಕರೊಬ್ಬರ ಮಗನಾದ ಆ ಹುಡುಗನನ್ನು ದುಷ್ಕರ್ಮಿಗಳು ಪುಸಲಾಯಿಸಿ, ಮನೆಯಿಂದ ಹಣವನ್ನು ಕದ್ದು ತರುವಂತೆ ಮಾಡಿ, ಅವನನ್ನು ಕೊಲ್ಲಲಿದ್ದರೆಂದೂ, ಟ್ಯಾಕ್ಸಿಯಲ್ಲಿ ಕುಳಿತು ಹೋಗುತ್ತಿದ್ದಾಗ ಬಾಲಕನು ಕೂಗಿದುದು ಪೋಲೀಸರ ಕಿವಿಗೆ ಬಿದ್ದು ಅವರು ಟ್ಯಾಕ್ಸಿಯನ್ನು ಹಿಂಬಾಲಿಸಿದರೆಂದೂ ವರದಿಯಾಗಿದೆ

೩ನೇ ಅಂತಸ್ತಿನಿಂದ ಹಾರಿ ವೃದ್ಧನ ಆತ್ಮಹತ್ಯೆ

ಅಸ್ಸಾಮಿನ ನಿವೃತ್ತ ಕಾಫಿ ತೋಟಗಾರ ಆರ್ಚಿಬಾಲ್ಡ್ ಡಗ್ಲಾಸ್ ಕೋಲ್ಡ್ ಹೋವರ್ ಎಂಬ ೬೨ ವರ್ಷ ವಯಸ್ಸಿನ ವೃದ್ಧನು ಮೊನ್ನೆ ಕೊಲಂಬೋವಿನ ಹೋಟೇಲಿನ ೩ನೇ ಅಂತಸ್ತಿನಿಂದ ಹಾರಿ ಆತ್ಮಹತ್ಯ ಮಾಡಿಕೊಂಡಿರುವುದಾಗಿ ವರದಿಯಾಗಿದೆ ಅವನು ಬ್ರಹ್ಮಚಾರಿಯಾಗಿದ್ದು ಹಲವು ದಿನಗಳಿಂದಲೂ ಅಸ್ವಸ್ಥನಾಗಿದ್ದನು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಮಿಶ್ರ ಮಾಧುರ್ಯ ಮಧ್ಯಾಹ್ನ ೧-೪೦ ಜಲತರಂಗ್ ೨ [illegible] ಚಿತ್ರದ ಗೀತೆಗಳು ಸಂಜೆ ೫-೪೦ ಮತ್ತು ೬-೩೦ ವಸುಮತಿ ರಾಮಚಂದರ್, ಹಾಡುಗಾರಿಕೆ ೬-೧೦ ಮತ್ತು ೮ ಎ [illegible] ದೊರೆಸ್ವಾಮಿ, ಸಂಗೀತ ೭ [illegible] ಮತ್ತು ಕಾಳಿದಾಸ ಗುಪ್ತ [illegible] ೮-೩೦ ಎಂ ವಿ ವರಾಹಸ್ವಾಮಿ, ಗೋಟುವಾದ್ಯ ೯-೧೫ ಚಿತ್ರ ಗೀತೆ ೯-೪೦ ಶಿವಶರಣ—ಕನ್ನಡ ನಾಟಕ

ಶ್ರೀ ರಮಣಿ ಸಂಗೀತ ವಿದ್ಯಾಲಯ
1064 1 ಚಾಮರಾಜ ಅಗ್ರಹಾರ
([illegible] ಭವನದ ಎದುರು)
ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ
ಎ ಕೃಷ್ಣಮೂರ್ತಿ,
ಸಂಚಾಲಕ.

ಮಾಸ್ಕೋವಿಗೆ ಭೇಟಿ ಕೊಡಲು ಚರ್ಚಿಲರು ಸಿದ್ಧ

ಉತ್ತರ ಅಟ್ಲಾಂಟಿಕ್ ಕೌಲಿಸ ರಾಷ್ಟ್ರಗಳು ಸಮ್ಮತಿಸಿದರೆ ಬ್ರಿಟಿಷ್ ಪ್ರಧಾನಿ ಚರ್ಚಿಲರು ರಷ್ಯದ ರಾಜಧಾನಿ ಮಾಸ್ಕೋವಿಗೆ ಭೇಟಿಯಿತ್ತು, ಪಶ್ಚಿಮ ರಾಷ್ಟ್ರಗಳಿಗೂ ರಷ್ಯಕ್ಕೂ ನಡುವೆ ನಡೆಯುತ್ತಿರುವ ಶೀತ ಯುದ್ಧವನ್ನು ಕೊನೆಗಾಣಿಸಲು ಪ್ರಯತ್ನ ನಡೆಸುವರೆಂದೂ, ರಷ್ಯ, ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸುಗಳ ಪ್ರಮುಖರ ಸಮ್ಮೇಳನಕ್ಕೆ ಇದರಿಂದ ಮಾರ್ಗವಾಗುವುದೆಂದೂ ಹೇಳಲಾಗಿದೆ

ಪಾಲಹಳ್ಳಿ ಸೀತಾರಾಮಯ್ಯನವರಿಗೆ ಜಗಜೂರರ ಬಹಿರಂಗ ಪತ್ರ

ರಾಜಧಾನಿಯ ಪೌರಸಭೆಯವರು ಕಂದಾಯವನ್ನು ಹೆಚ್ಚಿಸುವ ಬಗ್ಗೆ ಕಳೆದ ಬುಧವಾರ ಶ್ರೀ ಜಗಜೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಪ್ರತಿಭಟನಾ ಸಭೆಯಲ್ಲಿ ಆದ ನಿರ್ಣಯಗಳನ್ನು ಕುರಿತು ಶ್ರೀ ರಾಯರು ಪೌರ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರಿಗೆ ಒಂದು ಬಹಿರಂಗ ಪತ್ರ ಬರೆದಿರುತ್ತಾರೆ ಇದೇ ೨೮ ನೇ ತಾರೀಕು ನಡೆಯುವ ತಮ್ಮ ಪಕ್ಷದ ಸಭೆಯಲ್ಲಿ ಮೇಲ್ಕಂಡ ಠರಾವುಗಳನ್ನು ಪರಿಶೀಲಿಸಿ ನ್ಯಾಯ ದೊರಕಿಸಿಕೊಡಬೇಕಲ್ಲದೆ, ಇದೇ ೩೦ನೇ ತಾರೀಕು ನಡೆಯುವ ಪೌರಸಭಾಧಿವೇಶನದ ಮುಂದೆಯೂ ಆ ಠರಾವುಗಳ ಬಗ್ಗೆ ವಿಮರ್ಶಿಸಿ ಹೆಚ್ಚಿನ ಕಂದಾಯವನ್ನು ರದ್ದುಗೊಳಿಸಲು ಸಹಾಯಕರಾಗಬೇಕೆಂದು ಶ್ರೀ ರಾಮಚಂದ್ರರಾಯರು ಕೋರಿರುತ್ತಾರೆ ಬಡಾವಣೆ ಕೆಲಸಗಳನ್ನು ಮಾಡದೆ, ಅಥವಾ ಬಾಡಿಗೆಗೆ ಕೊಡದೇ ಇರುವ ಮನೆಗಳ ಕಂದಾಯವನ್ನು ಹೆಚ್ಚಿಸುವುದಿಲ್ಲವೆಂದು ಪೌರಸಭೆಯಲ್ಲಿ ಭರವಸೆಯಿತ್ತು ಈಗ ಅದನ್ನು ಉಲ್ಲಂಘಿಸಿರುವುದಾಗಿ ಅವರು ತಿಳಿಸಿ ತೀವ್ರವಾಗಿ ಖಂಡಿಸಿರುವರು ಪೌರ ಸಭೆಯ ರೆವಿನ್ಯೂ ಅಧಿಕಾರಿಗಳಾಗಲೀ, ಕಮೀಷನರರಾಗಲೀ, ಪ್ರಜಾಭಿಪ್ರಾಯವನ್ನು ವಿರೋಧಿಸಿ, ಸ್ವೇಚ್ಛೆಯಾಗಿ ಕಂದಾಯವನ್ನು ಹೆಚ್ಚಿಸಿದ್ದ ಪಕ್ಷದಲ್ಲಿ ಅವರಿಗೆ ಕ್ರೂರ ಶಿಕ್ಷೆ ವಿಧಿಸಬೇಕೆಂದೂ ಅವರು ಪತ್ರದಲ್ಲಿ ನಮೂದಿಸಿರುವರು

ನಾಯಿ ಕೆಮ್ಮಿಗೆ ಔಷಧ
(WHOOPING COUGH REMEDY)
ಗೂರಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಲಾಯಿಕಕ್ಕೆ ಖಾತರಿಯಾದ ಔಷಧ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ. 2-8 0
ಆರ್. ಎಸ್. ಪಂಡಿತರು.
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

ಮನೆ ಮಾರಾಟಕ್ಕಿದೆ
ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನಲ್ಲಿ, ದೀಪ ಪ್ಲಮಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ.
ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

Edited, Printed and Published by A R Nagarajan at Sadhvi Press, D Subbiah Road, Mysore

ರೋಜಿ ನಂ. 792 WEEKLY EDITION ಅಂಚಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬]   ಭಾನುವಾರ ೨೬-೪-೧೯೫೩   [ಸಂಚಿಕೆ ೬೫

ಕಾಶಿ ಬಳಿ ಐದು ರೈಲು ಗಾಡಿಗಳುರುಳಿದುವು

ಬೇಸಿಗೆ ರಜ ಮುಂದುವರಿಯದು

ಮಂಡ್ಯದ ಜಿಲ್ಲಾ ಬೋರ್ಡು ಕಟ್ಟಡದ ಆರಂಭೋತ್ಸವದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಮಂಡ್ಯದ ಜಿಲ್ಲಾ ಬೋರ್ಡಿನ ನೂತನ ಕಟ್ಟಡದ ಆರಂಭೋತ್ಸವವನ್ನು ನೆನ್ನೆ ದಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆರವೇರಿಸಿದರ ಆ ಸಂದರ್ಭದಲ್ಲಿ ಅವರು ಭಾಷಣ ಮಾಡುತ್ತಾ ಕೆಳಗೆ ಕಂಡಂತೆ ತಿಳಿಸಿದರ —

ಕಾಂಗ್ರೆಸ್ಸು ಅಧಿಕಾರಕ್ಕೆ ಬಂದಲ್ಲಿ ಪಠೋಟಿಗಳ ಕಿರುಕುಳವನ್ನು ತಪ್ಪಿಸುವುದಾಗಿ ಹಿಂದೆ ಪಣ ತೊಟ್ಟಿದುದನ್ನು ಈಗ ಈಡೇರಿಸಲಾಗಿದೆ ಇದರ ಕೀರ್ತಿಯು ಕಾಂಗ್ರೆಸ್ ಸಂಸ್ಥೆಗೇ ಸೇರತಕ್ಕದ್ದಾಗಿದೆ ಭಾರತದ ಇತರ ಯಾವ ಪ್ರಾಂತ್ಯದಲ್ಲೂ ಸಾಧಿಸಿಲ್ಲದ ಪ್ರಗತಿಯನ್ನು ಮೈಸೂರಿನಲ್ಲಿ ಸಾಧಿಸಲಾಗಿದೆ ಆದರೆ ಈ ಬಗ್ಗೆ ಹಲವು ಪತ್ರಿಕೆಗಳು ಇಲ್ಲಸಲ್ಲದ ಟೀಕೆಗಳನ್ನು ಮಾಡುತ್ತಿರುವುವು ವಿಷಾದಕರ ಹಲವು ಪತ್ರಿಕೆಗಳ ಮಾಲೀಕರು, ಈಚೆಗೆ ತಾವು ಅಪೇಕ್ಷಿಸಿದ ಕಂಟ್ರಾಕ್ಟುಗಳು ಸಿಕ್ಕದ ಕಾರಣಕ್ಕಾಗಿ ಸ್ವಾರ್ಥ ಸಾಧಿಸಿಕೊಳ್ಳಲು ಪತ್ರಿಕೆಗಳಲ್ಲಿ ಬೆದರಿಸುವ ರೀತಿಯಲ್ಲಿ ಟೀಕೆ ಮಾಡುತ್ತಿರುವರು ಅವುಗಳಿಗೆ ಹೆದರದೆ ಸರ್ಕಾರದವರು ರಚನಾತ್ಮಕ ಟೀಕೆಗಳಿಗ ಮನ್ನಣೆ ಕೊಡುತ್ತಲೇ ಬಂದಿರುವರು

ಬೇಸಿಗೆಯಲ್ಲಿ ದೀರ್ಘಕಾಲದ ರಜಾ ಪದ್ಧತಿಯನ್ನು ಇನ್ನು ಮುಂದುವರಿಸಲಾಗುವುದಿಲ್ಲವೆಂದು ಮುಖ್ಯ ಮಂತ್ರಿಗಳು ತಿಳಿಸಿ ದೇಶದಲ್ಲಿ ಪರಕೀಯರ ಆಳ್ವಿಕೆಯಿದ್ದಾಗ ಅವರು ತಮ್ಮ ಅನುಕೂಲಕ್ಕಾಗಿ ಬೇಸಿಗೆ ಕಾಲದಲ್ಲಿ ಶಾಲೆಗಳಿಗೆ ದೀರ್ಘ ಕಾಲ ರಜಾ ಕೊಡುತ್ತಿದ್ದರೆಂದೂ, ಈಗ ಅದನ್ನು ರದ್ದು ಮಾಡಿ, ವಿದ್ಯಾರ್ಥಿಗಳು ವ್ಯವಸಾಯ ಕೆಲಸಗಳಲ್ಲಿ ಪ್ರವರ್ತರಾಗುವಂತೆ ಮಾಡುವ ಸಲುವಾಗಿ ಜಮೀನುಗಳಲ್ಲಿ ಬಿತ್ತನೆ, ಕಳೆ ಕೀಳುವುದು ಕಟಾವು ಮಾಡುವುದು ಇವೇ ಮೊದಲಾದ ಒಕ್ಕಲ ಕಾಲಗಳಲ್ಲಿ ರಜಾ ಕೊಡುವಂತೆ ಏರ್ಪಡಿಸಲಾಗುವುದೆಂದು ಹೇಳಿದರು

ಖಾಸಗಿಯಾಗಿ ರವೆ ಮತ್ತು ಮೈದಾ ಮಾರಾಟ

ಹೊರ ದೇಶದ ಗೋಧಿಯಿಂದ ತಯಾರಾದ ರವೆ ಮತ್ತು ಮೈದಾ ಹಿಟ್ಟುಗಳನ್ನು ಖಾಸಗಿಯಾಗಿ ಮಾರಾಟ ಮಾಡಲು ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟು, ರವೆ ಮತ್ತು ಮೈದಾವನ್ನು ತಯಾರಿಸಲು ಖಾಸಗಿಯವರಿಗೆ ಸರ್ಕಾರದವರೇ ಗೋಧಿಯನ್ನು ಒದಗಿಸುವರೆಂದು ವರದಿಯಾಗಿದೆ

ಪಾಳೆಯಗಾರರ ಕೋಟೆ ಅಗೆದಾಗ ನಾಣ್ಯಗಳ ಪತ್ತೆ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಬಳಿ ಇರುವ ಪಾಳೇಗಾರರ ಕೋಟೆಯಲ್ಲಿ ಕೆಲವು ದಿನಗಳ ಹಿಂದೆ ಬಂಡೆಯೊಂದರ ಕೆಳಗೆ ಚಿನ್ನದ ನಾಣ್ಯಗಳು ಮತ್ತು ಒಡವೆಗಳಿಂದ ತುಂಬಿದ ತಾಮ್ರದ ಬಿಂದಿಗೆಯು ಸಿಕ್ಕಿತೆಂದು ವರದಿಯಾಗಿದೆ

ಪತ್ನಿಯ ವಿರಹ ತಾಳದೆ ಪತಿಯ ಆತ್ಮಹತ್ಯ

ಮೈಸೂರು ೨೬

ರಾಜಧಾನಿಯ ಪೌರಸಭೆಯ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರರಾಗಿದ್ದ ೨೯ ವರ್ಷದ ಶ್ರೀ ನಂಜುಂಡಯ್ಯ ಎಂಬುವರು ನೆನ್ನೆ ಬೆಳಗ್ಗೆ ನಾಯಿಗೆ ಹಾಕುವ ವಿಷವನ್ನು ತಾವೇ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಸಂಗತಿಯು ವರದಿಯಾಗಿದೆ. ಆತನ ಪತ್ನಿಯು ಮೆದುಳಿನ ರಕ್ತಸ್ರಾವಕ್ಕಾಗಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರೆಂದೂ, ಆಕೆಯು ಬದುಕುವುದಿಲ್ಲವೆಂದು ತಿಳಿದು ಅವರು ಪತ್ನಿಯ ವಿರಹ ಶೋಕವನ್ನು ತಾಳಲಾರದೆ ಈ ಕೃತ್ಯವನ್ನೆಸಗಿದರೆಂದೂ ಹೇಳಲಾಗಿದೆ

ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದ ತರುಣಿಯು ಮಾಯ

ರಾಜಧಾನಿಯ ದೇವೀರಮ್ಮಣ್ಣಿ ಆಸ್ಪತ್ರೆಯಲ್ಲಿರುವ ಪ ಮೂರು ೬೦ ವರ್ಷದ ಶ್ರೀ ನರಸಿಮ್ಹಯ್ಯಂಗಾರ್ ಎಂಬುವರ ಪತ್ನಿ ೩೫ ವರ್ಷದ ಶ್ರೀಮತಿ ಜಯಮ್ಮ ಎಂಬುವರು ಕಳೆದ ೧೧ನೇ ತಾ॥ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋಗಿ ಮನೆಗೆ ಹಿಂದಿರುಗದೆ, ಇದುವರೆಗೂ ಪತ್ತೆಯಿಲ್ಲವೆಂದು ಹೇಳಲಾಗಿದೆ ಕಳೆದ ೮ನೇ ತಾರೀಕು ಜಯಮ್ಮನವರು ಬೆಂಗಳೂರಿನಲ್ಲಿರುವ ತಮ್ಮ ತಂಗಿಯ ಮನೆಗೆ ಹೋಗಿ ಹಿಂದಿರುಗಿದ್ದರೆಂದೂ ವರದಿಯಾಗಿದೆ ಅವರ ಮೈ ಮೇಲೆ ಸುಮಾರು ೧,೨೦೦ ರೂ ಬೆಲೆಯ ಆಭರಣಗಳಿದ್ದುವೆಂದು ಗೊತ್ತಾಗಿದೆ

ಬಳ್ಳಾರಿ ತಾಲ್ಲೂಕು ಮೈಸೂರಿಗೆ ಸೇರಲಿ

ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೇ ಸೇರಿಸಬೇಕೆಂದು ಕೋರಿ ಅಲ್ಲಿಯ ೧೪ ಜನ ಪುರಸಭಾ ಸದಸ್ಯರು ಪ್ರಧಾನಿ ನೆಹರೂರವರಿಗೆ ಮನವಿಯೊಂದನ್ನು ಕಳುಹಿಸಿರುತ್ತಾರೆ ಅದನ್ನು ಆಂಧ್ರಕ್ಕೆ ಸೇರಿಸಬೇಕೆಂದು ಕಳೆದ ೮ನೇ ತಾ॥ ಸಭೆಯ ೩೨ ಸದಸ್ಯರ ಪೈಕಿ ೧೮ ಜನರು ಮಾಡಿದ್ದ ತೀರ್ಮಾನದ ವಿರುದ್ಧವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆಯೆಂದು ಗೊತ್ತಾಗಿದೆ

ರೈಲು ಕಂಬಿ ತಪ್ಪಿ ೫ ಬೋಗಿಗಳು ತಲೆಕೆಳಗಾದುವು

ಈಶಾನ್ಯ ರೈಲ್ವೆಯ ಅಲಹಾಬಾದ್ ಗೋರಖ್‌ಪುರ ಪ್ಯಾಸೆಂಜರ್ ರೈಲು ನೆನ್ನೆ ಬೆಳಗ್ಗೆ ೧೦-೪೫ ಘಂಟೆ ಸಮಯದಲ್ಲಿ ಕಂಬಿ ತಪ್ಪಿದ ಪರಿಣಾಮವಾಗಿ ೫ ಬೋಗಿಗಳು ತಲೆಕೆಳಗಾದುವೆಂದೂ ಅದರ ಪರಿಣಾಮವಾಗಿ ಒಬ್ಬನು ಸತ್ತು, ೨೧ ಜನರು ಗಾಯಗೊಂಡರೆಂದೂ ವರದಿಯಾಗಿದೆ ಪರಿಹಾರ ನೀಡುವ ಸಲುವಾಗಿ ದುರ್ಘಟನೆ ನಡೆದ ಸ್ಥಳಕ್ಕೆ ವೈದ್ಯಕೀಯ ಸಹಾಯದಿಂದ ಕೂಡಿದ ಮೂರು ವಿಶೇಷ ರೈಲುಗಳನ್ನು ಕಳುಹಿಸಲಾಗಿದೆ ಘಟನೆ ನಡೆದ ಸ್ಥಳದಲ್ಲಿ ರೈಲ್ವೆ ಕೆಲಸಗಾರರು ಕಂಬಿಗಳ ಬೋಲ್ಟುಗಳಿಗೆ ಗ್ರೀಸ್ ಹಚ್ಚುತ್ತಿದ್ದರೆಂದೂ, ರೈಲು ಬರುವ ವೇಳೆಯಲ್ಲಿ ಅಪಾಯ ಸೂಚಕ ಚಿಹ್ನೆಗಳನ್ನು ಹಾಕಿರಲಿಲ್ಲವೆಂದೂ ಹೇಳಲಾಗಿದೆ ಒಂದು ಕಡೆ ಬೋಲ್ಟು ನಟ್ಟುಗಳನ್ನು ಹಾಕಿರಲಿಲ್ಲವೆಂದೂ ಗೊತ್ತಾಗಿದೆ ೨೦೦ ಗಜ ದೂರದ ರೈಲು ಕಂಬಿಗಳಿಗೆ ತೀವ್ರ ಜಖಂ ಆಗಿದೆ

ವಸಂತ ಹಿಂದೀ ವರ್ಗಗಳು

ಮೈಸೂರ ವಾಣೀವಿಲಾಸ ಮೊಹಲ್ಲೆ ಮಹಾಜನಾ ವಿದ್ಯಾಸಿರದಲ್ಲಿ ತಾ॥ ೨೭-೫ ೫೩ ರಿಂದ ವಸಂತ ಹಿಂದೀ ವರ್ಗಗಳು ಪ್ರತಿದಿನ ಸಂಧ್ಯಾಕಾಲ ೫ ೩೦ ರಿಂದ ೭ ರ ವರೆಗೆ ನಡೆಯುವುವು ಪರೀಕ್ಷೆಯ ತಾರೀಖು ೭-೬-೫೩. ಹೆಚ್ಚಿಗೆ ವಿವರಗಳನ್ನು ವ್ಯವಸ್ಥಾಪಕರಿಂದ ತಿಳಿಯಬಹುದು.

ಹೆಲ್ತ್ ಇನ್ಸ್‌ಪೆಕ್ಟರುಗಳ ತುಟ್ಟಿ ಭತ್ಯ ಹೆಚ್ಚಿಸಬೇಕೆಂದು ನಿರ್ಧಾರ

ಮೊನ್ನೆ ದಿನ ರಾಜಧಾನಿಯಲ್ಲಿ ನಡೆದ ಸಂಸ್ಥಾನದ ಆರೋಗ್ಯ ಇನ್ಸ್‌ಪೆಕ್ಟರುಗಳ ಸಮ್ಮೇಳನದಲ್ಲಿ, ಅವರುಗಳಿಗೆ ೫ ರಿಂದ ೧೦ ರೂ ತುಟ್ಟಿಭತ್ಯ ಮತ್ತು ೧೫ ರೂ ಕಾಂವೋಯ್ಸ್ ಭತ್ಯವನ್ನು ಕೊಡಬೇಕೆಂದು ಒತ್ತಾಯಪಡಿಸುವ ನಿರ್ಣಯವು ಅಂಗೀಕೃತವಾಯಿತು

○ ಸಿಂಹಳದ ಭಾರತೀಯರಿಗೆ ಅಲ್ಲಿನ ಪೌರ ಹಕ್ಕಿನ ಬಗ್ಗೆ ಉಭಯ ಸರ್ಕಾರಗಳಿಗೂ ಶೀಘ್ರದಲ್ಲೇ ಒಂದು ಒಪ್ಪಂದವಾಗಿ, ಎರಡು ವಾರಗಳಲ್ಲೇ ಆ ಬಗ್ಗೆ ಘೋಷಣೆ ಹೊರಬೀಳಲಿರುವುದೆಂದು ವರದಿಯಾಗಿದೆ

ಬಳ್ಳಾರಿ ಭವಿಷ್ಯದ ನಿರ್ಧಾರದ ಬಗ್ಗೆ ತನಿಖೆ

ಬಳ್ಳಾರಿ ಭವಿಷ್ಯವನ್ನು ನಿರ್ಧರಿಸುವ ಸಲುವಾಗಿ ತನಿಖೆ ನಡೆಸಲು ವಿಶೇಷಾಧಿಕಾರಿಯಾಗಿ ನೇಮಿಸಲ್ಪಟ್ಟಿರುವ ಹೈದರಾಬಾದಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಶಂಕರ ಮಿಶ್ರರವರು ಬರುವ ತಿಂಗಳು ೧ ನೇ ತಾ॥ ಯಿಂದ ಬಳ್ಳಾರಿಯಲ್ಲಿ ವಿಚಾರಣೆಯನ್ನು ಆರಂಭಿಸುವರು

ಅಖಿಲ ಭಾರತ ಸಾಹಿತ್ಯ ಪರಿಷತ್ತು

ಭಾರತದ ವಿವಿಧ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ಅಖಿಲ ಭಾರತ ಸಾಹಿತ್ಯ ಪರಿಷತ್ತನ್ನು ಪಂಡಿತ ನೆಹರೂರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲು ನಿರ್ಧಾರವಾಗಿದೆಯೆಂದೂ, ಪರಿಷತ್ತಿನ ರಚನೆ ಬಗ್ಗೆ ಕೇಂದ್ರ ಸರ್ಕಾರದವರು ಶೀಘ್ರದಲ್ಲೇ ಘೋಷಣೆ ಹೊರಡಿಸಲಿರುವರೆಂದೂ ಗೊತ್ತಾಗಿದೆ.

ಗೂಡ್ಸ್ ರೈಲು ಕಂಬಿ ತಪ್ಪಿತು

ಬೆಂಗಳೂರು-ಅರಸೀಕೆರೆ ರೈಲು ಲೈನಿನಲ್ಲಿ ದೊಡ್ಡಬೆಲೆ ಮತ್ತು ನಿಡುವಂದೆಗಳ ನಡುವೆ ನೆನ್ನೆ ಬೆಳಗ್ಗೆ ಗೂಡ್ಸ್ ರೈಲೊಂದು ಕಂಬಿ ತಪ್ಪಿ ಅದರ ೬ ಗಾಡಿಗಳು ತಲೆಕೆಳಗಾದುವು ಬೆಂಗಳೂರಿಗೆ ಹೋಗಬೇಕಾಗಿದ್ದ ಪೂನಾ ರೈಲನ್ನು ಮೈಸೂರು ಮಾರ್ಗವಾಗಿ ಬಿಡಲಾಯಿತು

ಇಚ್ಛಾ ಪ್ರಯಾಣದ ಅಖಿಲ ಭಾರತ ಪ್ರವಾಸ

ಭಾರತದಲ್ಲಿ ರೈಲ್ವೆಗಳ ಶತಮಾನೋತ್ಸವವಾದ ಸಂದರ್ಭದಲ್ಲಿ, ಭಾರತದ ಆದ್ಯಂತ ಇಚ್ಛೆ ಬಂದಂತೆ ೩ ತಿಂಗಳ ಕಾಲ ಪ್ರಯಾಣ ಮಾಡಬಲ್ಲ ೩ ನೇ ತರಗತಿಯ ಟಿಕೆಟ್ಟುಗಳನ್ನು ಕೊಡಲು ರೈಲ್ವೆ ಬೋರ್ಡಿನವರು ಪರಿಶೀಲಿಸುತ್ತಿರುವರೆಂದೂ, ಅಂತಹ ಒಂದು ಟಿಕೆಟ್ಟಿಗೆ ೧೫೦ ರೂ ಗಳಾಗುವುದೆಂದೂ ಹೇಳಲಾಗಿದೆ.

ದೇಶದಲ್ಲೆಲ್ಲಾ ಭತ್ತಕ್ಕೆ ಒಂದೇ ಬೆಲೆ ಸಾಧ್ಯವಿಲ್ಲ

ದೇಶದಲ್ಲೆಲ್ಲಾ ಭತ್ತದ ಸಂಗ್ರಹಣದ ಬೆಲೆಯನ್ನು ಒಂದೇ ತೆರನಾಗಿ ನಿಗದಿ ಮಾಡಲು ಸಾಧ್ಯವಿಲ್ಲವೆಂದೂ, ಅದು ಬೆಳೆಯುವ ಪ್ರದೇಶ ಮತ್ತು ಅದರ ಗುಣಗಳಿಗನುಸಾರವಾಗಿ ಬೆಲೆಯನ್ನು ನಿಗದಿ ಮಾಡಬೇಕಾಗುವುದೆಂದೂ ಭಾರತ ಸರ್ಕಾರದ ಆಹಾರ ಖಾತೆಯ ಉಪ ಮಂತ್ರಿ ಎಂ ವಿ ಕೃಷ್ಣಪ್ಪನವರು ಮೊನ್ನೆ ರಾಜ್ಯ ಪರಿಷತ್ತಿನಲ್ಲಿ ತಿಳಿಸಿದರು

ಕೆ. ಶೇಷಗಿರಿರಾಯರು ಬಳ್ಳಾರಿಗೆ

ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕುಗಳನ್ನು ಮೈಸೂರಿನೊಡನೆ ಸೇರಿಸುವ ಸಂಬಂಧವಾಗಿ ಪರಿಶೀಲನೆ ನಡೆಸಲು ಸಂಸ್ಥಾನ ಸರ್ಕಾರದವರು ನೇಮಿಸಿರುವ ವಿಶೇಷಾಧಿಕಾರಿಯಾದ ಶ್ರೀ ಕೆ ಶೇಷಗಿರಿರಾಯರು ಮೊನ್ನೆ ಬಳ್ಳಾರಿಗೆ ತೆರಳಿದರು ಅವರು ಇದೇ ೨೬ ನೇ ತಾ॥ ವರೆಗೆ ಅಲ್ಲಿದ್ದು, ಅಲ್ಲಿನ ಕಲೆಕ್ಟರನೊಡನೆ ಕಲೆತು ತಮ್ಮ ಕಾರ್ಯಕ್ರಮವನ್ನು ನಿರ್ಧರಿಸುವರು.

ವಾರ ಭವಿಷ್ಯ

೨೬-೪-೫೩ ರಿಂದ ೩-೫-೫೩ರ ವರೆಗೆ

ಮೇಷ— ಆರೋಗ್ಯ ಉತ್ತಮ ಸಮಾಜ ಸೇವೆಯಲ್ಲಿ ಪ್ರಮುಖ ಪಾತ್ರ ವ್ಯವಹಾರಾದಿಗಳಲ್ಲಿ ಜಯ ಧನಾಗಮನ ಉತ್ತಮವಾಗಿರುವುದು

ವೃಷಭ— ಆರೋಗ್ಯ ಉತ್ತಮ ಅನಿರೀಕ್ಷಿತ ಧನ ಲಾಭ ವ್ಯವಹಾರಗಳಲ್ಲಿ ಎಚ್ಚರಿಕೆಯಿರಲಿ ಕುಟುಂಬದ ದೇಹಾಲಸ್ಯ ಸಂಭವ

ಮಿಥುನ— ಆರೋಗ್ಯ ಉತ್ತಮವಿರಲಾರದು ಕುಟುಂಬದಲ್ಲಿ ಕಲಹ ನೌಕರಿಯಲ್ಲಿ ಪೋಟಿಗಾರಿಕೆ ವ್ಯವಹಾರಗಳಲ್ಲಿ ಎಚ್ಚರಿಕೆಯಿರಲಿ

ಕರ್ಕ— ಆರೋಗ್ಯ ಚೆನ್ನಾಗಿರಲಾರದು ಧನಾಗಮನ ಚೆನ್ನಾಗಿರುವುದು ಸಂಬಳ ಹೆಚ್ಚುವ ಸಂಭವ.

ಸಿಂಹ— ಆರೋಗ್ಯ ಸಾಧಾರಣ ಕೌಟುಂಬಿಕ ಗೊಂದಲ ನಿವಾರಣೆ ವ್ಯಾಪಾರಸ್ಥರಿಗೆ ಉತ್ತಮ ವಾರ ಒಡವೆಗಳ ವ್ಯಾಪಾರ

FOR

IMMEDIATE SALE

1 FRIGIDAIRE in working order, with 25 or 60 cycles motor, open unit

2 WATER PUMP Electric complete in running order

3 GEC Electric cooker with oven As good as new

4 MARELLI Electric table fan

5 GODREJ STORWEL Steel Almirahs

6 PHILIPS RADIO 5 valves, AC DC in perfect order

7 SOFA SUITES new upholstered

8 GOODYEAR PLIOFOAM super cushioning Mattresses, pillows and Cushions

9 Huge lot of R W Armless chairs and MARBLE TABLES suitable for Hotels Houses & Offices

10 COFFEE Grinder and ROASTER

11 WELL SEASONED R W & T W CHEST OF DRAWERS with mirror, Almirahs, Benches

12 HIND CYCLE in order

Contd

Messrs : A B I D S,

State Square Mysore

೯೦ ವರ್ಷದ ಮುದುಕಿಗೆ, ೫ ವರ್ಷದ ಬಾಲಕಿಗೆ ಪ್ರಸವ

ಮೆಕ್ಸಿಕೊ ದೇಶದ ಗ್ವಾಯಮಾಸ್ ಸನೋರ ಎಂಬ ಊರಿನ ಹೆಂಗಸೊಬ್ಬಳು ತನ್ನ ೮೮ನೇ ವಯಸ್ಸಿನಲ್ಲಿ ಹೆತ್ತಳೆಂದೂ, ಆಗ ಆಕೆಯ ಪತಿಗೆ ೫೮ ವರ್ಷ ವಯಸ್ಸಾಗಿದ್ದಿತೆಂದೂ ವರದಿಯಾಗಿದೆ ಪೆರು ದೇಶದ ಲೀನ ಎಂಬ ಬಾಲಿಕೆಯು ತನ್ನ ೫ನೇ ವಯಸ್ಸಿನಲ್ಲಿ ಗರ್ಭಿಣಿಯಾದಳೆಂದೂ ಶಸ್ತ್ರ ಚಿಕಿತ್ಸೆಯಿಂದ ಮಗುವನ್ನು ಹೊರಕ್ಕೆ ತೆಗೆಯಲಾಯಿತೆಂದೂ ಗೊತ್ತಾಗಿದೆ

ಕನ್ಯಾ— ಆರೋಗ್ಯ ಉತ್ತಮ ಪ್ರವಾಸ ಸಂಭವ ಆಪ್ತರೊಡನೆ ವಿರಸ ಸಹೋದರರ ದೇಹಾಲಸ್ಯ ಧನಾಗಮನ ಸಾಧಾರಣ.

ತುಲಾ— ಆರೋಗ್ಯ ಸಾಧಾರಣ ಆಸ್ತಿಪಾಸ್ತಿಗಳ ಬಗ್ಗೆ ವ್ಯವಹಾರ ನೌಕರಿಯಲ್ಲಿ ಇತರರ ಸಹಕಾರ ಆರ್ಥಿಕ ಸ್ಥಿತಿ ಉತ್ಸಾಹದಾಯಕ

ವೃಶ್ಚಿಕ— ಆರೋಗ್ಯ ಉತ್ತಮ ನಿಶ್ಚಿತ ಪ್ರಮಾಣವಾಗಿ ನೌಕರಿಯಲ್ಲಿ ಉನ್ನತಿ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವ ಸಂಭವ

ಧನು— ಆರೋಗ್ಯ ಉತ್ತಮವಿರಲಾರದು ಬಂಧುಗಳಿಂದ ಮೋಸ ಸಂಭವ ಆಸ್ತಿಪಾಸ್ತಿಗಳ ಬಗ್ಗೆ ತಕರಾರು ಕುಟುಂಬದ ದೇಹಾಲಸ್ಯ

ಮಕರ— ಆರೋಗ್ಯ ಉತ್ತಮ ವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಹೊಣೆಗಾರಿಕೆ ಹೆಚ್ಚು ಮುಂದೆ ಆದರಿಂದ ಲಾಭವಾಗುವ ಸಂಭವ

ಕುಂಭ— ಆರೋಗ್ಯ ಉತ್ತಮ. ಉನ್ನತ ಅಧಿಕಾರಿಗಳಿಗೆ ವಿದೇಶ ಪ್ರವಾಸ ನೌಕರರಿಗೆ ಅನಿರೀಕ್ಷಿತ ಲಾಭ ಉತ್ಸಾಹದಾಯಕ ವಾರ

ಮೀನ— ಆರೋಗ್ಯ ಚೆನ್ನಾಗಿರುವುದು ಪ್ರಭಾವಶಾಲಿ ವ್ಯಕ್ತಿಗಳ ಸ್ನೇಹ. ಮನೆಮಾರುಗಳನ್ನು ಕೊಳ್ಳುವ ಸಂಭವ ವ್ಯಾಪಾರಸ್ಥರಿಗೆ ಲಾಭ

ರಾಜಕಮಲ್ ಮೈಸೂರು

24-4-53ರಿಂದ ಆಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಪಕ್ಷಿರಾಜರವರ ತಮಿಳು ಚಿತ್ರ

ಜಗನ್ಮೋಹಿನಿ

ಭೂಮಿಕೆ — ಹರಿದಾಸ ಪ್ರಕಾಶಾದೇವಿ, ಮಾಸ್ಟರ್ ಬಾಲಕೃಷ್ಣ, ಶ್ರೀನಿವಾಸರಾವ್

ಎಲೆ ಮತ್ತು ಮರದ ತೊಗಟೆಗಳೇ ಜನರ ಆಹಾರ

ರಾಜಸ್ಥಾನದ ಬಿಕನೀರ್ ಜಿಲ್ಲೆಯಲ್ಲಿ ಜನರು ಮರಗಳ ತೊಗಟೆಯಿಂದ ಮಾಡಿದ ರೊಟ್ಟಿ ಮತ್ತು ಎಲೆಗಳನ್ನು ತಿಂದು ಜೀವಿಸುತ್ತಿರುವರೆಂದು ಕೇಂದ್ರ ಪ್ರಜಾ ಸಭೆಯಲ್ಲಿ ಮೊನ್ನೆ ಸದಸ್ಯರೊಬ್ಬರು ತಿಳಿಸಿದಾಗ, ವ್ಯವಸಾಯ ಇಲಾಖಾ ಉಪಮಂತ್ರಿ ಪಂಜಾಬ್‌ರಾವ್ ದೇಶಮುಖ್‌ರವರು ಮಾತನಾಡಿ ಈ ಬಗ್ಗೆ ವರದಿಗಳು ತಮಗೆ ಬಂದಿಲ್ಲವೆಂದೂ, ರಾಜಸ್ಥಾನ ಸರ್ಕಾರದವರು ಸರಿಯಾಗಿ ವರದಿಗಳನ್ನು ಕಳುಹಿಸುತ್ತಿಲ್ಲವೆಂದೂ ತಿಳಿಸಿ, ಅಲ್ಲಿ ಕ್ಷಾಮ ನಿವಾರಣೆಗಾಗಿ ಸೂಕ್ತ ಪರಿಹಾರ ಕಲ್ಪಿಸುವುದಾಗಿ ಭರವಸೆಯಿತ್ತರು

ಎ. ಸಿ ದೇವೇಗೌಡರಿಗೆ ರಾಕ್‌ಫೆಲ್ಲರ್ ನಿಧಿಯ ವೇತನ

ಶಿಕ್ಷಣ ವಿಧಾನದಲ್ಲಿ ಹೆಚ್ಚಿನ ಪರಿಶ್ರಮ ಹೊಂದಲು ಅಮೆರಿಕದಲ್ಲಿ ಪ್ರವಾಸ ಕೈಗೊಳ್ಳುವ ಸಲುವಾಗಿ ಮೈಸೂರಿನ ಟೀಚರ್ಸ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ|| ಎ ಸಿ ದೇವೇಗೌಡರವರಿಗೆ ರಾಕ್ ಫೆಲ್ಲರ್ ಸಹಾಯ ನಿಧಿಯಿಂದ ೩,೯೦೦ ಡಾಲರ್ ಹಣವು ದೊರೆತಿರುವುದಾಗಿ ಗೊತ್ತಾಗಿದೆ

ರೇವಣ್ಣನವರ ಉಪವಾಸ ಮುಂದುವರಿಯುವುದು

ಧಾನ್ಯದ ಮೇಲಿನ ಹತೋಟಿಯನ್ನು ತೆಗೆದ ಮಾತ್ರಕ್ಕೆ ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದೂ, ಅದು ತಮ್ಮ ಗುರಿಯಲ್ಲವೆಂದೂ, ಫೇರ್ ಪ್ರೈಸ್ ಡಿಪೋಗಳಲ್ಲಿ ಧಾನ್ಯದ ಬೆಲೆಯನ್ನು ಇಳಿಸಬೇಕೆಂದೂ ರಾಜಧಾನಿಯ ಟೌನ್ ಹಾಲಿನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿರುವ ಶ್ರೀ ರೇವಣ್ಣನವರು ತಿಳಿಸಿರುವರು ಅವರ ಉಪವಾಸದ ಬಗ್ಗೆ ಸಹಾನುಭೂತಿ ತೋರಿಸುವ ಸಲುವಾಗಿ ನಂಜನಗೂಡಿನಲ್ಲಿರುವ ಕಪಿಲಾ ಟೆಕ್ಸ್‌ಟೈಲ್ ಗಿರಣಿ ಮತ್ತು ಕಾವೇರಿ ವ್ಯಾಲಿ ಪೇಪರ್ ಮಿಲ್ಲುಗಳ ಕಾರ್ಮಿಕರು ರಾಜಧಾನಿಯಲ್ಲಿ ಮೆರವಣಿಗೆ ನಡೆಸಿದರು ಶ್ರೀ ರೇವಣ್ಣನವರು ಉಪವಾಸ ಸತ್ಯಾಗ್ರಹವನ್ನು ಮುಂದುವರಿಸಲು ನಿಶ್ಚಯಿಸಿರುವರೆಂದೂ ಗೊತ್ತಾಗಿದೆ

Edited, Printed and Published by A R Nagarajan at Sadhvi Press, D Subbaiah Road Mysore

ಪ್ರಭುದೇವಾ ಟಾಕೀಸ್

27-4-53ನೇ ಸೋಮವಾರದಿಂದ ಅನೋಘ 3ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಅಪೂರ್ವ ಸಹೋದರರು

30—4—53 ರಿಂದ · ಅಪೋಘ ಪ್ರದರ್ಶನಾರಂಭ

ಜೆಮಿನಿಯವರ ತಮಿಳು ಚಿತ್ರ

ಸಂಸಾರಂ

ಮಿತ ಸಂತಾನದ ಬದಲು ಸಹಗಮನ, ಆತ್ಮಹತ್ಯೆ

ಆತ್ಮಹತ್ಯೆ ಮತ್ತು ಸಹಗಮನ ಪದ್ಧತಿಗಳಿಗೆ ಪ್ರೋತ್ಸಾಹ ಕೊಡುವುದರಿಂದ ಆಹಾರ ಸಮಸ್ಯೆಯು ಪರಿಹಾರವಾಗಿ ಲಭವಾಗುವುದೆಂದು ಕೈಲಾಸ್ ಬಿಹಾರಿ ಲಾಲ್‌ರವರು ಕೇಂದ್ರ ಪ್ರಜಾ ಸಭೆಯಲ್ಲಿ ಮೊನ್ನೆ ಹೇಳಿದರು ಮಿತ ಸಂತಾನ ಯೋಜನೆಗಿಂತಲೂ ಇದು ಉತ್ತಮ ಮಾರ್ಗವೆಂದು ಅವರು ತಿಳಿಸಿರುತ್ತಾರೆ

ಸಿನಿಮಾ ಕೆಲಸಗಾರರಿಗೆ ಅಗ್ನಿಶಮನ ಶಿಕ್ಷಣ

ಮೈಸೂರು ಜಿಲ್ಲೆಯ ಎಲ್ಲ ಚಿತ್ರಮಂದಿರಗಳ ಕೆಲಸಗಾರರಿಗೂ ರಾಜಧಾನಿಯ ಅಗ್ನಿ ಶಾಮಕ ಪಡೆಯವರು ಒಂದು ವಾರ ಕಾಲ ಅಗ್ನಿ ಶಮನ ಶಿಕ್ಷಣವನ್ನು ಕೊಟ್ಟು, ನೆನ್ನೆ ಅದು ಮುಕ್ತಾಯವಾಯಿತು

ಸಂಗೀತ

ರಾಜಧಾನಿಯ ಹೊಸಕೇರಿಯಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕದ ಅಂಗವಾಗಿ ಈ ರಾತ್ರಿ ೮ ಘಂಟೆಗೆ ವಿ|| ಎಚ್. ಆರ್ ಸೀತಾರಾಮ ಶಾಸ್ತ್ರಿಗಳವರ ಸಂಗೀತವು ವಿ|| ಮುತ್ತಣ್ಣನವರ ಪಿಟೀಲು ಮತ್ತು ವಿ|| ಶೇಷಪ್ಪನವರ ಮೃದಂಗದೊಡನೆ ಜರುಗುವುದು

ಹರಿಕಥೆ

ರಾಜಧಾನಿಯ ಚಾಮುರಾಜ ಮೊಹಲ್ಲಾ ನೂರಡಿರಸ್ತೆಯ ವೆಂಕಟರಾಮಯ್ಯನವರ ಅಂಗಡಿಯ ಮುಂಭಾಗದಲ್ಲಿ ಶ್ರೀ ವೆಂಕಟೇಶದಾಸರಿಂದ ಲವಕುಶ ಎಂಬ ಹರಿಕಥೆಯು ಈ ರಾತ್ರಿ ೮-೩೦ ಘಂಟೆಗೆ ನಡೆಯುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಸಾಕ್ಸೊಫೋನು ಸುಬ್ರಹ್ಮಣ್ಯಾಚಾರ್. ಮಧ್ಯಾಹ್ನ ೨ ಚಿತ್ರಸಂಗೀತ ಸಂಜೆ ೫ ೪೦ ಮತ್ತು ೮ ಪಿಟೀಲು, ಶ್ರೀ ವಿ ರಾಮರಾವ್ ೭ ೩೦ ಗೀತಾಂಜಲಿ ೭ ೪೦ ವಿಶ್ವವಾರ್ತೆ ವಿಮರ್ಶೆ, ೮ ೪೦ ಮತ್ತು ೯ ೪೦ ವಿ ಆರ್ ಪದ್ಮಾವತಮ್ಮ ಸಂಗೀತ ೯ ೦೫ ಹಳ್ಳಿಯ ಆಹಾರದ ಬಗ್ಗೆ ಇಂಗ್ಲೀಷಿನಲ್ಲಿ ಭಾಷಣ

ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿಯ ಅಧಿಕಾರ ವರ್ಗ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿಯ ಅಧಿಕಾರ ವರ್ಗದ ಮರುಚುನಾವಣೆಯು, ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಆಜ್ಞೆ ಮೇರೆ ಮೊನ್ನೆ ನಡೆದು ಶ್ರೀ ಎಂ ರಾಜಶೇಖರಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಎಂ. ಎಸ್ ರಾಮಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ ವಿ ವೆಂಕಟರಾಜುರವರು ಗೌರವ ಕಾರ್ಯದರ್ಶಿಯಾಗಿಯೂ ಮತ್ತು ಬಿ. ಪಟ್ಟಾಭಿರಾಮಯ್ಯನವರು ಲೀಗಲ್ ಅಡ್ವೈಸರಾಗಿಯೂ ಆರಿಸಲ್ಪಟ್ಟಿರುವರು

ನಾಯಿ ಕೆಮ್ಮಿಗೆ ಔಷಧ

(WHOOPING COUGH REMEDY)

ಆರ್. ಎಸ್ ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು.

ರೋ॥ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೭-೪-೧೯೫೬ [ಸಂಚಿಕೆ ೨೧೮

ಪೂನೆ ರಕ್ಷಣಾ ಕಾರ್ಮಿಕರ ಮುಷ್ಕರದ ನೋಟೀಸು

ಹೃಷೀಕೇಶದಲ್ಲಿ ಆಯುರ್ವೇದ ವಿಶ್ವವಿದ್ಯಾಲಯ

ಸ್ಥಾಪನೆಗಾಗಿ ಏರ್ಪಾಡು

ಬೆಂಗಳೂರು ೨೭

ಅ|| ಭಾ|| ಆಯುರ್ವೇದ ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಶಿವಶರ್ಮರವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಹೃಷೀಕೇಶದಲ್ಲಿ ಆಯುರ್ವೇದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ವ್ಯವಸ್ಥೆಯಾಗುತ್ತಿರುವುದಾಗಿ ತಿಳಿಸಿದರು ಆಯುರ್ವೇದದ ಗೌರವ ಘನತೆಯು ಆಯುರ್ವೇದ ಪಂಡಿತರಿಗೆ ಸಹಾಯ ಮಾಡುವುದಕ್ಕಾಗಿಯೇ ಕೈಗೊಳ್ಳಲ್ಪಡುವ ಉದ್ದಿಶ್ಯದಿಂದ ಕೂಡಿರವುದಿಲ್ಲವಾಗಿ ಅವರು ಹೇಳಿದರು ದೇಶಕ್ಕೆ ಅದರಿಂದ ಸಹಾಯವಾಗುವುದೆಂಬುದಕ್ಕಾಗಿ ಅದಕ್ಕೆ ಬೆಂಬಲ ಕೊಡಬೇಕಾದದು ಅಗತ್ಯವೆಂದು ಅವರು ಹೇಳಿ, ಆಯುರ್ವೇದವು ನಶಿಸಲು ಬಿಟ್ಟರೆ ದೇಶಕ್ಕೆ ನಷ್ಟವೆಂದು ಎಚ್ಚರಿಸಿದರು ಸರ್ಕಾರ ಮತ್ತು ಆಯುರ್ವೇದ ಇವುಗಳ ನಡುವೆ ಇರುವ ಆಯುರ್ವೇದ ತಿಳಿಯದ ಮಧ್ಯವರ್ತಿ ಜನರನ್ನು ತೆಗೆದುಹಾಕಬೇಕೆಂದು ಅವರು ಸೂಚಿಸಿದರು ಆಯುರ್ವೇದ ಭವಿಷ್ಯವು ಆ ವಿದ್ಯೆಯನ್ನರಿತ ಪಂಡಿತರ ಕೈಯ್ಯಲ್ಲಿಯೇ ಇರಬೇಕೆಂದು ಅವರು ಹೇಳಿದರು

ಮೊಗಲಾಯರಿತ್ತ ಬಹುಮಾನದ ಕಳುವಿನ ಪತ್ತೆ

ಮೊಗಲಾಯ್ ಚಕ್ರವರ್ತಿಗಳು ಜಯಪುರದ ಬಳಿ ಧೈಲಾ ಮಿದಿಗೆ ಹೊಂದಿ ಅರ್ಪಿಸಿದ್ದ ಕುರಾನಿನ ಮೂರು ಗ್ರಂಥಗಳು ಮತ್ತು ಗರ್ವ ವರ್ಷದ್ದೆಂದು ಹೇಳಲಾದ ೧ ಜೊತೆ ಪಾದರಕ್ಷೆ ಇವು ಎರಡು ವರ್ಷಗಳ ಕೆಳಗೆ ಕಳುವಾಗಿದ್ದು ಈಗ ಒಬ್ಬ ಫೋಟೋಗ್ರಾಫರನ ಒಳಪತ್ತೆಯಾಗಿ, ೮ ವರ್ಷಗಳ ಸಮೇತ ಪೋಲೀಸರ ವಶಕ್ಕೆ ಸಿಕ್ಕಿದೆ ಅಕ್ಬರ್ ಜಹಾಂಗೀರ್ ಮತ್ತು ಷಹಜಹಾನ್ ಚಕ್ರವರ್ತಿಗಳು ಒಪ್ಪಿಸಿದ ಗ್ರಂಥಗಳು — ಷಹಜಹಾನರು ಅರ್ಪಿಸಿದ ಗ್ರಂಥಕ್ಕೆ ೧೨೦ ಸಾವಿರ ರೂ ಬೆಲೆಯಾಗುವುದೆಂದು ಅಂದಾಜಾಗಿದೆ ಗ್ರಂಥಗಳ ನಕಲುಗಳನ್ನು ತೆಗೆದು ವಿದೇಶಗಳಲ್ಲಿ ಮಾರಾಟ ಮಾಡಲಾಗ ಪ್ರಿದ್ದಿತೆಂದು ವರದಿಯಾಗಿದೆ

ಅಂಗಡಿ ಕಾನೂನು-ಉಲ್ಲಂಘನೆಗಾಗಿ ಶಿಕ್ಷೆ

ರಾಜಧಾನಿಯಲ್ಲಿ ಅಂಗಡಿಗಳ ಮತ್ತು ಸಿಬ್ಬಂದಿ ಕಾನೂನನ್ನು ಉಲ್ಲಂಘಿಸಿದರೆಂದು ಈದಿಗವಲ್ಲಿ ಬಸವೇಶ್ವರ ವೀವಿಂಗ್ ಫ್ಯಾಕ್ಟರಿಯ ಶ್ರೀ ಇ ಬಸವಯ್ಯನವರಿಗೆ ೧೫ ರೂ ಮತ್ತು ಮುಂಡಿಪೇಟೆಯ ಅಜೀಜಿಯಾ ಹೋಟೇಲಿನ ಶ್ರೀ ಅಬ್ದುಲ್ ಅಜೀಜ್, ವಾಣಿವಿಲಾಸ ರಸ್ತೆಯ ಶ್ರೈಹಿಂದ್ ಪ್ರೆಸ್ಸಿನ ಶ್ರೀ ಟಿ ಸಿ ಬ್ರಹ್ಮಸೂರಯ್ಯ, ಶಿವಾಜಿಪೇಟೆ ಚಿಕ್ಕರಾಜ ಚೆಟ್ಟಿಯಾರ್ ಬಟ್ಟೆ ಅಂಗಡಿಯ ಶ್ರೀ ಗೋವಿಂದರಾಜ ಇರ್ವಿನ್ ರಸ್ತೆಯ ಸರಾಫ್ ವ್ಯಾಪಾರಿಗಳಾದ ಶ್ರೀ ರಾಧಾಕೃಷ್ಣಶೆಟ್ಟಿ, ಅಕ್ಬರ್ ರಸ್ತೆಯ ರಾಯಲ್ ರೆಸ್ಟೋರೆಂಟಿನ ಶ್ರೀ ಕೆ ಪಿ ನಾರಾಯಣಪಿಳ್ಳೆ ಮತ್ತು ಶಿವಾಜಿಪೇಟೆಯ ವರ್ತಕರಾದ ಬೋರಪ್ಪನವರಿಗೆ ತಲಾ ೧೦ ರೂ ಜುಲ್ಮಾನೆ ವಿಧಿಸಲಾಯಿತು.

ರೇವಣ್ಣನವರ ಉಪವಾಸ ಮುಕ್ತಾಯ

ಮೈಸೂರು ೨೭

ಸರ್ಕಾರಿ ಡಿಪೋಗಳಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಇಳಿಸುವವರೆಗೂ ಆಮರಣಾಂತ ಉಪವಾಸ ಕೈಗೊಳ್ಳುವುದಾಗಿ ತಿಳಿಸಿ ಕಳೆದ ೨೦ನೇ ತಾ|| ನಿಂದ ಟೌನ್‌ಹಾಲ್ ಬಳಿ ಮುಷ್ಕರ ತೊಟ್ಟಿದ್ದ ಶ್ರೀ ಎಸ್ ರೇವಣ್ಣನವರು ನೆನ್ನೆ ದಿನ ಕಬಿನಾ ಎಕ್ಸ್‌ಪ್ರೆಸ್ಸ್ ಮತ್ತು ಕಾವೇರಿ ವ್ಯಾಲಿ ಪೇಪರ್ ಮಿಲ್ಲಿನ ಸುಮಾರು ೩೦೦ ಮಂದಿ ಕಾರ್ಮಿಕರುಗಳ ಕೋರಿಗೆ ಮೇರೆ ಉಪವಾಸವನ್ನು ಮುಕ್ತಾಯ ಮಾಡಿದರು

ಮನೆ ಕಂದಾಯ ಏರಿಸಿರುವುದಕ್ಕೆ ಪ್ರತಿಭಟನಾ ಸಭೆ

ಮೈಸೂರು ಪೌರಸಭೆಯವರು ಕಂದಾಯ ಏರಿಸಿರುವುದನ್ನೂ ಮತ್ತು ನೈರ್ಮಲ್ಯ ... ಮಾಡಿರುವುದನ್ನು ಪ್ರತಿಭಟಿಸಲು ಇದೇ ... ಭಾನುವಾರ ಸಂಜೆ ... ದೇವರಾಜ ಮಾರ್ಕೆಟ್ ... ದಲ್ಲಿ ... ಸಭೆಯನ್ನು ಏರ್ಪಡಿಸಲಾಗಿದೆ ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು ಸರ್ವರೂ ಭಾಗವಹಿಸ ಬೇಕೆಂದು ವ್ಯವಸ್ಥಾಪಕರಾದ ಶ್ರೀ ಎಂ ಬಿ ಮಹದೇವಯ್ಯನವರು ಪ್ರಾರ್ಥಿಸುತ್ತಾರೆ

ಕನ್ನಡಿಗರ ಚಳುವಳಿಗೆ ಬಳ್ಳಾರಿ ಕೇಂದ್ರ

ಇದೇ ೩೦ ನೇ ತಾರೀಕಿನಿಂದ ಬಳ್ಳಾರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮತ್ತು ಅಖಿಲ ಕರ್ನಾಟಕ ಏಕೀಕರಣ ಸಮಿತಿಯ ಕಛೇರಿಗಳನ್ನು ತೆರೆಯಲಾಗುವುದೆ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಗದ್ದಿಗೆಪ್ಪ ಹಳ್ಳಿಕೇರಿಯವರೂ ಮತ್ತು ಕರ್ನಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿ ಶ್ರೀ ಎಂ ಪಿ ರಾಮಚಂದ್ರರಾಯರೂ ಹುಬ್ಬಳ್ಳಿಯಿಂದ ಆಗಮಿಸಿ ಕರ್ನಾಟಕ ಏಕೀಕರಣ ಚಳುವಳಿಯನ್ನು ಬಳ್ಳಾರಿಯಲ್ಲಿ ನಡೆಸುವುದಾಗಿಯೂ, ಬಳ್ಳಾರಿಯನ್ನು ಆಂಧ್ರಕ್ಕೆ ಬಿಟ್ಟುಕೊಡದೆ ಕರ್ನಾಟಕದಲ್ಲೇ ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡುವುದಾಗಿಯೂ ಹೇಳಿಕೆ ಇತ್ತಿರುವರು.

ಪೂನಾ ರಕ್ಷಣಾ ಕಾರ್ಮಿಕರ ಮುಷ್ಕರದ ನೋಟೀಸು

ಪೂನಾ ಹತ್ತಿರ ಕರ್ಕಿ ಮತ್ತು ದೇಹು ರಸ್ತೆ ಬಳಿ ಇರುವ ರಕ್ಷಣಾ ಕೇಂದ್ರಗಳ ೧೩,೦೦೦ ಕಾರ್ಮಿಕರು ಮೇ ೧೨ ನೇ ತಾ|| ಗೆ ಮುಗಿಯುವ ಅವಧಿಯ ನೋಟೀಸನ್ನು ಅಧಿಕಾರಿಗಳಿಗೆ ಕಳುಹಿಸಿ, ಮುಂದೆ ಗೊತ್ತುಮಾಡುವ ದಿನದಿಂದ ಮುಷ್ಕರ ಹೂಡುವುದಾಗಿ ತಿಳಿಸಿರುತ್ತಾರೆ ಮುಷ್ಕರ ಹೂಡುವ ದಿನವನ್ನು ನಿರ್ಧರಿಸಲು ಅವರುಗಳ ಕ್ರಿಯಾ ಸಮಿತಿಯ ಸಭೆಯು ನೆನ್ನೆ ಸೇರಿದ್ದಿತು ಸಿಬ್ಬಂದಿ ಕೋತಾ ವಿಷಯದಲ್ಲಿ ಸರ್ಕಾರದವರಿತ್ತ ಭರವಸೆಗೆ ತಪ್ಪಿ ನಡೆದಿರುವುದೂ ಮತ್ತು ರಕ್ಷಣಾ ಕೇಂದ್ರಗಳಲ್ಲಿರುವ ಕಾರ್ಮಿಕರಿಗೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸದಿರುವುದೂ ಮುಷ್ಕರ ಹೂಡಲು ಕಾರಣವಾಗಿದೆ

ಮೇ ೧ ರಂದು ಬ್ಯಾಂಕು ನೌಕರರ ಪ್ರತಿಭಟನೆ

ಅಖಿಲ ಭಾರತ ಬ್ಯಾಂಕ್ ವಿವಾದದ ನ್ಯಾಯಮಂಡಲದ ತೀರ್ಪನ್ನು ಪ್ರತಿಭಟಿಸಲು ಇದೇ ಮೇ ತಿಂಗಳು ೧ ನೇ ತಾ|| ಪ್ರತಿಭಟನಾ ದಿನಾಚರಣೆ ನಡೆಸುವಂತೆ ಅಖಿಲ ಭಾರತ ಬ್ಯಾಂಕು ನೌಕರರ ಸಂಘದ ಕಾರ್ಯದರ್ಶಿ ಶ್ರೀ ಎಲ್ ಮಲ್ಹೋತ್ರರವರು ಸೂಚಿಸಿರುತ್ತಾರೆ ಸಂಘದ ಪ್ರಾಂತಗಳ ಶಾಖೆಗಳು ೨ ಮತ್ತು ೩ ನೇ ತಾ| ಪ್ರತಿಭಟನಾ ದಿನಗಳನ್ನು ಆಚರಿಸಬೇಕೆಂದು ತಿಳಿಸಲಾಗಿದೆ ನ್ಯಾಯಮಂಡಲದ ತೀರ್ಪಿನ ವಿರುದ್ಧವಾಗಿ ಅಪೀಲು ಹೂಡಲಾಗುವುದು ತೀರ್ಪಿನಿಂದ, ನೌಕರರಿಗೆ ಬರುವ ಸಂಬಳ ಸಾರಿಗೆಯಲ್ಲಿ ಕಡಿಮೆಯಾಗಿರುವುದಾಗಿಯೂ, ಎಲ್ಲರಿಗೂ ಒಂದೇ ರೀತಿಯ ಸಂಬಳ ಕೊಡಬೇಕೆಂಬ ಬೇಡಿಕೆಯನ್ನು ಕಡೆಗಣಿಸಲಾಗಿರುವುದೆಂದೂ ಮಲ್ಹೋತ್ರರವರು ಹೇಳಿರುತ್ತಾರೆ

○ಉತ್ತರ ಪ್ರದೇಶ ಶಾಸನ ಸಭೆಯ ವಿರೋಧ ಪಂಗಡದ ಮುಖಂಡ ರಾಜನಾರಾಯಣಸಿಂಗ್ ಮತ್ತು ಬಿಹಾರ್ ಶಾಸನ ಸಭೆಯ ವಿರೋಧ ಪಂಗಡದ ಉಪನಾಯಕ ಮಧುಕರಧಿಗೆಯವರುಗಳು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂದು ಗೋರಖಪುರದ ಪೋಲೀಸರು ಅವರನ್ನು ದಸ್ತಗಿರಿ ಮಾಡಿರುತ್ತಾರೆ

ನೆಹರೂ ಭವನದ ಮುಂದೆ ಉಪವಾಸವೇ?

ಪಂಜಾಬಿ ಭಾಷೆ ಮಾತನಾಡುವವರ ಪ್ರಾಂತವನ್ನು ರಚಿಸಲು ಒಪ್ಪದಿದ್ದರೆ ಪ್ರಧಾನಿ ನೆಹರೂರವರ ಮನೆ ಬಳಿ ತಾವು ಆಮರಣಾಂತ ಉಪವಾಸ ನಡೆಸುವುದಾಗಿ ಶಿರೋಮಣಿ ದಿಪಾಸತಿ ಅಕಾಲಿ ಸಿಕ್ ದಳದ ಅಧ್ಯಕ್ಷರಾದ ಸಂಪೂರ್ಣ ಸಿಂಗ್ ರಾಮರವರು ನೆಹರೂರವರಿಗೆ ಪತ್ರದ ಮೂಲಕ ತಿಳಿಸಿರುತ್ತಾರೆ

ಪಾಕಿಸ್ತಾನವು ೧೯೫೭ ರಲ್ಲಿ ಒಡೆಯುವುದೇ?

ಪಾಕಿಸ್ತಾನವು ಮುಂದಿನ ವರ್ಷ ಸ್ವತಂತ್ರ ಸಂಸ್ಥಾನಗಳಾಗಿ ಒಡೆದು ಹೋಗುವುದಾಗಿಯೂ, ಮೊದಲು ಪೂರ್ವ ಬಂಗಾಳ, ನಂತರ ಗಡಿನಾಡು, ತರುವಾಯ ಪಂಜಾಬ್ ಮತ್ತು ಸಿಂಧ್ ಪ್ರಾಂತಗಳು ಪ್ರತ್ಯೇಕವಾಗಿ ಕೊನೆಗೆ ೧೯೫೭ರಲ್ಲಿ ಪಾಕಿಸ್ತಾನವು ಭಾರತದಲ್ಲಿ ಹೊಸ ಮಾದರಿಯಲ್ಲಿ ಐಕ್ಯ ಹೊಂದುವುದೆಂದೂ ಬೊಂಬಾಯಿಯ ಪತ್ರಿಕೆಯೊಂದರಲ್ಲಿ ಭವಿಷ್ಯ ನುಡಿಯಲಾಗಿದೆ

ಸ್ವಿಟ್ಸರ್ಲೆಂಡಿಗೆ ಯುದ್ಧಬಂದಿಗಳ ರವಾನೆಗೆ ವಿರೋಧ

ಸ್ವಿಟ್ಸರ್ಲೆಂಡನ್ನು ತಟಸ್ಥ ರಾಷ್ಟ್ರವಾಗಿ ಒಪ್ಪಿ ಅಲ್ಲಿಗೆ ಕೊರಿಯದ ಯುದ್ಧ ಮುಕ್ತಾಯವಾದ ನಂತರ ಸ್ವದೇಶಕ್ಕೆ ಹಿಂತಿರುಗಲಿಚ್ಛಿಸದ ಖೈದಿಗಳನ್ನು ರವಾನಿಸಬೇಕೆಂದು ವಿಶ್ವಸಂಸ್ಥೆಯು ಮಾಡಿರುವ ಸೂಚನೆಯನ್ನು ಕಮ್ಯೂನಿಸ್ಟರು ತಿರಸ್ಕರಿಸಿರುತ್ತಾರೆ ತಟಸ್ಥ ರಾಷ್ಟ್ರಗಳಲ್ಲಿ ೬ ತಿಂಗಳು ಕಾಲ ಖೈದಿಗಳನ್ನು ಇಡಬೇಕೆಂಬ ಕಮ್ಯೂನಿಸ್ಟರ ಸಲಹೆಯನ್ನು ವಿಶ್ವಸಂಸ್ಥೆಯವರೂ ನಿರಾಕರಿಸಿರುವರು

ಪರ್ಷಿಯಾ ಮಾಜಿ ಪೋಲೀಸ್ ಅಧಿಕಾರಿಯ ಕೊಲೆ

ಪರ್ಷಿಯಾದ ಮಾಜಿ ಪೋಲೀಸು ಮುಖ್ಯಾಧಿಕಾರಿ ಎಫ್ ಷಾಫ್ ಟೂಸ್‌ರವರು ಕಳೆದ ವಾರದಿಂದಲೂ ಪತ್ತೆಯಿಲ್ಲವಾಗಿ ಈಗ ಅವರ ಮೃತದೇಹವು ಅಲ್ಲಿನ ರಾಜಧಾನಿ ಟೆಹರಾನಿಗೆ ೩೦ ಮೈಲಿ ದೂರದಲ್ಲಿ ಒಂದು ಕಡೆ ದೊರೆತಿದೆ ಅವರಿಗೆ ವಿಷದ ಇಂಜೆಕ್ಷನ್ ಕೊಟ್ಟುದಾಗಿ ಇಬ್ಬರು ನಿವೃತ್ತ ಸೈನ್ಯಾಧಿಕಾರಿಗಳು ಒಪ್ಪಿಕೊಂಡಿರುವರೆಂದು ಹೇಳಲಾಗಿದೆ ಕೊಲೆಯಲ್ಲಿ ಇಬ್ಬರು ಶಾಸನ ಸಭಾ ಸದಸ್ಯರೂ ಭಾಗಿಗಳಾಗಿರುವರೆಂದು ಆಪಾದಿಸಲಾಗಿದೆ. ಮಾಜಿ ಅಧಿಕಾರಿಯ ಬಗ್ಗೆ ಸುದ್ದಿ ಕೊಟ್ಟವರಿಗೆ ೫ ಲಕ್ಷ ಬಹುಮಾನ ಕೊಡುವುದಾಗಿ ಪರ್ಷಿಯಾ ಸರ್ಕಾರದವರು ತಿಳಿಸಿದ್ದರು.

ಆತ್ಮಹತ್ಯ ಮಾಡಿಕೊಳ್ಳಲು ಹೋಗಿ ವಿಫಲ

ಪೂನಾವಿಗೆ ಸ್ವಲ್ಪ ದೂರವಿರುವ ತಲೆಗಾವ್ ಎಂಬ ನಿಲ್ದಾಣದ ಬಳಿ ನೆನ್ನೆ ೨೫ ವರ್ಷದ ಯುವಕನೊಬ್ಬನು ಆತ್ಮಹತ್ಯ ಮಾಡಿಕೊಳ್ಳಲೆತ್ನಿಸಿ, ವಿಫಲನಾದ ಸಂಗತಿಯು ವರದಿಯಾಗಿದೆ ಅವನು ರೈಲು ಕಂಬಿಗಳ ಮೇಲೆ ಅಡ್ಡಲಾಗಿ ಮಲಗಿದ್ದ, ಅವುಗಳ ಮಧ್ಯೆ, ಸಮಧಾನಂತರವಾಗಿ ಮಲಗಿದ್ದನಾದ್ದರಿಂದ ರೈಲು ಬಂದಾಗ ಅವನಿಗೆ ಸಣ್ಣ ಪುಟ್ಟ ಗಾಯಗಳು ಮಾತ್ರ ತಗಲಿದುವು

ನೌಕರಿಗಳಿಗೆ ಸೇರಿಸುವ ಬಗ್ಗೆ ಸರ್ಕಾರದ ಹೊಸ ಸೂಚನೆ

ಬೆಂಗಳೂರು ೨೭.

ನೌಕರಿಗಳಿಗೆ ಸೇರಿಸುವಾಗ, ಬಡ್ತಿ ಕೊಡುವಾಗ ಮತ್ತು ವರ್ಗ ಮಾಡುವಾಗ ಯೂನಿಟ್ ಅಧಿಕಾರಿಗಳೂ ಮತ್ತು ಅವರ ಕೈಕೆಳಗಿನ ಅಧಿಕಾರಿಗಳೂ ಆ ಬಗ್ಗೆ ಇರುವ ನಿಬಂಧನೆಗಳನ್ನೂ, ಕಟ್ಟಲೆಗಳನ್ನೂ ಕಟ್ಟುನಿಟ್ಟಾಗಿ ಅನುಸರಿಸಬೇಕೆಂದೂ, ಇವುಗಳಿಗೆ ವಿರೋಧವಾಗಿ ನಡೆದುಕೊಂಡ ಅಧಿಕಾರಿಗಳ ವರ್ತನೆ ಬಗ್ಗೆ ತೀವ್ರ ಗಮನ ಕೊಡಲಾಗುವುದೆಂದೂ ಸರ್ಕಾರದವರು ಹೊರಡಿಸಿರುವ ಪ್ರಕಟನೆಯೊಂದು ತಿಳಿಸುತ್ತದೆ. ಕೆಳ ದರ್ಜೆ ನೌಕರಿಗಳಿಗೆ ಸೇರಿಸಿಕೊಳ್ಳುವ [illegible] ಬಗ್ಗೆ [illegible] ಅಧಿಕಾರಿಗಳು ಪಾಲಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ಹೇಳಲಾಗಿದೆ. ಇತ್ತೀಚೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರೂ ಸಹ ಹಲವು ಅಕ್ರಮಗಳ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿರುವುದಾಗಿಯೂ ಹೇಳಲಾಗಿದೆ. ಹಿಂದುಳಿದ ವರ್ಗದವರ, ನಾಗರಿಕರನ್ನು(?) ವಿದ್ಯಾ [illegible] ವರನ್ನು ಸೇರಿಸಿಕೊಳ್ಳುವಾಗ [illegible] ಗತಿಯ ವಿಶೇಷ ದರ್ಜೆ ನೌಕರಿಗೆ ಬ್ರಾಹ್ಮಣರನ್ನು ಸೇರಿಸಿಕೊಳ್ಳುವುದೂ, ಸೀನಿಯಾರಿಟಿಯನ್ನು ಗಮನಿಸದೆ ಬಡ್ತಿ ಕೊಡುವುದೂ, ರಿಕ್ರೂಟ್‌ಮೆಂಟ್ ಹುದ್ದೆಗಳಿಗೆ ನೇರವಾಗಿ ಸೇರಿಸುವುದೇ ಮುಂತಾದ ಅಕ್ರಮಗಳು ನಡೆದಿರುವುದಾಗಿ ಸರ್ಕಾರದವರು ತಿಳಿಸಿರುತ್ತಾರೆ.

ವರ್ಧಾಕ್ಕೆ ದಾಸಪ್ಪನವರ ಭೇಟಿ

ಖಾದಿ ಕೈಗಾರಿಕೆ ಅಭಿವೃದ್ಧಿ ಸಂಬಂಧವಾಗಿ ಅಖಿಲ ಭಾರತ ಚರಖಾ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣದಾಸ ಜಾಜೂರವರೊಡನೆ ಮಾತುಕತೆ ನಡೆಸಲು ಮೈಸೂರಿನ ಮಾಜಿ ಮಂತ್ರಿಗಳೂ, ಕೇಂದ್ರ ಸರ್ಕಾರದವರು ರಚಿಸಿರುವ [illegible] ಸಮಿತಿ ಸದಸ್ಯರೂ ಆದ ಶ್ರೀ ಹೆಚ್. ಸಿ. ದಾಸಪ್ಪನವರು ಕಳೆದ ೧೯ನೇ ತಾ|| ವರ್ಧಾಕ್ಕೆ ಭೇಟಿಯಿತ್ತರು. ಮೈಸೂರು ಸಂಸ್ಥಾನದಲ್ಲಿ ಭೂದಾನ ಯಜ್ಞದ ವಿಷಯವಾಗಿ ಸರ್ವ ಸೇವಾ ಸಂಘದ ಶ್ರೀ ವಲ್ಲಭ ಸ್ವಾಮಿಯವರನ್ನು ಅವರು ಕಂಡು ಮಾತನಾಡಿದರು.

ನಾಯಿ ಕೆಮ್ಮಿಗೆ ಔಷಧ

(WHOOPING COUGH REMEDY)

ಆರ್. ಎಸ್. ಪಂಡಿತರು
ರಾಮಗೋಪಾಲ [illegible]
ದಿವಾನರ ರಸ್ತೆ, ಮೈಸೂರು

ಗೂರ್ಲು, ಉಬ್ಬಸ [illegible] ಮತ್ತು [illegible] ರಿಯಾದ ಔಷಧಿ ದೊರೆಯುತ್ತದೆ. [illegible] ಕ ದೊಡ್ಡ [illegible] ಮತ್ತು [illegible] ಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2 8 0

ಸ್ಟಾಲಿನ್ನರ ವಿಲ್ ಸಮೇತ ಪರಾರಿಯಾದವನ ಶೋಧನೆ

ಮಾರ್ಷಲ್ ಸ್ಟಾಲಿನ್ನರಿಗೆ ಕಳೆದ ೩೦ ವರ್ಷಗಳಿಂದಲೂ ಪ್ರಚಾರ ಸಲಹೆಗಾರರಾಗಿದ್ದ ಮೇ|| ಜ|| ಅಲೆಕ್ಸಾಂಡರ್ ಪೋಸ್ಕ್ರೆಬಿಷೆವ್ ಎಂಬ ೫೬ ವರ್ಷದ ಅಧಿಕಾರಿಯೊಬ್ಬರು, ರಷ್ಯದ ಪ್ರಧಾನ ಮುಖಂಡರ ಸಂಬಂಧವಾದ ರಹಸ್ಯ ಕಾಗದ ಪತ್ರಗಳನ್ನೂ, ಸ್ಟಾಲಿನ್ನರು ತಯಾರಿಸಿದ್ದ ವಿಲ್ಲಿನ ೩ ಪ್ರತಿಗಳ ಪೈಕಿ ಒಂದನ್ನೂ ತೆಗೆದುಕೊಂಡು ಎಲ್ಲಿಯೋ ಹೊರಟು ಹೋಗಿರುವರೆಂದು ವರದಿಯಾಗಿದೆ. ಅವರ ಬಗ್ಗೆ ರಷ್ಯದ ಅಧಿಕಾರಿಗಳು ಅಗಾಧವಾದ ಶೋಧನಾ ನಡವಳಿಕೆಯನ್ನು ಕೈಗೊಂಡಿರುವರೆಂದು ಹೇಳಲಾಗಿದೆ. ಅವರಿಗೆ ಕೊಡಲಾಗಿದ್ದ ವಿಲೆನಿನ್ ಪ್ರಶಸ್ತಿಯನ್ನು ರದ್ದುಪಡಿಸಲಾಗಿದೆ. ಅವರು ಬಂಧಿಸಲ್ಪಟ್ಟರೆ ಅವರನ್ನು ವಿಚಾರಣೆಗೆ ಗುರಿಪಡಿಸಲಾಗುವುದೆಂದೂ ಹೇಳಲಾಗಿದೆ. ಅವರನ್ನು ಕಂಡು ಹಿಡಿಯಲು ರಷ್ಯ ಮತ್ತು ಅವರ ಸಹಯೋಗಿ ರಾಷ್ಟ್ರಗಳ ಎಲ್ಲಾ [illegible] ಲಾಗಿದೆ.

ನೇಪಾಳದಿಂದ ಭಾರತದ ಸೈನ್ಯಗಳ ವಾಪಸು

ನೇಪಾಳದಲ್ಲಿರುವ ಭಾರತದ ಸೈನ್ಯಗಳನ್ನು ವಾಪಸು ಕಳುಹಿಸುವ ಬಗ್ಗೆ ವ್ಯವಸ್ಥೆಗಳಾಗುತ್ತಿರುವುದೆಂದು ಅಲ್ಲಿನ ಕಾಂಗ್ರೆಸ್ಸಿನ ನಾಯಕರಾದ ಶ್ರೀ ಬಿ ಪಿ ಕೊಯಿರಾಲಾರವರು ಒಂದು ಬಹಿರಂಗ ಸಭೆಯಲ್ಲಿ ತಿಳಿಸಿ, ಈ ಕ್ರಮದಿಂದ ನೇಪಾಳ ಭಾರತಗಳ ಬಾಂಧವ್ಯಕ್ಕೆ ಯಾವ ಧಕ್ಕೆಯೂ ತಗಲುವುದಿಲ್ಲವೆಂದೂ ಹೇಳಿರುತ್ತಾರೆ.

ಹೆಂಡತಿಯನ್ನು ಜೀವ ಸಹಿತ ಸುಟ್ಟ ಪ್ರಸಂಗ

ಉತ್ತರ ಭಾರತದ ಕರ್ನಾಲ್ ಜಿಲ್ಲೆಯ ಹಿಸ್ಸಾರ್ ಗ್ರಾಮದ ಸೂರಜ್ ಖಾನ್ ಎಂಬಾತನು ತನ್ನ ಪತ್ನಿ ವಿಷ್ಣು ಕೌರ್‌ರವರನ್ನು ಜೀವಸಹಿತ ಸುಟ್ಟುಹಾಕಿದನೆಂದು ವರದಿಯಾಗಿದೆ. ತನ್ನ ಹೆಂಡತಿಯು ಪರ ಪುರುಷನೊಡನೆ ಅನೀತಿಯುತ ಸಂಪರ್ಕ ಬೆಳೆಸಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಸತ್ಯನಾರಾಯಣ ವ್ರತ

ಮೈಸೂರ ಚಾಮರಾಜ ಮೊಹಲ್ಲಾಯ ಗೊಲ್ಲಗೇರಿಯಲ್ಲಿರುವ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಹುಣ್ಣಿಮೆ ಪ್ರಯುಕ್ತ ಸತ್ಯನಾರಾಯಣ ಪೂಜೆ ನಡೆಯುತ್ತದೆ. ಭಕ್ತಾದಿಗಳು ಆಗಮಿಸಬೇಕಾಗಿ ಕೋರಿದೆ.

ಭಾರತದಲ್ಲಿ ಯೂರೋಪು ರಾಷ್ಟ್ರಗಳ ಯುದ್ಧನೆಲೆಯಿಲ್ಲ

ಪೋರ್ಚುಗೀಸ್ ಅಥವಾ ಫ್ರೆಂಚರ ಆಧಿಪತ್ಯದಲ್ಲಿರುವ ಭಾರತದ ಸ್ವಾಸ್ಥ್ಯಗಳಲ್ಲಿ ಉತ್ತರ ಅಟ್ಲಾಂಟಿಕ್ ಕೌಲು ರಾಷ್ಟ್ರಗಳ ಯುದ್ಧ ಕೇಂದ್ರಗಳನ್ನು ನಿರ್ಮಿಸುವುದಿಲ್ಲವೆಂದೂ, ಈ ಸಂಬಂಧವಾಗಿ ಯಾವ ಸಲಹೆಯಾಗಲಿ ಬಂದಿರುವುದಿಲ್ಲವೆಂದೂ ಪೋರ್ಚುಗೀಸ್ ರಾಜ್ಯದ ವಿದೇಶಾಂಗ ಮಂತ್ರಿ ಡಾ|| ಪಾವಲೊ ಕುನ್ಹಾರವರು ತಿಳಿಸಿರುತ್ತಾರೆ. ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಶಾಂತಿ ವ್ಯವಸ್ಥೆಯು ಏರ್ಪಡಬೇಕೆಂಬುದೇ ಈ ರಾಷ್ಟ್ರಗಳ ಉದ್ದೇಶವಾಗಿರುವುದೆಂದೂ ಅವುಗಳ ಕೌಲಿನ ವ್ಯಾಪ್ತಿಗೆ ಭಾರತವನ್ನು ಒಳಪಡಿಸಿರುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ.

ವಿಶ್ವ ಶಾಂತಿ ಬಗ್ಗೆ ರಷ್ಯದ ಆಸಕ್ತಿ

ರಷ್ಯವು ವಿಶ್ವ ಶಾಂತಿಯ ಬಗ್ಗೆ ಆಸಕ್ತಿ ತೋರಿರುವುದೆಂದೂ, ಅಂತರ ರಾಷ್ಟ್ರೀಯ [illegible] ಚರ್ಚೆ ನಡೆಸಲು [illegible] ಸಿದ್ಧರಾಗಿರುವರೆಂದೂ [illegible] ನ ಪ್ರ[illegible] ಸ್ಪಷ್ಟವಾಗಿ [illegible] ತ್ತವೆ.

ಮಂಡ್ಯದ ಬಳಿ ಇರಿತದ ಪ್ರಸಂಗ

ಮಂಡ್ಯದ ಬಳಿ [illegible] ಗ್ರಾಮದ [illegible] ಸಿದ್ದಪ್ಪನ ಮಗ [illegible] ಎಂಬುವನು ಚಾಕುವಿನಿಂದ ಇರಿದು ಸಾಯಿಸಿ, ಆಯುಧದ ಸಮೇತನಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ಹಾಜರಾದನೆಂದು ವರದಿಯಾಗಿದೆ.

ಹುರಗ್ರಾಮದ ಯುವಕರ ಸಂಘದ ಆರಂಭೋತ್ಸವ

ನಂಜನಗೂಡು ತಾಲ್ಲೂಕು ಹುರ ಗ್ರಾಮದ ಯುವಕರ ಸಂಘದ ಮತ್ತು ವಯಸ್ಕರ ಶಿಕ್ಷಣ ಸಮಿತಿಯ ವಾಚನಾಲಯದ ಆರಂಭೋತ್ಸವವನ್ನು ನಂಜನಗೂಡು ತಾಲ್ಲೂಕು ಅಮಲ್ದಾರರಾದ ಶ್ರೀ ಸಿ ಕೆ ಶ್ರೀನಿವಾಸರಾವ್‌ರವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ನೆರವೇರಿಸಲಾಯಿತು. ಸುಪ್ರಸಿದ್ಧ ಸಾಹಿತಿಗಳೂ ಕಾದಂಬರಿಕಾರರೂ ಆದ ಶ್ರೀ ತ ರಾ ಸುಬ್ಬರಾಯರು ಆರಂಭ ಭಾಷಣ ಮಾಡುತ್ತಾ ನಾಡಿಗೆ ಜೀವನಾಡಿಯಂತಿರುವ ರೈತರ ಕರ್ತವ್ಯವನ್ನು ವಿವರಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಚರ್ಚಿಲ್ ಮಂತ್ರಿಮಂಡಲ ೫ ವರ್ಷವಿರುವುದು

ಕನ್ಸರ್ವೆಟಿವ್ ಪಕ್ಷದೊಳಗಿನ ಒತ್ತಾಯಕ್ಕೆ ಮನ್ನಣೆಯಿತ್ತು, ಈ ಶಿಶಿರ ಋತುವಿನಲ್ಲಿ ಬ್ರಿಟನ್ನಿನಲ್ಲಿ ಮಹಾ ಚುನಾವಣೆ ನಡೆಸಲು ಪ್ರಧಾನಿ ಚರ್ಚಿಲ್ಲರು ಅವಕಾಶ ಕೊಡುವುದಿಲ್ಲವೆಂದು ಲಂಡನ್ನಿನ ಡೈಲಿ ಸ್ಕೆಚ್ ಪತ್ರಿಕೆಯು ವರದಿ ಮಾಡಿದೆ. ತಮ್ಮ ಸರ್ಕಾರವು ಐದು ವರ್ಷಗಳ ಕಾಲ ಪೂರ್ಣವಾಗಿ ಅಧಿಕಾರದಲ್ಲಿರುವಂತೆ ತಾವು ಮಾಡುವುದಾಗಿ ಚರ್ಚಿಲ್ಲರು ಅಮೆರಿಕದ ಅಧ್ಯಕ್ಷ ಐಸೆನ್‌ಹೋವರ್‌ರವರಿಗೆ ಭರವಸೆಯಿತ್ತಿರುವರೆಂದೂ ಗೊತ್ತಾಗಿದೆ.

ಉದಕಮಂಡಲದ ಜಾಡಮಾಲಿಗಳ ೧ ದಿನದ ಮುಷ್ಕರ

ನೀಲಗಿರಿಯ ಉದಕಮಂಡಲದ ಪೌರಸಭೆಯ ೧೯೦ ಜನ ಜಾಡಮಾಲಿಗಳು ಮೊನ್ನೆ ಒಂದು ದಿನದ ಮುಷ್ಕರ ಹೂಡಿದ ಪ್ರಯುಕ್ತ ನಗರದಲ್ಲೆಲ್ಲಾ ವಿಪರೀತ ಗಲೀಜು ಸೇರಿ ದುರ್ವಾಸನೆಯುಂಟಾಗಿತ್ತೆಂದೂ, ಮುಷ್ಕರದ ನಂತರ ಎಲ್ಲರೂ ಪೌರಸಭಾ ಅಧಿಕಾರಿಗಳಿಗೆ ಕ್ಷಮಾಪಣೆ ಸಲ್ಲಿಸಿ ಕೆಲಸಕ್ಕೆ ಹಿಂದಿರುಗಿದರೆಂದೂ ಹೇಳಲಾಗಿದೆ. ೧೫ ಮಂದಿ ಜಾಡಮಾಲಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬.೩೦ ಎಸ್ ವಿ ಶ್ರೀನಿವಾಸಯ್ಯಂಗಾರ್, ವೀಣೆ. ಮಧ್ಯಾಹ್ನ ೨ ಶಂಕರರಾವ್ ಹುಂಬಾಳ್ಕರ್, ಹಿಂದೂಸ್ಥಾನಿ ಸಂಗೀತ. ಸಂಜೆ ೫.೪೦ ಮತ್ತು ೬.೪೦ ಸಿ ಕೆ ತಾರಾ, ಸಂಗೀತ. ೭ ಮತ್ತು ೭.೩೦ ಶಂಕರರಾವ್ ಹುಂಬಾಳ್ಕರ್, ಹಿಂದೂಸ್ಥಾನಿ ಸಂಗೀತ. ೭.೪೦ ಸಂಸ್ಥಾನದ ಅಭಿವೃದ್ಧಿ ಯೋಜನೆಗಳು, ಕನ್ನಡದಲ್ಲಿ ಭಾಷಣ. ೮ ಎಸ್. ವಿ ಶ್ರೀನಿವಾಸಯ್ಯಂಗಾರ್, ವೀಣೆ. ೯.೪೦ ಗಾನಾಮೃತ.

ಕಂಪಾಜಿಟರು ಬೇಕು

ಅನುಭವಸ್ಥರಾದ ಕಂಪಾಜಿಟರು ಬೇಕಾಗಿದೆ. ವಿವರಗಳಿಗೆ ಕೆಳಗೆ ಕಂಡವರಲ್ಲಿ ವಿಚಾರಿಸಿರಿ:—

ವ್ಯವಸ್ಥಾಪಕ
"ಸಾಧ್ವಿ", ಮೈಸೂರು

ಶ್ರೀ ರಮಣಿ ಸಂಗೀತ ವಿದ್ಯಾಲಯ

1064—1 ಚಾಮುಂಡಿ ಅಗ್ರಹಾರ
(ಮಾನುವನದ ಎದುರು)
ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ,
ಸಂಚಾಲಕ.

Edited, Printed and Published by A R Nagarajan at Sadhvi Press, D Subbiah Road, Mysore

ಮನೆ ಮಾರಾಟಕ್ಕಿದೆ

ಮೈಸೂರು [illegible] ರಸ್ತೆಯಲ್ಲಿರುವ ೧೦ನೇ ನಂಬರಿನ [illegible] ಮಾಡರ್ನ್ ಮನೆ, ದೀಪ, ಫ್ಲಷಿಂಗ್ ವಗೈರೆ ಕಾಂಪೌಂಡು ಇದೆ ಬೆಲೆ ಸುಮಾರು 5,000 ರೂ.

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಲಗ್ನದ ಜವಳಿಗಳಿಗೆ — ಮೈಸೂರು [illegible], ಧರ್ಮಾವರಂ, ಆರ್ಟ್ ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಅಟ್ಟಿಗೆ ಶಾಲುಗಳಿಗೆ ★ M.V. ಭೋಜಯ್ಯ (ಫೋನ್ 446) ಶ್ರೀ — ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೮-೪-೧೯೫೩ [ಸಂಚಿಕೆ ೩೧೯

ಬೆಂಗಳೂರು ಪುರಸಭೆಗೆ ನೌಕರರ ನೋಟೀಸು

ಬೆಂಗಳೂರಿನಲ್ಲಿ ರೇವಣ್ಣನವರ ಉಪವಾಸ

ಮೈಸೂರು ೨೮

ಸರ್ಕಾರದವರು ಆಹಾರದ ಬೆಲೆಯನ್ನು ಇಳಿಸಬೇಕೆಂದು ಒತ್ತಾಯಪಡಿಸುವ ಸಲುವಾಗಿ ಕಳೆದ ೨೦ ನೇ ತಾ|| ನಿಂದ ಆಮರಣಾಂತ ಉಪವಾಸ ಕೈಗೊಂಡ. ಮೊನ್ನೆ ದಿನ ಅದನ್ನು ಮುಕ್ತಾಯ ಮಾಡಿದೆ, ನಂಜನಗೂಡು ಕಪಿಲಾ ಟೆಕ್ಸ್‌ಟೈಲ್ಸ್ ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ ಎಸ್ ರೇವಣ್ಣನವರು ತಾವು ಸತ್ಯಾಗ್ರಹವನ್ನು ನಿಲ್ಲಿಸಿದ ಕಾರಣವನ್ನು ತಿಳಿಸಿ, ಆಹಾರದ ಬೆಲೆಯು ಇಳಿಯುವ ವರೆಗೂ ಸತ್ಯಾಗ್ರಹವನ್ನು ಬೆಂಗಳೂರಿನಲ್ಲಿ ಮುಂದುವರಿಸುವುದಾಗಿ ಹೇಳುತ್ತಾರೆ. ತಮ್ಮ ಉಪವಾಸದಲ್ಲಿ ಸಹಾನುಭೂತಿ ತೋರಿಸಲು ನಂಜನಗೂಡಿನಿಂದ "ಮೈಸೂರು ಚಲೋ" ಮೆರವಣಿಗೆಯನ್ನು ತೆಗೆದುಕೊಂಡು ಮೈಸೂರಿಗೆ ಬಂದ ಕಾರ್ಮಿಕರು, ಸತ್ಯಾಗ್ರಹವನ್ನು ಮುಂದುವರಿಸಬಾರದೆಂದೂ, ಹಾಗೆ ಅವರು ಮುಂದುವರಿಸಿದರೆ ತಾವು ಸಹ ಅವರೊಡನೆ ಆಮರಣಾಂತ ಉಪವಾಸ ನಡೆಸುವುದಾಗಿಯೂ ಹಟ ಹಿಡಿದ್ದುದರಿಂದ, ತಾವು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಅನಿವಾರ್ಯವಾಗಿ ಉಪವಾಸ ನಿಲ್ಲಿಸಬೇಕಾಯಿತೆಂದೂ ಅವರು ವಿವರಣೆಯಿತ್ತಿರುವರು

ಸತ್ಯನಾರಾಯಣ ವ್ರತ

ರಾಜಧಾನಿಯ ರಾಮಾನುಜಾ ರಸ್ತೆ ೬ ನೇ ನಂಬರು ಮನೆಯಲ್ಲಿರುವ ಶ್ರೀ ಕಡೂರು ವೆಂಕಟರಮಣ ಶಾಸ್ತ್ರಿಗಳವರು ನಾಳೆ ಪೂರ್ಣಿಮೆ ದಿನ ಸತ್ಯನಾರಾಯಣ ಪೂಜೆಯನ್ನು ನಡೆಸುವರು ಅಧಿಕ ವೈಶಾಖ ಮಾಸದ ಪ್ರಯುಕ್ತ ವಿಶೇಷ ಸೇವಾದಿಗಳನ್ನು ನೆರವೇರಿಸಲಾಗುವುದು ಸಂಗೀತ ವಿದ್ವಾಂಸರೂ, ಭಕ್ತರು ವಿಶೇಷವಾಗಿ ಭಾಗವಹಿಸಿ ಭಗವತ್ಸೇವೆಯನ್ನು ಕೈಗೊಳ್ಳಬೇಕೆಂದು ಕೋರಲಾಗಿದೆ

ತರುಣ ದಂಪತಿಗಳಿಂದ ಸನ್ಯಾಸಾಶ್ರಮ ಸ್ವೀಕಾರ

ರಾಜಸ್ತಾನದ ಬಿಕನೀರ್ ನಗರದ ಧನಿಕ ಯುವಕ ದಂಪತಿಗಳು ಮೊನ್ನೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದುದಾಗಿ ವರದಿಯಾಗಿದೆ ತೇರಾಪಂಥಿ ಗುಂಪಿನ ಆಚಾರ್ಯರವರು ಅವರಿಗೆ ದೀಕ್ಷೆ ಕೊಟ್ಟರು ಇದೇ ರೀತಿ ಇತರ ಇಬ್ಬರು ತರುಣಿಯರೂ ಮತ್ತೊಬ್ಬ ತರುಣನೂ ಸನ್ಯಾಸವನ್ನು ತೆಗೆದುಕೊಂಡರು ಅವರೆಲ್ಲರನ್ನೂ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು

ಜ್ವಾಲಾಮುಖಿ ಬೆಂಕಿ ಕಾರಿ ೧೧ ಜನರ ಮರಣ

ಜಪಾನಿನ ಅತ್ಯಂತ ದಕ್ಷಿಣದ ಕಿಯು ಷು ದ್ವೀಪದಲ್ಲಿರುವ ಆಸೋ ಅಗ್ನಿಪರ್ವತವು ಮೊನ್ನೆ ಬೆಂಕಿ ಕಾರಿದುದರಿಂದ ೧೧ ಜನ ಪರ್ವತಾರೋಹಿಗಳು ಮಡಿದಿರುವರೆಂದೂ, ನೂರಾರು ಮಂದಿಗೆ ಗಾಯವಾಗಿರುವುದಾಗಿಯೂ ವರದಿಯಾಗಿದೆ ೬೦೦ ವಿದ್ಯಾರ್ಥಿಗಳು ಪರ್ವತವನ್ನು ಹತ್ತುತ್ತಿದ್ದಾಗ ಈ ಘಟನೆಯು ಸಂಭವಿಸಿತೆಂದು ಹೇಳಲಾಗಿದೆ

ಕಾರ್ಪೊರೇಷನ್ ನೌಕರರ ಮುಷ್ಕರದ ನೋಟೀಸು

ಬೆಂಗಳೂರು ೨೮

ಇಲ್ಲಿನ ಕಾರ್ಪೊರೇಷನ್ನಿನ ಕೆಲಸಗಾರರ ಸಂಘದ ಸಭೆಯು ಮೊನ್ನೆ ಸಂಜೆ ನಡೆದು, ಕಾರ್ಪೊರೇಷನ್ನಿನ ೧೫೦ ಮಂದಿ ನೌಕರರನ್ನು ಕೆಲಸದಿಂದ ತೆಗೆಯುವ ಬಗ್ಗೆ ಅವರಿಗೆ ಜಾರಿ ಮಾಡಲಾಗಿರುವ ನೋಟೀಸನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಮತ್ತು ಕೆಲಸಗಾರರಿಗೆ ಹೆಚ್ಚಿನ ಸಂಬಳ, ತುಟ್ಟಿ ಭತ್ಯ ಮತ್ತು ಮನೆ ಬಾಡಿಗೆ ಭತ್ಯವನ್ನೂ ಕೊಡಬೇಕೆಂದೂ ಒತ್ತಾಯಪಡಿಸುವ ನಿರ್ಣಯಗಳು ಮಂಜೂರಾದುವು ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಬರುವ ತಿಂಗಳು ೧೧ನೇ ತಾರೀಖು ಅಥವಾ ನಂತರ ಕೆಲಸಗಾರರು ಮುಷ್ಕರ ಹೂಡುವ ನೋಟೀಸನ್ನು ಸಂಘದ ಪರವಾಗಿ ಕಾರ್ಪೊರೇಷನ್ನಿಗೆ ನೆನ್ನೆ ಕೊಡಲಾಯಿತು. ಕಾರ್ಪೊರೇಷನ್ನಿನವರು ಧಾನ್ಯದ ಡಿಪೋಗಳನ್ನು ಮುಂದೆಯೂ ನಡೆಸುವುದಲ್ಲದೆ ಹೊಸ ಫೇರ್ ಪ್ರೈಸ್ ಡಿಪೋಗಳನ್ನೂ ತೆರೆಯಬೇಕೆಂದೂ ಮತ್ತು ಮೇ ತಿಂಗಳು ೧ನೇ ತಾರೀಖು ರಜಾ ಕೊಡಬೇಕೆಂದೂ ಇಲ್ಲವಾದರೆ ಕೆಲಸಗಾರರು ಆ ದಿನ ಕೆಲಸದ ಮೇಲೆ ಹಾಜರಾಗುವುದಿಲ್ಲವೆಂದು ಸೂಚಿಸುವ ನಿರ್ಣಯ ಮಾಡಲಾಯಿತು

ದೇವರ ಪ್ರಾರ್ಥನೆ ನಡೆಸಿದ ಬಾಲಕಿಗೆ ಕಾಲು ಬಂದಿತು

ಬ್ರಿಟನ್ನಿನ ಪೂರ್ವ ಕರಾವಳಿಯ ವಾಲಿಂಗ್‌ಹ್ಯಾಂ ಎಂಬಲ್ಲಿನ ಕ್ರಿಸ್ತ ದೇವಾಲಯಕ್ಕೆ ೧೫ ವರ್ಷದ ಹೆಳವ ಬಾಲಕಿಯೊಬ್ಬಳನ್ನು ಕಳೆದ ಭಾನುವಾರ ದೇವರ ಪ್ರಾರ್ಥನೆಗಾಗಿ ಕರೆದುಕೊಂಡು ಹೋಗಲಾಗಿದ್ದಿತೆಂದೂ ಭಕ್ತಿಯಿಂದ ಪ್ರಾರ್ಥನೆ ನಡೆಸಿ ವಾಪಸು ಬರುವಾಗ ಹುಡುಗಿಯ ಕಾಲುಗಳಲ್ಲಿ ಶಕ್ತಿ ಬಂದು ನಡೆಯಲು ಸಾಧ್ಯವಾಯಿತೆಂದೂ ವರದಿಯಾಗಿದೆ ಮೇಲ್ಕಂಡ ಕ್ರಿಸ್ತ ದೇವಾಲಯವು ೧ ಸಾವಿರ ವರ್ಷದ್ದೆಂದು ಹೇಳಲಾಗಿದೆ

೨೦ ಸಾವಿರ ಮಣ ಗೋಧಿ ಮಾಯ

ಕರಾಚಿಯಿಂದ ಲಾಹೋರಿಗೆ ಮೊನ್ನೆ ಸಾಗುತ್ತಿದ್ದ ೨ ಲಕ್ಷ ರೂ ಬೆಲೆಯ ೨೦ ಸಾವಿರ ಮಣ ಗೋಧಿ ಮಾರ್ಗ ಮಧ್ಯೆ ಕಳವು ಹೋಗಿರುವುದಾಗಿ ವರದಿಯಾಗಿದೆ

ನೆಹರೂ ಭೇಟಿಗಾಗಿ ಮಹಮದಾಲಿ ಕಾತರ

ಭಾರತ ಪಾಕಿಸ್ತಾನಗಳ ನಡುವೆ ಗೌರವಯುತವೂ ಮತ್ತು ಸೌಹಾರ್ದಯುತವೂ ಆದ ಒಪ್ಪಂದವೊಂದಕ್ಕಾಗಿ ಎರಡು ರಾಷ್ಟ್ರಗಳ ನಡುವೆ ಮಧುರ ಬಾಂಧವ್ಯವು ಬೆಳೆಯಲು ತಾವು ಆಶಿಸುವುದಾಗಿಯೂ, ಪಂಡಿತ ನೆಹರೂರವರನ್ನು ತಮ್ಮ ಹಿರಿಯ ಸಹೋದರರೆಂದು ತಾವು ಭಾವಿಸುವುದಾಗಿಯೂ ಮತ್ತು ಅವರೊಡನೆ ತಮ್ಮ ಭೇಟಿಯು ಆದಷ್ಟು ಬೇಗನೆ ನಡೆಯಲೆಂಬುದೇ ತಮ್ಮ ಆಶಯವೆಂದೂ ಪಾಕಿಸ್ತಾನದ ನೂತನ ಪ್ರಧಾನಿ ಮಹಮದ್ ಆಲಿಯವರು ಪತ್ರಿಕಾ ಸಮ್ಮೇಳನದಲ್ಲಿ ನೆನ್ನೆ ತಿಳಿಸಿರುವರು ಬರುವ ಜೂನ್ ತಿಂಗಳಲ್ಲಿ ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೋತ್ಸವದ ವರೆಯುವುದಕ್ಕೆ ಮುನ್ನ ಮೇಲ್ಕಂಡ ಭೇಟಿಯು ನಡೆಯುವ ಸಂಭವವಿಲ್ಲವೆಂದೂ ಅವರು ಹೇಳಿರುವರು.

ಭಾರತ ಪಾಕಿಸ್ತಾನಗಳ ವ್ಯವಹಾರವನ್ನು ಸ್ನೇಹಯುತವಾಗಿ ಪರಿಹರಿಸಿದನಂತರ ಎರಡು ದೇಶಗಳ ಪ್ರತಿನಿಧಿಗಳೂ ಸೇರಿ ಅವೆರಡರ ಜಂಟಿ ರಕ್ಷಣಾ ವ್ಯವಸ್ಥೆಯನ್ನು ಕುರಿತು ಚರ್ಚಿಸಬಹುದೆಂದೂ ಕಳೆದ ಶನಿವಾರ ಪಂಡಿತ ನೆಹರೂರವರಿಗೆ ಒಂದು ಪತ್ರ ಬರೆಯಲಾಗಿದ್ದಿತೆಂದೂ ಅವರಿಂದ ಅದಕ್ಕೆ ಉತ್ತರ ಬಂದನಂತರ ಎರಡು ಸರಕಾರಗಳ ಅಧಿಕಾರಿಗಳು ಮೊದಲು ನೆಹರೂರವರ ಭೇಟಿಗೆ ಸಾಧಕವಾಗುವಂತಹ ಮಾತುಕತೆಗಳನ್ನು ನಡೆಸುವರೆಂದೂ ಮಹಮದಾಲಿಯವರು ತಿಳಿಸಿರುವರು. ತಮ್ಮ ಪ್ರಯತ್ನದಲ್ಲಿ ಪಾಕಿಸ್ತಾನ ಮತ್ತು ಭಾರತಗಳ ಪತ್ರಿಕೆಗಳು ಪೂರ್ಣ ಸಹಕಾರ ನೀಡಬೇಕೆಂದು ಅವರು ಕೋರಿದರು ಅಂಗಸ್ತಾನದಲ್ಲಿ ತಾವು ಖಾಸಗಿಯಾಗಿ ಪಂಡಿತ ನೆಹರೂರವರನ್ನು ಭೇಟಿ ಮಾಡಬಹುದೆಂದೂ ಅವರು ಹೇಳಿದರು

ಹಳ್ಳಿ ಮನೆಯೊಂದರಲ್ಲಿ ಅಸ್ಥಿಪಂಜರದ ಪತ್ತೆ

ಹೊಳೆನರಸೀಪುರಕ್ಕೆ ಮೂರು ಮೈಲಿ ದೂರವಿರುವ ದೊಡ್ಡ ಬ್ಯಾಗತಹಳ್ಳಿ ಎಂಬ ಗ್ರಾಮದ ಮನೆಯೊಂದರಲ್ಲಿ ಮನುಷ್ಯನ ಅಸ್ಥಿಪಂಜರವೊಂದು ಸಿಕ್ಕಿರುವುದಾಗಿಯೂ ಮೂಳೆಗಳು ಪ್ರತ್ಯೇಕವಾಗಿದ್ದುವಾಗಿಯೂ, ಮನೆಯ ಬಾಗಿಲನ್ನು ಹಾಕಿದ್ದು ಅದರಲ್ಲಿ ಯಾರೂ ವಾಸವಿರಲಿಲ್ಲವೆಂದೂ ಹೇಳಲಾಗಿದೆ ಮನೆ ಹಂಚು ಕೈಯಾಡುತ್ತಿದ್ದಾಗ ಒಳಗಿನಿಂದ ದುರ್ವಾಸನೆಯು ಬಂದು ಅದರಿಂದ ರಹಸ್ಯವು ಬಯಲಾಯಿತೆಂದು ಗೊತ್ತಾಗಿದೆ ಪೊಲೀಸರು ಅಸ್ಥಿಪಂಜರವ ರ ತ ... ಕೊಲೆ ಮಾಡಲಾಗಿದೆಯೆಂದೂ ಶಂಕೆಯಾಗಿದೆ

ಕಾರಿಯಪ್ಪ ಆಸ್ಟ್ರೇಲಿಯಾ ಹೈ ಕಮಿಷನರ್

ಭಾರತದ ನಿವೃತ್ತ ಶ್ರೇಷ್ಠ ಸೇನಾನಿ ಜನರಲ್ ಕೆ ಎಂ ಕಾರಿಯಪ್ಪನವರನ್ನು ಆಸ್ಟ್ರೇಲಿಯಾದಲ್ಲಿ ಭಾರತದ ಹೈ ಕಮಿಷನರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಅಮೇರಿಕಾ, ಜಪಾನುಗಳಿಗೆ ಅರ್ಧ ಬೆಲೆಗೆ ಪರ್ಷಿಯಾ ಎಣ್ಣೆ

ಇರಾನ್ ಸರ್ಕಾರದವರು ಅಮೆರಿಕಾ ಮತ್ತು ಜಪಾನುಗಳಿಗೆ ಇನ್ನು ಆರು ತಿಂಗಳ ಕಾಲ ಎಣ್ಣೆಯನ್ನು ಅರ್ಧ ಬೆಲೆಗೆ ಮಾರುವುದಾಗಿ ತಿಳಿಸಿರುತ್ತಾರೆ ಅವರ ಬೆಲೆಯನ್ನು ಡಾಲರುಗಳಲ್ಲೇ ಕೊಡಬೇಕೆಂದೂ, ಹೆಚ್ಚು ಡಾಲರುಗಳನ್ನು ಇರಾನು ಗಳಿಸುವುದೇ ಈ ಅಗ್ಗದ ಬೆಲೆಯ ಮಾರಾಟದ ಉದ್ದೇಶವೆಂದೂ ಹೇಳಲಾಗಿದೆ

ಬೊಂಬಾಯಿ ರೇಡಿಯೋ ಅಧಿಕಾರಿಯ ದಸ್ತಗಿರಿ

ಬೊಂಬಾಯಿಯ ಆಲ್ ಇಂಡಿಯಾ ರೇಡಿಯೋ ವಿನ ಅಸಿಸ್ಟೆಂಟ್ ಡೈರೆಕ್ಟರ್ ನಾರಾಯಣ ಸ್ ಇಕ್‌ಬಾಲ್‌ಸಿಂಗ್‌ರವರು ಹಣದ ದುರುಪಯೋಗದ ಸಂಬಂಧವಾಗಿ ದಸ್ತಗಿರಿಯಾಗಿ, ಈಗ ೩೦೦೦ ರೂ ಗಳ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ

ಕನ್ನಡದಲ್ಲಿ ಸುದ್ದಿ ಫಿಲಂಗಳು

ಭಾರತ ಸರ್ಕಾರದ ಸುದ್ದಿ ಫಿಲಂಗಳನ್ನು ಗುಜರಾತಿ, ಕನ್ನಡ, ಮರಾಠಾ, ಮಲಯಾಳ ಭಾಷೆಗಳ ವ್ಯಾಖ್ಯಾನದೊಡನೆ ಇನ್ನು ಮುಂದೆ ತಯಾರಿಸಲಾಗುವುದು ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಮತ್ತು ಬಂಗಾಳಿ ಭಾಷೆಗಳಲ್ಲಿ ವ್ಯಾಖ್ಯಾನಗಳಿರುವ ಫಿಲಂಗಳು ಇದುವರೆಗೆ ತಯಾರಾಗುತ್ತಿದ್ದುವು.

ಮಹದೇಶ್ವರನ ಬೆಟ್ಟಕ್ಕೆ ಮಹಾರಾಜರ ಭೇಟಿ

ಮುಂದಿನ ತಿಂಗಳು ೭ ನೇ ತಾ|| ಕೊಳ್ಳೇಗಾಲದ ಬಳಿ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಶ್ರೀಮನ್ ಮಹಾರಾಜರು ಭೇಟಿಯೀಯುವರು ಅವರೊಡನೆ ಮದ್ರಾಸಿನ ಮಂತ್ರಿ ಕೆ ವೆಂಕಟಸ್ವಾಮಿ ನಾಯ್ಡು ಮತ್ತು ಶಾಸನ ಸಭಾಧ್ಯಕ್ಷರಾದ ಶಿವಷಣ್ಮುಗಂ ಪಿಳ್ಳೆಯವರೂ ಇರುವರು

ಮೋಟಾರು ಮರಕ್ಕೆ ಡಿಕ್ಕಿಯಾಗಿ ಹುಡುಗಿಯ ಮರಣ

ಬೆಂಗಳೂರಿನ ಕ್ಲೀವ್‌ಲ್ಯಾಂಡ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ರೆಡ್ಡಿಯವರು ಮೊನ್ನೆ ಮಧ್ಯಾಹ್ನ ಮೋಟಾರಿನಲ್ಲಿ ನಂದಿ ಬೆಟ್ಟದ ರಸ್ತೆಯಲ್ಲಿ ಹೋಗುತ್ತಿದ್ದಾಗ, ಕಾರು ಮರಕ್ಕೆ ಡಿಕ್ಕಿ ಹೊಡೆದು ಕೂಡಲೇ ಅವರ ೬ ವರ್ಷದ ಮಗಳು ಮೃತಪಟ್ಟಳೆಂದೂ, ರೆಡ್ಡಿಯವರಿಗೂ ಅವರ ಕಾಯಿಯವರಿಗೂ ಕುಟುಂಬ ಗಾಯವಾಗಿ ಅವರನ್ನು ಆಸ್ಪತ್ರೆಗೆ ಸೇರಿಸಿದೆಯೆಂದೂ, ರೆಡ್ಡಿಯವರ ಕಾಲು ಮುರಿದಿರುವುದಾಗಿಯೂ, ಅವರ ತಾಯಿಯವರಿಗೆ ಅಪ್ಘಾತವನ್ನು ಕೊಡಲಾಗುತ್ತಿರುವುದೆಂದೂ ವರದಿಯಾಗಿದೆ

ಸೌರಾಷ್ಟ್ರದ ೩ ಲಕ್ಷ ಜನರು ... ತಿಳಿಸಿರುತ್ತಾರೆ

ಕೊರಿಯಾ ಸಂಧಾನದಲ್ಲಿ ಚೀಣದ ಪಾತ್ರ ಅಗತ್ಯ

ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ ಟ್ರಿಗ್ವಿ ಲೀಯವರು ಮೊನ್ನೆ ವಿಶ್ವಕ್ಕೆ ಪ್ರಸಾರ ಭಾಷಣ ಮಾಡುತ್ತಾ ಕೊರಿಯಾ ಶಾಂತಿ ಒಪ್ಪಂದದಲ್ಲಿ ಚೀಣವು ಅಗತ್ಯವಾಗಿ ಭಾಗ ವಹಿಸಬೇಕೆಂದೂ ಇಲ್ಲದಿದ್ದರೆ ಯುದ್ಧ ಸ್ತಂಭನವು ಸಾಧ್ಯವಿಲ್ಲವೆಂದೂ ಹೇಳಿರ ವರು. ಕೊರಿಯಾ ಮವ ಸ್ಯೆಯಲ್ಲಿ ದೂರ ಪ್ರಾಚ್ಯ ರಾಷ್ಟ್ರಗಳ ಸಮಸ್ಯೆಯೂ ಮಿಳಿತವಾಗಿರುವುದೆಂದೂ ಅದರ ಬಗ್ಗೆ ಗೌರವಯುತ ಶಾಂತಿ ಸಂಧಾನಕ್ಕೆ ಒರುವುದರಲ್ಲಿ ವಿಶ್ವಸಂಸ್ಥೆಗೆ ಇರುವಷ್ಟೇ ಜವಾಬ್ದಾರಿಯು ಅದರ ಜು ರಾಷ್ಟ್ರವಣ ನಡೆಯುವುದರಲ್ಲೂ ಇರುವುದೆಂದೂ ಅವರು ತಿಳಿಸಿರುವರು

ಮಾರಾಟ ತೆರಿಗೆ ಬಗ್ಗೆ ಸಾರ್ವಜನಿಕರ ಅಭಿಪ್ರಾಯಕ್ಕೆ ಸ್ವಾಗತ

ಸಂಸ್ಥಾನದಲ್ಲಿ ಜಾರಿಯಲ್ಲಿರುವ ಮಾರಾಟ ತೆರಿಗೆ ಕಾನೂನಿನಲ್ಲಿರಬಹುದಾದ ನ್ಯೂನಾತಿರೇಕಗಳ ಪರಿಹಾರ ಸೂಚಕವಾದ ಸಲಹೆಗಳನ್ನು ಕೊಡುವಂತೆ ನೇಮಕವಾಗಿರುವ ಸಮಿತಿಯವರು ತೆರಿಗೆಗೆ ಸಂಬಂಧಿಸಿದ ವಿಷಯವಾಗಿ ವ್ಯಕ್ತಿಗಳು ಸಂಸ್ಥೆಗಳು ಮತ್ತು ಸಾರ್ವಜನಿಕರ ಅಭಿಪ್ರಾಯವನ್ನು ಕೋರಿರುತ್ತಾರೆ ತೆರಿಗೆಯನ್ನು ವಿಧಿಸುವ ಬೇರೆ ಮಾರ್ಗದ ಬಗ್ಗೆ ತಮಗೆ ತೋರುಬರುವ ಸಲಹೆಗಳನ್ನು ಸಾರ್ವಜನಿಕರು ಸದರಿ ಸಮಿತಿಯ ಕಾರ್ಯದರ್ಶಿಯವರಿಗೆ ತಿಳಿಸಬಹುದಾಗಿದೆ ಪಾನ ನಿರೋಧವನ್ನು ರದ್ದುಮಾಡಬೇಕೆಂಬ ಸಲಹೆಯನ್ನು ಬಿಟ್ಟು ಮಾರಾಟ ತೆರಿಗೆಯನ್ನು ತೆಗೆಯಲು ಸಾಧ್ಯವಾಗುವಂತೆ ಸರ್ಕಾರಕ್ಕೆ ಬೇರೆ ವಿಧದ ಆದಾಯ ಬಾಬನ್ನು ಸೂಚಿಸಲೂ ಸಹ ಸಮಿತಿಯನ್ನು ಸರ್ಕಾರದವರು ಕೋರಿರುವರು

ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ವಾರ್ಷಿಕೋತ್ಸವ

ರಾಜಧಾನಿಯ ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ೩೩ ನೇ ವಾರ್ಷಿಕೋತ್ಸವವು ಶ್ರೀರಂಗಪಟ್ಟಣದಲ್ಲಿ ಮೊನ್ನೆ ನೆರವೇರಿತು ಮೈಸೂರು ನಗರ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆ ವಹಿಸಿದ್ದರು ಮಾಜಿ ಪೌರಸಭಾ ಸದಸ್ಯರಾದ ಶ್ರೀ ಎಂ ... ನವರ ... ಶ್ರೀ ಎ ... ಶ್ರೀ ಒ ... ಪುಟ್ಟಯ್ಯನವರು ... ಅಧ್ಯಕ್ಷರು ಮಾತನಾಡಿ ... ಗಳಿಂದ ನಡೆದ ಬರುತ್ತಿರುವ ಸಂಸ್ಥೆಯಿಂದ ಅದರಲ್ಲಿರುವ ಸದಸ್ಯರ ಕ್ರೀಡಾಭಿಮಾನವು ವ್ಯಕ್ತವಾಗುವುದಾಗಿಯೂ, ಸಾರ್ವಜನಿಕರು ಇಂತಹ ಕ್ರೀಡಾ ಸಂಸ್ಥೆಗಳಿಗೆ ನೆರವು ನೀಡಬೇಕೆಂದೂ ಸೂಚಿಸಿದರು ಮೈಸೂರು ಪೌರಸಭಾ ಸದಸ್ಯರಾದ ಡಾ|| ಬಿ ಜಿ ದಾಸ್‌ರವರೂ ಮಾತನಾಡಿದರು ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ದಂಪತಿಗಳಿಗೆ ಸಾಧು ವಿಷ ಕೊಟ್ಟ ಪ್ರಸಂಗ

ಕೋಲಾರದ ಬಳಿ ... ಎಂಬಲ್ಲಿ ಒಬ್ಬ ದಂಪತಿಗಳ ಮನೆಯಲ್ಲಿ ಸಾಧುವೊಬ್ಬನು ಅವರಿಗೆ ಶ್ರೇಯಸ್ಸಾಗಲೆಂದು ಪೂಜಾದಿಗಳನ್ನು ನಡೆಸಿ ಪ್ರಸಾದವನ್ನಿತ್ತನೆಂದೂ, ಅದನ್ನು ಸೇವಿಸಿ ಅವರಿಬ್ಬರೂ ಮೃತಪಟ್ಟರೆಂದೂ ತರುವಾಯ ಸಾಧುವು ಅವರ ಬಳಿ ಇದ್ದ ಬೆಲೆಯುಳ್ಳ ಪದಾರ್ಥಗಳನ್ನು ಅಪಹರಿಸಿ ಓಡಿಹೋದನೆಂದೂ ವರದಿಯಾಗಿದೆ

ಹರಿಕಥೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿ ೩೩ ನೇ ನಂಬರು ಮನೆ ಹಿಂಭಾಗದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವೇ|| ಸಿ ವಿ ನರಸಿಂಹ ಮೂರ್ತಿ ದಾಸರು ಸೀತಾ ಸ್ವಯಂವರ ಎಂಬ ಹರಿಕಥೆಯನ್ನು ಮಾಡುವರು ಶ್ರೀ ಶಂಕರ ಶಾಸ್ತ್ರಿಯವರ ಹಾರ್ಮೋನಿಯಂ ವಾದನವಿದೆ

ಹೈದರಾಬಾದು ಜಮಯತ್ ಕಛೇರಿ ಶೋಧನೆ

ಭಾರತ ಸರ್ಕಾರದವರು ಪ್ರಕಟಿಸಿರುವರೆಂದು ಹೇಳಲಾದ ಕೃತಕ ಸೂಚನೆ ಯೊಂದನ್ನು ಪ್ರಚುರ ಪಡಿಸಿದ ಸಂಬಂಧವಾಗಿ ಹೈದರಾಬಾದು ಪೋಲೀಸರು ಅಖಿಲ ಭಾರತ ಜಮಯತ್ ಉಲ್ ಉಲೇಮಾ ಶಾಖೆಯ ಕಛೇರಿಗೆ ನುಗ್ಗಿ ಹಲವು ಸಾಹಿತ್ಯಗಳನ್ನು ವಶಪಡಿಸಿಕೊಂಡಿರುತ್ತಾರೆ ಹೈದರಾಬಾದಿನಲ್ಲಿ ಮಿಲಿಟರಿ ಆಡಳಿತವಿದ್ದಾಗ ಕೆಲಸದಿಂದ ತೆಗೆಯಲ್ಪಟ್ಟ ಅಥವಾ ನಿವೃತ್ತಿ ಮಾಡಲ್ಪಟ್ಟ ಜನರನ್ನು ಪುನ ಕೆಲಸಕ್ಕೆ ತೆಗೆದುಕೊಳ್ಳುವಂತೆ ಭಾರತ ಸರ್ಕಾರದವರು ಸೂಚನೆಯಿತ್ತುದಾಗಿ ಆ ಪತ್ರಿಕೆಗಳಲ್ಲಿ ನಮೂದಿಸಲಾಗಿದ್ದಿತು

Edited, Printed and Published by A R Nagarajan at Sadhvi Press D Subbaiah Road Mysore

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಗ
ಕಡಲೆಕಾಯಿ	೨೮ ೧೨-೦	೨೯ ೦ ೦
ಹರಳುಬೀಜ	೪೬-೮-೦	೪೭ ೦ ೦
ಹುಣಸೆಹಣ್ಣು	೫೨ ೨ ೦	
ಹೊಂಗೆಬೀಜ	೨೧ ೩ ೦	೨೨-೧೨ ೦
ಹುರುಳಿ	೪೨ ೮ ೦	೪೩-೧೪ ೦
ಹೆಸರು	೬೪-೮-೦	
ಅವರೆ	೪೧ ೦ ೦	೫೦ ೩ ೦
ಹಲಸಂದೆ	೫೦ ೦ ೦	೫೬-೦ ೦
ಮೆಣಸಿನ		
ಕಾಯಿ ಹುಡಿಕೆ	೧೦ ೦ ೦	೧೫ ೦ ೦
ಹುಣಸೇಬೀಜ	೫ ೩ ೦	೬-೭-೦
ಹೀರೇಕಾಯಿ	೪ ೨ ೦	೪ ೧೪ ೦
ಬೆಲ್ಲ	೫-೪-೦	
ತೆಂಗಿನಕಾಯಿ		
೧,೦೦೦ಕ್ಕೆ	೧೩೮ ೦-೦	೨೫೬ ೦ ೦

SRI GANESHA

TALKIES

From 29-4 53 For 2 Days

Columbia's

CHINA CORSAIR

Featuring -John Hall

TO-DAY

VALENTINO

LAST DAY

GRAND GALA RELEASE!

AT SRI GAYATHRI TALKIES

FROM 1--5--1953 **Daily 3 Shows**

MGM's DRAMA OF THE WORLD'S MOST WICKED EMPIRE AND THE LOVE STORY OF A PAGAN SOLDIER AND A BEAUTIFUL SLAVE GIRL.

ROBERT TAYLOR • DEBORAH KERR

LEO GENN • PETER USTINOV

MERVYN LeROY SAM ZIMBALIST

Please Note Change of Time Matinee 2 15 1st Show 6.15 2nd Show 9 45

ರಿಜಿ ನಂ 792 || ಈ ದಿನ ಪತ್ರಿಕೆ || ಇಂದಿನ ಪತ್ರಿಕೆ 3 ಆಣೆ

ಸಾಧ್ವಿ

ಸಂಪುಟ ೧೧] ಬುಧವಾರ ೨೯-೭ ೧೯೫೩ [ಸಂಚಿಕೆ ೨೨೦

ಭಾಷಾ ಸಂಸ್ಥಾನಗಳ ಬಗ್ಗೆ ನೆಹರೂ ಭರವಸೆ

ಹರಿಕಥೆ

ಮೈಸೂರು ೨೮

ಡಿ ಸ ಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕೆ ಕಚೇರಿ ಮಹಡಿ ಮೇಲೆ ಈ ರಾತ್ರಿ ೯ ಗಂಟೆಗೆ ತುಣ್ಣವು ಶ್ರುದ ಎಕ್ರ ವೇ|| ನ ರಸೀಪುರಂ ಶ್ರೀನಿವಾಸ ರಂಗಾಚಾರ್ಯರವರು ಮೈರ ವಣ ಎಂಬ ಹರಿಕಥೆಯನ್ನು ಮಾ ಡ ವರು ಸರ್ವರಿಗೂ ಆಹ್ವಾನವಿರುತ್ತದೆ

ನಗರ ಕಾಂಗ್ರೆಸ್ ಚುನಾವಣೆ

ಮೈಸೂರು ನಗರದ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳ ಕಾಂಗ್ರೆಸ್ ವಾರ್ಡ್ ಸಮಿತಿಗಳ ಚುನಾವಣೆಗಳ ಬಗ್ಗೆ ಶ್ರೀ ಗಳಾದ ವಿ ಚಿನ್ನಸ್ವಾಮಿ ಮತ್ತು ರಾ ವಣ್ಣನವರನ್ನು ಚುನಾವಣಾಧಿಕಾರಿಗ ಳಾಗಿ ನೇಮಿಸಲಾಗಿದೆ ಮೇ ೩೧ ನೇ ತಾರೀಕು ಚುನಾವಣೆಯು ನಡೆಯ ಲಿದೆ

ನಗರಾಭಿವೃದ್ಧಿ ಸಮಿತಿಗೆ ಸಹಾಯ ದ್ರವ್ಯದಲ್ಲಿ ಖೋತಾ

ಮೈಸೂರು ನಗರಾಭಿವೃದ್ಧಿ ಸಮಿತಿ ಗೆ ಸರ್ಕಾರದವರು ಈ ವರ್ಷ ೧ ಲಕ್ಷ ರೂ ಗಳನ್ನು ಮಾತ್ರ ಸಹಾಯ ದ್ರವ್ಯ ವಾಗಿ ಕೊಟ್ಟಿರುವರೆಂದೂ ಹಣದ ಮು ಗ್ಗಟ್ಟಿನ ದೆಸೆಯಿಂದ ಪ್ರತಿ ವರ್ಷವು ಕೊಡುತ್ತಿದ್ದಂತೆ ೩|| ಲಕ್ಷ ರೂ ಗಳನ್ನು ಕೊಡಲು ಸಾಧ್ಯವಾಗಿಲ್ಲವೆಂದೂ ವಂದಿ ಯಾಗಿದೆ

ಬೆಂಗಳೂರಿಗೆ ಅಮೇರಿಕದ ಗೌರ್ನರ್ ಸ್ಟೀವನ್‌ಸನ್

ಅಮೇರಿಕದ ಅಧ್ಯಕ್ಷ ಚುನಾವಣೆಗೆ ನಿಂತು ಪರಾಜಯ ಹೊಂದಿದ ಇಲಿನಾ ಯ್ ಸಂಸ್ಥಾನದ ಡೆಮೋಕ್ರಾಟಿಕ್ ಪ ಕ್ಷದ ಗೌರ್ನರ್ ಅಡ್ಲೈ ಸ್ಟೀವನ್‌ಸನ್ನರು ಈ ತಿಂಗಳು ೩೦ ನೇ ತಾ|| ಭಾರತಕ್ಕೆ ಆಗ ಮಿಸುವರು ಅವರು ೧೨ ದಿನಗಳ ವರೆ ಗೆ ಈ ದೇಶದಲ್ಲಿದ್ದು ದಾಮೋದರ ಕಣಿ ವೆ ಕಾಶ್ಮೀರ ಮದರಾಸು ತಿ ರುವನಂತಪುರ ಬೆಂಗಳೂರು ಮತ್ತು ಬೊಂಬಾಯಿಗಳಿಗೆ ಭೇಟಿಯಿತ್ತು ಕರಾ ಚಿಗೆ ಮೇ ೧೪ ನೇ ತಾ|| ಪ್ರಯಾಣ ಬೆಳೆಸುವರು

ಗಂಡಹೆಂಡಿರ ಆತ್ಮಹತ್ಯೆ

ಎರಡು ವರ್ಷಗಳ ಕೆಳಗೆ ... ರಸೀಕೆರೆಯ ... ಕೆ ... ಗಮ್ಮ ಎಂಬ ... ವರ್ಷ ವಯಸ್ಸಿನ ಮ ಹಿಳೆಯು ಹೊಟ್ಟೆ ... ನ್ನು ... ವ ಕಳೆದ ಗುರುವಾರ ರಾತ್ರಿ ... ಬಾವಿ ಯಲ್ಲಿ ಬಿದ್ದು ಪ್ರಾಣಬಿಟ್ಟಳೆಂದು ವರದಿಯಾ ಗಿದೆ ಆ ... ವನ್ನು ಕೇಳಿದ ಆಕೆಯ ಗಂ ಡ ... ಉರುಫ್ ಚಿಕ್ಕಣ್ಣ ಎಂಬುವ ... ಬಾವಿಯ ಬಳಿಗೆ ಹೋಗಿ ... ಲು ಪ್ರಯತ್ನಪಟ್ಟಾಗ ಸುತ್ತಮುತ್ತಲ ಜನರು ತಡೆದು ಬುದ್ಧಿ ಹೇಳಿದರು ಅನಂತ ರ ಅವನು ಬೇರೆ ಬಾವಿಯೊಂದರಲ್ಲಿ ಬಿದ್ದು ಪ್ರಾಣ ಕಳೆದುಕೊಂಡನೆಂದು ಗೊತ್ತಾಗಿದೆ

ಬಳ್ಳಾರಿ ಬಗ್ಗೆ ನೆಹರೂರವರಿಗೆ ಕನ್ನಡಿಗರ ಮನವಿ

ಬಳ್ಳಾರಿ ಜಿಲ್ಲೆಯನ್ನು ಆಂಧ್ರ ಪ್ರಾಂತಕ್ಕೆ ಒಪ್ಪಿಸಿದೆ ಪ್ರತ್ಯೇಕವಾಗಿರುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿ ತಿಯವರು ನೆನ್ನೆ ಬೆಳಗಾವಿಯಲ್ಲಿ ಪ್ರಧಾ ನಿ ನೆಹರೂರವರಿಗೆ ಅರ್ಪಿಸಿದ ಮನವಿಯ ಲ್ಲಿ ಪ್ರಾರ್ಥಿಸಿರುತ್ತಾರೆ ಬಳ್ಳಾರಿ ತಾ ಲ್ಲೂಕನ್ನು ಕನ್ನಡ ನಾಡಿಗೆಂದು ಕೂಡಲೇ ಘೋಷಿಸುವಂತೆಯೂ ಅವರು ಕೋರಿ ರುವರು

ಕಂದಾಯ ಕೇಳಲು ಹೋದ ಪಟೇಲರಿಗೆ ಮಚ್ಚಿನೇಟು

ಬೆಂಗಳೂರು ೨೮

... ವ ನ ರ ... ತ ... ಗ ... ಮಂಗ ... ಪ್ರವ ವ ಪಟೇಲರಾ ... ಕ ... ಪ್ಪ ಎಂಬ ನೀ ವೊಸೆ ಬಟ್ಟ ಬೆಂಬಾ ರನಿ ವ ... ಕೇ ಳಲು ಹೋದಾಗ ... ಅವನ ಪಟೇಲರ ನ್ನು ಮಚ್ಚಿನಿಂದ ಹೊಡೆ ... ಗಾ ಯಗೊಳಿಸಿದ್ದನು ... ತಿ ಪುಸ್ತ ... ಪಟೇಲರನ ... ಕೆಲೂ ... ವರದಿಯಾ ದೆ ಪಟೇಲರನ್ನು ... ಅವರ ತಂದೆ ತಮ್ಮ ... ದಿನ ... ಲ್ಯರನ್ನೂ ... ಕಿ ದಾರನೂ ಮತ್ತು ... ಗೂ ಹೊಡೆದು ... ರೆ ದ ಹೇಳಲಾಗಿದೆ ... ಗಾಯಗೊಂಡವರಿ ... ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಗುತ್ತಿದೆ ಈ ಘಟನೆ ಬಗ್ಗೆ ಪೊಲೀಸ್ ... ದೂರು ಕೊಡಲಾಗಿದೆ

ಜ್ವಾಲಾಮುಖಿಯಿಂದ ೩೦ ಮಕ್ಕಳ ಮರಣ

ಪ್ರಪಂಚದ ಅತ್ಯಂತ ... ಯಾದ ಜಪಾನಿನ ... ಜ್ವಾಲಾ ... ವು ಮೊನ್ನೆ ಕೆಂಡವನ್ನು ಕಾರಿದ ಪರಿಣಾಮ ವಾಗಿ ಅಲ್ಲಿ ಮಡಿದ ವಿದ್ಯಾರ್ಥಿಗಳ ಸಂ ಖ್ಯೆಯು ಈಗ ೩೦ಕ್ಕೆ ಹೆಚ್ಚಿರುತ್ತದೆ

ದಾವಣಗೆರೆ ಉಪಾಧ್ಯಾಯರ ಸಹಾನುಭೂತಿ ಉಪವಾಸ

ಕರ್ನಾಟಕ ಪ್ರಾಂತ ರಚನೆಗಾಗಿ ಹುಬ್ಬಳ್ಳಿಯ ವಿರೂಪಾಕ್ಷ ಗೌಡರು ಕೈ ಗೊಂಡಿರುವ ಆಮರಣಾಂತ ಉಪವಾಸ ದಲ್ಲಿ ಸಹಾನುಭೂತಿ ತೋರಿಸಲು ದಾವ ಣಗೆರೆ ಸಮೀಪ ತುಮ್ಮಿನಕಟ್ಟೆಯ ಬಸ ಯ್ಯ ಹಿರೇಮಠ ಎಂಬ ಉಪಾಧ್ಯಾಯ ರು ಆಮರಣಾಂತ ಉಪವಾಸವನ್ನು ಆ ರಂಭಿಸಿರುತ್ತಾರೆ

ಚಿನ್ನದ ಗಣಿಯಲ್ಲಿ ಪುನಃ ಬಂಡೆಯ ಸಿಡಿತ

ಕೋಲಾರದ ನಂದೀದುರ್ಗದ ಚಿನ್ನ ದ ಗಣಿಯಲ್ಲಿ ಮೊನ್ನೆ ಮಧ್ಯಾಹ್ನ ೬೪ ನೇ ಮಟ್ಟದಲ್ಲಿ ಬಂಡೆ ಸಿಡಿದು ಒಬ್ಬನು ಮೃತಪಟ್ಟನು ಇಬ್ಬರಿಗೆ ಗಾಯವಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ನೆಹರೂ ಎದುರಿಸಲಿರುವ ವಿರುದ್ಧಹಸ್ತ ಪತ್ರಿಕೆಹಂಚಿಕೆ

ಪ್ರಧಾನಿ ನೆಹರೂ ನವರು ನೆನ್ನೆ ... ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ... ನೆಹರೂ ಹಿಂತಿರುಗಿ ... ಕರ್ನಾಟಕ ಪ್ರಾಂತದ ಬೇಡಿಕೆಯನ್ನು ... ಒಪ್ಪಿ ... ಎಂಬುದಾಗಿ ... ಮುದ್ರಿಸಲ್ಪಟ್ಟಿದ್ದ ... ಪತ್ರಿಕೆಗಳನ್ನು ... ಮ್ಮಾಗಿ ... ಬಳಿ ... ಜನ ... ಗಳನ್ನು ... ಕೊಳ್ಳಲು ... ಹೋಗಿ ... ಲ್ಲಾ ... ಗಲಭೆ ಯುಂಟಾಯಿತು ... ಕರ್ನಾ ಟಕ ... ಭವನ ... ಪತ್ರಿ ಕೆ ... ವ ... ಮುದ್ರಿಸಿ ... ಪತ್ರಿಕೆಗಳನ್ನು ಹಂಚಿರುವ ... ಕರ್ನಾಟಕ ... ನವ ... ವಕ್ಕೆ ಮುಂದೆ ಹಸ ಪತ್ರಿಕೆಗಳನ್ನು ... ಜನರ ... ದರು

ಪಂಚ ರಾಷ್ಟ್ರಗಳ ಒಪ್ಪಂದಕ್ಕಾಗಿ ರಷ್ಯದ ಕರೆ

ಬ್ರಿಟನ್ ಅಮೆರಿಕ ಫ್ರಾನ್ಸ್ ರಷ್ಯ ಮತ್ತು ಕೆಂಪು ಚೀನ ... ಈ ಪಂಚ ರಾಷ್ಟ್ರಗಳ ನಡುವೆ ಶಾಂತಿ ಒಪ್ಪಂದ ... ಗಬೇಕೆಂದು ರಷ್ಯದ ವಿದೇ ಶಾಂಗ ಮಂತ್ರಿ ಎಂ. ಮಾಲಟೋವ್ ರವ ರು ತಿಳಿಸಿ ಈ ಬಗ್ಗೆ ರಷ್ಯವು ಸಂಧಾನ ಕ್ಕೆ ಸಿದ್ಧವಾಗಿರುವುದೆಂದು ಸೂಚಿಸಿರು ತ್ತಾರೆ ಬ್ರಿಟನ ಪ್ರಧಾನಿ ಚರ್ಚಿಲ್ಲರ ವರು ಮಾಲಟೋವ್ ರವರ ಸಲಹೆಯ ನ್ನು ಪುರಸ್ಕರಿಸಿರುತ್ತಾರೆ

ಮಾಸ್ಕೋವಿಗೆ ಅಮೃತಕೌರ್ ಭೇಟಿ

ಭಾರತ ಸರ್ಕಾರದ ಆಹಾರ ಮಂತ್ರಿ ಅಮೃತಕೌರ್ ರವರು ಮೇ ತಿಂಗಳ ... ಸ್ಕೋ ನಗರಕ್ಕೆ ಭೇಟಿಯಿತ್ತು ... ರಷ್ಯದ ರಾಜಧಾನಿ ಮ್ಯಾಂಸ್ಕೋ ... ಅಲ್ಲಿನ ಆರೋಗ್ಯ ... ಶಾಖೆಯವರು ನಡೆ ಸುತ್ತಿರುವ ಕ್ರಮಗಳನ್ನು ... ವರೆಂದು ವರದಿಯಾಗಿದೆ

೧೮ ನರಸೀಪುರದ ಶ್ರೀ ಕೇಶವ ಸ್ವಾ ಮಿ ದೇವಸ್ಥಾನದಲ್ಲಿ ವಿದ್ಯಾರ್ಥಿನಿಲಯಗಳ ಪ್ರಾರಂಭೋತ್ಸವವನ್ನು ಕಳೆದ ೨೬ ನೇ ತಾ|| ... ಮುಖ್ಯ ಮಂತ್ರಿ ಶ್ರೀ ಎ ಜಿ ರಾ ಮಚಂದ್ರರಾಯರು ನೆರವೇರಿಸಿದರು

ಕರ್ನಾಟಕದ ಭಾಗಗಳು ಸೇರಲು ಮದ್ರಾಸಿನ ವಿರೋಧ

ಬೆಳಗಾಂನಲ್ಲಿ ನೆಹರೂರವರ ಭಾಷಣ

ಬೆಳಗಾಂವಿನ ಬಹಿರಂಗ ಸಭೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಾತ ನಾಡುತ್ತಾ ಆಂಧ್ರ ಪ್ರಾಂತ ಸ್ಥಾಪನೆ ಯಾದ ಕೂಡಲೇ ಒಂದು ಪ್ರಶ್ನೆಯ ನಂತ ರ ಭಾಷಾವಾರು ಪ್ರಾಂತಗಳ ಸಂಬಂಧ ವಾದ ಸಮಿತಿಯೊಂದನ್ನು ರಚಿಸಲಾಗ ವುದೆಂದು ತಿಳಿಸುತ್ತಾ ಭಾಷಾವಾರು ಆ ಧಾರದ ಮೇಲೆ ಪ್ರಾಂತಗಳ ರಚನೆಯು ಸಾಧ್ಯವೆ ಎಂಬುದನ್ನೂ ... ಪ್ರಾಂತದ ... ಸ್ಥಾಪಿಸಬೇಕೆ ... ನ ಸಮಿತಿಯು ಪರಿಶೀಲಿಸುವುದು ... ಸಮಿ ತಿಯು ... ಕ ... ರಚನೆ ... ನ್ನು ... ಯಾರಿಗೂ ... ಶಿಫಾರ್ಸು ... ಎಂದು ಹೇಳಿದರು

ಕರ್ನಾಟಕ ಪ್ರಾಂತ ರಚನೆ ವಿಷಯ ವನ್ನು ... ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ರಚನೆ ಬಗ್ಗೆ ಯಾ ವಾಗಲೂ ಸಂಶಯ ... ಮಾಡಿರಲಿಲ್ಲವೆಂ ದೂ ಬೊಂಬಾಯಿ ... ಮದ್ರಾಸು ಸಂಸ್ಥಾನಗಳ ಹಲವು ಕನ್ನಡದ ಭಾಗ ಗಳನ್ನು ಮೈಸೂರ ಸಂಸ್ಥಾನದಲ್ಲಿ ... ಕರ್ನಾಟಕ ಪ್ರಾಂತವನ್ನು ರಚಿಸುವ ... ಆದ ರೆ ಈ ಸಲಹೆಯನ್ನು ಮೈಸೂರಿನವರು ಒಪ್ಪಲಿಲ್ಲವೆಂದೂ ... ಈ ಸಲಹೆಯನ್ನೊಪ್ಪಬೇಕೆಂದ ... ಬಲವಂತ ಪಡಿಸ ... ನೆಹರೂ ರವರು ತಿಳಿಸಿದರು ... ಮುಂದಾಗುವುದೂ ... ಮಾತ್ರ ಭಾಷಾ ಪ್ರಾಂತ ರಚನೆ ಬಗ್ಗೆ ... ರವರು ... ಅವರು ಸ್ಪ ಷ್ಟಪಡಿಸಿದರು

ಉಪವಾಸದ ವಿಷಯವನ್ನು ಪ್ರಸ್ತಾ ಪಿಸಿ ಸರ್ಕಾರವನ್ನು ಈ ರೀತಿ ... ತಪಡಿಸುವುದನ್ನು ... ಪೊಟ್ಟಿ ಶ್ರೀರಾಮುಲು ... ಉಪ ವಾಸದಿಂದ ಆಂಧ್ರ ಪ್ರಾಂತ ರಚನೆಯು ... ವಿಷಯ ಉಪವಾಸ ಗಳು ಸರ್ಕಾರದ ಮೇಲೆ ... ಪ್ರಭಾ ವವನ್ನು ... ಹೇಳಿದ ರು ಕರ್ನಾಟಕ ಪ್ರಾಂತಕ್ಕಾಗಿ ನಡೆ ಯುತ್ತಿರುವ ಉಪವಾಸವನ್ನು ತಾವು ಗ ಮನಿಸುವುದಿಲ್ಲವಾಗಿಯೂ ಅವರು ಹೇಳಿ ದರು

ರೈತರಿಂದ ನಿರ್ಮಾಣವಾದ ೯ ಮೈಲಿ ಉದ್ದದ ಕಾಲುವೆ

ಚಿತ್ರದುರ್ಗ ಜಿಲ್ಲೆಯ ವೇದಾವತಿ ನ ದಿಯಿಂದ ... ಮೈಲಿ ಉದ್ದದ ಕಾಲುವೆ ಯ ಪ್ರಾರಂಭೋತ್ಸವವನ್ನು ನೆನ್ನೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ವೆಂಕ ಟಶಿವ ರೆಡ್ಡಿಯವರು ನೆರವೇರಿಸಿದರು ಸರ್ಕಾರ ಅಥವಾ ಸಾರ್ವಜನಿಕ ಸಹಾ ಯವಿಲ್ಲದೇ ಆ ಪ್ರದೇಶದ ಜನರು ಸ್ವಂ ತವಾಗಿ ಕಾಲುವೆಯನ್ನು ತೋಡಿರುವು ದಾಗಿಯೂ, ಸರ್ಕಾರದ ಸಹಾಯವಿಲ್ಲ ದೆ ನಡೆದಿರುವ ಇಂತಹ ಕಾರ್ಯವು ದಕ್ಷಿ ಣ ಭಾರತದಲ್ಲೆಲ್ಲಾ ಇದೊಂದೇ ಎಂ ದು ಹೇಳಲಾಗಿದೆ

ಆದವಾನಿ ಕನ್ನಡ ತರುಣನ ಉಪವಾಸ

ಆದವಾನಿ [illegible] ದುರ್ಗ [illegible] ಕಳೆಂದ [illegible] ಘೋಷಣೆ [illegible] ವಾಗಿಯೂ ಕನ್ನಡಿಗರಿಗೆ ನ್ಯಾಯ ದೊರಕಿಸ [illegible] ಗಂಗಾಧರ [illegible] ವರನು ಕಳೆದ [illegible] ರಣಾಂತ ಉಪವಾಸ ಕೈಗೊಂಡಿರುತ್ತಾನೆಂದು ವರದಿಯಾಗಿ [illegible] ಸರ್ಕಾರದವರು ಮಾಡಿದ [illegible] ನು ಆತ [illegible] ಕರೆದ [illegible] ಹೇಳಲಾಗಿದೆ

ಸರ್ಕಾರಿ ಬಸ್ಸಿನಲ್ಲಿ ನೌಕರರಿಗೆ ಸೀಸನ್ ಟಿಕೆಟ್

ಬೆಂಗಳೂರಿ [illegible] ಸುತ್ತಣ [illegible] ಪ್ರದೇಶಗಳ [illegible] ಸರ್ಕಾರಿ [illegible] ರುವ [illegible] ರು ಪ್ರಯಾಣ [illegible] ಮಾಡಿ [illegible] ಕೊಡಲು [illegible]

೨೦೦ ಎಕರೆ ಅಂಗಿಗಳನ್ನು ತೆರೆಯುವ ...

[illegible] ಲ್ಲಿಲ್ಲದ [illegible] ಕೆಂದು ಸರ್ಕಾರದವರ [illegible] ಧಾರವನ್ನು [illegible] ದು ವರದಿಯಾಗಿದೆ [illegible]

ರ ಮಾ ವಿ ಲಾ ಸ

ಆಗ್ರಹಾರದಲ್ಲಿ [illegible] ಒಂದು [illegible] ಗಳೂರು [illegible] ಗೆ ಭೋಗ್ಯಕ್ಕಿದೆ [illegible] ಗುತ್ತಿ

ಬಿ. ಎಸ್. ಸುಬ್ಬರಾವ್,
[illegible]
ಮೈಸೂರು

ರಷ್ಯದಿಂದ ೫೦ ಲಕ್ಷ ಟನ್ ಗೋಧಿ ಆಮದಿಗೆ ಪ್ರಯತ್ನ

ರಷ್ಯದಿ [illegible] ವರದಂತೆ ಭಾರತ [illegible] ಸರ್ಕಾರದವರ ಕೋರಿರುವರೆಂದೂ ಆದ ಕ್ಕೆ ಪ್ರತಿಯಾಗಿ ರಷ್ಯಕ್ಕೆ ಇಲ್ಲಿಂದ ತನಗೆ [illegible] ವಾಗಿ [illegible] ಸಭೆಯಲ್ಲಿ [illegible] ಉತ್ತರ [illegible] ಗೊತ್ತಾಗಿದೆ

ಶತಮಾನೋತ್ಸವ ಪ್ರದರ್ಶನಕ್ಕಾಗಿ ರಿಟರ್ನ್ ಟಿಕೆಟ್

[illegible] ಶತಮಾನೋತ್ಸವ [illegible] ನಿಂದ [illegible] ಶತಮಾನೋತ್ಸವ [illegible] ತರಿಸಲು [illegible]

ಪರ್ಸ್ ಕಳೆದುಹೋಗಿದೆ

ಮೈಸೂರ ದೊಡ್ಡ ಗಡಿಯಾರದ [illegible] ಇರುವ [illegible] ಗಡಿಯಾರದ [illegible] ನಗದು [illegible] ಒಂದು [illegible] ಕಳೆದು [illegible] ಸಾಧ್ಯ [illegible] ಕಾಗಿ ಪ್ರಾರ್ಥನೆ

೫೨ ಸಾವಿರ ರೂ ವೆಚ್ಚದಲ್ಲಿ ಟೆಲಿಫೋನ್ ಹುಡುಗಿ

ಬರುವ ಅಕ್ಟೋಬರ್ ತಿಂಗಳಿಂದ ದೆಹಲಿಯ ಟೆಲಿಫೋನು ಅಧಿಕಾರಿಗಳು [illegible] ರೂ ವೆಚ್ಚದಲ್ಲಿ 'ಚಿನ್ನ [illegible] ಟಲ ಹುಡುಗಿ' ಯೊಂದನ್ನು ನೇಮಿಸಿಕೊಳ್ಳಲಿರುವರು ಆವರೆ ಆಕೆಯು ಮಾನವಳಲ್ಲ ಅದೊಂದು ಯಂತ್ರ [illegible] ನೇ ನಂಬರನ್ನು ರಿಂಗ್ ಮಾಡಿದರೆ ಆ ಯಂತ್ರವು ಗಂಟೆಯು [illegible] ವನ್ನು ತಿಳಿಸುವುದು

ಜಿಂಕೆ ತಿವಿದು ವೃದ್ಧೆಯ ಮರಣ

ತಿರುವಾಂಕೂರಿಗೆ ೭ ಮೈಲಿ ದೂರದ [illegible] ರುವ [illegible] ಹಳ್ಳಿಯಲ್ಲಿ ಕಳೆದ [illegible] ಕಮ್ಯೂನಿಸ್ಟ್ ಕಾರ್ಯಕರ್ತೆಯ [illegible] ಬಂದು ಜಿಂ [illegible] ಯಾಗಿದೆ

ವಿವಾಹ ಮಹೋತ್ಸವ

[illegible] ಜಧಾನಿಯ ನಿವೃತ್ತ ಆಕ್ಟಿಂಗ್ [illegible] ಶ್ರೀ ಎಂ. ವೆಂಕಟಕೃಷ್ಣಯ್ಯನವರ [illegible] ಶ್ರೀ [illegible] ಶ್ರೀನಿವಾಸ [illegible] ಮಗಳು ಚಿ॥ ಸೌ॥ [illegible] ಕರೆದುಕೊಂಡು ಮೊನ್ನೆ [illegible] ವಿವಾಹವನ್ನು ನೆರವೇರಿಸಿದರು

[illegible] ಗೋಧಿ [illegible] ಇತರ ಆಹಾರ [illegible] ಮಾರಾಟ ಮಾಡಲು [illegible] ವರ್ತಕರಿಗೆ ರಹದಾರಿಯನ್ನು ಕೊಡಬಹುದೆಂದು ಮೈಸೂರು ಸರ್ಕಾರದವರು ಸೂಚಿಸಿರುತ್ತಾರೆ

ಒಲಿಂಪಿಯಾ ಟಾಕೀಸ್

[illegible] ತಾರೀಖು ಭಾನುವಾರ [illegible] ಪ್ರತಿದಿನ ೩ ಆಟಗಳು
ಜೆಮಿನಿ [illegible]

★ ತಿಂಸೂ ★

[illegible] ಮತ್ತು [illegible]

[illegible] ಪ್ರದರ್ಶನ
[illegible] ಭರ್ಜರಿಯಾಗಿ ನಡೆಯುವ
ಮಹಲ್

ಭಾರತಕ್ಕೆ ಬ್ರಿಟನ್ನಿನ ೩ ನೌಕೆಗಳ ಎರವಲು

ಭಾರತಕ್ಕೆ ಬ್ರಿಟನ್ನಿನ ಬಿಡೀಲ್ ಮತ್ತು ಲಾಮರ್ಟ್ ಎಂಬ ೧೦೫೦ ಟನ್ನಿನ ಎರಡು ಫ್ರಿಗೇಟ್ ಯುದ್ಧ ಹಡಗುಗಳನ್ನು ಮೊನ್ನೆ ಎರವಲಾಗಿ ಕೊಡಲಾಯಿತು ಅವುಗಳಿಗೆ ಗೋದಾವರಿ ಮತ್ತು ಗೋಮತಿ ಎಂದು ನಾಮಕರಣ ಮಾಡಲಾಗಿದೆ ಚಿಡ್ಡಿಂಗ್ ಫೋರ್ಡ್ ಎಂಬ ಮತ್ತೊಂದನ್ನು ಅನಂತರ ಕೊಡಲಾಗುವುದು ಅದಕ್ಕೆ ಗಂಗೆ ಎಂದು ಹೆಸರಿಡಲಾಗುವುದು

ವಸಂತ ಹಿಂದಿ ಪರೀಕ್ಷೆ ತರಗತಿಗಳು

ರಾಜಧಾನಿಯ ಹಿಂದಿ ಪ್ರಚಾರ ಸಭೆಯವರು ಸರ್ಕಾರಿ ನೌಕರರು ಮತ್ತು ಇತರ ಸಾರ್ವಜನಿಕರ ಸೌಕರ್ಯಕ್ಕಾಗಿ ವಸಂತ ಹಿಂದಿ ಪರೀಕ್ಷೆ ತರಗತಿಗಳನ್ನು ದಿನವೂ ಬೆಳಗ್ಗೆ ನಡೆಸಲಿರುವರು ಹಿಂದಿ ಪ್ರೇಮಿಗಳು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩ ಎಂ. ಬಿ. ಕೇಶವಮೂರ್ತಿ, ಸಂಗೀತ ಮಧ್ಯಾಹ್ನ ೧೨.೩೦ ವೀಣೆ [illegible] ರಾಜಲಕ್ಷ್ಮಿ ಸಂಗೀತ ಸಂಜೆ [illegible] ಕನ್ನಡ ಗೀತೆಗಳು [illegible] ಸಂಗೀತ [illegible] ಭಾರತ ನಾಟಕ [illegible] ರಾಜಲಕ್ಷ್ಮಿ, ಸಂಗೀತ [illegible] ಚಿತ್ರ [illegible] ಕಾರ್ಯಕ್ರಮ

● ಬಂಗಾಳಾ ಶಾಸನದ ಪ್ರಕಾರ ಪಶ್ಚಿಮ ಬಂಗಾಳದ ಮಾಜಿ ರೆವಿನ್ಯೂ ಮಂತ್ರಿ ಮಹಮದ್ ಹುಸೇನ್ ಚೌಧರಿಯವರನ್ನು ಬಂಧಿಸಲಾಗಿದೆ ಅವರ ನಡವಳಿಯಿಂದ ಸಾರ್ವಜನಿಕ ನೆಮ್ಮದಿಗೆ ಭಂಗವುಂಟಾಗುವುದೆಂಬುದೇ ದಸ್ತಗಿರಿಗೆ ಕಾರಣ

SRI GANESHA
TALKIES
FROM TO-DAY
Columbia's
DICK TURPIN'S RIDE
With — Louis Hayward
Patricia Medina

Edited, Printed and Published by A. R. Nagarajan at Sadhvi Press, D. Subbaiah Road, Mysore

ಪ್ರಭುದೇವಾ ಟಾಕೀಸ್ ★ 30-4-53 ನೇ ಗುರುವಾರದಿಂದ
ಅಪೋಘ ಪ್ರಾರಂಭ
ದಿನವಹಿ ಮೂರು ಆಟಗಳು

ತಮಿಳು ನಾಡಿನಲ್ಲಿ 25 ವಾರಗಳು ನಡೆದಿರುವ, ಜೆಮಿನಿಯವರ ತಮಿಳು ಚಿತ್ರ

ಸಂಸಾರಂ

[illegible] ಶ್ರೀರಾಂ [illegible] ರಾಮಚಂದ್ರ, ಸುಂದರಿಬಾಯಿ ಮುಂತಾದವರು

ರಿ. ನಂ. 792 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೧-೪-೧೯೫೪ [ಸಂಚಿಕೆ ೩೩೧

ಮುಂಬೈ ಕಾರ್ಖಾನೆಗಳಿಗೆ ಬೆಂಕಿ; ೫೦ ಲಕ್ಷ ನಷ್ಟ

ಬೊಂಬಾಯಿ ಕೃತಕ ರೇಷ್ಮೆ ಕಾರ್ಖಾನೆಗೆ ಬೆಂಕಿ

ಮಧ್ಯ ಬೊಂಬಾಯಿಯಲ್ಲಿರುವ ಕಾ[illegible]ದೇವ್ ಪ್ರದೇಶದಲ್ಲಿ ಕೃತಕ ರೇಷ್ಮೆ ಮತ್ತು ಇತರ ಕಾರ್ಖಾನೆಗಳಿಗೆ ನೆನ್ನೆ ಸಂಜೆ ಬೆಂಕಿ ಬಿದ್ದು, ಎಷ್ಟು ಪೂರ್ಣವಾಗಿ ಸುಟ್ಟುಹೋದವು ಸುಮಾರು ೫೦ ಲಕ್ಷ ರೂಗಳಷ್ಟು ಆಸ್ತಿ ನಷ್ಟವಾಗಿರುತ್ತದೆ ಬೆಂಕಿ ಆರಿಸುವವರ ದಳದಲ್ಲಿ ೩ ಜನರಿಗೆ ಗಾಯವಾಯಿತು ರೇಷ್ಮೆ, ಬಣ್ಣ, ಆಟದ ಸಾಮಾನು, ಸಿನಿಮಾ ಪ್ರಯೋಗ ಮತ್ತು ಮುದ್ರಣಾಲಯ ಇಷ್ಟು ಕಾರ್ಖಾನೆಗಳು ಬೆಂಕಿಗೆ ತುತ್ತಾದುವು ಆದಷ್ಟು [illegible] ಯಂತ್ರಗಳನ್ನು ಉಪಯೋಗಿಸಲಾಯಿತು

ಭಾರತಕ್ಕೆ ರಷ್ಯದ ಹೊಸ ರಾಯಭಾರಿ

ರಷ್ಯದ ವಾಣಿಜ್ಯ [illegible] ಮಂತ್ರಿ ಇವಾನ್ ಆಲೆಕ್ಸಾಂಡರ್ [illegible] ಬೆನೆಡಿಕ್ಟೊವ್ ರವರನ್ನು ಭಾರತದಲ್ಲಿ ರಾಯಭಾರಿಯಾಗಿ ನೇಮಿಸಲಾಗಿದೆ ಇದುವರೆಗೆ ರಾಯಭಾರಿಯಾಗಿದ್ದ ಎಂ ನೋವಿಕೋವ್ ರವರನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ

ರಾಮ ಪಟ್ಟಾಭಿಷೇಕ

ರಾಜಧಾನಿಯ ದಾರದ [illegible] ಶ್ರೀರಾಮ ಮಂದಿರದಲ್ಲಿ ಈ ದಿನ ಶ್ರೀರಾಮ ಪಟ್ಟಾಭಿಷೇಕ [illegible] ಂತರ್ಗತ [illegible] ಆರಂಭವಾಗಿದ್ದು ಈ ಸಂಜೆ ೬ ರಿಂದ ೭ [illegible] ರ ವರೆಗೆ [illegible] ಶಾಸ್ತ್ರ ವಿಶಾರದ [illegible] ಸಂಗೀತ [illegible] ನವರ [illegible] ವಿ|| [illegible] ನವರ ಹಾರ್ಮೋನಿಯಂ [illegible] ವಿ|| ವೀರಭದ್ರ [illegible] ನವರ [illegible] ವಿ|| [illegible] ಫ್ ರವರ [illegible] ಒಡನೆ [illegible] ಶ್ರೀ [illegible] ರಾಯರು, [illegible] ಸಹೋದರರ [illegible] ದ ಭಜನೆ ಮಂಗಳ [illegible] ನಾಳೆ ಸಂಜೆ ೬ ಗಂಟೆಗೆ [illegible] ಉತ್ಸವವೂ ತತ್ಸಂಬಂಧವಾಗಿ ಭಜನೆ ಉತ್ಸವ, [illegible] ಮಂಗಳಾರತಿ [illegible] ನಡೆಯುವುವು

ದೀಪಪ್ರಕಾಶದಲ್ಲಿ ವಿದ್ಯುಚ್ಛಕ್ತಿ ಲಿಫ್ಟಿನ ಆರಂಭೋತ್ಸವ

[illegible] ಜಧಾನಿಯ [illegible] ದೀಪಪ್ರಕಾಶದಲ್ಲಿರುವ ಮಾಡರನ್ [illegible] ಲ್ಲಿ ಸಜ್ಜುಗೊಳಿಸಲಾಗಿರುವ ವಿದ್ಯುಚ್ಛಕ್ತಿ ಲಿಫ್ಟಿನ ಆರಂಭೋತ್ಸವವನ್ನು [illegible] ಬೆಳಗ್ಗೆ ನೆರವೇರಿಸಲಾಯಿತು ಮಾಲೀಕರಾದ ಶ್ರೀ [illegible] ಸೀತಾರಾಮರಾವ್ ರು ಬಂಧು ಮಿತ್ರರೊಡನೆ ಶ್ರೀ [illegible] ದೇವರ ಉತ್ಸವ ನಡೆಸಿ ಮೊದಲು ದೇವರನ್ನು ಲಿಫ್ಟಿನ [illegible] [illegible]

ಯಕ್ಷಗಾನ

[illegible]

ಮಹಾರಾಷ್ಟ್ರದಲ್ಲಿ ನೆಹರೂರವರ ೧೦೦೦ ಮೈಲಿ ಪ್ರವಾಸ

ಮಹಾರಾಷ್ಟ್ರದಲ್ಲಿರುವ ಕ್ಷಾಮಪೀಡಿತ ಪ್ರದೇಶಗಳ ಪರಿಸ್ಥಿತಿಯನ್ನು ಖುದ್ದಾಗಿ ಅರಿತುಕೊಳ್ಳಲು ಪ್ರಧಾನಿ ನೆಹರೂರವರು ೧೦೦೦ ಮೈಲಿಯ ಪ್ರವಾಸವನ್ನು ಕೈಗೊಂಡಿರುವರು ಅವರು ಸಾವಂತವಾಡಿ, ರತ್ನಗಿರಿ ಮುಂತಾದ ನಗರಗಳಿಗೆ ಭೇಟಿಯಿತ್ತರು ರತ್ನಗಿರಿಯಲ್ಲಿ ಲೋಕಮಾನ್ಯ ತಿಲಕರು ಜನಿಸಿದ್ದ ಗೃಹಕ್ಕೆ ಭೇಟಿಯಿತ್ತು, ಭಾರತದ ಆ ವೀರ ಪುರುಷರನ್ನು ನೆನೆಸಿಕೊಂಡರು ಸಾವಂತವಾಡಿಗೆ ಸತ್ತ್ರ ಮತ್ತು ಕಂಬಳಿಗಳನ್ನು ದರಿಸಿ ಬಂದಿದ್ದ ಕುರುಬ ರೈತರ ಅಪೇಕ್ಷೆಯಂತೆ ನೆಹರೂರವರು ಅವರೊಡನೆ ನಡೆದು ಊರಿನಲ್ಲಿ ಮೆರವಣಿಗೆ ಹೋಗುತ್ತಾ, ಸ್ವಲ್ಪ ಕಾಲ ಕಳೆದರು. ನೆಹರೂರವರ ಭೇಟಿಗಾಗಿ ಆ ಊರಿನಲ್ಲಿ ಮನೆಗಳಿಗೆ ದೀಪಾಲಂಕಾರ ಮಾಡಲಾಗಿದ್ದಿತು ೩೦ ಸಾವಿರ ಜನರನ್ನುದ್ದೇಶಿಸಿ ಅವರು ಮಾತನಾಡಿ, ಕಳೆದ ಐದಾರು ವರ್ಷಗಳಲ್ಲಿ ಭಾರತವು ಸಾಧಿಸಿರುವ ಪ್ರಗತಿಯನ್ನು ಪ್ರಪಂಚವು ಹೊಗಳಿರುವುದಾಗಿ ಹೇಳಿದರು

ಷರ್ಟಿಂಗ್ ಬಟ್ಟೆ ಬೆಲೆ ಹತೋಟಿ ವಜಾ

ಷರ್ಟಿಂಗ್ ಮತ್ತು ಸುಕಿಸ್ ಬಟ್ಟೆಯ ಮೇಲೆ ಇದುವರೆಗೂ ಇಡಲಾಗಿದ್ದ ಬೆಲೆ ಹತೋಟಿಯನ್ನು ನಾಳೆಯಿಂದ ರದ್ದು ಮಾಡುವಂತೆ ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಪಾಪ್ಲಿನ್, ವಾಯಿಲ್ ಸೀರೆ ಮುಂತಾದವುಗಳ ಬೆಲೆ ಹತೋಟಿಯನ್ನು ಕಳೆದ ಅಕ್ಟೋಬರಿನಲ್ಲೂ, ಅತಿ ನಯವಾದ ಬಟ್ಟೆ ಬೆಲೆ ಹತೋಟಿಯನ್ನು ಜನವರಿಯಲ್ಲೂ ತೆಗೆಯಲಾಗಿದ್ದಿತು ಇತರ ರಿತಿಯ ಬಟ್ಟೆಗಳ ಮೇಲೆ ಬೆಲೆ ಹತೋಟಿ ಮುಂದುವರಿಯುವುದು

ತಾಲ್ಲೂಕು ಕಾಂಗ್ರೆಸ್ ಚುನಾವಣಾಧಿಕಾರಿಗಳು

ಮೈಸೂರು ತಾಲ್ಲೂಕಿನಲ್ಲಿ ನಡೆಯುವ ತಾಲ್ಲೂಕು ಕಾಂಗ್ರೆಸ್ ಚುನಾವಣೆ ಸಂಬಂಧವಾಗಿ ನಗರದ ವಕೀಲರಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರನ್ನು ನೇಮಿಸಲಾಗಿದೆ.

ಗೋವಾ ಜನರ ವಿಮೋಚನೆ ಬಗ್ಗೆ ಭಾರತದ ಕ್ರಮ

ಗೋವೆಯಲ್ಲಿರುವ ಭಾರತೀಯರ ದಾಸ್ಯ ವಿಮೋಚನೆಗಾಗಿ ಭಾರತ ಸರ್ಕಾರದವರು ಎಲ್ಲ ಕ್ರಮಗಳನ್ನೂ ಕೈಗೊಳ್ಳುವುದಾಗಿ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಶಾಂತಿಯುತವಾದ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕೆಂಬುದೇ ಸರ್ಕಾರದವರ ಉದ್ದಿಶ್ಯವಾಗಿರುವುದರಿಂದ ತಪ್ಪುದಾರಿಯನ್ನು ತುಳಿಯ ತಾವು ನಂತರ ಪಶ್ಚಾತ್ತಾಪಪಡಲಾರರೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ

ಬುಕ್ ಪೋಸ್ಟ್ ದರ ನಾಳೆಯಿಂದ ಹೆಚ್ಚು

ಬುಕ್ ಪೋಸ್ಟ್ ಮತ್ತು ಸ್ಯಾಂಪಲ್ ಪ್ಯಾಕೆಟ್ ಇವುಗಳ ಅಂಚೆ ದರಗಳನ್ನು [illegible] ತೊಲಕ್ಕೆ [illegible] ಕಾಸಿನಿಂದ [illegible] ಕಾಸಿಗೆ ನಾಳೆಯಿಂದ ಹೆಚ್ಚಿಸಲಾಗುವುದು ಅನಂತರ ಪ್ರತಿ [illegible] ತೊಲಗಳ ವಸ್ತುಗಳಿಗೆ [illegible] ಕಾಸು ಒದಲು ೬ ಕಾಸು ಕೊಡಬೇಕಾಗುವುದು ಧಾಂಗಿಗಳ ದರವನ್ನು ೪೦ ತೊಲಗಳಿಗೆ ೬ ಆಣೆ ಬದಲು ೮ ಆಣೆಯಂತೆ ಹೆಚ್ಚಿಸಲಾಗಿದೆ ರಿಜಿಸ್ಟರ್ ಆದ ವೃತ್ತ ಪತ್ರಿಕೆಗಳಿಗೆ ಈ ಹೊಸ ದರವು ಅನ್ವಯಿಸುವುದಿಲ್ಲ ಹೊರ ರಾಷ್ಟ್ರಗಳಿಗೆ ಮುದ್ರಣವಾದ ಕಾಗದ, ಮತ್ತು ಸ್ಯಾಂಪಲ್ ಪ್ಯಾಕೆಟ್ ಕಳುಹಿಸಿದರೆ ೨ ಔನ್ಸಿಗೆ [illegible] ಕಾಸಿನ ಬದಲು ೧ ಆಣೆ ಕೊಡಬೇಕಾಗುವುದು ಆದರೆ ಸ್ಯಾಂಪಲ್ ಪ್ಯಾಕೆಟ್ಟುಗಳಿಗೆ ೪ ನಿಶ್ಚಯವಾಗಿ ೪ ಆಣೆಯಂತೆ ದರ ಗೊತ್ತುಪಡಿಸಲಾಗಿದೆ

ಆಹಾರ ಮಿತವ್ಯಯದ ಹತೋಟಿ ಕ್ರಮ ಇರುವುದು

ಬೆಂಗಳೂರಿನಲ್ಲಿ ಮೇ ೧ ರಿಂದ ಹಡಿತರ ಪದ್ಧತಿಯು ರದ್ದಾದರೂ ಆಹಾರದ ಮಿತವ್ಯಯಕ್ಕೆ ಸಂಬಂಧಿಸಿದಂತೆ ಇರುವ ಕಾನೂನುಗಳು ಹೋಗುವುದಿಲ್ಲವಾಗಿಯೂ ವಿವಾಹ [illegible] ಸಂಸ್ಕಾರ ಮುಂತಾದ ಸಂದರ್ಭಗಳಲ್ಲಿ ಏರ್ಪಡಿಸುವ ಊಟಗಳ ಬಗ್ಗೆ ಇರುವ ನಿರ್ಬಂಧವು ಮುಂದುವರಿಯುವುದೆಂದೂ ಗೊತ್ತಾಗಿದೆ ಸಾಗಣಿಯವರು ರಹದಾರಿ ಪಡೆಯದೆ ೬ ಪಲ್ಲ ಧಾನ್ಯವನ್ನು ಮಾರಲು ಅವಕಾಶವಿರುವುದಾಗಿ ಅಧಿಕಾರಿ ವಲಯಗಳಿಂದ ತಿಳಿದುಬಂದಿದೆ

ವಿಶ್ವಶಾಂತಿ ರಕ್ಷಣೆಗೆ ಭಾರತ ಬಲಿಷ್ಠವಾಗಬೇಕು

ವಿಶ್ವದಲ್ಲಿ ಶಾಂತಿಯನ್ನು ಕಾಪಾಡಲು ಭಾರತವನ್ನು ಬಲಿಷ್ಠವಾದ ರಾಷ್ಟ್ರವಾಗಿ ಜನತೆ ಮಾಡಬೇಕೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ತಟಸ್ಥ ರಾಷ್ಟ್ರವಾಗಿ ಏಷ್ಯಾ ದೇಶ

ಸ್ವದೇಶಕ್ಕೆ ಹಿಂತಿರುಗಲಿಚ್ಛಿಸಿದ ಯುದ್ಧ ಖೈದಿಗಳನ್ನು ತಟಸ್ಥ ರಾಷ್ಟ್ರಕ್ಕೆ [illegible] ಕಳುಹುವ ಬಗ್ಗೆ ಸ್ವಿಟ್ಜರ್‌ಲೆಂಡ್ ರಾಷ್ಟ್ರದ ಬದಲು ಏಷ್ಯದ ಒಂದು ದೇಶವನ್ನು ನೇಮಿಸುವಂತೆ ಚೀನಾ ಕಮ್ಯೂನಿಸ್ಟರು ಸೂಚಿಸಲಿರುವರು

ಕೇಂದ್ರದ ಅಧಿಕಾರಿಗಳ ತುಟ್ಟಿಭತ್ಯದಲ್ಲಿ ಖೋತಾ

ಭಾರತ ಸರ್ಕಾರದ ನೌಕರಿಯಲ್ಲಿದ್ದು ತಿಂಗಳಿಗೆ [illegible] ರೂಗಳಿಗಿಂತ ಹೆಚ್ಚು ವೇತನ ಪಡೆಯುವ ಅಧಿಕಾರಿಗಳ ತುಟ್ಟಿ ಭತ್ಯವನ್ನು ಖೋತಾ ಮಾಡಿ ವರ್ಷಕ್ಕೆ [illegible] ಲಕ್ಷ ರೂಗಳನ್ನು ಉಳಿತಾಯ ಮಾಡಲಾಗುವುದೆಂದು ವರದಿಯಾಗಿದೆ

ಸಿದ್ದಲಿಂಗಯ್ಯನವರ ಅನರ್ಹತೆ ವಿಚಾರಣೆ

ಮುಂದಿನ ತಿಂಗಳು ೭ ನೇ ತಾ|| ಮಾಜಿ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರ ಶಾಸನ ಸಭಾ ಸದಸ್ಯತನದ ಅನರ್ಹತೆಯ ವಿಚಾರಣೆಯು ನಡೆಯಲಿರುವುದಾಗಿ ವರದಿಯಾಗಿದೆ

ಜನರಲ್ ಕಾರಿಯಪ್ಪ

ಭಾರತದ ನಿವೃತ್ತ ಸೇನಾನಿ ಜನರಲ್ ಕಾರಿಯಪ್ಪನವರನ್ನು ಆಸ್ಟ್ರೇಲಿಯದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ

ರಾಜಧಾನಿಯ ತೆಂಗಿನಕಾಯಿ ವರ್ತಕರ ಸಂಘದ ಸಭೆ

ಮೇಲ್ಕಂಡ ಸಂಘದ [illegible] ನೆ [illegible] ಧಾನವಾರ ನಡೆ[illegible] [illegible] ನ ಕಾರ್ಯನಿರ್ವಾಹಕ ಮಂಡಲಿಗೆ ಶ್ರೀ [illegible] ರಂಗಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಎ ಶಿವನಂಜಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಎಲ್ ವೆಂಕೋಬರಾವ್ ಮತ್ತು ಬಿ ಎಂ [illegible] ನ್ನಯ್ಯನವರುಗಳು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ನಂಜಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು

ಒಲೆ ಹೊತ್ತಿಸುತ್ತಿದ್ದಾಗ ಮೈಸುಟ್ಟು ಮರಣ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಶ್ರೀನಿವಾಸರಾಯರ ಪತ್ನಿ ೩೮ ವರ್ಷದ ಶಾರದಮ್ಮ ಎಂಬುವರು ಮೊನ್ನೆ ಸಂಜೆ ಒಲೆ ಹೊತ್ತಿಸುತ್ತಿದ್ದಾಗ ಅವರ ಸೀರೆಗೆ ಬೆಂಕಿ ತಗಲಿ ಮೈಸುಟ್ಟಿತೆಂದೂ, ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ರಾತ್ರಿ ಅವರು ಮೃತಪಟ್ಟರೆಂದೂ ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಗ್ರಾಮಫೋನ್ [illegible] ಮಧ್ಯಾಹ್ನ ೧ ೩೦ ದಿಲ್ಲಿ [illegible] [illegible] ಕಲಾವಿದರು ಸಂಜೆ ೫ ೨೦ ಮತ್ತು ೭ [illegible] ಆರ್ ಇಂದಿರಮ್ಮ ಮತ್ತು ಆರ್ ಲೀಲಾ, ಸಂಗೀತ ೬ ೧೦ ಗಾನ ವಿಹಾರ [illegible] ಗೀತಾ [illegible] ೯ ೩೦ ಎ ಎಸ್ ಚಂದ್ರಶೇಖರಯ್ಯ, ವೀಣೆ ೯ ೧೫ ರಂಗ, ತಾನ ಮತ್ತು ಪಲ್ಲವಿ.

ನಗರ ಕಾಂಗ್ರೆಸ್ ಚುನಾವಣಾ ವೇಳಾಪಟ್ಟಿ

ಮೈಸೂರು ೩೦

ನಗರ ಕಾಂಗ್ರೆಸ್ಸಿನ ದಕ್ಷಿಣ ಮತ್ತು ಉತ್ತರ ಕ್ಷೇತ್ರಗಳ ವಾರ್ಡ್ ಸಮಿತಿಗಳಿಗೆ ಚುನಾವಣೆಯ ವೇಳಾ ಪಟ್ಟಿಯನ್ನು ಈ ರೀತಿ ಕೊಡಲಾಗಿದೆ —

ಇದೇ ಮೇ ೩ನೇ ತಾ||. ಓಟರು ಪಟ್ಟಿ ಪ್ರಕಟಣೆ ನಾಮಪತ್ರ ಸ್ವೀಕಾರ ೧೦ ಮತ್ತು ೧೧ನೇ ತಾ|| ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೧ ಗಂಟೆ ವರೆಗೆ ಉಮೇದುವಾರಿಕೆಗಳ ಪ್ರಕಟಣೆ ೧೨ನೇ ತಾ|| ಬೆಳಗ್ಗೆ ೧೦ಕ್ಕೆ ನಾಮಪತ್ರ ಪರಿಶೀಲನೆ ೧೪ನೇ ತಾ|| ಬೆಳಗ್ಗೆ ೧೦ ಗಂಟೆಗೆ ಅಭ್ಯರ್ಥಿ ಪಟ್ಟಿ ಪ್ರಕಟಣೆ ೧೫ನೇ ತಾ|| ಬೆಳಗ್ಗೆ ೧೦ ಘಂಟೆಗೆ ೧೮ನೇ ತಾ|| ಸಂಜೆ ೫ ಗಂಟೆ ವರೆಗೆ ವಾಪಸು ಪಡೆಯಲು ಕಡೇ ದಿನ ೩೧ನೇ ತಾ|| ಬೆಳಗ್ಗೆ ೯ ೧೨ ಮತ್ತು ಮಧ್ಯಾಹ್ನ ೨ ೫ ಗಂಟೆ ವರೆಗೆ ಚುನಾವಣೆ ಅದೇ ಸಂಜೆ ೫||ಗೆ ಎಣಿಕೆ

ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಮೈಸೂರು ತಾಲ್ಲೂಕು ಚುನಾವಣಾ ವೇಳಾ ಪಟ್ಟಿಯನ್ನೂ ಪ್ರಕಟಿಸಲಾಗಿದೆ ಉಮೇದುವಾರಿಕೆ ಅರ್ಜಿಯನ್ನು ಮೇ ೧೬ನೇ ತಾ|| ಬೆಳಗ್ಗೆ ೧೦ ಗಂಟೆಗೆ ಸ್ವೀಕರಿಸಲಾಗುವುದು ಪರಿಶೀಲನೆ ೧೮ನೇ ಬೆಳಗ್ಗೆ ೧೦ ಗಂಟೆಗೆ ಮತ್ತು ವಾಪಸು ಪಡೆಯುವುದು ೨೧ನೇ ತಾ|| ಬೆಳಗ್ಗೆ ೧೦ ಗಂಟೆಗೆ ಚುನಾವಣೆ ೩೧ನೇ ತಾ|| ಬೆಳಗ್ಗೆ ೧೦ ೧೨ ಮತ್ತು ೨ ೫ ಗಂಟೆ ವರೆಗೆ

ಮೇ ದಿನಾಚರಣೆ

ಕಮ್ಯೂನಿಸ್ಟ್ ಪಾರ್ಟಿ ಆಶ್ರಯದಲ್ಲಿ ಮೇ ೧ನೇ ತಾರೀಕು ಶುಕ್ರವಾರ ಸಂಜೆ ೬-೩೦ಕ್ಕೆ ಟೌನ್‌ಹಾಲ್ ಮೈದಾನದಲ್ಲಿ ಮೇ ದಿನವನ್ನು ಆಚರಿಸಲು ಬಹಿರಂಗ ಸಭೆ ನಡೆಯುವುದು. ಮೈಸೂರು ಜಿಲ್ಲಾ ಲೇಬರ್ ಸೆಕ್ರೆಟರಿಯೇಟ್ಟಿನ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮ ಗಂಟೆಗೆ ರಾಜಧಾನಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯು ನಡೆಯುವುದು ಕಾರ್ಮಿಕರೆಲ್ಲರೂ ಭಾಗವಹಿಸಬೇಕೆಂದು ಸಂಚಾಲಕರಾದ ಶ್ರೀ ವೇದಾಂತ ಹೆಮ್ಮಿಗೆಯವರು ಕೋರುತ್ತಾರೆ

ಕಳ್ಳತನದಲ್ಲಿ ಬಂದ ೧೧೦೦ ಗಡಿಯಾರಗಳ ವಶ

ಸುಂಕದ ಅಧಿಕಾರಿಗಳ ಕಣ್ಣು ತಪ್ಪಿಸಿ ದೇಶದೊಳಕ್ಕೆ ತಂದ ೧೧೦೦ ಸ್ವಿಟ್ಜರ್‌ಲೆಂಡ್ ಗಡಿಯಾರಗಳನ್ನು ಬೊಂಬಾಯಿ ಸುಂಕದ ಅಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ ಅವುಗಳ ಬೆಲೆ ೮೦ ಸಾವಿರ ರೂ ಆಗುವುದು ಸ್ವಿಟ್ಜರ್ಲೆಂಡಿನಿಂದ ಭಾರತಕ್ಕೆ ವಿಮಾನದ ಮೂಲಕ ಗಡಿಯಾರಗಳು ಕಳ್ಳತನದಲ್ಲಿ ರವಾನೆಯಾಗುತ್ತಿರುವುದಾಗಿ ಸ್ವಿಟ್ಜರ್ಲೆಂಡಿನ ವ್ಯಾಪಾರಿ ಪತ್ರಿಕೆಯೊಂದು ವರದಿ ಮಾಡಿದ್ದಿತ

ಕಳ್ಳತನದ ಬಗ್ಗೆ ಮುಂಜಾಗ್ರತೆ ತಿಳುವಳಿಕೆ

ರಾಜಧಾನಿಯ ಕೃಷ್ಣಮೂರ್ತಿಪುರದ ವಿಜಿಲೆನ್ಸ್ ಸಂಘದ ಕಾರ್ಯದರ್ಶಿಗಳಾದ ಶ್ರೀ ವಿ ಆರ್ ನಾಗರಾಜರಾಯರು ಮನವಿಯೊಂದನ್ನು ಹೊರಡಿಸಿ ಈಗ್ಗೆ ಕೆಲವು ತಿಂಗಳುಗಳಲ್ಲೂ ನಗರದಲ್ಲಿ ಕಳ್ಳರು ಅಡಿಗಡಿಗೆ ಅನೇಕ ಮನೆಯ ಬೀಗಗಳನ್ನು ತೆಗೆದು ಬೆಳ್ಳಿಯ ದೇವರ ಸಾಮಾನು ಮತ್ತು ಇತರ ಪದಾರ್ಥಗಳನ್ನು ಅಪಹರಿಸಿಕೊಂಡು ಹೋಗುತ್ತಿರುವರೆ ಮಾ ಈ ಬಗ್ಗೆ ಜನರು ತಮ್ಮ ಪದಾರ್ಥಗಳನ್ನು ಭದ್ರಪಡಿಸಿಕೊಳ್ಳುವುದಲ್ಲದೆ ಸರ್ಕಾರದವರೂ ಮತ್ತು ವಿಜಿಲೆನ್ಸ್ ಸಂಘದವರೂ ಕೈಗೊಂಡಿರುವ ಮುಂಜಾಗ್ರತೆ ಕ್ರಮಗಳಲ್ಲಿ ಸಹಕರಿಸಬೇಕೆಂದೂ ಪ್ರಾರ್ಥಿಸಿರುತ್ತಾರೆ

ಹಿಂದೀ ಪ್ರಚಾರ ಭಾಷಣ

ಮೈಸೂರು ರೇಡಿಯೋ ಕೇಂದ್ರದಿಂದ ಪ್ರಸಾದ್ ಸ್ವಚ್ಛಂದವಾದಿ ಮತ್ತು ರಹಸ್ಯವಾದಿ ಎಂಬ ವಿಷಯದಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎಂ. ರಾಜೇಶ್ವರಯ್ಯನವರು ಈ ದಿನ ರಾತ್ರಿ ೯ ೩೦ಕ್ಕೆ ಪ್ರಸಾರ ಭಾಷಣ ಮಾಡುತ್ತಾರೆ

ಪ್ರಭಾ ★ ಅಪೋಘ ಪ್ರಾರಂಭ

1 5 53 ರಿಂದ ದಿನವೂ 3 ಆಟಗಳು

ಜೆಮಿನಿಯವರ ಅತ್ಯುತ್ತಮ ಹಿಂದಿ ಚಿತ್ರ

ಮಿಸ್ಟರ್ ಸಂಪತ್

ಪಾತ್ರ — ಮೋತಿಲಾಲ್, ಪದ್ಮಿನಿ, ಆಗ ಬದ್ರಿ ಪ್ರಸಾದ್

ಬೆಳಗಿನ ಪ್ರದರ್ಶನ 1 5 53 ರಿಂದ 3 ದಿನ ವೈಜಯಂತಿಮಾಲಾ, ಕರಣ್ ದಿವಾನ್ ನಟಿಸಿರುವ **ಬಹಾರ್**

ಆದವಾನಿ, ಆಲೂರು ಮತ್ತು ರಾಯದುರ್ಗಗಳ ಭವಿಷ್ಯ

ಬಳ್ಳಾರಿಯ ಬಗ್ಗೆ ಕನ್ನಡಿಗರ ನಿಯೋಗದ ಮನವಿಗೆ ಉತ್ತರವಾಗಿ ನೆಹರೂರವರು ಬಳ್ಳಾರಿಯ ರಾಯದುರ್ಗ, ಆದವಾನಿ ಮತ್ತು ಆಲೂರು ತಾಲ್ಲೂಕುಗಳ ಭವಿಷ್ಯವನ್ನು ಕುರಿತು ನ್ಯಾಯಾಧೀಶ ವಿ. ಶಾಸ್ತ್ರಿಯವರ ಮುಂದೆ ಮನವಿಗಳನ್ನು ಒಪ್ಪಿಸಬಹುದೆಂದೂ, ಮೊದಲು ಬಳ್ಳಾರಿ ತಾಲ್ಲೂಕಿನ ಭವಿಷ್ಯವನ್ನು ಮಾತ್ರ ಕುರಿತು ವರದಿ ಒಪ್ಪಿಸುವಂತೆ ವಿ. ಶಾಸ್ತ್ರಿಯವರಿಗೆ ಸೂಚಿಸಲಾಗಿತ್ತಾದರೂ, ಈಗ ಇತರ ಮೂರು ವಿವಾದಾಸ್ಪದ ತಾಲ್ಲೂಕುಗಳ ವಿಚಾರಣೆಯನ್ನೂ ಅವರು ನಡೆಸಿ ವರದಿ ಮಾಡುವಂತೆ ತಿಳಿಸಿರುವರೆಂದು ವರದಿಯಾಗಿದೆ ಕರ್ನಾಟಕ ಪ್ರಾಂತ ಪ್ರಶ್ನೆಯೊಂದನ್ನೇ ಪ್ರತ್ಯೇಕವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ, ಮಹಾರಾಷ್ಟ್ರ ಕೇರಳ ಮುಂತಾದ ಭಾಷಾ ಪ್ರಾಂತಗಳ ಸಮಸ್ಯೆಯ ಜೊತೆಗೆ ಒಟ್ಟಿಗೆ ಬಗೆಹರಿಸುವುದಾಗಿಯೂ ಅವರು ಒತ್ತಿ ಹೇಳಿರುತ್ತಾರೆ

ಭಾರತದಲ್ಲಿ ಅಕ್ಷರತೆ

ಭಾರತದಲ್ಲಿ ಶೇಕಡ ೧೭ ರಷ್ಟು ಅಕ್ಷರತೆಯುಳ್ಳವರಾಗಿ ಕೇಂದ್ರ ವಿದ್ಯಾ ಮಂತ್ರಿಗಳು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ವಸ್ತು	[illegible]	[illegible]
ರಾಗಿ [illegible]	೨೪ ೮	೨೯ [illegible]
ಜೋಳ [illegible]	೩೭ ೮ ೦	
ಹೊ. ಗೋಧಿ	೨೨ ೧ ೦	೨೩ ೬ ೦
ಹುರುಳಿ	೪ ೧ ೦	೫೩ ೮ ೦
ಅವರೆ	೩೬ ೪ ೦	
ಹುಣಸೇಹಣ್ಣು	೫ ೨ [illegible]	೬ ೩ ೦
ಬೆಲ್ಲ/ಕಡಲೇಕಾಯಿ	೪ ೮ ೦	೪ ೧೦ ೦
ತೆಂಗಿನಕಾಯಿ		
[illegible]	೧೪೩ ೦	೩೭೮ ೦

SRI GANESHA

TALKIES

From 1-5-53 For 3 Days

Universal's

COMING ROUND THE MOUNTAIN

Featuring — Bud Abbot and Lou Costello

NEXT CHANGE — **SUDAN**

(Technicolor)

ಕೈಗಾರಿಕಾ ಕಾರ್ಮಿಕರ ವಿಮೆ ಶಾಸನದ ಜಾರಿ

೫ ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರುಳ್ಳ ಪ್ರದೇಶಗಳಲ್ಲಿ ಮುಂದಿನ ವರ್ಷದ ಆದಿಯಿಂದ ನೌಕರರ ರಾಜ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಗುವುದೆಂದು ವರದಿಯಾಗಿದೆ. ಈ ಶಾಸನದ ಅಂಶಗಳನ್ನು ಮೊದಲು ವಿಶಾಲ ಬೊಂಬಾಯಿ, ಅಹಮದಾಬಾದು, ನಾಗಪುರ, ಜಬ್ಬಲ್ಪುರ, ಕಲ್ಕತ್ತಾ, ಬೆಂಗಳೂರು ಮದ್ರಾಸುಗಳಲ್ಲಿ ಜಾರಿಗೆ ಕೊಡಲಾಗುವುದು

೧೩|| ಲಕ್ಷ ರೂ. ಮೋಸಕ್ಕಾಗಿ ಇಬ್ಬರ ಮೇಲೆ ಮೊಕದ್ದಮೆ

೧೩|| ಲಕ್ಷ ರೂ ಗಳ ಬಗ್ಗೆ ಭಾರತ ಸರ್ಕಾರಕ್ಕೆ ದ್ರೋಹ ಮಾಡಿದರೆಂದು ಕಲ್ಕತ್ತೆಯ ಬಿ ಕೆ ಬಸು ಎಂಬ ಒಬ್ಬ ವಕೀಲರು ಮತ್ತು ಅವರ ಬಂಧು ದ್ವಿಜೇಂದ್ರ ನಾಥ್‌ರಾಯ್ ಎಂಬುವರ ಮೇಲೆ ಕಲ್ಕತ್ತಾ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಲಾಗುವುದು. ಮಿಲಿಟರಿ ಮತ್ತು ಎ ಆರ್ ಪಿ ಸಾಮಾನುಗಳನ್ನು ವಿಲೇವಾರಿ ಮಾಡುವ ಬಗ್ಗೆ ಬಂಗಾಳ, ಬಿಹಾರ ಮತ್ತು ಅಸ್ಸಾಂಗಳಲ್ಲಿ ಸಾಮಾನು ಹರಾಜು ಮಾಡುವಂತೆ ಅವರಿಗೆ ಸೂಚಿಸಿದ್ದುದಾಗಿಯೂ, ಒಪ್ಪಂದದ ಪ್ರಕಾರ ಅವರುಗಳು ಠೇವಣಿ ಹಣ ಕೊಡದೆ, ೧೯೪೬ನೇ ಫೆಬ್ರವರಿಯಿಂದ ೧೯೪೭ನೇ ಸೆಪ್ಟೆಂಬರ್‌ವರೆಗೆ ೧೫೫ ಹರಾಜುಗಳನ್ನು ನಡೆಸಿ, ಹರಾಜಿನಲ್ಲಿ ಬಂದ ಹಣವನ್ನು ಸ್ವಂತ ವ್ಯಾಪಾರದಲ್ಲಿ ಉಪಯೋಗಿಸಿದರೆಂದೂ ವರದಿಯಾಗಿದೆ

SRI GAYATHRI

TALKIES

GRAND GALA OPENING

From 1-5-53 Daily 3 Shows

M G. M's Mighty Picture

QUO VADIS

(Colour by Technicolor)

With Robert Taylor, Deborrah Kerr

Edited, Printed and Published by A R Nagarajan at Sadhvi Press, D Subbiah Road, Mysore

ಪ್ರಭುದೇವಾ ಟಾಕೀಸ್ ★

30-4-53 ನೇ ಗುರುವಾರದಿಂದ

ಅಪೋಘ ಪ್ರಾರಂಭ

ದಿನವಹಿ ಮೂರು ಆಟಗಳು

ತಮಿಳು ನಾಡಿನಲ್ಲಿ 25 ವಾರಗಳು ನಡೆದಿರುವ, ಜೆಮಿನಿಯವರ ತಮಿಳು ಚಿತ್ರ

ಸಂಸಾರಂ

ಪಾತ್ರ :— ಎಂ ಕೆ ರಾಧಾ ಪುಷ್ಪವಲ್ಲಿ, ಶ್ರೀರಾಂ, ವನಜ, ಟಿ ಆರ್ ರಾಮಚಂದ್ರನ್, ಸುಂದರಿಬಾಯಿ ಮುಂತಾದವರು

ರಿಜಿ ನಂ. 792 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧-೫-೧೯೫೩ [ಸಂಚಿಕೆ ೨೨೨

ಭಾರತದ ೫ ಲಕ್ಷ ಹಳ್ಳಿಗಳಿಗೆ ೧೦೧ ಕೋಟಿ ರೂ

ಕೆ. ಹನುಮಂತಯ್ಯನವರು ದೆಹಲಿಗೆ

ಬೆಂಗಳೂರು ೧

ಈ ತಿಂಗಳು ೧೧ ನೇ ತಾ|| ದೆಹಲಿಗೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಯಾಣ ಮಾಡಿ, ಅಲ್ಲಿ ೧೨ ಮತ್ತು ೧೩ ನೇ ತಾ|| ಇರುವರು. ಬಳ್ಳಾರಿ ತಾಲ್ಲೂಕಿನ ಭವಿಷ್ಯ, ಕರ್ನಾಟಕ ಏಕೀಕರಣ ಮುಂತಾದ ವಿಷಯಗಳನ್ನು ಕುರಿತು ಅವರು ಪ್ರಧಾನಿ ನೆಹರೂರವರೊಡನೆ ಚರ್ಚೆ ನಡೆಸಲಿರುವರೆಂದು ಗೊತ್ತಾಗಿದೆ. ಇದಲ್ಲದೆ ಸಂಸ್ಥಾನದಲ್ಲಿ ಅಭಾವ ಪೀಡಿತ ಪ್ರದೇಶಗಳಿಗೆ ನೆಹರೂ ಮತ್ತು ಎಸ್. ಕೆ. ರಾಜಮೂರ್ತಿಯವರು ಭೇಟಿಗಳನ್ನಿತ್ತ ಹೋದ ನಂತರ ಭಾರತ ಸರ್ಕಾರದಿಂದ ಈ ವರೆಗೆ ಯಾವ ಸಹಾಯವೂ ಬರದೆ ಇರುವ ಪ್ರಯುಕ್ತ ಈ ಬಗ್ಗೆಯೂ ಪ್ರಧಾನಿಯವರ ಗಮನವನ್ನು ಮುಖ್ಯ ಮಂತ್ರಿಯವರು ಸೆಳೆಯುವರೆಂದು ಗೊತ್ತಾಗಿದೆ.

ಈ ಕಾರಣದಿಂದ ಅವರ ಉದಕಮಂಡಲದ ಪ್ರವಾಸವು ಮುಂದೆ ಹೋಗಿರುತ್ತದೆ. ಫೀಲಗಿರಿಗೆ ೧೮ ನೇ ತಾ|| ಹೋಗಲು ಅವರು ರಾಜಧಾನಿಗೆ ೧೭ ನೇ ತಾ|| ಹಿಂತಿರುಗುವರು. ನೀಲಗಿರಿಯಲ್ಲಿ ೧ ವಾರ ಅವರು ಇರುವರು.

ಮುಖ್ಯ ಮಂತ್ರಿಗಳ ಬಳಿ ಕರ್ನಾಟಕ ಮುಖಂಡರ ನಿಯೋಗ

ಕರ್ನಾಟಕ ಏಕೀಕರಣವು ಜಾಗ್ರತೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಮೈಸೂರು ಸಂಸ್ಥಾನವು ತನ್ನ ಆಸಕ್ತಿ ವಹಿಸಿ ಕೂಡಲೇ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವಂತೆ ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಶ್ರೀಗಳಾದ ಮದ್ರಾಸಿನ ಮಾಜಿ ಮಂತ್ರಿ ಕೆ ಆರ್ ಕಾರಂತ್, ಮಾಸ್ತಿ ವೆಂಕಟೇಶಯ್ಯಂಗಾರ್, ಸಿದ್ದಪ್ಪ ಹೊಸಮನಿ ಮುಂತಾದವರು ಭೇಟಿ ಮಾಡಿ ಒತ್ತಾಯ ಪಡಿಸಿದರು. ಏಕೀಕರಣದ ಬಗ್ಗೆ ತಮಗೆ ಆಸಕ್ತಿ ಇರುವುದಾಗಿಯೂ, ಈ ವಿಷಯವನ್ನು ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಮತ್ತು ಎಂ ಪಿ ಸಿ ಸಿ ಗಳ ಮುಂದೆ ಇಟ್ಟು ಅವುಗಳ ಅಭಿಪ್ರಾಯ ಪಡೆಯಬೇಕಾಗಿರುವುದೆಂದೂ, ಈ ಬಗ್ಗೆ ಅಗತ್ಯವಾದ ಎಲ್ಲ ಕ್ರಮಗಳನ್ನೂ ತಾವು ಕೈಗೊಳ್ಳಲಿರುವುದಾಗಿಯೂ ಅವರು ಹೇಳಿದರು. ಏಕೀಕರಣದ ಬಗ್ಗೆ ಮುಖ್ಯ ಮಂತ್ರಿಯವರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ಹಡಗು ಮುಳುಗಿ ೬೭ ಜನರ ಮರಣ

ದಕ್ಷಿಣ ಅಮೇರಿಕದ ಕೊಲಂಬಿಯದ ಹಡಗೊಂದು ನೆನ್ನೆ ಪೆಸಿಫಿಕ್ ಸಾಗರದಲ್ಲಿ ಮುಳುಗಿ ಅದರಲ್ಲಿದ್ದ ೫೬ ಮಂದಿ ಪೋಲೀಸರೂ, ೧೧ ಮಂದಿ ನೌಕಾ ಕೆಲಸಗಾರರೂ ಮೃತಪಟ್ಟರೆಂದು ಗೊತ್ತಾಗಿದೆ

ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಮೈಸೂರು ತಾಲ್ಲೂಕು ಕಾಂಗ್ರೆಸ್ ಚುನಾವಣೆಗಳ ವೇಳಾ ಪಟ್ಟಿಯಲ್ಲಿ ಅರ್ಜಿಯ ಪರಿಶೀಲನೆ ತಾ|| ಈ ತಿಂಗಳು ೧೭ ಎಂದು ನೆನ್ನೆ ಬದಲಿಸುವುದನ್ನು ೧೯ ಎಂಬುದಾಗಿ ತಿದ್ದಿಕೊಳ್ಳಬೇಕೆಂದು ವಿನಂತಿ

ಹೆಚ್ಚುವರಿ ಧಾನ್ಯ ಇರುವವರಿಂದ ವಸೂಲಿ

ಮೈಸೂರು ೧

ಈ ದಿನದಿಂದ ಪಡಿತರವು ಮುಕ್ತಾಯವಾದರೂ ೧೦೦ ಪಲ್ಲ ಮತ್ತು ಅದಕ್ಕೆ ಹೆಚ್ಚಾಗಿ ಸರ್ಕಾರಕ್ಕೆ ಭತ್ತವನ್ನು ಸಲ್ಲಿಸಬೇಕಾದವರಿಂದ ಧಾನ್ಯವನ್ನು ವಸೂಲು ಮಾಡುವಂತೆ ಸರ್ಕಾರದವರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸಿರುವರೆಂದು ವರದಿಯಾಗಿದೆ

ಇರಿತದ ಗಾಯದಿಂದ ಮರಣ

ನಗರದ ಕಾಸ್ಮೊಪಾಲಿಟನ್ ಕ್ಲಬ್ ಹೋಟೇಲಿನ ಇಬ್ಬರು ಕೆಲಸಗಾರರು ರಾಮಸ್ವಾಮಿ ನಾಯರ್ ಮತ್ತು ಗೋಪಾಲ ನಾಯರ್ ಎಂಬುವರಿಗೆ ಕಳೆದ ೨೨ನೇ ತಾ|| ಜಗಳವಾಗಿ ರಾಮಸ್ವಾಮಿ ನಾಯರರನ್ನು ಚೂರಿ ಇರಿತದ ಪರಿಣಾಮವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದ್ದು ಸದರಿಯವನು ಈ ಬೆಳಿಗ್ಗೆ ಮೃತಪಟ್ಟನು. ಲಕ್ಷ್ಮೀಪುರಂ ಪೋಲೀಸರು ಮಹಜರು ಕ್ರಮ ನಡೆಸಿದರು

ಬಳ್ಳಾರಿ ಭಾಷಾವಾದಿಗಳಲ್ಲಿ ಘರ್ಷಣೆ

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಬಳ್ಳಾರಿ ಬೆಂಗಳೂರು ರಸ್ತೆ ಮಾರ್ಗದಲ್ಲಿ ಅಲ್ಲಿನ ಕನ್ನಡಿಗರು ನೆನ್ನೆ ಘೋಷಣೆಗಳನ್ನು ಬರೆಯುತ್ತಿದ್ದಾಗ ಆಂಧ್ರದವರು ಅವರುಗಳ ಮೇಲೆ ಕಲ್ಲುಗಳನ್ನೆಸೆದರೆಂದೂ, ಅದರಿಂದ ಗಲಭೆಯಾಗಿ ಪೋಲೀಸರು ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದರೆಂದೂ ವರದಿಯಾಗಿದೆ. ಐದು ಮಂದಿ ಕನ್ನಡಿಗರಿಗೆ ಪೆಟ್ಟು ಬಿದ್ದಿರುವುದಾಗಿ ಹೇಳಲಾಗಿದೆ. ಗಾಯವಾದವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತು. ನೆನ್ನೆ ರಾತ್ರಿಯೂ ಸಹ ಗಲಭೆ ನಡೆಯಿತೆಂದೂ, ಪೋಲೀಸರು ಮೂರನ್ನು ರಿಜಿಸ್ಟರ್ ಮಾಡಿಕೊಂಡು ತನಿಖೆ ನಡೆಸುತ್ತಿರುವರೆಂದೂ ಹೇಳಲಾಗಿದೆ

ಕೋರ್ಟಿನ ಬಳಿ ಮಾಜಿ ಅಧಿಕಾರಿಯನ್ನಿರಿದು ಕೊಲೆ

ಕೇಂದ್ರ ಸರ್ಕಾರದ ಮಾಜಿ ಎನ್‌ಫೋರ್ಸ್‌ಮೆಂಟ್ (ಪೋಲೀಸ್) ಅಧಿಕಾರಿ ದೇವದಾಸ್ ಭಂಡಾರಿ ಎಂಬಾತನು ನೆನ್ನೆ ಅಹಮದಾಬಾದು ನ್ಯಾಯಾಸ್ಥಾನದಲ್ಲಿ ಪ್ರಕರಣದ ವಿಚಾರಣೆ ಮೊಕದ್ದಮೆಯಲ್ಲಿ ಹಾಜರಾಗಿ ವಿಚಾರಣೆಯಾದನಂತರ ಹೊರಗೆ ಬಂದಾಗ ಅವನನ್ನು ೩ ಜನರು ಚೂರಿ ಇರಿದರೆಂದೂ, ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ.

ಇಂದಿನಿಂದ ಸಂಸ್ಥಾನದಲ್ಲಿ ಹಕೋಟ ರದ್ದು

ಸ್ವಂ ಸು ಪೋಸ್ಟ್] ಬೆಂಗಳೂರು ೧

ಕಳೆದ ೧೦ ವರ್ಷಗಳಿಂದಲೂ ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಆಹಾರದ ಹಕೋಟವು ಇಂದಿನಿಂದ ರದ್ದಾಗಿರುತ್ತದೆ. ಬೆಂಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ನಗರಗಳಲ್ಲಿ ಈ ದಿನ ಪಡಿತರ ಪದ್ಧತಿಯು ಕೊನೆಗೊಂಡಿತು. ಮದುವೆ ಮುಂಜಿ ಮತ್ತು ಶ್ರಾದ್ಧ ಮೊದಲಾದ ಧಾರ್ಮಿಕ ಕಾರ್ಯಗಳ ಸಂದರ್ಭದಲ್ಲಿ ಊಟ ಹಾಕುವುದನ್ನು ಮಿತಿಗೊಳಿಸಲಾಗಿದ್ದು ಅದನ್ನು ಈಗ ರದ್ದುಗೊಳಿಸಲಾಗುವುದು.

ಇಂದು ಇಲ್ಲಿ ಎಂದಿನಂತೆ ಜನರು ತಮ್ಮ ರೇಷನ್ ಕಾರ್ಡುಗಳನ್ನು ತಂದು ಆಹಾರ ಧಾನ್ಯಗಳನ್ನು ಕೊಂಡುಕೊಂಡು ಹೋದರು

ಸಿರಾ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟಿನ ತೀರ್ಪು

ಸಿರಾ ಕೋಮುವಾರು ಗಲಭೆ ಸಂಬಂಧವಾಗಿ ಅಬ್ದುಲ್ ರಹಮಾನ್ ಎಂಬುವರಿಗೆ ಕೊಡಲಾದ ಫಾಸಿ ಶಿಕ್ಷೆಯನ್ನು ಸುಪ್ರೀಂ ಕೋರ್ಟಿನವರು ಜೀವಾವಧಿ ಸಜಾ ಶಿಕ್ಷೆಗೆ ಇಳಿಸಿರುವರು

ಕಾಲೇಜು ಯುವತಿಯನ್ನು ಮೋಹಿಸಿದ ವೃದ್ಧನಿಗೆ ಶಿಕ್ಷೆ

ಕಳೆದ ೨ ವರ್ಷಗಳಿಂದಲೂ ಎಡೆಬಿಡದೆ ೨೦ ವರ್ಷ ವಯಸ್ಸಿನ ಒಬ್ಬ ಕಾಲೇಜು ವಿದ್ಯಾರ್ಥಿನಿಯನ್ನು ಹಿಂಬಾಲಿಸಿ ಆಕೆಯೊಡನೆ ಪ್ರಣಯ ಸಂಬಂಧ ಬೆಳೆಸಲೆಳಸಿ, ಕಡೆಗೆ ಕಳೆದ ಮಾರ್ಚಿ ೮ ನೇ ತಾ|| ಆಕೆಯ ಕೈಯನ್ನು ಜಗ್ಗಿದ ೫೦ ವರ್ಷದ ವೃದ್ಧನೊಬ್ಬನನ್ನು ಬೊಂಬಾಯಿ ನ್ಯಾಯಾಧೀಶರು ೬ ತಿಂಗಳು ಕಠಿಣ ಶಿಕ್ಷೆಗೆ ಗುರಿಪಡಿಸಿರುತ್ತಾರೆ

ಕಪಿ ಮುತ್ತಿಗೆ

ರಾಜಧಾನಿಯ ಬನಶಂಕರಿ ರಸ್ತೆಯಲ್ಲಿರುವ ಕುಂಬಾರಗುಂಡಿಯ ರಾಮಮಂದಿರದಲ್ಲಿ ನಾಳೆ ಸಂಜೆ ೬ ಘಂಟೆಗೆ, ಹಕೋಟಗಳು ರದ್ದಾದ ಪ್ರಯುಕ್ತ, ವಿ|| ಕೌಂಡಿನ್ಯರವರಿಂದ ಕಪಿ ಮಹಾತ್ಮೆ ಪುರಾಣವೂ ಮತ್ತು ವಿ|| ವೆಂಕಟಸುಬ್ಬಯ್ಯನವರಿಂದ ವ್ಯಾಖ್ಯಾನವೂ ನಡೆಯುವುದು.

ಕರ್ನಾಟಕ ಏಕೀಕರಣಕ್ಕೆ ಮುಖ್ಯ ಮಂತ್ರಿಯವರ ಸ್ವಾಗತ

ಸ್ವಂ ಸು ಪೋಸ್ಟ್] ಬೆಂಗಳೂರು ೧

ಸಿವಿಲ್ ಪ್ರದೇಶದಲ್ಲಿ ಮಂಗಳ ವಾರ ದ ಟ್ರೈನ್ ಹೆಂಗಸು ಮತ್ತು ಶಿಶು ಸಂರಕ್ಷಣಾ ಕೇಂದ್ರದ ಶಂಕುಸ್ಥಾಪನೆ ಮಾಡುತ್ತಾ ಈ ದಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕರ್ನಾಟಕ ಏಕೀಕರಣವಾಗುವುದರಿಂದ ತಾವು ಸಂತೋಷಿಸುವುದಾಗಿಯೂ, ಇದು ತಮ್ಮ ವೈಯಕ್ತಿಕ ಅಭಿಪ್ರಾಯವೆಂದೂ ತಿಳಿಸಿದರು. ಭಾಷಾವಾರು ಸಂಸ್ಥಾನಗಳ ಬಗ್ಗೆ ಕವಿಣಾಚಿನ್ನ ನೇಮಕವನ್ನು ಅವರು ಸ್ವಾಗತಿಸಿದರು. ಬಳ್ಳಾರಿ ಭವಿಷ್ಯವನ್ನು ಕುರಿತು ಆಂಧ್ರರು ನಡೆಸುತ್ತಿರುವ ಚಳುವಳಿಯನ್ನು ಅವರು ಖಂಡಿಸಿ, ಗಲಾಟೆಗಳನ್ನು ಮಾಡಿಕೊಳ್ಳದೆ ಪ್ರತಿಯೊಬ್ಬರೂ ತಮ್ಮ ಕಾರ್ಯ ಸಾಧಿಸಬೇಕಾದುದು ಅಗತ್ಯವೆಂದು. ತಿಳಿಸಿ, ಬಳ್ಳಾರಿ ಜನರು ಮೈಸೂರಿಗೆ ಸೇರಿದರೆ ಅವರನ್ನು ತಾವು ಸ್ವಾಗತಿಸುವುದಾಗಿ ಹೇಳಿದರು

ವಿಹಾರಾರ್ಥ ಹೋಗಿದ್ದ ದಂಪತಿಗಳ ಮೇಲೆ ಕೈ

ಬೆಂಗಳೂರಿನ ಬ್ಯೂಗಲ್ ರಾಕಿಗೆ ಹೋಗಿ ನೆನ್ನೆ ರಾತ್ರಿ ೮ ಗಂಟೆ ಸಮಯದಲ್ಲಿ ವಿಹಾರಾರ್ಥವಾಗಿ ಕುಳಿತಿದ್ದ ದಂಪತಿಗಳಿಬ್ಬರನ್ನು ಅಪರಿಚಿತನೊಬ್ಬನು ಮಾತನಾಡಿಸುತ್ತಾ, ಗಂಡನನ್ನು ಮೊದಲು ಹೊಡೆದು ನಂತರ ಪತ್ನಿಯ ಮೇಲೆ ಕೈಮಾಡಲೆತ್ನಿಸಿದನೆಂದೂ, ಆಕೆಯು ಕೂಗಿಕೊಳ್ಳಲಾಗಿ ಅವನು ಓಡಿಹೋದನೆಂದೂ ವರದಿಯಾಗಿದೆ

೧೨೦ ಸಾವಿರ ಹಳ್ಳಿಗಳ ಅಭಿವೃದ್ಧಿಗೆ ೧೦೧ ಕೋಟಿ

೮ ಕೋಟಿ ಪ್ರಜಾ ಸಂಖ್ಯೆಯುಳ್ಳ ೧,೨೦,೦೦೦ ಹಳ್ಳಿಗಳಲ್ಲಿ ವ್ಯವಸಾಯ ಅಭಿವೃದ್ಧಿ ಕಾರ್ಯಗಳನ್ನು ೧೯೫೬ ನೇ ಇಸವಿಗೆ ಮುಂಚೆ ಕೈಗೊಳ್ಳುವ ಸಲುವಾಗಿ ೧೦೧ ಕೋಟಿ ರೂಗಳ ಸೇವಾ ವಿಸ್ತರಣೆಯ ಯೋಜನೆಯನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಈಗಾಗಲೇ ಜಾರಿಗೆ ತರಲಾಗಿರುವ ೫೫ ಸಾಮೂಹಿಕ ಯೋಜನೆಗಳನ್ನೂ ಇದರೊಡನೆ ಸಂಯೋಜಿಸಿ ಕೆಲಸ ಕಾರ್ಯಗಳನ್ನು ನಡೆಸಲಾಗುವುದು. ಈ ವರ್ಷ ಮಹಾತ್ಮ ಗಾಂಧಿಯವರ ಜನ್ಮದಿನ ಎಂದರೆ ಇದೇ ಅಕ್ಟೋಬರ್ ೨ ನೇ ತಾ|| ಈ ಯೋಜನೆಯು ಆರಂಭವಾಗುವುದು

ರೈಲ್ವೆ ವರ್ಕ್‌ಶಾಪಿನಲ್ಲಿ ಆಕಸ್ಮಿಕ ಬೆಂಕಿ

ಮೈಸೂರು ೧

ನೆನ್ನೆ ಸಂಜೆ ೫ ಗಂಟೆಗೆ ರೈಲ್ವೆ ವರ್ಕ್‌ಶಾಪಿನಲ್ಲಿ ರೈಲ್ವೆ ಕಂಬಿ ಬಳಿ ಇದ್ದ ಗಗನ ಸೌದೆ ರಾಶಿಗೆ ಬೆಂಕಿ ಬಿದ್ದು, ನಗರದ ಫೈರ್ ಬ್ರಿಗೇಡಿನವರು ಬಂದು ೨|| ಗಂಟೆ ಕಾಲದಲ್ಲಿ ಆರಿಸಿದರು. ಗ್ಯಾಸಿನ ಇಂಜಿನ್ನಿನಿಂದ ಕಿಡಿಯು ಹಾರಿ ರಾಶಿ ಮೇಲೆ ಬಿದ್ದಿತೆಂದು ಹೇಳಲಾಗಿದೆ. ಯಾರಿಗೂ ತೊಂದರೆಯಾಗಿಲ್ಲ.

ಮನೆ ಕಂದಾಯ ಏರಿಸಿರುವ ಪ್ರಶ್ನೆ

ವಿವರವಾದ ಹೇಳಿಕೆ ಕೊಡುವುದಾಗಿ ಅಧ್ಯಕ್ಷರು

ಮೈಸೂರು ೧

ನಗರದ ಪೌರಸಭೆಯ ಸಾಮಾನ್ಯ ಅಧಿವೇಶನವು ನೆನ್ನೆ ಶ್ರೀ ಟಿ ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಶ್ರೀಗಳಾದ ವಿರಾಂ ನೂರ್ ಹುಸೇನ್ ಎಂ. ಸಿ. ಮಹದೇವಸ್ವಾಮಿ ಬಿ ಜಿ ದಾಸ್, ಎಚ್ ಎಂ ಮುದ್ದಯ್ಯ, ಪಿ ಡಿ ಕೃಷ್ಣಸ್ವಾಮಿ ಮತ್ತು ಯು ಎಲ್ ರಾಮಚಂದ್ರರಾವ್‌ರವರು ಮಾತನಾಡಿ, ಮನೆಗಂದಾಯವನ್ನು ಪೌರ ಸಭೆಯವರು ಹೆಚ್ಚಿಸಿರುವ ಬಗ್ಗೆ ನಗರದ ಹಲವು ಭಾಗಗಳಲ್ಲಿ ಪ್ರತಿಭಟನಾ ಸಭೆಗಳು ಮತ್ತು ನಿರ್ಣಯಗಳು ಆಗುತ್ತಿರುವುದಾಗಿ ಹೇಳಿ ಅಧ್ಯಕ್ಷರ ಗಮನವನ್ನು ಸೆಳೆದರು

ಅಧ್ಯಕ್ಷರು ಉತ್ತರವಿತ್ತು ೨ ೩ ದಿನಗಳಲ್ಲೇ ಕಾವು ಅಂಕಿ ಅಂಶಗಳುಳ್ಳ ವಿವರವಾದ ಪ್ರಕಟಣೆಯೊಂದನ್ನು ಹೊರಡಿಸಲಿರುವುದಾಗಿ ಹೇಳಿ ಕಂದಾಯವನ್ನು ಏರಿಸಲಾಗಿರುವ ಮನೆ ಮಾಲೀಕರು ಪೌರಸಭಾ ಕಮಿಷನರಿಗೆ ಅಪೀಲು ಹಾಕಿಕೊಳ್ಳಬಹುದೆಂದೂ, ಅಂತಹ ಅರ್ಜಿಗಳನ್ನ ಪರಿಶೀಲಿಸಲಾಗುವುದೆಂದೂ ಆಶ್ವಾಸನೆಯಿತ್ತರು

ಸರ್ಕಾರದವರು ಆಹಾರ ಧಾನ್ಯಗಳ ಬೆಲೆ ಹೆಚ್ಚಿಸಿರುವ ಬಗ್ಗೆ ಅವರ ಗಮನವನ್ನು ಸೆಳೆದ ಬೆಲೆ ಇಳಿಸುವಂತೆ ಕೋರಿ ಪೌರಸಭೆಯವರು ಮಾಡಿರುವ ನಿರ್ಣಯಕ್ಕೆ ಉತ್ತರವಿನ್ನೂ ಸರ್ಕಾರದಿಂದ ಬಂದಿಲ್ಲವೆಂದೂ ಆಹಾರ ಮಂತ್ರಿಗಳು ಇತ್ತೀಚೆ ಪೌರಸಭೆಯವರ ನಿರ್ಣಯವನ್ನು ಕುರಿತು ಪ್ರಸ್ತಾಪಿಸಿದುದಾಗಿಯೂ ಶ್ರೀಗಳಾದ ವಿರಾಂ ನೂರ್ ಹುಸೇನ್ ಮತ್ತು ಬಿ ಜಿ ದಾಸರು ಹೇಳಿದಾಗಿ ಸಚಿವರ ಭಾಷಣದ ವಿಷಯವು ತಮಗೆ ಅಧಿಕೃತವಾಗಿ ತಿಳಿದುಬಂದಿಲ್ಲವೆಂದೂ, ಪೌರಸಭಾ ನಿರ್ಣಯದ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ತಿಳಿಸುವಂತೆ ಮತ್ತೊಮ್ಮೆ ಕೋರಲಾಗುವುದೆಂದೂ ಅಧ್ಯಕ್ಷರು ಹೇಳಿದರು

ಮನೆಗಳಿಗೆ ದೀಪಗಳನ್ನು ಕೊಡಲು ವಿದ್ಯುಚ್ಛಕ್ತಿ ಲೈನುಗಳನ್ನು ಹಾಕುವಾಗ ಇಲಾಖೆಯವರು ಪೌರಸಭೆಯನ್ನು ಕೇಳಬೇಕಾದ ಅಗತ್ಯವಿಲ್ಲವೆಂದು ಸೂಚಿಸಿ ಸ್ಥಳೀಯ ಸಂಸ್ಥೆ ಇಲಾಖೆ ಕಾರ್ಯದರ್ಶಿಯವರಿಂದ ಬಂದ ಪತ್ರದ ಬಗ್ಗೆ ಶ್ರೀಗಳಾದ ಎಂ ಎಲ್ ಶ್ರೀನಿವಾಸಯ್ಯಂಗಾರ್ ಪಿ ಸೀತಾರಾಮಯ್ಯ, ಎ ವೆಂಕಟೇಶಯ್ಯ ಮುಂತಾದವರು ಮಾತನಾಡಿ ಪೌರಸಭೆಯವರ ಅಭಿಪ್ರಾಯವನ್ನು ಅವಶ್ಯಕವಾಗಿ ಪಡೆಯಬೇಕೆಂದು ತಿಳಿಸಿದರು ಮನೆಗಳ ನೇರಿಕೆ ಲೈನ್ ಎಳೆಯುವ ... ಅಪಾಯವು ಸಂಭವಿಸದಂತೆ ಮಾಡಲು ಈ ಅಧಿಕಾರವು ಪೌರಸಭೆಗೆ ಇರಬೇಕೆಂದೂ ಸದಸ್ಯರು ಅಭಿಪ್ರಾಯಪಟ್ಟ

ಕಾಫಿ ಬೋರ್ಡಿನ ವರ್ತನೆಯ ಖಂಡನೆ

ಅಖಿಲ ಭಾರತ ಕಾಫಿ ಬೋರ್ಡು ಇದುವರೆಗೂ ಕೊಳ್ಳುವವರ ಹಿತವನ್ನು ಗಮನಿಸಿರುವುದಿಲ್ಲವೆಂದೂ, ಅದಕ್ಕಾಗಿ ಬೋರ್ಡಿನ ವ್ಯವಸ್ಥೆಯಲ್ಲಿ ಬಲವಾದ ಮಾರ್ಪಾಡನ್ನು ಮಾಡಿ ಅದರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಸರ್ಕಾರದ ಪ್ರತಿನಿಧಿಗಳನ್ನು ನೇಮಿಸಲಾಗುವುದೆಂದೂ, ಕೇಂದ್ರ ವಾಣಿಜ್ಯ ಮಂತ್ರಿ ಕರ್ಮರ್‌ಕರ್ ರವರು ತಿಳಿಸಿರುತ್ತಾರೆ

ಅಶ್ಲೀಲ ಚಿತ್ರಗಳಿಂದ ಅಪಾಯವೆಂದು ಎಚ್ಚರಿಕೆ

ದಿಹಲಿಯಲ್ಲಿ ಕೇಂದ್ರ ಹಿರಿಯ ಶಾಸನ ಸಭೆಯಲ್ಲಿ ಮೊನ್ನೆ ಸದಸ್ಯರು ಮಾತನಾಡಿ ಅಶ್ಲೀಲ ಚಿತ್ರಗಳ ಪ್ರದರ್ಶನದಿಂದ ದೇಶಕ್ಕೆ ಆಗುವ ಅಪಾಯವನ್ನು ಕುರಿತು ಎಚ್ಚರಿಸಿದರು ಹಾಲಿವುಡ್ಡಿನಿಂದ ಬರುವ ಫಿಲಂಗಳು ಕೇವಲ ಲೈಂಗಿಕ ಮತ್ತು ದುಷ್ಕೃತ್ಯಗಳಿಗೆ ಸಂಬಂಧಿಸಿದ್ದಾಗಿ ಇರುವುದಾಗಿಯೂ ಅಮೆರಿಕದ ಲೈಂ... ಫಿಲಂಗಳನ್ನು ಜನರು ಹೇಸುತ್ತಿರುವುದಾಗಿಯೂ ಸದಸ್ಯರು ತಿಳಿಸಿದರು ಭಾರತ ಸರ್ಕಾರದವರೇ ಆದರ್ಶ ಚಿತ್ರಗಳನ್ನು ತಯಾರಿಸಬೇಕೆಂದೂ ಸೂಚಿಸಲಾಯಿತು

ಕೀರ್ತಿ ಸೋಪ್ ಫ್ಯಾಕ್ಟರಿಯ ಬಾರ್ ಸೋಪು

ರಾಜಧಾನಿಯ ದೊಡ್ಡಪೇಟೆಯ ಪ್ರವ ಸಿ ವರ್ತಕರಾದ ಶ್ರೀ ಎಂ ಜಿ ವಜ್ರಸಂಘಯ್ಯನವರು ಹೊಸದಾಗಿ ಆರಂಭಿಸಿರುವ ಕೀರ್ತಿ ಸೋಪ್ ಫ್ಯಾಕ್ಟರಿಯಲ್ಲಿ ತಯಾರಿಸಲ್ಪಟ್ಟ ಅತ್ಯುತ್ತಮವಾದ ಕೀರ್ತಿ ಬಾರ್ ಸೋಪನ್ನು ಕಳುಹಿಸಿರುವುದನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ

ಹರಿಕಥಾ ಕಾಲಕ್ಷೇಪ

ಮೈಸೂರು ನಜರ್‌ಬಾದ್ ಮೊಹಲ್ಲ ಮಹಾರಾಣಿ ಬೀದಿಯಲ್ಲಿರುವ ಶ್ರೀ ಮರುಳಾದೇವಿ ಯವರ ದೇವಸ್ಥಾನದಲ್ಲಿ ಬೆಂಗಳೂರಿನಿಂದ ಬಂದಿರುವ ಶ್ರೀ|| ಓ ರಾಮಸ್ವಾಮಿನಾಯ್ಡುರವರಿಂದ ಪ್ರತಿದಿವಸ ಸಾಯಂಕಾಲ ೭ ಗಂಟೆಯಿಂದ ೯ ಗಂಟೆ ವರೆಗೆ ಮಹಾಭಾರತದ ಕಥೆಯು ನಡೆಯುವುದು

ರು ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಾಗಿ ಅಧ್ಯಕ್ಷರು ತಿಳಿಸಿದರು

ಸಂತೆಪೇಟೆಯ ರಸ್ತೆಗೆ ಸಿಮೆಂಟ್ ಕಾನ್‌ಕ್ರೀಟ್ ಹಾಕಲೂ ಮತ್ತು ಧನ್ವಂತರಿ ರಸ್ತೆಗೆ ಟಾರು ಹಾಕಲೂ ಕೋರುವ ಶ್ರೀ ಚೌಡಯ್ಯನವರ ನಿರ್ಣಯಗಳು ಅಂಗೀಕರಿಸಲ್ಪಟ್ಟುವು

ಆಡವಾಳಿಗಳ್ಗೆ ಅವಶ್ಯಕವಾದ ಸಿಬ್ಬಂದಿಗೆ ಸೇರಿದವರಿರಬೇಕಾದಾಗಿ ಸರ್ಕಾರದ ಕಾರ್ಯದರ್ಶಿಯವರಿಂದ ಬಂದಿದ್ದ ಸೂಚನೆ ಬಗ್ಗೆ ವಿವರವನ್ನಿತ್ತು ಅವರಿಂದ ಪಡೆಯುವಂತೆ ತೀರ್ಮಾನಿಸಲಾಯಿತು

ಫ್ರಾನ್ಸಿನ ಕಾರ್ಮಿಕರೆಲ್ಲರೂ ಮುಷ್ಕರ ಹೂಡುವ ಸೂಚನೆ

ಫ್ರಾನ್ಸಿನ ವ್ಯಾಪಾರಿ ಹಡಗುಗಳ, ರೈಲ್ವೆಗಳ, ನಗರಗಳ ರಸ್ತೆ ಸಂಚಾರ, ಮೋಟಾರು ಕಾರ್ಖಾನೆ ಮುಂತಾದುವುಗಳಲ್ಲಿರುವ ನೌಕರರು ಮುಷ್ಕರ ಹೂಡುವುದಾಗಿ ಬೆದರಿಸಿರುತ್ತಾರೆ ಕಾರ್ಮಿಕರಿಗೆ ಹೆಚ್ಚು ಸಂಬಳ ಮತ್ತು ಉತ್ತಮ ಬಾಳುವೆ ಸ್ಥಿತಿಯನ್ನು ಕಲ್ಪಿಸುವ ಬಗ್ಗೆ ಅವರು ಮುಂದಿಸಿರುವ ಬೇಡಿಕೆಗಳಿಗೆ ಕಮ್ಯೂನಿಸ್ಟರೂ ಮತ್ತು ಇತರರೂ ಬೆಂಬಲವಿತ್ತಿರುವರು

ಕ್ಷಯ ರೋಗ ತಡೆಯಲು ಹೊಸ ಔಷಧಿ

ಕ್ಷಯ ರೋಗ ನಿರೋಧಕ್ಕಾಗಿ ಅತ್ಯಂತ ಪ್ರಧಾನಯುತವಾದ ಸ್ಟ್ರೆಪ್ಟೋಮೈಸಿನ್ ಮತ್ತು ಪಿಸೋನಿಯಾಸಿಡ್ ಎಂಬ ಎರಡು ಔಷಧಗಳನ್ನು ಸೇರಿ ಸ್ಟ್ರೆಪ್ಟೋ ಹೈಡ್ರಾಜಿಡ್ ಎಂಬ ಹೊಸ ಔಷಧವನ್ನು ಅಮೆರಿಕದಲ್ಲಿ ತಯಾರಿಸಲಾಗಿದೆ ಮೇಲ್ಕಂಡ ಎರಡು ಔಷಧಗಳು ಕೆಲಸ ಮಾಡದಿದ್ದರೆ, ಹೊಸದನ್ನು ಉಪಯೋಗಿಸಿದಲ್ಲಿ ಗುಣವಾಗುವುದಾಗಿ ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ರಚನಾ ವೈವಿಧ್ಯ ಮಧ್ಯಾಹ್ನ ೧ ೩೦ ಗಿಟಾರ್ ಬಾಲ ಜಗತ್ ಸಂಜೆ ೫ ೩೦ ಮತ್ತು ೭ ಎಸ್ ರಾಮಚಂದ್ರರಾವ್, ದೇವರ ನಾಮ ೬ ೧೦ ನಾದಶ್ರೀ ೭ ೩೦ ವನಿತಾ ವಿಹಾರ ೮ ಎಸ್ ನಾರಾಯಣದಾಸ್ ಕಥಾ ಕಾಲಕ್ಷೇಪ ೯ ೧೫ ಗಾನ ವಾರಿಧಿ ೯ ೩೦ ಎಂ ಶಿವರಾಂ ಜ್ಯೋತಿಷ್ಯದ ಹುಟ್ಟು

ನಗರದಲ್ಲಿ ೧|| ಅಂಗುಲ ಮಳೆ

ನೆನ್ನೆ ರಾತ್ರಿ ನಗರದಲ್ಲಿ ಭಾರಿ ಮಳೆಯಾಯಿತು ಮಳೆಯೊಡನೆ ಗುಡುಗು ಮಿಂಚುಗಳೂ ವಿಪರೀತವಾಗಿದ್ದುವು ಆಲಿಕಲ್ಲು ಸಹ ಬಿತ್ತು, ಊರಿನ ಅನೇಕ ಕಡೆಗಳಲ್ಲಿ ಮರಗಳು ಬಿದ್ದುವು. ಜಿಲ್ಲಾ ಕಛೇರಿಯ ಮುಂಭಾಗದಲ್ಲಿ ಒಂದು ಕಡೆ ವಿದ್ಯುಚ್ಛಕ್ತಿ ಕಂಬವು ಕೆಳಗೆ ಬಿತ್ತು ಅದನ್ನು ಸರಿಪಡಿಸಿದರು ೧ ೩೩ ಅಂಗುಲ ಮಳೆಯಾಗಿದೆ

ಮೈಸೂರಿನಲ್ಲಿ ವಿಶ್ವಸಂಸ್ಥೆಯ ವಿದ್ಯಾಭ್ಯಾಸ ಕೇಂದ್ರ

ಭಾರತದಲ್ಲಿ ವಿಶ್ವ ಸಂಸ್ಥೆಯ ವಿದ್ಯಾಭ್ಯಾಸ, ಸಾಮಾಜಿಕ ಮತ್ತು ಸಾಂಸ್ಕೃತಿ ಕೇಂದ್ರವೊಂದನ್ನು ಸ್ಥಾಪಿಸಿ ಅಲ್ಲಿ ಮೂಲ ವಿದ್ಯಾಭ್ಯಾಸದಲ್ಲಿ ಶಿಕ್ಷಣ ಕೊಡುವ ಬಗ್ಗೆ ಆ ಸಂಸ್ಥೆಯ ಸಮಿತಿಯವರು ಮಾಡಿರುವ ಸಲಹೆಯನ್ನು ಭಾರತ ಸರ್ಕಾರದವರು ಒಪ್ಪಿರುತ್ತಾರೆ ಮೈಸೂರು ನಗರದಲ್ಲಿ ಸಮಿತಿಯ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕೊಬ್ಬರಿಕಾಯಿ	೩೬ ೦-೦	೩೮ ೧೪ ೦
ಹೆಸರುಬೇಳೆ	೪೮-೪-೦	೪೮-೩-೦
ತೊಗರಿಬೇಳೆ	೩೧ ೧೪ ೦	೩೨ ೧೦ ೦
ಹುರುಳಿ	೪೨ ೨ ೦	೪೨ ೧೦ ೦
ಅವರೆ	೪೦ ೦ ೦	೪೮-೧೦ ೦
ಎಳ್ಳು	೭೩ ೮ ೦	೭೩ ೧೦-೦
ಹುಣಸೇಹಣ್ಣು	೫ ೩ ೦	೫-೧೪ ೦
ಸೀಗೇಕಾಯಿ	೪ ೮ ೦	೪ ೧೪ ೦
ಬೆಲ್ಲ	೫-೮-೦	
ತೆಂಗಿನಕಾಯಿ ೧,೧೦೦ಕ್ಕೆ	೧೧೩ ೦-೦	೨೮೧ ೦ ೦

ಚಲನ ಚಿತ್ರ ಪ್ರದರ್ಶನಕ್ಕಾಗಿ ಬೇಡಿಕೆ ಈಡೇರಲಿಲ್ಲ

ನಂಜನಗೂಡು ತಾಲ್ಲೂಕು ಹುರ ಗ್ರಾಮದ ಯುವಕರ ಸಂಘದವರು ಪುಸ್ತಕ ಭಂಡಾರ ಮತ್ತು ವಾಚನಾಲಯದ ಆರಂಭೋತ್ಸವವನ್ನು ಕಳೆದ ೨೪ ನೇ ತಾ|| ನೆರವೇರಿಸಿದರು ಗ್ರಾಮದ ವಯಸ್ಕರಿಗಾಗಿ ಮತ್ತು ಅನಕ್ಷರಸ್ಥರಿಗಾಗಿ ಒಂದು ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸುವಂತೆ ವಯಸ್ಕರ ಶಿಕ್ಷಣ ಸಮಿತಿಯವರನ್ನು ಕೋರಿದ್ದುದಾಗಿಯೂ, ಆದರೆ ಸಮಿತಿಯವರು ಒದಗಿಸಲಿಲ್ಲವೆಂದೂ ಯುವಕರ ಸಂಘದ ಅಧಿಕಾರ ವರ್ಗದವರು ಪತ್ರ ಬರೆದು ತಿಳಿಸಿರುತ್ತಾರೆ ಇದರಿಂದ ಅನಕ್ಷರಸ್ಥರಿಗೆ ನಿರಾಶೆಯುಂಟಾಯಿತೆಂದೂ ಅವರು ಹೇಳಿರುತ್ತಾರೆ

Edited, Printed and Published by A R Nagarajan at Sadhvi Press, D Subbiah Road, Mysore

A GRAND AUCTION SALE

WHICH YOU CANNOT AFFORD TO MISS

at Messrs Abids, Statue Square, Mysore, at 10 A M

On SUNDAY the 3rd MAY 1953

under kind instructions from

Mr V R Murlidharan & others,

Consisting of Solid pieces of seasoned wood furniture & Household effects including Chest of drawers Dressing table Almirah writing tables, upholstered spring Sofa suites Book case Book shelf, soil Linen Box Round tables Teapoys, Benches, Big and small Teakwood Boxes woollen and coir carpets CAMP FURNITURE arm & armless chairs Single & double cots Coffee Grinder Coffee Roasters Electric Table fan G E C Cooker, Harmonium glass Chandliers, Elec Table lamps Stoves Primus stove and several other useful articles, which you may come and see on Saturday

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ಜರಿಯ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★ M.V.ಭೋಜಯ್ಯ (ಫೋನ್ 446) ಬಿ ಎ ಇಂಡಿಯಾ ಬ್ಯಾಂಕ್ ಎದುರು ಮೈಸೂರು

ರೇಜಿ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧ ಶನಿವಾರ ೨-೫-೧೯೫೩ [ಸಂಚಿಕೆ ೩೨೩

ಬಳ್ಳಾರಿ ಭವಿಷ್ಯದ ಬಗ್ಗೆ - ತನಿಖೆಯು ಆರಂಭ -

ಕೆರೆಯಲ್ಲಿ ಇಬ್ಬರು ವಿದ್ಯಾರ್ಥಿಗಳ ಮರಣ

ಮೈಸೂರು

ರಾಜಧಾನಿಯ ... ಶ್ರೀ ಬಿ ಕೆ ... ಪ್ರಿಯ ವರ ... ಶ್ರೀ ನಂಜುಂಡಯ್ಯನವರ ... ಶ್ರೀ ಕೃಷ್ಣ ... ಎಂಬುವರು ... ಮರಣ ಹೊಂದಿದರು ... ಶಿಕ್ಷಣ ... ಶಿಬಿರದಲ್ಲಿ ಅವರು ಭಾಗವಹಿಸಲು ಉತ್ಸುಕರಾಗಿ ... ತೆರಳಿದ್ದರು ... ಬಿ ಎಸ್‌ಸಿ ... ಇಂಟರ್ ಮೀಡಿಯಟ್ ತರಗತಿಯಲ್ಲೂ ಓದುತ್ತಿದ್ದರು ... ಈ ಉಭಯರು ... ಕೆರೆಗೆ ... ಹೋಗಿ ... ಅಲ್ಲಿ ಅವರು ... ಕೆರೆಯನ್ನು ಶೋಧಿಸಲಾಗಿ ... ಕಲ್ಲುಬಂಡೆ ... ಕೆರೆಯಲ್ಲಿ ... ನಿನ್ನೆ ಬೆಳಿಗ್ಗೆ ... ಶವ ಪರೀಕ್ಷೆ ... ಪರೀಕ್ಷೆ ಆದನಂತರ ಅವರ ಅಂತ್ಯಕ್ರಿಯೆಯು ಇಂದು ನಡೆಯಲಿದೆ

ಹನುಮಂತೋತ್ಸವ

... ಗಾಂಧಿ ಚೌಕದಲ್ಲಿರುವ ... ಹನುಮಂತೋತ್ಸವ ... ಪ್ರಸಾದ ವಿನಿಯೋಗ ... ಶ್ರೀ ಬಿ ಎಸ್ ಸುಬ್ಬರಾಯರು ... ಮಾಡಿದರು

ಮಂತ್ರಿಯು ಶಾಸನ ಸಭಾ ಸದಸ್ಯ ಸ್ಥಾನಕ್ಕೆ ಚ್ಯುತಿ

... ಕೈಗಾರಿಕಾ ಮಂತ್ರಿ ... ಶಾಸನ ಸಭೆ ... ಚುನಾಯಿತರಾಗಿದ್ದರು ... ಸದಸ್ಯರ ಚುನಾವಣೆಯು ... ರದ್ದಾ... ಮಂತ್ರಿಯವರೂ ತಮ್ಮ ಸ್ಥಾನವನ್ನು ಕಳೆದುಕೊಂಡಿರುತ್ತಾರೆ

೩೫೦೦ ರೂ ಅಪಹಾರ - ಕಳ್ಳನ ಬಂಧನ

... ದಿನ ಬೆಂಗಳೂರು ... ಎಂಬುವನು ... ಠಾಣೆ ... ಎಂಬುವನ ಬಳಿ ... ದೊರೆತು ... ದಸ್ತಗಿರಿಯಾಯಿತೆಂದು ವರದಿಯಾಗಿದೆ

ಗೋಪಾಲನ್ ನಾಯರನ ದಸ್ತಗಿರಿ

ಮೈಸೂರು ...

ರಾಜಧಾನಿಯ ... ಗೋಪಾಲನ್ ನಾಯರ್ ಎಂಬುವವನನ್ನು ನೆನ್ನೆ ... ದಸ್ತಗಿರಿ ಮಾಡಿದರು ... ನಿನ್ನೆ ಸಂಜೆ ... ನಡೆ... ಮುನಿಸಿಪಲ್ ಕೆಲಸಗಾರರು ... ನಡೆಸಿದರು

ಫುಟ್‌ಬಾಲ್ ಪಂದ್ಯ

... ಫುಟ್‌ಬಾಲ್ ಟೂರ್ನ ಮೆಂಟಿನ ಸೆಮಿ ಫೈನಲ್ಸ್ ಪಂದ್ಯವು ನೆನ್ನೆ ದೊಡ್ಡಕೆರೆ ಮೈದಾನದಲ್ಲಿ ಬೆಂಗಳೂರು ... ಮತ್ತು ... ಪೋಲೀಸ್ ಟೀಮುಗಳಿಗೆ ನಡೆದ ... ಗೋಲುಗಳಿಲ್ಲದೆ ಸಮವಾಯಿತು

ಪಠ್ಯ ಪುಸ್ತಕಗಳ ನೋಟ್ಸಿಗೆ ನಿಷೇಧ ಬೇಕು

ಮೈಸೂರು ...

... ಪ್ರೊಫೆಸರ್ ಶ್ರೀ ... ನರಸಿಂಹಯ್ಯನವರು ... ಪುಸ್ತಕಗಳ ... ನೋಟ್ಸ್ ... ಮುದ್ರಿಸ... ನಿಷೇಧಿಸ... ಸರ್ಕಾರವನ್ನು ಪ್ರಾರ್ಥಿಸುವಂತೆ ... ಹೇಳುತ್ತಾರೆ

ಆಹಾರ ಧಾನ್ಯ ಮೂಟೆಗಳು ರಹದಾರಿ

ಪರ್ಮಿಟ್ ರದ್ದಿನ ಆಜ್ಞೆ ಕುರಿತು ಸರ್ಕಾರದ ಪ್ರಕಟಣೆ

ಸ್ವಂತ ವರದಿ] ಬೆಂಗಳೂರು ...

... ಆಹಾರ ಪರ್ಮಿಟ್ ... ರದ್ದಿನ ... ಪತ್ರಿಕಾ ಪ್ರಕಟಣೆ ... ಆಹಾರ ... ಉಪಯೋಗ ... ಮಾತ್ರ ... ರಹದಾರಿ ... ಅಧಿಕಾರಿಗಳಿಂದ ... ನೋಡಿಕೊಳ್ಳಲು ಸೂಚನೆ ... ರಹದಾರಿಯನ್ನು ... ಶ್ರೀ ಎಂ ಪಿ ಮಲ್ಲಪ್ಪನವರನ್ನು ಸರ್ಕಾರದ ... ಕಾರ್ಯದರ್ಶಿಯಾಗಿ ನೇಮಿಸಲಾಗಿದೆ

ಪಾರ್ಲಿಮೆಂಟಿನ ಕೆಳಸಭೆಯಿಂದ ಮಂತ್ರಿ ಹೊರಕ್ಕೆ

... ಕೆಳಸಭೆಯ ... ಮಂತ್ರಿಗಳು ... ನೆನ್ನೆ ... ಹೊರಟು ... ಹೋದರು ... ಮಂತ್ರಿ ... ಹೊರಕ್ಕೆ ... ಕರೆತಂದರು

ಕಿರೀಟ ಧಾರಣೋತ್ಸವದಲ್ಲಿ ಭಾರತದ ಪ್ರದರ್ಶನ

ಬೆಂಗಳೂರು ...

ಬ್ರಿಟಿಷ್ ರಾಣಿಯ ... ಕಿರೀಟ ಧಾರಣೋತ್ಸವದ ... ಲಂಡನ್ನಿನಲ್ಲಿ ... ಭಾರತೀಯ ಪ್ರದರ್ಶನದಲ್ಲಿ ಮೈಸೂರು ... ಕೈಗಾರಿಕಾ ... ಪ್ರದರ್ಶಿಸ... ಸರ್ಕಾರದವರು ... ಭಾಗವಹಿಸಲಿವೆ

ಜನಮ್ಮ ಸತ್ಯಾಗ್ರಹಕ್ಕೆ

ದೇವುಡು ಶಾಸ್ತ್ರಿ

... ಸಂಸ್ಥಾನ... ಬೆಂಗಳೂರಿನ ಶ್ರೀ ದೇವುಡು ನರಸಿಂಹ ಶಾಸ್ತ್ರಿ ಮತ್ತು ಟಿ ಕೆ ... ನಾಯಕತ್ವದಲ್ಲಿ ... ಸತ್ಯಾಗ್ರಹಿಗಳ ... ತಂಡವು ನಾಳೆ ... ಹೊರಡಲಿದೆ

ಸ್ಥಾನಭೋಗಿಗಳಿಗೆ ಹೆಚ್ಚಿನ ಸ್ಪೋಟಿಗೆ

... ಕೊಡಬೇಕು ... ರಷ್ಯಾ ... ಹಣವನ್ನು ... ಉಳಿಯೋಗಿ ... ಸರ್ಕಾರದವರು ಮಂಜೂರು ಮಾಡಿ ... ರೆವಿನ್ಯೂ ಕಮೀಷನರರು ... ಮಾಡಿದ್ದರು ... ಸಲ್ಲಿಸಿದ ... ಸ್ಥಾನಭೋಗಿಗಳೂ ... ಮಾಡುವ ... ತಕ್ಕದ್ದಾಗಿದೆ

ಪರ್ಮಿಟ್ ರದ್ದಿಗೂ ಆಹಾರ ಮೊಕದ್ದಮೆಗಳಿಗೂ ಸಂಬಂಧವಿಲ್ಲ

ನೆನ್ನೆಯ ... ಸಂಸ್ಥಾನದಲ್ಲಿ ಆಹಾರ ಪರ್ಮಿಟುಗಳು ರದ್ದಾಗಿವೆ ... ಆಹಾರದ ... ಮೊಕದ್ದಮೆಗಳಿಗೂ ಸಂಬಂಧವಿಲ್ಲವೆಂದು ಗೊತ್ತಾಗಿದೆ ಆಹಾರ ... ಸರ್ಕಾರದ ಅಧಿಕೃತ ಪ್ರಕಟಣೆಯು ಹೊರಬಿದ್ದಿದೆ

ಮಿಶ್ರಾರಿಂದ ವಿಚಾರಣೆ ಆರಂಭ

ಬಳ್ಳಾರಿ ... ಭವಿಷ್ಯದ ಬಗ್ಗೆ ಜಸ್ಟಿಸ್ ಮಿಶ್ರಾರವರು ನೆನ್ನೆ ತನಿಖೆ ... ಪಾರ್ಲಿಮೆಂಟಿನ ಬಳ್ಳಾರಿ ಸದಸ್ಯ ಟೇಕೂರು ಸುಬ್ರಹ್ಮಣ್ಯಂ, ಜಿಲ್ಲಾ ಬೋರ್ಡ್ ಅಧ್ಯಕ್ಷ ಮಹಾಬಲೇಶ್ವರಪ್ಪನವರು ಮನವಿಗಳನ್ನು ಒಪ್ಪಿಸಿ ... ತಾಲ್ಲೂಕುಗಳು ಮೈಸೂರಿಗೆ ಸೇರಬೇಕೆಂದು ಸೂಚಿಸಿದರು ... ಮಾಜಿ ಮಂತ್ರಿ ಸೀತಾರಾಮ ರೆಡ್ಡಿಯವರ ... ಆಂಧ್ರಕ್ಕೆ ಸೇರಬೇಕೆಂದು ತಿಳಿಸಿದರು

... ಭಾರತದ ... ಜನರಲ್ ಮತ್ತು ಕಂಟ್ರೋಲರ್‌ರವರ ಅಧಿಕಾರಾವಧಿಯು ... ವಿಸ್ತರಿಸ... ಪಾರ್ಲಿಮೆಂಟಿನ ... ಸಭೆ ...

ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಸ್ವಂ ಸ.] ಗುಂಡ್ಲುಪೇಟೆ ೧

ಇಲ್ಲಿನ ತಾಲ್ಲೂಕು ಕಾಂಗ್ರೆಸ್ಸಿನ ಚುನಾವಣೆ [illegible] ಗಳು ೩೧ ನೇ ತಾ|| ನಡೆಯುವುದು. ಈ ಬಗ್ಗೆ ಚುನಾವಣಾಧಿಕಾರಿಗಳಾದ ಶ್ರೀ ಬಿ ದೊಡ್ಡಯ್ಯನವರು ವೇಳಾ ಪಟ್ಟಿಯೊಂದನ್ನು ಈ ರೀತಿ ಪ್ರಕಟಿಸಿರುತ್ತಾರೆ —

ಓಟರ ಪಟ್ಟಿ ಪ್ರಕಟಣೆ [illegible] ನೇ ತಾ|| ಉಮೇದುವಾರಿಕೆ ಅರ್ಜಿ ಸ್ವೀಕಾರ-೧೦ ಮತ್ತು ೧೧ ನೇ ತಾ|| ಬೆಳಿಗ್ಗೆ ೧೦ ರಿಂದ ೧ ಘಂಟೆ ವರೆಗೆ ಅರ್ಜಿದಾರರ ಹೆಸರುಗಳ ಪ್ರಕಟಣೆ ೧೩ ನೇ ತಾ|| ಬೆಳಿಗ್ಗೆ ೧೦ ಅರ್ಜಿಗಳ ಪರಿಶೀಲನೆ– ೧೪ ನೇ ತಾ|| ಬೆಳಿಗ್ಗೆ ೧೦, ಅಖೈರು ಅರ್ಜಿದಾರರ ಪ್ರಕಟಣೆ ೧೫ ನೇ ತಾ|| ಬೆಳಿಗ್ಗೆ ೧೦, ಅರ್ಜಿ ವಾಪಸಿಗೆ ಕಡೆಯ ದಿನ– ೧೮ ನೇ ತಾ|| ಬೆಳಿಗ್ಗೆ ೧೦ ರಿಂದ ಸಂಜೆ ೫ ರ ವರೆಗೆ ಚುನಾವಣೆ ೩೧ ನೇ ತಾ|| ಬೆಳಿಗ್ಗೆ ೮ ರಿಂದ ೧೨ ಮತ್ತು ಮಧ್ಯಾಹ್ನ ೨ ರಿಂದ ೫ ಗಂಟೆವರೆಗೆ ಓಟುಗಳ ಎಣಿಕೆ ಅದೇ ಸಂಜೆ ೫|| ಗಂಟೆಗೆ

ಚುನಾವಣೆಯು ಅಂಗಡಿ ಬೀದಿ ಲೇಟ್ ಶ್ರೀ ನಂಜುಂಡಯ್ಯನವರ ಮಕ್ಕಳು ಶ್ರೀ ಶಿವಣ್ಣನವರ ಅಂಗಡಿ ಮಳಿಗೆಯಲ್ಲಿರುವ ತಾಲ್ಲೂಕು ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು ಉಮೇದುವಾರರಾಗಲಪೇಕ್ಷಿಸುವವರು ಸಕ್ರಿಯಾ ಸದಸ್ಯರಾಗಿರಬೇಕಲ್ಲದೆ ಅರ್ಜಿ ಜೊತೆಗೆ ೧೦ ರೂ ಶುಲ್ಕವನ್ನು ಕೊಡಬೇಕು ಯಾವ ಕಾರಣಕ್ಕಾದರೂ ಶುಲ್ಕವನ್ನು ವಾಪಸು ಕೊಡುವುದಿಲ್ಲ ಹೆಚ್ಚಿನ ವಿವರಗಳನ್ನು ಕಾಂಗ್ರೆಸ್ ಕಛೇರಿಯಲ್ಲಿ ತಿಳಿಯಬಹುದು

ಜಸ್ಟಿಸ್ ಮಿಶ್ರಾರವರ ಬಳಿ ನಿಜಲಿಂಗಪ್ಪನವರ ನಿಯೋಗ

ಬಳ್ಳಾರಿಯ ಭವಿಷ್ಯವನ್ನು ಕುರಿತು ವರದಿ ಮಾಡುವಂತೆ ಆಜ್ಞಪ್ತರಾಗಿರುವ ಜಸ್ಟಿಸ್ ಎಲ್ ಎಸ್ ಮಿಶ್ರಾರವರ ಬಳಿ ಎಸ್ ನಿಜಲಿಂಗಪ್ಪ, ಬಳ್ಳಾರಿಯ ಟಿ ಸುಬ್ರಹ್ಮಣ್ಯಂ, ಗುದ್ಲೆಪ್ಪ ಹಳ್ಳಿಕೇರಿ ಮುಂತಾದವರ ನಿಯೋಗವೊಂದು ಹೋಗಲಿದೆ

ವಿದ್ಯುಚ್ಛಕ್ತಿ ನೀರಾವರಿ ಬಗ್ಗೆ ಮಾತುಕತೆ

ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿ ಪಂಜಾಬರಾವ ದೇಶಮುಖ್ ಯೋಜನಾ ಸಮಿತಿ ಸಲಹೆಗಾರರಾದ ಎಸ್ ಪಿ ರಾಮಮೂರ್ತಿ ಮತ್ತು ವ್ಯವಸಾಯ ಕಾರ್ಯದರ್ಶಿ ದಾತಾರ್ ಸಿಂಗ್ ಇವರುಗಳು ಮೊನ್ನೆ ಬೆಂಗಳೂರು ರೆಸಿಡೆನ್ಸಿಯಲ್ಲಿ ಮೈಸೂರಿನ ವ್ಯವಸಾಯ ಮಂತ್ರಿ ಶ್ರೀ ಹಚ್ ಸಿದ್ದವೀರಪ್ಪನವರೊಡನೆ ವಿದ್ಯುಚ್ಛಕ್ತಿ ನೀರಾವರಿ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸಿದರು. ಸಂಸ್ಥಾನದ ಆಹಾರ ಉತ್ಪತ್ತಿ ಕಮೀಷನರ್ ಶ್ರೀ ಎಂ ಕೆ [illegible]ಪ್ಪ ವಿದ್ಯುಚ್ಛಕ್ತಿ ಇಲಾಖೆಯ ಮುಖ್ಯಾಧಿಕಾರಿ ಶ್ರೀ ಚಾಂಡಿಯವರು ಮಾತುಕತೆಗಳಲ್ಲಿ ಭಾಗವಹಿಸಿದ್ದರು.

ಕಳ್ಳತನ

ಚಾಮರಾಜನಗರ ೧

ಕಳೆದ ತಿಂಗಳು ೧೬ ನೇ ತಾ|| ರಾತ್ರಿ ಇಲ್ಲಿನ ವರ್ತಕರಾದ ಶ್ರೀ ಡಿ ಎಸ್ ಕೃಷ್ಣಮೂರ್ತಿಯವರ ಅಂಗಡಿಗೆ ಕನ್ನ ಹಾಕಿ ೪೦ ರೂ. ನಗದು ಮತ್ತು ೮೦ ರೂ ಬೆಲೆಯ ಸಾಮಾನುಗಳನ್ನು ಕಳುವು ಮಾಡಲಾಗಿದೆ ಈ ಊರಿನಲ್ಲಿ ಕಳ್ಳತನಗಳು ಇತ್ತೀಚೆಗೆ ಹೆಚ್ಚಾಗಿರುತ್ತದೆ ಆದ್ದರಿಂದ ಪೋಲೀಸರ ಹೆಚ್ಚಿನ ಉಸ್ತುವಾರಿ ಕ್ರಮವು ಅಗತ್ಯವಾಗಿದೆ

ತಾಲ್ಲೂಕು ಕಾಂಗ್ರೆಸ್ ಚುನಾವಣಾ ವೇಳಾ ಪಟ್ಟಿ

ಚಾಮರಾಜನಗರದ ತಾಲ್ಲೂಕು ಕಾಂಗ್ರೆಸ್ಸಿನ ಚುನಾವಣಾಧಿಕಾರಿಗಳಾದ ಶ್ರೀ ಕೆ ಎಸ್ ಕುಮಾರಸ್ವಾಮಿಯವರು, ತಾಲ್ಲೂಕಿನಲ್ಲಿ ಇದೇ ೩೧ ನೇ ತಾ|| ನಡೆಯಲಿರುವ ಕಾಂಗ್ರೆಸ್ ಚುನಾವಣೆಗಳ ವೇಳಾ ಪಟ್ಟಿಯನ್ನು ಈ ರೀತಿ ಪ್ರಕಟಿಸಿರುತ್ತಾರೆ ಓಟರು ಪಟ್ಟಿ ಪ್ರಕಟಣೆ ಇದೇ ೩ ನೇ ತಾ|| ಉಮೇದುವಾರಿಕೆ ಅರ್ಜಿ ಸ್ವೀಕಾರ ೧೦ ಮತ್ತು ೧೧ ನೇ ತಾ|| ಬೆಳಿಗ್ಗೆ ೧೧ ರಿಂದ ಮಧ್ಯಾಹ್ನ ೧, ಅರ್ಜಿ ಪ್ರಕಟಣೆ ೧೩ ನೇ ತಾ|| ಬೆಳಿಗ್ಗೆ ೧೦ ಗಂಟೆ ಅರ್ಜಿ ಪರಿಶೀಲನೆ ೧೪ ನೇ ತಾ|| ಬೆಳಿಗ್ಗೆ ೧೧ ಗಂಟೆ, ಉಮೇದುವಾರರ ಅಖೈರ ಹೆಸರುಗಳ ಪ್ರಕಟಣೆ ೧೫ನೇ ತಾ|| ಬೆಳಿಗ್ಗೆ ೧೦ಕ್ಕೆ ವಾಪಸಿಗೆ ದಿನ ೧೮ನೇ ತಾ|| ಸಂಜೆ ೫ ಗಂಟೆ ವರೆಗೆ ಚುನಾವಣೆ ೩೧ನೇ ತಾ|| ಬೆಳಿಗ್ಗೆ ೯ ೧೨ ಮತ್ತು ಮಧ್ಯಾಹ್ನ ೨ ೫, ಓಟುಗಳ ಎಣಿಕೆ ಅದೇ ಸಂಜೆ ೫|| ಗಂಟೆಗೆ ಉಮೇದುವಾರರಾಗಲು ೧೦ ರೂ ಶುಲ್ಕ ಸಮೇತ ಅರ್ಜಿ ಕೊಡಬೇಕು. ಶುಲ್ಕವನ್ನು ಯಾವ ಕಾರಣಕ್ಕಾದರೂ ವಾಪಸು ಮಾಡಲಾಗುವುದಿಲ್ಲ ಉಮೇದುವಾರರಾಗುವವರು ಸಕ್ರಿಯಾ ಸದಸ್ಯರಾಗಿರಬೇಕು

ತಾಲ್ಲೂಕು ಕಾಂಗ್ರೆಸ್ ಕಛೇರಿಗೆ ಸಚಿವರ ಭೇಟಿ

ಇಲ್ಲಿನ ತಾಲ್ಲೂಕು ಕಾಂ|| ಕಛೇರಿಗೆ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮೊನ್ನೆ ದಿನ ಭೇಟಿಯಿತ್ತು ಕೆಲಸಗಾರರಿಗೆ ಸೂಕ್ತ ಹಿತೋಕ್ತಿಗಳನ್ನಿತ್ತರು ಸಾಲಾ ಅಣೆಕಟ್ಟು ಒಡೆದು ದೊಡ್ಡ ಮತ್ತು ಚಿಕ್ಕ ಕೆರೆಗೆ ನೀರು ಬರದಿರುವುದನ್ನು ಸಚಿವರು ಅಜಮಾಯಿಷಿ ಮಾಡಿದರು

ಬಳ್ಳಾರಿ ತಾಲ್ಲೂಕು ಮೈಸೂರಿಗೆ ಸೇರಲಿ

ಡೆಹಲಿಯ ಪಾರ್ಲಿಮೆಂಟಿನಲ್ಲಿರುವ ಇಪ್ಪತ್ತು ಮಂದಿ ಸದಸ್ಯರ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಬಳ್ಳಾರಿ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಸೂಚಿಸಿರುತ್ತಾರೆ

ಕಾಶಿ ಬಿಸಮಿಲ್ಲಾ ಖಾನರ ಸಹನಾಯ್ ಪ್ರಸಾರ

ಮೈಸೂರು ರೇಡಿಯೋನಲ್ಲಿ ನಾಳೆ ರಾತ್ರಿ ೮ ಘಂಟೆಗೆ ಕಾಶಿಯ ಬಿಸಮಿಲ್ಲಾ ಖಾನ್ ಮತ್ತು ಪಾರ್ಟಿಯ ಸಹನಾಯ್ ವಾದನದ ಪ್ರಸಾರವು ಇದೆ

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಚುನಾವಣೆ

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸುವ ಸಕ್ರಿಯಾ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಉಮೇದುವಾರಿಕೆ ಅರ್ಜಿಗಳನ್ನು ನಂಜನಗೂಡು ಟೌನಿನ 'ಕನಕದಾಸರ' ಹಾಸ್ಟಲಿನಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಇದೇ ೧೦ ನೇ ತಾರೀಕು ಬೆಳಿಗ್ಗೆ ೧೦ ಘಂಟೆಯಿಂದ ಮಧ್ಯಾಹ್ನ ೧ ಘಂಟೆಯೊಳಗೆ ಚುನಾವಣಾಧಿಕಾರಿಗಳಿಗೆ ಸಲ್ಲಿಸಬಹುದು ಸದಸ್ಯರ ತಿಳುವಳಿಕೆ ಬಗ್ಗೆ ಚುನಾವಣಾ ವೇಳಾ ಪಟ್ಟಿಯನ್ನೂ ಮತ್ತು ಸದಸ್ಯರ ಪಟ್ಟಿಯನ್ನೂ ಮೇಲ್ಕಂಡ ಕಛೇರಿಯಲ್ಲಿ ಪ್ರಕಟಿಸಲಾಗಿದೆ ಅವಶ್ಯವಿದ್ದ ವಿವರಗಳನ್ನು ತಾಲ್ಲೂಕು ಕಾಂಗ್ರೆಸ್ ಕಛೇರಿಯಲ್ಲಿ ತಿಳಿದುಕೊಳ್ಳಬಹುದು–ಎಂದು ಕಾಂಗ್ರೆಸ್ ಚುನಾವಣಾಧಿಕಾರಿಗಳಾದ ಶ್ರೀ ಪಿ ಮಹದೇವಯ್ಯನವರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿಶ್ರ ಮಾಧುರ್ಯ ಮಧ್ಯಾಹ್ನ ೧ ೩೦ ಪಿಟೀಲು ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫ ೩೦ ಮತ್ತು ೮ ಎಸ್ ವಸುಮತಿ, ಸಂಗೀತ ೬ ೧೦ ನಾಟ್ಯ ಮತ್ತು ನಮ್ಮವರು ೭ ಗೀತೆ ೭ ೦ ಮತ್ತು ೮ ೩೦ ಬಿ ಶ್ರೀನಿವಾಸಯ್ಯಂಗಾರ್ ಸಂಗೀತ ೯ ೧೫ ಚಿತ್ರವಾಣಿ ೯ ೩೦ ಕನ್ನಡ ನಾಟಕ ಮಾಗಡಿ ಕೆಂಪೇಗೌಡ

○ ಸಂಸ್ಥಾನದ ಅಧಿಕ ಆಹಾರ ಬೆಳೆ ಯೋಜನೆಯ ಅಂಗವಾಗಿ ಈಗಾಗಲೇ ವಿದ್ಯುಚ್ಛಕ್ತಿ ನೀರಾವರಿಗಾಗಿ ಕೊಡಲಾಗಿದ್ದ ೫೦ ಲಕ್ಷ ರೂ ಸಹಾಯವಲ್ಲದೆ ಕೇಂದ್ರ ಸರ್ಕಾರದವರು ಆಹಾರ ಬೆಳೆಗಾಗಿ ೭೮ ಲಕ್ಷ ರೂ ಸಾಲ ಮತ್ತು ೭ ಲಕ್ಷ ರೂ ಸಹಾಯ ಮಾಡಿರುತ್ತಾರೆಂದು ಗೊತ್ತಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೨೫ ೬-೦	೩೦ ೨ ೦
ಹರಳುಬೀಜ	೩೭–೦–೦	೩೯–೧೪–೦
ಹೊಂಗೇಬೀಜ	೨೦ ೧೨ ೦	೨೩ ೦ ೦
ಹುರುಳಿ	೪೧ ೧೦ ೦	೪೨ ೧೦ ೦
ಎಳ್ಳು	೬೪ ೩ ೦	
ಮೆಣಸಿನ		
ಕಾಯಿ ಪುಡಿ	೧೯ ೨ ೦	
ಹುಣಿಸೇಹಣ್ಣು	೪-೧೨ ೦	೫-೧೨ ೦
ಹೇಗೇಕಾಯಿ	೪ ೮ ೦	೪-೯-೦
ತೆಂಗಿನಕಾಯಿ		
೧,೦೦೦ಕ್ಕೆ	೧೨೪ ೦-೦	೧೪೪ ೦ ೦

ರಿಸ್ಟ್ ವಾಚ್ ಸಿಕ್ಕಿರುತ್ತೆ

ಚಾಮರಾಜನಗರದ ದೊಡ್ಡ ಅಂಗಡಿ ಬೀದಿಯಲ್ಲಿರುವ ವಿಜಯ ಕೆಫೆಯ ಮಾಲೀಕರಾದ ಶ್ರೀ ಕೆ ದಾಸಾಚಾರ್ಯರಿಗೆ ಕಳೆದ ತಿಂಗಳು ೨೬ ನೇ ತಾರೀಕು ಒಂದು ರಿಸ್ಟ್ ವಾಚ್ ಸಿಕ್ಕಿ, ಅವರು ಅದನ್ನು ಅಲ್ಲಿನ ಟೌನ್ ಪೋಲೀಸ್ ಸ್ಟೇಷನ್ನಿಗೆ ಕೊಟ್ಟಿರುವರೆಂದೂ, ಮಾಲೀಕರು ರುಜು ವಾತುಕೊಟ್ಟು ಗಡಿಯಾರವನ್ನು ಪಡೆಯಬಹುದೆಂದೂ ಶ್ರೀಯುತರು ತಿಳಿಸುತ್ತಾರೆ

DISTRICT BOARD, MYSORE

NOTIFICATION

Newly constructed shops attached to the Musafir khana at Chamarajanagar

1 The public are informed that two shops newly constructed, attached to the Musafirkhana at Chamarajanagar are avail able for being rented out for a period of three years

2 Tenders will be received from the persons who require the shops till 4 P M on 6-5-53 by the undersigned

3 Tenderers should state clearly the monthly rent they are willing to pay and attach a treasury chellan for Rs 50/- being earnest money along with their tenders

4 After acceptance of tenders the rent fixed should be paid in advance within the 10th of succeeding month to the treasury to the credit of the District Fund and chellan sent to this office

5 The successful tenderer should execute an agreement on 10 anna stamped paper agreeing to the conditions specified therein within a week from the date of intimation failing which the earnest money will be forfeited.

6 Tenders of persons who do not pay the earnest money deposit will not be taken notice of and considered.

7. The decision of the President, District Board in regard to the acceptance or otherwise of tender is final

Sd/- H M. [illegible],
President,
District Board Mysore

ನಾಯಿ ಕೆಮ್ಮಿಗೆ ಔಷಧ
ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

Edited, Printed and Published by A R Nagarajan at Sadhvi Press, D. Subbiah Road, Mysore.

ರಿಜಿ ನಂ. 792 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೭] ಶನಿವಾರ ೩-೫-೧೯೫೪ [ಸಂಚಿಕೆ ೩೬

ಇಂಡೊ ಚೀಣಕ್ಕೆ ತ್ವರಿತ ಅಮೆರಿಕಾ ಸೈನ್ಯ ನೆರವು

ಕರ್ನಾಟಕ ಪ್ರಾಂತ್ಯ ನಿರ್ಮಾಣ ಅವಶ್ಯಕ

ವಕೀಲರ ಸಮ್ಮೇಳನದ ಅಧ್ಯಕ್ಷ ಸೋಮಶೇಖರರಾಯರ ಭಾಷಣ

ಹಾಸನ ೩

ನಿನ್ನೆಲ್ಲರ ಮುಮ್ಮನ್ನ ವೇಲಿ ಹೆಚ್ಚಾಗಿ ... ತ್ತಿರುವ ಪ್ರಶ್ನೆಯೊಂದಿದೆ ಅದು ಕ ... ಕ ಏಕೀಕರಣಕ್ಕೆ ಸಂಬಂಧಿಸಿದುದು ... ಸಂಸ್ಥಾನದ ಸ್ಥಾಪನೆ ಬಗ್ಗೆ ತಿಥಾಗ ... ಮೇಲೆ ಕನ್ನಡ ಪ್ರದೇಶಗಳನ್ನು ... ಗೂಡಿಸುವ ಸಮಸ್ಯೆಯು ಪ್ರಾಮು ... ಪಡೆದಿದೆ ಬಳ್ಳಾರಿಯನ್ನು ವಿಭಜನೆ ... ಹಲವು ತಾಲ್ಲೂಕಗಳನ್ನು ಮೈಸೂ ... ಸೇರಿಸಿರುವುದರಿಂದ, ಆ ಜಿಲ್ಲೆಯ ಉ ... ನ್ನಡ ಭಾಗಗಳ ಬಗ್ಗೆ ಧೀಶಗೆ ಕಾರ ... ವೆ ಈ ಸಮಸ್ಯೆಯು ತುರ್ತಾದುದಾ ... ಣಿಸಿದೆ ಮೈಸೂರಿನಲ್ಲಿ ಏಕೀಕರ ... ಬಗ್ಗೆ ಉತ್ಸಾಹವಿಲ್ಲವೆಂಬುದು ನನಗೆ ... ಹಿಂದೆ ಯಾವುದೇ ಪರಿಸ್ಥಿತಿಯು ... ಈಗ ಕರ್ನಾಟಕದ ಐಕ್ಯತೆಗೆ ಮೈ ... ವಲ್ಲಿ ಹೆಚ್ಚು ಜನರು ಒಪ್ಪುವರು

ವೈಯಕ್ತಿಕ ಅಭಿಪ್ರಾಯದಲ್ಲಿ ಕ ... ಕ ಏಕೀಕರಣವು ಒಪ್ಪತಕ್ಕದ್ದಾಗಿದೆ ... ರ ಸಂಸ್ಥಾನದ ರಚನೆಗೆ ದಾಟಲಾರದಂ ... ಕಷ್ಟಗಳಿವೆಯೆಂಬುದನ್ನು ನಾನು ನಂ ... ಹ್ಯದರಾಬಾದು ಕನ್ನಡಿಗರ ವಿಷ ... ಸ್ವಲ್ಪ ಕಷ್ಟಕರವಾಗಬಹುದು ಆದ ... ರಿಂದ ಉಳಿದ ಭಾಗಗಳ ಏಕೀಕರಣ ... ಕ್ಕೆ ಅಡ್ಡಿಯಿರುವುದಿಲ್ಲ — ಎಂಬುದಾಗಿ ಬೆಂ ... ಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಎ ... ಸೋಮಶೇಖರ ರಾಯರು ನಿನ್ನೆ ಇಲ್ಲಿ ... ನಡೆದ ಸಂಸ್ಥಾನದ ವಕೀಲರ ೧೯ ನೇ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದರು

ನ್ಯಾಯಾಂಗದ ಸ್ವಾತಂತ್ರ್ಯವನ್ನು ಅವರು ... ಇತ್ತೀಚೆಗೆ ಮೈಸೂರಿನ ಮು ... ಮಂತ್ರಿಗಳು ಇಲ್ಲಿನ ಹಿರಿಯ ಶಾಸನ ಸಭೆಯಲ್ಲಿ ಹೈಕೋರ್ಟು ಮತ್ತು ನ್ಯಾಯಾಧೀಶರ ಬಗ್ಗೆ ಆಡಿರುವ ಮಾತುಗಳನ್ನು ಅವರು ಟೀಕಿಸಿದರು ಭಾರತದಲ್ಲಿ ಶಾಸನ ಸಭೆಗಳಿಗೆ ಪೂರ್ಣಾಧಿಕಾರವಿದ್ದು, ಹೈಕೋರ್ಟ್ ನ್ಯಾಯಾಧೀಶರನ್ನು ವಜಾ ಮಾಡುವ ಅಧಿಕಾರವು ಶಾಸನ ಸಭೆಗೆ ಇರುವುದಾಗಿ ... ಇದನ್ನು ಅನೇಕ ನ್ಯಾಯಾಧೀಶರು ... ಮುದಿ ಇದ್ದು, ಸರ್ಕಾರವನ್ನು ಖಂಡಿಸದೇ ಅವರ ಕೆಲಸವಾಗಿರುವುದೆಂದೂ ... ಮುಖ್ಯ ಮಂತ್ರಿಗಳು ಹೇಳಿರುವುದನ್ನು ಅಧ್ಯಕ್ಷರು ಖಂಡಿಸಿ ಶಾಸನ ಸಭೆಗಳು ಎಂದೂ ಸಂಸ್ಥಾನದ ಸಭೆ ಕೆಂದು ಭಾವಿಸಲಾಗಿಲ್ಲವೆಂದೂ ಸಂಸ್ಥಾನದ ಸಭೆಗಳು ಹೈಕೋರ್ಟು ನ್ಯಾಯಾಧೀಶರನ್ನು ವಜಾ ಮಾಡಲು ತಕ್ಕ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದೂ ಕೇಂದ್ರ ಶಾಸನ ಸಭೆ ಕೂಡ ಸಹ ಮನ ಬಂದಂತೆ ನ್ಯಾಯಾಧೀಶರನ್ನು ತೆಗೆಯಲವಕಾಶವಿಲ್ಲವೆಂದೂ ಹೇಳಿದರು ಮುಖ್ಯ ಮಂತ್ರಿಯವರು ಆಡಿರುವ ಮಾತುಗಳನ್ನು ನೋಡಿದರೆ, ಶಾಸನ ಸಭೆಗಳ ಅಧಿಕಾರ ವ್ಯಾಪ್ತಿ ಬಗ್ಗೆ ಅವರಂತಹ ರಾಜ ... ತಿವೇತ್ತರಿಗೇ ತಪ್ಪು ಭಾವನೆಯಿರುವುದು ವಿಚಿತ್ರವಾಗಿದೆಯೆಂದೂ, ಹೈಕೋರ್ಟಿನ ಬಗ್ಗೆ ಅವರ ಹೇಳಿಕೆಯು ಬಹಳ ರೂಢ ... ವುದು ಇನ್ನೂ ಹೆಚ್ಚು ವಿಲಕ್ಷಣವುಳ್ಳದ್ದಾಗಿರುವುದೆಂದೂ ಅವರು ತಿಳಿಸಿದರು

ವಕೀಲರುಗಳಲ್ಲಿ ಇತ್ತೀಚೆಗೆ ದಕ್ಷತೆಯು ಕಡಿಮೆಯಾಗುತ್ತಿರುವುದಾಗಿ ಅವರು ಹೇಳಿ ... ಕೋರ್ಟು ಫೀ ದರವನ್ನು ಈವರೆಗೂ ಇಳಿಸದಿರುವುದೂ ಸರ್ಕಾರದ ಉತ್ಪತ್ತಿ ಹೆಚ್ಚಿಸಲು ದರವನ್ನು ಹೆಚ್ಚಿಸಿರುವುದೂ ವಿಷಾದಕರವೆಂದು ಅವರು ತಿಳಿಸಿದರು

ಸುಪ್ರೀಂ ಕೋರ್ಟನ್ನು ದೇಶದ ಎಲ್ಲ ಭಾಗಗಳಿಗೂ ಹತ್ತಿರವಿರುವ ಪ್ರದೇಶಕ್ಕೆ ವರ್ಗಾಯಿಸುವಂತೆ ಅವರು ಸೂಚಿಸಿದರು ನ್ಯಾಯಾಧೀಶರು ಮತ್ತು ವಕೀಲರುಗಳ ಸಂಬಂಧವನ್ನು ಅವರು ಪ್ರಸ್ತಾಪಿಸಿ ವಕೀಲರು ಕೋರ್ಟುಗಳ ಘನತೆಗೆ ತಕ್ಕಂತೆ ವರ್ತಿಸುವುದು ಒಳ್ಳೆಯದೆಂದು, ಹಾಗೆಯೇ ನ್ಯಾಯಾಧೀಶರೂ ಸಹ ವಕೀಲರ ಬಗ್ಗೆ ಹಾಗೆಯೇ ನಡೆದುಕೊಳ್ಳುವಂತೆಯೂ ಅವರು ಸೂಚಿಸಿದರು ಉಭಯರಿಗೂ ಯಾವ ತಿಕ್ಕಾಟವೂ ಇರಬಾರದೆಂದು ಅವರು ತಿಳಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ವೆಂಕಟೇಶಯ್ಯನವರ ತಮ್ಮ ಭಾಷಣದಲ್ಲಿ ಮರಣ ದಂಡನೆ ವಿಧಿಸುವುದು ಸರಿಯಲ್ಲವೆಂಬೂ, ಆದರಿಂದ ನಾವು ನಾಗರಿಕ ಸಮಾಜಕ್ಕೆ ಸೇರಿದವರೆಂಬುದಕ್ಕೆ ಚ್ಯುತಿ ಬರುವುದೆಂದೂ ತಿಳಿಸಿದರು ಕನ್ನಡವು ಕೋರ್ಟು ಭಾಷೆಯಾಗಬೇಕೆಂದು ಅವರು ಸೂಚಿಸಿದರು

ಭಾರತ ಪಾಕಿಸ್ತಾನಗಳು ತಟಸ್ಥ ರಾಷ್ಟ್ರಗಳು

ಸ್ವದೇಶಗಳಿಗೆ ಹಿಂತಿರುಗಲು ಇಚ್ಛಿಸದ ಕೊರಿಯಾ ಯುದ್ಧ ಖೈದಿಗಳನ್ನು ತಟಸ್ಥ ರಾಷ್ಟ್ರಗಳಿಗೆ ಕಳುಹಿಸುವ ಬಗ್ಗೆ ಕಮ್ಯೂನಿಸ್ಟರು ಭಾರತ, ಪಾಕಿಸ್ತಾನ, ಬರ್ಮಾ ಮತ್ತು ಇಂಡೋನೇಷ್ಯಗಳನ್ನು ನಾಲ್ಕು ತಟಸ್ಥ ರಾಷ್ಟ್ರಗಳೆಂದು ತಿಳಿಸಿರುತ್ತಾರೆ. ಆದರೆ ಆ ಪೈಕಿ ಯಾವ ರಾಷ್ಟ್ರದ ವಶಕ್ಕೆ ಖೈದಿಗಳನ್ನು ಒಪ್ಪಿಸಬೇಕೆಂಬ ದನ್ನು ಅವರು ಸೂಚಿಸಿಲ್ಲ ಭಾರತ ಅಥವಾ ಪಾಕಿಸ್ತಾನಗಳನ್ನು ಸೂಚಿಸಿದರೆ ವಿಶ್ವ ಸಂಸ್ಥೆಯು ಅದನ್ನೊಪ್ಪುವುದಾಗಿದೆ ವಾಪಸ ಹೋಗಲು ಇಚ್ಛೆಹೊಂದದ ಖೈದಿಗಳನ್ನು ಅನಾಮತ್ತಾಗಿ ತಟಸ್ಥ ರಾಷ್ಟ್ರಕ್ಕೆ ಸಾಗಿಸಬಹುದೆಂದು ವಿಶ್ವ ಸಂಸ್ಥೆಯು ಒಪ್ಪಿದನಂತರ ಕಮ್ಯೂನಿಸ್ಟರು ತಟಸ್ಥ ರಾಷ್ಟ್ರದ ಹೆಸರನ್ನು ಸೂಚಿಸಲಿರುವುದಾಗಿ ಗೊತ್ತಾಗಿದೆ

ಜೆಟ್ ಕಾಮೆಟ್ ವಿಮಾನ ಪತ್ತೆಯಿಲ್ಲ

ನೆನ್ನೆ ಸಂಜೆ ಕಲ್ಕತ್ತಾದಿಂದ ಪಶ್ಚಿಮಾಭಿಮುಖವಾಗಿ ಹೊರಟ ಬಿ ಓ ಎ ಸಿ ಜೆಟ್ ಕಾಮೆಟ್ ವಿಮಾನವು ಡಂಡಂ ನಿಲ್ದಾಣ ಬಿಟ್ಟ ೬ ನಿಮಿಷಗಳಿಂದ ರೇಡಿಯೊ ಸಂಪರ್ಕವನ್ನು ಕಳೆದುಕೊಂಡುದಾಗಿಯೂ, ಅದು ನೆನ್ನೆ ಸಂಜೆ ದೆಹಲಿಯನ್ನು ತಲುಪಬೇಕಾಗಿದ್ದಿತೆಂದೂ ಹೇಳಲಾಗಿದೆ ಅದರಲ್ಲಿ ೨೭ ಮಂದಿ ಸ್ತ್ರೀಯರೂ, ೧೦ ಜನ ಗಂಡಸರೂ ಮತ್ತು ಇಬ್ಬರು ಮಕ್ಕಳೂ ಇದ್ದರು ವಿಮಾನದ ಪತ್ತೆ ತರವೂದು ನಡೆಯುತ್ತಿದೆ.

ಇಂಡೊಚೀಣಕ್ಕೆ ಅಮೆರಿಕದ ತ್ವರಿತ ಸಹಾಯ

ಇಂಡೊಚೀಣದ ಲಾಓಸ್ ಸಂಸ್ಥಾನದ ರಕ್ಷಣಾ ಬಲಗಳಿಗೆ ತ್ವರಿತವಾಗಿ ಮಿಲಿಟರಿ ಸಹಾಯವನ್ನೊದಗಿಸಲು ಅಮೆರಿಕವು ನಿರ್ಧರಿಸಿರುವುದೆಂದು ಅಲ್ಲಿನ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ತಿಳಿಸಿರುತ್ತಾರೆ ವೀಟ್ ಮಿನ್ ಪಡೆಗಳ ಧಾಳಿಯು ಅಲ್ಲಿ ಜೋರಾಗಿ ಪರಿಸ್ಥಿತಿ ವಿಷಮಗೊಂಡಿರುವುದೆಂದು ಹೇಳಲಾಗಿದೆ

ಸಿನಿಮಾ ನಟಿ ಧ್ಯಾನದಲ್ಲೇ ಯುವಕನ ಮರಣ

ಪೂರ್ವ ಬಂಗಾಳದ ರಾಜಷಾಹಿಯಲ್ಲಿ ೨೦ ವರ್ಷದ ಖುರ್ಷೇದ್ ಎಂಬ ಯುವಕನು ಚಹ ಅಂಗಡಿಯಲ್ಲಿ ಕುಳಿತು ನಾಜನೀನ್ ಚಿತ್ರದಲ್ಲಿ ನಾಯಕಿ ಪಾತ್ರವಹಿಸಿದ ಮಧು ಬಾಲಳನ್ನು ಹೊಗಳುತ್ತಾ ಹಾಗೆಯೇ ಮೂರು ಬಾರಿ ಪ್ರಜ್ಞಾ ಹೀನನಾದುದಾಗಿಯೂ, ಅವನನ್ನು ಆಸ್ಪತ್ರೆಗೆ ಸೇರಿಸಲಾಗಿ ಅಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ ನಾಜನೀನ್ ಚಿತ್ರದ ಮಧುಬಾಲಳು ತನ್ನ ಬಳಿ ಇರುವಳೆಂದು ಅವನು ಪ್ರಜ್ಞಾಹೀನನಾಗಿದ್ದರೂ ಕನವರಿಸುತ್ತಿದ್ದುದಾಗಿ ಹೇಳಲಾಗಿದೆ

ಮಧುಗಿರಿ ಪೌರಸಭಾ ಸದಸ್ಯರ ಹೊಡೆದಾಟ

ಕಳೆದ ೩೦ ನೇ ತಾ|| ಮಧುಗಿರಿಯ ಮಾಹೆಯಾನಾ ಸಭೆಯು ನಡೆಯುತ್ತಿದ್ದು ನೀರಿನ ಸೌಕರ್ಯದ ಬಗ್ಗೆ ಎರಡು ಪಕ್ಷಗಳಲ್ಲಿ ವಾಗ್ಯುದ್ಧವಾಗಿ, ಸದಸ್ಯರುಗಳು ಹೊರಕ್ಕೆ ಬಂದರೆಂದೂ, ಅಲ್ಲಿ ಮಾತು ಬೆಳೆದು ಹೊಡೆದಾಟವಾಯಿತೆಂದೂ ವರದಿಯಾಗಿದೆ

ಜೇಬು ಕಳ್ಳತನಕ್ಕಾಗಿ ೧ ವರ್ಷ ಸಜಾ

ಬೆಂಗಳೂರಿನಲ್ಲಿ ಕೆಲವು ದಿನಗಳ ಹಿಂದೆ ಸಿಟಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀ ಭೀಮರಾವ್ ಎಂಬುವರ ಜೇಬಿನಿಂದ ೫೦೦ ರೂ ಗಳನ್ನು ಅಪಹರಿಸಿದ ಅಪಾದನೆಗಾಗಿ ಅಂತೋಣಿ ಎಂಬುವನಿಗೆ ೧ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಇ ತರಹ ಅಪರಾಧಕ್ಕಾಗಿ ಹಿಂದೆಯೂ ಅವನಿಗೆ ಸಜಾ ಆಗಿದ್ದಿತು

ಭದ್ರಾ ಯೋಜನೆಯಿಂದ ಆಹಾರ ಸ್ವಯಂಪೂರ್ಣತೆ

ಇಂಜನಿಯರುಗಳ ಸಮ್ಮೇಳನದಲ್ಲಿ ಕೇಂದ್ರ ಅಧಿಕಾರಿಯ ಭಾಷಣ

ಬೆಂಗಳೂರು ೩

ಸಂಸ್ಥಾನದ ಇಂಜನಿಯರುಗಳ ... ಷದ ೪೦ ನೇ ವಾರ್ಷಿಕ ಅಧಿವೇಶನ ನೆನ್ನೆ ಕೇಂದ್ರ ಸರ್ಕಾರದ ನೀರು ಮತ್ತು ವಿದ್ಯುಚ್ಛಕ್ತಿ ಸಮಿತಿಯ ಧೈರೆಕ್ಟರುಗಳಲ್ಲೊಬ್ಬರಾದ ಡಾ|| ಕೆ. ಎಲ್ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಆರಂಭೋತ್ಸವವನ್ನು ನೆರವೇರಿಸಿದರು

ಸಂಸ್ಥಾನದ ಮುಖ್ಯ ಇಂಜನಿಯರ್ ಶ್ರೀ ಗಂಗಾಧರ್‌ರವರ ಮಾತನಾಡಿ ೧೯೫೫ ೫೬ ನೇ ಇಸವಿಯಲ್ಲಿ ಸಂಸ್ಥಾನದ ಜನ ಸಂಖ್ಯೆಯು ೧ ಕೋಟಿಯಾಗುವುದೆಂದೂ, ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಿದ ಕೆಲಸಕಾರ್ಯಗಳಿಂದ ೧|| ಲಕ್ಷ ಟನ್ ಧಾನ್ಯವನ್ನು ಮಾತ್ರ ಹೆಚ್ಚಾಗಿ ಉತ್ಪತ್ತಿ ಮಾಡಬಹುದೆಂದೂ, ಆದರೆ ಸಂಸ್ಥಾನಕ್ಕೆ ಇನ್ನೂ ೨|| ಲಕ್ಷ ಟನ್ ಧಾನ್ಯದ ಅಭಾವವಿರುವುದಾಗಿಯೂ ತಿಳಿಸಿದರು

ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ದಕ್ಷಿಣ ಭಾರತದ ಕಡೆಗೆ ಕೇಂದ್ರದವರು ಹೆಚ್ಚು ಗಮನವಿತ್ತಿಲ್ಲವೆಂದು ತಿಳಿಸಿದರು

ಅಧ್ಯಕ್ಷರು ಮಾತನಾಡಿ ಮೈಸೂರಿನಲ್ಲಿ ಆಹಾರ ಸ್ವಯಂಪರಿಪೂರ್ಣತೆಯಾಗಬೇಕಾದರೆ ಭದ್ರಾ ಯೋಜನೆಯು ಪೂರೈಸಬೇಕೆಂದು ತಿಳಿಸಿದರು ಸಂಸ್ಥಾನದಲ್ಲಿ ನೀರಾವರಿ ಸೌಲಭ್ಯಗಳಿದ್ದರೂ ಇನ್ನೂ ಅನೇಕ ಕಡೆಗಳಿಗೆ ಅದರ ಪ್ರಯೋಜನವು ದೊರೆತಿಲ್ಲವಾಗಿಯೂ ಅವರು ತಿಳಿಸಿದರು

ಮತ್ತೊಬ್ಬರ ಆಮರಣಾಂತ ಉಪವಾಸ

ಹುಬ್ಬಳ್ಳಿಯ ಮಹದೇವಪ್ಪ ಮುರುಗೋಡು ಎಂಬುವರು ಮೊನ್ನೆಯಿಂದ ಕರ್ನಾಟಕ ಪ್ರಾಂತ ರಚನೆ ಸಂಬಂಧವಾಗಿ ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ

ಆರಾಣೆಗಾಗಿ ವ್ಯಾಜ್ಯದಲ್ಲಿ ೧ ಸಾವು; ಒಬ್ಬನಿಗೆ ಶಿಕ್ಷೆ

ಆರಾಣೆ ಸಾಲದ ಬಗ್ಗೆ ಕಲ್ಯಾಣ ಹಳ್ಳಿಯೊಂದರ ಇಬ್ಬರಲ್ಲಿ ಜಗಳವಾಗಿ ಒಬ್ಬನು ಮಡಿದು, ಮತ್ತೊಬ್ಬನಿಗೆ ೫ ವರ್ಷ ಕಠಿಣ ಸಜಾ ವಿಧಿಸಲಾಗಿದೆ ಹಳ್ಳಿಯ ಮಾಂಸದ ಅಂಗಡಿಯಲ್ಲಿ ರಮೆಂಡಿ ಬಸ್ತಿಯನ್ ಲೋಬ್ ಎಂಬುವನು ಮಾಂಸವನ್ನು ಸಾಲವಾಗಿ ಪಡೆದಿದ್ದನೆಂದೂ ಅನಂತರ ವ್ಯಾಪಾರಸ್ಥನು ದುಡ್ಡನ್ನು ಕೇಳಿದನೆಂದೂ ಈ ಬಗ್ಗೆ ವ್ಯಾಜ್ಯವಾಗಿ ವ್ಯಾಪಾರಿಯು ಮತ್ತೊಬ್ಬನನ್ನು ಮಚ್ಚಿನಿಂದ ಹೊಡೆಯಲು ಅವನಿಗೆ ತೀವ್ರ ಗಾಯವಾಗಿ ನಂತರ ಮೃತಪಟ್ಟನೆಂದೂ ವರದಿಯಾಗಿದೆ

ಪ್ರಭುಗಳು ನೀಲಗಿರಿಗೆ

ಶ್ರೀವರ ಮಹಾರಾಜರವರು ನಾಳೆ ನೀಲಗಿರಿಗೆ ಪ್ರಯಾಣ ಬೆಳೆಸಿ ೧೫ ದಿವಸ ಅಲ್ಲಿ ವಿಹಾರ ಮಾಡುವರೆಂದು ತಿಳಿದುಬಂದಿದೆ

ವಾರ ಭವಿಷ್ಯ

ತಾ|| ೩-೫-೫೩ ರಿಂದ ೧೦-೫-೫೩ ರ ವರೆಗೆ

ಮೇಷ — ಮನಸ್ಸಿಗೆ ಹಿತಕರ ಘಟನೆ, ಪತ್ನಿಯ ಸಹಕಾರ, ಆರ್ಥಿಕ ಸ್ಥಿತಿ ಉತ್ತಮ, ಆರೋಗ್ಯ ನೆಟ್ಟಗೆ, ಪ್ರವಾಸಕ್ಕೆ ಅನುಕೂಲ ತಾ|| ೩, ೪ ಪವಿತ್ರ ಸ್ಥಳ ದರ್ಶನ, ಮಹತ್ವದ ಪತ್ರ

ವೃಷಭ — ಆರೋಗ್ಯ ಕಾಪಾಡಿಕೊಳ್ಳಿ, ಸೌಜನ್ಯತೆ ಇರಲಿ, ಕಷ್ಟದಲ್ಲಿರುವ ನಿಮಗೆ ಇತರರು ... ಬೇಕೆ, ವ್ಯಾಪಾರಾದಿಗಳಲ್ಲಿ ಕ್ಲೇಶ ತಾ|| ೩, ೮ ಅಗ್ನಿ ಭಯ, ಧನಘಾತ

ಮಿಥುನ — ಕ್ಲೇಶದಾಯಕ ಆರೋಗ್ಯ, ಕೈ ಕಾಲು ನೋವು, ಅತಿಥಿ ಅಭ್ಯಾಗತರ ಆಗಮನ, ಪ್ರವಾಸಕ್ಕೆ ಉತ್ತಮ ದಿನವಲ್ಲ ತಾ|| ೫, ೬ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಕ್ಲೇಶ, ವಿಘ್ನ

ಕರ್ಕ — ಸಜ್ಜನರ ಸಹವಾಸ, ಮನಸ್ಸಿಗೆ ಆನಂದ, ಆರೋಗ್ಯ ಉತ್ತಮ, ನೌಕರಿಯಲ್ಲಿ ಆಕಸ್ಮಿಕ ಲಾಭ, ಸುಖ ಪ್ರವಾಸ, ವಿವಾಹ ತಾ|| ೭, ೮ ಪರೋಪಕಾರ, ವಸ್ತ್ರ ಖರೀದಿ

ಸಿಂಹ — ಹಣಕಾಸಿನ ಸ್ಥಿತಿ ಉತ್ತಮ, ಮಾನ ಸನ್ಮಾನ, ನೌಕರಿಯಲ್ಲಿ ಮೇಲಧಿಕಾರ ಪ್ರಾಪ್ತಿ, ವ್ಯಾಪಾರಾದಿಗಳಲ್ಲಿ ಲಾಭ, ಶುಭ ಕಾರ್ಯ ತಾ|| ೫, ೬ ವಿಶ್ರಾಂತಿ ಇಲ್ಲ, ಕ್ಲೇಶ

ಕನ್ಯಾ — ಆರೋಗ್ಯ ಉತ್ತಮ ಸ್ತ್ರೀ ವರ್ಗದಿಂದ ಲಾಭ, ಮನಸ್ಸಿಗೆ ಹರ್ಷ, ನಿರ್ವಿಘ್ನ ಪ್ರವಾಸ ತಾ|| ೩, ೪ ಮನರಂಜನೆ, ಅತಿಥಿಗಳಿಗಾಗಿ ಖರ್ಚು

ತುಲಾ — ಮನಸ್ಸಿಗೆ ನೆಮ್ಮದಿಯಿಲ್ಲ, ಎದುರಾಳಿಗಳಿಂದ ತೊಂದರೆ, ಧನ ಚಿಂತೆ, ಆರೋಗ್ಯ ನೆಟ್ಟಗಿರದು ತಾ|| ೫, ೬ ಅಗ್ನಿ ಶಸ್ತ್ರ ಭಯ

ವೃಶ್ಚಿಕ — ಶೋಕದಾಯಕ ಘಟನಾವಳಿ, ಆರೋಗ್ಯ ನೆಟ್ಟಗಿರದು, ಅಪೇಕ್ಷಾ ಭಂಗ, ವ್ಯಾಪಾರಾದಿಗಳಲ್ಲಿ ಶತ್ರುತ್ವ, ಪ್ರಿಯ ಜನ ವಿಯೋಗ ತಾ|| ೭, ೮ ಮಾನ ಹಾನಿ, ಧನ ಚಿಂತೆ

ಧನು — ಸಜ್ಜನರ ಸೇವೆ, ಆರೋಗ್ಯ ಉತ್ತಮ, ಆರ್ಥಿಕ ಲಾಭ, ವ್ಯಾಪಾರ ಉತ್ತಮ ತಾ|| ೭, ೮ ಆಪ್ತ ಜನರ ಭೇಟಿ, ಪ್ರವಾಸ

ಮಕರ — ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಉತ್ತಮ, ವ್ಯಾಪಾರಾದಿಗಳಲ್ಲಿ ಯಶ ತಾ|| ೩, ೪ ಮಕ್ಕಳಿಗೆ ಕ್ಲೇಶ, ವೆಚ್ಚ

ಕುಂಭ — ದುಃಖದಾಯಕ ವಾರ, ಆರೋಗ್ಯ ಉತ್ತಮವಿಲ್ಲ ರಕ್ತದ ಒತ್ತಡ, ವ್ಯಾಪಾರಾದಿಗಳಲ್ಲಿ ಸಮಾಧಾನವಿಲ್ಲ, ಮನಸ್ತಾಪ, ಚತುಷ್ಪಾದಿಗಳಿಂದ ಹಾನಿ ತಾ|| ೫, ೬ ಪ್ರಿಯ ಪತ್ನಿಗೆ ಅಗ್ನಿ ಭಯ

ಮೀನ — ಆನಂದಕರ ಘಟನೆ, ಆರೋಗ್ಯ ಉತ್ತಮ, ಅಪೇಕ್ಷಾ ಸಿದ್ಧಿ, ವ್ಯಾಪಾರಾದಿಗಳಲ್ಲಿ ಸಹಕಾರ, ನೌಕರಿಯಲ್ಲಿ ಅಧಿಕಾರ ಹೆಚ್ಚಳ ತಾ|| ೫, ೬ [illegible], ಧನಲಾಭ

ನಾಯಿ ಕೆಮ್ಮಿಗೆ ಔಷಧ
ಆರ್. ಎಸ್. ಪಂಡಿತರು
[illegible] ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು

ಕಂದಾಯದ ಪ್ರತಿಭಟನಾ ಸಭೆಯ ನಿರ್ಣಯ

ಮೈಸೂರು ೩

ರಾಜಧಾನಿಯ ಪ್ರಭುದೇವಾ ಟಾಕೀಸ್ ಬಳಿ ಇರುವ ಮೈದಾನದಲ್ಲಿ ಕಳೆದ ಬುಧವಾರ, ಪೌರಸಭೆಯವರು ಕಂದಾಯ ಏರಿಸಿರುವುದರ ಬಗ್ಗೆ ಶ್ರೀ ತಗಡೂರು ರಾಮ ಚಂದ್ರರಾಯರ ಅಧ್ಯಕ್ಷತೆಯಲ್ಲಿ ಪ್ರತಿಭಟನಾ ಸಭೆಯು ಸೇರಿ ಕೆಳಗೆ ಕಂಡ ನಿರ್ಣಯವನ್ನು ಅಂಗೀಕರಿಸಲಾಯಿತು:—

ಭಾರತದ ಶಾಸನದ ಪ್ರಕಾರ ಚಕ್ರವರ್ತಿಗಳು, ರಾಜ ಮಹಾರಾಜರುಗಳ ಅಧಿಕಾರವೆಲ್ಲಾ ಓಟರುಗಳಿಗೆ ವರ್ಗಾಯಿಸಲ್ಪಟ್ಟಿದೆ. ಓಟರುಗಳೇ ರಾಜ್ಯದ ಉತ್ತರವಾದಿಗಳು ಓಟರುಗಳೆಲ್ಲ ಯಜಮಾನರು ಕೌನ್ಸಿಲರುಗಳು ಸೇವಕರು. ಚಕ್ರಾಧಿಪತ್ಯದ ಕಾಲದಲ್ಲಿ ಸೇವಕರುಗಳು ರಾಜ ಮಹಾರಾಜರುಗಳಿಗೆ ಹೆದರಿ ನಡೆಯುತ್ತಿದ್ದರು. ಪ್ರಜಾ ಪ್ರಭುತ್ವದ ಕಾಲದಲ್ಲಿ ಸೇವಕರುಗಳು ಓಟರುಗಳಿಗೆ ಹೆದರಿ ನಡೆಯಬೇಕು. ರಾಜ್ಯದ ಉತ್ತರವಾದಿಗಳಾದ ಓಟರುಗಳು ತಮ್ಮ ಅಧಿಕಾರವನ್ನು ಕೌನ್ಸಿಲರುಗಳ ಮೇಲೆ ಚಲಾಯಿಸಬೇಕು. 'ಈಗ ಕಂದಾಯ ಏರಿಸಿರುವುದನ್ನು ರದ್ದು ಮಾಡಿಸಿರಿ. ಏರಿಸಿರುವ ವಿಧಾನದಲ್ಲಿ ಪಕ್ಷಪಾತ ತಪ್ಪಿಸಿರಿ. ಇಲ್ಲವೇ ರಾಜಿನಾಮೆ ಕೊಟ್ಟು ಹೊರಗೆ ಬನ್ನಿ' ಎಂಬುದಾಗಿ ಆಯಾಯಾ ಮೊಹಲ್ಲಾ ಓಟರುಗಳು ಆಯಾ ಮೊಹಲ್ಲಾ ಕೌನ್ಸಿಲರುಗಳಿಗೆ ಎಚ್ಚರಿಕೆಯನ್ನು ಕೊಡುವ ಸಲುವಾಗಿ ತಮ್ಮ ಘನತೆ ಗೌರವಗಳಿಗೆ ತಕ್ಕಂತೆ ಮಂಗಳ ವಾದ್ಯಗಳ ಸಮೇತ ಮೆರವಣಿಗೆಯಿಂದ ಕೌನ್ಸಿಲರುಗಳ ಮನೆಗೆ ಹೋಗಿಬರಲು ಸಿದ್ಧತೆ ಮಾಡಿಕೊಳ್ಳಬೇಕೆಂದು ಈ ಸಭೆಯು ನಿರ್ಧರಿಸಿ, ಓಟರುಗಳನ್ನು ಪ್ರಾರ್ಥಿಸಿಕೊಳ್ಳುತ್ತದೆ.

ಹರಿಕಥೆ

ದೇವೀರಮ್ಮಣ್ಣಿ ಅಗ್ರಹಾರದ ೩೩ನೇ ನಂಬರು ಮನೆಯ ಹಿಂಭಾಗದ ನಾಲಾ ಬೀದಿಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ಸಿ. ವಿ. ನರಸಿಂಹಮೂರ್ತಿ ದಾಸರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯು ಜರುಗುವುದು

೮೫೦ ಕೋಟಿ ಡಾಲರ್ ವೆಚ್ಚದ ಖೋತ

ಅಧ್ಯಕ್ಷ ಐಸೆನ್‌ಹೋವರರು ಪ್ರಸಕ್ತ ಸಾಲಿನ ಅಮೆರಿಕದ ಆಯವ್ಯಯ ಪಟ್ಟಿಯಲ್ಲಿ ವೆಚ್ಚಕ್ಕಾಗಿ ತೆಗೆದಿಟ್ಟ ಹಣದಲ್ಲಿ ೮೫೦ ಕೋಟಿ ಡಾಲರಿನಷ್ಟು ಖೋತಾ ಮಾಡಿರುತ್ತಾರೆ

೩ ನಾಲಿಗೆ, ೪ ಕೈ, ಕಾಲು ಇರುವ ಮಗು

ತಿರುಚ್ಚಿನಾಪಳ್ಳಿಯ(?) ಹೆರಿಗೆ ಆಸ್ಪತ್ರೆಯಲ್ಲಿ ಕಳೆದ ಗುರುವಾರ ಬಾಯಿಯಲ್ಲಿ ಎರಡು ಸಾಲು ಹಲ್ಲು, ೩ ನಾಲಿಗೆ, ೪ ಕೈ ಮತ್ತು ನಾಲ್ಕು ಕಾಲುಗಳಿದ್ದ ಒಂದು ಹೆಣ್ಣು ಶಿಶುವು ಜನಿಸಿತೆಂದೂ, ಅದು ಹುಟ್ಟಿದಾಗಲೇ ಸತ್ತಿತ್ತೆಂದೂ ವರದಿಯಾಗಿದೆ

ಮೊಕದ್ದಮೆಯಲ್ಲಿ ತನ್ನ ಪರ ತೀರ್ಪು ಕೊಡಲು ಜಡ್ಜರಿಗೆ ಪತ್ರ

ಅರ್ಜಿದಾರಳಿಗೆ ಕಂಟೆಂಪ್ಟ್ ತಪ್ಪಿತಕ್ಕಾಗಿ ೧೦೦೦ ರೂ. ಜುಲ್ಮಾನೆ

ಮದರಾಸಿನ ಹೈಕೋರ್ಟಿನಲ್ಲಿ ನಡೆಯುತ್ತಿದ್ದ ಒಂದು ಸಿವಿಲ್ ಮೊಕದ್ದಮೆಯಲ್ಲಿ ಪ್ರತಿವಾದಿಯಾಗಿದ್ದ ಶ್ರೀಮತಿ ಇಡಾ ಎಲ್ ಚೇಂಬರ್ಸ್ ಎಂಬಾಕೆಯು ತನ್ನ ಪರವಾಗಿ ತೀರ್ಪು ಕೊಡಬೇಕೆಂದು ನ್ಯಾಯಾಧೀಶರಿಗೆ ಖಾಸಗಿಯಾಗಿ ಪತ್ರ ಬರೆದ ಅಪರಾಧಕ್ಕಾಗಿ ಕಂಟೆಂಪ್ಟ್ ಆಫ್ ಕೋರ್ಟ್ ಆಪಾದನೆ ಮೇಲೆ ಮೊನ್ನೆ ಆಕೆಯನ್ನು ವಿಚಾರಣೆಗೆ ಗುರಿಪಡಿಸಿ ಸಾವಿರ ರೂ ಜುಲ್ಮಾನೆ ವಿಧಿಸಲಾಯಿತು. ಮೇಲ್ಕಂಡ ಸಿವಿಲ್ ವ್ಯವಹಾರದ ವಿಚಾರಣೆಯು ಕಳೆದ ತಿಂಗಳು ೨೧ನೇ ತಾರೀಕು ನಡೆದು ಜಡ್ಜ್‌ಮೆಂಟಿಗಾಗಿ ಕಾದಿರಿಸಲ್ಪಟ್ಟಿದ್ದು, ೨೪ನೇ ತಾರೀಕು ಆಕೆಯು ಜಡ್ಜರಿಗೆ ಮೇಲ್ಕಂಡಂತೆ ಪತ್ರ ಬರೆಯಲು, ನ್ಯಾಯಾಸ್ಥಾನಕ್ಕೆ ಅವಮಾನ ಮಾಡಿದುದಕ್ಕಾಗಿ ಆಕೆಯ ಮೇಲೆ ಏಕೆ ಕ್ರಮ ಜರುಗಿಸಬಾರದೆಂಬ ಬಗ್ಗೆ ಸಮಜಾಯಿಷಿ ಕೇಳಿ ನೋಟೀಸು ಕಳುಹಿಸುವಂತೆ ಆಜ್ಞೆಯಾಯಿತು. ನೋಟೀಸು ತಲುಪಿದ ಕೂಡಲೇ ಅವಳು ಕ್ಷಮಾಪಣೆ ಪತ್ರ ಸಲ್ಲಿಸಿದಳು. ಇಂತಹ ಅಪರಾಧಕ್ಕೆ ಸಜಾ ವಿಧಿಸಬಹುದಾಗಿದ್ದರೂ ನ್ಯಾಯಾಧೀಶರು ಆಕೆಯು ಕ್ಷಮಾಪಣೆ ಸಲ್ಲಿಸಿದ್ದರಿಂದಲೂ ಮತ್ತು ವೃದ್ಧಳಾಗಿದ್ದುದರಿಂದಲೂ ಜುಲ್ಮಾನೆಯನ್ನು ಮಾತ್ರ ವಿಧಿಸಿದರು

ರೈಲು ಗಾಡಿಯಲ್ಲಿ ಬೆಂಕಿ

ಬೆಂಗಳೂರು- ಪೂನಾ ಎಕ್ಸ್‌ಪ್ರೆಸ್ ರೈಲು ಕಳೆದ ಗುರುವಾರ ದೊಡ್ಡಬೆಲೆ ನಿಲ್ದಾಣವನ್ನು ಬಿಟ್ಟು ಮುಂದೆ ಹೋಗುತ್ತಿದ್ದಾಗ ರೈಲಿನ ಒಂದು ಕಂಪಾರ್ಟ್‌ಮೆಂಟಿನಲ್ಲಿ ಬೆಂಕಿ ಕಾಣಿಸಿಕೊಂಡಿತೆಂದೂ, ಅದನ್ನು ಸ್ಟೇಷನ್ ಮಾಸ್ಟರರು ಕಂಡು ರೈಲನ್ನು ನಿಲ್ಲಿಸಿದನಂತರ ಬೆಂಕಿಯನ್ನು ಆರಿಸಲಾಯಿತೆಂದೂ ವರದಿಯಾಗಿದೆ. ಯಾರಿಗೂ ಅಪಾಯವಾಗಲಿಲ್ಲ

ಬಿರುಗಾಳಿ ಅನಾಹುತದಲ್ಲಿ ೧೪ ಮರಣ

ಅಮೆರಿಕದ ಅಟ್ಲಾಂಟಾ ಪ್ರದೇಶದಲ್ಲಿ ಕಳೆದ ಗುರುವಾರ ಭಾರಿ ಬಿರುಗಾಳಿ ಬೀಸಿದ ಪರಿಣಾಮವಾಗಿ ಅನೇಕ ಅನಾಹುತಗಳಾದುವು. ೧೪ ಜನರು ಮಡಿದು ೨೪೦ ಮಂದಿಗೆ ಗಾಯವಾಗಿ ಅವರು ಆಸ್ಪತ್ರೆಗೆ ಸೇರಿಸಲ್ಪಟ್ಟಿರುತ್ತಾರೆ. ಅನೇಕ ಕಟ್ಟಡಗಳಿಗೆ ನಷ್ಟವಾಗಿವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ಶುಭ ದಿನದ ಆರ್ಕೆಸ್ಟ್ರಾ ರೆಕಾರ್ಡು. ಮಧ್ಯಾಹ್ನ ೧ ೩೦ ನಾಗಸ್ವರ. ೨ ಚಿತ್ರ ಸಂಗೀತ ೫ ೩೦ ಮಕ್ಕಳು, ೬ ೩೦ ಎಂ ಶಂಕರಪ್ಪ, ಪಿಟೀಲು ೬ ೧೦ ಗಾನ ವಿಹಾರ ೭ ಭಜನೆ ೭ ೨೦ ಗೀತಾಂಜಲಿ. ೭ ೩೦ ಜೀ ಸಿದ್ದವೀರಪ್ಪನವರ ಭಾಷಣ ೯ ೧೫ ಇಂಗ್ಲಿಷ್ ಭಾಷಣ ೯ ೩೦ ಲಕ್ಷ್ಮಿ ಮತ್ತು ಸರಸ್ವತಿ ಸಂಗೀತ

ಬಸ್ಸು ಮಗುಚಿಕೊಂಡಿತು

ಸ್ವಂ ಸು] ೮ ನರಸೀಪುರ ೧

೨೬ ಮಂದಿ ಪ್ರಯಾಣಿಕರಿದ್ದ ಬನ್ನೂರು ಟ್ರಾನ್ಸ್‌ಪೋರ್ಟ್ ಬಸ್ಸು ನೆನ್ನೆ ಮಧ್ಯಾಹ್ನ ಇಲ್ಲಿನ ಕಪಿಲಾ ನದಿ ಸೇತುವೆ ಬಳಿ ಮಗುಚಿಕೊಂಡಿತು. ಪ್ರಯಾಣಿಕರು ಯಾರಿಗೂ ಅಪಾಯವಾಗದೆ, ಕ್ಲೀನರನಿಗೆ ಸ್ವಲ್ಪ ಪೆಟ್ಟು ಬಿದ್ದಿತು.

○ ಕಳೆದ ವಾರ ಈ ಊರಿನ ಶಿವಶೈವರ ಮಠದಲ್ಲಿ ಸಂಸ್ಕೃತ ಮತ್ತು ಹಿಂದೀ ಪ್ರಾಥಮಿಕ ಶಾಲೆಯ ತರಗತಿಗಳ ಪ್ರಾರಂಭೋತ್ಸವವು ಜರುಗಿತು. ಆ ಸಂದರ್ಭದಲ್ಲಿ ಶ್ರೀ ಮಾಯಣ್ಣಗೌಡರ ಭಾರತ ಪಠಣವೂ ನಡೆಯಿತು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ. ಇಂದ	ರೂ. ರ
ಕಡಲೆಕಾಯಿ	೨೫-೪-೦	೩೦-೨-೦
ಹರಳುಬೀಜ	೩೨-೦-೦	೩೮-೫-೦
ಹೊಂಗೆಬೀಜ	೨೦ ೧೨.೦	೨೨ ೮ ೦
ಹಲಸಂದೆ	೪೧ ೬ ೦	೪೮-೪-೦
ಉದ್ದು	೬೧-೦-೦	
ಎಳ್ಳು	೬೨ ೨-೦	
ಮೆಣಸಿನ		
ಕಾಯಿ ಪುಡಿ	೧೦.೧೦-೦	೨೦ ೧೪ ೦
ಹುಣಸೇಹಣ್ಣು	೪.೧೨.೦	೫.೧೨.೦
ಸೀಗೇಕಾಯಿ	೪.೪.೦	೪.೧೧.೦
ಬೆಲ್ಲ	೫ ೧೨-೦	
ತೆಂಗಿನಕಾಯಿ		
೧,೧೦೦ಕ್ಕೆ	೧೨೦ ೦-೦	೨೫೦ ೦ ೦

ಗೃಹಕೃತ್ಯದ ಜವಾಬು ನೋಟೀಸು

ಮೈಸೂರು ಮಂಡಿಮೊಹಲ್ಲಾ ಗಾಣಿಗರ ಕೇರಿಯ 378ನೇ ನಂಬರು ಮನೆಯಲ್ಲಿರುವ ಗವಿಶೆಟ್ಟರ ಮಕ್ಕಳು ನಾರಾಯಣ ಶೆಟ್ಟಿಯವರು ತಾರೀಕು 29-4-53ನೇ ವರ್ತಮಾನ ಪತ್ರಿಕೆಯಲ್ಲಿ ಕೊಟ್ಟಿರುವ ನೋಟೀಸು ಹೇಳಿಕೆಯೆಲ್ಲವೂ ಶುದ್ಧ ಸುಳ್ಳು. ಎಸ್. ದಾಸಪ್ಪ ಉರುಫ್ ಪುಟ್ಟಸ್ವಾಮಿಗೂ ನಮಗೂ ಯಾವ ಸಂಬಂಧವೂ ಇಲ್ಲ. ಅವರು ಈ ಕೃಷ್ಣಯ್ಯ ಉರುಫ್ ಸುಬ್ಬಯ್ಯನವರ ಅಳಿಯಂದಿರಲ್ಲ. ಪಿಟೀ ನಾರಾಯಣಶೆಟ್ಟಿರು ಕುಲ ಪದ್ಧತಿಯಂತೆ ವಿವೇಕ ಪ್ರಸ್ತ ಮಾಡಿಕೊಂಡು ಸಂಸಾರಿಯಾಗಿ ಬಾಳು ಮಾಡದೆ ಬುದ್ಧಿ ವಿಕಲ್ಪವಾಗಿ ಕೋರ್ಟಿನಲ್ಲಿ ನಾನಾ ತರಹದ ದುವ್ಯಾಜ್ಯಗಳನ್ನು ಹೂಡುವುದರಲ್ಲೇ ನಿರತರಾಗಿ, ಅಗದವರ ಮತ್ತು ತಂದೆ ತಾಯಿಗಳ ಪ್ರೇರಣೆ ಮೇರೆ ಪತ್ರಿಕೆಯಲ್ಲಿ ನೋಟೀಸು ಕೊಟ್ಟಿರುತ್ತಾರೆ. ಇದರಿಂದ ಏನೂ ಪ್ರಯೋಜನವಿಲ್ಲ. ವ್ಯವಹಾರ ರೀತ್ಯಾ ಕುಲ ಪದ್ಧತಿ ಮೇರೆ ತವರಿಗೆ [illegible] ಬಾಳುವಾಗಲು [illegible] ಇದ್ದೇನೆ. ಇದಕ್ಕೆ ತಪ್ಪಿದರೆ ಪಿಟೀ ನಾರಾಯಣ ಶೆಟ್ಟರಿಂದ ಜೀವನಾಂಶ ಹೊಂದಲು ಕೋರ್ಟಿನಲ್ಲಿ ವ್ಯವಹಾರ ನಡೆಸಲಾಗುತ್ತೆ. ಎಲ್ಲದಕ್ಕೂ ಪಿಟೀ ನಾರಾಯಣಶೆಟ್ಟರೇ ಜವಾಬುದಾರರಾಗಬೇಕಾಗುತ್ತೆಂಬ ಅಂಶವನ್ನು ಈ ಮೂಲಕ ತಿಳಿಸಿರುತ್ತೆ.

○ ಈ ಎಸಗ್ಗೆ ಪಟ್ಟಿಷ್ಟನ ಗುರುನಾರಾಯಣಶೆಟ್ಟರ ಕುಟುಂಬ ಪುಟ್ಟಲಕ್ಷ್ಮಮ್ಮ ಹಾಕಿದ್ದು.

Edited, Printed and Published by A. R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೪-೫-೧೯೫೪ [ಸಂಚಿಕೆ ೨೨೪

ಬಳ್ಳಾರಿ ಭವಿಷ್ಯದ ಬಗ್ಗೆ ಜನಮತಗಣನೆಯೋ?

ಮನೆ ಬಾಡಿಗೆ ಕಂದಾಯದ ಏರಿಕೆ ಕಾನೂನು ಬದ್ಧವಾಗಿದೆ

ಪತ್ರಿಕಾ ಗೋಷ್ಠಿಯಲ್ಲಿ ಪುರಸಭಾಧ್ಯಕ್ಷರ ವಿವರಣೆ

ಮೈಸೂರು ೪

ಈ ವರ್ಷದ ಕಂದಾಯ ವಿಮರ್ಶೆಯಲ್ಲಿ ಯಾರಿಗೂ ಪಕ್ಷಪಾತ ತೋರಿಲ್ಲವೆಂದೂ, ಕಾನೂನಿಗನುಸಾರವಾಗಿಯೇ ಅದನ್ನು ನಡೆಸಿರವುದಾಗಿಯೂ ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಈ ದಿನ ಪ್ರಾತಃಕಾಲ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು ಪೌರಸಭಾ ಕಮಿಷನರ್ ಶ್ರೀ ಎಗ್. ಲಕ್ಷ್ಮಣರಾಯರೂ ಸಹ ಇದ್ದರು ವರ್ಷೇ ವರ್ಷೇ ಹೆಚ್ಚುತ್ತಿರುವ ಬಡ್ತಿಗಾಗಿ ೪೫ ಸಾವಿರ ರೂ ವೆಚ್ಚವು ಹೆಚ್ಚುತ್ತಿರುವುದಾಗಿಯೂ ಮತ್ತು ಪುರಸಭೆಯು ಜನಾರೋಗ್ಯ ಕಾರ್ಯಗಳಿಗೆ ಒಟ್ಟು ೨೦ ಲಕ್ಷ ರೂ ಗಳ ಆದಾಯದಲ್ಲಿ ೯ ಲಕ್ಷವನ್ನು ಖರ್ಚು ಮಾಡುತ್ತಿದೆಯೆಂದೂ, ಸಂಸ್ಥಾನದ ಬೇರೆ ಪಟ್ಟಣಗಳಲ್ಲಿನ ಕಂದಾಯ ವಿಧಿಸುವ ಸ್ಥಿತಿಗಿಂತ ಮೈಸೂರಿನದು ಎಷ್ಟೋ ಪಾಲು ಮೇಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು

ಅಲ್ಲದೆ ಕಾನೂನಿನ ಪ್ರಕಾರ ಪ್ರತಿ ೪ ವರ್ಷಗಳಿಗೊಂದು ಸಲ ಕಂದಾಯದ ವಿಮರ್ಶೆ ನಡೆಯಬೇಕಾಗಿದೆ ಅದರಂತೆ ಮೇ ಈಗಲೂ ಸಹ ನಡೆದಿದೆ ಹಿಂದೆ ಕಂದಾಯವನ್ನು ೮ ತಿಂಗಳ ಬಾಡಿಗೆಯ ಆಧಾರದ ಮೇಲೆ ಶೇ|| ೯ ರಂತೆ ವಿಧಿಸಲಾಗುತ್ತಿತ್ತು ಇದನ್ನು ಈ ಸಲ ೧೧ ತಿಂಗಳ ಮೊತ್ತದ ಮೇಲೆ ವಿಧಿಸಲಾಗಿದೆ ಬಾಡಿಗೆಯ ಮೊತ್ತವನ್ನು ೮ ತಿಂಗಳಿಂದ ೧೧ ತಿಂಗಳಿಗೆ ಹೆಚ್ಚಿಸಿರುವುದು ಮತ್ತು ಕಾಲಕ್ಕನುಗುಣವಾಗಿ ಮನೆ ಬಾಡಿಗೆ ಹೆಚ್ಚಿರುವುದು—ಈ ಕಾರಣಗಳಿಂದ ಕಂದಾಯವೂ ಹೆಚ್ಚಿರುತ್ತದೆ

ಕಂದಾಯವನ್ನು ನಗರದ ಕೇವಲ ಎರಡೇ ಮೊಹಲ್ಲಾಗಳಲ್ಲಿ ಹೆಚ್ಚಿಸಿಲ್ಲ ಮೈಸೂರು ಉತ್ತರ ಭಾಗದಲ್ಲಿರತಕ್ಕ ೧೨,೬೫೪ ಮನೆಗಳ ಪೈಕಿ ೫,೪೪೦ ಮನೆಗಳಿಗೂ ಮತ್ತು ದಕ್ಷಿಣ ಭಾಗದಲ್ಲಿರುವ ೯,೫೫೯ ಮನೆಗಳಲ್ಲಿ ೮,೩೨೦ ಮನೆಗಳ ಕಂದಾಯವನ್ನೂ ಹೆಚ್ಚಿಸಲಾಗಿದೆ ಈ ವಿಮರ್ಶೆಯ ಸಂಬಂಧದಲ್ಲಿ ಪರಿಹಾರಕ್ಕಾಗಿ ಕೋರಿ ಮೈಸೂರು ಉತ್ತರ ಭಾಗದಿಂದ ಬಂದ ಅರ್ಜಿಗಳಲ್ಲಿ ೫೧೩, ಅರ್ಜಿಗಳಿಗೂ ಮತ್ತು ದಕ್ಷಿಣದಿಂದ ಬಂದ ೧,೫೪೨ ಅರ್ಜಿಗಳಲ್ಲಿ ೩೬೬ ಅರ್ಜಿಗಳಿಗೆ ಪರಿಹಾರ ಕೊಡಲಾಗಿದೆ.

ಬಾಡಿಗೆಗೆ ಕೊಟ್ಟಿದರಿಂದ ಕಂದಾಯ ಹೆಚ್ಚಿಸಿರುವ ಮನೆಗಳ ಸಂಖ್ಯೆ ಉತ್ತರ ಭಾಗದಲ್ಲಿ ೪,೩೬೪ ಮತ್ತು ದಕ್ಷಿಣದಲ್ಲಿ ೪,೭೦೪ ಸ್ವಂತವಾಗಿ ಬಡಾವಣೆ ಮಾಡಿರುವ ಮನೆಗಳ ಸಂಖ್ಯೆ ಉತ್ತರದಲ್ಲಿ ೭,೦೫೨ ಮತ್ತು ದಕ್ಷಿಣದಲ್ಲಿ ೧,೭೧೨

ಕಮೀಷನರರ ಅಜ್ಞೆಯಂತೆ ಉತ್ತರ ಭಾಗದಲ್ಲಿ ೫೧೩, ಮತ್ತು ದಕ್ಷಿಣದಲ್ಲಿ ೩೬೬ ಮನೆಗಳಿಗೆ ಪರಿಹಾರ ಕೊಡಲಾಗಿದೆ ಇತ್ಯರ್ಥವಾಗದೆ ಉಳಿದವರ ಅರ್ಜಿಗಳ ಸಂಖ್ಯೆ ಎರಡು ಭಾಗಗಳಲ್ಲಿ ೫೧೩, ನಿಕ್ಕ ೫೩೫ ಮ್ಯಾನೇಜಿಂಗ್ ಸಮಿತಿಯವರ ಮುಂದೆ ಉತ್ತರ ಭಾಗದ ೫೧ ಮತ್ತು ದಕ್ಷಿಣದ ೬೦ ಅರ್ಜಿಗಳು ಬಂ

ಬಳ್ಳಾರಿ ಕನ್ನಡಿಗರ ಮೇಲೆ ದುಂಡಾವರ್ತಿ

ಬಳ್ಳಾರಿಯಿಂದ ಕೊಟ್ಟೂರಿಗೆ ನೆನ್ನೆ ಹೊರಟ ಬಸ್ಸೊಂದನ್ನು ವೇಣಿ ವೀರಪುರ ಎಂಬಲ್ಲಿ ತಡೆದು ಡ್ರೈವರ್ ಮತ್ತು ಕಂಡಕ್ಟರುಗಳನ್ನು ಹೊಡೆದು ಬಸ್ಸಿಗೆ ಜಖಂ ಮಾಡಲಾಗಿದೆಯೆಂದು ವರದಿಯಾಗಿದೆ ಮೋಕಾ ಎಂಬ ಹಳ್ಳಿಯಿಂದ ವಾಪಸು ಬಳ್ಳಾರಿಗೆ ಬರುತ್ತಿದ್ದ ೧೨ ಜನ ಕನ್ನಡ ಪ್ರಾಂತ್ಯ ಕಾರ್ಯಕರ್ತರ ಮೇಲೆ ಧಾಳಿ ನಡೆಸಲಾಯಿತೆಂದೂ, ಆ ಪೈಕಿ ೧೨ ಮಂದಿಗೆ ಗಾಯವಾಗಿದೆಯೆಂದೂ ಹೇಳಲಾಗಿದೆ ಬಳ್ಳಾರಿ ಟವನ್ನಿನಲ್ಲಿ ಹಲವು ಕನ್ನಡಿಗರ ಹೋಟೇಲುಗಳ ಮೇಲೆ ಕಲ್ಲೆಸೆಯಲಾಯಿತು

ದು ಆ ಪೈಕಿ ಕ್ರಮವಾಗಿ ೪೨ ಮತ್ತು ೫೩ ವಿಲೇವಾರಿಯಾಗಿ ೧೭ ಮತ್ತು ೩೬ ಅರ್ಜಿಗಳ ಸಂಬಂಧವಾಗಿ ಪರಿಹಾರ ನೀಡಲಾಗಿದೆಯೆಂದೂ ೩ ಮತ್ತು ೧೨ ಅರ್ಜಿಗಳು ಇನ್ನೂ ಇತ್ಯರ್ಥವಾಗಬೇಕೆಂದೂ ಸೂಚಿಸಲಾಗಿದೆ

ಖರ್ಚು ವೆಚ್ಚಗಳು ಹೆಚ್ಚುತ್ತಿರುವಾಗ ಪುರಸಭೆಯು ಪೌರರನ್ನು ಸಹಾಯ ಕೇಳುವುದು ಸಹಜವಾಗಿಯೇ ಇದೆ ಯಾರಿಗೂ ಯಾವ ಅನ್ಯಾಯವನ್ನೂ ಮಾಡಬೇಕೆಂದು ಪುರಸಭೆಗೆ ಇಚ್ಛೆಯಿಲ್ಲ ಅಲ್ಲದೆ ಕೆಲವು ಮನೆಗಳಿಗೆ ಕಂದಾಯವನ್ನೂ ಸಹ ಕಡಿಮೆ ಮಾಡಲಾಗಿದೆ-ಎಂಬುದಾಗಿ ಅವರು ನುಡಿದರು

ಕಂದಾಯದಾರರಿಗೆ ಅನ್ಯಾಯವಾಗಿದ್ದರೆ ಕಾನೂನು ಪ್ರಕಾರ ನಡೆದಲ್ಲಿ ಪರಿಹಾರ ಕೊಡಲು ಸಭೆಯು ಸದಾ ಸಿದ್ಧವಿದೆ ಸಾಧ್ಯವಾದಷ್ಟು ಅನುಕೂಲ ಕಲ್ಪಿಸುವುದು ಪೌರಸಭೆಯ ಧ್ಯೇಯ-ಎಂದು ತಿಳಿಸಲಾಯಿತು

ಹೀಗಿದ್ದರೂ ಏನೋ ಕಾರಣಕ್ಕಾಗಿ ಪೌರಸಭೆಯನ್ನು ಅನ್ಯಾಯವಾಗಿ ದೂರಿ ಜನ ಸಾಮಾನ್ಯರಲ್ಲಿ ಅಪ ಪ್ರಚಾರ ಮಾಡಿ ತಪ್ಪು ಭಾವನೆಯನ್ನು ಕಲ್ಪಿಸಿರುವುದು ಪ್ರಜಾ ಧರ್ಮಕ್ಕೆ ತಕ್ಕುದಲ್ಲ ಪೌರಸಭೆ ಬೇರೆ, ಜನ ಬೇರೆಯಲ್ಲ. ಈ ವಿಷಯವನ್ನು ಸಾರ್ವಜನಿಕರಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಹೋದ ವರ್ಷಕ್ಕಿಂತ ಈಗ ೨-೩ ರಷ್ಟು ಕಂದಾಯ ಹೆಚ್ಚಿಲ್ಲ"—ಎಂದು ಅಧ್ಯಕ್ಷರು ತಿಳಿಸಿದರು.

ಬಳ್ಳಾರಿ ತಾಲ್ಲೂಕು ಭವಿಷ್ಯ ಕುರಿತು ಜನಮತಗಣನೆ ?

ಬಳ್ಳಾರಿಯು ಮೈಸೂರಿನಲ್ಲಿ ಐಕ್ಯವಾಗಲೇಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ತಿಳಿಸಿ, ಆ ತಾಲ್ಲೂಕಿನ ಭವಿಷ್ಯದ ಬಗ್ಗೆ ಜನಮತಗಣನೆಯಾದರೆ ಅದನ್ನು ಎದುರಿಸಲು ತಾವು ಸಿದ್ಧವಿರುವುದಾಗಿ ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸಂಜೀವ ರೆಡ್ಡಿಯವರು ಹೇಳಿರುವುದನ್ನು ಕೇಳಿ ಆಶ್ಚರ್ಯ ವ್ಯಕ್ತಪಡಿಸಿರುತ್ತಾರೆ ಇದನ್ನು ಒಪ್ಪಿಕೊಂಡರೆ ಕೆಟ್ಟ ಪರಿಣಾಮಗಳು ಆಗುವುವೆಂದೂ, ಆದರೆ ಕೇಂದ್ರ ಸರ್ಕಾರದವರು ಜನಮತಗಣನೆಯಾಗಬೇಕೆಂದು ಕೇಳಿದರೆ, ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದೂ ತಿಳಿಸಿರುತ್ತಾರೆ.

ಬಳ್ಳಾರಿ ಹಳ್ಳಿ ಪಟೇಲರ ಮೇಲೆ ಧಾಳಿ

ಜಸ್ಟಿಸ್ ಮಿಶ್ರಾರವರ ವಿಚಾರಣೆ ಸಂಬಂಧವಾಗಿ ಬಳ್ಳಾರಿಗೆ ಹೋಗುತ್ತಿದ್ದ ಕಿಲ್ಲಗಲ್ಲು ಎಂಬ ಹಳ್ಳಿಯ ಪಟೇಲ ಶಿವನಗೌಡರನ್ನು ಮೊನ್ನೆ ರಾತ್ರಿ ಯಾರೋ ಹೊಡೆದು ಅವರ ತಲೆಗೆ ಗಾಯವಾಗಿದೆ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಅವರು ಅಭಿಪ್ರಾಯ ಪಡುತ್ತಿದ್ದರು

ಪಾಕಿಸ್ತಾನ ಪ್ರಾಂತಗಳಲ್ಲಿ ಭಾರಿ ಬದಲಾವಣೆ ?

ಪಾಕಿಸ್ತಾನದ ಪಂಜಾಬು ಮತ್ತು ಪೂರ್ವ ಬಂಗಾಳಾ ಪ್ರಾಂತಗಳಲ್ಲಿ ಭಾರಿ ರಾಜಕೀಯ ಬದಲಾವಣೆಯಾಗುವ ಸಂಭವವಿರುವುದೆಂದು ಹೇಳಲಾಗಿದೆ ಅಲ್ಲಿನ ಗೌರ್ನರ್ ಜನರಲ್ಲರು ಪಂಜಾಬು ರಾಜಧಾನಿ ಲಾಹೋರಿಗೆ ಹೋಗಿರುತ್ತಾರೆ. ಪ್ರಧಾನಿ ಮಹಮದ್ ಅಲಿಯವರು ಬರುವ ಗುರುವಾರ ಢಾಕ್ಕಾವಿಗೆ ತೆರಳುವರು

ಫ್ರೆಂಚ್ ಭಾರತ ಅಧಿಕಾರಿಗಳಿಗೆ ಪಿಸ್ತೂಲು

ಫ್ರೆಂಚ್ ಭಾರತದ ರೆವಿನ್ಯೂ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆ ಕಾಲದಲ್ಲಿ ಒಂದೊಂದು ಬಂದೂಕವನ್ನಿಟ್ಟುಕೊಳ್ಳಲು ಅವಕಾಶವೀಯಲಾಗಿದೆ.

ಕಾಮೆಟ್ ವಿಮಾನ ದುರಂತದಲ್ಲಿ ೪೩ ಜನರ ಮರಣ

ಸಿಂಗಪುರದಿಂದ ಲಂಡನ್ನಿನ ಅಭಿಮುಖವಾಗಿ ನೆನ್ನೆ ಹೊರಟ ಬಿ ಓ ಎ ಸಿ ಯ ಕಾಮೆಟ್ ವಿಮಾನವು ಕಲ್ಕತ್ತೆಯ ಬಳಿ ಧಗ್ಗನೆ ... ಕಲ್ಕತ್ತಾದಿಂದ ... ಗದೆ ನೆನ್ನೆ ದಿನ ಸಂಜೆ ... ಮುಕ್ಕಾಲು ವಿಮಾನವು ಶೋಧನಾಕಾರ್ಯ ನಡೆಸಿ, ಕಲ್ಕತ್ತಾಕ್ಕೆ ೩೫ ಮೈಲಿಯ ಹೂಗ್ಲಿ ನದಿ ಪ್ರದೇಶದಲ್ಲಿ, ಬಿದ್ದ ವಿಮಾನದ ಅವಶೇಷಗಳನ್ನು ಪತ್ತೆ ಮಾಡಿತು. ಅದರಲ್ಲಿದ್ದ ೪೩ ಜನರೂ ಮಡಿದರೆಂದೂ ಹೇಳಲಾಗಿದೆ ೨೨ ಮೃತ ಶರೀರಗಳು ಸಿಕ್ಕಿವೆ ಅವಶೇಷಗಳು ಪತ್ತೆಯಾದ ಸ್ಥಳದಲ್ಲಿ ನೆನ್ನೆ ... ಗಳು ಇನ್ನೂ ಉರಿಯುತ್ತಿದ್ದುವು ತಂಡು ಸಿಂಗಪುರವನ್ನು ಬಿಟ್ಟು ಹೊರಟ ಸ್ವಲ್ಪ ಹೊತ್ತಿನಲ್ಲೇ ವಿಮಾನದ ... ಬೆಂಕಿಯುಂಟಾಗಿ ಆಸ್ಫೋಟನೆ ಸಂಭವಿಸಿತೆಂದೂ, ಅಲ್ಲಿಂದ ೩ ೮ ಮೈಲಿ ಆಚೆ ವಿಮಾನದ ರೆಕ್ಕೆ ಮತ್ತು ಇತರ ಭಾಗಗಳು ಸಿಕ್ಕಿದುವೆಂದೂ ವರದಿಯಾಗಿದೆ

ಏರ್ ಇಂಡಿಯಾ ವಿಮಾನ ಸಂಸ್ಥೆಗೆ ೨ ಜೆಟ್ ವಿಮಾನ

ಭಾರತದ ಏರ್ ಇಂಡಿಯಾ ಇಂಟರ್‌ನ್ಯಾಷನಲ್ ವಿಮಾನ ಸಂಸ್ಥೆಯವರು ೧೯೫೭ ನೇ ಇಸವಿಯಲ್ಲಿ ಬ್ರಿಟನ್ನಿನಿಂದ ೨ ಕಾಮೆಟ್ ಜೆಟ್ ಲೈನರ್ ವಿಮಾನಗಳನ್ನು ಕೊಂಡುಕೊಳ್ಳುವ ಬಗ್ಗೆ ಸಂಧಾನ ನಡೆಸುತ್ತಿರುವರೆಂದು ಗೊತ್ತಾಗಿದೆ ಆವುಗಳನ್ನು ಕೊಂಡರೆ ಶೀಘ್ರಗಾಮಿ ಎಕ್ಸ್‌ಪ್ರೆಸ್ ಪ್ರಯಾಣಕ್ಕಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ವಯಸ್ಸಾದ ದನಗಳ ರಕ್ಷಣೆ

ವಯಸ್ಸಾದ ದನಗಳು ಕಟುಕರ ಕೈಗೆ ಹೋಗದಂತೆ ತಪ್ಪಿಸಲೂ ಮತ್ತು ಮುದಿ ದನಗಳಿಗಾಗಿ ಕೆಲವು ಹುಲ್ಲುಗಾವಲುಗಳನ್ನು ನಿರ್ಮಿಸುವ ಬಗ್ಗೆಯೂ ಪ್ರಸಕ್ತ ಸಾಲಿನಲ್ಲಿ ಹಣ ಒದಗಿಸಲು ಸಂಸ್ಥಾನ ಸರ್ಕಾರದವರು ಒಪ್ಪಿರುವರೆಂದು ವರದಿಯಾಗಿದೆ ಈ ಬಗ್ಗೆ ಸಂಸ್ಥಾನದ ಸಚಿವರುಗಳಾದ ಶ್ರೀಗಳು ಕೆ ಹನುಮಂತಯ್ಯ, ಹೆಚ್ ಸಿದ್ದವೀರಪ್ಪ ಮತ್ತು ಕಡಿದಾಳ್ ಮಂಜಪ್ಪನವರೊಡನೆ ಕೇಂದ್ರ ವ್ಯವಸಾಯ ಇಲಾಖಾ ಕಾರ್ಯದರ್ಶಿ ಸರ್ದಾರ್ ದಾತಾರ್ ಸಿಂಗ್‌ರವರು ಮಾತುಕತೆ ನಡೆಸಿದರು ಗೋಸದನದ ನಿರ್ಮಾಣಕ್ಕಾಗಿ ೧ ಲಕ್ಷ ರೂ.ಗಳನ್ನು ೨ ವರ್ಷಗಳ ಹಿಂದೆ ಮಾರ್ವಾಡಿ ಸಂಘದವರು ಕೊಟ್ಟಿರುತ್ತಾರೆ

ಬಿಸ್ಮಿಲ್ಲಾ ಖಾನ್ ಪಾರ್ಟಿಯವರ ಶಹನಾಯ್ ವಾದನ

ಮೈಸೂರು ಆಕಾಶವಾಣಿಯಲ್ಲಿ ನೆನ್ನೆ ರಾತ್ರಿ ೮ ರಿಂದ ೯ ಘಂಟೆವರೆಗೆ ಖ್ಯಾತಿಯ ಸುಪ್ರಸಿದ್ಧ ಶಹನಾಯ್ ವಿದ್ವಾಂಸರಾದ ಶ್ರೀ ಬಿಸ್ಮಿಲ್ಲಾ ಖಾನ್ ರವರ ಪಾರ್ಟಿಯವರ ಶಹನಾಯ್ ವಾದನದ ಪ್ರಸಾರವು ನಡೆಯಿತು ಸಮಾರಂಭಕ್ಕೆ ಪುರಸಭಾಧ್ಯಕ್ಷರು, ಸಂಗೀತ ವಿದ್ವಾಂಸರುಗಳು ಮುಂತಾದ ಅನೇಕ ಗಣ್ಯ ವ್ಯಕ್ತಿಗಳು ಆಹ್ವಾನಿತರಾಗಿ ಬಂದಿದ್ದರು

ಶಾಸನಸಭಾ ಪ್ರತಿನಿಧಿಗಳ ಸಂಖ್ಯೆ ನಿಗದಿ

ಭಾರತದ ಚುನಾವಣಾ ಪ್ರದೇಶಗಳ ಗಡಿ ನಿರ್ಧಾರ ಸಮಿತಿಯವರು ಕೇಂದ್ರ ಲೋಕ ಸಭೆ ಮತ್ತು ಸಂಸ್ಥಾನದ ಶಾಸನ ಸಭೆಗಳಿಗೆ ಪ್ರಾತಿನಿಧ್ಯದ ಕೋಟಾವನ್ನು ಹಂಗಾಮಿಯಾಗಿ ಗೊತ್ತುಪಡಿಸಿರುತ್ತಾರೆ. ಲೋಕ ಸಭೆಯಲ್ಲಿ ಪರಮಾವಧಿ ಸಂಖ್ಯೆಯಾದ ೫೦೦ ಚುನಾಯಿತ ಸ್ಥಾನಗಳಿರುವುವು. ಈಗ ಅಲ್ಲಿ ೪೯೫ ಚುನಾಯಿತ ಮತ್ತು ೪ ನಾಮಕರಣದ ಸ್ಥಾನಗಳಿವೆ. ಸಂಸ್ಥಾನಗಳ ಶಾಸನ ಸಭೆಗಳಿಗೆ ಈ ರೀತಿ ಸ್ಥಾನಗಳನ್ನು ಗೊತ್ತುಮಾಡಲಾಗಿದೆ. ಉತ್ತರ ಪ್ರದೇಶ ೪೩೦, ಬಿಹಾರ್-೩೩೦, ಬೊಂಬಾಯಿ-೩೯೪, ಮದ್ರಾಸ್ ೩೭೫, ಪಶ್ಚಿಮ ಬಂಗಾಳ-೨೩೮, ಮಧ್ಯ ಪ್ರದೇಶ ೨೩೨, ಆಂಧ್ರ-೧೬೮, ಹೈದರಾಬಾದು-೧೭೫, ರಾಜಾಸ್ಥಾನ-೧೬೮, ಒರಿಸ್ಸಾ-೧೪೦, ಅಸ್ಸಾಂ-೧೦೮, ಮಧ್ಯ ಭಾರತ-೯೯, ಸೌರಾಷ್ಟ್ರ-೬೦, ಪೆಪ್ಸು ೬೦.

ಇತ್ತೀಚಿನ ಜಾನೇವಾರಿ ಲೆಕ್ಕದಂತೆ ಈ ರೀತಿ ಗೊತ್ತುಪಡಿಸಲಾಗಿದೆ. ಮೈಸೂರು ತಿರುವಾಂಕೂರು-ಕೊಚ್ಚಿ ಕೊಡಗು ಈ ಮೂರು ಸಂಸ್ಥಾನಗಳ ಶಾಸನ ಸಭಾ ಮತ್ತು ಲೋಕ ಸಭಾ ಸ್ಥಾನಗಳನ್ನು ಇನ್ನೂ ನಿಗದಿ ಮಾಡಿಲ್ಲ.

ವಿವಿಧ ವಿನೋದಾವಳಿ

ರಾಜಧಾನಿಯ ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಶಂಕರ ಪಂಡಿತರ ಮನೆಯಲ್ಲಿ ಬಾಲಕ ಬಾಲಕಿಯರಿಂದ, ನೆನ್ನೆ ಶ್ರೀಮತಿ ಜಯಲಕ್ಷ್ಮಮ್ಮ ಶ್ರೀಕಂಠ ಪಂಡಿತರ ನೇತೃತ್ವದಲ್ಲಿ ವಿವಿಧ ವಿನೋದಾವಳಿಯ ಜೊತೆ ಚೌಚೌ ಎಂಬ ನಾಟಕವೂ ಅಭಿನಯಿಸಲ್ಪಟ್ಟಿತು.

ಕೇಂದ್ರ ಸಾಹಿತ್ಯ ಸಮಿತಿಗೆ ಎಂ ಆರ್ ಶ್ರೀನಿವಾಸಮೂರ್ತಿ

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಂ ಆರ್ ಶ್ರೀನಿವಾಸಮೂರ್ತಿಯವರನ್ನು ಕೇಂದ್ರ ಸಾಹಿತ್ಯ ಅಕೇಡಮಿಯ ಸದಸ್ಯರಾಗಿ ನೇಮಿಸಲಾಗಿದೆ.

ಭಾರತ ಸೇವಾ ದಳದ ಪ್ರಾಥಮಿಕ ಶಿಕ್ಷಣ ಶಿಬಿರ

ಭಾರತ ಸೇವಾ ದಳದ ಪ್ರಾಥಮಿಕ ಶಿಕ್ಷಣ ಶಿಬಿರವು ನಾಳೆ ಸಂಜೆ ೫ ಘಂಟೆಗೆ ಮೈಸೂರು ಹಳೇ ಅನ್ನಮಂಟಪದಲ್ಲಿರುವ ಶ್ರೀ ಸುತ್ತೂರು ಸ್ವಾಮಿಗಳವರ ವಿದ್ಯಾರ್ಥಿ ನಿಲಯದಲ್ಲಿ ಪ್ರಾರಂಭವಾಗಿ ಒಂದು ತಿಂಗಳ ಕಾಲ ಶಿಕ್ಷಣ ಕೊಡಲಾಗುವುದು. ಶಾಸನ ಸಭಾಸದಸ್ಯರಾದ ಶ್ರೀ ಕೆ ಪುಟ್ಟಸ್ವಾಮಿಯವರು ಪ್ರಾರಂಭೋತ್ಸವ ಅಧ್ಯಕ್ಷತೆ ವಹಿಸುವರು. ವಿದ್ಯಾವರ್ಧಕ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನರಸಿಂಗರಾಯರು ಸ್ವಯಂ ಸೇವಕರಿಗೆ ಹಿತೋಪದೇಶ ಮಾಡುವರು. ಸೇವಾದಳದ ಎಲ್ಲಾ ಬಂಧು ಮಿತ್ರರಿಗೂ ಆಹ್ವಾನವುಂಟೆಂದು ಶಿಬಿರಾಧಿಪತಿಗಳಾದ ಶ್ರೀ ಮರಾ ರಾಮಶೇಷ್‌ರವರು ತಿಳಿಸುತ್ತಾರೆ.

ಟ್ಯೂನಿಸ್ ಮುಖಂಡನಿಗೆ ಗುಂಡಿನೇಟು

ಆಫ್ರಿಕದ ಟ್ಯೂನಿಸಿಯಾ ದೇಶದ ರಾಜಧಾನಿ ಟ್ಯೂನಿಸ ನಗರದ ಪೌರಸಭಾ ಉಪಾಧ್ಯಕ್ಷ ಚಾಡ್ಲಿ ಕಾಸ್ಕಲ ಎಂಬುವರನ್ನು ಯುವಕನೊಬ್ಬನು ಗುಂಡಿನಿಂದ ಹೊಡೆದು ಪರಾರಿಯಾಗಿರುತ್ತಾನೆ. ಪೌರಸಭಾ ಚುನಾವಣೆಗೆ ಅವರು ನಿಲ್ಲಕೂಡದೆಂದು ಬೆದರಿಕೆ ಪತ್ರಗಳು ಬಂದಿದ್ದರೂ ಅವರು ಸ್ಪರ್ಧಿಸಿದ್ದರೆಂದು ಹೇಳಲಾಗಿದೆ.

ಲಾರ್ಡ್ ಎರ್ಸ್‌ಕೀನರ ಮರಣ

ಮದರಾಸಿನ ಮಾಜಿ ಗೌರ್ನರರಾದ ಲಾರ್ಡ್ ಎರ್ಸ್‌ಕೀನ್‌ರವರು ನೆನ್ನೆ ದಿನ ಇಂಗ್ಲೆಂಡಿನ ಸಸ್ಸೆಕ್ಸಿನಲ್ಲಿ ನಿಧನರಾದರೆಂಬ ವಾರ್ತೆ ಬಂದಿದೆ. ಅವರಿಗೆ ೫೮ ವರ್ಷ ವಯಸ್ಸಾಗಿದ್ದಿತು.

ಸಾಲಿಗ್ರಾಮಕ್ಕೆ ಮನರಂಜನೆ ತೆರಿಗೆ

ಈ ತಿಂಗಳು ೧೫ ನೇ ತಾ|| ನಿಂದ ಕೃಷ್ಣರಾಜನಗರ ತಾಲ್ಲೂಕು ಸಾಲಿಗ್ರಾಮದಲ್ಲಿ ಮನರಂಜನೆ ತೆರಿಗೆ ಶಾಸನವನ್ನು ಜಾರಿಗೆ ತರಲಾಗುವುದು.

ಕಾಂಗ್ರೆಸ್ ಚುನಾವಣಾ ಮತದಾರರ ಪಟ್ಟಿ ಪ್ರಕಟಣೆ

ಮೈಸೂರು ನಗರ ಕಾಂಗ್ರೆಸ್ಸಿನ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಿಂದ ಚುನಾವಣೆ ಸಂಬಂಧದ ಮತದಾರರ ಪಟ್ಟಿಯನ್ನು ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲೂ ಮತ್ತು ಮೈಸೂರು ತಾಲ್ಲೂಕು ಕಾಂಗ್ರೆಸ್ ಚುನಾವಣೆಗೆ ಸಂಬಂಧಪಟ್ಟ ಮತದಾರರ ಪಟ್ಟಿಯನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲೂ ನೆನ್ನೆ ಬೆಳಿಗ್ಗೆ ೧೦ ಘಂಟೆಯಲ್ಲಿ ಪ್ರಕಟಿಸಲಾಗಿದೆ. ಸಕ್ರಿಯ ಸದಸ್ಯರು ಮಾತ್ರ ಉಮೇದುವಾರಿಕೆ ಅರ್ಜಿಯನ್ನು ಸಂಬಂಧಪಟ್ಟ ಕಛೇರಿಗಳಲ್ಲಿ ೧೦ ರೂ ಶುಲ್ಕದೊಡನೆ ಚುನಾವಣಾಧಿಕಾರಿಗಳಿಗೆ ಸಲ್ಲಿಸಬಹುದೆಂದು ತಿಳಿಸಲಾಗಿದೆ.

ಮೇ ದಿನಾಚರಣೆ

ಸಂಸ್ಥಾನದ ರೈಲ್ವೆ ಕಾರ್ಮಿಕರ ಸಂಘದ ಮೈಸೂರು ಸೌತ್ ಶಾಖೆಯ ಆಶ್ರಯದಲ್ಲಿ ಕಳೆದ ಶುಕ್ರವಾರ ರೈಲ್ವೆ ವರ್ಕ್‌ಷಾಪ್ ಪ್ರದೇಶದಲ್ಲಿ ಮೇ ದಿನಾಚರಣೆಯನ್ನು ಕಾರ್ಮಿಕರು ನೆರವೇರಿಸಿದರು. ಸಮಸ್ತ ಮಾನವರಿಗೂ ಶಾಂತಿ ಮತ್ತು ಸುಖದಿಂದ ಕೂಡಿರುವ ಭವಿಷ್ಯಕ್ಕಾಗಿ ಹೋರಾಟ ನಡೆಸಲೂ, ಪ್ರಪಂಚದ ಎಲ್ಲಾ ಜನರ ಅಂತರ ರಾಷ್ಟ್ರೀಯ ಐಕಮತ್ಯ ಮತ್ತು ಸ್ನೇಹಭಾವವನ್ನು ಸಾಧಿಸುವಂತಾಗಲೂ ಹಾರೈಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಬೆಂಗಳೂರು ವಿದ್ಯಾರ್ಥಿಗೆ ಕೆನಡಾ ವಿದ್ಯಾರ್ಥಿ ವೇತನ

ಬೆಂಗಳೂರು ಟಾಟಾ ವಿಜ್ಞಾನ ಶಾಲೆಯ ಗೋಪಾಲಕೃಷ್ಣ ನಾರಾಯಣ ಭಟ್ ಎಂಬ ವಿದ್ಯಾರ್ಥಿಗೆ ಕೆನಡದ ೨ ಸಾವಿರ ಡಾಲರಿನ ಪೀಸೆಂಟ್ ಮ್ಯಾಸ್ಸೆ ವಿದ್ಯಾರ್ಥಿ ವೇತನವು ೫೩-೫೪ ನೇ ಸಾಲಿಗೆ ದೊರೆತಿರುತ್ತದೆ.

ಪಂಚ ವಾರ್ಷಿಕ ಯೋಜನೆಗಾಗಿ ೧ ರೂ.ನಂತೆ ಕಾಣಿಕೆ

ಕಳೆದ ಮೂರು ವರ್ಷಗಳಿಂದಲೂ ಭಾರತೀಯನೊಬ್ಬನು ತನ್ನ ಹೆಸರನ್ನು ತಿಳಿಸದೆ ರಾಷ್ಟ್ರದ ಪಂಚ ವಾರ್ಷಿಕ ಯೋಜನೆಗಾಗಿ ವರ್ಷಕ್ಕೆ ೫ ರೂ.ಗಳನ್ನು ಕೊಡುತ್ತಿರುವುದನ್ನು ಕಂಡು, ಈಗ ೧೦ ಜನರು ಅದೇ ರೀತಿ ಒಂದೊಂದು ರೂ ಅನ್ನು ಯೋಜನೆಯ ಸಾಫಲ್ಯಕ್ಕಾಗಿ ಕಾಣಿಕೆ ಕೊಟ್ಟಿರುವರೆಂದು ವರದಿಯಾಗಿದೆ.

ಭಾರತಕ್ಕೆ ಡಲ್ಲೆಸ್‌ರವರ ಭೇಟಿ

ಅಮೇರಿಕದ ವಿದೇಶಾಂಗ ಮಂತ್ರಿ ಜಾರ್ಜ್ ಫಾಸ್ಟರ್ ಡಲ್ಲೆಸ್‌ರವರು ಭಾರತಕ್ಕೆ ಇದೇ ತಿಂಗಳು ೨೦ ನೇ ತಾ|| ಭೇಟಿ ಕೊಡುವರು. ಅವರು ಪಾಕಿಸ್ತಾನ ಮತ್ತು ಮಧ್ಯ ಪೂರ್ವ ರಾಷ್ಟ್ರಗಳಲ್ಲೂ ಸಂಚರಿಸುವರು.

ಹೆಂಡತಿ ಮತ್ತು ಮಗುವಿನ ಬಲಿಗಾಗಿ ಗಂಡನ ಪ್ರಯತ್ನ

ಕೊಲ್ಲೆಂಗೋಡು ಬಳಿ ಕೊಡುವಯ್ಯೂರ್ ನಿವಾಸಿ ಕೃಷ್ಣನ್ ಎಂಬುವನು ಯಾವುದೋ ಪ್ರಭಾವಕ್ಕೊಳಗಾಗಿ ತನ್ನ ಹೆಂಡತಿ ಮತ್ತು ಮಗುವನ್ನು ದೇವತೆಯೊಂದಕ್ಕೆ ಬಲಿ ಕೊಡಲು ಮನಸ್ಸು ಮಾಡಿ, ಆ ಬಗ್ಗೆ ಮನೆಯಲ್ಲಿ ಪೂಜಾದಿಗಳನ್ನು ನಡೆಸುತ್ತಿದ್ದನೆಂದೂ, ಈ ವಿಷಯವನ್ನು ಅರಿತ ಅವನ ಪತ್ನಿಯು ಗ್ರಾಮದ ಪಟೇಲರಿಗೆ ತಿಳಿಸಲಾಗಿ, ಪೋಲೀಸರಿಗೆ ಸುದ್ದಿ ಮುಟ್ಟಿತೆಂದೂ, ಅವರು ಮನೆಗೆ ಬಂದು ಬಾಗಿಲನ್ನೊಡೆಯಲೆತ್ನಿಸಿದಾಗ ಕೃಷ್ಣನ್ ಮನೆಯ ಮೇಲ್ಛಾವಣಿಯನ್ನು ಹತ್ತಿ ಅಲ್ಲಿಂದ ಪೋಲೀಸರ ಮೇಲೆ ಕಲ್ಲು ಬೀರಿದನೆಂದೂ, ಅಲ್ಲಿಗೂ ಸಹ ಪೋಲೀಸರು ಬರಲು ಅವನು ಕೆಳಕ್ಕೆ ಧುಮುಕಿ ಆಯುಧವೊಂದನ್ನು ತೆಗೆದುಕೊಂಡನೆಂದೂ, ಆಗ ಸಬ್ ಇನ್ಸ್‌ಪೆಕ್ಟರು ಗುಂಡು ಹಾರಿಸಲಾಗಿ ಅವನು ಓಡಿಹೋದನೆಂದೂ ವರದಿಯಾಗಿದೆ. ಅವನನ್ನು ಬಹಳ ಪ್ರಯಾಸಪಟ್ಟು ಹಿಡಿಯಲಾಯಿತೆಂದು ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಜೆ. ಎಸ್. ಕೃಷ್ಣಮೂರ್ತಿ, ವೀಣೆ. ಮಧ್ಯಾಹ್ನ ೧ ೪೦ ಕೊಳಲು. ೨ ಶಂಕರ ಜೋಷಿ ದೇಶಗಿರಿ, ಹಿಂದೂಸ್ತಾನಿ ಸಂಗೀತ. ಸಂಜೆ ೫ ೪೦ ಮತ್ತು ೬ ೪೦ ಎಸ್. ಎಸ್. ರಾಜಮ್, ಸಂಗೀತ ೬.೧೦ ಗಾನ ವಿಹಾರ ೭ ಶಂಕರ ಜೋಷಿ ದೇಶಗಿರಿ, ಹಿಂದೂಸ್ತಾನಿ ಸಂಗೀತ ೭ ೪೦ ... ಭಾಷಣ. ೮ ಜೆ. ಎಸ್. ಕೃಷ್ಣಮೂರ್ತಿ, ವೀಣೆ ೯ ೧೫ ಇಂಗ್ಲೀಷ್ ಭಾಷಣ. ೯.೪೦ ...

"ಸುದರ್ಶನ" ವಾರ ಪತ್ರಿಕೆ

ರಾಜಧಾನಿಯ ಸಾರ್ವಜನಿಕ ಕಾರ್ಯಕರ್ತರಾದ ಶ್ರೀ ಜಿ ಸ್ವಾಮಿದಾಸ್ ರವರ ಸಂಪಾದಕತ್ವದಲ್ಲಿ ಸುದರ್ಶನ ಎಂಬ ಕನ್ನಡ ವಾರಪತ್ರಿಕೆಯು ಈ ತಿಂಗಳು ೧೮ ನೇ ತಾ|| ಸೋಮವಾರದಿಂದ ಪ್ರಕಟವಾಗಲಿದೆ. ಪತ್ರಿಕೆಗೆ ಶ್ರೀ ಎ ಗುಂಡಾಶಾಸ್ತ್ರಿಯವರು ಸಹ ಸಂಪಾದಕರು.

ಮಿತ್ರಾರೊಡನೆ ನಿಜಲಿಂಗಪ್ಪನವರ ಭೇಟಿ

೬ ತಾಲ್ಲೂಕುಗಳ ಬಗ್ಗೆ ಒಪ್ಪಂದ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಮೊನ್ನೆ ನ್ಯಾಯಾಧೀಶ ಎಲ್. ಎ. ಮಿತ್ರಾರವರನ್ನು ಭೇಟಿ ಮಾಡಿ, ಬಳ್ಳಾರಿಯ ಭವಿಷ್ಯದ ಬಗ್ಗೆ ಕನ್ನಡಿಗರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಿತ್ರಾರವರು ವಿದ್ಯಾರ್ಥಿಗಳಿಗೂ, ಮಹಿಳೆಯರಿಗೂ, ವ್ಯಾಪಾರಿಗಳಿಗೂ ಭೇಟಿಯಿತ್ತರು.

ನಿಜಲಿಂಗಪ್ಪನವರು ಮಿತ್ರಾರೊಡನೆ ಭೇಟಿಗೆ ಮುಂಚೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಬಳ್ಳಾರಿ ತಾಲ್ಲೂಕಿನ ಭವಿಷ್ಯವನ್ನು ಬಳ್ಳಾರಿ ಟೌನನ್ನು ನಿರ್ಧರಿಸಕೂಡದೆಂದು ತಿಳಿಸಿದರು. ವಿವಾದದ ಇತರ ಮೂರು ತಾಲ್ಲೂಕುಗಳ ಬಗ್ಗೆ ಒಂದು ಒಡಂಬಡಿಕೆಯಾಗಿ ಅದರ ಪ್ರಕಾರ, ಆ ತಾಲ್ಲೂಕುಗಳಲ್ಲಿ ಹೆಚ್ಚಿನ ಕನ್ನಡಿಗರು ಇರುವ ಪ್ರದೇಶಗಳನ್ನು ಮೈಸೂರಿಗೆ ಸೇರಿಸುವಂತೆಯೂ, ಕನ್ನಡ ತಾಲ್ಲೂಕುಗಳಲ್ಲಿ ಹೆಚ್ಚಿನ ತೆಲುಗರಿರುವ ಪ್ರದೇಶವನ್ನು ಆಂಧ್ರಕ್ಕೆ ಸೇರಿಸುವಂತೆಯೂ ಒಪ್ಪಿಕೊಳ್ಳಲಾಗಿದೆಯೆಂದೂ ಅವರು ತಿಳಿಸಿದರು.

ಮುಸ್ಲಿಮರಿಂದ ರಾಮಾಯಣ ಪಾರಾಯಣ

ಕೋಲಾರ ಜಿಲ್ಲೆ ಚಿಂತಾಮಣಿಯಲ್ಲಿ ಕಳೆದ ೨೦ ನೇ ತಾ|| ನಿಂದ ೨೭ ರ ವರೆಗೆ ಶ್ರೀ ರಾಮ ಸಪ್ತಾಹವು ನಡೆಯಿತು. ಅಲ್ಲಿನ ಮುಸಲ್ಮಾನ ಪಂಡಿತರಾದ ಖಾದರ್ ಸಾಹೇಬರವರು ಶ್ರೀಮದ್ರಾಮಾಯಣವನ್ನು ಪಾರಾಯಣ ಮಾಡಿದರು.

ಸಂಸ್ಥಾನಕ್ಕೆ ಇನ್ನೂ ೫೦ ಲಕ್ಷ ರೂ. ಸಹಾಯ

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ನೀರಾವರಿ ಬಾವಿಗಳನ್ನು ತೆಗೆಯಲು ಇನ್ನೂ ೫೦ ಲಕ್ಷ ರೂ ಗಳನ್ನು ಮೈಸೂರಿಗೆ ಸಾಲವಾಗಿ ಕೊಡುವಂತೆ ಕೇಂದ್ರ ವ್ಯವಸಾಯ ಇಲಾಖಾ ಕಾರ್ಯದರ್ಶಿಯವರು ಶಿಫಾರಸು ಮಾಡಿರುವರೆಂದು ವರದಿಯಾಗಿದೆ. ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಾತ್ರ ಈ ಹಣವನ್ನು ಉಪಯೋಗಿಸತಕ್ಕದ್ದೆಂದು ಷರತ್ತು ವಿಧಿಸಲಾಗುವುದೆಂದೂ ಗೊತ್ತಾಗಿದೆ.

ನಿಧನ

ರಾಜಧಾನಿಯ ಶ್ರೀರಾಂಪೇಟೆಯಲ್ಲಿರುವ ಆತ್ರೇಯ ಏಜೆನ್ಸೀಸ್ ಮಾಲೀಕರಾದ ಶ್ರೀ ರಾಮಚಂದ್ರ ಸ್ವಾಮಿಯವರ ತಂದೆ, ಶ್ರೀ ಕೃಷ್ಣಪ್ಪನವರು ನೆನ್ನೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಸಂಸ್ಥಾನದ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರ ರಾಯರಿಗೆ ಅವರು ಸಮೀಪದ ಬಂಧುಗಳು.

Edited, Printed and Published by A. R. Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ಸೂಲಿನ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★ M.V. ಭೋಜಯ್ಯ (ಫೋನ್ 446) ಬಿ. ಎ. ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 || ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧) ಮಂಗಳವಾರ ೫-೫-೧೯೫೪ [ಸಂಚಿಕೆ ೨೨೫

ನೆಹರೂ ಇದ್ದ ರೈಲನ್ನು - ಸಿಡಿಸಲು ಪ್ರಯತ್ನ -

ಸದಸ್ಯರ ರಾಜೀನಾಮೆಯಿಂದಲೇ ಫಲವಿಲ್ಲ

ಬಹಿರಂಗ ಸಭೆಯ ನಿರ್ಣಯಗಳಿಗೆ ಪುರಸಭೆ ಕಾಂಗ್ರೆಸ್ ಪಕ್ಷದ ಉತ್ತರ

ಮೈಸೂರು, ೫

ಶಾಸನವನ್ನು ಉಲ್ಲಂಘಿಸಿ ಸರ್ಕಾರಿಗೂ ಅನ್ಯಾಯ ಸವ ಪರಿಹಾರವನ್ನು ಕೊಡಬೇಕು ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೇಳುವ ನಿರ್ಣಯವು ಯುಕ್ತವಲ್ಲ ಮತ್ತು ತೊಂದರೆಗೀಡಾಗಿರುವವರಿಗೆ ಪರಿಹಾರ ನೀಡುವ ಬಗ್ಗೆ ಯಾವ ರೀತಿಯಲ್ಲೂ ಸಹಕಾರಿಯಾಗುವುದಿಲ್ಲ. ಹೀಗಿರುವುದರಿಂದ ಕಂದಾಯದಾರರು ತಮಗೆ ಪರಿಹಾರ ಬೇಕಾದಲ್ಲಿ ಕಟ ಹಾಜರಿ ಅರ್ಜಿ ಸಲ್ಲಿಸುವುದು ಒಳ್ಳೆಯದೆಂದು ಪೌರಸಭೆಯ ಕಾಂಗ್ರೆಸ್ ಪಕ್ಷದ ಸೂಚಿಸಿರುತ್ತದೆ— ಎಂಬುದಾಗಿ ಪಕ್ಷದ ಕಾರ್ಯದರ್ಶಿ ಶ್ರೀ ಟಿ ನರಸಿಂಹಯ್ಯಂಗಾರ್ಯರು ಪತ್ರಿಕಾ ಪ್ರಕಟನೆಯೊಂದರಲ್ಲಿ ತಿಳಿಸಿರುತ್ತಾರೆ ಶಾಸನದ ಪ್ರಕಾರ ನೀಡಬಹುದಾದ ಎಲ್ಲ ಪರಿಹಾರವನ್ನೂ ಕಲ್ಪಿಸಲು ಪಕ್ಷವು ಸಿದ್ಧವಿರುವುದಾಗಿಯೂ, ಶಾಸನದಲ್ಲಿಯೇ ಇರುವ ಬೇಕಾದಷ್ಟು ಅವಕಾಶವನ್ನು ಉಪಯೋಗಿಸಿಕೊಳ್ಳದೆ, ಬಹಿರಂಗ ಸಭೆಯಲ್ಲಿ ನಿರ್ಧರಿಸಿದಂತೆ ಪೌರಸಭಾ ಸದಸ್ಯರು ರಾಜೀನಾಮೆ ಕೊಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ ಮುಂದುವರಿದು ಅದರಲ್ಲಿ ಈ ರೀತಿ ಸಮರ್ಥಿಸಲಾಗಿದೆ—

ಕಂದಾಯ ದಾಖಲು ಮಾಡುವ ಅಥವಾ ಪುನರ್ವಿಮರ್ಶೆ ಮಾಡುವ ರೀತಿನ್ನೂ ಅಧಿಕಾರಿಯೇ ಮುಂತಾದವರ ಅಧಿಕಾರವನ್ನು ತಳ್ಳಿಹಾಕಲು ಪೌರಸಭೆಯ ಒಬ್ಬ ಸದಸ್ಯನಿಗಾಗಲೀ ಇಡೀ ಸಭೆಗೇ ಆಗಲೀ ಸಾಧ್ಯವಿಲ್ಲ. ಹೀಗಿರುವಾಗ ಕಳೆದ ೨೨ನೇ ತಾ ನ ದ ಬಹಿರಂಗ ಸಭೆಯಲ್ಲಿ ಮಾಡಲಾದ ನಿರ್ಣಯಗಳನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದಿರುವುದಕ್ಕೆ ಪಕ್ಷವು ವಿಷಾದಿಸುತ್ತದೆ

ಮನೆಗಂದಾಯವನ್ನು ಯಾವ ದರದಲ್ಲಿ ಗೊತ್ತುಪಡಿಸಬೇಕೆಂದು ನಿರ್ಧರಿಸಿರುವಾಗ ಬಹಿರಂಗ ಸಭೆಯಲ್ಲಿ ಮಾಡಲಾದ ಎರಡನೇ ಮತ್ತು ಮೂರನೇ ನಿರ್ಣಯಗಳಲ್ಲಿ ಹೇಳಿರುವಂತೆ ಬದಲಾಯಿಸಲು ಪೌರ ಸಭೆಗೆ ಅವಕಾಶವಿಲ್ಲ ಶಾಸನವು ವ್ಯಕ್ತಿ ವಿಶೇಷಗಳಿಗೆ ಪ್ರತ್ಯೇಕ ವಿನಾಯಿತಿಯನ್ನು ಕೊಡುವುದಿಲ್ಲ ದಾಖಲಾಂಗವು ಸರ್ಕಾರಿಗೂ ಸಮನಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿರುವಾಗ ಬಡವನಿಗೂ ಬಲ್ಲವರಿಗೂ ಬೇರೆಬೇರೆ ದರಗಳನ್ನು ಗೊತ್ತುಪಡಿಸಲು ಸಾಧ್ಯವಿಲ್ಲ ಅಲ್ಲದೆ ಸಭೆಯ ನಿರ್ಣಯದಂತೆ ೧೯೫೧-೫೨ ಮತ್ತು ೧೯೫೨-೫೩ನೇ ಸಾಲುಗಳಲ್ಲಿನ ಕಂದಾಯವನ್ನು ಆಯಾ ಮನೆಗಳ ಮೇಲೆ ಬರೆಸಲೂ ಅವಕಾಶವಿಲ್ಲ ೨೦ ಸಾವಿರ ಮನೆ ಮತ್ತು ೭೫೦೦ ನಿವೇಶನಗಳ ಪೈಕಿ ೧೯೫೧ರಲ್ಲಿ ಮನೆ ಮತ್ತು ೩೦೦ ನಿವೇಶನಗಳಿಗೆ ಕಂದಾಯವನ್ನು ಹೆಚ್ಚಿಸದಿರುವುದೇ ಅಧಿಕಾರದ ದುರುಪಯೋಗವಾಗಿಲ್ಲವೆಂಬುವಕ್ಕೆ ನಿದರ್ಶನವಾಗಿದೆ

ನಗರಾಭಿವೃದ್ಧಿ ಸಮಿತಿಯ ಪುನರ್ರಚನೆ

ಮೈಸೂರು ನಗರಾಭಿವೃದ್ಧಿ ಸಮಿತಿಯನ್ನು ಸರ್ಕಾರದವರು ಮೇ ೧ನೇ ತಾರೀಖಿನಿಂದ ಪುನರ್ರಚಿಸಿರುವರು ಶ್ರೀ ಎಸ್ ಲಿಂಗಣ್ಣನವರೇ ಪುನಃ ಅಧ್ಯಕ್ಷರಾಗಿ ನೇಮಕವಾಗಿರುವರು ಶ್ರೀಗಳಾದ ಎಸ್ ತಿರುಕೃಷ್ಣಯ್ಯಂಗಾರ್, ಕೆ ಬಸವರಾಜ ಅರಸು, ಓಟ್ ವ್ಯಾನಿಂಗ್, ಪಿ. ಸೀತಾರಾಮಯ್ಯ, ಜಿ ಅಹಮದ್ ಖಾನ್, ಪೌರಸಭೆಯ ಉಪಾಧ್ಯಕ್ಷರು, ಆರೋಗ್ಯ ಇಲಾಖೆಯ ಡೆಪ್ಯುಟಿ ಡೈರೆಕ್ಟರು, ಪೌರಸಭೆ ಕಮೀಷನರ್ ಮತ್ತು ಸರ್ಕಾರಿ ಆರ್ಕಿಟೆಕ್ಟ್ ರವರುಗಳು ಸದಸ್ಯರಾಗಿರುವರು

ಸರ್ಕಾರಿ ಕಛೇರಿಗೆ ಟ್ರಾಂ ಕೆಲಸಗಾರರ ಮೆರವಣಿಗೆ

ಮದರಾಸಿನ ಸುಮಾರು ನೂರು ಮಂದಿ ಟ್ರಾಂ ಕೆಲಸಗಾರರು ನೆನ್ನೆ ಬೆಳಿಗ್ಗೆ ಸರ್ಕಾರಿ ಕಛೇರಿಗೆ ಮೆರವಣಿಗೆ ಹೋಗಿ, ಅವರ ಮೂವರು ಪ್ರತಿನಿಧಿಗಳು ಮುಖ್ಯ ಮಂತ್ರಿ ರಾಜಾಜಿಯವರನ್ನು ಕಂಡು ಕೈಗಾರಿಕಾ ಟ್ರಿಬ್ಯೂನಲ್ಲಿನ ತೀರ್ಪು ಹೊರಬೀಳುವ ವರೆಗೆ ತಮಗೆ ಪರಿಹಾರ ನೀಡಬೇಕೆಂದೂ, ಅನುಚಿತ ನಡವಳಿಕೆಗಾಗಿ ೬೭ ಮಂದಿ ಟ್ರಾಂ ಕೆಲಸಗಾರರ ಮೇಲೆ ಹೂಡಲಾಗಿರುವ ಮೊಕದ್ದಮೆಗಳನ್ನು ವಾಪಸು ಪಡೆಯಬೇಕೆಂದೂ ಪ್ರಾರ್ಥಿಸಿ ಒಂದು ಮನವಿಯನ್ನು ಸಲ್ಲಿಸಿದರು ರಾಜಾಜಿಯವರು ಸೂಕ್ತ ಭರವಸೆಯಿತ್ತ ನಂತರ ಗುಂಪಿನವರು ಚದುರಿದರು

ಚಿತ್ರಗಳ ಅಭಾವದಿಂದ ಕರಾಚಿ ಸಿನಿಮಾಗಳ ಬಂದ್

ಕರಾಚಿಯಲ್ಲಿ ಬಹುವಾಗಿ ಭಾರತೀಯ ಚಿತ್ರಗಳನ್ನೇ ಪ್ರದರ್ಶಿಸಲಾಗುತ್ತಿದ್ದಿತೆಂದೂ, ಈಗ ಅವುಗಳ ಪ್ರದರ್ಶನಕ್ಕೆ ಅಲ್ಲಿ ರಹದಾರಿ ಕೊಡದೆ ಇರುವುದರಿಂದಲೂ ಮತ್ತು ಬೇರೆ ಚಿತ್ರಗಳು ದೊರಕದಿರುವುದರಿಂದಲೂ ಇದೇ ೧೫ನೇ ತಾರೀಖಿನಿಂದ ಅಲ್ಲಿನ ಎಲ್ಲ ಚಿತ್ರ ಮಂದಿರಗಳೂ ಮುಚ್ಚಲ್ಪಡುವುವೆಂದು ಹೇಳಲಾಗಿದೆ ಕರಾಚಿ ಬಂದರಿನಲ್ಲಿ ಸುಮಾರು ೫೦ ಭಾರತೀಯ ಚಿತ್ರಗಳಿದ್ದರೂ, ಸುಂಕದ ಅಧಿಕಾರಿಗಳು ಅವನ್ನು ಹಂಚಿಕೆಗಾರರಿಗೆ ಕೊಡುತ್ತಿಲ್ಲವೆಂದೂ, ಭಾರತೀಯ ಚಿತ್ರಗಳ ಪ್ರದರ್ಶನಕ್ಕೆ ಅಲ್ಲಿ ಇದ್ದ ಪ್ರತಿಬಂಧಕವನ್ನು ಈಗ ತೆಗೆಯಲಾಗಿದೆಯೆಂದೂ ಗೊತ್ತಾಗಿದೆ

ತಿದ್ದುಪಡಿ

ನೆನ್ನೆ ದಿನ ನಮ್ಮ ಪತ್ರಿಕೆಯಲ್ಲಿ ನಿಧನ ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿರುವ ಸುದ್ದಿಯಲ್ಲಿ ಶ್ರೀ ಎಂ ಆರ್ ಸುಬ್ಬರಾಯರು ಎಂದು ಇರುವುದಕ್ಕೆ ಪ್ರತಿಯಾಗಿ ಶ್ರೀ ಕೃಷ್ಣಪ್ಪನವರು ಎಂದು ಬಿದ್ದಿದೆ ಪ್ರಮಾದವಶಾತ್ ಆಗಿರುವ ಈ ತಪ್ಪಿಗಾಗಿ ನಾವು ಅತ್ಯಂತ ವಿಷಾದಿಸುತ್ತೇವೆ ನಿಧನರಾದವರು ಶ್ರೀ ಎಂ ಆರ್ ಸುಬ್ಬರಾಯರು ಎಂದು ವಾಚಕರು ಓದಿಕೊಳ್ಳಬೇಕೆಂದು ಕೋರುತ್ತೇವೆ

೨೦೫ಳ ಕೋಟಿ ರೂ. ಗಳ ಬಚ್ಚಿಟ್ಟ ಆದಾಯದ ಪತ್ತೆ

ಕಳೆದ ವರ್ಷ ಕೇಂದ್ರದ ವರಮಾನ ತೆರಿಗೆ ಸವಿತಿಯು ತೆರಿಗೆ ಕೊಡದೆ ಬಚ್ಚಿಡಲಾಗಿದ್ದುದೆಂದು ಹೇಳಲಾದ ೨೦೫ಳ ಕೋಟಿ ರೂ ಗಳನ್ನು ಪತ್ತೆ ಹಚ್ಚಿರುವುದಾಗಿ ಗೊತ್ತಾಗಿದೆ

ಮೈಸೂರು ಲಾರಿ ಮೇಲೆ ಮದ್ರಾಸ್ ಪೊಲೀಸರ ಗುಂಡು

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಬೈರಾಪುರದಿಂದ ಮುಳಬಾಗಿಲಿಗೆ ಕಳೆದ ೧ನೇ ತಾ|| ಸಾಮಾನು ಸಾಗಾಣಿಕೆ ಲಾರಿಯ ಮೇಲೆ ಮದ್ರಾಸು ಪೊಲೀಸರು ೭ ಬಾರಿ ಗುಂಡು ಹಾರಿಸಿದುದಾಗಿ ವರದಿಯಾಗಿದೆ ಲಾರಿಯ ೨ ಟೈರುಗಳಿಗೆ ಪೂರ್ಣವಾಗಿ ಜಖಂ ಆಗಿದೆ ಗುಂಡಿನೇಟಿನಿಂದ ಇಬ್ಬರು ಪಾರಾದರು ಹಳ್ಳಿಯಿಂದ ಸಂಸ್ಥಾನದಲ್ಲಿ ಹತೋಟಿ ರಫ್ತಾದ ದಿನ ಲಾರಿಯಲ್ಲಿ ೫೫ ಮೂಟೆ ಅಕ್ಕಿಯನ್ನು ಸಾಗಿಸಲಾಗುತ್ತಿತ್ತೆಂದು ಹೇಳಲಾಗಿದೆ ಕೋಲಾರ ಮತ್ತು ಚಿತ್ತೂರಿನ ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರುಗಳು ಸ್ಥಳ ಪರಿಶೀಲನೆಗಾಗಿ ಹೋಗಿರುವರು

ಕರಂಜಿಯಾ ಬಿಡುಗಡೆ ವಿರುದ್ಧ ಅಪೀಲು

ಬೊಂಬಾಯಿಯ ಬ್ಲಿಟ್ಸ್ ಪತ್ರಿಕಾ ಸಂಪಾದಕರಾದ ಶ್ರೀ ಕರಂಜಿಯಾರವರ ಮೇಲೆ ರುಜುವಿನ ಫೋರ್ಜರಿ ಸಂಬಂಧವಾಗಿ ಅಲ್ಲಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಹೂಡಲಾಗಿದ್ದ ಮೊಕದ್ದಮೆಯು ವಜಾ ಮಾಡಲ್ಪಟ್ಟಿತಷ್ಟೆ ಈಗ ಅಲ್ಲಿನ ಸರ್ಕಾರದವರು ಮೇಲ್ಕಂಡ ತೀರ್ಪಿನ ಮೇಲೆ ಪ್ರಾಂತ್ಯದ ಹೈಕೋರ್ಟಿನ ನಿರ್ಕೇಶ ಉಚ್ಚ ಕೋರ್ಟಿನಲ್ಲಿ ಅಪೀಲು ಹೂಡಿರುವರೆಂದೂ, ನ್ಯಾಯ ಮೂರ್ತಿ ದೇಸಾಯಿಯವರು ಅದಕ್ಕೆ ಒಪ್ಪಿಗೆಯಿತ್ತು ಅಪೀಲು ಅರ್ಜಿಯನ್ನು ಸ್ವೀಕರಿಸಿರುವರೆಂದೂ ಗೊತ್ತಾಗಿದೆ

ಟಿ ನರಸೀಪುರದಲ್ಲಿ ಆಲಿಕಲ್ಲು ಮಳೆ

ಟಿ ನರಸೀಪುರದಲ್ಲಿ ಮೊನ್ನೆ ಬಹಳ ಜೋರಾದ ಮತ್ತು ಆಲಿಕಲ್ಲಿನಿಂದ ಕೂಡಿದ ಮಳೆಯಾಯಿತು

ನೆಹರೂ ಪ್ರಯಾಣದ ರೈಲು ಮಾರ್ಗದಲ್ಲಿ ಬಾಂಬು

ಪ್ರಧಾನಿ ನೆಹರೂರವರು ನೆನ್ನೆ ಮುಂಜಾನೆ ಅಮೃತಸರ ಎಕ್ಸ್‌ಪ್ರೆಸ್ ರೈಲಿನಲ್ಲಿ ಕಲ್ಕತ್ತಾ ಬೊಂಬಾಯಿಗೆ ಪ್ರಯಾಣ ಮಾಡುತ್ತಿದ್ದಾಗ ಕಲ್ಯಾಣ ಸಿಲ್ದಾಣಕ್ಕೆ ಒಂದು ಮೈಲಿ ದೂರದಲ್ಲಿ ರೈಲು ಕಂಬಿ ಮೇಲೆ ಇಡಲಾಗಿದ್ದ ಅತ್ಯಂತ ಘೋರ ಸಿಡಿತದ ಬಾಂಬೊಂದನ್ನು ಪೊಲೀಸ್ ಕಾನ್‌ಸ್ಟೇಬಲ್ ವಿನಾಯಕ ಎಂಬಾತನು ಪತ್ತೆ ಮಾಡಿ, ರೈಲು ಆ ಪ್ರದೇಶಕ್ಕೆ ಬರಲು ಕೆಲವೇ ನಿಮಿಷಗಳಿದ್ದಾಗ ಅದನ್ನು ತೆಗೆದನೆಂದು ವರದಿಯಾಗಿದೆ ಕಲ್ಯಾಣದ ಶಿಬಿರದಿಂದ ಒಬ್ಬನು ಧಿರಾಕ್ರಿಕನು ರೈಲು ರಸ್ತೆ ಮೇಲೆ ಒಂದು ಪದಾರ್ಥವನ್ನು ಇಡುತ್ತಿದ್ದುದನ್ನು ಪೊಲೀಸನು ನೋಡಿ ಅವನ ಮೇಲೆ ಗುಂಡು ಹಾರಿಸಿದನೆಂದೂ, ಅದು ಗುರಿ ತಪ್ಪಲು, ಅವನು ಓಡಿಹೋದನೆಂದೂ ಹೇಳಲಾಗಿದೆ ಪತನ್ನಕ್ಕೆ ರೈಲಿನ ಸಂಬಂಧದ ಬೆಳಕು ಕಾಣ ಬಂದು ಬಾಂಬನ್ನು ಪೊಲೀಸನು ಕೂಡಲೇ ತೆಗೆದನೆಂದು ಹೇಳಲಾಗಿದೆ

ಇಂಡೋಚೀಣದ ಪೂರ್ಣ ಆಕ್ರಮಣ?

ಇಂಡೋಚೀಣದಲ್ಲಿ ವಿಯೆಟ್‌ಮಿನ್ ಪಡೆಗಳು ಫ್ರೆಂಚರ ಪ್ರಮುಖ ನಗರವೊಂದನ್ನು ಹಿಡಿದು, ದಕ್ಷಿಣಾಭಿಮುಖವಾಗಿ ಸಯಾಂ ದೇಶದ ಸಮೀಪಕ್ಕೆ ಬಹು ಜೋರಾಗಿ ಹೊರಟಿರುತ್ತಾರೆ ಲಾಓಸ್ ಸಂಸ್ಥಾನದ ರಾಜಧಾನಿ ಲವಂಗ ಪ್ರಭಂಗ್ ಅನ್ನು ಅವರು ಆಕ್ರಮಿಸಲು ಉದ್ದೇಶಿಸಿರುವರೆಂದು ಹೇಳಲಾಗಿದೆ. ಇಂಡೋಚೀಣವನ್ನೇ ಪೂರ್ಣವಾಗಿ ಆಕ್ರಮಿಸಲು ಮನಸ್ಸು ಮಾಡಿರುವುದಾಗಿಯೂ ಗೊತ್ತಾಗಿದೆ ಲಾಓಸ್ ಸಂಸ್ಥಾನದ ಮೇಲೆ ವಿದೇಶೀ ಸೈನ್ಯಗಳು ಆಕ್ರಮಣ ನಡೆಸಿರುವ ಬಗ್ಗೆ ವಿಶ್ವ ಸಂಸ್ಥೆಗೆ ಆ ಸಂಸ್ಥಾನದ ಪ್ರಧಾನಿ ಸೌವನ್ನಫೌಮರು ದೂರು ಕೊಟ್ಟು ಆಕ್ರಮಣವನ್ನು ಖಂಡಿಸವಂತೆ ಕೋರಲಿರುವುದಾಗಿಯೂ ಹೇಳಲಾಗಿದೆ ಆದರೆ ವಿಯೆಟ್‌ಮಿನ್ ಧಾಳಿಯನ್ನೆದುರಿಸಲು ಆ ಸಂಸ್ಥಾನವು ವಿದೇಶೀ ಸಹಾಯವನ್ನು ಅಪೇಕ್ಷಿಸುವುದಿಲ್ಲವಾಗಿಯೂ ದೇಶವನ್ನು ಕಾಪಾಡುವುದಾಗಿ ಫ್ರೆಂಚರು ತಮಗೆ ಆಶ್ವಾಸನೆಯಿತ್ತಿರುವರೆಂದೂ ಅವರು ಹೊರಗೆಡಹಿರುತ್ತಾರೆ

ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಕೃಷ್ಣಮೆನನ್

ಇಂಗ್ಲೆಂಡಿನಲ್ಲಿ ಇತ್ತೀಚಿನವರೆಗೂ ಭಾರತದ ಹೈ ಕಮೀಷನರಾಗಿದ್ದ ವಿ ಕೆ ಕೃಷ್ಣಮೆನನ್ನರನ್ನು ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಗೆ ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿ ಮದ್ರಾಸ್ ಕ್ಷೇತ್ರದಿಂದ ನಡೆಯುವ ಉಪ ಚುನಾವಣೆಯಲ್ಲಿ ನಿಲ್ಲಿಸಲಾಗುವುದು

ಬೆಂಗಳೂರಿಗೆ ಕೇಂದ್ರ ಚುನಾವಣಾ ಕಮಿಷನರರ ಭೇಟಿ

ಮಾಜಿ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಮೈಸೂರು ಶಾಸನ ಸಭಾ ಸದಸ್ಯರಾಗಿರಲು ಅನರ್ಹರೇ-ಎಂಬ ವಿಷಯವನ್ನು ವಿಚಾರಿಸಲು ಕೇಂದ್ರ ಚುನಾವಣಾ ಕಮಿಷನರ್ ಶ್ರೀ ಕೆ ವಿ ಕೆ. ಸುಂದರಂರವರು ನಾಳೆ ಬೆಂಗಳೂರಿಗೆ ಬರುವರು ೧೩ನೇ ತಾ|| ವರೆಗೂ ಅವರು ಅಲ್ಲಿರುವರು.

ಕರ್ನಾಟಕ ಏಕೀಕರಣಕ್ಕೆ ಅರ್ಧ ಸಮ್ಮತಿ

ವಕೀಲರ ಸಮ್ಮೇಳನದ ನಿರ್ಣಯ

ಹಾಸನ ೫

ಕರ್ನಾಟಕ ಏಕೀಕರಣವು ಆಗಬೇಕೆಂದೂ, ಅದಕ್ಕಾಗಿ ಕೂಡಲೇ ಗಡಿ ನಿರ್ಧಾರ ಸಮಿತಿಯೊಂದನ್ನು ಭಾರತ ಸರ್ಕಾರವು ನೇಮಿಸಿ, ಮೈಸೂರು, ಕೊಡಗು, ಮದ್ರಾಸು ಬೊಂಬಾಯಿ, ಮತ್ತು ಹೈದರಾಬಾದು ಸಂಸ್ಥಾನಗಳ ಕನ್ನಡ ಭಾಗಗಳು-ಇವುಗಳನ್ನೊಳಗೊಂಡ ಕನ್ನಡ ಸಂಸ್ಥಾನವನ್ನು ರಚಿಸಲು ಕ್ರಮ ಕೈಗೊಳ್ಳುವಂತೆಯೂ ಕೋರುವ ನಿರ್ಣಯವು ಇಲ್ಲಿ ನಡೆದ ಸಂಸ್ಥಾನದ ವಕೀಲರುಗಳ ಸಮ್ಮೇಳನದಲ್ಲಿ ಮಂಡಿಸಲ್ಪಟ್ಟು ಅರ್ಧದಷ್ಟು ಪ್ರತಿನಿಧಿಗಳು ಪರವಾಗಿಯೂ ಉಳಿದವರು ವಿರೋಧವಾಗಿಯೂ ಓಟು ಕೊಡಲಾಗಿ ಕೊನೆಗೆ ಅಧ್ಯಕ್ಷರು ತಮ್ಮ ಕ್ಯಾಸ್ಟಿಂಗ್ ಓಟನ್ನು ಉಪಯೋಗಿಸಿದ ನಂತರ ಅದು ಮಂಜೂರಾಯಿತು. ನಿರ್ಣಯದ ಪರ ಹಾಸನದ ವಕೀಲರಾದ ಶ್ರೀ ಜ್ಞಾನಸಹೇ ರಾಮಸ್ವಾಮಿಯವರೂ ವಿರೋಧವಾಗಿ ಅಲ್ಲಿನ ಸ್ವಾಗತ ಸಮಿತಿ ಅಧ್ಯಕ್ಷ, ಎಸ್ ವೆಂಕಟೇಶಯ್ಯನವರೂ ಭಾಷಣ ಮಾಡಿದರು

ಹೈಕೋರ್ಟ್ ನ್ಯಾಯಾಧೀಶರನ್ನು ಒಂದು ಸಂಸ್ಥಾನದಿಂದ ಮತ್ತೊಂದಕ್ಕೆ ವರ್ಗಾಯಿಸುವುದು ಅಗತ್ಯವೆಂದು ಸೂಚಿಸುವ ಮತ್ತೊಂದು ನಿರ್ಣಯವೂ ಅಂಗೀಕರಿಸಲ್ಪಟ್ಟಿತು

ನೀರಿಗೆ ಹಾಕಿದರೂ ಸೇದದ ಬಟ್ಟೆ

ನೀರಿಗೆ ಹಾಕಿದರೂ ಸೇದದ ಹೊಸ ಮಾದರಿಯ ಬಟ್ಟೆಯನ್ನು ಬ್ರಿಟಿಷ್ ಮತ್ತು ಆಸ್ಟ್ರೇಲಿಯಾ ವಿಜ್ಞಾನಿಗಳು ಕಂಡು ಹಿಡಿದಿರುವರೆಂದೂ ಇದರಿಂದ ಬಟ್ಟೆ ಮತ್ತು ಹೊಸೈರಿ ಕೈಗಾರಿಕೆಯಲ್ಲಿ ಭಾರಿ ಕ್ರಾಂತಿಯೇ ಆಗಲಿರುವುದಾಗಿಯೂ ವರದಿಯಾಗಿದೆ

ಲಾರಿ ಮತ್ತು ಬಸ್ಸು ಡಿಕ್ಕಿಯಲ್ಲಿ ೬ ಜನರಿಗೆ ಗಾಯ

ಮೊನ್ನೆ ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ಬಿ ಟಿ ಎಸ್. ಬಸ್ಸೊಂದಕ್ಕೆ ಸಾಮಾನು ತುಂಬಿದ ಲಾರಿಯು ಡಿಕ್ಕಿ ಹೊಡೆದ ಪರಿಣಾಮವಾಗಿ ೬ ಜನರಿಗೆ ಗಾಯವಾಯಿತು. ಶ್ರೀ ಜೋಸೆಫ್ ಎಂಬುವರಿಗೆ ತೀವ್ರ [illegible]

[illegible]

[illegible] ಹೊಟ್ಟೆ [illegible] ನನ್ನ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು ಮೇಲ್ಕಂಡಂತೆ ತಿದ್ದಿಕೊಳ್ಳಬೇಕಾಗಿ ವಿನಂತಿ

ಕೊರಿಯಾ ಖೈದಿಗಳು ಪಾಕಿಸ್ತಾನಕ್ಕೆ ?

ಸ್ವದೇಶಕ್ಕೆ ಹಿಂತಿರುಗಲಿಚ್ಛಿಸದ ಕೊರಿಯಾದ ಯುದ್ಧ ಖೈದಿಗಳನ್ನು ತಟಸ್ಥ ರಾಷ್ಟ್ರವೊಂದಕ್ಕೆ ರವಾನಿಸುವ ಬಗ್ಗೆ ಪಾಕಿಸ್ತಾನವನ್ನು ಆ ಖೈದಿಗಳ ಮೇಲ್ವಿಚಾರಕ ರಾಷ್ಟ್ರವಾಗಿರುವಂತೆ ನೇಮಿಸಲು ವಿಶ್ವ ಸಂಸ್ಥೆಯು ಸೂಚಿಸಿರುತ್ತದೆ ಕಮ್ಯೂನಿಸ್ಟರು ಈ ಸಲಹೆಯನ್ನು ಅಂಗೀಕರಿಸಲೂ ಇಲ್ಲ ಅಥವಾ ನಿರಾಕರಿಸಲೂ ಇಲ್ಲ ೮ ತಟಸ್ಥ ರಾಷ್ಟ್ರಗಳಿರುವುದಾಗಿ ಕಮ್ಯೂನಿಸ್ಟರು ಹೇಳಿ, ಪಾಕಿಸ್ತಾನವೂ ಅವುಗಳಲ್ಲಿ ಸೇರುವುದಾಗಿ ಸೂಚಿಸಿದ್ದರು ಈಗ ಅವರು ಪಾಕಿಸ್ತಾನದ ನೇಮಕಕ್ಕೆ ಸಮ್ಮತಿಸದಿದ್ದರೆ ಒಪ್ಪಂದಕ್ಕೆ ಬರಲು ಕಮ್ಯೂನಿಸ್ಟರಿಗೆ ಮನಸ್ಸಿಲ್ಲವೆಂದು ವ್ಯಕ್ತಪಡುವುದಾಗಿ ವಿಶ್ವ ಸಂಸ್ಥೆಯ ಸಂಧಾನ ಪ್ರತಿನಿಧಿ ಹ್ಯಾರಿಸನರವರು ತಿಳಿಸಿರುವರು ಪಾಕಿಸ್ತಾನವು ದಕ್ಷ ರಾಷ್ಟ್ರವಾಗಿರುವುದೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ

ಭೂದಾನ ಯಜ್ಞಕ್ಕೆ ಶೃಂಗೇರಿ ಮಠಾಧೀಶರ ಆಶೀರ್ವಾದ

ಮೈಸೂರು ಸಂಸ್ಥಾನದ ಭೂದಾನ ಯಜ್ಞ ಸಮಿತಿ ಸಂಚಾಲಕರಾದ ಶ್ರೀ ಬಿ ನಾರಾಯಣಪ್ಪ ಮತ್ತು ಅವರ ಸಹೋದ್ಯೋಗಿ ಶ್ರೀ ಅರಿಯಾರ್ ಶ್ರೀನಿವಾಸಯ್ಯಂಗಾರ್ಯರು ಶೃಂಗೇರಿಯ ಶಿರಿಯ ಜಗದ್ಗುರುಗಳನ್ನು ಭೇಟಿ ಮಾಡಿ ಭೂದಾನ ಯಜ್ಞ ಚಳುವಳಿ ವಿಷಯವನ್ನು ಅವರಿಗೆ ವಿವರಿಸಿದರು ಸರ್ವರ ಹಿತಕ್ಕಾಗಿ ನಡೆಯುವ ಯಜ್ಞವು ಯಶಸ್ವಿಯಾಗಲೆಂದು ಸ್ವಾಮಿಗಳವರು ಆಶೀರ್ವದಿಸಿದರು.

ಕೃಷ್ಣರಾಜನಗರ ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಕೃಷ್ಣರಾಜನಗರ ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆಯು ಇದೇ ತಿಂಗಳು ೩೧ ನೇ ತಾ|| ಬೆಳಗ್ಗೆ ೯-೩೦ ಮತ್ತು ಮಧ್ಯಾಹ್ನ ೨ ೫ ಗಂಟೆಗೆ ಕೃಷ್ಣರಾಜನಗರದಲ್ಲಿ ನಡೆಯಲಿದೆ ಉಮೇದುವಾರಿಕೆ ಅರ್ಜಿಯನ್ನು ೧೦ ಮತ್ತು ೧೧ ನೇ ತಾ|| ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೧ ಗಂಟೆ ವರೆಗೆ ಸ್ವೀಕರಿಸಲಾಗುವುದು ಅರ್ಜಿ ಪರಿಶೀಲನೆ ೧೪ ನೇ ತಾ|| ಬೆಳಗ್ಗೆ ೧೦ ಗಂಟೆಗೆ ವಾಪಸು ಪಡೆಯಲು ಕಡೇ ದಿನ ೧೮ ನೇ ತಾ|| ೫ ಗಂಟೆ ವರೆಗೆ ಅರ್ಜಿ ಸಲ್ಲಿಸುವವರು ೧೦ ರೂ ಶುಲ್ಕ ಕೊಡಬೇಕು

ಬಾಡಿಗೆ ಸೈಕಲ್ ಅಂಗಡಿ ಮಾಲೀಕರ ಸಂಘ

ರಾಜಧಾನಿಯ ಬಾಡಿಗೆ ಸೈಕಲ್ ಅಂಗಡಿ ಮಾಲೀಕರು ಮೊನ್ನೆ ತಮ್ಮ ಸಂಘದ ಕಛೇರಿಯಲ್ಲಿ ಸೇರಿ, ತಮಗಿರುವ ತೊಂದರೆಗಳನ್ನು ಚರ್ಚಿಸಿದರು. [illegible] ಬಾಡಿಗೆ ಸೈಕಲ್ ಅಂಗಡಿ [illegible] ಸಂಘದ ಸದಸ್ಯರಾಗಿ, [illegible] ತಮ್ಮ ಕಷ್ಟನಿಷ್ಠುರಗಳನ್ನು [illegible] ಸೂಚಿಸಲಾಯಿತು. ೯ ಜನರ ಸಮಿತಿಯೊಂದು ರಚಿಸಲ್ಪಟ್ಟಿತು. ತಿಂಗಳಿಗೆ ೪ ಆಣೆ ಚಂದಾವನ್ನು ಪ್ರತಿಯೊಬ್ಬ ಸದಸ್ಯನೂ ಕೊಡುವಂತೆ ನಿರ್ಧರಿಸಲಾಯಿತು.

ಬ್ರಿಟಿಷ್ ಕಡಲ್ಗಾಲುವೆಕೆಳಗೆ ಸುರಂಗದ ರೈಲು ಮಾರ್ಗ

ಬ್ರಿಟನ್ನು ಮತ್ತು ಫ್ರಾನ್ಸುಗಳ ನಡುವೆ ನೇರವಾದ ರೈಲ್ವೆ ಮಾರ್ಗವನ್ನು ಕಲ್ಪಿಸುವ ಬಗ್ಗೆ ಫ್ರಾನ್ಸಿನ ಶಿಲ್ಪಿ ಆಂಡ್ರಿ ಬಸ್‌ದವಾಂತ್ ಎಂಬುವರು ಪ್ಯಾರಿಸ್ಸಿನಲ್ಲಿರುವ ಮಿತ್ರ ಸೈನ್ಯ ಕೇಂದ್ರಕ್ಕೆ ಒಂದು ಸಲಹೆಯನ್ನು ನೀಡಿ ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಒಂದು ಸುರಂಗ ಮಾರ್ಗವನ್ನು ಹಾಕಲು ಸೂಚನೆಯಿತ್ತಿರುವನೆಂದೂ, ಆ ಯೋಜನೆಯು ಬಹಳ ಪ್ರಾಮುಖ್ಯವಾದುದೆಂದು ಮಿಲಿಟರಿ ಉನ್ನತಾಧಿಕಾರಿಗಳು ಭಾವಿಸಿ ಅದನ್ನು ಅಂಗೀಕರಿಸಿರುವರೆಂದೂ ಗೊತ್ತಾಗಿದೆ

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನ

ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಜರೂರು ಸಮ್ಮೇಳನವು ಬೆಂಗಳೂರಿನಲ್ಲಿ ಇದೇ ತಿಂಗಳು ೧೧ನೇ ತಾರೀಕು ಸೇರಲಿದೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಅದರ ಆರಂಭೋತ್ಸವವನ್ನು ನೆರವೇರಿಸುವರು ಹಾಸನ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ವೈ ಧರ್ಮಪ್ಪನವರು ಅಧ್ಯಕ್ಷತೆ ವಹಿಸುವರು

ಅಪ್ಪಾಜಿಗೌಡರು ಸ್ಟೋರ್ಸ್ ಪರ್ಚೇಸ್ ಸಮಿತಿ ಅಧ್ಯಕ್ಷರು

ಮೈಸೂರಿನ ಮಾಜಿ ಮಂತ್ರಿಗಳೂ, ಲಂಚ ನಿರೋಧ ಇಲಾಖಾ ಡೈರೆಕ್ಟರೂ ಆದ ಶ್ರೀ ಜೆ ಅಪ್ಪಾಜಿಗೌಡರನ್ನು ಸರ್ಕಾರದ ಸ್ಟೋರ್ಸ್ ಪರ್ಚೇಸ್ ಸಮಿತಿ ಅಧ್ಯಕ್ಷರಾಗಿ ನೇಮಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ಪಿ. ಎಂ ಕೃಷ್ಣಪ್ಪ, ನಾಗಸ್ವರ ಮಧ್ಯಾಹ್ನ ೧ ೪೦ ಪಿಟೀಲು ೨ ವನಿತಾ ವಿಹಾರ. ಸಂಜೆ ೫ ೪೦ ಪಿ. ಎಂ ಕೃಷ್ಣಪ್ಪ, ನಾಗಸ್ವರ. ೬ ೧೦ ಬಾಲ ಜಗತ್ ೭ ಶ್ರೀರಾಮುಲು ನಾಯ್ಡು, ಹಿಂದಿ ಗೀತೆ ೭ ೨೦ ಜನ ರಂಜನಿ ೭.೪೦ ನಮ್ಮ ಪುಸ್ತಕ ಭಂಡಾರ ಪುಸ್ತಕ ವಿಮರ್ಶೆ. ೮ ಎಸ್. ಚೊಕ್ಕಮ್ಮ, ವೀಣೆ ಮತ್ತು ಸಂಗೀತ. ೯.೧೫ ಎಂ.ಪಿ. ಗೋಪಿನಾಥ್, ಕನ್ನಡ ಗೀತೆಗಳು ೯.೪೦ ತಿಮ್ಮ ಮೊಳ್ಳನ ಗೀತೆಗಳು

○ ಪಾರ್ಲಿಮೆಂಟಿನ ಒಂದು ಸಭೆಯಲ್ಲಿ ಸದಸ್ಯರೊಬ್ಬರು ಮಾಡುವ ಭಾಷಣವನ್ನು ಮತ್ತೊಂದರಲ್ಲಿ ಉದಹರಿಸಕೂಡದೆಂದು ಕೇಂದ್ರ ಹಿರಿಯ ಸಭಾ ಉಪಾಧ್ಯಕ್ಷರು ರೂಲಿಂಗ್ ಕೊಟ್ಟಿರುತ್ತಾರೆ.

೨೦ ರೂ. ಕಳೆದುಹೋಗಿದೆ

ಮೈಸೂರು ನಗರದ ಲಕ್ಷ್ಮೀಪುರಂ ಪೊಲೀಸ್ ಸ್ಟೇಷನ್ ಮುಂಭಾಗದ ರಸ್ತೆಯಲ್ಲಿ ನೆನ್ನೆ ರಾತ್ರಿ ಸುಮಾರು 9 ಘಂಟೆ ಹೊತ್ತಿನಲ್ಲಿ 5 ರೂ. ಗಳ ನಾಲ್ಕು ನೋಟುಗಳು ಕಳೆದುಹೋಗಿವೆ ಅದು ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಡಿ ಸುಬ್ಬಯ್ಯ ರಸ್ತೆಯಲ್ಲಿ ಸಾಧ್ವಿ ಪತ್ರಿಕಾ ಕಛೇರಿ ಹಿಂಭಾಗದ ಮನೆಯಲ್ಲಿರುವ ಶ್ರೀ ಎಂ ಎಸ್ ನಾರಾಯಣರಾಯರಿಗೆ ತಲುಪಿಸಬೇಕಾಗಿ ಕೋರಲಾಗಿದೆ. ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಸ್ವೀಡನ್ನಿನಲ್ಲಿ ೨೫ ಸಾವಿರ ಕಾರ್ಮಿಕರ ಮುಷ್ಕರ

ಸ್ವೀಡನ್ನಿನ ೨೫ ಸಾವಿರ ಕಾರ್ಮಿಕರು ಕಳೆದ ೪೪ ವರ್ಷಗಳಿಂದಲೂ ನಡೆಯದಂತಹ ಭಾರಿ ಮುಷ್ಕರವನ್ನು ಹೂಡಿರುತ್ತಾರೆ ಕಸಾಯಿಖಾನೆಗಳಲ್ಲಿ ಮುಷ್ಕರವು ಆರಂಭವಾಗಿ, ಮುಕ್ಕಾಲು ಭಾಗ ಮಾಂಸದ ಸರಬರಾಜು ನಿಂತು ಹೋಗಿದೆ. ಹಿಟ್ಟಿನ ಗಿರಣಿಗಳು ಚಾಕೊಲೇಟು ಕಾರ್ಖಾನೆ, ಹಂದಿ ಮಾಂಸದ ಅಂಗಡಿಗಳಲ್ಲಿ ಲಾರ್ ಶಾಪ್ ಅಗಲಿದ ಬ್ರೆಡ್ ಅಂಗಡಿಗಳಿಗೂ ಮುಷ್ಕರವು ವಿಸ್ತರಿಸಲಿದೆ. ಕಾರ್ಮಿಕರು ಸಂಬಳ ಹೆಚ್ಚಿಗೆ ಕೊಡುವಂತೆ ಕೋರಿ ಮುಷ್ಕರ ಕೈಗೊಂಡಿರುತ್ತಾರೆ

ಆಲೂಗೆಡ್ಡೆಯು ೮ ತಿಂಗಳು ಕೆಡದಂತಿರಲು ಪ್ರಯೋಗ

೩೫ ರಿಂದ ೩೮ ಡಿಗ್ರಿ ಫ್ಯಾರೆನ್ ಹೀಟಿನ ಹವಾಗುಣದಲ್ಲಿ ಆಲೂಗೆಡ್ಡೆಯನ್ನು ೮ ತಿಂಗಳಕಾಲ ಕೆಡದೆ ಹೊಸದಾಗಿರುವಂತೆ ಇಟ್ಟಿರಬಹುದೆಂದು ಪ್ರಯೋಗದಿಂದ ವ್ಯಕ್ತಪಟ್ಟಿರುವುದಾಗಿ ಶ್ರೀ ಕೃಪಾಲ್ ಸಿಂಗ್ ರವರು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೨೮-೨-೦	೩೦-೦-೦
ಹರಳುಬೀಜ	೩೮-೧೪-೦	೪೦-೧೨-೦
ಹೊಂಗೇಬೀಜ	೧೯-೦-೦	೨೧-೧೨-೦
ಹುರಳಿ	೪೨-೬-೦	೪೩-೧೨-೦
ಎಳ್ಳು	೩೧-೦-೦	
ಉದ್ದು	೩೦-೦-೦	೩೧-೬-೦
ಮೆಣಸಿನ ಕಾಯಿ ಮುಂಡಿಗೆ	೨೭-೦-೦	೨೧-೧೨-೦
[illegible]	೪-೦-೦	೫-೮-೦
ಸೀಗೇಕಾಯಿ	೪-೬-೦	೪-೧೦-೦
ಬೆಲ್ಲ	೫-೧೨-೦	
ತೆಂಗಿನಕಾಯಿ ೧,೧೦೦ಕ್ಕೆ	೧೪೪-೦-೦	೨೪೦-೦-೦

ಅಂತರ ರಾಷ್ಟ್ರೀಯ ಕುಸ್ತಿ ಪಂದ್ಯ

ಕುಸ್ತಿಯಲ್ಲಿ ಭಾರತದ ಚಾಂಪಿಯನ್ ಷಿಪ್ಪಿನ ಸಂಬಂಧವಾಗಿ ಬೆಂಗಳೂರಿನಲ್ಲಿ ಈ ತಿಂಗಳು ೨ ನೇ ವಾರ ಅಂತರ ರಾಷ್ಟ್ರೀಯ ಪಂದ್ಯವೊಂದು ನಡೆಯಲಿದೆ.

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಕಿತ್ಸೆ!

ಡಿ ಲ್ ಮು ಷ್

1) [illegible] "ವಿಷಯ" ಮೊದಲಾದ [illegible] ನ್ನು [illegible].

2) [illegible]

ಪಿ. ಸೂ:— [illegible]

ಎಸ್. [illegible], ಸ್ಟೋರ್ಸ್,
2830, [illegible]
6 ನೇ ಕ್ರಾಸ್ ರೋಡ್, [illegible]
ಮೈಸೂರು.

Edited, Printed and Published by A. R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೬-೫-೧೯೫೪ [ಸಂಚಿಕೆ ೩೨೬

ಮೈಸೂರು ಸಚಿವ ಸಂಪುಟದ ಪುನರ್ರಚನೆ?

ವಸ್ತು ಪ್ರದರ್ಶನದ ಗುಮಾಸ್ತರ ಬಂಧನ

ನಕಲಿ ಟಿಕೆಟ್ಟುಗಳನ್ನು ಅಚ್ಚು ಹಾಕಿಸಿ ಮಾರಿದ ಅಪಾದನೆ

ಬೆಂಗಳೂರು, ೬

ಕೃಷಿ - ಛಾಪ್ ನಗರದಲ್ಲಿ ನಡೆ ಯುತ್ತಿರುವ ಕಾಂಗ್ರೆಸ್ ವಸ್ತು ಪ್ರದರ್ಶನಾಲಯದ ಬುಕ್ಕಿಂಗ್ ಕ್ಲಾರ್ಕುಗಳ ಲ್ಲೊಬ್ಬರಾದ ಎಚ್. ಎಸ್. ನಾಗೇಂದ್ರ ಎಂಬುವರು ನಕಲಿ ಟಿಕೆಟ್ಟು ಪುಸ್ತಕಗಳನ್ನು ಅಚ್ಚು ಹಾಕಿಸಿ, ಬುಕ್ಕಿಂಗ್ ಆಫೀಸಿನಲ್ಲಿ ಮಾರುತ್ತಿದ್ದರೆಂದು ಪ್ರದರ್ಶನ ಸಮಿತಿಯ ಪ್ರಧಾನ ಕಾರ್ಯದರ್ಶಿಯವರು ದೂರು ಕೊಟ್ಟುದರ ಮೇಲೆ ಉಪ್ಪಾರ ಪೇಟೆಯ ಪೊಲೀಸರು ನಾಗೇಂದ್ರರನ್ನು ಬಂಧಿಸಿ ತನಿಖೆ ಕ್ರಮ ಜರುಗಿಸುತ್ತಿದ್ದಾರೆ.

ಮಿರ್ಜಾರವರ ಆಗಮನ

ಬಳ್ಳಾರಿ ವಿವಾದದ ಬಗ್ಗೆ ವಿಚಾರಣೆ ನಡೆಸಲು ನೇಮಿಸಲ್ಪಟ್ಟಿರುವ ಹೈದರಾಬಾದಿನ ಶ್ರೀ ನ್ಯಾಯಾಧೀಶ ಶ್ರೀ ಎಸ್. ಎಸ್. ಮಿರ್ಜಾರವರು ನಾಳಿದ್ದು ಶನಿವಾರ ಬೆಳಿಗ್ಗೆ ಬಳ್ಳಾರಿಯಿಂದ ಇಲ್ಲಿಗೆ ಆಗಮಿಸಿ ಎರಡು ದಿನಗಳಿದ್ದು, ೧೦ ನೇ ತಾ. ವಿಮಾನದ ಮೂಲಕ ಹೈದರಾಬಾದಿಗೆ ತೆರಳುವರೆಂದು ಗೊತ್ತಾಗಿದೆ.

ಗುಮಾಸ್ತನು ಟೈಪ್‌ರೈಟರ್ ಗಿರವಿ ಇಟ್ಟ ಪ್ರಸಂಗ

ಪೆ... ಸರ್ಕಾರಿ ಇಂಜನಿಯರಿಂಗ್ ಶಾಲೆಯ ಎರಡು ಟೈಪ್‌ರೈಟರುಗಳನ್ನು ಗಿರವಿ ಮಾಡಿರುವುದಾಗಿ ಕಳೆದ ತಿಂಗಳ ಮೇ ೫ ನೇ ತಾ|| ಅವನ್ನು ಗಿರವಿ ಇಟ್ಟ ಸಂಬಂಧವಾಗಿ ಕಾಲೇಜಿನ ಗುಮಾಸ್ತೆ ಸಿ. ಡಿ. ವೈಕೇ... ಎಂಬುವನ ಮೇಲೆ ನಂಬಿಕೆ ದ್ರೋಹದ ಮೊಕದ್ದಮೆಯನ್ನು ಹೂಡಲಾಗಿದೆ.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸಭೆಯು ಇದೇ ತಿಂಗಳು ೧೬ ನೇ ತಾರೀಖು ಬೆಂಗಳೂರಿನಲ್ಲಿ ಸೇರಲಿದೆ. ಸಭೆ ಎರಡು ಗಂಟೆಗಳವರೆಗೆ ನಡೆಯುವುದನ್ನು ಇಕ್ಕೇರಿ ಶ್ರೀ ಎಚ್. ಎಸ್. ರುದ್ರಪ್ಪನವರ ನಡೆದ ದ್ರವ್ಯಸಕ್ತದ ಬಗ್ಗೆ ವರದಿ, ವಿದ್ಯುಕ್ತ ವ್ಯವಸಾಯ ಕಾಲೇಜಿನ ವರ್ಗ, ಬಳ್ಳಾರಿಯು ಮೈಸೂರಿಗೆ ಸೇರುವ ಪ್ರಶ್ನೆ ಇವುಗಳನ್ನು ಅಲ್ಲಿ ಪರಿಶೀಲಿಸಲಾಗುವುದೆಂದು ಹೇಳಲಾಗಿದೆ.

ಕೇಂದ್ರ ಮಂತ್ರಿಮಂಡಲಕ್ಕೆ ವಿ. ಕೆ. ಕೃಷ್ಣಮೆನನ್?

ಇಂಗ್ಲೆಂಡಿನಲ್ಲಿ ಭಾರತದ ಹೈ ಕಮಿಷನರಾಗಿದ್ದ ಶ್ರೀ ವಿ. ಕೆ. ಕೃಷ್ಣಮೆನನ್ನರು ಭಾರತದ ಮಂತ್ರಿಮಂಡಲಕ್ಕೆ ಸೇರುವ ಸಂಭವವಿರುವುದೆಂದು ಹೇಳಲಾಗಿದೆ.

ಊರಿಗಾಂವ್ ಗಣಿ ಮುಷ್ಕರದ ಬಗ್ಗೆ ಸಾಂಕೇತಿಕ ಮುಷ್ಕರ

ಕೋಲಾರ ಚಿನ್ನದ ಗಣಿಯ ... ತಿಂಗಳು ೩೧ ನೇ ತಾ ... ಪ್ರತಿಭಟಿ ... ಚಿನ್ನದ ಗಣಿಗಳ ೧೭ ಸಾವಿರ ... ನಿನ್ನೆ ೧ ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಿದ ... ವರದಿಯಾಗಿದೆ.

ಜಿಲ್ಲೆಯಲ್ಲಿ ರಸ್ತೆಗಳ ಕರಾಳ ಸ್ಥಿತಿ

ಜಿಲ್ಲಾ ಬೋರ್ಡು ಸಭೆಯಲ್ಲಿ ಚರ್ಚೆ

ಮೈಸೂರು ೬

ಮೈಸೂರು ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ನೆನ್ನೆ ಜೋಡಿ ನ ಕಟ್ಟಡದಲ್ಲಿ ನಡೆದು ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರ ಮಾತನಾಡಿ ಬೋರ್ಡಿನ ಪರವಾಗಿ ಇಬ್ಬರು ತ||ಗಿ|| ಮೈಲಿಯಷ್ಟು ರಸ್ತೆಗಳನ್ನು ಸರ್ಕಾರಕ್ಕೆ ವಹಿಸಿಕೊಡಬೇಕೆಂದು ಬೇಕೆವರು ಹಳ್ಳಿ ಹಳ್ಳಿ ಮತ್ತು ರಾಮನಗರ ಗಳಲ್ಲಿ ಬೋರ್ಡಿನ ಆಸ್ಪತ್ರೆಗಳ ಕಟ್ಟಡಗಳ ಕೆಲಸ ಪೂರ್ಣವಾಗಿರುವುದಾಗಿಯೂ, ದೇವನೂರಿನಲ್ಲಿ ಕೆಲಸವು ನಡೆಯುತ್ತಿರುವುದಾಗಿಯೂ ಅವರು ತಿಳಿಸಿದರು.

ರಸ್ತೆ ಕಾಂಗ್ರೆಸಿಗರ ವಿಷಯವಾಗಿ ಸ್ವಲ್ಪ ಚರ್ಚೆಯಾಯಿತು. ಶ್ರೀ ಟಿ. ಸಿ. ಜೊನ್ನಪ್ಪನವರು ಮಾತನಾಡಿ, ಮೈಸೂರು ತಾಲ್ಲೂಕಿನಲ್ಲಿ ರಸ್ತೆ, ನಿರ್ಮಾಣ ಮತ್ತು ರಿಪೇರಿಗಾಗಿ ಬೋರ್ಡಿನವರು ಸಾಕಾದಷ್ಟು ಗಮನವಿತ್ತಿಲ್ಲವಾಗಿ ಆಕ್ಷೇಪಿಸಿದರು. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟನ್ನೆಲ್ಲ ವನ್ನೂ ಮಾಡಲಾಗಿರುವುದಾಗಿ ಅಧ್ಯಕ್ಷರು ನುಡಿದರು.

ಬೋರ್ಡಿನ ಕೈಕೆಳಗಿರುವ ಆಯುರ್ವೇದ ಆಸ್ಪತ್ರೆಗಳ ಕೆಲಸ ತೃಪ್ತಿಕರವಾಗಿದೆಯೆಂದು ತಿಳಿಸಲಾಯಿತು.

ಫಜಲುಲ್ ಹಕ್‌ರವರು ಸಿಂಧ್ ಗವರ್ನರರು

ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಗವರ್ನರರಾಗಿದ್ದ ಮಿ. ಯೂನ್ ಅಮಿನ ದ್ದೀನ್ ರವರನ್ನು ಅಲ್ಲಿನ ಪಂಜಾಬ್ ಪ್ರಾಂತ್ಯದ ಗವರ್ನರರನ್ನಾಗಿ ವರ್ಗಾಯಿಸಿ, ಅವಿಭಕ್ತ ಬಂಗಾಳದ ಮಾಜಿ ಪ್ರಧಾನಿ ಎ. ಕೆ. ಫಜಲುಲ್ ಹಕ್‌ರವರನ್ನು ಸಿಂಧ್ ಗವರ್ನರರಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ. ಫಜಲುಲ್ ಹಕ್ಕರು ಪೂರ್ವ ಬಂಗಾಳದ ಅಡ್ವೊಕೇಟ್ ಜನರಲ್ಲರಾಗಿದ್ದರು. ಪಶ್ಚಿಮ ಪಂಜಾಬಿನಲ್ಲಿ ಸದ್ಯದಲ್ಲೇ ಗವರ್ನರರ ಆಡಳಿತವನ್ನು ಬಂದಿಗೆ ತಂದು ಹೊಸದಾಗಿ ಚುನಾವಣೆ ನಡೆಸುವಂತೆ ಆಜ್ಞೆಯು ಹೊರಬೀಳಲಿದೆಯೆಂದೂ ಗೊತ್ತಾಗಿದೆ.

ಲೋಕ ಸಭೆಗೆ ಆಚಾರ್ಯ ಕೃಪಲಾನಿ ಆಯ್ಕೆ

ಪಶ್ಚಿಮ ಬಂಗಾಳ ಭಾಗಲ್ಪುರ— ಪೂರ್ಣಿಯಾ ಕ್ಷೇತ್ರದಿಂದ ಪಾರ್ಲಿಮೆಂಟಿನ ಲೋಕ ಸಭೆಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿ ಆಚಾರ್ಯ ಕೃಪಲಾನಿಯವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ. ಆ ಕ್ಷೇತ್ರದಿಂದ ನಿಂತಿದ್ದ ಕಾಂಗ್ರೆಸ್ ಸ್ಪರ್ಧಿ ಅನೂಪಲಾಲ್ ಮಹತಾರವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿದ್ದಾರೆ.

ಆರ್. ಕೆ. ಷಣ್ಮುಗಂಶೆಟ್ಟರ ನಿಧನ

ಕೇಂದ್ರ ಸರ್ಕಾರದ ಮಾಜಿ ಅರ್ಥಸಚಿವ ಡಾ|| ಆರ್. ಕೆ. ಷಣ್ಮುಗಂಶೆಟ್ಟರು ನಿನ್ನೆ ಸಂಜೆ ೬ ಗಂಟೆಗೆ ಕೊಯಮತ್ತೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಕಳೆದ ಎರಡು ತಿಂಗಳಿಂದಲೂ ರಕ್ತದ ಒತ್ತಡ ಮತ್ತು ಹೃದಯ ವೇದನೆಯಿಂದ ನರಳುತ್ತಿದ್ದು ವಿಶ್ರಾಂತಿ ಪಡೆಯುತ್ತಿದ್ದರು. ಅವರಿಗೆ ೬೧ ವರ್ಷ ವಯಸ್ಸಾಗಿತ್ತು. ಅವರಿಗೆ ವೃದ್ಧ ಮಾತೆಯೂ ಪತ್ನಿ ಪತ್ನಿ ಮೂವರು ಹೆಣ್ಣು ಮಕ್ಕಳೂ ಮತ್ತು ಇಬ್ಬರು ಸಹೋದರರೂ ಇರುವರು. ದಿವಂಗತ ಷಣ್ಮುಗಂಶೆಟ್ಟರು ಮದರಾಸು ಶಾಸನ ಸಭಾ ಸದಸ್ಯರಾಗಿಯೂ, ಅಣ್ಣಾಮಲೈ ವಿಶ್ವ ವಿದ್ಯಾಲಯದ ವೈಸ್ ಚಾನ್ಸಲರಾಗಿಯೂ ಮತ್ತು ಕೆಲವು ಕಾಲ ಕೊಚ್ಚಿ ಸಂಸ್ಥಾನದ ದಿವಾನರಾಗಿಯೂ ಸೇವೆ ಸಲ್ಲಿಸಿದರು.

ಪೊಲೀಸು ಪ್ರೊಬೇಷನರುಗಳು

ನಂಜನಗೂಡು ಎ. ಎಸ್. ಪಿ. ಯವರಾಗಿರುವ ಶ್ರೀ ಎಂ. ಎಲ್. ಚಂದ್ರಶೇಖರ್ ಮತ್ತು ದಾವಣಗೆರೆಯಲ್ಲಿರುವ ಎ. ಎಸ್. ಪಿ. ಶ್ರೀ ಎಂ. ಕೆಂಪರಾಮಯ್ಯನವರನ್ನು ಕಳೆದ ಏಪ್ರಿಲ್ ಒನೇ ತಾ|| ನಿಂದ ಭಾರತದ ಪೊಲೀಸು ಸರ್ವೀಸಿನ ಅಧಿಕಾರಿಗಳಾಗಿ ತೆಗೆದುಕೊಳ್ಳಲಾಗಿದೆ.

ಸೆನೆಟ್ ಸಭೆ

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಇದೇ ತಿಂಗಳು ೧೫ ಮತ್ತು ೧೭ ನೇ ತಾ|| ಮೈಸೂರಿನಲ್ಲಿ ಸೇರಲಿದೆ.

ಮಂತ್ರಿಮಂಡಲದ ಪುನರ್ರಚನೆ ಸಂಭವ

ಸ್ವಂ. ಸ. ಪ್ರೆ. ಕ] ... ೬

ಮೈಸೂರಿನ ಮಂತ್ರಿಮಂಡಲದ ಪುನರ್ರಚನೆಯ ಸಂಭವವಿರುವುದಾಗಿ ತಿಳಿದುಬಂದಿದೆ.

ಬೆಂಗಳೂರಿಗೆ ಕೇಂದ್ರ ಚುನಾವಣಾ ಕಮೀಷನರ್

ಕೇಂದ್ರ ಚುನಾವಣಾ ಕಮೀಷನರಾದ ಶ್ರೀ ಕೆ. ವಿ. ಕೆ. ಸುಂದರಂರವರು ಇಂದು ಸಂಜೆ ೬ ಗಂಟೆಗೆ ಮದ್ರಾಸಿನಿಂದ ಆಗಮಿಸುವರು. ... ನೇ ತಾ|| ಅವರು ಮಾಜಿ ಮಂತ್ರಿ ... ಸಿದ್ದ... ಸವರ ಶಾಸನ ಸಭಾ ಸದಸ್ಯತ್ವದ ಅನರ್ಹತೆ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸುವರು.

○ ಮದ್ರಾಸಿನ ... ಧಾರ್ಮಿಕ ಸಂಸ್ಥೆಗಳ ಮಂತ್ರಿ ಶ್ರೀ ವೆಂಕಟಕೃಷ್ಣ ... ಇಲ್ಲಿಗೆ ಆಗಮಿಸಿ ರತ್ತಾರೆ. ಅವರು ಕೊಳ್ಳೇಗಾಲಕ್ಕೆ ಸದ್ಯದಲ್ಲೇ ತೆರಳಲಿರುವರು.

ರೈಲು ಕಂಬಿ ಮೇಲಿದ್ದುದು ಬಾಂಬಲ್ಲ: ಪಟಾಕಿ

ಪ್ರಧಾನಿ ನೆಹರೂರವರು ಬೊಂಬಾಯಿಗೆ ಪ್ರಯಾಣ ಮಾಡುತ್ತಿದ್ದಾಗ ಮೊನ್ನೆ ಕಲ್ಯಾಣ್ ಸ್ಟೇಷನ್ನಿನ ಬಳಿ ರೈಲು ಕಂಬಿ ಮೇಲೆ ಬಾಂಬು ಇರಿಸಲಾಗಿದ್ದಿತೆಂದು ಬಂದಿದ್ದ ವದಂತಿಗೆ ಸಂಬಂಧವಾಗಿ ಕೇಂದ್ರ ಮತ್ತು ಬೊಂಬಾಯಿ ಸರ್ಕಾರದವರು ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತಾರೆ. ಕಂಬಿಗಳ ಮೇಲೆ ಇಟ್ಟ ಎರಡು ವಸ್ತುಗಳು ಬಾಂಬುಗಳಲ್ಲವೆಂದೂ, ಅವು ಪಟಾಕಿಯೆಂದೂ, ಅವು ಸಿಡಿದಿದ್ದರೂ ಯಾವ ನಷ್ಟವೂ ಆಗುತ್ತಿರಲಿಲ್ಲವೆಂದೂ ಅದರಲ್ಲಿ ತಿಳಿಸಲಾಗಿದೆ. ಕೋಲಾಹಲವನ್ನುಂಟುಮಾಡುವ ಉದ್ದೇಶದಿಂದ ಅವನ್ನು ಇಡಲಾಗಿದ್ದಿತೆಂದೂ ಭಾವಿಸಲಾಗಿದೆ.

ಕೊಹಿನೂರು ವಜ್ರದ ವಾಪಸಿಗೆ ಪ್ರಯತ್ನ

ಬ್ರಿಟಿಷ್ ಚಕ್ರವರ್ತಿನಿಯ ಕಿರೀಟದಲ್ಲಿ ಸೇರಿಸಿದ ಕೊಹಿನೂರು ವಜ್ರವನ್ನು ... ಪ್ರಯತ್ನಗಳನ್ನು ... ಬ್ರಿಟಿಷ್ ಸರ್ಕಾರದವರು ... ಈ ವಜ್ರವು ಬ್ರಿಟಿಷ್ ಅರಸರ ಕಿರೀಟದಲ್ಲಿ ಸೇರಿಸಲ್ಪಟ್ಟಿರುತ್ತದೆ. ಈ ವಜ್ರವನ್ನು ಹಿಂತಿರುಗಿ ಕೊಡಲು ಬ್ರಿಟಿಷ್ ಸರ್ಕಾರಕ್ಕೆ ಸಾಧ್ಯವಿಲ್ಲವೆಂದು ಲಂಡನ್ನಿನ ಡೈಲಿ ಮಿರರ್ ಪತ್ರಿಕೆಯು ತಿಳಿಸುತ್ತದೆ. ರಕ್ಷಿತ ಬ್ರಿಟಿಷ್ ರಾಜ್ಯದ ಸ್ವತ್ತಲ್ಲವೆಂದೂ ರಾಣಿ ವಿಕ್ಟೋರಿಯಾರವರಿಗೆ ಬಳುವಳಿಯಾಗಿ ಬಂದುದರಿಂದ ಅದು ರಾಜಮನೆತನದ ಸ್ವತ್ತಾಗಿರುವುದೆಂದೂ ಅದು ಹೇಳುತ್ತದೆ.

ಯುದ್ಧ ಖೈದಿಗಳ ಸಾಮೂಹಿಕ ರವಾನೆಗೆ ವಿರೋಧ

ಸ್ವದೇಶಕ್ಕೆ ಹಿಂತಿರುಗಲು ಇಚ್ಛಿಸದ ಯುದ್ಧ ಖೈದಿಗಳನ್ನೆಲ್ಲಾ ಸಾಮೂಹಿಕವಾಗಿ ತಟಸ್ಥ ರಾಷ್ಟ್ರಕ್ಕೆ ಕಳುಹಿಸಲು ವಿಶ್ವ ಸಂಸ್ಥೆಯು ಒಪ್ಪುವುದಿಲ್ಲವಾಗಿ ವರದಿಯಾಗಿದೆ. ಅನೇಕ ಖೈದಿಗಳು ಕೋರಿಯಾವನ್ನು ಬಿಡುವುದಕ್ಕಿಂತಲೂ ಪ್ರಾಣ ಬಿಡಲು ತಯಾರಾಗಿರುವುದಾಗಿ ವಿಶ್ವ ಸಂಸ್ಥೆ ಸಂಘಾನದ ಅಧಿಕಾರಿ, ಹ್ಯಾರಿಸನ್‌ರವರು ಹೇಳುತ್ತಾರೆ.

ವಿಷ ವಾಯುವಿದ್ದ ಭಾವಿಗೆ ಇಳಿದ ಮೂವರ ಮರಣ

ಸಿಕಂದರಾಬಾದಿಗೆ ೩೦ ಮೈಲಿ ದೂರವಿರುವ [illegible] ಎಂಬ ಹಳ್ಳಿಯಲ್ಲಿ ಭಾವಿಯೊಂದನ್ನು ಆಳವಾಗಿ ತೋಡುವ ಕಾರ್ಯದಲ್ಲಿ ೩ ಜನರು ಭಾವಿಯೊಳಗಿನ ವಿಷವಾಯು ಬಿನಿಂದ ಮೃತಪಟ್ಟದ್ದಾಗಿ ವರದಿಯಾಗಿದೆ. ತೋಡುವ [illegible] ಒಬ್ಬ [illegible] ಬಂದ [illegible] ಮುಂಡಾಸವನ್ನು ಹಾಕಿ ಅದಕ್ಕೆ ಬೆಂಕಿ ಹಚ್ಚಲು ಮತ್ತೊಬ್ಬ ಪ್ರಯತ್ನಪಟ್ಟನೆಂದೂ, [illegible] ಇರಲಿಲ್ಲ [illegible] [illegible] ಅವನೂ [illegible] ಬಿದ್ದ [illegible] ಅವನೂ [illegible] ಲಿಲ್ಲವೆಂದೂ ಅನಂತರ [illegible] ಜನರ ಒಂದು [illegible] ಯನ್ನು [illegible] ಅವು ಸತ್ತು [illegible] ದುದೆಂದೂ ವೇದ್ಯವಾಗಿದೆ [illegible] ಇದೀಗ [illegible] ಸಿದೆ.

ಅಮೆರಿಕಾ ಗವರ್ನರುಗಳ ಸಭೆ

[illegible]

ವಿವಾಹದ ಸಂಗಡದ ಗಿಡ ಮುಂದಿ ಬೆಂಕಿಗೆ ಆಹುತಿ

[illegible] ಹಳ್ಳಿಯಲ್ಲಿ [illegible] ವಿವಾಹದ [illegible] ಹೆಂಗಸರು ಮತ್ತು ಮಕ್ಕಳು ಮಲಗಿದ್ದ ಒಂದು ಗುಡಿಸಲಿಗೆ ಬೆಂಕಿ ಬಿದ್ದು, ಎಲ್ಲರೂ ಬೆಂದುಹೋದರೆಂದು ವರದಿಯಾಗಿದೆ. ಗುಡಿಸಲಿನ ಬಾಗಿಲ ಚಿಲಕವನ್ನು ಹಾಕಲಾಗಿದ್ದಿತು.

ಸಂಗೀತ ಕಛೇರಿ

ರಾಜಧಾನಿಯ ಶ್ರೀ ವರಲಕ್ಷ್ಮಿ [illegible] ಆಸ್ಪತ್ರೆಯಲ್ಲಿ ನಾಳೆ [illegible] ಘಂಟೆಗೆ ಸರಸ್ವತಿ ಪೂಜೆಯನ್ನು ಸಂಸ್ಕೃತ ಕೃಷ್ಣಮೂರ್ತಿಪುರಂ ಸಂಗೀತ [illegible] ಆಚರಿಸಲಾಗುವುದು. [illegible] ಅಂಗವಾಗಿ ಬೆಂಗಳೂರಿನ ಕರ್ನಾಟಕ ಸಂಗೀತ ಕಾಲೇಜಿನ ಪ್ರಿನ್ಸಿಪಾಲ್ [illegible]

[illegible]

ವಿಜಯ [illegible] ಚಿತ್ರ

ಮಂಗಮ್ಮ ಶಪಥಂ

[illegible]

ರಷ್ಯಾ ನಲಯುವನ್ನು ಆಶ್ಚೀನಿಯನಾ ತ್ಯಜಿಸುವುದೇ?

ರಷ್ಯಾ [illegible] ರಾಷ್ಟ್ರಗಳ ಪ್ರತಿ ಒಂದಾ [illegible] ನಿಯತ್ರ [illegible] ದೀವ ತಪ್ಪಿಸಿಕೊಳ್ಳಲಿರುವುದಾಗಿ ವಾಸಿಂಗ್‌ಟನ್ನಿನಲ್ಲಿರುವ ಗ್ರೀಸಿನ ರಾಯಭಾರಿಯು ತಿಳಿಸಿರುತ್ತಾರೆ.

ಹುಣಸೂರು ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಹುಣಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಚುನಾವಣೆ ಬಗ್ಗೆ ಚುನಾವಣಾಧಿಕಾರಿಗಳಾದ ಶ್ರೀ ಎಂ. ಎ. ಶ್ರೀನಿವಾಸರು [illegible] ವೇಳಾ ಪಟ್ಟಿಯೊಂದನ್ನು [illegible] ಪಡಿಸಿರುತ್ತಾರೆ. ಅದರಂತೆ [illegible] ನೇ ತಾ॥ ಬೆಳಗ್ಗೆ [illegible] ವರೆಗೆ ಉಮೇದುವಾರಿಕೆ ಅರ್ಜಿ ಸ್ವೀಕಾರವೂ [illegible] ನೇ [illegible] ಗಂಟೆವರೆಗೆ [illegible] ಅರ್ಜಿ [illegible] ಗಳ ಪಟ್ಟಿಯನ್ನು [illegible] ಹಣವನ್ನು ಯಾವ [illegible] ವಾಪಸು ಕೊಡಲಾಗುವುದಿಲ್ಲವೆಂದೂ, ಪಕ್ಷದ ಸದಸ್ಯರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುವರು [illegible] ತಿಳಿಸಲಾಗಿದೆ.

ತರುಣಿಯ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ದಂಡ

[illegible] ಕೊಡುವುದಾಗಿ [illegible] ವರ್ಷದವಳನ್ನು [illegible] ಕಲಾಸಿಪಾಳ್ಯದ ಬಸ್ [illegible] ಕೊಠಡಿಗೆ ಕರೆತಂದು ಅತ್ಯಾಚಾರ ನಡೆಸಿದರೆಂದು ಬೆಂಗಳೂರಿನ ಹಣ್ಣು ವ್ಯಾಪಾರಿಗಳಾದ ಅಬ್ದುಲ್ ಅಜೀಜ್ ಮತ್ತು ಬಾಬಾದರ್ ಎಂಬುವರಿಗೆ [illegible] ನೇ ನ್ಯಾಯಾಧೀಶರು ತಲಾ [illegible] ರೂ ದಂಡ ತಪ್ಪಿದರೆ [illegible] ಸಜಾವನ್ನು ವಿಧಿಸಿರುವರು.

ಗ್ರಂಥಗಳ ಸ್ವೀಕಾರ

ಮದ್ರಾಸಿನಲ್ಲಿರುವ ಅಮೆರಿಕದ ವಾರ್ತಾ ಸಂಸ್ಥೆಯವರು ನಮಗೆ ಕಳುಹಿಸಿರುವ, ಕೆಳಗೆ ಕಂಡ ಗ್ರಂಥಗಳನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿರುತ್ತೇವೆ –

ಜಾನ್ ಗಂದರ್‌ರವರ ರೂಸ್‌ವೆಲ್ಟ್, ಎಡ್ವರ್ಡ್ ಸ್ಟೀವನ್ಸ್‌ರವರ ರಷ್ಯಾ, ಟಾರ್ನ್‌ಗಾಲ್ಟ್ ದಿಟ್ಟತನದ ಹೊಸಯೋಜನೆ ವಿಶ್ವ ಸಂಸ್ಥೆ ಮತ್ತು ಯುವಕರು (ಎಲಿನಾರ್ ರೂಸ್‌ವೆಲ್ಟ್) ಸ್ಟೀಫನ್ ವಿನ್‌ಸೆಂಟ್ ಬೋನೆಯವರ ಅಮೆರಿಕ ಜನತಾ ಸರ್ಕಾರ, ಪಾಲ್ ಹಾಫ್‌ಮನ್‌ರವರ ಶಾಂತಿ ಸಾಧನೆ, ಫ್ರೆಡರಿಕ್ ಮಾರ್ಟಿನ್‌ರವರ ವರ್ಗ ರಹಿತ ಸಮಾಜ ರಾಬರ್ಟ್ ಮ್ಯಾಗಡಾಫ್‌ರವರ ಕೋಶ ಮತ್ತು ಕನಿಕರದಲ್ಲಿ, ಅಮೆರಿಕ ಕೆಲವು ವಾಸ್ತವಾಂಶಗಳು, ನಾಲ್ಕು ಅಂಶಗಳ ಯೋಜನೆ ಮತ್ತು ನೀಗ್ರೋ [illegible]

ಬೆಂಗಳೂರು ಅಭಿವೃದ್ಧಿಗಾಗಿ ೧ ಕೋಟಿ ರೂ ಯೋಜನೆ

ಬೆಂಗಳೂರು ನಗರದ ಅಭಿವೃದ್ಧಿಗಾಗಿ ೧ ಕೋಟಿ ರೂ ಗಳ ಭಾರಿ ಯೋಜನೆಯನ್ನು ತಯಾರಿಸಿರುವುದಾಗಿಯೂ, ಕಳೆದ ಎರಡು ವರ್ಷಗಳಲ್ಲಿ ಈ ಸಂಬಂಧ [illegible] ಲಕ್ಷ ರೂ ಗಳಷ್ಟು ಕೆಲಸವು ನಡೆದಿರುವುದಾಗಿಯೂ ಇಲ್ಲಿನ ಪೌರ ಸಭಾಧ್ಯಕ್ಷ ಶ್ರೀ ಸಿ ಹನುಮಂತಯ್ಯನವರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಸಂಗೀತ ಮಧ್ಯಾಹ್ನ [illegible] ಕನ್ನಡ ಗೀತೆಗಳು [illegible] ರಾಗಮಾಲಿಕೆ [illegible] ಕೇಳಲು [illegible] ಗಾಯನ [illegible] ಶ್ರೀನಿವಾಸಯ್ಯ ಭಾರತ ವಾಚನ [illegible] ಸಂಗೀತ [illegible] ಚಿತ್ರಲೋಕ [illegible] ರಾಗಲೋಕ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೩೬-೧೪-೦	೩೮-೦-೦
ಹರಳುಬೀಜ	೩೮-೧೦-೦	೪೦-೨-೦
ಹೊಂಗೇಬೀಜ	೨೦-೬-೦	೨೮-೧೨-೦
ಹುರುಳಿ	೪೨-೦-೦	೪೨-೧೦-೦
ಹೆಸರು	೬೪-೬-೦	೬೪-೧೦-೦
ಹಲಸಂದೆ	೪೫-೦-೦	೫೪-೬-೦
ಎಳ್ಳು	೭೫-೦-೦	
ಹುಚ್ಚೆಳ್ಳು	೫೦-೨-೦	
ಉದ್ದು	೩೪-೮-೦	
ಮೆಣಸಿನ ಕಾಯಿ ಮಣಕ್ಕೆ	೧೦-೮-೦	೨೧-೮-೦
ಹುಣಸೇಹಣ್ಣು	೪-೬-೦	೫-೩-೦
ಸೀಗೇಕಾಯಿ	೪-೪-೦	೪-೧೧-೦
ಬೆಲ್ಲ	೫-೧೨-೦	
ತೆಂಗಿನಕಾಯಿ ೧,೦೦೦ಕ್ಕೆ	೧೪೦-೦-೦	೨೫೦-೦-೦

ಉಪಾಧ್ಯಾಯರ ವರ್ಗಾವರ್ಗಿಯಲ್ಲಿ ತೊಂದರೆ

ರಾಮನಗರದ ಶ್ರೀ ರಾಮಸ್ವಾಮಿಯವರು ಈ ರೀತಿ ತಿಳಿಸಿರುತ್ತಾರೆ.—

ಈ ಸಾಲಿನ ಎಲ್ಲಾ ದರ್ಜೆಯ ಉಪಾಧ್ಯಾಯರ ವರ್ಗಾವರ್ಗಿಗಳನ್ನು ನಿಯಮಗಳಿಗನುಸಾರವಾಗಿ ಬೇಸಿಗೆ ರಜದಲ್ಲೇ ಎಂದರೆ, ಪಾಠಶಾಲೆಗಳು ತೆರೆಯುವ ಮುಂಚೆಯೇ ನಡೆಸಿದರೆ ಎಲ್ಲ ಉಪಾಧ್ಯಾಯರುಗಳಿಗೂ ಉಪಕಾರವಾಗುವುದು. ಐದು ವರ್ಷಗಳಿಗೊಮ್ಮೆ, ಒಂದು ಕಡೆಯಿರುವ ಉಪಾಧ್ಯಾಯರನ್ನು ವರ್ಗ ಮಾಡಬೇಕೆಂದಿರುವ ನಿಬಂಧನೆಯ ವಿಷಯದಲ್ಲಿ ಅನೇಕ ಚಮತ್ಕಾರಗಳು ನಡೆಯುತ್ತಿವೆ. ಹತ್ತಿರವಿರುವ ಉಪಾಧ್ಯಾಯರು ಒಬ್ಬರೊಡನೆ ಒಬ್ಬರು ಮಾತಾಡಿಕೊಂಡು ಪರಸ್ಪರ ವರ್ಗಾವಣೆ ಹೊಂದುತ್ತಾರೆ. ಇದೂ ಅಲ್ಲದೆ ಇನ್ನೂ ಹಲವು ಅಕ್ರಮಗಳು ನಡೆಯುತ್ತವೆ. ಇಂತಹುದನ್ನು ತಪ್ಪಿಸಿ ಎಲ್ಲ ಉಪಾಧ್ಯಾಯರ ಬಗ್ಗೆಯೂ ನ್ಯಾಯವಾದ ಪಕ್ಷಪಾತರಹಿತ ಇರುವಂತೆ ಮಾಡಬೇಕಾದುದು ಅಗತ್ಯ.

ಒಲಂಪಿಯಾ ಟಾಕೀಸ್

7-5-53 ರಿಂದ ಅನೇಕ ಪ್ರಾರಂಭ
ಪ್ರತಿ ದಿನ 3 ಆಟಗಳು
ಅತ್ಯುತ್ಕೃಷ್ಟ ಸಾಮಾಜಿಕ ಚಿತ್ರ
ಸಂಗೀತ, ಹಾಸ್ಯದಿಂದೊಳಗೊಂಡ
ಮಧುಕರ್ ಪಿಕ್ಚರ್ಸ್‌ರವರ

ದಾಮನ್

ದಾಸ್ತ್ರ – ನಿಗಾರ್‌ಸುಲ್ತಾನ್, ಅಜಿತ್, ಹೀರಾಲಾಲ್, ಯಶೋಧರಾ ಕಟ್ಟು ಮುಂತಾದವರು

ಬೆಳಗಿನ ಪ್ರದರ್ಶನ: 7 5 53 ರಿಂದ
4 ದಿನಗಳು ಮಾತ್ರ ಬಾಬುಲ್

ಮನೆ ಕ್ರಯಕ್ಕಿದೆ

ಡೋರ್ ನಂ 579 :: ಎಲ್ಲೆ ಮಿಷರ್ ಬೀದಿ
ಹಾಲ್, ನೆಲ್ಲಿ, [illegible] ಇರುವ ವಿಶಾಲವಾದ ತಾರಸೀ ಮನೆ
ಮತ್ತು ಹೆಂಚಿನ ಔಟ್‌ಹೌಸ್ ಸಹಾ

ಜಯ ಅಂಡ್ ಕಂಪೆನಿ,
ಮನೆ, ಜಮೀನು ಮತ್ತು ಸಾಲ ಕೊಡಿಸುವ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಸಯ್ಯಾಜಿರಾವ್ ರಸ್ತೆ
ಮೈಸೂರು :: ಫೋನ್ ನಂ 520

ಮೋತೀಲಾಲ್ ಟಾಕೀಸ್

ಮಂಡಿ ಮೊಹಲ್ಲ ಮೈಸೂರು
8-5 53 ರಿಂದ : ಅನೇಕ ಪ್ರಾರಂಭ
ಪ್ರತಿ ದಿನ 3 ಆಟಗಳು
ಉಮಾ ಮತ್ತು ಓಂ ಫಿಲಂಸ್‌ರವರ ತಮಿಳು ಚಿತ್ರ

★ ಪಣಕ್ಕಾರಿ ★

ಮತ್ತು ಟಿ ಆರ್ ರಾಜಕುಮಾರಿ ಎಂ ಜಿ ರಾಮಚಂದ್ರನ್ ವಿ ನಾಗಯ್ಯ, ಯೋಗನುಂಗಳಂ, ಡಿಸ್ಟ್ರಿಂಗರ್ ಮುಂತಾದವರು

ಬರುತ್ತದೆ! ಬರುತ್ತದೆ!
ಎಸ್ ಸಿ ಪ್ರೊಡಕ್ಷನ್ಸ್‌ರವರ "ಜಿನೋವ", "ಸಂದೇಹ"

ಟಿ. ನರಸೀಪುರದಲ್ಲಿ ನಮ್ಮ ಏಜೆಂಟರು

ಟಿ.ನರಸೀಪುರದಲ್ಲಿ ಬಸ್ ಸ್ಟ್ಯಾಂಡ್ ಬಳಿ ಇರುವ ಶ್ರೀ ವೇಣುಗೋಪಾಲ ಸ್ಟೋರ್ಸಿನ ಮಾಲೀಕರಾದ ಶ್ರೀ ಎ. ಜಿ. ಗುಂಡಪ್ಪನವರನ್ನು ನಮ್ಮ ಪತ್ರಿಕೆಯ ಏಜೆಂಟರಾಗಿ ನೇಮಿಸಲಾಗಿದೆ. ವಾಚಕರೂ, ಹಿತೈಷಿಗಳೂ ಅವರೊಡನೆ ಸಹಕರಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕ
ಸಾಧ್ವಿ ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೭-೫-೧೯೫೩ [ಸಂಚಿಕೆ ೨೨೭

ಸಿದ್ದಲಿಂಗಯ್ಯನವರ ಅರ್ಹತೆ ಬಗ್ಗೆ ವಿಚಾರಣೆ

ಒಡವೆ ಅಪಹಾರಕ್ಕಾಗಿ ಪತ್ತೆಗಿರಿ

ಮೈಸೂರು ೭

ಚಿಕ್ಕಮಗಳೂರು ಜಿಲ್ಲೆ ಬಿಡಾರಂ ಕೃಷ್ಣಪ್ಪನವರ ... ಸೀತಾರಾಮ ಮಂದಿರದ ಸಮೀಪದಲ್ಲಿ ವಾಸವಾಗಿರುವ ಕೃಷ್ಣ ಭವನದ ... ಅವರ ಸಹೋದ್ಯೋಗಿ ... ಅವರ ಮನೆಯಲ್ಲಿ ಮೊನ್ನೆ ಸಂಜೆ ಯಾರೂ ಇಲ್ಲದಿರುವಾಗ ಬೀಗಗಳನ್ನು ಒಡೆದು ೧೫,೦೦೦ ರೂ ಬೆಲೆಯ ನಗ ನಾಣ್ಯಗಳನ್ನು ಅಪಹರಿಸಲಾಯಿತೆಂದೂ, ಮನೆಯಿಂದ ಪದಾರ್ಥಗಳನ್ನು ಗಂಟಿನಲ್ಲಿ ಕಟ್ಟಿಕೊಂಡು ಹೊರಕ್ಕೆ ಬಂದ ಒಬ್ಬನ ಬಗ್ಗೆ ಅನುಮಾನ ಬಂದು ಹೊರಗಡೆ ಜನರು ಕೂಗಿಕೊಳ್ಳಲಾಗಿ ಅವನು ಓಡಲು ಉದ್ಯುಕ್ತನಾಗಲು ಅವನನ್ನು ಪೋಲೀಸರು ಬಂಧಿಸಲಾಯಿತೆಂದೂ ವರದಿಯಾಗಿದೆ. ಅವನ ಹೆಸರು ಅನಂತಪುರದ ... ನೆಂದು ಹೇಳಲಾಗಿದೆ.

ಕಾಂಗ್ರೆಸ್ ಕೆಲಸಗಾರರ ಸಭೆ

ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಚುನಾವಣೆ ಸಂಬಂಧದಲ್ಲಿ ಉಮೇದುವಾರಿಕೆ ಶುಲ್ಕವನ್ನು ಹೆಚ್ಚಿಸಿರುವ ಬಗ್ಗೆ ಪರಿಶೀಲನೆ ನಡೆಸಲು ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ... ನಾಳೆ ಸಂಜೆ ೫ ಗಂಟೆಗೆ ಮೊಹಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯವರಾದ ಶ್ರೀ ಜಿ. ಜನಾರ್ದನ ನಾಯ್ಡುರವರು ಕರೆದಿರುತ್ತಾರೆ. ಕಾಂಗ್ರೆಸ್ಸಿನವರೆಲ್ಲರಿಗೂ ಈ ವಿಷಯವು ... ದಿಸಿರುವುದರಿಂದ ಸಭೆಗೆ ಇತರ ... ಕಾಂಗ್ರೆಸ್ ಕಾರ್ಯಕರ್ತರೂ ಬರಬೇಕೆಂದೂ ಕೋರಲಾಗಿದೆ.

ಉಮೇದುವಾರಿಕೆ ಶುಲ್ಕದಲ್ಲಿ ಮೋಸ ಇಲ್ಲ

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿಯವರಾದ ಶ್ರೀ ಟಿ. ಮರಿಯಪ್ಪನವರು ಸೂಚನೆಯೊಂದನ್ನು ಕಳಿಸಿ, ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣಾ ಸಂಬಂಧವಾಗಿ ಉಮೇದುವಾರಿಕೆ ಬಗ್ಗೆ ಕೊಡಬೇಕಾಗಿರುವ ೧೦ ರೂ. ಶುಲ್ಕವನ್ನು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಿಗೆಯಿಲ್ಲದೆ ಮೋಸ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ವಿಶ್ವೇಶ್ವರಯ್ಯನವರು ಮಾಜಿ ಮೈಸೂರು ರಾಜರು?

ಈ ವರ್ಷದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಹಲವು ವಿದ್ಯಾರ್ಥಿಗಳು ... ಉತ್ತರಗಳನ್ನು ಬರೆದಿರುತ್ತಾರೆ. ಮಾಜಿ ದಿವಾನರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರಿನ ಮಾಜಿ ಮಹಾರಾಜರೆಂದು ಒಬ್ಬನು ... ವಾಣಿ ವಿಲಾಸ ಸಾಗರ ... ಸಿನಿಮಾ ಮಂದಿರವೆಂದೂ, ... ಒಬ್ಬ ಹೆಂಗಸಿನ ಹೆಸರೆಂದೂ ಹಲವರು ಉತ್ತರದಲ್ಲಿ ಬರೆದಿರುತ್ತಾರೆ. ... ನಗರವು ಕಾವೇರಿ ನದಿ ತೀರದಲ್ಲಿರುವುದಾಗಿಯೂ, ನ್ಯೂಯಾರ್ಕ್ ನಗರವು ಚೀಣಾದ ರಾಜಧಾನಿಯೆಂದೂ, ಮಹಾತ್ಮಾ ಗಾಂಧಿಯವರು ಭಾರತದ ಕಡೆಯ ಗೌರ್ನರ್ ಜನರಲ್ಲೆಂದೂ ವಿದ್ಯಾರ್ಥಿಗಳು ತಿಳಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಮೂಹಿಕ ಯೋಜನೆ

ಬೆಂಗಳೂರು ೭

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿಗಳಲ್ಲಿ ಸಾಮೂಹಿಕ ಯೋಜನಾ ಕಾರ್ಯಗಳನ್ನು ಕೈಗೊಳ್ಳುವಂತೆ ಮೈಸೂರು ಸರ್ಕಾರದವರು ಸೂಚಿಸಿರುತ್ತಾರೆ. ಹೊಸ ಪ್ರದೇಶಗಳಲ್ಲಿ ಮಲೆನಾಡು ಅಭಿವೃದ್ಧಿ ಸೂಚಕ ವಲಯಗಳನ್ನು ರಚಿಸಲಾಗುವುದೆಂದೂ, ಕೇಂದ್ರ ಸರ್ಕಾರದವರು ಈ ಕೆಲಸಕ್ಕೆ ದ್ರವ್ಯ ಸಹಾಯ ನೀಡಲಿರುವುದಾಗಿಯೂ ಹೇಳಲಾಗಿದೆ. ಈಗ ಶಿವಮೊಗ್ಗೆಯ ಸಾಗರ, ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಈ ಕೆಲಸವು ನಡೆಯುತ್ತಿರುವುದು.

ಪಾರ್ಲಿಮೆಂಟಿಗೆ ಮಂತ್ರಿ ವಿಶ್ವಾಸರ ಕ್ಷಮಾಪಣೆ

ಪಾರ್ಲಿಮೆಂಟಿನ ಕೆಳ ಮತ್ತು ಮೇಲಿನ ಸಭೆಗಳಲ್ಲಿ ಕೇಂದ್ರ ಮಂತ್ರಿ ವಿಶ್ವಾಸ್‌ರವರ ಸಭಾ ತ್ಯಾಗದ ಸಂಬಂಧವಾಗಿ ಉಂಟಾದ ವಿವಾದವನ್ನು ಕುರಿತು ನೆನ್ನೆ ನೆಹರೂರವರು ಎರಡು ಸಭೆಗಳಲ್ಲೂ ಹೇಳಿಕೆಯನ್ನಿತ್ತು ಸಭೆಗಳು ಪರಸ್ಪರ ಸಹಕರಿಸಿಕೊಂಡು ಹೋಗಬೇಕೆಂದು ತಿಳಿಸಿದರು. ಹಿಂದೆ ನಡೆದ ಘಟನೆಗಳು ಮುಕ್ತಾಯವಾದುವೆಂದು ಭಾವಿಸಬೇಕೆಂದು ಸೂಚಿಸಿ, ಎರಡು ಸಭೆಗಳೂ ಸಮಾನಸ್ಕಂಧವೆಂದು ನೆಹರೂರವರು ತಿಳಿಸಿದಾಗ ಮೇಲಿನ ಸಭೆಯಲ್ಲಿ ಹರ್ಷೋದ್ಗಾರಗಳಾದುವು. ಕೆಳ ಸಭೆಯ ಅಧ್ಯಕ್ಷರ ಬಗ್ಗೆ ತಾವು ಹಿಂದೆ ಆಡಿದ ಮಾತುಗಳಿಗಾಗಿ ಕೇಂದ್ರ ಮಂತ್ರಿ ವಿಶ್ವಾಸ್‌ರವರು ಕ್ಷಮಾಪಣೆ ಕೇಳಿದರು.

ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಸಂಚಕಿ ಮೋಸ

ರಾಜಧಾನಿಯ ಉರ್ದು ಪತ್ರಿಕೆಯೊಂದರಲ್ಲಿ ಮುಮ್ಮ ಎಂಬ ಸ್ಪರ್ಧೆಯನ್ನು ನಡೆಸುತ್ತಿದ್ದ ಎ. ಆರ್. ಅಂಜುಮಾರವರು ಸ್ಪರ್ಧೆಯಲ್ಲಿ ಗೆದ್ದವರಿಗೆ ಹಣವನ್ನು ಕೊಡದೆ ಪರಾರಿಯಾಗಿರುವರೆಂದೂ, ಈ ಸಂಬಂಧದ ವಿಚಾರಗಳನ್ನು ತಿಳಿದವರು ಕ್ರೈಂ ಬ್ರಾಂಚ್ ಪೋಲೀಸರಿಗೆ ತಿಳಿಸಬೇಕೆಂದೂ ಪೋಲೀಸರು ಕೋರಿರುತ್ತಾರೆ.

ಬಳ್ಳಾರಿ ಮೈಸೂರಿನದೆಂದು ರುಜುವಾತು

ಸಾಂಸ್ಕೃತಿಕವಾಗಿ, ಭಾಷಾ ಮತ್ತು ಆರ್ಥಿಕವಾಗಿ ಬಳ್ಳಾರಿಯು ಮೈಸೂರಿಗೆ ಸಂಬಂಧಿಸಿದುದೆಂದು ರುಜುವಾತು ಮಾಡಲು ನೆನ್ನೆ ಬಳ್ಳಾರಿಯ ಮಾಧ್ವ ಬ್ರಾಹ್ಮಣ ಮತ್ತು ವೀರಶೈವ ಪಂಗಡಗಳು, ಅನೇಕ ವರ್ಗಗಳ ಹಿಂದೆ ಕಸಬಿನಲ್ಲೇ ಬರೆದಿರುವ ಸರ್ಕಾರಿ ಪತ್ರಗಳನ್ನು ಜಸ್ಟಿಸ್ ಮಿಶ್ರಾರವರಿಗೆ ತೋರಿಸಿದರೆಂದು ವರದಿಯಾಗಿದೆ.

ಸಂಸ್ಥಾನದ ಶಾಸನಗಳ ಪುನರ್ವಿಮರ್ಶೆಗಾಗಿ ಸಮಿತಿ

ಸಂಸ್ಥಾನದಲ್ಲಿ ಜಾರಿಯಲ್ಲಿರುವ ಶಾಸನಗಳು ಕೇಂದ್ರದ ಕಾನೂನುಗಳಿಗೆ ಅನುಗುಣವಾಗಿರುವಂತೆ ಮಾಡುವ ಬಗ್ಗೆ ಇಲ್ಲಿನ ಸರ್ಕಾರದವರು ವಿಶೇಷ ಸಮಿತಿಯೊಂದನ್ನು ರಚಿಸಲು ನಿರ್ಧರಿಸಿರುತ್ತಾರೆ. ಸಂಸ್ಥಾನದ ನಾನಾ ಸಿವಿಲ್ ಕೋರ್ಟುಗಳ ವ್ಯಾಪ್ತಿಯನ್ನು ಕುರಿತು ಪರಿಶೀಲಿಸಲು ಬೇರೊಂದು ಸಮಿತಿಯನ್ನು ರಚಿಸಲಾಗುವುದು. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕ ಮಾಡುವುದನ್ನು ಸರ್ಕಾರದವರು ಆಲೋಚಿಸುತ್ತಿರುವರು.

ಕಥಾ ಕಾಲಕ್ಷೇಪ

ರಾಜಧಾನಿಯ ಚಾಮುಂಡಿಪುರದ ೯೧೯ ನೇ ನಂಬರು ಮನೆಯಲ್ಲಿ ನಾಳೆಯಿಂದ ಪ್ರತಿ ಸಂಜೆ ೭ ಗಂಟೆಗೆ ವೇ|| ಶ್ರೀ ವಿ. ನರಸಿಂಹಮೂರ್ತಿ ದಾಸರಿಂದ ವೆಂಕಟೇಶ ಮಹಾತ್ಮ್ಯೆಯು ಭಾಗವತ ಕಥಾ ರೂಪವಾಗಿ ನಡೆಯುವುದು.

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಅಹೋಬಲ ಮಠದಲ್ಲಿ ಇಂದಿನಿಂದ ಪ್ರತಿದಿನ ಸಂಜೆ ೫.೩೦ ಗಂಟೆಗೆ ಮಧುರೆಯಾಂತಕದ ಕಾಲೇಜಿನ ಪ್ರಿನ್ಸಿಪಾಲರಾದ ಮುಕ್ಕೂರು ಶ್ರೀನಿವಾಸಾಚಾರ್ಯರಿಂದ ವಾಲ್ಮೀಕಿ ರಾಮಾಯಣ ಮತ್ತು ಕಂಬ ರಾಮಾಯಣಗಳ ಕಥಾ ಕಾಲಕ್ಷೇಪವು ತಮಿಳು ಭಾಷೆಯಲ್ಲಿ ನಡೆಯುವುದು.

○ ಸಾಲದ್ದಿನಿಂದ ಗಡಿ ಕ್ಷೇತ್ರಗಳ ನಿರ್ಧಾರಕ ಸಮಿತಿಯ ಕಾರ್ಯವು ಬೆಂಗಳೂರಿನಲ್ಲಿ ಆರಂಭವಾಗಲಿದೆ.

ಟಿ. ಸಿದ್ದಲಿಂಗಯ್ಯನವರ ಶಾಸನ ಸಭಾ ಸದಸ್ಯತ್ವ

ಅರ್ಹತೆ ಬಗ್ಗೆ ವಿಚಾರಣೆ ಆರಂಭ

(ಸ್ವಂ. ಸು. ಪ್ರ.) ಬೆಂಗಳೂರು ೭

ಕೇಂದ್ರ ಚುನಾವಣಾ ಕಮಿಷನರ್ ಶ್ರೀ ಕೆ. ವಿ. ಕೆ. ಸುಂದರಂರವರ ಸಮ್ಮುಖದಲ್ಲಿ ಈ ದಿನ ... ಸಭಾ ಭವನದಲ್ಲಿ ಮಾಜಿ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರ ಶಾಸನ ಸಭಾ ಸದಸ್ಯತ್ವದ ಅರ್ಹತೆ ಬಗ್ಗೆ ವಿಚಾರಣೆಯು ಆರಂಭವಾಯಿತು. ಶ್ರೀ ಟಿ. ಸಿದ್ದಲಿಂಗಯ್ಯನವರ ಪರವಾಗಿ ಶ್ರೀ ಬಿ. ವಿ. ನಾರಾಯಣರೆಡ್ಡಿಯವರ ಹಾಜರಾಗಿದ್ದರು. ಶ್ರೀ ಸಿದ್ದಲಿಂಗಯ್ಯನವರು ಶಾಸನ ಸಭೆಯಲ್ಲಿ ಇತ್ತ ಹೇಳಿಕೆಯ ಬಗ್ಗೆ ಲಿಖಿತ ವಿವರಣೆ ಸಲ್ಲಿಸಿದ್ದರು. ಇದಕ್ಕೆ ಉತ್ತರ ರೂಪವಾಗಿ ಶ್ರೀ ನಂಜುಂಡಯ್ಯನವರು ಕಾಲಾವಕಾಶ ಕೇಳಿದ್ದರಿಂದ ನಾಳೆಗೆ ವಿಚಾರಣೆಯನ್ನು ಮುಂದೂಡಲಾಯಿತು.

ಜಿಲ್ಲಾ ನ್ಯಾಯಾಧೀಶರ ವರ್ಗಾವರ್ಗಿ

ಜಿಲ್ಲಾ ನ್ಯಾಯಾಧೀಶರ ವರ್ಗಾವರ್ಗಿಯು ಕೆಳಗೆ ಕಂಡಂತೆ ಆಗಿದೆ:— ಬೆಂಗಳೂರಿನಲ್ಲಿರುವ ಶ್ರೀ ಕೆ. ವಿಶ್ವೇಶ್ವರಯ್ಯನವರು ಮೈಸೂರಿಗೆ, ಶಿವಮೊಗ್ಗೆಯಲ್ಲಿರುವ ಶ್ರೀ ಜಿ. ವಿ. ಚನ್ನಪ್ಪ ಬೆಂಗಳೂರಿಗೆ, ಬೆಂಗಳೂರಿನಿಂದ ಶ್ರೀ ಕೆ. ಗುಬ್ಬಯ್ಯ ಶಿವಮೊಗ್ಗೆಗೆ ಮತ್ತು ಮೈಸೂರಿನಲ್ಲಿರುವ ಶ್ರೀ ಎ. ವಿ. ನಿಸ್ವಾಮಿ ಬೆಂಗಳೂರಿಗೆ.

ಕಮ್ಯೂನಿಸ್ಟ್ ಪಕ್ಷದಿಂದ ಎಸ್. ಡಿ. ಶಂಕರರ ಉಚ್ಚಾಟನೆ

ಬೆಂಗಳೂರಿನ ಪ್ರಸಿದ್ಧ ಕಮ್ಯೂನಿಸ್ಟ್ ಕಾರ್ಯಕರ್ತರಾದ ಶ್ರೀ ಎಸ್. ಡಿ. ಶಂಕರ್‌ರವರನ್ನು ಆ ಸಂಸ್ಥೆಯಿಂದ ತೆಗೆದುಹಾಕಲಾಗಿರುವುದೆಂದು ವರದಿಯಾಗಿದೆ. ಈ ಬಗ್ಗೆ ಅತೃಪ್ತಿ ಮತ್ತು ಅಸಮಾಧಾನವನ್ನು ಪಕ್ಷ ಹಲವರು ಸೂಚಿಸಿರುವರೆಂದೂ ಹೇಳಲಾಗಿದೆ.

ಮೈಸೂರು ಜಿಲ್ಲಾ ಹಳ್ಳಿಗಳ ವೈದ್ಯ ಸಹಾಯಕ್ಕೆ ೫೫,೦೦೦ ರೂ.

ಮೈಸೂರು ಜಿಲ್ಲೆಯಲ್ಲಿರುವ ಹಳ್ಳಿಗಳಲ್ಲಿ ವೈದ್ಯ ಶಾಲೆಗಳ ಕಟ್ಟಡಗಳ ನಿರ್ಮಾಣಕ್ಕಾಗಿ ಜಿಲ್ಲಾ ಬೋರ್ಡಿನವರು ೫೫,೦೦೦ ರೂ ಗಳನ್ನು ಮಂಜೂರು ಮಾಡಿರುತ್ತಾರೆ.

ಕೊಡಗಿಗೆ ಮೈಸೂರು ವಿದ್ಯುಚ್ಛಕ್ತಿ ಒದಗಿಸಲು ಒಪ್ಪಂದ

ಕೊಡಗು ಪ್ರಾಂತಕ್ಕೆ ಮೈಸೂರು ಸಂಸ್ಥಾನದಿಂದ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಎರಡು ಸರ್ಕಾರಗಳಿಗೂ ಒಪ್ಪಂದವು ಪೂರ್ಣವಾಗಿರುವುದಾಗಿಯೂ, ಅದನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆಯೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

ಅಪಹೃತ ವಿವಾಹಿತ ತರುಣಿಯೊಡನೆ ದೇಶಾಟನೆ!

ಕಳೆದ ಡಿಸೆಂಬರ್ ೮ ನೇ ತಾ|| ವಿವಾಹವಾದ ತರುಣಿಯೋರ್ವಳನ್ನು ಅಪಹರಿಸಿ ಭಾರತದ ನಾನಾ ಕಡೆ ಅವಳೊಡನೆ ದೇಶಾಟನೆ ಮಾಡಿ, ಇತ್ತೀಚೆಗೆ ತಿರುಪತಿಗೆ ಹಿಂತಿರುಗಿದ ಗೋಪಾಲ ಚೆಟ್ಟಿ ಎಂಬ ಯುವಕನನ್ನು ಅಲ್ಲಿನ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ವಿದ್ಯಾಭ್ಯಾಸದಲ್ಲಿ ಕೈ ಕೆಲಸ ಮತ್ತು ನೀತಿ ಶಿಕ್ಷಣ ಅಗತ್ಯ

ಮದ್ರಾಸು ವಿದ್ಯಾಭ್ಯಾಸ ಸಮ್ಮೇಳನದಲ್ಲಿ ಹನುಮಂತಯ್ಯನವರ ಭಾಷಣ

ಮಂಗಳೂರು [illegible]

ಈಗಿನ ವಿದ್ಯಾಭ್ಯಾಸ ಪದ್ಧತಿಯು ಒಂದು ದೊಡ್ಡ ಯಂತ್ರವಂತಿದೆ ಪ್ರತಿ ವರ್ಷವೂ [illegible] ಗಂಡಸರೂ ಹೆಂಗಸರೂ [illegible] ಈ ಯಂತ್ರದಿಂದ [illegible] ಇವರಿಂದ [illegible] ಗಳ ಸಂಖ್ಯೆಯು ಹೆಚ್ಚುತ್ತಿರುವ [illegible] ವ ಉದ್ಯೋಗ [illegible] ತೆಯಿಲ್ಲದ [illegible] ಬೆಳೆಯುತ್ತಿದೆ [illegible] ರೀಕ್ಷೆಯಲ್ಲಿ ತೇರ್ಗಡೆಯಾದರೆ ಸಾಕೆಂಬ ಉದ್ದೇಶದಿಂದ [illegible] ವಾಗಿ ಹಲವು ವಿಷಯಗಳನ್ನು [illegible] ತ್ತಾರೆಯೇ ಹೊರತು, ಸಂಪೂರ್ಣವಾದ ಜ್ಞಾನವನ್ನು [illegible] ತ್ತಿಲ್ಲ. [illegible] ದಕ್ಕೆ [illegible] ಮತ್ತು [illegible] ಸ್ಥಿತಿಯೇ [illegible] ಜೀವನದಲ್ಲಿ [illegible] ಅವರಿಗೆ ಬೇಕಾಗಿರುವ [illegible] [illegible] ಶ್ರೀ [illegible] ನವರ [illegible] ಪ್ರಾಂತದ ವಿದ್ಯಾಭ್ಯಾಸ ಸಮ್ಮೇಳನದ [illegible] ವೇಶನದ [illegible] ಭಾಷಣವನ್ನು ನೆರವೇರಿಸುತ್ತಾ ತಿಳಿಸಿದರು.

ಅವರು [illegible] ಗಳಿಂದ [illegible] ರೇಡಿಯೋ, ಸಿನಿಮಾ ಮೊದಲಾದ ಸೌಲಭ್ಯ [illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಸಂಗೀತ [illegible] ದಿಲ್ರುಬಾ [illegible] ಸಂಜೆ [illegible] ಗಾನ ವಿಹಾರ [illegible] ಗೀತೆ ಮತ್ತು ಭಜನೆ [illegible] ಕಾರ್ಯಕ್ರಮ [illegible] ಮೈಸೂರಿನ [illegible] ಗೀತಾ [illegible]

[illegible] ಗಳಲ್ಲಿ ತೊಡಗಿ ಅದರಿಂದ ಆರಾಭಂಗ [illegible] ಘೋರ ಹಾನಿಗೀಡಾಗುವುದು [illegible] ಎಂದೂ ಅವರು ಸೂಚಿಸಿದರು ಈ ನ್ಯೂನತೆಗಳನ್ನು ಹೋಗಲಾಡಿಸಲು ವಿದ್ಯಾಭ್ಯಾಸದ ಎಲ್ಲ ಹಂತಗಳಲ್ಲೂ ಕೈ ಕೆಲಸ ಮತ್ತು ನೀತಿ ಶಿಕ್ಷಣಗಳು [illegible] ವಾಗಿರುವಂತೆ ಮಾಡುವುದು ಅವಶ್ಯಕವೆಂದು ಅವರು ಅಭಿಪ್ರಾಯಪಟ್ಟರು

ಮಹಾತ್ಮಾ ಗಾಂಧಿಯವರು ಹೇಳಿರುವಂತೆ ವಿದ್ಯಾಭ್ಯಾಸ ಪದ್ಧತಿಯು ರಾಷ್ಟ್ರದ ಆವಶ್ಯಕತೆಗಳಿಗೆ ಅನುಸಾರವಾಗಿರಬೇಕು. ಮತ್ತು ಕೈ ಕಸಬೂ ಶಿಕ್ಷಣ ಕ್ರಮದ [illegible] ಗವಾಗಿರಬೇಕು ಮೈಸೂರು ಸಂಸ್ಥಾನದಲ್ಲಿ ಈ ತತ್ವಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಾಗುತ್ತಿದೆ ವಿದ್ಯಾರ್ಥಿಯು ತನ್ನ ಅಭ್ಯಾಸ [illegible] ಜ್ಞಾನವನ್ನೂ ಸಂಪಾದಿಸಿ, ವಿದ್ಯಾರ್ಥಿಯನ್ನೂ ಮಾಡಬೇಕು ಉಪಾಧ್ಯಾಯರು ತಮ್ಮ ಕೆಲಸದ ಜೊತೆಗೆ ವಿದ್ಯಾ ಸಂಸ್ಥೆಗಳ ವರಮಾನದಲ್ಲೂ ಭಾಗಿಗಳಾಗುವಂತೆ ಮಾಡಬೇಕು ವಿದ್ಯಾರ್ಥಿಗಳಿಗೆ ಧರ್ಮ ಮತ್ತು ನೀತಿ ಬೋಧೆಗಳನ್ನು ಮಾಡಬೇಕು. ನೀತಿ ಶಿಕ್ಷಣವಿಲ್ಲದ ವಿದ್ಯಾಭ್ಯಾಸವು ಜೀವವಿಲ್ಲದ ದೇಹದಂತೆ ಎಂಬುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು.

ದಾವಣಗೆರೆ ಉಪಾಧ್ಯಾಯರ ಉಪವಾಸ ಮುಕ್ತಾಯ

ಕರ್ನಾಟಕ ಸಂಸ್ಥಾನದ ರಚನೆ ಬಗ್ಗೆ ಸಹಾನುಭೂತಿಗಾಗಿ ಅಮರಣಾಂತ ಉಪವಾಸವನ್ನು ಕೈಗೊಂಡಿದ್ದ ದಾವಣಗೆರೆ ತಾಲ್ಲೂಕು ತುಮರಿಕೊಪ್ಪದ ಉಪಾಧ್ಯಾಯರಾದ ಬಸಯ್ಯ ಹಿರೇಮಠರವರು [illegible] ದಿನಗಳ ನಂತರ ಅದನ್ನು ನಿಲ್ಲಿಸಿರುತ್ತಾರೆ ಸ್ಥಳೀಯ ಮುಖಂಡರುಗಳಾದ ಶ್ರೀ ದೊಡ್ಡವೀರಪ್ಪ, ಗುರುದೇವರು ಮತ್ತು ಇಟಗಿ ವೇದಮೂರ್ತಿಯವರು ಪ್ರಾಂತ ರಚನೆ ಬಗ್ಗೆ ಸರ್ವಪಕ್ಷ ಸಮ್ಮೇಳನವನ್ನು ಕರೆಸುವುದಾಗಿ ಆಶ್ವಾಸನೆಯಿತ್ತ ನಂತರ ಉಪವಾಸ ನಿಂತಿತು ಶ್ರೀ ಬಸಯ್ಯನವರ ಬಗ್ಗೆ ಸಹಾನುಭೂತಿ ತೋರಿಸಲು ದಾವಣಗೆರೆ ಕಾಲೇಜಿನ ಶ್ರೀಗಳು ಜಯಣ್ಣ, ರಾಧಾಕೃಷ್ಣ ಶೆಟ್ಟಿ, ಶೇಖರಯ್ಯ, ಊದಗಟ್ಟಿ ಎಂಬ ವಿದ್ಯಾರ್ಥಿಗಳು ೧ ದಿನದ ಉಪವಾಸ ಮಾಡಿದ್ದರು

ತೆಂಗಿನಕಾಯಿ ವ್ಯಾಪಾರಿಗಳ ಸಂಘದ ಕಾರ್ಯಕಾರಿ ಸಮಿತಿ

ರಾಜಧಾನಿಯ ತೆಂಗಿನಕಾಯಿ ವ್ಯಾಪಾರಸ್ಥರ ಸಭೆಯೊಂದು ನಡೆದು ಅವರ ಸಂಘದ ಅಧ್ಯಕ್ಷರಾಗಿ ಶ್ರೀ ಆರ್ ರಂಗಪ್ಪನವರನ್ನೂ, ಉಪಾಧ್ಯಕ್ಷರಾಗಿ ಶ್ರೀ ಶಿವನಂಜಪ್ಪನವರನ್ನೂ ಖಜಾಂಚಿಯಾಗಿ ಶ್ರೀ ನಂಜಯ್ಯನವರನ್ನೂ, ಕಾರ್ಯದರ್ಶಿಗಳಾಗಿ ಶ್ರೀಗಳು ಬಿ ಎಂ ಚನ್ನಪ್ಪ ಮತ್ತು ಎಲ್ ವೆಂಕೋಬರಾಯರನ್ನೂ ಆರಿಸಲಾಯಿತು. ಶ್ರೀಗಳಾದ ತಿಮ್ಮದಾಸಯ್ಯ, ಕೆ ಚೆಲುವಯ್ಯ, ಎಂ ಜಿ ಸುಬ್ಬರಾವ್, ಗಂಗೋಜಿರಾವ್, ದೊಡ್ಡಯ್ಯ ಇವರುಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟಿದೆ

ನಾನ್ ಗೆಜೆಟೆಡ್ ನೌಕರರ ಸಮ್ಮೇಳನ

ಮೈಸೂರು ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಮ್ಮೇಳನವು ಇದೇ ತಿಂಗಳು ಕೊನೆಯ ಭಾಗ ಅಥವಾ ಜೂನ್ ಮೊದಲ ಭಾಗದಲ್ಲಿ ಶಿವಮೊಗ್ಗಾದಲ್ಲಿ ಸೇರಲಿದೆ.

ಪ್ರಪಂಚದಲ್ಲೇ ಹೊಸದಾದ ಅಶ್ಚರ್ಯ ಚಿಕಿತ್ಸೆ!

ದಿ ಲ್ ಖು ಷ್

1) ಸಿಡುಬಿನ ಕಲೆ, ಗಾಯದ ಗುರುತುಗಳನ್ನು ಹೋಗಲಾಡಿಸಿ ಭಯಂಕರವಾದ "ಎಸಬು" ಮೊದಲಾದ ಚರ್ಮ ರೋಗಗಳನ್ನು ನಿರ್ಮೂಲ ಮಾಡುತ್ತದೆ.

2) ಸ್ತ್ರೀಯರು ಬಹಿಷ್ಠೆಯರಾಗುವ ಕಾಲದಲ್ಲಿ ಉತ್ಪನ್ನವಾಗುವ ನಾನಾ ಉಪದ್ರವಗಳನ್ನೂ ಅತಿಸಾರ ಮತ್ತು ರಾಜಯಕ್ಷ್ಮ, ಮೊದಲಾದುವನ್ನೂ ಬಹು ಶೀಘ್ರದಲ್ಲಿ ಗುಣಪಡಿಸಿ ದೇಹಶಕ್ತಿಯನ್ನು ಹೆಚ್ಚಿಸೋಣದರ ಮೂಲಕ ಸಂತೋಷವನ್ನುಂಟುಮಾಡುತ್ತದೆ.

ವಿ ಸೂ: — ಮೂಲವ್ಯಾಧಿ, ಕಾಮಾಲೆ ಮತ್ತು, ಲಿವರ್ ಅಂಡ್ ಸ್ಪ್ಲೀನ್ ಮತ್ತು ಅಜೀರ್ಣದ ತೊಂದರೆ ಇವುಗಳಿಗೆ ಸ್ಪೆಷಲ್ ಚಿಕಿತ್ಸೆಯುಂಟು.

ಎಸ್. ಶಾಮಣ್ಣ, ಸ್ಪೆಷಲಿಸ್ಟ್

2830, ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲೆ, 6 ನೇ ಕ್ರಾಸ್ ರೋಡ್, ಚಾಮುಂಡಿಪುರಂ, ಮೈಸೂರು.

AT SRI GAYATHRI
TALKIES
Running to Crowded Houses in
GLORIOUS 2ND WEEK
From 8-5-53: Daily 3 Shows

SRI GANESHA
TALKIES
Grand Gala Release
On 8-5-53



COLUMBIA PICTURES
presents
STANLEY KRAMER'S
Production of
[illegible]
Fredric March

ಮನೆಗಳು ಕ್ರಯಕ್ಕಿವೆ

1	ಡೋರ್ ನಂಬರು	1275	ಕೃಷ್ಣಮೂರ್ತಿಪುರಂ
2	,, ,,	1257	,, ,,
3	,, ,,	2933/1	ಸರಸ್ವತಿಪುರಂ
4	,, ,,	1176	ಚಾಮರಾಜಪುರಂ
5	,, ,,	1233	ಕೃಷ್ಣಮೂರ್ತಿಪುರಂ

ಜಯ ಅಂಡ್ ಕಂಪೆನಿ,

ಮನೆ, ಜಮೀನು ಮತ್ತು ಸಾಲ ಕೊಡಿಸುವ ಏಜೆಂಟರು,
ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಸಯ್ಯಾಜಿರಾವ್ ರಸ್ತೆ
ಮೈಸೂರು :: ಫೋನ್ ನಂ 520

ಮೋತೀಲಾಲ್ ಟಾಕೀಸ್

8-5-53 ರಿಂದ : ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಉಮಾ ಮತ್ತು ಓಂ ಫಿಲಂಸ್‌ರವರ ತಮಿಳು ಚಿತ್ರ
★ ಪಣಕ್ಕಾರಿ ★
ಪಾತ್ರ: [illegible] ಆರ್ ರಾಜಕುಮಾರಿ ಎಂ ಜಿ ರಾಮಚಂದ್ರನ್ ವಿ ನಾಗಯ್ಯ, ಯೋಗಮಂಗಳಂ, ದೊರೈರಾಜ್

QUO VADIS
Life and Look magazines describe it as "THE MOST COLOSSAL MOVIE EVER MADE!"
M-G-M proudly presents
Three Great Love Stories in one Mighty Spectacle!
COLOR BY
TECHNICOLOR

Edited, Printed and Published by A R Nagarajan at Saadhvi Press, D Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★ **M.V. ಭೋಜಯ್ಯ** (ಫೋನ್ 446) ಬಿ. ಎ. ಇಂಡಿಯ ಬ್ಯಾಂಕ್ ಎದುರು, ಶ್ರೀ ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೮-೫-೧೯೫೩ [ಸಂಚಿಕೆ ೩೨೮

ಅಮೆರಿಕದ ನೆರವಿಗಾಗಿ ಸಯಾಮಿನ ಮನವಿ

ಕರ್ನಾಟಕ ಪ್ರಾಂತ ರಚನೆ ಬಗ್ಗೆ ಮೈಸೂರಿನ ಅಡ್ಡಿ ಇಲ್ಲ

ಮುಖ್ಯ ಮಂತ್ರಿ ಹನುಮಂತಯ್ಯನವರ ಅಭಿಪ್ರಾಯ

ಮಂಗಳೂರು ೭

ಇಲ್ಲಿನ ಪೌರಸಭೆಯವರು ಈ ದಿನ ಅತ್ತ ಸಮಾರಂಭಕ್ಕೆ ಉತ್ತರವೀಯುತ್ತಾ, ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಾತನಾಡಿ, ಕರ್ನಾಟಕ ಪ್ರಾಂತ ರಚನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಆಸಕ್ತಿ ಇದ್ದರೆ, ಮೈಸೂರು ಸರ್ಕಾರದವರಾಗಲಿ, ಪ್ರಜೆಗಳಾಗಲಿ ಅಡ್ಡಿ ಬರುವುದಿಲ್ಲ ವೆಂದು ತಿಳಿಸಿದರು. ಕೇಂದ್ರ ಸರ್ಕಾರದವರು ಬಯಸಿದರೆ ಕರ್ನಾಟಕ ಸಂಸ್ಥಾನವನ್ನು ೪೮ ಗಂಟೆಗಳೊಳಗೆ ರಚಿಸಬಹುದೆಂದೂ ಅವರು ಹೇಳಿದರು.

ಆಂಧ್ರ ಸಂಸ್ಥಾನವು ಯಾವ ರೀತಿ ಕೆಲಸ ಮಾಡುವುದೆಂಬುದನ್ನು ನೋಡಿಕೊಂಡ ನಂತರ ಕರ್ನಾಟಕ ಸಂಸ್ಥಾನದ ರಚನೆಗೆ ಕೈ ಹಾಕುವುದಾಗಿ ಕೇಂದ್ರದವರು ಮಾಡಿರುವ ತೀರ್ಮಾನವು, ಒಬ್ಬನಿಗೆ ಅನ್ನವನ್ನು ಬಡಿಸಿ, ಅವನು ಅದನ್ನು ಜೀರ್ಣಿಸಿಕೊಳ್ಳಬಲ್ಲನೇ ಎಂಬುದನ್ನು ಪರೀಕ್ಷಿಸಿ, ಬೇರೆಯವರಿಗೆ ನಂತರ ಬಡಿಸೋಣವೆಂಬಂತೆ ಇರುವುದಾಗಿ ಅವರು ವ್ಯಾಖ್ಯಾನ ಮಾಡಿ, ಬಲವಾಗಿ ಉತ್ತರ ಭಾರತೀಯರಿಂದ ಕೂಡಿದ ಕೇಂದ್ರ ಸರ್ಕಾರವು ದಕ್ಷಿಣದಲ್ಲಿ ಭಾಷಾವಾರು ಪ್ರಾಂತಗಳ ರಚನೆಯಿಂದ ಹಿಂದಿ ಭಾಷೆಯು ಬೆಳೆಯುವುದಕ್ಕೆ ಧಕ್ಕೆ ಬರುವುದೆಂದು ಹೆದರಿಕೊಂಡಿರುವುದಾಗಿ ಅಭಿಪ್ರಾಯಪಟ್ಟರು.

ಗೋಮಟೇಶ್ವರ ಸ್ವಾಮಿಗೆ ವಿಮಾನದಿಂದ ಪುಷ್ಪವೃಷ್ಟಿ

ಬೆಂಗಳೂರಿನ ಜೈನ ಜನಾಂಗದವರು ಇದೇ ೧೦ ನೇ ತಾ|| ಭಾನುವಾರ ಮಧ್ಯಾಹ್ನ ೩-೩೦ ಘಂಟೆಗೆ ಶ್ರವಣಬೆಳಗೊಳದ ಗೋಮಟೇಶ್ವರ ಸ್ವಾಮಿಯವರಿಗೆ ಮಹಾ ಮಸ್ತಕಾಭಿಷೇಕವನ್ನು ಏರ್ಪಡಿಸಿರುವರು. ಆ ಸಂದರ್ಭದಲ್ಲಿ ಮೇವರಿಗೆ ವಿಮಾನಗಳ ಮೂಲಕ ಪುಷ್ಪವೃಷ್ಟಿಯನ್ನು ಮಾಡಲು ವ್ಯವಸ್ಥೆಯಾಗಿದೆ.

ಬಾಂಬು ಸಿಡಿದು ಇಬ್ಬರು ಮಕ್ಕಳ ಮರಣ

ತಿರುವಾಂಕೂರು-ಕೊಚ್ಚಿಯ ಎರ್ನಾಕುಲಂ ನಗರದ ಒಂದು ಭವನದ ಬಳಿ ಆಟವಾಡುವ ಸಲುವಾಗಿ ಮಕ್ಕಳು ಭೂಮಿಯನ್ನು ನೆನ್ನೆ ಅಗೆಯುತ್ತಿದ್ದಾಗ ಒಳಗಡೆ ಇದ್ದ ಹ್ಯಾಂಡ್ ಗ್ರೇನೇಡು ಬಾಂಬೊಂದು ಸಿಡಿದು, ಎರಡು ಮಕ್ಕಳು ಕೂಡಲೇ ಮೃತಪಟ್ಟರೆಂದೂ ೩ ಮಕ್ಕಳಿಗೆ ಗಾಯವಾಯಿತೆಂದೂ ವರದಿಯಾಗಿದೆ. ಪಕ್ಕದ ಮನೆಯೊಂದಕ್ಕೆ ಅಪಾಯವು ತಟ್ಟಿರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಪಿರಿಯಾಪಟ್ಟಣ ತಾಲ್ಲೂಕು ಕಾಂಗ್ರೆಸ್ ಕಮಿಟಿಗೆ ಸದಸ್ಯರ ಚುನಾವಣೆಗೆ ನಿಲ್ಲಲು ಇಚ್ಛೆಯುಳ್ಳವರು ೧೦ ರೂ ಪ್ರವೇಶ ಶುಲ್ಕದೊಡನೆ ತಮ್ಮ ನಾಮಪತ್ರಗಳನ್ನು ತಾ|| ೧೦-೫-೫೩ ಮತ್ತು ೧೧ ೫ ೫೩ ನೇ ದಿವಸಗಳಲ್ಲಿ ಬೆಳಿಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯೊಳಗೆ ಪಿರಿಯಾಪಟ್ಟಣದ ಸಂತೆಮಾಳದಲ್ಲಿರುವ ಕಾಂಗ್ರೆಸ್ ಕಛೇರಿಗೆ ಸಲ್ಲಿಸಬಹುದೆಂದು ರಿಟರ್ನಿಂಗ್ ಅಧಿಕಾರಿಗಳಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ತಿಳಿಸಿರುತ್ತಾರೆ.

ಕೊರಿಯಾ ಖೈದಿಗಳ ಹತೋಟಿಗಾಗಿ ಪಂಚರಾಷ್ಟ್ರ ಸಮಿತಿ

ಸ್ವದೇಶಕ್ಕೆ ಹಿಂತಿರುಗಲಿಚ್ಛಿಸದ ಯುದ್ಧ ಖೈದಿಗಳನ್ನು ತಟಸ್ಥ ರಾಷ್ಟ್ರಕ್ಕೆ ಸಾಗಿಸಬೇಕೆಂದು ಮಾಡಿದ್ದ ಒತ್ತಾಯವನ್ನು ಕಮ್ಯೂನಿಸ್ಟರು ಈಗ ಬಿಟ್ಟುಬಿಟ್ಟಿರುತ್ತಾರೆ. ಯುದ್ಧ ಖೈದಿಗಳ ಹತೋಟಿಗಾಗಿ ಅವರು ಭಾರತ, ಸ್ವಿಟ್ಸರ್ಲೆಂಡ್, ಸ್ವೀಡನ್, ಜೆಕೋಸ್ಲೋವೇಕಿಯಾ, ಪೋಲೆಂಡ್‌ಗಳಿರುವ ಐದು ರಾಷ್ಟ್ರಗಳ ಸಮಿತಿಯನ್ನು ರಚಿಸಬೇಕೆಂದು ಸಲಹೆ ಮಾಡಿರುತ್ತಾರೆ.

ಚಿಲಿ ದೇಶದಲ್ಲಿ ಭೂಕಂಪ

ದಕ್ಷಿಣ ಅಮೆರಿಕದ ಚಿಲಿ ದೇಶದಲ್ಲಿ ನೆನ್ನೆ ಭಾರಿ ಭೂಕಂಪವಾಗಿ ೧೪ ಮಂದಿ ಮಡಿದಿರುವರೆಂದು ವರದಿಯಾಗಿದೆ. ಅನೇಕ ಭವನಗಳು ಅಲುಗಾಡಿದುವು. ಸಮಾಚಾರ ಸಂಪರ್ಕಗಳು ನಾಶವಾಗಿವೆ. ಚಿಲಾನ್, ಟಾಲ್ಕಾ ಮತ್ತು ಕಾನ್‌ಸೆಪ್ಷಿಯನ್ ನಗರಗಳಲ್ಲಿ ವಿಪರೀತ ಹಾನಿಯುಂಟಾಗಿದೆ. ರಾಜಧಾನಿ ಸಾಂಟಿಯಾಗೊವಿನಲ್ಲಿ ಏಳು ಸೆಕೆಂಡು ಭೂಮಿ ನಡುಗಿತು.

ಸೇವಾದಳದ ಮಾಧ್ಯಮಿಕ ಶಿಕ್ಷಣ ಶಿಬಿರ

ರಾಜಧಾನಿಯ ಹಳೇ ಬನ್ನಿ ಮಂಟಪದಲ್ಲಿ ಕಳೆದ ೫ ನೇ ತಾ|| ಬೆಳಿಗ್ಗೆ ಮೇಲ್ಕಂಡ ಶಿಬಿರವು ಮಾಜಿ ಎ ಐ ಸಿ ಸಿ ಸಭ್ಯರಾದ ಶ್ರೀ ರಾಮರಾಯರ ನೇತೃತ್ವದಲ್ಲಿ ಆರಂಭವಾಯಿತು. ಯುವಕರು ಶಿಸ್ತಿನಿಂದ ಪಡೆದು ಆದರ್ಶಯುತರಾಗಬೇಕೆಂದು ದಳಪತಿ ಶ್ರೀ ರಾಮರಾಯರು ತಿಳಿಸಿದರು. ಸಂಜೆ ಶಿಬಿರದ ಪ್ರಾರಂಭೋತ್ಸವವು ನೆರವೇರಿಸಲ್ಪಟ್ಟಿತು. ವಿದ್ಯಾವರ್ಧಕ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನರಸಿಂಗರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಪುಟ್ಟಸ್ವಾಮಿಯವರು ಭಾಷಣ ಮಾಡಿ, ಸೂಕ್ತ ಹಿತೋಕ್ತಿಗಳನ್ನು ಹೇಳಿದರು. ಶಿಬಿರಕ್ಕೆ ಸುಮಾರು ನ್ಯಾಮಿಗಳವರು ಭೇಟಿಯಿತ್ತಿದ್ದರು. ಶಿಬಿರದ ಅಧಿಕಾರವರ್ಗಕ್ಕೆ ಆಯ್ಕೆ ನಡೆದು ಶ್ರೀ ಮೈ ರಾಮಶೇಷರವರು ಶಿಬಿರಾಧಿಪತಿಗಳಾಗಿಯೂ, ಶ್ರೀ ಎಂ. ಗಂಗಾಧರರವರು ಮತ್ತು ನಾಯಕರಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಭಾರತದಲ್ಲಿ ಮತ್ತೊಂದು ಕಬ್ಬಿಣದ ಕಾರ್ಖಾನೆ

ಭಾರತದಲ್ಲಿ ಹೊಸದೊಂದು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರದವರು ಜರ್ಮನಿಯ ಕಂಪೆನಿಗಳೊಡನೆ ವ್ಯವಹರಿಸುತ್ತಿರುವರೆಂದೂ, ಕಾರ್ಖಾನೆ ನಿರ್ಮಾಣದ ಸ್ಥಳದ ಬಗ್ಗೆ ಈಗಾಗಲೇ ಸರ್ಕಾರಕ್ಕೆ ತಜ್ಞರ ವರದಿಯೂ ಬಂದಿರುವುದಾಗಿಯೂ ಗೊತ್ತಾಗಿದೆ.

ಮಂಗಳೂರಿಗೆ ಮೈಸೂರಿನ ವಿದ್ಯುಚ್ಛಕ್ತಿ

ಮಂಗಳೂರಿಗೆ ಜೋಗ್ ವಿದ್ಯುತ್ ಕೇಂದ್ರದಿಂದ ೩ ಸಾವಿರ ಕಿಲೋವಾಟ್ ನಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದೆಂದು ಗೊತ್ತಾಗಿದೆ.

ಗೌರಿಶಂಕರ ಹತ್ತುತ್ತಿರುವವನಿಗೆ ರೇಡಿಯೊ ಶುಭವಾರ್ತೆ

ಹಿಮಾಲಯದ ಗೌರಿಶಂಕರ ಶಿಖರವನ್ನೇರಲು ಯತ್ನಿಸುತ್ತಿರುವ ಬ್ರಿಟಿಷ್ ಪರ್ವತಾರೋಹಿಗಳ ಪೈಕಿ ಒಬ್ಬರಾದ ಮೇಜರ್ ವೈಲಿಯವರಿಗೆ ಲಂಡನ್ನಿನ ಬಿ. ಬಿ. ಸಿ. ಪ್ರಚಾರ ಸಂಸ್ಥೆಯು ರೇಡಿಯೋ ಮೂಲಕ, ಅವರ ಪತ್ನಿಯು ಗಂಡು ಶಿಶುವೊಂದನ್ನು ಪ್ರಸವಿಸಿದುದಾಗಿ ಸುದ್ದಿ ಕೊಟ್ಟಿರುತ್ತದೆ.

ಭಾಗವತ ಪಠನ

ರಾಜಧಾನಿಯ ಚಿಕ್ಕೋಟೆ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ನಿತ್ಯವೂ ಸಂಜೆ ೭ ಗಂಟೆಯಿಂದ ೮ ರ ವರೆಗೆ ಕರ್ನಾಟಕಾಂಧ್ರ ಕೀರ್ತನ ಸುಧಾಕರ ಶ್ರೀ ಸತ್ಯ ಪ್ರಚಾರಕ ರಾಮಚಂದ್ರಜಿಯವರಿಂದ ಬಮ್ಮೆರ ಪೋತರಾಜಾಮಾತ್ಯ ರಚಿತವಾದ ಭಾಗವತದ ಪಠನವೂ, ಅದರ ಕನ್ನಡ ಅನುವಾದವೂ ನಡೆಯುವುವು.

ಗಂಡ ಮತ್ತು ಮಕ್ಕಳಿಗೆ ವಿಷ ಪ್ರಯೋಗವೇ ?

ಗುಂಡ್ಲುಪೇಟೆ ೩

ಈ ತಾಲ್ಲೂಕು ಶಿವಪುರದ ಬೋರಮ್ಮ ಎಂಬ ಒಬ್ಬ ಹೆಂಗಸು ತನ್ನ ಗಂಡನಿಗೂ, ಮಕ್ಕಳಿಗೂ ವಿಷ ಹಾಕಿ ಕೊಂದುದಕ್ಕಾಗಿ ಆಕೆಯನ್ನೂ, ಮತ್ತೊಬ್ಬನನ್ನೂ ಬಂಧಿಸಲಾಗಿದೆಯೆಂದು ಗೊತ್ತಾಗಿದೆ.

ಶಸ್ತ್ರಾಸ್ತ್ರ ಸಹಾಯಕ್ಕಾಗಿ ಅಮೆರಿಕಕ್ಕೆ ಸಯಾಂ ಬೇಡಿಕೆ

ಕೂಡಲೇ ಮಿಲಿಟರಿ ಶಸ್ತ್ರಾಸ್ತ್ರಗಳ ಸಹಾಯವನ್ನು ಅಮೆರಿಕನ್ ಒದಗಿಸುವಂತೆ ಸಯಾಂ ಮನವಿ ಮಾಡಿಸುತ್ತಾ, ಥರ್ಸೆ ನ್ನು ತೀವ್ರವಾಗಿ ಸಯಾಂ ಯೋಚಿಸಲಾಗುತ್ತಿರುವುದೆಂದೂ, ಸಯಾಮನ್ನು ಕಮ್ಯೂನಿಸ್ಟರು ಆಕ್ರಮಿಸಿದರೆ, ಬರ್ಮದ ಪರಿಸ್ಥಿತಿಯು ಅತ್ಯಂತ ಕಠಿಣವಾಗಿ ಇಂಡೋನೇಷ್ಯವು ಶಿಥಿಲವಾಗಬೇಕಾಗುವುದೆಂದೂ ಅಮೆರಿಕಾ ವಿದೇಶಾಂಗ ಮಂತ್ರಿ ಡಲ್ಲೆಸರು ತಿಳಿಸಿರುವರು.

ಎರಡು ಹಳ್ಳಿಗಳ ಜನರಿಗೆ ಘರ್ಷಣೆ

ಬಾಗಪಲ್ಲಿ ತಾಲ್ಲೂಕಿನ ದೊಂಬರಹಟ್ಟಿ ಮತ್ತು ಚಿಂತಾಮಣಿ ತಾಲ್ಲೂಕಿನ ವ್ಯಾರಹಳ್ಳಿಗಳ ರೈತರಲ್ಲಿ ಕಳೆದ ತಿಂಗಳು ೨೨ ನೇ ತಾ|| ಆದ ಘರ್ಷಣೆಯ ಪರಿಣಾಮವಾಗಿ ಒಬ್ಬನು ಸತ್ತು, ೭ ಮಂದಿಗೆ ಗಾಯವಾಗಿದೆ. ಈ ಸಂಬಂಧವಾಗಿ ಐವರನ್ನು ದಸ್ತಗಿರಿ ಮಾಡಲಾಗಿದೆ. ಘರ್ಷಣೆಯಲ್ಲಿ ಬಂದೂಕು, ಚಾಕುಗಳು, ಲಾಠಿಗಳು ಮತ್ತು ಇತರ ಆಯುಧಗಳನ್ನು ಉಪಯೋಗಿಸಲಾಗಿತ್ತೆಂದೂ ಹೇಳಲಾಗಿದೆ. ವ್ಯಾರಹಳ್ಳಿಯಲ್ಲಿ ಭತ್ತದ ಪೈರಿನ ಕಳುವಿನ ಬಗ್ಗೆ ನಡೆದ ತನಿಖೆಯಲ್ಲಿ ಉಂಟಾದ ಭಿನ್ನಾಭಿಪ್ರಾಯವು ಘರ್ಷಣೆಗೆ ಕಾರಣವಾಯಿತೆಂದು ಹೇಳಲಾಗಿದೆ.

ನೀರಿನ ಅಭಾವ ಪರಿಹಾರ ಭತ್ಯ

ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ನೀರಿನ ಅಭಾವವುಂಟಾಗಿರುವುದರಿಂದ, ಅಲ್ಲಿ ಮಾಸಿಕವಾಗಿ ೧೫೦ ರೂ ಗಳಿಗೆ ಕಡಿಮೆ ಸಂಬಳ ಪಡೆಯುವ ಸರ್ಕಾರಿ ನೌಕರರಿಗೆ ಕಳೆದ ಫೆಬ್ರವರಿಯಿಂದ ತಿಂಗಳಿಗೆ ೩ ರಿಂದ ೫ ರೂ ವರೆಗೆ ಭತ್ಯ ಕೊಡಲಾಗುವುದೆಂದು ವರದಿಯಾಗಿದೆ. ನೀರಿನ ಅಭಾವವು ನಿವಾರಣೆಯಾಗುವವರೆಗೆ ಈ ವಿಧವಾದ ಪರಿಹಾರವು ದೊರೆಯುವುದು.

ಬೂದಿಬಸವನ ಗುತ್ತಿನ ಜನರಿಗಾಗಿ ಶಾಲೆ

ಮೈಸೂರು ಜಿಲ್ಲೆಯಲ್ಲಿರುವ ಬೂದಿಬಸವನ ಗುತ್ತಿನ ಜನರ ಸೌಕರ್ಯಕ್ಕಾಗಿ ಮೈಸೂರು ಜಿಲ್ಲಾ ಬೋರ್ಡಿನವರು ಶಾಲೆ, ವಿದ್ಯಾರ್ಥಿ ನಿಲಯ ಮತ್ತು ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಲು ನಿರ್ಧರಿಸಿರುತ್ತಾರೆ. ಕಬ್ಬಾಳ್ ಮತ್ತು ರಾಮಂದೂರು ಜಿಲ್ಲಾ ಬೋರ್ಡ್ ಸ್ಕೂಲು ಕಟ್ಟಡಗಳ ಪ್ರವೇಶೋತ್ಸವವನ್ನು ನಡೆಸುವಂತೆ ಬೋರ್ಡಿನವರು ಶ್ರೀಮನ್ ಮಹಾರಾಜರನ್ನು ಪ್ರಾರ್ಥಿಸಿರುತ್ತಾರೆ. ಸಮಾರಂಭಗಳು ಮುಂದಿನ ತಿಂಗಳು ನಡೆಯುವುವು.

○ ಮೈಸೂರು-ನಂಜನಗೂಡು ರೈಲು ರಸ್ತೆಯಲ್ಲಿ ಮಂಡಕಳ್ಳಿ ಬಳಿ ಕಳೆದ ೧ ನೇ ತಾ|| ಸುಮಾರು ೫೫ ವರ್ಷದ ಸ್ತ್ರೀಯು ರೈಲಿನಿಂದ ಬಿದ್ದಿತ್ತು. ಶರೀರವು ಛಿದ್ರವಾಗಿತ್ತು.

○ ರಾಜಧಾನಿಯ ಪೌರಸಭಾ ನೌಕರರು ಮತ್ತು ಜಾಡಮಾಲಿಗಳಿಗೆ ಉಚಿತ ಔಷಧಿಯನ್ನು ಒದಗಿಸಲು ಸಭೆಯು ಆರೋಗ್ಯ ಇಲಾಖೆಯವರು ವ್ಯವಸ್ಥೆ ಮಾಡುವರು.

ಮಾಧ್ವರ ಜನಗಣತಿಯ ಪ್ರಾರಂಭೋತ್ಸವ

ಬೆಂಗಳೂರು ೬

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಆಶ್ರಯದಲ್ಲಿ ಕೈಗೊಳ್ಳಲಾಗಿರುವ ಮಂಡಲದ ಸದಸ್ಯ ಸಂಗ್ರಹ ಮತ್ತು ಮಾಧ್ವರ ಜನಗಣತಿಯ ಪ್ರಾರಂಭೋತ್ಸವವನ್ನು ಕಳೆದ ೩ ನೇ ತಾ॥ ಸೋಸಲೆಯ ವ್ಯಾಸರಾಯ ಮಠದ ಶ್ರೀ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಶ್ರೀ ಶ್ರೀಗಳವರು ತಮ್ಮ ಭಾಷಣದಲ್ಲಿ ಪ್ರತಿಯೊಂದು ಕಾರ್ಯಕ್ರಮಕ್ಕೂ ಜನಗಣತಿ ಕೆಲಸವು ಮೂಲಾಧಾರವಾದದೆಂದೂ, ಮತ್ತು ಅವಶ್ಯಕವಾದುದೆಂದೂ ಮಾಧ್ವ ಮಂಡಲದವರ ಯೋಜನೆಯು ಕಾರ್ಯಗತವಾಗಬೇಕಾದಲ್ಲಿ ಮಾಧ್ವರಲ್ಲಿ ಐಕಮತ್ಯವು [illegible] ಎಂದೂ ತಿಳಿಸಿದರು. [illegible] ಮಾಧ್ವ ಸಮಾಜದ ಸರ್ವತೋಮುಖ ಅಭಿವೃದ್ಧಿಯೇ ಮಂಡಲದ ಧ್ಯೇಯವೆಂದು ತಿಳಿಸಿದರು

ಬಾಲಕನಿಂದ ಭೂದಾನ

[illegible] ಜಿಲ್ಲೆಯ [illegible] ವರ್ಷದ [illegible] ಬಾಲಕನು ತನ್ನ [illegible] ಎಕರೆ ಜಮೀನಿನಲ್ಲಿ ೬ ಎಕರೆಯನ್ನು ಭೂದಾನ ಯಜ್ಞಕ್ಕಾಗಿ ಕೊಟ್ಟಿರುತ್ತಾನೆ. [illegible] ಜಿಲ್ಲೆಯಲ್ಲಿ ಇದುವರೆಗೆ [illegible] ಎಕರೆ ಜಮೀನು ದಾನವಾಗಿ ಬಂದಿದೆ

ಕೆನ್ಯದಲ್ಲಿ ಆಜ್ಞೋಲ್ಲಂಘನೆಗೆ ಗುಂಡಿನೇಟು

ಕೆನ್ಯದ ರಾಜಧಾನಿ ನೈರೋಬಿಯಲ್ಲಿ ಮೊನ್ನೆಯಿಂದ ಹಲವು ವಿಶೇಷಾಜ್ಞೆಗಳನ್ನು ಜಾರಿಗೆ ತರಲಾಗಿದೆ. ವಿಶೇಷ ಕ್ಷೇತ್ರಗಳೆಂದು ಸಾರಲಾಗಿರುವ ಪ್ರದೇಶಗಳಲ್ಲಿ ಪೊಲೀಸ್ ಮತ್ತು ಮಿಲಿಟರಿಯವರ ಆಜ್ಞೆಗಳನ್ನು ಉಲ್ಲಂಘಿಸುವವರನ್ನು ಕೂಡಲೇ ಗುಂಡು ಹಾರಿಸಿ ಕೊಲ್ಲಬಹುದೆಂದು ಅಲ್ಲಿನ ಗೌರ್ನರರು ಆಜ್ಞೆ ಮಾಡಿರುತ್ತಾರೆ. ಅಕ್ರಮವಾಗಿ ಶಸ್ತ್ರಾಸ್ತ್ರಗಳ ತಯಾರಿಕೆ ಮಾಡುವವರು ಮತ್ತು ಅವನ್ನು ಹೊಂದಿರುವವರನ್ನು ಮರಣ ದಂಡನೆಗೆ ಗುರಿಪಡಿಸಲಾಗುವುದೆಂದು ಹೇಳಲಾಗಿದೆ

ಹಿಂದಿ ಸಾಹಿತ್ಯ ವಿಶಾರದ ತರಗತಿ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಇದೇ ೧೫ ನೇ ತಾ॥ ನಿಂದ ಸಾಹಿತ್ಯ ಸಮ್ಮೇಳನದ ಸಾಹಿತ್ಯ ವಿಶಾರದ ತರಗತಿಗಳನ್ನು ನಡೆಸಲಾಗುವದು. ಸೇರಲಿಚ್ಛಿಸುವವರು ಇದೇ ೧೦ ನೇ ತಾರೀಕಿನೊಳಗೆ ಸಭಾ ಕಾರ್ಯಾಲಯಕ್ಕೆ ತಮ್ಮ ಹೆಸರುಗಳನ್ನು ಕೊಡಬೇಕೆಂದು ಸೂಚಿಸಲಾಗಿದೆ

ಮಾರಾಟ ತೆರಿಗೆ ಪರಿಹಾರ ಸಮಿತಿ ಸದಸ್ಯತ್ವ

ಮಾರಾಟ ತೆರಿಗೆ ಬಗ್ಗೆ ಪರಿಹಾರಕ್ಕಾಗಿ ವರ್ತಕರು ರಚಿಸಿಕೊಂಡಿರುವ ಸಮಿತಿಗೆ ಬಟ್ಟೆ ವ್ಯಾಪಾರಿಗಳಾದ ಶ್ರೀ ಕೆ ಎಸ್ ಸತ್ಯನಾರಾಯಣರಾಯರನ್ನು ಸದಸ್ಯರಾಗಿ ನೇಮಿಸಲಾಗಿದೆ

ಬ್ಯಾಂಕಿಗೆ ಕಟ್ಟಲು ಕೊಟ್ಟ ಹಣದ ಸಮೇತ ಪರಾರಿ

ಚಿಕ್ಕಮಗಳೂರಿನ ಪೆಟ್ರೋಲ್ ವ್ಯಾಪಾರಿಗಳಾದ ಶ್ರೀ ಎಂ ವಿ [illegible]ರವರು ಬ್ಯಾಂಕಿಗೆ ಕಟ್ಟುವಂತೆ ೧,೮೦೦ ರೂ ಗಳನ್ನು ತಮ್ಮ ನೌಕರ ಅನ್ವರ್ ಅಹಮದ್ ಎಂಬುವನಿಗೆ ಕೊಡಲಾಗಿ, ಆತನು ಅದನ್ನು ಕಟ್ಟಲಿಲ್ಲವೆಂದೂ, ಪೊಲೀಸರಿಗೆ ಈ ವಿಷಯ ತಿಳಿದು ಅವರು ಮಂಗಳೂರಿನ ಟಾಜ್‌ಮಹಲ್ ಹೋಟೇಲಿನಲ್ಲಿದ್ದ ಅವನನ್ನು ಪತ್ತೆ ಮಾಡಿ ಬಂಧಿಸಿ ಕರೆತಂದು, ೧,೬೦೦ ರೂ ಗಳನ್ನು ವಶಪಡಿಸಿಕೊಂಡರೆಂದೂ ವರದಿಯಾಗಿದೆ

ಬೆಂಗಳೂರಿನಲ್ಲಿ ಶಿಕ್ಷಕ ವಿಮಾನ ತಯಾರಿ

ಈ ವರ್ಷದ ಅಂತ್ಯದಲ್ಲಿ ಇದೇ ಪ್ರಥಮವಾಗಿ ಬೆಂಗಳೂರಿನ ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಇಲ್ಲೇ ಪೂರ್ಣವಾಗಿ ತಯಾರಿಸಲ್ಪಟ್ಟ ಭಾಗಗಳಿಂದ ಕೂಡಿದ ಶಿಕ್ಷಕ ವಿಮಾನಗಳು ಸಿದ್ಧವಾಗಲಿವೆಯೆಂದು ಗೊತ್ತಾಗಿದೆ. ಅದರ ಎಲ್ಲ ಸಾಮಾನುಗಳೂ ಲೋಹವಲ್ಲೇ ತಯಾರಾಗಲಿವೆ. ಸ್ವದೇಶಕ್ಕೆ ಬೇಕಾಗುವಷ್ಟು ವಿಮಾನಗಳು ತಯಾರಾದ ನಂತರ ಹೊರ ದೇಶಗಳಲ್ಲೂ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದೆಂದು ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ಕಡಲೇಕಾಯಿ	[illegible]	[illegible]
ಹರಳುಬೀಜ	[illegible]	[illegible]
ಹೊಂಗೇಬೀಜ	[illegible]	
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಹುಚ್ಚೆಳ್ಳು	[illegible]	
[illegible]		
[illegible]	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	
[illegible]		
[illegible]	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

SRI GANESHA TALKIES

Grand Gala Release

On 8 5-53

Columbia's

DEATH OF A SALESMAN

With —Fredric March

ಮನೆಗಳು ಕ್ರಯಕ್ಕಿವೆ

1	ಡೋರ್ ನಂಬರು 2960	ವಾಣೀವಿಲಾಸ ಮೊಹಲ್ಲ, 3ನೇ ಮೇನ್ ರಸ್ತೆ
2	,, 1665	ಒಲಂಪಿಯಾ ಟಾಕೀಸ್ ಎದುರು ರಸ್ತೆ
3	,, 809 2	ಲಕ್ಷ್ಮೀಪುರಂ
4	,, 203	ಶ್ರೀರಾಮಾ ಬೀದಿ, ಪಿಲ್ಲೆ ಮೊಹಲ್ಲ
5	,, 1047/13	ಸಿಮೆಂಟ್ ಬ್ಲಾಕ್

ಜಯ ಅಂಡ್ ಕಂಪೆನಿ,

ಮನೆ, ಜಮೀನು ಮತ್ತು ಸಾಲ ಕೊಡಿಸುವ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಸಯ್ಯಾಜಿರಾವ್ ರಸ್ತೆ,

ಮೈಸೂರು. ಫೋನ್ ನಂ 520

ಮೋತೀಲಾಲ್ ಟಾಕೀಸ್



8-5-53 ರಿಂದ : ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

[illegible] ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಪಣಕ್ಕಾರಿ ★

[illegible] ಎಂ ಜಿ ರಾಮಚಂದ್ರ [illegible] ಯೋಗಮಂಗಳಂ [illegible]

ಪ್ರಭುದೇವಾ ಟಾಕೀಸ್

ಪ್ರತಿದಿನ 3 ಆಟಗಳು

7-5 53 ರಿಂದ ಅಮೋಘ 2 ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಸಂಸಾರಂ

[illegible] ಶ್ರೀರಾಂ, [illegible] ಸುಂದರಿಬಾಯಿ ಮುಂತಾದವರು

ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರವರ ಆಫೀಸು

ಮೈಸೂರು - ತಾರೀಖು 25—4—1953

ಇಸ್ತಿಹಾರ್‌ನಾಮೆ

1 ಮೈಸೂರು ನರಸಿಂಹರಾಜ ಮೊಹಲ್ಲಾ [illegible] ದ್ರವ್ಯದಿಂದ ಒದಗಿಸಬೇಕಾದ ಕಾರ್ಮಿಕರ ಮನೆಗಳನ್ನು ಕಟ್ಟಲು [illegible] ಟೆಂಡರುಗಳನ್ನು ನಗರಾಭಿವೃದ್ಧಿ ಸಮಿತಿಯ ಇಂಜನಿಯರ್‌ರವರ ಆಫೀಸಿನಲ್ಲಿ 1953 ನೇ ಇಸವಿ ಮೇ 12 ನೇ ತಾರೀಖು ಮಧ್ಯಾಹ್ನ 3 ಘಂಟೆಯವರೆವಿಗೂ ಸ್ವೀಕರಿಸಲಾಗುವುದು

2 ಕೆಲಸವನ್ನು [illegible] ತಿಂಗಳುಗಳೊಳಗಾಗಿ ಪೂರೈಸಬೇಕು

3 [illegible] ಅಂದಾಜನ್ನು ಆಫೀಸಿನಲ್ಲಿ ಆಫೀಸಿನ ದಿನಗಳಲ್ಲಿ 11 ರಿಂದ 5 ಘಂಟೆಯವರೆಗೂ, ಶನಿವಾರಗಳಲ್ಲಿ ಬೆಳಗ್ಗೆ 8 ರಿಂದ 12 ಘಂಟೆಯವರೆಗೂ ನೋಡಬಹುದು

4 ಟೆಂಡರುಗಳನ್ನು ವಿಧಾಯಕವಾದ ನಮೂನೆಯಲ್ಲಿ ದರಗಳನ್ನು [illegible] ಮತ್ತು ಪದಗಳಲ್ಲೂ ನಮೂದಿಸಿ ಹಾಜರ್ಪಡಿಸಬೇಕು. ನಮೂನೆ ಫಾರಂಗಳನ್ನು ಆಫೀಸಿನಲ್ಲಿ ಒಂದು ರೂಪಾಯಿ [illegible] ಪಡೆಯಬಹುದು.

5 ಪ್ರತಿಯೊಂದು ಟೆಂಡರನ್ನು ನಗದು ರೂ 1,700 [ಒಂದು ಸಾವಿರದ ಏಳು ನೂರು ರೂಪಾಯಿಗಳ] ಠೇವಣಿ ಸಮೇತ ಹಾಜರ್ಪಡಿಸಬೇಕು. ಠೇವಣಿ ಇಲ್ಲದ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ. ಟೆಂಡರುಗಳ ಅಭ್ಯರ್ಥಿಗಳು ತೀರ್ಮಾನವು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರ ಮತ್ತು ಕಾರ್ಮಿಕರ ಗೃಹರಚನಾ [illegible] ಅಧ್ಯಕ್ಷರ ಅನುಮತಿಗೆ ಒಳಪಟ್ಟಿರುತ್ತೆ

6 ಟೆಂಡರುಗಳ ಒಪ್ಪಿಗೆಯಾದ ಮೇಲೆ ಟೆಂಡರುದಾರರು ಕಂಟ್ರಾಕ್ಟಿಗೆ ಸಂಬಂಧಪಟ್ಟ ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು. ತಪ್ಪಿದಲ್ಲಿ ಟೆಂಡರನ್ನು ರದ್ದು ಮಾಡುವುದಲ್ಲದೆ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು

7 ಟೆಂಡರುಗಳ ಒಪ್ಪಿಗೆ ಅಥವಾ ತಿರಸ್ಕಾರದ ವಿಚಾರದಲ್ಲಿ ಯಾವುದೇ ಕಾರಣ [illegible] ಜವಾಬು ಕೊಡಲಾಗುವುದಿಲ್ಲ. ಟೆಂಡರು ಒಪ್ಪಿಗೆಯಾದಮೇಲೆ, ತಿರಸ್ಕರಿಸಲ್ಪಟ್ಟ ಟೆಂಡರುಗಳ ಠೇವಣಿ ಮೊಬಲಗನ್ನು ವಾಪಸು ಮಾಡಲಾಗುವುದು.

8 ಕಟ್ಟಡದ ಅಂದಾಜು ರೂ 19 000 [ನೀರು, ವಿದ್ಯುಚ್ಛಕ್ತಿ ಮತ್ತು [illegible] ಸೌಕರ್ಯಗಳು ಸೇರಿ]

9 ಟೆಂಡರುದಾರರು 38,000 ರೂಪಾಯಿ ಅಂದಾಜಿಗಾಗುವ [illegible] ಬ್ಲಾಕುಗಳನ್ನು ಕಟ್ಟಲು ಶಕ್ತರಾಗಿರಬೇಕು

10 ಕಟ್ಟಡಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸತಕ್ಕ ಮತ್ತು ಸಾಗಿಸತಕ್ಕ ಏರ್ಪಾಡುಗಳನ್ನು ಕಂಟ್ರಾಕ್ಟುದಾರರೇ ಮಾಡಿಕೊಳ್ಳಬೇಕು.

ಟೆಂಡರಿನಲ್ಲಿ ಕೊಟ್ಟಿರತಕ್ಕ ದರಗಳಲ್ಲಿ ಆಯಾ ಸಾಮಗ್ರಿ ಸಂಬಂಧಪಟ್ಟ ಮಾರಾಟ ತೆರಿಗೆ [Sales Tax] ಸೇರಿರುತ್ತದೆಯೋ ಎಂಬ ವಿಚಾರವನ್ನು ಸ್ಪಷ್ಟವಾಗಿ ತಿಳಿಸಬೇಕು

(ಸಹಿ) ಎಸ್. ರಂಗಪ್ಪ, ಛೇರ್ಮನ್

Edited, Printed and Published by A. R. Nagarajan at Sadhvi Press, D Subbiah Road, Mysore

ಕೋ ಸಂ. 792 || ವಂದೇ ಮಾತರಂ || ಅಂಚಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೨] ಶನಿವಾರ ೯-೫-೧೯೫೩ [ಸಂಚಿಕೆ ೨೨೯

ದೆಹಲಿ ಬಳಿ ವಿಮಾನ -ಸಿಡಿದು ೧೮ ಮರಣ-

ನಾಳಿದ್ದಿನಿಂದ ಜಾಡಮಾಲಿಗಳ ಮುಷ್ಕರ ಪ್ರಾರಂಭ

ಬೆಂಗಳೂರು ೯

ಇಲ್ಲಿನ ಕಾರ್ಪೋರೇಷನ್ನಿಗೆ ಸೇರಿದ ಜಾಡಮಾಲಿಗಳು ಹಿಂದೆ ಮಾಡಿದ ನಿರ್ಧಾರದ ಪ್ರಕಾರ ನಾಳಿದ್ದಿನಿಂದ ಮುಷ್ಕರ ಹೂಡಲಿರುವರು ಕಾರ್ಪೋರೇಷನ್ನಿನವರು ಜಾಡಮಾಲಿಗಳ ೧೯ ಬೇಡಿಕೆಗಳಲ್ಲಿ ಹಲವನ್ನು ಸಲ್ಲಿಸಿರುವುದಾಗಿಯೂ ಆದರೆ ಸಂಬಳದ ವಿಚಾರವಾಗಿ ಶ್ರೀ ಪುರುಷರಿಂಬ ಭೇದವನ್ನು ತೋರಿಸಿರುವರೆಂದೂ ಅವರುಗಳ ಸಂಘದ ಕಾರ್ಯದರ್ಶಿ ಶ್ರೀ ಎ ಎಸ್ ಸಿಂಗ್‌ರವರು ತಿಳಿಸಿರುವರು ಕನಿಷ್ಠ ಸಂಬಳವನ್ನು ೩೫ ಕ್ಕೆ ಗೊತ್ತುಪಡಿಸಬೇಕೆಂದು ಕೇಳಿದ್ದರೂ ಪ ಹ ೩೦ ರೂ ಗಳಿಗೆ ನಿಗದಿ ಮಾಡಲಾಗಿದೆಯೆಂದೂ ತುಟ್ಟಿಭತ್ಯವನ್ನು ೬ಗ ರೂ ಗಳಿಗಿಂತ ಹೆಚ್ಚಿಸಿಲ್ಲವೆಂದೂ ಶ್ರೀ ಸಿಂಗ್ ರವರು ತಿಳಿಸಿರುವರು

ಸೂರ್ಯ ನಮಸ್ಕಾರ ಮಾಡುವ ಮರ ?

ಹೈದರಾಬಾದು ಸಂಸ್ಥಾನದ ಇತಪಳ್ಳಿ ಎಂಬ ಗ್ರಾಮದ ಬಳಿ ಹರಿಯುವ ಸಣ್ಣ ಹೊಳೆ ದಡದಲ್ಲಿರುವ ೬ ಅಡಿ ಎತ್ತರದ ಗಿಡವೊಂದು ಪ್ರತಿ ದಿನವೂ ಸೂರ್ಯೋದಯವಾದಾಗಿನಿಂದ ಸಂಜೆವರೆಗೆ ಬಾಗುತ್ತಾ, ಸಂಜೆ ಹೊತ್ತಿಗೆ ನದಿಯ ಮರಳಿನ ಮೇಲೆ ಬೀಳುತ್ತದೆಂದೂ, ರಾತ್ರಿಯೂ ಮೇಲೆ ಬೆಳಗಾಗುವವರೆಗೆ ಪುನಃ ಹಾಗೆಯೇ ಇದ್ದು ಬೆಳಗಿನ ಹೊತ್ತಿಗೆ ನೆಟ್ಟಗೆ ನಿಲ್ಲುವುದೆಂದೂ ವರದಿಯಾಗಿದೆ. ಇದೇ ಜಾತಿಯ ಇತರ ಮರಗಳ ಅಕ್ಕ ಪಕ್ಕಗಳಲ್ಲಿವೆ ಆದರೆ ಈ ಗಿಡವೊಂದು ಮಾತ್ರ ವಿಚಿತ್ರವಾಗಿದೆ

ಸದರ್ನ ರೈಲ್ವೆಯ ಹೊಸ ಮ್ಯಾನೇಜರರಿಗೆ ಅಭಿನಂದನೆ

ಸದರ್ನ ರೈಲ್ವೆಯ ಜನರಲ್ ಮ್ಯಾನೇಜರರಾದ ಶ್ರೀ ಕೆ ಆರ್ ರಾಮಾನುಜಂರವರು ಸಧ್ಯದಲ್ಲೇ ನಿವೃತ್ತರಾಗಲಿದ್ದು ಅದಕ್ಕೆ ಪೂರ್ವಭಾವಿಯಾಗಿ ರಜಾ ಪಡೆದಿರುತ್ತಾರೆ ಅವರ ಸ್ಥಾನದಲ್ಲಿ ಅದೇ ರೈಲ್ವೆಯ ಸೀನಿಯರ್ ಡೆಪ್ಯುಟಿ ಜನರಲ್ ಮ್ಯಾನೇಜರರಾದ ಶ್ರೀ ಟಿ ಎ ಜೋಸೆಫ್‌ರವರನ್ನು ನೇಮಿಸಲಾಗಿದೆ ಶ್ರೀ ಜೋಸೆಫ್‌ರವರಿಗೆ ಬಡ್ತಿ ಸಿಕ್ಕಿದ ಬಗ್ಗೆ ಸದರ್ನ ರೈಲ್ವೆಯ ಮೈಸೂರು ರೀಜನಲ್ ಅಧಿಕಾರಿಗಳು ಅವರಿಗೆ ಸಂತ ಮಯ್ಪಳ ಅಭಿನಂದನಾ ಸಂದೇಶ ಕಳುಹಿಸಿ, ಅವರ ಅಧಿಕಾರಾವಧಿಯು ಸುಖಪ್ರದವಾಗಿರಲೆಂದು ಹಾರೈಸಿ ಅವರಿಗೆ ತಮ್ಮ ಪೂರ್ಣ ಸಹಕಾರ ನೀಡುವುದಾಗಿ ಭರವಸೆಯಿತ್ತಿರುವರು ಸಂದೇಶಕ್ಕೆ ಶ್ರೀಗಳಾದ ಚೌಧುರಿ, ಚಲುವೇ ಅರ್ಸ್, ಕನ್ನಿಂಗ್‌ಹ್ಯಾಂ ಮತ್ತು ರೈಯರ್ಸನವರು ರುಜು ಮಾಡಿರುವರು

ಎಲ್ಲಾ ಸಂಸ್ಥಾನಗಳಲ್ಲೂ ಅಕ್ಟ್ರಾಯ್ ಸುಂಕ

ಬೊಂಬಾಯಿಯಲ್ಲಿ ನಡೆದ ಸಂಸ್ಥಾನಗಳ ಟ್ರಾಫಿಕ್ ಸಲಹಾ ಸಮಿತಿಯಲ್ಲಿ ಎಲ್ಲಾ ಸಂಸ್ಥಾನಗಳಲ್ಲೂ ಸಾರ್ವತ್ರಿಕವಾಗಿ ಅಕ್ಟ್ರಾಯ್ ಸುಂಕ ವಿಧಿಸುವಂತೆ ಸೂಚಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತೆಂದು ಗೊತ್ತಾಗಿದೆ ಮೈಸೂರಿನ ಪರವಾಗಿ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಸಮಿತಿಯಲ್ಲಿ ಭಾಗವಹಿಸಿದ್ದರು ಅಕ್ಟ್ರಾಯ್‌ನಿಂದ ಮೈಸೂರು ಸಂಸ್ಥಾನದಲ್ಲಿ ವರ್ಷಕ್ಕೆ ೫೦ ಲಕ್ಷ ರೂ ಉತ್ಪನ್ನವಾಗುತ್ತಿರುವುದಾಗಿ ಗೊತ್ತಾಗಿದೆ

ವಿಮಾನ ಅಪಘಾತದಿಂದ ೧೮ ಜನರ ಮರಣ

ನೆನ್ನೆ ಮಧ್ಯ ರಾತ್ರಿ ೧ ಗಂಟೆ ಸಮಯದಲ್ಲಿ ಏರ್ ಇಂಡಿಯಾ ಸಂಸ್ಥೆಯ ವಿಮಾನವೊಂದು ದೆಹಲಿಯಿಂದ ಬೊಂಬಾಯಿಯ ಕಡೆಗೆ ಹೊರಟು ಪಾಲಂ ನಿಲ್ದಾಣವನ್ನು ಬಿಟ್ಟು ಮೂರು ಮೈಲಿ ದೂರ ಹೋದಾಗ ಅಲ್ಲಿ ಹಠಾತ್ತನೆ ಅದರಲ್ಲಿ ಬೆಂಕಿಯುಂಟಾಗಿ ವಿಮಾನವು ಸಿಡಿದ ಪರಿಣಾಮವಾಗಿ ಅದರಲ್ಲಿದ್ದ ೧೩ ಮಂದಿ ಪ್ರಯಾಣಿಕರೂ ಮತ್ತು ೫ ಮಂದಿ ವಿಮಾನ ಸಿಬ್ಬಂದಿಯವರೂ ಮೃತಪಟ್ಟರೆಂದು ತಿಳಿದುಬಂದಿದೆ

ಮೈಸೂರು ಸಂಸ್ಥಾನಕ್ಕೆ ಕೇಂದ್ರದಿಂದ ೭೪ ಲಕ್ಷ ರೂ.

ಮೈಸೂರಿನಲ್ಲಿ ಅಧಿಕ ಆಹಾರ ಯೋಜನೆಗಾಗಿ ಈ ವರ್ಷಕ್ಕೆ ಕೇಂದ್ರ ಸರಕಾರದವರು ೫೫ ಲಕ್ಷ ರೂ ಸಹಾಯ ಮತ್ತು ೬.೭೩ ಲಕ್ಷ ರೂ ಸಾಲವನ್ನ ಮಂಜೂರು ಮಾಡಿರುತ್ತಾರೆ ಇದರಲ್ಲಿ ಮೈಸೂರು ಮತ್ತು ಬೆಂಗಳೂರಿನ ಗ್ರಾಮಸಾರದ ಉಪಯೋಗಕ್ಕಾಗಿ ೬.೮ ಲಕ್ಷ ರೂ ಗಳೂ ಸೇರಿವೆ

ಬಳ್ಳಾರಿ ಮೈಸೂರಿಗೆ ಸೇರಬೇಕು

ಮಿಶ್ರಾರವರಿಗೆ ಸಂಸ್ಥಾನ ಸರ್ಕಾರದ ಮನವಿ

ಸ್ವಂ, ಸು ಫೋ] ಬೆಂಗಳೂರು ೯

ಬಳ್ಳಾರಿ ಜಿಲ್ಲೆಯ ಭವಿಷ್ಯದ ವಿಚಾರಣಾಧಿಕಾರಿ ಜಸ್ಟಿಸ್ ಮಿಶ್ರಾರವರು ಇಂದು ಬಳ್ಳಾರಿಯಿಂದ ಇಲ್ಲಿಗೆ ಆಗಮಿಸಿದರು ಪತ್ರಿಕಾ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಿದಾಗ ಮಿಶ್ರಾರವರು ತಮ್ಮ ಕೆಲಸದ ಬಹುಭಾಗವು ಬಳ್ಳಾರಿಯಲ್ಲಿಯೇ ಮುಗಿದಿರುವುದಾಗಿ ಹೇಳಿದರು ಬೆಂಗಳೂರಿನಲ್ಲಿ ತಾವು ಯಾವ ವಿಧವಾದ ಮನವಿಗಳನ್ನು ಸ್ವೀಕರಿಸುವುದಾಗಲಿ, ಅಥವಾ ಭೇಟಿಗಳನ್ನು ಕೊಡುವುದಾಗಲಿ ಕೈಗೊಳ್ಳುವುದಿಲ್ಲವೆಂದು ಅವರು ಹೇಳಿದರು ಕೇಂದ್ರ ಸರ್ಕಾರಕ್ಕೆ ಈ ತಿಂಗಳ ೧೮ರ ಹೊತ್ತಿಗೆ ಅವರು ತಮ್ಮ ವರದಿಯನ್ನು ಒಪ್ಪಿಸಲಿರುವರು ಅವರು ಈ ದಿನ ಮುಖ್ಯ ಮಂತ್ರಿ ಹನುಮಂತಯ್ಯನವರನ್ನು ಭೇಟಿ ಮಾಡುವರು ಮೈಸೂರು ಸರ್ಕಾರದವರು ವಿಶೇಷಾಧಿಕಾರಿ ಶ್ರೀ ಕೆ ಶೇಷಗಿರಿರಾಯರ ಮೂಲಕ ಮನವಿಯೊಂದನ್ನು ಅವರಿಗೆ ಸಲ್ಲಿಸಿ ಬಳ್ಳಾರಿಯನ್ನು ಮೈಸೂರಿಗೆ ಸೇರಿಸಬೇಕೆಂದು ಕೋರಿರುವುದಾಗಿ ಗೊತ್ತಾಗಿದೆ ನಾಳಿದ್ದು ಶ್ರೀ ಮಿಶ್ರಾರವರು ಹೈದರಾಬಾದಿಗೆ ತೆರಳುವರು

ಶಾಸನ ಸಭಾ ಸದಸ್ಯನಿಗೆ ಮರಣ ದಂಡನೆ

ಲಾಹೋರಿನಲ್ಲಿ ಅಹಮದೀಯ ಮುಸಲ್ಮಾನರ ವಿರೋಧವಾಗಿ ಇತ್ತೀಚೆಗೆ ನಡೆದ ಘರ್ಷಣೆಯಲ್ಲಿ ಬಹು ಹೆಚ್ಚಿನ ಪಾತ್ರವಹಿಸಿದರೆಂದು ಹೇಳಲಾದ ಪಂಜಾಬ್ ಶಾಸನ ಸಭಾ ಸದಸ್ಯ ಮೌಲ್ವಿ ಅಬ್ದುಲ್ ಸತ್ತಾರ್‌ರವರಿಗೆ ಮಿಲಿಟರಿ ನ್ಯಾಯಾಸ್ಥಾನವು ಮರಣ ದಂಡನೆ ವಿಧಿಸಿರುವುದಾಗಿ ವರದಿಯಾಗಿದೆ

ಉಡುಪಿ ಗುರುಗಳೊಡನೆ ಹನುಮಂತಯ್ಯನವರ ಭೇಟಿ

ಮಂಗಳೂರಿನ ಪ್ರವಾಸ ಮುಗಿಸಿಕೊಂಡು, ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉಡುಪಿ ಕ್ಷೇತ್ರಕ್ಕೆ ಕಳೆದ ೬ ನೇ ತಾ|| ಪ್ರಯಾಣ ಮಾಡಿದರು ಅಲ್ಲಿ ಅಷ್ಟ ಮಠಾಧೀಶರು ಒಟ್ಟಾಗಿ ಮುಖ್ಯ ಮಂತ್ರಿಯವರಿಗೆ ಭೇಟಿಯಿತ್ತರು ಮುಖ್ಯ ಮಂತ್ರಿಗಳು ಅವರುಗಳಿಗೆ ದೀರ್ಘ ದಂಡ ಪ್ರಣಾಮ ಮಾಡಿ, ತಾವು ಧನ್ಯರಾದುದಾಗಿ ಹೇಳಿದರು. ಅಲ್ಲಿ ನಡೆದ ವೈದಿಕ ಧರ್ಮ ಪರಿಷತ್ತಿನ ಆರಂಭೋತ್ಸವವನ್ನು ಅವರು ನೆರವೇರಿಸಿದರು ಉಡುಪಿಯ ಪೌರ ಸಭೆಯವರು ಶ್ರೀ ಹನುಮಂತಯ್ಯನವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

ನಗರದ ಬಾಡಿಗೆ ಹತೋಟಿ ಅಧಿಕಾರಿ

ಮೈಸೂರು ಅಡಿಷನಲ್ ಫಸ್ಟ್ ಮುನ್ಸೀಫರಾದ ಶ್ರೀ ಆರ್. ನಾಗರಾಜ್‌ರವರನ್ನು ಈ ತಿಂಗಳು ೧೮ ರಿಂದ ನಗರದ ಬಾಡಿಗೆ ಹತೋಟಿ ಅಧಿಕಾರಿಯಾಗಿಯೂ ನೇಮಿಸಲಾಗಿದೆ ಮುನ್ಸೀಫರ ಕೆಲಸದ ಜೊತೆಗೆ ಹೊಸ ಕರ್ತವ್ಯವನ್ನೂ ಅವರು ನೆರವೇರಿಸಬೇಕಾಗಿದೆ

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನಿ ಸಭೆಯವರು ನಾಳೆ ಸಂಜೆ ೮ ಗಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ವಿದ್ವಾನ್ ಎಸ್ ಸುಬ್ಬಕೃಷ್ಣಯ್ಯನವರ ಗಾಯನ ಅ|| ವಿ|| ಎಸ್ ವೆಂಕಟರಮಣಯ್ಯನವರ ಪಿಟೀಲು ಮತ್ತು ವಿ|| ಎಂ ಎಸ್ ರಾಮಯ್ಯನವರ ಮೃದಂಗಗಳ ಕಛೇರಿಯನ್ನು ಏರ್ಪಡಿಸಿರುತ್ತಾರೆ

ಉರಿಗಾಂ ಚಿನ್ನದ ಗಣಿ ಚಾಂಪಿಯನ್ ಗಣಿ ವಶಕ್ಕೆ

ಗಣಿ ಸಮಿತಿಯ ವರದಿಯ ಅಂಶಗಳು

ಸ್ವಂ ಸು ಫೋ] ಬೆಂಗಳೂರು ೯

ಉರಿಗಾಂ ಚಿನ್ನದ ಗಣಿಯ ಸಂಬಂಧವಾಗಿ ರಚಿತವಾಗಿರುವ ಶ್ರೀ ಎಸ್ ಮಾಧವರಾವ್ ಸಮಿತಿಯು ಈ ದಿನ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿರುವುದಾಗಿ ಗೊತ್ತಾಗಿದೆ ಗಣಿಯನ್ನು ಮುಚ್ಚುವುದರ ಬದಲು ಅದನ್ನು ಚಾಂಪಿಯನ್ ಗಣಿಗೆ ವಹಿಸುವುದು ಒಳ್ಳೆಯದೆಂದೂ, ಆ ಗಣಿಯವರು ಅದನ್ನು ನಡೆಸಲು ಮುಂದೆ ಬಂದಿರುವರೆಂದೂ, ಅವರು ೧೦೦೦ ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಿದ್ಧವಿರುವುದಾಗಿಯೂ, ವರದಿಯಲ್ಲಿ ಸೂಚಿಸಲಾಗಿರುವುದೆಂದು ಗೊತ್ತಾಗಿದೆ ಇನ್ನು ೩೫೦ ಮಂದಿಯನ್ನ ನಿವೃತ್ತಿ ಮಾಡಿ, ಉಳಿದ ೧೬೦೦ ಜನರಿಗೆ ೩೦೦೦-೪೦೦೦ ರೂ ಗಳಷ್ಟು ಪರಿಹಾರ ದ್ರವ್ಯವನ್ನು ಕೊಟ್ಟು ಕಳುಹಿಸಬಹುದೆಂದೂ ಅಭಿಪ್ರಾಯಪಡಲಾಗಿದೆ

ಟಿ. ಸಿದ್ದಲಿಂಗಯ್ಯನವರ ಅನರ್ಹತೆ ವಿಚಾರಣೆ

ಶ್ರೀ ಟಿ ಸಿದ್ದಲಿಂಗಯ್ಯನವರ ಶಾಸನ ಸಭಾಸದಸ್ಯತ್ವದ ವಿಷಯವಾಗಿ ವಿಚಾರಣೆಯು ಈ ದಿನ ನಡೆಯಿತು ಶ್ರೀ ಬಿ.ವಿ ನಾರಾಯಣರೆಡ್ಡಿಯವರ ಪರವಾಗಿ ಕೋಲಾರದ ಶ್ರೀ ಬೈರಾರೆಡ್ಡಿಯವರು ವಾದಿಸುತ್ತಾ ಸಂತೆಗಳನ್ನು ಸಾಗಿಸಿದ ಬಗ್ಗೆ ಅದೊಂದು ಕಾಂಟ್ರ್ಯಾಕ್ಟೆಂದೂ, ಶ್ರೀ ಸಿದ್ದಲಿಂಗಯ್ಯನವರೂ ಅವರ ಸಹೋದರರೂ ಅವಿಭಕ್ತ ಕುಟುಂಬದವರೆಂದೂ, ಅವರಿಗೆ ಪಾಲು ಇರುವುದೆಂದೂ, ಶ್ರೀ ಸಿದ್ದಬಸಪ್ಪನವರು ಕಂಪೆನಿಯ ಮ್ಯಾನೇಜರೆಂದೂ ತಿಳಿಸಿದರು. ಶ್ರೀ ವಿ. ಕೃಷ್ಣಮೂರ್ತಿಯವರು ಮಾಜಿ ಮಂತ್ರಿಗಳ ಪರವಾಗಿ ವಾದ ಮಾಡಿ, ಈ ವ್ಯವಹಾರವು ಕೇವಲ ಸಾಗಾಣಿಕೆಯ ಸೇವೆಗೆ ಸಂಬಂಧಿಸಿರುವುದಾಗಿಯೂ, ಅದರ ಹಂಚಿಕೆಗೆ ಸಂಬಂಧಿಸಿಲ್ಲವೆಂದೂ ಹೇಳಿದರು ಈ ಬಗ್ಗೆ ಮೂಲ ಸಮಸ್ಯೆ (ಪ್ರಿಲಿಮಿನರಿ ಇಷ್ಯೂ) ಯನ್ನು ತೀರ್ಮಾನಿಸಲು ನಾಳಿದ್ದಿಗೆ ವಿಚಾರಣೆಯನ್ನು ಮುಂದುವರಿಸಲಾಗಿದೆ ಶ್ರೀ ಬಿ ವಿ ನಾರಾಯಣರೆಡ್ಡಿಯವರ ಪರ ಬೊಂಬಾಯಿಯ ಶ್ರೀ ಎ ಎಸ್ ಆರ್ ಚಾರಿಯವರು ವಾದ ಮಾಡುವರು

ಮೈಸೂರು ಶಾಸನ ಸಭೆಗೆ ೧೧೭ ಸ್ಥಾನ

ಚುನಾವಣಾ ಗಡಿ ನಿರ್ಧಾರ ಸಮಿತಿಯ ಅಧಿವೇಶನವು ಬೆಂಗಳೂರಿನಲ್ಲಿ ಇಂದು ಸೇರಿತ್ತು. ಪಾರ್ಲಿಮೆಂಟಿನ ಸದಸ್ಯರಾದ ಶ್ರೀಗಳು ಎಸ್ ಕೇಶವಯ್ಯಂಗಾರ್, ಸಿ ಆರ್ ಬಸಪ್ಪ, ಎಂ ಎಸ್. ಗುರುಪಾದಸ್ವಾಮಿ, ಶಾಸನ ಸಭಾಸದರಾದ ಶ್ರೀಗಳು ಎಂ ವಿ ರಾಮರಾವ್, ಟಿ ಹನುಮಯ್ಯ, ಜಿ ನಾರಾಯಣಗೌಡ, ಬಿ ಪಿ ನಾಗರಾಜಮೂರ್ತಿಯವರ ಸಾಕ್ಷ್ಯಗಳನ್ನು ತೆಗೆದುಕೊಳ್ಳಲಾಯಿತು ಪಾರ್ಲಿಮೆಂಟಿನಲ್ಲಿ ಸಂಸ್ಥಾನದಿಂದ ೧೩ ಪ್ರತಿನಿಧಿಗಳೂ, ಶಾಸನ ಸಭೆಯಲ್ಲಿ ೧೧೭ ಮಂದಿ ಸದಸ್ಯರೂ ಇರಬೇಕೆಂದು ಅವರುಗಳು ಸಮಿತಿಗೆ ತಿಳಿಸಿದರು.

ಹಂಗೇರಿ-ಯುಗೊಸ್ಲೋವಿಯಾ ಗಡಿ ಘರ್ಷಣೆ

ಹಂಗೇರಿ ಮತ್ತು ಯುಗೊಸ್ಲೋವಿಯಾ ಗಡಿ ಕಾವಲುಗಾರರಿಗೆ ಕಳೆದ ಮಂಗಳವಾರ ೧ ದಿನ ಪೂರ್ತಿ ಘರ್ಷಣೆ ನಡೆಯಿತೆಂದೂ, ಹಂಗೇರಿಯವರು ಮೊದಲು ಗುಂಡು ಹಾರಿಸಿದರೆಂದೂ, ಇದಕ್ಕೆ ಯುಗೋಸ್ಲೋವಿಯಾದವರು ಪ್ರತೀಕಾರ ಮಾಡಲು ಹಂಗೇರಿಯನ್ನರು ಎರಡು ಭಾರಿ ಮೆಷೀನ್ ಗನ್ನುಗಳನ್ನು ತಂದು ಗುಂಡು ಹಾರಿಸಲು ಪ್ರಯತ್ನಿಸಿದರೆಂದೂ ಹೇಳಲಾಗಿದೆ. ಇದಲ್ಲದೆ ಹಂಗೇರಿ ಮತ್ತು [illegible] ವಿಮಾನಗಳೂ ಸಹಾ ಯುಗೊಸ್ಲೋವಿಯಾ ಗಡಿ [illegible] ವಾರಿಗಳ ಮೇಲೆ ಹಾರಾಡಿದುವೆಂದು ವರದಿಯಾಗಿದೆ

ವಿಶ್ವದ ಸುಂದರಿಯ ವಿವಾಹ

ಕಳೆದ ವರ್ಷ ವಿಶ್ವದಲ್ಲೆಲ್ಲಾ ಅತಿ [illegible] ಎಂದು [illegible] ಪಟ್ಟ [illegible] ಸುಂದರಿ [illegible] ಕಳೆದ ವಾರ ಫಿಲಿಪೈನ್ ದ್ವೀಪದ [illegible] ವ್ಯಾಪಾರಿಯನ್ನು ವಿವಾಹವಾಗಿದ್ದಾಳೆ. ಇವಳಿಗೆ [illegible] ವರದ [illegible] ವಯಸ್ಸು. ಇನ್ನೂ ಚಿಕ್ಕವಳೆಂದು ಹೇಳಿದ್ದಾಳೆ

ಪಾಕಿಸ್ತಾನದಿಂದ ಭೂಪಟ್ ಡಂಗೆಕೋರರ ವಾಪಸ್?

ಸೌರಾಷ್ಟ್ರದಲ್ಲಿ ಅನೇಕ ದರೋಡೆಗಳನ್ನು ಮಾಡಿ ಪಾಕಿಸ್ತಾನಕ್ಕೆ ಓಡಿಹೋಗಿದ್ದ ಭೂಪಟ್ ದರೋಡೆಕೋರರನ್ನು ಪಾಕಿಸ್ತಾನದ ಅಧಿಕಾರಿಗಳು ದಸ್ತಗಿರಿ ಮಾಡಿರುತ್ತಾರೆ. ಇವನನ್ನು ಭಾರತ ಸರ್ಕಾರಕ್ಕೆ ಒಪ್ಪಿಸುವ ಸಂಭವವಿರುವುದಾಗಿ ಹೇಳಲಾಗಿದೆ

ಮೈಸೂರು ಜಿಲ್ಲೆಯಲ್ಲಿ ರೆವಿನ್ಯೂ ಕಮಿಷನರರ ಪ್ರವಾಸ

ಸಂಸ್ಥಾನದ ರೆವಿನ್ಯೂ ಕಮಿಷನರರಾದ ಶ್ರೀ ಎನ್ ಮಾಧವರಾಯರು ಇದೇ ೧೦ನೇ ತಾ|| ದಿಂದ ೧೬ನೇ ತಾರೀಕಿನವರೆಗೆ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ

ಯಕ್ಷಗಾನ ಮತ್ತು ಪುರಾಣ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದ ೩೩ನೇ ನಂಬರು ಮನೆಯ [illegible] ಭಾಗದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ನಡೆಯುತ್ತಿರುವ ರಾಮೋತ್ಸವದ ಅಂಗವಾಗಿ ಈ ರಾತ್ರಿ [illegible] ಘಂಟೆಗೆ ಶ್ರೀ [illegible] [illegible] ಮಂಡಲಿಯವರಿಂದ [illegible] ಯಕ್ಷಗಾನ [illegible] [illegible] [illegible] ಚರಿತ್ರೆ [illegible] ವಾಗುವುದು

ಬೆಂಗಳೂರು ಕಾರ್ಪೊರೇಷನ್ ಕಾರ್ಪಾಲಿಗಳಿಗೆ ೧|| ಲಕ್ಷ ರೂ ಹೆಚ್ಚು ಹಣ

ಬೆಂಗಳೂರ ಕಾರ್ಪೊರೇಷನ್ ಜಾಡಮಾಲಿಗಳು ಮತ್ತು ಕಸ ಗುಡಿಸುವವರ ಸಂಬಳಗಳನ್ನು ಹೆಚ್ಚಿಸಿ, ಅವರಿಗೆ ಅಧಿಕ ಸೌಲಭ್ಯವನ್ನು ಕಲ್ಪಿಸಲು ಅಲ್ಲಿನ ಕಾರ್ಪೊರೇಷನ್ ೧,೬೬,೫೩೭ ರೂ.ಗಳನ್ನು ಮಂಜೂರು ಮಾಡಿರುವರು

ವಿದ್ಯಾರ್ಥಿನಿಯರನ್ನು ನಿಂದಿಸಿದ ವಿದ್ಯಾರ್ಥಿಗಳ ಮೆರವಣಿಗೆ

ಪಾಕಿಸ್ತಾನದ ಪಂಜಾಬಿನ ಪಯಾಲ್‌ಕೋಟೆಯ ಪೊಲೀಸರು ಲಾಹೋರಿನ ೩ ಕಾಲೇಜು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿರುತ್ತಾರೆ. ಅಲ್ಲಿನ ಕಾಲೇಜು ವಿದ್ಯಾರ್ಥಿನಿಯರು ಪರೀಕ್ಷೆ ಮುಗಿಸಿಕೊಂಡು ಹೊರಬಂದಾಗ, ಇವರು ವಿದ್ಯಾರ್ಥಿಗಳು ಅವರನ್ನು ಕುರಿತು ಅಶ್ಲೀಲವಾದ ಶಬ್ದಗಳನ್ನು ಪಯೋಗಿಸಿದರೆಂಬುದೇ ದಸ್ತಗಿರಿಗೆ ಕಾರಣ. ಅಷ್ಟಲ್ಲದೆ ಇವರ ಬೆನ್ನುಗಳ ಮೇಲೆ 'ನಾವು ಹುಡುಗಿಯರನ್ನು ಅಪಮಾನ ಮಾಡಿದೆವು' ಎಂಬ ಬೋರ್ಡನ್ನು ತಗಲುಹಾಕಿ ಅವರನ್ನು ಊರಿನ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು

ಉತ್ತಮ ಡ್ರೆಸ್ ಹಾಕಿದ ಪೊಲೀಸನಿಗೆ ಬಹುಮಾನ

ನನ್ನೆ ರಾಜಧಾನಿಯಲ್ಲಿ ನಡೆದ ಪೊಲೀಸ್ ಪೆರೇಡಿನಲ್ಲಿ ಉತ್ತಮವಾಗಿ ಡ್ರೆಸ್ ಮಾಡಿದ ಶ್ರೀ ನೂರುಲ್ಲಾ ಎಂಬ ಕಾನ್ಸ್‌ಟೇಬಲ್ಲನಿಗೆ ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರು ಬಹುಮಾನವಿತ್ತರು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಮಾಧುರ್ಯ [illegible] [illegible] [illegible] ಸಂಗೀತ [illegible] ಗೀತೆ [illegible] [illegible] ಎಂ ಎ ನ, [illegible] ಗಾಯನ [illegible] ಸಹೋದರರು [illegible] ಸಹೋದರರು, [illegible] ಆರ್, ರಾಜಪ್ಪ ಶೆಟ್ಟಿ-ಕನ್ನಡ ನಾಟಕ

ಪಳನಿಯಲ್ಲಿ ವಿಶಾಖ ಮಹೋತ್ಸವ

ಪಳನಿ ಕ್ಷೇತ್ರದಲ್ಲಿ ಮಾಮೂಲಿನಂತೆ ಶ್ರೀ ಕುಮಾರ ಸ್ವಾಮಿಯವರ ಜನ್ಮ ನಕ್ಷತ್ರದಲ್ಲಿ ವಿಶೇಷ ಪೂಜಾದಿಗಳನ್ನು ಏರ್ಪಡಿಸಿದೆ. ಭಕ್ತಾದಿಗಳು ತಮ್ಮ ಕಷ್ಟಗಳನ್ನು ನೀಗಿ ಇಷ್ಟಾರ್ಥ ಸಿದ್ಧಿ ಪಡೆಯಲು ತಮ್ಮ ಜನ್ಮ ನಕ್ಷತ್ರ, ಹೆಸರು ಮತ್ತು ವಿಳಾಸಗಳನ್ನು ಇಂಗ್ಲಿಷಿನಲ್ಲಿ ಬರೆದು ಕೆಳಗೆ ಕಂಡಂತೆ ಮೊಬಲಗು ಕಳುಹಿಸಿದರೆ ಪ್ರಸಾದವನ್ನು ಟಪಾಲು ಮೂಲಕ ಕಳುಹಿಸಲಾಗುತ್ತದೆ

ಅರ್ಚನೆ ಮಾಡಿದ ಪ್ರಸಾದ ಕಳುಹಿಸಲು ೨ ರೂ, ಅರ್ಚನೆ ಮತ್ತು ಆರಾಧನೆ ಮಾಡಿದ ಪ್ರಸಾದ ಕಳುಹಿಸಲು 5 ರೂ, ಪ್ರತಿ ತಿಂಗಳೂ ವಿಶೇಷವಾಗಿ ಅರ್ಚನೆ ಮಾಡಿ 12 ತಿಂಗಳು ಪ್ರಸಾದ ಕಳುಹಿಸಲು 10 ರೂ

ಪಿ ನಟರಾಜ ಭಂಡಾರಕ್ಕ್ರಯ್ಯ,
ಹಿಲ್ ಟೆಂಪಲ್, ಅದೀನ ಪರಂಪರೈ,
ಅಯ್ಯನ್ ಮಿರಾಸ್, ಪಳನಿ.

ಭೂದಾನಯಜ್ಞಕ್ಕೆ ೧೦ ಲಕ್ಷ ಎಕರೆ ಜಮೀನು ಶೇಖರಣೆ

ಭೂದಾನ ಯಜ್ಞಕ್ಕಾಗಿ ಇದುವರೆಗೆ ೧೦ ಲಕ್ಷಕ್ಕೂ ಹೆಚ್ಚಾಗಿ ಜಮೀನನ್ನು ಪಡೆಯಲಾಗಿರುವುದೆಂದು ಗೊತ್ತಾಗಿದೆ. ಬಿಹಾರಿನಲ್ಲಿ ೫|| ಲಕ್ಷ ಎಕರೆ ಜಮೀನು ಇದಕ್ಕಾಗಿ ಬಂದಿದೆ. ಮೈಸೂರು ಸಂಸ್ಥಾನದಲ್ಲಿ ೩೪೩ ಎಕರೆ ಜಮೀನು ವಸೂಲಾಗಿದೆ

ಸಿನಿಮಾ ಕಟ್ಟಡ ಕುಸಿದು ಮೂವರ ಮರಣ

ಗಂಜಾಂ ಜಿಲ್ಲೆಯ ಶ್ರೀಕಾಕುಳದ ಬಳಿ ಚೀಪೂರುಪಳ್ಳಿ ಎಂಬಲ್ಲಿ ಕಳೆದ ೧ನೇ ತಾ|| ವಿಪರೀತ ಮಳೆಯಾಗಿ ಸಿನಿಮಾ ಮಂದಿರವೊಂದರ ಕಟ್ಟಡವು ಕುಸಿದು ಮೂವರು ಮೃತಪಟ್ಟರೆಂದು ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆಣೆ	ರೂ. ಆ
ಕಡಲೇಕಾಯಿ	[illegible]	[illegible]
ಕಡಲೆಬೀಜ	[illegible]	[illegible]
ಹೊಂಗೇಬೀಜ	[illegible]	[illegible]
ಹುರುಳಿ	[illegible]	[illegible]
ಹುಣಸೆಹಣ್ಣು	[illegible]	[illegible]
ಬೆಲ್ಲ	[illegible]	
ಕೊಬ್ಬರಿ	[illegible]	[illegible]
ತೆಂಗಿನಕಾಯಿ	[illegible]	[illegible]
ತೆಂಗಿನಕಾಯಿ		
೧,೧೦೦ಕ್ಕೆ	[illegible]	[illegible]

ಪ್ರಭಾ ಯಲ್ಲಿ 3ನೇ ವಾರ 8-5-53 ರಿಂದ
ದಿನಕ್ಕೆ ಮೂರು ಪ್ರದರ್ಶನಗಳು
ಜೆಮಿನಿಯವರ ಹಿಂದಿ ಚಿತ್ರ
ಮಿಸ್ಟರ್ ಸಂಪತ್

ABIDS GRAND OUTRIGHT AUCTION SALE

On SUNDAY the 10th May At SHOWROOMS at 10 A. M.

FURNITURE and HOUSEHOLD EFFECTS consisting of GODREJ STEEL ALMIRAH, FRIGIDAIRE, ALARM Table TIME PIECE, CYCLES, "MULTITONE" 8 valves AC-DC Radio, Coffee GRINDER & ROASTER, Fancy writing tables, Chairs, SOFA SUITES, Cradles, Benches, Stools, Woollen CARPETS, CASH BOXES and many other useful articles

ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರವರ ಆಫೀಸು
ಮೈಸೂರು – ತಾರೀಖು 25—4—1953
ಇ ಸ್ತಿ ಹಾ ನಾ ರ ಮೆ

1 ಮೈಸೂರು ನರಸಿಂಹರಾಜ ಮೊಹಲ್ಲಾ [illegible] ಬಡಾವಣೆಯಲ್ಲಿ [illegible] ಪ್ರಮಾಣದಿಂದ ಒದಗಿಸಬೇಕಾದ ಕಾರ್ಮಿಕರ ಮನೆಗಳನ್ನು ಕಟ್ಟಲು ಸೀಲಾದ ಟೆಂಡರುಗಳನ್ನು ನಗರಾಭಿವೃದ್ಧಿ ಸಮಿತಿಯ ಇಂಜನಿಯರ್‌ರವರ ಆಫೀಸಿನಲ್ಲಿ 1953 ನೇ ಇಸವಿ ಮೇ 12 ನೇ ತಾರೀಖು ಮಧ್ಯಾಹ್ನ 3 ಘಂಟೆಯವರೆವಿಗೂ ಸ್ವೀಕರಿಸಲಾಗುವುದು

2. ಕೆಲಸವನ್ನು ಹುಕುಂ ಕೊಟ್ಟ ಮೂರು ತಿಂಗಳುಗಳೊಳಗಾಗಿ ಪೂರೈಸಬೇಕು.

3 ಸವಿಸ್ತಾರವಾದ ಅಂದಾಜನ್ನು ಆಫೀಸಿನಲ್ಲಿ ಆಫೀಸಿರುವ ದಿನಗಳಲ್ಲಿ 11 ರಿಂದ 5 ಘಂಟೆಯವರೆಗೂ, ಶನಿವಾರಗಳಲ್ಲಿ ಬೆಳಿಗ್ಗೆ 8 ರಿಂದ 12 ಘಂಟೆಯವರೆಗೂ ನೋಡಬಹುದು

4. ಟೆಂಡರುಗಳನ್ನು ವಿಧಾಯಕವಾದ ನಮೂನೆಯಲ್ಲಿ ದರಗಳನ್ನು ಅಂಕೆಯಲ್ಲೂ ಮತ್ತು ಪದಗಳಲ್ಲೂ ನಮೂದಿಸಿ ಹಾಜರ್ಮಾಡಬೇಕು ನಮೂನೆ ಫಾರಂಗಳನ್ನು ಆಫೀಸಿನಲ್ಲಿ ಒಂದು ರೂಪಾಯಿ ಪಾವತಿ ಮಾಡಿ ಪಡೆಯಬಹುದು.

5 ಪ್ರತಿಯೊಂದು ಟೆಂಡರನ್ನೂ ನಗದು ರೂ 1,700 [ಒಂದು ಸಾವಿರದ ಏಳು ನೂರು ರೂಪಾಯಿಗಳು] ಠೇವಣಿ ಸಮೇತ ಹಾಜರ್ಮಾಡಬೇಕು. ಠೇವಣಿ ಇಲ್ಲದ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ ಟೆಂಡರುಗಳ ಅಂಗೀಕಾರವು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರ ಮತ್ತು ಕಾರ್ಮಿಕರ ಗೃಹನಿರ್ಮಾಣ ಕಾರ್ಪೊರೇಷನ್ ಅಧ್ಯಕ್ಷರ ಅನುಮತಿಗೆ ಒಳಪಟ್ಟಿರುತ್ತೆ.

6 ಟೆಂಡರುಗಳ ಒಪ್ಪಿಗೆಯಾದ ಮೇಲೆ ಟೆಂಡರುದಾರರು ಕಂಟ್ರಾಕ್ಟಿಗೆ ಸಂಬಂಧಪಟ್ಟ ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು. ತಪ್ಪಿದಲ್ಲಿ ಟೆಂಡರನ್ನು ವಜಾ ಮಾಡುವುದಲ್ಲದೆ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು

7 ಟೆಂಡರುಗಳ ಒಪ್ಪಿಗೆ ಅಥವಾ ತಿರಸ್ಕಾರದ ವಿಚಾರದಲ್ಲಿ ಮಾಡಲ್ಪಡುವ ತೀರ್ಮಾನಗಳಿಗೆ ಕಾರಣ ಕೊಡಲಾಗುವುದಿಲ್ಲ ಟೆಂಡರು ಒಪ್ಪಿಗೆಯಾದ ಮೇಲೆ, ತಿರಸ್ಕರಿಸಲ್ಪಟ್ಟ ಟೆಂಡರುಗಳ ಠೇವಣಿ ಮೊಬಲಗನ್ನು ವಾಪಸು ಮಾಡಲಾಗುವುದು

8 ಕಟ್ಟಡದ ಅಂದಾಜು ರೂ 19,000 [ನೀರು, ವಿದ್ಯುಚ್ಛಕ್ತಿ, ಮತ್ತು ಶೌಚ ಸೌಕರ್ಯಗಳು ಸೇರಿ]

9 ಟೆಂಡರುದಾರರು 28,000 ರೂಪಾಯಿ ಅಂದಾಜಾಗುವ ಕಟ್ಟಡ ಏರ್ಪಾಡುಗಳನ್ನು ಕಟ್ಟಿಲು ಶಕ್ತರಾಗಿರಬೇಕು.

10 ಕಟ್ಟಡಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸತಕ್ಕ ಮತ್ತು ಸಾಗಿಸತಕ್ಕ ಏರ್ಪಾಡುಗಳನ್ನು ಕಂಟ್ರಾಕ್ಟುದಾರರೇ ಮಾಡಿಕೊಳ್ಳಬೇಕು.

ಟೆಂಡರಿನಲ್ಲಿ ಕೊಟ್ಟಿರತಕ್ಕ ದರಗಳಲ್ಲಿ ಆಯಾ ಬಾಬಿಗೆ ಸಂಬಂಧಪಟ್ಟ ಮಾರಾಟ ತೆರಿಗೆ [Sales Tax] ಸೇರಿರುತ್ತದೆಯೋ ಎಂಬ ವಿಚಾರವನ್ನು ಸ್ಪಷ್ಟವಾಗಿ ತಿಳಿಸಬೇಕು

(ಸಹಿ) ಎಸ್. ರಂಗಣ್ಣ, ಛೇರ್ಮನ್

Edited, Printed and Published by A. R. Nagarajan at Sadhvi Press, D. Subbiah Road, Mysore.

ರೋಜಿ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೦-೫-೧೯೫೩ [ಸಂಚಿಕೆ ೩೭

ಲಾವೋಸ್ ದೇಶದಿಂದ ವಿಯಟ್ಮಿನ್ ಸೇನೆ ವಾಪಸು

ಬೆಂಗಳೂರಿನಲ್ಲಿ ವಿಶ್ವಸಂಸ್ಥೆ ಸಹಾಯಕ ಕಛೇರಿ

ಬೆಂಗಳೂರು ೧೧

ಸಯಾಮಿನ ರಾಜಧಾನಿ ಬ್ಯಾಂಕಾಕಿನಲ್ಲಿ ಸ್ಥಾಪಿತವಾಗಿರುವ ವಿಶ್ವಸಂಸ್ಥೆಯ ದೂರ ಪೂರ್ವ ನಾಡುಗಳ ಸಹಾಯಕ್ಕಾಗಿ ಏರ್ಪಟ್ಟಿರುವ ವಿಶ್ವಸಂಸ್ಥೆಯ ಆರ್ಥಿಕ ಸಮಿತಿಯ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಗುವುದೆಂದೂ, ಸಮಿತಿಯ ಕಛೇರಿಗಾಗಿ ಮೈಸೂರು ಸರ್ಕಾರದವರು ತಕ್ಕ ಜಾಗವನ್ನು ಅರಸುತ್ತಿರುವರೆಂದೂ ವರದಿಯಾಗಿದೆ

೩೦೦ ರೂ ಡಿಪಾಜಿಟ್ ಕೊಡುವವರಿಗೆ ಟೆಲಿಫೋನ್

ಇನ್ನು ಕೆಲವು ತಿಂಗಳೊಳಗೆ ಬೆಂಗಳೂರಿಗೆ ೫೦೦೦ ಟೆಲಿಫೋನುಗಳನ್ನು ಕೊಡಲಾಗುವುದೆಂದೂ, ೩೦೦೦ ರೂ ಡಿಪಾಜಿಟ್ ಕೊಟ್ಟು ಸ್ವಂತವಾದ ಟೆಲಿಫೋನ್ ಪಡೆಯುವ ಪದ್ಧತಿಯು ರದ್ದಾಗಿ, ೩೦೦ ರೂ ಡಿಪಾಜಿಟ್ ಕೊಡುವವರಿಗೆಲ್ಲ ಫೋನ್ ಕೊಡುವ ಏರ್ಪಾಡು ಮಾಡಲಾಗುವುದೆಂದೂ ತಿಳಿದುಬಂದಿದೆ

೧೬ ನೇ ತಾ॥ ಶಾಸನ ಸಭಾ ಕಾಂ॥ ಪಕ್ಷದ ಸಭೆ ನಡೆಯುವುದಿಲ್ಲ

ಇದೇ ತಿಂಗಳು ೧೬ ನೇ ತಾ॥ ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸಭೆಯು ನಡೆಯುವಂತೆ ಗೊತ್ತುಮಾಡಲ್ಪಟ್ಟಿದ್ದು ಈಗ ಅದನ್ನು ರದ್ದುಮಾಡಲಾಗಿದೆ. ಮುಂದೆ ಸಭೆ ಸೇರುವ ತಾರೀಕನ್ನು ಗೊತ್ತುಪಡಿಸಿಲ್ಲ

ಮಂಗಳೂರು-ಹಾಸನಕ್ಕೆ ಮೀಟರ್‌ಗೇಜ್ ರೈಲು

ಮಂಗಳೂರು-ಹಾಸನಗಳ ನಡುವೆ ಮೀಟರ್ ಗೇಜ್ ರೈಲು ರಸ್ತೆ ಹಾಕಲು ಕೇಂದ್ರ ಸರ್ಕಾರದವರು ನಿರ್ಧರಿಸಿರುವರೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಹೇಳಿರುತ್ತಾರೆ

ಬಳ್ಳಾರಿ ತಾಲ್ಲೂಕುಗಳ ಬಗ್ಗೆ ಕರಡು ಮಸೂದೆ

ಬಳ್ಳಾರಿಯ ೬ ತಾಲ್ಲೂಕುಗಳು ಮೈಸೂರಿಗೆ ಸೇರುವ ಬಗ್ಗೆ ಕೇಂದ್ರ ಸರ್ಕಾರದವರು ಮಸೂದೆಯೊಂದನ್ನು ತಯಾರಿಸಿ ಮೈಸೂರು ಸರ್ಕಾರದ ಅಭಿಪ್ರಾಯ ಪಡೆಯಲು ಕಳುಹಿಸಿರುತ್ತಾರೆ ಇದನ್ನು ತಜ್ಞರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ

ವ್ಯವಸಾಯ ಕಾರ್ಮಿಕರ ಕೂಲಿ ನಿರ್ಧಾರಕ ಸಮಿತಿ ಸದಸ್ಯರು

ವ್ಯವಸಾಯ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿಗದಿ ಮಾಡುವ ಸಲುವಾಗಿ ಸಂಸ್ಥಾನ ಸರ್ಕಾರದವರು ರಚಿಸಿರುವ ಸಮಿತಿಯ ಸದಸ್ಯರು ಇದೇ ೧೧ ನೇ ತಾರೀಕು ಶ್ರೀರಂಗಪಟ್ಟಣಕ್ಕೂ ಮತ್ತು ೧೨ ನೇ ತಾರೀಕು ತಿರುಮಕೂಡಲು ನರಸೀಪುರಕ್ಕೂ ಭೇಟಿ ಕೊಡುವರೆಂದು ಗೊತ್ತಾಗಿದೆ

ಔಷಧ ಕಡ್ಡಿ ಕಾರ್ಖಾನೆಗೆ ಬೆಂಕಿ

ಕೊಯಮತ್ತೂರು ಪೊನ್ನಣಿ ಔಷಧ ಕಡ್ಡಿ ಕಾರ್ಖಾನೆಗೆ ಮೊನ್ನೆ ಬೆಂಕಿ ಬಿದ್ದು, ೫೦ ಸಾವಿರ ರೂ.ಅಷ್ಟು ಆಸ್ತಿ ನಷ್ಟವಾಗಿದೆ.

ದೆಹಲಿಯಲ್ಲಿ ಕೊರಿಯಾ ಶಾಂತಿ ಸಂಧಾನ ?

ಕೊರಿಯಾ ಶಾಂತಿ ಸಂಧಾನವು [illegible] ದೆಹಲಿಯಲ್ಲಿ ನಡೆಸಬಹುದೆಂದು ಭಾವಿಸಲಾಗಿದೆ. [illegible] ರಾಷ್ಟ್ರಗಳ [illegible] ಇವರ [illegible] [illegible] ನೆಹರೂ [illegible] [illegible] ಬಂದಿರುತ್ತದೆ

ವಿಮಾನಾಪಘಾತದಲ್ಲಿ ಪಾರ್ಲಿಮೆಂಟ್ ಸದಸ್ಯನ ಮರಣ

ಮೊನ್ನೆ ದೆಹಲಿ ಬಳಿ ಏರ್ ಇಂಡಿಯಾ ಸಂಸ್ಥೆಯ ಡಕೋಟಾ ವಿಮಾನದ ದುರಂತದಲ್ಲಿ ಮೃತಪಟ್ಟವರ ಪೈಕಿ ರಾಜಸ್ಥಾನದಿಂದ ಪಾರ್ಲಿಮೆಂಟಿಗೆ ಆರಿಸಿ ಬಂದಿದ್ದ ಪಿ ಎಲ್ ಕೌಶಿಕರವರೂ ಒಬ್ಬರು ದೆಹಲಿಯಲ್ಲಿ ಆಡಿಟರ್ ಆಗಿದ್ದ ಎ ಎಸ್ ಅಯ್ಯರ್ ಎಂಬುವರೂ ಮೃತಪಟ್ಟಿರುತ್ತಾರೆ ಇವರಲ್ಲದೆ, ಸಯಾಂ, ಜರ್ಮನಿ, ಡೆನ್ಮಾರ್ಕ್ ಬ್ರಿಟನ್ ಮತ್ತು ಅಮೇರಿಕದವರೂ ಮಡಿದರು. ಕೋಟಾ ಉದಯಪುರದ ಡಿವೇಜನ್ ಮಹಾರಾಣಿಯವರೂ ಅದರಲ್ಲಿ ಹೊರಡಲುದ್ಯುಕ್ತರಾಗಿ, ಅವರ ಆಪ್ತ ಕಾರ್ಯದರ್ಶಿಯವರು ಪ್ರಯಾಣವು ಅಶುಭವೆಂದು ಎಚ್ಚರವಾಗ ಕೊಡದೇ ತಿಳಿಸಲು ಅವರು ನಿಂತುಬಿಟ್ಟರು.

ಕೋರ್ಟ್ ನಿರ್ಧಾರ ಪ್ರತಿಭಟಿಸಿ ದಾವೆಗಳು ವಾಪಸು

ವಿಚಾರಣೆ ನಡೆಸಬೇಕಾದ ಸಿವಿಲ್ ದಾವೆಗಳು ಅನೇಕವಿದ್ದು, ಅವುಗಳೆಲ್ಲವನ್ನೂ ತ್ವರಿತವಾಗಿ ಮುಗಿಸಬೇಕೆಂದು ತಾತ್ಕಾಲಿಕ ಕೋರ್ಟ್ ನಿರ್ಧರಿಸಿದ್ದನ್ನು ಪ್ರತಿಭಟಿಸುವ ಸಲುವಾಗಿ ಅಲ್ಲಿನ ವಕೀಲರುಗಳು ತಮ್ಮ ದಾವೆಗಳನ್ನು ವಾಪಸು ಪಡೆಯಲು ನಿರ್ಧರಿಸಿರುವರು ಈಗಾಗಲೇ ಅನೇಕ ದಾವೆಗಳು ವಾಪಸಾಗಿವೆ

ಲಾವೋಸ್ ಸಂಸ್ಥಾನದಿಂದ ವಿಯಟ್ಮಿನ್ ಪಡೆ ವಾಪಸು

ಇಂಡೋಚೀನಾದ ಲಾವೋಸ್ ಸಂಸ್ಥಾನದೊಳಗೆ ನುಗ್ಗಿ ಅದರ ರಾಜಧಾನಿ ಲುವಾಂಗ್ ಪ್ರಬಂಗ್ ಅನ್ನು ಮುತ್ತಿಗೆ ಹಾಕಿದ ವಿಯಟ್‌ಮಿನ್ ಸೈನ್ಯಗಳಲ್ಲಿ ಹಲವನ್ನು ಆ ದೇಶದಿಂದ ವಾಪಸು ಕರೆಸಿಕೊಳ್ಳಲಾಗುತ್ತಿರುವುದಾಗಿ ವರದಿ ಬಂದಿದೆ [illegible] [illegible] ಗೊತ್ತಾಗಿದೆ

ಪಶ್ಚಿಮ ಆಫ್ರಿಕಾ ದೊಂಬಿಯಲ್ಲಿ ೧೧ ಜನರ ಮರಣ

ಪಶ್ಚಿಮ ಆಫ್ರಿಕದ ರಾಜಧಾನಿ [illegible] ಮೈಲಿ ದೂರದಲ್ಲಿರುವ [illegible] ನಿನ್ನೆ ಭಾರಿ ದೊಂಬಿ ನಡೆದು ಆ ಪ್ರದೇಶದ ಡಿಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್ ಎಡ್ಗರ್ [illegible], ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮತ್ತು ೮ ಜನ ಗಲಭೆಗಾರರು ಗುಂಡಿನೇಟಿಗೆ ತುತ್ತಾದರು

೭ ಸರ್ಕಾರಿ ಬಸ್ಸುಗಳು ಭಸ್ಮ

[illegible] ಪುರದಲ್ಲಿರುವ ಸರ್ಕಾರಿ ಬಸ್ ಕಛೇರಿ ಆವರಣದಲ್ಲಿದ್ದ ೭ ಬಸ್ಸುಗಳು ೩ ಟ್ರಕ್ಕುಗಳು ಮತ್ತು ಕಟ್ಟಡ ಇವು ನಿನ್ನೆ ಮುಂಜಾನೆ ಉಂಟಾದ ಬೆಂಕಿ ಪ್ರಕರಣದಲ್ಲಿ ಸುಟ್ಟುಹೋಗಿ ೧॥ ಲಕ್ಷ ರೂ ಆಸ್ತಿ ನಷ್ಟವಾಗಿರುತ್ತದೆ

ವಿಯಟ್‌ಮಿನ್‌ರಿಂದ ರೈಲಿನ ಆಸ್ಫೋಟನೆ

ಇಂಡೋಚೀನಾದ ಅನ್ನಾಂ ಪ್ರಾಂತದ ರಾಜಧಾನಿ ಹ್ಯೂ ಬಳಿ ರೈಲು ಕಂಬಿಗಳಿಗೆ ವಿಯಟ್‌ಮಿನ್ ಪಡೆಗಳು ಮೈನುಗಳನ್ನಿಟ್ಟಿದರಿಂದ ಆ ಮಾರ್ಗದಲ್ಲಿ ಬಂದ ಫ್ರೆಂಚರ ರೈಲೊಂದು ಸಿಡಿದು ೧೧ ಜನ ಸೈನಿಕರು ಮತ್ತು ಇತರರು ಮಡಿದಿರುವುದಾಗಿ ಗೊತ್ತಾಗಿದೆ.

○ ಕರ್ನಾಟಕ ಪ್ರಾಂತ ನಿರ್ಮಾಣದ ಪರಿಷತ್ತು ಈ ತಿಂಗಳ ೨೮ ನೇ ತಾ॥ ದಾವಣಗೆರೆಯಲ್ಲಿ ಸೇರುತ್ತದೆ ದಾವಣಗೆರೆಯ ಪೌರಸಭಾಧ್ಯಕ್ಷ ಶ್ರೀ ಎನ್ನೆಲ್ಲಿ ದೊಡ್ಡವೀರಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ.

ಮಿರಜ್ ಪ್ರದೇಶಗಳಿಗೆ ೩೧೦ ಮನವಿಗಳು

ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಸೇರಿಸಬಾರದೆಂದು [illegible] ಅಂಧ್ರದಲ್ಲಿ ಸೇರಿಸಬೇಕೆಂದು ಸೂಚಿಸುವ ೩೧೦ ಮನವಿಗಳನ್ನು ಮಿಶ್ರಾರವರಿಗೆ ಒಪ್ಪಿಸಲಾಗಿದೆ ೩೭ ಪಂಚಾಯಿತಿಗಳು ತಾಲ್ಲೂಕನ್ನು ಮೈಸೂರಿಗೆ ಸೇರಿಸುವಂತೆಯೂ, ೫ ಪಂಚಾಯಿತಿಗಳು ಆಂಧ್ರಕ್ಕೆ ಸೇರಿಸುವಂತೆಯೂ ಕೋರಿರುತ್ತವೆ. ೬೫೦ ಚದರ ಮೈಲಿಯಿರುವ ಬಳ್ಳಾರಿ ತಾಲ್ಲೂಕಿನಲ್ಲಿ ೧೪೪,೦೦೦ ಜನರು ವಾಸವಾಗಿರುತ್ತಾರೆ ಅವರಲ್ಲಿ ೭೦ ಸಾವಿರ ಜನರು ಟವನ್ನಿನಲ್ಲೇ ಇರುವರು ನಗರದಲ್ಲಿ ಕನ್ನಡಿಗರಾಗಲಿ, ಆಂಧ್ರರಾಗಲಿ ಮೆಜಾರಿಟಿ ಇಲ್ಲದಿರುವುದಿಲ್ಲ

ರಷ್ಯದ ತಂತ್ರ ಬದಲಾಗಿರುವುದಾಗಿ ಸ್ಟೀವನ್‌ಸನ್

ಕಮ್ಯೂನಿಸ್ಟ್ ರಾಷ್ಟ್ರಗಳ ಕಡೆಯಿಂದ ಶಾಂತಿ ಸಂಧಾನದ ಬಗ್ಗೆ ಹಲವು ಸೂಚನೆಗಳು ಮಾಡಲ್ಪಟ್ಟರೂ ಅವನ್ನು ಅತಿಶಯವಾಗಿ ಕಾಣಕೂಡದೆಂದೂ, ರಷ್ಯವು ತನ್ನ ತಂತ್ರವನ್ನು ಬದಲಾಯಿಸಿರುವುದೆಂದೂ ಆದರೆ ಅದರ ಮುಖ್ಯ ಗುರಿಯಲ್ಲಿ ಮಾತ್ರ ವ್ಯತ್ಯಾಸವಿಲ್ಲವೆಂದೂ ಯೂರೋಪ್ ಮತ್ತು ಕೊರಿಯಾಗಳಲ್ಲಿ ಪರಿಸ್ಥಿತಿಯು ತಟಸ್ಥವಾದರೂ, ಲಾವೋಸ್ ಸಂಸ್ಥಾನದ ಮೇಲೆ ಕಮ್ಯೂನಿಸ್ಟರ ಆಕ್ರಮಣ ನಡೆಸಿರುವುದರಿಂದ ದೂರ ಪೂರ್ವದಲ್ಲಿ ಪರಿಸ್ಥಿತಿಯು ಕಠಿಣಗೊಂಡಿರುವುದಾಗಿಯೂ ಅಮೇರಿಕದ ಡೆಮೋಕ್ರಾಟಿಕ್ ಪಕ್ಷದ ಮುಖಂಡ ಅಡ್ಲೈ ಸ್ಟೀವನ್‌ಸನ್ನರು ಹೇಳುತ್ತಾರೆ

ಮಹಾಸಭಾ ಮುಖಂಡರ ಬಿಡುಗಡೆಗೆ ಆಜ್ಞೆ

ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯದರ್ಶಿ ವಿ ಜಿ ದೇಶಪಾಂಡೆ ಮತ್ತು ಸದಸ್ಯರುಗಳಾದ ಯು ಎಂ ತ್ರಿವೇದಿ ಮತ್ತು ಹರದಯಾಳ್ ದೇವಗುಣ ಇವರನ್ನು ಸುಪ್ರೀಂ ಕೋರ್ಟಿನ ಆಜ್ಞೆಯಂತೆ ಬಿಡುಗಡೆ ಮಾಡಲಾಗಿದೆ

ವಿದ್ಯುಚ್ಛಕ್ತಿ ಕಂಬದಿಂದ ಬಿದ್ದು ಮರಣ

ಮೈಸೂರು ೧೦

ರಾಜಧಾನಿಯ ಮಹಾನಂದವಾಡಿ ಸರ್ಕಲ್ ಬಳಿ ಈ ದಿನ ಮಧ್ಯಾಹ್ನ ೨॥ ಗಂಟೆಯಲ್ಲಿ ಶ್ರೀ ವೆಂಕಟರಾವ್ ಎಂಬ ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಾರನು ವಿದ್ಯುತ್ ಕಂಬದ ಮೇಲೆ ಕೆಲಸ ಮಾಡುತ್ತಿದ್ದಾಗ ಜಾರಿಬಿದ್ದು ಮೃತಪಟ್ಟನು.

ಡಾ॥ ಎಂ ಎನ್ ಶ್ರೀನಿವಾಸರವರಿಗೆ ವಿದೇಶೀ ವಿದ್ಯಾರ್ಥಿ ವೇತನ

ಮೈಸೂರಿನ ಡಾ॥ ಎಂ ಎನ್ ಶ್ರೀನಿವಾಸರವರು ಹೆಚ್ಚು ಸಂಶೋಧನೆ ನಡೆಸಲು ಬರ್ಮಿಂಗ್‌ಹಾಂ ವಿಶ್ವವಿದ್ಯಾನಿಲಯದ ವೇತನವನ್ನು ಪಡೆದು ಅಲ್ಲಿಗೆ ಪ್ರಯಾಣ ಮಾಡುತ್ತಾರೆ ಹಿಂದೆ ಆಕ್ಸ್‌ಫರ್ಡಿನಲ್ಲಿ ಅವರು ಹಲವು ಕಾಲ ಸಮಾಜ ಶಾಸ್ತ್ರದ ಉಪಾಧ್ಯಾಯರಾಗಿದ್ದರು ಬರೋಡಾ ವಿಶ್ವವಿದ್ಯಾನಿಲಯದಲ್ಲಿ ಅವರು ಅಧ್ಯಾಪಕರಾಗಿದ್ದರು.

ವಾರ ಭವಿಷ್ಯ

ತಾ|| ೧೦ ಮೊದಲು ರಿಂದ ೧೬ ರ ವರೆಗೆ

ಮೇಷ — ದೊಡ್ಡವರ ಸಹವಾಸದಿಂದ ಉತ್ತಮ ಪದವಿ. ಉದ್ಯೋಗದಲ್ಲಿ ಬದಲಾವಣೆ, ಅನಿರೀಕ್ಷಿತ ಧನಾಗಮನ. ನೌಕರರಿಗೆ ಸಂತೋಷ. ತಾ|| ೧೦, ೧೧ ಶತ್ರು ಪೀಡೆ, ವಾಹನಾದಿಕ ವಿಚಾರ.

ವೃಷಭ — ಜನಾನಾ ತಕರಾರು, ಪತ್ನೀ ಸ್ವಾಸ್ಥ್ಯ. ನೌಕರರಿಗೆ ನಿವ್ಯಾಪಾರ ಕಡಿಮೆ. ತಾ|| ೧೬ ಧೀರ್ಘ ಪ್ರಯಾಣದಿಂದ ಶುಭ ಫಲ.

ಮಿಥುನ — ಈ ವಾರ ಮತ್ತು ಪ್ರಮುಖ ಘಟನೆ, ಸಂಬಂಧಿಕರಿಂದ ತೊಂದರೆ, ಸ್ತ್ರೀ ಸಂಬಂಧ ... ದೃಷ್ಟಿ ..., ಪ್ರಯಾಣ ... ದಿ ವಾರಿ ...

ಕಟಕ — ಹಣಕಾಸಿನ ಅಡಚಣೆ. ಪುತ್ರ ಪುತ್ರರಿಗೆ ಅನಾರೋಗ್ಯ, ... ಟ ಘನವಾದ ... ನೌಕರರ ಎಚ್ಚರಿಕೆಯಾಗಿರಬೇಕು, ವ್ಯಾಪಾರದಲ್ಲಿ ಘಟ್ಟ ... ಅನಾರೋಗ್ಯ ... ಸ ತುಷ್ಟಿ.

ಸಿಂಹ — ಎಲ್ಲಾ ರಂಗದಲ್ಲೂ ಜಯ. ಪ್ರತಿಷ್ಠಿತ ವ್ಯಕ್ತಿಗಳ ... ಹಣಕಾಸಿನ ... ನೌಕರಿ ದೊರೆಯುವ ... ಜನ ... ತಾ|| ೧೦, ೧೫ ಪ್ರವಾಸ, ಎಚ್ಚ...

ಕನ್ಯಾ — ಹಣಕಾಸಿನ ಬಗ್ಗೆ ತೊಂದರೆ, ಸಾರ್ವಜನಿಕ ಸಂಸ್ಥೆ ಸಂಬಂಧ ... ಸಂಪಾದನೆಯಿಂದ ಧನ ಹಾನಿ ... ವ್ಯವಹಾರದ ... ವ್ಯಾಪಾರಿಗಳಿಗೆ ಲಾಭ ತಾ|| ೧೬, ... ಹಣಕಾಸಿನ ಸ್ಥಿತಿ ಸ್ವಲ್ಪ ಉತ್ತಮ.

ತುಲಾ — ಜಗಳ ಹೆಚ್ಚಾಗಬಹುದು ... ಉದ್ಯೋಗದಲ್ಲಿದೆ ನೌಕರರಿಗೆ ... ಸಿಕ್ಕಿದ ವ್ಯಾಪಾರಿಗಳಿಗೆ ಉ... ತಾ|| ೧೬ ... ಹಣದ ... ಹೆಚ್ಚು.

ವೃಶ್ಚಿಕ — ನೌಕರರಿಗೆ ... ವಿನೋದದ ... ಕತ್ತೆ, ... ತಾ|| ೧೫, ೧೬ ಆನಂದ, ಸುಖ.

ಧನು — ... ವ್ಯಾಧಿ ಕಳೆಗೆ ... ಚಿಂತೆ ... ವ್ಯವಹಾರ ... ಮನೋವ್ಯಾಕುಲ ... ವ್ಯಾ... ಸಂಪಾದನೆ ... ನಷ್ಟ ... ೧೬ ಉ... ವಸ್ತ್ರ ದೊರಕುವುದು.

... ದೂರ ಪ್ರವಾಸ ... ಭವಿಷ್ಯದ ಬಗ್ಗೆ ಚಿಂತೆ. ಸರ್ಕಾರ ... ನೌಕರರಿಗೆ ... ವ್ಯಾಪಾರಿಗಳಿಗೆ ... ಸ್ಥಿತಿ ... ತಾ|| ೧೬ ...

ಮೀನ — ವ್ಯಾಪಾರಿಗಳಿಗೆ ಉತ್ತ...

ಬೊಂಬಾಯಿ ಪೋಲೀಸರಿಗೆ ಬಹುಮಾನಗಳ ಸುರಿಮಳೆ

ಪ್ರಧಾನಿ ನೆಹರೂರವರು ಇತ್ತೀಚೆಗೆ ಮಾಡಿದ ರೈಲು ಪ್ರಯಾಣದ ಸಂಬಂಧವಾಗಿ ರೈಲು ... ಬಿ ಮೇಲೆ ಇಡಲಾಗಿದ್ದ ಸಿಡಿತದ ವಸ್ತುಗಳನ್ನು ಪತ್ತೆ ಮಾಡಿದ ... ಎಂ. ಪೋಲೀಸರಿಗೆ ಬಹುಮಾನ ಕೊಡುವಂತೆ ಬೊಂಬಾಯಿ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯಿ ... ಅನೇಕರು ... ಮಹಾರಾಜರುಗಳು ... ಸಿಕೊಟ್ಟಿರುವರೆಂದು ವರದಿಯಾಗಿದೆ. ಅವುಗಳನ್ನು ಇಟ್ಟವರ ಪತ್ತೆ ಹತ್ತ ... ಪೋಲೀಸರು ... ವಶ ... ಮಾಡಿಕೊಂಡ ... ಯಂತ್ರವನ್ನು ಉಪ... ಪ್ರಿ ... ಹೇಳಲಾಗಿದೆ.

ಲಕ್ಕವಳ್ಳಿ ಯೋಜನೆಗೆ ಕೇಂದ್ರದ ಒಪ್ಪಿಗೆಯಿಲ್ಲ

ಕೇಂದ್ರ ಲೋಕಸಭೆಯಲ್ಲಿ ಶ್ರೀ ... ಸ್ವಾಮಿಯವರ ಮಾಡಿದ ಪ್ರಶ್ನೆಗೆ ಉತ್ತರಿಸುತ್ತಾ, ಯೋಜನ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಲಕ್ಕವಳ್ಳಿ ಯೋಜನೆಯಿಂದ ... ವರೆಗೂ ಲಾಭ ... ಸೀರೀಕ್ಷೆಯಿಲ್ಲದಿರುವುದರಿಂದ ಅದಕ್ಕಾಗಿ ಸಹಾಯ ಒದಗಿಸಬೇಕೆಂದು ಮೈಸೂರು ಸರ್ಕಾರದ ಕೋರಿಕೆಯನ್ನು ಈಗ ಅಂಗೀಕರಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

ಸ್ಥಳೀಯ ಸಂಸ್ಥೆಗಳ ನೌಕರರಿಗೂ ಇಲಾಖಾ ಪರೀಕ್ಷೆ

ಸ್ಥಳೀಯ ಸಂಸ್ಥೆಗಳಲ್ಲಿರುವ ನೌಕರರು ಇಲಾಖೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಆವಶ್ಯಕವೆಂದು ಸರ್ಕಾರದವರು ಭಾವಿಸಿರುತ್ತಾರೆ. ಬೆಂಗಳೂರು, ಮೈಸೂರು, ದಾವಣಗೆರೆ, ಚನ್ನಪಟ್ಟಣ ನಗರಸಭೆಗಳ ಮತ್ತು ಹಿಂದೂಸ್ಥಾನ್ ಕಾಲೋನಿ ಸ್ಯಾನಿಟರಿ ಬೋರ್ಡಿನ ನೌಕರರುಗಳು ಮುನಿಸಿಪಲ್, ಲೋಕಲ್ ಬೋರ್ಡ್, ಲೆವಿನ್ಯೂ ಲೋಯರ್ ಅಥವಾ ಹೈಯರ್, ಅಕೌಂಟ್ಸ್ ಲೋಯರ್ ಅಥವಾ ಹೈಯರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಮಂಗಳ ಸುಬ್ರಹ್ಮಣ್ಯ ... ಮಧ್ಯಾಹ್ನ ೧-೪೦ ನಾಗಸ್ವರ ಸಂಜೆ ೩-೪೦ ಮತ್ತು ... ಎಸ್. ಶಿವರಾಮಯ್ಯ ... ೬-೦೦ ಗಾನ ವಿಹಾರ ೭ ಭಜನೆ ೭-೩೦ ಗೀತಾಂಜಲಿ ೯-೪೦ ಪಿ ಎಸ್ ... ಕನ್ನಡದಲ್ಲಿ ಭಾಷಣ ೮ ಟಿ ಎಸ್ ಚನ್ನಪ್ಪ ಸಂಗೀತ ... ನವರತ್ನ ರಾಮರಾವ್ ಇಂಗ್ಲಿಷ್ ಭಾಷಣ ... ಟಿ ಎಸ್ ಚನ್ನಪ್ಪ ಸಂಗೀತ.

ಮ — ... ಸೌಕರರಿಗೆ ಹೆಚ್ಚು ಕೆಲಸ ಮನಸ್ಸಿನಲ್ಲಿ ಕಿರಿಕಿರಿ, ಸ್ತ್ರೀಯರಿಗೆ ಕ್ಲೇಶ. ತಾ|| ೧೪, ೧೬ ತೊಂದರೆ, ಚಿಂತೆ.

ಮೀನ — ಅವಮಾನ ಸಂಗ ದೋಷ, ಪತ್ನಿ ಪುತ್ರರ ವಿರಹ, ನೌಕರರಿಗೆ ಜವಾಬ್ದಾರಿ, ವ್ಯಾಪಾರಿಗಳಿಗೆ ಉತ್ತಮ ತಾ|| ೧೬, ೧೬ ಚಿಂತಾ ನಾಶ, ಆರೋಗ್ಯ.

ಸೇಂದಿ ಹರಾಜಿನಲ್ಲಿ ಬಿಡ್ ಮಾಡಿದವರು ಪತ್ತೆಯಿಲ್ಲ

ಅರಸೀಕೆರೆಯಲ್ಲಿ ಕಳೆದ ಬುಧವಾರ ಸೇಂದಿ ಹರಾಜು ನಡೆಯುತ್ತಿದ್ದಾಗ ಶ್ರೀ ಗಂಗಪ್ಪ ಎಂಬ ಕಂಟ್ರಾಕ್ಟರೊಬ್ಬರು ಬಿಡ್ ಮಾಡಿ ಕಡೆಗೆ ಎಲ್ಲಿಯೋ ಹೊರಟು ಹೋದರೆಂಬ ಸುದ್ದಿ ಬಂದಿದೆ. ಹರಾಜಿನಲ್ಲಿ ಅವರು ೬,೫೦೧ ರೂ ಗೆ ಬಿಡ್ ಮಾಡಿ ಕಡೆಗೆ ಬಿಡ್ಡನ್ನು ಅವರ ಹೆಸರಿಗೆ ನಿಲ್ಲಿಸಲಾಗಿರುವುದೆಂದು ಘೋಷಿಸಿದಾಗ, ಶ್ರೀ ಗಂಗಪ್ಪನವರು ತಾವು ೬,೦೦೫ ರೂ ಗಳಿಗೆ ಹರಾಜು ಕೂಗಿದ ದಾಗಿ ಹೇಳಲು, ಅಧಿಕಾರಿಗಳು ಅದನ್ನು ಅಂಗೀಕರಿಸದೆ ೬,೫೦೦ ರೂ ಬಿಡ್ಡನ್ನು ಮಂಜೂರು ಮಾಡಿ ಅವರ ಹೆಸರಿಗೆ ನಿಲ್ಲಿಸಿದರು. ಹರಾಜು ಆಗಿದನಂತರ ಗುಂಪಿನಲ್ಲಿ ಅವರನ್ನು ಹುಡುಕಲಾಗಿ ಅವರು ಎಲ್ಲಿಯೂ ಪತ್ತೆಯಾಗಲಿಲ್ಲವೆಂದು ತಿಳಿದುಬಂದಿದೆ.

ಬ್ರಿಟನ್ನಿನ ವಿದೇಶಾಂಗ ಮಂತ್ರಿ ಈಡನ್ನರ ನಿವೃತ್ತಿ ?

ಮೂತ್ರ ಕೋಶದ ವ್ಯಾಧಿಯಿಂದ ನರಳುತ್ತಿರುವ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಆಂತೋಣಿ ಈಡನ್ನರು ತಮ್ಮ ಹುದ್ದೆಯಿಂದ ನಿವೃತ್ತರಾಗಬೇಕಾಗಬಹುದೆಂದು ವರದಿಯಾಗಿದೆ. ವಿದೇಶಾಂಗ ಸಚಿವರ ಗೈರು ಹಾಜರಿಯಲ್ಲಿ ವ್ಯವಹಾರಗಳನ್ನು ಬಹು ಕಾಲ ನಡೆಸಲು ಸಾಧ್ಯವಿಲ್ಲವೆಂದು ಎದುರು ಪಕ್ಷದವರು ಹೇಳುತ್ತಿರುವರು.

ಶಯನೋತ್ಸವ

ರಾಜಧಾನಿಯ ಶ್ರೀರಾಂಪೇಟೆ ಆರ್ಯ ವೈಶ್ಯ ಬಾಲಕ ಭಕ್ತಮಂಡಲಿಯ ಶ್ರೀ ರಾಮಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ರಾತ್ರಿ ೯|| ಗಂಟೆಗೆ ಶ್ರೀರಾಮಚಂದ್ರಸ್ವಾಮಿಯವರ ಶಯನೋತ್ಸವವೂ, ೧೩ ನೇ ತಾ|| ಬುಧವಾರ ರಾತ್ರಿ ೯|| ಉಯ್ಯಾಲೋತ್ಸವವೂ, ೧೬ ನೇ ತಾ|| ಭಾನುವಾರ ಮಧ್ಯಾಹ್ನ ೩|| ಗಂಟೆಗೆ ವಸಂತೋತ್ಸವವೂ ನೆರವೇರುವುವು. ಈ ರಾತ್ರಿ ೯|| ಗಂಟೆಗೆ ಕುಮಾರಿಗಳಾದ ಕೆ ಎಸ್ ಪದ್ಮ ಮತ್ತು ಸರೋಜರವರ ಸಂಗೀತವೂ ಮಿತ್ರಮಂಡಲಿಯವರ ವಾದ್ಯಗೋಷ್ಠಿಯೊಡನೆ ನಡೆಯಲಿದೆ.

ಜಾಲಹಳ್ಳಿಯಿಂದ ವಿದ್ಯುಚ್ಛಕ್ತಿ ಶಿಕ್ಷಣ ಕೇಂದ್ರದ ರವಾನೆ

ಬೆಂಗಳೂರು ಬಳಿ ಜಾಲಹಳ್ಳಿಯಲ್ಲಿರುವ ವಿದ್ಯುಚ್ಛಕ್ತಿ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗ್ ಶಿಕ್ಷಣ ಕೇಂದ್ರವನ್ನು ಸಧ್ಯದಲ್ಲೇ ಸಿಕಂದರಾಬಾದಿಗೆ ವರ್ಗಾಯಿಸಲಾಗುವುದೆಂದು ದಕ್ಷಿಣ ಭಾರತ ಸೇನಾನಿ ಲೆ|| ಜನರಲ್ ಶ್ರೀ ನಾಗೇಶ್‌ರವರು ತಿಳಿಸಿರುತ್ತಾರೆ.

ರಾಜಕಮಲ್ ಮೈಸೂರು

೮—೫ ೯೩ ರಿಂದ ಅಪೋಹ ಪ್ರಾರಂಭ

ದೀಕ್ಷ

[ತೆಲುಗು]

ನಾತ್ರ—ಪಿ ವರಲಕ್ಷ್ಮಿ

ಕಾಂಗ್ರೆಸ್ ಚುನಾವಣೆಯಲ್ಲಿ ೧೦ರೂ. ಶುಲ್ಕಕ್ಕೆ ಪ್ರತಿಭಟನೆ

ಮೈಸೂರು ೧೦

ರಾಜಧಾನಿಯ ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಮೊನ್ನೆ ನಡೆದು, ತಾಲ್ಲೂಕು ಕಾಂಗ್ರೆಸ್ ಚುನಾವಣೆ ಸಂಬಂಧವಾಗಿ ಉಮೇದುವಾರಿಕೆ ಶುಲ್ಕವನ್ನು ೧೦ ರೂ. ಗಳಿಗೆ ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆಯನ್ನು ಸೂಚಿಸಲಾಯಿತು. ಚುನಾವಣೆಗೆ ನಿಲ್ಲಬಯಸುವವರು ರುಸುಂ ಬಗ್ಗೆ ಪ್ರತಿಭಟಿಸಿ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸುವಂತೆಯೂ ನಿರ್ಧಾರವಾಯಿತು. ಮೊಹಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೈ ಗಿ ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಶುಲ್ಕವು ಹೆಚ್ಚಾಗಿರುವುದರಿಂದ ನಿಷ್ಠಾವಂತ ಕಾಂಗ್ರೆಸ್ಸಿನವರು ತಾಲ್ಲೂಕು ಸಮಿತಿಗಳಿಗೆ ಆರಿಸಿಬರಲು ಅಡ್ಡಿಯಾಗಿರುವುದೆಂದೂ, ಹೆಚ್ಚು ರುಸುಂ ವಿಧಿಸುವ ಬಗ್ಗೆ ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯವನ್ನು ಪೂರ್ವಭಾವಿಯಾಗಿ ಪಡೆಯದೆ ಇರುವುದರಿಂದ ಹಿಂದೆ ಇದ್ದಂತೆಯೇ ಶುಲ್ಕವನ್ನು ಇಟ್ಟು ಕೆಲಕಾರ್ಯದಲ್ಲಿ ಉಂಟಾಗಿರುವ ಅಸಮಾಧಾನವನ್ನು ಹೋಗಲಾಡಿಸಬೇಕೆಂದೂ ಸಭೆಯು ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಕೋರಿತು. ಅಲ್ಲದೆ ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆಗಳನ್ನು ಇದೇ ಕಾರಣಕ್ಕಾಗಿ ತಾತ್ಕಾಲಿಕವಾಗಿ ಮುಂದುವರಿಸಬೇಕೆಂದೂ ಪ್ರಾರ್ಥಿಸಲಾಯಿತು.

ಶ್ರೀಗಳಾದ ಜಿ ಜನಾರ್ಧನ ನಾಯ್ಡು, ಹಿ ಕಾ ಸುಬ್ಬರಾವ್, ಎಸ್. ಎಸ್ ಶಾಸ್ತ್ರಿ, ಡಾ|| ಸೂರ್ಯನಾರಾಯಣ ರಾವ್, ಟಿ ರಾಜ, ಬಿ ಕೆಂಪೇಗೌಡ ಎ. ರಾಮಣ್ಣ ಇವರುಗಳು ಮೂತನಾದ ಶುಲ್ಕ ಹೆಚ್ಚಿಸಿದ ಬಗ್ಗೆ ಟೀಕಿಸಿದರು.

ಶ್ರೀ ವೇಣುಗೋಪಾಲ ಸ್ಟೋರ್ಸ್

ಸಾಧ್ವಿ ಪತ್ರಿಕೆ ಏಜೆಂಟರು,

ಬಸ್‌ಸ್ಟ್ಯಾಂಡ್ ಟಿ ನರಸೀಪುರ

ನಮ್ಮಲ್ಲಿ ಬ್ರಾಹ್ಮಣರಿಂದ ಶುಚಿ ರುಚಿಯಾಗಿ ತಯಾರಿಸಲ್ಪಟ್ಟ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮೆಣಸಿನ ಪುಡಿ ಮುಂತಾದ ಸಂಬಾರದ ಪುಡಿಗಳೂ ಮತ್ತು ಇತರ ಚಿಲ್ಲರೆ ಸಾಮಾನುಗಳೂ ದೊರೆಯುತ್ತವೆ.

ಎ. ಜಿ. ಗುಂಡಪ್ಪ,

ಮಾಲೀಕರು

ನಾಯಿ ಕೆಮ್ಮಿಗೆ ಔಷಧ

ಆರ್. ಎಸ್ ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು

Edited, Printed and Published by A R Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★ M.V.ಭೋಜಯ್ಯ (ಫೋ 446) ಬಿ ಎ ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೧-೫-೧೯೫೩ [ಸಂಚಿಕೆ ೨೩೦

ಪೂರ್ವ ಬಂಗಾಳ ಲೀಗ್ ಸಭೆಯಲ್ಲಿ ಗಲಭೆ

ಕೃಷ್ಣರಾಜಸಾಗರದ ಬಳಿ ಅಣುಶಕ್ತಿ ಇರುವ ವಸ್ತು

ಮೈಸೂರು ೧೧

ಕೃಷ್ಣರಾಜಸಾಗರದ ಬಳಿ ೧ ಮೈಲಿ ಪ್ರದೇಶದಲ್ಲಿ ರೇಡಿಯೋ ಚಲನಶಕ್ತಿಯುಳ್ಳ ಖನಿಜವು ದೊರೆತಿರುವುದೆಂದು ವರದಿಯಾಗಿದೆ. ಇದರಲ್ಲಿ ಶೇ|| ೮೫ ರಷ್ಟು ರೇಡಿಯೋ ಆಕ್ಟಿವ್ ವಸ್ತುವಿದ್ದು ಅಣುಶಕ್ತಿಗೆ ಸಂಬಂಧಿಸಿದ ಪದಾರ್ಥಗಳ ತಯಾರಿಕೆಗೆ ಉಪಯುಕ್ತವಾಗಿರುವುದಾಗಿ ಗೊತ್ತಾಗಿದೆ.

ಸಾಲುಮರ ಕಡಿದುದಕ್ಕೆ ಮುಖ್ಯ ಮಂತ್ರಿಯವರ ಆಕ್ಷೇಪಣೆ

ಮಂಗಳೂರಿನಿಂದ ಬೆಂಗಳೂರಿಗೆ ಹಿಂತಿರುಗುವಾಗ್ಗೆ ಮೊನ್ನೆ ಮುಖ್ಯ ಮಂತ್ರಿಯವರು ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗೊಳದ ಬಳಿ ಸಾಲು ಮರಗಳನ್ನು ಜನರು ಅಕ್ರಮವಾಗಿ ಕಡಿಯುತ್ತಿದ್ದುದನ್ನು ಕಂಡು, ಶ್ರೀರಂಗಪಟ್ಟಣದ ತಾಲ್ಲೂಕು ಕಛೇರಿ ಬಳಿ ತಮ್ಮ ಕಾರನ್ನು ನಿಲ್ಲಿಸಿ ಅಮಲ್ದಾರರನ್ನು ಕರೆಸಿಕೊಂಡು ಅವರು ಈ ಬಗ್ಗೆ ಜಾಗರೂಕರಾಗಿರುವಂತೆ ಎಚ್ಚರಿಸಿದರು. ಅಲ್ಲದೆ ಪೋಲೀಸು ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ಸಹ ಈ ಬಗ್ಗೆ ಪ್ರಶ್ನಿಸಿದರು. ಮದ್ದೂರಿನ ಬಳಿ ರಸ್ತೆ ಪಕ್ಕದಲ್ಲಿ ಸರ್ಕಾರಿ ಹುಣಸೇ ಮರದಲ್ಲಿ ಹಣ್ಣನ್ನು ಕೀಳುತ್ತಿದ್ದವನ ಬಳಿ ಇದ್ದ ಕೊಕ್ಕೆಯ ಕೋಲನ್ನು ಕಿತ್ತುಕೊಂಡು ಸರ್ಕಾರಿ ವೃಕ್ಷನ್ನು ಅಪಹರಿಸಬಾರದೆಂದು ಎಚ್ಚರಿಸಿದರು. ಮಂಡ್ಯದಲ್ಲಿ ಒಂದುಕಡೆ ಟ್ರಾಫಿಕ್ ಪೋಲೀಸನು ಕಾಲುಗಳೆರಡನ್ನು ಗೋಡೆ ಮೇಲಿಟ್ಟು ಆರಾಮವಾಗಿ ಕುಳಿತಿದ್ದುದನ್ನು ಕಂಡು ಅವನಿಗೆ ಎಚ್ಚರಿಕೆಯಿತ್ತರು.

ಹೋಟೇಲಿನಲ್ಲಿ ಬೆಂಕಿ

ರಾಜಧಾನಿಯ ನಜರ್‌ಬಾದಿನಲ್ಲಿರುವ ಶ್ರೀ ಷಣ್ಮುಗಂ ಹೋಟೇಲಿನಲ್ಲಿ ನೆನ್ನೆ ರಾತ್ರಿ ೩| ಗಂಟೆ ಸುಮಾರಿನಲ್ಲಿ ಬೆಂಕಿ ಆಕಸ್ಮಿಕವಾಗಿ ಬಿದ್ದು ನಾಲ್ಕು ಹೆಂಚು ಮನೆಗಳು ಸುಟ್ಟುಹೋದವು. ಸಮಾಚಾರವನ್ನು ತಿಳಿದ ಕೂಡಲೇ ಅಗ್ನಿಶಾಮಕ ದಳದವರು ಹೋಗಿ ಆರಿಸಿದರು. ಹೆಚ್ಚಿನ ನಷ್ಟವೇನೂ ಆಗಿಲ್ಲ.

ಸಂಸ್ಥಾನದ ಹಿಂದೂ ಮಹಾ ಸಭಾಧಿವೇಶನ

ಮೈಸೂರು ಸಂಸ್ಥಾನದ ಹಿಂದೂ ಮಹಾ ಸಭಾಧಿವೇಶನವು ಈ ತಿಂಗಳು ೧೭ನೇ ತಾ|| ಸಾಗರದಲ್ಲಿ ನಡೆಯುವುದು. ಶ್ರೀ ಎಂ. ಎಚ್. ವಾಸುರವರು ಅಧ್ಯಕ್ಷತೆ ವಹಿಸುವರು. ಶ್ರೀ ಎನ್. ಎಸ್. ಹರ್ಡೀಕರ್ ಅವರು ಆರಂಭೋತ್ಸವವನ್ನು ನೆರವೇರಿಸುವರು.

ಮಿಶ್ರರಲ್ಲಿ ನಂಜನಗೂಡಿನವರ ನಿಯೋಗ

ಬಳ್ಳಾರಿಯಲ್ಲಿ ಜಸ್ಟಿಸ್ ಮಿಶ್ರಾರವರು ಆ ತಾಲ್ಲೂಕಿನ ಭವಿಷ್ಯದ ಬಗ್ಗೆ ನಡೆಸುವ ವಿಚಾರಣೆ ಸಂಬಂಧವಾಗಿ ನಂಜನಗೂಡಿನ ಶ್ರೀ ರಾಘವೇಂದ್ರ ಮಠದ ಪರವಾಗಿ ಶ್ರೀ ಹೆಚ್. ಕೆ. ವೇದವ್ಯಾಸಾಚಾರ್ ಮತ್ತು ಶ್ರೀ ಕೃಷ್ಣಾಚಾರ್‌ರವರು ನಿಯೋಗ ಹೋಗಿ ಬಳ್ಳಾರಿಯಲ್ಲಿ ಶ್ರೀ ರಾಘವೇಂದ್ರ ಗುರುಗಳ ಮಠಕ್ಕೆ ಸೇರಿದ ಆಸ್ತಿಗಳಿರುವುದಾಗಿಯೂ, ಆ ತಾಲ್ಲೂಕು ಮೈಸೂರಿಗೆ ಸೇರಬೇಕಾದ್ದು ನ್ಯಾಯವೆಂದೂ ತಿಳಿಸಿರುತ್ತಾರೆ.

ವಿದ್ಯುಚ್ಛಕ್ತಿ ತಂತಿ ತುಳಿದು ಮರಣ

ಮೈಸೂರು ೧೧

ಮೈಸೂರು ಸಶಸ್ತ್ರ ರಿಸರ್ವ್ ಪೋಲೀಸು ದಳದ ಗುಮಾಸ್ತೆ ಶ್ರೀನಿವಾಸಮೂರ್ತಿ ಎಂಬುವರು ಈ ಬೆಳಿಗ್ಗೆ ಸುಮಾರು ೭ ಗಂಟೆ ಹೊತ್ತಿನಲ್ಲಿ ಕಾರಂಜಿ ಕೆರೆಗೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಬಿದ್ದಿದ್ದ ವಿದ್ಯುಚ್ಛಕ್ತಿ ತಂತಿಯನ್ನು ತುಳಿದುದರ ಪರಿಣಾಮವಾಗಿ ಮೃತಪಟ್ಟರು. ಅವರಿಗೆ ಸುಮಾರು ೩೫ ವರ್ಷ ವಯಸ್ಸಾಗಿದ್ದಿತು.

ಭಾರತದ ರಾಯಭಾರಿಗಳ ಸಮ್ಮೇಳನ

ಬರುವ ತಿಂಗಳು ೨ ನೇ ತಾರೀಖು ನಡೆಯಲಿರುವ ಬ್ರಿಟನ್ನಿನ ರಾಣಿ ಎಲಿಜಬೆತ್‌ರವರ ಕಿರೀಟಧಾರಣೋತ್ಸವಕ್ಕಾಗಿ ಪಂಡಿತ ನೆಹರೂರವರು ಇದೇ ೨೯ನೇ ತಾರೀಖು ವಿಮಾನದಲ್ಲಿ ಲಂಡನ್ನಿಗೆ ತೆರಳುವರು. ಅಲ್ಲಿ ಅವರು ಜೂನ್ ೧೭ನೇ ತಾರೀಖಿನವರೆಗೆ ಇದ್ದು, ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಭಾರತದ ರಾಯಭಾರಿಗಳ ಸಮ್ಮೇಳನವೊಂದನ್ನು ನಡೆಸುವರೆಂದು ಗೊತ್ತಾಗಿದೆ.

ವಿಮಾನಗಳು ಡಿಕ್ಕಿಯಾಗಿ ಹೋಟೇಲು ಮೇಲೆ ಬಿದ್ದವು

ಬೆಲ್ಜಿಯಮ್ಮಿನಲ್ಲಿ ಮೂರು ಮೀಟಿಯರ್ ಜೆಟ್ ವಿಮಾನಗಳಿಗೆ ಮೊನ್ನೆ ಅಂತರಿಕ್ಷದಲ್ಲೇ ಡಿಕ್ಕಿಯಾಗಿ ಅವುಗಳ ೩ ಸಾರಥಿಗಳು ಮೃತಪಟ್ಟರೆಂದೂ, ಉರಿಯುತ್ತಿದ್ದ ವಿಮಾನದ ಭಾಗಗಳು ಒಂದು ಹೋಟೇಲಿನ ಮೇಲೆ ಬಿದ್ದು ಅದಕ್ಕೆ ಬೆಂಕಿ ಹತ್ತಿಕೊಂಡಿತೆಂದೂ ತಿಳಿದುಬಂದಿದೆ.

ಉಪನ್ಯಾಸಗಳು

ನಂಜನಗೂಡಿನ ಭಾರತೀಮಂದಿರದ ಆಶ್ರಮದಲ್ಲಿ ನಾಳೆ ಸಂಜೆ ೫|| ಗಂಟೆಗೆ ಆಸ್ಥಾನ ವಿದ್ವಾನ್ ಶ್ರೀ ದುರ್ಗದ ಭೀಮಾಚಾರ್ಯರಿಂದ ಶ್ರೀಮನ್ಮಧ್ವರೂ ಅವರ ತತ್ವಗಳೂ ಎಂಬ ವಿಷಯವಾಗಿಯೂ, ನಾಳಿದ್ದು ಸಂಜೆ ೫|| ಗಂಟೆಗೆ ಶ್ರೀ ಎ. ಟಿ. ತಿರುನಾರಾಯಣಯ್ಯಂಗಾರ್ಯರಿಂದ ಭಗವದ್ರಾಮಾನುಜರೂ, ಅವರ ಸಂದೇಶವೂ ಎಂಬ ವಿಷಯವಾಗಿಯೂ ಉಪನ್ಯಾಸಗಳು ನಡೆಯುವುವು.

ಮಿಶ್ರಾರವರ ಕಾರ್ಯಕ್ರಮ ಮುಕ್ತಾಯಗೊಂಡಿತು

ಬೆಂಗಳೂರು ೧೧

ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ಜಸ್ಟಿಸ್ ಮಿಶ್ರಾರವರ ವಿಚಾರಣೆಯು ನೆನ್ನೆ ಮುಕ್ತಾಯವಾಯಿತು. ಅವರು ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಇತರ ಸಚಿವರೊಡನೆ ಮಾತುಕತೆ ನಡೆಸಿದರು. ಬಳ್ಳಾರಿ ನಗರವೂ ಸೇರಿದ ಆ ತಾಲ್ಲೂಕನ್ನು ಪೂರ್ಣವಾಗಿ ಮೈಸೂರಿಗೆ ಸೇರಿಸುವಂತೆ ಸಚಿವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ಸಂಬಂಧವಾಗಿ ಉದ್ಭವಿಸುವ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಸೂಚಿಸಿದರೆಂದು ಹೇಳಲಾಗಿದೆ.

ಮಿಶ್ರಾರವರು ಅನಂತರ ಮದ್ರಾಸ್ ಅಧಿಕಾರಿಗಳಾದ ಶ್ರೀ ಎಸ್. ವೆಂಕಟೇಶ್ವರನ್, ಮೈಸೂರಿನ ವಿಭಾಗಾಧಿಕಾರಿ ಮತ್ತು ಮಾಜಿ ಸೆನ್ಸಸ್ ಅಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರೊಡನೆ ಬಳ್ಳಾರಿಯ ಬಗ್ಗೆ ಅಂಕಿಅಂಶಗಳನ್ನು ಕುರಿತು ಚರ್ಚಿಸಿದರೆಂದು ಹೇಳಲಾಗಿದೆ.

ಬ್ರಿಟನ್ನಿನೊಡನೆ ಯುದ್ಧಕ್ಕಾಗಿ ನಗೀಬರ ಕರೆ

ಈಜಿಪ್ಟಿನ ಪ್ರಧಾನಿ ನಗೀಬರು ನೆನ್ನೆ ಕೈರೋವಿನಲ್ಲಿ ಮಾತನಾಡುತ್ತಾ, ಈಜಿಪ್ಟ್ ದೇಶದವರು ಭಾರಿ ಯುದ್ಧವೊಂದನ್ನು ಮಾಡಬೇಕಾಗುವುದೆಂದೂ, ಪ್ರತಿಯೊಬ್ಬ ಈಜಿಪ್ಟನೂ ಸರ್ವತ್ಯಾಗಕ್ಕೂ ಸಿದ್ಧವಾಗಿರಬೇಕೆಂದೂ ಸೂಚಿಸಿದರು. ಸೂಯೆಜ್ ಕಾಲುವೆ ಬಗ್ಗೆ ಬ್ರಿಟನ್ನಿನೊಡನೆ ನಡೆಸಿದ ಸಂಧಾನದಿಂದ ತಮ್ಮ ಕೈ ತೊಳೆದುಕೊಂಡುದಾಗಿಯೂ, ಇದಕ್ಕೆ ಬ್ರಿಟನ್ನೇ ಕಾರಣವೆಂದೂ ಅವರು ಹೇಳಿ, ಬ್ರಿಟಿಷರು ೧೯೨೨ ಮತ್ತು ೧೯೩೬ರಲ್ಲಿ ೨ ಬಾರಿ ಕಾಗದದ ಮೇಲೆ ಸ್ವಾತಂತ್ರ್ಯವನ್ನು ಬರೆದುಕೊಟ್ಟರೆಂದೂ ಮೂರನೇ ಬಾರಿ ಅವರು ಹಾಗೆಯೇ ಮಾಡುವುದು ಬೇಡವೆಂದೂ, ಸ್ವಾತಂತ್ರ್ಯದ ಬೆಲೆಯು ಬಿಸಿ ರಕ್ತದ ಚೆಲ್ಲುವಿಕೆಯಲ್ಲಿರುವುದಾಗಿಯೂ ಹೇಳಿದರು. ಬ್ರಿಟನ್ನು ಈಜಿಪ್ಟಿನ ಶತ್ರುವೆಂದೂ ಅವರು ತಿಳಿಸಿದರು.

ಪೂರ್ವ ಬಂಗಾಳಾ ಮುಸ್ಲಿಂ ಲೀಗ್ ಸದಸ್ಯರ ಹೊಡೆದಾಟ

ಪೂರ್ವ ಬಂಗಾಳದ ಮುಸ್ಲಿಂ ಲೀಗ್ ಸಭೆಯು ನೆನ್ನೆ ರಾತ್ರಿ ಢಾಕಾದಲ್ಲಿ ಸೇರಿದ್ದಾಗ ಸದಸ್ಯರಲ್ಲಿ ಬಲವಾದ ವಾಗ್ಯುದ್ಧವಾಗಿ ಹೊಡೆದಾಟ ನಡೆಯಿತೆಂದು ವರದಿಯಾಗಿದೆ. ಈ ಬಗ್ಗೆ ಎರಡು ಪಕ್ಷದವರು ಪರಸ್ಪರ ವಿರುದ್ಧವಾದ ವರ್ತಮಾನಗಳನ್ನು ಕೊಟ್ಟಿರುತ್ತಾರೆ. ಲೀಗ್ ಕೌನ್ಸಿಲ್ಲಿನ ಅಧ್ಯಕ್ಷರಾದ ನೂರುಲ್ ಅಮೀನರಲ್ಲಿ ವಿಶ್ವಾಸವನ್ನು ಸಭೆಯು ಸೂಚಿಸಿರುವುದಾಗಿ ಒಂದು ಪಕ್ಷದವರೂ, ಅವರಲ್ಲಿ ಅವಿಶ್ವಾಸ ಸೂಚಿಸಿದುದಾಗಿ ಮತ್ತೊಂದು ಪಕ್ಷದವರೂ ಹೇಳುವರು. ಸಭೆ ನಡೆಯುತ್ತಿದ್ದಾಗ ಅವಿಭಕ್ತ ಬಂಗಾಳದ ಮಾಜಿ ಮುಖ್ಯ ಮಂತ್ರಿಯೂ, ಈಗ ಸಿಂಧ್ ಗೌರ್ನರರಾಗಿ ನೇಮಿಸಲ್ಪಟ್ಟವರೂ ಆದ ಫಜ್ಲುಲ್ ಹಕ್‌ರವರು ಹಲವು ಸದಸ್ಯರೊಡನೆ ತಮ್ಮ ಗೃಹಗಳಿಗೆ ತೆರಳಿದರು. ಹೊರಗಡೆ ಬಲವಾದ ಪೋಲೀಸು ಕಾವಲಿತ್ತು. ೨,೦೦೦ ಜನರು ಸೇರಿ ನೂರುಲ್ ಅಮೀನರ ವಿರೋಧವಾಗಿ ಹೊರಗಡೆ ಕೂಗುತ್ತಿದ್ದರು. ಸಭೆಯಲ್ಲಿ ವಿಶ್ವಾಸ ಮತ್ತು ಅವಿಶ್ವಾಸಗಳ ಬಗ್ಗೆ ನಿರ್ಣಯಗಳನ್ನು ಒಟ್ಟಿಗೆ ಮಂಡಿಸಲಾಗಿ, ಕಲಗಾಟಗಳಾದುವೆಂದೂ, ಅನಂತರ ಮೂರನೇ ಎರಡು ಭಾಗದಷ್ಟು ಮತ ಬಂದು ಅವಿಶ್ವಾಸ ನಿರ್ಣಯವನ್ನು ಒಪ್ಪಲಾಯಿತೆಂದೂ ಒಂದು ಪಕ್ಷದವರು ತಿಳಿಸಿರುತ್ತಾರೆ.

ರಷ್ಯ, ಯುಗೋಸ್ಲಾವಿಯಾಗಳಿಗೆ ಪುನಃ ಸಂಬಂಧ

ರಷ್ಯದೊಡನೆ ನೇರವಾದ ರಾಜತಾಂತ್ರಿಕ ಸಂಬಂಧವನ್ನು ಯುಗೋಸ್ಲಾವಿಯ ಸರ್ಕಾರದವರು ಪುನರಾರಂಭಿಸಿರುವುದಾಗಿ ಆಸ್ಟ್ರಿಯಾ ಪತ್ರಿಕೆಯೊಂದು ವರದಿ ಮಾಡುತ್ತದೆ. ಮಾರ್ಷಲ್ ಸ್ಟಾಲಿನ್ನರಿಗೂ, ಟಿಟೋರವರಿಗೂ ಭಿನ್ನಾಭಿಪ್ರಾಯ ಬಂದು ಟಿಟೋರವರಿಗೂ ರಷ್ಯಕ್ಕೂ ಸಂಬಂಧವು ಕಡಿದುಹೋಗಿದ್ದಿತು.

ಮಳೆಯಿಂದ ಗೋಡೆ ಕುಸಿದು ೬ ಮರಣ

ಭೀಮಾವರದಲ್ಲಿ ಕಳೆದ ಗುರುವಾರ ರಾತ್ರಿ ಬಿರುಗಾಳಿಯಿಂದ ಕೂಡಿದ ಭಾರಿ ಆಲಿಕಲ್ಲು ಮಳೆಯಾಗಿ, ಒಂದು ಹಿಟ್ಟಿನ ಗೋಡೆಯು ಕುಸಿದು ನಾಲ್ವರು ಸ್ತ್ರೀಯರು ಮತ್ತು ಇಬ್ಬರು ಮಕ್ಕಳು ಮಡಿದುದಾಗಿ ವರದಿಯಾಗಿದೆ. ಗಾಳಿಯಿಂದ ಮನೆಗಳ ಚಾವಣಿಗಳು ಹಾರಿಹೋದುವು. ಅನೇಕ ಮರಗಳು ಉರುಳಿದುವು. ವಿದ್ಯುಚ್ಛಕ್ತಿ ಸರಬರಾಜು ವ್ಯವಸ್ಥೆ ಕೆಟ್ಟಿತು.

ಕಾಳಹಸ್ತಿ ಬಳಿ ೧೦೦ ಮನೆಗಳು ಬೆಂಕಿಗೆ ಆಹುತಿ

ಕಾಳಹಸ್ತಿ ಬಳಿ ಸಾಲಿಪೇಟೆ ಎಂಬಲ್ಲಿ ಮೊನ್ನೆ ಬೆಂಕಿ ಆಕಸ್ಮಿಕ ಸಂಭವಿಸಿ ೧೦೦ ಮನೆಗಳು ಭಸ್ಮವಾದುವೆಂದು ವರದಿಯಾಗಿದೆ. ನಾಲ್ಕು ಗಂಟೆಗಳ ನಂತರ ತಿರುಪತಿಯಿಂದ ಅಗ್ನಿಶಾಮಕ ದಳದವರು ಬಂದು ಬೆಂಕಿಯನ್ನು ಆರಿಸಿದರು. ಸುಮಾರು ಒಂದು ಲಕ್ಷ ರೂ. ನಷ್ಟದ ಆಸ್ತಿಯು ನಷ್ಟವಾಗಿರುವುದಾಗಿ ಅಂದಾಜು ಮಾಡಲಾಗಿದೆ.

ಡಾ|| ಪಟ್ಟಾಭಿ ಆಂಧ್ರದ ಪ್ರಧಾನಿಯಾಗಬೇಕು

ಕಳೆದ ಶುಕ್ರವಾರ ಮಚ್ಲಿ ಪಟ್ಟಣದಲ್ಲಿ ಸೇರಿದ್ದ ಒಂದು ಬಹಿರಂಗ ಸಭೆಯಲ್ಲಿ ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಉಪಾಧ್ಯಕ್ಷರಾದ ಶ್ರೀ ಕಾಳೇಶ್ವರ ರಾಯರು ಭಾಷಣ ಮಾಡುತ್ತಾ ಮದರಾಸಿನಲ್ಲಿ ರಾಜಾಜಿಯವರ ನೇತೃತ್ವದಲ್ಲಿ ಸುಭದ್ರವಾದ ಸರ್ಕಾರವು ಸ್ಥಾಪಿತವಾಗಿರುವ ಹಾಗೆ ಆಂಧ್ರದಲ್ಲೂ ಸ್ಥಾಪನೆಯಾಗಬೇಕಾದರೆ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಆಂಧ್ರ ಸರ್ಕಾರದ ಪ್ರಧಾನಿಯಾಗಬೇಕೆಂದು ತಿಳಿಸಿದರು. ಹೈದರಾಬಾದನ್ನು ಆಂಧ್ರದ ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಬೇಕೆಂದೂ ಅವರು ಸೂಚಿಸಿದರು

ಇಂಡೋ ಚೀಣಕ್ಕೆ ಅಮೆರಿಕದ ಧನ ಸಹಾಯ

ಇಂಡೋಚೀಣದಲ್ಲಿ ಕಮ್ಯೂನಿಸ್ಟರನ್ನು ಮಣಿಸುವ ಸೈನ್ಯ ಪಡೆಗಳ ಸಹಾಯಕ್ಕಾಗಿ ಅಮೆರಿಕವು ಫ್ರಾನ್ಸಿಗೆ ೬ ಕೋಟಿ ಡಾಲರುಗಳ ಸಹಾಯವನ್ನು ಒದಗಿಸಿರುವುದಾಗಿ ಗೊತ್ತಾಗಿದೆ

ಚಿಟ್ಟದಪುರದಲ್ಲಿ ಪಶು ವೈದ್ಯಶಾಲೆ ಆರಂಭ

[illegible] ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೊನ್ನೆ ಚಿಟ್ಟದಪುರದಲ್ಲಿ ಶ್ರೀ ಚಿಕ್ಕೀರಸಿನವರು ತಮ್ಮ ತಂದೆಯವರ ಹೆಸರಿನಲ್ಲಿ ಕಟ್ಟಿಸಿರುವ ಪಶುವೈದ್ಯಶಾಲೆಯ ಆರಂಭೋತ್ಸವವನ್ನು ನೆರವೇರಿಸಿದರು.

ಐ ಎ ಎಸ್ ಅಧಿಕಾರಿ ಸತೀಶಚಂದ್ರರು ಸಂಸ್ಥಾನಕ್ಕೆ

ಪ್ರತಿ ವರ್ಷವೂ ಒಬ್ಬೊಬ್ಬ ಐ ಎ ಎಸ್ ಅಧಿಕಾರಿಯನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸುವ ಬಗ್ಗೆ ಆಗಿರುವ ಒಪ್ಪಂದದ ಪ್ರಕಾರ, ಕೇಂದ್ರ ಸರ್ಕಾರದವರು ಶ್ರೀ ಟಿ ಆರ್ ಸತೀಶ ಚಂದ್ರರವರನ್ನು ಕಳುಹಿಸಿದ್ದಾರೆ. ಅವರು ಹಿಂದೆ ಮಹಾರಾಜರವರ ಹುಜೂರು ಸಕ್ರೆಟರಿಗಳಾಗಿದ್ದ ದಿವಂಗತ ಶ್ರೀ ಟಿ ರಾಮಯ್ಯನವರ ಪುತ್ರರು

ತಿ. ನಂ ಶ್ರೀಕಂಠಯ್ಯನವರ ಭಾಷಣ

ರಾಜಧಾನಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಘಂಟೆಗೆ ಶ್ರೀ ತಿ. ನಂ ಶ್ರೀಕಂಠಯ್ಯನವರು ಉಪನ್ಯಾಸ ಮಾಡುವರು. ಕನ್ನಡದ [illegible] ಭಾಗವಹಿಸಬೇಕೆಂದು ಕೋರಲಾಗಿದೆ

ಶ್ರೀ ರಮಣಿ ಸಂಗೀತ ವಿದ್ಯಾಲಯ

[illegible] ಅಗ್ರಹಾರ
([illegible] ಎದುರು)
[illegible] ವಿದ್ಯಾರ್ಥಿಗಳಿಗೆ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ,
ಸಂಚಾಲಕ.

ಹಾವಿನ ವಿಷ ವ್ಯಾಪಿಸಲು ಅವಕಾಶ ಕೊಡದ ಸೀರಂ

ಸ್ವಿಟ್ಸರ್ಲೆಂಡಿನ ೩೮ ವರ್ಷದ ಜಾರ್ಜ್ ಪಾಂಟೆ ಎಂಬ ಯುವಕನು ಹಾವಿನ ವಿಷವು ಶರೀರಕ್ಕೆ ಸೇರಿದರೆ ಅದರಿಂದ ಏನೂ ತೊಂದರೆಯಾಗದಂತೆ ತಡೆಯುವ ಸೀರಂ (ಹಾಲು) ಅನ್ನು ಕಂಡುಹಿಡಿದಿರುತ್ತಾನೆ. ಇದು ಪರಿಣಾಮಕಾರಿಯೆಂಬುದನ್ನು ತೋರ್ಪಡಿಸಲು ಅವನು ತನ್ನ ನಿವಾಸದಲ್ಲಿ ತನ್ನ ಹೆಂಡತಿ ಸರ್ಕಾರಿ ವಕೀಲರು, ೫ ಜನ ವೈದ್ಯರು ಮತ್ತು ಇತರರ ಮುಂದೆ ಪರೀಕ್ಷೆ ನಡೆಸಿದನು. [illegible] ವಿಷದ ಹಾವುಗಳನ್ನು ತಂದು ಅವುಗಳಿಂದ ಕಡಿಸಿಕೊಂಡನು. ಜೊತೆಯಲ್ಲಿ ಒಂದು ಕುಂದಿಲಿಗೂ ಅದೇ ಜಾತಿಯ ಹಾವಿನಿಂದ ಕಡಿಸಿದನು. ೨ ಗಂಟೆ ನಂತರ ಕುಂದಿಲಿಯು ಸತ್ತಿತು. ಅವನ ಕೈ ತೋಳು ಮಾತ್ರ ಸ್ವಲ್ಪ ಊದಿದ್ದಿತು. ಅವನು ಕಡಿಸಿಕೊಳ್ಳುವುದಕ್ಕೆ ಮುಂಚೆ ಸೀರಂ ಇಂಜಕ್ಷನ್ ಅನ್ನು ತೆಗೆದುಕೊಂಡಿದ್ದನು. ಅದರ ಪ್ರಭಾವವು ೬ ವಾರವಿರುವುದಾಗಿ ಅವನು ಹೇಳಿರುತ್ತಾನೆ

ಶಂಕರ ಜಯಂತಿ ಉತ್ಸವ

ರಾಜಧಾನಿಯ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಮಾಮೂಲಿನಂತೆ ಶ್ರೀ ಶಂಕರ ಜಯಂತ್ಯುತ್ಸವವು ಈ ವರ್ಷವೂ ಶ್ರೀ ತ್ರಿನಯನೇಶ್ವರಸ್ವಾಮಿ ದೇವಾಲಯ ಮತ್ತು ಶ್ರೀ [illegible] ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಗಳಲ್ಲಿ ಇದೇ ೧೮ನೇ ತಾರೀಕು ಆರಂಭವಾಗಿ ೧೦ ದಿನಗಳ ವರೆಗೆ ನೆರವೇರುವುದು. ಅದರ ಅಂಗವಾಗಿ ಪಾರಾಯಣ, ಅಭಿಷೇಕ, ಉಪನ್ಯಾಸ, ಸಂಗೀತ ಮತ್ತು ಹರಿಕಥೆಗಳೂ ಇವೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ ಎಸ್ [illegible], ಮಧ್ಯಾಹ್ನ ೧-೩೦ ಕೊಳಲು [illegible] ಎಸ್ ಮೋರೆ ಹಿಂದೂಸ್ಥಾನಿ ಸಂಗೀತ ಸಂಜೆ ೫-೩೦ ಮತ್ತು ೮-೩೦ ಟಿ ಸುಂದರ ರಾಜಯ್ಯಂಗಾರ್, ಸಂಗೀತ ೬-೦೦ [illegible] ೭ ಕೆ. ಎಸ್ ಮೋರೆ ಹಿಂದೂಸ್ಥಾನಿ ಸಂಗೀತ ೭-೩೦ ಜೀವನ ವಿಕಾಸ ಕನ್ನಡದಲ್ಲಿ ಭಾಷಣ [illegible] ಎಂ ಎಸ್ [illegible], ಪಿಟೀಲು ೯-೦೦ ಇಂಗ್ಲಿಷ್ ಭಾಷಣ ೯-೩೦ ಗಾನಾವೃತ್ತ

SRI GANESHA
TALKIES
From 11-5-53 For 2 days
SATURDAY'S HERO
With — John Derek
Donna Reed
From 13-5-53 For 2 days
LUST FOR GOLD
With Id Lupino, Glenford.

ಪಾಕಿಸ್ತಾನ್ ಚಿತ್ರಕ್ಕೆ ಅಲ್ಲಿನ ಸರ್ಕಾರದ ನಿಷೇಧ

ಪಾಕಿಸ್ತಾನದಲ್ಲಿ ತಯಾರಾಗಿ ಅಲ್ಲಿನ ಹಲವಾರು ಕಡೆಗಳಲ್ಲಿ ಪ್ರದರ್ಶಿತವಾಗುತ್ತಿರುವ ನಬೂ ನಿಶಾನ್ ಎಂಬ ಚಿತ್ರವನ್ನು ಪಾಕಿಸ್ತಾನ ಸರ್ಕಾರದವರು ನಿಷೇಧಿಸಿರುತ್ತಾರೆ. ಭಾರತದ ವಿರುದ್ಧವಾಗಿ ಜನರನ್ನು ರೊಚ್ಚಿಗೆಬ್ಬಿಸುವ ಆ ಚಿತ್ರದಲ್ಲಿ ಪ್ರಧಾನಿ ನೆಹರೂ ಮತ್ತು ದಿವಂಗತ ಸರ್ದಾರ್ ಪಟೇಲರನ್ನು ಅವಹೇಳನ ಮಾಡುವ ವಿಷಯಗಳೇ ತುಂಬಿದ್ದುವು.

ಧರ್ಮರಾಯನ ಪಟ್ಟಾಭಿಷೇಕ

ರಾಜಧಾನಿಯ ಸಂತೇಪೇಟೆಯಲ್ಲಿರುವ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೬ ಘಂಟೆಗೆ ಧರ್ಮರಾಯನ ಪಟ್ಟಾಭಿಷೇಕದ ಕಥಾ ಭಾಗದ ವಾಚನ ಮತ್ತು ಮಂಗಳಾರತಿಗಳು ನೆರವೇರುವುವು. ಶ್ರೀ ಕೃಷ್ಣಗಿರಿ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು.

ಮನೆ ಕಂದಾಯ ಹೆಚ್ಚಿಸಿರುವ ವಿಷಯ

ಮೈಸೂರು ನಗರದಲ್ಲಿ ಮನೆಗಂದಾಯವನ್ನು ಹೆಚ್ಚಿಸಿರುವ ವಿಷಯವಾಗಿ ಪೌರಸಭಾಧ್ಯಕ್ಷರು ಮತ್ತು ಕಾಂಗ್ರೆಸ್ ಪಕ್ಷದವರು ಪತ್ರಿಕೆಗಳಲ್ಲಿ ಇತ್ತ ನಿಬಂಧನೆಗಳ ಸಂಬಂಧವಾದ ವಿವರಣೆಯು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಮನೆ ಬಾಡಿಗೆ ಪಡೆಯುವವರು ತಮ್ಮ ಜರೂರು ಆವಶ್ಯಕತೆಗಳಿಗಾಗಿ ಹೆಚ್ಚು ಬಾಡಿಗೆ ಪಡೆಯುವುದು ಸ್ವಾಭಾವಿಕ. ಇಂಥಾ ಮನೆಗಳಿಗೆ,ಬಾಡಿಗೆ ದರದಂತೆ ಕಂದಾಯವಿಧಿಸಲು ಅಡ್ಡಿಯಿಲ್ಲ ಆದರೆ ಸ್ವಂತವಾಗಿ ವಾಸವಾಗಿರುವವರಿಗೂ ಅದೇ ರೀತಿ ಕಂದಾಯವನ್ನು ದಾಖಲ್ಮಾಡುವುದು ಯಾವ ನ್ಯಾಯ? ಮನೆಯಿಂದ ಅವರಿಗೆ ವರಮಾನ ಬರುತ್ತದೆಯೇ? ಅದೇ ನ್ಯಾಯವೆಂದು ಭಾವಿಸುವುದಾದರೆ, ಕಮೀಷನರು ಕೊಡುವಷ್ಟು ವರಮಾನ ತೆರಿಗೆಯನ್ನು ರೆವಿನ್ಯೂ ಅಧಿಕಾರಿಯು ಏತಕ್ಕಾಗಿ ಕೊಡಬಾರದೆಂದು ನಾವು ಕೇಳಬಹುದಲ್ಲವೇ?-ಎಂಬುದಾಗಿ ನಗರದ ಒಬ್ಬ ಬಡ ತೆರಿಗೆದಾರರು ಪತ್ರ ಬರೆದು ತಿಳಿಸಿರುತ್ತಾರೆ.

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರ್ಲು, ಉಬ್ಬಸ, ಪರಿಣಾಮುಕೊಳೆ ಮತ್ತು (TONSIL) ಗಲಾಯುಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುಫಿಸಿಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಪೋಲೀಸ್ ಕಛೇರಿಯಲ್ಲಿ ಕಳ್ಳಮಾಲುಗಳ ಪ್ರದರ್ಶನ

ಮದರಾಸಿನಲ್ಲಿ ಕಳುವಾಗಿ ಪೋಲೀಸರಿಂದ ಪತ್ತೆ ಮಾಡಲ್ಪಟ್ಟು ಅವರ ವಶದಲ್ಲಿರುವ ಮತ್ತು ಇನ್ನೂ ವಿಲೆ ಆಗದ ಪದಾರ್ಥಗಳನ್ನು ಅಲ್ಲಿನ ಪೋಲೀಸ್ ಕಮೀಷನರರ ಕಛೇರಿಯಲ್ಲಿ ನಾಳೆಯಿಂದ ಪ್ರದರ್ಶಿಸಲಾಗುವುದೆಂದೂ, ಅವುಗಳನ್ನು ವಾರಸುದಾರರು ಪತ್ತೆ ಹಚ್ಚಿ ವಾಪಸು ಹೊಂದಲು ಅವಕಾಶವಾಗುವುದೆಂದೂ ತಿಳಿಸಲಾಗಿದೆ. ಅಲ್ಲಿನ ಕ್ರೈಮ್ಸ್ ಶಾಖೆಯ ಡೆಪ್ಯುಟಿ ಕಮೀಷನರರು ಒಂದು ಪ್ರಕಟಣೆಯನ್ನು ಹೊರಡಿಸಿ ಪೋಲೀಸರ ವಶದಲ್ಲಿರುವ ಕಳುವು ಮಾಲುಗಳ ಬಗ್ಗೆ ಅನೇಕ ಬಾರಿ ಪ್ರಚುರಪಡಿಸಿದ್ದಾಗ್ಯೂ ಅವುಗಳನ್ನು ವಾರಸುದಾರರು ಪಡೆಯದೆ ಹರಾಜು ಹಾಕಲಾಗುತ್ತಿರುವುದೆಂದೂ, ಈಗ ಮೇಲ್ಕಂಡಂತೆ ಪ್ರದರ್ಶನವನ್ನು ಏರ್ಪಡಿಸಿರುವುದರಿಂದ ಮಾಲೀಕರು ಅವುಗಳನ್ನು ಗುರ್ತಿಸಿ ತೆಗೆದುಕೊಂಡು ಹೋಗುವರೆಂದು ನಂಬಲಾಗಿದೆಯೆಂದೂ ತಿಳಿಸಿರುವರು.

○ ಭದ್ರಾಚಲದಲ್ಲಿ ೧೨೦ ಡಿಗ್ರಿಯಷ್ಟು ಶಖೆಯಿದೆ ಅದನ್ನು ತಡೆಯಲಾರದೆ ಹಕ್ಕಿಗಳು ಕೆಳಗೆ ಬಿದ್ದು ಮಡಿಯುತ್ತಿವೆ

ಶ್ರೀ ವೇಣುಗೋಪಾಲ ಸ್ಟೋರ್ಸ್

ಸಾಧ್ವಿ ಪತ್ರಿಕೆ ಏಜೆಂಟರು,
ಬಸ್ ಸ್ಟ್ಯಾಂಡ್ ಟಿ ನರಸೀಪುರ

ನಮ್ಮಲ್ಲಿ ಬ್ರಾಹ್ಮಣರಿಂದ ಶುಚಿ ರುಚಿಯಾಗಿ ತಯಾರಿಸಲ್ಪಟ್ಟ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮೆಣಸಿನ ಪುಡಿ ಮುಂತಾದ ಸಂಬಾರದ ಪುಡಿಗಳೂ ಮತ್ತು ಇತರ ಚಿಲ್ಲರೆ ಸಾಮಾನುಗಳೂ ದೊರೆಯುವುವು.

ಎ ಜಿ. ಗುಂಡಪ್ಪ,
ಮಾಲೀಕರು

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ!

ದಿ ಲ್ ಖು ಷ್

1) ಸಿಡುಬಿನ ಕಲೆ, ಗಾಯದ ಗುರುತುಗಳನ್ನು ಹೋಗಲಾಡಿಸಿ ಭಯಂಕರವಾದ "ವಿಷಬು" ಮೊದಲಾದ ಚರ್ಮ ರೋಗಗಳನ್ನು ನಿರ್ಮೂಲ ಮಾಡುತ್ತದೆ

2) ಸ್ತ್ರೀಯರು ಬಹಿಷ್ಟೆಯರಾಗುವ ಕಾಲದಲ್ಲಿ ಉಷ್ಣಾಧಿಕ್ಯದಿಂದಾಗುವ ನಾನಾ ಉಪದ್ರವಗಳನ್ನೂ ಅತಿಸಾರ ಮತ್ತು ಬಾಣಂತಿ ಕ್ಷಯ, ಮೊದಲಾದುವನ್ನೂ ಬಹು ಶೀಘ್ರದಲ್ಲಿ ಗುಣಪಡಿಸಿ ದೇಹಶಕ್ತಿಯನ್ನು ಹೆಚ್ಚಿಸೋಣದರ [illegible]

ವಿ ಸೂ:— ಮೂಲವ್ಯಾಧಿ, ನಾಯಿ ಕೆಮ್ಮು ಲಿವರ್ ಅಂಡ್ ಸ್ಪ್ಲೀನ್ ಮುಂತಾದ ರೋಗಗಳಿಗೆ ಸ್ಪೆಷಲ್ ಚಿಕಿತ್ಸೆಯುಂಟು.

ಎಸ್ ಶಾಮಣ್ಣ, ಸ್ಪೆಷಲಿಸ್ಟ್,
2330 ಲಿವರ್ ಅಂಡ್ ಸ್ಪ್ಲೀನ್ ವೈದ್ಯಶಾಲ,
6 ನೇ ಕ್ರಾಸ್ ರೋಡ್, ಚಾಮುಂಡಿಪುರಂ,
ಮೈಸೂರು

Edited, Printed and Published by A R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೨-೫-೧೯೫೩ [ಸಂಚಿಕೆ ೨೩೧

– ಕಾಶ್ಮೀರದಲ್ಲಿ – ಡಾ|| ಮುಖರ್ಜಿ ಬಂಧನ

ಶ್ಯಾಮಪ್ರಸಾದ ಮುಖರ್ಜಿಯವರ ಬಂಧನ

ಭಾರತೀಯ ಜನಸಂಘದ ಅಧ್ಯಕ್ಷರಾದ ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರು ಇತರ ನಾಲ್ವರೊಡನೆ ತಾವು ರಹದಾರಿ ಪಡೆಯದೆ ಕಾಶ್ಮೀರ ಸಂಸ್ಥಾನವನ್ನು ಪ್ರವೇಶಿಸುವುದಾಗಿ ಮೊದಲೇ ತಿಳಿಸಿದ್ದಂತೆ, ನೆನ್ನೆ ಪೂರ್ವ ಪಂಜಾಬಿನಿಂದ ಪಠಾಣಕೋಟೆ ಮಾರ್ಗವಾಗಿ ಜಮ್ಮು ಸಂಸ್ಥಾನವನ್ನು ಪ್ರವೇಶಿಸಿದರು. ಅವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಕಾಶ್ಮೀರದ ಗಡಿಯೊಳಕ್ಕೆ ಬಂದಾಗ ಅಲ್ಲಿನ ಅಧಿಕಾರಿಗಳು ಅವರು ವಾಪಸ ಹೋಗಬೇಕೆಂದೂ ಇಲ್ಲವಾದರೆ ಅವರನ್ನು ಬಂಧಿಸಬೇಕಾಗುವುದೆಂದೂ ತಿಳಿಸಲು, ಶ್ರೀ ಮುಖರ್ಜಿಯವರು ಅದನ್ನು ಕೇಳದೆ ಇನ್ನಿಬ್ಬರೊಡನೆ ಮುಂದುವರಿಯಲು ಪ್ರಯತ್ನಪಟ್ಟರು. ಪೋಲೀಸರು ಅವರನ್ನು ಬಂಧಿಸಿ ಜಮ್ಮುವಿಗೆ ಕರೆದೊಯ್ದರು. ಅವರನ್ನು ಶ್ರೀನಗರದಲ್ಲಿಟ್ಟಿರಿಸಲಾಗುವುದೆಂದು ತಿಳಿದುಬಂದಿದೆ

ಪಾರ್ಲಿಮೆಂಟ್ ಸಭೆಯಲ್ಲಿ ಸದಸ್ಯನ ಮೂರ್ಛೆ

ಪಾರ್ಲಿಮೆಂಟಿನ ಕೆಳ ಸಭೆಯಲ್ಲಿ ನೆನ್ನೆ ಚುನಾವಣಾ ಅನರ್ಹತೆ ಮಸೂದೆಯು ಚರ್ಚೆಯಾಗುತ್ತಿದ್ದಾಗ ಎಂ. ಡಿ. ಜೋಷಿ ಎಂಬ ಸದಸ್ಯರೊಬ್ಬರು ನಿಶ್ಶಕ್ತಿ ಪರಿಣಾಮವಾಗಿ ತಮ್ಮ ಸ್ಥಾನದಲ್ಲಿ ಮೂರ್ಛೆ ಹೋದರು. ೧೦ ನಿಮಿಷಗಳ ನಂತರ ಅವರಿಗೆ ಪ್ರಜ್ಞೆ ಬಂದಿತು. ಅಲ್ಲಿಯವರೆಗೆ ಸಭೆಯನ್ನು ನಿಲ್ಲಿಸಲಾಗಿದ್ದಿತು

ಬಾವಿಗೆ ಬಿದ್ದು ಪ್ರಣಯಿಗಳ ಆತ್ಮಹತ್ಯೆ

ಮಧುರೆಯಲ್ಲಿ ೧೮ ವರ್ಷದ ರಾಜು ಎಂಬ ವಿದ್ಯಾರ್ಥಿಯೊಬ್ಬನು ೨೦ ವರ್ಷದ ಬಾಪ್ಪೂ ಎಂಬ ಅಗಸರ ಜಾತಿಯ ವಿಧವೆಯನ್ನು ಒಂದು ವರ್ಷದಿಂದಲೂ ಪ್ರೀತಿಸುತ್ತಿದ್ದು, ಅವರಿಬ್ಬರೂ ಬೇರೆ ಬೇರೆ ಜಾತಿಯವರಾದ್ದರಿಂದ ಹಲವರು ಅವರ ವಿವಾಹಕ್ಕೆ ಅಡ್ಡಿಪಡಿಸಲು ಕಳೆದ ಗುರುವಾರ ಅವರಿಬ್ಬರೂ ಆತ್ಮಹತ್ಯೆ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡು ಒಂದು ಬಾವಿಗೆ ಬಿದ್ದರೆಂದೂ, ಮಾರನೇ ದಿನ ಅವರ ಶವಗಳು ದೊರೆತುವೆಂದೂ ವರದಿಯಾಗಿದೆ

ಪಾರ್ಲಿಮೆಂಟಿಗೆ ಆಯ್ಕೆ ಬಗ್ಗೆ ತಕರಾರು ಅರ್ಜಿ ವಜಾ

ಪಾರ್ಲಿಮೆಂಟಿನ ಕೆಳ ಸಭೆಗೆ ಮಂಡ್ಯ ಕ್ಷೇತ್ರದಿಂದ ಆರಿಸಿಬಂದಿರುವ ಶ್ರೀ ಎಂ. ಕೆ. ಶಿವನಂಜಪ್ಪನವರ ಚುನಾವಣೆಯನ್ನು ರದ್ದುಗೊಳಿಸುವಂತೆ ಅವರ ಪ್ರತಿಸ್ಪರ್ಧಿಯಾಗಿ ನಿಂತಿದ್ದ ಶ್ರೀ ಎಂ. ಕೆ. ಲಿಂಗೇಗೌಡರು ಹೂಡಿದ್ದ ತಕರಾರು ಅರ್ಜಿಯನ್ನು ಚುನಾವಣಾ ನ್ಯಾಯಮಂಡಲವು ಖರ್ಚು ಸಮೇತ ವಜಾ ಮಾಡಿರುತ್ತದೆ. ಚುನಾವಣೆಯು ನಿಷ್ಪಕ್ಷಪಾತವಾಗಿ ನಡೆದಿರುವುದೆಂದೂ, ಮತದಾರರ ಮೇಲೆ ಗೆದ್ದ ಅಭ್ಯರ್ಥಿಯು ಅನುಚಿತ ಪ್ರಭಾವ ಬೀರಲಾಗಿದ್ದಿತೆಂಬ ಆಪಾದನೆಯು ಸ್ಥಿರಪಟ್ಟಿಲ್ಲವೆಂದೂ ನ್ಯಾಯಾಧೀಶರು ತಿಳಿಸಿರುತ್ತಾರೆ

ನಗೀಬರ ಎಚ್ಚರಿಕೆಗೆ ಚರ್ಚಿಲರ ಉತ್ತರ

ಸೂಯೆಜ್ ಕಾಲುವೆ ಪ್ರದೇಶದಿಂದ ಬ್ರಿಟಿಷ್ ಸೈನ್ಯಗಳನ್ನು ವಾಪಸು ಕಳುಹಿಸಲು ಈಜಿಪ್ಟಿನ ಜನರು ರಕ್ತಪಾತದ ಕ್ರಾಂತಿಗೆ ಸಿದ್ಧರಾಗಬೇಕೆಂದು ಅಲ್ಲಿನ ಪ್ರಧಾನಿ ಜನರಲ್ ನಗೀಬರು ಕರೆಯಿತ್ತ ಬಗ್ಗೆ ಬ್ರಿಟನ್ನಿನ ಪ್ರಧಾನಿ ಚರ್ಚಿಲರು ಒಂದು ಹೇಳಿಕೆಯಿತ್ತು ಇಂತಹ ಬೆದರಿಕೆಗಳಿಗೆ ತಾವು ಜಗ್ಗುವುದಿಲ್ಲವೆಂದೂ, ಸೂಯೆಜ್ ಕಾಲುವೆ ಪ್ರದೇಶದಲ್ಲಿರುವ ತಮ್ಮ ಸೈನ್ಯಗಳ ಮೇಲೆ ಧಾಳಿ ನಡೆದರೆ ಅದನ್ನು ಎದುರಿಸಲಾಗುವುದೆಂದೂ ತಿಳಿಸಿರುವರು. ಸೂಯೆಜ್ ಕಾಲುವೆಯ ವಿವಾದವನ್ನು ಬಗೆಹರಿಸಲು ಈಜಿಪ್ಟ್ ಮಾತುಕತೆಗಳನ್ನು ಮುಂದುವರಿಸಲೊಪ್ಪಿದರೆ ಅದಕ್ಕೆ ತಾವೂ ಸಿದ್ಧವಾಗಿರುವುದಾಗಿಯೂ, ಅದು ಯೋಗ್ಯ ಮಾರ್ಗವೆಂದೂ ಅವರು ತಿಳಿಸಿರುವರು

ಕರ್ಣಾಟಕ ಗಡಿ ನಿರ್ಧಾರಕ್ಕಾಗಿ ಕ್ರಿಯಾ ಸಮಿತಿ

ಆಂಧ್ರ ಪ್ರಾಂತ ನಿರ್ಮಾಣ ಮಾಡುವ ಮುಂಚೆ ಆಲೂರು, ಆದವಾನಿ ಮತ್ತು ರಾಯದುರ್ಗಗಳಲ್ಲಿ, ಬಳ್ಳಾರಿ ಜಿಲ್ಲೆ ಮತ್ತು ಅನಂತಪುರ ಜಿಲ್ಲೆಯಲ್ಲಿರುವ ಇತರ ತಾಲ್ಲೂಕುಗಳಲ್ಲಿ ಗಡಿಯನ್ನು ಗೊತ್ತುಪಡಿಸುವ ಬಗ್ಗೆ ಸಮಿತಿಯೊಂದನ್ನು ರಚಿಸುವಂತೆ ಒತ್ತಾಯ ಮಾಡಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಪ್ರಜಾ ಸಮಾಜವಾದಿ ಪಕ್ಷ, ಕರ್ನಾಟಕ ಏಕೀಕರಣ ಸಮಿತಿ, ಕ್ರಾಂತಿಕಾರಕ ಕಾರ್ಮಿಕ ಪಕ್ಷಗಳ ಪ್ರತಿನಿಧಿಗಳುಳ್ಳ ಗಡಿ ನಿರ್ಧಾರಕ ಕ್ರಿಯಾ ಸಮಿತಿಯೊಂದನ್ನು ರಚಿಸಲಾಗಿದೆ

ಪುಟ್ಟರಾಜೆ ಅರಸರ ಅರ್ಜಿ ವಜಾ

ತಮ್ಮ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರು ಕೊನೆಗಾಣಿಸಿದ ಸಂಬಂಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅವಕಾಶವನ್ನು ಕೇಳಿ, ಮೈಸೂರು ಹೈಕೋರ್ಟಿನ ಮಾಜಿ ನ್ಯಾಯಾಧೀಶ ಶ್ರೀ ಪುಟ್ಟರಾಜೆ ಅರಸರು ಸಲ್ಲಿಸಿದ ಅರ್ಜಿಯನ್ನು ಪಂಜಾಬು ಹೈ ಕೋರ್ಟಿನವರು ತಿರಸ್ಕರಿಸಿರುತ್ತಾರೆ

ನಗರದಲ್ಲಿ ಕಾಂಗ್ರೆಸ್ ಚುನಾವಣೆ

ದಕ್ಷಿಣ ಭಾಗದ ಸಮಿತಿಗೆ ಅವಿರೋಧ ಆಯ್ಕೆ

ಮೈಸೂರು ೧೨

ತಾಲ್ಲೂಕು ಕಾಂಗ್ರೆಸ್ ಚುನಾವಣೆಗಳ ಸಂಬಂಧವಾಗಿ ಮೊನ್ನೆ ಮತ್ತು ನೆನ್ನೆ ನಗರದ ಉತ್ತರ ಮತ್ತು ದಕ್ಷಿಣ ಸಮಿತಿಗಳಿಗೆ ಉಮೇದುವಾರಿಕೆ ಅರ್ಜಿಗಳನ್ನು ಸ್ವೀಕರಿಸಲಾಯಿತು. ದಕ್ಷಿಣ ಭಾಗದ ಸಮಿತಿಯ ೧೫ ಸ್ಥಾನಗಳಿಗೆ ೧೫ ಮಂದಿ ಮಾತ್ರ ಸ್ಪರ್ಧಿಸಿರುವುದರಿಂದ ಅಲ್ಲಿ ಚುನಾವಣೆ ನಡೆಯುವುದಿಲ್ಲ. ಉತ್ತರ ಭಾಗದ ಸಮಿತಿಗೆ ಕೆಳಕಂಡವರು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿರುವರು –

ಶ್ರೀಗಳು ಎಂ. ಎಸ್. ನಂಜಪ್ಪ, ಎ. ಶಿವಣ್ಣ, ಕೆ. ಚಾಮುಂಡಯ್ಯ, ಟಿ. ವೆಂಕಟರಮಣಯ್ಯ, ಬಿ. ಎಚ್. ಲಿಂಗೇಗೌಡ, ಕೆ. ಸಿದ್ದಪ್ಪ, ಖಲೀಲುಲ್ಲಾ, ಜಿ. ಆರ್. ರಂಗಸ್ವಾಮಯ್ಯ, ಎಚ್. ರಾಚಯ್ಯ, ಎಂ. ಆರ್. ಬಸಪ್ಪ, ಜಿ. ಜನಾರ್ದನ ನಾಯ್ಡು, ಎಂ. ಶಂಕರಯ್ಯ, ಎಸ್. ಶ್ರೀಕಂಠಯ್ಯ, ಎಸ್. ವಿ. ದಾಸಪ್ಪ ಶೆಟ್ಟಿ, ಶ್ರೀಪತಿರಾವ್, ಎಂ. ಜಿ. ವೆಂಕಟಪ್ಪ, ಟಿ. ಗಂಗಣ್ಣ, ಹಂಪೋಜಿ ರಾವ್, ಶ್ರೀಕಂಠಗೌಡ, ಎಂ. ಸಿ. ಅಪ್ಪಯ್ಯ. ಈ ಉಮೇದುವಾರರ ಪೈಕಿ ೧೫ ಮಂದಿ ಮಾತ್ರ ಆರಿಸಲ್ಪಡಬೇಕಾಗಿದೆ

ದಕ್ಷಿಣ ಭಾಗದ ಸಮಿತಿಗೆ ಕೆಳಗಂಡವರು ನಿಂತಿರುವರು –

ಶ್ರೀಗಳು ಕೆ. ಎಸ್. ಸತ್ಯನಾರಾಯಣರಾವ್, ಬಿ. ನಾರಾಯಣಸ್ವಾಮಿ, ಪಡಿತ ಕೃಷ್ಣಮೂರ್ತಿ, ಎಂ. ಎಚ್. ಜೋಯಿಸ್, ಮೈರಾಮಯ್ಯ, ಎಚ್. ಗೋಪಾಲರಾವ್, ಹೆಚ್. ವಿ. ಸುಬ್ಬರಾಮಯ್ಯ, ಯು. ಎಲ್. ರಾಮಚಂದ್ರರಾವ್, ಬಿ. ಸುಬ್ಬರಾವ್ ಉಪಾಧ್ಯ, ಎ. ಕೃಷ್ಣಮೂರ್ತಿರಾವ್, ಚೌಡಯ್ಯ, ಟಿ. ಎಸ್. ಸುಬ್ಬಣ್ಣ, ಎ. ರಾಮಣ್ಣ, ಟಿ. ನರಸಿಂಹಯ್ಯಂಗಾರ್ ಮತ್ತು ಎಚ್. ಅಶ್ವತ್ಥರಾವ್.

ವಿಮಾನದ ಪಾರ್ಸಲಿನಲ್ಲಿದ್ದ ಬಾಂಬು ಸಿಡಿದು ೩ ಮರಣ

ಮೆಕ್ಸಿಕೋವಿನ ಮಜಲ್ಟಾನ್ ಎಂಬಲ್ಲಿ ಮೊನ್ನೆ ದಿನ ವಿಮಾನವೊಂದರಿಂದ ಒಂದು ಪಾರ್ಸಲನ್ನು ಕೆಳಕ್ಕೆ ಇಳಿಸುತ್ತಿದ್ದಾಗ ಅದರಲ್ಲಿದ್ದ ಬಾಂಬು ಸಿಡಿದು ವಿಮಾನ ನಿಲ್ದಾಣದ ಆಡಳಿತ ಅಧಿಕಾರಿಯೂ, ಇನ್ನಿಬ್ಬರೂ ಮೃತಪಟ್ಟರೆಂದೂ, ಏಳು ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ. ಸಮೀಪದ ಒಂದು ಕಟ್ಟಡವು ಪೂರ್ಣವಾಗಿ ನಾಶವಾಯಿತು. ಒಂದು ಮೋಟಾರು ಕಾರಿಗೆ ಜಖಂ ಸಂಭವಿಸಿತು.

ಪಾಟ್ನಾ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ

ಪಾಟ್ನಾ ವಿಶ್ವವಿದ್ಯಾನಿಲಯದ ಆವರಣದಲ್ಲಿ ನೆನ್ನೆ ಬಿಹಾರಿನ ಮುಖ್ಯಮಂತ್ರಿ ರಾಜಾಜಿಯವರ ಭಾಷಣವನ್ನು ಏರ್ಪಡಿಸಿ ಪ್ರೇಕ್ಷಕರಿಗೆ ಟಿಕೆಟ್ ಮೂಲಕ ಪ್ರವೇಶದ ವ್ಯವಸ್ಥೆ ಮಾಡಲಾಗಿದ್ದಿತು. ಭಾಷಣ ಕೇಳಲು ಉತ್ಸುಕರಾಗಿದ್ದ ಅನೇಕ ವಿದ್ಯಾರ್ಥಿಗಳು ತಮ್ಮನ್ನು ಟಿಕೆಟ್ ಇಲ್ಲದೆಯೇ ಒಳಕ್ಕೆ ಬಿಡಬೇಕೆಂದು ಒತ್ತಾಯಮಾಡಿ ಪ್ರದರ್ಶನ ನಡೆಸಿದಾಗ, ಗುಂಪಿನವರನ್ನು ಚದುರಿಸಲು ಪೋಲೀಸರು ಬಲ ಪ್ರಯೋಗಿಸಿ, ಸಾಧಾರಣವಾದ ಲಾಠಿ ಪ್ರಹಾರವನ್ನೂ ನಡೆಸಿದರು. ತರುವಾಯ ರಾಜಾಜಿಯವರೇ ಮಧ್ಯೆ ಪ್ರವೇಶಿಸಿ ಎಲ್ಲರನ್ನೂ ಒಳಗೆ ಬಿಡಿಸಿ ಭಾಷಣವನ್ನು ಉಪಕ್ರಮಿಸಿದಾಗ, ವಿದ್ಯಾರ್ಥಿಗಳು ಕೂಗಲು ಆರಂಭಿಸಿ ಲಾಠಿ ಪ್ರಹಾರ ಮಾಡಿದ ಪೋಲೀಸ್ ಅಧಿಕಾರಿಯನ್ನು ಶಿಕ್ಷಿಸಬೇಕೆಂದೂ ಮತ್ತು ಅವರು ಕ್ಷಮಾಪಣೆ ಸಲ್ಲಿಸಬೇಕೆಂದೂ ಒತ್ತಾಯ ಪಡಿಸಿದರು. ಒಂದು ಗಂಟೆಕಾಲ ಗೊಂದಲ ನಡೆದ ತರುವಾಯ ನಿಶ್ಶಬ್ದ ವಾತಾವರಣವುಂಟಾಗಿ ರಾಜಾಜಿಯವರ ಭಾಷಣವು ಮುಂದುವರಿಯಿತು

ಸಂಸ್ಥಾನದೊಳಗೆ ಬಂದ ಮದ್ರಾಸ್ ಪೋಲೀಸರಿಂದ ಲಾರಿ ವಶ

ಕಳೆದ ಶುಕ್ರವಾರ ಮದ್ರಾಸಿನ ಪೋಲೀಸರು ಮುಳಬಾಗಿಲಿಗೆ ಬಂದು ಅಲ್ಲಿದ್ದ ಲಾರಿ ಮತ್ತು ೫೫ ಮೂಟೆ ಅಕ್ಕಿಯನ್ನು ವಶಪಡಿಸಿಕೊಂಡು ತಮ್ಮ ಎಲ್ಲೆಯೊಳಗೆ ಹೊರಟು ಹೋದರೆಂದೂ, ಸ್ಥಳೀಯ ಪೋಲೀಸು ಇನ್ಸ್‌ಪೆಕ್ಟರು ಪ್ರತಿಭಟಿಸಿದರೂ ಅವರು ಅದನ್ನು ಗಮನಿಸಲಿಲ್ಲವೆಂದೂ ಹೇಳಲಾಗಿದೆ. ಇದಕ್ಕೆ ಮುಂಚೆ ತವಾಗಿ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರು ಲಾರಿಯನ್ನು ಬಿಡಕೂಡದೆಂದು ಆಜ್ಞೆ ಮಾಡಿದ್ದರು

ಗೂರ್ಖನಿಂದ ಜೈನರ ಹುಡುಗಿಯ ಅಪಹಾರ

ಚನ್ನರಾಯಪಟ್ಟಣದಲ್ಲಿ ಮೊನ್ನೆ ರಾತ್ರಿ ರಾಮ್ ಸಿಂಗ್ ಎಂಬ ಗೂರ್ಖರವನು ನಾಗಮ್ಮ ಎಂಬ ೧೪ ವರ್ಷದ ಜೈನ ಮತಸ್ಥ ಹುಡುಗಿಯನ್ನು ಅಪಹರಿಸಿಕೊಂಡು ಹೋದುದಾಗಿ ವರದಿಯಾಗಿದೆ.

ಶಿವಮೊಗ್ಗದ ಬೆಂಕಿಕಡ್ಡಿ ಕಾರ್ಖಾನೆ ಮುಚ್ಚುವುದೇ ?

ಶಿವಮೊಗ್ಗದಲ್ಲಿರುವ ಬೆಂಕಿಕಡ್ಡಿ ಕಾರ್ಖಾನೆಯಲ್ಲಿ ವ್ಯಾಪಾರವು ಕಡಿಮೆಯಾಗಿರುವುದರಿಂದಲೂ ಮತ್ತು ಬೆಂಕಿ ಕಡ್ಡಿಯ ದಾಸ್ತಾನು ಹೆಚ್ಚಾಗಿ ಉಳಿದುಹೋಗಿರುವುದರಿಂದ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಲು ಆಡಳಿತ ವರ್ಗದವರು ಅಲ್ಲಿಯ ಕೆಲಸಗಾರರಿಗೆ ಆ ಬಗ್ಗೆ ನೋಟೀಸು ಕೊಟ್ಟಿರುವರೆಂದು ಹೇಳಲಾಗಿದೆ.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ, ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ, ಈ ಸಂಜೆ ೭ ಘಂಟೆಗೆ ಶ್ರೀ ಮುಳಬಾಗಿಲು ನಾರಾಯಣದಾಸರಿಂದ ಭಕ್ತ ಏಕನಾಥ ಎಂಬ ಹರಿಕಥೆಯು ನಡೆಯುವುದು.

ಪಂಚವಾರ್ಷಿಕ ಯೋಜನೆ ಮತ್ತು ಗ್ರಾಮಾಧಿಕಾರಿಗಳು

ಸಂಸ್ಥಾನದ ಸಮ್ಮೇಳನದಲ್ಲಿ ಧರ್ಮಪ್ಪನವರ ಭಾಷಣ

ಬೆಂಗಳೂರು ೧೧

ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಜರೂರು ಸಮ್ಮೇಳನವು ನೆನ್ನೆ ಇಲ್ಲಿ ಸೇರಿದ್ದಿತು. ೮೦೦ ಪ್ರತಿನಿಧಿಗಳು ಆಗಮಿಸಿದ್ದರು. ಹಾಸನದ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಪೈ ಧರ್ಮಪ್ಪನವರು ಅಧ್ಯಕ್ಷತೆ ವಹಿಸಿದರು. ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಗ್ರಾಮಾಧಿಕಾರಿಗಳ ಸಂಘದ ಕಾರ್ಯದರ್ಶಿಯವರಾದ ಶ್ರೀ ಎಸ್. ಎಲ್. ನರಸಿಂಹಯ್ಯನವರ ಸ್ವಾಗತ ಭಾಷಣವಾದ ನಂತರ ವಿದ್ಯಾ ಮಂತ್ರಿಗಳವರಿಗೂ ಅಧ್ಯಕ್ಷರಿಗೂ ಮಾನ ಪತ್ರಗಳನ್ನು ಸಮರ್ಪಿಸಲಾಯಿತು.

ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಶ್ರೀ ಎ. ಜಿ. ರಾಮಚಂದ್ರರಾಯರು, ಹಳ್ಳಿಗಳಲ್ಲಿ ಗ್ರಾಮಾಧಿಕಾರಿಗಳ ಬಗ್ಗೆ ಮಾತೃವಾತ್ಸಲ್ಯವಿರುವುದಾಗಿಯೂ ಪಟೇಲ್, ಶ್ಯಾನುಭೋಗರುಗಳ ಜೀವನ ... ಹೆಚ್ಚಿದೆ, ಕೆಲಸವು ಹೆಚ್ಚಾಗಿರುವುದರಿಂದ ಅವರೂ ... ತತ್ವಗಳಿಗೆ ಹೊಂದಿಕೊಂಡ ... ನಡೆಸುತ್ತಿರ ... ಪದ್ಧತಿಯನ್ನು ... ಎಂಬುವನ್ನು ಸರ್ಕಾರದವರೂ, ಸಾರ್ವಜನಿಕರೂ ಆಲೋಚಿಸಬೇಕೆಂದೂ ತಿಳಿಸಿದರು. ಗ್ರಾಮ ಜೀವನ ಪದ್ಧತಿ ... ಗ್ರಾಮಗಳನ್ನು ಒಂದುಗೂಡಿಸಬೇಕು ... ಗ್ರಾಮಾಧಿಕಾರಿಯನ್ನು ... ಇದರಿಂದ ಗ್ರಾಮಾಧಿಕಾರಿಗಳಿಗೆ ... ಅವರು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಬೇಕಾದರೆ ಗ್ರಾಮಾಧಿಕಾರಿಗಳ ... ಮನೋಭಾವವನ್ನು ... ಗ್ರಾಮಾಧಿಕಾರಿಗಳ ಸಹಾಯ ... ಹೇಳಿದರು. ... ಕೆಲಸ ನಡೆಸುತ್ತಿರುವುದಾಗಿ ... ಗ್ರಾಮಾಧಿಕಾರಿಗಳು ... ಅಧಿಕಾರವನ್ನು ... ನಡೆಸುವ ... ಪತ್ರಿಕೆಗೆ ... ತಿಳಿಸಿದರು.

... ಪಾರ್ಲಿಮೆಂಟ್ ಸದಸ್ಯರಲ್ಲಿ ಘರ್ಷಣೆ

... ಸಭೆಯ ... ಪ್ರತಿನಿಧಿಗಳ ... ಭಾರಿ ಕಾರ್ಯ ... ಸಭೆಯನ್ನು ಅಧ್ಯಕ್ಷರು ಮುಂದೂಡಿ ... ಸಭೆಯನ್ನು ಅಧ್ಯಕ್ಷರು ಮುಲ್ತವಿ ಮಾಡಿದರು.

ಕೆನಡಾದಲ್ಲಿ ಭಯಂಕರ ಕಾಡ್ಗಿಚ್ಚು

ಕೆನಡಾ ರಾಜ್ಯದ ಮಾನಿಟೋಬ ಪ್ರಾಂತದಲ್ಲಿ ಒಂದು ಕಡೆ ಭಯಂಕರ ಕಾಡ್ಗಿಚ್ಚಿನಿಂದ ಸಹಸ್ರಾರು ಎಕರೆಗಳಲ್ಲಿದ್ದ ಗಿಡಮರಗಳು ಭಸ್ಮವಾದುವು. ಇಂತಹ ಬೆಂಕಿಯು ಹಿಂದೆಂದೂ ಸಂಭವಿಸಿರಲಿಲ್ಲವೆಂದು ಹೇಳಲಾಗಿದೆ. ಬೆಂಕಿಯಾರಿಸುವ ಪ್ರಯತ್ನದಲ್ಲಿ ಸ್ವಯಂಸೇವಕನೊಬ್ಬನು ಆಹುತಿಯಾದನು. ಮತ್ತೊಬ್ಬನು ತೀವ್ರ ಗಾಯಗೊಂಡು ಆಸ್ಪತ್ರೆಯನ್ನು ಸೇರಿರುವನು. ೧೫೦ ಮೈಲಿ ಉದ್ದದ ಪ್ರದೇಶವನ್ನು ಬೆಂಕಿಯು ಗಂಟೆಗೆ ೨೦ ಮೈಲಿ ವೇಗದಲ್ಲಿ ಆವರಿಸಿತೆಂದು ಹೇಳಲಾಗಿದೆ.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಇದೇ ತಿಂಗಳು ೨೧ ನೇ ತಾ|| ಬೆಳಗ್ಗೆ ೧೧ ಗಂಟೆಗೆ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯು ಬೆಂಗಳೂರಿನಲ್ಲಿ ಸೇರುವುದು.

ತಮ್ಮನ ಕೊಲೆ ಬಗ್ಗೆ ಅಣ್ಣಂದಿರ ದಸ್ತಗಿರಿ

ಕೃಷ್ಣರಾಜನಗರ ತಾಲ್ಲೂಕಿನ ಚುಂಚನಕಟ್ಟೆ ಬಳಿ ಕಳೆದ ಮಾರ್ಚಿಯಲ್ಲಿ ಶ್ರೀ ಎಂ. ಎಸ್. ಗೋಪಾಲರಾವ್ ಎಂಬುವನ ಕೊಲೆ ಸಂಬಂಧವಾಗಿ ಮೃತರ ಅಣ್ಣಂದಿರಾದ ಶ್ರೀ ಎಂ. ಎಸ್. ನಂಜುಂಡಯ್ಯ, ಶ್ರೀ ಎಂ. ಎಸ್. ಕೃಷ್ಣಮೂರ್ತಿ ಮತ್ತು ಚುಂಚನಕಟ್ಟೆ ಶ್ರೀ ರಾಮದೇವರ ಅರ್ಚಕರಾದ ಶ್ರೀ ಶ್ಯಾಮಯ್ಯಂಗಾರ್ ಇವರುಗಳನ್ನು ಕಳೆದ ೭ ನೇ ತಾ|| ದಸ್ತಗಿರಿ ಮಾಡಲಾಯಿತು.

ತಾಯಿನಾಡು ಸಂಪಾದಕರ ಮೇಲೆ ಮಾನನಷ್ಟ ಮೊಕದ್ದಮೆ

ಕಳೆದ ಮಾರ್ಚಿ ತಿಂಗಳು ಕಿರಿಯ ಶಾಸನ ಸಭೆಯಲ್ಲಿ ಆರೋಗ್ಯ ಮಂತ್ರಿಗಳಾದ ಶ್ರೀ ಟಿ. ಚನ್ನಯ್ಯನವರು ಬೆಂಗಳೂರು ಡೆಕ್ಕನ್ ಹೆರಾಲ್ಡ್ ಪತ್ರಿಕಾ ಮಾಲಿಕರ ಸಂಬಂಧವಾಗಿ ಕೊಟ್ಟ ಹೇಳಿಕೆಯನ್ನು ತಾಯಿನಾಡು ಪತ್ರಿಕೆಯು ಕಳೆದ ಮಾರ್ಚಿ ೧೩ ನೇ ತಾ|| ನ ಸಂಚಿಕೆಯಲ್ಲಿ ಪ್ರಕಟಿಸಿರುವುದು ಮಾನನಷ್ಟವನ್ನುಂಟುಮಾಡುವಂತಹ ತಪ್ಪೆಂದು ಎಬ್ಕಾರಿ ಕಂಟ್ರಾಕ್ಟರೂ, ಪತ್ರಿಕೆಯ ಮಾಲೀಕರೂ ಆದ ಶ್ರೀ ಕೆ. ಎಸ್. ಗುರುಸ್ವಾಮಿಯವರು ಸಿವಿಲ್ ಪ್ರದೇಶದ ೧ ನೇ ನ್ಯಾಯಸ್ಥಾನದಲ್ಲಿ ಮೊಕದ್ದಮೆ ಹೂಡಿ, ನೆನ್ನೆ ವಿಚಾರಣೆ ನಡೆಯಿತು. ತಾಯಿನಾಡು ಸಂಪಾದಕ ಶ್ರೀ ಪಿ. ಆರ್. ಶ್ರೀನಿವಾಸರವರು, ಕೋರ್ಟಿನಲ್ಲಿ ಹಾಜರಿದ್ದರು. ಮೊಕದ್ದಮೆಯನ್ನು ೨೬ ನೇ ತಾ|| ಗೆ ಮುಂದೂಡಲಾಯಿತು. ಕೋರ್ಟು ... ಅವರಿಗೆ ... ಮುಚ್ಚಳಿಕೆಯನ್ನು ಕೊಟ್ಟರು. ಇದೇ ರೀತಿಯ ಮತ್ತೊಂದು ಮೊಕದ್ದಮೆಯನ್ನು ಮತ್ತೊಬ್ಬ ಎಬ್ಕಾರಿ ಕಂಟ್ರಾಕ್ಟರ್ ಶ್ರೀ ಮೂಲೆ ರಂಗಪ್ಪನವರು ಶ್ರೀ ಶ್ರೀನಿವಾಸರವರ ಮೇಲೆ ಹೂಡಿದ್ದು, ಆ ಸಂಬಂಧದ ವಿಚಾರಣೆಯೂ ಇದೇ ೨೬ ನೇ ತಾ|| ಗೆ ಹಾಕಲ್ಪಟ್ಟಿತು. ಅದರ ಬಗ್ಗೆಯೂ ಆಪಾದಿತರು ಮತ್ತೊಂದು ೧೦೦೦ ರೂ ಗಳ ಸ್ವಂತ ಮುಚ್ಚಳಿಕೆಯನ್ನು ಕೊಟ್ಟರು.

ಮದ್ರಾಸಿನಲ್ಲಿ ವಿದ್ಯಾಭ್ಯಾಸದ ಮಾರ್ಪಾಡಿನಿಂದ ಹಾನಿ

ಮದ್ರಾಸಿನ ಪ್ರಾಥಮಿಕ ಶಾಲಾ ಬಾಲಕರು ಪ್ರತಿ ದಿನದ ಶಾಲೆಯ ವೇಳೆಯಲ್ಲಿ ಅರ್ಧ ದಿನವನ್ನು ವಿದ್ಯಾಭ್ಯಾಸದಲ್ಲೂ ಉಳಿದ ಕಾಲದಲ್ಲಿ ತಮ್ಮ ಕುಲ ಕಸಬನ್ನು ಕಲಿಯುವುದರಲ್ಲೂ ನಿರತರಾಗಬೇಕೆಂದು ಮದ್ರಾಸು ಸರ್ಕಾರದವರು ವಿಧಿಸಬೇಕಿರುವ ಹೊಸ ಸುಧಾರಣಾ ಯೋಜನೆಯು ೭ ಮತ್ತು ೧೦ ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳಿಗೆ ಹಾನಿಕಾರಕವೆಂದೂ ಅದನ್ನು ಜಾರಿಗೆ ತರುವುದು ಸರಿಯಲ್ಲವೆಂದೂ, ಮಂಗಳೂರಿನಲ್ಲಿ ಸೇರಿದ್ದ ಪ್ರಾಂತ ವಿದ್ಯಾಭ್ಯಾಸ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ.

ಹೂವಿನ ಸೀರೆ ಅಲಂಕಾರ

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದ ಅರವಿಂದ ನಾಯಕಿ ಅಮ್ಮನವರಿಗೆ ಈ ದಿನ ಸಂಜೆ ೭ ಘಂಟೆಗೆ ಹೂವಿನ ಸೀರೆ ಅಲಂಕಾರವನ್ನು ಏರ್ಪಡಿಸಲಾಗಿದೆ.

ರಜಾ ಹೆಚ್ಚಿತು

ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಮಹಮದ್ ಅಹಮದ್‌ರವರ ರಜಾ ಅವಧಿಯು ಕಳೆದ ತಿಂಗಳು ಅಖೈರಿಗೆ ಮುಕ್ತಾಯವಾಗಬೇಕಾಗಿದ್ದುದನ್ನು ಇದೇ ತಿಂಗಳು ೩೧ ರ ವರೆಗೆ ಮುಂದುವರಿಸಲಾಗಿದೆ.

ಬೀಡಿ ಕಾರ್ಮಿಕರ ನಿಯೋಗ

ರಾಜಧಾನಿಯ ಸವರ್ಣ ಬೀಡಿ ಕಾರ್ಖಾನೆಯ ೨೦ ಜನ ಕಾರ್ಮಿಕರನ್ನು ಕೆಲಸದಿಂದ ನಿಷ್ಕಾರಣವಾಗಿ ನಿವೃತ್ತಿ ಮಾಡಲಾಯಿತೆಂದು ಪ್ರತಿಭಟಿಸಿ ನೆನ್ನೆ ಕಾರ್ಖಾನೆಯ ಕಾರ್ಮಿಕರ ಮೆರವಣಿಗೆಯು ನಡೆದು, ಅಸಿಸ್ಟೆಂಟ್ ಲೇಬರ್ ಕಮಿಷನರರ ಬಳಿ ನಿಯೋಗ ತೆಗೆದುಕೊಂಡುಹೋಗಲಾಗಿದ್ದಿತು. ಈ ವಿಷಯವನ್ನು ಪರಿಶೀಲಿಸುವುದಾಗಿ ಕಮಿಷನರರು ಭರವಸೆಯಿತ್ತರು.

ಭಾರತ ವಾಚನದ ಪಟ್ಟಾಭಿಷೇಕ

ರಾಜಧಾನಿಯ ಸಂತೆಪೇಟೆಯಲ್ಲಿರುವ ಕುಂಚಿಟಿಗರ ರಾಮ ಮಂದಿರದಲ್ಲಿ ಕಳೆದ ೧೦ ತಿಂಗಳಿಂದಲೂ, ಗಮಕ ವಿದ್ವಾಂಸರುಗಳಾದ ಶ್ರೀಗಳು ಕೌಶಿಕ್ ಮತ್ತು ವೆಂಕಟಸುಬ್ಬಯ್ಯನವರಿಂದ ನಡೆಯುತ್ತಿದ್ದ ಮಹಾ ಭಾರತ ವಾಚನ ಮತ್ತು ವ್ಯಾಖ್ಯಾನಗಳು ಮುಕ್ತಾಯಗೊಂಡು ನೆನ್ನೆ ಪಟ್ಟಾಭಿಷೇಕ ಮತ್ತು ಮಹಾ ಮಂಗಳಾರತಿಗಳು ಜರುಗಿದುವು. ಗಮಕಿಗಳಾದ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೋತೃಗಳು ಭಕ್ತಿಪುರಸ್ಸರವಾಗಿ ಅರ್ಪಿಸಿದ ಕಾಣಿಕೆಗಳನ್ನು ಶ್ರೀ ಕೃಷ್ಣ ರಾಯರು ಗಮಕಿಗಳಿಗೆ ಕೊಟ್ಟು ಆಶೀರ್ವದಿಸಿ ಅವರ ಶ್ರೇಯಸ್ಸನ್ನು ಕೋರಿದರು. ಶ್ರೀ ವಿ. ಕೆ. ದೊರೆಸ್ವಾಮಿಯವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಗಿಯಿತು. ಇಂದಿನಿಂದ ಒಂದು ವಾರ ಕಾಲ ಸದರಿ ರಾಮ ಮಂದಿರದಲ್ಲಿ ಮೇಲ್ಕಂಡ ಗಮಕಿಗಳಿಂದ ರಾಮಾಯಣ ವಾಚನ ಮತ್ತು ವ್ಯಾಖ್ಯಾನಗಳು ನಡೆಯುವುವು.

ನಾವಿಕರ ಸಂಘದ ಉದ್ಘಾಟನೆ

ಕಲ್ಕತ್ತಾ, ಬೊಂಬಾಯಿ ಮತ್ತು ಸೂರತ್ ನಗರಗಳಲ್ಲಿರುವ ನಾವಿಕರ ೧೧ ಸಂಘಗಳನ್ನು ಒಂದುಗೂಡಿಸಿ, ಒಂದೇ ಸಂಘವನ್ನು ಶನಿವಾರ ಬೊಂಬಾಯಿಯಲ್ಲಿ ಸ್ಥಾಪಿಸಲಾಯಿತು. ಅದರ ಪ್ರಾರಂಭೋತ್ಸವವನ್ನು ಭಾರತದ ಸುಪ್ರಸಿದ್ಧ ಕಾರ್ಮಿಕ ಮುಖಂಡರಾದ ಎನ್. ಎಂ. ಜೋಷಿಯವರು ನೆರವೇರಿಸಿದರು. ಸಂಘದಲ್ಲಿ ೭೦ ಸಾವಿರ ಸದಸ್ಯರಿರುತ್ತಾರೆ.

ದೆಹಲಿಗೆ ಮುಖ್ಯ ಮಂತ್ರಿಗಳ ಪ್ರಯಾಣ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು. ನಾಳಿದ್ದು ಬೆಂಗಳೂರಿಗೆ ಹಿಂದಿರುಗುವರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೨೪ ೮-೦	೩೩-೦-೦
ಹರಳುಬೀಜ	೩೮-೧೨-೦	೪೦-೦-೦
ಹೊಂಗೇಬೀಜ	೨೦ ೧೪-೦	೨೨ ೪ ೦
ಹುರುಳಿ	೪೨ ೮-೦	೪೩ ೨ ೦
ಎಳ್ಳು	೩೬ ೦ ೦	
ಹುಚ್ಚೆಳ್ಳು	೫೫ ೨.೦	
ಹಲಸಂದೆ	೪೩.೧೦.೦	೬೦-೦-೦
ಹೆಸರು	೫೯ ೨ ೦	೬೩ ೮ ೦
ಮೆಣಸಿನ ಕಾಯಿ ಹುಡಿಕ್ಕೆ	೧೪.೪ ೦	೨೦ ೧೧ ೦
ಹುಣಸೇಹಣ್ಣು	೪ ೪ ೦	೫_೧೨-೦
ಬೆಲ್ಲ	೫ ೧೨ ೦	
ತೆಂಗಿನಕಾಯಿ ೧,೧೦೦ಕ್ಕೆ	೧೬೫ ೦-೦	೨೪೫ ೦.೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ರ ಕೃಷ್ಣಪ್ಪ, ನಾಗಸ್ವರ ಮಧ್ಯಾಹ್ನ ೧ ೪೦ ಪಿಟೀಲು ೨ ಪಕ್ಷಿಪ್ರಾಣಿ ಹಾರ. ಸಂಜೆ ೫.೪೦ ಪಿ. ಕೃಷ್ಣಪ್ಪ, ನಾಗಸ್ವರ. ೬.೧೦ ಬಾಲ ಜಗತ್ ೭ ಗಜೇಲ್, ಗಜಲ್. ೭ ೩೦ ಜನ ರಂಜನಿ. ೭ ೪೦ ಕನ್ನಡದಲ್ಲಿ ಭಾಷಣ ೮ ೨ ಸೂರ್ಯನಾರಾಯಣ, ಸಂಗೀತ ೮ ೪೦ ರಾಷ್ಟ್ರೀಯ ಕಾರ್ಯಕ್ರಮ. ೯.೧೫ ಎಸ್. ರಾಮಚಂದ್ರರಾವ್, ಕನ್ನಡ ಗೀತೆಗಳು. ೯.೪೦ ಹಳ್ಳಿ ಹೆಣ್ಣಿನ ಗೀತೆಗಳು

ರೇಸ್ ಕೋರ್ಸ್, ಮೈಸೂರು

ಟೆಂಡರ್ ನೋಟೀಸು

ಮೈಸೂರು ರೇಸ್ ಕೋರ್ಸಿನಲ್ಲಿ ಇದೇ 24 ನೇ ತಾ|| ನಿಂದ ಆರು ದಿನಗಳು ನಡೆಯಲಿರುವ ರೇಸುಗಳ ಸಂಬಂಧವಾಗಿ ಸ್ಟೆಸಲ್ ಸ್ಟಾಂಡುಗಳ ಕಂಟ್ರಾಕ್ಟನ್ನು ಹೊಂದುವ ಬಗ್ಗೆ ಅಪೇಕ್ಷೆಯುಳ್ಳವರು 1953 ನೇ ಇಸವಿ ಮೇ ತಿಂಗಳು 14 ನೇ ತಾರೀಖು ದಿವ 12 ಘಂಟೆಯೊಳಗೆ ಮೊಹರಾದ ಟೆಂಡರುಗಳನ್ನು ರೇಸ್ ಕೋರ್ಸಿನ ಗೌರವ ಕಾರ್ಯದರ್ಶಿಗಳಿಗೆ ಕಳುಹಿಸಬಹುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಗೌರವ ಕಾರ್ಯದರ್ಶಿ,
ರೇಸ್‌ಕೋರ್ಸ್, ಮೈಸೂರು.

Edited, Printed and Published by A. R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧) ಬುಧವಾರ ೧೩-೬-೧೯೫೬ [ಸಂಚಿಕೆ ೨೪೨

ಸೂಯೆಜ್ಜಿಗೆ ಬ್ರಿಟಿಷ್ ನೌಕಾ ಸೈನ್ಯದ ರವಾನೆ?

ಸೂಯೆಜ್ಜಿಗೆ ಮಾಲ್ಟಾದಿಂದ ನೌಕಾ ಪಡೆ

ಮಾಲ್ಟಾ ದ್ವೀಪದಲ್ಲಿದ್ದ ಬ್ರಿಟಿಷ್ ನೌಕಾ ಸೈನಿಕರು ಪೂರ್ಣ ಯುದ್ಧ ಸನ್ನದ್ಧರಾಗಿ ಹಡಗುಗಳಲ್ಲಿ ನೆನ್ನೆ ಪ್ರಯಾಣ ಬೆಳೆಸಿದರು ಅವರ ಗುರಿಗಳ ಬಗ್ಗೆ ಅಧಿಕಾರಿಗಳು ಏನನ್ನೂ ಸೂಚಿಸದಿದ್ದರೂ, ಈಜಿಪ್ಟಿನ ಸೂಯೆಜ್ ಕಾಲುವೆಯಲ್ಲುಂಟಾಗಿರುವ ಪರಿಸ್ಥಿತಿಗೂ ಈ ಪ್ರಯಾಣಕ್ಕೂ ಸಂಬಂಧವಿರುವುದಾಗಿ ಹೇಳಲಾಗಿದೆ.

ಪರ್ಷಿಯಾದ ರೈತರಿಗೆ ಸಹಾರವರಭೂಮಿ ಹಂಚಿಕೆ

ಪರ್ಷಿಯಾದ ಷಹಾರವರು ತಮ್ಮ ಎ... ಜಮೀನುಗಳನ್ನೂ ಅಲ್ಲಿ ಭೂಮಿಯಿಲ್ಲದ ರೈತರಿಗೆ ಮೊನ್ನೆ ಹಂಚಿ ೯೯ ವರ್ಷಗಳ ಅವಧಿಯ ಭೋಗ್ಯದ ವ್ಯವಸ್ಥೆ ಮಾಡಿ ಅದರ ಮೇಲ್ವಿಚಾರಣೆಯನ್ನು ಸ...ರಕ್ಕೆ ವಹಿಸಿರುವರೆಂದು ವರದಿಯಾಗಿದೆ ಇದರಿಂದ ಅಲ್ಲಿನ ಪ್ರಧಾನಿ ಡಾ|| ...ಸ್ಸಾದಿಕ್ಕರಿಗೂ ಮತ್ತು ಷಹಾರವರಿಗೂ ಇದ್ದ ಭಿನ್ನಾಭಿಪ್ರಾಯವು ನಿವಾರಣೆಯಾಗುವುದೆಂದೂ, ಭೋಗ್ಯದಿಂದ ಬರುವ ಉತ್ಪತ್ತಿಯನ್ನು ಸಮಾಜ ಸೇವಾ ಕಾರ್ಯಕ್ಕಾಗಿ ಉಪಯೋಗಿಸಲಾಗುವುದೆಂದೂ ಹೇಳಲಾಗಿದೆ

ಉಷ್ಣ ಮಾರುತದಿಂದ ಅಮೇರಿಕದಲ್ಲಿ ೭೫ ಮರಣ

ಅಮೇರಿಕದ ೬ ಸಂಸ್ಥಾನಗಳಲ್ಲಿ ಮೊನ್ನೆ ಭಾರಿ ಬಿಸಿಲ್ಗಾಳಿಯು ಬೀಸಿ ತಂ...ಡನಾಹುತವಾಗುತ್ತಿದೆ ೭೫ ಜನರು ಮಡಿದು, ೮೦೦ ಮಂದಿಗೆ ಗಾಯವಾಗಿದೆ ಒಂದು ಊರಿನಲ್ಲಿ ೧೫ ಲಕ್ಷ ...ಲರ್‌ಗಳ ಆಸ್ತಿ ನಷ್ಟವಾಗಿದೆ

ಪ್ರಜಾ ಕ್ಷೇಮ ಸಾಧನೆಗಾಗಿ ಸಂಸ್ಥಾನಕೆ ೭॥ ಲಕ್ಷ ರೂ.

ಪಂಚ ವಾರ್ಷಿಕ ಯೋಜನೆಯ ಅಂಗವಾಗಿ ಪ್ರಜಾ ಕ್ಷೇಮಾಭ್ಯುದಯ ಸಾಧನೆಗಾಗಿ ಕೇಂದ್ರ ಯೋಜನಾ ಸಮಿತಿಯವರು ...ಕೋಟಿ ರೂ ಗಳನ್ನು ಮಂಜೂರು ಮಾಡಿರುತ್ತಾರೆ ಆ ಪೈಕಿ ಮೈಸೂರು ಸಂಸ್ಥಾನಕ್ಕೆ ಈ ವರ್ಷ ೬-೭೫ ಲಕ್ಷಗಳು ಬರುವುದು ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆಗಳಿಗೆ ಈ ಹಣವನ್ನು ಕೊಡಲಾಗುವುದು

ಗ್ರಾಮಾಧಿಕಾರಿಗಳ ಚುನಾವಣೆ ಅನರ್ಹತೆ ಹೋಗಬೇಕು

ಗ್ರಾಮಾಧಿಕಾರಿಗಳಿಗೆ ಸರ್ಕಾರದವರು ...ಡುತ್ತಿರುವ ಪ್ರೋಟೆಗೆಯು ಗೌರವ ...ಭಾವನೆಯೆಂದು ಪರಿಗಣಿಸಿ, ಗ್ರಾಮಾಧಿಕಾರಿಗಳು ಶಾಸನ ಸಭೆ ಮುಂತಾದವುಗಳಿಗೆ ಸ್ಪರ್ಧಿಸಲು ಇರುವ ನಿರ್ಬಂಧವನ್ನು ತೆಗೆಯಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವು ಬೆಂಗಳೂರಿನಲ್ಲಿ ನಡೆದ ಗ್ರಾಮಾಧಿಕಾರಿಗಳ ...ಊರು ಸಮ್ಮೇಳನದಲ್ಲಿ ಅಂಗೀಕಾರವಾಯಿತು ಗ್ರಾಮಾಧಿಕಾರಿಗಳ ಬಗ್ಗೆ ...ವ ಶಾಸನದ ೭ ಮತ್ತು ೮ನೇ ವಿಧಿಗಳಿಗೆ ತಿದ್ದುಪಡಿ ಮಾಡುವುದರಿಂದ ಅವರುಗಳಿಗೆ ತೊಂದರೆಯಾಗುವುದೆಂದೂ, ಅದನ್ನು ಕೈಬಿಡಬೇಕೆಂದೂ ಕೋರಲಾಯಿತು

ಹೊಸ ಮಾದರಿಯ ಟೆಲಿಫೋನ್

ಬೆಂಗಳೂರು ೧೩

ಇಲ್ಲಿನ ದೂರವಾಣಿನಗರದ ಟೆಲಿಫೋನ್ ಕಾರ್ಖಾನೆಯವರು ಹೊಸ ಮಾದರಿಯ ಸಿಂಗಲ್ ಚಾನಲ್ ಕ್ಯಾರಿಯರ್ ಟೆಲಿಫೋನ್ ಅನ್ನು ತಯಾರಿಸಿರುತ್ತಾರೆ ದೂರದಲ್ಲಿರುವ ಸ್ಥಳಗಳಿಗೆ ಟ್ರಂಕ್ ಕಾಲ್ ಮಾಡುವ ಬಗ್ಗೆ ಇದು ಹೆಚ್ಚಿನ ಉಪಯೋಗವುಳ್ಳದಾಗಿರುವುದೆಂದು ಹೇಳಲಾಗಿದೆ. ಅಂಚೆ ಮತ್ತು ತಂತಿ ಇಲಾಖೆಗೆ ಅದನ್ನು ಕಾರ್ಖಾನೆಯವರು ಒದಗಿಸುವರು ಭಾರತದಲ್ಲಿ ಇದೇ ಮೊಟ್ಟ ಮೊದಲಾಗಿ ಇಂತಹ ಮಾದರಿಯ ಟೆಲಿಫೋನ್ ತಯಾರಾಗಿದೆ

ಸಿಪಾಹಿ ದಂಗೆ ಶತಮಾನೋತ್ಸವ

ಬರುವ ೫೭ನೇ ಇಸವಿಗೆ ೧೦೦ ವರ್ಷ ಪೂರ್ತಿಯಾಗುವ ಸಮಯದಲ್ಲಿ ೧೮೫೭ರಲ್ಲಿ ಸಿಪಾಹಿ ದಂಗೆಯ ರೂಪದಲ್ಲಿ ಆದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಯ ಶತಮಾನೋತ್ಸವವನ್ನು ನಡೆಸಬೇಕೆಂದು ಬಿತ್ತೂರಿನಲ್ಲಿ ಸೇರಿದ್ದ ಸಭೆಯೊಂದರಲ್ಲಿ ನಿರ್ಧಾರವಾಯಿತು ಕ್ರಾಂತಿಯ ನಾಯಕ ನಾನಾ ಸಾಹೇಬ್ ಪೇಷ್ವೆಯ ಗೌರವಾರ್ಥವಾಗಿ ಒಂದು ಸ್ಮಾರಕವನ್ನು ನಿರ್ಮಿಸಲೂ ನಿರ್ಧಾರವಾಯಿತು ಕ್ರಾಂತಿಯಲ್ಲಿ ಭಾಗವಹಿಸಿದ್ದವರು ಸಭೆಯಲ್ಲಿ ಇದ್ದರು ಉತ್ತರ ಪ್ರದೇಶ ಶಾಸನ ಸಭಾಧ್ಯಕ್ಷ ಎ ಜಿ ಖೇರ್‌ರವರು ಅಧ್ಯಕ್ಷತೆ ವಹಿಸಿದ್ದರು

ತರುಣಿಯರನ್ನು ಕ್ರಯಕ್ಕೆ ಕೊಂಡವನ ದಸ್ತಗಿರಿ

ಪಾಕಿಸ್ತಾನದ ಹೈದರಾಬಾದು ನಗರದ ಜಮೈಲ್ ಹುಸೇನ್ ಎಂಬ ಭಾರಿ ವರ್ತಕನು ೮ ಮಂದಿ ಸುಂದರ ತರುಣಿಯರನ್ನು ಕ್ರಯಕ್ಕೆ ಕೊಂಡು, ತನ್ನ ಬಳಿ ಇಟ್ಟುಕೊಂಡುದಕ್ಕಾಗಿ ದಸ್ತಗಿರಿಯಾಗಿರುತ್ತಾನೆ ೮ ಮಂದಿಯೂ ತನ್ನನ್ನು ವಿವಾಹವಾಗಲು ಒಪ್ಪಿರುವರೆಂದು ಅವನು ಪೋಲೀಸರಿಗೆ ತಿಳಿಸಿರುತ್ತಾನೆ

ಬಸವೇಶ್ವರ ಜನನದ ಚಿತ್ರ

ಬಸವೇಶ್ವರ ಜಯಂತಿ ಪ್ರಯುಕ್ತ ರಾಜಧಾನಿಯ ಎಂ ಎಸ್ ಶಿವಪ್ಪ ಬ್ರದರ್ಸ್‌ರವರು ಪ್ರಕಟಿಸಿರುವ ಬಸವೇಶ್ವರ ಜನನದ ಸುಂದರವಾದ ಚಿತ್ರವನ್ನು ಆದರದಿಂದ ಸ್ವೀಕರಿಸಿದ್ದೇವೆ ಇದರ ಬೆಲೆ ರೂ ೦-೮-೦

ಅಮೇರಿಕದ ಧಾಳಿ ಬಗ್ಗೆ ಚೀಣದ ಪ್ರತಿಭಟನೆ

ಅಮೇರಿಕದ ವಿಮಾನಗಳು ಚೀಣದ ಎಲ್ಲೆಯನ್ನು ದಾಟಿ ಬಂದು ಹಲವು ಪ್ರದೇಶಗಳಲ್ಲಿ ಬಾಂಬು ಹಾಕಿ ಧಾಳಿ ನಡೆಸಿರುವ ಬಗ್ಗೆ ಚೀಣದ ಪ್ರಧಾನ ಮಂತ್ರಿ ಚೌ ಎನ್ ಲೈಯವರು ಅಮೇರಿಕಕ್ಕೆ ಪ್ರತಿಭಟನೆಯನ್ನು ಸೂಚಿಸಿ, ಈ ಧಾಳಿಗಳಿಂದ ಅನೇಕ ಪ್ರಜೆಗಳು ಮಡಿದಿರುತ್ತಾರೆಂದು ಹೇಳಿರುತ್ತಾರೆ ೨೫ ವಿಮಾನಗಳು ಧಾಳಿಯಲ್ಲಿ ಭಾಗವಹಿಸಿದ್ದುವೆಂದೂ, ಬಾಂಬು ಹಾಕಿದ ದಳ್ಳಿವೆ ಗ್ರಾಮಗಳನ್ನು ನಾಶಪಡಿಸಲಾಯಿತೆಂದೂ, ೯೫೦ ಮಂದಿಗೆ ನಷ್ಟನೋವುಗಳಾದುವೆಂದೂ ಹೇಳಲಾಗಿದೆ

ಕರಾಚಿಯಲ್ಲಿ ಭಾರತದ ಚಿತ್ರಪ್ರದರ್ಶನಕ್ಕೆ ಅವಕಾಶ

ಭಾರತದ ಚಲನ ಚಿತ್ರಗಳ ಆಮದಿಗೆ ಕರಾಚಿಯಲ್ಲಿ ಪ್ರತಿಬಂಧಕ ಹಾಕಲ್ಪಟ್ಟಿದ್ದರೂ ಸಹ ೫೦ ಭಾರತೀಯ ಚಿತ್ರಗಳ ಪ್ರದರ್ಶನಕ್ಕೆ ಪಾಕಿಸ್ತಾನ ಸರ್ಕಾರದವರು ಅವಕಾಶ ಕೊಟ್ಟಿರುತ್ತಾರೆ ಅವುಗಳನ್ನು ಪ್ರದರ್ಶನಕ್ಕಾಗಿ ಚಿತ್ರಗಳ ಹಂಚಿಕೆಗಾರರಿಗೆ ಕೊಡಲಾಗಿದೆಯೆಂದು ತಿಳಿದುಬಂದಿದೆ

ಬಸವೇಶ್ವರರ ಜಯಂತಿ

ರಾಜಧಾನಿಯ ಶ್ರೀ ಕೃಷ್ಣರಾಜ ಮೊಹಲ್ಲಾ ವೀರಶೈವ ಮಂಡಲಿಯವರು ನಾಳೆ ದಿನ ಪ್ರಭುದೇವಾ ಟಾಕೀಸ್ ಸರ್ಕಲ್ ಬಳಿ ಸಾ॥ ತಿಮ್ಮಶ್ಯಾಣಿಯವರ ಛತ್ರದಲ್ಲಿ ಶ್ರೀ ಬಸವೇಶ್ವರರ ಜಯಂತ್ಯುತ್ಸವವನ್ನು ನೆರವೇರಿಸುವರು ಬೆಳಿಗ್ಗೆ ಅಭಿಷೇಕಾದಿಗಳೂ, ಸಂಜೆ ೬ ಗಂಟೆಗೆ ಶ್ರೀಮಾನ್ ಮುಡಾರ್‌ಷರ ಪಿ. ಎ. ಡಿ. ಸಿ ಯವರಾದ ಶ್ರೀ ಹೆಚ್. ಎಲ್ ದೇಸಾಯಿ ಅರಸಿನವರ ಅಧ್ಯಕ್ಷತೆಯಲ್ಲಿ ಸಭೆಯೂ ನಡೆಯುವುವು ಶ್ರೀ ಮಾಯಿಗ ಗೌಡರು ಬಸವೇಶ್ವರ ಜನನದ ಪುರಾಣವನ್ನು ವಾಚನ ಮಾಡುವರು. ರಾತ್ರಿ ೯॥ ಗಂಟೆಗೆ ಶ್ರೀ ಬಿ ಎಂ ಬಸವಣ್ಣ ಮಿತ್ರ ಮಂಡಲಿಯವರ ಆರ್ಕೆಸ್ಟ್ರಾದಿಂದ ಕೂಡಿದ ಭಜನೆ ಗಾನವೂ ಏರ್ಪಾಡಾಗಿದೆ.

ಉಪನ್ಯಾಸ

ಶ್ರೀ ಶಂಕರ ಜಯಂತೀ ಮಹೋತ್ಸವದ ಅಂಗವಾಗಿ ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಾಯಂಕಾಲ ೬ ಗಂಟೆಗೆ ಮಹಾ ವಿದ್ವಾನ್ ವೈ. ಚಂದ್ರಶೇಖರ ಶಾಸ್ತ್ರಿಗಳು "ಸನ್ಯಾಸಿಗಳು" ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಶ್ರೀ ಬದರೀ ಕ್ಷೇತ್ರದಲ್ಲಿ ಅಖಂಡ ಜ್ಯೋತಿ ದರ್ಶನ

ಯಾತ್ರಾರ್ಥಿಗಳ ಅಪೂರ್ವ ಸಂದಣಿ

ಸ್ಪ... ...ಂ...] ...ತ ...ರ...

ಚೇ...

...ಂದ ವ... ...ಟ್ಟಿ... ಗಿದ್ದ ...ನ...

...ರಿ ನಾ...ರಾ...ಣ ...ದೇವ... ...ದ ...ಗಿ

ಸ್ಸು ಈ ದಿನ ಬೆಳಿಗ್ಗೆ ಯಾತ್ರಾರ್ಥಿಗಳಿಗಾಗಿ ತೆರೆಯಲಾಯಿತು ಭಾರತದ ನಾನಾ ಭಾಗಗಳಿಂದ ಸುಮಾರು ಹತ್ತು ಸಾವಿರ ಮಂದಿ ಯಾತ್ರಿಕರು ಇಲ್ಲಿ ನೆರೆದು ಶ್ರೀ ಬದರೀ ನಾರಾಯಣನ ಮತ್ತು ಅಖಂಡ ಜ್ಯೋತಿಯ ದರ್ಶನ ಪಡೆದರು ಈ ಸಾರಿ ಸೇರಿದ್ದಷ್ಟು ಯಾತ್ರಿಕರು ಹಿಂದೆಂದೂ ಸೇರಿರಲಿಲ್ಲವೆಂದು ಹೇಳಲಾಗುತ್ತಿದೆ. ಯಾತ್ರಾರ್ಥಿಗಳ ಪ್ರಯಾಣಕ್ಕಾಗಿ ಬಸ್ಸು ಮತ್ತು ರಸ್ತೆಯ ಸೌಲಭ್ಯಗಳನ್ನು ಹೆಚ್ಚಿಸಿ ಸುವ್ಯವಸ್ಥೆಗೊಳಿಸಲಾಗಿದೆ ಮಂಜು ಬೀಳುವುದೂ ಮತ್ತು ಛಳಿಯೂ ಬಹು ಮಟ್ಟಿಗೆ ಕಡಿಮೆಯಾಗಿದೆ.

ಮುಖರ್ಜಿ ದಸ್ತಗಿರಿ ವಿರುದ್ಧ ದೆಹಲಿಯಲ್ಲಿ ಪ್ರದರ್ಶನ

ಭಾರತೀಯ ಜನಸಂಘದ ಅಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿ ಮತ್ತು ಇನ್ನಿಬ್ಬರನ್ನು ಕಾಶ್ಮೀರದಲ್ಲಿ ದಸ್ತಗಿರಿ ಮಾಡಿರುವ ಬಗ್ಗೆ ಪ್ರತಿಭಟನೆ ಸೂಚಿಸಲು ನೆನ್ನೆ ದೆಹಲಿಯಲ್ಲಿ ಬಹಿರಂಗ ಸಭೆಯೊಂದು ನಡೆದು, ಜನರು ...ಧ್ವಜಗಳೊಡನೆ ಮೆರವಣಿಗೆ ನಡೆಸುತ್ತಿದ್ದಾಗ, ಅವರ ಬಗ್ಗೆ ...ಧಾಳಿ... ...ವುದರಿಂದಾಗ ...ನ್ನು ...ಪೊಲೀಸರು ಪ್ರಯತ್ನಿಸಲು, ದ್ರಾವಕದ ಸೀಸೆಗಳು, ಕಲ್ಲು ಮುಂತಾದವನ್ನು ಜನರು ಪ್ರಯೋಗಿಸಿದರೆಂದೂ ಆಗ ಪೊಲೀಸರು ಲಾಠಿ ಪ್ರಹಾರ ಮಾಡಿದರೆಂದೂ ವರದಿಯಾಗಿದೆ ೧೭ ಮಹಿಳೆಯರೂ ಸೇರಿ ೭೫ ಜನರ ದಸ್ತಗಿರಿಯಾಗಿದೆ. ಡಾ|| ಮುಖರ್ಜಿಯವರನ್ನು ಶ್ರೀನಗರಕ್ಕೆ ಕರೆತರಲಾಗಿದೆ. ಅವರಿಗೂ, ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರಿಗೂ ಭೇಟಿ ನಡೆಯಲಿರುವುದೆಂದು ಗೊತ್ತಾಗಿದೆ

ಕನ್ಯಾಪಹಾರಕ್ಕಾಗಿ ದಸ್ತಗಿರಿ

ಚನ್ನರಾಯಪಟ್ಟಣದ ನಾಗಮ್ಮ ಎಂಬ ೧೪ ವರ್ಷದ ಜೈನ ಬಾಲಕಿಯನ್ನು ಅಪಹರಿಸಿದ ಸಂಬಂಧವಾಗಿ ರಾಂ ಸಿಂಗ್ ಮತ್ತು ಇನ್ನಿಬ್ಬರನ್ನು ದಸ್ತಗಿರಿ ಮಾಡಲಾಗಿದೆ. ಹುಡುಗಿಯೂ ಪತ್ತೆಯಾಗಿರುತ್ತಾಳೆ. ಹುಡುಗಿಯು ಬಾಯಿಗೆ ಬಟ್ಟೆ ತುರುಕಲಾಗಿತ್ತೆಂದೂ, ಹಾಸನಪುರದ ತಾಲ್ಲೂಕು ಕಛೇರಿಯ ಪೊಲೀಸರು ಅವರನ್ನು ಪತ್ತೆ ಹಚ್ಚಿದರೆಂದೂ ತಿಳಿದುಬಂದಿದೆ

ಮೈಸೂರು ತಾಲ್ಲೂಕು ಅಮಲ್ದಾರರ ವರ್ಗ

ಮೈಸೂರು ತಾಲ್ಲೂಕು ಅಮಲ್ದಾರರಾದ ಶ್ರೀ ಎಚ್ ಕಲ್ಲಪ್ಪನವರನ್ನು ರಾಜಧಾನಿಯ ಛಲವಾಂಬ ಮ.ತ್ರ ಶ್ರೀ ಕೃಷ್ಣರಾಜೇಂದ್ರ ...ರ್ಪತ್ರೆಗೆ ...ದ್ಯವರ್ತಿಯಾಗಿ ವರ್ಗಾಯಿಸಲಾಗಿದೆ ಅಲ್ಲಿದ್ದ ಶ್ರೀ ಬಿ ಎನ್ ಕೃಷ್ಣಪ್ಪನವರನ್ನು ಹುಂಗಾಡಿ ಅಸಿಸ್ಟೆಂಟ್ ಕಮೀಷನರಾಗಿ ನೇಮಕ ಮಾಡಲಾಗಿದೆ.

ಜಿಲ್ಲಾ ಸಹಕಾರ ಸಮ್ಮೇಳನ

ಮೈಸೂರು ೧೩
ಮೈಸೂರು ಜಿಲ್ಲೆಯ ಐದನೆಯ ಸಹಕಾರ ಸಮ್ಮೇಳನದ ಉದ್ಘಾಟನೋತ್ಸವವನ್ನು ರಾಜಧಾನಿಯ ಚಾಮರಾಜ ರಸ್ತೆಯಲ್ಲಿರುವ ಶ್ರೀ ನರಸಿಂಹರಾಜ ಸ್ಮಾರಕ ಭವನದಲ್ಲಿ ಇದೇ ೧೭ ನೇ ತಾ|| ಭಾನುವಾರ ಸಂಜೆ ೬-೩೦ ಘಂಟೆಗೆ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆರವೇರಿಸುವರು ಹಿರಿಯ ಸಹಕಾರಿಗಳೂ, ಶಾರದಾ ವಿಲಾಸ ಕಾಲೇಜಿನ ಪ್ರಿನ್ಸಿಪಾಲರೂ ಆಗಿರುವ ಶ್ರೀ ಎಂ ಎಸ್ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಸಮ್ಮೇಳನವು ಇದೇ ೧೮ ನೇ ತಾ|| ಸೋಮವಾರ ಬೆಳಿಗ್ಗೆ ೯ ಘಂಟೆಗೆ ಪುನಃ ಸೇರಿ ವಿಷಯಗಳ ಚರ್ಚೆಯನ್ನು ಮುಂದುವರಿಸುವುದು ಮೈಸೂರು ನಗರ ಮತ್ತು ಜಿಲ್ಲೆಯ ಸಹಕಾರಿಗಳೆಲ್ಲರಿಗೂ ಮತ್ತು ಸಹಕಾರ ಇಲಾಖೆ ಮತ್ತು ಸೊಸೈಟಿಗಳ ಅಧಿಕಾರಿ ವರ್ಗದವರಿಗೂ ಸ್ವಾಗತವಿದೆ ಆಹ್ವಾನ ಪತ್ರಿಕೆಗಳನ್ನು ಎಲ್ಲರಿಗೂ ಕಳುಹಿಸಲಾಗಿದೆ ಅಕಸ್ಮಾತ್ ಯಾರಿಗಾದರೂ ಆಹ್ವಾನ ಪತ್ರಿಕೆ ತಲುಪದೆ ಇದ್ದರೂ ಇದನ್ನೇ ಆಹ್ವಾನವೆಂದು ಭಾವಿಸಿ ಸಮ್ಮೇಳನಕ್ಕೆ ದಯಮಾಡಿಸಬೇಕಾಗಿ ಗೌರವ ಕಾರ್ಯದರ್ಶಿಗಳಾದ ಶ್ರೀಗಳು ಟಿ ಗೋಪಾಲಕೃಷ್ಣಶೆಟ್ಟಿ ಮತ್ತು ಎ ಚನ್ನಸ್ವಾಮಿ ಶೆಟ್ಟಿಯವರು ಪ್ರಾರ್ಥಿಸುತ್ತಾರೆ

ವೈ ಶ್ಯ ಅ ನಾ ಥಾ ಲ ಯ

[illegible] ಶ್ರೀ [illegible] ರಸ್ತೆಯ [illegible] ಸನಾತನ [illegible] ವೈಶ್ಯ [illegible] ಇದೇ ೨೮ ನೇ ತಾ|| [illegible] ವುದು ಅದಕ್ಕೆ ಸೇರಬಯಸುವ [illegible] ವಿದ್ಯಾರ್ಥಿಗಳು [illegible] ನಮೂನೆಗಳಲ್ಲಿ ಅರ್ಜಿಯನ್ನು ಈ ತಿಂಗಳು ೧೮ ರೊಳಗೆ ಕೊಡಬೇಕು ಅರ್ಜಿ ನಮೂನೆಗಳು ದೇವಸ್ಥಾನದ ಕಛೇರಿಯಲ್ಲಿ ದೊರೆಯುವುವು ಎಂದು ತಿಳಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಕರ್ಣಾಟಕ ಪ್ರಾಂತ ರಚನೆಗೆ ವಿರೋಧ

ಎಚ್ ಸಿ ನಾಗಯ್ಯರೆಡ್ಡಿಯವರ ಹೇಳಿಕೆ

ಬೆಂಗಳೂರು ೧೩
ಕೇಂದ್ರ ಶಾಸನ ಸಭೆಯ ಸದಸ್ಯರೂ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಶ್ರೀ ಎಚ್ ಸಿ ನಾಗಯ್ಯರೆಡ್ಡಿಯವರು ಹೇಳಿಕೆಯೊಂದನ್ನಿತ್ತು ಕರ್ಣಾಟಕ ಏಕೀಕರಣಕ್ಕೆ ಮೈಸೂರು ಸಂಸ್ಥಾನದಲ್ಲಿ ತೀವ್ರ ರೀತಿಯ ವಿರೋಧವಿರುವುದಾಗಿ ಹೇಳುತ್ತಾರೆ ಮೈಸೂರನ್ನು ಈಗ ಇರುವಂತೆಯೇ ಇರಗೊಡಬೇಕೆಂದು ಎಲ್ಲರ ಅಭಿಮತವಾಗಿರುವುದೆಂದೂ ಮೈಸೂರಿನ ಅಸ್ತಿತ್ವವನ್ನು ರಕ್ಷಿಸಿ ಉಳಿಸಿಕೊಂಡು ಬರುವುದೇ ಪ್ರತಿಯೊಬ್ಬರ ಆಶಯವಾಗಿರುವುದೆಂದೂ ಅವರು ಹೇಳಿ, [illegible] ಗಂಟೆಗಳೊಳಗೆ ಕರ್ಣಾಟಕ ಪ್ರಾಂತದ ರಚನೆಯು ಸಾಧ್ಯವೆಂದು ವ್ಯಕ್ತಪಡಿಸಿ ಶ್ರೀ ಕೆ ಹನುಮಂತಯ್ಯನವರು ಹೇಳಿರುವುದನ್ನು ಟೀಕಿಸಿ, ಇದರಿಂದ ಶ್ರೀ ಹನುಮಂತಯ್ಯನವರಿಗೆ ತಿಳಿಯಾದ ದೃಷ್ಟಿ ಇಲ್ಲವೆಂದು ವ್ಯಕ್ತವಾಗುವುದೆಂದೂ ತಿಳಿವಳಿಕೆಯಿಲ್ಲದೆ ಅಧಿಕಾರವನ್ನು ಹೊಂದುವುದರಿಂದ ದೇಶವನ್ನು ನಾಶಕ್ಕೆ ಕರೆದೊಯ್ದಂತಾಗುವುದೆಂದೂ ಹೇಳಿರುತ್ತಾರೆ

ಕರ್ಣಾಟಕ ಏಕೀಕರಣಕ್ಕೆ ಮೈಸೂರಿನವರು ವಿರೋಧವಿಲ್ಲವೆಂದು ಹೇಳುವುದು ಅನೃತ [illegible] ಜವಾಬ್ದಾರಿಯಿಂದ ಕೆಲವು [illegible] ಗಳ ಹಿಂದೆ ಶಾಸನ ಸಭೆಯ [illegible] ಸದಸ್ಯರೂ ಈ ಬಗ್ಗೆ ವಿರೋಧ ಸೂಚಕ [illegible] ನೆಹರೂರವರಿಗೆ ತಿಳಿಸಿದ್ದರೆಂದೂ, ಕರ್ಣಾಟಕದ ಏಕತೆಗೆ ಮೈಸೂರಿನವರ ವಿರೋಧವಿರುವುದಾಗಿ ನೆಹರೂರವರು ಹೇಳಿರುವುದು ಸಹಜವೆಂದೂ, ಶ್ರೀ ಹನುಮಂತಯ್ಯನವರ ಇತ್ತೀಚಿನ ಹೇಳಿಕೆಯು ನೆಹರೂರವರಿಗೆ ಸವಾಲು ಹಾಕಿದಂತಾಗಿದೆಯೆಂದೂ, ಭಾರತ ಸರ್ಕಾರ ಮತ್ತು ರಾಷ್ಟ್ರೀಯ ಮುಖಂಡರನ್ನು ಟೀಕಿಸುವುದರಿಂದ ತಮ್ಮ ಸ್ಥಾನವು ಇನ್ನೂ ಬಲವಾಗುವುದೆಂದು ಮುಖ್ಯ ಮಂತ್ರಿಯವರು ಭಾವಿಸಿರಬಹುದೆಂದೂ ಶ್ರೀ ನಾಗಯ್ಯ ರೆಡ್ಡಿಯವರು ತಿಳಿಸಿರುವರು

ಭಾರತದ ನೌಕೆಗೆ ಪ್ರಥಮ ವಿಮಾನ ಕೇಂದ್ರ

ಭಾರತದ ನೌಕೆಗಳ ರಕ್ಷಣಾರ್ಥವಾಗಿ ನೌಕೆಗೆ ಸೇರಿದ ವಿಮಾನ ಬಲದ ಪ್ರಥಮ ಪಡೆಗನ್ನು ಮೊನ್ನೆ ರಕ್ಷಣಾ ಮಂತ್ರಿ ಮಹಾವೀರ ತ್ಯಾಗಿಯವರು ಸಮುದ್ರಕ್ಕೆ ಬಿಟ್ಟರು ಅದಕ್ಕೆ ಐ ಎನ್. ಎಸ್ ಗರುಡ ಎಂದು ಹೆಸರಿಡಲಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	[illegible]
ಹೊಂಗೇಬೀಜ	[illegible]	[illegible]
ಹುರುಳಿ	[illegible]	[illegible]
ಹುಚ್ಚೆಳ್ಳು	[illegible]	
ಹಲಸಂದೆ	[illegible]	[illegible]
ಹೆಸರು	[illegible]	[illegible]
ಎಳ್ಳು	[illegible]	
ಮೆಣಸಿನ		
ಕಾಯಿ ಕೊಬ್ಬರಿ	[illegible]	[illegible]
ಹುಣಸೇಹಣ್ಣು	[illegible]	[illegible]
ಶೇಂಗೇಕಾಯಿ	[illegible]	[illegible]
ತೆಂಗಿನಕಾಯಿ		
೧,೦೦೦ಕ್ಕೆ	[illegible]	[illegible]

ಗುಂಡ್ಲುಪೇಟೆ ಬೀಡಿ ಕೆಲಸಗಾರರ ಸಂಘದ ಸ್ಥಾಪನೆ

ಗುಂಡ್ಲುಪೇಟೆಯ ಮುಸಾಫಿರ್ ಖಾನೆ ಮೈದಾನದಲ್ಲಿ ಕಳೆದ ಶುಕ್ರವಾರ ಮೈಸೂರಿನ ಶ್ರೀ ಎ ಸತ್ತಾರ್ ಸೇಟ್ ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಬೀಡಿ ಕಾರ್ಮಿಕರ ಬಹಿರಂಗ ಸಭೆಯು ನಡೆದು ತಾಲ್ಲೂಕು ಬೀಡಿ ಕೆಲಸಗಾರರ ಸಂಘವೊಂದನ್ನು ಸ್ಥಾಪಿಸಲಾಯಿತು ಸಂಘದ ಅಧಿಕಾರಿ ವರ್ಗದವರ ಚುನಾವಣೆಗಳೂ ನಡೆದುವು

SHI GANESHA
TALKILS
Grand Release
On 15-5-53
Universal s Spectacular Picture
In Teclnicolor
FLAME OF ARABY
Starring — Jess Ch n ll r
Maurcen O H ira and
Susin Cabot

From 22 5-53
Columb is
THE JUNGLE
Hav ng Mysore and Karaj ir as
The Locale of tl e Picture

15-5-53 ರಿಂದ .: ಅಮೋಘ ಪ್ರಾರಂಭ

[illegible]

ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ

ಪ್ರಕಾಶ್ ರವರ ತಮಿಳು ಚಿತ್ರ

ಪೆಟ್ರಿ ತಾ ಯ್

ಪಾತ್ರ ಜಿ ವರಲಕ್ಷ್ಮಿ, ನಾಗೇಶ್ವರರಾವ್, ವಸಂತ,
ನಂಬಿಯಾರ್, ಚೆಲ್ಲಂ

ಪ್ರತಿಯೊಂದು ಸಂಸಾರವೂ ನೋಡಬೇಕಾದ ಮಹೋನ್ನತ ಚಿತ್ರ

[A PRAKASH RLI TASE

SRI GAYATHRI TALKIES
To-day & Tomorrow Only
ಈ ದಿನ ಮತ್ತು ನಾಳೆ ಮಾತ್ರ

Edited, Printed and Published by A. R Nagarajan at Sadhvi Press, D Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೪-೫-೧೯೫೩ [ಸಂಚಿಕೆ ೨೩೩

ಆಂಧ್ರದ ಹಳ್ಳಿಗೆ ಬೆಂಕಿ, ೮೦೦ ಮನೆಗಳು ಭಸ್ಮ

ಲಾಹೋರಿನ ಮುಸಲ್ಮಾನ ಪ್ರಮುಖರ ಫಾಸಿ ರದ್ದು

ಲಾಹೋರಿನಲ್ಲಿ ಅಹಮದೀಯ ಮುಸಲ್ಮಾನರ ವಿರೋಧವಾಗಿ ನಡೆದ ಗಲಭೆ ಸಂಬಂಧದಲ್ಲಿ ವಿಚಾರಣೆಗೆ ಗುರಿಯಾಗಿದ್ದ ಜಮಾಯತ್ ಉಲ್ ಇಸ್ಲಾಮ್ ಪಕ್ಷದ ಮುಖಂಡರೂ, ಮುಸ್ಲಿಮರ ಗುರುಗಳೂ ಆದ ಮೌಲ್ವಿ ಮೌದುದ್ದೀನ್ ರವರನ್ನು ಮೊನ್ನೆ ಮಿಲಿಟರಿ ನ್ಯಾಯಮಂಡಲವು ಮರಣ ದಂಡನೆಗೆ ಗುರಿಪಡಿಸಿದ್ದಿತು. ಈ ಹಿಂದೆ ಶಾಸನ ಸಭಾ ಸದಸ್ಯರೊಬ್ಬರಿಗೆ ಇದೇ ಕಾರಣಕ್ಕಾಗಿ ಮರಣ ದಂಡನೆ ವಿಧಿಸಲಾಗಿದ್ದಿತು. ಅಲ್ಲಿನ ಮಾರ್ಷಲ್ ಲಾ ಆಡಳಿತಾಧಿಕಾರಿಯು ಅವರಿಬ್ಬರ ಮರಣ ದಂಡನೆಯನ್ನು ರದ್ದುಮಾಡಿ ೧೪ ವರ್ಷ ಸಜಾ ಶಿಕ್ಷೆ ವಿಧಿಸಿರುವರು.

ಮುಷ್ಕರನಡೆಸಲು ಬ್ಯಾಂಕು ನೌಕರರ ಬ್ಯಾಲೆಟ್

ಭಾರತಾದ್ಯಂತ ಬ್ಯಾಂಕುಗಳ ನೌಕರರು ಪ್ರತಿಭಟನಾ ಮುಷ್ಕರ ಕೈಗೊಳ್ಳುವ ಬಗ್ಗೆ ಅವರುಗಳ ಸಂಘದ ಕೇಂದ್ರ ಸಮಿತಿಯು ಇದೇ ತಿಂಗಳು ೩೧ ನೇ ತಾ|| ಬ್ಯಾಲೆಟ್ ತೆಗೆದುಕೊಳ್ಳಲು ನಿರ್ಧರಿಸಿರುವುದು. ಪಂಚಾಪಕೇಶ ಶಾಸ್ತ್ರಿ ಸಮಿತಿಯವರ ವರದಿ ಬಗ್ಗೆ ಅವರು ಅತೃಪ್ತಿ ಪ್ರಕಟಿಸಲು ಈ ಕ್ರಮ ಕೈಗೊಳ್ಳಲಿರುವರು.

ಶಂಕರ ಜಯಂತಿ

ರಾಜಧಾನಿಯ ಚಾಮುಂಡಿ ಮೊಹಲ್ಲಾದಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತ್ಯುತ್ಸವದ ಅಂಗವಾಗಿ ಇಂದಿನಿಂದ ಇದೇ ೨೫ ನೇ ತಾರೀಕಿನ ವರೆಗೆ ಪ್ರತಿ ದಿನ ಬೆಳಿಗ್ಗೆ ಅಭಿಷೇಕ, ಅರ್ಚನೆ ಮಹಾ ಮಂಗಳಾರತಿಗಳೂ ಇದೇ ೧೬ ರ ವರೆಗೆ, ಬೆಳಿಗ್ಗೆ ೮ ರಿಂದ ೯ ರ ವರೆಗೆ ವಿ|| ಪಂಡಿತ ಚಂದ್ರಶೇಖರ ಭಟ್ಟರಿಂದ ಭಾಷ್ಯ ಪ್ರವಚನ, ಸಂಜೆ ೬ ಘಂಟೆಗೆ ಶಂಕರ ವಿಜಯ ಕಥಾನುವಾದವೂ ಜರುಗುವವು. ಈ ರಾತ್ರಿ ೮ ಘಂಟೆಗೆ ವೇ|| ಬ್ರ|| ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ ದಾನಶೂರ ಕರ್ಣ ಎಂಬ ಕಥೆಯೂ ಏರ್ಪಾಡಾಗಿದೆ.

ತಾಲ್ಲೂಕು ಕಾಂಗ್ರೆಸ್ಸಿಗೆ ಅವಿರೋಧ ಆಯ್ಕೆ

ಚಾಮರಾಜನಗರ ೧೩

ಈ ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆ ಸಂಬಂಧದಲ್ಲಿ ಕೆಳಗೆ ಕಂಡ ಹದಿನೈದು ಜನರು ಮಾತ್ರ ಉಮೇದುವಾರಿಕೆ ಅರ್ಜಿ ಸಲ್ಲಿಸಿರುವುದರಿಂದ ಅವರೆಲ್ಲರೂ ಅವಿರೋಧವಾಗಿ ಆರಿಸಲ್ಪಟ್ಟಿರುವರೆಂದು ತಾಲ್ಲೂಕು ಕಾಂಗ್ರೆಸ್ಸಿನ ಜಂಟಿ ಕಾರ್ಯದರ್ಶಿ ಶ್ರೀ ಎನ್ ನಂಜಪ್ಪಶೆಟ್ಟರು ತಿಳಿಸುತ್ತಾರೆ.

ಶ್ರೀಗಳಾದ ಟಿ ವೆಂಕಟಸುಬ್ಬಪ್ಪ, ಎಸ್ ಆರ್ ಶಿವಣ್ಣ, ಎಂ ಮ[illegible]ಪ್ಪ, ಕೆ ಎಂ ಪುಟ್ಟಮಲ್ಲಪ್ಪ, ಎಂ [illegible]ರಿಯಪ್ಪ, ತಿಪ್ಪುಲಾಂಕಪ್ಪ, ಎನ್ ಪುಟ್ಟನಂಜಪ್ಪ, ಎಂ ರಾಮೇಗೌಡ, ಡಿ ಜೆ ಶಂಕರಪ್ಪ, ಎ ಎಂ ಮಾದಪ್ಪ, ಟಿ ವೆಂಕಟಸುಬ್ಬಶೆಟ್ಟಿ, ವಿ ವೆಂಕಟಸುಬ್ಬಪ್ಪ, ಆರ್ ಎಂ ಸಿದ್ದಯ್ಯ, ಎನ್ ನಂಜುಂಡಶೆಟ್ಟಿ ಮತ್ತು ಶಿವಪ್ಪ

ಬೆಂಕಿ ಅಪಘಾತದಲ್ಲಿ ೮೦೦ ಮನೆಗಳು ಭಸ್ಮ

ವಿಜಯವಾಡ ಜಿಲ್ಲೆಯ ಗನ್ನಾವರಂ ತಾಲ್ಲೂಕಿನ ತೆಲಪ್ರೋಲು ಎಂಬ ಹಳ್ಳಿಯಲ್ಲಿ ಮೊನ್ನೆ ಒಂದು ಗುಡಿಸಿಲಿಗೆ ಬೆಂಕಿ ಬಿದ್ದು, ಅದರ ಜ್ವಾಲೆಗಳು ಹರಡಿ ೮೦೦ ಮನೆಗಳು ಸುಟ್ಟುಹೋದುವೆಂದೂ, ಅನೇಕ ದನಗಳ ಕೊಟ್ಟಿಗೆಗಳೂ ಭತ್ತದ ಕಣಜಗಳೂ ಹುಲ್ಲು ಮೆದೆಗಳೂ ನಾಶವಾದುವೆಂದೂ ವರದಿಯಾಗಿದೆ. ಒಬ್ಬ ವೃದ್ಧನು ಮಡಿದಿರುವನು ಮತ್ತು ಅನೇಕ ಜನ ಪಶುಗಳು ಪರಿತ್ಯಕ್ತವಾಗಿವೆ. ಹಲವು ಲಕ್ಷ ರೂ ನಷ್ಟು ಆಸ್ತಿ ನಷ್ಟವಾಗಿದೆ. ನಾಲ್ಕು ಊರುಗಳಿಂದ ಅಗ್ನಿ ಶಾಮಕ ಯಂತ್ರಗಳು ಬಂದು ಬೆಂಕಿಯನ್ನು ಆರಿಸುವ ಕೆಲಸದಲ್ಲಿ ತೊಡಗಿವೆ. ನೆಲ್ಲೂರಿನಲ್ಲಿ ಮೊನ್ನೆ ಸಂಜೆ ಭಾರಿ ಬೆಂಕಿಯುಂಟಾಗಿ ೧೦೦ ಗುಡಿಸಿಲುಗಳು ಸುಟ್ಟುಹೋಗಿ ೩ ಲಕ್ಷ ರೂ ಆಸ್ತಿ ನಷ್ಟವಾಗಿರುತ್ತದೆ.

ಕಬ್ಬಿಣದ ಕಂಬ ಬಿದ್ದು ಸರ್ಕಾರಿ ನೌಕರರ ಮರಣ

ಮದರಾಸಿನ ಅಕೌಂಟೆಂಟ್ ಜನರಲ್ಲರ ಕಛೇರಿಯ ಸೂಪರಿಂಟೆಂಡೆಂಟರಾದ ಶ್ರೀ ರಾಮ ಚಂದ್ರರಾವ್ ನಾಯ್ಡು ಎಂಬುವರು ಮೊನ್ನೆ ಸಾಯಂಕಾಲ ಅಲ್ಲಿನ ಬ್ಯಾರಕ್ಸ್ ರಸ್ತೆಯಲ್ಲಿ ಹೋಗುತ್ತಿದ್ದಾಗ ೨೦ ಅಡಿ ಉದ್ದದ ಒಂದು ಕಬ್ಬಿಣದ ಕಂಬವು ಅವರ ಮೇಲೆ ಬೀಳಲು ತೀವ್ರ ಗಾಯವಾಗಿ, ಆಸ್ಪತ್ರೆಗೆ ಸೇರಿಸಲ್ಪಟ್ಟು ಅಲ್ಲಿ ಮೃತಪಟ್ಟರೆಂದು ತಿಳಿದು ಬಂದಿದೆ.

ನಂಜನಗೂಡು ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ

ನಂಜನಗೂಡಿನಲ್ಲಿರುವ ಕನಕದಾಸ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವವೂ ತಾಲ್ಲೂಕು ಕುರುಬರ ವಿದ್ಯಾರ್ಥಿನಿಲಯ ಸಂಘದ ಐದನೇ ವಾರ್ಷಿಕೋತ್ಸವವೂ ನಾಳೆ ಸಂಜೆ ೫ ಗಂಟೆಗೆ ನಂಜನಗೂಡಿನಲ್ಲಿ ನೆರವೇರುವುವು. ಧರ್ಮಪ್ರಕಾಶ ಶ್ರೀ ಬಿ ಪಿ ಸಂದಿಕರು ಅಧ್ಯಕ್ಷತೆ ವಹಿಸುವರು. ಶ್ರೀ ಟಿ ಚೌಡಯ್ಯನವರ ಪಿಟೀಲು ವಾದನವೂ ಶ್ರೀ ಸ್ವಾಮಯ್ಯನವರ ಮೃದಂಗದ ಸಮೇತ ನಡೆಯುವುದು. ಶ್ರೀ ಬಿ ಶಿವಮೂರ್ತಿಶಾಸ್ತ್ರಿಯವರ ವಚನ ಗಾನವೂ ಇರುವುದು. ಸರ್ವರಿಗೂ ಆಹ್ವಾನವುಂಟು.

ಸಾರಾಯಿಅಂಗಡಿ ನಡೆಸಲು ಸರ್ಕಾರದ ನಿರ್ಧಾರ

ಬೆಂಗಳೂರು ೧೪

ಬೆಂಗಳೂರು ನಗರ ಸಿವಿಲ್ ಪ್ರದೇಶ ಮತ್ತು ಜಿಲ್ಲೆಗಳಲ್ಲಿರುವ ಒಟ್ಟು ೧೪೮ ಸಾರಾಯಿ ಅಂಗಡಿಗಳನ್ನು ತಾನೇ ನಡೆಸಲು ಸರ್ಕಾರದವರು ನಿರ್ಧರಿಸಿರುವರೆಂದು ಗೊತ್ತಾಗಿದೆ. ಈ ಪ್ರದೇಶಗಳ ಬಾಬಿಗೆ ಇತ್ತೀಚೆಗೆ ನಡೆದ ಹರಾಜಿನಲ್ಲಿ ೧೪ ಲಕ್ಷರೂ ಬಿಡ್ಡು ಬಿದ್ದಿದ್ದು ಅದನ್ನು ಸರ್ಕಾರದವರು ನಿರಾಕರಿಸಿರುತ್ತಾರೆ. ಕೇಂದ್ರ ಬಾಬಿನ ಬಿಡ್ಡನ್ನು ಸಹ ತಿರಸ್ಕರಿಸಲಾಗಿದೆ. ಈ ಉದ್ಯಮದಿಂದ ಸರ್ಕಾರಕ್ಕೆ ವರ್ಷಕ್ಕೆ ೨೫ ಲಕ್ಷ ರೂ ವರಮಾನವೂ ಸುಂಕ ಮತ್ತು ಸೆಸ್ಸುಗಳಿಂದ ೧೫ ಲಕ್ಷ ರೂ ಆದಾಯವೂ ಬರುವುದೆಂದು ಹೇಳಲಾಗಿದೆ.

ವಿಶ್ವ ಸಂಸ್ಥೆಯ ಸಲಹೆಗೆ ಕಮ್ಯೂನಿಸ್ಟರ ನಿರಾಕರಣೆ

ಸ್ವದೇಶಕ್ಕೆ ಮರಳಲಿಚ್ಛಿಸದ ಯುದ್ಧ ಖೈದಿಗಳ ಮೇಲ್ವಿಚಾರಣೆ ನಡೆಸಲು ಐದು ತಟಸ್ಥ ರಾಷ್ಟ್ರಗಳ ಸಮಿತಿಯನ್ನು ರಚಿಸುವಂತೆ ಕಮ್ಯೂನಿಸ್ಟರು ಮಾಡಿದ್ದ ಸಲಹೆಯನ್ನು ವಿಶ್ವ ಸಂಸ್ಥೆಯು ಒಪ್ಪಿಕೊಂಡಿರುತ್ತದೆ. ಈ ಕಮಿಷನ್ನಿನ ವಶಕ್ಕೆ ಕೊರಿಯನ್ ಖೈದಿಗಳು ಒಳಪಡಕೂಡದೆಂದೂ ಚೀನಾ ಖೈದಿಗಳು ಸೇರಬೇಕೆಂದೂ ವಿಶ್ವ ಸಂಸ್ಥೆಯು ಸೂಚಿಸಿರುವುದಲ್ಲದೆ, ಯುದ್ಧ ನಿಂತ ದಿನದಿಂದ ಕೊರಿಯನ್ ಖೈದಿಗಳನ್ನು ಸ್ವತಂತ್ರರೆಂದು ಪರಿಗಣಿಸಿ ನಾಗರಿಕ ಪ್ರಜೆಗಳೆಂದು ಭಾವಿಸಬೇಕೆಂದೂ ತಟಸ್ಥ ಸಮಿತಿಗೆ ಭಾರತದ ಪ್ರತಿನಿಧಿಯು ಅಧ್ಯಕ್ಷರಾಗಿದ್ದು ಯುದ್ಧ ಖೈದಿಗಳ ಉಸ್ತುವಾರಿಗೆ ಭಾರತದ ಸೈನ್ಯ ಮತ್ತು ಅಧಿಕಾರಿಗಳನ್ನು ಮಾತ್ರ ಉಪಯೋಗಿಸಿಕೊಳ್ಳಬೇಕೆಂದೂ ವಿಶ್ವ ಸಂಸ್ಥೆಯವರು ಸೂಚಿಸಿದ್ದರು. ಈ ಸಲಹೆಯನ್ನು ಕಮ್ಯೂನಿಸ್ಟರು ಈಗ ನಿರಾಕರಿಸಿರುವರು.

ಬಸವ ಜಯಂತಿ ಕಾರ್ಯಕ್ರಮ

ರಾಜಧಾನಿಯ ಖಿಲ್ಲೆಮೊಹಲ್ಲಾ ಸೇವಾ ಮಂಡಲಿಯವರು ಬಸವಣ್ಣನವರ ಜಯಂತಿಯನ್ನು ಈ ದಿನದಲಾಗಾಯ್ತು ೧೮ನೇ ತಾ|| ಪರ್ಯಂತ ನಡೆಸುವರು. ಪ್ರತಿನಿತ್ಯವೂ ಸಂಜೆ ೭|| ಗಂಟೆಗೆ ಸಂಗೀತ, ಕಥೆ, ಪ್ರವಚನಗಳು ನಡೆಯುವುವು. ೨೪ ನೇ ತಾ|| ಬಡಬಗ್ಗರಿಗೆ ಅನ್ನ ಸಂತರ್ಪಣೆಯು ಏರ್ಪಾಡಾಗಿದೆ.

ಪೌರಸಭಾ ವಕೀಲರಾಗಿ ಎಂ ಆರ್. ನರಸಿಂಹ ಮೂರ್ತಿ

ಮೈಸೂರು ೧೩

ನಗರದ ಪೌರಸಭೆಯ ವಿಶೇಷ ಅಧಿವೇಶನವು ನೆನ್ನೆ ನಡೆದು, ಶ್ರೀ ಎಂ ಆರ್ ನರಸಿಂಹಮೂರ್ತಿಯವರನ್ನು ಪೌರಸಭಾ ಅಡ್ವೊಕೇಟರಾಗಿ ನೇಮಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

ರಾಜಧಾನಿಗೆ ಹೀರಾಲಾಲ್ ಬೋಸ್‌ರವರ ಭೇಟಿ

ಅಖಿಲ ಭಾರತ ಕಾಂಗ್ರೆಸ್ಸಿನ ಯುವಕ ಶಾಖೆಯ ಸಂಚಾಲಕರಾದ ಶ್ರೀ ಹೀರಾಲಾಲ್ ಬೋಸ್‌ರವರು ಕಾಂಗ್ರೆಸ್ಸಿನ ಆಶ್ರಯದಲ್ಲಿ ಯುವಕರ ಸಂಘಟನೆಗಾಗಿ ಮೈಸೂರು ಸಂಸ್ಥಾನಕ್ಕೆ ಆಗಮಿಸುತ್ತಾರೆ. ಅವರು ನಾಳೆ ಮಧ್ಯಾಹ್ನ ೪ ಗಂಟೆಗೆ ಮೈಸೂರು ನಗರ ಮತ್ತು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರನ್ನು ನಗರ ಕಾಂಗ್ರೆಸ್ ಕಛೇರಿಯಲ್ಲಿ ಭೇಟಿ ಮಾಡಲಿರುವರೆಂದೂ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ತಪ್ಪದೆ ಬರಬೇಕೆಂದೂ ನಗರ ಕಾಂಗ್ರೆಸ್ ಕಾರ್ಯದರ್ಶಿಯವರು ಕೋರಿರುತ್ತಾರೆ.

ಶ್ರೀ ಜಗದಾಂಬಾ ಶಿಶುವಿಹಾರ

ಬೇಸಿಗೆ ರಜದ ಪ್ರಯುಕ್ತ ಕಳೆದ ಒಂದು ತಿಂಗಳಿಂದಲೂ ಮುಚ್ಚಲ್ಪಟ್ಟಿದ್ದ ರಾಜಧಾನಿಯ ವಿನಾಯಕ ರಸ್ತೆಯಲ್ಲಿರುವ ಮೇಲ್ಕಂಡ ಶಿಶು ವಿಹಾರವನ್ನು ನಾಳೆಯಿಂದ ಮತ್ತೆ ತೆರೆಯಲಾಗುವುದು. ಪೋಷಕರು ತಮ್ಮ ಮಕ್ಕಳನ್ನು ಸೇರಿಸುವುದರ ಮೂಲಕ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಹತ್ತನೇ ಒಂದು ಭಾಗ ಭತ್ಯ ಸಂಬಳದೊಡನೆ ಐಕ್ಯ

ತಿರುವಾಂಕೂರ್-ಕೊಚ್ಚಿ ಸಂಸ್ಥಾನದಲ್ಲಿ ಎಲ್ಲ ಸರ್ಕಾರೀ ನೌಕರರ ತುಟ್ಟಿ ಭತ್ಯದ ಶೇಕಡ ೧೦ ರಷ್ಟನ್ನು ಮೂಲ ಸಂಬಳದೊಡನೆ ಸೇರಿಸಲು ಅಲ್ಲಿನ ಸರ್ಕಾರವು ಆಜ್ಞೆ ಹೊರಡಿಸಿರುತ್ತೆ. ಈ ಕ್ರಮವು ಕಳೆದ ಏಪ್ರಿಲ್ ತಿಂಗಳಿಂದ ಜಾರಿಗೆ ಬರುತ್ತದೆ.

ಆಲ್ ಇಂಡಿಯಾ ರೇಡಿಯೋಗೆ ಬಹಿಷ್ಕಾರ

ಆಲ್ ಇಂಡಿಯಾ ರೇಡಿಯೋದವರು ಹೊಸದಾಗಿ ಜಾರಿಗೆ ತಂದಿರುವ ರಿಹರ್ಸಲ್ ಪದ್ಧತಿಯನ್ನು ರದ್ದುಪಡಿಸುವವರೆಗೆ ಭಾರತದಲ್ಲಿರುವ ಎಲ್ಲಾ ರೇಡಿಯೋಗಳನ್ನೂ ಬಹಿಷ್ಕರಿಸಬೇಕೆಂದು ಬೊಂಬಾಯಿಯಲ್ಲಿ ಸೇರಿದ್ದ ಕಲಾವಿದರ ಸಭೆಯಲ್ಲಿ ನಿರ್ಧಾರವಾಗಿರುತ್ತದೆ.

ಕೇಂದ್ರದಿಂದ ಗೊಬ್ಬರಕ್ಕಾಗಿ ೧೩||| ಲಕ್ಷ ಸಾಲ

ಭಾರತದ ನಾನಾ ಸಂಸ್ಥಾನಗಳು ಸೀಮೆ ಗೊಬ್ಬರವನ್ನು ತರಿಸಿಕೊಳ್ಳಲು ಸಹಾಯವಾಗುವಂತೆ ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವ ೩,೫೦ ಲಕ್ಷ ರೂ ಪೈಕಿ ಮೈಸೂರ ಸಂಸ್ಥಾನಕ್ಕೆ ೧೩,೭೫,೦೦೦ ರೂ ಗಳು ಕಂಡಾಯವಾಗಿ [illegible] ಮೈಸೂರ [illegible] ರಟ್ ಗೊಬ್ಬರವನ್ನು ಈ ಹಣದಿಂದ ತರಿಸಲಿದೆ. ಈ ಗೊಬ್ಬರವನ್ನು ರೈತರಿಗೆ ಸಾಲವಾಗಿ ಕೊಡಲಾಗುವುದು.

○ ರಾಜಧಾನಿಯಲ್ಲಿ ಭಾರತ ಸೇವಾ ದಳದ ಮಾಧ್ಯಮಿಕ ಶಿಕ್ಷಣ ಶಿಬಿರವು ಚುರುಕಾಗಿ ನಡೆಯುತ್ತಿದೆ. ೫೦ ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು.

ಲಾವೋಸ್ ದೇಶದ ರಾಜರು ಪ್ಯಾರಿಸ್ಸಿಗೆ

ಇಂಡೋಚೀನಾದ ಲಾವೋಸ್ ಫ್ರಾಂಸ್ಸಿನ ಅರಸರಾದ ಸಿಸವಾಂಗ್‌ರವರು ಅನಾರೋಗ್ಯದ ನಿಮಿತ್ತ ಚಿಕಿತ್ಸೆಗಾಗಿ ಪ್ಯಾರಿಸ್ಸಿನ ಅಭಿಮುಖವಾಗಿ ತೆರಳಿರುವರೆಂದು ವರದಿಯಾಗಿದೆ ಅವರು ತಮ್ಮ ರಾಜಧಾನಿ ಲುವಾಂಗ್ ಪ್ರಭಾಂಗ್ ನಗರವು ವಿಯಟ್ಮಿನ್ನರ ವಶವಾಗಲಾರದೆಂದೂ, ಅದಕ್ಕೆ ದೈವ ಬಲವು ಇರುವುದೆಂದೂ ಕೆ-೯೬ಏದ ಶಂತ್ರು ಆಕ್ರಮಣದ ಭೀತಿಯಿಂದ ರಾಜಧಾನಿಯನ್ನು ಬಿಡುವುದಿಲ್ಲವೆಂದೂ ಹಿಂದೆ ತಿಳಿಸಿದ್ದರು.

ಮೈಸೂರು ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಮೈಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿಗೆ ನಡೆಯುವ ಚುನಾವಣೆ ಸಂಬಂಧವಾಗಿ ಕೆಳಗೆ ಕಂಡವರು ಉಮೇದವಾರಿಕೆ ಅರ್ಜಿಗಳನ್ನು ಕಳುಹಿಸಿರುತ್ತಾರೆ— ಶ್ರೀಗಳು ವಿ ಚೆನ್ನಸ್ವಾಮಿ, ಕೆ. ಕೆಂಪೇಗೌಡ, ಕೆ ಪುಟ್ಟಸ್ವಾಮಿ, ಎಲ್. ಕೆಂಪೇಗೌಡ, ತಿ ಲಿಂಗೇಗೌಡ ಟಿ ರಾಮಯ್ಯ, ಆರ್ ಭದ್ರಯ್ಯ, ಜಿ ಎಸ್ ಶಂಬು, ಸಿ ಎಸ್ ರಾಮಯ್ಯ ಸಿ ಚೆನ್ನಯ್ಯ, ವಿ. ಸಂಗಯ್ಯ, ಎಸ್ ಎಂ ರಾಚಯ್ಯ, ಶಿವನಂಜೇಗೌಡ, ಎಸ್ ಡಿ. ದೇವರಾಜಪ್ಪ. ಬಸವೇಗೌಡ ಜವರೇಗೌಡ ಲಕ್ಕೇಗೌಡ ಈರೇಗೌಡ ವೆಂಕಟೇಗೌಡ, ಜವರೇಗೌಡ ಮತ್ತು ನಂಜೇಗೌಡ

ಬೀಡಿ ಕೆಲಸಗಾರರ ಸಂಘ

ರಾಜಧಾನಿಯ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ, ಶ್ರೀ ಖಲೀಲ್‌ರವರು ಹೇಳಿಕೆಯೊಂದನ್ನಿತ್ತು, ತಮ್ಮ ಸಂಘವು ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲವೆಂದೂ, ಬೀಡಿ ಕೆಲಸಗಾರರ ಹಿತ ಸಂಘನೆಗಾಗಿಯೇ ಸಂಘವು ಸ್ಥಾಪಿಸಲ್ಪಟ್ಟಿರುವುದೆಂದೂ ತಿಳಿಸಿರುತ್ತಾರೆ ಆವರೆ ಸಂಘದ ಹೆಸರಿನಲ್ಲಿ ಸಂಪತ್ತು, ಸೇವಸಂ ಅಂಗಡಿ ಮತ್ತು ಹೊಟೇಲು ಇಂದ ದುಡ್ಡನ್ನು ವಸೂಲು ಮಾಡುತ್ತಿರುವರೆಂದೂ, ಸಾರ್ವಜನಿಕರು ಅಂತಹವರಿಗೆ ಹಣವನ್ನು ಕೊಡಕೂಡದೆಂದೂ ತಿಳಿಸಿರುತ್ತಾರೆ

SRI GANESHA

TALKIES

Grand Release

On 15-5-53

Universal's Spectacular Picture

In Technicolor

FLAME OF ARABY

Starring Jeff Chandler

Maureen O'Hara and

Susan Cabot

From 22-5-53

Columbia's

THE JUNGLE

Having Mysore and Karapur as The Locale of the Picture

Edited Printed and Published by A. R. Nagarajan at Sadhvi Press D. Subbaiah Road Mysore

ಅಜಾದ್‌ರವರು ಭಾರತದ ಹಂಗಾಮಿ ಪ್ರಧಾನಿ

ಬ್ರಿಟನ್ನಿಗೆ ಈ ತಿಂಗಳು ಅಂತ್ಯದಲ್ಲಿ ತೆರಳಲಿರುವ ಪ್ರಧಾನ ನೆಹರೂರವರ ಸ್ಥಾನದಲ್ಲಿ ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಅಜಾದ್‌ರವರನ್ನು ಹಂಗಾಮಿ ಪ್ರಧಾನಿಯಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಚಿನ್ನದಗಣಿ ಕಾರ್ಮಿಕರಿಗೆ ಬೋನಸ್ಸು

ಕೋಲಾರದ ಚಿನ್ನದ ಗಣಿಗಳ ಎಲ್ಲ ಕಾರ್ಮಿಕರಿಗೆ ೧೯೫೧ ನೇ ಇಸವಿಗಾಗಿ ೩೯ ದಿನಗಳ ಸಂಬಳದಷ್ಟು ಬೋನಸ್ಸನ್ನು ಕೊಡಲು ಚಿನ್ನದ ಗಣಿ ಆಡಳಿತ ಮತ್ತು ಕಾರ್ಮಿಕ ಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ

ರಾಯರಕೊಪ್ಪಲಿನಲ್ಲಿ ಬೇಸಿಗೆ ಸೇವಾ ಶಿಬಿರ

ಹಾಸನ ಜಿಲ್ಲೆಯ ರಾಯರಕೊಪ್ಪಲಿನಲ್ಲಿ ಕಳೆದ ತಿಂಗಳು ೨೪ ನೇ ತಾರೀಖಿನಿಂದ ನಡೆಯುತ್ತಿದ್ದ ಬೇಸಿಗೆ ಸೇವಾ ಶಿಬಿರದ ಮುಕ್ತಾಯ ಸಮಾರಂಭವು ಕಳೆದ ೬ ನೇ ತಾರೀಖು ಹಾಸನ ಜಿಲ್ಲಾ ಸ್ಕೌಟ್ ಮತ್ತು ವಯಸ್ಕರ ಶಿಕ್ಷಣ ಸಮಿತಿಗಳ ಅಧ್ಯಕ್ಷರಾದ ಶ್ರೀ ಅರಕೆರೆ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಎಂ ವಿ ಶಂಕರನಾರಾಯಣ ಶಾಸ್ತ್ರಿಗಳಿಂದ ಪ್ರಾರ್ಥನೆಯಾದ ಮೇಲೆ ಜಿಲ್ಲಾ ಸ್ಕೌಟ್ ಸಮಿತಿ ಕಾರ್ಯದರ್ಶಿ ಡಾ|| ಬಿ ಚಕ್ರಪಾಣಿ ಅಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿದರು ಶಿಬಿರದ ನಾಯಕರೂ, ಜಿಲ್ಲಾ ಬೋರ್ಡ್ ಹೈಸ್ಕೂಲು ಮುಖ್ಯೋಪಾಧ್ಯಾಯರೂ ಆದ ಶ್ರೀ ಕೆ ಜಿ ಸತ್ಯನಾರಾಯಣರಾಯರು ಕಾರ್ಯಕಲಾಪಗಳ ವರದಿಯನ್ನು ಒಪ್ಪಿಸಿ, ರಾಯರಕೊಪ್ಪಲು, ದಾರಗೋಡು ಮತ್ತು ಕಣಿವೆ ಬಸವನ ಹಳ್ಳಿಗಳಲ್ಲಿ ನಡೆದಿರುವ ಕೆಲಸಗಳನ್ನು ವಿವರಿಸಿದರು ಶಿಬಿರದ ಉಪ ನಾಯಕರಾದ ಶ್ರೀ ಪಿ ಎಸ್ ಸತ್ಯನಾರಾಯಣರವರು ವಂದನಾರ್ಪಣೆ ಮಾಡಿದರು

ನಿಶಾತ್ರರವರಲ್ಲಿ ಮುಸ್ಲಿಂ ವೇಷದಹಿಂದುಗಳನಿಯೋಗ

ಜಸ್ಟಿಸ್ ನಿಶಾತ್ರರವರು ಬಳ್ಳಾರಿಯಲ್ಲಿದ್ದಾಗ ಅಲ್ಲಿನ ಸಂತೆಗಾಗಿ ಬಂದಿದ್ದ ಹಳ್ಳಿಯವರಿಗೆ ಆಂಧ್ರರು ಮುಸ್ಲಿಮರ ಪೋಷಾಕನ್ನು ಹಾಕಿಸಿ, ನಿಶಾತ್ರರವರಲ್ಲಿ ನಿಯೋಗ ಕಳುಹಿಸಿ ಬಳ್ಳಾರಿಯು ಆಂಧ್ರಕ್ಕೆ ಸೇರಬೇಕೆಂದು ಅವರ ಮೂಲಕ ಒತ್ತಾಯ ಮಾಡಿಸಿದುದಾಗಿ ಗೊತ್ತಾಗಿದೆ.

ಅಂಚೆ ನೌಕರರ ಉಚಿತ ವೈದ್ಯ ಸಹಾಯ

ಅಂಚೆ ಮತ್ತು ತಂತಿ ಇಲಾಖಾ ನೌಕರರೆಲ್ಲರಿಗೂ ಉಚಿತವಾಗಿ ವೈದ್ಯ ಸೌಲಭ್ಯವನ್ನು ಕಲ್ಪಿಸುವ ವಿಷಯವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಕೇಂದ್ರ ಮಾರ್ಗಾನುಕೂಲ ಮಂತ್ರಿ ಜಗಜೀವನರಾಂರವರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ ಡಿ ವಂಜಸ್ವಾಮಿ, ಗೋಟುವಾದ್ಯ ಮಧ್ಯಾಹ್ನ ೧-೪೦ ದಿಲ್ರುಬಾ ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫-೪೦ ಮತ್ತು ೭-೩೦ ಆರ್ ಜಯಲಕ್ಷ್ಮಮ್ಮ, ಸಂಗೀತ ೯-೨೦ ಗಾನ ವಿಹಾರ ೭ ರೋಹಣಲಾಲ್ ಜೋಷಿ, ಹಿಂದೀ ಗೀತೆ, ೮ ಗೀತಾ ಮಾಲ ೮-೪೦ ಎ ವಿ ಕೃಷ್ಣಮಾಚಾರ್, ಪಿಟೀಲು ೯-೧೫ ರಾಗ ತಾನ, ಪಲ್ಲವಿ

ಒಲಂಪಿಯಾ ಟಾಕೀಸ್

14-5-53 ರಿಂದ ಪ್ರತಿದಿನ 3 ಆಟಗಳು

ಉಮರ್ ಖಾಯಂ ಪಿಕ್ಚರ್ಸ್‌ರವರ

ಉಸ್ತಾದ್ ಪೆಡ್ರೊ

ಪಾತ್ರ:-ಷೇಕ್ ಮುಖ್ತಾರ್, ಸತ್ಯಮೂರ್ತಿ ಬೇಗಂ ಪಾರಾ ಮತ್ತು ಶಮ್ಮಿ

ಬೆಳಗಿನ ಪ್ರದರ್ಶನ 14-5-53 ರಿಂದ

4 ದಿನಗಳು ಮಾತ್ರ

ಅಶೋಕ್‌ಕುಮಾರ್ ಪಾತ್ರವಹಿಸಿರುವ

ಬೇತಾಬ್

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ಕಡಲೆಕಾಯಿ	೨೬-೦-೦	೩೦-೦-೦
ಹರಳುಬೀಜ	೩೭-೧೨-೦	೪೧-೦-೦
ಹೊಂಗೇಬೀಜ	೨೦-೧೪-೦	೨೧-೧೨-೦
ಹುರುಳಿ	೪೨-೧೦-೦	೪೩-೮-೦
ಹಲಸಂದೆ	೪೮-೨-೦	೫೬-೦-೦
ಉದ್ದು	೩೦-೦-೦	
ಮೆಣಸಿನ		
ಕಾಯಿ ಹುಳ್ಳಿ	೧೪-೨-೦	೨೯-೧೪-೦
ಹುಣಸೇಹಣ್ಣು	೫-೩-೦	೬-೧೦-೦
ಸೀಗೇಕಾಯಿ	೫-೦-೦	
ಬೆಲ್ಲ	೬-೦-೦	
ತೆಂಗಿನಕಾಯಿ		
೧,೦೦೦ಕ್ಕೆ	೧೨೪-೦-೦	೨೨೬-೦-೦

ಬಸವ ಜಯಂತಿ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ವೀರಶೈವ ಮಂಡಲಿಯ ಆಶ್ರಯದಲ್ಲಿ ಪ್ರಭುದೇವಾಟಾಕೀಸ್ ಬಳಿ ಇರುವ ಶ್ರೀ ತಿಮ್ಮಪ್ಪಾಚಾರಿಯವರ ಕಟ್ಟಡದಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ನಾಳೆ ರಾತ್ರಿ ೯|| ಗಂಟೆಗೆ ಶ್ರೀ ಎಲ್ ಲಕ್ಷ್ಮಿಪತಿಯವರಿಂದ ಶಿವಕಥೆಯೂ, ೧೬ ನೇ ತಾ|| ರಾತ್ರಿ ೯|| ಗಂಟೆಗೆ ವಿ|| ದೇವೇಂದ್ರಪ್ಪನವರ ಶಿಷ್ಯ, ಶ್ರೀ ಸಿ ನಾರಾಯಣಶಾಸ್ತ್ರಿಯವರ ವಚನ ಸಂಗೀತವೂ ನಡೆಯುವುವು

SRI GAYATHRI

TALKIES

At the request of the Public the Show has been Extended up-to

16th May 1953

ಮಹಾ ಜನರ ಕೋರಿಕೆ ಮೇರೆ ಚಿತ್ರದ ಪ್ರದರ್ಶನವನ್ನು

16-5-53 ರ ವರೆಗೆ ಹೆಚ್ಚಿಸಲಾಗಿದೆ.

Life and Look magazines describe it as "THE MOST COLOSSAL MOVIE EVER MADE!"

M-G-M proudly presents

Three Great Love Stories in one Mighty Spectacle!

TECHNICOLOR

15-5-53 ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಮೈಸೂರು **ಚಾಮುಂಡೇಶ್ವರಿ** ಟಾಕೀಸಿನಲ್ಲಿ

ಪ್ರಕಾಶ್‌ರವರ ತಮಿಳು ಚಿತ್ರ

• ಪೆತ್ರ ತಾಯ್ •

ಪಾತ್ರ:- ಜಿ. ವರಲಕ್ಷ್ಮಿ, ನಾಗೇಶ್ವರರಾವ್, ಪಸಂತ್, ನಂಬಿಯಾರ್, ಚೆಲ್ಲಂ

ಪ್ರತಿಯೊಂದು ಸಂಸಾರವೂ ನೋಡಬೇಕಾದ ಮಹೋನ್ನತ ಚಿತ್ರ

[A PRAKASH RELEASE

ಪ್ರಭುದೇವಾ ಟಾಕೀಸ್

ಪ್ರತಿದಿನ ೩ ಆಟಗಳು

15-5-53 ನೇ :: ಶುಕ್ರವಾರದಿಂದ

(ತಮಿಳು) **ಮದನ ಮಾಲಾ** (ತಮಿಳು)

ಪಾತ್ರ:— ಶ್ರೀರಾಂ, ರಜನಿ ಮುಂತಾದವರು

ರಿಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೫-೫ ೧೯೫೩ [ಸಂಚಿಕೆ ೨೩೪

ದೆಹಲಿ ಜನ ಸಂಘದ ಕಛೇರಿಯ ಶೋಧನೆ

ಮಹಾಸಭೆ, ಜನಸಂಘಗಳ ಕಛೇರಿಗಳ ಮೇಲೆ ಧಾಳಿ

ದೆಹಲಿ ಪೊಲೀಸರು ನೆನ್ನೆ ಬೆಳಗ್ಗೆ ಹಿಂದೂ ಮಹಾಸಭೆ ಮತ್ತು ಜನಸಂಘಗಳ ಕಛೇರಿಗಳನ್ನು ಶೋಧಿಸಿ ೮೫ ಜನರನ್ನು ಬಂಧಿಸಿರುತಾರೆ. ಅವರೆಲ್ಲರೂ ಜಮ್ಮು ಪರಿಷತ್ತಿನವರ ಸತ್ಯಾಗ್ರಹದಲ್ಲಿ ಭಾಗವಹಿಸಲು ಉತ್ತರ ಪ್ರದೇಶದಿಂದ ಬಂದಿದ್ದರು. ದೆಹಲಿ ಹಿಂದೂ ಮಹಾಸಭೆಯ ಕಾರ್ಯದರ್ಶಿ ಬಾಲಗಂಗಾಧರರವರನ್ನೂ ಸಹ ದಸ್ತಗಿರಿ ಮಾಡಲಾಗಿದೆ. ಕಳೆದ ಮಾರ್ಚಿಯಲ್ಲಿ ಅವರು ಬಂಧಿಸಲಾಗಿದ್ದಿತು. ಸುಪ್ರೀಂ ಕೋರ್ಟಿನವರು ಅವರ ಬಿಡುಗಡೆಗೆ ಆಜ್ಞೆ ಮಾಡಿದ್ದರು.

ದೋಣಿ ಮಗುಚಿ ೭೫ ಜನರು ಗಂಗೆ ಪಾಲು

ಬಿಹಾರ್ ಪ್ರಾಂತ್ಯದ ರಾಜಧಾನಿ ಪಾಟ್ನಾ ನಗರದಲ್ಲಿ ಗಂಗಾ ನದಿಯನ್ನು ದಾಟುತ್ತಿದ್ದ ದೋಣಿಯು ಮೊನ್ನೆ ರಾತ್ರಿ ಮಗುಚಿ ೭೫ ಜನರು ನೀರಿಗೆ ಸಿಕ್ಕಿ ಮೃತಪಟ್ಟರೆಂದೂ ಇತರ ೩೦ ಮಂದಿಯನ್ನು ರಕ್ಷಿಸಲಾಯಿತೆಂದೂ ತಿಳಿದುಬಂದಿದೆ.

ಪಿ. ನರಸಿಂಹಮೂರ್ತಿಯವರಿಗೆ ಅನಾರೋಗ್ಯ

ಕೊಡಗು ಸರ್ಕಾರದ ಚೀಫ್ ಕಾರ್ಯದರ್ಶಿ ಶ್ರೀ ಪಿ ನರಸಿಂಹ ಮೂರ್ತಿಯವರು ಹಲವು ದಿನಗಳಿಂದ ಅಸ್ವಸ್ಥರಾಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರು.

ಕಾಂಗ್ರೆಸ್ ಚುನಾವಣೆಗಳಲ್ಲಿ ಸ್ಪರ್ಧಿಗಳ ಅರ್ಜಿ ತಿರಸ್ಕೃತ

ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಚುನಾವಣಾ ವೇಳಾ ಪಟ್ಟಿಯಂತೆ ನೆನ್ನೆ ನಗರದ ದಕ್ಷಿಣ ಉತ್ತರ ಭಾಗಗಳ ತಾಲ್ಲೂಕು ಕ್ಷೇತ್ರದಲ್ಲೂ ಉಮೇದುವಾರಿಕೆ ಅರ್ಜಿಗಳ ಪರಿಶೀಲನೆಯು ನಡೆಯಿತು. ನಗರದ ದಕ್ಷಿಣ ಭಾಗದ ಉಮೇದುವಾರಿಕೆಗಳೆಲ್ಲವೂ ಅಂಗೀಕೃತವಾಗಿ ಉತ್ತರ ಭಾಗದಲ್ಲಿ ನಿಂತಿದ್ದ ಸ್ಪರ್ಧಿಗಳಾದ ಶ್ರೀ ಸತೀರಾವ್, ರಂಗೇಗೌಡ ಮತ್ತು ಎಂ ಸಿ ರಾವ್ ರವರ ಅರ್ಜಿಗಳನ್ನು ತಿರಸ್ಕರಿಸಿದೆ.

ತಾಲ್ಲೂಕು ಕ್ಷೇತ್ರದಲ್ಲಿ ನಿಂತಿದ್ದ ೨೧ ಉಮೇದುವಾರರ ಪೈಕಿ ನಾಗನಾಯಕರು ಶ್ರೀ ಲಕ್ಕೇಗೌಡರ ಅರ್ಜಿ ವಜಾ ಆಗಿದೆ. ಅರ್ಜಿಗಳು ಕ್ರಮಬದ್ಧವಾಗಿಲ್ಲವೆಂಬುದೇ ತಿರಸ್ಕಾರಕ್ಕೆ ಕಾರಣವೆಂದು ಗೊತ್ತಾಗಿದೆ.

ಶೇಷ ವಾಹನೋತ್ಸವ

ರಾಜಧಾನಿಯ ಮಹಾನಂದವಾಡಿ ರಸ್ತೆಯ ದಕ್ಷಿಣ ಕೈಲ್ಸೆ ವರ್ಕ್‌ಶಾಪಿನ ಸೀತಾರಾಮಚಂದ್ರ ಸ್ವಾಮಿಯವರ ಸನ್ನಿಧಿಯ ನಾಳೆ ಸಂಜೆ ೫|| ಕ್ಕೆ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿಯವರ ಶೇಷವಾಹನೋತ್ಸವವು ಹೊರಟು ವಾಣೀವಿಲಾಸ ರಸ್ತೆ, ಶ್ರೀ ರಾಂ ದೇವರಾಜಾ ಮಾರ್ಕೆಟ್, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ, ಪಳೇ ಅಗ್ರಹಾರ, ಚಾಮರಾಜಪುರ ಮತ್ತು ಮಹಾನಂದವಾಡಿ ಮಾರ್ಗವಾಗಿ ದೇವಸ್ಥಾನಕ್ಕೆ ಬಿಜಯಮಾಡುವ ಏರ್ಪಾಡನ್ನು ವರ್ಕ್‌ಸ್ ಭಕ್ತ ಮಂಡಲಿಯವರು ಮಾಡಿರುತ್ತಾರೆ.

ಭಾರತ ಮತ್ತು ಪಾಕಿಸ್ತಾನ್ ಪ್ರಧಾನಿಗಳ ಭೇಟಿಗೆ ಬಿನ್ನತ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳ ಭೇಟಿ ಕಾಲದಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಎರಡು ಸರ್ಕಾರಗಳ ಪ್ರತಿನಿಧಿಗಳಿಗೂ ಮಾತುಕತೆಯಾಗಿ ಅವರಲ್ಲಿ ಭಿನ್ನಮತಪ್ರಬಲವಾಗಿರುವುದೆಂದು ಗೊತ್ತಾಗಿದೆ.

ಲಾಹೋರಿನಲ್ಲಿ ಮಾರ್ಷಲ್ ಲಾ ರದ್ದು

ಲಾಹೋರ್ ನಗರದಲ್ಲಿ ಇತ್ತೀಚೆಗೆ ನಡೆದ ಅಹಮದೀಯ ಪಂಗಡದ ವಿರುದ್ಧವಾದ ಗಲಭೆಗಳ ಪರಿಣಾಮವಾಗಿ ವಿಧಿಸಲಾಗಿದ್ದ ಮಾರ್ಷಲ್ ಲಾವನ್ನು ಇಂದಿನಿಂದ ರದ್ದುಗೊಳಿಸಲಾಗುವುದು.

ತುಟ್ಟಿಭತ್ಯದ ಬಗ್ಗೆ ಸರ್ಕಾರಕ್ಕೆ ಹೈಕೋರ್ಟಿನ ನೋಟೀಸು

ಕೇಂದ್ರ ಸರ್ಕಾರದ ನೌಕರರುಗಳಿಗೆ ಕೊಡುತ್ತಿರುವ ತುಟ್ಟಿ ಭತ್ಯದ ಪ್ರಮಾಣದಂತೆ ಮಧ್ಯ ಪ್ರದೇಶ ಸರ್ಕಾರವೂ ತನ್ನ ನೌಕರರಿಗೆ ಕೊಡುವಂತೆ ಆಜ್ಞೆಯಾಗಬೇಕೆಂದು, ನಾಗಪುರದ ಹೈಕೋರ್ಟಿಗೆ ಆ ಪ್ರಾಂತದ ನಾನ್ ಗೆಜೆಟೆಡ್ ನೌಕರರ ಸಂಘದ ಅಧ್ಯಕ್ಷರು ಅರ್ಜಿ ಹಾಕಿರುತ್ತಾರೆ. ಅರ್ಜಿಯನ್ನು ಪರಿಶೀಲನೆಗಾಗಿ ಕೋರ್ಟಿನವರು ತೆಗೆದುಕೊಂಡು ಈ ಬಗ್ಗೆ ಸಮಜಾಯಿಷಿ ಕೇಳಿ ಅಲ್ಲಿನ ಸರ್ಕಾರಕ್ಕೆ ನೋಟೀಸು ಕೊಟ್ಟಿರುವರು.

ವಿಶ್ವವಿದ್ಯಾಲಯದ ಪರೀಕ್ಷಾ ಫಲಿತಾಂಶ

ಈ ವರ್ಷದ ವಿಶ್ವವಿದ್ಯಾಲಯದ ಪರೀಕ್ಷೆಗಳ ಫಲಿತಾಂಶಗಳು ಜೂನ್ ಮೊದಲನೇ ವಾರದಲ್ಲಿ ಪ್ರಕಟವಾಗಲಿವೆ.

ಕರಗ ಮತ್ತು ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ನಜರ್‌ಬಾದ್ ಮೊಹಲ್ಲಾ ರೇಣುಕಾ ಪರದೇವತಮ್ಮನವರ ಉತ್ಸವವು ಈ ಸಂಜೆ ೭ ಗಂಟೆಗೆ ಕ್ಲಾರ್ಕ್ ಟವರ್ ಮಾರ್ಗವಾಗಿ, ದೇವರಾಜಾ ಮಾರ್ಕೆಟ್ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಕಾಳಮ್ಮನ ಗುಡಿ ಬೀದಿ ಅಶೋಕಾ ರಸ್ತೆ ಇವುಗಳ ಮೂಲಕ ಬಿಜಯ ಮಾಡಿಸುವುದು.

ಹೂವಿನ ಸೀರೆ ಅಲಂಕಾರ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ರಾತ್ರಿ ಅಮ್ಮನವರಿಗೆ ಹೂವಿನ ಸೀರೆ ಅಲಂಕಾರ ಮಾಡಲಾಗುವುದು.

ಈಜಿಪ್ಟ್ ಹಳ್ಳಿಯ ಮೇಲೆ ಬ್ರಿಟಿಷ್ ಸೈನ್ಯದ ಗುಂಡು

ಸೂಯೆಜ್ ಪ್ರದೇಶದಲ್ಲಿರುವ ಬ್ರಿಟಿಷ್ ಸೈನ್ಯಗಳು ನೆನ್ನೆ ಈಜಿಪ್ಟಿನ ಕಸರ್ ಅಬ್ ದಾ ಹಳ್ಳಿಯ ಮೇಲೆ ಗುಂಡು ಹಾರಿಸಿದುವೆಂದು ವರದಿಯಾಗಿದೆ. ರಂಜಾನ್ ಹಬ್ಬದ ಪ್ರಾರಂಭವನ್ನು ಸೂಚಿಸುವ ಬಗ್ಗೆ ಈಜಿಪ್ಟ್ ಫಿರಂಗಿಗಳು ಗುಂಡು ಹಾರಿಸಿದುವೆಂದೂ, ಅದಕ್ಕಾಗಿ ಬ್ರಿಟಿಷರು ಗುಂಡು ಹೊಡೆದರೆಂದೂ, ಬಹಳ ಹೊತ್ತಿನವರೆಗೂ ಗುಂಡು ಹಾರುತ್ತಲೇ ಇದ್ದಿತೆಂದೂ ಹೇಳಲಾಗಿದೆ. ಸೂಯೆಜ್ ಪ್ರದೇಶದಲ್ಲಿರುವ ಬ್ರಿಟಿಷ್ ಸೈನ್ಯಗಳಿಗೆ ನಿರ್ಬಂಧ ಹಾಕಿ, ಅವರಿಗೆ ಎಳ್ಳಿನಷ್ಟೂ ಆಹಾರ ಸರಬರಾಜು ಬರದಂತೆ ಮಾಡಲು ಈಜಿಪ್ಟ್ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ.

ಬಸವ ಜಯಂತಿ

ರಾಜಧಾನಿಯ ಪಿಲ್ಲೆ ಮೊಹಲ್ಲಾ ಶ್ರೀನಿವಾಸ ಅಗ್ರಹಾರದಲ್ಲಿ ಈ ಸಂಜೆ ೬|| ಗಂಟೆಗೆ ಬ್ರ|| ಶ್ರೀ ಕೂಣನೂರು ಸೀತಾರಾಮ ಶಾಸ್ತ್ರಿಗಳವರಿಂದ ದೂರ್ವಾಸಾತಿಥ್ಯ ಎಂಬ ಕಥೆಯನ್ನು ಬಸವ ಜಯಂತಿ ಕಾರ್ಯಕ್ರಮದ ಅಂಗವಾಗಿ ಪಿಲ್ಲೆ ಮೊಹಲ್ಲಾ ಸೇವಾ ಮಂಡಲಿಯವರು ಏರ್ಪಡಿಸಿರುವರು.

ಕಾಂಗ್ರೆಸ್ ಚುನಾವಣೆ ವೇಳಾಪಟ್ಟಿ ರದ್ದಿಗಾಗಿ ಕಲಹ

ಮೈಸೂರು ನಗರ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ ರಾಮಣ್ಣನವರು ಹೇಳಿಕೆಯೊಂದನ್ನಿತ್ತು, ತಾಲ್ಲೂಕು ಕಾಂಗ್ರೆಸ್ ಸಮಿತಿಗಳಿಗೆ ನಡೆಯುವ ಚುನಾವಣೆಗಳಿಗಾಗಿ ಉಮೇದುವಾರಿಕೆ ಶುಲ್ಕವನ್ನು ೧೦ ರೂ ವರೆಗೆ ಹೆಚ್ಚಿಸಿರುವುದನ್ನು ಪ್ರತಿಭಟಿಸಿರುತ್ತಾರೆ. ಪ್ರದೇಶ ಕಾಂಗ್ರೆಸ್ ಸಮಿತಿ ಅಥವಾ ಸಂಸ್ಥೆಯ ಅಂಗಸಮಿತಿಗಳ ಅಭಿಪ್ರಾಯವನ್ನು ಕೇಳದಿರುವ ಬಗ್ಗೆಯೂ ಅವರು ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ. ಇದು ಕಾಂಗ್ರೆಸ್ಸಿನ ಬೆಳವಣಿಗೆಗೆ ಕಂಟಕಪ್ರಾಯವಾಗಿದೆಯೆಂದೂ, ಅನ್ಯಾಯವಾಗಿ ವಿಧಾಯಕವಾಗಿರುವ ಈ ಮೊತ್ತವನ್ನು ಕಡಿಮೆ ಮಾಡಬೇಕೆಂದೂ, ಕಾಂಗ್ರೆಸ್ ಚುನಾವಣೆಗಳ ಈಗಿನ ವೇಳಾ ಪಟ್ಟಿಯನ್ನು ರದ್ದುಗೊಳಿಸಿ ಹೊಸ ಪಟ್ಟಿಯನ್ನು ಕೊಡಬೇಕೆಂದೂ ಅವರು ಕೋರಿರುತ್ತಾರೆ.

ವಿಶ್ವವಿದ್ಯಾಲಯದ ಆಯವ್ಯಯ ಪಟ್ಟಿ

ಸೆನೆಟ್ ಸಭೆಯಲ್ಲಿ ಅಂದಾಜಿನ ಪರಿಶೀಲನೆ

ಮೈಸೂರು ೧೫

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ಇಂದು ವಿಶ್ವವಿದ್ಯಾಲಯದ ಈ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಲಾಯಿತು. ಆದಾಯದ ಈ ರೀತಿ ಇದೆ:- ಸರ್ಕಾರದ ಸಹಾಯ ೪೭,೦೦,೦೦೦ ರೂ ಪಾಯಿಗಳು. ಫೀಜು ವಗೈರೆ ೧೫,೦೭,೧೦೦ ರೂ, ಪ್ರಾರಂಭದ ಶುಲ್ಕ ೬೦೦,೦೦೦ ಒಟ್ಟು ೬೭,೦೭,೧೦೦ ರೂ ವೆಚ್ಚವು ೬೪,೨೪ ೪೮೦ ರೂ ಆಗುವುದೆಂದೂ ೧೦,೧೨೦ ರೂ. ಉಳಿತಾಯವಾಗುವುದೆಂದೂ ನಿರೀಕ್ಷಿಸಲಾಗಿದೆ. ವಿಶೇಷ ಕೋರ್ಸುಗಳ ವಿದ್ಯಾರ್ಥಿ ವೇತನಕ್ಕಾಗಿ ೨,೩೯,೪೦೦ ರೂ ಗಳನ್ನು ತೆಗೆದಿಡಲಾಗಿದೆ.

ಆಯವ್ಯಯದ ಪಟ್ಟಿಯನ್ನು ಮಂಡಿಸಿದ ಪ್ರೊ|| ಪಿ ಎಲ್ ಡಿಸೌಜಾರವರು ಕಳೆದ ವರ್ಷಕ್ಕಿಂತಲೂ, ಈ ವರ್ಷ ಸರ್ಕಾರದಿಂದ ೧|| ಲಕ್ಷ ರೂ ಗ್ರಾಂಟು ಕಡಿಮೆಯಾಗಿ ಬರುವುದೆಂದೂ, ಆದರೆ ವಿಶ್ವವಿದ್ಯಾಲಯದ ವೆಚ್ಚವು ಹೆಚ್ಚಿರುವುದೆಂದೂ ತಿಳಿಸಿದರು. ವಿಶ್ವ ವಿದ್ಯಾಲಯದ ಕೈಕೆಳಗಿರುವ ಒಟ್ಟು ಸಂಸ್ಥೆಗಳಿಗಾಗಿ ವೆಚ್ಚವು ಹೆಚ್ಚಿರುವುದೆಂದು ಅವರು ಹೇಳಿದರು.

ಪಂಚವಾರ್ಷಿಕ ಯೋಜನೆ

ಶ್ರೀ ಡಿಸೌಜಾರವರು ತಮ್ಮ ಭಾಷಣವನ್ನು ಮುಂದುವರಿಸಿ, ವಿಶ್ವವಿದ್ಯಾಲಯದವರು ಪಂಚ ವಾರ್ಷಿಕ ಯೋಜನೆಯನ್ನು ತಯಾರಿಸಿರುವರೆಂದೂ, ಅದರ ಪ್ರಕಾರ, ಗೃಹ ವಿಜ್ಞಾನಕ್ಕಾಗಿ ೨೫ ಸಾವಿರ ರೂ ತೆಗೆದಿಡಲಾಗಿದೆಯೆಂದೂ ಹೇಳಿದರು. ಹೊಸ ಪಾರ ಪ್ರವಚನ ತರಗತಿಗಳನ್ನು ತೆರೆಯಲು ೩೦ ಸಾವಿರ ರೂ ಅನ್ನು ಕೊಟ್ಟಿರುವುದಾಗಿಯೂ ಅವರು ಹೇಳಿ, ಮಹಾರಾಜಾ ಕಾಲೇಜಿನಲ್ಲಿ ನ್ಯಾಯಶಾಸ್ತ್ರ ಶಾಖೆಗೆ ಅಸಿಸ್ಟೆಂಟ್ ಪ್ರೊಫೆಸರನ್ನು ನೇಮಿಸುವ ಬಗ್ಗೆ ೩,೩೬೦ ರೂ ಗಳನ್ನು ಮಂಜೂರು ಮಾಡಿದೆಯೆಂದು ತಿಳಿಸಿದರು.

ಕನ್ನಡಕ್ಕಾಗಿ ಮತ್ತೊಬ್ಬ ಪ್ರೊಫೆಸರನ್ನೂ, ಇನ್ನಿಬ್ಬರು ಅಸಿಸ್ಟೆಂಟ್ ಪ್ರೊಫೆಸರುಗಳನ್ನೂ ನೇಮಕರೂ ಮಾಡಲು ೧೩,೫೬೦ ರೂ ಅನ್ನು ಒದಗಿಸಲಾಗುವುದೆಂದು ಶ್ರೀ ಡಿಸೌಜಾರವರು ಹೇಳಿ, ನಾಟಕದ ಇಲಾಖೆ ತೆರೆಯಲು ೬೦೦೦೦ ರೂ ವಿನಿಯೋಗಿಸಲಾಗಿದೆಯೆಂದೂ ಸಂಸ್ಕೃತ ಭಾಷೆಯ ಅಡಿಷನಲ್ ಅಸಿಸ್ಟೆಂಟ್ ಪ್ರೊಫೆಸರನ್ನು ನೇಮಿಸಿಕೊಳ್ಳಲು ೩,೦೦೦ ರೂ ಒದಗಿಸಲಾಗಿದೆಯೆಂದೂ ಹೇಳಿದರು.

ಶಿವಮೊಗ್ಗ, ತುಮಕೂರು ಹಾಸನ, ಚಿತ್ರದುರ್ಗ ಕಾಲೇಜುಗಳ ಹಾಸ್ಟೆಲುಗಳ ಆಯವ್ಯಯ ಕ್ಷಣಕ್ಕಾಗಿ ೩೪,೭೩೦ ರೂ ವೆಚ್ಚ ಮಾಡಲಾಗುವುದೆಂದು ಅವರು ಹೇಳಿದರು. ವಿಶ್ವವಿದ್ಯಾಲಯದ ಆಫೀಸಿನಲ್ಲಿ ಹೊಸತಾಗಿ ಸೃಷ್ಟಿಸಿದ ಹುದ್ದೆಗೆ ೨,೦೦೦ ರೂ ಮಂಜೂರು ಮಾಡಿರುವುದಾಗಿಯೂ ತಿಳಿಸಿದರು. ವಿಶ್ವವಿದ್ಯಾಲಯದ ಖರ್ಚು ಹೆಚ್ಚುತ್ತಿದ್ದು, ಅವಶ್ಯವಾದುದರಿಂದ ಆದಾಯವು ಹೆಚ್ಚುತ್ತಿಲ್ಲವೆಂದೂ ಅವರು ಹೇಳಿದರು.

ಕೆನ್ಯಾದಲ್ಲಿ ೧೭ ಮಂದಿಗೆ ಫಾಸಿ ಶಿಕ್ಷೆ

ಕೆನ್ಯಾದ ಲಾರಿ ಎಂಬಲ್ಲಿ ಕಿಕುಯು ಜನರು ಘೋರ ವಿನಾಶಕೃತ್ಯ ಕೈಗೊಂಡು ೧೨೦ ಜನರನ್ನು ಕೊಲೆ ಮಾಡಿದ್ದ ಸಂದರ್ಭದಲ್ಲಿ ೧೭ ಜನರಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ

ಶಂಕರ ಜಯಂತಿ

ರಾಜಧಾನಿಯ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯವರು ಶ್ರೀಮನ್ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಏರ್ಪಡಿಸಿರುವ ಶ್ರೀ ಶಂಕರ ಜಯಂತಿ ಉತ್ಸವದ ಅಂಗವಾಗಿ ಈ ಸಂಜೆ ೭ ಗಂಟೆಗೆ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಭಾರತ ವಾಚನವು ನಡೆಯುವುದು.

ನಾಳೆ ಸಂಜೆ ೭ ಗಂಟೆಗೆ ವಿದ್ವಾನ್ ಟಿ. ಆರ್ ಶ್ರೀನಿವಾಸರವರ ಸಂಗೀತವು ಶ್ರೀ ಟಿ. ಮಹದೇವಪ್ಪನವರ ಪಿಟೀಲಿನೊಡನೆ ನಡೆಯುವುದು

ಚಾಮರಾಜ ಮೊಹಲ್ಲಾ ಪ್ರಸನ್ನ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಂಕರ ಜಯಂತಿ ಉತ್ಸವದ ಅಂಗವಾಗಿ ಈ ದಿನ ಬೆಳಿಗ್ಗೆ ಪ್ರಹ್ಲಾದ ಮತ್ತು ನಾಳೆ ಮಾರ್ಕಂಡೇಯ ಎಂಬ ಹರಿಕಥೆಗಳು ರಾತ್ರಿ ೮ ಗಂಟೆಗೆ ವೇ|| ಬ್ರ|| ಗಣಪತಿ ರಾಮಕೃಷ್ಣಶಾಸ್ತ್ರಿಯವರಿಂದ ನಡೆಯುವುವು

SRI GANESHA

TALKIES

Grand Release

On 15-5-53

Universal's Spectacular Picture In Technicolor

FLAME OF ARABY

Starring — Jeff Chandler, Maureen O'Hara and Susan Cabot

From 22-5-53

Columbia's

THE JUNGLE

Having Mysore and Karapur as The Locale of the Picture

ಲಾಟರಿ ನಡೆಸುವುದಕ್ಕೆ ಕೇಂದ್ರ ಸರ್ಕಾರದ ವಿರೋಧ

ಲಾಟರಿಗಳ ಯಾವುದೇ ರೂಪದಲ್ಲಿರಲಿ ಅವುಗಳನ್ನು ನಡೆಸುವುದು, ನಡೆಸಲು ಅಧಿಕಾರ ಕೊಡುವುದು ಅಥವಾ ಅವುಗಳಿಗೆ ಸರ್ಕಾರದ ಬೆಂಬಲವೀಯುವುದು ಇವುಗಳನ್ನು ಭಾರತ ಸರ್ಕಾರದವರು ವಿರೋಧಿಸುವರೆಂದೂ, ಲಾಟರಿಯನ್ನು ಪ್ರೋತ್ಸಾಹಿಸುವುದರಿಂದ ಜೂಜಾಟಕ್ಕೆ ಉತ್ತೇಜನವಿತ್ತಂತಾಗುವುದೆಂದೂ ಕೇಂದ್ರ ಗೃಹ ಶಾಖೆಯ ಉಪ ಮಂತ್ರಿ ಬಿ ಎನ್ ದಾತಾರ್‌ರವರು ಬೆಂಗಳೂರು ಜಿಲ್ಲೆ ಪ್ರತಿನಿಧಿ ಶ್ರೀ ಟಿ ಮಾದಯ್ಯಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿರುವರು ಲಾಟರಿಗಳಿಗೆ ರಹದಾರಿ ಕೊಡುವುದು ಅಥವಾ ಬಿಡುವುದು ಸಂಸ್ಥಾನ ಸರ್ಕಾರಗಳಿಗೆ ಸೇರಿದುದೆಂದು ಅವರು ಹೇಳಿರುವರು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಜಿ ಎನ್ ಬಾಲಸುಬ್ರಹ್ಮಣ್ಯಂ ರೆಕಾರ್ಡು ಮಧ್ಯಾಹ್ನ ೧ ೩೦ ಗಿಟಾರ್ ೩ ಬಾಲ ಜಗತ್ ಸಂಜೆ ೫ ೩೦ ಎಸ್ ರಾಮಚಂದ್ರ ರಾವ್ ದೇವರ ನಾಮ ೬ ೧೦ ನಾಡಶ್ರೀ ೭ ದಿಲ್ರುಬಾ ೭ ೩೦ ವನಿತಾ ವಿಹಾರ ೮ ಎಸ್ ಕೃಷ್ಣಯ್ಯಂಗಾರ್ ಕಥಾ ಕಾಲಕ್ಷೇಪ ೯ ಗಾನವಾರಿಧಿ ೯ ೩೦ ಕನ್ನಡದಲ್ಲಿ ಸಣ್ಣ ಕಥೆ

||ಶ್ರೀ||

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ ಮೈಸೂರು

ಬೇಸಿಗೆ ರಜೆಯಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಪುನಃ ಇಂದಿನಿಂದ ತೆರೆಯಲಾಗಿದೆ ಕಿಂಡರ್ ಗಾರ್ಟನ್ ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾರ್ಗಗಳನ್ನನುಸರಿಸಿ, ಕಿಂಡರ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ನಿರ್ದಿಷ್ಟವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ

ಡೈರೆಕ್ಟರ್

Edited, Printed and Published by A. R. Nagarajan at Sadhvi Press, D. Subbiah Road, Mysore

ಮೈಸೂರಿಗೆ ನೀಲಗಿರಿಯನ್ನು ಸೇರಿಸಲು ಗೌರ್ನರಿಗೆ ಮನವಿ

ಮದ್ರಾಸಿನ ಗೌರ್ನರ್ ಶ್ರೀ ಪ್ರಕಾಶರವರ ಬಳಿ ಉದಕಮಂಡಲದಲ್ಲಿ ಮೊನ್ನೆ ನೀಲಗಿರಿ ಜಿಲ್ಲೆಯ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷರಾದ ಟಿ ಎಸ್ ರಾಮೇಗೌಡರು ನಿಯೋಗ ಹೋಗಿ ಮನವಿಯೊಂದನ್ನು ಸಲ್ಲಿಸಿ ಜಿಲ್ಲೆಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ, ಹಾಗಾಗದಿದ್ದರೆ ಕೇಂದ್ರದವರೇ ಜಿಲ್ಲೆಯ ಆಡಳಿತವನ್ನು ವಹಿಸಬೇಕೆಂದೂ ಪ್ರಾರ್ಥಿಸಿರುತ್ತಾರೆ ಜಿಲ್ಲೆಯ ಶಾಲೆಗಳಲ್ಲಿ ಕನ್ನಡವನ್ನು ಹೇಳಿಕೊಡುವಂತೆ ವ್ಯವಸ್ಥೆಯಾಗಬೇಕೆಂದೂ ಅವರು ಕೋರಿರುತ್ತಾರೆ.

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ

ಬಿ ಲ್ ಖು ಷ್

ಸ್ತ್ರೀ ಪುರುಷರ ಜೀವನಾಧಾರ ಮಹಾ ಟಾನಿಕ್

1) ಹಳೆಯ ಕಳೆ ಗಾಯದ ಗುರುತು ಮತ್ತು ಮುಖದ ಮಚ್ಚೆಗಳು ಪ್ರಯೋಗಿಸಿದ ಮಾರನೇ ದಿನದಿಂದಲೇ ಆಶ್ಚರ್ಯಕರವಾದ ರೀತಿಯಲ್ಲಿ ಕಾಣಿಸುವ ಬದಲಾವಣೆಯನ್ನು ತೋರಿಸುವುದಲ್ಲದೆ ಕೂದಲ ಬೆಳೆಯುದಿದ್ದಲ್ಲಿ ಬೆಳೆಸುತ್ತದೆ. ಚರ್ಮ ರೋಗಗಳನ್ನು ನಿರ್ಮೂಲ ಮಾಡುತ್ತದೆ ಮುಖದ ಕಾಂತಿಯನ್ನು ಹೆಚ್ಚಿಸುವುದು

2) ಸ್ತ್ರೀಯರ ಬಿಳಿಸೆರಗು "ಹೊಟ್ಟೆ ಶೂಲೆ" ಮೊದಲಾದ ಉಪದ್ರವ ಅಕಾಲ ಮುಟ್ಟು ಸಂಬಂಧ ಅಶಕ್ತಿಯಿಂದ ಬಳಲುವವರಿಗೆ ಶಕ್ತಿ ಕೊಡುವ ಸಂಜೀವಿನಿ "ಧಾತು" ನಷ್ಟವನ್ನು ಬಂಧಿಸಿ, ದೇಹ ಶಕ್ತಿ ಮತ್ತು ಕಾಂತಿ ಹೆಚ್ಚಿಸುವ ಮಹಾ ಟಾನಿಕ್

ಎಸ್ ಶಾಮಣ್ಣ, ಸ್ಪೆಷಲಿಸ್ಟ್,

2830 ಲಿವರ್ ಅಂಡ್ ಸ್ಕಿನ್ ಸ್ಪೆಷಲಿಸ್ಟ್‌ಶಾಲ 6 ನೇ ಕ್ರಾಸ್ ರೋಡ್, ಚಾಮುಂಡಿಪುರಂ, ಮೈಸೂರು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ಕಡಲೇಕಾಯಿ	[illegible]	[illegible]
ಹರಳುಬೀಜ	೪೦-೧೨-೦	
ಹೊಂಗೆಬೀಜ	೨೦ ೦-೦	[illegible]
ಹುರುಳಿ	[illegible]	[illegible]
ಎಳ್ಳು	[illegible]	
ಅವರೆ	[illegible]	[illegible]
ಹಲಸಂದೆ	[illegible]	[illegible]
ಹುಣಸೇಹಣ್ಣು	[illegible]	[illegible]
ತೆಂಗಿನಕಾಯಿ ೧,೦೦೦ಕ್ಕೆ	[illegible]	[illegible]

○ ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿಯನ್ನು ಕುರಿತು ಪರ್ಯಾಲೋಚಿಸಲು ಇದೇ ೧೮ ನೇ ತಾ|| ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಸಭೆಯು ನಡೆಯುವುದು ಆಹಾರ ಸಚಿವರು ಸಭೆಯಲ್ಲಿ ಭಾಗವಹಿಸುವರು

ಟೆಂಡರ್ ನೋಟಿಫಿಕೇಷನ್

1948 ನೇ ಇಸವಿಯಲ್ಲಿ ರಿಜಿಸ್ಟರಾದ 1947 ನೇ ಮಾಡಲ್ 9 ಸೀಟುಗಳ ಸ್ಟೇಷನ್ ವ್ಯಾಗನ್ ವ್ಯಾನೊಂದನ್ನು ಕೊಂಡುಕೊಳ್ಳಲು ಇಚ್ಛಿಸುವವರಿಂದ, ತಾವು ಕೊಳ್ಳಲು ಇಚ್ಛಿಸುವ ಬೆಲೆ ನಮೂದಿಸಿದ ಸೀಲಾದ ಟೆಂಡರನ್ನು 25-5-53 ನೇ ದಿನ ಮಧ್ಯಾಹ್ನ 3 ಗಂಟೆಯೊಳಗೆ ಈ ಕೆಳಗೆ ಕಂಡ ವಿಳಾಸದಲ್ಲಿ ಸ್ವೀಕರಿಸಲಾಗುವುದು ವ್ಯಾನು ಸ್ವಂತ ಉಪಯೋಗದಲ್ಲಿದ್ದು ಒಳ್ಳೆ ಕಂಡಿಷನ್ನಿನಲ್ಲಿದೆ 8000 ರೂಪಾಯಿಗಳಿಗಿಂತ ಕಡಿಮೆ ಬರುವ ಟೆಂಡರನ್ನು ಗಮನಿಸಲಾಗುವುದಿಲ್ಲ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರ ಏಜಂಟರಿಗಿದೆ ವ್ಯಾನನ್ನು ವಾಣೀವಿಲಾಸ ಮೊಹಲ್ಲಾದಲ್ಲಿರುವ ಯಶೋವಿಲಾಸದಲ್ಲಿ ನೋಡಬಹುದು.

ಏಜಂಟರು,

ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ, ಯಶೋವಿಲಾಸ ವಿ ವಿ ಮೊಹಲ್ಲಾ, ಮೈಸೂರು.

ಮೈಸೂರು

14 5-53

ಪ್ರಭುದೇವಾ ಟಾಕೀಸ್

ಪ್ರತಿ ದಿನ 3 ಆಟಗಳು

15-5-53 ನೇ :: ಶುಕ್ರವಾರದಿಂದ

(ತಮಿಳು) ಮದನ ಮಾಲಾ (ತಮಿಳು)

ಪಾತ್ರ:— ಶ್ರೀರಾಂ, ರಜನಿ ಮುಂತಾದವರು

15—5—53ರಿಂದ :: 2 ನೆಯ ವಾರ

ಮೈಸೂರು ಉಡ್‌ಲ್ಯಾಂಡ್ಸ್ ಚಿತ್ರಮಂದಿರದಲ್ಲಿ

ದಿನವಹಿ ಮೂರು ಆಟಗಳು

ಜೆ ಎಸ್. ಪಿಕ್ಚರ್ಸ್‌ರವರ ಸಂಗೀತಮಯ ಹಿಂದಿ ಚಿತ್ರ

ಜಗ್ಗು ★ (ವಯಸ್ಕರಿಗೆ ಮಾತ್ರ) ★ JAGGU

(For Adults Only)

ಪಾತ್ರ ಶ್ಯಾಮಾ, ಕುಲದೀಪ್, ಕಮಲ್ ಕಪೂರ್, ಜಗದೀಶ್ ಸೇಠಿ

For Bookings Contact NEW INDIA FILM CIRCUIT, Gandhi Nagar, Bangalore-2

15-5-53 ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ

ಪ್ರಕಾಶ್‌ರವರ ತಮಿಳು ಚಿತ್ರ

• ಪೆಟ್ರಿ ತಾಯ್ •

ಪಾತ್ರ: ಜಿ ವರಲಕ್ಷ್ಮಿ, ನಾಗೇಶ್ವರರಾವ್, ವಸಂತ, ನಂಬಿಯಾರ್, ಚೆಲ್ಲಂ

ಪ್ರತಿಯೊಬ್ಬರು ನೋಡಲೇಬೇಕಾದ ಮಹೋನ್ನತ ಚಿತ್ರ

[A PRAKASH RELEASE]

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಶಾಕ್ಸ್ಕಿನ್ ಶಾಲುಗಳಿಗೆ ★ M.V. ಭೋಜಯ್ಯ ಶ್ರೀ (ಫೋನ್ 446) ಬಿ ಎ ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೭-೫ ೧೯೫೩ [ಸಂಚಿಕೆ ೩೮

ಕರ್ನಾಟಕ ಪ್ರಾಂತಕ್ಕೆ ತುಮಕೂರು ಚಳುವಳಿ

ಬದರಿನಾಥ ಕ್ಷೇತ್ರಕ್ಕೆ ಗೌರ್ನರ್ ಮುನ್ಷಿ

ಸ್ವಂ ಸು ತಂತಿ] ಜೋಷಿಮಠ ೧೬

ಉತ್ತರ ಪ್ರದೇಶದ ಗೌರ್ನರ್ ಶ್ರೀ ಕೆ. ಎಂ. ಮುನ್ಷಿ ಮತ್ತು ಅವರ ಪತ್ನಿ ಲೀಲಾವತಿಯವರು ಈ ಬೆಳಿಗ್ಗೆ ಈ ಊರಿನ ಮೂಲಕ ಬದ್ರಿನಾಥ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದರು. ಸುಂದರವಾಗಿ ಅಲಂಕರಿಸಿದ್ದ ಮುಂಬಾಗಿಲ ಬಳಿ ಗೌರ್ನರವರಿಗೂ ಅವರ ಪತ್ನಿಯವರಿಗೂ ಸ್ವಾಗತವನ್ನು ಬಯಸಲಾಯಿತು ... ಪ್ರಾಂತದ ಶಾಸನ ಸಭಾ ಸದಸ್ಯರಾದ ... ಪ್ರಸಿಂಗ್ ರಾವಲ್‌ರವರು ಆ ಪ್ರದೇಶದ ಕುಂದುಕೊರತೆಗಳನ್ನು ಗೌರ್ನರರ ಗಮನಕ್ಕೆ ತಂದು, ಬದರಿನಾಥ ಕ್ಷೇತ್ರದ ವರೆಗೆ ... ಬಸ್ಸಿಯ ಸೇರಿಸ ಸರಬರಾಜಿಗೆ ಏರ್ಪಾಡು ಆಗಬೇಕೆಂದೂ ರಸ್ತೆಯು ರಿಪೇರಿ ... ಪ್ರಯಾಣದ ಬಳಿ ಕೆಟ್ಟು ಹೋಗಿರುವ ... ಬದಲು ಬೇರೊಂದನ್ನು ನಿರ್ಮಿಸುವುದು ಇವುಗಳ ಬಗ್ಗೆ ಕ್ರಮ ಕೈಗೊಳ್ಳುತ್ತೆಯೂ ಕೋರಿದರು. ಬದರಿ ದೇವಾಲಯಕ್ಕೆ ವಿದ್ಯುದ್ದೀಪಗಳನ್ನು ಹಾಕಲಾಗಿ ಟೆಲಿಫೋನು ಮತ್ತು ಟೆಲಿಗ್ರಾಫ್ ವ್ಯವಸ್ಥೆಗಳನ್ನು ಉತ್ತಮಗೊಳಿಸಲಾಗಿದೆ. ದಿನವೂ ನೂರಾರು ಯಾತ್ರಾರ್ಥಿಗಳು ಅಲ್ಲಿಗೆ ಹೋಗುತ್ತಿರುವರು.

ಪಶ್ಚಿಮ ಪಂಜಾಬಿನ ರಾಜಕೀಯ ಖೈದಿಗಳ ಬಿಡುಗಡೆ

ಅಹಮದೀಯ ಮುಸಲ್ಮಾನರ ವಿರುದ್ಧ ... ಪಶ್ಚಿಮ ಪಂಜಾಬಿನಲ್ಲಿ ಇತ್ತೀಚೆಗೆ ನಡೆದ ಗಲಭೆಗಳ ಸಂಬಂಧದಲ್ಲಿ ದಸ್ತಗಿರಿ ಮಾಡಿದವರನ್ನು ಬಿಡುಗಡೆ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ.

ಶಂಕರ ಜಯಂತಿ

ರಾಜಧಾನಿಯ ರಾಮಾನುಜಾ ರಸ್ತೆ ... ನೇ ನಂಬರು ಮನೆಯಲ್ಲಿ ಶ್ರೀ ಶಂಕರರು ವೆಂಕಟರಮಣಶಾಸ್ತ್ರಿಯವರ ... ರಾಜರಾಜೇಶ್ವರಿ ಸನ್ನಿಧಿಯಲ್ಲಿ ಶಂಕರ ಜಯಂತಿ ಅಂಗವಾಗಿ ನಾಳೆ ಶಂಕರ ವಿಜಯ ಪಾರಾಯಣ, ಭಜನೆ, ... ತಾದಿಗಳನ್ನು ಜಗತ್ಕಲ್ಯಾಣಾರ್ಥ ... ನಡೆಸುವರು.

ರಾಜಧಾನಿಯ ಶ್ರೀಮಂ... ವ ಹಾರಾ... ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ... ಬೆಳಿಗ್ಗೆ ೮ ಗಂಟೆಗೆ ಅಭಿಷೇಕ, ... ಗಳಾರತಿ, ಪಾನಕ ಪೂಜಾದಿಗಳೂ, ... ೭ ಗಂಟೆಗೆ ಅ|| ವಿ|| ಪಾರಣಕರ್ ... ಶ್ರೇಯರ ಭಟ್ಟರಿಂದ ಉಪನ್ಯಾಸ ... ನೆರವೇರುವುವು. ಶ್ರೀ ... ಯ್ಯಾ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು.

ನಂಜನಗೂಡಿನ ಶ್ರೀ ಶಂಕರ ಮಠದ ... ಶಂಕರ ಜಯಂತಿ ಪ್ರಯುಕ್ತ ನಾಳೆ ... ೫|| ಗೆ ವಿಜ್ಞಾನ ಮಂದಿರದ ಶ್ರೀ ... ಮೆಜ್ ಎಸ್ ವರದೇಶಿಕಾಚಾರ್ಯ ... ನ ಶ್ರೀಮಚ್ಛಂಕರ ಭಗವತ್ಪಾದರು ... ಅವರ ಹೃದಯ ಎಂಬ ವಿಷಯ ... ಉಪನ್ಯಾಸವನ್ನು ನಂಜನಗೂಡಿನ ... ಶಂಕರ ಜಯಂತಿ ಪ್ರಚಾರಿಣೀ ಸಭೆ ... ಏರ್ಪಡಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

... ೭-೩೦ ಚಂಪೈ ವೈದ್ಯನಾಥ ಭಾಗವತ ... ಕಥಾ ... ಮಧ್ಯಾಹ್ನ ೧.೩೦ ... ಕಲ್ಕತಾ ಮಹಮದ್ ... ಸಂಜೆ ೫-೩೦ ಮತ್ತು ೬-೩೦ ... ಅನಂತರಾಮಯ್ಯನವರ ಪಿಟೀಲು ... ಗಾನ ವಿಹಾರ ... ಚೂಡಾಚಾರ್ಯ ... ೭-೩೦ ಕೆ. ವೆಂಕಟರಾಮಯ್ಯ ಕನ್ನಡ ಭಾಷಣ ೮ ಮತ್ತು ೯-೩೦ ಚಿನ್ನ ... ಸಂಗೀತ ... ಇಂಗ್ಲಿಷ್ ಭಾಷಣ

ನಗೀಬರೊಡನೆ ನೆಹ್ರೂರವರ ಭೇಟಿ

ಬ್ರಿಟಿಷ್ ರಾಣಿಯವರ ಕಿರೀಟಧಾರಣೋತ್ಸವ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ಲಂಡನ್ನಿಗೆ ತೆರಳುವ ಪ್ರಧಾನಿ ನೆಹರೂರವರು ವಾಪಸು ಬರುವಾಗ್ಯೆ ಈಜಿಪ್ಟಿನ ನಾಯಕ ಜನರಲ್ ನಗೀಬ್‌ರವರನ್ನು ಭೇಟಿ ಮಾಡುವರು. ಜನರಲ್ ನಗೀಬರು ಇತ್ತ ಆಹ್ವಾನವನ್ನು ಮನ್ನಿಸಿ, ನೆಹರೂರವರು ಅವರೊಡನೆ ಸಂಭಾಷಿಸುವರಲ್ಲದೆ ಕೈರೋದಲ್ಲಿ ಒಂದೆರಡು ದಿನಗಳಿರುವರೆಂದೂ ಹೇಳಲಾಗಿದೆ.

ಚಿತ್ತೂರು ಜಿಲ್ಲಾ ಬೋರ್ಡ್ ನೌಕರರಿಗೆ ಸಂಬಳವಿಲ್ಲ

ಚಿತ್ತೂರು ಜಿಲ್ಲಾ ಬೋರ್ಡಿಗೆ ಸೇರಿದ ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರೂ ಸೇರಿ, ಒಟ್ಟು ೧,೦೦೦ ಮಂದಿ ಸಿಬ್ಬಂದಿಯವರಿಗೆ ಕಳೆದ ಮಾರ್ಚ ಮತ್ತು ಏಪ್ರಿಲ್ ತಿಂಗಳು ಸಂಬಳವನ್ನು ಕೊಟ್ಟಿಲ್ಲವೆಂದೂ, ಬೋರ್ಡಿನ ಆಯವ್ಯಯದಲ್ಲಿ ೧೦ ಲಕ್ಷ ರೂ. ಕೊರತಾ ಬಿದ್ದಿರುವುದಾಗಿಯೂ ಹೇಳಲಾಗಿದೆ. ಅಲ್ಲದೆ ನಿರ್ಮಾಣ ಕಾಮಗಾರಿಗಳನ್ನು ನಡೆಸಿದ ಅನೇಕ ಕಂಟ್ರಾಕ್ಟರುಗಳ ಬಾಕಿಯನ್ನೂ ಸಹ ಕೊಟ್ಟಿಲ್ಲವೆಂದು ಗೊತ್ತಾಗಿದೆ.

ನೇಪಾಳದಲ್ಲಿ ಸಲಹೆಗಾರರ ತಳ್ಳಿಕೆಯ ರದ್ದು

ನೇಪಾಳದಲ್ಲಿ ಸಲಹೆಗಾರರ ಆಡಳಿತವನ್ನು ರದ್ದುಗೊಳಿಸಲು ದೊರೆ ತ್ರಿಭುವನರು ನಿರ್ಧರಿಸಿರುವರು. ನೇಪಾಳ ರಾಷ್ಟ್ರ ಪ್ರಜಾ ಪಕ್ಷದ ಅಧ್ಯಕ್ಷರೂ ಮಾಜಿ ಪ್ರಧಾನಿಯೂ ಆದ ಎಂ. ಪಿ. ಕೊಯಿರಾಲಾರವನ್ನು ಪ್ರಧಾನಿಯಾಗಿ ನೇಮಿಸಲಾಗುವುದು.

ಟ್ರಂಕ್ ಟೆಲಿಫೋನಿನಲ್ಲಿ ಒಂದೇ ಬಾರಿಗೆ ಎರಡು ಕಡೆ ಮಾತಿಗವಕಾಶ

ಬೆಂಗಳೂರಿನ ದೂರವಾಣಿನಗರದಲ್ಲಿರುವ ಟೆಲಿಫೋನ್ ಕಾರ್ಖಾನೆಯವರು ಹೊಸದಾಗಿ ತಯಾರಿಸಿರುವ ಸಿಂಗಲ್ ಚಾನಲ್ ಕ್ಯಾರಿಯರ್ ಟೆಲಿಫೋನ್‌ನಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ಒಂದೇ ಹೊತ್ತಿನಲ್ಲಿ ಎರಡು ನಂಬರುಗಳಿಗೆ ಮಾತನಾಡಲು ಅವಕಾಶವಾಗುವುದು.

ಕರ್ನಾಟಕ ಪ್ರಾಂತ್ಯಕ್ಕಾಗಿ ತುಮಕೂರಿನಲ್ಲಿ ಚಳುವಳಿ

ಪ್ರಜಾ ಸಮಾಜವಾದಿ ಪಕ್ಷದವರಿಂದ ಕಾನೂನು ಭಂಗವೇ?

ತುಮಕೂರು ೧೬

ತುಮಕೂರು ಜಿಲ್ಲೆಯ ಪ್ರಜಾ ಸಮಾಜವಾದಿ ಪಕ್ಷದ ಜರೂರು ಸಭೆಯು ಕಳೆದ ಮಂಗಳವಾರ ನಡೆದು ಆಂಧ್ರ ಪ್ರಾಂತ್ಯ ಮತ್ತು ಕರ್ನಾಟಕ ಪ್ರಾಂತ್ಯಗಳನ್ನು ಏಕಕಾಲದಲ್ಲಿ ರಚಿಸಬೇಕೆಂದು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು. ಆಂಧ್ರ ಪ್ರಾಂತ್ಯವನ್ನು ರಚಿಸುವುದಕ್ಕೆ ಮುಂಚೆ ಬಳ್ಳಾರಿ ಜಿಲ್ಲೆಯ ಆಲೂರು, ರಾಯದುರ್ಗ ಮತ್ತು ಆದವಾನಿಗಳ ಭವಿಷ್ಯವನ್ನು ನಿರ್ಧರಿಸಬೇಕೆಂದೂ ಮತ್ತು ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದೂ ಒತ್ತಾಯಪಡಿಸಲಾಯಿತು. ಬಳ್ಳಾರಿ ತಾಲ್ಲೂಕು ಕನ್ನಡ ಮಾತನಾಡುವ ಒಂದು ಪ್ರದೇಶವೆಂದು ... ಆಯೋಗ ... ಅದನ್ನು ಮೈಸೂರಿಗೆ ಸೇರಿಸಬೇಕೆಂದೂ ಅಭಿಪ್ರಾಯಪಡಲಾಯಿತು. ಆಂಧ್ರ ಪ್ರಾಂತ್ಯದೊಡನೆಯೇ ಕರ್ನಾಟಕ ಪ್ರಾಂತ್ಯವನ್ನು ರಚಿಸದಿದ್ದರೆ ಅಹಿಂಸಾಯುತವಾದ ಹೋರಾಟವನ್ನು ಆರಂಭಿಸಿ ಕರ ನಿರಾಕರಣೆ, ಸಾಮೂಹಿಕ ಪಿಕೆಟಿಂಗು ಇವುಗಳಿರುವ ಕಾನೂನು ಭಂಗ ಚಳುವಳಿ ಕೈಗೊಳ್ಳಲು ನಿರ್ಧರಿಸಲಾಯಿತು.

ಪಶ್ಚಿಮ ಬಂಗಾಳದಲ್ಲಿ ೫೯ನೇ ಕಾಂಗ್ರೆಸ್ ಸಭೆ

ಪಶ್ಚಿಮ ಬಂಗಾಳದಲ್ಲಿ ಮುಂದಿನ ಜನವರಿ ತಿಂಗಳು ಅಖಿಲ ಭಾರತ ಕಾಂಗ್ರೆಸ್ಸಿನ ೫೯ ನೇ ಅಧಿವೇಶನವು ಸೇರುವುದೆಂದು ತಿಳಿದುಬಂದಿದೆ.

ಕನ್ನಡ ಪಠ್ಯ ಪುಸ್ತಕಗಳ ತರ್ಜುಮೆ ಸಮಿತಿ

ವಿಜ್ಞಾನ ಮುಂತಾದ ಪಾರಿಭಾಷಿಕ ವಿಷಯಗಳನ್ನು ಕುರಿತು ಪಠ್ಯ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಸಲುವಾಗಿ ಪ್ರೊಫೆಸರುಗಳು ಮತ್ತು ಇತರರು ಇರುವ ಸಮಿತಿಯೊಂದನ್ನು ರಚಿಸುವಂತೆ ಕೋರುವ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ ನಿರ್ಣಯವನ್ನು ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಅಂಗೀಕರಿಸಿರುತ್ತದೆ. ಕನ್ನಡದಲ್ಲಿ ವಿಶ್ವಕೋಶವನ್ನು ತಯಾರಿಸಲೂ ಏರ್ಪಾಡಾಗಬೇಕೆಂದು ಸಮಿತಿಯು ಸೂಚಿಸಿರುತ್ತದೆ.

ಭಾಷಾವಾರು ಪ್ರಶ್ನೆ ಬಗ್ಗೆ ಪ್ರಾಂತೀಯ ಭಿನ್ನತೆ ಖಂಡನೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

ಆಂಧ್ರ ಪ್ರಾಂತದ ನಿರ್ಮಾಣವಾದ ನಂತರ ಸಂಸ್ಥಾನಗಳನ್ನು ಪುನರ್ವ್ಯವಸ್ಥೆ ಮಾಡುವ ಬಗ್ಗೆ ಪ್ರಭಾವಪೂರ್ಣ ಉನ್ನತ ಸಮಿತಿಯೊಂದನ್ನು ರಚಿಸುವುದಾಗಿ ಭಾರತ ಸರ್ಕಾರದವರು ಸೂಚಿಸಿರುವುದನ್ನು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ವಾಗತಿಸಿರುತ್ತದೆ. ಈ ಸಂಬಂಧವಾಗಿ ನೆನ್ನೆ ಮಾಡಲಾದ ಸರ್ವಾನುಮತದ ನಿರ್ಣಯವು ಭಾಷಾವಾರು ಪ್ರಾಂತಗಳ ಬಗ್ಗೆ ಕಾಂಗ್ರೆಸ್ಸಿನ ನೀತಿಯನ್ನು ವಿವರಿಸಿರುವುದಲ್ಲದೆ, ಬಹು ಮುಖ್ಯ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಲು ಪ್ರೇರಿಸುವುದಕ್ಕಾಗಿ ಉಪವಾಸ ಮುಷ್ಕರ ಹೂಡುವುದನ್ನು ಖಂಡಿಸುತ್ತದೆ. ಅಲ್ಲದೆ ಆಗಾಗ್ಗೆ ಒಂದೊಂದು ಶಾಸನ ಸಭೆ ಅಥವಾ ಪ್ರದೇಶ ಕಾಂಗ್ರೆಸ್ ಸಮಿತಿಯು, ಮತ್ತೊಂದು ಸಂಸ್ಥಾನ ಅಥವಾ ಪ್ರದೇಶ ಸಮಿತಿಯ ವಿರುದ್ಧವಾಗಿ ವರ್ತಿಸುವ ಮನೋಭಾವವನ್ನು ಕುರಿತು ಕಾರ್ಯಕಾರಿ ಸಮಿತಿಯು ಆಶ್ಚರ್ಯವನ್ನು ವ್ಯಕ್ತಪಡಿಸಿರುವುದು. ಇತ್ತೀಚೆಗೆ ಬಿಹಾರ್ ಮತ್ತು ಬಂಗಾಳಾ ಶಾಸನ ಸಭೆಗಳಲ್ಲಿ ಆದ ನಿರ್ಣಯಗಳು ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯ ಕಲಾಪಗಳನ್ನು ಕುರಿತು ಮೇಲ್ಕಂಡ ನಿರ್ಣಯ ಮಾಡಲಾಗಿರುವುದೆಂದು ಭಾವಿಸಲಾಗಿದೆ.

ಸಂಸ್ಥಾನಗಳ ಪುನರ್ರಚನೆ ಬಗ್ಗೆ ಸಾಂಸ್ಕೃತಿಕ ಮತ್ತು ಭಾಷಾ ವಿಷಯಗಳಲ್ಲದೆ, ಭಾರತದ ಐಕ್ಯತೆ, ರಾಷ್ಟ್ರದ ಭದ್ರತೆ, ರಕ್ಷಣೆ, ಆಡಳಿತದ ಅನುಕೂಲ್ಯ ಹಣಕಾಸು ಇವೇ ಮುಂತಾದ ಮುಖ್ಯ ಅಂಶಗಳನ್ನು ಗಮನಿಸಬೇಕಾಗಿರುವುದೆಂದು ಸಂಸ್ಥಾನಗಳ ಪುನರ್ವ್ಯವಸ್ಥಾ ಸಮಿತಿಯಲ್ಲಿ ರಾಜಕೀಯದಲ್ಲಿ ನೇರವಾಗಿ ಭಾಗವಹಿಸದ ಪ್ರಮುಖರು ಇರುವರೆಂದೂ, ಸಮಿತಿಯನ್ನು ಈ ವರ್ಷಾಂತ್ಯದಲ್ಲಿ ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಪ್ರತಿಭಟನಾ ಸಭೆ

ರಾಜಧಾನಿಯಲ್ಲಿ ಮನೆಗಂದಾಯವನ್ನು ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆ ಸೂಚಿಸಲು ಇದೇ ೨೦ ನೇ ತಾ|| ಬುಧವಾರ ಸಂಜೆ ೬|| ಗಂಟೆಗೆ ಸುಬ್ಬರಾಯನ ಕೆರೆ ಅಂಗಳದಲ್ಲಿ ಚಾಮರಾಜಾ, ದೇವರಾಜಾ, ಕೃಷ್ಣರಾಜಾ ಮತ್ತು ಬಿಲ್ಲೆ ಮೊಹಲ್ಲಾಗಳ ಜನರ ಬಹಿರಂಗ ಸಭೆಯು ನಡೆಯುವುದು. ಶ್ರೀ ... ನಗಡೂರು ರಾಮಚಂದ್ರರಾಯರ ಅಧ್ಯಕ್ಷತೆ ವಹಿಸುವರು.

ಕಾಂಗ್ರೆಸ್ ಚುನಾವಣೆಯಲ್ಲಿ ಸ್ಪರ್ಧಿಗಳೇ ಇಲ್ಲ

ಹಾಸನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸದಸ್ಯ ಸ್ಥಾನಗಳಿಗೆ ನಡೆಯಬೇಕಾಗಿರುವ ಚುನಾವಣೆಗಳ ಸಂಬಂಧವಾಗಿ ಇಬ್ಬರು ಮಾತ್ರ ಉಮೇದುವಾರಿ ಅರ್ಜಿಗಳನ್ನು ಸಲ್ಲಿಸಿರುವರು. ಶುಲ್ಕವನ್ನು ೧೦ ರೂ.ಗೆ ಹೆಚ್ಚಿಸಿರುವುದರಿಂದ ಸ್ಪರ್ಧಿಸಲು ಯಾರೂ ಮುಂದೆ ಬರಲಿಲ್ಲವೆಂದು ಹೇಳಲಾಗಿದೆ.

ವಾರ ಭವಿಷ್ಯ

ತಾ|| ೧೭-೫-೫೩ ರಿಂದ ೨೩-೫-೫೩ ರ ವರೆಗೆ

ಮೇಷ — ಹೆಚ್ಚು ವೆಚ್ಚ, ಆರೋಗ್ಯ ಉತ್ತಮವಿಲ್ಲ, ಪರೀಕ್ಷೆಯಲ್ಲಿ ತೇರ್ಗಡೆ, ವ್ಯಾಪಾರಾದಿಗಳಲ್ಲಿ ಕ್ರಮೇಣ ಉತ್ತಮ ಸ್ಥಿತಿ, ನೌಕರಿಯಲ್ಲಿ ಮನ್ನಣೆ ತಾ|| ೨೦, ೨೧, ಪರಿವಾರ ಸಹವಾಸ, ಪ ...

ವೃಷಭ — ಅನುಚಿತ ಘಟನೆಗಳು, ಖರ್ಚು ಹೆಚ್ಚು, ಪತ್ನಿಯ ಅನಾರೋಗ್ಯ, ಮಕ್ಕಳ ಅಭಿವೃದ್ಧಿ, ಆರೋಗ್ಯದ ಕಡೆ ಗಮನವಿಡಿ ತಾ|| ೨೦, ೨೧ ಸಂತೋಷ, ವ್ಯಥಾ ಕಲಹ

ಮಿಥುನ — ಆರೋಗ್ಯಕ್ಕೆ ತೊಂದರೆ, ಮಾನ ಹಾನಿ ಪ್ರಸಂಗ, ವ್ಯಾಪಾರಾದಿಗಳಲ್ಲಿ ಗೊಂದಲ, ನೌಕರಿಯಲ್ಲಿ ವೈಮನಸ್ಯ ತಾ|| ೧೯, ೨೦ ಧನ ಚಿಂತೆ ಕ್ಲೇಶ

ಕರ್ಕ — ವಧೂವರರ ವಿವಾಹ, ಆರೋಗ್ಯ ಉತ್ತಮ ಪರೀಕ್ಷೆಯಲ್ಲಿ ತೇರ್ಗಡೆ, ವ್ಯಾಪಾರಾದಿಗಳಲ್ಲಿ ಲಾಭ ಸುಖ ಪ್ರವಾಸ ತಾ|| ೨೦, ೨೧ ಸತ್ಸಹವಾಸ ಶುಭ ವಾರ್ತೆ

ಸಿಂಹ — ಆರೋಗ್ಯ ನೆಟ್ಟಗೆ ಕಾರ್ಯ ಸಿದ್ಧಿ ಜವಾನು ತೀರಿದಾರು ತಪ್ಪು ... ಪತ್ನಿಯ ಸಹಕಾರ ತಾ|| ೧೮, ೧೯ ಶುಭ ಕಾರ್ಯ, ಗೊಂದಲ

ಕನ್ಯಾ — ಆರೋಗ್ಯ ಉತ್ತಮ, ವ್ಯಾಪಾರಾದಿಗಳಲ್ಲಿ ಸುಖ, ಆಪ್ತರಿಂದ ಲಾಭ, ನೌಕರಿಯಲ್ಲಿ ಪ್ರಶಂಸೆ, ಸುಖ ಪ್ರವಾಸ ತಾ|| ೧೮, ೧೯ ಸನ್ಮಾನ, ಆಕಸ್ಮಿಕ ಲಾಭ

ತುಲಾ — ವಿಶ್ವಾಸಿಗಳಿಂದ ಮೋಸ, ಮನೋವ್ಯಥೆ, ಹೊಡೆದಾಟ ಕಲಹ, ಪತ್ನಿಯ ಅಸಮಾಧಾನ, ನಿರುತ್ಸಾಹಕರ ವಾರ ತಾ|| ೨೦, ೨೧ ಆರ್ಥಿಕ ಚಿಂತಾ ನಿವೃತ್ತಿ, ತಾತ್ಕಾಲಿಕ ಶಾಂತಿ.

ವೃಶ್ಚಿಕ — ಅನೇಕ ಚಿಂತಾಜನಕ ಘಟನೆ, ಆರೋಗ್ಯ ಉತ್ತಮವಿರದು, ವ್ಯಾಪಾರಾದಿಗಳಲ್ಲಿ ಕ್ಲೇಶ, ನೌಕರಿಯಲ್ಲಿ ಮೇಲಿನವರ ಅತೃಪ್ತಿ, ಪ್ರವಾಸ ನಿರರ್ಥಕ, ತಾ|| ೧೮, ೧೯ ಸಂಕಟ ನಾಶ, ಚಿಂತಾ ನಾಶ

ಧನು — ಆರೋಗ್ಯ ಉತ್ತಮ, ಹಣದಿಂದ ಲಾಭ, ವ್ಯಾಪಾರಾದಿಗಳಲ್ಲಿ ಚಿಂತಾ ನಿವಾರಣೆ, ನೌಕರಿಯಲ್ಲಿ ಮನ್ನಣೆ, ಇಷ್ಟಾರ್ಥ ಸಿದ್ಧಿ ತಾ|| ೨೦, ೨೧ ಶುಭ ವಾರ್ತೆ, ಆಪ್ತರ ಭೇಟಿ.

ಮಕರ — ಆರೋಗ್ಯ ಉತ್ತಮ, ಆರ್ಥಿಕ ಸ್ಥಿತಿ ನೆಟ್ಟಗಿರದು, ಪತ್ನಿಯ ಸಹಕಾರ, ವ್ಯಾಪಾರಾದಿಗಳಲ್ಲಿ ಸಾಮರಸ್ಯ. ತಾ|| ೧೮, ೧೯ ಪ್ರವಾಸ, ಶುಭ

ಕುಂಭ — ಆತ್ಮರಕ್ಷಣೆ ಮಾಡಿಕೊಳ್ಳಿ, ಶತ್ರುವಿನ ತೊಂದರೆ, ಪ್ರಿಯಜನ ವಿಯೋಗ, ಪ್ರವಾಸ ಬೇಡ, ಮಾರ್ಗದಲ್ಲಿ ಅಪಘಾತ, ತಾ|| ೧೮, ೨೦ ಪ್ರಾಣಿಗಳಿಂದ ಹಾನಿ, ಅಗ್ನಿಭಯ

ಮೀನ — ಆರೋಗ್ಯ ನೆಟ್ಟಗೆ, ಪವಿತ್ರ ಕ್ಷೇತ್ರ ದರ್ಶನ, ನೌಕರಿಯಲ್ಲಿ ಪ್ರಶಂಸೆ, ವ್ಯಾಪಾರಾದಿಗಳಲ್ಲಿ ಲಾಭ ತಾ|| ೧೮, ೧೯ ಮಹತ್ವದ ಪತ್ರ, ಲಾಭ

ಷೇಕ್ ಅಬ್ದುಲ್ಲಾ ಮತ್ತು ಮುಖರ್ಜಿ ಭೇಟಿ

ಜಮ್ಮುವಿನಲ್ಲಿ ದಸ್ತಗಿರಿಯಾಗಿ ಶ್ರೀನಗರಕ್ಕೆ ಕರೆತರಲ್ಪಟ್ಟಿರುವ ಭಾರತೀಯ ಜನಸಂಘದ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರೊಡನೆ ಮೊನ್ನೆ ಷೇಕ್ ಅಬ್ದುಲ್ಲಾರವರು ಜಮ್ಮು ಪರಿಸ್ಥಿತಿಯ ಬಗ್ಗೆ ಮಾತುಕತೆ ನಡೆಸಿದವರೆಂದು ವರದಿಯಾಗಿದೆ

ಎಚ್. ಸಿ. ನಾಗಯ್ಯರೆಡ್ಡಿಯವರಿಗೆ ಉತ್ತರ

ಕರ್ನಾಟಕ ಏಕೀಕರಣದ ಬಗ್ಗೆ ಕೇಂದ್ರೀಯ ಶಾಸನ ಸಭಾ ಸದಸ್ಯರಾದ ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು ಕೊಟ್ಟಿದ್ದ ಹೇಳಿಕೆ ಬಗ್ಗೆ ರಾಜಧಾನಿಯಲ್ಲಿರುವ ಶ್ರೀ ಬೇಲೂರು ರಂಗಸ್ವಾಮಿರವರು ಉತ್ತರವನ್ನು ಕೊಟ್ಟು ಸಂಸ್ಥಾನದ ... ಜನರು ಏಕೀಕರಣವನ್ನು ವಿರೋಧಿಸಿದ ವರೆಗೆ ... ಶ್ರೀ ರೆಡ್ಡಿ ... ಏಕೀಕರಣಕ್ಕೆ ವಿರೋಧವನ್ನು ಸೂಚಿಸಿರುವವನ್ನೂ ಅವರು ಓದಲಿ, ಸದರಿ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಜನಮತ ಪಡೆದಿದ್ದರೇ ಎಂದೂ ಪ್ರಶ್ನಿಸಿರುವರು ಶ್ರೀ ಹನುಮಂತಯ್ಯನವರ ಹೇಳಿಕೆಯು ನೆಹರೂರವರಿಗೆ ಸವಾಲು ಹಾಕುವ ರೀತಿಯಲ್ಲಿದ್ದರೆ ಶ್ರೀ ರೆಡ್ಡಿಯವರ ಹೇಳಿಕೆಯು ಗಾಂಧೀಜಿಯವರಿಗೆ ಸವಾಲು ಹಾಕಿದಂತಾಗಿದೆಯೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ ಕರ್ನಾಟಕ ಏಕೀಕರಣದಿಂದ ಮೈಸೂರಿನ ಅಸ್ತಿತ್ವವು ಉಳಿಯುವುದಲ್ಲದೆ, ಬೆಳೆಯುವುದೆಂದೂ ಅವರು ಹೇಳಿರುವರು

||ಶ್ರೀ||

ಜಗದಂಬಾ ಶಿಶುವಿಹಾರ

೨೬೩ ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಲ್ಪಟ್ಟ ಶ್ರೀ ಜಗದಂಬಾ ಶಿಶುವಿಹಾರವನ್ನು ಪುನಃ ಇಂದಿನಿಂದ ತೆರೆಯಲಾಗಿದೆ ಕಿಂಡರ್ ಗಾರ್ಟನ್, ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಪದ್ಧತಿಗಳನ್ನನುಸರಿಸಿ, ಮಿಡಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕೂಡಲೇ ಮಾರ್ಗದ ಪಾಲಕರುಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ
ಡೈರೆಕ್ಟರ್

ಹೆಂಡತಿ ಒಡವೆ ಕೊಡದಿದ್ದುದ್ದಕ್ಕೆ ಮಗುವನ್ನು ಹಿಚಿಕಿದ

ಕರ್ನೂಲ್ ಬಳಿ ಉಲ್ಲಚ್ ಎಂಬ ಹಳ್ಳಿಯಲ್ಲಿ ಶಿವಣ್ಣ ಎಂಬಾತನು ಕಳೆದ ಗುರುವಾರ ತನ್ನ ಪತ್ನಿ ಲಕ್ಷ್ಮಮ್ಮನು ಒಡವೆಗಳನ್ನು ತೆಗೆದುಕೊಡುವಂತೆ ಬಲವಂತ ಮಾಡಿದನೆಂದೂ, ಆದರೆ ಆಕೆಯು ನಿರಾಕರಿಸಲು ೧೧ ತಿಂಗಳಿನ ಅವರ ಮಗುವಿನ ಕೈಕಾಲುಗಳನ್ನು ಮುಲುಕಿ, ಮುರಿದು ಓಡಿಹೋದನೆಂದೂ ವರದಿಯಾಗಿದೆ ಮಗುವು ಆಸ್ಪತ್ರೆಯಲ್ಲಿದೆ

ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ ಷೀಲ್ಡು

ನೆನ್ನೆ ಮಂಡ್ಯದಲ್ಲಿ ನಡೆದ ಮೈಸೂರು ಪ್ರಾಂತ್ಯ ಸಹಕಾರ ಸಮ್ಮೇಳನದಲ್ಲಿ ರಾಜಧಾನಿಯ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ ಎ ಕೃಷ್ಣರಾವ್ ಸ್ಮಾರಕ ಷೀಲ್ಡು ಬಂದಿರುತ್ತದೆ ಸದರಿ ಬ್ಯಾಂಕು ನಗರ ಪ್ರದೇಶಗಳಲ್ಲಿರುವ ಸಹಕಾರ ಸಂಘಗಳ ಪೈಕಿ ಅತ್ಯುನ್ನತವಾದುದೆಂದು ಪರಿಗಣಿಸಲ್ಪಟ್ಟಿದೆ

ಬಸವ ಜಯಂತಿ

ರಾಜಧಾನಿಯ ಕೃಷ್ಣರಾಜಮೊಹಲ್ಲ ವೀರಶೈವ ಮಂಡಲಿಯವರು ಪ್ರಭುದೇವ ಟಾಕೀಸ್ ಸರ್ಕಲ್ ಬಳಿ ಇರುವ ಶ್ರೀ ತಿಮ್ಮಪ್ಪಾಜಿಯವರ ಕಟ್ಟಡದಲ್ಲಿ ಬಸವ ಜಯಂತಿ ಅಂಗವಾಗಿ, ಈ ರಾತ್ರಿ ೯|| ಗಂಟೆಗೆ ಶ್ರೀ ಪಿ ರಾಮಸ್ವಾಮಿ ಮತ್ತು ಶ್ರೀ ಗುರುರಾಜನಾಯ್ಡುರವರಿಂದ ಇಂದ್ರಕೀಲ ಎಂಬ ಕಥೆಯೂ, ನಾಳೆ ಸಂಜೆ ೬ ಗಂಟೆಗೆ ಬಸವೇಶ್ವರರ ಉತ್ಸವವೂ ನಡೆಯುವುವು.

ರಾಜಕಮಲ್, ಮೈಸೂರು

15-5-53 ರಿಂದ :: ಪ್ರದರ್ಶನಾರಂಭ

ವಿಜಯಾರವರ ತೆಲುಗು ಚಿತ್ರ

ಮದುವೆ ಮಾಡಿ ನೋಡು

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ

ದಿಲ್ ಖುಷ್

ಸ್ತ್ರೀ ಪುರುಷರ ಜೀವನಾಧಾರ ಮಹಾ ಟಾನಿಕ್

1) ಸಿಡುಬಿನ ಕಲೆ, ಗಾಯದ ಗುರುತು ಮತ್ತು ಮೊಡವೆ ಗುಳ್ಳೆಗಳು ಪ್ರಯೋಗಿಸಿದ ಮಾರನೇ ದಿನದಿಂದಲೇ ಆಶ್ಚರ್ಯಕರವಾದ ರೀತಿಯಲ್ಲಿ ಹೋಗುವ ಬದಲಾವಣೆಯನ್ನು ತೋರಿಸುವುದಲ್ಲದೆ ಕೂದಲು ಬೆಳೆಯದಿದ್ದಲ್ಲಿ ಬೆಳೆಸುತ್ತದೆ. ಚರ್ಮ ರೋಗಗಳನ್ನು ನಿರ್ಮೂಲ ಮಾಡುತ್ತದೆ ಮುಖದ ಕಾಂತಿಯನ್ನು ಹೆಚ್ಚಿಸುವುದು.

2) ಸ್ತ್ರೀಯರ ಬಹಿಷ್ಠ ಕಾಲದ "ಹೊಟ್ಟೆ ಶೂಲೆ"ಯೇ ಮೊದಲಾದ ಉಪದ್ರವ, ಅತಿಸಾರ, ಪ್ರಾಣಾಂತ ಕ್ಷಯ, ಪುರುಷರಲ್ಲಿ ... ಕೈಯಾಗದಿರುವುದನ್ನು ... ಸಂಜೀವನ "ಧಾತು" ನಷ್ಟವನ್ನು ಬಂಧಿಸಿ, ದೇಹ ಶಕ್ತಿ ಮತ್ತು ಕಾಂತಿ ಹೆಚ್ಚಿಸುವ ಮಹಾ ಟಾನಿಕ್

ಎಸ್ ಕಾಮಯ್ಯ, ಸ್ಪೆಷಲಿಸ್ಟ್,

2830 ಲಿವರ್ ಅಂಡ್ ಸ್ಕಿನ್ ಸ್ಪೆಷಲಿಸ್ಟ್, 6 ನೇ ಕ್ರಾಸ್ ರೋಡ್, ಚಾಮುಂಡಿಪುರಂ, ಮೈಸೂರು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೩೮ ೦-೦	೩೧-೦-೦
ಹರಳುಬೀಜ	೪೦ ೦-೦	೪೨-೧೦-೦
ಹೊಂಗೆಬೀಜ	೨೨ ೦-೦	
ಹುರುಳಿ	೪೩ ೨-೦	೪೪ ೦-೦
ಅವರೆ	೪೧-೨-೦	೫೧ ೮-೦
ಹಲಸಂದೆ	೪೬-೦-೦	೫೬-೧೨-೦
ಬೆಂಡಿನಕಾಯಿ	೧೬ ೧೦-೦	೨೨-೪-೦
ಹುಣಿಸೇಹಣ್ಣು	೪ ೫ ೦	೬ ೧೨-೦
ಸೀಗೆಕಾಯಿ	೫ ೦-೦	೫-೪-೦
ಬೆಲ್ಲ	೬-೧೨-೦	೭ ೦-೦
ತೆಂಗಿನಕಾಯಿ ೧,೦೦೦ಕ್ಕೆ	೧೪೬-೦-೦	೨೩೬ ೦-೦

ಬಸವೇಶ್ವರರ ವಚನಗಳು

ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಹಿಂದಿ ಅಧ್ಯಾಪಕರಾಗಿರುವ ಶ್ರೀ ಮೈ|| ರಾಜೇಶ್ವರಯ್ಯನವರು ಬಸವೇಶ್ವರರ ವಚನಗಳ ಬಗ್ಗೆ ರಚಿಸಿರುವ ಹಿಂದಿ ಗ್ರಂಥವು ನಮ್ಮ ಹಸ್ತಗತವಾಗಿದೆ ಬಸವಣ್ಣನವರು ಹೇಳಿರುವ ಅನೇಕ ವಚನಗಳಲ್ಲಿ ಹಲವನ್ನು ಆರಿಸಿ ಹಿಂದೀ ಮಾಡಿಕೊಳ್ಳಲಾಗಿದೆ ಗಾಂಧಿ ಮತ್ತು ಬುದ್ಧರಂತೆ ಬಸವೇಶ್ವರರೂ ಒಬ್ಬ ಅವತಾರ ಪುರುಷರೆಂಬುದನ್ನು ತೋರ್ಪಡಿಸುವ, ಅವರ ಜೀವನ ಮತ್ತು ವಚನಗಳು ಬಹು ಉನ್ನತವಾಗಿವೆ ಉತ್ತರ ಭಾರತದ ಜನರು ವಚನಾಮೃತವನ್ನು ಓದಿ ಅದರ ರಸವನ್ನು ಆಸ್ವಾದನೆ ಮಾಡಲು, ಅಪಾರದಂತಹ ವಚನಗಳನ್ನು ಗ್ರಂಥಕರ್ತರು ಎತ್ತಿ ತೋರಿಸಿರುತ್ತಾರೆ ಮೇಲಾಗಿ ಗ್ರಂಥಕ್ಕೆ ಬಿಹಾರಿನ ಗೌರ್ನರ್ ಶ್ರೀ ಆರ್ ಆರ್ ದಿವಾಕರ್‌ರವರು ಮುನ್ನುಡಿ ಬರೆದಿರುವರು ಹಿಂದಿ ಪ್ರೇಮಿಗಳೆಲ್ಲರೂ ಅವಶ್ಯವಾಗಿ ಓದಬೇಕಾದ ಗ್ರಂಥವಿದು. ಇದರ ಬೆಲೆ ೧ ರೂ

ನೋಟೀಸು

ಮೈಸೂರು ಕನ್ನೇಗೌಡನ ಕೊಪ್ಪಲಿನಲ್ಲಿರುವ ಲೇಟ್ ಸಣ್ಣೇಗೌಡರ ಹೆಂಡತಿ ಲಕ್ಷಮ್ಮನು ಈ ಮೂಲಕ ಪ್ರಚುರಪಡಿಸುವುದೇನೆಂದರೆ :—

ಇದೇ ಮೇ ಮಾಹೆ ೧೧ನೇ ತಾರೀಕಿನ ದಿನ ಕನ್ನೆಗೌಡನ ಕೊಪ್ಪಲು ಹೊಸಬೀದಿಯ ದಾಸೇಗೌಡನ ಗರಡಿ ಯಜಮಾನರುಗಳಾದ ಶ್ರೀಗಳು ಕರೀಗೌಡ, ಸಿದ್ದೇಗೌಡ ವಗೈರೇರು ಸೇರಿ ತಾವು ಪಂಚಾಯ್ತಿ ತೀರ್ಮಾನ ಮಾಡಿರುವುದಾಗಿ ತಿಳಿಸಿ, ಆ ಸಂಬಂಧದ ಕಾಗದವೊಂದಕ್ಕೆ ಬಲಾತ್ಕಾರವಾಗಿ ನನ್ನ ರುಜು ಪಡೆದು, ನನ್ನಲ್ಲಿರುವ ನಮ್ಮ ಯಜಮಾನರ ವಿಲ್ಲು ಪತ್ರವನ್ನು ಕೊಡಬೇಕೆಂದೂ, ಅದನ್ನು ಕೊಟ್ಟರೆ ಪತ್ರದ ಸಾರಾಂಶವನ್ನು ಹೇಳಿ, ಹಿಸ್ಸೆ ಕೊಡಿಸುತ್ತೇವೆ, ಇಲ್ಲದಿದ್ದರೆ ಏನೂ ಕೊಡುವುದಿಲ್ಲವೆಂದು ತಿಳಿಸಿ, ನಾನು ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ಬಿಡದೆ ಬಲಾತ್ಕಾರವಾಗಿ ಮಾಡಿಸಿಕೊಂಡಿರುವ ಯಾವ ಪಂಚಾಯ್ತಿ ಕಾಗದವೂ ನನ್ನನ್ನಾಗಲೀ, ನನ್ನ ಹಿಸ್ಸೆ ಹಕ್ಕು ಬಾಧ್ಯತೆಯನ್ನಾಗಲೀ ಬದ್ಧಪಡಿಸತಕ್ಕದ್ದಲ್ಲ ಮತ್ತು ಆ ಕ್ರಮಗಳೆಲ್ಲವೂ ನೋಸಕರವಾದುವು ಎಂದು ತಿಳಿಸಿರುತ್ತೇನೆ.

O ಈ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು ಲಕ್ಷಮ್ಮ ಹಾಕಿದ್ದು

16-5-53

NEW NURSERY SCHOOL

at

CHRIST THE KING CONVENT

(Near Sri Ganesh Talkies)

To be opened on

22-5-53

For Particulars Apply to The Manager

Printed by S. K. Nagarajan at Sadhvi Press, D. Subb-

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೮-೫-೧೯೫೩ [ಸಂಚಿಕೆ ...

ಕೊರಿಯಾ ರಂಗದಲ್ಲಿ ಭೀಕರ ಕಾಳಗ

ಬೀಡಿ ಕಾರ್ಮಿಕರು ಮತ್ತು ಮಾಲೀಕರಲ್ಲಿ ಒಪ್ಪಂದ

ಮೈಸೂರು ೧೮

ರಾಜಧಾನಿಯ ಸವರ್ ಬೀಡಿ ಕಾರ್ಖಾನೆ ಕೆಲಸಗಾರರು ಮತ್ತು ಮಾಲೀಕರುಗಳ ನಡುವೆ ಉಂಟಾಗಿದ್ದ ವಿವಾದವು ನೆನ್ನೆ ಇತ್ಯರ್ಥವಾಗಿ ಕೆಲಸಗಾರರನ್ನು ಉದ್ಯೋಗದ ಮೇಲೆ ತೆಗೆದುಕೊಳ್ಳುವುದಾಗಿ ಮಾಲೀಕರು ಭರವಸೆಯಿತ್ತರು. ಬೀಡಿ ಕೆಲಸಗಾರರು ಒಪ್ಪಕ್ಕೆ ಮುಂಚೆ ಮೆರವಣಿಗೆಯನ್ನು ನಡೆಸಿದರು. ಮೊನ್ನೆ ಕಾರ್ಖಾನೆಯ ಮುಂಭಾಗದಲ್ಲಿ ಐದು ಮಂದಿ ಉಪವಾಸ ಪ್ರಾರಂಭಿಸಲಾಗಿ, ಮಂದಿ ಪೋಲೀಸರು ಅವರನ್ನು ಠಾಣೆಗೆ ಕರೆದೊಯ್ದರು. ಅನಂತರ ಇನ್ನು ನಾಲ್ಕು ಜನರು ನೆನ್ನೆ ಬೆಳಿಗ್ಗೆ ಉಪವಾಸಕ್ಕೆ ಕುಳಿತರು. ಅವರನ್ನೂ ಕರೆದೊಯ್ಯಲಾಯಿತು. ಒಂಭತ್ತು ಜನರನ್ನೂ ಪೋಲೀಸರು ರಾತ್ರಿ ಬಿಟ್ಟುಬಿಟ್ಟರು. ಕಾರ್ಮಿಕರ ವಿವಾದದ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಸಲ್ಲಿಸಲಾಗಿತ್ತು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು ಕಾರ್ಮಿಕರ ಮುಖಂಡರನ್ನೂ ಮತ್ತು ಮಾಲೀಕರನ್ನೂ ಕರೆದು ಸಂಧಾನ ನಡೆಸಿದ ಪರಿಣಾಮವಾಗಿ ಒಂದು ಒಪ್ಪಂದವಾಯಿತು.

ರೇಡಿಯೋ ವರ್ತಕರ ಮೇಲೆ ಕೋರ್ಟಿನಲ್ಲಿ ದೂರು

ರಾಜಧಾನಿಯ ವೈರ್‌ಲೆಸ್ ಇನ್ಸ್ಪೆಕ್ಟರು ದೊಡ್ಡ ಗಡಿಯಾರದ ಬಳಿ ಇರುವ ಶ್ರೀ ಎಸ್ ಎಂ ಇಸ್ಮೇಲ್ ಎಂಬ ರೇಡಿಯೋ ವ್ಯಾಪಾರಿಗಳ ಮೇಲೆ ತಮ್ಮ ... ಎಲ್ ಬ್ರಾಡ್‌ಕ್ಯಾಸ್ಟ್ ರಿಸೀವಿಂಗ್ ಲೈಸೆನ್ಸ್ ಫೀ ಕಟ್ಟಲಿಲ್ಲವೆಂಬ ಆರೋಪದ ಮೇಲೆ ನಗರದ ಪ್ರಥಮ ನ್ಯಾಯಸ್ಥಾನದಲ್ಲಿ ಫಿರ್ಯಾದು ಸಲ್ಲಿಸಿದರು. ನೆನ್ನೆ ದಿನ ಈ ಸಂಬಂಧವಾಗಿ ನಡೆಯಬೇಕಾಗಿದ್ದ ವಿಚಾರಣೆಗೆ ಪಿರ್ಯಾದಿದಾರರು ಹಾಜರಾಗದ ಕಾರಣ ನ್ಯಾಯಾಧೀಶರು ಆಪಾದಿತರ ಮೇಲೆ ಮುಂದಿನ ನಡವಳಿಕೆಗಳನ್ನು ನಿಲ್ಲಿಸಿರುತ್ತಾರೆ.

ಮೈಸೂರು ತಾಲ್ಲೂಕಿನ ನೂತನ ಅಮಲ್ದಾರರು

ಬೆಂಗಳೂರು ... ಮತ್ತು ಉಕ್ಕಿನ ಕಾರ್ಖಾನೆ ಅಸಿಸ್ಟೆಂಟ್ ಕಂಟ್ರೋಲರಾದ ಶ್ರೀ ಮುನಿದೇವಪ್ಪನವರು ಮೈಸೂರು ತಾಲ್ಲೂಕು ಅಮಲ್ದಾರರಾಗಿ ನೇಮಕ ಮಾಡಲ್ಪಟ್ಟು ಈ ದಿನ ತಮ್ಮ ಹುದ್ದೆಯ ಅಧಿಕಾರ ವಹಿಸಿಕೊಂಡರು.

ಮಲಗಿದ್ದವರನ್ನು ಹೊಡೆದುದರಿಂದ ಇಬ್ಬರ ಮರಣ

ನರಸಿಂಹರಾಜಪುರದ ಬಳಿ ಇರುವ ... ಹಳ್ಳಿಯಲ್ಲಿ ಕಳೆದ ೧೫ನೇ ತಾ|| ... ಜಮೀನ್‌ದಾರ್ ಶ್ರೀ ಕೆ. ನಾರಾಯಣರಾಯರು ತಮ್ಮ ಮಕ್ಕಳ ಸಮೇತ ... ಪಕ್ಕದ ಮನೆಯಲ್ಲಿ ನಿದ್ರಿಸುತ್ತಿದ್ದಾಗ, ಮಧ್ಯ ರಾತ್ರಿಯಲ್ಲಿ ಯಾರೋ ದುಷ್ಕರ್ಮಿಗಳು ಕಬ್ಬಿಣದ ಕೋಲಿನಿಂದ ಅವರನ್ನೂ ಅವರ ೪ ಮಕ್ಕಳನ್ನೂ ಹೊಡೆದು ಗಾಯಪಡಿಸಿದರೆಂದೂ, ಅದರ ಪರಿಣಾಮವಾಗಿ ಶ್ರೀ ನಾರಾಯಣರಾಯರೂ ಮತ್ತು ಅವರ ದೊಡ್ಡ ಮಗಳು ಶ್ರೀಮತಿ ಅಂಜನಾದೇವಿಯವರು ಶಿವಮೊಗ್ಗಾ ಆಸ್ಪತ್ರೆಯಲ್ಲಿ ಮೃತರಾದರೆಂದೂ ವರದಿಯಾಗಿದೆ. ಒಬ್ಬ ಬಾಲಕನನ್ನು ಹಾರ್ನಹಳ್ಳಿ ಸಮೀಪದ ಆಸ್ಪತ್ರೆಗೆ ಸೇರಿಸಿ, ಉಳಿದವರನ್ನು ಶಿವಮೊಗ್ಗೆಗೆ ಕರೆದೊಯ್ಯಲಾಗಿದ್ದಿತು.

ಜೂಜಿನ ಕುದುರೆಯ ಕಾಲು ಮುರಿಯಿತು

ಮೈಸೂರು, ೧೮

ಬೊಂಬಾಯಿನ ಶ್ರೀ ... ಎಂ ಷಾ ಎಂಬುವರಿಗೆ ಸೇರಿದ ಪ್ರ್ಯಾಂಡರ್ ಚಾಂಪ್ಸ್ ಎಂಬ ಜೂಜಿನ ಕುದುರೆಯು ಮೊನ್ನೆ ಬೆಳಿಗ್ಗೆ ಇಲ್ಲಿನ ರೇಸ್ ಕೋರ್ಸಿನಲ್ಲಿ ಪ್ರಯೋಗದ ಓಟ ನಡೆಸುತ್ತಿದ್ದಾಗ ಅದರ ಒಂದು ಕಾಲು ಮುರಿಯಿತು. ತರುವಾಯ ಅದನ್ನು ಇಂಜಕ್ಷನ್ ಕೊಟ್ಟು ಸಾಯಿಸಲಾಯಿತು.

ಉಪನ್ಯಾಸ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆಯುತ್ತಿರುವ ಶ್ರೀ ಶಂಕರ ಜಯಂತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ಅಭಿನವ ಶಂಕರಾಲಯದ ಮಹಾವಿದ್ವಾನ್ ಪಾಲಘಾಟ್ ನಾರಾಯಣಶಾಸ್ತ್ರಿಗಳವರು ಶ್ರೀ ಶಂಕರಾಚಾರ್ಯರಿಂದಾಗಿರುವ ಲೋಕೋಪಕಾರ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಡಾ|| ನಾರಾಯಣ ಶಾಸ್ತ್ರಿಯವರಿಗೆ ಬ್ರಿಟಿಷ್ ಗೌರವ

ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿರುವ ಡಾ|| ಎ ಎಸ್ ನಾರಾಯಣ ಶಾಸ್ತ್ರಿಯವರಿಗೆ ಬ್ರಿಟನ್ನಿನ ಮನಶ್ಶಾಸ್ತ್ರಜ್ಞರಿಗೆ ಕೊಡಲಾಗುವ ಗೌರವ ಪ್ರಶಸ್ತಿಯನ್ನು ಕೊಡಲಾಗಿದೆ. ಈ ಗೌರವವನ್ನು ಪಡೆಯುವುದರಲ್ಲಿ ಭಾರತೀಯರಲ್ಲೈಕೆ ಇವರೇ ಮೊದಲಿನವರು. ಅವರು ಈಗ ಲಂಡನ್ನಿನಲ್ಲಿರುವರು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಹಲವು ಕಾಲ ಅವರು ಅಧ್ಯಾಪಕರಾಗಿದ್ದರು.

೧ನೇ ದರ್ಜೆಯಲ್ಲಿ ಪಾಸಾಗದ ವಿದ್ಯಾರ್ಥಿಯ ಆತ್ಮಹತ್ಯ

ಪಂಜಾಬ್ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಗೆ ಕುಳಿತಿದ್ದ ದೆಹಲಿಯ ಗೆಜೆಟೆಡ್ ಅಧಿಕಾರಿಯೊಬ್ಬರ ೧೬ ವರ್ಷದ ಮಗನು ನೆನ್ನೆ ಪರೀಕ್ಷಾ ಫಲಿತಾಂಶವನ್ನು ನೋಡಿ ತಾನು ಪ್ರಥಮ ದರ್ಜೆಯಲ್ಲಿ ಪಾಸಾಗುವುದರ ಬದಲು ದ್ವಿತೀಯ ದರ್ಜೆಯಲ್ಲಿ ಪಾಸಾದುದರಿಂದ ಖಿನ್ನನಾಗಿ ಮನೆಗೆ ಬಂದು ತನ್ನ ತಂದೆಯ ಬಂದೂಕದಿಂದ ಹೊಡೆದುಕೊಂಡು ಪ್ರಾಣ ನೀಗಿದನೆಂದು ವರದಿಯಾಗಿದೆ.

ಅರ್ಜೆಂಟೈನಾ ಅಧ್ಯಕ್ಷರ ಕೊಲೆ ಪ್ರಯತ್ನ

ಅರ್ಜೆಂಟೈನಾ ದೇಶದ ಅಧ್ಯಕ್ಷ ಪೆರಾನರವರು ಕಳೆದ ಬುಧವಾರ ಮಂತ್ರಿ ಮಂಡಲದ ಸಭೆಯಲ್ಲಿ ಭಾಗವಹಿಸಿದ್ದಾಗ ಅವರನ್ನೂ, ಅವರ ಪ್ರಮುಖ ಬೆಂಬಲಿಗರನ್ನೂ ಕೊಲ್ಲಲು ಯೋಚಿಸಿದ್ದ ಭಯೋತ್ಪಾದಕರ ಗುಪ್ತಪಿತೂರಿಯನ್ನು ಅಲ್ಲಿನ ಪೋಲೀಸರು ಪತ್ತೆ ಹಚ್ಚಿರುತ್ತಾರೆ. ಮಂತ್ರಿ ಮಂಡಲ ನಡೆಯುವ ಸಮಯಕ್ಕೆ ಸರಿಯಾಗಿ ಅವರು ೩ ಕಾರುಗಳಲ್ಲಿ ಬಂದು ಸಭಾ ಕೊಠಡಿಗೆ ಹಲವರು ಪ್ರವೇಶಿಸಿ ಕೈ ಬಾಂಬುಗಳನ್ನೆಸೆಯಬೇಕೆಂದೂ, ಇತರರು ಹೊರಗಡೆ ಕಾವಲು ಇರಬೇಕೆಂದೂ ಹಂಚಿಕೆ ಹಾಕಿಕೊಂಡಿದ್ದರೆಂದು ಹೇಳಲಾಗಿದೆ.

ಕೊರಿಯಾ ಮೇಲೆ ಅಣು ಬಾಂಬು ಹಾಕುವ ಪ್ರಯತ್ನ

ಕೊರಿಯಾ ಮೇಲೆ ಅಣು ಬಾಂಬು ಹಾಕಲು ಆಲೋಚಿಸಲಾಗುತ್ತಿರುವುದೆಂದು ಅಮೆರಿಕದ ವಿಮಾನಾಧಿಕಾರಿಯೊಬ್ಬರು ತಿಳಿಸಿರುವರು.

ಸಂಸ್ಥಾನ ಸಹಕಾರ ಸಂಸ್ಥೆಗೆ ಆಯ್ಕೆ

ಮೊನ್ನೆ ಮಂಡ್ಯದಲ್ಲಿ ಸೇರಿದ ಸಂಸ್ಥಾನ ಸಹಕಾರ ಸಮ್ಮೇಳನದ ಅಂಗವಾಗಿ ಸಂಸ್ಥಾನದ ಸಹಕಾರ ಸಂಸ್ಥೆಗೆ ಚುನಾವಣೆಯು ನಡೆದು ವ್ಯಕ್ತಿಗಳ ಪರವಾಗಿ ೧೫ ಮಂದಿಯೂ, ಸಂಸ್ಥೆಗಳ ಪರವಾಗಿ ೩೫ ಮಂದಿಯೂ ಆರಿಸಲ್ಪಟ್ಟರು. ವ್ಯಕ್ತಿಗಳ ಪರವಾಗಿ ಶ್ರೀಗಳು ಎಂ ಆರ್ ಸಿ ಬಸಪ್ಪ, ಪಿ ಗೋಪಾಲಕೃಷ್ಣ ಶೆಟ್ಟಿ, ಟಿ ಎಲ್. ಕಲ್ಲಯ್ಯ, ಎಂ ಪಿ. ಎಲ್ ಶಾಸ್ತ್ರಿ, ಆರ್ ಕೆ. ಜಯತೀರ್ಥಾಚಾರ್, ಆರ್ ಎಸ್ ನಾರಾಯಣ್, ಎಸ್ ಸತ್ಯಮೂರ್ತಿ, ಬಿ ಆರ್ ಲಕ್ಷ್ಮಣಶೆಟ್ಟಿ, ಬಿ ಗೋಪಾಲಾಚಾರ್, ಎಂ ಆರ್ ವೆಂಕಟಕೃಷ್ಣಯ್ಯ, ಎ ಕೃಷ್ಣಮೂರ್ತಿರಾವ್, ಜೆ. ಜನಾರ್ಧನ ನಾಯ್ಡು, ವೈ ಶ್ರೀನಿವಾಸಯ್ಯ ಮತ್ತು ಟಿ ಶ್ರೀನಿವಾಸಯ್ಯ. ಸಂಸ್ಥೆಗಳ ಪರವಾಗಿ ಆರಿಸಿ ಬಂದವರಲ್ಲಿ ಶ್ರೀಗಳು ಎಸ್ ಶ್ರೀನಿವಾಸ್, ಎ ಎ ರಾಮರಾವ್, ಸಿ ರಾಜಗೋಪಾಲಾಚಾರ್, ಎಂ ಎ ರಾಮಚಂದ್ರಜೋಯಿಸ್, ವಿ. ಲಿಂಗಪ್ಪಯ್ಯ, ಎಂ. ಬಿ ಟಿ ನಾರಾಯಣ್ ಮುಂತಾದವರು ಇರುವರು.

ಕೊರಿಯಾದಲ್ಲಿ ಪುನಃ ಭೀಕರ ಕಾಳಗ

ಕೊರಿಯಾದ ಪುಕ್ಹಾನ್ ನದಿ ಬಳಿ ಚೀಣೀಯರಿಗೂ ದಕ್ಷಿಣ ಕೊರಿಯನ್ನರಿಗೂ ನೆನ್ನೆ ಭೀಕರ ಕಾಳಗವೇ ನಡೆಯಿತೆಂದು ಹೇಳಲಾಗಿದೆ. ಒಂದು ಸಾರಿ ಚೀಣೀಯರನ್ನು ಕಮ್ಯೂನಿಸ್ಟರ ಮೃತ್ಯುಜಾಲದಲ್ಲಿ ಸಿಕ್ಕಿಸಿದ್ದರು. ಮೊನ್ನೆ ರಾತ್ರಿ ಕಮ್ಯೂನಿಸ್ಟರು ವಶಪಡಿಸಿಕೊಂಡಿದ್ದ ಎರಡು ಸ್ಥಳಗಳನ್ನು ದಕ್ಷಿಣ ಕೊರಿಯನ್ನರು ಪುನಃ ಕಿತ್ತುಕೊಂಡರು. ಪೆಸಿಫಿಕ್ ಸಾಗರದ ಓಕಿನಾವಾ ದ್ವೀಪಗಳಲ್ಲಿದ್ದ ಸೂಪರ್ ವಿಮಾನಗಳು ನೆನ್ನೆ ಕಮ್ಯೂನಿಸ್ಟರ ಸರಬರಾಜು ಗುದಾಮುಗಳ ಮೇಲೆ ೧೦೦ ಟನ್ ಬಾಂಬುಗಳನ್ನು ಹಾಕಿದವು. ಮಂಚೂರಿಯಾ ಗಡಿಯಾಚೆ ಇರುವ ಒಂದು ವಿದ್ಯುಚ್ಛಕ್ತಿ ಕಾರಾಗಾರಕ್ಕೆ ಮಿತ್ರ ವಿಮಾನಗಳು ಬಾಂಬು ಹಾಕಿದುವಾಗಿ ಉತ್ತರ ಕೊರಿಯಾ ರೇಡಿಯೋವು ಅಪಾದಿಸಿರುತ್ತದೆ.

ಸಂಸ್ಥಾನದ ಸಹಕಾರ ಸಮ್ಮೇಳನ

ಮೈಸೂರು ಸಂಸ್ಥಾನದ ೩ನೇ ಸಹಕಾರ ಸಮ್ಮೇಳನವು ಮಂಡ್ಯದಲ್ಲಿ ಮೊನ್ನೆ ನಡೆಯಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರು ಅಧ್ಯಕ್ಷತೆ ವಹಿಸಿದ್ದರು. ಗೃಹಮಂತ್ರಿ ಶ್ರೀ ಸಿದ್ದವೀರಪ್ಪನವರು ಆರಂಭೋತ್ಸವವನ್ನು ನೆರವೇರಿಸುತ್ತಾ, ಸಹಕಾರದ ಸಂದೇಶವನ್ನು ಜನರಲ್ಲಿ ಬಿತ್ತಲು ನಿಸ್ವಾರ್ಥ ಸೇವಕರ ಅವಶ್ಯಕತೆಯಿರುವುದಾಗಿಯೂ, ಪ್ರಜಾಭಿವೃದ್ಧಿಯೇ ಗುರಿಯಾಗಿರುವ ಸಹಕಾರ ಪದ್ಧತಿಯು ಉತ್ತಮತಮವೆಂದೂ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ದೇಶದ ಪುನರುಜ್ಜೀವನಕ್ಕೆ ಸಹಕಾರ ಸಂಘಗಳು ಪ್ರಮುಖ ಪಾತ್ರವನ್ನು ವಹಿಸಲು ಸಾಧಕವಾಗುವಂತೆ ಪಂಚ ವಾರ್ಷಿಕ ಯೋಜನೆಯು ಸಹಕಾರಿಯಾಗಿರುವುದಾಗಿ ಹೇಳಿದರು. ಸಹಕಾರವು ಜನಜೀವನದ ಎಲ್ಲ ಮಾರ್ಗಗಳಿಗೂ ಅನ್ವಯಿಸುವುದಾಗಿ ತಿಳಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಪದ್ಧತಿ ಮೇಲೆ ಕೈಗಾರಿಕೆಗಳನ್ನು ಏರ್ಪಡಿಸಬೇಕೆಂದು ಅವರು ಹೇಳಿದರು.

ಉಪಾಧ್ಯಕ್ಷರ ರಾಜೀನಾಮೆ

ಸ್ವಂ ಪು] ಟಿ ನರಸೀಪುರ ೧೮

ಇಲ್ಲಿನ ಪೌರಸಭಾ ಉಪಾಧ್ಯಕ್ಷರಾದ ಶ್ರೀ ಎ ಪಿ ಪುಟ್ಟಸ್ವಾಮಯ್ಯನವರು ವೈಯಕ್ತಿಕ ಕಾರಣಗಳಿಗಾಗಿ ತಮ್ಮ ಹುದ್ದೆಗೆ ರಾಜೀನಾಮೆಯಿತ್ತಿರುವರು.

ನಿಧನ

ಪಾರ್ಲಿಮೆಂಟಿನ ಸದಸ್ಯರಾಗಿರುವ ಶ್ರೀ ಎ ರಾಚಯ್ಯನವರ ಸಹೋದರಿ ಶ್ರೀಮತಿ ಬಸಮ್ಮನವರು ಮೈಸೂರಿನ ಆಸ್ಪತ್ರೆಯಲ್ಲಿ ನೆನ್ನೆ ಮೃತಿ ಹೊಂದಿರುತ್ತಾರೆ. ಅವರಿಗೆ ೨೦ ವರ್ಷ ವಯಸ್ಸಾಗಿದ್ದಿತು. ಮೃತರಿಗೆ ಇಬ್ಬರು ಮಕ್ಕಳಿರುವರು. ಅವರ ಪತಿಯು ಬನ್ನೂರು ಪೌರಸಭಾ ಸದಸ್ಯರಾಗಿರುವರು.

★ ಮುಂದಿನ ತಿಂಗಳು ಮೈಸೂರಿನಲ್ಲಿ ಅಖಿಲ ಭಾರತ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕರ ... ಸಮ್ಮೇಳನವು ನಡೆಯುವಂತೆ ಏರ್ಪಾಟಾಗಿದೆ

ಶ್ಯಾಮಪ್ರಸಾದ ಮುಖರ್ಜಿ ಬಿಡುಗಡೆಗೆ ಒತ್ತಾಯ

ಮೈಸೂರು ೧೮

ಮೈಸೂರು ಭಾರತೀಯ ಜನಸಂಘದ [illegible] ವಿಶೇಷ ಸಭೆಯು ನೆನ್ನೆ ಸಂಘದ ಕಾರ್ಯಾಲಯದಲ್ಲಿ ಸೇರಿ, ಭಾರತದ ಅಂಗವಾದ ಕಾಶ್ಮೀರ ಸರ್ಕಾರವು ಪ್ರಜೆಗಳಿಗೆ ರಾಜ್ಯಾಂಗದಲ್ಲಿ ನೀಡಿರುವ ಸಂಚಾರ ಸ್ವಾತಂತ್ರ್ಯವನ್ನು ನಿರ್ಲಕ್ಷಿಸಿ ಭಾರತೀಯ ಜನಸಂಘದ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ ಮುಖರ್ಜಿ ಮುಂತಾದ ಜನನಾಯಕರನ್ನು ದಸ್ತಗಿರಿ ಮಾಡಿರುವುದನ್ನು ಖಂಡಿಸಿ, ಅವರೆಲ್ಲರನ್ನೂ ಕೂಡಲೇ ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಬೇಕೆಂದು [illegible] ವನ್ನು ಮಾಡಿತು [illegible] ಪ್ರಧಾನಿ ನೆಹರೂ [illegible] ಜನಸಂಘದ ಪ್ರಾಂತೀಯ [illegible] ಗಳಿಗೂ [illegible]

ಮಕ್ಕಳ ಅಂತರ ರಾಷ್ಟ್ರೀಯ ಪುಸ್ತಕ ಭಂಡಾರ

ರಾಜಧಾನಿಯ [illegible] ಪುಸ್ತಕ [illegible] ಪುಸ್ತಕಗಳನ್ನು [illegible] ಗಿದೆ

ಸಂಸ್ಕೃತ ಮತ್ತು ಹಿಂದೀ ತರಗತಿಗಳು

ಮೈಸೂರು ವಾಣೀವಿಲಾಸ ಮೊಹಲ್ಲಾ ಕಾಳಿದಾಸ ರೋಡ್ ೫ ನೇ ಕ್ರಾಸ್ ೨೬೮೭ ನೇ ನಂಬರು ಮನೆಯಲ್ಲಿ ಹೈಸ್ಕೂಲ್ ತರಗತಿಗಳ ಸಂಸ್ಕೃತ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಹಿಂದೀ ಪರೀಕ್ಷೆಗಳ ಪಾಠಗಳು ನುರಿತ ಉಪಾಧ್ಯಾಯರಿಂದ ನಡೆಸಲ್ಪಡುತ್ತವೆ ಸೇರಲಿಚ್ಛಿಸುವವರು ವ್ಯವಸ್ಥಾಪಕರನ್ನು ವಿಚಾರಿಸಬಹುದು

ರಾಷ್ಟ್ರೀಯ ಕ್ಯಾಡೆಟ್ ದಳಕ್ಕೆ ವೈಮಾನಿಕ ಶಿಕ್ಷಣ

ರಾಷ್ಟ್ರೀಯ ಕ್ಯಾಡೆಟ್ ದಳದ ಅಂಗವಾಗಿ ವೈಮಾನಿಕ ವಿಭಾಗವನ್ನು ಏರ್ಪಡಿಸುವ [illegible] ವಿದ್ಯಾ ಮಂತ್ರಿ ಶ್ರೀ [illegible] ತಿಳಿಸಿವೆ

ಆಕಾಶವಾಣಿ [illegible] ಕಾರ್ಯಕ್ರಮ

[illegible]

ನಾಟ್ಯರಂಗದಲ್ಲಿ ನಗ್ನ ಸ್ತ್ರೀಯರ ಬಗ್ಗೆ ಪ್ರತಿಭಟನೆ

ಲಂಡನ್ನಿನ ಸಾರ್ವಜನಿಕ ನೀತಿಯ ಮಂಡಲವು ಅಲ್ಲಿನ ಕಲಾ ಶಾಲೆಗಳಲ್ಲಿ ನಗ್ನ ಸ್ತ್ರೀಯರನ್ನು ಕಣಿಗೆಂದು ನೃತ್ಯ ಮಾಡಿಸುವುದನ್ನು ಖಂಡಿಸಿರುತ್ತದೆ ಬ್ರಿಟನ್ನಿನ ಶಾಸನದಂತೆ ನಗ್ನ ಸ್ತ್ರೀಯು ಯಾವ ಚೇಷ್ಟೆಯನ್ನೂ ಮಾಡದೆ ರಂಗಸ್ಥಳದಲ್ಲಿ ಪ್ರತಿಮೆಯಂತೆ ನಿಲ್ಲಲು ಅವಕಾಶವಿದೆ ದೀಪಗಳನ್ನು ಆರಿಸಿದ ನಂತರ ಆಕೆಯು ಚಲಿಸಬಹುದಾಗಿದೆ ಈ ಶಾಸನದ ಪ್ರಕಾರ ರಂಗಸ್ಥಳದಲ್ಲಿ ನಗ್ನತೆಗೆ ಅವಕಾಶವಿತ್ತಿರುವುದರಿಂದ ಎಲ್ಲೆಲ್ಲೂ ಇದೇ ಪ್ರವೃತ್ತಿಯೇ ಜೋರಾಗಿ ನಡೆಯುತ್ತಿರುವುದಾಗಿ ಮಂಡಲದವರು ವ್ಯಸನವನ್ನು ಸೂಚಿಸಿರುವರು

ವಿವಾಹ ಮಹೋತ್ಸವಗಳು

ರಾಜಧಾನಿಯ ಭವಗ್ರಸ್ತ [illegible] ತಮ್ಮ ಪುತ್ರಿ [illegible] ಪುತ್ರಿ [illegible] ಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

[illegible] ನರಸೀಪುರ ತಾಲ್ಲೂಕು ಸೋಸಲೆ ಹೋಬಳಿ ಗಾಣಿಕೊಪ್ಪಲಿನ ಪಟೇಲರೂ ಮತ್ತು ಮಾಜಿ ಪ್ರಜಾ ಪ್ರತಿನಿಧಿ ಸಭಾಸದಸ್ಯರೂ ಆದ ಶ್ರೀ ಚಿಕ್ಕ ನೀಲೇಗೌಡ ಉರ್ಫ್ ತಮ್ಮಯ್ಯನವರ ಪುತ್ರಿ ಸೌ|| ಜಯಮ್ಮನನ್ನು ಸೋಮನಹಳ್ಳಿ ಗ್ರಾಮದ ಲೇಟ್ ಕೆಂಪೇಗೌಡರ ಕುಮಾರ ಶ್ರೀ ಚಿಕ್ಕಣ್ಣನವರಿಗೆ ಕೊಟ್ಟು ಗಾಣಿಕೊಪ್ಪಲಿನಲ್ಲಿ ನೆನ್ನೆ ವಿವಾಹವು ನೆರವೇರಿತು

ಬೆಂಗಳೂರು ಅಕೌಂಟೆಂಟ್ ಜನರಲ್‌ರವರ ಕಛೇರಿ ಸೂಪರಿಂಟೆಂಡೆಂಟರಾದ ಶ್ರೀ ಭಾಗವತ ಸುಬ್ರಹ್ಮಣ್ಯಯ್ಯನವರು ತಮ್ಮ ದ್ವಿತೀಯ ಪುತ್ರಿ ಸೌ|| ವಿಶಾಲಾಕ್ಷಿಯವರನ್ನು ಆಸ್ಥಾನ ವಿದ್ವಾನ್ ಶ್ರೀ ಬಿ. ಚೆನ್ನಕೇಶವಯ್ಯನವರ ತೃತೀಯ ಪುತ್ರ ಶ್ರೀ ಬಿ ಕೆ. ಸತ್ಯನ್‌ರವರಿಗೆ ಕೊಟ್ಟು ಈ ದಿನ ರಾಜಧಾನಿಯಲ್ಲಿ ವಿವಾಹವನ್ನು ಜರುಗಿಸಿದರು

ಐ ಸಿ ಎಸ್. ಆಳಿಯ

ನೂತನ ತರುಣ ಸಾಹಿತಿಗಳಾದ ಶ್ರೀ ಕೆ ಸುಬ್ಬಣ್ಣನವರು ಮ್ಯೇಕ್ಬೆತ್ ಎಂಬ ಹೆಸರಿನ ಚಿಕ್ಕ ನಾಟಕ ಗ್ರಂಥವನ್ನು [illegible] ಇದರ ಪ್ರತಿಯೊಂದನ್ನು ನಾವು [illegible] ಸ್ವೀಕರಿಸುತ್ತೇವೆ ನಾಟಕವು ಸ್ವಾರಸ್ಯವಾಗಿದೆ ಇದರ ಬೆಲೆ ನಾಲ್ಕಾಣೆ

ಅಮೆರಿಕಾದಲ್ಲಿ ಬಳಿಯರು ಭಯೋತ್ಪಾದನ [illegible] ವನ್ನು ಆರಂಭಿಸಿರುವರೆಂದೂ, ಅಲ್ಲಿ ವಾರಕ್ಕೆ ೫೦೦ ಜನ ಯುವಕರನ್ನು ಕೊಲ್ಲಲಾಗುತ್ತಿದೆಯೆಂದೂ, ಭಾರತದಲ್ಲಿ ಸಂಚರಿಸುತ್ತಿರುವ ಕೆನ್ಯಾದ ಮುಖಂಡ ಜೋಸೆಫ್ ಮೊರಾಂಬಿಯವರು ತಿಳಿಸಿರುವರು.

ಮಾರಾಟ ತೆರಿಗೆ ರದ್ದಾಗಬೇಕು

ಸಲಹಾ ಸಮಿತಿಗೆ ವರ್ತಕರ ಮನವಿ

ಮೈಸೂರು ೧೭

ರಾಜಧಾನಿಯ ಸಾಮಾನ್ಯ ವರ್ತಕರ ಸಂಘದವರು ಮಾರಾಟ ತೆರಿಗೆ ಸಲಹಾ ಸಮಿತಿಗೆ ಹಲವು ಸಲಹೆಗಳನ್ನು ಕೊಟ್ಟಿರುತ್ತಾರೆ ಜನರ ಕೊಳ್ಳುವ ಶಕ್ತಿಯು ಕಡಿಮೆಯಾಗಿ ವ್ಯಾಪಾರವು ಇಳಿಮುಖವಾಗಿರುವುದೆಂದೂ, ಮಾರಾಟ ತೆರಿಗೆಯನ್ನು ಜನರು ಹೊರಲಾರರೆಂದೂ, ಪದಾರ್ಥಗಳ ಮೇಲೆ ಈಗಾಗಲೇ ವಿಧಿಸಿರುವ ತೆರಿಗೆಗಳ ಜೊತೆಗೆ ಮಾರಾಟ ತೆರಿಗೆಯೂ ಸೇರಿದರೆ ಪದಾರ್ಥಗಳ ಬೆಲೆ ಇಳಿಯುವುದು ಅಸಂಭವವೆಂದೂ, ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದೂ ತಿಳಿಸಿರುತ್ತಾರೆ. ಸರ್ಕಾರದ ಆಯವ್ಯಯವನ್ನು ಸರಿತೂಗಿಸಲು ವರ್ತಕರ ಸಲಹೆಯನ್ನು ಸರ್ಕಾರದವರು ಕೇಳಿರುತ್ತಾರೆ ಆದರೆ ಸರ್ಕಾರದವರು ತಮ್ಮ ಆದಾಯಕ್ಕೆ ತಕ್ಕಂತೆ ವೆಚ್ಚವನ್ನು ಸರಿಹೊಂದಿಸಿಕೊಳ್ಳಬೇಕೆಂದು ಸಂಘದವರು ಸೂಚಿಸಿರುವರು ಸಾಂಸ್ಕೃತಿಕ ಯೋಜನೆಯನ್ನು ಕೈ ಬಿಡುವಂತೆಯೂ ಸೂಚಿಸಲಾಗಿದೆ ಮಾರಾಟ ತೆರಿಗೆ ಇಲಾಖೆಯನ್ನು ತೆಗೆದು ಹಾಕಿದರೆ ಸಿಬ್ಬಂದಿ ಖರ್ಚು ಉಳಿಯುವುದಾಗಿಯೂ ಸಂಘದವರು ತಿಳಿಸಿರುತ್ತಾರೆ ಇವುಗಳಿಂದ ಹೆಚ್ಚು ಹಣ ಉಳಿಯದಿದ್ದರೆ ಸರ್ಕಾರದವರೇ ಹೊಸ ಉದ್ಯಮಗಳನ್ನು ನಡೆಸುವುದು ಒಳ್ಳೆಯದೆಂದು ಅವರು ಹೇಳಿರುವರು

ಕಿರೀಟ ಧಾರಣೆಗೆ ರಷ್ಯಕ್ಕೆ ಎಲಿಜಬೆತ್‌ರವರ ಆಹ್ವಾನ

ಜೂನ್ ೨ ನೇ ತಾ|| ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೆ ಸಮಯದಲ್ಲಿ ಭಾಗವಹಿಸುವಂತೆ ರಾಣಿಯವರು ೭೫ ವಿದೇಶ ರಾಜ್ಯಗಳ ಮುಖ್ಯಸ್ಥರಿಗೆ ಆಹ್ವಾನವಿತ್ತಿರುವರು ರಷ್ಯಾ ಮತ್ತು ಅದರ ಬೆಂಬಲಿಗ ರಾಷ್ಟ್ರಗಳಿಗೂ ಆಹ್ವಾನವೀಯಲಾಗಿದೆ ಈ ರಾಜ್ಯಗಳು ಲಂಡನ್ನಿನಲ್ಲಿರುವ ತಮ್ಮ ರಾಯಭಾರಿಗಳು ಸಮಾರಂಭದಲ್ಲಿ ಭಾಗವಹಿಸುವಂತೆ ಸೂಚಿಸಿವೆ

NEW NURSERY SCHOOL

at

CHRIST THE KING CONVENT

(Near Sri Ganesh Talkies)

To be opened on

22-5-53

For Particulars Apply to The Manager.

Hostel for Young Ladies is attached to the Convent

Edited, Printed and Published by A R Nagarajan at Sadhvi Press, D. Subbiah Road, Mysore.

ಡಾ|| ಹರ್ಡೀಕರರ ಸೇವಾ ಪ್ರಶಂಸೆ

ಮೈಸೂರಿನಲ್ಲಿ ಭಾರತ ಸೇವಾ ದಳದವರು ಏರ್ಪಡಿಸಿರುವ ಮಾಧ್ಯಮಿಕ ಶಿಬಿರದಲ್ಲಿ ಕಳೆದ ೧೫ ನೇ ತಾ|| ಹಿಂದೂಸ್ಥಾನಿ ಸೇವಾದಳದ ಸಂಸ್ಥಾಪಕರಾದ ಡಾ|| ನಾರಾಯಣ ಸುಬ್ಬರಾವ್ ಹರ್ಡೀಕರ್‌ರವರ ಹುಟ್ಟಿದ ದಿನಾಚರಣೆಯನ್ನು ನೆರವೇರಿಸಲಾಯಿತು ಶಿಬಿರವಾಸಿಗಳು ಪ್ರಾರ್ಥನೆ, ಧ್ವಜ ವಂದನೆಗಳನ್ನು ನಡೆಸಿ, ಪಶ್ಚಿಮ ವಾಹಿನಿಗೆ ತೆರಳಿ, ನದಿಯಲ್ಲಿ ಮಿಂದು ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಪೂಜೆ ಸಲ್ಲಿಸಿ ದರಿಯಾ ದೌಲತ್ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಿಕೊಂಡು, ಸಂಜೆಯ ಹೊತ್ತಿಗೆ ವಾಪಸು ಬಂದರು ಶಿಬಿರಕ್ಕೆ ಭಾರತ ಸೇವಾದಳದ ಪ್ರಧಾನ ಕಾರ್ಯದರ್ಶಿ, ಶ್ರೀ ಶ್ಯಾಂಪೂರ್ ಗುರು, ಶ್ರೀಗಳಾದ ಹುಚ್ಚುಮಾಸ್ತಿಗೌಡ, ಎಸ್. ಕರಿಯಪ್ಪ ಮತ್ತು ಎಸ್ ಗೋಪಾಲಗೌಡರು ಭೇಟಿಯಿತ್ತರು ಶ್ರೀ ಗೋಪಾಲಗೌಡರೂ, ಶ್ರೀ ಗುರುರವರೂ ಭಾಷಣ ಮಾಡಿ ಸೂಕ್ತ ಹಿತೋಕ್ತಿಗಳನ್ನು ಹೇಳಿದರು ಡಾ|| ಹರ್ಡೀಕರರ ಅಮೋಘ ಸೇವೆಯನ್ನು ಪ್ರಶಂಸಿಸಿದರು ವಿವಿಧ ವಿನೋದಾವಳಿ ಮತ್ತು ಪ್ರಾರ್ಥನೆಗಳ ನಂತರ ಕಾರ್ಯಕ್ರಮವು ಮುಕ್ತಾಯವಾಯಿತು

ಚೀಣದ ನಾಲ್ಕು ಪ್ರಾಂತಗಳಲ್ಲಿ ೧೦ ಲಕ್ಷ ರೈತರು ಹೊಟ್ಟೆಗಿಲ್ಲದೆ ಪರಿತಪಿಸುತ್ತಿರುವರೆಂದು ಕಮ್ಯೂನಿಸ್ಟ್ ಪತ್ರಿಕೆಗಳು ತಿಳಿಸುತ್ತವೆ

ಮನೆಗಳು ಬೆಲೆಗಿವೆ

427 ದೇವಾಂಬ ಅಗ್ರಹಾರ, ಸಂತೇಪೇಟೆಗೆ ಹತ್ತಿರ ನಲ್ಲಿ, ದೀಪ, ಭಾವಿ ಇದ್ದು 30'x40' ಜಾಗದಲ್ಲಿ ಹಲಗೆ ಸೇವೆ ಹೆಂಚಿನ ಮನೆ ದೊಡ್ಡ ಸಂಸಾರಕ್ಕನುಕೂಲವಾಗಿದೆ ರೂ 9,500.

67/15 D ಹೊಸ ಕಲ್ಯಾಜರಾವ್ ರೋಡ್ ಹಿಂದೆ, ಪ್ಯಾಲೇಸ್ ಆಫೀಸಿಗೆ ಹತ್ತಿರ. ನಲ್ಲಿ, ದೀಪ, ಫ್ಲಷ್ ಕಾಂಪೌಂಡ್ ಇರುವ 50'x45' ಜಾಗದಲ್ಲಿ ಕಟ್ಟಿರುವ ತಾರಸಿ ಮನೆ ರೂ 7,500

ಚಾಮುಂಡಿಪುರಂ 12 ನೇ ಬ್ಲಾಕಿನಲ್ಲಿ 60'x20' ಜಾಗದಲ್ಲಿ ನಲ್ಲಿ, ದೀಪ ಫ್ಲಷ್ ಕಾಂಪೌಂಡ್ ಇರುವ ಪುಟ್ಟ ಸಂಸಾರಕ್ಕನುಕೂಲವಾದ ಮನೆ ರೂ 3,500. ಅಲ್ಲೇ ದೊಡ್ಡ ಸಂಸಾರಕ್ಕನುಕೂಲವಾದ ಮನೆ ರೂ. 5,500.

ಲಷ್ಕರ್ ಮೊಹಲ್ಲಾ ನರಸಿಂಹರಾಜಪುರಂ ರಾಜಪುಟ್ ಬ್ಲಾಕ್ ದೀಪ, ನಲ್ಲಿ, ಕಾಂಪೌಂಡ್, ಔಟ್ ಹೌಸ್ ಇರುವ 50'x70' ಜಾಗದಲ್ಲಿ ಕಟ್ಟಿರುವ ತಾರಸಿ-ಮಂಗಳೂರ್ ಹೆಂಚಿನ ಮನೆ ರೂ 12,000.

ಬಿ. ಎಸ್. ಸುಬ್ಬರಾವ್,

ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

ಲಗ್ನದ ಜವಳಿಗಳಿಗೆ

ಮೈಸೂರು ಸಿಲ್ಕು, ಧರ್ಮಾವರಂ, ಆಣಿ, ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★

M.V. ಭೋಜಯ್ಯ (ಫೋನ್ 446)

ಬಿ. ಎ. ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೯-೫ ೧೯೫೩ [ಸಂಚಿಕೆ ೩೩೭

ಭದ್ರಾ ಜಲಾಶಯಕ್ಕಾಗಿ ರೈತರಿಂದ ೩ ಕೋಟಿ

ಭದ್ರಾ ಜಲಾಶಯಕ್ಕಾಗಿ ೨-೩ ಕೋಟಿ ಕಂಟ್ರಿಬ್ಯೂಷನ್
ಸರ್ಕಾರದ ಮಸೂದೆ

ಸ್ವಂ ಸು. ಫೋ.] ಬೆಂಗಳೂರು ೧೯

ಭದ್ರಾ ಜಲಾಶಯದ ನಿರ್ಮಾಣಕ್ಕಾಗಿ ಬೇಕಾಗುವ ಸುಮಾರು ೩೦ ಕೋಟಿ ರೂಗಳ ಪೈಕಿ ೩ ಅಥವಾ ೩ ಕೋಟಿ ರೂಗಳನ್ನು ರೈತರುಗಳಿಂದ ಕಂಟ್ರಿಬ್ಯೂಷನ್ ರೂಪದಲ್ಲಿ ಪಡೆಯಲು ಸರ್ಕಾರದವರು ಒಂದು ಮಸೂದೆಯನ್ನು ತಯಾರಿಸಲು ಆಲೋಚಿಸುತ್ತಿರುವುದಾಗಿ ವರದಿಯಾಗಿದೆ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ದೆಹಲಿಯಲ್ಲಿ ಕೇಂದ್ರ ಯೋಜನಾ ಸಮಿತಿಯ ಉಪಾಧ್ಯಕ್ಷರಾದ ಶ್ರೀ ವಿ ಟಿ ಕೃಷ್ಣಮಾಚಾರಿಯವರನ್ನು ಕಂಡು ಜಲಾಶಯದ ವಿಷಯವಾಗಿ ಮಾತುಕತೆ ನಡೆಸಿದರು ಸಧ್ಯದಲ್ಲೇ ಕೇಂದ್ರದ ಮಂತ್ರಿಯೊಬ್ಬರು ಜಲಾಶಯ ನಿರ್ಮಾಣದ ಪರಿಶೀಲನೆಗಾಗಿ ಸಂಸ್ಥಾನಕ್ಕೆ ಬರಲಿರುವರೆಂದು ತಿಳಿದು ಬಂದಿದೆ

ಭೂಮಿಯಿಲ್ಲದವರಿಗೆ ಜಮೀನು ಹಂಚಿಕೆ

ಭೂದಾನ ಯಜ್ಞದ ಸಂಬಂಧದಲ್ಲಿ ಹಾಸನದಲ್ಲಿ ದಾನವಾಗಿ ಬಂದಿರುವ ಜಮೀನುಗಳನ್ನು ಅಲ್ಲಿನ [illegible] ಶ್ರೀ ರಾಜಗೋಪಾಲಾಚಾರಿಯವರು ಮೊನ್ನೆ ಈರೋಡಿನಲ್ಲಿ ಹಂಚಿದರು [illegible] ಜಮೀನಿಗೆ ಸಂಬಂಧಿಸಿದ ಪಟ್ಟೆಗಳನ್ನು ಅವರು ವಿನಿಯೋಗ ಮಾಡಿದರು [illegible] ಮಂತ್ರಿ ಶ್ರೀ [illegible] ಬ್ರಹ್ಮಣ್ಯಂರವರು ನೇಗಿಲುಗಳನ್ನೂ ಎತ್ತುಗಳನ್ನೂ ರೈತರಿಗೆ ಕೊಟ್ಟರು ರಾಜಾಜಿಯವರು ತಮ್ಮ ಭಾಷಣದಲ್ಲಿ ಭೂಮಿ [illegible] ಇರುವವರನ್ನು ದೂಷಿಸಬಾರದೆಂದೂ, [illegible] ಕ್ಕರಿಸಕೂಡದೆಂದೂ ವಿನಯದಿಂದ ಜಮೀನುದಾರರ ಮನಸ್ಸೊಲಿಸಿಕೊಳ್ಳಬೇಕೆಂದೂ ಹೇಳಿದರು ಈ ಶಾಂತಿಕ ಕ್ರಾಂತಿಯು ಇಡೀ ಜಗತ್ತನ್ನೇ [illegible] ಗೊಳಿಸಿರುವುದಾಗಿಯೂ ಅವರು ತಿಳಿಸಿದರು.

ಕಿರೀಟ ಧಾರಣೆ ಬಗ್ಗೆ ಭಾರತದಲ್ಲಿ ಸಂಭ್ರಮವಿಲ್ಲ

ಬ್ರಿಟನ್ನಿನ ರಾಣಿ ಎಲಿಜಬೆತರ ಕಿರೀಟ ಧಾರಣೆ ಸಂಬಂಧವಾಗಿ ಯಾವ ಸಂತೋಷದ ಸಮಾರಂಭವನ್ನೂ ನಡೆಸಬೇಕಾಗಿಲ್ಲವೆಂದು ಭಾರತ ಸರ್ಕಾರದವರ ಅಭಿಪ್ರಾಯಪಟ್ಟಿರುತ್ತಾರೆ ಅದರಂತೆ ಮದ್ರಾಸ್ ಪ್ರಾಂತದ ಯಾವ ಸ್ಥಳೀಯ ಸಂಸ್ಥೆಗಳಲ್ಲೂ ಈ ಬಗ್ಗೆ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕಾಗಿಲ್ಲವೆಂದು ತಿಳಿಸಲಾಗಿದೆ ಬ್ರಿಟಿಷರ ಧ್ವಜವನ್ನೂ ಪ್ರದರ್ಶಿಸಬೇಕಾಗಿಲ್ಲವೆಂದು ಸೂಚಿಸಲಾಗಿದೆ

ಅಂಗಡಿ ಕಾನೂನು ಉಲ್ಲಂಘನೆಗೆ ದಂಡ

ಅಂಗಡಿಗಳು ಮತ್ತು ಸಿಬ್ಬಂದಿ ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ ನಗರದ ಎರಡನೇ ನ್ಯಾಯಾಧೀಶರು ಚಲುವಾಂಬಾ ಅಗ್ರಹಾರದ [illegible] ಶ್ರೀ ವಿ ಕೃಷ್ಣ [illegible] ರವರಿಗೆ ೫ ರೂ, ಬಂಟಿಕೊಪ್ಪಲಿನ [illegible] ವಿಲಾಸ ಹೋಟೆಲಿನ ಶ್ರೀ [illegible] ರವರಿಗೆ ೧೦ ರೂ, ವಾಣಿವಿಲಾಸ ಮಾರ್ಕೆಟ್ ಚೌಕದಲ್ಲಿರುವ ಚಪ್ಪಲಿ ಅಂಗಡಿ [illegible] ಮಂಜಯ್ಯ ಉರುಫ್ [illegible] ನವರಿಗೆ [illegible] ದಂಡವನ್ನು ವಿಧಿಸಿರುತ್ತಾರೆ

ಹಾಸನ-ಮಂಗಳೂರು ರೈಲ್ವೆ ಬಗ್ಗೆ ಸರ್ವೆ

ಸ್ವಂ ಸು ಫೋ] ಬೆಂಗಳೂರು [illegible]

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ದೆಹಲಿಯಲ್ಲಿ ಕೇಂದ್ರ ರೈಲ್ವೆ ಮಂತ್ರಿ [illegible] ಶಾಸ್ತ್ರಿ ಮತ್ತು ಯೋಜನಾ ಸಮಿತಿ [illegible] ಶ್ರೀ ವಿ ಟಿ ಕೃಷ್ಣಮಾಚಾರಿಯವರೊಡನೆ [illegible] ಹಾಸನ-ಮಂಗಳೂರು ರೈಲ್ವೆ [illegible] ಮಾತುಕತೆ ನಡೆಸಿ [illegible] ಈ ವಿಷಯವಾಗಿ [illegible] ಸರ್ವೆ [illegible] ಪ್ರಾರಂಭಿಸಿದ [illegible] ಮೂಲಕ [illegible] ವುದಾಗಿ [illegible]

ಶ್ರೀನಗರಕ್ಕೆ ನೆಹರೂ

ಪ್ರಧಾನಿ ನೆಹರು ಮತ್ತು ಕೇಂದ್ರ [illegible] ಮಂತ್ರಿ [illegible] ಮುಂದಿನ [illegible] ರ ಕಂತ್ರೀ [illegible] ಪಟ್ಟಣ [illegible] ಶ್ರೀನಗರಕ್ಕೆ ಹೋಗುವರು [illegible] ನೊಡನೆ [illegible] ಮಾತುಕತೆಗಳನ್ನು ನಡೆಸಲಾಗುವುದು

ಗಡಿನಾಡಿನಲ್ಲಿ ಜಂಪು ಕೆಂಪು ಷರ್ಟಿನವರ ಬಿಡುಗಡೆ

ಪಾಕಿಸ್ಥಾನಕ್ಕೆ ಸೇರಿದ ವಾಯವ್ಯ ಗಡಿ ಪ್ರಾಂತದ ಸರ್ಕಾರದವರು ಖಾನ್ ಅಬ್ದುಲ್ ಗಫಾರ್ ಖಾನರವರ ಕೆಂಪು ಷರ್ಟಿನವರ ಪಕ್ಷದ ಹಲವರು ಸೇರಿ [illegible] ಜನ ರಾಜಕೀಯ ಬಂದಿಗಳನ್ನು ಬಿಡಲು ಆಜ್ಞಾಪಿಸಿರುತ್ತಾರೆ ರಾಜಕೀಯ ಬಂದಿಗಳನ್ನು ಕ್ರಮಕ್ರಮವಾಗಿ ಬಿಡುವ ಉದ್ದೇಶವನ್ನು ಅಲ್ಲಿನ ಸರ್ಕಾರದವರು ಹೊಂದಿರುವರು

ನೀರಿನ ಅಭಾವದಿಂದ ಹೋಟೇಲುಗಳು ಬಂದ್

ಚಿಕ್ಕಮಗಳೂರು ಟೌನಿಗೆ ನೀರು ಸರಬರಾಜಾಗುತ್ತಿದ್ದ ಕೆರೆಯು ಒಣಗಿ ಹೋಗಿರುವುದರಿಂದ, ನಾಗರಿಕರು ಬೇರೆ ಸ್ಥಳಗಳಿಂದ ನೀರನ್ನು ಒದಗಿಸಿಕೊಳ್ಳಬೇಕಾಗಿದೆ. ನೀರಿನ ಅಭಾವವಿರುವವರೆಗೆ ಅಲ್ಲಿನ ಹೋಟೇಲು ಮತ್ತು ಹೋಟೇಲುಗಳು [illegible] ಬಂದ್ ಮಾಡಲು [illegible] ಮುಚ್ಚುವಂತೆ ಆಜ್ಞೆಯಾಗಿದೆ.

ತಿರುವಾಂಕೂರು ಶಾಸನ ಸಭಾ ಸದಸ್ಯರ ದಸ್ತಗಿರಿ

ತಿರುವನಂತಪುರದಲ್ಲಿ ನಡೆಯುತ್ತಿರುವ [illegible] ಸತ್ಯಾಗ್ರಹ ಸಂಬಂಧವಾಗಿ ಮೊನ್ನೆ ಅಲ್ಲಿ ಕೂಡಿದ್ದ ಒಂದು [illegible] ಸಭೆಯನ್ನು [illegible] ಚದುರಿಸಲು ಪೋಲೀಸರು ಸ್ವಲ್ಪ ಮಟ್ಟಿನ ಬಲವಂತ ಮಾಡಿದರು [illegible] ನಡೆಸಕೂಡದೆಂದು ವಿಧಿಸಲಾಗಿ[illegible] ಉಲ್ಲಂಘಿಸಿ ಶಾಸನ ಸಭಾ ಸದಸ್ಯ [illegible] ಜನ [illegible] ದಸ್ತಗಿರಿ ಮಾಡಿ [illegible] ಮೇಲೆ [illegible] ಮಾಡಲಾಗಿದೆ ದಸ್ತಗಿರಿ [illegible] ಜನ ಸಂಪನ್ [illegible] ಪೋಲೀಸರು [illegible] ಮಾಡಿದರ [illegible] ಪ್ರಜಾ [illegible] ಸಭೆ [illegible] ಸರ್ಕಾರದವರು ಹಂಚಿಸಿದ್ದಾರೆ

ಲಂಚದ ಆಪಾದನೆಗಾಗಿ ಮಾಜಿ ಸಚಿವರ ಬಂಧನ

ಪೂರ್ವ ಪಂಜಾಬ ಮತ್ತು ಪಾಟಿಯಾಲಾ ಸಂಸ್ಥಾನದ ಮಾಜಿ ಮಂತ್ರಿ [illegible] ಸಿಂಗ್ ರವರನ್ನು ದಸ್ತಗಿರಿ ಮಾಡಲಾಗಿದೆ ಚುನಾವಣೆಗಳ ಕಾಲದಲ್ಲಿ ಲಂಚದ ಸಂಬಂಧವಾಗಿ ನಡವಳಿಕೆ ನಡೆಸಿದ್ದರಿಂದ ಇವರನ್ನು ಚುನಾವಣಾ ನ್ಯಾಯಮಂಡಲದವರು ೬ ವರ್ಷ ಕಾಲ ಶಾಸನ ಸಭೆಗೆ ಸ್ಪರ್ಧಿಸಲು ಅನರ್ಹರೆಂದು ತೀರ್ಮಾನಿಸಿದ್ದರು.

೧೩೦ ವರ್ಷದವನ ನಿಧನ

[illegible] ತಾಲ್ಲೂಕು [illegible] ಯ ಅತ್ಯಂತ ವೃದ್ಧ ನಿವಾಸಿಯೊಬ್ಬರು [illegible] ನೇ ತಾ|| ನಿಧನ ಹೊಂದಿದರು. ಅವರಿಗೆ ೧೩೦ ವರ್ಷವಾಗಿದ್ದಿತು [illegible] ರಲ್ಲಿ ಅವರು ಹುಟ್ಟಿದರೆಂದು ಹೇಳಲಾಗಿದೆ ಅವರಿಗೆ ೩ ಜನ ಗಂಡು, ಇಬ್ಬರು ಹೆಣ್ಣು ಮಕ್ಕಳೂ, ಹನ್ನೊಂದು ಮಂದಿ ಮೊಮ್ಮಕ್ಕಳೂ ಹತ್ತು ಜನ ಮರಿಮಕ್ಕಳೂ ಇರುವರು ಅವರ ದೊಡ್ಡ ಮಗಳಿಗೆ ೭೫ ವರ್ಷವಾಗಿದೆ ಹಿರಿಯ ಮಗನಿಗೆ ೬೫ ವರ್ಷ ವಯಸ್ಸು

ಬಳ್ಳಾರಿ ತಾಲ್ಲೂಕಿನ ವಿಭಜನೆ ಕೂಡದು
ನೆಹರೂರವರಿಗೆ ಹನುಮಂತಯ್ಯನವರ ಒತ್ತಾಯ

ಸ್ವಂ ಸು ಫೋ] ಬೆಂಗಳೂರು ೧೯

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ದೆಹಲಿಯಿಂದ ಇಲ್ಲಿಗೆ ಆಗಮಿಸಿದರು ಈ ದಿನ ಬೆಳಗ್ಗೆ ಅವರು ಪತ್ರಿಕಾ ಗೋಷ್ಠಿಯನ್ನು ನಡೆಸಿ ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ತಾವು ನೆಹರೂರವರೊಡನೆ ಮಾತುಕತೆ ನಡೆಸಿದುದಾಗಿ ತಿಳಿಸಿದರು ಆ ತಾಲ್ಲೂಕನ್ನು ವಿಭಜಿಸುವುದಾಗಲೀ, ಅಥವಾ ಅಲ್ಲಿ ಆಂಧ್ರರಿಗಾಗಿ ವಸಾಹತು (ಕಾಲೊನಿ) ಇನ್ನು ಏರ್ಪಡಿಸುವುದಾಗಲಿ ಕೂಡದೆಂದು ತಾವು ಒತ್ತಾಯ ಮಾಡಿರುವುದಾಗಿ ತಿಳಿಸಿದರು

ಮೈಸೂರು ಸಂಸ್ಥಾನದಲ್ಲಿ ಮಿಶ್ರ ಭಾಷೆಗಳನ್ನಾಡುವ ಜನತೆ ಇರುವರೆಂದೂ, ಗಡಿ ರೀತಿಯ ಪ್ರದೇಶವನ್ನು ಮೈಸೂರಿಗೆ ಸೇರಿಸುವುದು ಒಳಿತೆಂದೂ ಅವರು ತಿಳಿಸಿದರು. ಬಳ್ಳಾರಿಯಲ್ಲಿ ವಸಾಹತುವೊಂದನ್ನು ಏರ್ಪಡಿಸಿದರೆ ಶಾಶ್ವತವಾದ ಹೋರಾಟವೇ ಸಿದ್ಧವೆಂದೂ, ಇದರಿಂದ ಸಂಸ್ಥಾನಗಳಲ್ಲಿ ಸೌಹಾರ್ದ ಬಾಂಧವ್ಯಕ್ಕೆ ಅಪಚಾರವಾಗುವುದೆಂದೂ ಅವರು ಹೇಳಿದರು

ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ನೆಹರೂರವರ [illegible] ಮೈಸೂರಿಗೆ ಸೇರಲಿಚ್ಛಿಸುವವರನ್ನು ತಾವು ಸ್ವಾಗತಿಸುವುದಾಗಿ ಹೇಳಿದರು

[illegible] ಪ್ರಾಂತದ ನಿರ್ಮಾಣದ ಬಗ್ಗೆ [illegible] ಎರಡು ಅಭಿಪ್ರಾಯ [illegible] ಭಾಷಾವಾರು ಆಧಾರದ ಮೇಲೆ ಪ್ರಾಂತಗಳ ರಚನೆ [illegible] ಹಲವರು ಅಪೇಕ್ಷಿಸುವುದಾಗಿ [illegible] ಅಭಿಪ್ರಾಯದಲ್ಲಿ ಇವೆರಡು [illegible] ಅಭಾಯಕಾರಿ [illegible] ಹೇಳಿದರು

ಭಾರತವನ್ನು ಆಡಳಿತ ಸೌಲಭ್ಯಕ್ಕಾಗಿ ವಿಂಗಡಿಸುವುದು ಒಳ್ಳೆಯದೆಂದೂ, ಪ್ರಾಂತ್ಯ [illegible] ಸಂಸ್ಥಾನಗಳ ಭೇದವನ್ನು ತೆಗೆದು, ದೊಡ್ಡ ಪ್ರಾಂತಗಳನ್ನು ತೆಗೆದು ಹಾಕಿ, ಸಂಸ್ಥಾನಗಳನ್ನು ರದ್ದು ಮಾಡಬೇಕೆಂದೂ ಹೇಳಿದರು.

ಕೃಷ್ಣರಾಜನಗರದಲ್ಲಿ ಕಚ್ಚಾ ಫಿಲಂ ತಯಾರಿಕೆಗಾಗಿ ಒಂದು ಜಾಯಿಂಟ್ ಸ್ಟಾಕ್ ಸಂಸ್ಥೆಯನ್ನು ಸ್ಥಾಪಿಸಲಾಗುವುದೆಂದೂ, ಕಾರ್ಖಾನೆಗೆ ವಿದೇಶೀ ತಜ್ಞರನ್ನು ಕರೆಸಿಕೊಳ್ಳಲಾಗುವುದೆಂದೂ ಗೊತ್ತಾಗಿದೆ

ದೆಹಲಿಗೆ ಮಿಶ್ರಾರವರ ಪ್ರಯಾಣ

ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಎಲ್. ಎಸ್. ಮಿಶ್ರಾರವರು ತಾವು ನಡೆಸಿದ ತನಿಖೆಯ ಸಂಬಂಧವಾದ ವರದಿಯ ಸಮಾಲೋಚನೆಗಾಗಿ ನಿನ್ನೆ ದೆಹಲಿಗೆ ಪ್ರಯಾಣ ಮಾಡಿದರು ಇದನ್ನು ಅವರು ಕೇಂದ್ರ ಸರ್ಕಾರಕ್ಕೆ ಅವರನ್ನು ಒಪ್ಪಿಸಲಿರುವರೆಂದು ಹೇಳಲಾಗಿದೆ

ಮೈಸೂರು ಸಂಸ್ಥಾನಕ್ಕೆ ಬಳ್ಳಾರಿ ತಾಲ್ಲೂಕು

ಬಳ್ಳಾರಿ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಲಾಗುವುದೆಂದು ವರದಿಯಾಗಿದೆ.

ಕ್ರೀಡೆಗಳ ಮೂಲಕ ಮಕ್ಕಳಿಗೆ ವಿದ್ಯಾಭ್ಯಾಸ

ಶ್ರೀಮನ್ಮಹಾರಾಜರ ಭಾಷಣ

ಉದಕಮಂಡಲದಲ್ಲಿ ಕಳೆದ ಶುಕ್ರವಾರ ಸಮಾರಂಭವೊಂದರಲ್ಲಿ ಭಾಷಣ ಮಾಡುತ್ತಾ, ಮೈಸೂರಿನ ಶ್ರೀಮನ್ಮಹಾರಾಜರು ಕ್ರೀಡೆಗಳ ಮೂಲಕ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದರಿಂದ ಅವರುಗಳ ಗುಣ ವಿಶೇಷಗಳ ವಿಕಾಸಕ್ಕೆ ಅವಕಾಶವಾಗುವುದಾಗಿ ತಿಳಿಸಿದರು.

ಕ್ರೀಡೆಗಳ ಮೂಲಕ ಬಾಲಕ ಬಾಲಿಕೆಯರು ವಿದ್ಯಾಭ್ಯಾಸ ಮಾಡಿದರೆ ಮುಂದೆ ಅವರ ಜೀವಮಾನದಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ವರ್ತಿಸಲು ತಿಸ್ತಿಭಾರವನ್ನು ಹಾಕಿಕೊಟ್ಟಂತಾಗುವುದೆಂದು ಹೇಳುತ್ತ ಇಂಗ್ಲೆಂಡಿನ ...ಮಾಧ್ಯಮ ...ಮುಂದುವರಿಸಬೇಕೆಂದೂ ... ಉಪಾಧ್ಯಾಯರು ...ಸ್ತ ...ಮತ್ತು ಸ್ಥಳೀಯ ಭಾಷೆಗಳಿಗೆ ...ತೃಜನಪರ...ದು ಸಹಜವಾದರೂ ವಿದ್ಯಾರ್ಥಿಗಳು ಇಂಗ್ಲೀಷಿನಲ್ಲಿ ಉನ್ನತ ಮಟ್ಟದ ದಕ್ಷತೆಯನ್ನು ಪಡೆಯಬೇಕೆಂದೂ ಅವರು ಹೇಳಿದರು.

ಮೈಸೂರಿನಲ್ಲಿ ಹಾಲಿನ ಪುಡಿ ತಯಾರಿಕೆ

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದವರು ಹಾಲಿನ ಪುಡಿ ಮತ್ತು ಬಿಸ್ಕತ್ತುಗಳನ್ನು ತಯಾರಿಸುವ ಬಗ್ಗೆ ಸಲಹೆ ...ಲ ವಿಶ್ವಸಂಸ್ಥೆಯ ಆಹಾರ ಪ್ರವೀಣರನ್ನು ಮೈಸೂರಿಗೆ ಕಳುಹಲಾಗುವುದೆಂದು ಗೊತ್ತಾಗಿದೆ.

ಉಪನ್ಯಾಸ ಮತ್ತು ಹರಿಕಥೆ

ರಾಜಧಾನಿಯ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಶಂಕರ ಜಯಂತಿ ಅಂಗವಾಗಿ ಈ ಸಂಜೆ ೭ ಗಂಟೆಗೆ ಓರಿಯಂಟಲ್ ಲೈಬ್ರರಿಯ ಶ್ರೀ ಎಲ್. ರಾಮಶಾಸ್ತ್ರಿಯವರು ಪಂಚದಶಿ ವಿವೇಚನೆ ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು. ನಾಳೆ ಸಂಜೆ ೭ ಗಂಟೆಗೆ ಶ್ರೀ ಕೊಣನೂರು ...ಶಾಸ್ತ್ರಿ ಯವರಿಂದ ಹರಿಕಥೆ ನಡೆಯುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಮಧ್ಯಾಹ್ನ ... ... ಕನ್ನಡ ...

NEW NURSERY SCHOOL

at

CHRIST THE KING CONVENT

(Near St. Genesi Talkies)

To be opened on

22 5 53

For Further Apply

to The Manager

Christ the King Ladies ... Convent

ಭಾರತಕ್ಕೆ ಅಮೆರಿಕದ ವಿಶೇಷ ಆರ್ಥಿಕ ಸಹಾಯ

ಭಾರತ, ಪಾಕಿಸ್ತಾನ, ಅಫ್ಘಾನಿಸ್ಥಾನ ಮತ್ತು ನೇಪಾಳಗಳಿಗೆ ಈ ವರ್ಷ ಒಟ್ಟು ೧೫ ಕೋಟಿ ಡಾಲರಿನಷ್ಟು ವಿಶೇಷ ಆರ್ಥಿಕ ಸಹಾಯವನ್ನು ಕೊಡಲಾಗುವುದೆಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಆ ಪ್ರದೇಶಗಳಲ್ಲಿರುವ ಜನರ ಜೀವನದ ಮಟ್ಟ ಹೆಚ್ಚಿಸಲು ಈ ಸಹಾಯವನ್ನು ನೀಡಲಾಗುವುದು.

ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯ ಬಳಕೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಭಾಷೆಗಳ ಉಪಯೋಗದ ವಿಷಯವಾಗಿ ನಿರ್ಣಯವೊಂದನ್ನು ಮಾಡಿ ರಾಷ್ಟ್ರೀಯ ಭಾವನೆಯಾದ ಹಿಂದಿಯನ್ನು ಪ್ರೋತ್ಸಾಹಿಸಬೇಕಾದ ಅಗತ್ಯವಿದ್ದರೂ ಪ್ರಾಂತೀಯ ಭಾಷೆಗಳಿಗೂ ಪ್ರೋತ್ಸಾಹವೀಯಬೇಕೆಂದೂ ...ವುಗಳನ್ನು ಆಯಾ ಪ್ರದೇಶಗಳಲ್ಲಿನ ಕೆಲಸ ಕಾರ್ಯಗಳಿಗಾಗಿ ಬಳಸಬೇಕೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವು ಮಾತೃಭಾಷೆಯೇ ಆಗಿರಬೇಕೆಂದೂ ಸಮಿತಿಯು ಸೂಚಿಸಿರುತ್ತದೆ. ಭಾರತದಲ್ಲೇ ಹುಟ್ಟಿ ಬೆಳೆದ ಉರ್ದು ಭಾಷೆಗೂ ಉಚಿತ ಸ್ಥಾನವು ದೊರಕುವುದೆಂದು ಸಮಿತಿಯವರು ತಿಳಿಸಿರುತ್ತಾರೆ.

ಸುದರ್ಶನ ಪತ್ರಿಕೆಯ ಆರಂಭೋತ್ಸವ

ರಾಜಧಾನಿಯ ಶ್ರೀ ಜಿ. ಸ್ವಾಮಿದಾಸ್‌ರವರ ಸಂಪಾದಕತ್ವದಲ್ಲಿ ಮತ್ತು ಶ್ರೀ ಎಂ. ಗುಂಡಾಶಾಸ್ತ್ರಿಯವರ ಉಪ ಸಂಪಾದಕತ್ವದಲ್ಲಿ ಪ್ರಕಟವಾದ ಸುದರ್ಶನ ಎಂಬ ಕನ್ನಡ ವಾರ ಪತ್ರಿಕೆಯ ಪ್ರಾರಂಭೋತ್ಸವವನ್ನು ನೆನ್ನೆ ಚಾಮುಂಡೇಶ್ವರಿ ಭವನದಲ್ಲಿ ಶ್ರೀ ಎಂ. ಆರ್. ಸಿ. ಬಸಪ್ಪನವರು ನೆರವೇರಿಸಿದರು. ನಗರದ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರೂ ಶ್ರೀ ಎಂ. ಆರ್. ಸಿ. ಬಸಪ್ಪನವರೂ, ಶ್ರೀಗಳಾದ ಮೈಸೂರು ಪತ್ರಿಕೆಯ ಟಿ. ನಾರಾಯಣ, ವರ್ತಮಾನ ಸಂಪಾದಕರಾದ ಎಂ. ಎನ್. ತಿಮ್ಮಯ್ಯ, ಪೌರಸಭಾ ಸದಸ್ಯ ಬಿ. ಜಿ. ದಾಸ್, ಕೆ. ಶೇಷಾದ್ರಿ, ಕೋದಂಡರಾವ ಪಿಳ್ಳೈ, ಡಾ|| ಅಣ್ಣಾಜಪ್ಪನವರು ಗಳೂ ಭಾಷಣ ಮಾಡಿ ಪತ್ರಿಕೆಗೆ ಯಶಸ್ಸನ್ನು ಕೋರಿದರು.

SRI GAYATHRI

TALKIES

From 19 5 53 for 2 days

M G M's

SHADOW ON —

— THE WALL

With — Ann Sothern,

Zachary Scott

Coming —

PRE HISTORIC WOMAN

ಕಾಂಗ್ರೆಸ್ ಸದಸ್ಯತ್ವದ ಶುಲ್ಕ ಹೆಚ್ಚುವುದು

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರಾಗುವವರು ವರ್ಷಕ್ಕೆ ನಾಲ್ಕಾಣೆ ಬದಲು ೮ ಆಣೆ ಶುಲ್ಕವನ್ನು ಕೊಡಬೇಕೆಂದು ಕಾರ್ಯಕಾರಿ ಸಮಿತಿಯು ಗೊತ್ತುಮಾಡಿರುತ್ತದೆ. ಕಾರ್ಯನಿರತ ಸದಸ್ಯರು ಪ್ರತ್ಯೇಕವಾಗಿ ತಾವು ಕೊಡುವ ೧ ರೂ. ಜೊತೆಗೆ ಸಂಸ್ಥೆಗಾಗಿ ೧೦ ರೂ.ಗಳನ್ನು ಶೇಖರಿಸಿ ಕೊಡಬೇಕು. ಈ ಹಣವು ಸಮಿತಿಯ ವಿಕಾಸಲು ನಿಧಿಯಾಗುವುದು.

ಆಫ್ರಿಕಾ ಭಾರತೀಯರ ಮೇಲೆ ಹೊಸ ನಿರ್ಬಂಧ

ದಕ್ಷಿಣ ಆಫ್ರಿಕದಿಂದ ಸ್ವದೇಶಕ್ಕೆ ತೆರಳಿರುವ ಅಲ್ಲಿನ ಭಾರತೀಯರ ಪತ್ನಿಯರು ಮತ್ತು ಮಕ್ಕಳು ಮತ್ತೆ ದಕ್ಷಿಣ ಆಫ್ರಿಕಕ್ಕೆ ಬಂದಂತೆ ನಿಷೇಧಿಸುವ ಒಂದು ಮಸೂದೆಯನ್ನು ಅಲ್ಲಿನ ಒಳಾಡಳಿತ ಸಚಿವ ಡಾ|| ಟಿ. ಇ. ಡಾಂಗೆಸ್‌ರವರು ಸಿದ್ಧಗೊಳಿಸುತ್ತಿರುವರೆಂದು ಗೊತ್ತಾಗಿದೆ. ಬರುವ ಜುಲೈ ತಿಂಗಳಲ್ಲಿ ಸೇರಲಿರುವ ದಕ್ಷಿಣ ಆಫ್ರಿಕದ ಪಾರ್ಲಿಮೆಂಟ್ ಅಧಿವೇಶನದಲ್ಲಿ ಇದನ್ನು ಮಂಡಿಸಲಾಗುವುದು.

೧೯೫೧–೫೨ ರಲ್ಲಿ ೧೫೫ ಕೊಲೆಗಳು

ಸಂಸ್ಥಾನದಲ್ಲಿ ೧೯೫೧–೫೨ರಲ್ಲಿ ೧೫೫ ಕೊಲೆಗಳಾದುವೆಂದೂ ಆ ಪೈಕಿ ೩೧ ಕೊಲೆಗಳು ಪ್ರಣಯ ಸಂಬಂಧವಾಗಿ ನಡೆದವೆಂದೂ, ಸರ್ಕಾರದ ವರದಿಯು ತಿಳಿಸಿರುತ್ತದೆ. ಕುಟುಂಬ ವ್ಯವಹಾರಗಳ ಸಂಬಂಧವಾಗಿ ೨೬, ಕೋರ್ಟ್ ವ್ಯಾಜ್ಯಗಳಿಂದ ೧೫, ಲಾಭಕ್ಕಾಗಿ ೧೩, ಇತರ ಕಾರಣಗಳಿಗಾಗಿ ೭೦ ಕೊಲೆಗಳಾಗಿವೆ. ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಕೊಲೆಗಳು ಆ ವರ್ಷ ನಡೆದಿವೆ.

ರಾಮಮಂದಿರದ ಪ್ರವೇಶೋತ್ಸವ

ಟಿ. ನರಸೀಪುರ ೧೯

ಈ ತಾಲ್ಲೂಕು ಆಲಗೂಡು ರಾಮಮಂದಿರದ ಪ್ರವೇಶೋತ್ಸವವು ಕಳೆದ ವಾರ ಸಾಹುಕಾರ್ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಉತ್ಸವಾದಿಗಳು ವಿಜೃಂಭಣೆಯಿಂದ ನೆರವೇರಿದುವು.

○ ಶಿವನಸಮುದ್ರದವರಿಗೂ ಇಲ್ಲಿನ ಹೈಸ್ಕೂಲಿನವರಿಗೂ ಕ್ರಿಕೆಟ್ ಪಂದ್ಯವು ನಡೆದು ಇಲ್ಲಿನವರು ಗೆದ್ದರು.

SRI GANESHA

TALKIES

From 20 5 53 For 2 days

KANSAS RAIDERS

(In Technicolor)

With Tony Curtis

Scott Brady

TO-DAY LAST DAY

FLAME OF ARABY

From 22-5-53

THE JUNGLE

ಅಮೆರಿಕಕ್ಕೆ ರಾಧಾಕೃಷ್ಣನ್ ಪ್ರಯಾಣ

ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಮೊನ್ನೆ ಅಮೆರಿಕಕ್ಕೆ ಪ್ರಯಾಣ ಬೆಳೆಸಿ ನೆನ್ನೆ ಲಂಡನ್ ತಲುಪಿದರು. ಅವರು ನಾಳೆದ್ದು ಅಧ್ಯಕ್ಷ ಐಸೆನ್‌ಹೋವರರನ್ನು ಭೇಟಿ ಮಾಡುವರು. ಕೊರಿಯಾ ಬಗ್ಗೆ ಭಾರತದ ನಿಲುವನ್ನು ಅವರು ಅಧ್ಯಕ್ಷರಿಗೆ ವಿವರಿಸುವರು.

ಚಿನ್ನದ ಕಿರೀಟದ ಸಮೇತ ಸಮಾಧಿಯಾದ ರಾಣಿ

ಫ್ರಾನ್ಸಿನ ಬರ್ಗಂಡಿ ಪ್ರಾಂತದ ವಿಕ್ಸ್ ಎಂಬಲ್ಲಿ ೨೫ ಸಾವಿರ ವರ್ಷಗಳ ಹಿಂದೆ ಇದ್ದ ಗಾಲ್ ದೇಶದ ರಾಣಿಯ ಅಸ್ಥಿ ಪಂಜರವು ದೊರಕಿದೆ. ತಲೆ ಭಾಗದಲ್ಲಿ ಚಿನ್ನದ ಕಿರೀಟವು ಇದೆ. ಸಮಾಧಿಯಾಗುವಾಗ ಆಕೆಯನ್ನು ಯುದ್ಧದ ರಥದಲ್ಲಿ ಕೂಡಿಸಿ ಮಣ್ಣುಗೂಡಿಸಲಾಗಿದ್ದಿತು. ಈ ವಸ್ತುವಿಶೇಷಗಳನ್ನು ಪ್ಯಾರಿಸ್ಸಿನ ವಸ್ತುಸಂಗ್ರಹಾಲಯದಲ್ಲಿಡಲಾಗುವುದು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೨೮ ೦ ೨	೩೧ ೦ ೦
ಹರಳುಬೀಜ	೩೯ ೦ ೦	೪೧ ೧೦ ೦
ಹೊಂಗೆಬೀಜ	೨೧ ೮ ೦	೨೧ ೪ ೦
ಹುರುಳಿ	೪೩ ೨ ೦	೪೪ ೨ ೦
ಹೆಸರು	೬೨ ೨ ೦	
ಪಲಸಂದೆ	೫೨–೧೪–೦	೫೫ ೬ ೦
ಎಳ್ಳು	೭೫–೦ ೦	
ಮೆಣಸಿನಕಾಯಿ	೨೨ ೨ ೦	
ಸೂಣಸೀಡು	೫ ೦ ೦	೬ ೪ ೦
ಸೀಗೆಕಾಯಿ	೫ ೦ ೦	
ತೆಂಗಿನಕಾಯಿ		
೧೦೦೦ಕ್ಕೆ	೧೫೬ ೦ ೦	೨೪೬ ೨ ೦

ಸುತ್ತೂರಿನಲ್ಲಿ ಸೇವಾ ಶಿಬಿರ

ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿ ಇದೇ ೨೪ ನೇ ತಾ|| ನಿಂದ ಪ್ರಾಥಮಿಕ ಸೇವಾ ಶಿಬಿರವನ್ನು ಭಾರತ ಸೇವಾ ದಳದವರು ಏರ್ಪಡಿಸಲಿರುವರು. ೧೫ ದಿನಗಳ ವರೆಗೆ ಶಿಬಿರವು ನಡೆಯುವುದು. ೧೮ ವಯಸ್ಸಿಗೆ ಮೇಲ್ಪಟ್ಟ ಯುವಕರು ಅದರಲ್ಲಿ ಸೇರಬಹುದಾಗಿದೆ. ಸೇರಲಿಚ್ಛಿಸುವವರು ಇದೇ ೨೨ ನೇ ತಾ|| ನೊಳಗೆ ಶ್ರೀ ಹೆಚ್. ಶಿವಾನಂದ ಮೂರ್ತಿ, ಜಿಲ್ಲಾ ಸಂಘಟಕ, ಭಾರತ ಸೇವಾದಳ, ೧೮೦, ಹಳೇ ಅಗ್ರಹಾರ, ಮೈಸೂರು– ಈ ವಿಳಾಸಕ್ಕೆ ತಿಳಿಸಬೇಕು.

||ಶ್ರೀ||

ಜಗದಂಬಾ ಶಿಶುವಿಹಾರ

58೨ ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ. ಕಿಂಡರ್ ಗಾರ್ಟನ್ ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾದರಿಗಳನ್ನನುಸರಿಸಿ ಮಿಡಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು. ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣವೇಣಿ

ಸ್ಥಾಪಕಿ

Edited, Printed and Published by A. R. Nagarajan at Sadhvi Press, D. Subbiah Road, Mysore

ಕೋರ್ಟ ನಂ. 792 ॥ ವಂದೇ ಮಾತರಂ! ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೦-೫ ೧೯೫೩ [ಸಂಚಿಕೆ ೨೩೦

ಬರ್ಮದಿಂದ ವಾಪಸಿಗೆ ಚಿಯಾಂಗರ ವಿರೋಧ

ಮನೆ ಕಂದಾಯದ ಬಗ್ಗೆ ಪೌರಸಭೆ ಮೇಲೆ ದಾವಾ

ಮೈಸೂರು ೨೦

ಮನೆ ಕಂದಾಯ ವಿಧಾಯಕದ ವಿಷಯವಾಗಿ ಪೌರಸಭೆಯವರ ನಡವಳಿಕೆ ಕ್ರಮವನ್ನು ಪ್ರಶ್ನಿಸಿ ನಗರದ ವಕೀಲರಾದ ಶ್ರೀ ಎ ಎಸ್ ರಾಮಯ್ಯನವರು ೧ ನೇ ಮುನ್ಸೀಫ್ ಕೋರ್ಟಿನಲ್ಲಿ ದಾವ ಹೂಡಿರುತ್ತಾರೆ ಕಂದಾಯವನ್ನು ವಿಧಿಸುವ ಸಂಬಂಧವಾಗಿ ಮನೆ ಬಾಡಿಗೆಯ ಮೌಲ್ಯದ ನಿರ್ಧಾರದ ಬಗ್ಗೆ ಬರುವ ತಕರಾರುಗಳನ್ನು ತೀರ್ಮಾನ ಮಾಡಬೇಕಾದರೆ ಪೌರಸಭೆಯವರು ಸರ್ಕಾರದ ಸಲಹೆಯನ್ನು ಪಡೆಯಬೇಕಾಗಿರುವುದೆಂದೂ, ಆದರೆ ಸಲಹೆಯನ್ನು ಪಡೆಯದೆಯೇ ಪೌರಸಭೆಯವರು ಸ್ವತಃ ತೀರ್ಮಾನಿಸುವುದು ಕಾನೂನುಬದ್ಧವೇ ಎಂಬ ವಿಷಯವಾಗಿ ಈ ದಾವೆಯನ್ನು ಹೂಡಲಾಗಿದೆಯೆಂದೂ ಹೇಳಲಾಗಿದೆ

ವೇಣು ವಾದನ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಆಸ್ಥಾನ ವಿದ್ವಾನ್ ವಿ ದೇಶಿಕಾಚಾರ್ಯರ ವೇಣು ವಾದನವು ಏರ್ಪಾಡಾಗಿದೆ

ಮೈಸೂರಿಗೆ ಭರತಪುರದ ಮಹಾರಾಣಿಯವರು

ಶ್ರೀಮನ್ಮಹಾರಾಜರ ಕಿರಿಯ ಸಹೋದರಿಯೂ, ಭರತಪುರದ ಮಹಾರಾಣಿಯವರೂ ಆದ ಶ್ರೀ ಜಯ ಚಾಮುಂಡಮ್ಮಣ್ಣಿಯವರು ಮೈಸೂರಿಗೆ ಆಗಮಿಸಿರುತ್ತಾರೆ ಅವರು ಇಲ್ಲಿ ಹಲವು ದಿವಸಗಳವರೆಗೆ ಇರುವರು

ಉಪಾಧ್ಯಾಯರ ಕಾಲೇಜಿಗೆ ಕೆ. ಆರ್ ಎಸ್ ಗುಪ್ತ

ರಾಜಧಾನಿಯಲ್ಲಿರುವ ಉಪಾಧ್ಯಾಯರುಗಳ ಕಾಲೇಜಿನ ವಿದ್ಯಾಭ್ಯಾಸದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಕೆ ಆರ್ ಎಸ್ ಗುಪ್ತರವರನ್ನು ನೇಮಿಸಲಾಗಿದೆ

ನೈಜೀರಿಯದಲ್ಲಿ ಭಾರಿ ಗಲಭೆ

ಆಫ್ರಿಕಾ ಖಂಡದ ನೈಜೀರಿಯಾ ದೇಶದ ಉತ್ತರ ಭಾಗದಲ್ಲಿರುವ ಕಾನೊ ಎಂಬಲ್ಲಿ ಎರಡು ರಾಜಕೀಯ ಪಕ್ಷಗಳವರಿಗೆ ಶನಿವಾರ ತೀವ್ರ ಗಲಭೆ ನಡೆದುದರ ಪರಿಣಾಮವಾಗಿ ೫೦ ಮಂದಿ ಮಡಿದಿರುವರು ಅನೇಕರಿಗೆ ಗಾಯವಾಗಿದೆ ಅಲ್ಲಿ ಜರೂರು ಪರಿಸ್ಥಿತಿ ಇರುವುದಾಗಿ ಘೋಷಿಸಲಾಗಿದೆ ಪೊಲೀಸರಿಗೂ, ದಂಗೆಕೋರರಿಗೂ ಹೊಡೆದಾಟಗಳು ನಡೆದಿವೆ ಪರಿಸ್ಥಿತಿಯು ಉಲ್ಬಣಿಸಿದೆ

ಹೈದ್ರಾಬಾದ್ ನವಾಬ್ ದಂಪತಿಗಳಿಗೆ ದಂಡ

ಹೈದರಾಬಾದಿನ ನವಾಬ್ ಯಾರ್ ಜಂಗ್ ಮತ್ತು ಅವರ ಪತ್ನಿಯವರು ಕಳೆದ ವರ್ಷ ಸುಮಾರು ೫ ಲಕ್ಷ ರೂ ಬೆಲೆಯ ಆಭರಣಗಳನ್ನು ಅಪ್ಪಣೆಯಿಲ್ಲದೆ ವಿಮಾನದಲ್ಲಿ ಕೈರೋವಿಗೆ ಸಾಗಿಸಲೆತ್ನಿಸಿದ ಸಂಬಂಧವಾಗಿ ಅವರಿಗೆ ಬೊಂಬಾಯಿಯ ನ್ಯಾಯಾಧೀಶರು ತಲಾ ೧೫ ಸಾವಿರ ರೂ ದಂಡ, ತಪ್ಪಿದರೆ ೬ ತಿಂಗಳು ಸಾದಾ ಸಜಾ ವಿಧಿಸಿರುವರು.

ಕೃತಕ ಅಕ್ಕಿ ತಯಾರಿಕೆ ಯಂತ್ರಕೊಳ್ಳಲು ಶಿಫಾರಸು

ಮೈಸೂರು ೨೦

ರಾಜಧಾನಿಯಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದ ಡೈರೆಕ್ಟರರಾದ ಡಾ॥ ವಿ ಸುಬ್ರಹ್ಮಣ್ಯಂರವರು ಕೃತಕ ಅಕ್ಕಿ ತಯಾರಿಕೆ ಯಂತ್ರಗಳನ್ನು ಕೊಳ್ಳುವ ಸಲುವಾಗಿ ಇಂಗ್ಲೆಂಡಿಗೆ ತೆರಳಿದ್ದು ಯಂತ್ರಗಳ ಬಗ್ಗೆ ಅಲ್ಲಿ ನಡೆಸಿದ ಪ್ರಯೋಗಗಳು ಯಶಸ್ವಿಯಾಗದ ಪ್ರಯುಕ್ತ ಸ್ವಿಟ್ಸರ್ಲೆಂಡಿಗೆ ಹೋಗಿ ಅಲ್ಲಿನ ಪ್ರವೀಣರೊಡನೆ ಕಲೆತು ಯಂತ್ರ ತಯಾರಿಕೆ ಬಗ್ಗೆ ಯಶಸ್ವಿಯಾದ ಪ್ರಯೋಗಗಳನ್ನು ನಡೆಸಿ, ಸ್ವದೇಶಕ್ಕೆ ಹಿಂದಿರುಗಿರುತ್ತಾರೆ ತಾವು ನಡೆಸಿದ ಪ್ರಯೋಗಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವರು ಈಗ ಕಂಡುಹಿಡಿಯಲಾಗಿರುವ ಯಂತ್ರದಿಂದ ಗಂಟೆಗೆ ಅರ್ಧ ಟನ್ನು ಕೃತಕ ಅಕ್ಕಿಯನ್ನು ತಯಾರಿಸಬಹುದೆಂದೂ ಇಲ್ಲಿಂದಲೇ ಕಚ್ಚಾ ವಸ್ತುಗಳನ್ನು ಸ್ವಿಟ್ಸರ್ಲೆಂಡಿಗೆ ಕಳುಹಿಸಿ ಅಕ್ಕಿಯನ್ನು ಮಾಡಿಸಿ ಆಮದು ಮಾಡುವುದಕ್ಕಿಂತ ಯಂತ್ರವನ್ನು ತರಿಸಿ ಅಕ್ಕಿ ತಯಾರಿಸುವುದರಿಂದ ದುಬಾರಿ ವೆಚ್ಚವಾಗುವುದಿಲ್ಲವೆಂದೂ ಅವರು ತಿಳಿಸಿರುವರು

ಬ್ರಿಟನ್ನಿಗೆ ಈಜಿಪ್ಟಿನ ಎಚ್ಚರಿಕೆ

ಬ್ರಿಟಿಷರು ಸೂಯೆಜ್ ಕಾಲುವೆ ಪ್ರದೇಶವನ್ನು ಬಿಟ್ಟುಹೋಗದಿದ್ದರೆ ಅವರೊಡನೆ ಬಹು ದೀರ್ಘ ಮತ್ತು ಭೀಕರವಾದ ಹೋರಾಟ ನಡೆಸಲಾಗುವುದೆಂದು ಕಾಲುವೆ ಪ್ರದೇಶದ ಸಂಧಾನದ ಪ್ರತಿನಿಧಿ ಮೇಜರ್ ಸಲಾಹ್ ಸಲೀಂರವರು ತಿಳಿಸಿರುತ್ತಾರೆ ಯುದ್ಧಕ್ಕಾಗಿ ಕಳೆದ ೬ ತಿಂಗಳಿಂದಲೂ ತಾವು ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿಯೂ ಅವರು ಹೇಳಿರುತ್ತಾರೆ ಸೂಯೆಜ್ ವಿವಾದದ ಬಗ್ಗೆ ಬ್ರಿಟನ್ನಿನೊಡನೆ ಎಲ್ಲ ಸಂಧಾನವನ್ನೂ ನಿಲ್ಲಿಸಿರುವುದಾಗಿ ಈಜಿಪ್ಟಿನ ಪ್ರಧಾನಿ ನಗೀಬರು ನೆನ್ನೆ ತಿಳಿಸಿದರು ಸ್ವಾತಂತ್ರ್ಯ ಹೋರಾಟಕ್ಕಾಗಿ ತಾವು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವುದಾಗಿಯೂ ಅವರು ವ್ಯಕ್ತಪಡಿಸಿದರು

ಬರ್ಮಾದಲ್ಲಿರುವ ಚೀಣಾ ಸೈನ್ಯಗಳ ರವಾನೆಗೆ ವಿರೋಧ

ರಾಷ್ಟ್ರೀಯ ಚೀಣಾದ ನಾಯಕ ಚಿಯಾಂಗ್ ಕೈಷೇಕರು ಬರ್ಮಾದಲ್ಲಿರುವ ತಮ್ಮ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳಲು ನಿರಾಕರಿಸಿರುವರೆಂದು ಅಮೆರಿಕದ ಪತ್ರಿಕೋದ್ಯೋಗಿ ಡ್ರ್ಯೂ ಪಿಯರ್ಸನ್ನರು ತಿಳಿಸುವರು ಆ ಸೈನಿಕರನ್ನು ಓಡಿಸುವ ನೆಪದಲ್ಲಿ ಕಮ್ಯೂನಿಸ್ಟ್ ಚೀಣಾ ಸೈನಿಕರೂ ಬರ್ಮಾದ ಮೇಲೆ ಆಕ್ರಮಣ ನಡೆಸಬಹುದೆಂದೂ ಅವರು ಹೇಳಿರುವರು ಬರ್ಮಾದಲ್ಲಿ ಚಿಯಾಂಗರ ಸೈನ್ಯಗಳ ಚಟುವಟಿಕೆ ಬಗ್ಗೆ ಬರ್ಮಾ ಸರ್ಕಾರದವರು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಗೆ ದೂರನ್ನು ಇತ್ತುದರ ಮೇಲೆ ಆ ಸೈನಿಕರನ್ನು ನಿಶ್ಶಸ್ತ್ರೀಕರಿಸಿ ಅವರನ್ನು ಅಲ್ಲೇ ಬಂಧನದಲ್ಲಿಡಬೇಕು ಅಥವಾ ಫಾರ್ಮೊಸಾಕ್ಕೆ ಕಳುಹಿಸಬೇಕು-ಎಂದು ತೀರ್ಮಾನಿಸಲಾಗಿತ್ತು

ಗುಮಾಸ್ತನ ಮೇಲೆ ಅಧಿಕಾರಿಯ ಬಲಪ್ರಯೋಗ

ಚಿತ್ರದುರ್ಗ ಜಿಲ್ಲೆಯ ಆರೋಗ್ಯ ಇಲಾಖೆ ಕಛೇರಿಯಲ್ಲಿ ಗುಮಾಸ್ತೆಯಾಗಿರುವ ಶ್ರೀ ಬಿ ಕೆ ಅಪ್ಪಯ್ಯನವರನ್ನು ಜಿಲ್ಲಾ ಆರೋಗ್ಯಾಧಿಕಾರಿಗಳಾದ ಶ್ರೀ ಪುಟ್ಟಭಟ್ಟರು ಹೊಡೆದು ಹೀನಾಯವಾಗಿ ಕಂಡರೆಂದು ವರದಿಯಾಗಿದೆ ಬೇರೊಬ್ಬ ಗುಮಾಸ್ತೆಯು ಎಲ್ಲಿಯೋ ಇಟ್ಟಿದ್ದ ಹಲವು ಕಾಗದಗಳನ್ನು ತರುವಂತೆ ಅಧಿಕಾರಿಗಳು ಶ್ರೀ ಅಪ್ಪಯ್ಯನವರಿಗೆ ಹೇಳಿ ಅವರು ತಡವಾಗಿ ಬರಲು ಅಧಿಕಾರಿಗೆ ಕೋಪ ಬಂದು, ಗುಮಾಸ್ತೆಯ ಮೇಲೆ ಕುರ್ಚಿಯೊಂದನ್ನು ಎಸೆದು ಸ್ವಲ್ಪ ಗಾಯಪಡಿಸಿದುದಾಗಿ ಹೇಳಲಾಗಿದೆ

ಸಂಸ್ಥಾನದಲ್ಲಿ ಕೆ ಸಿ ರೆಡ್ಡಿ ಮತ್ತು ಎಂ ವಿ ಕೃಷ್ಣಪ್ಪನವರ ಪ್ರವಾಸ

ಕೇಂದ್ರ ಸರ್ಕಾರದ ಉತ್ಪನ್ನ ಖಾತಾ ಸಚಿವ ಶ್ರೀ ಕೆ ಸಿ ರೆಡ್ಡಿ ಮತ್ತು ಆಹಾರ ಖಾತೆಯ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಬರುವ ತಿಂಗಳು ಮೊದಲನೇ ವಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಆಗಮಿಸಿ, ಇಲ್ಲಿನ ಅಭಾವ ಪೀಡಿತ ಪ್ರದೇಶಗಳಲ್ಲಿ ಎರಡು ವಾರ ಕಾಲ ಒಟ್ಟಿಗೆ ಪ್ರವಾಸ ಕೈಗೊಳ್ಳುವರೆಂದು ತಿಳಿದುಬಂದಿದೆ

ಅರಮನೆ ಓಲಗದವರಿಗೆ ತುಟ್ಟಿ ಭತ್ಯ ರದ್ದು

ಮೈಸೂರು ೨೦

ಮೈಸೂರು ಅರಮನೆಯಲ್ಲಿರುವ ಓಲಗ(ವಾದ್ಯಗಾರರು)ದವರಿಗೆ ಕಳೆದ ಏಪ್ರಿಲ್ ತಿಂಗಳಿಂದ ತುಟ್ಟಿ ಭತ್ಯವನ್ನು ನಿಲ್ಲಿಸಲಾಗಿದೆಯೆಂದೂ, ಈ ಕಾರಣಕ್ಕಾಗಿ ಅವರು ಕಳೆದ ಮತ್ತು ಈ ತಿಂಗಳುಗಳ ಸಂಬಳವನ್ನು ತೆಗೆದುಕೊಳ್ಳದೆ ನಿರಾಕರಿಸಿರುವರೆಂದೂ ಹೇಳಲಾಗಿದೆ ಈ ಬಗ್ಗೆ ತಮಗೆ ಸೂಕ್ತ ಪರಿಹಾರ ದೊರಕುವವರೆಗೆ ತಾವು ಕೆಲಸದ ಮೇಲೆ ಹೋಗುವುದಿಲ್ಲವೆಂದು ಅವರು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ಅಸ್ಸಾಮಿನಲ್ಲಿ ಪ್ರವಾಹದ ಹಾವಳಿ

ಅಸ್ಸಾಮಿನ ದಿಬಾಂಗ್ ನದಿಯಲ್ಲಿ ಪ್ರವಾಹವುಂಟಾಗಿ ಸಾದಿಯಾ ನಗರದಲ್ಲಿ ನೀರು ನಿಂತಿರುವುದಾಗಿ ವರದಿಯಾಗಿದೆ ಸರ್ಕಾರಿ ಮತ್ತು ಸಾರ್ವಜನಿಕ ಕಟ್ಟಡಗಳೂ, ಮನೆಗಳೂ ಎರಡಡಿ ನೀರಿನಲ್ಲಿವೆ ಬ್ರಹ್ಮಪುತ್ರಾ ನದಿಯಲ್ಲೂ ವಿಪರೀತ ಪ್ರವಾಹ ಬಂದಿದೆ

ಹೋಟೇಲು ಮಾಲೀಕರ ಮೇಲೆ ಪೋಲೀಸರ ಕ್ರೋಧ

ಕಡೂರಿನ ಪುರ ಪೌರಸಭಾ ಸದಸ್ಯರೂ ಶ್ರೀ ಕೃಷ್ಣಾ ಟಾಕೀಸ್ ಹೋಟೇಲಿನ ಮಾಲೀಕರೂ ಆದ ಶ್ರೀ ಟಿ ನಾರಣಪ್ಪನವರನ್ನು ಅಲ್ಲಿನ ಪೊಲೀಸರು ಕಳೆದ ಶನಿವಾರ ಹೊಡೆದರೆಂದು ವರದಿಯಾಗಿದೆ ಪೌರಸಭಾಧಿಕಾರಿಗಳ ಸೂಚನೆಯಂತೆ ಹೋಟೇಲಿನ ತಟ್ಟೆಗಳು ಮತ್ತು ಆಹಾರ ಪದಾರ್ಥಗಳನ್ನು ಹೊರಕ್ಕೆ ತೆಗೆದುಕೊಂಡು ಹೋಗಲು ಹೋಟೇಲು ಮಾಲೀಕರು ಅಡ್ಡಿ ಬಂದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಕೆಲವು ತಿಂಗಳ ಹಿಂದೆ ಹೋಟೇಲನ್ನು ಪರೀಕ್ಷಿಸಿದಾಗ ಅದು ಕೊಳಕಾಗಿದ್ದಿತೆಂದೂ, ಅದನ್ನು ಸರಿಪಡಿಸುವಂತೆ ಅಧಿಕಾರಿಗಳು ಎರಡು ಬಾರಿ ತಿಳಿಸಿದರೆಂದೂ ಮಾಲೀಕರು ಕೇಳದಿರಲು ಅವರ ಲೈಸೆನ್ಸನ್ನು ರದ್ದು ಮಾಡಲಾಯಿತೆಂದೂ ಇವೆಲ್ಲವನ್ನೂ ಮಾಲೀಕರು ಗಮನಕ್ಕೆ ತಾರದಿರಲು ಪೌರಸಭಾಧ್ಯಕ್ಷ ಶ್ರೀ ತಿಮ್ಮಯ್ಯ ಮತ್ತು ಇತರ ಹಲವರು ಸಿಬ್ಬಂದಿಯೊಡನೆ ಹೋಟೇಲಿಗೆ ಹೋಗಿ ದಾಗಿನ ಮುಚ್ಚುವಂತೆ ಸೂಚಿಸಲು ಅವರು ಒಪ್ಪಲಿಲ್ಲವೆಂದೂ ಆ ಮೇಲೆ ಪೋಲೀಸರಿಗೆ ಸಾಮಾನುಗಳನ್ನು ತೆಗೆಯುವಂತೆ ಸೂಚಿಸಲಾಯಿತೆಂದೂ ಹೇಳಲಾಗಿದೆ ಅನೇಕ ಪದಾರ್ಥಗಳನ್ನು ವಶಪಡಿಸಿಕೊಂಡು ಪೌರಸಭಾ ಕಛೇರಿಗೆ ತೆಗೆದುಕೊಂಡು ಹೋಗಲಾಗಿದೆ

ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಈಗ ಹೋಟೇಲನ್ನು ನಿಲ್ಲಿಸುವ ಬಗ್ಗೆ ಆಜ್ಞೆಯನ್ನು ತೆರೆಯುವಂತೆ ಸೂಚಿಸಿರುವರೆಂದೂ, ಶ್ರೀ ನಾರಣಪ್ಪನವರು ಪೌರಸಭೆಯ ಅಧಿಕಾರಿಗಳ ಮೇಲೆ ಮಾನ ನಷ್ಟ ಮೊಕದ್ದಮೆಯನ್ನು ಹೂಡಲಿರುವರೆಂದೂ ಹೇಳಲಾಗಿದೆ

ನೀಲಗಿರಿಗೆ ೨೪ ನೇ ತಾ॥ ಮುಖ್ಯ ಮಂತ್ರಿ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೈಸೂರಿಗೆ ಇದೇ ೨೩ ನೇ ತಾ॥ ಗೆ ಆಗಮಿಸಿ, ಮಾರನೇ ದಿನ ನೀಲಗಿರಿಗೆ ಪ್ರಯಾಣ ಮಾಡುವರು. ಅಲ್ಲಿ ಅವರು ಜೂನ್ ೫ನೇ ತಾ॥ ವರೆಗೆ ಇರುವರು.

ಒಂದೇ ಘಟ್ಟದಲ್ಲಿ ಮಾರಾಟ ತೆರಿಗೆ

ಬೆಂಗಳೂರು ೨೦

ಮಾರಾಟ ತೆರಿಗೆ ಸಲಹಾ ಸಮಿತಿಯವರು ಮೊನ್ನೆ ಸಭೆ ಸೇರಿ ಸಂಸ್ಥಾನದಲ್ಲಿ ಈಗ ಜಾರಿಯಲ್ಲಿರುವ ಮಾರಾಟ ತೆರಿಗೆ ರೀತಿಯನ್ನು ಪರಿಶೀಲಿಸಿ, ಒಂದೇ ಘಟ್ಟದಲ್ಲಿ ತೆರಿಗೆ ವಿಧಿಸುವುದನ್ನು ಒಪ್ಪಿರುವುದಾಗಿ ತಿಳಿದು ಬಂದಿದೆ. ಆದರೆ ಹಲವು ಸರಕುಗಳ ಮೇಲೆ ಈಗ ವಿಧಿಸಿರುವ ತೆರಿಗೆಯ ದರವನ್ನು ಎರಡರಷ್ಟಾಗಲಿ, ಮೂರರಷ್ಟಾಗಲಿ ಹೆಚ್ಚಿಸುವುದು ಒಳ್ಳೆಯದೆಂದು ಸಮಿತಿಯು ಭಾವಿಸಿರುವುದಾಗಿಯೂ ಹೇಳಲಾಗಿದೆ. ಅವಶ್ಯಕ ಪದಾರ್ಥಗಳ ಮೇಲೆ ತೆರಿಗೆಯ ವಿನಾಯಿತಿ ಕೊಡಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿರುವುದಾಗಿ ಹೇಳಲಾಗಿದೆ.

ಪಂಚ ವಾರ್ಷಿಕ ಯೋಜನೆಗೆ ಕಾಣಿಕೆ

ಭಾರತದ ಪಂಚವಾರ್ಷಿಕ ಯೋಜನೆ ವೆಚ್ಚಕ್ಕಾಗಿ ದಯಾಪುರದ ಪೋಟೀಲ್ ದರಕೆಲಸಗಾರನು ತನ್ನ ಒಂದು ತಿಂಗಳ ಸಂಬಳವನ್ನು ಕಾಣಿಕೆಯಾಗಿ ಕೊಟ್ಟಿರುವದಾಗಿ ಗೊತ್ತಾಗಿದೆ. ಮುಂದಿನ ೫ ವರ್ಷಗಳಲ್ಲೂ ಪ್ರತಿ ವರ್ಷಕ್ಕೆ ೧೦ ರೂ ಸಂತೆ ಕೊಡುವುದಾಗಿಯೂ ಅವನು ತಿಳಿಸಿರುತ್ತಾನೆ.

ಗುಂಡ್ಲುಪೇಟೆ ಶಿಬಿರಕ್ಕೆ ಅಸ್ಸಿರಿಯಾ ಪ್ರವಾಸಿಗರ ಭೇಟಿ

ಮೈಸೂರಿನಲ್ಲಿ ನಡೆಯುತ್ತಿರುವ ಬೇಸಿಗೆ ಗ್ರಾಮ ಸೇವಾ ಶಿಬಿರಗಳ ಕಾರ್ಯಕ್ರಮವನ್ನು ಪರಿಶೀಲಿಸುವುದಕ್ಕಾಗಿ ಅಸ್ಸಿರಿಯಾ ದೇಶದ ಹೆಸಿಸ್ ಎಂಬುವರು ಆಗಮಿಸಿರುತ್ತಾರೆ. ಗುಂಡ್ಲುಪೇಟೆಯಲ್ಲಿ ಏರ್ಪಾಡಾಗಿರುವ ಶಿಬಿರಕ್ಕೆ ಅವರು ಪ್ರಯಾಣ ಮಾಡಿದ್ದಾರೆ. ಅವರು ಸರ್ವೀಸ್ ಸಿವಿಲ್ ಇಂಟರ್ ನ್ಯಾಷನಲ್ ಸಂಸ್ಥೆಯ ಸದಸ್ಯರು.

ಜನಗಣತಿ ಕೆಲಸ ಮಾಡಿದವರಿಗೆ ಬಹುಮಾನ

೧೯೫೧ರ ಜನಗಣತಿ ಕಾಲದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದರೆಂದು ನಗರದ ಆರೋಗ್ಯಾಧಿಕಾರಿಗಳಾಗಿದ್ದ ಡಾ|| ಎಸ್. ಶೇಷಗಿರಿರಾವ್ ರವರಿಗೂ ಶ್ರೀಗಳಾದ ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ಎಸ್. ಶಂಕರನಾರಾಯಣರಾವ್, ವೈ. ಸುಬ್ರಹ್ಮಣ್ಯರಾಜು ರವರುಗಳಿಗೂ ಬೆಳ್ಳಿ ಪದಕಗಳನ್ನು ಬಹುಮಾನ ಕೊಡಲಾಗಿದೆ. ಶ್ರೀಗಳಾದ ಬಿ. ಎಸ್. ವೆಂಕಟೇಶಯ್ಯ, ಹೆಚ್. ವೈ. ಮೋಹನರಾಂ, ಬಿ. ದೇವರಾಜು, ಎ. ಜಯತೀರ್ಥಾಚಾರ್ ಮತ್ತು ಸದಾಶಿವಯ್ಯನವರುಗಳಿಗೆ ಮಿಶ್ರಲೋಹದ ಪದಕಗಳನ್ನು ಕೊಡಲಾಗಿದೆ.

ಉತ್ತುವಳ್ಳಿಯಲ್ಲಿ ಬಸವ ಜಯಂತಿ

ಚಾಮರಾಜನಗರ ತಾಲ್ಲೂಕು ಉತ್ತುವಳ್ಳಿಯಲ್ಲಿ ಕಳೆದ ಗುರುವಾರ ಬಸವ ಜಯಂತಿ ಉತ್ಸವವು ನಡೆಯಿತು. ಶ್ರೀ ಪುಟ್ಟಮಾದಪ್ಪನವರಿಂದ ಅಲಂಕರಿಸಲ್ಪಟ್ಟ ಹೂವಿನ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರವನ್ನಿಟ್ಟು ವಾದ್ಯ ಸಮೇತ ಮೆರವಣಿಗೆ ಮಾಡಲಾಯಿತು. ಶ್ರೀ ಬಸವೇಶ್ವರರ ವಿಷಯವಾಗಿ ಉಪನ್ಯಾಸವೂ ಆಯಿತು.

ದೆಹಲಿ ಮೇಲೆ ಮಿಡತೆಗಳ ದಂಡಯಾತ್ರೆ

ದೆಹಲಿ ಮೇಲೆ ಈ ವರ್ಷ ಈಗಲೇ ಮಿಡತೆಗಳ ಆಕ್ರಮಣವು ಪ್ರಾರಂಭವಾಗಿದೆ. ಮಿಡತೆಗಳ ಎರಡು ಗುಂಪುಗಳು ಕಳೆದ ವಾರ ಕಾಣಿಸಿಕೊಂಡುವು. ಮೊನ್ನೆ ರಾಧಾಕೃಷ್ಣನವರು ಹೊರಟ ವಿಮಾನಕ್ಕೆ ಅವು ಅಡ್ಡ ಬಂದುವು. ಕೆಂಪು, ಹಳದಿ ಮತ್ತು ಬೂದು ವರ್ಣದ ಮಿಡತೆಗಳು ೧ ಚದರ ಮೈಲಿಯಷ್ಟು ಪ್ರದೇಶವನ್ನು ಆಕ್ರಮಿಸಿದ್ದುವೆಂದು ಹೇಳಲಾಗಿದೆ. ಅವು ನೆನ್ನೆ ಲಕ್ನೋ ನಗರದ ಸುಮಾರು ಐದು ಚದುರ ಮೈಲಿ ಪ್ರದೇಶವನ್ನು ಅರ್ಧ ಘಂಟೆ ಕಾಲ ಆಕ್ರಮಿಸಿ ಅನಂತರ ಲಖೀಂಪುರದ ಕಡೆ ಹೊರಟುವೆಂದೂ ತಿಳಿದುಬಂದಿದೆ.

ಚರ್ಮ ಹದ ಮಾಡುವವರ ಮುಷ್ಕರ

ರಾಜಧಾನಿಯ ಕರೀಂ ಟ್ಯಾನರಿ (ಚರ್ಮ ಹದ ಮಾಡುವ) ಕಾರ್ಖಾನೆಯಲ್ಲಿದ್ದ ಸುಮಾರು ೫೦ ಮಂದಿ ಕಾರ್ಮಿಕರನ್ನು ಕಳೆದಿಂದ ವಜಾ ಮಾಡಿರುವ ಪ್ರಯುಕ್ತ, ಅದಕ್ಕೆ ಪ್ರತಿಭಟನೆಯನ್ನು ಸೂಚಿಸಲು ಮತ್ತು ಅವರನ್ನು ಪುನಃ ಕೆಲಸಕ್ಕೆ ನೇಮಿಸಿಕೊಂಡು, ಅವರನ್ನು ಕೆಲಸದಿಂದ ತೆಗೆದಂದಿನಿಂದಲೂ ಅವರ ಸಂಬಳವನ್ನು ಕೊಡುವಂತೆ ಒತ್ತಾಯಪಡಿಸಲು ಕಾರ್ಖಾನೆಯ ಎಲ್ಲ ಕೆಲಸಗಾರರೂ ನೆನ್ನೆಯಿಂದ ಮುಷ್ಕರ ಹೂಡಿರುತ್ತಾರೆ.

ದಕ್ಷಿಣ ಭಾಗದ ವನಮೃಗ ರಕ್ಷಣಾ ಸಮಿತಿಗೆ ಸಾಂಡೂರು ರಾಜರು

ಭಾರತದ ವನ ಮೃಗ ರಕ್ಷಣಾ ಸಮಿತಿಯ ದಕ್ಷಿಣ ಭಾಗದ ಕಾರ್ಯದರ್ಶಿಯಾಗಿ ಸಾಂಡೂರಿನ ಶ್ರೀಮಂತ ಯಶವಂತರಾವ್ ಘೋರ್ಪಡೆ ರಾಜರನ್ನು ನೇಮಿಸಲಾಗಿದೆ. ಅವರ ಅಧಿಕಾರ ವ್ಯಾಪ್ತಿಗೆ ಮೈಸೂರು ಸಂಸ್ಥಾನವೂ ಸೇರಿರುತ್ತದೆ.

ಚಲನಚಿತ್ರಗಳ ಮೂಲಕ ವಿದ್ಯಾಭ್ಯಾಸದ ಶಿಕ್ಷಣದ ಪರಿಸಮಾಪ್ತಿ

ಚಲನ ಚಿತ್ರಗಳ ಮೂಲಕ ವಿದ್ಯಾಭ್ಯಾಸ ಮಾಡಿಸುವ ಬಗ್ಗೆ ಇಲವಾಲದ ಭವನದಲ್ಲಿ ಈ ಬೇಸಿಗೆಯಲ್ಲಿ ಏರ್ಪಾಡಾಗಿದ್ದ ಶಿಕ್ಷಣದ ವ್ಯವಸ್ಥೆಯು ಇದೇ ೨೫ನೇ ತಾ|| ಮುಕ್ತಾಯವಾಗುವುದು. ಅದರ ಸಂಬಂಧವಾಗಿ ನಡೆಯುವ ಸಮಾರಂಭಕ್ಕೆ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎ. ಪಿ. ಶ್ರೀನಿವಾಸಮೂರ್ತಿ, ದೇವರ ನಾಮಗಳು. ಮಧ್ಯಾಹ್ನ ೧-೪೦ ವೀಣೆ ೨ ಪಲ್ಲವಿ ನಾಗರಾಜರಾವ್, ಕೊಳಲು. ಸಂಜೆ ೫-೪೦ ಗೋಟು ವಾದ್ಯ. ೬-೧೦ ಕನ್ನಡ ಗೀತೆಗಳು ೬ ಹೀರಾಬಾಯಿ ಬರೋಡ್ಕರ್, ಠಿಕಾರ್ ೬-೩೦ ಪಲ್ಲವಿ ನಾಗರಾಜರಾವ್ ಕೊಳಲು. ೮ ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೆ ಪಿಟೀಲು, ರಿಕಾರ್ಡ್ ೮-೧೫ ಹೆಚ್. ಕೆ. ರಾಮಸ್ವಾಮಿ, ಭಾರತ ಹಾಡನ ೯-೪೦ ಎ. ಹೆಚ್. ಶ್ರೀನಿವಾಸಮೂರ್ತಿ ಸಂಗೀತ ೯-೧೫ ಮೈಸೂರು ಸರಸ್ವತಿ ರಿಕಾರ್ಡು ೯-೪೦ ಇಂಗ್ಲೀಷ್ ಕಾರ್ಯಕ್ರಮ-೨೦ ಪ್ರಶ್ನೆಗಳು

೭೫ ಅಡಿ ಎತ್ತರದ ಗೋಪುರದಿಂದ ಬಾಲಕರು ಹಾರಿದರು

ಕ್ಯಾಲಿಫೋರ್ನಿಯಾ ಸಂಸ್ಥಾನದ ಸ್ಟಾಕ್‌ಟನ್ ಎಂಬಲ್ಲಿ ೩ ಬಾಲಕರು ತಮ್ಮ ಸಹಪಾಠಿಯೊಬ್ಬನ ೧೩ ವರ್ಷದ ಹುಟ್ಟಿದ ಹಬ್ಬವನ್ನು ಆಚರಿಸುವ ಸಲುವಾಗಿ ಅಲ್ಲಿನ ೭೫ ಅಡಿ ಎತ್ತರದ ಮರದ ಗೋಪುರವನ್ನು ಮೊನ್ನೆ ಹತ್ತಿದಾಗ ಆ ಪೈಕಿ ಒಬ್ಬನು ಸೇದಿ ಬಿಸಾಕಿದ ಸಿಗರೇಟಿನಿಂದ ಗೋಪುರಕ್ಕೆ ಬೆಂಕಿ ತಗುಲಿ, ತಪ್ಪಿಸಿಕೊಳ್ಳುವುದೇ ಕಷ್ಟವಾಯಿತೆಂದೂ, ಅಗ್ನಿ ಶಾಮಕ ದಳದವರು ಏಣಿಯನ್ನು ಹಾಕಲು ಅದು ಜ್ವಾಲೆಯಲ್ಲಿ ಉರಿದುಹೋಯಿತೆಂದೂ, ಅನಂತರ ಬೇರೆ ವಿಧಾನ ಕಾಣದೆ ಅಗ್ನಿ ಶಾಮಕ ದಳದವರು ಬಲೆ ಹಾಸಿ, ಬಾಲಕರನ್ನು ಅದಕ್ಕೆ ಧುಮುಕುವಂತೆ ಹೇಳಲು ಮೂವರೂ ಹಾಗೆಯೇ ಮಾಡಿ ಯಾವ ಅಪಾಯವೂ ಆಗದೆ ಮೃತ್ಯುವಿನಿಂದ ಪಾರಾದರೆಂದೂ ಗೊತ್ತಾಗಿದೆ.

ತುಂಗಭದ್ರಾ ಯೋಜನೆ ಬಗ್ಗೆ ದೆಹಲಿ ಮಾತುಕತೆ

ಬಳ್ಳಾರಿಯ ಹಲವು ಭಾಗಗಳು ಮೈಸೂರು ಸಂಸ್ಥಾನಕ್ಕೆ ಸೇರಲಿರುವುದರಿಂದ ತುಂಗಭದ್ರಾ ಯೋಜನೆಯ ಜವಾಬ್ದಾರಿಯು ಸಂಸ್ಥಾನದ ಮೇಲೆ ಎಷ್ಟಿರುವುದೆಂಬುದನ್ನು ಕುರಿತು ಚರ್ಚಿಸಲು ದೆಹಲಿಯಲ್ಲಿ ಸಭೆಯೊಂದು ಇದೇ ೩೦ನೇ ತಾ|| ನಡೆಯುವುದು. ಮೈಸೂರಿನ ಪರವಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಭಾಗವಹಿಸುವರು. ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ ಗಂಗಾಧರ್‌ರವರೂ ಹೋಗುವ ಸಂಭವವಿದೆ.

ಮನೆ ಖರೀದಿಗೆ

2945. ಸರಸ್ವತೀಪುರಂ

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ, ಸರಸ್ವತೀಪುರಂ 3 ನೇ ಕ್ರಾಸ್ ರೋಡು 2945ನೇ ಡೋರು ನಂಬರು ಮನೆ ಖರೀದಿಗೆ ದೊರೆಯುತ್ತೆ. ಮುಂದುಗಡೆ ತಾರಸಿ, ಹಿಂದುಗಡೆ ಮಂಗಳೂರು ಹಂಚಿನ ಮನೆ, ನಲ್ಲಿ, ದೀಪ, ಫ್ಲಷ್ ಕಕ್ಕಸು, ಭಾವಿ ಇತ್ಯಾದಿಗಳಿವೆ— ಸೈಟು ಅಳತೆ 40'x70' ಕ್ರಯ ರೂ 10,000

ಮಾಲೀಕರು,

ನಂ 2945 ಸರಸ್ವತೀಪುರಂ, ಮೈಸೂರು

||ಶ್ರೀ||

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ. ಕಿಂಡರ್ ಗಾರ್ಟನ್ ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಪದ್ಧತಿಗಳನ್ನನುಸರಿಸಿ ಪ್ರಿಪರೇಟರಿ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು. ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಮೋಸದ ಚಕ್ರಬಂಧ ಸ್ಪರ್ಧೆಗಾಗಿ ೧೫ ವರ್ಷ ಸಜಾ

ಮಧುರೆಯಲ್ಲಿ ಮೋಸದ ಚಕ್ರಬಂಧ ಸ್ಪರ್ಧೆಗಳನ್ನು ನಡೆಸುತ್ತಿದ್ದನೆಂದು ಅಲ್ಲಿನ ಕೆ. ಎಸ್. ರಾಮನ್ ಎಂಬಾತನಿಗೆ ೩ ಮೊಕದ್ದಮೆಗಳಲ್ಲಿ ೧೫ ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಆಣೆ	ರೂ. ಆ
ಅಕ್ಕಿ ಕಾಳು	೨೬ ೨-೦	೪೧ ೬ ೦
ಹರಳುಬೀಜ	೪೦-೦-೦	೪೫ ೦ ೦
ಕಡಲೆಬೀಜ	೨೧ ೧೪ ೦	೨೨ ೦ ೦
ಹುರುಳಿ	೪೭-೮-೦	೪೪ ೨ ೦
ಹಲಸಂದೆ	೫೦-೪-೦	೫೫ ೧೨ ೦
ಅವರೆ	೪೬ ೧೨-೦	
ಎಳ್ಳು	೬೮-೦-೦	
ಹುಚ್ಚೆಳ್ಳು	೫ ೯ ೦	೬ ೧೪ ೦
ಹೆಸರುಕಾಳು	೫ ೯ ೦	
ತೆಂಗಿನಕಾಯಿ		
೧,೦೦೦ ಕ್ಕೆ	೧೫೧ ೦-೦	೨೫೬ ೦ ೦

SRI RAGHAVENDRA INSTITUTE

1661. Kabir Road, Lashkar Mohalla Mysore.

CLASSES FROM 1 6-53

Ajmer Inter (in private), Hindi, L S From 2nd or 3 year, S S.L C (with or without L S), Dancing & Music (girls only) Class examinations.

ಒಲಂಪಿಯಾ ಟಾಕೀಸ್

21-5-53 ನೇ ಗುರುವಾರದಿಂದ ಅಮೋಘ ಪ್ರಾರಂಭ ದಿನಕ್ಕೆ 3 ಆಟಗಳು

ನರ್ಗಿಸ್ ದಿಲೀಪ್ ಕುಮಾರ್

ಅಂದಾಜ್

ಪಾತ್ರ—ಮೈಸೂರುಡಿಸ್ಟ್ರಿಬ್ಯೂಟರ್ಸ್, ಕೋರ್ಟ್‌ರೋಡ್, ಮೈಸೂರ್.

ಬೆಳಗಿನ ಪ್ರದರ್ಶನ 21-5-53 ರಿಂದ 4 ದಿನಗಳು ಮಾತ್ರ

ಕಾಮ್ಯಾರ್‌ರವರ— ದ ಡ್ ಳ

ಪಾತ್ರ-ಸುನೀಲ್ ದತ್ತ, ಸುರೈಯ,

ಪ್ರಪಂಚದಲ್ಲೇ ಹೊಸದಾದ ಅಪೂರ್ವ ಬತ್ತಿ

ದಿಲ್ ಖುಷ್

ಸ್ತ್ರೀ ಪುರುಷರ ಕೇಶತೈಲ ಮಹಾ ಬಾಂಡ್

1) ಹಿತದಿನ ಕಳೆ, ಗಾಢವಾದ ಸುಗಂಧ ಮತ್ತು ಮೋಹಕ ಮೆಲ್ಲಗಳು ಪ್ರಯೋಗಿಸಿದ ಮಾರನೇ ದಿನದಿಂದಲೇ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಹೊಳೆಯುವ ಕೂದಲನ್ನು ಬೆಳೆಸುವುದಲ್ಲದೆ ತಲೆಯ ಚರ್ಮವನ್ನು ಶುದ್ಧದಲ್ಲಿ ಬೆಳಸುತ್ತದೆ. ಚರ್ಮ ರೋಗಗಳನ್ನು ನಿವಾರಣೆ ಮಾಡುತ್ತದೆ. ಮುಖದ ಕಾಂತಿಯನ್ನು ಹೆಚ್ಚಿಸುವುದು.

2) ಪ್ರಿಯರ ಇಷ್ಟಕ್ಕೆ ತಾಂಡ್ ಕೊಟ್ಟ ಹೊಳಪಿಯೋ ಹೊಂದದ ಉಪದ್ರವ, ತಲೆನೋವು, ದಾಹ, ಕಣ್ಣುರಿ, ತಲೆಸುತ್ತು ಬರದಂತೆ ಕಾಪಾಡುವುದಲ್ಲದೆ ಸ್ಥಿರ ಬುದ್ಧಿ ಸಂಪಾದನ "ಧಾತು" ವೃದ್ಧಿಯನ್ನು ಉಂಟುಮಾಡಿ, ದೇಹ ಶಕ್ತಿ ಮತ್ತು ಕಾಂತಿ ಹೆಚ್ಚಿಸುವ ಮಹಾ ಬಾಂಡ್.

ಎಸ್. ಶಾಮಣ್ಣ, ಪ್ರೊಪ್ರೈಟರ್,

2830 ಲೇಡೀ ಅಂಡ್ ಸ್ಪೆಷಲ್ ಕೇಶವೃದ್ಧಿ ಶಾಲೆ, 6 ನೇ ಕ್ರಾಸ್ ರೋಡ್, ಚಾಮರಾಜಪುರಂ, ಮೈಸೂರು

Edited, Printed and Published by A. R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೨೧-೫ ೧೯೫೩ [ಸಂಚಿಕೆ ೨೩೯

ಬಳ್ಳಾರಿ ತಾಲ್ಲೂಕು ಪೂರ್ಣವಾಗಿ ಮೈಸೂರಿಗೆ

ಡಿಪೋವಿನಲ್ಲಿ ೧೨,೦೦೦ ರೂ. ಭಪಾವಣೆ ಆಪಾದನೆ

ಸೆಷನ್ಸಿನಲ್ಲಿ ಅಪಾದಿತರ ವಿಚಾರಣೆ ಆರಂಭ

ಮೈಸೂರು ೨೦

ಕಳೆದ ೧೯೪೯ ನೇ ಇಸವಿಯಿಂದ ೧೯೫೦ ರ ವರೆಗೆ ರಾಷಣ ನಿಂದ ಲಕ್ಷ್ಮೀ ಮತ್ತು ಚಾಮರಾಜ ಮೊಹಲ್ಲಾ ಆಹಾರ ಸಬ್ ಗೋಡೌನುಗಳಲ್ಲಿ ಬಿಲ್ ಕ್ಲಾರ್ಕ್ ಆಗಿದ್ದ ಶ್ರೀ ಹೆಚ್ ಎ ವೇದಾಂತ ದೇಶಿಕರ್ ಎಂಬುವರ ಮೇಲೆ ೧೨,೦೦೦ ರೂ ಗಳಿಗೂ ಹೆಚ್ಚು ಭಪಾವಣೆ ಸಂಬಂಧವಾಗಿ ಲಕ್ಷ್ಮೀಪುರದ ಪೋಲೀಸರು ೧ನೇ ನಗರ ನ್ಯಾಯಾಧೀಶರ ಮುಂದೆ ಐ ಪಿ ಸಿ ೪೦೯ನೇ ನಿಬಂಧನೆ ರೀತ್ಯಾ ಮೊಕದ್ದಮೆ ಹೂಡಿದ್ದು, ಅಪಾದಿತರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದ್ದಿತು ನೆನ್ನೆ ದಿನ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಗುರುನಂಜಯ್ಯನವರ ಸಮ್ಮುಖದಲ್ಲಿ ವಿಚಾರಣೆಯು ಆರಂಭವಾಯಿತು ೨೦ ಜನ ಸಾಕ್ಷಿಗಳನ್ನು ಪ್ರಾಸಿಕ್ಯೂಷನ್ನಿನವರು ವಿಚಾರಣೆ ಮಾಡಿದರು ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ತಿಮ್ಮೇಗೌಡರು ವಾದಿಸುತ್ತಿರುವರು ಅಪಾದಿತರ ಪರ ಯಾರೂ ವಕೀಲರಿರುವುದಿಲ್ಲ

ಡಾ|| ಗಿರಿಧಾರಿಲಾಲ್‌ರವರಿಗೆ ಸತ್ಕಾರ

ರಾಜಧಾನಿಯಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಸಲಗಳ ಸಂಶೋಧನಾಶಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿದ್ದು ನಿವೃತ್ತರಾದ ಡಾ|| ಗಿರಿಧಾರಿಲಾಲ್ ರವರ ಗೌರವಾರ್ಥವಾಗಿ ಸಂಶೋಧನಾಲಯದವರು ನೆನ್ನೆ ಸಂಜೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು ಆಲಯದ ಡೈರೆಕ್ಟರ್ ಡಾ|| ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿದ್ದರು ಅವರು ಮಾತನಾಡಿ, ಡಾ|| ಗಿರಿಧಾರಿಲಾಲ್‌ರವರು ನಡೆಸಿರುವ ಸಂಶೋಧನಾ ಕೆಲಸಗಳನ್ನು ವಿವರಿಸಿದರು ದೇಶೀಯ ವಸ್ತುಗಳನ್ನು ಭಾರತೀಯರು ಉಪಯೋಗಿಸಿಕೊಳ್ಳಬೇಕೆಂದು ಅವರು ತಿಳಿಸಿದರು ಆಲಯದ ನೌಕರರು ಡಾ|| ಲಾಲ್‌ರವರಿಗೆ ಬೆಳ್ಳಿಯ ಸ್ಮಾರಕ ಚಿಹ್ನೆಯೊಂದನ್ನೂ, ಒಂದು ಸೈಕಲನ್ನೂ ಬಹುಮಾನವಾಗಿ ಕೊಟ್ಟರು ಮುಖ್ಯ ಅತಿಥಿಗಳು ಸೂಕ್ತ ಉತ್ತರವಿತ್ತರು ಆಲಯದ ನೌಕರರ ಸಂಘದ ಕಾರ್ಯದರ್ಶಿಯವರು ವಂದನಾರ್ಪಣೆ ಸಲ್ಲಿಸಿದ ನಂತರ ಸಮಾರಂಭವು ಮುಕ್ತಾಯವಾಯಿತು

ಸಿನಿಮಾ ನೋಡೆವೆಂದು ವಿದ್ಯಾರ್ಥಿಗಳ ಪ್ರತಿಜ್ಞೆ

ಬರೋಡಾ ಬಳಿ ಮೋಲ್ವಾರ್ ಪಟ್ಟಣದಲ್ಲಿ ಗಾಂಧಿ ವಾದಿಗಳಾದ ಶ್ರೀ ರವಿಶಂಕರ ಮಹಾರಾಜರ ಉಪದೇಶದಂತೆ, ಅಲ್ಲಿನ ವಿದ್ಯಾರ್ಥಿಗಳು ಊರಿನ ಪುಸ್ತಕ ಭಂಡಾರವನ್ನು ಚೆನ್ನಾಗಿ ನಡೆಸುವಂತಾಗಲು ಅದಕ್ಕೆ ಹಣ ಶೇಖರಿಸಲು ನಿರ್ಧರಿಸಿ ತಾವುಗಳು ೧ ವರ್ಷ ಕಾಲ ಯಾವ ಸಿನಿಮಾ ಚಿತ್ರಗಳನ್ನೂ ನೋಡುವುದಿಲ್ಲವಾಗಿ ಪ್ರತಿಜ್ಞೆ ತೊಟ್ಟಿರ ತ್ತಾರೆ ಅಲ್ಲದೆ ಭೋಗ್ಯ ವಸ್ತುಗಳನ್ನೂ ತ್ಯಜಿಸಲು ಅವರು ನಿಶ್ಚಯಿಸಿರುವರು.

ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೆಸೇರಿಸಲುನಿರ್ಧಾರ

ಕರ್ನಾಟಕ ಪ್ರಾಂತ್ಯದ ನಿರ್ಮಾಣದ ಸಂದರ್ಭದಲ್ಲಿ ಬಳ್ಳಾರಿಯ ಭವಿಷ್ಯವನ್ನು ನಿರ್ಧರಿಸುವ ಏಕೈಕ ವಿಚಾರಣೆ ನಡೆಸಿದ ಶ್ರೀ ಎಲ್ ಎಸ್ ಮಿಶ್ರರವರು ನೆನ್ನೆ ಕೇಂದ್ರ ಸರ್ಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿ ಬಳ್ಳಾರಿ ತಾಲ್ಲೂಕು ಪೂರ್ಣವಾಗಿ ಮೈಸೂರಿಗೇ ಸೇರಬೇಕೆಂದು ಸಲಹೆ ಮಾಡಿದರು. ಸರ್ಕಾರದವರು ಈ ಸಲಹೆಯನ್ನು ಅಂಗೀಕರಿಸಿರುವರು

ನೆಹರೂರವರೊಡನೆ ಡಲ್ಲೆಸ್‌ರವರ ಭೇಟಿ

ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ನೆನ್ನೆ ದೆಹಲಿಗೆ ಆಗಮಿಸಿದರು. ಅವರು ನೆನ್ನೆ ಸ್ವಲ್ಪ ಕಾಲ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿದ್ದರು ಇಂದು ಅವರಿಬ್ಬರೂ ಕಲೆತು ಮುಖ್ಯವಾದ ವಿಷಯಗಳ ಬಗ್ಗೆ ಚರ್ಚೆ ನಡೆಸುವರು ನೆನ್ನೆ ಅವರು ವಿಮಾನದಲ್ಲಿ ಪಾಲಂ ನಿಲ್ದಾಣಕ್ಕೆ ಆಗಮಿಸುವ ಹೊತ್ತಿಗೆ ಸ್ವಲ್ಪ ಮುಂಚೆ ಅವರ ಆಗಮನವನ್ನು ವಿರೋಧಿಸಲು ೩೦೦ ಜನರು ಕಪ್ಪು ಧ್ವಜಗಳನ್ನು ಹಿಡಿದು ಅಲ್ಲಿಗೆ ಬಂದಿದ್ದರು ಪೋಲೀಸರು ಅವರನ್ನು ಠಾಣೆಗೆ ಒಯ್ದು ಎಲ್ಲರನ್ನೂ ದಸ್ತಗಿರಿ ಮಾಡಿರುವುದಾಗಿ ತಿಳಿಸಿದರು ಸಾಮ್ರಾಜ್ಯಶಾಹಿಗಳೇ ಏಷ್ಯದಿಂದ ತೊಲಗಿ ಎಂದು ಬರೆದ ದಪ್ಪಕ್ಷರಗಳ ಪಟಗಳನ್ನು ಅವರು ಹಿಡಿದಿದ್ದರು ಡಲ್ಲೆಸ್‌ರವರೊಡನೆ ಪರಸ್ಪರ ಭದ್ರತಾ ಆಡಳಿತಗಾರರಾದ ಹೆರಾಲ್ಡ್ ಸ್ಟಾಸೆನ್ನರೂ ಬಂದಿರುವರು

೨೪ ಅಮೆರಿಕಾ ರಾಯಭಾರ ಕಛೇರಿಗಳ ಬಂದು

ಅಮೆರಿಕದ ೧೯೫೩-೫೪ರ ಆಯವ್ಯಯದಲ್ಲಿ ವಿದೇಶಾಂಗ ಇಲಾಖೆಗೆ ಮಂಜೂರು ಮಾಡಿರುವ ಹಣದಲ್ಲಿ ಕೋತಾ ಹಾಕಿರುವುದರಿಂದ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ವಿದೇಶಗಳಲ್ಲಿರುವ ಅಮೆರಿಕದ ೨೪ ರಾಯಭಾರ ಕಛೇರಿಗಳನ್ನು ಮುಚ್ಚಲಾಗುವುದೆಂದು ಅಮೆರಿಕದ ಸಂಸ್ಥಾನಗಳ ಶಾಖಾ ಕಛೇರಿಯ ಅಧಿಕಾರಿಯೊಬ್ಬರು ತಿಳಿಸಿರುವರು

ವಿಷ ಸೇವಿಸಿ ತರುಣ ತರುಣಿಯರ ಆತ್ಮಹತ್ಯೆ

ಮುಂಬಯಿನ ಒಂದು ಮನೆಯ ಕೊಠಡಿಯಲ್ಲಿ ಮೊನ್ನೆ ರಾತ್ರಿ ೧೮ ವರ್ಷದ ರಾಮಕೃಷ್ಣ ಎಂಬ ಯುವಕನ ಮತ್ತು ೧೫ ವಯಸ್ಸಿನ ಚಂದ್ರ ಎಂಬ ತರುಣಿಯ ಶವಗಳು ಪತ್ತೆಯಾಗಿ ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವರೆಂದು ಭಾವಿಸಲಾಗಿದೆ ರಾಮಕೃಷ್ಣನು ತ್ಯಾಗರಾಯನಗರದ ಒಂದು ಅಂಗಡಿಯಲ್ಲಿ ನೌಕರಿಯಲ್ಲಿದ್ದನೆಂದೂ, ಚಂದ್ರಳು ಕಳೆದ ಡಿಸೆಂಬರಿನಲ್ಲಿ ಏಕ ಪಾಳಯದಿಂದ ಆತನೊಡನೆ ಪರಾರಿಯಾಗಿ ಕಲವು ಕಾಲ ಕೊಡಂಬಾಕಂನಲ್ಲಿದ್ದು, ಕಳೆದ ೭ ನೇ ತಾ|| ನಿಂದ ತ್ಯಾಗರಾಯ ನಗರದ ಮನೆಯಲ್ಲಿ ನೆಲೆಸಿದರೆಂದೂ ಹೇಳಲಾಗಿದೆ ಮೊನ್ನೆ ರಾತ್ರಿ ಅವರಿಬ್ಬರೂ ಮಾಮೂಲಿನಂತೆ ಮಲಗಲು ಕೊಠಡಿಗೆ ಹೋದರೆಂದೂ ಸ್ವಲ್ಪ ಹೊತ್ತಿನಲ್ಲೇ ಒಂದು ವಿಚಿತ್ರ ಶಬ್ದವು ಬಂದುದನ್ನು ಮನೆಯಲ್ಲಿದ್ದ ಇತರರು ಕೇಳಿ, ಕೊಠಡಿಗೆ ಹೋಗಿ ನೋಡಲಾಗಿ ಇಬ್ಬರೂ ಮರಣ ಸಂಕಟದಿಂದ ನರಳುತ್ತಿದ್ದುದು ತಿಳಿದುಬರಲು ಇವರಿಗೆ ಭೂತವು ಹಿಡಿದಿರಬಹುದೆಂದು ಮನೆಯವರು ಭಾವಿಸಿ ಮಂತ್ರ ಹಾಕಿಸಿದರೆಂದೂ, ಅದು ವಿಫಲವಾಗಿ ಅವರಿಗೆ ಔಷಧಿ ಚಿಕಿತ್ಸೆ ನಡೆಸುವುದರೊಳಗೆ ಮೃತಪಟ್ಟರೆಂದೂ ವರದಿಯಾಗಿದೆ ಇದಕ್ಕೆ ಮುಂಚೆ ರಾಮಕೃಷ್ಣನ ತಂದೆಯು ಮಗನಿಗೆ ಬುದ್ಧಿ ಹೇಳಿ ಚಂದ್ರಳನ್ನು ಬಿಟ್ಟುಬಿಡುವಂತೆ ಒತ್ತಾಯಪಡಿಸಿದುದಲ್ಲದೆ, ಅವಳೂ ಅವನನ್ನು ಬಿಟ್ಟುಹೋಗುವ ಶಿ ಹೇಳುತ್ತಿದ್ದನೆಂದೂ ಆ ಕಾರಣಕ್ಕಾಗಿ ಅವರಿಬ್ಬರೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರೆಂದೂ ಊಹಿಸಲಾಗಿದೆ

ಫೋನ್ ಮೂಲಕ ವಿವಾಹ

ಲಂಡನ್ನಿನಲ್ಲಿರುವ ಮೆಡಿಕಲ್ ಕಾಲೇಜು ವಿದ್ಯಾರ್ಥಿಯೊಬ್ಬನೊಡನೆ ಪಾಕಿಸ್ತಾನದ ರಾವಲ್ಪಿಂಡಿಯ ಆಸ್ಪತ್ರೆಯೊಂದರಲ್ಲಿ ವೈದ್ಯಳಾಗಿರುವ ಒಬ್ಬ ಮಹಿಳೆಯು ಮೊನ್ನೆ ಟೆಲಿಫೋನ್ ಮೂಲಕ ವಿವಾಹವಾದಳು ಮೌಲ್ವಿಯೊಬ್ಬರು ಟೆಲಿಫೋನ್ ಮೂಲಕವೇ ವಿವಾಹ ಶಾಸ್ತ್ರವನ್ನು ಓದಿದರು

ಬಳ್ಳಾರಿ ತಾಲ್ಲೂಕಿನ ಸೇರ್ಪಡೆಗೆ ಸಂತೋಷ

ಮೈಸೂರು ಪ್ರದೇಶ ಕಾಂಗ್ರೆಸ್ ನಿರ್ಣಯ

ಸ್ವಂ ಸು ಫೋನ್] ಬೆಂಗಳೂರು ೨೧

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಈ ದಿನ ನಡೆದು ಬಳ್ಳಾರಿ ತಾಲ್ಲೂಕು ಮತ್ತು ಆ ಜಿಲ್ಲೆಯ ಇತರ ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸುವ ಬಗ್ಗೆ ಕೈಗೊಂಡ ಕ್ರಮಕ್ಕಾಗಿ ಹರ್ಷವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ಆ ತಾಲ್ಲೂಕುಗಳ ಜನರಿಗೆ ಸಮಿತಿಯು ಸ್ವಾಗತವನ್ನು ಬಯಸಿ ಕೇಂದ್ರ ಸರ್ಕಾರದವರು ಕೈಗೊಂಡಿರುವ ಈ ನಿರ್ಧಾರವು ಮೈಸೂರು ಕಾಂಗ್ರೆಸ್ ಸಭೆಯ ನಿರ್ಣಯದ ಅನುಸಾರವಾಗಿರುವುದೆಂದು ಸಮಿತಿಯು ಅಭಿಪ್ರಾಯಪಟ್ಟಿತು

ಅನಂತರ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯು ಬೆಳಿಗ್ಗೆ ೧೧|| ಯಿಂದ ಮಧ್ಯಾಹ್ನ ೧ ಗಂಟೆವರೆಗೂ ಸೇರಿ ಮೇಲ್ಕಂಡಂತೆಯೇ ನಿರ್ಣಯವೊಂದನ್ನು ಅಂಗೀಕರಿಸಿತು ಪಕ್ಷದ ನಾಯಕರಾದ ಶ್ರೀ ಕೆ ಹನುಮಂತಯ್ಯನವರು ೭ ತಾಲ್ಲೂಕುಗಳ ಸೇರ್ಪಡೆ ವಿಷಯವಾಗಿ ಸಭೆಯಲ್ಲಿ ದೀರ್ಘವಾದ ಹೇಳಿಕೆಯೊಂದನ್ನಿತ್ತರೆಂದು ವರದಿಯಾಗಿದೆ

ಹಲವು ಸದಸ್ಯರು ಇದೇ ಸಮಯದಲ್ಲಿ ಏಕೀಕರಣದ ವಿಷಯವನ್ನು ಪ್ರಸ್ತಾಪಿಸಿದರೆಂದೂ, ಶ್ರೀ ಹೆಚ್ ಕೆ ವೀರಣ್ಣಗೌಡರು ಅದು ಈಗ ಅನಗತ್ಯವೆಂದು ತಿಳಿಸಿದುದಾಗಿಯೂ ಹೇಳಲಾಗಿದೆ

ಶ್ರೀ ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಬಳ್ಳಾರಿ ತಾಲ್ಲೂಕು ಸೇರ್ಪಡೆಯ ನಿರ್ಧಾರವು ಮೈಸೂರಿನ ಚರಿತ್ರೆಯಲ್ಲಿ ಅತ್ಯಂತ ಹಿರಿಮೆಯ ದಿನವೆಂದು ಹೇಳಿದರು

ತುಂಗಭದ್ರಾ ನೀರು ೧೯೫೪ರಲ್ಲಿ ಒದಗುವುದು

ಸ್ವಂ ಸು ಫೋನ್] ಬೆಂಗಳೂರು ೨೧

ತುಂಗಭದ್ರಾ ಅಣೆಕಟ್ಟಿನಿಂದ ೧೯೫೪ನೇ ಮಾರ್ಚಿಯಲ್ಲಿ ನೀರನ್ನು ಪಡೆಯಲು ಸಾಧ್ಯವಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ ಈ ಸಂಬಂಧದ ಜವಾಬ್ದಾರಿಯನ್ನು ಮೈಸೂರು ಹೊರಬೇಕಾಗುವುದೆಂದೂ ಅವರು ಹೇಳಿದರು

ಮನೆ ಕಂದಾಯದ ಬಗ್ಗೆ ಪ್ರತಿಭಟನಾ ಸಭೆ

ಮೈಸೂರು ೨೧

ಪೌರಸಭೆಯವರು ಮನೆಗಂದಾಯವನ್ನು ಹೆಚ್ಚಿಸಿರುವುದನ್ನು ಖಂಡಿಸಲು ರಾಜಧಾನಿಯ ಸುಬ್ಬರಾಯನಕೆರೆ ಮೈದಾನದಲ್ಲಿ ನೆನ್ನೆ ದೇವರಾಜಾ, ಕೃಷ್ಣರಾಜಾ, ಚಾಮರಾಜಾ ಮತ್ತು ಹಳ್ಳಿ ಮೊಹಲ್ಲಗಳ ಮಹಾಜನರ ಸಭೆಯು ನಡೆಯಿತು ಶ್ರೀಗಳಾದ ತಗಡೂರು ರಾಮಚಂದ್ರರಾವ್, ಎ ಎನ್ ಸೂರ್ಯನಾರಾಯಣರಾವ್, ಮತ್ತು ಡಿ ಆರ್ ಕೃಷ್ಣಮೂರ್ತಿಯವರು ಭಾಷಣ ಮಾಡಿದರು ಬರುವ ತಿಂಗಳು ೧೮ ನೇ ತಾ|| ಪೌರಸಭಾ ಸದಸ್ಯರ ಮನೆಗಳಿಗೆ ಬಾಜಾಬಜಂತ್ರಿಯೊಡನೆ ಮೆರವಣಿಗೆಯಲ್ಲಿ ಹೋಗಿ ಅವರು ರಾಜೀನಾಮೆ ಕೊಡುವಂತೆ ಒತ್ತಾಯಪಡಿಸಲಾಗುವುದೆಂದು ಶ್ರೀ ತಗಡೂರು ರಾಮಚಂದ್ರರಾಯರು ವ್ಯಕ್ತಪಡಿಸಿದರು

ಮಕ್ಕಳ ಕೂಟ

ಉದಕಮಂಡಲ ೧೯

ತಿರುವಾಂಕೂರ - ಕೊಚ್ಚಿಯ ಮಹಾರಾಜ ಶ್ರೀ ಪದ್ಮನಾಭದಾಸ ಬಲರಾಮವರ್ಮರವರ ಅಧ್ಯಕ್ಷತೆಯಲ್ಲಿ ಕಳೆದ ಗುರುವಾರ ೧೦ ನೇ ಮಕ್ಕಳ ಕೂಟದ ಅಧಿವೇಶನವು ಮಾಡರ್ನ್ ಹಿಂದೂ ಹೋಟೇಲಿನ ಶ್ರೀ ಕೆ ಸೀತಾರಾಮಯ್ಯರ ದಾಸಪ್ರಕಾಶ ಭವನದಲ್ಲಿ ನಡೆಯಿತು. ತಿರುವಾಂಕೂರು ಮಹಾರಾಣಿಯವರಾದ ಶ್ರೀಮತಿ ಸೇತೂ ಪಾರ್ವತಿಬಾಯಿಯವರು ಮಕ್ಕಳಿಗೆ ಪಾರಿತೋಷಕಗಳನ್ನು ಹಂಚಿದರು.

೧೬ ಮತ್ತು ... ನೇ ತಾ॥ ನಡೆದ ಸ್ಪರ್ಧೆಯ ಪಂದ ... ವಾರ ೨೦೦ ... ಗವಹಿಸಿದ್ದರು ... ವಾರ ೩೦ ಬೆಳ್ಳಿಯ ... ಪ್ರಥಮವಾಗಿ ಕೊ ... ನ ... ಸೂರಿ ... ತಿರುವ ... ಸ್ವಾಮಿ ... ಶ್ರೀ ... ಅವರ ... ಜನ ... ಹಸ್ಪ ... ಕೊಟ್ಟರು

ಶ್ರೀ ಸೀತಾರಾಮಯ್ಯರ ... ಕಾರ್ಯಕ್ರಮ ... ವಾಲಂಟಿಯರ್ ... ಒಂದು ... ಪ್ರದರ್ಶಿಸಿದರು ... ಕೂಟದ ... ವರ್ಷ ... ವಾಗಿ ... ಭವನ ... ಅವರು ... ಸಿದರು.

ಅಧ್ಯಕ್ಷರ ... ಸಮಾರಂಭಗಳನ್ನು ಏರ್ಪಡಿಸುವ ಬಗ್ಗೆ ಶ್ರೀ ಸೀತಾರಾಮಯ್ಯರ ... ಶ್ಲಾಘಿಸಿದರು

ಶ್ರೀ ಸೀತಾರಾಮಯ್ಯರ ಮಕ್ಕಳು ... ಬಲರಾಮ ದಾಸ್ ಮತ್ತು ... ರವರಿಗೆ ಮೈಸೂರ ... ಬಹುಮಾನದ ಬ ... ಬಾಲಕಿ ... ಬಹುಮಾನದ ಬಟ್ಟಲೂ ಬಂದುವು

ದುಃಶಪಲ್ಲಿಯಲ್ಲಿ ಶತಾಬ್ದಿ ವಸ್ತು ಪ್ರದರ್ಶನ

ಕಂಪನಿ ... ದಿನ ... ಜನರೂ ... ಅವಕಾಶವಾಗ ... ಕ್ರಿಸ್ತ ... ಸ್ಪೆಷಲ್ ... ಎಲ್ಲ ಊರುಗಳಿಗೂ ಹೋಗುವಂತೆ ಏರ್ಪಡಿಸಲಾಗಿದೆ

ಶಿಲಾ ಸ್ಥಾಪನ

ರಾಜಧಾನಿಯ ಶ್ರೀ ... ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆ ... ಜಯಂತಿ ... ಸಂಜೆ ೭ ... ಅಧ್ಯಕ್ಷತೆಯಲ್ಲಿ ಡಾ॥ ... ನಾಡಪವು ನಡೆಯುವುದು

ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆ

ಯಳಂದೂರು ೧೯

ಈ ತಾಲ್ಲೂಕಿನ ಕಾಂಗ್ರೆಸ್ ಸಮಿತಿಗೆ ಕೆಳಗೆ ಕಂಡವರು ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಚುನಾವಣಾಧಿಕಾರಿಗಳಾದ ಶ್ರೀ ಬಿ. ಸೂರ್ಯನಾರಾಯಣರಾಯರು ತಿಳಿಸಿರುತ್ತಾರೆ. ಶ್ರೀಗಳಾದ ಕೆ ಎಸ್ ವೆಂಕಟಸ್ವಾಮಿ, ಸಿ ಎಂ ಗೋವಿಂದಯ್ಯ, ವೈ ಆರ್ ವೆಂಕಟರಾಮಯ್ಯ, ಆರ್ ಸುಬ್ಬರಾವ್, ಜಿ ವಿ. ಹರಿಸರ್ವೋತ್ತಮರಾವ್, ಸಿ. ನಂಜಪ್ಪ, ವೈ ಎಸ್ ಸೋಮಾರಾಧ್ಯ, ಎಂ ಎಸ್ ನಾಗಪ್ಪ, ಹೆಚ್ ವಿ ರಾಮರಾವ್, ಎ ಕೆ ಶ್ರೀನಿವಾಸಯ್ಯಂಗಾರ್ ಮತ್ತು ಎ ವಿ ರಾಮಚಂದ್ರಯ್ಯ

ಬ್ರಿಹದ್ರಾಷ್ಟ್ರ ಸಭೆಗೆ ಭಾರತವನ್ನೂ ಸೇರಿಸಲಿ

ಬ್ರಿಟನ್ನಿನ ಪ್ರಧಾನಿ ವಿನ್ಸ್ಟನ್ ಚರ್ಚಿಲ್ ಸೂಚಿಸಿರುವ ಬೃಹದ್ರಾಷ್ಟ್ರ ಸಭೆ ... ಬಾಂತದ ಪ್ರಧಾನಿ ನೆಹರೂರವರೂ ... ವಂತಾಗಬೇಕೆಂದು ... ಪತ್ರಿಕೆ ಟೈಮ್ಸ್ ... ಸಲಹೆ ಮಾಡಿದೆ

ಪಡಿ ಪತ್ರಿಕ ಮೇಲಿನ ಮೊಕದ್ದಮೆ

... ದಿನ ... ಪ್ರಕಟಿಸ ... ಬೆಂಗಳೂರಿನ ... ಪತ್ರಿಕೆಯ ಸಂಪಾದಕ, ಶ್ರೀ ಪಿ ... ಮತ್ತು ಮುದ್ರಣಕಾರರಾದ ಶ್ರೀ ಎಂ ಎಸ್ ಚಿಂತಾಮಣಿಯವರುಗಳ ಮೇಲೆ ಹೂಡಲಾಗಿದ್ದ ಪ್ರತ್ಯೇಕ ಮೊಕದ್ದಮೆಗಳು ಮೊನ್ನೆ ವಿಚಾರಣೆಗೆ ಬಂದಿದ್ದವು. ಪ್ರತಿವಾದಿಗಳಿಬ್ಬರೂ ತಮ್ಮ ಮೇಲಿನ ಆಪಾದನೆಗಳನ್ನು ನಿರಾಕರಿಸಿ, ಒಂದು ಬಾರಿ ರಿವಿಷನ್ ಕೇಳಿ ಆದರ ಬಗ್ಗೆ ವಿಚಾರಣೆ ನಡೆಯುತ್ತಿರುವಾಗ ಪುನಃ ರಿವಿಷನ್ ಕೇಳಿ ಮೊಕದ್ದಮೆ ಹೂಡಿರುವುದು ಕಾನೂನು ಪ್ರಕಾರ ಸರಿಯಲ್ಲವೆಂದು ತಕರಾರು ಸಲ್ಲಿಸಿದರು ಜೂನ್ ೧೯ನೇ ತಾ॥ಗೆ ಮೊಕದ್ದಮೆಗಳನ್ನು ಮುಂದುವರಿಸಲಾಗಿದೆ

SRI RAGHAVENDRA INSTITUTE

1661 Kabir Road Lashkar Mohalla Mysore

CLASSES FROM 1 6 53

Ajmer Inter (in private), Hindi L S From 2nd or 3rd year, S S L C (with or without E S), Dancing & Music (girls only) Class examinations

SRI GANESHA

TALKIES

GALA OPENING

On 2? ? ?



ಸಂಸ್ಥಾನದಲ್ಲಿ ಕಾಂಗ್ರೆಸ್ ಕಾರ್ಯದರ್ಶಿಗಳ ಪ್ರವಾಸ

ರಾಷ್ಟ್ರಾದ್ಯಂತ ಕಾಂಗ್ರೆಸ್ ಸಂಸ್ಥೆಯ ವ್ಯವಸ್ಥೆಗಾಗಿ ಪ್ರಧಾನ ಕಾರ್ಯದರ್ಶಿಗಳಾದ ಬಲವಂತರಾಯ್ ಮೆಹತಾ ಮತ್ತು ಪ್ರೊಫೆಸರ್ ಎಸ್. ಎನ್ ಅಗರ್ವಾಲರವರು ಪ್ರವಾಸ ಹೊರಡುವರು. ಮೆಹತಾರವರು ರಾಜಸ್ಥಾನ, ಮಧ್ಯಭಾರತ, ಬಿಹಾರ್ ಮತ್ತು ಆಂಧ್ರಗಳಲ್ಲೂ, ಅಗರ್ವಾಲರವರು ತಮಿಳುನಾಡು, ಮೈಸೂರು, ಕರ್ನಾಟಕ, ಮಹಾರಾಷ್ಟ್ರ, ಹೈದರಾಬಾದು, ಮಧ್ಯ ಪ್ರದೇಶಗಳಲ್ಲೂ ಸಂಚರಿಸುವರು

ಸೀಮೆಯೆಣ್ಣೆ ಸುರಿದು ಬೆಂಕಿ ಹತ್ತಿಸಿಕೊಂಡ ಪ್ರಸಂಗ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಶ್ರೀ ತಿರುವೆಂಗಡಂ ಎಂಬುವರ ಪತ್ನಿ ಪದ್ಮ ಎಂಬ ೨೩ ವರ್ಷದ ಯುವತಿಯು ಮೊನ್ನೆ ಸಂಜೆ ಮನೆಯ ಬಾಗಿಲನ್ನು ಹಾಕಿ, ಮೈಗೆ ಸೀಮೆಯೆಣ್ಣೆ ಸುರಿದು, ಬೆಂಕಿ ಹತ್ತಿಸಿಕೊಂಡಳೆಂದೂ ಬಾಗಿಲ ಒಡೆದು ನೋಡಲಾಗಿ, ಶರೀರವೆಲ್ಲವೂ ಸುಟ್ಟು ಹೋಗಿತ್ತೆಂದೂ, ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿದ ಮೇಲೆ ಆ ರಾತ್ರಿಯಲ್ಲಿ ಮಡಿದಳೆಂದೂ ವರದಿಯಾಗಿದೆ. ಆಕೆಯ ಗಂಡನು ಕಾರ್ಮಿಕನಾಗಿದ್ದು, ಕೆಲಸವಿಲ್ಲದೆ ನಿರುದ್ಯೋಗಿಯಾದನೆಂದೂ, ಮನೆಯಲ್ಲಿ ಜಗಳವಾಗಿ ಆಕೆಗೆ ಜಿಗುಪ್ಸೆಯುಂಟಾಗಿತ್ತೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಲಾರಿಯೊನೆಟ್ ವಾದ್ಯ ... ೮ ೩೦ ... ಗೀತೆಗಳು ಸಂಜೆ ೫ ೪೦ ಮತ್ತು ೭ ೪೦ ವಿಜಯಲಕ್ಷ್ಮಿ ಮತ್ತು ಲಕ್ಷ್ಮಿ ಶ್ರೀನಿವಾಸ, ಸಂಗೀತ ೬ ೧೦ ಗಾನ ವಿಹಾರ ೭ ... ಶಾಮರಾವ್, ಹಿಂದಿ ಗೀತೆ ೮ ... ತಾಮೂಲಿ ೮ ೪೦ ಎಂ ಎಸ್ ಕಲ್ಲೂರಿ ಅಯ್ಯಂಗಾರ್, ಗಾಯನ ೯ ೦೫ ರಾಗಮಾಲ ಪಲ್ಲವಿ

SRI GAYATHRI

TALKIES

On 21 5 53 For a day Only

20th Century's

THE HOUSE ON 92nd. STREET

With —William Eythe

FROM TO MORROW

20th Century's

GOLDEN GIRL

ಒಲಿಂಪಿಯಾ ಟಾಕೀಸ್

21 5 ೫೩ ನೇ ಗುರುವಾರದಿಂದ

ಪ್ರಾರಂಭ ದಿನವೂ 3 ಆಟಗಳು

... ಪಿಕ್ಚರ್ಸ್ ರವರ **ಅಂಜಾಂ**

ಶಾಸ್ತ್ರ-ವೈಜಯಂತಿಮಾಲಾ ಪ್ರೇಂನಾಥ್, ...

ಬೆಳಗಿನ ಪ್ರದರ್ಶನ 21 5 53 ರಿಂದ 4 ದಿನಗಳು ಮಾತ್ರ

... ರವರ **ದಿದ್ ...**

ಶಾಸ್ತ್ರ ...

ಮೈಸೂರು ಪೇಟೆ ಧಾರಣೆ

ಪಲ್ಲೆಗೆ	ರೂ ಆಣೆ	ರೂ ಆ
ಕಡಲೆಕಾಯಿ	೨೯ ೪-೦	೩೧ ೦ ೦
ಕೊಂಗೇಬೀಜ	೨೬ ೪ ೦	
ತೊಗರಿ	೪೪-೦-೦	೪೪ ೬ ೦
ಹಲಸಂದೆ	೫೭-೮-೦	೫೭ ೮ ೦
ಉದ್ದು	೬೧ ೩ ೦	೬೪ ೧೪ ೦
ಎಳ್ಳು	೬೫-೧೧-೦	
ಹುರುಳಿಕಾಳು	೫ ೧೩ ೦	೬ ೧ ೦
ತೆಂಗಿನಕಾಯಿ		
೧,೧೦೦ಕ್ಕೆ	೧೨೬ ೦-೦	೧೨೨ ೦ ೦

ವಿಂಬಲ್ಡನ್ ಟೆನ್ನಿಸ್ ಪಂದ್ಯಕ್ಕೆ ಹೋಗಲು ಪ್ರಭುಗಳ ಸಹಾಯ

ವಿಂಬಲ್ಡನ್ ಟೆನ್ನಿಸ್ ಛಾಂಪಿಯನ್‌ಷಿಪ್ ಪಂದ್ಯದಲ್ಲಿ ಭಾಗವಹಿಸುವ ಸಲುವಾಗಿ ಆರ್ ಕೃಷ್ಣನ್ ಎಂಬ ಯುವಕರಿಗೆ ಶ್ರೀಮನ್ ಮಹಾರಾಜರು ೬ ಸಾವಿರ ರೂ ಗಳ ಸಹಾಯವನ್ನು ಮಾಡಿರುತ್ತಾರೆ ಲಂಡನ್ ಇನ್ಸ್ಟಿಟ್ಯೂಟಿನ ಪಂದ್ಯದಲ್ಲಿ ಕೃಷ್ಣನ್‌ರವರು ೨ನೇ ಪ್ರಶಸ್ತಿ ಪಡೆದು ಶ್ರೀಮನ್ಮಹಾರಾಜರಿಂದ ಬಹುಮಾನವನ್ನು ಗಳಿಸಿದರು

ಜವಾಬು ನೋಟೀಸು

ಮೈಸೂರು ಕನ್ನೇಗೌಡನ ಕೊಪ್ಪಲು ಯಜಮಾನರಾದ ಕರೀಗೌಡ ಮತ್ತು ಸಿದ್ದೇಗೌಡ ಇವರು ಈ ಮೂಲಕ ಎಲ್ಲರಿಗೂ ತಿಳಿಸುವುದೇನೆಂದರೆ —

ಇದೇ ಕನ್ನೇಗೌಡನ ಕೊಪ್ಪಲು ... ಸಣ್ಣೇಗೌಡರ 2ನೇ ಹೆಂಡತಿ ಲಕ್ಷ್ಮಮ್ಮನು 17 5 1953 ನೇ ಮಿಸುರು ... ಪತ್ರಿಕೆಯಲ್ಲಿ ಪ್ರಚುರ ಪಡಿಸಿರುವ ನೋಟೀಸಿನಲ್ಲಿ ನಮೂದು ಮಾಡಿರುವ ಸಂಗತಿಗಳೆಲ್ಲವೂ ಅಪ್ಪಟ ಸುಳ್ಳಾಗಿರುತ್ತವೆ. ತನ್ನ ಗಂಡನ ಹಿರೀ ಹೆಂಡತಿ ಮಕ್ಕಳು ಕರಿನಿಪ್ಪ ಮತ್ತು ಸಣ್ಣೇಗೌಡ ಎಂಬುವರು ತನಗೆ ಜೀವನಾಂಶಕ್ಕೆ ಕೊಡಲು ತಕರಾರು ... ಇರುತ್ತಾರೆಂದು ನಮ್ಮ ಕೊಪ್ಪಲಿನಲ್ಲಿ ಹುಡುಗರು ಸೇರಿದ್ದ ನೋಟೀಸಿನಲ್ಲಿ ನಮ್ಮ ಪಂಚಾಯತಿಯಲ್ಲಿ ತಿಳಿಸಲು ಯಜಮಾನರುಗಳಾದ ನಾವು ನೋಟೀಸಿನ ಲಕ್ಷ್ಮಮ್ಮ ಮತ್ತು ಅವಳ ಪಕ್ಷದವರಾದ ರುದ್ರಮ್ಮ ಮತ್ತು ಗೌಡ ಇವರುಗಳ ಅನುಮತಿ ... ಮೇರೆಗೆ 10 5 1953 ರಲ್ಲಿ ಪಂಚಾಯಿತಿ ನಡೆಸಿ ಅವರಿಗೂ ಮತ್ತು ಅವಳ ಬಳಿ ಮಕ್ಕಳಿಗೂ ಮುಂದಕ್ಕೆ ನ್ಯಾಯವಾಗಿದೆ ಎಲ್ಲರ ಒಪ್ಪಿಗೆ ಮೇರೆಗೆ ತೀರ್ಮಾನ ಮಾಡಿ ಪರಸ್ಪರ ತೀರ್ಮಾನಕ್ಕೆ ಅಲ್ಲಿ ನೆರೆದಿದ್ದವರೆಲ್ಲರೂ, ಎಂದರೆ ಸುಮಾರು 15 ಜನರು ರುಜು ಮಾಡಿರುತ್ತಾರೆ ಅಲ್ಲದೆ ಲಕ್ಷ್ಮಮ್ಮನೂ ಮತ್ತು ಕರಿನಿಪ್ಪನೂ ಸಹ ರುಜು ಮಾಡಿರುತ್ತಾರೆ ನಾವುಗಳು ಯಾರೂ ಯಾರನ್ನೂ ಬಲಾತ್ಕಾರ ಪಡಿಸಿ ರುಜು ಮಾಡಿಸಿರುವುದಿಲ್ಲ ಮತ್ತು ಆ ರೀತಿ ಮಾಡಿಸುವುದಕ್ಕೆ ಯಾವ ಕಾರಣವೂ ಇರುವುದಿಲ್ಲ ಯಾರೋ ಸ್ವಾರ್ಥಿಗಳ ಮತ್ತು ಕೆಟ್ಟ ಜನಗಳ ಚಿತಾವಣೆ ಮೇಲೆ ಸದರಿ ಲಕ್ಷ್ಮಮ್ಮನು ಸುಳ್ಳು ಹೇಳಿಕೆಗಳನ್ನು ನಮೂದು ಮಾಡಿರುತ್ತಾಳೆ ಪಂಚಾಯಿತಿಯಲ್ಲಿ ನಡೆದಿರತಕ್ಕ ಸಂಗತಿಗಳೆಲ್ಲವೂ ಸಾಬೀತಾಗಿರುತ್ತವೆ

ಕರೀಗೌಡನ ರುಜು,

O ಈ ಎಡಗೈ ಹೆಬ್ಬೆಟ್ಟಿನ ಗುರುತಿನ ರುಜು ಸಿದ್ದೇಗೌಡ ಹಾಕಿದ್ದಕ್ಕೆ ಡಿ ಯಾಲಕ್ಕೆಗೌಡನ ಬರಹ

ಮೈಸೂರು,

20-5-1953

Edited, Printed and Published by A R Nagarajan at Sadhvi Press, D. Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧) ಶುಕ್ರವಾರ ೨೨-೫ ೧೯೫೩ [ಸಂಚಿಕೆ ೨೪೦]

ಮುಟ್ಟಿದೊಡ್ಡಿ ಜಮೀನನ್ನು ರೈತರಿಗೆ ಕೊಡಲು ನಿರ್ಧಾರ

ಬೆಂಗಳೂರು ೨೧

ರಾಮನಗರ ತಾಲ್ಲೂಕು ಮುಟ್ಟಿದೊಡ್ಡಿಯಲ್ಲಿ ೫೦ ಎಕರೆ ಜಮೀನನ್ನು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರ ಸಹೋದರ, ಶ್ರೀ ವಿ ನಂಜಪ್ಪನವರಿಗೆ ಕೊಟ್ಟ ಸಂಬಂಧದಲ್ಲಿ ಉಂಟಾಗಿದ್ದ ವಿವಾದವು ನೆನ್ನೆ ಇಲ್ಲಿ ಸೇರಿದ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ಇತ್ಯರ್ಥವಾಯಿತು ಜಮೀನನ್ನು ಹಿಂದೆ ವ್ಯವಸಾಯ ಮಾಡುತ್ತಿದ್ದ ರೈತರುಗಳಿಗೇ ಬಿಟ್ಟುಕೊಡಲು ಶ್ರೀ ನಂಜಪ್ಪನವರು ಒಪ್ಪಿರುವರೆಂದೂ ಈ ಜಮೀನನ್ನು ಶ್ರೀಯುತರಿಗೆ ಕೊಡುವ... ಶ್ರೀ ಹನುಮಂತಯ್ಯನವರ ಜವಾಬ್ದಾರಿಯೇನೂ ಇರಲಿಲ್ಲವೆಂದು ... ಅಭಿಪ್ರಾಯಪಟ್ಟಿನಾಗಿಯೂ ... ಗಿದೆ ಆದರೆ ಜಮೀನನ್ನು ... ಮಾಡಲು ಶ್ರೀ ನಂಜಪ್ಪನವರು ಹಣ ವೆಚ್ಚ ಮಾಡಿರುವುದರಿಂದ ಅವರಿಗೆ ಪರಿಹಾರವಾಗಿ ಬೇರೆ ಕಡೆ ಜಮೀನನ್ನು ಸರ್ಕಾರದವರು ಕೊಡುವಂತೆ ಒಪ್ಪಲಾಗಿದೆ

ಹೆಬ್ಬಾಳದಲ್ಲಿರುವ ವ್ಯವಸಾಯ ಕಾಲೇಜನ್ನು ಮುಚ್ಚದೆ ಮುಂದುವರಿಸಿಕೊಂಡು ಬರುವಂತೆಯೂ ನಿರ್ಧರಿಸಲಾಯಿತೆಂದು ಹೇಳಲಾಗಿದೆ ... ಸಂಘಗಳಲ್ಲಿ ಐಕ್ಯತೆ ತರುವ ... ಶ್ರೀ ಹೆಚ್ ಎಸ್ ರುದ್ರಪ್ಪನವರು ಸಲ್ಲಿಸಿದ ವರದಿಯನ್ನು ಕುರಿತು ಚರ್ಚೆ ನಡೆಸಿದುದಾಗಿಯೂ ಹೇಳಲಾಗಿದೆ ಎರಡು ಸಂಘಗಳಲ್ಲಿರುವ ಭಿನ್ನಾಭಿಪ್ರಾಯವೂ ಕೊನೆಗೊಂಡಿರುವುದಾಗಿ ಶ್ರೀ ಹೆಚ್ ಎಸ್ ರುದ್ರಪ್ಪನವರು ವರದಿ ಮಾಡಿರುವುದಾಗಿಯೂ ... ಅವರುಗಳು ಒಪ್ಪಿರುವ ಒಂದು ಒಡಂಬಡಿಕೆಯನ್ನು ಸಭೆಯಲ್ಲಿ ಮಂಡಿಸಿದುದಾಗಿಯೂ ಗೊತ್ತಾಗಿದೆ

ಸೆನೆಟ್ಟಿಗೆ ನಾಮಕರಣ

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟಿಗೆ ಶ್ರೀಗಳಾದ ಟಿ ಕಾಳೇಗೌಡ ಹೆಚ್ ಲಿಂಗಾರೆಡ್ಡಿ ಎ ಜಿ ಪದ್ಮನಾಭ ... ಹಳ್ಳಿ ರಾಮಸ್ವಾಮಿ ಮತ್ತು ... ಪ್ಪನವರನ್ನು ಸದಸ್ಯರಾಗಿ ನಾಮಕರಣ ಮಾಡಲಾಗಿದೆ ವಿಶ್ವ ವಿದ್ಯಾಲಯದ ಕೌನ್ಸಿಲ್ಲಿಗೆ ಬೆಂಗಳೂರಿನ ಮಾಜಿ ಮೇಯರ್ ಶ್ರೀ ಬಿ ವಿ ಲಂಕಪ್ಪನವರನ್ನು ಶ್ರೀ ಹೆಚ್ ಸಿ ದಾಸಪ್ಪನವರ ಸ್ಥಾನದಲ್ಲಿ ಸದಸ್ಯರಾಗಿ ನಾಮಕರಣ ಮಾಡಲಾಗಿದೆ

ಉಮೇದುವಾರರೇ ಇಲ್ಲದೆ ಚುನಾವಣೆ ರದ್ದು

ಮಂಡ್ಯ ಜಿಲ್ಲಾಬೋರ್ಡಿಗೆ ನಾಗಮಂಗಲ ಮತ್ತು ಮದ್ದೂರು ಕ್ಷೇತ್ರಗಳಿಂದ ಬರುವ ತಿಂಗಳು ... ನೇ ತಾ|| ನಡೆಯಬೇಕಾಗಿದ್ದ ಚುನಾವಣೆಗಾಗಿ ಯಾವ ಉಮೇದುವಾರರೂ ಅರ್ಜಿ ಸಲ್ಲಿಸಿಲ್ಲವೆಂದೂ, ಆದ್ದರಿಂದ ಚುನಾವಣೆ ರದ್ದುಗೊಳಿಸಲಾಯಿತೆಂದೂ ಗೊತ್ತಾಗಿದೆ ಇಂತಹ ಪ್ರಸಂಗವು ಆಗಿರುವುದು ಸಂಸ್ಥಾನದಲ್ಲಿ ಇದೇ ಮೊದಲು.

ಅವಿಶ್ವಾಸಕ್ಕಾಗಿ ಫ್ರೆಂಚ್ ಸರ್ಕಾರದ ರಾಜೀನಾಮೆ

ಎರಡು ಕೊಲೆಗಳಿಗಾಗಿ ೭ ವರ್ಷ ಕಠಿಣ ಸಜಾ

ಮೈಸೂರು ...

... [illegible]

ಕಲ್ಯಾಣೋತ್ಸವ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದ ... ಶ್ರೀ ಶ್ರೀನಿವಾಸ ವೆಂಕಟರಮಣಸ್ವಾಮಿ ... ಸನ್ನಿಧಿಯಲ್ಲಿ ... ಕಲ್ಯಾಣೋತ್ಸವವೂ, ತಾ|| ... ನೇ ... ದ್ವಾದಶಿ ... ಉತ್ಸವವೂ ತಾ|| ... ನೇ ಸೋಮವಾರ ರಾತ್ರಿ ... ಗಂಟೆಗೆ ಡೋಲೋತ್ಸವವೂ ನಡೆಯುವುವು ಭಕ್ತಾದಿಗಳ ಉತ್ಸವಗಳಲ್ಲಿ ಭಾಗಿಗಳಾಗಬೇಕೆಂದು ಕೋರಿದೆ

ಅರ್ಜಿ ಸ್ವೀಕಾರಕ್ಕೆ ಅವಧಿ ಹೆಚ್ಚಿತು

ರಾಜಧಾನಿಯ ಚಿಕ್ಕಪೇಟೆ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ವೈಶ್ಯ ಅನಾಥಾಲಯಕ್ಕೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಅವಧಿಯನ್ನು ಇದೇ ೨೫ ನೇ ತಾರೀಕಿನಿಂದ ೩೧ ನೇ ತಾ|| ವರೆಗೂ ಹೆಚ್ಚಿಸಲಾಗಿದೆ

ಫ್ರೆಂಚ್ ಮಂತ್ರಿಮಂಡಲದ ರಾಜೀನಾಮೆ

ಪ್ಯಾರಿಸ್ಸ್ ... ಫ್ರಾನ್ಸಿನ ... ಶಾಸನ ಸಭೆಯ ... ಪ್ರಧಾನಿ ರೆನೆ ಮೇಯರ ... ಯೋಜನೆಯು ಪಾರ್ಲಿಮೆಂಟಿನಲ್ಲಿ ತಿರಸ್ಕರಿಸಲ್ಪಟ್ಟು ಬಿದ್ದುಹೋದುದರಿಂದ, ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವು ಅಂಗೀಕೃತವಾಗಿ, ನೆನ್ನೆ ರಾತ್ರಿ ಮಂತ್ರಿಮಂಡಲದ ಎಲ್ಲ ಸಚಿವರೂ ರಾಜೀನಾಮೆ ಕೊಟ್ಟಿದ್ದಾರೆ

ಬರುವ ತಿಂಗಳು ತ್ರಿರಾಷ್ಟ್ರ ಪ್ರಮುಖರ ಸಮ್ಮೇಳನ

ರಷ್ಯದೊಡನೆ ನಾನಾ ವಿಷಯಗಳ ಬಗ್ಗೆ ಮಾತುಕತೆ ನಡೆಸಲು, ಒದಗುವ ತಿಂಗಳು ಮಧ್ಯಭಾಗದಲ್ಲಿ ಬರ್ಮ್ಯುಡಾ ದ್ವೀಪದಲ್ಲಿ ಇಂಗ್ಲೆಂಡ್, ಫ್ರಾನ್ಸುಗಳ ಪ್ರಧಾನಿಗಳು ಮತ್ತು ಅಮೆರಿಕದ ಅಧ್ಯಕ್ಷರ ನಡುವೆ ಸಮಾಲೋಚನೆ ನಡೆಸಲು ಸಮ್ಮೇಳನವೊಂದು ಏರ್ಪಾಡಾಗಿದೆ

ಬಿರುಗಾಳಿಗೆ ಸಿಕ್ಕಿದ ದೋಣಿ ಮುಳುಗಿ ೧೫೦ ಮರಣ

ಪೂರ್ವ ಪಾಕಿಸ್ತಾನದ ಮೈಮನ್‌ಸಿಂಗ್ ಎಂಬಲ್ಲಿಗೆ ಸಮೀಪದಲ್ಲಿ ಮೇಘ್ನ ಮತ್ತು ಧಾಲೇಶ್ವರಿ ನದಿಗಳ ಸಂಗಮದ ಬಳಿ ಕಳೆದ ಮಂಗಳವಾರ ೧೫೦ ಮಂದಿ ಪ್ರಯಾಣಿಕರಿಂದ ಕೂಡಿದ ಒಂದು ದೋಣಿಯು ಬಿರುಗಾಳಿಗೆ ಸಿಕ್ಕಿ ಮುಳುಗಿದ ಪರಿಣಾಮವಾಗಿ ೧೫೦ ಮಂದಿ ಮೃತಪಟ್ಟಿರೆಂದು ವರದಿಯಾಗಿದೆ ಇತರ ೨೫ ಜನರು ಈಜಿಕೊಂಡು ದಡವನ್ನು ಸೇರಿದರು ಅವರೆಲ್ಲರೂ ದೋಣಿಯ ಮೇಲ್ಭಾಗದಲ್ಲಿ ಕುಳಿತಿದ್ದರು

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಕೊರತೆ ಸಂಭವ

ಇದೇ ೨೫ ನೇ ತಾರೀಕಿನಿಂದ ೨೫ ಸೈಕಲ್ಲುಗಳ ವಿದ್ಯುಚ್ಛಕ್ತಿಯಲ್ಲಿ ಈಗ ಜಾರಿಯಲ್ಲಿರುವ ಶೇ|| ೭ ರಷ್ಟು ಮೋತಾದಿಗಿಂತಲೂ ಹೆಚ್ಚು ಕೊರತೆ ಮಾಡಬೇಕಾಗುವುದೆಂದು ಹೇಳಲಾಗಿದೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ಇಳಿದು ಹೆಚ್ಚು ನೀರು ಬಾರದಿದ್ದರೆ ಈ ಕ್ರಮವನ್ನು ಕೈಗೊಳ್ಳಬೇಕಾಗುವುದು

ವಾಸ್ತುಶಿಲ್ಪ ಇಲಾಖೆಯ ಡೈರೆಕ್ಟರ್ ಬಲಾತ್ಕಾರ ನಿವೃತ್ತಿ

ಲಂಚ ನಿರೋಧ ಇಲಾಖೆಯ ತ್ರೈಮಾಸಿಕ ವರದಿ

ಬೆಂಗಳೂರು ೨೧

ಕಳೆದ ಮಾರ್ಚಿ ತಿಂಗಳಿಗೆ ಅಂತ್ಯವಾದ ೩ ತಿಂಗಳ ಅವಧಿಯಲ್ಲಿ ನಡೆಸಲಾದ ಕಾರ್ಯಕ್ರಮಗಳನ್ನು ಕುರಿತು ಲಂಚ ನಿರೋಧ ಶಾಖೆಯವರು ಪ್ರಕಟಿಸಿರುವ ವರದಿಯಂತೆ, ಲಂಚ ಪಡೆದ ಆಪಾದನೆ ಮತ್ತು ಸರ್ಕಾರಕ್ಕೆ ವಂಚನೆ ಮಾಡಿದ ಸಂಬಂಧವಾಗಿ ... ಶ್ರೀ ಜಿ ವಿ ಗೋಪಾಲಸ್ವಾಮಿಯವರನ್ನು ... ಸುಳ್ಳು ರಶೀತಿಗಳನ್ನು ಸೃಷ್ಟಿಸಿದ ಸಂಬಂಧವಾಗಿಯೂ ... ಬಗ್ಗೆಯೂ, ವಾಸ್ತುಶಿಲ್ಪ ಇಲಾಖೆಯ ಹಂಗಾಮಿ ಡೈರೆಕ್ಟರ್ ಶ್ರೀ ಎಸ್ ನರಸಿಂಹಾಚಾರ್ಯರನ್ನು ಕೆಲಸದಿಂದ ನಿವೃತ್ತಿ ಮಾಡಲಾಗಿದೆ ಮತ್ತು ಅವರಿಂದ ... ರೂಪಾಯಿಯನ್ನು ವಸೂಲು ಮಾಡುವಂತೆಯೂ ... ಸರ್ಕಾರಿ ಡಿಪೋ ... ದಾಸ್ತಾನುಗಳ ಲೆಕ್ಕ ತಗೆದುಕೊಳ್ಳುವ ಬಗ್ಗೆ ಉಪೇಕ್ಷೆಮಾಡಿದ ಸಂಬಂಧವಾಗಿ ಹಂಗಾಮಿ ಆಹಾರ ಇನ್ಸ್‌ಪೆಕ್ಟರ್ ಶ್ರೀ ರಾಚಪ್ಪನವರನ್ನು ಕೆಲಸದಿಂದ ನಿವೃತ್ತಿಗೊಳಿಸಲಾಗಿದೆ ... ತಾಲ್ಲೂಕು ... ತಿಮ್ಮಯ್ಯನವರು ಲಂಚ ಪಡೆದರೆಂದು ಅವರನ್ನು ಕೆಲಸದಿಂದ ತೆಗೆಯಲಾಗಿದೆ ಪ್ರಯಾಣ ಭತ್ಯದ ಬಗ್ಗೆ ಸುಳ್ಳು ಅಂಕಿಗಳನ್ನು ಕೊಟ್ಟುದಕ್ಕಾಗಿ ... ಪೋಲೀಸ್ ಕಾನ್ಸ್‌ಟೇಬಲ್ ನಂ|| ಕೃಷ್ಣಮಾಚಾರ್ಯರ ಸಂಬಳವನ್ನು ಕಡಿಮೆ ಮಾಡಲಾಗಿದೆ

ಡಲ್ಲೆಸ್ ಪ್ರತಿಮೆ ಸುಟ್ಟ ಬಗ್ಗೆ ದಸ್ತಗಿರಿ ಮತ್ತು ಬಿಡುಗಡೆ

ಪ್ರಧಾನಿ ನೆಹರೂರವರೊಡನೆ ಮಾತುಕತೆ ನಡೆಸಲು ದೆಹಲಿಗೆ ಮೊನ್ನೆ ಆಗಮಿಸಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸರವರ ವಿರೋಧವಾದ ಪ್ರತಿಭಟನಾ ಸಭೆಯೊಂದನ್ನು ಮೊನ್ನೆ ರಾತ್ರಿ ಡಿಲ್ಲಿನ ... ನಡೆಸಿದರು ಅದಕ್ಕೆ ಮುಂಚಿತವಾಗಿ ಡಲ್ಲೆಸರವರ ಪ್ರತಿಮೆಯೊಂದನ್ನು ಮಾಡಿ ಮೆರವಣಿಗೆಯಲ್ಲಿ ಕೊಂಡೊಯ್ದು ಅಮೆರಿಕದವರ ಪುಸ್ತಕ ಭಂಡಾರವಿರುವ ಸ್ಥಳದಲ್ಲಿ ಸುಡಲಾಯಿತು ಪ್ರತಿಮೆಯು ಉರಿಯುತ್ತಿರುವಾಗ ಪೋಲೀಸ್ ಅಧಿಕಾರಿಗಳು ತಡೆಯಲು ಪ್ರಯತ್ನಪಟ್ಟರೆಂದೂ, ಅದು ವಿಫಲವಾಯಿತೆಂದೂ ಹೇಳಲಾಗಿದೆ ಈ ಸಂಬಂಧವಾಗಿ ಮೊನ್ನೆ ರಾತ್ರಿ ಶ್ರೀಗಳಾದ ಎಸ್ ಎಲ್ ಉಪಾಧ್ಯಾಯ, ಎಸ್ ಸಿಂಗ್, ವೈ ಆರ್ ಶರ್ಮ ಮತ್ತು ಪೆರುಮಾಳ್‌ರವರನ್ನು ದಸ್ತಗಿರಿ ಮಾಡಿ ನೆನ್ನೆ ಬಿಡುಗಡೆ ಮಾಡಲಾಯಿತು

ಡಾ|| ಎ. ಜಿ ರಾಂಗರವರ ನಿಧನ

ರಾಜಧಾನಿಯ ಪ್ರಸಿದ್ಧ ವೈದ್ಯರೂ ಮತ್ತು ಮಾಜಿ ಪೌರಸಭಾ ಸದಸ್ಯರೂ ಆದ ಡಾ|| ಎ ಜಿ ರಾಂಗರವರು ನೆನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ... ವರ್ಷ ವಯಸ್ಸಾಗಿತ್ತು ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ

ಅಖಿಲ ಮೈಸೂರು ಹಿಂದೀ ಪ್ರಚಾರಕರ ಸಮ್ಮೇಳನ

ಅಖಿಲ ಮೈಸೂರ ಹಿಂದೀ ಪ್ರಚಾರಕರ ೭ನೇ ಸಮ್ಮೇಳನವು ಇದೇ ಜೂನ್ ೬ ಮತ್ತು ೭ನೇ ತಾ|| ಗಳಲ್ಲಿ ತುಮಕೂರಿನಲ್ಲಿ ಶ್ರೀ ಹೆಚ್. ಬಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಸಮ್ಮೇಳನದ ಉದ್ಘಾಟನೋತ್ಸವವನ್ನು ನೆರವೇರಿಸುವರು. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಮಾಣಿತ ಪ್ರಚಾರಕರು, ರಾಷ್ಟ್ರಭಾಷಾ ವಿಶಾರದ ಪದವೀಧರರು, ಸರ್ಕಾರದ ಮಾನ್ಯತೆಯನ್ನು ಪಡೆದ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುವ ಹಿಂದೀ ಅಧ್ಯಾಪಕರು ಮತ್ತು ಸ್ವಾನೀಯ ಹಿಂದೀ ಪ್ರಚಾರ ಸಂಸ್ಥೆಗಳ ಆಶ್ರಯದಲ್ಲಿ ಕೆಲಸ ಮಾಡುತ್ತಿರುವ ಹಿಂದೀ ಪ್ರಚಾರಕರು [illegible] ಹಿಂದೀ ಪ್ರಚಾರ [illegible] [illegible] ಹೆಸರನ್ನು [illegible] [illegible] ಮೊದಲೇ [illegible] ಬಿ. ಪರಮೇಶ್ವರಯ್ಯ [illegible] ಕೊಡಬೇಕಾಗಿ [illegible] ಸಮ್ಮೇಳನದ [illegible] ಪ್ರತಿನಿಧಿಗಳ [illegible] ಪಾಲ್ಗೊಳ್ಳ ಬಯಸುವವರು [illegible] ರೂ. ಪ್ರವೇಶ ಧನವನ್ನು ಕೊಟ್ಟು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. [illegible] ವರ್ಷಗಳಲ್ಲಿ ಹಿಂದಿಯನ್ನು ರಾಜ್ಯಭಾಷೆಯನ್ನಾಗಿ ಮಾಡಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳೇನು? ಎಂಬ ವಿಷಯವಾಗಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಲಾಗುವುದು.

ಬೆಂಗಳೂರು ನಗರದ ಅಭಿವೃದ್ಧಿ ಬಗ್ಗೆ ಸರ್ ಎಂ. ವಿ.

ಬೆಂಗಳೂರ ನಗರವನ್ನು ಅಭಿವೃದ್ಧಿಗೊಳಿಸಲು ವಿಶಾಲವಾದ ಯೋಜನೆಯನ್ನು ಸಿದ್ಧಗೊಳಿಸುವಂತೆ ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರು ಸಲಹೆ ಮಾಡಿದ್ದಾರೆ. ಈ ಸಂಬಂಧವಾಗಿ ವಿಸ್ತಾರವಾದ ಸಂಶೋಧನಾ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಅವರು ತಿಳಿಸಿ, ನಗರದ ಎಲ್ಲ ಭಾಗಗಳಿಗೂ ಜಾಗ್ರತೆಯಾಗಿ ಹೋಗಲು ಸಾಧ್ಯವಾಗುವಂತೆ ನಗರದ ಸುತ್ತಲೂ ಒಂದು ರಸ್ತೆಯನ್ನು ನಿರ್ಮಿಸಬೇಕೆಂದು ಅವರು ಹೇಳಿರುವರು.

ಬರ್ಮಾ ದಂಗೆಕೋರರಿಂದ ರೈಲಿನ ಸಿಡಿತ

ರಂಗೂನಿಗೆ ೫೦ ಮೈಲಿ ಪೂರ್ವದಲ್ಲಿ ಒಂದು ಕಡೆ ಬರ್ಮಾ ದಂಗೆಕೋರರು ಮೊನ್ನೆ ರೈಲೊಂದನ್ನು ಸಿಡಿಸಿದ ಕಾರಣವಾಗಿ ೫ ಜನರು ಮಡಿದು, ಅನೇಕರಿಗೆ ಗಾಯವಾಗಿರುತ್ತದೆ. ಕಂಬಿ ಕೆಳಗೆ ಡೈನಮೈಟ್ ಇಟ್ಟು ರೈಲನ್ನು ಕಂಬಿ ತಪ್ಪುವಂತೆ ಮಾಡಿ ಪ್ರಯಾಣಿಕರಿಂದ ದಂಗೆಕೋರರು ಹಣ ಸುಲಿದರೆಂದು ಹೇಳಲಾಗಿದೆ.

ಚೌಡಯ್ಯನವರ ತನಿ ಪಿಟೀಲು ಕಛೇರಿ

ರಾಜಧಾನಿಯ ಚಾಮರಾಜ ಮೊಹಲ್ಲದ [illegible] ಜಪ್ತುರು ಕೋ ಆಪರೇಟಿವ್ ಸೊಸೈಟಿ ಕೇಂದ್ರ ಶಾಖೆಯ ಎದುರಿಗಿರುವ ಶ್ರೀ ಕಾಶಿ ವಿಶ್ವೇಶ್ವರಸ್ವಾಮಿಯವರ ದೇವಾಲಯದಲ್ಲಿ ಶ್ರೀ [illegible] ಜಯಂತಿ ಉತ್ಸವದ ಅಂಗವಾಗಿ [illegible] ಘಂಟೆಗೆ ಸಂಗೀತ ರತ್ನ [illegible] ವಿದ್ವಾನ್ [illegible] ಚೌಡಯ್ಯನವರ [illegible] ವಿದ್ವಾನ್ [illegible] ನವರ ಮೃದಂಗ [illegible] ನಾಗಣ್ಣನವರ [illegible] ಸಂಗೀತ ನಡೆಯಲಿದೆ.

ಮಾಧ್ವ ಮಹಾಜನರ ಸಭೆ

ಕಳೆದ ಜನವರಿಯಲ್ಲಿ ಮೈಸೂರು ಶ್ರೀಮನ್ಮಹಾರಾಜರ [illegible] ಉದ್ಘಾಟಿಸಿದ ಮಾಧ್ವ ತತ್ವ ಸಮ್ಮೇಳನದಲ್ಲಿ ಸ್ಥಾಪಿಸಲ್ಪಟ್ಟ ಅಖಿಲ ಭಾರತ ಮಹಾಮಂಡಲಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು, ಮೈಸೂರು ನಗರದಲ್ಲಿ ಆ ಮಂಡಲದ ಒಂದು ಶಾಖೆಯನ್ನು ಸ್ಥಾಪಿಸಲೂ, ಮಂಡಲಕ್ಕೆ ಸದಸ್ಯರುಗಳನ್ನು ಸಂಗ್ರಹಿಸಲೂ ಮತ್ತು ಮಾಧ್ವರ ಜನಗಣತಿಯನ್ನು ಮಾಡಲೂ ಸಹ ಸಕಲ ಮಾಧ್ವ ಮಹಾಜನರ ಸಭೆಯನ್ನು ಇದೇ ೨೫ನೇ ತಾರೀಕು ಭಾನುವಾರ ಸಾಯಂಕಾಲ ೬ ಗಂಟೆಗೆ ಸುಬ್ಬರಾಯನ ಕೆರೆ ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ಸೇರಿಸಲು ತೀರ್ಮಾನಿಸಿರುತ್ತದೆ. ಮಾಧ್ವ ಮಹಾ ಮಂಡಲದ ಪ್ರಧಾನ ಕಾರ್ಯದರ್ಶಿ, ಶ್ರೀ ಪಿ. ಹೆಚ್. ಕೃಷ್ಣರಾಯರು, ಸಮ್ಮೇಳನದ ಕಾರ್ಯಕಲಾಪಗಳ, ಮಾಧ್ವ ಮಹಾ ಮಂಡಲಿಯ ಉದ್ದೇಶಗಳ ಮತ್ತು ಈಗ ಮಾಧ್ವ ಮಹಾಜನಗಳ ಕರ್ತವ್ಯಗಳ ವಿಚಾರವಾಗಿ ಭಾಷಣ ಮಾಡುವರು. ಸರ್ವ ಮಾಧ್ವ ಮಹಾಜನರ ಸಹಕಾರವನ್ನೂ ಕೋರಿದೆ.

ಬಿಸಿಲಿನ ತಾಪದಿಂದ ರೈಲ್ವೆ ಇಂಜನ್ ಡ್ರೈವರನ ಮೂರ್ಛೆ

ಮದ್ರಾಸಿನಿಂದ ವಿಳ್ಳುಪುರಕ್ಕೆ ಮಂಗಳವಾರ ಹೊರಟ ರೈಲು ಚಲಿಸುತ್ತಿದ್ದಾಗ ಒಂದು ಸ್ಟೇಷನ್ ಬಳಿ ಇಂಜನ್ ಡ್ರೈವರ್ ಶ್ರೀನಿವಾಸನ್ ಎಂಬುವನು ಬಿಸಿಲು ತಾಪದಿಂದ ಪ್ರಜ್ಞಾವಿಹೀನನಾದನೆಂದೂ, ರೈಲನ್ನು ನಿಲ್ದಾಣದಲ್ಲಿ ಸ್ವಲ್ಪ ಹೊತ್ತು ನಿಲ್ಲಿಸಲಾಗಿದ್ದಿತೆಂದೂ, ಹೇಳಲಾಗಿದೆ. ಡ್ರೈವರನನ್ನು ವಿಳ್ಳುಪುರಕ್ಕೆ ಚಿಕಿತ್ಸೆಗಾಗಿ ಕರೆದೊಯ್ಯಲಾಯಿತು.

ಕಾಂಗ್ರೆಸ್ ಶುಲ್ಕದಲ್ಲಿ ಕೋತಾ ಇಲ್ಲ

ತಾಲ್ಲೂಕು ಕಾಂಗ್ರೆಸ್ ಚುನಾವಣೆಗಳಿಗೆ ಸಂಬಂಧಿಸಿದಂತೆ ೧೦ ರೂಗಳ ಶುಲ್ಕವನ್ನು ೩ ರೂ ಗೆ ಇಳಿಸಲು ಸಾಧ್ಯವಿಲ್ಲವೆಂದು ಪ್ರದೇಶ ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುತ್ತದೆ.

ರಾಜಕೀಯದಲ್ಲಿ ನೊಂದವರಿಗೆ ಜಮೀನು ಮತ್ತು ಉದ್ಯೋಗ

ರಾಜಕೀಯದಲ್ಲಿ ನೊಂದವರಿಗೆ ಸರ್ಕಾರಿ ಕೈಗಾರಿಕೆಗಳಲ್ಲಿ ಉದ್ಯೋಗ ಮತ್ತು ಅರ್ಹರಾದವರಿಗೆ ಜಮೀನುಗಳನ್ನು ಕೊಡುವ ನೀತಿಯನ್ನು ಮುಂದುವರಿಸುವಂತೆ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ.

ಕನ್ಯಕಾಪರಮೇಶ್ವರಿ ವರ್ಧಂತಿ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಅಮ್ಮನವರ ವರ್ಧಂತಿ ಮಹೋತ್ಸವವು ನಾಳೆಯಿಂದ ಪ್ರಾರಂಭವಾಗಿ, ೨೬ನೇ ತಾ|| ವರೆಗೂ ನಡೆಯುವುದು. ನಾಳೆ ಮತ್ತು ನಾಳಿದ್ದು ೧೦ ಗಂಟೆಗೆ ಹರಿಕಥೆಯೂ ಏರ್ಪಾಡಾಗಿದೆ.

ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಮೈಸೂರು ತಾಲ್ಲೂಕಿನ ಕಾಂಗ್ರೆಸ್ ಸಮಿತಿಯ ಚುನಾವಣೆಯು ಈ ತಿಂಗಳ ೩೧ ನೇ ತಾ|| ಬೆಳಿಗ್ಗೆ ೯ ರಿಂದ ೧೨ ಮತ್ತು ಮಧ್ಯಾಹ್ನ ೩ ರಿಂದ ೫ರ ವರೆಗೆ ನಗರದ ಟೌನ್‌ಹಾಲಿನಲ್ಲಿ ನಡೆಯುವುದಾಗಿ ತಿಳಿಸಲಾಗಿದೆ. ೧೫ ಸ್ಥಾನಗಳಿಗೆ ೨೦ ಮಂದಿ ಉಮೇದುವಾರರಿರುವರು.

ಹೆಚ್ ಎಂ ವಿ

ರೇಡಿಯೋಗಳು

ನಿಮ್ಮ ಮನೆಯ ಸುಂದರವಾದ ಪೆಟ್ಟಿಗೆಯಿಂದ ಕೂಡಿದ್ದು ದರವನ್ನು ಇಳಿಸಿದೆ

ಏಜಂಟರು — ರೇಡಿಯೋ ಹೌಸ್,
570 ಇರ್ವಿನ್ ರಸ್ತೆ, ಮೈಸೂರು

ಫ್ರಾನ್ಸಿನ ಅಧ್ಯಕ್ಷತೆಗೆ ಬೀಡೋ

ಈ ವರ್ಷ ಶಿಶಿರ ಋತುವಿನಲ್ಲಿ ಫ್ರಾನ್ಸಿನ ಅಧ್ಯಕ್ಷರಾದ ವಿನಸೆಂಟ್ ಓರಿಯಲ್‌ರವರು ಅಧಿಕಾರದಿಂದ ನಿವೃತ್ತರಾಗಲಿರುವರು. ಅವರ ಸ್ಥಾನಕ್ಕೆ ಅಲ್ಲಿನ ವಿದೇಶಾಂಗ ಮಂತ್ರಿ ಎಂ. ಬೀಡೋರವರು ಬರುವರೆಂದು ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಂ	ರೂ ಗ
ಕಡಲೆಕಾಯಿ	೨೯ ೪-೦	೩೦-೪-೦
ಹರಳುಬೀಜ	೪೧ ೧೨ ೦	
ಹೊಂಗೇಬೀಜ	೨೨ ೪ ೦	
ಹುರುಳಿ	೪೩ ೪ ೦	೪೩ ೧೨ ೦
ಅವರೆ	೫೦-೦-೦	
ಉದ್ದು	೩೧ ೮ ೦	
ಹುಣಸೇಹಣ್ಣು	೫ ೪ ೦	೬ ೬ ೦
ಬೆಲ್ಲ	೬-೮-೦	
ತೆಂಗಿನಕಾಯಿ		
೧,೦೦೦ಕ್ಕೆ	೧೩೬ ೦ ೦	೨೧೦ ೦ ೦

ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲರ ಬಂಧನ

ಬೆಂಗಳೂರಿನ ಕಿಲಾರಿ ರಸ್ತೆಯಲ್ಲಿ ಮೊನ್ನೆ ಮಧ್ಯರಾತ್ರಿ ಕೋಟಿಶೆಟ್ಟಿ ಎಂಬ ಲೇವಾದೇವಿಗಾರರು ಅವರ ಮನೆ ಮುಂಭಾಗದಲ್ಲಿ ಪೆಟ್ಟು ತಿಂದು ಸತ್ತರೆಂಬ ಸಂಬಂಧವಾಗಿ ಅಲ್ಲಿನ ಪೋಲೀಸರು, ಪೋಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ನಂಜುಂಡಯ್ಯ ಮತ್ತು ಇಬ್ಬರ ಪೋಲೀಸರನ್ನು ದಸ್ತಗಿರಿ ಮಾಡಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೨೦ ಕಸ್ತೂರು ಎ ಜಿ ಸುಬ್ರಹ್ಮಣ್ಯಂ, ರಿಕಾರ್ಡ್ ಮಧ್ಯಾಹ್ನ ೧ ೪೦ ಗಿಟಾರ್ ೨ ಬಾಲ ಜಗತ್ ಸಂಜೆ ೫.೪೦ ಎಸ್ ರಾಮಚಂದ್ರರಾವ್, ದೇವರ ನಾಮಗಳು ೬ ೧೦ ಸಾವಿತ್ರೀ ೭ ಎಸ್ ರಾಮಚಂದ್ರರಾವ್, ದೇವಿ ಸ್ತುತಿ ೭ ೨೦ ವನಿತಾ ವಿಹಾರ ೮ ಎಸ್ ಕೆ ಅನಂತಪದ್ಮನಾಭ, ಕಥಾ ಕಾಲಕ್ಷೇಪ ೯ ೧೫ ಗಾನ ಪಾಠ ೯ ೪೦ ರೇಡಿಯೋ ರಸಿಕ ಮಂಡಲಿ

ಬೇಕಾಗಿದ್ದಾರೆ

ಸುಮಾರು ಹತ್ತು ವರ್ಷ ಜವಳಿ ವ್ಯಾಪಾರದಲ್ಲಿ ಅನುಭವವುಳ್ಳ ಒಬ್ಬ ಗುಮಾಸ್ತರು ಬೇಕಾಗಿದ್ದಾರೆ. ಬಾಕಿ ವಿಚಾರಕ್ಕಾಗಿ ತಕ್ಷಣ ಭಾನುವಾರ ಬಂದು ಭೇಟಿ ಮಾಡಬೇಕು. ಭೇಟಿ ಕಾಲ ಬೆಳಿಗ್ಗೆ ೯ ರಿಂದ ಸಂಜೆ ೫ರ ವರೆಗೆ

ಎಂ. ರಿಕಾಬ್ ಚಂದ್ ಮಿಶ್ರಿಲಾಲ್,
ಜವಳಿ ವ್ಯಾಪಾರಿಗಳು,
ಅಶೋಕಾ ರಸ್ತೆ, ಮೈಸೂರು

SRI GANESHA
TALKIES
GALA OPENING
On 22-5-53



ಪ್ರಭುದೇವಾ ಥಿಯೇಟರ್
ಪದ್ಮಾ ಟಾಕೀಸ್
23-5-53 ನೇ ಶನಿವಾರದಿಂದ ದಿನವಹಿ 3 ಆಟಗಳು
ಜೆಮಿನಿಯವರ ತಮಿಳು ಚಿತ್ರ ✱ ಚಕ್ರಧಾರಿ ✱
ನಾಗಯ್ಯ, ಪುಷ್ಪವಲ್ಲಿ, ಸೂರ್ಯಪ್ರಭಾ, ನಾರಾಯಣರಾವ್
[illegible]

ಲಗ್ನದ ಜವಳಿಗಳಿಗೆ — ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ನೂಲಿನ ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ ★ M.V.ಭೋಜಯ್ಯ (ಫೋನ್ 446) ಬಿ ಎ ಇಂಡಿಯ ಬ್ಯಾಂಕ್ ಎದುರ ಮೈಸೂರು

Edited, Printed and Published by A R Nagaraja at Sadhvi Press, D. Subbiah Road, Mysore

ರೋ೯ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೩-೫-೧೯೫೧ [ಸಂಚಿಕೆ ೨೪೧

ಬ್ರಿಟಿಷರೊಡನೆ ಕದನಕ್ಕೆ ಈಜಿಪ್ಟ್ ವಿದ್ಯಾರ್ಥಿಗಳು!

ಪೆಟ್ರೋಲ್ ಮೇಲೆ ಮಾರಾಟ ತೆರಿಗೆ ಬಗ್ಗೆ ದಾವೆ

ಮೈಸೂರು ೨೩

ಮೈಸೂರು ನಗರದಲ್ಲಿ ಕೊಂಡುಕೊಂಡು ಕೊಡಗಿನಲ್ಲಿ ಉಪಯೋಗಿಸುವ ಪೆಟ್ರೋಲ್ ಮತ್ತು ಮೋಟಾರು ಎಣ್ಣೆಗಳ ಮೇಲೆ ಮೈಸೂರು ಸರ್ಕಾರದವರು ವಿಧಿಸುವ ಮಾರಾಟ ತೆರಿಗೆಯು ಅಕ್ರಮವೆಂದೂ, ಈ ಸಂಬಂಧವಾದ ಕಾನೂನು ಸಂವಿಧಾನದ ೨೮೬ ನೇ ನಿಬಂಧನೆಗೆ ವ್ಯತಿರೇಕವೆಂದೂ ಸಾರುವಂತೆ ಕೋರಿ ಕೊಡಗಿನ ಗೋಣಿಕೊಪ್ಪದ ಅಕ್ಕಿ ಗಿರಣಿ ಮತ್ತು ಲಾರಿ ಮಾಲೀಕರಾದ ಶ್ರೀ ... ನಾಯ್ಡುರವರ ನೆನ್ನೆ ೧ ನೇ ವರ್ಗ ಸಬ್‌ಜಡ್ಜ್ ಕೋರ್ಟಿನಲ್ಲಿ ಮೈಸೂರು ಸರ್ಕಾರ ಮತ್ತು ರಾಜಧಾನಿಯ ಮಾರಾಟ ತೆರಿಗೆ ಅಧಿಕಾರಿಯವರ ಮೇಲೆ ದಾವೆ ಹೂಡಿದರು. ಈ ಸಂಬಂಧವಾಗಿ ನಡವಳಿಕೆ ಬಗ್ಗೆ ಕೋರ್ಟಿನವರಿಗೆ ನಿರ್ಣಯವು ಬಂದರೆ, ಹೈಕೋರ್ಟಿಗೆ ಅನ್ನು ಕಳುಹಿಸುವಂತೆಯೂ ಅರ್ಜಿದಾರರು ಪ್ರಾರ್ಥಿಸಿರುತ್ತಾರೆ.

ಜಿಲ್ಲಾ ಬೋರ್ಡ್ ಉಪಾಧ್ಯಕ್ಷರು ಅಪಾಯದಿಂದ ಪಾರು

ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದ ಶ್ರೀ ಟಿ. ಪಿ. ಬೋರಯ್ಯನವರು ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗಿ ಅಲ್ಲಿನ ಆಸ್ಪತ್ರೆಯ ಪರೀಕ್ಷೆಯನ್ನು ನಡೆಸಿ ಮೊನ್ನೆ ವಾಪಸು ಬರುತ್ತಿದ್ದಾಗ ಸಲ್ಪ ದಾರಿಯಲ್ಲಿ ಮುಂದು ರಸ್ತೆಯಲ್ಲಿ ನಿಂತು, ಉಪಾಧ್ಯಕ್ಷರು ಕುಳಿತಿದ್ದ ಲಾರಿಯನ್ನು ಎತ್ತಿ ... ಹಾಕಿತೆಂದೂ, ಆದರೆ ಯಾವ ತೊಂದರೆಯೂ ಆಗಲಿಲ್ಲವೆಂದೂ ತಿಳಿದು ಬಂದಿದೆ. ... ಗುಂಡಿನಿಂದ ಆನೆಯನ್ನು ಓಡಿಸಲಾಯಿತೆಂದೂ, ನಂತರ ಲಾರಿಯು ಸುರಕ್ಷಿತವಾಗಿ ವಾಪಸು ಬಂದಿತೆಂದೂ ಹೇಳಲಾಗಿದೆ.

ಹರಿಕಥೆ

ರಾಜಧಾನಿಯ ಶ್ರೀರಾಮಪೇಟೆಯ ... ವ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀರಾಮ ಮಂದಿರದಲ್ಲಿ ಈ ದಿನ ರಾತ್ರಿ ೯-೩೦ ಕ್ಕೆ ಸರಿಯಾಗಿ ಕೀರ್ತನಕೇಸರಿ ಪಿ. ರಾಮಸ್ವಾಮಿ ನಾಯ್ಡುರವರಿಂದ "ಶಿವಲೀಲಾ ಕುಸುಮಾವಳಿ" ಎಂಬ ಹರಿಕಥೆಯು ಏರ್ಪಾಡಾಗಿದೆ.

ನಾಗಯ್ಯ ರೆಡ್ಡಿಯವರ ವರ್ತನೆಗೆ ಆಕ್ಷೇಪ

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಎಸ್. ನಾಗಯ್ಯರೆಡ್ಡಿಯವರು ಪಕ್ಷಕ್ಕೆ ಅಪಮಾನ ಮಾಡುವ ಮತ್ತು ಪಕ್ಷದ ಶಿಸ್ತಿಗೆ ಭಂಗ ತರುವ ರೀತಿಯಲ್ಲಿ ವರ್ತಿಸುತ್ತಿರುವರೆಂದೂ ಆದಕ್ಕಾಗಿ ಅವರ ಮೇಲೆ ಕ್ರಮ ಕೈಕೊಳ್ಳಬೇಕೆಂದೂ ಸೂಚಿಸಿ ಬೆಂಗಳೂರು ಸಿವಿಲ್ ಪ್ರದೇಶದ ಸದಸ್ಯರಾದ ಶ್ರೀ ಪಳನಿಯಪ್ಪನವರು ನೆನ್ನೆ ಪಕ್ಷದ ಸಭೆಯಲ್ಲಿ ನಿರ್ಣಯವೊಂದನ್ನು ತಂದಿದ್ದರು. ಈ ಬಗ್ಗೆ ಅವರಿಗೆ ನೋಟೀಸು ಕೊಟ್ಟು ವಿಶೇಷ ಸಭೆಯಲ್ಲಿ ಆ ವಿಷಯವನ್ನು ಚರ್ಚೆ ನಡೆಸುವಂತೆ ನಿರ್ಧಾರವಾಯಿತೆಂದು ಗೊತ್ತಾಗಿದೆ. ಶ್ರೀ ನಾಗಯ್ಯರೆಡ್ಡಿಯವರು ಮುಂದೆ ಸೇರುವ ಸಭೆಯಲ್ಲಿ ತಮ್ಮ ನಿಲುವನ್ನು ವಿವರಿಸುವುದಾಗಿ ತಿಳಿಸಿರುವುದಾಗಿಯೂ ಗೊತ್ತಾಗಿದೆ.

ಬಿ. ಎ ಪರೀಕ್ಷೆಗೆ ಹೊಸ ಅಧ್ಯಯನ ವಿಷಯಗಳು

ಬೆಂಗಳೂರು ೨೩

ಬಿ. ಎ ಪದವಿ ಪರೀಕ್ಷೆಗೆ ಮನಶ್ಶಾಸ್ತ್ರ, ಸಂಖ್ಯಾಶಾಸ್ತ್ರ, ಸಂಸ್ಕೃತ ಮತ್ತು ಸಮಾಜಶಾಸ್ತ್ರಗಳನ್ನು ಐಚ್ಛಿಕ ವಿಷಯಗಳಾಗುವ ಹೊಸ ಕಾಂಬಿನೇಷನ್ ಅನ್ನು ಏರ್ಪಡಿಸಬೇಕೆಂದ ನೆನ್ನೆ ಇಲ್ಲಿ ಸೇರಿದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಯಿತು. ನಾಟಕವನ್ನು ಪದವಿ ತರಗತಿಯ ಐಚ್ಛಿಕ ವಿಷಯವಾಗಿ ಸೇರಿಸಲೂ ಸಭೆಯು ಒಪ್ಪಿತು. ಪ್ರಿಮೆಡಿಕಲ್ ಪರೀಕ್ಷೆಯಲ್ಲಿ ಎರಡು ಸಾರಿ ಉತ್ತೀರ್ಣರಾಗದವರನ್ನು ಪುನಃ ಅದೇ ಪರೀಕ್ಷೆಗೆ ಕೂಡಿಸಬಾರದೆಂದು ತರಲಾಗಿದ್ದ ನಿರ್ಣಯವನ್ನು ಚರ್ಚೆ ಮಾಡಿದ ಮೇಲೆ ಸಂಬಂಧಪಟ್ಟ ಇಲಾಖೆಗೆ ಒಪ್ಪಿಸಲಾಯಿತು.

ಮೈಸೂರು ಕ್ರಾಫರ್ಡ್ ಭವನದ ಬಳಿ ಇರುವ ನ್ಯೂಟ್ ಕಟ್ಟಡವನ್ನು ವಿಶ್ವವಿದ್ಯಾಲಯದವರು ವಹಿಸಿಕೊಂಡು ಅಲ್ಲಿ ನಾಟಕ ರಂಗವನ್ನು ನಿರ್ಮಿಸುವಂತೆಯೂ ಶಿಫಾರಸಾಯಿತು.

ವಿಶ್ವ ವಿದ್ಯಾಲಯದಲ್ಲಿ ಫ್ರೀಷಿಪ್‌ಗಳಿಗೆ ಮಿತಿ

ವಿಶ್ವ ವಿದ್ಯಾಲಯದಲ್ಲಿ ಫ್ರೀಷಿಪ್ ಮತ್ತು ಅರ್ಧ ಫ್ರೀಷಿಪ್ಪುಗಳನ್ನು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇ|| ೨೦ ರಷ್ಟು ಮಂದಿಗಾಗಿ ಮಾತ್ರ ಮಿತಗೊಳಿಸಬೇಕೆಂದು ಸೂಚಿಸಿ ಬಂದಿದ್ದ ನಿರ್ಣಯವು ಅಕಾಡೆಮಿಕ್ ಕೌನ್ಸಿಲಿನಲ್ಲಿ ನೆನ್ನೆ ತೀವ್ರವಾಗಿ ಚರ್ಚಿಸಲ್ಪಟ್ಟು, ಅದನ್ನು ವಿಶ್ವವಿದ್ಯಾಲಯದ ಕೌನ್ಸಿಲಿಗೆ ವಾಪಸು ಕಳುಹಿಸಲಾಯಿತು.

ಡಲ್ಸ್ ವಿರುದ್ಧ ಪ್ರದರ್ಶನಕ್ಕಾಗಿ ದಸ್ತಗಿರಿ

ದೆಹಲಿಯಲ್ಲಿ ನೆನ್ನೆ ಅಮೆರಿಕದ ರಾಯಭಾರಿ ಕಚೇರಿಯ ಎದುರಿನಲ್ಲಿ ಪ್ರದರ್ಶನ ನಡೆಸಿದ ೮ ಮಹಿಳೆಯರನ್ನು ದಸ್ತಗಿರಿ ಮಾಡಲಾಯಿತು. ಉತ್ತರ ಕೊರಿಯದಲ್ಲಿ 'ಅಮೆರಿಕನ್ನರು ನಡೆಸುತ್ತಿರುವ ದೌರ್ಜನ್ಯಗಳ' ಬಗ್ಗೆ ಪ್ರತಿಭಟನಾ ಪತ್ರವನ್ನು ಡಲ್ಸ್‌ರವರಿಗೆ ಒಪ್ಪಿಸಲು ಅವರು ಅಲ್ಲಿಗೆ ಬಂದಿದ್ದರೆಂದು ಹೇಳಲಾಗಿದೆ.

ಪಾಕಿಸ್ತಾನದ ಸಿಂಧಿನಲ್ಲಿ ಹೊಸ ಸರ್ಕಾರ

ಪಾಕಿಸ್ತಾನದಲ್ಲಿ ಪ್ರಾಂತೀಯ ಸಾಚಿವ ಶ್ರೀನರ ಮಂತ್ರಿ ಮಂಡಲದಲ್ಲಿ ಆಹಾರ ಶಾಖಾ ಸಚಿವರಾಗಿದ್ದ ಗೌ|| ಜನರಲ್ಲಿಂದ ನೇಮಕ ಮಾಡಲ್ಪಟ್ಟ ಪೀರ್ ಜಾದಾ ಸತ್ತಾರ್‌ರವರು ಅಲ್ಲಿನ ಸಿಂಧ್ ಶಾಸನ ಸಭೆಯ ಮುಸ್ಲಿಂ ಲೀಗ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟು, ಅವರೇ ನೆನ್ನೆ ಸಿಂಧ್ ಪ್ರಾಂತ್ಯದಲ್ಲಿ ಸರ್ಕಾರವನ್ನು ರಚಿಸಿದರು. ಸುಮಾರು ೧೬ ತಿಂಗಳಿಂದಲೂ ಅಲ್ಲಿ ಗವರ್ನರರ ಆಡಳಿತವು ಜಾರಿಯಲ್ಲಿತ್ತು. ೧೯೪೭ ರಿಂದ ಇದುವರೆಗೂ ೬ ಬಾರಿ ಮಂತ್ರಿ ಮಂಡಲ ಬದಲಾವಣೆಯಾಗಿರುತ್ತದೆ. ಅಲ್ಲಿ ಒಟ್ಟು ಎಂಟು ಮಂದಿ ಸಚಿವರಿರುವರು. ಮುಖ್ಯ ಮಂತ್ರಿಯೂ ಸೇರಿ, ಆರು ಜನ ಮಂತ್ರಿಗಳು ನೆನ್ನೆ ಪ್ರಮಾಣ ವಚನವನ್ನು ಸ್ವೀಕರಿಸಿದರು. ಇತರ ಇಬ್ಬರ ಹೆಸರನ್ನು ಸಧ್ಯದಲ್ಲೇ ಹೊರಗೆಡವಲಾಗುವುದು. ಆ ಪೈಕಿ ಒಬ್ಬರು ನಿರಾಶ್ರಿತರೆಂದೂ ಹೇಳಲಾಗಿದೆ.

ಬಾಂಬು ಸಿಡಿತದಿಂದ ೫ ಮಂದಿಯ ಮರಣ

ಪಾಟ್ನಾ ನಗರದ ರಾಮಪುರ್ ಎಂಬಲ್ಲಿ ಮೊನ್ನೆ ಘುದಿಯಾನ್ ಎಂಬಾತನಿಗೆ ಬೀದಿಯಲ್ಲಿ ಸಿಕ್ಕಿದ ಗಟ್ಟಿಯಾದ ಒಂದು ಲೋಹದ ಪದಾರ್ಥವನ್ನು ಕರಗಿಸುವ ಸಲುವಾಗಿ ಮನೆಗೆ ತೆಗೆದುಕೊಂಡು ಹೋಗಿ ಒಲೆಯಲ್ಲಿ ಹಾಕಲು ಅದು ಸಿಡಿದು ಆತನ ಹಾಗೂ ಸಂಸಾರದ ೪ ಮಂದಿಯು ಮೃತಪಟ್ಟರೆಂದು ವರದಿಯಾಗಿದೆ. ಸಿಡಿದ ವಸ್ತುವು ಬಾಂಬೆಂದು ಹೇಳಲಾಗಿದೆ.

ಈಜಿಪ್ಟಿನಿಂದ ಬ್ರಿಟಿಷ್ ಸಂಸಾರಗಳ ರವಾನೆ ಆರಂಭ

ಈಜಿಪ್ಟಿನಲ್ಲಿರುವ ಬ್ರಿಟಿಷ್ ಸಂಸಾರಗಳ ಪ್ರಥಮ ತಂಡವೊಂದು ನೆನ್ನೆ ಅಲ್ಲಿಂದ ಪ್ರದೇಶಕ್ಕೆ ಹೊರಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗಿಯೂ, ಬರುವ ಹಲವು ವಾರಗಳಲ್ಲಿ ಅಧಿಕ ಸಂಖ್ಯೆಯ ಬ್ರಿಟಿಷ್ ಸಂಸಾರಗಳು ವಾಪಸು ಹೋಗಲಿರುವುವೆಂದೂ ವರದಿಯಾಗಿದೆ. ಅಲ್ಲಿರುವ ಬ್ರಿಟಿಷ್ ಶಾಲೆಗಳನ್ನೂ ಮುಚ್ಚಲಾಗುವುದು.

ಬ್ರಿಟಿಷರೊಡನೆ ಯುದ್ಧಕ್ಕೆ ಈಜಿಪ್ಟ್ ವಿದ್ಯಾರ್ಥಿಗಳ ನಿರ್ಧಾರ

ಈಜಿಪ್ಟ್ ರಾಜಧಾನಿ ಕೈರೋವಿನ ಫಾದ್ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು, ಬ್ರಿಟಿಷರೊಡನೆ ಕದನ ಹೂಡಲು ನಿರ್ಧರಿಸಿರುತ್ತಾರೆ.

ನೇಪಾಳದ ಪಕ್ಷಗಳಲ್ಲಿ ಹೊಡೆದಾಟ

ನೇಪಾಳದಲ್ಲಿ ಮಾಜಿ ಪ್ರಧಾನಿ ಎಂ. ಪಿ. ಕೊಯಿರಾಲಾ ಪಕ್ಷದವರಿಗೂ ಪ್ರತಿಪಕ್ಷದವರಿಗೂ ನೆನ್ನೆ ಹೊಡೆದಾಟವಾಯಿತು. ೪ ಜನರಿಗೆ ಪೆಟ್ಟು ಬಿದ್ದಿದೆ.

ಸಯಾಂ ಗಡಿಯಲ್ಲಿ ವಿಶೇಷ ವಿಮಾನ ಕಾವಲು

ಕಳೆದ ೧೦ ನೇ ತಾ|| ಇಂಡೋಚೀನಾ ಮತ್ತು ಸಯಾಂ ಗಡಿಯಲ್ಲಿರುವ ಮೀಕಾಂಗ್ ನದಿ ಮೇಲೆ ಫ್ರೆಂಚ್ ಮಿಲಿಟರಿ ವಿಮಾನಗಳು ಹಾರಾಡುತ್ತಾ ಬಾಂಬು ಧಾಳಿ ನಡೆಸಿದ ಸಂಬಂಧವಾಗಿ ಸಯಾಂನ ಹಲವು ಮನೆಗಳ ಮೇಲೆ ಬಾಂಬು ಬಿದ್ದುವೆಂದೂ, ಸಯಾಂ ಗಡಿಯನ್ನು ಉಲ್ಲಂಘಿಸಲು ಅವಕಾಶವೀಯದಿರುವಂತೆ ಅಲ್ಲಿನ ವಿಮಾನ ಪಡೆಗಳಿಗೆ ಸಯಾಂ ಸರ್ಕಾರವು ಸೂಚನೆಯಿತ್ತಿರುವುದಾಗಿಯೂ ವರದಿಯಾಗಿದೆ. ಫ್ರೆಂಚ್ ಸರ್ಕಾರಕ್ಕೆ ಗಡಿ ಉಲ್ಲಂಘನೆ ಬಗ್ಗೆ ಸಯಾಂ ಸರ್ಕಾರವು ಪ್ರತಿಭಟಿಸಿರುತ್ತದೆ.

ಆಯುರ್ವೇದ ಕಾಲೇಜಿನ ವರ್ಗದ ಬಗ್ಗೆ ಬಹಿರಂಗ ಸಭೆ

ರಾಜಧಾನಿಯಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಲು ಕೈಕೊಳ್ಳಲಾಗಿರುವ ಕ್ರಮದಿಂದಾಗುವ ಪರಿಣಾಮವನ್ನು ಕುರಿತು ಪರಿಶೀಲಿಸಲು ಮತ್ತು ಈ ಬಗ್ಗೆ ಪ್ರಜಾಭಿಪ್ರಾಯವನ್ನು ತಿಳಿಯಪಡಿಸಲು ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ನಡೆಯುವುದು. ಸಭೆಯಲ್ಲಾಗುವ ನಿರ್ಣಯಗಳನ್ನು ಕಾರ್ಯಗತ ಮಾಡಲು ಕ್ರಿಯಾ ಸಮಿತಿಯೊಂದನ್ನು ರಚಿಸಲಾಗುವುದು. ಸಾರ್ವಜನಿಕರು ಭಾಗವಹಿಸುವಂತೆ ಕೋರಲಾಗಿದೆ.

ಸಂಸ್ಥಾನಕ್ಕೆ ೨೬ ಸಾವಿರ ಟನ್ ಧಾನ್ಯದ ಆಮದು

ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿಯು ತೃಪ್ತಿಕರವಾಗಿರುವುದೆಂದೂ, ಸಧ್ಯದಲ್ಲೇ ೨೦ ಸಾವಿರ ಟನ್ ಜೋಳ ಮತ್ತು ೬ ಸಾವಿರ ಟನ್ ರಾಗಿಯನ್ನು ಆಮದು ಮಾಡಿಕೊಳ್ಳಲಾಗುವುದೆಂದೂ ಆಹಾರ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

ಸಂಸ್ಥಾನದ ರೈಲ್ವೆ ನೌಕರರ ಸಂಘಕ್ಕೆ ಮನ್ನಣೆ ಬೇಕು

ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಸಂಘದ ಸದಸ್ಯರ ಸಭೆಯು ಕಳೆದ ೧೮ ನೇ ತಾ|| ಮೈಸೂರು ಟೌನ್‌ನಲ್ಲಿ ನಡೆದು, ರೈಲ್ವೆಗಳ ಈ ರಚನೆ ಕತ್ರಲ್ಲಿ ... ಸ್ವತಂತ್ರವಾಗಿರುವ ಇದೊಂದೇ ಸಂಘಕ್ಕೆ ಮನ್ನಣೆಯನ್ನು ಕೂಡಲೇ ಕೊಡುವಂತೆ ಒತ್ತಾಯ ಪಡಿಸಲಾಯಿತು.

[illegible] ಚ ನಿರೋಧ ಇಲಾಖೆಯ ಕಾರ್ಯಕ್ರಮ

ಬೆಂಗಳೂರು [illegible]

ಕಳೆದ ಮಾರ್ಚಿ ಅಖೈರಿನ ವರೆಗೆ ಸಂಸ್ಥಾನದ [illegible] ನಿರೋಧ ಶಾಖೆಯವರು ಕೈಗೊಂಡ ಕಾರ್ಯಕ್ರಮದ ತ್ರೈಮಾಸಿಕ ವರದಿಯು ಈ ರೀತಿ ತಿಳಿಸಿರುತ್ತದೆ:—

[illegible] ಕೊಟ್ಟಿದ್ದಕ್ಕಿಂತ ಹೆಚ್ಚು [illegible] ನಡೆದುದಕ್ಕಾಗಿ [illegible] ನಂ [illegible] ವಸೂಲು ಮಾಡಲಾಗಿದೆ. [illegible] ರೂ ವಸೂಲು ಮಾಡಲಾಗಿದೆ.

ಪೆಬ್ರವರಿಯಲ್ಲಿ ವ್ಯವಸಾಯ ಕಚೇರಿಗೆ ಸಂಬಂಧಿಸಿದ [illegible] ಪ್ರೊಫೆಸರ್ ಕೊಳಂದಸ್ವಾಮಿ [illegible] ಇತರ [illegible]

[illegible]

[illegible] ವಸೂಲು [illegible]

[illegible]

[illegible] ಶಿವಣ್ಣಯ್ಯನವರ [illegible]

[illegible] ಕೆಲಸ [illegible]

[illegible] ನಿರಂಜನ [illegible] ವಸೂಲು ಮಾಡು ವಂತೆ ತಿಳಿಸಲಾಗಿದೆ

[illegible] ಮರೆಸಿದ್ದಕ್ಕಾಗಿ [illegible] ಶ್ರೀ ಕೃಷ್ಣ [illegible] ರಿಪೋರ್ಟ್ ಮಾಡಲಾಗಿದೆ

ಕೆಲಸವನ್ನು ಸರಿಯಾಗಿ ಮಾಡದಿದ್ದ ಬಗ್ಗೆ [illegible] ಶ್ರೀ ಎಸ್ ವೆಂಕಟರಾಮಯ್ಯನವರಿಗೆ [illegible] ಶ್ರೀ [illegible] ವಿಧಿಸಲಾಗಿದೆ [illegible] ಶ್ರೀ [illegible]

ಪರಮಾನದ ಆಸೆಗಾಗಿ ಕೇಂದಿ ಅಂಗಡಿ ತೆರೆಯಬೇಡಿ

ಸರ್ಕಾರಕ್ಕೆ ಹೆಚ್ಚು ವರಮಾನ ಬರುವುದೆಂಬ ಆಸೆಯಿಂದ ಪುನಃ ಹೆಂಡದ ಅಂಗಡಿಗಳನ್ನು ತೆರೆಯ ಕೂಡದೆಂದೂ, ಹಾಗೆ ತೆರೆದರೆ ತಾವು ಮುಡಿವ ಮೇಲೂ ತಮ್ಮ ಆತ್ಮಕ್ಕೆ ಶಾಂತಿಯಿರುವುದಿಲ್ಲವಾಗಿಯೂ ರಾಜಾಜಿಯವರು ಹೇಳಿರುತ್ತಾರೆ. ನೆಯ್ಗೆಯವರಿಗೆ ಪಾನನಿರೋಧವು ವರ ಪ್ರಸಾದವಾಗಿರುವುದಾಗಿ ಅವರು ಅಭಿಪ್ರಾಯಪಟ್ಟು, ಕಳ್ಳ ಭಟ್ಟಿ ತೆಗೆಯುವ [illegible] ಜನಾಂತರೂ ಇದರಿಂದ ಬಾಧಕವಿಲ್ಲವೆ [illegible] ತಿಳಿಸಿರತ್ತಾರೆ ಮುಂದಿನ ಕಲೆಮಾರಿನವರಿಗೆ [illegible] ಬದ್ದ ಗೊತ್ತಾಗದಂತೆ ಮಾಡಿದರೆ, [illegible] ನೆರವೇರುವುದಾಗಿ ಅವರು ಹೇಳಿರುವರು

ಯಕ್ಷಗಾನ

[illegible] ಸಂತೆಪೇಟೆ [illegible] ರಾಮ ಮಂದಿರದ ಮುಂಭಾಗದ ಚಪ್ಪರದಲ್ಲಿ ಈ ರಾತ್ರಿ [illegible] ಗಂಟೆಗೆ ಸಾಗರ [illegible] ಯಕ್ಷಗಾನ ಮಂಡಲಿಯವರಿಂದ [illegible] ವಿಕ್ರಮ-ಶನಿಮಹಾತ್ಮೆ ಎಂಬ [illegible] ನಡೆಯುವುದು

ಹರಿಕಥೆ

ರಾಜಧಾನಿಯ ಶ್ರೀಮಾನ್ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ [illegible] ಜಯಂತಿ ಪ್ರಯುಕ್ತ ಈ ಸಂಜೆ [illegible] ಗಂಟೆಗೆ ಶ್ರೀ [illegible] ಯವರಿಂದ ಇಂದ್ರಕೀಲ ಎಂಬ ಕಥೆಯೂ, ನಾಳೆ ಸಂಜೆ [illegible] ಗಂಟೆಗೆ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಯವರಿಂದ ಸತ್ಯಸಂಧ ಭೀಷ್ಮ ಎಂಬ ಹರಿಕಥೆಯೂ ನಡೆಯುವುವು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಮಿಶ್ರ ಮಾಧುರ್ಯ [illegible] ಗೀತೆಗಳು. ಸಂಜೆ [illegible] ಮತ್ತು [illegible] ಸಂಗೀತ. [illegible] ಮತ್ತು [illegible] ವರು [illegible] ಶಕ್ತಿ ಸೋಲ [illegible] ಮತ್ತು [illegible] ಗ್ರಾಮದ [illegible] ಕನ್ನಡದಲ್ಲಿ ನಾಟಕ

ಬಾಡಿಗೆಯನ್ನು ಕೊಡುವಂತೆ ಆಜ್ಞೆ ಯಾಗಿದೆ ಬಸ್ ಪ್ರಯಾಣ ಮಾಡಿ, ಕಂಡಕ್ಟರನಿಗೆ ಕೊನೆಯವರೆಗೂ ಬಸ್ಸು ಚಾರ್ಜ ಕೊಡದಿದ್ದ ಬಗ್ಗೆ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಶಿವಣ್ಣನವರಿಗೆ ಎಚ್ಚರಿಕೆ ಕೊಡಲಾಗಿದೆ

ಇನಾಂ ರದ್ದಿನ ಶಾಸನಕ್ಕೆ ತಿದ್ದುಪಡಿ ಅವಶ್ಯಕ

ಜಿಲ್ಲಾ ಇನಾಂದಾರರ ಸಂಘದ ಸಭೆಯಲ್ಲಿ ನಿರ್ಣಯ

ಮೈಸೂರು [illegible]

ಮೈಸೂರು ಜಿಲ್ಲಾ ಇನಾಂದಾರರ ಸಂಘದ ಸಭೆಯು ಕಳೆದ ಬುಧವಾರ ಗಂಧನಹಳ್ಳಿ, ಜಹಗೀರುದಾರ್ ಶ್ರೀ ಕೃಷ್ಣರಾಯರ ಮನೆಯಲ್ಲಿ ಸೇರಿದ್ದಿತು ಶ್ರೀ ಎಂ ಎಲ್ ರಾಜೆ ಅರಸಿನವರು ಅಧ್ಯಕ್ಷತೆ ವಹಿಸಿದ್ದರು ಕಳೆದ [illegible] ನೇ ತಾ|| ಬೆಂಗಳೂರಿನಲ್ಲಿ ನಡೆದ ಸಂಸ್ಥಾನ ಸಂಘದ ಸಭೆಯಲ್ಲಾದ ನಿರ್ಣಯಗಳನ್ನು ಅನುಮೋದಿಸಲಾಯಿತು ಇನಾಂಗಳ ರದ್ದಿನ ಬಗ್ಗೆ ಪರಿಹಾರಕ್ಕಾಗಿ ಕೊಡಲಾಗುವ ಹಣದ ಪ್ರಮಾಣವು ಕಡಿಮೆಯಾಗಿರುವುದೆಂದೂ, ಅದನ್ನು ಎರಡರಷ್ಟು ಹೆಚ್ಚಿಸಬೇಕೆಂದೂ ಕೋರಲಾಯಿತು ಇನಾಂದಾರರ ಸ್ವಂತ ಅನುಭವದಲ್ಲಿರುವ ಜಮೀನುಗಳಿಗೆ ಶಾಸನದ ನಿಬಂಧನೆಯನ್ನು ಅನ್ವಯಿಸಕೂಡದೆಂದೂ, ಕ್ವಾಸಿ ಪರ್ಮನೆಂಟ್ ಟೆನೆಂಟ್ ಎಂದು ಏರ್ಪಡಿಸಲು ಅವಕಾಶವಿರಕೂಡದೆಂದೂ ರೈತರ ಮತ್ತು ಇನಾಂದಾರರುಗಳ ಹಿತ ದೃಷ್ಟಿಯಿಂದ ಮಸೂದೆಯ ಅನೇಕ ನಿಬಂಧನೆಗಳಿಗೆ ತಿದ್ದುಪಾಟಾಗಬೇಕೆಂದೂ ಕೋರುವ ನಿರ್ಣಯಗಳನ್ನು ಮಾಡಲಾಯಿತು

ಸರ್ಕಾರದವರು ಈ ರೀತಿ ತಿದ್ದುಪಾಟು ಮಾಡದಿದ್ದರೆ ಹೈಕೋರ್ಟಿನಲ್ಲಿ ರಿಟ್ ವ್ಯವಹಾರವನ್ನು ಹೂಡುವಂತೆಯೂ ನಿರ್ಧರಿಸಲಾಯಿತು ಈ ಬಗ್ಗೆ ತಗಲುವ ವೆಚ್ಚಕ್ಕಾಗಿ ಇನಾಂದಾರರುಗಳ ದ್ರವ್ಯ ಸಹಾಯವನ್ನು ಕೋರಲಾಯಿತು ಅಧ್ಯಕ್ಷರು ನೂರು ರೂ ಕೊಡುವುದಾಗಿ ವಾಗ್ದಾನ ಮಾಡಿದರು ಸಭೆಗೆ ಬಂದ ಇತರರು ಒಟ್ಟು [illegible] ರೂ ಕೊಡುವುದಾಗಿ ತಿಳಿಸಿದರು. ಸಂಘಕ್ಕೆ ಜಿಲ್ಲೆಯ ಎಲ್ಲ ಇನಾಂದಾರರೂ ಸದಸ್ಯರಾಗಬೇಕೆಂದು ಕೋರಲಾಯಿತು [illegible] ನೇ ತಾ|| ಸಂಸ್ಥಾನದ ಸಂಘದ ಸಭೆ ಮತ್ತು [illegible] ನೇ ತಾ|| ಮುಖ್ಯ ಮಂತ್ರಿಯವರೊಡನೆ ಭೇಟಿ ಇವು ನಡೆದನಂತರ ಜಿಲ್ಲಾ ಸಂಘದ ಸಭೆಯನ್ನು ಸೇರಿಸುವಂತೆ ತೀರ್ಮಾನವಾಯಿತ –ಎಂಬುದಾಗಿ ಸಂಸ್ಥಾನದ ಇನಾಂದಾರ್ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ತಿಳಿಸಿರುತ್ತಾರೆ

ಬೆಂಕಿ ಅನಾಹುತದಲ್ಲಿ [illegible] ಮಂದಿಯ ಭಸ್ಮ

ಅಗಸ್ತ್ಯ ಬಳಿ ರಾಂಪುರ ಎಂಬ ಹಳ್ಳಿಯ ಒಂದು ಮನೆಯಲ್ಲಿ ಮೊನ್ನೆ ಆಕಸ್ಮಾತ್ ಬೆಂಕಿಯುಂಟಾಗಿ ಒಳಗಿದ್ದ [illegible] ಜನರ ಪೈಕಿ [illegible] ಜನರ ಜೀವ ಸಹಿತ ಸುಟ್ಟು ಹೋಗಲ್ಪಟ್ಟರೆಂದು ವರದಿಯಾಗಿದೆ ಬೆಂಕಿಯು ಅಕ್ಕಪಕ್ಕದ [illegible] ಮನೆಗಳಿಗೂ ಹರಡಿ ಅವೂ ಸುಟ್ಟು ಭಸ್ಮವಾದುವು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	[illegible]
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಹೆಸರು	[illegible]	
ಅವರೆ	[illegible]	
ಉದ್ದು	[illegible]	
ಹುಚ್ಚೆಳ್ಳು	[illegible]	[illegible]
ಹುಣಿಸೆಹಣ್ಣು	[illegible]	
ಬೆಲ್ಲ	[illegible]	
ತೆಂಗಿನಕಾಯಿ		
[illegible]	[illegible]	[illegible]

SRI RAGHAVENDRA INSTITUTE

1661 Kabir Road Lashkar Mohalla Mysore

CLASSES FROM 1-6-53

Ajmer Inter (in private), Hindi, L S From 2nd or 3rd year, S S.L.C (with or without L S), Dancing & Music (girls only) Class examinations.

Edited, Printed and Published by A R Nagarajan at Sadhvi Press, D Subbiah Road, Mysore

ಮನೆ ಕ್ರಯಕ್ಕಿದೆ

ಡೋರ್ ನಂ. 579 : ಎಣ್ಣೆ ಮಿಷನ್ ಬೀದಿ

ಭಾವಿ, ನಲ್ಲಿ, ದೀಪ, ಇರುವ ವಿಶಾಲವಾದ ತಾರಸೀ ಮನೆ ಮತ್ತು ಹೆಂಚಿನ ಔಟ್ ಹೌಸ್ ಸಹಾ

ಜಯ ಅಂಡ್ ಕಂಪೆನಿ,

ಮನೆ ಜಮೀನು ಮತ್ತು ಸಾಲ ಕೊಡಿಸುವ ಏಜೆಂಟರು, ಹಳೇ ಮೈಸೂರುಬ್ಯಾಂಕ್ ಕಟ್ಟಡ, ಸಯ್ಯಾಜಿರಾವ್ ರಸ್ತೆ

ಮೈಸೂರು : ಫೋನ್ ನಂ 520

22-5-53 ರಿಂದ :: ಜನಭರಿತ 2ನೇ ವಾರ

[illegible] ಆಟಗಳು

ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ

[illegible] ತಮಿಳು ಚಿತ್ರ

ಪೆಟ್ರ ತಾಯ್

ಪಾತ್ರ:- ಜಿ ವರಲಕ್ಷ್ಮಿ, ನಾಗೇಶ್ವರರಾವ್, ವಸಂತ, ನಂಬಿಯಾರ್, [illegible]

ಪ್ರತಿಯೊಂದು ಸಂಸಾರವೂ ನೋಡಬೇಕಾದ ಮಹೋನ್ನತ ಚಿತ್ರ

A PRAKASH RELEASE

ಪ್ರಭುದೇವಾ ಥಿಯೇಟರ್

(ಸ ದ್ದಾ ಟಾ ಕೀ ಸ್)

23-5-53 ನೇ : ಶನಿವಾರದಿಂದ : ದಿನವಹಿ 3 ಆಟಗಳು

ಜೆಮಿನಿಯವರ ತಮಿಳು ಚಿತ್ರ **ಚಕ್ರಧಾರಿ**

ಪಾತ್ರ – ನಾಗಯ್ಯ, ಪುಷ್ಪವಲ್ಲಿ, ಸೂರ್ಯಪ್ರಭಾ, ನಾರಾಯಣರಾವ್ ಮುಂತಾದವರು

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

[ಸಂಪುಟ ೧೭] ಭಾನುವಾರ ೨೪-೫ ೧೯೫೩ [ಸಂಚಿಕೆ ೩೯

ಅಮೆರಿಕಾ ಮಾದರಿ ಈಜಿಪ್ಟಿನ ರಾಜ್ಯಾಂಗ

ಕಾಂಗ್ರೆಸ್ ಸದಸ್ಯರ ಮೇಲೆ ಶಿಸ್ತಿನ ಕ್ರಮ

ಬೆಂಗಳೂರು ೨೩

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆಯಲ್ಲಿ ಕಳೆದ ಮಹಾ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿ ವರ್ತಿಸಿದ ಸು ಮಾರು ೨೦೦ ಜನರ ಮೇಲಿನ ಆಪಾದನೆಗಳನ್ನು ಪರಿಶೀಲಿಸಿ ಹಲವರು ತಮ್ಮ ಕೃತ್ಯಕ್ಕಾಗಿ ಕ್ಷಮಾಪಣೆ ಸಲ್ಲಿಸಬೇಕೆಂದೂ, ಇಲ್ಲವಾದರೆ ಸಂಸ್ಥೆಯ ಯಾವ ಅಧಿಕಾರ ಸ್ಥಾನಗಳಲ್ಲಿಯೂ ೧ ರಿಂದ ೨ ವರ್ಷಗಳ ವರೆಗೆ ಅವರು ಚುನಾಯಿತರಾಗದಂತೆ ಅನರ್ಹರನ್ನಾಗಿ ಮಾಡಲಾಗುವುದೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು

೪೧ ಮಂದಿಯ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲು ಸಮಿತಿಯು ನಿರ್ಧರಿಸಿರುವುದಾಗಿಯೂ, ಅವರಲ್ಲಿ ೧೮ ಜನರು ಮೈಸೂರು ಜಿಲ್ಲೆಯವರೆಂದೂ, ೮ ಮಂದಿ ಚಿತ್ರದುರ್ಗ, ೬ ಹಾಸನ, ಮತ್ತು ೧೨ ಕೋಲಾರ ಜಿಲ್ಲೆಯವರೆಂದೂ ಗೊತ್ತಾಗಿದೆ ಹಲವರಿಗೆ ಎಚ್ಚರಿಕೆಯನ್ನು ಕೊಡಲಾಗುವುದು ಈ ಸಂಬಂಧವಾಗಿ ನಂಜನಗೂಡಿನ ಶ್ರೀ ಎಸ್ ನಾರಾಯಣರಾವ್, ತುಮಕೂರಿನ ಶ್ರೀ ಟಿ ಸುಬ್ರಹ್ಮಣ್ಯ ಮತ್ತು ಹೆಚ್ ಎಸ್ ರುದ್ರಪ್ಪ ಇವರುಗಳುಳ್ಳ ವಿಚಾರಣಾ ಸಮಿತಿಯನ್ನು ನೇಮಿಸಲಾಗಿದ್ದಿತು

ಸಾಹಿತ್ಯಪರಿಷತ್ತಿಗೆ ೧೫,೦೦೦ ರೂ

ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನವರು ಸಾಂಸ್ಕೃತಿಕ ಪ್ರಚಾರ ಕೈಗೊಳ್ಳುವ ಸಲುವಾಗಿ ಸರ್ಕಾರದವರು ೧೫,೦೦೦ ರೂ ಗಳ ಸಹಾಯ ಧನವನ್ನು ಕೊಟ್ಟಿರುತ್ತಾರೆ

ಬೆಂಗಳೂರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭೇಟಿ

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಅಗರ್‌ವಾಲರವರು ಮಂಗಳವಾರ ಬೆಂಗಳೂರಿಗೆ ಆಗಮಿಸುವರು ಅವರು ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತರು, ಶಾಸನ ಸಭಾ ಸದಸ್ಯರು ಮತ್ತು ಕಾಂಗ್ರೆಸ್ ಯುವಕ ಚಳುವಳಿ ಕೆಲಸಗಾರರೊಡನೆ ಅಂದು ಸಂಜೆ ೪½ ಗಂಟೆಗೆ ಕಲೆತು ಮಾತನಾಡುವರು.

ಬೆಂಗಳೂರಿಗೆ ಏಷ್ಯಾ ಆರ್ಥಿಕ ಸಹಾಯ ಕಛೇರಿ ವರ್ಗ ಸಧ್ಯಕ್ಕಿಲ್ಲ

ಸಯಾಂ ರಾಜಧಾನಿ ಬ್ಯಾಂಕಾಕಿನಲ್ಲಿರುವ ಏಷ್ಯಾ ಮತ್ತು ದೂರ ಪೂರ್ವ ಪ್ರದೇಶಗಳ ಆರ್ಥಿಕ ಸಮಿತಿಯ ಕಛೇರಿಯನ್ನು ಸಧ್ಯದಲ್ಲೇ ವರ್ಗಾಯಿಸುವ ಬಗ್ಗೆ ಇನ್ನೂ ನಿರ್ಧಾರವಿನ್ನೂ ಆಗಿಲ್ಲವೆಂದು ಸಮಿತಿಯ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ ಬೆಂಗಳೂರಿಗೆ ಕಛೇರಿಯನ್ನು ವರ್ಗಾಯಿಸುವಂತೆ ಮೈಸೂರು ಸರ್ಕಾರದವರು ಆಹ್ವಾನವಿತ್ತಿದ್ದರು

ನೆಹರೂರವರಿಗೆ ಕೇಂಬ್ರಿಜ್ ಗೌರವ

ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಹಿಂದೆ ವ್ಯಾಸಂಗ ಮಾಡಿದ್ದ ನೆಹರೂರವರಿಗೆ ಅಲ್ಲಿನ ವಿಶ್ವವಿದ್ಯಾಲಯದವರು ಗೌರವ ಡಾಕ್ಟರ್ ಆಫ್ ಲಾ ಪ್ರಶಸ್ತಿ ಕೊಡಬೇಕೆಂದು ಯೋಚಿಸುತ್ತಾರೆ

ಅಮೆರಿಕಾ ರಾಜ್ಯಾಂಗದಂತೆ ಈಜಿಪ್ಟಿನ ರಾಜ್ಯಾಂಗ

ಅಮೆರಿಕದಲ್ಲಿರುವ ರಾಜ್ಯಾಂಗದ ರೀತಿಯಲ್ಲಿ ಈಜಿಪ್ಟಿನಲ್ಲೂ ರಿಪಬ್ಲಿಕ್ ಮಾದರಿಯ ರಾಜ್ಯಾಂಗವನ್ನು ಜಾರಿಗೆ ತರಲಾಗುವುದೆಂದೂ, ಈ ಬಗ್ಗೆ ಶೀಘ್ರದಲ್ಲೇ ಘೋಷಣೆಯಾಗಲಿರುವುದಾಗಿಯೂ ವರದಿಯಾಗಿದೆ ಈಜಿಪ್ಟಿನ ಹೊಸ ರಾಜ್ಯಾಂಗವನ್ನು ೫೦ ಮಂದಿ ಸದಸ್ಯರ ಸಮಿತಿಯು ತಯಾರಿಸುತ್ತಿದೆ

ಬಿಳಿಗಿರಿರಂಗನ ಬೆಟ್ಟದಲ್ಲಿ ಸಲಗನ ಹಾವಳಿ

ಯಳಂದೂರು ೨೨

ಬಿಳಿಗಿರಿರಂಗನ ಬೆಟ್ಟದಲ್ಲಿ ಭಾರಿ ಸಲಗವೊಂದರ ಹಾವಳಿ ಜಾಸ್ತಿಯಾಗಿದೆ ಕಳೆದ ೯ ನೇ ತಾ॥ ಶ್ರೀ ಕೆ ಬಾಲಕೃಷ್ಣ ಮತ್ತು ಶ್ರೀ ಗುರುರಾಜ ರಾವ್ ಎಂಬ ಇಬ್ಬರು ಆದಿವಾಸಿ ಸೇವಕ ಸಂಘದ ಕಾರ್ಯಕರ್ತರು ಬೆಟ್ಟದ ಬುಡದ ಕಡೆಗೆ ಹೋಗುತ್ತಿದ್ದಾಗ ಅವರನ್ನು ಸಲಗವು ಅಟ್ಟಿಸಿಕೊಂಡು ಬಂದಿತೆಂದೂ ಅವರೂ ಅವರೊಡನೆ ಇದ್ದ ಇಬ್ಬರು ಸೋಲಿಗರೂ ಓಡುತ್ತಾ ಮಾರ್ಗದಲ್ಲಿ ಸಿಕ್ಕ ಪರ್ವತ ಹತ್ತಲು ಅದರಿಂದ ದೊರೆತ ಕೆಲ ನಿಮಿಷಗಳ ಅವಕಾಶದಲ್ಲಿ ಸಮೀಪದ ಮರವೊಂದನ್ನೇರಿ ಕುಳಿತರೆಂದೂ, ಆನೆಯು ಆ ಸ್ಥಳಕ್ಕೆ ಬಂದು ಸೊಂಡಿಲಿನಲ್ಲಿ ಸಣ್ಣ ಗಿಡಗಳ ಕೊಂಬೆಗಳನ್ನು ಕಿತ್ತೆಸೆದು ದಾಂಧಲೆ ಮಾಡಿತೆಂದೂ ಹೇಳಲಾಗಿದೆ ಸ್ವಲ್ಪ ಹೊತ್ತಿನ ಮೇಲೆ ಅದು ಅಲ್ಲಿಂದ ಸುಮಾರು ೧೫೦ ಗಜ ದೂರದಲ್ಲಿ ಹೋಗಿ ನಿಂತು ೨॥ ಗಂಟೆಯಾದ ನಂತರ ಹೊರಟುಹೋಯಿತೆಂದು ಹೇಳಲಾಗಿದೆ ಶ್ರೀ ಬಿ. ಎಲ್ ಕೃಷ್ಣಯ್ಯನವರಿಗೆ ಸೇರಿದ ಸಾಮಾನುಗಳನ್ನೆಲ್ಲವನ್ನೂ ಅದು ಧ್ವಂಸಮಾಡಿದ್ದಿತು

ಕಳೆದ ಭಾನುವಾರ ಬಿಳಿಗಿರಿ ರಂಗಸ್ವಾಮಿಯವರ ದರ್ಶನಕ್ಕಾಗಿ ೩೫ ಜನರು ಲಾರಿಯೊಂದರಲ್ಲಿ ಹೋಗಿ ಮಂಗಳವಾರ ವಾಪಸು ಬರುತ್ತಿದ್ದಾಗ, ಒಂದು ಭಾರಿ ಸಲಗವು ದಾರಿಯಲ್ಲಿ ಅಡ್ಡಲಾಗಿ ಬಂದಿತೆಂದೂ ಅದನ್ನು ನೋಡಿ ಡ್ರೈವರನು ಲಾರಿಯನ್ನು ಹಿಂದಿರುಗಿಸಿದನೆಂದೂ ಒಳಗಿದ್ದವರು ಗಲಾಟೆ ಮಾಡದೆ ಸುಮ್ಮನಿದ್ದರೆಂದೂ ಅದರೆ ಆನೆಯು ಮುಂಭಾಗವನ್ನು ಆಘಾತಮಾಡಿ ಎತ್ತಿ ಇಳಿಸಿ, ಹೊರಟು ಹೋಯಿತೆಂದೂ ಗೊತ್ತಾಗಿದೆ ಯಾರಿಗೂ ಅಪಾಯವಾಗದಿದ್ದುದು ಸುದೈವವೆಂದು ಹೇಳಲಾಗಿದೆ ಆನೆಯು ೧೩ ಅಡಿ ಎತ್ತರವಿದ್ದು ಅದರ ಕೋರೆಯು ದಂತಗಳು ೩ ಅಡಿ ಇರುವುದಾಗಿ ಹೇಳಲಾಗಿದೆ ಸ್ವಾಯಲ್ ಇದೇ ಹಿಂದೆಯೂ ಗಲಾಟೆ ಮಾಡಿದ ಆನೆಯೆಂದು ಊಹಿಸಲಾಗಿದೆ.

ಪಾಕಿಸ್ತಾನಕ್ಕೆ ತೆರಳಿದವರ ಆಸ್ತಿ ನಿರಾಶ್ರಿತರಿಗೆ

ಪಶ್ಚಿಮ ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರು ಪಂಜಾಬಿನಲ್ಲಿ ಬಿಟ್ಟು ಬಂದಿರುವ ಸ್ಥಿರ ಆಸ್ತಿಗಳ ಬದಲು ಅವರುಗಳಿಗೆ ಭಾರತದಿಂದ ಪಾಕಿಸ್ತಾನಕ್ಕೆ ಹೋಗಿರುವವರ ಆಸ್ತಿಗಳನ್ನು ಹಂಚಿ ಕೊಡಲು ಭಾರತ ಸರ್ಕಾರದವರು ಯೋಚಿಸಿರುವರೆಂದೂ, ಈ ಬಗ್ಗೆ ಅಂತಿಮ ನಿರ್ಧಾರವು ನೆಹರೂ–ಮಹಮದ್ ಅಲಿ ಭೇಟಿಯ ನಂತರ ತೆಗೆದುಕೊಳ್ಳಲ್ಪಡುವುದೆಂದೂ ತಿಳಿದುಬಂದಿದೆ ಇವರ ಜೊತೆಗೆ ಎರಡು ದೇಶಗಳಲ್ಲೂ ಬಿಟ್ಟು ಬಂದಿರುವ ಆಸ್ತಿಗಳ ಬೆಲೆಯ ವ್ಯತ್ಯಾಸದ ಮೂಲಕ ಭಾರತಕ್ಕೆ ಪಾಕಿಸ್ತಾನವು ಕೊಡುವ ಹಣವನ್ನೂ ಸಹ ನಿರಾಶ್ರಿತರಿಗೆ ಭಾರತ ಸರ್ಕಾರದವರು ಹಂಚಿ ಕೊಡುವರು

ನೆಹರೂ ಮತ್ತು ಪಾಕ್ ಪ್ರಧಾನಿ ಭೇಟಿ

ಬ್ರಿಟನ್ನಿನ ರಾಣಿಯವರ ಕಿರೀಟ ಧಾರಣೋತ್ಸವವು ಮುಗಿದ ನಂತರ ಅದರಲ್ಲಿ ಭಾಗವಹಿಸಿ ಹಿಂತಿರುಗಿದ ಮೇಲೆ ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳಾದ ಪಂಡಿತ ನೆಹರೂ ಮತ್ತು ಮಹಮದ್ ಅಲಿಯವರ ಭೇಟಿಯು ಕರಾಚಿಯಲ್ಲಿ ನಡೆಯುವಂತೆ ಗೊತ್ತುಮಾಡಲ್ಪಟ್ಟಿದೆ. ಇದಕ್ಕೆ ಮುಂಚೆ ಲಂಡನ್ನಿನಲ್ಲಿಯೂ ಅವರು ಭೇಟಿ ನಡೆಸುವರು

ಯುದ್ಧ ನೌಕೆಯಲ್ಲಿ ತ್ರಿರಾಷ್ಟ್ರ ನಾಯಕರ ಭೇಟಿ

ಬ್ರಿಟಿಷ್ ಪ್ರಧಾನಿ ಚರ್ಚಿಲ್ ಮತ್ತು ಫ್ರಾನ್ಸಿನ ಪ್ರಧಾನಿಯವರು ಅಮೆರಿಕದ ಅಧ್ಯಕ್ಷರೊಡನೆ ಬರ್ಮುಡಾ ದ್ವೀಪದ ಬಳಿ ಅಮೆರಿಕದ ಯುದ್ಧದ ಹಡಗಿನಲ್ಲಿ ಭೇಟಿ ಮಾಡಿ ಮಾತುಕತೆ ನಡೆಸುವಂತೆ ಏರ್ಪಾಡಾಗಿರುತ್ತದೆ

ಕಾಶ್ಮೀರಕ್ಕೆ ಸಚಿವ ಎಂ. ವಿ. ಕೃಷ್ಣಪ್ಪ

ಕೇಂದ್ರ ಸರ್ಕಾರದ ಆಹಾರದ ಶಾಖೆಯ ಉಪಮಂತ್ರಿ ಶ್ರೀ ಎಂ ವಿ. ಕೃಷ್ಣಪ್ಪನವರು ಈ ದಿನ ಕಾಶ್ಮೀರಕ್ಕೆ ತೆರಳಿ, ಒಂದು ವಾರ ಕಾಲವಿದ್ದು, ಅಲ್ಲಿನ ಆಹಾರ ಪರಿಸ್ಥಿತಿಯ ಪರಿಶೀಲನೆ ನಡೆಸಲಿರುವರೆಂದು ವರದಿಯಾಗಿದೆ.

ಭಾರತದ ಭೇಟಿ ಯಶಸ್ವಿಯೆಂದು ಡಲ್ಸ್

ಭಾರತದ ಪ್ರಧಾನಿ ಮತ್ತು ಇತರ ಮಂತ್ರಿಗಳೊಡನೆ ತಾವು ನಡೆಸಿದ ಭೇಟಿಗಳು ಯಶಸ್ವಿಯಾಗಿರುವುದಾಗಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಸ್‌ರವರು ನೆನ್ನೆ ಕರಾಚಿಗೆ ತೆರಳುವ ಮುನ್ನ ತಿಳಿಸಿದರು ಭಾರತವು ಸರ್ವಾಧಿಕಾರ ಮನೋಗತವುಳ್ಳ ರಾಜ್ಯಗಳಿಗೆ ವಿರೋಧವಾಗಿವುದೆಂದೂ, ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರ ಈ ಎರಡು ವಿಷಯಗಳ ಬಗ್ಗೆ ಭಾರತವು ತಾಟಸ್ಥ್ಯ ವಹಿಸುವುದಿಲ್ಲವೆಂದು ತಮಗೆ ಮನವರಿಕೆಯಾಗಿರುವುದಾಗಿಯೂ ಅವರು ತಿಳಿಸಿ, ಭಾರತವು ಪ್ರಜಾಶಕ್ತಿಯನ್ನು ಯಶಸ್ವಿಗೊಳಿಸಲು ತನ್ನದೇ ಮಾರ್ಗವನ್ನು ಅನುಸರಿಸುತ್ತಿರುವುದಾಗಿ ಹೇಳಿದರು

ದೆಹಲಿಯಲ್ಲಿ ಕಮ್ಯೂನಿಸ್ಟ್ ಕಛೇರಿ ಉಚ್ಚಾಟನೆ

ಮದ್ರಾಸಿನಿಂದ ದೆಹಲಿಗೆ ಕಮ್ಯೂನಿಸ್ಟರು ತಮ್ಮ ಕೇಂದ್ರ ಕಛೇರಿಯನ್ನು ರವಾನಿಸಿದ ಸಂದರ್ಭದಲ್ಲಿ ಕಳೆದ ಏಳು ತಿಂಗಳಿಂದಲೂ ವಾಸಿಸುತ್ತಿದ್ದ ಮನೆಯಿಂದ ಅವರನ್ನು ಹೊರ ಹಾಕಲಾಗಿದೆ ಆ ಮನೆಯು ಬೇರೊಬ್ಬರಿಗೆ ಆಧಾರವಾಗಿದ್ದು, ಅದನ್ನು ಹರಾಜಿನಲ್ಲಿ ಪಡೆದವರು ಕಮ್ಯೂನಿಸ್ಟರನ್ನು ಅಮೀನರ ಮೂಲಕ ಹೊರಕ್ಕೆ ಹಾಕಿಸಿರುತ್ತಾರೆ

ಶ್ರೀನಗರಕ್ಕೆ ನೆಹ್ರೂ ಭೇಟಿ

ಪ್ರಧಾನಿ ಪಂಡಿತ ನೆಹರೂ ಮತ್ತು ಕೇಂದ್ರ ಗೃಹ ಮಂತ್ರಿ ಕೆ ಎನ್. ಕಟ್ಜು ರವರು ದೆಹಲಿಯಿಂದ ಶ್ರೀನಗರಕ್ಕೆ ತೆರಳುತ್ತಾರೆ ಅವರು ಎರಡು ದಿನಗಳ ಕಾಲ ಕಾಶ್ಮೀರದಲ್ಲಿರುವರು

ದೋಣಿಯಲ್ಲಿ ಅಟ್ಲಾಂಟಿಕ್ ಸಾಗರ ದಾಟಿದ ಮಹಿಳೆ

೩೮ ವರ್ಷ ವಯಸ್ಸಿನ ಆನಿ ಡೇವಿಸನ್ ಎಂಬ ಬ್ರಿಟಿಷ್ ಸ್ತ್ರೀಯು ಏಕಾಂಗಿಯಾಗಿ ೨೩ ಅಡಿ ಉದ್ದದ ದೋಣಿಯಲ್ಲಿ ಕುಳಿತು ಅಟ್ಲಾಂಟಿಕ್ ಸಾಗರವನ್ನು ದಾಟಿ ಬಹಾಮಾ ದ್ವೀಪವನ್ನು ಸೇರಿರುತ್ತಾಳೆ

ಸೂಯೆಜ್ಜಿನಲ್ಲಿ ಬ್ರಿಟಿಷ್ ಸೈನಿಕನಿಗೆ ಇರಿತ

ಸೂಯೆಜ್ ಕಾಲುವೆಯ ಮುಖದಲ್ಲಿರುವ ಪೋರ್ಟ್‌ಸೈಯದ್‌ನಲ್ಲಿ ನೆನ್ನೆ ನಡು ರಸ್ತೆಯಲ್ಲಿ ಬ್ರಿಟಿಷ್ ಸೈನಿಕನೊಬ್ಬನನ್ನು ಇರಿದು ಕೊಲೆ ಮಾಡಲಾಯಿತೆಂದೂ, ಮತ್ತೊಬ್ಬನನ್ನು ಗಾಯಗೊಳಿಸಲಾಯಿತೆಂದೂ ವರದಿಯಾಗಿದೆ ಈ ಸಂಬಂಧವಾಗಿ ಹಲವು ಈಜಿಪ್ಟ್ ದೇಶೀಯರ ಬಂಧನವಾಗಿದೆ

ಎಚ್ ಎಸ್. ರಾಮಚಂದ್ರರವರು ಕೊಡಗಿಗೆ

ಕೊಡಗಿನ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರಾದ ಶ್ರೀ ಸಿ ನರಸಿಂಹಮೂರ್ತಿಯವರ ಅಧಿಕಾರದ ಕಾಂಟ್ರಾಕ್ಟು ಸಧ್ಯದಲ್ಲೇ ಮುಗಿಯುತ್ತದೆ – ಆ ಸ್ಥಾನಕ್ಕೆ ಶಿವಮೊಗ್ಗ ಜಿಲ್ಲಾಧಿಕಾರಿ ಶ್ರೀ ಎಚ್ ಎಸ್ ರಾಮಚಂದ್ರರವರನ್ನು ಕಳುಹಲಾಗುವುದೆಂದೂ ವರದಿಯಾಗಿದೆ

SRIKANTESWARA BANK, LTD., NANJANGUD

BALANCE SHEET AS AT 31ST DECEMBER 1952 FORM A

CAPITAL AND LIABILITIES	Rs	A	P	Rs	A	P
1 *Capital—(a)*						
Authorised Capital 1400 shares of Rs 50 each	7000	0	0			
Issued Capital 985 shares of Rs 50 each	49250	0	0			
Subscribed Capital 985 shares of Rs 50 each	49250	0	0			
Amount called up at Rs 50 per share						
Less calls unpaid	250	0	0			
Add forfeited shares	Nil			49000	0	0
2 *Reserve fund and other reserves—*						
Statutory Reserve	17856	0	0			
Dividend Equalisation Fund	528	7	3	18384	7	3
3 *Deposits and other Accounts—*						
Fixed Deposits	38308	0	0			
Savings Bank Deposits	21606	9	1			
Current Accounts, Contingency	34706	11	5			
Accounts etc Staff, Provident Fund	960	4	0	95691	8	6
4 *Borrowing from other Banking Companies, Agents etc—*						
(i) In India	Nil					
(ii) Outside India	Nil					
Particulars—						
(i) Secured (Stating the nature of security)	Nil					
(ii) Unsecured	Nil					
5 *Bills Payable*				2015	12	6
6. *Bills for collections being Bills receivable as Per contra—*						
(i) Payable in India	59379	14	9			
(ii) Payable outside India	Nil			59379	14	9
7 *Other Liabilities—*						
(i) Liability suspence	615	15	6			
(ii) Interest on F D due, but not paid	1144	12	6			
(iii) Reserve for Income Tax	3597	8	9			
(iv) Arrears of Dividend	655	4	0	6013	8	9
8. *Acceptances, endorsements and other obligations as per contra—*	Nil					
9. *Profit and Loss—*						
Profit as per last Balance Sheet for 30-6-52	3030	4	0			
Less Appropriations	3030	4	0			
Add Profit for the year brought from the Profit and Loss Account	2625	5	0	2625	5	0
10. *Contingent Liabilities—(d)*						
Total				233110	8	9

PROPERTY AND ASSETS	Rs	A	P	Rs	A	P
1 *Cash* In hand and with Reserve Bank and Imperial Bank (including foreign currency notes)				14513	0	3
2 *Balance with other Banks* (showing whether on Deposit or current account including Govt S B a/c —						
(i) In India (Current Account)	14562	11	0			
(ii) Outside India	Nil			14562	11	0
3 *Money at call and short Notice*				Nil		
4 *Investments* (stating mode of valuation eg, cost or market value (f) — at cost				Nil		
(i) Securities of the Central and States Governments and other Trustee Securities including Treasury Bills of the Central and State Treasury 5 Years Savings Certificates at cost	8949	1	0			
(ii) Shares (classifying into preference ordinary, deffered and other classes of shares and showing seperately shares fully paid up and partly paid up)	Nil					
(iii) Debentures of Bonds	Nil					
(iv) Other investments to be classified under proper heads	Nil					
(v) Gold	Nil			8949	1	0
5 *Advances—*						
Other than bad & doubtful debts for which provisions have been made to the satisfaction of the Auditors						
(i) Loans, Cash credits Overdrafts etc,	Nil					
(a) In India	127935	6	0			
(b) Outside India	Nil			127935	6	0
(ii) Bills discounted and purchased (excluding Treasury bills of the Central and State Governments)	Nil					
(i) Payable in India	Nil					
(ii) Payable outside India	Nil					
Particulars of Advances—						
(i) Debts considered good in respect of which the Banking Co, is fully secured ..	59250	0	0			
(ii) Debts considered good for which the Banking company holds no other security than the debtors' personal security	14190	4	6			
(iii) Debts considered good secured by other personal liabilities of one or more parties in addition to the personal security of the debtors ..	54495	1	6			
(iv) Debts due considered doubtful or bad not provided for	Nil					
(v) Debts due by directors or officers of the Banking Company or any of them either severally or jointly with any other persons ..	4750	0	0			
(vi) Debts due by companies or firms in which the directors of the banking company are interested as directors, partners or managing agents or in the case of private companies as members	Nil					
(vii) Maximum total amount of advances including temporary advances made at any time during the year to [illegible] companies as members (f)	Nil					
(ix) Due from Banking Companies	Nil					
6. *Bills receivable being Bills for collection as Per contra—*						
(i) Payable in India ..	59379	14	9			
(ii) Payable outside India	Nil			59379	14	9
7 *Constituents' Liabilities for acceptances, endorsements and other obligations as per contra—*				Nil		
8. *Premises less depreciation (g)*						
at cost as at 31st Dec 51 ..	6683	1	0			
addition during the year ..	78	5	6			
	6761	6	6			
Less depreciation to date	1076	4	0	5685	2	6
9 *Furniture and fixture Less depreciation (g)*	2047	14	9			
as at cost as at 31-12-51 ..	9	0	0			
Additions during the year ..	2056	14	9			
Less depreciation to date	666	14	0	1390	0	9
10 *Other assets including silver to be specified (h)*						
Stock of paper and Stationery etc ..				645	4	6
11 *Non Banking assets acquired in satisfaction of claims (stating mode of valuation) (i) at cost*				50	0	0
12 *Profit and Loss*				Nil		
Total				233110	8	9

Directors —1 K Venkata Subban 2 S Venugopalachar 3 M A Venkatachar 4 R Jayaramachar 5 N K Chandrasekhara Sastry

R Raghavendrachar,
Agent

PROFIT AND LOSS ACCOUNT FOR THE HALF YEAR ENDED 31ST DECEMBER 1952

	EXPENDITURE	RS	A	P
1.	Interest paid on deposits, borrowings etc	970	1	0
2.	Salaries and Allowances and Provident Fund (showing separately salaries and allowances to Managing Director, Manager or Chief Executive Officer Rs 1025 8 0	2193	12	0
3.	Directors' and local committee members' fee and allowances	122	0	0
4.	Rent, Taxes, Insurance, Lighting etc ..	145	0	9
5	Law Charges			
6	Postage, Telegraphs and Stamps D D Commission	207	13	6
7.	Auditor's Fees	85	0	0
8	Depreciation on and repairs to the Banking Companies Property	278	11	6
9.	Stationery Printing, Advertisements etc	252	8	9
10	Loss from sale of or dealing with Non Banking assets	Nil		
11	Other expenditure	131	5	6
12	Balance of Profit	2625	5	0
	Total	7011	10	0

	INCOME (Less provisions made during the year for Bad and doubtful debts and other usual or necessary provisions)	RS	A	P.
1	Interest and Discount	6266	15	0
2	Commission Exchange and Brokerage	444	11	0
3	Rents ..	Nil		
4	Net profit on sale of investments, Gold and Silver, Land premises and other assets (not credited to Account) ..	Nil		
5	Net profit on revaluation of investments Gold and Silver, Land premises and other assets (not credited to Reserves or any particular Fund or Account)	Nil		
6	Income from Non-Banking assets and profit from sale of or dealing with such assets ..	300	0	0
7	Other receipts (Interest on investments)	Nil		
8	Loss (if any)	Nil		
	Total	7011	10	0

Directors
1 K Venkata Subban
2 S. Venugopalachar
3 M. A Venkatachar
4 R Jayaramachar
5 N K Chandrasekhara Sastry

V K Narayana Iyengar,
Legal Adviser.

NANJANGUD }
1-2-1953 }

REPORT OF THE AUDITOR TO THE SHARE HOLDERS OF THE SRIKANTESWARA BANK LTD

R Raghavendrachar
Agent

I have audited the Balance Sheet of the Srikanteswara Bank Ltd, for the half year ended 31st December 1952 and the Profit and Loss Account for the half year ended that Date and report

(a) I have obtained all the information and explinations I have required (b) Such information and explanations have been found to be satisfactory (c) The transactions of the Bank which have come to my notice have been in my opinion, within the powers of the Bank (d) In my opinion the Profit and Loss Account shows a true balance of profit and Loss for the period covered by the Audit (e) In my opinion the Balance Sheet & the Profit and Loss Account are, drawn up in confirmity with the Law & the Balance Sheet exhibits a true and correct view of the state of affairs of the Bank according to the best of my information & the explinations given to me & as shown by the books of the Bank (f) The Accounts of the Bank have been kept as per section 130 of the RegulationXVIII of the act 1938 (Mysore Co Act)

NANJANGUD. }
[illegible] }

M. K. Srinivasa Iyengar, B. Com.
[illegible]

ವಾರ ಭವಿಷ್ಯ

ತಾ|| ೨೪-೫-೫೩ರಿಂದ ೩೦-೫-೫೩ರ ವರೆಗೆ

ಮೇಷ — ಹಣಕಾಸಿನ ಅನುಕೂಲ ವಿಲ್ಲ, ಖರ್ಚು ಹೆಚ್ಚು, ಆರೋಗ್ಯ ಸ್ವಲ್ಪ ಉತ್ತಮ, ವ್ಯಾಪಾರಾದಿಗಳ ಸ್ಥಿತಿ ಸುಧಾರಣೆ, ನೌಕರರಿಗೆ ವರ್ಗ ತಾ|| ೨೮, ೨೯ ಬೆಲೆಬಾಳುವ ವಸ್ತುವಿನ ಕಳವು ಎಚ್ಚರಿಕೆ

ವೃಷಭ — ಮೇಲಿಂದ ಮೇಲೆ ತೊಂದರೆ, ಜಮೀನು ವಿಷಯದಲ್ಲಿ ತಕರಾರು, ಪತ್ನಿ ಆರೋಗ್ಯಕ್ಕೆ ಕ್ಲೇಶ ನೌಕರಿ ದಂಧೆಯಲ್ಲಿ ಚಿಂತೆ, ಪ್ರವಾಸ ಸಂಭವವಿಲ್ಲ ತಾ|| ೨೫, ೨೬ ದ್ರವ್ಯ ಚಿಂತೆ, ಕ್ಲೇಶ

ಮಿಥುನ — [illegible] ಕಷ್ಟಗಳ ಮೇಲೆ ಕಷ್ಟ ಒದಗುತ್ತದೆ ಆರೋಗ್ಯ ನೆಟ್ಟಗಿರದು, ವ್ಯವಸಾಯ ದಂಧೆಗಳಲ್ಲಿ ನಷ್ಟ, ವಿದ್ಯಾರ್ಥಿಗಳಿಗೆ ಆಲಸ್ಯ. ತಾ|| ೨೮, ೨೯ ನಿದ್ರಾ ಭಂಗ, ಕಲಹ

ಕರ್ಕ — ಅನುಕೂಲ ಗ್ರಹಗತಿ ಆರೋಗ್ಯ ಉತ್ತಮ, ಮಾನ ಸನ್ಮಾನ ವ್ಯಾಪಾರಾದಿಗಳಲ್ಲಿ ಉತ್ತಮ ಸ್ಥಿತಿ, ತಾ|| ೨೫, ೨೬ ವಿಶ್ರಾಂತಿ ಧನಲಾಭ

ಸಿಂಹ — [illegible] ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಬಡ್ತಿ, [illegible] ಕೆಲಸ ಅನುಕೂಲ [illegible] ಧನ ಲಾಭ ಮಹತ್ವದ ಪತ್ರ

ಕನ್ಯಾ — ಆರೋಗ್ಯ ಉತ್ತಮ, [illegible] ನೆಟ್ಟಗೆ ವ್ಯಾಪಾರಾದಿಗಳ [illegible] ಲಾಭ ಮಾನ ಸನ್ಮಾನ [illegible] ಪತ್ರ, ಮಿತ್ರರ ಭೇಟಿ

ತುಲ — ಆರೋಗ್ಯದ ಬಗ್ಗೆ ಎಚ್ಚರಿಕೆ ವ್ಯಾಪಾರಾದಿಗಳ ಸ್ಥಿತಿ ಚಿಂತಾಜನಕ, [illegible] ಪ್ರವಾಸವಿಲ್ಲ, ಕಲಹ ಪ್ರಸಂಗ ತಾ|| ೨೪, ೨೫ ಖರ್ಚು, ನಿದ್ರಾ ಭಂಗ

ವೃಶ್ಚಿಕ — ಆರೋಗ್ಯ ಉತ್ತಮ, ಅಪೇಕ್ಷಿತ ಸಿದ್ಧಿ, ಆಕಸ್ಮಿಕ ವೆಚ್ಚ, ಪತ್ನಿಗೆ ಬಾಯಲೆ, ಪ್ರವಾಸದಲ್ಲಿ ಅನುಕೂಲ, ತಾ|| ೨೫, ೨೬ ಕಲಹ ವಿಶ್ವಾಸಘಾತ

ಧನು — ಮಹತ್ವಪೂರ್ಣ ವಾರ ಕೋರ್ಟು ಕಾರ್ಯದಲ್ಲಿ ಜಯ, ಆರೋಗ್ಯ ನೆಟ್ಟಗೆ, ಶತ್ರು ನಾಶ, ಉದ್ಯೋಗದಲ್ಲಿ ಪ್ರಗತಿ, ನೌಕರಿಯಲ್ಲಿ ಬಡ್ತಿ ಪ್ರವಾಸ ಸುಖಕರ ತಾ|| ೨೮, ೨೯ ದಾನ ಧರ್ಮ ಪ್ರಿಯಜನರ ಭೇಟಿ

ಮಕರ — ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಬದಲಾವಣೆ ಯೋಗ ಮನಸ್ಸಿಲ್ಲದಿದ್ದರೂ ಪ್ರಯಾಣ ತಾ|| ೨೮, ೨೯ ಮಿತ್ರ ಸಹಾಯ, ಸುವಾರ್ತೆ

ಕುಂಭ — ಆಪ್ತ ಜನ ವಿಯೋಗ, ಚತುಷ್ಪಾದಿಗಳಿಂದ ಭಯ, ನೌಕರಿಯಲ್ಲಿ ಬದಲಾವಣೆ. ಖರ್ಚು ತಾ|| ೨೪, ೨೫ ಅಪಘಾತ, ಸಂಕಟ

ಮೀನ — ಆರೋಗ್ಯ ಉತ್ತಮ, ಶುಭ ಕಾರ್ಯ, ನೌಕರಿಯಲ್ಲಿ ಬಡ್ತಿ, ವ್ಯಾಪಾರಾದಿಗಳಲ್ಲಿ ಧನಿಕರ ಸಹಾಯ, ನಿರ್ವಿಘ್ನ ಪ್ರವಾಸ ತಾ|| ೨೪, ೨೫ ಧನ ಲಾಭ, ಪುತ್ರ ಸಂತಾನ ಲಾಭ

ಮೊಹಲ್ಲಾ ದಿನಾಚರಣೆ

ಮೈಸೂರು ೨೨

ಮೈಸೂರು ಪೌರಸಭೆಯ ಆಶ್ರಯದಲ್ಲಿ ದೇವರಾಜ ಮೊಹಲ್ಲಾ ದಿನಾಚರಣೆಯನ್ನು ನಾಳೆ ಆಚರಿಸಲಾಗುವುದು ಅದರ ಅಂಗವಾಗಿ ಬೆಳಗ್ಗೆ ೬-೩೦ ರಿಂದ ೯-೩೦ರ ವರೆಗೂ ಮೊಹಲ್ಲಾ ನಿರ್ಮಲೀಕರಣ ಕೆಲಸವನ್ನು ಆ ಭಾಗದ ಜನಗಳಿಂದ ಮಾಡಿಸಲಾಗುತ್ತದೆ ರಸ್ತೆಗಳ ರಿಪೇರಿಯೇ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಲು ಏರ್ಪಡಿಸಿರುತ್ತದೆ

ನೇವಿ ಹಾಕುವುದು, ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಪರೀಕ್ಷೆ ಇವುಗಳನ್ನು ಒಂಟಿಕೊಪ್ಪಲಿನ ಮಾತೃಮಂಡಲಿ ಶಿಶುವಿಹಾರದಲ್ಲಿ ಮಾಡಲಾಗುತ್ತದೆ. ಸಾರ್ವಜನಿಕರ ಆರೋಗ್ಯ ವಿಚಾರದಲ್ಲಿ ಸೂಕ್ತ ಸಲಹೆಗಳನ್ನು ಕೊಡಲಾಗುವುದು ಸಂಜೆ ೭ ಗಂಟೆಗೆ ಅದೇ ಸ್ಥಳದಲ್ಲಿ ಪೌರಸಭಾಧ್ಯಕ್ಷರ ನೇತೃತ್ವದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ ಮಹಾಜನರು ಭಾಗವಹಿಸಿ ದಿನಾಚರಣೆಯು ಯಶಸ್ವಿಯಾಗಿ ನಡೆಯುವಂತೆ ಮಾಡಬೇಕಾಗಿ ಕೋರಿದೆ

ಹಾಸನದಲ್ಲಿ ಅಂತರ್ರಾಷ್ಟ್ರ ಸಂಘದ ಸಾಮಾಜಿಕ ಸೇವಾ ಶಿಬಿರ

ಫ್ರೆಂಡ್ಸ್ ಸರ್ವಿಸ್ ಅಂತರ ರಾಷ್ಟ್ರೀಯ ಸೇವಾ ಸಂಸ್ಥೆಯವರು ಹಾಸನದ ವಿದ್ಯಾಸೌಧದಲ್ಲಿ ಜೂನ್ ಮೊದಲನೇ ವಾರದಲ್ಲಿ ಒಂದು ಸೇವಾ ಶಿಬಿರವನ್ನು ತೆರೆಯಲಿರುವರು. ಭಾರತ, ಪಾಕಿಸ್ತಾನ ಮತ್ತು ಇತರ ಹೆಚ್ಚು ಅಭಿವೃದ್ಧಿಗೊಳ್ಳದ ಪ್ರದೇಶಗಳಲ್ಲಿ ಶಾರೀರಕ ಶ್ರಮದ ಮೂಲಕ ಸಮಾಜ ಸೇವೆ ಮಾಡುವ ಬಗ್ಗೆ ಸಂಸ್ಥೆಯು ಸ್ವಯಂಸೇವಕರನ್ನು ಕಳುಹುವುದು ಹಾಸನದಲ್ಲಿ ತೆರೆಯುವ ಶಿಬಿರವು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ನಡೆಯುವುದು.

ವಿಮಾನದ ಮೇಲೆ ರಣಹದ್ದಿನ ಧಾಳಿ

ಕೊಲಂಬೊವಿಗೆ ಮೊನ್ನೆ ಹೋಗುತ್ತಿದ್ದ ಏರ್ ಇಂಡಿಯಾ ವಿಮಾನವೊಂದರ ಮೇಲೆ ಒಂದು ರಣಹದ್ದು ಹಾರುತ್ತಾ ಬಂದು ಹೊಡೆಯಿತೆಂದೂ, ಅದರಿಂದ ವಿಮಾನದ ಒಂದು ರೆಕ್ಕೆಯಲ್ಲಿ ಒಂದು ಕಡೆ ಬಾಗು ಬಂದಿತೆಂದೂ, ಪ್ರಯಾಣಿಕರೊಡನೆ ಸುರಕ್ಷಿತವಾಗಿ ಅದನ್ನು ಚಾಲಕನು ತಿರುಚಿ ನಿಲ್ದಾಣದಲ್ಲಿ ಇಳಿಸಿದನೆಂದೂ ವರದಿಯಾಗಿದೆ ಡೆಕ್ಕನ್ ವಿಮಾನವೊಂದನ್ನು ಕರೆಸಿ, ಪ್ರಯಾಣಿಕರನ್ನು ಕಳುಹಲೇರ್ಪಾಡಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೩೯ ೪-೦	೩೦ ೮-೦
ಹುರುಳಿ	೪೩ ೮ ೦	೪೩ ೧೪ ೦
ಹಲಸಂದೆ	೫೩-೨ ೦	೫೮-೮ ೦
ಹೆಸರು	೬೬-೩-೦	
ಅವರೆ	೫೪ ೦ ೦	೫೪ ೧೪ ೦
ಉದ್ದು	೭೧ ೬ ೦	೭೩ ೮ ೦
ಬೇಳೆಕಾಳು	೨೩-೪ ೦	
ಹೊಣಸೇರು	೫ ೩-೦	೬ ೨ ೦
ಸೀಗೆಕಾಯಿ	೫ ೯ ೦	೫-೧೦-೦
ಬೆಲ್ಲ	೭-೮ ೦	
ತೆಂಗಿನಕಾಯಿ		
೧,೦೦೦ಕ್ಕೆ	೧೪೮ ೦-೦	೨೩೧ ೦-೦

ಹೊಸ ನರ್ಸರಿ ಶಾಲೆ

ರಾಜಧಾನಿಯ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟಿನವರು ಗಣೇಶಾ ಟಾಕೀಸ್ ಬಳಿ ಮೊನ್ನೆ ಹೊಸ ನರ್ಸರಿ ಶಾಲೆಯೊಂದರ ಆರಂಭೋತ್ಸವವನ್ನು ನೆರವೇರಿಸಿದರು ಎಲ್ಲರೂ ಇದರ ಸದುಪಯೋಗವನ್ನು ಪಡೆಯುವರೆಂದು ಆಶಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಅರಿಯಾಕುಡಿ ರಾಮಾನುಜಯ್ಯಂಗಾರ್ ರೆಕಾರ್ಡು ಮಧ್ಯಾಹ್ನ ೧ ೩೦ ನಾಗಸ್ವರ. ತ ಟಿ. ವಿ ರತ್ನಂ, ರಕಾರ್ಡು ಸಂಜೆ ೫ ೩೦ ಮುತ್ತು ೬.೪೦ ಎ. ಎಸ್. ಶಿವರುದ್ರಪ್ಪ, ಪಿಟೀಲು ೬ ೦೦ ಗಾನ ವಿಹಾರ ೬.೩೦ ಗೀತಾಂಜಲಿ. ೭ ೩೦ ಕನ್ನಡದಲ್ಲಿ ಭಾಷಣ ೯ ೦೫ ಟಿ. ಜಿ. ಕೃಷ್ಣರಾವ್, ಇಂಗ್ಲಿಷ್ ಭಾಷಣ ೯.೩೦ ಎಂ. ಆರ್ ಸರೋಜಿನಿದೇವಿ, ಸಂಗೀತ

ವಿವಾಹ ಮಹೋತ್ಸವಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ವೇ|| ಬ್ರಂ|| ಶ್ರೀನಿವಾಸಮೂರ್ತಿಯವರು ತಮ್ಮ ಪುತ್ರಿ, ಶ್ರೀ ರಾಮಾಶಾಸ್ತ್ರಿಯವರಿಗೆ, ಶ್ರೀರಂಗಪಟ್ಟಣದ ಪಾರುಪತ್ತೆಗಾರ್ ಶ್ರೀ ಕೆ ನಾರಣಪ್ಪನವರ ಪುತ್ರಿ ಸೌ|| ಪಾರ್ವತಮ್ಮನವನ್ನು ತಂದುಕೊಂಡು ಈ ದಿನ ಶ್ರೀರಂಗಪಟ್ಟಣದಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ರಾಜಧಾನಿಯ ಕಾಗದದ ವ್ಯಾಪಾರಿಗಳೂ ಏಜೆಂಟರೂ ಆದ ಶ್ರೀ ಆರ್ ಕೃಷ್ಣಸ್ವಾಮಿಯವರು ತಮ್ಮ ಮಗಳು ಸೌ|| ಧರ್ಮಾಂಬಾಳ್‌ರವರನ್ನು ತಿರುಪತ್ತೂರಿನ ವಕೀಲರಾದ ಶ್ರೀ ಎ ಸಿ ರಾಮಶೇಷ ಅಯ್ಯರ್‌ರವರ ಮಕ್ಕಳು ಶ್ರೀ ಎ ಆರ್. ಕುಮಾರಸ್ವಾಮಿಯವರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ವಾಣೀವಿಲಾಸ ಮಾರ್ಕೆಟ್ ಬಳಿ ಇರುವ ಸಿಟಿ ಟ್ಯುಟೋರಿಯಲ್ ಕಾಲೇಜಿನ ಪ್ರೊಪ್ರೈಟರ್, ಶ್ರೀ ಎಸ್ ವೆಂಕಟನಾರಣಪ್ಪನವರು ತಮ್ಮ ಪುತ್ರಿ, ಸೌ|| ಕನಕಲಕ್ಷ್ಮಿಯನ್ನು ರಾಜಧಾನಿಯ ಶಾಲಾ ಇನ್ಸ್‌ಪೆಕ್ಟರ್, ಶ್ರೀ ಜಿ ಕೆ ನಂಜಪ್ಪನವರ ಮಗ, ಶ್ರೀ ಸತ್ಯನಾರಾಯಣರವರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು

ರಾಜಕಮಲ್, ಮೈಸೂರು

22 5-53 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ವಿಜಯಾರವರ ತೆಲುಗು ಚಿತ್ರ

ಪಾತಾಳ ಭೈರವಿ

ಪಾತ್ರ:— ಮಾಲತಿ, ರೇಲಂಗಿ ಎನ್ ಟಿ. ರಾಮರಾವ್, ರಂಗರಾವ್

Edited, Printed and Published by A R Nagarajan at Sadhvi Press, D. Subbiah Road, Mysore

22-5-53 ರಿಂದ :: ಜನಭರಿತ 2ನೇ ವಾರ

ಪ್ರತಿ ದಿನ ಮೂರು ಆಟಗಳು

ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ

ಪ್ರಕಾಶ್‌ರವರ ತಮಿಳು ಚಿತ್ರ

ಪೆಟ್ರಿ ತಾಯ್

ಪಾತ್ರ:- ಜಿ. ವರಲಕ್ಷ್ಮಿ, ನಾಗೇಶ್ವರರಾವ್, ವಸಂತ, ನಂಬಿಯಾರ್, ಜೆಮಿನಿ

ಪ್ರತಿಯೊಂದು ಸಂಸಾರವೂ ನೋಡಬೇಕಾದ ಮಹೋನ್ನತ ಚಿತ್ರ

[A PRAKASH RELEASE

ಗುಟ್ಟಾಗಿ ನರಳ ಬೇಡಿ ! ಸಂಕೋಚದಿಂದ ಕೊರಗಬೇಡಿ !!

ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

—: ಸಂತಾನ ಸಿಂಧೂರ :—

ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲ ಮಾಡಿ ಅದರ ಜೊತೆಗೆ ಬರುವ ಕಿವಿ ನೋವು, ಮೈ ಕೈ, ದೆನ್ನು ನೋವು, ನಡು ಸೆಳೆತ, ಅಶ್ರುಮ ಮಾಸಿಕ, ಗರ್ಭ ಪತನ(Abortion)ಇತ್ಯಾದಿಗಳನ್ನು ನಿವಾರಿಸಿ, ಬಂಜೆತನವನ್ನು ಹೋಗಲಾಡಿಸಿ "ಸಂತಾನ" ಕೊಡುವ ಸಿದ್ಧೌಷಧ.

—: ಮದನ ವಿಲಾಸ :—

ಈ ಗುಳಿಗೆಗಳು ಪುರುಷನ ಶರೀರದ ಅಶಕ್ತತೆಯನ್ನು ಸಮಾಧಾನವಾಗಿ ಮಾಡಿ, ಶೀಘ್ರ ಸ್ಖಲನ, ಸ್ವಪ್ನಸ್ಖಲನ (Wet Dreams) ಗಳನ್ನು ನಿವಾರಿಸಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸರಿಹೋದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ

ವಿಶೇಷವಾಗಿ 16–18 ವರ್ಷ ಮಕ್ಕಳಿಲ್ಲದ ಅನೇಕ ಬಂಜೆ ದಂಪತಿಗಳು ಈ ಮಹೌಷಧಿಗಳ ಸೇವನೆಯಿಂದ ಸತ್ಸಂತಾನ ಪಡೆದು ಸಂಸಾರ ನೌಕೆಯಲ್ಲಿ ಸುಖದಿಂದಿದ್ದಾರೆ.

ಕ್ರಯ —2 ಔಷಧಿಗಳ 1 ಸೆಟ್ 6 ರೂ., ಟಪಾಲು ಖರ್ಚು 1 ರೂ , ಒಟ್ಟು 7 ರು

ಪತ್ರ ವ್ಯವಹಾರ ಗೋಪ್ಯ

Manufactured By And Available Only From :-

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ ಅಂಡ್ ಕಂಪೆನಿ,

628 ಲೀಲಾವಿಲಾಸ ಛತ್ರದ ಹಿಂದೆ, ಸುಬ್ಬರಾಯನ ಕೆರೆ ಹತ್ತಿರ, ಮೈಸೂರು.

ರೋ॥ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೫-೫ ೧೯೫೩ [ಸಂಚಿಕೆ ೨೪೨

೧೯೫೫ಕ್ಕೆ ಮುಂಚೆ ರಷ್ಯ ಯುದ್ಧ ಹೂಡುವುದೇ?

ಮನೆಗಂದಾಯದ ಪುನರ್ವಿಮರ್ಶೆಗಾಗಿ ನಿರ್ಣಯ

ಮೈಸೂರು ೨೫

ರಾಜಧಾನಿಯಲ್ಲಿ ಮನೆಗಂದಾಯವನ್ನು ಹೆಚ್ಚಿಸಿರುವುದನ್ನು ಪುನರ್ವಿಮರ್ಶೆ ಮಾಡಬೇಕೆಂದೂ, ಅಭಿವೃದ್ಧಿ ಪಡಿಸದೆ ಇರುವ ಮನೆಗಳಿಗೆ ವಿಧಿಸಿರುವ ಕಂದಾಯವನ್ನು ಹಿಂದೆ ಇದ್ದ ಮಟ್ಟದಲ್ಲೇ ಇಡಬೇಕೆಂದೂ ನಗರದ ಪೌರಸಭೆಯ ಮ್ಯಾನೇಜಿಂಗ್ ಕಮಿಟಿಗೆ ಸೂಚಿಸುವಂತೆ ಕೋರುವ ನಿರ್ಣಯವನ್ನು ಪೌರಸಭಾ ಸದಸ್ಯರಾದ ಶ್ರೀ ಎ ವೆಂಕಟೇಶಯ್ಯನವರು ಮಂಡಿಸಿರುತ್ತಾರೆ ಮೈಸೂರು ನಗರದಲ್ಲಿ ಆಹಾರ, ಹಾಲು ಮುಂತಾದ ಅವಶ್ಯಕ ಪದಾರ್ಥಗಳ ಅಭಾವ ಇರುವವರೆಗೆ ನಗರದಲ್ಲಿರುವ ಎಲ್ಲಾ ಹೋಟೇಲುಗಳನ್ನೂ ಮುಚ್ಚಲು ಸರ್ಕಾರದವರು ಸೂಕ್ತ ಶಾಸನ ಮಾಡುವಂತೆ ಕೋರುವ ನಿರ್ಣಯವನ್ನು ಶ್ರೀ ಮೂರ್ ಹುಸೇನರವರು ಕಳುಹಿಸಿರುತ್ತಾರೆ. ನಗರದ ಬಸ್ ಸಂಚಾರ ವ್ಯವಸ್ಥೆಯನ್ನು ಪೌರಸಭೆಯವರೇ ನಡೆಸುವಂತಾಗಬೇಕೆಂದೂ ಅವರು ಮತ್ತೊಂದು ನಿರ್ಣಯದಲ್ಲಿ ಸೂಚಿಸಿರುತ್ತಾರೆ ವಿದ್ಯುಚ್ಛಕ್ತಿ ಶಂತಿ ತಗಲಿ ಮರಣ ಸಂಭವಿಸಿದ ಸಂಬಂಧವಾಗಿ ಡಾ॥ ಬಿ ಜಿ. ದಾಸ್‌ರವರು ಪ್ರಶ್ನೆ ಹಾಕಿರುತ್ತಾರೆ

ಉಪನ್ಯಾಸ

ಶ್ರೀ ಶಂಕರ ಜಯಂತಿ ಪ್ರಯುಕ್ತ ಇಂದು ಸಂಜೆ ೭ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪಂಡಿತ ರತ್ನಂ, ಮ. ಮ. ವಿದ್ವಾನ್ ಎಂ ಎಸ್ ವೆಂಕಟೇಶ ಶಾಸ್ತ್ರಿಗಳು "ಜೀವ ಬ್ರಹ್ಮ ಸ್ವರೂಪ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ

ಇಂಡೋನೇಷ್ಯಾ ಅಧ್ಯಕ್ಷರ ಅಪಹಾರಕ್ಕೆ ಪ್ರಯತ್ನ

ಇಂಡೋನೇಷ್ಯದ ಅಧ್ಯಕ್ಷರಾದ ಡಾ॥ ಅಹಮದ್ ಸುಕರ್ಣೋರವರು ಕಳೆದ ಬುಧವಾರ ಸೆಮರಾಂಗ್ ನಗರಕ್ಕೆ ಭೇಟಿ ಕೊಟ್ಟಾಗ, ಹಲವು ಯುವಕರು ಅವರನ್ನು ಅಪಹರಿಸಿಕೊಂಡು ಹೋಗಲು ಪ್ರಯತ್ನಪಟ್ಟು ಅದು ವಿಫಲವಾಯಿತೆಂದೂ ವರದಿಯಾಗಿದೆ ಯುವಕರ ಉದ್ದೇಶವು "ಬಹು ಸೌಮ್ಯವಾದುದಾಗಿತ್ತೆಂದೂ", ಇಂಡೋನೇಷ್ಯಾ ರಾಜಧಾನಿಯನ್ನು ಈಗಿನ ಸ್ಥಳದಿಂದ, ೧೯೪೫-೪೯ರಲ್ಲಿ ರಾಜಧಾನಿಯಾಗಿದ್ದ ಜೋಗ್ಯಾಕರ್ತಾವಿಗೆ ವರ್ಗಾಯಿಸಲು ಅಧ್ಯಕ್ಷರನ್ನು ಪ್ರೇರಿಸುವುದೇ ಅವರ ಗುರಿಯಾಗಿದ್ದಿತೆಂದೂ ಹೇಳಲಾಗಿದೆ

ಗೌರೀಶಂಕರ ಹತ್ತುವ ಪ್ರಯತ್ನ

ಕಳೆದ ೨೩ ರಲ್ಲಿ ೨೯೦೦೨ ಅಡಿ ಎತ್ತರವಿರುವ ಗೌರೀಶಂಕರ ಶಿಖರವನ್ನೇರಲು ಎರಡು ಬ್ರಿಟಿಷ್ ಗುಂಪುಗಳು ಪ್ರಯತ್ನ ಪಡಲಿದ್ದವು. ಅವು ಯಶಸ್ವಿಯಾಗದಿದ್ದರೆ ಹೊಸ ಪ್ರಯತ್ನ ನಡೆಸಲಾಗುವುದು ಜೂನ್ ೨ ನೇ ತಾ॥ ಬ್ರಿಟನ್ನಿನ ರಾಣಿಯವರ ಕಿರೀಟ ಧಾರಣೆಯ ಹೊತ್ತಿಗೆ ಈ ಸಾಹಸ ಕಾರ್ಯವನ್ನು ಮಾಡಿರಬೇಕೆಂಬುದು ಪರ್ವತಾರೋಹಿಗಳ ಬಯಕೆ

೧೯೫೫ಕ್ಕೆ ಮುಂಚೆ ಯುದ್ಧಕ್ಕಾಗಿ ರಷ್ಯದ ಸಿದ್ಧತೆಯೇ?

೧೯೫೫ಕ್ಕೆ ಮುಂಚೆ ಯೂರೋಪಿನಲ್ಲಿ ಯುದ್ಧ ಹೂಡಲು ರಷ್ಯವು ಹಂಚಿಕೆ ಹಾಕಿಕೊಂಡಿರುವುದೆಂದು ರಷ್ಯಾ ಮಿಲಿಟರಿಯ ಪರಿಂದ ತರಪೇತು ಹೊಂದಿದ ಜೆಕೊಸ್ಲೋವೇಕಿಯಾದ ಮಾಜಿ ಅಧಿಕಾರಿಯೊಬ್ಬರು ಅಮೆರಿಕಾ ಸಮಿತಿಯೊಂದರಲ್ಲಿ ತಿಳಿಸಿರುವರೆಂದು ವರದಿಯಾಗಿದೆ ರಷ್ಯವನ್ನು ನಾಶಪಡಿಸಲು ಬ್ರಿಟನ್ನು ೧೯೫೫ ರಲ್ಲಿ ಪ್ರಯತ್ನ ಪಡುವುದೆಂದು ರಷ್ಯವು ಭಾವಿಸಿ ಅದಕ್ಕೆ ಮುಂಚೆಯೇ ತಾನು ಯೂರೋಪನ್ನು ವಶಪಡಿಸಿಕೊಳ್ಳಲು ಯೋಚಿಸಿರುವುದಾಗಿಯೂ ಡಾರ್ಡನಲ್ಸ್ ಮತ್ತು ಬಾಸ್ಪೊರಸ್ ಜಲಸಂಧಿ ಕ್ಷೇತ್ರಗಳನ್ನು ರಷ್ಯನರು ೫೫ಕ್ಕೆ ಮುಂಚೆ ವಶಪಡಿಸಿಕೊಳ್ಳಲು ಆಶೆ ಹೊಂದಿರುವರೆಂದೂ ಅಧಿಕಾರಿಯು ಹೇಳಿರುವರು.

೧೦ ಲಕ್ಷ ಭಾರತೀಯರ ಬಗ್ಗೆ ಭಾರತ, ಸಿಂಹಳಗಳ ಒಪ್ಪಂದ

ಸಿಂಹಳದಲ್ಲಿ ನೆಲೆಸಿರುವ ಭಾರತೀಯರ ನಾಗರಿಕ ಮತ್ತು ಮತದಾನಗಳ ಹಕ್ಕುಗಳ ಸಂಬಂಧವಾಗಿ ಭಾರತ ಮತ್ತು ಸಿಂಹಳಗಳಲ್ಲಿ ಉಂಟಾಗಿದ್ದ ವಿರಸವು ಹೋಗಿ, ಅಲ್ಲಿರುವ ೧೦ ಲಕ್ಷ ಭಾರತೀಯರ ಭವಿಷ್ಯವನ್ನು ಕುರಿತು ಎರಡು ರಾಜ್ಯಗಳಿಗೂ ಒಪ್ಪಂದವಾಗಿರುವುದೆಂದೂ, ಒಪ್ಪಂದದ ಕರಡನ್ನು ಸಿಂಹಳದ ಪ್ರಧಾನಿ ಸೇನಾನಾಯಕೆಯವರು ಲಂಡನ್ನಿಗೆ ತೆಗೆದುಕೊಂಡು ಹೋಗಲಿರುವರೆಂದೂ, ಅಲ್ಲಿ ಅದಕ್ಕೆ ಅವರ ಮತ್ತು ಪ್ರಧಾನಿ ನೆಹರೂರವರ ರುಜುಗಳಾಗುವುವೆಂದೂ ವರದಿಯಾಗಿದೆ ಸೇನಾನಾಯಕೆಯವರು ಜೂಲೈ ತಿಂಗಳಲ್ಲಿ ದೆಹಲಿಗೆ ಭೇಟಿ ಕೊಡಲಿರುವರೆಂದು ಹೇಳಲಾಗಿದೆ

ಭಾರತೀಯ ಪತ್ರಿಕೋದ್ಯಮದ ಇತಿಹಾಸ

ಭಾರತ ಸರ್ಕಾರದವರು ನೇಮಿಸಿರುವ ಸಮಿತಿಯು ಭಾರತ ಪತ್ರ ಪತ್ರಿಕೆಗಳ ಇತಿಹಾಸವನ್ನು ರಚಿಸಲಿರುವುದಾಗಿ ವರದಿಯಾಗಿದೆ. ಟ್ರಿಬ್ಯೂನ್ ಪತ್ರಿಕೆಯ ಸಂಪಾದಕ, ಶ್ರೀ ಜೆ ನಟರಾಜನ್‌ರವರು ಅದನ್ನು ಬರೆಯುವರು.

ಚಿಕ್ಕಮಗಳೂರಿನಲ್ಲಿ ಗೋ ಸದನದ ಸ್ಥಾಪನೆ

ಬೆಂಗಳೂರು ೨೫

ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಸದನವೊಂದನ್ನು ಏರ್ಪಡಿಸಲಾಗುತ್ತಿರುವುದೆಂದ ಸಂಸ್ಥಾನದ ಪಶು ವೈದ್ಯ ಇಲಾಖಾ ಡೈರೆಕ್ಟರ್ ಡಾ॥ ಪಿ ಎಂ ನಾರಾಯಣಸ್ವಾಮಿ ನಾಯ್ಡುರವರು ತಿಳಿಸಿರುತ್ತಾರೆ ಸಂಸ್ಥಾನದಲ್ಲಿ ಗೋ ವಧೆಯನ್ನು ಪೂರ್ಣವಾಗಿ ನಿಷೇಧಿಸಿರುವುದರಿಂದ, ವಯಸ್ಸಾದ ಮತ್ತು ಅನುಪಯುಕ್ತವಾದ ದನಸುವಾರುಗಳನ್ನು ಪ್ರಾಣಿ ದಯಾ ದೃಷ್ಟಿಯಿಂದ ಸಾಕಲು ಇಂತಹ ಅನೇಕ ಸದನಗಳನ್ನು ಏರ್ಪಡಿಸಬೇಕಾಗುವುದೆಂದು ಅವರು ಹೇಳಿರುವರು

ಬಳ್ಳಾರಿ ಬಗ್ಗೆ ಆಂಧ್ರ ಜಾಡಮಾಲಿಗಳ ಮುಷ್ಕರ

ಅಕ್ಟೋಬರ್ ತಿಂಗಳಿಂದ ಸ್ಥಾಪಿತವಾಗುವ ಆಂಧ್ರ ಪ್ರಾಂತದಲ್ಲಿ ಬಳ್ಳಾರಿ ತಾಲ್ಲೂಕನ್ನು ಸೇರಿಸುವಂತೆ ಬೇಡಿಕೆಯಿಟ್ಟು ಬಳ್ಳಾರಿ ಪೌರಸಭಾ ಜಾಡಮಾಲಿಗಳು ನೆನ್ನೆ ಹಠಾತ್ತನೆ ಮುಷ್ಕರ ಹೂಡಿದರು. ಅದು ಪ್ರಾಯಶಃ ಸಾಂಕೇತಿಕ ಮುಷ್ಕರವಿರಬಹುದೆಂದು ಅಧಿಕಾರಿಗಳು ಭಾವಿಸಿರುತ್ತಾರೆ

ಸೂರ್ಯನ ಶಾಖದಿಂದ ಅಡಿಗೆ ಯಂತ್ರದ ತಯಾರಿಕೆ

ಸೂರ್ಯನ ಶಾಖವನ್ನು ಶೇಖರಿಸಿ ಆ ಮೂಲಕ ಅಡಿಗೆ ಮಾಡಲು ಸಾಧಕವಾದ ಯಂತ್ರದ ತಯಾರಿಕೆ ಆರಂಭೋತ್ಸವವನ್ನು ನಾಳಿದ್ದು ಬೊಂಬಾಯಿಯಲ್ಲಿ ಕೇಂದ್ರ ಮಂತ್ರಿ ಮಾಳವೀಯರು ನೆರವೇರಿಸುವರು ಅಲ್ಲಿ ತಿಂಗಳಿಗೆ ೫೦೦೦ ಯಂತ್ರಗಳನ್ನು ತಯಾರಿಸಬಹುದೆಂದು ಹೇಳಲಾಗಿದೆ

ಬಿರುಗಾಳಿಯಿಂದ ೫೦೦ ಅಡಿ ಗೋಪುರ ಮುರಿದು ಬಿತ್ತು

ಇಟಲಿಯ ಟ್ಯೂರಿನ್ ನಗರದಲ್ಲಿ ಭಾರಿ ಮಳೆ ಮತ್ತು ಬಿರುಗಾಳಿ ದೆಸೆಯಿಂದ ಭಾರಿ ಅನಾಹುತವಾಗಿದೆ ೫ ಜನರು ಮಡಿದಿರುತ್ತಾರೆ ೫೫೧ ಅಡಿ ಎತ್ತರದ ಗೋಪುರದ ಮೇಲ್ಭಾಗವು ಮುರಿದು ಬಿದ್ದಿದೆ.

ಭಾರತದಲ್ಲಿ ಕಮ್ಯೂನಿಸಂ ಪ್ರಾಬಲ್ಯ ಇಳಿ ಮುಖ

ಭಾರತದಲ್ಲಿ ಕಮ್ಯೂನಿಸಮ್ಮಿನ ಪ್ರಾಬಲ್ಯವು ಇಳಿಮುಖವಾಗುತ್ತಿರುವುದೆಂದೂ ಕಮ್ಯೂನಿಸ್ಟರ ಜಯದ ಕಾಲವು ಕಳೆದು ಹೋಗಿರುವುದಾಗಿಯೂ ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಮಲಬಾರ್ ಪ್ರದೇಶದ ರಾಜಕೀಯ ಸಮ್ಮೇಳನದಲ್ಲಿ ಭಾಷಣಮಾಡುತ್ತಾ ತಿಳಿಸಿರುತ್ತಾರೆ ಕಮ್ಯೂನಿಸ್ಟ್ ಪಕ್ಷವು ಈಗ ಅವ್ಯವಸ್ಥೆಯ ಸ್ಥಿತಿಯಲ್ಲಿರುವುದಾಗಿಯೂ ಅವರು ಹೇಳಿರುತ್ತಾರೆ ಪಾರ್ಲಿಮೆಂಟಿನ ಚಟುವಟಿಕೆಗಳನ್ನು ಕಮ್ಯೂನಿಸ್ಟರು ಕೈಕೊಂಡ ಮೇಲೆ ಅವರ ಪಕ್ಷದಲ್ಲಿ ಮರಾಠೆ, ಹೊಟ್ಟೆಕಿಚ್ಚು, ಒಡಕು ಮುಂತಾದುವುಗಳುಂಟಾಗಿ, ಅವರು ಈಗ ಪಕ್ಷದಲ್ಲಿ ಉದ್ಭವಿಸಿರುವ ಅತೀವ ಅಶಾಂತಿಯನ್ನು ಹೋಗಲಾಡಿಸಲು ಸಿಕ್ಕಿದ ಯಾವ ಪರಿಹಾರವನ್ನು ಬೇಕಾದರೂ ಕೈಗೊಳ್ಳುತ್ತಿರುವುದಾಗಿಯೂ, ಭಾರತದಲ್ಲಿ ಭಕ್ತಿ ಮತ್ತು ನಿಜವಾದ ಮತ ಧರ್ಮಾಚರಣೆ ಇರುವುದರಿಂದಲೇ ಕಮ್ಯೂನಿಸ್ಟರ ಏಳಿಗೆಯಾಗುವುದಿಲ್ಲವೆಂದೂ, ಆ ತತ್ವಕ್ಕೆ ಈ ದೇಶದಲ್ಲಿ ಭವಿಷ್ಯವೇ ಇಲ್ಲವೆಂದೂ ಅವರು ತಿಳಿಸಿರುವರು.

ವಿಮಾನದಲ್ಲಿ ಒಂಟೆಗಳ ಪ್ರಯಾಣ

ಸಯಾಂ ರಾಜಧಾನಿ ಬ್ಯಾಂಕಾಕಿನ ಮೃಗಾಲಯದಲ್ಲಿಡಲು ಪಾಕಿಸ್ತಾನದ ಎರಡು ಒಂಟೆಗಳನ್ನು ಬಿ. ಓ. ಎ ಸಿ. ವಿಮಾನವು ಸಾಗಿಸಿಕೊಂಡು ಹೋಗಿರುವುದಾಗಿ ವರದಿಯಾಗಿದೆ.

ತ್ರಿರಾಷ್ಟ್ರ ಸಭೆ ಬಗ್ಗೆ ರಷ್ಯದ ಸಂಶಯ

ಬರ್ಮುಡಾ ದ್ವೀಪದ ಬಳಿ ಸಧ್ಯದಲ್ಲಿ ನಡೆಯುವ ಬ್ರಿಟನ್, ಅಮೆರಿಕಾ, ಫ್ರಾನ್ಸುಗಳ ನಾಯಕರ ಸಮ್ಮೇಳನದ ಬಗ್ಗೆ ರಷ್ಯವು ಸಂಶಯಪಟ್ಟುಕೊಂಡಿರುವುದೆಂದು ತಿಳಿದುಬಂದಿದೆ ಅಲ್ಲಿನ ಕಮ್ಯೂನಿಸ್ಟ್ ಪತ್ರಿಕೆ ಪ್ರಾವ್ದಾವು ಈ ವಿಷಯವನ್ನು ಕುರಿತು, ಬರ್ಮುಡಾ ಸಭೆಯು ರಷ್ಯದ ವಿರುದ್ಧ ಪಿತೂರಿ ಮಾಡುವ ಸಲುವಾಗಿ ನಡೆಯುವುದೆಂದು ತಿಳಿಸಿರುತ್ತದೆ.

ಬ್ರಿಟಿಷ್ ರಾಣಿಗೆ ವಿಲಕ್ಷಣ ಹಾರ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೋತ್ಸವ ಕಾಲದಲ್ಲಿ ಅವರಿಗಾಗಿ ಅರ್ಪಿಸಲು ಜೋಡಿ ನಾಯಕನೂರಿನ ತೋಟಗಾರರು ಉತ್ತಮ ಹಸರು ಏಲಕ್ಕಿ ಹಾರವೊಂದನ್ನು ಕಳುಹಿಸಿಕೊಟ್ಟಿರುತ್ತಾರೆ

ನೀಲಗಿರಿಗೆ ಮುಖ್ಯಮಂತ್ರಿಯವರ ಪ್ರಯಾಣ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೊನ್ನೆ ಸಂಜೆ ಇಲ್ಲಿಗೆ ಆಗಮಿಸಿ, ನೆನ್ನೆ ನೀಲಗಿರಿಗೆ ಪ್ರಯಾಣ ಮಾಡಿದರು ಅವರು ಅಲ್ಲಿ ೬ ನೇ ತಾ॥ ವರೆಗೆ ಇರುವರು.

○ ಪರ್ಷಿಯದ ಅರಸರ ಅಧಿಕಾರವನ್ನು ಮೊಟಕು ಮಾಡುವ ಬಗ್ಗೆ ಶಿರಬಾದ ಮುಸೂದೆಯು ಚರ್ಚೆ ಕಾಲದಲ್ಲಿ ಮಜಲಿಸ್ ಸಭೆಯ ಹಲವು ಸದಸ್ಯರು ಸಭಾತ್ಯಾಗ ಮಾಡಿದರು.

ಮಂಡ್ಯಕ್ಕೆ ವ್ಯವಸಾಯ ಕಾಲೇಜಿನ ವರ್ಗವಿಲ್ಲ

ಬೆಂಗಳೂರು ೨೪

ಹೆಬ್ಬಾಳಿನ ವ್ಯವಸಾಯ ಕಾಲೇಜನ್ನು ಮಂಡ್ಯಕ್ಕೆ ವರ್ಗಾಯಿಸ ಬೇಕಿಲ್ಲವೆಂದು ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ತಿಳಿಸಿರುತ್ತಾರೆ ಕಾಲೇಜಿನ ಸಂಶೋಧನಾ ವಿಭಾಗವನ್ನು ಅಭಿವೃದ್ಧಿಗೊಳಿಸುವ ಸಂಬಂಧವಾಗಿ ತಜ್ಞರೊಬ್ಬರಿಂದ ಬಂದಿರುವ ಸಲಹೆಗಳನ್ನು ಪರಿಶೀಲಿಸುತ್ತಿರುವುದಾಗಿ ಅವರು ಹೇಳಿರುತ್ತಾರೆ

ಹೊರಗಿನ ಪದವಿಗಳಿಗೆ ಮೈಸೂರು ಮಾನ್ಯತೆ

ಧಾರ್ವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಬಿ ಕಾಂ ಮತ್ತು ಬಿ ಕಾಂ ಪ್ರಶಸ್ತಿಗಳನ್ನೂ ರೂರ್ಕಿ ವಿಶ್ವವಿದ್ಯಾಲಯದ ಬಿ ಇ ಪದವಿ ಪ್ರಶಸ್ತಿಯನ್ನೂ ಪೂನಾ ವಿಶ್ವವಿದ್ಯಾಲಯದ ಬಿ ಎಸ್‌ಸಿ ಪ್ರಶಸ್ತಿಯನ್ನೂ ಮೈಸೂರು ವಿಶ್ವವಿದ್ಯಾಲಯವು ಮಾನ್ಯ ಮಾಡುವಂತೆ ಬೆಂಗಳೂರಿನಲ್ಲಿ ಸೇರಿದ ಅಕೇಡೆಮಿಕ್ ಕೌನ್ಸಿಲ್ ಸಭೆಯು ಶಿಫಾರಸು ಮಾಡಿರುತ್ತದೆ

ಗ್ರೀನ್ ಮಾರ್ಕ್ ಪಡೆದ ಉತ್ತೀರ್ಣರಾದವರಿಗೆ ಪದಕಗಳನ್ನು ಕೊಡಲು ಬಂದಿರುವ ವಿಶ್ವವಿದ್ಯಾಲಯದ ಕೌನ್ಸಿಲಿನವರು ಸೂಚಿಸಿ ಕಳುಹಿಸಿದ್ದ ನಿರ್ಣಯವನ್ನು ಜನ ನಾಯಕರು ಹಾಕಲಿಂಗದ ವಿದ್ಯಾರ್ಥಿಗಳು ಸಂಗೀತ ರಥವಂ ಬಿ ಸಿಕಲ್ ಪ್ರೈಸ್ಕೆ ಸಂಬಂಧಿಸಿದಂತೆ ಪ್ರಾವೀಣ್ಯತೆ ಪಡೆದವರಿಗೆ ಕೊಡಬೇಕೆನ್ನುವ ಗಿಫ್ಟ್‌ನ ಕಾಪೇರಿಟಿವ್ ಯವರು ಕಟ್ಟಿ ಬೇಕಿದೆ ಹೊಸ ಸಂಗೀತ ಸಮಯಸ್ಥ ಮಹಿಳೆಯರಿಗೆ ಸಾರ್ವಜನಿಕ ಸೇವೆಯಲ್ಲಿ ಶಿಕ್ಷಣ ಕೊಡುವಂತೆ ಕೋರಿ ಅವರಿಗೆ ಸ್ಕಾಲರ್‌ಷಿಪ್ ಕೊಡಲು ದಿವಂಗತ ಎಲ್ಬರ್ಟ ಬ್ಯಾನರ್ಜಿಯವರು ತಮ್ಮ ವಿಲ್ಲಿನಲ್ಲಿ ತೋರಿಸಿದ ಮತ್ತು ೭೫೦ ರೂ ಗಳ ದಾನವನ್ನು ಸಭೆಯು ಅಂಗೀಕರಿಸಿರುತ್ತದೆ

ರಫ್ತು ವ್ಯಾಪಾರದಲ್ಲಿ ೨೫೫ ಕೋಟಿ ರೂ ಕಡಿಮೆ

ಭಾರತ ಸರ್ಕಾರದವರು ಇದೇ ಡಿಸೆಂಬರ್ ಒಂದನೇ ತಾರೀಖಿನವರೆಗೂ ಹತ್ತಿ ಬಟ್ಟೆಗಳ ಸ್ವತಂತ್ರ ರಫ್ತಿಗೆ ಅವಕಾಶವಿತ್ತಿರುವರು ... ಬಟ್ಟೆಗಳ ರಫ್ತಿನ ಪ್ರಮಾಣವನ್ನು ... ಕಳೆದ ವರ್ಷ ವಿದೇಶೀ ವ್ಯಾಪಾರದಿಂದ ... ಹಣದಲ್ಲಿ ೧೫೫ ಕೋಟಿ ರೂ ... ಕಡಿಮೆಯಾದುದಾಗಿ ಹೇಳಲಾಗಿದೆ

ಹೆಚ್ ಜಿ ಇ ಸಿ

ರೇಡಿಯೋ ಭಾಗಗಳು ... ನಲ್ಲಿ ದೊರೆಯುತ್ತವೆ

ಲೌಡ್ ಸ್ಪೀಕರುಗಳೂ ಬಾಡಿಗೆಗೆ ದೊರೆಯುವುವು

ರೇಡಿಯೋ ಹೌಸ್,

೨೧೦ ಇರ್ವಿನ್ ರಸ್ತೆ, ಮೈಸೂರು

ರೇಷ್ಮೆ ಮೊಟ್ಟೆ ವರ್ತಕರ ಸಂಘ

ಚಾಮರಾಜನಗರ ೨೦

ಮೈಸೂರು ಜಿಲ್ಲಾ ರೇಷ್ಮೆ ಮೊಟ್ಟೆ ತಯಾರಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಈ ದಿನ ಇಲ್ಲಿ ನಡೆಯಿತು ಶಾಸನ ಸಭಾ ಸದಸ್ಯರಾದ ಶ್ರೀಯುತ ಎಂ ಮಾದಪ್ಪನವರು ಅಧ್ಯಕ್ಷತೆ ವಹಿಸಿದ್ದರು ಸರ್ಕಾರಿ ಸಹಾಯ ಪಡೆದ ರೇಷ್ಮೆ ಮೊಟ್ಟೆ ಉತ್ಪಾದನೆಯವರಿಗೆ ಒದಗಿಸುತ್ತಿರುವ ಸಹಾಯ ಸೌಲಭ್ಯಗಳನ್ನು ಖಾಸಗಿ ತಯಾರಕರಿಗೂ ಬಿತ್ತನೆ ಕೇಂದ್ರಗಳಲ್ಲಿ ಒದಗಿಸುವಂತೆ ಸರ್ಕಾರವನ್ನು ಕೋರುವ ನಿರ್ಣಯ ಮಾಡಲಾಯಿತು ಮೂಗೂರು ಕೋಲ್ಡ್ ಸ್ಟೋರೇಜ್‌ನ ಲಭ್ಯವನ್ನು ಖಾಸಗಿಯವರಿಗೂ ಒದಗಿಸುವಂತೆಯೂ, ಬಿಳಿ ಜಾತಿಯ ಬಿತ್ತನೆ ಮೊಟ್ಟೆಗಳನ್ನು ಅವರುಗಳಿಗೆ ಕೊಡ ಬೇಕೆಂದೂ ಪ್ರಾರ್ಥಿಸಲಾಯಿತು ರೇಷ್ಮೆ ಮೊಟ್ಟೆ ಹಂಚುವಿಕೆಯ ಹತೋಟಿ ಕಾನೂನಿನಿಂದ ಖಾಸಗಿಯವರಿಗೆ ಯಾವ ಪ್ರತಿಬಂಧವೂ ಆಗದಂತೆಯೂ ನೋಡಿಕೊಳ್ಳುವಂತೆ ವಿನಂತಿ ಮಾಡಿಕೊಳ್ಳಲಾಯಿತು

ಹತ್ತು ಮೊಳದ ಸೀರೆ ಕೂಡದೆಂದು ರಾಜಾಜಿ

ಭಾರತೀಯ ಮಹಿಳೆಯರು ಧರಿಸುವ ಉಡಿಗೆಯು ಅವರ ಗಾಂಭೀರ್ಯವನ್ನು ಹೆಚ್ಚಿಸುವುದೆಂದೂ, ಆದರೆ ಆಧುನಿಕವಾದ ಅಲಂಕಾರ ಪದ್ಧತಿಯಂತೆ ೫ ಗಜದ ಸೀರೆಗಳನ್ನು ಉಟ್ಟುಕೊಳ್ಳುವ ಬಗ್ಗೆ ತಮಗೆ ವ್ಯಾಕುಲವಾಗಿರುವುದೆಂದೂ ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಹೇಳಿರುತ್ತಾರೆ ಹಿಂದಿನಿಂದಲೂ ಬಂದಿರುವ ಪದ್ಧತಿಯನ್ನು ಅನುಸರಿಸಬೇಕೆಂದು ಅವರು ಪ್ರಾರ್ಥಿಸಿರುತ್ತಾರೆ ಗಂಡಸರು ಇತರರ ಮಾರ್ಗವನ್ನು ಅವಲಂಬಿಸಿದರೂ ಸ್ತ್ರೀಯರು ಪೂರ್ವಾಚಾರವನ್ನು ಮರೆಯಬಾರದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೩೦ ಡಿ ರವೀಂದ್ರ, ವೀಣೆ ಮಧ್ಯಾಹ್ನ ೧ ೪೦ ಕೊಳಲು ... ಆರ್ ಎಸ್ ಬದ್ರಿ ಸಿತಾರ್ ... ಸಂಜೆ ೫ ೪೦ ಮತ್ತು ೬ ೪೦ ವಿ ಶಂಕರನ್, ಸಂಗೀತ ೬ ೧೦ ಗಾನ ವಿಹಾರ ೭ ಆರ್ ಎಸ್ ಬದ್ರಿ, ಸಿತಾರ್ ೭ ೪೦ ಸಿ ವಿ ಶ್ರೀನಿವಾಸಮೂರ್ತಿ ಕನ್ನಡದಲ್ಲಿ ಭಾಷಣ ... ಡಿ ರವೀಂದ್ರ, ವೀಣೆ ... ಎಂ ಜಿ ವಿಜಯಸಾರಥಿ, ... ೯ ೪೦ ಬಿ ಕೆ ಪಟ್ಟಮ್ಮಾಳ್ ...

SRI RAGHAVENDRA INSTITUTE

1661 Kabir Road Lashkar Mohalla Mysore

CLASSES FROM 1 6 53

Ajmer Inter (in private), Hindi, L S From 2nd or 3rd year, Madras & Benares Matric (with or without L S), Dancing & Music

ಆಂಧ್ರ ಪ್ರಾಂತ್ಯಕ್ಕೆ ಹೈದರಾಬಾದ್ ಐ. ಜಿ. ಪಿ.

ಹೈದರಾಬಾದಿನ ಪೊಲೀಸು ಇನ್ಸ್‌ಪೆಕ್ಟರ್ ಜನರಲ್ಲರಾದ ಪಿ ಕೆ ಮೋನಪ್ಪನವರು ಆಂಧ್ರ ಪ್ರಾಂತದ ಪ್ರಥಮ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾಗುವ ಸಂಭವವಿದೆ

ಇಟ್ಟಿಗೆ ಗೂಡಿನ ರಾಯಲ್ಟಿ ದರ ಹೆಚ್ಚಳ

ಮೈಸೂರು ಸಿಟಿಯಿಂದ ಹತ್ತು ಮೈಲಿ ಫಾಸಲೆಯುಲ್ಲಿರುವ ಪ್ರದೇಶಗಳಲ್ಲಿ ಇಟ್ಟಿಗೆ ಗೂಡುಗಳನ್ನು ಸುಡುವ ಬಗ್ಗೆ ಇದುವರೆಗೂ ಇದ್ದ, ಸಾವಿರ ಇಟ್ಟಿಗೆಗೆ ಆರಣೆ ರಾಯಲ್ಟಿ ದರವನ್ನು ಸರ್ಕಾರದವರು ೧ ರೂ ವರೆಗೆ ಹೆಚ್ಚಿಸಿರುತ್ತಾರೆ ೧೧ ಮೈಲಿ ಆಚೆ ಇರುವ ಸ್ಥಳಗಳಿಗೆ ೧೨ ಆಣೆಯನ್ನು ಕೊಡಬೇಕೆಂದು ಸೂಚಿಸಲಾಗಿದೆ

ರಾಷ್ಟ್ರೀಯ ಹಾಕಿ ಪಂದ್ಯದ ಪ್ರಸಾರ

ರಾಜಧಾನಿಯ ಆಲ್ ಇಂಡಿಯಾ ರೇಡಿಯೋದವರು ನಾಳೆ, ನಾಳಿದ್ದು ಮತ್ತು ೩೦ ನೇ ತಾ॥ ಸಂಜೆ ೧೫ ಮತ್ತು ೬ ೩೦ ಗಂಟೆಗೆ ರಾಷ್ಟ್ರೀಯ ಹಾಕಿ ಪಂದ್ಯದ ಸೆಮಿಫೈನಲ್ಸ್ ಮತ್ತು ಫೈನಲ್ ಪಂದ್ಯಗಳ ಬಗ್ಗೆ ವ್ಯಾಖ್ಯಾನಗಳನ್ನು ಪ್ರಸಾರ ಮಾಡಲಿರುವರು

ಸದಾಶಿವರಾಯರ ಜೀವನದ ಬಗ್ಗೆ ರೇಡಿಯೋ ಪ್ರಸಾರ

ಕರ್ನಾಟಕ ಸಂಗೀತದ ಕೃತಿಗಳನ್ನು ಬರೆದು ಪ್ರಖ್ಯಾತರಾಗಿದ್ದ ಮೈಸೂರು ಸದಾಶಿವರಾಯರ ಜೀವನ ಚರಿತ್ರೆ ಮತ್ತು ಅವರ ಸಾಧನೆ ಇವುಗಳನ್ನು ಕುರಿತು ಇದೇ ೨೯ನೇ ತಾ॥ ರಾತ್ರಿ ೮॥ ಗಂಟೆಗೆ ಮೈಸೂರಿನ ರೇಡಿಯೋದಿಂದಲ್ಲಿ ಪ್ರಸಾರ ಮಾಡಲಾಗುವುದು ಶ್ರೀ ಸದಾಶಿವರಾಯರನ್ನು ಬಲ್ಲವರಾದ, ೮೦ ವರ್ಷದ ಶ್ರೀ ಕೆ ವಾಸುದೇವಾಚಾರ್ಯರ ವಿಷಯವನ್ನೂ ಸಹ ಆಗ ತಿಳಿಸಲಾಗುವುದು ಶಿಷ್ಯರುಗಳಾದ ವಾಸುದೇವಾಚಾರ್ಯರು, ಟಿಟ್ಟೆ ಕೃಷ್ಣಯ್ಯಂಗಾರ್, ಆರ್. ಕೆ ಶ್ರೀಕಂಠನ್, ಟಿ ನಾಗಮ್ಮ ಮತ್ತು ಎಂ ಎಸ್ ಶೆಲ್ವಪುಳ್ಳೆ ಅಯ್ಯಂಗಾರ್ ರವರು ರಾಯರ ಕೃತಿಗಳನ್ನು ಹಾಡುವರು ಶ್ರೀ ಹೆಚ್ ಯೋಗಾನರಸಿಂಹರವರು ಅವರ ಜೀವನದ ಬಗ್ಗೆ ವಿಮರ್ಶೆ ಮಾಡುವರು ಸದಾಶಿವರಾಯರ ಮೊಮ್ಮಕ್ಕಳು ಶ್ರೀ ಆನಂದರಾಯರು ತಮ್ಮ ಅಜ್ಜಂದಿರ ಜೀವನದ ಹಲವು ವಿಷಯಗಳನ್ನು ತಿಳಿಸುವರು

SRI GAYATHRI

TALKIES

TO-DAY & TOMORROW

M G M's

BATHING BEAUTY

(Technicolor)

With — Red Skelton

Esther Williams

On 27th & 28th

ROBIN HOOD

ಹಕ್ಕಿ ತಿನ್ನಲು ಬಂದ ಸರ್ಪವನ್ನು ಹಕ್ಕಿ ಓಡಿಸಿತು

ಕಾರವಾರದಲ್ಲಿ ಒಂದು ಅರಳಿ ಮರದ ಮೇಲೆ ಪಕ್ಷಿಯೊಂದು ತನ್ನ ಗೂಡಿನಲ್ಲಿ ಮೊಟ್ಟೆಗಳನ್ನು ಹಾಕಿದುದರ ವಾಸನೆ ಹಿಡಿದು ಹಾವೊಂದು ಅವನ್ನು ತಿನ್ನಲು ಮರವನ್ನು ಹತ್ತಿತೆಂದೂ, ಹಾವಿನ ಇಂಗಿತವನ್ನರಿತ ಹಕ್ಕಿಯು ಅದರ ಹೆಡೆಯ ಮೇಲೆ ಕುಕ್ಕುತ್ತಾ ಅರ್ಧಗಂಟೆಯ ತರುವಾಯ ಹಾವನ್ನು ಓಡಿಸಿತೆಂದು ವರದಿಯಾಗಿದೆ

ವಿವಾಹ ಮಹೋತ್ಸವಗಳು

ರಾಜಧಾನಿಯ ಸಂಗಮೇಶ್ವರ ಬಸ್ ಸರ್ವಿಸ್ಸಿನ ಮಾಲೀಕರಾದ ಶ್ರೀ ಎಸ್ ಸಂಗಯ್ಯನವರು ತಮ್ಮ ಕುಮಾರಿ ಸೌ॥ ಶಾರದಾರವರನ್ನು ಇದೇ ಊರಿನ ಶ್ರೀ ಜಿ ಎ ನಾರಾಯಣ ಶ್ರೋತ್ರಿಯವರ ಮಗ ಶ್ರೀ ಎನ್ ಎಸ್ ನಂಜುಂಡ ಸ್ವಾಮಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಡಾ॥ ಎಂ ಸಿದ್ದಲಿಂಗಯ್ಯನವರು ತಮ್ಮ ಮಗಳು ಸೌ॥ ಉಮಾದೇವಿಯನ್ನು ಕೃಷ್ಣರಾಜನಗರದ ಬಟ್ಟೆ ವರ್ತಕರಾದ ಶ್ರೀ ಬಿ ಎಸ್ ನಾಗರಾಜ್‌ರವರ ಸಹೋದರ ಶ್ರೀ ಬಿ ಎಸ್ ಸುಕಂದರಾಜ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಶ್ರೀಮತಿ ಮಾದಮ್ಮನವರು ತಮ್ಮ ದತ್ತು ಪುತ್ರ ಲಿಂಗೇಗೌಡರಿಗೆ ನಂಜನಗೂಡು ಶ್ರೀ ಮಾದಪ್ಪನವರ ಕುಮಾರಿ ಶ್ರೀಮತಿ ಮಹದೇವಮ್ಮನನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಡೆಸಿದರು

ಶ್ರೀ ಹೊನ್ನಪ್ಪರು ಮುದ್ದಪ್ಪನವರು ತಮ್ಮ ಕುಮಾರಿ ಶ್ರೀಮತಿ ಮಹದೇವಮ್ಮನನ್ನು ಶ್ರೀ ಪುಟ್ಟಮಾದಪ್ಪನವರ ಪುತ್ರ ಶ್ರೀ ಶ್ರೀ ಪಿ ನಾಗಭೂಷಣರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

॥ಶ್ರೀ॥

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ, ಮೈಸೂರು

ಮೇಲಿನ ಶಿಶುವಿಹಾರ ಮುಖ್ಯಸ್ಥ ಶ್ರೀ ಜಗದಂಬಾ ಶಿಶುವಿಹಾರವನ್ನು ಜೂನ್ ಪುನಃ ತೆರೆಯಲಾಗಿದೆ ಕಿಂಡರ್ ಗಾರ್ಟನ್ ಮಾಂಟಿಸ್ಸೊರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾದರಿಗಳನ್ನನುಸರಿಸಿ ಮಿಡಲ್ ಫಾರ್ಮ್ ... ಇಂಗ್ಲೀಷಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕೂಡಲೇ ಮಕ್ಕಳ ತಂದೆತಾಯಿಗಳು ತಮ್ಮ ಮಕ್ಕಳನ್ನು ಸೇರಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ, ಡೈರೆಕ್ಟರ್

Edited, Printed and Published by A R Nagarajan at Sadhvi Press, D Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ., ಇಂಡಿಯ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೬-೫ ೧೯೫೩ [ಸಂಚಿಕೆ ೨೪೪

ಅಜಾದರು ಹಂಗಾಮಿ ಕಾಂಗ್ರೆಸ್ ಅಧ್ಯಕ್ಷರು

ದೇವರಾಜ ಮೊಹಲ್ಲಾ ದಿನಾಚರಣೆ

ಮೈಸೂರು ೨೬

ನಗರದ ಪೌರಸಭೆಯವರು ನೆನ್ನೆ ದೇವರಾಜ ಮೊಹಲ್ಲಾ ದಿನಾಚರಣೆಯನ್ನು ನೆರವೇರಿಸಿದರು. ಬೆಳಗ್ಗೆ ಪಡುವಾರಹಳ್ಳಿ ಮತ್ತು ಒಂಟಿಕೊಪ್ಪಲುಗಳಿಗೆ ಪೌರಸಭಾಧ್ಯಕ್ಷರು, ಆರೋಗ್ಯಾಧಿಕಾರಿಗಳು ಭೇಟಿಯಿತ್ತು ರಸ್ತೆ, ಪಾಕೀಜು, ರಿಪೇರಿ ಮುಂತಾದ ಕೆಲಸ ಕಾರ್ಯಗಳನ್ನು ವೀಕ್ಷಿಸಿದರು. ೧೨೦ ಮಕ್ಕಳಿಗೆ ಸ್ನಾನ, ೯೭ ಬಾಲಕ ಬಾಲಕಿಯರಿಗೆ ಹಾಲು ಹಂಚಿಕೆ, ೨೭ ಮಕ್ಕಳಿಗೆ ಹೊಸದಾಗಿ ಮತ್ತು ೧೧೩ ಮಕ್ಕಳಿಗೆ ಪುನಃ ಸಿಡುಬು ಹಾಕುವುದು, ಇವುಗಳನ್ನು ನಡೆಸಲಾಯಿತು. ೧೯ ಬಾವಿಗಳನ್ನು ಶುದ್ಧಿ ಮಾಡಿಸಲಾಯಿತು. ೫೮ ಮನೆಗಳಿಗೆ ಸುಣ್ಣವನ್ನು ಹೊಡೆಯಲಾಯಿತು.

ಮಕ್ಕಳ ಪೋಷಣೆ ಸಂಬಂಧವಾಗಿ ಶ್ರೀ ಸಿದ್ದಯ್ಯ ಎಂಬುವರ ಮಗಳು ಗೌರಿ, ಶ್ರೀ ಚಲುವಯ್ಯನವರ ಮಗಳು ಚನ್ನಮ್ಮ ಮತ್ತು ಕಾಳಯ್ಯನವರ ಮಗ ನಂಜಯ್ಯ ಈ ಮಕ್ಕಳಿಗೆ ಕ್ರಮವಾಗಿ ಬಹುಮಾನಗಳು ದೊರೆತುವು. ಉತ್ತಮವಾಗಿ ಮನೆಗಳನ್ನು ಇಟ್ಟುಕೊಂಡವರ ಪೈಕಿ ಶ್ರೀ ಬೋರಯ್ಯ, ಶ್ರೀ ದೊಡ್ಡ ನಂಜಯ್ಯ, ಮತ್ತು ಶ್ರೀ ಹಳ್ಳಿ ಗೌರೀಗೌಡ ಇವರಿಗೆ ಕ್ರಮವಾಗಿ ಬಹುಮಾನಗಳು ಸಿಕ್ಕಿದುವು.

ಸಂಜೆ ಸಭೆಯು ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಮಾತೃಮಂಡಲಿ ಕಟ್ಟಡದಲ್ಲಿ ನೆರೆಯಿತು. ಗಾನ ಕಲಾ ಸಂಘದ ವಿದ್ಯಾರ್ಥಿನಿಯರಿಂದ ಪ್ರಾರ್ಥನೆ, ಶ್ರೀ ಎಸ್ ಕಂಠರಾಯರಿಂದ ಲಾವಣಿ ಮತ್ತು ಮಾತೃ ಮಂಡಲಿಯ ಬಾಲಕಿಯರ ನೃತ್ಯ ಇವುಗಳು ನಡೆದುವು. ಕೋಲಾಟವೂ ಏರ್ಪಾಡಾಗಿದ್ದಿತು.

ಪೌರಸಭಾ ಸದಸ್ಯರುಗಳಾದ ಮಿ|| ಎಲ್ ರಾಮಚಂದ್ರ ರಾವ್, ಟಿ ನರಸಿಂಹಯ್ಯಂಗಾರ್, ಶ್ರೀ ಎ ರಾಮಣ್ಣ ಮತ್ತು ಶ್ರೀಮತಿ ಕಾಮೇಶ್ವರಮ್ಮನವರು ಭಾಷಣ ಮಾಡಿ ಮೊಹಲ್ಲಾ ದಿನಾಚರಣೆ ಮಹತ್ವವನ್ನು ವಿವರಿಸಿದರು. ಅಧ್ಯಕ್ಷರು ಬಹುಮಾನಗಳನ್ನು ಹಂಚಿದನಂತರ ನಗರದ ಆರೋಗ್ಯವನ್ನು ಕಾಪಾಡುವುದರಲ್ಲಿ ಜನರು ಪೌರಸಭೆಯವರೊಡನೆ ಸಹಕರಿಸಬೇಕೆಂದು ಕೋರಿದರು.

ದೇವರ ವಿಗ್ರಹ ತಯಾರಿಸಿ ಒಡೆಯುವ ಚಳುವಳಿ

ದ್ರಾವಿಡ ಸಂಘದ ಕಾರ್ಯಕರ್ತರು ಕೆಲವು ಕಡೆ ತಮ್ಮ ಸ್ಥಳಗಳಲ್ಲಿ ದೇವರ ವಿಗ್ರಹವನ್ನು ತಯಾರಿಸಿ ಅವನ್ನು ಒಡೆದು ಹಾಕಿ, ದೇವರ ಅಸ್ತಿತ್ವದಲ್ಲಿ ತಮಗೆ ನಂಬಿಕೆಯಿಲ್ಲದಿರುವುದನ್ನು ಪ್ರದರ್ಶಿಸುವಂತೆ ಆ ಸಂಘದ ಮುಖಂಡರಾದ ಇ ವಿ ರಾಮಸ್ವಾಮಿ ನಾಯಕರು ತಿಳಿಸಿರುವರು. ಆದರೆ ಇಂತಹ ಪ್ರದರ್ಶನಗಳು ರಾಜ್ಯದಲ್ಲಿ ಭಂಗಗೊಂಡವರಿಂದ ನಡೆಯುವುವೆಂದೂ, ಅದಕ್ಕಾಗಿ ಜನರು ಯೋಚಿಸಬೇಕಾಗಿಲ್ಲವೆಂದೂ ಮದ್ರಾಸ್ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಲನಚಿತ್ರಗಳ ಮೂಲಕ ವಿದ್ಯಾಭ್ಯಾಸ ತರಗತಿ

ಮುಕ್ತಾಯ ಸಮಾರಂಭದಲ್ಲಿ ವಿದ್ಯಾಮಂತ್ರಿಯವರ ಭಾಷಣ

ಮೈಸೂರು ೨೬

ವಿಶ್ವಸಂಸ್ಥೆಯ ವಿದ್ಯಾಭ್ಯಾಸ ಸಾಂಸ್ಕೃತಿಕ ಸಮಿತಿಯವರು ಕಳೆದ ೩ ತಿಂಗಳಿಂದಲೂ ಇಲವಾಲದ ಭವನದಲ್ಲಿ ನಡೆಸುತ್ತಿದ್ದ ಚಲನಚಿತ್ರಗಳ ಮೂಲಕ ಶಿಕ್ಷಣದ ಮುಕ್ತಾಯ ಸಮಾರಂಭವು ನೆನ್ನೆ ವಸ್ತು ಪ್ರದರ್ಶನದ ಕಟ್ಟಡದಲ್ಲಿ ನೆರವೇರಿತು. ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು.

ಮಂತ್ರಿಯವರಿಗೆ ರಿಸರ್ವ್ ಪೋಲೀಸಿನವರು ಗೌರವ ರಕ್ಷೆ ಸಲ್ಲಿಸಿದನಂತರ ಇವರನ್ನು ವಿಶ್ವಸಂಸ್ಥೆ ಅಧಿಕಾರಿ ಮೆಕ್ ಲಾರೆನ್, ವಯಸ್ಕರ ಶಿಕ್ಷಣ ಸಮಿತಿ ಕಾರ್ಯದರ್ಶಿ ಶ್ರೀ ಎಂ. ಚಿನ್ನಯ್ಯ ಮುಂತಾದವರು ಸ್ವಾಗತಿಸಿದರು. ವರ್ಣರಂಜಿತ ಚಲನ ಚಿತ್ರಗಳನ್ನು ಪ್ರದರ್ಶಿಸಿದ ಮೇಲೆ ಸಮಾರಂಭವು ಉಪಕ್ರಮವಾಯಿತು.

ಶ್ರೀ ಟಿ ಮಾದಯ್ಯ ಗೌಡರು ಸ್ವಾಗತ ಭಾಷಣ ಮಾಡಿದರು. ಸಮಾರಂಭಕ್ಕೆ ಆಗಮಿಸಿದ್ದ ಕೇಂದ್ರ ಸರ್ಕಾರದ ವಿದ್ಯಾ ಖಾತೆ ಅಧಿಕಾರಿ ಶ್ರೀ ಆರ್ ಎಸ್ ಶುಕ್ಲರವರು ಮಾತನಾಡಿ ವಯಸ್ಕರ ಶಿಕ್ಷಣದ ಬಗ್ಗೆ ಸಂಸ್ಥಾನದ ಸಮಿತಿಯವರು ನಡೆಸುತ್ತಿರುವ ಕಾರ್ಯಗಳನ್ನು ಪ್ರಶಂಸಿಸಿದರು. ಅನಂತರ ಶ್ರೀ ಮೆಕ್ ಲಾರೆನವರು ಚಲನ ಚಿತ್ರಗಳ ಮೂಲಕ ವಿದ್ಯಾಭ್ಯಾಸದ ಸಂಬಂಧವಾಗಿ ನಡೆಸಿರುವ ಕಾರ್ಯಕ್ರಮಗಳ ಬಗ್ಗೆ ವಿವರಣೆಯನ್ನಿತ್ತರು.

ಅಧ್ಯಕ್ಷರು ಮಾತನಾಡಿ ವಿಶ್ವ ಸಂಸ್ಥೆ ಅಧಿಕಾರಿಗಳಾದ ಮೆಕ್ ಲಾರೆನ್, ಆರ್ ಡಿ ಜೋನ್ಸ್ ಮತ್ತು ಭಾರತದ ವಿದ್ಯಾ ಪ್ರವೀಣರಾದ ಬುದ್ಧದೇವ ಬೋಸ್ ಮತ್ತು ಸೈಯದ್‌ರವರುಗಳ ಸೇವೆಯನ್ನು ಪ್ರಶಂಸಿಸಿದರು.

ಚಲನ ಚಿತ್ರಗಳ ಮೂಲಕ ವಿದ್ಯಾಭ್ಯಾಸ ಮಾಡಿಸುವ ತರಗತಿಯನ್ನು ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಒಂದೊಂದು ಸಾರಿ ಏರ್ಪಡಿಸುವುದರ ಬದಲು ದೇಶದ ಒಂದೇ ಕಡೆಯಲ್ಲಿ ಅದನ್ನು ಏರ್ಪಡಿಸಿ ಅಖಂಡ ಭಾರತದ ಮನೋಭಾವವು ಬೇರೂರುವಂತೆ ಮಾಡಬೇಕಾದುದು ಅಗತ್ಯವೆಂದು ತಿಳಿಸಿದರು.

ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಅಜಾದರು ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರು

ಬ್ರಿಟಿಷ್ ರಾಣಿಯವರ ಕಿರೀಟ ಧಾರಣೆ ಮತ್ತು ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನಗಳಲ್ಲಿ ಭಾಗವಹಿಸಲು ನಾಳೆದಿನ ಪ್ರಧಾನಿ ನೆಹರೂರವರು ಲಂಡನ್ನಿಗೆ ತೆರಳುವರು. ಅವರ ಕೆಲಸಗಳನ್ನು ವಿದ್ಯಾ ಮಂತ್ರಿ ಮೌಲಾನಾ ಆಜಾದರು ನೋಡಿಕೊಳ್ಳುವರು. ತಮ್ಮ ಗೈರು ಹಾಜರಿಯಲ್ಲಿ ಆಜಾದರೇ ಮಂತ್ರಿಮಂಡಲದ ಅಧ್ಯಕ್ಷತೆಯನ್ನು ವಹಿಸುವರೆಂದು ನೆಹರೂರವರು ಉಳಿದ ಮಂತ್ರಿಗಳಿಗೆ ತಿಳಿಸಿರುವರೆಂದು ಹೇಳಲಾಗಿದೆ. ವಿದೇಶಾಂಗ ಇಲಾಖೆಯ ಕೆಲಸವನ್ನೂ ಅವರು ವಹಿಸಿಕೊಳ್ಳುವರು. ಅಲ್ಲದೆ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕೇಂದ್ರ ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷರಾಗಿಯೂ ಅವರು ಕೆಲಸ ಮಾಡುವರೆಂದು ಗೊತ್ತಾಗಿದೆ.

ಬಂಡೆಯಿಂದ ಕಾರು ಹಾರಿ ಮರದ ಮೇಲೆ ಬಿತ್ತು

ಜಪಾನಿನ ಯೊಕೊಹಾಮಾ ನಗರದಲ್ಲಿರುವ ಅಮೆರಿಕದ ಉಪ ರಾಯಭಾರಿ ಚಾರ್ಲ್ಸ್ ಟೈಲರ್ ಎಂಬುವರು, ಇತರ ನಾಲ್ವರೊಡನೆ ಮೊನ್ನೆ ಮೋಟಾರಿನಲ್ಲಿ ಹೋಗುತ್ತಿದ್ದಾಗ ೨೦೦ ಅಡಿ ಎತ್ತರದ ಬಂಡೆಯಿಂದ ಕಾರು ಕೆಳಗೆ ಬಿದ್ದಿತೆಂದೂ, ಆದರೆ ಅದೃಷ್ಟವಶಾತ್ ಒಂದು ಮರದ ಮೇಲೆ ಅದು ಕುಳಿತುಕೊಳ್ಳಲಾಗಿ ಒಳಗಿದ್ದವರೆಲ್ಲರೂ ಪಾರಾದರೆಂದೂ ವರದಿಯಾಗಿದೆ.

ಮೋಟಾರು ಹಳ್ಳಕ್ಕೆ ಬಿದ್ದು ೧೦ ಜನರ ಮರಣ

ಫ್ರಾನ್ಸಿನ ಲಿಯೋನ್ಸ್ ನಗರದ ಬಳಿ ಒಂದು ಕಡೆ ಮೊನ್ನೆ ೩೫ ಮಂದಿ ಪ್ರಯಾಣಿಕರಿದ್ದ ಒಂದು ಮೋಟಾರು ಗಾಡಿಯು ಕೊರಕಲೊಂದರಲ್ಲಿ ಬಿದ್ದುದರಿಂದ ೧೦ ಜನರ ಪ್ರಾಣಹಾನಿಯಾಗಿ, ಉಳಿದವರೆಲ್ಲರೂ ಗಾಯಗೊಂಡಿರುವರೆಂದು ಹೇಳಲಾಗಿದೆ. ಬೆಟ್ಟದ ಪ್ರದೇಶದಲ್ಲಿ ಈ ಅನಾಹುತವು ನಡೆಯಿತೆಂದೂ, ಗಾಡಿಯು ತಂತಿ ಕಂಬಕ್ಕೆ ಡಿಕ್ಕಿ ಹೊಡೆದು ತಲೆಕೆಳಗಾಗಿ ಕಮರಿಗೆ ಮಗುಚಿಕೊಂಡಿತೆಂದೂ ಗೊತ್ತಾಗಿದೆ.

ಶಂಕರೇಶ್ವರ ಸ್ವಾಮಿಯವರಿಗೆ ಅಭಿಷೇಕ

ಟಿ ನರಸೀಪುರ ೨೬

ಟಿ ನರಸೀಪುರದ ತಾಲ್ಲೂಕು ತಿರುಮಕೂಡಲು ಸಂಗಮದಲ್ಲಿರುವ ಬೃಹಸ್ಪತ್ಯದ ಬಳಿ ಇರುವ ಪುರಾತನವಾದ ಶ್ರೀ ಶಂಕರೇಶ್ವರ ಸ್ವಾಮಿಯವರಿಗೆ ಕಳೆದ ಶಂಕರ ಜಯಂತಿ ದಿನ ಭಕ್ತಾದಿಗಳು ಅಭಿಷೇಕವನ್ನೂ, ಪಾನಕ ಪೂಜೆಯನ್ನೂ ಮಾಡಿ ಮತ್ತು ನೆನ್ನೆ ಸಂತರ್ಪಣೆಯನ್ನು ನಡೆಸಿದರು. ಶ್ರೀ ಹೆಚ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದರು. ನೆನ್ನೆ ಇಲ್ಲಿ ಸ್ವಲ್ಪ ಮಳೆಯಾಗಿರುತ್ತೆ.

ಇಲ್ಲಿನ ದಳವಾಯಿ ಅಗ್ರಹಾರದಲ್ಲಿರುವ ಶ್ರೀರಾಮ ಮಂದಿರದಲ್ಲಿ ನೆನ್ನೆಯಿಂದ ಇದೇ ೨೮ ನೇ ತಾ|| ವರೆಗೆ ಮೈಸೂರಿನಿಂದ ಬಂದಿರುವ ಶ್ರೀ ಸು ಕೃಷ್ಣಮೂರ್ತಿ ಮತ್ತು ಶ್ರೀಮತಿ ರುಕ್ಮಿಣಿಯವರಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ನಾಳೆ ಶ್ರೀಮತಿಯವರು ದೇಹ ಬೀಜಗಳು ಎಂಬ ವಿಷಯವಾಗಿಯೂ ಮತ್ತು ಶ್ರೀ ಕೃಷ್ಣಮೂರ್ತಿಯವರು ಯೋಗ ಮಾರ್ಗ ಎಂಬ ವಿಷಯವಾಗಿಯೂ ಉಪನ್ಯಾಸ ಮಾಡುವರು.

ಮನ್ಮಾಡಿನಲ್ಲಿ ನೀರಿನ ಪಡಿತರ

ಹೈದರಾಬಾದಿನ ಬಳಿ ಮನ್ಮಾಡ್ ಎಂಬ ಸುಪ್ರಸಿದ್ಧ ರೈಲು ಜಂಕ್ಷನ್ ಇರುವ ಊರಿನಲ್ಲಿ ನೀರಿನ ಅಭಾವದಿಂದ ಅದನ್ನು ಪಡಿತರದ ಮೂಲಕ ಹಂಚಲಾಗುತ್ತಿದೆ. ಒಬ್ಬನಿಗೆ ೧ ಕೊಡದಂತೆ ನೀರು ಕೊಡಲಾಗುತ್ತಿದೆ. ಕೊಡಕ್ಕೆ ೨ ರೂ ನಂತೆ ಅದರ ಮಾರಾಟವಾಗುತ್ತಿದೆ.

ಹಾರಲು ಹೊರಟ ವಿಮಾನ ರಸ್ತೆಯಲ್ಲಿ ಓಡಿತು

ಹಾಲೆಂಡಿನ ರಾಜಧಾನಿ ಆಮ್‌ಸ್ಟರ್‌ಡಾಮಿನಿಂದ ಪ್ಯಾರಿಸ್ಸಿಗೆ ನೆನ್ನೆ ಹೊರಟ ವಿಮಾನವೊಂದು ಹಾರುತ್ತಿದ್ದಾಗಲೇ ನೆಲಕ್ಕೆ ಬಿದ್ದು ಹೇಗ್ ನಗರದ ರಸ್ತೆಯಲ್ಲಿ ಸ್ವಲ್ಪದೂರ ಓಡಿ ಅನಂತರ ಇಬ್ಭಾಗವಾಗಿ ಒಡೆಯಿತೆಂದೂ, ಇಬ್ಬರು ದಾರಿಕಾರರು ಮಡಿದು, ೨೯ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಸರಪಳಿಯಲ್ಲಿ ಬಿಗಿದಿದ್ದ ಹುಚ್ಚ ಬೆಂಕಿಗೆ ಆಹುತಿ

ಕುಂಭಕೋಣದ ಒಂದು ಬೀದಿಯಲ್ಲಿ ಕಳೆದ ಶನಿವಾರ ಬೆಂಕಿಯುಂಟಾಗಿ ಏಳು ಮನೆಗಳು ನಾಶವಾದುವು. ಒಂದು ಮನೆಯ ಕೊಠಡಿಯಲ್ಲಿ ಸರಪಳಿಯಿಂದ ಬಿಗಿದು ಬಿಟ್ಟಿದ್ದ ಮಧ್ಯ ವಯಸ್ಕ ಹುಚ್ಚನೊಬ್ಬನು ಬೆಂದುಹೋದನು.

ಸಿ. ಜೆ. ವಾರ್ಕಿಯವರ ನಿಧನ

ಮದ್ರಾಸಿನ ಮಾಜಿ ವಿದ್ಯಾ ಸಚಿವರಾದ ಸಿ ಜೆ ವಾರ್ಕಿಯವರು ನೆನ್ನೆ ಎರ್ನಾಕುಲದಲ್ಲಿ ತೀವ್ರ ಅರೋಗದ ಪರಿಣಾಮವಾಗಿ ಸ್ವರ್ಗಸ್ಥರಾದರು. ಅವರಿಗೆ ೬೩ ವಯಸ್ಸಾಗಿದ್ದಿತು. ಅವರು ಕೆಲವು ಕಾಲ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು.

○ ಗೌರೀಶಂಕರ ಶಿಖರವನ್ನು ಹತ್ತುವ ಪ್ರಥಮ ಪ್ರಯತ್ನ ವಿಫಲವಾಗಿದೆ.

ಚರಖಾ ಸಂಘದ ಕಾರ್ಯಕರ್ತರ ಸಮ್ಮೇಳನ

ಇದೇ ಜೂನ್ ೧ ಮತ್ತು ೨ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ದಕ್ಷಿಣ ಭಾರತದ ಚರಖಾ ಸಂಘದ ಕಾರ್ಯಕರ್ತರ ಮತ್ತು ಖಾದಿ ಪ್ರೇಮಿಗಳ ಸಮ್ಮೇಳನವನ್ನು ಏರ್ಪಡಿಸಲಾಗಿದೆ ರಚನಾತ್ಮಕ ಕೆಲಸಗಳ ಮುಖಂಡರಾದ ಶ್ರೀ ಕೃಷ್ಣದಾಸ್ ಜಾಜೂ, ಶ್ರೀ ಕೃಷ್ಣದಾಸ್ ಗಾಂಧಿ, ಸರ್ವ ಸೇವಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರೂ, ಸಹ ಕಾರ್ಯದರ್ಶಿಗಳಾದ ಶ್ರೀ ವಲ್ಲಭಸ್ವಾಮಿಯವರೇ ಮೊದಲಾದವರೂ ಆಗಮಿಸುತ್ತಾರೆ ತಮಿಳು ನಾಡು, ಕೇರಳ, ಆಂಧ್ರ, ಕರ್ನಾಟಕ, ಹೈದರಾಬಾದ ಮತ್ತು ಮೈಸೂರು ಪ್ರಾಂತ್ಯಗಳಿಂದ ಸುಮಾರು ೬೦೦ ಮಂದಿಗಿಂತ ಹೆಚ್ಚು ಕಾರ್ಯಕರ್ತರೂ ಖಾದಿ ಪ್ರೇಮಿಗಳೂ ಬರುವರು ಈ ಸಮ್ಮೇಳನದಲ್ಲಿ ಭಾಗವಹಿಸುವ ಎಲ್ಲ ಕಾರ್ಯಕರ್ತರ ಊಟ ವಸತಿಯನ್ನು ಮೈಸೂರು ಮಹಾಜನರು ಏರ್ಪಡಿಸಬೇಕಾಗಿರುತ್ತದೆ ಇದರಲ್ಲಿ ಸರ್ವರೂ ದಯವಿಟ್ಟು ಯಥಾಶಕ್ತಿ ಹಣ ಸಹಾಯ ಮಾಡಬೇಕೆಂದು ಸ್ವಾಗತ ಸಮಿತಿಯ ಶ್ರೀಗಳು ಎಸ್ ವಾಸುದೇವರಾವ್ ಮತ್ತು ಹೆಚ್ ಆರ್ ವೆಂಕಟರಾವ ನಾಯ್ಡುರವರು ಕೋರಿರುತ್ತಾರೆ

ಮಾಧ್ವ ಮಹಾ ಮಂಡಲಿ ಸಭೆ

ಅಖಿಲ ಭಾರತ ಮಾಧ್ವ ಮಹಾಮಂಡಲಿಯ ಮೈಸೂರು ಶಾಖಾ ಸಮಿತಿಯ . ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಸೇರುವುದು ಸದಸ್ಯರೆಲ್ಲರೂ ಬರುವಂತೆ ಕೋರಲಾಗಿದೆ

ಶಾಲಾ ತರಗತಿ ಆರಂಭೋತ್ಸವ

ಮೈಸೂರು ಹಿರಿಯ ಶಾಸನ ಸಭಾ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲ ಕೃಷ್ಣ ಶೆಟ್ಟರು ಮೊನ್ನೆ ಛತ್ರಿ ನರಸಪ್ಪನವರ ಛತ್ರದ ಕಟ್ಟಡದಲ್ಲಿರುವ ಶಾರದಾ ವಿಲಾಸ ನ್ಯೂ ಟೈಪ್ ಮಿಡಲ್ ಸ್ಕೂಲಿನಲ್ಲಿ ಮಾಧ್ಯಮಿಕ ನಾಲ್ಕನೇ ತರಗತಿಯ ಆರಂಭೋತ್ಸವವನ್ನು ನೆರವೇರಿಸಿದರು

ಸ್ವೀಕಾರ

ರಾಜಧಾನಿಯ ನಜರ್‌ಬಾದಿನಲ್ಲಿರುವ ವಿಜಯ್ ಇಂಡಸ್ಟ್ರೀಸ್ ಸಂಸ್ಥೆಯವರು ತಯಾರಿಸುವ ಹಸಿರವ ಸ್ನೋ, ಹೇರ್ ಆಯಿಲ್ ಪ್ಯಾಕೆಟ್ ಮತ್ತು ಅರೋಮ ಸುಗಂಧ ಸ್ವಾರ್ ಅಡಿಕೆಪುಡಿ ಪೊಟ್ಟಣಗಳನ್ನು ಬಹುಮಾನದಿಂದ ಸ್ವೀಕರಿಸಿದ್ದೇವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವಾರ್ತಾ ಪ್ರಸಾರ, ಸಂಗೀತ ಮಧ್ಯಾಹ್ನ ೧ ೩ ಪಿಟೀಲು ೨ ವನಿತಾ ವಿಹಾರ ಸಂಜೆ ೬ ೩೦ ನಾಗಸ್ವರ ೬ ೧೦ ಬಾಲ ಜಗತ್ ೭ ಸಿಸ್ತಂಭರ ತೋಟಗಾರಿಕೆ, ಗೀತೆ ಮತ್ತು ಭಜನೆಗಳು ೭ ೩೦ ಹೆಚ್ ಸುಬ್ಬರಾಯರಿಂದ ವಿಶ್ವ ವಾರ್ತಾ ವಿಮರ್ಶೆ ಶೀಲಮ್ಮ ಕಥಾವಳಿ, ವೀಣೆ ಮತ್ತು ಗಾಯನ ೮ ೩೦ ರಾಷ್ಟ್ರೀಯ ಕಾರ್ಯಕ್ರಮ ೯ ೧೫ ಟಿ ಎಸ್ ಬಾಯಮ್ಮನವರಿಂದ ಕನ್ನಡ ಗೀತೆಗಳು ೯ ೩೦ ನಿಮ್ಮ ಮೆಚ್ಚಿನ ಗೀತೆಗಳು

ದಕ್ಷಿಣದಲ್ಲಿ ಹೊಸ ಪ್ರಾಂತ ರಚನೆಗೆ ಕೋರಿಕೆ

ಪಾಲಘಾಟಿನಲ್ಲಿ ಸೇರಿದ್ದ ಮಲಿಯಾಳ ಪ್ರದೇಶ ರಾಜಕೀಯ ಸಮ್ಮೇಳನದಲ್ಲಿ ಆಂಧ್ರ ಪ್ರಾಂತ ರಚನೆಯಾದ ನಂತರ ಉಳಿವ ಮದ್ರಾಸಿನ ವಿಭಾಗಗಳು, ತಿರುವಾಂಕೂರು-ಕೊಚ್ಚಿ ಮತ್ತು ಕೊಡಗು ಪ್ರದೇಶಗಳು ಸೇರಿದ ದಕ್ಷಿಣ ಪ್ರದೇಶ ಪ್ರಾಂತವನ್ನು ರಚಿಸುವಂತೆ ಭಾರತ ಸರ್ಕಾರವನ್ನು ಕೋರುವ ನಿರ್ಣಯವು ಅಂಗೀಕರಿಸಲ್ಪಟ್ಟಿರುತ್ತದೆ ನಿರ್ಣಯವನ್ನು ವಿರೋಧಿಸಿದ ೯ ಜನರ ಪೈಕಿ ಮದ್ರಾಸಿನ ಮಾಜಿ ಸಚಿವ ಕೆ ಮಾಧವ ಮೆನನ್‌ರವರೂ ಒಬ್ಬರು

ರೈಲಿನ ಮೇಲೆ ಡಕಾಯಿತರ ಧಾಳಿ ಯತ್ನ

ಯಮುನಾ ಸೇತುವೆ ಮತ್ತು ಚೋಲೆಸಾರ್ ಎಂಬ ನಿಲ್ದಾಣಗಳ ಮಧ್ಯೆ ಮೊನ್ನೆ ಹೋಗುತ್ತಿದ್ದ ರೈಲೊಂದನ್ನು ತಡೆದು ಪ್ರಯಾಣಿಕರನ್ನು ದೋಚಲು ಹಲವು ಡಕಾಯಿತರು ಪ್ರಯತ್ನ ನಡೆಸಿ ವಿಫಲರಾದರೆಂದೂ, ಆದರೆ ಅವರ ಗುಂಡಿನೇಟಿನಿಂದ ಒಬ್ಬ ಪ್ರಯಾಣಿಕನು ಮಡಿದುದಾಗಿಯೂ ವರದಿಯಾಗಿದೆ

ಅಸಿಸ್ಟೆಂಟ್ ಪ್ರೊಫೆಸರಾಗಿ ಖಾಯಂ

ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ತೆಲುಗು ಭಾಷೆಯ ಹಂಗಾಮಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದ ಶ್ರೀ ಕೆ ಸುಬ್ರಹ್ಮಣ್ಯಶಾಸ್ತ್ರಿಗಳನ್ನು ಖಾಯಂ ಮಾಡಲಾಗಿದೆ

ಬಸವ ಜಯಂತಿ

ಶ್ರೀ ಬಸವೇಶ್ವರ ಜಯಂತಿ ಮಹೋತ್ಸವದ ಅಂಗವಾಗಿ ಜಿಲ್ಲೆ ಮಹಿಳಾ ಸೇವಾ ಮಂಡಲಿಯವರು ಮೊನ್ನೆ ಸಾವಿರಾರು ಮಂದಿ ಬಡಬಗ್ಗರಿಗೆ ಅನ್ನ ಸಂತರ್ಪಣೆ ಮತ್ತು ಗೋವುಗಳಿಗೆ ಹುಲ್ಲು ಒದಗಿಸುವ ಕಾರ್ಯಗಳನ್ನು ನೆರವೇರಿಸಿದರು

ಜಿಲ್ಲಾ ವಿದ್ಯಾ ಸಮ್ಮೇಳನಗಳು

ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಶಿಫಾರಸುಗಳ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆಗಾಗಿ ಎಲ್ಲಾ ಜಿಲ್ಲೆಗಳಲ್ಲೂ ವಿದ್ಯಾ ಸಮ್ಮೇಳನಗಳನ್ನು ಇದೇ ತಿಂಗಳು ೩೦ ರಿಂದ ಜೂನ್ ೧೩ ರ ವರೆಗೆ ನಡೆಸುವಂತೆ ಏರ್ಪಾಡಾಗಿರುತ್ತದೆ

ಬೇರೆ ಕೆಲಸಗಾರರಿಗೆ ಉದ್ಯೋಗ ದೊರಕಿಲ್ಲ

ಇದೇ ತಿಂಗಳು ೮ನೇ ತಾ॥ ಕೆಲಸದಿಂದ ತಗೆಯಲ್ಪಟ್ಟವರೆಂದು ಹೇಳಲಾದ ಸರ್ಕಾರಿ ಬೇರೆ ಕಾರ್ಖಾನೆ ಕಾರ್ಮಿಕರಿಗೆ ಉದ್ಯೋಗವನ್ನು ಪುನಃ ಕೊಡಲಾಯಿತೆಂದೂ, ಕಾರ್ಮಿಕರಿಗೂ ಕಾರ್ಖಾನೆಯವರಿಗೂ ಇದ್ದ ವಿವಾದವು ಇತ್ಯರ್ಥವಾಗಿರುವುದಾಗಿಯೂ ಪ್ರಕಟವಾದ ಸುದ್ದಿಯು ನಿರಾಧಾರವಾದುದೆಂದು ಕಾರ್ಖಾನೆಯಲ್ಲಿದ್ದು ಕೆಲಸ ಕಳೆದುಕೊಂಡವರ ಪೈಕಿ ಒಬ್ಬರಾದ ಶ್ರೀ ಕೆ ಪಿ ಅಬ್ದುಲ್ ಖಾದರ್‌ರವರು ತಿಳಿಸಿರುತ್ತಾರೆ ಅಸಿಸ್ಟೆಂಟ್ ಲೇಬರ್ ಕಮಿಷನರರೂ ಸಹ ಕೆಲಸ ಕೊಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿಯೂ ಅವರು ಹೇಳಿರುತ್ತಾರೆ

ಮಾರ್ಷಲ್ ಟಿಟೋರವರಿಗೆ ನೆಹರೂ ಆಹ್ವಾನ

ಭಾರತಕ್ಕೆ ಭೇಟಿ ಕೊಡುವಂತೆ ಪ್ರಾರ್ಥಿಸಿ ಚೀನಾ ಅಧ್ಯಕ್ಷ ಮಾರ್ಷಲ್ ಟಿಟೋರವರಿಗೆ ಪ್ರಧಾನಿ ನೆಹರೂರವರು ಹಿಂದೆಯೇ ಪತ್ರ ಬರೆದಿದ್ದರಷ್ಟೆ? ಕೆಲವು ದಿನಗಳ ಹಿಂದೆ ಆಶಾ ಎಂಬ ಆನೆ ಮರಿಯನ್ನು ಚೀಣಕ್ಕೆ ಕಳುಹಿಸಿದ ಸಂದರ್ಭದಲ್ಲಿ ನೆಹರೂರವರು ಪುನಃ ತಮ್ಮ ಆಹ್ವಾನವನ್ನು ಅವರಿಗೆ ತಿಳಿಯಪಡಿಸಿರುವರೆಂದು ಹೇಳಲಾಗಿದೆ

ಲಂಡನ್ನಿಗೆ ಪ್ರಧಾನಿಗಳ ಪ್ರಯಾಣ

ಸಿಂಹಳದ ಪ್ರಧಾನಿ ಡಡ್ಲಿ ಸೇನಾನಾಯಕೆಯವರು ಮತ್ತು ಪಾಕಿಸ್ತಾನದ ಪ್ರಧಾನಿ ಮಹಮದ್ ಆಲಿಯವರು ಬ್ರಿಟಿಷ್ ರಾಣಿಯವರ ಕಿರೀಟ ಧಾರಣೆ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಗಳಲ್ಲಿ ಭಾಗವಹಿಸಲು ನೆನ್ನೆ ಲಂಡನ್ನಿಗೆ ಪ್ರಯಾಣ ಬೆಳೆಸಿದರು ಪಾಕಿಸ್ತಾನದ ಪ್ರಧಾನಿಯವರ ಗೈರುಹಾಜರಿಯಲ್ಲಿ ವಿದೇಶಾಂಗ ಮಂತ್ರಿ ಜಫರುಲ್ಲಾಖಾನರವರು ಹಂಗಾಮಿ ಪ್ರಧಾನಿಯಾಗಿರುವರು

ಕಂಬಿ ಬೇಕಿಲ್ಲದ ರೈಲು

ಅಮೆರಿಕದ ಇಲ್ಲಿನಾಯ್ ಸಂಸ್ಥಾನದ ಒಂದು ಕಂಪೆನಿಯವರು ಕಂಬಿಗಳಿಲ್ಲದೆ ನೆಲದ ಮೇಲೆ ಓಡಬಲ್ಲ ವಿದ್ಯುಚ್ಛಕ್ತಿ ರೈಲನ್ನು ನಿರ್ಮಿಸಿರುವರು ಅದರಲ್ಲಿ ಒಂದು ಇಂಜನ್ನು ಮತ್ತು ನಾಲ್ಕು ಗಾಡಿಗಳಿವೆ ಪ್ರತಿಯೊಂದು ಚಕ್ರಕ್ಕೂ ಒಂದೊಂದು ವಿದ್ಯುಚ್ಛಕ್ತಿ ಮೋಟಾರನ್ನು ಅಳವಡಿಸಲಾಗಿದೆ ಎಲ್ಲ ಮೋಟಾರುಗಳನ್ನೂ ಇಂಜನ್ನಿನಲ್ಲಿರುವ ಒಬ್ಬ ಡ್ರೈವರನು ಏಕಕಾಲದಲ್ಲಿ ನಡೆಸಬಹುದಾಗಿದೆ.

ಕೊರಿಯದಲ್ಲಿ ೧೦ ಲಕ್ಷ ಕಮ್ಯೂನಿಸ್ಟ್ ಸೈನ್ಯ

ಕೊರಿಯದಲ್ಲಿ ವಿಶ್ವಸಂಸ್ಥೆ ಸೈನ್ಯಗಳು ೧೦ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯುಳ್ಳ ಕಮ್ಯೂನಿಸ್ಟ್ ಯೋಧರಿರುವ ಭಾರಿ ಸೈನ್ಯವನ್ನು ಎದುರಿಸಬೇಕಾಗಿರುವುದೆಂದು ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೩೪ ೦-೦	೪೩ ೪ ೦
ಹುಚ್ಚೆಳ್ಳು	೫೭ ೦.೦	
ಹೊಂಗೇಬೀಜ	೨೨.೦ ೦	೨೪ ೦ ೦
ಹರಳುಬೀಜ	೪೯ ೪ ೦	೪೮ ೦ ೦
ಹುರುಳಿ	೪೩ ೦.೦	೪೪ ೧೦ ೦
ಹಲಸಂದೆ	೫೪ ೦ ೦	೫೯ ೮ ೦
ಹೆಸರು	೬೫-೮-೦	೬೬.೪ ೦
ಅವರೆ	೩೪ ೮-೦	
ಉದ್ದು	೬೯ ೦ ೦	೭೨.೨ ೦
ಹುಣಸೇಹಣ್ಣು	೫ ೮_೦	೬ ೫ ೦
ಸೀಗೆಕಾಯಿ	೫.೬ ೦	
ಬೆಲ್ಲ	೭-೮-೦	
ತೆಂಗಿನಕಾಯಿ		
೧,೦೦೦ಕ್ಕೆ	೧೩೦ ೦-೦	೧೩೫.೦ ೦

ಕುಸ್ತಿಯಲ್ಲಿ ಸೋತರೆ ಮುಖವಾಡ ತೆರೆಯುವುದಾಗಿ ಪಣ

ಅಮೆರಿಕದ ಫ್ಲಾಷ್ ಗಾರ್ಡನ್ ಎಂಬ ಪೈಲ್ವಾನನು ಬೆಂಗಳೂರಿಗೆ ಆಗಮಿಸಿರುತ್ತಾನೆ ಅಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಕುಸ್ತಿ ಪಂದ್ಯದಲ್ಲಿ ಅವನು ಭಾಗವಹಿಸುವನು ತನ್ನನ್ನು ಎದುರಿಸಿ ಯಾರಾದರೂ ಸೋಲಿಸಿದರೆ ತನ್ನ ಮುಖಾವರಣವನ್ನು ತೆಗೆದು ತಾನು ಯಾರೆಂಬುದನ್ನು ತೋರುವುದಾಗಿ ಅವನು ಹೇಳಿರುವನು ಭಾರತದಲ್ಲಿ ಇಬ್ಬರು ಮಾತ್ರ ಅವನ ಪರಿಚಯ ಪಡೆದಿರುವರೆಂದು ಹೇಳಲಾಗಿದೆ

ಭಗಿನೀ ಸೇವಾ ಸಮಾಜ

ರಾಜಧಾನಿಯ ಲಕ್ಷ್ಮೀಪುರದ ೯೧೩ನೇ ನಂಬರು ಮನೆಯಲ್ಲಿರುವ ಭಗಿನೀ ಸೇವಾ ಸಮಾಜವನ್ನು ಮಧ್ಯಾಹ್ನ ೩ ರಿಂದ ೬ ಗಂಟೆ ವರೆಗೆ ನಡೆಸಲಾಗುತ್ತಿದೆ ಪ್ರೌಢ ದರ್ಜೆಯ ಮಹಿಳೆಯರಿಗೆ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತಗಳಲ್ಲಿ ಪಾಠಗಳನ್ನೂ, ಸಂಗೀತದಲ್ಲಿ ಗಾಯನ, ಪಿಟೀಲು ಮತ್ತು ವೀಣೆಗಳನ್ನೂ, ಬಟ್ಟೆ ಹೊಲಿಯುವುದು, ಕಸೂತಿ ಕೆಲಸ, ಡ್ರಾಯಿಂಗ್ ಮುಂತಾದುವನ್ನೂ ಹೇಳಿಕೊಡಲಾಗುವುದು

○ ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ನೆನ್ನೆ ಒಂದು ಬ್ರಿಟಿಷ್ ಮತ್ತೊಂದು ನಾರ್ವೆ ಹಡಗುಗಳಿಗೆ ಡಿಕ್ಕಿಯಾಗಿ ಹಲವರು ನೀರು ಪಾಲಾದರು

SRI GANESHA TALKIES

From 27 5 53 For 2 Days

CONVICTED

Featuring Glenford and Broderick Crawford

From 29-5-53

SNIPER

॥ಶ್ರೀ॥

ಜಗದಂಬಾ ಶಿಶುವಿಹಾರ

585. ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ ಕಿಂಡರ್ ಗಾರ್ಟನ್, ಮಾಂಟೆಸ್ಸೊರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾದರಿಗಳನ್ನನುಸರಿಸಿ, ಮಿಡಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನೆಗಳನ್ನು ನಡೆಸಲಾಗುವುದು ಅಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಬೇಗನೆ ಸೇರಿಸಬೇಕೆಂದು ಕೋರಲಾಗಿದೆ

ಬಿ ಕೃಷ್ಣಮೂರ್ತಿ, ಕಾರ್ಯದರ್ಶಿ

Edited, Printed and Published by A R Nagarajan at Sadhvi Press, D. Subbiah Road, Mysore

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ೮೧೫ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ.

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧ ಬುಧವಾರ ೨೬-೯-೧೯೫೬ [ಸಂಚಿಕೆ ೨೪೪

ಸೂಯೆಜ್ ಭವಿಷ್ಯದ ಬಗ್ಗೆ ಮುಸ್ಲಿಮರ ಸಭೆ

ಸೂಯೆಜ್ ಭವಿಷ್ಯದ ಬಗ್ಗೆ ಇಸ್ಲಾಂ ಮುಖಂಡರ ಸಭೆ

ಸೂಯೆಜ್ ಕಾಲುವೆ ಪ್ರದೇಶದಿಂದ ಬ್ರಿಟಿಷರು ಹೊರಟುಹೋಗುವಂತೆ ಅವರನ್ನು ಬಲವಂತಪಡಿಸುವ ಬಗ್ಗೆ ಚರ್ಚೆ ನಡೆಸಲು ಪ್ರಪಂಚದ ನಾನಾ ಭಾಗಗಳ ಮುಸ್ಲಿಂ ಮುಖಂಡರು ಕೈರೋವಿನಲ್ಲಿ ಬರುವ ೨ ನೇ ತಾ|| ಸಭೆ ಸೇರುವರೆಂದು ವರದಿಯಾಗಿದೆ

೧|| ಟನ್ ಅಫೀಮಿನ ಪತ್ತೆ

ಸಿಂಗಪುರದ ಸುಂಕದ ಅಧಿಕಾರಿಗಳು ನೆನ್ನೆ ಒಂದು ಸೌದೆ ತುಂಬಿದ್ದ ಲಾರಿಯನ್ನು ಶೋಧಿಸಿದಾಗ, ಅವರಲ್ಲಿ ೧|| ಟನ್ನಷ್ಟು ಅಫೀಮು ಇದ್ದುದು ಪತ್ತೆಯಾಯಿತೆಂದೂ, ಅದರ ಬೆಲೆ ಸುಮಾರು ೩ ಕೋಟಿ ಡಾಲರಿನಷ್ಟಾಗುವುದೆಂದೂ ಹೇಳಲಾಗಿದೆ

ಬ್ರಿಟಿಷರಿಂದ ಈಜಿಪ್ಟಿನ ಹಳ್ಳಿಯ ನೆಲಸಮ

ಬ್ರಿಟಿಷರಿಗೆ ಶುದ್ಧವಾದ ನೀರು ಸರಬರಾಜು ಮಾಡುವ ಯಂತ್ರವಿರುವ ಪ್ರದೇಶದ ಬಳಿ ಇದ್ದ ಈಜಿಪ್ಟಿನ ಹಳ್ಳಿಯನ್ನು ಬ್ರಿಟಿಷ್ ಸೈನ್ಯಗಳು ನೆನ್ನೆ ನೆಲಸಮಮಾಡಿದುವು ಅಲ್ಲಿರುವ ಈಜಿಪ್ಷಿಯನ್ನರು ಬ್ರಿಟಿಷರ ಯಂತ್ರಕ್ಕೆ ಅಪಾಯವುಂಟುಮಾಡುವುದನ್ನು ತಡೆಯಲು ಈ ರೀತಿ ಮಾಡಲಾಯಿತೆಂದು ಹೇಳಲಾಗಿದೆ ಆ ಹಳ್ಳಿಯಲ್ಲಿ ೪೦೦ ಮನೆಗಳಿದ್ದುವು

ಪಾರಿವಾಳದ ಮೂಲಕ ಗೂಢಚಾರರ ಪತ್ತೆ

ಉತ್ತರ ಕೊರಿಯದ ಹಳ್ಳಿಯೊಂದರ ಮೇಲೆ ಹಾರುತ್ತಿದ್ದ ಪರಿಚಯವಿಲ್ಲದಿದ್ದ ಪಾರಿವಾಳವೊಂದನ್ನು ಹಿಂಬಾಲಿಸಿ, ಕಮ್ಯೂನಿಸ್ಟರು ೫ ಮಂದಿ ಗೂಢಚಾರರನ್ನು ಪತ್ತೆ ಮಾಡಿರುವರೆಂದು ವರದಿಯಾಗಿದೆ ಗೂಢಚಾರರನ್ನು ಪ್ಯಾರಾಚೂಟುಗಳ ಮೂಲಕ ಕೆಳಗಿಳಿಸಲಾಯಿತೆಂದೂ, ಅವು ಸುರಕ್ಷಿತವಾಗಿ ಇಳಿದುದಾಗಿ ಅವರು ಪಾರಿವಾಳದ ಮೂಲಕ ಸಮಾಚಾರ ಕಳುಹಿಸುತ್ತಿದ್ದುದಾಗಿಯೂ ಹೇಳಲಾಗಿದೆ ಅವರ ಅಮೆರಿಕದಿಂದ ಕಳುಹಲಾಗಿತ್ತೆಂದು ಗೊತ್ತಾಗಿದೆ.

ತಾಯಿನಾಡು ಮತ್ತು ಜನವಾಣಿ ಪತ್ರಿಕೆಗಳ ಮೇಲೆ ಮೊಕದ್ದಮೆ

ಸಂಸ್ಥಾನದ ಅಬ್ಕಾರಿ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಕಳೆದ ಶಾಸನ ಸಭಾಧಿವೇಶನದಲ್ಲಿ ಕೊಟ್ಟ ಹೇಳಿಕೆಯೊಂದು ತಮಗೆ ಮಾನನಷ್ಟವುಂಟುಮಾಡಿದೆಯೆಂದು ಶ್ರೀಗಳಾದ ಕೆ ಎಂ ಗುರುಸ್ವಾಮಿ ಮತ್ತು ಮೂಲಾ ರಂಗಪ್ಪನವರು ಬೆಂಗಳೂರಿನ ತಾಯಿನಾಡು ಮತ್ತು ಜನವಾಣಿ ಪತ್ರಿಕೆ ಸಂಪಾದಕರುಗಳ ಮೇಲೆ ಹೂಡಿರುವ ಮೊಕದ್ದಮೆಗಳು ನೆನ್ನೆ ಸಿವಿಲ್ ಪ್ರದೇಶದ ೧ ನೇ ನ್ಯಾಯಾಧೀಶರ ಕೋರ್ಟಿನಲ್ಲಿ ವಿಚಾರಣೆಗೆ ಬಂದು ಜೂನ್ ೧೦ ನೇ ತಾ|| ಗೆ ಮುಂದಕ್ಕೆ ಹಾಕಲ್ಪಟ್ಟವು ಸಂಪಾದಕರು ಖುದ್ದಾಗಿ ಹಾಜರಾಗದೆ ಇರುವ ಬಗ್ಗೆ ನ್ಯಾಯಾಧೀಶರು ವಿನಾಯಿತಿಯನ್ನು ಕೊಟ್ಟು ಕೋರ್ಟಿನವರು ಸೂಚಿಸಿದ ದಿನ ಹಾಜರಾಗಲು ಆಪಾದಿತರು ಒಪ್ಪಿರುತ್ತಾರೆ. ಜನವಾಣಿ ಸಂಪಾದಕರಾದ ಶ್ರೀ ಸುಬ್ರಹ್ಮಣ್ಯ ಯಾಜಿಯವರು ೧೦೦೦ ರೂ ಗಳ ಸ್ವಂತ ಮುಚ್ಚಳಿಕೆಯನ್ನು ಕೊಟ್ಟರು

ಹಾಸನದ ಡಿಪ್ಪೋವಿನಲ್ಲಿ ಸಕ್ಕರೆ ಅಕ್ರಮ ಮಾರಾಟ

ಹಾಸನದ ಆಹಾರ ಡಿಪ್ಪೋ ಒಂದರಿಂದ ಸಕ್ಕರೆಯನ್ನು ಸಕಲೇಶಪುರದ ಒಂದು ಅಂಗಡಿಯವರಿಗೆ ಅಕ್ರಮ ರೀತಿಯಲ್ಲಿ ಮಾರಾಟ ಮಾಡಲಾಗಿದೆಯೆಂದು ಸರ್ಕಾರಕ್ಕೆ ಸುದ್ದಿ ಬಂದ ಮೇಲೆ ಸರ್ಕಾರ ತನಿಖೆ ನಡೆಸಲು ಕ್ರಮ ತೆಗೆದುಕೊಂಡಿದೆ ಹಾಸನ ಜಿಲ್ಲಾಧಿಕಾರಿಗಳು ತನಿಖೆ ನಡೆಸುತ್ತಾರೆಂದೂ ವರದಿಯಾಗಿದೆ ಹಾಸನ ಪ್ರದೇಶ ಸಕ್ಕರೆ ಕೋಟಾ ಸಕಲೇಶಪುರದವರ ಅವ್ಯವಹಾರದಿಂದ ಕಡಿಮೆಯಾಗಿದೆ ಸಕಲೇಶಪುರದ ಅಂಗಡಿಯವರು ಹಾಸನದ ಪ್ರವರ್ ಏಜೆಂಟರೊಡನೆ ಒಪ್ಪಂದ ಮಾಡಿಕೊಂಡು ಒಂದು ಮೂಟೆ ಸಕ್ಕರೆಗೆ ೭೬ ರೂ ಕೊಡುತ್ತಿದ್ದರೆಂದು ಹೇಳಲಾಗಿದೆ ಸಕಲೇಶಪುರದಲ್ಲಿ ಅದರ ಧಾರಣೆ ಮೂಟೆ ೯೫ ರೂ ಇರುವುದು ಕಳೆದ ಹಲವಾರು ದಿನಗಳ ಕಾಲ ಹಾಸನದ ಡಿಪ್ಪೋವಿನ ಅನಿರೀಕ್ಷಿತ ಬೇಟಿಯಿಂದಾಗಿ ಈ ಅಕ್ರಮ ನಡವಳಿಕೆಯು ಪತ್ತೆಯಾಯಿತೆಂದು ಗೊತ್ತಾಗಿದೆ

ದಾವಣಗೆರೆ ಸಮ್ಮೇಳನಕ್ಕೆ ಕಾಂಗ್ರೆಸ್ಸಿನ ಬಹಿಷ್ಕಾರ

ದಾವಣಗೆರೆಯಲ್ಲಿ ನಾಳಿದ್ದು ನಡೆಯುವ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನಲ್ಲಿ ಕಾಂಗ್ರೆಸ್ಸಿನವರು ಪಾತ್ರ ವಹಿಸಲೂಡದೆಂದು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯವರು ಸೂಚಿಸಿರುವುದಾಗಿ ಗೊತ್ತಾಗಿದೆ

ಆರ್. ಪುಟ್ಟರಾಜೆ ಅರಸರಿಗೆ ವಿರಾಮ ವೇತನ ?

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿದ್ದು, ರಾಷ್ಟ್ರಾಧ್ಯಕ್ಷರ ಅಪ್ಪಣೆ ಪ್ರಕಾರ ನಿವೃತ್ತಿ ಮಾಡಲ್ಪಟ್ಟ ಶ್ರೀ ಆರ್. ಪುಟ್ಟರಾಜೆ ಅರಸರಿಗೆ ವಿರಾಮ ವೇತನ ಕೊಡಲು ಮೈಸೂರು ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ

ಉಪನ್ಯಾಸ

ಟಿ ನರಸೀಪುರದ ದಳವಾಯಿ ಅಗ್ರಹಾರದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಸು ಕೃಷ್ಣಮೂರ್ತಿ ಮತ್ತು ಶ್ರೀಮತಿ ವಿ ರುಕ್ಮಿಣಿಯವರಿಂದ ಇಂಡಿಯಾ ದೇಶದ ಪುನರುದ್ಧಾರ ಎಂಬ ವಿಷಯವಾಗಿ ಉಪನ್ಯಾಸವು ಏರ್ಪಾಡಾಗಿದೆ

ಉರಿಗಾಂ ಗಣಿ ಮುಚ್ಚಲು ಭಾರತ ಸರ್ಕಾರದ ಒಪ್ಪಿಗೆ

ಈ ತಿಂಗಳು ೩೦ ನೇ ತಾ|| ಉರಿಗಾಂ ಚಿನ್ನದ ಗಣಿಯನ್ನು ಮುಚ್ಚುವುದಕ್ಕೆ ಭಾರತ ಸರ್ಕಾರದವರು ಒಪ್ಪಿರುವರು. ತಿಪ್ಪೆ ಭೂಮಿಯಲ್ಲಿ ಅದನ್ನು ನಡೆಸುವುದರಿಂದ ನಷ್ಟವಾಗುವುದೆಂಬ ವಿಷಯವು ಸರ್ಕಾರದವರ ಮನಗಂಡಿರುತ್ತಾರೆ. ಗಣಿಯಲ್ಲಿ ಉಳಿದಿರುವ ಚಿನ್ನದ ಅದುರನ್ನು ಚಾಂಪಿಯನ್ ರೀಫ್ ಗಣಿಯವರು ತೆಗೆಯಲು ಅನುಮತಿ ಕೊಡಲಾಗಿದೆ ಇದರಿಂದ ೩,೦೦೦ ಮ. ದಿ ಉರಿಗಾಂ ಕಾರ್ಮಿಕರ ಪೈಕಿ ೯೦೦ ಜನರಿಗೆ ಉದ್ಯೋಗ ದೊರೆಯುವುದಾಗಿದೆ ಚಿನ್ನದ ಉತ್ಪತ್ತಿಯು ಈಗಿನ ದರದಂತೆ ಲಾಭದಾಯಕವಾಗಿ ಮಾಡಬೇಕಾದರೆ ತಿಂಗಳಿಗೆ ೭೫೦೦೦ ಟನ್ನು ಅಗೆಯಬೇಕಾಗಿದೆ ಆದರೆ ೨೬,೦೦೦ ಟನ್ನುತೆಗೆಯುತ್ತಿರುವುದಾಗಿಯೂ, ಇದ ೧,೯೦೦ ಟನ್ನಿಗೆ ಇಳಿಯುವ ಭೀತಿಯಿದ್ದು ಚಿನ್ನದ ದರವು ತುಂಬಾ ಇಳಿದ ಕೋಗಿ, ಲಾಭದ ಉಕವಾಗಿ ಕಂಪೆನಿಯನ್ನು ನಡೆಸಲು ಸಾಧ್ಯವಿಲ್ಲವೆಂದೂ ಆ ಮಾಲೀಕರು ಸರ್ಕಾರಕ್ಕೆ ತಿಳಿಸಿದ್ದರು ಚಾಂಪಿಯನ್ ಗಣಿಯವರು ಬಾರತ್ ಯರಲ್ಲದವರನ್ನು ನೌಕರಿಗೆ ತೆಗೆದುಕೊಳ್ಳುವ ಮುಂಚೆ ಮೈಸೂರು ಸರ್ಕಾರದವರ ಒಪ್ಪಿಗೆ ಪಡೆಯಬೇಕೆಂದೂ ಸೂಚಿಸಲಾಗಿದೆ

ಕಾಶ್ಮೀರ ಪ್ರಶ್ನೆಯಲ್ಲಿ ವಿದೇಶೀಯರ ಕೈವಾಡ ಬೇಡ

ಕಾಶ್ಮೀರ ಪ್ರಶ್ನೆಯನ್ನು ಭಾರತ ಮತ್ತು ಪಾಕಿಸ್ತಾನಗಳೇ ಬಗೆಹರಿಸಲು ಅವಕಾಶವಿರಬೇಕೆಂದೂ ಹೊರಗಿನವರು ಈ ಬಗ್ಗೆ ಸಹಾಯಕರಾಗಬೇಕೆಂದೂ ಪ್ರಧಾನಿ ನೆಹರೂರವರು ತಿಳಿಸಿ, ಹಾಗಾದರೆ ಕಾಶ್ಮೀರ ಸಮಸ್ಯೆಯು ಬಗೆಹರಿಯುವುದು ಸುಲಭವಾಗುವುದೆಂದು ಹೇಳಿಯುತ್ತಾರೆ

ಕಾರಿನ ಮೇಲೆ ವಿಮಾನ ಬಿದ್ದು ೪ ಮರಣ

ಕರಾಚಿಯ ರಸ್ತೆಯೊಂದರಲ್ಲಿ ನೆನ್ನೆ ನಿಂತಿದ್ದ ಮೋಟಾರಿನ ಮೇಲೆ ಶಿಕ್ಷಕ ವಿಮಾನವೊಂದು ಉರುಳಿ ಬಿದ್ದು ವಿಮಾನದ ಚಾಲಕನೂ ಮತ್ತು ಕಾರಿನಲ್ಲಿದ್ದ ಮೂವರು ಜನರೂ ಮೃತಪಟ್ಟರು

ಬಾಗೇಪಲ್ಲಿ ಪೌರಸಭಾಧ್ಯಕ್ಷರ ಮೇಲೆ ಅವಿಶ್ವಾಸ

ಬಾಗೇಪಲ್ಲಿ ಪೌರಸಭೆಯಲ್ಲಿ ಹಣ ದುರುಪಯೋಗವಾಗಿರುವುದೆಂಬ ಬಗ್ಗೆ ಹತ್ತು ಮಂದಿ ಸದಸ್ಯರು ಸಭೆಯ ಅಧ್ಯಕ್ಷರಿಗೆ ಒಂದು ಪತ್ರ ಬರೆದ ಅವರ ಮೇಲೆ ಅವಿಶ್ವಾಸ ಸೂಚಿಸಲು ಒಂದು ದಿನ ಸಮಾವೇಶಗೊಳ್ಳಬೇಕೆಂದು ಕೋರಿದುದರ ಮೇರೆ, ಅಧ್ಯಕ್ಷ, ಶ್ರೀ ಬಿ ಆರ್ ವೆಂಕಟಾಚಲಪತಿಯವರು ಕಳೆದ ೧೯ ನೇ ತಾರೀಕು ಒಂದು ಸಭೆಯನ್ನು ಕರೆದರು. ಅದು ಆರಂಭವಾಗುವುದಕ್ಕೆ ಸ್ವಲ್ಪ ಮುಂಚೆ ಅವರ ಸಭೆ ಬಿಟ್ಟು ತೆರಳಿ, ೧೦ ಮಂದಿ ಸದಸ್ಯರೂ ಶ್ರೀ ಎಸ್ ವಿ ಮುನ್ನಿನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸರ್ವಾನುಮತದಿಂದ ಅವಿಶ್ವಾಸ ನಿರ್ಣಯವನ್ನು ಮಾಡಿದರು ಸಭಾ ನಡವಳಿಕೆಯನ್ನು ರಿಕಾರ್ಡು ಮಾಡಲು ನಿರ್ಣಯ ಪುಸ್ತಕವನ್ನು ಗುಮಾಸ್ತರು ಕೊಡಲು ನಿರಾಕರಿಸಿದರೆಂದು ಗೊತ್ತಾಗಿದೆ ನಿರ್ಣಯವನ್ನು ತಂತಿ ಮೂಲಕ ಕೋಲಾರದ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು

ಶಂಕರ ಜಯಂತೀ ಮಹೋತ್ಸವ ಸಭಾ

ರಾಜಧಾನಿಯ ಶಂಕರ ಜಯಂತೀ ಮಹೋತ್ಸವ ಸಭೆಯ ಸಾಧಾರಣ ಸಭೆಯು ಇದೇ ೩೦ ನೇ ತಾರೀಖು ಸಂಜೆ ೬ ಘಂಟೆಗೆ ಶ್ರೀನಿವಾಸಾಚಾರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಜರುಗುವುದು ರಾಜಸೇವಾ ಪ್ರಸಕ್ತ ಶ್ರೀ ತಂಜಾಳೆ ಸುಬ್ರಹ್ಮಣ್ಯ ಅಯ್ಯರ್ ರವರು ಅಧ್ಯಕ್ಷತೆ ವಹಿಸುವರು ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ಖಾಸಗಿ ನರ್ಸಿಂಗ್ ಹೋಂಗಳ ತನಿಖೆ

ಮೈಸೂರು ನಗರದ ಎಲ್ಲೆಯೊಳಗಿರುವ ಖಾಸಗಿ ನರ್ಸಿಂಗ್ ಹೋಂಗಳು ಪೌರಸಭಾ ಸದಸ್ಯರನ್ನೊಳಗೊಂಡಿರುವ ಬೋರ್ಡ್ ಆಫ್ ವಿಸಿಟರ್ಸ್ ತನಿಖೆಗೆ ಒಳಪಡುವಂತೆ ಏರ್ಪಾಡಾಗಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವನ್ನು ಪೌರಸಭಾ ಸದಸ್ಯರಾದ ಶ್ರೀ ಹೆಚ್ ಎಸ್ ಮುದ್ದಯ್ಯನವರು ಕಳುಹಿಸಿರುತ್ತಾರೆ

ಬೀಡಿ ಕೆಲಸಗಾರರ ಸತ್ಯಾಗ್ರಹ

ಕೆಲವು ದಿನಗಳ ಹಿಂದೆ ತಮ್ಮ ಉದ್ಯೋಗಗಳನ್ನು ಕಳೆದುಕೊಂಡ ಬೀಡಿ ಕೆಲಸಗಾರರು ಸತ್ಯಾಗ್ರಹ ನಡೆಸುತ್ತಿರುವರಷ್ಟೆ ಅವರಿಗೆ ಕೆಲಸ ಕೊಡಿಸುವುದಾಗಿ ಭರವಸೆಯಿತ್ತರೂ ಸಹ ಸತ್ಯಾಗ್ರಹವನ್ನು ಮುಂದುವರಿಸುತ್ತಿರುವರೆಂದೂ, ಅವರು ನಡೆಸುತ್ತಿರುವ ಸತ್ಯಾಗ್ರಹಕ್ಕೂ ಮೈಸೂರು ಬೀಡಿ ಕಾರ್ಮಿಕರ ಸಂಘಕ್ಕೂ ಯಾವ ಸಂಬಂಧವೂ ಇಲ್ಲವೆಂದೂ, ಸದರಿ ಕೆಲಸಗಾರರು ಕಮ್ಯೂನಿಸ್ಟರ ಪ್ರೇರಣೆ ಮೇರೆ ತಮ್ಮ ಕಾರ್ಯಗಳನ್ನು ನಡೆಸುತ್ತಿರುವುದಾಗಿಯೂ ಸಂಘದ ಅಧ್ಯಕ್ಷರಾದ ಶ್ರೀ ಅಜೀಜ್ ಸತ್ತಾರ್ ಸೇಟ್‌ರವರು ತಿಳಿಸಿರುತ್ತಾರೆ

೦ ಕೋಂಚ ಭೂಮಿಗಾಗಿ ದರ್ಭಾಂಗದ

ಲ್ಲಿ ಧಾನುವಾರ ಎರಡು ಗುಂಪುಗಳಿಗೆ ಘರ್ಷಣೆ ನಡೆದು, ಇಬ್ಬರು ಗುಂಡೇಟಿಗೆ ಬಲಿಯಾದರು

ಜುವ್ಯವಸ್ಥಾ ಶಾಸನ ಸಭಾಧಿವೇಶನ

ಬೆಂಗಳೂರು ೨೭ [illegible] ಜೂನ್ ತಿಂಗಳ ೧೫ ನೇ ತಾರೀಖಿನಿಂದ ಸೇರಬೇಕೆಂದು ಗೊತ್ತುಮಾಡಲಾಗಿದ್ದ ಮೈಸೂರು ಶಾಸನ ಸಭಾಧಿವೇಶನವು ಜುಲೈ ಮಧ್ಯ ಭಾಗದಲ್ಲಿ ನಡೆಯುವುದೆಂದು ಗೊತ್ತಾಗಿದೆ [illegible]

ಪೇಪರ್ ವಿಗ್ರಹದ ಮೆರವಣಿಗೆಗೆ ನಿಷೇಧ

ಬೆಂಗಳೂರಿನ [illegible]

[illegible] ಹೊಸ ಸಂಚಿಕೆ

[illegible] ಪ್ರಕಟವಾಗಿದೆ

ಕಾಶಿಯಲ್ಲಿ ಸಂಸ್ಕೃತ ವಿಶ್ವ ವಿದ್ಯಾಲಯ

ಕಾಶಿಯಲ್ಲಿ ಸಂಸ್ಕೃತ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಕೋರುವ [illegible] ಸಂಸ್ಕೃತ ಮಹಾ [illegible] ಅಂಗೀಕರಿಸಲಾಗಿದೆ

ಮಹಾರಾಜಾ ಕಾಲೇಜಿಗೆ ಕಟ್ಟಡ ಕೊಡಬೇಕೆಂದು ಮನವಿ

[illegible]

ನೀಲಗಿರಿ ಕನ್ನಡಿಗರ ಸಮ್ಮೇಳನ

ಭಾಷಾ ಪ್ರಾಂತ್ಯದ ಬಗ್ಗೆ ಜಿಲ್ಲಾ ಜನರ ಅಭಿಪ್ರಾಯ ಪಡೆಯಬೇಕು

[illegible] ವಕಮಂಡಲ ೨೫

ನೀಲಗಿರಿ ಜಿಲ್ಲಾ ಕನ್ನಡಿಗರ ಸಮ್ಮೇಳನವು ಇಂದು ಇಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಆರಂಭೋತ್ಸವವನ್ನು ನೆರವೇರಿಸುತ್ತ ಮೈಸೂರಿಗೆ [illegible] ಸೇರಬಿಚ್ಛಿಸುವವರಿಗೆ ಸ್ವಾಗತವಿರುವುದಾಗಿ [illegible] ಎಲ್ಲಾ ಕನ್ನಡಿಗರೂ ಒಂದು [illegible] ಬಯಸಿದರೆ ತಪ್ಪೇನಿದೆಯೆ [illegible] ದೃಷ್ಟಿಯಿಂದಲೂ [illegible] ಸರಿಯಾಗಿರುವುದೆಂದು ಅವರು [illegible]

[illegible] ಕನ್ನಡಿಗರ [illegible] ಬೊಂಬಾಯಿ [illegible] ಬಾದಿನಲ್ಲಿ [illegible] ಕೊಡಗಿನಲ್ಲಿ [illegible] ಈ ರೀತಿ [illegible] ಚಲ್ಲಪಟ್ಟಿರುವರೆಂ [illegible] ಪ್ರದೇಶಗಳನ್ನೂ ಒಂ [illegible] ಅಗಿರುವುದೆಂದೂ ಇದ [illegible] ಪ್ರಾಂತಕ್ಕೆ [illegible] ಹಾಕಿದುದಾಗಿಯೂ ಅವರು ನುಡಿದರು

ಭಾಷಾವಾರು ಆಧಾರದ ಮೇಲೆ ಪ್ರಾಂತಗಳ ಪುನರ್ವ್ಯವಸ್ಥೆ ವಿಷಯದಲ್ಲಿ ನೀಲಗಿರಿ ಜಿಲ್ಲಾ ಜನರ ಅಭಿಪ್ರಾಯವನ್ನು ಪಡೆಯುವಂತೆ ಕೋರುವ ನಿರ್ಣಯವು ಅಂಗೀಕರಿಸಲ್ಪಟ್ಟಿತು

ನೀಲಗಿರಿಯ ಶ್ರೀ ಆರ್ಯಗೌಡರು ಸ್ವಾಗತ ಭಾಷಣ ಮಾಡಿದರು

ಅಣು ಗೂಢಚಾರರ ಅಪೀಲಿನ ವಜಾ

ಮರಣದ ದಂಡನೆಗೆ ಗುರಿಯಾಗಿರುವ ಅಮೆರಿಕದ ಅಣು ಗೂಢಚಾರರಾದ ಜೂಲಿಯಸ್ ರೋಸೆನ್‌ಬರ್ಗ್ ಮತ್ತು ಅವರ ಪತ್ನಿ ಎಥೆಲ್‌ರವರು ಮೂರನೇ ಬಾರಿ ಹೂಡಿದ್ದ ಅಪೀಲನ್ನು ಅಲ್ಲಿನ ಸುಪ್ರೀಂ ಕೋರ್ಟ್ ತಿರಸ್ಕರಿಸಿತು

SRI RAGHAVENDRA INSTITUTE
1661 Kabir Road Lashkar Mohalla Mysore
CLASSES FROM 1 6 53
Ajm r Inter (in private), Hindi I S From 2nd or rd year, Madras & Benares Matric (with or without I S), Dancing & Music

ಡಲ್ಲೆಸ್ ವಿರುದ್ಧ ಪ್ರದರ್ಶನ ಕ್ಕಾಗಿ ನಹರೂ ಖಂಡನೆ

ಅಮೆರಿಕದ ವಿದೇಶಾಂಗ ಮಂತ್ರಿ ಜಾರ್ಜ್ ಫಾಸ್ಟರ್ ಡಲ್ಲೆಸ್‌ರವರು ಭಾರತಕ್ಕೆ ಭೇಟಿ ಕೊಟ್ಟ ಸಂಬಂಧದಲ್ಲಿ ಅವರ ವಿರುದ್ಧವಾಗಿ ಹಲವು ಕಡೆ ನಡೆದ ಪ್ರದರ್ಶನಗಳನ್ನು ನೆಹರೂರವರು ಖಂಡಿಸಿ, ಅವು ಪೈಶಾಚಿಕ ಕೃತ್ಯಗಳೆಂದೂ, ಭಾರತಕ್ಕೆ ಅಗೌರವವನ್ನು ತರುವಂತಹುವೆಂದೂ ತಿಳಿಸಿರುತ್ತಾರೆ ಅಭಿಪ್ರಾಯ ಭೇದಗಳಿದ್ದರೆ ಪ್ರದರ್ಶನವನ್ನು ನಡೆಸುವುದು ಸರಿಯಲ್ಲವೆಂದೂ, ಡಲ್ಲೆಸ್‌ರವರು ಕೊಟ್ಟಂತಹ ಭೇಟಿಗಳಿಂದಲೇ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯು ಸಾಧ್ಯವೆಂದೂ ಅವರು ಹೇಳಿ, ಭಾರತದ ವಿದೇಶಾಂಗ ನೀತಿಯ ಬಗ್ಗೆ ಹೊರಗಿನವರ ಸಂದೇಹಗಳು ಪರಿಹರಿಸಲ್ಪಟ್ಟು, ರಾಷ್ಟ್ರದ ಗೌರವವು ಹೆಚ್ಚಿರುವುದಾಗಿಯೂ ತಿಳಿಸಿರುತ್ತಾರೆ

ಜೈಲು ಅಧಿಕಾರಿಗಳ ಶಿಕ್ಷಣ ಶಾಲೆ

ಜೈಲುಗಳಲ್ಲಿ ಖೈದಿಗಳ ಬಗ್ಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಲು ಅನುಕೂಲಿಸುವಂತೆ ಲಕ್ನೋವಿನಲ್ಲಿ ಉತ್ತರ ಪ್ರದೇಶ ಸರ್ಕಾರದವರು ಏರ್ಪಡಿಸಿರುವ ಜೈಲು ಶಿಕ್ಷಣ ಶಾಲೆಗೆ ಭಾರತದ ೧೫ ಸಂಸ್ಥಾನಗಳಿಂದ ಜೈಲು ಅಧಿಕಾರಿಗಳನ್ನು ತರಬೇತಿಗಾಗಿ ಕಳುಹಲಾಗಿದೆ ಇಂತಹ ಶಾಲೆಯು ಏಷ್ಯಾದಲ್ಲಿ ಇದೊಂದೇ ಎಂದು ಹೇಳಲಾಗಿದೆ

ಸವರ್ಣ ಅಲಂಕಾರ

ಮಂಡಿ ಮೊಹಲ್ಲಾ ಇರ್ವಿನ್ ರಸ್ತೆ ಶ್ರೀ ಕಾಳಿಕಾದೇವಿ ಸಮೇತ ಕಮಠೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ಪೂರ್ಣಿಮೆ ಪ್ರಯುಕ್ತ ನಾಳೆ ಸವರ್ಣ ಅಲಂಕಾರ, ಸಂಜೆ ೬ ಘಂಟೆಗೆ ಶ್ರೀ ಸಂಬಂಧಮೂರ್ತಿ ಭಾಗವತರಿಂದ ಶ್ರೀವಳ್ಳಿ ಎಂಬ ಶಿವಕಥೆ ನಡೆಯುತ್ತದೆ

ಯಕ್ಷಗಾನ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ, ವಾಣೀವಿಲಾಸ ಮೊಹಲ್ಲೆಯ ೧೨ ನೇ ಕ್ರಾಸ್ ರಸ್ತೆಯಲ್ಲಿ ಶ್ರೀ ಜಿ ಎಸ್ ಜಗನ್ನಾಥರವರ ಮನೆಯಲ್ಲಿರುವ, ೨ ನೇ ಮಹಿಳಾ ಶಾಖೆಯಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಕೃಷ್ಣ ಪ್ರಸಾದ ಯಕ್ಷಗಾನ ಮಂಡಳಿಯವರಿಂದ ಸುಭದ್ರಾ ಕಲ್ಯಾಣವು ಯಕ್ಷಗಾನ ರೂಪದಲ್ಲಿ ಏರ್ಪಾಡಾಗಿದೆ

SRI GAYATHRI TALKIES
From 27 5 53 For 2 days
Warners
ADVENTURES OF ROBINHOOD
(In Technicolor)
With — Errol Flynn
Olivia De Havilland

೪ ಜನ ಇಸ್ರೇಲ್ ಮಂತ್ರಿಗಳ ರಾಜೀನಾಮೆ

ಇಸ್ರೇಲಿನ ರಾಷ್ಟ್ರೀಯ ಪಕ್ಷದ ಕೆಂಪು ಬಾವುಟ ಮತ್ತು ಕ್ರಾಂತಿ ಪದ್ಯ ಇವುಗಳ ಸಂಬಂಧವಾಗಿ ಅಲ್ಲಿನ ಮಂತ್ರಿ ಮಂಡಲದಲ್ಲಿ ಭಿನ್ನಾಭಿಪ್ರಾಯ ಬಂದು, ೪ ಜನ ಮಂತ್ರಿಗಳು ರಾಜೀನಾಮೆಯಿತ್ತಿರುವರು. ಬಿಕ್ಕಟ್ಟು ಪರಿಹಾರವಾಗದಿದ್ದರೆ, ಪ್ರಧಾನಿ ಬೆನ್‌ಗುರಿಯನ್‌ರವರು ರಾಜೀನಾಮೆ ಕೊಡಲಿರುವರೆಂದೂ ಹೇಳಲಾಗಿದೆ

ದಾದಿಯರ ಹುದ್ದೆಗಳಿಗೆ ಗಂಡಸರಿಂದ ಅರ್ಜಿಗಳು

ಕೇಂದ್ರ ಸರ್ಕಾರದ ಶಸ್ತ್ರ ಸಜ್ಜಿತ ಬಲಗಳ ವೈದ್ಯಕೀಯ ಇಲಾಖೆಯಲ್ಲಿ ಖಾಲಿ ಇದ್ದ ೪೦ ದಾದಿಯರ ಕೆಲಸಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ಪ್ರಕಟಿಸಿದ ಬಗ್ಗೆ ಅದಕ್ಕಾಗಿ ಮಹಿಳೆಯರಿಂದ ಬಂದ ಅರ್ಜಿಗಳಿಗಿಂತ ೫೦೦ ಗಂಡಸರ ಅರ್ಜಿಗಳು ಜಾಸ್ತಿಯಾಗಿದ್ದುದನ್ನು ಇಲಾಖೆಯವರು ಕಂಡು ಆಶ್ಚರ್ಯಚಕಿತರಾಗಿರುತ್ತಾರೆ

ಮಹಾ ಮಸ್ತಕಾಭಿಷೇಕ

ಶ್ರವಣಬೆಳಗೊಳದಲ್ಲಿರುವ ಶ್ರೀ ಬಾಹುಬಲಿಸ್ವಾಮಿಯವರಿಗೆ ೧೦೮ ಕಲಶದ ಮಹಾ ಮಸ್ತಕಾಭಿಷೇಕವನ್ನು ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳವರ ಸಮ್ಮುಖದಲ್ಲಿ ಬರುವ ಭಾನುವಾರ ಮಧ್ಯಾಹ್ನ ಸಾಲಿಗ್ರಾಮದ ಜೈನ ಮಂಡಲಿಯವರು ಏರ್ಪಡಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೨೯ ೧೦-೦	೩೦ ೦ ೦
ಹೊಂಗೇಬೀಜ	೨೪ ೦ ೦	
ಹರಳುಬೀಜ	೪೨ ೨ ೦	೪೩ ೮ ೦
ಹುರುಳಿ	೪೨ ೧೪ ೦	೪೪ ೧೦ ೦
ಹಲಸಂದೆ	೪೯ ೨ ೦	೫೫ ೧೦ ೦
ಹೆಸರು	೬೫-೦-೦	
ಉದ್ದು	೬೯ ೧೪ ೦	೭೦ ೧೦-೦
ನೆಲಗಡಲೆಕಾಯಿ	೨೨ ೧೦ ೦	೨೩ ೬ ೦
ತುಪ್ಪೆಹುರುಳಿ	೬ ೦ ೦	೬ ೪ ೦
ತೆಂಗಿನಕಾಯಿ		
೧,೧೦೦ಕ್ಕೆ	೧೨೧ ೦ ೦	೩೧೧ ೦ ೦

ಒಲಂಪಿಯಾ ಟಾಕೀಸ್
ಅಮೋಘ ಪ್ರಾರಂಭ 28 5 53 ರಿಂದ
ಪ್ರತಿ ದಿನ 3 ಪ್ರದರ್ಶನಗಳು
ಆನ್ ಚಿತ್ರ್ಯಾಪ್ತಿ ಕಾದಿರ ಹುತ್ತು ಹವಾಲೋಗ್ ಪ್ರವಿಸ್ತ್ರೀ ಬಾಲರಾಜ್ ಸಹಾನಿ ಮೊದಲುಬಾರಿ ಒಟ್ಟಿಗೆ ನಟಿಸಿರುವ
ಕೆ ಎ ಅಬ್ಬಾಸ್‌ರವರ
ಸಂಗೀತ ಸುಧಾ ಚಿತ್ರ
★ ಆಕಾಶ್ ★
ಸಹಾಯಕ ವರ್ಗ — ಪದ್ಮಿ ಅಗಾ, ಮಾಸ್ಟರ್ ಮನೋಹರ ಕೃಷ್ಣ

Edited, Printed and Published by A R Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ ಶೆಟ್ಟಿ (ಫೋನ್ 446) ಬಿ ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿ. ಸಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೮-೫-೧೯೫೩ [ಸಂಚಿಕೆ ೨೪೫

– ವಿಶ್ವಸಂಸ್ಥೆ ಸಲಹೆಗೆ – ದ. ಕೊರಿಯಾ ಆಕ್ಷೇಪ

ಜಿಲ್ಲಾ ವಿದ್ಯಾ ಸುಧಾರಣಾ ಸಮ್ಮೇಳನಗಳು

ಬೆಂಗಳೂರು ೨೭

ಸಂಸ್ಥಾನದ ವಿದ್ಯಾ ಸುಧಾರಣಾ ಸಮಿತಿಯ ವರದಿಯನ್ನು ಪರಿಶೀಲನೆ ಮಾಡುವ ಸಲುವಾಗಿಯೂ ಸಾಮಾನ್ಯ ಜನರಲ್ಲಿ ವಿದ್ಯಾ ಸುಧಾರಣೆ ಬಗ್ಗೆ ಉತ್ಸಾಹ ಹುಟ್ಟಿಸಲೂ ಸಹ ಸರ್ಕಾರದವರು ಜಿಲ್ಲೆಗಳಲ್ಲಿ ವಿದ್ಯಾ ಸುಧಾರಣಾ ಸಮ್ಮೇಳನಗಳನ್ನು ಈ ತಿಂಗಳು ೩೦ ರಿಂದ ಜೂನ್ ೧೩ರ ವರೆಗೆ ಕ್ರಮವಾಗಿ ಪಟ್ಟಣಗಳಲ್ಲಿ ಕರೆಯಲಿರುವರು. ಅದರ ಪ್ರಕಾರ ಮೈಸೂರು ಜಿಲ್ಲಾ ಸಮ್ಮೇಳನವು ಜೂನ್ ೭ ನೇ ತಾ|| ಟಿ. ನರಸೀಪುರದಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆರಂಭೋತ್ಸವವನ್ನು ನೆರವೇರಿಸುವರು. ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಜೂನ್ ೪ ನೇ ತಾ|| ತುಮಕೂರಿನಲ್ಲಿ ಆರಂಭೋತ್ಸವವನ್ನು ನೆರವೇರಿಸುವರು. ಮಂಡ್ಯದ ಸಮ್ಮೇಳನವು ೬ ನೇ ತಾ|| ಶ್ರೀ ಕೆ. ವಿ. ಶಂಕರೇಗೌಡರ ಅಧ್ಯಕ್ಷತೆಯಲ್ಲಿ ಸೇರುವುದು.

ಬಿ. ಎಸ್. ಪುಟ್ಟಸ್ವಾಮಿಯವರ ಅಧಿಕಾರಾವಧಿ ಹೆಚ್ಚಿಕೆ

ಸಂಸ್ಥಾನದ ಕಾರ್ಮಿಕ ಕಮಿಷನರಾದ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರ ಅಧಿಕಾರಾವಧಿಯನ್ನು ಇನ್ನೂ ಒಂದು ವರ್ಷ ಕಾಲ ಹೆಚ್ಚಿಸಲಾಗಿದೆ.

ಕಾಂಗ್ರೆಸ್-ಕಮ್ಯೂನಿಸ್ಟ್ ಹಿಂಬಾಲಕರಿಗೆ ಘರ್ಷಣೆ

ತಿರುವಾಂಕೂರು-ಕೊಚ್ಚಿಯ ಅಲ್ಲೆಪ್ಪಿ ನಗರದ ಕೂಲಿಗಾರರಿರುವ ಪ್ರದೇಶದಲ್ಲಿ ನೆನ್ನೆ ಕಮ್ಯೂನಿಸ್ಟ್ ಮತ್ತು ಕಾಂಗ್ರೆಸ್ ಸಹಾನುಭೂತಿಗಾರರಲ್ಲಿ ಘರ್ಷಣೆಯಾಗಿ ಆರು ಜನಂಗೆ ಇಂತಹ ಪೆಟ್ಟು ಬಿದ್ದಿದೆ. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಇಬ್ಬರ ಪರಿಸ್ಥಿತಿ ತೀವ್ರವಾಗಿದೆ. ಘರ್ಷಣೆಯಲ್ಲಿ ಬಾರಿಗಳನ್ನೂ, ಬಡಿಗೆಗಳನ್ನೂ ಮಚ್ಚನ್ನೂ ಉಪಯೋಗಿಸಲಾಯಿತೆಂದೂ ವರದಿಯಾಗಿದೆ.

ಬ್ರಿಟಿಷ್ ಸೈನಿಕರ ಮೇಲೆ ಈಜಿಪ್ಟಿನವರ ಆಕ್ರಮಣ

ಸೂಯೆಜ್ ಪ್ರದೇಶದಲ್ಲಿರುವ ಫಾಯದ್ ಎಂಬ ಊರಿನಲ್ಲಿ ನೆನ್ನೆ ಇಬ್ಬರು ಬ್ರಿಟಿಷ್ ಸೈನಿಕರ ಮೇಲೆ ಇಬ್ಬರು ಈಜಿಪ್ಟಿನವರು ಆಕ್ರಮಣ ನಡೆಸಿದರೆಂದೂ ಒಬ್ಬ ಸೈನಿಕನಿಗೆ ಹಿಂದುಗಡೆಯಿಂದ ಇರಿಯಲಾಯಿತೆಂದೂ ವರದಿಯಾಗಿದೆ.

ಉಮೇದುವಾರಿಕೆ ವಾಪಸು

ಮೈಸೂರು ನಗರದ ಉತ್ತರ ಕ್ಷೇತ್ರದ ಕಾಂಗ್ರೆಸ್ ಸಮಿತಿ ಚುನಾವಣೆಯಲ್ಲಿ ಸ್ಪರ್ಧಿಸಿರುವವರ ಪೈಕಿ ಶ್ರೀಗಳಾದ ಎಂ. ರಾಜಯ್ಯ, ಜಿ. ಆರ್. ರಂಗಸ್ವಾಮಯ್ಯನವರು ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆ. ೩೧ ನೇ ತಾ|| ಚುನಾವಣೆಯು ಬೆಳಗ್ಗೆ ೯-೧೨ ಮತ್ತು ಮಧ್ಯಾಹ್ನ ೨-೫ ಘಂಟೆವರೆಗೆ ಯಾಲಕ್ಕಾಚಾರ್ಯರ ಛತ್ರದಲ್ಲಿ ನಡೆಯುವುದೆಂದು ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ.

ಬೀಡಿ ಕಾರ್ಮಿಕರ ಮೇಲೆ ಮೊಕದ್ದಮೆ

ಮೈಸೂರು ೨೭

ರಾಜಧಾನಿಯ ಸರ್ವರ್ ಬೀಡಿ ಕಾರ್ಖಾನೆಯಿಂದ ಕೆಲಸದಿಂದ ವಜಾ ಮಾಡಲ್ಪಟ್ಟು ಸತ್ಯಾಗ್ರಹ ನಡೆಸುತ್ತಿರುವ ೪೫ ಮಂದಿ ಕೆಲಸಗಾರರನ್ನು ಮೊನ್ನೆ ಪೋಲೀಸರ ವಶ್ಯಕ್ಕೆ ತೆಗೆದುಕೊಂಡರು. ಅವರು ಕಮ್ಯೂನಿಸ್ಟರೆಂದು ಹೇಳಲಾಗಿದೆ. ಪಿಕೆಟಿಂಗ್ ಮತ್ತು ಇತರರ ಮೇಲೆ ಮುಂಡಿ ಪೋಲೀಸರು ನ್ಯಾಯಾಧೀಶರ ಕೋರ್ಟಿನಲ್ಲಿ ೩೪೧ ಮತ್ತು ೧೪೩ನೇ ನಿಬಂಧನೆ ಪ್ರಕಾರ ಮೊಕದ್ದಮೆಯನ್ನು ಹೂಡಿರುತ್ತಾರೆ. ಆಪಾದಿತರನ್ನು ಜೈಲಿಗೆ ರಿಮ್ಯಾಂಡ್ ಮಾಡಲಾಗಿದೆ.

ಈ ಬಗ್ಗೆ ಕಾರ್ಖಾನೆಯ ಹಲವು ಕಾರ್ಮಿಕರು ಮೆರವಣಿಗೆ ನಡೆಸಿದರು.

ರಷ್ಯದಲ್ಲಿ ಅಮೆರಿಕದ ೪ ಗೂಢಚಾರರಿಗೆ ಗಲ್ಲು

ಅಮೆರಿಕದ ಗೂಢಚಾರರೆಂದು ಹೇಳಲಾದ ೪ ಮಂದಿಯನ್ನು ಮೊನ್ನೆ ಗಲ್ಲಿಗೆ ಹಾಕಿರುವುದಾಗಿ ರಷ್ಯಾ ಸರ್ಕಾರದವರು ಪ್ರಕಟಪಡಿಸಿರುತ್ತಾರೆ. ರಷ್ಯದ ಉಕ್ರೇನ್ ಪ್ರಾಂತದಲ್ಲಿ ಕಳೆದ ಏಪ್ರಿಲ್ ೨೫-೨೬ ನೇ ತಾ|| ರಾತ್ರಿ ಅವರುಗಳನ್ನು ಅಮೆರಿಕದ ವಿಮಾನವೊಂದ ಪ್ಯಾರಾಚೂಟ್ ಮೂಲಕ ಇಳಿಸಿತೆಂದೂ ಹೇಳಲಾಗಿದೆ. ತಾವು ಗೂಢಚರ್ಯೆಯಲ್ಲಿ ನಿರತರಾಗಿದ್ದುದಾಗಿ ಅವರುಗಳು ಒಪ್ಪಿಕೊಂಡರೆಂದೂ, ಆದರ ಮೇಲೆ ರಷ್ಯದ ಸುಪ್ರೀಂ ಕೋರ್ಟಿನವರು ಮರಣ ದಂಡನೆ ವಿಧಿಸಲಾಗಿ ಅದನ್ನು ಜಾರಿ ಮಾಡಲಾಯಿತೆಂದೂ ಹೇಳಲಾಗಿದೆ.

ರಾಮಸ್ವಾಮಿ ನಾಯಕರ ಪ್ರತಿಮೆಯ ದಹನ

ವೆಲ್ಲೂರಿನಲ್ಲಿ ದ್ರಾವಿಡ ಸಂಘದ ವಿರೋಧಿಗಳು ನೆನ್ನೆ ಸಂಘದ ಮುಖಂಡ ಇ. ವಿ. ರಾಮಸ್ವಾಮಿ ನಾಯಕರ ಚಿತ್ರವನ್ನು ಕತ್ತೆಯ ಮೇಲೆ ಇರಿಸಿ ಮೆರವಣಿಗೆ ಮಾಡಿದರು. ಅವರ ಪ್ರತಿಮೆಯೊಂದನ್ನು ಭಾರಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಸುಟ್ಟು ಹಾಕಿದರು. ಅರ್ಕೋಣಂನಲ್ಲೂ ಅವರ ಚಿತ್ರವನ್ನು ಸುಡಲಾಯಿತು. ಬೊಂಬಾಯಿಯಲ್ಲಿಯೂ ಅವರ ಪ್ರತಿಮೆಯನ್ನು ಸುಡಲಾಯಿತು.

ಗಣಗನೂರು ಕೊಲೆ ಆಪಾದಿತನಿಗೆ ಶಿಕ್ಷೆ

ಮೈಸೂರು ೨೭

ಚಾಮರಾಜನಗರದ ತಾಲ್ಲೂಕು ಗಣಗನೂರಿನ ರಾಚ ಎಂಬುವನು ಪುಟ್ಟಮಾದ ಎಂಬುವನನ್ನು ಕಳೆದ ನವೆಂಬರ್ ೬ ನೇ ತಾರೀಕು ಚೂರಿಯಿಂದ ಇರಿದು ಕೊಲೆ ಮಾಡಿದನೆಂದು ಆ ದೇಶದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಇಲ್ಲಿನ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ಇಂದು ತೀರ್ಪಿತ್ತು ಆಪಾದಿತನಿಗೆ ಒಂದು ವರ್ಷ ಕಠಿಣ ಸಜಾ ವಿಧಿಸಿದರು.

ಕುರಿಗಳ ಕಳುವಿಗಾಗಿ ಶಿಕ್ಷೆ

ನಂಜನಹಳ್ಳಿ ಗ್ರಾಮದ ಶಿವಮ್ಮಾಬೋಯಿ ಗುಂಡಾ ಉರುಫ್ ತಿಮ್ಮ ಮತ್ತು ಮಾದಶೆಟ್ಟಿ ಎಂಬುವರು ಕಳೆದ ಜೂನ್ ೭ ನೇ ತಾ|| ಶ್ರೀ ವೀರರಾಜೆ ಅರಸಿನವರಿಗೆ ಸೇರಿದ ಎರಡು ಕುರಿಗಳನ್ನು ಕದ್ದರೆಂದು ಮೈಸೂರು ದಕ್ಷಿಣ ರೇಂಜ್ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ರಾಜಧಾನಿಯ ಎರಡನೇ ನಗರ ನ್ಯಾಯಾಧೀಶರು ಈ ದಿನ ತೀರ್ಪಿತ್ತು ಗುಂಡಾ ಉರುಫ್ ತಿಮ್ಮನಿಗೆ ಒಂದು ತಿಂಗಳು ಕಠಿಣ ಸಜಾ ಮತ್ತು ೩೦ ರೂ. ಜುಲ್ಮಾನೆ ತಪ್ಪಿದರೆ ಒಂದು ವಾರ ಕಠಿಣ ಸಜಾ ಶಿಕ್ಷೆ ವಿಧಿಸಿದರು. ಉಳಿದವರಿಗೆ ಎಚ್ಚರಿಕೆಯಿತ್ತು ಬಿಡಲಾಯಿತು.

ಬಸ್ ಸಂಚಾರ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ನಷ್ಟ

ಮದರಾಸಿನಲ್ಲಿ ಸರ್ಕಾರಿ ಬಸ್ ಪ್ರಯಾಣದ ವ್ಯವಸ್ಥೆಯಿಂದ ಈಗ ದಿನವಹಿ ವರಮಾನದಲ್ಲಿ ಏಳು ಸಾವಿರ ರೂ. ಕಡಿಮೆಯಾಗುತ್ತಿರುವುದೆಂದೂ, ಶಾಲಾ ಕಾಲೇಜುಗಳು ಮತ್ತು ಕೋರ್ಟುಗಳಿಗೆ ರಜಾ ಕೊಟ್ಟಿರುವುದರಿಂದ ಹೀಗಾಗಿರಬಹುದೆಂದೂ ಹೇಳಲಾಗಿದೆ. ಟ್ರಾಂ ಸರ್ವಿಸುಗಳು ಕೆಲವು ತಿಂಗಳಿಂದ ನಿಂತುಹೋಗಿ ಹೆಚ್ಚು ಬಸ್ಸುಗಳನ್ನು ಹಾಕಲಾಗಿದ್ದರೂ ವರಮಾನವು ಉತ್ತಮಗೊಳ್ಳದೆ ಸರ್ಕಾರಕ್ಕೆ ಮಾಸೆಯಾನಾ ಹತ್ತು ಸಾವಿರ ರೂ. ನಷ್ಟವಾಗುತ್ತಿರುವುದೆಂದು ಅಲ್ಲಿನ ಸಂಚಾರ ಶಾಖಾ ಸಚಿವ ಡಾ|| ಯು. ಕೃಷ್ಣರಾಯರು ತಿಳಿಸಿರುವರು.

ಒಂಟಿಯಾಗಿ ಕಾದಾಡಲು ದಕ್ಷಿಣ ಕೊರಿಯಾ ಸಿದ್ಧ

ಕೊರಿಯಾ ಯುದ್ಧ ವಿರಾಮಕ್ಕಾಗಿ ವಿಶ್ವಸಂಸ್ಥೆಯವರ ಹೊಸ ಸಲಹೆಗೆ ದಕ್ಷಿಣ ಕೊರಿಯಾ ಸರ್ಕಾರವು ತೀವ್ರ ವಿರೋಧವನ್ನು ವ್ಯಕ್ತಪಡಿಸಿರುವುದೆಂದೂ, ವಿಶ್ವಸಂಸ್ಥೆಯವರ ಹೊಸ ಸಲಹೆಗೆ ಕಮ್ಯೂನಿಸ್ಟರು ಸಣ್ಣಪುಟ್ಟ ಆಕ್ಷೇಪಣೆಗಳನ್ನು ಮಾತ್ರ ತೆಗೆಯಬಹುದೆಂದೂ ಭಾವಿಸಲಾಗಿದೆ. ಬಿಕ್ಕಟ್ಟು ಸಂಧಾನದ ಮೂಲಕ ಪರಿಹಾರವಾಗದಿದ್ದರೆ ಯುದ್ಧ ಕೈದಿಗಳ ಇಡೀ ಪ್ರಶ್ನೆಯನ್ನು ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಮಂಡಿಸಲಾಗುವುದೆಂದು ಹೇಳಲಾಗಿದೆ. ಕಮ್ಯೂನಿಸ್ಟರು ಸಲಹೆಯನ್ನು ಒಪ್ಪಿದರೂ ಸಹ, ದಕ್ಷಿಣ ಮತ್ತು ಉತ್ತರ ಕೊರಿಯಾಗಳನ್ನು ಒಂದುಗೂಡಿಸಲು ದಕ್ಷಿಣ ಕೊರಿಯನ್ನರು ಒಂಟಿಯಾಗಿ ಯುದ್ಧ ಮಾಡುವರೆಂದೂ ಹೇಳಲಾಗಿದೆ.

ಲಂಡನ್ ಸಮಾರಂಭಕ್ಕೆ ಭಾರತದಿಂದ ಹೂವಿನ ಛತ್ರಿ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೆ ದಿನ ಮೆರವಣಿಗೆ ರಸ್ತೆಯಲ್ಲಿ ಭಾರತೀಯರಿಗೆ ಏರ್ಪಡಿಸಿರುವ ಸ್ಥಳವನ್ನು ಅಲಂಕರಿಸಲು ಹೂವಿನ ಛತ್ರಿ ಮತ್ತು ನಾನಾ ವಿಧದ ಹೂಗಳ ೮ ಬುಟ್ಟಿಗಳನ್ನು ಬೊಂಬಾಯಿಯಿಂದ ಲಂಡನ್ನಿಗೆ ವಿಮಾನದಲ್ಲಿ ಕಳುಹಲಾಗುವುದು.

ಉದ್ಯೋಗದಲ್ಲಿ ತೊಡಗಿದ್ದ ಅಧಿಕಾರಿಯ ಮರಣ

ಕಡಪದ ನಗರಾಭಿವೃದ್ಧಿ ಇಲಾಖಾ ಸಬ್ ಡಿವಿಜನ್ ಅಧಿಕಾರಿ ಪಿ. ಶ್ರೀರಾಮುಲು ಎಂಬುವರು ಕಳೆದ ೨೫ ನೇ ತಾ|| ತಮ್ಮ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಹೃದಯ ವೇದನೆಯುಂಟಾಗಿ ಅಲ್ಲೇ ಮೃತಪಟ್ಟರೆಂದು ವರದಿಯಾಗಿದೆ.

ಪೈಕಾರಾ ಅಣೆಕಟ್ಟಿಗೆ ಹನುಮಂತಯ್ಯನವರ ಭೇಟಿ

ಮೈಸೂರು ನೀಲಗಿರಿ ರಸ್ತೆ ಬಳಿ ಇರುವ ಪೈಕಾರಾ ಅಣೆಕಟ್ಟಿನ ಯೋಜನೆಗೆ ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭೇಟಿಯಿತ್ತಿದ್ದರು. ಅವರು ನೀಲಗಿರಿಯಲ್ಲಿ ಜೂನ್ ೧೦ ನೇ ತಾ|| ವರೆಗೆ ಇರುವರೆಂದು ಹೇಳಲಾಗಿದೆ.

ವಿಶ್ವದ ವಿಶ್ವವಿದ್ಯಾಲಯಗಳ ಸೇವಾ ಸಮ್ಮೇಳನಕ್ಕೆ ಭಾರತದ ತಂಡ

ಮೈಸೂರಿನಲ್ಲಿ ಮುಂದಿನ ತಿಂಗಳು ೮ ನೇ ತಾ|| ನಿಂದ ಜುಲೈ ೧೦ ರ ವರೆಗೆ ನಡೆಯುವ ಪ್ರಪಂಚದ ವಿಶ್ವವಿದ್ಯಾನಿಲಯಗಳ ಸೇವಾ ಸಮ್ಮೇಳನದಲ್ಲಿ ಭಾರತ ಪ್ರತಿನಿಧಿಗಳಾಗಿ ಡಾ|| ಜಕೀರ್ ಹುಸೇನ್, ಡಾ|| ಬಿ. ಎಲ್. ಮಂಜುನಾಥ್, ಡಾ|| ಎ. ಕೆ. ಎನ್. ಮೆನನ್, ಪ್ರೊ|| ಎ. ವಿ. ಜೋಬ್ ಮತ್ತು ರೆ|| ಪೆರೋರಾ ಪಿ. ಸೌಜಾರವರನ್ನು ಪ್ರತಿನಿಧಿಗಳಾಗಿ ಆರಿಸಲಾಗಿದೆ.

○ ಬೊಂಬಾಯಿಯ ಬಂದರಿನ ಹೈಡ್ರಾಲಿಕ್ ಶಾಖೆಯಲ್ಲಿ ಸಣ್ಣ ನೌಕರನೊಬ್ಬನಿಗೆ ಹೆಚ್ಚಿನ ಬಡ್ತಿ ಕೊಟ್ಟುದನ್ನು ಪ್ರತಿಭಟಿಸಲು ಸುಮಾರು ೨೦೦ ನೌಕರರು ಸ್ಟೇ ಇನ್ ಸ್ಟ್ರೈಕ್ ಮುಷ್ಕರ ಹೂಡಿರುತ್ತಾರೆ.

ಕುದುರೆ ಜೂಜಿನ ಫಲಿತಾಂಶ

ಮೈಸೂರು ೨೮

ನೆನ್ನೆ ದಿನ ನಡೆದ ಕುದುರೆ ಜೂಜಿನ ಫಲಿತಾಂಶಗಳು ಈ ರೀತಿ ಇವೆ—

೧. ಮೈಸೂರು ಪ್ಲೇಟ್

ವಿನ್—ಎಸ್ಪ್ಲೆಂಡರ್ [illegible] ಪ್ಲೇಸ್ [illegible], ಕಲರ್ ಬಾರ್ [illegible]

೨. ದೇವರಾಜೇ ಅರಸ್ ಮೆಮೋರಿಯಲ್ ಪ್ಲೇಟ್

ವಿನ್ ಅಪ್‌ಸೈಟ್ [illegible] ಪ್ಲೇಸ್ [illegible] ಇಮ್ಯಾರ್ಲಿಂಗ್ [illegible], ರೂಸಿಗಲ್ [illegible]

೩. ಮೈಸೂರು ಪ್ಲೇಟ್

ವಿನ್ ಪೆನ್ನಾಟಿ [illegible] ಪ್ಲೇಸ್ [illegible] ಫೀನಿಕ್ಸ್ ಬ್ಯಾಡ್ [illegible] ಸ್ಕ್ಯಾಂಟಿಫಿಕ್ [illegible]

೪. ಇಂಡಿಯನ್ ಯೂನಿಯನ್ ಪ್ಲೇಟ್

ವಿನ್ ವಿಂಡ್ಸರ್ ಸ್ಟೈಲ್ [illegible], ಪ್ಲೇಸ್ [illegible] ಪ್ರಿನ್ಸ್ [illegible]

೫. ಬೆಂಗಳೂರು ಕಪ್ ರೇಸ್

ವಿನ್ ಫಿಲಾಂಡರರ್ [illegible] ಪ್ಲೇಸ್ [illegible] ಪ್ರಾಟ್ [illegible]

೬. ಕುಣಿಗಲ್ ಪ್ಲೇಟ್

ವಿನ್ [illegible] ಪ್ಲೇಸ್ [illegible] ಗ್ರೀನ್ [illegible]

ವಯಸ್ಕರ ಶಿಕ್ಷಣದ ಬಗ್ಗೆ ಚಲನ ಚಿತ್ರ

[illegible] ಸೇವಾ ಸಮಿತಿ [illegible] ವಯಸ್ಕರ ಶಿಕ್ಷಣದ [illegible] ನಡೆಸಿದ [illegible] ಗೋಷ್ಠಿಯಲ್ಲಿ [illegible] ಪ್ರದರ್ಶನಾಲಯ [illegible] ಪ್ರದರ್ಶನಕ್ಕಾಗಿ ಇಡಲಾಗಿದೆ [illegible] ನಡೆಯ ಪ್ರದೇಶ [illegible] ಸಲಾಗುವು [illegible] ಜನರು [illegible] ವುಗಳನ್ನು [illegible]

ಭಿಕ್ಷುಕರ ಪರಿಹಾರ ಸಮಿತಿ ಅಧ್ಯಕ್ಷರ ರಾಜೀನಾಮೆ

ಸಂಸ್ಥಾನದ ಭಿಕ್ಷುಕರ ಪರಿಹಾರ ಸಮಿತಿ ಅಧ್ಯಕ್ಷರಾಗಿದ್ದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ರಾಜೀನಾಮೆ ಯಿತ್ತಿರುವರು ಸಮಿತಿಯ ಅವಧಿಯ ಉಳಿದ ಭಾಗಕ್ಕೆ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ

ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಖೋತಾ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಬಹಳ ಕಡಿಮೆಯಾಗಿರುವುದರಿಂದ [illegible] ವಿದ್ಯುಚ್ಛಕ್ತಿಯನ್ನು [illegible] ಕಡಿಮೆ ಮಾಡಲಾಗುವುದು ಮೈಸೂರು ಜಿಲ್ಲೆ ಮಂಡ್ಯ, ಬೆಂಗಳೂರು, [illegible] ಭಾಗಗಳು, [illegible] ಚನ್ನಪಟ್ಟಣ [illegible] ಮೋಟಾರು [illegible] ಮಾಡುವುದಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ತಾಲ್ಲೂಕು ಕಾಂಗ್ರೆಸ್ ಚುನಾವಣೆ

ಗುಂಡ್ಲುಪೇಟೆ ೨೫

ಈ ತಾಲ್ಲೂಕಿನ ಕಾಂಗ್ರೆಸ್ ಸಮಿತಿಯ ಚುನಾವಣೆಯಲ್ಲಿ ೧೫ ಸದಸ್ಯ ಸ್ಥಾನಗಳಿಗೆ ೧೧ ಮಂದಿ ಮಾತ್ರ ಸ್ಪರ್ಧಿಸಿರುವರು — ಶ್ರೀಗಳಾದ ವೈ ಜಿ ಶ್ರೀಕಂಠಾಚಾರ್, ಜಿ ಎಂ ಕಾಳಯ್ಯ, ಕೆ ಸಿದ್ದನಾಯಕ ಜಿ ಬಿ ಚಿಕ್ಕಣ್ಣ ಜಿ ಎ ಕೃಷ್ಣಮೂರ್ತಿ ಸಿ.ಸಿ.ಲಕ್ಷ್ಮಣಶೆಟ್ಟಿ, ಜಿ ಡಿ ಮಹದೇವಶೆಟ್ಟಿ, ಜಿ ಪಿ ಕೃಷ್ಣಶೆಟ್ಟಿ ಜಿ ಎಲ್ ಚಿಕ್ಕ ಸಿದ್ದಪ್ಪ, ಜಿ ಎಸ್ ಹನುಮಂತಶೆಟ್ಟಿ ಮತ್ತು ಜಿ ವಿ ಶಿವರಾಮಯ್ಯ. ಅವರೆಲ್ಲರೂ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ

ಬಹಿರಂಗ ಅಬ್ಕಾರಿ ಹರಾಜಾಗಬೇಕು

ಸ್ವಾಮಿ

ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ಸೇಂದಿ ವ್ಯಾಪಾರದ ಬಗ್ಗೆ ೨೫ ನೇ ತಾ ಟೆಂಡರನ್ನು ಸ್ವೀಕರಿಸಲಾಯಿತು ಸೇಂದಿ ಸಾರಾಯಿ ಮತ್ತು ಸ್ಪೆಷಲ್ ಲಿಕ್ಕರ್‌ಗಳಿಗೆ ಶ್ರೀ ಕೆ ಎಸ್ ಲಿಂಗಪ್ಪನವರ [illegible] ರೂ ಮತ್ತು ಶ್ರೀ ಪಾಪೇಗೌಡರು [illegible] ರೂ ಗಳಿಗೆ ಟೆಂಡರ್ ಕೊಟ್ಟಿದ್ದರು ಶ್ರೀ ಪಾಪೇಗೌಡರು ಸೇಂದಿಗೆ ಪ್ರತ್ಯೇಕವಾಗಿ [illegible] ಸಾವಿರ ರೂ ಗಳೂ, ಸಾರಾಯಿ ಮತ್ತು ಸ್ಪೆಷಲ್ ಲಿಕ್ಕರಿಗೆ [illegible] ಸಾವಿರ ರೂ ಗಳೂ ಟೆಂಡರು ಕೊಟ್ಟಿದ್ದರು ಆದರೆ ಶ್ರೀ ಪಾಪೇಗೌಡರ ಹೆಸರಿನಲ್ಲಿ [illegible] ರೂಗೆ ಟೆಂಡರು ಮಂಜೂರಾಯಿತೆಂದು ತಿಳಿಸಲಾಯಿತು ಇದು ಆಶ್ಚರ್ಯಕರವಾದ ವಿಷಯ ಬಿಡಿಬಿಡಿಯಾಗಿ ಒಂದನ್ನೊ, ಒಟ್ಟಿಗೆ ಒಂದನ್ನೊ ಟೆಂಡರು ಕೊಟ್ಟ ಮೇಲೆ ಶ್ರೀ ಪಾಪೇಗೌಡರು ಇನ್ನೆ ಹೆಚ್ಚಿನ ಮೊಬಲಗಿನ ಟೆಂಡರನ್ನು ಯಾವಾಗ ಕೊಟ್ಟರು ? ಕೇವಲ [illegible] ರೂ ಹೆಚ್ಚಾಗಿ ಬೇಕಾಗಿದ್ದರೆ ಶ್ರೀ ಲಿಂಗಪ್ಪನವರೇ ಅದನ್ನು ಕೊಡಬಲ್ಲವರಾಗಿದ್ದರು. ಅದವಾ ಅದೇ ಆಧಾರದ ಮೇಲೆ ಹರಾಜು ನಡೆಸಬಹುದಾಗಿತ್ತು. ಅದೇ ಸರಿಯಾದ ಮಾರ್ಗ ಈಗ ಆಗಿರುವ ಸಡವಳಿಕೆಯನ್ನು ರದ್ದು ಮಾಡಿ, ಬಹಿರಂಗ ಹರಾಜು ನಡೆಯುವಂತಾಗಬೇಕು—ಎಂಬುದಾಗಿ ಸಾರ್ವಜನಿಕರೊಬ್ಬರು ತಿಳಿಸಿರುತ್ತಾರೆ

SRI GANESHA

TALKIES

From 29 5 53 For 3 days

Columbia's

THE SNIPER

(A Stanley Kramer Production)

Featuring Adolphe Menjou Arthur Franz Mary Windsor

NEXT ATTRACTION

G B Shaw's

MAJOR BARBARA

ಗೋವಾದಲ್ಲಿ ಜನರ ಮೇಲೆ ಸೈನಿಕ ತೆರಿಗೆ

ಪೋರ್ಚುಗೀಸರ ಸಾಮ್ರಾಜ್ಯವಾದ ಗೋವಾದಲ್ಲಿ ೨೧ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಪ್ರತಿಯೊಬ್ಬ ಪ್ರಜೆಯೂ ವರ್ಷಕ್ಕೆ ೧೦ ರೂ. ನಂತೆ ಸೈನಿಕ ತೆರಿಗೆಯನ್ನು ಕೊಡುವಂತೆ ವಿಧಾಯಕವಾಗಿದೆ ೧೯೫೨ ರಿಂದಲೂ ಅಲ್ಲಿ ಈ ತೆರಿಗೆಯನ್ನು ವಿಧಿಸಲಾಗಿದೆ ಇದುವರೆಗೆ ೪ ರೂ ಮಾತ್ರ ತೆರಿಗೆ ಕೊಡಬೇಕಾಗಿದ್ದಿತು

ವಿಗ್ರಹ ಭೇದಕರಿಗೂ ಕಾರ್ಮಿಕರಿಗೂ ಘರ್ಷಣೆ

ಮದ್ರಾಸು ನಗರದಲ್ಲಿ ನೆನ್ನೆ ದ್ರಾವಿಡ ಸಂಘದ ಕಾರ್ಯಕರ್ತರಿಗೂ ಕಾರ್ಖಾನೆಯೊಂದರ ಕಾರ್ಮಿಕರಿಗೂ ಘರ್ಷಣೆ ಸಂಭವಿಸಿತೆಂದು ವರದಿಯಾಗಿದೆ ಬುದ್ಧ ಪೂರ್ಣಿಮೆಯ ದಿನ ಗಣಪತಿ ವಿಗ್ರಹವನ್ನು ಒಡೆಯುವ ಸಲುವಾಗಿ ದ್ರಾವಿಡ ಸಂಘದ ಸುಮಾರು ೨೫ ಜನರು ನೆನ್ನೆ ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ, ಕ್ರೋಧಗೊಂಡ ೧೦೦ ಮಂದಿ ಕಾರ್ಮಿಕರು ಅವರನ್ನು ಹೊಡೆದರೆಂದೂ ಪೋಲೀಸರು ಬರುವಷ್ಟರಲ್ಲೇ ಎಲ್ಲರೂ ಚದುರಿದ್ದರೆಂದೂ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೨೨-೮-೦	೪೦-೧೦-೦
ಹರಳುಬೀಜ	೪೦-೦-೦	೪೩-೦-೦
ಎಳ್ಳು	೭೭-೨-೦	
ಹೊಂಗೆಬೀಜ	೨೨-೦-೦	೨೨-೪-೦
ಹುರುಳಿ	೪೪-೮-೦	೪೪-೧೪-೦
ಅಲಸಂದೆ	೫೩-೧೪-೦	೫೫-೧೦-೦
ಹೆಸರು	೬೩-೪-೦	೬೬-೪-೦
ಅವರೆ	೫೩-೨-೦	೫೩-೪-೦
ಉದ್ದು	೭೦-೮-೦	೭೩-೧೦-೦
ಮೆಣಸಿನಕಾಯಿ	೨೩-೪-೦	
ಕೊಬ್ಬರಿ / ತೆಂಗಿನಕಾಯಿ	೫೦-೦-೦	೬-೦-೦
೧,೦೦೦ಕ್ಕೆ	೧೨೫-೦-೦	೫೫೨-೦-೦

ಒಲಂಪಿಯಾ ಟಾಕೀಸ್

ಅಮೋಘ ಪ್ರಾರಂಭ 28.5 53 ರಿಂದ

ಪ್ರತಿ ದಿನ 3 ಪ್ರದರ್ಶನಗಳು

ಅನ್ ಚಿತ್ರಪಿಕ್ಚರ್ಸ್ ನಾದಿರ ಮತ್ತು ಹಮ್ ಲಿಯೋನ್ ಪ್ರಖ್ಯಾತ ಬಾಲರಾಜ್ ಸಹಾನಿ ಮೊದಲಾದವರು ಒಟ್ಟಿಗೆ ನಟಿಸಿರುವ ಸಿ ಎ ಅಲ್ಲಾಸ್ಗರವರ ಸಂಗೀತ ಸುಧಾ ಚಿತ್ರ

★ **ಆಕಾಶ್** ★

ಸಹಾಯಕ ವರ್ಗ — ಶಮ್ಮಿ, ಅಗಾ, ಮತ್ತು ಮನೋಹರ ಕೃಷ್ಣ

ಆಯುರ್ವೇದ ಕಾಲೇಜಿನ ವರ್ಗದ ವಿಷಯ

ಸ್ವಾಮಿ,

ತಮ್ಮ ತಾ|| ೨೩. ೫-೫೩ ನೆಯ ಪತ್ರಿಕೆಯಲ್ಲಿ 'ಆಯುರ್ವೇದ ಕಾಲೇಜಿನ ವರ್ಗದ ಬಗ್ಗೆ ಬಹಿರಂಗ ಸಭೆ' ಎಂಬ ಶಿರೋನಾಮೆಯಲ್ಲಿ, ಶನಿವಾರ ಸಂಜೆ ೪|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಸಭೆ ಸೇರುವುದಾಗಿ ಪ್ರಕಟವಾಗಿತ್ತು ಅದರ ಪ್ರಕಾರ, ನಾನು ಶನಿವಾರ ಸಂಜೆ ನಾಲ್ಕು ಗಂಟೆಗೇನೇ ಸಭೆಗೋಸ್ಕರ ಟೌನ್‌ಹಾಲ್ ಕಡೆ ಹೋದೆನು ಸದರಿ ಮೈದಾನದಲ್ಲಿ ಒಂದು ಕಡೆ ಡಾ|| ಜೆ ವಿ ಆಚಾರ್ಯರೂ, ಶ್ರೀ ಪುರಾಣಿಕರೂ ಮಾತಾಡುತ್ತಾ ಕುಳಿತಿದ್ದರು ಸ್ವಲ್ಪ ಹೊತ್ತಿನ ಬಳಿಕ ಡಾ|| ನಾಗೇಶರಾಯರೂ ಬಂದು ಅಲ್ಲಿಯೇ ಕುಳಿತರು ಸಭೆಯಾಗುವ ಚಿಹ್ನೆ ಎಲ್ಲಿಯೂ ಕಾಣಲಿಲ್ಲ ಟೌನ್ ಹಾಲಿನ ಸುತ್ತಲೂ ಎರಡು ಸಲ ಸುತ್ತಿನೋಡಿ ಪುನಃ ಅಲ್ಲಿಯೇ ಬಂದು ಕುಳಿತೆನು ಸುಮಾರು ಆರು ಗಂಟೆಯ ಹೊತ್ತಿಗೆ ಯಾರೋ ಸೈಕಲ್ ಮೇಲೆ ಬಂದು(ಅವರು ಸಿ.ಐ.ಡಿ ಇರಬೇಕು) ಸಭೆಯಿಲ್ಲವೇ ? ಆಗುತ್ತದಿಲ್ಲವೇ ? ಎಂದು ಶ್ರೀ ಪುರಾಣಿಕರನ್ನು ವಿಚಾರಿಸಿದರು 'ನಾನು ಸಭೆಗೆಂದೇ ಬಂದೆ ಇನ್ನೂ ಯಾವುದೂ ಕಾಣಲಿಲ್ಲ' ಎಂದು ಶ್ರೀ ಪುರಾಣಿಕರು ಉತ್ತರ ಕೊಟ್ಟರು ಸ್ವಲ್ಪ ಹೊತ್ತಿನ ಬಳಿಕ ಅವರೆಲ್ಲರೂ ಎದ್ದು ಹೋದರು ಆ ದಿನ ಟೌನ್‌ಹಾಲ್ ಮೈದಾನದಲ್ಲಿ ಯಾವ ಸಭೆಯೂ ನಡೆಯಲಿಲ್ಲ ನಿರಾಶೆಯಾಗಿ ನಾನು ಮನೆಗೆ ಹೋದೆನು ಬರಿಯ ಬೇಜವಾಬ್ದಾರಿಗಳು ತಂದು ಕೊಡುವ ಸುದ್ದಿಯನ್ನು ಪ್ರಕಟಿಸಕೂಡದೆಂದು ತಮ್ಮಲ್ಲಿ ವಿಜ್ಞಾಪಿಸುತ್ತೇನೆ ಎಂ. ಎ ಮಂಜುನಾಥ್

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ

ದಿ ಲ್ ಖು ಷ್

ಬಹಿಷ್ಠೆ ಕಾಲದ ಹೊಟ್ಟೆ ನೋವನ್ನು, ಸೇವಿಸಿದ ಕೂಡಲೇ ನಿಲ್ಲಿಸುತ್ತದೆ.

ಶ್ರೀ ಆರ್ ಕೆ ವೆಂಕಟರಾವ್,

ಕ್ವಿಲ್ಟ್ ವರ್ಕ್ಸ್, ಮೈಸೂರ

ನನ್ನ ಸಂಸಾರಕ್ಕೆ ನಾಲ್ಕು ವರ್ಷಗಳಿಂದ ಬಹಿಷ್ಠಾ ಕಾಲದ ಹೊಟ್ಟೆ ನೋವಿನಿಂದ ಬುದ್ಧಿ ಭ್ರಮಣೆಯೇ ಮೊದಲಾದ ಉಪದ್ರವಗಳುಂಟಾಗಿ ಸಾವಿರಾರು ರೂಪಾಯಿ ವೆಚ್ಚದಲ್ಲಿ ನಾನಾ ಚಿಕಿತ್ಸೆಗಳನ್ನು ಮಾಡಿಸಿ ಪ್ರಯೋಜನವಿಲ್ಲದೆ, ಮೈಸೂರು ಮಹಾರಾಜರವರ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ಚಿಕಿತ್ಸೆ ಹೊಂದಿದರೂ ನಿಷ್ಫಲವಾಗಿ, ದೈವಕೃಪೆಯಾಗಿ ಜೀವನದಲ್ಲಿ ನಿರಾಶರಾದೆವು ಆಗ್ಗೆ ಶ್ರೀ ಶಾಮಣ್ಣನವರಲ್ಲಿ ಚಿಕಿತ್ಸಾ ಪ್ರಾರಂಭಿಸಿ "ದಿಲ್ ಖುಷ್" ಅನ್ನು ಸೇವಿಸಿದ ಕೂಡಲೇ ಹೊಟ್ಟೆ ನೋವ್ ನಿಂತುಹೋಗಿ, ಬುದ್ಧಿ ಭ್ರಮಣೆ ಮುಂತಾದುವು ಆಗೋಚರವಾಗಿಯೇ ಹೋದುವು. ರೋಗಿಗೆ ದೇಹ ದಾರ್ಢ್ಯ ಹೆಚ್ಚಿ, ದೇಹ ಕಾಂತಿಯು ಹೆಚ್ಚುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ

ಎಸ್. ಶಾಮಣ್ಣ, ಸ್ಪೆಷಲಿಸ್ಟ್,

2830 ಲಿವರ್ ಅಂಡ್ ಸ್ಪ್ಲೀನ್ ವೈದ್ಯ ಶಾಲಾ, 6ನೇ ಕ್ರಾಸ್ ರಸ್ತೆ

ಚಾಮುಂಡಿಪುರಂ, ಮೈಸೂರು

ಪ್ರಭುದೇವಾ ಥಿಯೇಟರ್

(ಪ ದ್ಮಾ ಟಾ ಕೀ ಸ್)

29 5-53 ನೇ . ಶುಕ್ರವಾರದಿಂದ ದಿನವಹಿ 3 ಆಟಗಳು

ಜೆಮಿನಿಯವರ ತಮಿಳು ಚಿತ್ರ * **ಚಂದ್ರಲೇಖಾ** *

ಪಾತ್ರ — ಎಂ ಕೆ ರಾಧಾ ಟಿ ಆರ್ ರಾಜಕುಮಾರಿ, ರಂಜನ್, ಸುಂದರಿಬಾಯಿ, ಎನ್ ಎಸ್ ಕೃಷ್ಣನ್ ಟಿ ಎ ಮಧುರಂ ಮುಂತಾದವರು

Edited, Printed and Published by A R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೯-೫-೧೯೫೩ [ಸಂಚಿಕೆ ೨೪೬

ಆಂಧ್ರದ ರಾಜಕೀಯ – ಪಕ್ಷಗಳಿಗೆ ಒಪ್ಪಂದ –

ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಅಧಿವೇಶನ

ದಾವಣಗೆರೆಯಲ್ಲಿ ನೆನ್ನೆ ಕರ್ನಾಟಕ ರಾಜ್ಯ ನಿರ್ಮಾಣದ ಪರಿಷತ್ತು ಮದ್ರಾಸಿನ ಮಾಜಿ ರೆವಿನ್ಯೂ ಮಂತ್ರಿಗಳೂ, ಮಂಗಳೂರಿನ ಪ್ರಜಾ ಸಮಾಜವಾದಿ ಪಕ್ಷದ ನಾಯಕರೂ ಆದ ಶ್ರೀ ಕೆ. ಆರ್ ಕಾರಂತ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು ಮೈಸೂರು ಮತ್ತು ನೆರೆಹೊರೆಯ ಕನ್ನಡ ಪ್ರದೇಶಗಳನ್ನು ಒಂದುಗೂಡಿಸಿ ಒಂದೇ ಆಡಳಿತವನ್ನು ಏರ್ಪಡಿಸಬೇಕೆಂಬುದೇ ಕನ್ನಡಿಗರ ಅಭಿಪ್ರಾಯವಾಗಿರುವುದಾಗಿ ಅಧ್ಯಕ್ಷರು ಹೇಳಿದರು ಆಂಧ್ರ ಪ್ರಾಂತವು ಸುಭದ್ರವಾಗಿ ನಿಂತ ಒಂದು ವರ್ಷದವರೆಗೂ ಕನ್ನಡ ಪ್ರಾಂತ ರಚನೆಗಾಗಿ ಕಾಯಬೇಕೆಂಬ ಹೇಳುವುದು ಸರಿಯಲ್ಲವೆಂದೂ ಅವರು ತಿಳಿಸಿದರು

ದಾವಣಗೆರೆ ಪೌರಸಭಾಧ್ಯಕ್ಷ ಶ್ರೀ ಐನಳ್ಳಿ ದೊಡ್ಡವೀರಪ್ಪನವರು ಸ್ವಾಗತ ಭಾಷಣ ಮಾಡಿ, ಆಂಧ್ರ ಪ್ರಾಂತ ರಚನೆಗಾಗಿ ಎಲ್ಲಾ ರಾಜಕೀಯ ಪಕ್ಷಗಳೂ ಒಂದುಗೂಡಿ ಕೆಲಸ ಮಾಡಿದಂತೆ ಕರ್ನಾಟಕದವರೂ ಚಳುವಳಿ ನಡೆಸಬೇಕೆಂದು ಕೋರಿದರು ಹೈದರಾಬಾದಿನಿಂದ ಪಾರ್ಲಿಮೆಂಟಿಗೆ ಆರಿಸಿಬಂದಿರುವ ಶ್ರೀ ಶಿವಮೂರ್ತಿ ಸ್ವಾಮಿಯವರು ಪ್ರಾರಂಭೋತ್ಸವವನ್ನು ನೆರವೇರಿಸಿದರು

ಸಮ್ಮೇಳನಕ್ಕೆ ಮೈಸೂರಿನಿಂದ ಶ್ರೀಗಳಾದ ಕೆ ಪಿ ಶಾಂತಮೂರ್ತಿ, ಬಿ ಶ್ರೀಕಂಠಪ್ಪ, ಶಿವಯ್ಯ, ಟಿ ಎಸ್ ಸುಬ್ಬಣ್ಣ ಮುಂತಾದವರು ಹೋಗಿರುವರು

ರಂಜಾನ್ ನಿಯಮಗಳ ಉಲ್ಲಂಘನೆಗೆ ಸಜಾ

ರಂಜಾನ್ ಹಬ್ಬದ ನಿಯಮಗಳನ್ನು ಉಲ್ಲಂಘಿಸಿ, ಉಪವಾಸಾದಿಗಳನ್ನು ಆಚರಿಸದೆ ಹಬ್ಬದ ಪವಿತ್ರತೆಯನ್ನು ಕೆಡಿಸಿದರೆಂದು ೪ ಜನ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಸೇರಿರುವ ಬಹಾವಲ್ಪುರ ಸಂಸ್ಥಾನದ ಒಂದು ನ್ಯಾಯಾಸ್ಥಾನವು ದಿನಗಳ ಸಾದಾ ಸಜಾಕ್ಕೆ ಗುರಿಪಡಿಸಿದೆ ಮುಸ್ಲಿಮರೆಲ್ಲರೂ ರಂಜಾನ್ ವ್ರತವನ್ನು ಆಚರಿಸಬೇಕೆಂದು ಅಲ್ಲಿ ಕಾನೂನು ಮಾಡಲಾಗಿದೆ

ಲಂಡನ್ನಿಗೆ ನೆಹರೂ ಪ್ರಯಾಣ

ಬ್ರಿಟಿಷ್ ರಾಣಿಯವರ ಕಿರೀಟ ಧಾರಣೆ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ನೆಹರೂರವರು ನೆನ್ನೆ ವಿಮಾನದಲ್ಲಿ ಲಂಡನ್ನಿಗೆ ಪ್ರಯಾಣ ಬೆಳೆಸಿದರು ಅವರು ಜೂನ್ ೨೬ನೇ ತಾ॥ ಹಿಂದಿರುಗುವರೆಂದು ಹೇಳಲಾಗಿದೆ

ಬಳ್ಳಾರಿ ಕಛೇರಿಗಳ ಬಳಿ ಪಿಕೆಟಿಂಗ್

ಬಳ್ಳಾರಿಯು ಆಂಧ್ರರದು ಎಂದು ಕೂಗುತ್ತಾ ಹಲವು ತರುಣರು ಮತ್ತು ಬಾಲಕರು ಮೊನ್ನೆ ಬಳ್ಳಾರಿ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ಆಂಧ್ರರಿಗೆ ಅನ್ಯಾಯ ಮಾಡಿದ ಸರ್ಕಾರಗಳಿಗೆ ಬಹಿಷ್ಕಾರ ಹಾಕಿರಿ–ಎಂದು ಜನರನ್ನು ಪ್ರೇರೇಪಿಸುತ್ತಿದ್ದರೆಂದು ವರದಿಯಾಗಿದೆ ಇದಕ್ಕೆ ಸಂಬಂಧಿಸಿದ ಚಳುವಳಿ ಬಗ್ಗೆ ೫೫ ಜನರನ್ನು ಬಂಧಿಸಲಾಗಿದೆ

ಸಂಸ್ಥಾನದಲ್ಲಿ ವಿಹಾರಾರ್ಥ ವಿಮಾನ ಹಾರಾಟದ ವ್ಯವಸ್ಥೆ

ಭದ್ರಾವತಿ, ದಾವಣಗೆರೆ ಮುಂತಾದ ಸಂಸ್ಥಾನದ ಪ್ರಮುಖ ಊರುಗಳಲ್ಲಿ ಸಣ್ಣ ವಿಮಾನವನ್ನಿಳಿಸಲು ಅವಕಾಶವಾಗುವಂತಹ ನಿಲ್ದಾಣಗಳನ್ನು ಏರ್ಪಡಿಸುವ ವಿಷಯವು ಪರ್ಯಾಲೋಚನೆಯಲ್ಲಿರುವುದಾಗಿ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿರುತ್ತಾರೆ ೪ ಜನರು ಕೂಡಬಲ್ಲ ಸಣ್ಣ ವಿಮಾನವೊಂದನ್ನು ಸರ್ಕಾರದವರು ಕೊಂಡಿದ್ದಾರೆಂದೂ, ಮೇಲ್ಕಂಡ ನಿಲ್ದಾಣಗಳಲ್ಲಿ ತಿಂಗಳಲ್ಲಿ ೧ ವಾರ ಕಾಲ ಅದನ್ನು ಇಟ್ಟು ಸ್ಥಳೀಯ ಜನರು ವಿಹಾರಾರ್ಥವಾಗಿ ಹಾರಾಡಲು ಏರ್ಪಾಡು ಮಾಡಲಾಗುವುದೆಂದೂ ಇವರು ಹೇಳಿರುತ್ತಾರೆ

ಗೌರೀಶಂಕರ ಶಿಖರ ಹತ್ತುವ ಪ್ರಯತ್ನ ವಿಫಲ

ಗೌರೀಶಂಕರ ಶಿಖರವನ್ನು ಹತ್ತಲು ಕರ್ನಲ್ ಹಂಟ್ ಮತ್ತು ಇತರ ಬ್ರಿಟಿಷ್ ಪರ್ವತಾರೋಹಿಗಳು ನಡೆಸಿದ ಪ್ರಯತ್ನವು ವಿಫಲವಾಗಿರುವುದೆಂದು ವರದಿಯಾಗಿದೆ ೨೮॥ ಸಾವಿರ ಅಡಿಯಲ್ಲಿದ್ದ ಕೆಟ್ಟ ಹವಾಗುಣದ ಪರಿಣಾಮವಾಗಿ ಅವರು ಹಿಂತಿರುಗಿರುತ್ತಾರೆ ಮುಂಗಾರು ಮಳೆ ಶುರುವಾಗುವ ಮುಂಚೆ ಮತ್ತೊಂದು ಪ್ರಯತ್ನ ಮಾಡಬಹುದೆಂದೂ, ಅದರೆ ಮುಂದಿನ ಶಿಶಿರ ಋತುವಿನಲ್ಲಿ ಹೊಸ ಪ್ರಯತ್ನ ಪಡುವ ಆಲೋಚನೆಯಲ್ಲಿ ಪರ್ವತಾರೋಹಿಗಳು ತೊಡಗಿರುವರೆಂದೂ ಹೇಳಲಾಗಿದೆ

ಪತ್ನಿಯ ವಿಟನ ತಲೆ ಕತ್ತರಿಸಿ ಕೋರ್ಟಿಗೆ ತಂದ ಪ್ರಸಂಗ

ತನ್ನ ಪತ್ನಿಯ ವಿಟನ ತಲೆಯನ್ನು ಕತ್ತರಿಸಿ ಒಂದು ಕೈಯಲ್ಲಿ ಕೊಡಲಿ ಮತ್ತೊಂದರಲ್ಲಿ ಕತ್ತರಿಸಿದ ರುಂಡದ ಸಮೇತ ಹರಿಪಾಲ್ ಎಂಬಾತನು ಸಂಬಲ್ಪುರದ ನ್ಯಾಯಾಸ್ಥಾನದ ಎದುರಿನಲ್ಲಿ ನೊನ್ನೆ ಹಾಜರಾದನೆಂದು ವರದಿಯಾಗಿದೆ

ಎಸ್ ಎಸ್ ಎಲ್. ಸಿ ಪರೀಕ್ಷಾ ಫಲಿತಾಂಶ

ಸಂಸ್ಥಾನದ ಎಸ್.ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶವನ್ನು ಜೂನ್ ನೇ ತಾರೀಖು ಪ್ರಕಟಿಸಬಹುದೆಂದು ತಿಳಿದುಬಂದಿದೆ

ಆಂಧ್ರ ಕಾಂಗ್ರೆಸ್ ಮತ್ತು ಪ್ರಜಾಪಕ್ಷಗಳಿಗೆ ಒಪ್ಪಂದ

ಪಾರ್ಲಿಮೆಂಟರಿ ಸಂಸ್ಥೆಗಳಲ್ಲಿ ಸಹಕಾರದ ಬಗ್ಗೆ ಕನಿಷ್ಠಾಂಶದ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಆಂಧ್ರದ ಕಾಂಗ್ರೆಸ್ ಮತ್ತು ಪ್ರಜಾ ಸಮಾಜವಾದಿ ಪಕ್ಷಗಳವರಲ್ಲಿ ಒಪ್ಪಂದವಾಗಿರುವುದೆಂದು ಗೊತ್ತಾಗಿದೆ ನೆಹರೂ–ಜಯಪ್ರಕಾಶ ನಾರಾಯಣರವರಿಗೆ ನಡೆದ ಸಂಧಾನದ ಆಧಾರದ ಮೇಲೆ ಆಂಧ್ರ ಸಂಸ್ಥಾನಕ್ಕೆ ಅನ್ವಯಿಸುವಂತಹ ಕಾರ್ಯಕ್ರಮವನ್ನು ಎರಡು ಪಕ್ಷಗಳವರೂ ಒಟ್ಟಾಗಿ ನಡೆಸಲು ಒಪ್ಪಿರುವರೆಂದು ಹೇಳಲಾಗಿದೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರು ಮೇಲ್ಕಂಡ ವಿಷಯಗಳನ್ನು ಆಂಧ್ರದ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಎದುರಿನಲ್ಲಿ ತಿಳಿಸಿದಾಗ, ಅವರಲ್ಲಿ ವಿಶ್ವಾಸವಿರುವುದಾಗಿ ಸದಸ್ಯರು ಹೇಳಿದರು ಆಂಧ್ರದ ರಾಜಧಾನಿಯನ್ನು ರಾಯಲಸೀಮೆಯಲ್ಲಿ ಏರ್ಪಡಿಸುವುದಾಗಿಯೂ ಅವರ ತಿಳಿಸಿದರು

ಬ್ಲಿಟ್ಸ್ ಪತ್ರಿಕೆ ಮೇಲೆ ನಿಜಾಂ ಸಲಹೆಗಾರರ ಮೊಕದ್ದಮೆ

ಬೊಂಬಾಯಿಯ ಬ್ಲಿಟ್ಸ್ ವಾರ ಪತ್ರಿಕೆ ಮತ್ತು ಹೈದರಾಬಾದಿನ ೨ ಉರ್ದು ಪತ್ರಿಕೆಗಳ ಮೇಲೆ ನಿಜಾಮರ ಹಣಕಾಸಿನ ಸಲಹೆಗಾರರಾದ ತಾರ್‌ಪೋರವಾಲಾರವರು ಹೈದರಾಬಾದಿನ ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯೊಂದನ್ನು ಹೂಡಿರುತ್ತಾರೆ. ಸರ್ಫ್ ಎ ಖಾಸ್ ಎಂಬ ನಿಜಾಮರ ಖಾಸಾ ಆಸ್ತಿಯ ಮೇಲ್ವಿಚಾರಣೆಯಲ್ಲಿರುವ ಹಿಂದೂ ನೌಕರರನ್ನು ತೆಗೆಯುವಂತೆ ನಿಜಾಮರು ಆಜ್ಞೆ ಹೊರಡಿಸಿದರೆಂಬುದಾಗಿ ಸದರಿ ಆಜ್ಞೆಯ ಫೋಟೋವೆಂದು ಹೇಳಲಾದ ಪ್ರತಿಯನ್ನು ಪತ್ರಿಕೆಗಳು ಪ್ರಕಟಿಸಿದುದೇ ಮೊಕದ್ದಮೆಗೆ ಕಾರಣವಾಗಿದೆ. ಪತ್ರಿಕೆಗಳ ಸಂಪಾದಕರು ಮತ್ತು ಮುದ್ರಕರುಗಳಿಗೆ ನೋಟೀಸು ಕೊಡಲಾಗಿದೆ

ಪ್ರವಾಸಿ ಮಂದಿರಗಳು

ಸಂಸ್ಥಾನದಲ್ಲಿರುವ ಮುಸಾಫಿರ್ ಖಾನಾ (ಟ್ರಾವಲರ್ಸ್ ಬಂಗಲೆ)ಗಳನ್ನು ಇನ್ನು ಮುಂದೆ ಪ್ರವಾಸಿ ಮಂದಿರಗಳೆಂದು ಕರೆಯುವಂತೆ ಸರ್ಕಾರದ ಆಜ್ಞೆಯಾಗಿದೆ

ಸೇಂದಿ ಅಂಗಡಿಗಳನ್ನು ಸರ್ಕಾರ ನಡೆಸಲು ವಿರೋಧ

• ಮೈಸೂರು •–

ಬೆಂಗಳೂರು ನಗರ ಮತ್ತು ತಾಲ್ಲೂಕು ಪ್ರದೇಶಗಳಲ್ಲಿರುವ ಸಾರಾಯಿ ಮತ್ತು ಇತರ ಮಾದಕ ದ್ರವ್ಯಗಳ ಅಂಗಡಿಗಳನ್ನು ಕಾಂಗ್ರೆಸ್ ಸರ್ಕಾರದವರು ನಡೆಸುವುದಕ್ಕೆ ತಮ್ಮ ವಿರೋಧವನ್ನು ಸೂಚಿಸಿ, ರಾಜಧಾನಿಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎಸ್ ಎಸ್ ಶಾಸ್ತ್ರಿಯವರು ನಗರದ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆದು, ಈ ವಿಷಯದ ಪರಿಶೀಲನೆಗಾಗಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದನ್ನು ಕರೆಯುವಂತೆ ಸೂಚಿಸಿರುತ್ತಾರೆ

ಕೊರಿಯಾ ಯುದ್ಧಕೈದಿಗಳ ಉಸ್ತುವಾರಿಗೆ ಭಾರತದ ಪೋಲೀಸ್ ಪಡೆ

ಸ್ವದೇಶಕ್ಕೆ ತೆರಳಲು ಒಪ್ಪದ ಕೊರಿಯಾ ಯುದ್ಧ ಕೈದಿಗಳ ಉಸ್ತುವಾರಿಗಾಗಿ ೧ ಸಾವಿರ ಭಾರತೀಯ ಪೋಲೀಸರನ್ನು ನೇಮಿಸುವಂತೆ ವಿಶ್ವ ಸಂಸ್ಥೆಯ ಹೊಸ ಸಲಹೆಯಲ್ಲಿ ತಿಳಿಸಲಾಗಿರುವುದೆಂದೂ, ಅದನ್ನು ಒಪ್ಪಲು ಸಾಧ್ಯವಿಲ್ಲವೆಂದೂ ದಕ್ಷಿಣ ಕೊರಿಯಾ ವಿದೇಶಾಂಗ ಮಂತ್ರಿ ಟೇಯಿನ್‌ರವರು ತಿಳಿಸಿರುತ್ತಾರೆ ಅಲ್ಲಿನ ಶಾಸನ ಸಭೆಯ ಉಪಾಧ್ಯಕ್ಷರು ಮಾತನಾಡಿ, ಭಾರತವನ್ನು ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದೂ, ಭಾರತ, ಪೋಲೆಂಡ್, ಮತ್ತು ಜೆಕೊಸ್ಲೊವೇಕಿಯಾಗಳ ಸೈನ್ಯಗಳನ್ನು ಕೈದಿಗಳ ಉಸ್ತುವಾರಿಗಾಗಿ ದಕ್ಷಿಣ ಕೊರಿಯಕ್ಕೆ ಬರಗೊಟ್ಟರೆ, ಅವು ಕೊರಿಯಾವನ್ನು ಕಮ್ಯೂನಿಸಂ ಕಡೆಗೆ ಒಯ್ಯುವುವೆಂದೂ ಹೇಳಿರುತ್ತಾರೆ ಕೊರಿಯಾ ಮಾತುಕತೆಗಳಲ್ಲಿ ಬ್ರಿಟನ್ನು ತಲೆಗೆಡಿತನದಿಂದ ಪ್ರವೇಶಿಸಿ, ಸಂಧಾನ ಭಂಗ ಮಾಡುತ್ತಿರುವುದರಿಂದ, ಬ್ರಿಟಿಷ್ ರಾಣಿಯ ಕಿರೀಟ ಧಾರಣೋತ್ಸವಕ್ಕಾಗಿ ತೆರಳಿರುವ ದಕ್ಷಿಣ ಕೊರಿಯಾ ಪ್ರತಿನಿಧಿಗಳನ್ನು ವಾಪಸು ಕರೆಸಬೇಕೆಂದೂ ಅವರು ಸಲಹೆ ಮಾಡಿರುತ್ತಾರೆ

ಮದ್ರಾಸಿನಲ್ಲಿ ವಿಗ್ರಹ ಒಡೆಯುವ ಚಳುವಳಿ

ಮದ್ರಾಸು ಪ್ರಾಂತದ ನಾನಾ ಭಾಗಗಳಲ್ಲಿ ಮೊನ್ನೆ ದ್ರಾವಿಡ ಸಂಘದವರು ಮಣ್ಣಿನಿಂದ ಮಾಡಿದ ಗಣೇಶನ ವಿಗ್ರಹಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಪುಡಿಮಾಡಿದರು ಈ ಸೇಲಂ ಕಡೆ ಆಸ್ತಿಕರಿಗೂ ದ್ರಾವಿಡ ಸಂಘದವರಿಗೂ ಘರ್ಷಣೆಗಳಾದುವು. ಸಂಘದ ಮುಖಂಡ, ಇ ವಿ. ರಾಮಸ್ವಾಮಿ ನಾಯಕರು ತಿರುಚಿಯಲ್ಲಿ ಗಣಪತಿ ವಿಗ್ರಹವನ್ನು ತಮ್ಮ ಕೈಕೋಲಿನಿಂದ ಹೊಡೆದು ಒಡೆದುಹಾಕಿದರು

ಉಪವಾಸ ಮಾಡುವ ಕಾಂಗ್ರೆಸ್ಸಿಗರ ಮೇಲೆ ಕ್ರಮ

ಇನ್ನು ಮುಂದೆ ಉಪವಾಸ ಮುಷ್ಕರ ಹೂಡುವ ಕಾಂಗ್ರೆಸ್ಸಿನವರ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುತ್ತದೆ ಭಾಷಾ ಪ್ರಾಂತಗಳ ರಚನೆ ಸಂಬಂಧವಾಗಿ ಕಾಂಗ್ರೆಸ್ಸಿನವರು ಉಪವಾಸ ನಡೆಸಿದ ಬಗ್ಗೆ ಕಾರ್ಯಕಾರಿ ಸಮಿತಿಯು ಪರಿಶೀಲನೆ ನಡೆಸಿ ಉಪವಾಸ ಕೂಡದೆಂದು ತೀರ್ಮಾನಿಸಿತು.

ತಿರುಪತಿ ಆಂಧ್ರದ ರಾಜಧಾನಿಯಾಗಲಿ

[illegible] ಪ್ರತಿನಿಧಿಗಳ ಸಮ್ಮೇಳನವು ಪೂರ್ಣವ [illegible] ನಡೆದ [illegible] ಆಂಧ್ರ ಸಂಸ್ಥಾನದ ಮುಖ್ಯ ಪಟ್ಟಣವಾಗಿ ಮಾಡಬೇಕೆಂದು [illegible] ನಿರ್ಣಯವನ್ನು [illegible] ಮೈಸೂರಿನ [illegible]

[illegible] ವರ ಪತ್ನಿ ಮೇಲೆ ಮೊಕದ್ದಮೆ

[illegible]

[illegible]

ಚರಖಾ ಕಾರ್ಯಕರ್ತರ ಸಮ್ಮೇಳನ

ಬೆಂಗಳೂರು [illegible]

[illegible] ಇಲ್ಲಿ [illegible] ಭಾರತ ಚರಖಾ ಸಂಘದ ಕಾರ್ಯಕರ್ತರ ಮತ್ತು ಖಾದಿ ಸ್ತ್ರೀಯರುಗಳ ಸಮ್ಮೇಳನದ ವ್ಯವಸ್ಥೆಗಾಗಿ ನೆನ್ನೆ ಕೆಲಸಗಾರರ ಸಭೆಯು ನಡೆದು, ಸಮ್ಮೇಳನದ ವೆಚ್ಚಕ್ಕಾಗಿ ಸಾರ್ವಜನಿಕರಿಂದ ಧನಧಾನ್ಯಗಳ ಸಹಾಯವನ್ನು ಪಡೆಯಲು, ಶ್ರೀಗಳಾದ ಸಿದ್ದನಹಳ್ಳಿ ಕೃಷ್ಣಶರ್ಮ, ಬಿ ಎಸ್ ನಾರಾಯಣರಾವ್ ಆರ್ ವೆಂಕಟರಮಣಯ್ಯಂಗಾರ್, ಅನಂತರಂಗಾಚಾರ್ ಮತ್ತು ಶ್ರೀಮತಿ [illegible] ಇವರುಗಳ ಸಮಿತಿ ಒಂದನ್ನು ರಚಿಸಲಾಯಿತು.

ಕಾರ್ಕಸ್ಟೇಬಲನಿಂದ ಪತ್ನಿಯ ಕೊಲೆ ಮತ್ತು ಆತ್ಮಹತ್ಯೆ

[illegible] ರಿಜರ್ವ್ [illegible] ಹೆಡ್ ಕಾನ್ಸ್ಟೇಬಲ್ [illegible] ತನ್ನ ಹೆಂಡತಿಯನ್ನು [illegible] ಗುಂಡಿಟ್ಟು ಕೊಂದು [illegible]

ಟೌನ್‌ಹಾಲಿನಲ್ಲಿ ಗಾಂಧೀಜಿ ಭಾವಚಿತ್ರ

[illegible] ಟೌನ್‌ಹಾಲಿನಲ್ಲಿ ಮಹಾತ್ಮಾ [illegible] ಮತ್ತು ಪಂಡಿತ ಜವಹರ್‌ಲಾಲ್ ನೆಹರೂರವರ ಭಾವಚಿತ್ರಗಳನ್ನಿಡಲು [illegible] ರೂ ವೆಚ್ಚ ಮಾಡುವುದಕ್ಕೆ ಸರ್ಕಾರದವರು ನಗರ ಪೌರಸಭೆಯವರಿಗೆ ಅನುಮತಿಯಿತ್ತಿರುವರು

ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು ಅವಶ್ಯಕ

ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ತಿಳಿಸಿರುತ್ತಾರೆ.—

ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಕುಂದುಕೊರತೆಗಳನ್ನು ತಿಳಿದುಕೊಳ್ಳಲು ಹಿಂದೆ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳನ್ನು ಏರ್ಪಾಡು ಮಾಡಿದ್ದರು. ಅದು [illegible] ವರೆಗೂ ನಡೆಯುತ್ತಾ ಬಂದಿತು [illegible] ಸರ್ಕಾರದವರು ಏಕಾಏಕಿ ಈ ಏರ್ಪಾಡನ್ನು ನಿಲ್ಲಿಸಿಬಿಟ್ಟರು ಪ್ರಜೆಗಳು ಪ್ರತಿಭಟನೆ ಮಾಡಲು ಮತ್ತೆ ನಡೆಸಲು ಸರ್ಕಾರದ ಆಜ್ಞೆಯಾಯಿತು [illegible] ನೇ ಜುಲೈನಲ್ಲಿ ಈಗಿನ ಸರ್ಕಾರದ ಆಜ್ಞೆಯಂತೆ ಪುನಃ ಅದು ನಿಂತುಹೋಯಿತು ಮಿತವ್ಯಯ ದೃಷ್ಟಿಯಿಂದ ಹೀಗೆ ಮಾಡಲಾಯಿತೆಂದು ಸರ್ಕಾರದ ಕಡೆ ತಿಳಿಸಲಾಯಿತು ಜಿಲ್ಲಾ ಮತ್ತು ತಾಲ್ಲೂಕುಗಳ ಸಮ್ಮೇಳನಗಳಿಂದ ಸರ್ಕಾರಕ್ಕೆ ಒಟ್ಟು [illegible] ರೂ ವೆಚ್ಚವಾಗುವುದೆಂದೂ, ಮಿತವ್ಯಯದ ನೆಪಹೇಳಿ ಸಮ್ಮೇಳನವನ್ನು ನಿಲ್ಲಿಸುವುದು ತರವಲ್ಲವೆಂದೂ ಅನೇಕ ಪತ್ರಗಳನ್ನು ಬರೆದಾಗ್ಯೂ, ಸರ್ಕಾರದವರು ಅದನ್ನು ಗಮನಿಸಲಿಲ್ಲ [illegible] ಈಗ ನಡೆಯುತ್ತಿರುವ ಅನೇಕ ಕಾರ್ಯಗಳು ಮಿತವ್ಯಯ ದೃಷ್ಟಿಯಿಂದ ಸರಿಯಲ್ಲವೆಂಬುದು ಅನೇಕರಿಗೆ ಗೊತ್ತಿದೆ

ಈ ಎಲ್ಲ ವಿಷಯಗಳನ್ನೂ ಪತ್ರಿಕೆಗಳ ಮೂಲಕವೂ, ನೇರವಾಗಿಯೂ ಸರ್ಕಾರಕ್ಕೆ ತಿಳಿಸುತ್ತಿದ್ದರೂ ಏನೂ ಪ್ರಯೋಜನವಾಗಿಲ್ಲ ಇನ್ನಾದರೂ ಸರ್ಕಾರದವರ ಕಣ್ಣು ತೆರೆಯಲಿ

ಕೃತಜ್ಞತೆಗಳು

ರಾಜಧಾನಿಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಗೆ ನೆನ್ನೆ ಕಾರ್ಯಾರ್ಥವಾಗಿ ನಾನು ಹೋಗಿದ್ದು, ಹಿಂದಿರುಗುವಾಗ ಅಲ್ಲೇ ಮರೆತು ಬಂದ ನನ್ನ ಬೈಸಿಕಲ್ಲನ್ನು ಸೊಸೈಟಿ ನೌಕರ ಮಾನೇಜರು ತೆಗೆದಿಟ್ಟು ನನಗೆ ಕೊಟ್ಟುದಕ್ಕಾಗಿ ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ ಎ ಎಂ ರಾಮಯ್ಯ

ಮೈಸೂರು ಪೇಟೆ ಧಾರಣೆ

ವಸ್ತು	ರೂ ಇಂದ	ರೂ ಗೆ
ಕಡಲೆಕಾಯಿ	[illegible]	[illegible]
ಕೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹಲಸಂದೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	
ಹುಚ್ಚೆಳ್ಳು	[illegible]	[illegible]
ಒಣಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಬಾಲ ಜಗತ್. ಸಂಜೆ [illegible] ದೇವರ ನಾಮಗಳು [illegible] ಸಂಗೀತ [illegible] ವನಿತಾ ವಿಹಾರ [illegible] ಕಥಾ ಕಾಲಕ್ಷೇಪ [illegible] "[illegible]" ಎಂಬ ಕನ್ನಡ ನಾಟಕ

ಮೈಸೂರು ಸರ್ಕಾರ

ನೋಟೀಸ್

20 5 1953

ಎಕ್ಸ್ಪ್ರೆಸ್ ನಂ 11619

ಮೈಸೂರಿನಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಗೆ ಬೇಕಾಗುವ ವಿವಿಧ ಸೈಜಿನ ಮರದ ಹಲಗೆಗಳನ್ನು ಸರಬರಾಜು ಮಾಡುವ ಬಗ್ಗೆ ತಾ ॥10 6-1953ರ ವರೆಗೆ ಮೊಹರಾದ ಟೆಂಡರುಗಳು ಸ್ಟೋರ್ಸ್ ಪರ್ಚೇಸ್ ಕಮಿಟಿ ಕಾರ್ಯದರ್ಶಿಗಳಿಂದ ಸ್ವೀಕರಿಸಲ್ಪಡುವುವು

ಅಪೇಕ್ಷಿಸುವ ಟೆಂಡರುದಾರರು ಸ್ಟೋರ್ಸ್ ಪರ್ಚೇಸ್ ಕಮಿಟಿ ಕಾರ್ಯದರ್ಶಿಗಳಿಗೆ ಬರೆದು ಕೊಂಡು ಟೆಂಡರುಗಳನ್ನು ಸಲ್ಲಿಸಲು ಬಗೆಗೆ ಮುದ್ರಿತ ಫಾರಂಗಳನ್ನು ಪಡೆಯಬಹುದು ಒಂದು ಸೆಟ್ಟು ಟೆಂಡರು ಫಾರಮ್ಮುಗಳ ಮೌಲ್ಯವಾದ ರೂ 5 ಅನ್ನು [illegible] ಕೊಡತಕ್ಕದ್ದು. ಅರ್ಜಿ ನಮೂನೆಗಳ ಮೌಲ್ಯಕ್ಕಾಗಿ ಚೆಕ್ಕುಗಳನ್ನು [illegible] ಪೋಸ್ಟಲ್ ಆರ್ಡರುಗಳನ್ನಾಗಲೀ ಅಂಗೀಕರಿಸುವುದಿಲ್ಲ ಅಥವಾ ಟೆಂಡರು ಫಾರಮ್ಮುಗಳನ್ನು [illegible] ಕಳುಹಿಸಲಾಗುವುದಿಲ್ಲ

ಅಪ್ಪಣೆ ಮೇರೆಗೆ,

ಬಿ ಸಿ ಮಲ್ಲಪ್ಪ,

ಕಾರ್ಯದರ್ಶಿ, ಸ್ಟೋರ್ಸ್ ಪರ್ಚೇಸ್ ಕಮಿಟಿ,

ಯುನೈಟೆಡ್ ಇಂಡಿಯಾ ಬಿಲ್ಡಿಂಗ್

ಬೆಂಗಳೂರು ಸಿಟಿ

Edited, Printed and Published by A R Nagarajan at Sadhvi Press, D Subbiah Road Mysore

SRI GAYATHRI
TALKIES
[illegible]
BIG JIM McLAIN
[illegible]
—NEXT CHANGE
WAY OF GAUCHO

SRI GANESHA
TALKIES
From 29 5 53 For 3 days
Columbia's
THE SNIPER
(A Stanley Kramer Production)
Featuring Adolphe Menjou
Arthur Franz Marie Windsor
NEXT ATTRACTION
G B S [illegible]
MAJOR BARBARA

29-5-53ರಿಂದ [illegible] 3ನೇ ವಾರ
ಮೈಸೂರು ಚಾಮುಂಡೇಶ್ವರಿ ಟಾಕೀಸಿನಲ್ಲಿ
ಪುತ್ರ ಧರ್ಮ
[illegible]
[illegible] PRAKASH RELEASE

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
29 5-53 ನೇ ಶುಕ್ರವಾರದಿಂದ ದಿನವಹಿ 3 ಆಟಗಳು.
ಜೆಮಿನಿಯವರ [illegible] ಚಿತ್ರ
ಚಂದ್ರಲೇಖ
ಮ್ಯಾಟನಿ ಮಧ್ಯಾಹ್ನ 2-30 ಕ್ಕೆ
[illegible] ರಂಜನ್ [illegible] ಸುಂದರಿಬಾಯಿ [illegible] ಎಂ ಎಸ್ ಕೃಷ್ಣ [illegible] ಮುಂತಾದವರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೩೦-೫-೧೯೫೩ [ಸಂಚಿಕೆ ೨೪೭

ದಕ್ಷಿಣ ಕೊರಿಯಕ್ಕೆ ಅಮೆರಿಕದ ಎಚ್ಚರಿಕೆ

ಪ್ರೊ|| ಎಲ್. ಶ್ರೀಕಂಠಯ್ಯನವರ ರಾಜೀನಾಮೆ ?

ಮೈಸೂರು ೩೦

ಇಲ್ಲಿನ ಮಹಾರಾಜಾ ಕಾಲೇಜಿನ ರಾಜ್ಯಶಾಸ್ತ್ರದ ಪ್ರೊಫೆಸರಾದ ಶ್ರೀ ಎಲ್. ಶ್ರೀಕಂಠಯ್ಯನವರು ರಾಜೀನಾಮೆಯಿತ್ತಿರುವರೆಂದೂ, ವಿಶ್ವವಿದ್ಯಾಲಯದ ಕೌನ್ಸಿಲ್ ಸಭೆಯು ಅದನ್ನು ಸ್ವೀಕರಿಸುತ್ತಿರುವುದಾಗಿಯೂ ತಿಳಿದುಬಂದಿದೆ

ಕಾರ್ಮಿಕ ಕಮಿಷನರ್ ಕಛೇರಿಯಲ್ಲಿ ಬೀಡಿ ಕಾರ್ಮಿಕರ ಗಲಾಟೆ

ನಗರದಲ್ಲಿರುವ ಅಸಿಸ್ಟೆಂಟ್ ಲೇಬರ್ ಕಮಿಷನರ ಕಛೇರಿಗೆ ನೆನ್ನೆ ದೇವೇಗೌಡ, ವೇಣುಗೋಪಾಲ್, ಕುಂಜ ಮೊಹಮದ್ ಮತ್ತು ಮೊಹಿಯುದ್ದೀನ್ ಎಂಬ ನಾಲ್ವರು ಬೀಡಿ ಕೆಲಸಗಾರರು ಇತರ ೨೦ ಜನರೊಡನೆ ಹೋಗಿ ಗಲಾಟೆ ಮಾಡಿ ಕಛೇರಿ ಕೆಲಸಕ್ಕೆ ಅಡಚಣೆಯುಂಟು ಮಾಡಿದರೆಂದು ಮೇಲ್ಕಂಡ ನಾಲ್ವರನ್ನು ಪೋಲೀಸರು ೧ನೇ ನಗರ ನ್ಯಾಯಾಧೀಶರ ಮುಂದೆ ಹಾಜರ್ಮಾಡಲಾಗಿ ಅವರುಗಳಿಗೆ ತಲಾ ೨೦ ರೂ ದಂಡ ತಪ್ಪಿದರೆ ೧ ವಾರ ಸಜಾವನ್ನು ವಿಧಿಸಲಾಯಿತು ಅವರೆಲ್ಲರೂ ಜೈಲಿಗೆ ಹೋದರು

ಹರಿಕಥೆ

ರಾಜಧಾನಿಯ ಶ್ರೀರಾಮಪೇಟೆಯಲ್ಲಿರುವ ಶ್ರೀ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀ ರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ೩|| ಗಂಟೆಗೆ ಶ್ರೀ ಪಿ ರಾಮಸ್ವಾಮಿ ನಾಯ್ಡು ಮತ್ತು ಶ್ರೀ ಆರ್ ಗುರುರಾಜನಾಯ್ಡುರವರು ಏರ ಬಭ್ರುವಾಹನ-ಅರ್ಜುನ ಎಂಬ ಹರಿಕಥೆಯನ್ನು ಮಾಡುವರು

ಬೃಂದಾವನದಲ್ಲಿ ದೀಪೋತ್ಸವವಿಲ್ಲ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಬಹಳ ಕಡಿಮೆಯಾಗಿರುವುದರಿಂದ ವಾರಾಂತ್ಯಗಳಲ್ಲೂ ಮತ್ತು ವಿಶೇಷ ದಿನಗಳಲ್ಲೂ ಬೃಂದಾವನದಲ್ಲಿ ನಡೆಸುವ ದೀಪೋತ್ಸವವನ್ನು ನೆನ್ನೆಯಿಂದ ನಿಲ್ಲಿಸಿರುವುದಾಗಿ ಸಂಸ್ಥಾನದ ಚೀಫ್ ಇಂಜನಿಯರು ತಿಳಿಸಿರುತ್ತಾರೆ ಅಣೆಕಟ್ಟಿನಲ್ಲಿ ನೀರು ಪುನಃ ಹೆಚ್ಚಾಗಿ ಬಂದನಂತರ ದೀಪೋತ್ಸವವನ್ನು ನಡೆಸಲಾಗುವುದು ಹಿಂದೆ ಅಲ್ಲಿ ಮುಳುಗಿ ಹೋಗಿದ್ದ ದೇವಸ್ಥಾನ ಮತ್ತು ಮರಗಳು ಈಗ ಕಾಣಲಾರಂಭಿಸಿರುವುವು

ಪದ್ಮಾಸನ ಹಾಕಿಕೊಂಡು ಜನಿಸಿದ ಶಿಶು

ಪಶ್ಚಿಮ ಬಂಗಾಳದ ಟಿಟಾಘರ್ ಬಳಿ ಮಿಯ್ಯಾಬಾಡಿ ಎಂಬ ಹಳ್ಳಿಯಲ್ಲಿ ಎಂಬಯ್ಯ ಎಂಬುವರ ಪತ್ನಿ ನರಸಮ್ಮ ಎಂಬಾಕೆಯು ಕಳೆದ ೧೫ ನೇ ತಾ|| ಪದ್ಮಾಸನ ಹಾಕಿಕೊಂಡಿರುವ ಗಂಡು ಮಗುವೊಂದನ್ನು ಪ್ರಸವಿಸಿರುವುದಾಗಿ ವರದಿಯಾಗಿದೆ ಅದು ಹುಟ್ಟಿ ೧೪ ದಿನಗಳು ಮಾತ್ರ ಆಗಿದ್ದರೂ, ೧೪ ತಿಂಗಳ ಮಗುವಿನಂತಿದೆ ಅದು ಇನ್ನೂ ಪದ್ಮಾಸನವನ್ನು ಹಾಕಿಕೊಂಡಿರುವುದಾಗಿಯೂ ಹೇಳಲಾಗಿದೆ ಅದನ್ನು ನೋಡಲು ಸಾವಿರಾರು ಜನರು ಬರುತ್ತಿರುವರು ಪೂರ್ವಜನ್ಮದಲ್ಲಿ ಶಾಪಗ್ರಸ್ತನಾದ ಋಷೀಶ್ವರರೊಬ್ಬರು ಈ ರೀತಿ ಜನ್ಮ ತಾಳಿರಬೇಕೆಂದು ಅಲ್ಲಿನ ಜನರ ಭಾವನೆಯಾಗಿದೆ

ನೆಹ್ರೂ ಲಂಡನ್ ತಲಪಿದರು

ಭಾರತದ ಪ್ರಧಾನಿ ನೆಹರೂರವರು ನೆನ್ನೆ ಲಂಡನ್ ನಗರವನ್ನು ತಲಪಿದರು ಅವರನ್ನು ಅಲ್ಲಿರುವ ಭಾರತದ ಹೈ ಕಮಿಷನರ್ ಶ್ರೀ ಬಿ ಜಿ ಖೇರ್, ನೆಹರೂರವರ ಸಹೋದರಿ ಕೃಷ್ಣಾ ಹಠೀಸಿಂಗ್ ಮತ್ತು ಮಗಳು ಇಂದಿರಾ ಗಾಂಧಿಯವರು ಸ್ವಾಗತಿಸಿದರು ಇನ್ನೂ ಅನೇಕ ಭಾರತೀಯರು ನೆಹರೂರವರಿಗೆ ಹಾರ್ದಿಕ ಸುಸ್ವಾಗತವನ್ನು ಬಯಸಿದರು ಅವರು ಖೇರ್‌ರವರ ಭವನಕ್ಕೆ ತೆರಳಿದರು ಈ ವಾರಾಂತ್ಯದಲ್ಲಿ ಅವರು ಲಾರ್ಡ್ ಮೌಂಟ್‌ಬ್ಯಾಟನ್ನರೊಡನೆ ಒಂದು ದಿನ ಇರುವರು

ಪೂರ್ವ ಜರ್ಮನಿ ಮೇಲೆ ರಷ್ಯಾ ಹಿಡಿತ

ಪೂರ್ವ ಜರ್ಮನಿಯಲ್ಲಿ ರಷ್ಯದ ರಾಜಕೀಯ ಹತೋಟಿ ಅಧಿಕಾರಿಯನ್ನೂ ಮತ್ತು ರಷ್ಯದ ಸೇನಾನಿಯೊಬ್ಬರನ್ನೂ ಇಡಲಾಗುವುದೆಂದು ಮಾಸ್ಕೋ ರೇಡಿಯೋವು ತಿಳಿಸಿರುತ್ತದೆ ಹೊಸ ರಾಜಕೀಯ ಅಧಿಕಾರಿಯು ಜರ್ಮನಿ ಸರ್ಕಾರದ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುವರೆಂದು ಹೇಳಲಾಗಿದೆ

ಜೂನ್ ೧೮ಕ್ಕೆ ರೋಸನ್‌ಬರ್ಗ್ ದಂಪತಿಗಳ ಫಾಸಿ

ಅಮೆರಿಕದ ಅಣು ರಹಸ್ಯವನ್ನು ರಷ್ಯಕ್ಕೆ ಒದಗಿಸಿದರೆಂದು ಮರಣ ದಂಡನೆಗೆ ಗುರಿಯಾಗಿರುವ ಪ್ರಸಿದ್ಧ ವೈಜ್ಞಾನಿಕ ಡಾ|| ಜೂಲಿಯಸ್ ರೋಸನ್‌ಬರ್ಗ್ ಮತ್ತು ಅವರ ಪತ್ನಿ ಎಥೆಲ್‌ರವರನ್ನು ಜೂನ್ ೧೮ ನೇ ತಾ|| ವಿದ್ಯುಚ್ಛಕ್ತಿ ಕುರ್ಚಿಯಲ್ಲಿ ಕುಳ್ಳಿರಿಸಿ ವಿದ್ಯುತ್ ಪ್ರವಾಹನ್ನು ಬಿಟ್ಟು ಅವರ ಜೀವ ತೆಗೆಯಲಾಗುವುದೆಂದು ಪ್ರಕಟಿಸಲಾಗಿದೆ

ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಚಿ ನರಸೀಪುರ ೨೭

ಇಲ್ಲಿನ ಪೌರಸಭೆಯ ಉಪಾಧ್ಯಕ್ಷ ಶ್ರೀ ಎನ್. ಪಿ ಪುಟ್ಟಸ್ವಾಮಿಯವರು ರಾಜೀನಾಮೆ ಇತ್ತುದರಿಂದ, ಆ ಸ್ಥಾನಕ್ಕೆ ಚುನಾವಣೆ ನಡೆಸಲು ವೇಳಾ ಪಟ್ಟಿಯನ್ನು ಸಿದ್ಧಗೊಳಿಸುವುದಕ್ಕಾಗಿ ಜೂನ್ ೧೨ ನೇ ತಾ|| ಪೌರಸಭೆಯ ಅಧಿವೇಶನವು ನಡೆಯಲಿದೆ

ಅತಾರಾ ಕಛೇರಿ ಮುಂದೆ ಮೇಯರ್ ಉಪವಾಸ !

ಮಾಡಲೆಂದು ಪೌರಸಭಾ ಸದಸ್ಯರ ಸಲಹೆ

ಬೆಂಗಳೂರು ೩೦

ಬೆಂಗಳೂರು ನಗರದಲ್ಲಿರುವುದಕ್ಕಿಂತ ಸಿವಿಲ್ ಪ್ರದೇಶದಲ್ಲಿ ಹೆಚ್ಚು ತೆರಿಗೆಯನ್ನು ವಿಧಾಯಕ ಮಾಡಿರುವುದರ ಬಗ್ಗೆ ಸಿವಿಲ್ ಪ್ರದೇಶದ ಜನರ ಕುಂದು ಕೊರತೆಯನ್ನು ನಿವಾರಿಸಲು ಮತ್ತು ಇದುವರಿಗೆ ಕೊಟ್ಟ ಹೆಚ್ಚಿನ ತೆರಿಗೆಯನ್ನು ವಾಪಸು ಪಡೆಯಲು ಮೇಯರವರು ಅತ್ತಾರಾ ಕಛೇರಿ ಮುಂದೆ ಕುಳಿತು ಉಪವಾಸ ಮಾಡಬೇಕೆಂದು ನೆನ್ನೆ ಇಲ್ಲಿನ ಪೌರ ಸಭಾಧಿವೇಶನದಲ್ಲಿ ಸದಸ್ಯರಾದ ಶ್ರೀ ಜಯತೀಲಕ್‌ರವರು ಸಲಹೆ ಮಾಡಿದರು

ಕಮಿಷನರ್, ಶ್ರೀ ಹೆಂಜಾರಪ್ಪನವರು ಉತ್ತರವಿತ್ತು ಪೌರಸಭಾ ನಿಯಮಾವಳಿಗಳನ್ನು ಬದಲಾಯಿಸಿದ ಹೊರತು ಯಾವ ಪರಿಹಾರ ನೀಡಲೂ ಸಾಧ್ಯವಿಲ್ಲವೆಂದು ಹೇಳಿದರು ಹಿಂದೆ ವಸೂಲಾದ ಹಣವನ್ನು ವಾಪಸು ಕೊಡುವ ಪ್ರಶ್ನೆಯೇ ಏಳುವುದಿಲ್ಲವಾಗಿಯೂ ಅವರು ಸ್ಪಷ್ಟಪಡಿಸಿದರು

ರಿಪಬ್ಲಿಕ್ ಆಗಲು ಪಾಕಿಸ್ತಾನದ ನಿರ್ಧಾರ

ಕಾಮನ್‌ವೆಲ್ತಿನಲ್ಲಿ ರಿಪಬ್ಲಿಕ್ ರಾಷ್ಟ್ರವಾಗಿರಲು ಪಾಕಿಸ್ತಾನವು ನಿರ್ಧರಿಸಿರುವುದಾಗಿಯೂ, ಈ ವಿಷಯವನ್ನು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ತಿಳಿಯಪಡಿಸುವರೆಂದೂ ವರದಿಯಾಗಿದೆ

ಗಡಿ ನಿರ್ಧಾರ ಸಮಿತಿ ರಚಿಸದಿದ್ದರೆ ಚಳುವಳಿ

ಇದೇ ಆಗಸ್ಟ್ ೧ ನೇ ತಾ|| ಒಳಗಾಗಿ ಕೇಂದ್ರ ಸರ್ಕಾರದವರು ಗಡಿ ನಿರ್ಧಾರದ ಸಮಿತಿಯನ್ನು ರಚಿಸಬೇಕೆಂದೂ, ಇಲ್ಲವಾದರೆ ಕನ್ನಡಿಗರು ಶಾಂತಿಯುತ ಚಳುವಳಿಯನ್ನು ಹೂಡಲಿರುವರೆಂದೂ ಸೂಚಿಸುವ ನಿರ್ಣಯವನ್ನು ದಾವಣಗೆರೆಯಲ್ಲಿ ಸೇರಿದ್ದ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನಲ್ಲಿ ಅಂಗೀಕರಿಸಲಾಯಿತು ಈ ಬಗ್ಗೆ ಕ್ರಮ ಕೈಗೊಳ್ಳಲು ಕೆ ಆರ್ ಕಾರಂತ್, ಶಿವಮೂರ್ತಿ ಸ್ವಾಮಿ ಮುಂತಾದ ೧೪ ಜನರ ಸಮಿತಿಯೊಂದನ್ನು ರಚಿಸಲಾಯಿತು.

ದ. ಕೊರಿಯಕ್ಕೆ ಅಮೆರಿಕದ ಬಲವಾದ ಎಚ್ಚರಿಕೆ

ಕೊರಿಯಾ ಯುದ್ಧ ಮುಕ್ತಾಯದ ಬಗ್ಗೆ ಪಾನ್‌ಮನ್‌ಜಾನ್‌ನಲ್ಲಿ ನಡೆಯುತ್ತಿರುವ ಸಂಧಾನವು ಜಯಪ್ರದವಾಗಿ, ಕಾಳಗ ನಿಲ್ಲಿಸಿದ ನಂತರ ದಕ್ಷಿಣ ಕೊರಿಯವು ತಾನೊಂದೇ ಯುದ್ಧ ನಡೆಸುವ ಪ್ರಯತ್ನ ಮಾಡಿದರೆ ಅದಕ್ಕೆ ತಾವು ಯಾವ ವಿಧವಾದ ಸಹಾಯವನ್ನೂ ಮಾಡುವುದಿಲ್ಲವೆಂದು ಅಮೆರಿಕಾ ಸರ್ಕಾರದವರು ಎಚ್ಚರಿಸಿರುತ್ತಾರೆ ದಕ್ಷಿಣ ಕೊರಿಯಾ ಸೈನ್ಯಗಳು ಅಮೆರಿಕದ ಸಹಾಯವಿಲ್ಲದೆ ಕೇವಲ ಎರಡು ವಾರ ಕಾಲವಾದರೂ ಯುದ್ಧವನ್ನು ಎದುರಿಸಲಾರವೆಂದು ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್‌ರೀಯವರಿಗೆ ತಿಳಿಸಲಾಗಿದೆ

ನಗೀಬರೊಡನೆ ನೆಹ್ರೂ ಭೇಟಿ

ಪ್ರಧಾನಿ ನೆಹರೂರವರು ಲಂಡನ್ನಿಗೆ ಹೋಗುವ ಮಾರ್ಗದ ಮಧ್ಯೆ ಕೈರೋವಿನಲ್ಲಿ ಇಳಿದಾಗ ಅವರೊಡನೆ ವಿಮಾನ ನಿಲ್ದಾಣದಲ್ಲಿ ಈಜಿಪ್ಟಿನ ಪ್ರಧಾನಿ ನಗೀಬ್‌ರವರು ಭೇಟಿ ನಡೆಸಿದರೆಂದೂ, ಬ್ರಿಟನ್ನಿಗೂ ಈಜಿಪ್ಟಿಗೂ ಸೂಯೆಜ್ ಕಾಲುವೆ ವಿಷಯದ ವಿವಾದವನ್ನು ಶಾಂತಿ ಮಾರ್ಗದಿಂದಲೇ ಬಗೆಹರಿಸಲು ಸಾಧ್ಯ ಎಂದು ನೆಹರೂರವರು ಹೇಳಿರುವುದಾಗಿಯೂ ವರದಿಯಾಗಿದೆ

ತುಂಗಭದ್ರಾ ಯೋಜನೆ ಬಗ್ಗೆ ಮೈಸೂರಿನ ಜವಾಬ್ದಾರಿ

ತುಂಗಭದ್ರಾ ಅಣೆಕಟ್ಟನ್ನು ಪೂರ್ತಿಯಾಗಿ ಕಟ್ಟುವ ಜವಾಬ್ದಾರಿಯು ಹೊಸ ಆಂಧ್ರ ಪ್ರಾಂತ ಮತ್ತು ಮೈಸೂರು ಸರ್ಕಾರಗಳ ಜವಾಬ್ದಾರಿಯೆಂದು ಗೊತ್ತು ಮಾಡಲ್ಪಟ್ಟಿದೆ ಈ ಸಂಬಂಧವಾಗಿ ದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಮೈಸೂರಿನ ಪರವಾಗಿ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಭಾಗವಹಿಸಿದ್ದರು ಈ ಸಂಬಂಧವಾದ ಮಾತುಕತೆಗಳನ್ನು ಜೂನ್ ತಿಂಗಳು ೩ ನೇ ವಾರದಲ್ಲಿ ಬೆಂಗಳೂರಿನಲ್ಲಿ ಮುಂದುವರಿಸಲಾಗುವುದೆಂದೂ, ಅಲ್ಲಿ ಈ ಬಗ್ಗೆ ಉದ್ಭವಿಸುವ ಹಣಕಾಸು, ಆಡಳಿತ, ಮತ್ತು ಟೆಕ್ನಿಕಲ್ ವ್ಯವಸ್ಥೆಗಳನ್ನು ಗೊತ್ತುಪಡಿಸಲಾಗುವುದೆಂದೂ ಹೇಳಲಾಗಿದೆ

ನಾಟಕ ಸಾಗಾಣಿಕೆ ಮೊಕದ್ದಮೆ ವರ್ಗ

ಪ.ಣಕೂರಿನ ವಿಶೇಷ ನ್ಯಾಯಾಸ್ಥಾನದಲ್ಲಿ ನಡೆಯುತ್ತಿದ್ದ ಸಿರಿಯಾ ಪಟ್ಟಣದ ನಾಟಾ ರವಾನೆ ಮೊಕದ್ದಮೆಯನ್ನು ಮೈಸೂರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಸುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯಾಗಿದೆ. ಶಾಸನ ಸಭಾ ಸದಸ್ಯ ಶ್ರೀ ಎಸ್ ಎಂ ಮರಿಯಪ್ಪ ಮತ್ತಿತರರು ಮೊಕದ್ದಮೆಯಲ್ಲಿ ಅಪಾದಿತರಾಗಿರುವರು

ಸುಳ್ಳು ಫಿರ್ಯಾದು ಕೊಟ್ಟುದಕ್ಕೆ ಪರಿಹಾರ ಕೊಡಬೇಕು

ಮೈಸೂರು ತಾಲ್ಲೂಕು ಇಲವಾಲ ಗ್ರಾಮದ ಶಿವೇಗೌಡ ಎಂಬುವನು ಶ್ರೀ ಉಗ್ರಾಚಾರಿ ಎಂಬುವರ ಮೇಲೆ ಪ್ರೋನೋಟನ್ನು ಹರಿದು ಹಾಕಿದರೆಂಬ ಬಗ್ಗೆ ನಗರದ ೨ನೇ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ದೂರಿನ ಅಂಶ ಸುಳ್ಳೆಂದು ಗೊತ್ತಾದುದರಿಂದ ಸದರಿ ಶಿವೇಗೌಡನು ಶ್ರೀ ಉಗ್ರಾಚಾರಿಯವರಿಗೆ ೫೦ ರೂ ಪರಿಹಾರ ಕೊಡುವಂತೆ ಆ ದಿನ ನ್ಯಾಯಾಧೀಶರು ಆಜ್ಞೆ ಮಾಡಿದರು.

ವಿದೇಶೀ ಮಾದಕ ದ್ರವ್ಯಗಳ ಬಗ್ಗೆ ರಿಜಿಸ್ಟ್ರೇಷನ್

ಸರ್ಕಾರಕ್ಕೆ ಪೌರಸಭೆಯ ಶಿಫಾರಸು

ಮೈಸೂರು ೩೦

ನೆನ್ನೆ ಮಧ್ಯಾಹ್ನ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು ಪುನರ್ರಚಿತವಾದ ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ ಶ್ರೀ ಎಸ್ ಲಿಂಗಣ್ಣನವರನ್ನು ಪುರಸಭೆಯ ಸಂವಾಗಿ ಆರಿಸಲಾಯಿತು ಹಾಗೆಯೇ ಸೂಯೆಜ್ ಫಾರಂ ಸಮಿತಿಗೆ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಚಾಮುಂಡಯ್ಯನವರು ಚುನಾಯಿಸಲ್ಪಟ್ಟರು

ನಗರದಲ್ಲಿ ವ್ಯಾಪಾರದ ಬಾಬುಗಳ ಮೇಲೆ ತೆರಿಗೆ ಹಾಕುವಾಗ ಏನಾದರೂ ಅನ್ಯಾಯವಾದಲ್ಲಿ ಸಂಬಂಧಪಟ್ಟವರಿಗೆ ಪರಿಹಾರ ಕೊಡಲು ಕಾನೂನಿನಲ್ಲೇ ರಕ್ಷಣೆಗಳಿರುವುದರಿಂದ ಆ ಭಾಗವನ್ನು ಸರ್ಕಾರದ ಅಪೇಕ್ಷೆಯನುಸಾರವಾಗಿ ತಿದ್ದುಪಡಿ ಮಾಡುವುದು ಅನಗತ್ಯವೆಂದೂ, ಸಭೆಯು ಇಚ್ಛಿಸಿದರೆ ವ್ಯಾಪಾರ ಎಂಬ ಪದಕ್ಕೆ ಲಾಭದಾಯಕ ವೃತ್ತಿ" ಎಂಬ ದಾಗಿ ಸರ್ಕಾರದವರು ಸೂಚಿಸಿರುವಂತೆ ತಿದ್ದುಪಡಿ ಮಾಡಬಹುದೆನ್ನೂ ಒಂದಿದ್ದ ಸ್ಥಾಯಿ ಸಮಿತಿಯ ಶಿಫಾರಸನ್ನು ತಿರಸ್ಕರಿಸಲಾಯಿತು

ನಜರ್‌ಬಾದ್ ಮತ್ತು ಲಷ್ಕರ್ ಮೊಹಲ್ಲಗಳಲ್ಲಿರುವ ಸೈನಿಕರ ನಿವಾಸದ ಭವನಗಳ ಮೇಲಿನ ತೆರಿಗೆಯನ್ನು ಕೊಡಲು ... ನ ಅಧಿಕಾರಿಯು ಕೇಂದ್ರ ಸರ್ಕಾರದ ಇತರೇ ಕಛೇರಿಗಳ ಅಧಿಕಾರಿಗಳಂತೆಯೇ ಒಪ್ಪದಿರುವುದರಿಂದ ಈ ಬಗ್ಗೆ ಸಂಸ್ಥಾನ ಸರ್ಕಾರದ ಸಹಾಯವನ್ನು ಕೋರಬೇಕೆಂಬ ಕಾನೂನು ರಚನಾ ಸಮಿತಿಯ ನಿರ್ಣಯವನ್ನು ಒಪ್ಪಲಾಯಿತು

ನಗರದಲ್ಲಿ ವಿದೇಶೀ ಮದ್ಯದ ಮಾರಾಟದ ಮೇಲೆ ಹಾಕಲಾಗುತ್ತಿದ್ದ ರಿಜಿಸ್ಟ್ರೇಷನ್ ಲೈಸೆನ್ಸನ್ನು ಜಾರಿ ತಿಂಗಳಿನಿಂದ ರದ್ದು ಮಾಡಬೇಕೆಂಬ ಆಜ್ಞೆಯನ್ನು ಪುನರ್ವಿಮರ್ಶಿಸುವಂತೆ ಸರ್ಕಾರವನ್ನು ಕೋರಲು ತೀರ್ಮಾನಿಸಲಾಯಿತು

ಸಭೆಯನ್ನು ಜೂನ್ ೯ನೇ ತಾರೀಖಿಗೆ ಮುಂದುವರಿಸಲಾಯಿತು

ಲೋಕಲ್ ಸೆಸ್ ವಸೂಲಿ ಕ್ರಮ

ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಶಾಸನದ ಪ್ರಕಾರ ವಿಧಿಸುವ ಲೋಕಲ್ ಸೆಸ್ಸನ್ನು ಭೂ ಕಂದಾಯದ ವಸೂಲಿ ರೀತಿಯಲ್ಲಿ ವಸೂಲು ಮಾಡುವಂತೆ ಸರ್ಕಾರದ ಆಜ್ಞೆಯಾಗಿದೆ

ಆಂಧ್ರ ಸ್ವಾತಂತ್ರ್ಯದ ಮಸೂದೆ ಬಗ್ಗೆ ಮೈಸೂರು ಅಭಿಪ್ರಾಯ

ಆಂಧ್ರ ಪ್ರಾಂತದ ರಚನೆ ಸಂಬಂಧವಾಗಿ ಕೇಂದ್ರ ಸರ್ಕಾರದವರು ಒಂದು ಕರಡು ಮಸೂದೆಯನ್ನು ತಯಾರಿಸಿ ಅದನ್ನು ಪರಿಶೀಲಿಸಲು ಮದ್ರಾಸು ಸರ್ಕಾರದವರಿಗೆ ಕಳುಹಿಸಿರುತ್ತಾರೆ ಈ ಬಗ್ಗೆ ಮೈಸೂರು ಸರ್ಕಾರದ ಅಭಿಪ್ರಾಯವನ್ನೂ ಸಹ ಕೇಂದ್ರದವರು ಕೇಳಲಿರುವರೆಂದು ಮದ್ರಾಸಿನ ಹಣಕಾಸಿನ ಮಂತ್ರಿ, ಸಿ ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ. ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳು ಅಕ್ಟೋಬರ್ ೧ ನೇ ತಾ|| ನಂತರ, ಮೈಸೂರಿಗೆ ಸೇರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೨೩ ೧೪-೦	೨೮ ೧೦ ೦
ಹೊಂಗೆಬೀಜ	೨೧ ೧೨-೦	೨೨-೬-೦
ಹುರುಳಿ	೪೪ ೬ ೦	೪೪ ೧೦ ೦
ಹೆಸರು	೬೮ ೪-೦	೬೯ ೧೨ ೦
ಹಲಸಂದೆ	೫೦ ೦ ೦	೬೦ ೪ ೦
ಅವರೆ	೫೧ ೬-೦	೫೨ ೧೦ ೦
ಉದ್ದು	೭೦ ೧೨ ೦	೭೧ ೬ ೦
ಮೆಣಸಿನಕಾಯಿ	೨೨ ೧೪ ೦	
ಹುಣಸೇಹಣ್ಣು	೬ ೧ ೦	೬ ೧೦ ೦
ತೆಂಗಿನಕಾಯಿ	೧೨೭ ೦ ೦	೨೧೨ ೦ ೦

ವಿದ್ಯಾ ಸುಧಾರಣೆ ಬಗ್ಗೆ ಚರ್ಚೆಗಾಗಿ ವಿಶೇಷ ಸೆನೆಟ್ ಸಭೆ

ಮೈಸೂರು ಸಂಸ್ಥಾನದ ವಿದ್ಯಾ ಸುಧಾರಣಾ ಸಮಿತಿಯವರು ಮಾಡಿರುವ ವರದಿಯಲ್ಲಿ ವಿಶ್ವವಿದ್ಯಾಲಯದ ವಿದ್ಯಾಭ್ಯಾಸ ಕ್ರಮಕ್ಕೆ ಸಂಬಂಧಿಸಿದ ಮಾರ್ಪಾಡುಗಳನ್ನು ಕುರಿತು ಪರಿಶೀಲಿಸಲು ಬರುವ ೧೩ನೇ ತಾ|| ಬೆಂಗಳೂರಿನಲ್ಲಿ ಸೆನೆಟ್ಟಿನ ವಿಶೇಷ ಸಭೆಯು ನಡೆಯುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿಶ್ರ ಮಾಧುರ್ಯ ಮಧ್ಯಾಹ್ನ ೧ ೪೦ ಪಿಟೀಲು ೩ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೬ ೪೦ ಮತ್ತು ೮ ಶಿವಶಂಕರ್ ಸಂಗೀತ ೬ ೧೦ ಹಾವು ಮತ್ತು ನಮ್ಮವರು ೭ ಗಾನಮಂಜರಿ ೭ ೩೦ ಮತ್ತು ೮ ೪೦ ಎಸ್ ಮಹದೇವಪ್ಪ ಪಿಟೀಲು. ೯ ೧೫ ಚಿತ್ರವಾಣಿ ೯ ೪೦ ಎ ಸೀತಾರಾಂ ಕನ್ನಡ ನಾಟಕ

ಮೋತಿಲಾಲ್ ಟಾಕೀಸ್,

ಮೈಸೂರು

31 5 53ರಿಂದ ಪ್ರತಿದಿನ 3 ಆಟಗಳು

ಭಗವಾನ್ ಆರ್ಟ್ಸ್ ಪ್ರೊಡಕ್ಷನ್ಸ್‌ರವರ

ಅಲ್ ಬೆಲಾ

(ಹಿಂದಿ)

ಪಾತ್ರ ಗೀತಾಬಾಲಿ ಭಗವಾನ್

ಹಿಮದಿಂದ ೧೬೦ ಲಕ್ಷ ಎಕರೆಯಲ್ಲಿ ಪೈರು ನಾಶ

ಅಕಾಲದ ಹಿಮದಿಂದ ಚೀಣದ ಆರ್ಸ್ವೆ, ಹೊನಾನ್, ಸಾಂಟುಂಗ್, ಕಿಯಾಂಗ್ಸು ಮತ್ತು ಷಾನ್ಸಿ ಪ್ರಾಂತಗಳ ಒಟ್ಟು ೧೬೦ ಲಕ್ಷ ಎಕರೆ ಜಮೀನುಗಳಲ್ಲಿ ಪೈರು ನಾಶವಾಗಿರುವುದೆಂದು ಹೇಳಲಾಗಿದೆ

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ

ದಿ ಲ್ ಖು ಷ್

ಬಹಳ ಕಾಲದ ಹೊಟ್ಟೆ ಶೂಲೆಯನ್ನು ಸೇವಿಸಿದ ಕೂಡಲೇ ನಿಲ್ಲಿಸುತ್ತದೆ

ಶ್ರೀ ಆರ್ ಕೆ ವೆಂಕಟರಾವ್,

ಕ್ವಾಲಿಟಿ ವರ್ಕ್ಸ್, ಮೈಸೂರು.

ನನ್ನ ಸಂಸಾರಕ್ಕೆ ನಾಲ್ಕು ವರ್ಷಗಳಿಂದ ಬಹಳ ಕಾಲದ ಹೊಟ್ಟೆ ಶೂಲೆಯಿಂದ ಬುದ್ಧಿ ಭ್ರಮಣೆಯೇ ಮೊದಲಾದ ಉಪದ್ರವಗಳುಂಟಾಗಿ ಸಾವಿರಾರು ರೂಪಾಯಿ ವೆಚ್ಚದಲ್ಲಿ ನಾನಾ ಚಿಕಿತ್ಸೆಗಳನ್ನು ಮಾಡಿಸಿ ಪ್ರಯೋಜನವಿಲ್ಲದೆ ಮೈಸೂರು ಮಹಾರಾಜರವರ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ಚಿಕಿತ್ಸೆ ಕೊಟ್ಟರೂ ನಿಷ್ಫಲವಾಗಿ ದೇಹ ಕೃಶವಾಗಿ ಜೀವನದಲ್ಲಿ ನಿರಾಶರಾಗಿದ್ದು ಈಗ ಶ್ರೀ ರಾಮಣ್ಣನವರಲ್ಲಿ ಚಿಕಿತ್ಸೆ ಪ್ರಾರಂಭಿಸಿ "ದಿಲ್ ಖುಷ್" ಅನ್ನು ಸೇವಿಸಿದ ಕೂಡಲೇ ಹೊಟ್ಟೆ ಶೂಲೆ ನಿಂತುಹೋಗಿ, ಬುದ್ಧಿ ಭ್ರಮಣೆ ಮುಂತಾದುವು ಆಗೋಚರವಾಗಿಯೇ ಹೋದುವು ರೋಗಿಗೆ ದೇಹ ದಾರ್ಢ್ಯ ಹೆಚ್ಚಿ ದೇಹ ಕಾಂತಿಯು ಹೆಚ್ಚುತ್ತಿರುವುದರಲ್ಲಿ ಅತಿಶಯೋಕ್ತಿಯಿಲ್ಲ

ಎಸ್ ರಾಮಣ್ಣ ಸ್ಪೆಷಲಿಸ್ಟ್,

2830 ಲಿವರ್ ಅಂಡ್ ಸ್ಪ್ಲೀನ್

ವೈದ್ಯ ಶಾಲಾ, 6ನೇ ಕ್ರಾಸ್ ರಸ್ತೆ

ಚಾಮುಂಡಿಪುರಂ ಮೈಸೂರು

Edited, Printed and Published by A R Nagarajan at Sadhvi Press, D Subbiah Road Mysore

ಗೃಹಕೃತ್ಯದ ನೋಟೀಸು

ಚಾಮರಾಜನಗರದ ತಾಲ್ಲೂಕು ಹರದನಹಳ್ಳಿ ಹೋಬಳಿ ವೆಂಕಟಯ್ಯನ ಛತ್ರದ ಹೊಸೂರು ಗ್ರಾಮದಲ್ಲಿರುವ ಶ್ರೀ ರಕ್ಷಿವ ಮಠದ ಶುದ್ಧ ವೀರಪ್ಪನವರ ಮಕ್ಕಳು ವೀರಣ್ಣನವರ ಹೆಂಡತಿ ಪುಟ್ಟ ವೀರಮ್ಮನು ತಿಳಿಯಪಡಿಸುವುದೇನೆಂದರೆ:—

ಇದೇ ಹರದನಹಳ್ಳಿ ಹೋಬಳಿ ಕೋಡಿ ಉಗನೇ ಗ್ರಾಮಕ್ಕೆ ಸೇರಿದ ಸರ್ವೆ 39/1, ಎಕ್ರೇಜ್ 2-26, ಸರ್ವೆ 39/2, ಎಕ್ರೇಜ್ 2-29 ಈ ಎರಡು ಖುಷ್ಕಿ ಜಮೀನುಗಳು ಮತ್ತು ಇದೇ ವೆಂಕಟಯ್ಯನ ಛತ್ರದ ಹೊಸೂರು ಗ್ರಾಮದಲ್ಲಿರುವ ತೊಟ್ಟಿ ಮನೆಯಲ್ಲಿ ಉತ್ತರದ ಅರ್ಧ ಮನೆ ಮತ್ತು ಖಾಲಿ ಜಾಗ ಒಂದು ಈ ನಾಲ್ಕು ಸ್ವತ್ತುಗಳು ನನಗೂ, ನನ್ನ ಮೈನರ್ ಮಗ ಶಿವಮಲ್ಲಪ್ಪನ ಹೆಸರಿಗೂ ಸಹಾ ದಾನ ಪತ್ರವಾಗಿ ರಿಜಿಸ್ಟರಾಗಿರುತ್ತೆ ಈ ಸ್ವತ್ತುಗಳನ್ನು ನನ್ನ ಯಜಮಾನರಾದ ವೀರಣ್ಣನವರು ದುರ್ಜನರ ದುರ್ಬೋಧನೆಗೆ ಒಳಪಟ್ಟು ಸ್ವತ್ತುಗಳನ್ನು ಪರಭಾರೆ ಮಾಡಲು ಯತ್ನಿಸುತ್ತಾರೆಂದು ತಿಳಿದುಬಂದಿರುವುದರಿಂದ ಮೇಲ್ಕಂಡ ಸ್ವತ್ತುಗಳನ್ನು ಯಾರಾದರೂ ನನ್ನ ಅನುಮತಿಯಿಲ್ಲದೆ ಕ್ರಯ, ಭೋಗ್ಯ, ಆಧಾರ ವಗೈರೆ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಇದರಿಂದ ನನಗೆ ಮುಂದೆ ಉಂಟಾಗತಕ್ಕ ನಷ್ಟಕ್ಕೆ ಪರಭಾರೆ ಮಾಡಿಕೊಂಡವರು ಜವಾಬ್ದಾರರಾಗಬೇಕಾಗುತ್ತದೆ

O ಪುಟ್ಟವೀರಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತನ ರುಜುವಿಗೆ ಹೆಚ್. ಎಸ್ ಭೀಮರಾವ್ ಬರಹ

ತಾ|| 29 5 53

ತಾ|| 29-5-53ರಿಂದ ಚಿಕ್ಕಂದ ಜನಸಂದಣಿಗೆ ಪ್ರದರ್ಶಿಸುತ್ತಿರುವ 3ನೇ ವಾರ

ಪ್ರತಿ ದಿನ ಮೂರು ಆಟಗಳು

ಮೈಸೂರು **ಚಾಮುಂಡೇಶ್ವರಿ** ಟಾಕೀಸಿನಲ್ಲಿ

ಪ್ರಕಾಶ್‌ರವರ ತಮಿಳು ಚಿತ್ರ **ಪೆತ್ತ ತಾಯ್**

ಪಾತ್ರ: ಜಿ ವರಲಕ್ಷ್ಮಿ, ನಾಗೇಶ್ವರರಾವ್, ವಸಂತ, ನಂಬಿಯಾರ್, ಚೆಲ್ಲಂ

ಪ್ರತಿಯೊಂದು ಸಂಸಾರವೂ ನೋಡಬೇಕಾದ ಮನೋಜ್ಞ ಚಿತ್ರ

[A PRAKASH RELEASE]

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ?

ಬಹುಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು

ಮೈಸೂರು ಉಕ್ಕಿನ ಸಾಮಾನುಗಳು

★ ಗಾಡಿ ಪಟ್ಟಿ ಅಥವ ಹಲಗೆಗಳು (Flats)

★ ದುಂಡು ಮತ್ತು ಚದರ ಸಲಾಕಿಗಳು (Rounds & Squares)

★ ಕೋನ ಕಂಬಿಗಳು (Angles)

★ ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು (Reinforcing Rods)

★ ಮತ್ತು ಬೇಲು ಪಟ್ಟಿಗಳು (Hoops)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

★

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೭] ಭಾನುವಾರ ೩೧-೫-೧೯೫೩ [ಸಂಚಿಕೆ ೪೦

ರಾಷ್ಟ್ರೀಯ ಯೋಜನೆಗೆ ೭೫ ಕೋಟಿ ರೂ. ಸಾಲ

ಬಾಲರತ್ನಂ ಮತ್ತು ಇಬ್ಬರ ಮೇಲೆ ಮೊಕದ್ದಮೆ

ಬೆಂಗಳೂರು ೩೦

ಇಲ್ಲಿನ ಅಡ್ವೊಕೇಟರಾದ ಶ್ರೀ ವಿ ಬಾಲರತ್ನಂ, ಹನುಮಂತ ಮತ್ತು ಚೌರಿಯಪ್ಪ ಈ ಮೂರು ಜನರ ಮೇಲೆ ಇಲ್ಲಿನ ಪೋಲೀಸರು ಕೊಲೆ ಪ್ರಯತ್ನದ ಆಪಾದನೆ ಸಂಬಂಧವಾಗಿ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ ಕಳೆದ ೫೧ ನೇ ಜೂಲೈ ೩೧ ನೇ ತಾ|| ಗಾಂಧಿನಗರದಲ್ಲಿರುವ ಒಂದು ಮನೆಯೊಳಗೆ ಹನುಮಂತ ಮತ್ತು ಚೌರಿಯಪ್ಪ ಇವರನ್ನು ಶ್ರೀ ಬಾಲರತ್ನಂರವರು ಕರೆತಂದು ಬಿಟ್ಟರೆಂದೂ, ದೊಡ್ಡಬಳ್ಳಾಪುರದ ವಕೀಲರಾದ ಶ್ರೀ ವಿ ರಾಮಕೃಷ್ಣಯ್ಯನವರನ್ನು ಚಚ್ಚಿ ಕೊಲೆ ಮಾಡುವಂತೆ ಅವರಿಬ್ಬರನ್ನೂ ಅವರು ಪ್ರೇರೇಪಿಸಿದರೆಂದೂ, ಇದರಿಂದ ಶ್ರೀ ರಾಮಕೃಷ್ಣಯ್ಯನವರಿಗೆ ಗಾಯ ಗಳಾದುವೆಂದೂ ವರದಿಯಾಗಿದೆ ನ್ಯಾಯಾಧೀಶರು ಛಾರ್ಜ್‌ಷೀಟನ್ನು ಸ್ವೀಕರಿಸಿ, ಆಪಾದಿತರಿಗೆ ಸಮನ್ಸ್ ಜಾರಿ ಮಾಡಲು ಆಜ್ಞೆ ಮಾಡಿ ಜೂನ್ ೧೦ ಕ್ಕೆ ವಿಚಾರಣೆಯನ್ನು ಇಟ್ಟುಕೊಂಡಿರುತ್ತಾರೆ ಪ್ರಾಸಿಕ್ಯೂಷನ್ ಪರ ೧೮ ಜನ ಸಾಕ್ಷಿಗಳ ವಿಚಾರಣೆಯಾಗುವುದು

ಸಬ್ ಇನ್ಸ್‌ಪೆಕ್ಟರ್ ಮತ್ತು ಪೋಲೀಸರ ಮೇಲೆ ಮೊಕದ್ದಮೆ

ಬೆಂಗಳೂರು ಕಿಲಾರಿ ರಸ್ತೆಯಲ್ಲಿದ್ದ ಕೇವಾದೇವಿಗಾರ ಶ್ರೀ ಕೋಟಪ್ಪ ಎಂಬುವರ ಮರಣದ ಸಂಬಂಧವಾಗಿ ಪತ್ತೆದಾರಿಯಾಗಿದ್ದ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಶ ನಂಜುಂಡಯ್ಯ, ಕಾನ್‌ಸ್ಟೇಬಲ್‌ಗಳಾದ ಗೌಸ್ ಖಾನ್ ಮತ್ತು ಹುಚ್ಚಯ್ಯ ಎಂಬುವರ ಮೇಲೆ ಅಲ್ಲಿನ ನ್ಯಾಯಾಧೀಶರಾದ ಶ್ರೀ ಎಂ ವೀರರಾಜೆ ಅರಸಿನವರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ ಕಳೆದ ೯ ನೇ ತಾ|| ಜೂಜಿನ ಅಟ್ಟೆಗೆ ಮುತ್ತಿಗೆ ಹಾಕುವ ಉದ್ದೇಶದಿಂದ ಅವರು ಕಿಲಾರಿ ರಸ್ತೆಯಲ್ಲಿ ಶ್ರೀ ಕೋಟಪ್ಪನವರ ಮನೆಗೆ ಅಕ್ರಮ ಪ್ರವೇಶ ಮಾಡಿದರೆಂದೂ, ಶ್ರೀ ಪುಟ್ಟನಂಜಪ್ಪ ಎಂಬುವರನ್ನು ಹೊಡೆಯಲಾಯಿತೆಂದೂ, ಅವರನ್ನು ಬಿಡಿಸಲು ಬಂದ ಕೋಟಪ್ಪನವರ ತಲೆ ಮೇಲೆ ಹೊಡೆಯಲಾಗಿ ರಕ್ತದ ಒತ್ತಡದಿಂದ ನರಳುತ್ತಿದ್ದವರು, ಅದರ ವೇಗ ಹೆಚ್ಚಿ ಮೃತಪಟ್ಟರೆಂದೂ ಆಪಾದಿಸಲಾಗಿದೆ ಹುಚ್ಚಯ್ಯನ ಮೇಲೆ ಹೊಡೆದು ಸಾವಿಗೆ ಈಡು ಮಾಡಿದ ಆಪಾದನೆಯನ್ನೂ, ಉಳಿದವರ ಮೇಲೆ ಗಾಯಗೊಳಿಸಿದ ಆಪಾದನೆಯನ್ನೂ ಹೊರಿಸಲಾಗಿದೆ ಆಪಾದಿತರು ಜಾಮೀನಿನ ಮೇಲೆ ಬಿಡಲಾಗಿದೆ ಮೊಕದ್ದಮೆಯು ಜೂನ್ ೧೭ ನೇ ತಾ|| ನಡೆಯುವುದು

ಏಕ ಕಾಲದಲ್ಲಿ ೩ ಮಕ್ಕಳ ಜನನ

ಟಿ ನರಸೀಪುರದ ತಾಲ್ಲೂಕ ಯಡದೊರೆ ಗ್ರಾಮದ ಮಾದಯ್ಯ ಉರುಫ್ ಒಸ್ತ ಎಂಬುವನ ಪತ್ನಿಯು ಏಕ ಕಾಲದಲ್ಲಿ ಎರಡು ಗಂಡು ಮತ್ತು ಒಂದು ಹೆಣ್ಣು ಶಿಶುಗಳನ್ನು ಪ್ರಸವಿಸಿರುವಳೆಂದು ವರದಿಯಾಗಿದೆ

ವೇದಾಂತ ದೇಶಿಕಾಚಾರ್ಯರವರಿಗೆ ೪ ವರ್ಷ ಕಠಿಣ ಸಜಾ

ರೇಷ್ಮೆ ಡಿಪ್ರೋವಿನಲ್ಲಿ ೧೨,೯೪೮ ರೂ ದುರುಪಯೋಗಕ್ಕಾಗಿ

ಮೈಸೂರು ೩೧

ರಾಜ್ಯದ ನಿಯುಕ್ತ ರೇಷ್ಮೆ ವೊಹಿಡದ ರೇಷ್ಮೆ ಡಿಪ್ರೋವಿನಲ್ಲಿ ಬಿಲ್ ಕ್ಲಾರ್ಕ್ ಆಗಿದ್ದ ಶ್ರೀ ಎಚ್ ಎಸ್ ವೇದಾಂತ ದೇಶಿಕಾಚಾರ್ಯರವರು ತಾ|| ೧೮-೧೨-೫೧ ರಿಂದ ೨೭-೬-೫೨ ರ ವರೆಗಿನ ಅವಧಿಯಲ್ಲಿ ಮೈಸೂರ ರೇಷ್ಮೆ ಕಿಗೆ ಡಿಪ್ರೋವಿನ ಹಣ ಜಮಾ ಮಾಡಿದ ಎಸ್ಟೇ ಪಡೆದ ಚೆಕ್ ಟ್ರೆಷರಿ ಫಾಯಿಲ್ ರಶೀತಿಯ ನಕಲಿ ಬದಲಾವಣೆ ಮಾಡಿ ೧೨,೯೪೮ ರೂಗಳನ್ನು ದುರುಪಯೋಗಪಡಿಸಿಕೊಂಡರೆಂದು ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು ಇಲ್ಲಿನ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಗುರುನಂಜಯ್ಯನವರು ನೆನ್ನೆ ತೀರ್ಪಿತ್ತು, ಆಪಾದಿತರಿಗೆ ನಾಲ್ಕು ವರ್ಷ ಕಠಿಣ ಸಜಾ ಮತ್ತು ಎರಡು ಸಾವಿರ ರೂ ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ಆರು ತಿಂಗಳು ಕಠಿಣ ಸಜಾ ಶಿಕ್ಷೆ ವಿಧಿಸಿದರು

ಪೊಲೀಸ್ ಕಚೇರಿಯ ಪ್ರಿನ್ಸ್ ಇನ್ಸ್‌ಪೆಕ್ಟರರಾದ ಶ್ರೀ ಎ ಮಲ್ಲೇಗೌಡರು ಮೇಲ್ಕಂಡ ಅಕ್ರಮವನ್ನು ಪತ್ತೆ ಹಚ್ಚಿದರು ಬಿ ಡಿವಿಜನ್ನಿನ ಇನ್ಸ್‌ಪೆಕ್ಟರರಾದ ಶ್ರೀ ಸಿದ್ದಯ್ಯನವರು ತನಿಖೆ ನಡೆಸಿದರು

ಅಬ್ದುಲ್ ಗಫಾರ್ ಖಾನರು ಆಸ್ಪತ್ರೆಗೆ

೧೯೪೮ನೇ ಇಸವಿಯಿಂದಲೂ ಬಂಧನದಲ್ಲಿರುವ ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರನ್ನು ಲಾಹೋರು ಆಸ್ಪತ್ರೆಗೆ ವರ್ಗಾಯಿಸಲಾಗಿದೆ "ಸಾಮಾನ್ಯ ವೈದ್ಯ ಪರೀಕ್ಷೆಗಾಗಿ ಅವರನ್ನು ಅಲ್ಲಿಗೆ ಕರೆತರಲಾಗಿದೆ" ಯೆಂದು ವರದಿಯಾಗಿದೆ ಪಾಕಿಸ್ತಾನದ ಜನತಾ ಅವಾಮಿ ಲೀಗಿನ ಅಧ್ಯಕ್ಷರಾದ ಹೆಚ್ ಎಸ್ ಸುಹ್ರಾವರ್ದಿಯವರು ಹೇಳಿಕೆಯೊಂದನ್ನಿತ್ತು ಗಫಾರ್ ಖಾನರನ್ನು ಕೂಡಲೇ ಬಿಡುಗಡೆ ಮಾಡುವಂತೆ ತಿಳಿಸಿ, ಬಂಧನದಲ್ಲಿರುವಾಗ ಅವರಿಗೆ ಯಾವುದಾದರೂ ಘಟನೆ ಸಂಭವಿಸಿದಲ್ಲಿ ಪಾಕಿಸ್ತಾನ ಸರ್ಕಾರದ ವಿರುದ್ಧವಾಗಿ ಅಸಮಾಧಾನವು ಉಗ್ರರೂಪ ತಾಳುವುದೆಂದು ಎಚ್ಚರಿಸಿರುತ್ತಾರೆ

ಭಾರತ ಸರ್ಕಾರದ ಹೊಸ ಸಾಲ

ಭಾರತ ಸರ್ಕಾರದವರು ಮುಂದಿನ ತಿಂಗಳು ಆದಿ ಭಾಗದಲ್ಲಿ ೭೫ ಕೋಟಿ ರೂಗಳ ಸಾಲವನ್ನು ಎತ್ತಲು ನಿರ್ಧರಿಸಿದ್ದಾರೆ ಸಾಲ ಪತ್ರಗಳನ್ನು ರಾಷ್ಟ್ರೀಯ ಯೋಜನಾ ಸಾಲಪತ್ರವೆಂದು ಕರೆಯಲಾಗುವುದು ೧೯೬೨ರ ಜೂನ್ ೧ನೇ ತಾ|| ಗೆ ಸಲ್ಲುವ ಬಾಂಡುಗಳನ್ನು ಮಂಜೂರು ಮಾಡಲಾಗುವುದು ಅದಕ್ಕೆ ಶೇಕಡ ವರ್ಷಕ್ಕೆ ೩ ರಂತೆ ಬಡ್ಡಿಯನ್ನು ಆರು ತಿಂಗಳಿಗೆ ಒಮ್ಮೆ ಕೊಡಲಾಗುವುದು ಇದರ ಮೇಲೆ ಆದಾಯ ತೆರಿಗೆಯನ್ನು ವಸೂಲು ಮಾಡಲಾಗುವುದು ಬರುವ ಜೂನ್ ೮ ರಿಂದ ೧೦ನೇ ತಾರೀಕಿನ ವರೆಗೆ ಸಾಲಪತ್ರಗಳನ್ನು ಕೊಳ್ಳಬಹುದು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಈ ಹಣವನ್ನು ವಿನಿಯೋಗಿಸಲಾಗುವುದು

ಒಂದೇ ಕಡೆ ನೆಹರೂ, ಮಹಮದಾಲಿ ಬಿಡಾರ

ಎಲಿಜಬೆತ್ ರಾಣಿಯವರ ಕಿರೀಟ ಧಾರಣ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಗಳಿಗಾಗಿ ಲಂಡನ್ನಿಗೆ ತೆರಳಿರುವ ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳಾದ ಪಂಡಿತ ನೆಹರೂ ಮತ್ತು ಮಹಮದಾಲಿ ಯವರು ಲಂಡನ್ನಿನಲ್ಲಿ ಒಂದೇ ಹೊಟೇಲಿನಲ್ಲಿ ಬಿಡಾರ ಮಾಡಿರುವರೆಂದು ವರದಿಯಾಗಿದೆ ಅವರು ಈ ದಿನದಿಂದ ಪರಸ್ಪರ ಕಲೆತು ಉಭಯ ರಾಷ್ಟ್ರಗಳ ಸಮಸ್ಯೆಗಳನ್ನು ಕುರಿತು ಚರ್ಚೆಯನ್ನು ಆರಂಭಿಸುವರೆಂದೂ ಹೇಳಲಾಗಿದೆ, ಅವರುಗಳು ಅಲ್ಲಿ ಮಾತುಕತೆಗಳಿಗಾಗಿ ಹಲವಾರು ಬಾರಿ ಸಂಧಿಸುವುದೆಂದೂ ಊಹಿಸಲಾಗಿದೆ

ಪೂನಾ ಮದ್ದುಗುಂಡು ಕಾರ್ಖಾನೆ ಕಾರ್ಮಿಕರ ಮುಷ್ಕರ

ಪೂನಾ ಬಳಿ ದೆಹೂ ರಸ್ತೆಯಲ್ಲಿರುವ ಕೇಂದ್ರ ಮದ್ದುಗುಂಡು ತಯಾರಿಯ ಡಿಪೋವಿನಲ್ಲಿ ಕಳೆದ ತಿಂಗಳು ಹಲವು ಕೆಲಸಗಾರರನ್ನು ತೆಗೆದುದಲ್ಲದೆ, ಕಳೆದ ಮೂರು ದಿನಗಳಿಂದೀಚೆಗೆ ಮತ್ತೆ ೯೨೦ ಮಂದಿ ಕೈಗಾರಿಕಾ ಕಾರ್ಮಿಕರನ್ನು ತೆಗೆದುಹಾಕಿರುವುದರಿಂದ ಸುಮಾರು ೪ ಸಾವಿರ ಮಂದಿ ಕಾರ್ಮಿಕರು ನಾಳೆಯಿಂದ ಮುಷ್ಕರವನ್ನಾರಂಭಿಸುವರೆಂದು ಅಖಿಲ ಭಾರತ ರಕ್ಷಣಾ ಇಲಾಖೆಯ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಎಂ ಜೋಷಿಯವರು ತಿಳಿಸಿರುವರು

ಡೆಕ್ಕನ್ ಹೆರಾಲ್ಡ್ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಬೆಂಗಳೂರ ೩೧

ಇಲ್ಲಿನ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ದಿನ ಪತ್ರಿಕೆಗಳ ಮೇಲೆ ಸರ್ಕಾರದವರು ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆಯನ್ನು ಹೂಡಿದ್ದಾರೆ ಜೂನ್ ೬ ನೇ ತಾ|| ಹೈಕೋರ್ಟಿಗೆ ರಜೆ ಮುಗಿದ ನಂತರ ಮೊಕದ್ದಮೆಯನ್ನು ವಿಚಾರಣೆಗೆ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು

ಮಂಗಳೂರಿಗೆ ಜೋಗ್ ವಿದ್ಯುಚ್ಛಕ್ತಿ

ಜೋಗ್ ವಿದ್ಯುತ್ ಕಾರ್ಖಾನೆಯಿಂದ ಈ ಕೂಡಲೇ ೩ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಮಂಗಳೂರು ಜಿಲ್ಲೆಗೆ ಒದಗಿಸಲು ಮೈಸೂರು ಸರ್ಕಾರದವರು ನಿರ್ಧರಿಸಿರುತ್ತಾರೆ

ಮದ್ರಾಸು ಟ್ರಾಂ ಕಂಪೆನಿ ಮೊಕದ್ದಮೆ ತೀರ್ಪು ೬ ನೇ ತಾ||

ಮದ್ರಾಸು ಟ್ರಾಂ ಕಂಪೆನಿಯ ರಿಸೀವರ್ ಒಬ್ರಿಕ್ಸ್ ಮತ್ತು ಮಾಜಿ ಅಧಿಕಾರಿ ಬಿಯರ್ಡ್‌ಸೆಲ್‌ರವರ ಮೇಲೆ ಅಲ್ಲಿನ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಲಾಗಿರುವ ಮೊಕದ್ದಮೆಯಲ್ಲಿ ವಾದವಿವಾದಗಳು ಮುಗಿದಿವೆ ಜೂನ್ ೬ ನೇ ತಾ|| ಗೆ ತೀರ್ಪನ್ನು ಕಾದಿಡಲಾಗಿದೆ

ಭೂ ದಾನ ಯಜ್ಞಕ್ಕೆ ೧ ಲಕ್ಷ ಎಕರೆ ಜಮೀನು

ಪಶ್ಚಿಮ ಬಂಗಾಳದ ಪಾಲಮೌ ಜಿಲ್ಲೆಯ ರಾಂಗಢ ರಾಜರು ಆಚಾರ್ಯ ವಿನೋಬಾ ಭಾವೆಯವರ ಭೂ ದಾನ ಯಜ್ಞಕ್ಕಾಗಿ ೧,೦೨,೦೦೧ ಎಕರೆ ಜಮೀನನ್ನು ಕೊಟ್ಟಿರುತ್ತಾರೆ ಇಷ್ಟು ದೊಡ್ಡ ಪ್ರಮಾಣದ ದಾನ ಹಿಂದೆ ಎಂದೂ ಬಂದಿರಲಿಲ್ಲವೆಂದು ಹೇಳಲಾಗಿದೆ ಇದು ಪರಿಪೂರ್ಣವಾದ ದಾನವೆಂದು ವಿನೋಬಾಜಿಯವರು ತಿಳಿಸಿರುತ್ತಾರೆ

ಸಿದ್ದಲಿಂಗಯ್ಯನವರ ಅನರ್ಹತೆ ಬಗ್ಗೆ ವಿಚಾರಣೆ

ಮಾಜಿ ವಿದ್ಯಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರ ಶಾಸನ ಸಭಾ ಸದಸ್ಯತ್ವದ ವಿಷಯವಾಗಿ ಕೇಂದ್ರ ಚುನಾವಣಾ ಕಮಿಷನರು ನಡೆಸುತ್ತಿರುವ ವಿಚಾರಣೆಯು ಮುಂದಿನ ತಿಂಗಳು ೧೨ ನೇ ತಾ|| ನಡೆಯುವುದು

ಚಂದ್ರಪ್ಪ ಪಂಡಿತರ ನಿಧನ

ರಾಜಸ್ಥಾನಿಯ ಜೈನ ಮುಖಂಡರಾದ ಶ್ರೀ ಚಂದ್ರಪ್ಪ ಪಂಡಿತರು ನೆನ್ನೆ ತಮ್ಮ ೭೫ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಅನೇಕ ದಾನ ಧರ್ಮಗಳನ್ನು ಮಾಡಿದ್ದರು ಮೈಸೂರು ರಸ್ತೆಯಲ್ಲಿರುವ ಎ ಪಿ ಜೈನ ಬೋರ್ಡಿಂಗ್ ಹೋಂ ಎಂಬ ಸಂಸ್ಥೆ ಮತ್ತು ಅದಕ್ಕೆ ಸೇರಿರುವ ಭಾರಿ ಸ್ಥಿರ ಆಸ್ತಿಯನ್ನು ಸಂಗ್ರಹಿಸಿ ಬಡ ವಿದ್ಯಾರ್ಥಿಗಳಿಗೆ ಅನ್ನ ದಾನ ಮತ್ತು ಜ್ಞಾನ ದಾನದ ವ್ಯವಸ್ಥೆ ಮಾಡಿದ್ದರು ಅವರ ನಿಧನದಿಂದ ಆಗಿರುವ ನಷ್ಟವನ್ನು ಕುಟುಂಬದವರು ಸಹಿಸುವಂತೆ ಅವರಿಗೆ ಧೈರ್ಯ ದೊರೆಯಲೆಂದು ಜೈನ ಸಾಹಿತ್ಯ ಪ್ರಚಾರ ಸಂಘದವರು ಹಾರೈಸಿರುತ್ತಾರೆ

ವಾರ ಭವಿಷ್ಯ

ತಾ|| ೩೧ ೫ ೫೩ ರಿಂದ ೬ ೬ ೫೩ ರ ವರೆಗೆ

ಮೇಷ — ಆತ್ಮ ವಿಶ್ವಾಸಕ್ಕೆ ಅನುಕೂಲದ ಪ್ರಸಂಗ ಎಚ್ಚರಿಕೆ ಬೇಕು, ಗ್ರಹಮಾನ ಅನುಕೂಲ ತಾ|| ೩, ೪ ಉತ್ತೇಜನ, ನೌಕರಿ ಧಂಧೆಗಳಲ್ಲಿ ಲಾಭ

ವೃಷಭ — ಸಂಕಟ ಪ್ರಾಪ್ತಿ, ನೌಕರಿಯಲ್ಲಿ ಶತ್ರುಗಳ ಉಪಟಲ, ಆರೋಪಣೆ, ಆದರೆ ನೀವು ನಿರಪರಾಧಿಗಳೆಂದು ತೀರ್ಮಾನವಾಗುವುದು ತಾ|| ೨, ೫ ಧನ ಚಿಂತಾ ನಿವಾರಣೆ

ಮಿಥುನ — ಸಂಸಾರದ ತಾಪತ್ರಯ, ಗಡಿಬಿಡಿ, ದ್ರವ್ಯಾಭಾವದಿಂದ ಕೆಲಸ ಅರ್ಧಕ್ಕೆ ವ್ಯಾಪಾರ ನೌಕರಿಗಳಲ್ಲಿ ಆರ್ಥಿಕ ದೃಷ್ಟಿಯಿಂದ ತೊಂದರೆ ತಾ|| ೧, ೩ ನಿದ್ರಾಭಂಗ, ಕ್ಲೇಶ

ಕರ್ಕ — ಆರೋಗ್ಯ ಉತ್ತಮ, ಮನಸ್ಸಿಗೆ ಸ್ವಾಸ್ಥ್ಯವಿಲ್ಲ ಉದ್ಯೋಗ ನೌಕರಿಯಲ್ಲಿ ಸೇರುವ ಯೋಗ ಧನ ಲಾಭ ತಾ|| ೩ ೪ ವಿಶೇಷ ಖರ್ಚು ಗಡಿಬಿಡಿ

ಸಿಂಹ — ಪ್ರಗತಿದಾಯಕ ಗ್ರಹಮಾನ ಆರೋಗ್ಯ ಉತ್ತಮ, ಅಪೇಕ್ಷಿತರ ಭೇಟಿ, ನೌಕರಿಯಲ್ಲಿ ಮೇಲಧಿಕಾರ, ಧಂಧೆಯಲ್ಲಿ ಪ್ರಗತಿ, ಸಂತತಿಯ ಆರೋಗ್ಯ ಸಕಾರಣ ಕಾರ್ಯದಲ್ಲಿ ಜಯ ತಾ|| ೧, ೩ ಗಡಿಬಿಡಿ ಖರ್ಚು

ಕನ್ಯಾ — ಆರೋಗ್ಯ ಉತ್ತಮ, ಪ್ರವಾಸ ನಿರ್ವಿಘ್ನ ಪ್ರಿಯ ರಿಂದ ಲಾಭ, ನೌಕರಿ ಪಾರಾಯಿಂ ಧಾರ್ಮಿಕ ಕಾರ್ಯ, ಆಪ್ತರ ಭೇಟಿ ತಾ|| ೩ ೪ ವಿಶೇಷ ಖರ್ಚು, ಗೊಂದಲ

ತುಲಾ — ಆರೋಗ್ಯ ನೆಟ್ಟಗಿರದು ಮಾನಸಿಕ ತೊಂದರೆ ಆಕಸ್ಮಿಕ ಅಪಘಾತ, ವ್ಯವಸಾಯ ಧಂಧೆಗಳಲ್ಲಿ ಕಷ್ಟ, ವಾತಾವರಣ, ಆಪ್ತರ ವಿಯೋಗ ತಾ|| ೧, ೩ ಸಂಕಟ, ಅಸ್ವಸ್ಥತೆ

ವೃಶ್ಚಿಕ — ಆರೋಗ್ಯ ಕೆಡುವ ಪರಿಸ್ಥಿತಿ, ಸಂಕಟ ಪ್ರಾಪ್ತಿ ಆಹಾರದ ಬಗ್ಗೆ ಎಚ್ಚರಿಕೆ, ದೂರ ಪ್ರವಾಸ ಬೇಡ ನೌಕರಿಯಲ್ಲಿ ಕಲಹ, ಪಾಲುದಾರರಿಂದ ಮೋಸ ತಾ|| ೩, ೪ ಕಣ್ಣಿನ ಬೇನೆ

ಧನು — ಇಚ್ಛಾ ವಿರುದ್ಧ ಕಾರ್ಯ, ಮನಸ್ಸಿಗೆ ಬೇಸರ, ನೌಕರಿ ಧಂಧೆಯಲ್ಲಿ ಹಣ ದುರಾಪಣ ಖರ್ಚು, ಅಪ್ತ ಮಿತ್ರರ ಭೇಟಿ, ಆರೋಗ್ಯ ಸಾಧಾರಣ. ತಾ|| ೩, ೪ ಖರ್ಚು, ಆಪ್ತರ ಭೇಟಿ

ಮಕರ — ಆರೋಗ್ಯ ನೆಟ್ಟಗೆ, ಪ್ರವಾಸ ... ಭೇಟಿ ನೌಕರಿ ಧಂಧೆಗಳಲ್ಲಿ ಶತ್ರುಗಳು ಮಿತ್ರರಾಗುವರು ತಾ|| ೪, ೫ ಮಹತ್ವದ ಪತ್ರ ಪ್ರಾಪ್ತಿ

ಕುಂಭ — ಆರೋಗ್ಯ ನೆಟ್ಟಗಿರದು ಸಜ್ಜನರ ಸಹವಾಸ ಲಭ್ಯ, ಅನೇಕ ಸಂಕಟ ಪ್ರಸಂಗ ಖರ್ಚು ಹೆಚ್ಚು, ಪ್ರವಾಸ ಬೇಡ ತಾ|| ೧, ೩ ಹಾನಿ, ಖರ್ಚು ವಿನಾ ಧಾರ್ಮಿಕ ಕಾರ್ಯ, ಪ್ರವಾಸ ಲಭ್ಯ, ಖರ್ಚು ಹೆಚ್ಚು, ನೌಕ...

ಮೈಸೂರು ಉತ್ತರ ಭಾಗದ ಕಾಂಗ್ರೆಸ್ ಚುನಾವಣೆ

ಮೈಸೂರು ೩೧

ರಾಜಧಾನಿಯ ಉತ್ತರ ಭಾಗದಿಂದ ಕಾಂಗ್ರೆಸ್ ಚುನಾವಣೆಗೆ, ೧೭ ಮಂದಿ ಉಮೇದುವಾರರು ಸ್ಪರ್ಧಿಸಿದ್ದು ಅವರ ಪೈಕಿ ಒಬ್ಬರಾದ ಶ್ರೀ ಎಂ ಶಂಕರಯ್ಯನವರು ವಾಪಸು ಪಡೆದುದರಿಂದ ಕೆಳಗೆ ಕಂಡ ೧೫ ಜನರು ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ -

ಶ್ರೀಗಳಾದ- ಕೆ ಸಿದ್ದಪ್ಪ, ಮಹಮದ್ ಖಲೀಲುಲ್ಲಾ,ಎಸ್ ಲಿಂಗಣ್ಣ ಟಿ ವೆಂಕಟರಮಣಯ್ಯ ಕೆ ಚಾಮುಂಡಯ್ಯ, ಎ ಶಿವಣ್ಣ ಎಂ ಎಸ್ ನಂಜಪ್ಪ, ಬಿ ಎನ್ ಕೆಂಗೇಗೌಡ ಜಿ ಜನಾರ್ಧನಸ್ವಾಮಿ, ಎಂ ಆರ್ ಪಿ ಬಸಪ್ಪ, ಎಸ್ ಶ್ರೀಕಂಠಯ್ಯ, ಡಿ ಎಸ್ ಸಿದ್ದರಾಮಶೆಟ್ಟಿ, ಪಿ ಗಂಗಣ್ಣ ಮೈ ಗಿ ವೆಂಕಟಪ್ಪ ಮತ್ತು ಎ ಎಂ ಹಂಡೋರ್ ಜಿರಾವ್

ಕಾರ್ಮಿಕ ಮುಖಂಡರಿಗೆ ಮನವಿ

ರಾಜಧಾನಿಯ ಬೀಡಿ ಕೆಲಸಗಾರರ ಪೈಕಿ ಹಲವರು ನಡೆಸುತ್ತಿರುವ ಸತ್ಯಾಗ್ರಹದ ಸಂಬಂಧವಾಗಿ ಕಾರ್ಮಿಕ ಮುಖಂಡರಾದ ಅಜೀಜ್ ಸೇಟ್ ಮುಂತಾದವರು ಇತ್ತೀಚೆಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ ಉತ್ತರವಾಗಿ, ಕಾರ್ಮಿಕ ಮುಖಂಡರು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುವುದಲ್ಲ ಇತರರನ್ನು ಟೀಕಿಸುತ್ತಿರುವುದಾಗಿಯೂ ೧೯೫೦ ರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದವರನ್ನು ಕಾರಣವಿಲ್ಲದೆ ತೆಗೆದುಹಾಕಿದವರಿಗೆ ಪುನ ಅಲ್ಲಿಯೋ, ಅದೇ ನೌಕರಿ ಕೊಡಬೇಕಾದುದು ಮತ್ತು ಪರಿಹಾರ ಒದಗಿಸಬೇಕಾದುದು ನ್ಯಾಯವೆಂದೂ, ಕಾರ್ಮಿಕ ಮುಖಂಡರು ಇದನ್ನು ಮನಗಂಡು ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕೆಂದೂ ಕೆಲಸ ಕಳೆದುಕೊಂಡವರ ಪರವಾಗಿ ಶ್ರೀ ಟಿ ಎಂ ಅಬ್ದುಲ್ಲಾ ಮತ್ತು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎಂ. ಎಸ್ ಉಗ್ರಪ್ಪನವರೂ ತಿಳಿಸಿದ್ದಾರೆ

ಅತಿಕ್ರಮ ಪ್ರವೇಶಕ್ಕಾಗಿ ಶಿಕ್ಷೆ

ಮೈಸೂರು ತಾಲ್ಲೂಕು ಚಿಕ್ಕನಹಳ್ಳಿ ನಿವಾಸಿಗಳಾದ ಸಿಂಗ್ರೇಗೌಡ ಮತ್ತು ಅವನ ಮಕ್ಕಳು ನರಸೇಗೌಡ ಮತ್ತು ಅಯ್ಯ ಎಂಬುವರು ಅಲ್ಲಿ ಒಂದು ಕಡೆ ಅತಿಕ್ರಮ ಪ್ರವೇಶ ಮಾಡಿದರಿಂದು ಸಿಂಗ್ರೇಗೌಡನಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೫೦ ರೂ ದಂಡ, ಮತ್ತು ಮಕ್ಕಳಿಬ್ಬರಿಗೆ ಎರಡು ಸಿ ಎಂಪ್ಲನೆಗಳ ವೇಳೆ ತಲಾ ೩೦ ರೂ ದಂಡ ತಪ್ಪಿದರೆ ೭ ದಿನಗಳ ಸಾದಾ ಸಜಾವನ್ನು ವಿಧಿಸಿ, ನಗರದ ಎನೇ ನ್ಯಾಯಾಧೀಶರು ನೆನ್ನೆ ತೀರ್ಪಿತ್ತರು

೩ ಧಂಧೆಯಲ್ಲಿ ಚಿಂತೆ, ಆರ್ಥಿಕ ಸ್ಥಿತಿಯ ಸುಧಾರಣೆ, ಪತ್ನಿ ಆರೋಗ್ಯ ನೆಟ್ಟಗಿರದು ತಾ|| ೩, ೪ ಚಿಂತೆ ಸಂಕಟ

ಆಂಧ್ರದ ರಾಜಧಾನಿಯ ಬಗ್ಗೆ ನಿರ್ಧಾರ

ಆಂಧ್ರದ ರಾಜಧಾನಿಯನ್ನು ಹಂಗಾಮಿಯಾಗಿ ರಾಯಲಸೀಮೆಯಲ್ಲಿ ಏರ್ಪಡಿಸುವಂತೆ ಆಂಧ್ರ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಸಭೆಯಲ್ಲಿ ನಿರ್ಧಾರವಾಗಿರುತ್ತದೆ

ಬೆಂಕಿ ಇಟ್ಟ ಆಪಾದನೆಯಿಂದ ಖುಲಾಸೆ

ರಾಮನಗರ ತಾಲ್ಲೂಕಿನ ಅಚ್ಚಲು ಗ್ರಾಮದ ಬಳಿ ಶ್ರೀ ವಿ ನಂಜಪ್ಪನವರಿಗೆ ಸೇರಿದ ಜಮೀನಿನಲ್ಲಿದ್ದ ನಾಲ್ಕು ಮೆದೆಗಳಿಗೆ ಬೆಂಕಿ ಹಾಕಿದರೆಂದು ಮರಿಸಿದ್ದೇಗೌಡ ಮತ್ತು ಇತರ ಮೂವರ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಬೆಂಗಳೂರಿನ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು ಆಪಾದಿತರುಗಳನ್ನು ಖುಲಾಸೆ ಮಾಡಿರುತ್ತಾರೆ ಜೂರರುಗಳು ಸಹ ಇದೇ ಅಭಿಪ್ರಾಯವನ್ನಿತ್ತಿದ್ದರು

ವಿವಾಹ ಮಹೋತ್ಸವ

ಹಾಸನ ಜಿಲ್ಲೆ ಆಲೂರಿನ ಅಸಿಸ್ಟೆಂಟ್ ಸರ್ಜನ್ ಡಾ|| ಎಸ್ ಕೆ ಸುಬ್ಬರಾಯರು ತಮ್ಮ ಸಹೋದರ ಶ್ರೀ ಎಸ್ ಕೆ ಅಶ್ವತ್ಥನಾರಾಯಣ ರಾಯರಿಗೆ ಶ್ರೀ ವೈ ಜಿ ಕೃಷ್ಣಪ್ಪನವರ ಕುಮಾರಿ ಸೌ|| ಲಲಿತಾರವರನ್ನು ತಂದುಕೊಂಡು ನೆನ್ನೆ ವಿವಾಹವನ್ನು ರಾಜಧಾನಿಯಲ್ಲಿ ನೆರವೇರಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಶ್ರೀ ಸ್ವರ್ಣಗುರಿ ಶ್ರೀನಿವಾಸಯ್ಯಂಗಾರ್ ರಿಕಾರ್ಡ್ ಮಧ್ಯಾಹ್ನ ೧-೪೦ ನಾಗೇಶ್ವರರಾವ್ ... ಪ್ರೋಗ್ರಾಮ್ ರಿಕಾರ್ಡ್ ... ಮತ್ತು ... ಸುಬ್ಬರಾವ್ ಪಿಟೀಲು ... ಗಾನವಿಹಾರ ... ಭಕ್ತಿ ... ಗಂಜಿಟಿ ... ಕನ್ನಡದಲ್ಲಿ ಭಾಷಣ ... ಮತ್ತು ... ಸರೋಜ ಮತ್ತು ಇಂದಿರ ಸಂಗೀತ ಮತ್ತು ಪಿಟೀಲು ... ಕೈ ವಾದ್ಯ ... ಇಂಗ್ಲಿಷ್ ಭಾಷಣ

||ಶ್ರೀ||

ಜಗದಂಬಾ ಶಿಶುವಿಹಾರ

೨೮೫ ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜೆಗಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನ ತೆರೆಯಲಾಗಿದೆ ಕಿಂಡರ್ ಗಾರ್ಟನ್ ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಪದ್ಧತಿಗಳನ್ನನುಸರಿಸಿ ಮಿಡಲ್ ಕ್ಲಾಸ್ ಲೋಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಆದಷ್ಟು ಬೇಗನೆ ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಸ್ಥಾಪಕರು

ಕೊಡಗಿನ ಧನಲಕ್ಷ್ಮಿಯ ಬಗ್ಗೆ ಸುದ್ದಿ ಚಿತ್ರ

ಕೊಡಗಿನ ಧನಲಕ್ಷ್ಮಿಯು ಆಹಾರ ಸೇವಿಸದೇ ಈಗಾಗಲೇ ಒಂದು ವರ್ಷ ಕಳೆದಿರುತ್ತಾಳೆ ಕೆಲವು ದಿನಗಳ ಹಿಂದೆ ಭಾರತದ ಮಾಜಿ ಪ್ರಧಾನ ಸೇನಾನಿ ಜನರಲ್ ಕಾರಿಯಪ್ಪ ಮತ್ತು ಕೊಡಗಿನ ಮಂತ್ರಿ ಕೆ ಮಲ್ಲಪ್ಪನವರು ಆಕೆಯನ್ನು ಭೇಟಿ ಮಾಡಿದ್ದರು ಕೆಲವು ತಿಂಗಳ ಹಿಂದೆ ಆಕೆಯ ಬಗ್ಗೆ ಸುದ್ದಿ ಚಲನ ಚಿತ್ರಗಳನ್ನು ತೆಗೆದುಕೊಳ್ಳಲಾಗಿದ್ದವು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೨೪ ೪-೦	೨೯ ೧೪ ೦
ಹರಳುಬೀಜ	೪೬ ೦ ೦	೪೪-೮-೦
ಹೊಂಗೆಬೀಜ	೨೨-೮-೦	೨೪-೧೦-೨
ಹುರುಳಿ	೪೪ ೨ ೦	೪೪ ೧೩ ೦
ಹೆಸರು	೬೯-೮-೦	೬೯ ೧೪-೦
ಹಲಸಂದೆ	೪೯ ೧೪ ೦	[illegible] ೯೪ ೦
ಉದ್ದು	೬[illegible] ೧೨ ೦	೬೧ ೦-೦
ಸೀಗೆಕಾಯಿ	[illegible] ೪ ೦	೬-೧[illegible]-೦
ದಾಲ್ಚಿನ್ನಿ	೫ ೪ ೦	೬ [illegible] ೧
ತೆಂಗಿನಕಾಯಿ	೧೩೧ ೦ ೦	೨[illegible] ೦ ೦

ಶಾಸನ ಸಭಾಧಿವೇಶನ

ಬರುವ ಜುಲೈ ೧೩ನೇ ತಾರೀಖಿನಂದ ಮೈಸೂರಿನ ಕೆಳಿಯ ಶಾಸನ ಸಭಾಧಿವೇಶನವು ಆರಂಭವಾಗುವುದು

ದಕ್ಷಿಣ ಭಾರತ ಭೂ ದಾನ ಯಜ್ಞ ಸಂಚಾಲಕರ ಸಭೆ

ದಕ್ಷಿಣ ಭಾರತದಲ್ಲಿರುವ ಭೂ ದಾನ ಯಜ್ಞ ಸಮಿತಿಗಳ ಸಂಚಾಲಕರ ಸಭೆಯು ಬೆಂಗಳೂರಿನಲ್ಲಿ ನಾಳೆ ಸೇರಲಿದೆ

ಅಶೋಕ ಚಕ್ರ ಸಂಘ

ರಾಜಧಾನಿಯ ಅಶೋಕ ಚಕ್ರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ೩೦ ಘಂಟೆಗೆ ಸಾಧ್ವಿ ಪತ್ರಿಕಾ ಕಛೇರಿ ಮಹಡಿ ಮೇಲೆ ಶ್ರೀ ಎ ಸುಬ್ರಹ್ಮಣ್ಯಂರವರು ಬ್ರಹ್ಮ ವಿದ್ಯಾ ಮತ್ತು ರಾಜಕೀಯ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ರಾಜಕಮಲ್, ಮೈಸೂರು

29 5 53 ರಿಂದ 2ನೇ ವಾರ

ಪ್ರತಿ ದಿನ ಮೂರು ಆಟಗಳು

ವಿಜಯಾರವರ ತೆಲುಗು ಚಿತ್ರ

ಪಾತಾಳ ಭೈರವಿ

ಪಾತ್ರ- ಮಾಲತಿ, ರೇಲಂಗಿ

ಎನ್ ಟಿ ರಾಮರಾವ್, ರಂಗರಾವ್

Edited, Printed and Published by A R Nagarajan at Sadhvi Press, D Subbiah Road Mysore

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುಸ್ಸಿಹಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 416) ಬಿ ಎ, ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 793 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧-೬ ೧೯೫೩ [ಸಂಚಿಕೆ ೨೪೮

ಮೋಟಾರು ಭಾಗಗಳ ಆಮದು ಸುಂಕ ಖೋತ

ಗ್ರಾಮಾಂತರ ಪ್ರದೇಶಗಳಿಗೆ ಚಲಿಸುವ ಪೊಲೀಸ್ ದಳ

ಬೆಂಗಳೂರು ೧

ಸಂಸ್ಥಾನದ ಗ್ರಾಮಾಂತರ ಪ್ರದೇಶಗಳಲ್ಲಿ ದುಷ್ಕೃತ್ಯಗಳನ್ನು ಕಡಿಮೆ ಮಾಡಿ, ಜನರಲ್ಲಿ ನೆಮ್ಮದಿ ತರುವ ಉದ್ದೇಶದಿಂದಲೂ ಮತ್ತು ದುಷ್ಕೃತ್ಯಕಾರರಿಗೆ ತಮ್ಮ ಕೆಲಸದಿಂದ ಲಾಭ ದೊರೆಯುವುದಿಲ್ಲವೆಂದು ತೋರಿಸಲೂ ಸಹ ಸಂಸ್ಥಾನದ ಪೊಲೀಸು ಇಲಾಖೆಯವರು ಶಸ್ತ್ರಸಜ್ಜಿತ ಚಲಿಸುವ ಪೊಲೀಸು ದಳವನ್ನು ಏರ್ಪಡಿಸಲಿರುವರೆಂದು ವರದಿಯಾಗಿದೆ. ಪ್ರತಿ ಜಿಲ್ಲಾ ಕೇಂದ್ರದಲ್ಲೂ ಮ್ಯಾಂಟ್ ರೋವರ್ಸ್ ಎಂಬ ಪಡೆಗಳನ್ನು ಇದಕ್ಕಾಗಿ ವ್ಯವಸ್ಥೆ ಮಾಡಲಾಗುವುದೆಂದು ಹೇಳಲಾಗಿದೆ

ಹೈದರಾಬಾದಿನಲ್ಲಿ ರಿಕ್ಷಾ ಎಳೆಯುವವರ ಮುಷ್ಕರ

ಹೈದರಾಬಾದಿನಲ್ಲಿ ಪೊಲೀಸರು ಟ್ರಾಫಿಕ್ ನಿಯಮಗಳ ಉಲ್ಲಂಘನೆಗಾಗಿ ಅಲ್ಲಿನ ರಿಕ್ಷಾ ಎಳೆಯುವವರ ಮೇಲೆ ಮೊಕದ್ದಮೆ ಹೂಡುತ್ತಿದ್ದುದನ್ನು ಪ್ರತಿಭಟಿಸಿ, ಕಳೆದ ಶುಕ್ರವಾರ ಹತ್ತು ಸಾವಿರ ರಿಕ್ಷಾ ಎಳೆಯುವವರು ನಗರದಲ್ಲಿ ಪ್ರಚಂಡ ಮೆರವಣಿಗೆ ನಡೆಸಿ, ಹರತಾಳವನ್ನಾಚರಿಸಿ, ಸರ್ಕಾರಿ ಕಛೇರಿ ಕಡೆ ತೆರಳಲು, ದಾರಿಯಲ್ಲಿ ಪೊಲೀಸರು ಅವರನ್ನು ತಡೆದರು. ತರುವಾಯ ಅವರ ನಿಯೋಗದವರು ಗೃಹ ಸಚಿವರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು. ಸಚಿವರು ಸಹಾನುಭೂತಿಯಿಂದ ಸೂಕ್ತ ಭರವಸೆಯಿತ್ತ ಬಳಿಕ ಗುಂಪಿನವರು ಚದುರಿದರು

ಸಹಗಮನ ಯತ್ನ ಪೊಲೀಸರಿಂದ ಭಂಗ

ಮಧ್ಯ ಭಾರತದ ಸಾಗರ ಜಿಲ್ಲೆಯ ಹಟ್ಟಿ ಹಳ್ಳಿಯ ಒಬ್ಬ ಮಹಿಳೆಯು ತನ್ನ ಗಂಡನ ಚಿತೆಯೇರಲು ಪ್ರಯತ್ನಿಸಿದುದನ್ನು ಪೊಲೀಸಿನವರು ತಪ್ಪಿಸಿರುವುದಾಗಿ ತಿಳಿದುಬಂದಿದೆ. ಪೊಲೀಸ್ ದಫೇದಾರರ ಮಾತನ್ನು ಕೇಳದೆ ಆಕೆಯು ಚಿತೆಯಮೇಲೆ ಕುಳಿತಳೆಂದೂ, ಚಿತೆಗೆ ಬೆಂಕಿ ಹತ್ತಿಸಲಾಗಿ, ಆಕೆಯ ಸೀರೆಗೆ ಬೆಂಕಿ ತಗುಲಿದ ಸಮಯಕ್ಕೆ ಸರಿಯಾಗಿ ಪೊಲೀಸು ಪಡೆ ಬಂದು ಆಕೆಯನ್ನು ಕೆಳಕ್ಕೆ ಇಳಿಸಿ, ಬಂಧಿಸಿದರೆಂದೂ ತಿಳಿದುಬಂದಿದೆ. ಅಲ್ಲಿ ನೆರೆದಿದ್ದ ೩ ಸಾವಿರ ಜನರನ್ನು ಚದುರಿಸಲು ಪೊಲೀಸರು ಆಕಾಶಕ್ಕೆ ಗುಂಡು ಹಾರಿಸಿದರೆಂದೂ ಹೇಳಲಾಗಿದೆ

ಸಿಂಹಳದಲ್ಲಿ ಸತ್ಕಾರದ ಬಗ್ಗೆ ಅತಿಥಿಗಳ ಮಿತಿ

ಸಿಂಹಳದಲ್ಲಿ ಆಹಾರ ನಿಯಮಗಳ ಬಗ್ಗೆ ಇಂದಿನಿಂದ ಹೊಸ ಕಾನೂನನ್ನು ಜಾರಿ ಮಾಡಿ ಸತ್ಕಾರ ಮತ್ತು ಭೋಜನ ಕೂಟಗಳಲ್ಲಿ ೨೫ಕ್ಕಿಂತ ಹೆಚ್ಚು ಮಂದಿ ಅತಿಥಿಗಳನ್ನು ಆಹ್ವಾನಿಸಲಾಗದೆಂದು ನಿಷೇಧಿಸಲಾಗುವುದು ಮತ್ತು ಪ್ರಾಥಮಿಕ ಶಾಲೆಗಳು ವಿನಹ ಉಳಿದ ಎಲ್ಲ ವಿದ್ಯಾ ಸಂಸ್ಥೆಗಳಲ್ಲೂ ಮಧ್ಯಾಹ್ನದ ಹೊತ್ತು ಉಪಾಹಾರವನ್ನು ರದ್ದುಗೊಳಿಸಲಾಗುವುದೆಂದೂ ಗೊತ್ತಾಗಿದೆ

ಕುದುರೆ ಜೂಜಿನ ಫಲಿತಾಂಶ

ಮೈಸೂರು ೧

ನೆನ್ನೆ ದಿನ ನಡೆದ ಕುದುರೆ ಜೂಜಿನ ಫಲಿತಾಂಶಗಳು ಈ ರೀತಿ ಇವೆ —

ದಿ ಅಶೋಕ ಪ್ಲೇಟ್–ವಿ ಡಿವೇರೊ ೧೫ ಪ್ಲೇಸ್ – ೭, ಫಾರೆಸ್ಟ್ ಪ್ರಿನ್ಸ್ ೭ ಮತ್ತು ಕಲ್ಯಾಣ್ ೭ ೮ ೦

ಚಾಮುಂಡಿ ಪ್ಲೇಟ್– ವಿ ಲಾ ಫಾರ್ ಲಿಬರ್ಟಿ ರೂ ೫೬ ೮ ೦, ಪ್ಲೇಸ್ ೮ ೮ ೦ ಚಂದ್ರಮಹಲ್ ೯ ೮ ೦ ಮತ್ತು ಇಯರ್ ಲಿಂಗ್ ೧೨–೮ ೦

ಆರ್ ಡಬ್ಲ್ಯು ಐ ಟಿ ಸಿ ಕಪ್–ವಿ ಕಿಂಗ್ಸ್ ಡ್ರೀಮ್ ರೂ ೩೦, ಪ್ಲೇಸ್—೮, ಶಾಂತಾ ೭ ೮ ೦ ಮತ್ತು ಕೋಲ್ಡ್ ಶೌಲ್ಡರ್ ೬

ದಿ ನೀಲಗಿರಿ ಪ್ಲೇಟ್–ವಿ ಫ್ಲಾಷ್ ಬ್ಯಾಕ್ ರೂ ೧೭, ಪ್ಲೇಸ್ ೫–೮–೦ ರಿವರ್ ೭ ಮತ್ತು ನಿಕ್‌ನ್ಯಾಕ್ ೫ ೮

ನರಸಿಂಹರಾಜ ಮೆಮೋರಿಯಲ್ ಪ್ಲೇಟ್ ವಿ ಮರ್ಸಿ ಲೈಟ್ ಅಂಡ್ ಷಾಡೋಸ್ ೧೦ ೮ ೦ ರೂ ಪ್ಲೇಸ್ ೭ ಪ್ರೊಮಿಡಿಯಸ್ ೧೨ ಮತ್ತು ಅಸ್ಟೆರ್ ೨೯

ಆರ್ ಡಬ್ಲ್ಯು ಐ ಟಿ ಸಿ ಕಪ್ (೨) ವಿ. ಗರ್ಲ್ ಗೈಡ್ ರೂ ೭೨ ಪ್ಲೇಸ್ ೧೨ ೮ ೦, ಸಿಂಟ್ರಿಲ ಮತ್ತು ಕಲೀ ಟಾಪ್ ೬–೮ ೦.

ಕರ್ನೂಲಿನಲ್ಲಿ ಆಂಧ್ರದ ರಾಜಧಾನಿ

ಆಂಧ್ರ ಪ್ರಾಂತದ ರಾಜಧಾನಿಯನ್ನು ಕರ್ನೂಲ್ ನಗರದಲ್ಲಿ ಸ್ಥಾಪಿಸುವ ಬಗ್ಗೆ ಕಾಂಗ್ರೆಸ್ ಮತ್ತು ಪ್ರಜಾ ಪಕ್ಷಗಳಿಗೆ ಒಡಂಬಡಿಕೆಯಾಗಿರುತ್ತದೆ. ವಿಜಯವಾಡದಲ್ಲಿ ರಾಜಧಾನಿಯನ್ನು ಸ್ಥಾಪಿಸುವಂತೆ ಕಮ್ಯೂನಿಸ್ಟ್ ಪಕ್ಷದವರು ನಿರ್ಧರಿಸಿರುತ್ತಾರೆ. ಈ ಬಗ್ಗೆ ಆಂಧ್ರ ಪ್ರದೇಶದ ಶಾಸನ ಸಭಾ ಸದಸ್ಯರ ಸಭೆಯಲ್ಲಿ ಬಹಿರಂಗ ಓಟು ಮೂಲಕ ನಿರ್ಧರವಾಗಬೇಕೆಂದು ಗೊತ್ತಾಗಿದೆ

ತಿರಿಗೆದಾರರ ಸಂಘದ ಆರಂಭೋತ್ಸವ

ನಂಜನಗೂಡಿನ ಶ್ರೀಕಂಠಪುರಿ ಬಡಾವಣೆಯ ತಿರಿಗೆದಾರರ ಸಂಘದ ಪ್ರಾರಂಭೋತ್ಸವವು ಇದೇ ತಿಂಗಳು ಎರಡನೇ ವಾರದಲ್ಲಿ ಜರುಗುವುದೆಂದು ತಿಳಿದುಬಂದಿದೆ

ಮೋಟಾರು ಬೆಲೆ ಇಳಿಸಲು ಆಮದು ಸುಂಕ ಕಡಿಮೆ

ಮೋಟಾರು ವಾಹನಗಳ ಬೆಲೆಯನ್ನು ಇಳಿಸಲು ಸಾಧಕವಾಗುವಂತೆ ಭಾರತ ಸರ್ಕಾರದವರು ಹೊರಗಿನಿಂದ ಆಮದಾಗುವ ವಾಹನಗಳ ಭಾಗಗಳಿಗೆ ಸುಂಕವನ್ನು ಶೇಕಡ ೧೨½ ರಷ್ಟು ಕಡಿಮೆ ಮಾಡಿರುತ್ತಾರೆ. ಭಾರತದಲ್ಲಿ ಮೋಟಾರು ತಯಾರಿಕಾ ಕೈಗಾರಿಕೆಗೆ ಪ್ರೋತ್ಸಾಹ ನೀಡಲು ಈ ರೀತಿ ಸುಂಕವನ್ನು ಇಳಿಸಲಾಗಿರುವುದೆಂದು ವರದಿಯಾಗಿದೆ

ವಿದ್ಯಾರ್ಥಿಗಳ ನಡತೆಗಾಗಿ ನಂಬರು

ಮಧ್ಯ ಭಾರತದ ಸೌಗಾರ್ ವಿಶ್ವವಿದ್ಯಾಲಯದಲ್ಲಿ ಪದವೀಧರರ ಮತ್ತು ಪೋಸ್ಟ್ ಗ್ರಾಜುಯೇಟ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕಳೆದ ಏಪ್ರಿಲ್ ತಿಂಗಳಿಂದ ಹಲವು ಮಾರ್ಪಾಟುಗಳನ್ನು ಮಾಡಲಾಗಿದೆ. ಪರೀಕ್ಷೆಗಳನ್ನು ಒಟ್ಟು ಎರಡು ಭಾಗವಾಗಿ ವಿಂಗಡಿಸಿ, ಪಾಠಕ್ರಮಗಳಿಗೆ ಸಂಬಂಧಿಸಿದಂತೆ ಎ ವಿಭಾಗವನ್ನೂ, ನಡತೆ ಮತ್ತು ಹಾಜರಿ ಮುಂತಾದ ಇತರ ವಿಭಾಗಗಳಿಗೆ ಸಂಬಂಧಿಸಿದಂತೆ ಬಿ ವಿಭಾಗವನ್ನೂ ಮಾಡಿ ಎ ವಿಭಾಗಕ್ಕೆ ೭೦ ಮತ್ತು ಬಿ. ವಿಭಾಗಕ್ಕೆ ೩೦ ನಂಬರುಗಳನ್ನೂ ಕೊಡಲು ಏರ್ಪಾಡಾಗಿದೆ. ಹೊಸ ನಿಬಂಧನೆ ಪ್ರಕಾರ ಉತ್ತೀರ್ಣರಾಗಬೇಕಾದರೆ ಎರಡು ಭಾಗಗಳಲ್ಲೂ ಕಲಾ ಶೇ|| ೩೩ ರಷ್ಟು ನಂಬರನ್ನು ಪಡೆಯಬೇಕು

ಜಾಕಿಯ ಸಸ್ಪೆಂಡ್

ನೆನ್ನೆ ದಿನ ನಡೆದ ಕುದುರೆ ಜೂಜಿನ ಸಂದರ್ಭದಲ್ಲಿ ಆರ್ ಡಬ್ಲ್ಯು ಟಿ ಸಿ ಕಪ್ ರೇಸಿನಲ್ಲಿ ಪೆಗ್ಗೊಟ್ಟಿ ಎಂಬ ಕುದುರೆ ಮೇಲೆ ಸವಾರಿ ಮಾಡಿದ ಜಾಕಿ ಅಹಮದ್ ಖಾನ್ ಎಂಬುವನು ಬೇಕಾಬಿಟ್ಟಿ ಸವಾರಿ ಮಾಡಿದನೆಂಬ ಕಾರಣಕ್ಕಾಗಿ ಮುಂದಿನ ಎರಡು ದಿನಗಳ ರೇಸಿನಲ್ಲಿ ಅವನು ಸವಾರಿ ಮಾಡದಂತೆ ಸಸ್ಪೆಂಡ್ ಮಾಡಲಾಗಿವೆಯೆಂದು ಗೊತ್ತಾಗಿದೆ

○ ತುಮಕೂರು ಜಿಲ್ಲೆಯಲ್ಲಿ ರಾತ್ರಿ ಹೊತ್ತು ಲಾರಿಗಳ ಓಡಾಟದ ಪ್ರತಿಬಂಧಕವನ್ನು ರದ್ದು ಮಾಡಿ ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿರುವರು

ಅಂಗಡಿ ಕಾನೂನು ಉಲ್ಲಂಘನೆಗೆ ದಂಡ

ಮೈಸೂರು ೧

ಅಂಗಡಿ ಕಾನೂನು ಉಲ್ಲಂಘನೆ ಮಾಡಿದರೆಂದು ನಗರದ ಅಂಗಡಿ ಮತ್ತು ಸಿಬ್ಬಂದಿ ಇನ್‌ಸ್ಪೆಕ್ಟರರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಗಳಲ್ಲಿ ಧನಲಕ್ಷ್ಮಿ ಮೆಟಲ್ ವರ್ಕ್ಸಿನ ಶ್ರೀ ಅಪ್ಪಾಪುರವರಿಗೆ ೧೦ ರೂ, ಬನುಮಯ್ಯ ರಸ್ತೆಯ ರಿಪಬ್ಲಿಕ್ ಟೇಲರ್ಸ್ ಶ್ರೀ ಬೊಮ್ಮಯ್ಯ, ವರ್ನಾ ಸ್ಟೋರ್ಸ್ ಪ್ರೊಪ್ರೈಟರ್ ಪಿ ರಾಮಕೃಷ್ಣ ನಾಯರ್, ಸಯ್ಯಾಜಿರಾವ್ ರಸ್ತೆ ಮೋತೀಶರಿಮಲ್ ಪ್ರೇವಿಷ್ಣು ಕಂಪೆನಿ ಪ್ರೊಪ್ರೈಟರ್ ಶ್ರೀ ಪಿ ಸರ್ಮಲ್ ರವರುಗಳಿಗೆ ತಲಾ ೧೫ ರೂ. ದಂಡವನ್ನು ವಿಧಿಸಲಾಗಿದೆ

ಕಲ್ಯಾಣಿಯಲ್ಲಿ ಕಾಂಗ್ರೆಸ್ ಅಧಿವೇಶನ

ಕಲ್ಕತ್ತಾ ನಗರಕ್ಕೆ ೩೦ ಮೈಲಿ ಉತ್ತರಕ್ಕೆ ಭಾಗೀರಥಿ ನದಿ ತೀರದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಕಲ್ಯಾಣಿ ಎಂಬಲ್ಲಿನಲ್ಲಿ ೫೯ ನೇ ಕಾಂಗ್ರೆಸ್ ಅಧಿವೇಶನವು ಬರುವ ಜನವರಿಯಲ್ಲಿ ಸೇರುವುದು. ಅಲ್ಲಿ ೨ ಲಕ್ಷ ಜನರು ಕೂಡಬಹುದಾದ ಮಂಟಪವನ್ನು ನಿರ್ಮಿಸಲಾಗುವುದು. ಕಲ್ಯಾಣಿ ನಗರದ ನಿರ್ಮಾಣಕ್ಕೆ ೧೪ ಕೋಟಿ ರೂ ವೆಚ್ಚವಾಗುವುದೆಂದು ಅಂದಾಜಾಗಿದೆ

ಮೊರಾಕೋ ವೇಶ್ಯೆಯರ ಪಂಗಡಗಳಿಗೆ ಘರ್ಷಣೆ

ಫ್ರೆಂಚ್ ಮೊರಾಕೋವಿನ ಮೆಕ್ನೆಸ್ ಎಂಬಲ್ಲಿ ವೇಶ್ಯೆಯೊಬ್ಬಳ ಮನೆಗೆ ಹೋಗುತ್ತಿದ್ದ ಅಮೆರಿಕದ ಶ್ರೀಮಂತ ವಿಟನನ್ನು ಇನ್ನೊಬ್ಬ ವೇಶ್ಯೆಯು ಮನೆಗೆ ಆಕೆಯ ಕಡೆಯವರು ಪುಸಲಾಯಿಸಿ ಕರೆದುಕೊಂಡು ಹೋದ ಬಗ್ಗೆ ಎರಡು ಪಕ್ಷಗಳವರಿಗೂ ಜಗಳವಾಗಿ, ಕಡೆಗೆ ಒಬ್ಬಳು ಚೂರಿಯ ಇರಿತಕ್ಕೆ ತುತ್ತಾಗಿ ಸತ್ತಳೆಂದೂ, ಐದು ಜನರಿಗೆ ತೀವ್ರ ಗಾಯಗಳಾದುವೆಂದೂ ವರದಿಯಾಗಿದೆ

ಶ್ರೀ ಶಾರದಾ ಕನ್ನಡ ಅಟ್ಲಾಸ್

ರಾಜಧಾನಿಯ ಶ್ರೀ ಶಾರದಾ ಪ್ರೆಸ್ ಮತ್ತು ಬುಕ್ ಡಿಪೋವಿನವರು ನಮಗೆ ಕಳುಹಿಸಿರುವ ಪ್ರಪಂಚದ ನಾನಾ ದೇಶಗಳ ಮತ್ತು ಮೈಸೂರು ಸಂಸ್ಥಾನದ ಜಿಲ್ಲೆಗಳ ವರ್ಣರಂಜಿತ ಭೂಪಟಗಳುಳ್ಳ ಕನ್ನಡ ಅಟ್ಲಾಸನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಮಿಡಲ್ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗೆ ಇದು ತುಂಬಾ ಉಪಯುಕ್ತವಾಗಿದೆ. ಬೆಲೆ ೧ ರೂ

ಗಿರಿಜಾ ಕಲ್ಯಾಣೋತ್ಸವ

ಟಿ ನರಸೀಪುರ ೧

ಇಲ್ಲಿನ ತಿರುಮಕೂಡಲು ಕ್ಷೇತ್ರದಲ್ಲಿರುವ ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ಗಿರಿಜಾ ಕಲ್ಯಾಣದ ಅಂಗವಾಗಿ ನಾಳಿದ್ದು ವರಪೂಜೆಯೂ ಮತ್ತು ಇದೇ ೪ ನೇ ತಾರೀಕು ಗುರುವಾರ ಧಾರಾ ಮಹೋತ್ಸವವೂ ಜರುಗುವುವು

ಈ ಪ್ರಾಂತ್ಯದಲ್ಲಿ ಮಳೆಯಿಲ್ಲದೆ ತುಂಬಾ ತೊಂದರೆಯಾಗಿರುತ್ತದೆ

○ ವಿಜಯವಾಡದ ಒಬ್ಬ ಕಾನ್ಸ್‌ಟೇಬಲು, ಕೆಲಸದ ಮೇಲಿದ್ದಾಗಲೇ ಕಣ್ಣೆಯನ್ನು ಕಡೆಯದೆ ವ್ಯಕತಿಸಿದ್ದನೆಂದು ವಾರ್ತೆ ಬಂದಿದೆ

ತಾಲ್ಲೂಕು ಕಾಂಗ್ರೆಸ್ ಚುನಾವಣಾ ಫಲಿತಾಂಶ

ಮೈಸೂರ ೧

ಮೈಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಒಟ್ಟು ೧೫ ಸ್ಥಾನಗಳಿಗೆ ನೆನ್ನೆ ಟೌನ್‌ಹಾಲಿನಲ್ಲಿ ಚುನಾವಣೆ ನಡೆಯಿತು ಒಟ್ಟು ೩೪೩ ಓಟುದಾರರು ಮತವನ್ನು ಚಲಾಯಿಸಿದರು ೧೫ ಮತಗಳು ಅಕ್ರಮವಾದುವು ಈ ಕೆಳಗೆ ಕಂಡವರು ಆರಿಸಿಬಂದಿದ್ದಾರೆ –

ಶ್ರೀಗಳಾದ ಟಿ ರಾಮಯ್ಯ ಎಸ್ ಎಂ ರಾಚಯ್ಯ, ಸಿ ಚನ್ನಯ್ಯ, ಆರ್ ಭದ್ರಯ್ಯ, ವಿ ರಂಗಯ್ಯ, ಕೆ ಪುಟ್ಟಸ್ವಾಮಿ, ಎಂ ಕೆಂಪೇಗೌಡ, ಕೆ ಕೆಂಪೇಗೌಡ ಬಿ ರಂಗೇಗೌಡ, ಎ ಚನ್ನಸ್ವಾಮಿ [illegible] ಎಸ್ ಚಾವಯ್ಯ ಮೆ[illegible] ಜವರೇಗೌಡ, ತಂಬಿ, ಹುಚಿಗೌಡ ಮತ್ತು ವೆಂಕಟೇಗೌಡ

ಚುನಾವಣೆ ಬಗ್ಗೆ ಕೃತಜ್ಞತೆ

ಮೈಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆಗಳನ್ನು ಸುಗಮವಾಗಿ ನಡೆಸಿದ ಸಂದರ್ಭದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಚುನಾವಣಾಧಿಕಾರಿಗಳಾದ ಶ್ರೀ ಕೆ ಎಸ್ ಸೂರ್ಯನಾರಾಯಣರಾವ್ ಪೋಲಿಂಗ್ ಅಧಿಕಾರಿ [illegible], ಓಟರುಗಳ ಮತ್ತು ಇತರರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿರುತ್ತಾರೆ

ಜಿಲ್ಲಾ ವಿದ್ಯಾ ಸುಧಾರಣಾ ಸಮ್ಮೇಳನ

ಮೈಸೂರು ಜಿಲ್ಲೆಗೆ ಸಂಬಂಧಿಸಿದ ತೆ ವಿದ್ಯಾ ಸುಧಾರಣಾ ಸಮ್ಮೇಳನವು ೩ನೇ ತಾ [illegible] ಬೆಳಿಗ್ಗೆ ೯ ಗಂಟೆಗೆ ಟಿ ನರಸೀಪುರದ ಸಿನಿಮಾ ಮಂದಿರದಲ್ಲಿ ನಡೆಯುವುದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇದರ ಪ್ರಾರಂಭೋತ್ಸವವನ್ನು ನೆರವೇರಿಸುವರು ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು ಟಿ ನರಸೀಪುರದ ಪೌರಸಭಾಧ್ಯಕ್ಷ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ ಮೈಸೂರು ಜಿಲ್ಲೆಯಲ್ಲಿರುವ ಎಲ್ಲ ಉಪಾಧ್ಯಾಯರುಗಳೂ, ವಿದ್ಯಾಭ್ಯಾಸದ ವಿಷಯದಲ್ಲಿ ಆಸಕ್ತಿ ಇರುವ ಎಲ್ಲ ಮಹನೀಯರೂ ದಯಮಾಡಿ, ತಮ್ಮ ಅಮೂಲ್ಯ ಸಲಹೆಗಳನ್ನು ಕೊಡುವಂತೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರು ಕೋರಿದ್ದಾರೆ

ವಿವಾಹೋಪನಯನಗಳು

[illegible] ಯ ಶ್ರೀ ರಂಗಶೆಟ್ಟಿ [illegible] ಶ್ರೀ [illegible] ಫಾಟಿಸಿದ [illegible] ನೆನ್ನೆ ತಮ್ಮ [illegible] ಉಪನಯನವನ್ನು ನೆರವೇರಿಸಿದರ

[illegible] ಮಹಾರಾಜರ [illegible] ಯ ಶ್ರೀ ಕೆ ಎಸ್ ರಾಜಗೋಪಾಲ್‌ರವರು ತಮ್ಮ ಕುಮಾರ ಚಿ ಜೈರಾಮನಿಗೆ ನೆನ್ನೆ ಸಿಕಂದರಾಬಾದಿನಲ್ಲಿ ಉಪನಯನ ಮಾಡಿದರು

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ತಮ್ಮ ಕುಮಾರಿ ಸೌ॥ ಶಾರದಮ್ಮನನ್ನು ಶ್ರೀ ಗಿರಿಯಪ್ಪನವರ ಮಗ ತಿಮ್ಮಪ್ಪನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ನಂಜನಗೂಡಿನ ಶ್ರೀ ಕೆ ಆರ್ ಮುತ್ತುಸ್ವಾಮಿ ಅಯ್ಯರ್‌ರವರ ಮಗಳು ಸೌ॥ ಸರೋಜಿನಿಯವರನ್ನು ಕಾಸರಗೋಡು ಪಾನ ನಿರೋಧದ ಉಪ ಅಧಿಕಾರಿಗಳಾದ ಶ್ರೀ ಎಸ್ ರಾಮಕೃಷ್ಣ ಅಯ್ಯರ್‌ರವರ ಮಗ ಶ್ರೀ ಆರ್ ನಾಗರಾಜರವರಿಗೆ ಕೊಟ್ಟು ನಂಜನಗೂಡಿನಲ್ಲಿ ನೆನ್ನೆ ವಿವಾಹವು ಜರುಗಿತು

೬ ವರ್ಷದ ಅವಧಿಯ ಪ್ರಾಥಮಿಕ ವಿದ್ಯಾಭ್ಯಾಸ

ಬರುವ ಜೂಲೈ ೧ ರಿಂದ ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಮಾಡಿರುವ ಹಲ ಕೆಲವು ಶಿಫಾರಸುಗಳನ್ನು ಜಾರಿಗೆ ತರಲಾಗುವುದೆಂದು ತಿಳಿದುಬಂದಿದೆ ಆರು ವರ್ಷದ ಅವಧಿಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಏರ್ಪಡಿಸಲಾಗುವುದೆಂದೂ, ಮಿಡಲ್ ಸ್ಕೂಲ್ ಪರೀಕ್ಷೆಯನ್ನು ರದ್ದುಪಡಿಸಲಾಗುವುದೆಂದೂ, ದೊಡ್ಡಬಳ್ಳಾಪುರದಲ್ಲಿರುವ ಮೂಲ ಶಿಕ್ಷಣದ ಶಾಲೆಯನ್ನು ವಸತಿ ಶಾಲೆಯನ್ನಾಗಿ ಪರಿವರ್ತಿಸಿ, ಬೆಂಗಳೂರಿನಲ್ಲಿ ನಾರ್ಮಲ್ ಟ್ರೈನಿಂಗ್ ಶಾಲೆಯನ್ನು ತೆರೆಯಲಾಗುವುದೆಂದೂ ಗೊತ್ತಾಗಿದೆ ಈ ಎರಡು ಶಾಲೆಗಳಿಗಾಗಿ ವರ್ಷಕ್ಕೆ ೩ ಲಕ್ಷ ರೂ ವೆಚ್ಚವಾಗುವುದೆಂದು ಅಂದಾಜಾಗಿದೆ

ವಿದ್ಯಾ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಿ, ಸಂಸ್ಥಾನವನ್ನು ೩ ಡಿವಿಜನ್ನುಗಳಾಗಿ ವಿಂಗಡಿಸಿ, ಪ್ರತಿಯೊಂದಕ್ಕು ಒಬ್ಬ ಡೆಪ್ಯುಟಿ ಡೈರೆಕ್ಟರನ್ನು ನೇಮಿಸಲಾಗುವುದೆಂದೂ, ಇದಕ್ಕಾಗಿ ವರ್ಷಕ್ಕೆ ೬೦ ಸಾವಿರ ರೂ ಹೆಚ್ಚು ವೆಚ್ಚವಾಗುವುದೆಂದೂ ತಿಳಿದುಬಂದಿದೆ ಈ ಮುಖ್ಯಾಂಶ ಶಿಫಾರಸುಗಳನ್ನು ಮಾತ್ರ ಈಗ ಜಾರಿಗೆ ಕೊಡಬಹುದೆಂದು ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ರ ಕೃಷ್ಣಪ್ಪ ಸಂಗೀತ ಮಧ್ಯಾಹ್ನ ೧೨ ಕೊಳಲು ತಿ ಅಬ್ದುಲ್ ರಹೀಂ ಸಿತಾರ್ ವಾದನ ಸಂಜೆ ೫-೩೦ ಮತ್ತು ೮ ಎಂ ಜಿ ಸತಿ ಸಂಗೀತ ೬ ರ ಗಾನ ವಿಹಾರ ೭ ಅಬ್ದುಲ್ ರಹೀಂ ಸಿತಾರ್ ವಾದನ ೮-೩೦ ರ ಕೃಷ್ಣಪ್ಪ ಸಂಗೀತ ೯ ರ ಸಿ ಎ ಜಾರ್ಜ್, ಇಂಗ್ಲಿಷ್ ಭಾಷಣ ೯-೩೦ ಎಂ ಎಲ್ ವಸಂತಕುಮಾರಿ ದರ್ಬಾರ್

SRI GAYATHRI

TALKIES

From 2 6 53 For 2 days

Warners

Painting the Clouds With Sunshine

(Technicolor)

With – Dennis Morgan

Virginia Mayo

Edited, Printed and Published by A R Nagarajan at Sadhvi Press, D Subbaiah Road, Mysore

Office of The President, DISTRICT BOARD, MYSORE

1 Sealed tenders will be received at the office of the President, District Board Mysore at 4 PM on 5.6 1953 for the works noted below

2 The works have to be completed by the end of December 1953

3 Tenders should be given on percentage basis, either above or below the sanctioned estimate

4 Items not provided in the sanctioned estimate will be paid on the approved schedule of rates in force or data worked out during the execution of the works.

5 Each tender must be accompanied by a treasury chellan for having credited into treasury the earnest deposit of the amount noted against each work

6 Adequate progress should be shown from the very commencement, that is from the date of agreement, failing which the earnest money will be forfeited contract cancelled without further notice and the balance of work will be carried out at his risk

7 Controlled articles required for the work will be supplied departmentally and the cost thereof will be adjusted in the bills that come for payment

8 The successful tenderer will be required to produce an Income Tax clearance or verification certificate before executing the work

9 The President reserves the right of accepting or rejecting the tender without assigning any reason

10 The decision of the District Board in respect of any disputes regarding rates or other matters arising will be final

11 Plans, estimates and other details connected with the work can be seen in the office on any working day during office hours

PRESIDENT

District Board, Mysore.

Sl No.	Particulars of Work	Estimate	Earnest Money
		Rs	Rs
1	Construction of a Bus-shelter at Kuderu Chamarajanagar Taluk	5,700	300
2	Well for Chapparadahalli Dispensary, Periyapatna	1,850	90
3	Well for Kittur Dispensary, Periyapatna Tq	1,050	50
4	Well for Hosur Dispensary, K R Nagar Tq	1,050	50
5	Well for Hadya Dispensary,	1,050	50
6	Well for the High School at Saragur, H G Kote	1,300	65
7	Constructing an open stall at Madahalli Shandy, Nanjangud Taluk	1 800	90
8	Well at the Bus-shelter at Santhemarahalli, Chamarajanagar Taluk	2,500	125
9	Constructing a rest house at Kittur, Periyapatna	1 000	50
10	,, ,, Kamplapura ,,	1,000	50
11	,, ,, Bus shelter at Kunnahalli Periyapatna Taluk	1,000	50
12	Extending the Primary School at Saligrama, K R Nagar	4,700	250
13	Constructing a Primary School at Cheeranahalli, K R Nagar Taluk	4 700	250
14	—do— Kempegowdanakoppal Periyapatna	2,500	150
15	Telaginakuppe, Periyapatna	2 500	150
16	,, Kudakur, ,,	2,500	150
17	,, Haradur, ,,	4,700	250
18	,, Karimanjanapur, Ch Nagar	4,700	250
19	Mudlagrahar, Chamarajanagar Taluk	2,500	150
20	,, Kalmalli Nanjangud Taluk	2,500	150
21	,, Bidigalu, H G Kote Taluk	2,500	150
22	Construction of Twin quarters at Budipadigu in Chamarajanagar Taluk for housing the hill Tribesmen 25 quarters (each)	3,100	5,000
23	Constructing a ward at Heggadahalli, Gundlupet Tq	2,750	150
24	Improvements to Musafirkhana at Sosale, T Narasipur Taluk	1,800	100
25	Sinking a well near dispensary building at Harave, Chamarajanagar Taluk	1,300	65

PRESIDENT,

District Board, Mysore.

ರೆಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨-೬ ೧೯೫೩ [ಸಂಚಿಕೆ ೨೪೯

ಗೌರೀಶಂಕರ ಶಿಖರದ ಯಶಸ್ವೀ ಆರೋಹಣ

ಲಂಡನ್ನಿನಲ್ಲಿ ವಿಶೇಷ ಸಂಭ್ರಮ

ಇಂದು ಬ್ರಿಟಿಷ್ ರಾಣಿ ಎರಡನೇ ಎಲಿಜಬೆತ್ತರ ಕಿರೀಟ ಧಾರಣೆಯಾದುದರಿಂದ, ಅದಕ್ಕೆ ಸಂಬಂಧಿಸಿದ ಉತ್ಸವವನ್ನು ನೋಡಲು ಬಕಿಂಗ್‌ಹ್ಯಾಂ ಅರಮನೆಯಿಂದ ವೆಸ್ಟ್‌ಮಿನ್‌ಸ್ಟರ್ ದೇವಾಲಯದ ವರೆಗೂ ಇರುವ ಮೆರವಣಿಗೆ ರಸ್ತೆಗಳಲ್ಲಿ ಅನೇಕ ಪ್ರೇಕ್ಷಕರು ಹಗಲು ರಾತ್ರಿ ಎನ್ನದೆ ಸೇರಿ, ಅಲ್ಲಿಯೇ ಬಿಡಾರಗಳನ್ನು ಮಾಡಿಕೊಂಡಿರುತ್ತಾರೆ ಸುಮಾರು ೩೦ ಲಕ್ಷಕ್ಕೂ ಹೆಚ್ಚು ಜನ ಪ್ರೇಕ್ಷಕರು ಸೇರಬಹುದೆಂಬ ನಿರೀಕ್ಷೆಯಿದೆ ಮೆರವಣಿಗೆಯುದ್ದಕ್ಕೂ ೧೫,೦೦೦ ಮಂದಿ ಪೋಲೀಸರೂ, ಸಾವಿರಾರು ಸಿ ಐ ಡಿ ಗಳೂ ರಕ್ಷಣೆಗೆ ನಿಯಮಿತರಾಗಿರುವರು ವೆಸ್ಟ್‌ಮಿನ್‌ಸ್ಟರ್ ಚರ್ಚಿನಲ್ಲಿ ಪೋಲೀಸರು ಪೂರ್ಣವಾದ ಶೋಧನೆ ನಡೆಸಿರುತ್ತಾರೆ ಈ ಶುಭ ಸನ್ನಿವೇಶದಲ್ಲಿ ಭಾರತದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ರಾಣಿ ಎಲಿಜಬೆತ್ತರಿಗೆ ತಮ್ಮ ಮತ್ತು ಭಾರತದ ಪ್ರಜೆಗಳ ಪರವಾಗಿ ಶುಭಾಶಯಗಳನ್ನು ಕಳುಹಿಸಿರುವರು

ಉನ್ನತ ಅಧಿಕಾರಿಗಳ ತುಟ್ಟಿ ಭತ್ಯ ನಿಲ್ಲುವುದು

ಸಾವಿರ ರೂಪಾಯಿಗಳಿಗಿಂತ ಹೆಚ್ಚು ವೇತನ ಪಡೆಯುವ ಭಾರತ ಸರ್ಕಾರದ ಎಲ್ಲಾ ಅಧಿಕಾರಿಗಳು, ಅಖಿಲ ಭಾರತ ಸರ್ವಿಸ್ಸಿನ ಎಲ್ಲಾ ಅಧಿಕಾರಿಗಳು ಮಾಜಿ ಸ್ಟೇಟ್ಸ್ ಸೆಕ್ರೆಟರಿ ಮತ್ತು ಪ್ರಾಂತಗಳಲ್ಲಿ ಕೆಲಸ ಮಾಡುತ್ತಿರುವ ಭಾರತ ಸರ್ಕಾರದ ನೌಕರರುಗಳಿಗೆ ಕೊಡುತ್ತಿರುವ ತುಟ್ಟಿ ಭತ್ಯವನ್ನು ಇದೇ ಜೂನ್ ತಿಂಗಳಿಂದ ಕಡಿಮೆ ಮಾಡಿ ೨ ವರ್ಷಗಳ ಅಂತರದಲ್ಲಿ ಪೂರ್ಣವಾಗಿ ಭತ್ಯವನ್ನು ನಿಲ್ಲಿಸಲಾಗುವುದೆಂದು ಭಾರತ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ

ಪ್ರಸನ್ನ ಸಾಯಿ ಮಂದಿರ

ರಾಜಧಾನಿಯಲ್ಲಿರುವ ಮೋಲ್ಕಂಡ ಮಂದಿರದ ಭಕ್ತಮಂಡಳಿಯವರು ಶ್ರೀ ಸಾಯಿಬಾಬಾರವರ ಜೀವನ ಚರಿತ್ರೆ ಮತ್ತು ಲೀಲಾತಿಶಯಗಳನ್ನು ಕುರಿತು ನಾಳೆ ಸಂಜೆ ೬ ರಿಂದ ೭ ಘಂಟೆವರೆಗೆ, ಚಾಮುಂಡೇಶ್ವರೀ ಟಾಕೀಸಿನಲ್ಲಿ, ಸಿನಿಮಾ ಸ್ಲೈಡುಗಳ ಮೂಲಕ ಪ್ರದರ್ಶನವನ್ನು ಏರ್ಪಡಿಸಿರುವರು ಅಖಿಲ ಭಾರತ ಸಾಯಿ ಸಮಾಜದ ಅಧ್ಯಕ್ಷರಾದ ಶ್ರೀ ನರಸಿಹ್ಮಸ್ವಾಮಿಜಿಯವರು ಅಧ್ಯಕ್ಷತೆ ವಹಿಸುವರು ನಾಳಿದ್ದು ಗುರುವಾರ ಸಂಜೆ ೭ ಘಂಟೆಗೆ ಕಾಳಮ್ಮನ ಗುಡಿ ಬೀದಿಯಲ್ಲಿರುವ ಸಾಯಿ ಮಂದಿರದಲ್ಲಿ ಭಜನೆಯೂ ಮತ್ತು ಶ್ರೀ ನರಸಿಂಹಸ್ವಾಮಿಯವರಿಂದ ಉಪನ್ಯಾಸವೂ ಏರ್ಪಾಡಾಗಿವೆ

ಶ್ರೀ ನರಸಿಹ್ಮಸ್ವಾಮಿಯವರು ನಾಳೆ ಬೆಳಗ್ಗೆ ಮೇಲ್ ಟ್ರೈನಿನಲ್ಲಿ ರಾಜಧಾನಿಗೆ ಆಗಮಿಸಿ, ನಜರ್‌ಬಾದಿನಲ್ಲಿ ಸಾಹುಕಾರ್ ಶ್ರೀ ಎಸ್ ಚನ್ನಯ್ಯನವರ ಮನೆ ಎದುರಿಗಿರುವ, ಇನ್‌ಕಂಟ್ಯಾಕ್ಸ್ ಆಫೀಸರ್ ಶ್ರೀ ರಾಮಮೂರ್ತಿಯವರ ಮನೆಯಲ್ಲಿ ಬಿಡಾರ ಮಾಡುವರು ಅಪೇಕ್ಷಿಸುವವರು ಅವರನ್ನು ಅಲ್ಲಿ ಭೇಟಿ ಮಾಡಬಹುದು

ಗೌರೀಶಂಕರ ಶಿಖರದ ಆರೋಹಣ ಕಾರ್ಯ ಜಯ

ಕರ್ನಲ್ ಹಂಟ್ ಎಂಬುವರ ನೇತೃತ್ವದಲ್ಲಿ ಹಿಮಾಲಯದ ಗೌರೀಶಂಕರ ಶಿಖರವನ್ನು ಹತ್ತಲು ಹೊರಟ ಬ್ರಿಟಿಷ್ ಪರ್ವತಾರೋಹಿಗಳ ತಂಡದ ಇಬ್ಬರು ಕಳೆದ ಶುಕ್ರವಾರ ೨೯,೦೦೨ ಅಡಿ ಎತ್ತರದ ಆ ಶಿಖರವನ್ನು ಯಶಸ್ವಿಯಾಗಿ ತಲುಪಿದರೆಂದು ಗೊತ್ತಾಗಿದೆ, ಶಿಖರವನ್ನು ಮುಟ್ಟಿದ ಇಬ್ಬರ ಪೈಕಿ ಒಬ್ಬನು ನೇಪಾಳದವನೆಂದೂ ತಿಳಿದುಬಂದಿದೆ ಬ್ರಿಟಿಷ್ ರಾಣಿಯ ಕಿರೀಟ ಧಾರಣೋತ್ಸವ ಸಮಯದಲ್ಲಿ ರಾಣಿಯವರಿಗೆ ಉಡುಗೊರೆಯಾಗಿ ಸಾಹಸ ಈ ಕಾರ್ಯವನ್ನು ಅರ್ಪಿಸಲೂ ಸಹ ಪರ್ವತಾರೋಹಿಗಳು ನಿಶ್ಚಯಿಸಿದ್ದರು

ಆಂಧ್ರ ಶಾಸನ ಸಭಾ ಸದಸ್ಯರ ಸಭೆ

ಆಂಧ್ರ ಸಂಸ್ಥಾನದ ರಾಜಧಾನಿಯನ್ನು ಗೊತ್ತುಪಡಿಸುವ ಬಗ್ಗೆ ಆಂಧ್ರ ಪ್ರದೇಶ ಶಾಸನ ಸಭಾ ಸದಸ್ಯರ ಸಭೆಯು ನೆನ್ನೆ ಮದ್ರಾಸಿನಲ್ಲಿ ನಡೆಯಿತು ೧೪೦ ಜನರ ಪೈಕಿ ೧೨೫ ಮಂದಿ ಹಾಜರಿದ್ದರು ಮದ್ರಾಸು ಶಾಸನ ಸಭಾಧ್ಯಕ್ಷರಾದ ಶ್ರೀ ಶಿವಷಣ್ಮುಗಂ ಪಿಳ್ಳೆಯವರು ಸಭೆಯನ್ನು ಆರಂಭಿಸಿ ತಮಗೆ ತೆಲುಗು ಭಾಷೆಯು ತಿಳಿಯದುದರಿಂದ ಟಿ ಪ್ರಕಾಶಂ ರವರನ್ನು ಸಭಾಧ್ಯಕ್ಷತೆಗೆ ಸೂಚಿಸಿದರು ಟಿ ಪ್ರಕಾಶಂರವರು ಸ್ವೀರಿಕಾ ಭಾಷಣ ಮಾಡಿ, ಕರ್ನೂಲನ್ನು ಆಂಧ್ರದ ರಾಜಧಾನಿಯಾಗಿ ಮಾಡಿಕೊಳ್ಳುವುದು ಒಳ್ಳೆಯದೆಂದು ಸಲಹೆ ಮಾಡಿದರು ಕಮ್ಯೂನಿಸ್ಟ್ ಪಕ್ಷದ ಟಿ ನಾಗಿರೆಡ್ಡಿಯವರು ಕ್ರಿಯಾಲೋಪವೆತ್ತಿ, ಅಧ್ಯಕ್ಷತೆ ವಹಿಸಿದವರು ಕರ್ನೂಲಿನ ಪರವಾಗಿ "ಕ್ಯಾನ್‌ವಾಸ್" ಮಾಡುವುದು ಸರಿಯಲ್ಲವೆಂದು ಹೇಳಿದರು

ಪೂನಾ ಮುಷ್ಕರಕ್ಕೆ ಕಾರ್ಮಿಕರ ಒತ್ತಾಸೆಯಿಲ್ಲ

ಪೂನಾ ಬಳಿ ದೆಹೂ ರಸ್ತೆಯಲ್ಲಿರುವ ಕೇಂದ್ರ ಸರ್ಕಾರದ ಮದ್ದುಗುಂಡು ತಯಾರಿಕಾ ಕಾರ್ಖಾನೆಯ ೪೦೦೦ ಕಾರ್ಮಿಕರು ನೆನ್ನೆಯಿಂದ ಮುಷ್ಕರ ಹೂಡಲು ಕರೆ ಕೊಟ್ಟಿತ್ತಾದರೂ ಶೇ|| ೧೦ ಮಂದಿಗಿಂತ ಹೆಚ್ಚಾಗಿ ಜನರು ಅದರಲ್ಲಿ ಭಾಗವಹಿಸಿರಲಿಲ್ಲವೆಂದು ವರದಿಯಾಗಿದೆ.

ಏಕೀಕರಣಕ್ಕಾಗಿ ಶಾಂತಿಯುತ ಹೋರಾಟ

ಕೆ ಆರ್. ಕಾರಂತರಿಂದ ವಿವರಣೆ

ಮೈಸೂರು ೨

ಈ ದಿನ ಬೆಳಗ್ಗೆ ದುಂಡ್ಯಾಪದ ಮಾಜಿ ಸಚಿವರೂ ಕರ್ನಾಟಕ ಪ್ರಾಂತ ಸ್ಥಾಪನಾ ಕ್ರಿಯಾ ಸಮಿತಿ ಸದಸ್ಯರೂ ಆದ ಶ್ರೀ ಕೆ ಆರ್ ಕಾರಂತರು ಪತ್ರಿಕಾ ಸಮ್ಮೇಳನವೊಂದನ್ನು ಕರೆದು ಏಕೀಕರಣದ ಬಗ್ಗೆ ವಿವರಣೆಯನ್ನಿತ್ತರು

ಏಕೀಕರಣವು ಪಕ್ಷಗಳ ರಾಜಕೀಯವಲ್ಲವೆಂದೂ ಅದು ಇಡೀ ಕರ್ನಾಟಕದ ಜನರ ಒಂದು ಆಶೆಯ ಸ್ವರವೆಂದೂ ಹೇಳಿ, ದಾವಣಗೆರೆಯಲ್ಲಿ ನಡೆದ ಸರ್ವ ಪಕ್ಷಗಳ ಸಮ್ಮೇಳನದಲ್ಲಿ ಕೆಲವು ಕಾಂಗ್ರೆಸ್ಸಿಗರೂ ಸಹ ಅನಧಿಕೃತವಾಗಿಯಾದರೂ ಭಾಗವಹಿಸಿದ್ದರೆಂದೂ ತಿಳಿಸಿದರು

ಈ ಬಗ್ಗೆ ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದರಿಂದ ಸಮಸ್ಯಾ ಪರಿಹಾರಕ್ಕೆ ಬಹಳ ತಡವಾಗುವದೆಂದೂ ಅದಕ್ಕೆ ಮುಂಚೆ ಪ್ರಾಂತ ಸ್ಥಾಪನೆಯ ಬಗ್ಗೆ ಒಂದು ಘೋಷಣೆಯನ್ನು ಹೊರಡಿಸುವುದನ್ನು ತಾವು ಸ್ವಾಗತಿಸುವುದಾಗಿಯೂ ಹೇಳಿದರು

ಮೈಸೂರಿನಲ್ಲಿ ಕೆಲವು ಕಡೆ ಇದಕ್ಕೆ ವಿರೋಧವಿರುವ ವಿಚಾರವನ್ನು ಪ್ರಸ್ತಾಪಿಸಿ, ವಿರೋಧಿಗಳ ಮನಸ್ಸಿನಲ್ಲಿರುವ ಭಯವನ್ನು ಹೋಗಲಾಡಿಸುವುದು ಮೈಸೂರಿನವರ ಕರ್ತವ್ಯವೆಂದೂ, ಏಕೀಕರಣದಿಂದ ಯಾವ ಕೇಡೂ ಇಲ್ಲವೆಂದು ಕೇಡನ್ನು ಲೆಕ್ಕಿಸಲು ಸಾಧ್ಯವಾಗುವುದಿಲ್ಲವೆಂದು ತಾವು ನಂಬಿರುವುದಾಗಿಯೂ ತಿಳಿಸಿದರು

ಏಕೀಕರಣದ ಚಳುವಳಿಯನ್ನು ಪ್ರಾಂತದಾದ್ಯಂತ ಶಾಂತಿಯುತವಾಗಿ ನಡೆಸುವುದಾಗಿಯೂ ಹಿಂಸೆ ಮತ್ತು ಬೆದರಿಕೆಗಳನ್ನನುಸರಿಸಿ ಹೋರಾಡುವುದರಲ್ಲಿ ನಮಗೆ ಇಷ್ಟವಿಲ್ಲವೆಂದೂ ತಿಳಿಸಿ, ಇದಕ್ಕಾಗಿ ದೇಶದಾದ್ಯಂತ ಸ್ವಯಂಸೇವಕರನ್ನು ಕೂಡಿಸುವುದಾಗಿ ನುಡಿದರು

ಮೈಸೂರನ್ನುಳಿದು ಬೇರೆ ಭಾಗಗಳು ಕೂಡಿ ಕರ್ನಾಟಕ ಪ್ರಾಂತವಾಗಬೇಕೆಂಬುದನ್ನು ತಾವು ಒಪ್ಪುವುದಿಲ್ಲವೆಂದರು

ಕಿರೀಟ ಧಾರಣೆ ಬಗ್ಗೆ ಪ್ರಸಾರ

ಈ ರಾತ್ರಿ ೮|| ಗಂಟೆಯಿಂದ ೨೦ ನಿಮಿಷಕಾಲ ಮೈಸೂರಿನ ರೇಡಿಯೋ ವಿನವರು ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೋತ್ಸವದ ವಿಷಯವನ್ನೂ, ನಾಳೆ ರಾತ್ರಿ ೮|| ಗೆ ರಾಣಿಯವರ ಸಂದೇಶವನ್ನೂ ಪುನಃ ಪ್ರಸಾರ ಮಾಡುವರು

ಟೆಲಿವಿಷನ್ ಮೂಲಕ ಬ್ರಿಟಿಷ್ ಕಿರೀಟ ದರ್ಶನ

ಬ್ರಿಟಿಷ್ ನೂತನ ರಾಣಿ ಎಲಿಜಬೆತ್‌ರವರು ಈ ದಿನ ಧರಿಸುವ ಕಿರೀಟವನ್ನು ಬಕಿಂಗ್ ಹ್ಯಾಂ ಅರಮನೆಯಿಂದ ಕಳೆದ ವಾರ ವೆಸ್ಟ್‌ಮಿನ್‌ಸ್ಟರ್ ಚರ್ಚಿಗೆ ರವಾನಿಸಲಾಯಿತು ಅದನ್ನು ಈ ದಿನ ಟೆಲಿವಿಷನ್ ಮೂಲಕ ಸಾರ್ವಜನಿಕರಿಗೆ ತೋರಿಸುವ ವ್ಯವಸ್ಥೆಯಾಗಿರುವುದು

ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪರು ಈ ದಿನ ಎಲಿಜಬೆತ್ ರಾಣಿಯವರಿಗೆ ವಿಧ್ಯುಕ್ತವಾಗಿ ಕಿರೀಟಧಾರಣೆ ಮಾಡಿಸುವರು ಕಿರೀಟವು ಐದು ಪೌಂಡು ತೂಕವಿದ್ದು ಬಹಳ ಭಾರವಾಗಿರುವುದರಿಂದ ಧರಿಸಿದ ಸ್ವಲ್ಪ ಹೊತ್ತಿನ ನಂತರ ಅದನ್ನು ಬದಲಾಯಿಸಿ ೨| ಪೌಂಡು ತೂಕದ ಬೇರೆ ಕಿರೀಟವನ್ನು ಧರಿಸಲಾಗುವುದು ಈ ಕಿರೀಟವು ವಿಕ್ಟೋರಿಯಾ ರಾಣಿಯವರಿಗಾಗಿ ತಯಾರಾಗಿದ್ದಿತು ಈಗ ಅತ್ಯಮೂಲ್ಯ ವಜ್ರಗಳಿಂದ ಕೆತ್ತಿ ಸಿದ್ಧಪಡಿಸಲ್ಪಟ್ಟದ್ದಾಗಿದೆ ಈ ದಿನ ರಾಣಿ ಎಲಿಜಬೆತ್ತರು ಅದೇ ಕಿರೀಟವನ್ನು ಧರಿಸಿ ಮೆರವಣಿಗೆಯಲ್ಲಿ ವಾಪಸು ಬರುವರು ಇಂದಿನ ಸಮಾರಂಭದಲ್ಲಿ ರಾಣಿಯವರು ಧರಿಸುವ ಕಿರೀಟ ಮತ್ತು ಇತರ ಎಲ್ಲ ಆಭರಣಗಳಬೆಲೆಯು ಸುಮಾರು ೩೦ ಕೋಟಿ ರೂ ಆಗುವುದೆಂದು ಹೇಳಲಾಗಿದೆ

ಮಂಗಳೂರು ರೇವನ್ನು ಅಭಿವೃದ್ಧಿಪಡಿಸಲು ನಿರ್ಧಾರ

ಎಲ್ಲಾ ಋತುಗಳಲ್ಲೂ ಉಪಯೋಗಕ್ಕೆ ಬರುವ ಆಧುನಿಕ ರೇವೊಂದನ್ನು ಮಂಗಳೂರಿನಲ್ಲಿ ನಿರ್ಮಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಬೊಂಬಾಯಿ ಮತ್ತು ಕೊಚ್ಚಿಗಳ ಮಧ್ಯೆ ಉತ್ತಮವಾದ ಬೇರೆ ರೇವು ಇಲ್ಲದಿರುವುದರಿಂದಲೂ, ಕರ್ನಾಟಕ, ಮೈಸೂರು ಮತ್ತು ಇತರ ಪ್ರದೇಶಗಳಲ್ಲಿ ಬೆಳೆಯುವ ಪದಾರ್ಥಗಳನ್ನು ಸಾಗಿಸಲು ಮಂಗಳೂರು ಉಪಯುಕ್ತ ಸ್ಥಳವಾಗಿರುವುದರಿಂದಲೂ ಅದನ್ನು ಅಭಿವೃದ್ಧಿಗೊಳಿಸಲಾಗುವುದೆಂದು ಹೇಳಲಾಗಿದೆ

ಹೋಟೇಲು ಮಾಲೀಕರಿಂದ ಕೆಲಸಗಾರರಿಗೆ ಬರೆ

ನೆಲ್ಲೂರಿನ ಶ್ರೀ ರಾಮಚಂದ್ರ ಅಯ್ಯರ್ ಎಂಬ ಹೋಟೇಲು ಮಾಲೀಕರೊಬ್ಬರು ತಮ್ಮ ಹೋಟೇಲಿನ ಹಲವು ಕೆಲಸಗಾರರು ಕೆಲಸಕ್ಕೆ ಕ್ರಮವಾಗಿ ಹಾಜರಾಗದಿದ್ದ ಪ್ರಯುಕ್ತ ಕಬ್ಬಿಣದ ಸಲಾಕಿಯನ್ನು ಕಾಯಿಸಿ ಅವರಿಗೆ ಬರೆ ಹಾಕಿದರೆಂದೂ, ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ ಮಾಲೀಕರ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆಯೆಂದು ಗೊತ್ತಾಗಿದೆ

ಬಹಿರಂಗ ಸಭೆ

ನಾಳೆ ಸಂಜೆ ಟೌನ್‌ಹಾಲಿನಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ ಶ್ರೀಗಳಾದ ಕೆ ಆರ್ ಕಾರಂತ್, ಮತ್ತು ಎಂ. ಎಸ್ ಗುರುಪಾದಸ್ವಾಮಿಯವರು ಭಾಷಣ ಮಾಡುವರು

ಬ್ರಿಟಿಷ್ ರಾಣಿಯವರ ಕಿರೀಟ ಧಾರಣೆ ಬಿರುದು

ಬ್ರಿಟನ್ನಿನ ರಾಣಿ ಎಲಿಜಬೆತ್ತರು ತಮ್ಮ ಕಿರೀಟ ಧಾರಣೋತ್ಸವದ ಪೂರ್ವ [illegible] ಅವರ ಕಿರೀಟ [illegible] ಎಲಿಜಬೆತ್ [illegible] ಬ್ರಿಟಿಷ್ ಸೈನ್ಯ [illegible] ಕೊಡಲಾಗಿದೆ [illegible] ಕೋಲಾರದ [illegible] ದೊರೆತಿವೆ

ಹಿಂದೀ ಶಿಕ್ಷಕರಿಗೆ ಆವೇದನ ಪತ್ರ

[illegible] ಅನಂತರ [illegible] ನಗರದ [illegible] ತಿಳಿಸಿರತ್ತಾರೆ

ವಿವಾಹ ಮಹೋತ್ಸವ

[illegible] ಶ್ರೀ ಎನ್ [illegible] ಶ್ರೀ ಎನ್ [illegible] ಕೊಟ್ಟದಪುರದ ಶ್ರೀ ಶ್ರೀನಿವಾಸಯ ನವರ [illegible] ಬೆಟ್ಟದಪುರದಲ್ಲಿ [illegible] ವಿವಾಹವನ್ನು ನೆರವೇರಿಸಿದರು

SRI GANESHA

[illegible]

GARDEN OF ALLAH

[illegible]

THE ELUSIVE PIMPERNEL

[illegible]

ಚಳಿಯಿಂದ ಬೆಂಕಿ ಪೊಟ್ಟಣ ಹತ್ತಿಕೊಂಡು ಬಟ್ಟೆ ನಾಶ

ಭದ್ರಾಚಲದಲ್ಲಿ ಚಳಿಯು ವಿಪರೀತವಾಗಿ [illegible] ಯಾತ್ರಿಕನು ಗೋದಾವರಿ ನದಿಯಲ್ಲಿ ಸ್ನಾನಕ್ಕಾಗಿ ಹೋಗಿ ದಡದ ಮೇಲೆ ಬಟ್ಟೆಗಳನ್ನು ಕಳೆದಿಟ್ಟು ಸ್ನಾನ ಮಾಡುತ್ತಿದ್ದಾಗ ಅವನ ಬಟ್ಟೆಯಲ್ಲಿದ್ದ ಬೆಂಕಿ ಪೊಟ್ಟಣವು ಚಳಿಯ ಕಾವಿನಿಂದ ಹತ್ತಿಕೊಂಡು ಬಟ್ಟೆಗಳನ್ನು ಸುಟ್ಟುಹಾಗಿ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
[illegible]	[illegible]	[illegible]
[illegible]	[illegible]	
[illegible]	[illegible]	
[illegible]	[illegible]	೩೪-೧೦-೦
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನ

ಕಳೆದ ತಿಂಗಳ [illegible] ನೇ ತಾ|| ನಡೆ[illegible] ಮುಂದ ವರಿಸಲ್ಪಟ್ಟ [illegible] ಸಹಕಾರ ಸಮ್ಮೇಳನದ ಪ್ರಾರಂಭೋತ್ಸವವು [illegible] ನೇ ತಾ|| ಸಂಜೆ [illegible] ಗಂಟೆಗೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಿಂದ ನೆರವೇರಿಸಲ್ಪಡುವುದು ಶಾರದಾವಿಲಾಸ ಕಾಲೇಜಿನ [illegible]ರಾದ ಶ್ರೀ ಎಂ ಎಸ್ [illegible]ರವರು ಅಧ್ಯಕ್ಷತೆ ವಹಿಸುವರು [illegible] ನೇ ತಾ|| ಬೆಳಗ್ಗೆ ಸಮ್ಮೇಳನವು [illegible] ವಿಷಯಗಳನ್ನು ಕುರಿತು ಚರ್ಚೆ ನಡೆಸುವುದು ಸಮ್ಮೇಳನಕ್ಕೆ ಬರುವಂತೆ ಎಲ್ಲ ಸಹಕಾರಿಗಳಿಗೂ ಆಹ್ವಾನ ನೀಡಲಾಗಿದೆ, ಆಕಸ್ಮಾತ್ ಕಳಹದಿದ್ದವರು ಪತ್ರಿಕಾ ಪ್ರಕಟಣೆಯನ್ನು ಆಹ್ವಾನವೆಂದು ಮನ್ನಿಸಿ ಬರಬೇಕೆಂದು ಜಿಲ್ಲಾ ಸಹಕಾರ ಪ್ರಚಾರ ಸಂಘದ ಕಾರ್ಯದರ್ಶಿಯವರು ಕೋರಿರುವರು

ಪ್ರಿಂಟಿಂಗ್ ಮಿಷನ್‌ಗಳ ರಿಪೇರಿ

ಸಿಲಿಂಡರ್, ಟ್ರೆಡಲ್, ಕಟಿಂಗ್, ವೈರ್ ಸ್ಟಿಚರ್ ಮುಂತಾದ ಪ್ರಿಂಟಿಂಗ್‌ಗೆ ಸಂಬಂಧಪಟ್ಟ ಸಕಲ ಮಿಷನ್ನುಗಳ ರಿಪೇರಿಗಳನ್ನು ಮತ್ತು ಫಿಟಿಂಗ್ ಕೆಲಸಗಳನ್ನೂ ತೃಪ್ತಿಕರವಾಗಿಯೂ ಮತ್ತು ಜಾಗ್ರತೆಯಾಗಿಯೂ ಮಾಡಿಕೊಡಲಾಗುತ್ತೆ

G. K. O.,

C/o ಕೆ ವಿ ವಿ ಪ್ರೆಸ್, ಮೈಸೂರು

Edited, Printed and Published by A. R. Nagarajan at Sadhvi Press, D. Subbiah Road, Mysore

ಉರಿಗಾಂ ಚಿನ್ನದ ಗಣಿ ಮುಚ್ಚುವ ಕ್ರಮ

ಕೋಲಾರದ ಉರಿಗಾಂ ಚಿನ್ನದ ಗಣಿಯನ್ನು ಕ್ರಮ ಕ್ರಮವಾಗಿ ಮುಚ್ಚಲು ಸೂಕ್ತ ಕಾರ್ಯ ಕೈಗೊಳ್ಳಲ್ಪಟ್ಟು, ನಾಲ್ಕೈದು ವಾರಗಳೊಳಗೆ ಅದು ಪೂರೈಸುವುದೆಂದು ಗೊತ್ತಾಗಿದೆ

ಮುಖ್ಯ ಮಂತ್ರಿಗಳ ಬಳಿ ಇನಾಂದಾರರ ನಿಯೋಗ

ಮುಖ್ಯ ಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಈ ತಿಂಗಳು ೧೨ ನೇ ತಾ|| ಸಂಜೆ ೬ ಗಂಟೆಗೆ ಮೈಸೂರು ಜಿಲ್ಲಾ ಇನಾಂದಾರರ ಸಂಘದ ಪ್ರತಿನಿಧಿಗಳಿಗೆ ಭೇಟಿ ಕೊಡುವರೆಂದು ಗೊತ್ತಾಗಿದೆ ಸಂಸ್ಥಾನದ ಸಂಘದ ಸಭೆಯು ಕಳೆದ [illegible] ನೇ ತಾ|| ಬೆಂಗಳೂರಿನಲ್ಲಿ ನಡೆದು ಇನಾಂ ರದ್ದಿನ ಮಸೂದೆಯನ್ನು ತಿದ್ದುಪಡಿ ಮಾಡುವಂತೆ ಕೋರಿ ಸರ್ಕಾರಕ್ಕೆ ಮನವಿಯೊಂದನ್ನು ಕಳುಹಲಾಗಿದೆ

||ಶ್ರೀ||

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ ಕಿಂಡರ್ ಗಾರ್ಟನ್ ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾದರಿಗಳನ್ನನುಸರಿಸಿ, ಮಿಡಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ನಿರ್ದಿಷ್ಟವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಡೈರೆಕ್ಟರ್

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಶ್ರೀನಿವಾಸನ್, ನಾಗಸ್ವರ [illegible] ಪಿಟೀಲು [illegible] ಎಂ ಆರ್ ಲಕ್ಷ್ಮಮ್ಮನವರ ಕನ್ನಡ ಭಾಷಣ ಸಂಜೆ [illegible] ಶ್ರೀನಿವಾಸನ್, ನಾಗಸ್ವರ [illegible] ಸರೋಜಾದೇವಿ [illegible] ಎಂ. ಶಿವರಾಂ, ಕನ್ನಡದಲ್ಲಿ ಭಾಷಣ. [illegible] ಚೌಡಯ್ಯ, ಪಿಟೀಲು [illegible] ದಿಹಲಿ ಕಾರ್ಯಕ್ರಮ [illegible] ಶ್ರೀಕಂಠಯ್ಯ, [illegible] ಮೆಚ್ಚಿನ ಗೀತೆಗಳು

ಪ್ರಪಂಚದಲ್ಲೇ ಹೊಸದಾದ ಆಶ್ಚರ್ಯ ಚಿಕಿತ್ಸೆ

ದಿ ಲ್ ಖು ಷ್

ಬಹುಕಾಲದ ಹೊಟ್ಟೆ ಶೂಲೆಯನ್ನು, ಸೇವಿಸಿದ ಕೂಡಲೇ ಶಮನಗೊಳಿಸುತ್ತದೆ

ಶ್ರೀ ಆರ್ ಕೆ ವೆಂಕಟರಾವ್,
ರೈಲ್ವೆ ವರ್ಕ್ಸ್, ಮೈಸೂರು

ನನ್ನ ಸಂಸಾರಕ್ಕೆ ನಾಲ್ಕು ವರ್ಷಗಳಿಂದ ಬಹುಕಾಲದ ಹೊಟ್ಟೆ ಶೂಲೆಯಿಂದ ಬುದ್ಧಿ ಭ್ರಮಣೆಯೇ ಮೊದಲಾದ ಉಪದ್ರವಗಳುಂಟಾಗಿ ಸಾವಿರಾರು ರೂಪಾಯಿ ವೆಚ್ಚದಲ್ಲಿ ನಾನಾ ಚಿಕಿತ್ಸೆಗಳನ್ನು ಮಾಡಿಸಿ ಪ್ರಯೋಜನವಿಲ್ಲದೆ, ಮೈಸೂರು ಮಹಾರಾಣಿಯವರ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ಚಿಕಿತ್ಸೆ ಹೊಂದಿದರೂ ನಿಷ್ಫಲವಾಗಿ ಜೀವಿತದಲ್ಲಿ ನಿರಾಶರಾದೆವು ಈಗ್ಗೆ ಶ್ರೀ ಶಾಮಣ್ಣನವರಲ್ಲಿ ಚಿಕಿತ್ಸಾ ಪ್ರಾರಂಭಿಸಿ "ದಿಲ್ ಖುಷ್" ಅನ್ನು ಸೇವಿಸಿದ ಕೂಡಲೇ ಹೊಟ್ಟೆ ಶೂಲೆ ನಿಂತುಹೋಗಿ, ಬುದ್ಧಿ ಭ್ರಮಣೆ ಮುಂತಾದುವು ಆಗೋಚರವಾಗಿಯೇ ಹೋದುವು ರೋಗಿಗೆ ದೇಹ ದಾರ್ಢ್ಯ ಹೆಚ್ಚಿ ದೇಹ ಕಾಂತಿಯೂ ಹೆಚ್ಚುತ್ತದೆಂಬುವದರಲ್ಲಿ ಅತಿಶಯೋಕ್ತಿಯಿಲ್ಲ

ಎಸ್ ಶಾಮಣ್ಣ, ಸ್ಪೆಷಲಿಸ್ಟ್,
2830 ರಿವರ್ ಬಂಡ್ ಸ್ಟ್ರೀಟ್
ವೈದ್ಯ ಶಾಲಾ, 6ನೇ ಕ್ರಾಸ್ ರಸ್ತೆ,
ಚಾಮುಂಡಿಪುರಂ, ಮೈಸೂರು

ಹೊಸ ಮುದ್ರಣ ! 24 ಮ್ಯಾಪುಗಳು !!

ಮಿಡಲ್ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ

ಭೂಗೋಳಶಾಸ್ತ್ರಜ್ಞರಿಂದ ರಚಿಸಲ್ಪಟ್ಟ

ಬಣ್ಣಬಣ್ಣಗಳಿಂದ ಸುಂದರವಾಗಿ ಮುದ್ರಿತವಾಗಿರುವ

ಶಾರದಾ ಅಟ್ಲಾಸ್

24 ಭೂಪಟಗಳು

ಪ್ರಪಂಚದನರ, 6 ಖಂಡಗಳು, ಬ್ರಿಟಿಷ್ ದ್ವೀಪಗಳು, ಇಂಡಿಯಾದ ಬೆಳೆ, ಖನಿಜಗಳು, ಮೈಸೂರುದೇಶದ ಡಿಸ್ಟ್ರಿಕ್ಟುಗಳು, ತಾಲ್ಲೂಕುಗಳು ಮತ್ತು ಅನೇಕ ಉಪಯುಕ್ತವಾದ ವಿವರಗಳನ್ನೊಳಗೊಂಡಿದೆ

ಬೆಲೆ : 1—0—0

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ

— ಮುದ್ರಕರು ಮತ್ತು ಪ್ರಕಾಶಕರು —

ಶ್ರೀ ಶಾರದಾ ಪ್ರೆಸ್ ಮತ್ತು ಬುಕ್ ಡಿಪೋ,
ಹನುಮಂತರಾವ್ ಸ್ಟ್ರೀಟ್, ಮೈಸೂರು.

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ., ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ರೆಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೩-೬-೧೯೫೩ [ಸಂಚಿಕೆ ೨೫೦

ಇಂಡೋನೇಷ್ಯಾದಲ್ಲಿ ಸರ್ಕಾರದ ರಾಜೀನಾಮೆ

ಪೌರಸಭೆ ಮೇಲೆ ದಾವಾ ೨೦ ನೇ ತಾರೀಖು ವಿಚಾರಣೆ

ಮೈಸೂರು ೩

ಮೈಸೂರು ಪೌರಸಭೆಯವರು ಮನೆ ಕಂದಾಯ ಹೆಚ್ಚಿಸಿರುವ ಸಂಬಂಧವಾಗಿ ನಗರದ ವಕೀಲರಾದ ಶ್ರೀ ಎ ಎಸ್ ರಾಮಯ್ಯನವರು ೧ ನೇ ಮುನ್ಸೀಫ್ ಕೋರ್ಟಿನಲ್ಲಿ ಹೂಡಿರುವ ಮೊಕದ್ದಮೆ ವಿಚಾರಣಾರ್ಹವೆಂದು ಅಂಗೀಕರಿಸಲ್ಪಟ್ಟು, ವಿಚಾರಣೆಗೆ ಇದೇ ೨೦ ನೇ ತಾ|| ಗೆ ಹಾಕಲ್ಪಟ್ಟಿದೆ

ವಿ. ಎಂ. ಇನಾಂದಾರರಿಂದ ಉಪನ್ಯಾಸ

ರಾಜಧಾನಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಕರ್ನಾಟಕ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀ ವಿ ಎಂ ಇನಾಂದಾರರು ಪೌರ್ವಾತ್ಯ ಮತ್ತು ಪಾಶ್ಚಾತ್ಯ ದುರಂತ ನಾಟಕಗಳ ಬೆಳವಣಿಗೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರೊ|| ಶ್ರೀ ಎಸ್ ವಿ ರಂಗಣ್ಣನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಆಹ್ವಾನವಿದೆ

ಪ್ರಸನ್ನ ಸಾಯಿ ಮಂದಿರ

ನಾಳೆ ಪ್ರಾತಃಕಾಲ ೯ ಗಂಟೆಯಿಂದ ೧೧|| ಗಂಟೆ ವರೆಗೆ ಶ್ರೀ ಸಾಯಿಬಾಬಾ ರವರ ಜೀವನ ಚರಿತ್ರೆ ಮತ್ತು ಲೀಲಾತಿಶಯಗಳನ್ನು ಕುರಿತು ಸಿನಿಮಾ ಸ್ಲೈಡ್ ಮೂಲಕ ತೋರಿಸಲು ಮೇಲ್ಕಂಡ ಮಂದಿರದ ಭಕ್ತ ಮಂಡಲಿಯವರು ಪ್ರಭು ದೇವಾ ಥಿಯೇಟರಿನಲ್ಲಿ (ಸದ್ಯಾ ಟಾಕೀಸ್) ಏರ್ಪಾಡು ಮಾಡಿರುತ್ತಾರೆ. ಮಂದಿರದ ಅಧ್ಯಕ್ಷರಾದ ನರಸಿಂಹ ಸ್ವಾಮಿಜೀಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವುಂಟು. ಸ್ತ್ರೀಯರಿಗೆ ಪ್ರತ್ಯೇಕಸ್ಥಳವನ್ನೇರ್ಪಡಿಸಲಾಗಿದೆ

ಸಾಯಿಬಾಬಾ ಪ್ರಚಾರ ಭಾಷಣ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಆಂಡಾಳ್ ಮಂದಿರದ ಆವರಣದಲ್ಲಿ ನಾಳೆಸಂಜೆ ೫ ಘಂಟೆಗೆ ಶ್ರೀ ಸಾಯಿಬಾಬಾ ರವರ ಭಕ್ತರಾದ ಶ್ರೀ ನರಸಿಂಹ ಸ್ವಾಮಿಯವರು ಸಾಯಿಬಾಬಾ ರವರ ವಿಷಯವಾಗಿ ಕಾಲಕ್ಷೇಪ ನಡೆಸುವರು. ಸಂಜೆ ೬ ಗಂಟೆಗೆ ಚಿತ್ರ ಪ್ರದರ್ಶನವೂ ೭ ಘಂಟೆಗೆ ಭಜನೆಯೂ ನಡೆಯುವುವು

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘಕ್ಕೆ ಸ್ವಾಮಿಯವರು ಈ ಸಂಜೆ ೭ ಗಂಟೆಗೆ ಭೇಟಿ ಕೊಡುವರು. ಸರ್ವರಿಗೂ ಸ್ವಾಗತವುಂಟು

ದೇವರಿಗೆ ನಮಸ್ಕಾರ ಮಾಡುತ್ತಿದ್ದಾಗ ಕೊಲೆ

ತಿರುಪತಿಯ ಶ್ರೀ ರಾಮನ ಆಲಯದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಳೆದ ೨೮ ನೇ ತಾ|| ಶೇಷಯ್ಯ ಎಂಬುವನು ದೇವರಿಗೆ ನಮಸ್ಕಾರ ಮಾಡುತ್ತಿದ್ದಾಗ, ಅಪ್ಪಲ ಶಿವಯ್ಯ ಎಂಬಾತನು ಅವನನ್ನು ಕತ್ತಿಯಿಂದ ಹೊಡೆದು ತಾನು ಸ್ಟೇಷನ್ನಿಗೆ ಹೋಗಿ ಪೊಲೀಸರ ವಶನಾದನೆಂದೂ, ಪೆಟ್ಟು ತಿಂದವನು ಆಸ್ಪತ್ರೆಯಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ. ಮೃತಪಟ್ಟವನು ಒಂದು ದೇವಾಲಯದಲ್ಲಿ ಕೆಲಸದಲ್ಲಿದ್ದನು

ಪ್ರಪಂಚ ವಿಶ್ವವಿದ್ಯಾಲಯ ಸೇವಾ ಸಂಸ್ಥೆಯ ಗೋಷ್ಠಿ

ಮೈಸೂರು ೩

ಬರುವ ಸೋಮವಾರ ಇಲ್ಲಿ ಸೇರಲಿರುವ ಅಂತರ ರಾಷ್ಟ್ರೀಯ ವಿಶ್ವವಿದ್ಯಾನಿಲಯ ಸೇವಾ ಸಮಿತಿಯ ಚರ್ಚಾ ಗೋಷ್ಠಿಯ ಬಗ್ಗೆ ಅದರ ವ್ಯವಸ್ಥಾಪಕರಾದ ಸಿಸ್ಟರ್ ವರ್ಜೀನಿಯ ಹಾರ್ಟ್ ಮತ್ತು ಶ್ರೀ ವಿ ತಗರನಾಳ ರವರು ಈ ಬೆಳಿಗ್ಗೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ಸೂಕ್ತ ವಿವರಣೆಗಳನ್ನಿತ್ತರು.

ಭಾರತ ಮತ್ತು ಕೆನಡಿಯರ್ ಶಾಖೆಗಳು ಸೇರಿ ಈ ಚರ್ಚಾ ಗೋಷ್ಠಿಯನ್ನು ಕರೆದಿವೆಯೆಂದೂ, ಇದು ಸುಮಾರು ೫ ೬ ವಾರಗಳ ಕಾಲ ನಡೆದು ೨೪ ದೇಶಗಳ ಸುಮಾರು ೧೨೫ ಮಂದಿ ಪ್ರೊಫೆಸರುಗಳೂ ಮತ್ತು ವಿದ್ಯಾರ್ಥಿಗಳು ಭಾಗವಹಿಸುವರೆಂದೂ, ಗೋಷ್ಠಿಯು 'ಯೋಜನೆಗಳ ಅಭಿವೃದ್ಧಿಯಲ್ಲಿ ಮಾನವನ ಪಾತ್ರ' ಎಂಬ ವಿಷಯದ ಬಗ್ಗೆ ಚರ್ಚೆ ನಡೆಸುವುದೆಂದೂ, ಅಲ್ಲದೆ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳನ್ನೂ ಸಹ ಚರ್ಚಿಸಲಾಗುವುದೆಂದೂ ಅವರು ಹೇಳಿದರು. ಅನೇಕ ಮುಖಂಡರುಗಳೂ ಮತ್ತು ಪರಿಣತರೂ ಭಾಷಣ ಮಾಡುವರೆಂದು ತಿಳಿಸಿದರು

ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಬೆಳೆಸುವುದು ಮತ್ತು ಅವರಿಗೆ ಅನುಕೂಲವನ್ನು ಕಲ್ಪಿಸುವುದು ಇವೇ ಮುಂತಾದ ಧ್ಯೇಯಗಳನ್ನು ಈ ಸಂಸ್ಥೆಯು ಹೊಂದಿದೆಯೆಂದೂ ಈಗಾಗಲೇ ಭಾರತದಲ್ಲಿ ೨ ವಿದ್ಯಾರ್ಥಿಗಳ ವಿಶ್ರಾಂತಿ ಗೃಹಗಳನ್ನು ಡಿಲ್ಹೌಸಿ ಮತ್ತು ಮದ್ರಾಸುಗಳಲ್ಲಿ ನಿರ್ಮಿಸಲಾಗಿದೆಯೆಂದೂ, ಅಲ್ಲದೆ ಇನ್ನೂ ಅನೇಕ ಔದ್ಯೋಗಿಕ ಸಾಧನಗಳನ್ನೂ ಸಹ ಕಲ್ಪಿಸಿಕೊಡಲಾಗಿದೆಯೆಂದೂ ಗೋಷ್ಠಿಯ ವ್ಯವಸ್ಥಾಪಕರು ತಿಳಿಸಿದರು

ಇದೇ ಭಾನುವಾರ ಶ್ರೀಮನ್ಮಹಾರಾಜರು ಗೋಷ್ಠಿಯ ಆರಂಭೋತ್ಸವವನ್ನು ನೆರವೇರಿಸುವರು. ಅಲಿಘರ್ ವಿಶ್ವವಿದ್ಯಾಲಯದ ಡಾ|| ಜಕೀರ್ ಹುಸೇನರವರು ಅಧ್ಯಕ್ಷತೆ ವಹಿಸುವರು

★ ಕರ್ನೂಲ್ ನಗರವನ್ನು ಆಂಧ್ರ ಪ್ರಾಂತದ ರಾಜಧಾನಿಯಾಗಿ ಮಾಡಲಾಗುತ್ತಿರುವುದನ್ನು ಪ್ರತಿಭಟಿಸಿ ವಿಜಯವಾಡದ ಜನರು ನಿನ್ನೆ ಹರತಾಳವನ್ನಾಚರಿಸಿದರು

ಎರಡನೇ ಎಲಿಜಬೆತ್ತರಿಂದ ಕಿರೀಟ ಧಾರಣೆ

ಲಂಡನ್ ನಗರದಲ್ಲಿ ವೈಭವದ ಸಮಾರಂಭ

ಬ್ರಿಟನ್ನಿನ ರಾಣಿ ಎರಡನೇ ಎಲಿಜಬೆತ್ತರು ನಿನ್ನೆ ಸಂಜೆ ೫ ಗಂಟೆ ೨ ನಿಮಿಷಕ್ಕೆ ಸರಿಯಾಗಿ (ಇಲ್ಲಿನ ಕಾಲದ ಪ್ರಮಾಣ) ಲಂಡನ್ನಿನ ವೆಸ್ಟ್‌ಮಿನ್‌ಸ್ಟರ್ ಚರ್ಚಿನಲ್ಲಿ ಕಿರೀಟವನ್ನು ಧರಿಸಿದರು. ಕ್ಯಾಂಟರ್‌ಬರಿ ಆರ್ಚ್‌ಬಿಷಪ್ ಫಿಷರ್‌ರವರ ರಾಣಿಯವರ ಶಿರಸ್ಸಿನ ಮೇಲೆ ಪುರಾತನದ ಸೇಂಟ್ ಎಡ್ವರ್ಡ್ ಕಿರೀಟವನ್ನು ಇಟ್ಟರು

ನಿನ್ನೆ ಬೆಳಿಗ್ಗೆ ರಾಣಿಯವರು ೧೦ ಗಂಟೆಗೆ ಸರಿಯಾಗಿ (ಇಲ್ಲಿನ ೩ ಗಂಟೆ) ೮ ಕುದುರೆಗಳನ್ನು ಕಟ್ಟಿದ ದಿವ್ಯ ಸುವರ್ಣ ರಥದಲ್ಲಿ ತಮ್ಮ ಪತಿ ಎಡಿನ್‌ಬರ್ಗ್ ಡ್ಯೂಕರೊಡನೆ ಕುಳಿತು ಬಕಿಂಗ್‌ಹ್ಯಾಂ ಅರಮನೆಯಿಂದ ಮೆರವಣಿಗೆಯಲ್ಲಿ ಹೊರಟು ವಿಕ್ಟೋರಿಯ ಬೀದಿಗಳ ಮೂಲಕ ಚರ್ಚಿಗೆ ತೆರಳಿದರು. ಅಲ್ಲಿ ವಿಧ್ಯುಕ್ತವಾಗಿ ಕಿರೀಟ ಧಾರಣೆ ನಡೆಯಿತು

ನಂತರ ರಾಣಿಯವರು ಒಂದು ಕೈಯಲ್ಲಿ ದಂಡವನ್ನೂ, ಮತ್ತೊಂದರಲ್ಲಿ ರಾಜ ದಂಡವನ್ನೂ ಹಿಡಿದು ಸಿಂಹಾಸನವನ್ನೇರಿದರು. ಆಗ ಕ್ರಿಸ್ತ ಪಾದ್ರಿಗಳು ಮೊದಲಾಗಿ ನಿಷ್ಠೆಯನ್ನು ವ್ಯಕ್ತಪಡಿಸಿದರು. ಎಡಿನ್‌ಬರ್ಗ್ ಡ್ಯೂಕರು ಸಿಂಹಾಸನದ ಸಮೀಪಕ್ಕೆ ಹತ್ತಿ ಮೆಟ್ಟಿಲು ಹತ್ತಿ ಬಂದು ಮೊಣಕಾಲೂರಿ, ತಮ್ಮ ಕೈಗಳನ್ನು ರಾಣಿಯವರ ಕೈಗೆ ಜೋಡಿಸಿ ನಿಷ್ಠೆಯನ್ನು ತೋರ್ಪಡಿಸುವ ಪ್ರತಿಜ್ಞೆ ಮಾಡಿದರು. ಅನಂತರ ಎದ್ದು ನಿಂತು ಅವರು ರಾಣಿಯವರ ಕೆನ್ನೆಗೆ ಮುತ್ತಿಕ್ಕಿದರು. ಅದಾದ ನಂತರ ರಾಣಿಯವರ ಚಿಕ್ಕಪ್ಪಂದಿರಾದ ಗ್ಲೌಸೆಸ್ಟರ್ ಡ್ಯೂಕರು ನಿಷ್ಠೆಯನ್ನು ತೋರಿಸಿದರು. ಇತರ ಬ್ರಿಟಿಷ್ ಶ್ರೀಮಂತರು ಅದೇ ರೀತಿ ನಡೆದುಕೊಂಡರು

ಸಿಂಹಾಸನವನ್ನು ಇಳಿದು ರಾಣಿಯವರು ತಮ್ಮ ಪತಿ ಎಡಿನ್‌ಬರ್ಗ್‌ರ ಜೊತೆಯಲ್ಲಿ ದೇವಾಲಯದ ವೇದಿಕೆ ಮುಂದೆ ಬಾಗಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದರು

ಇಷ್ಟೆಲ್ಲಾ ಕಳೆದ ಮೇಲೆ ಆಯಾಸದಿಂದ ಅವರು ನಡೆಯುತ್ತಾ ಸ್ವಲ್ಪ ವಿಶ್ರಮಿಸಿದರು. ನಂತರ ಅವರು ಅರಮನೆಗೆ ಮೊದಲಿನಂತೆ ಮೆರವಣಿಗೆಯಲ್ಲಿ ವಾಪಸು ತೆರಳಿದರು

ಮೆರವಣಿಗೆಯಲ್ಲಿ ಭಾರತ, ಪಾಕಿಸ್ಥಾನ ಮುಂತಾದ ಕಾಮನ್‌ವೆಲ್ತ್ ಪ್ರಧಾನಿಗಳು ಇದ್ದರು. ನೆಹರೂರವರೊಡನೆ ಅವರ ಮಗಳೂ ಇದ್ದರು.

ಮಗಳ ಸಾವಿನ ಬಗ್ಗೆ ತಂದೆ ಮೇಲೆ ಮೊಕದ್ದಮೆ

ಬೆಂಗಳೂರು ೩

ಕೆಲವು ದಿನಗಳ ಹಿಂದೆ ತುಮಕೂರು ರಸ್ತೆಕಡೆ ಮೋಟಾರಿನಲ್ಲಿ ಅತಿ ವೇಗವಾಗಿ ಹೋಗುತ್ತಾ ಕಾರನ್ನು ಹಿಡಿವೆ ಇಲ್ಲದೆ, ಮರಕ್ಕೆ ಡಿಕ್ಕಿ ಹೊಡಿಸಿ, ಅದರ ಪರಿಣಾಮವಾಗಿ ಮಗಳೊಬ್ಬಳು ಮೃತಪಟ್ಟ ಸಂಬಂಧವಾಗಿ ಮೋಟಾರನ್ನು ನಡೆಸುತ್ತಿದ್ದ ಸಬ್ ಇನ್‌ಸ್ಪೆಕ್ಟರ್ ಬಿ ವಿ ಶ್ರೀಕಂಠರೆಡ್ಡಿಯವರಮೇಲೆ ಇಲ್ಲಿನ ಪೋಲೀಸರು ಮೊಕದ್ದಮೆ ಹೂಡಿರುತ್ತಾರೆ. ವಿಚಾರಣೆಯು ಇದೇ ೧೮ ನೇ ತಾ|| ಇದೆ

ಬ್ರಿಟಿಷ್ ರಾಣಿಯವರ ಪ್ರಸಾರ ಸಂದೇಶ

ಕಿರೀಟ ಧಾರಣೆ ಉತ್ಸವದ ಸಂಬಂಧವಾಗಿ ನಿನ್ನೆ ಬ್ರಿಟಿಷ್ ರಾಣಿ ಎಲಿಜಬೆತ್ತರು ಪ್ರಸಾರ ಮಾಡಿ, ಪ್ರಜೆಗಳು ತಮ್ಮಲ್ಲಿಟ್ಟಿರುವ ಭಕ್ತಿಗಾಗಿ ಅವರನ್ನು ವಂದಿಸಿ, ಆಜೀವ ಪರ್ಯಂತ ತಮ್ಮಲ್ಲಿ ಪ್ರಜೆಗಳು ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳಲು ಸದಾ ಶ್ರಮಿಸುವುದಾಗಿ ಆಶ್ವಾಸನೆಯಿತ್ತರು

ಲಂಡನ್ ಸಮಾರಂಭದಲ್ಲಿ ಕಳ್ಳರಿಗೆ ಸುಗ್ಗಿ

ಲಂಡನ್ನಿನಲ್ಲಿ ನೆನ್ನೆ ಬ್ರಿಟಿಷ್ ರಾಣಿಯವರ ಕಿರೀಟ ಧಾರಣೋತ್ಸವದಲ್ಲಿ ಭಾಗವಹಿಸಲು ವೆಸ್ಟ್‌ಮಿನ್‌ಸ್ಟರ್ ಚರ್ಚಿಗೆ ನಾರ್‌ಫೋಕಿನ ಡ್ಯೂಕ್ ಮತ್ತು ಅವರ ಪತ್ನಿಯವರು ಹೋಗಿದ್ದಾಗ, ಅವರ ಮನೆಯಲ್ಲಿ ೩೦ ಸಾವಿರ ಪೌಂಡು ಬೆಲೆಯ ಆಭರಣಗಳು ಕಳುವಾದುವೆಂದು ಹೇಳಲಾಗಿದೆ. ಡ್ಯೂಕರ ಪತ್ನಿಯು ೧೯೫೦ ರಲ್ಲಿ ೫೦ ಸಾವಿರ ಪೌಂಡು ಬೆಲೆಯ ನಗಗಳನ್ನು ಕಳೆದುಕೊಂಡಿದ್ದರೆಂದು ಗೊತ್ತಾಗಿದೆ

ಇಂಡೋನೇಷ್ಯಾ ಸರ್ಕಾರದ ರಾಜೀನಾಮೆ

ಇಂಡೋನೇಷ್ಯದ ಮಂತ್ರಿಮಂಡಲವು ನಿನ್ನೆ ರಾತ್ರಿ ಅಧ್ಯಕ್ಷ ಸುಕರ್ನೋರವರಿಗೆ ರಾಜೀನಾಮೆಯನ್ನು ಅರ್ಪಿಸಿದುದಾಗಿಯೂ, ಅದನ್ನು ಅಧ್ಯಕ್ಷರು ಅಂಗೀಕರಿಸಿದರೆಂದೂ ವರದಿಯಾಗಿದೆ

ಹೋಟೇಲು ಮಾಲೀಕರ ದಸ್ತಗಿರಿ

ನೆಲ್ಲೂರಿನಲ್ಲಿರುವ ಬೃಂದಾವನ ಹೋಟೇಲಿನ ಮಾಲೀಕರಾದ ರಾಮಸ್ವಾಮಿ ಅಯ್ಯರ್ ಎಂಬುವನು ತನ್ನ ಕೆಲಸಗಾರರಿಬ್ಬರಿಗೆ ಬರೆ ಹಾಕಿದನೆಂದು ಅವನನ್ನು ದಸ್ತಗಿರಿ ಮಾಡಲಾಗಿದೆ

ಸುಗ್ಗಿ ಆಜ್ಞೆಯ ರದ್ದು

ಮೈಸೂರು ಸರ್ಕಾರದವರು ೧೯೫೩ರ ಭತ್ತದ ಸಂಗ್ರಹಣಾ ಆಜ್ಞೆಯನ್ನು ಮೊನ್ನೆಯಿಂದ ರದ್ದು ಮಾಡಿರುತ್ತಾರೆ. ಈ ಆಜ್ಞೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ತನಿಖೆ, ಮೊಕದ್ದಮೆ ಮುಂತಾದುವುಗಳು ಆಜ್ಞೆಯ ರದ್ದಿಯಾತಿಗೆ ಒಳಪಡುವುದಿಲ್ಲ

○ ಲಕ್ನೋವಿನ ದೊಡ್ಡ ಅಂಚೆ ಕಛೇರಿಯಲ್ಲಿ ಕಾಗದ ಬಟವಾಡೆ ಮಾಡುವ ೨೦೦ ಕೆಲಸಗಾರರು ಹಠಾತ್ತನೆ ಸ್ಟ್ರೈಕ್ ಹೂಡಿದುದರಿಂದ ನಗರದಲ್ಲಿ ನೆನ್ನೆ ಬಟವಾಡೆಯೇ ಆಗಲಿಲ್ಲವೆಂದು ವರದಿಯಾಗಿದೆ

ದಕ್ಷಿಣ ಭಾರತ ಖಾದಿ ಕಾರ್ಯಕರ್ತರ ಸಮ್ಮೇಳನ

ಶಂಕರರಾವ್ ದೇವ್‌ರವರ ಪ್ರಾರಂಭ ಭಾಷಣ

ಬೆಂಗಳೂರು ೨

ದಕ್ಷಿಣ ಭಾರತ ಚರಖಾ ಸಂಘದ ಕಾರ್ಯಕರ್ತರ ಸಮ್ಮೇಳನವು ನೆನ್ನೆ ಇಲ್ಲಿ ಸೇರಿತು. ಅಖಿಲ ಭಾರತ ಸರ್ವ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವ್‌ರವರು ಆರಂಭೋತ್ಸವವನ್ನು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ, ರಚನಾತ್ಮಕ ಕಾರ್ಯಕ್ರಮಗಳ ಮಹತ್ವವನ್ನು ವಿವರಿಸಿ, ಮಹಾತ್ಮಾ ಗಾಂಧಿಯವರ ಈ ಕಾರ್ಯಕ್ರಮದಿಂದ ಸ್ವಾತಂತ್ರ್ಯವು ಲಭ್ಯವಾಯಿತೆಂದು ಹೇಳಿದರು. ರಚನಾತ್ಮಕ ಕಾರ್ಯಕ್ರಮದ ಅಗತ್ಯವಿಲ್ಲ ಎಂಬ ಭಾವನೆ ಉಗವಾಗಿರುವುದೆಂದೂ ಗಾಂಧಿಜಿಯವರು ಕೇವಲ ರಾಜಕೀಯ ಸ್ವಾತಂತ್ರ್ಯದಲ್ಲಿ ಮಾತ್ರ ಆಸಕ್ತರಾಗಿದ್ದ ಸ್ವರಾಜವನ್ನು ಜನತಾ ರಾಜವನ್ನಾಗಿ ಮಾಡಲು ಉದ್ದೇಶ್ಯ ಹೊಂದಿದ್ದರೆಂದೂ ತಿಳಿಸಿದರು. ಅದಕ್ಕಾಗಿ ಅವರು ಸರ್ವೋದಯ ಸಮಾಜವನ್ನು ಸ್ಥಾಪಿಸಲು ಬಯಸಿ ಹೊರಟಿದ್ದರೆಂದೂ, ವಿನೋಬಾಜಿಯವರ ಭೂದಾನ ಯಜ್ಞವು ಸ್ವಾತಂತ್ರ್ಯವನ್ನು ... ಮಾಡುವರಲ್ಲಿ ... ಆಗಿರುವುದೆಂದೂ ಹೇಳಿದರು. ಖಾದಿ ಬೆಳವಣಿಗೆ ... ಮಾಡಬೇಕೆಂದೂ, ವಿದೇಶಿ ... ಅನೇಕರಿಗೆ ಉದ್ಯೋಗ ... ಶ್ರೀ ದೇವ್‌ರವರು ಹೇಳಿದರು.

ಶಿಕ್ಷಣ ತರಗತಿಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯ ... ನೇ ನಂಬರು ಮನೆಯಲ್ಲಿ (ಶ್ರೀ ಶ್ರೀನಿವಾಸ ... ದಿಂದ) ತಾರೀಖು ... ನೇ ಗುರುವಾರದಿಂದ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲು ತರಗತಿಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ತರಗತಿಗಳನ್ನು ಏರ್ಪಡಿಸಿದೆ. ಹಿಂದಿ ಮತ್ತು ಸಂಗೀತ ಪಬ್ಲಿಕ್ ಪರೀಕ್ಷೆಗೆ ತರಗತಿಗಳನ್ನೂ ಏರ್ಪಡಿಸಿದೆ ಮತ್ತು ... ವರ್ಷದ ಒಳಗಿನ ಮಕ್ಕಳಿಗೆ ಶಿಶುವಿಹಾರದ ಪಾಠಗಳನ್ನು ನಡೆಸಲಾಗುತ್ತೆ. ವಿದ್ಯಾರ್ಥಿಗಳೂ ಮತ್ತು ಪೋಷಕರೂ ... ವಿವರಗಳನ್ನು ... ದಲ್ಲಿ ವಿಚಾರಿಸಬಹುದು.

ಪ್ರಿಂಟಿಂಗ್ ಮಿಷನುಗಳ ರಿಪೇರಿ

ಸಿಲಿಂಡರ್, ಟ್ರೆಡಲ್, ಕಟಿಂಗ್, ಪ್ಲೇಟ್ ಸ್ಟಿಚಿಂಗ್ ಮುಂತಾದ ಪ್ರಿಂಟಿಂಗ್‌ಗೆ ಸಂಬಂಧಪಟ್ಟ ಸಕಲ ಮಿಷನ್ನುಗಳ ರಿಪೇರಿಗಳನ್ನೂ ಮತ್ತು ಎಟಿಂಗ್ ಕೆಲಸಗಳನ್ನೂ ತೃಪ್ತಿಕರವಾಗಿಯೂ ಮತ್ತು ಜಾಗ್ರತೆಯಾಗಿಯೂ ಮಾಡಿಕೊಡಲಾಗುತ್ತೆ.

G. K. O.,

C/o ಕ ವಿ ವಿ ಪ್ರೆಸ್, ಮೈಸೂರು

ಇಸ್ರೇಲಿನಲ್ಲಿ ಪಿತೂರಿಗಾಗಿ ಅನೇಕರ ದಸ್ತಗಿರಿ

ಕಳೆದ ...ನೆ ತಾ|| ಇಸ್ರೇಲ್ ಸರ್ಕಾರದ ವಿದ್ಯಾ ಇಲಾಖಾ ಕಟ್ಟಡವನ್ನು ಇಬ್ಬರು ಯುವಕರು ಸಿಡಿಸಲೆತ್ನಿಸಿದ ಸಂಬಂಧವಾಗಿ ತನಿಖೆ ನಡೆದು ಪಿತೂರಿಗಾರರ ರಹಸ್ಯ ಸಂಸ್ಥೆಯೊಂದನ್ನು ಪತ್ತೆ ಹಚ್ಚಿ ಅಲ್ಲಿನ ಪೊಲೀಸರು ಅದಕ್ಕೆ ಸಂಬಂಧಿಸಿದ ಅನೇಕರನ್ನು ದಸ್ತಗಿರಿ ಮಾಡಿರುತ್ತಾರೆ. ಅವರುಗಳ ಬಳಿ ಇದ್ದ ಹಲವು ಆಯುಧಗಳನ್ನೂ ವಶಪಡಿಸಿಕೊಳ್ಳಲಾಗಿದೆ.

ಮೋಟಾರು ಕೆಲಸಗಾರರ ಸಭೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ನಾಳೆ ಸಂಜೆ ೬ ಗಂಟೆಗೆ ಸಂಘದ ಕಛೇರಿಯಲ್ಲಿ ಸೇರುವುದು. ೫೩-೫೪ ನೇ ಸಾಲಿಗೆ ಸಂಘದ ಅಧಿಕಾರ ವರ್ಗ ಮತ್ತು ಕಾರ್ಯ ನಿರ್ವಾಹಕ ಸಮಿತಿಯ ಚುನಾವಣೆಯು ಅಲ್ಲಿ ನಡೆಯುವುದು. ಎಲ್ಲ ಸದಸ್ಯರೂ ಬರುವಂತೆ ಕೋರಲಾಗಿದೆ.

ಭೋಜನ ಕೂಟ

ಮೈಸೂರು ಪೌರಸಭೆಯ ಸದಸ್ಯರಾದ ಶ್ರೀ ... ಗೌಡಯ್ಯನವರು ತಮ್ಮ ಕುಮಾರಿ ... ಶಾರದಮ್ಮನವರ ವಿವಾಹದ ಸಂದರ್ಭದಲ್ಲಿ ನೆನ್ನೆ ರಾತ್ರಿ ತಮ್ಮ ... ಛತ್ರದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು. ೩೦೦ ಜನ ಅತಿಥಿಗಳು ಆಗಮಿಸಿದ್ದರು.

ದೇವನೂರು ವಾಲಿಬಾಲ್ ಪಂದ್ಯ

ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ಇದೇ ತಿಂಗಳು ೧೨ನೇ ತಾ|| ... ವಾಲಿಬಾಲ್ ಪಂದ್ಯವನ್ನು ನಡೆಸಲಾಗುವುದು. ಈ ಸಂಬಂಧವಾಗಿ ನಾಜಿ ಶಾಸನ ಸಭಾಸದಸ್ಯ ಶ್ರೀ ಡಿ ಎಂ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಭಾಗವಹಿಸಲಿಚ್ಛಿಸುವ ಟೀಮುಗಳು ೫ ರೂ. ಪ್ರವೇಶ ಶುಲ್ಕದೊಡನೆ ಅರ್ಜಿಗಳನ್ನು ಕಳುಹಿಸುವಂತೆಯೂ, ಎಲ್ಲಾ ವ್ಯವಹಾರಗಳನ್ನೂ ಸಮಿತಿ ಕಾರ್ಯದರ್ಶಿ ಶ್ರೀ ಡಿ ಎಂ ಗುರುಸಿದ್ದಯ್ಯನವರೊಡನೆ ಬೆಳೆಸುವಂತೆಯೂ ಕೋರಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಆರ್ ರಂಗಸ್ವಾಮಿ ... ಕೀರ್ತನೆ ... ಎಂ ಪಿ ಸೂರ್ಯನಾರಾಯಣ ... ಸಂಜೆ ... ಎಂ ಪಿ ... ಗೀತೆಗಳು ... ಗೀತೆಗಳು ... ಎಂ ಪಿ ... ಕೊಳಲು ... ತಬಲ ... ಕಾರ್ಯಕ್ರಮ ... ಆರ್ ರಂಗ ... ಭಾರತ ... ರಾತ್ರಿ ...

ADMISSIONS RECEIVED

for

Middle School Classes

and

Madras Matriculation Classes

Please enquire at

CITY TUTORIAL COLLEGE,

Near V V Market Mysore

ಮುಖಂಡರಿಗೆ ಸತ್ಕಾರ ಸಮಾರಂಭ

ನೀಲಗಿರಿ ೩೦

ಕಳೆದ ೨೮ ನೇ ತಾ|| ಸಾಯಂಕಾಲ ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನೂ ಮತ್ತು ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರನ್ನೂ ಸನ್ಮಾನಿಸಲು ಮಾರ್ಡರ್ನ ಹೋಟೇಲಿನ ಶ್ರೀ ಕೆ ಸೀತಾರಾಮರಾಯರು ದಾಸಪ್ರಕಾಶದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ದಾಸಪ್ರಕಾಶದ ಉದ್ಯಾನದಲ್ಲಿ ಉಪಾಹಾರವಾದ ನಂತರ ಶ್ರೀ ಕೆ ಸೀತಾರಾಮರಾಯರು ಸ್ವಾಗತ ಭಾಷಣ ಮಾಡುತ್ತಾ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖ್ಯ ಅತಿಥಿಗಳು ಮಾಡಿದ ದೇಶ ಸೇವೆಯನ್ನೂ ಮತ್ತು ಸರ್ವತೋಮುಖ ಸಾಧನೆಗಳನ್ನೂ ನೆನಪಿಗೆ ತಂದರು. ಶ್ರೀ ಹನುಮಂತಯ್ಯನವರು ಮೈಸೂರಿನಲ್ಲಿ ಆಹಾರ ನಿಯಂತ್ರಣವನ್ನು ತೆಗೆದು ಹಾಕಿದುದಲ್ಲದೆ, ವಿದ್ಯಾಕ್ಷೇತ್ರದಲ್ಲಿ ಸಹಾ ಮಾಡಿದ ಅನೇಕ ಸುಧಾರಣೆಗಳನ್ನು ವಿವರಿಸಿದರು. ಶ್ರೀ ನಿಜಲಿಂಗಪ್ಪನವರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನರುಜ್ಜೀವನಗೊಳಿಸಿದರೆಂದೂ, ಜಸ್ಟಿಸ್ ಮಿಶ್ರಾರವರ ವರದಿ ಪ್ರಕಾರ ಬಳ್ಳಾರಿ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವ ಕೇಂದ್ರ ಸರಕಾರದ ನಿರ್ಧಾರಕ್ಕೆ ಶ್ರೀ ನಿಜಲಿಂಗಪ್ಪನವರೇ ಮುಖ್ಯ ಕಾರಣರೆಂದೂ ಅವರು ತಿಳಿಸಿದರು.

ಶ್ರೀ ಹನುಮಂತಯ್ಯನವರು ಮತ್ತು ಶ್ರೀ ನಿಜಲಿಂಗಪ್ಪನವರು ಸೂಕ್ತ ಉತ್ತರವಿತ್ತು ಶ್ರೀ ಸೀತಾರಾಮರಾಯರ ಸೇವೆಯು ಪ್ರಶಂಸಾರ್ಹವೆಂದು ಹೇಳಿದರು.

PALACE MARAMATH DEPARTMENT.

ABSTRACT NOTIFICATION

Dated 25-5-1953

Sealed Tenders for constructing 7 houses in the Premises of Gajashala School Building on Ramanuja Road, Mysore, estimated to cost Rs 71,600/- will be received till 3-30 P. M. on 11th June 1953.

Please see Notification published on the NOTICE BOARD of the Palace Engineer's office for details.

H K PANDITHARADHYA,
Palace Engineer.
Mysore,
Dated 26-5-1953.

Edited, Printed and Published by A R Nagarajan at Sadhvi Press, D. Subbiah Road, Mysore.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಅಂದ	ರೂ ಗ
ಕಡಲೆಕಾಯಿ	೨೧-೪-೦	೩೧.೦ ೦
ಎಳ್ಳು	೪೦-೨-೦	೪೧ ೦ ೦
ಹರಳುಬೀಜ	೩೯-೦ ೦	೪೮.೪ ೦
ತೆಂಗಿನಕಾಯಿ	೨೭-೧೨-೦	೨೮-೮-೦
ಹುರುಳಿ	೧೩-೮-೦	೧೫.೦ ೦
ಅವರೆ	೩೫ ೦.೦	
ಹೆಸರು	೩೩-೮-೦	೩೬-೪ ೦
ಹಲಸಂದೆ	೪೯.೦ ೦	೩೦-೨ ೦
ಉದ್ದು	೩೬ ೨-೦	೩೦ ೧೪-೦
ಮೆಣಸಿನಕಾಯಿ	೧೪.೧೦ ೦	೨೩ ೧೪.೦
ಸೀಗೆಕಾಯಿ	೫-೧೨-೦	೫-೧೪-೦
ಹುಣಸೇಹಣ್ಣು	೬-೧-೦	೬-೧೪ ೦
ತೆಂಗಿನಕಾಯಿ	೧೧೦-೮-೦	೨೫೪.೦ ೦

ಜಿಲ್ಲಾ ಇನಾಂದಾರರುಗಳ ಸಭೆ

ಮೈಸೂರು ಜಿಲ್ಲಾ ಇನಾಂದಾರರ ಸಭೆಯು ಇದೇ ೮ ನೇ ತಾ|| ಸಂಜೆ ೬ ಗಂಟೆಗೆ ವೈಸರಾಯ್ ರಸ್ತೆಯಲ್ಲಿರುವ ಗಂಧನಹಳ್ಳಿ ಜಹಗೀರ್‌ದಾರ್ ಶ್ರೀ ಕೃಷ್ಣರಾಯರ ಭವನದಲ್ಲಿ ನಡೆಯುವುದು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರೊಡನೆ ಜಿಲ್ಲಾ ಸಂಘದವರ ನಿಯೋಗ ಹೋಗುವ ಮುಂಚೆ ಇನಾಂ ರದ್ದಿನ ಶಾಸನದ ಮಸೂದೆಯ ಬಗ್ಗೆ ಇನಾಂದಾರರ ಅಭಿಪ್ರಾಯವನ್ನು ಪಡೆಯಲು ಉದ್ದೇಶಿಸಲಾಗಿದೆ. ಈ ಜಿಲ್ಲೆಯಲ್ಲಿ ೨೦೦ ಕ್ಕೂ ಮೇಲ್ಪಟ್ಟು ಇನಾಂ ಗ್ರಾಮಗಳಿರುವುವೆಂದೂ, ಜಿಲ್ಲಾ ಸಂಘಕ್ಕೆ ೫೦ ಮಂದಿಯಾದರೂ ಸದಸ್ಯರಾಗಲು ಅರ್ಹರಾಗಿರುವರೆಂದೂ, ಅವರೆಲ್ಲರು ಸಂಘಕ್ಕೆ ಸೇರಿ ಅದನ್ನು ಬಲಪಡಿಸಬೇಕೆಂದೂ ಕೋರಿ, ಸಂಘದ ಪರವಾಗಿ ಕಾರ್ಯ ಸಮಿತಿ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಪ್ರಾರ್ಥಿಸಿರುತ್ತಾರೆ.

ಸ್ವೀಕಾರ

ರಾಜಧಾನಿಯ ತೀರ್ಥ ಮತ್ತು ಕಂಪೆನಿಯವರು ಪ್ರಕಟಿಸುತ್ತಿರುವ ಕನ್ನಡ ಮಾಸ ಪತ್ರಿಕೆಯಾದ ಕಥಾಲೋಕದ ೧೧ ನೇ ಸಂಚಿಕೆಯನ್ನು ಸಾಭಾರ ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ.

ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯಗಳ ಮತ್ತು ಶ್ಯಾಲಕನಹಳ್ಳಿ ಸಾಹುಕಾರ್ ಶ್ರೀ ಸಿದ್ದಲಿಂಗಯ್ಯನವರ ಸಂಸ್ಕೃತ ವಿದ್ಯಾರ್ಥಿ ನಿಲಯದ ವಾರ್ಷಿಕ ವರದಿಯನ್ನು ಸ್ವೀಕರಿಸಿರುತ್ತೇವೆ.

ಒಲಂಪಿಯಾ ಟಾಕೀಸ್

4—6—53 ರಿಂದ . ಪ್ರತಿದಿನ ೩ ಆಟಗಳು ಥಿಯೇಟರ್ ಪಿಕ್ಚರ್ಸ್‌ರವರ

ಸಬ್ಜ ಬಾಗ್

ಶಾಸ್ತ್ರಿ - ತಿಪ್ಪಿ, ಶೇಖರ್ ಓಂ ಪ್ರಕಾಶ್

||ಶ್ರೀ||

ಜಗದಂಬಾ ಶಿಶುವಿಹಾರ

585. ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ. ಕಿಂಡರ್ ಗಾರ್ಟನ್, ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಪದ್ಧತಿಗಳನ್ನನುಸರಿಸಿ, ನಿಜಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು. ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಬೇಕಾಗುವುದರಿಂದ ಶಾಲೆ ಪ್ರವೇಶ ಬಯಸುವ ತಾಯಿತಂದೆಗಳು ತಮ್ಮ ಮಕ್ಕಳನ್ನು ಕೂಡಲೆ ಸೇರಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,
ಪ್ರೆಸಿಡೆಂಟ್

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೪-೬ ೧೯೫೩ [ಸಂಚಿಕೆ ೨೩೧

ಹೈದರಾಬಾದಿನ ವಿಭಜನೆಗೆ ನಿರ್ಣಯ

ಕರ್ನಾಟಕ ಪ್ರಾಂತ ರಚನೆ ತಡವಾಗಕೂಡದು

ಕೆ ಆರ್ ಕಾರಂತ್‌ರವರ ಭಾಷಣ

ಮೈಸೂರು ೪

ಮಂಗಳೂರಿನ ಪ್ರಜಾ ಸಮಾಜವಾದಿ ಪಕ್ಷದ ನಾಯಕರೂ, ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಕೆ ಆರ್. ಕಾರಂತ್‌ರವರು ನೆನ್ನೆ ಟೌನ್ ಹಾಲ್ ಮೈದಾನದಲ್ಲಿ ಭಾಷಣ ಮಾಡುತ್ತಾ, ಕರ್ನಾಟಕ ಪ್ರಾಂತವನ್ನು ರಚಿಸಲು ತಡವಾಗಕೂಡದೆಂದೂ, ಹಾಗೆ ತಡವಾಗಲು ಜನರು ಅವಕಾಶವೀಯಬಾರದೆಂದೂ ತಿಳಿಸಿದರು

ಕರ್ನಾಟಕ ಪ್ರಾಂತ ರಚನೆಗೆ ಗಾಂಧಿಜಿಯವರು ಸಮ್ಮತಿಸಿದ್ದರೆಂದೂ, ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬರುವ ಮುಂಚೆ ಭಾಷಾ ಪ್ರಾಂತಗಳ ರಚನೆಗೆ ಒಪ್ಪಿದ್ದು, ಈಗ ಕರ್ನಾಟಕ ಪ್ರಾಂತ ರಚನೆ ಬಗ್ಗೆ ಜನರಿಗೆ ವಂಚನೆ ಮಾಡಿರುವುದಾಗಿಯೂ ಅವರು ಹೇಳಿದರು

ಕರ್ನಾಟಕ ಏಕೀಕರಣದ ಬಗ್ಗೆ ಮೈಸೂರಿನವರ ಅಭಿಪ್ರಾಯವು ಅವಶ್ಯಕವೆಂದು ನೆಹರೂ ರವರ ಹೇಳಿದುದನ್ನು ಶ್ರೀ ಕಾರಂತರು ಪ್ರಸ್ತಾಪಿಸಿ, ಈಚೆಗೆ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಅಗರ್‌ವಾಲ್‌ರವರು ಆಡಿದ ಮಾತುಗಳನ್ನು ಖಂಡಿಸಿದರು ಮೈಸೂರು ಕಾಂಗ್ರೆಸ್ ಸಮಿತಿ, ಶಾಸನ ಸಭೆ ಮತ್ತು ಸರ್ಕಾರಗಳ ಅಭಿಪ್ರಾಯವು ಏಕೀಕರಣದ ಬಗ್ಗೆ ಅವಶ್ಯಕವೆಂದು ಅಗರ್‌ವಾಲ್‌ರವರು ತಿಳಿಸಿದ್ದುದಾಗಿಯೂ, ಮೈಸೂರಿನಲ್ಲಿ ಕಾಂಗ್ರೆಸ್ಸಿನವರೇ ಅಲ್ಲದೆ, ಇತರ ಪ್ರಜಾ ವರ್ಗದವರೂ ಇರುವರೆಂದೂ ತಿಳಿಸಿ ಕರ್ನಾಟಕ ರಾಜ್ಯ ಸ್ಥಾಪನೆ ಬಗ್ಗೆ ಚಳವಳಿಗೆ ಬೆಂಬಲ ನೀಡಬೇಕೆಂದು ಕೋರಿದರು

ದೇಶದ ರಾಜಕೀಯ ಪಕ್ಷಗಳನ್ನು ಕುರಿತು ಅವರು ವಿಮರ್ಶೆ ಮಾಡುತ್ತಾ, ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತು ಪ್ರಜಾ ಸಮಾಜವಾದಿ ಗುಂಪುಗಳಲ್ಲಿ ಯಾವುದು ಉತ್ತಮವೆಂಬುದನ್ನು ಜನರು ಪರಿಶೀಲಿಸಬೇಕೆಂದೂ, ಸಾಮಾನ್ಯ ಜನರ ಹಿತವನ್ನು ತಮ್ಮ ಪಕ್ಷವು ವಹಿಸಿರುವುದರಿಂದ ಅದಕ್ಕೆ ಬೆಂಬಲನೀಡಬೇಕೆಂದೂ ತಿಳಿಸಿದರು ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಭಾಷಣ ಮಾಡಿ, ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿದರು

ಗಡಿನಾಡಿನಲ್ಲಿ ಜಿಲ್ಲಾ ಬೋರ್ಡುಗಳ ರದ್ದು

ಪಾಕಿಸ್ತಾನದ ಗಡಿನಾಡು ಪ್ರಾಂತ್ಯದಲ್ಲಿರುವ ಎಲ್ಲಾ ಜಿಲ್ಲಾ ಬೋರ್ಡುಗಳನ್ನೂ ಇದೇ ಅಕ್ಟೋಬರ್ ೧ ರಿಂದ ರದ್ದುಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ ಬೋರ್ಡುಗಳ ಕೆಲಸವನ್ನು ಸರ್ಕಾರದ ನಾನಾ ಇಲಾಖೆಗಳೇ ವಹಿಸಿಕೊಳ್ಳುವುವು

ಮುಖ್ಯ ಮಂತ್ರಿಯವರಿಗೆ ಬಿನ್ನವತ್ತಳೆ

ಟಿ ನರಸೀಪುರ ೧

ಇಲ್ಲಿನ ಪೌರಸಭೆಯ ವಿಶೇಷ ಅಧಿವೇಶನವು ಕಳೆದ ೨೯ ನೇ ತಾ॥ ನಡೆದು ಇದೇ ೯ ನೇ ತಾ॥ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸಲು ನಿರ್ಧರಿಸಿತು

ಕುದುರೆ ಜೂಜಿನ ಫಲಿತಾಂಶ

ಮೈಸೂರು ೪

ನೆನ್ನೆ ನಡೆದ ಕುದುರೆ ಜೂಜಿನ ಫಲಿತಾಂಶಗಳು ಈ ರೀತಿ ಇವೆ —

೧ ಪುಟ್ಟಣ್ಣ ಪ್ಲೇಟ್ . ವಿನ್— ಪ್ರೈಸ್ ಫ್ಲವರ್ ೧೬-೮-೦, ಪ್ಲೇಸ್ ೧೪-೦ ೦

೨ ಪ್ಯಾಲೇಸ್ ಪ್ಲೇಟ್ · ವಿನ್— ಸ್ಯಾಂಟನಿಲಾ ೧೨-೦ ೦, ಪ್ಲೇಸ್ ೭-೮-೦ ಸಿಂಟ್ರ ೧೬-೦-೦, ಕಿಂಗ್ಸ್ ತ್ರೀಂ ೯-೦-೦

೩ ಎಸ್ ಐ ಟಿ ಸಿ ಕಪ್ ವಿನ್— ಅಟೋ ಬಾನ್ಸ್ ೧೧ ೮-೦, ಪ್ಲೇಸ್ ೭-೮ ೦ ಫಾರ್‌ಸಂ ೨೬-೮-೦

೪ ವಿಕ್ಟರಿ ಪ್ಲೇಟ್ ವಿನ್—ನಿಕ್‌ನ್ಯಾಕ್ ೩೧ ೦ ೦, ಪ್ಲೇಸ್ ೧೧ ೦-೦ ಎಲಿಮಂಕೊ ೮-೮-೦, ಪ್ರೆಸ್ ಆನ್ ೭ ೦-೦

೫ ದಳವಾಯ್ ಕಪ್ · ವಿನ್— ಸ್ಪೆಕ್ಟ್ರಂ ೩೩-೮-೦, ಪ್ಲೇಸ್ ೧೦ ೮-೦ ರಾಜಮುಕುಟ್ ೯ ೦-೦, ಫ್ಲಟ್‌ರಿಂಗ್ ೭-೦-೦

ಟ್ರಿಬಲ್ ಇವೆಂಟಿನಲ್ಲಿ ಒಟ್ಟು ೧೬೮೧೫ ರೂ ಗಳು ೧೩ ಜನರಿಗೆ ತಲಾ ೯೮೭ ರೂ ನಂತೆ ಹಂಚಿಕೆಯಾಗಿರುತ್ತೆ

ವಿಷ ಪೂರಿತ ಮಾವಿನಹಣ್ಣು ತಿಂದು ೮ ಜನರ ಮರಣ

ಜೋಧಪುರದಿಂದ ೨೦೦ ಮೈಲಿ ದೂರದ ಒಂದು ಹಳ್ಳಿಗೆ ವಿಹಾರಾರ್ಥವಾಗಿ ಹೋಗಿದ್ದ ೪೦ ಜನರು ಮಾವಿನ ಹಣ್ಣುಗಳನ್ನು ತಿಂದರೆಂದೂ, ನಂತರ ಎಲ್ಲರಿಗೂ ಹೊಟ್ಟೆಯಲ್ಲಿ ಸಂಕಟವುಂಟಾಗಿ, ೮ ಮಂದಿ ಕೂಡಲೇ ಮೃತಪಟ್ಟರೆಂದೂ, ಉಳಿದವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ, ಅವರೆಲ್ಲರ ಸ್ಥಿತಿಯೂ ಚಿಂತಾಜನಕವಾಗಿರುವುದೆಂದೂ ವರದಿಯಾಗಿದೆ ಮಾವಿನ ಹಣ್ಣುಗಳಿಗೆ ಯಾರೋ ವಿಷಹಾಕಿರಬೇಕೆಂದು ಶಂಕಿಸಲಾಗಿದೆ

ಕೊರಿಯಾ ಸಂಧಾನ ಪ್ರತಿನಿಧಿಯ ರಾಜೀನಾಮೆ

ಕೊರಿಯಾ ಯುದ್ಧ ಮುಕ್ತಾಯದ ಸಂಬಂಧವಾಗಿ ನಡೆಯುತ್ತಿರುವ ಮಾತುಕತೆಗಳಲ್ಲಿ ದಕ್ಷಿಣ ಕೊರಿಯಾ ಪರವಾಗಿ ಭಾಗವಹಿಸುವ ಪ್ರತಿನಿಧಿ ಮೇಜರ್ ಜನರಲ್ ಚೋಯಿ ಡುಕ್ ಶಿನ್ ರವರು ರಾಜೀನಾಮೆ ಸಲ್ಲಿಸಿರುವರೆಂದು ತಿಳಿದುಬಂದಿದೆ

ಮುಖ್ಯೋಪಾಧ್ಯಾಯಿನಿಯ ಭೀಕರ ಕೊಲೆ

ಬೆಂಗಳೂರು ೩

ಇಲ್ಲಿನ ಸಿವಿಲ್ ಪ್ರದೇಶದ ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯವರಾದ ೪೬ ವರ್ಷದ ಶ್ರೀಮತಿ ಈನಿಡ್ ಜಾಯ್‌ಡ್ರೆಟನ್‌ರವರನ್ನು ಯಾರೋ ಅವರ ಭವನದಲ್ಲಿ ನೆನ್ನೆ ರಾತ್ರಿ ಭಯಂಕರ ರೀತಿಯಲ್ಲಿ ಕೊಲೆ ಮಾಡಿದರೆಂದು ವರದಿಯಾಗಿದೆ

ಆ ರಾತ್ರಿ ಆಕೆಯು ಎಲಿಜಬೆತ್ ರಾಣಿಯವರ ಕಿರೀಟ ಧಾರಣೋತ್ಸವದ ಸುದ್ದಿಯನ್ನು ರೇಡಿಯೋವಿನಲ್ಲಿ ಕೇಳುತ್ತಿದ್ದರೆಂದೂ, ಮನೆಯಲ್ಲಿ ಆಕೆಯೊಬ್ಬರು ಮಾತ್ರ ವಾಸವಿದ್ದರೆಂದೂ ಹೇಳಲಾಗಿದೆ ನೆನ್ನೆ ಬೆಳಿಗ್ಗೆ ಸೇವಕನು ಆಕೆಗೆ ಚಹಾ ಕೊಡಲು ಹೋದಾಗ ಮುಂದಿನ ಬಾಗಿಲು ತೆರೆದಿತ್ತೆಂದೂ, ಒಳಗಡೆ ಗೋಡೆ ಅಂಚಿನಲ್ಲಿ ಆಕೆಯು ಶರೀರವು ಬಿದ್ದಿದ್ದು, ರಕ್ತದ ಕೋಡಿಯು ಹರಿದಿದ್ದಿತೆಂದೂ ಹೇಳಲಾಗಿದೆ ಸುದ್ದಿಯು ಪೋಲೀಸರಿಗೆ ಮುಟ್ಟಲಾಗಿ ಅವರು ಶೋಧನೆ ನಡೆಸಿದರು ಮನೆಯಲ್ಲಿ ಅಲ್ಮೇರಾ, ಮೇಜುಗಳಲ್ಲಿ ಕಾಗದ ಪತ್ರಗಳೂ, ಸಾಮಾನುಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುದು ಕಾಣಬಂದಿತು ಆಕೆಯ ಕತ್ತಿನ ಮೇಲೂ, ಕೈ ಕಾಲುಗಳ ಮೇಲೂ ಪೆಟ್ಟುಗಳು ಬಿದ್ದಿದ್ದುವಲ್ಲದೆ ಕೈ ಬೆರಳುಗಳೂ ಸಹ ಕತ್ತರಿಸಲ್ಪಟ್ಟಿದ್ದುವು ಹಂತಕನೊಡನೆ ಅವರು ಹೋರಾಡಿರಬಹುದೆಂದು ಊಹಿಸಲಾಗಿದೆ

ಕಾಲೇಜು ಉ॥ ಪ್ರೊಫೆಸರರಿಗೆ ಅಮೆರಿಕಾ ವಿದ್ಯಾರ್ಥಿ ವೇತನ

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ರಾಜ್ಯ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಬಷೀರ್ ಹುಸೇನರವರಿಗೆ ಅಮೆರಿಕದ ಫುಲ್‌ಬ್ರೈಟ್ ಮತ್ತು ಸ್ಮಿತ್ ಮಂಡ್ಟ್ ವಿದ್ಯಾರ್ಥಿ ವೇತನವು ದೊರೆತಿದೆ. ಅವರು ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ವಿಶೇಷ ವ್ಯಾಸಂಗ ಮಾಡುವರು ಅವರ ಸ್ಥಳ ಮೂಡಿಗೆರೆ

○ ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಹುಣಿಸೆ ಮರಗಳಿಂದ ಸೇಂದಿ ಇಳಿಸಲು ಅನುಮತಿ ದೊರೆತಿದೆ.

ಹೈದರಾಬಾದು ಸಂಸ್ಥಾನದ ವಿಭಜನೆ ಅವಶ್ಯಕ

ಹೈದರಾಬಾದು ಸಂಸ್ಥಾನದ ಕನ್ನಡ, ತೆಲುಗು ಮತ್ತು ಮಹಾರಾಷ್ಟ್ರ ಪ್ರದೇಶಗಳನ್ನು ಪಕ್ಕದ ಆಯಾ ಭಾಷಾ ಪ್ರದೇಶಗಳೊಡನೆ ಐಕ್ಯಗೊಳಿಸುವುದು ಸರಿಯೆಂದು ಹೈದರಾಬಾದು ಪ್ರದೇಶ ಕಾಂಗ್ರೆಸ್ ಸಮಿತಿಯು ಸರ್ವಾನುಮತದಿಂದ ನಿರ್ಧರಿಸಿರುತ್ತದೆ

ಗೌರೀಶಂಕರ ಪತ್ತಿದವನಿಗೆ ಜೀವಾವಧಿ ವೇತನ

ಗೌರೀಶಂಕರ ಶಿಖರವನ್ನೇರಿದವರ ಪೈಕಿ ನೇಪಾಳ ಪರ್ವ, ಟೇನ್‌ಸಿಂಗನಿಗೆ ಜೀವಾವಧಿ ಎಂಬ ವೇತನ ಕೊಡುವ ವಿಷಯವನ್ನು ನೇಪಾಳ ಸರ್ಕಾರದವರು ಆಲೋಚಿಸುತ್ತಿರುವರು

ಜೆ. ಸಿ. ಕುಮಾರಪ್ಪನವರ ರಾಜೀನಾಮೆ

ಅಖಿಲ ಭಾರತ ಸರ್ವ ಸೇವಾ ಸಂಘದ ಸದಸ್ಯತ್ವಕ್ಕೆ ಡಾ॥ ಜೆ ಸಿ ಕುಮಾರಪ್ಪನವರು ಆರೋಗ್ಯ ನಿಮಿತ್ತ ರಾಜೀನಾಮೆ ಕೊಟ್ಟಿರುತ್ತಾರೆ ಗ್ರಾಮ ಉದ್ಯೋಗ ಪತ್ರಿಕೆಯ ಸಂಪಾದಕತ್ವವನ್ನೂ ಅವರು ಬಿಟ್ಟಿರುತ್ತಾರೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ವಿನ್‌ಸ್ಟನ್ ಚರ್ಚಿಲರ ಅಧ್ಯಕ್ಷತೆಯಲ್ಲಿ ನೆನ್ನೆ ಆರಂಭವಾಯಿತು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಸಮ್ಮೇಳನ ನಡೆಯುವಂತೆ ಚರ್ಚಿಲರು ಸೂಚಿಸಿರುವುದನ್ನು ಪ್ರಧಾನಿಗಳು ಅನುಮೋದಿಸಿರುತ್ತಾರೆ ರಷ್ಯದ ರಾಯಭಾರಿ ಮಾಲಿಕ್ ರವರು ಚರ್ಚಿಲರನ್ನು ಭೇಟಿ ಮಾಡಿ, ಬರ್ಮುಡಾ ಸಮ್ಮೇಳನಕ್ಕೆ ರಷ್ಯದ ವಿರೋಧವನ್ನು ವ್ಯಕ್ತಪಡಿಸಿದರೆಂದು ಗೊತ್ತಾಗಿದೆ ಚರ್ಚಿಲರು ನೆಹರೂರವರಿಗೆ ನೆನ್ನೆ ಮಧ್ಯಾಹ್ನ ಔತಣವಿತ್ತರು

ಗಾಳಿ, ಮಳೆಯಿಂದ ಮರಗಳುರುಳಿದವು

ಕೊಳ್ಳೇಗಾಲ, ಅಗರ, ಮಾಂಬಳ್ಳಿ, ಮೂಗೂರು ಈ ಪ್ರಾಂತಗಳಲ್ಲಿ ಮೊನ್ನೆ ವಿಪರೀತ ಗಾಳಿಯಿಂದ ಕೂಡಿದ ಮಳೆಯ ಪರಿಣಾಮವಾಗಿ ಅನೇಕ ಮರಗಳು ಮತ್ತು ದೀಪದ ಕಂಬಗಳೂ ಉರುಳಿದುವೆಂದು ವಾರ್ತೆ ಬಂದಿದೆ ಟಿ ನರಸೀಪುರದಲ್ಲಿ ಇತ್ತೀಚೆಗೆ ಸುಮಾರಾದ ಮಳೆಯಾಗಿರುತ್ತೆ

ಕಾಡಾನೆಗಳಿಂದ ಹಾನಿ

ಹೆಗ್ಗಡದೇವನಕೋಟೆ ತಾಲ್ಲೂಕು ಅಂತರಸಂತೆ ಬಳಿ ಬೇಗೂರು ಕಾಡುಗಳಲ್ಲಿ ಗುತ್ತಿಗಾಡಿನ ಜನರ ಸರ್ವೆಗಾಗಿ ಬಂದಿದ್ದ ಕೇಂದ್ರ ಸರ್ಕಾರದ ನೌಕರರ ಒಂದು ತಂಡವು ಕೆಲವು ದಿನಗಳ ಹಿಂದೆ ಗಾಡಿಯಲ್ಲಿ ವಾಪಸು ಬರುತ್ತಿದ್ದಾಗ ರಸ್ತೆ ಪಕ್ಕದಲ್ಲಿ ೫ ಆನೆಗಳ ಒಂದು ಹಿಂಡನ್ನು ಕಂಡು ಎತ್ತುಗಳು ಹೆದರಿದುವೆಂದೂ, ಅಷ್ಟರಲ್ಲೇ ಅರಣ್ಯಗಳ ಗಾಡರ್ ಒಂದು ಆನೆಗೆ ಗುಂಡಿನಿಂದ ಹೊಡೆದನೆಂದೂ ಕೊಂಚ ಹೊತ್ತಿನ ಮೇಲೆ ಅವು ಹೊರಟು ಹೋದವೆಂದೂ ಗೊತ್ತಾಗಿದೆ.

ಬಹುಮಾನ ವಿನಿಯೋಗ ಸಮಾರಂಭ

ಮೈಸೂರು ೩

ರಾಜಧಾನಿಯ ಮಹಿಳಾ ಸದನದ ಸಂಸ್ಥಾಪಕರಾದ ದಿವಂಗತ ಶ್ರೀ ಎಂ ಡಿ ಗೋಪಾಲಾಚಾರ್ಯರ ಸ್ಮಾರಕ ಪ್ರಥಮ ಬಹುಮಾನ ವಿನಿಯೋಗ ಸಮಾರಂಭವು ಕಳೆದ ಶುಕ್ರವಾರ ಇಲ್ಲಿನ ವಕೀಲರಾದ ಶ್ರೀ ಎಂ ಲಕ್ಷ್ಮೀನಾರಾಯಣರಾವ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಮೂಹಿಕ ಪ್ರಾರ್ಥನೆಯಾದನಂತರ ಸದನದ ಅಧ್ಯಕ್ಷೆ ಪಿ ಎಸ್ ತಂಗಮ್ಮನವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿಯವರಾದ ಶ್ರೀ ಹೆಚ್ ಎನ್ ಜಾನಕಿಯವರು ಸ್ಮಾರಕ ಸ್ಪರ್ಧೆಗಳ ವರದಿಯನ್ನು ಓದಿದರು ಸಂಸ್ಥೆಗಳ ಬಹುಮಾನಿತ ಪ್ರತಿನಿಧಿ... ದೇವರ ನಾಮ... ಹಾಡಲ್ಪಟ್ಟಿತು

ಅನಂತರ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು ... ಒಳಗಿನ ... ಮನೋಹರ ... ಕಾಣಿಕೆ ... ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ಮಹಿಳಾ ಸದನ ... ಪ್ರತಿನಿಧಿಗಳು ಎಲ್ ಜಾನಕಿ ... ವಿಜಯಾಬಾಯಿ ... ಬಹುಮಾನವ ಪಡೆದ ... ಸಮಾಜದ ಶ್ರೀ ... ವಿಶೇಷ ... ಭಾರತೀಯ ಸ್ತ್ರೀ ... ಪ್ರಸಿದ್ಧಿ ... ಎಲ್ಲರಿಗೂ ಒಂದು ... ಸ್ತ್ರೀ ಸಮಾಜದ ... ದೇಶದ ಮಹಿಳೆಯರು ... ಹಾಗು ಸ್ತ್ರೀ ಸ್ವಾತಂತ್ರ್ಯವನ್ನು ನಾವು ಗಳಿಸಿದ್ದೇವಾದರೂ ಮಹಾತ್ಮಾ ಗಾಂಧಿ ... ಸ್ವಾತಂತ್ರ್ಯ ... ಆಗಲಿಲ್ಲವೆಂದೂ ... ರಾಜಲಕ್ಷ್ಮಮ್ಮನವರ ವಂದನಾರ್ಪಣೆಯ ನಂತರ ... ಮುಕ್ತಾಯವಾಯಿತು

SRI GANESHA TALKIES

From ... 2 Days

The Elusive Pimpernel

(Technicolor)

Starring David Niven

On 7-6-53 ... Daily ...

ANNA KARENINA

Edited, Printed and Published by A R Nagaraja at Sadhvi Press, D Subbiah Road, Mysore

ಕಿರೀಟ ಧಾರಣೆಯಲ್ಲಿ ಸಂಸ್ಕೃತದಲ್ಲಿ ಪ್ರಾರ್ಥನೆ

ಕಿರೀಟ ಧಾರಣ ಕಾಲದಲ್ಲಿ ಆರ್ಚ್ ಬಿಷಪ್ಪರು ... ಶಾಸ್ತ್ರೋಕ್ತವಾದ ವಾಕ್ಯಗಳನ್ನು ಉಚ್ಚರಿಸುತ್ತಿದ್ದಾಗ ನೆರೆದಿದ್ದವರ ಪೈಕಿ ಒಬ್ಬರು ಸಂಸ್ಕೃತ ಶ್ಲೋಕಗಳನ್ನು ಹೇಳಿ ರಾಣಿಯವರಿಗೆ ದೇವರ ಆಶೀರ್ವಾದವನ್ನು ಕೋರುತ್ತಿದ್ದುದು ಕೇಳಿಬಂದಿತು ಶಿವ ಮತ್ತು ವಿಷ್ಣು ಮುಂತಾದ ಎಲ್ಲಾ ಹಿಂದೂ ದೇವರುಗಳ ಹೆಸರಿನಲ್ಲೂ ರಾಣಿಯವರಿಗೆ ಶುಭವನ್ನು ಕೋರಲಾಯಿತು

ತಿರುವಾಂಕೂರಿನಲ್ಲಿ ನೀರಿಗೆ ಕ್ಷಾಮ

ತಿರುವಾಂಕೂರ ಸಂಸ್ಥಾನದ ಕೊಟ್ಟಾಯಂ ಚಂಗನಾಚೇರಿ ತಿರುವಲ್ಲಾ ಮುಂತಾದ ಕಡೆ ಕುಡಿಯುವ ನೀರಿಗೆ ಕ್ಷಾಮವು ಉಂಟಾಗಿದೆ ಮಳೆಯಿಲ್ಲದೆ ಆ ಪ್ರದೇಶದಲ್ಲಿ ಪೈರು ಪಚ್ಚೆಗಳೆಲ್ಲಾ ಒಣಗಿವೆ ವಿದ್ಯುಚ್ಛಕ್ತಿ ಸರಬರಾಜು ನಿಂತುಹೋಗಿ ಅನೇಕ ಕೈಗಾರಿಕೆಗಳಲ್ಲಿ ಕೆಲಸ ನಡೆಯುತ್ತಿಲ್ಲ

ಮಕ್ಕಳ ಪ್ರದರ್ಶನದ ಬಹುಮಾನ ವಿನಿಯೋಗ

ರಾಜಧಾನಿಯ ಗುಣಾಂಬಾ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಸಂಸ್ಥೆ ಮತ್ತು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಪ್ರಯತ್ನದಲ್ಲಿ ಕಳೆದ ವರ್ಷ ನಡೆದ ಮಕ್ಕಳ ವಾರದ ಸ್ಪರ್ಧೆಯಲ್ಲಿ ಜಯಶೀಲರಾದ ಮಕ್ಕಳಿಗೆ ಇದೇ ೬ ನೇ ತಾ|| ಸಂಜೆ ೬ ಘಂಟೆಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ವಾಣೀವಿಲಾಸ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಕೇಂದ್ರದಲ್ಲಿ ಬಹುಮಾನಗಳ ವಿನಿಯೋಗ ಮಾಡುವರು

PALACE MARAMATH DEPARTMENT

ABSTRACT NOTIFICATION

D ... 26 5 1953

Sealed Tenders for constructing 7 houses in the Premises of Gajashala School Building on Ramanuja Road, Mysore, estimated to cost Rs 71,600/ will be received till 3 30 P M on 11th June 1953

Please see Notification published on the Notice Board of the Palace Engineer's office for details

H K PANDITHARADHYA,
Palace Engineer
Mysore
Dated 26.5.1953

ಕೊಳಕು ಕೇರಿಗಳನ್ನು ತೆಗೆಯಲು ಕೇಂದ್ರದ ಸಹಾಯ

ಬೆಂಗಳೂರು ೩

ಇಲ್ಲಿನ ಕಾರ್ಪೊರೇಷನ್ನಿನವರು ನೆನ್ನೆ ಕೇಂದ್ರ ಮಂತ್ರಿ ಸ್ವರಣ್ ಸಿಂಗ್‌ರವರಿಗೆ ಇತ್ತ ಸತ್ಕಾರ ಸಮಾರಂಭದಲ್ಲಿ ಅವರು ಭಾಷಣ ಮಾಡಿ, ಪೌರಸಭೆ ಮತ್ತು ಸಂಸ್ಥಾನದ ಸರ್ಕಾರ ಇವರು ಸೇರಿ ನಗರದಲ್ಲಿರುವ ಕೊಳಕು ಕೇರಿಗಳನ್ನು ತೆಗೆಯಲು ಸರಿಯಾದ ಒಂದು ಯೋಜನೆಯನ್ನು ತಯಾರಿಸಿದರೆ ಅದಕ್ಕೆ ಕೇಂದ್ರ ಸರ್ಕಾರದವರು ಸಹಾಯ ನೀಡುವುದಾಗಿ ತಿಳಿಸಿದರು

೩ ಕಣ್ಣು ೨ ಬಾಯಿಯುಳ್ಳ ಶಿಶು

ತಿರುಚಂಗೋಡಿನ ಒಂದು ಆಸ್ಪತ್ರೆಯಲ್ಲಿ ೩೦ ವರ್ಷದ ಒಬ್ಬ ಹೆಂಗಸಿಗೆ ಕಳೆದ ೩೦ನೇ ತಾ|| ೩ ಕಣ್ಣುಗಳು ಮತ್ತು ಎರಡು ಬಾಯಿಗಳುಳ್ಳ ಒಂದು ಹೆಣ್ಣು ಶಿಶುವು ಜನನವಾಗಿರುತ್ತದೆ ಹುಟ್ಟಿದ ಕೂಡಲೆ ಅದು ಸತ್ತಿತು ಮಗುವಿನ ಹಣೆಯ ಮೇಲೆ ೧ ಕಣ್ಣು ಇದ್ದಿತು ೨ ಬಾಯಿಗಳು ಅಕ್ಕಪಕ್ಕಗಳಲ್ಲಿದ್ದು ಮಧ್ಯದಲ್ಲಿ ಪ್ರತ್ಯೇಕಿಸಲ್ಪಟ್ಟಿದ್ದವು ಮಗುವನ್ನು ಅಲ್ಲಿನ ಆಸ್ಪತ್ರೆಯಲ್ಲಿ ಇಡಲಾಗಿದೆ

ಗೌರೀಶಂಕರ ಶಿಖರದ ಆರೋಹಣ

ನೇಪಾಳದವನಾದ ೩೯ ವರ್ಷದ ಟೆನ್ಸಿಂಗ್ ಮತ್ತು ನ್ಯೂಜಿಲೆಂಡಿನ ಹಿಲಾರಿ ಎಂಬುವ ಕರ್ನಲ್ ಹಂಟ್ ಗುಂಪಿನ ಪರ್ವತಾರೋಹಿಗಳು ಕಳೆದ ೨೯ ನೇ ತಾ|| ಗೌರೀಶಂಕರ ಶಿಖರವನ್ನು ಹತ್ತಿದರು ಟೆನ್ಸಿಂಗರಿಗೆ ಇದು ೯ ನೇ ಪ್ರಯತ್ನ ಇವರು ಶಿಖರವನ್ನು ಹತ್ತಿದ ಸುದ್ದಿಯನ್ನು ಬ್ರಿಟಿಷ್ ರಾಣಿಯವರಿಗೂ ಅಮರಿಕಾ ಅಧ್ಯಕ್ಷರಿಗೂ ತಿಳಿಸಲಾಯಿತು

SRI GAYATHRI

TALKIES

From 5 6 53 For 2 days

R K O's

TWO TICKETS TO BROADWAY

(In Technicolor)

With — Gonet Leigh

— NEXT CHANGE —

PRE-HISTORIC WOMEN

೫೦ ಅಡಿ ಎತ್ತರದಿಂದ ಬಿದ್ದರೂ ಅಪಾಯವಿಲ್ಲ

ಕೊಡೈಕೆನಾಲ್ ಬೆಟ್ಟದ ರಸ್ತೆ ಅಂಚಿನಲ್ಲಿ ಮೊನ್ನೆ ಸಂಜೆ ಬರುತ್ತಿದ್ದ ಮೋಟಾರೊಂದು ೫೦ ಅಡಿ ಕೆಳಗೆ ಬಿದ್ದಿತಾದರೂ, ಕೆಳಗಡೆ ಹಲಸಿನ ಮರವೊಂದು ಇದ್ದುದರಿಂದ ಕಾರಿನಲ್ಲಿದ್ದ ಒಬ್ಬ ಹೆಂಗಸು, ಆಕೆಯ ಇಬ್ಬರು ಮಕ್ಕಳು ಮತ್ತು ಇನ್ನೊಬ್ಬರು ಅಪಾಯದಿಂದ ಪಾರಾದರೆಂದು ವರದಿಯಾಗಿದೆ ಹೆಂಗಸು ಮದ್ರಾಸಿನ ಕಲಾವಿದ ಪಾಲರಾಜ್ ಎಂಬುವರ ತಾಯಿ ಕೊಡೈಕೆನಾಲಿಗೆ ೧೭ ಮೈಲಿ ದೂರದಲ್ಲಿ ಹೋಗುತ್ತಿದ್ದ ಬಸ್ಸೊಂದರ ಡ್ರೈವರ್ ಮತ್ತು ಪ್ರಯಾಣಿಕರು ಅವರಿಗೆ ಸಹಾಯ ಮಾಡಿ, ಅಪಾಯವಿಲ್ಲದ ಸ್ಥಳಕ್ಕೆ ಸಾಗಿಸಿದರು ಹೆಂಗಸನ್ನೂ, ಆಕೆಯ ಒಬ್ಬ ಮಗನನ್ನೂ ಆಸ್ಪತ್ರೆಗೆ ಸಾಗಿಸಲಾಗಿದೆ ಕಾರಿಗೆ ವಿಶೇಷ ನಷ್ಟ ಆಗಿದೆ

ಪ್ಯಾಲೇಸ್ ನಗರದ ಆರಂಭೋತ್ಸವ

ರಾಜಧಾನಿಯಲ್ಲಿ ೮ ನರಸೀಪುರದ ರಸ್ತೆ ಬಳಿ ಮೈಸೂರು ಹೌಸ್ ಪ್ರದೇಶದಲ್ಲಿರುವ ಸರ್ಕಾರದ ವಿದ್ಯುಚ್ಛಕ್ತಿ ಕಾಲೋನಿಯಾದ ಪ್ಯಾಲೇಸ್ ನಗರದ ಆರಂಭೋತ್ಸವವನ್ನು ನಾಳೆದಿನ ಸಂಜೆ ೬ ಗಂಟೆಗೆ ಮುಖ್ಯ ಮಂತ್ರಿಯವರು ನೆರವೇರಿಸುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಂಗಳವಾದ್ಯ ... ೧ ೩೦ ... ವಾದ್ಯಗಳು ಸಂಜೆ ೫ ೩೦ ... ೬ ೩೦ ಎಂ. ಜಾರ ... ೭ ೦೦ ಗಾನ ವಿಹಾರ ... ಶಾಂತಾರಾಮ್, ಹಿಂದಿ ಗೀತೆ ... ಎಂ ಎಸ್ ಗೋವಿಂದಸ್ವಾಮಿ, ಗಾಯನ

ಒಲಂಪಿಯಾ ಟಾಕೀಸ್

4-6-53 ರಿಂದ ಪ್ರತಿದಿನ ೩ ಆಟಗಳು ಫಿಲ್ಮಿಸ್ತಾನ್ ಪಿಕ್ಚರ್‌ರವರ

ಸಬ್ಜ ಬಾಗ್

ಪಾತ್ರ - ಶಿಮ್ಮಿ, ಕಿಶೋರ್ ಓಂ ಪ್ರಕಾಶ್

ಚಾಮುಂಡೇಶ್ವರಿ

ಟಾಕೀಸ್

ಪ್ರತಿ ದಿನ ಮೂರು ಆಟಗಳು

5 6 53 ರಿಂದ ಅಮೋಘ ಪ್ರಾರಂಭ

ಪ್ರತಿಜ್ಞೆ

ರಿವೆಂಜ್ ಎಂಬ ಇಂಗ್ಲಿಷ್ ಕಥೆಯ ಚಿತ್ರದ ತಮಿಳು ಅನುವಾದ

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

5-6-53 ರಿಂದ • ಅಮೋಘ 2 ನೇ ವಾರ : ದಿನವೂ 3 ಆಟಗಳ.

ಜೆಮಿನಿಯವರ ತಮಿಳು ಚಿತ್ರ

ಚಂದ್ರಲೇಖ

ಮ್ಯಾಟಿನಿ ಮಧ್ಯಾಹ್ನ 2-30 ಕ್ಕೆ

ಪಾತ್ರ — ಎಂ. ಕೆ. ರಾಧಾ, ಟಿ ಆರ್ ರಾಜಕುಮಾರಿ, ರಂಜನ್, ಸುಂದರಿಬಾಯಿ ಎನ್ ಎಸ್ ಕೃಷ್ಣನ್, ಟಿ. ಎ ಮಧುರಂ ಮುಂತಾದವರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಬಿ. ಎ., ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ರೋ॥ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧) ಶುಕ್ರವಾರ ತಾ-೩ ೧೯೫೩ [ಸಂಚಿಕೆ ೨೩೨

ಕೊರಿಯಾ ಸಂಧಾನದ ಬಗ್ಗೆ ಆಶಾಭಾವನೆ

ಮನೆಗಂದಾಯದ ಬಗ್ಗೆ ಪ್ರತಿಭಟನಾ ಸಭೆ

ಮೈಸೂರು ೫

ರಾಜಧಾನಿಯಲ್ಲಿ ಮನೆಗಂದಾಯ ಹೆಚ್ಚಿಸಿರುವ ಸಂಬಂಧದಲ್ಲಿ ಪೌರರ ಪ್ರತಿಭಟನೆ ಸೂಚಿಸಲು ಟೌನ್‌ಹಾಲ್ ಮೈದಾನದಲ್ಲಿ ನಾಳಿದ್ದು ಸಂಜೆ ೬॥ ಗಂಟೆಗೆ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ ಈ ರೀತಿ ಹೆಚ್ಚಿಸಲು ಕಾರಣಭೂತರಾದ ಪೌರಸಭಾ ಸದಸ್ಯರುಗಳಿಂದ ರಾಜೀನಾಮೆ ಕೊಡಿಸಲು ಓಟರುಗಳು ಇದೇ ತಿಂಗಳು ೧೪ನೇ ತಾ॥ ಬೆಳಿಗ್ಗೆ ೮ ಗಂಟೆಗೆ ಪ್ರಭುದೇವಾ ಟಾಕೀಸ್ ಬಳಿ ಸಭೆ ಸೇರಿ, ಪೌರಸಭಾ ಸದಸ್ಯರ ಮನೆ ಮುಂಭಾಗಕ್ಕೆ ಮಂಗಳವಾದ್ಯ ಸಮೇತ ಮೆರವಣಿಗೆಯಲ್ಲಿ ತೆರಳಿ, ಅವರು ರಾಜೀನಾಮೆ ಕೊಟ್ಟು ತಮ್ಮ ಸ್ಥಾನಗಳನ್ನು ಖಾಲಿ ಮಾಡುವಂತೆ ಸೂಚಿಸುವ ಬಹಿರಂಗ ಪತ್ರವನ್ನು ಅವರಿಗೆ ಕೊಡುವ ಏರ್ಪಾಡಾಗಿದೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವ ಪ್ಲಕಾರ್ಡುಗಳನ್ನೂ ಅಲ್ಲಿ ಪ್ರದರ್ಶಿಸಲಾಗುವುದು 'ಪ್ರತಿನಿಧಿಗಳ ದುರಾಡಳಿತವನ್ನು ಖಂಡಿಸಬೇಕಾದರೆ ರಾಜೀನಾಮೆ ಕೊಡಿಸುವುದೇ ರಾಜಮಾರ್ಗ ರಾಜೀನಾಮೆ ಕೊಡದಿದ್ದರೆ ಪ್ರಜಾ ನ್ಯಾಯಾಲಯದಲ್ಲಿ (ಬಹಿರಂಗ ಸಭೆ) ಅವಿಧೇಯರೆಂದು ನಿರ್ಣಯಿಸಿ ಸಾರಬೇಕು ಅವಿಧೇಯರಾದ ಕೌನ್ಸಿಲರಿಗೆ ಯಾವಾಗಲೂ ಓಟು ಕೊಡಕೂಡದೆಂದು ಸಾರಬೇಕು ಇವೇ ಮುಂತಾದ ೮ ವಿಧದ ನಾನಾ ಪ್ಲಕಾರ್ಡುಗಳನ್ನು ತೆಗೆದುಕೊಂಡು ಹೋಗಲಾಗುವುದು

ಚಿನ್ನದ ನಾಣ್ಯ ಕೊಡುವುದಾಗಿ ೧ ಲಕ್ಷ ರೂ ಮೋಸ

ಬೊಂಬಾಯಿಯ ಒಬ್ಬ ವ್ಯಾಪಾರಿಯು ಚಿನ್ನದ ಗಿನಿ ನಾಣ್ಯ ಪಡೆಯುವ ಆಶೆಯಿಂದ ಯಾರೋ ಕೆಲವರಿಗೆ ೧ ಲಕ್ಷ ರೂ ಕೊಟ್ಟನೆಂದೂ, ಅದಕ್ಕೆ ಪ್ರತಿಯಾಗಿ ಅವರುಗಳು ಕೊಟ್ಟ ಒಂದು ಚೀಲವನ್ನು ಮನೆಗೆ ತೆಗೆದುಕೊಂಡು ಹೋಗಿ ನೋಡಲಾಗಿ ಅದರಲ್ಲಿ ಬರೀ ತಾಮ್ರದ ನಾಣ್ಯಗಳು ಮಾತ್ರ ಇದ್ದುದಾಗಿಯೂ ಗೊತ್ತಾಗಿದೆ ಈ ಸಂಬಂಧವಾಗಿ ೭ ಜನರ ದಸ್ತಗಿರಿಯಾಗಿದೆ

ಟ್ರೇಟನ್ನರ ಮರಣದ ಬಗ್ಗೆ ಪೋಲೀಸು ಪ್ರವೀಣರ ತನಿಖೆ

ಬೆಂಗಳೂರಿನ ಬಿಷಪ್ ಕಾಟನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ, ರೋಸ್ಮ ಮಿಸ್ ಟ್ರೇಟನ್ನರವರ ರಹಸ್ಯ ಮರಣದ ಸಂಬಂಧವಾಗಿ ಹಂತಕನನ್ನು ಕಂಡುಹಿಡಿಯಲು ಗುಪ್ತ ಪೋಲೀಸರ ಪ್ರವೀಣರನ್ನೂ, ಕೈ ಬೆರಳು ಮತ್ತು ಕಾಲು ಗುರುತುಗಳನ್ನು ಪರೀಕ್ಷಿಸಲು ಲಂಡನ್ನಿನಲ್ಲಿ ತರಪೇತು ಹೊಂದಿದವರನ್ನೂ ನೇಮಿಸಲಾಗಿರುವುದೆಂದು ಹೇಳಲಾಗಿದೆ ಮದ್ರಾಸಿನಿಂದ ಪೋಲೀಸು ನಾಯಿಗಳನ್ನು ಕರೆಸಲು ಪ್ರಯತ್ನ ನಡೆದು ಕಾಲವಿಳಂಬವಾದುದರಿಂದ ಮದ್ರಾಸಿನವರು ಕಳುಹಿಸಲಿಲ್ಲ ಹಿಂದೊಮ್ಮೆ ಟ್ರೇಟನ್ನರ ಕೈ ಚೀಲವನ್ನು ಅಪಹರಿಸಿಕೊಂಡು ಹೋದವನನ್ನು ಪೋಲೀಸರು ಅರಸುತ್ತಿರುವರೆಂದು ಹೇಳಲಾಗಿದೆ

೯ನೇ ತಾರೀಕು ಪರೀಕ್ಷಾ ಫಲಿತಾಂಶ

ಮೈಸೂರು ೫

ಮೈಸೂರು ವಿಶ್ವ ವಿದ್ಯಾಲಯದ ಬಿ ಎ, ಬಿ ಎಸ್‌ಸಿ, ಇಂಟರ್ ಮೀಡಿಯೇಟ್, ಬಿ ಇ, ಎಲ್ ಎಸ್ ಎಲ್ ಸಿ ಮುಂತಾದ ಪರೀಕ್ಷೆಗಳ ಫಲಿತಾಂಶಗಳು ಇದೇ ೯ನೇ ತಾ॥ ಪ್ರಕಟವಾಗುವುವು

ಮೊರಾದಾಬಾದಿನಲ್ಲಿ ವಿದ್ಯಾರ್ಥಿಗಳಿಂದ ಲೂಟಿ

ದೆಹಲಿಯಿಂದ ಮೊರಾದಾಬಾದಿಗೆ ಮೊನ್ನೆ ಆಗಮಿಸಿದ ಒಂದು ರೈಲಿನಲ್ಲಿ ಪರೀಕ್ಷಾ ಫಲಿತಾಂಶಗಳಿಂದ ಕೂಡಿದ ಯಾವ ವರ್ತಮಾನ ಪತ್ರಿಕೆಯೂ ಬರಲಿಲ್ಲವೆಂದು ಅಸಮಾಧಾನಗೊಂಡ ಸುಮಾರು ೧೫೦೦ ಮಂದಿ ವಿದ್ಯಾರ್ಥಿಗಳು ನಿಲ್ದಾಣದಲ್ಲಿ ಗಲಭೆ ಮಾಡಿ ಅಲ್ಲಿದ್ದ ಹಿತ್ತಾಳೆ ಪಾತ್ರೆ ಅಂಗಡಿಯನ್ನೂ, ೧೦ ಬೇಲು ರೇಷ್ಮೆ ಬಟ್ಟೆಗಳನ್ನೂ ಲೂಟಿ ಮಾಡಿ, ಟೀ ಅಂಗಡಿಯ ಗಾಜಿನ ಶೀಟುಗಳನ್ನು ಒಡೆದು ನಾಶ ಪಡಿಸಿ, ಅವರನ್ನು ತಡೆಯಲು ಬಂದ ಸಬ್ ಇನ್ಸ್‌ಪೆಕ್ಟರನ್ನೂ ಹೊಡೆದರೆಂದು ವರದಿಯಾಗಿದೆ ಪೋಲೀಸು ಪಡೆ ಬರುವುದರೊಳಗೆ ಅವರೆಲ್ಲರೂ ಚದುರಿದ್ದರೆಂದೂ, ರೇಷ್ಮೆ ಬಟ್ಟೆ ಕದ್ದ ಒಬ್ಬ ವಿದ್ಯಾರ್ಥಿಯನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ

ಚನ್ನಗಿರಿ ತಾ॥ ಹಳ್ಳಿಯಲ್ಲಿ ಭಾರಿ ಹೊಡೆದಾಟ

ಶಿವಮೊಗ್ಗಾ ಜಿಲ್ಲೆ ಚನ್ನಗಿರಿ ತಾಲ್ಲೂಕು ನಲ್ಲೂರು ಗ್ರಾಮದಲ್ಲಿ ಎರಡು ಪಂಗಡಗಳಿಗೆ ಮೊನ್ನೆ ಭಾರಿ ಹೊಡೆದಾಟ ನಡೆದು ೧೭ ಮಂದಿಗೆ ಗಾಯವಾಗಿರುತ್ತದೆ ಪರಿಸ್ಥಿತಿಯು ಈಗ ಹತೋಟಿಗೆ ಬಂದಿರುವುದಾಗಿ ಗೊತ್ತಾಗಿದೆ ಪಟೇಲ್ ಹಾಲಪ್ಪ ಎಂಬುವರಿಗೆ ತೀವ್ರ ಗಾಯಗಳಾಗಿವೆಯೆಂದೂ ೩೦ ಜನರ ದಸ್ತಗಿರಿಯಾಗಿದೆಯೆಂದೂ ತಿಳಿದುಬಂದಿದೆ.

ಬಿಸಿಲಿನ ತಾಪದಿಂದ ೨೪ ಮರಣ

ಬಿಹಾರಿನಲ್ಲಿ ಕಳೆದವಾರ ಬಿಸಿಲು ತಾಪದಿಂದ ೨೪ ಜನರು ಮಡಿದರೆಂದು ವರದಿಯಾಗಿದೆ

ಪಟೇಲರಿಂದ ಅಕ್ರಮದ ಬಗ್ಗೆ ದೂರು

ಕ್ರಮ ಕೈಗೊಳ್ಳದಿದ್ದರೆ ಕಂದಾಯ ಕೊಡಲು ನಿರಾಕರಣೆ

ಕಡೂರಿನ ಚಿಕ್ಕಬಸೂರು ಗ್ರಾಮದ ಪಟೇಲ ಶ್ರೀ ಸಿ ಬೇಲೂರಯ್ಯನವರು ನಡೆಸಿರುವರೆಂದು ಹೇಳಲಾದ ಹಲವು ಅಕ್ರಮಗಳನ್ನು ವಿಚಾರಣೆ ಮಾಡದಿದ್ದರೆ ಕಂದಾಯವನ್ನು ಕೊಡುವುದಿಲ್ಲವೆಂದು ಗ್ರಾಮದ ಜನರು ಅಮಲ್ದಾರರಿಗೆ ತಿಳಿಸಿರುವರೆಂದು ವರದಿಯಾಗಿದೆ ಹಳ್ಳಿಯ ಜನರಿಂದ ಕಟ್ಟಿದ್ದ ರಾಗಿಯನ್ನು ಸರ್ಕಾರಕ್ಕೆ ವಸೂಲು ಮಾಡಿಕೊಂಡು ಬಂದ ೪೫೦ ರೂ ಗಳನ್ನು ಪಟೇಲರು ಇದುವರೆಗೂ ಪಾವತಿ ಮಾಡಿಲ್ಲವೆಂದೂ ತಮಗೆ ಅಧಿಕಾರವಿಲ್ಲದಿದ್ದರೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಲು ಅವಕಾಶವಿತ್ತು ನಿವೇಶನಗಳಿಗಾಗಿ ೩೦೦ ರೂ ನಂತೆ ಅವರು ವಸೂಲು ಮಾಡಿರುವುದಾಗಿಯೂ ಹೇಳಲಾಗಿದೆ ಇತರ ಅಕ್ರಮಗಳ ಬಗ್ಗೆಯೂ ದೂರು ಕೊಡಲಾಗಿದೆ

ಅತ್ಯಂತ ಭಾರಿ ಅಣು ಬಾಂಬಿನ ಪರೀಕ್ಷೆ

ಅಮೆರಿಕವು ತಯಾರಿಸಿರುವ ಅತ್ಯಂತ ಭಾರಿ ಅಣು ಬಾಂಬಿನ ಪ್ರಯೋಗ ಪರೀಕ್ಷೆಯು ನೆನ್ನೆ ಮುಂಜಾನೆ ನಡೆಯಿತು ಹಿಂದೆ ನಡೆಸಿದ ಪರೀಕ್ಷೆಗಳಲ್ಲಿ ಉತ್ಪನ್ನವಾದ ಪ್ರಕಾಶಕ್ಕೆ ಎರಡರಷ್ಟು ನೆನ್ನೆ ನಡೆಸಿದುದರಲ್ಲಿ ಉಂಟಾಯಿತೆಂದು ಹೇಳಲಾಗಿದೆ

ಅಂಚೆ ಕಛೇರಿಗಳಿಗೆ ಹೊಸ ಬಣ್ಣ

ಗ್ರಾಮಾಂತರ ಪ್ರದೇಶದಲ್ಲಿರುವ ಜನರು ಅಂಚೆ ಮತ್ತು ತಂತಿ ಕಛೇರಿಗಳನ್ನು ಗುರುತು ಹಚ್ಚಲು ಸುಲಭವಾಗುವಂತೆ ಅಂಚೆ ಕಛೇರಿಗಳ ಕಟ್ಟಡಗಳಿಗೆ ಹೊಸ ಬಣ್ಣವನ್ನು ಭಾರತ ಸರ್ಕಾರದವರು ಹಾಕಿಸಲಿರುವರು

○ ಅಮೆರಿಕದಿಂದ ಪಾಕಿಸ್ತಾನಕ್ಕೆ ೭ ಲಕ್ಷ ಟನ್ ಗೋಧಿಯನ್ನು ದಾನವಾಗಿ ಕೊಡುವ ಅಂಶವನ್ನು ಅಮೆರಿಕಾ ಆಡಳಿತಗಾರರು ,ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ

ಕೊರಿಯಾ ಶಾಂತಿ ಸಂಧಾನ ಜಯಪ್ರದವೇ ?

ಕೊರಿಯಾ ಯುದ್ಧ ಮುಕ್ತಾಯದ ಮಾತುಕತೆಗಳಲ್ಲಿ ಕಮ್ಯೂನಿಸ್ಟರಿಗೂ, ವಿಶ್ವ ಸಂಸ್ಥೆಯವರಿಗೂ ಒಪ್ಪಂದವಾಗುವ ಸೂಚನೆಯಿರುವುದಾಗಿ ಗೊತ್ತಾಗಿದೆ ಹತ್ತು ದಿನಗಳ ಕೆಳಗೆ ವಿಶ್ವ ಸಂಸ್ಥೆಯವರು ಕೊಟ್ಟಿದ್ದ ಸಲಹೆಗಳನ್ನು ಕಮ್ಯೂನಿಸ್ಟರು ಅನುಮೋದಿಸಿರುವ ಚಿಹ್ನೆಗಳಿವೆ ಮಾತುಕತೆಗಳಲ್ಲಿ ದಕ್ಷಿಣ ಕೊರಿಯಾ ಪರವಾಗಿ ಭಾಗವಹಿಸಿದ್ದ ಪ್ರತಿನಿಧಿಯು ನೆನ್ನೆ ಸಭೆಗೆ ಬಂದಿರಲಿಲ್ಲವೆಂದು ಹೇಳಲಾಗಿದೆ

ಪಾಕಿಸ್ತಾನಿಗಳಿಂದ ಗೋವುಗಳ ಕಳುವು

ಪಶ್ಚಿಮ ಬಂಗಾಳದ ಪೂರ್ಣಿಯಾ ಜಿಲ್ಲೆಯ ಗಡಿ ಬಳಿ ಗವಲ್ಲಿ ಪಾಕಿಸ್ತಾನದ ಪೋಲೀಸರು ಗುಂಡು ಮೊನ್ನೆ ಹಾರಿಸಿದರು ೫ ಗೋವುಗಳನ್ನು ಅವರು ಕದ್ದುಕೊಂಡು ಹೋಗುವುದನ್ನು ಗ್ರಾಮಸ್ಥರು ಪ್ರತಿಭಟಿಸಿದುದೇ ಇದಕ್ಕೆ ಕಾರಣ

ಪರೀಕ್ಷೆಯಲ್ಲಿ ಫೇಲಾದ ೫ ವಿದ್ಯಾರ್ಥಿಗಳ ಆತ್ಮಹತ್ಯೆ

ಬೊಂಬಾಯಿಯ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದಕ್ಕಾಗಿ ಬಿಜಾಪುರದ ೫ ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರೆಂದೂ, ಆ ಪೈಕಿ ೩ ಜನರು ಅಕ್ಕಪಕ್ಕದ ನಾಲು ಮನೆಗಳಿಗೆ ನೇಣು ಹಾಕಿಕೊಂಡರೂ, ಒಬ್ಬನು ರೈಲಿನಿಂದ ಹಾರಿ ಬಿದ್ದೂ, ಓರ್ವ ವಿದ್ಯಾರ್ಥಿನಿಯು ಬಾವಿಗೆ ಹಾರಿಕೊಂಡು ಪ್ರಾಣ ಕಳೆದ ಕೊಂಡುದಾಗಿಯೂ ವರದಿಯಾಗಿದೆ

ಗೌರೀ ಶಂಕರಕ್ಕೆ ಮೌಂಟ್ ಎಲಿಜಬೆತ್ ಹೆಸರು !

ಹಿಮಾಲಯದ ಗೌರೀ ಶಂಕರವನ್ನು ಮೌಂಟ್ ಎಲಿಜಬೆತ್ ಎಂಬುದಾಗಿ ಕರೆಯುವಂತೆ ಲಂಡನ್ನಿನ ಡೈಲಿ ಟೆಲಿಗ್ರಾಫ್ ಪತ್ರಿಕೆಯು ಸೂಚಿಸಿರುತ್ತದೆ

ನೆಹರೂರವರಿಗೆ ಕೇಂಬ್ರಿಜ್ ಪ್ರಶಸ್ತಿ

ಕೇಂಬ್ರಿಜ್ ವಿಶ್ವ ವಿದ್ಯಾಲಯದಲ್ಲಿ ಹಿಂದೆ ಎಂ ಎ ಪದವಿಯನ್ನು ಪಡೆದ ನೆಹರೂರವರಿಗೆ ನೆನ್ನೆ ಅದೇ ವಿಶ್ವ ವಿದ್ಯಾಲಯದವರು ಡಾಕ್ಟರ್ ಆಫ್ ಲಾಸ್ ಗೌರವ ಪ್ರಶಸ್ತಿಯನ್ನು ಕೊಟ್ಟರು

ರವೆ, ಮೈದಾ ಹಿಟ್ಟು ಮಾಡಲು ನಿಷೇಧ

ಕ್ರಮವರಿತ ರಹದಾರಿಯಿಲ್ಲದೆ ಸ್ಥಳೀಯವಾದ ಗೋಧಿಯಿಂದ ಮೈದಾ ಹಿಟ್ಟು, ರವೆ ಮುಂತಾದುವನ್ನು ಹಿಟ್ಟಿನ ಗಿರಣಿಗಳು ತಯಾರಿಸಕೂಡದೆಂದು ಭಾರತ ಸರ್ಕಾರದವರು ನಿಷೇಧಿಸಿರುವುದಾಗಿ ಮೈಸೂರು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ

○ ಬೆಂಗಳೂರಿನ ಎ ಬಟಾಲಿಯನ್ ಮಿಲಿಟರಿ ಪಡೆಗೆ ಸೇರಲಿದ್ದ ಹೊಸಬ ಉದ್ಯೋಗಿ ಡ್ರೈವರ್ ರಾಮಚಂದ್ರಸಿಂಗ್ ಎಂಬುವನು ತುಮಕೂರು ರಸ್ತೆಯಲ್ಲಿ ೧೮ ಮೈಲಿ ದೂರವಿರುವ ಶಿಬಿರದ ಬಳಿ ಬಂದು ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ

ಟೇಕ್‌ಸಿಂಗ್ ಸಾಹಸಕ್ಕೆ ನೆಹರೂ ಪ್ರಶಂಸೆ

[illegible] ಶಿಖರವನ್ನೇರಿದ ನೇಪಾಳ ವೀರ ಟೆನ್ಸಿಂಗ್ ಮತ್ತು ನ್ಯೂಜಿಲೆಂಡಿನ ಹಿಲರಿ [illegible] ಸಾಹಸಗಳನ್ನು [illegible] ಭಾರತದ ಪ್ರಧಾನ ಮಂತ್ರಿಯ ಕೆಲಸವನ್ನು [illegible] [illegible] ಬ್ರಿಟಿಷ್ [illegible] ಭಾರಿಗೂ [illegible] ಕುಟುಂಬಗಳ ಸಂತೋಷವನ್ನು ವ್ಯಕ್ತಪಡಿಸಿರುವರು [illegible]

ನಗರದ ಉದ್ಯಾನಗಳಲ್ಲಿ ಬ್ಯಾಂಡ್

[illegible] ನಗರ ಪುರಸಭೆ [illegible] ಉದ್ಯಾನವನ [illegible] ಇಂಗ್ಲಿಷ್ [illegible] ನ್ನು [illegible] ಮತ್ತು [illegible] ಈ ರೀತಿ ವಾದ್ಯವನ್ನೇರ್ಪಡಿಸಲಾಗುವುದು

ಕೇಂದ್ರ ಮಂತ್ರಿ ಸ್ವರ್ಣ ಸಿಂಗ್

ಕೇಂದ್ರ [illegible] ಮತ್ತು [illegible] ಮಂತ್ರಿ [illegible] ಸಿಂಗ್ [illegible] ರಾಜಧಾನಿ [illegible] ನರಸಿಂಹರಾಜ [illegible] ಕಾರ್ಮಿಕರ [illegible] ಕಾರ್ಯಕ್ರಮ [illegible]

ಚಾಮುಂಡೇಶ್ವರಿ

[illegible]

[illegible] 5653 [illegible] ಪ್ರಾರಂಭ

ಪ್ರಾಣಿಕಟ್ಟುಪ್ಪಡ

[illegible] ಇಂಗ್ಲಿಷ್ ಚಿತ್ರದ ಕನ್ನಡ ಅನುವಾದ

ಪಾದಚಾರಿಯಾಗಿ ವಿಶ್ವ ಪರ್ಯಟನ

[illegible] ಎಂಬುವ [illegible] ನಡಿಗೆಯಲ್ಲಿ ಈ ಸಂಚಾರವನ್ನು ಸುತ್ತಿಕೊಂಡು ಬರಲು ಆಲೋಚಿಸಿ, ಈಗಾಗಲೇ ೩೦ ದಿನಗಳಲ್ಲಿ [illegible] ಮೈಲಿ ನಡೆದು [illegible] ಭಾರತವನ್ನು [illegible] ವರ್ಷಗಳಲ್ಲಿ ಸುತ್ತುವನೆಂದೂ ಹೇಳಲಾಗಿದೆ. ಪ್ರಪಂಚ ಪರ್ಯಟನ ಮಾಡಿ ಮುಗಿಯುವವರೆಗೆ ಅವನಿಗೆ [illegible] ವರ್ಷವಾಗುವುದೆಂದು ಅವನ ಅಂದಾಜು. ಅವನ ಒಳಗೆ [illegible] ಅವನು ನಡೆಯುವನು.

ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಕಾರ್ಮಿಕರ ಸಂಘಕ್ಕೆ ಚುನಾವಣೆ

ಬೆಂಗಳೂರಿನ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ [illegible] ಸಂಘದ [illegible] ಸ್ಥಾನಗಳಿಗೆ [illegible] ಶ್ರೀ [illegible] ನಂಬಿಯಾರ್, ಶ್ರೀ ಎಂ. ಎಸ್. ಕೃಷ್ಣ ಮತ್ತು [illegible] ನರಸಿಂಹ [illegible] ಶ್ರೀ [illegible] ರಿಗೂ ಲಭಿಸಿವೆ.

ಮುದ್ರಣ ಕೆಲಸಗಾರರ ಸಭೆ

ರಾಜಧಾನಿಯಲ್ಲಿರುವ ಮೈಸೂರು ಜಿಲ್ಲಾ ಮುದ್ರಣ ಕೆಲಸಗಾರರ ಸಂಘದ [illegible] ಸರ್ವ ಸದಸ್ಯರ ಸಭೆ [illegible] ಕೆಲಸಗಾರರ [illegible] ನಡೆಯುವುದು.

ಹರಿಕಥೆ

ರಾಜಧಾನಿಯ ಗೀತಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರ ಸ್ವಾಮಿ ದೇವಾಲಯದಲ್ಲಿ ನೆನ್ನೆಯಿಂದ ಪ್ರತಿ ದಿನ [illegible] ಗಂಟೆಯಿಂದ [illegible] ವರೆಗೆ ಶ್ರೀ [illegible] ರಾಮಕೃಷ್ಣಶಾಸ್ತ್ರಿಗಳವರು ಭಾಗವತವನ್ನು ಹರಿಕಥಾ ರೂಪವಾಗಿ ಕೀರ್ತನ ಮಾಡುವರು.

೧೧ನೇ ತಾ|| ವಿಶೇಷ ಸೆನೆಟ್ ಸಭೆ

ಮೈಸೂರು ವಿಶ್ವ ವಿದ್ಯಾನಿಲಯದ [illegible] ಸೆನೆಟ್ ಸಭೆಯು ಬೆಂಗಳೂರಿನಲ್ಲಿ ಇದೇ ತಿಂಗಳು ೧೧ ಮತ್ತು ೧೨ ನೇ ತಾ|| [illegible] ಗಂಟೆಯಿಂದ [illegible] ಸೇರುವುದು.

ADMISSIONS RECEIVED

For

Middle School Classes

and

Madras Matriculation Classes

Please enquire at

CITY TUTORIAL COLLEGE,

Near V. V. Market, Mysore

Edited, Printed and Published by A. R. Nagarajan at Sadhvi Press, D. Subbiah Road, Mysore

ಬೊಂಬಾಯಿ ಉದ್ಯಾನವನಕ್ಕೆ ಆನೆ

ಬೊಂಬಾಯಿ ನಗರದಲ್ಲಿರುವ ರಾಣಿ ಪಾರ್ಕಿನಲ್ಲಿ ಮಕ್ಕಳ ಸಂತೋಷಾರ್ಥವಾಗಿ ಇಡಲು ಅಲ್ಲಿನ ಪೌರಸಭೆಯವರು [illegible] ಸಾವಿರ ರೂ. ಕೊಟ್ಟು ಹೆಣ್ಣಾನೆಯೊಂದನ್ನು ಕೊಳ್ಳುವರು.

ತುಮಕೂರು ಬಳಿ ಗಣಿಯಲ್ಲಿ ಇಬ್ಬರ ಮರಣ

ತುಮಕೂರು ಜಿಲ್ಲೆಯ ಹೆಬ್ಬಾಗಿಲು ಬೆಟ್ಟದ ಮ್ಯಾಂಗನೀಸ್ ಗಣಿಯಲ್ಲಿ ಕಳೆದ [illegible] ಭೂಮಿಯು ಮೇಲಿಂದ ಬಿದ್ದು ಊರಿನ ರಂಗಯ್ಯ, ಶಿವಯ್ಯ ಎಂಬ ಇಬ್ಬರು ಮೃತಪಟ್ಟರೆಂದೂ, ಇತರ [illegible] ಜನರು ಗಾಯಗೊಂಡರೆಂದೂ ಗೊತ್ತಾಗಿದೆ.

ಗಿರಿಜಾ ಕಲ್ಯಾಣ ಮಹೋತ್ಸವ

[illegible] ಶ್ರೀ ಅಗಸ್ತ್ಯೇಶ್ವರ ಸ್ವಾಮಿ [illegible] ನಡೆಯುವ ಗಿರಿಜಾ ಕಲ್ಯಾಣ ಮಹೋತ್ಸವ [illegible] ವಿವಿಧ ಉತ್ಸವಗಳು [illegible] ಧಾರಾ ಮಹೋತ್ಸವವು ನಡೆಯುತು. [illegible] ತಾ|| ವರೆಗೂ ಇತರ ಉತ್ಸವಗಳು ಇವೆ.

ಬೆಂಗಳೂರಿನಲ್ಲಿ ವ್ಯಾಪಾರದ ಶಿಕ್ಷಣ ಕೇಂದ್ರ

ವ್ಯಾಪಾರದಲ್ಲಿ [illegible] ಡಿಪ್ಲೊಮಾವನ್ನು ಬೆಂಗಳೂರಿನಲ್ಲಿ [illegible] ರವರು ಏಪ್ರಿಲ್ [illegible] ಮತ್ತು ಯೋಜನಾ ಕಮಿಷನರ್ ಶ್ರೀ [illegible] ಅಯ್ಯಂಗಾರ್ ರವರು ತಿಳಿಸಿದ್ದಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಸಂಬಂಧ ಮತ್ತು [illegible] ಸಂಗೀತ [illegible] ಶ್ರೀ [illegible] ನಾಗಲಿಂಗಾಚಾರ್, ಕಥಾ ಕಾಲಕ್ಷೇಪ [illegible] ಮತ್ತು [illegible] ಅಯ್ಯಂಗಾರ್ ಕನ್ನಡ ಭಾಷಣ

Dodge, Austin, Leyland

OLD LORRIES

(In Working Order)

Gear Box, Discs etc

Other Spare Parts

SOFA MAKING

Wooden Parts, Reapers,

Scraps etc.,

Old Furniture etc

PUBLIC AUCTION

SUNDAY 7-6-53

AT

946 LAKSHMIPURAM

Terms and Details From -

CITY AUCTIONEERING CO.,

Mysore

ನೇಪಲ್ಸ್ ನಗರದಲ್ಲಿ ಗಲಭೆ

ಇಟಲಿಯ ಸುಂದರವಾದ ಪಟ್ಟಣವೆನಿಸಿರುವ ನೇಪಲ್ಸಿನಲ್ಲಿ ನೂತನ ಫ್ಯಾಸಿಸ್ಟ್ ಜನರಿಗೂ ಪೊಲೀಸರಿಗೂ ಮೊನ್ನೆ ರಾತ್ರಿ ತೀವ್ರವಾದ ಘರ್ಷಣೆಯಾಗಿ ನಗರದ ರಸ್ತೆಗಳು ಗಾಜು ಮತ್ತು ಕಲ್ಲುಗಳಿಂದ ತುಂಬಿದ ರಣರಂಗ ದೃಶ್ಯವನ್ನು ತೋರ್ಪಡಿಸುತ್ತಿದ್ದುವೆಂದು ವರದಿಯಾಗಿದೆ. ೧೦ ಮಂದಿ ಪೊಲೀಸರೂ ಸೇರಿ [illegible] ಜನರಿಗೆ ಪ್ರಥಮ ಚಿಕಿತ್ಸೆ ನಡೆಯಿತು. ೧೦ ಸಾವಿರ ಜನರು ಅಕ್ರಮ ಮೆರವಣಿಗೆಯನ್ನು ತೆಗೆದುಕೊಂಡು ಹೋದಾಗ ಗಲಭೆಯಾಯಿತು.

ಕಳೆದ ವರ್ಷ ೭ ಲಕ್ಷ ತೊಲ ಬಂಗಾರದ ಉತ್ಪತ್ತಿ

ಭಾರತದ ಗಣಿಗಳಲ್ಲಿ ಕಳೆದ ವರ್ಷ ಒಟ್ಟು ೩,೪೩,೦೨೦ ಔನ್ಸ್ ಬಂಗಾರವನ್ನು ತೆಗೆಯಲಾಯಿತೆಂದು ರಿಸರ್ವ್ ಬ್ಯಾಂಕಿನವರು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಆ. ಪೈ	ರೂ. ಗೆ
ಕಡಲೆಕಾಯಿ	೨೬ ೪ ೧	೩೦ ೬ ೨
ಎಳ್ಳು	೮೧ ೦ ೦	
ಹರಳುಬೀಜ	೩೭ ೮ ೦	೩೯ ೧೪ ೦
ಹೊಂಗೆಬೀಜ	೨೪-೪ ೦	
ಮರಾಠಿ	೪೩ ೮ ೦	೪೪ ೪ ೦
ಹೆಸರು	೬೧-೦-೦	೬೩ ೩ ೦
ಹಲಸಂದೆ	೫೨ ೧೨ ೦	೬೨ ೦೦ ೦
ಉದ್ದು	೬೮ ೧೪ ೦	೬೧ ೧೨ ೦
ತೆಂಗಿನಕಾಯಿ	೧೨೨ ೦ ೦	೨೦೫ ೦ ೦

ಹರಾಜು ನೋಟೀಸು

ಮೈಸೂರ ಒಂದನೇ ಮುನ್ಸೀಫರವರ ಕೋರ್ಟು O. S. No. 322 of 1952-53 ರ ಡಿಕ್ರಿ, ಜಾರಿ ನಂಬರು E. No. 268 of 1953 ರಲ್ಲಿ, ಘನ ಕೋರ್ಟಿನವರಿಂದ ನೇಮಿತರಾಗಿರುವ ಕೆಳಗೆ ನಮೂದಿಸಿರುವ ಕಮೀಷನರ್ ರವರಿಂದ:—

ಮೇಲ್ಕಂಡ ಕೇಸಿನಲ್ಲಿ ಜಪ್ತಿ ಆಗಿರುವ, ಬೀಟೀ ಮರದ, (ರೋಸ್ ವುಡ್) ಹೊಸ ಕುರ್ಚಿಗಳು, ಹೊಸ ಟೇಬಲ್‌ಗಳು ಮತ್ತು ಹೊಸದಾದ ಹೊನ್ನೆ ಮಂಚಗಳು, ಕುರ್ಚಿ, ಟೇಬಲ್, ಮಂಚದ ಸಾಮಾನುಗಳು ಬಹಿರಂಗವಾಗಿ ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ಕಾಲದಲ್ಲಿ ಹರಾಜು ಮಾಡಲ್ಪಡುತ್ತವೆ. ಇಷ್ಟವುಳ್ಳವರು ಖುದ ದರಖಾಸ್ತ್ ಬಿಡ್ ಮಾಡಬಹುದು. ಬಿಡ್ ಮೊಬಲಗನ್ನು ಸ್ಥಳದಲ್ಲೇ, ಕೂಡಲೇ ಪಾವತಿ ಮಾಡಿ ಸಾಮಾನುಗಳನ್ನು ಸಾಗಿಸಿಕೊಳ್ಳಬೇಕು. ಬಿಡ್ ಒಪ್ಪುವ, ವಗೈರೆ ಹಕ್ಕುಗಳು ಕಮಿಷನರಿಗೆ ಸೇರಿದ್ದು. ಹೆಚ್ಚಿನ ವಿವರಗಳನ್ನು ಕಮಿಷನರಿಂದ ತಿಳಿಯಬಹುದು.

ಸ್ಥಳ — ಮೈಸೂರು ನೂರಡಿ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ ಸಂಧಿಸುವ ಕೋ ಆಪರೇಟಿವ್ ಹೋಂ ಎದುರು ಮಳಿಗೆ ಬಳಿ.

ದಿನ ವಕ್ತು ಕಾಲ ಭಾನುವಾರ 7-6-.953 ಬೆಳಿಗ್ಗೆ 10 ಗಂಟೆಯಿಂದ

ಎಂ. ವಿ. ವೆಂಕಟರಾಮಸ್ವಾಮಿ,
ಕಮಿಷನರ್

ಫೋನ್ ನಂ 792 || ವಂದೇ ಮಾತರಂ || ಬಿಡಿಯ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೬-೬-೧೯೫೩ [ಸಂಚಿಕೆ ೨೫೩

ಕರ್ನೂಲು ಆಂಧ್ರದ ಹಂಗಾಮಿ ರಾಜಧಾನಿ

ನೆಲ್ಲೂರಿನ ಕೋಮುವಾರು ಗಲಭೆ

ಚನ್ನಗಿರಿ ತಾಲ್ಲೂಕು ನೆಲ್ಲೂರಿನಲ್ಲಿ ಬಹು ದಿನಗಳಿಂದಲೂ ಮಳೆ ಬಾರದೆ ಪ್ರಾರ್ಥನೆ ನಡೆಸಲು ಕಳೆದ ಮಂಗಳವಾರ ಸೇರಿದ್ದ ಜನರಿಗೂ ಅಲ್ಲಿನ ಮುಸಲ್ಮಾನರಿಗೂ ಘರ್ಷಣೆಯಾಗಿ ೧೪ ಹಿಂದುಗಳಿಗೆ ಗಾಯಗಳಾದುವು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಕೆ. ಹೆಚ್ ಹಾಲಪ್ಪನವರಿಗೂ ಗಾಯವಾಗಿದೆ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಲಕ್ಷ್ಮಣಶೆಟ್ಟರ ಸಹೋದರರ ಜವಳಿ ಅಂಗಡಿಯು ಲೂಟಿಯಾಗಿ ೩|| ಸಾವಿರ ರೂ ನಷ್ಟವಾಗಿರುವುದೆಂದು ಹೇಳಲಾಗಿದೆ ಇತರ ಮೂರು ಹಿಂದೂ ಅಂಗಡಿಗಳೂ, ಮುಸ್ಲಿಮರ ೪ ಚಿಕ್ಕ ಅಂಗಡಿಗಳೂ ಲೂಟಿ ಆಗಿವೆ ಅಂದು ಸಂಜೆ ಮಲ್ಲೇಶ್ವರಸ್ವಾಮಿ ದೇವರ ವಿಗ್ರಹವನ್ನು ಮೆರವಣಿಗೆಯಲ್ಲಿ ಸ್ಥಳೀಯ ಮಸೀದಿ ಬಳಿ ತಂದಾಗ ಗಲಭೆಗೆ ಆರಂಭವಾಯಿತೆಂದೂ, ರಾತ್ರಿಯೆಲ್ಲಾ ಹೊಡೆದಾಟ ನಡೆಯಿತೆಂದೂ ಗೊತ್ತಾಗಿದೆ ಬೆಳಗಿನ ಝಾವ ಪೊಲೀಸರು ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು ೨೦ ಜನರ ದಸ್ತಗಿರಿಯಾಗಿದೆ ಮೊನ್ನೆ ಸಂಜೆ ಆ ಊರಿನಲ್ಲಿ ವಿಪರೀತ ಮಳೆ ಬಂದು ಮರಗಳು ಉರುಳಿದ್ದುವು

ಟೇನ್‌ಸಿಂಗರಿಗೆ ನೇಪಾಳದ ಬಿರುದು

ಗೌರೀಶಂಕರ ಶಿಖರವನ್ನೇರಿದ ಟೇನ್ಸಿಂಗರಿಗೆ ನೇಪಾಳ ದೊರೆಯು "ಹುಲಿಗಳಲ್ಲಿ ಹುಲಿ" ಎಂಬ ಬಿರುದನ್ನು ಕೊಡಲಿರುವರೆಂದು ಹಿಂದೂ ಪತ್ರಿಕೆ ತಿಳಿಸಿದೆ ಅವರ ಸಾಹಸದ ಬಗ್ಗೆ ಮೆಚ್ಚಿಗೆ ಸೂಚಿಸಲು ಆ ದೇಶದಲ್ಲಿ ಒಂದು ದಿನ ರಜಾ ಘೋಷಿಸುವಂತಾಗಬೇಕೆಂದೂ ಸಲಹೆಯು ಬಂದಿದೆ ನಾಳೆ ದಿನ ಟೇನ್ ಸಿಂಗ್ ಮತ್ತು ಬ್ರಿಟಿಷ್ ಪರ್ವತಾರೋಹಿಗಳು ವಾಪಸು ಹೊರಡುವರು

ಮಿಡಲ್ ಸ್ಕೂಲ್ ಪರೀಕ್ಷಾ ಫಲಿತಾಂಶ

ಸಂಸ್ಥಾನದ ಮಿಡಲ್ ಸ್ಕೂಲ್ ಪರೀಕ್ಷಾ ಫಲಿತಾಂಶವು ಜೂನ್ ೧೧ನೇ ತಾ|| ಬೆಳಗ್ಗೆ ಪ್ರಕಟವಾಗುವುದು

ರಚನಾತ್ಮಕ ಕಾರ್ಯಕರ್ತರ ಸಭೆ

ಮೈಸೂರು ಒಂಟಿಕೊಪ್ಪಲಿನಲ್ಲಿರುವ ಶ್ರೀ ಯಶೋಧರಾ ದಾಸಪ್ಪನವರ ಗೃಹವಲ್ಲಿ ನಾಳೆ ಸಂಜೆ ೬ ರಿಂದ ೭|| ವರೆಗೆ ರಚನಾತ್ಮಕ ಕಾರ್ಯಕರ್ತರನ್ನು ಉದ್ದೇಶಿಸಿ ಅಖಿಲ ಭಾರತ ಚರಖಾ ಸಂಘದ ಶ್ರೀ ಕೃಷ್ಣದಾಸ್ ಜಾಜೂರವರು ಭಾಷಣ ಮಾಡುವರು ಅವರು ಈ ದಿನ ಬೆಂಗಳೂರಿಗೆ ತೆರಳಿರುತ್ತಾರೆ

ಪುರಾತನ ಮಂದಿರಗಳಲ್ಲಿ ಸಭೆಗಳು ಕೂಡದು

ದೇವಾಲಯ ಮಸೀದಿ ಮುಂತಾದ ಪುರಾತನ ಮಂದಿರಗಳ ರಕ್ಷಣಾ ಶಾಸನದ ಪ್ರಕಾರ, ಸರ್ಕಾರದವರು ಅಪ್ಪಣೆಯೊಂದನ್ನು ಹೊರಡಿಸಿ, ಸರ್ಕಾರದಿಂದ ರಕ್ಷಣೆ ಪಡೆದಿರುವ ಅಂತಹ ಸ್ಥಳಗಳಲ್ಲಿ ಸಮ್ಮೇಳನ ಸಭೆ ಸ್ವಾಗತ ವ್ಯಾಯಾಮ ಪ್ರದರ್ಶನ, ಕುಸ್ತಿ ಮುಂತಾದುವು ನಡೆಯಕೂಡದೆಂದು ನಿಷೇಧಿಸಿರುತ್ತಾರೆ, ಈ ನಿಬಂಧನೆಯ ಉಲ್ಲಂಘನೆಗೆ ೨೦ ರೂ ವರೆಗೆ ದಂಡ ವಿಧಿಸಲಾಗುವುದು.

ನಾಯಿಯೊಡನೆ ಹಾವಿನ ಕಾಳಗ

ನಂಜನಗೂಡು ೪

ಇಲ್ಲಿನ ಕಪಿನೀ ನದಿ ತೀರದ ಚಾಮುಂಡಿ ಘಟ್ಟದ ಬಳಿ ಶ್ರೀ ನಾಗಾಬಾವಾಜಿಯವರು ಸಾಕಿದ್ದ ಒಂದು ನಾಯಿಗೂ, ಅಲ್ಲಿಯೇ ಇರುವ ಒಂದು ದೊಡ್ಡ ಹುತ್ತದಲ್ಲಿ ವಾಸವಾಗಿದ್ದ ಒಂದು ಗೋಧಿ ನಾಗರಹಾವಿಗೂ ನೆನ್ನೆ ಭಾರಿ ಕಾಳಗವು ನಡೆದು ಎರಡೂ ಪರಸ್ಪರ ಕಚ್ಚಿ ಮೃತಪಟ್ಟುವು ನಾಗರಹಾವು ಹೆಡೆಯಾಡಿಸುತ್ತಿದ್ದುದನ್ನು ನಾಯಿಯು ಕಂಡು ಅದನ್ನು ಮೊದಲು ಕಚ್ಚಿತೆಂದೂ ನಂತರ ಕಾಳಗವು ಬಹಳ ಹೊತ್ತು ನಡೆದು ನಾಯಿಯು ಹಾವನ್ನು ಅರ್ಧಕ್ಕೆ ಕಡಿದು ಹಾಕಿತೆಂದೂ, ಹಾವು ಹುತ್ತದ ಬಳಿ ಸತ್ತಿತೆಂದೂ ಹೇಳಲಾಗಿದೆ ನಾಯಿಯು ದಾಹ ಅಡಗಿಸಿಕೊಳ್ಳಲು ನೀರಿಗೆ ಹೋಗಿ ಅಲ್ಲಿ ಮೃತಪಟ್ಟಿತು.

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆ

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಸಮಿತಿ ಚುನಾವಣೆಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದ ಕೆಳಗೆ ಕಂಡ ೧೫ ಜನರು ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ —

ಶ್ರೀಗಳಾದ ಮಾದಪ್ಪನವರು, ಸಿದ್ದಪ್ಪನವರು, ಎನ್ ರಾಚಯ್ಯನವರು, ಕೆ ನಂಜೇಗೌಡರು, ಕೆ ವಿಶ್ವೇಶ್ವರಗೌಡರು, ಎಸ್ ನಾರಾಯಣರಾವ್‌ರವರು, ಸಿ ಚಾಮಯ್ಯನವರು, ಎಲ್ ನಂಜುಂಡರಾವ್‌ರವರು, ಪಿ ವೆಂಕಟರಮಣರವರು, ಕೆ. ಶಿವನಂಜಪ್ಪನವರು, ಎಚ್ ಎಂ.ನಾಗಪ್ಪನವರು, ಎಂ ಮಾದಯ್ಯನವರು, ದಾಸೇಗೌಡರು, ಟಿ ಕೆ ಪುಟ್ಟಸ್ವಾಮಿಯವರು ಮತ್ತು ಚಂದ್ರಪ್ಪನವರು

ಬೊಂಬಾಯಿ ಮಾರ್ಕೆಟ್ಟು ಇಳಿಮುಖ

ಕೊರಿಯಾದಲ್ಲಿ ಶಾಂತಿ ಮಾತುಕತೆಗಳು ಬಲಗೊಂಡುದರಿಂದ ಬೊಂಬಾಯಿಯ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ಪದಾರ್ಥಗಳ ಬೆಲೆ ಇಳಿಮುಖವಾಗಿದೆ ಹಲವು ಸರಕುಗಳ ಬೆಲೆಯು ತುಂಬಾ ಇಳಿಯುತ್ತಿರುವುದಾಗಿಯೂ ಹೇಳಲಾಗಿದೆ

ಕರ್ನೂಲು ಆಂಧ್ರದ ರಾಜಧಾನಿಯಾಗಿ ಆಯ್ಕೆ

ಆಂಧ್ರದ ಶಾಸನ ಸಭಾ ಸದಸ್ಯರು ಕಳೆದ ೧ನೇ ತಾ|| ನಿಂದಲೂ ಸಭೆ ಸೇರಿ, ನೆನ್ನೆ ಆಂಧ್ರ ಪ್ರಾಂತಕ್ಕೆ ಕರ್ನೂಲು ಪಟ್ಟಣವನ್ನು ಹಂಗಾಮಿ ರಾಜಧಾನಿಯಾಗಿ ಮಾಡಿಕೊಳ್ಳಲು ಧ್ವನಿ ಓಟಿನ ಮೂಲಕ ನಿರ್ಧರಿಸಿರುತ್ತಾರೆ ವಿಜಯವಾಡವನ್ನು ರಾಜಧಾನಿಯಾಗಿ ಮಾಡಿಕೊಳ್ಳುವಂತೆ ಟಿ ನಾಗಿರೆಡ್ಡಿಯವರು ಮಂಡಿಸಿದ ನಿರ್ಣಯವು ೭೯-೫೩ ಓಟುಗಳಿಂದ ತಿರಸ್ಕೃತವಾಯಿತು ಗುಂಟೂರು ನಗರ ಮತ್ತು ಗುಂಟೂರು ವಿಜಯವಾಡದ ಪ್ರದೇಶ ಇವುಗಳಲ್ಲಿ ರಾಜಧಾನಿ ಸ್ಥಾಪಿಸುವಂತೆ ಪ್ರಜಾ ಸಮಾಜವಾದಿ ಮತ್ತು ಸ್ವತಂತ್ರ ಸದಸ್ಯರುಗಳು ಪ್ರತ್ಯೇಕವಾಗಿ ಸೂಚಿಸಿದ ನಿರ್ಣಯಗಳೂ ಸಹ ತಿರಸ್ಕರಿಸಲ್ಪಟ್ಟವು

ಕರ್ನೂಲ್ ಪಟ್ಟಣವು ೧೧ ನೇ ಶತಮಾನದಲ್ಲಿ ಕಟ್ಟಲ್ಪಟ್ಟಿತೆಂದು ಹೇಳಲಾಗಿದೆ.

ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಮುಖ್ಯ ಮಂತ್ರಿಗಳ ಭೇಟಿ

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ಬೆಳಗ್ಗೆ ಇಲ್ಲಿನ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಭೇಟಿಯಿತ್ತು ಪರಿಶೀಲನೆ ನಡೆಸಿದರು. ಅಧ್ಯಕ್ಷ ಶ್ರೀ ಹೆಚ್ ಸುಬ್ಬರಾವ್ ಮತ್ತು ಕಾರ್ಯದರ್ಶಿ ಶ್ರೀ ಎನ್ ಶ್ರೀನಿವಾಸಮೂರ್ತಿಯವರು ಅವರನ್ನು ಸ್ವಾಗತಿಸಿ ಅಲ್ಲಿನ ಕೆಲಸ ಕಾರ್ಯಗಳನ್ನು ವಿವರಿಸಿದರು ಮತ್ತು ಅದಕ್ಕೆ ಸರ್ಕಾರದ ಸಹಾಯವನ್ನು ಕೋರಿದರು

ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ಅಕ್ಷನ ಮಾಧ್ಯಮಿಕ ಶಾಲೆಯಲ್ಲಿ ಅ|| ವಿ|| ಕೊಳ್ಳೇಗಾಲದ ಶ್ರೀ ವೆಂಕಟಸುಬ್ಬಾ ಶಾಸ್ತ್ರಿಯವರಿಂದ ಆಧುನಿಕ ವಿಜ್ಞಾನ ಮತ್ತು ಪ್ರಾಚೀನ ಜ್ಯೋತಿಷ್ಯ ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿದೆ ಪ್ರಾಚೀನವಾದ ಈ ಶಾಸ್ತ್ರದ ಬಗ್ಗೆ ಅವರು ಸಂಶಯವನ್ನು ನಿವಾರಣೆ ಮಾಡಲು ಸಿದ್ಧರಾಗಿರುವರು ಆಸಕ್ತಿ ಇರುವವರೆಲ್ಲರೂ ಬರುವಂತೆ ಕೋರಲಾಗಿದೆ.

ನೆಹರೂ-ಮಹಮದಾಲಿ ಭೇಟಿ

ಲಂಡನ್ನಿನಲ್ಲಿ ನೆನ್ನೆ ಭಾರತದ ಪ್ರಧಾನಿ ನೆಹರೂರವರು ಪಾಕಿಸ್ತಾನದ ಪ್ರಧಾನಿ ಮಹಮದ್ ಆಲಿಯವರೊಡನೆ, ತೀರ್ಮಾನವಾಗದೇ ಉಳಿದಿರುವ ವಿಷಯಗಳ ಬಗ್ಗೆ ಮಾತುಕತೆಯನ್ನಾರಂಭಿಸಿದರು ಕಾಶ್ಮೀರದ ವಿಷಯವಾಗಿಯೂ ಸಹ ಅವರಿಬ್ಬರು ಸಂಭಾಷಣೆ ನಡೆಸುವರು ಲಂಡನ್ನಿನಿಂದ ವಾಪಸು ಬಂದ ಮೇಲೆ ಕರಾಚಿಯಲ್ಲಿ ವಿಧಿವತ್ತಾದ ಸಂಭಾಷಣೆಗಳು ನಡೆಯುವುವು ನೆಹರೂರವರು ನೆನ್ನೆ ಸಿಂಹಳದ ಪ್ರಧಾನಿ ಸೇನಾನಾಯಕೆಯವರನ್ನು ಭೋಜನಕ್ಕೆ ಆಹ್ವಾನಿಸಿದ್ದರು

ಕೊರಿಯಾ ಶಾಂತಿ ಕಾಗದಕ್ಕೆ ಸಿಂಗ್ಮನ್‌ರೀ ರುಜು

ಈ ದಿನ ಪಾನ್‌ಮುನ್‌ಜಾನ್‌ನಲ್ಲಿ ನಡೆಯುವ ಶಾಂತಿ ಸಂಧಾನದ ಮಾತುಕತೆಗಳಿಂದ ಮೂರು ವರ್ಷಗಳ ಕಾಲ ನಡೆದ ಕೊರಿಯಾ ಯುದ್ಧವು ಪರಿಸಮಾಪ್ತಿಯಾಗುವುದಿದೆಯೆಂದು ಹೇಳಲಾಗಿದೆ ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ಶಾಂತಿ ಕಾಗದಕ್ಕೆ ರುಜು ಹಾಕಲು ಒಪ್ಪಿರುತ್ತಾರೆ

ಬಿರುಗಾಳಿಯಿಂದ ೧೦ ಲಕ್ಷ ಪೌಂಡು ನಷ್ಟ; ೧೪ ಮರಣ

ಫಿಲಿಪೈನ್ ದ್ವೀಪಗಳ ರಾಜಧಾನಿ ಮನಿಲಾದಲ್ಲಿ ನೆನ್ನೆ ಗಂಟೆಗೆ ನೂರು ಮೈಲಿ ವೇಗದ ಪ್ರಚಂಡ ಬಿರುಗಾಳಿಯು ಬೀಸಿದುದರಿಂದ ಅಪಾರ ನಷ್ಟ ಸಂಭವಿಸಿ, ೧೪ ಜನರು ಮೃತಪಟ್ಟು, ೧೨ ಮಂದಿ ಗಾಯಗೊಂಡರೆಂದು ವರದಿಯಾಗಿದೆ ಸುದ್ದಿ ಸೌಲಭ್ಯಗಳು ಕಡಿಯಲ್ಪಟ್ಟಿರುವುವಲ್ಲದೆ, ಬೆಳೆಗಳೂ ನಾಶವಾಗಿರುವುವೆಂದೂ, ಒಟ್ಟು ೧೦ ಲಕ್ಷ ಪೌಂಡು ಆಸ್ತಿ ನಷ್ಟವಾಗಿರುವುದೆಂದೂ ಗೊತ್ತಾಗಿದೆ

ನ್ಯಾಯಾಧೀಶರ ಮೇಲೆ ಖೈದಿಯು ಮೇಜನ್ನು ಎಸೆದ

ತಾನು ವರಮಾನ ತೆರಿಗೆ ಅಧಿಕಾರಿಯೆಂದು ಹೇಳಿಕೊಂಡು ಮೋಸದಿಂದ ಅನೇಕರಿಂದ ಹಣ ವಸೂಲು ಮಾಡಿದ ಒಬ್ಬನನ್ನು ಮಧುರೆಯ ನ್ಯಾಯಾಲಯದಲ್ಲಿ ವಿಚಾರಿಸಿ, ಅವನಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿ, ಅವನು ಅರ್ಜಿಯನ್ನು ಸಲ್ಲಿಸುವ ನೆಪದಲ್ಲಿ ಒಂದು ಸಣ್ಣ ಮೇಜನ್ನು ನ್ಯಾಯಾಧೀಶರ ಕಡೆ ಎಸೆದನೆಂದೂ, ಆದರೆ ಅವರಿಗೆ ಪೆಟ್ಟು ಬೀಳಲಿಲ್ಲವೆಂದೂ ವರದಿಯಾಗಿದೆ ತರುವಾಯ ಅವನನ್ನು ಬಂಧಿಸಲಾಯಿತು

ಸಹಾಯಾರ್ಥ ನಾಟಕ

ರಾಜಧಾನಿಯ ಪೋಸ್ಟ್‌ಮೆನ್ ಮತ್ತು ಕೆಳದರ್ಜೆ ನೌಕರರ ಸಹಾಯಾರ್ಥವಾಗಿ ನಾಳೆ ಸಂಜೆ ೬-೩೦ ಘಂಟೆಗೆ ಟೌನ್‌ಹಾಲಿನಲ್ಲಿ ಸದರಿ ನೌಕರರು "ವಿದ್ಯಾರ್ಥಿ ಜೀವನ" ಎಂಬ ನಾಟಕವನ್ನು ಅಭಿನಯಿಸುವರು ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

○ ಬರುವ ಆಗಸ್ಟ್ ೧೪ನೇ ತಾ|| ಮುಂಚೆ ಪಾಕಿಸ್ತಾನವು ರಿಪಬ್ಲಿಕ್ ಆಗುವುದೆಂದು ಕರಾಚಿಯ ಪತ್ರಿಕೆಯೊಂದು ತಿಳಿಸಿರುತ್ತದೆ

ಮೋಟಾರು ಕೆಲಸಗಾರರ ಸಂಘದ ಅಧಿಕಾರ ವರ್ಗ

ಮೈಸೂರು ೬

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ [illegible] ಅಧಿಕಾರ ವರ್ಗದ ಚುನಾವಣೆಯು ಮೊನ್ನೆ ನಡೆದು ಪ್ರಸಕ್ತ ಸಾಲಿಗೆ ಶ್ರೀ ಕೆ ಪೌಲ್ರಾಜ್‌ರಾವ್ ಅಧ್ಯಕ್ಷರು ಶ್ರೀ ಕೆ ಸಿ ಚಿನಪ್ಪನವರು ಉಪಾಧ್ಯಕ್ಷರು, ಶ್ರೀ ಟಿ ಎಸ್ ಸುಬ್ಬಣ್ಣನವರು ಕಾರ್ಯದರ್ಶಿಯವರು ಶ್ರೀ ಕೆ ರಂಗಸ್ವಾಮಿ ಯವರು ಖಜಾಂಚಿ ಮತ್ತು ಶ್ರೀ ಕೆ ಸುಬ್ಬಣ್ಣನವರು ಸಹಕಾರ್ಯದರ್ಶಿಗಳಾಗಿ ಚುನಾಯಿತರಾಗಿರುವರು

ಸಂಘದ ವಾರ್ಷಿಕೋತ್ಸವವನ್ನು ಈ ದಿನ ತಿಂಗಳ [illegible] ವಾರದಲ್ಲಿ ನಡೆಸಲಾಯಿತು. ಅದರ ಅಧ್ಯಕ್ಷತೆ ವಹಿಸಲು [illegible] ರವರ ಗೃಹ ಕಾರ್ಯದರ್ಶಿ ಶ್ರೀ ಜಿ ಎಸ್ ನಾಗರಾಜರಾಯರನ್ನು [illegible] ಮಾಡಿದರು ಮೋಟಾರು [illegible] ಬಗ್ಗೆ ರಾಜಕೀಯ [illegible] [illegible] ತೆಗೆದುಕೊಳ್ಳಬೇಕಾದ [illegible] [illegible] ನೌಕರರು ಕೇಳಿದ [illegible] ಮಾಲೀಕರು [illegible] ಬಗ್ಗೆ [illegible] ಡಿಸಲಾಯಿತು

ಭಾವಸಾರ ಕ್ಷತ್ರಿಯ ವಿದ್ಯಾರ್ಥಿನಿಲಯ

[illegible] ಭಾವಸಾರ ಕ್ಷತ್ರಿಯ ವಿದ್ಯಾರ್ಥಿನಿಲಯವನ್ನು [illegible] ತಿಂಗಳಿನಿಂದ ತೆರೆಯಲಾಗುವುದು ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ಜಿಲ್ಲೆಯ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಇದೇ ತಿಂಗಳು [illegible] ರೊಳಗೆ [illegible] ಶ್ರೀ ಯು ಎಲ್ [illegible] ಅಪೇಕ್ಷಿಸುವವರಿಗೆ [illegible] ನಮೂನೆಗಳನ್ನು ಕಳುಹಲಾಗುವುದು

ಪುಟ್ಟ ಶ್ರೀರಾಮುಲು ಪ್ರತಿಮೆಯ ಪ್ರತಿಷ್ಠೆ

[illegible] ಸಮಾವೇಶಗೊಂಡು [illegible] ನೌಕರರಿಗೆ ಮನೆ [illegible] ಭಗ್ನವನ್ನು ಮಾಡಿತು [illegible] ಸರದ್ದೈವೇನೆ ಎಂಬ [illegible] ಚೌಕದಲ್ಲಿ [illegible] ಪುಟ್ಟ ಶ್ರೀರಾಮುಲು [illegible] ಪ್ರತಿಷ್ಠಿಸಲು [illegible] ಕೊಡಲಾಯಿತು

ದುರ್ನಡತೆಗಾಗಿ ತಾಯಿ, ಪುತ್ರಿಯರ ಗಡಿಪಾರು

ದುರ್ನಡತೆಗಾಗಿದ್ದರಿಂದು ಹೇಳಲಾದ ಒಬ್ಬ ಹೆಂಗಸು ಮತ್ತು ಆಕೆಯ ಮೂವರು ಹೆಣ್ಣುಮಕ್ಕಳನ್ನು ಸಿಯಾಲ್‌ಕೋಟ ನ್ಯಾಯಾಧೀಶರು ಊರಿನಿಂದ ಆಚೆಗೆ ಹೊರಡಿಸಲು ಆಜ್ಞೆ ಮಾಡಿರುತ್ತಾರೆ ಅಲ್ಲಿ ಇಂತಹ ಕ್ರಮ ಕೈಗೊಂಡಿರುವುದು ಇದೇ ಮೊದಲು

ಗಡ್ಡ ಬೆಳೆಸುವ ಚಳುವಳಿ

ಪಾಕಿಸ್ತಾನದ ರಾವಲ್ಪಿಂಡಿಯಲ್ಲಿ ಗಡ್ಡವನ್ನು ಬೆಳೆಸುವ ಚಳುವಳಿಯು ದಿನ ದಿನಕ್ಕೂ ಜೋರಾಗುತ್ತಿದೆ ಈ ವರ್ಷದ ಆರಂಭವಾದಂದಿನಿಂದ ಆ ನಗರದಲ್ಲಿ ಶೇ|| ೫೦ ರಷ್ಟು ಹೆಚ್ಚು ಮಂದಿ ಗಡ್ಡವನ್ನು ಬಿಟ್ಟಿರುವರೆಂದೂ ವಿಶೇಷವಾಗಿ ಪಾಠಕರು ಮತ್ತು ವಿದ್ಯಾರ್ಥಿಗಳಲ್ಲಿ ಈ ಹೊಸ ಅಭ್ಯಾಸವು ಹೆಚ್ಚಾಗಿ ಕಾಣುತ್ತಿರುವುದಾಗಿಯೂ ವರದಿಯಾಗಿದೆ

ಚಿತ್ರದ ಸಹಾಯದಿಂದ ಉಪನ್ಯಾಸ

ರಾಜಧಾನಿಯ ಎಂಡೀಕೇರಿ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ ಈ ರಾತ್ರಿ ೮|| ಘಂಟೆಗೆ ಕಾಶೀಯಾತ್ರೆಯಿಂದ ಬಂದಿರುವ ಶ್ರೀ ಅವರನಾಥ್ ಎಂ ವಿ ಶರ್ಮರವರಿಂದ ಓಮಾಲಯ ಕ್ಷೇತ್ರ ಯಾತ್ರಾನುಭವಾನಂದಂ ಎಂಬ ವಿಷಯವಾಗಿ ಪರದೆ ಮೇಲೆ ತೋರಿಸುವ ಚಿತ್ರಗಳ ಸಹಾಯದಿಂದ ಉಪನ್ಯಾಸವನ್ನು ಏರ್ಪಡಿಸಲಾಗಿದೆ

ಉಪನಯನ ಮತ್ತು ವಿವಾಹ ಮಹೋತ್ಸವಗಳು

ಮೈಸೂರು ಮೆಡಿಕಲ್ ಹಾಲ್ ಡಾ|| ಸಿ ಸುಬ್ಬರಾಮಯ್ಯನವರು ತಮ್ಮ ಕುಮಾರ ಡಾ|| ಎಸ್ ರಾಮರಾವ್ ರವರಿಗೆ ಬೆಂಗಳೂರಿನ ಓರಿಯಂಟಲ್ ಲೈಫ್ ಇನ್ಷೂರೆನ್ಸ್ ಇನ್ಸ್ಪೆಕ್ಟರ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಪುತ್ರಿ ಸೌ|| ಎ ರಾಜಮ್ಮನನ್ನು ತಂದುಕೊಂಡು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರಿನ ನಿವೃತ್ತ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಎಸ್ ಜಿ ಕೃಷ್ಣಯ್ಯಂಗಾರ್ಯರು ತಮ್ಮ ಕುಮಾರ ಚಿ|| ಶ್ರೀಧರ ಮತ್ತು ಮೊಮ್ಮಗ ಚಿ|| ವಾಸುದೇವ ಇವರುಗಳಿಗೆ ಮೊನ್ನೆ ಉಪನಯನವನ್ನೂ ಮತ್ತು ಪುತ್ರಿ ಸೌ|| ಕಲ್ಯಾಣಿಯನ್ನು ಬೆಂಗಳೂರಿನ ವಕೀಲರಾದ ಶ್ರೀ ಕೆ ಆರ್ ರಾಘವಾಚಾರ್ಯರ ಮಕ್ಕಳು [illegible] ಸ್ವಾಮಿಯವರಿಗೆ ಕೊಟ್ಟು ಇಂದು ವಿವಾಹವನ್ನೂ ತಿರುಪತಿ ಬೆಟ್ಟದಲ್ಲಿ ನೆರವೇರಿಸುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ವಿವಿಧ ರಚನೆ [illegible] [illegible] ಮಕ್ಕಳ ಗೀತೆಗಳು [illegible] ಮತ್ತು [illegible] ಎಸ್ ಕೃಷ್ಣನ್ ಸಂಗೀತ [illegible] ಗಳಿಗೆ [illegible] ವಿವಿಧ ವಾಣಿ [illegible] ಮತ್ತು [illegible] ಕೇಶವಮೂರ್ತಿ ಪಿಟೀಲು [illegible] ಚಿತ್ರಗೀತೆ [illegible] ಸಂಗೀತ [illegible] ಚಂದ್ರರವರ ಹಿಂದಿ ಕಥೆ ಅನುವಾದ

ಗೋಕಾಕಿನಲ್ಲಿ ವೇದ ಕೇಂದ್ರದ ಸ್ಥಾಪನೆ

ಬೆಳಗಾಂ ಜಿಲ್ಲೆಯ ಗೋಕಾಕಿನಲ್ಲಿ ಅಖಿಲ ಭಾರತೀಯ ವೇದ ಕೇಂದ್ರ ಪಾರಾಯಣ ಮಂಡಳಿಯವರು ಕಳೆದ ೨೮ನೇ ತಾ|| ವಿಧಿಪೂರ್ವಕವಾಗಿ ವೇದ ಕೇಂದ್ರವೊಂದನ್ನು ಸ್ಥಾಪಿಸಿದರು ಅದರ ಪ್ರಾರಂಭೋತ್ಸವವನ್ನು ವೇ|| ತ್ರಿಯಂಬಕ ರಾಮಚಂದ್ರ ದೀಕ್ಷಿತರು ನೆರವೇರಿಸಿದರು ಸಮಾರಂಭಕ್ಕೆ ಅನೇಕ ಸನ್ಮಾನ್ಯರು ಆಗಮಿಸಿದ್ದರು ಶ್ರೀ ಅನಂತರಾವ್ ಅಣ್ಣಾಜಿ ದೇಶಪಾಂಡೆಯವರನ್ನು ಕೇಂದ್ರದ ವ್ಯವಸ್ಥಾಪಕರಾಗಿ ನೇಮಿಸಲಾಗಿದೆ

ಪಠ್ಯ ಪುಸ್ತಕಗಳ ಅಭಾವ

ಸ್ವಾಮಿ

ಈಚೀಚೆಗೆ ಪಠ್ಯಪುಸ್ತಕಗಳ ಅಭಾವವು ವಿಪರೀತವಾಗಿದೆ ಶಾಲೆಗಳು ಪ್ರಾರಂಭವಾಗಿ ಹಲವು ದಿನಗಳಾದರೂ ಪಠ್ಯ ಪುಸ್ತಕಗಳು ದೊರಕುವುದೇ ದುರ್ಲಭವಾಗಿದೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಪುಸ್ತಕಗಳ ಸಿಗದೆ [illegible] ಕ್ಕಳು ಪರಿತಪಿಸಬೇಕಾಗಿದೆ ಬಿಸಿಲಿನಲ್ಲಿ ಬಾಲಕ ಬಾಲಕಿಯರು ಅಲೆದಾಡುವುದನ್ನು ನೋಡಿದರೆ ಮನಸ್ಸಿಗೆ ನೋವುಂಟಾಗುತ್ತದೆ ವಿದ್ಯಾಭ್ಯಾಸ ಸುಧಾರಣೆ ಮಾಡಲು ಹೊಂದಿರುವ ಆಸಕ್ತಿಯನ್ನು ಸರ್ಕಾರದವರ ಇಂತಹ ಸಣ್ಣ ಅನಾನುಕೂಲಗಳನ್ನು ತಪ್ಪಿಸುವುದರಲ್ಲಿ ತೋರಿಸಿದರೆ ಎಷ್ಟೋ ಮೇಲು ಮತ್ತು ಇದಕ್ಕಾಗಿ ಮೊದಲು ಪ್ರಯತ್ನಿಸಬೇಕು ಶಾಲೆಗಳು ತೆರೆಯುವ ಮುಂಚೆ ಪುಸ್ತಕಗಳು ದೊರೆಯುವಂತಾಗಬೇಕು ಕೆಲವು ಸಂದರ್ಭಗಳಲ್ಲ ಉಪಾಧ್ಯಾಯರು ಪುಸ್ತಕಗಳ ಅಭಾವದಿಂದ ನಿಯಮಗಳ ಉಲ್ಲಂಘನೆ ಮಾಡಬೇಕಾಗುವುದು ಇದರಿಂದ ವಿದ್ಯಾರ್ಥಿಗಳಿಗೆ ಹಾನಿಯಾಗುವ ಸಂಭವವೂ ಉಂಟು ಇಂತಹ ಅಸಂಗತಗಳಿಗೆ ಇಲಾಖೆಯ ಔದಾಸೀನ್ಯವೇ ಕಾರಣ ತರಗತಿಗಳಿಗೆ ಬೇಕಾಗುವ ಪುಸ್ತಕಗಳು ಮಾತ್ರ ದೊರೆಯದೆ ಇತರರಿಂದ ಪ್ರಕಟಿಸಲ್ಪಡುವ ಪುಸ್ತಕಗಳು ಧಾರಾಳವಾಗಿ ದೊರೆಯುತ್ತಿವೆ ಪ್ರಜಾ

SRI GAYATHRI

TALKIES

To day Last day

TWO TICKETS FOR BROADWAY

From 7 6 53 For 2 days

Pre- Historic Women

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಕಡಲೆಬೇಳೆ	[illegible]	[illegible]
ಉದ್ದು	[illegible]	[illegible]
ಮೆಣಸಿನಕಾಯಿ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

ಸರ್ಕಾರದವರು ಇಂತಹ ಚಿಕ್ಕ ಪುಟ್ಟ ತೊಂದರೆಗಳು ತಪ್ಪುವಂತೆ ಏರ್ಪಾಡು ಮಾಡಿ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಬೇಕಾದುದು ಅಗತ್ಯ

— ಎಚ್ ಗೋಪಾಲರಾವ್

ಹರಾಜು ನೋಟೀಸು

ಮೈಸೂರು ಒಂದನೇ ಮುನ್ಸೀಫ್‌ರವರ ಕೋರ್ಟು O S No 322 of 1952 ೨೩ ರ ಡಿಕ್ರಿ ಜಾರಿ ನಂಬರು Ex No 268 of 1953ರಲ್ಲಿ ಘನ ಕೋರ್ಟ ನವರಿಂದ ನೇಮಿತರಾಗಿರುವ ಕೆಳಗೆ ನಮೂದಿಸಿರುವ ಕಮೀಷನರ್ ರವರಿಂದ —

ಮೇಲ್ಕಂಡ ಕೇಸಿನಲ್ಲಿ ಜಪ್ತಿ ಆಗಿರುವ ಕರೀ ಮರದ (ರೋಸ್‌ವುಡ್) ಹೊಸ ಕುರ್ಚಿಗಳು, ಹೊಸ ಟೇಬಲ್‌ಗಳು ಮತ್ತು ಹೊಸದಾದ ಹೊನ್ನೆ ಮಂಚಗಳು ಕುರ್ಚಿ, ಟೇಬಲ್ ಮಂಚದ ಸಾಮಾನುಗಳು ಬಹಿರಂಗವಾಗಿ ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ಕಾಲದಲ್ಲಿ ಹರಾಜು ಮಾಡಲ್ಪಡುತ್ತವೆ ಇಷ್ಟವುಳ್ಳವರು ಭಾಗ ವಹಿಸಿ ಬಿಡ್ ಮಾಡಬಹುದು ಬಿಡ್ ಮೊಬಲಗನ್ನು ಸ್ಥಳದಲ್ಲೇ ಕೂಡಲೇ ಪಾವತಿ ಮಾಡಿ ಸಾಮಾನುಗಳನ್ನು ಸಾಗಿಸಿಕೊಳ್ಳಬೇಕು ಬಿಡ್ ಒಪ್ಪುವ, ವಗೈರೆ ಹಕ್ಕುಗಳು ಕಮಿಷನರಿಗೆ ಸೇರಿದ್ದು ಹೆಚ್ಚಿನ ವಿವರಗಳನ್ನು ಕಮಿಷನರಿಂದ ತಿಳಿಯಬಹುದು

ಸ್ಥಳ — ಮೈಸೂರು ನೂರಡಿ ರಸ್ತೆ ನ್ಯೂ ಸಯ್ಯಾಜಿರಾವ್ ರಸ್ತೆ ಸಂಧಿಸುವ ಕೋ ಆಪರೇಟಿವ್ ಹೋಂ ಎದುರು ಮಳಿಗೆ ಬಳಿ

ದಿನ ಮತ್ತು ಕಾಲ ಭಾನುವಾರ 7-6-1953 ಬೆಳಗ್ಗೆ 10 ಗಂಟೆಯಿಂದ

ಎಂ ವಿ ವೆಂಕಟರಾಮಸ್ವಾಮಿ,

ಕಮೀಷನರ್

Edited, Printed and Published by A R Nagarajan at Sadhvi Press, D Subbaiah Road Mysore

ABIDS AUCTION SALE

On SUNDAY the 7th at SHOW ROOMS at 10 A M

FURNITURE & HOUSEHOLD EFFECTS consisting of SOFA SUITES ALMIRAHS Single & Double COTS, TABLES, Arm & armless CHAIRS Teak wood 6 x4½ GATES complete with fittings MULTITONE 8 valves RADIO Fancy table lamps TIME PIECES & Electric STOVES Crockery and many other useful articles

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಡಿ. ಎ. ಇಂಡಿಯ ಬ್ಯಾಂಕ್ ಎದುರು, ಮೈಸೂರು

ರಿಜಿ ನಂ. 792 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೭] ಭಾನುವಾರ ೭-೬ ೧೯೫೩ [ಸಂಚಿಕೆ ೪೧

ಅಮೆರಿಕಕ್ಕೆ ಕಾಮನ್ವೆಲ್ತ್ ಪ್ರಧಾನಿಗಳ ಪತ್ರ

ಪೀಪಲ್ಸ್ ಪಾರ್ಕಿನಲ್ಲಿ ಬ್ಯಾಂಡ್

ಮೈಸೂರು ೬

ನಗರದ ಪೌರಸಭೆಯವರು ಸರ್ಕಾರಿ ಭವನದ ಬಳಿ ಇರುವ ಪೀಪಲ್ಸ್ ಪಾರ್ಕಿನಲ್ಲಿ ಪೊಲೀಸ್ ಬ್ಯಾಂಡ್ ಬಾರಿಸುವ ಏರ್ಪಾಡನ್ನು ಮಾಡಿದ್ದರು. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೂ ಬೊಂಬಾಯಿ ಬ್ಲಿಟ್ಸ್ ಪತ್ರಿಕೆ ಸಂಪಾದಕ ಶ್ರೀ ಆರ್. ಕೆ. ಕರಾಂಜಿಯಾರವರೂ ಆಗಮಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಭಾಷಣ ಮಾಡಿ ಪೌರರ ಆರೋಗ್ಯ ಮುಂತಾದ ವಿಷಯಗಳಿಗೆ ಪೌರಸಭೆಯವರು ಗಮನ ಕೊಡುವುದಲ್ಲದೆ ಹಿಂದೆ ನಗರ ನಿವಾಸಿಗಳೆಲ್ಲರ ಸಂತೋಷಾರ್ಥವಾಗಿ ಬ್ಯಾಂಡ್ ಬಾರಿಸುವ ಏರ್ಪಾಟು ಇದ್ದು ಕಾರಣಾಂತರದಿಂದ ನಿಂತುಹೋಗಿದ್ದುದನ್ನು ಈಗ ಪುನಃ ಸಭೆಯವರು ಏರ್ಪಡಿಸಿರುವುದಾಗಿಯೂ ಹೇಳಿದರು. ಮುಖ್ಯ ಮಂತ್ರಿಯವರು ಮಾತನಾಡಿ ಇಂಗ್ಲಿಷ್ ಮತ್ತು ಕರ್ನಾಟಕ ಬ್ಯಾಂಡಿನವರು ನಗರಗಳಲ್ಲಲ್ಲದೆ ಜಿಲ್ಲಾ ಕೇಂದ್ರ ಮತ್ತು ಇತರ ಮುಖ್ಯ ಸ್ಥಳಗಳಲ್ಲಿ ಜನರ ಮನಸ್ಸಿಗೆ ಹರ್ಷವನ್ನುಂಟು ಮಾಡಲು ಬ್ಯಾಂಡು ಬಾರಿಸುವ ಏರ್ಪಾಡನ್ನು ಮಾಡಲಾಗುವುದೆಂದು ಹೇಳಿದರು. ಮೈಸೂರು ಬ್ಯಾಂಡಿನವರ ಕೌಶಲ್ಯವನ್ನು ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಯವರು ಹೊಗಳಿರುವುದಾಗಿ ಅವರು ತಿಳಿಸಿದರು.

ಜ್ಯೋತಿ ನಗರದ ಆರಂಭ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ರಾತ್ರಿ ಟಿ. ನರಸೀಪುರ ರಸ್ತೆಯಲ್ಲಿರುವ ಮೈಸೂರು ಹಾರ್ಸ್ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಸುಮಾರು ೧೫೦ ಸಂಸಾರಗಳಿಗಾಗಿ ಏರ್ಪಡಿಸಿರುವ ಜ್ಯೋತಿ ನಗರದ ಆರಂಭೋತ್ಸವವನ್ನು ನೆರವೇರಿಸಿದರು. ಮೈಸೂರು ಆರ್ಮ್ಡ್ ರಿಸರ್ವ್ ಪೋಲೀಸ್ ಪಡೆಯವರು ಮುಖ್ಯ ಮಂತ್ರಿಯವರಿಗೆ ಗಾರ್ಡ್ ಆಫ್ ಆನರ್ ಅನ್ನು ಕೊಟ್ಟರು. ಶ್ರೀಮತಿ ಹೆಚ್. ಆರ್. ಲೀಲಾವತಿಯವರಿಂದ ಪ್ರಾರ್ಥನೆ, ಇಲಾಖಾ ಸೂಪರಿಂಟೆಂಡೆಂಟರಾದ ಶ್ರೀ ಶಿವಪ್ರಕಾಶಂರವರಿಂದ ಸ್ವಾಗತ ಮತ್ತು ಶ್ರೀಮತಿ ರಾಜಮ್ಮ ಕಲ್ಲೋಳಿ ಮಠದವರಿಂದ ಭಾರತ ವಾಚನವಾದನಂತರ ಸಂಗೀತ ರತ್ನ ಟಿ. ಚೌಡಯ್ಯನವರು ಪಿಟೀಲು ನುಡಿಸಿದರ. ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಶ್ರೀ ಜಿ. ಚಾಂಡಿಯವರು ವಿದ್ಯುಚ್ಛಕ್ತಿಯ ಬೆಳವಣಿಗೆಯು ಸಂಸ್ಥಾನದಲ್ಲಿ ಆದ ವಿವರವನ್ನು ತಿಳಿಸಿದರು.

ಮುಖ್ಯ ಮಂತ್ರಿಯವರು ಮಾತನಾಡಿ, ಇಲಾಖೆಯ ಪ್ರಗತಿಯನ್ನು ಪ್ರಶಂಸಿಸಿದರು. ಜ್ಯೋತಿ ನಗರದ ನಿವಾಸಿಗಳಿಗೆ ಶುಭಾಶಯವನ್ನು ಕೋರಿ, ಅವರುಗಳಿಗೆ ನೀರಿನ ಸೌಲಭ್ಯ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮುಂತಾದುವನ್ನು ಕಲ್ಪಿಸುವ ಏರ್ಪಾಡು ಮಾಡುವುದಾಗಿ ಭರವಸೆಯಿತ್ತರು.

ಸಮಾರಂಭಕ್ಕೆ ಉತ್ತರ ಪ್ರದೇಶ ಶಾಸನ ಸಭಾಧ್ಯಕ್ಷ ಶ್ರೀ ಚಂದ್ರಪ್ರಕಾಶ್‌ರವರು ದಯಮಾಡಿಸಿದ್ದರು.

ಎಣ್ಣೆ ಟ್ಯಾಂಕರುಗಳಿಗೆ ಘರ್ಷಣೆ

ಅಮೆರಿಕದ ಡಿಲಾವೇರ್ ನದಿಯಲ್ಲಿ ಮೊನ್ನೆ ರಾತ್ರಿ ಎರಡು ಭಾರಿ ಎಣ್ಣೆ ಟ್ಯಾಂಕರ್ ಹಡಗುಗಳಿಗೆ ಘರ್ಷಣೆಯಾಗಿ ಎರಡೂ ಒಡೆದು ಬೆಂಕಿ ಹತ್ತಿಕೊಂಡಿತು. ೪೦ ಜನರು ರಕ್ಷಿಸಲ್ಪಟ್ಟಿರುತ್ತಾರೆ. ಇತರ ೪೦ ಜನರು ಪತ್ತೆಯಿಲ್ಲ.

ಮಕ್ಕಳ ಪಾಲನಾ ಸಂಸ್ಥೆಗಳು ಹೆಚ್ಚಬೇಕು

ಮುಖ್ಯ ಮಂತ್ರಿ ಹನುಮಂತಯ್ಯನವರ ಭಾಷಣ

ಮೈಸೂರು ೬

ರಾಜಧಾನಿಯ ಗ[illegible] ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಸಂಸ್ಥೆ ಮತ್ತು ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ ಕಳೆದ ವರ್ಷ ನಡೆದ ಮಕ್ಕಳ ವಾರದ ಸ್ಪರ್ಧೆಯಲ್ಲಿ ಜಯಶೀಲರಾದ ಮಕ್ಕಳಿಗೆ ಬಹುಮಾನ ವಿನಿಯೋಗ ಸಮಾರಂಭವು ನೆನ್ನೆ ನಡೆಯಿತು. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಬಹುಮಾನ ವಿನಿಯೋಗ ಮಾಡಿದರು.

ಪ್ರಾರ್ಥನೆ ಮತ್ತು ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ವಿದ್ಯಾರ್ಥಿನಿಯರಿಂದ ಸ್ವಾಗತ ಪದ್ಯ ಪಠಣವಾದನಂತರ, ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ ಮುಂತಾದವರಿಂದ ಬಂದಿದ್ದ ಸಂದೇಶಗಳನ್ನು ಓದಲಾಯಿತು.

ಅಧ್ಯಕ್ಷರಾದ ಶ್ರೀ ಹೆಚ್. ಎಸ್. ಪಾಳೇಗಾರ್‌ರವರು ಬಿನ್ನವತ್ತಳೆಯನ್ನು ಓದಿ ಅದನ್ನು ಕರಂಡದಲ್ಲಿಟ್ಟು ಮುಖ್ಯ ಮಂತ್ರಿಯವರಿಗೆ ಅರ್ಪಿಸಿದರು. ಅನಂತರ ಕಾರ್ಯದರ್ಶಿ ಶ್ರೀ ಎಂ. ರಾಮಸ್ವಾಮಿಯವರು ವರದಿಯನ್ನೊಪ್ಪಿಸಿದರು.

ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಮಕ್ಕಳ ಪಾಲನೆ ಮತ್ತು ಪೋಷಣೆ ಕಾರ್ಯಗಳನ್ನು ನಡೆಸುವ ಸಂಸ್ಥೆಗಳು ಹೆಚ್ಚಬೇಕೆಂದು ಹೇಳಿದರು. ರಷ್ಯದಲ್ಲಿ ಮನಶ್ಶಾಸ್ತ್ರ ರೀತ್ಯಾ ನಡೆಸುತ್ತಿರುವ ನರ್ಸರಿ ಶಾಲೆ ಮತ್ತು ಸ್ವೀಡನ್ ದೇಶದಲ್ಲಿ ಮಕ್ಕಳ ಪೋಷಣಾ ಕಾರ್ಯಗಳನ್ನು ವಿವರಿಸಿ, ಅಂತಹ ಶಾಲೆಗಳು ನಮ್ಮ ಹಳ್ಳಿಗಳಲ್ಲಿ ಏರ್ಪಾಡಾಗಬೇಕೆಂದು ಅಭಿಪ್ರಾಯಪಟ್ಟು, ಮುಂದಿನ ವರ್ಷದ ಆಯವ್ಯಯದಲ್ಲಿ ನರ್ಸರಿ ಶಾಲೆಗಳಿಗಾಗಿ ಹೆಚ್ಚು ಹಣ ಒದಗಿಸುವ ಬಗ್ಗೆ ಪರ್ಯಾಲೋಚಿಸುವುದಾಗಿ ತಿಳಿಸಿದರು.

ಅನಂತರ ಮಕ್ಕಳಿಗೆ ಬಹುಮಾನ ವಿನಿಯೋಗಗಳನ್ನು ಮಾಡಲಾಯಿತು. ಪ್ರಥಮ ಬಹುಮಾನವನ್ನು ಪಡೆದ ಮಗುವನ್ನು ಅವರು ಎತ್ತಿಕೊಂಡರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಡ್ರೇಟನ್ನರ ಹಂತಕನ ಬಗ್ಗೆ ಸುದ್ದಿ ಕೊಟ್ಟರೆ ೫೦೦ ರೂ

ಬೆಂಗಳೂರು ೬

ಇಲ್ಲಿನ ಬಿಷಪ್ ಕಾಟನ್ ಸ್ಕೂಲಿನ ಮಿಸ್ ಎನೀಡ್ ಡ್ರೇಟನ್ನರನ್ನು ಕೊಲೆ ಮಾಡಿದವನ ಬಗ್ಗೆ ಸುದ್ದಿ ಕೊಟ್ಟವರಿಗೆ ೫೦೦ ರೂ ಬಹುಮಾನವೀಯುವುದಾಗಿ ಸಿವಿಲ್ ಪ್ರದೇಶದ ಪೋಲೀಸು ಅಧಿಕಾರಿ ಶ್ರೀ ಆಲ್ಬರ್ಟ್ ಮನೋರಂಜನ್‌ರವರು ಪ್ರಕಟಿಸಿರುತ್ತಾರೆ. ಆತನ ಮೈ ಮೇಲೆ ಹರಿತವಾದ ಆಯುಧದ ಗಾಯವಿರುವುದಾಗಿಯೂ ತಿಳಿಸಲಾಗಿದೆ. ಇಲ್ಲಿನ ಆರ್. ಎಂ. ಡಿ. ಸಿ. ಕಂಪೆನಿಯವರು ೫,೦೦೦ ರೂ ಕೊಡಲು ಮುಂದೆ ಬಂದಿರುತ್ತಾರೆಂದೂ ವರದಿಯಾಗಿದೆ.

ಗೌರೀಶಂಕರಕ್ಕೆ ಟೇನ್‌ಸಿಂಗ್ ಹೆಸರು !

ನೇಪಾಳದಲ್ಲಿ ಜನ್ಮ ತಾಳಿದ ಟೇನ್‌ಸಿಂಗನ ಹೆಸರನ್ನು ಗೌರೀಶಂಕರಕ್ಕೆ ಇಡುವಂತೆ ಅಲ್ಲಿನ ರಾಜಧಾನಿ ಖಟ್ಮಂಡುವಿನ ಶಿಕ್ಷಣ ಸಂಸ್ಥೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಸೂಚಿಸಿರುತ್ತಾರೆ. ಟೇನ್‌ಸಿಂಗ್ ಮತ್ತು ಬ್ರಿಟಿಷ್ ಪಡೆಯವರು ಈ ತಿಂಗಳು [illegible] ಖಟ್ಮಂಡುವಿಗೆ ಹಿಂತಿರುಗುವರೆಂದು ಗೊತ್ತಾಗಿದೆ. ಟೇನ್‌ಸಿಂಗನಿಗೆ ಸತ್ಕಾರ ನೀಡಲು ಕಲ್ಕತ್ತಾ ಪೌರಸಭೆಯು ನಿರ್ಧರಿಸಿದೆ.

೨೦ ಟನ್ ಪಟಾಕಿ ಸಿಡಿತ

ಇಂಗ್ಲೆಂಡಿನ [illegible] ಪಟ್ಟಣದಲ್ಲಿ ಒಂದು ಕಾರ್ಖಾನೆಯಲ್ಲಿ ಮೊನ್ನೆ ೨೦ ಟನ್ನಿನಷ್ಟು ಪಟಾಕಿಗಳು ಸಿಡಿದುದರ ಪರಿಣಾಮವಾಗಿ ೪ ಜನರು ಮಡಿದು ೩೫ ಮಂದಿಗೆ ಗಾಯವಾಗಿದೆ.

ಟೇನ್ ಸಿಂಗರಿಗೆ ಮೈಸೂರು ಸಚಿವರ ಅಭಿನಂದನೆ

ಗೌರೀಶಂಕರವನ್ನೇರಿದ ಟೇನ್ ಸಿಂಗ್ ಮತ್ತು ಹಿಲಾರಿಯವರನ್ನು ಮೈಸೂರಿನ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಅಭಿನಂದಿಸಿರುತ್ತಾರೆ. ಸ್ವತಂತ್ರ ಭಾರತದಲ್ಲಿ ಸಮಾನಾವಕಾಶವು ದೊರೆತು, ಭಾರತೀಯರು ಈಗಲೀಗ ತಮ್ಮ ಪರಾಕ್ರಮವನ್ನು ತೋರಿಸಲು ಅವಕಾಶವಾಗಿರುವುದೆಂದು ಅವರು ತಿಳಿಸಿರುವರು.

ಅಮೆರಿಕಕ್ಕೆ ಕಾಮನ್‌ವೆಲ್ತ್ ಪ್ರಧಾನಿಗಳ ಪತ್ರ

ಕೊರಿಯಾ ಶಾಂತಿ ಸಂಧಾನದಲ್ಲಿ ಭಾರತವು ವಹಿಸಿರುವ ಮಹತ್ವ ಪಾತ್ರವನ್ನು ಕಾಮನ್‌ವೆಲ್ತಿನ ಪ್ರಧಾನಿಗಳು ಮುಕ್ತ ಕಂಠದಿಂದ ಹೊಗಳಿರುವುದಾಗಿ ವರದಿಯಾಗಿದೆ. ತನಗಿರುವ ವಿಶೇಷ ಸ್ಥಾನಮಾನದಿಂದ ಭಾರತವು ಶಾಂತಿ ಸಾಧಿಸಲು ಪರಿಣಾಮಕಾರಿಯಾದ ಕಾರ್ಯಗಳನ್ನು ಮುಂದೆಯೂ ಕೈಗೊಳ್ಳುವ ಭರವಸೆಯನ್ನು ಅವರು ಹೊಂದಿರುವುದಾಗಿಯೂ ಹೇಳಲಾಗಿದೆ. ಪ್ರಧಾನಿಗಳೆಲ್ಲರೂ ಅಮೆರಿಕಾ ಸರ್ಕಾರಕ್ಕೆ ಕಮ್ಯೂನಿಸ್ಟರ ಸರತ್ತುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಒಟ್ಟಾಗಿ ಕಳಿಸಿರುವರೆಂದೂ, ಅದು ವಿಶ್ವಸಂಸ್ಥೆ ಸಂಧಾನ ಪ್ರತಿನಿಧಿಗಳ ಸೂಚನೆಯನ್ನು ಬಹುಮಟ್ಟಿಗೆ ಹೋಲುವುದೆಂದೂ ಗೊತ್ತಾಗಿದೆ.

ಬೊಂಬಾಯಿಯಲ್ಲಿ ಕಾರ್ಮಿಕರ ಇನ್ಸ್ಟಿಟ್ಯೂಟ್

ಬೊಂಬಾಯಿಯಲ್ಲಿ ಕೇಂದ್ರ ಸರ್ಕಾರದವರು ಕಾರ್ಮಿಕರಿಗಾಗಿ ಒಂದು ಇನ್ಸ್ಟಿಟ್ಯೂಟ್ ತೆರೆಯಲಿರುವರು. ಅದಕ್ಕಾಗಿ ೫ ಲಕ್ಷ ರೂಗಳನ್ನು ವೆಚ್ಚ ಮಾಡಲಾಗುವುದು. ಅಮೆರಿಕಾ ಸರ್ಕಾರದವರೂ ೧ ಲಕ್ಷ ಡಾಲರನ್ನು ಕೊಡುವರು. ಕಾರ್ಮಿಕರ ರಕ್ಷಣೆ, ಆರೋಗ್ಯ, ಕ್ಷೇಮ ಚಿಂತನೆ, ಮುಂತಾದುವುಗಳನ್ನು ತಿಳಿಸುವ ಮ್ಯೂಸಿಯಂ ಒಂದನ್ನು ಅಲ್ಲಿ ತೆರೆಯಲಾಗುವುದು.

ಎವರೆಸ್ಟ್ ಪರ್ವತಾರೋಹಿಗಳಿಗೆ ಬ್ರಿಟಿಷ್ ಪ್ರಶಸ್ತಿ

ಗೌರೀಶಂಕರ ಶಿಖರವನ್ನು ಹತ್ತಲು ಹೋಗಿದ್ದ ಬ್ರಿಟಿಷ್ ಪಡೆಯ ನಾಯಕ ಕರ್ನಲ್ ಹಂಟ್‌ರವರಿಗೆ ಸರ್ ಮತ್ತು ಶಿಖರವನ್ನೇರಿದ ನ್ಯೂಜಿಲೆಂಡಿನ ಹಿಲಾರಿಯವರಿಗೆ ಬ್ರಿಟಿಷ್ ಸಾಮ್ರಾಜ್ಯದ ನೈಟ್ ಕಮ್ಯಾಂಡರ್ ಪ್ರಶಸ್ತಿಗಳನ್ನು ಕೊಡಲಾಗಿದೆ. ಮತ್ತೊಬ್ಬ ಶಿಖರಾರೋಹಿ ಟೇನ್‌ಸಿಂಗರು ಬ್ರಿಟಿಷ್ ಪ್ರಜೆಯಲ್ಲವಾದುದರಿಂದ ಅವರಿಗೆ ಯಾವ ರೀತಿ ಗೌರವವನ್ನು ಸಲ್ಲಿಸಬೇಕೆಂಬುವನ್ನು ಪರಿಶೀಲಿಸಲಾಗುತ್ತಿದೆ.

ಫಾರ್ವರ್ಡ್ ಬ್ಲಾಕ್-ಪ್ರಜಾಪಕ್ಷಗಳ ಐಕ್ಯ

ಭಾರತದ ಪ್ರಜಾ ಸಮಾಜವಾದಿ ಪಕ್ಷ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ಐಕ್ಯವಾಗುವ ಬಗ್ಗೆ ಎರಡು ಪಕ್ಷಗಳ ಮುಖಂಡರಿಗೂ ಒಪ್ಪಂದವಾಗಿರುತ್ತದೆ. ಕಾಂಗ್ರೆಸ್ಸಿನ ವಿರುದ್ಧವಿರುವ ಪಕ್ಷಗಳು ಒಂದುಗೂಡುವ ಅವಶ್ಯಕತೆಯನ್ನು ಮುಖಂಡರು ಒತ್ತಿ ಹೇಳುತ್ತಾರೆ.

ಫುಟ್‌ಬಾಲ್ ಕ್ಲಬ್ಬಿಗೆ ಕಾಣಿಕೆ

ಗುಂಡ್ಲುಪೇಟೆಯಲ್ಲಿರುವ ಮಿತ್ರ ಕೂಟದವರು ಏರ್ಪಡಿಸಿರುವ ರಿಪಬ್ಲಿಕ್ ಫುಟ್‌ಬಾಲ್ ಕ್ಲಬ್ಬಿಗೆ ಶ್ರೀ ಆರ್. ಕೃಷ್ಣಪ್ಪನವರು ತಮ್ಮ ವಿವಾಹ ಸಂಬಂಧದಲ್ಲಿ ೫೫ ರೂಗಳ ಕಾಣಿಕೆಯನ್ನು ಕೊಟ್ಟಿರುತ್ತಾರೆ. ಸಂಘದವರು ಸದರಿಯವರಿಗೆ ವಂದನೆಗಳನ್ನು ಅರ್ಪಿಸಿರುತ್ತಾರೆ.

ವಾರ ಭವಿಷ್ಯ

ತಾ|| ೭-೬-೫೩ ರಿಂದ ೧೪-೬-೫೩ ರ ವರೆಗೆ

ಮೇಷ — ಪರಾಕ್ರಮದ ಘಟನೆ, ಕೈಗೊಂಡ ಕಾರ್ಯ ಜಯ, ಮಾನ ಸನ್ಮಾನ, ಉತ್ಸಾಹಪ್ರದ ವಾರ ತಾ|| ೧೦, ೧೧ ಅಪ್ತರ ಭೇಟಿ, ದ್ರವ್ಯ ಲಾಭ

ವೃಷಭ — ಉಷ್ಣಾಂಶದಿಂದ ಶರೀರಕ್ಕೆ ಕ್ಲೇಶ ನೌಕರಿ ಪಂದೆಗಳಲ್ಲಿ ಲಾಭ, ಹೆಚ್ಚಿನ ತೊಂದರೆಗಳಿಲ್ಲ ತಾ|| ೭, ೮ ವಿಶೇಷ ಖರ್ಚು, ಸಂಕಟ ನಿವಾರಣೆ

ಮಿಥುನ — ಕುಟುಂಬದ ಜವಾಬ್ದಾರಿ ಹೆಚ್ಚುವುದು ಆರೋಗ್ಯ ನೆಟ್ಟಗಿರದು, ತಲೆಗೆ ಆಘಾತದ ತೊಂದರೆ, ಕತ್ತರಿ ವ್ಯವಸಾಯ ಸಂಘಗಳಲ್ಲಿ ಅಪಮಾನ ತಾ|| ೧೦, ೧೧ ದ್ರವ್ಯ ಚಿಂತೆ

ಕರ್ಕ — ಸಮಾಜದಲ್ಲಿ ಒಳ್ಳೆ ಸ್ಥಾನ ಮಾನ ದೊರಕಿದೆ, ಆದಾಯ ವೆಚ್ಚ ಖರ್ಚು, ಕಾಲಿಗೆ ಜಖಂ, ಬಾಕಿ ವಸೂಲಿ ಇಲ್ಲ ತಾ|| ೮ ೧೦ ದ್ರವ್ಯ ಚಿಂತೆ ದರ್ ...

ಸಿಂಹ — ಸಂತೋಷದ ಘಟನೆ ನೌಕರಿ ... ವಿವಾಹ ಜರಗುವುದು ... ನೌಕರಿಯ ... ಭವಿತವ್ಯ, ... ಶತ್ರುಗಳ ನ...

ಕನ್ಯಾ — ಕೈಕೊಂಡ ಕಾರ್ಯಸಿದ್ಧಿ ... ಉತ್ಸಾಹಜನಕ ಘಟನೆ ... ಕಾರ್ಯ ... ತಾ|| ... ಉತ್ತಮ, ಮಹತ್ವದ ಪತ್ರ.

ತುಲಾ — ವಿಪತ್ತಿನಿಂದ ದೂರ ಆರೋಗ್ಯ ನೆಟ್ಟಗೆ ಪ್ರವಾಸದಲ್ಲಿ ... ವ್ಯಾಪಾರ ... ಲಾಭ ತಾ|| ೧೦, ೧೧ ಅಧಿಕ ಖರ್ಚು, ತೊಂದರೆ

ವೃಶ್ಚಿಕ — ಆರೋಗ್ಯ ನೆಟ್ಟಗಿರದು, ಪ್ರಮಾಸದಲ್ಲಿ ಸಂಕಟ ಆರ್ಥಿಕ ಅಡಚಣೆ ಪಿತೃವಿನ ಸಹಾಯ ನೌಕರಿಯಲ್ಲಿ ... ತಾ|| ... ೧೨ ಅಪಘಾತ ಭಯ, ಮನಸ್ಸಿನ ಚಿಂತೆ

ಧನು — ಕಾರ್ಯಕ್ಕೆ ಸ್ವಪ್ರಯತ್ನವು ಬೇಕು ವ್ಯವಸಾಯ ದಂಧೆಗಳಲ್ಲಿ ಅಪೇಕ್ಷೆ ... ಪತ್ನಿಯ ಆರೋಗ್ಯಕ್ಕೆ ಕ್ಲೇಶ ತಾ|| ೧೦, ೧೧ ಕಲಹ, ಖರ್ಚು

ಮಕರ — ಆರೋಗ್ಯ ಉತ್ತಮ, ಕೋರ್ಟು ಕೆಲಸದಲ್ಲಿ ಜಯ, ಪ್ರವಾಸ ಯೋಗ, ಧರ್ಮ ಕಾರ್ಯ ತಾ|| ೭, ೮ ಖರ್ಚು, ಗಡಿಬಿಡಿ.

ಕುಂಭ — ಆರೋಗ್ಯ ನೆಟ್ಟಗೆ, ಪತ್ನಿ ಪುತ್ರರಿಗೆ ಕ್ಲೇಶ, ನೌಕರಿ ದಂಧೆಗಳ ಸ್ಥಿತಿ ... ಸಂಪಾದನ, ದ್ರವ್ಯಾನುಕೂಲವುಂಟು ತಾ|| ೧೦, ೧೧ ಆಕಸ್ಮಾತ್ ಖರ್ಚು, ವಾದ ವಿವಾದ

ಮೀನ — ಗೊಂದಲ, ಜವಾಬ್ದಾರಿ ಹೆಚ್ಚು ಪತ್ನಿಗೆ ಅನಾರೋಗ್ಯ ತಾ|| ೯, ೧೦ ದ್ರವ್ಯ ಚಿಂತೆ, ಮಿತ್ರ ಸಹಾಯ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೨೦ ಪಿ ಪಿ ಪಟಗೋಪ್ಕರ್, ... ಕಾರ್ಯ ಮಧ್ಯಾಹ್ನ ೧.೩೦ ಮುಂಬಯೀ ... ಎಚ್ ಅಕ್ಕ ಮತ್ತು ಶಾಂತಾ ... ಸಂಜೆ ೫.೩೦ ಮತ್ತು ೬.೩೦ ... ರಂಗನಾಥ, ... ಗಾನ ವಿಹಾರ ೭ ಘಂಟೆ ೭.೨೦ ಗೀತಾಂಜಲಿ ೮ ಮತ್ತು ೮.೩೦ ಎಂ ಪಿ ... ಸಂಗೀತ ೯ ... ತಿರುಮಲೈ ... ... ಮಂಜಪ್ಪನವರ ಭಾಷಣ

ಬಂಡವಾಳ-ಸಮತಾವಾದಗಳ ತಿಕ್ಕಾಟಕ್ಕೆ ಸಹಕಾರವೇ ತಕ್ಕ ಪರಿಹಾರ

ಜಿಲ್ಲಾ ಸಹಕಾರ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಮೈಸೂರು ೬

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನವನ್ನು ನೆನ್ನೆ ಸಂಜೆ ಸಹಕಾರ ಭವನದಲ್ಲಿ ಆರಂಭಗೊಳಿಸಿದರು ಸುಪ್ರಸಿದ್ಧ ಸಹಕಾರಿಗಳೂ ಮತ್ತು ಶಾರದಾ ವಿಲಾಸ ಕಾಲೇಜಿನ ಪ್ರಿನ್ಸಿಪಾಲರೂ ಆದ ಶ್ರೀ ಎಂ ಎಸ್ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆ ಮತ್ತು ಶ್ರೀ ಸತ್ಯಪ್ರಚಾರಕ ರಾಮಚಂದ್ರ ಜೀಯವರಿಂದ ಸ್ವಾಗತ ಪದ್ಯ ಪಠಣವಾದ ಮೇಲೆ, ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಕೆ ಎಸ್ ರಾಜಗೋಪಾಲಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿ, ಸಹಕಾರವನ್ನು ವ್ಯಾಪಾರೋದ್ಯಮವೊಂದಕ್ಕೇ ಸಮಾನ ಎಂಬ ಭಾವನೆಯನ್ನು ಬಿಟ್ಟು ಜನರು ಇದರ ತತ್ವದ ಪ್ರಸಾರದ ಕಡೆಗೆ ಗಮನ ಕೊಡಬೇಕೆಂದು ಹೇಳಿದರು

ಕಾರ್ಯದರ್ಶಿಯವರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಕಳೆದಸಾಲಿನ ವರದಿಯನ್ನು ಓದಿ, ಸಹಕಾರ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರವು ಪುರಸ್ಕಾರವಿತ್ತು ಅದಕ್ಕೆ ಪ್ರೋತ್ಸಾಹವೀಯಬೇಕೆಂದೂ ಮತ್ತು ಜಿಲ್ಲೆಯಲ್ಲಿ ಒಟ್ಟು ... ರೂ ಗಳು ಕ್ಷಾಮ ಪರಿಹಾರ ನಿಧಿಗಾಗಿ ಶೇಖರಿಸಲ್ಪಟ್ಟಿವೆಯೆಂದೂ ಅಳಿಸಿದರ ಮುಖ್ಯ ಮಂತ್ರಿಗಳಿಗೆ ನಿಧಿಯನ್ನರ್ಪಿಸಲಾಯಿತು ಶ್ರೀ ಚನ್ನಸ್ವಾಮಿಶೆಟ್ಟರು ಸಂದೇಶಗಳನ್ನು ಓದಿದರು ಸಹಕಾರ ಸಂಘಗಳ ಅ|| ರಿಜಿಸ್ಟ್ರಾರರಾದ ಶ್ರೀ ಜಿ. ರುದ್ರಪ್ಪನವರು ಜಿಲ್ಲೆಯಲ್ಲಿರುವ ಸಹಕಾರದ ಪ್ರಗತಿಯ ವರದಿಯನ್ನು ಓದಿ ಸಹಕಾರ ಸಂಘಗಳ ಉಪಯೋಗವನ್ನು ಗ್ರಾಮಾಂತರದ ಜನರು ಚನ್ನಾಗಿ ಪಡೆದುಕೊಳ್ಳಬೇಕೆಂದು ಹೇಳಿದರು.

ಮುಖ್ಯ ಮಂತ್ರಿಗಳು ಭಾಷಣ ಮಾಡಿ, ಪ್ರಪಂಚದಲ್ಲಿ ಈಗ ನಡೆಯುತ್ತಿರುವ ಬಂಡವಾಳ-ಸಮತಾವಾದಗಳ ಘರ್ಷಣೆಯನ್ನು ತಪ್ಪಿಸಲು ಸಹಕಾರ ತತ್ವವೊಂದೇ ತಕ್ಕ ಮಾರ್ಗವೆಂದು ನುಡಿದರು ಇದಕ್ಕೆ ನಿದರ್ಶನವಾಗಿ ಯೂರೋಪಿನಲ್ಲಿ ಸ್ವೀಡ್, ಡೆನ್ಮಾರ್ಕ್ ಮುಂತಾದ ದೇಶಗಳು ಕಮ್ಯೂನಿಸಮ್ಮಿನ ಹೆಬ್ಬಾಗಿಲಿನಲ್ಲಿದ್ದರೂ ಮತ್ತು ಇಂಗ್ಲೆಂಡ್ ಫ್ರಾನ್ಸ್‌ಗಳಂತೆ ಮಹಾ ಸಾಮ್ರಾಜ್ಯಗಳಲ್ಲದಿದ್ದರೂ ಅತ್ಯಂತ ಉನ್ನತ ಜೀವನ ಮಟ್ಟವನ್ನು ಹೊಂದಿವೆಯೆಂಬುದಾಗಿ ತಿಳಿಸಿದರು

ಮುಂದುವರಿಯುತ್ತಾ ಸಹಕಾರ ತತ್ವವನ್ನು ಜನರು ಕಡೆಗಣಿಸದೆ ಅದನ್ನು ಬೆಳೆಸಿಕೊಂಡು ಸಹಕಾರ ರಾಷ್ಟ್ರ ಸಂಪತ್ತಿ (ಕಾಮನ್‌ವೆಲ್ತ್) ಯನ್ನು ಸ್ಥಾಪಿಸಬೇಕೆಂದು ಕೋರಿ, ಇದಕ್ಕೆ ಸರ್ಕಾರವು ಸಾಧ್ಯವಾದಷ್ಟು ಸಹಾಯ ನೀಡುವುದಾಗಿ ಹೇಳಿದರು

ಬಳಿಕ್ಕರಿ ವಿಷಯವಾಗಿ ಪ್ರಸ್ತಾಪಿಸಿ,

ಬೊಂಬಾಯಿ-ಗೋವಾ ಮಧ್ಯೆ ಕಳ್ಳಸಾಗಾಣಿಕೆ ಪತ್ತೆ

ಬೊಂಬಾಯಿ ಮತ್ತು ಗೋವಾಗಳ ನಡುವೆ ಕಳ್ಳತನದಲ್ಲಿ ಸರಕುಗಳನ್ನು ರವಾನಿಸುವ ಹಡಗನ್ನು ಪೋಲೀಸರು ಪತ್ತೆ ಹಚ್ಚಿರುತ್ತಾರೆ. ಇದರಿಂದ ಇದೇ ರೀತಿ ಸಾಗಿಸುವ ಇತರ ಹಡಗುಗಳು ಇವೆಯೆಂದೂ ಪೋಲೀಸರು ಊಹಿಸಿರುತ್ತಾರೆ ಪತ್ತೆಯಾದ ಹಡಗಿನಲ್ಲಿ ೪,೦೦೦ ರೂ ಬೆಲೆ ಬಾಳುವ ಸರಕುಗಳು ಸಿಕ್ಕಿದುವು.

ಔದ್ಯೋಗಿಕ ಕಾಲೇಜುಗಳು ವಿಶ್ವ ವಿದ್ಯಾಲಯಕ್ಕೆ

ಶಿವಮೊಗ್ಗಾ ಜಿಲ್ಲಾ ವಿದ್ಯಾ ಸುಧಾರಣಾ ಸಮ್ಮೇಳನವು ಮೊನ್ನೆ ನಡೆದು, ಸರ್ಕಾರದವರು ನಡೆಸುತ್ತಿರುವ ಔದ್ಯೋಗಿಕ ಕಾಲೇಜುಗಳನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸುವಂತೆ ಕೋರುವ ನಿರ್ಣಯ ಮಾಡಲಾಗಿದೆ.

ಯಾವ ವಿಧವಾದ ರಕ್ತಪಾತ ಅಥವಾ ಹೋರಾಟವೂ ಇಲ್ಲದೇ ನಮ್ಮ ಸಂಸ್ಥಾನವು ವಿಸ್ತಾರಗೊಳ್ಳುವುದು ಸಂತೋಷದಾಯಕವೆಂದೂ, ಈ ಬಗ್ಗೆ ವಿರೋಧ ಮಾಡುವವರು ಯಾರ ಮೇಲೆಯೋ ಇರುವ ತಮ್ಮ ಕೋಪವನ್ನು ಮತ್ತೊಬ್ಬರ ಮೇಲೆ ತೋರಿಸಬಾರದೆಂದೂ, ಇದರಿಂದ ಸಂಸ್ಥಾನವು ಇಡೀ ದಕ್ಷಿಣ ಭಾರತದಲ್ಲೇ ಹಿರಿಮೆಯನ್ನು ಗಳಿಸುವ ಶುಭ ಕಾರ್ಯಕ್ಕೆ ಅಡ್ಡಿಯುಂಟಾಗುವುದೆಂದೂ ತಿಳಿಸಿದರು

ADMISSIONS RECEIVED

For

Middle School Classes

and

Madras Matriculation Classes

Please enquire at —

CITY TUTORIAL COLLEGE,

Near V. V. Market, Mysore.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ ಗೆ
ಕಡಲೆಕಾಯಿ	೧೬ ೦-೦	೨ ೧೪ ೦
ಹರಳುಬೀಜ	೪೦ ೨-೦	೪೦.೮ ೦
ಹುಚ್ಚೆಳ್ಳು	೫೫-೨-೦	೫೯-೨-೦
ಹೊಂಗೆಬೀಜ	೨೪-೦-೦	
ಹುರುಳಿ	೪೭ ೧೪.೦	೪೪ ೧೪ ೦
ಹೆಸರು	೫೯-೨-೦	೬೫-೧೦ ೦
ಅವರೆ	೪೮.೮.೦	
ಹಲಸಂದೆ	೫೩-೦ ೦	೩೩.೧೪.೦
ಉದ್ದು	೬೮ ೧೪-೦	೬೨.೦-೦
ಎಳ್ಳು	೬೩ ೧೪ ೦	೭೪ ೮.೦
ಕೊಬ್ಬರಿಕಾಯಿ	೨೫ ೧೪ ೦	೨೭.೨.೦
ಹುಣಸೇಹಣ್ಣು	೪-೦-೦	೬ ೧೨ ೦
ತೆಂಗಿನಕಾಯಿ	೧೨೪ ೦-೦	೨೪೮ ೦ ೦

ಮದ್ರಾಸು ಭಿಕ್ಷುಕರ ಹಾವಳಿ ತಪ್ಪಿಸಲು ಕೇಂದ್ರದವರಿಗೆಕೋರಿಕೆ

ಮದ್ರಾಸು ಪ್ರಾಂತದ ಕಡೆಯಿಂದ ಸಂಸ್ಥಾನಕ್ಕೆ ಬರುತ್ತಿರುವ ಭಿಕ್ಷುಕರ ಸಮಸ್ಯೆ ನಿವಾರಣೆ ಬಗ್ಗೆ ಮದ್ರಾಸು ಸರ್ಕಾರದವರು ಕೂಡ ಭರವಸೆಯಿತ್ತಿದ್ದರೂ ಸಹ, ಭಿಕ್ಷುಕರ ಆಗಮನಕ್ಕೆ ತಡೆಯೇ ಇಲ್ಲದಿರುವುದರಿಂದ ಸಂಸ್ಥಾನ ಸರ್ಕಾರದವರು ಈ ಬಗ್ಗೆ ಕೇಂದ್ರದವರ ಸಲಹೆಯನ್ನು ಕೋರಿರುವುದಾಗಿ ವರದಿಯಾಗಿದೆ.

SRI GANESHA

TALKIES

ONLY FOR TO-DAY

Tolstoy's Immortal Love Story

ANNA KARENINA

With — Vivien Leigh,

Ralph Richardson

From 8 6-53 · For 2 days

The Much Awaited

Universal's

UNDER COVER GIRL

With — Scott Brady,

Alexis Smith

Edited, Printed and Published by A R Nagarajan at Sadhvi Press, D. Subbiah Road, Mysore

ರಾ ಜ ಕ ಮ ಲ್ ಟಾ ಕೀ ಸ್

6—6—53 ರಿಂದ :: ಅಮೋಘ ಪ್ರಾರಂಭ

ದಿನಕ್ಕೆ ಮೂರು ಆಟಗಳು

ಮಹಾತ್ಮಾ ರವರ ಕನ್ನಡ ಚಿತ್ರ

ಸೌಭಾಗ್ಯ ಲಕ್ಷ್ಮಿ

ಭೂಮಿಕೆ:— ಹರಿಣಿ, ಇಂದುಶೇಖರ್, ಮಹಾಬಲರಾವ್, ಮಾಧವರಾವ್

ರಿಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೮-೬ ೧೯೫೩ [ಸಂಚಿಕೆ ೨೫೪

ಟೇನ್ಸಿಂಗರಿಗೆ ಭಾರತ – ಸರ್ಕಾರದ ಗೌರವ –

ಭಾರತದ ಸಂಸ್ಕೃತಿಯಿಂದ ಆತ್ಮವಿಕಾಸದ ಸಾಧನೆ

ವಿಶ್ವವಿದ್ಯಾಲಯ ಸೇವಾ ಗೋಷ್ಠಿಯಲ್ಲಿ ಮಹಾರಾಜರ ಭಾಷಣ

ಮೈಸೂರು ೮

ಈ ದಿನ ಪ್ರಾತಃಕಾಲ ಶ್ರೀಮನ್ಮಹಾರಾಜರು ಅಂತರ ರಾಷ್ಟ್ರೀಯ ವಿಶ್ವವಿದ್ಯಾಲಯ ಸೇವಾ ಸಮಿತಿಯ ಶಿಕ್ಷಣ ಗೋಷ್ಠಿಯನ್ನು ಆರಂಭಗೊಳಿಸಿದರು. ಅಲಿಘರ್ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾದ ಡಾ|| ಜಕೀರ್ ಹುಸೇನರವರು ಅಧ್ಯಕ್ಷತೆ ವಹಿಸಿದ್ದರು

ಮೈಸೂರು ವಿಶ್ವವಿದ್ಯಾಲಯದ ಪರವಾಗಿ ವೈಸ್‌ಛಾನ್ಸಲರ್ ಡಾ॥ ಬಿ ಎಲ್ ಮಂಜುನಾಥರವರೂ ಮತ್ತು ಮೈಸೂರು ಸರ್ಕಾರದ ಪರವಾಗಿ ಶಿಕ್ಷಣ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರೂ ವಿದೇಶೀ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಡಾ॥ ಜಕೀರ್ ಹುಸೇನರವರು ಭಾಷಣ ಮಾಡಿ ಪ್ರಪಂಚದ ನಾನಾ ದೇಶಗಳು ಯುದ್ಧದಿಂದ ಬಿಡುಗಡೆಯನ್ನು ಗಳಿಸಲು ಯತ್ನಿಸುತ್ತಿದ್ದರೆ ಭಾರತವು ತನ್ನ ಸಂಸ್ಕೃತಿ ಮತ್ತು ತತ್ವ ಪ್ರಚಾರದಿಂದ ಹಿರಿದಾಗುತ್ತಿದೆಯೆಂದೂ, ಇಂತಹ ಗೋಷ್ಠಿಗಳು ಪ್ರಪಂಚದ ಐಕ್ಯತೆ ಮತ್ತು ಉನ್ನತಿಗೆ ಸಾಧನಗಳೆಂದೂ ನುಡಿದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ, ಹೋಲ್ಮಂತ ಸೇವಾ ಸಮಿತಿಯ ಉಪಯೋಗವನ್ನು ಒತ್ತಿ ಹೇಳುತ್ತಾ, ತತ್ವ ಶಿಥಿಲತೆ, ಸ್ಪರ್ಧೆ ಮತ್ತು ಘರ್ಷಣೆ ಇರುವ ಪ್ರಪಂಚದಲ್ಲಿ, ಅಂತರ ರಾಷ್ಟ್ರೀಯ ಸೌಹಾರ್ದವನ್ನು ಬೆಳಗೊಳಿಸಿ ಜನ ಸಮೂಹದಲ್ಲಿ ಶಾಂತಿಯನ್ನು ವಿಸ್ತರಿಸಲು ವಿಶ್ವವಿದ್ಯಾಲಯಗಳ ಅಂತರ್ರಾಷ್ಟ್ರ ಸಂಘಟನೆ ಬೇರೊಂದು ಸಂಸ್ಥೆಯಲ್ಲವೆಂದು ಹೇಳಿದರು. ವಿಶ್ವವಿದ್ಯಾಲಯಗಳು ಪ್ರಪಂಚದಲ್ಲಿ ಶಾಂತಿ ಮತ್ತು ವಿವೇಕವನ್ನು ತಂದುಕೊಡುವ ಸಾಧನಗಳಾಗಿರುವುವೆಂದೂ ನುಡಿದರು

ಭಾರತದಲ್ಲಿ ಗೋಷ್ಠಿಯನ್ನು ಸೇರಿಸುವ ವಿಷಯವನ್ನು ಅವರು ಪ್ರಸ್ತಾಪಿಸಿ ಭಾರತೀಯ ಸಂಸ್ಕೃತಿಯು ಆತ್ಮ ವಿಕಾಸಕ್ಕೆ ಬೇಕಾದ ಪ್ರಾಮುಖ್ಯತೆಯನ್ನಿತ್ತಿರುವುದಾಗಿಯೂ, ವೇದಾಂತ ಮತ್ತು ಮತ ತತ್ವಗಳು ಅದಕ್ಕೆ ಎರಡು ಸಾಧನಗಳೆಂದೂ ಪಾಶ್ಚಾತ್ಯ ದೇಶಗಳಲ್ಲಿ ಇವೆರಡನ್ನೂ ಪ್ರತ್ಯೇಕವಾಗಿ ಕಾಣಲಾಗುತ್ತಿರುವುದೆಂದೂ ಹೇಳಿದರು. ಗೋಷ್ಠಿಯು ನಡೆಸುವ ಕಾರ್ಯವು ಯಶಸ್ವಿಯಾಗಲೆಂದು ಅವರು ಹಾರೈಸಿದರು.

ದಕ್ಷಿಣ ಕೊರಿಯದಲ್ಲಿ ಮಾರ್ಷಲ್ ಲಾ ಜಾರಿ

ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ತಮ್ಮ ದೇಶಾದ್ಯಂತ ಮಾರ್ಷಲ್ ಲಾ ಜಾರಿ ಮಾಡಲು ಆಜ್ಞೆ ಮಾಡಿರುತ್ತಾರೆ ಸೈನಿಕರಿಗೆ ಕೊಡಲಾಗಿರುವ ರಜಾವನ್ನು ರದ್ದು ಮಾಡಲಾಗಿದೆ ರೀಯವರು ಅಮೆರಿಕಾ ಅಧ್ಯಕ್ಷರಿಗೆ ಬರೆದಿರುವ ಪತ್ರದ ಪ್ರಕಾರ, ತಮ್ಮ ಹೊಸ ಶಾಂತಿ ಸಲಹೆಗಳನ್ನು ವಿಶ್ವ ಸಂಸ್ಥೆಯು ಒಪ್ಪದಿದ್ದರೆ, ಉತ್ತರ ಕೊರಿಯದೊಳಗೆ ಪ್ರವೇಶಿಸಿ ದಕ್ಷಿಣ ಕೊರಿಯನ್ನರೇ ಏಕಾಂಗಿಯಾಗಿ ಯುದ್ಧ ಮಾಡುವುದಾಗಿ ವಿಶ್ವಸಂಸ್ಥೆಗೆ ದಕ್ಷಿಣ ಕೊರಿಯವು ಪ್ರಚಾರ ಮೂಲಕ ತಿಳಿಸಿರುತ್ತದೆ

ಸ್ಕೂಲ್ ಫೈನಲ್‌ನಲ್ಲಿ ಶೇ|| ೨೭ ರಷ್ಟು ತೇರ್ಗಡೆ

ಈ ವರ್ಷ ಸಂಸ್ಥಾನದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶೇ|| ೨೭.೩ ರಷ್ಟು ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರೆಂದು ವಿದ್ಯಾ ಸಚಿವರು ತಿಳಿಸಿರುತ್ತಾರೆ

ಪ್ರಭುಗಳಿಂದ ೨ ಸಲಗಗಳ ಷಿಕಾರಿ

ಮೈಸೂರು ೮

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಪೈರನ್ನು ಹಾಳು ಮಾಡುತ್ತಿದ್ದ ೧೦ ಅಡಿ ಎತ್ತರದ ಭಾರಿ ಸಲಗವೊಂದನ್ನು ಶ್ರೀಮನ್ಮಹಾರಾಜರವರು ಮೊನ್ನೆ ಸಂಜೆ ಹಂಗಳದ ಬಳಿ ಹೊಡೆದುಹಾಕಿದರು ಬಿಳಿಗಿರಿರಂಗನ ಬೆಟ್ಟದಲ್ಲಿ ಪ್ರಯಾಣಿಕರಿಗೆ ತೊಂದರೆ ಕೊಡುತ್ತಿದ್ದ ೧೦ ಅಡಿ ಎತ್ತರದ ಇನ್ನೊಂದು ಸಲಗನನ್ನು ಅವರು ಕಳೆದ ತಿಂಗಳು ೨೭ ನೇ ತಾ|| ಹೊಡೆದು ಹಾಕಿದರು. ಈ ಎರಡು ಸಲಗಗಳ ಕೋರೆ ದಾಡೆಗಳು ೪ ಅಡಿ ಉದ್ದ ಮತ್ತು ೧½ ಅಡಿ ದಪ್ಪ ಇದ್ದುವು ಜಿಲ್ಲಾ ಅರಣ್ಯಾಧಿಕಾರಿಗಳಾದ ಶ್ರೀ ಬಿ ಎಚ್ ಗುಲಾಬ್ ಸಿಂಗ್‌ರವರು ಷಿಕಾರಿ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಿದ್ದರು

ಗೌರೀಶಂಕರದ ಮೇಲೆ ಭಾರತದ ಧ್ವಜ

ಗೌರೀಶಂಕರ ಶಿಖರದ ಮೇಲೆ ಭಾರತದ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಲಾಯಿತೆಂದು ಬ್ರಿಟಿಷ್ ಪರ್ವತಾರೋಹಿ ಪಡೆಯ ಮುಖಂಡರಾದ ಕರ್ನಲ್ ಹಂಟ್‌ರವರು ಭಾರತದ ಮಂತ್ರಿ ಆಜಾದ್‌ರವರಿಗೆ ತಿಳಿಸಿ, ಅವರ ಅಭಿನಂದನಾ ಸಂದೇಶಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿರುವರು

ಉಪಾಹಾರದ ವೆಚ್ಚಕ್ಕೆ ಪುರಸಭೆಯ ವಿರೋಧ

ನಂಜನಗೂಡು ೪

ಕಳೆದ ತಿಂಗಳು ಇಲ್ಲಿನ ಪೌರಸಭೆಯು ಸೇರಿದ್ದಾಗ ನರಸಣ್ಣನವರ ಅಗ್ರಹಾರದ ರಸ್ತೆಯ ಪಕ್ಕಗಳಲ್ಲಿ ಚರಂಡಿಗಳನ್ನು ನಿರ್ಮಿಸಲೂ, ಗುಂಡ್ಲು ನದಿಗೆ ಸೋಪಾನವನ್ನು ಕಟ್ಟಿಸಲೂ ಮತ್ತು ನಗರದ ಕಸ್ತೂಲಗಳನ್ನು ಹೊರಕ್ಕೆ ಸಾಗಿಸಲು ಸರ್ಕಾರದಿಂದ ೧ ಲಾರಿಯನ್ನು ಸಾಲವಾಗಿ ಪಡೆಯಲೂ ನಿರ್ಧರಿಸಲಾಯಿತು. ಇನ್ನು ಮುಂದೆ ಸಭೆಯ ಅಧಿವೇಶನಕಾಲದಲ್ಲಿ ಪೌರ ಸಭೆಯ ವೆಚ್ಚದಲ್ಲಿ ಉಪಾಹಾರವನ್ನು ನಿರ್ವಹಿಸಲು ಸಭೆಯು ವಿರೋಧವನ್ನು ವ್ಯಕ್ತಪಡಿಸಿತು

ಟೇನ್ಸಿಂಗರಿಗೆ ರಾಷ್ಟ್ರಾಧ್ಯಕ್ಷರ ಪದಕ

ಗೌರೀಶಂಕರವನ್ನೇರಿದ ಟೇನ್ಸಿಂಗರಿಗೆ ಭಾರತ ಸರ್ಕಾರದವರು, ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿ ವಿಶೇಷ ಪದಕವೊಂದನ್ನು ಕೊಡಲಿರುವರು ಮುಂದಿನ ತಿಂಗಳು ಇದಕ್ಕಾಗಿ ಒಂದು ಸಾರ್ವಜನಿಕ ಸಮಾರಂಭವನ್ನು ನಡೆಸಲಾಗುವುದು. ಪಶ್ಚಿಮ ಬಂಗಾಳಾ ಸರ್ಕಾರದವರು ಟೇನ್ಸಿಂಗ್ ಎಂಬ ಅಭಿಧಾನದ ೭೦೦ ಅಡಿಯ ಫಿಲಂ ಅನ್ನು ತೆಗೆಯುವರು

ಬ್ರಿಟಿಷ್ ರಾಣಿಗೆ ಭಾರತದ ಮಾವಿನ ಹಣ್ಣು

ಲಂಡನ್ನಿನಲ್ಲಿರುವ ಭಾರತದ ಪ್ರಧಾನಿ ನೆಹರೂರವರು ಬೊಂಬಾಯಿಯಿಂದ ಬಂದ ಹೊಸ ಮಾವಿನ ಹಣ್ಣುಗಳ ಪೈಕಿ ಹಲವನ್ನು ಬ್ರಿಟನ್ನಿನ ರಾಣಿಯವರಿಗೆ ಒಪ್ಪಿಸಿದರೆಂದೂ, ಹೊಸ ಹಣ್ಣನ್ನು ತಾವು ಹಿಂದೆ ಯಾವಾಗಲೂ ತಿಂದಿರಲಿಲ್ಲವೆಂದು ರಾಣಿಯವರು ನೆಹರೂರವರಿಗೆ ತಿಳಿಸಿದರೆಂದೂ ವರದಿಯಾಗಿದೆ

ರಾಲ್ಫ್ ಬಂಚರು ವಿಚಾರಣೆಗೆ ಗುರಿ

ವಿಶ್ವ ಸಂಸ್ಥೆಯ ಹುದ್ದೆಯೊಂದರಲ್ಲಿದ್ದು, ನೋಬೆಲ್ ಶಾಂತಿ ಪಾರಿತೋಷಕ ಪಡೆದ ಡಾ|| ರಾಲ್ಫ್ ಬಂಚ್ ಎಂಬ ಅಮೆರಿಕದ ನೀಗ್ರೋ ಮುಖಂಡರನ್ನು, ಅಮೆರಿಕದ ವಿರುದ್ಧ ಕಾರ್ಯಗಳನ್ನು ನಡೆಸಿದರೆಂಬ ಆಪಾದನೆ ಬಗ್ಗೆ ವಿಚಾರಣೆಗೆ ಗುರಿಪಡಿಸಲಾಗುವುದೆಂದು ವರದಿಯಾಗಿದೆ

ಮುಂದಿನ ವರ್ಷದಿಂದ ನಾಟಕ ಕಲಾ ವ್ಯಾಸಂಗ

ಮೈಸೂರು ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ನಾಟಕದ ಕಲೆಯನ್ನು ೨ ವರ್ಷ ಅವಧಿಯ ಐಚ್ಛಿಕ ವಿಷಯವಾಗಿ ಅಭ್ಯಸಿಸುವ ಏರ್ಪಾಡನ್ನು ೧೯೫೪-೫೫ ರಲ್ಲಿ ಮಾಡಲಾಗುವುದೆಂದು ಗೊತ್ತಾಗಿದೆ ಕಲೆಯ ವ್ಯಾಸಂಗಕ್ಕೆ ವ್ಯವಸ್ಥೆ ಮಾಡಿರುವುದು ಇಡೀ ವಿಶ್ವಾದಲ್ಲಿ ಇದೇ ಮೊದಲೆಂದು ಹೇಳಲಾಗಿದೆ

○ ನಗರದಲ್ಲಿ ನೆನ್ನೆ ಒಂದೂ ಮುಕ್ಕಾಲು ಅಂಗುಲಗಳಷ್ಟು ಮಳೆಯಾಗಿದೆ.

ಕುದುರೆ ಜೂಜಿನ ಫಲಿತಾಂಶ

ಮೈಸೂರು

ನೆನ್ನೆ ನಡೆದ ಕುದುರೆ ಜೂಜಿನ ಫಲಿತಾಂಶಗಳು ಈ ರೀತಿ ಇವೆ:—

೧ ಬೃಂದಾವನ್ ಪ್ಲೇಟ್: ವಿನ್ ಗ್ರೀಟಾಪ್ಸ್ ೨೨ ೮-೦, ಪ್ಲೇಸ ೮-೮-೦, ಜಿಪ್ಸಿ ಲೌ ೭-೦-೦

೨ ಸ್ಟ್ಯುಯರ್ಡ್ಸ್ ಕಪ್: ವಿನ್—ಸನ್ ಸ್ಟ್ರೀಂ ೨೨-೮-೦, ಪ್ಲೇಸ ೧೫-೦-೦, ಚಕೋರ್ ೪೧-೦-೦ ಚಂದ್ರಮಹಲ್ ೧೦-೦-೦

೩ ವಸಂತ ಪ್ಲೇಟ್ : ವಿನ್—ಪ್ರೊಮಿತಿಯಸ್ ೯-೦-೦, ಪ್ಲೇಸ್ ೫-೦-೦, ಸನ್ ಬರ್ಸ್ಟ್ ೭-೮-೦.

೪ ಮಹಾರಾಜಾಸ್ ಗೋಲ್ಡ್ ಕಪ್.— ವಿನ್—ಪೈರೊ III ೧೪-೦-೦, ಪ್ಲೇಸ್ ೫-೮-೦; ಗೋಲ್ಡನ್ ಲ್ಯಾಪ್ ೭-೦ ೦

ಶ್ರೀಮನ್ಮಹಾರಾಜರು ತೆರೆದ ಕಾರಿನಲ್ಲಿ ರೇಸ್‌ಕೋರ್ಸಿಗೆ ಆಗಮಿಸಿದಾಗ ಸ್ಟ್ಯುವರ್ಡ್‌ಗಳೂ ಮತ್ತು ರೇಸ್ ಕ್ಲಬ್ಬಿನ ಅಧಿಕಾರಿಗಳೂ ಅವರನ್ನು ಸ್ವಾಗತಿಸಿದರು. ಭಾರತದ ನಿವೃತ್ತ ಪ್ರಧಾನ ಸೇನಾನಿ ಶ್ರೀ ಕೆ ಎಂ. ಕಾರಿಯಪ್ಪನವರೂ ನೆನ್ನೆ ರೇಸಿಗೆ ಆಗಮಿಸಿದ್ದರು

ಮಹಾರಾಜರವರ ಗೋಲ್ಡ್ ಕಪ್ ರೇಸಿನಲ್ಲಿ ಗೆದ್ದ ಕುದುರೆಯಾದ ಪೈರೊ IIIನ ಮಾಲೀಕರೂ, ಮತ್ತು ತ್ರೈನರೂ ಆದ, ಬೊಂಬಾಯಿನ ಖೊಡಿಯಾರ್‌ರವರು ಪ್ರಭುಗಳ ಹಸ್ತದಿಂದ ಕಪ್ಪನ್ನು ಪಡೆದರು ವಿಶೇಷವೇನೆಂದರೆ ಪ್ರಯುಕ್ತ ಕಡೆಯ ಎರಡು ರೇಸುಗಳು ನಡೆಯಲಿಲ್ಲ

ಪರ್ಷಿಯಾ ಶಾಸನಸಭೆಯಲ್ಲಿ ಹೊಡೆದಾಟ

ಪರ್ಷಿಯದ ಷಹಾರವರ ಅಧಿಕಾರವನ್ನು ಮೊಟಕು ಮಾಡುವ ಬಗ್ಗೆ ಅಲ್ಲಿನ ಶಾಸನ ಸಭೆಯಾದ ಮಜ್ಲಿಸಿನಲ್ಲಿ ನೆನ್ನೆ ಒಂದು ಮಸೂದೆಯನ್ನು ಚರ್ಚಿಸುತ್ತಿದ್ದಾಗ ಪ್ರಧಾನಿ ಮುಸಾದಿಕ್‌ರವರ ಪಕ್ಷಕ್ಕೂ, ವಿರೋಧಿಗಳಿಗೂ ಹೊಡೆದಾಟ ನಡೆದು ಇಬ್ಬರ ತಲೆಗಳಿಗೆ ಗಾಯಗಳಾದುವೆಂದೂ, ಪೋಲೀಸರು ಸಭೆಗೆ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರೆಂದೂ ವರದಿಯಾಗಿದೆ ವಿರೋಧ ಪಕ್ಷದ ಹುಸೇನ್ ಮೆಕ್ಕಿಯವರು ಸಭೆಯ ಉಪಾಧ್ಯಕ್ಷರನ್ನು ಪಕ್ಷಪಾತಕ್ಕಾಗಿ ಆಕ್ಷೇಪಿಸಿ, ಅವರು ಸಭಾಧ್ಯಕ್ಷತೆಯನ್ನು ಬಿಟ್ಟು ತಮ್ಮ ಸ್ಥಾನದಿಂದ ಕೆಳಗಿಳಿಯಬೇಕೆಂದೂ ಒತ್ತಾಯಪಡಿಸಿದಾಗ ಗೊಂದಲವು ಉಪಕ್ರಮವಾಯಿತೆಂದು ಹೇಳಲಾಗಿದೆ ಅನಂತರ ಸಭೆಯನ್ನು ಮುಂದಕ್ಕೆ ಹಾಕಲಾಯಿತು.

ವಿವಾಹ ಮಹೋತ್ಸವ

ಯಳಂದೂರು ತಾಲ್ಲೂಕು ಅಗರದ ಜಮೀನ್ದಾರರಾದ ಶ್ರೀ ವೆಂಕಟರಾಮರು ತಮ್ಮ ಪುತ್ರ ಶ್ರೀ ವಾಸುದೇವರಾಯರ ಮಗಳು ಸೌ|| ಪರಿಮಳವನ್ನು ಬೆಂಗಳೂರಿನಲ್ಲಿರುವ, ಸವರ್ಣ ಶ್ರೇಷ್ಠಿಯ ಶ್ರೀ ಎಂ ಎಸ್ ಶ್ರೀನಿವಾಸರಾಯರ ಪುತ್ರ ಶ್ರೀ ಎಂ ಎಸ್ ಮುರಾರಿಯವರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರು ಜಿಲ್ಲೆಯ ಐದನೇ ಸಹಕಾರ ಸಮ್ಮೇಳನ

ಎಂ. ಎಸ್. ರಾಮಸ್ವಾಮಿಯವರ ಅಧ್ಯಕ್ಷ ಭಾಷಣ

ಮೈಸೂರು ... ನಮ್ಮದೇಶದ ರೈತರು ಬೆಳೆದ ... [illegible] ... ಒಟ್ಟೆಯನ್ನೂ, ನವರತ್ನಗಳನ್ನೂ ... [illegible] ... ಗಾಂಧಿ ... [illegible] ... ಬೇಕಾದ ಭೂಮಿ, ವ್ಯವಸಾಯಕ್ಕೆ ... [illegible] ...

[illegible]

... ಮಾಡಿದಂತೆ ಬೀದಿಗಳೂ ಮರದ ನರಳೂ, ಚಾವಡಿಗಳೂ ಶಾಲೆಗಳಾಗಬೇಕು.

ದೇಶದ ಸಂಪತ್ತು ಸಮಸ್ತ ಪ್ರಜೆಗಳಲ್ಲೂ ಸರಿಯಾದ ರೀತಿಯಲ್ಲಿ ಹಂಚಿಕೆಯಾಗದಿರುವುದೇ ಒಂದವಾಳದ ಅಭಾವಕ್ಕೆ ಮುಖ್ಯ ಕಾರಣವಾಗಿದೆ. ಧನಿಕರು ಮಾಡಲಿಸಿಂದಲೂ ಧನಿಕರಾಗಿಯೇ ... [illegible] ... ಜೀವಲ ಒಂದವಾಳವನ್ನು ಒದಗಿಸುವುದೊಂದೇ ಸಹಕಾರದ ... [illegible] ...

ಹಳ್ಳಿಗಾಡಿನವರ ... [illegible] ... ಗಿ ಸಹಕಾರವು ... [illegible]

... [illegible] ... ಸಹಕಾರವು ... ಮಾಡಿದ ... ವರ್ಗಗಳಿಂದ ... [illegible] ... ಅಭಿಮಾನ ... [illegible] ... ಸಹಕಾರದ ಪ್ರಗತಿಯು ಮಂದವಾಗುತ್ತಿದೆ ... [illegible] ... ಸಹಕಾರ ಸಂಘಗಳ ... [illegible] ... ಸಹಕಾರ ಸಂಘಗಳಲ್ಲಿ ಧರ್ಮ ಮತ್ತು ನಿಷ್ಕಾಮ ... ಅನೇಕರು ಮರೆಯುತ್ತಿದ್ದಾರೆ.

ಹಳ್ಳಿಯವರಿಗೆ ... ಸಹಕಾರ ... [illegible] ... ಈ ಸಮಸ್ಯೆಯನ್ನು ... ಸಹಕಾರದ ಮೂಲ ... ಒದಗಿಸಿಕೊಳ್ಳುವ ... ಸಹಕಾರ ಸಂಘಗಳು ಎಲ್ಲಾ ... ಸ್ಥಾಪಿತವಾಗಬೇಕು. ... ಸಂಘಗಳ ಉದ್ದೇಶವಾಗಿರ ... ಸಂಘಗಳು ... ಮತ್ತು ಸಾಮಾಜಿಕ ಜೀವನದ ... ವಿವಿಧೋದ್ದೇಶ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಒಂದು ರೀತಿಯಲ್ಲಿ ಮೈಸೂರು ದೇಶವು ಈ ಕಾರ್ಯವನ್ನು ಸಾಧಿಸುತ್ತದೆ. ಹಲವು ... ಸಹಕಾರದ ... ಸಂಘಗಳು ಮುದುಡಿಕೊಳ್ಳುತ್ತಿವೆ ... ನಾಶವಾಗದಂತೆ ನೋಡಿಕೊಳ್ಳುವುದು ನಮ್ಮ ಕೆಲಸವಾಗಿದೆ.

ಕೇಂದ್ರ ಮತ್ತು ಸಂಸ್ಥಾನಗಳ ಸರ್ಕಾರಗಳು ... [illegible] ... ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ... ಸ್ಥಾನವನ್ನು ಕೊಡಲಾಗಿದೆ ... ಯೋಜನೆಗಳು ... ಭಾರತದ ಪ್ರಜೆಗಳ ... ಸಹಕಾರವು ... ಭಾರತ ... ಸ್ಪೈವವನ್ನು ಪುನಃ ಪಡೆಯಲ್ಲದು.

Edited, Printed and Published by A. R. Nagarajan ... Sadhvi Press, D. Subbaiah Road, Mysore

ಮೈಸೂರು ಶಾಸನಸಭೆಯಲ್ಲಿ ಆಂಧ್ರದ ಮಸೂದೆ ಚರ್ಚೆ

ಆಂಧ್ರ ಪ್ರಾಂತ ನಿರ್ಮಾಣದ ಸಂಬಂಧವಾಗಿ ತಯಾರಾಗುವ ಮಸೂದೆಯು ಮದ್ರಾಸ್ ಮತ್ತು ಮೈಸೂರು ಶಾಸನ ಸಭೆಗಳಲ್ಲಿ ಚರ್ಚಿಸಲ್ಪಡಬೇಕಾಗುವುದೆಂದೂ, ಹೊಸ ಪ್ರಾಂತದ ಆಸ್ತಿ ಮತ್ತು ಜವಾಬ್ದಾರಿಗಳ ವಿವರವನ್ನು ಮಸೂದೆಯಲ್ಲಿ ಕೊಡಲಾಗುವುದೆಂದೂ ವರದಿಯಾಗಿದೆ. ಮಸೂದೆಯನ್ನು ಸಿದ್ಧಪಡಿಸಲು ಭಾರತ ರಾಜ್ಯಾಂಗವನ್ನು ತಯಾರು ಮಾಡಿದ ಕೌನ್ಸಿಲ್ ಆಫ್ ಸ್ಟೇಟ್ಸ್ ಸೆಕ್ರೆಟರಿ ಎಸ್. ಎನ್. ಮುಖರ್ಜಿಯವರ ಸಹಾಯವನ್ನು ಕೋರಲಾಗುವುದೆಂದು ಗೊತ್ತಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ 8-30 ಎಲ್. ರಾಜಾರಾವ್ ವೀಣೆ. ಮಧ್ಯಾಹ್ನ 1-30 ಕೊಳಲು. 3 ಎಂ. ಎಸ್. ರಾಮಚಂದ್ರರಾವ್ ... [illegible] ... ಸಂಗೀತ ... [illegible] ... ಪ್ ಹಿಂದೂಸ್ಥಾನಿ ಸಂಗೀತ ... [illegible] ... ದವರಿಂದ ... [illegible] ... ರಿಂದ ವಾದ್ಯ ... [illegible]

SRI GAYATHRI

TALKIES

LAST DAY

Pre-Historic Women

From 9-6-53 ... 2 ... Warner's

RETREAT HELL

ಬೆಂಗಳೂರು ... ರೂ.

ಬೆಂಗಳೂರಿನಲ್ಲಿ ... ಹತ್ತನೇ ಅವಧಿಯಲ್ಲಿ ೧೦ ರೂ. ... ರೂ. ಏರಿಸಲಾಗುತ್ತದೆ.

ನೋಟೀಸು

—:o:—

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಅವುಗಳ ಮುಂದೆ ನಮೂದಿಸಿರುವ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ:—

1) ಸುಮಾರು 160 ಟನ್ ಗಳಗಳ ... 5 ಲಾಟುಗಳಲ್ಲಿ 17-6-1953ನೇ ತಾರೀಖು ಬುಧವಾರ ಬೆಳಗ್ಗೆ 10ಗಂಟೆಗೆ ಮೈಸೂರು ರೌಡ್ ಸದರ್ನ್ ರೈಲ್ವೆ ವರ್ಕ್‌ಶಾಪ್ ಆವರಣದಲ್ಲಿ.

2) ಸುಮಾರು 14 ಟನ್ ... ಮರದ ಪೆಟ್ಟಿಗೆ ಮತ್ತು ಹಲಗೆಗಳು, 4 ಲಾಟುಗಳಲ್ಲಿ. 18-6-1953ನೇ ತಾ|| ಗುರುವಾರ ಬೆಳಗ್ಗೆ 10 ಗಂಟೆಗೆ, ಮೈಸೂರು ರೌಡ್ ಸದರ್ನ್ ರೈಲ್ವೆ ಸೆಂಟ್ರಲ್ ಸ್ಟೋರ್ಸ್ ಆವರಣದಲ್ಲಿ.

ಈ ಮಾರಾಟಕ್ಕೆ ಅನ್ವಯಿಸುವ ನಿಬಂಧನೆಗಳ ನಮೂನೆಯನ್ನು ಕೆಳಗೆ ನಮೂದಿಸಿರುವ ಆಫೀಸಿನಲ್ಲಿ ಪಡೆಯಬಹುದು

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್,

ಸದರ್ನ್ ರೈಲ್ವೆ,

ಮೈಸೂರು ರೌಡ್.

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ

ಲಿಮಿಟೆಡ್ ಮೈಸೂರು

ನೋಟಿಫಿಕೇಷನ್

ಹಳೇ ಪದಾರ್ಥಗಳ ವಿಲೇವಾರಿ ಬಗ್ಗೆ

ಕೆಳಗೆ ಕಂಡ ಪದಾರ್ಥಗಳನ್ನು ಕೊಳ್ಳುವ ಬಗ್ಗೆ ಮೊಹರಾದ ಟೆಂಡರುಗಳನ್ನು ಕರೆಯಲಾಗಿದೆ —

1	5 ಇಂಪೀರಿಯಲ್ ಗ್ಯಾಲನ್ ಹಿಡಿಸುವ ಹಳೆಯ ಖಾಲಿ ಡ್ರಮ್ಮುಗಳು	1,100
2.	40-45 ಗ್ಯಾಲನ್ ಹಿಡಿಸುವ ಹಳೇ ಖಾಲಿ ಡ್ರಮ್ಮುಗಳು	12
3	5-6 ಗ್ಯಾಲನ್ ಹಿಡಿಸುವ ಹಳೆಯ ಖಾಲಿ ಡ್ರಮ್ಮುಗಳು	75
4	ಬೇರೆ ಬೇರೆ ಸೈಜುಗಳ, ತರಹೇವಾರಿ, ಹಳೆಯ ಖಾಲಿ ಗೋಣಿ ಚೀಲಗಳು	7,000

—: ಷ ರ ತ್ತು ಗ ಳು :—

1 "ಹಳೆಯ ಖಾಲಿ ಚೀಲಗಳು ಮತ್ತು ಖಾಲಿ ಡ್ರಮ್ಮುಗಳನ್ನು ಕೊಳ್ಳಲು ಟೆಂಡರು" ಎಂದು ನಮೂದಿಸಿದ ಮೊಹರಾದ ಟೆಂಡರುಗಳನ್ನು 16-6-1953 ನೇ ತಾರೀಖು ಸಂಜೆ 4 ಘಂಟೆಯೊಳಗೆ ತಲುಪುವಂತೆ ಕೆಳಗೆ ರುಜು ಮಾಡಿರುವವರ ವಿಳಾಸಕ್ಕೆ ಕಳುಹಿಸತಕ್ಕದ್ದು.

2 ಟೆಂಡರಿನೊಡನೆ 100 ರೂ ಠೇವಣಿ ಮೊಬಲಗನ್ನು ಕಟ್ಟಬೇಕು.

3 ಮೇಲೆ ನಮೂದಿಸಿರುವ ಎಲ್ಲ ಪದಾರ್ಥಗಳಿಗಾಗಲೀ ಅಥವಾ ಒಂದೊಂದಕ್ಕೇ ಆಗಲೀ ಟೆಂಡರುಗಳನ್ನು ಕಳುಹಿಸಬಹುದು.

4 ಮಾರಾಟ ಮಾಡಲಿರುವ ಪದಾರ್ಥಗಳನ್ನು, ಅಪೇಕ್ಷಿಸುವ ಟೆಂಡರುದಾರರು ಕೆಲಸದ ದಿನಗಳಲ್ಲಿ ಬೆಳಗ್ಗೆ 9 ರಿಂದ 12 ರ ವರೆಗೂ ಮತ್ತು ಸಂಜೆ 3 ರಿಂದ 5 ರ ವರೆಗೂ ಅವಲೋಕಿಸಿ ಮಾಡಬಹುದು

5. ಜಯಶೀಲರಾದ ಟೆಂಡರುದಾರರು, ತಮಗೆ ಸುದ್ದಿ ಕೊಟ್ಟ 7 ದಿನಗಳೊಳಗೆ, ಕೊಂಡುಕೊಂಡ ಪದಾರ್ಥಗಳ ಪೂರ್ತಾ ಮೌಲ್ಯವನ್ನು ಪಾವತಿ ಮಾಡಿ ಕಾರ್ಖಾನೆಯಿಂದ ಅವನ್ನು ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗತಕ್ಕದ್ದು.

6 ಟೆಂಡರುಗಳನ್ನು, ಯಾವ ಕಾರಣವೂ ಕೊಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿಯ ಅಧ್ಯಕ್ಷರು ಪಡೆದಿರುವರು.

ಮೈಸೂರು 5-6-1953

(ರುಜು) ಎಸ್. ಕೆ. ರಂಗನಾಥ್,

ಜನರಲ್ ಮ್ಯಾನೇಜರ್ ಮತ್ತು ಕಾರ್ಯದರ್ಶಿ.

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ... ಮೈಸೂರು

ರಿಜಿ ನಂ. 792 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೯-೬-೧೯೫೩ [ಸಂಚಿಕೆ ೨೫೫

ಕೆಂಪು ಚೀಣಕ್ಕೆ ವಿಶ್ವ ಸಂಸ್ಥೆ ಸದಸ್ಯತ್ವ

ಕೊರಿಯಾ ಯುದ್ಧ ಖೈದಿಗಳ ಬಗ್ಗೆ ಒಪ್ಪಂದ

ಪಾನ್ ಮುಂಜಾನಿನಲ್ಲಿ ನಡೆಯುತ್ತಿರುವ ಕೊರಿಯಾ ಕದನ ವಿರಾಮದ ಮಾತುಕತೆಗಳು ಬಹುಮಟ್ಟಿಗೆ ಯಶಸ್ವಿಯಾಗಿವೆ. ನೆನ್ನೆ ವಿಶ್ವ ಸಂಸ್ಥೆ ಮತ್ತು ಕಮ್ಯೂನಿಸ್ಟ್ ಚೀಣಗಳ ಪ್ರತಿನಿಧಿಗಳು ಯುದ್ಧ ಖೈದಿಗಳ ವಿನಿಮಯದ ಬಗ್ಗೆ ಒಪ್ಪಂದಕ್ಕೆ ರುಜು ಹಾಕಿದರು. ಕದನ ವಿರಾಮ ಮತ್ತು ಯುದ್ಧ ಸ್ತಂಭನ ರೇಖೆಯನ್ನು ಗೊತ್ತುಪಡಿಸುವ ಬಗ್ಗೆಯೂ ಸಧ್ಯದಲ್ಲೇ ಸಂಧಾನವು ಆರಂಭವಾಗಿ, ಯುದ್ಧ ಮುಕ್ತಾಯ ಮಾಡಿ ಶಾಂತಿ ನೆಲೆಸುವ ಯತ್ನವು ಫಲಕಾರಿಯಾಗುವ ರೀತಿಯಲ್ಲಿ ಮಾತುಕತೆಗಳು ಮುಂದುವರಿಯುವುವು. ಸ್ವದೇಶಕ್ಕೆ ಹಿಂತಿರುಗಲು ಅಪೇಕ್ಷಿಸದ ಯುದ್ಧ ಖೈದಿಗಳ ಸಮಸ್ಯೆಯ ಇತ್ಯರ್ಥಕ್ಕಾಗಿ ಭಾರತ ಮತ್ತು ಇತರ ನಾಲ್ಕು ರಾಷ್ಟ್ರಗಳ ಒಂದು ಕಮಿಷನ್ನನ್ನು ನೇಮಿಸಲು ಉಭಯ ಪಕ್ಷಗಳವರೂ ಒಪ್ಪಿರುವರು.

ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ಮೇಲ್ಕಂಡ ಸಂಧಾನವನ್ನು ವಿರೋಧಿಸಿ, ಕದನ ವಿರಾಮ ಒಪ್ಪಂದಕ್ಕೆ ಮಾನ್ಯತೆ ಕೊಡುವುದಿಲ್ಲವೆಂದು ತಿಳಿಸಿರುವರು. ಕೊರಿಯಾದಲ್ಲಿ ಯುದ್ಧ ಕಾರ್ಯಾಚರಣೆಯನ್ನು ಮುಂದುವರಿಸಲೂ ಅವರು ನಿರ್ಧರಿಸಿರುವರು. ಸಂಧಾನವು ಯಶಸ್ವಿಯಾಗುತ್ತಿರುವ ಬಗ್ಗೆ ಪಂಡಿತ ನೆಹರೂರವರು ಸಂತೋಷವನ್ನು ವ್ಯಕ್ತಪಡಿಸಿರುವರು.

ಯುದ್ಧ ಖೈದಿಗಳನ್ನು ಸ್ವದೇಶಗಳಿಗೆ ರವಾನಿಸುವ ಬಗ್ಗೆ ಏರ್ಪಡಿಸಲಾಗಿರುವ ತಟಸ್ಥ ರಾಷ್ಟ್ರಗಳ ಕಮೀಷನ್‌ಗೆ ಭಾರತದ ಪ್ರತಿನಿಧಿಯು ಅಧ್ಯಕ್ಷರಾಗಿರುವರು. ಸ್ವೀಡನ್, ಸ್ವಿಟ್ಜರ್ಲೆಂಡ್, ಪೋಲೆಂಡ್ ಮತ್ತು ಜೆಕೊಸ್ಲೊವೇಕಿಯ ರಾಷ್ಟ್ರಗಳಿಂದ ತಲಾ ಒಬ್ಬೊಬ್ಬ ಪ್ರತಿನಿಧಿಯನ್ನು ಕಳುಹಿಸಲು ಆ ರಾಷ್ಟ್ರಗಳನ್ನು ಕೋರಲಾಗುವುದು. ಖೈದಿಗಳ ವಿನಿಮಯ ಕಾರ್ಯಕ್ಕಾಗಿ ಭಾರತವು ಮಾತ್ರ ಕೊರಿಯಾಕ್ಕೆ ಶಸ್ತ್ರ ಸಜ್ಜಿತ ಸೈನ್ಯಗಳನ್ನು ಒದಗಿಸುವುದು. ಮೂರು ತಿಂಗಳ ಅವಧಿಯಲ್ಲಿ ಯುದ್ಧ ಖೈದಿಗಳ ವಿನಿಮಯದ ಬಗ್ಗೆ ಅವರಿಗೆ ವಿವರವಾದ ತಿಳಿವಳಿಕೆ ಕೊಟ್ಟು ಸ್ವದೇಶಗಳಿಗೆ ರವಾನಿಸಲಾಗುವುದು. ಆ ಅವಧಿಯವರೆಗೆ ಅವರು ತಟಸ್ಥ ರಾಷ್ಟ್ರವೊಂದರ ಸುಪರ್ದಿನಲ್ಲಿರುವರು.

ರಾಘವೇಂದ್ರ ಚರಿತ್ರೆ

ರಾಜಧಾನಿಯ ಪುರಂಧರ ತ್ಯಾಗರಾಜ ಸಂಗೀತ ಪಾಠಶಾಲೆಯ ವಾಣಿವಿಲಾಸ ಮೊಹಲ್ಲಾ ಶಾಖೆಯಲ್ಲಿ ನಾಳೆ ಮತ್ತು ನಾಳಿದ್ದು ಸಂಜೆ ೬ ಗಂಟೆಗೆ ಶ್ರೀ ಅನಂತರಾಮಯ್ಯ ಮತ್ತು ಪಿ. ಸುಬ್ಬರಾವ್‌ರವರುಗಳಿಂದ ಶ್ರೀ ರಾಘವೇಂದ್ರ ಸ್ವಾಮಿಯವರ ಜೀವನ ಚರಿತ್ರೆಯು ಕಥಾರೂಪದಲ್ಲಿ ನಡೆಯುವುದು.

ಮಹಾಜನಾ ಪ್ರೌಢಶಾಲಾ

ವಾಣೀವಿಲಾಸ ಮೊಹಲ್ಲದಲ್ಲಿರುವ ಮಹಾಜನಾ ಪ್ರೌಢಶಾಲೆಯು ಬೇಸಿಗೆ ರಜದ ನಂತರ ಮತ್ತೆ ನೆನ್ನೆಯಿಂದ ಪ್ರಾರಂಭವಾಗಿರುತ್ತೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಪೋಷಕ ವರ್ಗದವರು ಎಂದಿನಂತೆ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಪರೀಕ್ಷೆಗಳಲ್ಲಿ ಶೇಕಡಾವಾರು ಫಲಿತಾಂಶ

ಮೈಸೂರು ೯

ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳು ಇಂದು ಬೆಳಗ್ಗೆ ಪ್ರಕಟವಾದುವು. ಅವುಗಳಲ್ಲಿ ಕೆಳಗೆ ಕಂಡಂತೆ ಶೇಕಡಾವಾರಾಗಿ ಪ್ರಮೋಷನ್ ಕೊಡಲಾಗಿದೆ:—

ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶೇಕಡ ೩೩, ಇಂಟರ್‌ಮೀಡಿಯೆಟ್ ಆರ್ಟ್ಸ್‌ನಲ್ಲಿ ೫೯, ಸೈನ್ಸ್‌ನಲ್ಲಿ ೩೧.೪, ಬಿ. ಎ ೩೧, ಬಿ ಎಸ್‌ಸಿ ೨೧, ಇಂಟರ್‌ಮೀಡಿಯೆಟ್ ಕಾಮರ್ಸ್ ೫೪ ೧ ಮತ್ತು ಬಿ ಕಾಂ ೪೪

ಸುಬ್ಬರಾಯನ ಕೆರೆಯಲ್ಲಿ ಕರ್ನಾಟಕ ಬ್ಯಾಂಡ್

ರಾಜಧಾನಿಯ ಸುಬ್ಬರಾಯನ ಕೆರೆಯ ಅಂಬಳೆ ಅಣ್ಣಯ್ಯ ಪಂಡಿತರ ಪಾರ್ಕಿನಲ್ಲಿ ನಾಳೆ ಸಂಜೆ ೬ ರಿಂದ ೭ ಗಂಟೆವರೆಗೆ ಕರ್ನಾಟಕ ಬ್ಯಾಂಡ್ ವಾದ್ಯವನ್ನು ಬಾರಿಸುವ ವ್ಯವಸ್ಥೆ ಮಾಡಲಾಗಿದೆ.

ವಿಶ್ವಸಂಸ್ಥೆಗೆ ಚೀಣವನ್ನು ಸೇರಿಸಲು ಒಪ್ಪಿಗೆ ?

ಕೊರಿಯಾ ಯುದ್ಧ ಮುಕ್ತಾಯವಾದ ನಂತರ ಕೆಂಪು ಚೀಣವನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಸೇರಿಸಿಕೊಳ್ಳುವ ಬಗ್ಗೆ ಕಾಮನ್‌ವೆಲ್ತ್ ಪ್ರಧಾನಿಗಳ ಪೈಕಿ ಬಹು ಮಂದಿ ಅಭಿಪ್ರಾಯಪಟ್ಟಿರುವರೆಂದೂ, ಬ್ರಿಟನ್ ಮತ್ತು ಈಜಿಪ್ಟ್‌ಗಳ ಬಿಕ್ಕಟ್ಟನ್ನು ಬಗೆಹರಿಸುವ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳು ತಮ್ಮ ಪ್ರಭಾವವನ್ನು ಉಪಯೋಗಿಸುವುವೆಂದೂ ಪಾಕಿಸ್ತಾನದ ಪ್ರಧಾನಿ ಮಹಮದಾಲಿಯವರು ತಿಳಿಸಿರುವರು.

○ ಭಾರತದ ಪಂಚ ವಾರ್ಷಿಕ ಯೋಜನೆಗಾಗಿ ಕೇಂದ್ರದವರು ಹೊಸದಾಗಿ ಎತ್ತಲಿರುವ ಸಾಲಕ್ಕೆ ನೆನ್ನೆಯಿಂದ ಹಣವು ತೃಪ್ತಿಕರವಾಗಿ ಬರುತ್ತಿರುವುದೆಂದು ರಿಜರ್ವ್ ಬ್ಯಾಂಕಿನ ಪ್ರಕಟಣೆಯಿಂದ ಗೊತ್ತಾಗಿದೆ.

★ ಕೈದಿ ★
ದಿನ ಪತ್ರಿಕೆ
ಜೂನ್ ೩೦ರಿಂದ ಪ್ರಕಟವಾಗುತ್ತದೆ
ವಿಶಿಷ್ಟ ಬೇಡಿಕೆಯಲ್ಲಿ ರಿಸರ್ವ್ ಮಾಡಿಕೊಳ್ಳಿ
—: ವಿವರಗಳಿಗೆ :—
ಕೈದಿ, ಬೆಂಗಳೂರು

ಎಸ್. ಎಸ್. ಎಲ್. ಸಿ ಯಲ್ಲಿ ಪ್ರಥಮ ೧೦ ಸ್ಥಾನಗಳು

ಸ್ವಂ ಸು. ಫೋನ್] ಬೆಂಗಳೂರು ೯

ಕಳೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಕೆಳಗೆ ಕಂಡ ವಿದ್ಯಾರ್ಥಿಗಳಿಗೆ ಪ್ರಥಮ ೧೦ ಸ್ಥಾನಗಳು ದೊರೆತಿವೆ.-

೧ ವಿನಾಯಕಮೂರ್ತಿ ಕೆ, ಆರ್. ಬಿ.ಎ.ಎನ್.ಎಂ ಹೈಸ್ಕೂಲು, ಬೆಂಗಳೂರು

೨. ನರಸಿಂಹಮೂರ್ತಿ ಎಂ. ಎನ್., ಮುನಿಸಿಪಲ್ ಹೈಸ್ಕೂಲು, ಸಕಲೇಶಪುರ.

೩. ಸೇತುಮಾಧವ ಎಸ್, ಗೌರ್ನಮೆಂಟ್ ಹೈಸ್ಕೂಲು, ಹಾಸನ

೪. ಯೋಗಾನರಸಿಂಹ ಬಿ. ಎನ್, ಮಧುಗಿರಿ ಹೈಸ್ಕೂಲ್.

೫ ಪ್ರಭಾಕರ ಕೆ. ಎಸ್, ಹಾರ್ಡ್ವಿಕ್ ಹೈಸ್ಕೂಲ್, ಮೈಸೂರು

೬ ರಾಮಪ್ರಿಯನ್ ಬಿ. ಆರ್, ಮತ್ತು ಸ್ವಾಮಿ ಸಿ ಕೆ, ಮಲ್ಲೇಶ್ವರಂ ಹೈಸ್ಕೂಲು, ಬೆಂಗಳೂರು.

೭ ರಾಮಸ್ವಾಮಿ ಕೆ. ವಿ., ಸೆಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲು, ಬೆಂಗಳೂರು.

೮ ಜಗದೀಶ್ ಪ್ರಸಾದ್ ಎ, ಗೌರ್ನಮೆಂಟ್ ಹೈಸ್ಕೂಲು, ಚಿತ್ರದುರ್ಗ.

೯. ಕೃಷ್ಣಮೂರ್ತಿ ವಿ, ಮುನಿಸಿಪಲ್ ಹೈಸ್ಕೂಲ್, ಸಾಗರ.

೧೦. ರಾಜಲಕ್ಷ್ಮಿ, ಶ್ರೀ ಮತಿ ಕಮಲಾಬಾಯಿ ಹೈಸ್ಕೂಲು, ಬೆಂಗಳೂರು

ಪರೀಕ್ಷೆಗೆ ಕಳುಹಿಸಿದ್ದ ೧೯೮೧೪ ವಿದ್ಯಾರ್ಥಿಗಳ ಪೈಕಿ ೬೫೪೯ ಜನರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಒಟ್ಟು ೬೫೪೯ ಜನರು ಉತ್ತೀರ್ಣರಾಗಿರುತ್ತಾರೆ.

ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ

ಮೈಸೂರು ೯

ಇಲ್ಲಿನ ವಿ. ಸುಬ್ಬಯ್ಯ ರಸ್ತೆಯಲ್ಲಿರುವ ಥಿಯೋಸಾಫಿಕಲ್ ನರ್ಸರಿ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ನಂಜಮ್ಮ ಎಂಬುವರು ನೆನ್ನೆ ರಾತ್ರಿ ಅದೇ ರಸ್ತೆಯಲ್ಲಿರುವ ತಮ್ಮ ಮನೆಯೊಳಗೆ ಬೀಗ ಹಾಕಿಕೊಂಡು ಮೈಗೆ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆಂದು ತಿಳಿದುಬಂದಿದೆ. ಬಟ್ಟೆಗೆ ಸೀಮೆಎಣ್ಣೆ ಸುರಿದು ಹೊತ್ತಿಸಿಕೊಂಡಿರಬಹುದೆಂದು ಭಾವಿಸಲಾಗಿದೆ. ಲಕ್ಷ್ಮೀಪುರಂ ಪೋಲೀಸರು ಮಹಜರು ಕ್ರಮ ಜರುಗಿಸಿದರು.

ಕಂಟೋನ್ಮೆಂಟ್ ಅಪರಾಧಿಗಳ ಅಪೀಲು ಅರ್ಜಿ ಪರಿಶೀಲನೆ

ಸ್ವಂ ಸು ಫೋನ್] ಬೆಂಗಳೂರು ೯

ರಾಮನಗರದ ಕಂಟೋನ್ಮೆಂಟ್ ಆಫ್ ಕೋರ್ಟ್ ಮೊಕದ್ದಮೆಯಲ್ಲಿ ಶಿಕ್ಷಿತರಾದ ೧೭ ಜನರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅನುಮತಿ ಬೇಡಿ ಸಲ್ಲಿಸಿದ್ದ ಅರ್ಜಿಗಳು ಈ ದಿನ ಶ್ರೇಷ್ಠ ನ್ಯಾಯಾಲಯದ ಫುಲ್ ಬೆಂಚಿನ ಮುಂದೆ ಪರಿಶೀಲಿಸಲ್ಪಟ್ಟು, ವಾದವಿವಾದಗಳಿಗಾಗಿ ಕಾದಿಡಲ್ಪಟ್ಟಿದೆ.

○ ಸಂಸ್ಥಾನದಿಂದ ಮಂಗಳೂರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಈ ದಿನ ಇಲ್ಲಿನ ಮಂತ್ರಿಮಂಡಲದಲ್ಲಿ ನಡೆದ ಮಾತುಕತೆಗಳಲ್ಲಿ ಮದರಾಸಿನ ಹಲವು ಉನ್ನತಾಧಿಕಾರಿಗಳೂ ಭಾಗವಹಿಸಿದ್ದರು.

○ ಸಧ್ಯದಲ್ಲೇ ಬೆಂಗಳೂರಿನಲ್ಲಿ ರಿಜರ್ವ್ ಬ್ಯಾಂಕಿನ ಶಾಖೆಯೊಂದನ್ನು ತೆರೆಯಲಿರುವುದರಿಂದ ಬೆಂಗಳೂರು ಉತ್ತರ, ದಂಡು, ಜಿಲ್ಲೆ ಮತ್ತು ದಕ್ಷಿಣ ತಾಲ್ಲೋಕುಗಳ ಖಜಾನೆಗಳನ್ನು ರದ್ದು ಮಾಡಲಾಗುವುದು. ಸ್ಟೇಟ್ ಹುಜೂರು ಖಜಾನೆಯು ಮುಂದುವರಿಯುವುದು.

○ ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲ್, ಮಿಸ್ ಗ್ರೀಟನ್ನರ ಕೊಲೆ ಸಂಬಂಧದಲ್ಲಿ ತನಿಖೆಯು ಇನ್ನೂ ಮುಂದುವರಿಯುತ್ತಿದೆ. ಹಂತಕನ ಪತ್ತೆ ಬಗ್ಗೆ ಯಾವ ಸುಳಿವೂ ಇನ್ನೂ ಸಿಕ್ಕಿಲ್ಲ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಇಂದ	ರೂ. ಗೆ
ಕಡಲೆಕಾಯಿ	೧೪ ೨-೦	೩೦-೦-೦
ಹರಳುಬೀಜ	೪೦ ೦ ೦	
ಹೊಂಗೆಬೀಜ	೨೩-೨-೦	೨೪ ೮ ೦
ಹುರುಳಿ	೪೪ ೦ ೦	೪೪-೧೦ ೦
ಹೆಸರು	೬೦-೧೪-೦	೬೨ ೨.೦
ಹಲಸಂದೆ	೫೪-೬ ೦	೬೫ ೧೦.೦
ಉದ್ದು	೬೯ ೬-೦	೬೭.೧೪-೦
ಎಳ್ಳು	೮೫ ೦ ೦	೮೭ ೪ ೦
ಮೆಣಸಿನಕಾಯಿ	೨೩ ೧೦ ೦	೨೬ ೮.೦
ಮುಸುಕಿನಜೋಳ	೩-೧೨ ೦	೪-೬-೦
ಸೀಗೆಕಾಯಿ	೫-೪-೦	
ತೆಂಗಿನಕಾಯಿ	೧೯೩ ೦-೦	೨೩೭.೦.೦

ಅರಮನೆ ಪುಸ್ತಕ ಭಂಡಾರದಲ್ಲಿ ಪ್ರಾಚೀನ ಭರತ ನಾಟ್ಯ ಗ್ರಂಥ

ಭರತ ನಾಟ್ಯಕ್ಕೆ ಸಂಬಂಧಿಸಿದಂತೆ ೧೫೮೨ ರಲ್ಲಿ ಕನ್ನಡದಲ್ಲಿ ಬರೆಯಲ್ಪಟ್ಟಿತೆಂದು ಹೇಳಲಾದ ಓಲೆಗರಿಯ ಗ್ರಂಥವೊಂದು ಮೈಸೂರು ಅರಮನೆಯ ಪುಸ್ತಕ ಭಂಡಾರದಲ್ಲಿರುವುದನ್ನು ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಕ್ಯೂರೇಟರ್ ಶ್ರೀ ಹೆಚ್ ಆರ್ ರಂಗಸ್ವಾಮಿ ಅಯ್ಯಂಗಾರ್ಯರು ಕಂಡುಹಿಡಿದಿರುತ್ತಾರೆ. ವೀರಭದ್ರಪಾಲನ ಮಗ ಸಿಂಹನ ಭೂಪಾಲನು ಗ್ರಂಥಕರ್ತನಾಗಿರಬೇಕೆಂದು ಹೇಳಲಾಗಿದೆ. ಗ್ರಂಥವು ಕಂದ ಮತ್ತು ವೃತ್ತದ ರೂಪದಲ್ಲಿದೆ. ಸೂಕ್ಷ್ಮವಾಗಿ ಗ್ರಂಥವನ್ನು ಪರಿಶೀಲಿಸಿದರೆ ಶಾರಂಗದೇವನು ಬರೆದ ಸಂಗೀತ ರತ್ನಾಕರದ ಏಳನೇ ಅಧ್ಯಾಯದ ಭಾಷಾಂತರವೆಂದು ಅರ್ಥವಾಗುವುದು. ಈ ಗ್ರಂಥವನ್ನು ಪೂರ್ಣ ವಿವರ, ಮತ್ತು ಚಿತ್ರಗಳೊಡನೆ ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಲಿರುವರೆಂದು ಹೇಳಲಾಗಿದೆ.

ಜಿಲ್ಲಾ ವಿದ್ಯಾ ಸಮ್ಮೇಳನ

ಮುಖ್ಯ ಮಂತ್ರಿಯವರಿಂದ ಆರಂಭ

ಟಿ ನರಸೀಪುರ ...

[illegible]

ನೋಟೀಸು

[illegible]

1) [illegible] 150 [illegible] 5 [illegible] 10 ಗಂಟೆಗೆ [illegible]

2) [illegible] 14 [illegible] 18 6-1953 [illegible] 10 ಗಂಟೆಗೆ [illegible]

ಈ ಮಾರಾಟಕ್ಕೆ ಅನ್ವಯಿಸುವ ನಿಬಂಧನೆಗಳು [illegible] ಪಡೆಯಬಹುದು

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್,

ಸದರ್ನ್ ರೈಲ್ವೆ,

ಮೈಸೂರು ...

[illegible]

ಚಾಮುಂಡೇಶ್ವರಿ

[illegible]

ಪಂಚಕಲ್ಯಾಣಿ

[illegible]

COACHING SECTION

Dalvoy High School, Mysore

MODERATE FEES,

MORNING CLASSES

For the benefit of Students appearing for the S S L C Supplementary Examination 1953 Coaching classes will commence from the 15th of this month

Expert coaching by experienced teachers Join early

Further particulars during working hours of the School

From A Gopalaswamy,

Secretary

SARADA VILAS COLLEGE,

MYSORE

TUTORIAL SECTION

Tutorial Classes in English Second Language and P C M for the benefit of students taking September Inter Examination 1953 will be started

Please enquire between 10 and 12 in the morning

Hon Secretary

SRI GANESHA

TALKIES

From 10 6 53 • For 2 days

Universal's Presents

Ginger Rogers and

Jack Carson in

The Groom Wore Spurs

(Programme Loaded with Laughter from beginning to end)

On 12 6 53

The World in His Arms

(Technicolor)

ಪ್ರಭಾ ★ 11-6-53 ರಿಂದ 3 ದಿನಗಳು ಮಾತ್ರ

ಭೋಲಾ ಭಾಗ್

ಪಹಿಲಾ ಪಾದಿ

ಧೋಲಕ್

ಸಂಗೀತಾಭ್ಯಾಸಿಗಳಿಗೆ

ಸುಸಮಯ

[illegible]

(C/o ...)

[illegible]

Edited, Printed and Published by A R Nagarajan at Sadhvi Press, D. Subbiah Road, Mysore

NOTIFICATION

THE NATIONAL INSTITUTE OF ENGINEERING, MYSORE

Printed application forms and prospectus containing full instructions for admission to the Civil Engineering L C E (Diploma) and B E (Degree) Courses can be had from the Principal on payment of one rupee by cash or by money Order

MINIMUM QUALIFICATIONS FOR ADMISSION TO Diploma Course —A pass in S S L C / E C. & P. S) with Physics, Chemistry & Mathematics as optionals or an equivalent examination

2 B. E Degree Course —A pass in Intermediate Examination with Physics, Chemistry and Mathematics as optionals or an equivalent examination.

Last date for the application form to reach the office is 20th June 1953 and up to 30th with penalty of Re. 1/- per day limited to Rs 5 0 0 maximum For other Particulars see the application form

Copies of Marks Cards and Leaving Certificates certified by a Gazetted officer must be attached to the application The originals should be produced at the time of joining the College

Applications found incomplete in any respect will not be considered

List of provisionally selected candidates will be published on the Notice Board of the Institute on 2nd July 1953 and only these candidates should interview the Principal between 3rd and 8th July 1953 and should come prepared to join forthwith, if selected, after payment of the prescribed fees in full, immediately, failing which they forfeit their seats

The Principal reserves the right of refusing admission to students provisionally selected but found unfit for the course in any respect during interview

S. RAMASWAMY,

Principal

ರಿಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೦-೬ ೧೯೫೩ [ಸಂಚಿಕೆ ೨೫೬

ಅಮೆರಿಕದಲ್ಲಿ ೧೩೧ ಜನ ಬಿರುಗಾಳಿಗೆ ಆಹುತಿ

ಮನೆಗಂದಾಯದ ಪುನರ್ವಿಮರ್ಶೆ ನಿರ್ಣಯ

ಪೌರಸಭಾ ಕಾನೂನಿಗೆ ಅಸಮ್ಮತವೆಂದು ತಿರಸ್ಕೃತ

ಮೈಸೂರು ೧೦

ಪೌರಸಭೆಯ ಮುಂದುವರಿದ ಸಾಮಾನ್ಯ ಅಧಿವೇಶನವು ನೆನ್ನೆ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಪೌರಸಭೆಯವರು ಒಂದು ಪತ್ರಿಕೆ ಹೊರಡಿಸಬೇಕೆಂಬ ಸೂಚನೆ ಶ್ರೀ ಎ. ಕೆ. ಖಾನ್ ರವರು ತಂದ ನಿರ್ಣಯವು ತಿರಸ್ಕೃತವಾಯಿತು. ಪೌರಸಭಾ ನಡವಳಿ ಮತ್ತು ಪೌರರ ಕರ್ತವ್ಯ ಮುಂತಾದುವನ್ನು ಅವರಿಗೆ ತಿಳಿಸಲು ಚಿತ್ರ ಪ್ರದರ್ಶನಗಳನ್ನು ಏರ್ಪಡಿಸುವುದು ಚೆನ್ನಾಗಿರುವುದೆಂದೂ, ಪತ್ರಿಕೆಯೊಂದನ್ನು ಹೊರಡಿಸುವುದು ಅಸಾಧ್ಯವೆಂದೂ ಅಭಿಪ್ರಾಯಪಡಲಾಯಿತು

ನಗರದಲ್ಲಿ ಬಸ್ಸು ಸಂಚಾರ ವ್ಯವಸ್ಥೆಯನ್ನು ಪೌರಸಭೆಯೇ ವಹಿಸಿಕೊಳ್ಳುವಂತೆ ಸೂಚಿಸಿ ಬಂದಿದ್ದ ನಿರ್ಣಯವು ಸಹ ಬಿದ್ದುಹೋಯಿತು

ಹಾಲು ಮತ್ತು ಆಹಾರ ಪದಾರ್ಥಗಳ ಪರಿಶುದ್ಧಿಯು ಉತ್ತಮವಾಗುವವರೆಗೂ ನಗರದ ಹೋಟೇಲುಗಳನ್ನು ಮುಚ್ಚುವಂತೆ ಸರ್ಕಾರಕ್ಕೆ ಕೋರಿಕೆ ಸಲ್ಲಿಸಬೇಕೆಂದು ಶ್ರೀ ಪಿ.ಆರ್ ನೂರ್ ಮುಸ್ತೇರರವರು ನಿರ್ಣಯ ತಂದಿದ್ದರು. ಭಾರತೀಯನ ಮೂಲಭೂತ ಹಕ್ಕಿಗೆ ಇದು ವಿರುದ್ಧವಾಗಿರುವುದೆಂದು ಅಭಿಪ್ರಾಯಪಟ್ಟುದರಿಂದ ನಿರ್ಣಯವು ಅಂಗೀಕಾರವಾಗಲಿಲ್ಲ

ಮನೆಗಂದಾಯದ ಪುನರ್ವಿಮರ್ಶೆ ಮಾಡುವಂತೆ ಪೌರಸಭಾ ಮ್ಯಾನೇಜಿಂಗ್ ಕಮಿಟಿಗೆ ಸೂಚಿಸಬೇಕೆಂದು ಶ್ರೀ ಎ ವೆಂಕಟೇಶಯ್ಯನವರು ತಂದಿದ್ದ ನಿರ್ಣಯವು ಚರ್ಚಿಸಲ್ಪಟ್ಟಿತು

ಮನೆಗಂದಾಯವನ್ನು ವಿಧಾಯಿಸಿ ಮಾಡುವುದರಲ್ಲಿ ರೆವಿನ್ಯೂ ಆಫೀಸರರೇ ಪುನರ್ವಿಮರ್ಶೆ ಮಾಡುವ ಅಧಿಕಾರಿಯಾಗಿದ್ದು, ಪೌರಸಭಾ ಕಮಿಷನರರು ಅವರ ಮೇಲೆ ಮುಕ್ತ ವಿಚಾರಣೆ ನಡೆಸುವ ಅಧಿಕಾರ ಹೊಂದಿರುವರೆಂದೂ, ಪೌರಸಭೆಯ ಮ್ಯಾನೇಜಿಂಗ್ ಕಮಿಟಿಯು ಅಪ್ಪೆಲೇಟ್ ನ್ಯಾಯಾಸ್ಥಾನವಾಗಿರುವುದೆಂದೂ ಆದ ಕಾರಣ ಈ ನಿರ್ಣಯದಲ್ಲಿ ಸಲಹಿತವಾಗಿರುವ ಮೇರೆ ಪುನರ್ವಿಮರ್ಶೆ ಮಾಡುವಂತೆ ಸೂಚಿಸುವುದಕ್ಕೆ ಪೌರಸಭಾ ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದಲೂ ಈ ನಿರ್ಣಯವನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಕ್ರಮಾಲೋಚನವನ್ನು ಎತ್ತಲಾಯಿತು ಅಧ್ಯಕ್ಷರು ಕ್ರಮಾಲೋಚನವನ್ನು ಅನುಮೋದಿಸಿದುದರಿಂದ ನಿರ್ಣಯವು ಚರ್ಚೆಯಾಗಲಿಲ್ಲ

ಆಸ್ಪತ್ರೆ ಕೆಲಸಗಾರರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಸರ್ಕಾರಿ ಆಸ್ಪತ್ರೆ ಕೆಲಸಗಾರರ ಸಂಘದ ಸಾಮಾನ್ಯ ಸದಸ್ಯರ ಸಭೆಯು ಕಳೆದ ೫ ನೇ ತಾ|| ನಡೆದು ಶ್ರೀ ಎ ರಾಮಣ್ಣ ಅಧ್ಯಕ್ಷ, ಶ್ರೀ ಬಾಲಾಜಿ ಸಿಂಗ್ ಉಪಾಧ್ಯಕ್ಷ, ಶ್ರೀ ಟಿ ಎಸ್ ಸುಬ್ಬಣ್ಣ ಕಾರ್ಯದರ್ಶಿ, ಶ್ರೀ ಸಿದ್ದಯ್ಯ ಖಜಾಂಚಿ ಮತ್ತು ಶ್ರೀ ಚೌಡಯ್ಯ ಉಪಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು ಸಂಘದ ವಾರ್ಷಿಕೋತ್ಸವವನ್ನು ಜುಲೈ ತಿಂಗಳಲ್ಲಿ ನಡೆಸುವಂತೆ ತೀರ್ಮಾನವಾಯಿತು

★ ಕಮ್ಯೂನಿಸ್ಟ್ ಚೀನಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವವು ದೊರೆಯದಂತೆ ಅಡ್ಡಿಪಡಿಸಲು ಅವಶ್ಯಕವಾದ ಎಲ್ಲ ಕ್ರಮಗಳನ್ನೂ ಜಾರಿ ಕೈಗೊಳ್ಳುವುದಾಗಿಯೂ ಕಡೆಗೆ ವೀಟೋ ಅಧಿಕಾರವನ್ನು ಉಪಯೋಗಿಸುವುದಾಗಿಯೂ ಸದರಿ ಸಂಸ್ಥೆಯ ಅಮೆರಿಕದ ಸದಸ್ಯ ಶ್ರೀ ಕ್ಯಾಬಟ್ ಲಾಡ್ಜ್ ರವರು ತಿಳಿಸಿರುವರು.

ಮುಖ್ಯ ಮಂತ್ರಿಯವರಲ್ಲಿ ನಿಯೋಗ

ಬೆಂಗಳೂರು ೧೦

ಮೈಸೂರು, ಬೆಂಗಳೂರು, ಚಿಕ್ಕಮಗಳೂರು, ಚಿತ್ರದುರ್ಗ, ಮುಂತಾದ ಹಲವು ಜಿಲ್ಲಾ ಬೋರ್ಡು ಅಧ್ಯಕ್ಷರುಗಳು ಶ್ರೀ ಹೆಚ್ ಆರ್ ಗುರುವಾರೆಡ್ಡಿಯವರ ನೇತೃತ್ವದಲ್ಲಿ ಮೊನ್ನೆ ಮುಖ್ಯ ಮಂತ್ರಿಯವರ ಬಳಿ ನಿಯೋಗ ಹೋಗಿ ಜಿಲ್ಲಾ ಬೋರ್ಡು ಶಾಸನದ ಪ್ರಕಾರ ಹಲವು ತೆರಿಗೆಗಳ ವಸೂಲಿಯಲ್ಲಿ ಸ್ವಲ್ಪ ಭಾಗವನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂಬ ಸರ್ಕಾರದ ನಿರ್ಧಾರವನ್ನು ಬದಲಾಯಿಸುವಂತೆ ಕೋರಿದರು ಹೊಸ ಶಾಸನದಂತೆ ಏರ್ಪಾಡಾಗಿರುವ ಚೀಫ್ ಆಫೀಸರುಗಳಿಗೂ, ಅಧ್ಯಕ್ಷರುಗಳಿಗೂ ಇರುವ ಬಾಂಧವ್ಯವನ್ನೂ ಕುರಿತು ಇವರು ಪ್ರಸ್ತಾಪಿಸಿದರು ಮುಖ್ಯ ಮಂತ್ರಿಯವರು ತೆರಿಗೆಯ ವಿಷಯವಾಗಿ ಪರಿಶೀಲನೆ ನಡೆಸುವುದಾಗಿಯೂ, ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಚೀಫ್ ಆಫೀಸರುಗಳಿಗೆ ಅಧಿಕಾರ ಚಲಾವಣೆ ಬಗ್ಗೆ ಘರ್ಷಣೆಯಾಗದಂತೆ ನಿಬಂಧನೆಗಳನ್ನು ರಚಿಸುವುದಾಗಿಯೂ ಆಶ್ವಾಸನೆ ಇತ್ತರು

೫೧ ವರ್ಷದ ಸೈನ್ಯಾಧಿಕಾರಿಗೆ ಬಿ ಎಲ್ ಪದವಿ

ಬೆಂಗಳೂರಿನ ಮೇಜರ್ ರಾಂಸಿಂಗ್ ಸೂರಿ ಎಂಬ ೫೧ ವರ್ಷದ ಸೈನ್ಯಾಧಿಕಾರಿಯು ಬಿ ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಸೈನಿಕ ವೃತ್ತಿಯಲ್ಲಿದ್ದುಕೊಂಡು ನ್ಯಾಯಾಂಗ ಪದವಿಯನ್ನು ಪಡೆಯುವುದರಲ್ಲಿ ಇವರು ಎರಡನೆಯವರು

ಭಾರಿ ಬಹುಮಾನದ ಬಗ್ಗೆ ಸ್ವಪ್ನ

ಡರ್ಬಿಯ ಕುದುರೆ ಪಂದ್ಯದ ಸಂಬಂಧವಾಗಿ ಏರ್ಪಾಡಾಗಿದ್ದ ಸ್ವೀಪ್ ಸ್ಟೇಕಿನಲ್ಲಿ ಈಸಾರಿ ಕಾನ್ಪುರದ ಡಾ|| ಶಿವಶಂಕರ ಶರ್ಮ ಎಂಬುವರಿಗೆ ೫೦ ಸಾವಿರ ಪೌಂಡಿನ ಬಹುಮಾನ ದೊರೆತಿದೆ ಆ ವಿಷಯವು ತಿಳಿಯುವುದಕ್ಕೆ ಎರಡು ದಿನ ಮುಂಚೆ ಅವರಿಗೆ ಅದೇ ರೀತಿ ಸ್ವಪ್ನವಾಗಿತ್ತೆಂದು ಹೇಳಲಾಗಿದೆ ಜ್ಯೋತಿಷ್ಯರೊಬ್ಬರೂ ಸಹ ಅವರು ಬಹುಮಾನ ಪಡೆಯುವವರಲ್ಲಿ ಒಬ್ಬರಾಗುವರೆಂದು ಸೂಚಿಸಿದ್ದರೆಂದೂ ಗೊತ್ತಾಗಿದೆ

ಆರ್. ಎಂ. ಡಿ. ಸಿ. ಮಾಲೀಕರ ಪ್ರಾಣಕ್ಕೆ ಸಂಚಕಾರ ?

ಬೆಂಗಳೂರು ೧೦

ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲ್ ಮಿಸ್ ಕ್ರೇಟನ್ನರ ಕೊಲೆ ಸಂಬಂಧವಾಗಿ ಹಂತಕನ ಪತ್ತೆ ಹಚ್ಚಲು ಅನುಕೂಲಿಸುವಂತೆ ಅವನ ಕುಳಿವಿನ ಬಗ್ಗೆ ಸುದ್ದಿ ಕೊಡುವವರಿಗೆ ಐದು ಸಾವಿರ ರೂ ಬಹುಮಾನ ಕೊಡುವುದಾಗಿ ತಿಳಿಸಿರುವ ಆರ್ ಎಂ ಡಿ ಸಿ ಸ್ಪರ್ಧೆ ಮಾಲೀಕರಾದ ಶ್ರೀ ಚಮನ್ ಬಾಗ್ ವಾಲಾರವರಿಗೆ ಯಾರೋ ಟೆಲಿಫೋನ್ ಮೂಲಕ ಪ್ರಾಣಾಪಾಯದ ಬೆದರಿಕೆಯಿತ್ತು ಬಹುಮಾನವನ್ನು ಕೊಡಲು ಅವರು ಜೀವಸಹಿತ ಉಳಿದಿರುವುದಾಗಿ ಭಾವಿಸಿರುವರೇ ಎಂದು ಪ್ರಶ್ನಿಸಿದರೆಂದೂ, ಅದಕ್ಕೆ ಶ್ರೀ ಚಮನ್ ಬಾಗ್ ವಾಲಾರವರು ಉತ್ತರವಿತ್ತು ಒಂದು ಪಕ್ಷ ತಾವು ಜೀವಂತವಾಗಿಲ್ಲದಿದ್ದಲ್ಲಿ ಬಹುಮಾನ ಕೊಡಲು ತನ್ನ ಸಂಸ್ಥೆಯು ಅದನ್ನು ಕೊಡಲು ಸದಾ ಸಿದ್ಧವಾಗಿರುವುದೆಂದು ತಿಳಿಸಿರುವುದಾಗಿಯೂ ಗೊತ್ತಾಗಿದೆ

ಶ್ಯಾಮಲದಾಸ್ ಗಾಂಧಿಯವರ ನಿಧನ

ಮಹಾತ್ಮ ಗಾಂಧಿಯವರ ಸಹೋದರರ ಪುತ್ರರೂ ಸೌರಾಷ್ಟ್ರ ಸರ್ಕಾರದ ಮಾಜಿ ಮಂತ್ರಿಯೂ ಆದ ಶ್ಯಾಮಲದಾಸ್ ಗಾಂಧಿಯವರು ಮೊನ್ನೆ ರಾತ್ರಿ ಹೃದಯ ವೇದನೆಯಿಂದ ಮೃತಿ ಹೊಂದಿದರು ಅವರಿಗೆ ೬೦ ವರ್ಷ ವಯಸ್ಸಾಗಿತ್ತು

ಟೇನ್ಸಿಂಗರು ಲಂಡನ್ನಿಗೆ

ಕಳೆದ ೨೯ ನೇ ತಾ|| ಗೌರೀಶಂಕರ ಶಿಖರವನ್ನೇರಿದ ಬ್ರಿಟಿಷ್ ಪರ್ವತಾರೋಹಿಗಳ ತಂಡದವರ ಪೈಕಿ ನೇಪಾಳದ ಟೇನ್ಸಿಂಗರೇ ಮೊದಲು ಶಿಖರವನ್ನು ಹತ್ತಿದರೆಂದು ಗೊತ್ತಾಗಿದೆ ಈ ಪ್ರಯತ್ನದಲ್ಲಿ ಜಯಶೀಲರಾದ ಹಿಲಾರಿಯವರೂ ಮತ್ತು ಟೇನ್ಸಿಂಗರೂ ಬ್ರಿಟಿಷ್ ಸರ್ಕಾರದ ಆಹ್ವಾನದ ಮೇರೆ ಶೀಘ್ರದಲ್ಲೇ ವಿಮಾನದಲ್ಲಿ ಲಂಡನ್ನಿಗೆ ತೆರಳುವರೆಂದು ವರದಿಯಾಗಿದೆ ದೆಹಲಿಯ ೧೨ ವರ್ಷದ ವಿದ್ಯಾರ್ಥಿನಿಯೊಬ್ಬಳು ತನ್ನ ಹುಟ್ಟಿದ ಹಬ್ಬಕ್ಕಾಗಿ ಸಂಗ್ರಹಿಸಿಟ್ಟಿದ್ದ ೧೨ ರೂ ಗಳನ್ನು ಟೇನ್ಸಿಂಗರಿಗೆ ಬಹುಮಾನವಾಗಿ ಕೊಡಲು ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿರುವಳು.

ಮಲೇರಿಯಾದ ಪೂರ್ಣ ಹತೋಟಿಗೆ ಕ್ರಮ

ಮೈಸೂರು ೭

ಸಂಸ್ಥಾನದಲ್ಲಿ ಮಲೇರಿಯಾವನ್ನು ಶೀಘ್ರದಲ್ಲೇ ಪೂರ್ಣವಾಗಿ ಹತೋಟಿಗೆ ತರಲಾಗುವುದೆಂದು ಆರೋಗ್ಯ ಇಲಾಖಾ ಡೈರೆಕ್ಟರ್ ಡಾ|| ಟಿ ಚಂದ್ರಶೇಖರಯ್ಯನವರು ತಿಳಿಸಿರುತ್ತಾರೆ ೫೦ ಲಕ್ಷ ಜನರಿರುವ ಪ್ರದೇಶಗಳಲ್ಲಿ ೫ ಯೂನಿಟ್ಟುಗಳನ್ನು ಏರ್ಪಡಿಸುವುದಾಗಿಯೂ, ಭಾರತ ಸರ್ಕಾರದವರು ಉಚಿತವಾಗಿ ಡಿ ಡಿ ಟಿ ದ್ರವ, ಅದರ ಉಪಯೋಗದ ಸಾಧನ, ಮಲೇರಿಯಾ ವಿರೋಧಿ ಔಷಧ ಮತ್ತು ಮೋಟಾರು ವಾಹನಗಳನ್ನು ಸಂಸ್ಥಾನಕ್ಕೆ ಕೊಡಲಿರುವುದಾಗಿಯೂ ಅವರು ಹೇಳಿ ಈ ಯೋಜನೆಗೆ ೮ ಲಕ್ಷ ರೂ ವೆಚ್ಚವಾಗುವುದೆಂದು ತಿಳಿಸಿರುತ್ತಾರೆ

ಜಸ್ಟಿಸ್ ಆಫ್ ದಿ ಪೀಸ್ ನೇಮಕವೇ ?

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಒಂದು ಸಮಾರಂಭದಲ್ಲಿ ಮಾತನಾಡುತ್ತಾ, ಬೆಂಚು ಕೋರ್ಟುಗಳ ಬದಲು ಜಸ್ಟಿಸ್ ಆಫ್ ದಿ ಪೀಸ್ ರವರುಗಳನ್ನೂ ಬೆಂಗಳೂರು ನಗರಕ್ಕೆ ಒಬ್ಬ ಪರೀಪರನ್ನೂ ನೇಮಿಸುವ ವಿಷಯಗಳನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು

ಬಿರುಗಾಳಿಯಿಂದ ೧೩೧ ಜನರ ಮರಣ

ಅಮೆರಿಕದ ಮಿಚಿಗನ್ ಮತ್ತು ಓಹಿಯೋ ಸಂಸ್ಥಾನಗಳ ಮೇಲೆ ನೆನ್ನೆ ಪ್ರಚಂಡ ಬಿರುಗಾಳಿಯು ಬೀಸಿದ ಪರಿಣಾಮವಾಗಿ ೧೩೧ ಮಂದಿ ಮಡಿದಿರುವುದಾಗಿ ವರದಿಯಾಗಿದೆ ಫ್ಲಿಂಟ್ ಎಂಬ ನಗರದಲ್ಲೇ ೮೩ ಜನರು ಸತ್ತಿರುವರು ೭೦೦ ಮಂದಿಗೆ ಗಾಯವಾಗಿರುವುದಾಗಿ ಹೇಳಲಾಗಿದೆ

ಎಸ್. ಎಸ್. ಎಲ್. ಸಿ. ಯಲ್ಲಿ ಡಿಬಾರ್ ಆದ ವಿದ್ಯಾರ್ಥಿಗಳು

ಬೆಂಗಳೂರು ೯

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅಕ್ರಮ ರೀತಿಯಲ್ಲಿ ವರ್ತಿಸಿದ ನಾಲ್ಕು ವಿದ್ಯಾರ್ಥಿಗಳು ೫೪ ರ ಮಾರ್ಚಿ ಮತ್ತು ಸೆಪ್ಟೆಂಬರ್ ಪರೀಕ್ಷೆಗಳಿಗೆ ಕುಳಿತುಕೊಳ್ಳಲಾಗದೆಂದೂ ಮತ್ತು ಇತರ ಏಳು ವಿದ್ಯಾರ್ಥಿಗಳನ್ನು ೫೪ ರ ಮಾರ್ಚಿ ಪರೀಕ್ಷೆಗೆ ಕುಳಿತುಕೊಳ್ಳದಂತೆಯೂ ಡಿಬಾರ್ ಮಾಡಲಾಗಿದೆ ಒಬ್ಬ ವಿದ್ಯಾರ್ಥಿಯ ಫಲಿತಾಂಶವನ್ನು ವಿತ್‌ಹೋಲ್ಡ್ ಮಾಡಲಾಗಿದೆ ಬೇರೆ ಹನ್ನೊಂದು ವಿದ್ಯಾರ್ಥಿಗಳ ಫಲಿತಾಂಶವನ್ನು ಮುಂದೆ ಪ್ರಕಟಿಸಲಾಗುವುದೆಂದೂ ತಿಳಿಸಲಾಗಿದೆ

○ ಮಳವಳ್ಳಿ ಡಿವಿಜನ್ನಿನ ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ಎಂ ವೇದವ್ಯಾಸಾಚಾರ್ ರವರನ್ನು ನಂಜನಗೂಡು ಡಿವಿಜನ್ನಿಗೂ, ನಂಜನಗೂಡಿನ ಇಂಜನಿಯರ್ ಶ್ರೀ ಕೆ ಎಸ್ ಸೂರ್ಯನಾರಾಯಣ ಶಾಸ್ತ್ರಿಯವರನ್ನು ಅಪ್ಪರ್ ಕಾವೇರಿ ಡಿವಿಜನ್ನಿಗೂ, ಅಲ್ಲಿರುವ ಇಂಜನಿಯರ್ ಶ್ರೀ ಕೆ ಎಸ್ ನಂಜುಂಡರಾಯರನ್ನು ಮೈಸೂರು ಡಿವಿಜನ್ನಿಗೂ ವರ್ಗಾಯಿಸಲಾಗಿದೆ

ಬಡವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ

ಮೈಸೂರು ೧೧

ನಗರದ ಪೌರಸಭೆಯ ಆಶ್ರಯದಲ್ಲಿ ಏರ್ಪಾಡಾಗಿರುವ ಬಡ ವಿದ್ಯಾರ್ಥಿಗಳ ಊಟದ ಸಮಿತಿಯವರ ವ್ಯಾಪ್ತಿಯಲ್ಲಿ ನಂತೆ ಈ ವರ್ಷವೂ ಹಲವು ಶಾಲೆಗಳ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಕಲ್ಪಿಸಲಿರುವರು ಪೌರಸಭಾ ಕಛೇರಿಯಲ್ಲಿ ದೊರೆಯುವ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಕೆಲಸದ ದಿನಗಳಲ್ಲಿ ಬೆಳಿಗ್ಗೆ ೧೧ ರಿಂದ ಸಂಜೆ ೫ ರ ವರೆಗೆ ಪಡೆದು ಬರುವ ತಿಂಗಳ ೧೫ ನೇ ತಾ|| ಸಂಜೆ ೫ ಘಂಟೆಯೊಳಗೆ ತಲುಪುವಂತೆ ಕಳುಹಿಸಬೇಕೆಂದು ಪೌರ ಭಾ [illegible] ವ ಶ್ರೀ [illegible] ವೆಂಕಟರಾಮಯ್ಯನವರು ತಿಳಿಸಿದ್ದಾರೆ

ನಿ ಕ ಟ ವ ರ್ತಿ

ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನದ [illegible] ಸನಿವರ [illegible] ತ್ರಿ ಜಿಲ್ಲಾ ಸಹಕಾರ [illegible] ವರು ಇಂಪೀರಿಯಲ್ ಹೋಟೆಲಿನ [illegible] ಆವರನ್ನು ಏನ [illegible]

ಶಾರದಾವಿಲಾಸ ಇಂಟರ್

ಕಾಲೇಜಿನ ಪರೀಕ್ಷಾ ಫಲಿತಾಂಶ

ಶಾರದಾವಿಲಾಸ ಕಾಲೇಜಿನಿಂದ ಕಳೆದ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕುಳಿತಿದ್ದ ೩೦೦ ಮಂದಿ ವಿದ್ಯಾರ್ಥಿಗಳ ಪೈಕಿ [illegible] ಜನರು ಪ್ರಥಮ [illegible] [illegible] ಜನ ದ್ವಿತೀಯ [illegible] ಜನರು [illegible] ಶೇಕಡ [illegible] [illegible]

ಸಂಗೀತಾಭ್ಯಾಸಿಗಳಿಗೆ ಸುವರ್ಣಾವಕಾಶ

ಕೊಳಲು, ಪಿಟೀಲು, ಹಾಡುಗಾರಿಕೆ

ಹೇಳಿಕೊಡಲಾಗುತ್ತದೆ ಸುಲಭ ಫೀ [illegible] ಕಲಿಸಲಾಗುವುದು

ವಿ|| ಕೆ ಗೋಪಾಲಕೃಷ್ಣರಾವ್,

(C/o ಶ್ರೀ ಎ ಬಿ ಚನ್ನಬಸಪ್ಪ)

ಡೋರ್ ನಂಬರ್ 4

ಡೋರ್ ನಂ 1 ಸೊಪ್ಪಿನ ಬೀದಿ

ಮೈಸೂರು ಸಿಟಿ

ರಾಷ್ಟ್ರೀಯ ಯೋಜನೆ ಸಾಲ ಒಂದೇ ದಿನದಲ್ಲಿ ಭರ್ತಿ

ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರುವ ಸಲುವಾಗಿ ಭಾರತ ಸರ್ಕಾರದವರು ಮೊನ್ನೆ ಹೊರಡಿಸಿದ್ದ ಸಾಲಕ್ಕೆ ನೆನ್ನೆ ಮಧ್ಯಾಹ್ನ ೧ ಘಂಟೆಯೊಳಗೆ ೫೦ ಕೋಟಿ ರೂ ಚಂದಾ ಹಣವೂ ಪೂರ್ತಿಯಾಗಿ ಭರ್ತಿಯಾಯಿತು ಇದಕ್ಕೆ ಸರ್ಕಾರಕ್ಕೆ [illegible] ಕೋಟಿ ರೂ ಗಳೂ, ಉಳಿದ ಮೊಬಲಗು ಇತರ ವಿನಿಮಯ [illegible] ದಲ್ಲೂ ಸಂದಾಯವಾಗಿವೆ

ಚನ್ನರಾಜಪುರಮೋಕ್ಷಪುರಿ ಸೊಸೈಟಿಗೆ ಷೀಲ್ಡು

[illegible] ನೇ ತಾರೀಖು ನಡೆದ ಮೈಸೂರು ಜಿಲ್ಲಾ ಐದನೇ ಸಹಕಾರ ಸಮ್ಮೇಳನದಲ್ಲಿ ರಾಜಧಾನಿಯ ಶ್ರೀ [illegible] ನ್ಯಾಯವಾದಿ [illegible] ಕೋ ಆಪರೇಟಿವ್ ಸೊಸೈಟಿಯು ಶ್ರೇಷ್ಠದರ್ಜೆಯ ಕೋ ಆಪರೇಟಿವ್ ಸೊಸೈಟಿಯೆಂದು ಪರಿಗಣಿಸಲ್ಪಟ್ಟು ಅದಕ್ಕೆ ಮುಖ್ಯ ಮಂತ್ರಿಯವರ ಬೆಳ್ಳಿಯ ಷೀಲ್ಡನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ

ಕೊಳ್ಳೇಗಾಲವು ಶಾಶ್ವತವಾಗಿ ಮೈಸೂರಿಗೆ ಸೇರುವುದು

[illegible] ಕೊಳ್ಳೇಗಾಲ [illegible] ಮೈಸೂರಿನೊಡನೆ ಐಕ್ಯಗೊಳ್ಳುವುದಿಲ್ಲ ಆದ್ದರಿಂದ ಸಂಸ್ಥಾನದವರು [illegible] ಕೈಗೊಳ್ಳಬೇಕಾಗಿದೆ ಎಂದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿರುತ್ತಾರೆ

COACHING SECTION

Dalvoy High School, Mysore

MODERATE FEES

MORNING CLASSES

For the benefit of Students appearing for the S S L C Supplementary Examination 1953 Coaching classes will commence from the 15th of this month

Expert coaching by experienced teachers Join early

Further particulars during working hours of the School

From **A Gopalaswamy,**
Secretary

ಆಕಾಶವಾಣಿ ವಾರದ ಕಾರ್ಯಕ್ರಮ

ಬೆಳಿಗ್ಗೆ 8 30 ಬಿ ಎನ್ ರಾವ್ ದೇಶ ಭಕ್ತಿ ಗಾನಗಳು ಮಧ್ಯಾಹ್ನ ೧ ೪೦ ಬೀಣೆ [illegible] ರಂಗಪ್ಪ ಕೊಳಲು ಸಂಜೆ ೫ ೪೦ ಗೋಟುವಾದ್ಯ 6 30 ಕನ್ನಡ ಗೀತೆಗಳು [illegible] ಗೀತೆ 8 30 ರಂಗಪ್ಪ ಕೊಳಲು [illegible] ಸಾಗರ [illegible] ಎಂ ರಾಘವೇಂದ್ರ ರಾವ್ ಭಾರತ ವಾಚನ [illegible] ಬಿ ಎನ್ ರಾವ್, ಸಂಗೀತ [illegible] ಗಂಗೂಬಾಯಿ ಹಾನಗಲ್ ಮತ್ತು ಇಂದಿರಾಬಾಯಿ ಖಾಡಿಲ್ಕರ್ [illegible] [illegible] ಕೊಡಗಿನ ಮುಖ್ಯ ಮಂತ್ರಿ [illegible] ಮತ್ತು ಗೃಹ ಮಂತ್ರಿ ಮಲ್ಲಪ್ಪ ಅವರ ಭಾಷಣ ಮತ್ತು ಗ್ರಾಮರು ಪದಗಳು ನೃತ್ಯ ಇತ್ಯಾದಿ, [illegible]

COACHING CLASSES

For Madras Matric, Ajmer Inter L S, S S L C (Sup Full Term Fees Rs 15/- to the poor) Sri Raghavendra Institute Kabir Road Mysore

SRI GAYATHRI

TALKIES

From 11 6 53 For 3 days

Universal's

IVORY HUNTER

(Technicolor)

With — Anthony Steel Dina Sheridan

— NEXT CHANGE —

HURRICANE SMITH

(Technicolor)

ಮೈಸೂರು ಪೇಟೆ ಧಾರಣೆ

	ಕನಿಷ್ಠ ರೂ ಇಂದ	ರೂ ಗೆ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
[illegible]	[illegible]	[illegible]
ಉದ್ದು	[illegible]	[illegible]
ಎಳ್ಳು	[illegible]	[illegible]
ಮೆಣಸಿನಕಾಯಿ	[illegible]	
[illegible]	[illegible]	[illegible]
ತೆಂಗಿನಕಾಯಿ	[illegible]	[illegible]

D BANUMIAH'S COLLEGE OF COMMERCE, MYSORE

Applications for Admission to JUNIOR I com class will be received upto 20th June 1953 Late Applications will be received upto 1st July 1953 with a Penal Fee of Re 1/- per day subject to a limit of Rs 5 0 0 Further particulars can be known from the prospectus which will be supplied on remittance of As 10

Edited, Printed and Published by A R Nagarajan at Sadhvi Press, D Subbaiah Road Mysore

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ?

ಬಹುಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು

ಮೈಸೂರು ಉಕ್ಕಿನ ಸಾಮಾನುಗಳು

- ★ **ಗಾಡಿ ಪಟ್ಟಿ ಅಥವ ಹಳಿಗಳು** (Flats)
- ★ **ದುಂಡು ಮತ್ತು ಚದರ ಸಲಾಕಿಗಳು** (Rounds & Squares)
- ★ **ಕೋನ ಕಂಬಿಗಳು** (Angles)
- ★ **ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು** (Reinforcing Rods)
- ★ **ಮತ್ತು ಬೇಲು ಪಟ್ಟಿಗಳು** (Hoops)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

★

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ

ಒಲಿಂಪಿಯಾ ★

12 6 53 ರಿಂದ ಅಮೋಘ ಪ್ರಾರಂಭ ಪ್ರತಿದಿನ ಮೂರು ಪ್ರದರ್ಶನಗಳು

ಓರಿಯಂಟ್ ಫಿಲಂಸ್ ರವರ

★ **ಷೋಲೆ** ★

ಬೀನಾರಾಯ್ ನಟಿಸಿರುವ, ಅಶೋಕ್ ಕುಮಾರ್, ಬಿಪಿನ್ ಗುಪ್ತ [illegible] ಜೀವನ [illegible] ಕೃಷ್ಣ [illegible] ನಟಿಸಿರುವ [illegible] ಚಿತ್ರ

CHANGE OF ADDRESS

Our New Address is

PEOPLE'S BOOK HOUSE,

Opposite Jaganmohan Palace, Mysore

Expected Soon —

THE COLLECTED WORKS OF J V STALIN (Vol 1)

ಲಗ್ನದ ಜವಳಿಗಳಿಗೆ

ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಸೂಲಿನ ಸೀರೆಗಳಿಗೆ

M.V.ಭೋಜಯ್ಯ

(ಫೋನ್ 446)

ಬಿ ಎ , ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೧ ೬ ೧೯೫೩ [ಸಂಚಿಕೆ ೨೪೬

ಕೊರಿಯಕ್ಕೆ ಭಾರತದ ಸೈನ್ಯ ರವಾನೆಗೆ ಒಪ್ಪಿಗೆ

ಮಂಗಳೂರಿಗೆ ೬೦೦೦ ಕಿಲೋವಾಟ್ ವಿದ್ಯುಚ್ಛಕ್ತಿ

ಬೆಂಗಳೂರು ೧೧

ದಕ್ಷಿಣ ಕನ್ನಡ ಜಿಲ್ಲೆಗೆ ಆರು ಸಾವಿರ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಜೋಗ್ ಕೇಂದ್ರದಿಂದ ಸರಬರಾಜು ಮಾಡುವ ಬಗ್ಗೆ ಮೈಸೂರು ಮತ್ತು ಮದ್ರಾಸು ಸರ್ಕಾರಗಳಿಗೆ ಒಡಂಬಡಿಕೆಯಾಗಿದೆ ಈ ಬಗ್ಗೆ ಮಾತುಕತೆ ನಡೆಸಲು ಮದ್ರಾಸು ಮಂತ್ರಿ ಶ್ರೀ ಎ ರಂಗಾರೆಡ್ಡಿಯವರು ಇಲ್ಲಿಗೆ ಭೇಟಿ ಕೊಟ್ಟಿದ್ದರು ಪ್ರಾರಂಭದಲ್ಲಿ ೨೫೦೦ ಕಿಲೋವಾಟಿನಷ್ಟು, ೩ ವರ್ಷಗಳ ನಂತರ ೩½ ಸಾವಿರದಷ್ಟು, ಆರು ವರ್ಷಗಳು ಮುಗಿಯುವುದರೊಳಗೆ ೬೦೦೦ ಕಿಲೋವಾಟುಗಳ ಶಕ್ತಿಯನ್ನು ಮೈಸೂರು ಸರ್ಕಾರದವರು ಮಂಗಳೂರಿಗೆ ಒದಗಿಸಲಿರುವರು

ಬೆಂಗಳೂರು ದಿನಪತ್ರಿಕೆಗಳ ಮೇಲೆ ಮಾನನಷ್ಟ ಮೊಕದ್ದಮೆ

ಮೈಸೂರು ತಿರುಚು ಶಾಸನ ಸಭೆಯಲ್ಲಿ ಕಳೆದ ಮಾರ್ಚಿ ತಿಂಗಳು ಅಬ್ಕಾರಿ ಮಂತ್ರಿ ಶ್ರೀ ಟಿ ಚನ್ನಯ್ಯನವರು ಕೊಟ್ಟ ಹೇಳಿಕೆಯನ್ನು ಪ್ರಕಟಿಸಿ ತಮಗೆ ಅಪಮಾನ ಮಾಡಿರುವುದಾಗಿ ಶ್ರೀಗಳಾದ ಕೆ ಆರ್ ಗುರುಸ್ವಾಮಿ ಮತ್ತು ಮಾಲೂರು ರಂಗಪ್ಪನವರು ಹೂಡಿರುವ ಮೊಕದ್ದಮೆಯು ನೆನ್ನೆ ಶ್ರೀ ಬಿ ಜಿ ಕೋಸಲ್ರಾಂರವರ ಕೋರ್ಟಿನಲ್ಲಿ ವಿಚಾರಣೆಗೆ ಬಂದು ೫ ನೇ ತಾ॥ ಗೆ ಮುಂದುವರಿಯಿತು ವಿಶ್ವಕರ್ನಾಟಕ ಪತ್ರಿಕೆಯ ಮೇಲೂ ಸಹ ಮೊಕದ್ದಮೆ ಹೂಡಲಾಗಿದ್ದು, ಅದರ ಸಂಪಾದಕ ಶ್ರೀ ಎ ಎಸ್ ವೆಂಕೋಬರಾಯರು ಕೋರ್ಟಿನಲ್ಲಿ ಹಾಜರಾಗಿದ್ದು ೧೦೦ ರೂ ಗಳ ಮುಚ್ಚಳಿಕೆಯನ್ನು ಬರೆದುಕೊಟ್ಟರು ತಾಯಿನಾಡು ಜನವಾಣಿ ಮತ್ತು ವಿಶ್ವಕರ್ನಾಟಕ ಪತ್ರಿಕೆಗಳ ಮೇಲಿನ ಮೂರು ಮೊಕದ್ದಮೆಗಳನ್ನೂ ಒಟ್ಟಿಗೆ ಪರಿಶೀಲಿಸುವುದಾಗಿ ನ್ಯಾಯಾಧೀಶರು ತಿಳಿಸಿದರು

ಫಿರ್ಯಾದುದಾರರು ಅರ್ಜಿಯೊಂದನ್ನು ಸಲ್ಲಿಸಿ ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರ, ಸಂಸ್ಥಾನದ ಎಕ್ಸೈಜ್ ಕಮಿಷನರ್ ಅಬ್ಕಾರಿ ಮಂತ್ರಿಗಳು ಶಾಸನ ಸಭಾ ಕಾರ್ಯದರ್ಶಿ ವಿಶೇಷ ರೆವಿನ್ಯೂ ಸೆಕ್ರೆಟರಿಗಳನ್ನು ಸಾಕ್ಷಿಗಳಾಗಿ ಕರೆಯುವಂತೆ ಕೋರಿರುತ್ತಾರೆ

ಕಾಡ್ಗಿಚ್ಚಿನಿಂದ ೧೦ ಲಕ್ಷ ರೂ ಆಸ್ತಿ ನಷ್ಟ

ಕಾಟಿಯಾವಾಡ ಮತ್ತು ಪೂರ್ವ ಪಂಜಾಬು ಸಂಸ್ಥಾನದ ಒಂದುಕಡೆ ೧೫ ಮೈಲಿ ಪ್ರದೇಶದಲ್ಲಿ ಕಾಡ್ಗಿಚ್ಚು ಸಂಭವಿಸಿ, ೧೦ ಲಕ್ಷ ರೂ ನಷ್ಟವಾಗಿರುವುದಾಗಿ ವರದಿಯಾಗಿದೆ ಎಲ್ಲವನ್ನೂ ಸುಟ್ಟುಹಾಕಿಬಿಟ್ಟಿರುತ್ತಾನೆ ಅನೇಕ ದನಕರುಗಳು ನಾಶವಾಗಿವೆ ನೂರಾರು ಜನರು ನಿರಾಶ್ರಿತರಾಗಿರುವರು ಬೆಂಕಿಯನ್ನು ಆರಿಸಲು ೪೦೦ ಜನರು ೪೬ ಗಂಟೆಕಾಲ ಶ್ರಮಪಟ್ಟರು

ಟೇನ್‌ಸಿಂಗರಿಗೆ ಜಾರ್ಜ್ ಪದಕ

ಎವರೆಸ್ಟ್ ಶಿಖರವನ್ನೇರಿದ ನೇಪಾಳದ ಟೇನ್‌ಸಿಂಗರಿಗೆ ಬ್ರಿಟಿಷ್ ಸರ್ಕಾರದವರು ಜಾರ್ಜ್ ಪದಕವನ್ನು ಕೊಡುವರು. ಟೇನ್‌ಸಿಂಗರು ಮೊದಲು ಶಿಖರವನ್ನೇರಿ ಭಾರತ,ಬ್ರಿಟನ್ ವಿಶ್ವಸಂಸ್ಥೆ ಮತ್ತು ನೇಪಾಳ ಧ್ವಜಗಳನ್ನು ಹಾರಿಸಿದರೆಂದೂ, ನಂತರ ಮತ್ತೊಬ್ಬ ಪರ್ವತಾರೋಹಿ ಹಿಲಾರಿಯವರು ಮೇಲಕ್ಕೆ ಹತ್ತಲು ಅವರು ಸಹಾಯ ನೀಡಿದರೆಂದೂ ಹೇಳಲಾಗಿದೆ

ಕುದುರೆಜೂಜಿನ ಫಲಿತಾಂಶ

ಮೈಸೂರ ೧೧

ನೆನ್ನೆ ನಡೆದ, ಈ ಸಾಲಿಯ ಕುದುರೆ ಜೂಜುಗಳ ಕಡೇ ದಿನದ ಫಲಿತಾಂಶಗಳು ಈ ರೀತಿ ಇವೆ —

ಮೊದಲನೇ ರೇಸು ವಿನ್ ಪಟ್ ಬ್ರೇಕರ್ ೧೩.೮.೦, ಪ್ಲೇಸ್ ೫ ೮ ೦, ಫ್ಲೈಟ್ ಸಾಲ್ಟ್ ೫ ೮ ೦ ಬಾಜ್ ಬಹದೂರ್ ೭ ೮-೦

ಎರಡನೇ ರೇಸು – ವಿನ್ ಚಕೋರ್ ೬೪-೮-೦, ಪ್ಲೇಸ್ ೧೨ ೮ ೦ ಸ್ಟೈಲಟ್ ೧೦-೮ ೦ ಕಾಫಿರ್ ಚೀಫ್ ೨೩ ೮ ೦

ಮೂರನೇ ರೇಸು — ವಿನ್– ಶೀಟ್ ಆಂಕರ್ ೬ ೮.೦, ಪ್ಲೇಸ್ ೫ ೮ ೦ ಏತೆಕ್ಸ್ ೬-೦-೦

ನಾಲ್ಕನೇ ರೇಸು — ವಿನ್ ಮೇಸ್ ಪೆಟ್ ೧೯-೦ ೦ ಪ್ಲೇಸ್ ೧೦ ೦ ೦ ಡಗಾನಿಯಾ ೯-೮ ೦

ಐದನೇ ರೇಸು ವಿನ್ ರೂಕ್ಕಯ್ಯ ೪೭-೦-೦, ಪ್ಲೇಸ್ ೮ ೮ ೦ ಗರ್ಲ್‌ಫ್ರೆಂಡ್ ೯-೮-೦, ರೆಡ್‌ಕ್ರಾಸ್ ಬಾಯ್ ೨೩ ೮ ೦

ಆರನೇ ರೇಸು — ವಿನ್–ರಾಯಲ್ ಇಂಪ್ರೆಸ್ ೧೫-೦-೦, ಪ್ಲೇಸ್ ೯ ೮ ೦ ಗೋಲ್ಡ್ ಮೈನ್ ೧೪-೮-೦ ಮೈಗ್ನಯಾನಿ ೪೦-೮ ೦

ಟ್ರಬಲ್ ಇವೆಂಟಿನಲ್ಲಿ ನಾಲ್ಕು ಮಂದಿ ಕಲಾ ೧,೧೪೧ ರೂ ಪಂತ ಪಡೆದರು

ಲಿಸ್ಬನ್ನಿನಲ್ಲಿ ಭಾರತದ ಪ್ರತಿನಿಧಿ ಕಛೇರಿ ಬಂದ್

ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್ನಿನಲ್ಲಿರುವ ಭಾರತದ ಪ್ರತಿನಿಧಿ ಕಛೇರಿಯನ್ನು ಭಾರತ ಸರ್ಕಾರದವರು ನೆನ್ನೆಯಿಂದ ಮುಚ್ಚಿರುವರು ಆದರೆ ಪೋರ್ಚುಗಲ್ಲಿನೊಡನೆ ರಾಜತಾಂತ್ರಿಕ ಸಂಬಂಧವನ್ನು ತ್ಯಜಿಸುವುದಿಲ್ಲವೆಂದು ತಿಳಿದುಬಂದಿದೆ ಭಾರತದಲ್ಲಿರುವ ಪೋರ್ಚುಗೀಸ್ ವಸಾಹತುಗಳನ್ನು ಭಾರತ ಸರ್ಕಾರಕ್ಕೆ ಒಪ್ಪಿಸುವ ಬಗ್ಗೆ ಮಾತುಕತೆ ನಡೆಸಲು ಪೋರ್ಚುಗಲ್ಲು ನಿರಾಕರಿಸುವುದೇ ಲಿಸ್ಬನ್ನಿನಲ್ಲಿರುವ ಭಾರತದ ಪ್ರತಿನಿಧಿ ಕಛೇರಿಯನ್ನು ಮುಚ್ಚಲು ಕಾರಣ

ಕೊರಿಯಕ್ಕೆ ಸೈನ್ಯ ಕಳುಹಲು ಭಾರತದ ಒಪ್ಪಿಗೆ

ಸ್ವದೇಶಗಳಿಗೆ ಖೈದಿಗಳ ರವಾನೆ ಸಂಬಂಧವಾದ ಕೆಲಸಕ್ಕೆ ಭಾರತವು ತನ್ನ ಸೈನ್ಯಗಳನ್ನು ಕಳುಹಲು ಒಪ್ಪಿರುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಕೊರಿಯಾ ಯುದ್ಧದ ಎರಡು ಪಕ್ಷಗಳವರೂ ಭಾರತಕ್ಕೆ ಆಹ್ವಾನವಿತ್ತಿರುವುದರಿಂದ, ಅದು ಈ ಕೆಲಸಕ್ಕೆ ಸಮ್ಮತಿಸಿರುವುದಾಗಿ ಅವರು ಹೇಳಿರುವರು ದಕ್ಷಿಣ ಕೊರಿಯವು ವಿಶ್ವ ಸಂಸ್ಥೆಯ ಕೈಕೆಳಗಿರುವುದೆಂದೂ, ಅಲ್ಲಿನ ಪರಿಸ್ಥಿತಿಯನ್ನು ವಿಶ್ವ ಸಂಸ್ಥೆಯು ಹತೋಟಿಗೆ ತರಲು ಸಾಧ್ಯವಿಲ್ಲದಿದ್ದರೆ ಅನಂತರ ಭಾರತವು ತನ್ನ ನಿಲುವೇನೆಂಬುದನ್ನು ಕುರಿತು ಆಲೋಚಿಸುವುದೆಂದೂ ಅವರು ಹೇಳಿರುತ್ತಾರೆ

ಪಾಕಿಸ್ತಾನದ ನೌಕರನಿಗೆ ೧೧ ಲಕ್ಷ ರೂ. ಬಹುಮಾನ

ಪಾಕಿಸ್ತಾನದ ವಿಮಾನ ಬಲದಲ್ಲಿ ನೌಕರನಾಗಿರುವ ಮ ಜಫರ್ ಉದ್ದೀನ್ ಎಂಬುವನಿಗೆ ಡರ್ಬಿ ಸ್ವೀಪಿನಲ್ಲಿ ೧೧ ಲಕ್ಷ ರೂ ಬಹುಮಾನ ದೊರೆಯಿತು ಆತನ ಸಹೋದರರೊಬ್ಬರು ಆ ನೌಕರನ ಹೆಸರಿನಲ್ಲಿ ಟಿಕೆಟ್ ಕೊಂಡಿದ್ದು ಬಹುಮಾನ ಬಂದುದನ್ನು ಅವನಿಗೆ ತಂತಿ ಮೂಲಕ ತಿಳಿಸಿದರೆಂದೂ ಅದನ್ನು ಕೇಳಿ ನೌಕರನಿಗೆ ಪ್ರಜ್ಞೆ ತಪ್ಪಿತೆಂದೂ ಕೂಡಲೇ ಆಸ್ಪತ್ರೆಗೆ ಕಳುಹಿದರು ಪ್ರಜ್ಞೆ ಬರುವಂತೆ ಮಾಡಲು ಯತ್ನಿಸಲಾಗುತ್ತಾ ಇದೆ

ಕಡಲೂರಿನಲ್ಲಿ ತಾಟಬೆಲ್ಲದ ಪರಿಶೋಧನಾಲಯ

ಮದ್ರಾಸು ಪ್ರಾಂತದ ಕಡಲೂರಿನಲ್ಲಿ ತಾಟಬೆಲ್ಲದ ಪರಿಶೋಧನಾಲಯವನ್ನು ಸ್ಥಾಪಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ

ಬಿರುಗಾಳಿ ಅನಾಹುತದಿಂದ ಮರಣದ ಸಂಖ್ಯೆ ೧೫೮

ಕಳೆದ ಸೋಮವಾರ ಅಮೆರಿಕದ ಮಿಚಿಗನ್ ಮತ್ತು ಓಹಿಯೋ ಪ್ರಾಂತಗಳಲ್ಲಿ ಬಿರುಗಾಳಿ ಬೀಸಿದ ಪರಿಣಾಮವಾಗಿ ಜನರ ಸಾವಿನ ಸಂಖ್ಯೆಯು ೧೫೮ ಕ್ಕೆ ಹೆಚ್ಚಿರುವುದಾಗಿ ವರದಿಯಾಗಿದೆ

ಒಂದು ವಾರದಲ್ಲಿ ಕೊರಿಯಾ ಶಾಂತಿ ಕೌಲಿಗೆ ರುಜು

ಕೊರಿಯಾ ಯುದ್ಧ ಸ್ಥಗಿತ ಒಪ್ಪಂದವಾಗುವಂತೆ ಮಾಡಲು ಇನ್ನೊಂದು ವಾರದಲ್ಲಿ ಶಾಂತಿ ಕೌಲಿಗೆ ರುಜು ಹಾಕಲಾಗುವುದೆಂದು ತಿಳಿದುಬಂದಿದೆ ಎರಡು ಪಕ್ಷಗಳ ಮುಖಂಡರೂ ನೆನ್ನೆ ಸಂಧಿಸಿ, ಕೌಲಿನ ವಿವರಗಳನ್ನು ಸಿದ್ಧಪಡಿಸುವ ಸಲುವಾಗಿ ಭೇಟಿಯನ್ನು ಮುಂದಕ್ಕೆ ಹಾಕಿದರು

ನ್ಯೂ ಇಂಗ್ಲೆಂಡಿನಲ್ಲಿ ಬಿರುಗಾಳಿ ಅನಾಹುತ

ಅಟ್ಲಾಂಟಿಕ್ ಸಾಗರದ ದ್ವೀಪವಾದ ನ್ಯೂ ಇಂಗ್ಲೆಂಡ್ ಪ್ರದೇಶದಲ್ಲಿ ಹಿಂದೆಂದೂ ಆಗದಂತಹ ಬಿರುಗಾಳಿಯ ಅನಾಹುತವು ಸಂಭವಿಸಿ, ೬೬ ಮಂದಿ ಸತ್ತು ೭೪೦ ಜನರ ಗಾಯಗೊಂಡಿರುವುದಾಗಿ ೧. ೫, ೨½ ಸಾವಿರ ಜನರ ಮನೆಮಠಗಳನ್ನು ಕಳೆದುಕೊಂಡಿರುವರೆಂದೂ ವರದಿಯಾಗಿದೆ

ಪೌರಸಭೆ ಮುಂದೆ ನೀರಿನ ಗಡಿಗೆ ಒಡೆದರು

ಅಜ್ಮೀರ್ ಸಂಸ್ಥಾನದ ಬೇವರ್ ಎಂಬಲ್ಲಿ ಜನರಿಗೆ ನೀರಿನ ಸೌಕರ್ಯವು ಸರಿಯಾಗಿಲ್ಲದೆ ಮೊನ್ನೆ ಅನೇಕರು ಖಾಲಿ ಗಡಿಗೆಗಳು ಬಕೆಟ್ ಮುಂತಾದ ನೀರು ತುಂಬುವ ಪಾತ್ರೆಗಳನ್ನು ಮೆರವಣಿಗೆಯಲ್ಲಿ ತಂದು, ಅಲ್ಲಿನ ಟೌನ್‌ಹಾಲಿನಲ್ಲಿ ಪೌರಸಭಾಧಿವೇಶನವು ನಡೆಯುತ್ತಿದ್ದಾಗ ಎದುರಿಗೆ ಒಡೆದುಹಾಕಿದರೆಂದು ಹೇಳಲಾಗಿದೆ

ಲ್ಯಾಂಟರ್ನ ಲೆಕ್ಚರ್

ರಾಜಧಾನಿಯ ಸದ್ವಿದ್ಯಾಪಾಠಶಾಲೆಯಲ್ಲಿ ನಾಳೆ ಸಂಜೆ ೫ ರಿಂದ ೬ ಗಂಟೆವರೆಗೆ ಶ್ರೀ ಅಮರನಾಥ್ ಎಂ ವಿಶ್ವೇಶ್ವರ ಶರ್ಮರವರು ಲ್ಯಾಂಟರ್ನ ಸಹಾಯದಿಂದ "ಕೇಳು, ನೋಡು ಮತ್ತು ಕಲಿ ಎಂಬ ವಿಷಯ ವಾಗಿ ಉಪನ್ಯಾಸ ಮಾಡುವರು

ರಂಜಾನ್ ಹಬ್ಬದಲ್ಲಿ ಸೂಳೆಗಾರಿಕೆ ತ್ಯಾಜ್ಯ

ಪಾಕಿಸ್ತಾನದ ಪಂಜಾಬಿನಲ್ಲಿರುವ ಸಿಯಾಲ್ಕೋಟೆ ಯಲ್ಲಿ ವ್ಯಭಿಚಾರವೃತ್ತಿಯಲ್ಲಿರುವ ಸ್ತ್ರೀಯರು ರಂಜಾನ್ ಹಬ್ಬಕ್ಕಾಗಿ ಒಂದು ತಿಂಗಳ ಕಾಲ ತಮ್ಮ ವೃತ್ತಿಯನ್ನು ನಿಲ್ಲಿಸಲು ನಿರ್ಧರಿಸಿರುತ್ತಾರೆ. ಈ ಪೈಕಿ ಹಲವರು ಕಷ್ಟಕ್ಕೆ ಗುರಿಯಾಗುವುದರಿಂದ ಅವರಿಗೆ ಸಹಾಯ ಮಾಡಲು ನಗರ ನಿವಾಸಿಗಳು ನಿಧಿಯೊಂದನ್ನು ಕೂಡಿಸಲು ಹೊರಟಿರುತ್ತಾರೆ

ಬೆಂಗಳೂರು ಹೈಸ್ಕೂಲಿನ ಪ್ರಾಶಸ್ತ್ಯ

ಬೆಂಗಳೂರಿನ ಸಿವಿಲ್ ಪ್ರದೇಶದಲ್ಲಿರುವ ಆರ್ ಬಿ ಎ ಎಂ ಹೈಸ್ಕೂಲಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಈ ಸಾರಿ ಕುಳಿತಿದ್ದ ೧೧೨ ವಿದ್ಯಾರ್ಥಿಗಳ ಪೈಕಿ ೯೬ ಮಂದಿ ಉತ್ತೀರ್ಣರಾಗಿ ಅವರಲ್ಲಿ ೪೦ ಜನರು ಪ್ರಥಮ ದರ್ಜೆ ಪಡೆದು, ಒಬ್ಬನು ಸಂಸ್ಥಾನಕ್ಕೆಲ್ಲಾ ಪ್ರಥಮ ಸ್ಥಾನ ಪಡೆದಿರುತ್ತಾನೆ ೬ ಮಂದಿ ಐ ಪಿ ಎಸ್ ಪಡೆದಿರುತ್ತಾರೆ ೯ ಮಂದಿ ಮಾತ್ರ ತೇರ್ಗಡೆಯಾಗಿರುವುದಿಲ್ಲ ಫಲಿತಾಂಶವು ಶೇ॥ ೮೬ ರಷ್ಟು ಬಂದಿದೆ

ಆಫ್ರಿಕಾ ನಾಯಕರ ಮೇಲೆ ನಿರ್ಬಂಧ

ದಕ್ಷಿಣ ಆಫ್ರಿಕದಲ್ಲಿರುವ ಎಲ್ಲಾ ಆಫ್ರಿಕಾ ಮತ್ತು ಭಾರತೀಯ ಮುಖಂಡರ ಮೇಲೆ ಅಲ್ಲಿನ ಸರ್ಕಾರದವರು ನಿಷೇಧಾಜ್ಞೆ ಜಾರಿ ಮಾಡಿ, ಅವರು ಯಾವುದೇ ಸಾರ್ವಜನಿಕ ಸಭೆಗಳಲ್ಲೂ ಒಂದು ವರ್ಷದವರೆಗೆ [illegible] ಹಾಗೂ ಅವರು [illegible] ನಗರಗಳಿಗೆ ಹೋಗ[illegible] ತಿಳಿಸಲಾಗಿದೆ

ವಿದ್ಯಾಭ್ಯಾಸ ಸಂಶೋಧನೆಗಾಗಿ ಒಂದು ಸಂಸ್ಥೆ

ಟಿ ನರಸೀಪುರದಲ್ಲಿ ಸೇರಿದ್ದ ಜಿಲ್ಲಾ ವಿದ್ಯಾಭ್ಯಾಸ ಸಮ್ಮೇಳನವು ವಿದ್ಯಾಭ್ಯಾಸದ ಎಲ್ಲಾ ಶಾಖೆಗಳಲ್ಲೂ [illegible] ಶೋಧನೆ ನಡೆಸಲು ಒಂದು [illegible] ಸ್ಥಾಪಿಸ[illegible] ಸರ್ಕಾರವನ್ನು [illegible] [illegible]

ಉತ್ತೀರ್ಣರಾದ ವಿದ್ಯಾರ್ಥಿಗಳು [illegible]

[illegible]

ಬ[illegible]ಗ ಅತಿಯಾಗಿ ಹರ್ಷವು ಬಾಗಿ[illegible] [illegible] ವೃತ್ತಪತ್ರಿಕೆ[illegible] [illegible]ಗಿದೆ

ವಸಂತ ಸಾಹಿತ್ಯೋತ್ಸವ

[illegible] ನಗರದ ಪುರಭವನದಲ್ಲಿ ವಸಂತ ಉತ್ಸವವನ್ನು [illegible] ಅದರ ಅಂಗವಾಗಿ [illegible] ಕಾಲೇಜಿನ ಸಂಸ್ಕೃತ [illegible] ಶ್ರೀ ಎನ್ ಎಸ್ ಪಾರ್ಥಸಾರಥಿರವರ ಉಪನ್ಯಾಸವು ಶ್ರೀ ಎಚ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ನೃತ್ಯ ನಾಟಕ ಮತ್ತು ಕಾವ್ಯವಾಚನ ಮೊದಲಾದ ಮನರಂಜನೆ ಕಾರ್ಯಕ್ರಮಗಳೂ ಏರ್ಪಾಡಾಗಿವೆ

ಶ್ರೀ

ಜಗದಂಬಾ ಶಿಶುವಿಹಾರ

[illegible]

ಗಳನ್ನು ನಡೆಸಲಾಗುತ್ತದೆ [illegible] ತಿಳಿಸಲಾಗಿದೆ

ಬಿ ಕೃಷ್ಣಮೂರ್ತಿ,
ಕಾರ್ಯದರ್ಶಿ

ಕರ್ನಾಟಕ ಪ್ರಾಂತವಾಗುವವರೆಗೆ ಕಿರೀಟಧಾರಣೆ ಇಲ್ಲ

ರಂಭಾಪುರಿ ಜಗದ್ಗುರುಗಳ ಪ್ರತಿಜ್ಞೆ

ದಾವಣಗೆರೆಗೆ ತೆರವು [illegible] ಜಿಲ್ಲೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಜಗದ್ಗುರುಗಳು ಕರ್ನಾಟಕ ಪ್ರಾಂತ ರಚನೆಯಾಗುವ ವರೆಗೆ ಕಿರೀಟವನ್ನು ಧರಿಸುವುದಿಲ್ಲವೆಂದು ಪ್ರತಿಜ್ಞೆ ತೊಟ್ಟಿರುತ್ತಾರೆ. ತಮ್ಮ [illegible] ಜನರು [illegible] ಮತ್ತು ಪೇಟಾಗಳನ್ನು ಕಳಚಿಡುವಂತೆ ಅವರು ಸೂಚಿಸಿರುತ್ತಾರೆ [illegible] ಪ್ರಾಂತಗಳ ರಚನ[illegible] ಅವರು ತಿಳಿಸಿ, ಕರ್ನಾಟಕ ಏಕೀಕರಣದ ಹೋರಾಟ [illegible] ವರ

ರಾಜೀನಾಮೆ ಕೊಡುವಂತೆ ಸೂಚಿಸುವ ಕೃತಕ ಪತ್ರ

[illegible] ಪಂಚಾಯಿತಿ ಕೋರ್ಟಿನ [illegible] ಸ್ಥಾನಕ್ಕೆ [illegible] ಜಿಲ್ಲಾ ಕಲೆ[illegible]

[illegible]

[illegible] ವರದಿಯಾಗಿದೆ ಪೊಲೀಸ[illegible] ತನಿಖೆ ನಡೆಸುತ್ತಿರುವ

೧೯೯೯ ರಲ್ಲಿ ಭಾರತದ ಜನಸಂಖ್ಯೆ ೧೦೦ ಕೋಟಿ?

[illegible] ರ ಹೊತ್ತಿಗೆ ಭಾರತದ ಜನಸಂಖ್ಯೆ [illegible] ಕೋಟಿಯಷ್ಟಾಗುವುದೆಂದು [illegible] ವಿಶ್ವವಿದ್ಯಾಲಯದ ಡಾ ಎಸ್ ಚಂದ್ರಶೇಖರ್‌ರವರು ಅಂತರ ರಾಷ್ಟ್ರೀಯ ವಿಶ್ವ ವಿದ್ಯಾಲಯಗಳ ಸೇವಾ ಗೋಷ್ಠಿಯಲ್ಲಿ ಭಾಷಣ ಮಾಡುತ್ತಾ ತಿಳಿಸಿರುತ್ತಾರೆ

COACHING CLASSES

For Madras Matric, Ajmer Inter. L. S. S. S. L. C. (Sup.) Full Term Fees Rs 1?/ to the poor. Sri Raghavendra Institute Kabir Road Mysore

SARADA TUTORIAL INSTITUTE,
Sarada Vilasa High School Buildings Mysore

Coaching Classes for the benefit of candidates appearing for the Supplementary S S L C Examination of Sept 1953 will start working from 15th June 1953

Admissions will be received between 11 A M and 4-30 P M on all working days

B V Rajagopala Iyengar,
Organiser

ಅಮೇರಿಕದಲ್ಲೊಂದು ವಿದೇಶೀ ಸೈನ್ಯತಂಡ

ರಷ್ಯನ ಅಧೀನವಾಗಿರುವ ದೇಶಗಳಿಂದ ಓಡಿಬಂದಿರುವ ವಿದೇಶೀಯರಿಂದ ಕೂಡಿದ ತುಕಡಿಯೊಂದನ್ನು ಏರ್ಪಡಿಸಲು ಅಮೆರಿಕವು ಯೋಚಿಸುತ್ತಿರುವುದಾಗಿ ಗೊತ್ತಾಗಿದೆ ಪೂರ್ಣ ಮಿಲಿಟರಿ ಶಿಕ್ಷಣವನ್ನು ಈ ಪಡೆಗೆ ಕೊಡಲಾಗುವುದು ಅದಕ್ಕಾಗಿ ಸಾಕಾದಷ್ಟು ಹಣವನ್ನು ಶೇಖರಿಸಲಾಗುವುದು ತರಬೇತಾದ ನಂತರ ಈ ತಂಡವನ್ನು ಯೂರೋಪಿನಲ್ಲಿಡಲಾಗುವುದು

ಹರಿಕಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಚಂದ್ರಹಾಸ ಎಂಬ ಹರಿಕಥೆಯನ್ನು ಶ್ರೀ ಪಿ ರಾಮಸ್ವಾಮಿ ನಾಯ್ಡುರವರು ಮಾಡುವರು ಅಮ್ಮನವರಿಗೆ ಕ್ಷೀರಸಾಗರ ಸ್ವಾಮಿ ಅಲಂಕಾರವನ್ನು ಹಾಕಲಾಗುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಚಂದ್ರಮುಖಿ

ರಾಜಧಾನಿಯ ಪಂಡಿತ ಎಂ ಕೆ ಅನಂತರಾಜು ಅವರಿಂದ ರಚಿಸಲ್ಪಟ್ಟು, ಪುಷ್ಪ ಪ್ರಕಟನಾಲಯದವರು ಪ್ರಕಟಿಸಿರುವ ಚಂದ್ರಮುಖಿ ಎಂಬ ಪತ್ತೇದಾರಿ ಕಾದಂಬರಿಯನ್ನು ಆದರದಿಂದ ಸ್ವೀಕರಿಸಿದ್ದೇವೆ ೨೪ ಪುಟಗಳ ಈ ಗ್ರಂಥದ ಬೆಲೆ ೦-೪-೦

THE MODEL TUTORIAL INSTITUTE
D Banumiah's School Building Mysore

Coaching Classes for the Supplementary S S L C. Examination of September 1953 start working from about the 15th of this month

Admissions are made from 9 A M to 5 P M daily on all working days

B Seshagiri Rao,
Organiser

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
[illegible]	[illegible]	[illegible]
ಹರಳುಬೀಜ	[illegible]	[illegible]
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
[illegible]	[illegible]	[illegible]
ಉದ್ದು	[illegible]	[illegible]
ಎಳ್ಳು	[illegible]	[illegible]
[illegible]	[illegible]	
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

★ [illegible] ಸ್ಪರ್ಧೆಗಳು ಪ್ರಕಟವಾಗುವ "[illegible]" [illegible] ಸ್ಪರ್ಧೆಗಳನ್ನು [illegible] ದಿನಗಳ ಸಂಚಿಕೆ ಮೇಲೆ ಸರ್ಕಾರದವರು [illegible] ತಂಗೆ [illegible]

SRI GANESHA TALKIES

GRAND GALA RELEASE On 12—6—53

SARADA VILAS COLLEGE MYSORE

TUTORIAL SECTION

Tutorial Classes in English Second Language and P C M for the benefit of students taking September Inter Examination 1953 will be started

Please enquire between 10 and 12 in the morning

Hon Secretary

ರಂಜನ್ ಚಿತ್ರದ ಪ್ರಮುಖ[illegible]

ಶ್ರೀ [illegible]

ಮೋತಿಲಾಲ್ ಟಾಕೀಸ್,

13-6-53 ರಿಂದ ಪ್ರತಿದಿನ 3 ಆಟಗಳು [illegible] ಆಫ್ರಿಕದ [illegible] ವಿಧವಾದ ಭಯಂಕರ [illegible] ಇಂಗ್ಲೀಷ್ ಚಿತ್ರ

ಕ್ವೀನ್ ಆಫ್ ದಿ ಜಂಗಲ್

ಬೆಳಗಿನ ಪ್ರದರ್ಶನ 12-6-53 ರಿಂದ

ಅನ್ನೈ ಓರ್ ರತ್ನ

ಒಲಿಂಪಿಯಾ ★ ಅಮೋಘ ಪ್ರಾರಂಭ 14-6-53 ರಿಂದ ಪ್ರತಿದಿನ ಮೂರು ಪ್ರದರ್ಶನಗಳು

ಹಿಂದೂ ಫಿಲಂಸ್ ರವರ ★ **ಮೋಲಿ** ★

ಅಮರ ಸಂಸಾರದಲ್ಲೊಂದ [illegible] ಕಥಾ [illegible]

[illegible] ಕುಮಾರ್, [illegible] ಪೂರ್ಣ[illegible]

[illegible] ಮತ್ತು [illegible]

Edited, Printed and Published by A R Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೨-೬-೧೯೫೩ [ಸಂಚಿಕೆ ೨೫೮

ಚಳುವಳಿ ಅಡಗಿಸಲು ಮೊರಾಕ್ಕೋಗೆ ಫ್ರೆಂಚ್ ಸೈನ್ಯ

ಮೊರಾಕ್ಕೋ ಚಳುವಳಿ ತಡೆಗೆ ಫ್ರೆಂಚ್ ಸೈನ್ಯ

ಮಲಬಾರ್ ತೀರದಲ್ಲಿರುವ ಮಾಹೆ ಪ್ರದೇಶದಲ್ಲಿ ಯಾವುದೇ ಚಳುವಳಿ ನಡೆದರೂ ಅದನ್ನು ದಮನ ಮಾಡಲು ಫ್ರೆಂಚರು ತಮ್ಮ ಸೈನ್ಯಗಳನ್ನು ಕಳುಹಿಸಿರುವುದಾಗಿ ಭಾರತ ಸರ್ಕಾರಕ್ಕೆ ವರದಿಗಳು ಬರುತ್ತಲಿವೆ ಯೆಂದು ಕೇಂದ್ರದ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ ಮಾಹೆಯಲ್ಲಿ ಚಳುವಳಿಯು ನಡೆಯುತ್ತಿರಬಹುದೆಂದೂ, ಫ್ರೆಂಚರಿಗೆ ಅದನ್ನು ಹಿಂದಿನ ಅಗುತ್ತಿಲ್ಲವೆಂದೂ ಅವರು ಹೇಳಿ ಮಾಹೆಗೆ ಆಹಾರ ಪದಾರ್ಥಗಳನ್ನು ಕಳುಹಿಸದಂತೆ ಭಾರತವು ಬಹಿಷ್ಕಾರ ಹಾಕಿಲ್ಲವೆ ಎಂದೂ ಮೇಲೆ ಸುಳ್ಳು ಆಪಾದನೆ ಹೊರಿಸಲಾಗಿದೆಯೆಂದೂ, ಇದರಿಂದ ಅಲ್ಲಿ ಕ್ಷಾಮ ಪರಿಸ್ಥಿತಿ ಉಂಟಾಗುವುದೆಂದು ಆ ಪಾದಿಸಿರುವುದನ್ನು ನಂಬಲು ಸಾಧ್ಯವಿಲ್ಲವೆಂದೂ ತಿಳಿಸಿದರು. ಫ್ರೆಂಚ್ ಶುದ್ಧಿ ಸಂಸ್ಥೆಯೊಂದರ ಪ್ರಕಾರ, ಕಳೆದ ಸೋಮವಾರ ಸ್ಥಾಹಿಯು ಮೇಲೆ ಭಾರತ ಸರ್ಕಾರ ಪೂರ್ಣವಾದ ದಿಗ್ಬಂಧನವನ್ನು ಹಾಕಿದ ಮೇಲೆಯೂ ಅದರಿಂದ ಅಲ್ಲಿ ಕ್ಷಾಮ ಪರಿಸ್ಥಿತಿ ಉಂಟಾಗಿರುವುದಾಗಿಯೂ ತಿಳಿಸಲಾಗಿದೆ. ಭಾರತ ಸರ್ಕಾರದ ಅಧಿಕಾರಿಯು ಈ ವಿಷಯವನ್ನು ಪ್ರಸ್ತಾಪಿಸಿ ಫ್ರೆಂಚ್ ಸರ್ಕಾರದವರು ಈ ಸಂಬಂಧ ಮಾಡಿರುವ ಪ್ರತಿಭಟನೆಗೆ ಒಂದೆರಡು ದಿನಗಳಲ್ಲಿ ಉತ್ತರವೀಯಲಾಗುವುದೆಂದು ಹೇಳಿರುತ್ತಾರೆ

ಅಹಿಂಸಾವಾದಿಯನ್ನು ಕೊಂದ ಹುಲಿ ನಾಶವು

ಮಂಧರ್ ತಾಲ್ಲೂಕಿನಲ್ಲಿ ಗಣಪತಿ ಕೃಷ್ಣ ಎಂಬ ಅಹಿಂಸಾವಾದಿ ಸರ್ವೋದಯ ಕಾರ್ಯಕರ್ತರು ಭೂದಾನ ಯಜ್ಞ ಕೆಲಸದ ಸಂಬಂಧವಾಗಿ ಪ್ರವಾಸ ಮಾಡುತ್ತಾ, ಕಳೆದ ವಾರ ಮಧ್ಯ ರಾತ್ರಿಯಲ್ಲಿ ಅರಣ್ಯವೊಂದರಲ್ಲಿ ಬರುತ್ತಿದ್ದಾಗ, ಒಂದು ಹುಲಿ ಎದುರಾಯಿತು ಇದ್ದ ಸ್ಥಳಕ್ಕೆ ಸಂಗಡಿಗರು ನಿಂತುಕೊಂಡು ಆ ವರನ್ನು ಪ್ರೀತಿಯ ದೃಷ್ಟಿಯಿಂದ ನೋಡುತ್ತಾ ಕಲ್ಲನ್ನು ಹಾಕಲು ಹುಲಿಯು ಹೊರಟುಹೋದುದಾಗಿ ವರದಿಯಾಗಿದೆ

ಪ್ರತಿಭಟನಾ ಸಭೆ

ರಾಜಧಾನಿಯಲ್ಲಿ ಮನೆಗಂದಾಯವನ್ನು ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆ ಸೂಚಿಸಲು ಮುಂದಿನ ಭಾನುವಾರ ಡಾ|| ಬೆಳ್ಳಿ ಪ್ರಭುದೇವ ಟೌನ್‌ಹಾಲ್ ಬಳಿಯಿಂದ ಮೆರವಣಿಗೆ ಹೊರಟು ಪೌರಸಭಾ ಸದಸ್ಯರ ಗೃಹಗಳ ಮುಂದೆ ಹೋಗುವ ಸಂಬಂಧ ನಿರ್ಧರಿಸಲಾಗಿದೆ ಸಂಜೆ ೬|| ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ ಮಹಾಜನರು ದಯಮಾಡಿಸಬೇಕೆಂದು ಸಭಾ ವ್ಯವಸ್ಥಾಪಕ ಶ್ರೀ ಡಿ ಆರ್ ಕೃಷ್ಣಮೂರ್ತಿಯವರ ಪ್ರಾರ್ಥಿಸಿರುತ್ತಾರೆ

ಆಂಧ್ರ ಪ್ರಾಂತದ ಮಸೂದೆ ಬಗ್ಗೆ ಮೈಸೂರು ಸರ್ಕಾರದ ಅಭಿಪ್ರಾಯ

ಆಂಧ್ರ ಪ್ರಾಂತ ರಚನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದವರು ತಯಾರಿಸಿರುವ ಕರಡು ಮಸೂದೆಯು ಮೈಸೂರು ಸರ್ಕಾರದವರಿಗೆ ತಲುಪಿ, ಅವರ ಪರಿಶೀಲನೆಯಲ್ಲಿರುವುದಾಗಿ ಗೊತ್ತಾಗಿದೆ ಈ ತಿಂಗಳು ೧೬ನೇ ತಾರೀಕಿನೊಳಗೆ ಕೇಂದ್ರಕ್ಕೆ ಮೈಸೂರು ಸರ್ಕಾರದವರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿದೆ

ವಿದ್ಯಾರ್ಥಿನಿಯರ ಶುಲ್ಕದ ರಿಯಾಯಿತಿ ರದ್ದು

ಸೆನೆಟ್ ಸಭೆಯಲ್ಲಿ ನಿರ್ಣಯದ ಅಂಗೀಕಾರ

ಬೆಂಗಳೂರು ೧೧

ನೆನ್ನೆ ಇಲ್ಲಿ ನಡೆದ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರಿಗೆ ಕೊಡಲಾಗಿದ್ದ ಶುಲ್ಕದ ರಿಯಾಯಿತಿಯನ್ನು ಸರ್ಕಾರದವರು ರದ್ದು ಮಾಡಿರುವುದನ್ನು ಅನುಮೋದಿಸುವ ಬಗ್ಗೆ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ವೈ ಅಪ್ಪಾಜಿಯವರು ಒಂದು ನಿರ್ಣಯವನ್ನು ಮಂಡಿಸಿದರು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ, ಶ್ರೀಗಳಾದ ಎಂ ಎಸ್ ರಾಮಸ್ವಾಮಿ, ವೆಂಕಟ್ಯಾಗೋವಿಂದರೆಡ್ಡಿ ಮತ್ತು ಎ. ಶ್ರೀನಿವಾಸ ಮೂರ್ತಿಯವರು ಅದನ್ನು ವಿರೋಧಿಸಿ ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದರು ಆದರೂ ಸಭೆಯು ನಿರ್ಣಯವನ್ನು ಅಂಗೀಕರಿಸಿತು

ಅಮೆರಿಕಾ ಸಾಹಿತ್ಯದ ಜೊತೆಗೆ ಚೀನಾ ಮತ್ತು ರಷ್ಯಾ ಸಾಹಿತ್ಯ

ಬಿ ಎ ಪದವಿ ತರಗತಿಗೆ ಅಮೆರಿಕಾ ಸಾಹಿತ್ಯವನ್ನು ಒಂದು ಮೈನರ್ ಸಬ್ಜೆಕ್ಟ್ ಆಗಿ ಸೇರಿಸುವಂತೆ ನಿರ್ಣಯವನ್ನು ಸೆನೆಟ್ ಸಭೆಯಲ್ಲಿ ತರಲಾಗಿದ್ದಿತು ಚೀನಾ ಮತ್ತು ರಷ್ಯಾ ಸಾಹಿತ್ಯಗಳನ್ನೂ ಸೇರಿಸುವಂತೆ ಸೂಚಿಸಿ ಸಭೆಯು ನಿರ್ಣಯವನ್ನು ವ್ಯಾಸಂಗ ಸಮಿತಿಗೆ ವಾಪಸು ಕಳುಹಿಸಿತು

ನಾಟಕವನ್ನು ಸಹ ಐಚ್ಛಿಕ ವಿಷಯವಾಗಿ ಬಿ ಎ ಪದವಿ ತರಗತಿಗೆ ಸೇರಿಸುವುದನ್ನು ಸಭೆಯು ಅಂಗೀಕರಿಸಿತು. ಈ ಬಗ್ಗೆ ನಿರ್ಣಯವನ್ನು ಮಂಡಿಸಿದ ಪ್ರೊ|| ಶಿವಾಚಾರವರು ಮಾತನಾಡಿ ಮೈಸೂರಿನಲ್ಲಿ ಅಭ್ಯಾಸಕ್ಕಾಗಿ ನಾಟಕ ರಂಗವೊಂದನ್ನು ನಿರ್ಮಿಸಲು ವಿಶ್ವವಿದ್ಯಾಲಯವು ಆಲೋಚಿಸಿರುವುದಾಗಿಯೂ, ನಾಟಕ ಕಲೆಯನ್ನು ಅಭಿವೃದ್ಧಿಗೊಳಿಸಲು ವಿದ್ಯಾರ್ಥಿಗಳಲ್ಲಿರುವ ನಾಟ್ಯ ಗುಣ ವಿಶೇಷಗಳನ್ನು ಉಪಯೋಗಿಸಿಕೊಳ್ಳಬೇಕೆಂದೂ, ಅಭಿಪ್ರಾಯಪಟ್ಟರು ಪ್ರೊ|| ಎಲ್ ಶ್ರೀಕಂಠಯ್ಯನವರು ವಿರೋಧಿಸಿದರು

ಫ್ರಾನ್ಸ್ ಅಧ್ಯಕ್ಷರಿಂದಲೇ ಪ್ರಧಾನಿಯ ನೇಮಕ

ಫ್ರಾನ್ಸಿನಲ್ಲಿ ಕಳೆದ ಮೂರು ವಾರಗಳಿಂದ ಮಂತ್ರಿಮಂಡಲವೇ ಇಲ್ಲದೆ ಬಿಕ್ಕಟ್ಟುಂಟಾಗಿರುವುದು ಅಧ್ಯಕ್ಷ ಅರಿಯೋಲ್‌ರವರು ಮಾಜಿ ಪ್ರಧಾನಿ ಬಿಡೋರವರನ್ನು ಸರ್ಕಾರ ರಚಿಸುವಂತೆ ಕೇಳಿದ್ದರು ಅಲ್ಲಿನ ರಾಷ್ಟ್ರೀಯ ಸಭೆಯಲ್ಲಿ ನೆನ್ನೆ ಬಿಡೋರವರಿಗೆ ಸಾಕಷ್ಟು ಬೆಂಬಲದ ಓಟುಗಳು ದೊರೆಯದೆ ಅವರು ಮಂತ್ರಿಮಂಡಲ ರಚಿಸುವ ಪ್ರಯತ್ನವೂ ವಿಫಲವಾಯಿತು ಈಗ ಅಧ್ಯಕ್ಷ ಅರಿಯೋಲ್‌ರವರು ಹೊಸ ಕ್ರಮವನ್ನನುಸರಿಸಿ, ಮುಖ್ಯ ಮಂತ್ರಿಯನ್ನು ತಾವೇ ನಾಮಕರಣ ಮಾಡಲು ನಿರ್ಧರಿಸಿರುವರೆಂದು ತಿಳಿದುಬಂದಿದೆ ಬರ್ಮುಡಾದಲ್ಲಿ ನಡೆಯಲಿರುವ ತ್ರಿರಾಷ್ಟ್ರಗಳ ಸಮ್ಮೇಳನದ ವೇಳೆಗೆ ಫ್ರಾನ್ಸಿನ ಪ್ರಧಾನಿಯ ಆಯ್ಕೆಯಾಗಿ, ಅವರು ಸಮ್ಮೇಳನದಲ್ಲಿ ಭಾಗವಹಿಸುವಂತಾಗಲೆಂಬ ಉದ್ದೇಶದಿಂದ ಅರಿಯೋಲ್‌ರವರು ಈ ಕ್ರಮವನ್ನು ಕೈಗೊಂಡಿರುವರೆಂದು ಹೇಳಲಾಗಿದೆ ಆ ದೇಶದ ಪರಿಸ್ಥಿತಿ ವಿಷಮಿಸಿರುವುದೆಂಬುದಕ್ಕೆ ಇದೂ ಒಂದು ಚಿಹ್ನೆಯಾಗಿರುವುದೆಂದು ಭಾವಿಸಲಾಗಿದೆ

ನೇಪಾಳದ ರಾಜರಿಂದ ಸಿಂಹಾಸನ ತ್ಯಾಗವೇ ?

ನೇಪಾಳದ ಅರಸರಾದ ತ್ರಿಭುವನರ ಆರೋಗ್ಯವು ದಿನೇದಿನೇ ಕೆಡುತ್ತಿರುವುದೆಂದೂ, ಆದುದರಿಂದ ಅವರು ವಿಶ್ರಾಂತಿ ಪಡೆಯಲು, ತಮ್ಮ ಮಗನ ಪರವಾಗಿ ಸಿಂಹಾಸನ ತ್ಯಾಗ ಮಾಡಿ, ಖಾಯಮ್ಮಾಗಿ ಸ್ವಿಟ್ಸರ್ಲೆಂಡಿನಲ್ಲಿ ನೆಲೆಸುವರೆಂದೂ ಹೇಳಲಾಗುತ್ತಿದೆ

ಇಂಟರ್ ಆರ್ಟ್ಸ್ ಮತ್ತು ಸೈನ್ಸ್‌ಗಳಲ್ಲಿ ಪ್ರಥಮ ಸ್ಥಾನ

ಈ ವರ್ಷದ ಇಂಟರ್ ಆರ್ಟ್ಸ್ ಪರೀಕ್ಷೆಯಲ್ಲಿ ಬೆಂಗಳೂರು ಮೌಂಟ್ ಕಾರ್ಮೆಲ್ ಕಾಲೇಜಿನ ಕುಮಾರಿ ಸಿಸಿಲಿಯಾ ಅಲ್ಬುಕರ್ಕ್‌ರವರು ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನ ಶ್ರೀ ಸುಂದರೇಶನವರು ಇಂಟರ್ ಸೈನ್ಸಿನಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ

ಟಿ. ಸಿದ್ದಲಿಂಗಯ್ಯನವರ ಶಾಸನ ಸಭಾ ಸದಸ್ಯತ್ವ

ಇಬ್ಬರು ಸಾಕ್ಷಿಗಳ ವಿಚಾರಣೆ

ಸ್ವಂ ಸು ಫೋ] ಬೆಂಗಳೂರು ೧೧

ಕಾಫಿ ಕಂಪನಿ ಸ್ಥಾಪನೆ ಸಂಬಂಧವಾಗಿ ಮಾಜಿ ಮಂತ್ರಿ ಶ್ರೀ ಟಿ ಸಿದ್ಧಲಿಂಗಯ್ಯನವರು ಶಾಸನ ಸಭಾ ಸದಸ್ಯರಾಗಿರಲು ಅನರ್ಹರಾಗಿರುವರೇ ಎಂಬ ವಿಷಯವಾಗಿ ನಡೆಯುತ್ತಿರುವ ವಿಚಾರಣೆಯು ಈ ದಿನ ಕೇಂದ್ರ ಚುನಾವಣಾ ಕಮಿಷನರ್ ಶ್ರೀ ಕೆ ವಿ ಸುಂದರಂರವರ ಎದುರಿನಲ್ಲಿ ನಡೆಯಿತು ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ನಿನ ಶ್ರೀ ಎಂ ಜಿ ಭಟ್ ಮತ್ತು ಶ್ರೀ ಪಿ ಚೌಡಪ್ಪ ಎಂಬ ಇಬ್ಬರು ಸಾಕ್ಷಿಗಳ ವಿಚಾರಣೆ ಮತ್ತು ಪಾಟೀಸವಾಲು ನಡೆಯಿತು

ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಸಮ್ಮೇಳನಕ್ಕೆ ಡಾ|| ಮುಂಜುನಾಥ್

ಬರುವ ತಿಂಗಳು ಕೇಂಬ್ರಿಡ್ಜ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಸಮ್ಮೇಳನದಲ್ಲಿ ಭಾಗವಹಿಸಲು ಇಲ್ಲಿನ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಡಾ|| ಬಿ ಎಲ್ ಮಂಜುನಾಥ್‌ರವರು ಈ ತಿಂಗಳ ಕೊನೆಯಲ್ಲಿ ಪ್ರಯಾಣ ಬೆಳೆಸುವರೆಂದೂ, ಅವರ ಗೈರುಹಾಜರಿಯಲ್ಲಿ ವಿದ್ಯಾ ಇಲಾಖಾ ಡೈರೆಕ್ಟರರಾದ ಶ್ರೀ ಜೆ ಬಿ ಮಲ್ಲಾರಾಧ್ಯರವರು ಆಕ್ಟಿಂಗ್ ವೈಸ್ ಛಾನ್ಸಲರಾಗಿರುವರೆಂದೂ ವರದಿಯಾಗಿದೆ

ವಿಶ್ವವಿದ್ಯಾಲಯದಿಂದ ಇಂಟರ್ ತರಗತಿ ಪ್ರತ್ಯೇಕ

ವಿಶೇಷ ಸೆನೆಟ್ ಸಭೆಯಲ್ಲಿ ಸದಸ್ಯರ ವಿರೋಧ

ಸ್ವಂ ಸು ಫೋ] ಬೆಂಗಳೂರು ೧೧

ಸಂಸ್ಥಾನದ ವಿದ್ಯಾ ಸುಧಾರಣಾ ಸಮಿತಿಯವರ ವರದಿಯು ಇಂದು ಸೆನೆಟ್ಟಿನ ವಿಶೇಷ ಸಭೆಯಲ್ಲಿ ಚರ್ಚೆಯಾಯಿತು ಶ್ರೀ ಎ ಭೀಮಪ್ಪನಾಯಕರು, ಪ್ರೊಫೆಸರುಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಸ್ವತಂತ್ರರಾಗಿರವರೇ? ಎಂಬುದು ಇತ್ಯರ್ಥವಾಗಬೇಕೆಂದೂ, ಈಚೆಗೆ ಒಬ್ಬ ಪ್ರೊಫೆಸರರಿಗೂ ವಿಶ್ವವಿದ್ಯಾಲಯಕ್ಕೂ ಈ ಬಗ್ಗೆ ಅಭಿಪ್ರಾಯ ಭೇದ ಒಂದಿರುವುದೆಂದೂ ತಿಳಿಸಿದರು

ವೈಸ್ ಛಾನ್ಸಲರು ಉತ್ತರವಿತ್ತು, ಎಲ್ಲರೂ ಒಂದೇ ಅಭಿಮತ ಹೊಂದಿರಲು ಸಾಧ್ಯವಿಲ್ಲವೆಂದೂ, ಸದಸ್ಯರು ಸ್ವತಂತ್ರ ಅಭಿಪ್ರಾಯವನ್ನು ಸೂಚಿಸಬಹುದೆಂದೂ ತಿಳಿಸಿದರು

ಶಾರದಾ ವಿಲಾಸ ಕಾಲೇಜಿನ ಶ್ರೀ ಎಂ ಎಸ್ ರಾಮಸ್ವಾಮಿಯವರು ಚರ್ಚೆಯನ್ನಾರಂಭಿಸಿ, ಇಂಟರ್ ತರಗತಿಗಳನ್ನು ವಿಶ್ವವಿದ್ಯಾಲಯದ ಮೇಲ್ವಿಚಾರಣೆಯಿಂದ ತಪ್ಪಿಸಕೂಡದೆಂದು ತಿಳಿಸಿದರು

ಶ್ರೀ ಎಲ್ ಶ್ರೀಕಂಠಯ್ಯನವರು ಮಾತನಾಡಿ, ವಿದ್ಯಾಭ್ಯಾಸದ ಈಗಿನ ಪದ್ಧತಿಯನ್ನೇ ಇನ್ನೂ ೧೦ ವರ್ಷ ಕಾಲ ಮುಂದುವರಿಸಿಕೊಂಡು ಬರಬೇಕೆಂದು ಹೇಳಿದರು

ಜರ್ಮನಿಯಲ್ಲೂ ಅಣು ವಸ್ತುಗಳ ಶೋಧನೆ

ಜರ್ಮನಿಯಲ್ಲೂ ಸಹ ಅಣು ವಸ್ತು ಶೋಧಿಸುವ ಏರ್ಪಾಡಾಗುತ್ತಿರುವುದಾಗಿ ವರದಿಯಾಗಿದೆ.

ಎಲ್. ಎಸ್. ಪರೀಕ್ಷೆಯಲ್ಲಿ ಪ್ರಥಮ ೫ ಸ್ಥಾನಗಳು

ಬೆಂಗಳೂರು ೧೧

ಕಳೆದ ಏಪ್ರಿಲ್‌ನಲ್ಲಿ ನಡೆದ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಒಟ್ಟು ೪೭,೯೪೯ ವಿದ್ಯಾರ್ಥಿಗಳು ಕಟ್ಟಿದ್ದರು. ಇವರ ಪೈಕಿ ೩೧,೦೪೦ ಮಂದಿ ಉತ್ತೀರ್ಣರಾಗಿರುತ್ತಾರೆ. ಅವರಲ್ಲಿ ೩,೫೭೯ ಮಂದಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವರು. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಸಂಖ್ಯೆ ೪೦,೭೭೫ ಶೇಕಡ ೫೫ ೫೮ ರಂತೆ ಪ್ರಮೋಷನ್ ಕೊಡಲಾಗಿದೆ. ರ್‍ಯಾಂಕು ಪಡೆದವರ ಪೈಕಿ ಕೆಳಗೆಕಂಡ ವಿದ್ಯಾರ್ಥಿಗಳು ಕ್ರಮವಾಗಿ ಐದು ಸ್ಥಾನಗಳನ್ನು ಗಳಿಸಿರುವರು —

೧ ಎಸ್. ಸಿದ್ದಲಿಂಗಪ್ಪ, ಸರ್ಕಾರಿ ಬಾಲಕರ ವಿ ಡಲ್ ಸ್ಕೂಲ್ ತಿಪಟೂರು ೨ ಎಲ್ ಶ್ರೀನಿವಾಸ ಉಡುಪ, ನ್ಯಾಷನಲ್ ಮಿಡಲ್ ಸ್ಕೂಲ್, ಅರಗ ತೀರ್ಥಹಳ್ಳಿ ತಾಲ್ಲೂಕು ೩ ಕೆ ವೆಂಕಟರವಣಪ್ಪ, ನ್ಯೂ ಟೈಪ್ ಮಿಡಲ್ ಸ್ಕೂಲ್, ತೊಂಡೆಭಾವಿ, ಗೌರಿಬಿದನೂರು ತಾಲ್ಲೂಕು ೪ ಆರ್ ಶಂಕರ್, ಶಂಕರಾಪುರಂ ಸರ್ಕಾರಿ ಮಿಡಲ್ ಸ್ಕೂಲ್, ಮೈಸೂರು ೫ ಹೆಚ್ ವಿ ಗಂಗಾಧರ, ಸರ್ಕಾರಿ ಮಿಡಲ್ ಸ್ಕೂಲ್, ಮಲ್ಲೇಶ್ವರಂ, ಬೆಂಗಳೂರು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಮೆರಿಕಾ ಸಾಹಿತ್ಯ ತರಗತಿ

ಮೈಸೂರು ವಿಶ್ವವಿದ್ಯಾಲಯದಲ್ಲಿ ಅಮೆರಿಕಾ ಸಾಹಿತ್ಯ ತರಗತಿಯನ್ನು ಏರ್ಪಡಿಸುವ ಆಲೋಚನೆಯಿರುವುದೆಂದು ತಿಳಿದುಬಂದಿದೆ

ಧಾನ್ಯಗಳಿಗೆ ಬ್ಯಾಂಕಿನವರ ಮುಂಗಡ ಸಾಲ ಕೊಡದು

ಸ್ವಾಮಿ,

ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆಯನ್ನು ಸರ್ಕಾರದವರು ನಿಲ್ಲಿಸಿರುವುದಕ್ಕಾಗಿ ಮಹಾಜನರು ಕೃತಜ್ಞರಾಗಿರುತ್ತಾರೆ. ಧಾನ್ಯಗಳ ವ್ಯಾಪಾರವು ವರ್ತಕರ ಕೈಗೆ ಬಂದಿದೆ ಲಾಭದ ಆಶೆಯಿಂದ ಬ್ಯಾಂಕಿನವರು ಅಕ್ಕಿ, ರಾಗಿ, ಜೋಳ ಮುಂತಾದುವುಗಳ ಮೇಲೆ ಮುಂಗಡ ಸಾಲ ಕೊಡುವುದು ಸರಿಯಲ್ಲ. ಹಾಗೆ ಕೊಟ್ಟರೆ, ಧಾನ್ಯಗಳು ಹಲವು ಜನರ ಕೈಯಲ್ಲಿ ಶೇಖರಣೆಯಾಗಿ ಬೆಲೆಗಳ ಏರಿಕೆಗೆ ಮಾರ್ಗವಾಗುವುದು ಈಗಾಗಲೇ ವರ್ತಕರು ಬೆಲೆಗಳನ್ನು ಹೆಚ್ಚಿಸಿ, ಜನಸಾಮಾನ್ಯರಿಗೆ ತೊಂದರೆ ಕೊಟ್ಟಿರುತ್ತಾರೆ ಆದ್ದರಿಂದ ಬ್ಯಾಂಕಿನವರು ವರ್ತಕರಿಗೆ ಧಾನ್ಯಗಳಿಗೆ ಮುಂಗಡ ಹಣ ಕೊಡದಂತೆ ಸರ್ಕಾರದವರು ನಿರ್ಬಂಧಪಡಿಸಬೇಕೆಂದು ಕೋರುತ್ತೇನೆ.

— ಪ್ರಜಾ ಹಿತೈಷಿ

SARADA TUTORIAL INSTITUTE,

Sarada Vilasa High School Buildings, Mysore.

Coaching Classes for the benefit of candidates appearing for the Supplementary S S L C. Examination of Sept 1953 will start working from 15th June 1953

Admissions will be received between 11 A. M and 4 30 P M on all working days

H V Rajagopala Iyengar,
Organiser.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಇಂದ	ರೂ. ಗೆ
ಕಡಲೆಕಾಯಿ	೨೦-೨-೦	೪೦-೦-೦
ಕೊಂಗಿರೇಟು	೨೪-೨-೦	
ಜೋಳ	[illegible]	[illegible]
ಹೆಸರು	೬೦-೦-೦	೬೬ ೧೨.೦
ಹಲಸಂದೆ	[illegible]	[illegible]
ಅವರೆ	[illegible]	[illegible]
ಉದ್ದು	[illegible]	೬೪.೧೦-೦
ಎಳ್ಳು	[illegible]	[illegible]
ಮೆಣಸಿನಕಾಯಿ	೨೬.೧೦ ೦	
ಹುಣಸೇಹಣ್ಣು	೬.೧೨ ೦	[illegible]
ಸೀಗೆಕಾಯಿ	೬-೦-೦	[illegible]
ತೆಂಗಿನಕಾಯಿ	೧೨೭-೦-೦	೨೧೪.೦.೦

ಎಸ್. ಭದ್ರಯ್ಯನವರಿಗೆ ಅಮೆರಿಕಾ ನೇಗಿಲು ದಾನ

ಮದ್ರಾಸಿನಲ್ಲಿರುವ ಅಮೆರಿಕದ ಉಪರಾಯಭಾರಿ ಡಾ|| ರಾಲ್ಫ್ ಇ. ಪರ್ಸೆಲ್‌ರವರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಕಾರ್ಯದರ್ಶಿ ಶ್ರೀ ಎಸ್ ಭದ್ರಯ್ಯನವರಿಗೆ ಒಂದು ನೇಗಿಲನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ ನಂಜನಗೂಡಿನಲ್ಲಿರುವ ವಯಸ್ಕರ ಶಿಕ್ಷಣ ಸಮಿತಿ ವಿದ್ಯಾಪೀಠದ ಪರವಾಗಿ ಶ್ರೀ ಭದ್ರಯ್ಯನವರು ಅದನ್ನು ಸ್ವೀಕರಿಸಿರುತ್ತಾರೆ ಈ ನೇಗಿಲನ್ನು ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೊಟ್ಟಿದ್ದರು.

COACHING CLASSES

For Madras Matric, Ajmer Inter, L. S., S.S L C (Sup Full Term Fees Rs. 15/- to the poor). Sri Raghavendra Institute, Kabir Road, Mysore.

ರಂಜಕ ಪ್ರಚುರ ಪ್ರಯುಕ್ತ

ಸ್ವತಂತ್ರ ಪ್ರಯೋಗ

ಮೋತಿಲಾಲ್ ಟಾಕೀಸ್,

13-6-53 ರಿಂದ : ಪ್ರತಿದಿನ 3 ಆಟಗಳು

ಯುದ್ಧದ ಸಮಯದಲ್ಲಿ ಸಹಸ್ರಾರು ಜನರ ಜೀವನವನ್ನು ಸಾಹಸಕ್ಕೆ ಗುರಿಮಾಡಿದ ನೈಜ ಕಥೆ

ಕ್ವೀನ್ ಆಫ್ ದಿ ಜಂಗಲ್

ಬರಲಿರುವ ಪ್ರದರ್ಶನ :: 12.6.53 ರಿಂದ

ಅ ನ್ಯಾ ಲ್ ರ ತ್ನ

ಅಗಾಸದ ಕಾರ್ಯಕ್ರಮ

[illegible]

SRI GANESHA

TALKIES

GRAND GALA RELEASE
On 12—6—53

ಇದು ನಿಮಗೆ ಗೊತ್ತೇ?

ಬೆಲೆಗಿನ ಅಂಗಡಿ, ಸೀಮೆಗೆ ಪ್ರಸಿದ್ಧ ಗೃಹೋಪಯೋಗಿ ಅವಶ್ಯಕವಾದ ಸಾಮಾನುಗಳು

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪ್ರಸಿದ್ಧ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೀಶ್ವರ ದೇವಸ್ಥಾನ ಬಳಿ)

ಹ ಸುಬ್ಬಯ್ಯ ರಸ್ತೆ, ಮೈಸೂರು.

THE MODEL TUTORIAL INSTITUTE

D. Banumiah's School Building, Mysore.

Coaching Classes for the Supplementary S S L. C. Examination of September 1953 start working from about the 15th of this month.

Admissions are made from 9 A. M. to 5 P. M. daily on all working days.

B. Seshagiri Rao,
Organiser.

D BANUMIAH'S COLLEGE OF COMMERCE, MYSORE

Applications for Admission to JUNIOR I COM class will be received upto 20th June 1953 Late Applications will be received upto 1st July 1953 with a Penal Fee of Re 1/- per day subject to a limit of Rs 5 0 0 Further particulars can be known from the prospectus which will be supplied on remittance of As 1

ಚಾಮುಂಡೇಶ್ವರಿ

ಟಾ ಕೀ ಸ್

13-6-53 ರಿಂದ :: ಪ್ರಾರಂಭ

ನ್ಯಾಷನಲ್ ಪಿಕ್ಚರ್ಸ್‌ರವರ

ತಮಿಳು ಚಿತ್ರ

★ ಪ ರಾ ಶ ಕ್ತಿ ★

ತಾರೆ - ಗಣೇಶನ್, ಸಹದೇವನ್, ಸಹಸ್ರಾರು ಮುಂತಾದವರು

ಪ್ರಭುದೇವಾ ಥಿಯೇಟರ್

(ಸ ದ್ಯಾ ಟಾ ಕೀ ಸ್)

12-6-53ನೇ ಶುಕ್ರವಾರದಿಂದ : ಅನೇಕ 3ನೇ ವಾರ

ಜೆಮಿನಿ ಯವರ ತಮಿಳು ಚಿತ್ರ

ಚಂ ದ್ರ ಲೇ ಖ

ಮ್ಯಾಟನಿ ಮಧ್ಯಾಹ್ನ 2-30 ಕ್ಕೆ

ತಾರೆ.— ಎಂ ಕೆ. ರಾಧಾ ಟಿ ಆರ್. ರಾಜಕುಮಾರಿ, ರಂಜನ್, ಸುಂದರಿಬಾಯಿ, ಎನ್. ಎಸ್ ಕೃಷ್ಣನ್, ಟಿ. ಎ. ಮಧುರಂ ಮುಂತಾದವರು

CHANGE OF ADDRESS

Our New Address is

PEOPLE'S BOOK HOUSE,

Opposite Jaganmohan Palace, Mysore

Expected Soon:—

THE COLLECTED WORKS OF J. V STALIN (Vol. I)

Edited, Printed and Published by A. R. Nagarajan at Sadhvi Press, D. Subbiah Road, Mysore.

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ **M.V. ಭದ್ರಯ್ಯ** (ಫೋನ್ 446) ಬಿ. ಎ., ಅಂಡಿಯನ್ ಲ್ಯಾಂಡ್ ಎದುರು, ಮೈಸೂರು

ರಿಜಿ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೩-೬-೧೯೫೩ [ಸಂಚಿಕೆ ೨೫೮

ಮೈಸೂರು ಅಧಿಕಾರಿ ಮೇಲೆ ಆಂಧ್ರರ ಧಾಳಿ

ವಸಂತ ಸಾಹಿತ್ಯೋತ್ಸವ

ಮೈಸೂರು ೧೨

ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ಈ ವರ್ಷದ ವಸಂತ ಸಾಹಿತ್ಯೋತ್ಸವವು ಟೌನ್‌ಹಾಲಿನಲ್ಲಿ ನೆನ್ನೆ ಆರಂಭವಾಯಿತು. ವಕೀಲರಾದ ಶ್ರೀ ಜೆಚ್ ಸುಬ್ಬರಾಯರು ಅಗ್ರಾಸನವನ್ನು ವಹಿಸಿದ್ದರು.

ಶ್ರೀಮತಿಗಳಾದ ವಿಶಾಲಾಕ್ಷಿ ಮತ್ತು ವಿಜಯಲಕ್ಷ್ಮಿಯವರುಗಳಿಂದ ಪ್ರಾರ್ಥನೆ ನಡೆದನಂತರ ಶ್ರೀ ಕೆ ಎಸ್ ನಾರಾಯಣ ಸ್ವಾಮಿಯವರು ಧಾರವಾಡ ಕಾಲೇಜಿನ ಶ್ರೀ ಎಸ್ ಎಸ್ ಮಾಳವಾಡ್‌ರವರನ್ನು ಪರಿಚಯ ಮಾಡಿಕೊಟ್ಟರು. ಪೌರಸಭಾಧ್ಯಕ್ಷರೂ, ಉತ್ಸವ ಸಮಿತಿ ಅಧ್ಯಕ್ಷರೂ ಆದ ಶ್ರೀ ಟಿ ವೆಂಕಟರಮಣಯ್ಯನವರ ಸ್ವಾಗತ ಭಾಷಣ ಮಾಡಿದರು. ಶ್ರೀ ನಂ ಅಶ್ವತ್ಥನಾರಾಯಣರವರಿಂದ ಭಾರತ ವಾಚನವಾಯಿತು. ಶ್ರೀ ಮಾಳವಾಡ್‌ರವರು ಕನ್ನಡ ಶಿಕ್ಷಣ ಮಾಧ್ಯಮವನ್ನು ಕುರಿತು ವಿಚಾರಪೂರಿತ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣಾನಂತರ ಕು ಮಾ ರಿ ಕಮಲಾ ಮತ್ತು ನಾಗರತ್ನ ರವರಿಂದ ನೃತ್ಯವು ನಡೆಯಿತು. ಮಿತ್ರ ಕೂಟದವರಿಂದ ಕಾಶ್ಮೀರ ಯಾತ್ರೆ ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಯಕ್ಷಗಾನ

ದೇವಿರಮ್ಮಣ್ಣಿ ಅಗ್ರಹಾರದ ೩೩ನೇ ನಂಬರಿನ ಮನೆಯ ಹಿಂಭಾಗದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ಶ್ರೀ ಹನುಮತ್ಸಂಕಲ್ಪಿತ ಚಾಮುಂಡೇಶ್ವರೀ ಯಕ್ಷಗಾನ ಮಂಡಲಿಯವರಿಂದ ಶಿವಾಜಿ ವಿಜಯ ಯಕ್ಷಗಾನವು ನಡೆಯುವುದು.

ಹರಿಕಥೆ

ರಾಜಧಾನಿಯ ನಜರ್‌ಬಾದಿನ ಮಹಾರಾಷ್ಟ್ರ ಬೀದಿ ಶ್ರೀ ಮರುಗಮ್ಮನವರ ದೇವಸ್ಥಾನದಲ್ಲಿ ಈ ಸಂಜೆ ೬-೩೦ ಗಂಟೆಗೆ ಶ್ರೀ ಪಿ ರಾಮಸ್ವಾಮಿನಾಯ್ಡು ರವರಿಂದ ದ್ರೌಪದಿ ಸ್ವಯಂವರ ಎಂಬ ಹರಿಕಥೆಯು ನಡೆಯುವುದು.

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಘಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ವಿ|| ಬಿ. ಶ್ರೀನಿವಾಸಯ್ಯಂಗಾರ್ಯರ ಗಾಯನವು ವಿ|| ಎಂ ಎಸ್ ಸುಬ್ರಹ್ಮಣ್ಯಂರವರ ಪಿಟೀಲು ಮತ್ತು ವಿ|| ಡಿ ಶೇಷಪ್ಪನವರ ಮೃದಂಗದೊಡನೆ ಏರ್ಪಾಡಾಗಿದೆ.

ರಾಮಮಂದಿರಕ್ಕೆ ಸಾವಿರ ರೂ ಸಹಾಯ

ಕಳೆದ ಭಾನುವಾರ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಟಿ. ನರಸೀಪುರಕ್ಕೆ ತೆರಳಿದ್ದಾಗ ಅಲ್ಲಿನ ಗಂಗಾ ಮತಸ್ಥರ ಶ್ರೀ ರಾಮ ಮಂದಿರಕ್ಕೆ ಭೇಟಿಯಿತ್ತಿದ್ದರು. ಅಲ್ಲಿ ಶ್ರೀ ಜಿ ಎಂ ಮಾದಯ್ಯನವರ ಅವರನ್ನು ಸ್ವಾಗತಿಸಿ ಹಾರ, ತುರಾಯಿ ಗಳನ್ನರ್ಪಿಸಿದರು. ಮುಜರಾಯಿ ನಿಧಿಯಿಂದ ಮಂದಿರಕ್ಕೆ ಒಂದು ಸಾವಿರ ರೂ ಸಹಾಯಧನವನ್ನು ಒದಗಿಸುವುದಾಗಿ ಮುಖ್ಯ ಮಂತ್ರಿಗಳು ವಾಗ್ದಾನವಿತ್ತರೆಂದು ತಿಳಿದುಬಂದಿದೆ.

ಸಿದ್ದಲಿಂಗಯ್ಯನವರ ಸಾಕ್ಷ್ಯ

ಶಾಸನ ಸಭಾ ಸದಸ್ಯತ್ವದ ಅರ್ಹತೆ ವಿಚಾರಣೆ ಅಂಗವಾಗಿ

ಬೆಂಗಳೂರು ೧೨

ಮಾಜಿ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರ ಶಾಸನ ಸಭಾಸದಸ್ಯತ್ವದ ಅನರ್ಹತೆ ಬಗ್ಗೆ ನಡೆಯುತ್ತಿರುವ ಮೊಕದ್ದಮೆಯಲ್ಲಿ ನೆನ್ನೆ ಕೆಳಕಂಡ ಸಾಕ್ಷಿಗಳ ವಿಚಾರಣೆ ನಡೆಯಿತು. ಕೆನರಾ ಬ್ಯಾಂಕಿನ ಶ್ರೀ ಎಂ.ಜಿ ಭಟ್‌ರವರು ಸಾಕ್ಷ್ಯ ನುಡಿದು ಶ್ರೀಗಳಾದ ಸಿದ್ದಬಸಪ್ಪ, ಚೌಡಪ್ಪ ಮತ್ತು ಶಂಕರಯ್ಯನವರ ಹೆಸರುಗಳಲ್ಲಿ ಶಂಕರ್ ಕಂಪೆನಿಯ ಒಂದು ಲೆಕ್ಕವನ್ನು ಬ್ಯಾಂಕಿನಲ್ಲಿ ೧೯೫೧ರ ಜುಲೈನಲ್ಲಿ ತೆರೆದು ಮಾರನೇ ವರ್ಷ ಜನವರಿಯಲ್ಲಿ ಮುಚ್ಚಲಾಯಿತೆಂದೂ, ೧೯೫೧ರ ಅಕ್ಟೋಬರ್ ೧೫ ರಲ್ಲಿ ಅವರು ಬ್ಯಾಂಕಿಗೆ ಬರೆದ ಪತ್ರದ ಪ್ರಕಾರ ಸಿದ್ದಬಸಪ್ಪನವರ ಪಾಲುದಾರಿಕೆಯು ವಿಸರ್ಜಿಸಲ್ಪಟ್ಟಿತೆಂದೂ ಉಳಿದ ಇಬ್ಬರು ಕಂಪೆನಿಯ ಹೊಸ ಲೆಕ್ಕವನ್ನು ತೆರೆದರೆಂದೂ ತಿಳಿಸಿದರು.

ಶಾಟಿಸವಾಲಿನಲ್ಲಿ ಶ್ರೀ ಟಿ ಸಿ. ಸಿದ್ದಲಿಂಗಯ್ಯ ಅಂಡ್ ಬ್ರದರ್ಸ್ ಹೆಸರಿನಲ್ಲಿ ೧೯೪೫ರಿಂದ ಒಂದು ಲೆಕ್ಕವಿದ್ದು, ಅದರಲ್ಲಿ ಶ್ರೀ ಟಿ ಸಿ ಸಿದ್ದಲಿಂಗಯ್ಯ, ಟಿ ಸಿ ಸಿದ್ದಬಸಪ್ಪ ಮತ್ತು ಟಿ ಸಿದ್ದಲಿಂಗಯ್ಯನವರು ಪಾಲುದಾರರಾಗಿರುವರೆಂದೂ ಶ್ರೀ ಭಟ್‌ರವರು ತಿಳಿಸಿದರು.

ಶಂಕರ್ ಕಂಪೆನಿಯ ಚೌಡಪ್ಪನವರ ಸಾಕ್ಷ್ಯದಲ್ಲಿ ೧೯೫೩ ರಲ್ಲಿ ಮೂವರ ಪಾಲುದಾರಿಕೆಯು ಆರಂಭವಾಗಿ ೩೦ ೬೦ ಸಾವಿರ ರೂ ಹಣದ ವ್ಯಾಪಾರ ನಡೆಯಿತೆಂದೂ, ಆಕಸ್ಮಾತ್ ಒಂದು ವೇಳೆಗೆ ೩ ಸಾವಿರ ಚಿಲ್ಲರೆ ರೂ. ನಷ್ಟ ಕಾಣಿಸಿದುದರಿಂದ, ಶ್ರೀ ಬಸಪ್ಪನವರು ಇಷ್ಟಪಟ್ಟಂದ ೪೮ ಸಾವಿರ ರೂ. ಬಾಕಿಗಾಗಿ ಪತ್ರ ಬರೆಸಿಕೊಂಡು ಪಾಲುಗಾರಿಕೆ ಬಿಟ್ಟರೆಂದಾಗಿಯೂ ಹೇಳಿದರು. ಆನಂತರದಿಂದ ನಾವಿಬ್ಬರೂ ಕಂಪೆನಿಯನ್ನು ನಡೆಸುತ್ತಿರುವುದಾಗಿಯೂ, ಶಾಮರಾವ್ ಕಂಪೆನಿಯ ಸಾಗಾಣಿಕೆ ಕಂಟ್ರಾಕ್ಟ್ ಪಡೆದು, ಬೊಂಬಾಯಿ ಕಂಪೆನಿಗೆ ಸಬ್ ಕಂಟ್ರಾಕ್ಟ್ ಕೊಟ್ಟು ಕೆಲಸನಡೆಸಿದುದಾಗಿಯೂ ಶ್ರೀ ಚೌಡಪ್ಪನವರು ಹೇಳಿದರು.

ನಂತರ ಶ್ರೀ ಟಿ ಸಿ. ಸಿದ್ದಲಿಂಗಯ್ಯನವರು ಸಾಕ್ಷ್ಯವಿತ್ತು, ಶಂಕರ್ ಅಂಡ್ ಕಂಪೆನಿ ವಿಷಯವು ತಮಗೆ ತಿಳಿಯದೆಂದೂ, ಸಿದ್ದಬಸಪ್ಪ, ಚಿಕ್ಕ ಸಿದ್ದಲಿಂಗಯ್ಯ ಮತ್ತು ತಾವು ಅವಿಭಕ್ತ ಸಹೋದರರೆಂದೂ, ಚೌಡಪ್ಪನವರು ಸಿದ್ದಬಸಪ್ಪನವರೊಡನೆ ಭಾಗಸ್ಥರಾಗಿರುವರೆಂಬುದು ಬಹುದಿನಗಳ ನಂತರ ತಮಗೆ ತಿಳಿದುದಾಗಿಯೂ ಹೇಳಿದರು.

ಶಂಕರ್ ಕಂಪೆನಿಯಲ್ಲಿ ತಮ್ಮ ಸಹೋದರರಿಂದ ವಿಷಯವನ್ನು ತಾವಾಗಿಯೇ ಕಂಡು

ಟೇನ್ ಸಿಂಗರಿಗೆ ಫಿಲಂ ಕಾಂಟ್ರಾಕ್ಟ್

ಎವರೆಸ್ಟ್ ಶಿಖರವನ್ನು ಹತ್ತಿದ ಟೇನ್ಸಿಂಗರಿಗೆ ಬೊಂಬಾಯಿಯ ಚಿತ್ರ ತಯಾರಕರು ಮತ್ತು ಸುಪ್ರಸಿದ್ಧ ನಟರೂ ಆದ ರಾಜ್‌ಕಪೂರ್‌ರವರು ಚಲನಚಿತ್ರದಲ್ಲಿ ನಟಿಸುವ ತೆ ಜೋರಿ ಆಹ್ವಾನವಿತ್ತಿರುವರು. ಟೇನ್ ಸಿಂಗರ ಪತ್ನಿಗೆ ಈ ವಿಷಯವನ್ನು ಅವರು ತಿಳಿಸಿ, ಹಿಮಾಲಯದಿಂದ ಹಿಂತಿರುಗಿದನಂತರ ತಮ್ಮೊಡನೆ ಟೇನ್ ಸಿಂಗರು ವ್ಯವಹರಿಸುವಂತೆ ಸೂಚಿಸಬೇಕೆ ಮ ಪತ್ರ ಬರೆದಿರುವರು.

ಮೈಸೂರು ಅಧಿಕ ಆಹಾರ ಬೆಳೆ ಯೋಜನೆಗೆ ಗ್ರಾಂಟು

ಸಂಸ್ಥಾನದ ಪ್ರಸಕ್ತ ಸಾಲಿನ ಹೆಚ್ಚು ಆಹಾರ ಬೆಳೆಗೆ ಸಂಬಂಧಿಸಿದ ಯೋಜನೆಗೆ ೫೭,೮೧,೦೦೦ ರೂ ಅನ್ನು ಕೇಂದ್ರ ಸರ್ಕಾರದವರು ಕೊಡಲಿರುವರು.

ಗ್ರೀಸ ಪಕ್ಷದ ಸಭೆಯಲ್ಲಿ ಚಳುವಳಿಯೂ ಮುಖ್ಯ ಮಂತ್ರಿಗಳಿಗೆ ತಾವು ಪತ್ರ ಬರೆದ ವಿಷಯವಾಗಿ ಶ್ರೀ ನಾಗಯ್ಯರೆಡ್ಡಿಯವರು ಬರೆದ ಪತ್ರದ ವಿಷಯವು ತಮಗೆ ಗೊತ್ತಿಲ್ಲವೆಂದೂ ಹೇಳಿದರು.

ಬಿಂಡರು ವಿಷಯವನ್ನು ಕುರಿತು ಮಂತ್ರಿಗಳು ಪ್ರವೀಣರಲ್ಲವೆಂದೂ, ಸಲಹಾ ಸಮಿತಿಯವರು ಶ್ರೀ ಚೌಡಪ್ಪನವರ ಟೆಂಡರನ್ನು ಶಿಫಾರಸು ಮಾಡಿದನಂತರ ತಾವು ಅದಕ್ಕೆ ರುಜು ಹಾಕಿದುದಾಗಿಯೂ ತಿಳಿಸಿದರು. ಚೌಡಪ್ಪನವರು ೪೨ ಸಾವಿರ ರೂ. ಗಳನ್ನು ಕೊಟ್ಟರೆಂಬುದನ್ನು ತಾವು ಒಪ್ಪುವುದಿಲ್ಲವಾಗಿ ಅವರು ಹೇಳಿ, ತಮ್ಮ ಕುಟುಂಬದ ಲೆಕ್ಕ ಪುಸ್ತಕಗಳನ್ನು ತಾವು ನೋಡುತ್ತಿರಲಿಲ್ಲವಾಗಿ ಹೇಳಿದರು.

ಮದ್ರಾಸಿನ ಶ್ರೀ ವಿ ಜಿ. ರಾವ್‌ರವರು ಬಿ. ವಿ. ಎಗ ರೆಡ್ಡಿ ಪರ ವಾದ ಮಾಡಿ, ಶಂಕರ್ ಅಂಡ್ ಕಂಪೆನಿಯು ಬೋಗಸ್ (ಕೃತ್ರಿಮ) ಕಂಪೆನಿಯೆಂದು ಹೇಳಿದರು.

ಬೊಂಬಾಯಿಯ ವಕೀಲರಾದ ಶ್ರೀ ಎಸ್ ಸಿ ಎಗ ಆಚಾರ್ಯರು ಪ್ರತಿವಾದಿಪರ ಶಂಕರ್ ಅಂಡ್ ಕಂಪೆನಿಯಲ್ಲಿ ಶ್ರೀ ಸಿದ್ದಬಸಪ್ಪನವರು ಇದ್ದಾಗ ಮತ್ತು ಅದನ್ನು ಬಿಟ್ಟ ಮೇಲೆ ಎರಡು ರೀತಿಯ ವ್ಯವಹಾರಗಳು ನಡೆದಿರುವುದಾಗಿಯೂ, ಅದನ್ನು ಪ್ರತ್ಯೇಕವಾಗಿಯೇ ಪರಿಶೀಲಿಸಬೇಕೆಂದೂ, ಶ್ರೀ ಸಿದ್ದಲಿಂಗಯ್ಯನವರಿಗೂ ಈ ವ್ಯವಹಾರಗಳಿಗೂ ಸಂಬಂಧವಿಲ್ಲವೆಂದೂ ಹೇಳಿದರು. ಅಷ್ಟಕ್ಕೆ ಕಾದಿಡಲಾಗಿದೆ.

ಮೈಸೂರು ಅಧಿಕಾರಿಗೆ ಕಪ್ಪುಬಾವುಟದ ಪ್ರದರ್ಶನ

ಬಳ್ಳಾರಿಯಲ್ಲಿ ಘಟನೆ

ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಮೈಸೂರಿನೊಡನೆ ಐಕ್ಯಗೊಳಿಸುವ ಸಂಬಂಧವಾಗಿ ಆ ತಾಲ್ಲೂಕುಗಳಲ್ಲಿ ಪರಿಶೀಲನೆ ನಡೆಸಲು ನೇಮಕರಾದ ಮೈಸೂರಿನ ಅಧಿಕಾರಿಗಳಾದ ಶ್ರೀ ಕೆ. ಶೇಷಗಿರಿರಾಯರು ಮೊನ್ನೆ ಬಳ್ಳಾರಿಯಿಂದ ಬೆಂಗಳೂರಿಗೆ ತೆರಳಲು ಒಂದು ಜೀಪಿನಲ್ಲಿ ರೈಲ್ವೆ ಸ್ಟೇಷನ್ನಿಗೆ ಹೋಗುತ್ತಿದ್ದಾಗ, ಮಿಶ್ರಾರವರ ತೀರ್ಪಿನ ಬಗ್ಗೆ ಅಸಮಾಧಾನಗೊಂಡ ಹಲವರು ಜೀಪನ್ನು ನಿಲ್ಲಿಸಲು ಪ್ರಯತ್ನಪಟ್ಟು ವಿಫಲರಾಗಿ, ಕಡೆಗೆ ಅದರ ಕಡೆ ಕಲ್ಲುಗಳನ್ನು ಎಸೆದರೆಂದು ವರದಿಯಾಗಿದೆ. ಆದರೆ ಅವು ಗುರಿತಪ್ಪಿ ಹೋದುವೆಂದು ಪೋಲೀಸ್ ಜೀಪಿಗೆ ಬಿದ್ದಿತೆಂದು ಹೇಳಲಾಗಿದೆ. ತರುವಾಯ ಗುಂಪಿನವರು ರೈಲ್ವೆ ಸ್ಟೇಷನ್ನಿಗೆ ತೆರಳಿ ಶ್ರೀ ಶೇಷಗಿರಿರಾಯರು ಕುಳಿತಿದ್ದ ರೈಲನ್ನು ಔಟರ್ ಸಿಗ್ನಲ್ ಬಳಿ ನಿಲ್ಲಿಸಲು ಪ್ರಯತ್ನ ಪಟ್ಟರೆಂದೂ, ಅಷ್ಟರಲ್ಲಿ ಪೋಲೀಸರು ಅವರನ್ನು ಚದುರಿಸಿದರೆಂದೂ ಗೊತ್ತಾಗಿದೆ.

ಅವರು ಇಳಿದಿದ್ದ ಟ್ರಾವಲರ್ಸ್ ಬಂಗಲೆ ಮುಂದೆ ಕಪ್ಪು ಧ್ವಜಗಳನ್ನು ಆಂಧ್ರರು ಪ್ರದರ್ಶಿಸಿ, "ಶೇಷಗಿರಿರಾಯರೇ ವಾಪಸು ಹೋಗಿ," "ಡೌನ್ ವಿತ್ ಮೈಸೂರ್" ಎಂದು ಕೂಗಿದರು. ಪ್ರದರ್ಶನದ ಮುಖಂಡರಾದ ಎಸ್ ರಾಜಗೋಪಾಲಶೆಟ್ಟರು ಜಿಲ್ಲಾ ಪೋಲೀಸು ಅಧಿಕಾರಿಗಳ ಸಲಹೆಯಂತೆ, ಪ್ರದರ್ಶನಕಾರರು ಚದರುವಂತೆ ಮಾಡಿದರು.

ಪೌರಸಭಾ ಸದಸ್ಯರ ರಾಜೀನಾಮೆಗೆ ಒತ್ತಾಯ

ನಾಳೆ ಬೆಳಿಗ್ಗೆ ಬಾಜಾಬಜಂತ್ರಿ ಸಮೇತ ಮೆರವಣಿಗೆ

ಮೈಸೂರು ೧೨

ಮನೆಗಂದಾಯವನ್ನು ಹೆಚ್ಚಿಸಿರುವುದಕ್ಕಾಗಿ ಪ್ರತಿಭಟನೆ ಸೂಚಿಸಲು ನೆನ್ನೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ, ಶ್ರೀಗಳಾದ ಡಿ ಆರ್ ಕೃಷ್ಣಮೂರ್ತಿ ಮತ್ತು ಶ್ರೀ ಎ. ಎಸ್. ರಾಮಯ್ಯನವರು ಭಾಷಣ ಮಾಡಿ ಪೌರಸಭಾಧಿಕಾರಿಗಳ ನೀತಿಯನ್ನು ಟೀಕಿಸಿದರು. ಪೌರಸಭಾ ಸದಸ್ಯರುಗಳ ಹೆಸರುಗಳನ್ನು ಬರೆದ, ಅವರು ರಾಜೀನಾಮೆ ಕೊಡುವಂತೆ ಸೂಚಿಸುವ ಬೋರ್ಡುಗಳ ಪ್ರದರ್ಶನ ಮಾಡಲಾಯಿತು. ನಾಳೆ ಬೆಳಿಗ್ಗೆ ೮ ಘಂಟೆಗೆ ಆ ಬೋರ್ಡುಗಳನ್ನು ಹಿಡಿದು ಪ್ರಭಾತ್ ಟಾಕೀಸ್ ಬಳಿಯಿಂದ ಪೌರಸಭಾ ಸದಸ್ಯರ ಮನೆಗಳಿಗೆ ಬಾಜಾಬಜಂತ್ರಿಯೊಡನೆ ಮೆರವಣಿಗೆಯಲ್ಲಿ ಹೋಗಿ ಕೂಡಲೇ ರಾಜೀನಾಮೆ ಕೊಡಬೇಕೆಂದು ಪತ್ರಗಳನ್ನು ಅವರಿಗೆ ಕೊಟ್ಟು, ಒತ್ತಾಯ ಪಡಿಸಲಾಗುವುದು. ಮೆರವಣಿಗೆಯು ಪೌರಸಭಾ ಕಛೇರಿಯನ್ನು ಸೇರಿ ಅನಂತರ ಚದುರುವುದು.

○ ಈ ವರ್ಷ ತುಮಕೂರಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಶಾಲೆಯೊಂದನ್ನು ವಿಶ್ವವಿದ್ಯಾಲಯದವರು ತೆರೆಯಲಿರುವರು.

ಮದ್ರಾಸಿನ ಮಾಜಿ ಸಚಿವರ ಪರಾಜಯ

ಬಳ್ಳಾರಿ ಮತ್ತು ಕರ್ನೂಲ್ ಪ್ರದೇಶದಿಂದ ಪಾರ್ಲಿಮೆಂಟಿಗೆ ನಡೆದ ಉಪಚುನಾವಣೆಯಲ್ಲಿ ಮಾಜಿ ಮದ್ರಾಸು ಮಂತ್ರಿ ಡಾ|| ಸೀತಾರಾಮರೆಡ್ಡಿಯವರಿಗೆ ೪೮,೦೪೭ ಮತ್ತು ಅವರ ಪ್ರತಿಸ್ಪರ್ಧಿ ಗಾದಿಲಿಂಗಣ್ಣಗೌಡರಿಗೆ ೮೯,೧೧೪ ಮತ್ತು ನಾಗಪ್ಪ ಎಂಬ ಇನ್ನೊಬ್ಬ ಸ್ಪರ್ಧಿಗೆ ೮,೧೯೦ ಓಟುಗಳು ಬಂದಿವೆ. ಅಧಿಕಾರಯುತವಾಗಿ ಫಲಿತಾಂಶವು ತಿಳಿದುಬಂದಿಲ್ಲ. ಹಲವು ಬ್ಯಾಲೆಟ್ ಪೆಟ್ಟಿಗೆಗಳಲ್ಲಿದ್ದ ಓಟು ಪತ್ರಗಳ ಬಗ್ಗೆ ಆಕ್ಷೇಪಣೆಗಳನ್ನು ತೀರ್ಮಾನಿಸಿಲ್ಲದಿರುವುದೇ ಅದಕ್ಕೆ ಕಾರಣ. ಶ್ರೀ ರೆಡ್ಡಿಯವರು ಕಾಂಗ್ರೆಸ್ಸಿನ ಪರವಾಗಿಯೂ, ಶ್ರೀ ಗೌಡರು ಪ್ರಜಾ ಸಮಾಜವಾದಿ ಪಕ್ಷದ ಪರವಾಗಿಯೂ ಮತ್ತು ನಾಗಪ್ಪನವರು ಸ್ವತಂತ್ರವಾಗಿಯೂ ಸ್ಪರ್ಧಿಸಿದ್ದರು

ರಷ್ಯದೊಡನೆ ನಾಜಿ ಜರ್ಮನ್ ಸೇನಾನಿ ವಿರೋಧ

ಎರಡನೇ ಮಹಾ ಯುದ್ಧದ ಕಾಲದಲ್ಲಿ ರಷ್ಯದ ಸ್ಟಾಲಿನ್‌ಗ್ರಾಡ್ ನಗರವನ್ನು ಹಿಡಿಯಬೇಕೆಂದಿದ್ದ ಜರ್ಮನಿಯ ಪ್ರಸಿದ್ಧ ಸೇನಾನಿ ವಾನ್ ಪೌಲಸ್ ಮತ್ತು ವಾನ್ ಸೈಡ್ಲಿಟ್ಸ್‌ರವರು ರಷ್ಯದವರೊಡನೆ ಸಹಕರಿಸುತ್ತಿದ್ದು, ಈಗ ವಿರೋಧವಾಗಿರುತ್ತಾರೆಂದು ವರದಿಯಾಗಿದೆ. ಇವರಿಬ್ಬರನ್ನೂ ರಷ್ಯನರು ಸೆರೆ ಹಿಡಿದಿದ್ದರು. ಹಿಟ್ಲರ್ ನೀತಿಯನ್ನು ಪ್ರತಿಭಟಿಸಿ ಇವರು ರಷ್ಯದಲ್ಲಿ ಸ್ವತಂತ್ರ ಜರ್ಮನ ಸಮಿತಿಯನ್ನು ರಚಿಸಿದ್ದರು.

ಅಡವೀ ಮಠದ ಆಡಳಿತ ವ್ಯವಸ್ಥೆ

ರಾಜಧಾನಿಯ ಮಂಡಿ ಮೊಹಲ್ಲಾ ಇರ್ವಿನ್ ರಸ್ತೆಯಲ್ಲಿರುವ ಬ್ರ|| ಶ್ರೀ ಅಡವಿಸ್ವಾಮಿಗಳವರ ಮಠದ ಆಡಳಿತದ ವ್ಯವಸ್ಥೆ ಮಾಡುವ ಸಲುವಾಗಿ ಇದೇ ತಿಂಗಳು ೧೫ನೇ ತಾ|| ಸಂಜೆ ೬ ಘಂಟೆಗೆ ಸಭೆಯೊಂದನ್ನು ಏರ್ಪಡಿಸಲಾಗಿದೆ. ಮಠದ ಎಲ್ಲಾ ಶಿಷ್ಯರೂ, ಭಕ್ತರೂ ಮತ್ತು ಅಭಿಮಾನಿಗಳೂ ದಯಮಾಡಿಸಬೇಕೆಂದು ಸಂಚಾಲಕರಾದ ಅಡ್ವೊಕೇಟ್ ಶ್ರೀ ಎ. ಶಂಕರಯ್ಯನವರು ಕೋರಿರುತ್ತಾರೆ

COACHING CLASSES

For Madras Matric, Ajmer Inter, L. S., S S L C (Sup Full Term Fees Rs 15/- to the p... Sri Raghavendra Institute, Kabir Road, Mysore.

ಕ್ರಯಕ್ಕಿದೆ

ಡೋರ್ ನಂಬರ್ 59.

ಗೊಲ್ಲಗೇರಿ

ಕೂಡಲೇ ಸ್ವಾಧೀನ ಕೊಡಲಾಗುತ್ತದೆ

ಬೆಲೆ— ಸುಮಾರು 4,000 ರೂ ಗಳು

ವಿವರಗಳಿಗೆ:

ಜಯ ಅಂಡ್ ಕಂಪೆನಿ,

ಮನೆ ಜಮೀನು ಮಾರಾಟಗಳ ಏಜಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು

ದೇವರ ಸ್ಮರಣೆಯಿಂದ ಪರೀಕ್ಷೆಯಲ್ಲಿ ತೇರ್ಗಡೆ ?

ಕಲ್ಕತ್ತದ ಒಬ್ಬ ವಿದ್ಯಾರ್ಥಿಯು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತು ಉತ್ತರ ಬರೆಯುವಾಗ ಕಾಗದದಲ್ಲಿ ತನ್ನ ಗ್ರಾಮ ದೇವತೆಯ ಹೆಸರನ್ನು ಮಾತ್ರ ೧೦೮ ಬಾರಿ ಬರೆದು ಕೊಟ್ಟನೆಂದು ವರದಿಯಾಗಿದೆ. ಪರೀಕ್ಷಕರು ಇದನ್ನು ಕಂಡು ಮೇಲಧಿಕಾರಿಗೆ ತಿಳಿಸಲಾಗಿ ಅವರು ವಿದ್ಯಾರ್ಥಿಯನ್ನು ಕರೆಸಿ ಹಾಗೆ ಏಕೆ ಮಾಡಿದನೆಂದು ಕೇಳಲು ಅವನು ತನಗೆ ಸ್ವಪ್ನದಲ್ಲಿ ಗ್ರಾಮ ದೇವತೆಯು ಕಾಣಿಸಿಕೊಂಡು ತನ್ನನ್ನು ೧೦೮ ಬಾರಿ ಸ್ಮರಿಸಿದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದೆಂದು ತಿಳಿಸಿದುದರಿಂದ ಅದೇ ಮೇರೆ ಮಾಡಿದುದಾಗಿ ಹೇಳಿದನು ಆದರೆ ಅವನಿಗೆ ಮಾತ್ರ ತೇರ್ಗಡೆಯಾಗಲಿಲ್ಲ

ಆಕಾಶವಾಣಿ ನಾಳೆ ಕಾರ್ಯಕ್ರಮ

ಪ್ರಾತಃ ೬.೩೦ ರಾಗಮಾಲಿಕೆ ಮಧ್ಯಾಹ್ನ ೧ ೪೦ ಪಿಟೀಲು ೨ ನಿಮ್ಮ ಮೆಚ್ಚಿನ ಗೀತೆಗಳು. ಸಾಯಂ ೫ ೪೦ ಮತ್ತು ೮.೪೦ ಪಿ ಆರ್ ಸುಂದರರಾಜನ್, ಸಂಗೀತ ೬ ೧೦ ನಾವು ಮತ್ತು ನಮ್ಮವರು ೭ ರಂಜಾನ್ ಹಬ್ಬ ಕನ್ನಡದಲ್ಲಿ ಭಾಷಣ ೭ ೨೦ ಎಲ್ ಗೋಪಾಲರಾವ್, ವೀಣೆ ೯ ೧೫ ರಿಕಾರ್ಡ್ ಸಂಗೀತ ೯ ೪೦ ಜನ ಖಂಡಿ ಉಪಾಧ್ಯಾಯರ್, ಭಾಷಣ

ಮಾವಿನಕಾಯಿ ಕೊಡದಿದ್ದುದಕ್ಕೆ ದುಂಡಾವರ್ತಿ

ಚಾಮರಾಜನಗರದ ರೈಲ್ವೆ ನಿಲ್ದಾಣದಲ್ಲಿ ಕಳೆದ ೨ನೇ ತಾರೀಖು ಸ್ಟೇಷನ್ ಮಾಸ್ಟರನ್ನು ನೋಡಲು ಬಂದಿದ್ದ ಒಬ್ಬನನ್ನು ಅಲ್ಲಿದ್ದ ಒಬ್ಬ ಕಾನ್‌ಸ್ಟೇಬಲನು ಮಾವಿನಕಾಯಿ ಕೇಳಲು ಅವನು ನಿರಾಕರಿಸಿದುದಕ್ಕೆ, ಅವನನ್ನು ಪೋಲೀಸು ಠಾಣೆಗೆ ಎಳೆದುಕೊಂಡುಹೋಗಿ ಹೊಡೆದನೆಂದೂ, ಮಾರನೆ ದಿನ ಬೆಳಗಿನವರೆಗೂ ಅವನಿಗೆ ಪೋಲೀಸರು ತುಂಬಾ ತೊಂದರೆ ಕೊಟ್ಟರೆಂದೂ, ಸಂಬಂಧಪಟ್ಟ ಮೇಲಧಿಕಾರಿಗಳು ಈ ಬಗ್ಗೆ ವಿಚಾರಣೆ ನಡೆಸಬೇಕೆಂಬುದಾಗಿಯೂ ಕೋರಿ ಪ್ರತ್ಯಕ್ಷದರ್ಶಿಯೊಬ್ಬರು ಪತ್ರ ಬರೆದಿರುತ್ತಾರೆ

ಮಗು ತಪ್ಪಿಸಿಕೊಂಡಿದೆ

ಅಂತಮ್ಮ ಎಂಬ ನಾಲ್ಕು ವರ್ಷದ ಮಗುವು ಕಳೆದ ಮಂಗಳವಾರದಿಂದ ತಪ್ಪಿಸಿಕೊಂಡಿರುತ್ತೆ ಅದು ಒಂದು ಬಿಳಿಯ ಬನೀನು ಧರಿಸಿರುತ್ತೆ ಎರಡು ಕೈಲೂ ಎರಡೆರಡು ಹಿತ್ತಾಳೆ ಬಳೆಗಳನ್ನೂ, ಕಿವಿಯಲ್ಲಿ ಲೋಲಾಕುಗಳನ್ನೂ, ಮೂಗಿನಲ್ಲಿ ಬಿಳಿ ಹರಳಿನ ಮೂಗುಬಟ್ಟನ್ನೂ ಧರಿಸಿರುತ್ತೆ ಮಗುವಿನ ಬಣ್ಣ ಕೆಂಪು ಛಾಯೆ ಅದು ತೆಲುಗಿನಲ್ಲಿ ಮಾತನಾಡುತ್ತೆ. ಕನ್ನಡ ತಿಳಿಯದು ಮಗುವು ಯಾರಿಗಾದರೂ ಸಿಕ್ಕಿದ್ದಲ್ಲಿ ಮೈಸೂರು ಕಾರ್‌ಗೇರಿಯಲ್ಲಿರುವ ಮಸೀದಿ ಪಕ್ಕದ, ಪಬ್ಬಲ್ ಬೂಬಮ್ಮನ ಮನೆಯಲ್ಲಿರುವ ವೆಂಕಟಮ್ಮನಿಗೆ ದಯವಿಟ್ಟು ತಲುಪಿಸಬೇಕಾಗಿ ಕೋರಲಾಗಿದೆ

Edited, Printed and Published by A. R. Nagarajan at Sadhvi Press, D. Subbiah Road, Mysore.

ಕೆನರಾ ಬ್ಯಾಂಕಿನ ಎರಡು ಹೊಸ ಶಾಖೆಗಳು

ದಕ್ಷಿಣ ಕನ್ನಡದ ಸುಪ್ರಸಿದ್ಧ ಬ್ಯಾಂಕಿಂಗ್ ಸಂಸ್ಥೆಯಾದ ಕೆನರಾ ಬ್ಯಾಂಕಿನವರು ಇತ್ತೀಚಿಗೆ ಕಾರ್ವಾರ ಮತ್ತು ಸಿರ್ಸಿಗಳಲ್ಲಿ ಎರಡು ಶಾಖೆಗಳನ್ನು ತೆರೆದಿರುವರು ಸಂಸ್ಥೆಯು ಭಾರತದ ಅನೇಕ ಪ್ರಮುಖ ನಗರಗಳಲ್ಲಿ ಶಾಖೆಗಳನ್ನು ಹೊಂದಿ ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದೆ

ಕುದೇರಿನಲ್ಲಿ ಬಸ್ ಷೆಲ್ಟರ್

ಸ್ವಾಮಿ,

ಚಾಮರಾಜನಗರ ತಾಲ್ಲೂಕು ಕುದೇರು ಗ್ರಾಮದಲ್ಲಿ ೫,೭೦೦ ರೂ ವೆಚ್ಚದಲ್ಲಿ ಒಂದು ಬಸ್ಸು ಷೆಲ್ಟರನ್ನು ಕಟ್ಟಲು ಏರ್ಪಾಡು ಮಾಡಿ, ಅದಕ್ಕಾಗಿ ಟೆಂಡರನ್ನು ಕರೆಯಲಾಗಿದೆ. ಅಲ್ಲಿ ಇಷ್ಟೊಂದು ಭಾರಿ ವೆಚ್ಚದಲ್ಲಿ ಷೆಲ್ಟರ್ ಕಟ್ಟಿಸುವುದು ಅನವಶ್ಯಕ ಈರೀತಿ ಮಾಡುತ್ತಾ ಹೋದರೆ, ಕುದೇರು ಗ್ರಾಮಕ್ಕಿಂತಲೂ ಹೆಚ್ಚು ಬಸ್ಸು ಓಡಾಟಗಳಿರುವ ಊರುಗಳಲ್ಲಿ ಇದೇ ರೀತಿ ಬಸ್ಸುಗಳನ್ನು ಕಟ್ಟಿಸಬೇಕಾಗಿ ವಿಪರೀತ ಹಣವು ವ್ಯಯವಾಗುತ್ತದೆ ಮುಖ್ಯವಾಗಿ ಆಗಬೇಕಾದ ಜನೋಪಯುಕ್ತ ಕಾರ್ಯಗಳು ಬೇಕಾದಷ್ಟಿವೆ ಉದಾಹರಣೆಗಾಗಿ, ಕುದೇರಿನಿಂದ ಕವಲಂದೆಗೆ ಹೋಗುವ ರಸ್ತೆಯಲ್ಲಿ ಅಡ್ಡಹಳ್ಳಕ್ಕೆ ಕಾಂಕ್ರೀಟ್ ದಾರಿ ಕಿತ್ತು ಹೋಗಿರುವುದನ್ನು ರಿಪೇರಿ ಮಾಡಿಸುವುದು, ನರಸೀಪುರದ ಮಾರ್ಗ

ಔಟ್ ರೈಟ್ ಸೇಲ್

942. ಲಕ್ಷ್ಮೀಪುರಂ

ಹಲಗೆ, ಪರೋಟ್, ರೀಪರ್, ತುಂಡುಗಳು

ನಾಳೆ ಬೆಳಿಗ್ಗೆ 10 ಗಂಟೆಗೆ ಹರಾಜು

ದಿಲ್ ಖುಷ್

(ಪ್ರಕಟಣೆ)

1. ಸಿಡುಬಿನ ಕಲೆಯನ್ನೂ, ಮುಖದ ಕಪ್ಪು ವರ್ಣವನ್ನೂ ಹೋಗಲಾಡಿಸುವುದಲ್ಲದೆ ಕೂದಲು ಬೆಳೆಯುವುದಕ್ಕೂ ಸಹಕರಿಸುತ್ತದೆ.
2. ಶರೀರ ವಿಷದಿಂದ ಉಂಟಾದ ಚರ್ಮರೋಗಗಳನ್ನು ನಿರ್ಮೂಲ ಮಾಡುತ್ತದೆ
3. ಬಹಿಷ್ಠಾ ಕಾಲದ ಹೊಟ್ಟೆ ನೋವನ್ನು, ಸೇವಿಸಿದ ಕೂಡಲೇ ನಿಲ್ಲಿಸುತ್ತದೆ
4. ದಾಂಪತ್ಯ ಜೀವನದಲ್ಲಿ ಉಗ್ರ ಮನೋರಥಕ್ಕಾಗಿ ಮಾಡುವ ರಕ್ತ ಕೊರತೆ (Anaemia), ಧಾತು ನಷ್ಟ, ಧಾತು ದೌರ್ಬಲ್ಯ ಮತ್ತು ಅಶಕ್ತತೆಗಳನ್ನು ನಿವಾರಿಸಿ, ಮನಸ್ಸಿಗೆ ಹರ್ಷವನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದೆಂಬುದರಲ್ಲಿ ಅತಿಶಯೋಕ್ತಿಯಿಲ್ಲ
5. ಮೂಲವ್ಯಾಧಿಗೆ ಪರಮೌಷಧ.

ಹತ್ತಾರು ವರ್ಷ ಮೂಲವ್ಯಾಧಿಯಿಂದ ನರಳಿ ನಾನಾ ಚಿಕಿತ್ಸೆಗಳನ್ನು ಮಾಡಿದಾಗ್ಯೂ ನಿರಾಶನಾಗಿ, ಅಪರೇಷನ್ ಮಾಡಿಸುವುದೆಂದಾಗ, ಧನ್ವಂತರಿಗಳೆಂದು ನನ್ನ ಭಾವನೆಯಲ್ಲಿರುವ ಶ್ರೀ ಶಾಮಣ್ಣನವರೇ, ನನ್ನನ್ನು ಈ ಮಹಾ ವ್ಯಾಧಿಯಿಂದ ಪಾರು ಮಾಡಿದಿರಿ. ...

. . . . (ಶ್ರೀ ಟಿ. ವೆಂಕಟಸುಬ್ಬಾ ಶೆಟ್ಟಿಯರ್, ರೈಲ್ವೆ ಟೆಲಿಫೋನ್ ಆಫೀಸ್, ಮೈಸೂರು)

ಎಸ್ ಶಾಮಣ್ಣ, ಸ್ಪೆಷಲಿಸ್ಟ್,

28/0. ರಿಸರ್ಚ್ ಅಂಡ್ [illegible] ಔಷಧಾಲಯ, 13ನೇ ನಂ. ಕ್ರಾಸ್ [illegible] ಮನೆ,

ಚಾಮುಂಡಿಪುರಂ, ಮೈಸೂರು

ಭಾರತದಲ್ಲಿ ರೇಡಿಯೊ ಭಾಗಗಳ ತಯಾರಿಕೆ

೧೯೫೩ರಲ್ಲಿ ಹಲವು ಬಗೆಯ ರೇಡಿಯೊ ಭಾಗ ಮತ್ತು ರೇಡಿಯೊವಿಗೆ ಸಂಬಂಧಿಸಿದ ವಸ್ತುಗಳನ್ನು ಭಾರತದಲ್ಲಿ ತಯಾರಿಸಲಾಗುವುದೆಂದು ವರದಿಯಾಗಿದೆ ಸೈನ್ಯಕ್ಕೆ ಅವಶ್ಯಕವಾದ ವೈರ್‌ಲೆಸ್ ಮತ್ತು ರಾಡರ್ ಸಾಧನಗಳ ತಯಾರಿಗಾಗಿಯೂ ಒಂದು ಕಾರ್ಖಾನೆಯನ್ನು ಭಾರತ ಸರ್ಕಾರದವರು ಬೆಂಗಳೂರಿನಲ್ಲಿ ಏರ್ಪಡಿಸಲಿರುವರು.

ಕಲ್ಲಿದ್ದಲು ಗಣಿಯಲ್ಲಿ ಮುಷ್ಕರ

ಹೈದರಾಬಾದಿನ ಬೆಲ್ಲಂಪಲ್ಲಿ ಕಲ್ಲಿದ್ದಲು ಗಣಿಯಲ್ಲಿ ನಾಲ್ಕೈದು ದಿನಗಳಿಂದ ಮುಷ್ಕರ ನಡೆಸುತ್ತಿರುವುದರಿಂದ, ಅಲ್ಲಿ ದಿನಕ್ಕೆ ೧,೩೦೦ ಟನ್ ಕಲ್ಲಿದ್ದಲು ಉತ್ಪನ್ನವು ನಿಂತುಹೋಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ. ಇಂದ	ರೂ. ಗೆ
ಕಡಲೆಕಾಯಿ	೨೦.೦.೦	೩೦.೧೪.೦
ಹರಳುಬೀಜ	೪೧.೮.೦	೪೪.೨.೦
ಹೊಂಗೆಬೀಜ	೨೨–೧೨–೦	೨೪_೧೨_೦
ಹುರುಳಿ	೪೩.೨.೦	೪೫.೧೦.೦
ಹೆಸರು	೭೮–೪–೦	೭೯.೧೪.೦
ಹಲಸಂದೆ	೩೩.೦.೦	೩೪.೮.೦
ಉದ್ದು	೭೦.೨–೦	೭೦.೧೪.೦
ಎಳ್ಳು	೪೪ ೮.೦	೪೩.೦.೦
ಮೆಣಸಿನಕಾಯಿ	೧೯ ೧೦ ೦	೨೫.೦.೦
ಹುಣಸೇಹಣ್ಣು	೬.೧೨.೦	೭.೮.೦
ಬೆಲ್ಲ	೮_೦_೦	
ತೆಂಗಿನಕಾಯಿ	೧೪೯ ೦–೦	೨೪೯.೦.೦

ಹಿಟ್ಟಿನ ಗಿರಣಿಗಳಿಗೆ ರಜಾ ದಿನ

ರಾಜಧಾನಿಯ ಹಿಟ್ಟಿನ ಗಿರಣಿಗಳ ಮಾಲೀಕರ ಸಂಘದ ಕಾರ್ಯಕಾರೀ ಸಮಿತಿಯು ಸಭೆ ನಡೆಸಿ, ಅಂಗಡಿ ಮತ್ತು ಸಿಬ್ಬಂದಿ ಕಾನೂನಿನ ಅಂಶಗಳನ್ನು ಪರಿಶೀಲಿಸಿ, ಅದರಂತೆ ತಾತ್ಕಾಲಿಕವಾಗಿ ಪ್ರತಿ ಭಾನುವಾರವೂ ಕೆಲಸವನ್ನು ನಿಲ್ಲಿಸಿ ಕಾರ್ಮಿಕರಿಗೆ ರಜಾ ಕೊಡಬೇಕೆಂದು ತೀರ್ಮಾನಿಸಲಾಯಿತು. ಈ ಬಗ್ಗೆ ಅಖೈರು ತೀರ್ಮಾನವನ್ನು ಸಾಮಾನ್ಯ ಸದಸ್ಯರ ಸಭೆಯಲ್ಲಿ ಕೈಗೊಳ್ಳಲಾಗುವುದೆಂದೂ, ಈ ಸಂಬಂಧವಾಗಿ ಹೆಚ್ಚಿನ ವಿವರಗಳನ್ನು ಮಾಲೀಕರುಗಳು ಸಂಘದ ಕಛೇರಿಯಲ್ಲಿ ಪಡೆಯಬಹುದೆಂದೂ ತಿಳಿಸಲಾಗಿದೆ

ವಾಗಿ ಚಾಮರಾಜನಗರಕ್ಕೆ ಹೋಗುವ ರಸ್ತೆ ಹಾಳಾಗಿ ಅದರ ರಿಪೇರಿಯಾಗಬೇಕಾದುದು ಅಗತ್ಯವಾಗಿದೆ. ಆದುದರಿಂದ ಮೇಲ್ಕಂಡ ಷೆಲ್ಟರ್ ಪ್ರಮಾಣವನ್ನು ರದ್ದುಮಾಡಿ, ಆ ಹಣವನ್ನು ಅಗತ್ಯವಾದ ಕೆಲಸಗಳಿಗೆ ಮಾತ್ರ ಉಪಯೋಗಿಸಬೇಕೆಂದು ಪ್ರಾರ್ಥಿಸುತ್ತೇನೆ

ವಿ ಶ್ರೀನಿವಾಸಯ್ಯರ್.

SRI GAYATHRI

TALKIES

From 14.6.53 : For 2 days

Paramount's

HURRICANE SMITH

(Technicolor)

With:— Yvonne Decarlo

John Ireland

—:NEXT CHANGE:—

CAPTIVE WOMEN

ರೀಜ಼ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೪-೬-೧೯೫೩ [ಸಂಚಿಕೆ ೪೨

ಪೌರಸಭಾ ಸದಸ್ಯರ ಮನೆ ಎದುರು ಪ್ರದರ್ಶನ

ಜಯಚಾಮರಾಜ ಒಡೆಯರವರ ಮೇಲೆ ದಾವಾ

ಮೈಸೂರು ೧೪

ನಗರದಲ್ಲಿರುವ ಅಬ್ಕಾರಿ ಕಂಟ್ರಾಕ್ಟರ್ ಮತ್ತು ಪೌರಸಭಾ ಸದಸ್ಯರಾದ ಶ್ರೀ ಟಿ ನಾರಣಪ್ಪನವರು ಶ್ರೀಮನ್ ಮಹಾರಾಜಾ ಶ್ರೀ ಜಯಚಾಮರಾಜ ಒಡೆಯರ್‌ರವರ ಮೇಲೆ ಮತ್ತು ಶ್ರೀಗಳಾದ ಎಸ್. ಆರ್. ಶರ್ಮ, ಎಂ. ಎಲ್. ಸುಬ್ರಹ್ಮಣ್ಯರಾಜ ಅರಸ್, ಎಂ ಎ ಜೋಯಿಸ್ ಮುಂತಾದವರ ಮೇಲೆ ಚೋಳಿ ಜಮೀನು ಸಂಬಂಧವಾಗಿ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಕಳೆದ ೧೧ ನೇ ತಾ|| ದಾವಾ ದಾಖಲ್ ಮಾಡಿರುತ್ತಾರೆ. ಶ್ರೀಮನ್ ಮಹಾರಾಜರ ಮೇಲೆ ದಾವೆ ಹೂಡಲು ಪೂರ್ವಭಾವಿಯಾಗಿ ಅನುಮತಿ ಪಡೆಯಬೇಕಾಗಿದ್ದು, ವಾದಿಯು ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಯವರಿಂದ ಸರ್ಟಿಫಿಕೇಟು ಪಡೆದಿರುತ್ತಾರೆ ವಾದಿಯ ಪರ ಶ್ರೀ ಎ. ವೆಂಕಟೇಶಯ್ಯನವರು ವಕಾಲತ್ತು ವಹಿಸಿರುವರು

ತುಂಗಭದ್ರೆಗೆ ಮೈಸೂರು ಅಧಿಕಾರಿಗಳ ಭೇಟಿ

ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ ಕೆ. ಎಸ್. ಗಂಗಾಧರ್ ಮತ್ತು ವಿಶೇಷಾಧಿಕಾರಿಗಳಾದ ಶ್ರೀ ಕೆ ಶೇಷಗಿರಿರಾವ್‌ರವರು ಬಳ್ಳಾರಿ ಬಳಿ ತುಂಗಭದ್ರಾ ನಿವೇಶನದ ಪರಿಶೀಲನೆ ನಡೆಸಿದರೆಂದು ವರದಿಯಾಗಿದೆ ಅವರು ಶೀಘ್ರದಲ್ಲೇ ಬೆಂಗಳೂರಿನಲ್ಲಿ ಮದ್ರಾಸು ಮತ್ತು ಹೈದರಾಬಾದು ಪ್ರತಿನಿಧಿಗಳೊಡನೆ ಯೋಜನೆ ಸಂಬಂಧವಾಗಿ ಮಾತುಕತೆ ನಡೆಸುವರು

ಬಿಹಾರ್ ಮಂತ್ರಿಯ ಸೋಲು

ಬಿಹಾರ್ ಶಾಸನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಅಲ್ಲಿನ ಆರೋಗ್ಯ ಮಂತ್ರಿ ದೇವಶರಣ ಸಿಂಗ್‌ರವರು ಪ್ರಜಾ ಸಮಾಜವಾದಿ ಸ್ಪರ್ಧಿಯಿಂದ ಸೋಲಿಸಲ್ಪಟ್ಟಿರುವರು.

ಸಂಸ್ಥಾನದಲ್ಲಿ ಕಿದ್ವಾಯಿ ಮತ್ತು ಕೃಷ್ಣಪ್ಪನವರ ಪ್ರವಾಸ

ಸಂಸ್ಥಾನದ ಅಭಾವ ಪರಿಸ್ಥಿತಿಯನ್ನು ಕುರಿತು ಪರಿಶೀಲಿಸಲು ಜೂಲೈ ಆದಿಭಾಗದಲ್ಲಿ ಕೇಂದ್ರ ಸರ್ಕಾರದ ಆಹಾರ ಮಂತ್ರಿ ರಫಿ ಅಹಮದ್ ಕಿದ್ವಾಯಿರು ಪ್ರವಾಸ ಕೈಗೊಳ್ಳುವರು ಉಪ ಮಂತ್ರಿ ಶ್ರೀ ಎಂ. ವಿ ಕೃಷ್ಣಪ್ಪನವರು ಅವರೊಡನೆ ಇರುವರು

ವಿ ವಾ ಹ ಮ ಹೋ ತ್ಸ ವ

ರಾಜಧಾನಿಯ ಜಿ ಟಿ. ಎ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ ರಾಮ. ನರಸಿಂಹಯ್ಯನವರು ತಮ್ಮ ಕುಮಾರಿ ಸೌ|| ಕೆ. ಆರ್. ಜಯಾರವರನ್ನು ಬೆಂಗಳೂರಿನ ಶ್ರೀ ಬಿ ಶ್ರೀಕಂಠರಾಮಯ್ಯರ ಮಗ ಶ್ರೀ ಎಸ್. ಎಸ್ ರಾಮರಾಯರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು

○ ಭಾರತ ಸರ್ಕಾರದವರು ಎವರೆಸ್ಟ್ ಶಿಖರಾರೋಹಣದ ನೆನಪಿನ ಸ್ಟಾಂಪುಗಳನ್ನು ಹೊರಡಿಸಲಿರುವುದಾಗಿ ಗೊತ್ತಾಗಿದೆ

ಕೊಡಗಿಗೆ ಎ. ಎಸ್. ರಾಮಚಂದ್ರರವರು

ಬೆಂಗಳೂರು ೧೪

ಶಿವಮೊಗ್ಗಾ ಜಿಲ್ಲಾಧಿಕಾರಿಗಳಾದ ಶ್ರೀ ಎ ಎಸ್. ರಾಮಚಂದ್ರರವರನ್ನು ಕೊಡಗಿನ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯಾಗಿ ನೇಮಿಸಲು ಅವರ ಸೇವೆಯನ್ನು ಎರವಲಾಗಿ ಕೊಡಲಾಗಿದೆ. ಅಲ್ಲಿರುವ ಶ್ರೀ ಸಿ. ನರಸಿಂಹಮೂರ್ತಿಯವರು ಸಂಸ್ಥಾನಕ್ಕೆ ಹಿಂತಿರುಗುವರು ಇಲ್ಲಿನ ಪಂಚಾಯತ್ತು ಇಲಾಖಾ ಸ್ಪೆಷಲಿನ ಶ್ರೀ ಕೆ ಎಸ್ ಕೃಷ್ಣಸ್ವಾಮಿಯವರನ್ನು ಸೂಪರಿಂಟೆಂಡಿಂಗ್ ಇಂಜನಿಯರಾಗಿ ಬಡ್ತಿ ಕೊಟ್ಟು, ಇಲ್ಲಿನ ಸ್ಯಾನಿಟರಿ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಕ ಮಾಡಲಾಗಿದೆ

ಸಿದ್ಧಲಿಂಗಯ್ಯನವರ ವಿಚಾರಣೆ ತೀರ್ಪು ರಾಜಪ್ರಮುಖರಿಂದ

ಪಶ್ಚಿಮ ಮಂತ್ರಿ ಶ್ರೀ ಟಿ. ಸಿದ್ಧಲಿಂಗಯ್ಯನವರ ಶಾಸನಸಭಾ ಸದಸ್ಯತ್ವದ ಅನರ್ಹತೆ ಬಗ್ಗೆ ವಾದವಿವಾದಗಳು ಪೂರೈಸಿದುವಷ್ಟೆ? ವಿಚಾರಣಾಧಿಕಾರಿಗಳಾದ ಶ್ರೀ ಕೆ ಎ ಕೆ ಸುಂದರಂ ರವರು ತಮ್ಮ ಅಭಿಪ್ರಾಯವನ್ನು ರಾಜಪ್ರಮುಖರಿಗೆ ಸಲ್ಲಿಸಿದನಂತರ ರಾಜಪ್ರಮುಖರು ತಮ್ಮ ತೀರ್ಪನ್ನು ಕೊಡಲಿರುವರೆಂದು ಗೊತ್ತಾಗಿದೆ.

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಹೊಸ ವಿಭಾಗ

ರಾಜಧಾನಿಯ ಮೆಡಿಕಲ್ ಕಾಲೇಜನಲ್ಲಿ ಈ ವರ್ಷ ಎಂ. ಎಸ್‌ಸಿ ತರಗತಿಯಲ್ಲಿ ಬಯೊ ಕೆಮಿಸ್ಟ್ರಿ ವಿಭಾಗವನ್ನು ತೆರೆಯಲಾಗುವುದೆಂದು ಗೊತ್ತಾಗಿದೆ ಈ ವಿಭಾಗವನ್ನು ತೆರೆಯುವುದರಲ್ಲಿ ಮೈಸೂರೇ ಭಾರತದಲ್ಲೆಲ್ಲಾ ಪ್ರಥಮವಾಗಿರುತ್ತದೆ.

ಕೆರೆಯಲ್ಲಿ ಬಿದ್ದು ಮರಣ

ತಾಗಡ—ಮಾಂಬಳ್ಳಿ, ೧೩.

ಮಲಗಹಳ್ಳಿಯ ಆದಿಕರ್ನಾಟಕರ ಜಾತಿಯ ಬಸಮ್ಮ ಎಂಬಾಕೆಯು ಕಳೆದ ಮಂಗಳವಾರ ಇಲ್ಲಿನ ಕೆರೆಯಲ್ಲಿ ಬಿದ್ದು ಮೃತಪಟ್ಟಳೆಂದೂ, ಚಾಮರಾಜನಗರದ ಪೋಲೀಸರು ಯಳಂದೂರು ಪೋಲೀಸರೊಡನೆ ಶವದ ಮಹಜರು ನಡೆಸಿದರೆಂದೂ ಗೊತ್ತಾಗಿದೆ

○ ಅಲಹಾಬಾದಿನ ಬಳಿ ಮಿರ್ಜಾಪುರದಲ್ಲಿ ನೆನ್ನೆ ದೋಣಿಯೊಂದು ಮುಳುಗಿ ೨೫ ಜನರು ಮೃತಪಟ್ಟರೆಂದು ವರದಿಯಾಗಿದೆ.

ಶಾಲಾ ಬಾಲಕಿಯ ಕೊಲೆ

ಬೆಂಗಳೂರು ೧೪

ಇಲ್ಲಿನ ಗುಡ್ ಷೆಪರ್ಡ್ ಗರ್ಲ್ಸ್ ಮಿಡಲ್ ಸ್ಕೂಲಿನ ವಿದ್ಯಾರ್ಥಿನಿ ೧೪ ವರ್ಷದ ಸರಸ್ವತಿ ಎಂಬುವಳನ್ನು ಕತ್ತು ಹಿಸುಕಿ ಕೊಂದ ಸಂಬಂಧವಾಗಿ ಬಿ. ನಾಗಪ್ಪ ಎಂಬಾತನ ಮೇಲೆ ಪೋಲೀಸರು ಖೂನಿ ಮೊಕದ್ದಮೆ ರಿಜಿಸ್ಟರು ಮಾಡಿಕೊಂಡಿರುತ್ತಾರೆ ಅವರಿಬ್ಬರಿಗೂ ಎರಡು ವರ್ಷಗಳಿಂದಲೂ ಪ್ರಣಯ ಸಂಬಂಧವಿದ್ದಿತೆಂದೂ, ಆಗಾಗ್ಯೆ ಆಕೆಯು ನಾಗಪ್ಪನ ಮನೆಗೆ ಹೋಗಿಬರುತ್ತಿದ್ದಳೆಂದೂ, ಮೊನ್ನೆ ಅವರುಗಳಿಗೆ ಉಂಟಾದ ಜಗಳದ ಪರಿಣಾಮವಾಗಿ ಅವಳನ್ನು ಕತ್ತು ಹಿಸುಕಲಾಯಿತೆಂದೂ ಹೇಳಲಾಗಿದೆ ಶವವನ್ನು ಮನೆಯಲ್ಲಿಟ್ಟು ಬೀಗ ಹಾಕಿ ಆತನು ಬೀದಿಬಂದಿ ಅಲೆಯುತ್ತಾ, ತನ್ನ ಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟುಕೊಂಡು, ಫ್ರೇಸರ್ ಟೌನ್ ಪೋಲೀಸು ಠಾಣೆಗೆ ಎಲ್ಲ ಸಮಾಚಾರವನ್ನೂ ಖುದ್ದಾಗಿ ತಿಳಿಸಿ, ಪೋಲೀಸರ ವಶವಾದನೆಂದು ಹೇಳಲಾಗಿದೆ

ಗೌರೀಶಂಕರ ಹತ್ತಿದ ಬಗ್ಗೆ ಹಿಲಾರಿ ಮತ್ತು ಟೇನ್‌ಸಿಂಗ್

ವಿಶ್ವದ ಅತ್ಯಂತ ಎತ್ತರವಾದ ಗೌರೀಶಂಕರ ಶಿಖರವನ್ನು ಏರಿದ ಟೇನ್‌ಸಿಂಗ್ ಮತ್ತು ಹಿಲಾರಿಯವರು ವಿವರಗಳನ್ನಿತ್ತು ಅದರ ಮೇಲೆ ೨೦ ನಿಮಿಷ ಕಾಲ ಮಾತ್ರ ಇದ್ದರೆಂದೂ, ಟೇನ್‌ಸಿಂಗ್ ಕೈಲಿ ವಿಶ್ವಸಂಸ್ಥೆ, ಭಾರತ, ಬ್ರಿಟನ್ ಮತ್ತು ನೇಪಾಳಗಳ ಬಾವುಟಗಳನ್ನು ಹಿಡಿದು ಧ್ವಂತಿಯೇ ಹಿಲಾರಿಯು ಫೋಟೊ ತೆಗೆದುಕೊಂಡುದಾಗಿಯೂ, ಮೇಲೆ ಹತ್ತಿದನಂತರ ಅವರು ಪರಸ್ಪರ ಆಲಿಂಗಿಸಿದರೆಂದೂ ತಿಳಿಸಿರುತ್ತಾರೆ ಇಳಿಯುವುದಕ್ಕೆ ಮುಂಚೆ ಬೆಟ್ಟದ ಸುತ್ತಲೂ ಕೆಳಗೆ ಒಂದು ಸಾರಿ ವೀಕ್ಷಿಸಿದರೆಂದು ಗೊತ್ತಾಗಿದೆ ಮತ್ತೊಮ್ಮೆ ಗೌರೀಶಂಕರವನ್ನು ತಾವು ಹತ್ತುವುದಿಲ್ಲವಾಗಿಯೂ, ೭ ಬಾರಿ ನಡೆಸಿರುವ ಪ್ರಯತ್ನಗಳೇ ಸಾಕೆಂದೂ, ಮುಂದೆ ೨೮,೨೫೦ ಅಡಿಯ ಗಾಡ್ವಿನ್ ಆಸ್ಟಿನ್ ಪರ್ವತ ಹತ್ತಲು ಆಶಿಸಿರುವುದಾಗಿಯೂ ಟೇನ್‌ಸಿಂಗರು ಹೇಳಿರುತ್ತಾರೆ.

ಪೌರಸಭಾ ಸದಸ್ಯರ ಗೃಹಗಳಿಗೆ ಮೆರವಣಿಗೆ

ಮನೆಗಂದಾಯ ಹೆಚ್ಚಿಸಿರುವ ಬಗ್ಗೆ ರಾಜೀನಾಮೆ ಕೊಡಲು ಸೂಚನೆ

ಮೈಸೂರು ೪

ನಗರ ಪೌರಸಭೆಯವರು ಮನೆಗಂದಾಯವನ್ನು ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆಯನ್ನು ತೋರಿಸಿ, ಪೌರ ಸಭಾ ಸದಸ್ಯರು ರಾಜೀನಾಮೆ ಕೊಡುವಂತೆ ಒತ್ತಾಯಪಡಿಸುವ ಸಲುವಾಗಿ ಶ್ರೀ ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ಈ ದಿನ ಬೆಳಗ್ಗೆ ಪ್ರದರ್ಶನವೊಂದು ನಡೆಯಿತು. ಶ್ರೀಗಳಾದ ಎ ಎ ಸೂರ್ಯನಾರಾಯಣರಾವ್, ಡಿ ಆರ್. ಕೃಷ್ಣಮೂರ್ತಿ, ಬೆಳ್ಳಿಯಪ್ಪ ಮುಂತಾದವರು ಮೆರವಣಿಗೆಯಲ್ಲಿದ್ದರು ಪೌರಸಭಾ ಸದಸ್ಯರು ರಾಜೀನಾಮೆಯನ್ನು ಕೊಡಬೇಕೆಂದು ಸೂಚಿಸುವ ಬೋರ್ಡುಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು ಶ್ರೀ ತಗಡೂರು ರಾಮಚಂದ್ರರಾಯರು ಒಂದು ಬೋರ್ಡನ್ನು ಸ್ವತಃ ಹಿಡಿದಿದ್ದರು ನೂರಾರು ಜನರು ಭಾಗವಹಿಸಿದ್ದರು.

ಮೆರವಣಿಗೆಯು ಪ್ರಭುದೇವಾ ಟಾಕೀಸ್ ಚೌಕದಿಂದ ಹೊರಟು, ಶ್ರೀಗಳು ಟಿ ಎಸ್ ರಾಜಗೋಪಾಲಯ್ಯಂಗಾರ್, ಎ ಕೃಷ್ಣಮೂರ್ತಿರಾವ್, ಎಂ ಸಿ. ಮಹದೇವಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯ, ಟಿ ನಾರಣಪ್ಪ, ಬಿ. ಕೆ ರಾಮಕೃಷ್ಣಯ್ಯ, ಎಂ. ವೀರರಾಜ ಅರಸ್, ಎ ವೆಂಕಟೇಶಯ್ಯ, ಡಾ|| ಬಿ ಜಿ ದಾಸ್, ಚೌಡಯ್ಯನವರ ಮನೆಗಳಿಗೂ ಮತ್ತು ವಕೀಲರಾದ ಕೆ. ಪುಟ್ಟಸ್ವಾಮಿಯವರ ಕಛೇರಿಗೂ ತೆರಳಿ ರಾಜೀನಾಮೆ ಕೊಡುವಂತೆ ಒತ್ತಾಯಪಡಿಸುವ ಪತ್ರಗಳನ್ನು ಕೊಡಲಾಯಿತು ಎ ಕೃಷ್ಣಮೂರ್ತಿರಾಯರು ಮತ್ತು ಕೆ. ಪುಟ್ಟಸ್ವಾಮಿಯವರಿಗೆ ಪತ್ರಗಳನ್ನು ಖುದ್ದಾಗಿ ಸಲ್ಲಿಸಲಾಯಿತು ಉಳಿದವರು ಮನೆಯಲ್ಲಿರಲಿಲ್ಲವೆಂದೂ, ಅದುದರಿಂದ ಪತ್ರಗಳನ್ನು ಮನೆಯಲ್ಲಿ ಕೊಡಲಾಯಿತೆಂದೂ ಗೊತ್ತಾಗಿದೆ

ಶ್ರೀಗಳಾದ ಟಿ ಎಸ್. ರಾಜಗೋಪಾಲಯ್ಯಂಗಾರ್, ಎ. ಕೃಷ್ಣಮೂರ್ತಿರಾವ್, ಎಂ. ಸಿ ಮಹದೇವಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯ, ಟಿ ನಾರಣಪ್ಪ ಮತ್ತು ಬಿ ಕೆ ರಾಮಕೃಷ್ಣಯ್ಯನವರ ಮನೆಗಳ ಬಳಿ ಪೋಲೀಸು ಕಾವಲು ಹಾಕಲಾಗಿದ್ದಿತು. ಮೆರವಣಿಗೆಯುದ್ದಕ್ಕೂ ಪೋಲೀಸರು ವ್ಯಾನಿನಲ್ಲಿ ಹಿಂಬಾಲಿಸಿದರು ಡಿ ಎಸ್ ಪಿ. ಮತ್ತು ಎ. ಎಸ್ ಪಿ.ಯವರೂ ಸಹ ಸ್ವಲ್ಪ ದೂರದಲ್ಲಿದ್ದು ಪರಿಶೀಲಿಸಿದರು ಪ್ರದರ್ಶನಕಾರರು ಪೌರಸಭಾ ಕಛೇರಿಯನ್ನು ತಲುಪಿ, ಅಲ್ಲಿನ ಟಪ್ಪಾಲು ಪೆಟ್ಟಿಗೆಯಲ್ಲಿ ಉಳಿದ ೧೩ ಜನ ಸದಸ್ಯರ ರಾಜೀನಾಮೆ ಒತ್ತಾಯದ ಪತ್ರಗಳನ್ನು ಹಾಕಿದನಂತರ ಚದುರಿದರು.

ಡಾ|| ನಾಗನಗೌಡರಿಗೆ ಬಿನ್ನವತ್ತಳೆ

ನಂಜನಗೂಡು ಕನಕದಾಸ ವಿದ್ಯಾರ್ಥಿ ಮಂದಿರದಲ್ಲಿ ನಾಳೆ 'ಮಧ್ಯಾಹ್ನ ೩ ಗಂಟೆಗೆ ಮದ್ರಾಸಿನ ಮಂತ್ರಿ ಡಾ|| ಆರ್. ನಾಗನಗೌಡರು ಕುರುಬರ ಸಮ್ಮೇಳನವನ್ನು ಆರಂಭಗೊಳಿಸುವರು. ಅವರಿಗೆ ಬಿನ್ನವತ್ತಳೆಯೊಂದನ್ನು ಸಮರ್ಪಿಸಲಾಗುವುದು.

ವಾರ ಭವಿಷ್ಯ

ತಾ|| ೧೪ ೬ ೫೩ ರಿಂದ ೨೧ ೬–೫೩ ರ ವರೆಗೆ

ಮೇಷ—ವಿದ್ಯಾರ್ಥಿಗಳಿಗೆ ಸಿದ್ಧಿ, ಸ್ನೇಹಿತರ ಸಹಾಯ, ಆರೋಗ್ಯ ಉತ್ತಮ, ನೌಕರಿಯಲ್ಲಿ ಮೇಲಧಿಕಾರಿಗಳ ಸುಪ್ರಸನ್ನತೆ ಉದ್ಯೋಗ ವಂಥೆಗಳಲ್ಲಿ ಶ್ರೀಮಂತರ ಸಹಾಯ, ಪ್ರವಾಸ ಯೋಗ, ತಾ|| ೧೭, ೧೮ ಸಜ್ಜನರ ಸ್ನೇಹ, ಮಹತ್ವದ ಪತ್ರ

ವೃಷಭ — ಕೈಗೊಂಡ ಕಾರ್ಯ ಸಿದ್ಧಿ, ಆರೋಗ್ಯದಲ್ಲಿ ಸುಧಾರಣೆ, ವಿಶೇಷ ಖರ್ಚು, ನೌಕರಿ ವಂಥೆಗಳಲ್ಲಿ ಅನುಕೂಲವಿಲ್ಲ, ಆದರೂ ತೊಂದರೆ ಇಲ್ಲ, ವಿರೋಧಿಗಳ ಕಾಟ, ಸಹನೆಯಿಂದ ಕೇಡಿಲ್ಲ ತಾ|| ೧೭, ೧೮ ವಿಶ್ರಾಂತಿ ಇಲ್ಲ, ಖರ್ಚ

ಮಿಥುನ — ಆರೋಗ್ಯ ನೆಟ್ಟಗಿರದು, ನೌಕರಿ ವಂಥೆಗಳಲ್ಲಿ ಸ್ಥಳ ಬದಲಾವಣೆ ಸಂಭವ, ವಿಶೇಷ ವೆಚ್ಚ, ಮನಸ್ಸಿಗೆ ಶಾಂತಿ ಇಲ್ಲ ತಾ|| ೧೭, ೧೮ ಚಿಂತೆ, ಖರ್ಚು

ಕರ್ಕ — ದುರ್ಜನರ ಸಹವಾಸ ಆದರೆ ತೊಂದರೆ, ನೌಕರಿ ವಂಥೆಯಲಿ ವಿಘ್ನ ಘಟನೆ ಮೇಲಧಿಕಾರಿಗಳ ಕೋಪ ಪತ್ನಿಗೆ ಬಾಧೆ ತಾ|| ೧೪, ೧೫ ಮಾನ ಹಾನಿ, ಚಿಂತೆ

ಸಿಂಹ — ಗ್ರಹಗತಿ ಚೆನ್ನಾಗಿದೆ, ಐಕ್ಯ ಆದಾಯ, ಆದರೆ ಖರ್ಚ ಸ್ನೇಹಿತರ ದ್ರೋಹಿಗಳಿಗ ನೌಕರಿ ಲಭ್ಯ ಉದ್ಯೋಗ, ವ್ಯಾಪಾರಗಳಲ್ಲಿ ಲಾಭ ತಾ|| ೧೪, ೧೫ ಅಪ್ಪರ ಆಗಮನ ಖರ್ಚ

ಕನ್ಯಾ — ಹಣದ ಅನುಕೂಲವುಂಟು, ಮಹತ್ವದ ಕಾರ್ಯ ವಿಕ್ರಯ ಕೈ ಅನುಕೂಲ ಆರೋಗ್ಯ ಉತ್ತಮ, ವಿದ್ಯಾರ್ಥಿಗಳ ಸ್ನೇಹ ತಾ|| ೧೪, ೧೫ ಶುಭ ವಾರ್ತಾ ಉತ್ಸಾಹ

ತುಲಾ — ಸತ್ಸಹವಾಸ, ಕೈಗೊಂಡ ಕಾರ್ಯದಲ್ಲಿ ಯಶಸ್ಸು ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಮಾನ ಸನ್ಮಾನ ತಾ|| ೧೭, ೧೮ ಅಕಸ್ಮಿಕ ಲಾಭ ಮಹತ್ವದ ಪತ್ರ

ವೃಶ್ಚಿಕ — ಆರೋಗ್ಯ ನೆಟ್ಟಗಿರದು, ವ್ಯವಸಾಯ ವಂಥೆಗಳಲ್ಲಿ ನಷ್ಟ, ಮಾನ ಸನ್ಮಾನ ದೊರೆಯದ, ನೌಕರರ ಮೇ

ಲೆ ಚಿಂತೆ ಆವಕಾಶ, ತಾ|| ೧೬, ೧೭ ಚಿಂತೆ, ಖರ್ಚು

ಧನು — ಮನೆಯಲ್ಲಿ ವೃದ್ಧ ಹೆಂಗಸಿನ ವಿಯೋಗ, ಕೈಗೊಂಡ ಕಾರ್ಯದಲ್ಲಿ ಅಪಯಶಸ್ಸು, ಉದ್ಯೋಗ ವಂಥೆಗಳಲ್ಲಿ ನಷ್ಟ ತಾ|| ೧೪ ೧೫ ಕಲಹ, ಪತ್ನಿಗೆ ಕ್ಲೇಶ

ಮಕರ — ಆರೋಗ್ಯ ನೆಟ್ಟಗೆ ದ್ರವ್ಯಾನುಕೂಲ ಮಾನ ಸನ್ಮಾನ ಚಿತ್ತಸ್ವಾಸ್ಥ್ಯವಿಲ್ಲ ಕತು ಏನ ಆಟ ನಡೆಯದು ತಾ|| ೧೭, ೧೮ ಮುಂಗೆಳ ಕಾರ್ಯ ಖರ್ಚು

ಕುಂಭ — ನಿಮ್ಮ ಮತ್ತು ಪತ್ನಿ ಆರೋಗ್ಯದಲ್ಲಿ ಸುಧಾರಣೆ ಮಕ್ಕಳಿಗೆ ಕ್ಲೇಶ ವ್ಯವಹಾರ ವಂಥೆಗಳಲ್ಲಿ ಉತ್ತಮ ಲಾಭ ಧನಪ್ರಾಪ್ತಿ ಕಾರ್ಯ ತಾ|| ೧೭, ೧೮ ಪ್ರವಾಸ, ಶೀಘ್ರ ಕ್ಷೇತ್ರ ದರ್ಶನ

ಮೀನ — ಕಾಳ್ಜಿಯುರಲಿ, ಕುಟುಂಬದಲ್ಲಿ ತೊಂದರೆ, ಮಹತ್ವದ ಕಾಗದ ಪತ್ರಗಳು ಮತ್ತು ಬೆಲೆಯುಳ್ಳ ವಸ್ತು ಅಪಹಾರ, ನೌಕರಿ ವಂಥೆಗಳಲ್ಲಿ ಶತ್ರು ಕಾಟ, ತಾ|| ೧೭, ೧೮ ಮಿತ್ರ ಹಾನಿ ದ್ರವ್ಯ ಚಿಂತೆ

ಪಂಚಚೂಳಿ ಶಿಖರದ ಆರೋಹಣ

ಇದ ವರೆಗೂ ಯಾರೂ ಹತ್ತದ ಹಿಮಾಲಯದ ಪಂಚಚೂಳಿ ಎಂಬ ೨೨,೬೫೦ ಅಡಿ ಎತ್ತರದ ಶಿಖರವನ್ನು ಭಾರತೀಯ ತಂಡವೊಂದು ಹತ್ತಿರುವುದಾಗಿ ಗೊತ್ತಾಗಿದೆ. ಈ ಶಿಖರವು ಆಲ್ಮೊರಾವಿಗೆ ಸಮಿಪದಲ್ಲಿದೆ ಶ್ರೀ ನಿಶೋರ್ ರವರು ತಂಡದ ನಾಯಕರಾಗಿದ್ದರು

ಶ್ರೀ ರಾಮ ಸಹಾಯ ಸಂಘ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮೇಲ್ಕಂಡ ಸಂಘದ ಮೂಲಕ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕುಳಿತಿದ್ದ ೨೫ ವಿದ್ಯಾರ್ಥಿಗಳ ಪೈಕಿ ೧೮ ಮಂದಿಯೂ, ಎಸ್ ಎಸ್ ಪರೀಕ್ಷೆಗೆ ಕುಳಿತಿದ್ದ ೪೫ ವಿದ್ಯಾರ್ಥಿಗಳ ಪೈಕಿ ೩೭ ಜನರೂ ತೇರ್ಗಡೆಯಾಗಿರುತ್ತಾರೆ. ಮೇಲ್ಕಂಡ ಸಂಘದಲ್ಲಿ ಶಿಕ್ಷಣ ತರಗತಿಗಳು ಮುಂದಿನ ತಿಂಗಳು ೧ನೇ ತಾರೀಕಿನಿಂದ ಆರಂಭವಾಗಿರುವುದು

ಚಿಕ್ಕಾಲಿಯ ಎರಡು ಗುಂಪುಗಳಿಗೆ ಘರ್ಷಣೆ

ಇಬ್ಬರಿಗೆ ಜೀವಾವಧಿ ಶಿಕ್ಷೆ: ೧೯ ಜನರಿಗೆ ವಿವಿಧ ಸಜಾ

ಮೈಸೂರು ೧೪

ಇಲ್ಲಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಜಿ ವೆಂಕಟರಮಣರವರು ಗುಂಡ್ಲುಪೇಟೆ ತಾಲ್ಲೂಕು ಚಿಕ್ಕಾಲಿ ಗ್ರಾಮದ ರಂಗನಾಯಕ, ಸಣ್ಣ ಬಸವನಾಯಕ, ಚೆನ್ನಬಸವನಾಯಕ ಮತ್ತು ಇತರ ಮೂವತ್ತೊಂದು ಜನರ ಮೇಲೆ ಅದೇ ಊರಿನ ಮಲ್ಲಬೀರೆ ಗೌಡ ಎಂಬುವರ ಕೊಲೆ ಸಂಬಂಧದಲ್ಲಿ ನೊಕದ್ದಮೆಯಲ್ಲಿ ತೀರ್ಪಿತ್ತು, ಸಣ್ಣ ಜವರನಾಯಕ ಮತ್ತು ಚೆನ್ನ ಬಸವನಾಯಕರವರಿಗೆ ಜೀವಾವಧಿ ಶಿಕ್ಷೆ, ತಲಾ ೨ ವರ್ಷ ಕಠಿಣ ಸಜಾ ಮತ್ತು ೧೫೦ ರೂ ದಂಡ, ತಪ್ಪಿದರೆ ಮತ್ತೆ ಮೂರು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು ಸಣ್ಣ ಜವರನಾಯಕನಿಗೆ ಇನ್ನೊಂದು ಸೆಕ್ಷನ್ ಪ್ರಕಾರ ೬ ತಿಂಗಳು ಕಠಿಣ ಸಜಾವನ್ನು ವಿಧಿಸಲಾಯಿತು

ರಂಗನಾಯಕ ಮುಂತಾದ ಒಟ್ಟು ೧೯ ಜನರಿಗೆ ವಿವಿಧ ಅಪರಾಧಗಳಲ್ಲಿ ೨ ವರ್ಷದಿಂದ ಹಿಡಿದು ೯ ತಿಂಗಳವರೆಗೆ ಸಜಾ ೧೫೦ ರೂ ನಿಂದ ೫೦ ರ ವರೆಗೆ ದಂಡಗಳನ್ನು ವಿಧಿಸಲಾಗಿದೆ ೧೩ ಜನರನ್ನು ನ್ಯಾಯಾಧೀಶರು ಖುಲಾಸೆ ಮಾಡಿರುತ್ತಾರೆ

ಚಿಕ್ಕಾಲಿ ಗ್ರಾಮದಲ್ಲಿ ಕುರುಬರಿಗೆ ಸೇರಿತ್ತೆಂದು ಹೇಳಲಾದ ಜಮೀನೊಂದರ ಉಳುಮೆ ವಿಷಯವಾಗಿ ಕುರುಬರಿಗೂ ಪರಿವಾರದವರಿಗೂ ಕಳೆದ ವರ್ಷ

ಶ್ರೀ ರಾಮ ಲೀಲ

ರಾಜಧಾನಿಯ ಸೊಹಾರ್ ಬೀದಿಯಲ್ಲಿದ್ದ ಶ್ರೀ ರಾಮ ಲೀಲೆಯನ್ನು ಕಳೆದ ತಿಂಗಳು ೨೦ನೇ ತಾ|| ರಿಂದ ಡಿ ಸುಬ್ಬಯ್ಯ ರಸ್ತೆಯಲ್ಲಿ, ಹಾರ್ಡ್ವಿಕ್ ಸ್ಕೂಲು ಹಿಂಭಾಗದಲ್ಲಿರುವ ೫೬೭/೩೬ನೇ ನಂಬರು ಮನೆಗೆ ವರ್ಗಾಯಿಸಲಾಗಿದೆ

ಏಪ್ರಿಲ್ ೧೭ನೇ ತಾ|| ಹೊಸಹಳ್ಳಿ ಗ್ರಾಮದ ಕುರುಬರ ಯುವಕನಾದ ಮಲ್ಲಬೀರೇಗೌಡರು ಮೃತರಾದ ಸಂಬಂಧವಾಗಿ ಮೊಕದ್ದಮೆಯನ್ನು ಹೂಡಲಾಗಿದ್ದಿತು

ಶಿಕ್ಷೆಗೆ ಗುರಿಯಾದವರು ಇವರುಗಳು:— ರಂಗನಾಯಕ, ದೊಡ್ಡ ಜವರನಾಯಕ, ಚಿಕ್ಕ ಜವರ ನಾಯಕ, ಬೆಟ್ಟ ನಾಯಕ, ಕರಿ ನಾಯಕ, ಮಾದ ನಾಯಕ, ನಂಜ ನಾಯಕ, ಮಾಸ್ತಿ, ರಾಮ ನಾಯಕ, ಲಕ್ಷ್ಮಣ ನಾಯಕ, ಮಾದ ನಾಯಕ, ವೆಂಕಟನಾಯಕ, ಚಿಕ್ಕ ಮಾದ ನಾಯಕ, ಪುಟ್ಟ ನಾಯಕ, ಜವರ ನಾಯಕ, ಚಿಕ್ಕ ನಾಯಕ, ಮಾದ, ಮಾದಯ್ಯ ಸಿದ್ದನಾಯಕ, ಮುದ್ದ ಬಸಪ್ಪ ಮತ್ತು ಬಸಪ್ಪ

ಬಿಡುಗಡೆಯಾದವರು:— ಅಂಗಡಿ ಸಿದ್ದ ನಾಯಕ, ಸಿದ್ದ ನಾಯಕ, ಜವರ ನಾಯಕ, ಮಾದ ನಾಯಕ, ವೀರ ನಾಯಕ ಟೋಪಿ ರಂಗ ನಾಯಕ, ಜವರ ನಾಯಕ, ಗೋಪಾಲಿ, ಸಿದ್ದ ನಾಯಕ, ಗೋವಿಂದ, ಗೋಪಾಲಿ ಮತ್ತು ಸಿದ್ದ ನಾಯಕ

THE MODEL TUTORIAL INSTITUTE

D Banumiah s School Building Mysore

Coaching Classes for the Supplementary S S L C Examination of September 1953 start working from about the 15th of the month

Admissions are made from 9 A M to 5 P M daily on all working days

B Seshagiri Rao, *Organiser*

D BANUMIAH'S COLLEGE OF COMMERCE, MYSORE

Applications for Admission to JUNIOR I COM class will be received upto 20th June 1953 Late Applications will be received upto 1st July 1953 with a Penal Fee of Re 1/- per day subject to a limit of Rs 5 0 0 Further particulars can be known from the prospectus which will be supplied on remittance of As 10

COACHING CLASSES

For Madras Matric, Ajmer Inter L S, S S L C (Sup Full Term Fees Rs 15/ to the poor) Sri Raghavendra Institute Kabir Road, Mysore

ರಾಜಕಮಲ್, ಮೈಸೂರು

13 6 53 ರಿಂದ ಅಮೋಘ 2 ನೇ ವಾರ ಮಹಾತ್ಮಾ ರವರ ಸಾಮಾಜಿಕ ಕನ್ನಡ ಚಿತ್ರ

ಸೌಭಾಗ್ಯ ಲಕ್ಷ್ಮಿ

ಪಾತ್ರ—ಹರಿಣಿ ಇಂದುಶೇಖರ್, ಮುಸ್ತಫಾ, ಸುಬ್ಬಣ್ಣ ಮುಂತಾದವರು

THE CITY TUTORIAL COLLEGE,

Vanivilas Road Mysore.

ADMISSIONS RECEIVED

For INTERMEDIATE Exams (Sept)

&

S S. L. C Exams (Sept)

Classes from 22nd June 1953

ಕ್ರಯಕ್ಕಿದೆ

ಡೋರ್ ನಂಬರ್ 59.

ಗೊಲ್ಲಗೇರಿ

ಈಗಲೇ ಸ್ವಾಧೀನ ಕೊಡಲಾಗುವುದು ಬೆಲೆ—ಸುಮಾರು 4,000 ರೂ ಗಳು

ವಿಚಾರಣೆಗೆ

ಜಯ ಅಂಡ್ ಕಂಪೆನಿ,

ಮನೆ ಜಮೀನು ಮಾರಾಟಗಾರರು, ಹಳೇ ಮೈಸೂರು ಬ್ಯಾಂಕ್ ಎದುರು, ಮೈಸೂರು

CHANGE OF ADDRESS

Our New Address is

PEOPLE'S BOOK HOUSE,

Opposite Jaganmohan Palace, Mysore

Expected Soon —

THE COLLECTED WORKS OF J. V STALIN (Vol. I)

Edited Printed and Published by A R. Nagarajan at Sadhvi Press, D. Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ, ಅಂಡ್ ಸನ್ಸ್, ಬ್ಯಾಂಕ್ ಎದುರು, ಮೈಸೂರು

ಫೋನ್ ನಂ 792 ‖ ವಂದೇ ಮಾತರಂ ‖ ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೫-೬-೧೯೫೪ [ಸಂಚಿಕೆ ೨೬೦

ಮದನಪಲ್ಲಿ ಬಳಿ ರೈಲು ಡಿಕ್ಕಿಯಾಗಿ ೫೦ ಮರಣ

ಮದನಪಲ್ಲಿ ಬಳಿ ರೈಲು ಡಿಕ್ಕಿಯಾಗಿ ೫೦ ಮರಣ

ಧರ್ಮಾವರಂ ಪಾಕಾಲಾ ನಡುವೆ ಇರುವ ರೈಲು ಮಾರ್ಗದಲ್ಲಿ ಮೊನ್ನೆ ರಾತ್ರಿ ಗೂಡ್ಸ್ ಮತ್ತು ಮಿಕ್ಸೆಡ್ ರೈಲು ಗಾಡಿಗಳಿಗೆ ಮುಲಕಲಚೆರವು ಮತ್ತು ಬತ್ತುಲಾಪುರಂ ಮಧ್ಯೆ ಡಿಕ್ಕಿಯಾಗಿ ಭಾರಿ ಪ್ರಮಾಣದ ಅನಾಹುತವಾಗಿ ೫೦ ಮಂದಿ ಪ್ರಯಾಣಿಕರು ಮೃತಪಟ್ಟಿರುತ್ತಾರೆ ೭೦ ಜನರಿಗೆ ಗಾಯಗಳಾಗಿವೆ ಎಲ್ಲರನ್ನೂ ಮದನಪಲ್ಲಿ ಆಸ್ಪತ್ರೆಗೆ ಸಾಗಿಸಲಾಗಿದೆ. ದಾರಿಯ ಸ್ಥಳದಲ್ಲೇ ಇಬ್ಬರು ಸತ್ತುಹೋದರು ರೈಲು ನಡೆಯುತ್ತಿದ್ದ ರಸ್ತೆ ಕೆಲವಡೆ ಮಡಿದಿದ್ದ ಗಾಡಿಗಳು ಮುರಿದು, ಅದರ ಭಾಗಗಳು ದೂರದೂರ ಬಿಸಾಡಲ್ಪಟ್ಟಿದ್ದುವು

ದಕ್ಷಿಣ ರೈಲಿನಲ್ಲಿ ಇಂತಹ ಭಾರಿ ನಾಹುತವು ಹಿಂದೆಂದೂ ಆಗಿರಲಿಲ್ಲ ಮೊನ್ನೆ ರಾತ್ರಿ ಆಕಾಶವು ಮೋಡದಿಂದ ಕೂಡಿ ಮಳೆಯು ಬರುತ್ತಿದ್ದಿತೆಂದೂ, ಗ್ಗತ್ತಲಾಗಿದ್ದಿತೆಂದೂ ಹೇಳಲಾಗಿದೆ ಗೂಡ್ಸ್ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬ ರೈಲ್ವೆ ನೌಕರನ ಅಪಾಯ ದಿಂದ ಪಾರಾಗಿ ಹತ್ತಿರದ ಸ್ಟೇಷನ್ನಿಗೆ ನಡೆದು ಹೋಗಿ ವರ್ತಮಾನ ಕೊಟ್ಟನೆಂದೂ ಆದರೆ ಟೆಲಿಫೋನ್ ಸೌಕರ್ಯವಿಲ್ಲದಿದ್ದ ಪ್ರಯುಕ್ತ ಅಲ್ಲಿಂದ ತಂತಿ ಮೂಲಕ ಕಳುಹಿಸಿದ ಸಮಾಚಾರವು ಮಾರನೆ ಮುಂಜಾನೆ ಮದ್ರಾಸಿಗೆ ತಲುಪಿತೆಂದೂ ಹೇಳಲಾಗಿದೆ

ಎರಡು ರೈಲುಗಳ ಇಂಜನ್ನುಗಳು ಒಂದರೊಳಗೆ ಒಂದು ಸೇರಿವೆ ರೈಲು ಕಂಬಿಗಳು ಕಿತ್ತುಹಾಕಲ್ಪಟ್ಟಿವೆ ಸತ್ತವರ ಶರೀರಗಳು ಕತ್ತರಿಸಲ್ಪಟ್ಟು ಒಬ್ಬರ ಶರೀರ ಮತ್ತೊಬ್ಬರದಕ್ಕೆ ಅಂಟಿಕೊಂಡು, ಪತ್ತೆ ಮಾಡುವುದೇ ಕಷ್ಟವಾಗಿದೆಯೆಂದೂ ಹೇಳಲಾಗಿದೆ ಸತ್ತವರೆಲ್ಲರೂ ಮೂರನೇ ತರಗತಿ ಪ್ರಯಾಣಿಕರು ರೈಲಿನಲ್ಲಿ ಎರಡನೇ ತರಗತಿ ಗಾಡಿಗಳು ಹೆಚ್ಚಾಗಿರಲಿಲ್ಲ ಒಂದನೇ ತರಗತಿ ಇಲ್ಲವೇ ಇಲ್ಲ

ಮುಲಕಚೆರವು ಸ್ಟೇಷನ್ ಮಾಸ್ಟರು ತಮ್ಮ ಕಛೇರಿಗೆ ಬೀಗ ಹಾಕಿಕೊಂಡು ಎಲ್ಲೋ ಹೊರಟುಹೋಗಿರುವರೆಂದು ಹೇಳಲಾಗುತ್ತಿದೆ ಒಬ್ಬ ಗಾರ್ಡ್ ಬದುಕಿರುವನೆಂದು ತಿಳಿದುಬಂದಿದೆ ಬೆಂಗಳೂರು ಸರ್ಕಲ್ ರೈಲ್ವೆ ಇನ್ಸ್‌ಪೆಕ್ಟರು ಘಟನೆ ಬಗ್ಗೆ ತನಿಖೆ ನಡೆಸಲಿರುವರು

ಗಾಡಿಗಳಿಗೆ ವಿಪರೀತ ನಷ್ಟ ಸಂಭವಿಸಿ, ಕುಪ್ಪೆಯಂತೆ ಬಿದ್ದಿರುವುದಾಗಿಯೂ, ಅವನ್ನು ಎತ್ತಲು ಅನೇಕ ಗಾಡಿಗಳನ್ನೂ, ಕ್ರೇನುಗಳನ್ನೂ ಅಲ್ಲಿಗೆ ಕಳುಹಿಸಲಾಗಿದೆಯೆಂದೂ ಗೊತ್ತಾಗಿದೆ

ಪ್ರಯಾಣಿಕರಲ್ಲಿ ಉಳಿದುಕೊಂಡಿರುವ ಕೃಷ್ಣಪ್ಪ ಎಂಬುವನು ಜೋಲುವ ಪ್ರಕಾಶ ಭಂಗಿ ಮಿಂಚು ಹೊಳೆದು, ನಂತರ ಗುಡುಗು ಬಂದ ಶಬ್ದವು ಕೇಳಿಸಿದಹಾಗೆ ಆಯಿತೆಂದೂ, ನಂತರ ಅವನು ಗಾಡಿಯಿಂದ ಹೊರಗೆ ಬಿಸಾಡಲ್ಪಟ್ಟು ನೆಲದ ಮೇಲೆ ಬಿದ್ದುದಾಗಿಯೂ, ಗೊತ್ತಾಗಿದೆ ಮೃತ ಶರೀರಗಳ ಮೇಲೆ ಟಾರು ದ್ರವ್ಯಗಳೂ ಸಹ ಉರುಳಿದುವೆಂದೂ ಅವನು ಹೇಳಿ, ಈ ಭಯಾನಕ ದೃಶ್ಯವನ್ನು ವರ್ಣಿಸಲು ಸಾಧ್ಯವಿಲ್ಲವೆಂದಿರುತ್ತಾನೆ ಧರ್ಮಾವರಂ-ಪಾಕಾಲಾ ನಡುವೆ ರೈಲು ಓಡಾಟವನ್ನೂ ನಿಲ್ಲಿಸಲಾಗಿದೆ

ಮೈ ಸುಟ್ಟು ಬಾಲಕಿಯ ಮರಣ

ಮೈಸೂರು ೧೫

ರಾಜಧಾನಿಯ ಶ್ರೀರಾಂಪೇಟೆಯಲ್ಲಿರುವ ದಿನಸಿ ವರ್ತಕರಾದ ಶ್ರೀ ವೆಂಕಟ ಚಲಪತಿ ಶೆಟ್ಟರ ಮಗಳು ವಿಜಯಲಕ್ಷ್ಮಿ ಎಂಬ ೫ ವರ್ಷದ ಬಾಲಕಿಯು ನೆನ್ನೆ ಮಧ್ಯಾಹ್ನ ಮೈ ಸುಟ್ಟುಕೊಂಡದರ ಪರಿಣಾಮವಾಗಿ ಇಂದು ಮುಂಜಾನೆ ಮೃತಪಟ್ಟಳು ಶ್ರೀ ಶೆಟ್ಟರು ತಮ್ಮ ಮನೆ ಮಹಡಿ ಮೇಲೆ ನೆನ್ನೆ ದೇವರ ಪೂಜೆ ಮಾಡಿ, ತಮ್ಮ ಕೆಲಸದ ಮೇಲೆ ಹೋದನಂತರ ಬಾಲಕಿಯು ಪ್ರಸಾದದ ಹೂಗಳನ್ನು ತೆಗೆದುಕೊಳ್ಳಲು ಹೋದಳೆಂದೂ, ಉಟ್ಟಿದ್ದ ಲಂಗಕ್ಕೆ ಆಕಸ್ಮಾತ್ ಹಣತೆಯ ದೀಪವು ತಗುಲಿ ಮೈ ಸುಟ್ಟು ಹುಡುಗಿಯು ಕೂಗಿ ಕೊಳ್ಳಲಾಗಿ, ಇತರರು ಬಂದು ಬೆಂಕಿಯನ್ನು ಆರಿಸಿದರೆಂದೂ ಗೊತ್ತಾಗಿದೆ ಮಧ್ಯಾಹ್ನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿತ್ತು ದೇವರಾಜಾ ಪೋಲೀಸರು ಮಹಜರು ಕ್ರಮ ನಡೆಸಿದರು

ದ್ಯೂತ ಗೃಹಕ್ಕೆ ಬೆಂಕಿ ಬಿದ್ದು ೭೦ ಜನರ ಮರಣ

ಬ್ರಿಜಲ್ಲಿನ ಸಮೀಪವೊಂದರ ಒಂದು ಜೂಜು ಕಟ್ಟೆಯಲ್ಲಿ ನೆನ್ನೆ ಆಕಸ್ಮಾತ್ ಬೆಂಕಿಯುಂಟಾಗಿ ೭೦ ಜನರು ಮಡಿದರೆಂದೂ, ೬೦ ಕ್ಕೂ ಮೇಲ್ಪಟ್ಟು ಮಂದಿ ತೀವ್ರ ಗಾಯಗೊಂಡರೆಂದೂ ವರದಿಯಾಗಿದೆ ಬೆಂಕಿಯು ಹರಡಿ ಜ್ವಾಲೆಯುಂಟಾದಾಗ ಆರ ಜು ತ್ತಾ ಮನೆಯ ಉಪ್ಪರಿಗೆಯಲ್ಲಿದ್ದ ಜನರು ಗಾಬರಿಯಿಂದ ಮಹಡಿ ಮೆಟ್ಟಲಿನಿಂದ ಕೆಳಕ್ಕೆ ಉರುಳಿದರೆಂದೂ, ಹಲವರು ಕಿಟಕಿಯಿಂದ ಕೆಳಕ್ಕೆ ಹಾರಿದರೆಂದೂ, ಆ ವೇಳೆಯಲ್ಲಿ ಹಲವರು ಪ್ರಬಲವಾದ ವಿದ್ಯುಚ್ಛಕ್ತಿ ತಂತಿ ಮೇಲೆ ಬಿದ್ದು ಮೃತಪಟ್ಟರೆಂದೂ ಹೇಳಲಾಗಿದೆ

★ ರಾಜಧಾನಿಯ ಮಂಡಿ ಮೊಹಲ್ಲಾ, ಚೌಡೇಶ್ವರಿ ಗುಡಿ ಬೀದಿಯಲ್ಲಿರುವ ಶ್ರೀ ಪೂಜಾರಿ ರಂಗಸ್ವಾಮಯ್ಯನವರ ಪುತ್ರ ಸಂಗೀತ ವಿದ್ವಾನ್ ರಾಮಕೃಷ್ಣ ಭಾಗವತರಿಗೆ ಶ್ರೀ ಬಟಿ ರಂಗಯ್ಯನವರ ಪುತ್ರಿ ಸೌ॥ ರಂಗಮ್ಮನ್ನು ಕೊಟ್ಟು ಈ ದಿನ ವಿವಾಹವಾಯಿತು

ಕೊರಿಯಾ ಒಪ್ಪಂದಕ್ಕೆ ಸಿಂಗ್ಮನ್ ರ್ಹೀ ವಿರೋಧವಿಲ್ಲ

ಕೊರಿಯಾ ಯುದ್ಧ ನಿಲುಗಡೆ ಬಗ್ಗೆ ನಡೆಯುತ್ತಿರುವ ಒಪ್ಪಂದದ ಷರತ್ತುಗಳನ್ನು ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ವಿರೋಧಿಸುವುದಿಲ್ಲವೆಂದು ತಿಳಿದುಬಂದಿದೆ ಅವುಗಳನ್ನು ಉಲ್ಲಂಘಿಸಿ ಅವರು ಉತ್ತರ ಕೊರಿಯಕ್ಕೆ ಸೈನ್ಯವನ್ನು ಕಳುಹಿಸುವುದಿಲ್ಲವೆಂದೂ ಮತ್ತು ಒಪ್ಪಂದವಾದ ನಂತರ ದಕ್ಷಿಣ ಕೊರಿಯದ ಸೈನ್ಯಗಳನ್ನು ಸಂಯುಕ್ತ ರಾಷ್ಟ್ರ ಸೈನ್ಯಾಧಿಪತ್ಯಕ್ಕೆ ವಹಿಸಲು ಅವರು ಒಪ್ಪಿರುವರೆಂದೂ ಹೇಳಲಾಗಿದೆ. ಆದರೆ ದಕ್ಷಿಣ ಮತ್ತು ಉತ್ತರ ಕೊರಿಯಗಳನ್ನು ಐಕ್ಯಗೊಳಿಸದಿರುವಂತಹ ಒಪ್ಪಂದವನ್ನು ಅವರು ಅನುಮೋದಿಸುವುದಿಲ್ಲವೆಂದೂ ತಿಳಿದುಬಂದಿದೆ.

ರಷ್ಯಾ ನೀತಿ ಬಗ್ಗೆ ನೆಹರೂ ಹೇಳಿಕೆ

ರಷ್ಯದ ನೀತಿಯಲ್ಲಿ ಗಣನೀಯವಾದಂತಹ ಬದಲಾವಣೆಗಳಾಗಿರುವುದಾಗಿಯೂ, ರಷ್ಯಕ್ಕೆ ಈಗ ಶಾಂತಿಯು ಬೇಕಾಗಿರುವುದೆಂದೂ ಪ್ರಧಾನಿ ನೆಹರೂರವರು ಮೊನ್ನೆ ಲಂಡನ್ನಿನಲ್ಲಿ ಟೆಲಿವಿಷನ್ ಮೂಲಕ ಪ್ರಸಾರ ಭಾಷಣ ಮಾಡಿ ತಿಳಿಸಿರುತ್ತಾರೆ. ಭಾರತಕ್ಕೆ ಕಮ್ಯೂನಿಸ್ಟರ ಅಥವಾ ಬೇರೆಯವರಿಂದ ಆಕ್ರಮಣ ಭೀತಿಯಿಲ್ಲವೆಂದೂ, ಚೀನಾವನ್ನು ವಿಶ್ವಸಂಸ್ಥೆಗೆ ಸೇರಿಸದಿರುವುದು ವಕ್ರತನವೆಂದೂ ಅವರು ಹೇಳಿರುತ್ತಾರೆ ಕಾಮನ್‌ವೆಲ್ತ್ ಸಮ್ಮೇಳನಕ್ಕೆ ಈಗ ಸಕಾಲವಾಗಿರುವುದೆಂದೂ ಅವರು ಹೇಳಿರುವರು

ನೆಹರೂ-ಸೇನಾನಾಯಕೆ ಸಂಧಾನ ವಿಫಲ

ಭಾರತ ಮತ್ತು ಸಿಂಹಳಗಳ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಪಂಡಿತ ನೆಹರೂ ಮತ್ತು ಸೇನಾನಾಯಕೆ ಯವರಿಗೆ ಲಂಡನ್ನಿನಲ್ಲಿ ನಡೆದ ಮಾತುಕತೆಗಳು ವಿಫಲವಾದುವೆಂದು ಕೊಲಂಬೋವಿನ ಪತ್ರಿಕೆಯೊಂದು ವರದಿ ಮಾಡಿದೆ ಅಲ್ಲಿರುವ ಭಾರತೀಯರ ನಾಗರಿಕ ಹಕ್ಕಿನ ಸಂಬಂಧವಾಗಿ ಉಭಯ ಪ್ರಧಾನಿಗಳೂ ಮಾತುಕತೆ ನಡೆಸುತ್ತಿದ್ದರು.

ಪಂಚವಾರ್ಷಿಕ ಯೋಜನೆಗೆ ವಿಜ್ಞಾನಿಗಳ ಅವಶ್ಯಕತೆ

ಕೇಂದ್ರ ನೀರಾವರಿ ಬೋರ್ಡಿನ ಅಧ್ಯಕ್ಷ ಸೇಠಿಯವರ ಭಾಷಣ

(ಸ್ವಂ ಸು ಶೋ॥) ಬೆಂಗಳೂರು ೧೫

ಇಲ್ಲಿನ ಸರಕಾರಿ ವಿಜ್ಞಾನ ಶಾಲೆಯಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಕೇಂದ್ರ ಬೋರ್ಡಿನ ಅಧ್ಯಕ್ಷರಾದ ಶ್ರೀ ಕನ್ವರ್ ಸೇಠಿಯವರು ನಡುವಿನ ಸಂಶೋಧನಾ ಕಾರ್ಯಕರ್ತರ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿದರು ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸಲು ವಿಜ್ಞಾನಿಗಳು ಮತ್ತು ಸಂಶೋಧನಾ ಕಾರ್ಯಕರ್ತರ ಅವಶ್ಯಕತೆಯನ್ನು ಅವರು ಒತ್ತಿಹೇಳಿದರು ಯೋಜನೆಗೆ ಹೆಚ್ಚುಹೆಚ್ಚಾಗಿ ಇಂಜನಿಯರುಗಳು ಬೇಕೆಂದೂ, ಆದರೆ ಈಗಿನ ಅವಶ್ಯಕತೆಗಳಿಗೆ ಸಾಕಾದಷ್ಟು ಇಂಜನಿಯರಿಂಗ್ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿರುವರೆಂದೂ ಅವರು ಹೇಳಿದರು ವರ್ಷಕ್ಕೆ ೨,೦೦೦ ವಿದ್ಯಾರ್ಥಿಗಳು ಇಂಜನಿಯರಿಂಗ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಿರುವುದಾಗಿಯೂ ಅವರು ಹೇಳಿದರು

ಕೆ ಸಿ. ರೆಡ್ಡಿಯವರ ಆಗಮನ

ಕೇಂದ್ರ ಸರ್ಕಾರದ ಉತ್ಪಾದನಾ ಮಂತ್ರಿ, ಶ್ರೀ ಕೆ ಸಿ ರೆಡ್ಡಿಯವರು ನಾಳೆ ಇಲ್ಲಿಗೆ ಆಗಮಿಸಿ, ಒಂದು ವಾರ ಸಂಸ್ಥಾನದಲ್ಲಿರುವರೆಂದು ತಿಳಿದುಬಂದಿದೆ

○ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸರಕಾರಿ ವಿಜ್ಞಾನ ಶಾಲೆಯಲ್ಲಿ ಸಿವಿಲ್ ಮತ್ತು ಹೈ ವೋಲ್ಟೇಜ್ ಲ್ಯಾಬೊರೇಟರಿಯ ಆರಂಭೋತ್ಸವವನ್ನು ಇಂದು ನೆರವೇರಿಸಿದರು

ಕೊಲಂಬಿಯದಲ್ಲಿ ರಕ್ತಪಾತವಿಲ್ಲದ ಕ್ರಾಂತಿ

ಕೊಲಂಬಿಯದಲ್ಲಿ "ರಕ್ತಪಾತವನ್ನು ತಪ್ಪಿಸುವುದಕ್ಕಾಗಿ" ಅಲ್ಲಿನ ಪ್ರಧಾನ ಸೇನಾಪತಿ ರೋಜಾಸ್ ಪಿನಿಲಾರವರು ಅಧಿಕಾರ ಸೂತ್ರವನ್ನು ಕೈಗೆತ್ತಿಕೊಂಡು ತಾವೇ ರಾಷ್ಟ್ರದ ಅಧ್ಯಕ್ಷರಾಗಿ, ನಾಗರಿಕರು ಮತ್ತು ಸೈನ್ಯದವರು ಕೂಡಿದ ಸರ್ಕಾರವನ್ನು ಏರ್ಪಡಿಸಿರುತ್ತಾರೆ

ರೋಸೆಂಬರ್ಗರಿಗೆ ಶಿಕ್ಷೆ ವಿಧಿಸಿದ ಜಡ್ಜರ ಪ್ರಾಣಕ್ಕೆ ಸಂಚಕಾರ?

ಅಣು ರಹಸ್ಯವನ್ನು ರಷ್ಯಕ್ಕೆ ಬಯಲು ಮಾಡಿದ ಅಪರಾಧಕ್ಕಾಗಿ ಅಮೆರಿಕದ ರೋಸೆನ್‌ಬರ್ಗ್ ದಂಪತಿಗಳನ್ನು ಮರಣ ಶಿಕ್ಷೆಗೆ ಗುರಿಪಡಿಸಿದ ನ್ಯಾಯಾಧೀಶ ಇರ್ವಿಂಗ್ ಕಾಫ್‌ಮನ್‌ರವರ ಪ್ರಾಣಾಪಹರಣದ ಬಗ್ಗೆ ಅವರಿಗೆ ಬೆದರಿಕೆ ಪತ್ರಗಳು ಬಂದಕಾರಣ ನ್ಯೂಯಾರ್ಕಿನಲ್ಲಿ ನೆನ್ನೆ ಅವರ ಭವನವನ್ನೂ ಮತ್ತು ಅಕ್ಕಪಕ್ಕದ ಮನೆ ಅವರಣವನ್ನೂ ಶೋಧಿಸಿದರೆಂದು ವರದಿಯಾಗಿದೆ

ವಿವಾಹ ಮಹೋತ್ಸವ

ರಾಜಧಾನಿಯ ಅಗ್ರಹಾರದ ... ಶ್ರೀ ... ಸುಬ್ಬರಾಯರು ... ಪುತ್ರಿಯ ... ಶ್ರೀ ... ರಾಯರ ... ಶ್ರೀ ... ... ವರ ಪುತ್ರ ... ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು.

ಡಾ|| ಪಟ್ಟಾಭಿ ಕೇಂದ್ರ ಸರ್ಕಾರಕ್ಕೆ

ಆಂಧ್ರ ಪ್ರಾಂತ ನಿರ್ಮಾಣದ ಸಂಬಂಧವಾಗಿ, ಹೊಸ ಪ್ರಾಂತಕ್ಕೂ ಕೇಂದ್ರಕ್ಕೂ ನಡುವೆ, ವ್ಯವಹಾರಗಳು ಸುಗಮವಾಗಿ ನಡೆಯುವಂತೆ ಮಾಡಲು, ಕೇಂದ್ರ ಮಂತ್ರಿ ಮಂಡಲಕ್ಕೆ ಮಧ್ಯಪ್ರದೇಶದ ಗೌರ್ನರ್ ಡಾ|| ಪಟ್ಟಾಭಿಯವರನ್ನು ತೆಗೆದುಕೊಳ್ಳುವಂತೆ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಬಲವಂತರಾಯ್ ಮೆಹತಾರವರು ಸಲಹೆ ಮಾಡಿರುತ್ತಾರೆಂದು ಗೊತ್ತಾಗಿದೆ

ಮಂಡ್ಯಕ್ಕೆ ಸಿ. ಪಿ ರಾಮಸ್ವಾಮಿ ಅಯ್ಯರ್ ಭೇಟಿ

ತಿರುವಾಂಕೂರಿನ ಮಾಜಿ ದಿವಾನರೂ ಮತ್ತು ರೋಟರಿ ಗೌರ್ನರೂ ಆದ ಡಾ|| ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ನಾಳದ್ದು ಮಂಡ್ಯಕ್ಕೆ ಆಗಮಿಸಿ, ಅಲ್ಲಿನ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ನಡೆಯಲಿರುವ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವರು

ರೈಲ್ವೆ ಫೆಡರೇಷನ್ ಅಧಿವೇಶನ ಮುಂದಕ್ಕೆ ಹಾಕಲು ಕೋರಿಕೆ

ರಾಜಧಾನಿಯಲ್ಲಿ ಈ ತಿಂಗಳು ೨೫ ನೇ ತಾ|| ನಡೆಯಬೇಕಾಗಿರುವ ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ನಿನ ಕೂಟವನ್ನು ಜೂಲೈ ತಿಂಗಳು ೫ ನೇ ತಾ|| ಗೆ ಮುಂದ ವರಿಸುವಂತೆ ಇಲ್ಲಿನ ರೈಲ್ವೆ ನೌಕರರ ಸಂಘದ ಕಾರ್ಯದರ್ಶಿಯು ಅಖಿಲ ಭಾರತ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರನ್ನು ಕೋರಿರುತ್ತಾರೆ ಇಲ್ಲಿನ ಸಂಘದ ಸದಸ್ಯರು ತಿರುಚಿರಾಪಳ್ಳಿಯ ಬಳಿ ಗೋಲ್ಡನ್‌ರಾಕಿನಲ್ಲಿ ಇದೇ ತಿಂಗಳು ೧೯ ರಿಂದ ೨೮ ರ ವರೆಗೆ ನಡೆಯಲಿರುವ ದಕ್ಷಿಣ ರೈಲ್ವೆ ಸಂಘದ ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿರುವುದೇ ಈ ಕೋರಿಕೆಗೆ ಕಾರಣವೆಂದು ತಿಳಿಸಲಾಗಿದೆ

ಮಹಾರಾಜರಿಂದ ಕಛೇರಿ ಕಟ್ಟಡದ ಶಿಲಾ ಸ್ಥಾಪನೆ

ಬೆಂಗಳೂರಿನ ರೆಸಿಡೆನ್ಸಿ ಪಾರ್ಕಿನಲ್ಲಿ ಕಟ್ಟಲಾಗುವ ಅಕೌಂಟೆಂಟ್ ಜನರಲ್ಲರ ಕಛೇರಿಯ ಶಂಕು ಸ್ಥಾಪನಾ ಮಹೋತ್ಸವವನ್ನು ಇದೇ ತಿಂಗಳು ೨೦ ನೇ ತಾ|| ಶ್ರೀಮನ್ ಮಹಾರಾಜರು ನೆರವೇರಿಸುವರು

ಶಿಕ್ಷಣ ತರಗತಿಗಳು

ರಾಜಧಾನಿಯ ದಿ ಸಬ್ಬಯ್ಯ ರಸ್ತೆಯ ಕ್ಲಬ್ ... ನೇ ನಂಬರು ಮನೆಯಲ್ಲಿ (ಶ್ರೀನಿವಾಸ ...) ಪ್ರೈಮರಿ ಮಿಡಲ್ ಮತ್ತು ಹೈಸ್ಕೂಲು ತರಗತಿಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಿದೆ. ಅಲ್ಲದೆ ಟಿ. ಸಿ ಮತ್ತು ಸಂಗೀತ ಪರೀಕ್ಷೆಗಳ ತರಗತಿಗಳನ್ನೂ ನಡೆಸುವುದು ಮತ್ತು ... ಹೆಂಗಸರಿಗೆ ಶಿಕ್ಷಣಕ್ಕಾಗಿ ಬೇರೆ ಕಾಲಗಳನ್ನೂ ನಡೆಸಲಾಗುತ್ತೆ. ವಿದ್ಯಾರ್ಥಿಗಳೂ ಮತ್ತು ಮಹಾಜನರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ, ಹೆಚ್ಚು ವಿವರಗಳಿಗೆ ಮೇಲ್ಕಂಡ ಮಂದಿರದಲ್ಲಿ ವಿಚಾರಿಸಬಹುದು.

Edited, Printed and Published by A. R. Nagarajan at Sadhvi Press, D. Subbaiah Road Mysore

ಆನೆಯಿಂದ ರಕ್ಷಕನ ಕೊಲೆ

ಅಸ್ಸಾಂ ಸರ್ಕಾರದ ಅರಣ್ಯ ಇಲಾಖೆಯವರು ಕೆಲಸಕ್ಕಾಗಿ ಇಟ್ಟುಕೊಂಡಿರುವ ಅಕ್ಬರ್ ಎಂಬ ಭಾರಿ ಗಂಡಾನೆಯು, ತನ್ನ ರಕ್ಷಕನು ತನಗೆ ಸಲ್ಲಬೇಕಾದ ಪೂರ್ಣ ಆಹಾರ ಪದಾರ್ಥವನ್ನು ಕೊಡದಿದ್ದುದಕ್ಕಾಗಿ ಅವನನ್ನು ಕೊಂದುಹಾಕಿರುತ್ತದೆ. ಈ ಬಗ್ಗೆ ವಿಚಾರಣೆಯು ನಡೆದು, ಕೆಲವು ಕಾಲದಿಂದಲೂ ರಕ್ಷಕನು ಅದಕ್ಕೆ ಸರಿಯಾಗಿ ಆಹಾರ ಒದಗಿಸದೆ, ಆಗಾಗ್ಗೆ ಆನೆಯು ತನ್ನ ಅಸಂತುಷ್ಟಿಯನ್ನು ವ್ಯಕ್ತಪಡಿಸುತ್ತಿದ್ದುದು ಗೊತ್ತಾಯಿತು

ಜನ್ಮದಿನೋತ್ಸವ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ರಾಘವೇಂದ್ರಸ್ವಾಮಿಗಳ ಜಯಂತ್ಯುತ್ಸವದ ಅಂಗವಾಗಿ ಈ ಬೆಳಗ್ಗೆ ಅಭಿಷೇಕ, ಅರ್ಚನೆ, ಉತ್ಸವ ಇತ್ಯಾದಿಗಳ ನಡೆದುವು ಸಂಜೆ ೬ ಗಂಟೆಗೆ ವೇಣುಗಾನ ಪ್ರವೀಣ ಪಲ್ಲಡಂ ನಾಗರಾಜರಾವ್ ಮತ್ತು ಪಾರ್ಟಿಯವರಿಂದ ವೇಣುವಾದನವು ಏರ್ಪಾಡಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ಮಿ ಅನಂತರಾಮನ್, ವೀಣೆ ಮಧ್ಯಾಹ್ನ ೧ ೪೦ ಕೊಳಲು ೨ ಎಂ ಓ ನಾಗಮುತ್ತು ಹಿಂದೂಸ್ತಾನಿ ಸಂಗೀತ ಸಂಜೆ ೫ ೪೦ ಮತ್ತು ೮ ೪೦ ಆರ್ ಆರ್ ಚಂದ್ರಸಿಂಗ್ ಸಂಗೀತ ೬ ೧೦ ಗಾನ ವಿಹಾರ ೮.೪೦ ಮಿಲರ್ ಶ್ರೀನಿವಾಸರಾವ್, ಕಥಾ ಕಾಲಕ್ಷೇಪ ೭ ಎಂ ಓ ನಾಗಮುತ್ತು, ಹಿಂದೂಸ್ತಾನಿ ಸಂಗೀತ ೭ ೪೦ ಕೆ ವಾಸುದೇವಾಚಾರ್ಯ ಮತ್ತು ಆರ್ ಎಸ್ ದೊರೆಸ್ವಾಮಿ, ಕನ್ನಡದಲ್ಲಿ ಚರ್ಚೆ ೯ ೧೫ ಇಂಗ್ಲಿಷ್ ಭಾಷಣ ೯ ೪೦ ಡಿ ಕೆ ಪಟ್ಟಮ್ಮಾಳ್, ರಿಕಾರ್ಡ್

COACHING CLASSES

For Madras Matric, Ajmer Inter, L. S., S.S L C (Sup Full Term Fees Rs. 15/- to the poor). Sri Raghavendra Institute, Kabir Road, Mysore.

ಪೂನಾ ಮುಷ್ಕರದ ಮುಕ್ತಾಯ

ಕಳೆದ ೧೩ ದಿನಗಳಿಂದ ಪೂನಾ ಬಳಿ ದೇಹೂ ರಸ್ತೆಯ ಮದ್ದುಗುಂಡು ತಯಾರಿಕಾ ಕಾರ್ಖಾನೆ ಕಾರ್ಮಿಕರು ಹೂಡುತ್ತಿದ್ದ ಮುಷ್ಕರವನ್ನು ನೆನ್ನೆಯಿಂದ ಮುಕ್ತಾಯ ಮಾಡಲಾಗಿದೆ ಸಿವಿಲ್ ಅಧಿಕಾರಿಗಳು ಪ್ರತಿಬಂಧಕಾಜ್ಞೆಗಳನ್ನು ಜಾರಿ ಮಾಡಿ, ಮುಷ್ಕರವನ್ನು ಒಡೆಯುವುದರಲ್ಲಿ ಮಿಲಿಟರಿಯವರಿಗೆ ಸಹಾಯಕರಾಗಿ, ಮುಷ್ಕರದ ಬಗ್ಗೆ ಕಾರ್ಮಿಕರೆಲ್ಲರ ಅಭಿಪ್ರಾಯವನ್ನು ಪ್ರಜಾ ಸತ್ತಾತ್ಮಕ ರೀತಿಯಲ್ಲಿ ತಿಳಿದುಕೊಳ್ಳಲು ಸಾಧ್ಯವಾಗದಿರುವುದೇ ಮುಷ್ಕರ ಮುಕ್ತಾಯಕ್ಕೆ ಕಾರಣವೆಂದು ಅವರ ಮುಖಂಡರಾದ ಎಸ್ ಎಂ ಜೋಷಿಯವರು ತಿಳಿಸಿರುವರು

ಪಟಾಕಿ ಮದ್ದು ಸಿಡಿದು ಮೂವರ ಮರಣ

ನಾಗಪುರದಲ್ಲಿ ಒಂದು ಸಂಸಾರದ ಆರು ಜನರು ಪಟಾಕಿ ಮಾಡುತ್ತಾ ಕುಳಿತಿದ್ದಾಗ, ಅವರ ಪೈಕಿ ಒಬ್ಬನು ಸಿಗರೇಟ್ ಸೇದಿದ ತುಂಡನ್ನು ಬಿಸಾಡಲು ಅದರ ಬೆಂಕಿಯು ಪಕ್ಕದಲ್ಲಿದ್ದ ಮದ್ದಿಗೆ ತಗುಲಿ ಭಾರಿ ಆಸ್ಫೋಟನೆಯಾಗಿ ಮೂವರು ಸ್ಥಳದಲ್ಲೇ ಮಡಿದರೆಂದೂ, ಇತರ ೩ ಜನರು ತೀವ್ರ ಗಾಯಗೊಂಡರೆಂದೂ ಗೊತ್ತಾಗಿದೆ

ಕ್ರಯಕ್ಕಿದೆ

ಡೋರ್ ನಂಬರ್ 59.

ಗೊಲ್ಲಗೇರಿ

ಕೂಡಲೇ ಸ್ವಾಧೀನ ಕೊಡಲಾಗುತ್ತದೆ.

ಬೆಲೆ—ಸುಮಾರು 4,000 ರೂ. ಗಳು.

ವಿವರಗಳಿಗೆ:—

ಜಯ ಅಂಡ್ ಕಂಪೆನಿ,

ಮನೆ ಜಮೀನು ಮಾರಾಟಗಳ ಏಜಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು

ಕೊರಿಯಾ ಖೈದಿ ವಾಪಸಿನ ಸಮಿತಿಯಲ್ಲಿರಲು ಒಪ್ಪಿಗೆ

ಕೊರಿಯಾ ಯುದ್ಧ ಖೈದಿಗಳನ್ನು ಸ್ವದೇಶಗಳಿಗೆ ಹಿಂತಿರುಗಿಸುವ ಸಂಬಂಧವಾಗಿ ಏರ್ಪಾಡಾಗುವ ಸಮಿತಿಯಲ್ಲಿರಲು ಭಾರತ, ಸ್ವೀಡನ್, ಸ್ವಿಟ್ಸರ್ಲೆಂಡ್, ಜೆಕೊಸ್ಲೊವೇಕಿಯಾ ಮತ್ತು ಪೋಲೆಂಡುಗಳು ಒಪ್ಪಿವೆ

ಪ್ರಥಮ ದರ್ಜೆ ಕಾಲೇಜಿನಲ್ಲಿ ಸಿ. ಬಿ. ಜೆಡ್. ವ್ಯಾಸಂಗಕ್ಕೆ ಅವಕಾಶ ಬೇಕು

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ಬಿ. ಎಸ್‌ಸಿ ತರಗತಿಗಳಲ್ಲಿ ಸಿ. ಬಿ. ಜೆಡ್ ವಿಭಾಗವನ್ನು ತೆರೆಯುವಂತೆ ನಗರದಲ್ಲಿರುವ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಹೇಳುತ್ತಲೇ ಒಂದಿರುತ್ತಾರೆ ಸೇಂಟ್ ಫಿಲೊಮಿನಾ ಕಾಲೇಜಿನಲ್ಲಿ ಮಾತ್ರ ಈ ವಿಭಾಗಕ್ಕೆ ಅವಕಾಶವಿದೆ ನಗರದಿಂದ ದೂರವಿರುವ ಈ ಕಾಲೇಜಿಗೆ ಹೋಗಲು ಅನೇಕ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಅಲ್ಲದೆ ಅಲ್ಲಿ ಈ ವಿಭಾಗದ ಸ್ಥಾನಗಳೂ ಮಿತವಾಗಿವೆ ಬಿ ಎಸ್‌ಸಿ ಯಲ್ಲಿ ವ್ಯಾಸಂಗಕ್ಕೆ ಅವಕಾಶವಿರುವ ೧ನೇ ದರ್ಜೆ ಕಾಲೇಜು ಮತ್ತು ಮಹಾರಾಣಿ ಕಾಲೇಜುಗಳ ಪೈಕಿ, ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರು ವಿಜ್ಞಾನ ವಿಷಯಗಳ ಪ್ರಾಕ್ಟಿಕಲ್ ವರ್ಕ್ ಸಂಬಂಧವಾಗಿ ೧ನೇ ದರ್ಜೆ ಕಾಲೇಜಿಗೆ ಹೋಗಬೇಕಾಗಿದೆ. ಆದುದರಿಂದ ಬಿ ಎಸ್‌ಸಿ.ಯ ಸಿ ಬಿ.ಜೆಡ್ ನ ಪ್ರಾಮುಖ್ಯತೆಯನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯದವರು ಪರಿಗಣಿಸಿ ಈ ವರ್ಷದಿಂದಲೇ ಆ ವಿಭಾಗವನ್ನು ಎರಡು ಕಾಲೇಜುಗಳಲ್ಲೂ ತೆರೆಯಬೇಕಾದುದು ಅವಶ್ಯಕ

—ವಿದ್ಯಾರ್ಥಿಗಳ ಒಕ್ಕೂಟ

ನಗರಾಭಿವೃದ್ಧಿ ಸಮಿತಿ, ಮೈಸೂರು

ತಾ|| 2-6-1953

ಪ್ರಕಟಣೆ

—:o:—

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಸರಸ್ವತಿಪುರಂ ಬಡಾವಣೆಯಲ್ಲಿ 42 ನೇ ನಂಬರು ಸೈಟಿನಲ್ಲಿ ಕಟ್ಟಿಸಿರುವ ಒಂದು ಮಾದರಿ ಮನೆ ವಿಲೆ ಬಗ್ಗೆ ತಾರೀಖು 22-6-53ನೇ ಸೋಮವಾರ ಮಧ್ಯಾಹ್ನ 3 ಗಂಟೆ ವರೆವಿಗೆ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ವಿಧಾಯಕವಾದ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ ಮನೆ ಬೆಲೆ 10,000 ರೂಪಾಯಿಗಳು ಮನೆಯ ಬೆಲೆಯ ನಾಲ್ಕನೇ ಒಂದು ಭಾಗವನ್ನು, ಅಂದರೆ 2,500 ರೂಪಾಯಿಗಳನ್ನು ಟ್ರಸ್ಟ್ ಬೋರ್ಡ್ ಖಜಾನೆಗೆ ಅಡ್ವಾನ್ಸಾಗಿ ಪಾವತಿ ಮಾಡಿ, ಮನೆಗೆ ಅರ್ಜಿ ಹಾಕಿಕೊಳ್ಳತಕ್ಕದ್ದು ತಮಗೆ ಮನೆ ಮಂಜೂರಾದಲ್ಲಿ ಆಗಾಯಿತು ಒಂದು ತಿಂಗಳಲ್ಲಿ ಬಾಕಿ ಮೊಬಲಗನ್ನು ಪೂರ್ತಾ ಪಾವತಿ ಮಾಡಿ ಮನೆಯನ್ನು ಸ್ವಾಧೀನ ಪಡೆಯತಕ್ಕದ್ದು ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ರುಜು) ಎಸ್. ಲಿಂಗಣ್ಣ,

ಅಧ್ಯಕ್ಷರು

City Municipal office,

C2 Adv 5/53-54 Mysore, Dated 11-6-53

NOTIFICATION

Notice is hereby given to the inhabitants of the Municipality of Mysore that the Municipal Council desire to amend the bye-law relating to dangerous and offensive trades so as to enlarge the item No 8 under bye-law No. 3(b) of Chapter XXIV of the Mysore City Municipal Rules & Bye-laws as follows:-

8 Manufacturing oil by boiling, melting tallow or preparing any cooking medium by mixing or otherwise any oil, ghee, tallow or fat or any other similar material

Any inhabitant of the Municipality objecting to the proposed amendment may within one month from the date of this notice send his objections in writing to the Municipal Council

(Sd) N. LAKSHMAN RAU,

Municipal Commissioner.

ರೀಜಿ ನಂ. 792 || ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೬-೬-೧೯೫೩ [ಸಂಚಿಕೆ ೨೬೧

ಬಳ್ಳಾರಿ ಕನ್ನಡಿಗರ ಮೇಲೆ ದೌರ್ಜನ್ಯ

ಅಮೆರಿಕಕ್ಕೆ ಲೆಕ್ಚರರಾಗಿ ಡಾ॥ ಎಂ ಎಚ್. ಗೋಪಾಲ್

ಮೈಸೂರು ೧೬

ಮೈಸೂರು ವಿಶ್ವವಿದ್ಯಾಲಯದಲ್ಲಿ ಎಕನಾಮಿಕ್ಸ್ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದು ಈಗ ಹೈದರಾಬಾದಿನಲ್ಲಿರುವ ಡಾ॥ ಎಂ ಎಚ್ ಗೋಪಾಲ್‌ರವರಿಗೆ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ವಿಸಿಟಿಂಗ್ ಲೆಕ್ಚರರ್ ಹುದ್ದೆಗೆ ಆಹ್ವಾನವನ್ನು ಕೊಡಲಾಗಿದೆ

ಉರಿಗಾಂ ಗಣಿ ಕಾರ್ಮಿಕರ ಭವಿಷ್ಯದ ಬಗ್ಗೆ ಒಪ್ಪಂದ

ಉರಿಗಾಂ ಚಿನ್ನದ ಗಣಿಯನ್ನು ಮುಚ್ಚುವುದರಿಂದ ನಿರುದ್ಯೋಗಿಗಳಾಗುವ ಸುಮಾರು ೩,೫೦೦ ಮಂದಿ ಕಾರ್ಮಿಕರ ಭವಿಷ್ಯದ ಬಗ್ಗೆ ಕಾರ್ಮಿಕರ ಪ್ರತಿನಿಧಿಗಳಿಗೂ, ಗಣಿ ಆಡಳಿತ ವರ್ಗದವರಿಗೂ ಒಂದು ಒಪ್ಪಂದವಾಗಿರುವುದೆಂದೂ, ಅದರ ಪ್ರಕಾರ ಎಲ್ಲ ಉದ್ಯೋಗಿಗಳನ್ನೂ ನಿವೃತ್ತಿಗೊಳಿಸುವ ಬಗ್ಗೆ ಪೂರ್ವಭಾವೀ ನೋಟೀಸು ಕೊಡಲಾಗುವುದೆಂದೂ, ಕೋಲಾರದ ಇತರ ಗಣಿಗಳಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಈಗ ನಿವೃತ್ತಿಗೊಳಿಸಲ್ಪಟ್ಟವರನ್ನು ಮೊದಲು ತೆಗೆದುಕೊಳ್ಳುವ ಬಗ್ಗೆ ಪ್ರಾಶಸ್ತ್ಯವೀಯಲಾಗುವುದೆಂದೂ ಗೊತ್ತಾಗಿದೆ

ರೈಲು ದುರಂತದಲ್ಲಿ ಸತ್ತವರ ಸಂಖ್ಯೆ ೬೪ಕ್ಕೆ ಏರಿತು

ಕಳೆದ ಶನಿವಾರ ರಾತ್ರಿ ಮದನಪಲ್ಲಿ ಬಳಿ ನಡೆದ ರೈಲ್ವೆ ದುರ್ಘಟನೆಯಲ್ಲಿ ಸತ್ತವರ ಸಂಖ್ಯೆಯು ೬೪ಕ್ಕೆ ಏರಿರುತ್ತದೆ ಈ ಘಟನೆ ನಡೆದ ಸ್ಥಳವು ಒಂದು ತಿರುವಿನಲ್ಲಿದ್ದು ಎರಡು ಕಡೆಗಳಿಂದಲೂ ಇಳಿಜಾರಿದ್ದುದರಿಂದ ಈ ರೀತಿಯ ಅನಿರೀಕ್ಷಿತ ಮತ್ತು ಅವರ್ಣನೀಯ ದುರಂತವು ಸಂಭವಿಸಿತೆಂದು ದಕ್ಷಿಣ ರೈಲ್ವೆಗಳ ಜನರಲ್ ಮ್ಯಾನೇಜರರಾದ ಶ್ರೀ ಜೋಸೆಫ್‌ರವರು ತಿಳಿಸಿದ್ದಾರೆ. ರೈಲಿನಲ್ಲಿ ರವಾನಿಸಲಾಗುತ್ತಿದ್ದ ಗೂಡ್ಸ್ ಸಾಮಾನುಗಳೆಲ್ಲವೂ ಸುರಕ್ಷಿತವಾಗಿರುವುದಾಗಿಯೂ, ಇದುವರೆಗೆ ಆಗಿರುವ ನಷ್ಟವು ಸುಮಾರು ಒಂದು ಲಕ್ಷ ರೂ. ಎಂದು ಅಂದಾಜು ಮಾಡಲಾಗಿರುವುದೆಂದೂ ಗೊತ್ತಾಗಿದೆ. ರಂಜಾನ್ ಹಬ್ಬವನ್ನು ಮುಗಿಸಿಕೊಂಡು ಹಿಂತಿರುಗುತ್ತಿದ್ದ ಅನೇಕರು ಈ ಅಪಘಾತಕ್ಕೆ ಸಿಕ್ಕಿರುತ್ತಾರೆಂದು ಹೇಳಲಾಗಿದೆ

ಮುಲುಕುಚೆರುವು ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರರಾದ ಶ್ರೀ ದೀನದಯಾಳುರಾಜಾರವರನ್ನು ಬಂಧಿಸಲಾಗಿದೆ. ಆ ಸ್ಟೇಷನ್ನಿನಿಂದ ಜೂನ ರೈಲು ಮುಂದೆ ಹೋಗಲು ಅವಕಾಶವೀಯುವಂತೆ ಅವರಿಗೆ ಸೂಚಿಸಲಾಗಿದ್ದಿತೆಂದೂ ಆದರೂ ಅವರು ಮಿಕ್ಸೆಡ್ ರೈಲು ಹೋಗುವಂತೆ ಅವಕಾಶವಿತ್ತರೆಂದೂ ಗೊತ್ತಾಗಿದೆ

ಆನರ್ಸ್ ಫೈನಲ್ ಪರೀಕ್ಷೆ ಫಲಿತಾಂಶಗಳು

ಮೈಸೂರು ವಿಶ್ವವಿದ್ಯಾಲಯದ ಆನರ್ಸ್ ಫೈನಲ್ ಪರೀಕ್ಷೆ ಫಲಿತಾಂಶಗಳು ಈ ದಿನ ಬೆಳಿಗ್ಗೆ ಪ್ರಕಟವಾದುವು. ಸಾಧ್ವಿ ಪತ್ರಿಕಾ ಕಛೇರಿಯಲ್ಲೂ ಅವನ್ನು ಪ್ರಕಟಿಸಲಾಗಿದೆ.

ಎಂ. ಪಿ. ಕೊಯಿರಾಲಾ ಮತ್ತೆ ನೇಪಾಳದ ಪ್ರಧಾನಿ

ನೇಪಾಳದ ಮಾಜಿ ಪ್ರಧಾನಿ ಶ್ರೀ ಮಾತೃಕಾ ಪ್ರಸಾದ ಕೊಯಿರಾಲಾರವರ ನೇತೃತ್ವದಲ್ಲಿ ನೆನ್ನೆ ಅಲ್ಲಿ ಹೊಸ ಸರ್ಕಾರವನ್ನು ರಚಿಸಲಾಯಿತು. ಅದರಲ್ಲಿ ಕೊಯಿರಾಲಾ ಮತ್ತು ಅವರ ನ್ಯಾಷನಲ್ ಡೆಮೊಕ್ರಾಟಿಕ್ ಪಕ್ಷದ ಮೂವರೂ ಮತ್ತು ಸ್ವತಂತ್ರರೊಬ್ಬರೂ ಸಚಿವರಾಗಿರುವರು ಎಲ್ಲರೂ ನೆನ್ನೆ ಪ್ರಮಾಣ ವಚನವನ್ನು ತೆಗೆದುಕೊಂಡರು ಕಳೆದ ೯ ತಿಂಗಳಿಂದ ಜಾರಿಯಲ್ಲಿದ್ದ ಸಲಹೆಗಾರ ಆಡಳಿತವು ನೆನ್ನೆಯಿಂದ ಮುಕ್ತಾಯವಾಗಿದೆ

ಮಧ್ಯ ಕೊರಿಯದಲ್ಲಿ ಅತ್ಯುಗ್ರ ವಿಮಾನ ಧಾಳಿ

ಕಮ್ಯೂನಿಸ್ಟರ ಭಾರಿ ಆಕ್ರಮಣವನ್ನು ತಡೆಗಟ್ಟುವ ಸಲುವಾಗಿ ಮಧ್ಯ ರಣಕ್ಷೇತ್ರದಲ್ಲಿ ನೆನ್ನೆ ೫೦೦ಕ್ಕೂ ಮೇಲ್ಪಟ್ಟು ವಿಶ್ವ ಸಂಸ್ಥೆ ವಿಮಾನಗಳು ೨೦ ಲಕ್ಷ ಪೌಂಡು ಬಾಂಬುಗಳನ್ನೂ ಸಿಡಿತದ ದ್ರವಗಳನ್ನೂ ಸುರಿಸಿದುವೆಂದು ವರದಿಯಾಗಿದೆ ೨೦ ಸಾವಿರ ಕಮ್ಯೂನಿಸ್ಟರು ನೆನ್ನೆ ಭಾರಿ ಆಕ್ರಮಣವನ್ನು ಪ್ರಾರಂಭಿಸಿ, ದಕ್ಷಿಣ ಕೊರಿಯನ್ನರು ಹಿಮ್ಮೆಟ್ಟುವಂತೆ ಮಾಡಿರುವರೆಂದು ಹೇಳಲಾಗಿದೆ

ಉಪನ್ಯಾಸ

ರಾಜಧಾನಿಯ ಕೃಷ್ಣವಿಲಾಸ ಅಗ್ರಹಾರ ರಸ್ತೆಯಲ್ಲಿರುವ ಪಾಠಶಾಲೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಶ್ರೀ ಅಮರನಾಥ್ ಎಂ ವಿ ಶರ್ಮರವರು ಲಾಂಟರ್ನ್ ಸಹಾಯದಿಂದ ಉಪನ್ಯಾಸ ಮಾಡುವರು ನಾಳಿದ್ದು ಸಂಜೆ ೬॥ ಗಂಟೆಗೆ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಅವರು ಹಿಮಾಲಯಾ ಯಾತ್ರೆ ಸಂಬಂಧವಾಗಿ ಉಪನ್ಯಾಸ ಕೊಡುವರು

ಆಂಧ್ರ ಪ್ರಾಂತ್ಯ ರಚನೆ ಮಸೂದೆಗೆ ಮೈಸೂರಿನ ತಿದ್ದುಪಡಿ ಸೂಚನೆ

ಆಂಧ್ರ ಪ್ರಾಂತ್ಯದ ರಚನೆ ಸಂಬಂಧವಾಗಿ ಕೇಂದ್ರ ಸರ್ಕಾರದವರು ರಚಿಸಿರುವ ಮಸೂದೆಯನ್ನು ನೆನ್ನೆ ಮೈಸೂರು ಮಂತ್ರಿಮಂಡಲದವರು ಪರಿಶೀಲಿಸಿ, ಅದಕ್ಕೆ ಹಲವು ತಿದ್ದುಪಡಿಗಳನ್ನು ಸೂಚಿಸಿ, ಈ ದಿನ ಕೇಂದ್ರ ಸರ್ಕಾರಕ್ಕೆ ಕಳುಹಿಸುವರೆಂದು ತಿಳಿದುಬಂದಿದೆ.

ಕೊರಿಯದಲ್ಲಿ ಶಾಂತಿ ಕಾಲಾಗುವ ಭರವಸೆ ಇಲ್ಲ

ಕೊರಿಯಾ ಯುದ್ಧದಲ್ಲಿ ಶಾಂತಿ ಕಾಲಾಗುವ ಭರವಸೆಯಿಲ್ಲವೆಂದು ಅಮೆರಿಕದ ವಿದೇಶಾಂಗ ಮಂತ್ರಿ ಫಾಸ್ಟರ್ ಡಲ್ಲೆಸ್‌ರವರು ತಿಳಿಸಿರುತ್ತಾರೆ. ಕೊರಿಯಾ ಸಂಧಾನ ಪ್ರತಿನಿಧಿಗಳು ನೆನ್ನೆ ೧೯ ನಿಮಿಷಕಾಲ ಸಂಧಿಸಿದ್ದರು ಕಮ್ಯೂನಿಸ್ಟ್ ಚೀನರೂ ಮತ್ತು ಉತ್ತರ ಕೊರಿಯನ್ನರೂ ತಮ್ಮ ಧಾಳಿ ಕ್ರಮವನ್ನು ಇನ್ನೂ ನಿಲ್ಲಿಸದಿರುವುದೇ ಈ ರೀತಿ ಭಾವಿಸಲು ಕಾರಣವಾಗಿದೆ

ಕಾಂಬೋಡಿಯಾ ದೊರೆಯು ಪರಾರಿ

ಇಂಡೋಚೀನಾದಲ್ಲಿರುವ ಕಾಂಬೋಡಿಯಾ ಸಂಸ್ಥಾನದ ದೊರೆ ನರೋತ್ತಮರವರು ಮೊನ್ನೆ ದೇಶವನ್ನು ಬಿಟ್ಟು, ಪಕ್ಕದಲ್ಲಿರುವ ಸಯಾಂ ರಾಜ್ಯದಲ್ಲಿ ಆಶ್ರಯ ಪಡೆದಿರುವುದಾಗಿ ವರದಿಯಾಗಿದೆ. ಅವರು ಹೊರಡುವ ಮುಂಚೆ ತಮ್ಮ ಅಧಿಕಾರವನ್ನೆಲ್ಲಾ ಅಲ್ಲಿನ ಪ್ರಧಾನಿಯವರಿಗೆ ವಹಿಸಿದರು ಆ ಸಂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಫ್ರೆಂಚರು ಹಿಂದುಮುಂದು ನೋಡುತ್ತಿರುವುದಾಗಿಯೂ, ಈ ಬಗ್ಗೆ ದೊರೆಯು ಪ್ರತಿಭಟನೆ ಸೂಚಿಸಿರುವುದಾಗಿಯೂ ಗೊತ್ತಾಗಿದೆ.

ಕೈರೋ ಬಳಿ ಬೆಂಕಿಯಿಂದ ೨೫ ಜನರ ಮರಣ

ಈಜಿಪ್ಟಿನ ರಾಜಧಾನಿ ಕೈರೋವಿನ ಬಳಿ ಹಲವು ಹಳ್ಳಿಗಳಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ ರಂಜಾನ್ ಹಬ್ಬದ ಸಂಬಂಧವಾಗಿ ಮನೆ ದೀಪಗಳಿಂದ ಗುಡಿಸಲುಗಳಿಗೆ ಬೆಂಕಿಹತ್ತಿಕೊಂಡು ೬೦೦ ಸಣ್ಣ ಸಣ್ಣ ಮನೆಗಳು ಸುಟ್ಟುಹೋಗಿ, ೨೫ ಮಂದಿಗೂ ಮೇಲ್ಪಟ್ಟು ಮೃತರಾದರೆಂದೂ, ಗೋಧಿಯ ಫಸಲು ಬಹಳವಾಗಿ ನಷ್ಟವಾಯಿತೆಂದೂ ವರದಿಯಾಗಿದೆ. ಅನೇಕ ಜಾನುವಾರುಗಳು ಸತ್ತುಹೋದುವು

ಪಿಶಾರೋಟಿಯವರ ಅಧಿಕಾರಾವಧಿ ಮತ್ತೊಂದು ವರ್ಷ ಹೆಚ್ಚಿತು

ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ॥ ಪಿ ಎಲ್. ಪಿಶಾರೋಟಿಯವರ ಅಧಿಕಾರಾವಧಿಯನ್ನು ನೆನ್ನೆಯಿಂದ ಮತ್ತೆ ೧ ವರ್ಷ ಕಾಲ ಹೆಚ್ಚಿಸಿರುವುದಾಗಿ ಗೊತ್ತಾಗಿದೆ.

ಬಳ್ಳಾರಿ ಕನ್ನಡಿಗರ ಮೇಲೆ ದುಂಡಾವರ್ತಿ

ಬಳ್ಳಾರಿ ಟವನ್ನಿನಲ್ಲಿ ನೆನ್ನೆ ಮಧ್ಯಾಹ್ನ ದೊಣ್ಣೆ, ಲಾರಿ ಮುಂತಾದುವನ್ನು ಹಿಡಿದ ಒಂದು ತಂಡದವರು ಮುಖ್ಯಬೀದಿಗಳಲ್ಲಿ ತಿರುಗಿ ಅಂಗಡಿಗಳನ್ನು ಲೂಟಿ ಮಾಡುತ್ತಾ, ಕನ್ನಡದ ಬೋರ್ಡುಗಳನ್ನು ಕಿತ್ತುಹಾಕುತ್ತಾ, ಜನರನ್ನು ಹೊಡೆದರೆಂದು ವರದಿಯಾಗಿದೆ. ಹಲವು ಶಾಲೆಗಳಿಗೂ ಅವರು ನುಗ್ಗಿ ಮರಮುಟ್ಟುಗಳನ್ನು ಒಡೆದು, ಶಾಲೆಗಳನ್ನು ಬಲವಂತವಾಗಿ ಮುಚ್ಚುವಂತೆ ಮಾಡಿದರೆಂದು ಹೇಳಲಾಗಿದೆ ಕೋರ್ಟು ಭವನದಲ್ಲಿ ಒಬ್ಬ ವಕೀಲರ ಮೇಲೆ ಬಿದ್ದು, ಕೋರ್ಟು ಕಾರ್ಯ ನಡೆಯದಂತೆ ಆತಂಕಪಡಿಸಲಾಯಿತೆಂದು ಗೊತ್ತಾಗಿದೆ ನಗರದ ಎಲ್ಲಾ ಅಂಗಡಿಗಳನ್ನೂ, ಹೋಟೆಲುಗಳನ್ನೂ ಗಾಬರಿಯಿಂದ ಮುಚ್ಚಲಾಯಿತು ಶಸ್ತ್ರ ಸಜ್ಜಿತ ಪೋಲೀಸರು ಸ್ಥಳಕ್ಕೆ ಬಂದು ಶಾಂತಿಯನ್ನು ಕಾಪಾಡಿದರು

ನಂತರ ಪ್ರದರ್ಶನಕಾರರು ಸಭೆ ಸೇರಿ ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರದವರು ತಮ್ಮ ನಿರ್ಧಾರವನ್ನು ಬದಲಾಯಿಸುವಂತೆ ಒತ್ತಾಯಪಡಿಸಿದರು ಅಲ್ಲಿನ ಕರ್ನಾಟಕ ಕ್ರಿಯಾ ಸಮಿತಿ ಕಾರ್ಯದರ್ಶಿಯವರು ಹೇಳಿಕೆಯೊಂದನ್ನಿತ್ತು, [illegible] ಕಾಪಾಡಲು ತೀವ್ರ ಕ್ರಮ ಕೈಗೊಳ್ಳುವಂತೆ ಕೋರಿ, ಗುಂಪಿನ ಪುಂಡುತನವನ್ನು ಖಂಡಿಸಿರುವರು

ಟೆಹರಾನ್ ಕೋರ್ಟಿನಲ್ಲಿ ಬೆಂಚು-ಕುರ್ಚಿಗಳ ಹಾರಾಟ

ಪರ್ಷಿಯದ ಪ್ರಧಾನಿ ಮುಸ್ಸಾದಿಕ್ಕರ ಭವನದ ಹೆಬ್ಬಾಗಿಲಿನ ಮೇಲೆ ಜೀಪು ಕಾರು ಬಿಟ್ಟ ಪಹಬಾರ್ ಮತ್ತು ಇತರರ ಮೇಲೆ ಅಲ್ಲಿನ ಕೋರ್ಟಿನಲ್ಲಿ ಮೊಕದ್ದಮೆ ನಡೆಸುತ್ತಿದ್ದಾಗ ಮುಸ್ಸಾದಿಕ್ಕರ ಪಕ್ಷದವರು ಅಪಾದಿತರನ್ನು ನಿಂದಿಸಲಾಗಿ ಅಪಾದಿತರ ಬೆಂಬಲಿಗರು ಕೋರ್ಟಿನಲ್ಲಿದ್ದ ಬೆಂಚು, ಕುರ್ಚಿಗಳನ್ನು ತೆಗೆದು ಎಸೆದು ಪಹಾರವರ ಪರವಾಗಿ ಘೋಷಣೆ ಮಾಡಿದರೆಂದು ಹೇಳಲಾಗಿದೆ. ೬ ಜನರಿಗೆ ಪೆಟ್ಟು ತಗುಲಿದೆ ಅಲ್ಲಿದ್ದ ಸ್ತ್ರೀಯರು ಪ್ರಜ್ಞೆ ತಪ್ಪಿದರು ೫ ಜನರ ದಸ್ತಗಿರಿಯಾಗಿದೆ.

ಸತ್ಕಾರ ಕೂಟ

ರಾಜಧಾನಿಯ ಶ್ರೀರಾಂಪೇಟೆಯ ಮಹೀದ್ ಭವನದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಜಯಭಾರತ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಸಂಸ್ಥೆಯ ಆರಂಭೋತ್ಸವದ ಅಂಗವಾಗಿ ನೆನ್ನೆ ಸಂಜೆ ಸಂಸ್ಥೆಯವರು ಚಾಮುಂಡೇಶ್ವರಿ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಎಲ್. ರಾಮಚಂದ್ರರಾವ್ ಮತ್ತು ಡೈರೆಕ್ಟರರಲ್ಲೊಬ್ಬರಾದ ಶ್ರೀ ಚೌಡಯ್ಯನವರು ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು

○ ಲಾಹೋರಿನಲ್ಲಿ ನೆನ್ನೆ ಹಗಲಿನಲ್ಲೇ ಕಮಲ್ ಸಿರಾಜ್ ಎಂಬ ಪತ್ರಿಕೋದ್ಯೋಗಿಯನ್ನು ಅವನ ಮನೆ ಎದುರಿನಲ್ಲಿ ಕೊಲೆ ಮಾಡಲಾಯಿತೆಂದು ವರದಿಯಾಗಿದೆ.

ಪ್ರಾರ್ಥನೆಯ ಹೋರಿ ಸತ್ಯಾಗ್ರಹದ ದಿನ

ನೀರಿನ ಕಂದಾಯ ಹೆಚ್ಚಿಸಿರುವ ಸಂಬಂಧವಾಗಿ

ಮೈಸೂರು [illegible]

ಶ್ರೀ [illegible] ಜ ದ ರಾಯ [illegible] ಪ್ರೊಫ್ ಜೋಷಿ [illegible] ನಗರ [illegible] ಭೆ ಮತ್ತು [illegible] ಭಾರ [illegible] ಸ್ತ್ರೀ [illegible] ಮಾಡುವಂತೆ [illegible] ತದ ಮಾಡ [illegible] ಮಾಗಬೇಕೆಂದು ಕೋರಿದ್ದಾರೆ

[illegible]

ಇಟ್ಟಿಗೆಗೂಡು ಜಯ ಮಾರ್ತಾಂಡಪುರವಾಗಲಿ

ಉತ್ತರ ನ ಪೂರ್ವಭಾಗದಲ್ಲಿ ಅ ರವ ನೆ ಪಂಭಾಗದಲ್ಲಿರುವ ಇಟ್ಟಿಗೆ ಗೂಡ ಬಡಾವಣೆಯು ಈಗಿನ ಹೆಸರು ಚೆನ್ನಾಗಿಲ್ಲವೆಂದೂ, ನಗರ ದ ಪೌರಸಭೆ ಮತ್ತು ಟ್ರಸ್ಟ್ ಬೋರ್ಡಿನವರು ಅದನ್ನು ಜಯ ಮಾರ್ತಾಂಡ ಪುರ ಎಂದು ಕರೆಯುವಂತೆ ವ್ಯವಸ್ಥೆ ಮಾಡಬೇಕೆಂದೂ ಅಲ್ಲಿನ ನಿವಾಸಿಗಳಾದ ಡಾ|| ಪಿ ಟಿ ಕೆ ನಂಬೀಶ್ [illegible] ಜಯಸ್ವಾಮಿ ಐಯರ್ ಮುಂತಾದವರು ಕೋರಿ ಪತ್ರ ಒರೆದಿರುತ್ತಾರೆ ಮಹಾ ರಾಜರ ಹೆಸರೂ ಸಹ ಹೊಸ ಹೆಸರಿನಲ್ಲಿ ಸೇರಿದ ಹಾಗಾಗುತ್ತ ಅವರ ಹೇಳಿರು ತ್ತಾರೆ [illegible] ಕ್ಷೇತ್ರದ ಪೂರ್ವ ದಿಕ್ಕಿನ [illegible] ಹೆಸರು ಜಯ ಮಾರ್ತಾಂಡನ ನು ಕರೆಯಲಾಗಿರುವ [illegible] ಇಟ್ಟಿಗೆಗೂಡಿಗೆ ಹೊಸ ಹೆಸರನ್ನು ಕೊಡಬೇಕೆಂದು ಅವರ ಅ [illegible] ಪಟ್ಟಿರುತ್ತಾರೆ

ವಿವಾಹ ಮಹೋತ್ಸವ

[illegible] ಪ್ರೊಫೆಸರ್ ಆಗಿರುವ [illegible] ಇನ್ಸ್ಟಿಟ್ಯೂಟ್ ಆಫ್ [illegible] ಅಧ್ಯಾಪಕರಾಗಿರುವ ಶ್ರೀ ಎಸ್ [illegible] ಪಿ ಅಯ್ಯಂಗಾರರವರು ತಮ್ಮ ಸಹೋದರಿ [illegible] ಭಾಗ್ಯಲಕ್ಷ್ಮಿಯು [illegible] ಸರ್ವೀಸ್ನಲ್ಲಿರುವ [illegible] ಗೋಪಾಲಕೃಷ್ಣ ರವರಿಗೆ ಕೊಟ್ಟು [illegible] ವಿವಾಹವನ್ನು ಜರುಗಿಸಿದರು

[illegible] ಮನೆಗಳನ್ನು ಬಾಡಿಗೆಗೆ ಕೊಡುವಾಗ [illegible] ಕಾನೂನಿನ ನಿಯಮದ [illegible] ಹೆಚ್ಚು ಬಾಡಿಗೆ [illegible] ಮೊಹಲ್ಲಾ ಮೊಹಲ್ಲಾಗಳಿಗೂ ವ್ಯಕ್ತಿ ವ್ಯಕ್ತಿಗಳಿಗೂ ಭೇದ ಮಾಡುವುದು (ಈ ರೀತಿ ಭೇದ ಮಾಡಿರುವುದು ರಾಜ್ಯಾಂಗದ [illegible] ವಿರೋಧವೆಂದು ಅವರ ವಾದ)

[illegible] ಕಾರಣಗಳಿಗಾಗಿ ಮನೆಗ [illegible] ವನ್ನು ಹೆಚ್ಚಿಸಿರುವುದು ಅಕ್ರಮವಾದದ್ದಲ್ಲಿ, ಹಾಗೆಯೇ [illegible] ಆಗಿರುವುದೆಂದು ಅವರು ತಿಳಿಸಿ [illegible] ಅಭಿಪ್ರಾಯವನ್ನು ನೋಟೀಸು ಕೊಟ್ಟ [illegible] ದಿನಗಳೊಳಗೆ [illegible] ಮಾಡದಿದ್ದ [illegible] ಎನ್ನುವುದಾಗಿ ತಿಳಿಸಿರು [illegible] ಕೋರಿದ್ದಾರೆ

COACHING CLASSES

[illegible] Matric [illegible] Inter [illegible] S S L C (Sup [illegible] Rs 15 to [illegible] Sri Rag [illegible] Institute K [illegible] Road Mysore

[illegible] Printed and Published by A K [illegible] rajan [illegible] Press, [illegible] Mysore

ಪ್ರೀತ್ ಸಿಂಗರಿಗೆ ದೆಹಲಿ ಪೌರಸಭಾ ಮಾನಪತ್ರ

ಎವರೆಸ್ಟ್ ಶಿಖರಾರೋಹಣ ಮಾಡಿದ ಟಿ ಸಿಂಗ್ ರವರಿಗೆ ದೆಹಲಿಯ ಪೌರ ಸಭೆಯವರು ಮಾನಪತ್ರವನ್ನರ್ಪಿಸುವರು

ರೋಸೆಂಬರ್ಗ್ ದಂಪತಿಗಳನ್ನು ಉಳಿಸಲು ಪ್ರದರ್ಶನ

ಅಣು ರಹಸ್ಯವನ್ನು ರಷ್ಯಕ್ಕೆ ತಿಳಿಯಪಡಿಸಿದ ಅಪರಾಧಕ್ಕೆ ಮರಣ ದಂಡನೆಗೆ ಗುರಿಯಾಗಿರುವ ರೋಸೆಂಬರ್ಗ್ ದಂಪತಿಗಳ ಪ್ರಾಣವನ್ನುಳಿಸಲು ವಾಷಿಂಗ್ಟನ್ನಿನಲ್ಲಿ ಮೊನ್ನೆ ದಿನ ಸಾವಿರಾರು ಜನರು ಅಧ್ಯಕ್ಷರ ಭವನದ ಬಳಿ ಪ್ಲಕಾರ್ಡುಗಳನ್ನು ಹಿಡಿದು ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ ನಾಳಿದ್ದು ಅವರನ್ನು ವಿದ್ಯುಚ್ಛಕ್ತಿ ಕುರ್ಚಿಯಲ್ಲಿ ಕುಳ್ಳಿರಿಸಿ ಕೊಲ್ಲಬೇಕಾಗಿದೆ ಅಂದೇ ಅವರ ವಿವಾಹದ ವಾರ್ಷಿಕ ದಿನವೂ ಆಗಿದೆ ಲಂಡನ್ನಿನಲ್ಲೂ ಮೊನ್ನೆ ಈ ಸಂಬಂಧವಾಗಿ ಪ್ರದರ್ಶನಗಳಾದುವು

ಸ್ವಾತಂತ್ರ್ಯದ ಇತಿಹಾಸ ರಚನೆಗೆ ಮೈಸೂರಿನ ಸಮಿತಿ

ಭಾರತದ ಸ್ವಾತಂತ್ರ್ಯದ ಇತಿಹಾಸವನ್ನು ರಚಿಸುವ ಬಗ್ಗೆ ಕೇಂದ್ರ ಸರ್ಕಾರದವರು ಸ್ಥಾಪಿಸಿರುವ ಸಮಿತಿಗೆ, ಮೈಸೂರಿನ ಚಳುವಳಿಯ ಸಂಬಂಧವಾಗಿ ಅಂಕಿಅಂಶಗಳನ್ನು ಒದಗಿಸಲು ಸಂಸ್ಥಾನ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿರುವರು ಶ್ರೀಗಳಾದ ಟಿ ಟಿ ಶರ್ಮ ಎಚ್ ಕೆ ವೀರಣ್ಣಗೌಡ, ಡಿ ಎಂ ಸಿದ್ದಯ್ಯ ಮತ್ತು ಪ್ರೊಫೆಸರ್ ನೀಲಕಂಠಶಾಸ್ತ್ರಿಯವರು ಸದರಿ ಸಮಿತಿಯಲ್ಲಿರುವರು

ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳ ರಾಜೀನಾಮೆ

ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀಗಳು ಶಾಂತವೇರಿ ಗೋಪಾಲಗೌಡ (?) ಮತ್ತು ಬಾ ಸು ಕೃಷ್ಣಮೂರ್ತಿಯವರು ಸಂಸ್ಥೆಯ ಅಧ್ಯಕ್ಷ ಶ್ರೀ ಬಿ ಹುಚ್ಚೇಗೌಡರು ಮತ್ತು ಅವರ ಕಾರ್ಯಕಾರಿ ಸಮಿತಿಯ ಚಟುವಟಿಕೆಗಳಲ್ಲಿ ಭಿನ್ನಾಭಿಪ್ರಾಯ ಹೊಂದಿ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ ಪ್ರಜಾ ಸಮಾಜವಾದಿ ಪಕ್ಷವು ಪ್ರಾರಂಭವಾದಂದಿನಿಂದಲೂ ಇವರು ವಾಜಿಕ ಎಂ ಪಿ ಪರಮಶಿವಯ್ಯನವರೊಡನೆ ಭಿನ್ನಾಭಿಪ್ರಾಯ ಹೊಂದಿದ್ದರು

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಶುಚಿರುಚಿಯಾದ [illegible]

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಸ್ಥಳ [illegible]

ಶ್ರೀ ಕೃಷ್ಣ ರೊಟ್ಟಿ ಅಂಗಡಿ,

(ಚಂದ್ರಮೌಳೇಶ್ವರ ಬಿಲ್ಡಿಂಗ್)

[illegible] ರಸ್ತೆ ಮೈಸೂರು

ನವೆಂಬರಿನಲ್ಲಿ ಅಂಚೆ ಶತಮಾನೋತ್ಸವ

ಭಾರತದ ಅಂಚೆ ಇಲಾಖೆಯ ಶತಮಾನೋತ್ಸವವು ಇದೇ ನವೆಂಬರ್ ತಿಂಗಳಲ್ಲಿ ನಡೆಯಲು ಸಿದ್ಧತೆಗಳಾಗುತ್ತಿವೆ ನೂರು ವರ್ಷದಲ್ಲಿ ಇಲಾಖೆಯು ಸಾಧಿಸಿರುವ ಪ್ರಗತಿಯ ಪ್ರದರ್ಶನವೂ ನಡೆಯುವುದು

'ಉಳಗಂ'

ಮದರಾಸಿನ ಸೊಸೈಟಿ ಫಿಲಂ ಡಿಸ್ಟ್ರಿಬ್ಯೂಟರ್ಸ್ ರವರು, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಪ್ರದರ್ಶಿಸಲಿರುವ 'ಪ್ರಪಂಚಂ' ಮತ್ತು "ಉಳಗಂ" ಎಂಬ ಚಿತ್ರದ ಕಥಾಸಾರಾಂಶವನ್ನು ನಿರೂಪಿಸುವ [illegible] ಫೋಟೋಗಳ ಸುಂದರವಾದ ಪುಸ್ತಕವನ್ನು ಸ್ವೀಕರಿಸಿರುತ್ತೇವೆ ಚಿತ್ರದ ಹಲವು ಸೊಗಸಾದ ದೃಶ್ಯಗಳನ್ನು ಅದರಲ್ಲಿ ಕೊಡಲಾಗಿದೆ ಶ್ರೇಷ್ಠ ವರ್ಗದ ನಟನಟಿಯರಿಂದ ಕೂಡಿ, ನುರಿತ ಪರಿಣತರಿಂದ ತಯಾರಿಸಲ್ಪಟ್ಟಿರುವ ಈ ಚಿತ್ರವು [illegible] ಯಶಸ್ಸನ್ನು ಗಳಿಸುವುದೆಂದು ನಿರೀಕ್ಷಿಸಲಾಗಿದೆ

ಮೈಸೂರು ಪೇಟೆ ಧಾರಣೆ

ಪಟ್ಟಿ	ರೂ ಆಣೆ	ರೂ ಆ
ಕಡಲೆಕಾಯಿ	೩೩ ೦-೦	೪೧ ೪ ೦
ಕಡಲೆಬೇಳೆ	೪೯ ೮ ೦	೪೧ ೮ ೦
ತೊಗರಿಬೇಳೆ	೩೨ ೩-೦	೩೯-೦-೦
ಹುರುಳಿ	೪೪ ೨ ೦	೪೩ ೧೨ ೦
ಹೆಸರು	೭೫-೪-೦	೭೭ ೮ ೦
ಅವರೆ	೩೩ ೦ ೦	
ಹಲಸಂದೆ	೩೫ ೨ ೦	೭೩ ೧೪ ೦
ಉದ್ದು	೭೧ ೨-೦	೩೦ ೪ ೦
ಹುಚ್ಚೆಳ್ಳು	೩೩ ೨ ೦	
ಎಳ್ಳು	೮೩ ೦ ೦	೮೩ ೪ ೦
ಕೊಬ್ಬರಿಕಾಯಿ	೨೭ ೧೦ ೦	೨೯ ೧೦ ೦
ಹುಣಸೇಹಣ್ಣು	೭ ೮ ೦	೮ ೨ ೦
ಬೀಗೆ...	೬ ೦ ೦	
ಬೆಲ್ಲ	೮ ೦-೦	
ತೆಂಗಿನಕಾಯಿ	೧೧೪ ೦ ೦	೨೫೪ ೦ ೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ರಿಂದ ೮ ಸಂಜೀವಪ್ಪ ನಾಗಸ್ವರ ಮಧ್ಯಾಹ್ನ ೧೨ ೩೦ ಟಿಟೀಲು ೨ ಮಹಿಳಾ ವಿಹಾರ ಸಂಜೆ ೫ ೩೦ ರಿಂದ ೬ ಸಂಜೀವಪ್ಪ ನಾಗಸ್ವರ ೬ ೧೦ ಬಾಲ ಜಗತ್ ೭ ವಿಚಾರ ಅಲಂಕಾರ ಭಜನೆ ೭ ೩೦ ರಾಜೇಶ್ವರ ರಾವ್ ರಿಕಾರ್ಡು ೭ ೪೦ ದಿ ಸಿ ಶಾಂತಮೂರ್ತಿ, ಕನ್ನಡದಲ್ಲಿ ಭಾಷಣ [illegible] ಸರ್ವಶ್ರೀ ನರಸಿಂಹಯ್ಯ [illegible] ಗೀತೆಗಳು [illegible]

D BANUMIAH'S COLLEGE OF COMMERCE, MYSORE

Applications for Admission to JUNIOR I COM class will be received upto 20th June 1953 Late Applications will be received upto 1st July 1953 with a Penal Fee of Re 1/ per day subject to a limit of Rs 5 0 0 Further particulars can be known from the prospectus which will be supplied on remittance of As 10

[illegible]

CITY TUTORIAL COLLEGE

[illegible] Road Mysore

ADMISSIONS RECEIVED

for INTERMEDIATE Exams (Sept)

&

S S L C Exams (Sept)

Classes from 22nd June 1953

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಬಿ ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಿಜಿ. ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೭-೩-೧೯೫೪ [ಸಂಚಿಕೆ ೨೬೨

ಪಿ. ಎಸ್. ಪಿ. ಅಧ್ಯಕ್ಷತೆಗೆ ಕೃಪಲಾನಿ ರಾಜೀನಾಮೆ

ಡಾ॥ ಡಿ. ಸಿ. ಕಮಲಾ ರವರಿಗೆ ಸತ್ಕಾರ

ಮೈಸೂರು ೧೬

ರಾಜಧಾನಿಯ ಚೆಲುವಾಂಬಾ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ನರಾದ ಡಾ॥ ಡಿ ಸಿ ಕಮಲಾರವರು ಅಮೆರಿಕಕ್ಕೆ ಪ್ರಯಾಣ ಬೆಳೆಸುವ ಸಂಬಂಧ ನೆನ್ನೆ ಅವರ ಗೌರವಾರ್ಥವಾಗಿ ಶ್ರೀಮತಿ ಮತ್ತು ಶ್ರೀ ಆರ್ ಹನುಮಪ್ಪನವರು ಗಾಯತ್ರಿ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಶ್ರೀಮತಿ ಕಮಲಾರವರು ಹೆರಿಗೆ ಮತ್ತು ಸ್ತ್ರೀ ರೋಗ ಶಾಸ್ತ್ರದಲ್ಲಿ ಹೆಚ್ಚು ಪರಿಶ್ರಮ ಪಡೆಯಲು ೨ ವರ್ಷಕಾಲದ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳುವರು ಶ್ರೀ ಹನುಮಂತಪ್ಪ ದಂಪತಿಗಳು ಮುಖ್ಯ ಅತಿಥಿಗಳನ್ನೂ, ಇತರರನ್ನೂ ಸ್ವಾಗತಿಸಿ, ಶ್ರೀಮತಿ ಕಮಲಾರವರಿಗೆ ಸುಖ ಪ್ರಯಾಣವನ್ನು ಕೋರಿದರು ಶ್ರೀಮತಿಯವರು ಸೂಕ್ತ ಉತ್ತರವಿತ್ತು ಕೃತಜ್ಞತೆಗಳನ್ನು ಸೂಚಿಸಿದರು

ಆತ್ಮಹತ್ಯೆ

ರಾಜಧಾನಿಯ ಮಂಡಿ ಮೊಹಲ್ಲಾ ನಿವಾಸಿ ಶ್ರೀ ಗಿರಿಯಪ್ಪನವರ ಪತ್ನಿ ಶ್ರೀಮತಿ ಸಾಕಮ್ಮ ಎಂಬುವರು ಎದೆ ನೋವು ಮತ್ತು ಹೊಟ್ಟೆ ಶೂಲೆಯನ್ನು ತಾಳಲಾರದೆ ಮೊನ್ನೆ ಸಂಜೆ ವೈವೇಳೆ ಸೀಮೆಯೆಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡುದಾಗಿ ವರದಿಯಾಗಿದೆ

ಹುಲಿಯಿಂದ ದೇವರ ಸೇವೆ

ಚಿಕ್ಕಮಗಳೂರಿನ ಬಳಿ ಚಂದ್ರದ್ರೋಣ ಪರ್ವತದ ಶಿಖರದ ಮೇಲೆ ಬಾಬಾಬುಡನ್ ಸ್ವಾಮಿ ಎಂಬ ದೇವಸ್ಥಾನದಲ್ಲಿ ಕೆಲವು ದಿನಗಳ ಹಿಂದೆ ಭಕ್ತರು ದೇವರ ಪೂಜೆ ನೆರವೇರಿಸುತ್ತಿದ್ದಾಗ ಪಕ್ಕದ ಗುಹೆಯಿಂದ ಒಂದು ಮುದಿ ಹುಲಿಯು ಅಲ್ಲಿಗೆ ಬಂದು ಅರ್ಧ ಘಂಟೆ ಕಾಲವಿದ್ದು ದೇವರ ದರ್ಶನ ಪಡೆದು ಅನಂತರ ಸವಸ್ಥಾನ ಹೊರಟುಹೋಯಿತೆಂದು ವರದಿಯಾಗಿದೆ ಅದಕ್ಕೆ ಮುಂಚೆ ಆ ಹುಲಿಯು ಆಗಾಗ್ಗೆ ಅಲ್ಲಿಗೆ ಬಂದು ತನ್ನ ಬಾಲದಿಂದ ಕಸ ಗುಡಿಸಿ ಸ್ವಲ್ಪ ಕಾಲವಿದ್ದು ಅದೃಶ್ಯವಾಗಿ ಸೇವೆಗೈಯುತ್ತಿತ್ತೆಂದೂ ಪ್ರತೀತಿಯಿದ್ದಿತು

ಕಿರೀಟ ಧಾರಣೆ ಸಂಬಂಧದ ನೌಕಾ ಪ್ರದರ್ಶನ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೆ ಸಂಬಂಧದಾಗಿ ನೆನ್ನೆ ಸ್ಪಿಟ್‌ಹೆಡ್‌ನಲ್ಲಿ ನೌಕಾ ಪ್ರದರ್ಶನವು ನಡೆಯಿತು ಭಾರತದ ಪ್ರಧಾನಿ ನೆಹರೂರವರ ಗ್ಲಾಸ್ಕೋ, ಡೆಲ್ಲಿ ಮುಂತಾದ ಯುದ್ಧ ಹಡಗುಗಳನ್ನು ಹತ್ತಿ ಪರಿಶೀಲನೆ ನಡೆಸಿದರು

ವಿಶ್ವವಿದ್ಯಾಲಯದ ಹೊಸ ರಿಜಿಸ್ಟ್ರಾರ್

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನ ಗಣಿತ ಶಾಸ್ತ್ರದ ಪ್ರೊಫೆಸರ್ ಎಫ್ ಜೆ ನರಸಿಂಹನಾರವರನ್ನು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ ನೇಮಕ ಮಾಡಲಾಗಿದೆ ಇದುವರೆಗೂ ಆ ಹುದ್ದೆಯಲ್ಲಿದ್ದ ಶ್ರೀ ಸಿ ರಂಗಾಚಾರ್ಯರನ್ನು ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ವಿದ್ಯಾಭ್ಯಾಸದ ಪ್ರಾಧ್ಯಾಪಕರಾಗಿ ವರ್ಗಾಯಿಸಲಾಗಿದೆ

ರೈಲಿಗೆ ಸಿಕ್ಕಿ ಮರಣ

ಮೈಸೂರು ೧೬

ರೈಲ್ವೆ ಕಾಲೋನಿಯಲ್ಲಿ ವೈರ್‌ಮನ್ ಆಗಿರುವ ಶ್ರೀ ಬಸವರಾಜು ಅವರ ಪತ್ನಿ ೨೦ ವರ್ಷದ ಶ್ರೀಮತಿ ಸರೋಜಮ್ಮ ಎಂಬುವರು ನೆನ್ನೆ ರಾತ್ರಿ ಇಲ್ಲಿನ ನಿಲ್ದಾಣದ ಸಿಗ್ನಲ್ ಪೋಸ್ಟ್ ಬಳಿ ಅರಸೀಕೆರೆ ಕಡೆಗೆ ಹೋಗುತ್ತಿದ್ದ ರೈಲಿಗೆ ಸಿಕ್ಕಿ ಮೃತಪಟ್ಟರು ಜೀವನದಲ್ಲಿ ಜಿಗುಪ್ಸೆ ಹುಟ್ಟಿ ಈ ರೀತಿ ಮಾಡಿಕೊಂಡರೆಂದು ಹೇಳಲಾಗಿದೆ

ಮಹಮ್ಮದ್ ಅಹಮದ್‌ರವರ ರಜಾ ಪಡೆದಿತು

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಕೆ ಮಹಮ್ಮದ್ ಅಹಮದ್‌ರವರಿಗೆ ಎರಡು ತಿಂಗಳ ಅಧಿಕೃತ ರಜೆ ... ರಜೆಯನ್ನು ... ರವರಿಗೆ ವಹಿಸಲಾಗಿದೆ

ಮೊಳಕಾಲ್ಮೂರು ಸ್ಟೇಷನ್ ಮಾಸ್ಟರ ಮೇಲೆ ಮೊಕದ್ದಮೆ

ಕಳೆದ ಶನಿವಾರ ಧರ್ಮಾವರಂ ಬೆಂಗಳೂರು ರೈಲ್ವೆ ಲೈನಿನಲ್ಲಿ ಸಂಭವಿಸಿದ ಪರಿಣಾಮವಾಗಿ ೩ ಗಂಟೆಗಳ ನಿಲ್ಲಿಸಲಾಗಿದ್ದ ಪ್ರಯಾಣವನ್ನು ನೆನ್ನೆಯಿಂದ ಲೈನನ್ನು ಸರಿಪಡಿಸಿ, ಪುನಃ ಆರಂಭಿಸಲಾಗಿದೆ ಮೊಳಕಾಲ್ಮೂರು ನಿಲ್ದಾಣದ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರಾದ ಶ್ರೀ ದೀನದಯಾಳು ರಾಜುರವರ ಮೇಲೆ ಪ್ರಯಾಣಿಕರ ಕ್ಷೇಮಕ್ಕೆ ಧಕ್ಕೆ ತಂದ ಅಪಾದನೆಗಾಗಿ ಮೊಕದ್ದಮೆ ಹೂಡಲಾಗುವುದೆಂದು ತಿಳಿದುಬಂದಿದೆ

ಮದ್ರಾಸಿನಲ್ಲಿ ಕಳ್ಳತನ, ೮೦ ಸಾವಿರ ರೂ. ನಷ್ಟ

ಮದ್ರಾಸಿನಲ್ಲಿ ಮೊನ್ನೆ ಎರಡು ಕಡೆ ಕಳ್ಳತನಗಳು ಜರುಗಿ, ೮೦ ಸಾವಿರ ರೂಗಳ ನಗದು ಮತ್ತು ಆಭರಣಗಳು ನಷ್ಟವಾಗಿವೆ ಜಾರ್ಜ್ ಟೌನಿನ ಒಂದು ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಕಳ್ಳರು ಕಬ್ಬಿಣದ ಪೆಟ್ಟಿಗೆ ಮುರಿದು, ವಜ್ರದ ಸರ ಮುಂತಾದ ಆಭರಣಗಳು, ಚಿನ್ನದ ಲೋಟ ಮುಂತಾದ ೭೦,೦೦೦ ರೂ ಬೆಲೆಯ ಸಾಮಾನುಗಳನ್ನು ಅಪಹರಿಸಿದ್ದಾರೆ ಇನ್ನೊಂದು ಕಡೆ ೧೦ ಸಾವಿರ ರೂ. ಆಭರಣ ಮತ್ತು ೨ ಸಾವಿರ ರೂ. ನಗದು ಹಣವನ್ನು ಕದಿಯಲಾಗಿದೆ

ಪ್ರೇಮ ಹಂತಕನ ಪತ್ತೆಯೇ ?

ಬೆಂಗಳೂರು ೭

ಇಲ್ಲಿನ ಸಿವಿಲ್ ಸ್ಟೇಷನ್ನಿನಲ್ಲಿ ಮಿಲಿಟರಿ ಕ್ವಾರ್ಟರ್ಸ್ ... ಕಳೆದ ತಿಂಗಳು ನಡೆದ ಕೊಲೆಯ ಸಂಬಂಧದಲ್ಲಿ ಪೊಲೀಸರು ... ಶ್ರೀ ... ಎಂಬುವನನ್ನು ನೆನ್ನೆ ದಸ್ತಗಿರಿ ಮಾಡಿರುವರು ಅವನಿಗೆ ೩೦ ವರ್ಷ ವಯಸ್ಸೆಂದೂ ಹಿಂದೆ ಹಲವು ಬಾರಿ ಅವನು ಶಿಕ್ಷೆಗೆ ಗುರಿಯಾಗಿದ್ದನೆಂದೂ ಹೇಳಲಾಗಿದೆ ಕೊಲೆ ಸಂಬಂಧವಾಗ್ಗಿ ಪೊಲೀಸರ ... ಬಂದ ... ಅವರಿಗೆ ... ಪ್ರೇಮಿಗಳನ್ನು ... ಅವನನ್ನು ಇಂದಿನ ಸಿವಿಲ್ ಸ್ಟೇಷನ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ರಿಮ್ಯಾಂಡು ಪಡೆಯಲಾಗುವುದು

ಮ್ಯೂನಿಕ್ಕಿಗೆ ನೆಹರೂ

ಭಾರತದ ಪ್ರಧಾನಿ ನೆಹರೂರವರು ನೆನ್ನೆ ಲಂಡನ್ನಿನಿಂದ ಜರ್ಮನಿಯ ಮ್ಯೂನಿಕ್ ನಗರಕ್ಕೆ ಪ್ರಯಾಣ ಬೆಳೆಸಿದರು ಅವರು ಕೈರೋ ವಿಮಾನ ನಿಲ್ದಾಣಕ್ಕೆ ಭೇಟಿ ಕೊಟ್ಟು ಅಲ್ಲಿ ಈಜಿಪ್ಟಿನ ಪ್ರಧಾನಿ ನಗೀಬರವರನ್ನು ಕಂಡು ಮಾತನಾಡುವರು ಸೂಯೆಜ್ ಕಾಲುವೆ ಬಗ್ಗೆ ಈಜಿಪ್ಟ್ ಸರ್ಕಾರವು ನಿರ್ಧಾರ ಕೈಗೊಳ್ಳುವ ಮುಂಚೆ ಅವರು ನೆಹರೂರವರ ಅಭಿಪ್ರಾಯವನ್ನು ತಿಳಿದುಕೊಳ್ಳಲಿರುವರೆಂದು ಹೇಳಲಾಗಿದೆ

ಪ್ರಜಾ ಸಮಾಜವಾದಿ ಪಕ್ಷಕ್ಕೆ ಕೃಪಲಾನಿ ರಾಜೀನಾಮೆ

ಉತ್ತರ ಪ್ರದೇಶದ ಬೆತೂಲ್ ಎಂಬಲ್ಲಿ ನೆನ್ನೆ ಪ್ರಜಾ ಸಮಾಜವಾದಿ ಪಕ್ಷದ ಅಧಿವೇಶನವು ಸೇರಿದ್ದಾಗ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರೂ ಮತ್ತು ಪ್ರಧಾನ ಕಾರ್ಯದರ್ಶಿ ಅಶೋಕ ಮೆಹತಾರವರೂ ತಮ್ಮ ರಾಜೀನಾಮೆಗಳನ್ನು ಒಪ್ಪಿಸಿದರೆಂದು ತಿಳಿದುಬಂದಿದೆ ಕಾಂಗ್ರೆಸ್ಸಿಗೆ ಸಂಸ್ಥೆಯ ಸಹಕಾರ ನೀಡುವ ವಿಷಯದಲ್ಲಿ ಬಹು ಮಂದಿ ಸದಸ್ಯರಿಗೂ ಅವರಿಗೂ ಉಂಟಾದ ಭಿನ್ನಾಭಿಪ್ರಾಯವೇ ಇವಕ್ಕೆ ಕಾರಣವೆಂದು ಗೊತ್ತಾಗಿದೆ

ಶಾಸನ ಸಭೆಯಲ್ಲಿ ೧೪೦ ಸ್ಥಾನಗಳನ್ನು ಕಲ್ಪಿಸಬೇಕು

ಗಡಿ ಸಮಿತಿಗೆ ಸಂಸ್ಥಾನದ ಪ್ರತಿನಿಧಿಗಳ ಮನವಿ

ಬೆಂಗಳೂರು ೧೬

ಕೇಂದ್ರ ಸರ್ಕಾರದವರು ನೇಮಿಸಿರುವ ಗಡಿ ನಿರ್ಧಾರಕ ಸಮಿತಿಯನ್ನು ನೆನ್ನೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀಗಳು ಸಿ ಆರ್ ಬಸಪ್ಪ ಮತ್ತು ಗುರುಪಾದಸ್ವಾಮಿ ಮತ್ತು ಶಾಸನ ಸಭಾಸದಸ್ಯರು ಶ್ರೀಗಳಾದ ಟಿ ಹನುಮಯ್ಯ, ಜಿ ನಾರಾಯಣಗೌಡ, ಬಿ ಪಿ ನಾಗರಾಜಮೂರ್ತಿ ಮತ್ತು ಎಂ ವಿ ರಾಮರಾವ್ ಭೇಟಿ ಮಾಡಿ ಸಂಸ್ಥಾನದ ಶಾಸನ ಸಭೆಯಲ್ಲಿ ಒಟ್ಟು ೧೪೦ ಸ್ಥಾನಗಳಿರಬೇಕೆಂದೂ ಪಾರ್ಲಿಮೆಂಟಿನ ಕಿರಿಯ ಸಭೆಯ ೧೪ ಸ್ಥಾನಗಳು ಮೈಸೂರಿನವರಿಗೆ ದೊರಕುವಂತಾಗಬೇಕೆಂದೂ ಒತ್ತಾಯ ಮಾಡಿದರು

ಪೆಟ್ರೋಲ್ ದುರುಪಯೋಗ ಆಪಾದನೆಗಾಗಿ ಬಂಧನ

ಪೆಟ್ರೋಲ್ ಮೇಲಿನ ಹತೋಟಿಯು ಜಾರಿಯಲ್ಲಿದ್ದಾಗ ಸುಮಾರು ೧೧ ಸಾವಿರ ಗ್ಯಾಲನ್ ಪೆಟ್ರೋಲಿನ ಕೂಪನ್ನುಗಳನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ಮೋಸಮಾಡಿದ ಆಪಾದನೆಗಾಗಿ ಬೊಂಬಾಯಿನ ಅಕೌಂಟ್ಸ್ ಶಾಖೆ ಡೆಪ್ಯುಟಿ ಡೈರೆಕ್ಟರ್ ಎಸ್ ಎ ದಾದ್ಲಾನಿ, ಅಸಿಸ್ಟೆಂಟ್ ಡೆಪ್ಯುಟಿ ಡೈರೆಕ್ಟರ್ ಎಸ್ ಎ ನಾಯರ್ ಮತ್ತು ಗುಮಾಸ್ತೆ ಕೆ ಜೆ ಹಿಂಗ್‌ನನ್ ಎಂಬುವರನ್ನು ಮೊನ್ನೆ ಬಂಧಿಸಿ, ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ ಅವರನ್ನು ಜಾಮೀನಿನಮೇಲೆ ಬಿಡಲಾಗಿದೆ ಮೂವರನ್ನೂ ಕೆಲಸದಿಂದ ಸಸ್ಪೆಂಡ್ ಮಾಡಲಾಗಿದೆ

ಶಿವನಸಮುದ್ರದ ವಿದ್ಯುತ್ ಕೇಂದ್ರದ ಕೆಲಸ ಬಂದ್

ಬೆಂಗಳೂರು ೧೬

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ತೀರಾ ಕಡಿಮೆಯಾಗಿ ಶಿಂಷಾ ಮತ್ತು ಶಿವನಸಮುದ್ರಗಳಲ್ಲಿ ವಿದ್ಯುದುತ್ಪಾದನೆಗೆ ಸಾಕಾಗುವಷ್ಟು ನೀರು ಒದಗದಿರುವುದರಿಂದ ನೆನ್ನೆ ಬೆಳಗ್ಗೆ ೭ ಘಂಟೆಯಿಂದ ಅಲ್ಲಿನ ವಿದ್ಯುತ್‌ಕೇಂದ್ರದ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ ಸಂಸ್ಥಾನದಲ್ಲಿ ಇಂತಹ ಪರಿಸ್ಥಿತಿಯು ಹಿಂದೆಂದೂ ಸಂಭವಿಸಿರಲಿಲ್ಲ ಇದರಿಂದ ಮೈಸೂರು, ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿನ ಕೈಗಾರಿಕೆಗಳು ಪೂರ್ಣವಾಗಿ ನಿಲ್ಲುವ ಪರಿಸ್ಥಿತಿ ಒದಗಿದೆಯೆಂದು ಹೇಳಲಾಗಿದೆ

ಶಿವನಸಮುದ್ರ ಮತ್ತು ಶಿಂಷಾಗಳಲ್ಲಿ ಈಗ ದೊರೆಯುತ್ತಿರುವ ಅತ್ಯಲ್ಪ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಆಸ್ಪತ್ರೆ, ನೀರು ಎತ್ತುವ ಸ್ಟೇಷನ್ನುಗಳು ಮತ್ತು ಕೆ ಜಿ ಎಫ್. ಗಣಿಗಳಿಂದ ನೀರೆತ್ತುವುದು ಈ ಕೆಲಸಗಳಿಗೂ ಮತ್ತು ಮನೆ ದೀಪಗಳಿಗೂ ಬಳಸಲಾಗುವುದು ಮೈಸೂರು ಮತ್ತು ಬೆಂಗಳೂರುನಗರಗಳಿಗೆ ಜೋಗದಿಂದ ವಿದ್ಯುಚ್ಛಕ್ತಿಯು ಸರಬರಾಜಾಗುತ್ತಿರುವುದರಿಂದ ಅಲ್ಲಿನ ಕೈಗಾರಿಕೆಗಳಿಗೆ ಅವನ್ನು ಮುಚ್ಚುವ ಪ್ರಮೇಯ ಬರುವುದಿಲ್ಲವೆಂದೂ ತಿಳಿದುಬಂದಿದೆ

ದೇಶದಲ್ಲಿ ೧೬೦ ಕೋಟಿ ರೂ. ವರಮಾನ ತೆರಿಗೆ ಬಾಕಿ

ಭಾರತದಲ್ಲಿ ೧೬೦ ಕೋಟಿ ರೂ ಗಳಷ್ಟು ವರಮಾನ ತೆರಿಗೆ ಬಾಕಿಯು ಬರಬೇಕಾಗಿರುವುದೆಂದೂ, ಅದರ ವಸೂಲಾತಿಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಲಾಗುವುದಾಗಿಯೂ ಕೇಂದ್ರದ ಉಪ ಮಂತ್ರಿ ಎಂ ಸಿ ಷಾರವರು ತಿಳಿಸಿರುತ್ತಾರೆ

ಶಾಶ್ವತ ಶ್ರೀವೈಷ್ಣವ ಯುವಕ ವಿದ್ಯಾರ್ಥಿ ನಿಲಯ

ರಾಜಧಾನಿಯ ಮಂಡಿ ಮೊಹಲ್ಲದ ಪಿಳ್ಳೆ ರಸ್ತೆಯಲ್ಲಿರುವ ಶಾಶ್ವತ ಶ್ರೀವೈಷ್ಣವ ಯುವಕ ಸಂಘದ ವಿದ್ಯಾರ್ಥಿ ನಿಲಯಕ್ಕೆ ಸೇರಲಿಚ್ಛಿಸುವ, ಸವರ್ಣ ಜನಾಂಗದ, ಶಾಲಾ ಕಾಲೇಜು ವಿದ್ಯಾರ್ಥಿಗಳು ಇದೇ ತಿಂಗಳು ೩೦ ನೇ ತಾರೀಖಿನೊಳಗೆ ನಿಲಯದ ಅಧ್ಯಕ್ಷರಿಗೆ ಅರ್ಜಿಗಳನ್ನು ಕಳುಹಿಸಬಹುದೆಂದು ತಿಳಿಸಲಾಗಿದೆ

ಕಿರಿಯರ ತಂಡದ ವಾರ್ಷಿಕೋತ್ಸವ

ರಾಜಧಾನಿಯ ಕಿರಿಯರ ತಂಡದ ಪ್ರಥಮ ವಾರ್ಷಿಕೋತ್ಸವವು ... [illegible]

... ರಾ ಸುಬ್ಬರಾಯರು ... ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಂ ... ದ ಪ್ರಾರ್ಥನೆ ... ನಂತರ ಶ್ರೀ ಎಂ ಎಸ್ ಸೀತಾರಾಮಯ್ಯನವರು ... ವರದಿಯ ... ಮನರಂಜನೆ ... ಸಂಘದ ... ಕಲಹೆಯಿತ್ತರು ಜಾತಿ ಭೇದಗಳನ್ನು ತೊಡೆದು ಒಗ್ಗಟ್ಟಿನಿಂದ ನಾಡಿನ ಸೇವೆ ಮಾಡಬೇಕೆಂದು ... ಸಂಘದ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದು ಶ್ರೀ ತ ರಾ ಸುಬ್ಬರಾವ್ ಅಧ್ಯಕ್ಷರು, ಶ್ರೀ ಎ ಸೀತಾರಾಮಯ್ಯ ಉಪಾಧ್ಯಕ್ಷರು, ಶ್ರೀ ಎಂ ಎಸ್ ಸೀತಾರಾಮಯ್ಯ ಕಾರ್ಯದರ್ಶಿ ಶ್ರೀ ಎಂ ಕೆ ವೆಂಕಟಪ್ಪ ಉಪ ಕಾರ್ಯದರ್ಶಿ, ಶ್ರೀ ಬಿ ... ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು ೧೦ ಜನರ ಕಾರ್ಯಕಾರಿ ಸಮಿತಿ ಚುನಾಯಿತರಾದರು

ಆಂಧ್ರಕ್ಕೆ ನಿಜಾಮರ ರಾಜಪ್ರಮುಖತ್ವ ಬೇಡ

ಆಂಧ್ರ ಪ್ರಾಂತಕ್ಕೆ ರಾಜಪ್ರಮುಖರಾಗಿ ನಿಜಾಮರನ್ನು ನೇಮಿಸುವಂತೆ ಆಂಧ್ರ ಶಾಸನ ಸಭಾ ಸದಸ್ಯರೊಬ್ಬರು ಮಾಡಿರುವ ಸಲಹೆಯನ್ನು ಹೈದರಾಬಾದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಮಾನಂದ ತೀರ್ಥರು ವಿರೋಧಿಸಿರುತ್ತಾರೆ ರಾಜಪ್ರಮುಖತ್ವ ಪದ್ಧತಿಯು ರದ್ದಾಗಬೇಕಾಗಿರುವುದರಿಂದ ಈ ಸಲಹೆಯು ಅಂಗೀಕಾರಾರ್ಹವಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು

○ ಎವರೆಸ್ಟ್ ಪರ್ವತದ ಆರೋಹಣ ಮಾಡಲು ಹೋದವರ ಪೈಕಿ ಒಬ್ಬರ ಹೆಸರನ್ನು ಆ ಶಿಖರಕ್ಕೆ ಇಡಲು ಬ್ರಿಟಿಷ್ ಪರ್ವತಾರೋಹಿಗಳ ತಂಡದ ಮುಖಂಡರಾದ ಹಂಟ್ ರವರು ವಿರೋಧವನ್ನು ಸೂಚಿಸಿರುತ್ತಾರೆ

ದಿ ಲ್ ಖು ಷ್

(ಪ್ರಕಂಸೆ)

1. ಜಿಡುಬಿನ ಕಳೆಯನ್ನೂ, ಮುಖದ ಕಪ್ಪು ... [illegible]

2. ... [illegible] ... ಸೇವಿಸಿದ ಕೂಡಲೇ ನಿಲ್ಲಿಸುತ್ತದೆ

3. ದಂಪತಿಗಳ ದಾಂಪತ್ಯ ಜೀವಿತದಲ್ಲಿ ಭಗ್ನವ ಸನೋರಥರನ್ನಾಗಿ ಮಾಡುವ ರಕ್ತ ಕೊರತೆ (Anaemia), ಧಾತು ನಷ್ಟ, ಧಾತು ದೌರ್ಬಲ್ಯ ಮತ್ತು ನಿಶ್ಯಕ್ತಿ-ಇವುಗಳನ್ನು ನಿವಾರಿಸಿ ದ ಪತ್ನಿಗೆ ಸಂತಾನವನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದೆಂಬುದರಲ್ಲಿ ಆಕ್ಷೇಪಣೆಯಿಲ್ಲ

3. ಮೂಲವ್ಯಾಧಿಗೆ ಪರಮೌಷಧ

ವಸಾನಾಂತರ ಮೂಲವ್ಯಾಧಿಯಿಂದ ನರಳುತ್ತಿದ್ದ ನಾನು ಚಿಕಿತ್ಸೆಗಳನ್ನು ಮಾಡಿದಾಗ್ಯೂ ನಿರಾಶನಾಗಿ, ಆಪರೇಷನ್ ಕೊನೆಯದೆಂದಾಗ ಧನ್ವಂತರಿಗಳಿಂದು ಪ್ರಸಿದ್ಧ ಭಾವಿತದಲ್ಲಿರುವ ಶ್ರೀ ಶಾಮಣ್ಣನವರೇ ನನ್ನನ್ನು ಈ ಮಹಾ ವ್ಯಾಧಿಯಿಂದ ಪಾರು ಮಾಡಿದರು

ಶ್ರೀ ಬಿ ವೆಂಕಟಸುಬ್ಬಾ ಜೋಯಿಸ್, ರೈಲ್ವೆ ಪೋಸ್ಟ್ ಆಫೀಸ್, ಮೈಸೂರು)

ಎಸ್ ಶಾಮಣ್ಣ, ಸ್ಪೆಷಲಿಸ್ಟ್,
2810 ಲಿವರ್ ಅಂಡ್ ಸ್ಪ್ಲೀನ್ ಔಷಧಾಲಯ, 1ನೇ ನಂ ಕ್ರಾಸ್ ರಸ್ತೆ ಮನೆ
ಚಾಮುಂಡಿಪುರಂ, ಮೈಸೂರು

ವಿವಾಹೋತ್ಸವ ಸಮಾಚಾರಗಳು

ಬೆಂಗಳೂರ ಗವರ್ನಮೆಂಟ್ ಪ್ರೆಸ್ಸಿನಲ್ಲಿರುವ ಶ್ರೀ ಎಂ ವಾಸುದೇವಯ್ಯನವರು ತಮ್ಮ ಅಣ್ಣಂದಿರಾದ, ದಿವಂಗತ ನಾರಾಯಣರಾಯರ ಪುತ್ರಿ ಸೌ|| ರತ್ನಮ್ಮನನ್ನು ಚಿಕ್ಕೂರಿನ ದಿವಂಗತ ಅನಂತರಂಗಯ್ಯನವರ ದತ್ತು ಪುತ್ರ ಶ್ರೀ ಕೆ ರಂಗಸ್ವಾಮಿಯವರಿಗೆ ಕೊಟ್ಟು ಈ ದಿನ ವಿವಾಹವನ್ನೂ ಮತ್ತು, ಮೊಲ್ಕಂಡ ನಾರಾಯಣರಾಯರ ಪುತ್ರ ಚಿ|| ಗೋಪಾಲಕೃಷ್ಣನಿಗೆ ನೆನ್ನೆ ಬ್ರಹ್ಮೋಪದೇಶವನ್ನೂ ರಾಜಧಾನಿಯಲ್ಲಿ ನೆರವೇರಿಸಿದರು

ಆ ಯು ರ್ವಾ ಣಿ

ತುಮಕೂರಿನ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಆರ್ ಎಸ್. ಆರಾಧ್ಯರವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಆಯುರ್ವಾಣಿ ದಿನ ಪತ್ರಿಕೆಯ ೬೨ ನೇ ಸಂಚಿಕೆಯ ಪ್ರತಿಯೊಂದು ನಮ್ಮ ಕೈಸೇರಿದೆ

ಬೆಂಗಳೂರಿನಲ್ಲಿರುವ ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳವರು ತಮ್ಮ ಪುತ್ರ ಶ್ರೀ ನಾಗೇಶ್ವರರವರಿಗೆ ರಾಜಧಾನಿಯ ಶ್ರೀ ಸಿ ಎನ್ ನಾರಾಯಣಶಾಸ್ತ್ರಿರ ಪುತ್ರಿ ಸೌ|| ಅನುಸೂಯಾರವರನ್ನು ತಂದುಕೊಂಡು ಈ ದಿನ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

SRI GAYATHRI TALKIES
5TH ANNIVERSARY
Special Picture !

From 18 6 53 : Daily 3 Shows

SARADAVILAS COLLEGE, MYSORE
TENDER NOTIFICATION
No. 72 Dated 16 6 53

Sealed tenders will be received at the office of the Hon Secretary, Saradavilas College, Mysore up to 5 P. M on 25 6-1953 for Constructing the two side-wings of the first floor of the existing Intermediate College building at an estimated cost of Rs 2?,000 for which an earnest money deposit of Rs 1,4?0 is required to be Credited to the current account of Saradavilas College Mysore, at the Bank of Mysore Ltd , Market Sub Branch, Mysore and the challan presented with the tender Plan and description of the work may be seen in the College office during the working hours

HON. SECRETARY,
Saradavilas College Mysore.

Edited, Printed and Published by A R Nagarajan at Sadhvi Press, D. Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೮-೬-೧೯೫೩ [ಸಂಚಿಕೆ ೨೬೩

ಪೂರ್ವ ಬರ್ಲಿನ್ನಿನಲ್ಲಿ ಮಾರ್ಷಲ್ ಲಾ ಜಾರಿ

ವಸಂತ ಸಾಹಿತ್ಯೋತ್ಸವ

ಮೈಸೂರು ೧೮

ರಾಜಧಾನಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಏರ್ಪಾಡಾಗಿದ್ದ ವಸಂತ ಸಾಹಿತ್ಯೋತ್ಸವವು ಕಳೆದ ೧೩, ಮತ್ತು ೧೪ ನೇ ತಾ|| ಪುರಭವನದಲ್ಲಿ ನಡೆಯಿತು ಹಿಂದಿನ ದಿನ ಉತ್ಸವದ ಪ್ರಾರಂಭೋತ್ಸವವು ನೆರವೇರಿದ್ದಿತು ೧೩ ನೇ ತಾ|| ಉತ್ಸವಕ್ಕೆ ಶ್ರೀ ಎನ್ ಭದ್ರಯ್ಯನವರು ಅಧ್ಯಕ್ಷತೆ ವಹಿಸಿದ್ದರು ಕುಮಾರಿ ಸುನಂದಾರವರಿಂದ ಪ್ರಾರ್ಥನೆಯಾದನಂತರ ಶ್ರೀ ಎಸ್ ವಿ ಶ್ರೀನಿವಾಸರಾಯರು ಜನ ಜೀವನವೆಂಬ ವಿಷಯವನ್ನು ಕುರಿತು ಭಾಷಣ ಮಾಡಿದರು ಅಧ್ಯಕ್ಷರ ಭಾಷಣಾನಂತರ ಗುಂಡೂ ಮಂಡಲಿಯವರಿಂದ ಅಪ್ಪ್ಯಾಪ್ಪ ಗಂಡ ನಾಟಕವು ಅಭಿನಯಿಸಲ್ಪಟ್ಟಿತು

೧೪ ನೇ ತಾ|| ಕಾಲೇಜಿನ ರಾಜ್ಯಶಾಸ್ತ್ರದ ಪ್ರೊಫೆಸರ್ ಶ್ರೀ ಎಲ್ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಉತ್ಸವದ ಮುಕ್ತಾಯ ಸಮಾರಂಭವು ಜರುಗಿತು ಕುಮಾರಿ ಚಂಪಾ ಮತ್ತು ಲಲಿತಾರವರಿಂದ ಪ್ರಾರ್ಥನೆಯಾದಮೇಲೆ ಶ್ರೀ ಎಂ ಯಾಮುನಾಚಾರ್ಯರು ಉಪನ್ಯಾಸ ಮಾಡಿದರು ಶ್ರೀಮತಿಗಳಾದ ವಿಜಯಲಕ್ಷ್ಮಿ ಮತ್ತು ವಿಶಾಲಾಕ್ಷಿಯವರಿಂದ ಸಂಗೀತವೂ, ಶಿಶುಸಾಹಿತ್ಯ ಸಂಘದವರಿಂದ ನೃತ್ಯ ಪ್ರದರ್ಶನವೂ, ಶ್ರೀಗಳಾದ ನಂ ಅಶ್ವತ್ಥನಾರಾಯಣ ಮತ್ತು ಕೆ ಎ ರಾಜಗೋಪಾಲ್‌ರವರಿಂದ ಕಾವ್ಯವಾಚನವೂ, ಕರ್ನಾಟಕ ಸಂಘದ ಕಲಾವಿದರಿಂದ ಕಂಬಳಿ ಸೇವೆ ಮತ್ತು ವಾರ್ಷಿಕೋತ್ಸವ ಎಂಬ ನಾಟಕಗಳೂ ಆದುವು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರ್ನಾಟಕ ಸಂಘಗಳ ನಿಲುವೇನೆಂಬುವನ್ನು ವಿವರಿಸಿದರು

ಸಕ್ಕರೆ ಬೆಲೆ ಇಳಿಸಲು ಕ್ರಮ

ಕಳೆದ ಕೆಲವು ವಾರಗಳಿಂದ ಸಕ್ಕರೆಯ ಧಾರಣೆಯು ಏರುತ್ತಿರುವುದೆಂದೂ, ಇದನ್ನು ತಡೆಯಲು ಕೇಂದ್ರ ಸರ್ಕಾರದವರು ನಿರ್ಧರಿಸಿ ಈಗ ಸಂಗ್ರಹಿಸಲಾಗಿರುವ ದಾಸ್ತಾನನ್ನು ಎಲ್ಲ ಪ್ರದೇಶಗಳಿಗೂ ವಿಶೇಷ ರೈಲುಗಳ ಮೂಲಕ ರವಾನಿಸುವುದಲ್ಲದೆ, ವಿದೇಶಗಳಿಂದ ಆಮದು ಮಾಡಲಾಗುವುದೆಂದೂ ಕೇಂದ್ರ ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿರುತ್ತದೆ ಈ ಕ್ರಮಗಳಿಂದಲೂ ಬೆಲೆಯು ಇಳಿಯದಿದ್ದರೆ, ಅನಂತರ ವ್ಯಾಪಾರಿಗಾರರು ಮತ್ತು ದಾಸ್ತಾನುಗಾರರು ರಹದಾರಿ ಪಡೆಯಬೇಕೆಂದು ವಿಧಾಯಕ ಮಾಡಿ ಸಕ್ಕರೆಯ ಸಂಗ್ರಹಣೆ ಕಾರ್ಯಗಳನ್ನೂ ಆರಂಭಿಸಲಾಗುವುದೆಂದೂ ಎಚ್ಚರಿಸಲಾಗಿದೆ

ಮುಖರ್ಜಿ ಬಂಧನದ ವಿರುದ್ಧ ಹೇಬಿಯಸ್ ಕಾರ್ಪಸ್ ಅರ್ಜಿ

ಅನುಮತಿಯಿಲ್ಲದೆ ಕಾಶ್ಮೀರವನ್ನು ಪ್ರವೇಶಿಸಿದ ಭಾರತೀಯ ಜನ ಸಂಘದ ಅಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿಯವರನ್ನು ಕಾಶ್ಮೀರದಲ್ಲಿ ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟಿರುವುದರ ವಿರುದ್ಧವಾಗಿ ಶ್ರೀ ದೇವಕಿ ಬೋಸ್‌ರವರು ಅಲ್ಲಿನ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯೊಂದನ್ನು ಸಲ್ಲಿಸಿರುವರೆಂದು ಗೊತ್ತಾಗಿದೆ.

ಪೂರ್ವ ಬರ್ಲಿನ್ನಿನಲ್ಲಿ ಮಾರ್ಷಲ್ ಲಾ ಜಾರಿ

ಬರ್ಲಿನ್ ನಗರದ ರಷ್ಯನರ ಪ್ರದೇಶದಲ್ಲಿ ಸೋವಿಯಟ್ ಸೈನಿಕರು ನೆನ್ನೆ ಪಾಶ್ಚಾತ್ಯ ಪ್ರದರ್ಶನಕಾರರ ಮೇಲೆ ಗುಂಡು ಹಾರಿಸಿದರು ಬ್ರ್ಯಾಂಡೆನ್‌ಬರ್ಗ್ ಹೆಬ್ಬಾಗಿಲಿನ ಮೇಲಿದ್ದ ರಷ್ಯಾ ಧ್ವಜವನ್ನು ೬ ಜನ ಕಾರ್ಮಿಕರು ಹರಿದು ಹಾಕಿದಾಗ ಈ ಕ್ರಮವು ನಡೆಯಿತು ಪೂರ್ವ ಬರ್ಲಿನ್ನಿನಲ್ಲೆಲ್ಲಾ ಮಾರ್ಷಲ್ ಲಾ ವನ್ನು ರಷ್ಯನರು ಘೋಷಿಸಿರುವರೆಂದು ವರದಿಯಾಗಿದೆ ಪೂರ್ವ ಬರ್ಲಿನ್ನಿನಲ್ಲಿ ೩೦ ರಿಂದ ೫೦ ಸಾವಿರ ಕಾರ್ಮಿಕರು ಕೆಲಸಕ್ಕೆ ಹೋಗದೆ ಪ್ರದರ್ಶನಗಳನ್ನು ನಡೆಸಿದರೆಂದೂ, ಪಶ್ಚಿಮ ಬರ್ಲಿನ್ ಕಡೆ ಇದ್ದವರು ಇವರಿಗೆ ಉತ್ತೇಜನವಿತ್ತರೆಂದೂ ಹೇಳಲಾಗಿದೆ ಕಾರ್ಮಿಕರು ತಮ್ಮ ದೇಶದ ಸರ್ಕಾರದವರೊಡನೆ ಹೇಗೆ ಬೇಕಾದರೂ ವರ್ತಿಸಬಹುದೆಂದೂ, ಆದರೆ ರಷ್ಯನರ ತೊಡವಿಗೆ ಹೋಗಲೂ ಕಡೆಂದೂ ಅವರ ಮುಖಂಡರು ಸೂಚಿಸಿದ್ದರು ಆದರೆ ಇಬ್ಬರು ಕಾರ್ಮಿಕರು ತತ್ತ್ರ ಮೇಲೆ ನಾಯಕರ ಆಜ್ಞೆಯನ್ನು ಅವರು ಪಾಲಿಸಲಿಲ್ಲವೆಂದು ಹೇಳಲಾಗಿದೆ ಗಂಡಿನೇಟಿನಿಂದ ಅನೇಕರಿಗೆ ಪೆಟ್ಟುಬಿದ್ದಿದೆ

ಕೊರಿಯಾ ಶಾಂತಿ ಸ್ಥಾಪನೆ ರೇಖೆ ಬಗ್ಗೆ ಒಪ್ಪಂದ

ಕೊರಿಯದಲ್ಲಿ ಹೋರಾಡುತ್ತಿರುವ ಎರಡು ಸೈನ್ಯಗಳ ನಡುವೆ ಶಾಂತಿ ಸ್ಥಾಪನಾ ರೇಖೆಯನ್ನು ಶಾಂತಿ ಒಪ್ಪಂದವಾದ ನಂತರ ಗೊತ್ತುಪಡಿಸುವ ಬಗ್ಗೆ ಕಮ್ಯೂನಿಸ್ಟರಿಗೂ ವಿಶ್ವಸಂಸ್ಥೆ ಪ್ರತಿನಿಧಿಗಳಿಗೂ ಒಪ್ಪಿಗೆಯಾಗಿರುತ್ತದೆ ಶಾಂತಿ ಸ್ಥಾಪನೆಯಾಗಲು ಇನ್ನು ಒಂದು ವಾರ ಹಿಡಿಯಬಹುದೆಂದು ಹೇಳಲಾಗಿದೆ. ಶಾಂತಿ ಒಪ್ಪಂದಕ್ಕೆ ಇದೇ ತಿಂಗಳು ೨೫ ನೇ ತಾ|| ನ ದಿನ ರುಜು ಬೀಳುವುದೆಂದು ನಂಬಲಾಗಿದೆ

○ ಮದ್ರಾಸಿನಲ್ಲಿ ಪ್ರತಿ ಜಿಲ್ಲೆಯಿಂದಲೂ ತಲಾ ೨೫ ರೂ ನಂತೆ ಸಾರ್ವಜನಿಕ ಸಾಲವನ್ನು ಅಲ್ಲಿನ ಸರ್ಕಾರದವರು ಎತ್ತುವರು ಆ ಹಣವನ್ನು ಪ್ರಾಂತದ ಅಭಿವೃದ್ಧಿ ಯೋಜನೆಗೆ ವಿನಿಯೋಗಿಸಲಾಗುವುದು

ಎ. ಎ. ಕೃಷ್ಣಸ್ವಾಮಿ ಅಯ್ಯಂಗಾರ್ಯರ ನಿಧನ

ಮೈಸೂರು ೧೮

ಮಹಾರಾಜಾ ಕಾಲೇಜಿನ ನಿವೃತ್ತ ಗಣಿತ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಎ ಎ ಕೃಷ್ಣಸ್ವಾಮಯ್ಯಂಗಾರ್ಯರು ನೆನ್ನೆ ಸಂಜೆ ಹೃದಯ ವೇದನೆಯಿಂದ ಮೃತರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ ನೆನ್ನೆ ಸಂಜೆ ಸುಮಾರು ಏಳು ಗಂಟೆ ಸಮಯದಲ್ಲಿ ಅವರು ಇಲ್ಲಿನ ಲ್ಯಾನ್ಸ್‌ಡೌನ್ ಬಜಾರಿನ ಶ್ರೀ ಎಂ ಸಿ ಕುಮಾರ್‌ರವರ ಅಂಗಡಿಯಲ್ಲಿ ಕುಳಿತು ಪತ್ರಿಕೆಯನ್ನು ಓದುತ್ತಾ, ಹಾಗೆಯೇ ಕುರ್ಚಿಯಿಂದ ಕೆಳಗೆ ಬಿದ್ದರು. ನೋಡುವಲ್ಲಿ ಪ್ರಾಣವು ಹೋಗಿದ್ದಿತು ಅನೇಕ ವಿದ್ಯಾರ್ಥಿಗಳು, ಪರಿಚಯಸ್ಥರು ಮತ್ತು ಇತರರು ಅಲ್ಲಿ ನೆರೆದಿದ್ದರು ಅವರಿಗೆ ೬೨ ವರ್ಷ ವಯಸ್ಸಾಗಿದ್ದಿತು ವಾಲ್ಟೇರ್ ವಿಶ್ವವಿದ್ಯಾಲಯದಲ್ಲೂ ಸಹ ಅವರು ಕೆಲಸದಲ್ಲಿದ್ದರು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

ರೋಸೆನ್‌ಬರ್ಗ್ ದಂಪತಿಗಳ ಫಾಸಿಗೆ ತಡೆ ಆಜ್ಞೆ

ಅಣು ರಹಸ್ಯವನ್ನು ರಷ್ಯಕ್ಕೆ ಬಿಟ್ಟು ಕೊಟ್ಟ ಸಂಬಂಧವಾಗಿ ಮರಣ ದಂಡನೆಗೆ ಗುರಿಯಾಗಿರುವ ರೋಸೆನ್‌ಬರ್ಗ್ ದಂಪತಿಗಳನ್ನು ಗಲ್ಲಿಗೆ ಹಾಕುವುದಕ್ಕೆ ತಡೆ ಆಜ್ಞೆಯನ್ನು ಅಮೆರಿಕಾ ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶರು ಕೊಟ್ಟಿರುವರು ಶಿಕ್ಷೆಯ ವಿರುದ್ಧವಾಗಿ ಫುಲ್‌ಬೆಂಚಿಗೆ ಅಪೀಲು ಮಾಡಲಾಗಿದೆ

ಮಗು ಸಮೇತ ತೊಟ್ಟಿಲು ಹಾರಿತು

ಔರಂಗಾಬಾದಿನಲ್ಲಿ ಮೊನ್ನೆ ಜೋರಾದ ಗಾಳಿ ಬೀಸಿದ ಸಂಬಂಧದಲ್ಲಿ ಮನೆಯೊಂದರ ಮೇಲೆ ಹಾಸಿದ್ದ ತಗಡಿನ ಮೇಲ್ಛಾವಣಿಯು ಗಾಳಿಗೆ ಹಾರಿಹೋಯಿತು ಅದಕ್ಕೆ ತೊಟ್ಟಿಲೊಂದನ್ನು ಕಟ್ಟಲಾಗಿದ್ದಿತು ದೂರದಲ್ಲಿ ಬಿದ್ದ ಆ ತೊಟ್ಟಿಲನ್ನು ಮಾತಾಪಿತೃಗಳು ಪರೀಕ್ಷಿಸಲಾಗಿ, ತೊಟ್ಟಿಲಲ್ಲಿದ್ದ ಅವರ ಮಗುವು ಸತ್ತುಹೋಗಿದ್ದಿತು.

ಶ್ರೀಟರ್ ಕೊಲೆ ಬಗ್ಗೆ ಹೆಚ್ಚಿನ ವಿವರ

ಬೆಂಗಳೂರು ೧೮

ಮಿಸ್ ಶ್ರೀಟರ್‌ರವರ ಕೊಲೆ ಸಂಬಂಧವಾಗಿ ದಸ್ತಗಿರಿಯಾಗಿರುವ ಆದಿ ದ್ರಾವಿಡ ಜಾತಿಯ ಕುಪ್ಪುಸ್ವಾಮಿ ಎಂಬ ಕೊಲೆಗಾರನನ್ನು ನೆನ್ನೆ ಸಿಟಿ ಪ್ರದೇಶದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ೨೫ ನೇ ತಾ|| ವರೆಗೂ ಪೋಲೀಸು ವಶದಲ್ಲಿರುವಂತೆ ರಿಮ್ಯಾಂಡು ಪಡೆಯಲಾಯಿತು ಅವನು ಕೊಟ್ಟ ಸುದ್ದಿ, ಪೋಲೀಸರು ನೆನ್ನೆ ಪ್ರಕಟಿಸಿರುವ ಹೇಳಿಕೆಯಲ್ಲಿ ಆಯುಧದ ಬಗ್ಗೆ ಶೋಧನೆ ನಡೆಸಿದರು ಇನ್ನೂ ಯಾವುದೂ ಸಿಕ್ಕಿಲ್ಲ ಕೊಲೆಯಾದ ರಾತ್ರಿ ಅವನು ಕಳುವಿನ ಉದ್ದೇಶದಿಂದ ಅವರ ಮನೆ ಕಾಂಪೌಂಡನ್ನು ಹಾರಿದಾಗ ಒಂದು ನಾಯಿಯು ಬೊಗಳಿತೆಂದೂ, ಆ ಹೈಲ್ಯಾಂಡ್ಸ್ ನಂಬರಿನ ಬಾಗಿಲನ್ನು ಬಲಾತ್ಕಾರವಾಗಿ ತೆರೆದು ಒಳಗೆ ಹೋದುದಾಗಿಯೂ, ಆಗ ತಟ್ಟನೆ ಶ್ರೀಟರ್‌ರು ಅಲ್ಲಿಗೆ ಬಂದು ಅವನನ್ನು ಹಿಡಿದು, ಹೋರಾಡುತ್ತಾ ಒಳಗಡೆ ಎಳೆದುಕೊಂಡು ಹೋದುದಾಗಿಯೂ, ಅಲ್ಲಿ ಅವನು ಆಕೆಯನ್ನು ಹೊಟ್ಟೆಯಿಂದ ಹಿಡಿದು ಉರುಳಿಸಿದುದಾಗಿಯೂ ಹೇಳಲಾಗಿದೆ ಪಕ್ಕ ಮಾರನೆದಿನ ಆ ನೈಟಿಯನ್ನು ತೊಳೆದುಕೊಂಡು ಆಕೆಯ ಹೆಸರನ್ನು ಶೋಧಿಸಿ ಬಂದಿದ್ದ ಅಲ್ಲಿ ಸಿಕ್ಕಿದ್ದ ಚೆಪ್ಪಲಿ ಪಡೆದು ನಗರದ ಇತರರ ಮನೆಗಳನ್ನು ಅಪಹರಿಸಿ ಪರಾರಿಯಾದನೆಂದೂ, ಎರಡು ದಿನಗಳ ಹಿಂದೆ ಬೀದಿ ಕೊಳ್ಳಲು ಒಂದು ಅಂಗಡಿಗೆ ಹೋಗಿ ಚೆಪ್ಪಲಿಗಳನ್ನು ತೋರಿಸಿದಾಗ, ಒಬ್ಬ ಪೋಲೀಸರಿಗೆ ಅನುಮಾನ ಬಂದು, ಅವನು ಅದನ್ನು ಪರೀಕ್ಷಿಸಿ, ಮೇಲಧಿಕಾರಿಗಳಿಗೆ ವರ್ತಮಾನ ಕಳಿಸಿದನೆಂದೂ ಹೇಳಲಾಗಿದೆ ನೆನ್ನೆ ಕುಪ್ಪುಸ್ವಾಮಿಯು ಗಣ್ ಮೆಟಲ್ ಒಂದನ್ನು ಮಾರುತ್ತಿದ್ದಾಗ ಅದರ ಮೇಲೆ ಮಿಸ್ ಶ್ರೀಟರ್ ಎಂಬುದಾಗಿ ಬರೆದಿದ್ದುದನ್ನು ಹೋಟೆಲ್ ಸಂಶಯಬಂದು ಕಾನ್ಸ್‌ಟೇಬಲ್ ತಂಗವೇಲು ಅವನನ್ನು ದಸ್ತಗಿರಿ ಮಾಡಿದರು

ಕೊಳ್ಳೇಗಾಲದಲ್ಲಿ ಅಫೀಮು ದಾಸ್ತಾನು ಪತ್ತೆ

೩ ಲಕ್ಷ ರೂ ಬೆಲೆಯಾಗುವ ಸುಮಾರು ೬೦೦ ಪೌಂಡು ಅಫೀಮನ್ನು ಕೊಳ್ಳೇಗಾಲದಲ್ಲಿ ಕಳೆದ ಸೋಮವಾರ ಪತ್ತೆ ಹಚ್ಚಿ ವಶಪಡಿಸಿಕೊಳ್ಳಲಾಗಿದೆಯೆಂದೂ, ಅಫೀಮನ್ನು ೩೧ ಡಬ್ಬಿಗಳಲ್ಲಿಟ್ಟು ಬಟ್ಟೆ ಮೂಟೆಗಳಲ್ಲಿ ರಹಸ್ಯವಾಗಿಡಲಾಗಿದ್ದಿತೆಂದೂ, ಬೆಂಗಳೂರಿಯಿಂದ ಅದನ್ನು ಸಾಗಿಸಿಕೊಂಡು ಬರಲಾಗಿದ್ದಿತೆಂದೂ ವರದಿಯಾಗಿದೆ ಈ ಸಂಬಂಧವಾಗಿ ೫ ಜನರ ದಸ್ತಗಿರಿಯಾಗಿದೆ ದಕ್ಷಿಣ ಭಾರತದಲ್ಲೆಲ್ಲಾ ಇದೇ ಅತ್ಯಂತ ಭಾರಿ ಅಫೀಮು ದಾಸ್ತಾನಿನ ಪತ್ತೆಯೆಂದು ಹೇಳಲಾಗಿದೆ

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿ ಚುನಾವಣೆ

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ ಮೈಸೂರು ತಾಲ್ಲೂಕಿನ ಹೋಬಳಿಗಳಿಂದ ನಡೆದ ಚುನಾವಣೆಯಲ್ಲಿ ಕೆಳಗೆ ಕಂಡವರು ಆರಿಸಲ್ಪಟ್ಟಿದ್ದಾರೆ ಕಸಬಾ ಹೋಬಳಿ — ಶ್ರೀಗಳಾದ ಟಿ ವೆಂಕಟರಮಣಯ್ಯ ಮತ್ತು ಶಿವನಂಜೇಗೌಡ, ವರುಣಾ ಹೋಬಳಿ- ಶ್ರೀಗಳಾದ ಡಾ. ಕೆ. ಕುಮಾರಸ್ವಾಮಿ ಮತ್ತು ಕೆ. ಕೆಂಪೇಗೌಡ; ಇಲವಾಲದ ಹೋಬಳಿ- ಶ್ರೀ ಬಸವೇಗೌಡ ಮತ್ತು ನಾಗವಾಲದ ಶ್ರೀ ಈಶ್ವರ್; ಜಯಪುರ ಹೋಬಳಿ- ಶ್ರೀ ಜವನಪ್ಪ ಪತ್ತು ಶ್ರೀ ಸಿಂಧುವಳ್ಳಿ ಸುಬ್ರಹ್ಮಣ್ಯಂ.

ಡಾ|| ನಾಗನಗೌಡರಿಗೆ ಬಿನ್ನವತ್ತಳೆ

ನಂಜನಗೂಡು ೧೬.

ಮದ್ರಾಸಿನ ಮಂತ್ರಿಗಳಾದ ಡಾ|| ನಾಗನಗೌಡರಿಗೆ ನೆನ್ನೆ ಇಲ್ಲಿನ ಕುರುಬ [illegible] ಸಂಬಂಧದಲ್ಲಿ ಬಿನ್ನವತ್ತಳೆಯೊಂದನ್ನು ಶ್ರೀ ಎಂ. ರಾಜಯ್ಯನವರು ಅರ್ಪಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಮರಿಯಪ್ಪನವರು ವಹಿಸಿದ್ದರು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀರಣ್ಣಗೌಡ, ಶ್ರೀಗಳಾದ ಕೆ. ಚಾಮುಂಡಯ್ಯ, ಎ. ಶಿವಣ್ಣ ಮುಂತಾದವರು ಭಾಗವಹಿಸಿದ್ದರು. ಕನಕದಾಸ ವಿದ್ಯಾರ್ಥಿ ನಿಲಯವನ್ನು ಕಟ್ಟುವ [illegible] ಶ್ರೀ [illegible] ಚಿನ್ನದ ಸರ ಮತ್ತು ಜೊತೆ ವಸ್ತ್ರವನ್ನು ಶ್ರೀ ರಾಜಯ್ಯನವರು ಶ್ರೀ ವೀರಣ್ಣಗೌಡರ ಕೈಯಿಂದ ಕೊಡಿಸಿದರು. [illegible] ವಸ್ತ್ರಗಳನ್ನು ಕೊಡಲಾಯಿತು. ಶ್ರೀ ಟಿ. ಮರಿಯಪ್ಪನವರ [illegible] ವಿದ್ಯಾರ್ಥಿ ನಿಲಯಕ್ಕೆ [illegible] ಜನರು [illegible] ಭಾವನೆಯನ್ನು [illegible] ಡಾ|| ನಾಗನಗೌಡರು ಬಿನ್ನವತ್ತಳೆಗೆ [illegible] ಉತ್ತರವಿತ್ತರು.

ಐಶ್ವರ್ಯ ದಾನ

[illegible] ಕೋಡಿನ [illegible] ವರ್ಷದ [illegible] ತಮ್ಮ ವರಮಾನದಲ್ಲಿ [illegible] ಭಾಗವನ್ನು ಕೇರಳ ಭೂದಾನ ಸಮಿತಿಗೆ ದಾನ ಮಾಡುವುದಾಗಿ [illegible]

ವಿದ್ಯಾರ್ಥಿ ವೇತನಗಳಿಗಾಗಿ ಅರ್ಜಿ

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಡಿಗ್ರಿ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಗಳಿಗಾಗಿ ಪ್ರಿನ್ಸಿಪಾಲ್ ಪ್ರೆಸಿಡೆಂಟರಿಗೆ ಜುಲೈ ೩೦ನೇ ತಾರೀಕಿನವರೆಗೆ ಅರ್ಜಿ ಹಾಕಬಹುದೆಂದೂ, ಅರ್ಜಿ ನಮೂನೆಗಳನ್ನೂ ಇನ್ಸ್ಟಿಟ್ಯೂಟಿನಲ್ಲಿ, ಕಛೇರಿ ದಿನಗಳಲ್ಲಿ ಪಡೆಯಬಹುದೆಂದೂ ಸಂಸ್ಥೆಯ ಹಳೇ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಶ್ರೀ ಬಿ. ವಿ. [illegible] ತಿಳಿಸಿದ್ದಾರೆ.

THE CENTRAL COLLEGE OF COMMERCE,
[illegible] Buildings
MYSORE

Admissions to [illegible] Shorthand & Typewriting will be received on all working days [illegible]

V. Somasundaram,
Principal

ಮತ್ತೊಂದು ಗುಡ್ಸ್ ಮತ್ತು ಮಿಕ್ಸೆಡ್ ರೈಲ್ [illegible]

ಈ ತಿಂಗಳ [illegible] ತಾರೀಖಿನಿಂದ [illegible] ರಾತ್ರಿ [illegible] ಗೂಡ್ಸ್ ರೈಲಿಗೆ ಬದಲಾಗಿ [illegible] ರೈಲಿಗೂ ಶಿಕ್ಷಯಾಗಿ ಗೂಡ್ಸ್ ರೈಲಿನ [illegible] ಮಿಕ್ಸೆಡ್ ರೈಲಿನ [illegible] ಬೋಗಿಗಳಿಗೆ [illegible] ವರದಿಯಾಗಿದೆ [illegible] ಗೊತ್ತಾಗಿದೆ

ಕೊತಗದ್ದೆಗೆ ಜಿಲ್ಲಾಧಿಕಾರಿಗಳ ಭೇಟಿ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಬಿ. ಎಸ್. [illegible] ನೆನ್ನೆ [illegible] ಭೇಟಿಯಿತ್ತು [illegible] ಜಮೀನ [illegible] ಶ್ರೀ [illegible] ಮತ್ತು ಇತರರ [illegible] ಜಿಲ್ಲಾಧಿಕಾರಿಗಳನ್ನು [illegible] ಶ್ರೀ [illegible] ಕೊಟ್ಟಿದ್ದರು [illegible] ವಿವರವಾಗಿ [illegible] ಬರೆದು ಕೊಟ್ಟರೆ [illegible] ತಿಳಿದು ಬಂದಿದೆ

ಕೋಲಾರದಲ್ಲಿ ೩| ಅಂಗುಲ ಮಳೆ

ಕಳೆದ ರಾತ್ರಿ ಕೋಲಾರದಲ್ಲಿ ೩| ಅಂಗುಲ [illegible] ಮಳೆಯಾಗಿ [illegible] ಕೆರೆಗಳಿಗೆ [illegible] ನೀರು ಬಂದಿದೆ [illegible] ಇಂತಹ ಭಾರಿ ಮಳೆಯಾಗಿರಲಿಲ್ಲ.

ಶ್ರೀ
ಶ್ರೀನಿವಾಸ ಮಂದಿರ
3?9 [illegible] ರೋಡ್, ಮೈಸೂರು
ಇಲ್ಲಿ ಈ ಕೆಳಗೆ ಕಂಡ ಶಿಕ್ಷಣ ತರಗತಿಗಳ ನಡೆಯುತ್ತವೆ
ಪ್ರೈಮರಿ, ಮಿಡಲ್, ಹೈಸ್ಕೂಲ್, ಹಿಂದಿ, ಸಂಗೀತ ಮತ್ತು ಶಿಶುವಿಹಾರ
ವಿವರಗಳಿಗೆ ವಿಚಾರಿಸಿ

SRI GANESHA TALKIES
On 19—6—53 [illegible] only
NO ROOM FOR THE GROOM
[illegible]
STAGE TO TUCSON
[illegible]
TO DAY LAST DAY
THE WORLD IN HIS ARMS

ಮೈಸೂರು ಪೇಟೆ ಧಾರಣೆ

ಕಡಲೆ	[illegible]	[illegible]
[illegible]	[illegible]	
[illegible]	[illegible]	[illegible]
ತುರುಪಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಹುರುಳಿ	[illegible]	[illegible]
ಉದ್ದು	[illegible]	[illegible]
[illegible]	[illegible]	[illegible]
ಎಳ್ಳು	[illegible]	[illegible]
[illegible]	[illegible]	[illegible]
[illegible]	[illegible]	[illegible]
ಬೆಲ್ಲ	[illegible]	
ಕೊಬ್ಬರಿ	[illegible]	[illegible]

ಹಿಂದೀ ಪರೀಕ್ಷೆಗಳಿಗೆ ಅವೇದನ ಪತ್ರಗಳು

ಇದೇ [illegible] ತಿಂಗಳಿನಲ್ಲಿ ನಡೆಯುವ ಮದ್ರಾಸ ಸಾರಕ ಹಿಂದೀ ಪ್ರಚಾರ ಸಭೆಯ [illegible] ಮತ್ತು [illegible] ಪತ್ರಗಳನ್ನು [illegible] ವಿವರಗಳನ್ನು [illegible] ಪ್ರಚಾರ ಸಭಾ [illegible] ಪಡೆಯಬಹುದೆಂದು [illegible] ಮಾಡಿದ [illegible] ತಿಳಿಸುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಶ್ರೀನಿವಾಸ [illegible]

SARADA VILAS
INTER TUTORIAL SECTION
Classes Start On 20-6-53
Working hours 7-30 A. M. to 9-30 A. M.

Edited, Printed and Published by A. R. Nagarajan at Sadhvi Press D. Subbiah Road Mysore.

ಬನುಮಯ್ಯಾ ಕಾಲೇಜಿನಲ್ಲಿ ಬಿ. ಕಾಂ. ಏರ್ಪಡಬೇಕು

ಸ್ವಾಮಿ,

ರಾಜಧಾನಿಯ ಈ ಬನುಮಯ್ಯಾ ಕಾಲೇಜಿನಲ್ಲಿ ಕಳೆದ ೪ ವರ್ಷಗಳಿಂದಲೂ ಐ ಕಾಂ ತರಗತಿಗಳು ನಡೆಯುತ್ತಿವೆ. ಪ್ರತಿ ವರ್ಷವೂ ಅಲ್ಲಿ ನೂರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವರು. ಉತ್ತೀರ್ಣರಾದವರು ಬಿ. ಕಾಂ. ತರಗತಿಗೆ ಸೇರಲು ಇಲ್ಲಿ ಅವಕಾಶವಿಲ್ಲದೆ ಬೆಂಗಳೂರಿಗೆ ಹೋಗಬೇಕಾಗಿದೆ. ಇದರಿಂದ ಶ್ರಮವೂ ಅತಿಯಾದ ಧನವ್ಯಯವೂ ಆಗುವುದು ಮತ್ತು ಅನೇಕರಿಗೆ ವ್ಯಾಸಂಗವನ್ನು ಮುಂದುವರಿಸುವುದೇ ದುಸ್ತರವಾಗಿ ಪರಿಣಮಿಸಿದೆ. ವಿದ್ಯಾರ್ಥಿಗಳ ಈ ತೊಂದರೆಗಳನ್ನು ವಿಶ್ವವಿದ್ಯಾನಿಲಯದವರು ಗಮನಿಸಿ ಬನುಮಯ್ಯಾ ಕಾಲೇಜಿನಲ್ಲಿಯೇ ಬಿ. ಕಾಂ. ವ್ಯಾಸಂಗಕ್ಕೆ ಏರ್ಪಡಿಸುವುದು ವಿಹಿತವಾಗಿದೆ. ಇಲ್ಲಿಯೇ ವಿದ್ಯಾರ್ಥಿಗಳು ವ್ಯಾಸಂಗವನ್ನು ಮುಂದುವರಿಸಲು ಸಾಧ್ಯವಾಗುವಂತೆ ಅಧಿಕಾರಿಗಳು ಏರ್ಪಡಿಸಿ ವಿದ್ಯಾರ್ಥಿಗಳ ಮತ್ತು ಅವರ ಪೋಷಕ ವರ್ಗದವರ ಕೃತಜ್ಞತೆಗೆ ಪಾತ್ರರಾಗಲಿ ಎಂದು ಕೋರುತ್ತೇವೆ.

—ವಿದ್ಯಾರ್ಥಿ ಪೋಷಕರು

ಕಾಂಗ್ರೆಸ್ಸಿಗೆ ಕಾಣಿಕೆ

ಮೈಸೂರು ಪ್ರದೇಶ ಕಾಂಗ್ರೆಸ್ಸಿಗೆ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ ಮತ್ತು ಪರಿಮಳಮ್ಮ ಇವರ ವಿವಾಹದ ಸಂಬಂಧವಾಗಿ ೫೦ ರೂ ಗಳನ್ನು ಕಾಣಿಕೆ ಕೊಡಲಾಗಿದೆ. ನಂಜನಗೂಡಿನ ಶ್ರೀ ರಂಗಯ್ಯನವರ ಪುತ್ರಿಯ ವಿವಾಹದ ಸಂಬಂಧವಾಗಿ ಕಾಂಗ್ರೆಸ್ಸಿಗೆ ೧೦೧ ರೂ ಕಾಣಿಕೆ ಅರ್ಪಿಸಲಾಗಿದೆ.

ಒಲಂಪಿಯಾ ಟಾಕೀಸ್
19—6—53 ರಿಂದ
ಜನಭರಿತ 2 ನೇ ವಾರ
ಹೀರಾ ಫಿಲಂಸ್ ರವರ
ಮೋಲಿ
ಪಾತ್ರ-ಅಶೋಕ್ ಕುಮಾರ್
ಮಿನಾಕ್ಷಿ?, ಪ್ರಾಣ್, ಕುಕ್ಕು? [illegible]
— ದಿನಕ್ಕೆ ೩ ಪ್ರದರ್ಶನ —
ಕರ್ನಾಟಕ? [illegible] ಸಬಾಸ್

ESTD 1917
THE CHAMPION METROPOLITAN COLLEGE OF COMMERCE,
Co operators Home 100 Feet Road MYSORE

Principal
P. Subbaraya Sastry
M.A. M.A. (Com) C.E.T.D. (Lon) P.C.I. (Lon)

Vice Principal
M. S. Puttanna
B.Sc. N.D. Com. (GOI) F.I.B. (Lon)

NOTIFICATION
ADMISSIONS to the several certificate and diploma courses in
Commerce Typewriting Shorthand Accountancy Banking Etc
are now being received in the Mornings & Evenings on all working days

ಉಗ್ಗದ ಉಪಮೆಗಳಿಗೆ ಮೈಸೂರು ಸಿಲ್ಕು, ಧರ್ಮವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ. ಎ., ಇಂಡಿಯಾ ಬ್ಯಾಂಕ್ ಎದುರು ಮೈಸೂರು

ರಿಜಿ ನಂ. 792 ॥ ವಂದೇ ಮಾತರಂ ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೯-೬ ೧೯೫೩ [ಸಂಚಿಕೆ ೨೬೪

ಈಜಿಪ್ಟ್ ದೇಶದಲ್ಲಿ – ರಾಜತ್ವದ ರದ್ದು –

ರೀಯವರಿಂದ ಉತ್ತರ ಕೊರಿಯಾ ಖೈದಿಗಳ ಖುಲಾಸೆ

ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ಕಮ್ಯೂನಿಸ್ಟರಲ್ಲದ ೨೫ ಸಾವಿರ ಉತ್ತರ ಕೊರಿಯಾ ಖೈದಿಗಳನ್ನು ಬಿಡುಗಡೆ ಮಾಡಿರುತ್ತಾರೆ. ಇದರ ಪರಿಣಾಮದಿಂದ ಆ ಖೈದಿಗಳೆಲ್ಲರೂ ತಪ್ಪಿಸಿಕೊಂಡು ಹೋಗಿರುವುದಾಗಿ ವಿಶ್ವಸಂಸ್ಥೆ ಅಧಿಕಾರಿಗಳು ತಿಳಿಸಿರುತ್ತಾರೆ. ಪರಾರಿಯಾಗುತ್ತಿದ್ದ ೯ ಜನರನ್ನು ಗುಂಡು ಹೊಡೆದು ಕೊಲ್ಲಲಾಯಿತೆಂದೂ, ೧೬ ಮಂದಿಗೆ ಗಾಯಗಳಾಗಿರುವುವೆಂದೂ ಗೊತ್ತಾಗಿದೆ. ೧೦೦೦ ಮಂದಿಯನ್ನು ಪುನಃ ಸೆರೆಹಿಡಿಯಲಾಗಿದೆ. ಯುದ್ಧ ಖೈದಿಗಳ ಶಿಬಿರಗಳಲ್ಲಿ ದಕ್ಷಿಣ ಕೊರಿಯಾ ಕಾವಲುಗಾರರಿಗೆ ಪ್ರತಿಯಾಗಿ ಅಮೆರಿಕ ಯೋಧರನ್ನು ನೇಮಿಸಲಾಗುತ್ತಿದೆ. ಯುದ್ಧ ಖೈದಿಗಳು ಶಿಬಿರಗಳಲ್ಲಿ ದಂಗೆಯೆದ್ದರೆಂದೂ, ಆ ಸಮಯದಲ್ಲೇ ಅವರ ಬಿಡುಗಡೆ ಆಜ್ಞೆಯನ್ನು ಘೋಷಿಸಲಾಯಿತೆಂದೂ, ಅವರು ಪರಾರಿಯಾಗುವುದನ್ನು ತಡೆಯಲು ಅಶ್ರುವಾಯು ಪ್ರಯೋಗಿಸಿದರೂ ಉಪಯೋಗವಾಗಲಿಲ್ಲವೆಂದೂ ಗೊತ್ತಾಗಿದೆ. ಬಿಡುಗಡೆ ಹೊಂದಿದ ಎಲ್ಲ ಖೈದಿಗಳನ್ನೂ ಪುನಃ ಬಂಧಿಸಲು ಪ್ರಯತ್ನಗಳಾಗುತ್ತಿವೆ

ವಿಮಾನ ಅಪಘಾತದಲ್ಲಿ ೧೨೯ ಜನರ ಮರಣ

ಅಮೆರಿಕದ ಸೈನಿಕರ ರವಾನಾ ವಿಮಾನವೊಂದು ನೆನ್ನೆ ಟೋಕಿಯೋವಿಗೆ ೩೦ ಮೈಲಿ ಉತ್ತರದಲ್ಲಿ ಸಿಡಿದು ಕೆಳಗೆ ಉರುಳಿದುದರ ಪರಿಣಾಮವಾಗಿ ೧೨೯ ಜನರು ಮಡಿದಿರುವರೆಂದು ವರದಿಯಾಗಿದೆ

ಕೊಲೆ ಅಪಾದನೆಯಿಂದ ಖುಲಾಸೆ

ರಾಜಧಾನಿಯ ಈರನಗೆರೆ ಶ್ರೀ ಕೃಷ್ಣಯ್ಯನವರ ಮಗ ಸುಬ್ಬಯ್ಯ ಎಂಬುವನು ಶ್ರೀ ಮುನಿಸ್ವಾಮಿ ಎಂಬುವರಿಗೆ ಕೊಡಲಾಗಿದ್ದಿತೆಂದು ಹೇಳಲಾದ ಮನೆ ಬಾಡಿಗೆ ಮುಂಗಡವನ್ನು ವಾಪಸು ತೆಗೆದುಕೊಳ್ಳಲು ಅವರಲ್ಲಿ ಹೋದ ಸಂಬಂಧದಲ್ಲಿ ಉದ್ರೇಕಗೊಂಡ ಶ್ರೀ ಮುನಿಸ್ವಾಮಿಯವರ ಕೊಲೆಗೆ ಕಾರಣನಾದನೆಂಬ ಅಪಾದನೆ ಮೇಲೆ ಸೆಷನ್ಸಿಗೆ ಗುರಿಯಾಗಿ, ವಿಚಾರಣೆಯ ನಂತರ ಮೊನ್ನೆ ನ್ಯಾಯಾಧೀಶರಾದ ಶ್ರೀ ಕೆ ವಿಶ್ವೇಶ್ವರಯ್ಯನವರು ಅವನು ತಪ್ಪಿತಸ್ಥನಲ್ಲವೆಂದು ಖುಲಾಸೆ ಮಾಡಿದರು

ವಿದ್ಯುದ್ದೀಪೋತ್ಸವ

ನಂಜನಗೂಡು ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಸ್ಥಳೀಯ ಗಿರಿಜಾಂಬ ಎಲೆಕ್ಟ್ರಿಕ್ ಸ್ಟೋರ್ಸಿನ ಮಾಲೀಕರಾದ ಶ್ರೀ ಕೆ ಎಸ್ ಸೂರ್ಯನಾರಾಯಣ್‌ರವರಿಂದ, ಅವರ ತಂದೆಯವರ ಹೆಸರಿನಲ್ಲಿ ಶಾಲೆಗೆ ಉಚಿತವಾಗಿ ಹಾಕಿಸಲ್ಪಟ್ಟ ವಿದ್ಯುದ್ದೀಪದ ಆರಂಭೋತ್ಸವವನ್ನು ಕಳೆದ ಸೋಮವಾರ ಏರ್ಪಡಿಸಲಾಗಿತ್ತು. ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿ, ಶ್ರೀ ಕೆ ಎಸ್ ಸೂರ್ಯನಾರಾಯಣ್‌ರವರ ಔದಾರ್ಯವನ್ನು ಶ್ಲಾಘಿಸಿ ಶಾಲಾ ಬಾಲಕರಲ್ಲಿ ಇದೇ ರೀತಿಯ ಜ್ಞಾನ ಜ್ಯೋತಿಯು ದೊರಕಲೆಂದು ಹಾರೈಸಿದರು

ನ್ಯೂ ಯಾರ್ಕ್ ಹತ್ತಿ ಸಟ್ಟಾ ಸಂಬಂಧವಾಗಿ ದಸ್ತಗಿರಿ

ಬೆಂಗಳೂರು ೧೮

ನ್ಯೂ ಯಾರ್ಕ್ ಹತ್ತಿ ಸಟ್ಟಾ ಸಂಸ್ಥೆಯ ಸಂಬಂಧವಾಗಿ ಇಲ್ಲಿ ನಡೆಯುತ್ತಿರುವ ಜೂಜನ್ನು ತಪ್ಪಿಸಲು ಪೋಲೀಸರು ಕ್ರಮ ಕೈಗೊಂಡು, ನೆನ್ನೆ ಎರಡು ಮನೆಗಳ ಮೇಲೆ ಧಾಳಿ ನಡೆಸಿ, ೨೪ ಜನರನ್ನು ದಸ್ತಗಿರಿ ಮಾಡಿರುತ್ತಾರೆ. ನಗದು ಮತ್ತು ಹತ್ತಿ ದರದ ಸಂಖ್ಯೆಗಳುಳ್ಳ ಹಸ್ತ ಪತ್ರಿಕೆಗಳನ್ನೂ ವಶಪಡಿಸಿಕೊಳ್ಳಲಾಗಿದೆ

ಪೂರ್ವ ಜರ್ಮನಿಯಲ್ಲೆಲ್ಲಾ ಮಾರ್ಷಲ್ ಲಾ

ಪೂರ್ವ ಜರ್ಮನಿಯಲ್ಲೆಲ್ಲಾ ರಷ್ಯನರು ಈಗ ಮಾರ್ಷಲ್ ಲಾವನ್ನು ಜಾರಿಗೆ ತಂದಿರುತ್ತಾರೆ. ಬರ್ಲಿನ್ ಗಲಭೆಗಳಲ್ಲಿ ಮೊನ್ನೆ ೭ ಜನರು ಮಡಿದರು.

ಡಾ॥ ಮುಖರ್ಜಿ ವಕೀಲರನ್ನು ರಹಸ್ಯವಾಗಿ ನೋಡಲವಕಾಶ

ಕಾಶ್ಮೀರ ಸರ್ಕಾರದವರು ಬಂಧಿಸಿರುವ ಜನ ಸಂಘದ ನಾಯಕ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ತಮ್ಮ ವಕೀಲರನ್ನು ರಹಸ್ಯವಾಗಿ ನೋಡಲು ಅವಕಾಶ ಕೊಡುವಂತೆ ಸೂಚಿಸಿ ಕಾಶ್ಮೀರದ ಹೈ ಕೋರ್ಟು ನ್ಯಾಯಾಧೀಶರು ಆಜ್ಞೆ ಮಾಡಿ, ೪೮ ಗಂಟೆಗಳೊಳಗೆ ಈ ಅವಕಾಶಕಲ್ಪಿಸುವಂತೆ ಸೂಚಿಸಿರುವರು. ಭೇಟಿ ಸಮಯದಲ್ಲಿ ಅಧಿಕಾರಿಗಳಾರೂ ಇರಕೂಡದೆಂದು ಆಜ್ಞೆ ಮಾಡಲಾಗಿದೆ

ವಿದ್ಯಾ ಸುಧಾರಣೆ ಬಗ್ಗೆ ಭಾಷಣ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದ ಸಂಘದ ಆಶ್ರಯದಲ್ಲಿ ದೆಹಲಿಯಿಂದ ಆಗಮಿಸಿರುವ ಸ್ವಾಮಿ ರಂಗನಾಥಾನಂದಜೀಯವರು ಮೊನ್ನೆ ಭಾಷಣ ಮಾಡಿ, ಭಾರತದಲ್ಲಿ ವಿದ್ಯಾಭ್ಯಾಸ ಪದ್ಧತಿಯು ಸುಧಾರಣೆಯಾಗಬೇಕೆಂದೂ ಭಾರತದ ಸಂಸ್ಕೃತಿ ಮತ್ತು ಜೀವನ ಮಟ್ಟಗಳು ಅದರಿಂದ ಹೆಚ್ಚುವಂತಾಗಬೇಕೆಂದೂ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ಶಾಂಭವಾನಂದಜೀಯವರು ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ಹೇಳಿದರು

ಈಜಿಪ್ಟು ರಿಪಬ್ಲಿಕ್ ಆಯಿತು

ಈಜಿಪ್ಟನ್ನು ರಿಪಬ್ಲಿಕ್ ರಾಷ್ಟ್ರವೆಂದು ಜನರಲ್ ನಗೀಬ್‌ರವರು ನೆನ್ನೆ ಘೋಷಿಸಿ ತಾವೇ ರಾಷ್ಟ್ರಾಧ್ಯಕ್ಷರ ಮತ್ತು ಪ್ರಧಾನಿಯ ಪಟ್ಟವನ್ನು ವಹಿಸಿಕೊಂಡರು. ಅವರು ರಕ್ಷಣಾ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯಿತ್ತು ಬೇರೊಬ್ಬರನ್ನು ನೇಮಿಸಿದರು. ಇನ್ನು ೩ ವರ್ಷ ಕಾಲ ಅಲ್ಲಿ ನಗೀಬರು ಅಧ್ಯಕ್ಷರಾಗಿದ್ದು ಅನಂತರ ಆ ಸ್ಥಾನಕ್ಕೆ ಚುನಾವಣೆ ನಡೆಸುವ ವ್ಯವಸ್ಥೆಯಾಗುವುದೆಂದು ಹೇಳಲಾಗಿದೆ. ಇದುವರೆಗೆ ಅಲ್ಲಿದ್ದ ರಾಜತ್ವವು ಈಗ ರದ್ದಾಗಿದೆ

ಕೊರಿಯಾ ಶಾಂತಿ ಭಂಗಕ್ಕೆ ರೀಯವರ ತಂತ್ರ

ದಕ್ಷಿಣ ಕೊರಿಯಾ ಸರ್ಕಾರಕ್ಕೆ ನಿಷ್ಠೆ ತೋರಿಸುವ ಉತ್ತರ ಕೊರಿಯದ ೨೫ ಸಾವಿರ ಯುದ್ಧ ಖೈದಿಗಳನ್ನು ಬಿಡುಗಡೆ ಮಾಡಿ, ಅಧ್ಯಕ್ಷ ರೀಯವರು ಕೊರಿಯಾ ಶಾಂತಿ ಸಂಧಾನವನ್ನು ಮುರಿಯಲೆತ್ನಿಸಿರುವುದಾಗಿ ಗೊತ್ತಾಗಿದೆ. ಅಲ್ಲಿನ ಮಿಲಿಟರಿ ಸೇನಾಧಿಕಾರಿ ವಾನ್‌ಯೊಂಗ್ ಡೂಕ್‌ರವರು ಬಿಡುಗಡೆಯಾಗಿರುವ ಖೈದಿಗಳನ್ನು "ತಮ್ಮ ಅಪ್ಪಣೆಯಿಲ್ಲದೆ" ಹಿಡಿಯುವವರ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸುವುದಾಗಿ ಹೆದರಿಸಿರುತ್ತಾರೆ. ರೀಯವರ ಈ ಕಾರ್ಯವನ್ನು ಕುರಿತು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ವಿಶ್ವ ಸಂಸ್ಥೆಯ ಅಧಿಕಾರವನ್ನು ಅಲ್ಲಗಳೆದಂತಾಗಿರುವುದೆಂದು ತಿಳಿಸಿರುತ್ತಾರೆ

ಗ್ರಾಮ ಪಂಚಾಯಿತಿಗಳ ಸಂಖ್ಯೆ ನಿಗದಿ

ಹೊಸ ಜಿಲ್ಲಾ ಬೋರ್ಡು ಮತ್ತು ಗ್ರಾಮ ಪಂಚಾಯಿತಿ ಶಾಸನಗಳ ಪ್ರಕಾರ ಸರ್ಕಾರದವರು ಗ್ರಾಮ ಪಂಚಾಯಿತಿಗಳ ಸದಸ್ಯರ ಸಂಖ್ಯೆಯನ್ನು ನಿಗದಿ ಮಾಡಿ ಆಜ್ಞೆ ಹೊರಡಿಸಿರುತ್ತಾರೆ. ೫೦೦ ಜನರು ವಾಸವಿರುವ ಹಳ್ಳಿ ಅಥವ ಅಷ್ಟು ಜನ ಸಂಖ್ಯೆ ಆಗುವ ಹಳ್ಳಿಗಳ ಗುಂಪಿನ ಪಂಚಾಯಿತಿಗೆ ೧೦ ಜನ ಸದಸ್ಯರಿರುವಂತೆಯೂ, ಅದಕ್ಕೆ ಹೆಚ್ಚಿನ ಪ್ರತಿ ೨೦೦ ಪ್ರಜಾ ಸಂಖ್ಯೆಗೂ ಇಬ್ಬರು ಸದಸ್ಯರನ್ನು ತೆಗೆದುಕೊಳ್ಳತಕ್ಕದ್ದೆಂದೂ ಗೊತ್ತುಪಡಿಸಲಾಗಿದೆ

ಹೈಕೋರ್ಟಿಗೆ ಕೆ. ಎನ್. ಗುರುಸ್ವಾಮಿಯವರ ಅರ್ಜಿ

ಅಬ್ಕಾರಿ ಕಂಟ್ರಾಕ್ಟ್ ರದ್ದು ಮಾಡಿರುವುದನ್ನು ವಜಾ ಮಾಡಲು

ಸ್ವಂ. ಸು ಪೋ॥] ಬೆಂಗಳೂರು ೧೮

ಅಬ್ಕಾರಿ ಕಂಟ್ರಾಕ್ಟರಾದ ಶ್ರೀ ಕೆ ಎನ್ ಗುರುಸ್ವಾಮಿಯವರು ರಾಜ್ಯಾಂಗದ ೨೨೬ನೇ ನಿಬಂಧನೆ ಪ್ರಕಾರ ಹೈಕೋರ್ಟಿನಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಬೆಂಗಳೂರು ನಗರದ ಅಬ್ಕಾರಿ ಹರಾಜಿನಲ್ಲಿ ತಮ್ಮ ಹೆಸರಿಗೆ ನಿಂತ ಬಿಡ್ಡನ್ನು ಸರ್ಕಾರದವರು ವಜಾ ಮಾಡಿರುವುದನ್ನು ತಡೆಗಟ್ಟುವಂತೆ ರಿಟ್ ಆಜ್ಞೆಯಾಗಬೇಕೆಂದು ಕೋರಿರುತ್ತಾರೆ

ಶಾಸನ ಸಭಾ ಭವನದ ದ್ವಾರ

ಬೆಂಗಳೂರಿನಲ್ಲಿ ನಿರ್ಮಿಸಲಾಗುವ ಶಾಸನ ಸಭಾ ಭವನದ ದ್ವಾರವನ್ನು ಶೃಂಗೇರಿಯ ಶ್ರೀ ಶಾರದಾ ಅಮ್ಮನವರ ಗರ್ಭಗುಡಿಯ ದ್ವಾರದಂತೆ ನಿರ್ಮಿಸುವುದು ಚೆನ್ನಾಗಿರುವುದೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಭಿಪ್ರಾಯಪಟ್ಟು ಅದರ ಡಿಸೈನನ್ನು ತಯಾರಿಸುವಂತೆ ಸೂಪರಿಂಟೆಂಡಿಂಗ್ ಇಂಜನಿಯರರಿಗೆ ಸೂಚಿಸಿರುವರೆಂದು ಹೇಳಲಾಗಿದೆ

ಕಳುವು ಮಾಲು ಪತ್ತೆ

ಮಹಾರಾಜರ ಆಪ್ತ ಕಾರ್ಯದರ್ಶಿಯವರಾದ ಶ್ರೀ ಸಫಿ ದಾರಾಷಾರವರ ಮನೆಯಲ್ಲಿ ಹಿಂದೆ ಕಳುವಾಗಿದ್ದ ೨ ಸಾವಿರ ರೂ ಬೆಲೆಯ ವಸ್ತುಗಳು ಚಿನ್ನದ ಗಣಿ ಸಿ ಎಸ್ ಪಿ ಯವರಿಂದ ಪತ್ತೆ ಮಾಡಲ್ಪಟ್ಟಿವೆ. ೫ ಜನ ಕ್ರಿಮಿನಲ್ ಟ್ರೈಬ್ ಜನರನ್ನು ಬಂಧಿಸಿದಾಗ, ಅವರ ಬಳಿ ಇದ್ದ ೭ ಸಾವಿರ ರೂ ವಸ್ತುಗಳ ಪೈಕಿ ಶ್ರೀ ದಾರಾಷಾರವರ ಸಾಮಾನುಗಳೂ ಇದ್ದುವು

ಶೃಂಗೇರಿ ಗುರುಗಳ ಬಳಿ ಮುಖ್ಯ ಮಂತ್ರಿಯವರು

ಶೃಂಗೇರಿಗೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಹೋಗಿ ಹಿರಿಯ ಮತ್ತು ಕಿರಿಯ ಗುರುಗಳ ದರ್ಶನವನ್ನು ಪಡೆದು, ಮಠಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಕುರಿತು ಚರ್ಚಿಸಿದರು

ಬೊಂಬಾಯಿಯಲ್ಲಿ ೭ ಅಂಗುಲ ಮಳೆ

ಬೊಂಬಾಯಿ ನಗರದಲ್ಲಿ ಮೊನ್ನೆ ೨೪ ಗಂಟೆಗಳ ಸತತ ಮಳೆಯಾಯಿತು. ಹಲವಾರು ಊರುಗಳಿಗೆ ಟ್ರಂಕ್ ಟೆಲಿಫೋನ್ ವ್ಯವಸ್ಥೆ ಕೆಟ್ಟುಹೋಗಿದ್ದಿತು. ರೀತಿಯಲ್ಲಿ ಅವ್ಯವಸ್ಥೆಯೇರ್ಪಟ್ಟಿದ್ದಿತು. ೬.೯೮ ಅಂಗುಲ ಮಳೆಯಾದುದಾಗಿ ರಿಕಾರ್ಡ್ ಆಗಿದೆ. ಅನೇಕ ಪ್ರಮುಖ ಮಾರ್ಗಗಳಲ್ಲಿ ರೈಲು ಸಂಚಾರವನ್ನು ನಿಲ್ಲಿಸಲಾಗಿದೆ. ಹಲವನ್ನು ಬೇರೆ ಮಾರ್ಗಗಳಲ್ಲಿ ವ್ಯವಹರಿಸಲಾಗಿದೆ

ಬಿಹಾರಿನಲ್ಲಿ ಪ್ರವಾಹದಿಂದ ೫೦ ಸಾವಿರ ಮಂದಿಗೆ ಕಷ್ಟ

ಬಿಹಾರಿನ ಕೋಸಿ ನದಿಯಲ್ಲಿ ಪ್ರವಾಹವುಂಟಾಗಿ ೧೦೦ ಹಳ್ಳಿಗಳು ಮುಳುಗಿಹೋಗಿವೆ. ೫೦,೦೦೦ ಜನರಿಗೆ ಮನೆಮಠವಿಲ್ಲದಾಗಿದೆ.

ಭಾರತ ಸೇವಕ ಸಮಾಜದ ಜಿಲ್ಲಾ ಪ್ರವಾಸ

ಸಂಚಾಲಕ ಟಿ ಸುಬ್ರಹ್ಮಣ್ಯ ರವರಿಂದ ವಿವರಣೆ

ಮೈಸೂರು ೧೯

ಭಾರತ ಸೇವಕ ಸಮಾಜದ ಅಧ್ಯಕ್ಷರನ್ನೂ ಮತ್ತು ಜಿಲ್ಲಾಧಿಕಾರಿಗಳ ಸಭೆಯೊಂದು ಜರುಗಿತು. ಮೈಸೂರು ಸಂಸ್ಥಾನದ ಶಾಖೆಯ ಸಂಚಾಲಕರಾದ ಶ್ರೀ ಟಿ ಸುಬ್ರಹ್ಮಣ್ಯ ರವರು ಸಂಸ್ಥೆಯ ಕಾರ್ಯೋದ್ದೇಶಗಳನ್ನು ವಿವರಿಸಿದರು. ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ [illegible] ಮಾಜಿ ಜಿಲ್ಲಾ [illegible] ಸಮಿತಿ ಅಧ್ಯಕ್ಷ ಶ್ರೀ ಎಸ್ ರಂಗರಾಮಯ್ಯ, ಶ್ರೀ ಸಿ ಜೆ ಡಿ [illegible] ಕೆ [illegible] ಮುಂತಾದವರು ಆಗಮಿಸಿದ್ದರು.

ಜಿಲ್ಲಾಧಿಕಾರಿಗಳು ಶ್ರೀ ಟಿ ಸುಬ್ರಹ್ಮಣ್ಯ ರವರನ್ನು ಪರಿಚಯ ಮಾಡಿಕೊಟ್ಟು ಸಂಸ್ಥೆಯ ಉದ್ದೇಶಗಳನ್ನು ವಿವರಿಸಬೇಕೆಂದು ಕೋರಿದರು.

[illegible]

SARADA VILAS

INTER TUTORIAL SECTION

[illegible] 6 53

[illegible]

ಬೆಂಗಳೂರಿನಲ್ಲಿ ರಿಸರ್ವ್ ಬ್ಯಾಂಕ್ ಶಾಖೆ

ಬೆಂಗಳೂರು ೧೯

[illegible] ರಿಸರ್ವ್ ಬ್ಯಾಂಕಿನ ಶಾಖೆಯೊಂದನ್ನು ತೆರೆಯಲಿರುವುದರ ಅಂಗವಾಗಿ ಸಿವಿಲ್ ಪ್ರದೇಶದಲ್ಲಿರುವ ನಗದು ವ್ಯವಹಾರಗಳೆಲ್ಲವನ್ನೂ ನಡೆಸುತ್ತಿರುವ ಖಜಾನೆಗಳ ಕೆಲಸವನ್ನು ಶಾಖೆಯು ವಹಿಸಿಕೊಳ್ಳುವುದು. ಮೈಸೂರು ಸರ್ಕಾರದ ಹಣಕಾಸಿನ ವಹಿವಾಟುಗಳನ್ನು ಅದಕ್ಕೆ ವಹಿಸುವ ಬಗ್ಗೆ ಈಗಾಗಲೇ ಒಪ್ಪಂದವಾಗಿದ್ದು [illegible] ಶಾಖೆಯು [illegible] ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಖಜಾನೆ ಕೆಲಸಗಳನ್ನು ಶಾಖೆಯು ವಹಿಸಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ನಗರದಲ್ಲಿನ ಖಜಾನೆಗಳ ಕೆಲಸವನ್ನು ಪ್ರತ್ಯೇಕವಾಗಿ ನೋಡಲಾಗುವುದು. [illegible] ಹುಜೂರ್ ಖಜಾನೆ [illegible] ಮತ್ತು ಜಿಲ್ಲಾ ಖಜಾನೆಗಳನ್ನು ಐಕ್ಯಗೊಳಿಸಲಾಗುವುದು. ಬೆಂಗಳೂರು ದಕ್ಷಿಣ ತಾಲ್ಲೂಕು ಖಜಾನೆಯನ್ನು ಉತ್ತರ ತಾಲ್ಲೂಕಿನಲ್ಲಿ ಸೇರಿಸಲಾಗುವುದು.

ವಿಮಾನ ಪತ್ತೆಯಿಲ್ಲ

ಮೂವತ್ತು ಜನರಿದ್ದ ಫ್ರೆಂಚ್ ವಿಮಾನವೊಂದು [illegible] ಪ್ರದೇಶಗಳಲ್ಲಿ ಪತ್ತೆಯಿಲ್ಲವಾಗಿದೆ.

ಸಿ ಸಿ ಸಿದ್ದಮೂರ್ತಿಯವರಿಗೆ ರಜಾ

ಕೊಡಗು ಸರ್ಕಾರದ ಪ್ರಧಾನ [illegible] ಯಾಗಿದ್ದು ಮೈಸೂರು ಸರ್ಕಾರದಿಂದ ವಾಪಸ್ ಕರೆಸಿಕೊಳ್ಳಲ್ಪಟ್ಟ ಡೆಪ್ಯುಟಿ ಕಮಿಷನರ್ ಶ್ರೀ ಸಿ ಸಿದ್ದಮೂರ್ತಿಯವರಿಗೆ ಇದೇ ೧೫ ನೇ ತಾರೀಖಿನಿಂದ [illegible] ಗಳು ಹಕ್ಕಿನ ರಜಾ ಕೊಡಲಾಗಿದೆ.

ಯೋಜನೆ ಪ್ರಕಾರ [illegible] ೨೦೦ ಹಳ್ಳಿಗಳಲ್ಲಿ ಕೆಲಸವು ಆರಂಭವಾಗಿದೆ. ಆದರೆ ಅಲ್ಲಿ ಈಗ [illegible] ಸಾವಿರ ರೂ ಕೆಲಸ ಮಾತ್ರ ನಡೆದಿರುವುದು. ಹೆಚ್ಚಿನ ಉತ್ಸಾಹವು ಇರಬೇಕು. ಅವರಲ್ಲಿ ಅದನ್ನು ಕಲಿಸಲು ಸಮಾಜದ ಕಾರ್ಯಕರ್ತರು ನೆರವು ನೀಡಬೇಕು ಎಂದು ಅವರು ಹೇಳಿದರು.

ಸ್ಕೂಲ್ ಪುಸ್ತಕಗಳು ಬೇಕೆ?

— ೦ —

ಚಾಮರಾಜ ರಸ್ತೆಯಲ್ಲಿ, ಸಿ ಟಿ ಬಳಿಯಲ್ಲಿ [illegible] ಸಕ್ಕದಲ್ಲಿರುವ [illegible] ಸಂಘದಲ್ಲಿ ವಿಚಾರಿಸಿರಿ.

ಪಶ್ಚಿಮ ಬರ್ಲಿನ್ನಿಗೆ ಪೂರ್ವ ಜರ್ಮನ್ ಮಂತ್ರಿ ಪರಾರಿ

ಪೂರ್ವ ಜರ್ಮನಿಯ ಉಪ ಪ್ರಧಾನಿ ಒಟ್ಟೊ ನುಷ್ಕೆ ರವರು ಪೂರ್ವ ಬರ್ಲಿನ್ನಿನಿಂದ ಪಶ್ಚಿಮ ಬರ್ಲಿನ್ನಿಗೆ ಪರಾರಿಯಾಗಿರುತ್ತಾರೆ.

ಸ್ವಾಗತ ಸಮಾರಂಭ

ಮೈಸೂರು ಮೆಡಿಕಲ್ ಹಾಲಿನ ಡಾ॥ ಸಿ ಸುಬ್ಬರಾಮಯ್ಯನವರು ತಮ್ಮ ಪುತ್ರ ಶ್ರೀ ರಾಮುಂಡಯ್ಯರಿಗೆ ಶ್ರೀಮತಿ ರಾಜಮ್ಮನವರನ್ನು ತಂದುಕೊಂಡು ವಿವಾಹವನ್ನು ಜರುಗಿಸಿದ ಸಂಬಂಧವಾಗಿ ನೆನ್ನೆ ಸಂಜೆ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಸ್ವಾಗತ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಅತಿಥಿಗಳನ್ನು ಗಂಧ ಪುಷ್ಪ ಫಲ ತಾಂಬೂಲಗಳಿಂದ ಸತ್ಕರಿಸಿದರು. ವಿ॥ ಟಿ ಆರ್ ಶ್ರೀನಿವಾಸನ್ ಮತ್ತು ಪಾರ್ಟಿಯವರ ಸಂಗೀತವೂ ಏರ್ಪಡಾಗಿತ್ತು.

ಸಪ್ಲಿಮೆಂಟರಿ ಎಸ್ ಎಸ್ ಎಲ್. ಸಿ ಪರೀಕ್ಷೆ

ಮೈಸೂರಿನ ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯು ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವುದು. ಕುಳಿತುಕೊಳ್ಳಬಿಚ್ಛಿಸುವವರು ಸೆಕೆಂಡರಿ ವಿದ್ಯಾಭ್ಯಾಸ ಸಮಿತಿಗೆ ಅರ್ಜಿಗಳನ್ನು ಜುಲೈ ೧೧ ರೊಳಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ. ಅನಂತರ ಬರುವುವುಗಳನ್ನು ಅಂಗೀಕರಿಸುವುದಿಲ್ಲವೆಂದು ಪ್ರಕಟಿಸಲಾಗಿದೆ.

ವಿವಾಹ ಮಹೋತ್ಸವ

ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿರುವ ಹಿಂದೂಸ್ತಾನ್ ಮೋಟಾರ್ ವರ್ಕ್ಸಿನ ಶ್ರೀ ಎಸ್ ತಮ್ಮಣ್ಣನವರು ತಮ್ಮ ಪುತ್ರಿ ಚಿ॥ ಸೌ॥ ಸರಸಮ್ಮನನ್ನು ಲಕ್ಷ್ಮೀಪುರದಲ್ಲಿರುವ ಶ್ರೀ ಆರ್ ಪುಟ್ಟರಾಮಣ್ಣನವರ ಪುತ್ರ ಶ್ರೀ ರಾಮಕೃಷ್ಣರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಚಾಮುಂಡೇಶ್ವರಿ

ಟಾಕೀಸ್

20-6-53 ರಿಂದ

ಜನಭರಿತ 2 ನೇ ವಾರ

★ ಪರಾಶಕ್ತಿ ★

ಶಿವಾಜಿ ಗಣೇಶನ್, ಪಂಡರಿಬಾಯಿ, ಸಹಸ್ರನಾಮಂ ಮುಂತಾದವರು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಗ
ಕಡಲೆಕಾಯಿ	[illegible]	[illegible]
ಕೊಂಗಿಬೀಜ	[illegible]	
ಹುರುಳಿ	[illegible]	
ಹೆಸರು	[illegible]	[illegible]
ಹಲಸಂದೆ	[illegible]	[illegible]
ಉದ್ದು	[illegible]	[illegible]
ಎಳ್ಳು	[illegible]	[illegible]
ಕೊಬ್ಬರಿ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ಕಡಲೆಬೇಳೆ	[illegible]	[illegible]

ಸಾಹಿತ್ಯೋತ್ಸವ

ಬೆಂಗಳೂರಿನ ಭಾರತೀ ಮಂದಿರದವರು ಅಲ್ಲಿನ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಮಂಡಿಸಿದ ಕಾರ್ಯಕ್ರಮವನ್ನು ನಾಳೆ ಸಂಜೆ ೫॥ ಗಂಟೆಗೆ ನೆರವೇರಿಸುವರು. ವಿಶ್ವನಾಥ ಮಂದಿರದ ಶ್ರೀ ಜೆ ಎಸ್ ವಾಸುದೇವಾಚಾರ್ಯರು ಸನಾತನ ಭಾರತೀಯ ವಿದ್ಯೆಗಳು ಮತ್ತು ಸಂಸ್ಕೃತಿ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಆ॥ ವಿ॥ ಆರ್ ಎ [illegible] ಮಿಯರಿಂದ ವೀಣಾ ವಾದನವೂ ಇದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

SRI GANESHA

TALKIES

On 19 6—53 A day only

NO ROOM FOR THE GROOM

Featuring — Tony Curtis, Piper Laurie

From 20 6 53

Columbia s

STAGE TO TUCSON

(Technicolor)

With Rod Cameron, Wayne Morris

Edited, Printed and Published by A R Nagarajan at Sadhvi Press, D. Subbaiah Road, Mysore

ಪ್ರಭುದೇವಾ ಥಿಯೇಟರ್

([illegible] ಟಾಕೀಸ್)

19 6 53ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ಜನ ನಿಬಿಡದ ತಮಿಳು ಚಿತ್ರ

★ ಮದನಕಾಮರಾಜನ್ ★

[illegible]

ಭಿಕ್ಷುಕರ ಪರಿಹಾರ ಸಮಿತಿ ಛೇರ್ಮನ್ನರ ಕಛೇರಿ, ಮೈಸೂರು

ಇದೇ ಮೈಸೂರು ನಂಜರಾಜ ಬಹದ್ದೂರ್ ಛತ್ರದ 3 ನೇ ಬ್ಲಾಕಿನಲ್ಲಿರುವ ಭಿಕ್ಷುಕರ ವಸತಿ ಗೃಹಕ್ಕೆ ಬೇಕಾಗುವ ಆಹಾರ ವಗೈರೆ ಸಾಮಾನುಗಳನ್ನು ಸಪ್ಲೈ ಮಾಡಲು ಸೀಲು ಮಾಡಿದ ಟೆಂಡರುಗಳನ್ನು ತಾರೀಖು 30-6-1953 ನೇ ಮಂಗಳವಾರ ಮಧ್ಯಾಹ್ನ 3 ಗಂಟೆಯಿಂದ 4 ಗಂಟೆಯೊಳಗೆ, ಸದರಿ ಭಿಕ್ಷುಕರ ಪರಿಹಾರ ಸಮಿತಿ ಛೇರ್ಮನ್ನರವರಿಂದ, ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ. ವಿವರಗಳನ್ನು ಸದರಿ ಛೇರ್ಮನ್ನರವರ ಆಫೀಸಿನಲ್ಲಿ ಪಡೆಯಬಹುದು.

(ರುಜು) ಟಿ ವೆಂಕಟರಾಮಯ್ಯ,

ಛೇರ್ಮನ್, ಭಿಕ್ಷುಕರ ಪರಿಹಾರ ಸಮಿತಿ

ಮೈಸೂರು 15—6—53

ಫೋನ್ ನಂ. 792 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೦-೬-೧೯೫೩ [ಸಂಚಿಕೆ ೨೫೬

ರೋಸೆನ್‌ಬರ್ಗ್ ದಂಪತಿಗಳಿಗೆ ಇಂದು ಫಾಸಿ

ಗಾಡಿಯಿಂದ ಬಿದ್ದು ಬಾಲಕಿಯ ಮರಣ

ಮೈಸೂರು ೨೦

ರಾಜಧಾನಿಯ ಚಿಕ್ಕಗಡಿಯಾರದ ಕೊತ್ತಲದಲ್ಲಿ ಹ.ಕೆ.ಹ. ವಿಹಾರವೊಂದನ್ನು ಮುಗಿಸಿಕೊಂಡು ಜಟಕಾ ಗಾಡಿ ಮೇಗಡೆ ಕೂತುಕೊಂಡಿರುಗುತ್ತಿದ್ದ ಒಂದು ಮದುವೆಯ ಗುಂಪಿನ ಪೈಕಿ ೮ ವರ್ಷದ ಹುಡುಗಿಯೊಬ್ಬಳು ಎಂಬ ಬಾಲಕಿಯು ಗಾಡಿಯಿಂದ ಬಿದ್ದು ಮೃತಪಟ್ಟಳೆಂದು ತಿಳಿದುಬಂದಿದೆ. ೩ ಜಟಕಾ ಗಾಡಿಗಳು ಒಟ್ಟಿಗೆ ಹೋಗುತ್ತಿದ್ದವಾಗಿಯೂ, ರಾಮಕೃಷ್ಣಾಶ್ರಮದ ಬಳಿ ಒಂದು ಕಾರು ಎದುರಾಗಿ ೧ ನೋಟಾರು ಬಂದಾಗ ೩ ನೇ ಗಾಡಿಯ ಎತ್ತುಗಳು ಬೆದರಿ ಫುಟ್‌ಪಾತ್ ಮೇಲೆ ಹತ್ತಲು ಅದರಲ್ಲಿ ಕುಳಿತಿದ್ದ ಹುಡುಗಿಯು ಕೆಳಗೆ ಕಲ್ಲಿನ ಮೇಲೆ ಬಿದ್ದು ತಲೆಗೆ ಪೆಟ್ಟು ತಗುಲಿ ಮೃತಪಟ್ಟಳೆಂದೂ ವರದಿಯಾಗಿದೆ. ಟ್ರಾಫಿಕ್ ಪೊಲೀಸಿಗೆ ಸೇರಿದ ಶ್ರೀ ಬೋರೇಗೌಡ ಮತ್ತು ದೇವರಾಜ ಪೊಲೀಸರು ಮಹಜರ್ ಕ್ರಮ ನಡೆಸಿದರು

ರಾಮಸ್ವಾಮಿ ನಾಯಕರ ಮೇಲೆ ಮೊಕದ್ದಮೆ

ದ್ರಾವಿಡ ಸಂಘದ ನಾಯಕರಾದ ಶ್ರೀ ಇ. ವಿ. ರಾಮಸ್ವಾಮಿ ನಾಯಕರು ಗಣಪತಿ ವಿಗ್ರಹಗಳನ್ನು ಒಡೆದರೆಂಬ ಅಪಾದನೆಗಾಗಿ ಅವರ ಮೇಲೆ ತಿರುಚನಾಪಳ್ಳಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ. ಇದೇ ೨೬ನೇ ತಾರೀಖು ವಿಚಾರಣೆ ನಡೆಯಲಿದೆ

ಸಮಾಜವಾದಿ ಭಾರತದ ನಿರ್ಮಾಣಕ್ಕೆ ಕಾರ್ಯಕ್ರಮ

ಪ್ರಜಾ ಸಮಾಜವಾದಿ ಸಮ್ಮೇಳನವು ಬೆಟೂಲಿನಲ್ಲಿ ಸೇರಿ ಸಮಾಜವಾದಿ ಭಾರತ ನಿರ್ಮಾಣದ ಸಂಬಂಧವಾಗಿ ಕಾರ್ಯಕ್ರಮವನ್ನು ಗೊತ್ತುಪಡಿಸಲು ೧೫ ಜನರ ಸಮಿತಿಯೊಂದನ್ನು ರಚಿಸಿದೆ. ಅದರಲ್ಲಿ ಕೃಪಲಾನಿ, ನರೇಂದ್ರದೇವ್, ಜಯಪ್ರಕಾಶ್ ನಾರಾಯಣ್, ಸುಚೇತಾ ಕೃಪಲಾನಿ, ಬೆಂಗಳೂರಿನ ಸಿ. ಜಿ. ಕೆ. ರೆಡ್ಡಿ ಮುಂತಾದವರು ಇರುವರು

ಮತ್ತೆ ೯೦೦ ಮಂದಿ ಖೈದಿಗಳ ಪರಾರಿ

ದಕ್ಷಿಣ ಕೊರಿಯಾದ ಇಂಚಾನ್ ಎಂಬಲ್ಲಿ ವಿಶ್ವಸಂಸ್ಥೆಯ ಶಿಬಿರದಿಂದ ೫೦೦ ಮಂದಿ ಖೈದಿಗಳು ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದಾಗ ಅವರ ಮೇಲೆ ಗುಂಡು ಹಾರಿಸಿದ ಪರಿಣಾಮವಾಗಿ ೧೩ ಜನರು ಸತ್ತರೆಂದೂ, ನೂರಾರು ಜನರಲ್ಲಿ ೧೭ ಮಂದಿ ಮಾತ್ರ ರೆಂದು ಗೊತ್ತಾಗಿದೆ. ಗುಂಡು ಹಾರಿಸಿದವರು ಯಾರೆಂಬುದು ತಿಳಿದುಬಂದಿಲ್ಲವೆಂದು ಹೇಳಲಾಗಿದೆ

ನೆರಿಂಚಾನ್ ಎಂಬ ಇನ್ನೊಂದು ಯುದ್ಧಬಂದಿಗಳ ಶಿಬಿರದಲ್ಲೂ ಮೊನ್ನೆ ರಾತ್ರಿ ನಾನೂರು ಮಂದಿ ಖೈದಿಗಳು ತಪ್ಪಿಸಿಕೊಂಡು ಹೋದರು, ಆಗ ನಡೆದ ಘರ್ಷಣೆಯಿಂದ ೩೩ ಮಂದಿ ಸತ್ತರು, ೯೬ ಜನರು ಗಾಯಗೊಂಡರು. ತಪ್ಪಿಸಿಕೊಂಡವರ ಪೈಕಿ ೧೦೦ ಜನರನ್ನು ಮತ್ತೆ ಬಂಧಿಸಲಾಯಿತು

ಆಗ್ಫಾ ಸಂಸ್ಥೆ ಸಹಾಯದಿಂದ ಫಿಲಂ ಕಾರ್ಖಾನೆ

ಬೆಂಗಳೂರು ೨೦

ಕೃಷ್ಣರಾಜಸಾಗರದಲ್ಲಿ ಮೈಸೂರು ಸರ್ಕಾರದವರು ೨|| ಕೋಟಿ ರೂ. ಬಂಡವಾಳದಲ್ಲಿ ಏರ್ಪಡಿಸಲಿರುವ ಕಚ್ಚಾ ಫಿಲಂ ತಯಾರಿಕಾ ಕಾರ್ಖಾನೆಯ ಸಂಬಂಧವಾಗಿ ಸರ್ಕಾರಕ್ಕೂ ಜರ್ಮನಿಯ ಪ್ರಸಿದ್ಧ ಅಗ್ಫಾ ಫಿಲಂ ಕಂಪೆನಿಗೂ ಒಪ್ಪಂದವಾಗಿರುವುದೆಂದು ವರದಿಯಾಗಿದೆ. ಕಂಪೆನಿಗೆ ಸೇರಿದ ಡಾ|| ಮೇಯರ್‌ರವರು ಕಾರ್ಖಾನೆಯ ಅಭಿವೃದ್ಧಿ ಸಂಬಂಧವಾಗಿ ಸಹಾಯ ನೀಡಲಿರುವರೆಂದು ಹೇಳಲಾಗಿದೆ

ಮೀನು ಹಿಡಿಯಲು ಹೋದ ೩೦೦ ಬೆಸ್ತರು ಪತ್ತೆಯಿಲ್ಲ

ಮದ್ರಾಸಿನ ಸುಮಾರು ೩೦೦ ಮಂದಿ ಬೆಸ್ತರು ಬಂಗಾಳಾ ಕೊಲ್ಲಿಯಲ್ಲಿ ಮೀನು ಹಿಡಿಯುವ ಸಲುವಾಗಿ ೪ ದಿನಗಳ ಕೆಳಗೆ ಬಹು ದೂರ ಹೋಗಿ ನೆನ್ನೆಯವರೆಗೂ ಹಿಂದಿರುಗಲಿಲ್ಲವೆಂದೂ, ಅವರು ಎಲ್ಲೋ ಸುಳಿಗಾಳಿಗೆ ಸಿಕ್ಕಿರಬಹುದೆಂದು ಊಹಿಸಿ ಅವರನ್ನು ಪತ್ತೆಹಚ್ಚಲು ವಿಮಾನಗಳ ನೆರವನ್ನು ಕೇಳಲಾಗಿದೆಯೆಂದೂ ತಿಳಿದುಬಂದಿದೆ. ೩೬ ಮಂದಿಯನ್ನು ಈಗ ರಕ್ಷಿಸಲಾಗಿದೆ

ಮದುವೆ ಸಮಯದಲ್ಲಿ ಮನೆ ಕುಸಿದು ಮರಣ

ಬಿಹಾರಿನ ಮಾಂಘೀರಿನಲ್ಲಿ ಮೊನ್ನೆ ಮದುವೆಯೊಂದು ನಡೆಯುತ್ತಿದ್ದಾಗ ಮನೆಯ ಕಾಂಕ್ರೀಟ್ ಮೇಲ್ಛಾವಣಿ ಕುಸಿದುಬಿದ್ದ ಪರಿಣಾಮವಾಗಿ ಇಬ್ಬರು ಸತ್ತು, ೩೦ ಜನರಿಗೆ ತೀವ್ರ ಗಾಯಗಳಾಗಿವೆ. ಆ ಪೈಕಿ ೨೦ ಮಂದಿಯ ಸ್ಥಿತಿ ತೀವ್ರವಾಗಿದೆ. ವಧೂವರರು ಪಾರಾದರು. ಸತ್ತವರ ಪೈಕಿ ವಧುವಿನ ಸೋದರಿಯೂ ಒಬ್ಬಳು

ಬಳ್ಳಾರಿಯಲ್ಲಿ ಶಾಂತ ಪರಿಸ್ಥಿತಿ

ಬಳ್ಳಾರಿ ನಗರದಲ್ಲಿ ಈಗ ಶಾಂತ ಪರಿಸ್ಥಿತಿಯು ನೆಲೆಸಿರುವುದೆಂದು ತಿಳಿದುಬಂದಿದೆ. ಊರಿನ ಪ್ರಮುಖ ಸ್ಥಳಗಳಲ್ಲಿ ಸಶಸ್ತ್ರ ಪೊಲೀಸರ ಕಾವಲು ಹಾಕಲಾಗಿದೆ

ಕೊರಿಯಾ ಸರ್ಕಾರದ ದಸ್ತಗಿರಿಗೆ ಸೂಚನೆ

ಸಿಂಗ್ಮನ್ ರೀಯವರು ೨೫,೦೦೦ ಉತ್ತರ ಕೊರಿಯಾದ ಖೈದಿಗಳನ್ನು ಬಿಡುಗಡೆ ಮಾಡಿದ ಸಂಬಂಧವಾಗಿ ಬ್ರಿಟನ್ನಿನಲ್ಲಿ ಕಳವಳವನ್ನು ವ್ಯಕ್ತಪಡಿಸಲಾಗಿದೆ. ಪಾರ್ಲಿಮೆಂಟಿನಲ್ಲಿ ಎಡ ಪಕ್ಷದ ಸದಸ್ಯರೊಬ್ಬರು ಮಾತನಾಡುತ್ತಾ, ರೀಯವರ ಸರ್ಕಾರಕ್ಕೆ 'ರಕ್ಷಣೆ ಕೊಡಲು' ಅದನ್ನು ದಸ್ತಗಿರಿ ಮಾಡುವಂತೆ ಸೂಚಿಸಿರುತ್ತಾರೆ. ಚರ್ಚಿಲ್ಲರು ಸಾವಧಾನದಿಂದ ವರ್ತಿಸುವಂತೆ ಸೂಚಿಸಿರುತ್ತಾರೆ. ಪ್ರಧಾನಿ ನೆಹರೂರವರಿಗೆ ರೀಯವರು ಮಾಡಿರುವ ಕಾರ್ಯವನ್ನು ತಿಳಿಸಲಾಗಿದೆ. ತಟಸ್ಥ ರಾಷ್ಟ್ರಗಳ ತಾಟಸ್ಥ್ಯ ಸಮಿತಿಯಲ್ಲಿ ಭಾರತವು ಮುಖ್ಯ ಪಾತ್ರವಹಿಸಲಿರುವುದರಿಂದ ಮುಂದಿನ ಕ್ರಮದ ಬಗ್ಗೆ ಕುತೂಹಲದಿಂದ ನಿರೀಕ್ಷಿಸಲಾಗುತ್ತಿದೆ

ಬಿಡುಗಡೆಯಾದ ೨೫ ಸಾವಿರ ಖೈದಿಗಳು ದ. ಕೊರಿಯಾ ಸೈನ್ಯಕ್ಕೆ?

ದಕ್ಷಿಣ ಕೊರಿಯದಲ್ಲಿ ಕಮ್ಯೂನಿಸ್ಟರಲ್ಲದ ೨೫ ಸಾವಿರ ಯುದ್ಧಖೈದಿಗಳನ್ನು ಅಧ್ಯಕ್ಷ ಸಿಂಗ್ಮನ್ ರೀಯವರು ಖುಲಾಸೆ ಮಾಡಿದ ಬಗ್ಗೆ ಪೀಕಿಂಗ್ ರೇಡಿಯೋ ಟೀಕೆ ಮಾಡಿ, ಈ ಕೃತ್ಯದಿಂದ ಎಲ್ಲ ಕಡೆಗಳಲ್ಲೂ ತೀವ್ರ ಪ್ರತಿಕ್ರಿಯೆಯುಂಟಾಗಿರುವುದೆಂದೂ ಖುಲಾಸೆಯಾದ ೨೫ ಸಾವಿರ ಖೈದಿಗಳನ್ನು ರೀಯವರು ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳಲು ಹವಣಿಸುತ್ತಿರುವರೆಂದೂ, ಈ ಪ್ರಕರಣಕ್ಕೆ ಅಮೆರಿಕದವರೂ ಜವಾಬ್ದಾರರೆಂದೂ ಆಪಾದಿಸಿದೆ

೨೪ ಗಂಟೆಗಳಲ್ಲಿ ೨೦ ಅಂಗುಲ ಮಳೆ

ಬೊಂಬಾಯಿಯಲ್ಲಿ ಮೊನ್ನೆ ಬೆಳಗ್ಗೆ ೮-೩೦ ಘಂಟೆಯಿಂದ ನೆನ್ನೆ ಬೆಳಗ್ಗೆ ೮-೩೦ರ ವರೆಗೆ ಒಟ್ಟು ೨೦|| ಅಂಗುಲ ಮಳೆಯಾಗಿದೆ. ನೆನ್ನೆ ಮಧ್ಯಾಹ್ನದ ವೇಳೆಗೆ ಮಳೆಯು ಕಡಿಮೆಯಾಗಿ ಬಿಸಿಲು ಬಂದು ವಿಮಾನ ನಿಲ್ದಾಣಗಳಲ್ಲಿ ಆಲ್ ಕ್ಲಿಯರ್ ಸಿಗ್ನಲನ್ನು ಕೊಡಲಾಯಿತು. ರೈಲು, ಬಸ್ಸು ಮತ್ತು ಟ್ರಾಮುಗಳ ಓಡಾಟವೂ ಆರಂಭವಾಗಿದೆ.

ರೋಸೆನ್‌ಬರ್ಗ್ ದಂಪತಿಗಳಿಗೆ ಕ್ಷಮೆ ಸಿಗಲಿಲ್ಲ

ಅಣು ಗೂಢಚಾರದಿಂದ ರೋಸೆನ್‌ಬರ್ಗ್ ದಂಪತಿಗಳಿಗೆ ಮರಣ ದಂಡನೆ ವಿಧಿಸಲಾಗಿದೆಯೆಂದು ಅಮೆರಿಕದ ಸುಪ್ರೀಂ ಕೋರ್ಟಿನ ಓರ್ವ ನ್ಯಾಯಾಧೀಶರು ಇತ್ತ ತೀರ್ಪನ್ನು ಅದೇ ಕೋರ್ಟಿನ ಫುಲ್ ಬೆಂಚಿನವರು ೬-೩ ಓಟುಗಳಿಂದ ರದ್ದುಗೊಳಿಸಿರುತ್ತಾರೆ. ಅಧ್ಯಕ್ಷ ಐಸೆನ್‌ಹೋವರರೂ ಸಹ ಕ್ಷಮೆ ತೋರಿಸಲು ನಿರಾಕರಿಸಿರುತ್ತಾರೆ. ಅವರನ್ನು ಈ ದಿನ ಬೆಳಗ್ಗೆ ೮|| ಗಂಟೆಗೆ ವಿದ್ಯುಚ್ಛಕ್ತಿ ಕುರ್ಚಿಯಲ್ಲಿ ಕುಳ್ಳಿರಿಸಿ ಪ್ರಾಣ ತೆಗೆಯಲು ಗೊತ್ತುಪಡಿಸಲಾಗಿತ್ತು

ಮದ್ರಾಸು ಅಧಿಕಾರಿಗಳ ಸಂಬಳದ ಖೋತಾ ರದ್ದು

ಕಳೆದ ಜನವರಿ ೧ ನೇ ತಾ|| ನಿಂದ ಮದ್ರಾಸಿನಲ್ಲಿ ೩೦೦ ರೂ. ಗಿಂತ ಹೆಚ್ಚು ಸಂಬಳ ಪಡೆಯುವ ಅಖಿಲ ಭಾರತ ಸರ್ವೀಸಿನ ಅಧಿಕಾರಿಗಳ ವೇತನದಲ್ಲಿ ಶೇ|| ೧೦ರಂತೆ ಖೋತಾ ಮಾಡಿದ್ದುದನ್ನು ಭಾರತ ಸರ್ಕಾರದವರು ಒಪ್ಪಲಿಲ್ಲವಾದುದರಿಂದ, ಖೋತಾವನ್ನು ಈಗ ರದ್ದುಪಡಿಸಲಾಗಿದೆ

೧ ಲಕ್ಷ ಮೂಟೆ ಗೋಧಿಗೆ ಮುಗ್ಗು

ಹೈದರಾಬಾದು ಸಂಸ್ಥಾನದಲ್ಲಿ ೧ ಲಕ್ಷ ಮೂಟೆಗಳಷ್ಟು ಗೋಧಿಗೆ ಮುಗ್ಗು ಹಿಡಿದಿರುವುದಾಗಿ ವರದಿಯಾಗಿದೆ. ಸರ್ಕಾರದವರು ಗೋಧಿಯನ್ನು ಈ ಕೂಡಲೇ ಬಿಕರಿ ಮಾಡಿದರೂ ೧೦ ಲಕ್ಷ ರೂ. ನಷ್ಟವಾಗುವುದೆಂದೂ, ೬ ತಿಂಗಳ ನಂತರ ಮಾರಿದರೆ ನಷ್ಟವು ೫೦ ರಷ್ಟಾಗುವುದೆಂದೂ ಹೇಳಲಾಗಿದೆ

ಫೋರ್ಜರಿಗಾಗಿ ಭಾರಿ ಶಿಕ್ಷೆ

ಶ್ರೀನಿವಾಸಪುರ ತಾಲ್ಲೂಕಿಗೆ ಸೇರಿದ ಶ್ಯಾನುಭೋಗ್ ಗೋವಿಂದರಾವ್ ಎಂಬಾತನು ಪಾಪಣ್ಣ ಎಂಬುವನಿಗೆ ಸೇರಿದ ಜಮೀನೊಂದರ ಕ್ರಯಪತ್ರ ವಿಕ್ರಯ. ದ ಸಂಬಂಧವಾಗಿ ಪತ್ರಕ್ಕೆ ಪಾಪಣ್ಣನ ಎಡಗೈ ಹೆಬ್ಬೆಟ್ಟಿನ ಗುರುತೆಂದು ತನ್ನ ಬಲಗೈ ಹೆಬ್ಬೆಟ್ಟಿನ ಗುರುತು ಹಾಕಿದ ಬಗ್ಗೆ ಅವನಿಗೆ ಕೋಲಾರದ ಸೆಷನ್ ನ್ಯಾಯಾಧೀಶರು ೭ ವರ್ಷ ಕಠಿಣ ಶಿಕ್ಷೆ ವಿಧಿಸಿದರು. ಆ ಕಾಗದ ಪತ್ರಗಳನ್ನು ಅಕ್ರಮವಾಗಿ ಹೊಂದಿದ್ದ ಬಗ್ಗೆ ಅವನಿಗೆ ೫ ವರ್ಷ ಸಜಾ ಕೊಡಲಾಗಿದೆ

ಶಾಲಾ ಕಟ್ಟಡ ಕುಸಿದು ೮ ಮಕ್ಕಳ ಮರಣ

ಪೂನಾ ಜಿಲ್ಲೆ ತಾಲ್ಲೂಕಿನ ಇಂದಾಪೂರ್ ಎಂಬ ಹಳ್ಳಿಯ ಶಾಲಾ ಕಟ್ಟಡವು ನೆನ್ನೆ ಮಳೆ ಬೀಸಿಯಿಂದ ಕುಸಿದುಬಿದ್ದ ಪರಿಣಾಮವಾಗಿ ೮ ಮಕ್ಕಳು ಮಡಿದು ೧೩ ವಿದ್ಯಾರ್ಥಿಗಳಿಗೆ ಗಾಯವಾಗಿದೆ

ಸಹಾಯಾರ್ಥ ಕುಸ್ತಿ ಪಂದ್ಯಗಳು

ರಾಜಧಾನಿಯ ರೈಲ್ವೆ ವರ್ಕ್‌ಷಾಪಿನ ಕೆಲಸಗಾರರಲ್ಲಿ ರೋಗಗ್ರಸ್ತರಾದವರಿಗೆ ಸಹಾಯವನ್ನೊದಗಿಸುವ ನಿಧಿಗಾಗಿ ನಾಳೆ ಸಂಜೆ ೮|| ಗಂಟೆಗೆ ಬೊಮ್ಮನಹಳ್ಳಿ ಮೈದಾನದಲ್ಲಿ ೫ ಜೊತೆ ಭಾರಿ ಕುಸ್ತಿ ಪಂದ್ಯಗಳು ನಡೆಯುತ್ತವೆ. ಟಿಕೆಟ್ ಮೂಲಕ ಪ್ರವೇಶ. ಸಾರ್ವಜನಿಕರ ಪ್ರೋತ್ಸಾಹವನ್ನು ಕೋರಲಾಗಿದೆ

ಮಂಡಿಮೊಹಲ್ಲ ವಿನಾಚರಣೆ

ಮೈಸೂರು ೩೦

ರಾಜಧಾನಿಯ ಪೌರ ಸಭೆಯವರು ನಾಳಿದ್ದು ಸೋಮವಾರ ಮಂಡಿ ಮೊಹಲ್ಲಾ ದಿನಾಚರಣೆಯನ್ನು ಏರ್ಪಡಿಸಿರುತ್ತಾರೆ ಇದರ ಅಂಗವಾಗಿ ಆ ದಿನ ಬೆಳಿಗ್ಗೆ ೭ ರಿಂದ ೯|| ವರಿಗೆ ನಿರ್ಮಲೀಕರಣ, ರಸ್ತೆಗಳ ಮೈನರ್ ರಿಪೇರಿ ಮುಂತಾದುವನ್ನು ನಡೆಸಲಾಗುವುದು ದೇವಿ ಹುಚ್ಚು, ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರ ಪರೀಕ್ಷೆ ಇವುಗಳನ್ನು ಶ್ರೀ ಲಕ್ಷ್ಮಿ ವೈಟ್ ಹಾಲಿನ ಕೇಂದ್ರದಲ್ಲಿ ನಡೆಸಲಾಗುವುದು ಮತ್ತು ಸೂಕ್ತ ಔಷಧಿಗಳನ್ನೂ ಕೊಡಲಾಗುವುದು. ಸಂಜೆ ೬ ಗಂಟೆಗೆ ಪೌರಸಭಾಧ್ಯಕ್ಷರ ನೇತೃತ್ವದಲ್ಲಿ ಬಹಿರಂಗ ಸಭೆಯೊಂದು ನಡೆಯುವುದು

ಕಳ್ಳತನದ ಪ್ರಯತ್ನಕ್ಕಾಗಿ ಶಿಕ್ಷೆ

ರಾಜಧಾನಿಯ ಕೃಷ್ಣಮೂರ್ತಿಪುರದ ಬೊಜ್ಜಣ್ಣ ರಸ್ತೆಯಲ್ಲಿರುವ ಶ್ರೀ ಕೃಷ್ಣಾ ಬೇಕರಿ ಅಂಗಡಿ ಬೀಗ ತೆಗೆದು ಒಳಗೆ ಹೋಗಲು ಯತ್ನಿಸಿದ ಎಂ ಆರ್ ಕೃಷ್ಣಮೂರ್ತಿ ಎಂಬುವವನನ್ನು ಲಕ್ಷ್ಮೀಪುರಂ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ ಈ ದಿನ ನಗರ ನ್ಯಾಯಾಧೀಶರು ಇವನ ವಿಚಾರಣೆ ನಡೆಸಿ, ಒಂದು ವಾರ ಸಜಾ ವಿಧಿಸಿದರು

ಕಲ್ಕತ್ತಾ ಸಕ್ಕರೆ ವ್ಯಾಪಾರಿಗಳಿಗೆ ಸುಗ್ಗಿ

ರೈಲ್ವೆ ವ್ಯಾಗನ್ನುಗಳ ಅಭಾವದ ಪರಿಣಾಮವಾಗಿ ಕಲ್ಕತ್ತೆಯಲ್ಲಿ ಸಕ್ಕರೆಯ ಕೊರತೆಯುಂಟಾಗಿರುವುದೆಂದೂ, ಈ ಅವಕಾಶವನ್ನು ಪಡೆದ ವರ್ತಕರು ೧ ವಾರದಲ್ಲಿ ೮|| ಲಕ್ಷ ರೂ ಹೆಚ್ಚಿನ ಲಾಭವನ್ನು ಗಳಿಸಿರುವರೆಂದೂ ವರದಿಯಾಗಿದೆ

ಕಬ್ಬಹಳ್ಳಿ ಹೈಸ್ಕೂಲಿನ ಪರೀಕ್ಷಾ ಫಲಿತಾಂಶ

ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿಯಲ್ಲಿರುವ ಶ್ರೀಮತಿ ಕೆಂಪುದೇವಮ್ಮ ಜಿಲ್ಲಾ ಬೋರ್ಡು ಹೈಸ್ಕೂಲಿನಿಂದ ಈ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತಿದ್ದ ೩೩ ವಿದ್ಯಾರ್ಥಿಗಳಲ್ಲಿ ೧೫ ಮಂದಿ ಇ. ಸಿ ಪಿ ಎಸ್ ಮತ್ತು ೬ ಜನ ಇ ಪಿ ಎಸ್ ಪಡೆದಿರುವರು ಮೈಸೂರು ಜಿಲ್ಲಾ ಬೋರ್ಡು ಪ್ರೌಢ ಶಾಲೆಗಳ ಫಲಿತಾಂಶಗಳಲ್ಲಿ ಈ ಶಾಲೆಯು ಪ್ರಥಮ ಸ್ಥಾನ ಗಳಿಸಿರುವುದಾಗಿ ಗೊತ್ತಾಗಿದೆ

ಇದು ನಿಮಗೆ ಗೊತ್ತೇ?

ಬೆಳೆಗಿನ ತಿಂಡಿಗೂ, ರೋಗಿಗಳ ಪೇಹಾರಕ್ಕೂ ಗೃಹಕ್ಕೂ ಕೃತಿಗೂ ಆವಶ್ಯಕವಾಗಿ ಬೇಕಾಗುವ ರುಚಿಯಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪಸ್ತ್ರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂಪಕವಾಕೇಶ್ವರ ಬಿಲ್ಡಿಂಗ್)

ಡಿ. ಸುಬ್ಬಯ್ಯ ರಸ್ತೆ, ಮೈಸೂರು.

ಮದ್ರಾಸು-ಬೆಂಗಳೂರು ರೈಲು ಗಾಡಿ ಅಪಘಾತ

ಮದ್ರಾಸಿನಿಂದ ಬೆಂಗಳೂರಿಗೆ ಬುಧವಾರ ರಾತ್ರಿ ಹೊರಟ ಪ್ರಯಾಣಿಕರ ರೈಲು ಕಾಟ್ಪಾಡಿ-ಆರ್ಕೋಣಂ ನಡುವೆ ಒಂದು ನಿಲ್ದಾಣದಲ್ಲಿದ್ದ ಗೂಡ್ಸ್ ರೈಲಿಗೆ ಡಿಕ್ಕಿಹೊಡೆದುದರಿಂದ ೪ ಜನರಿಗೆ ಗಾಯವಾಯಿತು ಒಂದು ಇಂಜನ್ನಿಗೆ ಜಖಂ ಆಗಿದೆ

ಜಿಲ್ಲಾ ಭಾರತ ಸೇವಕ ಸಮಾಜದ ಕಾರ್ಯದರ್ಶಿಗಳು

ಭಾರತ ಸೇವಕ ಸಮಾಜದ ಮೈಸೂರು ಜಿಲ್ಲಾ ಸಮಿತಿಗೆ ಈ ಕೆಳಗೆ ಕಂಡವರನ್ನು ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ.—ಶ್ರೀಮತಿ ಬಿ. ಕಾಮೇಶ್ವರಮ್ಮ ಶ್ರೀಗಳಾದ ಎಸ್ ಚನ್ನಯ್ಯ, ಹೆಚ್ ಎಂ ಚನ್ನಬಸಪ್ಪ, ಎ ರಾಚಯ್ಯ, ಎಸ್. ರಂಗರಾಮಯ್ಯ, ಎಂ ರಾಜಶೇಖರ ಮೂರ್ತಿ, ಎಂ. ಸಿ ಬಸಪ್ಪ, ಲಿಂಗಣ್ಣಯ್ಯ, ಸೀರಳಿ ಮಾದಪ್ಪ, ಎಸ್ ಎಚ್ ತಮ್ಮಯ್ಯ, ಎಂ ಎಲ್ ನಂಜರಾಜ ಅರಸ್ ವಿಶಾಲ್‌ನೂರ್ ಹುಸೇನ್, ಎಸ್ ಎ. ಸಿಗ್ಗಯ್ಯ, ತಿರುಕಾಚಾರ್ ಜಿ ಎಂ ಚಿಕ್ಕಸಿದ್ದಪ್ಪ, ಹೆಜ್ಜಿಗೆ ಎಂ ಲಿಂಗಣ್ಣ, ಸಿ ಜೆ ದೇವನಾಥ್ ಮತ್ತು ಜಿ ಕೃಷ್ಣಮೂರ್ತಿ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರನ್ನು ಜಿಲ್ಲಾ ಸಮಿತಿಯ ವ್ಯವಸ್ಥಾಪಕರಾಗಿ ನೇಮಿಸಲಾಗಿದೆ

ನಂಜನಗೂಡಿಗೆ ಭಾವನಗರದ ಮಹಾರಾಜರ ಭೇಟಿ

ನಂಜನಗೂಡಿಗೆ ಮದ್ರಾಸಿನ ಮಾಜಿ ಗೌರ್ನರ್ ಭಾವನಗರದ ಮಹಾರಾಜರು ಸಂಸಾರ ಸಮೇತ ಭೇಟಿಯಿತ್ತು ಶ್ರೀಕಂಠೇಶ್ವರ ಸ್ವಾಮಿಯವರ ದೇವಾಲಯದಲ್ಲಿ ಪೂಜಾ ಕಾರ್ಯವನ್ನು ನೆರವೇರಿಸಿ ವಾಪಸು ತೆರಳಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ನಾಗಸ್ವರ ಸುಬ್ರಹ್ಮಣ್ಯಂ, ರಾಜಮ್ಮರ್, ಮಧ್ಯಾಹ್ನ ೧.೪೦ ಹಿಟ್ಟೀಲು, ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫.೪೦ ಮತ್ತು ೮ ೪೦ ಎಸ್ ಎಂ ಪುಟ್ಟಯ್ಯ, ಸಂಗೀತ, ೬.೧೫ ನಾವು ಮತ್ತು ನಮ್ಮವರು, ೭ ಜಾನಪದ ರಾಯರ, ರಾಜಮ್ಮರ್. ೭.೩೦ ಎಸ್ ಅನಂತಪದ್ಮನಾಭರಾವ್, ಪಿಟೀಲು ೯ ೧೫ ಸಿನಿಮಾ ನಟಿಯರ ಹಾಡುಗಳು ೯ ೪೦ ಕನ್ನಡ ನಾಟಕ "ಬಂಧನ"

||ಶ್ರೀ||

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ ಕಿಂಡರ್ ಗಾರ್ಟನ್, ಮಾಂಟಿಸ್ಸೋರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾರ್ಗಗಳನ್ನನುಸರಿಸಿ, ಮಿಡಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಕಾಲ ವಿಳಂಬ ಮಾಡದೆ ತಾಯಿತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ,
ಪ್ರೊಪ್ರೈಟರ್

ಜಿನರಾಜ ದಾಸರವರ ಮರಣ

ಮದರಾಸಿನ ಥಿಯಸಾಫಿಕಲ್ ಸೊಸೈಟಿಯ ಮಾಜಿ ಅಧ್ಯಕ್ಷ ಡಾ|| ಜಿನರಾಜದಾಸರವರು ನೆನ್ನೆ ಬೆಳಗಿನ ಝಾವ ಅಮೆರಿಕದ ಇಲ್ಲಿನಾಯ್ ಪ್ರಾಂತ್ಯದ ವ್ಹೀಟನ್ ಎಂಬಲ್ಲಿ ನಿಧನರಾದರೆಂದು ಸುದ್ದಿ ಬಂದಿದೆ

ಕಾಲೇಜುಗಳಿಗೆ ಸೇರಲು ಹೆಚ್ಚಿನ ಕಾಲಾವಕಾಶ

ಸಂಸ್ಥಾನದಲ್ಲಿ ಕಾಲೇಜುಗಳಿಗೆ ಸೇರಲು ಇಂದೇ ಕೊನೆಯ ದಿನವೆಂದು ಈ ಮೊದಲು ಸೂಚಿಸಲಾಗಿತ್ತು, ಈಗ ಆ ಅವಧಿಯನ್ನು ಇದೇ ೨೫ನೇ ತಾರೀಕಿನ ವರೆಗೆ ಹೆಚ್ಚಿಸಲಾಗಿದೆ. ಫಲಿತಾಂಶ ಕೈಸೇರಿದೊಡನೆ, ಬರುವ ೩೦ನೇ ತಾರೀಕಿನ ವರೆಗೂ ಅರ್ಜಿ ಸಲ್ಲಿಸಲು ಅವಕಾಶವಿದೆ ಅನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ

೨ ನೇ ಗ್ರೇಡ್ ನೌಕರಿಯಲ್ಲಿರುವ ಪದವೀಧರರಿಗೆ ೧ನೇಗ್ರೇಡ್ ಸಂಬಳ

ಸರ್ಕಾರೀ ಕೆಲಸದಲ್ಲಿದ್ದುಕೊಂಡೇ ವ್ಯಾಸಂಗ ಮಾಡಿ ಪದವೀಧರರಾಗುವ ದ್ವಿತೀಯ ದರ್ಜೆ ನೌಕರರಿಗೆ ಅದೇ ಗ್ರೇಡಿನಲ್ಲಿ ೬೦ ರೂ ಸಂಬಳ ಕೊಡಬಹುದೆಂದು ಸರ್ಕಾರಿ ಆಜ್ಞೆಯಾಗಿದೆ ಈ ಆಜ್ಞೆಯು ಕಳೆದ ತಿಂಗಳು ೨೬ ರಿಂದ ಜಾರಿಗೆ ಬರುವುದು

ಸಹಾಯಾರ್ಥ ಚಿತ್ರ ಪ್ರದರ್ಶನ

ರಾಜಧಾನಿಯಲ್ಲಿರುವ ಮೈಸೂರು ಯೂತ್ಸ್ ಕ್ಲಬ್ಬಿನ ಸಹಾಯಾರ್ಥವಾಗಿ ಇದೇ ೨೮ನೇ ತಾರೀಖು ಬೆಳಿಗ್ಗೆ ೧೧-೩೦ಕ್ಕೆ ಶ್ರೀ ಗಾಯತ್ರೀ ಟಾಕೀಸಿನಲ್ಲಿ ಅಮೆರಿಕ ಗೆರಿಲ್ಲಾ ಇನ್ ದಿ ಫಿಲಿಪ್ಪೈನ್ಸ್ ಎಂಬ ಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿದೆ

|| ಶ್ರೀ ||

ಶ್ರೀನಿವಾಸ ಮಂದಿರ

329, ಡಿ.ಸುಬ್ಬಯ್ಯ ರೋಡ್, ಮೈಸೂರು.

ಇಲ್ಲಿ ಈ ಕೆಳಗೆ ಕಂಡ ಶಿಕ್ಷಣ ತರಗತಿಗಳು ನಡೆಯುತ್ತವೆ:—

ಪ್ರೈಮರಿ, ಮಿಡಲ್, ಹೈಸ್ಕೂಲ್, ಹಿಂದಿ, ಸಂಗೀತ ಮತ್ತು ಶಿಶುವಿಹಾರ.

ವಿವರಗಳಿಗೆ ವಿಚಾರಿಸಿ.

SRI GAYATHRI

TALKIES

From 18 6 53 : Daily 3 Shows

M. G M's Most Adventurous

Story in Technicolor

IVANHOE

With:— Robert Taylor,

Elizabeth Taylor,

Joan Fontaine

Edited, Printed and Published by A R Nagarajan at Sadhvi Press, D Subbah Road, Mysore

ಬೆಂಕಿ ಅಪಘಾತದಲ್ಲಿ ನಾಲ್ಕು ಸ್ತ್ರೀಯರ ಮರಣ

ಸಿಂಹಳದಲ್ಲಿ ಕೊಲಂಬೋ ನಗರದ ಬಳಿ ಇರುವ ಕೆಲಾನ ಎಂಬಲ್ಲಿ ನೆನ್ನೆ ಒಂದು ಹತ್ತಿ ಗಿರಣಿಗೆ ಬೆಂಕಿ ಬಿದ್ದು ಅಪಾರ ನಷ್ಟ ಸಂಭವಿಸಿರುವುದೆಂದೂ, ೪ ಮಂದಿ ಹೆಂಗಸರು ಜ್ವಾಲೆಯಲ್ಲಿ ಸಿಕ್ಕಿ ಮೃತಪಟ್ಟು, ಇತರ ೧೨ ಜನರು ಗಾಯಗೊಂಡರೆಂದೂ ವರದಿಯಾಗಿದೆ. ೧೨ ಘಂಟೆಗಳ ಕಾಲ ಹೋರಾಡಿ ಬೆಂಕಿಯನ್ನು ಆರಿಸಲಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೧೩ ೧೩-೦	೩೦.೦ ೦
ಹರಳುಬೀಜ	೪೦_೦-೦	
ಹೊಂಗೆಬೀಜ	೩೨-೧೦-೦	೩೩ ೧೩
ಹುರುಳಿ	೪೫ ೬.೦	
ಹೆಸರು	೬೫-೨-೦	೬೫-೦ ೦
ಅವರೆ	೫೩.೪ ೦	
ಹಲಸಂದೆ	೫೪.೦ ೦	೬೧.೦.೦
ಉದ್ದು	೬೯-೦-೦	೭೦ ೩ ೦
ಎಳ್ಳು	೪೩ ೦ ೦	೪೬ ೪ ೦
ಕೊಬ್ಬರಿ ಕಾಯಿ	೩೬ ೧೪ ೦	೩೮_೧೪_೦
ಹುಣಸೇಹಣ್ಣು	೪ ೦.೦	[illegible] ೩ ೦
ಒಣಮೆಣಸಿನಕಾಯಿ	೬_೪_೦	
ತೆಂಗಿನಕಾಯಿ	೧೩೪ ೦-೦	೨೫೦.೦ ೦

The Central College Of Commerce,

Vanivilas Market Buildings,

MYSORE

Admissions to D Com, Dip-in-sten, Short-hand & Typewriting will be received on all working days Join immediately.

ದಿ ಲ್ ಖು ಷ್

(ಪ್ರಶಂಸೆ)

1. ಹಿಡುದಿನ ಕಲಿಯನ್ನೂ, ಹುಚ್ಚ ಕಷ್ಟ ದರ್ಶನವನ್ನು ಹೊಡೆದುಹಾಕುವುದಲ್ಲದೆ ಹೊದಲು ಬೆಳೆಯುದನ್ನೂ ಬೆಳೆಸುತ್ತದೆ.
2. ಶರೀರ ವಿಷಯ ಮೊದಲಾದ ಚರ್ಮರೋಗಗಳನ್ನು ನಿರ್ಮೂಲ ಮಾಡುತ್ತದೆ.
3. ಬಹುಕಾಲದ ಹೊಟ್ಟೆ ನೋವನ್ನು, ಕ್ಷಣದಲ್ಲೇ ನಿಲ್ಲಿಸುತ್ತದೆ
4 ರಾಸಾಯನಿಕ ಪದಾರ್ಥ ಮಿಶ್ರಣದಲ್ಲಿ ಶಾಸ್ತ್ರೀಯವಾಗಿ ತಯಾರಿಸಿದ ರಕ್ತ ಹೀನತೆ (Anaemia). ಧಾತು ನಷ್ಟ, ಧಾತು ದೌರ್ಬಲ್ಯ ಮುಂತಾದ ರೋಗಗಳನ್ನು ನಿವಾರಿಸಿ, ಮನಸ್ಸಿಗೆ ಹರ್ಷವನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದೆಂಬುದರಲ್ಲಿ ಅತಿಶಯೋಕ್ತಿಯಿಲ್ಲ
5. ಮೂಲವ್ಯಾಧಿಗೆ ಪರಮೌಷಧ.

ಹನ್ನೆರಡು ವರ್ಷ ಮೂಲವ್ಯಾಧಿಯಿಂದ ನರಳಿ ನಾನಾ ಚಿಕಿತ್ಸೆಗಳನ್ನು ಮಾಡಿಸಿದ್ದಾಗ್ಯೂ ನಿರಾಶನಾಗಿ, ಆಪರೇಷನ್ ಮಾಡಿಸಬೇಕೆಂದಿದ್ದಾಗ, ಧನ್ವಂತರಿಯಂತೆ ನನ್ನ ಭಾಗ್ಯದಲ್ಲಿದ್ದ ಶ್ರೀ ಕಾಮಣ್ಣನವರೇ, ನನ್ನನ್ನು ಈ ಮೂಲ ವ್ಯಾಧಿಯಿಂದ ಪಾರು ಮಾಡಿದರು....

. ...(ಶ್ರೀ ಬಿ ವೆಂಕಟಸುಬ್ಬಯ್ಯ, ಹೆಡ್ ಕ್ಲರ್ಕ್, ರೈಲ್ವೆ ಲೋಕೋ ಆಫೀಸ್, ಮೈಸೂರು.)

ಎಸ್. ಕಾಮಣ್ಣ, ಸ್ಪೆಷಲಿಸ್ಟ್.

2830. ಆರ್ಡರ್ ಆಫ್ ಸ್ಟ್ರೀಟ್ ಔಷಧಾಲಯ, 13ನೇ ಕ್ರಾಸ್ ಸ್ಟ್ರೀಟ್ ಡಿಸ್ಟ್ರಿಕ್ಟ್ ಮುಂದೆ, ಚಾಮುಂಡಿಪುರಂ, ಮೈಸೂರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಬಿ ಎ., ಇಂಡಿಯಾ ಬ್ಯಾಂಕ್ ಎದುರು ಸ್ಟ್ರೀಟ್ ಮೈಸೂರು

ರಿಜಿಸ್ಟರ್ ನಂ. 792 WEEKLY EDITION ಅಂಚೆ ಸಹಿತ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೨೧-೬-೧೯೫೩ [ಸಂಚಿಕೆ ೪೩

– ಕೊರಿಯಾ ಶಾಂತಿ – ಬಗ್ಗೆ ಪೂರ್ಣ ನಿರಾಶೆ?

ಅಕೌಂಟೆಂಟ್ ಜನರಲ್ಲರ ಕಛೇರಿ ಶಂಕು ಸ್ಥಾಪನೆ

ಶ್ರೀಮನ್ ಮಹಾರಾಜರ ಭಾಷಣ

ಬೆಂಗಳೂರು ೨೧

ಶ್ರೀಮನ್ ಮಹಾರಾಜರು ನೆನ್ನೆ ಅಕೌಂಟೆಂಟ್ ಜನರಲ್‌ರವರ ಕಛೇರಿಯ ಶಿಲಾ ಸ್ಥಾಪನೆಯನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಸ್ವತಂತ್ರ ಭಾರತಕ್ಕೆ ಪ್ರಥಮ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರನ್ನು ಮೈಸೂರು ಒದಗಿಸಿರುವುದಾಗಿ ತಿಳಿಸಿ, ರಾಷ್ಟ್ರದ ಎಲ್ಲಾ ರೀತಿಯ ಸೇವೆಗೂ ದಕ್ಷರಾದವರನ್ನು ಒದಗಿಸಿಕೊಡಲು ಮೈಸೂರಿಗೆ ಶಕ್ತಿಯಿರುವುದಾಗಿ ಅವರು ಅಭಿಪ್ರಾಯಪಟ್ಟರು. ಸಂಸ್ಥಾನವು ಮೊದಲಿನಿಂದಲೂ ಇಲ್ಲಿಯ ಸಾರ್ವಜನಿಕ ಸೇವೆಗಲ್ಲದೆ, ಇತರ ಸಂಸ್ಥಾನಗಳಿಗೂ, ಭಾರತ ಸರ್ಕಾರಕ್ಕೂ ಉನ್ನತ ಪ್ರತಿಭಾನ್ವಿತ ಅಧಿಕಾರಿಗಳನ್ನು ಒದಗಿಸಿರುವುದಾಗಿ ಅವರು ತಿಳಿಸಿದರು.

ಆಡಿಟರ್ ಜನರಲ್ ಶ್ರೀ ನರಹರಿ ರಾಯರು ಮಾತನಾಡಿ, ಆಡಿಟ್ಟಿನ ಮಹತ್ವವನ್ನು ವಿವರಿಸಿದರು. ಅಕೌಂಟೆಂಟ್ ಜನರಲ್ಲರಾದ ಶ್ರೀ ಘಟಕ್‌ರವರು ಸ್ವಾಗತ ಬಯಸಿದರು.

ಭಾವಿ ತೆಗೆಯಲು ದ್ರವ್ಯ ಸಹಾಯ

ಭಾರತ ಸರ್ಕಾರದವರ ಒಟ್ಟಿಗೆ ಮೇರೆ ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿ ೫೩-೫೪ನೇ ಸಾಲಿಗೂ ಸಹ ನೀರಾವರಿ ಭಾವಿ ತೋಡುವುದಕ್ಕೆ ದ್ರವ್ಯ ಸಹಾಯ ಕೊಡುವ ಯೋಜನೆಯನ್ನು ಮಂಜೂರು ಮಾಡಿರುತ್ತಾರೆ. ಕೋಲಾರ, ತುಮಕೂರು ಮತ್ತು ಚಿತ್ರದುರ್ಗಗಳಲ್ಲಿ ೫೦೦ ರೂ ಗಳನ್ನೂ, ಉಳಿದ ಕಡೆಗಳಲ್ಲೆಲ್ಲಾ ೩೫೦ ರೂ ಗಳನ್ನು ಒದಗಿಸಲಾಗುವುದು.

ವಜಾ ಆದವನಿಂದ ಸಿ.ಐ.ಡಿ. ಕೆಲಸಕ್ಕೆ ಅರ್ಜಿ

ಲಂಚ ಪಡೆದ ಅಪಾದನೆ ಮೇಲೆ ಕಳೆದ ಫೆಬ್ರವರಿಯಲ್ಲಿ ವಜಾ ಆದ ರಾತಿಯ ಮುನಿಸಿಪಾಲಿಟಿ ಓವರ್‌ಸೀಯರನೊಬ್ಬನು ಸಿ. ಐ. ಡಿ ಇಲಾಖೆಯಲ್ಲಿ ತನಗೆ ಕೆಲಸ ಕೊಡಿಸುವಂತೆ ಅರ್ಜಿ ಹಾಕಿಕೊಂಡು, ಲಂಚದ ತಂತ್ರ ಮತ್ತು ಪ್ರಯೋಗಗಳಲ್ಲಿ ತಾನು ಪ್ರವೀಣನಾಗಿರುವುದಾಗಿಯೂ, ಲಂಚದ ವಿದ್ಯಮಾನಗಳನ್ನು ಕಂಡುಹಿಡಿಯಲು ತನ್ನಿಂದ ಹೆಚ್ಚು ಸಹಾಯವಾಗುವುದೆಂದೂ ತಿಳಿಸಿರುತ್ತಾನೆ. ಅವನು ಬ್ಯಾಂಕಿನಲ್ಲಿ ೬೦ ಸಾವಿರ ರೂ ಗಳನ್ನು ಇಟ್ಟಿದ್ದುದಾಗಿಯೂ, ಈ ಹಣವು ಅವನಿಗೆ ಕಳೆದ ೨೪ ವರ್ಷಗಳಲ್ಲಿ ಸಂದಾಯವಾದ ಸಂಬಳ, ಭತ್ಯ ಮುಂತಾದುವುಗಳ ಒಟ್ಟು ಮೊತ್ತದ ಎರಡರಷ್ಟಾಗಿದ್ದಿತೆಂದೂ ಹೇಳಲಾಗಿದೆ.

ಕೊಪ್ಪ ಪೌರಸಭಾ ಮಾಜಿ ಗುಮಾಸ್ತನಿಗೆ ಶಿಕ್ಷೆ

ಕೊಪ್ಪ ಪೌರ ಸಭೆಯ ಹಣವನ್ನು ದುರುಪಯೋಗಪಡಿಸಿಕೊಂಡನೆಂದು ಅಲ್ಲಿನ ಮಾಜಿ ಗುಮಾಸ್ತೆ ಹಯಾತ್ ಎಂ. ಬ.ವನಿಗೆ ೨ ಮೊಕದ್ದಮೆಗಳಲ್ಲಿ ಒಟ್ಟು ೯ ತಿಂಗಳು ಸಜಾ, ೧,೫೦೦ ರೂ ದಂಡ. ಅದನ್ನು ಕೊಡದಿದ್ದರೆ ಪುನಃ ೯ ತಿಂಗಳ ಸಜಾ ವಿಧಿಸಲಾಗಿದೆ.

ವಿದ್ಯುತ್ತಿಗೆ ರೋಸೆನ್‌ಬರ್ಗ್ ದಂಪತಿಗಳ ಬಲಿ

ಅಮೆರಿಕದ ಅಣು ಗೂಢಚಾರರಾದ ರೋಸೆನ್‌ಬರ್ಗ್ ದಂಪತಿಗಳನ್ನು ನೆನ್ನೆ ಸಿಂಗ್‌ಸಿಂಗ್ ಜೈಲಿನಲ್ಲಿ ಕುರ್ಚಿಯ ಮೇಲೆ ಕುಳ್ಳಿರಿಸಿ ವಿದ್ಯುತ್ ಪ್ರವಾಹ ಬಿಟ್ಟು ಮರಣ ದಂಡನೆಯನ್ನು ಜಾರಿ ಮಾಡಲಾಯಿತು. ದಂಪತಿಗಳಿಬ್ಬರೂ ಸಾಯುವವರೆಗೂ ತಾವು ನಡೆಸಿದ ಕಾರ್ಯಗಳ ಬಗ್ಗೆ ಯಾವ ರಹಸ್ಯವನ್ನೂ ಹೊರಗೆಡಹಲಿಲ್ಲ. ಐದನ್ನರೆಯುವ ಸಲುವಾಗಿ ಅಧ್ಯಕ್ಷ ಐಸೆನ್‌ಹೋವರರು ಕಾದಿದ್ದರು. ಅವರಿಬ್ಬರನ್ನೂ ಪ್ರತ್ಯೇಕವಾಗಿ ವಿದ್ಯುತ್ ಕುರ್ಚಿಗೆ ಕರೆತರಲಾಯಿತು. ಗಂಡನನ್ನು ಕೊಂದ ೧೦ ನಿಮಿಷಗಳ ನಂತರ ಪತ್ನಿಯ ಪ್ರಾಣ ತೆಗೆಯಲಾಯಿತು. ಆಕೆ ಮೇಲೆ ೪ ಬಾರಿ ವಿದ್ಯುತ್ಪ್ರವಾಹ ಬಿಟ್ಟರೂ ಸಾಯಲಿಲ್ಲ. ಆಗ ವೈದ್ಯರು ಕಾರಾಗೃಹದ ವಾರ್ಡನ್ನಿನ ಕಿವಿಯಲ್ಲಿ ಏನೋ ಉಸುರಲು, ಆಕೆಯನ್ನು ಬೇರೆ ವಿಧಾನದಲ್ಲಿ ಕಟ್ಟಿ ಕುಳ್ಳಿರಿಸಿ ತಲೆಗೂ ಬಲಗಾಲಿಗೂ ಮತ್ತೆ ಷಾಕ್ ಕೊಟ್ಟಮೇಲೆ ಹೆಂಡತಿಯ ಪ್ರಾಣವು ಹಾರಿಹೋಯಿತು. ಗಂಡನನ್ನು ಕೊಲ್ಲಲು ಮೂರು ಬಾರಿ ವಿದ್ಯುತ್ಪ್ರವಾಹವನ್ನು ಕೊಡಲಾಯಿತು.

ಪತ್ನಿಯನ್ನು ಕುರ್ಚಿ ಮೇಲೆ ಕುಳ್ಳಿರಿಸಿದಾಗ, ಆಕೆಯು ಜೈಲಿನ ಮೇಟ್ರನ್ನಳನ್ನು ಅಪ್ಪಿಕೊಂಡಳು. ಆಕೆಗೆ ಆತ ದುಃಖವುಂಟಾಗಿ ಅಲ್ಲಿಂದ ಹೊರಟುಹೋದಳು. ಗಂಡನನ್ನು ಮೃತ್ಯು ಕೊಠಡಿಗೆ ಒಯ್ಯುವಾಗ ಆತನು ಶಾಂತನಾಗಿಯೇ ಗಂಭೀರವಾಗಿ ಹೆಜ್ಜೆ ಇಡುತ್ತಾ ಹೋದನು.

ಅವರಿಗೆ ಪ್ರಾಣಭಿಕ್ಷೆ ನೀಡ ಬೇಕೆಂದು ಕೋರುವ ಅರ್ಜಿಯನ್ನು ಹಿಡಿದು ಅವರ ವಕೀಲರು ಅಧ್ಯಕ್ಷರ ಭವನಕ್ಕೆ ಹೋದಾಗ ಕಾವಲುಗಾರರು ಅವರನ್ನು ಒಳಗೆ ಬಿಡಲಿಲ್ಲ. ಗೂಢಚರ್ಯೆ ನಡೆಸಿದ ನಾಗರಿಕ ಪ್ರಜೆಗಳ ಪೈಕಿ ಅಮೆರಿಕದಲ್ಲಿ ಮರಣಶಿಕ್ಷೆ ಗುರಿಯಾದವರು ಇವರೇ ಮೊದಲಿನವರು.

○ ಸಂಸ್ಥಾನದ ಟೌನ್ ಪೌರಸಭೆಗಳಲ್ಲಿ ಸಿಬ್ಬಂದಿ ತೋತಾವನ್ನು ಮಂಜೂರು ಮಾಡುವ ಅಧಿಕಾರವನ್ನು ಸರ್ಕಾರದವರು ಸ್ಥಳೀಯ ಸಂಸ್ಥೆ ಕಮಿಷನರಿಗೆ ಕೊಟ್ಟಿರುತ್ತಾರೆ.

ಸಬ್ ಇನ್ಸ್‌ಪೆಕ್ಟರರನ್ನು ಹೊಡೆದುದಕ್ಕೆ ಸಜಾ

ಬೆಂಗಳೂರು ೨೦

ರಾಮನಗರದ ಪೊಲೀಸು ಸಬ್ ಇನ್ಸ್‌ಪೆಕ್ಟರೊಬ್ಬರನ್ನು ಕಳೆದ ೧೪ ನೇ ತಾ|| ರಂಜಾನ್ ಹಬ್ಬದದಿನ ಬಜಾರಿನಲ್ಲಿ ಹೊಡೆದುದಕ್ಕಾಗಿ ಖಲಂದರ್ ಖಾನ್ ಎಂಬುವನಿಗೆ ಎರಡು ಆಪಾದನೆ ಮೇಲೆ ತಲಾ ೧ ವರ್ಷ ಕಠಿಣ ಸಜಾ ವಿಧಿಸಿ, ಎರಡು ಶಿಕ್ಷೆಗಳನ್ನೂ ಒಟ್ಟಿಗೆ ಅನುಭವಿಸುವಂತೆ ಅಲ್ಲಿನ ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ. ರಾಮನಗರಂ ಕಂಟೆಂಪ್ಟ್ ಆಫ್ ಕೋರ್ಟ್ ಅಪಾದನೆಯಲ್ಲಿ ಶಿಕ್ಷಿತರಾಗಿರುವ ಪೌರಸಭಾ ಉಪಾಧ್ಯಕ್ಷ ಚಿಕ್ಕ ನರಸಿಂಹ ರೆಡ್ಡಿ ಮತ್ತು ಶಿವಣ್ಣ ಎಂಬುವರ ಪ್ರೇರಣೆ ಪ್ರಕಾರ ಖಲಂದರನು ಅಧಿಕಾರಿಯ ಮೇಲೆ ಕೈ ಮಾಡಿದುದಾಗಿ ಅವನು ಒಪ್ಪಿಕೊಂಡಿರುತ್ತಾನೆ.

ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸಲು ಮನವಿ

ಮದರಾಸಿನ ವ್ಯವಸಾಯ ಶಾಖಾ ಸಚಿವ ಡಾ|| ಆರ್ ನಾಗನಗೌಡರವರು ಕಳೆದ ವಾರ ಕೊಳ್ಳೇಗಾಲಕ್ಕೆ ಭೇಟಿಯಿತ್ತಾಗ, ಅಲ್ಲಿನ ಪ್ರಮುಖರು ಸಚಿವರಿಗೆ ಒಂದು ಮನವಿಯನ್ನು ಸಲ್ಲಿಸಿ ಕೊಳ್ಳೇಗಾಲವು ಸಾಂಸ್ಕೃತಿಕವಾಗಿಯೂ ಮತ್ತು ವ್ಯಾಪಾರ ವ್ಯವಹಾರಗಳ ದೃಷ್ಟಿಯಿಂದಲೂ ಮೈಸೂರಿನೊಡನೆ ಬಹಳ ಮಟ್ಟಿಗೆ ಹೊಂದಿಕೊಂಡಿರುವುದರಿಂದ ಅದನ್ನು ಆ ಸಂಸ್ಥಾನಕ್ಕೆ ಸೇರಿಸಬೇಕೆಂದು ಪ್ರಾರ್ಥಿಸಿದರು. ಅದನ್ನು ಸಹಾನುಭೂತಿಯುತವಾಗಿ ಪರಿಶೀಲಿಸಲಾಗುವುದೆಂದು ಸಚಿವರು ಭರವಸೆಯಿತ್ತರು.

ಗೌರೀಶಂಕರ ಆರೋಹಣದ ಬಗ್ಗೆ ವರ್ಣರಂಜಿತ ಚಿತ್ರ

ಗೌರೀಶಂಕರ ಶಿಖರವನ್ನು ಹತ್ತಿದ ಸಂಬಂಧವಾಗಿ ಅಲ್ಲಿ ನಡೆದ ಸಾಹಸ ಕಾರ್ಯಗಳನ್ನು ತೋರಿಸುವ ವರ್ಣರಂಜಿತ ಚಿತ್ರವು ಬ್ರಿಟನ್ನಿನಲ್ಲಿ ತಯಾರಾಗುತ್ತಿದೆ. ಬರುವ ಅಕ್ಟೋಬರಿನಿಂದ ಅದನ್ನು ಸಾರ್ವಜನಿಕರು ನೋಡಬಹುದಾಗಿದೆ. ಲಂಡನ್ ಮತ್ತು ಡೆಹಲಿಗಳಲ್ಲಿ ಮೊದಲು ಅದನ್ನು ಏಕ ಕಾಲದಲ್ಲಿ ತೋರಿಸಲಾಗುವುದು.

ಕೊರಿಯಾ ಸಂಧಾನದ ಭಂಗವೇ?

ಶಾಂತಿ ಸಂಧಾನವಾಗುವ ಎಲ್ಲಾ ಆಸೆಯನ್ನು ಬೋಳಿಯೊಪಿನಲ್ಲಿರುವ ವಿಶ್ವಸಂಸ್ಥೆ ಅಧಿಕಾರಿಗಳು ಬಿಟ್ಟುಬಿಟ್ಟಿರುವುದಾಗಿ ಗೊತ್ತಾಗಿದೆ. ೨೭ ಸಾವಿರ ಖೈದಿಗಳನ್ನು ಸಿಂಗ್ಮನ್ ರೀಯವರು ಬಿಡುಗಡೆ ಮಾಡಿದುದಕ್ಕೆ ವಿಶ್ವ ಸಂಸ್ಥೆಯವರು ಒತ್ತಾಸೆಯಿತ್ತುದಾಗಿ ಸಂಧಾನದ ಕಾಲದಲ್ಲಿ ಕಮ್ಯೂನಿಸ್ಟರು ಅಪಾದಿಸಿರುವುದೇ ಈ ಮನೋಭಾವನೆಗೆ ಕಾರಣವಾಗಿದೆ. ಈಗಿನದಕ್ಕಿಂತಲೂ ಇನ್ನೂ ಕೆಟ್ಟ ಪರಿಣಾಮಗಳು ಆಗುವುದೆಂದು ನಿರೀಕ್ಷಿಸಲ್ಪಟ್ಟಿದ್ದು, ಈಗಲೂ ಶಾಂತಿಯಾಗುವ ಬಗ್ಗೆ ಸ್ವಲ್ಪ ಆಶಾಕಿರಣಗಳಿರುವುವೆಂದು ನ್ಯೂಯಾರ್ಕಿನಲ್ಲಿ ಭಾವಿಸಲಾಗಿದೆ. ಶಾಂತಿ ಸಂಧಾನ ನಡೆಯುತ್ತಿರುವ ಗುಡಿಸಲುಗಳನ್ನು ಕಮ್ಯೂನಿಸ್ಟರು ಕಿತ್ತು ಹಾಕುತ್ತಿರುವುದು, ದಕ್ಷಿಣ ಕೊರಿಯಾ ಸರ್ಕಾರದವರು ಬಿಡುಗಡೆಯಾದ ಖೈದಿಗಳನ್ನು ಸೈನ್ಯಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿರುವುದು, ಇವೇ ಮುಂತಾದುವು ಸಂಧಾನ ಭಂಗಕ್ಕೆ ಕಾರಣವಾಗಿವೆ. ಕಮ್ಯೂನಿಸ್ಟರಾಗಲಿ, ದಕ್ಷಿಣ ಕೊರಿಯನ್ನರಾಗಲಿ ತಮ್ಮ ನಿಲುವಿನಿಂದ ಸ್ವಲ್ಪ ಇಳಿದರೆ ಶಾಂತಿಯನ್ನು ಈಗಲಾದರೂ ಸಾಧಿಸಬಹುದೆಂದು ವಿಶ್ವ ಸಂಸ್ಥೆ ಪ್ರಧಾನ ಸೇನಾನಿಯು ಭಾವಿಸಿರುವರು.

ಪೂರ್ವ ಜರ್ಮನಿಯಲ್ಲಿ ಅನೇಕರ ದಸ್ತಗಿರಿ

ಪೂರ್ವ ಬರ್ಲಿನ್ನಿನಲ್ಲಿ ಆದ ಗಲಭೆಯ ಪ್ರತಿಕ್ರಿಯೆಯಾಗಿ ಪೂರ್ವ ಜರ್ಮನಿಯಲ್ಲಿ ಅನೇಕರನ್ನು ದಸ್ತಗಿರಿ ಮಾಡಲಾಗುತ್ತಿದೆಯೆಂದೂ, ಅಲ್ಲಿನ ಶಾಲೆಗಳನ್ನು ಹಂಗಾಮಿ ಜೈಲುಗಳಾಗಿ ಪರಿವರ್ತಿಸಲಾಗುತ್ತಿದೆಯೆಂದೂ ಹೇಳಲಾಗಿದೆ.

ಮಲೆನಾಡಿಗೆ ವಿದ್ಯುಚ್ಛಕ್ತಿ ದರದಲ್ಲಿ ರಿಯಾಯಿತಿ

ಮಲೆನಾಡು ಪ್ರದೇಶಗಳಿಗೆ ಒದಗಿಸಲಾಗುತ್ತಿರುವ ವಿದ್ಯುಚ್ಛಕ್ತಿ ದರದಲ್ಲಿ ಸ್ವಲ್ಪ ರಿಯಾಯಿತಿ ತೋರಿಸುವುದಾಗಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ. ಸರ್ಕಾರದ ಬಂಡವಾಳಕ್ಕೆ ಶೇ|| ೬ ಅಥವಾ ೭ ರಷ್ಟು ಲಾಭವನ್ನು ಸಾಮಾನ್ಯವಾಗಿ ಪಡೆಯಲಾಗುತ್ತಿರುವುದಾಗಿಯೂ ಅವರು ಹೇಳಿರುತ್ತಾರೆ.

ಮುಸ್ಲಿಂ ಲೀಗ್ ಅಧ್ಯಕ್ಷತೆಗೆ ರಾಜೀನಾಮೆ

ವಜಾ ಆದ, ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರವರು ಮುಸ್ಲಿಂ ಲೀಗಿನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯಿತ್ತಿರುವರು. ಅವರು ರಾಜಕೀಯದಿಂದ ಪೂರ್ಣವಾಗಿ ನಿವೃತ್ತಿ ಹೊಂದಿ ಬೇಸಾಯದಲ್ಲಿ ನಿರತರಾಗುವರೆಂದು ಹೇಳಲಾಗಿದೆ.

ಮದ್ರಾಸಿನಲ್ಲಿ ೧೪೮ ಬೆಸ್ತರ ರಕ್ಷಣೆ

ಮೀನು ಹಿಡಿಯಲು ಸಮುದ್ರಕ್ಕೆ ಹೋಗಿ ಉಬ್ಬರವಿಳಿತಕ್ಕೆ ಸಿಕ್ಕಿದ ಬೆಸ್ತರ ಪೈಕಿ ಇದುವರೆಗೆ ೧೪೮ ಮಂದಿಯನ್ನು ರಕ್ಷಿಸಲಾಗಿದೆ.

ವಾರ ಭವಿಷ್ಯ

ತಾ|| ೨೧-೬-೫೩ ರಿಂದ ೨೭-೬-೫೩ ರ ವರೆಗೆ

ಮೇಷ — ಆರೋಗ್ಯ ನೆಟ್ಟಗೆ, ಮನೆಯಲ್ಲಿ ಶುಭ ಕಾರ್ಯ ದ ಹುಕದಿಂ, ಪ್ರವಾಸ ಸುಖಕರ ವ್ಯಾಪಾರಾದಿಗಳಲ್ಲಿ ಲಾಭ ತಾ|| ... ಖರ್ಚು, ವ್ಯಥೆ

ವೃಷಭ — ... ಗಳಿಂದ ವಿಘ್ನ ... ಪತ್ನಿ ದಾಕ್ಷಿಣ್ಯಕ್ಕೆ ... ತಾಪತ್ರಯ, ಆರೋಗ್ಯ ಸಂಧಂದಣ, ವ್ಯಾಪಾರಾದಿಗಳಲ್ಲಿ ಲಾಭ. ತಾ|| ... ಗಡಿಬಿಡಿ

ಮಿಥುನ — ... ದ ಕಾರ್ಯ ಸಿದ್ಧಿಸದು ಆರೋಗ್ಯ, ಆರ್ಥಿಕ ಸ್ಥಿತಿ ... ಬೀಳುವುವು, ವ್ಯಾಪಾರಾದಿಗಳಲ್ಲಿ ಹಿತಶತ್ರುಗಳ ಬಾಧೆ ತಾ|| ... ಕಲಹ, ವಿರೋಧ

ಕರ್ಕ — ಆರ್ಥಿಕ ಸ್ಥಿತಿ ನೆಟ್ಟಗಿಲ್ಲ ಉದ್ಯೋಗ, ನೌಕರಿ ಮತ್ತು ಪ್ರವಾಸಗಳಲ್ಲಿ ತೊಂದರೆ ಮಾನಸಿಕ ಕ್ಲೇಶ ತಾ|| ... ಚಿಂತಾ ನಾಶ

ಸಿಂಹ — ... ವ್ಯಾಪಾರ, ಉದ್ಯೋಗ ... ನೌಕರಿ ... ಪ್ರವಾಸದಲ್ಲಿ ... ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ತಾ|| ... ವಿಘ್ನ ನಾಶ

ಕನ್ಯಾ — ... ಸಿದ್ಧಿ, ಆರೋಗ್ಯ, ಆರ್ಥಿಕ ವ್ಯವಹಾರ, ಉದ್ಯೋಗ ನೌಕರಿ, ಪ್ರವಾಸಾದಿಗಳಲ್ಲಿ ಲಾಭ, ತಾ|| ... ಸಾಧನೆ, ಮನೋಲ್ಲಾಸ

ತುಲಾ — ಆರೋಗ್ಯ ಆರ್ಥಿಕ ಸ್ಥಿತಿ ನೆಟ್ಟಗೆ, ಸ್ವೀಕೃತ ಕಾರ್ಯದಲ್ಲಿ ಜಯ, ವಧೂವರರ ವಿವಾಹ ವ್ಯಾಪಾರಾದಿಗಳಲ್ಲಿ ತೊಂದರೆ ದೂರಾಗುವ ಸಂಭವ ತಾ|| ... ವ್ಯವಸ್ಥೆ ಬೋಜನ, ಬಂಧುಗಳ ಆಗಮನ

ವೃಶ್ಚಿಕ — ವಾರದ ಕಷ್ಟವನ್ನು ಸಹಿಸಿರಿ, ಅದರಿಂದ ಐಶ್ವರ್ಯೋನ್ನತಿ, ಮಾನಸಿಕ ವ್ಯಗ್ರತೆ ... ಉದ್ಯೋಗ ನೌಕರಿ, ಪ್ರವಾಸಗಳಲ್ಲಿ ಹಾನಿ ತಾ|| ... ಮಾನಹಾನಿ ಅಪಘಾತ

ಧನು — ವಿಲಕ್ಷಣ ಘಟನೆ ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ಹಾನಿ, ಅಪಘಾತ ಭಯ, ದುಷ್ಟರ ಸಹವಾಸ ಪೀಡೆ, ಆರೋಗ್ಯ ಉತ್ತಮ ತಾ|| ... ಪತ್ನಿಗೆ ಅಗ್ನಿ ಭಯ, ಹಣದ ಕೊರತೆ

ಮಕರ — ಆರೋಗ್ಯ ಸಂಪತ್ತಿ ...

ಗಿರಿಜಾ ಕಲ್ಯಾಣೋತ್ಸವ

ನಂಜನಗೂಡ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಗಿರಿಜಾ ಕಲ್ಯಾಣೋತ್ಸವವು ಇದೇ ... ನೇ ತಾ ... ಸೋಮವಾರ ಬೆಳಗಿನ ಜಾವ ಅವರ ಅಂಗವಾಗಿ ಇದೇ ... ನೇ ತಾರೀಕು ರಾತ್ರಿ ... ಘಂಟೆಗೆ ವರ ಪೂಜೆಯೂ, ನಾಳೆ ದಿನ ಸಂಜೆ ... ಘಂಟೆಗೆ ಕಾಶೀಯಾತ್ರೆಯೂ ಮತ್ತು ರಾತ್ರಿ ... ಘಂಟೆಗೆ ಸಂಭ್ರಮ ಗಳ ವತ್ತು ಧಾರಾ ಮಹೋತ್ಸವವೂ ಜರಗುವವು ... ನೇ ತಾರೀಕಿನಿಂದ ಜುಲೈ ... ರ ವರೆಗೆ ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ... ಉರುಟಣೆ ... ಉಯ್ಯಾಲೋತ್ಸವಗಳೂ ಮತ್ತು ಜುಲೈ ... ರಿಂದ ... ರ ವರೆಗೆ ... ದಿನ ತೆಪ್ಪೋತ್ಸವವೂ ಜರುಗುತ್ತವೆ. ಈ ... ಗಳಲ್ಲಿ ಪ್ರತಿ ದಿನ ಸಂಜೆ ವಿದ್ವಾಂಸರುಗಳಿಂದ ಸಂಗೀತ ಕಛೇರಿಗಳೂ ನಡೆಯುವುವು

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ಸ್ವಾಮಿಯವರ ಗಿರಿಜಾ ಕಲ್ಯಾಣೋತ್ಸವವು ಸಂಜೆ ... ಯುತ್ತದೆ ಈ ರಾತ್ರಿ ... ಘಂಟೆಗೆ ವರ ಪೂಜೆಯೂ, ನಾಳೆ ಸಂಜೆ ... ಘಂಟೆಗೆ ಕಾಶೀಯಾತ್ರೆಯೂ ನಂತರ ರಾತ್ರಿ ... ಘಂಟೆಗೆ ಧಾರಾ ಮಹೋತ್ಸವವೂ ನಡೆಯುವುವು ನಾಳಿದ್ದಿನಿಂದ ಮೂರು ದಿನಗಳು ಪ್ರತಿ ಬೆಳಗ್ಗೆ ಮತ್ತು ಸಂಜೆ ಉರುಟಣೆ, ಉಯ್ಯಾಲೋತ್ಸವಗಳು ಜರುಗುವುವು ಈ ಸಂಬಂಧವಾಗಿ ಇಂದಿನಿಂದ ... ನೇ ತಾರೀಕಿನ ವರೆಗೆ ನಿತ್ಯವೂ ರಾತ್ರಿ, ವಿದ್ವಾಂಸರುಗಳಿಂದ ಸಂಗೀತ ಮತ್ತು ಹರಿಕಥೆಗಳೂ ಏರ್ಪಡಾಗಿವೆ

ಸ್ಥಿತಿಯಲ್ಲಿ ... ವ್ಯಾಪಾರ, ಉದ್ಯೋಗ ನೌಕರಿ ಪ್ರವಾಸಗಳಲ್ಲಿ ತೊಂದರೆ ದೂರ, ವಿವಾಹ ನೆರವೇರುವುದು ತಾ|| ... ಅಲ್ಪ ಪ್ರವಾಸ, ಶುಭವಾರ್ತೆ

ಕುಂಭ — ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ತೊಂದರೆ ದೂರ ಪ್ರವಾಸದಲ್ಲಿ ... ಗಳ ಸಹವಾಸ, ತಾ|| ... ಪ್ರವಾಸ ಮಿತ್ರ ಸಹಾಯ

ಮೀನ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮವಿಲ್ಲ, ವ್ಯಾಪಾರಾದಿಗಳಲ್ಲಿ ವಿಘ್ನ, ಪ್ರವಾಸ ಬೇಡ ತಾ|| ... ಶತ್ರು ಪೀಡೆ, ಧನ ... , ಅಗ್ನಿ ಭಯ

ವಿವಾಹೋಪನಯನಗಳು

ರಾಜಧಾನಿಯ ಆಯುರ್ವೇದ ವಿದ್ವಾನ್ ಎಸ್ ಎನ್ ಪಂಡಿತರ ಪುತ್ರರಾದ ಶ್ರೀ ಎಸ್ ನರಸಿಂಹಯ್ಯನವರು ತಮ್ಮ ಪುತ್ರ ಚಿ|| ರಾ|| ಎಸ್ ಎನ್ ನರಹರಿ ಪಂಡಿತನಿಗೆ ಈ ದಿನ ಬ್ರಹ್ಮೋಪದೇಶವನ್ನು ನೆರವೇರಿಸಿದರು

ಮೈಸೂರು ಪೌರಸಭೆಯ ಮಾಜಿ ಉಪಾಧ್ಯಕ್ಷರಾದ ಶ್ರೀ ಕೆ ಧನಕೋಟಿಶೆಟ್ಟರು ತಮ್ಮ ಪುತ್ರ ಶ್ರೀ ಕೆ ಬಾಲಮುಕುಂದರ ಗುಪ್ತರವರಿಗೆ ಶ್ರೀ ಗಂಜಾಂ ಭಾಸ್ಕರಯ್ಯಶೆಟ್ಟರ ಪುತ್ರಿ ಸೌ|| ರಾಮಲಕ್ಷ್ಮಮ್ಮನವರನ್ನು ತಂದುಕೊಂಡು ಈ ದಿನ ವಿವಾಹವನ್ನು ಬೆಳೆಸಿದರು

ಹನಸೋಗೆಯ ಲಕ್ಷ್ಮೀಕಾಂತಯ್ಯನವರ ಪುತ್ರರಾದ ಶ್ರೀ ಎಚ್ ಎಲ್ ಶ್ರೀನಿವಾಸಮೂರ್ತಿಯವರು ತಮ್ಮ ಸಹೋದರರಾದ ಶ್ರೀ ಎಚ್ ಎಲ್ ಶ್ರೀಕಂಠಮೂರ್ತಿಯವರಿಗೆ ರಾಜಧಾನಿಯ ಹೆಡ್ ಪೋಸ್ಟ್ ಆಫೀಸಿನಲ್ಲಿರುವ ಶ್ರೀ ಹರವೆ ನರಸಿಂಹಯ್ಯನವರ ಪುತ್ರಿ ಅನಂತಲಕ್ಷ್ಮಮ್ಮನನ್ನು ತಂದುಕೊಂಡು ಈ ದಿನ ವಿವಾಹವನ್ನು ನೆರವೇರಿಸಿದರು

ಮೈಸೂರು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಜಿ ಲಕ್ಕಯ್ಯನವರ ಸಹೋದರ ಚಿ|| ಶ್ರೀಕಂಠಪ್ಪ ಮತ್ತು ಡಿ ಸುಬ್ಬಯ್ಯ ರಸ್ತೆ ಹೊಸಕೇರಿಯಲ್ಲಿರುವ ಶ್ರೀ ವಿ ತಮ್ಮಯ್ಯನವರ ಪುತ್ರಿ ಚಿ|| ಸೌ|| ಶಾರದಮ್ಮ ಇವರ ವಿವಾಹವು ಈ ದಿನ ನಡೆಯಿತು

ಕೆಂಪನಂಜಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ಪಟ್ಟಾಭಿರಾಮಶಾಸ್ತ್ರಿಯವರ ಪುತ್ರರಾದ ಶ್ರೀ ಸಿ ರಾಮಾಶಾಸ್ತ್ರಿಯವರ ಮಗ ಚಿ|| ದತ್ತಾತ್ರೇಯ ಮತ್ತು ಶ್ರೀ ಪಟ್ಟಾಭಿ ರಾಮಾಶಾಸ್ತ್ರಿಗಳವರ ಅಳಿಯಂದಿರಾದ ಶ್ರೀ ವಾಜಪೇಯಂ ವೆಂಕಟರಾಮಯ್ಯನವರ ಪುತ್ರ ಚಿ|| ರಾಮಸ್ವಾಮಿ ಇವರ ಉಪನಯನಗಳು ಈ ದಿನ ಜರುಗಿದವು

ರಂಗಕ್ಷೇತ್ರದ ಹನುಮಾನ್ ಘಾಟಿನಲ್ಲಿರುವ ಶ್ರೀ ಬೋಧಾಯನ ರಾಮಾಶಾಸ್ತ್ರಿಯವರ ಪುತ್ರ ಶ್ರೀ ... ಶಾಸ್ತ್ರಿಯವರಿಗೆ ದಾವಣಗೆರೆಯಲ್ಲಿರುವ ಶ್ರೀ ಎನ್ ಲಕ್ಷ್ಮೀನರಸಿಂಹಶಾಸ್ತ್ರಿಗಳವರ ಪುತ್ರಿ ಸೌ|| ಗೌರಮ್ಮನನ್ನು ಕೊಟ್ಟು ಈ ದಿನ ದಾವಣಗೆರೆಯಲ್ಲಿ ವಿವಾಹವು ನೆರವೇರಿತು

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆ ಪೈ	ರೂ ಆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಕೊಂಗಿಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅಲಸಂದೆ	[illegible]	[illegible]
ಉದ್ದು	[illegible]	[illegible]
ಮೆಣಸಿನಕಾಯಿ	[illegible]	[illegible]
ಹುಣಸೇಹಣ್ಣು	[illegible]	[illegible]
ಹೊಗೆಸೊಪ್ಪು	[illegible]	
ಬೆಲ್ಲ	[illegible]	[illegible]
ತೆಂಗಿನಕಾಯಿ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ಕುಮಾರಿ ಸುಬ್ರಹ್ಮಣ್ಯ ಅಯ್ಯರ್ ... ಮಧ್ಯಾಹ್ನ ೧ ೪೦ ನಾಗಸ್ವರ ... ಸಂಜೆ ... ರಾಮಕೃಷ್ಣ ... ಗಾನ ವಿಹಾರ ... ಗೀತಾಂಜಲಿ ... ಎಂ ಸುಂದರೇಶನ್ ಕನ್ನಡದಲ್ಲಿ ಭಾಷಣ ಮತ್ತು ... ಸಂಗೀತ ... ಸಿ. ಎಸ್ ಕಾಲ್ ಇಂಗ್ಲೀಷ್ ಭಾಷಣ.

ರಾಜಕಮಲ್, ಮೈಸೂರು

20 6 53 ರಿಂದ · ಅಶೋಕ ಪಿಕ್ಚರ್ಸ್ ರವರ ... ಕನ್ನಡ ಚಿತ್ರ

ಸೌಭಾಗ್ಯ ಲಕ್ಷ್ಮಿ

ಪಾತ್ರ — ಹರಿಣಿ ... ಮಾಧವರಾವ್, ... ಮುಂತಾದವರು

ಇದು ನಿಮಗೆ ಗೊತ್ತೇ?

ಬೇಸಿಗೆ ... ರೋಗಿಗಳ ... ಗಳ್ಳು ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ... ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಹತ್ತಿರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ

(ಚಂದ್ರಮೌಳೇಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು.

C. I. C.

cor ... Market Mysore

[... BUILDINGS]

... for the

Supplementary Examinations

... 1953

★ ... — English

★ ... English

...

P C M ... B Z

(...)

★ ... all Subjects

For Particulars

CITY TUTORIAL COLLEGE,

MYSORE

SRI GAYATHRI

TALKIES

From 18 6 53 Daily 3 Shows

M G M's Most Adventurous Story in Technicolor

IVANHOE

Also showing from to day the panoramic Scenes of the coronation of Queen Elizabeth II

AND

The conquest of Mount Everest by the British Expedition

ಪ್ರಭಾ ★ 22-6-53 ರಿಂದ 4 ದಿನಗಳು ಮಾತ್ರ

ದಿನವಹಿ ಮೂರು ಪ್ರದರ್ಶನಗಳು

ಬಹುರಾಣಿ

ಪಾತ್ರ ಸುಲೋಚನಾ ಚಟರ್ಜಿ, ... ಪವಾರ್ ಶೇಖರ್ ಮತ್ತು ಗೋಪ್

26 6 53 ರಿಂದ

ಯೂಕಿವಾರಿಸು

ಜಪಾನ್ ದೇಶದ ಅತ್ಯುತ್ತಮ ಚಿತ್ರ

(ಹಿಂದಿ ಸಂಭಾಷಣೆ)

ESTD 1917

THE CHAMPION METROPOLITAN COLLEGE OF COMMERCE,

Co-operators Home 100 Feet Road MYSORE

Principal — P Subbaraya Sastry, M A M.A (Com) C.E.T.D (Lon) P C T (Lon)

Vice Principal — M S Pattanna. B Sc., N D. Com.(GOI) F.I.B. (Lon)

NOTIFICATION

ADMISSIONS to the several certificate and diploma courses in Commerce, Typewriting Shorthand, Accountancy, Banking Etc are now being received in the Mornings & Evenings on all working days

Edited, Printed and Published by A R Nagaraja at Sadhvi Press, D. Subbaiah Road, Mysore

ನೋಂ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೨-೬ ೧೯೫೩ [ಸಂಚಿಕೆ ೨೫೬

ಸ್ಪೇನ್ ಸರ್ವಾಧಿಕಾರತ್ವ ರದ್ದಾಗುವುದೇ ?

ಬ್ರಿಟಿಷ್ ರಾಯಭಾರಿ ಮೇಲೆ ಈಜಿಪ್ಟಿನ ದಾವಾ

ಈಜಿಪ್ಟಿನಲ್ಲಿರುವ ಬ್ರಿಟಿಷ್ ಉಪ ರಾಯಭಾರಿ ರಾಬರ್ಟ್ ಹ್ಯಾಂಕೆ ಮತ್ತು ಮಧ್ಯ ಪೂರ್ವದ ಸೈನ್ಯಾಧಿಕಾರಿ ಸರ್ ಬ್ರಿಯಾರ್ ರಾಬರ್ಟ್ಸನ್‌ರವರ ಮೇಲೆ ೩೭ ಸಾವಿರ ಪೌಂಡುಗಳ ನಷ್ಟಕ್ಕಾಗಿ ದಾವಾ ಹೂಡಲಾಗಿದೆ ಕಳೆದ ತಿಂಗಳು ೨೬ನೇ ತಾ|| ಈಜಿಪ್ಟಿನ ಒಂದು ಹಳ್ಳಿಯನ್ನು ಬ್ರಿಟಿಷ್ ಸೈನ್ಯಗಳು ನಾಶಪಡಿಸಿದ ಬಗ್ಗೆ ಈ ದಾವಾ ಆಗಿದೆ ಹೂಡಿರುವವನು ಈಜಿಪ್ಟಿನವನಾದರೂ, ಅವನ ಹೆಸರನ್ನು ಮಾತ್ರ ತಿಳಿಸಿಲ್ಲ ಜುಲೈ ೨೩ನೇ ತಾ|| ಕೈರೋವಿನಲ್ಲಿ ಈ ದಾವೆಯು ವಿಚಾರಣೆಗೆ ಬರುವುದು

ಪಾಕ್ ಸಚಿವರ ಭವನಗಳಿಗೆ ಪೋಲೀಸ್ ಬಂದೋಬಸ್ತು ರದ್ದು

ಪಾಕಿಸ್ತಾನ ಕೇಂದ್ರ ಸರ್ಕಾರದ ಮಂತ್ರಿಗಳ ಭವನಗಳ ಬಳಿ ಇಡಲಾಗಿರುವ ಪೋಲೀಸ್ ಕಾವಲುಗಾರರನ್ನು ಇನ್ನು ಮುಂದೆ ತೆಗೆದುಹಾಕಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುವರು ಆದರೆ ಪ್ರಧಾನಿಯ ಭವನದ ಕಾವಲುಗಾರರನ್ನು ತೆಗೆಯುವುದಿಲ್ಲ ಅನಾವಶ್ಯಕವಾದ ಖರ್ಚನ್ನು ಹೋಗಲಾಡಿಸುವ ಉದ್ದೇಶದಿಂದ ಈ ಕ್ರಮವನ್ನು ಕೈಗೊಳ್ಳಲಾಗುವುದು

ಮಹಿಳೆಯನ್ನು ಕೊಂದು ತಾನೂ ಮಡಿದ

ಕಾಶಿಯ ಪೋಲೀಸಿನವನೊಬ್ಬನು ನೆನ್ನೆ ಯುವತಿಯೊಬ್ಬಳ ಮೇಲೆ ಗುಂಡು ಹಾರಿಸಿ ಕೊಂದು, ಅನಂತರ ತಾನೂ ಅದೇ ರೀತಿ ಮಡಿದನೆಂದು ವರದಿಯಾಗಿದೆ ಈ ದುರಂತ ತಪ್ಪಿಸಲು ಬಂದ ಮತ್ತೊಬ್ಬನಿಗೂ ಗುಂಡು ತಗುಲಿ ಅವನು ಆಸ್ಪತ್ರೆಗೆ ಸೇರಿಸಲ್ಪಟ್ಟಿರುತ್ತಾನೆ

೧ ಎಕರೆಗೆ ೯೩೩೬ ಪೌಂಡು ಜೋಳ

ಶೋಲಾಪುರದ ಜಿಲ್ಲೆಯ ಅಕ್ಲುಜ್ ಹಳ್ಳಿಯ ಸದಾಶಿವ ಅನಂತರಾವ್ ಪಾಟೀಲ್ ಎಂಬ ರೈತನು ೧ ಎಕರೆಗೆ ೯೩೩೬ ಪೌಂಡು ಜೋಳವನ್ನು ಬೆಳೆದಿರುವುದಾಗಿಯೂ, ಇಷ್ಟೊಂದು ಬೆಳೆಯು ದೇಶದಲ್ಲಿ ಯಾವಾಗಲೂ ಆಗುವುದಿಲ್ಲವೆಂದೂ ಗೊತ್ತಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಆರ್ ಎಂ ಜನಾರ್ಧನ, ವೀಣೆ, ಮಧ್ಯಾಹ್ನ ೧ ೩೦ ಕೊಳಲು ೩ ಎ ಆರ್ ಷಹಜಾದ್ ಸಿತಾರ್ ಸಂಜೆ ೫ ೩೦ ಮತ್ತು ೮ ೩೦ ಎಂ ಎ ವೆಂಕಟಾಚಾರ್, ೬ ೧೦ ಗಾನ ವಿಹಾರ ೭ ಎ ಆರ್ ಷಹಜಾದ್, ಸಿತಾರ್, ೭ ೩೦ ಎ ಸೀತಾರಾಂ ಮತ್ತು ಎಂ ಸುಬ್ರಹ್ಮಣ್ಯರಾಜೆ ಅರಸ್, ಕನ್ನಡದಲ್ಲಿ ಚರ್ಚೆ ೮ ಆರ್ ಎಂ ಜನಾರ್ಧನ, ವೀಣೆ ೯ ೦೫ ಇಂಗ್ಲಿಷ್ ಭಾಷಣ ೯ ೩೦ ಅನಂತಲಕ್ಷ್ಮಿ ಷಡಗೋಪನ್, ರಿಕಾರ್ಡ್

○ ಕಲ್ಕತ್ತಾ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿರುವ ಕೇಂದ್ರ ಸರ್ಕಾರದ ನೌಕರರು ಮತ್ತು ಅವರ ಕುಟುಂಬ ವರ್ಗದವರಿಗೆ ಔಷಧೋಪಚಾರಗಳನ್ನು ನಡೆಸಲು ಪ್ರತ್ಯೇಕ ಆಸ್ಪತ್ರೆಗಳನ್ನು ಭಾರತ ಸರ್ಕಾರದವರು ನಿರ್ಮಿಸಲಿರುವರೆಂದು ಹೇಳಲಾಗಿದೆ

ಸಿಂಗ್ಮನ್ ರೀಯವರ ಕಾರ್ಯದ ಬಗ್ಗೆ ಭಾರತದ ಖಂಡನೆ

ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ೨೭ ಸಾವಿರ ಕಮ್ಯೂನಿಸ್ಟೇತರ ಖೈದಿಗಳನ್ನು ಬಿಡುಗಡೆ ಮಾಡಿದ ಬಗ್ಗೆ ಭಾರತದ ಪ್ರಧಾನಿ ನೆಹರೂರವರು ತೀವ್ರ ಖಂಡನೆಯನ್ನು ವ್ಯಕ್ತ ಪಡಿಸಿರುವುದಾಗಿ ಗೊತ್ತಾಗಿದೆ ಕೊರಿಯಾ ಶಾಂತಿ ಒಪ್ಪಂದವು ಆಗ ಬೇಕಾಗಿದ್ದು, ಅದನ್ನು ಭಂಗಗೊಳಿಸಲೆತ್ನಿಸುವ ಉದ್ದೇಶಪೂರ್ವಕ ಕಾರ್ಯವಿದೆಂದು ನೆಹರೂರವರು ಅಭಿಪ್ರಾಯಪಟ್ಟಿರುವುದಾಗಿ ಹೇಳಲಾಗಿದೆ.

ಪೂರ್ವ ಜರ್ಮನಿ ಸರ್ಕಾರದ ಬದಲಾವಣೆ

ಪೂರ್ವ ಬರ್ಲಿನ್ ನಗರವು ಮೊದಲಿನ ಶಾಂತ ಸ್ಥಿತಿಗೆ ಬರುತ್ತಿರುವುದಾಗಿಯೂ, ಅಲ್ಲಿ ಕೆಲಸಕಾರ್ಯಗಳು ಮಾಮೂಲಿನಂತೆ ನಡೆಯಲಾರಂಭಿಸಿವೆಯೆಂದೂ ವರದಿಯಾಗಿದೆ ಕಳೆದ ವಾರದ ಗಲಭೆಗಳನ್ನು ತುಳಿಯಲು ರಷ್ಯದ ೩ ಲಕ್ಷ ಸೈನಿಕರನ್ನು ನಿಯೋಜಿಸಲಾಗಿದ್ದಿತೆಂದು ಹೇಳಲಾಗಿದೆ ಪೂರ್ವ ಜರ್ಮನಿ ಮಂತ್ರಿಮಂಡಲದಲ್ಲಿ ಬದಲಾವಣೆಯಾಗುವ ನಿರೀಕ್ಷೆಯೂ ಇದೆ

ಟೇನ್ಸಿಂಗ್ ಮತ್ತು ಇನ್ನಿಬ್ಬರಿಗೆ ನೇಪಾಳದ ಗೌರವ

ನೇಪಾಳದ ದೊರೆಯು ಎವರೆಸ್ಟ್ ಶಿಖರವನ್ನು ಜಯಿಸಿದ ಟೇನ್‌ಸಿಂಗ್, ಹಿಲಾರಿ ಮತ್ತು ಆರೋಹಿಗಳ ಪಡೆ ನಾಯಕ ಸರ್ ಜಾನ್ ಹಂಟ್‌ರವರಿಗೆ ನೆನ್ನೆ ಪ್ರಶಸ್ತಿಗಳನ್ನು ಕೊಟ್ಟರು ಈ ಸಮಾರಂಭಕ್ಕೆ ಅವರು ನಾಲ್ಕು ಕುದುರೆಗಳನ್ನು ಕಟ್ಟಿದ ಸರ್ಕಾರಿ ಗಾಡಿಯಲ್ಲಿ ಬಂದಿದ್ದರು ಟೇನ್‌ಸಿಂಗರಿಗೆ ನೇಪಾಳ ತಾರ ಎಂಬುದನ್ನೂ, ಉಳಿದವರಿಬ್ಬರಿಗೂ ಗೂರ್ಖಾ ದಕ್ಷಿಣ ಬಾಹು ಎಂಬ ಪ್ರಥಮ ದರ್ಜೆ ಪ್ರಶಸ್ತಿಗಳನ್ನೂ ರಾಜರು ಕೊಟ್ಟಿರುತ್ತಾರೆ

ಕೃಷ್ಣರಾಜಸಾಗರದ ನೀರಿನ ಮಟ್ಟ ಹೆಚ್ಚಿತು

ಕೃಷ್ಣರಾಜಸಾಗರದಲ್ಲಿ ಈ ದಿನ ೩೭ ೯ ಅಡಿ ನೀರಿದೆ ಪ್ರವಾಹವು ಬಂದು ನೀರಿನ ಮಟ್ಟವು ಸ್ವಲ್ಪ ಹೆಚ್ಚುತ್ತದೆ.

ಸ್ಪೇನಿನಲ್ಲಿ ಮತ್ತೆ ರಾಜತ್ವವೇ ?

ಸ್ಪೇನಿನ ಬಗ್ಗೆ ಪಶ್ಚಿಮ ರಾಷ್ಟ್ರಗಳ ಮೆಚ್ಚಿಗೆ ಪಡೆಯುವ ಸಲುವಾಗಿ ಜನರಲ್ ಫ್ರಾಂಕೋರವರು ತಮ್ಮ ಸರ್ವಾಧಿಕಾರತ್ವವನ್ನು ಮುಕ್ತಾಯಗೊಳಿಸಿ ಅಲ್ಲಿ ಮತ್ತೆ ರಾಜತ್ವವನ್ನು ಜಾರಿಗೆ ತರಲು ಆಲೋಚಿಸಿರುತ್ತಾರೆ ಅಲ್ಲಿನ ಸಿಂಹಾಸನದ ಹಕ್ಕುದಾರ ಡಾನ್ ಜುವಾನ್ ರವರ ಕುಮಾರ ೧೪ ವರ್ಷದ ಜುವಾನ್ ಕಾರ್ಲೋಸ್‌ರವರ ಪರವಾಗಿ ಒಂದು ರೀಜೆನ್ಸಿಯನ್ನು ಸ್ಥಾಪಿಸಲು ಅವರು ಯೋಚಿಸುತ್ತಿರುವರೆಂದೂ ತಿಳಿದುಬಂದಿದೆ ಕಾರ್ಲೋಸ್‌ರವರು ಈಗ ಮಾಡ್ರಿಡ್ಡಿನಲ್ಲಿರುವರು

ಗೌರೀಶಂಕರ ಶಿಖರದ ಆರೋಹಣದ ಬಗ್ಗೆ ವಿವರಣೆ

ಗೌರೀಶಂಕರ ಶಿಖರವನ್ನೇರಿದ ಟೇನ್‌ಸಿಂಗರು ನೆನ್ನೆ ನೇಪಾಳದ ರೇಡಿಯೋವಿನಲ್ಲಿ ಸಂಭಾಷಣೆ ನಡೆಸುತ್ತಾ ಶಿಖರಾರೋಹಣದ ಅನುಭವದ ಬಗ್ಗೆ ವಿವರಣೆಯನ್ನಿತ್ತರು ಹಿಲಾರಿಯವರೂ, ತಾವೂ ಒಟ್ಟಿಗೆ ಶಿಖರವನ್ನು ಏಕಕಾಲದಲ್ಲಿ ತಲುಪಿದುದಾಗಿಯೂ, ಅಲ್ಲಿ ತಾವು ಬ್ರಿಟನ್, ಭಾರತ, ನೇಪಾಳ ಮತ್ತು ಸಂಯುಕ್ತ ರಾಷ್ಟ್ರಗಳ ಧ್ವಜಗಳನ್ನು ಕೈಯಲ್ಲಿ ಹಿಡಿದಿದ್ದಂತೆ ಹಿಲಾರಿಯವರು ತನ್ನ ಫೋಟೋ ತೆಗೆದುಕೊಂಡರೆಂದೂ ಅವರು ಹೇಳಿದರು ಶಿಖರದ ತುದಿಯಲ್ಲಿ ನಿಂತು ಸುತ್ತಲೂ ನೋಡಿದಾಗ ನೇಪಾಳ, ಟಿಬೆಟ್‌ಗಳ ದೃಶ್ಯಗಳೂ ಕಾಂಚನಗಂಗ ಶಿಖರವೂ ಮತ್ತು ಟಿಬೆಟ್ಟಿನ ರೋಮಠಗಳೂ ಕಂಡುವೆಂದೂ ತಿಳಿಸಿದರು ಚಲನಚಿತ್ರದಲ್ಲಿ ಪಾತ್ರವಹಿಸಲು ರಾಜ್ ಕಪೂರ್ ರವರು ತಮಗೆ ಆಹ್ವಾನವಿತ್ತಿರುವುದಕ್ಕಾಗಿ ಟೇನ್‌ಸಿಂಗರು ಕೃತಜ್ಞತೆಯನ್ನು ವ್ಯಕ್ತಪಡಿಸಿ, ಅದನ್ನಂಗೀಕರಿಸುವ ವಿಷಯವನ್ನು ಸಾವಧಾನದಿಂದ ಪರಿಶೀಲಿಸುವುದಾಗಿ ತಿಳಿಸಿದರು

ಲಂಡನ್ನಿಗೆ ಟೇನ್‌ಸಿಂಗ್ ಪ್ರಯಾಣವಿಲ್ಲ

ಬ್ರಿಟನ್ನಿಗೆ ಟೇನ್‌ಸಿಂಗರು ಹೋಗುವುದಿಲ್ಲವೆಂತಲೂ, ಎವರೆಸ್ಟ್ ಶಿಖರವನ್ನು ಮೊದಲು ಹತ್ತಿದವರಾರೆಂಬ ಬಗ್ಗೆ ವಿಜ್ಞಾಸೆ ಹುಟ್ಟಿರುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ

ಬಸ್ಸು-ಗಾಡಿ ಢಿಕ್ಕಿಯಲ್ಲಿ ಒಬ್ಬನ ಮರಣ

ಮೈಸೂರು ೨೨

ಹುಣಸೂರಿನ ಕಡೆಯಿಂದ ನೆನ್ನೆ ಸಂಜೆ ಹಿಂತಿರುಗಿ ಬರುತ್ತಿದ್ದ ಗಣೇಶ ಮೋಟಾರು ಸರ್ವೀಸ್ಸಿನ ಬಸ್ಸೊಂದಕ್ಕೂ ಎತ್ತಿನ ಗಾಡಿಯೊಂದಕ್ಕೂ ಇಲವಾಲದ ಬಳಿ ಢಿಕ್ಕಿಯಾಗಿ ಹಳ್ಳಿಯ ದಂಪತಿಗಳಿಗೆ ಗಾಯಗಳಾದುವೆಂದೂ, ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕರೆತರಲಾಯಿತೆಂದೂ ಹೇಳಲಾಗಿದೆ ಗಂಡನು ಈ ದಿನ ಮೃತಪಟ್ಟನು ಪೋಲೀಸರು ಡ್ರೈವರನನ್ನು ದಸ್ತಗಿರಿ ಮಾಡಿರುತ್ತಾರೆ

○ ಕೇಂದ್ರ ಸರ್ಕಾರದ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಇಂದು ಇಲ್ಲಿಗ ಆಗಮಿಸಿದರು ಅವರು ಸರ್ಕಾರಿ ಭವನದಲ್ಲಿ ತಂಗಿರುತ್ತಾರೆ ಈ ಸಂಜೆ ಬೆಂಗಳೂರಿಗೆ ವಾಪಸು ಹೋಗುವರು

ಕೊರಿಯಾದಲ್ಲಿ ಮತ್ತೆ ೨೦೦ ಖೈದಿಗಳ ಖುಲಾಸೆ

ಈಗಾಗಲೇ ತಪ್ಪಿಸಿಕೊಂಡು ಹೋಗಿರುವ ೨೭ ಸಾವಿರ ಯುದ್ಧ ಖೈದಿಗಳಲ್ಲದೆ ಇನ್ನೂ ೨೦೦ ಕಮ್ಯೂನಿಸ್ಟ್ ಖೈದಿಗಳು ಬೇಗು, ಪುಸಾನ್ ಮತ್ತು ಮಾಸಾನ್ ಶಿಬಿರಗಳಿಂದ ಓಡಿಹೋಗಿರುವರು ದಕ್ಷಿಣ ಕೊರಿಯಾ ಟ್ಯಾಂಕುಗಳು ಖೈದಿಗಳ ಪರಾರಿಗೆ ಸಹಾಯ ಮಾಡಿದುವೆಂದು ಆಪಾದಿಸಲಾಗಿದೆ

ಈಜಿಪ್ಟ್-ಬ್ರಿಟನ್ ಬಿಕ್ಕಟ್ಟು ಪರಿಹಾರಕ್ಕೆ ನೆಹರೂ ಸೂತ್ರ

ಈಜಿಪ್ಟಿನ ಅಧ್ಯಕ್ಷ ನಗೀಬ್‌ರವರು ಭಾರತ ಪಾಕಿಸ್ತಾನಗಳ ಪ್ರಧಾನಿಗಳನ್ನು ನಾಳೆ ದಿನ ಒಟ್ಟಿಗೆ ಭೇಟಿ ಮಾಡಲುದ್ದೇಶಿಸಿರುವುದಾಗಿ ಗೊತ್ತಾಗಿದೆ. ಈಜಿಪ್ಟಿನ ಸರ್ವ ಸ್ವಾಮ್ಯತ್ವವನ್ನು ರಕ್ಷಿಸಿ, ಅದಕ್ಕೆ ಸರಿಹೊಂದುವಂತೆ ಸೂಯೆಜ್ ಮಿಲಿಟರಿ ನೆಲೆಯ ಹಿತರಕ್ಷಣೆ ಮಾಡುವ ಬಗ್ಗೆ ನೆಹರೂರವರು ಒಂದು ಪರಿಹಾರ ಸೂತ್ರವನ್ನು ಸಿದ್ಧಪಡಿಸಿರುವರೆಂದೂ ಗೊತ್ತಾಗಿದೆ

ಜುಲೈ ೮ ನೇ ತಾರೀಕು ಬರ್ಮುಡಾ ಮಾತುಕತೆ

ಪೂರ್ವಾರ್ಧ ಮತ್ತು ಪಶ್ಚಿಮಾರ್ಧ ಗೋಳಗಳ ಸಮಸ್ಯೆಗಳ ಬಗ್ಗೆ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸುಗಳ ನಡುವೆ ಏರ್ಪಾಡಾಗಿರುವ ಮಾತುಕತೆಗಳು ಬರುವ ತಿಂಗಳು ೮ ನೇ ತಾ|| ಬರ್ಮುಡಾದಲ್ಲಿ ಆರಂಭವಾಗುವುವೆಂದು ಹೇಳಲಾಗಿದೆ

ವಿಸರ್ಜಿಸಲ್ಪಟ್ಟ ಚಿನ್ನದಗಣಿ ಕಾರ್ಮಿಕರಿಗೆ ಉದ್ಯೋಗ

ಉರಿಗಾಂ ಚಿನ್ನದ ಗಣಿಯ, ಉದ್ಯೋಗವಿಲ್ಲದ ಕಾರ್ಮಿಕರುಗಳನ್ನು ಪುನರ್ವಸತಿಗೊಳಿಸುವ ಬಗ್ಗೆ ಸರ್ಕಾರದವರು ಹೊಸ ಕೈಗಾರಿಕೆಯೊಂದನ್ನು ಸ್ಥಾಪಿಸಲು ಆಲೋಚಿಸುತ್ತಿರುವುದಾಗಿ ಮಾಜಿ ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರು ತಿಳಿಸಿರುತ್ತಾರೆ

○ ಬೆಂಗಳೂರಿನಲ್ಲಿ ನೆನ್ನೆ ನಡೆದ ಕುದುರೆ ಜೂಜಿನ ಟ್ರಿಬಲ್ ಇವೆಂಟಿನಲ್ಲಿ ೬೧ ಜನರಿಗೆ ತಲಾ ೮೧ ರೂ ನಂತೆ ಹಂಚಿಕೆಯಾಯಿತೆಂದು ತಿಳಿದುಬಂದಿದೆ.

ಚನ್ನದಗಣ ಪೌರಸಭಾ ಚುನಾವಣೆಗೆ ಬಹಿಷ್ಕಾರ

ಚನ್ನದ ಗಣ ಸ್ಯಾನಿಟರಿ ಸಭೆಯನ್ನು ಪೌರ ಸಭೆಯಾಗಿ ಪರಿವರ್ತಿಸದೆ ಚುನಾವಣೆ ನಡೆಸುತ್ತಿರುವುದನ್ನು ಪ್ರತಿಭಟಿಸಲು ಆ ತಾಲ್ಲೂಕು ಕಾಂಗ್ರೆಸ್ಸಿನವರು ಚುನಾವಣೆಗೆ ಬಹಿಷ್ಕಾರ ಹಾಕಲು ನಿಶ್ಚಯಿಸಿದ್ದಾರೆ

ಬಳ್ಳಾರಿಯಲ್ಲಿ ಹರತಾಳ

ಇತ್ತೀಚಿಗೆ ನಡೆದ ಆಂಧ್ರ ಶಾಸನ ಸಭಾ ಸದಸ್ಯರ ತೀರ್ಮಾನವನ್ನನುಸರಿಸಿ ಬಳ್ಳಾರಿಯಲ್ಲಿ ಮೊನ್ನೆ ಪೂರ್ಣ ಹರತಾಳವನ್ನು ನಡೆಸಲಾಯಿತು. ಮೈಸೂರು ಸೇರುವುದರ ವಿರುದ್ಧವಾಗಿ ಆಂಧ್ರ ದಿನಾಚರಣೆ ನಡೆಸುವಂತೆ ಸಮ್ಮೇಳನವು ನಿರ್ಧಾರ ಮಾಡಿದ್ದಿತು

ಅಂಗಡಿ ಮತ್ತು ಸಿಬ್ಬಂದಿ ಕಾನೂನು ತಿದ್ದುಪಡಿಗಾಗಿ ಮನವಿ

ಸಂಸ್ಥಾನದಲ್ಲಿ ಜಾರಿಯಲ್ಲಿರುವ ಅಂಗಡಿ ಮತ್ತು ಸಿಬ್ಬಂದಿ ಕಾನೂನಿನ ಹಲವು ನ್ಯೂನತೆಗಳನ್ನು ಮೈಸೂರು ನಗರದ ಸಿಬ್ಬಂದಿ ಹೊಂದದ ಅಂಗಡಿ ಮಾಲೀಕರು ಎತ್ತಿತೋರಿಸಿ, ಈ ಬಗ್ಗೆ ಸೂಕ್ತ ತಿದ್ದುಪಡಿ ಮಾಡಬೇಕೆಂದು ಮನವಿಯೊಂದನ್ನು ಹೊರಡಿಸಿರುತ್ತಾರೆ. ಸಿಬ್ಬಂದಿಯನ್ನು ಹೊಂದದೆ ಇರುವ ಸಣ್ಣ ಸಣ್ಣ ವ್ಯಾಪಾರಿಗಳು ಈ ಕಾನೂನಿನಂತೆ ವಾರಕ್ಕೊಂದು ದಿನಗಳಿಗೆ ಅಂಗಡಿಗಳನ್ನು ಮುಚ್ಚಿ ಆ ದಿನಗಳಲ್ಲಿ ತಮ್ಮ ಜೀವನಕ್ಕಾಗಿ ತೊಂದರೆ ಪಡಬೇಕಾಗಿರುವುದೆ ಮೂಪ್ರತಿಯೊಬ್ಬನೂ ತನ್ನ ಜೀವನವನ್ನು ನಡೆಸಿಕೊಳ್ಳುವ ಬಗ್ಗೆ ರಾಜ್ಯಾಂಗ ದತ್ತವಾದ ಅಧಿಕಾರವನ್ನು ಶಾಸನದ ಮೂಲಕ ಮೊಟಕು ಮಾಡಲು ಅವಕಾಶವಿಲ್ಲವೆಂದೂ ಅವರು ತಿಳಿಸಿರುತ್ತಾರೆ. ವಾರದಲ್ಲೊಂದು ದಿನ ಮುಚ್ಚುವಂತೆ ಸೂಚಿಸಿರುವುದು ವಿವೇಚನಾರಹಿತ ... ಪ್ರಮಾಣಿಕತನದಿಂದ ತಮ್ಮ ವ್ಯಾಪಾರಗಳನ್ನು ನಡೆಸಲು ಕಾನೂನಿನ ಅಡ್ಡಿಯಾಗುವುದೆಂದೂ ... ಹೇಳಿದ್ದಾರೆ

SARADA TUTORIAL INSTITUTE
Sarada Vilasa High School Buildings Mysore

Coaching Classes for the benefit of candidates appearing for the Supplementary S S L C Examination of Sept 1953 have started working from 15th June 1953

Admissions will be received between 11 A M and 4-30 P M on all working days

H V RAJAGOPALA IYENGAR,
Organiser

ವಿವಾಹೋಪನಯನಗಳು

ರಾಜಧಾನಿ ... ವಿದ್ವಾಂಸರಾದ ಶ್ರೀ ಗೋಪಾಲ ಕೃಷ್ಣಾವಧಾನಿಗಳವರ ತಮ್ಮ ಸಹೋದರರಾದ ಶ್ರೀ ಕೆ ... ನವರ ಪುತ್ರ ಚಿ|| ರಾಮಕೃಷ್ಣನ ಉಪನಯನವನ್ನೂ, ತಮ್ಮ ಪುತ್ರಿ ಚಿ|| ಸೌ|| ... ಯನ್ನು ನಂಜನಗೂಡಿನಲ್ಲಿರುವ ಶ್ರೀ ... ಆಗರದ ಶ್ರೀಕಂಠಶಾಸ್ತ್ರಿಗಳವರ ಪುತ್ರ ಶ್ರೀ ... ನವರಿಗೆ ಕೊಟ್ಟು ಈ ದಿನ ವಿವಾಹವನ್ನೂ ನೆರವೇರಿಸಿದರು

ಅರಮನೆ ಧರ್ಮಾಧಿಕಾರಿಗಳಾಗಿದ್ದ ದಿವಂಗತ ... ಕಟಾಚಲಶಾಸ್ತ್ರಿಗಳವರ ಪುತ್ರರಾದ ಶ್ರೀ ಬಾಲಗಂಗಾಧರ ಶಾಸ್ತ್ರಿಗಳವರ ಮಗ ಚಿ|| ... ಸಣನ ಉಪನಯನ ಮಹೋತ್ಸವವು ಈ ದಿನ ಬೆಂಗಳೂರಿನಲ್ಲಿ ಜರುಗಿತು

ರಾಮನಗರ ತಾಲ್ಲೂಕಿನ ಬೈರವ ... ಲದ ಶ್ರೀ ಬಿ ವಿ ನಾರಾಯಣ ಅಯ್ಯಂಗಾರ್‌ರವರು ತಮ್ಮ ಪುತ್ರ ಚಿ|| ವ ... ರವರ ಉಪನಯನವನ್ನೂ, ಮತ್ತು ಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ನಂಜನಗೂಡಿನ ಶ್ರೀ ಮಾಧವ ಅಯ್ಯಂಗಾರ್‌ರವರ ಪುತ್ರ ಚಿ|| ಎಂ ಎಸ್ ಶ್ರೀಕಂಠಯ್ಯನಿಗೆ ಕೊಟ್ಟು ವಿವಾಹವನ್ನೂ ಈ ದಿನ ಬೈರವಂಗಲದಲ್ಲಿ ನೆರವೇರಿಸಿದರು

ನಂಜನಗೂಡಿನಲ್ಲಿರುವ ಅಡ್ವೊಕೇಟ್ ಶ್ರೀ ಎಸ್ ನಾರಾಯಣರಾಯರ ಪುತ್ರ ಚಿ|| ಶ್ರೀನಿವಾಸಮೂರ್ತಿ ಮತ್ತು ಧಾರವಾಡದಲ್ಲಿರುವ ಶ್ರೀ ಸಂಪಿಗೆ ವೆಂಕಟೇಶಯ್ಯನವರ ಪುತ್ರ ಚಿ|| ಶ್ರೀಕಂಠಯ್ಯ ಇವರ ಉಪನಯನ ಮಹೋತ್ಸವಗಳು ನಿನ್ನೆ ತುರುವೇಕೆರೆ ತಾಲ್ಲೂಕು ಸಂಪಿಗೆಯಲ್ಲಿ ಜರುಗಿದುವು

ಬೆಂಗಳೂರು ನರಸಿಂಹರಾಜಾ ಕಾಲೊನಿಯ ಶ್ರೀ ವಿ ನಂಜನಗೂಡಿನ ಶ್ರೀ ಎಸ್. ಸುಬ್ರಹ್ಮಣ್ಯಯ್ಯರವರ ಪುತ್ರ ಶ್ರೀ ಶ್ರೀಕಂಠಯ್ಯನವರಿಗೆ ರಾಜಧಾನಿಯ ಚಾಮರಾಜ ಅಗ್ರಹಾರದಲ್ಲಿರುವ ಲೇಟ್ ಶ್ರೀ ಸುಬ್ಬರಾಯರ ಪುತ್ರಿ ಸೌ|| ಅನಂತಲಕ್ಷ್ಮಮ್ಮನನ್ನು ಕೊಟ್ಟು ಈ ದಿನ ಮೈಸೂರಿನಲ್ಲಿ ವಿವಾಹವು ಜರುಗಿತು

ಮೈಸೂರು ಶ್ರೀ ಗಾಯತ್ರಿ ಟಾಕೀಸಿನ ಮಾಲೀಕರಾದ ... ಸೇವಾ ... ತ್ರ ಶ್ರೀ ಎಂ ಸಿ ... ಚಾರ್ಯರ

CITY TUTORIAL COLLEGE,
Near V V Markets, Mysore
Special Coaching Classes
FOR GIRLS ONLY

★ JUNIORS S L C M S Passed girls are trained in 2 YEARS for the S S L C Examination

★ SENIORS S L C Girls who have studied up to V Form are coached for the S S L C Examination of 1954

[60 Per cent Passed in March 53
Admissions Close On 1 7-53

ಬಳ್ಳಾರಿ ಕಾಂಗ್ರೆಸ್ ಸಮಿತಿ ಮೈ|| ಪ್ರದೇಶ ಸಮಿತಿಗೆ

ಬಳ್ಳಾರಿ ಜಿಲ್ಲೆಯ ಏಳು ತಾಲೂಕು ಗಳಲ್ಲಿರುವ ಕಾಂಗ್ರೆಸ್ ಸಮಿತಿಗಳನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಐಕ್ಯಗೊಳಿಸುವಂತೆಯೂ ಮದ್ರಾಸು ಪ್ರಾಂತದಲ್ಲಿರುವ ಆದವಾನಿ, ಆಲೂರು ಮತ್ತು ರಾಯದುರ್ಗ ಮತ್ತು ಅನಂತಪುರ ಜಿಲ್ಲೆಯ ಮಡಕಸಿರಾ ತಾಲ್ಲೂಕು ನೀಲಗಿರಿಯ ಜಿಲ್ಲೆ ಮುಂತಾದ ಎಲ್ಲ ಕನ್ನಡ ಪ್ರದೇಶಗಳನ್ನೂ ಮೈಸೂರು ಸಂಸ್ಥಾನಕ್ಕೆ ಸೇರಿಸುವಂತೆಯೂ ಕೋರುವ ಎರಡು ನಿರ್ಣಯಗಳನ್ನು ಆಗ್ರಾದಲ್ಲಿ ಮೊದಿನ ತಿಂಗಳು ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಸಮಿತಿ ಸದಸ್ಯರಾದ ಹಂಪನಹಳ್ಳಿ ... ಸ್ವಾಮಿಯವರು ಕಳುಹಿಸಿರುತ್ತಾರೆ ಇದಲ್ಲದೆ ಅವರು ಕಾಂಗ್ರೆಸ್ ಸಂಘಟನೆಗೆ ... ಪದಗಳನ್ನೂ ಸೂಚಿಸಿರುತ್ತಾರೆ

ಕುಮಾರಿ ಚಿ|| ಸೌ|| ದೇವಿ ಸರಸ್ವತಿಯನ್ನು ಮಂಗಳೂರಿನ ಶ್ರೀ ಪಟ್ಟ ಲಿಂಗಾಚಾರ್ಯರ ಪುತ್ರ ಶ್ರೀ ರವೀಂದ್ರಾಚಾರ್ಯರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು.

ರಾಜಧಾನಿಯ ವರ್ತಕರಾದ ಶ್ರೀ ಸಿ ಎಲ್ ಬ್ರಹ್ಮಯ್ಯನವರು ತಮ್ಮ ಪುತ್ರಿ ಸೌ|| ರತ್ನಪ್ರಭಾರವರನ್ನು ಶ್ರೀ ಚೆಟ್ಟಿ ಎಸ್ ಪಿ ಪದ್ಮರಾಜಯ್ಯನವರ ಪುತ್ರ ಶ್ರೀ ಎಸ್ ಪಿ ಧರಣೇಂದ್ರರವರಿಗೆ ಕೊಟ್ಟು ಈ ದಿನ ವಿವಾಹವನ್ನು ನೆರವೇರಿಸಿದರು

ಮೈಸೂರು ಮಹಾರಾಜರವರ ಹೈಸ್ಕೂಲಿನ ಹಿಂದಿ ಅಧ್ಯಾಪಕರಾದ ಶ್ರೀ ಚಿಕ್ಕ ನರಸಿಂಹಯ್ಯನವರ ಪುತ್ರಿ ಸೌ|| ಎಂ ನರಸಮ್ಮನನ್ನು ಚಾಮುಂಡಿ ... ಮಂಡಿಯಲ್ಲಿರುವ ಶ್ರೀ ಆರ್ ರಂಗಪ್ಪನವರ ಸಹೋದರರಾದ ಶ್ರೀ ಆರ್ ಕೃಷ್ಣಪ್ಪನವರಿಗೆ ಕೊಟ್ಟು ಈ ದಿನ ವಿವಾಹವು ಜರುಗಿತು

The Central College
Of Commerce,
Vanivilas Market Buildings
MYSORE

Admissions to D Com Diploma Short-hand & Typewriting will be received on all working days
Join immediately

ಬಿ ಇ ಪರೀಕ್ಷೆ ಫಲಿತಾಂಶ ಅಸಮರ್ಪಕ

ಈ ವರ್ಷದ ಬಿ ಇ ಪರೀಕ್ಷಾ ಫಲಿತಾಂಶವು ತುಂಬಾ ಅಸಮರ್ಪಕವಾಗಿ ವಿದ್ಯಾರ್ಥಿಗಳ ಓದುವ ಮಟ್ಟವನ್ನು ಉತ್ತಮಗೊಳಿಸುವುದಾಗಿ ಹೇಳಿ, ನಿಯಮಗಳನ್ನು ಸರಿಯಾಗಿ ಉಪಯೋಗಿಸದೆ ಎಲ್ಲ ಪ್ರತಿ ಸಲವೂ ೬೦ ಗ್ರೇಸ್ ನಂಬರ್ ಕೊಟ್ಟು ಉತ್ತೀರ್ಣರಾಗಿ ಮಾಡಲಾಗುತ್ತಿತ್ತು. ಈ ಸಾರಿ ೨ ನಂಬರುಗಳನ್ನು ಮಾತ್ರ ಕೊಡಲಾಗಿದೆ ಹತ್ತು ನಂಬರುಗಳನ್ನು ಸೇರಿಸಿ ಹೊಸ ಫಲಿತಾಂಶದ ಪಟ್ಟಿಯನ್ನು ಪ್ರಕಟಿಸಬೇಕು. ಇದರಿಂದ ಅನೇಕ ವಿದ್ಯಾರ್ಥಿಗಳಿಗೆ ಉಪಕಾರವಾಗ ... ಬಿ ಇ ಪರೀಕ್ಷಾ ಫಲಿತಾಂಶ ಪ್ರಕಟನೆಗೆ ... ಅನ್ಯಾಯವಾಗಿದೆ ... ವರ್ಷಗಳ ಹಿಂದೆ ಒಟ್ಟು ನಂಬರುಗಳ ಮಿತಿಯನ್ನು ಕಡಿಮೆ ಮಾಡಿ ಡಬ್ಬಲ್ ಆರ್ಡಿನೆನ್ಸ್ ಹೊರಡಿಸಲಾಗಿತ್ತು. ಅದನ್ನ ವಿರುದ್ಧವಾಗಿ ವಿಶ್ವವಿದ್ಯಾಲಯದವರು ಆಗ ನಡೆದ ಕೊಂಡರಲ್ಲಿ, ಅದೇ ರೀತಿ ಎರಡೂ ನಿಯಮವನ್ನು ಶಾಶ್ವತವಾಗಿ ಏಕೆ ಮಾಡಲಿಲ್ಲ? ಈಗಲಾದರೂ ಮದ್ರಾಸು ವಿಶ್ವವಿದ್ಯಾಲಯದ ಶಾಸನವನ್ನು ಮೈಸೂರಿನವರು ಅನುಸರಿಸಿ ವಿದ್ಯಾರ್ಥಿಗಳಿಗೆ ಅಮೂಲ್ಯವಾದ ೧ ವರ್ಷವು ವ್ಯರ್ಥವಾಗದಂತೆ ಮಾಡಲಿ. ಈ ಸಾರಿಯ ಎರಡನೇ ತರಗತಿಯವರನ್ನಂತೂ ... ಯಾಕೆ "ಕೊಲೆ" ಮಾಡಲಾಗಿದೆ. ಅತ್ಯಂತ ಕಷ್ಟವೆನಿಸಿರುವ ಈ ತರಗತಿಯಲ್ಲಿ ಓದುವವರಿಗೆ ಕೇವಲ ೨ ಗ್ರೇಸ್ ನಂಬರುಗಳನ್ನು ಕೊಡುವುದು ಸರಿಯೇ? ಅದ್ದರಿಂದ ೬೦ ನಂಬರುಗಳನ್ನಾದರೂ ಸೇರಿಸಲಿ ಅಥವಾ ಒಟ್ಟು ನಂಬರಿನಲ್ಲಿ ಹೋಲಿಸಾದರೂ ಇದ್ದವರನ್ನಾದರೂ ಮುಂದಿನ ತರಗತಿಗೆ ಕಳುಹಿಸಿ, ಅವರು ಉತ್ತೀರ್ಣರಾಗದಿರುವ ವಿಷಯಗಳಲ್ಲಿ ಸೆಪ್ಟೆಂಬರ್ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಲಿ —ನೊಂದ ವಿದ್ಯಾರ್ಥಿ

SRI GANESHA
TALKIES
From 23 6 53 For 2 Days
Dumb ...
THE TEXAS RANGERS
(In Super Cine Color)
Starring George Montgomery
Jerome Courtland,
Gale Storm

From 25 6 53
JUNGLE JIM

A COMPLETE RANGE OF LATEST
MURPHY RADIOS
NOW ON DEMONSTRATION
:: ABIDS ::
Statue Square, Mysore

Edited, Printed and Published by A R. Nagarajan at Sadhvi Press, D Subbiah Road, Mysore

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ಸಿಲ್ಕ್ ನವೀನ ನೂಲಿನ ಸೀರೆಗಳಿಗೆ M.V.ಭೋಜಯ್ಯ (ಫೋನ್ 446) ಬಿ ಎ, ಇಂಡಿಯ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೩-೬-೧೯೫೩ [ಸಂಚಿಕೆ ೨೫೧

ಮದ್ರಾಸಿನ ಅಮೆರಿಕಾ ಕಛೇರಿ ಮೇಲೆ ಧಾಳಿ

ಕರ್ನಲ್ ಹಂಟರ ಬಗ್ಗೆ ಟೇನ್‌ಸಿಂಗರ ಅಸಮಾಧಾನ

ಗೌರೀಶಂಕರ ಶಿಖರವನ್ನೇರಿದ ಬ್ರಿಟಿಷ್ ಪರ್ವತಾರೋಹಿಗಳ ನಾಯಕ ಕರ್ನಲ್ ಹಂಟ್‌ರವರು ಕೆಲವು ದಿನಗಳ ಕೆಳಗೆ ಪತ್ರಿಕಾ ಸಮ್ಮೇಳನದಲ್ಲಿ ತಮ್ಮ ಬಗ್ಗೆ ಅವಹೇಳನ ಮಾಡುವ ರೀತಿಯಲ್ಲಿ ಮಾತನಾಡಿದರೆಂದು ತಿಳಿಸಿ, ಅವರ ತಪ್ಪುಗಳನ್ನು ಸರಿಪಡಿಸಿಕೊಳ್ಳದಿದ್ದರೆ, ಆ ವಿಷಯವನ್ನು ಪೂರ್ಣವಾಗಿ ಬಯಲಿಗೆ ಎಳೆಯಬೇಕಾಗಿ ಟೇನ್‌ಸಿಂಗರು ಹೇಳಿರುವರು ಅವರು ಜಾರ್ಜ್ ಪದಕವನ್ನು ಪಡೆಯಲು ಮೇಲ್ಕಂಡ ತಂಡದವರೊಡನೆ ಇಂಗ್ಲೆಂಡಿಗೆ ಹೋಗುವುದಿಲ್ಲವೆಂದೂ, ಪದಕವನ್ನು ಸ್ವೀಕರಿಸುವ ಬಗ್ಗೆ ಅವರು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲವೆಂದೂ ಹೇಳಲಾಗಿದೆ. ಪರ್ವತಾರೋಹಿಗಳ ಗೌರವಾರ್ಥವಾಗಿ ಬ್ರಿಟಿಷ್ ರಾಯಭಾರಿಯು ಏರ್ಪಡಿಸಿದ್ದ ಸತ್ಕಾರ ಕೂಟಕ್ಕೆ ಟೇನ್‌ಸಿಂಗರು ಹೋಗಲಿಲ್ಲ

ಟೇನ್‌ಸಿಂಗ್ ರವರ ಗೌರವಾರ್ಥವಾಗಿ ನೇಪಾಳದ ರಾಜಧಾನಿ ಖಟ್ಮಂಡು ವಿನಲ್ಲಿ ಮೊನ್ನೆ ನಡೆದ ಸಮಾರಂಭದಲ್ಲಿ ಅವರಿಗೆ ೩೦ ಮಾನ ಪತ್ರಗಳನ್ನು ಓದಲಾಯಿತು ಬುದ್ಧನ ಕಂಚಿನ ವಿಗ್ರಹ, ದಂತ ಮತ್ತು ಮರದ ಕ್ಯಾಸ್ಕೆಟ್ಟುಗಳು ಇತರ ವಸ್ತುಗಳನ್ನೂ ಅವರಿಗೆ ಬಹುಮಾನವಾಗಿ ಕೊಡಲಾಯಿತು.

ಭಾರತ ಸಿಂಹಳಗಳ ಸಂಧಾನ ವಿಫಲ

ಸಿಂಹಳದಲ್ಲಿರುವ ಭಾರತೀಯರ ಸಮಸ್ಯೆಯನ್ನು ಕುರಿತು ಲಂಡನ್ನಿನಲ್ಲಿ ತಮಗೂ ಮತ್ತು ಭಾರತದ ಪ್ರಧಾನಿ ಪಂಡಿತ ನೆಹರೂರವರಿಗೂ ನಡೆದ ಮಾತುಕತೆಗಳು ವಿಫಲಗೊಂಡುದಾಗಿ ಸಿಂಹಳದ ಪ್ರಧಾನಿ ಸೇನಾನಾಯಿಕೆಯವರು ನೆನ್ನೆ ಕೊಲಂಬೋವಿನಲ್ಲಿ ತಿಳಿಸಿದರು ಸಿಂಹಳದ ಪೌರ ಹಕ್ಕನ್ನು ಪಡೆಯದ ಸುಮಾರು ೫|| ಲಕ್ಷ ಭಾರತೀಯರನ್ನು ವಾಪಸು ಕರೆಸಿಕೊಳ್ಳುವ ಬಗ್ಗೆ ನೆಹರೂರವರಿಗೂ ತಮಗೂ ಭಿನ್ನಾಭಿಪ್ರಾಯ ಬಂದುದೇ ಇದಕ್ಕೆ ಕಾರಣವೆಂದೂ, ಆದರೂ ಸಂಧಾನವನ್ನು ಮುಂದುವರಿಸಲು ಬಾಧಕವೇನೂ ಇಲ್ಲವೆಂದೂ ಅವರು ಹೇಳಿದರು

ಅಂಗಡಿ ಕಾನೂನು ಉಲ್ಲಂಘನೆಗೆ ದಂಡ

ಅಂಗಡಿ ಮತ್ತು ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ರಾಜಧಾನಿಯ ಎರಡನೇ ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಅಂಗಡಿ ಮತ್ತು ಸಿಬ್ಬಂದಿ ಇನ್ಸ್‌ಪೆಕ್ಟರರು ಹೂಡಿದ್ದ ಮೊಕದ್ದಮೆಗಳಲ್ಲಿ ಕೆಳಗೆ ಕಂಡ ಅಂಗಡಿ ಮಾಲೀಕರಿಗೆ ದಂಡವನ್ನು ವಿಧಿಸಲಾಗಿದೆ – ಮಂಡಿ ಮೊಹಲ್ಲಾ ಚಾಮುಂಡೇಶ್ವರಿ ನೇಯ್ಗೆ ಕಾರ್ಖಾನೆಯ ಶ್ರೀ ಎಚ್ ಹನುಮಂತಯ್ಯ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಶೆಟ್ಟಿ ಸೋಡಾ ಫ್ಯಾಕ್ಟರಿಯ ಶ್ರೀ ಗುಂಡಪ್ಪ, ಉದಿಗಾ ವರ್ಕ್‌ಷಾಪಿನ ಶ್ರೀ ಎಂ ವಿ ಮೊದಲಿಯಾರ್ ತಲಾ ೧೦ ರೂ, ಅಶೋಕಾ ರಸ್ತೆ ಹತ್ತಿ ವ್ಯಾಪಾರಿ ಶ್ರೀ ಅಮಿರ್ ಖಾನ್ ರವರಿಗೆ ೧೫ ರೂ, ಜಗನ್ಮೋಹನ ಬಂಗ್ಲೆ ರಸ್ತೆ ರಾಮಚಂದ್ರ ಭವನ ಹೋಟೇಲಿನ ಶ್ರೀ ಪಿ ಎಸ್ ರಾಮಕೃಷ್ಣನ್ ರವರಿಗೆ ೫ ರೂ

ತುಂಗಭದ್ರಾ ಅಣೆಕಟ್ಟು ಪೂರೈಸಿತು

ತುಂಗಭದ್ರಾ ಅಣೆಕಟ್ಟಿನ ನಿರ್ಮಾಣ ಕಾರ್ಯವು ಈಗ ಪೂರೈಸಲ್ಪಟ್ಟು, ಅಲ್ಲಿಂದ ನೀರು ಸರಬರಾಜು ಕಾರ್ಯವು ಬರುವ ತಿಂಗಳು ಒಂದನೇ ತಾರೀಕಿನಿಂದ ಆರಂಭವಾಗುವುದೆಂದು ತಿಳಿದುಬಂದಿದೆ ಮದರಾಸು ಮತ್ತು ಹೈದರಾಬಾದು ಗಳ ಸರ್ಕಾರಗಳ ಕೆಲಸಗಾರರಿಗಾಗಿ ಮೇಲ್ಕಂಡ ಅಣೆಕಟ್ಟಿನಿಂದ ಎರಡು ಕಾಲುವೆಗಳನ್ನು ತೆಗೆಯಲಾಗಿದೆ ಮದರಾಸು ಪ್ರದೇಶದ ಕಾಲುವೆಯು ೨೨೦ ಮೈಲಿ ಉದ್ದವಾಗಿಯೂ ಮತ್ತು ಹೈದರಾಬಾದು ಪ್ರದೇಶದ ಕಾಲುವೆಯು ೧೩೭ ಮೈಲಿ ಉದ್ದವಾಗಿಯೂ ಇವೆ ಹೈದರಾಬಾದಿನಲ್ಲಿ ಈ ಕಾಲುವೆಯ ಸಹಾಯದಿಂದ ವಿದ್ಯುಚ್ಛಕ್ತಿಯು ಉತ್ಪನ್ನ ಮಾಡಲಾಗುವುದು

ಭಾರತಕ್ಕೆ ಸಕ್ಕರೆ ಆಮದಿಗೆ ಅನುಮತಿ

ದೇಶದಲ್ಲಿ ಇತ್ತೀಚೆಗೆ ಸಕ್ಕರೆ ಬೆಲೆಯು ವಿಪರೀತವಾಗಿ ಏರಿರುವುದರಿಂದ, ಅದನ್ನು ತಡೆಗಟ್ಟಲು ಕೇಂದ್ರ ಸರ್ಕಾರದವರು ವಿದೇಶಗಳಿಂದ ಸಕ್ಕರೆ ಆಮದಿಗೆ ಅನುಮತಿ ಕೊಡಲೂ ಮತ್ತು ಆಮದು ಸುಂಕವನ್ನು ಅರ್ಧಕ್ಕೆ ಇಳಿಸಲೂ ನಿರ್ಧರಿಸಿರುವರು

ಗರ್ಗೇಶ್ವರಿ ನಂಜುಂಡ ಶಾಸ್ತ್ರಿಗಳವರ ನಿಧನ

ಟಿ ನರಸೀಪುರ ತಾಲ್ಲೂಕು ಗರ್ಗೇಶ್ವರಿಯ ಶ್ರೀ ನಂಜುಂಡ ಶಾಸ್ತ್ರಿಗಳವರು ಕಳೆದ ಶನಿವಾರ ಬೆಳಗ್ಗೆ ೧೦ ಗಂಟೆ ಹೊತ್ತಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಕೆಲವು ದಿನಗಳಿಂದ ಪಾರ್ಶ್ವ ವಾಯುವಿನಿಂದ ನರಳುತ್ತಿದ್ದರು ಅವರು ಸಾಮವೇದದಲ್ಲಿ ಪಾರಂಗತರಾಗಿದ್ದರು.

ನೇಣು ಹಾಕಿಕೊಂಡು ವಿದ್ಯಾರ್ಥಿಯ ಆತ್ಮಹತ್ಯೆ

ಬೆಂಗಳೂರು ಮಲ್ಲೇಶ್ವರದ ಒಂದು ಮನೆಯ ಕೊಠಡಿಯಲ್ಲಿದ್ದ ಹೈಸ್ಕೂಲ್ ಇಂಟರ್‌ಮೀಡಿಯೇಟ್ ತರಗತಿಯ ವಿದ್ಯಾರ್ಥಿ ಒಬ್ಬನು ಪರೀಕ್ಷೆಯಲ್ಲಿ ತೇರ್ಗಡೆಯಾಗದ ಕಾರಣಕ್ಕಾಗಿ ಮೊನ್ನೆ ಹಗ್ಗದಿಂದ ನೇಣು ಹಾಕಿಕೊಂಡು ತನ್ನ ಕೊಠಡಿಯಲ್ಲಿ ಮೃತಪಟ್ಟನೆಂದು ತಿಳಿದುಬಂದಿದೆ

ಮದ್ರಾಸಿನಲ್ಲಿ ಅಮೆರಿಕಾ ಪ್ರತಿನಿಧಿ ಕಛೇರಿ ಮುತ್ತಿಗೆ

ಮದ್ರಾಸಿನ ಮೌಂಟ್ ರೋಡಿನಲ್ಲಿರುವ ಅಮೆರಿಕದ ಪ್ರತಿನಿಧಿ ಕಛೇರಿಯ ಮುಂದೆ ನೆನ್ನೆ ಸಂಜೆ ಸುಮಾರು ನೂರು ಜನರು ಕಮ್ಯೂನಿಸ್ಟ್ ಬಾವುಟಗಳನ್ನು ಹಿಡಿದು ಪ್ರದರ್ಶನ ನಡೆಸಿ ಅಮೆರಿಕದಲ್ಲಿ ಅಣು ಗೂಢಚಾರರಾದ ರೋಸೆಂಬರ್ಗ್ ದಂಪತಿಗಳಿಗೆ ಫಾಸಿ ಶಿಕ್ಷೆ ಜಾರಿ ಮಾಡಿದ ಬಗ್ಗೆ ಖಂಡಿಸಿದರು ಗುಂಪಿನ ಪೈಕಿ ಹಲವರು ಕಲ್ಲುಗಳನ್ನೆಸೆದ ಪರಿಣಾಮವಾಗಿ ಭವನದ ಕೆಳ ಅಂತಸ್ತಿನಲ್ಲಿದ್ದ ಪುಸ್ತಕ ಭಂಡಾರದ ಗಾಜಿನ ದೊಡ್ಡ ಕನ್ನಡಿಗಳೂ ಮತ್ತು ಕಿಟಕಿ ಬಾಗಿಲುಗಳೂ ಮುರಿದವು ಇದರಿಂದ ಸುಮಾರು ೩,೦೦೦ ರೂ ನಷ್ಟ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ ಕಛೇರಿ ನೌಕರರುಗಳಿಗೂ ಪೆಟ್ಟು ಬಿದ್ದಿಲ್ಲ ಪೋಲೀಸರು ಬಂದು ಗುಂಪನ್ನು ಚದುರಿಸಿದರು ಈ ಸಂಬಂಧದಲ್ಲಿ ಪೋಲೀಸರು ೩೩ ಜನರನ್ನು ದಸ್ತಗಿರಿ ಮಾಡಿರುತ್ತಾರೆ

ಟಿಕೆಟ್ ಕಲೆಕ್ಟರ ಕೆನ್ನೆಗೆ ಮಹಿಳೆಯ ಏಟು

ಮದ್ರಾಸಿನ ತ್ಯಾಗರಾಯನಗರ ರೈಲ್ವೆ ಸ್ಟೇಷನ್ನಿನಲ್ಲಿ ನೆನ್ನೆ ಟಿಕೆಟ್ ಕಲೆಕ್ಟರು ಟಿಕೆಟ್ಟನ್ನು ಕೇಳಿದಾಗ ೩೩ ವರ್ಷದ ವಿಮಲ ಎಂಬ ಯುವತಿಯು ಅವರ ಕೆನ್ನೆಗೆ ಹೊಡೆದು ಟಿಕೆಟ್ ಕೊಡದೆ ಓಡಿಹೋದಳೆಂದೂ, ಅವಳ ಜೊತೆ ಇದ್ದ ಗಂಡ ಮತ್ತು ಆಕೆ ಇಬ್ಬರನ್ನೂ ಕೋರ್ಟಿನಲ್ಲಿ ಹಾಜರುಪಡಿಸಲಾಗಿ ಗಂಡ ಹೆಂಡರಿಗೆ ತಲಾ ೩ ರೂ ಮತ್ತು ಹೆಂಡತಿಗೆ ತಪ್ಪು ನಡತೆಗಾಗಿ ೧೦ ರೂ ದಂಡ ವಿಧಿಸಲಾಯಿತಲ್ಲದೆ, ಆಕೆಯು ೬ ತಿಂಗಳು ಕಾಲ ಒಳ್ಳೆಯ ನಡತೆಯಲ್ಲಿರುವ ಬಗ್ಗೆ ಮುಚ್ಚಳಿಕೆ ಬರೆದುಕೊಡುವಂತೆಯೂ ನ್ಯಾಯಾಧೀಶರು ತೀರ್ಪಿತ್ತರು

ಸಂಸ್ಥಾನದ ನಾಲ್ಕು ಜಿಲ್ಲೆಗಳಲ್ಲಿ ಶೇ|| ೧೦೦ ರಷ್ಟು ವಿದ್ಯುಚ್ಛಕ್ತಿ ಕಡಿತ ಮಾಡಿದ್ದುದನ್ನು ಈ ದಿನದಿಂದ ರದ್ದುಗೊಳಿಸಲಾಗಿದೆ ಕನ್ನಂಬಾಡಿ ಕಟ್ಟೆಯಲ್ಲಿ ಈ ದಿನ ೪೬.೬ ಅಡಿ ನೀರು ಬಂದಿರುತದೆ

ಛತ್ರದ ಮೂಟೆ ಕಳುವಿಗಾಗಿ ದಸ್ತಗಿರಿ

ಮೈಸೂರು ೨೨

ರಾಜಧಾನಿಯ ಕುದುರೆಗಾವಲಿನಲ್ಲಿರುವ ಹನುಮಾನಿಯಾ ನಾವಿಕ್ಸ್ ನ ಆಹಾರದ ಡಿಪೋವಿನಲ್ಲಿ ಕಳೆದ ೧೯ ನೇ ತಾ|| ಛತ್ರದ ಮೂಟೆಗಳನ್ನು ಕಳವು ಮಾಡಿ, ಬನ್ನಿಮಂಟಪದಲ್ಲಿ ಮಾರಾಟ ಮಾಡುತ್ತಿದ್ದ ಅಬ್ದುಲ್ ರಬ್ ಮತ್ತು ಇತರ ೪ ಜನರನ್ನು ಪ ೩ ಪೋಲೀಸರು ದಸ್ತಗಿರಿ ಮಾಡಿ, ಮಾಲನ್ನು ವಶಪಡಿಸಿಕೊಂಡಿರುವರು

ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ನಿಧನ

ಭಾರತೀಯ ಜನ ಸಂಘದ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಈ ದಿನ ಬೆಳಗಿನ ಝಾವ ೪ ಗಂಟೆ ಸಮಯದಲ್ಲಿ ನಿಧನರಾದರೆಂಬ ತಂತಿ ವಾರ್ತೆ ಬಂದಿದೆ ಜಮ್ಮು ಕಾಶ್ಮೀರದ ಚಳವಳಿ ಸಂಬಂಧದಲ್ಲಿ ಡಾ|| ಮುಖರ್ಜಿಯವರನ್ನು ಕಾಶ್ಮೀರ ಸರ್ಕಾರದವರು ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದ್ದರು ಶ್ವಾಸಕೋಶದ ಬಾಧೆಯಿಂದ ನರಳುತ್ತಿದ್ದ ಮುಖರ್ಜಿಯವರನ್ನು ಶ್ರೀನಗರದ ಆಸ್ಪತ್ರೆಯೊಂದಕ್ಕೆ ಸೇರಿಸಲಾಗಿತ್ತು

ಟೆಕ್ನಿಕಲ್ ಕಾಲೇಜು ಸಮಿತಿಗಳ ಸದಸ್ಯರು

ಬೆಂಗಳೂರು ೨೨

ಸರ್ಕಾರಿ ಇಂಜನಿಯರಿಂಗ್, ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸ್ಕೂಲುಗಳಲ್ಲಿ ಪ್ರವೇಶ ಸಂಬಂಧವಾದ ಸಮಿತಿಗಳನ್ನು ಸರ್ಕಾರದವರು ೧ ವರ್ಷಕ್ಕಾಗಿ ಈ ರೀತಿ ಪುನರ್ರಚಿಸಿರುತ್ತಾರೆ –

ಮೆಡಿಕಲ್ ಕಾಲೇಜು ಶ್ರೀಗಳಾದ ಎ ಭೀಮಪ್ಪನಾಯಕ್, ವೈ ಧರ್ಮಪ್ಪ, ಎಂ ಪಿ ಎಲ್. ಶಾಸ್ತ್ರಿ ಎಸ್ ಕರಿಯಪ್ಪ, ನೇರಳೆ ಮಾದಯ್ಯ, ಎ. ಚಂದ್ರಪ್ಪ, ಡಿ ದೇವರಾಜ ಅರಸ್, ಎಂ ಸಳನಿಯಪ್ಪನ್ ಮತ್ತು ಶ್ರೀಮತಿ ಬಿ ಎಲ್ ಸುಬ್ಬಮ್ಮ

ಇಂಜನಿಯರಿಂಗ್ ಕಾಲೇಜು — ಶ್ರೀಗಳಾದ ಎ. ಹುಚ್ಚಮಾಸ್ತಿಗೌಡ, ಎಸ್ ವೀರಬಸಪ್ಪ, ಬಿ ವಿ ಲಂಕಪ್ಪ, ಎ ಬಿ ಮರಿಯಪ್ಪ, ಕೆ ಆರ್ ಮಾಧವರಾವ್, ಕೆ ಪ್ರಭಾಕರ್, ಆರ್. ಕೆ ಪ್ರಸಾದ್ ಮತ್ತು ಕೆ ಸಿಂಗಾರಿಗೌಡ

ಮೆಡಿಕಲ್ ಸ್ಕೂಲ್ — ಶ್ರೀಗಳಾದ ಎಚ್ ರಂಗರಾವ್, ಆರ್ ಅನಂತರಾಮ್, ವೈ ಎಂ ಚಂದ್ರಶೇಖರಯ್ಯ, ಮಾಲಿ ಮರಿಯಪ್ಪ, ಹೆಚ್ ಆರ್ ಅಬ್ದುಲ್ ಗಫಾರ್, ಹೆಚ್ ಎಂ ಗಂಗಾಧರಯ್ಯ ಡಿ ಆರ್ ಕರೀಗೌಡ ಮತ್ತು ಟಿ ಎ. ಮೂಡ್ಲಗಿರಿಗೌಡ

ಪ್ರೀತಿ ಕೊಲೆ ಅಪಾದಿತನು ಮತ್ತೆರಡು ದಿನ ಪೋಲೀಸರ ವಶಕ್ಕೆ

ಬೆಂಗಳೂರು ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲ್ ಮಿಸ್ ಪ್ರೀತಿನ್ನರ ಕೊಲೆ ಸಂಬಂಧದಲ್ಲಿ ಬಂಧಿತನಾಗಿರುವ ಅಪ್ಪುಸ್ವಾಮಿ ಎಂಬುವನನ್ನು ನೆನ್ನೆ ಪೋಲೀಸರು ದಂಡಿನ ಅಡಿಷನಲ್ ಪ್ರಥಮ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ತನಿಖೆಗಾಗಿ ಮತ್ತೆರಡು ದಿನ ರಿಮ್ಯಾಂಡು ಪಡೆದರು

ದಕ್ಷಿಣ ರೈಲ್ವೆ ನೌಕರರ ಸಂಘಗಳ ಐಕ್ಯ

ದಕ್ಷಿಣ ರೈಲ್ವೆಯ ಮಾಜಿ ದಕ್ಷಿಣ ಭಾರತ, ಮೈಸೂರು ಮತ್ತು ಎಂ. ಎಸ್ ಎಂ ರೈಲ್ವೆಗಳ ನೌಕರರ ಸಂಘಗಳನ್ನು ಐಕ್ಯಗೊಳಿಸಿ ಈಗ ದಕ್ಷಿಣ ರೈಲ್ವೆ (ಐಕ್ಯಗೊಂಡ) ನೌಕರರ ಸಂಘವೆಂಬುದನ್ನು ಸ್ಥಾಪಿಸಲಾಗಿದೆ. ಅದಕ್ಕೆ ಅಧ್ಯಕ್ಷರಾಗಿ ಎಸ್ ಗುರುಸ್ವಾಮಿಯವರನ್ನು ಆರಿಸಲಾಗಿದೆ. ಐದು ಜನ ಉಪಾಧ್ಯಕ್ಷರ ಪೈಕಿ ಮೈಸೂರಿನ ಶ್ರೀ ಹೆಚ್ ಬಿ ರಾಘವರಾಜ್‌ರವರೂ ಇರುವರು. ಪ್ರಧಾನ ಕಾರ್ಯದರ್ಶಿಗಳಾಗಿ ಟಿ ವಿ ಆನಂದ್‌ರವರೂ ೩ ಜನ ಸಹಾಯಕ ಕಾರ್ಯದರ್ಶಿಗಳ ಪೈಕಿ ಮೈಸೂರಿನ ಶ್ರೀ ಕೆ ಟಿ ರಾಮಸ್ವಾಮಿಯವರೂ ಒಬ್ಬರಾಗಿ ಆರಿಸಲ್ಪಟ್ಟಿರುವರು

ಕೃಷ್ಣರಾಜಸಾಗರ ಅಣೆಕಟ್ಟು ಬಗ್ಗೆ ರೇಡಿಯೊ ಪ್ರಸಾರ

ಕೃಷ್ಣರಾಜಸಾಗರ ಅಣೆಕಟ್ಟಿನ ಬಗ್ಗೆ ಮೈಸೂರು ರೇಡಿಯೊದವರು ಮಾಜಿ ದಿವಾನರೂ, ಅಣೆಕಟ್ಟಿನ ನಿರ್ಮಾಣಕ್ಕೆ ಹೆಚ್ಚು ಜವಾಬ್ದಾರಿ ಹೊತ್ತಿದವರೂ ಆದ ಶ್ರೀ ಎಂ ವಿಶ್ವೇಶ್ವರಯ್ಯನವರೊಡನೆ ನಡೆಸಿದ ಭೇಟಿಯ ವಿವರಣೆಗಳನ್ನು ನಾಳಿದ್ದು ರಾತ್ರಿ ೯|| ಗಂಟೆಗೆ ಪ್ರಸಾರ ಮಾಡುವರು

ತುಂಗಭದ್ರಾ ಯೋಜನೆ ಸಮ್ಮೇಳನ ಮುಂದಕ್ಕೆ

ಬೆಂಗಳೂರಿನಲ್ಲಿ ಈ ತಿಂಗಳು ಕಡೆಯ ವಾರದಲ್ಲಿ ಸೇರಬೇಕಾಗಿದ್ದ ಹೈದರಾಬಾದ್, ಮದ್ರಾಸ್ ಮತ್ತು ಮೈಸೂರು ಸರ್ಕಾರದ ಪ್ರತಿನಿಧಿಗಳ ಸಭೆಯು ಜುಲೈ ತಿಂಗಳ ಎರಡನೇ ಭಾಗದಲ್ಲಿ ಸೇರುವುದೆಂದೂ ಸ್ಥಳದ ಬಗ್ಗೆ ಮೊದಲೇ ಪ್ರಕಟನೆ ಹೊರಡಿಸುವುದಾಗಿಯೂ ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಹೆಚ್. ಎಲ್. ಸಣ್ಣಪ್ಪ ನಾಗಸ್ವರ ಮಧ್ಯಾಹ್ನ ೧-೪೦ [illegible] ೩ ವರ್ಷದ ಸಿತಾರ್ ಸಂಜೆ ೫ ೪೦ ಹೆಚ್ ಎಲ್ ಸಣ್ಣಪ್ಪ, ನಾಗಸ್ವರ ೬ ೧೫ ಬಾಲಜಗತ್ತು ೭ ಶ್ರೀರಾಮುಲು ನಾಯ್ಡು, ಹಿಂದಿ ಗೀತೆ. ೭ ೩೦ ವೃಂದ ವೀಣೆ ೭ ೪೫ ಜೆ ಬಿ ಮಲ್ಲಾರಾಧ್ಯ, ಕನ್ನಡದಲ್ಲಿ ಭಾಷಣ ೮ ಆರ್ ಕೆ ಶ್ರೀಕಂಠನ್, ಸಂಗೀತ ೮ ೪೦ ರಾಷ್ಟ್ರೀಯ ಕಾರ್ಯಕ್ರಮ ೯ ೧೫ ಸರೋಜಾ ನಾರಾಯಣನ್, ಕನ್ನಡ ಗೀತೆಗಳು, ೯ ೩೦ ಸಿನಿಮಾ ಚಿತ್ರದ ಗೀತೆಗಳು

॥ಶ್ರೀ॥

ಜಗದಂಬಾ ಶಿಶುವಿಹಾರ

[illegible] ರಸ್ತೆ, ಮೈಸೂರು

[illegible] ಶ್ರೀ ಜಗದಂಬಾ ಶಿಶುವಿಹಾರ [illegible]

ಡಿ ಕೃಷ್ಣಮೂರ್ತಿ,
ಮ್ಯಾನೇಜರ್

ಖಾನೇಷುಮಾರಿ ಲೆಕ್ಕದ ಬಗ್ಗೆ ಬಹುಮಾನ

ಸ್ವಂ. ಸು] ಟಿ ನರಸೀಪುರ ೨೨

ಖಾನೇಷುಮಾರಿ ಲೆಕ್ಕದ ಸಂಬಂಧವಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರೆಂದು ಇಲ್ಲಿನ ಪೌರಸಭಾಧ್ಯಕ್ಷ ಶ್ರೀ ಎಸ್ ಶ್ರೀನಿವಾಸ ಅಯ್ಯಂಗಾರ್, ಶ್ರೀಗಳಾದ ವೈ ಎಸ್ ವೆಂಕಟರಂಗಯ್ಯಂಗಾರ್, ಹೆಚ್ ಕೃಷ್ಣಪ್ಪ, ಆರ್ ಗುಂಡಪ್ಪ, ಎಂ ಎನ್ ನಂಜುಂಡಯ್ಯ ಮತ್ತು ಅಗರಮಾಂಬಳ್ಳಿಯ ಶ್ರೀ ಎ ಸುಬ್ರಹ್ಮಣ್ಯರವರುಗಳಿಗೆ ಮುಖ್ಯ ಮಂತ್ರಿಗಳು ಇಲ್ಲಿಗೆ ದಯಮಾಡಿಸಿದ್ದಾಗ ಬಹುಮಾನವಾಗಿ ಪದಕಗಳನ್ನು ಕೊಟ್ಟಿರುತ್ತಾರೆ

ಸಮ್ಮೇಳನದಲ್ಲಿ ಗಲಭೆಗಾಗಿ ೨೦೦ ನಿರಾಶ್ರಿತರ ದಸ್ತಗಿರಿ

ಪಶ್ಚಿಮ ಬಂಗಾಳದ ೨೪ ಪರಗಣ ಜಿಲ್ಲೆಯಲ್ಲಿ ಒಂದು ಕಡೆ ನಡೆಯುತ್ತಿದ್ದ ಪಶ್ಚಿಮ ಬಂಗಾಳ ಕಾಂಗ್ರೆಸ್ ಸಮ್ಮೇಳನಕ್ಕೆ ೫೦೦ ಮಂದಿ ನಿರಾಶ್ರಿತರು ನುಗ್ಗಿದರೆಂದೂ, ಆ ಪೈಕಿ ಮಹಿಳೆಯರೇ ಹೆಚ್ಚಾಗಿದ್ದರೆಂದೂ ವರದಿಯಾಗಿದೆ. ತಮಗೆ ಜಮೀನು ಕೊಡುವಂತೆ ಅವರು ಕೂಗುತ್ತಾ ಗಲಭೆ ಮಾಡಿದರೆಂದೂ, ೨೦೦ ನಿರಾಶ್ರಿತರನ್ನು ದಸ್ತಗಿರಿ ಮಾಡಲಾಯಿತೆಂದೂ ವರದಿಯಾಗಿದೆ

ಆಸ್ಟ್ರಿಯಾಕ್ಕೆ ಸಿಂಹಳದ ಕ್ಷಮಾಪಣೆ

ಸಿಂಹಳದ ಗೆಜೆಟ್ಟಿನಲ್ಲಿ ''ಕಬ್ಬಿಣದ ಪರದೆ'' ರಾಷ್ಟ್ರಗಳ ಪಟ್ಟಿಯಲ್ಲಿ ಆಸ್ಟ್ರಿಯಾವನ್ನೂ ಸೇರಿಸಿದ್ದ ಸಂಬಂಧವಾಗಿ ಸಿಂಹಳ ಸರ್ಕಾರದವರು ಆಸ್ಟ್ರಿಯಾ ಸರ್ಕಾರಕ್ಕೆ ಕ್ಷಮಾಪಣೆ ಸಲ್ಲಿಸಿದ್ದಾರೆ. ಹೊಸ [illegible] ಸಂಬಂಧವಾಗಿ ಈ ಪ್ರಕಟಣೆ ಹೊರಟಿದ್ದಿತು

ನಿರುದ್ಯೋಗ ನಿವಾರಣೆಗೆ ಸರ್ಕಾರದ ಕ್ರಮ

ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯ ನಿವಾರಣೆಯೇ ಸರ್ಕಾರದ ಮುಂದಿರುವ ಪ್ರಮುಖ ಪ್ರಶ್ನೆಯಾಗಿರುವುದೆಂದೂ ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದರಲ್ಲಿ ಸಂದೇಹವೇನೂ ಇಲ್ಲವಾಗಿಯೂ ಕೇಂದ್ರ ಆಹಾರ ಮತ್ತು ವ್ಯವಸಾಯ ಮಂತ್ರಿ ಕಿದ್ವಾಯಿಯವರು ತಿಳಿಸಿರುತ್ತಾರೆ.

ಮಂತ್ರಿಮಂಡಲದ ಅಸ್ತಿತ್ವದ ಬಗ್ಗೆ ರಿಟ್ ಅರ್ಜಿ ವಜಾ

ಬೆಂಗಳೂರು ೨೨

ರಾಜ್ಯಸಭಾ ಸದಸ್ಯರಾದ ಶ್ರೀ ಎಸ್ ಗೋಪಾಲಗೌಡರು ಈಗಿನ ಮಂತ್ರಿಮಂಡಲವು ಅಧಿಕಾರದಲ್ಲಿರಕೂಡದೆಂಬ ಬಗ್ಗೆ ಆಜ್ಞೆಯಾಗಬೇಕೆಂದು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನೆನ್ನೆ ಶ್ರೇಷ್ಠ ನ್ಯಾಯಾಧೀಶ, ಶ್ರೀ ಪಿ ಮೇದಪ್ಪ ಮತ್ತು ಜ|| ಬಿ ವಾಸುದೇವ ಮೂರ್ತಿಯವರು ತಳ್ಳಿಹಾಕಿದರು. ಅರ್ಜಿಯಲ್ಲಿ ತಿರುಳೇನೂ ಇಲ್ಲವಾಗಿಯೂ, ಅದನ್ನು ಪರಿಶೀಲಿಸಲು ಯಾವ ಆಧಾರವೂ ಇಲ್ಲವೆಂದೂ ಕೋರ್ಟಿನವರು ಅಭಿಪ್ರಾಯಪಟ್ಟರು. ಶ್ರೀ ಟಿ ಸಿದ್ದಲಿಂಗಯ್ಯನವರು ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿದ ಸಂಬಂಧದಲ್ಲಿ ಜಂಟಿ ಜವಾಬ್ದಾರಿಯುಳ್ಳವರಾಗಿರುವ ಇತರ ಮಂತ್ರಿಗಳೂ ರಾಜೀನಾಮೆ ಸಲ್ಲಿಸಬೇಕಾಗಿದ್ದಿತೆಂದು ಶ್ರೀ ಗೋಪಾಲಗೌಡರು ಅರ್ಜಿಯಲ್ಲಿ ತಿಳಿಸಿದ್ದರು

ಮಳೆಗಾಳಿಯಿಂದ ನಾಲ್ವರು ಕೊಚ್ಚಿಹೋದರು

ಬೊಂಬಾಯಿನಲ್ಲಿ ಮೊನ್ನೆ ಭಾರಿ ಮಳೆಯೂ, ಘಂಟೆಗೆ ೫೨ ಮೈಲಿ ವೇಗದಲ್ಲಿ ಬಿರುಗಾಳಿಯೂ ಬೀಸಿ, ಬೀದಿಗಳಲ್ಲೆಲ್ಲಾ ನೀರು ತುಂಬಿಹೋಗಿತ್ತು. ಮೆರೀನ್ ಡ್ರೈವಿನ ಹಂತಗಳ ಮೇಲೆ ನಿಂತಿದ್ದ ಮೂವರು ಹುಡುಗರ ಪೈಕಿ ಪ್ರೇಮಸಿಂಗ್ ಎಂಬುವನು ನೀರಿನಲ್ಲಿ ಕೊಚ್ಚಿಹೋದನೆಂದು ವರದಿಯಾಗಿದೆ. ಕೊಚ್ಚಿಹೋಗಿದ್ದ ಮೂರು ಜನ ಭಿಕ್ಷುಕರ ದೇಹಗಳು ಪೋಲೀಸರಿಗೆ ಸಿಕ್ಕಿವೆ. ವಾಹನ ಸಂಚಾರವೆಲ್ಲವೂ ನಿಂತುಹೋಗಿತ್ತು.

ಗೋಖಲೆ ಹಿಂದಿ ವಿದ್ಯಾಲಯ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿ ೧೫೨ನೇ ನಂಬರು ಮಾದರಿ ಮನೆಯಲ್ಲಿರುವ ಗೋಖಲೆ ಹಿಂದಿ ವಿದ್ಯಾಲಯದವರು ಹೈಸ್ಕೂಲು ಮತ್ತು ಮಿಡಲ್ ಸ್ಕೂಲ್ ಹಿಂದಿ ಪಾಠಗಳನ್ನೂ ಮತ್ತು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಪಾಠಗಳನ್ನೂ ಹೇಳಿಕೊಡಲು ಏರ್ಪಾಡು ಮಾಡಿರುತ್ತಾರೆ. ಅಲ್ಲದೆ ಸಂಘದ ಆಶ್ರಯದಲ್ಲಿ ಕರ್ನಾಟಕ ಸಂಘವೊಂದು ಸ್ಥಾಪಿತವಾಗಿದೆ. ಶ್ರೀಗಳಾದ ಎ. ಎನ್ ಜಯರಾಂ ಮತ್ತು ಕೆ. ಎಸ್ ವೆಂಕಟರಾವ್ ರವರನ್ನು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್. ಸುಬ್ಬರಾಯರನ್ನು ಖಜಾಂಚಿಯಾಗಿಯೂ ಆರಿಸಲಾಗಿದೆ

ವಿವಾಹ ಮಹೋತ್ಸವಗಳು

ಮಲಯದ ಜೊಹೋರ್ ಸಂಸ್ಥಾನದ ನೀರಾವರಿ ಇಲಾಖೆಯ ಶ್ರೀ ಹೆಚ್ ಎಸ್ ವೆಂಕಟರಾಮಯ್ಯನವರು ತಮ್ಮ ಕುಮಾರಿ ಶ್ರೀಮತಿ ಗೌರಮ್ಮನನ್ನು ಮೈಸೂರಿನ ವಕೀಲರಾದ ಶ್ರೀ ಎಸ್ ಶ್ರೀಕಂಠಯ್ಯನವರ ಮಕ್ಕಳು ಶ್ರೀ ಮಂಜುನಾಥ್‌ರವರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಶ್ರೀ ಗಂಜಾಂ ಬಾಲದಾಸಪ್ಪನವರು ತಮ್ಮ ಕುಮಾರರೂ, ವಿಜಯ ಪತ್ರಿಕೆ ಸಹ ಸಂಪಾದಕರೂ ಆದ ಶ್ರೀ ಬಿ ಬಾಲಕೃಷ್ಣನವರಿಗೆ ಬೆಂಗಳೂರಿನ ಶ್ರೀ ಬಿ ಆರ್ ಚಿಕ್ಕಣ್ಣನವರ ಕುಮಾರಿ ಸೌ|| ಸುಮತಿಯನ್ನು ತಂದುಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಚಾಮರಾಜನಗರದ ಬರ್ಮಾ ಶೆಲ್ ಏಜೆಂಟರಾದ ಶ್ರೀ ಸಿ ವಿ ರಾಮರಾವ್‌ರವರು ತಮ್ಮ ಮಗಳು ಸೌ|| ನಾಗಲಕ್ಷ್ಮಿಯನ್ನು ಈರೋಡಿನ ವ್ಯಾಪಾರಿಗಳಾದ ಶ್ರೀ ವಿ ಕಸ್ತೂರಿ ಚೆಟ್ಟಿಯವರ ಮಗ ಶ್ರೀ ವಿ ಕೆ ರಾಮಚಂದ್ರರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೧೩-೧೦-೦	೪೦-೦-೦
ಎಳ್ಳು	೩೩-೨-೦	೫೭-೦-೦
ಹುಚ್ಚೆಳ್ಳು	೩೧-೨-೦	
ತೊಗರಿ	೪೩-೮-೦	೪೬-೦-೦
ಹೆಸರು	೭೪-೦-೦	೭೩-೦-೦
ಹಲಸಂದೆ	೫೭-೦-೦	೭೦-೦-೦
ಉದ್ದು	೩೪-೧೪-೦	೩೯-೦-೦
ಅವರೆ	೫೬-೪-೦	೬೦-೨-೦
ಹುಣಸೇಹಣ್ಣು	೪-೧೩-೦	೫-೯-೦
ಸೀಗೆಕಾಯಿ	೩-೧-೦	೩-೫-೦
ಬೆಲ್ಲ	೮-೦-೦	
ತೆಂಗಿನಕಾಯಿ	೧೩೫-೦-೦	೧೪೦-೦-೦

॥ಶ್ರೀ॥

ಶ್ರೀನಿವಾಸ ಮಂದಿರ

329. ಡಿ. ಸುಬ್ಬಯ್ಯ ರೋಡ್, ಮೈಸೂರು

ಇಲ್ಲಿ ಈ ಕೆಳಗೆ ಕಂಡ ಶಿಕ್ಷಣ ತರಗತಿಗಳು ನಡೆಯುತ್ತವೆ —

ಪ್ರೈಮರಿ, ಮಿಡಲ್, ಹೈಸ್ಕೂಲ್, ಹಿಂದಿ, ಸಂಗೀತ ಮತ್ತು ಶಿಶುವಿಹಾರ

ವಿವರಗಳಿಗೆ ವಿಚಾರಿಸಿ

ಕಳೆದು ಹೋಗಿದೆ

ಚನ್ನೇಗೌಡನ ಕೊಪ್ಪಲಿನ ಶ್ರೀ [illegible] ಶ್ರೀ ಎಸ್. ಎಸ್. [illegible] 5 [illegible] 15 ರೂ ಬಹುಮಾನ ಕೊಡಲಾಗುತ್ತದೆ

ಇತ್ತೀಚಿನ ನವೀನ ಮಾದರಿಗಳಲ್ಲಿ

ಮರ್ಫಿ ರೇಡಿಯೋಗಳು

ಈಗ ತಾನೆ ಪ್ರದರ್ಶಿಸಲ್ಪಡುತ್ತಿವೆ.

—: ಶ್ರೀ ಬೀಡ್ಸ್ :—

ಆಸ್ಪತ್ರೆ ಚೌಕ — : — ಮೈಸೂರು.

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ. ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

Edited, Printed and Published by A.R. Nagarajan at Sadhvi Press, D. Subbiah Road, Mysore.

ರಿಜಿ. ನಂ. 792 ‖ ವಂದೇ ಮಾತರಂ ‖ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧} ಬುಧವಾರ ೨೪-೬-೧೯೫೩ [ಸಂಚಿಕೆ ೨೫೯

೧೪ ಸಾವಿರ ಕಲ್ಲಿದ್ದಿಲು ಗಣಿ ಕಾರ್ಮಿಕರ ಮುಷ್ಕರ

ಕಲ್ಕತ್ತಾ ನಗರಕ್ಕೆ ಡಾ|| ಮುಖರ್ಜೀ ಕಳೇಬರ

ಜನಸಂಘದ ಅಧ್ಯಕ್ಷ ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರ ಕಳೇಬರವನ್ನು ಅವರ ಬಂಧುಗಳ ಕೋರಿಕೆಯಂತೆ ಕಲ್ಕತ್ತೆಗೆ ವಿಮಾನದಲ್ಲಿ ಕಾಶ್ಮೀರ ಸರ್ಕಾರದವರು ನೆನ್ನೆ ಕಳುಹಿಸಿಕೊಟ್ಟರು. ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ಮತ್ತು ಇತರ ಮಂತ್ರಿಗಳು ವಿಮಾನಕ್ಕೆ ಬಂದಿದ್ದರು ಶವಕ್ಕೆ ಕಾಶ್ಮೀರ ಸರ್ಕಾರದ ಪರವಾಗಿ ಹೂವಿನ ಹಾರವನ್ನು ಅರ್ಪಿಸಲಾಯಿತು ಬೇಗಂ ಅಬ್ದುಲ್ಲಾರವರು ಕಳುಹಿಸಿದ್ದ ಪುಷ್ಪ ಹಾರವನ್ನು ಷೇಕ್ ಅಬ್ದುಲ್ಲಾರವರು ಕಳೇಬರದ ಮೇಲಿಟ್ಟು, ಕಾಶ್ಮೀರದ ಶಾಲನ್ನು ಹೊದಿಸಿದರು.

ಶ್ಯಾಮ ಪ್ರಸಾದ ಮುಖರ್ಜಿಯವರಿಗೆ ೧೦-೧೨ ದಿನಗಳಿಂದಲೂ ಜ್ವರವು ಬರುತ್ತಿದ್ದುದಾಗಿಯೂ, ನೆನ್ನೆ ಬೆಳಗ್ಗೆ ಕಲ್ಕತ್ತಾದಲ್ಲಿರುವ ಅವರ ಅಣ್ಣಂದಿರಾದ ಜಸ್ಟಿಸ್ ಮುಖರ್ಜಿಯವರಿಗೆ ನಿಧನದ ಸುದ್ದಿಯನ್ನು ತಿಳಿಸಲಾಯಿತೆಂದೂ ಹೇಳಲಾಗಿದೆ ಅವರಿಗೆ ಹಿಂದಿನ ಮೂರು ದಿನಗಳಿಂದ ಪ್ಲೂರಸಿ ಉಂಟಾಗಿ ಆಸ್ಪತ್ರೆಗೆ ಸೇರಿಸಲಾಗಿದ್ದಿತೆಂದೂ, ನೆನ್ನೆ ಮುಂಜಾನೆ ಆಸ್ಪತ್ರೆಯಲ್ಲಿ ಹೃದಯ ಕ್ರಿಯೆ ನಿಂತು ಅವರು ಮಡಿದರೆಂದೂ ವರದಿಯಾಗಿದೆ

ಮುಖರ್ಜಿಯವರ ನಿಧನದ ವಾರ್ತೆ ಬಂದೊಡನೆಯೇ ಅಲ್ಲಿನ ಸರ್ಕಾರದವರು ಎಲ್ಲ ಕಛೇರಿಗಳನ್ನು ಮುಚ್ಚಿದರು ಕಟ್ಟಡಗಳ ಮೇಲೆ ಧ್ವಜಗಳು ಅರ್ಧ ಮಟ್ಟದಲ್ಲಿ ಹಾರಾಡುತ್ತಿದ್ದುವು. ದೆಹಲಿಯಲ್ಲಿ ಅಂಗಡಿಗಳನ್ನು ನೆನ್ನೆ ಮುಚ್ಚಲಾಗಿದ್ದಿತು ಕಪ್ಪು ಬ್ಯಾಡ್ಜು ಧರಿಸಿ, ಧ್ವಜಗಳನ್ನು ಹಿಡಿದು ಜನಸಂಘದವರು ನಗರದಲ್ಲಿ ಸಂಚರಿಸಿದರು. ಒಂದು ಕಡೆ ಪೋಲೀಸರಿಗೂ, ಪ್ರದರ್ಶಕರಿಗೂ ಘರ್ಷಣೆಯಾಯಿತು ಹಲವರ ಪೆಟ್ಟುಗಳಾಗಿವೆ ನೆನ್ನೆ ಮೋಲಾಪುರದಲ್ಲೂ ಹರತಾಳವು ಆಯಿತು ಬೆಂಗಳೂರು ವಿಮಾನ ಕಾರ್ಖಾನೆಗೆ ಅರ್ಧ ದಿನದ ರಜಾ ಕೊಡಲಾಗಿತ್ತು

ಅಮೆರಿಕಾ ನ್ಯಾಯಾಧೀಶರ ವಿಚಾರಣೆ

ರೋಸೆನ್‌ಬರ್ಗ್ ದಂಪತಿಗಳ ಶಾಸಿಯ ದಿನವನ್ನು ಮುಂದಕ್ಕೆ ಹಾಕುವಂತೆ ಆಜ್ಞೆ ಮಾಡಿದ್ದ ಜಸ್ಟಿಸ್ ವಿಲಿಯಂ ಡಗ್ಲಾಸ್‌ರವರನ್ನು ಬರುವ ಮಂಗಳವಾರ ಅಲ್ಲಿನ ಪ್ರತಿನಿಧಿ ಸಭೆಯ ನ್ಯಾಯಾಂಗ ಸಮಿತಿ ಮುಂದೆ ವಿಚಾರಣೆಗೆ ಗುರಿಪಡಿಸಲಾಗುವುದು

ಮುಖರ್ಜಿ ಮರಣದ ಬಗ್ಗೆ ಡೋಗ್ರಾ ಹೇಳಿಕೆ

ಜಮ್ಮು ಪರಿಷತ್ತಿನ ಅಧ್ಯಕ್ಷರಾದ ಪ್ರೇಮನಾಥ ಡೋಗ್ರಾರವರು ಹೇಳಿಕೆಯೊಂದನ್ನಿತ್ತು, ಡಾ|| ಮುಖರ್ಜಿಯವರ ಮರಣದ ಸಂಬಂಧವಾಗಿ ಕಾಶ್ಮೀರ ಸರ್ಕಾರವು ಇತ್ತಿರುವ ಹೇಳಿಕೆ ತಪ್ಪೆಂದು ತಿಳಿಸಿ, ಮುಖರ್ಜಿಯವರು ಶ್ರೀನಗರದಲ್ಲಿ ಮಡಿದ ನಂತರ ಪೊಲೀಸ್ ಅಧಿಕಾರಿಗಳು ಅವರ ಶರೀರವನ್ನು, ಇನ್ನಿಬ್ಬರು ಬಂಧಿತರನ್ನು ಜೀಪಿನಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋದುದಾಗಿ ಹೇಳಿರುವರು

ಮೆಡಿಕಲ್ ಕಾಲೇಜಿನಲ್ಲಿ ಬಯೋ ಕೆಮಿಸ್ಟ್ರಿ ಶಿಕ್ಷಣ

ಮೈಸೂರು ೨೪

ಮೈಸೂರು ಮೆಡಿಕಲ್ ಕಾಲೇಜಿನ ಎಂ.ಎಸ್‌ಸಿ ತರಗತಿಯಲ್ಲಿ ೧೯೫೩-೫೪ ನೇ ಸಾಲಿನಲ್ಲಿ ಬಯೋ ಕೆಮಿಸ್ಟ್ರಿ ವಿಭಾಗದ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸಲಾಗುವುದೆಂದು ವಿಶ್ವವಿದ್ಯಾಲಯದ ಪ್ರಕಟಣೆಯೊಂದು ತಿಳಿಸಿರುತ್ತದೆ ರಸಾಯನಶಾಸ್ತ್ರದ ಬಿ.ಎಸ್‌ಸಿ ಆನರ್ಸ್ ಡಿಗ್ರಿ ಪಡೆದ ಪದವೀಧರರು ಆ ಶಿಕ್ಷಣ ತರಗತಿಗೆ ಸೇರಲವಕಾಶವಿದೆ ಅಪೇಕ್ಷಿಸುವವರು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರಿಗೆ ಅರ್ಜಿ ಹಾಕಿಕೊಳ್ಳಬಹುದೆಂದು ಸೂಚಿಸಲಾಗಿದೆ

ಶಾಂತಿ ಕೌಲಿಗೆ ರುಜು ಹಾಕಲು ರೀ ಷರತ್ತು

ಕೊರಿಯದಿಂದ ಚೀಣಾ ಮತ್ತು ವಿಶ್ವ ಸಂಸ್ಥೆ ಸೈನ್ಯಗಳನ್ನು ಏಕ ಕಾಲದಲ್ಲಿ ವಾಪಸು ಕರೆಸುವುದು, ಶಾಂತಿ ಕೌಲಿಗೆ ಮುನ್ನ ದಕ್ಷಿಣ ಕೊರಿಯಾ-ಅಮೆರಿಕಾ ರಕ್ಷಣಾ ಒಪ್ಪಂದವು ಆಗತಕ್ಕದ್ದು ಮತ್ತು ಶಾಂತಿ ಸ್ಥಾಪನಾ ಸಂಬಂಧವಾದ ಸಮ್ಮೇಳನ ಸೇರಲು ೯೦ ದಿನಗಳ ಅವಧಿ ಮಾತ್ರವಿರುವುದು - ಈ ಮೂರು ಷರತ್ತುಗಳನ್ನು ಮಿತ್ರ ಪಕ್ಷದವರು ಒಪ್ಪಿದರೆ ಕೊರಿಯಾ ಶಾಂತಿ ಕೌಲಿಗೆ ತಾವು ರುಜು ಹಾಕಲು ಸಿದ್ಧವಾಗಿರುವುದಾಗಿ ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ವಿಶ್ವ ಸಂಸ್ಥೆ ಪ್ರಧಾನ ಸೇನಾನಿಯವರಿಗೆ ತಿಳಿಸಿರುತ್ತಾರೆ ಸಂಸ್ಥೆಯ ಅಧ್ಯಕ್ಷ ಲೆಸ್ಟರ್ ಪಿಯರ್ಸನ್ನರು ರೀಯವರಿಗೆ ತಂತಿಯೊಂದನ್ನು ಕಳುಹಿಸಿ, ಖೈದಿಗಳ ಬಿಡುಗಡೆಯಿಂದ ತಮಗೆ ತುಂಗು ಬಡಿದಂತಾಗಿದೆಯೆಂದು ತಿಳಿಸಿ, ಶಾಂತಿ ಸ್ಥಾಪನೆಗೆ ಅವರು ಅಡ್ಡಿಯಾಗಕೂಡದೆಂದು ಸೂಚಿಸಿರುವರು

ಕೈರೋವಿನಲ್ಲಿ ನೆಹರೂ

ಭಾರತದ ಪ್ರಧಾನಿ ನೆಹರೂರವರು ನೆನ್ನೆ ಕೈರೋವಿಗೆ ಆಗಮಿಸಿದರು. ಅವರನ್ನು ಈಜಿಪ್ಟಿನ ವಿದೇಶಾಂಗ ಮಂತ್ರಿ ಮಹಮುದ್ ಫೌಜಿಯವರು ಸ್ವಾಗತಿಸಿದರು. ಕೊರಿಯ ಸಮಸ್ಯೆಯ ಪರಿಹಾರವು ಸಾಧ್ಯವೆಂಬ ಆಶೆಯನ್ನು ತಾವು ಇನ್ನೂ ಹೊಂದಿರುವುದಾಗಿ ನೆಹರೂರವರು ತಿಳಿಸಿರುತ್ತಾರೆ.

ರೆಗ್ಯುಲೇಟೆಡ್ ಮಾರ್ಕೆಟ್ ವರ್ತಕರ ಪ್ರತಿನಿಧಿಗಳ ಆಯ್ಕೆ

ಮೈಸೂರು ೨೪

ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ವರ್ತಕರ ಕ್ಷೇತ್ರದಿಂದ ನೆನ್ನೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಕೆ ನಂದಿಬಸಪ್ಪ, ಎಲ್ ನಾಗಪ್ಪ, ರಂಗಯ್ಯ ಶೆಟ್ಟಿಯ್ಯ, ಚಿನ್ನಸ್ವಾಮಿ ಮೊದಲಿಯಾರ್ ಮತ್ತು ಚೌಡಯ್ಯನವರು ಆರಿಸಲ್ಪಟ್ಟಿರುತ್ತಾರೆ

ಮುಖರ್ಜಿಯವರಿಗೆ ಶ್ರದ್ಧಾಂಜಲಿ

ಡಾ|| ಮುಖರ್ಜಿಯವರ ನಿಧನಕ್ಕಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್, ಪಂಡಿತ ನೆಹರೂ, ಮೌಲಾನಾ ಆಜಾದ್ ಮುಂತಾದ ದೇಶದ ನಾನಾ ಮುಖಂಡರು ಸಂತಾಪವನ್ನು ವ್ಯಕ್ತಪಡಿಸಿರುತ್ತಾರೆ ಪದಗಳಲ್ಲಿ ವರ್ಣಿಸಲಸದಳವಾದಷ್ಟು ದುಃಖವಾಗಿರುವುದಾಗಿ ರಾಜಾಜಿಯವರು ಹೇಳಿರುವರು ಕೇಂದ್ರ ಮಂತ್ರಿ ರೆಡ್ಡಿಯವರು, ಅವರೊಬ್ಬ ಪ್ರತಿಭಾನ್ವಿತ ವ್ಯಕ್ತಿಯಾಗಿದ್ದರೆಂದೂ ತಿಳಿಸಿರುತ್ತಾರೆ ಹಿಂದೂ ಮಹಾಸಭೆ ಅಧ್ಯಕ್ಷ ಎನ್ ಸಿ ಚಾಟರ್ಜಿ, ಡಾ|| ಪರಾಂಜಪೆ, ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅವರ ಗುಣಗಾನ ಮಾಡಿರುತ್ತಾರೆ

ನೆಹರೂ, ನಗೀಬ್ ಮತ್ತು ಮಹಮದ್ ಆಲಿ ಭೇಟಿ

ಭಾರತದ ಪ್ರಧಾನಿ ನೆಹರೂ, ಈಜಿಪ್ಟಿನ ಅಧ್ಯಕ್ಷ ನಗೀಬ್ ಮತ್ತು ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರುಗಳಿಗೆ ಕೈರೋವಿನ ರಿಪಬ್ಲಿಕ್ ಅರಮನೆಯಲ್ಲಿ ನೆನ್ನೆ ರಾತ್ರಿ ೧ ಗಂಟೆ ಕಾಲ ಸೂಯೆಜ್ ಕಾಲುವೆ ಸಂಬಂಧವಾಗಿ ಮಾತುಕತೆಗಳು ನಡೆದುದಾಗಿ ಗೊತ್ತಾಗಿದೆ ಭಾರತದ ರಾಯಭಾರಿ ಪಣಿಕ್ಕರ್ ಮತ್ತು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಾರವರೂ ಹಾಜರಿದ್ದರು

ಶಿವಮೊಗ್ಗೆಯ ಹೊಸ ಜಿಲ್ಲಾಧಿಕಾರಿ

ವಿದೇಶದಿಂದ ವಾಪಸು ಬಂದ ಶ್ರೀ ಎಂ. ಎ ಶ್ರೀರಂಗಾಚಾರ್ಯರವರನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲಾಗಿದೆ.

ಕೊತ್ತಗುಡಂ ಕಲ್ಲಿದ್ದಿಲು ಗಣಿ ಕಾರ್ಮಿಕರ ಮುಷ್ಕರ

ಕೊತ್ತಗುಡಂ ಮತ್ತು ಎಲ್ಲಂದು ಕಲ್ಲಿದ್ದಿಲು ಗಣಿಯ ೧೪ ಸಾವಿರ ಕಾರ್ಮಿಕರು ನೆನ್ನೆಯಿಂದ ಮುಷ್ಕರ ಹೂಡಿರುತ್ತಾರೆ ಗಣಿಗಳಲ್ಲಿ ಕೆಲಸವು ಪೂರ್ಣವಾಗಿ ನಿಂತಿದೆ ಕಾರ್ಮಿಕರ ಬೇಡಿಕೆಗಳ ಪೂರೈಕೆಯಾಗುವವರೆಗೆ ಮುಷ್ಕರವು ಮುಂದುವರಿಯುವುದಾಗಿ ಅವರ ಸಂಘದ ಕಾರ್ಯದರ್ಶಿಯು ತಿಳಿಸಿರುತ್ತಾರೆ

೨ ದೋಣಿಗಳು ಮುಳುಗಿ ೯೦ ಜನರ ಮರಣ

ಗೋದಾವರಿ ನದಿಗೆ ಸೇರುವ ಶಬರಿ ಎಂಬ ಉಪನದಿಯಲ್ಲಿ ಕಳೆದ ಶನಿವಾರ ಎರಡು ದೋಣಿಗಳು ಮುಳುಗಿ ೯೦ ಜನರು ಮೃತಪಟ್ಟರೆಂದು ತಿಳಿದುಬಂದಿದೆ ಪ್ರವಾಹದಿಂದ ೧೦ ಲಕ್ಷ ರೂ ಮನೆ ಮಠಗಳು ಕೊಚ್ಚಿಹೋಗಿವೆ ಈ ಬಗ್ಗೆ ಸರ್ಕಾರದವರು ವಿವರಗಳನ್ನು ಕೇಳಿರುತ್ತಾರೆ

೪೦ ಕೋಟಿ ರೂ. ವೆಚ್ಚದಲ್ಲಿ ವಿದ್ಯುಚ್ಛಕ್ತಿ ಕಾರ್ಖಾನೆ

೩೦-೪೦ ಕೋಟಿ ರೂ ಗಳ ವೆಚ್ಚದಲ್ಲಿ ಭಾರಿ ವಿದ್ಯುಚ್ಛಕ್ತಿ ಕೈಗಾರಿಕಾ ಯಂತ್ರಗಳನ್ನು ತಯಾರಿಸಬಲ್ಲ ಕಾರ್ಖಾನೆಯೊಂದನ್ನು ಭಾರತ ಸರ್ಕಾರದವರು ಏರ್ಪಡಿಸಲಿರುವುದಾಗಿ ವರದಿಯಾಗಿದೆ ಇನ್ನೆರಡು ವರ್ಷಗಳಲ್ಲಿ ಕಾರ್ಖಾನೆಯು ಉತ್ಪನ್ನಕ್ಕೆ ಪ್ರಾರಂಭಿಸಲಿರುವುದಾಗಿಯೂ ಹೇಳಲಾಗಿದೆ.

ವಿಕ್ಟೋರಿಯಾ ಪ್ರತಿಮೆಯ ಉಚ್ಚಾಟನೆ

ಬೊಂಬಾಯಿಯಲ್ಲಿ ಕಳೆದ ೬೧ ವರ್ಷಗಳಿಂದಲೂ ಇರುವ ವಿಕ್ಟೋರಿಯಾ ರಾಣಿಯ ಪ್ರತಿಮೆಯನ್ನು ಅಲ್ಲಿಂದ ತೆಗೆಯಲು ಬೊಂಬಾಯಿ ಸರ್ಕಾರದವರು ನಿರ್ಧರಿಸಿರುತ್ತಾರೆ ಅದನ್ನು ಆಲ್ಬರ್ಟ್ ಪ್ರದರ್ಶನ ಶಾಲೆಯಲ್ಲಿಡಲಾಗುವುದೆಂದು ಹೇಳಲಾಗಿದೆ.

೧೦ ವರ್ಷದ ಹುಡುಗಿಗೆ ಮಗುವಿನ ಪ್ರಸವ

ಅಮೆರಿಕದ ಓಹಿಯೋ ಸಂಸ್ಥಾನದ ಯಂಗ್ಸ್‌ಟೌನ್ ಎಂಬಲ್ಲಿ ಹತ್ತು ವರ್ಷದ ಹುಡುಗಿಯು ೫ ಪೌಂಡು, ೧೪ ಔನ್ಸು ತೂಕದ ಒಂದು ಹೆಣ್ಣು ಮಗುವನ್ನು ಹೆಡೆದಿರುವಳೆಂದು ವರದಿಯಾಗಿದೆ.

ಪಾರ್ಲಿಮೆಂಟಿಗೆ ಕೃಪಲಾನಿ ಆಯ್ಕೆ

ಪೂರ್ನಿಯಾ ಮತ್ತು ಭಾಗಲ್ಪುರ ಪ್ರದೇಶದಿಂದ ಪಾರ್ಲಿಮೆಂಟಿನ ಕೆಳ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಆರಿಸಬಂದಿರುವರು ಖಾಲಿ ಸ್ಥಾನಕ್ಕೆ ಅದೇ ಪಕ್ಷದ ಮತ್ತೊಬ್ಬರು ಚುನಾಯಿತರಾಗಿರುವರು. ಪ್ರತಿಸ್ಪರ್ಧಿಯಾಗಿದ್ದ ಕಾಂಗ್ರೆಸ್ ಉಮೇದುವಾರರು ಸೋತುಹೋಗಿರುವರು.

ಕೃಷ್ಣರಾಜಸಾಗರದಲ್ಲಿ ೫೩ ಅಡಿ ನೀರು

ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು ೫೩ ಅಡಿಗೆ ಏರಿದೆ.

ಡ್ರೇಪರ್ ಕೊಲೆ ಸಂಬಂಧದಲ್ಲಿ ಬಾಕು ಪತ್ತೆ

ಬೆಂಗಳೂರು, ೨೩

ಕಳೆದ ೩ನೇ ತಾರೀಖು ಇಲ್ಲಿನ ಬಿಷಪ್ ಕಾಟನ್ ಗರ್ಲ್ಸ್ ಹೈಸ್ಕೂಲಿನ ಪ್ರಿನ್ಸಿಪಾಲ್ ಮಿಸ್ ಡ್ರೇಪರ್‌ರ ಕೊಲೆ ಸಂಬಂಧದಲ್ಲಿ ಆಪಾದಿತ ಕೃಷ್ಣಸ್ವಾಮಿಯು ಉಪಯೋಗಿಸಿದನೆಂದು ಹೇಳಲಾದ ಆಯುಧದ ಪತ್ತೆಗಾಗಿ ೩೦ ಸೂರು ಕೆರೆಯಲ್ಲಿ ಕಳೆದ ಆರು ದಿನಗಳಿಂದಲೂ ಶೋಧನೆ ನಡೆದು, ನೆನ್ನೆ ೧೦ ಅಂಗುಲ ಉದ್ದದ ಬಾಕುವೊಂದು ಸಿಕ್ಕಿರುವದಾಗಿ ತಿಳಿದುಬಂದಿದೆ. ಇವರಲ್ಲಾಗಿ ಪೋಲೀಸರೂ ಮತ್ತು ೬೦ ಮಂದಿ ಕೂಲಿಗಳೂ ಪತ್ತೆ ಕಾರ್ಯದಲ್ಲಿ ನಿರತರಾಗಿದ್ದರೆಂದು ಹೇಳಲಾಗಿದೆ.

ಮದರಾಸಿನಲ್ಲಿ ಹೆಚ್ಚಿನ ಅಕ್ಕಿ ಪಡಿತರ

ಇದೇ ತಿಂಗಳ ೨೮ನೇ ತಾರೀಖಿನ ವಾರದಿಂದ ಅಕ್ಕಿಯ ಪಡಿತರದ ಪ್ರಮಾಣವನ್ನು ... ಹೆಚ್ಚಿಸಲಾಗುವುದು.

ರೈಲ್ವೆ ಫೆಡರೇಷನ್ ಅಧಿವೇಶನ

... ರೈಲ್ವೆ ... ದರ್ ... ಬೇಡಿಕೆಗಳ ... ರೈಲ್ವೆ ... ನ್ಯಾಷನಲ್ ರೈಲ್ವೆ ... ವಿಷಯವನ್ನು ... ತೀರ್ಮಾನಿಸಲಾಯಿತು.

ಬಿ ಇ. ಫೇಲಾದ ವಿದ್ಯಾರ್ಥಿಗಳ ಸಭೆ

... ವಿದ್ಯಾರ್ಥಿಗಳ ... ಫಲಿತಾಂಶ ... ವಿಶ್ವವಿದ್ಯಾಲಯದ ಅಧಿಕಾರಿಗಳು ... ವಿದ್ಯಾರ್ಥಿಗಳಿಗೆ ... ಕೂಡಲೆ ... ಮಾಡಬೇಕೆಂದು ... ಪರೀಕ್ಷೆ ... ಪ್ರಕಟಣೆಯನ್ನು ... ಕೋರಿದ ... ತೀರ್ಮಾನಿಸಲಾಯಿತು.

ಚೀಣದಲ್ಲಿ ಪ್ರವಾಹದಿಂದ ಅಗಾಧ ನಷ್ಟ

ಚೀಣಾ ದೇಶದ ನದಿಗಳಲ್ಲಿ ಕಳೆದ ತಿಂಗಳು ... ಪ್ರವಾಹ ಬಂದ ಪರಿಣಾಮ ... ಲಕ್ಷ ಎಕರೆಗಳಷ್ಟು ವಿಸ್ತಾರದ ನೀರಿನಲ್ಲಿ ಮುಳುಗಿ ಹೋಗಿರುವುದಲ್ಲದೆ ... ಮಂದಿ ಮೃತಪಟ್ಟವರಾಗಿಯೂ ಮತ್ತು ... ಮನೆಗಳು ಒಡೆದುಹೋಗಿರುವವೆಂದೂ ಗೊತ್ತಾಗಿದೆ.

ತಪ್ಪಿಸಿಕೊಂಡಿದ್ದ ಬೆಸ್ತರೆಲ್ಲರ ಪತ್ತೆ

... ಕರಾವಳಿ ... ತಪ್ಪಿಸಿಕೊಂಡಿದ್ದ ೩೦೦ ಮಂದಿ ಬೆಸ್ತರನ್ನು ಪತ್ತೆಹಚ್ಚಲಾಗಿರುವುದಾಗಿ ಗೊತ್ತಾಗಿದೆ.

ವಿದ್ಯಾರಣ್ಯರ ಸ್ಮಾರಕೋತ್ಸವ

... ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಶ್ರೀ ವಿದ್ಯಾರಣ್ಯರ ಸ್ಮಾರಕೋತ್ಸವವು ಜರುಗುವುದು. ... ಬೆಳಿಗ್ಗೆ ... ಶ್ರೀ ವಿದ್ಯಾರಣ್ಯರಿಗೆ ಪೂಜೆ ಮತ್ತು ಮಂಗಳಾರತಿಯು, ಸಂಜೆ ... ರಿಂದ ಡಾ॥ ಎಸ್. ಶ್ರೀಕಂಠ ಶಾಸ್ತ್ರಿಗಳವರಿಂದ ಶ್ರೀ ವಿದ್ಯಾರಣ್ಯರ ... ಎಂಬ ವಿಷಯವಾಗಿ ಉಪನ್ಯಾಸ, ... ಬಹುಮಾನ ವಿನಿಯೋಗ, ... ರಾಜಾಶೀರ್ವಾದಗಳೂ ... ರಾಜಸೇವಾ ಪ್ರಸಕ್ತ ... ತಮ್ಮಯ್ಯನವರು ಅಧ್ಯಕ್ಷತೆ ವಹಿಸುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಂಗೀತ, ಎ ಎಸ್ ... ಮಧ್ಯಾಹ್ನ ... ಮುತ್ತುಸ್ವಾಮಿ ದೀಕ್ಷಿತರ ಸಾಹಿತ್ಯ—ರೇಡಿಯೋ ... ಕ್ಕೃಷ್ಣೋಪ, ಎಂ ಡಿ ಲಕ್ಷ್ಮೀನರಸಿಂಹಯ್ಯ ... ಕನ್ನಡ ಗೀತೆಗಳು—ರೇಡಿಯೋ ... ವಿಶ್ವನಾಥ ಭಾಗವತರ್, ... ಸಂಗೀತ, ಎ ಎಸ್ ... ಭಾರತ ವಾಚನ, ... ರೇಡಿಯೋ ... ಕೃಷ್ಣರಾಜಸಾಗರದ ಬಗ್ಗೆ ...

ಮುಖರ್ಜಿ ಒಡನಾಡಿಗಳ ಬಿಡುಗಡೆ

ಡಾ॥ ಮುಖರ್ಜೀಯವರ ಜೊತೆಗೆ ಕಾಶ್ಮೀರ ಸರ್ಕಾರದಿಂದ ಬಂಧಿಸಲ್ಪಟ್ಟ ಗುರುದತ್ ಮತ್ತು ಟೇಕ್‌ಚಂದ್‌ರವರನ್ನು ಬಿಡುಗಡೆ ಮಾಡಲಾಗಿದೆ. ಅವರೂ ಅವರ ವಕೀಲರಾದ ತ್ರಿವೇದಿಯವರೂ ಮುಖರ್ಜಿಯವರ ಕಳೇಬರದೊಡನೆ ಕಲ್ಕತ್ತಾವಿಗೆ ತೆರಳಿದರು.

ಹೊರನಾಡು ಕನ್ನಡಿಗರ ಸಮ್ಮೇಳನ

ಮುಂದಿನ ತಿಂಗಳು ೪ ಮತ್ತು ೫ನೇ ತಾ॥ ಭೂಪಾಲ್ ನಗರದಲ್ಲಿ ಹೊರನಾಡು ಕನ್ನಡಿಗರ ೪ನೇ ಸಮ್ಮೇಳನವು ಜರುಗುವುದು. ಬೆಂಗಳೂರಿನ ಮಾಜಿ ಮೇಯರ್ ಮತ್ತು ಲೋಕಸಭಾ ಸದಸ್ಯ ಶ್ರೀ ಎಚ್. ಕೇಶವಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು.

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯು ಮುಂದಿನ ತಿಂಗಳು ೧೨ನೇ ತಾ॥ ಬೆಂಗಳೂರಿನಲ್ಲಿ ಸೇರುವುದು. ಕಾರ್ಯಕ್ರಮ ಪಟ್ಟಿಯಲ್ಲಿ ಶ್ರೀ ಎಚ್. ಸಿ. ದಾಸಪ್ಪನವರ ... ನಾಗಪ್ಪರೆಡ್ಡಿಯವರ ಮೇಲಿನ ಶಿಸ್ತಿನ ಕ್ರಮಕ್ಕೆ ಸಂಬಂಧಿಸಿದ ನಿರ್ಣಯವೂ ಸೇರಿರುವುದಾಗಿ ಗೊತ್ತಾಗಿದೆ.

ಸಂತಾಪ ಸೂಚಕ ಸಭೆ

ನಗರದ ಭಾರತೀಯ ಜನಸಂಘದ ಕಾರ್ಯಕಾರಿ ಸಮಿತಿಯು ನೆನ್ನೆ ರಾತ್ರಿ ಸೇರಿ ಲೋಕ ಸಭಾ ಸದಸ್ಯರೂ, ಭಾರತೀಯ ಜನಸಂಘದ ಅಧ್ಯಕ್ಷರೂ ಆದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ಆಕಸ್ಮಿಕ ನಿಧನದ ಬಗ್ಗೆ ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ನೀಡಬೇಕೆಂದು ಭಗವಂತನನ್ನು ಪ್ರಾರ್ಥಿಸಲಾಯಿತು. ಈ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಸಾರ್ವಜನಿಕ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಲಾಗಿದೆ.

ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ೨೦ ಸಾರಿ ಕುಳಿತ ಪ್ರಸಂಗ

ಜಗದಾಳ್‌ಪುರ ಎಂಬಲ್ಲಿ ದ್ವಾರಕಾನಾಥ ಮಿಶ್ರ ಎಂಬ ೪೦ ವರ್ಷದ ಗುಮಾಸ್ತನೊಬ್ಬನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ೧೯ ವರ್ಷ ಕುಳಿತು ವಿಫಲನಾಗಿ ಕಡೆಗೆ ೨೦ ನೇ ಸಾರಿ ಈ ವರ್ಷ ಕುಳಿತು ತೇರ್ಗಡೆಯಾದನೆಂದು ವರದಿಯಾಗಿದೆ.

ಸಾರಾಯಿ ಅಂಗಡಿಯು ಸ್ಥಳಾಂತರವಾಗಲಿ

ರಾಜಧಾನಿಯ ಲಷ್ಕರ್ ಮೊಹಲ್ಲಾ ಕುಂಬಾರಗೇರಿ ಅಂಗಡಿಯನ್ನು ಸಂಸಾರಗಳಿಲ್ಲದ ಬಯಲು ಪ್ರದೇಶಕ್ಕೆ ಸಾಗಿಸುವಂತಾಗಬೇಕು. ಮೊಹಲ್ಲಾದಲ್ಲಿರುವ ೧೦-೧೫ ಮಧ್ಯದ ಅಂಗಡಿಗಳಿಂದ ಜನರಿಗೆ ತುಂಬಾ ತೊಂದರೆಯಾಗಿರುವುದಾಗಿ ಸರ್ಕಾರಕ್ಕೆ ಮೊಹಲ್ಲಾ ಕಾಂಗ್ರೆಸ್ ಸಮಿತಿಯವರು ತಿಳಿಸಿ ಅದನ್ನು ಬೇರೆ ಕಡೆಗೆ ಸಾಗಿಸಬೇಕೆಂದು ಹಿಂದೆಯೇ ಕೋರಿದ್ದರು. ಮುಖ್ಯ ಮಂತ್ರಿಗಳು ಮತ್ತು ಅಬ್ಕಾರಿ ಸಚಿವರು ಸ್ಥಳ ಪರಿಶೀಲನೆ ಮಾಡಿ ಜನರ ತೊಂದರೆ ತಪ್ಪಿಸುವುದಾಗಿ ಭರವಸೆಯಿತ್ತಿದ್ದರೂ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಅಂಗಡಿಯ ಲೈಸೆನ್ಸ್ ದಾರರಾದ ಶ್ರೀ ಪುಟ್ಟಸ್ವಾಮಯ್ಯನವರು ಈ ಸಂಬಂಧವಾಗಿ ಹೈಕೋರ್ಟಿನ ತನಕ ವ್ಯಾಜ್ಯ ಮಾಡಿ, ಇದೇ ೩೦ನೇ ತಾ॥ ನಿಂದ ಅಂಗಡಿಯ ಸ್ಥಳಾಂತರ ಪಡೆಯುವುದಕ್ಕೆ ಅನುಜ್ಞೆ ಪಡೆದಿರುತ್ತಾರೆ. ಅವರೇ ಸಾರಾಯಿ ಅಂಗಡಿಯವರು ತಮ್ಮ ಅಂಗಡಿಯನ್ನು ಹತ್ತಿರದಲ್ಲೇ ಇರುವ ಬೇರೆ ಸ್ಥಳಕ್ಕೆ ಸಾಗಿಸಲು ಏರ್ಪಾಡು ಮಾಡಿದಂತೆ ಆಗಬೇಕು. ಇಂತಹ ಅಂಗಡಿಗಳಿಂದ ವ್ಯಭಿಚಾರ ವೃತ್ತಿಯೂ ಹೆಚ್ಚಿ ಸಂಸಾರಗಳ ಬಾಳ್ವೆಗೆ ತುಂಬಾ ಧಕ್ಕೆಯಾಗಿರುತ್ತದೆ—ಎಂಬುದಾಗಿ ಮೊಹಲ್ಲಾ ನಿವಾಸಿಗಳು ಕೋರಿರುತ್ತಾರೆ.

C. T. C.

Near ... Market, Mysore

[NEW BUILDINGS]

Classes open for the

Supplementary Examinations

... Sept 1953

★ ... S.S.L.C. ... English

★ INTER ... English

Kannada

PCM & CBZ

(H. ... Classes also likely)

★ S.S.L.C. — All Subjects

For Particulars

CITY TUTORIAL COLLEGE,

MYSORE

SRI GANESHA

TALKIES

From 25-6-53



SARADA VILAS

INTER TUTORIAL SECTION

CLASSES STARTED

From 20-6-1953

(7.30 A.M. to 9.30 A.M.)

Edited, Printed and Published by A.R. Nagarajan at Sadhvi Press, D. Subbiah Road, Mysore

The Central College Of Commerce,

Vanivilas Market Buildings

MYSORE

Admissions to D. Com Dip. in sten, Short-hand & Typewriting will be received on all working days Join immediately

ಪ್ರಭಾ ★ 26-6-53 ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಆರಂಭದಿಂದಿರುವ ದಂಪತಿಗಳು ... ವಾದ ಮತ್ತು ... ಕಥೆ ... ಮುಟ್ಟುವಂತಹ ಅರಬ್ ದೇಶದ ಅತ್ಯುತ್ತಮ ಚಿತ್ರ

(ಹಿಂದಿ ಆವೃತ್ತಿ)

ಮೂಕಿವಾರಿಸು (With English Sub titles)

ವಿಶೇಷ ಆಕರ್ಷಣೆ — 22-6-53 ರಿಂದ ಒಂದು ವಾರ ಮಾತ್ರ

1) ಲಂಡನ್ ನಗರದಲ್ಲಿ ಜರುಗಿದ ಎಲಿಜಬೆತ್ ರಾಣಿಯ ಕಿರೀಟಧಾರಣ ಮಹೋತ್ಸವ

2) ಹಿಮಾಲಯ ಪರ್ವತದ ಮೌಂಟ್ ಎವರೆಸ್ಟ್ ಶಿಖರದ ಆರೋಹಣ

ಬೆಳಗಿನ ಪ್ರದರ್ಶನ 26 6 53 ರಿಂದ ... ಮೂರು ದಿನಗಳು

ಸುರಯ್ಯ, ... ನಟಿಸಿರುವ—"ಬಡಿ ಬಹೆನ್"

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕ್, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ., ಇಂಡಿಯನ್ ಬ್ಯಾಂಕ್ ಎದುರು. ಶ್ರೀ ಮೈಸೂರು

ಫೋನ್ ನಂ. 792 ॥ ಶಂಕರ ಜಯತರಂ ॥ ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೫-೬-೧೯೫೩ [ಸಂಚಿಕೆ ೩೬೦

ಮದ್ರಾಸಿನಲ್ಲಿ ಅಕ್ಕಿ ಕಳ್ಳರ ಮೇಲೆ ಗುಂಡು

ಮುಖರ್ಜಿ ನಿಧನದ ಬಗ್ಗೆ ವಿಚಾರಣಾ ಸಮಿತಿಯಾಗಬೇಕು

ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೨೫

ನಿನ್ನೆ ಸಂಜೆ ರಾಜಧಾನಿಯ ಭಾರತೀಯ ಜನಸಂಘದ ಆಶ್ರಯದಲ್ಲಿ, ಪುರಭವನದ ಮೈದಾನದಲ್ಲಿ, ಭಾರತೀಯ ಜನಸಂಘದ ಅಧ್ಯಕ್ಷರೂ, ಲೋಕ ಸಭಾ ಸದಸ್ಯರೂ ಆದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಕಾಶ್ಮೀರದ ಜೈಲಿನಲ್ಲಿ ಆಕಸ್ಮಿಕವಾಗಿ ನಿಧನರಾದ ಬಗ್ಗೆ ಸಾರ್ವಜನಿಕ ಸಭೆಯು ಶ್ರೀ ಲಕ್ಷ್ಮೀನಾರಣಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಂ ಕೃಷ್ಣಪ್ಪ, ಪೌರಸಭಾ ಸದಸ್ಯ ಡಾ॥ ಬಿ ಜಿ ದಾಸ್‌ರವರುಗಳು ಭಾಷಣ ಮಾಡಿ, ಡಾ॥ಮುಖರ್ಜಿಯವರಂತಹ ಶ್ರೇಷ್ಠ ರಾಜಕಾರಣಿಗಳ ಬಗ್ಗೆ ಕಾಶ್ಮೀರದ ಹಾಗೂ ಕೇಂದ್ರ ಸರ್ಕಾರದವರು ತೋರಿದ ಔದಾಸೀನ್ಯ ಮನೋವೃತ್ತಿಯನ್ನು ಖಂಡಿಸಿದರು.

ಶ್ರೀನಗರದ ಸೆರೆಮನೆಯಲ್ಲಿ ಡಾ॥ ಮುಖರ್ಜಿಯವರು ಮಡಿದ ಬಗ್ಗೆ ಸಾರ್ವಜನಿಕರಿಗೆ ಸಂಪೂರ್ಣ ವಿವರಣೆ ಕೊಡಲು ಸರ್ವ ಸಮ್ಮತ ಸಾರ್ವತ್ರಿಕ ವಿಚಾರಣಾ ಸಮಿತಿಯನ್ನು ಕಾಶ್ಮೀರ ಸರ್ಕಾರವು ರಚಿಸಬೇಕೆಂದು ಆ ಸರ್ಕಾರವನ್ನು ಒತ್ತಾಯ ಮಾಡುವ ಮತ್ತು ಡಾ॥ ಮುಖರ್ಜಿಯವರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯಗಳನ್ನು ಸಭೆಯು ಮೌನದಿಂದೆದ್ದು ನಿಂತು ಅಂಗೀಕರಿಸಿತು.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು ೫೯-೨೭ ಅಡಿಗಳಷ್ಟಿದ್ದಿತು.

ಟೇನ್‌ಸಿಂಗರಿಗೆ ೬ ತೊಲ ಬಂಗಾರದ ಪದಕ

ಎವರೆಸ್ಟ್ ಶಿಖರಾರೋಹಿ ಟೇನ್‌ಸಿಂಗರಿಗೆ ರಾಷ್ಟ್ರಾಧ್ಯಕ್ಷರು ೬ ತೊಲ ತೂಕ ಬಂಗಾರದ ಪದಕವನ್ನು ಕೊಡಲಿರುವರು. ಅದರಲ್ಲಿ ಎವರೆಸ್ಟ್ ಶಿಖರದ ಚಿತ್ರವು ಒಂದು ಕಡೆ, ಅಶೋಕ ಚಕ್ರವು ಮತ್ತೊಂದು ಕಡೆ ಛಾಪಿಸಲ್ಪಟ್ಟಿರುವುದು. ಹಿಲಾರಿ ಮತ್ತು ಹಂಟರಿಗೂ ಇದೇ ಬಗೆಯ ಪದಕಗಳನ್ನೀಯಲಾಗುವುದು.

೩ನೇ ಸಂಬಂಧದ ವರನನ್ನು ಒಲ್ಲದ ತರುಣಿಯ ಆತ್ಮಹತ್ಯೆ

ಹಾಸನದ ನಿವೃತ್ತ ಸರ್ಕಾರಿ ಉದ್ಯೋಗಿಯೊಬ್ಬರ ಮಗಳು ನಾಗಮ್ಮ ಎಂಬಾಕೆಯು ಕಳೆದ ೨೨ ನೇ ತಾ॥ ವಿವಾಹವಾಗಬೇಕಾಗಿದ್ದು, ಅದಕ್ಕೆ ಹಿಂದಿನ ರಾತ್ರಿ ಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ.ದಾಗಿ ವರದಿಯಾಗಿದೆ. ಮೂರನೇ ಸಂಬಂಧದ ವರನನ್ನು ಆಕೆಗೆ ಗೊತ್ತು ಮಾಡಲಾಗಿದ್ದಿತೆಂದೂ, ಯುವತಿಯು ಇದನ್ನೊಪ್ಪಿರಲಿಲ್ಲವೆಂದೂ, ವಿವಾಹದ ಹಿಂದಿನ ರಾತ್ರಿಯವರೆಗೂ ಮನೆಯಲ್ಲಿಯೇ ಇದ್ದು ಅನಂತರ ಆತ್ಮಹತ್ಯೆ ಮಾಡಿಕೊಂಡುದಾಗಿಯೂ ಹೇಳಲಾಗಿದೆ.

ಅಕ್ಕಿ ಸಾಗಿಸಲು ಅನುಮತಿಗೆ ಅವಕಾಶ

ಮಧ್ಯಪ್ರದೇಶ ಮತ್ತು ಒರಿಸ್ಸಾಗಳಿಂದ ಅಕ್ಕಿಯ ಕುಚ್ಚನ್ನು ವರ್ತಕರು ತರಿಸಿ,ಸಂಸ್ಥಾನದಲ್ಲಿ ಮಾರಾಟ ಮಾಡಬಹುದೆಂದು ಸರ್ಕಾರ ಪ್ರಕಟಣೆಯೊಂದು ತಿಳಿಸುತ್ತದೆ.

ವಿಶ್ವ ವಿದ್ಯಾಲಯದ ಪ್ರವೇಶಕ್ಕೆ ಮಿತಿ ಬೇಕು

ನಿರುದ್ಯೋಗ ಸಮಸ್ಯೆ ಬಗ್ಗೆ ಕೆ. ಸಿ. ರೆಡ್ಡಿಯವರ ಅಭಿಪ್ರಾಯ

ಬೆಂಗಳೂರು ೨೫

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿರುದ್ಯೋಗ ನಿವಾರಣಾ ಸಮಸ್ಯೆಯನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಶೀಘ್ರದಲ್ಲೇ ಈ ಬಗ್ಗೆ ಸರ್ಕಾರದ ರೀತಿ ನೀತಿಯನ್ನು ಬಹಿರಂಗ ಪಡಿಸಲಾಗುವುದೆಂದೂ ತಿಳಿಸಿದರು. ವಿಶ್ವ ವಿದ್ಯಾಲಯಗಳ ತರಗತಿಗಳಿಗೆ ಪ್ರವೇಶವನ್ನು ಮಿತಿಗೊಳಿಸಿ ಇತರ ವಿಧಾನದ ವಿದ್ಯಾಭ್ಯಾಸಗಳನ್ನೇರ್ಪಡಿಸುವುದು ಉತ್ತಮವೆಂದು ಅವರು ಅಭಿಪ್ರಾಯ ಪಟ್ಟರು.

ಗುರುಸ್ವಾಮಿಯವರ ರಿಟ್ ಅರ್ಜಿ ಪರಿಶೀಲನೆ

ಬೆಂಗಳೂರು ನಗರ, ತಾಲ್ಲೂಕು ಮತ್ತು ಸಿವಿಲ್ ಪ್ರದೇಶಗಳಲ್ಲಿ ಹೆಂಡದ ಮಾರಾಟದ ಕಂಟ್ರಾಕ್ಟಿಗೆ ಸಂಬಂಧಿಸಿದ ಹರಾಜಿನಲ್ಲಿ ಬಿದ್ದ ತಮ್ಮ ಹೆಸರಿಗೆ ಇಂತು, ಅದನ್ನು ಸರ್ಕಾರದವರು ಮಂಜೂರು ಮಾಡದಿರುವ ಸಂದರ್ಭದಲ್ಲಿ ಶ್ರೀ ಕೆ. ಎನ್ ಗುರುಸ್ವಾಮಿಯವರು ಹೈಕೋರ್ಟಿನಲ್ಲಿ ಸಲ್ಲಿಸಿರುವ ಮ್ಯಾಂಡಮಸ್ ಅರ್ಜಿಯನ್ನು ನ್ಯಾಯಾಧೀಶರುಗಳಾದ ಶ್ರೀಗಳು ಆರ್ ವೆಂಕಟರಾಮಯ್ಯ ಮತ್ತು ಬಿ ವಾಸುದೇವಮೂರ್ತಿಯವರು ಪರಿಶೀಲನೆಗೆ ತೆಗೆದುಕೊಂಡು ಮೈಸೂರು ಸರ್ಕಾರ, ಅಬ್ಕಾರಿ ಇಲಾಖಾ ಕಮಿಷನರ್, ಬೆಂಗಳೂರು ಜಿಲ್ಲಾಧಿಕಾರಿ ಮತ್ತು ಅಬ್ಕಾರಿ ಕಂಟ್ರಾಕ್ಟರ್ ಶ್ರೀ ತಿಮ್ಮಪ್ಪ ಇವರುಗಳಿಗೆ ನೋಟೀಸು ಕೊಡುವಂತೆ ಆಜ್ಞೆ ಮಾಡಿರುತ್ತಾರೆ.

ಒಪ್ಪಂದಕ್ಕೆ ರುಜು ಹಾಕಿದರೆ ದ. ಕೊರಿಯಾ ಸೈನ್ಯ ವಾಪಸು

ಕಮ್ಯೂನಿಸ್ಟರೊಡನೆ ಶಾಂತಿಯು ಪೂರ್ವಭಾವಿಯಾದ ಯುದ್ಧ ವಿರಾಮ ಒಪ್ಪಂದಕ್ಕೆ ವಿಶ್ವಸಂಸ್ಥೆಯು ರುಜು ಹಾಕಿದರೆ, ಸಂಸ್ಥೆ ಕೈಕೆಳಗಿರುವ ದಕ್ಷಿಣ ಕೊರಿಯಾ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳುವುದಾಗಿ ತಿಳಿಸಿ ಅಧ್ಯಕ್ಷ ಸಿಂಗ್ಮನ್ ರೀಯವರು ವಿಶ್ವಸಂಸ್ಥೆ ಪ್ರಧಾನ ಸೇನಾನಾಯಕರಿಗೆ ಪತ್ರ ಬರೆದಿರುತ್ತಾರೆ.

ಅಭಾವ ಪರಿಹಾರಕ್ಕೆ ಮತ್ತೆ ೫೦ ಲಕ್ಷ ರೂ. ಸಾಲ

ಕೇಂದ್ರಕ್ಕೆ ಸಂಸ್ಥಾನದ ಸಮಿತಿಯ ಕೋರಿಕೆ

ಬೆಂಗಳೂರು ೨೫

ಶ್ರೀ ಎಸ್ ವಿ ರಾಮಮೂರ್ತಿಯವರು ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಟ್ಟ ವರದಿಯಲ್ಲಿರುವ ಶಿಫಾರಸುಗಳೆಲ್ಲವನ್ನೂ ಮಂಜೂರು ಮಾಡುವಂತೆ ಸಂಸ್ಥಾನದ ಅಭಾವ ಪರಿಹಾರ ಸಮಿತಿಯು ಕೇಂದ್ರ ಸರ್ಕಾರವನ್ನು ನೆನ್ನೆ ಪ್ರಾರ್ಥಿಸಿತು. ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪರಿಹಾರ ನೀಡುವ ಬಗ್ಗೆ ಇತ್ತೀಚೆಗೆ ಮಂಜೂರು ಮಾಡಿದ ೫೦ ಲಕ್ಷ ರೂ. ಸಾಲದ ಜೊತೆಗೆ ಇನ್ನೂ ೫೦ ಲಕ್ಷ ರೂ ಸಾಲವನ್ನು ಕೊಡುವಂತೆ ಕೇಂದ್ರದವರನ್ನು ಕೋರಲಾಯಿತು.

ಡಾ॥ ಮುಖರ್ಜಿಯವರ ಅಂತ್ಯಕ್ರಿಯೆ

ಡಾ॥ ಶ್ಯಾಮಪ್ರಸಾದಮುಖರ್ಜಿಯವರ ಕಳೇಬರವನ್ನು ನೆನ್ನೆ ಕಲ್ಕತ್ತಾದಲ್ಲಿ ಚಿತೆಯ ಮೇಲಿಟ್ಟು ಅಗ್ನಿ ಸ್ಪರ್ಶ ಮಾಡಲಾಯಿತು. ೫ ಲಕ್ಷ ಜನರು ಸ್ಮಶಾನದಲ್ಲಿದ್ದು ಅಂತ್ಯದರ್ಶನ ಮಾಡಿದರು. ರಸ್ತೆಗಳಲ್ಲಿ ಬಸ್ಸು ಸಂಚಾರ ನಿಂತು ಹೋಗಿತ್ತು. ಶೋಕ ಸಂತಪ್ತರಾದ ಜನರು ಒಂದು ಕಡೆ ರೈಲು ಕಂಬಿ ಮೇಲೆ ಕುಳಿತುದರಿಂದ ಸ್ಥಳೀಯ ರೈಲು ಓಡಾಟಕ್ಕೆ ಅಡ್ಡಿಯಾಯಿತು.

ಈ ವರ್ಷದಲ್ಲೇ ಕಾಶ್ಮೀರದ ಸಮಸ್ಯೆ ಪರಿಹಾರ ?

ಲಂಡನ್ನಿಗೆ ತೆರಳಿದ್ದ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ನೆನ್ನೆ ಕರಾಚಿಗೆ ವಾಪಸು ಬಂದರು. ಈ ವರ್ಷದೊಳಗೆ ಕಾಶ್ಮೀರದ ಸಮಸ್ಯೆಯು ಇತ್ಯರ್ಥವಾಗುವುದೆಂದು ತಾವು ಆಶಿಸುವುದಾಗಿಯೂ, ಕಾಶ್ಮೀರದ ವಿಭಜನೆಯ ವಿಷಯವನ್ನು ನೆಹರೂರವರೊಡನೆ ಪ್ರಸ್ತಾಪಿಸಲಿಲ್ಲವೆಂದೂ, ಇನ್ನೊಂದು ತಿಂಗಳೊಳಗೆ ತಾವು ಕರಾಚಿಯಲ್ಲಿ ಪಂಡಿತ ನೆಹರೂರವರನ್ನು ಭೇಟಿ ಮಾಡುವ ಸಂಭವವಿರುವುದೆಂದೂ ಅವರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ಅಕ್ಕಿ ಲೂಟಿಗೆ ಪ್ರಯತ್ನಿಸಿದವನ ಮೇಲೆ ಗುಂಡು

ಮದ್ರಾಸಿನ ಒಂದು ರೈಲ್ವೆ ಯಾರ್ಡಿನಲ್ಲಿ ನೆನ್ನೆ ವ್ಯಾಗನ್ನಿನಿಂದ ಅಕ್ಕಿ ಮೂಟೆಗಳನ್ನು ಕಳುವು ಮಾಡಲೆತ್ನಿಸಿದವನ ಮೇಲೆ ಅಲ್ಲಿದ್ದ ಪೋಲೀಸು ಕಾವಲುಗಾರನು ಗುಂಡು ಹಾರಿಸಿ ಕೊಂದನೆಂದು ವರದಿಯಾಗಿದೆ. ೫೦ ಜನರು ಲೂಟಿ ಮಾಡಲು ಪ್ರಯತ್ನಿಸಿದರೆಂದೂ, ಅಲ್ಲಿದ್ದ ಕೆಲಸದವರನ್ನು ಅವರು ಹೊಡೆದರೆಂದೂ ವರದಿಯಾಗಿದೆ. ಹಲವರನ್ನು ದಸ್ತಗಿರಿ ಮಾಡಲಾಗಿದೆ.

ಜುಲೈ ೧ ರಿಂದ ಮದ್ರಾಸಿನಲ್ಲಿ ಟ್ರಾಂ ಓಡಾಟದ ಆರಂಭ

ಕಳೆದ ಏಪ್ರಿಲ್ ೧೦ ನೇ ತಾ॥ ನಿಂದ ಮದರಾಸಿನಲ್ಲಿ ಟ್ರಾಂ ಓಡಾಟ ನಿಂತುಹೋಗಿರುವುದಷ್ಟೆ, ಈ ಬಗ್ಗೆ ಪಂಚಾಯಿತಿ ಸಮಿತಿಯವರಿಗೂ, ಕಾರ್ಮಿಕರ ಮತ್ತು ಟ್ರಾಂ ಕಂಪನಿ ಆಡಳಿತ ವರ್ಗದ ಪ್ರತಿನಿಧಿಗಳಿಗೂ ನಡೆದ ಸಂಧಾನವು ಫಲಕಾರಿಯಾಗುವ ಸಂಭವವಿದ್ದು, ಬರುವ ತಿಂಗಳು ೧ ನೇ ತಾ॥ ನಿಂದ ಟ್ರಾಂ ಸರ್ವಿಸ್ಸು ಮತ್ತೆ ಆರಂಭವಾಗುವುದೆಂಬ ಭರವಸೆ ಇರುವುದಾಗಿ ಹೇಳಲಾಗುತ್ತಿದೆ.

ಮುಂದಿನ ವರ್ಷ ಆಹಾರ ಸ್ವಯಂಪರಿಪೂರ್ಣತೆ

ಕೇಂದ್ರ ಆಹಾರ ಖಾತೆ ಮಂತ್ರಿ ಶ್ರೀ ಎಂ ಎ ಕೃಷ್ಣಪ್ಪನವರು ಭದ್ರಾವತಿಯಲ್ಲಿ ಮಾತನಾಡಿ, ಮದ್ರಾಸು ಮತ್ತು ಮೈಸೂರು ಸಂಸ್ಥಾನಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲೂ ಭತ್ತದ ಬೆಳೆ ಚೆನ್ನಾಗಿರುವುದೆಂದೂ, ಮುಂದಿನ ವರ್ಷ ಹೊರಗಿನಿಂದ ಆಹಾರವನ್ನು ತರಿಸುವ ಪ್ರಮೇಯ ತಪ್ಪಬಹುದೆಂದೂ ತಿಳಿಸಿರುತ್ತಾರೆ.

ರಷ್ಯದಲ್ಲಿ ವಿದೇಶೀಯರ ಪ್ರವಾಸಕ್ಕೆ ಅವಕಾಶ

ರಷ್ಯದ ನಾನಾ ಭಾಗಗಳಿಗೆ ವಿದೇಶೀ ಪ್ರವಾಸಿಗರು ಹೋಗಕೂಡದೆಂದು ಇದ್ದ ಪ್ರತಿಬಂಧಗಳನ್ನು ಅಲ್ಲಿನ ಸರ್ಕಾರದವರು ಈಗ ಸಡಿಲಗೊಳಿಸಿರುತ್ತಾರೆ.

ದೆಹಲಿ ಜಾಡಮಾಲಿಗಳ ಮೇಲೆ ಲಾಠಿ ಪ್ರಹಾರ

ನವದೆಹಲಿಯ ಪೌರಸಭಾ ಕಚೇರಿಗೆ ನುಗ್ಗಲೆತ್ನಿಸಿದ ಸಾವಿರ ಜಾಡಮಾಲಿಗಳ ಮೇಲೆ ನೆನ್ನೆ ಪೋಲೀಸರು ಲಾಠಿ ಪ್ರಹಾರ ಮಾಡಿ ಚದುರಿಸಿದೆಂದು ವರದಿಯಾಗಿದೆ. ೬ ಜನರಿಗೆ ಪೆಟ್ಟು ಬಿದ್ದಿತೆಂದೂ ಆ ಪೈಕಿ ೪ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ಕಾರ್ಮಿಕರಿಗೆ ಹೊಸ ನಿವಾಸ ಸ್ಥಾನಗಳನ್ನು ಕಲ್ಪಿಸುವವರೆಗೆ ಅವರ ಗುಡಿಸಲುಗಳನ್ನು ನಾಶ ಪಡಿಸಕೂಡದೆಂಬುದು ಅವರ ಮುಖ್ಯ ಬೇಡಿಕೆಯಾಗಿದ್ದಿತು.

ಮುಖರ್ಜಿ ಮರಣ ವಾರ್ತೆ ಕೇಳಿ ತಾಯಿಗೆ ಮೂರ್ಛೆ

ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನದ ವಾರ್ತೆಯನ್ನು ೮೦ ವರ್ಷದ ಅವರ ತಾಯಿಗೆ ಹಿರಿಯ ಮಗನು ತಿಳಿಸಿದಾಗ ಅವರಿಗೆ ಮೊದಲು ಅರ್ಥವಾಗಲಿಲ್ಲ. ಮಗನ ಬಿಡುಗಡೆಯಾಯಿತೇ ಎಂದು ಕೇಳಿದರೆಂದೂ, ನಂತರ ನಿಜಸ್ಥಿತಿ ತಿಳಿದಮೇಲೆ ಅವರು ಮೂರ್ಛೆ ಹೋದರೆಂದೂ ವರದಿಯಾಗಿದೆ.

ಟೇನ್‌ಸಿಂಗರಿಗೆ ೧೦ ಸಾವಿರ ರೂ. ಬಹುಮಾನ

ಎವರೆಸ್ಟ್ ಶಿಖರ ಏರಿದ ಟೇನ್‌ಸಿಂಗರಿಗೆ ನೇಪಾಳ ಸರ್ಕಾರದವರು ೧೦೦೦೦ (ಅರ್ಧನ) ರೂಪಾಯಿಗಳ ಬಹುಮಾನವನ್ನು ಕೊಟ್ಟಿರುತ್ತಾರೆ ಮತ್ತೊಬ್ಬ ವಿಜಯಿ ಹಿಲರಿಯವರಿಗೂ, ಪಡೆಯ ಮುಖಂಡ ಕರ್ನಲ್ ಹಂಟ್‌ರವರಿಗೂ ಚಿತ್ರ ಖಚಿತವಾದ [illegible] ಗಳನ್ನು [illegible] ನೇಪಾಳದ [illegible] ಬಹುಮಾನ ಕೊಟ್ಟರು

ವಿವಾಹ ಮಹೋತ್ಸವದಲ್ಲಿ ಕಾಣಿಕೆ

ರಾಜಧಾನಿ [illegible] [illegible] ನಗರದ [illegible] [illegible]

[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

CITY TUTORIAL COLLEGE,

[illegible] Mysore

Special Coaching Classes

FOR GIRLS ONLY

★ JUNIORS S. L. C. M. S. [illegible] girls [illegible] trained in 2 YEARS for [illegible] S. S. L. C. [illegible]

★ SENIORS S. L. C. Girls [illegible] studied up to [illegible] [illegible] for the S. S. L. C. Examination of 195[illegible]

[illegible] Per cent Pass in March 53

Admissions Close On 1-7-53

ಗುಂಡಿ ತೋಡುವಾಗ ಉಜ್ವಲ ಪ್ರಕಾಶ

ಚನ್ನಗಿರಿ ತಾಲ್ಲೂಕು ರಾಜಗೊಂಡನಹಳ್ಳಿ ಗ್ರಾಮದ ಪಟೇಲ್ ಶ್ರೀ ಶಿವಪ್ಪನವರು ಕಳೆದ ೧೭ ನೇ ತಾ|| ರಾತ್ರಿ ತಮ್ಮ ಮನೆ ಮುಂದೆ ಗುಂಡಿಯನ್ನು ತೋಡಿ [illegible] ಮಣ್ಣು ರಾಶಿಯಲ್ಲಿ ಉಜ್ವಲ ಪ್ರಕಾಶವುಳ್ಳ ಒಂದು ವಿಧವಾದ ವಸ್ತು ಕಾಣಿಸಿಕೊಂಡಿತೆಂದು [illegible] [illegible] ಕ್ರಮೇಣ [illegible] [illegible] ಆಗಲವಾಯಿತೆಂದೂ, [illegible] ಮಾಯವಾಯಿತೆಂದೂ ಗೊತ್ತಾಗಿದೆ ಅನಂತರ ದ್ರವವನ್ನು [illegible] [illegible]

ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿ ತೃಪ್ತಿಕರ

ಮೈಸೂರು ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿ ತೃಪ್ತಿಕರವಾಗಿದೆಯೆಂ[illegible] ಸಾವಿರ ಟನ್ [illegible] ಟನ್ ಗೋಧಿ [illegible] ಟನ್ ಇತರ ಧಾನ್ಯಗಳಿರುವುದಾಗಿ ಹೇಳಲಾಗಿದೆ ಹೈದರಾಬಾದಿನಿಂದ [illegible] ಸಾವಿರ ಟನ್ ಜೋಳ ಮತ್ತು [illegible] ಮೈಸೂರಿಗೆ ಬರುವುದಿದೆ

ವಿಶ್ವ ವಿದ್ಯಾಲಯಗಳ ಸೇನಾ ಗೋಷ್ಠಿಯವರಿಗೆ ಔತಣಕೂಟ

ನಗರದ ಪೌರ ಸಭೆಯವರು ನಾಳೆ [illegible] ಪುರಭವನದಲ್ಲಿ [illegible] ವಿಶ್ವ ವಿದ್ಯಾಲಯಗಳ ಸೇನಾ ಗೋಷ್ಠಿಯ [illegible] ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿರುತ್ತಾರೆ.

SARADA VILAS

INTER TUTORIAL SECTION

CLASSES STARTED

From 20-6-1953

(7-30 A. M. to 9-30 A. M.)

SRI GAYATHRI

TALKIES

GLORIOUS 2ND WEEK

From 25-6-53 Daily 3 Shows

M. G. M's

IVANHOE

Starring Robert Taylor

Elizabeth Taylor,

Joan Fontaine

Edited, Printed and Published by A. R. Nagarajan at Sadhvi Press, D. Subbaiah Road, Mysore

ವಿವಾಹ ಮಹೋತ್ಸವಗಳು

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಕಾಳಪ್ಪ ಸುಬ್ರಹ್ಮಣ್ಯರವರು ತಮ್ಮ ಕುಮಾರ ಚಿ|| ರಾ|| [illegible] ಎಸ್ ವಿಶ್ವೇಶ್ವರಯ್ಯನವರಿಗೆ ಹಲಸನಹಳ್ಳಿ ಶ್ರೀ ಕೃಷ್ಣಮೂರ್ತಿಯವರ ಮಗಳು ಸೌ|| ಇಂದಿರಾರವರನ್ನು ತಂದುಕೊಂಡು ಈ ದಿನ ಅರಸೀಕೆರೆಯಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರಿನ ಆಲ್ ಇಂಡಿಯಾ ರೇಡಿಯೋವಿನ ಸಂಗೀತ ಕಾರ್ಯಕ್ರಮ ವಿಭಾಗದ ಶ್ರೀ ಎ ಲಿಂಗಪ್ಪನವರು ತಮ್ಮ ಸೋದರ ಸೊಸೆ ಸೌ|| ನಾಗಲಕ್ಷ್ಮಮ್ಮನನ್ನು ಚಾಮರಾಜನಗರದ ಲೇ|| ಶ್ರೀ ಹೆಚ್ ಎಸ್ ಬೈರಯ್ಯನವರ ಮಗ ಶ್ರೀ ಸಿ ಬಿ ಸಿದ್ದಯ್ಯನವರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಹರಿಹರದ ಸರಾಫ್ ಆರ್ ಎಚ್ ಪುಟ್ಟಪ್ಪನವರ ಮಕ್ಕಳೂ, ಆಲ್ ಇಂಡಿಯಾ ರೇಡಿಯೋ ನೌಕರರೂ ಆದ ಶ್ರೀ ಆರ್ ರಾಜಪ್ಪ ಶೆಟ್ಟಿಯವರಿಗೆ ಶ್ರೀ ಸವಣೂರು ಈಶ್ವರಪ್ಪನವರ ಕುಮಾರಿ ಸೌ|| ಶಾರದಮ್ಮನನ್ನು ಕೊಟ್ಟು ನೆನ್ನೆ ಹುಬ್ಬಳ್ಳಿಯಲ್ಲಿ ವಿವಾಹವು ನಡೆಯಿತು

ರಾಜಧಾನಿಯ ಶಾರದಾ ವಿಲಾಸ ಹೈಸ್ಕೂಲಿನ ಸಹಾಯೋಪಾಧ್ಯಾಯರಾದ ಶ್ರೀ ಎಂ ಎನ್ ಲಕ್ಷ್ಮೀನರಸಿಂಹ ಶಾಸ್ತ್ರಿಯವರು ತಮ್ಮ ಕುಮಾರಿ ಸೌ|| ಸುಬ್ಬಲಕ್ಷ್ಮಿಯನ್ನು ಹೊಸೂರು ತಾಲ್ಲೂಕು ನರಸಾಪುರದ ಶ್ರೀ ನಂಜುಂಡಯ್ಯನವರ ಕುಮಾರ ಶ್ರೀ ಟಿ ಎನ್ ಪದ್ಮನಾಭನವರಿಗೆ ಕೊಟ್ಟು ಈ ದಿನ ವಿವಾಹವನ್ನು ಜರುಗಿಸಿದರು

ಹೊಸೂರಿನ ಸರ್ಕಾರಿ ಮಾಧ್ಯಮಿಕ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಆ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	
ಹೊಂಗೆಬೀಜ	[illegible]	
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ಉದ್ದು	[illegible]	[illegible]
ಅವರೆ	[illegible]	
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಗಿರಿಜಾ ಕಲ್ಯಾಣ ಮಹೋತ್ಸವ

ರಾಜಧಾನಿಯ ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿನಯನೇಶ್ವರಸ್ವಾಮಿಯವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವವು ಈ ತಿಂಗಳು ೨೯ನೇ ತಾ|| ನೆರವೇರುವುದು ಅದರ ಅಂಗವಾಗಿ ನಾಳೆಯಿಂದ ಬರುವ ತಿಂಗಳು ೬ನೇ ತಾ|| ವರೆಗೂ ವಿವಿಧ ಉತ್ಸವಗಳು ನೆರವೇರುವುವು

ಶಾಲೆಯ ಹೆಡ್‌ಮಾಸ್ಟರ್ ಶ್ರೀ ಸುಬ್ಬರಾಯರು ತಮ್ಮ ಕುಮಾರ ಶ್ರೀ ಬಿ ಎಸ್ ನಾರಾಯಣರವರಿಗೆ ಕೂಸುಬೂರ್ ಕಾಫಿ ಹೋಟೆಲ್ ಚೀಫ್ ಅಕೌಂಟೆಂಟ್ ಶ್ರೀ ಲಕ್ಷ್ಮೀನರಸಿಂಹಯ್ಯನವರ ಮಗಳು ಸೌ|| ವಿಜಯಲಕ್ಷ್ಮಿಯನ್ನು ತಂದುಕೊಂಡು ಈ ದಿನ ವಿವಾಹವನ್ನು ಮೈಸೂರಿನಲ್ಲಿ ನೆರವೇರಿಸಿದರು

ಶ್ರೀ ಸ್ವಚ್ಛಂದ ವೆಂಕಟ ನರಸಿಂಹಾಚಾರ್ಯರು ತಮ್ಮ ಮಗಳು ಸೌ|| ಪದ್ಮಾರವರನ್ನು ಕಲ್ಯಾಣಪುರದ ಶ್ರೀ ಶ್ರೀನಿವಾಸ ದೀಕ್ಷಿತಾಚಾರ್ಯರ ಮಗ ಶ್ರೀ ರಂಗಾಚಾರ್ಯರಿಗೆ ಕೊಟ್ಟು ಈ ದಿನ ಪಶ್ಚಿಮವಾಹಿನಿಯಲ್ಲಿ ವಿವಾಹವನ್ನು ಜರುಗಿಸಿದರು

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಸೂಚರಿಯಾದ ಸಾಮಾನುಗಳು ?

ಬಹುಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು

ಮೈಸೂರು ಉಕ್ಕಿನ ಸಾಮಾನುಗಳು

★ **ಗಾಡಿ ಪಟ್ಟಿ ಅಥವ ಪಳಿಗಳು** (Flats)

★ **ದುಂಡು ಮತ್ತು ಚದರ ಸಲಾಕಿಗಳು** (Rounds & Squares)

★ **ಕೋನ ಕಂಬಿಗಳು** (Angles)

★ **ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು** (Reinforcing Rods)

★ **ಮತ್ತು ಬೇಲು ಪಟ್ಟಿಗಳು** (Hoops)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

★

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

26-6-53 ನೇ ಶುಕ್ರವಾರದಿಂದ :: ಅನೋಘ ಪ್ರಾರಂಭ

ಕನ್ನಡ ಚಿತ್ರ

ಕಾಂಚನ

ಪ್ರತಿ ದಿನ ಮೂರು ಪ್ರದರ್ಶನಗಳು

[illegible] ಆರ್ ರಾಮಸ್ವಾಮಿ [illegible] ಎನ್ ದೊರೆರಾಜ್ ಮುಂತಾದವರು

ರೀ. ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೬-೬-೧೯೫೩ [ಸಂಚಿಕೆ ೨೬೧

ಜಮ್ಮು ಗುಂಪಿನ ಮೇಲೆ ಪೊಲೀಸರ ಗುಂಡು

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧಿವೇಶನ

ಮೈಸೂರು ೨೬

ಇಲ್ಲಿನ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ನಿನ ಅಧಿವೇಶನವು ನೆನ್ನೆ ಉಪಾಧ್ಯಕ್ಷ ಶ್ರೀ ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ೬೦೦ ಮಂದಿ ಪ್ರತಿನಿಧಿಗಳು ಆಗಮಿಸಿರುತ್ತಾರೆ. ಅಧಿವೇಶನವು ೩ ದಿನಗಳ ವರೆಗೆ ನಡೆಯುವುದು. ನಾಳೆ ಅಖಿಲ ಭಾರತ ರೈಲ್ವೆ ಸ್ಟೇಷನ್ ಮಾಸ್ಟರುಗಳ ಸಮ್ಮೇಳನವು ಸೇರುವುದು. ಈ ದಿನ ದೇಶದಲ್ಲಿರುವ ಎರಡು ರೈಲ್ವೆ ಸಂಘಗಳ ಐಕ್ಯದ ವಿಷಯವನ್ನು ಅಧಿವೇಶನವು ಚರ್ಚಿಸಲಿದೆ

ರೇಷನ್ ಕಾರ್ಡುಗಳಿಗೆ ಹೊಸ ಚೀಟಿಗಳು

ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಎಲ್ ನಂಗೇಗೌಡರು ಹೊರಡಿಸಿರುವ ಒಂದು ಪ್ರಕಟಣೆಯಂತೆ, ಹಾಲಿ ನಗರದಲ್ಲಿ ಚಾಲ್ತಿಯಲ್ಲಿರುವ ಖಾಯಂ ರೇಷನ್ ಕಾರ್ಡುಗಳಲ್ಲಿ ಧಾನ್ಯದ ಬಗ್ಗೆ ಗುರುತು ಹಾಕುವ ಸ್ಥಳವು ಇದೇ ತಿಂಗಳಿಗೆ ಅಖೈರಾಗುವುದರಿಂದ ಜುಲೈ ೧ ನೇ ತಾ|| ಆಗಾಯಿತು ಡಿಪೋಗಳಲ್ಲಿ ಹೊಸ ಚೀಟಿಗಳನ್ನು ಕೊಡಲಾಗುವುದೆಂದು ತಿಳಿದುಬಂದಿದೆ

ದೇವರನಾಮವನ್ನು ಉಚ್ಚರಿಸುತ್ತಾ ಮರಣ

ರಾಜಧಾನಿಯ ಕೃಷ್ಣರಾಜ ಪೊಲೀಸು ಠಾಣೆಯ ಹಿಂಭಾಗದಲ್ಲಿ ಕಳೆದ ೨೩ ನೇ ತಾ|| ರಾತ್ರಿ ಗೊರವಯ್ಯನ ವೇಷ ಹಾಕಿದ್ದ ಶ್ರೀ ಮಲ್ಲಯ್ಯ ಎಂಬವರು ಮಲ್ಲೇದೇವರನ್ನು ಪೂಜಿಸಿ ಧ್ಯಾನ ಮಾಡುತ್ತಿದ್ದಾಗ ಹಾಗೆಯೇ ಮರಣ ಹೊಂದಿದರೆಂದು ತಿಳಿದುಬಂದಿದೆ. ಪೂಜೆಗಾಗಿ ನಾನಾ ಭಾಗಗಳಿಂದ ಅವರು ಭಕ್ತರನ್ನು ಬರಮಾಡಿಕೊಂಡು ದೇವರ ಸೇವೆಗೈದಮೇಲೆ ತಂಬೂರಿಯನ್ನು ಹಿಡಿದು "ಯಮನ ಭಟರು ಎಳೆಯುವಾಗ ಶಿವನ ಧ್ಯಾನ ಮಾಡಿರಯ್ಯಾ" ಎಂದು ಹೇಳುತ್ತಿದ್ದಂತೆಯೇ ತಂಬೂರಿಯ ಮೇಲೆ ತಲೆಯನ್ನಿಟ್ಟು ನಿಧನ ಹೊಂದಿದರು

ಭಾರತ ಸೇವಕ ಸಮಾಜಕ್ಕೆ ಅಮೆರಿಕದಿಂದ ದಾನ

ಭಾರತ ಸೇವಕ ಸಮಾಜದವರು ಹಳ್ಳಿಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕಾಗಿ ಅಮೆರಿಕದ ಅಮ್‌ಸ್ಟೆರ್ ಕಮ್ಯೂನಿಟಿ ಚರ್ಚಿನ ಕಾರ್ಯದರ್ಶಿ ಪಾಟ್ರಿಷಿಯಾ ಬ್ಲೇಕರವರು ೧೪,೫೦,೦೦೦ರೂ ಗಳನ್ನು ಸಮಾಜದ ಕಾರ್ಯದರ್ಶಿಯವರಿಗೆ ಕಳುಹಿಸಿರುತ್ತಾರೆ

ಹಂಟರಿಗೆ ಬ್ರಿಟಿಷ್ ನಾಟಕ ಮಂದಿರದ ಆಹ್ವಾನ

ಬ್ರಿಟನ್ನಿನ ನಾಟಕ ಮಂದಿರಗಳಿಗೆ ಎವರೆಸ್ಟ್ ಶಿಖರಾರೋಹಿ ತಂಡದೊಡನೆ ಬರುವಂತೆ ಆಹ್ವಾನಿಸಿ, ತಂಡದ ಮುಖಂಡರಾದ ಕರ್ನಲ್ ಹಂಟರಿಗೆ ಮ್ಯಾಂಚೆಸ್ಟರಿನ ನಾಟಕ ಮಂದಿರಗಳ ಪ್ರತಿನಿಧಿ ಸಂಸ್ಥೆಯು ಆಹ್ವಾನವಿತ್ತು, ಅವರು ತಂಡವಿಯೊಡನೆ ಕಾಂಟ್ರಾಕ್ಟ್ ಮಾಡಿಕೊಳ್ಳಬೇಕೆಂದು ಸೂಚಿಸುತ್ತದೆ

ಜಮ್ಮು ಗುಂಪಿನ ಮೇಲೆ ಪೊಲೀಸರ ಗುಂಡು

ಜಿಲ್ಲಾಧಿಕಾರಿಗಳ ಮನೆಗೆ ಮುತ್ತಿಗೆ

ಜಮ್ಮುವಿನಲ್ಲಿ ನೆನ್ನೆ ಉದ್ರಿಕ್ತ ಗುಂಪೊಂದು ಅಲ್ಲಿನ ಜಿಲ್ಲಾಧಿಕಾರಿಗಳ ಮನೆಗೆ ನುಗ್ಗಿ ಕಿಟಕಿ ಗಾಜುಗಳನ್ನು ಒಡೆದು, ಸಿವಿಲ್ ಸರಬರಾಜು ಮತ್ತು ವಿದ್ಯುಚ್ಛಕ್ತಿ ಇಂಜನಿಯರರ ಕಛೇರಿ ಮೇಲೆ ಧಾಳಿ ನಡೆಸಿ ಹಲವು ದಾಖಲೆಗಳನ್ನು ಸುಟ್ಟುಹಾಕಿದ ಸಂದರ್ಭದಲ್ಲಿ ಪೊಲೀಸರು ೩ ರೌಂಡ ಗುಂಡು ಹಾರಿಸಿ ಅನೇಕ ಬಾರಿ ಲಾಠಿ ಪ್ರಯೋಗ ಮಾಡಿ ಗುಂಪನ್ನು ಚದರಿಸಿದರೆಂದು ವರದಿಯಾಗಿದೆ. ಒಬ್ಬ ಸಿ ಐ ಡಿ ಅಧಿಕಾರಿ ಮತ್ತು ಅನೇಕ ಪೊಲೀಸರಿಗೆ ಕಲ್ಲೇಟಿನ ಗಾಯಗಳಾಗಿವೆ. ಡಾ|| ಮುಖರ್ಜಿಯವರ ನಿಧನದ ಬಗ್ಗೆ ಗುಂಪು ಸಂತಾಪ ಸೂಚಿಸುವುದಕ್ಕಾಗಿ ನೆನ್ನೆ ನಗರದ ಬೀದಿಗಳಲ್ಲಿ ಸಂಚರಿಸಿದಾಗ ಮೇಲ್ಕಂಡ ಘಟನೆಯು ಸಂಭವಿಸಿತು. ೭ ಜನರ ದಸ್ತಗಿರಿಯಾಗಿದೆ. ಗುಂಪಿನವರು ಉಪಾಧ್ಯಾಯಿನಿಯೊಬ್ಬರ ಮನೆಗೆ ನುಗ್ಗಿ ಕಿಟಕಿಗಳನ್ನು ಮುರಿದರು. ಇದಕ್ಕೆ ಮುಂಚೆ ಅಲ್ಲಿನ ಸರ್ಕಾರಿ ಕಲಾ ವಸ್ತು ಸಂಗ್ರಹಾಲಯಕ್ಕೆ ವಿದ್ಯಾರ್ಥಿಗಳ ತಂಡವವರು ಮುತ್ತಿಗೆ ಹಾಕಿ ಕಲಾ ವಸ್ತುಗಳನ್ನೆಲ್ಲಾ ನಾಶಪಡಿಸಿದರೆಂದು ವರದಿಯಾಗಿದೆ. ಕಿಟಕಿಗಳ ಗಾಜುಗಳನ್ನು ಪುಡಿಪುಡಿ ಮಾಡಲಾಯಿತು

ರೈಲು ಕೊರಕಲಿಗೆ ಬಿದ್ದು ೩೫ ಜನರ ಮರಣ

ಇಂಡೊಚೀನಾದಲ್ಲಿ ವೀಟ್ ಮಿನ್ ದಂಗೆಕೋರರು ೬ ಮದ್ದಿನ ಕಡ್ಡಿ ಸಣ್ಣ ಸೇತುವೆಯನ್ನು ಸಿಡಿಸಿದುದರ ಪರಿಣಾಮವಾಗಿ ರೈಲು ಅದರ ಮೇಲೆ ಹರಿದಾಗ ಅದು ೫೦ ಅಡಿ ಆಳದ ಕೊರಕಲಿಗೆ ಬಿದ್ದಿತೆಂದೂ, ೩೫ ಜನರು ಮಡಿದು ೨೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ. ೨ ಇಂಜನ್ನುಗಳು ಮತ್ತು ೧೫ ಗಾಡಿಗಳು ಕೊರಕಲಿನಲ್ಲಿ ಬಿದ್ದವು

ಕನ್ನಂಬಾಡಿ ನೀರಿನ ಮಟ್ಟ ೨ ಅಡಿ ಕಡಿಮೆ

ಕೃಷ್ಣರಾಜಸಾಗರದಲ್ಲಿ ಈ ದಿನ ೧೨ ಗಂಟೆಗೆ ನೀರಿನ ಮಟ್ಟವು ೨.೨ ಅಡಿಯಷ್ಟು ಕಡಿಮೆಯಾಗಿ ೫೭ ಅಡಿಗೆ ಇಳಿಯಿತು.

ರೀಯರವರಿಗೆ ಅಮೆರಿಕಾ ಬ್ರಿಟನ್‌ಗಳ ಅಂತ್ಯ ಎಚ್ಚರಿಕೆ

ದಕ್ಷಿಣ ಕೊರಿಯಾ ಅಧ್ಯಕ್ಷರು ತಮ್ಮ ಪ್ರತಿಕೂಲ ನೀತಿಯನ್ನು ಬಿಡದಿದ್ದರೆ, ಬ್ರಿಟನ್ ಮತ್ತು ಇತರ ರಾಷ್ಟ್ರಗಳು ಅವರಿಗೆ ಅಂತ್ಯ ಎಚ್ಚರಿಕೆಯನ್ನು ಕೊಡಲಿರುವುವೆಂದು ವರದಿಯಾಗಿದೆ

ಬಳ್ಳಾರಿ ಆಂಧ್ರನಾಯಕರಿಗೆ ನೇಕ್ ಚಾಲ್ ನೋಟೀಸು

ಬಳ್ಳಾರಿಯಲ್ಲಿರುವ ೮ ಮಂದಿ ಆಂಧ್ರ ನಾಯಕರ ಮೇಲೆ ಒಳ್ಳೆಯ ನಡತೆಗಾಗಿ ಜಾಮೀನಿನ ನೋಟೀಸನ್ನು ಜಾರಿ ಮಾಡಲಾಗಿದೆ. ಇವರೆಲ್ಲರೂ ಅಲ್ಲಿನ ಕೋರ್ಟಿನ ಮುಂದೆ ೩೦ನೇ ತಾ|| ಹಾಜರಾಗಬೇಕೆಂದು ಸೂಚಿಸಲಾಗಿದೆ. ಬಳ್ಳಾರಿಯು ಮೈಸೂರಿನ ವಿಶೇಷಾಧಿಕಾರಿಗಳಾಗಿರುವ ಶ್ರೀ ಕೆಂಗಿರಿರಾಯರು ಅಲ್ಲಿಗೆ ಹೋಗಿದ್ದಾಗ ಪ್ರದರ್ಶನ ನಡೆದ ಸಂಬಂಧವಾಗಿ ಈ ನೋಟೀಸನ್ನು ಕೊಡಲಾಗಿರುವುದು

ತಿರುಪತಿ ಗುಡಿ ಗೋಪುರಕ್ಕೆ ಚಿನ್ನದ ಮುಲಾಮು

ತಿರುಪತಿ ದೇವಸ್ಥಾನದ ದಿವ್ಯ ಆನಂದ ನಿಲಯ ವಿಮಾನಕ್ಕೆ ಹಲವು ಶತಮಾನಗಳ ಹಿಂದೆ ಹಾಕಲಾಗಿದ್ದ ಚಿನ್ನದ ಮುಲಾಮು ಅಳಿಸಿಹೋಗಿರುವುದರಿಂದ ಈಗ ಪುನಃ ಅದನ್ನು ಹಾಕಿಸಲು ದೇವಾಲಯದ ಧರ್ಮದರ್ಶಿಗಳು ನಿರ್ಧರಿಸಿರುತ್ತಾರೆ. ಇದಕ್ಕೆ ೧೨ ಲಕ್ಷ ರೂ. ವೆಚ್ಚವಾಗುವುದೆಂದು ಹೇಳಲಾಗಿದೆ. ಈ ಕೆಲಸಕ್ಕಾಗಿ ಭಕ್ತರು ಚಿನ್ನವನ್ನು ದಾನಮಾಡುವಂತೆ ಕೋರಲಾಗಿದೆ

ಸಂಸ್ಥಾನದ ಶಾಸನಗಳ ಪುನರ್ವಿಮರ್ಶೆ ಅಧಿಕಾರಿ

ಮೈಸೂರು ಸಂಸ್ಥಾನದ ಶಾಸನಗಳ ಪುನರ್ವಿಮರ್ಶೆ ಸಂಬಂಧದಲ್ಲಿ, ನ್ಯಾಯಾಂಗ ಕಾರ್ಯದರ್ಶಿಯಾಗಿರುವ ಶ್ರೀ ಎಂ ಸದಾಶಿವಯ್ಯನವರನ್ನು ವಿಶೇಷ ಅಧಿಕಾರಿಯಾಗಿ ನೇಮಿಸಲಾಗಿದೆ. ಬೆಂಗಳೂರಿನ ಎರಡನೇ ಅಡಿಷನಲ್ ಜಡ್ಜಾದ ಶ್ರೀ ಸಿ ವಿ ಚನ್ನಬಸಪ್ಪನವರನ್ನು ನ್ಯಾಯಾಂಗ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ

ಗ್ರಾಮಾಭಿವೃದ್ಧಿ ಇಲಾಖೆ ಸಿಬ್ಬಂದಿ ಖಾಯಂ

ಬೆಂಗಳೂರು ೨೬

ಇದೇ ಏಪ್ರಿಲ್ ೧ ನೇ ತಾ|| ನಿಂದ ಸಂಸ್ಥಾನದ ಗ್ರಾಮಾಭಿವೃದ್ಧಿ ಇಲಾಖೆಯ ಸಿಬ್ಬಂದಿಯು ಖಾಯಂ ಆಗಿ ಮುಂದುವರಿಯಲು ಸರ್ಕಾರದವರು ಮಂಜೂರಾತಿ ಕೊಟ್ಟಿರುತ್ತಾರೆ. ೧೯೫೧ ರ ಗ್ರಾಮ ಪೌರಸಭೆ ಕಾನೂನು ಮತ್ತು ೧೯೫೨ ರ ಜಿಲ್ಲಾಬೋರ್ಡ ಮತ್ತು ಪಂಚಾಯತಿಗಳ ಕಾನೂನುಗಳು ಜಾರಿಗೆ ಬಂದನಂತರ ಗ್ರಾಮಾಭಿವೃದ್ಧಿ ಕಮಿಷನರರನ್ನು ಸ್ಥಳೀಯ ಅಭಿವೃದ್ಧಿ ಕಮಿಷನರಾಗಿ ಹಂಗಾಮಿಯಾಗಿ ನೇಮಿಸಲಾಗಿತ್ತು. ಈಗ ಅದನ್ನು ಖಾಯಂಗೊಳಿಸಲಾಗಿದೆ

ಟೇನ್‌ಸಿಂಗರಿಗೆ ನಿಧಿ

ದೆಹಲಿ ಪೌರಸಭೆಯವರು ಟೇನ್‌ಸಿಂಗರಿಗೆ ೫,೦೦೦ ರೂ. ನಿಧಿಯನ್ನು ಅರ್ಪಿಸಲು ನಿಶ್ಚಯಿಸಿರುತ್ತಾರೆ. ಕಲ್ಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯು ತನ್ನ ಚಂದಾದಾರರಿಂದ ೧೨ ಸಾವಿರ ರೂ. ನಿಧಿಯನ್ನು ಕೂಡಿಸಿ ಅವರಿಗೆ ಅರ್ಪಿಸಿರುತ್ತದೆ

ಹೈದರಾಬಾದು ಕಾರ್ಮಿಕರ ಮೇಲೆ ಗುಂಡು

ಹೈದರಾಬಾದು ಬಳಿ ಕಾಗಜ್ ನಗರದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಕಾರ್ಮಿಕರ ಗುಂಪೊಂದರ ಮೇಲೆ ನೆನ್ನೆ ಪೊಲೀಸರು ಲಾಠಿ ಪ್ರಹಾರ ಮಾಡಿ, ನಂತರ ಗುಂಡು ಹಾರಿಸಿದ ಪರಿಣಾಮವಾಗಿ ಇಬ್ಬರು ಮಡಿದು, ೪೦ ಮಂದಿಗೆ ಗಾಯವಾಗಿರುವುದಾಗಿ ಗೊತ್ತಾಗಿದೆ. ಆ ಕಾರ್ಮಿಕರು ಸಹ ಪೊಲೀಸರು ಮೊದಲು ಗುಂಡು ಹಾರಿಸಿದರೆಂದು ಹೇಳಲಾಗಿದೆ

ಶಾಂತಿ ಒಪ್ಪಂದದ ವಿರುದ್ಧ 'ಬಲಿದಾನ ಪಡೆ'

ಕೊರಿಯದಲ್ಲಿ ಶಾಂತಿ ಒಪ್ಪಂದಕ್ಕೆ ರುಜು ಬಿದ್ದರೆ, ಉತ್ತರ ಕೊರಿಯಕ್ಕೆ ಸಾವಿರಗಟ್ಟಲೆ ಜನರುಳ್ಳ "ಬಲಿದಾನ ಪಡೆ"ಗಳನ್ನು ಕಳುಹುವುದಾಗಿ ದಕ್ಷಿಣ ಕೊರಿಯದ ಒಬ್ಬ ಗೌರ್ನರು ಬೆದರಿಕೆ ಹಾಕಿರುತ್ತಾರೆ. ಶಾಂತಿ ಒಪ್ಪಂದವಾಗದಂತೆ ಮಾಡಲು ರೀ ಯವರು ಐದು ಕಟ್ಟದ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವುದಾಗಿ ನವ ಚೀನಾ ವಾರ್ತಾ ಸಂಸ್ಥೆಯು ತಿಳಿಸಿರುತ್ತದೆ

೪ ಮಕ್ಕಳ ಜನನ; ಆ ಪೈಕಿ ೧ ಜೊತೆ ಜಂಟಿ ಶಿಶುಗಳು

ನಾಸಿಕದ ಆಸ್ಪತ್ರೆಯಲ್ಲಿ ೪೦ ವರ್ಷದ ರೈತ ಸ್ತ್ರೀಯೊಬ್ಬಳು ೧ ಜೊತೆ ಜಂಟಿ ಮಕ್ಕಳೂ ಸೇರಿ ಒಟ್ಟು ೪ ಮಕ್ಕಳನ್ನು ಹಡೆದಿರುತ್ತಾಳೆ. ಪ್ರಸವವಾದ ನಂತರ ತಾಯಿಯು ಮಡಿದಳು. ಜಂಟಿಮಕ್ಕಳು ಹೊಟ್ಟೆ ಬಳಿ ಒಂದಕ್ಕೊಂದು ಅಂಟಿಕೊಂಡಿವೆ. ಇತರ ಎರಡು ಮಕ್ಕಳ ಪೈಕಿ, ಹುಟ್ಟುವ ಮುಂಚೆಯೇ ಒಂದು ಸತ್ತು ಹೋಗಿದ್ದಿತು

ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾಲ್

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಹಂಗಾಮಿ ಪ್ರಿನ್ಸಿಪಾಲರಾಗಿ ಶ್ರೀ ಸಿ ರಂಗಾಚಾರ್ಯರನ್ನು ನೇಮಿಸಲಾಗಿದೆ

ಅಮೇರಿಕಕ್ಕೆ ಮೈಸೂರು ವೈದ್ಯರ ಪ್ರಯಾಣ

ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಾಗಳಲ್ಲಿರುವ ವಿವಿಧ ಆಸ್ಪತ್ರೆಗಳಲ್ಲಿ ಅನುಭವ ಪಡೆಯಲು ಕಳೆದ ... ನೇ ತಾ|| ಬೊಂಬಾಯಿ ... ಭಾರತೀಯ ವೈದ್ಯರ ತಂಡವೊಂದು ತೆರಳಿತು. ಆ ಪೈಕಿ ಮೈಸೂರು ವೈದ್ಯರುಗಳೆಂದರೆ ... ಕಮಲಾ, ಆರ್. ಎ. ರಾಜು, ಕೆ. ಸಿ. ವಾಣಿ ಮತ್ತು ವಿ. ಬಿ. ನಾಯ್ಡುರವರು ಇರುವರು.

(ಯು. ಎಸ್. ಐ. ಎಸ್.)

ಐ. ಪಿ. ಎಸ್. ಪರೀಕ್ಷೆಯಲ್ಲಿ ಇಬ್ಬರು ಮೈಸೂರಿನವರು

ಈ ಸಾರಿ ನಡೆದ ಇಂಡಿಯನ್ ಪೋಲೀಸು ಸರ್ವಿಸ್ ಪರೀಕ್ಷೆಯಲ್ಲಿ ಶ್ರೀ ಬಿ. ಎನ್. ಚಿಕ್ಕಪ್ಪ ... ಎಂ. ಎ. ... ಇಬ್ಬರು ಮೈಸೂರಿನವರು ... ಕೇಂದ್ರ ಸರ್ವಿಸ್‌ಗಳ ಪರೀಕ್ಷೆಗೆ ... ಕುಮಾರಿ ... ಇರುವರು.

ಸ್ವಾಗತ ಸಮಾರಂಭ

ಆ ... ಅಕೌಂಟೆಂಟ್ ಶ್ರೀ ಲಕ್ಷ್ಮೀನರಸಿಂಹಯ್ಯನವರ ಪುತ್ರಿ ... ವಿವಾಹ ... ಶ್ರೀ ... ನಾರಾಯಣ ... ಕೃಷ್ಣಮೂರ್ತಿಯವರ ... ಚಂದ್ರ ... ಸುಖಪ್ರವಾಗಿ ಜರುಗಿತು.

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಜಯಂತಿ

ಮು ... ನೇ ತಾ|| ... ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತ್ಯುತ್ಸವ ... ಶ್ರೀ ... ಜೋಯಿಸರವರ ಅಧ್ಯಕ್ಷತೆಯಲ್ಲಿ ... ನಡೆಯುವುದು ... ಭಾಗವಹಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ... ದೇವರಾಜೇ ... ಕೋರಿದ್ದಾರೆ.

ಬ್ರಿಟನ್ನಿನಲ್ಲಿ ನಿರ್ಮಿಸಲ್ಪಟ್ಟ ನಾಲ್ಕು ಮೋಟಾರುಗಳು

ಕಳೆದ ... ತಿಂಗಳಲ್ಲಿ ಬ್ರಿಟನ್ನಿನ ಕಾರ್ಖಾನೆಗಳು ... ಲೆಕ್ಕಾಚಾರದಂತೆ ೫,೨೬,೦೦೦ ಮೋಟಾರು ಕಾರುಗಳನ್ನು ತಯಾರಿಸಿರುವುದಾಗಿ ವರದಿಯಾಗಿದೆ.

ಗುಂಡ್ಲುಪೇಟೆ ಬೀಡಿ ಕೆಲಸಗಾರರ ಸಂಘ

ಕಳೆದ ಭಾನುವಾರ ಗುಂಡ್ಲುಪೇಟೆ ಬೀಡಿ ಕೆಲಸಗಾರರ ಸಭೆಯು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ. ಜಿ. ವೆಂಕಟಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆದು, ಸಂಘದ ಅಧಿಕಾರ ವರ್ಗದ ಚುನಾವಣೆಯು ಆಯಿತು. ಶ್ರೀ ಅಜೀಜ್ ಸೇಠ್ ... ಅಧ್ಯಕ್ಷರಾಗಿಯೂ, ... ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಆರ್. ಪ್ರಸಾದ್ ರವರು ಕಾರ್ಯದರ್ಶಿಯಾಗಿಯೂ, ಶ್ರೀ ಎಂ. ಮಾದನಾಯಕರು ಉಪಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಎಂ. ಎಸ್. ನಂಜನಾಯಕರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

ಮಹಿಳಾ ಸದನದಲ್ಲಿ ಸತ್ಕಾರ ಕೂಟ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ೨೧ ನೇ ತಾ|| ಸತ್ಕಾರಕೂಟವೊಂದು ನಡೆಯಿತು. ಶ್ರೀಮತಿ ಬಿ. ಎಲ್. ಜಾನಕಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿಗಳಾದ ಎಂ. ಬಿ. ರಾಜಾಮಣಿ, ಎಂ. ಎಸ್. ಸಾವಿತ್ರಮ್ಮರವರು ಭಾಷಣ ಮಾಡಿ ... ಶ್ರೀಮತಿ ... ನಾಟಕ ನೃತ್ಯ ... ಕಾರ್ಯಕ್ರಮ ... ಜರುಗಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಎಲ್. ವಸಂತ ... ಸುಬ್ರಹ್ಮಣ್ಯಂ, ... ಕಥಾ ... ಮತ್ತು ... ನಾಟಕ

ಒಲಂಪಿಯಾ ಟಾಕೀಸ್

26-6-53 ರಿಂದ : 3 ನೇ ಕಡೇ ವಾರ ಹೀರಾ ಫಿಲಂಸ್ ರವರ **ಮೋಲಿ**

ಪಾತ್ರ:— ... ಕುಮಾರ್, ... ಮತ್ತು ...

ಬೇಗನೆ ಪ್ರದರ್ಶನ **ಮಹಲ್**

SARADA VILAS

INTER TUTORIAL SECTION

CLASSES STARTED

From 20-6-1953

(7.30 A. M. to 9.30 A. M.)

Edited, Printed and Published by A.R. Nagarajan at Sadhvi Press, D. Subbiah Road, Mysore

ಜಿಲ್ಲಾ ಟ್ರ್ಯಾಕ್ಟರ್ ಸಮಿತಿಗಳ ನೇಮಕ

ಟ್ರ್ಯಾಕ್ಟರುಗಳನ್ನು ಒದಗಿಸುವ ಸಂಬಂಧವಾಗಿ ಸರ್ಕಾರದವರು ಈಗಳಲ್ಲಿ ರಚಿಸಿದ ಜಿಲ್ಲಾ ಟ್ರ್ಯಾಕ್ಟರು ಸಮಿತಿಗಳನ್ನು ಪುನರ್ರಚಿಸಿರುತ್ತಾರೆ. ಅದರಂತೆ ಆಯಾ ಜಿಲ್ಲಾಧಿಕಾರಿಗಳು ಸಮಿತಿಗಳ ಅಧ್ಯಕ್ಷರಾಗಿಯೂ, ಜಿಲ್ಲಾ ಬೋರ್ಡು ಅಧ್ಯಕ್ಷರು, ಮತ್ತು ಜಿಲ್ಲೆಯಲ್ಲಿರುವ ಹಿರಿಯ ... ಕಿರಿಯ ಶಾಸನ ಸಭೆಗಳ ಸದಸ್ಯರು ಸಮಿತಿಯ ಸದಸ್ಯರಾಗಿಯೂ ಇರುವರು. ಜಿಲ್ಲೆಯ ವ್ಯವಸಾಯ ಅಸಿಸ್ಟೆಂಟ್ ಡೈರೆಕ್ಟರು ಕಾರ್ಯದರ್ಶಿಯಾಗಿರುತ್ತಾರೆ.

ತುರುಗನೂರಿನಲ್ಲಿ ರೈತರ ಸಭೆ

ಟಿ. ನರಸೀಪುರದ ತಾ|| ತುರುಗನೂರಿನಲ್ಲಿ ವ್ಯವಸಾಯ ... ಇದೇ ೨೮ನೇ ತಾರೀಕು ಮಧ್ಯಾಹ್ನ ೪ ಗಂಟೆಗೆ ರೈತರ ಸಭೆಯು ಜಿಲ್ಲಾ ಬೋರ್ಡು ಉಪಾಧ್ಯಕ್ಷರಾದ ಶ್ರೀ ಟಿ. ಪಿ. ಬೋರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಜಿಲ್ಲಾ ವ್ಯವಸಾಯ ಇಲಾಖಾ ಅಸಿಸ್ಟೆಂಟರಾದ ಶ್ರೀ ಸಿ. ಎಂ. ರೇವಣ್ಣನವರು ಜಪಾನ್ ದೇಶದಲ್ಲಿ ಭತ್ತ ಬೆಳೆಯುವ ಕ್ರಮದ ಬಗ್ಗೆ ಉಪನ್ಯಾಸ ಮಾಡುವರು. ವ್ಯವಸಾಯಗಾರರು ಸಭೆಗೆ ಬರಬೇಕೆಂದು ಕೋರಲಾಗಿದೆ.

CHAMUNDESWARI

TALKIES

From 27-6-53 D ... 3 Sh ...

DOUBLE ATTRACTION

March Of The Wooden Soldiers

Starring:—Laurel and Hardy

AND

STAMPEDE

Starring:— Rod Cameron and Gale Storm

The Central College Of Commerce,

Vanivilas Market Buildings

MYSORE

Admissions to D Com, Dip-in-sten, Short-hand & Typewriting will be received on all working days

Join immediately

ಮಾಸ್ಕೋವಿನಲ್ಲಿ ಇಂದಿರಾ ಗಾಂಧಿ

ಪಂಡಿತ ನೆಹರೂರವರ ಪುತ್ರಿ, ಇಂದಿರಾ ಗಾಂಧಿಯವರು ಮೊನ್ನೆ ಮಾಸ್ಕೋವಿಗೆ ತಲುಪಿದರು. ರಷ್ಯದಲ್ಲಿ ಭಾರತದ ರಾಯಭಾರಿಯಾಗಿರುವ ಕೆ. ಪಿ. ಎಸ್. ಮೆನನ್‌ರವರೂ ಅವರ ಜೊತೆಯಲ್ಲಿ ಇದ್ದರು.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆಣೆ	ರೂ. ಆ	
ಕಡಲೆಕಾಯಿ	೭೩ ೦-೦	೫೯-೫-೦	
ಹೊಂಗೆಬೀಜ	೩೩-೦-೦		
ಎಳ್ಳು	೫೬ ೯-೦	೬೮ ೩-೦	
ಹುರುಳಿ	೧೮-೩ ೦	೧೫-೧೩-೦	
ಹೆಸರು	೩೩-೧-೦	೩೦-೧೦-೦	
ಅಲಸಂದೆ	೫೯-೮ ೦	೩೪ ೧೧ ೦	
ಉದ್ದು	೬೧ ೦-೦		
ಅವರೆ	೫೩-೦-೦		
ಮೆಣಸಿನಕಾಯಿ	೫೩-೧೧-೦	೫೩-೨ ೦	
ಹುಣಸೇಹಣ್ಣು	೬-೧೩ ೧	೪ ೯-೦	
ಸೀಗೆಕಾಯಿ	೬-೦-೦	೩-೫-೦	
ಬೆಲ್ಲ	೭.೦.೦		
ಕೊಬ್ಬರಿ ...	೬೦-೦-೦	೫೩-೦ ೦	

ಹರಾಜು ನೋಟೀಸು

ಮೈಸೂರು ಒಂದನೇ ಮುನ್ಸೀಫರವರ ಕೋರ್ಟಿನ O S No 322 of 1952-53 ರ ಡಿಕ್ರಿ ಜಾರಿ ನಂಬರು Ex No 268 of 1953 ರಲ್ಲಿ, ಘನ ಕೋರ್ಟಿನವರಿಂದ ಹರಾಜು ಆಗಲು ಅಪ್ಪಣೆಯಾಗಿ ನೇಮಿಸಲಾಗಿರುವ ಕೆಳಗೆ ನಮೂದಿಸಿರುವ ಕಮೀಷನರ್‌ರವರಿಂದ:—

ಮೇಲ್ಕಂಡ ಕೇಸಿನಲ್ಲಿ ಅಟ್ಯಾಚ್ ಆಗಿರುವ ಕಬ್ಬಿಣ ಮರದ, (...) ಕುರ್ಚಿಗಳು, ಹೊಸ ಟೇಬಲ್‌ಗಳು ಮತ್ತು ಹೊಸದಾದ ಹೊನ್ನೆ ಮಂಚಗಳು, ಕುರ್ಚಿ, ಟೇಬಲ್, ಮಂಚದ ಸಾಮಾನುಗಳು ಬಹಿರಂಗವಾಗಿ ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ಕಾಲದಲ್ಲಿ ಹರಾಜು ಮಾಡಲ್ಪಡುತ್ತವೆ. ಇಷ್ಟವುಳ್ಳವರು ಧರ ದರಖಾಸ್ತ್ ಬಿಡ್ ಮಾಡಬಹುದು. ಬಿಡ್ ಮೊಬಲಗನ್ನು ಸ್ಥಳದಲ್ಲೇ, ಕೂಡಲೇ ಪಾವತಿ ಮಾಡಿ ಸಾಮಾನುಗಳನ್ನು ಸಾಗಿಸಿಕೊಳ್ಳಬೇಕು. ಬಿಡ್ ಒಪ್ಪುವ, ಒಪ್ಪದೆ ಹಕ್ಕುಗಳು ಕಮೀಷನರಿಗೆ ಸೇರಿದ್ದು. ಹೆಚ್ಚಿನ ವಿವರಗಳನ್ನು ಕಮೀಷನರಿಂದ ತಿಳಿಯಬಹುದು.

ಸ್ಥಳ:— ಮೈಸೂರು ನಗರ ರಸ್ತೆ, ನಜ್ಜರ್‌ಬಾದ್ ರಸ್ತೆ ಸಂಧಿಸುವ ಕೋ-ಆಪರೇಟಿವ್ ಹೋಂ ಎದುರು ಮಳಿಗೆ ಬಳಿ

ದಿನ ಮತ್ತು ಕಾಲ:— ಭಾನುವಾರ 28-6-1953 ಬೆಳಿಗ್ಗೆ 10 ಗಂಟೆಯಿಂದ

ಎಂ. ವಿ. ವೆಂಕಟರಾಮಸ್ವಾಮಿ, ಕಮೀಷನರ್.

SRI GANESHA

TALKIES

From 27-6-53 For 2 days

Republic Pictures'

CALIFORNIA PASSAGE

With — Forrest Tucker, Adele Mara

ಪ್ರಭುದೇವಾ ಥಿಯೇಟರ್

(ಸದ್ಯಾ ಟಾಕೀಸ್)

26-6-53 ನೇ : ಶುಕ್ರವಾರದಿಂದ :: ಅಮೋಘ ಪ್ರಾರಂಭ

ಚಕ್ರವರ್ತಿರವರ ತಮಿಳು ಚಿತ್ರ **ಕಾಂಚನ** ... ಪ್ರದರ್ಶನಗಳು

ಪಾತ್ರ:— ಲಲಿತ ಪದ್ಮಿನಿ, ಕೆ. ಆರ್. ರಾಮಸ್ವಾಮಿ, ಟಿ. ಎಸ್. ದೊರೈರಾಜ್ ಮುಂತಾದವರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ **M. V. ಭೋಜಯ್ಯ** (ಫೋನ್ 446) ಬಿ. ಎ., ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೭-೬-೧೯೫೩ [ಸಂಚಿಕೆ ೨೬೩

ಕೊರಿಯದಲ್ಲಿ ಪುನಃ ಘೋರ ಕದನ ಆರಂಭ

ರೈಲ್ವೆ ಸಂಘಗಳ ಸೇರ್ಪಡೆಗೆ ಒಪ್ಪಿಗೆ

ಅಖಿಲ ಭಾರತ ನೌಕರರ ಸಂಘದ ನಿರ್ಣಯ

ಮೈಸೂರು ೨೭

ಭಾರತದಲ್ಲಿರುವ ಎರಡು ರೈಲ್ವೆ ಸಂಘಗಳು ಪರಸ್ಪರ ಐಕ್ಯವಾಗುವ ಬಗ್ಗೆ ನೆನ್ನೆ ಇಲ್ಲಿ ಸೇರಿದ್ದ ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಲಾಯಿತು. ಕೆಲವು ತಿಂಗಳ ಹಿಂದೆ ಎರಡು ಸಂಘಗಳ ಕಾರ್ಯಕಾರಿ ಸಮಿತಿಗಳು ಐಕ್ಯದ ಬಗ್ಗೆ ನಿರ್ಣಯ ಮಾಡಿದುದನ್ನು, ಫೆಡರೇಷನ್ನಿನ ಕಾರ್ಯಕಾರಿ ಸಮಿತಿಯು ಸಭೆಯ ಮುಂದೆ ಮಂಡಿಸಿತು. ಅಖಿಲ ಭಾರತ ರಾಷ್ಟ್ರೀಯ ರೈಲ್ವೆ ನೌಕರರ ಸಂಘವು ಈಗಾಗಲೇ ನಿರ್ಣಯವನ್ನು ಅಂಗೀಕರಿಸಿರುತ್ತದೆ.

ಹೊಸ ಸಂಘವನ್ನು ಭಾರತೀಯ ರೈಲ್ವೆ ನೌಕರರ ರಾಷ್ಟ್ರೀಯ ಸಂಸ್ಥೆಯೆಂದು ಕರೆಯಲಾಗುವುದು. ನಿರ್ಣಯವಾಗುವುದಕ್ಕೆ ಮುಂಚೆ ಶ್ರೀ ಎಸ್. ಗುರುಸ್ವಾಮಿಯವರು ಮಾತನಾಡಿ, ಅಖಿಲ ಭಾರತ ರೈಲ್ವೆ ನೌಕರರ ಸಂಘವು ಸಾಧಿಸಿರುವ ಕಾರ್ಯಗಳನ್ನು ವಿವರಿಸಿದರು.

ತೂಗು ಸೇತುವೆ ಮುರಿದು ೭ ಜನರ ಮರಣ

ಅಫ್ಘಾನಿಸ್ಥಾನದ ರಾಜಧಾನಿ ಕಾಬೂಲಿನ ಮಧ್ಯಭಾಗದಲ್ಲಿ ಹರಿಯುವ ಕಾಬೂಲು ನದಿಯ ಮೇಲೆ ನಿರ್ಮಿಸಲಾಗಿರುವ ತೂಗು ಸೇತುವೆಯ ಮೇಲೆ ನಿಂತು ಅನೇಕ ಪ್ರೇಕ್ಷಕರು ಕೆಳಗಡೆ ನದಿಯಲ್ಲಿ ಆಟವನ್ನು ನೋಡುತ್ತಿದ್ದಾಗ, ಸೇತುವೆಯು ಮುರಿದು ಬಿದ್ದ ಪರಿಣಾಮವಾಗಿ ೭ ಮಂದಿ ಮುಳುಗಿ ಪ್ರಾಣಬಿಟ್ಟರೆಂದು ವರದಿಯಾಗಿದೆ. ಹೆಣಗಳನ್ನು ಹುಡುಕುವುದಕ್ಕಾಗಿ ನದಿಯ ಮಾರ್ಗವನ್ನು ಬದಲಿಸಿ, ನೀರನ್ನು ಅಗ್ನಿಶಾಮಕ ಯಂತ್ರಗಳ ಸಹಾಯದಿಂದ ಎತ್ತಿ ಹಾಕಲಾಯಿತು.

ವಿಶ್ವಸಂಸ್ಥೆ ಅಧಿವೇಶನಕ್ಕಾಗಿ ನೆಹರೂ ಮನವಿ

ಕೊರಿಯಾ ಶಾಂತಿ ಒಪ್ಪಂದಕ್ಕೆ ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ತೋರುತ್ತಿರುವ ವಿರೋಧದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ವಿಶ್ವ ಸಂಸ್ಥೆಯ ಸಾಧಾರಣ ಸಭೆಯನ್ನು ಕರೆಯುವಂತೆ ಪ್ರಧಾನಿ ನೆಹರೂರವರು ಸಂಸ್ಥೆಯ ಅಧ್ಯಕ್ಷ ಲೆಸ್ಟರ್ ಪಿಯರ್ಸನ್ನರಿಗೆ ಸಲಹೆ ಮಾಡಿರುವರೆಂದು ವರದಿಯಾಗಿದೆ. ರಷ್ಯನರೊಡನೆ ಅತ್ಯುನ್ನತ ಮಟ್ಟದಲ್ಲಿ ಚರ್ಚಿಸುವಂತೆ ಬ್ರಿಟಿಷ್ ಪ್ರಧಾನಿ ಚರ್ಚಿಲರು ಮಾಡಿರುವ ಸಲಹೆಯನ್ನು ಅವರು ಸ್ವಾಗತಿಸಿರುವರು.

ಎವರೆಸ್ಟ್ ಆರೋಹಣದ ನೆನಪಿಗಾಗಿ ಶಾಲೆ

ಎವರೆಸ್ಟ್ ಶಿಖರಾರೋಹಣದ ನೆನಪಿಗಾಗಿ, ಪರ್ವತಾರೋಹಣ ಶಾಲೆಯೊಂದನ್ನು ಡಾರ್ಜಲಿಂಗಿನಲ್ಲಿ ಏರ್ಪಡಿಸಲು ಬಂಗಾಳಾ ಸರ್ಕಾರದವರು ಆಲೋಚಿಸಿರುತ್ತಾರೆ. ಟೇನಸಿಂಗರು ಶಾಲೆಯ ಪ್ರಥಮ ಡೈರೆಕ್ಟರಾಗುವರು.

ಫ್ರಾನ್ಸಿಗೆ ಕಡೆಗೂ ಒಬ್ಬ ಪ್ರಧಾನಿ ಸಿಕ್ಕಿದರು

ಫ್ರಾನ್ಸಿಗೆ ಕಡೆಗೂ ಪ್ರಧಾನಿಯಾಗುವವರೊಬ್ಬರು ಈಗ ಸಿಕ್ಕಿರುತ್ತಾರೆ. ಕನ್ಸರ್ವೇಟಿವ್ ಪಕ್ಷಕ್ಕೆ ಸೇರಿರುವ ೬೩ ವರ್ಷದ ಜೋಸೆಫ್ ಲೇನಿಯಲ್‌ರವರು ಪ್ರಧಾನಿಯಾಗಲು ಅಲ್ಲಿನ ರಾಷ್ಟ್ರೀಯ ಸಭೆಯು ಹೆಚ್ಚು ಬಹುಮತದ ಬೆಂಬಲವನ್ನು ಕೊಟ್ಟಿರುತ್ತದೆ. ಕಳೆದ ತಿಂಗಳು ೨೧ನೇ ತಾ|| ನಿಂದ ಅಲ್ಲಿ ಮಂತ್ರಿಮಂಡಲವೇ ಇರಲಿಲ್ಲ. ಐದು-ಆರು ಜನರು ಆ ಸ್ಥಾನಕ್ಕೆ ಸೂಚಿಸಲ್ಪಟ್ಟು ಯಾರಿಗೂ ಬೆಂಬಲ ದೊರೆಯದೆ ವಿಫಲರಾಗಿದ್ದರು.

೨ ವಾರಗಳಲ್ಲಿ ಬರ್ಮಾದಿಂದ ಕೆ.ಎಂ.ಟಿ. ಸೈನ್ಯ ವಾಪಸು

ಬರ್ಮಾದಲ್ಲಿರುವ ಸುಮಾರು ೧೨ ಸಾವಿರ ರಾಷ್ಟ್ರೀಯ ಚೀನಾ ಗೆರಿಲ್ಲಾ ಸೈನ್ಯಗಳು ಎರಡು ವಾರಗಳಲ್ಲಿ ಅಲ್ಲಿಂದ ಹೊರಡಲಿರುವುದಾಗಿ ವರದಿಯಾಗಿದೆ. ಈ ಬಗ್ಗೆ ೪ ರಾಷ್ಟ್ರಗಳ ಸಮಿತಿಯು ಕಾರ್ಯಕ್ರಮವನ್ನು ತಯಾರಿಸುತ್ತಿದೆ.

೪ ದಿನಗಳಲ್ಲಿ ಪ್ರಪಂಚ ಪರ್ಯಟನ

ಸಂಚಾರ ವಿಮಾನಗಳಲ್ಲಿ ಕುಳಿತು ೪ ದಿನಗಳಲ್ಲಿ ಪ್ರಪಂಚದ ಸುತ್ತಲೂ ಬಳಸಿಕೊಂಡು ಬರುವ ಪ್ರಯತ್ನದಲ್ಲಿ ಅಮೆರಿಕದ ಟೆಕ್ಸಾಸ್ ಪ್ರಾಂತದ ಹೊರೇಸ್ ಬೂರ್ಕರವರು ತೊಡಗಿರುತ್ತಾರೆ. ಅವರು ಈಗಾಗಲೇ ದೆಹಲಿಯನ್ನು ದಾಟಿ ಹೋಗಿರುವರು. ಅವರು ಮೂರು ವಿಮಾನಗಳಲ್ಲಿ ಸಂಚರಿಸುವರು. ೨೧ ಸಾವಿರ ಮೈಲಿ ದೂರವನ್ನು ಗಂಟೆಗೆ ೩೦೦ ಮೈಲಿಯಂತೆ ಪ್ರವಾಸ ಮಾಡಿ ರಿಕಾರ್ಡ್ ಸ್ಥಾಪಿಸುವುದೇ ಅವರ ಉದ್ದೇಶವಾಗಿದೆ.

ರಾಮಸ್ವಾಮಿ ನಾಯಕರ್ ಮೇಲಿನ ಮೊಕದ್ದಮೆ ವಜಾ

ಕಳೆದ ತಿಂಗಳು ೨೭ನೇ ತಾ|| ಗಣೇಶನ ವಿಗ್ರಹಗಳನ್ನು ಒಡೆದುಹಾಕಿದರೆಂದು ದ್ರಾವಿಡ ಸಂಘದ ನಾಯಕ ಇ. ವಿ. ರಾಮಸ್ವಾಮಿ ನಾಯಕರ ಮೇಲೆ ತಿರುಚಿ ಕೋರ್ಟಿನಲ್ಲಿ ಹಲವರು ಹೂಡಿದ್ದ ಮೊಕದ್ದಮೆಯು ವಜಾ ಆಗಿದೆ.

ಕೊರಿಯಾದಲ್ಲಿ ಪುನಃ ಕದನದ ಪ್ರಾರಂಭ

ಕೊರಿಯಾ ಮಧ್ಯ ರಣರಂಗದಲ್ಲಿ ನೆನ್ನೆಯಿಂದ ಬಿರುಸಾದ ಕದನಗಳು ನಡೆಯುತ್ತಿರುವುದಾಗಿ ವರದಿಯಾಗಿದೆ. ಕಮ್ಯೂನಿಸ್ಟರ ೧೧ ಸಾವಿರ ಸೈನಿಕರು ದಕ್ಷಿಣ ಕೊರಿಯನ್ನರ ಮೇಲೆ ಧಾಳಿಯನ್ನಾರಂಭಿಸಿದರೆಂದೂ, ಹಲವು ಕಡೆ ಅವರನ್ನು ಹಿಮ್ಮೆಟ್ಟಿಸಲಾಯಿತೆಂದೂ ಹೇಳಲಾಗಿದೆ.

ಭಾರತಕ್ಕೆ ನೆಹರೂರವರ ಆಗಮನ

ಲಂಡನ್ನಿನಲ್ಲಿ ಈ ತಿಂಗಳು ಆದಿಭಾಗದಲ್ಲಿ ನಡೆದ ಕಿರೀಟ ಧಾರಣೋತ್ಸವದ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ತೆರಳಿದ್ದ ಪ್ರಧಾನಿ ನೆಹರೂರವರು ನೆನ್ನೆ ಕೈರೋವಿನಿಂದ ಬೊಂಬಾಯಿಗೆ ಆಗಮಿಸಿದರು. ಈಜಿಪ್ಟ್ ಅಧ್ಯಕ್ಷ ನಗೀಬ್‌ರವರು ಅವರನ್ನು ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು. ತಮ್ಮ ಪ್ರವಾಸದ ಬಗ್ಗೆ ನೆಹರೂರವರು ತೃಪ್ತಿಯನ್ನು ವ್ಯಕ್ತಪಡಿಸಿದರು.

ಕುಡಿಯುವ ಪಂದ್ಯದಲ್ಲಿ ಮರಣ

ಬೊಂಬಾಯಿ ನಗರದ ೨೭ ವರ್ಷದವನೊಬ್ಬನು ೨ ಬಾಟಲು ಆಲ್ಕೊಹಾಲ್ ಅನ್ನು ಕುಡಿಯುವುದಾಗಿ ೨೫ ರೂ ಗಳ ಪಂಥ ಕಟ್ಟಿ, ಮೊದಲು ೧ ಪೌಂಡು ವನಸ್ಪತಿ ತುಪ್ಪವನ್ನು ತಿಂದು, ನಂತರ ಮಾದಕ ದ್ರವವನ್ನು ಸೇವಿಸಿದನೆಂದೂ, ಅದಾದ ಸ್ವಲ್ಪ ಹೊತ್ತಿನಲ್ಲೇ ಮೃತಪಟ್ಟನೆಂದೂ ವರದಿಯಾಗಿದೆ. ಮದ್ಯದೊಡನೆ ತುಪ್ಪವನ್ನು ಸೇವಿಸಿದರೆ ಆರೋಗ್ಯವು ಕೆಡುವುದಿಲ್ಲವೆಂದು ಅವನು ಭಾವಿಸಿದ್ದನೆಂದು ಹೇಳಲಾಗಿದೆ.

ಹೋಟೇಲು ಕೆಲಸಗಾರರು ಪೋಲೀಸರ ವಶಕ್ಕೆ

ರಾಜಧಾನಿಯ ದಾಸಪ್ರಕಾಶ ಹೋಟೇಲಿನಲ್ಲಿ ಕೆಲಸದಲ್ಲಿದ್ದ ಸಂಜೀವ ಮತ್ತು ತಿಮ್ಮ ಎಂಬುವರನ್ನು ಲಷ್ಕರ್ ಪೋಲೀಸರ ವಶಕ್ಕೆ ಒಪ್ಪಿಸಲಾಗಿರುವುದೆಂದು ತಿಳಿದುಬಂದಿದೆ. ಹೋಟೇಲಿನಲ್ಲಿ ಕೆಲವು ದಿನಗಳಿಂದಲೂ ಕಳ್ಳತನಗಳು ನಡೆಯುತ್ತಿದ್ದುವೆಂದು ವರದಿಯಾಗಿದೆ.

ಕೊಲೆ ಅಪಾದನೆಯಿಂದ ಖುಲಾಸೆ

ಮೈಸೂರು ೨೭

ಪಿರಿಯಾಪಟ್ಟಣದ ತಾಲ್ಲೂಕು ಕೆರೆಮೇಗಳ ಕೊಪ್ಪಲು ದಾಸೇಗೌಡ ಎಂಬುವನು ತನ್ನ ಮಾವ ಬೋರೇಗೌಡ ಎಂಬುವವನನ್ನು ಕಳೆದ ಸಂಕ್ರಾಂತಿ ಹಬ್ಬದ ದಿನ ರಾತ್ರಿ ಕಣದಲ್ಲಿದ್ದಾಗ ಕೊಂದುಹಾಕಿದ್ದನೆಂದು ಹುಣಸೂರು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಇಲ್ಲಿನ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್‌ರವರು ಈ ದಿನ ತೀರ್ಪಿತ್ತು, ಅಪರಾಧಿಯು ತಪ್ಪಿತಸ್ಥನಲ್ಲವೆಂದು ಖುಲಾಸೆ ಮಾಡಿರುತ್ತಾರೆ. ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಶಂಕರಶೆಟ್ಟಿಯವರೂ, ಅಪರಾಧಿಯ ಪರವಾಗಿ ಶ್ರೀ ವಿ. ಲಿಂಗಪ್ಪಯ್ಯನವರೂ ವಕಾಲತ್ತು ವಹಿಸಿದ್ದರು.

ಬಾಲಕಿ ಮೇಲೆ ಅತ್ಯಾಚಾರ ನಡೆಸಿದವನಿಗೆ ಶಿಕ್ಷೆ ಖಾಯಂ

ಜಗಳೂರು ತಾಲ್ಲೂಕು ಕೊರಸಿದ್ದಿಹಳ್ಳಿಯಲ್ಲಿ ಕಳೆದ ವರ್ಷ ಜನವರಿಯಲ್ಲಿ ಯಡ್ಡಲ ರಾಮಪ್ಪ ಎಂಬುವರ ಮಗಳು ೧೨ ವರ್ಷದ ರಾಕ್ಕಣಿಯಮ್ಮನ ಮೇಲೆ ಅತ್ಯಾಚಾರ ನಡೆಸಿ, ಆಕೆಯ ಕತ್ತು ಹಿಸುಕಿ ಮರಣವುಂಟುಮಾಡಿದ ಬಗ್ಗೆ ಕನಕಟ್ಟೆ ಬೊಮ್ಮಪ್ಪ ಎಂಬುವನಿಗೆ ವಿಧಿಸಲಾಗಿದ್ದ ಜೀವಾವಧಿ ಶಿಕ್ಷೆ ಮತ್ತು ೫ ವರ್ಷ ಸಜಾವನ್ನು ಹೈಕೋರ್ಟಿನವರು ಖಾಯಂ ಮಾಡಿರುತ್ತಾರೆ.

ಯಾದವ ಮಹಾಸಭೆ

ಮೈಸೂರು ಯಾದವ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ಮೈಸೂರು ಯಾದವ ಮಹಾ ಸಭೆಯು ನಿವೃತ್ತ ಪ್ರಿನ್ಸಿಪಲ್ ಸಬಾರ್ಡಿನೇಟ್ ಜಡ್ಜರಾದ ಶ್ರೀ ಎಂ. ನರಸಿಂಹಸ್ವಾಮಿಯವರ ಅಧ್ಯಕ್ಷತೆಯಲ್ಲಿ ಪ್ರಭುದೇವಾ ಥಿಯೇಟರ್ ಬಳಿಯಿರುವ ಶ್ರೀ ತಮ್ಮಯ್ಯನವರ ಕಟ್ಟಡದಲ್ಲಿ ನಡೆಯುವುದು.

ಕೃಷ್ಣರಾಜಸಾಗರದಲ್ಲಿ ನೀರಿನಮಟ್ಟ

ಕೃಷ್ಣರಾಜಸಾಗರದಲ್ಲಿ ನೀರಿನಮಟ್ಟ ಈ ದಿನ ೯೮ ಅಡಿಗಳು ಇದ್ದಿತು.

೫ ಲಕ್ಷ ಎಕರೆ ಭೂಮಿಯಲ್ಲಿ ಜಪಾನ್ ಸಾಗುವಳಿ ಪದ್ಧತಿ

ಭಾರತದಲ್ಲಿ ಈ ವರ್ಷ ಐದು ಲಕ್ಷ ಎಕರೆ ಜಮೀನುಗಳಲ್ಲಿ ಜಪಾನಿನ ಸಾಗುವಳಿ ಪದ್ಧತಿಯನ್ನು ಅನುಸರಿಸಿ ಬೆಳೆ ತೆಗೆಯಲಾಗುವುದೆಂದು ಹೇಳಲಾಗಿದೆ.

ಕಾಫಿ ಪುಡಿಯ ಬೆಲೆ ಇಳಿಯಿತು

ಬೆಂಗಳೂರು ೨೭

ಕೇಂದ್ರ ಸರ್ಕಾರದವರು ಭಾರತದ ಕಾಫಿ ಬೋರ್ಡಿಗೆ ಆರು ತಿಂಗಳು ಜೀವದಾನವನ್ನು ಕೊಟ್ಟಿರುತ್ತಾರೆ. ಬೋರ್ಡಿನ ಅಧ್ಯಕ್ಷ ಶ್ರೀ ಎವ್ಲೂರ್ ಬುಲ್‌ರವರು ರಾಜೀನಾಮೆಯಿತ್ತುದರಿಂದ ಆ ಸ್ಥಾನಕ್ಕೆ ಗೃಹ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಅಧ್ಯಕ್ಷರಾಗಿ ಬಂದು ಜುಲೈ ೧ನೇ ತಾ|| ನಿಂದ ಕೆಲಸ ಮಾಡುವರು. ಬೋರ್ಡಿನವರು ಕಾಫಿ ಪುಡಿಯ ಬೆಲೆಯನ್ನು ಪೌಂಡು ೧ಕ್ಕೆ ಎರಡು ಅಣೆಯಷ್ಟು ಇಳಿಸಿರುವರು.

ಡಾ॥ ಶಾಮೋಶಂಕರವರ ನಿಧನ

ಬೆಂಗಳೂರು ೨೭

[illegible] ಬಗ್ಗೆ ಪ್ರಖ್ಯಾತಿ ಪಡೆದಿದ್ದ ಡಾ॥ ಶಾಮೋಶಂಕರವರು ಮೊನ್ನೆ ರಾತ್ರಿ ಹೃದಯ ಕ್ರಿಯೆ ನಿಂತು ನಿಧನ ಹೊಂದಿದರು. ಅವರಿಗೆ ೫೫ ವರ್ಷ ವಯಸ್ಸಾಗಿದ್ದಿತು. ಕೇಂದ್ರ ಯೋಜನಾ ಸಮಿತಿಯ ಸದಸ್ಯರಾಗಿರುವ [illegible] ಶ್ರೀ ಎಸ್. ವಿ. ರಾಮಮೂರ್ತಿಯವರಿಗೆ ಡಾ॥ ಶಾಮೋಶಂಕರವರು [illegible] ಕಡಿನೆ ವೆಚ್ಚದ [illegible] ನಿವೇಶನ ವಿಧಾನವನ್ನು [illegible] ಕಂಡುಹಿಡಿದಿದ್ದರು. [illegible] ಅರಣ್ಯ ಸಂಶೋಧನಾ ಸಂಸ್ಥೆ [illegible] ತಜ್ಞರಾಗಿ ಕೆಲಸ ಮಾಡಿದ್ದರು.

ಗುರುಸ್ವಾಮಿಯವರ ರಿಟ್ ಅರ್ಜಿ ಪರಿಶೀಲನೆ

[illegible]

ಒರಿಸ್ಸಾ ಬಗ್ಗೆ ಅನುಮತಿ ಅವರ [illegible]

[illegible] ಇವನ್ನು ಮೈಸೂರು ಸಂಸ್ಥಾನದ [illegible] ಪ್ರಕಟಣೆಯೊಂದ ತಿಳಿಸುತ್ತದೆ.

ಅಕ್ರಮ ಗಾಂಜ ಹೊಂದಿದ್ದುದಕ್ಕಾಗಿ ದಂಡ

೩೦೦ ರೂ ಬೆಲೆಯಾಗುವ [illegible] ಗಾಂಜವನ್ನು ಅಕ್ರಮವಾಗಿ ಹೊಂದಿದ್ದದಕ್ಕಾಗಿ [illegible] ನ್ಯಾಯಾಧೀಶರು [illegible] ೧೦೦ ರೂ. ದಂಡವನ್ನು ವಿಧಿಸಿರುತ್ತಾರೆ. [illegible] ಪೊಲೀಸರ ಮೋಟಾರನ್ನು ಪತ್ತೆಹಚ್ಚಿರುವರು.

COMMERCIAL INSTITUTE

Attached to

SARADAVILAS HIGH SCHOOL,

K. M. Puram, Mysore

NOTIFICATION

FRESH ADMISSIONS for Dip in Com., Dip in Sten., and TYPEWRITING, SHORTHAND & ACCOUNTANCY according to the Mysore Govt. Commercial Exams, 1954 will be received. Individual attention and Expert coaching. Further Particulars can be had during the working hours of the Institute.

Gopalakrishna Setty, B.A., B.L.,

Honorary Secretary

ವಿವಾಹ ಭಂಗಕ್ಕಾಗಿ ೫ ಜನರ ಪ್ರಾಣಹಾನಿ

[illegible]

ಭೂದಾನ ಯಜ್ಞಕ್ಕೆ

೧೮ ಲಕ್ಷ ಎಕರೆ ಜಮೀನು

[illegible] ಆಕಾಶವಾಣಿ ನಾಟಕ ಕಾರ್ಯಕ್ರಮ [illegible]

BRIGHT COLLEGE OF COMMERCE,

MYSORE

Wanted a Part-time Commerce Lecturer. Apply immediately to the Principal stating qualification, experience and other particulars.

CHAMUNDESWARI

TALKIES

[illegible]

DOUBLE ATTRACTION

March Of The Wooden Soldiers

Starring [illegible] Hardy

AND

STAMPEDE

Starring Rod Cameron and Gale Storm

ಏಳು ಸ್ತ್ರೀಯರ ಕೊಲೆಗಾರನಿಗೆ ಮರಣ ದಂಡನೆ

[illegible] ಸ್ತ್ರೀಯರನ್ನು ಕತ್ತು ಹಿಸುಕಿ ಕೊಂದುಹಾಕಿದ ಜಾನ್ ಕ್ರಿಸ್ಟಿ ಎಂಬುವನನ್ನು ಮರಣ ದಂಡನೆಗೆ ಗುರಿಪಡಿಸಲಾಗಿದೆ. ಅವನಿಗೆ [illegible] ಹೇಳಿದುದನ್ನು ಜೂರಿಗಳು ಒಪ್ಪಲಿಲ್ಲ.

ರೇಡಿಯೋದಲ್ಲಿ ಪ್ರಾಂತಗಳ ಹಳ್ಳಿ ಹಾಡುಗಳು

ಮೈಸೂರಿನ ಆಲ್ ಇಂಡಿಯಾ ರೇಡಿಯೋದವರು ಜುಲೈ ೩ನೇ ತಾ॥ ನಿಂದ ಪ್ರತಿವಾರ [illegible] ವರೆಗೆ ಭಾರತದ ನಾನಾ ಭಾಗಗಳ ಹಳ್ಳಿ ಹಾಡುಗಳ ಪ್ರಸಾರದ [illegible] ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು. ಉತ್ತರ ಪ್ರದೇಶ, ಮಹಾರಾಷ್ಟ್ರ, ಬಂಗಾಳ ಮತ್ತು ಕರ್ನಾಟಕ ಹಳ್ಳಿಗಳ ಹಾಡುಗಳನ್ನು ಮುಂದಿನ ತಿಂಗಳಲ್ಲಿ ಪ್ರಸಾರ ಮಾಡಲಾಗುವುದು.

SARADA VILAS

INTER TUTORIAL SECTION

CLASSES STARTED

From 20-6-1953

(7.30 A. M. to 9.30 A. M.)

ಹರಾಜು ನೋಟೀಸು

ಮೈಸೂರು ಒಂದನೇ ಮುನ್ಸಿಫ್‌ರವರ ಕೋರ್ಟು O. S. No. 322 of 1952 ರ [illegible] E. X. No. 268 of 1953 ರ [illegible] ಹರಾಜು [illegible] ನೇಮಿಸಿರುವ [illegible] ರಿಂದ —

[illegible] ಟೇಬಲ್‌ಗಳು [illegible] ಮಂಚಗಳು, ಕುರ್ಚಿ, ಟೇಬಲ್ ಮುಂತಾದ [illegible] ಭದ್ರತೆ [illegible] ಬೀರುಗಳು [illegible] ಹರಾಜು ಮಾಡಲಾಗುವುದು. [illegible]

ದಿನ ಮತ್ತು ಕಾಲ: ಭಾನುವಾರ 28-6-1953 ಬೆಳಿಗ್ಗೆ 10 ಗಂಟೆ

[illegible]

ಎಂ. ಪಿ. ವೆಂಕಟರಾಮಸ್ವಾಮಿ,

ಕಮೀಷನರ್

Edited, Printed and Published by A. K. Nagarajan at Sadhvi Press, D. Subbaiah Road, Mysore.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಪೈ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಎಳ್ಳು	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	[illegible]
[illegible]	[illegible]	[illegible]
ದಿಲ್ಲ	[illegible]	
[illegible]	[illegible]	[illegible]

SRI GAYATHRI

TALKIES

Daily 3 Shows

From 20-6-53 2nd Week

LAST THREE DAYS ONLY

IVANHOE

UNIVERSITY OF MYSORE

NOTIFICATION

The following University Examinations will be held from MONDAY 7th SEPTEMBER 1953 on the basis of one paper a day. The detailed time-tables will be published in the Mysore Gazette in due course.

1) Intermediate in Arts,
2) Intermediate in Science,
3) Intermediate in Commerce,
4) B. A. Degree,
5) B. Sc. Degree,
6) B. A. Honours Preliminary
7) B. Sc. Honours Preliminary
8) B. Com.,
9) Engineering,
10) Law,
11) B. Sc. (Textiles) (Final Examination only)
12) B. Sc. (Agriculture) (Final Examination only)

Applications must be sent through the Heads of Colleges concerned. The last date for receipt of applications by Heads of Colleges is SATURDAY 4th JULY 1953.

Late applications will be received with a penal fee of Rs. 1/- per day subject to a limit of Rs. 5/- upto MONDAY 20th JULY 1953.

Application forms may be obtained from the Heads of Colleges after MONDAY, 22nd JUNE 1953. Forms can be had by post by sending two annas postal stamp or a self addressed Postal cover to the Heads of Colleges.

By Order.

T. J. NORONHA

Registrar

ರಿಜಿ ನಂ. 793 WEEKLY EDITION ಅಂಚೆಯ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೨೮-೬-೧೯೫೩ [ಸಂಚಿಕೆ ೪೪

ಜಪಾನ್ ಪ್ರವಾಹದಲ್ಲಿ ೨೩೪ ಜನರ ಮರಣ

ವಿಶ್ವವಿದ್ಯಾಲಯ ಗೋಷ್ಠಿ ಪ್ರತಿನಿಧಿಗಳಿಗೆ ಸತ್ಕಾರ

ಪುರಭವನದಲ್ಲಿ ಸಮಾರಂಭ

ಮೈಸೂರು ೨೮

ರಾಜಧಾನಿಯಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ಗೋಷ್ಠಿಯ ಪ್ರತಿನಿಧಿಗಳನ್ನು ಸತ್ಕಾರಿಸಲು ಪೌರ ಸಭೆಯವರು ನೆನ್ನೆ ಪುರ ಭವನದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಪ್ರತಿನಿಧಿಗಳಲ್ಲದೆ, ಅವರ ನಾಯಕರುಗಳಾದ ಡಾ|| ಜಕೀರ್ ಹುಸೇನ್ ಮತ್ತು ಪ್ರೊ|| ಡೀನ್ ಲಿವೆಸ್ಟ್ಯಾರವರು ಬಂದಿದ್ದರು. ಅರಮನೆ ಕರ್ನಾಟಕ ಬ್ಯಾಂಡಿನವರು ಸುಶ್ರಾವ್ಯವಾದ ಗಾನವನ್ನು ಮಾಡಿದರು. ವಿದ್ವಾನ್ ರ [illegible] ಮತ್ತು ಪಾರ್ಟಿಯವರಿಂದ ವೀಣಾ ವಾದನವೂ, ಕುಮಾರಿ ಶಕುಂತಲಾ [illegible]ರಿಂದ ಭರತ ನಾಟ್ಯವೂ ಆದನಂತರ ಪೌರ ಸಭಾಧ್ಯಕ್ಷರಾದ ಶ್ರೀ ಟಿ ವೆಂಕ[illegible] ಸ್ವಾಗತ ಭಾಷಣ ಮಾಡಿ [illegible] ಪ್ರತಿನಿಧಿಗಳು [illegible] ಯಲ್ಲಿ ತೋರಿದ [illegible] ಸಂತೋಷವನ್ನು ವ್ಯಕ್ತಪಡಿಸಿದರು.

ಪ್ರೊ|| ಡೀನ್ ಲಿವೆಸ್ಟ್ಯಾರವರು ಭಾಷಣಮಾಡಿ ಪೌರ ಸಭೆಯ ಸ್ವಾಗತಕ್ಕಾಗಿ ಪ್ರತಿನಿಧಿಗಳ ಪರವಾಗಿ ಧನ್ಯವಾದವನ್ನು ಸಲ್ಲಿಸಿದರು. ಮೈಸೂರು ನಗರದಲ್ಲಿ ತಮಗೆ ದೊರಕಿದ ಸೌಲಭ್ಯಗಳೂ ಮತ್ತು ಪ್ರೀತ್ಯಾದರಗಳೂ ಬಹಳ ಆಸ್ವಾದನೀಯವಾದುವೆಂದು ಹೇಳಿ ತಾವು [illegible] ಎಂದೆಂದೂ ಮರೆಯ [illegible] ಸಿದರು. ಮೈಸೂರು ನಗರದ ಸೌಂದರ್ಯವನ್ನು ಪ್ರತ್ಯಕ್ಷ [illegible] ಕೊಂಡಾಡಿದುದಲ್ಲದೆ, ಇಲ್ಲಿ [illegible] ಕುಶಲ ಕಲಾ ವಸ್ತುಗಳನ್ನು [illegible] ತಮ್ಮ ದೇಶಗಳಿಗೆ ಹೇರಳವಾಗಿ ಕೊಂಡೊಯ್ಯುವುದಾಗಿ ತಿಳಿಸಿದರು.

ಇದಕ್ಕೆ ಮುಂಚೆ ಪೌರಸಭಾ ಭವನದಲ್ಲಿ ಪ್ರತಿನಿಧಿಗಳ ಗೌರವಾರ್ಥ ಪೌರಸಭೆಯವರ [illegible] ಕೂಟವನ್ನು ಏರ್ಪಡಿಸಿದ್ದರು. [illegible] ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಕ್ಷಿಣ ಕೊರಿಯಾ ಅಧ್ಯಕ್ಷ

[illegible] ಅಮೆರಿಕಾ ಪ್ರತಿನಿಧಿ

[illegible] ಕೊರಿಯಾ ಅಧ್ಯಕ್ಷ [illegible]ರೊಡನೆ ನಿನ್ನೆ ಅಮೆರಿಕದ ಅಧ್ಯಕ್ಷರ ಪ್ರತಿನಿಧಿ ರಾಬರ್ಟ್‌ಸನ್‌ರವರು [illegible] ಕಾಲ ಸಂಭಾಷಣೆ ನಡೆಸಿದರು. [illegible] ದಲ್ಲಿ ಶಾಂತಿ ಸ್ಥಾಪನೆಯಾಗ[illegible] ಒಪ್ಪಂದ [illegible] ಬಗ್ಗೆ ಅವರು [illegible] ಮಾಡಿಕೊಂಡರೆಂದು ಹೇಳಲಾಗಿದೆ.

ಮುಖ್ಯ ದೇವಾಲಯಗಳ ಆಡಳಿತ ಕೇಂದ್ರಕ್ಕೆ

ದೇಶದಲ್ಲಿರುವ ಮುಖ್ಯವಾದ ದೇವಾಲಯಗಳ ಆಡಳಿತವನ್ನು ಕೇಂದ್ರ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಲಿರುವರೆಂದು ವರದಿಯಾಗಿದೆ. ಈ ಸಂಬಂಧವಾಗಿ ಪ್ರಾಂತ ಸರ್ಕಾರಗಳು ಮುಖ್ಯ ದೇವಾಲಯಗಳ ಬಗ್ಗೆ ವಿವರಗಳನ್ನು ಒದಗಿಸುವಂತೆ ಸೂಚಿಸಲಾಗಿದೆ.

ರೈಲ್ವೆ ನೌಕರರ ಸಂಸ್ಥೆಯ ಅಧ್ಯಕ್ಷರು

[illegible] ಪ್ರಿಯನಾ[illegible]

ಮೈಸೂರು ೨೮

ನೂತನವಾಗಿ ರಚಿತವಾದ ಭಾರತದ ರೈಲ್ವೆ ನೌಕರರ ರಾಷ್ಟ್ರೀಯ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಹರಿಹರನಾಥ ಶಾಸ್ತ್ರಿಯವರನ್ನು ಚುನಾಯಿಸಲಾಗಿದೆ. ವಾರ್ಧಾ ಕೇಂದ್ರ ರೈಲ್ವೆ ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಪೂರ್ವ ರೈಲ್ವೆ [illegible] ಪರೀಕ್ಷಕ [illegible] ಬಂದಿದ್ದವರು [illegible] ಮಾಜಿ ಅ|| ಭಾ|| ರೈಲ್ವೆ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಎಸ್ ಗುರುಸ್ವಾಮಿಯವರು [illegible] ಆರಿಸಲ್ಪಟ್ಟರು. ದಕ್ಷಿಣ ರೈಲ್ವೆ ವರ್ಕ್‌ಷಾಪಿನ ಮೋಸ್ಟ್ರಿ ಶ್ರೀ ಟಿ ವಿ ಆನಂದರವರನ್ನು ಸಹಾಯಕ ಕಾರ್ಯದರ್ಶಿಯಾಗಿ ತೆಗೆದುಕೊಳ್ಳಲಾಗಿದೆ. ಕಾರ್ಯಕಾರಿ ಸಮಿತಿಗೆ ಪ್ರಮುಖರಾದ ಜಯಪ್ರಕಾಶ ನಾರಾಯಣ್ ಮತ್ತು ಖಂಡೂಭಾಯಿ ದೇಸಾಯಿ [illegible] ಸದಸ್ಯರಾಗಿದ್ದಾರೆ. ಸಂಸ್ಥೆಯ ಕೇಂದ್ರ ಕಛೇರಿಯು ದೆಹಲಿಯಲ್ಲಿರುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಅರಿಯಕುಡಿ ರಾಮಾನುಜಯ್ಯಂಗಾರ್ ರಿಕಾರ್ಡ್ ಮಧ್ಯಾಹ್ನ ೧-೩೦ ನಾಗಸ್ವರ ರಿಕಾರ್ಡ್ ಸಂಗೀತ ಸಂಜೆ ೫.೩೦ ಮತ್ತು ೬-೩೦ ರಾಜಲಕ್ಷ್ಮಿ ಶ್ರೀನಿವಾಸನ್ ಪಿಟೀಲು ೬-೧೦ ಗಾನವಿಹಾರ ೭ ರಿಕಾರ್ಡ್ ಸಂಗೀತ ೭-೧೦ ಗೀತಾಂಜಲಿ ೭-೨೫ ಕನ್ನಡದಲ್ಲಿ ಚರ್ಚೆ ೮ ಮತ್ತು ೯ ೩೦ ಎಂ ಪಿ ಮಾಲತಿ ಸಂಗೀತ ೯-೧೫ ಕೆ ಸುರದತ್ ಇಂಗ್ಲಿಷ್‌ನಲ್ಲಿ ಪುಸ್ತಕ ವಿಮರ್ಶೆ

ಡಿ. ಸುಬ್ಬಮ್ಮನವರ ನಿಧನ

ರಾಜಧಾನಿಯ ಅರಸು ಬೋರ್ಡಿಂಗ್ ಗರ್ಲ್ಸ್ ಸ್ಕೂಲಿನಲ್ಲಿ ಮೇಟ್ರನ್ ಆಗಿ ನಂತರ ನಿವೃತ್ತರಾಗಿದ್ದ ಶ್ರೀಮತಿ ಡಿ ಸುಬ್ಬಮ್ಮನವರು ಕಳೆದ ೨೪ನೇ ತಾರೀಕು ತಿಪಟೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಚಿತ್ರದುರ್ಗದ ಬಾಲಿಕೆಯರ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದರು.

ಜಪಾನಿನಲ್ಲಿ ಪ್ರವಾಹದಿಂದ ೨೩೪ ಮರಣಗಳು

ಜಪಾನಿನ ದಕ್ಷಿಣ ಭಾಗದ ಕ್ಯೂಷು ದ್ವೀಪದಲ್ಲಿರುವ ಎರಡು ನದಿಗಳಲ್ಲಿ ನೆನ್ನೆ ವಿಪರೀತ ಪ್ರವಾಹ ಬಂದು ಇದುವರೆಗೆ ೨೩೪ ಮಂದಿ ಮಡಿದು, ೬೮೫ ಜನರು ಪತ್ತೆಯಿಲ್ಲವಾಗಿರುತ್ತಾರೆ. ೩೦ ಮೈಲಿ ಉದ್ದದಷ್ಟು ಪ್ರದೇಶವು ಸರೋವರದಂತೆ ಪರಿಣಮಿಸಿ, ೩೦ ಸಾವಿರ ಜನರು ನಿರಾಶ್ರಿತರಾಗಿರುವರು.

ನದಿಗೆ ಬಿದ್ದು ಆತ್ಮಹತ್ಯೆ

ಚಿಕ್ಕನಾಯಕನಹಳ್ಳಿಯ ಹೊಸ ಟೌನ್ ಮಾಧ್ಯಮಿಕ ಶಾಲಾ ಉಪಾಧ್ಯಾಯರಾದ ಶ್ರೀ ಸತ್ಯನಾರಾಯಣರಾಯರ ಪತ್ನಿ ೨೪ ವರ್ಷ ವಯಸ್ಸಿನ ಗಂಗಾಬಾಯಿ ಎಂಬುವರು ಜೀವನದಲ್ಲಿ ಜಿಗುಪ್ಸೆ ಹುಟ್ಟಿ ಭದ್ರಾ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ.

ಎವರೆಸ್ಟ್ ಶಿಖರದಲ್ಲಿರುವ ಜಾಗವೆಷ್ಟು?

ಎವರೆಸ್ಟ್ ಶಿಖರವನ್ನು ಹತ್ತಿದ ಟೇನ್ಸಿಂಗ್ ಮತ್ತು ಹಿಲಾರಿಯವರು ಶಿಖರದ ಎತ್ತಿ ವಿವರಣೆಯಿತ್ತಿರುವರು. ಮಂಜುಗಡ್ಡೆಯು ಇಲ್ಲದಿದ್ದರೆ, ಶಿಖರದ ತುದಿಯ ಮೇಲೆ ಇಬ್ಬರು ನಿಲ್ಲಬಹುದೆಂದೂ ಆ ಸ್ಥಳಕ್ಕೆ ೨೦-೩೦ ಅಡಿ ಕೆಳಗೆ ಇಬ್ಬರು ಮಲಗಿಕೊಳ್ಳಲು ಅವಕಾಶವಾಗುವಂತಹ ವಿಸ್ತಾರವಾದ ಸ್ಥಳವು ಇರುವುದಾಗಿಯೂ ಹೇಳಲಾಗಿದೆ. ಶಿಖರದ ಉತ್ತರ ಭಾಗದಲ್ಲಿ ಮಂಜು ತುಂಬಿ, ದಕ್ಷಿಣದ ಕಡೆ ಕಲ್ಲು ಬಂಡೆಯಿರುತ್ತದೆ.

ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ದುರ್ಘಟನೆ

ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಮೊನ್ನೆ ಸಂಜೆ ವಿಮಾನ ಕಾರ್ಖಾನೆಯಿಂದ ಬಂದ ರೈಲು ಸೈಡಿಂಗಿಗೆ ವಾಪಸಾಗುತ್ತಿದ್ದಾಗ, ೮ ವರ್ಷದ ಬಾಲನೊಬ್ಬನು ರೈಲಿನ ಹಿಂಭಾಗದಲ್ಲಿ ಹೋಗುತ್ತಾ ರೈಲಿಗೆ ಸಿಕ್ಕಿ ತಪ್ಪಿಸಿಕೊಳ್ಳಲೆತ್ನಿಸಿದನೆಂದೂ, ಅವನನ್ನು ಉಳಿಸಲು ಹೋದ ಜಾಯಿಂಟ್ಸ್‌ಮನ್ ಗಣೇಶಪ್ಪ ಎಂಬುವನ ತಲೆಯು ವೇಗ್ಯಾಗನ್ನು ರೈಲಿಗೆ ಸಿಕ್ಕಿ ಜಖಂ ಹೋಗಿ ಮೃತನಾದನೆಂದೂ ವರದಿಯಾಗಿದೆ. ಬಾಲಕನ ಕಾಲ್ಬೆರಳುಗಳು ಕತ್ತರಿಸಿ ಹೋಗಿವೆ.

ಹೈಕೋರ್ಟಿಗೆ ಅಂಜನಪ್ಪನವರ ರಿಟ್ ಅರ್ಜಿ

ಬೆಂಗಳೂರು ೨೮

ಮೈಸೂರಿನ ಅಬ್ಕಾರಿ ಕಂಟ್ರಾಕ್ಟರ್ ಆದ ಶ್ರೀ ಕೆ ಎಂ. ಅಂಜನಪ್ಪನವರು ನೆನ್ನೆ ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ, ಶ್ರೀರಂಗಪಟ್ಟಣ ತಾಲ್ಲೂಕಿನ [illegible] ಮತ್ತು ಪಾಂಡವಪುರ ತಾಲ್ಲೂಕಿನ [illegible] ಹರಾಜು ಅಂಗಡಿಗಳನ್ನು ಹೊಸ ಹರಾಜು ಮೂಲಕವಾಗಲಿ ಅಥವಾ ಟೆಂಡರ್ ಮೂಲಕವಾಗಲಿ ವಿಲೇವಾರಿ ಮಾಡುವಂತೆ ಸರ್ಕಾರಕ್ಕೆ ಸೂಚನೆ ಕೊಡಬೇಕೆಂದು ಕೋರಿದ್ದಾರೆ. ಮೊದಲು ತಿಳಿಸಿದಂತೆ ಅಂಗಡಿಗಳ ಹರಾಜು ಹಾಕಿದ ನಂತರ ಟೆಂಡರನ್ನು ಕರೆಯಲಾಯಿತೆಂದೂ, ತಾವು ಕೊಟ್ಟ ಟೆಂಡರನ್ನು ಒಪ್ಪದೆ, ಟೆಂಡರ್ ಬಗ್ಗೆ ಹೊರಡಿಸಿದ್ದ ಪ್ರಕಟಣೆಯನ್ನು ರದ್ದು ಮಾಡಿರುವುದಾಗಿ ತಮಗೆ ತಿಳಿಸಲಾಯಿತೆಂದೂ, ಅನಂತರ ಮಂತ್ರಿಗಳೂ ತಮ್ಮ ಅಪೀಲನ್ನು ವಜಾ ಮಾಡಿದ ದಾಗಿಯೂ ಅರ್ಜಿದಾರರು ನಮೂದಿಸಿರುತ್ತಾರೆ. ಈ ಸರ್ಕಾರಿ ಆಜ್ಞೆಯು ರದ್ದಾಗಬೇಕೆಂದು ಅವರು ಪ್ರಾರ್ಥಿಸಿರುತ್ತಾರೆ.

ಸರ್ಕಾರಿ ರಿಕಾರ್ಡುಗಳ ಅಪಹಾರ ಮತ್ತು ಪತ್ತೆ

ಚಿತ್ರದುರ್ಗದಲ್ಲಿ ೩ ವಿದ್ಯಾರ್ಥಿಗಳ ದಸ್ತಗಿರಿ

ಚಿತ್ರದುರ್ಗ ಜಿಲ್ಲಾ ವಿದ್ಯಾಧಿಕಾರಿ ಮತ್ತು ರಿಸರ್ವಿಂಗ್ ಅಧಿಕಾರಿ ಕಛೇರಿಗಳ ಹಲವು ಮುಖ್ಯವಾದ ರಿಕಾರ್ಡುಗಳು ಕಳೆದ ೨೫ ನೇ ತಾ|| ಪತ್ತೆಯಿಲ್ಲವಾದ ಸಂಬಂಧದಲ್ಲಿ ಪೊಲೀಸರು ಪತ್ತೆಕರದೂ ಮ. ನಡೆಸಿ, ಅಲ್ಲಿನ ಶ್ರೀ ಸುಬ್ಬಯ್ಯ ಶೆಟ್ಟಿ ಎಂಬುವರ ಅಂಗಡಿಯಲ್ಲಿ ಶೋಧನೆ ಮಾಡಿ ಅವುಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡರೆಂದೂ, ಸರ್ವಿಸ್ ಮತ್ತು ಪೇಷಲ್ ರಿಜಿಸ್ಟರುಗಳು, ಲೆಕ್ಕದ ಪುಸ್ತಕ ಪತ್ರ ವ್ಯವಹಾರಕ್ಕೆ ಸಂಬಂಧಿಸಿದ ರಿಕಾರ್ಡುಗಳು ಮತ್ತು ಗ್ರಂಥಗಳು ದೊರಕಿರುವೆಂದೂ ಹೇಳಲಾಗಿದೆ. ಅಲ್ಲಿನ ಸ್ಕೂಲ್ ಫೈನಲ್ ತರಗತಿಯ ೧೭ ವಯಸ್ಸಿನ ಚನ್ನಬಸಪ್ಪ, ನಾಲ್ಕನೇ ಫಾರಂ ವಿದ್ಯಾರ್ಥಿ ೧೪ ವಯಸ್ಸಿನ ತಿಪ್ಪೇರುದ್ರಪ್ಪ, ಲೋವರ್ ಸೆಕೆಂಡರಿಯ ೧೬ ವರ್ಷದ ಬಸಲಿಂಗಪ್ಪ ಎಂಬ ಮೂರು ಹುಡುಗರನ್ನು ದಸ್ತಗಿರಿ ಮಾಡಲಾಗಿದೆ.

ವಿದ್ಯಾಮಂದಿರದ ಸ್ಥಳ ಬದಲಾವಣೆ

ರಾಜಧಾನಿಯ ಹಳೇ ಬೊಂಬೂ ಬಜಾರು ರಸ್ತೆಯಲ್ಲಿದ್ದ ಮೇಲ್ಕಂಡ ವಿದ್ಯಾಮಂದಿರವನ್ನು ಕಬೀರ್ ರಸ್ತೆ, ಎಲ್ಲನವರ ದೇವಸ್ಥಾನದ ಬಳಿಗೆ ವರ್ಗಾಯಿಸಲಾಗಿದೆ. ಈ ಮಂದಿರದ [illegible] ಎಂ ಎಸ್ ಪರೀಕ್ಷೆಗೂ [illegible] ತರಗತಿಗಳಿಗೂ ಹಿಂದಿ [illegible] ಎಸ್ ಎಸ್ [illegible] ಗಳಿಗೆ ತೋರಿದ [illegible] ಶಿಕ್ಷಣ ಕೊಡಲಾಗುವುದು. ಕನ್ನಡ ಸಾಹಿತ್ಯ ಪರಿಷತ್ತಿನ [illegible], ಈ ಪರೀಕ್ಷೆಗಳಿಗೂ [illegible] ಹಿಂದೀ ಪ್ರಚಾರ ಪರಿಷತ್ತಿನ [illegible] ಕೊಡಲಾಗುವುದು.

ವಾರ ಭವಿಷ್ಯ

೨೮-೬-೫೩ರಿಂದ ೪-೭-೫೩ರ ವರೆಗೆ

ಮೇಷ — ಆಕಸ್ಮಿಕ ಘಟನೆ, ಆರೋಗ್ಯ ನೆಟ್ಟಗಿರದು, ಧನಿಕರಿಂದ ಸಹಾಯ, ಸಂಸಾರ ಸುಖ, ಪರೀಕ್ಷೆಯಲ್ಲಿ ತೇರ್ಗಡೆ ತಾ|| ೨೮, ೧ ಶುಭ ವಾರ್ತೆ, ಹಣದ ಲಾಭ

ವೃಷಭ — ಆರೋಗ್ಯ ನೆಟ್ಟಗೆ, ಸಂಸಾರಕ್ಕಾಗಿ ವಿಶೇಷ ವೆಚ್ಚ, ಯಾರನ್ನೂ ನಂಬದಿರಿ, ಸತತ ಶ್ರಮದಿಂದ ಜಯ. ತಾ|| ೨, ೩ ಮಹತ್ವದ ಪತ್ರ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಯಶ.

ಮಿಥುನ — ಆರೋಗ್ಯದ ಕಡೆ ಗಮನವಿರಲಿ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭಹಾನಿಗಳಿಲ್ಲ, ಆರ್ಥಿಕ ಸ್ಥಿತಿ ಸಾಧಾರಣ, ಅಲ್ಪರ ಸಹವಾಸದಿಂದ ಮಾನ ಭಂಗದ ಸಂಭವ ತಾ|| ೨೮, ೨೯ ದ್ರವ್ಯ ಹಾನಿ, ನಿದ್ರಾ ಭಂಗ [illegible]

ಸಿಂಹ — ಆರೋಗ್ಯ, ಆರ್ಥಿಕ ಸ್ಥಿತಿ ನೆಟ್ಟಗೆ ಮಾನ ಸನ್ಮಾನ, ವ್ಯಾಪಾರಿಗಳಿಗೆ ಲಾಭ, ಲೇಖಕರಿಗೆ ಯಶ ತಾ|| ೨, ೩ ದಾನ ಧರ್ಮ, ಬಂಧು ದರ್ಶನ

ಕನ್ಯಾ — ಆರೋಗ್ಯದ ಕಡೆ ಲಕ್ಷ್ಯವಿರಲಿ ಕಷ್ಟಕ್ಕೆ ತಕ್ಕ ಫಲ ಲಾಭ, ವ್ಯಾಪಾರಾದಿಗಳಲ್ಲಿ [illegible], ಆರ್ಥಿಕ, ಮಾನಸಿಕ ಸ್ಥಿತಿ [illegible] ತಾ|| ೨೯, ೩ ಮಹತ್ವಾಕಾರ್ಯದ ಬಗ್ಗೆ [illegible]

ತುಲಾ — [illegible] ವ್ಯಾಪಾರಾದಿಗಳಲ್ಲಿ [illegible] ಆರೋಗ್ಯ ಉತ್ತಮ, [illegible] ಉತ್ತೇಜನ [illegible]

ಶ್ರೀ ಮುಕ್ಕಿಡೆ

ಡೋರ್ ನಂಬರ್ 59.

ಗೊಲ್ಲಗೇರಿ

ಕೂಡಲೇ ಸ್ವಾಧೀನ ಕೊಡಲಾಗುತ್ತದೆ

[illegible] 4,000 ರೂ [illegible]

ವಿವರಗಳಿಗೆ —

ಜನತಾ ಲ್ಯಾಂಡ್ ಕಂಪೆನಿ,

ಮನೆ, ಜಮೀನು ಮಾರಾಟಗಾರರ ಏಜೆಂಟರು

[illegible] ಮೈಸೂರು [illegible] ಕಟ್ಟಡ,

ಮೈಸೂರು.

ರಾಜಕಮಲ್, ಮೈಸೂರು

[illegible]

ಸೌಭಾಗ್ಯ ಲಕ್ಷ್ಮಿ

ಪ್ರತಿ [illegible]

[illegible]

ಮೈಸೂರಿನ ನಿರಾಶ್ರಿತರಿಗೆ ೨೪,೦೦೦ ರೂ.

ಮೈಸೂರಿನಲ್ಲಿರುವ ನಿರಾಶ್ರಿತರಿಗೆ ಈ ವರ್ಷ ೨೪ ಸಾವಿರ ರೂ ಗಳನ್ನು ಕೊಡಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ವಿದ್ಯಾಭ್ಯಾಸ ಸಹಾಯ ದ್ರವ್ಯ ಮತ್ತು ಶಿಬಿರಗಳಲ್ಲಿರುವವರಿಗೆ ಸಾಲ. ಇವುಗಳನ್ನು ಪ್ರತ್ಯೇಕವಾಗಿ ಕೊಡಲಾಗುವುದು.

ಭಾಗ್ಯಗಳ ಆಗಮನ.

ವೃಶ್ಚಿಕ — ದುರುದ್ದೇಶ ಬಿಡಿರಿ, ಗ್ರಹಗಳ ವಕ್ರ ಗತಿ, ಆರೋಗ್ಯ ನೋಡಿಕೊಳ್ಳಿ, ಆರ್ಥಿಕ, ಮಾನಸಿಕ ಸ್ಥಿತಿ ಚಂಚಲ, ವ್ಯಾಪಾರಾದಿಗಳಲ್ಲಿ ಕಲಹ ಪ್ರವಾಸದಲ್ಲಿ ಹಾನಿ. ತಾ|| ೩೦, ೧ ವಿರಸ, ಅಗ್ನಿ, ವಿದ್ಯುತ್ ಭಯ.

ಧನು — ಆರೋಗ್ಯ ಶಕ್ಯವುಳ್ಳ [illegible] ವ್ಯರ್ಥ ಖರ್ಚು, [illegible] ದ್ರವ್ಯ [illegible]

ಮಕರ — ಸಮಾಜ ಸೇವೆ, ಧಾರ್ಮಿಕ ಕಾರ್ಯ, ಹತ್ತಿರದವರ ವಿವಾಹ. ಲಾಭದಾಯಕ ಘಟನೆ, ಆರ್ಥಿಕ ಸ್ಥಿತಿ ಉತ್ತಮ ತಾ|| ೧, ೩ ಮಹತ್ವದ ಪತ್ರಾಗಮನ

ಕುಂಭ — ಆರೋಗ್ಯ ನೆಟ್ಟಗೆ, ಮನೆಯಲ್ಲಿ ಮಂಗಳ ಕಾರ್ಯ, ಖರ್ಚು ಹೆಚ್ಚು, ಕೊರತೆ ಇಲ್ಲ ತಾ|| ೨೮, ೨೯ ವಕ್ಕಳಿಗೆ ಕ್ಲೇಶವಿರದು, ವ್ಯಾಪಾರಾದಿಗಳಲ್ಲಿ ತೊಂದರೆ ಇಲ್ಲ

ಮೀನ — ಆರೋಗ್ಯ ನೋಡಿಕೊಳ್ಳಿ, ಪ್ರವಾಸ ಕಷ್ಟದಾಯಕ ತಾ|| ೧, ೩ ಹಣಗ [illegible]

The Central College Of Commerce,

Dr. Vanivilas Market Buildings
MYSORE

Admissions to D Com, Dip in sten, Short-hand & Typewriting will be received on all working days
Join immediately

C. T. C.

Near V V Markets Mysore
[NEW BUILDINGS]

Courses open for the
Supplementary Examinations
Of Sept. 1953

★ B A. & B Sc. — English
★ INTER English
Kannada
[illegible]
★ [illegible]

For Particulars
CITY TUTORIAL COLLEGE,
MYSORE

Estd 1917
THE CHAMPION METROPOLITAN COLLEGE OF COMMERCE,
Co-operators Home 100 Feet Road MYSORE

Principal	Vice Principal
P Subbaraya Sastry	**M S Puttanna**
M.A. M A. (Com) C E T D (Lon) P C T (Lon)	B Sc N D Com (GOI) F I.B. (Lon)

NOTIFICATION

ADMISSIONS to the several certificate and diploma courses in
Commerce, Typewriting Shorthand, Accountancy Banking Etc.
are now being received in the Mornings & Evenings on all working days

SRI GAYATHRI TALKIES

TO-MORROW (MONDAY) LAST DAY

DAILY 3 SHOWS

ಲಗ್ನದ ಜವಳಿಗಳಿಗೆ

ಮೈಸೂರು ಸಿಲ್ಕು, ಧರ್ಮಾವರಂ, ಆರ್ಡಿ ನವೀನ ನೂಲಿನ ಸೀರೆಗಳಿಗೆ

M.V. ಸುಬ್ರಹ್ಮಣ್ಯಂ (ಫೋನ್ 446)
ಬಿ ಎ., ಇಂಡಿಯಾ ಬ್ಯಾಂಕ್ ಎದುರು. ಮೈಸೂರು

Edited, Printed and Published by A.R. Nagarajan at Sadhvi Press, D. Subbiah Road, Mysore.

ರಿಜಿ ನಂ. 792 ‖ ವಂದೇ ಮಾತರಂ ‖ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೯-೬-೧೯೫೩ [ಸಂಚಿಕೆ ೨೬೩

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳ ಭೇಟಿ

ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರನ್ನು ಕರಾಚಿಯಲ್ಲಿ ಶೀಘ್ರದಲ್ಲೇ ಪ್ರಧಾನಿ ನೆಹರೂರವರು ಭೇಟಿ ಮಾಡಲಿರುವರು ಭೇಟಿಯ ದಿನವನ್ನು ಗೊತ್ತುಪಡಿಸಿಲ್ಲವಾದರೂ ನೆಹರೂರವರು ಅಲ್ಲಿ ಎರಡು ದಿನಗಳ ವರೆಗೆ ಇರುವರು. ಭಾರತ ಮತ್ತು ಪಾಕಿಸ್ತಾನಗಳ ನಡುವೆ ದೀರ್ಘವಾದ ಮಾತುಕತೆ ನಡೆಸಲು ಪಾಕಿಸ್ತಾನದ ಪ್ರಧಾನಿಯವರು ಅನಂತರ ದೆಹಲಿಗೆ ಬರುವರೆಂದು ಹೇಳಲಾಗಿದೆ

ಪಾಕಿಸ್ತಾನವೂ ಜಾತ್ಯತೀತ ರಾಷ್ಟ್ರ?

ಪಾಕಿಸ್ತಾನವನ್ನು ಜಾತ್ಯತೀತ ರಾಷ್ಟ್ರವಾಗಿ ಮಾಡಲಾಗುವುದೆಂದು ತಿಳಿದು ಬಂದಿದೆ ಶಾಸನ ಸಭೆಗಳಿಗೆ ಹೊಲ್ಪಟ್ಟ ಮುಸ್ಲಿಂ ಗುರುಗಳ ಸಮಿತಿಗಳು ಇರುವುದಿಲ್ಲವೆಂದೂ ಪಾಕಿಸ್ತಾನಕ್ಕೆ ಮುಸ್ಲಿಮನೇ ಅಧ್ಯಕ್ಷನಾಗಬೇಕೆಂಬ ಅಂಶವನ್ನು ರಾಜ್ಯಾಂಗದ ಕರಡಿನಿಂದ ತೆಗೆದು ಹಾಕಲಾಗುವುದೆಂದೂ ವರದಿಯಾಗಿದೆ ಆಗಸ್ಟ್ ೧೪ನೇ ತಾ|| ಸ್ವಾತಂತ್ರ್ಯ ದಿನದಂದು ಪಾಕಿಸ್ತಾನ್ ರಿಪಬ್ಲಿಕ್ ರಾಷ್ಟ್ರವಾಗುವುದೆಂದು ಗೊತ್ತಾಗಿದೆ

ವಿಶ್ವಸಂಸ್ಥೆ ಅಧಿವೇಶನವಿಲ್ಲ

ಕೊರಿಯದ ಪರಿಸ್ಥಿತಿಯನ್ನು ಕುರಿತು ಪರಿಶೀಲನೆ ನಡೆಸಲು ವಿಶ್ವಸಂಸ್ಥೆ ಸಾಧಾರಣ ಸಭೆಯ ಜರೂರು ಅಧಿವೇಶನವನ್ನು ಈಗ ಕರೆಯುವುದು ಸೂಕ್ತವಲ್ಲವೆಂದು ಸಂಸ್ಥೆಯ ಅಧ್ಯಕ್ಷ ಲೆಸ್ಟರ್ ಪಿಯರ್ಸನ್ ಮತ್ತು ಕಾರ್ಯದರ್ಶಿ ಡ್ಯಾಗ್ ಹ್ಯಾಮರ್‌ಷೋಲ್ಡ್‌ರವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ

ಬೊಂಬಾಯಿಯಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಪ್ರತ್ಯೇಕ

ನಾಳಿದ್ದಿನಿಂದ ಬೊಂಬಾಯಿ ಸಂಸ್ಥಾನದಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲಾಗುವುದು ಈ ರೀತಿಯ ವ್ಯವಸ್ಥೆಯು ಆಗಿರುವುದು ಭಾರತದಲ್ಲೆಲ್ಲಾ ಇದೇ ಮೊದಲು

ಹೊಸ ಪೌಷ್ಟಿಕ ಆಹಾರ

ರಾಜಧಾನಿಯ ಕೇಂದ್ರ ಆಹಾರ ಸಂಶೋಧನಾಲಯದವರು ವಿಟಮಿನ್ ಬಿ, ಲೋಹ ಮತ್ತು ಪ್ರೋಟೀನುಗಳುಳ್ಳ ಹೊಸ ಪೌಷ್ಟಿಕ ಆಹಾರವನ್ನು ಕಂಡುಹಿಡಿದಿರುತ್ತಾರೆ ಮುಸುಕಿನ ಜೋಳದ ಹಿಟ್ಟು, ಹಾಲಿನ ಕೆನೆ, ಕಡಲೆಕಾಯಿ ಹಿಂಡಿ, ಮುಂತಾದ ಪದಾರ್ಥಗಳನ್ನು ಈ ಆಹಾರ ತಯಾರಿಕೆಗೆ ಸಂಯೋಜಿಸಲಾಗಿದೆ ಅಕ್ಕಿರಾಳಿನ ರೂಪದಲ್ಲಾಗಲಿ ಅಥವಾ ಸಮೋಲಿನಾದಂತಾಗಲಿ ಇದನ್ನು ತಯಾರಿಸಬಹುದೆಂದು ಹೇಳಲಾಗಿದೆ

ಕೆನಡಾಕ್ಕೆ ಕಾಮೇಶ್ವರಮ್ಮನವರು

ಇಲ್ಲಿನ ಪ್ರದೇಶ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರಾದ ಶ್ರೀಮತಿ ಕಾಮೇಶ್ವರಮ್ಮನವರು ಕೆನಡದ ಟೊರಾಂಟೊವಿನಲ್ಲಿ ಸೇರಲಿರುವ ಅಂತರ ರಾಷ್ಟ್ರೀಯ ಮಹಿಳಾ ಸಮ್ಮೇಳನಕ್ಕೆ ಭಾರತದ ಇಬ್ಬರು ಪ್ರತಿನಿಧಿಗಳ ಪೈಕಿ ಒಬ್ಬರಾಗಿ ಜುಲೈ ೨೦ನೇ ತಾ|| ಪ್ರಯಾಣ ಮಾಡುವರೆಂದು ಗೊತ್ತಾಗಿದೆ.

ಭಾರತೀಯರ ಮೇಲೆ ಆಫ್ರಿಕ ಪೋಲೀಸ್ ಧಾಳಿ

ಶಾಂತಿ ಸ್ಥಾಪನೆ ನಂತರ ಕೊರಿಯಕ್ಕೆ ಭಾರತದ ಸೈನ್ಯ

ಕೊರಿಯದಲ್ಲಿ ಶಾಂತಿಯುತವಾದ ಕೆಲವು ಕಾರ್ಯಗಳನ್ನು ನಡೆಸುವಾಗ ಸೂಕ್ತ ಕಾಲದಲ್ಲಿ ಮಾತ್ರ ಅಲ್ಲಿಗೆ ಭಾರತದ ಸೈನ್ಯಗಳನ್ನು ಕಳುಹಲಾಗುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಕೊರಿಯದಲ್ಲಿ ಭಾರತದ ಸೈನಿಕರು ಯಾರೊಡನೆಯೂ ಕಾದಾಡುವುದಿಲ್ಲವೆಂದೂ ಅವರು ಹೇಳಿರುವರು

ಈಜಿಪ್ಟಿನ ಮಾಜಿ ರಾಣಿಯ ಪುನರ್ವಿವಾಹ?

ಈಜಿಪ್ಟನ್ನು ರಿಪಬ್ಲಿಕ್ ರಾಷ್ಟ್ರವೆಂದು ಘೋಷಿಸಿರುವುದರಿಂದ ಅಲ್ಲಿನ ಮಾಜಿ ದೊರೆ ಫರೂಕರ ಪತ್ನಿ ನರಿಮಾನರವರು ಮತ್ತೊಂದು ವಿವಾಹವಾಗುವ ಅವಕಾಶವು ದೊರೆತಿರುವುದಾಗಿ ವರದಿಯಾಗಿದೆ ತನ್ನ ಮಗುವನ್ನು ನೋಡಲು ಅವಕಾಶ ಬೇಕೆಂದು ಆಕೆಯು ಬೇಡಿದ್ದಳೆಂದೂ, ಅದು ಸಿಗದಿದ್ದರೆ ದಾಂಪತ್ಯ ವಿಚ್ಛೇದನ ಮಾಡಿಕೊಳ್ಳುವುದಾಗಿ ಆಕೆಯು ಫರೂಕರಿಗೆ ತಿಳಿಸಿದ್ದುದಾಗಿಯೂ ಹೇಳಲಾಗಿದೆ

ಪ್ರವಾಹಕ್ಕಾಗಿ ಮನೆಯಿಂದ ಮನೆಗೆ ಹೋಗಲು ದೋಣಿ

ಬಿಹಾರಿನ ಕೋಸಿ ನದಿಯಲ್ಲಿ ಪ್ರವಾಹ ಬಂದು ೨೦ ಗ್ರಾಮಗಳಿಗೆ ನೀರು ನುಗ್ಗಿ, ಒಂದು ಮನೆಯಿಂದ ಮತ್ತೊಂದಕ್ಕೆ ಹೋಗಲು ದೋಣಿಗಳನ್ನು ಉಪಯೋಗಿಸುವಂತಾಗಿರುವುದೆಂದು ವರದಿಯಾಗಿದೆ. ೨೦ ಸಾವಿರ ಜನರು ನಿರಾಶ್ರಿತರಾಗಿರುವರು.

ಜಪಾನ್ ಪ್ರವಾಹಕ್ಕೆ ೩೭೬ ಮಂದಿ ತುತ್ತು

ಜಪಾನಿನ ದಕ್ಷಿಣ ದ್ವೀಪ ಕಿಯೂಷಿಯಲ್ಲಿ ಪ್ರವಾಹದ ಪರಿಣಾಮವಾಗಿ ಇದುವರೆಗೆ ೩೭೬ ಮಂದಿ ಮಡಿದರೆಂದೂ, ೧೧೨೬ ಜನರು ಪತ್ತೆಯಿಲ್ಲವೆಂದೂ ಹೇಳಲಾಗಿದೆ ೯೩೪ ಜನರು ಆಸ್ಪತ್ರೆಗಳಿಗೆ ಸೇರಿಸಲ್ಪಟ್ಟಿರುವರು. ಕುಡಿಯುವ ನೀರಿನ ಅಭಾವವು ಒಂದು ಭಾರಿ ಸಮಸ್ಯೆಯಾಗಿ, ಅಮೆರಿಕದ ವಿಮಾನಗಳು ನೀರನ್ನು ಶುದ್ಧಿ ಮಾಡುವ ಯಂತ್ರಗಳನ್ನು ಪ್ರವಾಹ ಪೀಡಿತ ಪ್ರದೇಶಗಳಿಗೆ ಸಾಗಿಸುತ್ತಿವೆ

ಹಿಂದುಳಿದ ಪಂಗಡಗಳ ಸಮಿತಿ ಸದಸ್ಯರ ಆಗಮನ

ಬೆಂಗಳೂರು ೨೮

ಹಿಂದುಳಿದ ಪಂಗಡಗಳಿಗೆ ಸೇರಿರುವ ಜನರ ಪಟ್ಟಿ ಮಾಡುವ ಸಂಬಂಧವಾಗಿ ತನಿಖೆ ನಡೆಸಲು ರಾಷ್ಟ್ರಾಧ್ಯಕ್ಷರಿಂದ ನೇಮಕವಾಗಿರುವ ಸಮಿತಿಯವರು ನಾಳೆ ಇಲ್ಲಿಗೆ ಆಗಮಿಸುವರು ಜುಲೈ ೧ನೇ ತಾ|| ವರೆಗೂ ಅವರು ಸಂಸ್ಥಾನದ ಹಲವು ಕಡೆ ಪ್ರವಾಸವನ್ನು ಕೈಗೊಳ್ಳುವರು ಹಿಂದುಳಿದವರ ಯೋಗಕ್ಷೇಮದಲ್ಲಿ ಆಸಕ್ತರಾಗಿರುವ ಸಂಘಗಳು ಮತ್ತು ವ್ಯಕ್ತಿಗಳಿಂದ ಅವರು ಮನವಿಗಳನ್ನೂ, ಅರ್ಜಿಗಳನ್ನೂ ಸ್ವೀಕರಿಸುವರು ಆಚಾರ್ಯ ಕಾಕಾ ಕಾಲೇಲ್ಕರ್‌ರವರು ಸಮಿತಿಯ ಅಧ್ಯಕ್ಷರು ಸಮಿತಿಯಲ್ಲಿ ಮೈಸೂರು ಶಾಸನ ಸಭಾ ಸದಸ್ಯರಾದ ಶ್ರೀ ಟಿ ಮರಿಯಪ್ಪನವರೂ ಇರುವರು

ಸೂರ್ಯನು ಕಾಣಿಸದಷ್ಟು ಧೂಳಿನ ಗಾಳಿ

ಧೂಳು ಮತ್ತು ಬಿರುಗಾಳಿಯ ದೆಸೆಯಿಂದ ಬಿಕನೇರ್ ನಗರದಲ್ಲಿ ಮೊನ್ನೆ ಸೂರ್ಯ ಬಿಂಬವೇ ಕಾಣಲಿಲ್ಲವೆಂದೂ, ಅಲ್ಲಿನ ರೈಲ್ವೆ ಕಂಬಿಗಳ ಮೇಲೆ ೪ ಅಡಿಯಷ್ಟು ಮರಳು ತುಂಬಿ ರೈಲು ಸಂಚಾರವು ನಿಂತಿರುವುದಾಗಿಯೂ ವರದಿಯಾಗಿದೆ ಜೋಧಪುರದಲ್ಲೂ ಇದೇ ರೀತಿ ಬಿರುಗಾಳಿಯು ಬೀಸಿದೆ.

ಅಮೆರಿಕಾ ಪ್ರತಿನಿಧಿಯ ಸಲಹೆಗಳಿಗೆ ರೀ ಒಪ್ಪಿಗೆ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಮಾಡಿರುವ ರಹಸ್ಯ ಸಲಹೆಗಳನ್ನು ದಕ್ಷಿಣ ಕೊರಿಯಾ ಸರ್ಕಾರವು ಅಂಗೀಕರಿಸುವ ಚಿಹ್ನೆಗಳಿರುವುವೆಂದು ವರದಿಯಾಗಿದೆ ಅಮೆರಿಕದ ಪ್ರತಿನಿಧಿ ರಾಬರ್ಟ್‌ಸನ್ನರು ದಕ್ಷಿಣ ಕೊರಿಯದ ಅಧ್ಯಕ್ಷ ರೀ ಮತ್ತು ಅವರ ಒಡನಾಡಿಗಳೊಡನೆ ಪುನಃ ಪುನಃ ಭೇಟಿ ನಡೆಸುತ್ತಲೇ ಇರುವರು

ಎಂ. ಪಿ. ಸಿ. ಸಿ. ಅಧಿವೇಶನ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನವು ಜುಲೈ ತಿಂಗಳು ಕಡೆಯ ವಾರದಲ್ಲಿ ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿರುವ ರಾಬರ್ಟ್‌ಸನ್ ಪೇಟೆಯಲ್ಲಿ ನಡೆಯುವುದು.

ಭಾರತೀಯರ ಸಭೆ ಮೇಲೆ ಆಫ್ರಿಕಾ ಪೋಲೀಸರ ಧಾಳಿ

ಜೊಹಾನ್ಸ್‌ಬರ್ಗ್ ನಗರದ ಒಂದು ಭಾಗದಲ್ಲಿ ನೆನ್ನೆ ಸೇರಿದ್ದ ಭಾರತೀಯ ಕಾಂಗ್ರೆಸ್ಸಿನವರ ಸಮ್ಮೇಳನದ ಮೇಲೆ ದಕ್ಷಿಣ ಆಫ್ರಿಕಾ ಪೋಲೀಸರು ಸ್ಟೆನ್‌ಗನ್ನು, ರೈಫಲ್ಲು, ಈಟಿ ಮುಂತಾದ ಆಯುಧಗಳನ್ನು ಹಿಡಿದು ಧಾಳಿ ನಡೆಸಿದರೆಂದೂ, ವೇದಿಕೆಯ ಮೇಲೆ ಕುಳಿತಿದ್ದ ಕಾಂಗ್ರೆಸ್ಸಿನ ಜಂಟಿ ಕಾರ್ಯದರ್ಶಿಯವರನ್ನು ಬಲವಂತವಾಗಿ ಇಳಿಸಲಾಯಿತೆಂದೂ ವರದಿಯಾಗಿದೆ ಕಮ್ಯೂನಿಸಂ ಶಕ್ತಿ ದಮನ ಶಾಸನ ರೀತ್ಯಾ ನಿಷೇಧಿಸಲ್ಪಟ್ಟ ಸಭೆಗೆ ಅವರು ಹೋಗಿದ್ದರೆಂದು ಅವರ ಮೇಲೆ ಅಪಾದನೆ ಮಾಡಲಾಗಿದೆ

೩ ಹಡಗುಗಳಿಗೆ ಬೆಂಕಿ, ೨೦ ನಾವಿಕರ ಮರಣ

ಪೋರ್ಚುಗೀಸರ ಪೂರ್ವ ಆಫ್ರಿಕದ ತೀರದಲ್ಲಿ ಮೊನ್ನೆ ಎಣ್ಣೆ ಟ್ಯಾಂಕರಿನಿಂದ ಹೊರಬರುತ್ತಿದ್ದ ಪೆಟ್ರೋಲಿಗೆ ಬೆಂಕಿ ಹತ್ತಿ, ಪಕ್ಕದಲ್ಲಿದ್ದ ಮೂರು ಹಡಗುಗಳಿಗೆ ಜ್ವಾಲೆ ಆವರಿಸಿತೆಂದೂ, ೨೦ ಮಂದಿ ನಾವಿಕರು ಮಡಿದರೆಂದೂ ವರದಿಯಾಗಿದೆ

ಚೀಣಕ್ಕೆ ಟಿ. ಚೌಡಯ್ಯನವರು

ಭಾರತದಿಂದ ಚೀಣಕ್ಕೆ ಶೀಘ್ರದಲ್ಲೇ ಸಂಗೀತ, ನಾಟಕ, ನೃತ್ಯ ಮತ್ತು ಕಾವ್ಯ ಮುಂತಾದ ಕಲೆಗಾರರುಳ್ಳ ೩೫ ಮಂದಿಯ ಸೌಹಾರ್ದ ನಿಯೋಗವು ಹೋಗಲಿರುವುದಾಗಿ ವರದಿಯಾಗಿದೆ. ಇದರಲ್ಲಿ ಮೈಸೂರಿನ ಸಂಗೀತ ರತ್ನ ಟಿ ಚೌಡಯ್ಯ, ಕೇರಳದ ಕವಿ ವಲ್ಲತೋಳ್, ಆಂಧ್ರದ ಚಂದ್ರಶೇಖರರವರು ಇರುವರು

ಕಾರ್ಪೊರೇಷನ್ ಜಾಡಮಾಲಿಗಳ ಮುಷ್ಕರ ಮುಂದಕ್ಕೆ

ಬೆಂಗಳೂರು ಪೌರಸಭೆಯ ಜಾಡಮಾಲಿಗಳು ಈ ದಿನ ಹೂಡಬೇಕಾಗಿದ್ದ ೧ ದಿನದ ಮುಷ್ಕರವು ಮುಂದೂಡಲ್ಪಟ್ಟಿದೆ. ಸ್ತ್ರೀ ಪುರುಷ ಕೆಲಸಗಾರರಿಗೆ ಒಂದೇ ಮಟ್ಟದ ಸಂಬಳವನ್ನು ಕೊಡುವ ತತ್ವವನ್ನು ಒಪ್ಪುವಂತೆಯೂ ಸಧ್ಯದಲ್ಲಿ ಜಾಡಮಾಲಿ ಹೆಂಗಸರಿಗೆ ತಿಂಗಳಿಗೆ ೧ ರೂ ಹೆಚ್ಚು ಸಂಬಳ ಕೊಡುವಂತೆಯೂ ತಾವು ಪೌರಸಭೆಯನ್ನು ಪ್ರಾರ್ಥಿಸುವುದಾಗಿ, ಅಲ್ಲಿನ ಪೌರಸಭಾ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಎ ಸಿ. ತಿಮ್ಮಯ್ಯನವರು ಇತ್ತ ಭರವಸೆಯ ಮೇಲೆ ಮುಷ್ಕರವು ಮುಂದುವರಿಯಿತು

ಹೈಕೋರ್ಟಿನ ರಿಜಿಸ್ಟ್ರಾರ್

ನ್ಯಾಯಾಂಗ ಇಲಾಖೆಯ ಡೆಪ್ಯುಟಿ ಕಾರ್ಯದರ್ಶಿ ಶ್ರೀ ಆರ್ ಪಿ ವಾಸುದೇವ್‌ರವರನ್ನು ಜಿಲ್ಲಾ ಜಡ್ಜರಾಗಿ ಬಡ್ತಿ ಕೊಟ್ಟು ಹೈಕೋರ್ಟಿನ ರಿಜಿಸ್ಟ್ರಾರರಾಗಿ ವರ್ಗಾಯಿಸಲಾಗಿದೆ ಚಿತ್ರದುರ್ಗದ ಸಬಾರ್ಡಿನೇಟ್ ಜಡ್ಜರಾದ ಶ್ರೀ ಭೀಮರಾಯರನ್ನು ನ್ಯಾಯಾಂಗ ಡೆಪ್ಯುಟಿ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ ಹೈಕೋರ್ಟಿನ ರಿಜಿಸ್ಟ್ರಾರರಾಗಿದ್ದ ಶ್ರೀ ಕೆಂಪಯ್ಯನವರು ನಿವೃತ್ತಿ ಪೂರ್ವದ ರಜಾಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ.

ನೆಹರೂರವರ ತೂಕ ೧೪೦ ಪೌಂಡು

ದೆಹಲಿಗೆ ವಿಮಾನದಲ್ಲಿ ಹೊರಡುವ ಮುಂಚೆ ಮೊನ್ನೆ ಪ್ರಧಾನಿ ನೆಹರೂರವರು ಬೊಂಬಾಯಿ ವಿಮಾನ ನಿಲ್ದಾಣದಲ್ಲಿ ತಮ್ಮ ತೂಕವನ್ನು ನೋಡಿಕೊಂಡಾಗ, ಅವರ ಶರೀರವು ೧೪೦ ಪೌಂಡು ತೂಗಿತೆಂದು ವರದಿಯಾಗಿದೆ. ಬೊಂಬಾಯಿ ಮುಖ್ಯ ಮಂತ್ರಿ ೧೫೮ ಪೌಂಡು ತೂಗಿದರು. ಬೊಂಬಾಯಿ ಗೌರ್ನರ್ ೧೪೦ ಪೌಂಡು ಇದ್ದರು.

ಮಹಿಳಾ ಸದನದ ಕಾರ್ಯಕಾರಿ ಸಮಿತಿಗೆ ಆಯ್ಕೆ

ರಾಜಧಾನಿಯ ಮಹಿಳಾ ಸದನದ ಸದಸ್ಯರ ಸಭೆಯು ಕಳೆದ ೨೦ ನೇ ತಾ|| ಸೇರಿ ಪ್ರಸಕ್ತ ಸಾಲಿನ ಕಾರ್ಯಕಾರಿ ಸಮಿತಿಗೆ ಚುನಾವಣೆಯು ನಡೆಯಿತು. ಶ್ರೀಮತಿ ಪಿ ಎ ತಂಗಮ್ಮನವರು ಅಧ್ಯಕ್ಷಿಣಿಯಾಗಿಯೂ, ಶ್ರೀಮತಿ ಎಂ ಎಸ್ ಸಾವಿತ್ರಮ್ಮನವರು ಉಪಾಧ್ಯಕ್ಷಿಣಿಯಾಗಿಯೂ, ಶ್ರೀಮತಿ ಎಚ್ ಎ ಜಾನಕಿಯವರು ಕಾರ್ಯದರ್ಶಿಯಾಗಿಯೂ ಶ್ರೀಮತಿ ಎಂ ಡಿ ರಂಗನಾಯಕಮ್ಮನವರು ಕೋಶಾಧಿಕಾರಿಣಿಯಾಗಿಯೂ ಆರಿಸಲ್ಪಟ್ಟರು. ಶ್ರೀಮತಿಗಳಾದ ಎಂ ಬಿ ಜಾನಕಿ, ಕೆ ವಿಶಾಲಾಕ್ಷಮ್ಮ, ಎಚ್ ಎಸ್ ಸೀತಾ, ಯು ಜಿ ರಾಜೇಶ್ವರಿ, ಎಂ ಆರ್ ಚಿನ್ನಮ್ಮ ಮತ್ತು ಶ್ರೀಗಳಾದ ಕೆ ಎಸ್ ನಾರಾಯಣಸ್ವಾಮಿ, ಕೆ ವಿ ಶ್ರೀಕಂಠಯ್ಯ ಮತ್ತು ಎ ಎಸ್ ಸುಬ್ಬರಾವ್‌ರವರು ಸದಸ್ಯರುಗಳಾಗಿಯೂ ಚುನಾಯಿತರಾದರು

ಸಂಸ್ಥಾನದಲ್ಲೊಂದು ಪ್ರಾಣಿ ಶಾಸ್ತ್ರ ಸಂಘ

ಮೈಸೂರು ಸಂಸ್ಥಾನದಲ್ಲೊಂದು ಪ್ರಾಣಿ ಶಾಸ್ತ್ರ ಸಂಘವನ್ನು ಸ್ಥಾಪಿಸುವ ವಿಷಯವು ಸಂಸ್ಥಾನದ ವನ ಮೃಗ ರಕ್ಷಣಾ ಸಮಿತಿಯ ಪರಿಶೀಲನೆಯಲ್ಲಿರುವುದಾಗಿ ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಆರ್ ವಿಶ್ವೇಶ್ವರರ ವೀಣೆ ಮಧ್ಯಾಹ್ನ ೧-೩೦ ಕೊಳಲು ೭-೩೦ ದಯಾನಿಧಿ ಸಿತಾರ್ ಸಂಜೆ ೫-೩೦ ಮತ್ತು ೮ ೩೦ ಎಂ ಎಲ್ ಶಿವಯ್ಯ ಹಾಡುಗಾರಿಕೆ ೬-೧೦ ಗಾನವಿಹಾರ ೭-೩೦ ದಯಾನಿಧಿ ಸಿತಾರ್ ೭-೩೦ ವಿ ನಾಗರಾಜರಾವ್ ವಿಶ್ವವಾರ್ತಾ ವಿಮರ್ಶೆ ೮ ಆರ್ ವಿಶ್ವೇಶ್ವರರ ವೀಣೆ ೯ ೧೫ ಸಿ ಎಸ್ ಸಿಟ್ಟ ಮತ್ತು, ಕ್ರೀಡಾ ವಿಮರ್ಶೆ ೯-೩೦ ಎಂ ಎಸ್. ಸುಬ್ಬಲಕ್ಷ್ಮಿ ರಿಕಾರ್ಡು

ಕ್ರಯಕ್ಕಿದೆ

ಡೋರ್ ನಂಬರ್ 59.

ಗೊಲ್ಲಗೇರಿ

ಕೂಡಲೇ ಸ್ವಾಧೀನ ಕೊಡಲಾಗುತ್ತದೆ

ಬೆಲೆ-ಸುಮಾರು 4,000 ರೂ ಗಳು

ವಿವರಗಳಿಗೆ --

ಜಯ ಅಂಡ್ ಕಂಪೆನಿ,

ಮನೆ ಜಮೀನು ಮಾರಾಟಗಳ ಏಜೆಂಟರು

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು

ಅಟ್ಲಾಂಟಿಕ್ ಸಾಗರ ದಾಟಿದ ಅತಿ ಚಿಕ್ಕ ವಿಮಾನ

ಪೀಟರ್ ಗ್ಲಾರ್ವರ್ ಎಂಬ ಸ್ಯಾನ್ ಫ್ರಾನ್ಸಿಸ್ಕೋವಿನ ಯುವಕ ಗಡಿಯಾರ ತಯಾರಕನು ೩೦ ಅಡಿಯ ಚಿಕ್ಕ ವಿಮಾನವೊಂದರಲ್ಲಿ ಕುಳಿತು ಅಟ್ಲಾಂಟಿಕ್ ಸಾಗರವನ್ನು ದಾಟಿ ಐರ್ಲೆಂಡ್ ದ್ವೀಪವನ್ನು ತಲುಪಿರುತ್ತಾನೆ. ಆ ಸಾಗರವನ್ನು ದಾಟಿದ ವಿಮಾನಗಳಲ್ಲಿ ಇದು ಅತ್ಯಂತ ಚಿಕ್ಕದೆಂದು ಹೇಳಲಾಗಿದೆ

ಸಂಸ್ಕೃತಿ ಪ್ರಸಾರದ ಬಗ್ಗೆ ಸಲಹಾ ಸಮಿತಿಯ ನೇಮಕ

ಕಳೆದ ನವೆಂಬರ್ ೨೭ ರಂದು ಸಂಸ್ಥಾನದಲ್ಲಿ ಆರಂಭ ಮಾಡಿದ ಸಂಸ್ಕೃತಿ ಪ್ರಸಾರದ ಚಟುವಟಿಕೆಗಳನ್ನು ಹೆಚ್ಚಿಸಲೂ ಮತ್ತು ಉತ್ತಮ ಮೇಲ್ವಿಚಾರಣೆ ನಡೆಸಲೂ ಸರ್ಕಾರದವರು ೧೫ ವರ್ಷ ಅವಧಿಯ ೨೧ ಜನರ ಸಲಹಾ ಸಮಿತಿಯನ್ನು ರಚಿಸಿರುತ್ತಾರೆ. ಸಮಿತಿಯ ಸಲಹೆಯನ್ನು ಪಡೆದ ಅವರ ಅಧ್ಯಕ್ಷರನ್ನು ನೇಮಿಸಲಾಗುವುದು. ಸಂಸ್ಕೃತಿ ಪ್ರಸಾರ ಡೈರೆಕ್ಟರ್ ಶ್ರೀ ಸಿ ಕೆ ವೆಂಕಟರಾಮಯ್ಯನವರು ಕಾರ್ಯದರ್ಶಿಯಾಗಿರುವರು. ಸಮಿತಿಯಲ್ಲಿ ಶ್ರೀಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೆ ಮಹಮದ್ ಇಮಾಂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಎಂ ಆರ್ ಶ್ರೀನಿವಾಸಮೂರ್ತಿ, ಜಿ ಗುರುದತ್ ಕೆ ವಿ ಪುಟ್ಟಪ್ಪ ಡಿ ದೇವರಾಜ ಅರಸ್, ಬಿ ಶಿವಮೂರ್ತಿ ಶಾಸ್ತ್ರಿ ಅ ನ ಕೃಷ್ಣರಾವ್ ದೇವುಡು ನರಸಿಂಹಶಾಸ್ತ್ರಿ ಶಿವಗಂಗಾಮಠಾಧೀಶರು, ಅ|| ವಿ|| ಡಿ ನಾಗರಾಜಶಾಸ್ತ್ರಿ, ಸಿದ್ಧವನಹಳ್ಳಿ ಕೃಷ್ಣಶರ್ಮ, ಜೆ ಬಿ ಮಲ್ಲಾರಾಧ್ಯ, ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ ಮುಂತಾದವರು ಇರುವರು

SRI GANESHA

TALKIES

From 29 6 53 For 2 Days

Republic Presents

Rex Beach's Greatest Story

THE AVENGERS

With – John Carrol Adele Mara Fernando Lamas

॥ ಶ್ರೀ ॥

ಶ್ರೀನಿವಾಸ ಮಂದಿರ

329 ಡಿ ಸುಬ್ಬಯ್ಯ ರೋಡ್, ಮೈಸೂರು

ಇಲ್ಲಿ ಈ ಕೆಳಗೆ ಕಂಡ ಶಿಕ್ಷಣ ತರಗತಿಗಳು ನಡೆಯುತ್ತವೆ —

ಪ್ರೈಮರಿ, ಮಿಡಲ್, ಹೈಸ್ಕೂಲ್, ಹಿಂದಿ, ಸಂಗೀತ ಮತ್ತು ಶಿರ ವಿಹಾರ

ವಿವರಗಳಿಗೆ ವಿಚಾರಿಸಿ

SRI GAYATHRI

TALKIES

TO-DAY LAST DAY

M G M's

IVANHOE

(Technicolor)

With Robert Taylor, Elizabeth Taylor, Joan Fontaine

ಬರ್ಮುಡಾ ಸಮ್ಮೇಳನ ಮುಂದೆ ಹೋಯಿತು

ಬರ್ಮುಡಾದಲ್ಲಿ ಬರುವ ತಿಂಗಳು ನಡೆಯಬೇಕಾಗಿದ್ದ ಚರ್ಚಿಲ್ ಐಸೆನ್‌ಹೋವರ್ ಮತ್ತು ಫ್ರಾನ್ಸಿನ ಪ್ರಧಾನಿ ಲ್ಯಾನಿಯಲ್‌ರವರ ಸಮ್ಮೇಳನವು ಮುಂದೆ ಹೋಗಿದೆ. ಚರ್ಚಿಲರು ಹೆಚ್ಚು ದೇಹಶ್ರಮ ಹೊಂದಿ ಅವರಿಗೆ ಒಂದು ತಿಂಗಳು ವಿಶ್ರಾಂತಿ ಬೇಕೆಂದು ವೈದ್ಯರು ಸಲಹೆ ಮಾಡಿರುವುದರಿಂದ ಸಮ್ಮೇಳನವು ಮುಂದುವರಿದಿದೆ

ಸಂಸ್ಕೃತ ಕಾಲೇಜಿಗೆ ಪ್ರವೇಶ

ರಾಜಧಾನಿಯ ಶ್ರೀಮನ್ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯ ನೂತನ ವರ್ಷವು ಕಳೆದ ೭ ನೇ ತಾ|| ಪ್ರಾರಂಭವಾಯಿತು. ಹೊಸದಾಗಿ ಸೇರಲಿಚ್ಛಿಸುವವರು ಜುಲೈ ೭ ನೇ ತಾ|| ವರೆಗೆ ಅರ್ಜಿ ಹಾಕಿಕೊಳ್ಳಲು ಅವಕಾಶವಿದೆ. ಎಲ್ಲ ಕೋರ್ಸುಗಳಿಗೆ ವಿದ್ಯಾರ್ಥಿಗಳು ಸೇರಬಹುದು

ಸ್ಕೌಟ್ ಮಾಸ್ಟರುಗಳ ಸಮ್ಮೇಳನ

ಭಾರತದ [illegible] ಸ್ಕೌಟ್ ಮಾಸ್ಟರು ಮತ್ತು ಅಸಿಸ್ಟೆಂಟ್ ಸ್ಕೌಟ್ ಮಾಸ್ಟರುಗಳ ವಿಶೇಷ ಸಮ್ಮೇಳನವು ಮೊನ್ನೆ ಇಲ್ಲಿನ ವಸ್ತುಪ್ರದರ್ಶನದ ಕಟ್ಟಡದಲ್ಲಿ ನಡೆಯಿತು [illegible] ಸಮ್ಮೇಳನದ ನಿರ್ಣಯಗಳನ್ನು ಜಾರಿಗೆ ತರುವ ಬಗ್ಗೆ ಕಾರ್ಯ ವಿಧಿಯೊಂದನ್ನು ರಚಿಸಬೇಕೆಂದು ನಿರ್ಧರಿಸಲಾಯಿತು.

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಶುಚಿರುಚಿಯಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪತ್ತರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೀಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು

Sri

Baba Tutorial Institute

Swaraj Bhavan, Vani Vilas Mohalla Mysore

Coaching from 1 7 53 at very low fees in P C M group of Inter Science and S S L C for Supplementary Examinations is given by experienced and qualified Staff for boys and girls

Apply for admission and particulars to

SUNANDAMMA

Organiser

Edited, Printed and Published by A K Nagarajan at Sadhvi Press, D Subbiah Road, Mysore

ಪಾಕಿಸ್ತಾನದಲ್ಲಿ ಮಿರ್ಜಾರವರ ಮಾತುಕತೆ

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಮೊನ್ನೆ ಕರಾಚಿಯಲ್ಲಿ ಪಾಕಿಸ್ತಾನದ ಪ್ರಧಾನಿ ಮತ್ತು ಇತರ ರಾಜಕೀಯ ಮುಖಂಡರೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ ನಂತರ ಅವರು ಲಂಡನ್ನಿಗೆ ಪ್ರಯಾಣ ಬೆಳೆಸಿದರು

ಹುಟ್ಟಿದ ತಾರೀಖು ತಪ್ಪಾಗಿ ಕೊಟ್ಟುದಕ್ಕೆ ಡಿಬಾರ್

ಹುಟ್ಟಿದ ತಾರೀಖನ್ನು ಸರಿಯಾಗಿ ಕೊಡಲಿಲ್ಲವೆಂದು ಹಾಸನ ಜಿಲ್ಲೆಯ ಬೇಗರಹಳ್ಳಿ ಪ್ರಾಥಮಿಕ ಶಾಲಾ ಉಪಾಧ್ಯಾಯರಾದ ಶ್ರೀ ಬಿ ಸಿದ್ದಪ್ಪನವರನ್ನು ೩ ವರ್ಷ ಕಾಲ ಸರ್ಕಾರಿ ಕೆಲಸಕ್ಕೆ ತೆಗೆದುಕೊಳ್ಳಕೂಡದೆಂದು ಆಜ್ಞೆ ಮಾಡಲಾಗಿದೆ.

○ ಪಂಜಾಬು ಶಾಸನ ಸಭೆಯ ಸದಸ್ಯರಾದ ಅಕಾಲಿ ಪಕ್ಷದ ಸರ್ದಾರ್ ದೇವೇಂದ್ರ ಸಿಂಗ್, ಸರ್ದಾರ್ ಮುಖ್ತಾರ್ ಸಿಂಗ್, ಮಾಸ್ಟರ್ ಪ್ರತಾಪಸಿಂಗ್, ಮತ್ತು ಕಾಂಗ್ರೆಸ್ಸಿನ ಜ್ಞಾನಿ ರಾಜೇಂದ್ರ ಸಿಂಗ್‌ರವರ ಚುನಾವಣೆಗಳನ್ನು ಅಲ್ಲಿನ ಚುನಾವಣಾ ನ್ಯಾಯ ಮಂಡಲವು ರದ್ದುಗೊಳಿಸುತ್ತದೆ

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್

ಲಿಮಿಟೆಡ್, ಮೈಸೂರು

ನೋಟೀಸು

ಷೇರು ಸರ್ಟಿಫಿಕೇಟು ಕಳೆದುಹೋದ ಬಗ್ಗೆ ಪ್ರಕಟನೆ

ಮೇಲ್ಕಂಡ ಕಂಪೆನಿಯಲ್ಲಿ ಮ|| ರಾ|| ನಾರಾಯಣಸ್ವಾಮಿ ಅಯ್ಯರ್-ಮರ್ಚೆಂಟು, III ರೋಡು ಚಾಮರಾಜಪೇಟೆ, ಬೆಂಗಳೂರು ಸಿಟಿ ಇವರ ಹೆಸರಿನಲ್ಲಿ ರಿಜಿಸ್ಟರ್ ಆಗಿರುವ ಷೇರುಗಳ ನಂಬರ್ ೩೬೭೬೭ ರಿಂದ ೩೬೭೭೧ (36767 to 36771) ವರೆಗಿನ (ಎರಡು ನಂಬರೂ ಸೇರಿ) ಷೇರುಗಳನ್ನೊಳಗೊಂಡ ಅಸಲು ಷೇರು ಸರ್ಟಿಫಿಕೇಟು ನಂಬರ ೨೧೪೦ (Original Share Certificate No 2140) ಕಳೆದು ಹೋಗಿರುವುದಾಗಿ ವರದಿಯಾಗಿರುವುದರಿಂದ ಅಸಲು ಸರ್ಟಿಫಿಕೇಟಿಗೆ ಪ್ರತಿಯಾಗಿ ಡೂಪ್ಲಿಕೇಟು ಷೇರು ಸರ್ಟಿಫಿಕೇಟು ಬೇಕೆಂದು ಅರ್ಜಿ ಬಂದಿರುವುದರಿಂದ ಸಾರ್ವಜನಿಕರು ಇನ್ನು ಮುಂದೆ ಅಸಲು ಷೇರು ಸರ್ಟಿಫಿಕೇಟಿನ ಒಡನೆ ಯಾವ ತರಹ ವ್ಯವಹಾರವನ್ನೂ ನಡೆಸಲಾಗದೆಂದೂ ಮತ್ತು ಸಂಬಂಧಪಟ್ಟವರ ಆಕ್ಷೇಪಣೆಗಳೇನಾದರೂ ಇದ್ದರೆ ಈ ತಾರೀಖಿನಿಂದ 15 ದಿವಸಗಳೊಳಗೆ ಕಂಪೆನಿಯ ರಿಜಿಸ್ಟರ್ಡ್ ಆಫೀಸಿಗೆ ತಿಳಿಸತಕ್ಕದ್ದು ಆಕ್ಷೇಪಣೆಗಳೇನೂ ಬರದಿದ್ದಲ್ಲಿ 15 ದಿನಗಳ ತರುವಾಯ ಈ ವಿಷಯವನ್ನು ಮಾಮೂಲಿನಂತೆ ಇತ್ಯರ್ಥ ಮಾಡಲಾಗುತ್ತದೆ.

(ಸಹಿ) B S VISWESWARAIYA,

Secretary

ಮೈಸೂರು,

10 5-1953

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೩೦-೬-೧೯೫೩ [ಸಂಚಿಕೆ ೨೭೩

ದಕ್ಷಿಣ ಕೊರಿಯದಿಂದ ಶಾಂತಿ ಕೌಲಿಗೆ ರುಜು

ಗಲಭೆಗಾಗಿ ೧ ರೂ. ದಂಡ

ಮೈಸೂರು ೩೦

ರಾಜಧಾನಿಯ ಹನುಮಂತರಾವ್ ಬೀದಿಯಲ್ಲಿರುವ ರಾಜಾಜಿ ಸ್ಟೋರ್ಸ್ ಮಾಲೀಕರಾದ ಶ್ರೀ ಕೆ ಎಸ್ ರಾಜು ಶ್ರೀ ಎ ಎಸ್ ರಾವ್ ಮತ್ತು ಶ್ರೀ ವಿ ಎ ಸಾಲಿಗ್ರಾಂರವರಿಗೆ ನೆನ್ನೆ ಬೆಳಿಗ್ಗೆ ವ್ಯಾಜ್ಯವಾಗಿ ಅವರುಗಳು ಗಾಂಧಿ ಚೌಕದ ಬಳಿ ಗಲಭೆ ಮಾಡಿದರೆಂದು ಆಪಾದಿಸಿ ಲಷ್ಕರ್ ಟ್ರಾಫಿಕ್ ಪೊಲೀಸರು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿ, ಅವರಿಗೆ ತಲಾ ೧ ರೂ ದಂಡವನ್ನು ವಿಧಿಸಲಾಯಿತು

ಮದುವೆಯ ಮಾರನೇ ಬೆಳಿಗ್ಗೆ ವರನ ದಸ್ತಗಿರಿ

ಬಳ್ಳಾರಿಯಲ್ಲಿ ಕಳೆದ ಶುಕ್ರವಾರ ವಿವಾಹವಾದ ವಿಜಯ ಕುಮಾರ ಮಿತ್ರನೆಂಬುವನನ್ನೂ ಮತ್ತು ಅವನ ಸಹೋದರನನ್ನೂ ಪೊಲೀಸರು ಮಾರನೇ ಬೆಳಿಗ್ಗೆ ಮದುವೆ ಮನೆಯಲ್ಲೇ ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ ವರನು ಒಬ್ಬಳೊಂದು ಹುಡುಗಿಯನ್ನು ವಿವಾಹವಾಗುವುದಾಗಿ ಹೇಳಿ, ಆಕೆಯ ತಂದೆಯಿಂದ ೩ ಸಾವಿರ ರೂ ವರದಕ್ಷಿಣೆ ಪಡೆದು ನಂತರ ಬೇರೆ ಯುವತಿಯನ್ನು ಮದುವೆಯಾದುದಾಗಿ ಗೊತ್ತಾಗಿದೆ.

ಗಣೇಶನ ವಿಗ್ರಹ ಪವಿತ್ರವಲ್ಲವೆಂದು ತೀರ್ಪು

ಮಣ್ಣಿನ ಗಣೇಶನ ವಿಗ್ರಹವನ್ನು ಒಡೆದವರೆಂದು ದ್ರಾವಿಡ ಸಂಘದ ಮುಖಂಡ ಇ ವಿ ರಾಮಸ್ವಾಮಿ ನಾಯಕರ ಮೇಲೆ ನಾಸ್ತಿಕತೆಯ ನಿವಾರಣಾ ಸಂಘದ ಸಂಚಾಲಕರಾದ ಎಸ್ ವೀರಭದ್ರ ಚೆಟ್ಟಿಯಾರ್‌ರವರು ಹೂಡಿದ್ದ ಮೊಕದ್ದಮೆಯನ್ನು ತಿರುಚನಾಪಳ್ಳಿಯ ನ್ಯಾಯಾಧೀಶ, ಆರ್ ವಿ ಪೈಯಾಪುರಿ ಪಿಳ್ಳೆಯವರು ವಜಾಮಾಡಿ, ಗಣೇಶನ ಮಣ್ಣಿನ ವಿಗ್ರಹವನ್ನು ಯಾವ ವರ್ಗದ ಜನರೂ ಪವಿತ್ರವಾದ ವಸ್ತುವೆಂದು ಪೂಜಿಸುತ್ತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ ಕೃಜಿಸಲ್ಪಟ್ಟ ಗಣೇಶನ ವಿಗ್ರಹವು ತನ್ನ ಪವಿತ್ರತೆಯನ್ನು ಕಳೆದುಕೊಳ್ಳುವುದಾಗಿಯೂ, ಹಾಗೆ ಬಿಟ್ಟುಬಿಟ್ಟಿರುವ ವಿಗ್ರಹಗಳು ಅನೇಕ ಕಡೆ ಇರುವವೆಂದೂ, ಆದ್ದರಿಂದ ಅಂತಹ ವಿಗ್ರಹವನ್ನು [illegible] ಒಡೆದರೂ ಅಪರಾಧವಾಗುವುದಿಲ್ಲವೆಂದೂ ನ್ಯಾಯಾಧೀಶರು ತಿಳಿಸಿರುತ್ತಾರೆ

ರೈಲಿನಲ್ಲಿ ಜಗಳವಾಗಿ ಮದುವಣಿಗನ ಮರಣ

ಕಾನ್ಪುರ ಮತ್ತು ಉನಾವ್‌ಗಳ ನಡುವೆ ನೆನ್ನೆ ರೈಲೊಂದು ಹೋಗುತ್ತಿದ್ದಾಗ ವಾದವಿವಾದ ಮಾಡಿಕೊಂಡು ಬಡುತ್ತಿದ್ದ ಮದುವಣಿಗ ಪೆಟ್ಟುಬಿದ್ದು ಕೂಡಲೇ ಮೃತಪಟ್ಟುದಾಗಿ ವರದಿಯಾಗಿದೆ ಮದುವಣಿಗನ ಕಡೆಯವರು ಒಬ್ಬ ವ್ಯಾಪಾರಿಯಿಂದ ಹಲವು ಸಾಮಾನುಗಳನ್ನು ಕೊಂಡರೆಂದೂ, ದುಡ್ಡು ಕೊಡುವ ಬಗ್ಗೆ ವ್ಯಾಜ್ಯವಾಗಿ, ಕಡೆಗೆ ವರ್ತಕನು ವರನನ್ನು ಹೊಡೆಯಲು ಅವನಿಗೆ ಮರಣ ಸಂಭವಿಸಿತೆಂದೂ ಹೇಳಲಾಗಿದೆ ವರ್ತಕನು ಕಾಣಿಸದಾಗಿರುತ್ತಾನೆ.

ಕೃಷ್ಣರಾಜನಗರದ ಕೊಲೆ ಮೊಕದ್ದಮೆ

ಅಪರಾಧಿಗೆ ಜೀವಾವಧಿ ಶಿಕ್ಷೆ

ಮೈಸೂರು ೩೦

ಕಳೆದ ಸೆಪ್ಟೆಂಬರ್ ೧೦ ನೇ ತಾರೀಖು ಕೃಷ್ಣರಾಜನಗರದ ರೈಲ್ವೆ ವಾಟರ್ ಕೂಲಿ ಚಿಕ್ಕನ ಹೆಂಡತಿ ಸಣ್ಣಮ್ಮ, ಅವಳ ಮಗು ಮೂರು ವರ್ಷದ ಜಯಮ್ಮ ಮತ್ತು ಕಾನ್ಸ್ಟೇಬಲ್ ಸುಬ್ಬಣ್ಣ ಎಂಬುವರನ್ನು ಮಚ್ಚಿನಿಂದ ಹೊಡೆದು ಕೊಂದುಹಾಕಿದನೆಂದೂ ಮತ್ತು ಅದೇ ದಿನ ರೈಲ್ವೆ ವಾಚ್ ಅಂಡ್ ವಾರ್ಡ್ ಸಿಪಾಯಿ ಲಿಂಗಯ್ಯ ಹನುಮ ಮತ್ತು ಕಾನ್ಸ್ಟೇಬಲ್ ಸುಬ್ಬಣ್ಣನ ಹೆಂಡತಿ ರಕ್ಷಮ್ಮ ಎಂಬುವಳನ್ನು ಮಚ್ಚಿನಿಂದ ಹೊಡೆದು ಗಾಯಪಡಿಸಿದನೆಂದೂ, ಹೊಳೇನರಸೀಪುರದ ಮಾಜಿ ಸಿಪಾಯಿ ಸಣ್ಣಪ್ಪ ಎಂಬುವನ ಮೇಲೆ ಕೃಷ್ಣರಾಜನಗರದ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಇಲ್ಲಿನ ಪ್ರಿನ್ಸಿಪಲ್ ಸೆಷನ್ಸ್ ಜಡ್ಜರಾದ ಶ್ರೀ ಜಿ ನಟರಾಜರವರು ಈ ದಿನ ತೀರ್ಪಿತ್ತು ಅಪರಾಧಿಗೆ ಎರಡು ಆಪಾದನೆಗಳಿಗೂ ಜೀವಾವಧಿ ಶಿಕ್ಷೆಯನ್ನು ವಿಧಿಸಿ, ಎರಡು ಶಿಕ್ಷೆಗಳನ್ನೂ ಏಕ ಕಾಲದಲ್ಲಿ ಅನುಭವಿಸುವಂತೆ ಆಜ್ಞೆ ಮಾಡಿರುತ್ತಾರೆ ಅಪರಾಧಿಯ ಪರವಾಗಿ ಶ್ರೀ ಟಿ ತಿಮ್ಮೇಗೌಡರೂ ಮತ್ತು ಸರ್ಕಾರದ ಪರವಾಗಿ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ ವಿ ಶ್ರೀನಿವಾಸಮೂರ್ತಿಯವರೂ ವಕಾಲತ್ತು ವಹಿಸಿದ್ದರು

ಭಾವನಗರದ ರಾಜಕುಮಾರ ಸೆಷನ್ಸಿಗೆ

ಭಾವನಗರದ ರಾಜಕುಮಾರ ನಿರ್ಮಲ ಕುಮಾರ್ ಮತ್ತು ರಾಣಿ ಬಾಬಿ ಇವರಿಬ್ಬರೂ, ನಿರ್ಮಲ ಕುಮಾರರ ಪತ್ನಿ ಬೀಣಾ ದೇವಿಯವರಿಗೆ ವಿಷ ಹಾಕಿದರೆಂಬ ಆಪಾದನೆ ಮೇಲೆ ಸೆಷನ್ಸ್ ವಿಚಾರಣೆಗೆ ಗುರಿಯಾಗಿರುವರು

ಪಬ್ಲಿಕ್ ಪ್ರಾಸಿಕ್ಯೂಟರುಗಳ ಅವಧಿ ಹೆಚ್ಚಿಕೆ

ಈ ದಿನದಿಂದ ಮುಕ್ತಾಯವಾಗಬೇಕಾಗಿದ್ದ ಸಂಸ್ಥಾನದ ಪಬ್ಲಿಕ್ ಪ್ರಾಸಿಕ್ಯೂಟರುಗಳ ಅವಧಿಯನ್ನು ಸರ್ಕಾರದವರು ಮುಂದೆ ತಿಳಿಸುವವರೆಗೆ ಹೆಚ್ಚಿಸಿರುವರೆಂದು ವರದಿಯಾಗಿದೆ.

ಮೈಸೂರು ಪೌರಸಭೆಗೆ ಕೇಂದ್ರದಿಂದ ೫೦,೦೦೦ರೂ.

ಬೆಂಗಳೂರು ೩೦

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಗ್ಯಾಸು ಸಾರಗಳನ್ನು ಉಪಯೋಗಿಸುವ ಬಗ್ಗೆ ತಯಾರಾಗಿರುವ ಯೋಜನೆಗಳಿಗಾಗಿ ಬೆಂಗಳೂರು ಪೌರಸಭೆಗೆ ೬ ಲಕ್ಷ ಮತ್ತು ಮೈಸೂರು ಪೌರಸಭೆಗೆ ೫೦ ಸಾವಿರ ರೂ ಸಾಲವನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಬೆಂಗಳೂರು ನಗರದ ಗ್ಯಾಸ್ ಸಾರದ ಉಪಯೋಗದ ಬಗ್ಗೆ ೩೦ ಲಕ್ಷ ರೂ ವಿನ ಯೋಜನೆಯನ್ನು ತಯಾರಿಸಲಾಗಿದ್ದು ಅದು ವಿಪರೀತ ದುಬಾರಿಯೆಂದು ಕೈ ಬಿಡಲಾಗಿದ್ದಿತೆಂದೂ ಕಳೆದ ವರ್ಷ ಭಾರತ ಸರ್ಕಾರದ ಗ್ಯಾಸ್ ಸಾರ ಅಭಿವೃದ್ಧಿ ಅಧಿಕಾರಿ ಡಾ‖ ತಲಾತಿಯವರು ಇಲ್ಲಿಗೆ ಬಂದು ೪೦ ಲಕ್ಷದ ಯೋಜನೆಯನ್ನು ಕೊಟ್ಟರೆಂದೂ ಹೇಳಲಾಗಿದೆ ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವ ಸಾಲವನ್ನು ಸಂಸ್ಥಾನದ ಸರ್ಕಾರ, ಪೌರಸಭೆಗಳು ತಲಾ ಅರ್ಧದಂತೆ ತೀರಿಸಲು ಆಲೋಚಿಸಲಾಗುತ್ತಿದೆ

ಮಳೆಯಿಂದ ಮರ ಬಿದ್ದು ೩ ಜನರ ಮರಣ

ಕಳೆದ ೨೯ನೇ ತಾ‖ ದಕ್ಷಿಣ ಕೊಡಗಿನಲ್ಲಿ ಭಾರಿ ಗಾಳಿ ಮತ್ತು ಮಳೆ ಬಿದ್ದು, ತಿತ್ತಿಮತ್ತಿ ಎಂಬಲ್ಲಿ ಮರವೊಂದು ಉರುಳಿ ಅದರಡಿ ನಿಂತಿದ್ದ ಮೂವರು ಮೃತಪಟ್ಟುದಾಗಿ ವರದಿಯಾಗಿದೆ ಪೊನ್ನಂಪೇಟೆಯಲ್ಲಿ ಮತ್ತೊಂದು ಮರವು ದನಗಳ ಕೊಟ್ಟಿಗೆ ಮೇಲೆ ಬಿದ್ದು ಆರು ಜಾನುವಾರುಗಳು ಸತ್ತುಹೋಗಿವೆ

ನೌಕರರಿಗೆ ನೀರಿನ ಭತ್ಯ

ಅಹಮದ್‌ನಗರದಲ್ಲಿ ನೀರಿನ ಅಭಾವವು ವಿಪರೀತವಾಗಿ ಅಲ್ಲಿ ವಾಸಿಸುತ್ತಿರುವ ಎಲ್ಲಾ ಸರ್ಕಾರಿ ನೌಕರರಿಗೂ ಮತ್ತು ಅವರ ಸಂಸಾರದಲ್ಲಿರುವ ಪ್ರತಿಯೊಬ್ಬರಿಗೂ ತಲಾ ೯ ರೂ ನಂತೆ ಕಳೆದ ತಿಂಗಳು ೧೫ ರಿಂದ ಈ ದಿನದವರೆಗೂ ನೀರಿನ ಭತ್ಯವನ್ನು ಕೊಡಲು ಬೊಂಬಾಯಿ ಸರ್ಕಾರದವರು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಶಾಂತಿ ಕೌಲಿಗೆ ದಕ್ಷಿಣ ಕೊರಿಯ ಒಪ್ಪಿಗೆ

ಕಮ್ಯೂನಿಸ್ಟರೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ದಕ್ಷಿಣ ಕೊರಿಯಾ ಮತ್ತು ಅಮೆರಿಕಾಗಳಿಗೆ ಒಡಂಬಡಿಕೆಯಾಗಿರುವುದೆಂದು ತಿಳಿದುಬರುತ್ತದೆ ರೀಯವರೊಡನೆ ಮಾತುಕತೆ ನಡೆಸಿ, ಟೋಕಿಯೋವಿಗೆ ಹಿಂತಿರುಗಿದ ವಿಶ್ವಸಂಸ್ಥೆ ಸೇನಾಧಿಕಾರಿ, ಜ‖ ಮಾರ್ಕ್ ಕ್ಲಾರ್ಕ್‌ರವರು-ಶಾಂತಿ ಒಪ್ಪಂದದ ಮಾತುಕತೆಯನ್ನಾರಂಭಿಸಿ, ಸೀಸ್‌ಫೈರ್ ದಿನವನ್ನು ಗೊತ್ತುಪಡಿಸುವ ಬಗ್ಗೆ ಏರ್ಪಾಡು ಮಾಡುವಂತೆ ಕಮ್ಯೂನಿಸ್ಟರನ್ನು ಕೋರಿರುವರೆಂದು ಹೇಳಲಾಗಿದೆ ಅಮೆರಿಕಾ-ದಕ್ಷಿಣ ಕೊರಿಯಾ ಮಾತುಕತೆ ಮುಗಿದಾಗುವವರೆಗೆ ಇನ್ನು ಮುಂದೆ ಯುದ್ಧ ಖೈದಿಗಳನ್ನು ಕೊರಿಯದವರು ಬಿಡುಗಡೆ ಮಾಡುವುದಿಲ್ಲವೆಂದು ಹೇಳಲಾಗಿದೆ

ಬೊಂಬಾಯಿಯಲ್ಲಿ ರಾತ್ರಿ ಭಾರಿ ಮಳೆ

ಬೊಂಬಾಯಿಯಲ್ಲಿ ನೆನ್ನೆ ಮುಂಜಾನೆ ೫‖ ಗಂಟೆಯಿಂದ ೯‖ ಗಂಟೆವರೆಗೆ ೪ ಅಂಗುಲದಷ್ಟು ಮಳೆ ಬಂದು, ವಿಮಾನ, ರೈಲು ಮತ್ತು ಇತರ ವಾಹನ ಸಂಚಾರಗಳೆಲ್ಲವೂ ನಿಂತಿದ್ದುವೆಂದು ತಿಳಿದುಬಂದಿದೆ

ಮದ್ರಾಸು ಟ್ರಾಂ ಸಂಧಾನ ವಿಫಲ

ಮದ್ರಾಸಿನ ಟ್ರಾಂ ಕಂಪೆನಿಯವರಿಗೂ, ಕಂಪೆನಿಯ ಕಾರ್ಮಿಕರಿಗೂ ಕಳೆದ ಎರಡು ವಾರಗಳಿಂದ ನಡೆಯುತ್ತಿದ್ದ ಸಂಧಾನವು ವಿಫಲವಾಗಿರುವುದಾಗಿ ವರದಿಯಾಗಿದೆ

ಪ್ರವಾಹದಲ್ಲಿ ಮರಣಗಳ ಸಂಖ್ಯೆ ೪೨೩

ಜಪಾನಿನ ಕಿಯೂಷು ದ್ವೀಪದ ಪ್ರವಾಹದಲ್ಲಿ ೪೨೩ ಜನರು ಮಡಿದು, ೭೫೯ ಮಂದಿ ಗಾಯಗೊಂಡಿರುವರೆಂದೂ, ೧೦ ಲಕ್ಷ ಜನರು ನಿರಾಶ್ರಿತರಾಗಿರುವುದಾಗಿಯೂ, ಕಳೆದ ೧೦೦ ವರ್ಷಗಳಿಂದಲೂ ಇಂತಹ ಪ್ರವಾಹವು ಬಂದಿರಲಿಲ್ಲವೆಂದೂ ವರದಿಯಾಗಿದೆ

೪ ನೇ ವನ ಮಹೋತ್ಸವ

ಕೇಂದ್ರದ ವ್ಯವಸಾಯ ಮಂತ್ರಿ ಡಾ‖ ಪಂಜಾಬರಾವ್ ದೇಶಮುಖ್‌ರವರು ದೆಹಲಿ ರೇಡಿಯೋವಿನಲ್ಲಿ ಪ್ರಸಾರ ಭಾಷಣ ಮಾಡಿ, ನಾಳೆ ದಿನದಿಂದ ಆರಂಭಿಸುವ ೪ ನೇ ವನಮಹೋತ್ಸವ ದಿನದಿಂದ ಸಸಿಗಳನ್ನು ನೆಡುವ ಕಾರ್ಯದಲ್ಲಿ ತೊಡಗಬೇಕೆಂದು ಕೋರಿರುತ್ತಾರೆ ಬೆಳೆಯಾಗದ ಕಡೆಗಳಲ್ಲಿ ಮರಗಳನ್ನು ಬೆಳೆಸಲು ಬೇಕಾದಷ್ಟು ಅವಕಾಶವಿರುವುದಾಗಿ ಅವರು ತಿಳಿಸಿರುವರು

ಎಲ್ ಎಸ್. ತರಗತಿಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ನಾಳೆಯಿಂದ [illegible] ವರ್ಷದಂತೆ ಲೋವರ್ ಸೆಕೆಂಡರಿ ಮತ್ತು ಹಿಂದಿ ತರಗತಿಗಳನ್ನು ಪ್ರಾರಂಭಿಸುವುದಾಗಿಯೂ, [illegible] ಸಂಘದಲ್ಲಿ [illegible] ದೂ ತಿಳಿಸಲಾಗಿದೆ.

ಕರ್ನಾಟಕ ಪ್ರಾಂತಕ್ಕಾಗಿ ಜುಲೈನಿಂದ ಸತ್ಯಾಗ್ರಹ

ಬೆಂಗಳೂರು [illegible]

ಮೈಸೂರು ಮತ್ತು ಕರ್ನಾಟಕ ಪ್ರಾಂತಗಳ ಹಲವು ರಾಜಕೀಯ [illegible] [illegible] ಕರ್ನಾಟಕ ಪ್ರಾಂತ [illegible] ನಡೆಸಲು ನಿರ್ಧರಿಸಿ [illegible] ವರದಿಯಾಗಿದೆ

ಎವರೆಸ್ಟ್ ಶಿಖರಕ್ಕೆ ನಗರ ಮಾತಾ ಎಂಬ ಹೆಸರು

[illegible]

೪ ನಿಮಿಷ ೨ ಸೆಕೆಂಡಿನಲ್ಲಿ ೧ ಮೈಲಿ ಓಡಿದ ವಿದ್ಯಾರ್ಥಿ

[illegible]

ಪಾಕಿಸ್ತಾನ ಮಂತ್ರಿಗಳಿಗೆ ಛಡಿ ಏಟು ಕೊಡಬೇಕು !

ಪಾಕಿಸ್ತಾನದ ಮಂತ್ರಿಗಳಿಗೆ [illegible] ಸಾರ್ವಜನಿಕ ಸ್ಥಳದಲ್ಲಿ ಛಡಿ ಏಟುಗಳನ್ನು ಕೊಡಬೇಕೆಂದು [illegible] ಕರಾಚಿಗೆ ಹೋಗಿ [illegible] ನಿರಾಶ್ರಿತ [illegible] ಸಲಹೆ ಮಾಡಿ [illegible] [illegible]

ವಿವಾಹ ಮಹೋತ್ಸವಗಳು

[illegible]

ಶಬರಿ ನದಿಯಲ್ಲಿ ಮುಳುಗಿದವರೆಲ್ಲರೂ ಪಾರು

ಭದ್ರಾಚಲದ ಬಳಿ ಶಬರಿ ನದಿಯಲ್ಲಿ [illegible] ನೇ ತಾರೀಕು ಎರಡು ದೋಣಿಗಳ ಮುಳುಗಿ [illegible] ಜನರು ಮೃತಪಟ್ಟರೆಂದು ವರದಿಯಾಗಿರುವ [illegible] ಮದರಾಸು ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ, ದೋಣಿಗಳಿಂದ ನೀರಿಗೆ ಬಿದ್ದವರೆಲ್ಲರೂ ಪಾರಾಗಿರುವರೆಂದು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
[illegible]	[illegible]	[illegible]
ಹರಳುಬೀಜ	[illegible]	
ಹೊಂಗೆಬೀಜ	[illegible]	[illegible]
ಎಳ್ಳು	[illegible]	[illegible]
[illegible]	[illegible]	[illegible]
ಹೆಸರು	[illegible]	[illegible]
ಹಲಸಂದೆ	[illegible]	[illegible]
ಉದ್ದು	[illegible]	[illegible]
[illegible]	[illegible]	[illegible]
[illegible]	[illegible]	[illegible]
ಬೆಲ್ಲ	[illegible]	
[illegible]	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಎಸ್ ರಾಮಚಂದ್ರನ್, ಹಿಂದೂಸ್ತಾನಿ ಸಂಗೀತ [illegible] ಎಸ್ ವಿ ಪಾರ್ಥಸಾರಥಿ, [illegible] ಮತ್ತು ಸಂಜೆ [illegible] ಸೀತಾಲಕ್ಷ್ಮಿ ವೆಂಕಟೇಶನ್ ಸಂಗೀತ [illegible] ಕನ್ನಡ ಗೀತೆ [illegible] ಎಸ್ ರಾಮಚಂದ್ರನ್, ಹಿಂದೂಸ್ತಾನಿ ಸಂಗೀತ, [illegible] ಸಂಗೀತ [illegible] ಕರ್ನಾಟಕ ಸಂಗೀತ

ಸಿಡಿಮದ್ದು ಕಾರ್ಖಾನೆಯಲ್ಲಿ ಆಸ್ಫೋಟನೆ; ೪ ಮರಣ

[illegible] ಕಾರ್ಖಾನೆಯೊಂದರಲ್ಲಿ ಮೊನ್ನೆ ಆಸ್ಫೋಟನೆ ಸಂಭವಿಸಿ ನಾಲ್ವರು [illegible] ಸತ್ತರೆಂದೂ, [illegible] ಜನರು ತೀವ್ರ ಗಾಯಗೊಂಡರೆಂದೂ ವರದಿಯಾಗಿದೆ. ಗಾಯವಾದವರ [illegible] ಬಹು ಮಂದಿ ಬಾಲಕಬಾಲಕಿಯರಿರುವರು.

ಬೃಂದಾವನದಲ್ಲಿ ವಿದ್ಯುದ್ದೀಪೋತ್ಸವ

ಕೃಷ್ಣರಾಜಸಾಗರದಲ್ಲಿ ನೀರಿನ ಸಂಗ್ರಹಣೆಯು ಉತ್ತಮಗೊಂಡಿರುವುದರಿಂದ ಕಳೆದ ಶನಿವಾರದಿಂದ ಅಲ್ಲಿನ ಬೃಂದಾವನದಲ್ಲಿ ವಿದ್ಯುದ್ದೀಪೋತ್ಸವವನ್ನು [illegible] ಪುನಹ ಆರಂಭಗೊಳಿಸಿದೆ. ಈ ದಿನ ನೀರಿನ ಮಟ್ಟ [illegible] ಅಡಿಗಳಷ್ಟಿದ್ದಿತು.

UNIVERSITY OF MYSORE

NOTIFICATION

The following University Examinations will be held from MONDAY, 7th SEPTEMBER 1953 on the basis of one paper a day. The details of time-tables will be published in the Mysore Gazette in due course.

1) Intermediate in Arts
2) Intermediate in Science,
3) Intermediate in Commerce,
4) B. A. Degree,
5) B. Sc. Degree,
6) B. A. Honours Preliminary
7) B. Sc Honours Preliminary
8) B. Com.,
9) Engineering,
10) Law,
11) B. Sc. (Textiles) (Final Examination only)
12) B. Sc. (Agriculture) (Final Examination only)

Applications must be sent through the Heads of Colleges concerned. The last date for receipt of applications by Heads of Colleges is SATURDAY 4th JULY 1953.

Late applications will be received with a penal fee of Re 1/- per day subject to a limit of Rs 5/ upto MONDAY 20th JULY 1953.

Application form may be obtained from the Heads of Colleges after MONDAY, 22nd JUNE 1953. Forms can be had by post by sending two annas postal stamp or a self-addressed Postal cover to the Heads of Colleges.

By Order.
F. J. NORONHA,
Registrar

ಒಲಿಂಪಿಯಾ ಟಾಕೀಸ್
[illegible]
ಮೋಹಿನಿ

ಅಲೀಫ್ ಲೈಲಾ
[illegible]

The Central College Of Commerce.
Vanivilas Market Buildings
MYSORE
Admissions to D. Com., Diploma, Short-hand & Typewriting will be received on all working days. Join immediately.

SRI GAYATHRI TALKIES
TO DAY & TO MORROW
THE STORY OF WILL ROGERS
(Technicolor)
With - Will Rogers, Jane Wyman
NEXT CHANGE - - THE QUIET MAN

ಕ್ರಯಕ್ಕಿದೆ
ಡೋರ್ ನಂಬರ್ 59.
ಗೊಲ್ಲಗೇರಿ
[illegible] 4,000 [illegible]
ವಿವರಗಳಿಗೆ —
ಜಯ ಅಂಡ್ ಕಂಪೆನಿ,
[illegible]

PRABHA ★ GRAND OPENING
From 1-7-53 : Daily 3 Shows
The World's Most Honoured Movie, Special Academy Award, Best Film of the Year. The Prime Choice of India's Film Festival. De Sica's
BICYCLE THIEF (In English)
— LAST DAY — YUKI WARI SOO ·
Morning Shows From 3-7-53 For 3 days
Shantaram's DAHEJ

Edited Printed and Published by A. R. Nagarajan at Sadhvi Press, D. Subbiah Road, Mysore

ಉಗ್ರದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ. ಎ., ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧-೭-೧೯೫೩ [ಸಂಚಿಕೆ ೨೭೪

ಕಾಂಬೋಡಿಯದಲ್ಲಿ - ವಿಷಮ ಪರಿಸ್ಥಿತಿ -

ಎಂ. ಕೆ. ಶಿವನಂಜಪ್ಪನವರ ಚುನಾವಣೆ ಸಕ್ರಮ

ಬೆಂಗಳೂರು ೧

ಸಂಸ್ಥಾನದ ಚುನಾವಣಾ ನ್ಯಾಯ ಮಂಡಲದ ಅಧ್ಯಕ್ಷ ಶ್ರೀ ವಿ ಕೆಂದಸಾ ಮಿಟಿಕ್ಕೆ ಮತ್ತು ಸದಸ್ಯರಾದ ಶ್ರೀಗಳು ಕೆ ಎಸ್ ಪದ್ಮನಾಭಯ್ಯ ಮತ್ತು ಮಹಮ್ಮದ್ ಇಕ್‌ಬಾಲ್‌ಹುಸೇನರವರು ಕಳೆದ ೧೧ ನೇ ತಾ॥ ತೀರ್ಪಿತ್ತು, ಪಾರ್ಲಿಮೆಂಟಿನ ಕೆಳ ಸಭೆಗೆ ಮಂಡ್ಯ ಜಿಲ್ಲೆಯಿಂದ ಶ್ರೀ ಎಂ ಕೆ ಶಿವನಂಜಪ್ಪನವರು ಆರಿಸಿ ಬಂದಿರುವುದು ಸಕ್ರಮವಾಗಿದೆಯೆಂದು ತಿಳಿಸಿರುತ್ತಾರೆ ಅವರ ಪ್ರತಿಸ್ಪರ್ಧಿಯಾದ ಶ್ರೀ ಎಂ ಸಿ. ಲಿಂಗೇಗೌಡರ ಚುನಾವಣಾ ತಕರಾರು ಅರ್ಜಿಯನ್ನು ೫೦೦ ರೂ ಖರ್ಚಿನ ಸಮೇತ ವಜಾ ಮಾಡಲಾಗಿದೆ

ಕೊಲೆಗಾಗಿ ಇಬ್ಬರಿಗೆ ಮರಣ ದಂಡನೆ

ಬೆಂಗಳೂರು ಜಿಲ್ಲೆಯ ವನಕನಹಳ್ಳಿ ಸಿದ್ದಾರೆಡ್ಡಿ ಯನ್ನು ಜಿದ್ದಿನಿಂದ ಕಳೆದ ಆಗಸ್ಟಿನಲ್ಲಿ ಕೊಲೆ ಮಾಡಿದರೆಂದು ಗುರಪ್ಪ ಮತ್ತು ನಂಜುಂಡಪ್ಪ ಎಂಬುವರಿಗೆ ಮರಣ ದಂಡನೆ ವಿಧಿಸಲಾಗಿದೆ ಎಲ್ಲಿಗ ಮತ್ತು ನರಸಿಂಹ ಎಂಬುವರಿಗೆ ೨ ವರ್ಷ ಸಜಾ, ೧,೦೦೦ ರೂ. ದಂಡ ತಪ್ಪಿದರೆ ಪುನಃ ೬ ತಿಂಗಳು ಸಜಾ ವಿಧಿಸಲಾಗಿದೆ ಇತರ ಮೂವರ ಖುಲಾಸೆಯಾಗಿದೆ.

೨೦೦ ಸ್ಥಾನಗಳಿಗೆ ೧೨೦೦ ಅರ್ಜಿಗಳು

ಬೆಂಗಳೂರಿನಲ್ಲಿರುವ ಸರ್ಕಾರಿ ಇಂಜನಿಯರಿಂಗ್ ಕಾಲೇಜಿನ ೨೦೦ ಸ್ಥಾನಗಳಿಗೆ ೧,೨೦೦ ವಿದ್ಯಾರ್ಥಿಗಳಿಂದ ಪ್ರವೇಶ ಅರ್ಜಿಗಳು ಬಂದಿರುವುದಾಗಿ ಗೊತ್ತಾಗಿದೆ ಸೀಟುಗಳನ್ನು ಹಂಚುವ ಬಗ್ಗೆ ಕಳೆದ ವರ್ಷ ಅನುಸರಿಸಿದ ಧಾಮಾಸಾ ನೀತಿಯಂತೆಯೇ ನಡೆಯುವಂತೆ ಸರ್ಕಾರದವರು ಸೂಚಿಸಿರುವರೆಂದು ಗೊತ್ತಾಗಿದೆ

ಕಾಕಾ ಕಾಲೇಲ್ಕರ್‌ರವರ ಆಗಮನ

ಹಿಂದುಳಿದ ಕಮಿಷನ್ನಿನ ಅಧ್ಯಕ್ಷರೂ, ಕೇಂದ್ರ ಪಾರ್ಲಿಮೆಂಟಿನ ಸದಸ್ಯರೂ ಆದ ಕಾಕಾ ಸಾಹೇಬ್ ಕಾಲೇಲ್ಕರ್‌ರವರು ನೆನ್ನೆ ಬೆಂಗಳೂರಿಗೆ ಆಗಮಿಸಿದರು. ಅವರನ್ನು ಶ್ರೀಗಳಾದ ಟಿ ಮರಿಯಪ್ಪ ಮತ್ತು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಎಸ್ ಪುಟ್ಟರಂಗಸ್ವಾಮಿಯವರು ಸ್ವಾಗತಿಸಿದರು ಶ್ರೀ ಕಾಲೇಲ್ಕರ್‌ರವರು ಮಾತನಾಡಿ ನಿಮ್ನ ವರ್ಗಗಳಲ್ಲಿ ಪ್ರಮಾದವಶಾತ್ ಕೆಲವು ಪಂಗಡಗಳು ಕೈಬಿಟ್ಟುಹೋಗಿರಬಹುದೆಂದೂ, ಅಂತಹ ಪ್ರಸಂಗಗಳನ್ನು ಪುನಃ ಪರಿಶೀಲಿಸಿ, ನೂತನ ಪಟ್ಟಿಯನ್ನು ತಯಾರಿಸಲಾಗುವುದೆಂದೂ ತಿಳಿಸಿದರು

ಶ್ರೀಟನ್ ಕೊಲೆ ಅಪಾದನೆ ಬಗ್ಗೆ ಚಾರ್ಜ್ ಷೀಟು

ಬೆಂಗಳೂರಿನ ಬಿಷಪ್ ಕಾಟನ್ ಹೈಸ್ಕೂಲಿನ ಶ್ರೀಮತಿ ಎನಿಡ್ ಶ್ರೀಟನ್ನರನ್ನು ಕೊಲೆ ಮಾಡಿದನೆಂದು ಕುಪ್ಪುಸ್ವಾಮಿ ಉರುಫ್ ಜೋಕರ್ ಎಂಬುವನ ಮೇಲೆ ಪೊಲೀಸರು ಅತಿಕ್ರಮ ಪ್ರವೇಶ, ಕಳುವು, ದರೋಡೆ, ಕೊಲೆ ಮತ್ತು ಕೇಡಿ ಅಪಾದನೆಗಳನ್ನು ಹೊರಿಸಿ, ನೆನ್ನೆ ಸಿವಿಲ್ ಪ್ರದೇಶದ ಅಡಿಷನಲ್ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದರು.

ಕಾಂಬೋಡಿಯಾದಲ್ಲಿ ವಿಷಮ ಪರಿಸ್ಥಿತಿ

ರಾಜರ ಸೈನ್ಯಗಳಿಂದ ಸರ್ಕಾರಿ ಕಟ್ಟಡಗಳ ಆಕ್ರಮಣ

ಕಾಂಬೋಡಿಯಾ ರಾಜ್ಯಕ್ಕೆ ಫ್ರೆಂಚರು ಕೂಡಲೇ ಸ್ವಾತಂತ್ರ್ಯ ಕೊಡಬೇಕೆಂದು ಒತ್ತಾಯಪಡಿಸಿ, ಆ ಸಂಬಂಧವಾಗಿ ಅಲ್ಲಿನ ರಾಜರಾದ ನರೋತ್ತಮರವರು ಥೈಲೇಡಿಗೆ ಹೋದಂದಿನಿಂದಲೂ, ರಾಜ್ಯದಲ್ಲಿ ಪರಿಸ್ಥಿತಿಯು ಹದಗೆಡುತ್ತ ಬಂದು ಈಗ ಉಲ್ಬಣಿಸಿರುವುದೆಂದೂ, ರಾಜರ ಸೈನ್ಯಗಳು ನೆನ್ನೆ ಅಲ್ಲಿನ ರಾಜಧಾನಿಯಲ್ಲಿರುವ ಎಲ್ಲ ಸರ್ಕಾರಿ ಕಟ್ಟಡಗಳನ್ನೂ ತಮ್ಮ ವಶಕ್ಕೆ ತೆಗೆದುಕೊಂಡಿರುವುವೆಂದೂ ಗೊತ್ತಾಗಿದೆ ಫ್ರೆಂಚ್ ಮತ್ತು ಕಾಂಬೋಡಿಯಾ ಸೈನ್ಯಗಳಿಗೆ ಯಾವ ಘರ್ಷಣೆಯೂ ಇದುವರೆಗೆ ಸಂಭವಿಸಿಲ್ಲ ರಾಜಾ ನರೋತ್ತಂರವರು ಸ್ವದೇಶಕ್ಕೆ ಹಿಂದಿರುಗಿ ರಾಜಧಾನಿ ಫ್ನಾಂ ಪೆನ್ಹ್ ನಗರಕ್ಕೆ ಬರದೆ ಬತ್ತಾಂಬಾಂಗ್ ಎಂಬಲ್ಲಿ ನೆಲೆಸಿರುವರೆಂದೂ ವರದಿಯಾಗಿದೆ ಫ್ರೆಂಚರು ತಮ್ಮ ಶಸ್ತ್ರಸಜ್ಜಿತ ಪೊಲೀಸರನ್ನು ನೂರಾರು ಲಾರಿಗಳಲ್ಲಿ ರಾಜಧಾನಿಗೆ ಕಳುಹಿಸಿ ಆಯಕಟ್ಟಾದ ಸ್ಥಳಗಳಲ್ಲಿ ಕಾವಲು ಹಾಕಿರುವುದಾಗಿಯೂ ವರದಿಯಾಗಿದೆ ದಂಗೆಯು ಸಂಭವಿಸಿದರೆ ಅದನ್ನು ಸುಲಭವಾಗಿ ಅಡಗಿಸುವುದಾಗಿ ಇಂಡೋಚೀಣದಲ್ಲಿರುವ ಫ್ರೆಂಚ್ ವಿಮಾನ ಪಡೆಯ ಅಧಿಕಾರಿ ಜನರಲ್ ಚಾಸ್ಸಿನ್‌ರವರು ತಿಳಿಸಿರುತ್ತಾರೆ

ರೈಲಿಗೆ ಸಿಡಿಲು ಹೊಡೆತ

ಬೊಂಬಾಯಿಗೆ ಕಾಸಾರ್ ಎಂಬಲ್ಲಿಂದ ಮೊನ್ನೆ ಬರುತ್ತಿದ್ದ ಸ್ಥಳೀಯ ರೈಲೊಂದಕ್ಕೆ ತಿತ್ವಾಲಾ ಬಳಿ ಸಿಡಿಲು ಬಡಿಯಿತೆಂದೂ, ಆದರೆ ಯಾರಿಗೂ ಗಾಯವಾಗಲಿಲ್ಲವೆಂದೂ ವರದಿಯಾಗಿದೆ

ಜಿಲ್ಲಾ ಬೋರ್ಡ್ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಬೋರ್ಡಿನ ಕಟ್ಟಡದಲ್ಲಿ ಇದೇ ೬ ನೇ ತಾ॥ ಸೋಮವಾರ ಮಧ್ಯಾಹ್ನ ೧ ಗಂಟೆಗೆ ಸೇರುವುದು.

○ ಇದೇ ದಿನದಿಂದ ಸೆಪ್ಟೆಂಬರ್ ತಿಂಗಳು ಆಖೈರು ವರೆಗೆ ಪ್ಯಾಕ್ ಆದ ಸಿಮೆಂಟಿಗೆ ೬೧ ರೂ ಮತ್ತು ಪ್ಯಾಕಿಂಗ್ ಚಾರ್ಜು ೧೧-೪-೦ಕ್ಕೆ ಹೆಚ್ಚದಂತೆ ಬೆಲೆ ಫಿಗದಿ ಮಾಡಲಾಗಿದೆ.

ದಕ್ಷಿಣ ಕೊರಿಯದ ರಕ್ಷಣಾ ಮಂತ್ರಿಯ ವಜಾ

ಕೊರಿಯಾ ಶಾಂತಿ ಒಪ್ಪಂದಕ್ಕೆ ವಿರೋಧವಾಗಿದ್ದರೆಂಬ ಕಾರಣಕ್ಕಾಗಿ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರೀಯವರು ಅಲ್ಲಿನ ರಕ್ಷಣಾ ಮಂತ್ರಿ ಶಿನ್ ಟಾಯ್ ಯುಂಗ್‌ರವರನ್ನು ವಜಾ ಮಾಡಿ, ನೌಕಾ ಪಡೆಯ ಮುಖ್ಯಾಧಿಕಾರಿ ಅಡ್ಮಿರಲ್ ಸೋನ್ ವಾನ್ ಇರರನ್ನು ಅವರ ಸ್ಥಾನದಲ್ಲಿ ನೇಮಿಸಿರುವರು

ಗ್ವಾಟೆಮಾಲಾದಲ್ಲಿ ಪ್ರಚಂಡ ಸಿಡಿತದಿಂದ ೪೨ ಮರಣ

ಮಧ್ಯ ಅಮೇರಿಕದ ಗ್ವಾಟೆಮಾಲಾ ನಗರದ ಜನ ನಿಬಿಡ ಪ್ರದೇಶವೊಂದರಲ್ಲಿ ನೆನ್ನೆ ಪ್ರಚಂಡ ಅಸ್ಫೋಟನೆಯೊಂದು ಸಂಭವಿಸಿ, ಅದರಿಂದ ಬೆಂಕಿಯುಂಟಾಗಿ ೫೦ ಮನೆಗಳೂ, ೨ ಹೋಟೇಲುಗಳೂ ಸುಟ್ಟು ಭಸ್ಮವಾದುವು ಇದುವರೆಗೆ ೪೨ ಶವಗಳು ದೊರೆತಿರುವುವೆಂದೂ, ಸುಮಾರು ನೂರು ಜನರು ಮಡಿದು, ೨೦೦ ಮಂದಿ ಗಾಯಗೊಂಡಿರಬಹುದೆಂದೂ ಊಹಿಸಲಾಗಿದೆ

ದೇಶಾದ್ಯಂತ ರಕ್ಷಣಾ ಕಾರ್ಮಿಕರ ಮುಷ್ಕರ

ಅಖಿಲ ಭಾರತ ರಕ್ಷಣಾ ಕಾರ್ಮಿಕರ ಸಂಘದ ಕರೆಯಂತೆ ನೆನ್ನೆ ದೇಶಾದ್ಯಂತ ಸುಮಾರು ಶೇ॥ ೯೦ ರಷ್ಟು ಮಂದಿ ಸದಸ್ಯರು ೧ ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಿದುದಾಗಿ ವರದಿಯಾಗಿದೆ ಭಾರತ ಸರ್ಕಾರದ ರಕ್ಷಣಾ ಇಲಾಖೆಯವರ ಸಿಬ್ಬಂದಿ ಛೋಟಾ ನೀತಿಯನ್ನು ಪ್ರತಿಭಟಿಸಿ ಮುಷ್ಕರವನ್ನು ನಡೆಸಲಾಯಿತು ಜಬ್ಬಲ್ಪುರದಲ್ಲಿ ೧೩ ಸಾವಿರ, ಪೂನಾದಲ್ಲಿ ೭,೦೦೦, ಅಲಹಾಬಾದಿನಲ್ಲಿ ೫,೦೦೦, ಕಲ್ಕತ್ತದಲ್ಲಿ ೨೭ ಸಾವಿರ, ಬೊಂಬಾಯಿಯಲ್ಲಿ ೬,೦೦೦ ಕಾರ್ಮಿಕರು ಮುಷ್ಕರಕ್ಕೆ ಸೇರಿದ್ದರು

ಬೆಂಗಳೂರಿನಲ್ಲಿಯೂ ನೆನ್ನೆ ರಕ್ಷಣಾ ಕಾರ್ಮಿಕರು ಮುಷ್ಕರ ನಡೆಸಿದರು ಅವರ ಸಂಘದ ಕಾರ್ಯದರ್ಶಿ ಶ್ರೀ ಕಣ್ಣನ್‌ರವರ ನೇತೃತ್ವದಲ್ಲಿ ಮೆರವಣಿಗೆಯನ್ನು ನಡೆಸಲಾಯಿತಲ್ಲದೆ, ಹಿಂದೆ ವಜಾ ಮಾಡಿದವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡಲಾಯಿತು

ಅಬ್ಕಾರಿ ಹರಾಜು ರದ್ದಿನ ಬಗ್ಗೆ ವಿಚಾರಣೆ

ಹೈಕೋರ್ಟಿನಲ್ಲಿ ಸರ್ಕಾರದ ಪರ ಪ್ರತಿ ಅರ್ಜಿ

ಸ್ವಂ ಸು ಫೋನ್] ಬೆಂಗಳೂರು ೧

ಬೆಂಗಳೂರು ನಗರ, ಸಿವಿಲ್ ಪ್ರದೇಶ ಮತ್ತು ತಾಲ್ಲೂಕು ಎಲ್ಲೆಯೊಳಗೆ ಅಬ್ಕಾರಿ ಅಂಗಡಿಗಳನ್ನು ನಡೆಸುವ ಸಂಬಂಧವಾಗಿ ನಡೆದ ಹರಾಜಿನಲ್ಲಿ ಬಿಡ್ಡನ್ನು ವಜಾ ಮಾಡಿದ ಸಂದರ್ಭದಲ್ಲಿ ಶ್ರೀ ಕೆ ಎಸ್ ಗುರುಸ್ವಾಮಿಯವರು ಹೈಕೋರ್ಟಿನಲ್ಲಿ ಸಲ್ಲಿಸಿದ ಅರ್ಜಿಯು ವಿಚಾರಣೆಯು ಇಂದು ಇತ್ತು. ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಎಸ್ ಪುಟ್ಟರಂಗಸ್ವಾಮಿಯವರ ಪರವಾಗಿ ಪ್ರತಿ ಅರ್ಜಿಯನ್ನು ಸಲ್ಲಿಸಲಾಯಿತು ಅರ್ಜಿದಾರರೊಡನೆ ಸರ್ಕಾರದವರು ಕಾಂಟ್ರಾಕ್ಟ್ ಮಾಡಿಕೊಂಡಿರಲಿಲ್ಲವೆಂದೂ, ಹರಾಜನ್ನು ರದ್ದುಮಾಡಲು ಸರ್ಕಾರಕ್ಕೆ ಪೂರ್ಣ ಅಧಿಕಾರವಿರುವುದಾಗಿಯೂ ಶ್ರೀಷ್ಠ ಕಾರ್ಯದರ್ಶಿಯವರು ತಮ್ಮ ಪ್ರತಿ ಅರ್ಜಿಯಲ್ಲಿ ತಿಳಿಸಿದ್ದರು. ಅಬ್ಕಾರಿ ಕಮೀಷನರ್, ಬೆಂಗಳೂರು ಜಿಲ್ಲಾಧಿಕಾರಿಗಳ ಪರವಾಗಿಯೂ ಪ್ರತಿ ಅರ್ಜಿಗಳನ್ನು ಸಲ್ಲಿಸಲಾಯಿತು

ಶ್ರೀ ಗುರುಸ್ವಾಮಿಯವರ ಪರವಾಗಿ ಬೊಂಬಾಯಿಯ ಬ್ಯಾರಿಸ್ಟರ್ ಶ್ರೀ ಜೋಷಿಯವರು ವಾದ ಮಾಡಿ, ಒಂದು ಸಾರಿ ಹರಾಜು ಕರೆದು, ಅದಕ್ಕೆ ಬಿಡ್ಡು ಬಂದ ಮೇಲೆ ವಜಾ ಮಾಡಿರುವ ಪ್ರಸಂಗವು ದೇಶದಲ್ಲೆಲ್ಲೂ ನಡೆದಿರುವುದಿಲ್ಲವೆಂದೂ, ಬಿಡ್ಡು ಮಾಡಿದ ನಂತರ ಹರಾಜಿನ ಸಂಬಂಧವಾಗಿ ಅಬ್ಕಾರಿ ಕಮೀಷನರು ಅದರ ಬಗ್ಗೆ ಪುನರ್ವಿಮರ್ಶೆ ನಡೆಸಬಹುದಾದರೂ, ಅದನ್ನು ವಜಾ ಮಾಡಲು ಅವಕಾಶವಿಲ್ಲವೆಂದೂ, ಇದು ರಾಜ್ಯಾಂಗದ ಮೂಲಭೂತ ಹಕ್ಕಿನ ನಿಬಂಧನೆಗೆ ವಿರೋಧವಾದುದೆಂದೂ ತಿಳಿಸಿದರು

ಅಡ್ವೊಕೇಟ್ ಜನರಲ್ಲರು ಸರ್ಕಾರದ ಪರವಾಗಿ ತಮ್ಮ ವಾದವನ್ನು ಆರಂಭ ಮಾಡಿರುವರು

ಡಾ॥ ಮುಖರ್ಜಿ ನಿಧನದ ಬಗ್ಗೆ ವಿಚಾರಣೆಗೆ ಒತ್ತಾಯ

ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಶ್ರೀನಗರದ ಜೈಲಿನಲ್ಲಿ ಬಂಧನದಲ್ಲಿದ್ದಾಗ ಮೃತಪಟ್ಟ ಬಗ್ಗೆ ಪ್ರಮುಖ ಖಾಸಗಿ ಜನರಿಂದಲಾಗಲೀ ಅಥವಾ ಸುಪ್ರೀಂ ಕೋರ್ಟಿನ ಜಡ್ಜರಿಂದಲಾಗಲೀ ವಿಚಾರಣೆ ನಡೆಸಲು ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಪಡಿಸಿ ಪಶ್ಚಿಮ ಬಂಗಾಳಾ ಕಾಂಗ್ರೆಸ್ಸಿನ ಅಧ್ಯಕ್ಷ ಅತುಲ್ಯ ಘೋಷ್‌ರವರೂ ಮತ್ತು ಹಲವು ಸದಸ್ಯರೂ ಪಂಡಿತ ನೆಹರೂರವರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ

ವಿಮಾನಗಳಿಗೆ ಭಾರವಿಲ್ಲದ ಪೆಟ್ರೋಲ್ ಟಾಂಕ್

ಸಣ್ಣ ವಿಮಾನಗಳಿಗೆ ಹಗುರವಾದ ಪೆಟ್ರೋಲ್ ಟಾಂಕುಗಳನ್ನು, ಭಾರತೀಯ ವಸ್ತುಗಳನ್ನೇ ಉಪಯೋಗಿಸಿ ಇಲ್ಲಿಯೇ ತಯಾರಿಸಬಹುದಾದ ಯೋಜನೆಯನ್ನು ಬೆಂಗಳೂರಿನ ಭಾರತ ವಿಜ್ಞಾನ ಶಾಲೆಯವರು ಸಿದ್ಧಪಡಿಸಿರುವರಂತೆ

ಹೆಗ್ಗಡದೇವನಕೋಟೆಯ ಬೆಂಕಿ ಪ್ರಕರಣ

ಸರ್ಕಾರಿ ಅಧಿಕಾರಿಗಳ ಮುಖಾಂತರ

ಮೈಸೂರು ೧

ಕಳೆದ ವರ್ಷ ಬರ್ಗಿ ... ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಯ ಆಫಾರ ... ಬೆಂಕಿ ಬಿದ್ದು ರಿಕಾರ್ಡುಗಳು ಸುಟ್ಟುಹೋಗಿದ್ದ ಬಗ್ಗೆ ಶ್ರೀಗಳಾದ ಎಂ. ಕೆ. ಸುಬ್ಬರಾವ್, ಬಾಲಕೃಷ್ಣರಾವ್ ಮತ್ತು ರಾಮಾದೀಕ್ಷಿತರ ಮೇಲೆ ಹುಣಸೂರು ಪೋಲೀಸರು ... ಮತ್ತು ... ಕಲಮುಗಳ ಪ್ರಕಾರ ಹೂಡಿದ್ದ ಮೊಕದ್ದಮೆಯಲ್ಲಿ ಇಲ್ಲಿನ ಅಸಿಸ್ಟೆಂಟ್ ಸೆಷನ್ಸ್ ಜಡ್ಜರಾದ ಶ್ರೀ ಗುರುನಂಜಯ್ಯನವರು ನೆನ್ನೆ ತೀರ್ಪಿತ್ತು, ಆರೋಪಿಗಳ ಅಭಿಪ್ರಾಯವನ್ನು ಅಂಗೀಕರಿಸಿ ಆಪಾದಿತರು ತಪ್ಪಿತಸ್ಥರಲ್ಲವೆಂದು ಅವರುಗಳೆಲ್ಲರನ್ನೂ ಖುಲಾಸೆ ಮಾಡಿರುತ್ತಾರೆ.

ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಬಿ. ಶಂಕರಶೆಟ್ಟರೂ, ಆಪಾದಿತರ ಪರವಾಗಿ ಶ್ರೀಗಳಾದ ಎ. ವೆಂಕಟೇಶಯ್ಯ, ಎಂ. ಸಿ. ಗುರು ಮತ್ತು ಕೃಷ್ಣರಾಜನಗರದ ಶ್ರೀ ಬಿ. ವಿ. ವೆಂಕಟರಂಗಗೌಡರವರೂ ವಕಾಲತ್ತು ವಹಿಸಿದ್ದರು.

ಮತ್ತೊಂದು ಹಿಮಾಲಯಾರೋಹಣ

ಮೇಜರ್ ನಂದು ಜಯಾಲ್ ಮತ್ತು ಇನ್ನಿಬ್ಬರು ಹಿಮಾಲಯದ ... ಅಡಿ ಎತ್ತರದ ಅಬು ಗಾಮಿನ್ ಶಿಖರವನ್ನು ಕಳೆದ ... ಹತ್ತಿದರೆಂದು ವರದಿಯಾಗಿದೆ. ಆ ಶಿಖರದ ಮೇಲೆ ಭಾರತದ ಕಡೆಯಿಂದ ಹತ್ತಿರುವುದು ಇದೇ ಮೊದಲು. ಹಿಂದೆ ಟಿಬೆಟ್ ಕಡೆಯಿಂದ ಬ್ರಿಟಿಷ್ ಮತ್ತು ಸ್ವಿಸ್ ಕಡೆಯವರು ಹತ್ತಿದ್ದರೆಂದು ಹೇಳಲಾಗಿದೆ.

ಬ್ರಿಟಿಷ್ ರಾಣಿ ಭೇಟಿಗೆ ಉ. ಐರ್ಲೆಂಡಿನವರ ವಿರೋಧ

ಉತ್ತರ ಐರ್ಲೆಂಡಿಗೆ ಸಧ್ಯದಲ್ಲೇ ಬ್ರಿಟಿಷ್ ರಾಣಿ ಎಲಿಜಬೆತ್ ಮತ್ತು ಅವರ ಪತಿ ಎಡಿನ್‌ಬರ್ಗ್ ಡ್ಯೂಕರು ಭೇಟಿ ಕೊಡುವುದಕ್ಕೆ ಪ್ರತಿಭಟನೆಯನ್ನು ಉತ್ತರ ಐರ್ಲೆಂಡಿನವರ ಸಭೆಯೊಂದರಲ್ಲಿ ಸೂಚಿಸಲಾಯಿತು. ಐರ್ಲೆಂಡಿಗೆ ಸಂಬಂಧಿಸಿದಂತೆ ರಾಣಿಯು ತನ್ನ ಯಾವ ಬಿರುದಾವಳಿಯನ್ನು ... ಇಟ್ಟುಕೊಳ್ಳದೆಂದು ಐರ್ಲೆಂಡಿನ ವಿಭಾಗ ಮಾಡಿರುವುದು ತಪ್ಪೆಂದೂ ಅವರು ಸೂಚಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೨೦ ವಿ. ಎಲ್. ನಾಗರತ್ನಮ್ಮ ಸಂಗೀತ ಮಧ್ಯಾಹ್ನ ೧೨.೦ ಕ್ಲಾರಿಯೊನೆಟ್ ... ಬಿ. ಎಲ್. ನಾಗರತ್ನಮ್ಮ ಸಂಗೀತ ಸಂಜೆ ೫.೩೦ ಮತ್ತು ... ಎಲ್. ವೇಣುಗೋಪಾಲ್ ಪಿಟೀಲು ... ಎಂ. ಕರಿಬಸವಾರಾಧ್ಯ ಭಾರತ ವಚನ ... ಹಿಂದಿ ಭಜನೆಗಳು ... ನಾಗೇಂದ್ರ ... ಎ. ವಿ. ಕೃಷ್ಣಮಾಚಾರ್ ಪಿಟೀಲು, ... ನಿಮ್ಮ ಮೆಚ್ಚಿನ ಗೀತೆಗಳು

ಟೀಕೆ ಮಾಡಿದ ಗಿರಾಕಿಗೆ ಕ್ಷೌರಿಕನ ಇರಿತ

ರಂಗೂನಿನ ಬಳಿ ... ಯಿಂದನೊಬ್ಬನ ಅಂಗಡಿಗೆ ಕ್ಷೌರಕ್ಕಾಗಿ ಹೋದವನು ಕ್ಷೌರ ಮಾಡುತ್ತಿರುವವನ ಬಗ್ಗೆ ಟೀಕಿಸಲು, ಅಷ್ಟಕ್ಕೇ ಸಿಟ್ಟಿಗೆದ್ದ ನಾಯಿಂದನು ಕೈಯಲ್ಲಿದ್ದ ಕತ್ತಿಯಿಂದ ಗಿರಾಕಿಯ ಹೊಟ್ಟೆಗೂ ಎದೆ ತೋಳಿಗೂ ಇರಿದನೆಂದು ವರದಿಯಾಗಿದೆ. ಗಾಯಗೊಂಡವನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಕ್ಷೌರಕನು ಪೋಲೀಸರ ವಶದಲ್ಲಿರುವನು.

ವಿದ್ಯುಚ್ಛಕ್ತಿ ಬೀಸಣಿಗೆಯಿಂದ ಮರಣ

ಕಲ್ಲಿಕೋಟೆಯ ಟೆಕ್ಸ್ ಕೆಮಿಕಲ್ ಇಂಡಸ್ಟ್ರೀಸ್ ಕಂಪೆನಿಯ ... ನಾಯರ್ ಎಂಬ ನೌಕರನು ಕಛೇರಿಯಲ್ಲಿ ವಿದ್ಯುಚ್ಛಕ್ತಿ ಬೀಸಣಿಗೆಯು ಷಾಕನ್ನು ಒರೆಸುತ್ತಿದ್ದಾಗ ಷಾಕ್ ತಗಲಿ ತತ್ಕ್ಷಣ ಸತ್ತನೆಂದು ವರದಿಯಾಗಿದೆ.

ಟಿ.ವಣಿಗೆ ಹಾಕುವ ತಗಡಿನಿಂದ ಅಪಾಯ

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಒದಗಿಸುವ ಪ್ರದೇಶಗಳಲ್ಲಿರುವ ... ಕಟ್ಟಡಗಳ ಮೇಲ್ಚಾವಣಿಗಾಗಿ ಹಾಕಲಾಗುವ ಜಿಂಕ್ ಶೀಟುಗಳು ... ಹತ್ತಿರದಲ್ಲಿರುವ ವಿದ್ಯುತ್ ತಂತಿಗಳನ್ನು ಕತ್ತರಿಸುವ ನಿದರ್ಶನಗಳು ಕಂಡುಬಂದಿರುವುದಾಗಿ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ. ಗ್ರಾಮ ಪಂಚಾಯಿತಿಗಳು, ಪೌರಸಭೆಗಳು ಮತ್ತು ಬೆಂಗಳೂರು ಕಾರ್ಪೊರೇಷನ್‌ಗಳಿಗೆ ಸರ್ಕಾರದವರು ಸೂಕ್ತ ತಿಳುವಳಿಕೆ ಕೊಟ್ಟು ಇಂತಹ ಕಟ್ಟಡಗಳಾಗುವ ಸಂಬಂಧದಲ್ಲಿ ಮೇಲ್ಚಾವಣಿಗಳನ್ನು ಭದ್ರವಾಗಿ ಹೊದಿಸಲಾಗಿರುವುದೇ ಎಂಬುದನ್ನು ಪರೀಕ್ಷಿಸಬೇಕೆಂದು ಸೂಚಿಸಿರುತ್ತಾರೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ... ಶ್ರೀ ಹೆಚ್. ವಿ. ಸುಬ್ಬರಾಮಯ್ಯನವರ ... ಶ್ರೀ ಹೆಚ್. ವಿ. ವಿಶ್ವೇಶ್ವರರವರಿಗೆ ನಂಜನಗೂಡಿನ ಶ್ರೀ ಕೆ. ವಿ. ಅರುಣಾಚಲಯ್ಯನವರು ತಮ್ಮ ಮಗಳು ಸೌ|| ರಂಜಲಕ್ಷ್ಮಮ್ಮನ್ನು ಕೊಟ್ಟು ಈದಿನ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು.

ರಮಾವಿಲಾಸ ಅಗ್ರಹಾರದಲ್ಲಿರುವ ಓರಿಯಂಟಲ್ ಪ್ಯಾಲೇಸಿನ ಶ್ರೀ ಎಸ್. ಆರ್. ಕೃಷ್ಣಮೂರ್ತಿಯವರ ತಮ್ಮನ ಮಗ, ಶ್ರೀ ಕೆ. ರಾಮಚಂದ್ರಮೂರ್ತಿಯವರಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ಎಂ. ಆರ್. ಸುಂದರರಾಯರ ಮಗಳು ಸೌ|| ಸುಲೋಚನರವರನ್ನು ತಂದುಕೊಂಡು ಈ ದಿನ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಕೃಷ್ಣರಾಜ ಮೊಹಲ್ಲಾ ಆಶ್ಮಿ ... ಲಕ್ಷ್ಮಯ್ಯನವರ ಮಗ ಶ್ರೀ ಲಕ್ಷ್ಮಯ್ಯನವರಿಗೆ ಬೆಳಗೊಳದ ಶ್ರೀ ದೇವರಾಜೇಗೌಡರು ತಮ್ಮ ಮಗಳು ಸೌ|| ಲಕ್ಷ್ಮಮ್ಮನನ್ನು ಕೊಟ್ಟು ಬೆಳಗೊಳದಲ್ಲಿ ಕಳೆದ ಭಾನುವಾರ ವಿವಾಹವನ್ನು ನೆರವೇರಿಸಿದರು.

ಕೈ ಕಚ್ಚಿದುದರಿಂದ ವಿಷವೇರಿ ಹಸ್ತ ಛೇದನ

... ರು ... ನಂಜಪ್ಪನ ಮಗ ರಂಗಪ್ಪನ ಕೈಯನ್ನು ... ಹೆಂಡತಿ ಬಿಟ್ಟು ... ಕೆಲವು ದಿನಗಳ ಹಿಂದೆ ಬಲವಾಗಿ ಕಚ್ಚಿದಳೆಂದೂ, ಅದರ ಪರಿಣಾಮವಾಗಿ ಕೈ ಕೊಳೆತ ದರಿಂದ ಆತನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆದು ಹಾಕಲಾಯಿತೆಂದೂ ವರದಿಯಾಗಿದೆ.

ನಾಯಿಯ ಬಾಯಲ್ಲಿ ಮಗುವಿನ ರುಂಡ

ಕೋಲಾರದ ಬಳಿ ... ಎಂಬಲ್ಲಿ ಕಳೆದ ಶುಕ್ರವಾರ ನಾಯಿಯೊಂದು ... ಮಗುವಿನ ಕತ್ತರಿಸಿದ ತಲೆಯನ್ನು ಕಚ್ಚಿಕೊಂಡು ಬೀದಿಯಲ್ಲಿ ಓಡುತ್ತಿದ್ದಿತೆಂದು ವರದಿಯಾಗಿದೆ.

ಉಪನ್ಯಾಸ

... ಅವಿನವತ ... ವೇದಾಂತ ... ದಿನಗಳಿಂದ ... ಸಂಜೆ ... ಶ್ರೀ ಪದ್ಮನಾಭ ... ನವೀನಂ ವೆಂಕಟೇಶ ಶಾಸ್ತ್ರಿಗಳವರು ವೇದಾಂತ ಮತ್ತು ... ಎಂಬ ವಿಷಯವಾಗಿ ... ಮಾಡಿದರು ... ಮಾಡಬೇಕೆಂದು ಕೋರಲಾಗಿದೆ.

ಮೋಟಾರು ಅಪಘಾತಗಳ ತನಿಖೆಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ

ಮರಣ ಅಥವಾ ಶರೀರಕ್ಕೆ ಗಾಯವಾಗುವ ಸಂಬಂಧದ ಮೋಟಾರು ಅಪಘಾತಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ತನಿಖೆ ನಡೆಸಿ ವರದಿ ಮಾಡಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ. ಅಪಘಾತಕ್ಕೀಡಾದವರಿಗೆ ಪರಿಹಾರ ಕೊಡುವ ಬಗ್ಗೆಯೂ ವರದಿ ಮಾಡಬೇಕೆಂತೆ ತಿಳಿಸಲಾಗಿದೆ.

SRI GANESHA
TALKIES
From 1 53 For 3 Days
'DAVID CROCKET INDIAN SCOUT'
Starring George Montgomery and Ellen Drew

Edited Printed and Published by A R ...garajan at Sadhvi Press ... Road Mysore

ಎವರೆಸ್ಟ್ ಹತ್ತಿದವರಿಗೆ ರಾಷ್ಟ್ರಾಧ್ಯಕ್ಷರಿಂದ ಪದಕ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ನೆನ್ನೆ ದೆಹಲಿಯ ಮೊಗಲ್ ವನದಲ್ಲಿ ಟೇನ್‌ಸಿಂಗ್, ಹಿಲಾರಿ ಮತ್ತು ಕರ್ನಲ್ ಹಂಟ್‌ರವರಿಗೆ ಚಿನ್ನದ ಪದಕಗಳನ್ನು ದಯಪಾಲಿಸಿದರು. ಪದಕದಲ್ಲಿ ಇವರುಗಳ ಹೆಸರುಗಳನ್ನು ... ಹಾಕಲಾಗಿರುವುದಲ್ಲದೆ ಸಾಹಸೀ ಶ್ರೀಶಿಖರಪತಿ ಎಂದೂ ಬರೆಯಲಾಗಿದೆ. ಅವರುಗಳ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ರಾಷ್ಟ್ರಾಧ್ಯಕ್ಷರು ಏರ್ಪಡಿಸಿದ್ದರು.

ಒಂದೇ ಮರದಲ್ಲಿ ೨೪ ನಾಗರ ಹಾವುಗಳು!

ಹುಣಸೂರು ಬಳಿ ಬೆಟ್ಟಹಳ್ಳಿ ಗ್ರಾಮದಲ್ಲಿ ಒಂದು ಹುಣಸೇ ಮರವನ್ನು ಕಡಿಯುತ್ತಿದ್ದಾಗ ಅದರ ಪೊಟರೆಯ ... ಕಾಲದಲ್ಲಿ ೨೪ ನಾಗರಹಾವುಗಳು ಒಂದಾಗುತ್ತಲೊಂದು ಹೊರಟುವು. ... ಹಾವುಗಳನ್ನು ಕೊಂದುಹಾಕಲಾಯಿತೆಂದೂ, ಮತ್ತೊಂದು ತಪ್ಪಿಸಿಕೊಂಡಿತೆಂದೂ ವರದಿಯಾಗಿದೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಇಂದ	ರೂ. ವರೆಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹಚ್ಚೆಳ್ಳು	[illegible]	
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
[illegible]	[illegible]	
[illegible]	[illegible]	[illegible]
[illegible]	[illegible]	[illegible]
ತೆಂಗಿನಕಾಯಿ	[illegible]	[illegible]

COMMERCIAL INSTITUTE
Attached to
SARADAVILAS HIGH SCHOOL,
K M Puram Mysore
NOTIFICATION
FRESH ADMISSIONS for Dip in Com , Dip in Sten and TYPEWRITING, SHORT HAND & ACCOUNTANCY leading to the Mysore Govt Commercial Exams , 1954 are now being received Individual attention and Expert training Further Particulars can be had during the working hours of the Institute
P Gopalakrishna Setty, B.A.,B.L.,
Honorary Secretary.

ESTD 1917
THE CHAMPION METROPOLITAN COLLEGE OF COMMERCE,
Co operators Home 100 Feet Road MYSORE

Principal	Vice Principal
P Subbaraya Sastry	M S Pattanna
MA MA (Com) CLID (Lon) PCT (Lon)	*B Sc N D Com (GOI) F I B (Lon)*

NOTIFICATION
ADMISSIONS to the several certificate and diploma courses in
Commerce Typewriting Shorthand Accountancy Banking Etc
are now being received in the Mornings & Evenings on all working days

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨ ೭-೧೯೫೩ [ಸಂಚಿಕೆ ೨೨೫

ಟ್ಯೂನಿಸ್ ಸಿಂಹಾಸನದ ಉತ್ತರಾಧಿಕಾರಿ ಕೊಲೆ

ನಗರದಲ್ಲಿ ನಿಶ್ಶಬ್ದ ಪ್ರದೇಶಗಳು

ವ್ಯವಸ್ಥೆ ಜಾರಿಗೆ ತರಲು ಪೌರಸಭೆಯ ಒತ್ತಾಯ

ಮೈಸೂರು ೮

ರಾಜಧಾನಿಯ ಪೌರಸಭೆಯ ಅಧಿವೇಶನವು ನೆನ್ನೆ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ನಗರದಲ್ಲಿ ನಿಶ್ಶಬ್ದ ಪ್ರದೇಶಗಳೆಂದು ಗೊತ್ತು ಮಾಡಲ್ಪಟ್ಟಿರುವ ಸ್ಥಳಗಳಲ್ಲಿ ಸದರಿ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಜಿಲ್ಲಾಧಿಕಾರಿಗಳನ್ನೂ ಜಿಲ್ಲಾ ಪೋಲೀಸು ಅಧಿಕಾರಿಗಳನ್ನೂ ಕೋರುವ ನಿರ್ಣಯವು ಶ್ರೀ ಪಿ ಡಿ ಕೃಷ್ಣಸ್ವಾಮಿಯವರಿಂದ ಮಂಡಿಸಲ್ಪಟ್ಟು ಅಂಗೀಕೃತವಾಯಿತು

ಕೃಷ್ಣ ಕಛೇರಿಯಿಂದ ಚಾಮರಾಜೇಂದ್ರ ವೃತ್ತಿ ಶಿಕ್ಷಣಾ ಶಾಲೆ ನಾರಾಯಣ ಶಾಸ್ತ್ರಿ ರಸ್ತೆ, ತಿಯಾಗರಾಜ ರಸ್ತೆಯಿಂದ ದೇವರಾಜ ಮಾರ್ಕೆಟ್ ಕೃಷ್ಣ ಕಛೇರಿಯವರೆಗೆ ದಾದಿಗಳ ಭವನ ಮತ್ತು ಧನ್ವಂತರಿ ರಸ್ತೆಗಳು ನಿಶ್ಶಬ್ದ ಪ್ರದೇಶಗಳೆಂದು ಘೋಷಿಸಲಾಗಿರುವುದೆಂದು ಅಧ್ಯಕ್ಷರು ತಿಳಿಸಿದರು

ನಿಶ್ಶಬ್ದ ಪ್ರದೇಶಗಳಿಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದರೆ ಜನರ ರಸ್ತೆಗಳ ಮಧ್ಯದಲ್ಲಿ ತಿರುಗಾಡುವುದನ್ನು ತಪ್ಪಿಸಿ, ಕಾಲುದಾರಿಗಳಲ್ಲಿ ನಡೆಯುವಂತೆ ವ್ಯವಸ್ಥೆಯಾಗಬೇಕೆಂದೂ, ಈ ಸಂಬಂಧವಾಗಿ ಪೋಲೀಸು ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಲಾಗುತ್ತಿರುವುದಾಗಿಯೂ ಕಮಿಷನರು ತಿಳಿಸಿದರು

ಬಡಬಗ್ಗರ ಅನ್ನದಾನಕ್ಕಾಗಿ ಈ ವರ್ಷ ೩೭೫ ರೂ ಕೊಡಬಹುದೆಂದು ಸರ್ಕಾರದಿಂದ ಬಂದಿದ್ದ ಆಜ್ಞೆಯನ್ನು ರದ್ದು ಮಾಡಲಾಯಿತು

ಮಿಷನ್ ಆಸ್ಪತ್ರೆಗೆ ಸಹಾಯಧನ ೧೦೦ ರೂ ಕೊಡುವಂತೆ ನಿರ್ಧರಿಸಲಾಯಿತು

ದೇವರಾಜ ಮಾರ್ಕೆಟ್ ದಕ್ಷಿಣ ಭಾಗದಿಂದ ಸಂತೇಪೇಟೆ ರಸ್ತೆಯಲ್ಲಿ ಜಗನ್ಮೋಹನ ಭವನದ ಬಳಿ ಚೌಕದವರೆಗೂ ವಾಹನ ಸಂಚಾರವು ಏಕಮುಖವಾಗಿ ನಡೆಯುವ ವ್ಯವಸ್ಥೆಯಾಗಬೇಕೆಂದ ಶ್ರೀ ಚೌಡಯ್ಯನವರು ತಂದ ನಿರ್ಣಯವನ್ನು ಟ್ರಾಫಿಕ್ ಸಮಿತಿಗೆ ಒಪ್ಪಿಸಲಾಯಿತು

ವಿ ರಾಮಣ್ಣನವರ ಬೀದಿಯಲ್ಲಿ ನೀರಿನ ಸರಬರಾಜು ಸಮರ್ಪಕವಾಗಿಲ್ಲವಾದ ಕಾರಣದಿಂದ ಅಲ್ಲಿ ನೀರಿನ ಸಬ್ ಲೈನನ್ನು ಹಾಕಬೇಕೆಂದು ಆದೇ ಸದಸ್ಯರು ತಂದ ಮತ್ತೊಂದು ನಿರ್ಣಯವು ಮ್ಯಾನೇಜಿಂಗ್ ಸಮಿತಿಗೆ ಒಪ್ಪಿಸಲ್ಪಟ್ಟಿತು

ಚಿತ್ರಕ ಕೇರಿಯಲ್ಲಿ ೩೫೦೦ ರೂ ಗಳ ವೆಚ್ಚದಲ್ಲಿ ಮಾದರಿ ಮನೆಯೊಂದನ್ನು ಕಟ್ಟಬೇಕೆಂದೂ, ೨೦೦೦ ರೂ ವೆಚ್ಚದಲ್ಲಿ ಆದಿಕರ್ನಾಟಕಪುರದಲ್ಲಿ ಒಂದು ರೇಡಿಯೋವನ್ನು ಸ್ಥಾಪಿಸಬೇಕೆಂದೂ ನಿರ್ಣಯಗಳಾದುವು ನಂತರ ಸಭೆಯ ವಿವಿಧ ಸಮಿತಿಗಳಿಗೆ ಚುನಾವಣೆಯು ನಡೆಯಿತು

ಈಜಿಪ್ಟಿನ ಅಧ್ಯಕ್ಷ, ಜನರಲ್ ನಗೀಬ್‌ರವರು ತಮಗೆ ದೊರೆಯುವ ಸಾಲಿಯಾನಾ ೬ ಸಾವಿರ ಪೌಂಡು ಸಂಬಳದ ಸೈಕಿ ಅರ್ಧ ಭಾಗವನ್ನು ದೇಶದ ಹಿತಕ್ಕಾಗಿ ಕೊಡುವುದಾಗಿ ತಿಳಿಸಿರುತ್ತಾರೆ.

ರಾಷ್ಟ್ರಾಧ್ಯಕ್ಷರಿಂದ ವನಮಹೋತ್ಸವದ ಆರಂಭ

ನಾಲ್ಕನೇ ವರ್ಷದ ವನಮಹೋತ್ಸವವನ್ನು ನೆನ್ನೆ ರಾಷ್ಟ್ರಾಧ್ಯಕ್ಷರು ದೆಹಲಿಯಲ್ಲಿ ಆರಂಭಗೊಳಿಸಿದರು ಜುಮ್ಮಾ ಮಸೀದಿ ಬಳಿ ಇರುವ ಎಡ್ವರ್ಡ್ ಉದ್ಯಾನವನದಲ್ಲಿ ರಾಜೇಂದ್ರ ಪ್ರಸಾದರು ನೆರಳು ಕೊಡಬಲ್ಲ ಗುಲ್ ಮೊಹರ್ ಮತ್ತು ಅಮಲ್‌ತಾಸ ಸಸಿಗಳನ್ನು ನಟ್ಟರು ತನಾವೃಷ್ಟಿ ಮತ್ತು ಭೂಸಾರ ಕಡಿಮೆಯಾಗುವುದು-ಈ ಎರಡು ಸಮಸ್ಯೆಗಳನ್ನು ಜಯಪ್ರದವಾಗಿ ಎದುರಿಸಲು ಜನರು ವನಮಹೋತ್ಸವದಲ್ಲಿ ತೊಡಗಬೇಕೆಂದು ರಾಷ್ಟ್ರಾಧ್ಯಕ್ಷರು ನುಡಿದರು

ಜಪಾನಿನಲ್ಲಿ ಪ್ರವಾಹಕ್ಕೆ ೬೨೨ ಮಂದಿ ಬಲಿ

ಜಪಾನಿನ ಕಿಯೂಷು ದ್ವೀಪದಲ್ಲಿ ಪ್ರವಾಹದಿಂದ ಇದುವರೆಗೆ ೬೨೨ ಮಂದಿ ಮಡಿದಿರುತ್ತಾರೆ ಅಲ್ಲಿ ಅಂಟುರೋಗವು ತಲೆದೋರಿರುವುದೆಂದೂ ವೈದ್ಯರು ಅದರ ನಿವಾರಣಾ ಕ್ರಮದಲ್ಲಿ ತೊಡಗಿರುವರೆಂದೂ ಗೊತ್ತಾಗಿದೆ ಒಟ್ಟು ೧೯ ಮಿಲಿಯ ಪೌಂಡಿನಷ್ಟು ನಷ್ಟವಾಗಿರುವುದಾಗಿ ಗೊತ್ತಾಗಿದೆ

ಮದುವೆ ಮೆರವಣಿಗೆಯಲ್ಲಿ ಡಮ್ಮಿ ಕುದುರೆ ಕುಣಿತ

ಮೈಸೂರು ೨

ಸೇಟ್ ಮಾಣಿಕ್‌ಚಂದ್ ಫುಕ್‌ರಾಜ್‌ರವರ ಮೊಮ್ಮಗ ಮಿಟ್ಠಾಲಾಲ್‌ರವರ ಮದುವೆಯ ಸಂದರ್ಭದಲ್ಲಿ ಇದೇ ತಿಂಗಳು ೩ ನೇ ತಾ॥ ಶುಕ್ರವಾರ ಸಾಯಂಕಾಲ ನಡೆಯುವ ಮೆರವಣಿಗೆಯಲ್ಲಿ ಸುಪ್ರಸಿದ್ಧವಾದ ಡಮ್ಮಿ ಕುದುರೆಯ ಕುಣಿತ ನಡೆಯತಕ್ಕಂಥದಾಗಿಯೂ ಮೆರವಣಿಗೆ ಬಹಳ ವಿಜೃಂಭಣೆಯಿಂದ ಎಲ್ಲಾ ದೊಡ್ಡ ರಸ್ತೆಗಳಲ್ಲಿ ಬರುತ್ತೆಂಬುದಾಗಿಯೂ ತಿಳಿದುಬಂದಿದೆ

ಕನ್ನಂಬಾಡಿ ನೀರಿನ ಮಟ್ಟ ೧೪ ಅಡಿ ಹೆಚ್ಚಿತು

ಕೃಷ್ಣರಾಜಸಾಗರದ ನೀರಿನ ಮಟ್ಟವು ಈ ದಿನ ೧೪ ಅಡಿ ಹೆಚ್ಚಿ, ೬೨ ಅಡಿಗಳಷ್ಟು ರಿಕಾರ್ಡಾಗಿದೆ ಕೊಡಗಿನ ಕಡೆ ಮಳೆಯು ಚೆನ್ನಾಗಿ ಆಗಿರುವುದೆಂದು ತಿಳಿದುಬಂದಿದೆ

ಟ್ಯೂನಿಸ್ ರಾಜ್ಯದ ಉತ್ತರಾಧಿಕಾರಿಯ ಕೊಲೆ

ಟ್ಯೂನೀಷಿಯಾ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿದ್ದ ೫೦ ವರ್ಷದ ಅಜ್ಜೆಡೀನ್ ಬೇಯವರಿಗೆ ನೆನ್ನೆ ಆ ದೇಶದವನೊಬ್ಬನ ಗುಂಡಿನಿಂದ ಹೊಡೆದುದರ ಪರಿಣಾಮವಾಗಿ ಅವರು ಮೃತಪಟ್ಟಿರುತ್ತಾರೆ ಅಲ್ಲಿನ ಪದ್ಧತಿ ಪ್ರಕಾರ, ಬೇಯವರ ಹಿರಿಯ ಮಗನು ಸಿಂಹಾಸನಕ್ಕೆ ಬರುವಂತಿಲ್ಲ ರಾಜಮನೆತನದವರು ಹಿರಿಯರು ಅವನ್ನು ಹತ್ಯೆ ಮಾಡಿದವರು ಸತ್ತ ಬೇಯವರು ಫ್ರೆಂಚರ ಸ್ನೇಹಿತರೆಂದು ಹೇಳಲಾಗಿದೆ

ಷೇಕ್ ಅಬ್ದುಲ್ಲಾರವರ ಮೇಲೆ ಕೊಲೆ ಆಪಾದನೆ

ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾ ಮತ್ತು ವೈದ್ಯ ಡಾ॥ ಅಲಿ ಮಹಮದ್‌ರವರು ಪಿತೂರಿ ನಡೆಸಿ, ಡಾ॥ ಮುಖರ್ಜಿಯವರ ಬಗ್ಗೆ ಉದಾಸೀನತೆಯನ್ನು ತೋರಿ ಅವರ ಮರಣಕ್ಕೆ ಕಾರಣರಾದರೆಂದು, ಕಲ್ಕತ್ತಾ ನ್ಯಾಯಾಲಯವೊಂದರಲ್ಲಿ ಕೃಷ್ಣ ಕುಮಾರ್ ಚಟರ್ಜಿಯವರು ಕೊಟ್ಟಿದ್ದ ದೂರನ್ನು ವಜಾ ಮಾಡಲಾಗಿದೆ ಡಾ॥ ಮುಖರ್ಜಿಯವರ ನಿಧನವು ಕೊಲೆಯಾಗಿರಬಹುದೆಂದು ಅರ್ಜಿದಾರರು ತಿಳಿಸಿದ್ದರು

ರೀಯವರಿಗೆ ಅಮೆರಿಕದ ಬಲವಾದ ಎಚ್ಚರಿಕೆ

ದಕ್ಷಿಣ ಕೊರಿಯಾ ಸರ್ಕಾರಕ್ಕೆ ಅನೈರು ರಿಯಾಯಿತಿಗಳನ್ನು ತೋರಿಸಲಾಗಿರುವುದೆಂದೂ, ಅಲ್ಲಿನ ಅಧ್ಯಕ್ಷ ರೀಯವರು ಇನ್ನೂ ಶಾಂತಿ ಒಪ್ಪಂದಕ್ಕೆ ಒಪ್ಪದಿದ್ದರೆ, ಅವರನ್ನು ಬಿಟ್ಟು ಒಪ್ಪಂದವನ್ನು ಮಾಡಿಕೊಳ್ಳಲಾಗುವುದೆಂದೂ ಅಮೆರಿಕಾ ಸರ್ಕಾರವು ರೀಯವರಿಗೆ ತಿಳಿಸಿರುವುದೆಂದು ಗೊತ್ತಾಗಿದೆ

ನಾಯಿ ಕಣ್ಣಿಗೆ ಶಸ್ತ್ರ ಚಿಕಿತ್ಸೆ

ತುಮಕೂರಿನ ಪ್ರಥಮ ನ್ಯಾಯಾಧೀಶರಾದ ಶ್ರೀ ಬಿ ಎಸ್ ರುದ್ರಪ್ಪನವರ ಬೇಟೆ ನಾಯಿಯ ಕಣ್ಣಿಗೆ ಡಾ॥ ಎಂ ಸಿ ಮೋದಿಯವರು ಶಸ್ತ್ರ ಚಿಕಿತ್ಸೆ ನಡೆಸಿ, ಪೊರೆಯನ್ನು ತೆಗೆದಿರುತ್ತಾರೆ ಚಿಕಿತ್ಸೆಯು ಯಶಸ್ವಿಯಾಗಿದೆ

ತುಂಗಭದ್ರಾ ಅಣೆಕಟ್ಟಿನಿಂದ ನೀರು ಸರಬರಾಜು

ತುಂಗಭದ್ರಾ ಅಣೆಕಟ್ಟಿನಿಂದ ನೆನ್ನೆ ಹೈದರಾಬಾದು ಮತ್ತು ಆಂಧ್ರ ಗಡಿಗಳಿಗೆ ನೀರನ್ನು ಕಾಲುವೆಗಳ ಮೂಲಕ ಬಿಡಲಾಯಿತು ಅತ್ಯಂತ ವೃದ್ಧನಾದ ಶಂಕರಪ್ಪ ಎಂಬ ರೈತನು ಅದರ ಆರಂಭೋತ್ಸವವನ್ನು ನೆರವೇರಿಸಿದನು. ಈ ಸಮಾರಂಭದಲ್ಲಿ ಹೈದರಾಬಾದು ಕಡೆ ೧ ಸಾವಿರ ಬಡಬಗ್ಗರಿಗೆ ವಸ್ತ್ರದಾನ ಮಾಡಲಾಯಿತು ಹತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಸಂತರ್ಪಣೆ ನಡೆಸಿ, ಮಕ್ಕಳಿಗೆ ಸಿಹಿ ತಿಂಡಿಯನ್ನು ಕೊಡಲಾಯಿತು

೩ ಪ್ರಮುಖ ರಾಯಭಾರಿಗಳೊಡನೆ ರಷ್ಯಾ ಆಲೋಚನೆ

ಅಮೆರಿಕ, ಬ್ರಿಟನ್ ಫ್ರಾನ್ಸುಗಳಲ್ಲಿರುವ ತಮ್ಮ ರಾಯಭಾರಿಗಳನ್ನು ರಷ್ಯಾ ಸರ್ಕಾರದವರು ಸಮಾಲೋಚನೆಗಾಗಿ ಮಾಸ್ಕೋವಿಗೆ ಕರೆಸಿರುವರು ಅವರುಗಳು ವಿದೇಶಾಂಗ ಮಂತ್ರಿ ಮೊಲೊಟೋವ್‌ರೊಡನೆ ಮಾತುಕತೆ ನಡೆಸುವರು

ವಾಷಿಂಗ್ಟನ್ನಿನಲ್ಲಿ ವಿದೇಶಾಂಗ ಸಚಿವರ ಸಭೆ

ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸುಗಳ ವಿದೇಶಾಂಗ ಮಂತ್ರಿಗಳ ಸಭೆಯು ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿನಲ್ಲಿ ಇದೇ ತಿಂಗಳು ೧೦ ನೇ ತಾ॥ ನಡೆಯುವುದೆಂದು ವರದಿಯಾಗಿದೆ

ಚೀಣಕ್ಕೆ ಚೌಡಯ್ಯನವರ ಪ್ರಯಾಣವಿಲ್ಲ

ಚೀಣಕ್ಕೆ ಹೋಗಲಿರುವ ಭಾರತದ ಕಲಾವಿದರ ಸೌಹಾರ್ದ ನಿಯೋಗದಲ್ಲಿ ತಾವು ಸೇರಲು ಹಲವು ಅನಿವಾರ್ಯಗಳಿಂದ ಸಾಧ್ಯವಿಲ್ಲವೆಂದು ಸಂಗೀತ ರತ್ನ ಟಿ ಚೌಡಯ್ಯನವರು ತಿಳಿಸಿರುತ್ತಾರೆ

ವಿದ್ಯುಚ್ಛಕ್ತಿ ಕಂಬಕ್ಕೆ ಲಾರಿ ಢಿಕ್ಕಿ

ಹೆಗ್ಗಡದೇವನ ಕೋಟೆಯಿಂದ ನೆನ್ನೆ ಸಾಮಾನುಗಳನ್ನು ತರುತ್ತಿದ್ದ ಪೌರಸಭೆಯ ಒಂದು ಲಾರಿಯು ಲೇಷ್ಮಿ ಕಾಲೋನಿ ಬಳಿ ಅಪಘಾತಕ್ಕೀಡಾಯಿತು ಲಾರಿಯು ವಿದ್ಯುಚ್ಛಕ್ತಿ ಕಂಭಕ್ಕೆ ಡಿಕ್ಕಿ ಹೊಡೆದು ಕಂಬಾ ಜಖಂ ಆಯಿತೆಂದೂ ಗೊತ್ತಾಗಿದೆ ವಿದ್ಯುಚ್ಛಕ್ತಿ ಕಂಭವು ಮುರಿದು ಬಿದ್ದಿತೆಂದೂ ಗೊತ್ತಾಗಿದೆ ಯಾರಿಗೂ ಅಪಾಯವಾಗಲಿಲ್ಲ ಲಾರಿಯ ಡ್ರೈವರ್ ವೆಂಕಟೇಶ ಎಂಬುವರನ್ನು ವಶಕ್ಕೆ ತೆಗೆದುಕೊಂಡು, ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ

ಮಿಸೆಸ್ ಕಪಾಸ್ಕಿಯವರಿಗೆ ಸಾರಾಯಿ ಕಂಟ್ರಾಕ್ಟು

ಬೆಂಗಳೂರು ನಗರ, ದಂಡು ಮತ್ತು ತಾಲ್ಲೂಕು ಪ್ರದೇಶಗಳ ಅಂಗಡಿಗಳನ್ನು ಸರ್ಕಾರದವರೇ ನಡೆಸಲು ನಿರ್ಧಾರವಾಗಿದ್ದು ಈಗ ಅದನ್ನು ಬದಲಾಯಿಸಿ ಸಾಲಿಯಾನ ೧,೬೩,೪೦೦ ರೂ ಗಳ ಕಂಟ್ರಾಕ್ಟನ್ನು ಶ್ರೀಮತಿ ಕಪಾಸ್ಕಿ ಎಂಬುವರಿಗೆ ವಹಿಸಲಾಗಿದೆ ಶ್ರೀ ಕೆ ಎಸ್ ಗುರುಸ್ವಾಮಿಯವರು ೧,೭೧ ೦೦೦ ರೂಗಳಿಗೆ ಬಿಡ್ಡು ಮಾಡಿದ್ದರು ಈಗ ಹೊಸಬರಿಗೆ ವಹಿಸಿರುವುದರಿಂದ ೭೬ ಸಾವಿರ ರೂ ವರಮಾನವು ಹೆಚ್ಚಾಗಿ ಬರುವುದೆಂದು ಹೇಳಲಾಗಿದೆ.

ಸಂಸ್ಥಾನದ ಭೂದಾನ ಯಜ್ಞ ಸಮ್ಮೇಳನ

ಬೆಂಗಳೂರು ೩೦

ಮೈಸೂರು ಪ್ರಾಂತೀಯ ಭೂದಾನ ಯಜ್ಞ ಸಮಿತಿ ಸಂಚಾಲಕರಾದ ಶ್ರೀ ಬೆಳಗುಂಬ ಎಂ. ತಿಮ್ಮಪ್ಪನವರು ಮನವಿಯೊಂದನ್ನು ಹೊರಡಿಸಿ ಇದೇ ಜನೇವರಿ ಭಾನುವಾರ ಇಲ್ಲಿನ ನ್ಯಾಷನಲ್ ಕಾಲೇಜಿನಲ್ಲಿ ಮೈಸೂರು ಪ್ರಾಂತೀಯ ಭೂದಾನ ಯಜ್ಞ ಸಮ್ಮೇಳನವು ನಡೆಯುವುದಾಗಿ ತಿಳಿಸಿರುತ್ತಾರೆ. ಸರ್ವೋದಯದ ನಾಯಕರಾದ ಶ್ರೀ ದಾದಾ ಧರ್ಮಾಧಿಕಾರಿ, ಸರ್ವ ಸೇವಾ ಸಂಘದ ಶ್ರೀ ವಲ್ಲಭಸ್ವಾಮಿ, ಭೂದಾನ ಯಜ್ಞದ ಮುಂದಾಳುಗಳಾದ ಶ್ರೀಮತಿ ವಿನು ಅಬಾಯಿ ಮೊದಲಾದ ಹಿರಿಯರುಗಳು ಸಮ್ಮೇಳನದಲ್ಲಿ ಭಾಗವಹಿಸುವರು.

ಬಿಹಾರಿನಲ್ಲಿ ಇತ್ತೀಚೆಗೆ ನಡೆದ ಭೂದಾನ ಯಜ್ಞ ಸಮ್ಮೇಳನದಲ್ಲಿ ಆದ ತೀರ್ಮಾನದಂತೆ ಮೈಸೂರು ಸಂಸ್ಥಾನದಲ್ಲಿ ಮುಂದಿನ ಏಪ್ರಿಲ್ ತಿಂಗಳೊಳಗೆ ಲಕ್ಷ ಎಕರೆ ಜಮೀನನ್ನು ಸಂಗ್ರಹಿಸಬೇಕಾಗಿದೆ. ಭೂದಾನ ಯಜ್ಞ ಪ್ರಚಾರವು ಸಂಸ್ಥಾನದಲ್ಲಿ ಚೆನ್ನಾಗಿ ಹರಡುವಂತೆ ಎಲ್ಲರೂ ಕೈಗೊಳ್ಳಬೇಕಾಗಿದೆ. ಈ ಕಾರ್ಯಕ್ರಮವನ್ನು ಗೊತ್ತುಪಡಿಸಲು ಸಮ್ಮೇಳನವು ನಡೆಯುವುದು. ಸ್ಥಾನದಲ್ಲಿ ಭೂಮಿಯಿಲ್ಲದ ಎಲ್ಲ ಕುಟುಂಬಗಳ ಪೈಕಿ ಕನಿಷ್ಠ ಒಂದು ಭಾಗದವರಿಗಾದರೂ ಭೂಮಿಯನ್ನು ಕೊಡಿಸುವ ಉದ್ದೇಶ ಕಾರ್ಯಗತವಾಗಬೇಕಾಗಿರುವುದರಿಂದ ಸಂಸ್ಥಾನದ ವಿವಿಧ ರಾಜಕೀಯ ಪಕ್ಷಗಳವರೂ, ಪಕ್ಷಾತೀತ ಸೇವಾಸಕ್ತರೂ ಈ ಸಮ್ಮೇಳನಕ್ಕೆ ಬರಬೇಕೆಂದೂ ಕೋರಲಾಗಿದೆ.

ಸಮುದ್ರವನ್ನು ತಡೆಯಲು ಮರಳಿನ ಏರಿ

ಗೋಚ್ಚಿ ಎಂದರಿಯೋಗ ಸಮುದ್ರವು ಹೆಚ್ಚುಹೆಚ್ಚಾಗಿ ನೆಗ್ಗಿರುವುದನ್ನು ತಪ್ಪಿಸಲು ಪಶ್ಚಿಮ ತೀರದಲ್ಲಿ ಮೈಲಿ ಉದ್ದ ಮರಳಿನ ಏರಿಯನ್ನು ಕಟ್ಟಲು ಅಲ್ಲಿನ ಸರ್ಕಾರದವರು ಆಲೋಚಿಸುತ್ತಾರೆ.

ದೇವರಿಗೆ ಪೀತಾಂಬರ ಉಡುಗೊರೆ

ರಾಜಧಾನಿಯ ಅರಮನೆ ಕೋಟೆಯ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ಆರಂಭವಾಗಿ ವಿವಿಧ ಸಮಾರಂಭಗಳು ನಡೆಯುತ್ತಿದ್ದು ಶ್ರೀ ಚಾಮರಾಜ ಒಡೆಯರವರು ಅಮ್ಮನವರಿಗೆ ಬೆಲೆಯ ಕೃದಿವ್ಯ ಪೀತಾಂಬರವೊಂದನ್ನು ಉಡುಗೊರೆಯಾಗಿ ಕಳುಹಿಸಿರುತ್ತಾರೆ.

ಕೂಡಲೇ ಮಾರಾಟಕ್ಕಿದೆ

ಒಳ್ಳೆಯ ಕಂಡೀಷನ್ನಿನಲ್ಲಿರುವ 3.5 H.P. ಮ್ಯಾಚ್‌ಲೆಸ್ ಮೋಟಾರ್ ಸೈಕಲ್, (ಹೊಸ ಟೈರು) ಕೂಡಲೇ ವಿಚಾರಿಸಿ: ಮ್ಯಾನೇಜರ್, ಅಂಡರ್ ಸ್ಟ್ಯಾಂಡ್, ಬೆಂಗಳೂರು; 1581 ... ದಿನ್ನೆ, ಮೈಸೂರು

ಗಿರಿಜಾ ಕಲ್ಯಾಣ

ಚಾಮರಾಜನಗರ

ಇಲ್ಲಿನ ಚಾಮರಾಜೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣ ಮಹೋತ್ಸವವು ಅತಿ ವೈಭವದಿಂದ ನಡೆದ ಏಳು ದಿನಗಳಿಂದಲೂ ನಡೆಯಿತು. ಸಂಗೀತ ವಿದ್ವಾಂಸರಿಂದ ಗಾಯನವೂ ಕೀರ್ತನಕಾರರಿಂದ ಹರಿಕಥೆಗಳೂ ಜರುಗಿದವು. ಅಮುಖ್ಯರಾದ ಶ್ರೀ ಎಂ. ಆರ್. ನರಸೀಗಂಗಪ್ಪನವರೂ ಉತ್ಸವದ ಸಮಿತಿ ಸದಸ್ಯರುಗಳಾದ ಶ್ರೀಗಳು ಟಿ. ಆರ್. ಜನಾರ್ಧನ್, ಡಿ. ನಂಜುಂಡಯ್ಯ, ಸಿ. ಎಸ್. ಬಸಪ್ಪಶೆಟ್ಟಿ, ವಿ. ರಾಮಣ್ಣ, ಸಿ. ವಿ. ವೆಂಕಟೇಶ್, ವಿ. ಕೃಷ್ಣಸ್ವಾಮಿ, ಜೋಡಿದಾರ್ ಜಿ. ರಂಗಸ್ವಾಮಿ ಮತ್ತು ಇತರರು ಈ ಸಂದರ್ಭದಲ್ಲಿ ಉತ್ಸವವನ್ನು ಯಶಸ್ವಿಗೊಳಿಸಿದರು.

ಕುಂಡಿತಿಕ್ಕಾಗಿ ಕತ್ತಿಯ ದಸ್ತಗಿರಿ

ಕುಂಡಿಕ್ಕಾಗಿ ಶ್ರೀ ಒಬ್ಬ ಪೋಲೀಸನು ತನ್ನ ಕತ್ತಿಯನ್ನು ದಸ್ತಗಿರಿ ಮಾಡಿದ ಸುದ್ದಿ ವರದಿಯಾಗಿದೆ. ನಿನ್ನೆ ಮಧ್ಯರಾತ್ರಿಯ ಹೊತ್ತಿಗೆ, ಒಂದು ವಿಕ್ಟೋರಿಯಾ ಗಾಡಿ ಹೋಗುವಾಗ ಅದರ ಕತ್ತಿ ಒಬ್ಬ ಸ್ತ್ರೀಯನ್ನು ಕಂಡಿತೆಂದೂ, ಆಕೆಯ ತನ್ನ ಪೋಲೀಸನು ಕತ್ತಿಯನ್ನು ದಸ್ತಗಿರಿ ಮಾಡಿ ಪೋಲೀಸ್ ಠಾಣೆಗೆ ಕರೆದೊಯ್ದನೆಂದು ವರದಿಯಾಗಿದೆ.

ಸಂಗೀತ ಕೃತಿಗಳ ಪ್ರಕಟನೆಗಳಿಗೆ ಧನ ಸಹಾಯ

ರಾಜಧಾನಿಯ ಸಂಗೀತ ಕಲಾಭಿವೃದ್ಧಿಗೆ ಶ್ರಮಿಸುವರು ಸದಾಶಿವರಾಯರೇ ಮೊದಲಾದ ಮೈಸೂರಿನ ಸಪ್ರಸಿದ್ಧ ವಾಗ್ಗೇಯಕಾರರ ಕೃತಿಗಳನ್ನು ಪ್ರಕಟಿಸುವುದಕ್ಕಾಗಿ, ಸಭೆಯ ಗೌರವ ಕಾರ್ಯದರ್ಶಿ ಬೇಡಿಕೆ ಬಂದಿದ್ದು ಮಹಾರಾಜರವರ ಪರವಾಗಿ ೫೦೦ ರೂ. ಮತ್ತು ವಿ. ಎಸ್. ಸಿ. ಬೇಲೂರು ಅವರು ೫೦ ರೂ.ಗಳನ್ನು ಕಾಣಿಕೆಯಾಗಿ ಕೊಟ್ಟಿರುತ್ತಾರೆ.

ರಾಜಧಾನಿಯ ಶ್ರೀ ಎ. ವಿ. ಅನಂತರಾಮಯ್ಯನವರ ಸಂಪಾದಕತ್ವದಲ್ಲಿ ತೀರ್ಥ ಮತ್ತು ಕಂಪೆನಿಯವರು ಪ್ರಕಟಿಸುತ್ತಿರುವ ಕಥಾವಳಿ ಕನ್ನಡ ಮಾಸಪತ್ರಿಕೆಯ ೧೧ನೇ ಸಂಚಿಕೆಯು ನಮ್ಮ ಕೈಸೇರಿದೆ.

ಒಲಂಪಿಯಾ ಟಾಕೀಸ್

3-7-53 ರಿಂದ ಪ್ರತಿದಿನ 3 ಆಟಗಳು

ಫಾಲ್ಕನ್ ಪಿಕ್ಚರ್ಸ್‌ರವರ

ಬಾಗ್ದಾದ್

ಪಾತ್ರ: ರಂಜನ್, ಭಾರತಿ ಭಗವಾನ್

ಶೀಘ್ರದಲ್ಲಿ — ಮೋತಿ

ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಗಳೆಲ್ಲ ಅರ್ಜಿ ವಜಾ

ಹೈದರಾಬಾದು ಸಂಸ್ಥಾನದ ಉಮ್ರೆಗಾರ್ ನಗರ ಸಭೆಯ ಚುನಾವಣೆ ಸಂಬಂಧವಾಗಿ, ಚುನಾವಣಾಧಿಕಾರಿಗಳು ಕಾಂಗ್ರೆಸ್ಸಿನ ೧೪ ಜನ ಪ್ರತಿನಿಧಿಗಳೆಲ್ಲರ ಅರ್ಜಿಗಳನ್ನು ತಿರಸ್ಕರಿಸಿದುದರಿಂದ ಅಲ್ಲಿನ ಪ್ರಜಾ ಸಂಯುಕ್ತ ರಂಗದ ಉಮೇದುವಾರರೆಲ್ಲರೂ ಜಯಶಾಲಿಗಳಾಗಿದ್ದಾರೆ. ಚುನಾವಣೆ ನಿಯಮದಂತೆ ಕಾಂಗ್ರೆಸ್ ಸ್ಪರ್ಧಿಗಳು ನಾಮಪತ್ರಗಳ ಪ್ರತಿಯನ್ನು ಒಪ್ಪಿಸದಿದ್ದುದೇ ಅರ್ಜಿಗಳ ತಿರಸ್ಕಾರಕ್ಕೆ ಕಾರಣ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ವರೆಗೆ ಮಣಿ ಅಯ್ಯರ್ ರಿಂದ ವಾದ್ಯ ಸಂಗೀತ ೯-೩೦ ವಿಜ್ಞಾನ ವಿಹಾರ, ಸಂಜೆ ೫-೩೦ ವ್ಯವಹಾರ ಇಂಗ್ಲೀಷ್, ಚಿಕ್ಕೋಳಪ್ಪ, ಕನ್ನಡ ... ೬-೩೦ ಎಂ. ಕೃಷ್ಣನ್ ... ನಾರ್ ... ೮-೩೦ ಭಾಂಕರದ ಜನಪದ ಗೀತೆ, ... ಉಸ್ತಾದ್ ಕೈಯಾಜ್‌ಖಾನ್, ರಿಕಾರ್ಡ್ ೯-೩೦ ಕರ್ನಾಟಕ ...

ಚಾಮರಾಜನಗರದಲ್ಲಿ ಬಾರದ ಮಾರ್ಗ ಸುಂಕವೇ?

ಸ್ವಾಮಿ,

ಸುಬ್ಬಯ್ಯನವರ ಎಲ್ಲ ಭಾಗದ ಸಭ್ಯರುಗಳ ಒಳಗಿನ ಚಿಕ್ಕ ದೊಡ್ಡ ಗಾಡಿಗಳಿಗೆ ಬಾರದ ಮಾರ್ಗದ ಸುಂಕದ ವಿನಾಯಿತಿ ಇದೆ. ಆದರೆ ಚಾಮರಾಜನಗರದ ಪಿಪ್ಲ ಟೋಲುಗೇಟುಗಳನ್ನು ದಾಟಿ ಹೋಗುವ ಎಲ್ಲಾ ಗಾಡಿಗಳಿಗೂ ಟೋಲು ಚೀಟಿ ಕೊಂಡುಕೊಳ್ಳಬೇಕೆಂದು ಕೈಚಾಚಿ ಜನರಿಗೆ ಒತ್ತಾಯ ಮಾಡಿ ತೊಂದರೆ ಕೊಡಲಾಗುತ್ತಿದೆ. ಈ ವಿಷಯವನ್ನು ಸಂಬಂಧಪಟ್ಟವರಿಗೆ ತಿಳಿಸಿದರೂ ಯಾವ ಪ್ರಯೋಜನವೂ ಆಗಿರುವುದಿಲ್ಲ. ಮೇಲಧಿಕಾರಿಗಳಾದರೂ ಈ ವಿಷಯವನ್ನು ಪರಿಶೀಲಿಸಿ ಬಡ ರೈತರಿಗಾಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇವೆ.

ನೊಂದವರು

ಚಾಮುಂಡೇಶ್ವರಿ

ಟಾಕೀಸ್

3-7-53 ರಿಂದ ಎರಡನೆಯ ವಾರ ಪ್ರಾರಂಭ

ದಿನವಹಿ ಮೂರು ಆಟಗಳು

ಮಯೂರಿ

(ತೆಲುಗು)

ನಮ್ಮ ಹಿಂದಿನ ರೆಕಾರ್ಡನ್ನು ಮೀರಿಸುತ್ತಿದೆ, ನರಸಿಂಹ ಭಾರತಿ ... ಕಿಸ್ಸನ್ನು ನೋಡಿ

Edited and published by K. Nagaraja... at Sadhvi Press D. Subbaiah Road, Mysore

ಮೈಸೂರು ಪೇಟೆ ಧಾರಣೆ

ಸರಕು	ರೂ. ಖಂಡ	ರೂ. ಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಉದ್ದು	[illegible]	
ಕಡಲೆ	[illegible]	[illegible]
ಬೆಲ್ಲ	[illegible]	
ಹುಣಿಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	[illegible]
ಕೆಂಗಿನಕಾಯಿ	[illegible]	[illegible]

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ದಾನ

ಮುಡಗೂರು ಶ್ರೀ ಮಠದಲ್ಲಿರುವ ವೇ॥ ಶಾಂತವೀರ ದೇವರ ಕುಮಾರ ಚಿ॥ ರಾ॥ ಎಂ. ಎಸ್. ಉದ್ಧಾನೇಶ್ವರ ಎಂಬುವರಿಗೆ ಮಲ್ಲನ ಮೂಲೆ ಶ್ರೀ ಮಠದಲ್ಲಿರುವ ವೇ॥ ಸ್ವತಂತ್ರಪ್ಪನವರ ಕುಮಾರಿ ಚಿ॥ ಸೌ॥ ಸರ್ವಮಂಗಳಮ್ಮನವರನ್ನು ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಇಪ್ಪತ್ತು ರೂಗಳನ್ನು ದಾನವಾಗಿ ಕೊಟ್ಟಿದ್ದಾರೆ.

ಡೀಸೆಲ್ ಇಂಜನ್ ತಯಾರಿಕೆ

ಬೆಂಗಳೂರಿನ ಶಾಖಾ ವಿಜ್ಞಾನ ಶಾಲೆಯವರ ಇದೇ ಮೊಟ್ಟಮೊದಲಾಗಿ ಒಂದು ಅಶ್ವಶಕ್ತಿಯ ಡಬ್ಬಲ್ ಸ್ಟ್ರೋಕ್ ಡೀಸಲ್ ಇಂಜನ್ನನ್ನು ತಯಾರಿಸುತ್ತಾರೆ. ಇಂಜನ್ನು ಪೆಟ್ರೋಲ್ ಬದಲು ಆಲ್ಕೋಹಾಲ್ ದ್ರಾವಕವನ್ನು ಉಪಯೋಗಿಸಬಹುದು.

ಶ್ರೀ ಕಾಶೀ ಯಾತ್ರಾರ್ಥಿಗಳಿಗೆ ಸೂಚನೆ

ಯಾತ್ರಾರ್ಥಿಗಳು ಪ್ರಯಾಗ, ಕಾಶಿ, ಗಯಾ ಕ್ಷೇತ್ರಗಳಲ್ಲಿ ಸ್ವಂತ ಅನುಕೂಲವನ್ನೂ, ಯಾತ್ರಾ ಕಾರ್ಯಗಳ ವಿಚಾರಣೆಯನ್ನೂ ನಮಗೆ ಒಪ್ಪಿಸಿ ತಮ್ಮ ಇಷ್ಟದಂತೆ ನಡೆಸಿಕೊಡುತ್ತೇವೆ. ನೀವು ಇಂಥಾ ಸ್ಥಳಕ್ಕೆ ಹೋಗುವೆವೆಂದರೆ ನಮ್ಮ ಇಷ್ಟದ ಸ್ಥಳಕ್ಕೆ ಕರೆದುಕೊಂಡು ಹೋಗುವೆವೆಂದು ಹೇಳಿ, ಬೇರೆ ಜನ ಮಧ್ಯ ಮಾರ್ಗದಲ್ಲಿ ಮೋಸಮಾಡಿಯಾರು ಎಚ್ಚರವಾಗಿರಿ.

ಕಾಶಿಗೆ ನೇರವಾಗಿ ಇಂಥ ದಿನ ಬರುತ್ತೇವೆಂದು ಮುಂದಾಗಿ ನಮಗೆ ತಿಳಿಸಿದರೆ ಸ್ಟೇಷನ್ನಿಗೆ ಬಂದು ನಿಮ್ಮನ್ನು ಎದುರುಗೊಳ್ಳುತ್ತೇವೆ. ಬಂದುಹೋದ ಎಲ್ಲಾ ಪ್ರಯಾಣಿಕರು ಬರಬೇಕೆಂದು ಆಪೇಕ್ಷಿಸಿದಲ್ಲಿ ಅಲ್ಲಿಗೂ ಬಂದು ಎದುರುಗೊಳ್ಳುತ್ತೇವೆ.

ಕಾಶಿಯಲ್ಲಿ ತಯಾರಾಗುವ ರೇಷ್ಮೆ, ಜರಿ ಮುಂತಾದ ಬಟ್ಟೆಗಳನ್ನಾಗಲಿ ತಾಮ್ರದ ಪಾತ್ರೆ, ಗಂಗಾ ಚೆಂಬುಗಳು, ಪಂಚಾಯತನ ಮುಂತಾದ ಪೂಜಾ ಸಾಧನಗಳನ್ನಾಗಲಿ, ಸಲ್ಪ ಬೆಲೆಗೆ ವಿ. ಪಿ. ಮೂಲಕ ಕಳುಹಿಸುತ್ತೇವೆ.

ವಿಶೇಷ ಸಂಗತಿ ಪತ್ರದ್ವಾರ ತಿಳಿಯಬಹುದು.

ಮೈಸೂರು ಕೃಷ್ಣಶಾಸ್ತ್ರೀ

ನಂ. 27 ಹನುಮಾನ್ ಘಾಟ್, ಬನಾರಸ್ (ಕಾಶೀ ಕ್ಷೇತ್ರ)

ಉಗ್ಗದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಅಲ್ಲದೆ ನವೀನ ಸೂಲಿನ ಸೀರೆಗಳಿಗೆ **M. V. ಭೋಜಯ್ಯ** ಬಿ. ಎ. ಇಂಡಿಯಾ ಬ್ಯಾಂಕ್ ಎದುರು ಕೆ. ಆರ್. ಮೈಸೂರು (ಫೋನ್ 446)

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೩-೭-೧೯೫೩ [ಸಂಚಿಕೆ ೩೭೭

ದಕ್ಷಿಣ ಕೊರಿಯವು ಆಕ್ರಮಣಕಾರಿ ರಾಷ್ಟ್ರ?

ಯುದ್ಧ ಮುಂದುವರಿಸುವ ಬಗ್ಗೆ ಪ್ಲೀ ಸಲಹೆಗೆ ತಿರಸ್ಕಾರ

ಪಾನ್‌ಮುಂಜಾನ್ ಕದನ ವಿರಾಮದ ನಂತರ ನಡೆಯುವ ರಾಜಕೀಯ ಸಮ್ಮೇಳನವು ವಿಫಲವಾದರೆ ಯುದ್ಧವನ್ನು ಮುಂದುವರಿಸಬೇಕೆಂದು ದಕ್ಷಿಣ ಕೊರಿಯವು ಅಮೆರಿಕಕ್ಕೆ ನೀಡಿದ್ದ ಸಲಹೆಯನ್ನು ನಿರಾಕರಿಸಲಾಗಿರುವುದೆಂದು ತಿಳಿದುಬಂದಿದೆ. ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರೊಡನೆ ಈ ಸಂಬಂಧವಾಗಿ ಮಾತುಕತೆ ನಡೆಸಲು ಐಸೆನ್‌ಹೋವರರ ಪ್ರತಿನಿಧಿಯಾಗಿ ಬಂದಿರುವ ರಾಬರ್ಟ್ಸನ್ನರು ದಕ್ಷಿಣ ಕೊರಿಯಕ್ಕೆ ಹಲವು ಭರವಸೆಗಳನ್ನು ನೀಡಿ, ಬಿಡುಗಡೆ ಹೊಂದಿದ ಕಮ್ಯೂನಿಸ್ಟ್ ವಿರೋಧಿ ಯುದ್ಧ ಖೈದಿಗಳಿಗೆ ಆಶ್ರಯ ಸ್ಥಾನಮಾನಗಳ ಪುರಸ್ಕಾರವೀಯುವುದಾಗಿಯೂ, ಅವರೊಡನೆ ಒಂದು ರಕ್ಷಣಾ ಒಪ್ಪಂದ ಮಾಡಿಕೊಳ್ಳುವುದಾಗಿಯೂ ಮತ್ತು ಅವಕ್ಕೆ ಆರ್ಥಿಕ ನೆರವು ನೀಡುವುದಲ್ಲದೆ ಶಾಂತಿ ಸಂಧಾನದ ನಂತರ ನಡೆಯುವ ರಾಜಕೀಯ ಸಮ್ಮೇಳನದಲ್ಲಿ ದಕ್ಷಿಣ ಕೊರಿಯವು ತನ್ನ ನಿಲುವಿನ ಬಗ್ಗೆ ಪ್ರತಿಪಾದಿಸಲು ಅವಕಾಶ ಕಲ್ಪಿಸಲಾಗುವುದೆಂದೂ ತಿಳಿಸಿದ್ದುದಾಗಿ ಹೇಳಲಾಗಿದೆ

ಇವೆಲ್ಲವನ್ನೂ ನಿಲಕ್ಷಿಸಿ ದಕ್ಷಿಣ ಕೊರಿಯವು ಸ್ವೇಚ್ಛೆಯಾಗಿ ಯುದ್ಧವನ್ನು ಮುಂದುವರಿಸಲು ಪ್ರಯತ್ನಪಟ್ಟರೆ, ಅದನ್ನು ವಿಶ್ವಸಂಸ್ಥೆಯು ಆಕ್ರಮಣಕಾರಿ ರಾಷ್ಟ್ರವೆಂದು ಘೋಷಿಸಿ ಹಳಿಯುವ ಸಂಭವವಿರುವುದಾಗಿ ದಕ್ಷಿಣ ಕೊರಿಯದ ವಿದೇಶಾಂಗ ಮಂತ್ರಿಯವರು ತಿಳಿಸಿರುವರು

ಬಂಧನದಿಂದ ತಪ್ಪಿಸಿಕೊಂಡ ಸುಮಾರು ೩೦೦ ಮಂದಿ ಕಮ್ಯೂನಿಸ್ಟೇತರ ಖೈದಿಗಳು ನೆನ್ನೆ ಪುಸಾನ್ ನಗರದಲ್ಲಿ ಜೀಪುಗಳಲ್ಲಿ ಕುಳಿತು ಪ್ರದರ್ಶನ ನಡೆಸುತ್ತಾ ತಾವು ಮತ್ತೆ ಸೈನ್ಯಗಳಲ್ಲಿ ಸೇವೆ ಸಲ್ಲಿಸಲು ಸಿದ್ಧವಿರುವುದಾಗಿ ಘೋಷಿಸಿ ಮಿಲಿಟರಿ ಬ್ಯಾರಕ್ಕುಗಳ ಕಡೆ ಹೊರಟು ಕೆಲವರು ಆ ಬಗ್ಗೆ ರಕ್ತದಲ್ಲಿ ಅರ್ಜಿಗಳನ್ನು ಬರೆದು ಕೊಟ್ಟರೆಂದೂ ವರದಿಯಾಗಿದೆ

ಕಾಶ್ಮೀರದ ಮುಖಂಡರಲ್ಲಿ ಒಡಕು

ಕಾಶ್ಮೀರದ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾ ಮತ್ತು ಉಪ ಪ್ರಧಾನಿ ಬಕ್ಷಿ ಗುಲಾಂ ಮಹಮದ್ ಮುಂತಾದವರುಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿರುವುದೆಂದೂ, ಭಾರತಕ್ಕೆ ಕಾಶ್ಮೀರದ ಸೇರ್ಪಡೆ ವಿಷಯದಲ್ಲಿ ಷೇಕ್ ಅಬ್ದುಲ್ಲಾರವರ ವಿರುದ್ಧವಾಗಿ ರಾಷ್ಟ್ರೀಯ ಸಮ್ಮೇಳನದ ಕಾರ್ಯಕಾರಿ ಸಮಿತಿಯು ಬಹುಮತದ ಓಟು ಕೊಟ್ಟಿತೆಂದೂ ಹೇಳಲಾಗಿದೆ. ಕಾಶ್ಮೀರವನ್ನು ಸ್ವತಂತ್ರವಾಗಿಟ್ಟು ಭಾರತ ಮತ್ತು ಪಾಕಿಸ್ತಾನಗಳು ಅದರ ಅಸ್ತಿತ್ವದ ಬಗ್ಗೆ ಖಾತರಿ ಕೊಡಬೇಕೆಂದು ಷೇಕ್ ಅಬ್ದುಲ್ಲಾರವರು ಆಶೆ ಹೊಂದಿರುವುದಾಗಿ ಹೇಳಲಾಗಿದೆ. ಆದರೆ ಪಕ್ಷದ ಬಹುಮತದವರು ಭಾರತದೊಡನೆ ಮಾಡಿಕೊಂಡಿರುವ ಕರಾರಿನಂತೆ ನಡೆದು, ಪೂರ್ಣವಾಗಿ ಭಾರತದೊಡನೆ ಐಕ್ಯವಾಗಲು ಇಚ್ಛಿಸುತ್ತಿರುವರೆಂದು ಗೊತ್ತಾಗಿದೆ

ರೈಲನ್ನು ತಡೆದುದಕ್ಕಾಗಿ ಜನರ ಮೇಲೆ ಲಾಠಿ ಪ್ರಹಾರ

ತಮಿಳುನಾಡಿಗೆ ತಿರುತ್ತಣಿ ಗ್ರಾಮವು ಸೇರಬೇಕೆಂದು ಒತ್ತಾಯ ಮಾಡಲು ನಾಗರಿ ಎಂಬಲ್ಲಿ ರೈಲು ಓಡಾಟಕ್ಕೆ ತಡೆ ಮಾಡಿ ೨ ಸಾವಿರ ಜನರು ಮೊನ್ನೆ ಕಂಬಿ ಮೇಲೆ ಕುಳಿತಾಗ ಅವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಬೇಕಾಯಿತು. ಪೊಲೀಸರ ಮೇಲೆ ಜನರು ಕಲ್ಲೆಸೆದರೆಂದು ವರದಿಯಾಗಿದೆ. ೧೦ ಜನರನ್ನು ದಸ್ತಗಿರಿ ಮಾಡಲಾಗಿದೆ

ಸಿರಿಯಾದಲ್ಲಿ ಮತದಾನದ ಬಗ್ಗೆ ಒತ್ತಾಯದ ಶಾಸನ

ಸಿರಿಯದ ಹೊಸ ರಾಜ್ಯಾಂಗದ ಮತ್ತು ಅಲ್ಲಿನ ಅಧ್ಯಕ್ಷರ ಚುನಾವಣೆಗಳ ಬಗ್ಗೆ ನಡೆಯುವ ಜನಮತಗಣನೆಯಲ್ಲಿ ಪ್ರತಿಯೊಬ್ಬರೂ ಓಟು ಕೊಡಬೇಕೆಂದೂ ಹಾಗೆ ಕೊಡದಿದ್ದವರ ಮೇಲೆ ಕ್ರಮ ಜರುಗಿಸಲಾಗುವುದೆಂದೂ ಶಾಸನ ಮಾಡಲಾಗಿದೆ

ಹೆಂಡತಿಯ ಕತ್ತು, ಕೈಕಾಲು ಕುಯ್ದ ಪ್ರಸಂಗ

ಚಿಂತಾಮಣಿ ತಾಲ್ಲೂಕು ಕುರ್ಪಿಹಳ್ಳಿಯ ನಿವಾಸಿಯೊಬ್ಬನು, ಎರಡು ವರ್ಷಗಳ ಹಿಂದೆ ವಿಚ್ಛೇದನ ಮಾಡಿಕೊಂಡ, ಮುನೆಮ್ಮ ಎಂಬ ತನ್ನ ಹೆಂಡತಿಯು ಇನ್ನೊಬ್ಬನೊಡನೆ ಅಕ್ರಮ ಸಂಪರ್ಕವಿಟ್ಟುಕೊಂಡಿದ್ದಳೆಂದು, ಕಳೆದ ತಿಂಗಳು ೧೭ ನೇ ತಾ|| ಒಂದು ಹೊಲದಲ್ಲಿ ಆಕೆಯು ಹುಲ್ಲು ಕುಯ್ಯುತ್ತಿದ್ದಾಗ ಅವಳ ಕತ್ತು, ಕೈಕಾಲುಗಳನ್ನು ಕತ್ತರಿಸಿ ಪರಾರಿಯಾದನೆಂದು ವರದಿಯಾಗಿದೆ. ಆಕೆಗೆ ತೀವ್ರ ಗಾಯಗಳಾಗಿ ಪೊಲೀಸರು ಆಸ್ಪತ್ರೆಗೆ ಸೇರಿಸಿರುವರು

ಪಿ.ಹೆಚ್ ಕೃಷ್ಣರಾಯರಿಗೆ ಹೊಸ ಹುದ್ದೆ

ಸಂಸ್ಥಾನದ ಮಾಜಿ ಆರ್ಥಿಕಾಭಿವೃದ್ಧಿ ಕಮಿಷನರಾದ ಶ್ರೀ ಪಿ ಎಚ್ ಕೃಷ್ಣರಾಯರನ್ನು ಬೆಂಗಳೂರು ಜಯಚಾಮರಾಜೇಂದ್ರ ಔದ್ಯೋಗಿಕ ಶಾಲೆಯ ಪ್ರಿನ್ಸಿಪಾಲರಾಗಿ ಒಂದು ವರ್ಷ ಕಾಲ ನೇಮಿಸಲಾಗಿದೆ

ನೀರೆತ್ತುವ ಕಾರ್ಯಕ್ಕೆ ಸೂರ್ಯ ಪ್ರಕಾಶದ ಬಳಕೆ

ಕಲ್ಕತ್ತದ ಆರ್ಡಿನೆನ್ಸ್ ಇಂಜನಿಯರ್ ಮಿ|| ಕೆ ದಾಸ್ ಎಂಬುವರು ಸೂರ್ಯ ಪ್ರಕಾಶದಿಂದ ನೀರನ್ನು ಎತ್ತುವ ಮತ್ತು ಟೀ ಮೊದಲಾದ ಪದಾರ್ಥಗಳನ್ನು ತಯಾರಿಸುವ ಬಗ್ಗೆ ಯಶಸ್ವಿಯಾಗಿ ಪ್ರಯೋಗನಡೆಸಿ ನಿನ್ನೆ ಪಶ್ಚಿಮ ಬಂಗಾಳದ ಪ್ರಧಾನಿ ಡಾ|| ಬಿ ಸಿ ರಾಯರ ಸಮ್ಮುಖದಲ್ಲಿ ಅವನ್ನು ಪ್ರದರ್ಶಿಸಿದರೆಂದು ವರದಿಯಾಗಿದೆ

ಚಾಂಪಿಯನ್ ರೀಫ್‌ನಲ್ಲಿ ಹೆಚ್ಚಿನ ಚಿನ್ನದ ಉತ್ಪತ್ತಿ

ಕೋಲಾರದ ಚಾಂಪಿಯನ್ ರೀಫ್ ಎನ್ನುವ ಗಣಿಯಲ್ಲಿ ಕಳೆದ ವರ್ಷ ಚಿನ್ನದ ಉತ್ಪನ್ನವು ಹೆಚ್ಚಾಗಿ ಅದರಿಂದ ಸಂಸ್ಥಾನಕ್ಕೆ ೩೨,೮೫,೬೭೪ ರೂ ರಾಜಾದಾಯ ಬಂದಿರುವುದೆಂದು ಗೊತ್ತಾಗಿದೆ

ಪಾಸಾಗದ ಇಂಜನಿಯರಿಂಗ್ ವಿದ್ಯಾರ್ಥಿಗಳ ಸಭೆ

ವಿಶ್ವವಿದ್ಯಾಲಯಗಳ ಉಪಸ್ಥಾನಪತಿಗಳು ಮತ್ತು ಕೌನ್ಸಿಲರುಗಳನ್ನು ಭೇಟಿ ಮಾಡಿ ಮನವಿ ಪತ್ರಗಳನ್ನು ಸಲ್ಲಿಸಬೇಕೆಂದು ಕೆಲವು ಪಾಸಾಗದ ಇಂಜನಿಯರಿಂಗ್ ವಿದ್ಯಾರ್ಥಿಗಳು ತೀರ್ಮಾನಿಸಿ ಈ ಬಗ್ಗೆ ಪರಿಶೀಲನೆ ನಡೆಸಲು ಪಾಸಾಗದ ಬಿ ಇ ವಿದ್ಯಾರ್ಥಿಗಳೆಲ್ಲರೂ ನಾಳೆ ಬೆಳಗ್ಗೆ ೧೦ ಘಂಟೆಗೆ ವಿಶ್ವವಿದ್ಯಾಲಯದ ಕಛೇರಿ ಬಳಿ ಸಭೆ ಸೇರಲು ನಿರ್ಧರಿಸಲಾಗಿದೆಯೆಂದೂ ತಿಳಿಸಿ, ಅದರಲ್ಲಿ ಎಲ್ಲರೂ ಭಾಗವಹಿಸಬೇಕೆಂದು ವ್ಯವಸ್ಥಾಪಕರು ಕೋರಿರುತ್ತಾರೆ

ವಿವಾಹೋಪನಯನಗಳು

ಮೈಸೂರು ರೈಲ್ವೆ ವರ್ಕ್‌ಷಾಪಿನಲ್ಲಿ ಗುಮಾಸ್ತರಾಗಿರುವ ಶ್ರೀ ಎಂ ಆರ್ ನಾಗರಾಜರಾಯರ ಕುಮಾರ ಚಿ|| ಎಂ ಎನ್ ವೆಂಕಟಸುಬ್ಬರಾಯನ ಬ್ರಹ್ಮೋಪದೇಶವೂ ಮತ್ತು ಅವರ ಜ್ಯೇಷ್ಠ ಪುತ್ರಿ ಚಿ|| ಸೌ|| ಮಂಜುಳ ಮತ್ತು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹೆಚ್ ವೆಂಕಟರಾಮಯ್ಯನವರ ಸಹೋದರ ಶ್ರೀ ಹೆಚ್. ಅನಂತರಾಮಯ್ಯ ಇವರ ವಿವಾಹ ಮಹೋತ್ಸವವೂ ಕಳೆದ ೨ನೇ ತಾ|| ಚಲುವಾಂಬಭವನದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನೆರವೇರಿತು.

ಕೌಲಾಲಂಪುರದಲ್ಲಿ ಅಕ್ಕಿ ದಾಸ್ತಾನಿನ ಶೋಧನೆ

ದಂಗೆಕೋರರಿಗೆ ಅದು ಸಿಕ್ಕದಂತೆ ತಡೆಯಲು ಕ್ರಮ

ಮಲಯಾದಲ್ಲಿ ದಂಗೆಕೋರರಿಗೆ ನಾಗರಿಕರಿಂದ ಆಹಾರ ಸರಬರಾಜಾಗುವುದನ್ನು ತಡೆಗಟ್ಟಲು ಉಗ್ರ ಕ್ರಮವನ್ನು ಕೈಗೊಂಡು, ಅಲ್ಲಿನ ರಕ್ಷಣಾ ಪೊಲೀಸ್ ಶಾಖೆಯವರು ನೆನ್ನೆ ಒಂದು ಆಜ್ಞೆಯನ್ನು ಹೊರಡಿಸಿ, ಎಲ್ಲರ ಮನೆಗಳಲ್ಲಿರುವ ಅಕ್ಕಿಯ ಶೋಧನೆಯನ್ನು ಆರಂಭಿಸಲಾಗುವುದೆಂದು ಪ್ರಕಟಿಸಿರುವರು. ಮೇಲ್ಕಂಡ ಆಜ್ಞೆಯ ನಿಯಮಗಳ ಪ್ರಕಾರ ಯಾರೇ ಆಗಲೀ ತಮ್ಮ ಬಳಿ ಒಂದು ವಾರಕ್ಕೆ ಅವಶ್ಯಕವಾದಷ್ಟಕ್ಕಿಂತ ಹೆಚ್ಚು ಅಕ್ಕಿಯನ್ನು ಹೊಂದಿರಲಾಗದು. ಹೆಚ್ಚಿಗೆ ಪಡೆದಿರುವವರು ದಂಗೆಕೋರರಿಗೆ ಸರಬರಾಜು ಮಾಡುವರೆಂದು ಭಾವಿಸಲಾಗಿದೆ. ಹೊಸ ಆಜ್ಞೆಯು ಹೊರಟಾಗಿನಿಂದ ಕೌಲಾಲಂಪುರದಲ್ಲಿರುವ ಚೀನೀಯರೂ ಮತ್ತು ಭಾರತೀಯರೂ ತಮ್ಮಲ್ಲಿರುವ ಹೆಚ್ಚಿನ ಅಕ್ಕಿ ದಾಸ್ತಾನನ್ನು ವಿಲೇ ಮಾಡಲು, ಅದನ್ನು ಮುಫತ್ತಾಗಿ ತೆಗೆದುಕೊಂಡು ಹೋಗುವವರಿದ್ದಾರೆಯೇ ಎಂದು ಹುಡುಕುತ್ತಿರುವರೆಂದು ವರದಿಯಾಗಿದೆ

ನದಿ ದಡ ಕುಸಿದು ೫ ಜನರ ಮರಣ

ಉದಕಮಂಡಲದ ಕೋಟಗಿರಿಯ ಬಳಿ ಒಂದು ಸಣ್ಣ ನದಿಯ ದಡವು ಕುಸಿದು ೫ ಮಂದಿ ಮಹಿಳೆಯರು ಮಡಿದರೆಂದು ವರದಿಯಾಗಿದೆ. ಅವರು ತಮ್ಮ ಕೇರಿಯ ಮುಂಭಾಗದಲ್ಲಿ ನದಿಯ ಒತ್ತಿನಲ್ಲಿದ್ದ ರಸ್ತೆಯ ಹಳ್ಳಕೊಳ್ಳಗಳನ್ನು ಸಮ ಮಾಡುತ್ತಿದ್ದಾಗ, ವಿಪರೀತ ಮಳೆಯ ಪರಿಣಾಮವಾಗಿ ನದಿಯ ದಂಡೆಯು ಕುಸಿದು ಈ ಘಟನೆ ಸಂಭವಿಸಿತು.

ಹೈದರಾಬಾದಿನಿಂದ ೬೦೦೦೦ ಪಲ್ಲ ರಾಗಿ

ಹೈದರಾಬಾದಿನಿಂದ ಮೈಸೂರು ಸಂಸ್ಥಾನಕ್ಕೆ ೬೦ ಸಾವಿರ ಪಲ್ಲ ರಾಗಿಯನ್ನು ಸರಬರಾಜು ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಆಹಾರ ಶಾಖಾ ಉಪಸಚಿವ ಶ್ರೀ ಎಂ ವಿ ಕೃಷ್ಣಪ್ಪನವರು ವ್ಯವಸ್ಥೆ ಮಾಡಿರುವರೆಂದೂ ಶೀಘ್ರದಲ್ಲೇ ಅದನ್ನು ರವಾನಿಸಲಾಗುವುದೆಂದೂ ಗೊತ್ತಾಗಿದೆ

ನಿವೃತ್ತಿಗೆ ಮುನ್ನ ರಜಾ

ಮೈಸೂರು ಡಿವಿಜನ್ನಿನ ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಬಿ ಆರ್ ಸುಬ್ಬರಾಯರಿಗೆ, ಅವರು ನಿವೃತ್ತರಾಗುವುದಕ್ಕೆ ಪೂರ್ವಭಾವಿಯಾಗಿ ಬರುವ ಆಗಸ್ಟ್ ತಿಂಗಳು ೩ನೇ ತಾರೀಖಿನವರೆಗೆ ರಜಾ ಕೊಡಲಾಗಿದೆ

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದ ನೀರಿನ ಮಟ್ಟ ಈ ದಿನ ೯೦ ಅಡಿಗಳಿಗೆ ಏರಿದೆ

○ ತಿರುಪತಿ ಯಾತ್ರಾರ್ಥಿಗಳಿಗಾಗಿ ಮೊನ್ನೆಯಿಂದ ತಿರುಮಲೆ [illegible] ಗಳಲ್ಲಿ ಹೊಟೇಲುಗಳ [illegible] ಸ್ಥಾನದ [illegible] ರು.

ಮಲೆನಾಡಿನಲ್ಲಿ ವಿಪರೀತ ಮಳೆ

ಸಂಸ್ಥಾನದ ಮಲೆನಾಡು ಪ್ರದೇಶದಲ್ಲಿ ವಿಪರೀತ ಮಳೆಯು ಆರಂಭವಾಗಿ ತುಂಗಾ ನದಿಯಲ್ಲಿ ಭಾರೀ ಪ್ರವಾಹವು ಬಂದಿರುವುದರಿಂದಲೂ ಶಿವಮೊಗ್ಗದಲ್ಲಿ ಊರೊಳಕ್ಕೆ ನೀರು ನುಗ್ಗಿರುವುದಾಗಿಯೂ, ... ಹಳ್ಳಿಗೆ ಹೋಗುವ ರಸ್ತೆಯಲ್ಲಿ ... ಸಂಚಾರಕ್ಕೆ ಅಡಚಣೆಯಾಗಿರುವುದಾಗಿಯೂ ತಿಳಿದುಬಂದಿದೆ

ಇಂಗ್ಲೆಂಡಿಗೆ ಟೀಚರುಗಳ ಪ್ರಯಾಣ

ಬ್ರಿಟಿಷ್ ಸರ್ಕಾರದ ... ಟೀಚರುಗಳ ಮೊನ್ನೆ ... ಇಂಗ್ಲೆಂಡಿಗೆ ವಿಮಾನದಲ್ಲಿ ತೆರಳಿದರು ಬ್ರಿಟಿಷ್ ... ಅವರಿಗೆ ... ಪದಕವನ್ನು ... ದರು

ಹಿಂದುಳಿದ ವರ್ಗದ ಸಮಿತಿಗೆ ಸಂಸ್ಥಾನದ ಸದಸ್ಯರು

ಸಂಸ್ಥಾನದಲ್ಲಿ ಪ್ರವಾಸ ... ಹಿಂದುಳಿದ ವರ್ಗದ ಸಮಿತಿಗೆ ಶ್ರೀ ... ನಾಥ್ ಮತ್ತು ... ಸಂಸ್ಥಾನದ ... ರಾಗಿ ... ಲ್ಪಟ್ಟಿದ್ದಾರೆ

ಎಲ್ ಎಸ್ ಶಿಕ್ಷಣ ತರಗತಿಗಳು

... ಶ್ರೀ ... ಕಾಲೇಜಿನಲ್ಲಿ ಮೊನ್ನೆಯಿಂದ ಎಲ್ ಎಸ್ ತರಗತಿಗಳನ್ನು ಪ್ರಾರಂಭಿಸಲಾಗಿದೆ ಸೇರಬಯಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಂಸ್ಥೆಯಲ್ಲಿ ವಿವರಗಳನ್ನು ತಿಳಿಯಬಹುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ವೆಂಕಟಪ್ಪ ... ದೇವರ ನಾಮಗಳು ... ಸಿತಾರ್ ಮತ್ತು ಸರೋದ್ ... ಕನ್ನಡ ಗೀತೆಗಳು ... ವೆಂಕಟಪ್ಪ ... ಎಸ್ ವೆಂಕಟರಾವ್ ಕನ್ನಡದಲ್ಲಿ ಭಾಷಣ ... ಕನ್ನಡದಲ್ಲಿ ... ಹರಟೆ

||ಶ್ರೀ||

ಜಗದಂಬಾ ವಿಶ್ರಾಂತಿಗೃಹ

... ಮೈಸೂರು

... (illegible)

ಡಿ ಕೃಷ್ಣಮೂರ್ತಿ, ...

ಶ್ಯಾಮಪ್ರಸಾದ ಮುಖರ್ಜಿ ನಿಧನಕ್ಕಾಗಿ ಸಂತಾಪ

ಚಾಮರಾಜನಗರ ...

ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿ ಸಭೆಯು ಮೊನ್ನೆ ಸೇರಿ ಡಾ|| ಶ್ಯಾಮಪ್ರಸಾದ ಮುಖರ್ಜಿ ಮತ್ತು ತಾಲ್ಲೂಕು ಕಾಂಗ್ರೆಸ್ಸಿನ ಸಕ್ರಿಯ ಸದಸ್ಯ ಶ್ರೀ ... ರಂಗಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ... ಶ್ರೀ ಎಸ್ ... ಅಧ್ಯಕ್ಷರಾಗಿಯೂ ಶ್ರೀ ಎ ಎಂ ... ಪ್ರಧಾನ ಕಾರ್ಯದರ್ಶಿಯಾಗಿಯೂ ... ನಂಜುಂಡಶೆಟ್ಟಿ ... ಜಂಟಿ ಕಾರ್ಯದರ್ಶಿ ...

... (illegible) ...

... ಸದಸ್ಯರಿಂದ ಶ್ರೀ ... ಅಧ್ಯಕ್ಷತೆ ವಹಿಸಿದರು ... ಜಂಟಿ ಕಾರ್ಯದರ್ಶಿ ಶ್ರೀ ... ಕೇಶವಮೂರ್ತಿಯವರು ಸ್ವಾಗತ ಭಾಷಣ ಮಾಡಿದನಂತರ ...

ಶ್ರೀ ಕಾಶೀ ಯಾತ್ರಾರ್ಥಿಗಳಿಗೆ ಸೂಚನೆ

ಯಾತ್ರಾರ್ಥಿಗಳು ಪ್ರಯಾಗ ... ಕ್ಷೇತ್ರ ... ಯಾತ್ರಾ ... ಕಾರ್ಯಕ್ರಮಗಳನ್ನು ... ನಿಮ್ಮ ...

... (illegible) ...

ವಿಶೇಷ ಸಂಗತಿ ... ಬರುವ ...

ಮೈಸೂರು ಕೃಷ್ಣಶಾಸ್ತ್ರಿ
ನಂ 27 ಹನುಮಾನ್ ಘಾಟ
ಬನಾರಸ್ (ಕಾಶೀ ಕ್ಷೇತ್ರ)

... ರಾಮಸ್ವಾಮಿ ... ನಿಧನ

... ಡ್ವೋಕೇಟ್ ... ವೆಂಕಟರಾಮಶಾಸ್ತ್ರಿಯವರ ... ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ... ಸ್ವತಂತ್ರ ಮನೋಭಾವನೆಯಿಂದ ... ಬ್ರಿಟಿಷ್ ... ನ್ಯಾಯಾಂಗ ...

... (illegible) ...

... ರಾಯಣರವರು ... ಮಾಡಿದರು

CAMERA FOR SALE

One Pocket Delco German Camera with 4.5 lens, in good condition, for sale Rs 125/- or near offer. Please Contact A G Nagesha, 1082 Chamaraja Agrahar, Mysore

ಫ್ರೆಂಚ್ ಭಾರತದ ಜನರು ಫ್ರಾನ್ಸಿಗೆ ನಿಷ್ಠರಾಗಿರಬೇಕು

ಫ್ರೆಂಚ್ ಭಾರತಸಂಸ್ಥಾನದವರು ನೆನ್ನೆ ಒಂದು ಪ್ರಕಟಣೆಯನ್ನು ಹೊರಡಿಸಿ ಅಲ್ಲಿನ ಪ್ರಜೆಗಳು ಫ್ರೆಂಚ್ ಸರ್ಕಾರದ ಬಗ್ಗೆ ನಿಷ್ಠರಾಗಿದ್ದಲ್ಲಿ ಮಾತ್ರ ಅವರಿಗೆ ನಾಗರಿಕ ಹಕ್ಕುಬಾಧ್ಯತೆಗಳು ದೊರೆಯುವುವೆಂದು ತಿಳಿಸಿ ಫ್ರೆಂಚ್ ರಾಷ್ಟ್ರೀಯತೆಯ ನಿಯಮಾವಳಿಯನ್ನು ನೆನ್ನೆಯಿಂದ ಫ್ರೆಂಚ್ ಭಾರತದಲ್ಲೂ ಜಾರಿಗೆ ತಂದಿರುವುದಾಗಿ ಪ್ರಕಟಿಸಿರುವರು ಫ್ರೆಂಚ್ ರಾಷ್ಟ್ರೀಯತೆಯನ್ನು ಪಡೆಯುವ, ಅಥವಾ ನಿರಾಕರಿಸುವ ... ನಿಯಮಾವಳಿಗಳನ್ನೂ ಅದರಲ್ಲಿ ನಮೂದಿಸಲಾಗಿದೆ

ಮೈಸೂರು ಪೇಟೆ ಧಾರಣೆ

ಗಲ್ಲೆ	ರೂ	ರೂ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹೊಂಗೆಬೀಜ	[illegible]	
ಹರಳುಬೀಜ	[illegible]	
...	[illegible]	
ಜೀರಿಗೆ	[illegible]	[illegible]
...	[illegible]	[illegible]
...	[illegible]	[illegible]
...	[illegible]	[illegible]
...	[illegible]	[illegible]

ಭಾರತದ ... ಮಹೋತ್ಸವ ... ಆರಂಭವಾದ ... ಇದುವರೆಗೆ ... ಕೋಟಿ ... ನೆಡಲ್ಪಟ್ಟು ... ಕೋಟಿ ಗಿಡಗಳು ಮಾತ್ರ ಬೆಳೆದು ಬಂದಿರುವುವು

ಚಾಮುಂಡೇಶ್ವರಿ

3-7 ರಿಂದ ... ಪ್ರಾರಂಭ

ಮುಯ್ಯಿಬರ್ (?)

... — ... , ... , ...

Edited Printed and Published by A R Nagaraja at Sadhvi Press, D Subbaiah Road, Mysore

ABIDS GRAND OUTRIGHT AUCTION

For which you have been longing is now fixed up on

SUNDAY the 5th JULY 1953 at 10 A M at SHOWROOMS

... the Proprietor ... All the FURNITURE in DRAWING, DINING, BED, STORE, KITCHEN & BATHROOMS including ... tools, LOUD SPEAKER ... COPPER HANDA, TRICYCLE ... BATTERIES, ELECT BELL ... OFFICE FITTINGS ... BUCKETS & TUBS ... SINGLE ...

COME & INSPECT THEM YOURSELF & KEEP THE DATE FREE

ಫೋನ್ ನಂ. 795 ‖ ವಂದೇ ಮಾತರಂ ‖ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೬-೬-೧೯೫೩ [ಸಂಚಿಕೆ ೨೭೭

ಕಾಶ್ಮೀರದ ಚಳುವಳಿ ಮುಕ್ತಾಯ ಸಂಭವ?

ಈ ತಿಂಗಳ ಮಧ್ಯಭಾಗದಲ್ಲಿ ಕಿದ್ವಾಯಿಯವರ ಭೇಟಿ

ಬೆಂಗಳೂರು ೬

ಹಲವು ಅನಿವಾರ್ಯ ಕಾರಣಗಳಿಂದ ಕೇಂದ್ರ ಸರ್ಕಾರದ ಆಹಾರ ಸಚಿವರಾದ ರಫಿ ಅಹಮದ್ ಕಿದ್ವಾಯಿಯವರ ಮೈಸೂರು ಸಂಸ್ಥಾನದ ಪ್ರವಾಸವು ಮುಂದುವರಿಸಲ್ಪಟ್ಟಿರುವುದೆಂದೂ, ಆಗ್ರಾದಲ್ಲಿ ನಡೆಯುವ ಎ. ಐ. ಸಿ. ಸಿ. ಅಧಿವೇಶನವನ್ನು ಮುಗಿಸಿಕೊಂಡು, ಈ ತಿಂಗಳ ಮಧ್ಯ ಭಾಗದಲ್ಲಿ ಅವರು ಮೈಸೂರಿಗೆ ಭೇಟಿ ಕೊಡುವರೆಂದೂ ಕೇಂದ್ರದ ಆಹಾರ ಶಾಖೆಯ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿದರು. ಈ ವರ್ಷ ಭಾರತದಲ್ಲಿ ೩½ ಕೋಟಿ ಟನ್ ಆಹಾರ ಧಾನ್ಯದ ಬೆಳೆಯಾಗಿರುವುದೆಂದೂ ಅ ಪೈಕಿ ೩೦ ಲಕ್ಷ ಟನ್ ಭತ್ತವೆಂದೂ ಅವರು ತಿಳಿಸಿರುವರು. ದೇಶದಲ್ಲಿ ಆಹಾರದ ಉತ್ಪತ್ತಿ ಬಹಳ ಮಟ್ಟಿಗೆ ಉತ್ತಮಗೊಂಡಿರುವುದರಿಂದ, ಹೊರಗಿನಿಂದ ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನು ತರಿಸುವ ಬಗ್ಗೆ ವ್ಯವಹಾರ ನಡೆಸಲು ಸಾಧ್ಯವಾಗಿದೆಯೆಂದು ಅವರು ಹೇಳಿರುವರು.

ಎತ್ತಿನ ಗಾಡಿ, ರೈಲುಗಳಿಗೆ ಡಿಕ್ಕಿ

ಲಗ್ನ ನಿಶ್ಚಯಕ್ಕಾಗಿ ಹೋಗಿ ಹಿಂತಿರುಗುತ್ತಿದ್ದ ಮಹಿಳೆಗೆ ಮೃತ್ಯು

ಬೆಂಗಳೂರಿನಿಂದ ಪೂನಾಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲು ಗಾಡಿಗೆ ಮೊನ್ನೆ ಮಧ್ಯಾಹ್ನ ತುಮಕೂರಿನ ಒಳಕೆಟ್ಟೆ ಹಳ್ಳಿಯ ರೈಲ್ವೆ ಗೇಟಿನ ಬಳಿ ಕಂಬಿಗೆ ಅಡ್ಡಲಾಗಿ ನಿಂತಿದ್ದ ಜೋಡೆತ್ತಿನ ಗಾಡಿಯು ಸಿಕ್ಕಿ ಒಂದು ಎತ್ತೂ ಮತ್ತು ಒಬ್ಬ ಹೆಂಗಸೂ ಮೃತಪಟ್ಟರೆಂದು ಸುದ್ದಿ ಬಂದಿದೆ. ಗಾಡಿಯನ್ನು ಹೊಡೆಯುತ್ತಿದ್ದ ಶಿವಣ್ಣ ಎಂಬ ಹುಡುಗನೂ, ಗಾಡಿಯ ಹಿಂದೆ ಮತ್ತು ಮುಂದೆ ಕುಳಿತಿದ್ದವರೂ ಗಾಬರಿಯಿಂದ ಕೆಳಗಿಳಿದು ತಪ್ಪಿಸಿಕೊಂಡು ಓಡಿಹೋದರೆಂದೂ ಆದರೆ ಮೃತಪಟ್ಟ ಹೆಂಗಸು ಗಾಡಿಯ ಮಧ್ಯದಲ್ಲಿ ಕುಳಿತಿದ್ದುದರಿಂದ ಬೇಗನೆ ಇಳಿಯಲಾಗದೆ ರೈಲಿಗೆ ಸಿಕ್ಕಿ ಸತ್ತಳೆಂದೂ ಹೇಳಲಾಗಿದೆ. ಗಾಡಿಯು ನುಚ್ಚು ನೂರಾಯಿತು. ಇನ್ನೊಂದು ಎತ್ತಿನ ಮೈಗೆ ಮರದ ತುಂಡುಗಳು ಹೊಕ್ಕು ತೀವ್ರಗಾಯವಾಗಿತ್ತೆಂದೂ ವರದಿಯಾಗಿದೆ. ಮೃತಪಟ್ಟ ಹೆಂಗಸು ಲಗ್ನ ನಿಶ್ಚಯ ಮಾಡಿಕೊಂಡು ಬರುವ ಸಲುವಾಗಿ ಇತರ ನಾಲ್ಕು ಮಂದಿ ಹೆಂಗಸರೊಡನೆ ಕೋಡಿಹಳ್ಳಿಗೆ ಹೋಗಿ ಹಿಂದಿರುಗುವ ಮಾರ್ಗದಲ್ಲಿ ಕೆಟ್ಟೆಹಳ್ಳಿಗೆ ಹೋಗುವ ಮೇಲ್ಕಂಡ ಎತ್ತಿನ ಗಾಡಿಯನ್ನು ಕಂಡು ಅದರಲ್ಲಿ ಎಲ್ಲರೂ ಕುಳಿತರೆಂದು ಗೊತ್ತಾಗಿದೆ.

ಕೇಂದ್ರ ಮಂತ್ರಿಮಂಡಲದ ಪುನರ್ವ್ಯವಸ್ಥೆಯೇ?

ಬ್ರಿಟನ್ನಿನಲ್ಲಿ ಭಾರತದ ಹೈಕಮೀಷನರಾಗಿದ್ದ ಶ್ರೀ ವಿ. ಕೆ. ಕೃಷ್ಣಮೆನನ್ನರನ್ನು ಕೇಂದ್ರ ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಲಾಗುವುದೆಂದೂ ಅಲ್ಲಿ ಈಗಿರುವ ಸಚಿವರ ಪೈಕಿ ಒಬ್ಬಿಬ್ಬರು ಹೊರಗೆ ಬರಬಹುದೆಂದೂ ಹೇಳಲಾಗುತ್ತಿದೆ. ಮಂತ್ರಿಗಳಿಗೆ ವಹಿಸಲಾಗಿರುವ ವಿವಿಧ ಖಾತೆಗಳ ಪುನರ್ಹಂಚಿಕೆಯೂ ಆಗುವುದಾಗಿ ಭಾವಿಸಲಾಗಿದೆ.

ಕಲ್ಕತ್ತಾದಲ್ಲಿ ಟ್ರಾಮುಗಳಿಗೆ ಬೆಂಕಿ

೬೦೦ ಜನರ ಬಂಧನ

ಕಲ್ಕತ್ತಾದಲ್ಲಿ ಎರಡನೇ ತರಗತಿ ಟ್ರಾಂ ಪ್ರಯಾಣದ ದರವನ್ನು ಹೆಚ್ಚಿಸಿರುವುದರ ವಿರುದ್ಧ ಚಳುವಳಿ ನಡೆಸಿದ ಸಂದರ್ಭದಲ್ಲಿ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಜ್ಯೋತಿ ಬಸು, ಗಣೇಶ್ ಘೋಷ್ ಎಂಬುವರನ್ನು ನೆನ್ನೆ ಬಂಧಿಸಿದಾಗ ಗಲಭೆ ನಡೆದು ಟ್ರಾಮುಗಳ ಓಡಾಟಕ್ಕೆ ಅಡಚಣೆಯಾದುದರಿಂದ ನಗರದಲ್ಲಿ ಟ್ರಾಂ ಸಂಚಾರವನ್ನು ಪೂರ್ಣವಾಗಿ ನಿಲ್ಲಿಸಲಾಗಿದೆ. ಈಗ ಬಸ್ಸುಗಳು ಮಾತ್ರ ಸಂಚರಿಸುತ್ತಿವೆ. ನಗರದಲ್ಲೆಲ್ಲಾ ಪೋಲೀಸರ ಕಾವಲು ಹಾಕಲಾಗಿದೆ. ನೆನ್ನೆ ಮಧ್ಯಾಹ್ನದ ವೇಳೆಗೆ ಜನರು ಐದು ಟ್ರಾಮುಗಳಿಗೆ ಬೆಂಕಿ ಹಚ್ಚಿದರು. ಇನ್ನೊಂದಕ್ಕೆ ಹಚ್ಚಲಾದ ಬೆಂಕಿಯನ್ನು ಕೂಡಲೇ ಆರಿಸಲಾಯಿತು. ನೆನ್ನೆ ಮಧ್ಯಾಹ್ನದವರೆಗೆ ಕಲ್ಕತ್ತಾ ಮತ್ತು ಹೌರಾಗಳಲ್ಲಿ ೬೦೦ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ.

ಕಳೆದ ಬುಧವಾರದಿಂದ ಟ್ರಾಂ ದರವನ್ನು ಹೆಚ್ಚಿಸಿದುದರಿಂದ ಪ್ರಯಾಣಿಕರು ಹಣವನ್ನು ಕೊಡದೆ ಪ್ರಯಾಣ ಮಾಡುತ್ತಿದ್ದರೆಂದೂ ಇದರಿಂದ ಕಂಪೆನಿಗೆ ಬಹಳ ನಷ್ಟವಾಗಿರುವುದೆಂದೂ ವರದಿಯಾಗಿದೆ. ಶ್ಯಾಂಬಜಾರ್ ಎಂಬ ಪ್ರದೇಶದಲ್ಲಿ ಪ್ರದರ್ಶನಕಾರರು ಪೋಲೀಸರ ಮೇಲೆ ಪಟಾಕಿಗಳು, ಬಾಂಬುಗಳು, ಇಟ್ಟಿಗೆ ಚೂರುಗಳನ್ನು ಎಸೆದರೆಂದೂ, ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಪ್ರಹಾರ ನಡೆಸಿದರೆಂದೂ ವರದಿಯಾಗಿದೆ. ಗಲಭೆಯಲ್ಲಿ ೧೨ ಮಂದಿ ಗಾಯಗೊಂಡರು.

ಹೆಚ್ಚಿಸಿದ ದರಗಳ ಪ್ರಕಾರ ವಸೂಲು ಮಾಡುವ ಸಲುವಾಗಿ ನೆನ್ನೆ ಬೆಳಗಿನಿಂದ ಟ್ರಾಂ ಕಾರುಗಳ ಸೆಕೆಂಡ್ ಕ್ಲಾಸ್ ಗಾಡಿಗಳಲ್ಲಿ ನೌಕರರ ನೆರವಿಗಾಗಿ ಪೋಲೀಸರನ್ನು ನೇಮಿಸಲಾಗಿದೆ.

ಕನ್ನಂಬಾಡಿಯಲ್ಲಿ ೧೦೦ ಅಡಿ ನೀರು

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಇಂದು ೧೦೦ ಅಡಿಗಳಿಗೆ ಏರಿದೆ. ಇಂದಿನಿಂದ ಬೃಂದಾವನದಲ್ಲಿ ಪೂರ್ಣವಾಗಿ ದೀಪೋತ್ಸವವನ್ನು ಏರ್ಪಡಿಸಲಾಗಿದೆ.

ಟೇನ್‌ಸಿಂಗರಿಗೆ ಲಂಡನ್ನಿನಲ್ಲಿ ಸ್ವಾಗತ

ಹಿಮಾಲಯದ ಗೌರೀಶಂಕರ ಶಿಖರವನ್ನೇರಿದ ಟೇನ್ ಸಿಂಗ್ ಮತ್ತು ಅವರ ಸಂಸಾರದವರೂ, ಹಿಲಾರಿ, ಮತ್ತು ತಂಡದ ನಾಯಕ ಕರ್ನಲ್ ಹಂಟರೂ ಕಳೆದ ಬುಧವಾರ ಭಾರತದಿಂದ ಹೊರಟು ನೆನ್ನೆ ವಿಮಾನದಲ್ಲಿ ಲಂಡನ್ನನ್ನು ತಲಪಿದರು. ಬ್ರಿಟನ್, ಭಾರತ, ನ್ಯೂಜಿಲೆಂಡ್ ಮತ್ತು ನೇಪಾಳಗಳ ಪ್ರತಿನಿಧಿಗಳು ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಿದರು. ಅನೇಕ ಮಂದಿ ಪತ್ರಿಕಾ ಕರ್ತರೂ ಮತ್ತು ಚಲನ ಚಿತ್ರ ಸಂಸ್ಥೆಗಳವರೂ ಭಾವಚಿತ್ರಗಳನ್ನು ತೆಗೆದುಕೊಂಡರು. ಟೇನ್ ಸಿಂಗ್ ದಂಪತಿಗಳೂ ಮತ್ತು ಅವರ ಇಬ್ಬರು ಪುತ್ರಿಯರೂ ಲಂಡನ್ನಿನಲ್ಲಿ ಭಾರತದ ಹೈ ಕಮಿಷನರ ಅತಿಥಿಗಳಾಗಿರುವರು.

ಹಾವು ಕಡಿದು ಶಿಶುವಿನ ಮರಣ

ಸಿಕಂದರಾಬಾದಿನಲ್ಲಿ ಮೊನ್ನೆ ರಾತ್ರಿ ಒಂದು ನಾಗರಹಾವು ಹತ್ತು ತಿಂಗಳ ಮಗುವನ್ನು ಕಡಿದು ಸಾಯಿಸಿದ ಸುದ್ದಿಯು ವರದಿಯಾಗಿದೆ. ಮಗುವೂ ಅದರ ಚಿಕ್ಕಮ್ಮನೂ ಒಟ್ಟಿಗೆ ಮಲಗಿ ನಿದ್ರಿಸುತ್ತಿದ್ದಾಗ ಹಾವು ಹೆಂಗಸಿನ ಮೈ ಮೇಲೆ ಹರಿದು ಬಂದು ಎದೆಯ ಮೇಲೆ ಕುಳಿತು, ಮಗುವಿನ ಕಡೆ ತಿರುಗಿಕೊಂಡು ಹೆಡೆಯಾಡಿಸುತ್ತಿತ್ತೆಂದೂ, ಆಗ ಆಕೆಗೆ ಎಚ್ಚರವಾಗಿ ಗಾಬರಿಯಿಂದ ಅವಳು ತಿರುಚುತ್ತಾ ಮೈಯನ್ನು ಕೊಡವಲು ಹಾವು ಮಗುವಿನ ಬಳಿ ಬಿದ್ದು, ಅದರ ಕತ್ತನ್ನು ಕಚ್ಚಲು ಅದು ಕೂಡಲೇ ಮೃತಪಟ್ಟಿತೆಂದೂ ಗೊತ್ತಾಗಿದೆ.

ಐಸ್‌ಕ್ರೀಂನಲ್ಲಿ ಎವರೆಸ್ಟ್ ಶಿಖರ

ಎವರೆಸ್ಟ್ ಶಿಖರಾರೋಹಣ ಮಾಡಿದವರ ಪೈಕಿ ಒಬ್ಬರಾದ ಹಿಲಾರಿಯವರ ಗೌರವಾರ್ಥವಾಗಿ ನ್ಯೂಜಿಲೆಂಡಿನವರು ಐಸ್‌ಕ್ರೀಮಿನಲ್ಲಿ ಹಿಮಾಲಯ ಶಿಖರವನ್ನು ಹೋಲುವ ಗಿರಿಯ ಎತ್ತರದ ಗುಡ್ಡೆಯನ್ನು ಮಾಡಿ ಅದರ ಮೇಲೆ ನ್ಯೂಜಿಲೆಂಡ್ ಧ್ವಜವನ್ನು ನೆಡುವ ಸಮಾರಂಭವನ್ನು ಅಲ್ಲಿನ ಪ್ರಧಾನಿಯವರು ನೆರವೇರಿಸಿದರು.

ಅನಾಂ ರದ್ದಿಯಾತಿ ಮಸೂದೆ

ಈ ಸಾರಿ ಶಾಸನ ಸಭೆಯ ಮುಂದೆ ಬರಲಾರದು

ಬೆಂಗಳೂರು ೬

ಇನಾಂ ರದ್ದಿಯಾತಿ ಮಸೂದೆಯ ಬಗ್ಗೆ ರಚಿಸಲಾಗಿರುವ ಸಮಿತಿಯು ನೆನ್ನೆ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸಭೆಯಲ್ಲಿ ಮಸೂದೆ ಬಗ್ಗೆ ತೀವ್ರ ಭಿನ್ನಾಭಿಪ್ರಾಯವು ಬಂದುದರಿಂದ ಯಾವ ತೀರ್ಮಾನಕ್ಕೂ ಬರಲಾಗಲಿಲ್ಲವೆಂದೂ, ಅದ ಕಾರಣ, ಇದೇ ೧೫ನೇ ತಾರೀಕು ಆರಂಭವಾಗಲಿರುವ ಶಾಸನ ಸಭೆಯಲ್ಲಿ ಆ ಮಸೂದೆಯನ್ನು ಮಂಡಿಸುವ ಸಂಭವವಿಲ್ಲವೆಂದೂ ಹೇಳಲಾಗುತ್ತಿದೆ.

ಕಾಶ್ಮೀರ ಚಳುವಳಿಯು ಮುಕ್ತಾಯಗೊಳ್ಳುವುದೇ

ಕಾಶ್ಮೀರವನ್ನು ಪೂರ್ಣವಾಗಿ ಭಾರತದೊಡನೆ ಐಕ್ಯಗೊಳಿಸುವ ಬಗ್ಗೆ ಅಲ್ಲಿನ ಪ್ರಜಾಪರಿಷತ್ತಿನವರು ಹೂಡಿದ್ದ ಚಳುವಳಿಗೆ ಬೆಂಬಲ ನೀಡುವ ಸಲುವಾಗಿ ಹಿಂದೂಮಹಾಸಭೆ, ಭಾರತೀಯ ಜನಸಂಘ ಮತ್ತು ರಾಮರಾಜ್ಯ ಪರಿಷತ್ತಿನವರು ಸಂಯುಕ್ತವಾಗಿ ನೀಡುತ್ತಿದ್ದ ಬೆಂಬಲವನ್ನು ಮುಕ್ತಾಯಗೊಳಿಸಲು ಮೇಲ್ಕಂಡ ಮೂರು ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿ ಸಭೆಯು ನೆನ್ನೆ ರಾತ್ರಿ ದೆಹಲಿಯಲ್ಲಿ ನಡೆದು ತೀರ್ಮಾನಿಸಿತೆಂದಿರುವುದಾಗಿ ವರದಿಯಾಗಿದೆ.

ಆಂಧ್ರ ಪ್ರಾಂತ್ಯ ನಿರ್ಮಾಣದ ಮಸೂದೆ ಸಿದ್ಧವಾಯಿತು

ಆಂಧ್ರ ಪ್ರಾಂತ್ಯ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರದವರು ಕಳೆದ ಮೇ ತಿಂಗಳಿನಲ್ಲಿ ಕರಡು ಮಸೂದೆಯೊಂದನ್ನು ಸಿದ್ಧಗೊಳಿಸಿ ಮದರಾಸು ಮತ್ತು ಮೈಸೂರು ಸರ್ಕಾರಗಳ ಅಭಿಪ್ರಾಯ ಪಡೆದು, ಈಗ ಪೂರ್ಣ ಮಸೂದೆಯನ್ನು ತಯಾರಿಸಿರುವರು. ಅದರಲ್ಲಿ ೬೦ ವಿಧಿಗಳೂ ಮತ್ತು ೮ ಷೆಡ್ಯೂಲುಗಳೂ ಅಡಕವಾಗಿವೆ. ಪೂರ್ಣವಾದ ಈ ಮಸೂದೆಯನ್ನು ಮದರಾಸು ಮತ್ತು ಮೈಸೂರು ಶಾಸನ ಸಭೆಗಳಿಗೆ ಕಳುಹಿಸಿ ಅವುಗಳ ಅಭಿಪ್ರಾಯಗಳನ್ನು ಕೇಳಲಾಗುವುದು. ಆದರೆ ಅವುಗಳ ಅಭಿಪ್ರಾಯಗಳಾವುದಕ್ಕೂ ಕೇಂದ್ರ ಸರ್ಕಾರವು ಕಟ್ಟುಬೀಳುವುದಿಲ್ಲ. ಮೇಲ್ಕಂಡ ಎರಡು ಶಾಸನಸಭೆಗಳ ಅಭಿಪ್ರಾಯ ಪರಿಶೀಲಿಸಿ ಮಸೂದೆಯನ್ನು ಲೋಕಸಭೆಯ ಮುಂದೆ ಕೇಂದ್ರ ಸರ್ಕಾರದವರು ಮಂಡಿಸುವರು. ಆಂಧ್ರ ಪ್ರಾಂತ ನಿರ್ಮಾಣ, ಬಳ್ಳಾರಿಯ ಹಲವು ಭಾಗಗಳನ್ನು ಮೈಸೂರಿಗೆ ಸೇರಿಸುವುದು, ಆಂಧ್ರ ಶಾಸನ ಸಭೆ, ಪಾರ್ಲಿಮೆಂಟಿನಲ್ಲಿ ಆಂಧ್ರದ ಪ್ರಾತಿನಿಧ್ಯ, ಹೈಕೋರ್ಟು ಮತ್ತು ಆಸ್ತಿಗಳ ಹಂಚಿಕೆ—ಈ ವಿಷಯಗಳು ಮಸೂದೆಯಲ್ಲಿ ಅಡಕವಾಗಿರುವುದೆಂದು ತಿಳಿದು ಬಂದಿದೆ.

ಸರ್ವೋದಯ ಸಿದ್ಧಾಂತದ ಬಗ್ಗೆ ಉಪನ್ಯಾಸ

ನಾಳೆ ಸಂಜೆ ೫ ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಸತ್ಯ ಪ್ರಜ ಗ. ರಾಮಚಂದ್ರ ಚಿಮರವರು "ಸರ್ವೋದಯ ತತ್ವ ಸಿದ್ಧಾಂತ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಬೆಲ್‌ಫಾಸ್ಟಿನಲ್ಲಿ ಬ್ರಿಟಿಷ್ ರಾಣಿಯ ವಿರುದ್ಧ ಪ್ರದರ್ಶನ

ಬ್ರಿಟನ್ನಿನ ನೂತನ ರಾಣಿ ಎಲಿಜಬೆತ್ತರು ಕಳೆದ ಮೂರು ದಿನಗಳಿಂದಲೂ ಉತ್ತರ ಐರ್ಲೆಂಡಿನಲ್ಲಿ ಪ್ರವಾಸ ಕೈಗೊಂಡಿರುವರು. ಐರಿಷ್ ರಿಪಬ್ಲಿಕನ್ ಪಕ್ಷದವರು ಇದನ್ನು ಪ್ರತಿಭಟಿಸಿ ಮೊನ್ನೆ ಬೆಲ್‌ಫಾಸ್ಟಿನಲ್ಲಿ ನಡೆದ ಒಂದು ಸಮಾರಂಭಕ್ಕೆ ರೈಲಿನಲ್ಲಿ ತೆರಳಿದ್ದ ಪಾಲ ಸೈನಿಕರನ್ನು ತಡೆಯಲು, ಸುಮಾರು ೪೦ ಅಡಿ ಉದ್ದದ ರೈಲು ಮಾರ್ಗವನ್ನು ಟೈಂಬಾಂಬು ಹಾಕಿ ಸಿಡಿಸಿದರೆಂದೂ ಮತ್ತು ಆ ನಗರದ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಹದಗೆಡಿಸಿ ಮೂರು ಗಂಟೆಗಳ ಕಾಲ ದೀಪವಿಲ್ಲದಂತೆ ಮಾಡಿದ್ದರೆಂದೂ ವರದಿಯಾಗಿದೆ. ಬ್ರಿಟನ್ನಿನ ರಾಣಿಯು ಐರ್ಲೆಂಡಿನ ಯಾವ ಭಾಗದಲ್ಲೂ ಆಳಲು ಹಕ್ಕುಳ್ಳವರಾಗಿಲ್ಲವೆಂದು ಸೂಚಿಸುವ ಬೋರ್ಡುಗಳನ್ನು ಗೋಡೆಗಳ ಮೇಲೆ ಅಂಟಿಸಲಾಗಿತ್ತು. ಪೋಲೀಸರು ಉಸ್ತುವಾರಿಯಿಂದಿದ್ದು ಹೆಚ್ಚಿನ ಗಲಭೆಯಾಗದಂತೆ ತಡೆದರು. ಮೊನ್ನೆ ಬೆಳಗ್ಗೆ ಬೆಲ್‌ಫಾಸ್ಟಿನಲ್ಲಿ ನಡೆದ ರಾಣಿಯವರ ಮೆರವಣಿಗೆಯಲ್ಲಿ ಸುಮಾರು ೫,೫೦೦ ಮಂದಿ ಸೈನಿಕರು ಮಾರ್ಗದ ಉದ್ದಕ್ಕೂ ಕಾವಲಿದ್ದರು.

ಮಿಶ್ರ ಲೋಹದ, ಹಗುರವಾದ ರೈಲ್ವೆ ಕೋಚುಗಳು

ಮದರಾಸಿನ ಬಳಿ ಪೆರಂಬೂರಿನಲ್ಲಿರುವ ರೈಲ್ವೆ ಕಾರ್ಖಾನೆಯಲ್ಲಿ ಮಿಶ್ರ ಲೋಹದ, ಹಗುರವಾದ ರೈಲ್ವೆ ಕೋಚುಗಳನ್ನು ತಯಾರಿಸಲಾಗುವುದೆಂದೂ, ಸ್ವಿಸ್ ಸರಕಾರದ ನೆರವಿನೊಡನೆ, ೧೯೫೫ ರಲ್ಲಿ ಈ ಕಾರ್ಯವನ್ನು ಆರಂಭಿಸಲಾಗುವುದೆಂದೂ ವರದಿಯಾಗಿದೆ.

ಶ್ಯಾಮಪ್ರಸಾದ ಮುಖರ್ಜಿಯವರ ಶ್ರಾದ್ಧ ದಿನಾಚರಣೆ

ಕಾಶ್ಮೀರದಲ್ಲಿ ಬಂಧನದಲ್ಲಿದ್ದಾಗಲೇ ಹಠಾತ್ತನೆ ವಿಧಿವಶರಾದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ 'ಶ್ರಾದ್ಧ' ದಿನದ ಅಂಗವಾಗಿ ಮೈಸೂರು ಭಾರತೀಯ ಜನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ರಾಜಧಾನಿಯ ಟೌನ್ ಹಾಲ್ ವೃತ್ತದಲ್ಲಿ ಸಾರ್ವಜನಿಕ ಸಭೆಯು ನಡೆಯುತ್ತದೆ. ಶ್ರೀಗಳಾದ ಗೋಪಾಲಶಾಸ್ತ್ರಿ, ಹೆಚ್. ಕೆ. ಕುಮಾರಸ್ವಾಮಿ, ಲಕ್ಷ್ಮೀನಾರಣಪ್ಪ, ಟಿ. ಎಸ್. ರಾಜಗೋಪಾಲಯ್ಯಂಗಾರ್ ಮುಂತಾದ ಪ್ರಮುಖ ನಾಗರೀಕರು ಭಾಷಣ ಮಾಡುತ್ತಾರೆ. ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಏಕ ಕಾಲದಲ್ಲಿ ೫ ಮಕ್ಕಳ ಜನನ

ಆಗ್ರಾ ಬಳಿ ಬಸೂಯಿ ಎಂಬಲ್ಲಿಗೆ ಹತ್ತಿರದ ಪ್ರದೇಶದಲ್ಲಿ ಕಳೆದ ಬುಧವಾರ ಒಬ್ಬ ಹೆಂಗಸು ಏಕ ಕಾಲದಲ್ಲಿ ೫ ಮಕ್ಕಳನ್ನು ಹಡೆದಳೆಂದೂ, ಅವುಗಳ ಪೈಕಿ ಒಂದು ಕೂಡಲೇ ಮೃತಪಟ್ಟಿತೆಂದೂ ವರದಿಯಾಗಿದೆ. ಉಳಿದ ನಾಲ್ಕು ಮಕ್ಕಳೂ, ತಾಯಿಯೂ ಸೌಖ್ಯವಾಗಿರುವರೆಂದೂ ಹೇಳಲಾಗಿದೆ.

ವಿವಾಹೋಪನಯನಗಳು

ರಾಜಧಾನಿಯ ಆನಂದಾ ಸೋಪ್ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಸಿ. ಪಾಪಿಲಾಮಣಿ ಮೊದಲಿಯಾರರು ತಮ್ಮ ಮಗ ಶ್ರೀ ಎಂ. ನಂಜುಂಡ ಮೊದಲಿಯಾರ್‌ರವರಿಗೆ ಬೆಂಗಳೂರಿನ ಶ್ರೀ ಕನಿ ಮೊದಲಿಯಾರರ ಪುತ್ರಿ ಸೌ॥ ಮಂಗಳಮ್ಮಾಳ್‌ರವರನ್ನು ತಂದುಕೊಂಡು ವಿವಾಹವನ್ನು ನೆನ್ನೆ ಬೆಂಗಳೂರಿನಲ್ಲಿ ನೆರವೇರಿಸಿದರು.

ಯಳಂದೂರು ತಾಲ್ಲೂಕು ಅಗರದ ಲೇಟ್ ಎ. ಕೆ. ಶ್ರೀನಿವಾಸಮೂರ್ತಿಯವರ ಪುತ್ರ ಶ್ರೀ ಎ. ಎಸ್. ಆನಂದರಾಮುರವರಿಗೆ ರಿಟೈರ್ಡ್ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಂ. ನಂಜುಂಡರಾಯರ ಪುತ್ರಿ ಚಿ॥ ಸೌ॥ ಸುಂದರಮ್ಮನವರನ್ನು ಕೊಟ್ಟು ನೆನ್ನೆ ವಿವಾಹವು ರಾಜಧಾನಿಯಲ್ಲಿ ಜರುಗಿತು.

ರಾಜಧಾನಿಯ ಅಡ್ವೊಕೇಟ್ ಶ್ರೀ ಟಿ. ಶೇಷಾದ್ರಿಯವರು ತಮ್ಮ ಪುತ್ರಿ ಚಿ॥ ಸೌ॥ ಸೀತಮ್ಮನವರನ್ನು ಬೆಂಗಳೂರಿನ ಶ್ರೀ ಯದುಗಿರಿ ನರಸಿಂಹಾಚಾರ್ಯರ ಪುತ್ರ ಶ್ರೀ ಕೆ. ಎನ್. ಶೇಷಾದ್ರಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಡೆಸಿದರು.

ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟಿನ ನಿವೃತ್ತ ಅಕೌಂಟೆಂಟ್ ಶ್ರೀ ಡಿ. ಎ. ಶ್ರೀನಿವಾಸರಾಘವಾಚಾರ್ಯರು ತಮ್ಮ ಪುತ್ರ ಚಿ॥ ಸಪ್ತಗಿರಿಯ ಉಪನಯನವನ್ನು ಕಳೆದ ಬುಧವಾರವೂ ಮತ್ತು ತಮ್ಮ ಪುತ್ರಿ ಚಿ॥ ಸೌ॥ ಶಾಂತಮ್ಮನವರನ್ನು ಶ್ರೀ ಎಂ. ಎಸ್. ತಿರುಮಲಾಚಾರ್ಯರ ಸಹೋದರ ಶ್ರೀ ಎಂ. ಎಸ್. ಕೃಷ್ಣಯ್ಯಂಗಾರ್ಯರಿಗೆ ಕೊಟ್ಟು ವಿವಾಹವನ್ನು ನೆನ್ನೆಯೂ ನೆರವೇರಿಸಿದರು.

SRI GANESHA
TALKIES
From 4 7 53 · For 3 Days
Gala Release of the much
awaited Mysore Sabu's Picture
SAVAGE DRUMS
Co starring LITA BARON
with thousands of
Jungle Thrills

ರೈಲು ಕಂಬಿ ಮೇಲೆ ವಿಮಾನವು ಬಿದ್ದಿತು

ಅಮೇರಿಕದ ವಿಮಾನ ದಳಕ್ಕೆ ಸೇರಿದ ಭಾರಿ ವಿಮಾನವೊಂದು ಮೊನ್ನೆ ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಬಳಿ ರೈಲ್ವೆ ಲೈನಿನ ಮೇಲೆ ಬಿದ್ದು, ಕೂಡಲೇ ಬೆಂಕಿಯುಂಟಾಗಿ ಅದು ಸುಟ್ಟು ಭಸ್ಮವಾಯಿತೆಂದೂ, ಅದರಲ್ಲಿದ್ದ ನಾಲ್ಕು ಜನರು ಉರಿದುಹೋದರೆಂದೂ ವರದಿಯಾಗಿದೆ. ಆಗ ತಾನೇ ಅದೇ ಮಾರ್ಗದಲ್ಲಿ ಲಂಡನ್ನಿನ ಅಭಿಮುಖವಾಗಿ ಹೊರಟ ರೈಲನ್ನು ಇಂಜಿನ್ ಡ್ರೈವರನು ಜ್ವಾಲೆಯನ್ನು ಕಂಡು, ವಿಮಾನವು ಬಿದ್ದ ಸ್ಥಳಕ್ಕೆ ೧೦೦ ಗಜ ಹಿಂದೆಯೇ ರೈಲನ್ನು ನಿಲ್ಲಿಸಿ, ಅದರಲ್ಲಿದ್ದ ೪೦೦ ಮಂದಿ ಪ್ರಯಾಣಿಕರು ಮೃತ್ಯುವಿಗೆ ತುತ್ತಾಗುತ್ತಿದ್ದುದನ್ನು ತಪ್ಪಿಸಿದನು.

ಒಂದೇ ಸಮನಾಗಿ ೩೯೩ ಮೈಲಿ ಓಡುವ ರೈಲು

ಲಂಡನ್ನಿನಿಂದ ಎಡಿನ್‌ಬರ್ಗ್ ನಗರಕ್ಕೆ ೩೯೩॥ ಮೈಲಿ ದೂರವನ್ನು ೬ ಗಂಟೆ ೬೦ ನಿಮಿಷದಲ್ಲಿ, ಮಧ್ಯೆ ಎಲ್ಲೂ ನಿಲ್ಲದೆ ಎಲಿಜಬೆತ್ತ್ ಎಂಬ ಹೊಸ ಬ್ರಿಟಿಷ್ ರೈಲು ಸಂಚರಿಸಿ, ಪ್ರಪಂಚದ ರಿಕಾರ್ಡನ್ನು ಸ್ಥಾಪಿಸಿರುತ್ತದೆ. ಅದು ಗಂಟೆಗೆ ೫೩ ಮೈಲಿಗಿಂತಲೂ ಹೆಚ್ಚು ವೇಗದಲ್ಲಿ ಓಡಿರುತ್ತದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ. ಎಲ್. ವಸಂತಕುಮಾರಿ, ರಿಕಾರ್ಡು. ಮಧ್ಯಾಹ್ನ ೨ ನಿಮ್ಮ ಮೆಚ್ಚಿನ ಗೀತೆಗಳು, ರಿಕಾರ್ಡ್. ಸಂಜೆ ೫-೩೦ ಮತ್ತು ೬ ಸಂಗೀತ, ಪಿ. ವಿ. ವಾಸುದೇವರಾವ್ ೬-೧೫ ನಾಳೆ ಮತ್ತು ನಮ್ಮವರು ೬-೫ ಮತ್ತು ೮-೩೦ ಎಸ್. ವೆಂಕಟರಮಣಯ್ಯ ಪಿಟೀಲು ೯-೧೫ ಜೂತಿಕಾರಾಯ್ ಮತ್ತು ಕಮಲದಾಸ್ ಗುಪ್ತ, ರಿಕಾರ್ಡು ೯-೩೦ ಅನಕೃರವರ "ಉದಯರಾಗ" ಕಾದಂಬರಿಯ ರೇಡಿಯೋ ನಾಟಕ.

PRABHA
Special Morning Show
on 5th July at 10 30 A M
BICYCLE THIEF
[In English]
(Evening Show Rates)

Edited, Printed and Published by A R. Nagarajan at Sadhvi Press, D Subbiah Road, Mysore

'ನಿಮ್ಮ ಸ್ವಂತ ವ್ಯಾಗನ್ ಹೊಂದಿರಿ' ವ್ಯವಸ್ಥೆ

ದೇಶದಲ್ಲಿ ರೈಲ್ವೆ ವ್ಯಾಗನ್ನುಗಳ ಅಭಾವದಿಂದ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಬೇಕಾದಷ್ಟು ವ್ಯಾಗನ್ನುಗಳನ್ನು ಒದಗಿಸಲು ಅಸಾಧ್ಯವಾಗಿರುವುದೆಂದು ಕೇಂದ್ರ ರೈಲ್ವೆ ಶಾಖೆಯವರು ತಿಳಿಸಿ, ಇನ್ನು ಮುಂದೆ ವಾಣಿಜ್ಯ ಅಥವಾ ಕೈಗಾರಿಕಾ ಸಂಸ್ಥೆಗಳವರು ಪೂರ್ಣವಾಗಿ ತಮ್ಮ ಉಪಯೋಗಕ್ಕಾಗಿ ಸ್ವಂತ ರೈಲ್ವೆ ವ್ಯಾಗನ್ನುಗಳನ್ನು ಹೊಂದುವ ಬಗ್ಗೆ ಘೋಷಣೆಯನ್ನು ಹೊರಡಿಸುವರು. ಈ ಯೋಜನೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲು ಒಂದು ಪ್ರಶ್ನಾವಳಿಯನ್ನು ತಯಾರಿಸಿ, ಆಸಕ್ತಿಯುಳ್ಳವರು ಅದನ್ನು ಪಡೆದು ವ್ಯವಹರಿಸಬಹುದೆಂದು ತಿಳಿಸಿರುವರು.

ಮೈಸೂರು ಪೇಟೆ ಧಾರಣೆ

	ಸಗಟು	ರೂ ಅಂತ	ರೂ ಗೆ
ಕಡಲೇಕಾಯಿ	[illegible]	[illegible]	
ಎಳ್ಳು	[illegible]	[illegible]	
ಹರಳುಬೀಜ	[illegible]	[illegible]	
ಹುರುಳಿ	[illegible]		
ಹೆಸರು	[illegible]	[illegible]	
ಅವರೆ	[illegible]		
ಹಲಸಂದೆ	[illegible]	[illegible]	
ಉದ್ದು	[illegible]	[illegible]	
ಹುಣಸೇಹಣ್ಣು	[illegible]	[illegible]	
ಸೀಗೆಕಾಯಿ	[illegible]	[illegible]	
ಕೊಬ್ಬರಿ	[illegible]	[illegible]	

ನಿಧನ

ರಾಜಧಾನಿಯ ಶಾರದಾ ವಿದ್ಯಾಶಾಲೆಯ ಹೆಡ್ ಮಾಸ್ಟರ್ ಮತ್ತು ಇನ್ಸ್‌ಪೆಕ್ಟರಾಗಿದ್ದ ಬಿ. ಆರ್. ಶ್ರೀನಿವಾಸರಾಯರು ಕಳೆದ ೨೮ನೇ ತಾರೀಖು ನಿಧನ ಹೊಂದಿದರೆ ದ. ತಿಂಗಳ ವಿಷಾದಕರವೆ. ಅವರಿಗೆ ೫೦ ವರ್ಷ ವಯಸ್ಸಾಗಿತ್ತು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ.

॥ಶ್ರೀ॥
ಜಗದಂಬಾ ಶಿಶುವಿಹಾರ
583 ರಾಮಾನುಜ ರಸ್ತೆ, ಮೈಸೂರು
ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ಈಗ ಪುನಃ ತೆರೆಯಲಾಗಿದೆ. ಕಿಂಡರ್ ಗಾರ್ಟನ್ ಮಾಂಟೆಸ್ಸೊರಿ ಮತ್ತು ಆಧುನಿಕ ಶಿಶು ವಿದ್ಯಾಭ್ಯಾಸ ಮಾರ್ಗಗಳನ್ನನುಸರಿಸಿ ಮಾಡೆಲ್ ಫಸ್ಟ್ ಇಯರ್ ಕ್ಲಾಸಿನ ವರೆಗೂ ಪಾಠ ಪ್ರವಚನಗಳನ್ನು ನಡೆಸಲಾಗುವುದು. ಪರಿಮಿತವಾದ ಸಂಖ್ಯೆಯಲ್ಲಿ ಮಾತ್ರ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದರಿಂದ ಶಾಲೆ ತೆರೆದ ಕೂಡಲೇ ತಂದೆತಾಯಂದಿರುಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕೆಂದು ಕೋರಲಾಗಿದೆ.
ಡಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಮನೆ ಮಾರಾಟಕ್ಕಿದೆ
ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ಪಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ
ಬೆಲೆ ಸುಮಾರು 5,000 ರೂ
ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
5-7-53 ನೇ ಭಾನುವಾರದಿಂದ :: ದಿನವೊ 3 ಆಟಗಳು
• ರಾಜಾಂಬಾಳ್ •
(ತಮಿಳು)
ಪಾತ್ರ — ಎಸ್. ಬಾಲಚಂದ್ರನ್ ಮನೋಹರ್, ಪಿ. ಕೆ. ಸರಸ್ವತಿ ಮುಂತಾದವರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ ಶೆಟ್ಟಿ (ಫೋನ್ 446) ಬಿ. ಎ. ಇಂಡಿಯಾ ಬ್ಯಾಂಕ್ ಎದುರು ಮೈಸೂರು

ರಿಜಿ ನಂ. 793 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೫-೭-೧೯೫೩ [ಸಂಚಿಕೆ ೪೪

-ಕಾಶ್ಮೀರ ಚಳುವಳಿ- ಗಾರರ ಖುಲಾಸೆ

ಪ್ರವಾಹಕ್ಕೆ ಸಿಕ್ಕಿದ ಮಹಿಳೆಯ ರಕ್ಷಣೆ

ಮೈಸೂರು ೫

ಹುಣಸೂರು-ಕೃಷ್ಣರಾಜನಗರ ರಸ್ತೆಯಲ್ಲಿರುವ ಕಟ್ಟೆಮಳಲವಾಡಿ ಬಳಿ ಲಕ್ಷ್ಮಣ ತೀರ್ಥ ನದಿಗೆ ಕಟ್ಟಲಾಗಿರುವ ಅಣೆಕಟ್ಟೆಯ ಮೇಲೆ ಕಳೆದ ೧ನೇ ತಾ|| ಕೆಂಚಮ್ಮ ಎಂಬ ಹೆಂಗಸು ಹೋಗುತ್ತಿದ್ದಾಗ ಪ್ರವಾಹವು ಬಂದು ಆಕೆಯನ್ನು ಕೊಚ್ಚಿಕೊಂಡುಹೋಯಿತೆಂದೂ, ನದಿಯ ಮಧ್ಯದಲ್ಲಿದ್ದ ಒಂದು ಮರವು ಅದೃಷ್ಟವಶಾತ್ ಆಕೆಯ ರಕ್ಷಣೆಗೆ ಕಾರಣವಾಯಿತೆಂದೂ ಹೇಳಲಾಗಿದೆ ಹೆಂಗಸು ಮರವನ್ನೇರಿ ಕುಳಿತಳು ಅದನ್ನು ಕಂಡು ಅಕ್ಕಪಕ್ಕದ ಹಳ್ಳಿಯ ಜನರು ಓಡಿಬಂದು ಆಕೆಯ ರಕ್ಷಣೆಗೆ ಪ್ರಯತ್ನ ಪಟ್ಟು ವಿಫಲರಾದರು ಮಾರನೆಯ ದಿನ ವಿಷಯವು ಮೈಸೂರು ಜಿಲ್ಲಾ ಪೋಲೀಸು ಅಧಿಕಾರಿಗಳಿಗೆ ತಿಳಿದು, ಅವರು ಕೂಡಲೇ ಒಂದು ರಕ್ಷಣಾ ಪಡೆಯನ್ನು ಕಳುಹಿಸಿಕೊಟ್ಟರು ಅಷ್ಟು ಹೊತ್ತಿಗೆ ಹುಣಸೂರು ಪಬ್ಲಿಕ್ ವರ್ಕ್ಸ್ ಮ್ಯಾನೇಜರ್ ಶ್ರೀ ಮೌಲಾಜಿಯವರು ಪ್ರಯಾಸಪಟ್ಟು ಆಕೆಯನ್ನು ಮರದಿಂದ ಇಳಿಸಿ ಪಕ್ಕದಲ್ಲಿದ್ದ ಪುಟ್ಟ ನಡುಗಡ್ಡೆಗೆ ಬರುವಂತೆ ಮಾಡಿದ್ದರು ಪೋಲೀಸರು ಹಗ್ಗ, ಲೈಫ್ ಬೆಲ್ಟ್ ಮುಂತಾದ ಸಾಧನಗಳಿಂದ ಆಕೆಯನ್ನು ದಡಕ್ಕೆ ಕರೆತಂದು ರಕ್ಷಿಸಿದರು ನೆನ್ನೆ ಆಕೆಯನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತು ಮೂರು ನಾಲ್ಕು ದಿನಗಳಿಂದ ಆಹಾರವಿಲ್ಲದೆ ಆಕೆಯು ತುಂಬಾ ಆಯಾಸಪಟ್ಟಿದ್ದಳು ಆಕೆಯ ದೇಹ ಸ್ಥಿತಿಯು ತೃಪ್ತಿಕರವಾಗಿರುವುದೆಂದು ವರದಿಯಾಗಿದೆ.

೨೫ ನೇ ತಾ|| ಕರಾಚಿಗೆ ನೆಹರೂ ಪ್ರಯಾಣ

ಇದೇ ತಿಂಗಳು ೨೫ ನೇ ತಾ|| ನೆಹರೂರವರು ಕರಾಚಿಗೆ ಪ್ರಯಾಣ ಮಾಡಿ, ಅಲ್ಲಿ ಎರಡು ದಿನಗಳವರೆಗೆ ಇದ್ದು, ಅಲ್ಲಿನ ಪ್ರಧಾನಿ ಮಹಮದ್ ಅಲಿಯವರೊಡನೆ ಮಾತುಕತೆ ನಡೆಸಿ, ಮೂರನೇ ದಿನ ದೆಹಲಿಗೆ ಹಿಂದಿರುಗುವರೆಂದು ವರದಿಯಾಗಿದೆ ಕರಾಚಿಗೆ ನೆಹರೂರವರು ಭೇಟಿ ಕೊಡುವ ನೆನಪಿಗಾಗಿ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಇತರ ಹಾಜಿ ಕಾಂಗ್ರೆಸ್ಸು ಮುಖಂಡರ ಬಿಡುಗಡೆ ಮತ್ತು ಕರಾಚಿ ನಗರದಲ್ಲಿ ಗಾಂಧಿಜಿಯವರ ಹೆಸರಿನಲ್ಲಿ ಆಸ್ಪತ್ರೆ ಅಥವಾ ಪುಸ್ತಕ ಭಂಡಾರ ಅಥವಾ ಸ್ಮಾರಕ ಉದ್ಯಾನ ಒಂದನ್ನು ತೆರೆಯಬೇಕೆಂದು ಲಾಹೋರಿನ ಉರ್ದು ಪತ್ರಿಕೆ ಅಜಾದ್ ಎಂಬುದು ತಿಳಿಸಿರುತ್ತದೆ

ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧಿಕಾರ ವರ್ಗ

ಯಳಂದೂರು ೨

ಕಳೆದ ೩೦ ನೇ ತಾ|| ಈ ತಾಲ್ಲೂಕಿನ ಕಾಂಗ್ರೆಸ್ ಸಮಿತಿ ಸಭೆಯು ಸೇರಿ ಶ್ರೀ ಬಿ ಸೂರ್ಯನಾರಾಯಣರವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎ. ಬಿ ರಾಮಚಂದ್ರಯ್ಯ ಮತ್ತು ಸಿ ತಂಜಪ್ಪನವರುಗಳು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಕೆ. ಎಲ್ ವೆಂಕಟಸ್ವಾಮಿಯವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಶೀಘ್ರದಲ್ಲೇ ವಿಶ್ವವಿದ್ಯಾಲಯದಲ್ಲಿ ಹಿಂದೀ ಪಾಠ

ಬೆಂಗಳೂರು ೫

ಮೈಸೂರು ಹಿಂದಿ ಪ್ರಚಾರ ಪರಿಷತ್ತಿನವರ ಘಟಿಕೋತ್ಸವದಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಭಾಷಣ ಮಾಡಿ, ವಿಶ್ವವಿದ್ಯಾಲಯದ ಪಾಠ ಕ್ರಮದಲ್ಲಿ ಹಿಂದಿಯನ್ನು ಸೇರಿಸುವ ಬಗ್ಗೆ ವಿಶ್ವ ವಿದ್ಯಾಲಯದ ಸೆನೆಟ್ ಸಭೆಯು ಆಲೋಚಿಸುತ್ತಿರುವುದಾಗಿ ತಿಳಿಸಿದರು ೫ ವರ್ಷಗಳಲ್ಲಿ ಇಂಗ್ಲಿಷ್ ಭಾಷೆಯು ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವುದೆಂದೂ, ಆದರೆ ಜ್ಞಾನಾರ್ಜನೆಗೆ ಇಂಗ್ಲಿಷ್ ಅವಶ್ಯಕವೆಂದೂ ಅವರು ಅಭಿಪ್ರಾಯಪಟ್ಟರು

ಜರ್ಮನಿ-ಪೋಲೆಂಡ್ ಗಡಿ ಬಳಿ ಘರ್ಷಣೆಯೇ?

ಪೂರ್ವ ಜರ್ಮನಿ ಮತ್ತು ಪೋಲೆಂಡ್ ಗಡಿ ಬಳಿ ಅಶಾಂತಿಯು ತಲೆದೋರಿ ಗಡಿ ಘರ್ಷಣೆಯಾಗಿರುವುದೆಂದು ವರದಿಯಾಗಿದೆ ಅದನ್ನು ದಮನ ಮಾಡಲು ಪೂರ್ವ ಬರ್ಲಿನ್ ನಗರದಲ್ಲಿದ್ದ ಟ್ಯಾಂಕುಗಳನ್ನು ರಷ್ಯನರು ಆ ಪ್ರದೇಶಗಳಿಗೆ ಕಳುಹಿಸಿರುವುದಾಗಿ ಹೇಳಲಾಗಿದೆ ಪೋಲಿಷ್ ಜನರಿಗೂ ರಷ್ಯದ ಸೈನ್ಯಗಳಿಗೂ ಘರ್ಷಣೆ ನಡೆದುದಾಗಿ ವಾಯುವ್ಯ ಜರ್ಮನ್ ರೇಡಿಯೋವು ತಿಳಿಸಿರುತ್ತದೆ ರಷ್ಯದ ಚಿತ್ರವೊಂದನ್ನು ಪ್ರದರ್ಶಿಸುತ್ತಿದ್ದ ಸಿನಿಮಾ ಮಂದಿರವನ್ನು ಪೋಲಿಷ್ ಪ್ರದರ್ಶನಕಾರರು ನಾಶಪಡಿಸಿದರೆಂದೂ "ನಾವು ಸ್ವತಂತ್ರರಾಗಬೇಕೆಂದೂ, ಅಲ್ಲಿಂದ ರಷ್ಯಾ ಸೈನ್ಯಗಳು ಕಾಲ್ತೆಗೆಯಬೇಕೆಂದೂ" ಪ್ರದರ್ಶನಕಾರರು ಕೂಗಿಕೊಂಡುದಾಗಿಯೂ ಹೇಳಲಾಗಿದೆ

ಹಣ್ಣುಗಳನ್ನು ರಕ್ಷಿಸುವ ಬಗ್ಗೆ ಜಾಯಿಂಟ್ ಸ್ಟಾಕ್ ಕಂಪೆನಿ

ಮಾವು, ಕಿತ್ತಳೆ, ಹಿಂಬೆ, ಮುಂತಾದ ಹಣ್ಣುಗಳನ್ನು ಡಬ್ಬಿಗಳಲ್ಲಿಟ್ಟು ರಕ್ಷಣೆ ಮಾಡುವ ಸಂಬಂಧವಾಗಿ ಶೀಘ್ರದಲ್ಲೇ ಹಾಸನದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಯೊಂದು ಸ್ಥಾಪಿತವಾಗಲಿದೆ ಈ ಸಂಸ್ಥೆಗೆ ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರ ನೆರವು ಸಿಗಲಿರುವುದೆಂದು ಹೇಳಲಾಗಿದೆ.

ಐಕ್ಯ ಕರ್ನಾಟಕ ಪ್ರಾಂತಕ್ಕಾಗಿ ಸೌಹಾರ್ದ ಅಗತ್ಯ

ಹೊರನಾಡು ಕನ್ನಡಿಗರ ಸಮ್ಮೇಳನದಲ್ಲಿ ಭಾಷಣ

ಭೂಪಾಲ್ ನಗರದಲ್ಲಿ ನೆನ್ನೆ ನಡೆದ ಹೊರನಾಡು ಕನ್ನಡಿಗರ ೬ ನೇ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುತ್ತಾ, ರಾಜ್ಯ ಮಂಡಲದ ಉಪಾಧ್ಯಕ್ಷರಾದ ಶ್ರೀ ಎಸ್ ವಿ ಕೃಷ್ಣಮೂರ್ತಿರಾಯರು ಮಾತನಾಡಿ, ಕರ್ನಾಟಕದ ಭಾಗಗಳನ್ನು ಐಕ್ಯಗೊಳಿಸುವ ಸಮಸ್ಯೆಯನ್ನು ಸೌಹಾರ್ದಪೂರಿತ ಸನ್ನಿವೇಶದಲ್ಲಿ ಬಗೆಹರಿಸಬೇಕೆಂದು ತಿಳಿಸಿದರು ಕನ್ನಡ ಪ್ರದೇಶಗಳನ್ನು ಐಕ್ಯಗೊಳಿಸುವ ಬಗ್ಗೆ ಕೇಂದ್ರದವರು ನಿಧಾನ ಮಾಡುವ ಉದ್ದೇಶ್ಯ ಹೊಂದಿಲ್ಲವೆಂದು ಅವರು ಸ್ಪಷ್ಟಪಡಿಸಿದರು.

ಬಳ್ಳಾರಿಯು ಮೈಸೂರಿಗೆ ಸೇರುವುದರಿಂದ ಕರ್ನಾಟಕ ಏಕೀಕರಣವು ಪ್ರಾರಂಭವಾಗಲಿರುವುದೆಂದೂ, ಮೈಸೂರು ಜನರ ವರ್ತನೆಯೇ ಇದಕ್ಕೆ ಮುಖ್ಯ ತೊಂದರೆಯೆಂದೂ ಅವರು ಹೇಳಿ, ಏಕೀಕರಣದಿಂದ ಮೈಸೂರಿನಲ್ಲಿ ಹಣ ಕಾಸಿನ ತೊಂದರೆಗಳು ಆಗಿ, ದೇಶದ ಪ್ರಗತಿಗೆ ಅಡ್ಡಿಯಾಗುವುದೆಂದು ಅನೇಕರು ಭಾವಿಸಿರುವುದಾಗಿ ತಿಳಿಸಿದರು ಮೈಸೂರು ಮುಖ್ಯ ಮಂತ್ರಿಗಳ ವರ್ತನೆಯಿಂದ ಆಶಾ ಕಿರಣವು ಮೂಡಿರುವುದಾಗಿಯೂ ಅವರು ಅಭಿಪ್ರಾಯಪಟ್ಟರು.

ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್ ಕೇಶವಯ್ಯಂಗಾರ್ಯರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು

ಕಲ್ಕತ್ತದಲ್ಲಿ ರಷ್ಯ ಪ್ರಜೆ ಮೇಲೆ ಕೊಲೆ ಆಪಾದನೆ

ಕಳೆದ ೨೫ ನೇ ತಾ|| ಟಿಂಗ್ ಎಂಬ ಚೀನಾ ಪ್ರಜೆಯನ್ನು ಕೊಲೆ ಮಾಡಿದನೆಂದು, ಕಲ್ಕತ್ತೆಯ ಪೋಲೀಸರು ರಷ್ಯದ ಪ್ರಜೆ ಅಲೆಕ್ಸಾಂಡರ್ ಪೆವಾಂಸಿಡಿಚ್ ಎಂಬಾತನ ಮೇಲೆ ಅಲ್ಲಿನ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದ ನೀರಿನ ಮಟ್ಟವು ಈ ದಿನ ೧೦೭ ಅಡಿಗಳಿಗೆ ಏರಿದೆ.

ಕಾಶ್ಮೀರದಲ್ಲಿ ಜನ ಸಂಘದ ಸ್ವಯಂಸೇವಕರ ಬಿಡುಗಡೆ

ಜಮ್ಮು ಪ್ರಜಾಪರಿಷತ್ತಿನವರು ನಡೆಸುತ್ತಿರುವ ಚಳುವಳಿಯಲ್ಲಿ ಭಾಗವಹಿಸಿ ಬಂಧಿಸಲ್ಪಟ್ಟಿರುವ ಭಾರತೀಯ ಜನಸಂಘದ ಸ್ವಯಂಸೇವಕರೆಲ್ಲರನ್ನೂ ಬಿಡುಗಡೆ ಮಾಡಲು ಕಾಶ್ಮೀರ ಸರ್ಕಾರದವರು ನಿರ್ಧರಿಸಿ, ಈಗಾಗಲೇ ಒಂದು ತಂಡವನ್ನು ಖುಲಾಸೆ ಮಾಡಿರುವರು

ಕಲ್ಕತ್ತಾ ಗುಂಪಿನ ಮೇಲೆ ಗುಂಡು

ಕಲ್ಕತ್ತದಲ್ಲಿ ಟ್ರಾಂ ದರವನ್ನು ಹೆಚ್ಚಿಸಿರುವ ಬಗ್ಗೆ ನೆನ್ನೆಯಿಂದ ಪ್ರದರ್ಶನ ನಡೆಸುತ್ತಿರುವ ಜನರ ಮೇಲೆ ನೆನ್ನೆ ಪೋಲೀಸರು ೮೦ ರೌಂಡಿನಷ್ಟು ಅಶ್ರುವಾಯು ಬಾಂಬುಗಳನ್ನು ಪ್ರಯೋಗಿಸಿದರು ಪೋಲೀಸರ ಮೇಲೆ ಜನರು ಕಲ್ಲುಗಳನ್ನೆಸೆದರು ಒಂದು ಕಡೆ ಎರಡು ರೈಲುಗಾಡಿಗಳಿಗೆ ಬೆಂಕಿ ಹತ್ತಿಸುವ ಪ್ರಯತ್ನವು ನಡೆಯಿತು ನೆನ್ನೆ ಮಧ್ಯಾಹ್ನ ೫೦೦ ಜನರನ್ನು ದಸ್ತಗಿರಿ ಮಾಡಲಾಗಿದೆ ನಗರದಲ್ಲಿ ಹರತಾಳವನ್ನು ಆಚರಿಸಬೇಕೆಂದು ಪ್ರದರ್ಶನಕಾರರು ಬೆಳಗಿನಿಂದಲೂ ತಿಳಿಸುತ್ತಿದ್ದರು ಒಂದು ಕಡೆ ಲಾರಿ ಪ್ರಹಾರವೂ ಆಯಿತು ಪೋಲೀಸರು ೨ ಬಾರಿ ಗುಂಡು ಹಾರಿಸಿದರು

ಸಿಂಗ್ಮನ್ ರ್ಹೀಯವರು ಬಗ್ಗುವರೇ?

ಕೊರಿಯಾ ಸಮಸ್ಯೆಯ ಪರಿಶೀಲನೆಗಾಗಿ ವಿಶ್ವ ಸಂಸ್ಥೆಯ ಅಸೆಂಬ್ಲಿ ಅಧಿವೇಶನವನ್ನು ಸೇರಿಸುವಂತೆ ಪಂಡಿತ ನೆಹರೂರವರು ಮಾಡಿದ್ದ ಸಲಹೆಯು ತಿರಸ್ಕರಿಸಲ್ಪಟ್ಟಿತಷ್ಟೆ ಶಾಂತಿ ಒಪ್ಪಂದದ ಬಗ್ಗೆ ಅಮೆರಿಕವು ನೀಡಿದ ಎಲ್ಲ ಸಲಹೆಗಳನ್ನೂ ದಕ್ಷಿಣ ಕೊರಿಯದ ಅಧ್ಯಕ್ಷ ರ್ಹೀಯವರು ನಿರಾಕರಿಸಿರುವುದರಿಂದ ಅಮೆರಿಕವು ಈಗ ಸಮಸ್ಯೆಯನ್ನು ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿ ಮುಂದಿಡಲು ಸಿದ್ಧವಾಗಿರುವುದೆಂದು ರ್ಹೀಯವರಿಗೆ ತಿಳಿಸಲಾಗಿದೆ ಅಸೆಂಬ್ಲಿಯ ತೀರ್ಮಾನವು ರ್ಹೀಯವರಿಗೆ ವಿರುದ್ಧವಾಗಿ ಹೋಗಬಲ್ಲುದೆಂದು ಅವರಿಗೆ ಮನವರಿಕೆಯಾಗಿರುವುದರಿಂದ ಅವರು ಒಂದು ಒಪ್ಪಂದಕ್ಕೆ ಬರುವ ಸಂಭವವಿರುವುದೆಂದು ಸಿಯೋಲ್ ಮತ್ತು ಟೋಕಿಯೋಗಳ ಅಧಿಕಾರಿ ವೃತ್ತಗಳಲ್ಲಿ ಹೇಳಲಾಗುತ್ತಿದೆ

ಫಾರ್ಮೋಸಾದಲ್ಲಿ ಬಿರುಗಾಳಿ

ಗಂಟೆಗೆ ೧೫೦ ಮೈಲಿ ವೇಗದ ಬಿರುಗಾಳಿಯು ಫಾರ್ಮೋಸ ದ್ವೀಪದ ಮೇಲೆ ನೆನ್ನೆ ಬೀಸಿ, ತುಂಬಾ ನಷ್ಟವಾಗಿರುವುದೆಂದು ವರದಿಯಾಗಿದೆ ವಿದ್ಯುಚ್ಛಕ್ತಿ ಸರಬರಾಜು, ಸಂಚಾರಸಾಧನಗಳು ಕಡಿಯಲ್ಪಟ್ಟಿವೆ

ತಮಿಳರ ಚಳುವಳಿ ನಿಂತಿತು

ಚಿತ್ತೂರು ಜಿಲ್ಲೆಯ ತಿರುತ್ತಣಿ ಮುಂತಾದ ಹಲವು ತಮಿಳು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಕೂಡದೆಂದು ಹೂಡಲಾಗಿರುವ ಚಳುವಳಿಯನ್ನು ತಮಿಳುನಾಡು ಉತ್ತರ ಗಡಿ ಸಮಿತಿಯವರು ನಿಲ್ಲಿಸಿರುತ್ತಾರೆ ಮದ್ರಾಸಿನ ಶಾಸನ ಸಭಾ ಸದಸ್ಯ ಎಂ ಪಿ ಶಿವಜ್ಞಾನಗ್ರಾಮಣಿಯವರನ್ನು ಚಳುವಳಿ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ.

ವಾರ ಭವಿಷ್ಯ

೫-೭-೫೩ ರಿಂದ ೧೧-೭-೫೩ ರ ವರೆಗೆ

ಮೇಷ — ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಲ್ಲಿ ಜಯ, ಆರ್ಥಿಕ ಪರಿಸ್ಥಿತಿ ಸಮರ್ಪಕವಾಗಿರುವುದು ತಾ|| ೭, ೮ ಆಪ್ತರ ಭೇಟಿ, ಕೊಪ್ಪ ಭೋಜನ

ವೃಷಭ— ಆರೋಗ್ಯ ಉತ್ತಮ, ಸಂಬಂಧ ದ್ರೋಹ, ಆರ್ಥಿಕ ಪರಿಸ್ಥಿತಿ ಉತ್ತಮವಾಗಿರಲಾರದು ವ್ಯಾಪಾರಾದಿಗಳಲ್ಲಿ ನಷ್ಟ. ತಾ|| ೫, ೬ ಕಲಹದ ಸಂಭವ, ಕುಟುಂಬದ ದೇಹಾಲಸ್ಯ

ಮಿಥುನ - ಆರೋಗ್ಯ ಚೆನ್ನಾಗಿರಲಾರದು, ಜವಾಬ್ದಾರಿ ಹೆಚ್ಚು, ಹಣಕಾಸಿನ ಸ್ಥಿತಿ ಅಸಮರ್ಪಕ, ವ್ಯಾಪಾರಾದಿಗಳಲ್ಲಿ ನಷ್ಟ ತಾ|| ೭, ೮ ಕಲಹ ಸಂಭವ, ಜಾಗರಣೆ

ಕರ್ಕ — ಆರೋಗ್ಯ ಚೆನ್ನಾಗಿರಲಾರದು, ಖರ್ಚು ಹೆಚ್ಚಾಗುವುದು, ಪ್ರವಾಸ ಕೈಗೊಳ್ಳಬೇಕು, ವ್ಯಾಪಾರಾದಿಗಳಲ್ಲಿ ತೊಂದರೆ ತಾ|| ೯, ೧೦ ಶತ್ರು ಕಾಟ, ಚಿತ್ತ ಶುದ್ಧಿ

ಸಿಂಹ — ಆರೋಗ್ಯ ಉತ್ತಮ ಸ್ನೇಹಿತರ ಸಹವಾಸ, ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು, ವ್ಯಾಪಾರಾದಿಗಳಲ್ಲಿ ಲಾಭ ತಾ|| ೯, ೧೦ ಶುಭವಾರ್ತೆ, ಗೌರವ ಲಾಭ

ಕನ್ಯಾ — ಆರೋಗ್ಯ ಉತ್ತಮ ಧನಾಗಮನ ಚೆನ್ನಾಗಿದೆ, ಪ್ರವಾಸ ಸಂಭವ ತಾ|| ೭, ೮ ಅಪ್ತೇಷ್ಟರ ಕ್ಲೇಶ ಸಮಾಚಾರ, ಚಿಂತಾ ಸಾಧ

ತುಲಾ — ಆರೋಗ್ಯ ಉತ್ತಮ, ಕೈಗೊಂಡ ಕಾರ್ಯ ಸಿದ್ಧಿ, ಆರ್ಥಿಕ ಸ್ಥಿತಿ ಚೆನ್ನಾಗಿರುವುದು ವ್ಯಾಪಾರಾದಿಗಳಲ್ಲಿ ಲಾಭ ತಾ|| ೭, ೮ ಖರ್ಚು, ಗೊಂದಲ

ವೃಶ್ಚಿಕ — ಆರೋಗ್ಯ ಚೆನ್ನಾಗಿರಲಾರದು, ಖರ್ಚು ಹೆಚ್ಚಾಗುವುದು, ಅಪಘಾತ ಸಂಭವ ತಾ|| ೯, ೧೦ ವ್ಯಯ, ಜಾಗರಣೆ

ಧನು — ಆರೋಗ್ಯ ಸಾಧಾರಣ, ಆಪ್ತರಿಂದಲೇ ದ್ರೋಹ, ಖರ್ಚು ವಿಪರೀತ, ವ್ಯಾಪಾರಾದಿಗಳಲ್ಲಿ ನಷ್ಟ ತಾ|| ೭, ೮ ಸುವಾರ್ತೆ, ಚಿಂತಾ ನಾಶ

ಮಕರ — ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಿಗೆ ವಿಘ್ನ, ವ್ಯಾಪಾರಾದಿಗಳಲ್ಲಿ ಪ್ರಗತಿ ತಾ|| ೯, ೧೦ ಅತಿಥಿ ಸತ್ಕಾರ, ಖರ್ಚು

ಕುಂಭ—ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದು, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ತಾ|| ೭, ೮ ಖರ್ಚು ಗೊಂದಲ

ಮೀನ— ಆರೋಗ್ಯ ಚೆನ್ನಾಗಿರಲಾರದು, ಖರ್ಚು ಹೆಚ್ಚು, ಪ್ರವಾಸದಲ್ಲಿ ಅಪಘಾತ ಸಂಭವ, ವ್ಯಾಪಾರಾದಿಗಳಲ್ಲಿ ತೊಂದರೆ. ತಾ|| ೯, ೧೦ ವೃಥಾ ಕಲಹ, ಚಿಂತೆ

ಇಂಡೊಚೀಣದ ರಾಜ್ಯಗಳಿಗೆ ಹೆಚ್ಚಿನ ಸ್ವಾತಂತ್ರ್ಯ

ಇಂಡೊಚೀಣದಲ್ಲಿ ಫ್ರೆಂಚರ ಆಡಳಿತಕ್ಕೆ ಸೇರಿರುವ ವಿಯಟ್ನಾಂ, ಕಾಂಬೋಡಿಯಾ ಮತ್ತು ಲಾವೋಸ್ ರಾಜ್ಯಗಳಿಗೆ ಫ್ರಾನ್ಸು ಹೆಚ್ಚಿನ ಸ್ವಯಂ ಆಡಳಿತವನ್ನು ಕೊಡಲು ನಿರ್ಧರಿಸಿ, ಆ ಸಂಬಂಧದ ಪ್ರಕಟಣೆಗಳನ್ನು ಫ್ರಾನ್ಸಿನಲ್ಲಿರುವ ಮೇಲ್ಕಂಡ ರಾಜ್ಯಗಳ ಪ್ರತಿನಿಧಿಗಳಿಗೆ ಮೊನ್ನೆ ತಲುಪಿಸಿತೆಂದು ತಿಳಿದು ಬಂದಿದೆ

ಡಾ|| ಮುಖರ್ಜಿ ನಿಧನದ ಬಗ್ಗೆ ವಿದ್ಯಾರ್ಥಿಗಳ ಸಂತಾಪ ಸಭೆ

ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ನಿಧನ ಹೊಂದಿ ನಾಳೆಗೆ ೧೩ ನೇ ದಿನವಾಗುವ ಪ್ರಯುಕ್ತ, ನಾಳೆ ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳೂ ತರಗತಿಗಳಿಗೆ ಹೋಗುವ ಮೊದಲು, ಆಯಾ ಕಾಲೇಜುಗಳ ಮುಂದೆ ಸೇರಿ ಎರಡು ನಿಮಿಷ ಮೌನವನ್ನು ಆಚರಿಸಿ, ದಿವಂಗತ ಮುಖರ್ಜಿಯವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಮೈಸೂರು ಶಾಖಾ ಕಾರ್ಯದರ್ಶಿ, ಶ್ರೀ ಎಸ್ ಎಚ್. ರಾಜರವರು ಕೋರುತ್ತಾರೆ

ಗಮಕ ತರಗತಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮೈಸೂರಿನಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಗಮಕ ತರಗತಿಗಳನ್ನು ನಡೆಸಲು ಒಪ್ಪಿರುವರೆಂದೂ, ಈ ಸುಸಂಧಿಯನ್ನು ಉಪಯೋಗಿಸಿಕೊಂಡು ತರಗತಿಗೆ ಸೇರಲು ಅಪೇಕ್ಷೆ ಪಡುವವರು ತಮ್ಮ ಹೆಸರು, ವಿಳಾಸಗಳನ್ನು ಶ್ರೀ ಕೃಷ್ಣಗಿರಿ ಕೃಷ್ಣರಾಯರು, ೧೩೭೫ ಕೃಷ್ಣಮೂರ್ತಿ ಪುರಂ, ಮೈಸೂರು ಇವರಿಗೆ ತಿಳಿಸಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬಹುದೆಂದೂ ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಶಾರದಾವಿಲಾಸ ಹೈಸ್ಕೂಲಿನ ಹೊಸ ಹೆಡ್‌ಮಾಸ್ಟರು

ಶಾರದಾವಿಲಾಸ ಹೈಸ್ಕೂಲಿನ ಸಹೋಪಾಧ್ಯಾಯರಾಗಿದ್ದ ಶ್ರೀ ಕೆ ವಿ ನಾರಾಯಣ್‌ರವರು ಕಳೆದ ಬುಧವಾರದಿಂದ ಅಲ್ಲಿನ ಹೆಡ್ಮಾಸ್ಟರಾಗಿ ನೇಮಿಸಲ್ಪಟ್ಟಿದ್ದಾರೆ

ಕಾಂಬೋಡಿಯಾ ಸೈನ್ಯವನ್ನು ಬಲಪಡಿಸಲು ಯೋಜನೆ

ಕಾಂಬೋಡಿಯದ ಸೈನ್ಯ ಬಲವನ್ನು ಈಗಿರುವುದರ ಹತ್ತರಷ್ಟಕ್ಕೆ ಹೆಚ್ಚಿಸುವುದಾಗಿ ಅಲ್ಲಿನ ರಾಜರು ಘೋಷಿಸಿರುವರು ಈ ಯೋಜನೆಯನ್ನು ಕಾರ್ಯಗತ ಮಾಡಲು ಅಗತ್ಯವಾದ ತ್ಯಾಗಕ್ಕೆ ಜನರು ಸಿದ್ಧರಾಗಬೇಕೆಂದು ಅವರು ಮನವಿ ಮಾಡಿಕೊಂಡಿರುತ್ತಾರೆ ತಮ್ಮ ದೇಶಕ್ಕಾಗಿ ಸ್ವಾತಂತ್ರ್ಯವನ್ನು ಗಳಿಸುವುದಲ್ಲದೆ ಫ್ರಾನ್ಸ್ ಮತ್ತು ಸ್ವತಂತ್ರ ಜಗತ್ತಿಗೆ ಸೇವೆ ಸಲ್ಲಿಸುವುದೇ ತಮ್ಮ ಗುರಿಯೆಂದು ಅವರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ನಾಗಸ್ವರ, ಎಂ ಬಿ ಹನುಮಂತಪ್ಪ ಮಧ್ಯಾಹ್ನ ೨ ಎಂ ಎಸ್ ಬೆಳ್ಳುಪುಳ್ಳೆ ಅಯ್ಯಂಗಾರ್, ಸಂಗೀತ ಸಂಜೆ ೫-೩೦ ನಾಗಸ್ವರ, ಎಂ ಬಿ ಹನುಮಂತಪ್ಪ ೭-೫ ಎಂ ಎಸ್. ಬೆಳ್ಳುಪುಳ್ಳೆ ಅಯ್ಯಂಗಾರ್, ಸಂಗೀತ ೮ ಎಂ ಪಿ ನಾಗಮುತ್ತು ವಚನಗಾನ. ೮ ೧೫ ವತ್ತು ೯ ೩೦ ವಿ ದೊರೆಸ್ವಾಮಿ ಅಯ್ಯಂಗಾರ್ ವೀಣೆ

ರೈಲ್ವೆ ಕ್ಯಾಂಟೀನ್ ಕೆಲಸಗಾರರ ಮುಷ್ಕರ

ರಾಜಧಾನಿಯ ರೈಲ್ವೆ ವರ್ಕ್‌ಷಾಪ್ ಕ್ಯಾಂಟೀನ್ ಕೆಲಸಗಾರರೆಲ್ಲರೂ ಕಳೆದ ೭ ನೇ ತಾ|| ನಿಂದ ಮುಷ್ಕರ ಹೂಡಿರುತ್ತಾರೆ ಶ್ರೀ ಬಾಲಕೃಷ್ಣ ಎಂಬ ಕೆಲಸಗಾರನನ್ನು ನಿಷ್ಕಾರಣವಾಗಿ ತೆಗೆಯಲಾಯಿತೆಂದೂ, ಈ ವಿಷಯವಾಗಿ ಕ್ಯಾಂಟೀನ್ ಅಧ್ಯಕ್ಷರಾದ ಶ್ರೀ ಜಿ ಕೃಷ್ಣಮೂರ್ತಿಯವರೊಡನೆ ಚರ್ಚಿಸಲಾಯಿತೆಂದೂ, ಇನ್ನೂ ಐದು ಜನರನ್ನು ಅನಂತರ ತೆಗೆದುಹಾಕಲಾಯಿತೆಂದೂ, ಮುಷ್ಕರಗಾರರ ಮುಖಂಡರಾದ ಶ್ರೀ ಎಂ ಆರ್ ರಾಧಾಕೃಷ್ಣರವರು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಸರಕು	ರೂ ಆಣೆ	ರೂ ಗೆ
ಕಡಲೆಕಾಯಿ	೧೮ ೦-೦	೨೫ ೧೩ ೦
ಎಳ್ಳು	೩೫ ೦.೦	೩೮ ೧೨.೦
ಹರಳೆಣ್ಣೆ	೪೪ ೧೨.೦	
ಹುಚ್ಚೆಳ್ಳು	೩೮-೮-೦	
ಹೊಂಗೆಬೀಜ	೨೯-೧೪-೦	
ಹುರುಳಿ	೪೯-೮-೦	
ಹೆಸರು	೩೫-೦-೦	೩೦-೦ ೦
ಅವರೆ	೩೨-೦-೦	
ಹಲಸಂದೆ	೩೫ ೮ ೦	೩೯-೦-೦
ಉದ್ದು	೩೫-೧೪-೦	೩೯-೦ ೦
ಮೆಣಸಿನಕಾಯಿ	೨೯-೦-೦	೩೦-೦ ೦
ಜೀರಿಗೆ	೩-೧೨-೦	೪-೪-೦
ಶೀಗೆಕಾಯಿ	೩-೦-೦	
ಕೊಬ್ಬರಿ	೧೩೯-೦ ೦	೨೯೩-೦-೦

ಸ್ಪರ್ಧೆಯಲ್ಲಿ ಗೆದ್ದವರಿಗೆ ಹಣ ಕೊಡದಿದ್ದುದಕ್ಕೆ ಮೊಕದ್ದಮೆ

ರಾಜಧಾನಿಯ ಹೆರಾಲ್ಡ್ ಎಂಬ ಪತ್ರಿಕೆಯಲ್ಲಿ ನಡೆಸುತ್ತಿದ್ದ ಮಹಮದ್ ಗಾರ್ಮೆಂಟ್ ಎಂಬ ಸ್ಪರ್ಧೆಯಲ್ಲಿ ಜನರಿಗೆ ಮೋಸ ಮಾಡಿದರೆಂಬ ಆಪಾದನೆ ಮೇಲೆ ಗುಲಾಂ ಮುಸ್ತಫಾ, ಅಂಜು ಮಶ್ರೂ ಅಹಮದ್ ಇವರುಗಳ ಮೇಲೆ ಕ್ರೈಂ ಬ್ರಾಂಚ್ ಪೋಲೀಸಿನವರು ಮೊಕದ್ದಮೆ ಹೂಡಿರುತ್ತಾರೆ

ರಾಜಕಮಲ್, ಮೈಸೂರು

4-7-53 ರಿಂದ ಅಮೋಘ 5ನೇ ವಾರ
ಪ್ರತಿದಿನ 3 ಆಟಗಳು

ಮಹಾತ್ಮಾ ರವರ ಸಾಮಾಜಿಕ ಕನ್ನಡ ಚಿತ್ರ

ಸೌಭಾಗ್ಯ ಲಕ್ಷ್ಮಿ

ಮೈಸೂರು ಒಂದನೇ ಮುನ್ಸೀಫರ ಕೋರ್ಟಿನಲ್ಲಿ

O S ನಂ 115/45-46
Ex. ನಂ 600/52-53

ವಾದಿ:- ಎಂ. ವಿ. ನರಸಿಂಹಯ್ಯ,
V.
ಪ್ರತಿವಾದಿ:- ಎ. ಜಿ. ಪ್ರಹ್ಲಾದರಾವ್

ಮೇಲ್ಕಂಡ ಕೇಸಿನಲ್ಲಿ ಪ್ರತಿವಾದಿಯ ಬಾಬ್ತು, ಮೈಸೂರು ಸಿಟಿ, ಚಾಮುಂಡಿ ಮೊಹಲ್ಲಾ, ಲಕ್ಷ್ಮೀಪುರದಲ್ಲಿರುವ 890/4 ನೇ ನಂಬರು ಮನೆಯು 7-7-53 ನೇ ತಾರೀಖಿನ ದಿನ ಕೋರ್ಟು ರೂಬುರೂಬು ಹರಾಜು ಮಾಡಲ್ಪಡುತ್ತದೆ

ಎಂ. ವಿ. ನರಸಿಂಹಯ್ಯ,
ಡಿಕ್ರಿ ಹೋಲ್ಡರ್,
ಶ್ರೀ ಸತ್ಯನಾರಾಯಣ ಫಾರ್ಮಸಿ ಪರ್ಸ್ಪೆ...
ಚಾಮುಂಡೇಶ್ವರಿ ರಸ್ತೆ, ಮೈಸೂರು

SRI GAYATHRI
TALKIES
LAST DAY
THE QUIET MAN
From 6 7 53 · For 2 Days
THE FABULOUS SENORITA

PALMISTRY
(ಭವಿಷ್ಯ-ಹಸ್ತ ಸಾಮುದ್ರಿಕ)



H S ವೆಂಕಟರಾವ್ B. A, B L
"ಶ್ರೀ ನಿವಾಸ ಮಂದಿರ", 1329. ಕೃಷ್ಣಮೂರ್ತಿಪುರಂ, ಮೈಸೂರು

ಪ್ರಭುದೇವಾ ಥಿಯೇಟರ್
(ಪ ದ್ಮಾ ಟಾ ಕೀ ಸ್)
5-7-53 ನೇ : ಭಾನುವಾರದಿಂದ :: ದಿನಕ್ಕೆ 3 ಆಟಗಳು

• ರಾಜಾಂಬಾಳ್ •
(ತಮಿಳು)
ಪಾತ್ರ :— ಎಸ್. ಬಾಲಚಂದ್ರ, ಸುಶೀಲಾ, ಸಿ. ಕೆ. ಸರಸ್ವತಿ ಮುಂತಾದವರು

ESTD 1917
THE CHAMPION METROPOLITAN COLLEGE OF COMMERCE,
Co operators Home 100 Feet Road, MYSORE

Principal	*Vice Principal*
P Subbaraya Sastry,	M S Puttanna,
M A M A (Com) C E T D (Lon)	*B.Sc., N D. Com (GOI)*
P C T Lon)	*F I.B. (Lon)*

NOTIFICATION
ADMISSIONS to the several certificate and diploma courses in
Commerce, Typewriting Shorthand Accountancy, Banking Etc
are now being received in the Mornings & Evenings on all working days

Edited Printed and Published by A R Nagarajan at Sadhvi Press, D Subbiah Road, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೬-೭-೧೯೫೩ [ಸಂಚಿಕೆ ೨೭೬

ಬಿಹಾರ್ ಕಾರ್ಮಿಕರ ಮೇಲೆ ೩ ಬಾರಿ ಗುಂಡು

ಚೀಣಾ ಸಂಸ್ಕೃತಿ ನಿಯೋಗದಲ್ಲಿ ದೇವೇಂದ್ರಪ್ಪನವರು

ಹಿತ ಮಿತ್ರರಿಂದ ಸತ್ಕಾರ ಸಮಾರಂಭ

ಮೈಸೂರು ೬

ಚೀಣಕ್ಕೆ ಸದ್ಯದಲ್ಲೇ ತೆರಳಲಿರುವ ಭಾರತದ ಸಾಂಸ್ಕೃತಿಕ ನಿಯೋಗದ ಸದಸ್ಯರಾದ ಗಾನ ವಿಶಾರದ ಬಿ. ದೇವೇಂದ್ರಪ್ಪನವರ ಗೌರವಾರ್ಥವಾಗಿ ನೆನ್ನೆ ಸಂಜೆ ಬೊಂಬಾಯಿ ಇಂದ್ರಭವನದಲ್ಲಿ ಶ್ರೀಗಳಾದ ಎಸ್. ನಾರಾಯಣಸ್ವಾಮಿ, ಎಂ. ಕೆ. ಲಿಂಗಯ್ಯ ಮತ್ತು ಎಲ್. ನಾರಾಯಣರಾಜುರವರು ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಮಾಜಿ ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಅಗ್ರಾಸನವನ್ನು ವಹಿಸಿದ್ದರು. ಉಪಾಹಾರ ಮತ್ತು ಸ್ವಾಗತ ಭಾಷಣಗಳಾದ ನಂತರ ಪ್ರೊಫೆಸರ್ ಎಲ್. ಶ್ರೀಕಂಠಯ್ಯನವರು ಮಾತನಾಡಿ, ಭಾರತ ಮತ್ತು ನವ ಚೀಣಗಳ ಮಧ್ಯೆ ಸೌಹಾರ್ದವೇರ್ಪಡಲು ಕಲಾವಿದರ ನಿಯೋಗ ಹೋಗುವುದರ ಬಗ್ಗೆಯೂ, ಆ ನಿಯೋಗದಲ್ಲಿ ಮೈಸೂರಿನ ಸುಪ್ರಸಿದ್ಧ ಗಾಯಕರೊಬ್ಬರು ಸೇರಿರುವುದಕ್ಕಾಗಿಯೂ ಸಂತೋಷವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಮಾತನಾಡಿ, ನಿಯೋಗದಲ್ಲಿ ಶ್ರೀ ದೇವೇಂದ್ರಪ್ಪನವರನ್ನು ಸೇರಿಸಿರುವುದು ಮೈಸೂರಿಗೆ ಹೆಮ್ಮೆಯ ಮಾತೆಂದು ಅಭಿಪ್ರಾಯಪಟ್ಟರು. ಶ್ರೀ ದೇವೇಂದ್ರಪ್ಪನವರು ಸೂಕ್ತ ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿದರು

ಬಿರುಗಾಳಿಯಿಂದ ೮ ಮರಣ

ಫಾರ್ಮೋಸಾ ದ್ವೀಪದಲ್ಲಿ ಕಳೆದ ಶುಕ್ರವಾರ ಬೀಸಿದ ಬಿರುಗಾಳಿಯ ಪರಿಣಾಮವಾಗಿ, ೮ ಜನರು ಸತ್ತು ೧೦೦ ಮಂದಿಗೆ ಗಾಯವಾಗಿರುವುದಾಗಿಯೂ, ೫ ಲಕ್ಷ ಸ್ಟರ್ಲಿಂಗ್‌ನಷ್ಟು ಆಸ್ತಿ ನಷ್ಟವಾಗಿರುವುದೆಂದೂ ಗೊತ್ತಾಗಿದೆ

ಚಿತ್ರದುರ್ಗದಲ್ಲಿ ಪುನಃ ಅಭಾವ ಪರಿಸ್ಥಿತಿ

ಚಿತ್ರದುರ್ಗ ಜಿಲ್ಲೆಯಲ್ಲಿ ಆಹಾರಾಭಾವ ಸ್ಥಿತಿಯು ತೀವ್ರವಾಗಿ, ಜನರಿಗೆ ಅನ್ನ ಇಲ್ಲವಾಗಿರುವುದೆಂದೂ, ಅನೇಕ ಹಳ್ಳಿಗಳಲ್ಲಿ ಕಾಡುಗೆಡ್ಡೆ ಮತ್ತು ಬೇರುಗಳು ಜನರಿಗೆ ಆಹಾರವಾಗಿರುವುವೆಂದೂ, ಜಿಲ್ಲೆಯಲ್ಲಿ ಮೂರು ದಿನಗಳವರೆಗೆ ಪ್ರವಾಸ ಮಾಡಿದ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ. ಸಂಸ್ಥಾನಕ್ಕೆ ಬರಲಿರುವ ೬೦ ಸಾವಿರ ಚೀಲ ರಾಗಿಯಲ್ಲಿ ಅರ್ಧದಷ್ಟನ್ನು ಜಿಲ್ಲೆಗೆ ಒದಗಿಸಿ, ಪರಿಹಾರ ಕ್ರಮ ಕೈಗೊಳ್ಳಬೇಕೆಂದೂ, ಗಂಜಿ ಕೇಂದ್ರಗಳನ್ನು ಏರ್ಪಡಿಸಬೇಕೆಂದೂ ಅವರು ತಿಳಿಸಿರುವರು

ಕಲ್ಕತ್ತದಲ್ಲಿ ಮತ್ತೆ ೨೦೦ ಜನರ ದಸ್ತಗಿರಿ

ಕಲ್ಕತ್ತಾ ಟ್ರಾಂ ದರಗಳ ಸಂಬಂಧವಾದ ಚಳುವಳಿಗಾಗಿ ನೆನ್ನೆ ಪುನಃ ೨೦೦ ಜನರನ್ನು ದಸ್ತಗಿರಿ ಮಾಡಲಾಗಿದೆ. ಪೋಲೀಸರ ಮೇಲೆ ಅನೇಕ ಕಡೆ ಪಟಾಕಿಗಳನ್ನು ಎಸೆದರೆಂದೂ ವರದಿಯಾಗಿದೆ. ಹಲವು ಕಡೆಗಳಲ್ಲಿ ಟ್ರಾಂಗಳು ಓಡಾಡುತ್ತಿವೆ

ಅಂತರಸಂತೆ ಬಳಿ ಬಸ್ ಮಗುಚಿಕೊಂಡಿತು

ಒಬ್ಬನ ಕಾಲಿಗೆ ಜಖಂ; ಮತ್ತೊಬ್ಬನಿಗೆ ಗಾಯ

ಮೈಸೂರು ೬

ಹೆಗ್ಗಡದೇವನಕೋಟೆ ತಾಲ್ಲೂಕಿನ ಅಂತರಸಂತೆ ಬಳಿ ವಿಕ್ಟರಿ ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನ ಒಂದು ಬಸ್ಸು ಕಳೆದ ಶುಕ್ರವಾರ ಮಗುಚಿಕೊಂಡು ಕ್ಲೀನರ್ ಶ್ರೀ ಪ್ರಭಾಕರ್ ಮತ್ತು ಅಂತರಸಂತೆಯ ಬಸ್ ಏಜೆಂಟ್ ಶ್ರೀ ನಾಗಪ್ಪ ಎಂಬುವರಿಗೆ ಗಾಯಗಳಾಗಿ ಅವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ. ಶ್ರೀ ನಾಗಪ್ಪನವರ ಬಲಗಾಲಿನ ಮಂಡಿಯ ಕೆಳಭಾಗಕ್ಕೆ ಬಲವಾದ ಪೆಟ್ಟು ಬಿದ್ದು ಮುರಿದಿದೆ. ಎಡಗಾಲಿಗೆ ನೋವಾಗಿದೆ. ಕ್ಲೀನರ್ ಪ್ರಭಾಕರರಿಗೆ ಬೆನ್ನಿನ ಮೇಲೆ ಗಾಯವಾಗಿದೆ. ದೇವರಾಜಾ ಪೋಲೀಸ್ ಠಾಣೆಯ ಜಮೇದಾರ್ ಶ್ರೀ ಕೆ. ಅಹಮದ್ ಖಾನ್‌ರವರು ಅವರುಗಳ ಹೇಳಿಕೆಗಳನ್ನು ರೆಕಾರ್ಡ್ ಮಾಡಿ, ಸಂಬಂಧಪಟ್ಟವರಿಗೆ ವರದಿಯನ್ನು ಕೊಟ್ಟಿರುತ್ತಾರೆ

ಕಲ್ಕತ್ತಾ ಟ್ರಾಂ ಗಲಭೆಯಲ್ಲಿ ಹೆಂಗಸಿನ ಮರಣ

ಕಲ್ಕತ್ತದಲ್ಲಿ ಟ್ರಾಂ ದರಗಳನ್ನು ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆ ನಡೆಸುತ್ತಿರುವವರ ಮೇಲೆ, ಮೊನ್ನೆ ಪೋಲೀಸರ ಗುಂಡು ಹಾರಿಸಿದ ಸಂಬಂಧವಾಗಿ [illegible] ನಗರಿನಲ್ಲಿ ಒಬ್ಬ ಹೆಂಗಸು ಕೊಲೆಯಲ್ಪಟ್ಟು ಮಡಿದಿರುತ್ತಾಳೆ. ೨೦ ಜನರಿಗೆ ಗಾಯವಾಗಿದೆ. ಚಳುವಳಿಯು ಆರ್ಥಿಕ ವಿಷಯಕ್ಕಿಂತಲೂ, ರಾಜಕೀಯಕ್ಕೆ ಹೆಚ್ಚು ಸಂಬಂಧಿಸಿರುವುದಾಗಿ ಅಲ್ಲಿನ ಮುಖ್ಯ ಮಂತ್ರಿ ಡಾ|| ಬಿ. ಸಿ. ರಾಯ್‌ರವರು ತಿಳಿಸಿರುತ್ತಾರೆ

ಪತ್ರಿಕೋದ್ಯಮದ ದಮನಕ್ಕಾಗಿ ಪ್ರತಿಭಟನೆ

ಬೆಂಗಳೂರಿನಲ್ಲಿ ಬಹಿರಂಗ ಸಭೆಯೊಂದು ನಡೆದು, ಪತ್ರಿಕಾ ಸ್ವಾತಂತ್ರ್ಯವನ್ನು ದಮನ ಮಾಡುವ ಬಗ್ಗೆ ಸರ್ಕಾರದ ಕ್ರಮವನ್ನು ಕುರಿತು ಪ್ರತಿಭಟನೆ ಸೂಚಿಸಲಾಯಿತು. ಅದೇ ರೀತಿಯನ್ನು ಮುಂದುವರಿಸಿದರೆ, ಸಂಸ್ಥಾನಾದ್ಯಂತ ಚಳುವಳಿಯನ್ನು ಹೂಡುವುದಾಗಿಯೂ ತಿಳಿಸಲಾಯಿತು

ಶ್ಯಾಮಪ್ರಸಾದ ಮುಖರ್ಜಿ ನಿಧನಕ್ಕಾಗಿ ಸಂತಾಪ

ಜಿಲ್ಲಾ ಬೋರ್ಡ್ ಸಭೆಯಲ್ಲಿ ನಿರ್ಣಯ

ಮೈಸೂರು ೬

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಈ ದಿನ ಮಧ್ಯಾಹ್ನ ಶ್ರೀ ಎಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ಭಾರತೀಯ ಜನಸಂಘದ ಅಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ನಿಧನಕ್ಕಾಗಿ ಸಂತಾಪ ಸೂಚನೆಯ ಬಗ್ಗೆ ಶ್ರೀ ಸಿ. ವೆಂಕಟಸುಬ್ಬಯ್ಯನವರು ಒಂದು ನಿರ್ಣಯವನ್ನು ಮಂಡಿಸಿದರು. ಶ್ರೀಗಳಾದ ರಾಜಗೋಪಾಲ ಮುದಲಿಯಾರ್, ಟಿ. ಸಿ. ಹೊನ್ನಪ್ಪ ಮತ್ತು ಅಧ್ಯಕ್ಷ, ಶ್ರೀ ಚನ್ನಬಸಪ್ಪನವರು ಅನುಮೋದಿಸಿದರು. ಸದಸ್ಯರೆಲ್ಲರೂ ಎರಡು ನಿಮಿಷ ಮೌನದಿಂದ ಎದ್ದು ನಿಂತು ಗೌರವವನ್ನು ಸಲ್ಲಿಸಿದ ನಂತರ ನಿರ್ಣಯವು ಅಂಗೀಕಾರವಾಯಿತು

ತರುವಾಯ ಅಧ್ಯಕ್ಷರು ಜಿಲ್ಲಾ ಬೋರ್ಡಿನ ಹಣಕಾಸಿನ ಪರಿಸ್ಥಿತಿಯ ಬಗ್ಗೆ ವಿವರಣೆಯನ್ನಿತ್ತು ಸರ್ಕಾರದಿಂದ ಸಭೆಗೆ ವಿವಿಧ ಬಾಬುಗಳಿಗಾಗಿ ಒಟ್ಟು ೪,೩೮,೦೦೦ ರೂಗಳು ಬರಬೇಕಾಗಿರುವುದೆಂದೂ, ಅದು ಬಾರದಿರುವುದರಿಂದ ರಸ್ತೆ, ಕಟ್ಟಡಗಳ ರಿಪೇರಿ ಮತ್ತು ಇನ್ನಿತರ ಕೆಲಸಗಳು ನಡೆಯದೆ ನಿಂತುಹೋಗಿರುವುವೆಂದೂ ತಿಳಿಸಿದರು

ಇಂದಿನ ಸಭೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿ, ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ವಿಶೇಷ ಆಹ್ವಾನದ ಮೇಲೆ ಬಂದಿದ್ದರು

ಕನ್ನಂಬಾಡಿ ನೀರಿನ ಮಟ್ಟ ೧೧೫ ಅಡಿಗಳು

ಮೈಸೂರು ೬

ಕೃಷ್ಣರಾಜ ಸಾಗರದ ನೀರಿನ ಮಟ್ಟವು ಈ ದಿನ ೧೧೫ ಅಡಿಗಳಿಗೆ ಏರಿದೆ. ನಾಳೆಯ ವೇಳೆಗೆ ೧೨೦ ಅಡಿಗಳನ್ನು ಮುಟ್ಟಬಹುದೆಂದು ನಿರೀಕ್ಷಿಸಲಾಗಿದೆ. ರಾಜಧಾನಿಯಲ್ಲಿ ನೆನ್ನೆ ಬೆಳಿಗ್ಗೆಯಿಂದ ಆರಂಭವಾದ ಸೋನೆ ಮಳೆಯು ಈ ದಿವಸವೂ ಬಿಟ್ಟಿಲ್ಲ.

ಬಿಹಾರಿನ ಕಬ್ಬಿಣ ಕಾರ್ಮಿಕರ ಮೇಲೆ ೩ ಸಲ ಗುಂಡು

೬ ಮಂದಿ ಮರಣ; ೧೧ ಜನರಿಗೆ ಗಾಯ

ಬಿಹಾರಿನ ಜರಗಾಂವಿನ ಸಬ್ ಡಿವಿಷನ್ ಅಧಿಕಾರಿಗಳ ಕಛೇರಿ ಮುಂದೆ ನೆನ್ನೆ ಸೇರಿದ್ದ ೩ ಸಾವಿರ ಕಬ್ಬಿಣ ಮತ್ತು ಉಕ್ಕಿನ ಕಂಪೆನಿ ಕಾರ್ಮಿಕರ ಮೇಲೆ ಪೋಲೀಸರು ೩ ಬಾರಿ ಗುಂಡು ಹಾರಿಸಿದರೆಂದು ವರದಿಯಾಗಿದೆ. ಮುಷ್ಕರ ಹೂಡಿದ ಕಾರ್ಮಿಕರ ಆರು ಜನ ಮುಖಂಡರನ್ನು ನೆನ್ನೆ ಬೆಳಿಗ್ಗೆ ಬಂಧಿಸಿದುದಕ್ಕಾಗಿ ಕಾರ್ಮಿಕರು ಗುಂಪು ಕೂಡಿ, ಅವರುಗಳನ್ನು ಬಿಡುಗಡೆ ಪ್ರದರ್ಶನ ನಡೆಸಿದರೆಂದೂ, ಅಲ್ಲಿ ಕೂಡಲೇ ಪ್ರತಿಬಂಧಕಾಜ್ಞೆಯನ್ನು ವಿಧಿಸಿ, ಜನರು ಚದುರಬೇಕೆಂದು ಧ್ವನಿವರ್ಧಕಗಳ ಮೂಲಕ ತಿಳಿಸಲಾಯಿತೆಂದೂ ವರದಿಯಾಗಿದೆ. ಗುಂಪನ್ನು ಚದುರಿಸಲು ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗಗಳಾದುವು. ಜನರು ಕಲ್ಲುಗಳನ್ನು ತೂರಿದರು. ಬೆದರಿಕೆ ಹಾಕಲು ಪೋಲೀಸರು ಒಂದು ಬಾರಿ ಗುಂಡನ್ನು ಹಾರಿಸಿದರು. ಕಲ್ಲಿನೇಟು ಜೋರಾಗಿ, ಸಬ್ ಡಿವಿಷನ್ ಅಧಿಕಾರಿಗಳು ಏಟು ತಿಂದು ಕೆಳಗೆ ಬಿದ್ದರು. ಪುನಃ ೬ ರೌಂಡು ಗುಂಡು ಹಾರಿಸಲಾಗಿ ಗುಂಪು ಚದುರಿತು. ನಂತರ ಗಲಭೆಗೆ ಕಾರಣರಾದ ಹಲವರನ್ನು ದಸ್ತಗಿರಿ ಮಾಡಲು, ಪುನಃ ಗಲಭೆಯಾಗಿ ಜಿಲ್ಲಾ ಪೋಲೀಸ್ ಅಧಿಕಾರಿ, ೨೦ ಜನ ಅಧಿಕಾರಿಗಳು ಮತ್ತು ಪೋಲೀಸರಿಗೂ ಪೆಟ್ಟು ಬಿದ್ದಿತು. ಆಗ ಪೋಲೀಸರು ೩ ನೇ ಸಲ ೧೪ ರೌಂಡು ಗುಂಡು ಹಾರಿಸಲು, ೬ ಜನರು ಮಡಿದು ೧೧ ಮಂದಿಗೆ ಗಾಯವಾಯಿತು. ನಂತರ ಗುಂಪು ಚದುರಿತೆಂದು ಹೇಳಲಾಗಿದೆ

೧೫ ಜನ ಶ್ಯಾನುಭೋಗರ ರಾಜೀನಾಮೆ

ಭದ್ರಾವತಿ ತಾಲ್ಲೂಕಿನಲ್ಲಿ ಭೂಕಂದಾಯವನ್ನು ಪೂರ್ತಿಯಾಗಿ ವಸೂಲು ಮಾಡದಿರುವ ಪಟೇಲ ಶ್ಯಾನುಭೋಗರುಗಳ ಇರಸಾಲು ಹಣವನ್ನು ಖಜಾನೆಗೆ ಕಟ್ಟಿಸಿಕೊಳ್ಳದೆ ಅಲ್ಲಿನ ತಾಲ್ಲೂಕು ಅಮಲ್ದಾರರು ನಿರಾಕರಿಸಿರುವರೆಂದೂ, ವಿಷಮಶೀತ ಮಳೆ ಬಂದು, ಗಡಿ ಪ್ರದೇಶಗಳಿಂದ ಅಲ್ಲಿಗೆ ಬಂದಿರುವ ಗ್ರಾಮಾಧಿಕಾರಿಗಳಿಗೆ ಆಶ್ರಯವಿಲ್ಲದೆ ತೊಂದರೆಯಾಗಿರುವುದೆಂದೂ, ೧೫ ಜನ ಶ್ಯಾನುಭೋಗರು ಅಮಲ್ದಾರರ ವರ್ತನೆ ಬಗ್ಗೆ ಪ್ರತಿಭಟಿಸಿ ರಾಜೀನಾಮೆ ಸಲ್ಲಿಸಿರುವರೆಂದೂ ವರದಿಯಾಗಿದೆ

ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯಲ್ಲಿ ಮುಷ್ಕರ ?

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಷ್ಕರ ಹೂಡುವುದಾಗಿ ಆಡಳಿತದವರಿಗೆ ತಿಳಿಸಲು ೧೫ ದಿನಗಳ ಅವಧಿಯ ನೋಟೀಸನ್ನು ಕೊಡಬೇಕೆಂದು ನಿರ್ಧರಿಸಿರುವರೆಂದು ವರದಿಯಾಗಿದೆ. ತುಟ್ಟಿಭತ್ಯವನ್ನು ಹೆಚ್ಚಿಸುವುದು, ಆಹಾರ ವಸ್ತುಗಳ ಮಾರಾಟ, ಸಂಬಳದ ದರ ಪುನರ್ವಿಮರ್ಶೆ ಮುಂತಾದ ಬೇಡಿಕೆಗಳನ್ನು ಸಲ್ಲಿಸಲಾಗಿದೆ.

ಕೊರಿಯಾ ಯುದ್ಧ ಖೈದಿಗಳ ವರ್ಗಾವಣೆ

ಬಿಡುಗಡೆಯಾದವರನ್ನು ಬಿಟ್ಟು ಉಳಿದಿರುವ ಉತ್ತರ ಕೊರಿಯಾ ಯುದ್ಧ ಖೈದಿಗಳನ್ನು ವಿಶ್ವ ಸಂಸ್ಥೆಯ ಸೇನಾಧಿಕಾರಿಯು ಅವರನ್ನು ಇಡಲಾಗಿದ್ದ ದ್ವೀಪಗಳಿಂದ ದಕ್ಷಿಣ ಕೊರಿಯದ ಮುಖ್ಯ ನಾಡಿಗೆ ವರ್ಗಾಯಿಸಿ ಅವರನ್ನು ಎಂದು ಶಿಬಿರಗಳಲ್ಲಿ ಅಮೇರಿಕಾ ಸೈನಿಕರ ಉಸ್ತುವಾರಿಯಲ್ಲಿಟ್ಟಿರುತ್ತದೆ ಎಷ್ಟೋ ಸ್ಟ್ರಯವರ ವಶದಲ್ಲಿ ಇನ್ನೂ ... ಸಾವಿರ ಖೈದಿಗಳಿರುವರು

ಕನ್ನಡ ಭಾರತ ವಾಚನ

ದಿವಾನ್ ಪೂರ್ಣಯ್ಯನವರ ಛತ್ರದ ಬೀದಿಯಲ್ಲಿರುವ ಅಭಿನವ ಶಂಕರ ದೇವಾಲಯದಲ್ಲಿ (ಶಂಕರ ಮಠ) ಶ್ರೀಗಳ ಸನ್ನಿಧಿಯಲ್ಲಿ ೯-೭ ಜೂನ್ ಗುರುವಾರದಿಂದ ಆರಂಭಿಸಿ ಪ್ರತಿ ದಿನ ಸಂಜೆ ೭ ಘಂಟೆಗೆ ಮೈಸೂರಿನ ಗಮಕ ಸೋದರರಾದ ಬಿ ಎಸ್. ಎಸ್ ಕೌಶಿಕ್ ಮತ್ತು ಶ್ರೀ ಕೆ ವೆಂಕಟಸುಬ್ಬಯ್ಯನವರಿಂದ ಭಾರತ ವಾಚನ ಮತ್ತು ವ್ಯಾಖ್ಯಾನವನ್ನೇರ್ಪಡಿಸಿದೆ ಸರ್ವರಿಗೂ ಆಹ್ವಾನವುಂಟು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ತಿಮ್ಮಂಗುಡಿ ಶ್ರೀನಿವಾಸ ಅಯ್ಯಂಗಾರ್ ರಿಕಾರ್ಡು ಮಧ್ಯಾಹ್ನ ೧-೩೦ ಕೊಳಲು ಿ ವನಿತಾ ವಿಹಾರ - ನಮ್ಮ ಸೋದರಿಯರು, ಕನ್ನಡದಲ್ಲಿ ಭಾಷಣ ರಾಜಸ್ಥಾನದ ಹಳ್ಳಿ ಹಾಡುಗಳು, ವಾಗಶಾಸ್ತ್ರದ ಬಗ್ಗೆ ತಿಳುವಳಿಕೆ ಸಂಜೆ ೫-೩೦ ಮತ್ತು ೭-೫ ಆರ್ ಕೆ ಶ್ರೀನಿವಾಸಮೂರ್ತಿ ವೀಣೆ ೭ ಗಾನ ವಿಹಾರ, ೭-೧೫ ಬಾಲಜಗತ್ ವಿವಿಧ ಕಾರ್ಯಕ್ರಮ ೮ ಮತ್ತು ೯ ೩೦ ಹೆಚ್ ಟಿ. ರಾಮಸ್ವಾಮಿ, ಸಂಗೀತ ೮-೩೦ ವಿ ಎ ಕಾಗಲ್‌ಕರ್ ರಿಕಾರ್ಡು ೯-೧೫ ಬಿ ಬಸವಣ್ಣನವರೊಡನೆ ರೇಡಿಯೋ ಭೇಟಿ

ಮೈಸೂರು ಒಂದನೇ ಮುನ್ಸೀಫರ ಕೋರ್ಟಿನಲ್ಲಿ

O S ನಂ 115/45-46
Ex. ನಂ 600/52-53

ವಾದಿ. ಎಂ. ವಿ ನರಸಿಂಹಯ್ಯ
Vs
ಪ್ರತಿವಾದಿ:- ಎ. ಜಿ. ಪ್ರಹ್ಲಾದರಾವ್

ಮೇಲ್ಕಂಡ ಕೇಸಿನಲ್ಲಿ ಪ್ರತಿವಾದಿಯ ಬಾಬ್ತು, ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರದಲ್ಲಿರುವ 890/4 ನೇ ನಂಬರು ಮನೆಯು 7-7-53 ನೇ ತಾರೀಖಿನ ದಿನ ಕೋರ್ಟು ರೂಬುರೂಬು ಹರಾಜು ಮಾಡಲ್ಪಡುತ್ತದೆ

ಎಂ. ವಿ. ನರಸಿಂಹಯ್ಯ,
ಡಿಕ್ರಿ ಹೋಲ್ಡರ್,
ಶ್ರೀ ಕೃಷ್ಣನಾರಾಯಣ ಫರ್ನಿಚರ್ ವರ್ಕ್ಸ್,
ಚಾಮುಂಡೇಶ್ವರಿ ರಸ್ತೆ, ಮೈಸೂರು

ಕಂದ

ಮೈಸೂರು ಜಯನಗರದ ಕಿರು ಸಾಹಿತ್ಯ ಸಂಘದವರು ಮೇಲ್ಕಂಡ ಶಿರೋನಾಮೆಯಲ್ಲಿ ಪ್ರಕಟಿಸಿರುವ ಗಾಯತ್ರಿ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಸಂಚಿಕೆಗೆ ಶ್ರೀಮನ್ ಮಹಾರಾಜರು ಸಂದೇಶವನ್ನು ಕೊಟ್ಟಿರುವರು ಅವರ ಮತ್ತು ರಾಜಕುಮಾರಿ ಗಾಯತ್ರೀ ದೇವಿಯವರ ಚಿತ್ರಗಳು ಸಂಚಿಕೆಯಲ್ಲಿ ಕೊಡಲ್ಪಟ್ಟಿವೆ ರಾಜಕುಮಾರಿಯವರ ಹೆಸರಿನಲ್ಲಿ ಪ್ರಕಟವಾಗಿರುವ ಈ ಸಂಚಿಕೆಯಿಂದ ಕರ್ನಾಟಕದ ಎಲ್ಲ ಮಕ್ಕಳಿಗೂ ಆನಂದವಾಗಲೆಂದು ಶ್ರೀಮನ್ ಮಹಾರಾಜರು ಹಾರೈಸಿರುತ್ತಾರೆ ವಿದ್ಯಾ ಮಂತ್ರಿ ಶ್ರೀ ಎ. ಜಿ ರಾಮಚಂದ್ರರಾವ್, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ, ಶ್ರೀ ವೀರಣ್ಣಗೌಡ, ಮಾಜಿ ಸಚಿವ ಶ್ರೀ ಹೆಚ್ ಸಿ ದಾಸಪ್ಪ ಹಿರಿಯ ಶಾಸನ ಸಭಾಧ್ಯಕ್ಷ ಶ್ರೀ ಕೆ ಟಿ ಭಾಷ್ಯಂರವರುಗಳ ಸಂದೇಶಗಳನ್ನು ಕಳುಹಿರುವರು ಮಕ್ಕಳಿಗೆ ತಿಳಿಯುವ ಚಿಕ್ಕ ಕಥೆಗಳು, ಸಾಹಿತ್ಯ, ಮುಂತಾದ ನಾನಾ ಉಪಯುಕ್ತ ವಿಷಯಗಳು ಪ್ರಕಟವಾಗಿವೆ ಗಾಯತ್ರಿ ದೇವಿಯವರ ಬಗ್ಗೆ ಆ॥ ಮ॥ ವಿ॥ ಶ್ರೀಕಂಠಶಾಸ್ತ್ರಿಯವರ ಕವನವೂ, ಅವರ ಜೀವನದ ಪರಿಚಯವೂ ಸಹ ಕೊಡಲ್ಪಟ್ಟಿವೆ

ಹರಾಜು

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟು, ಇನ್‌ಸಾಲ್ವೆನ್ಸಿ ನಂ 1/53

ನಸುಪಾಲ್
Vs
ರಾಮಚಂದ್ರ, ಗಿರಿಧರಲಾಲ್ ಮತ್ತು ಇತರರು

ಈ ಕೇಸಿನಲ್ಲಿ ತಾ॥ 26 6-53ನೇ ಮರ್ಕಂ ಆರ್ಡರು ಪ್ರಕಾರ, ಮೈಸೂರು ಡಿಸ್ಟ್ರಿಕ್ಟ್ ಅಫಿಷಿಯಲ್ ರಿಸೀವರಾದ, ಎಸ್ ಎಲ್ ಲಕ್ಷ್ಮೀಗೌಡ, ಬಿ ಎ. ಎಲ್‌ಎಲ್ ಬಿ ರವರು ಮೈಸೂರು ಅಶೋಕಾ ರಸ್ತೆಯಲ್ಲಿರುವ ಎಂ ವಿ. ವಸುಪಾಲ್, ಹಾರ್ಡ್‌ವೇರ್ ಅಂಗಡಿಯಲ್ಲಿರುವ ಕಬ್ಬಿಣದ ಸಾಮಾನು, ಬಣ್ಣ, ವಾರ್ನಿಷ್ ಮತ್ತು ಫರ್ನಿಚರ್ ವಗೈರೆಗಳನ್ನು ತಾ॥ 12 7-53ನೇ ಭಾನುವಾರ ಬೆಳಿಗ್ಗೆ 9 ಘಂಟೆಯಿಂದ ಮೇಲ್ಕಂಡ ಅಂಗಡಿಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಬಿಡ್ ಮೊಬಲಗನ್ನು ಪೂರ್ತಿ ಪಾವತಿ ಮಾಡಿ, ಸಾಮಾನುಗಳನ್ನು ಕೊಂಡುಕೊಳ್ಳಬಹುದು

ಎಸ್ ಎಲ್ ಲಕ್ಷ್ಮೀಗೌಡ,
ಬಿ.ಎ., ಎಲ್‌ಎಲ್., ಬಿ.,
ಅಡ್ವೊಕೇಟ್ ಮತ್ತು ಅಫಿಷಿಯಲ್ ರಿಸೀವರ್, ಮೈಸೂರು

Edited, Printed and Published by A.R Nagarajan at Sadhvi Press, D Subbiah Road Mysore

ತುಂಗಭದ್ರಾ ಯೋಜನೆ ಮಾತುಕತೆ

ತುಂಗಭದ್ರಾ ಯೋಜನೆಯ ಸಂಬಂಧವಾಗಿ ಇದೇ ತಿಂಗಳು ೧೩ನೇ ತಾ॥ ಬೆಂಗಳೂರಿನಲ್ಲಿ ಮೈಸೂರು, ಮದ್ರಾಸು ಮತ್ತು ಹೈದರಾಬಾದು ಸರ್ಕಾರಗಳ ಪ್ರತಿನಿಧಿಗಳ ಸಭೆ ನಡೆಯುವುದೆಂದು ಗೊತ್ತಾಗಿದೆ ಕಳೆದ ತಿಂಗಳು ಈ ಪ್ರತಿನಿಧಿಗಳು ದೆಹಲಿಯಲ್ಲಿ ಸೇರಿದ್ದರು

ವಿವಾಹ ಮಹೋತ್ಸವಗಳು

ರಾಜಧಾನಿಯ ಶ್ರೀ ರಾಜರಾಜೇಶ್ವರಿ ಹಾಲ್ ಬಟ್ಟೆ ಅಂಗಡಿಯ ಮಾಲೀಕರೂ ಮತ್ತು ಪೌರಸಭಾ ಸದಸ್ಯರೂ ಆದ ಶ್ರೀ ಯು ಎಲ್ ರಾಮಚಂದ್ರರಾಯರು ತಮ್ಮ ಕುಮಾರಿ ಶ್ರೀಮತಿ ಇಂದಿರಾ ರಾಣಿಯವರನ್ನು ಪಾಂಡವಪುರದ ಬಟ್ಟೆ ವರ್ತಕರೂ ಮತ್ತು ಪೌರಸಭಾ ಸದಸ್ಯರೂ ಆದ ಶ್ರೀ ಕುಂಟಿ ಯೋಗನರಸಿಂಹರಾಯರ ಸಹೋದರ, ಶ್ರೀ ಕೆ. ಬಿ. ರಾಮಮೂರ್ತಿಯವರಿಗೂ, ಮತ್ತೊಬ್ಬ ಕುಮಾರಿ ಸೌ॥ ವಿಮಲಾರವರನ್ನು ಬೆಂಗಳೂರಿನ ಶ್ರೀ ಕೆ ಎಸ್ ನಂಜುಂಡರಾಯರ ಮಕ್ಕಳು ಶ್ರೀ ಕೆ ಎನ್ ರಂಗರಾಯರಿಗೂ ಕೊಟ್ಟು ನೆನ್ನೆ ಮೇತ್ರಿ ಶ್ರೀ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ವಿವಾಹ ಮಹೋತ್ಸವಗಳನ್ನು ನೆರವೇರಿಸಿದರು ಸಂಜೆ ಸ್ವಾಗತ ಸಮಾರಂಭವು ಏರ್ಪಾಡಾಗಿದ್ದಿತು ವಿ॥ ದೇವೇಂದ್ರಪ್ಪ ಮುತ್ತಾಟೀಯವರ ಸಂಗೀತವು ನಡೆಯಿತು

ಸಂತೆಪೇಟೆಯ ವರ್ತಕರಾದ ಶ್ರೀ ಪಿ ಮಲ್ಲಣ್ಣನವರು ತಮ್ಮ ಕುಮಾರಿ ಸೌ॥ ಶೈಲಾಂಬಾರವರನ್ನು ಬೆಂಗಳೂರಿನ ಶ್ರೀ ಕೆ ವಿ ಭದ್ರಪ್ಪನವರ ಸಹೋದರ, ಶ್ರೀ ಕೆ ವಿ ಶಿವಪ್ಪನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು ಸಂಜೆ ಸ್ವಾಗತ ಸಮಾರಂಭವು ಜರುಗಿತು.

WANTED

One Stenographer ... passed Senior Type-writing & Shorthand to teach students in SRI INSTITUTE OF COMMERCE, Chamarajanagar Apply with pay expected to the Principal.

ಹರಿಕಥೆ

ರಾಜಧಾನಿಯ ಶ್ರೀರಾಂಪೇಟೆ ಪೆಲಿಸ್ಸ್‌ನ ರಾಣಿ ಬಳಿ ಇರುವ ಶ್ರೀ ರಾಮಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ವಿಖ್ಯಾತ ಪ್ರಯುಕ್ತ ಶ್ರೀ ಹರಿನಾರಾಯಣದಾಸರಿಂದ ಲಂಕಾದಹನ ಎಂಬ ಹರಿಕಥೆಯು ಏರ್ಪಾಡಾಗಿದೆ.

SRI GANESHA
TALKIES
From 7-7 53 · For 2 days
Universal International's
THUNDER ON THE HILL
With Claudette Colbert and Ann Blyth

From 9 7 53
BRIGHT VICTORY

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು?
ಬಹುಕಾಲ ಬಾಳಿಕೆ ಬರುವುವು !!
ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು
ಮೈಸೂರು ಉಕ್ಕಿನ ಸಾಮಾನುಗಳು

★ ಗಾಡಿ ಪಟ್ಟಿ ಅಥವ ಹಲಿಗಳು (Flats)
★ ದುಂಡು ಮತ್ತು ಚದರ ಸಲಾಕಿಗಳು (Rounds & Squares)
★ ಕೋನ ಕಂಬಿಗಳು (Angles)
★ ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು (Reinforcing Rods)
★ ಮತ್ತು ಬೇಲು ಪಟ್ಟಿಗಳು (Hoops)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು
ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

★

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ. ಇಂಡಿಯಾ ಬ್ಯಾಂಕ್ ಎದುರು, ಮೈಸೂರು

ರಿಜಿ. ನಂ. 792 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೭-೭-೧೯೫೧ [ಸಂಚಿಕೆ ೩೭೯

ಕಪಿನೀ ನದಿಯಲ್ಲಿ - ಅಗಾಧ ಪ್ರವಾಹ -

ಕಪಿನೀ ನದಿಯಲ್ಲಿ ಭಾರಿ ಪ್ರವಾಹ

ರಸ್ತೆ ಸಂಚಾರಕ್ಕೆ ಅಡ್ಡಿ

ನಂಜನಗೂಡು ೭

ಕಪಿನಿ ನದಿಯಲ್ಲಿ ವಿಪರೀತ ಪ್ರವಾಹವು ಬಂದು ನೆನ್ನೆ ಮಲ್ಲನಮೂಲೆಯಲ್ಲಿ ರಸ್ತೆ ಮೇಲೆ ೪ ಅಡಿಯಷ್ಟು ನೀರು ಹರಿಯುತ್ತಿತ್ತೆಂದು ತಿಳಿದು ಬಂದಿದೆ. ಇಲ್ಲಿನ ಸೇತುವೆಯು ಕಮಾನಿನಲ್ಲಿ ೧ ಗೇಣನಷ್ಟು ಮಾತ್ರ ಬಿಟ್ಟಿರುತ್ತದೆ ಕಾಗದದ ಕಾರ್ಖಾನೆ ವರೆಗೆ ನೀರು ನುಗ್ಗಿದೆ ಬಸ್ಸು ಮತ್ತು ಇತರ ವಾಹನಗಳ ಸಂಚಾರವು ನಿಂತಿದೆ. ರೈಲು ಓಡಾಟಕ್ಕೆ ಮಾತ್ರ ಯಾವ ತೊಂದರೆಯೂ ಆಗಿಲ್ಲ

ಊರಿನೊಳಗೆ ಗೌರೀಘಟ್ಟದ ಬಳಿ ಪ್ರವಾಹವು ನುಗ್ಗಿ ಬರುತ್ತಿರುವುದರಿಂದ ಕೆಲವು ಮನೆಗಳನ್ನು ಖಾಲಿ ಮಾಡಿಸಲಾಗುತ್ತಿದೆ ಅನೇಕ ಗದ್ದೆಗಳು ನೀರಿನಲ್ಲಿ ಮುಳುಗಿವೆ

ಚಾಮುಂಡೇಶ್ವರಿ ದೇವಾಲಯದ ಬಳಿ ಇರುವ ರಾಮಪ್ಪನವರ ಛತ್ರದ ಹತ್ತಿರ ಗುಡಿಸಲುಗಳನ್ನು ಖಾಲಿ ಮಾಡಿಸಿ, ಜನರನ್ನು ಬೇರೆ ಕಡೆಗೆ ಕಳುಹಿಸಲಾಗಿದೆ ಲಾಕ್ ಅಪ್ ಹಿಂಭಾಗದವರೆಗೂ ನೀರು ಬಂದಿರುತ್ತದೆ ಹುಲ್ಲಹಳ್ಳಿ, ರಾಗಿ ಬೈರಿರುವ ಪ್ರದೇಶದ ಮೇಲೆ ನೀರು ನುಗ್ಗಿ ನಷ್ಟವಾಗಿದೆ ಕಾಯಿಸೂರಿಗೂ, ನಗರ್ಲೆಗೂ ನೀರು ಪ್ರವೇಶಿಸಿದೆ. ಹುಲ್ಲಹಳ್ಳಿ-ನಂಜನಗೂಡು ಬಸ್ಸು ಪ್ರಯಾಣ ನಿಂತಿದೆ. ಆ ಪ್ರದೇಶಗಳಲ್ಲಿ ಪೊಲೀಸರನ್ನು ಇಟ್ಟು ಜನರಿಗೆ ಸೂಕ್ತ ಎಚ್ಚರಿಕೆ ಕೊಡಲಾಗಿದೆ ಜಿಲ್ಲಾ ಪೊಲೀಸು ಅಧಿಕಾರಿಗಳು ಆ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಹಿಂತಿರುಗಿರುವರು ಈ ಮಧ್ಯಾಹ್ನ ಅವರು ಟಿ ನರಸೀಪುರಕ್ಕೆ ತೆರಳುವರು.

ಟಿ. ನರಸೀಪುರದ ಅಮಲ್ದಾರರ ವರ್ಗ

ಟಿ. ನರಸೀಪುರದ ತಾಲ್ಲೂಕು ಅಮಲ್ದಾರ್, ಶ್ರೀ ಬಿ ಮಲ್ಲರಾಜೆ ಅರಸಿನವರು ಸರ್ವೆ ಟ್ರೈನಿಂಗಿಗಾಗಿ ಚುನಾಯಿತರಾಗಿರುವುದರಿಂದ, ಅವರು ಕಳೆದ ೧ನೇ ತಾ|| ತಾಲ್ಲೂಕು ಕಂಟ್ರಿಬ್ಯೂಷನ್ನಿಗೆ ಸಂಬಂಧಿಸಿದಂತೆ ಇರುವ ವಿಶೇಷ ಅಮಲ್ದಾರ್ ಶ್ರೀ ಕೆ ಸಿದ್ದೇಗೌಡರಿಗೆ ಚಾರ್ಜ್ ವಹಿಸಿದರು.

ಟಿ. ನರಸೀಪುರದ ತಾಲ್ಲೂಕು ಖಜಾನೆಯ ಸ್ಥಳ ಬದಲಾವಣೆ

ಕಾವೇರಿ ಮತ್ತು ಕಪಿನೀ ನದಿಗಳಲ್ಲಿ ಪ್ರವಾಹವು ಅತಿಯಾಗಿ ಟಿ ನರಸೀಪುರದ ತಾಲ್ಲೂಕು ಖಜಾನೆಯನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು ತಿಳಿದುಬಂದಿದೆ

ವಂಗ ಪರ್ವತಾರೋಹಣ

ಪಾಕಿಸ್ತಾನದ ಎಲ್ಲೆಯೊಳಗಿರುವ ೨೬,೬೨೯ ಅಡಿಯ ನಂಗ ಪರ್ವತ ಶಿಖರವನ್ನು ಆಸ್ಟ್ರಿಯಾ ಮತ್ತು ಜರ್ಮನಿ ಪರ್ವತಾರೋಹಿಗಳ ಪಡೆಯು ಕಳೆದ ೪ನೇ ತಾ|| ಹತ್ತಿತು ಶಿಖರದ ಮೇಲೆ ಪಾಕಿಸ್ತಾನ್ ಮತ್ತು ಜರ್ಮನ್ ಧ್ವಜಗಳನ್ನು ಹಾರಿಸಲಾಯಿತು ಹಿಂದೆ ಅನೇಕ ಸಲ ಹತ್ತಲು ಪಟ್ಟ ಶ್ರಮವು ವ್ಯರ್ಥವಾಗಿದ್ದಿತು.

ಕಲ್ಕತ್ತದಲ್ಲಿ ಬಸ್ಸು ಮತ್ತು ಅಂಚೆ ಕಛೇರಿಗೆ ಬೆಂಕಿ

ಕಲ್ಕತ್ತಾ ಟ್ರಾಂ ಗಲಭೆಗಳ ಸಂಬಂಧವಾಗಿ ಮೊನ್ನೆ ಮಧ್ಯ ರಾತ್ರಿ ಜನರ ಗುಂಪೊಂದಕ್ಕೂ ಪೊಲೀಸರಿಗೂ ಘರ್ಷಣೆಯಾಗಿ ೪೦ ಜನರನ್ನು ದಸ್ತಗಿರಿ ಮಾಡಲಾಗಿದೆ. ಜನರ ಗುಂಪು ಸರ್ಕಾರಿ ಬಸ್ಸೊಂದಕ್ಕೂ, ಸ್ಥಳೀಯ ಅಂಚೆ ಕಛೇರಿಗೂ ಬೆಂಕಿಯನ್ನು ಹತ್ತಿಸಿತೆಂದೂ, ಪೊಲೀಸರ ಮೇಲೆ ಬಲವಾಗಿ ಕಲ್ಲೆಸೆದ ಗುಂಪಿನವರನ್ನು ಲಾಠಿ ಪ್ರಯೋಗ ಮಾಡಿ ಚದುರಿಸಲಾಯಿತೆಂದೂ ವರದಿಯಾಗಿದೆ ನೆನ್ನೆ ೧೦ ಸಾವಿರ ಜನರು ಕಲ್ಕತ್ತ ಮತ್ತು ಹೌರಾಗಳಲ್ಲಿ ಪ್ರದರ್ಶನ ನಡೆಸಿ, ಟ್ರಾಂ ಸಂಚಾರಕ್ಕೆ ಬಹಿಷ್ಕಾರ ಹಾಕುವಂತೆ ಘೋಷಿಸಿದರು ಈ ಬಗ್ಗೆ ಪ್ರತಿಭಟನಾ ಸಮಿತಿಯೂ ಸಹ ನಿರ್ಣಯ ಮಾಡಿರುತ್ತದೆ ನೆನ್ನೆ ೧೫೦ ಮಂದಿಯನ್ನು ಬಂಧಿಸಲಾಗಿದೆ ಆ ಪೈಕಿ ಪ್ರಜಾ ಸಮಾಜವಾದಿ ಮುಖಂಡರಾದ ಡಾ|| ಸುರೇಶಚಂದ್ರ ಬ್ಯಾನರ್ಜಿಯವರೂ ಇರುವರು

ನಗರಕ್ಕೆ ಹಿಂದುಳಿದ ಕಮಿಷನ್ನಿನ ಆಗಮನ

ಹಿಂದುಳಿದ ಪಂಗಡಗಳ ಸಮಿತಿಯವರು ಇದೇ ೧೦ ನೇ ತಾ|| ನಗರಕ್ಕೆ ಆಗಮಿಸಿ, ಮಾರನೇ ದಿನವೂ ಇಲ್ಲಿರುವರೆಂದೂ, ಹಿಂದುಳಿದ ಪಂಗಡಗಳವರು ನಗರ ಕಾಂಗ್ರೆಸ್ ಸಮಿತಿ ಮೂಲಕವಾಗಲಿ ಖುದ್ದಾಗಿಯಾಗಲಿ, ತಮ್ಮ ಸಲಹೆಗಳನ್ನು ಒಪ್ಪಿಸಬಹುದೆಂದೂ ಸಮಿತಿಯ ವರೊಡನೆ ಭೇಟಿ ಕಾಲ ಮತ್ತು ಸ್ಥಳವನ್ನು ಮುಂದೆ ತಿಳಿಸಲಾಗುವುದೆಂದೂ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ತಿಳಿಸಿರುವರು.

ರೈಲ್ವೆ ಕ್ಯಾಂಟೀನ್ ಕೆಲಸಗಾರರ ಮುಷ್ಕರ ಮುಕ್ತಾಯ

ಇಲ್ಲಿನ ರೈಲ್ವೆ ವರ್ಕ್‌ಷಾಪಿನ ಕ್ಯಾಂಟೀನಲ್ಲಿ ಕೆಲಸಕ್ಕಿದ್ದು ವಜಾ ಆದ, ಶ್ರೀ ಎಸ್. ಬಾಲಕೃಷ್ಣನ್ ಎಂಬುವನನ್ನು ಪುನಃ ನೌಕರಿ ಮೇಲೆ ತೆಗೆದುಕೊಂಡ ಕಾರಣ, ಕ್ಯಾಂಟೀನಿನ ೧೫ ಮಂದಿ ಕೆಲಸಗಾರರು ಹೂಡಿದ್ದ ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಹಿಂತಿರುಗಿರುತ್ತಾರೆ.

ಕೃಷ್ಣರಾಜಸಾಗರದ ನೀರಿನ ಮಟ್ಟ ೧೨೩ ಅಡಿ

ಕಳೆದ ೩-೪ ದಿನಗಳಿಂದ ಎಡಬಿಡದೆ ಬಿದ್ದ ಮಳೆಯ ಪರಿಣಾಮವಾಗಿ ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿಗಳಲ್ಲಿ ಪ್ರವಾಹ ಬಂದು ಕೃಷ್ಣರಾಜಸಾಗರದ ಅಣೆಕಟ್ಟಿನಲ್ಲಿ ಇಂದು ಮಧ್ಯಾಹ್ನ ೧೨೩ ಅಡಿ ನೀರು ಇರುತ್ತದೆ. ಸಾಗರಕಟ್ಟೆಯ ಬಳಿ ರೈಲ್ವೆ ನಿಲ್ದಾಣಕ್ಕೆ ಬಹಳ ಸಮೀಪವಾಗಿ ನೀರು ಬಂದಿರುವುದೆಂದು ಗೊತ್ತಾಗಿದೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮೊನ್ನೆ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತು ಪರಿಶೀಲನೆ ನಡೆಸಿದರು.

ಗೂಡ್ಸ್ ಗಾಡಿ ವ್ಯಾಗನ್‌ಗಳು ಕಳಚಿ ಹಿಂದಕ್ಕೆ ಓಡಿದುವು

ಪೂನಾ ಮಿರಜ್ ರಸ್ತೆಯ ಅದರ್ಕಿ ರೈಲ್ವೆ ನಿಲ್ದಾಣದಲ್ಲಿ ಮೊನ್ನೆ ಗೂಡ್ಸ್ ಗಾಡಿಯ ನಾಲ್ಕು ವ್ಯಾಗನ್ನುಗಳು ಕಂಬಿ ತಪ್ಪಿ ರೈಲು ಸಂಚಾರಕ್ಕೆ ಸ್ವಲ್ಪ ಕಾಲ ಅಡಚಣೆಯಾಗಿದ್ದಿತು. ಮುಂದೆ ಹೋಗುತ್ತಿದ್ದ ಗಾಡಿಯ ೨೬ ವ್ಯಾಗನ್ನುಗಳು ಕಳಚಿಕೊಂಡು ವಾಪಸು ಅದರ್ಕಿ ಸ್ಟೇಷನ್ನಿಗೆ ಬಂದುವೆಂದೂ, ಆ ಪೈಕಿ ನಾಲ್ಕು ಗಾಡಿಗಳು ಕಂಬಿ ತಪ್ಪಿ ಉರುಳಿದುದಾಗಿಯೂ ಹೇಳಲಾಗಿದೆ

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಹದ ಪ್ರಭಾವ

ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ವಾರ ವಿಪರೀತ ಮಳೆಯಾಗಿ, ತೀರ್ಥಹಳ್ಳಿ-ಶಿವಮೊಗ್ಗಗಳಿಗೆ ಮಾರ್ಗಸಂಪರ್ಕ ಕಡಿದಿದೆ ತೀರ್ಥಹಳ್ಳಿ ತಾಲ್ಲೂಕಿನ ಬೊಮ್ಮನಹಳ್ಳಿ, ಶಿವಮೊಗ್ಗೆಯ ತಿಮ್ಮಾಪುರ, ಚಿಕನಾಯಕನಹಳ್ಳಿ, ಸೀರಳಿ, ಬೆಳಗಲು ಮುಂತಾದ ಗ್ರಾಮಗಳನ್ನು ಖಾಲಿ ಮಾಡಲಾಗಿದೆ

ಸರ್ಕಾರದಿಂದಲೇ ಸಕ್ಕರೆ ಆಮದು ?

ಹೊರಗಿನಿಂದ ಇನ್ನು ಮುಂದೆ ಸಕ್ಕರೆಯನ್ನು ಸರ್ಕಾರದವರು ಆಮದು ಮಾಡಿಕೊಳ್ಳುವರೆಂದೂ, ವರ್ತಕರ ಮೂಲಕ ತರಿಸುವ ಏರ್ಪಾಡನ್ನು ನಿಲ್ಲಿಸಲಾಗುವುದೆಂದೂ ಹೇಳಲಾಗಿದೆ.

ಎ. ಐ. ಸಿ. ಸಿ. ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನವು ನೆನ್ನೆ ಬೆಂಗಳೂರಿನಲ್ಲಿ ಸೇರಿತು. ಬೆಳಗ್ಗೆ ಅಧ್ಯಕ್ಷ ನೆಹರೂರವರು ಧ್ವಜಾರೋಹಣ ಮಾಡಿದರು ಅನಂತರ ಸೇರಿದ್ದ ಸಭೆಯಲ್ಲಿ ಭಾಷಣ ಮಾಡಿ, ಕೊರಿಯಾದ ಸಮಸ್ಯೆಯನ್ನು ಪ್ರಸ್ತಾಪಿಸಿದರು ಸಿಂಗ್ಮನ್ ರೀಯವರ ವರ್ತನೆ ಬಗ್ಗೆ ಅವರು ಕ್ರೋಧವನ್ನು ವ್ಯಕ್ತಪಡಿಸಿ, ಅವರಿಗೆ ಬೇರೆ ಯಾವುದಾದರೂ ರಾಷ್ಟ್ರದ ಬೆಂಬಲವಿತ್ತಿದ್ದರೆ ಅದನ್ನೂ ಖಂಡಿಸಬೇಕಾಗುವುದೆಂದು ಹೇಳಿದರು ಬಳ್ಳಾರಿಯಲ್ಲಿ ರೈಲು ನಿಲ್ಲಿಸುವ ಚಳುವಳಿಯನ್ನು ಕುರಿತು ನೆಹರೂರವರು ಪ್ರಸ್ತಾಪಿಸಿದರು. ಸಮಿತಿಯು ಕಾಂಗ್ರೆಸ್ಸಿನ ವಿದೇಶಾಂಗ ನೀತಿಯನ್ನು ಅಂಗೀಕರಿಸಿತು.

ಪೂರ್ವ ಪಾಕಿಸ್ತಾನದಲ್ಲಿ ಕಾನೂನು ಭಂಗ ಚಳುವಳಿ

ಪೂರ್ವ ಪಾಕಿಸ್ತಾನದ ಅವಾಮಿ ಲೀಗ್ ಕೌನ್ಸಿಲ್ ಸಭೆಯು ೩ ದಿನಗಳ ಕಾಲ ನಡೆದು ನೆನ್ನೆ ಮುಕ್ತಾಯವಾಯಿತು. ಸಂಘದ ಹೊಸ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಅಹಮದ್ ಖಾನ್ ಬಶಾನಿಯವರು ನೆನ್ನೆ ಸಂಜೆ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ, ಇನ್ನೆರಡು ತಿಂಗಳುಗಳಲ್ಲಿ ಅಲ್ಲಿ ಕಾನೂನು ಭಂಗ ಚಳುವಳಿಯನ್ನು ನಡೆಸಲಾಗುವುದೆಂದೂ, ಅದಕ್ಕೆ ಯುವಕರೆಲ್ಲಾ ಸೇರಬೇಕೆಂದೂ ತಿಳಿಸಿದರು ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ಮಧ್ಯೆ ಸಂಚಾರದ ರಹದಾರಿ ಏರ್ಪಾಟಿನ ರದ್ದು, ರಾಜಕೀಯ ಖೈದಿಗಳ ಖುಲಾಸೆ, ಬಂಗಾಳಿಯನ್ನು ರಾಜ ಭಾಷೆಗಳಲ್ಲೊಂದಾಗಿ ಮಾಡುವುದು- ಇವೇ ಮುಂತಾದ ನಿರ್ಣಯಗಳನ್ನು ಕೌನ್ಸಿಲ್ ಅಧಿವೇಶನದಲ್ಲಿ ಮಾಡಲಾಯಿತು

ಕಛೇರಿಯಲ್ಲಿ ಕುಳಿತು ಉಗಿಯುತ್ತಿದ್ದುದಕ್ಕೆ ಶಿಕ್ಷೆ

ಲಕ್ನೋ ಸರ್ಕಾರೀ ಕಛೇರಿಯ ಉನ್ನತಾಧಿಕಾರದಲ್ಲಿರುವ ಗುಮಾಸ್ತರೊಬ್ಬರು ತಮ್ಮ ಭವನದ ಮೇಲಂತಸ್ತಿನಲ್ಲಿ ಕುಳಿತು, ಎಲೆಯಡಿಕೆಯನ್ನು ಹಾಕಿಕೊಂಡು ಕೆಳಕ್ಕೆ ಉಗುಳುತ್ತಿದ್ದುದಕ್ಕಾಗಿ ಅವರನ್ನು ಆ ಹುದ್ದೆಯಿಂದ ರಿವರ್ಟ್ ಮಾಡಿ, ಟೆಲಿಫೋನ್ ಆಪರೇಟರಾಗಿ ನೇಮಿಸಿ ಅವರ ಸಂಬಳವನ್ನು ಮಾಹೆಯಾನ ೨೦೦ ರೂ. ಅಷ್ಟು ಕಡಿಮೆ ಮಾಡಲಾಯಿತೆಂದು ವರದಿಯಾಗಿದೆ ಅವರ ಮೇಲಧಿಕಾರಿಯು ಅವರನ್ನು ಕರೆಸಿ ಪ್ರಶ್ನಿಸಿದಾಗ ಅವರು ಕೊಟ್ಟ ಸಮಜಾಯಿಷಿಯು ತೃಪ್ತಿಕರವಾಗಿರಲಿಲ್ಲವೆಂದು ಹೇಳಲಾಗಿದೆ.

ಗುಂಡಿನೇಟಿನಿಂದ ಮತ್ತೊಬ್ಬನ ಮರಣ

ಬಿಹಾರಿನ ಅರ್ರಾನಲ್ಲಿ ಕಳ್ಳಿಗಾದ ಕಾರ್ಮಿಕರ ಮೇಲೆ ಮೊನ್ನೆ ಗುಂಡು ಹಾರಿಸಿದ ಸಂಬಂಧವಾಗಿ ೬ ಜನರು ಮಡಿದರಲ್ಲದೆ ಗುಂಡಿನೇಟಿಗೆ ಒಬ್ಬ ವಿದ್ಯಾರ್ಥಿಯೂ ಸಿಕ್ಕಿ ಸತ್ತನೆಂದು ಹೇಳಲಾಗಿದೆ. ಇನ್ನೂ ೪೦ ಜನರನ್ನು ದಸ್ತಗಿರಿ ಮಾಡಲಾಗಿದೆ.

ಜಿಲ್ಲಾ ಬೋರ್ಡ್ ಶಾಲೆಗಳಿಗೆ ಪೋಷಕರ ಕಾಣಿಕೆ

ಮೈಸೂರು ೭

ಮೈಸೂರು ಜಿಲ್ಲಾ ಬೋರ್ಡಿನ ಆಶ್ರಯದಲ್ಲಿ ನಡೆಯುತ್ತಿರುವ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೋಷಕರಿಂದ ಶಾಲೆಗಳ ವೆಚ್ಚಕ್ಕಾಗಿ ಪ್ರತಿ ವರ್ಷವೂ ತಲಾ ೪ ರೂ ಗಳನ್ನು ಪಡೆಯಬೇಕೆಂಬ ನಿರ್ಣಯವು ಬೋರ್ಡಿನ ಸಭೆಯಲ್ಲಿ ನೆನ್ನೆ ಅಂಗೀಕೃತವಾಯಿತು

ಹುಣಸೂರು ತಾಲ್ಲೂಕು ಚಿಲ್ಕುಂದದಿಂದ ಹೆಬ್ಬನಕುಪ್ಪೆ ಮತ್ತು ಗಂಗೂರು ಕಟ್ಟೆಹಳ್ಳಿ ಮೂಲಕ ಮಾಕೋಡಿಗೆ ೭ ಮೈಲಿ ರಸ್ತೆಯ ನಾಲಾಬಾದಿಗಾಗಿ ಸೆಟ್ಟಹಳ್ಳಿ ಪಂಚಾಯಿತಿಯವರು ಕೊಟ್ಟಿರುವ ೧೬೫೦ ರೂ ಗಳ ಜೊತೆಗೆ ಇಷ್ಟೇ ಮೊಬಲಗನ್ನು ಬೋರ್ಡಿನಿಂದ ಒದಗಿಸಬಹುದೆಂದು ತೀರ್ಮಾನವಾಯಿತು

ಕೆರೆಕಣಾಂಬಿಯಲ್ಲಿ ಪಶು ವೈದ್ಯಶಾಲೆಯ ಉಪಯೋಗಕ್ಕಾಗಿ ೭೫೦೦ ರೂ. ಅಂದಾಜು ವೆಚ್ಚದಲ್ಲಿ ಒಂದು ಕಟ್ಟಡವನ್ನು ಕಟ್ಟಲು ಬೋರ್ಡಿನಿಂದ ಅರ್ಧದಷ್ಟು ಮೊತ್ತವನ್ನು ಒದಗಿಸಿ, ಉಳಿದುದನ್ನು ಸರ್ಕಾರದವರು ಕೊಡುವಂತೆ ಪ್ರಾರ್ಥಿಸಬೇಕೆಂದು ನಿರ್ಧರಿಸಲಾಯಿತು.

ರಸ್ತೆ ರಿಪೇರಿ ಮತ್ತು ಕಟ್ಟಡಗಳ ನಿರ್ಮಾಣದ ಬಗ್ಗೆ ಅಧ್ಯಕ್ಷ ಚನ್ನಬಸಪ್ಪನವರು ವಿವರಣೆ ಇತ್ತು, ಸಿಮೆಂಟು, ಕಬ್ಬಿಣ ಸಾಮಾನುಗಳು ದೊರೆಯದೆ ಕಟ್ಟಡಗಳ ಕೆಲಸವೂ ನಿಧಾನವಾಗಿದೆಯೆಂದೂ ಇತ್ತೀಚಿಗೆ ನಡೆದ ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳ ಮತ್ತು ಇಂಜನಿಯರುಗಳ ಸಭೆಯಲ್ಲಿ ರಸ್ತೆ ಕಾಮಗಾರಿಗಳ ಬಗ್ಗೆ ಆದ ನಿರ್ಧಾರದ ಸಂಬಂಧವಾಗಿ ಸರ್ಕಾರದವರ ಆಜ್ಞೆಯು ಹೊರಬೀಳದಿರುವುದರಿಂದ ಆ ಕಾರ್ಯವೂ ನಿಧಾನವಾಗಿರುವುದೆಂದೂ ಹೇಳಿದರು ಇದಕ್ಕೆ ಹಣದ ಅಭಾವವು ಕಾರಣವಲ್ಲವೆಂದು ತಿಳಿದುಬಂದಿದೆ

ಟ್ಯೂನಿಸ್ ರಾಜಕುಮಾರನ ಕೊಲೆ ಬಗ್ಗೆ ಇಬ್ಬರ ಬಂಧನ

ಟ್ಯೂನಿಸಿಯಾ ರಾಜ್ಯದ ಉತ್ತರಾಧಿಕಾರಿ ಅಜೆಡಿ ಬೇಯವರ ಕೊಲೆ ಸಂಬಂಧವಾಗಿ ಇಬ್ಬರನ್ನು ದಸ್ತಗಿರಿ ಮಾಡಲಾಗಿದೆ ಆ ಪೈಕಿ ಒಬ್ಬನು ಹಂತಕನೆಂದು ಹೇಳಲಾಗಿದೆ ಮತ್ತೊಬ್ಬನ ದಸ್ತಗಿರಿಗೆ ವಾರಂಟ ಹೊರಟಿರುತ್ತದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ ಎಸ್ ಶಿಲ್ಪವುಳ್ಳಿ [illegible], ಸಂಗೀತ ಮಧ್ಯಾಹ್ನ ೧-೩೦ ಸ್ತ್ರೀಯರ [illegible] ರೇಡಿಯೋ [illegible] ಪ್ರವಚನ, ಗಾಯನ ೬ ಹಿಂದಿ ಶಿಕ್ಷಣ ೬-೧೫ [illegible] ಕನ್ನಡ ಗೀತೆಗಳು ೭-೧ [illegible] ಸಂಗೀತ [illegible] ಕಾರ್ಯಕ್ರಮ-ಇಂಗ್ಲಿಷ್ ಭಾಷಣ ೯-೧೫ ಮೈಸೂರು ಸರ್ಕಾರದ ಅಭಿವೃದ್ಧಿ ಯೋಜನೆ ೯-೩೦ ರೇಡಿಯೋ ಸಂಗೀತ ೯-೪೫ ನೆರೆಮನೆ ಹುಡುಗಿ-ನಾಟಕ

೫ ಲಕ್ಷ ರೂ.ವಿಗೆ ಶಾಪದ ವಜ್ರದ ಮಾರಾಟ

ಶಾಪವಿರುವುದೆಂದು ಹೇಳಲಾದ ೭ ರೋಹಾವ ೨೮ ಕ್ಯಾರಟ್ಟಿನ ವಜ್ರವೊಂದನ್ನು ಅಮೇರಿಕದ ಡಿಟ್ರಾಯ್ಟ್ ನಗರದ ರತ್ನಪಡಿ ವ್ಯಾಪಾರಿಯೊಬ್ಬನು ೧೦ ಲಕ್ಷ ಡಾಲರ್‌ಗೆ (ಸುಮಾರು ೫ ಲಕ್ಷ ರೂ) ಕೊಂಡಿರುವುದಾಗಿ ವರದಿಯಾಗಿದೆ ಭಾರತದ ರಾಜಕುಮಾರ ರಾಮಚಂದ್ರ ಎಂಬುವರು ಅದನ್ನು ಹೊಂದಿದ್ದರು ಶಾಪವಿರುವುದೆಂದು ತಿಳಿದಿದ್ದರೂ ಅದನ್ನು ಲೆಕ್ಕಿಸದೆ ಅವರು ಅದನ್ನು ಇಟ್ಟುಕೊಂಡಿದ್ದುದಾಗಿಯೂ, ೧೯೪೭ರಲ್ಲಿ ಅವರು ಅದನ್ನು ಸಮುದ್ರದಾಚೆ ಸಾಗಿಸಿದ ನಂತರ ಅವರು ನಿರ್ಗತಿಕರಾದರೆಂದೂ ಅವರ ಜಹಗೀರ್, ಬಂಗಲೆ ಮತ್ತು ಚಿನ್ನಾ ಆಸ್ತಿಗಳನ್ನು ಜಪಾನಿಗಳು ಕೊಂಡರೆಂದೂ, ಭಾರತದಲ್ಲಿರುವ ಅವರ ಆಸ್ತಿಗಳು ಹಾಳಾಗುತ್ತಿರುವುದಾಗಿಯೂ ಹೇಳಲಾಗಿದೆ ತಾನು ಹೊಂದಿರುವವರಿಗೂ ತನ್ನನ್ನೇನೂ ಶಾಪವು ಬಾಧಿಸದೆಂದು ಹೊಸದಾಗಿ ಕೊಂಡಿರುವವನು ಆಶಿಸಿರುತ್ತಾನೆ.

ತಂಬೂರಿಕಾ ಸಂಘದ ಖಾಯಂ ಅಧ್ಯಕ್ಷರು

ಅಖಿಲ ಭಾರತ ತಂಬೂರಕರ ಸಂಘದ ಖಾಯಂ ಅಧ್ಯಕ್ಷರಾಗಿ ಮೈಸೂರಿನ ಮಾಜಿ ದಿವಾನರಾದ ಡಾ|| ಎಂ ವಿಶ್ವೇಶ್ವರಯ್ಯನವರನ್ನು ಆರಿಸಲಾಗಿದೆ ಸಂಘದ ಧ್ಯೇಯ [illegible] ನೇಮಿಸಲ್ಪಟ್ಟಿರುವರು

ಜಮ್ಮು ಚಳುವಳಿ ತಾತ್ಕಾಲಿಕವಾಗಿ ನಿಂತಿದೆ

ಜಮ್ಮು ಪ್ರಜಾ ಪರಿಷತ್ತಿನವರು ನಡೆಸುತ್ತಿರುವ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಚಳುವಳಿಯನ್ನು ಯಾವ ಷರತ್ತೂ ಇಲ್ಲದೆ ನಿಲ್ಲಿಸಕೂಡದೆಂದು ಉತ್ತರ ಪ್ರದೇಶ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯು ತಿಳಿಸಿರುತ್ತದೆ

ಮಾನವೀಯತೆ ವಿದ್ಯಾಭ್ಯಾಸಕ್ಕಾಗಿ ೧೦೦ ವೇತನ

ಮಾನವೀಯತೆಗೆ ಸಂಬಂಧಿಸಿದ ವಿಷಯಗಳಲ್ಲಿ ಪರಿಶೋಧನೆ ನಡೆಸಲು ೨೦೦ ರೂ ಗಳ ಮೊತ್ತದ ೧೦೦ ವಿದ್ಯಾರ್ಥಿ ವೇತನಗಳನ್ನು ವಿತರಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಎರಡು ವರ್ಷಗಳ ವರೆಗೆ ಈ ವೇತನವು ದೊರೆಯುವುದು. ಇದುವರೆಗೆ ಸಾಕಷ್ಟು ಗಮನ ಕೊಡದಿರುವ ವಿಷಯಗಳಿಗೆ ವೇತನವು ಸಂಬಂಧಿಸಿರುತ್ತದೆ

ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರಿಗೆ ಸ್ಮಾರಕ

ದಿವಂಗತ ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರ ಸ್ಮಾರಕವೊಂದನ್ನು ನಿರ್ಮಿಸಲು ಭಾರತೀಯ ಜನ ಸಂಘದ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ ಸಾರ್ವಜನಿಕ ಸಭಾ ಭವನ, ಭಾರತೀಯ ಸಂಸ್ಕೃತಿಯ ಪರಿಶೋಧನಾಲಯ ಮತ್ತು ಒಂದು ಪ್ರತಿಮೆ ಇವುಗಳನ್ನು ಸ್ಥಾಪಿಸಬೇಕೆಂದು ತೀರ್ಮಾನವಾಗಿದೆ

ವಿವಾಹ ಮಹೋತ್ಸವಗಳು

ರಾಜಧಾನಿಯ ಇಂಜನಿಯರಿಂಗ್ ಕಂಟ್ರಾಕ್ಟರ್, ಶ್ರೀ ಎಸ್. ಗುಂಡೂರಾವಯ್ಯನವರು ತಮ್ಮ ಸಹೋದರ, ಶ್ರೀ ಎಸ್ ಕೃಷ್ಣಮೂರ್ತಿಯವರಿಗೆ ಬೊಂಬಾಯಿಯ ಶ್ರೀ ಬಿ ಎನ್ ನಾರಾಯಣಸ್ವಾಮಿಯವರ ಕುಮಾರಿ ಸೌ|| ಪ್ರಮೀಳಾರವರನ್ನು ತಂದುಕೊಂಡು ಮೊನ್ನೆ ಮೈಸೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರಿನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿದ್ದು ನಿವೃತ್ತರಾಗಿರುವ ಶ್ರೀ ಎಂ. ಎ ಶ್ರೀನಿವಾಸಯ್ಯಂಗಾರ್ಯರು ತಮ್ಮ ಕುಮಾರಿ ಸೌ|| ಆಂಡಾಳ್‌ರವರನ್ನು ಮಂಡ್ಯಂ ಅಪ್ಪಾಚಾರ್ ವರದರಾಜಯ್ಯಂಗಾರ್ಯರ ಕುಮಾರ, ಶ್ರೀ ಎಂ ಎ ನರಸಿಂಹಸ್ವಾಮಿಯವರಿಗೆ ಕೊಟ್ಟು ಮೊನ್ನೆ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಗೌರೀಶಂಕರ ಡಿಪೋವಿನ ಶ್ರೀ ಬಿ. ಎಸ್ ಎಲ್ ಈಶ್ವರಪ್ಪನವರು ತಮ್ಮ ಪುತ್ರಿ, ಸೌ|| ಲೀಲಾವತಿಯವರನ್ನು ಬೆಂಗಳೂರಿನ ಶ್ರೀ ಪಿ ಎಂ. ಬಸಪ್ಪನವರ ಮಕ್ಕಳು ಶ್ರೀ ದಯಾಕುಮಾರರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು

ರಾಜಸೇವಾ ಪ್ರಸಕ್ತ ವೈ. ಕೆ. ರಾಮಚಂದ್ರರಾಯರು ತಮ್ಮ ಅಳಿಯ ಎಂ ರಂಗನರಸಿಂಹಯ್ಯನವರ ಪುತ್ರ ಚಿ|| ರಾ|| ರಘುನಾಥರಿಗೆ ಬೆಂಗಳೂರಿನ ಶ್ರೀ ಹೆಚ್ ಶ್ರೀ [illegible] ರಾಯರ ಪುತ್ರಿ ಸೌ|| ವನಜಾರವರನ್ನು ತಂದುಕೊಂಡು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಮಾಕವಳ್ಳಿ ಶ್ರೀ ನಾಗಪ್ಪನವರು ತಮ್ಮ ಕುಮಾರಿ ಸೌ|| ಶಾರದಮ್ಮನನ್ನು ಬೆಂಗಳೂರಿನ ಶ್ರೀ ಎಸ್. ಗೋಪಾಲಕೃಷ್ಣರಾಯರ ಮಕ್ಕಳೂ, ಇಂಜನಿಯರಿಂಗ್ ಕಾಲೇಜು ಅಸಿಸ್ಟೆಂಟ್ ಪ್ರೊಫೆಸರರೂ ಆದ ಶ್ರೀ ಎಸ್ ಜಿ ಸುಬ್ರಹ್ಮಣ್ಯರವರಿಗೆ ಕೊಟ್ಟು ಮೊನ್ನೆ ಮೈಸೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಮಂಡ್ಯದ ಅಡ್ವೊಕೇಟರಾದ ಶ್ರೀ ಕೆ ಚಿಕ್ಕಲಿಂಗಯ್ಯನವರು ತಮ್ಮ ಕುಮಾರಿ ಸೌ|| ಸುಶೀಲಮ್ಮನನ್ನು ಮದ್ದೂರು ತಾಲ್ಲೂಕು ಹುಲಿಗೆರೆಪುರದ ಲೇ|| ಕರಿಬೋರೆಗೌಡರ ಪುತ್ರ ಶ್ರೀ ಎಚ್ ಬಿ ಸೋಸಲೇಗೌಡರಿಗೆ ಕೊಟ್ಟು ಮೊನ್ನೆ ಮಂಡ್ಯದಲ್ಲಿ ವಿವಾಹವನ್ನು ನೆರವೇರಿಸಿದರು

ಶ್ರೀ ವಿದ್ಯಾ ಮಂದಿರ

(ಪ್ರೈವೇಟ್ ಕೋಚಿಂಗ್ ಹೋಂ)

ಕಬೀರ್ ರೋಡ್ .. ಮೈಸೂರು

"No pass-No fee" ಎಂಬ ಷರತ್ತಿನ ಮೇಲೆ ಶಿಕ್ಷಣ ಕೊಡಲು

ವಿಚಾರಿಸಿ

S S L C. (All Subjects) 5 0 0
L S ,, 3 0 0

ಮಿಡಲ್ ಸ್ಕೂಲ್ I, II, III ನೇ ತರಗತಿಗಳಿಗೂ, ಸ್ತ್ರೀ [illegible] ಮತ್ತು ಹಿಂದಿ ಪರೀಕ್ಷೆಗಳಿಗೂ ಶಿಕ್ಷಣ ಕೊಡಲಾಗುವುದು

ಹೆಚ್ ಆರ್ ಕೃಷ್ಣಾಚಾರ್ಯ,
ವ್ಯವಸ್ಥಾಪಕರು

ವಿಧವೆಯರಿಗೂ ಶ್ರೀಮತಿ ಎಂದು ಸಂಬೋಧನೆ

ವಿವಾಹಿತ ಮಹಿಳೆಯರಿಗೆ ಉಪಯೋಗಿಸಲಾಗುತ್ತಿರುವ ಶ್ರೀಮತಿ ಎಂಬ ಅಭಿದಾನವನ್ನು ವಿಧವೆಯರ ಬಗ್ಗೆಯೂ ಉಪಯೋಗಿಸಬೇಕೆಂದು ಮದ್ರಾಸು ಸರ್ಕಾರದವರು ಸೂಚಿಸಿರುತ್ತಾರೆ ಬಾಲಕರಿಗೂ "ಶ್ರೀ" ಎಂದು ಕರೆಯುವಂತೆಯೂ ಸೂಚಿಸಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆಣೆ	ರೂ ಆ
ಕೊಬ್ಬರಿಕಾಯಿ	೧೪-೧೪-೦	೨೫ ೦ ೦
ಎಳ್ಳು	೭೩ ೦-೦	೭೩ ೨-೦
ಹರಳುಬೀಜ	೪೩ ೧೨ ೦	
ಹುರುಳಿ	೪೯ ೬-೦	
ಹೆಸರು	೩೪-೦-೦	೪೯-೧೨ ೦
ಕಡಲೆಕಂಡಿ	೬೪-೨ ೦	೬೬ ೬ ೧
ಉದ್ದು	೩೪-೪-೦	
ಮೆಣಸಿನಕಾಯಿ	೭೭-೦-೦	೨೮ ೧೨ ೦
ಕುಂಕೇಹಣ್ಣು	೩-೦-೦	೮-೧-೦
ತೆಂಗಿನಕಾಯಿ	೧೪೪ ೦ ೦	೨೪೯-೦-೦

ನೋಟೀಸು

—೦—

ನಮ್ಮ ಕಕ್ಷಿಗಾರರಾದ, ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರ ಹೋಬಳಿ ಬೊಕ್ಕಹಳ್ಳಿ ಗ್ರಾಮದಲ್ಲಿರುವ ಲಿಂಗನಾಯ್ಕ ಉರುಫ್ ಕೊಣಯನಾಯ್ಕರವರ ಮಗ ಬಿ ಎಸ್. ಪುಟ್ಟಣ್ಣನವರ ಇಂದಿನ ಮೇರೆಗೆ ಈ ವಗೈರೆ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ನಮ್ಮ ಕಕ್ಷಿಗಾರರ ತಂದೆ ಶ್ರೀ ಲಿಂಗನಾಯ್ಕ ಉರುಫ್ ಕೊಣಯನಾಯ್ಕರವರಿಗೆ ಈಗ್ಗೆ 3-4 ತಿಂಗಳಿಂದಲೂ ಖಾಯಿಲೆ ಸಬೂಬು, ನಾಲಿಗೆ, ಕೈಕಾಲುಗಳು ಸ್ವಾಧೀನವಿಲ್ಲದೆ ಬುದ್ಧಿ ಸ್ಥಿಮಿತವಿಲ್ಲದೆ ಇರುವ ಕಾರಣ ಈ ಕಾಲವನ್ನು ದುರುಪಯೋಗಪಡಿಸಿಕೊಂಡು ನ್ಯಾಯವಾದ ಹಕ್ಕುದಾರರಾದ ನಮ್ಮ ಕಕ್ಷಿಗಾರರಿಗೂ, ಕುಟುಂಬಕ್ಕೂ ಮೋಸ ಮಾಡುವ ಉದ್ದೇಶ್ಯ ಲಿಂಗನಾಯ್ಕರವರ ಸ್ವಯಾರ್ಜಿತವಾದ ಆಸ್ತಿಗಳನ್ನೂ, ಲೇವಾದೇವಿಗಳನ್ನೂ ತಮ್ಮ ಹೆಸರಿಗೆ ಮಾಡಿಕೊಳ್ಳಲು ಕೆಲವರು ಮಾಡುತ್ತಾ ಇರುತ್ತಾರಾಗಿ ತಿಳಿದುಬಂದಿದೆ ಸದರಿ ಲಿಂಗನಾಯ್ಕರವರಿಂದ ನಮ್ಮ ಕಕ್ಷಿಗಾರರ ಸಮ್ಮತಿ ಇಲ್ಲದೆ ಯಾವ ವಿಧವಾದ ಕಾಗದ ಪತ್ರ ಮಾಡಿಕೊಂಡಿದ್ದಾಗ್ಯೂ ಅಥವಾ ಮಾಡಿಸಿಕೊಂಡರೂ ಮತ್ತು ಯಾವ ಮೊಬಲಗನ್ನೂ ಲಿಂಗನಾಯ್ಕರವರಿಗೆ, ಯಾ ಮಕ್ಕಳಿಗಾದರೂ ಸಾಲವಾಗಿ ಮಾಡಿದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ನಮ್ಮ ಕಕ್ಷಿಗಾರರನ್ನು ದೇಣಿದಾರರ ಬಾಧ್ಯತೆಯನ್ನೂ ಬದ್ಧಪಡಿಸುವುದಿಲ್ಲ.

ಎಂ. ವಿ ವೆಂಕಟರಾಮಸ್ವಾಮಿ
ಎಲ್ ಎಲ್ ಬಿ
ಅಡ್ವೊಕೇಟ್ ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಬಿಡಿಯ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೮-೭-೧೯೬೪ [ಸಂಚಿಕೆ ೩೬೦

ಸಿದ್ಧಲಿಂಗಯ್ಯನವರಿಗೆ ಅನರ್ಹತೆ ಇಲ್ಲ

ದಾಸ ಕೀರ್ತನ ಸಾಹಿತ್ಯ ಮಹತ್ವ ಹರಿಕಥೆ

ಮೈಸೂರು ೮

ಈ ದಿನ ರಾತ್ರಿ ೮ ಘಂಟೆಗೆ ಶಿ. ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಪತ್ರಿಕಾ ಕಛೇರಿಯ ಮಹಡಿಯಲ್ಲಿ ಸುಪ್ರಸಿದ್ಧ ಕರ್ನಾಟಕಾಂಧ್ರ ಕೀರ್ತನ ಸುಧಾಕರ, ಸರ್ವೋದಯ ತತ್ವ ಪ್ರಚಾರಕ, ಭಾವಕವಿ ಗಮಕಿ, ಶ್ರೀ ರಾಮಚಂದ್ರ ಜಯವರು ಭಕ್ತಿಯೇ ಮುಕ್ತಿ ಸಾಧನವೆಂದು ಸಮರ್ಥಿಸಿ ಹರಿಕಥೆ ಮಾಡುತ್ತಾರೆ ಸರ್ವರಿಗೂ ಸುಸ್ವಾಗತವಿದೆ

ಹೇಮಾವತಿ ಪ್ರವಾಹದಲ್ಲಿ ನಾಗರ ಹಾವುಗಳು !

ಹೇಮಾವತಿಯಲ್ಲಿ ಈ ಬಾರಿ ಅಧಿಕವಾದ ಪ್ರವಾಹವು ಬಂದು, ಹೊಳೆನರಸೀಪುರದ ಬಳಿ ಶ್ರೀ ರಾಮದೇವರ ಕಟ್ಟೆಯ ಮೇಲಿನಿಂದ ೯|| ಅಡಿಯಷ್ಟು ನೀರು ಧುಮುಕುತ್ತಿದೆ ೧೯೩೮ರಿಂದ ಇದುವರೆಗೆ ಇಂತಹ ಭಾರಿ ಪ್ರವಾಹವು ಬಂದಿರಲಿಲ್ಲ ಅರಕಲಗೂಡು-ಹೊಳೆನರಸೀಪುರ ಮಾರ್ಗದಲ್ಲಿ ವಾಹನಗಳ ಓಡಾಟಕ್ಕೆ ಅಡಚಣೆಯಾಗಿ ೩೦೦-೪೦೦ ಅಡಿ ದೂರ ರಸ್ತೆಯಲ್ಲಿ ೧ ಅಡಿ ನೀರು ಹರಿಯುತ್ತಿದೆ ಅನೇಕ ಸರ್ಪಗಳು ತೇಲಿ ಬರುತ್ತಿವೆ ಏಳೆಂಟು ಮೇಲ್ಪಟ್ಟು ನಾಗರ ಹಾವುಗಳನ್ನು ಹೊಡೆದು ಹಾಕಲಾಗಿದೆ

ಹಳ್ಳಿಗಳಲ್ಲಿ ೩೦ ಸಾವಿರ ಪದವೀಧರರಿಗೆ ಉದ್ಯೋಗ

ಗ್ರಾಮಾಂತರ ಪ್ರದೇಶಗಳಲ್ಲಿ ೩೦ ಸಾವಿರ ಪದವೀಧರರಿಗೆ ಹಲವು ವರ್ಷಗಳವರೆಗೆ ಉದ್ಯೋಗ ಕಲ್ಪಿಸುವ ಯೋಜನೆಯನ್ನು ಮದ್ರಾಸಿನ ಮುಖ್ಯ ಮಂತ್ರಿ ಸಿ. ರಾಜಗೋಪಾಲಾಚಾರಿಯವರು ತಯಾರಿಸುತ್ತಿರುವರೆಂದೂ ಕುಶಲ ಕಲೆ ಮತ್ತು ವಿದ್ಯಾಭ್ಯಾಸ ಇವೆರಡನ್ನೂ ಒಟ್ಟಾಗಿ ಕಲಿಸುವ ಬಗ್ಗೆ ಪದವೀಧರರು ಸರ್ಕಾರದೊಡನೆ ಸಹಕರಿಸಬೇಕೆಂದೂ ಮದ್ರಾಸು ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿ, ಶ್ರೀ ಕೆ ಆರ್ ರಾಜಾರಾಂ ನಾಯ್ಡು ರವರು ತಿಳಿಸಿರುವರು ಈ ಪಂಚ ವಾರ್ಷಿಕ ಯೋಜನೆಯನ್ನು ಪೂರ್ತಿ ಮಾಡಿದರೆ, ೫೦ ಲಕ್ಷ ಜನರ ನಿರುದ್ಯೋಗವು ನಿವಾರಣೆಯಾಗುವುದೆಂದು ಅವರು ಹೇಳುತ್ತಾರೆ.

ಕೈಮಗ್ಗ ಕೈಗಾರಿಕೆ ಅಭಿವೃದ್ಧಿಗೆ ಕೇಂದ್ರದಿಂದ ಸಹಾಯ

ಸಂಸ್ಥಾನದಲ್ಲಿ ಕೈಮಗ್ಗ ಕೈಗಾರಿಕೆಯ ಅಭಿವೃದ್ಧಿ, ಸಂಶೋಧನೆ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರದವರು ಈ ಸಾಲಿನಲ್ಲಿ ೧,೮೦,೦೦೦ ರೂ ಗಳನ್ನು ಸಹಾಯವಾಗಿ ಕೊಡಲಿರುವರೆಂದು ಸಂಸ್ಥಾನದ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿರುತ್ತಾರೆ.

ರೇಡಿಯೋವಿನಲ್ಲಿ ಜೈಮಿನಿ ಭಾರತ ವಾಚನ

ಮೈಸೂರು ಆಲ್ ಇಂಡಿಯಾ ರೇಡಿಯೊ ಕೇಂದ್ರದಿಂದ ನಾಳೆ ಸಂಜೆ ೬। ಗಂಟೆಗೆ ಶ್ರೀ ಸಿ ಕೆ. ಪುಟ್ಟಣ್ಣಯ್ಯನವರು ಸೀತಾ ಪರಿತ್ಯಾಗ ಅಥವಾ ಲವಕುಶ ಜನನ ಎಂಬ ಜೈಮಿನಿ ಭಾರತದ ಭಾಗದ ವಾಚನ ಮಾಡುವರು.

ಸಿದ್ಧಲಿಂಗಯ್ಯನವರಿಗೆ ಅನರ್ಹತೆ ಇಲ್ಲ

ರಾಜಪ್ರಮುಖರ ನಿರ್ಧಾರ

ಬೆಂಗಳೂರು ೮

ಮಾಜಿ ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ಧಲಿಂಗಯ್ಯನವರು ತಿರುಗಿ ಶಾಸನ ಸಭಾ ಸದಸ್ಯರಾಗಿರಲು ಅನರ್ಹತೆ ಹೊಂದಿರುವುದಿಲ್ಲವೆಂದು ಭಾರತದ ಚುನಾವಣಾ ಸಮಿತಿಯವರು ಇತ್ತಿರುವ ಸಲಹೆಯಂತೆ ರಾಜಪ್ರಮುಖರು ನಿರ್ಧರಿಸಿರುವುದಾಗಿಯೂ, ಈ ಬಗ್ಗೆ ಶಾಸನ ಸಭೆಯು ೧೩ ನೇ ತಾ॥ ಸೇರಿದಾಗ ಅಲ್ಲಿ ಪ್ರಕಟಿಸ ಹೊರಡಿಸುವುದೆಂದೂ ತಿಳಿದುಬಂದಿದೆ ತಾವು ಪ್ರದತ್ತ ಕೈಗಾರಿಕೆ ಸಂಬಂಧವಾಗಿ ಅವರ ಮೇಲೆ ಕೋರಿದ್ದ ಶ್ರೀ ಬಿ ಎ ನಾರಾಯಣರೆಡ್ಡಿಯವರು ಚುನಾವಣಾ ಕಮಿಷನರ ಮುಂದೆ ದೂರು ಕೊಟ್ಟಿದ್ದರು

ಲಕ್ಕವಳ್ಳಿ ಬಳಿ ಖೈದಿಗಳ ಶಿಬಿರ

ಖೈದಿಗಳು ಸಭ್ಯರಂತೆ ಜೀವನವನ್ನು ನಡೆಸಲು ಅವರಲ್ಲಿ ಸುಧಾರಣೆ ತರುವುದಕ್ಕಾಗಿ ಸರ್ಕಾರದವರು ಕ್ಯಾಲಿಪೋರ್ನಿಯದಲ್ಲಿರುವ ಆನ್ಯೊ ಫ್ರೀ ರೋಡ್ ಕ್ಯಾಂಪ್ ಸಿಸ್ಟಂ ಎಂಬ ಅಮೆರಿಕದ ಮಾದರಿಯ ಏರ್ಪಾಡನ್ನು ಇಲ್ಲಿ ಜಾರಿಗೆ ತಂದು, ಪ್ರಾಯೋಗಿಕವಾಗಿ, ಲಕ್ಕವಳ್ಳಿ ಜಲಾಶಯ ನಿರ್ಮಾಣದ ಪ್ರದೇಶಕ್ಕೆ ೫೦ ಜನ ಖೈದಿಗಳನ್ನು ಕಳುಹಿಸಿರುವರು ೧ ತಿಂಗಳವರೆಗೆ ಅವರು ಸರಿಯಾಗಿ ವರ್ತಿಸಿದರೆ, ಅವರ ಸಂಸಾರದವರು ಅವರೊಡನೆ ಇರಲು ಅವಕಾಶ ಕೊಡಲಾಗುವುದೆಂದೂ, ಈ ಯೋಜನೆಗೆ ೭,೦೦೦ ರೂ. ವೆಚ್ಚವಾಗುವುದೆಂದೂ ಹೇಳಲಾಗಿದೆ. ಖೈದಿಗಳು ಮಾಡುವ ಕೆಲಸದ ಕೂಲಿಯನ್ನು ಕಾಯ್ದಿರಿಸಿ ಬಿಡುಗಡೆಯಾದ ನಂತರ ಅವರಿಗೆ ಕೊಡಲಾಗುವುದೆಂದೂ, ಇದಲ್ಲದೆ ಶೈಲು ಶಿಕ್ಷೆಯಲ್ಲಿ ರಿಯಾಯಿತಿಯನ್ನು ಕೊಡಲಾಗುವುದೆಂದೂ ಹೇಳಲಾಗಿದೆ ಡಕಾಯಿತರು ಮತ್ತು ಕೇಡಿಗಳಿಗೆ ಈ ಸೌಕರ್ಯವು ಲಭಿಸುವುದಿಲ್ಲ

ಸಂಸ್ಥಾನದಲ್ಲಿ, ಅಭಿವೃದ್ಧಿ ಕಾರ್ಯಗಳಿಗೆ ೩ ಕೋಟಿ ರೂ. ಸಾಲ

ಮೈಸೂರು ಸಂಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಮೈಸೂರು ಸರ್ಕಾರದವರು ೩ ಕೋಟಿ ರೂ ಗಳ ಸಾಲವನ್ನು ಎತ್ತುವುದಕ್ಕೆ ಕೇಂದ್ರ ಸರ್ಕಾರದವರು ಅನುಮತಿಯಿತ್ತಿರುವರೆಂದು ವರದಿಯಾಗಿದೆ.

ಪೌರಸಭೆ ಮೇಲೆ ೫೦೦ ದಾವಾಗಳು

ಮನೆಗಂದಾಯ ಹೆಚ್ಚಿಸಿದುದಕ್ಕಾಗಿ

ಬೆಂಗಳೂರು ೮

ಇಲ್ಲಿನ ಪೌರ ಸಭೆಯವರು ಮನೆಗಂದಾಯವನ್ನು ಹೆಚ್ಚಿಸಿರುವುದಕ್ಕಾಗಿ ಪ್ರತಿಭಟಿಸಿ, ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಸುಮಾರು ೫೦೦ ದಾವಾಗಳನ್ನು ತೆರಿಗೆದಾರರು ದಾಖಲ್ಮಾಡಿರುತ್ತಾರೆಂದು ತಿಳಿದುಬಂದಿದೆ

ಕಪಿನೀ ಪ್ರವಾಹಕ್ಕೆ ಸಿಕ್ಕಿದ ಆನೆ ಮರಿಯ ಮರಣ

ಕಪಿನೀ ನದಿಯ ಪ್ರವಾಹದಲ್ಲಿ ನೆನ್ನೆ ಆನೆ ಮರಿಯೊಂದು ತೇಲಿಬಂದು ನಂಜನಗೂಡಿನ ಸೇತುವೆ ಬಳಿ ಕಮಾನಿನಲ್ಲಿ ಸಿಕ್ಕಿಕೊಂಡು. ಸತ್ತುಹೋಗಿದ್ದಿತೆಂದೂ, ಈ ಬೆಳಗ್ಗೆ ಅದನ್ನು ಎಳೆದುಹಾಕಲಾಯಿತೆಂದೂ ವರದಿಯಾಗಿದೆ ಸೇತುವೆ ಮೇಲೆ ೪-೫ ಅಡಿ ಎತ್ತಿನ ಗಾಡಿಗಳನ್ನು ಬಿಡಲಾಗುತ್ತಿರುವುದೆಂದೂ, ಇತರ ವಾಹನ ಸಂಚಾರಕ್ಕೆ ಇನ್ನೂ ಅವಕಾಶ ಕೊಟ್ಟಿಲ್ಲವೆಂದೂ ಹೇಳಲಾಗಿದೆ

ಕನ್ನಂಬಾಡಿ ನೀರಿನ ಮಟ್ಟವು ೧೧೫ ಅಡಿ ಇಳಿಯಿತು

ಕನ್ನಂಬಾಡಿಯಲ್ಲಿ ಇಂದು ನೀರಿನ ಮಟ್ಟವು ೧೧೫ ಅಡಿಯಷ್ಟು ಕಡಿಮೆಯಾಗಿದೆ ವಿಶ್ವೇಶ್ವರಯ್ಯ ನಾಲೆಯೊಂದನ್ನು ಬಿಟ್ಟು ಬಾಕಿ ಎಲ್ಲಾ ನಾಲೆಗಳಲ್ಲೂ ನೀರನ್ನು ಬಿಡಲಾಗಿದೆ ನಾಳೆ ದಿನ ವಿಶ್ವೇಶ್ವರಯ್ಯ ನಾಲೆಗೆ ನೀರನ್ನು ಬಿಡಲಾಗುವುದು

ಜಿಲ್ಲಾಧಿಕಾರಿಗಳ ಕಾರಿಗೂ ಲಾರಿಗೂ ಡಿಕ್ಕಿ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ನೆನ್ನೆ ಬೆಂಗಳೂರಿಗೆ ಪ್ರಯಾಣ ಬೆಳೆಸುತ್ತಿದ್ದಾಗ, ಕೆಂಗೇರಿ ಬಳಿ ಅವರ ಮೋಟಾರಿಗೆ ಎದುರಾಗಿ ಬರುತ್ತಿದ್ದ ಲಾರಿಯೊಂದು ಡಿಕ್ಕಿ ಹೊಡೆದುದರ ಪರಿಣಾಮವಾಗಿ ಕಾರಿಗೆ ಜಖಂ ಆಯಿತೆಂದು ವರದಿಯಾಗಿದೆ ಕಾರಿನ ಡ್ರೈವರ್, ಮತ್ತು ಜಿಲ್ಲಾಧಿಕಾರಿಗಳ ಗುಮಾಸ್ತೆಯವರಿಗೆ ಸ್ವಲ್ಪ ಗಾಯವಾಗಿದೆ ಜಿಲ್ಲಾಧಿಕಾರಿಗಳು ಈ ಸಂಜೆ ನಗರಕ್ಕೆ ಹಿಂತಿರುಗಲಿದ್ದರು.

ರೈತರಿಗೆ ಸಾಲ ಕೊಡಲು ರಿಸರ್ವ್ ಬ್ಯಾಂಕ್ ಸಹಾಯ

ಬೆಂಗಳೂರು ೮

ಸಂಸ್ಥಾನದ ರೈತರುಗಳಿಗೆ ಸಹಕಾರ ಸಂಘಗಳ ಮೂಲಕ ಅಲ್ಪಾವಧಿ ಸಾಲವನ್ನು ಕೊಡಲು ಭಾರತದ ರಿಸರ್ವ್ ಬ್ಯಾಂಕಿನವರು [illegible] ರೂ ಗಳನ್ನು ಸಂಸ್ಥಾನಕ್ಕೆ ಕೊಡಲಿರುವರೆಂದೂ, ಈ [illegible] [illegible] ಬ್ಯಾಂಕಿನವರು [illegible] ಸಹಾಯವನ್ನು ೧ ಕೋಟಿ [illegible] ಸಂವರಿಂದೂ ತಿಳಿದುಬಂದಿದೆ.

ಕಾಂಗ್ರೆಸ್ ಸದಸ್ಯತ್ವದ ಶುಲ್ಕ ಹೆಚ್ಚಿಲ್ಲ

ಕಾಂಗ್ರೆಸ್ ಸಂಸ್ಥೆಯು ಸದಸ್ಯತ್ವದ ಶುಲ್ಕವನ್ನು ೪ ಆಣೆಯಿಂದ ೮ ಆಣೆಗೆ ಹೆಚ್ಚಿಸಬೇಕೆಂದು ಕಾಂಗ್ರೆಸ್ [illegible] ಸಮಿತಿಯು [illegible] ಎ. ಐ. ಸಿ. ಸಿ. [illegible] ಭಾಗವನ್ನು [illegible] ಕಲ್ಲ. [illegible] ಚರ್ಚೆ [illegible] ಬಗ್ಗೆಯೂ, ನಿರುದ್ಯೋಗದ ಪರಿಹಾರದ ಬಗ್ಗೆಯೂ ಸಲಾದ ಅಧಿಕೃತ ನಿರ್ಣಯಗಳನ್ನು, ಸ್ವದೇಶಿ ಭಾವನೆಯು [illegible] ಹಂತ [illegible] ಬಗ್ಗೆ [illegible] ನಿರ್ಣಯವನ್ನೂ ಅಂಗೀಕರಿಸಿದ ನಂತರ ಮುಕ್ತಾಯವಾಯಿತು

ಜಮ್ಮು ಸತ್ಯಾಗ್ರಹ ನಿಂತಿತು

ಜನಸಂಘ, ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತುಗಳ ಜಂಟಿ ಕ್ರಿಯಾ ಸಮಿತಿಯು ಹೂಡಿದ್ದ ಜಮ್ಮು ಸತ್ಯಾಗ್ರಹವನ್ನು ನಿಲ್ಲಿಸಲಾಗಿದೆ. ಜಮ್ಮು ಪರಿಷತ್ತಿನವರ ಚಳುವಳಿಗೆ ಬೆಂಬಲಕೊಡಲು ಸತ್ಯಾಗ್ರಹವು ನಡೆಯುತ್ತಿತ್ತು.

ಟಿ. ನರಸೀಪುರದ ತಾಲ್ಲೂಕು ಕಛೇರಿಯಲ್ಲಿ ನೀರು

ಟಿ ನರಸೀಪುರದ ತಾಲ್ಲೂಕು ಕಛೇರಿಯಲ್ಲಿ ೩ ಅಡಿ ನೀರು ನಿಂತಿರುವುದಾಗಿ ತಿಳಿದುಬಂದಿದೆ ಕಛೇರಿಯನ್ನು ಅಲ್ಲಿನ ಮುಸಾಫಿರ್ ಖಾನೆಗೆ ವರ್ಗಾಯಿಸಲಾಗಿದೆ

ಶ್ರೀರಂಗಪಟ್ಟಣ ರಸ್ತೆ ಮೇಲೆ ನೀರು

ಮೈಸೂರು-ಬೆಂಗಳೂರು ನಡುವೆ ಶ್ರೀರಂಗಪಟ್ಟಣ ಬಳಿ ಸೇತುವೆ ಮೇಲೆ ೩ ಅಡಿ ನೀರು ಉಕ್ಕಿ ಬಂದಿರುವುದರಿಂದ ರಸ್ತೆ ಸಂಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ

ಕೃಷ್ಣರಾಜಸಾಗರಕ್ಕೆ ಮಂತ್ರಿಗಳ ಭೇಟಿ

ಸ್ವಂ ವ. ಪ್ರೋ[ತ] ಬೆಂಗಳೂರು ೮

ಈ ದಿನ ಮಂತ್ರಿಗಳೆಲ್ಲರೂ ಕೃಷ್ಣರಾಜಸಾಗರಕ್ಕೆ ತೆರಳುವರು ಅಲ್ಲಿಯೇ ಈ ರಾತ್ರಿ ಅವರು ಸಭೆ ಸೇರುವರು. ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಚೀಫ್ ಇಂಜಿನಿಯರೊಡನೆ ಈ ದಿನ ಬೆಳಿಗ್ಗೆ ತೆರಳಿರುತ್ತಾರೆ

ಕೃಷ್ಣರಾಜಸಾಗರದ ಅಣೆಕಟ್ಟಿನ ಬಗ್ಗೆ ಯಾವ ಕಳವಳವೂ ಬೇಕಾಗಿಲ್ಲವೆಂದು ಹೇಳಲಾಗಿದೆ.

○ ತುಂಗಾನದಿ ಅಣೆಕಟ್ಟಿನ ಮೇಲೆ ೭ ಅಡಿ ನೀರು ಇದೆ

○ ಶ್ರೀ ಕೆ.ಎಸ್ ಗುರುಸ್ವಾಮಿಯವರು ಹಾಕಿರುವ ರಿಟ್ ಅರ್ಜಿಯಲ್ಲಿ ಹೈಕೋರ್ಟಿನವರು ಸೋಮವಾರ ತೀರ್ಪು ನೀಡಲಿರುವರು

ದೇಶ ಭಾಷೆಗಳಲ್ಲಿ ಶೀಘ್ರಲಿಪಿ

ಸರ್ಕಾರದ ಪ್ರೋತ್ಸಾಹದ ಅಗತ್ಯ

ಕನ್ನಡ ಶೀಘ್ರ ಲಿಪಿಯನ್ನು ಕಂಡು ಹಿಡಿದ ಮೈಸೂರು ಸರ್ಕಾರದ ನಿವೃತ್ತ ಅಸಿಸ್ಟೆಂಟ್ ಸೆಕ್ರೆಟರಿ ಮತ್ತು ಚೀಫ್ ರಿಪೋರ್ಟರ್ ಶ್ರೀ ಎ. ದೇವರಾವ್‌ರವರು ತಮ್ಮ ಶೀಘ್ರ ಲಿಪಿಯನ್ನು ಹಿಂದಿ, ಮರಾಠಿ ಮತ್ತು ತೆಲಗು ಮುಂತಾದ ಭಾಷೆಗಳಿಗೂ ಅನ್ವಯಿಸಲು ಸಂಶೋಧನೆಗಳನ್ನು ತಮ್ಮ ೭೦ನೇ ವಯಸ್ಸಿನಲ್ಲಿ ನಡೆಸುತ್ತಿರುವರೆಂದು ಗೊತ್ತಾಗಿದೆ ಹಿಂದಿ ಮತ್ತು ಮರಾಠಿಗಳ ಬಗ್ಗೆ ಅವರ ಸಂಶೋಧನೆಗಳು ಆಯುಕ್ತವಾಗಿವೆಯೆಂದೂ ಈ ಹೊಸ ಪದ್ಧತಿಗೆ ಉತ್ತೇಜನ ಕೊಡುವಂತೆ ಕೇಂದ್ರ ಸರ್ಕಾರದ ವಿದ್ಯಾ ಮಂತ್ರಿ ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಮೈಸೂರು, ಹೈದರಾಬಾದು ಮತ್ತು ಬೊಂಬಾಯಿ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿರುವರೆಂದೂ ತಿಳಿದುಬಂದಿದೆ

ಕನ್ನಡ ಶೀಘ್ರ ಲಿಪಿ ಶಿಕ್ಷಣವನ್ನು ಹತ್ತು ವರ್ಷಗಳ ಹಿಂದೆಯೇ ಮೈಸೂರು ಪೋಲೀಸು ಇಲಾಖೆಯಲ್ಲಿ ಜಾರಿಗೆ ತಂದುದಾದರೂ ಶೀಘ್ರಲಿಪಿಗಾರರಿಗೆ ಇದುವರೆಗೂ ಯಾವ ಸೌಲಭ್ಯಗಳನ್ನೂ ಕಲ್ಪಿಸದಿರುವುದರಿಂದ ಅವರು ತೊಂದರೆಗೊಳಗಾಗಿರುವರೆಂದೂ, ಆದ್ದರಿಂದ ಈಗಲಾದರೂ ಅವರಿಗೆ ಸೂಕ್ತವಾದ ಪ್ರೋತ್ಸಾಹವನ್ನು ಕೊಡಬೇಕೆಂದೂ ಮೈಸೂರು ಮುಖ್ಯ ಮಂತ್ರಿಗಳವರಿಗೆ ಬರೆದಿರುವ ಪತ್ರದಲ್ಲಿ ಶ್ರೀ ರಾಯರು ಕೋರಿದ್ದಾರೆ

ಈ ಪದ್ಧತಿಯನ್ನು ತೆಲುಗಿನಲ್ಲಿ ಬಳಸಲನುಕೂಲವಾಗುವಂತೆ ಸಂಶೋಧನೆಗಳನ್ನು ನಡೆಸುವ ಕಾರ್ಯವನ್ನು ಸಂಸ್ಥಾನದ ಕನ್ನಡ ಶೀಘ್ರ ಲಿಪಿ ಬೋಧಕರಾದ ಶ್ರೀ ಆರ್ ಗೋಪಾಲಕೃಷ್ಣರವರಿಗೆ ಶ್ರೀ ದೇವರಾಯರು ವಹಿಸಿರುವರೆಂದು ಗೊತ್ತಾಗಿದೆ

ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಈ ಪದ್ಧತಿಗೆ ಪ್ರೋತ್ಸಾಹ ಕೊಡುವುವೆಂದು ಆಶಿಸಲಾಗಿದೆ ಭಾರತದ ರಾಷ್ಟ್ರ ಭಾಷೆಯೇ ಮೊದಲಾಗಿ ಅನೇಕ ಭಾಷೆಗಳಿಗೆ ಶೀಘ್ರ ಲಿಪಿಯನ್ನು ಅಳವಡಿಸಿದ ಶ್ರೀ ದೇವರಾಯರ ಹೆಸರೂ ಸಹ ಇತಿಹಾಸ ಪ್ರಸಿದ್ಧವಾಗುವುದರಲ್ಲಿ ಸಂಶಯವಿಲ್ಲ

SRI GAYATHRI
TALKIES
From 8-7-53 For 2 days
Warner's
THE TANKS ARE COMING
Morning Shows on 11th & 12th
20th Century's
STELLA
With - Victor Mature

ಬೇಗಂ ಅಗಾಖಾನರ ದರೋಡೆ ಮೊಕದ್ದಮೆ

ಬೇಗಂ ಅಗಾಖಾನರಿಗೆ ಸೇರಿದ ೨ ಲಕ್ಷ ಪೌಂಡು ಬೆಲೆಯ ಆಭರಣಗಳನ್ನು ದರೋಡೆ ಮಾಡಿರುವುದಾಗಿ ಫ್ರಾನ್ಸಿನ ನ್ಯಾಯಾಸ್ಥಾನವೊಂದರಲ್ಲಿ ೧೦ ಜನರ ಒಂದು ಗುಂಪಿನ ಮೇಲೆ ಮೊಕದ್ದಮೆ ಹೂಡಲಾಗಿದೆ. ಆಪಾದಿತರ ಪೈಕಿ ೨ ಮಹಾ ಯುದ್ಧಗಳಲ್ಲಿ ಭಾಗವಹಿಸಿ ಖ್ಯಾತಿಗಳಿಸಿರುವ ಕರ್ನಲ್ ಲಿಂಡ್ಸೆ ಜಾರ್ಜ್ ವಾಟ್ಸೇರವರೂ, ಅವರ ಪತ್ನಿಯವರೂ ಇರುವರು ೧೯೪೯ರಲ್ಲಿ ಸಿನಿಮಾ ಚಾಕಚಕ್ಯದಂತೆ ಬೇಗಂ ಅಗಾಖಾನರ ಮೇಲೆ ದರೋಡೆ ನಡೆಸಲಾಯಿತೆಂದೂ ಹೇಳಲಾಗಿದೆ.

ಪೂಜೆಗಾಗಿ ಗುಡಿಗೆಹೋದವರಿಗೆ ಪ್ರವಾಹದಿಂದ ಬಂಧನ

ಬೆಳಗಾಂನಿಂದ ೧೭ ಮೈಲಿ ದೂರವಿರುವ ಒಂದು ದೇವಾಲಯದಲ್ಲಿ ಪೂಜೆಗಾಗಿ ಹೋದ ೪೦ ಜನರ ಗುಂಪೊಂದು ಆ ರಾತ್ರಿ ಅಲ್ಲಿಯೇ ಉಳಿದುಕೊಂಡು ಬೆಳಗ್ಗೆ ಎದ್ದು ನೋಡಲಾಗಿ ಹತ್ತಿರದಲ್ಲೇ ಹರಿಯುವ ಮಲಪ್ರಭಾ ನದಿಯಲ್ಲಿ ಪ್ರವಾಹವು ಉಕ್ಕಿ ದೇವಾಲಯವನ್ನು ಸುತ್ತುವರಿದಿತ್ತೆಂದೂ, ಅವರುಗಳನ್ನು ರಕ್ಷಿಸಲು ಬಂದ ಪೋಲೀಸು ಪಡೆಯೂ ಸಹ ಪ್ರವಾಹದಲ್ಲಿ ಸಿಕ್ಕಿಕೊಂಡು, ಅವರ ವಾಹನವು ನೀರಿನಲ್ಲಿ ತೇಲುತ್ತಿತ್ತೆಂದೂ ವರದಿಯಾಗಿದೆ ಅದಾದ ಮಾರನೇ ದಿನ ಬೇರೊಂದು ಸಹಾಯದ ಗುಂಪು ಬಂದುದಾಗಿಯೂ, ಅಷ್ಟು ಹೊತ್ತಿಗೆ ಪ್ರವಾಹವು ಇಳಿದು ಹೋಗಿದ್ದಿತೆಂದೂ ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೧ ಹೆಚ್ ಎಸ್ ಪ್ರಸನ್ನಲಕ್ಷ್ಮಿ ರಿಕಾರ್ಡು ಮಧ್ಯಾಹ್ನ ೧-೩೦ ಕ್ಲಾರಿಯೊನೆಟ್ ೨ ಹೆಚ್ ಎಸ್ ಪ್ರಸನ್ನಲಕ್ಷ್ಮಿ ಸಂಗೀತ. ಸಂಜೆ ೫-೩೦ ಮಕ್ಕಳ ವಿ ರಾಮಯ್ಯ, ಪಿಟೀಲು ೬-೧೫ ಸಿ ಕೆ ಪುಟ್ಟಣ್ಣಯ್ಯ- ಭಾರತವಾಣಿಸ ೭-೫ ರಿಕಾರ್ಡು ಸಂಗೀತ ೭-೩೦ ಹಿಂದಿ ಭಜನೆ ೮-೩೦ ವಿದ್ಯಾರ್ಥಿಗಳಿಗಾಗಿ- ವಿವಿಧ ಕಾರ್ಯಕ್ರಮ. ಕವಿ- ಕಾವ್ಯ, ಕೂಡ್ಲಿ ಚಿದಂಬರಂರವರ ಭಾಷಣ, ಶಿ ವಿ. ಜಿ. ಯವರ ಕೃತಿ- ಎಂ. ವಿ ಮೂಲತಿಯವರಿಂದ. ೯-೧೫ ಗಿಟಾರ್ ೯-೩೦ ನಿಮ್ಮ ಮೆಚ್ಚಿನ ಗೀತೆಗಳು.

ಮನೆ ಬಿಕರಿಗೆ ಇದೆ

ಮೈಸೂರು ಜಯನಗರದಲ್ಲಿರುವ 2847-2ನೇ ನಂ ಮನೆ ಸಲ್ಲಿ ದೀಪ, ನಲ್ಲಿ, ಕಾಂಪೌಂಡು ಇವೆ ಕೋರ್ಟ್, ರೈಲ್ವೆ ಸ್ಟೇಷನ್, ಕಾಲೇಜುಗಳಿಗೆ ಸಮೀಪವಾಗಿದೆ.

ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ :—

ಹೆಚ್. ಆರ್. ನಾರಾಯಣರಾವ್,
ಪ್ರೊಪ್ರೈಟರ್, ಸಾಯಿನ್ ಸ್ಟೋರ್ಸ್,
2837, ಜಯನಗರ, ಮೈಸೂರು

ವಿವಾಹ ಮಹೋತ್ಸವಗಳು

ಬೆಂಗಳೂರಿನ ಸ್ವಂತ, ಕರ್ನಾಟಕ ಮುದ್ರಣಾಲಯದ ಮಾಲೀಕರಾದ ಶೀ ಕರ್ಣಾಚಾರ್ಯ, ಬಿ ಶಿವಮೂರ್ತಿ ಶಾಸ್ತ್ರಿಗಳವರು ತಮ್ಮ ಕುಮಾರ ಚಿ|| ರಾ|| ಹೆಚ್ ಎಸ್. ರೇಣುಕಾ ಪ್ರಸಾದ್‌ರವರಿಗೆ ಸಾಂಗ್ಲಿ ಪೌರಸಭಾ ಟ್ರಸ್ಟಿನ ಆಡಳಿತಗಾರರಾದ ಶ್ರೀ ವಿ ಎಸ್. ಹಿರೇಮಠರವರ ಮಗಳು ಸೌ|| ಲೀಲಾದೇವಿಯವರನ್ನು ತಂದು ಕೊಂಡು ಕಳೆದ ಭಾನುವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಶ್ರೀ ಚನ್ನ ಸಮುದ್ರಂ ಶ್ರೀನಿವಾಸ [illegible]ರವರು ತಮ್ಮ ಕುಮಾರಿ ಸೌ|| ಶ್ರೀರಂಗಮ್ಮಾಳ್‌ರವರನ್ನು ಶ್ರೀ ಟಿ ರಾಮಸ್ವಾಮಿಯವರ ಪುತ್ರರೂ, ಕೊಯಮತ್ತೂರಿನ ಲಕ್ಷ್ಮಿ ಮಿಲ್ಲಿನಲ್ಲಿ ಕೇಂದ್ರ ಸುಂಕದ ನೌಕರರೂ ಆದ ಶ್ರೀ ಜಿ. ಸಂಪತ್‌ರವರಿಗೆ ಕೊಟ್ಟು ಅದಿನ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಶ್ರೀರಂಗಪಟ್ಟಣದ ಆಂಜನೇಯಸ್ವಾಮಿ ಅರ್ಚಕರಾದ ಶ್ರೀ ಜಿ ರಾಮಣ್ಣನವರು ತಮ್ಮ ಕುಮಾರ ಶ್ರೀ ಎಸ್ ಕೃಷ್ಣಮೂರ್ತಿಯವರಿಗೆ ಕನಕಪುರದ ಶ್ರೀ ಶ್ರೀನಿವಾಸ ಮೂರ್ತಿಯವರ ಮಗಳು ಸೌ|| ಸುಶೀಲಮ್ಮನವರನ್ನು ತಂದುಕೊಂಡು ಕಳೆದ ಭಾನುವಾರ ಪಶ್ಚಿಮ ವಾಹಿನಿಯಲ್ಲಿ ವಿವಾಹವನ್ನು ನಡೆಸಿದರು

ಗುಂಡ್ಲುಪೇಟೆಯ ಶ್ರೀ ಹೆಚ್ ಎಸ್. ರಾಮಣ್ಣನವರು ತಮ್ಮ ಕುಮಾರಿ ಸೌ|| ಕೃಷ್ಣವೇಣಿಯವರನ್ನು ಹಂಗಳದ ಶ್ರೀ ಎ್ ಶ್ರೀನಿವಾಸಯ್ಯನವರ ಪುತ್ರ, ಶ್ರೀ ಹೆಚ್. ಎಸ್ ಸುಬ್ರಹ್ಮಣ್ಯಂರವರಿಗೆ ಕೊಟ್ಟು ಕಳೆದ ಭಾನುವಾರ ಗುಂಡ್ಲುಪೇಟೆಯಲ್ಲಿ ವಿವಾಹವನ್ನು ನೆರವೇರಿಸಿದರು

ಒಲಂಪಿಯಾ ಟಾಕೀಸ್
10-7-53 ರಿಂದ · ಪ್ರತಿದಿನ 3 ಆಟಗಳು
ಉತ್ತಮ ಚಿತ್ರೀಕರಣ ಸಂಗೀತದೊಡಗೂಡಿದ,
ಹಾಸ್ಯರಸಭರಿತ ಸಾಮಾಜಿಕ ಚಿತ್ರ
★ **ಮಾಲ್ಕಿನ್** ★
ತಾರೆ:- ನೂರ್, ಸಜ್ಜನ್, ಆಘಾ,
ಗೋಪ್ ಮತ್ತು ಯಾಕೂಬ್
ಬರಲಿರುವ ಪ್ರದರ್ಶನ : 9-7-53 ರಿಂದ
ಸಗಣ

SRI GANESHA
TALKIES
From 9-7-53 : For 2 days
Universal's
BRIGHT VICTORY
Featuring :- Arthur Kennedy & Peggy Dow
The Greatest Living Love Story of To-Day's Generation
On 11-7-53
SANTAFE
(Technicolor)

ಗುಡ್ಡದಿಂದ ಲಾರಿ ಬಿದ್ದು ೨೪ ಜನರ ಮರಣ

ಕಾಬೂಲ್ ನಗರದ ಬಳಿ ಜನರಿಂದ ತುಂಬಿದ್ದ ಮೋಟಾರು ಲಾರಿಯೊಂದು ಕಳೆದ ೨ನೇ ತಾ|| ಹೋಗುತ್ತಾ, ಗುಡ್ಡವೊಂದರಿಂದ ಕೆಳಗಡೆ ಇದ್ದ [illegible] ಎಂಬ ಚಿಕ್ಕ ನದಿಗೆ ಉರುಳಿ, ೨೪ ಜನರು ಮಡಿದರೆಂದು ವರದಿಯಾಗಿದೆ.

ಮೈಸೂರು ಪೇಟೆ ಧಾರಣೆ

	[illegible]	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
[illegible]	[illegible]	
ಹೆಸರು	[illegible]	[illegible]
[illegible]	[illegible]	[illegible]
[illegible]	[illegible]	[illegible]
ತೆಂಗಿನಕಾಯಿ	[illegible]	[illegible]
[illegible]	[illegible]	[illegible]

ಪ್ರಭಾ 1-7-53 ರಿಂದ ದಿನವಹಿ 3 ಪ್ರದರ್ಶನ
ಬೈಸಿಕಲ್ ಥೀಫ್
ಇಂಗ್ಲಿಷ್
—: ಮಂ ದಿನ ಬಿಡುಗಡೆ :—
ಮಹಮಾರ
ತಾರೆ— [illegible]
ಸಂಗೀತ — ಅನಿಲ್ ಬಿಸ್ವಾಸ್

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

ಇದರಿಂದ ಸಕಲರಿಗೂ ಪ್ರಕಟಿಸುವುದೇನೆಂದರೆ, ಮೈಸೂರು [illegible] ಪುರದಲ್ಲಿ ಹೊಸದಾಗಿ ಕಟ್ಟಿಸಿರುವ [illegible] ಮನೆಗಳ ಪೈಕಿ 7050 ರೂಪಾಯಿ ಬೆಲೆಯ 6 ಮನೆಗಳೂ 7240 ರೂಪಾಯಿ ಬೆಲೆಯ 8 ಮನೆಗಳೂ ವಿಲೇ ಬಗ್ಗೆ ಸಿದ್ಧವಾಗಿರುತ್ತವೆ ಈ ಮನೆಗಳನ್ನು [illegible] ಮಾದರಿಯಾಗಿ ಕಟ್ಟಿರುವುದಲ್ಲದೆ, ನೀರು, ಎಲೆಕ್ಟ್ರಿಕ್ ದೀಪ [illegible] ಗಳನ್ನು [illegible] [illegible]

(ಸಹಿ) ಎಸ್. [illegible],
ಅಧ್ಯಕ್ಷರು

Edited, Printed and Published by A R Nagarajan at Sadhvi Press, 17 Subbiah Road, Mysore.

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕ್, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) [illegible] ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ‖ ಸಂಪಾದಕ: ... ‖ ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೯-೭-೧೯೫೩ [ಸಂಚಿಕೆ ೨೮೦

ಸಾಲ ಕೊಡುವುದಾಗಿ ಮೈಸೂರವರಿಗೆ ಮೋಸ

ಸಾಲ ಕೊಡುವುದಾಗಿ ಹೇಳಿ ಮೈಸೂರು ಪ್ರಮುಖರಿಗೆ ಮೋಸವೇ ?

ಬೊಂಬಾಯಿ ಲೇವಾದೇವಿಗಾರರು, ವಕೀಲರು ಮತ್ತು ಮೈಸೂರು ಏಜೆಂಟರ ದಸ್ತಗಿರಿ

ಮೈಸೂರು ೯

ಸಾಲ ಕೊಡುವುದಾಗಿ ಹೇಳಿ, ಮೈಸೂರಿನ ಹಲವು ಗಣ್ಯ ಮಹನೀಯರುಗಳಿಗೆ ೨೦-೨೫ ಸಾವಿರ ರೂ. ವರೆಗೆ ಬೊಂಬಾಯಿಯ ಹಲವರು ಮೋಸ ಮಾಡಿರುವ ಸ್ವಾರಸ್ಯ ಪ್ರಕರಣವೊಂದು ಈಗ ಹೊರಬಿದ್ದಿದೆ. ಸಾಲ ಕೊಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ಬಂದ ವಿಷಯವನ್ನು ತಿಳಿದು, ಇಲ್ಲಿನ ಶ್ರೀಗಳಾದ ಲೋಕಸೇವಾನಿರತ ವಿ. ನಾರಾಯಣರಾವ್, ಎಂ. ಎಸ್. ಮಾಧವರಾವ್, ರಟ್ಟೆಹಳ್ಳಿ ರಾಮಪ್ಪ ಮತ್ತು ಇನ್ನೂ ಹಲವರು ಬೊಂಬಾಯಿಯ ಶ್ರೀ ಕೆ. ಬೊಮ್ಮಾಜಿ ಎಂಬ ಲೇವಾದೇವಿಗಾರರೊಡನೆ ಪತ್ರವ್ಯವಹಾರ ನಡೆಸಿದರೆಂದೂ, ಬೊಮ್ಮಾಜಿಯವರು ಶ್ರೀ ವಿ. ನಾರಾಯಣರಾವ್ ರವರಿಂದ ೧೫,೭೫೦ ರೂ. ಗಳನ್ನು ಛಾಪಾ ಕಾಗದಕ್ಕೆಂದು ಪಡೆದರೆಂದೂ, ಅವರು ಆಧಾರ ಮಾಡಿಸಿಕೊಳ್ಳುವ ಆಸ್ತಿಯ ಪರಿಶೀಲನೆಗಾಗಿ ಮೈಸೂರಿಗೂ ಬಂದಿದ್ದರೆಂದೂ, ನಂತರ ಹಣವನ್ನು ತನಗೆ ಕೊಟ್ಟೇ ಇರಲಿಲ್ಲವೆಂದು ಹೇಳಿದರೆಂದೂ ವರದಿಯಾಗಿದೆ.

ಈ ಸಂಬಂಧವಾಗಿ ಬೊಂಬಾಯಿಯ ಪೊಲೀಸರಿಗೆ ದೂರು ಕೊಡಲಾಗಿದ್ದಿತು ಭಾರತದಲ್ಲಿ ಅಂತರ ಪ್ರಾಂತೀಯ ಏಜನ್ಸಿಯೊಂದು ಈ ರೀತಿಯ ಮೋಸ ಪ್ರಕರಣದಲ್ಲಿ ತೊಡಗಿರುವುದೆಂಬ ವಿಷಯವು ಕೇಂದ್ರ ಸರ್ಕಾರದವರ ಗಮನಕ್ಕೆ ಬಂದು ಅವರು ತನಿಖೆ ನಡೆಸುವಂತೆ ಪ್ರಾಂತ ಸರ್ಕಾರಗಳಿಗೆ ಸೂಚಿಸಿದ್ದರೆಂದೂ, ಅದೇ ಪ್ರಕಾರ ಇಲ್ಲಿನ ಸರ್ಕಾರದವರು ಕ್ರಮ ಕೈಗೊಂಡರೆಂದೂ ತಿಳಿದುಬಂದಿದೆ ನಗರದ ದೇವರಾಜಾ ಪೊಲೀಸರು ಈ ಸಂಬಂಧವಾಗಿ ಮೊಕದ್ದಮೆಯೊಂದನ್ನು ರಿಜಿಸ್ಟರ್ ಮಾಡಿಕೊಂಡು ನಾಲ್ಕು ದಿನಗಳ ಹಿಂದೆ, ಮೈಸೂರಿನ ನಿವಾಸಿಗಳಾದ ಶ್ರೀ ಕೆ. ಎ. ರಂಗಸ್ವಾಮಿ ಅಯ್ಯಂಗಾರ್ ಮತ್ತು ಕೃಷ್ಣಪ್ಪ ಎಂಬುವರನ್ನು ಬೆಂಗಳೂರಿನಲ್ಲಿ ದಸ್ತಗಿರಿ ಮಾಡಿ ಇಲ್ಲಿಗೆ ಕರೆತಂದು, ಅವರನ್ನು ನ್ಯಾಯಾಧೀಶರ ಮುಂದೆ ನಿಲ್ಲಿಸಿ ರಿಮ್ಯಾಂಡ್ ಪಡೆದಿರುವರು.

ಬೊಂಬಾಯಿಯಲ್ಲಿ ಅಲ್ಲಿನ ಶ್ರೀ ಕೆ ಬೊಮ್ಮಾಜಿ, ಅವರ ವಕೀಲರಾದ ಶ್ರೀ ದೇಸಾಯ್ ಮತ್ತು ಗುಮಾಸ್ತೆ ಗುರುನಾಥಪ್ಪ ಎಂಬುವರನ್ನು ದಸ್ತಗಿರಿ ಮಾಡಲಾಯಿತು ಅವರನ್ನು ಜಾಮೀನು ಮೇಲೆ ಬಿಡಲಾಗಿದೆ.

ರಂಗಸ್ವಾಮಿ ಅಯ್ಯಂಗಾರ್ ಮತ್ತು ಕೃಷ್ಣಪ್ಪನವರು ಬೊಂಬಾಯಿಯವರ ಏಜಂಟರಾಗಿ ಇಲ್ಲಿ ಕೆಲಸ ಮಾಡುತ್ತಿದ್ದವರೂ, ಬೊಮ್ಮಾಜಿಯವರಿಗೆ ಅವರ ವಕೀಲರೂ ಮತ್ತು ಗುಮಾಸ್ತರೂ ಸಹಾಯಕರಾಗಿದ್ದರೆಂದೂ ಹೇಳಲಾಗಿದೆ

ಇದೇ ಮೇರೆ ಶ್ರೀ ರಟ್ಟೆಹಳ್ಳಿ ರಾಮಪ್ಪನವರಿಂದಲೂ ಸುಮಾರು ೮ ೧೦ ಸಾವಿರ ರೂ. ಗಳನ್ನು ಅವರುಗಳು ಪಡೆದ

ನಂಜನಗೂಡು-ಮೈಸೂರು ರಸ್ತೆ ಸಂಚಾರಕ್ಕೆ ಅವಕಾಶ

ಪ್ರವಾಹದ ಭರ ಕಡಿಮೆಯಾಗಿದೆ

ಮೈಸೂರು ೯

ಕಪಿನೀ ಪ್ರವಾಹದ ಭರವು ಕಡಿಮೆಯಾಗಿ ಈಗ ನಂಜನಗೂಡು-ಮೈಸೂರು ರಸ್ತೆ ಸಂಚಾರಕ್ಕೆ ಅವಕಾಶವು ದೊರೆತಿದೆ ಗುಂಡ್ಲು ಹೊಳೆಯಲ್ಲಿಯೂ ಪ್ರವಾಹವು ಬಂದಿದ್ದುದಾಗಿಯೂ, ನಂಜನಗೂಡಿನಲ್ಲಿ ಹಲವು ಮನೆಗಳು ಬಿದ್ದುವೆಂದೂ ಹೇಳಲಾಗಿದೆ ಟಿ ನರಸೀಪುರದಲ್ಲಿ ಜನರಲ್ ಆಸ್ಪತ್ರೆಯನ್ನು ಹಂಗಿ ಆಸ್ಪತ್ರೆಗೆ ವರ್ಗಾಯಿಸಲಾಗಿದೆ ಅಲ್ಲಿನ ಶ್ರೀನಿವಾಸ ಅಕ್ಕಿ ಗಿರಣಿಯಲ್ಲೂ ನೀರು ತುಂಬಿರುವುದಾಗಿ ವರದಿಯಾಗಿದೆ ಸುತ್ತ ಮುತ್ತಲೂ ತಗ್ಗಾದ ಪ್ರದೇಶದ ಜಮೀನಿಗೆ ನೀರು ನುಗ್ಗಿದೆ

ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್. ಸ್ವಾಮಿನಾಥನ್ ಮತ್ತು ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರಾದ ಶ್ರೀ ಕೃಷ್ಣಮೂರ್ತಿಯವರು ಈ ದಿವಸ ಟಿ ನರಸೀಪುರಕ್ಕೆ ಪರಿಶೀಲನೆಗಾಗಿ ತೆರಳಿದರು.

ಟಿ. ನರಸೀಪುರದ ತಾಲ್ಲೂಕು ಕಛೇರಿಯ ರಿಕಾರ್ಡುಗಳನ್ನೂ, ಸಬ್ ರಿಜಿಸ್ಟ್ರಾರ್ ಮತ್ತು ಪೊಲೀಸು ಕಛೇರಿಗಳನ್ನೂ ಅಲ್ಲಿನ ಪ್ರವಾಸಿ ಮಂದಿರಕ್ಕೆ ವರ್ಗಾಯಿಸಲಾಗಿದೆಯೆಂದು ಹೇಳಲಾಗಿದೆ

ಯುವಕನ ಹೊಟ್ಟೆಯಲ್ಲಿ ಗರ್ಭಾಶಯ !

ಟರ್ಕಿಯ ಆಸ್ಪತ್ರೆಗೆ ೨೨ ವರ್ಷದ ಯುವಕನೊಬ್ಬನನ್ನು ಹೊಟ್ಟೆ ನೋವಿನ ಸಂಬಂಧವಾಗಿ ಚಿಕಿತ್ಸೆಗೆ ಸೇರಿಸಿದಾಗ ವೈದ್ಯರು ಪರೀಕ್ಷೆ ನಡೆಸಲಾಗಿ ಅವನ ಉದರದಲ್ಲಿ ಒಂದು ಗರ್ಭಾಶಯ ಮತ್ತು ಮೂತ್ರ ಜನನಾಂಗಗಳು ಇದ್ದುವೆಂದು ಗೊತ್ತಾಗಿದೆ ಶಸ್ತ್ರ ಚಿಕಿತ್ಸೆ ನಡೆಸಿ ಅವುಗಳನ್ನು ತೆಗೆದುಹಾಕಲಾಯಿತೆಂದು ತಿಳಿದುಬಂದಿದೆ.

ನಗರದ ವರ್ತಕರಾದ ಶ್ರೀ ಚಂದ್ರಶೇಖರಯ್ಯ ಮತ್ತು ಸರ್ವ ಹೊಸ್ಸ ಸಿಲ್ಕ್ ಮಿಲ್ಸಿನ ಶ್ರೀ ನರಸಿಂಹ ಸ್ವಾಮಿಯವರಿಂದಲೂ ಸಾವಿರಾರು ರೂ ಗಳನ್ನು ಪಡೆದು ಅವರಿಗೂ ಮೋಸ ಮಾಡಲಾಗಿದ್ದಿತೆಂದು ಹೇಳಲಾಗಿದೆ.

ಪೂರ್ವ ಬರ್ಲಿನ್ ಸರ್ಕಾರ ಪ್ರದರ್ಶನಕಾರರಿಗೆ ಬಗ್ಗಿತು

ಪೂರ್ವ ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್‌ಗಳ ನಡುವೆ ಯಾವ ಪ್ರತಿಬಂಧಕವೂ ಇಲ್ಲದಂತೆ ಇಂದಿನಿಂದ ಸಂಚಾರವನ್ನು ಏರ್ಪಡಿಸಲು ಪೂರ್ವ ಜರ್ಮನಿ ಸರ್ಕಾರದವರು ಒಪ್ಪಿರುತ್ತಾರೆ. ಹಾಗೆ ಸಂಚಾರಾವಕಾಶವು ದೊರೆಯದಿದ್ದರೆ ಸಾರ್ವತ್ರಿಕ ಮುಷ್ಕರ ನಡೆಸುವುದಾಗಿ ಅಲ್ಲಿನ ಕಾರ್ಮಿಕರು ಎಚ್ಚರಿಕೆಯಿತ್ತಿದ್ದರು ಕಳೆದ ೧೭ನೇ ತಾರೀಖಿನಿಂದ ಪೂರ್ವ ಬರ್ಲಿನ್ ಮೇಯರರ ಆಜ್ಞೆಯಂತೆ ಓಡಾಟಕ್ಕೆ ನಿರ್ಬಂಧವನ್ನು ಹಾಕಲಾಗಿದ್ದಿತು

ಕಾವೇರಿ ಪ್ರವಾಹದಲ್ಲಿ ಮೊಸಳೆ

ಕೃಷ್ಣರಾಜಸಾಗರದಿಂದ ಬಿಡಲ್ಪಟ್ಟ ಪ್ರವಾಹದ ನೀರು ಅತಿಯಾಗಿ, ಕಾವೇರಿ ನದಿಯು ಉಕ್ಕಿ ಹರಿದು ಪಾತ್ರ ಬಳಿ ಇರುವ ಭತ್ತದ ಗದ್ದೆಗಳಿಗೆ ತುಂಬಾ ನಷ್ಟವಾಗಿದೆ ಪಶ್ಚಿಮ ವಾಹಿನಿ ಸೇತುವೆ ಮೇಲೆ ನೀರು ೪ ಅಡಿ ಏರಿತ್ತು ಇದ್ದಿತು ಸಾರಾಯಿ ಜನರು ಶ್ರೀರಂಗಪಟ್ಟಣದ ಕೈಲಾಸ ಸೇತುವೆ ಮೇಲೆ ಹೋಗುತ್ತಿದ್ದುದು ಕಂಡುಬಂದಿತು. ಪ್ರವಾಹದಲ್ಲಿ ದನಕರುಗಳೂ, ಹಾವುಗಳೂ, ಒಂದು ಭಾರಿ ಮೊಸಳೆಯೂ ತೇಲಿ ಬಂದುವೆಂದು ಹೇಳಲಾಗಿದೆ. ಜನರಾರಿಗೂ ಅಪಾಯವಾಗಿಲ್ಲ.

ಕಾವೇರಿಯ ಪೂರ್ವ ವಾಹಿನಿಯಲ್ಲಿ ಒಂದು ಕಡೆ ಪ್ರವಾಹದಿಂದ ತಪ್ಪಿಸಿಕೊಳ್ಳಲು ಒಬ್ಬ ಸನ್ಯಾಸಿಯು ಮರವನ್ನು ಹತ್ತಿ ಕುಳಿತಿರುವುದಾಗಿ ವರದಿಯಾಗಿದೆ.

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ೧೨೨.೪೬ ಅಡಿ

ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು ೧೨೨.೪೬ ಅಡಿ ಇದೆ. ವಿಶ್ವೇಶ್ವರಯ್ಯ ನಾಲೆಗೆ ಇಂದು ನೀರನ್ನು ಬಿಡಲಾಗಿದೆ.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಸಚಿವರಾದ ಶ್ರೀಗಳು ಸಿದ್ಧವೀರಪ್ಪ, ಚನ್ನಯ್ಯ, ರಾಮಚಂದ್ರರಾವ್ ರವರು ಅಲ್ಲಿ ಪರಿಶೀಲನೆ ನಡೆಸಿದರು.

ವ್ಯವಸಾಯ ಕಾರ್ಯದರ್ಶಿಯಾಗಿ ಮಹಮದ್ ಅಹಮದ್

ರಜಾ ಮೇಲಿರುವ ಜಿಲ್ಲಾಧಿಕಾರಿ ಶ್ರೀ ಕೆ. ಮಹಮದ್ ಅಹಮದ್‌ರವರನ್ನು ಇದೇ ೧೫ ನೇ ತಾರೀಖಿನಿಂದ ಸರ್ಕಾರದ ಅರಣ್ಯ ಮತ್ತು ವ್ಯವಸಾಯ ಇಲಾಖಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ದುರಾನಿಯವರಿಗೆ ದಂಡ ರದ್ದು

ಬೆಂಗಳೂರು ೯

ಮೈಸೂರಿನ ಶ್ರೀ ಅಹಮದ್ ಖಾನ್ ದುರಾನಿ ಮತ್ತು ಇತರ ಮೂವರಿಗೆ ಮೈಸೂರು ನಗರ ನ್ಯಾಯಾಧೀಶರು ವಿಧಿಸಿದ್ದ ದಂಡವನ್ನು ಹೈ ಕೋರ್ಟಿನವರು ರದ್ದುಗೊಳಿಸಿರುತ್ತಾರೆ ಫ್ಯಾಕ್ಟರಿ ಹತ್ತಿ ದರದ ಬಗ್ಗೆ ಆಪಾದಿತರು ಪಟ್ಟಿ ಇಡುತ್ತಿದ್ದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದ್ದಿತು. ಶಿಕ್ಷೆಯ ವಿರುದ್ಧವಾಗಿ ಆಪಾದಿತರು ಹೈಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿದ್ದರು. ಅರ್ಜಿಯನ್ನು ಪರಿಶೀಲಿಸಿದ ಇಬ್ಬರು ನ್ಯಾಯಾಧೀಶರ ಪೈಕಿ, ಜಸ್ಟಿಸ್ ಶ್ರೀ ಎನ್ ಬಾಲಕೃಷ್ಣಯ್ಯನವರು ಶಿಕ್ಷೆಯನ್ನು ಖಾಯಂ ಮಾಡಬೇಕೆಂದೂ, ಜಸ್ಟಿಸ್ ಶ್ರೀ ಟಿ ಎನ್. ಮಲ್ಲಪ್ಪನವರು ಅದನ್ನು ಖುಲಾಸೆ ಮಾಡಬೇಕೆಂದೂ ಅಭಿಪ್ರಾಯಪಟ್ಟ ಮೇಲೆ ವಿಷಯವು ಶ್ರೀ ಬಿ ವಾಸುದೇವಮೂರ್ತಿಯವರ ಮುಂದೆ ಹೋಗಿ ಅವರು ಆಪಾದಿತರಿಗೆ ಬೆನಿಫಿಟ್ ಆಫ್ ಡೌಟ್ ಕೊಟ್ಟು ಖುಲಾಸೆ ಮಾಡಿದರು.

ಚೀಣದಲ್ಲಿ ತೀವ್ರ ಅನಾವೃಷ್ಟಿ

ಚೀಣದಲ್ಲಿ ಈ ವರ್ಷ ತೀವ್ರ ಅನಾವೃಷ್ಟಿಯಾಗಿ ೬೦ ಲಕ್ಷ ಭತ್ತದ ಗದ್ದೆಗಳಿಗೆ ನಷ್ಟ ಸಂಭವಿಸಿರುವುದೆಂದು ಗೊತ್ತಾಗಿದೆ. ಧಾನ್ಯ ಮತ್ತು ಆಲೂಗೆಡ್ಡೆ ಪೈರುಗಳು ನಾಶವಾಗಿವೆಯೆಂದು ವರದಿಯಾಗಿದೆ

೨೧ ದಿನ ಸನ್ಯಾಸಿಯ ನಿರ್ವಿಕಲ್ಪ ಸಮಾಧಿ

ಕಡಪದ ಅಂಕಾಳಮ್ಮನ ದೇವಾಲಯದ ಗರ್ಭ ಗುಡಿ ಪಕ್ಕದಲ್ಲಿ ನಿರ್ಮಿತವಾಗಿರುವ ಅತಿ ತಗ್ಗಾದ ನೆಲ್ಮಾಳಿಗೆಯ ಒಂದು ಪುಟ್ಟ ನಿವಾಸದಲ್ಲಿ ನಿತ್ಯಾನಂದ ಎಂಬ ಸನ್ಯಾಸಿಯೊಬ್ಬರು ಕಳೆದ ೩ ವಾರಗಳಿಂದಲೂ ನಿರ್ವಿಕಲ್ಪ ಸಮಾಧಿಯಲ್ಲಿರುತ್ತಾರೆ ಆತ್ಮ ಶುದ್ಧಿ ಮತ್ತು ಜಗತ್ಕಲ್ಯಾಣಕ್ಕಾಗಿ ಅವರು ಇನ್ನೂ ಒಂದು ವಾರ ಸಮಾಧಿಯಲ್ಲಿರುವರು ಎರಡು ಸಲ ಮಾತ್ರ ಅವರು ಸಮಾಧಿಯಿಂದ ಎದ್ದು ಹೊರಗೆ ಬಂದು ಶಿಷ್ಯರಿಗೆ ದರ್ಶನವಿತ್ತರು. ಒಳಗಡೆ ಒಬ್ಬರು ಕಾಲುಗಳನ್ನು ನೀಡುವಷ್ಟೂ ಸಹ ಸ್ಥಳವಿರುವುದಿಲ್ಲ. ಅಲ್ಲಿ ಸ್ವಾಮಿಯವರು ಕುಳಿತು ತಪಸ್ಸನ್ನು ನಡೆಸುತ್ತಿರುವರು. ಯಾರಾದರೂ ಒಳಗಡೆ ಹೋಗಬೇಕಾದರೂ ಎದೆಯಲ್ಲಿ ತೆವಳಿಕೊಂಡು ಹೋಗಬೇಕಾಗಿದೆ. ಸಮಾಧಿಯು ಆರಂಭಕ್ಕೆ ಮೊದಲು ಅವರು ದಿವಸಕ್ಕೊಮ್ಮೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದು ಅನಂತರ, ಹಾಲೂ ಹಣ್ಣುಗಳನ್ನು ಸೇವಿಸುತ್ತಿದ್ದರೆಂದೂ ಈಗ ಪೂರ್ಣ ಉಪವಾಸ ಮಾಡುತ್ತಿರುವರೆಂದೂ ಹೇಳಲಾಗಿದೆ.

○ ಬೊಂಬಾಯಿಯ ಕುರುಡರ ಶಾಲೆಯ ನಾಯಿಯೊಂದು ೬ ಮರಿಗಳನ್ನು ಹಾಕಿದೆ ಅವೆಲ್ಲವೂ ಕುರುಡಾಗಿವೆ. ಅವು ಹಡೆಯಲು ಪ್ರಾರಂಭವಾದಾಗ ವ್ಯಾಕ್ಸಿನೇಷನ್ ಕ್ರಮದಲ್ಲಿ ಮತ್ತು ಸುತ್ತುತ್ತಿದ್ದುವೆಂದೂ, ಕಣ್ಣು ವೈದ್ಯ ಶಾಲೆಯಲ್ಲಿ ಅವುಗಳ ಕಣ್ಣಿಗೆ ಚಿಕಿತ್ಸೆ ನಡೆಸಲು ಈಗ ಅವು ನೆಟ್ಟಗೆ ಹೋಗಬಲ್ಲವೆಂದೂ ಹೇಳಲಾಗಿದೆ.

ಉನ್ನತ ಅಧಿಕಾರಿಗಳ ತುಟ್ಟಿ ಭತ್ಯ ರದ್ದು

೧೦೦೦ರೂ ಮೇಲ್ಪಟ್ಟು ಸಂಬಳ ಪಡೆಯುವ ಅಧಿಕಾರಿಗಳ ತುಟ್ಟಿ ಭತ್ಯವನ್ನು ಜೂನ್ ೧ ನೇ ತಾರೀಖಿನಿಂದ ೩ ವರ್ಷದ ಅವಧಿಯಲ್ಲಿ, ೩ ಕಂತುಗಳಲ್ಲಿ ನಿಲ್ಲಿಸಲಾಗುವುದೆಂದು ಮದ್ರಾಸು ಸರ್ಕಾರದ ಪ್ರಕಟಣೆ ತಿಳಿಸುತ್ತದೆ

ಹೋಟೇಲು ಕೆಲಸಕ್ಕೆ ಜಪಾನ್ ರಾಜಕುಮಾರಿ

ಜಪಾನಿನ ಚಕ್ರವರ್ತಿನಿಯ ನಾದಿನಿಯಾದ ರಾಜಕುಮಾರಿ ಅಬಾಕೊ ಕುನಿಯವರು ಟೋಕಿಯೊ ಬಳಿ ಒಂದು ಹೋಟೇಲಿನಲ್ಲಿ ಕೆಲಸಗಾರಳಾಗಿ ಸೇರಿಕೊಂಡಿರುವರು ಸಾಮಾನ್ಯ ಜನರಂತೆ ಬಾಳಿ, ಅವರಂತೆಯೇ ಜೀವನದಲ್ಲಿ ಹರ್ಷ ಪಡಬೇಕೆಂದು ತಮ್ಮ ಆಶೆಯಾಗಿರುವುದಾಗಿ ಆಕೆಯು ಹೇಳಿರುತ್ತಾರೆ.

ಎ. ಎಸ್. ಖಲೀಲರಿಗೆ ನಿವೃತ್ತಿ ಪೂರ್ವ ರಜಾ

ಸರ್ಕಾರದ ವ್ಯವಸಾಯ ಇಲಾಖಾ ಕಾರ್ಯದರ್ಶಿಯಾಗಿರುವ ಶ್ರೀ ಎ. ಎಸ್. ಖಲೀಲ್ ರವರಿಗೆ ಇದೇ ೧೫ನೇ ತಾ॥ ನಿಂದ ನಿವೃತ್ತಿ ಪೂರ್ವ ೬ ತಿಂಗಳ ರಜಾವನ್ನು ಕೊಡಲಾಗಿದೆ ಬೆಂಗಳೂರು ಜಿಲ್ಲಾ ನ್ಯಾಯಾಧೀಶ ಶ್ರೀ ಕೆ ಎ ಪದ್ಮನಾಭಯ್ಯನವರನ್ನು ಪ್ರಥಮ ದರ್ಜೆಯಲ್ಲಿ ಖಾಯಂ ಮಾಡಿ, ಶ್ರೀ ಟಿ ಕೆಂಪಯ್ಯನವರನ್ನು ಎರಡನೇ ದರ್ಜೆ ಜಿಲ್ಲಾ ಜಡ್ಜರಾಗಿ ನೇಮಕ ಮಾಡಿದೆ

ಸಿಡುಬಿನಿಂದ ೩ ಮರಣ

ಕಳೆದ ೩೦ನೇ ತಾ॥ಗೆ ಮುಗಿದ ಎರಡು ವಾರಗಳಲ್ಲಿ ಮೈಸೂರು ನಗರದಲ್ಲಿ ಸಿಡುಬು ಉಪದ್ರವವು ಎದ್ದು ಜನರಿಗೆ ತಗುಲಿ ಮೂರು ಮಂದಿ ಮಡಿದರೆಂದು ವರದಿಯಾಗಿದೆ ೨೯೩ ಮಂದಿಗೆ ಹೊಸದಾಗಿ ಸಿಡುಬು ಹಾಕಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೨೦ ರಿಕಾರ್ಡು ಸಂಗೀತ ಮಧ್ಯಾಹ್ನ ೧-೩೦ ವೀಣೆ ೩ ವನಿತಾ ವಿಹಾರ-ಇದೇ ನವ್ಯ ದೆ ವರ ಪೂಜ್ಯ ಕನ್ನಡ ಕವಿ ಮತ್ತು ಕಾವ್ಯ- ಆದಿ ಪುರಾಣ- ನಂಜಪ್ಪನವರಿಂದ ನಾಗಣ್ಣನವರಿಂದ ೫-೬ ಭಾರತ ಸಂಜೆ ೫-೩೦ ಮಕ್ಕಳ ರಾಮಸ್ವಾಮಿ ಕೊಳಲು ೭-೧೫ ಕನ್ನಡ ಗೀತೆಗಳು ೭-೫ ಮತ್ತು ೮ ೩೦ ರತ್ನಮ್ಮ ಕೃಷ್ಣಮೂರ್ತಿ ಸಂಗೀತ ೮-೩೦ ಭಾರತ ಮತ್ತು ಕರ್ನಾಟಕದ ಜನಪದ ಗೀತೆ ೯-೧೫ ದೇವಿ ಮುಖರ್ಜಿ ಕರ್ ಶನಾಯ್ ೯-೩೦ ತರಂಗ ರಂಗ

ಮನೆಗಳು ಖರೀದಿಗಿವೆ

ಮೈಸೂರು ದೇವರಾಜ ಮೊಹಲ್ಲಾ ದೇವರಾಜ ಮಾರ್ಕೆಟ್ ಪಕ್ಕದಲ್ಲಿರತಕ್ಕಂತ 1563 ೧೦ ಮನೆ ಮತ್ತು ವಾಣಿವಿಲಾಸ ಮೊಹಲ್ಲಾ 11 ನೇ ಕ್ರಾಸ್ ಬೀದಿಯಲ್ಲಿ ನಂ. 2807 ಮನೆ ಇವುಗಳು ಖರೀದಿಗಿವೆ. ಹಳೇ ಮೈಸೂರು ಬ್ಯಾಂಕ್ ಪಕ್ಕದಲ್ಲಿರುವ ಬ್ರೋಕರ್ಸ್ ಸಿಂಡಿಕೇಟ್‌ನಲ್ಲಿ ವಿಚಾರಿಸಿ

ಪಾಕಿಸ್ತಾನದಲ್ಲಿ ಬಿಸಿಲಿನ ಬೇಗೆಯಿಂದ ಮರಣ

ಪಾಕಿಸ್ತಾನದ ವಾಯುವ್ಯ ಗಡಿನಾಡಿನಲ್ಲಿ ಬಿಸಿಲಿನ ತಾಪದಿಂದ ೨೦ಕ್ಕೂ ಹೆಚ್ಚು ಮಂದಿ ಮಡಿದಿರುವರು ಅಲ್ಲಿ ಉಷ್ಣಾಂಶವು ೧೧೭ ಡಿಗ್ರಿಗಳ ವರೆಗೆ ಇದ್ದಿತು ಕರಾಚಿ ಬಳಿಯೂ ಅನೇಕರು ಇದೇ ಕಾರಣಕ್ಕಾಗಿ ಮಡಿದಿರುವರೆಂದು ಹೇಳಲಾಗಿದೆ

ಸಹಕಾರ ವಿಶ್ವ

ರಾಜಧಾನಿಯ ಪೌರ ಸಭಾ ಸದಸ್ಯರೂ, ಪ್ರಸಿದ್ಧ ಸಹಕಾರಿಗಳೂ ಆದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಮೇಲ್ಕಂಡ ಶಿರೋನಾಮೆಯಲ್ಲಿ ಸಹಕಾರ ತತ್ವದ ಮಹತ್ವವನ್ನು ಚಿತ್ರಿಸುವ ಕಾವ್ಯ ರೂಪದ ನಾಟಕವೊಂದನ್ನು ಬರೆದಿರುತ್ತಾರೆ. ಭಾರತ ಮಾತೆ, ಸಹಕಾರ ದೇವಿ ಮುಂತಾದವರು ನಟಿಸಿರುವ ದೃಶ್ಯಗಳನ್ನೂ ಕೊಡಲಾಗಿದೆ ಭಾರತದ ಉನ್ನತಿಗೆ ಸಹಕಾರವೇ ಮುಕ್ತಿಯ ಮಾರ್ಗವೆಂದು ಅವರು ವ್ಯಕ್ತಪಡಿಸಿರುತ್ತಾರೆ ಈ ಕಾವ್ಯವನ್ನು ಶ್ರೀ ತಿನಂತರಂಗಾಚಾರ್ಯರು ಕನ್ನಡಕ್ಕೆ ಅನುವಾದಿಸಿರುತ್ತಾರೆ ಪ್ರತಿಯೊಬ್ಬ ಸಹಕಾರಿಯೂ ಈ ಗ್ರಂಥವನ್ನು ಓದಿ ಅದರ ಭಾವವನ್ನು ಗ್ರಹಿಸಲು ಯೋಗ್ಯವಾಗಿದೆ ಬೆಲೆ ಎರಡು ಆಣೆ

ವಯಸ್ಕರ ಶಿಕ್ಷಣ ತರಗತಿ

ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯವರು ಸೋಮವಾರ ಶ್ರೀ ಕೆ ಬಸವರಾಜೆ ಅರಸಿನವರ ಭವನದಲ್ಲಿ ವಯಸ್ಕರಿಗಾಗಿ ೨ ತರಗತಿಗಳನ್ನು ತೆರೆದರು ಶ್ರೀ ಬಸವರಾಜೆ ಅರಸಿನವರು ಮಾತನಾಡಿ, ಅಕ್ಷರ ಜ್ಞಾನದ ಪ್ರಾಧಾನ್ಯತೆಯನ್ನು ವಿವರಿಸಿದರು ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯವರು ಚಲನ ಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು ಸಮಾರಂಭಕ್ಕೆ ಸಂಸ್ಥಾನ ಸಮಿತಿಯ ಕಾರ್ಯದರ್ಶಿ, ಶ್ರೀ ಎ ಭದ್ರಯ್ಯ ಮತ್ತು ಅಧಿಕಾರಿ ಶ್ರೀ ಟಿ. ಎ ತಿಮ್ಮೇಗೌಡರು ಆಗಮಿಸಿದ್ದರು

ಚಲುವಾಂಬಾ ಆಸ್ಪತ್ರೆ ಅಧಿಕಾರಿಗಳ ವರ್ಗ

ರಾಜಧಾನಿಯ ಚಲುವಾಂಬಾ ಆಸ್ಪತ್ರೆಯ ವೈದ್ಯಾಧಿಕಾರಿಣಿ,ಶ್ರೀಮತಿ ಲಲಿತಾ ಲಿಂಗಯ್ಯನವರನ್ನು ಬೆಂಗಳೂರಿನ ಮಲ್ಲೇಶ್ವರದ ಮೆಟರ್ನಿಟಿ ಆಸ್ಪತ್ರೆಗೆ ವರ್ಗಾಯಿಸಲಾಗಿದೆ

ಕಂಪಲ್ಸರಿ ಹಿಂದೀ ಸರಳ ವ್ಯಾಕರಣ

ಹೈಸ್ಕೂಲು ಮೂರು ತರಗತಿಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಂಪಲ್ಸರಿ ಹಿಂದೀ ಭಾಗಕ್ಕೆ ಅತ್ಯವಶ್ಯಕವಾದ ಗ್ರಂಥ ಬೆಲೆ ಕೇವಲ 0-6 0. ಕೇವಲ ಕೆಲವು ಪ್ರತಿಗಳು ಮಾತ್ರ ಉಳಿದಿವೆ

ಲೇಖಕರು:—ಚಿಕ್ಕನರಸಿಂಹಯ್ಯ, ಸಾಹಿತ್ಯ ವಿಹಾರದ ಮೈಸೂರು

Edited, Printed and Published by A.R Nagarajan at Sadhvi Press, D Subbiah Road, Mysore

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ಪ್ರೌಢ ಗಮಕ ಶಿಕ್ಷಣ ತರಗತಿ

ಗಮಕ ಶಿಕ್ಷಕರನ್ನು ತರಬೇತು ಮಾಡುವ ಉದ್ದೇಶದಿಂದ ಪ್ರೌಢ ಗಮಕ ಶಿಕ್ಷಣ ತರಗತಿಯೊಂದನ್ನು ಪರಿಷತ್ತಿನಲ್ಲಿ ಇದೇ ಆಗಸ್ಟ್ ೧ ರಿಂದ ತೆರೆಯಲಾಗುವುದು.

ಪ್ರಸಕ್ತ ವರ್ಷದಲ್ಲಿ ಈ ತರಗತಿಗೆ ಹತ್ತು ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ತೀರ್ಮಾನಿಸಲಾಗಿದೆ ಹತ್ತು ಜನಗಳಲ್ಲಿ ಇಬ್ಬರನ್ನು ಬೆಂಗಳೂರು ನಗರದಿಂದಲೂ ಉಳಿದವರನ್ನು ಕರ್ನಾಟಕದ ಉಳಿದ ಭಾಗಗಳಿಂದಲೂ ಆರಿಸಲಾಗುವುದು ಸ್ಥಳದ ಪ್ರತಿಯೊಬ್ಬ ವಿದ್ಯಾರ್ಥಿಗೂ ತಿಂಗಳಿಗೆ ಹತ್ತು ರೂಪಾಯಿನಂತೆ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದು ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ ಹೋಗಿ ಬರ ಮಾರ್ಗವೆಚ್ಚ ತರಗತಿ ರೈಲು ಛಾರ್ಜನ್ನೂ, ತಿಂಗಳಿಗೆ ಇಪ್ಪತ್ತು ರೂಪಾಯಿಗಳಂತೆ ವೇತನವನ್ನೂ ಕೊಡಲಾಗುವುದು ಹೊರಗಿನಿಂದ ಬರುವವರಿಗೆ ಪರಿಷತ್ತಿನಲ್ಲಿಯೇ ಉಚಿತವಾಗಿ ವಸತಿ ಕೊಡಲಾಗುವುದು ಊಟ ತಿಂಡಿಗಳ ಏರ್ಪಾಟನ್ನು ಅವರೇ ಮಾಡಿಕೊಳ್ಳಬೇಕು

ತರಗತಿಗೆ ಸೇರಬಯಸುವವರು ಪರಿಷತ್ತಿನ ಗಮಕ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಮೂರು ವರ್ಷ ಕಾಲವಾದರೂ ಕ್ರಮವಾದ ವಾಚನಾಭ್ಯಾಸವನ್ನು ಇಟ್ಟುಕೊಂಡಿರಬೇಕು ಇಲ್ಲವೆ ಗಮಕ ವಾಚನದಲ್ಲಿ ಸಾಕಷ್ಟು ಪರಿಶ್ರಮವುಳ್ಳವರು ಸಾರ್ವಜನಿಕ ಸಭೆಗಳಲ್ಲಿ ವಾಚನ ಮಾಡಿದವರಾಗಬೇಕು. ಇಂತಹವರ ಗಮಕ ಪ್ರತಿಭೆಯನ್ನು ಕುರಿತು ಸಂಸ್ಥೆ ವ್ಯಕ್ತಿಗಳಿಂದಾಗಲಿ ತಮ್ಮ ಅರ್ಹತೆಯ ಬಗ್ಗೆ ಪ್ರಶಸ್ತಿ ಪತ್ರಗಳನ್ನು ತರಬೇಕು. ಎಸ್ ಎಸ್ ಎಲ್ ಸಿ. ವರೆಗಾದರೂ ಸಾಮಾನ್ಯ ಶಿಕ್ಷಣ ಪಡೆದವರಾಗಬೇಕು.

ತರಗತಿ ಮೂರು ತಿಂಗಳ ಕಾಲ ಬೆಂಗಳೂರಿನಲ್ಲಿ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆಯುತ್ತದೆ

ಅಭ್ಯರ್ಥಿಗಳಾಗಬಯಸುವವರು ತಮ್ಮ ಅಪೇಕ್ಷಾಪತ್ರವನ್ನು ಎಲ್ಲ ವಿವರಗಳೊಡನೆ ಪರಿಷತ್ತಿಗೆ ಜುಲೈ ೧೫ನೆಯ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕು. ಈ ಸುಸಂಧಿಯನ್ನು ಉಪಯೋಗಿಸಿಕೊಂಡು ಸ್ಥಳೀಯ ಕರ್ನಾಟಕ ಸಂಘಗಳೂ ಅಕ್ಕ ಪಕ್ಕ ಸಂಘದ ಪರವಾಗಿ ಯಾರನ್ನಾದರೂ ಆರಿಸಿ ಕಳುಹಿಸಬೇಕೆಂದು ಕೋರಲಾಗಿದೆ

ವಕೀಲರ 'ಬುದ್ಧಿ ದಾನ'

ಬರೋಡೆಯ ಭೂದಾನ ಸಮಿತಿಯವರು ಶಿಫಾರಸು ಮಾಡುವಂತಹ ರೈತರುಗಳ ಪರವಾಗಿ ಉಚಿತ ವಕಾಲತ್ತನ್ನು ವಹಿಸಲು ತಾವು ಸಿದ್ಧರಾಗಿ ತಮ್ಮ "ಬುದ್ಧಿ ದಾನ" ಮಾಡುವುದಾಗಿ ಬರೋಡಾ ವಕೀಲರೊಬ್ಬರು ತಿಳಿಸಿರುತ್ತಾರೆ. ಕಳೆದ ವಾರ ಇದೇ ರೀತಿ ಸೂರತ್ತಿನ ಒಬ್ಬ ವಕೀಲರು ತಿಳಿಸಿದ್ದರು

ಪೂರ್ವ ಬರ್ಲಿನ್ನಿನಲ್ಲಿ ಪುನಃ ಗಲಭೆ

ಪೂರ್ವ ಬರ್ಲಿನ್ ನಗರದಲ್ಲಿ ಕಾರ್ಮಿಕರಿಗೂ ಪೋಲೀಸರಿಗೂ ಹೊಸ್ತೆ ಪುನಃ ಘರ್ಷಣೆಗಳಾದುವೆಂದು ವಾಯುವ್ಯ ಜರ್ಮನಿ ರೇಡಿಯೋ ತಿಳಿಸುತ್ತದೆ. ಕಳೆದ ೧೭ ನೇ ತಾ॥ ನಡೆದ ಗಲಭೆಗಳ ಸಂಬಂಧವಾಗಿ ದಸ್ತಗಿರಿಯಾಗಿರುವ ಕಾರ್ಮಿಕರನ್ನು ಬಿಡುವಂತೆ ಪ್ರದರ್ಶನ ನಡೆಸಿ, ಒತ್ತಾಯ ಮಾಡಲಾಯಿತೆಂದೂ, ಸರ್ಕಾರಿ ಭವನಗಳ ಮೇಲೆ ಮುತ್ತಿಗೆ ಹಾಕುವುದಾಗಿ ಕಾರ್ಮಿಕರು ಅಧಿಕಾರಿಗಳನ್ನು ಬೆದರಿಸಿದರೆಂದೂ ವರದಿಯಾಗಿದೆ. ನಗರದ ಇನ್ನೆರಡು ಕಡೆಗಳಲ್ಲೂ ಗಲಭೆಗಳಾದುವೆಂದೂ, ರಷ್ಯದ ಟ್ಯಾಂಕುಗಳು ಸಿದ್ಧವಾಗಿದ್ದುವೆಂದೂ ವರದಿಯಾಗಿದೆ,

ತಾಲ್ಲೂಕು ಕಾಂಗ್ರೆಸ್ ಅಧಿಕಾರ ವರ್ಗ

ಗುಂಡ್ಲುಪೇಟೆ ೭

ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಭೆ ಸೇರಿ, ಶ್ರೀ ಜಿ ಎ ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಜಿ ಎಂ. ರಾಜಣ್ಣನವರು ಉಪಾಧ್ಯಕ್ಷರಾಗಿಯೂ, ಶ್ರೀ ಜಿ ಬಿ ಚನ್ನಣ್ಣನವರು ಕಾರ್ಯದರ್ಶಿ ಮತ್ತು ಶ್ರೀ ಕೆ. ಸಿದ್ದನಾಯ್ಕರವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟಿರುವರು.

ಮೈಸೂರು ಪೇಟೆ ಧಾರಣೆ

ಪಳ್ಳಿ	ರೂ ಆಂದ	ರೂ ಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆಕಾಳು	[illegible]	[illegible]
ಉದ್ದು	೭೦—೦—೦	
ಅವರೆ	[illegible]	
ತೊಗರಿಬೇಳೆ	[illegible]	
ಕುಸುಬೆ	[illegible]	[illegible]
ತೆಂಗಿನಕಾಯಿ	[illegible]	[illegible]

ಒಲಂಪಿಯಾ ಟಾಕೀಸ್

10-7-53 ರಿಂದ : ಪ್ರತಿದಿನ 3 ಆಟಗಳು

ಉತ್ತಮ ಪಕ್ಷಿಯ ಸಂಗೀತ ನೃತ್ಯಗಳುಳ್ಳ, ಹಾಸ್ಯಮಯ ಸಾಮಾಜಿಕ ಚಿತ್ರ

★ ಮಾಲ್ತಿ ನ್ ★

ಪಾತ್ರ:- ಸೂರ್ಯ, ಕಣ್ಣ, ಪ್ರಾಣ್, ಗೋಪ್ ಮತ್ತು ಯಾಕೂಬ್

ಬೆಳಗಿನ ಪ್ರದರ್ಶನ : 9-7-53 ರಿಂದ ಸರಗಂ

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

10-7-53ನೇ . ಶುಕ್ರವಾರದಿಂದ :: ಅನೋಖ ಪ್ರಾರಂಭ

ಪ್ರತಿ ದಿನ 3 ಆಟಗಳು

• ರಾಜಾ ವಿಕ್ರಮ •

(ಶನಿ ಮಹಾತ್ಮೆ) ಕನ್ನಡ

ಪಾತ್ರ:— ಕೆಂಪರಾಜ್, ರಾಜಮ್ಮ, ಜಯಮ್ಮ, ಮುಂತಾದವರು

ಫೋನ್ ನಂ. 792 || ಸಂಚೀ ಸಾಗರಂ || ಅಂಚಿನ ಪತ್ರಿಕೆ 3 ಪೈಸೆ

ಸಾಧ್ವಿ

ಸಂಪುಟ ೧೦] ಶುಕ್ರವಾರ ೧೦-೭-೧೯೭೪ [ಸಂಚಿಕೆ ೨೬೩

ಗುರುಸ್ವಾಮಿಯವರ ರಿಟ್ ಅರ್ಜಿಯ ವಜಾ

ಪ್ರವಾಹ ಪೀಡಿತರಿಗೆ ೧೨,೦೦೦ ರೂ. ಪರಿಹಾರ

ಟಿ ನರಸೀಪುರಕ್ಕೆ ಸಚಿವರ ಭೇಟಿ

ಮೈಸೂರು ೧೦

ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸುರವರು ನೆನ್ನೆ ಟಿ ನರಸೀಪುರಕ್ಕೆ ಭೇಟಿಯಿತ್ತು, ಪ್ರವಾಹದ ಪರಿಸ್ಥಿತಿಯನ್ನು ಖುದ್ದಾಗಿ ತಿಳಿದುಕೊಂಡರು. ಪ್ರವಾಹಪೀಡಿತರಿಗೆ ೧೦ ಸಾವಿರ ರೂ ಗಳನ್ನು, ಪಕ್ಕಕ್ಕೆ ಗುರಿಯಾಗಿರುವವರಿಗೆ ೨ ಸಾವಿರ ರೂ ಗಳನ್ನು ಸಹಾಯವಾಗಿ ಕೊಡುವುದಾಗಿ ಅವರು ಹೇಳಿದರು. ಪ್ರವಾಹದಿಂದ ಉತ್ಪಲಿಗರು ಮತ್ತು ಪರಿವಾರದವರ ಮನೆಗಳು ನಾಶವಾಗಿರುವುವೆಂದೂ, ಅನೇಕರು ಮನೆಮಠಗಳನ್ನು ಕಳೆದುಕೊಂಡಿರುವರೆಂದೂ ವರದಿಯಾಗಿದೆ.

ತಿರುಮಕೂಡ್ಲು ಸಂಗಮದ ಬಳಿ ಪ್ರವಾಹದ ಅಬ್ಬರವು ಹೆಚ್ಚಾಗಿ ಅನೇಕ ಮನೆಗಳಿಗೆ ನೀರು ನುಗ್ಗಿದ ಪರಿಣಾಮವಾಗಿ ಜನರು ದೇವಾಲಯದ ಮೇಲ್ಭಾಗದಲ್ಲಿ ಗಂಟೆಗಟ್ಟಲೆ ಆಶ್ರಯಪಡೆದಿದ್ದರೆಂದೂ, ೩೦೦ ಜನರನ್ನು ದೋಣಿಗಳಲ್ಲಿ ಸುರಕ್ಷಿತ ಪ್ರದೇಶಕ್ಕೆ ಕಳುಹಿಸಲಾಯಿತೆಂದೂ ವರದಿಯಾಗಿದೆ. ಈ ಬಗ್ಗೆ ಸಹಾಯ ಮಾಡಿದ ಅಂಬಿಗರಿಗೆ ೫೦೦ ರೂ ಗಳನ್ನು ಬಹುಮಾನ ಕೊಡಲಾಗುವುದೆಂದು ಹೇಳಲಾಗಿದೆ

ಶಿವಮೊಗ್ಗೆಗೆ ತುಂಗಾ ನದಿ ನೀರು ಮತ್ತೆ ನುಗ್ಗಿತು

ತುಂಗಾ ನದಿಯಲ್ಲಿ ನೀರು ೨೬ ಅಡಿಯಷ್ಟು ಬಂದು ಮತ್ತೆ ಶಿವಮೊಗ್ಗೆಯ ಕುಂಬಾರ ಗುಂಡಿ, ಸೀಗೆಹಟ್ಟಿ ಪ್ರದೇಶಗಳಿಗೆ ನುಗ್ಗಿತ್ತು. ಕಳೆದ ೨ನೇ ತಾ॥ ಇದೇ ರೀತಿ ಪ್ರವಾಹವು ಬಂದಿದ್ದಿತು. ಸುತ್ತಮುತ್ತಲೂ ಇರುವ ಕೆರೆಗಳು ಹತ್ತು ವರ್ಷಗಳಿಂದಲೂ ತುಂಬದೇ ಇದ್ದು ಈಗ ತುಂಬಿವೆ. ಹಲವು ಗ್ರಾಮಗಳಿಂದ ಜನರನ್ನು ಬೇರೆ ಕಡೆಗೆ ಕಳುಹಲಾಗಿದೆ.

ವೆಲ್ಲೆಸ್ಲಿ ಸೇತುವೆ ಮೇಲೆ ನೀರು ಇಲ್ಲ

ಮೈಸೂರು ೧೦

ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ ಮೇಲೆ ಈಗ ನೀರು ಹರಿಯುತ್ತಿಲ್ಲ. ಆದರೂ ಅಲ್ಲಿ ಸಂಚಾರವಿಲ್ಲವೆಂದು ತಿಳಿದುಬಂದಿದೆ. ಸರ್ಕಾರಿ ಬಸ್ಸುಗಳು ಕೃಷ್ಣರಾಜಸಾಗರದ ಮೇಲೆ ಬೆಂಗಳೂರಿಗೆ ಹೋಗುತ್ತಿವೆ

ಶ್ರೀರಂಗಪಟ್ಟಣದ ಆಂಜನೇಯಸ್ವಾಮಿ ದೇವಾಲಯವು ಕುಸಿದು ಬಿದ್ದಿದೆ.

ಕೆಲವು ಸನ್ಯಾಸಿಗಳಿಗೆ ಮಠಗಳು ಆಶ್ರಯ ಸ್ಥಾನಗಳಾಗಿವೆ. ಹಲವು ಶವಗಳೂ ತೇಲಿಬಂದುವೆಂದು ಹೇಳಲಾಗಿದೆ.

ಸಹಾಯಾರ್ಥ ಚಿತ್ರ ಪ್ರದರ್ಶನ

ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಹಳೆಯ ವಿದ್ಯಾರ್ಥಿಗಳ ಸಂಘದವರು ಏರ್ಪಡಿಸಿರುವ ಬಡ ವಿದ್ಯಾರ್ಥಿಗಳ ಸಹಾಯ ನಿಧಿಗಾಗಿ ೧೨ನೇ ತಾ॥ ಭಾನುವಾರ ಬೆಳಗ್ಗೆ ೧೦॥ ಗಂಟೆಗೆ ಪ್ರಭಾ ಚಿತ್ರ ಮಂದಿರದಲ್ಲಿ ಕಾಲಿಘಟ್, ಎಂಬ ಚಿತ್ರ ಪ್ರದರ್ಶನವನ್ನು ಏರ್ಪಡಿಸಿರುವರು. ಸಾರ್ವಜನಿಕರು ಸಹಕರಿಸಿ, ಬೆಂಬಲ ನೀಡಬೇಕೆಂದು ಕೋರಲಾಗಿದೆ

ಹಿಂದುಳಿದ ಪಂಗಡದ ಸಮಿತಿಯವರ ಆಗಮನ

ಮೈಸೂರು ೧೦

ರಾಷ್ಟ್ರಾಧ್ಯಕ್ಷರು ನೇಮಿಸಿರುವ, ಹಿಂದುಳಿದ ಪಂಗಡದ ಸಮಿತಿಯವರು ನೆನ್ನೆ ಸಂಜೆ ಇಲ್ಲಿಗೆ ಮಂಡ್ಯದಿಂದ ಆಗಮಿಸಿದರು. ಅವರು ಇಲ್ಲಿನ ಹೋಟೇಲು ಮೆಟ್ರೋಪೋಲಿನಲ್ಲಿ ಇಳಿದುಕೊಂಡಿರುವರು. ಈ ಬೆಳಗ್ಗೆ ಅವರು ನಗರದ ಕೈಗಾರಿಕಾ ಕೆಲಸಗಾರರಿರುವ ಪ್ರದೇಶಗಳಿಗೆ ಭೇಟಿಯಿತ್ತರು. ಅನಂತರ ಅರಮನೆಗೆ ತೆರಳಿ ಶ್ರೀಮನ್ ಮಹಾರಾಜರನ್ನು ಭೇಟಿ ಮಾಡಿದ್ದರು. ಮಧ್ಯಾಹ್ನ ೩ ರಿಂದ ಸಂಜೆ ೬ರ ವರೆಗೆ ಸೋಲಿಗರು, ಮತ್ತು ಹಿಂದುಳಿದ ಪಂಗಡಗಳವರು ಅವರನ್ನು ಭೇಟಿ ಮಾಡಿ, ಮನವಿಗಳನ್ನು ಒಪ್ಪಿಸುವ ಕಾರ್ಯಕ್ರಮವಿದ್ದಿತು.

ನಾಳೆ ಬೆಳಗ್ಗೆ ಅವರು ಚಾಮರಾಜನಗರ ತಾಲ್ಲೂಕು ಬುಡಕಟ್ಟುಗಳಿಗೆ ಭೇಟಿಕೊಟ್ಟು, ವಾಪಸು ಬರುವಾಗ ನಂಜನಗೂಡಿನ ವಿದ್ಯಾಪೀಠವನ್ನು ಸಂದರ್ಶಿಸುವರು

ಕನ್ನಂಬಾಡಿ ನೀರಿನ ಮಟ್ಟ ೧೨೪.೬೫ ಅಡಿ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಇಂದು ೧೨೪.೬೫ ಅಡಿ ಇರುತ್ತದೆ ಪ್ರವಾಹದ ಭರವು ಈಗ ಕಡಿಮೆಯಾಗಿದೆ.

೫೭ರಲ್ಲಿ ಭಾರತೀಯರಿಂದ ಎವರೆಸ್ಟ್ ಹತ್ತುವ ಯತ್ನ

ಭಾರತೀಯ ಪಡೆಯೊಂದು ೧೯೫೭ರಲ್ಲಿ ಎವರೆಸ್ಟ್ ಶಿಖರವನ್ನು ಹತ್ತುವ ಪ್ರಯತ್ನ ನಡೆಸುವುದಾಗಿ ಹಿಮಾಲಯ ಸಂಘದ ಕಾರ್ಯದರ್ಶಿ ಜೆ ಡಿ. ಜೋಷಿಯವರು ತಿಳಿಸಿರುತ್ತಾರೆ ೧೯೪೭ರ ಮೊದಲನೇ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದ ನೆನಪಿಗಾಗಿ ಆ ವರ್ಷದಲ್ಲಿ ಶಿಖರವನ್ನು ಹತ್ತುವ ಏರ್ಪಾಡಾಗಿರುತ್ತದೆ

○ ಕೆನ್ಯದಲ್ಲಿ ಮೌಮೌ ಕ್ರಾಂತಿಕಾರರನ್ನು ಹಿಡಿಯಲು ಜೋರಾಗಿ ಓಡುವ ನಾಯಿಗಳನ್ನು ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಬಾಡಿಗೆ ಬಗ್ಗೆ ಪೌರಸಭೆ ಮೇಲೆ ೫೧೦ ದಾವೆಗಳು

ಬೆಂಗಳೂರು ೧೦

ಬೆಂಗಳೂರಿನ ಜಿಲ್ಲಾ ನ್ಯಾಯಾಧೀಶರಕೋರ್ಟಿನಲ್ಲಿ ಅಲ್ಲಿನ ೩೬ ಮಾರ್ಕೆಟ್ಟಿನ ವರ್ತಕರು ಪೌರಸಭಾ ಕಮಿಷನರ ಮೇಲೆ ೫೧೦ ದಾವಾಗಳನ್ನು ಹೂಡಿರುತ್ತಾರೆ. ಮಾರ್ಕೆಟ್ಟಿನ ಬಾಡಿಗೆಗಳನ್ನು ಹೆಚ್ಚಿಸಿರುವ ಬಗ್ಗೆ ದಾವಾ ಹೂಡಲಾಗಿದೆ ಹೆಚ್ಚಿಗೆ ಬಾಡಿಗೆಯನ್ನು ಕೊಡಬೇಕೆಂಬುದಾಗಿ ನೋಟೀಸು ಕೊಟ್ಟ ಮಾತ್ರಕ್ಕೆ ಪೌರ ಸಭೆಯವರು ವರ್ತಕರೊಡನೆ ಮಾಡಿಕೊಂಡಿರುವ ಒಪ್ಪಂದವು ರದ್ದಾಗುವುದಿಲ್ಲವೆಂದು ವಾದಿಗಳ ಅಭಿಪ್ರಾಯವಾಗಿದೆ ಬಾಡಿಗೆ ಕಂಟ್ರೋಲ್ ಶಾಸನದ ನಿಯಮಗಳು ಪೌರಸಭಾ ಕಟ್ಟಡಗಳಿಗೆ ಅನ್ವಯಿಸುವುದಿಲ್ಲವೆಂದು ವಿನಾಯಿತಿಯನ್ನು ಕೊಟ್ಟಿದ್ದರೂ, ಅದು ರಾಜ್ಯಾಂಗದ ೧೪ನೇ ವಿಧಿಗೆ ವಿರೋಧವಾಗಿರುವುದರಿಂದ ಅದು ನ್ಯಾಯ ಬಾಹಿರವೆಂದು ವಾದಿಗಳು ತಿಳಿಸಿರುವರು

ಈ ಕಾರಣಗಳಿಗಾಗಿ, ಕಾರ್ಪೊರೇಷನ್ನಿನವರು ಬಾಡಿಗೆ ಹೆಚ್ಚಿಸಿ ಅದರಂತೆ ವಸೂಲಿಗೆ ತಗಾದೆ ಮಾಡಿರುವುದು ನ್ಯಾಯವಲ್ಲವೆಂದು ಕೋರ್ಟಿನವರು ತೀರ್ಪು ಕೊಡುವಂತೆ ಫಿರ್ಯಾದುದಾರರು ಕೇಳುತ್ತಾರೆ

ಮನೆ ಮೇಲೆ ಮರ ಬಿದ್ದು ದಂಪತಿಗಳ ಮರಣ

ಸಕಲೇಶಪುರಕ್ಕೆ ೧೨ ಮೈಲಿ ದೂರವಿರುವ ಕಾಡುಮನೆ ಟೀ ಎಸ್ಟೇಟಿನ ಕಾರ್ಮಿಕರ ವಸತಿ ಗೃಹಗಳ ಮೇಲೆ ಕಳೆದ ಮಂಗಳವಾರ ಭಾರಿ ಮರವೊಂದು ಮಳೆಯ ದೆಸೆಯಿಂದ ಬುಡಸಮೇತ ಉರುಳಿ ಹೋದದ್ದಾಗಿ ವಿವಾಹಿತರಾದ ದಂಪತಿಗಳೂ ಸೇರಿ ೮ ಜನರು ಜೀವಸಹಿತ ಸಮಾಧಿಯಾದರೆಂದು ವರದಿಯಾಗಿದೆ

ಮಳೆ ಗಾಳಿಯಿಂದ ೮೦೦ ದನಗಳ ಸಾವು

ಅತಿಯಾದ ಮಳೆ ಮತ್ತು ಗಾಳಿಗಳಿಂದ ಸುಮಾರು ೮೦೦ ಜಾನುವಾರುಗಳು ಹೊಳೇನರಸೀಪುರ ತಾಲ್ಲೂಕಿನಲ್ಲಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಗುರುಸ್ವಾಮಿಯವರ ರಿಟ್ ಅರ್ಜಿಯ ವಜಾ

ಹೈಕೋರ್ಟಿನಲ್ಲಿ ತೀರ್ಪು

ಸ್ವಂ ಸು ಪ್ರೋ] ಬೆಂಗಳೂರು ೧೦

ಇಂದು ಹೈಕೋರ್ಟಿನಲ್ಲಿ ನ್ಯಾಯಾಧೀಶರುಗಳಾದ ಶ್ರೀ ಆರ್ ವೆಂಕಟರಾಮಯ್ಯ ಮತ್ತು ಶ್ರೀ ಬಿ. ವಾಸುದೇವಮೂರ್ತಿಯವರು ತೀರ್ಪಿತ್ತು, ಬೆಂಗಳೂರು ನಗರ, ಸಿವಿಲ್ ಪ್ರದೇಶ ಮತ್ತು ಜಿಲ್ಲೆಯಿಂದ ಅಬ್ಕಾರಿ ಹರಾಜು ನಡೆಸುವುದನ್ನು ವಿರೋಧಿಸಿ, ಶ್ರೀ ಕೆ. ಗುರುಸ್ವಾಮಿಯವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಖರ್ಚಿನ ಸಹಿತ ವಜಾ ಮಾಡಿದರು.

ಇಬ್ಬರೂ ನ್ಯಾಯಾಧೀಶರು ಪ್ರತ್ಯೇಕ ತೀರ್ಪುಗಳನ್ನು ಕೊಟ್ಟರು. ಅರ್ಜಿದಾರರು ಹೆಚ್ಚು ಬಿಡ್ಡು ಮಾಡಿದ್ದರೂ ಸಹ ಅದನ್ನು ಸರ್ಕಾರದವರು ಅಂಗೀಕರಿಸಲಿಲ್ಲವಾದುದರಿಂದ ಹೆಚ್ಚು ಬಿಡ್ಡುದಾರರಿಗೆ ಬಾಬತ್ತು ಕೊಡಬೇಕೆಂದು ಹೇಳುವುದು ಸರಿಯಲ್ಲವೆಂದು ಶ್ರೀ ವೆಂಕಟರಾಮಯ್ಯನವರು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀ ಕೆ. ಗುರುಸ್ವಾಮಿಯವರಿಗೆ ಹೊಸ ಕಾಂಟ್ರ್ಯಾಕ್ಟನ್ನು ಕೊಟ್ಟ ಬಗ್ಗೆ ಜಿಲ್ಲಾಧಿಕಾರಿಗಳ ಆಜ್ಞೆಯು ಆಕ್ಷೇಪಣೀಯವಲ್ಲವೆಂದೂ, ರಿವಿಜನ್ ಅರ್ಜಿಯನ್ನು ಮೇಲ್ಪಟ್ಟವರಲ್ಲಿ ಅರ್ಜಿದಾರರು ಹಾಕಬಹುದಾಗಿತ್ತೆಂದೂ ಅದೇ ಯನ್ನು ಹೂಡಬಹುದಾಗಿದ್ದಿತೆಂದೂ ತಿಳಿಸಲಾಗಿದೆ

ಶ್ರೀ ಬಿ ವಾಸುದೇವಮೂರ್ತಿಯವರು ತಮ್ಮ ತೀರ್ಪಿನಲ್ಲಿ ಹರಾಜನ್ನು ಒಪ್ಪಲು ಅಥವಾ ನಿರಾಕರಿಸಲು ೧೯ ನೇ ನಿಯಮಗಳಿಗಿಂತ ಹೆಚ್ಚು ಅಧಿಕಾರ ತೆಗೆದುಕೊಂಡುದರಿಂದ ಪಾರ್ಟಿಗಳಿಗೆ ತೊಂದರೆಯಾಗಿರುವುದಾಗಿ ಹೇಳಿರುವರು. ಅಲ್ಲದೆ ರಾಜ್ಯಾಂಗದ ಮೂಲಭೂತ ಹಕ್ಕುಗಳ ನಿಬಂಧನೆಗೆ ಒಳಪಟ್ಟಂತೆ ಅಬ್ಕಾರಿ ಶಾಸನದ ೧೮ ನೇ ವಿಧಿಯನ್ನು ತಿದ್ದಬೇಕೆಂದು ಸಲಹೆ ಮಾಡಿರುವರು.

ರಾಜಧಾನಿಗೆ ಅಮೆರಿಕದ ರಾಯಭಾರಿಯ ಆಗಮನ

ಮೈಸೂರು ೧೦

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಡಾಕ್ಟರ್ ಡಿ. ಕೂಪರ್‌ರವರು ಈ ದಿನ ಇಲ್ಲಿಗೆ ಆಗಮಿಸಿ, ಅರಮನೆಯಲ್ಲಿ ತಂಗಿರುವರು. ಅವರು ಈ ಸಂಜೆ ಕೃಷ್ಣರಾಜಸಾಗರಕ್ಕೆ ಭೇಟಿ ಕೊಡುವರು.

ರೆವಿನ್ಯೂ ಕಮೀಷನರರ ಆಗಮನ

ಸಂಸ್ಥಾನದ ರೆವಿನ್ಯೂ ಕಮಿಷನರರಾದ ಶ್ರೀ ಎಸ್. ಮಾಧವರಾಯರು ಈ ದಿನ ಇಲ್ಲಿಗೆ ಆಗಮಿಸಿ,ಟಿ ನರಸೀಪುರಕ್ಕೆ ಭೇಟಿಯಿತ್ತು ಪ್ರವಾಹಕ್ಕೆ ತುತ್ತಾಗಿರುವ ಪ್ರದೇಶಗಳನ್ನು ಮತ್ತು ತಾಲ್ಲೂಕು ಕಛೇರಿಯನ್ನು ಪರಿಶೀಲಿಸಿದರು. ಈ ಸಂಜೆ ಅವರು ಕೃಷ್ಣರಾಜಸಾಗರಕ್ಕೆ ಭೇಟಿ ಕೊಡುವರು. ನಾಳೆ ಅವರು ಶಿವಮೊಗ್ಗದಲ್ಲಿ ಪ್ರವಾಹ ಪರಿಶೀಲನೆಗಾಗಿ ಹೋಗಲಿರುವರು.

○ ಆಲ್ ಇಂಡಿಯಾ ರೇಡಿಯೋ ಬಿತ್ತರಿಸುವ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ನಾಳೆ ರಾತ್ರಿ ೯॥ ಗಂಟೆಗೆ ಮಧುರೈ ಶ್ರೀ ಮಣಿ ಅಯ್ಯರ್‌ರವರ ಕರ್ನಾಟಕ ಸಂಗೀತದ ಪ್ರಸಾರ ವಿರ್ಪಾಡಾಗಿದೆ.

ಯಳಂದೂರು ತಾಲ್ಲೂಕಿನ ವಿಭಜನೆಯಾಗದಿರಲಿ

ಕೆ. ಪಿ. ಶಾಂತಮೂರ್ತಿಯವರ ಹೇಳಿಕೆ

ಯಳಂದೂರು ತಾಲ್ಲೂಕು ಪ್ರಜಾ ಸಮಾಜವಾದಿ ಪಕ್ಷದ ಸಂಚಾಲಕ, ಶ್ರೀ ಕೆ. ಪಿ. ಶಾಂತಮೂರ್ತಿಯವರು ಈ ರೀತಿ ತಿಳಿಸುತ್ತಾರೆ.—

ಯಳಂದೂರು ತಾಲ್ಲೂಕು ಒಂದು ಸಣ್ಣ ಕ್ಷೇತ್ರವಾಗಿದ್ದು ಸಬ್ ತಾಲ್ಲೂಕು ಆಗಿದ್ದರೂ ತನ್ನ ಐತಿಹಾಸಿಕ ಹಿನ್ನೆಲೆ, ಆರ್ಥಿಕ ಭದ್ರತೆ ಹಾಗೂ ಆಡಳಿತ ಸೌಕರ್ಯ ದೃಷ್ಟಿಯಿಂದ ಹಿರಿದಾದುದು. ಕನ್ನಡ ನಾಡಿನ ಇತಿಹಾಸದಲ್ಲಿ ಇದರ ಉಜ್ವಲತೆ ಸುವರ್ಣಾಕ್ಷರಗಳಲ್ಲಿ ಮೆರೆಯುತ್ತಿರುವುದು. ಕನ್ನಡ ಕವಿ ಶ್ರೇಷ್ಠ ಷಡಕ್ಷರದೇವ ಯಳಂದೂರಿನಲ್ಲಿ ಜನ್ಮತಾಳಿದ್ದೇ ಇದಕ್ಕೆ ಆಧಾರಭೂತವಾಗಿರುತ್ತೆ.

ಆರ್ಥಿಕ ದೃಷ್ಟಿಯಲ್ಲಿ ಹೇಳುವುದಾದರೆ, ಬಹು ಫಲವತ್ತಾದ ಸಾಕಷ್ಟು ಭೂಮಿ ಇದೆ, ವ್ಯವಸಾಯಕ್ಕೆ ಅನುಕೂಲವಾದ ಅನೇಕ ದೊಡ್ಡ ನೀರಾವರಿ ಕೆರೆಗಳಿವೆ, ಪ್ರಕೃತಿ ಸೌಂದರ್ಯದಿಂದ ಕೂಡಿದ ಬಿಳಿಗಿರಿ ರಂಗನ ಬೆಟ್ಟದ ದಟ್ಟವಾದ ಕಾಡುಗಳಿಂದ [illegible] ಉತ್ಪತ್ತಿ ಬರುತ್ತಿದೆ; ಅಬ್ಕಾರಿ ಬಾಬಿನಿಂದ ವಿಶೇಷ ವರಮಾನವಿರುತ್ತೆ.

ಆಡಳಿತ ಸೌಕರ್ಯದಲ್ಲಿ ಹೇಳುವುದಾದರೆ, ತಾಲ್ಲೂಕಿನ ಉದ್ದಳತೆ ಸುಮಾರು ಎಂಟು ಮೈಲಿಗಳಿರುವುದರಿಂದ, ಎಲ್ಲಾ ಹಳ್ಳಿಗಳವರೂ ಯಳಂದೂರಿಗೆ ಬಂದು ತಾಲ್ಲೂಕಿನ ವ್ಯವಹಾರ ನಡೆಸಲು ಅನುಕೂಲವಾಗಿರುತ್ತೆ. ಈ ತಾಲ್ಲೂಕು ಜಹಗೀರಿಯಾಗಿ ಕೊಡುವುದಕ್ಕೆ ಮುಂಚೆಯೂ ಸಹ ತಾಲ್ಲೂಕಾಗಿತ್ತು. ಅಂದ ಮೇಲೆ ಅಂದಿನಿಂದಲೂ ಸುವ್ಯವಸ್ಥಿತ ಆಡಳಿತವನ್ನು ನಡೆಸಿಕೊಂಡು ಬಂದಿರುತ್ತೆ. ಆದ ಕಾರಣ ಆಡಳಿತ ಸೌಕರ್ಯ ಹಾಗೂ ಆರ್ಥಿಕ ಸುಭದ್ರತೆಯುಂಟಾಗಿದ್ದು ಒಂದು ತಾಲ್ಲೂಕಿಗೆ ಬೇಕಾದ ಎಲ್ಲಾ ಅರ್ಹತೆಯನ್ನೂ ಪಡೆದಿರುತ್ತದೆ. ಮಾಗಿಲಾಗಿ ಕಳೆದ ವರ್ಷ ಮಹಾ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರವಾಗಿ ಮನ್ನಣೆ ಪಡೆದಿತ್ತು.

ಆದರೆ ಈ ತಾಲ್ಲೂಕು ೪೬ ವರ್ಷಗಳಿಂದ ಜಹಗೀರಿ ಆಡಳಿತಕ್ಕೆ ಒಳಪಟ್ಟದ್ದರಿಂದ [illegible] ಇದರ ಪೂರ್ಣ ಪರಿಮಾಣ ತಾಲ್ಲೂಕಿನ ಅಭಿವೃದ್ಧಿಗೆ ಉಪಯೋಗಿಸಲ್ಪಡದೆ, ಜಹಗೀರುದಾರರು ಮತ್ತು ಅವರ ವಂಶಸ್ಥರ ಪೋಷಣೆಗಾಗಿ ವಿನಿಯೋಗಿಸಲ್ಪಡುತ್ತಿತ್ತು. ಆದರೆ ಈ ವರ್ಷ ಮೈಸೂರು ಸರ್ಕಾರ ಜನತೆಯ ಸಂತುಷ್ಟಿಗಾಗಿ ಕೊನೆಗೊಟ್ಟು, ಈ ದುಷ್ಟ ಪದ್ಧತಿಯ ಶೃಂಖಲೆಗಳಿಂದ ಜನತೆಯನ್ನು ಬಿಡುಗಡೆ ಮಾಡಲು ನಿರ್ಧರಿಸಿ, ಇನಾಂತಿ ರದ್ದಿನ ಮಸೂದೆಯಲ್ಲಿ ಯಳಂದೂರು ಜಹಗೀರು ರದ್ದಿಯನ್ನೂ ಸೇರಿಸಿರುವುದು ಜನತೆಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಜಹಗೀರಿ ರದ್ದಾದ ಮೇಲೆ ಇದರ ಆರ್ಥಿಕ ಪರಿಸ್ಥಿತಿ ಸರ್ವತೋಮುಖವಾಗಿ ಉತ್ತಮಗೊಂಡು, ಸಂಸ್ಥಾನದ ಇತರ ತಾಲ್ಲೂಕುಗಳಂತೆ ಸರ್ಕಾರದ ಸೌಲಭ್ಯಗಳನ್ನು ಪಡೆದು, ತನ್ಮೂಲಕ ಈ ತಾಲ್ಲೂಕಿನ [illegible] ಸ್ಥಿತಿಯನ್ನು ಹಚ್ಚೇಯವಾಗಿ ಉಳಿಸಿಕೊಂಡು ಬರ ಬೇಕೆಂಬುದರಲ್ಲಿ ಸಂದೇಹವಿಲ್ಲ.

ಆದರೆ, ಇತಿಹಾಸ ಪ್ರಸಿದ್ಧವಾದ ಈ ತಾಲ್ಲೂಕನ್ನು ಒಡೆದು ಪಕ್ಕದಲ್ಲಿರುವ ಚಾಮರಾಜನಗರ ಮತ್ತು ಟಿ. ನರಸೀಪುರ ತಾಲ್ಲೂಕುಗಳಿಗೆ ಹಂಚಬೇಕೆಂಬ ಸರ್ಕಾರ ಪ್ರಸ್ತಾಪ ಕೇಳಿದ ಮಾತ್ರವಾಗಿ ತಿಳಿದುಬಂದಿದೆ. ಇದು ಯಳಂದೂರು ಜನತೆಗೆ ಅತ್ಯಂತ ಆಘಾತವನ್ನುಂಟು ಮಾಡಿದೆ. ಈ ತಾಲ್ಲೂಕನ್ನು ಒಡೆದು ಪಕ್ಕದ ತಾಲ್ಲೂಕಿಗೆ ಹಂಚುವುದರಿಂದ, ಯಳಂದೂರು ತಾಲ್ಲೂಕಿನ ಪ್ರಜೆಗಳಿಗೆ ತಾಲ್ಲೂಕಿನ ವ್ಯವಹಾರ ನಡೆಸಲು ಬಹು ದೂರವಾಗುತ್ತೆ. ಅದರ ಬದಲು ಚಾಮರಾಜನಗರ ಹಾಗೂ ಟಿ. ನರಸೀಪುರ ತಾಲ್ಲೂಕುಗಳು ಬಹು ದೊಡ್ಡವಾಗಿದ್ದು ಆಡಳಿತ ನಡೆಸಲು ಸದರೀ ತಾಲ್ಲೂಕುಗಳ ಅಮಲ್ದಾರರುಗಳಿಗೇ ಅಸಾಧ್ಯವಾಗಿರುವುದರಿಂದ, ಈ ಎರಡು ತಾಲ್ಲೂಕುಗಳ ಕೆಲವು ಭಾಗಗಳನ್ನು ಯಳಂದೂರಿಗೆ ಸೇರಿಸಬಹುದು. ಇದರಿಂದ ಯಳಂದೂರಿನ ಹತ್ತಿರದಲ್ಲಿರುವ ಚಾಮರಾಜನಗರದ ಹಳ್ಳಿಗಳಿಗೆ ಅನುಕೂಲವಾಗುತ್ತದೆ.

ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣ ಬಹು ದೂರವಿಲ್ಲದಿರುವುದರಿಂದಲೂ ಮತ್ತು ಕನ್ನಡ ಭಾಗವಾದ ಕೊಳ್ಳೇಗಾಲ ಯಳಂದೂರಿಗೆ ಬಹು ಸಮೀಪದಲ್ಲಿರುವುದರಿಂದಲೂ, ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳನ್ನು ಮುಂದೆ ಒಂದೇ ಆಡಳಿತಕ್ಕೆ ಸೇರಿಸಬಹುದು.

ಸರ್ಕಾರದವರು ಎಲ್ಲವನ್ನೂ ಸಹಾನುಭೂತಿಯಿಂದ ಕೂಲಂಕಷವಾಗಿ ಪರಿಶೀಲಿಸಿ, ತಾಲ್ಲೂಕನ್ನು ಒಡೆದು ಹಂಚುವ ಗೊಂದಲಕ್ಕೆ ಹೋಗದೆ ಈ ತಾಲ್ಲೂಕಿನ ವೈಶಿಷ್ಟ್ಯವನ್ನು ಉಳಿಸುವರೆಂದು ನಂಬಿದ್ದೇನೆ.

ಪ್ರೇಮದ ಔಷಧಿಗುಳಿಗೆ ಕೊಟ್ಟು ದರೋಡೆ

ಲಂಡನ್ನಿನ ಅನ್ನಾ ಬೆಲ್ಲಾ ಫಾರ್ಸ್ ಎಂಬ ೩೯ ವರ್ಷದ ಮಹಿಳೆಯೊಬ್ಬಳು ಅಲ್ಲಿನ ವಿಶ್ರಾಂತಿ ಗೃಹಗಳಿಗೆ ಹೋಗಿ ತನ್ನ ಪ್ರೇಮವನ್ನು ಕಂಡವರೆಲ್ಲರಿಗೂ ಪ್ರದರ್ಶಿಸುತ್ತಾ, ಅವರುಗಳಿಗೆ ಪ್ರೇಮದ ಗುಳಿಗೆಗಳನ್ನು ಕೊಟ್ಟು ಮತ್ತು ಬರುವಂತೆ ಮಾಡಿ, ಅವರಲ್ಲಿರುತ್ತಿದ್ದ ಹಣವನ್ನು ಅಪಹರಿಸುತ್ತಿದ್ದಳೆಂದು ವರದಿಯಾಗಿದೆ. ಈ ರೀತಿ ೧ ಲಕ್ಷ ಪೌಂಡಿನಷ್ಟು ಪದಾರ್ಥಗಳನ್ನು ಆಕೆಯು ದರೋಡೆ ಮಾಡಿರುವುದಾಗಿಯೂ, ಕಡೆಗೆ ಗೂಢಚಾರರಿಗೂ ಅದೇ ರೀತಿ ಆಕೆಯು ಮಾಡಲು ಹೋಗಿ ಸಿಕ್ಕಿಕೊಂಡಳೆಂದೂ ನ್ಯಾಯಾಧೀಶರು ಆಕೆಯನ್ನು ೭ ವರ್ಷ ಶಿಕ್ಷೆಗೆ ಗುರಿ ಪಡಿಸಿರುವರೆಂದೂ ಗೊತ್ತಾಗಿದೆ.

ಬೃಂದಾವನದಲ್ಲಿ ನಿತ್ಯವೂ ದೀಪೋತ್ಸವ

ಕೃಷ್ಣರಾಜಸಾಗರದಲ್ಲಿ [illegible] ಬರುತ್ತವರಿ ದ ನನ್ನ [illegible] ಬೃಂದಾವನದಲ್ಲಿ ನಿತ್ಯವೂ ದೀಪೋತ್ಸವವನ್ನು ಏರ್ಪಡಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಕೆ ಎಸ್ ತ್ಯಾಗರಾಜ್ ಸಂಗೀತ [illegible] ಟಿ [illegible] ಬಾಲಜಗತ್ ವಿಶೇಷ ಕಾರ್ಯಕ್ರಮ. ಸಂಜೆ ೬-೩೦ ಕ್ಕೆ [illegible] ಎಸ್ ಸಿ ಬೇಲೂರಯ್ಯ ನಾಗಸ್ವರ [illegible] ಟಿ. ನಾಗಪ್ಪ [illegible] ಹೆಚ್ ಎಸ್ ತ್ಯಾಗರಾಜ್ ಸಂಗೀತ, [illegible] ಎಂ ಎಸ್ [illegible] ಕಡಾ ಕಾಲಕ್ಷೇಪ [illegible] ಶಿವರವರಿಂದ ಕನ್ನಡದಲ್ಲಿ ಸಣ್ಣ ಕಥೆ.

ಪ್ರವಾಹದಿಂದ ಮನೆಗಳ ಮೇಲೆ ಕುಳಿತಿದ್ದವರ ರಕ್ಷಣೆ

ತಿರುವಾಂಕೂರಿನಲ್ಲಿ ಕಳೆದ ೪ ದಿನಗಳಿಂದ ಭಾರಿ ಮಳೆಯಾಗಿ ಕರಿಯೂರ್ ನದಿಯು ಉಕ್ಕಿ ಬಂದಿದೆ. ತಿರುವನಂತಪುರದ ಕೆಳಗಿನ ಪ್ರದೇಶಕ್ಕೆ ನೀರು ನುಗ್ಗಿ, ಅನೇಕರು ಮನೆಗಳ ಮೇಲೆ ಹತ್ತಿರುವರು. ೨೦೦ ಜನ ಹೆಂಗಸರು ಮತ್ತು ಮಕ್ಕಳನ್ನು ಮನೆ ಮೇಲಿನಿಂದ ಇಳಿಸಿ ರಕ್ಷಿಸಲಾಗಿದೆ.

ಉಪನಯನ

ಯಳಂದೂರು ತಾಲ್ಲೂಕಿನ ಅಗರದ ಶ್ರೀ ಎ. ಶ್ರೀನಿವಾಸ ಉಪಾಧ್ಯರು ತಮ್ಮ ಜ್ಯೇಷ್ಠ ಕುಮಾರ ಚಿ॥ ಅನಂತನಾರಾಯಣನಿಗೆ ಕಳೆದ ಭಾನುವಾರ ಬ್ರಹ್ಮೋಪದೇಶವನ್ನು ಅಗರದಲ್ಲಿ ನೆರವೇರಿಸಿದರು.

ಪರಿಣಯ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾವ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರತಿನಿತ್ಯ ಮಧ್ಯಾಹ್ನ ೪ ಗಂಟೆಯಿಂದ ೫ ಗಂಟೆ ವರೆಗೆ ಶ್ರೀ ಲಿಂಗಾನಂದ ಸ್ವಾಮಿಯವರಿಂದ ವ್ಯಾಖ್ಯಾನವೂ ೫ ಗಂಟೆಯಿಂದ ೭ ಗಂಟೆ ವರೆಗೆ ಮಾಯಿಗೌಡರು ಮತ್ತು [illegible] ರುಗಳಿಂದ ಮಹಾ [illegible] ಪುರಾಣವೂ [illegible] ಪ್ರಯ [illegible], ಈ ಸಂಜೆ ೭ ಘಂಟೆಗೆ ಶ್ರೀ [illegible] ರಾವ ಸ್ವಾಮಿ ನಾಯ್ಡುರವರಿಂದ ಸು [illegible] ಪರಿಣಾಮವೆಂಬ ಕಾರಿಕೆಯೂ ಏರ್ಪಾಡಾಗಿದೆ.

ವಿದ್ಯಾರ್ಥಿ ನಿಲಯಕ್ಕೆ ಸಹಾಯ

ಚಾಮರಾಜನಗರದಲ್ಲಿರುವ ವಿದ್ಯಾರ್ಥಿನಿಲಯಕ್ಕೆ ದುಗಹಟ್ಟಿ ಶ್ರೀ ಪುಟ್ಟಬಸಪ್ಪ ಮತ್ತು ನೀಲಮ್ಮನವರ ವಿವಾಹ ಮಹೋತ್ಸವ ಸಂದರ್ಭದಲ್ಲಿ ೫೦ ರೂಗಳೂ, ಕಮರವಾಡಿ ಕೊಗ್ಗಪ್ಪನ ಶಿವಪ್ಪನವರಿಂದ, ಶಿವಸ್ವಾಮಿ ಮತ್ತು ಮಹದೇವಮ್ಮ ಇವರ ವಿವಾಹದಲ್ಲಿ ೧೫ ರೂಗಳೂ, ಕುರುಬೂರು ವೀರಭದ್ರಪ್ಪನವರಿಂದ, ಮಹದೇವಪ್ಪ ಮತ್ತು ಶಿವಮ್ಮಣ್ಣಿ ಇವರ ವಿವಾಹದಲ್ಲಿ ೫ ರೂಗಳೂ, ಸರಗೂರು ಸಿದ್ದೇಗೌಡರಿಂದ, ದಾಸೇಗೌಡ ಮತ್ತು ಜಯಮ್ಮ ಇವರ ವಿವಾಹದಲ್ಲಿ ೧೦ ರೂ.ಗಳೂ ಸಹಾಯರೂಪವಾಗಿ ಬಂದಿರುವುದರಿಂದ ವಿದ್ಯಾರ್ಥಿನಿಲಯದ ಪರವಾಗಿ ಅಲ್ಲಿನ ವ್ಯವಸ್ಥಾಪಕರು ಮೇಲ್ಕಂಡ ಮಹನೀಯರುಗಳಿಗೆ ಕೃತಜ್ಞತೆ ಸೂಚಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ. ಗೆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಸೀಗೆಕಾಯಿ	[illegible]	
ಕುಸುಬೆ(?)	[illegible]	[illegible]
ತೆಂಗಿನಕಾಯಿ	[illegible]	[illegible]

ಬೆಂಗಳೂರಿನಲ್ಲಿ ವಿಶ್ವದ ಆಹಾರ ಸಮಿತಿ ಸಭೆ

ಬೆಂಗಳೂರಿನಲ್ಲಿ ಈ ತಿಂಗಳು ೨೭ ರಿಂದ ಆಗಸ್ಟ್ ೫ರ ವರೆಗೆ ವಿಶ್ವದ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಅಧಿವೇಶನವು ನಡೆಯುವುದು. ಅದಕ್ಕೆ ಆಸ್ಟ್ರೇಲಿಯಾ, ಬರ್ಮಾ, ಸಿಂಹಳ, ಇಂಡೋನೇಷ್ಯ, ಜಪಾನ್, ಪಾಕಿಸ್ತಾನ್, ಕೊರಿಯಾ, ನೇಪಾಳ, ಬ್ರಿಟನ್, ಫ್ರಾನ್ಸ್, ಹಾಲೆಂಡ್, ಪೋರ್ಚುಗಲ್, ಸಯಾಂ, ಫಿಲಿಪ್ಪೈನ್ ಮತ್ತು ಅಮೆರಿಕಾ ದೇಶಗಳ ಪ್ರತಿನಿಧಿಗಳು ಬರಲಿರುವರು.

ಚಂದ್ರಮೌಳೇಶ್ವರ ದೇವಸ್ಥಾನದ ಸಭೆ

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದ ವಾರ್ಷಿಕ ಸಭೆಯು ನಾಳೆ ಸಂಜೆ ೪ ಗಂಟೆಗೆ ದೇವಾಲಯದಲ್ಲಿ ಸೇರುವುದು. ಸರ್ವರೂ ದಯಮಾಡಿಸುವಂತೆ ಪ್ರಾರ್ಥಿಸಲಾಗಿದೆ.

SRI GANESHA

TALKIES

From 11-7-53 : For 3 days

Columbia's

SANTA FE

The Frontier's Greatest Adventure

(Glorious Technicolor)

Featuring:— Randolph Scott, Jerome Courtland, Janis Carter in leading role

Edited, Printed and Published by A. R. Nagarajan at Sadhvi Press, D Subbiah Road, Mysore

ಪ್ರಭುದೇವಾ ಥಿಯೇಟರ್

(ಪ ದ್ಮಾ ಟಾ ಕೀ ಸ್)

10-7-53ನೇ : ಶುಕ್ರವಾರದಿಂದ :: ಅನೋಘ ಪ್ರಾರಂಭ,

ಪ್ರತಿ ದಿನ 3 ಆಟಗಳು

ರಾಜಾ ವಿಕ್ರಮ

(ಶ ನಿ ಮ ಹಾ ತ್ಮೆ)

ಪಾತ್ರ — ಕೆಂಪರಾಜ್, ರಾಜಮ್ಮ, ಜಯಮ್ಮ ಮುಂತಾದವರು

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ಟ್ ನವೀನ ನೂಲಿನ ಸೀರೆಗಳಿಗೆ M.V. ಭೋಜಯ್ಯ (ಫೋನ್ 446) ಬಿ ಎ, ಇಂಡಿಯಾ ಬ್ಯಾಂಕ್ ಎದುರು, ಶ್ರೀ ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೧-೭-೧೯೫೩ [ಸಂಚಿಕೆ ೨೮೩

೬ ಲಕ್ಷ ರೂ. ವೆಚ್ಚದಲ್ಲಿ ಹೊಸ ವೆಲ್ಲೆಸ್ಲಿ ಸೇತುವೆ

೬ ಜನರ ಮೇಲೆ ಮೋಸದ ಆಪಾದನೆ

ಮೈಸೂರು ೧೧

ಲೋಕಸೇವಾನಿರತ ವಿ ನಾರಾಯಣಾಚಾರ್ಯರಿಗೆ ಸಾಲ ಕೊಡುವುದಾಗಿ ಹೇಳಿ ಮೋಸಪಡಿಸಿದರೆಂದು ಬೊಂಬಾಯಿಯ ಶ್ರೀ ಕೆ ಬೊಮನ್‌ಜಿ, ಅಲ್ಲಿನ ಅಡ್ವೊಕೇಟ್ ಹೆಚ್ ದೇಸಾಯ್, ಡಿ. ಗುರುನಾಥ್ ಮತ್ತು ಮಾಡೆಲ್ ಜಿ ದೇಸಾಯ್ ಮತ್ತು ಮೈಸೂರಿನ ಶ್ರೀ ಹೆಚ್. ವಿ ರಂಗಸ್ವಾಮಿ ಅಯ್ಯಂಗಾರ್, ಕೃಷ್ಣಪ್ಪ ಇವರುಗಳ ಮೇಲೆ ನಗರದ ಕ್ರೈಂ ಬ್ರಾಂಚ್ ಪೋಲೀಸರು ಇಲ್ಲಿನ ೧ ನೇ ನ್ಯಾಯಾಧೀಶರ ಕೋರ್ಟಿನಲ್ಲಿ ಐ ಪಿ ಸಿ ೪೨೦ನೇ ವಿಧಿ ಪ್ರಕಾರ ಮೊಕದ್ದಮೆಯನ್ನು ಹೂಡಿರುತ್ತಾರೆ ಮೊಕದ್ದಮೆಯನ್ನು ಇದೇ ೨೫ನೇ ತಾ|| ಗೆ ಹಾಕಲಾಗಿದೆ ದಸ್ತಗಿರಿಯಾಗಿರುವ ಮೈಸೂರಿನವರಿಬ್ಬರನ್ನು ಜೈಲು ರಿಮ್ಯಾಂಡಿನಲ್ಲಿಡಲಾಗಿದೆ

ಕೀರ್ತನೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೇ|| ಬ್ರ|| ಶ್ರೀ ಹರಿಸರ್ವೋತ್ತಮ ದಾಸರಿಂದ ಈ ದಿನದ ಲಾಗಾಯ್ತು ಆಷಾಢ ಬಹುಳ ಅಮಾವಾಸ್ಯೆ ವರೆಗೆ ಪ್ರತಿದಿನ ಸಂಜೆ ೭ ಘಂಟೆಯಿಂದ ೯ ರ ವರೆಗೆ ಕೀರ್ತನೆ ನಡೆಯುವುದು. ಈ ದಿನ ಭಕ್ತ ಸುಧಾಮ ಎಂಬ ಹರಿಕಥೆ ನಡೆಯುತ್ತೆ ಆಡಿ ಮಾಸದಲ್ಲಿ ಪ್ರತಿ ಶುಕ್ರವಾರ ಅಮ್ಮನವರಿಗೆ ಅಲಂಕಾರವಿದೆ

ಆರಾಣೆ ಕೊಡದಿದ್ದುದಕ್ಕೆ ಮಾತೆಯ ಕೊಲೆ

ಗಾಂಜ ಮತ್ತು ಅಫೀಮು ಸೇವಿಸುವ ಚಟವಿದ್ದ ಪೋರ್ಬಂದರಿನ ಒಬ್ಬ ಯುವಕನಿಗೆ ತನ್ನ ಚಟ ತೀರಿಸಿಕೊಳ್ಳಲು ಅವನ ವೃದ್ಧ ತಾಯಿಯು ಆರು ಆಣೆಗಳನ್ನು ಕೊಡಲು ನಿರಾಕರಿಸಿದುದಕ್ಕಾಗಿ ಅವನು ಕೋಪಗೊಂಡು ಕೊಡಲಿಯ ಅಲಗಿಗೆ ಅನೇಕ ಏಟುಗಳನ್ನು ಕೊಟ್ಟು ಕೊಂದುಹಾಕಿದನೆಂದು ವರದಿಯಾಗಿದೆ

ಸಾಮಾನ್ಯನೊಡನೆ ಬ್ರಿಟಿಷ್ ರಾಜಕುಮಾರಿ ಲಗ್ನಕ್ಕೆ ಅಡ್ಡಿ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ತಂಗಿ ರಾಜಕುಮಾರಿ ಮಾರ್ಗರೆಟ್‌ರವರು ಅರಮನೆಯಲ್ಲಿ ಅಧಿಕಾರಿಯಾಗಿರುವ ಗ್ರೂಪ್ ಕ್ಯಾಪ್ಟನ್ ಪೀಟರ್ ಟೌನ್‌ಸೆಂಡ್‌ರವರನ್ನು ವಿವಾಹವಾಗಲು ಬ್ರಿಟಿಷ್ ಮಂತ್ರಿ ಮಂಡಲವು ಅವಕಾಶವನ್ನು ನಿರಾಕರಿಸಿರುವುದಾಗಿ ವರದಿಯಾಗಿದೆ ತಮ್ಮ ಸಹೋದರಿಯ ವಿವಾಹದ ಬಗ್ಗೆ ರಾಣಿಯವರು ಮಂತ್ರಿಮಂಡಲದವರ ಅಭಿಪ್ರಾಯವನ್ನು ಕೇಳಿದ್ದರೆಂದೂ, ಅವರು ಅನ್ಯಥಾ ಸಲಹೆ ಇತ್ತರೆಂದೂ ಹೇಳಲಾಗಿದೆ ಆದರೆ ಅಧಿಕಾರಿಯನ್ನು ಬೆಲ್ಜಿಯಂ ದೇಶಕ್ಕೆ ವರ್ಗಾಯಿಸಲಾಗುವುದೆಂದು ಗೊತ್ತಾಗಿದೆ ಟೌನ್‌ಸೆಂಡರು ತಮ್ಮ ಮೊದಲನೇ ಪತ್ನಿಯ ಅನೀತಿಗಾಗಿ ಅವಳೊಡನೆ ವಿಚ್ಛೇದನ ಮಾಡಿಕೊಂಡಿರುವರೆಂದು ಹೇಳಲಾಗಿದೆ

ಸೆರೆಮನೆ ಕೆಲಸಗಾರರಿಂದ ೧ ದಿನ ಮುಷ್ಕರ

ಮೈಸೂರು ೧೧

ರಾಜಧಾನಿಯ ವಾಣೀವಿಲಾಸ ವಾಟರ್ ವರ್ಕ್ಸಿನ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ೭ ನೇ ತಾ|| ನಡೆದು ಬಹು ದಿನಗಳಿಂದಲೂ ಕೆಲಸಗಾರರ ಬೇಡಿಕೆಗಳ ವಿಷಯದಲ್ಲಿ ಸರ್ಕಾರದವರು ಉದಾಸೀನ ಭಾವವನ್ನು ಹೊಂದಿರುವುದಕ್ಕಾಗಿ ಪ್ರತಿಭಟಿಸಲು ಇದೇ ೨೦ ನೇ ತಾ|| ಸೋಮವಾರದಿಂದ ೨೪ ಗಂಟೆಗಳ ಮುಷ್ಕರ ಹೂಡುವಂತೆ ನಿರ್ಧರಿಸಲಾಯಿತು

ಆಕಾಶವಾಣಿಯಲ್ಲಿ ಮಲ್ಲಾರಾಧ್ಯರ ಭಾಷಣ

ಸಂಸ್ಥಾನದ ವಿದ್ಯಾ ಇಲಾಖಾ ಡೈರೆಕ್ಟರರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ಈ ಸಂಜೆ ೭-೩೦ ಘಂಟೆಗೆ ಮೈಸೂರಿನ ರೇಡಿಯೋ ಕೇಂದ್ರದಿಂದ "ಸಂಸ್ಥಾನದ ಅಭಿವೃದ್ಧಿ ಯೋಜನೆಗಳು" ಎಂಬ ಭಾಷಣ ಮಾಲೆಯಲ್ಲಿ ವಾಚನಾಲಯಗಳ ವ್ಯವಸ್ಥೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ದಸರಾ ವಸ್ತು ಪ್ರದರ್ಶನ ಸಮಿತಿಗೆ ಜೀವದಾನ

ಕಳೆದ ವರ್ಷ ಪುನರ್ರಚಿತವಾಗಿದ್ದ ದಸರಾ ವಸ್ತು ಪ್ರದರ್ಶನ ಸಮಿತಿಯು ಈ ಸಾರಿಯೂ ಕೆಲಸ ಮಾಡುವಂತೆ ಸರ್ಕಾರದವರು ಗೊತ್ತುಪಡಿಸಿರುವರು. ವಸ್ತು ಪ್ರದರ್ಶನವು ಈ ವರ್ಷ ಅಕ್ಟೋಬರ್ ೮ ರಿಂದ ೨೫ ರ ವರೆಗೆ ನಡೆಯುವುದು

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ವಿದ್ವಾನ್ ಎ ವಿ ನಾರಣಪ್ಪನವರ ನಾದಸ್ವರವು ವಿ|| ಹೆಚ್ ವಿ ರಾಮರಾಯರ ಪಿಟೀಲು ಮತ್ತು ವಿ|| ಟಿ ಕೆ ವೈದ್ಯನಾಥಪುರಿ ದೇವರ್ ರವರ ಮೃದಂಗದೊಡನೆ ಏರ್ಪಾಡಾಗಿದೆ

ಪ್ರವಾಹಕ್ಕೆ ಸಿಕ್ಕಿ ೪ ಮರಣ

ಕೊಳ್ಳೇಗಾಲಕ್ಕೆ ೨ ಮೈಲಿ ದೂರವಿರುವ ಕಾವೇರಿಯ ಪ್ರವಾಹದಲ್ಲಿ ಸಿಲುಕಿ ೪ ಜನರು ನೀರಿನ ಪಾಲಾಗಿರುವರೆಂದು ವರದಿಯಾಗಿದೆ

ಕಿರಂಗೂರು ಬಳಿ ಕಾವೇರಿಗೆ ಹೊಸ ಸೇತುವೆ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಯವರ ಸೂಚನೆ

ಸ್ವಂ ಸು ಪೋ] ಬೆಂಗಳೂರು ೧೧

ಮುಖ್ಯ ಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಇಂದು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ, ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರಿನ ಬಳಿ ಇರುವ ವೆಲ್ಲೆಸ್ಲಿ ಸೇತುವೆಗೆ ಪ್ರವಾಹದಿಂದ ಜಖಂ ಆಗಿರುವುದೆಂದೂ, ಈಗ ಅದು ಬಹಳ ಹಳೆಯದಾದುದರಿಂದ ಅದರ ಬದಲು ೬-೭ ಲಕ್ಷ ರೂ ವೆಚ್ಚದಲ್ಲಿ ಹೊಸ ಸೇತುವೆಯನ್ನು ನಿರ್ಮಿಸಲಾಗುವುದೆಂದೂ ತಿಳಿಸಿದರು

ಮಹಾರಾಜರ ಸಹಾಯಕ ಕಾರ್ಯದರ್ಶಿಯವರ ನಿವೃತ್ತಿ

ಶ್ರೀಮನ್ ಮಹಾರಾಜರ ಸಹಾಯಕ ಕಾರ್ಯದರ್ಶಿ, ಶ್ರೀ ಎಂ ನಾರಾಯಣಮೂರ್ತಿಯವರಿಗೆ ನಿವೃತ್ತಿ ಪೂರ್ವ ೩ ತಿಂಗಳಿನ ರಜವನ್ನು ಕೊಡಲಾಗಿದೆ

೧೫ನೇ ತಾ|| ದೇವಸ್ಥಾನಗಳಲ್ಲಿ ಪ್ರಾರ್ಥನೆ

ಕಳೆದ ವರ್ಷ ಮಳೆಯಾಗದೆ ಈ ವರ್ಷ ಸಮೃದ್ಧಿ ಮಳೆಯಾಗಿರುವುದರಿಂದ ದೇವರಿಗೆ ಕೃತಜ್ಞತೆ ಸಲ್ಲಿಸಲು ಸಂಸ್ಥಾನದ ದೇವಾಲಯ ಮತ್ತು ಇತರ ಪ್ರಾರ್ಥನಾ ಮಂದಿರಗಳಲ್ಲಿ ಇದೇ ತಿಂಗಳು ೧೫ನೇ ತಾರೀಖು ವಿಶೇಷ ಸೇವೆ ಮತ್ತು ಪ್ರಾರ್ಥನೆ ನಡೆಸುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಈ ರೀತಿ ಸಲಹೆ ಇತ್ತು ಮದ್ರಾಸು ಮುಖ್ಯ ಮಂತ್ರಿ ರಾಜಾಜಿಯವರು ಪತ್ರ ಬರೆದಿದ್ದರೆಂದು ಹೇಳಲಾಗಿದೆ

ಪ್ರವಾಹದ ಬಗ್ಗೆ ಅಧಿಕಾರಿಗಳಿಗೆ ಸೂಚನೆ

ಪ್ರವಾಹದಲ್ಲಿ ಪೀಡಿತರಾಗಿರುವವರಿಗೆ ಪರಿಹಾರ ಕೊಡುವ ಸಂಬಂಧವಾಗಿ ಸರ್ಕಾರದವರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸುತ್ತಾರೆ ಮನೆಗಳು ನಾಶವಾಗಿರುವ ಕಡೆಗಳಲ್ಲಿ ಪರಿಹಾರವನ್ನು ಕೊಡಲಾಗುವುದು ಬಿತ್ತನೆ ಬೀಜವನ್ನೂ ಒದಗಿಸುವಂತೆ ವ್ಯವಸಾಯ ಇಲಾಖೆಗೆ ತಿಳಿಸಲಾಗಿದೆ

○ ಕೃಷ್ಣರಾಜಸಾಗರದಲ್ಲಿ ಇಂದು ನೀರಿನ ಮಟ್ಟವು ೧೨೪|| ಅಡಿ ಇದ್ದಿತು.

ಬಟ್ಟೆ ಬೆಲೆ ಮತ್ತು ಹಂಚಿಕೆ ಹತೋಟಿ ಪೂರ್ಣ ರದ್ದು

೧೯೫೨-೫೩ರಲ್ಲಿ ಗೊತ್ತುಮಾಡಲ್ಪಟ್ಟಿದ್ದ ಪರಮಾವಧಿಯನ್ನು ಮೀರಿ ಈಗಲೇ ತಿಂಗಳಿಗೆ ೪೦ ಕೋಟಿಗಳಷ್ಟು ಗಜ ಬಟ್ಟೆಗಳನ್ನು ತಯಾರಿಸಲಾಗುತ್ತಿರುವುದರಿಂದ ಭಾರತ ಸರ್ಕಾರದವರು ಬಟ್ಟೆಗಳ ಬೆಲೆ ಮತ್ತು ಹಂಚಿಕೆ ಮೇಲಿನ ಎಲ್ಲಾ ಹತೋಟಿಗಳನ್ನೂ ರದ್ದುಗೊಳಿಸಿರುತ್ತಾರೆ.

ಸೇವಾದಳದ ಶಿಕ್ಷಕರ ಸಭೆ

ಮೈಸೂರು ನಗರದಲ್ಲಿರುವ ಭಾರತ ಸೇವಾದಳದ ಶಾಖೆಯ ಎಲ್ಲಾ ಶಿಕ್ಷಕ ನಾಯಕ ಮತ್ತು ಮಾಧ್ಯಮಿಕ ಶಿಕ್ಷಕರುಗಳ ಸಭೆಯು ನಾಳೆ ಸಂಜೆ ೫ ಗಂಟೆಗೆ ಮಂಡಿಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ವಿದ್ಯಾ ಮಂದಿರದಲ್ಲಿ ಸೇರುವುದು

ರಷ್ಯದ ಒಳಾಡಳಿತ ಮಂತ್ರಿ ಬೆರಿಯಾರವರ ವಜಾ

ಸುಪ್ರೀಂ ಕೋರ್ಟಿನ ಮುಂದೆ ಅವರ ವಿಚಾರಣೆ

ರಷ್ಯದ ಒಳಾಡಳಿತ ಮಂತ್ರಿ ಲಾವ್ರೆಂಟಿ ಪಿ ಬೆರಿಯಾರವರನ್ನು ಅಧಿಕಾರ ಸ್ಥಾನದಿಂದಲೂ, ಕಮ್ಯೂನಿಸ್ಟ್ ಪಕ್ಷದಿಂದಲೂ ವಜಾ ಮಾಡಲಾಗಿರುವುದೆಂದು ರಷ್ಯದ ಟಾಸ್ ಸುದ್ದಿ ಸಂಸ್ಥೆ ತಿಳಿಸಿರುತ್ತದೆ ಅವರು ರಷ್ಯಾ ಜನತೆಗೂ, ಕಮ್ಯೂನಿಸ್ಟ್ ಪಕ್ಷಕ್ಕೂ ಶತ್ರುಗಳೆಂದು ಆಪಾದಿಸಲಾಗಿದೆ. ಅವರ ಸ್ಥಾನದಲ್ಲಿ ಸರ್ಗೆ ಕ್ರುಗ್ಲೊಫ್‌ರನ್ನು ನೇಮಿಸಲಾಗಿದೆ. ಬೆರಿಯರವರು ರಷ್ಯಾ ವಿರುದ್ಧದ ಚಟುವಟಿಕೆ ನಡೆಸುತ್ತಿದ್ದು, ವಿದೇಶೀ ಬಂಡವಾಳದ ಹಿತಾಸಕ್ತಿ ಹೊಂದಿ, ತಮ್ಮ ರಾಷ್ಟ್ರವನ್ನು ಬುಡಮೇಲು ಮಾಡುವ ಭಾರೀ ಚಟುವಟಿಕೆ ಕೈಗೊಂಡಿದ್ದರೆಂದೂ ಹೇಳಲಾಗಿದೆ, ಅವರನ್ನು ಅಲ್ಲಿನ ಸುಪ್ರೀಂ ಕೋರ್ಟಿನ ಮುಂದೆ ವಿಚಾರಣೆಗೆ ಗುರಿಪಡಿಸಲಾಗುವುದು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಸ್ ಸಿ. ವಸಂತ ಕೋಕಿಲಂ ರಿಕಾರ್ಡು. ಮಧ್ಯಾಹ್ನ ೧-೩೦ ಪಿಟೀಲು ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫-೩೦ ಮತ್ತು ಆ ಬಿ ಪಿ ವೆಂಕಟೇಶ ಸಂಗೀತ ೬ ೧೫ ನವಿಹಾರ ೬-೧೫ ಹಾಡು ಮತ್ತು ಹಮ್ಮವರು ೭-೫ ಮತ್ತು ೮-೩೦ ಎಂ ಡಿ. ವರಾಹಸ್ವಾಮಿ: ಗೋಟುವಾದ್ಯ ೭-೩೦ ನೃತ್ಯಗೀತೆ ೯-೧೫ ಗಜಲ್. ೯-೩೦ ಜ ಪಿ ರಾಜರತ್ನಂ-ಬಾಹುಬಲಿ ನಾಟಕ

○ ಮೈಸೂರು ಬ್ಯಾಂಕಿನವರು ೫೦ ಲಕ್ಷ ರೂ ಗಳನ್ನು ಬಡ ಜನರಿಗೆ ಸಾಲ ಕೊಡಲು ಮುಂದೆ ಬಂದಿರುವರು ೧೦೦ ರೂ.ಗೆ ೫ ರೂ ಗಳನ್ನು ತೆರಿಗೆ ಕೊಟ್ಟರೆ, ಉಳಿದ ೯೫ ರೂ.ಗಳನ್ನು ಬ್ಯಾಂಕಿನವರು ಮುಂಗಡವಾಗಿ ಕೊಡುವರು.

○ ರಜದ ಮೇಲಿರುವ ಮೈಸೂರು ಸೈಲು ಸೂಪರಿಂಟೆಂಡೆಂಟರಾದ ಶ್ರೀ ಎಸ್. ಬಸಪ್ಪನವರನ್ನು ಬೆಂಗಳೂರಿನ ಸಾರಿ ಸರಬರಾಜಿನ ಏಕೋಪಾಧಿಕಾರಿಯಾಗಿ ವರ್ಗಾಯಿಸಲಾಗಿದೆ ಆ ಸ್ಥಾನದಲ್ಲಿದ್ದ ಶ್ರೀ ಎ ಎಸ್ ರಾಮಣ್ಣನವರನ್ನು ಪೊಲೀಸು ಇಲಾಖೆಗೆ ವರ್ಗಾಯಿಸಲಾಗಿದೆ

ಆಸ್ಟ್ರೇಲಿಯದ ಮೇಲೆ ಭಾರತದ ಆಕ್ರಮಣದ ಸೋಗು

ದಕ್ಷಿಣ ಆಫ್ರಿಕದ ಪ್ರಧಾನಿ ಡಾ|| ಡೇನಿಯಲ್ ಮಲಾನ್‌ರವರು ಒಂದು ಕಡೆ ಮಾತನಾಡುತ್ತ ಆಸ್ಟ್ರೇಲಿಯಕ್ಕೆ ಭಾರತದಿಂದ ಆಕ್ರಮಣವೇನಾದರೂ ಸಂಭವಿಸಿದರೆ, ದಕ್ಷಿಣ ಆಫ್ರಿಕವು ಆಸ್ಟ್ರೇಲಿಯಕ್ಕೆ ಸಹಾಯ ಮಾಡಲಿರುವುದಾಗಿ ತಿಳಿಸಿರುತ್ತಾರೆ

ಚಿತ್ರಾಲ್ ಪ್ರಜೆಗಳಿಗೂ ಪಾಕ್ ಸೈನ್ಯಗಳಿಗೂ ಘರ್ಷಣೆ

ಪಾಕಿಸ್ತಾನದ ಚಿತ್ರಾಲ್ ಪ್ರದೇಶದಲ್ಲಿ ಪ್ರದರ್ಶನಕಾರರಿಗೂ ಪಾಕಿಸ್ತಾನ ಸೈನ್ಯಗಳಿಗೂ ಘರ್ಷಣೆಗಳು ನಡೆದ ಬಹುವಷ್ಟು ಸಾವುನೋವುಗಳಾಗಿರುವುದೆಂದು ವರದಿಯಾಗಿದೆ ಚಿತ್ರಾಲಿನಲ್ಲಿ ಹೊಸ ಪ್ರಧಾನಿಯನ್ನು ನೇಮಿಸಿ, ಆ ಸಂಸ್ಥಾನದಲ್ಲಿ ಹೊಸದಾಗಿ ಚುನಾವಣೆಗಳನ್ನು ನಡೆಸಬೇಕೆಂದು ಪಾಕಿಸ್ತಾನದ ಸರ್ಕಾರದವರು ಆಲೋಚನೆ ಮಾಡುತ್ತಿರೆಂದೂ, ಇದರಿಂದ ಅಲ್ಲಿನ ಜನರಿಗೂ ಪಾಕಿಸ್ತಾನದ ಸೈನ್ಯಗಳಿಗೂ ಘರ್ಷಣೆಯಾಯಿತೆಂದೂ ಹೇಳಲಾಗಿದೆ ಎರಡು ಕಡೆಗಳಲ್ಲೂ ಸಾವುನೋವುಗಳಾಗಿವೆ

ಶಿಖರ ನೋಡಲು ಹೋಗಿ ನದಿ ಪಾಲು

ಹಿಮಾಲಯದ ೨೫೮೧೧ ಅಡಿ ಎತ್ತರದ ಹಿಮಾಲ್ ಚೂಲಿ ಶಿಖರವನ್ನು ನೋಡಲು ಹೋಗಿದ್ದ ೨೨ ವರ್ಷದ ಹರ್ಬರ್ಟ್ ವ್ಯಾಡಕ್ ಎಂಬ ಬ್ರಿಟಿಷ್ ಯುವಕನು ... ಖೋಲಾ ಎಂಬ ವೇಗ ಪ್ರವಾಹವುಳ್ಳ ನದಿಯಲ್ಲಿ ಮುಳುಗಿ ಮಡಿದಿರುವುದಾಗಿ ವರದಿಯಾಗಿದೆ ವ್ಯಾಡಕನೂ, ಹ್ಯಾರಿ ಬಿಬ್ಬಿ ಎಂಬ ಮತ್ತೊಬ್ಬ ಯುವಕನೂ ಪ್ರಪಂಚವನ್ನೆಲ್ಲ ಸುತ್ತಿಕೊಂಡು ಬರಲು ಎರಡು ವರ್ಷಗಳ ಹಿಂದೆ ಹೊರಟಿದ್ದರು

ಈಜಿಪ್ಟಿಗೆ ಶಸ್ತ್ರಾಸ್ತ್ರ ರವಾನೆ ಬಗ್ಗೆ ಅಮೆರಿಕಕ್ಕೆ ಪ್ರತಿಭಟನೆ

ಈಜಿಪ್ಟಿಗೆ ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವ ಬಗ್ಗೆ ಬ್ರಿಟನ್ನು ಅಮೆರಿಕ ಸರ್ಕಾರಕ್ಕೆ ಪ್ರತಿಭಟನೆಯನ್ನು ಸೂಚಿಸಿರುವುದಾಗಿ ವರದಿಯಾಗಿದೆ ಅರಬ್ ರಾಷ್ಟ್ರಗಳಿಗೆ ಏಳು ಮಿಲಿಯ ಡಾಲರು ಸಹಾಯವನ್ನು ನೀಡುವ ಸಲುವಾಗಿ ಅಮೆರಿಕದ ರಾಜಧಾನಿಗಳು ಆಶ್ವಾಸನೆ ಕೊಟ್ಟಿರುವರೆಂದೂ ಹೇಳಲಾಗಿದೆ

CHAMUNDESWARI

TALKIES

MORNING SHOWS

... 30

On SATURDAY & SUNDAY

Francis Goes To Races

Starring ... O'Connor, ... Mule

Edited, Printed and Published by A R Nagaraja ... Sadhvi ... Mysore

ಬಿಸಿಲಿನಿಂದ ಮದ್ದುಗುಂಡು ಡಿಪೋ ಸಿಡಿತ

ಸ್ಪೇನಿನ ಬಳಿ ದ್ವೀಪವೊಂದರಲ್ಲಿರುವ ಮದ್ದುಗುಂಡಿನ ಡಿಪೋವು ಬಿಸಿಲಿನ ತಾಪದಿಂದ ಸಿಡಿದು, ೮ ಮಂದಿ ಸೈನಿಕರು ಮಡಿದು ಅನೇಕರು ಗಾಯಗೊಂಡಿರುವರು

ಡಾ॥ ಹೆಚ್. ಕೃಷ್ಣರಾಯರಿಗೆ ಅಮೆರಿಕಾ ಪ್ರಶಸ್ತಿ

ಬೆಂಗಳೂರು ಕಾರ್ಪೊರೇಷನ್ನಿನ ಸಹಾಯಕ ಆರೋಗ್ಯಾಧಿಕಾರಿಗಳಾದ ಡಾ॥ ಹೆಚ್ ಕೃಷ್ಣರಾಯರಿಗೆ ಬಾಲ್ಟಿಮೋರಿನ ಜಾನ್ ಹಾಪ್ಕಿನ್ಸ್ ಶಾಲೆಯವರು ಎಂ ಪಿ. ಹೆಚ್ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ ರಾಕ್‌ಫೆಲ್ಲರ್ ವಿದ್ಯಾರ್ಥಿ ವೇತನ ಪಡೆದ ಇವರು ಕಳೆದ ವರ್ಷ ಅಮೆರಿಕಕ್ಕೆ ತೆರಳಿದರು ಸಾರ್ವಜನಿಕ ಆರೋಗ್ಯ ವಿಷಯಗಳಲ್ಲಿ ಅವರು ವಿಶೇಷ ವ್ಯಾಸಂಗ ಮಾಡಿರುತ್ತಾರೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಇಂದ	ರೂ ಗೆ
ಕಡಲೆಕಾಯಿ	೩ ೪ ೦	೨೮ ೮ ೦
ಎಳ್ಳು	೬ ೦ ೦	೮೩ ೧ ೦
ಕೊಂಗಿಧಾನ್ಯ	೩೩ ೨ ೦	೩೩ ೧೨ ೦
ಜವಳಿ	೪೮ ೬ ೦	೪೮ ೧೨ ೦
ಹೆಸರು	೪೬ ೦	೬೦ ೦ ೦
ಅವರೆ	೫೧ ೦	೫೮ ೦ ೦
ಉದ್ದು	೬೪ ೪ ೦	೭೨ ೮ ೦
ಹಲಸಂದೆ	೫೦ ೮	೬೭ ೪ ೦
ಸೀಗೆಕಾಯಿ	೬ ೭ ೦	
ಹುಣಸೇಹಣ್ಣು	೫ ೦	೮ ೪
ಮೆಣಸಿನಕಾಯಿ	೨೬ ೦ ೦	
ತೆಂಗಿನಕಾಯಿ	೧೬೩ ೦ ೦	೨೪೪ ೦ ೦

ಸೈಕಲ್ ಕಳೆದುಹೋಗಿದೆ

ಬಿ ಎಸ್ ಎ ಸೈಕಲ್ ನಂ B 76337 (ರ್‍ಯಾಲಿ ಮಾಡಲ್) ಫಸ್ಟ್ ಗ್ರೇಡ್ ಕಾಲೇಜಿನ ಬಳಿ ನಿನ್ನೆ ಕಳೆದು ಹೋಗಿದೆ ಪತ್ತೆ ಮಾಡಿಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು

ಎಸ್ ಶ್ರೀರಂಗಾಚಾರ್,
861 ನಾರಾಯಣಶಾಸ್ತ್ರಿ ರಸ್ತೆ
ಮೈಸೂರು

ಮನೆಗಳು ಖರೀದಿಗಿವೆ

ಮೈಸೂರು ದೇವರಾಜ ಮೊಹಲ್ಲಾ ದೇವರಾಜ ಮಾರ್ಕೆಟ್ ಪಕ್ಕದಲ್ಲಿರತಕ್ಕಂತಾ 1834 3೦ ಮನೆ ಮತ್ತು ವಾಣಿವಿಲಾಸ ಮೊಹಲ್ಲಾ 11 ನೇ ಕ್ರಾಸ್ ರೋಡಿನಲ್ಲಿ ನಂ 2807 ಮನೆ ಇವುಗಳು ಖರೀದಿಗಿವೆ ಹಳೇ ಮೈಸೂರು ಬ್ಯಾಂಕ್ ಕಟ್ಟಡದಲ್ಲಿರುವ ಬ್ರೋಕರ್ಸ್ ಸಿಂಡಿಕೇಟ್‌ನಲ್ಲಿ ವಿಚಾರಿಸಿ

SRI GAYATHRI

TALKIES

From 1-7-53 For 3 days

LURE OF THE WILDERNESS

(Technicolor)

Starring — Jean Peters and Jeffry Hunter

COMING —

Androcles And The Lion

ಟೆಂಡರ್ ನೋಟಿಫಿಕೇಷನ್

— ೦ —

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲುಗಳಿಗೆ ಬೇಕಾದ ಕೆಳಗೆ ಕಂಡ ಸಾಮಾನುಗಳನ್ನು ಪ್ರತಿ ಹೈಸ್ಕೂಲುಗಳಿಗೂ ಸಪ್ಲೈ ಮಾಡಲು ಟೆಂಡರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಲ್ಲಿ ೧೯೫೩ನೇ ಇಸವಿ ಜುಲೈ ೧೭ನೇ ತಾರೀಖು ಶುಕ್ರವಾರ ಮಧ್ಯಾಹ್ನ ೪ ಗಂಟೆ ವರೆವಿಗೂ ಸ್ವೀಕರಿಸಲಾಗುತ್ತದೆ ಟೆಂಡರು ಕೊಡಲು ಅಪೇಕ್ಷೆಯುಳ್ಳವರು ೪೫೦ (ನಾಲ್ಕು ನೂರ ಐವತ್ತು) ರೂಪಾಯಿಗಳನ್ನು ಠೇವಣಿಯಾಗಿ ಡಿಸ್ಟ್ರಿಕ್ಟ್ ಬೋರ್ಡ್ ಫಂಡಿನ ಕ್ರೆಡಿಟ್ಟಿಗೆ ಜಮಾ ಮಾಡಿದ ಚಲನ್ನನ್ನು ಟೆಂಡರಿಗೆ ಲಗತ್ತಿಸಿ ಕವರಿನಲ್ಲಿಟ್ಟು ಸೀಲ್ ಮಾಡಿ ಹಾಜರ್‍ಮಾಡಬೇಕು ಈ ಹಣವನ್ನು ಜಮಾ ಮಾಡದೇ ಬರುವಂಥ ಟೆಂಡರುಗಳಿಗೆ ಗಮನ ಕೊಡಲಾಗುವುದಿಲ್ಲ.

೧ ಬೆಟ್ಟದಪುರ, ೨ ಪಿರಿಯಾಪಟ್ಟಣ, ೩ ರಾಮಂದೂರು, ೪ ಚಾಮರಾಜನಗರ, ೫ ನರಗೂರು ೬. ಕಬ್ಬಹಳ್ಳಿ, ೭ ಕುದೇರು, ೮ ಬೀವನೂರು ೯ ಬನ್ನೂರು, ೧೦ ತಲಕಾಡು (ಈ ಸ್ಕೂಲುಗಳಿಗೆ)

೧ ತೇಗದ ಮರದ ಕುರ್ಚಿಗಳು ಹಿಂಭಾಗದ ಎತ್ತರ ೩' ೨", ಮುಂಭಾಗ ೨೬'' ಹಲಗೆ ಮುಂಭಾಗ ೨೨||'', ಹಿಂಭಾಗದ ಅಗಲ ೧೯'' ಒಟ್ಟು ಸಂಖ್ಯೆ (Number) ೧೦x೬ = ೬೦

೨ ತೇಗದ ಮರದ ರಿಟ್ಯಾನ್ ಕುರ್ಚಿಗಳು (Rattan Chairs) ಒಟ್ಟು ಸಂಖ್ಯೆ ೧೦x೧ = ೧೦

೩ ತೇಗದ ಮರದ ಕರಗಸಿಯ ಮೇಜಾಗಳು ಒಂದು ಡ್ರಾಯರ್ ಸಮೇತ (Table with one drawer) – ಅಳತೆಗಳು ೩೦''x೨೬''x೩೦'' ೪ ಚೌಕವಾದ ಕಾಲುಗಳು ೨''x೨'' ಅಡ್ಡಲಾಗಿ ಹಾಕುವ ಪಟ್ಟಿಗಳು ೨''x೧'' ಮೇಲಿನ ಹಲಗೆ ದಪ್ಪ ೩/೪'' ಮೇಲ್ಭಾಗಕ್ಕೆ ಎರಡು ಹಲಗೆಗಿಂತ ಜಾಸ್ತಿಯಾಗಿ ಉಪಯೋಗಿಸಕೂಡದು ಸಂಖ್ಯೆ ೧೦x೫ =೫೦

೪ ತೇಗದ ಮರದ ಮೇಜಾಗಳು ಎರಡು ಡ್ರಾಯರ್ ಮತ್ತು ವಿಭಾಗಗಳು (Portion), ಉತ್ತಮ ತರದ ಬೀಗಗಳು ಮತ್ತು ಬೀಗದ ಕೈಗಳ ಸಮೇತ ಅಳತೆ ೪'x೨||'x–| ಗುಂಡಾದ ಅಥವಾ ಟರ್ನಿಂಗ್ ಕಾಲುಗಳು (Legs) ಹಲಗೆಯ ದಪ್ಪ ೧ ಮೇಲ್ಭಾಗಕ್ಕೆ ಮೂರು ಹಲಗೆಗಳಿಗಿಂತ ಜಾಸ್ತಿಯಾಗಿ ಉಪಯೋಗಿಸಕೂಡದು ಅತ್ಯಂತ ತೃಪ್ತಿಕರವಾಗಿ ಒಪ್ಪುವ ಹಾಗೆ ೧೦x೧ = ೧

೫ ಪ್ರಯೋಗಶಾಲೆ (Laboratory) ತೇಗದ ಮರದ ಮೇಜಾಗಳು – ಅಳತೆ ೮'x... ಕಾಲುಗಳು ೩''x೩'' ಹಲಗೆ ದಪ್ಪ ೧'' ಮೂರು ಹಲಗೆಗಳಿಗಿಂತ ಜಾಸ್ತಿಯಾಗಿ ಉಪಯೋಗಿಸದೆ ಚೆನ್ನಾಗಿ ಒಪ್ಪುವಂತೆ ಮಾಡಿಕೊಡುವುದು ೧೦x೧ = ೧೦

೬ ತೇಗದ ಮರದ ಬೀರುಗಳು (Almirah) ಮತ್ತು ನಾಲ್ಕು ವಿಭಾಗಗಳು, ಕಬ್ಬಿಣದ ಹ್ಯಾಸ್ಪ್ (Hasp) ಮತ್ತು ಸ್ಟೇಪಲ್ ಒಳಗೊಂಡ ಅಳತೆ ೫||'x೩'x೧| ಹಲಗೆಯ ದಪ್ಪ ೧'' ಕೆಳ ಭಾಗದ ಕಾಲುಗಳು ೨|| x೨||" ಗಳಾಗಿ ಮಾಡುವುದು ಇತ್ಯಾದಿ ಒಪ್ಪುವಂತೆ ಮಾಡುವುದು ೧೦x೨ = ೨೦

೭ ತೇಗದ ಮರದ ಸ್ಟೂಲುಗಳು (Stools) ಮೇಲಿನ ಹಲಗೆಯು ದಪ್ಪ ೧'' ಅಳತೆ -೧೮''x೧೨''x೧೮ ಒಂದೇ ಹಲಗೆಯನ್ನು ಉಪಯೋಗಿಸಬೇಕು ಕಾಲುಗಳು ೨''x೨'' ಪಟ್ಟಿಗಳು ಕೆಳಗಡೆ ಹಲಗೆಗಳು ೨''x೧'' ಕೆಳಗಡೆಯು ಅಡ್ಡಲಾದ ಪಟ್ಟಿಗಳು ಸುತ್ತಲೂ ೧||' x೧'' ಅತ್ಯಂತ ತೃಪ್ತಿಕರವಾಗಿ ಒಪ್ಪುವಂತೆ ಮಾಡಿಕೊಡುವುದು ೧೦x೪ = ೪೦

೮ ತೇಗದ ಮರದ ಬೆಂಚುಗಳು ಅಳತೆ ೬'x೧'x೧೪", ಹಲಗೆಯ ದಪ್ಪ ೧'' ಮತ್ತು ೬ ಕಾಲುಗಳು ೨''x೨" ಅಡ್ಡಲಾದ ಪಟ್ಟಿಗಳು ೧||"x೧" ಮತ್ತು ಅಗಲವಾದ ಪಟ್ಟಿಗಳು ೨||''x೧", ಹಲಗೆಯನ್ನು ನಿಲ್ಲಿಸುವುದಕ್ಕೆ ಇತ್ಯಾದಿ ೧೦x೨ = ೨೦

೯ ತೇಗದ ಮರದ ಪೆಟ್ಟಿಗೆ, ಕಬ್ಬಿಣದ ಹ್ಯಾಸಪ್ (Hassap) ಮತ್ತು ಸ್ಟೇಪಲ್ (Staple) ಸಮೇತ–ಹೊರ ಅಳತೆಗಳು. ೨೬"x೧೨"x೧೫", ಹಲಗೆ ದಪ್ಪ ೩/೪", ಕೆಳಗಡೆಯ ಪಟ್ಟಿಗಳು ೨"x೧" ೪" ಕಬ್ಬಿಣದ ಅಥವಾ ಮರದ ಕೈಗಳು (Handles) ಮರದ ಎಣ್ಣೆಯನ್ನು (Wood oiling) ಹಚ್ಚುವುದನ್ನು ಸಹ ಸೇರಿಸಿಕೊಂಡು ಒಪ್ಪುವಂತೆ ಮಾಡಿಕೊಡುವುದು ೧೦x೧ = ೧೦

೧೦ ತೇಗದ ಮರದ ಪಿಜನ್ ಗೂಡುಗಳು (Pigeon Holes) ನಾಲ್ಕು ಮಡಿಸುವ ಬಾಗಿಲುಗಳು ೩'x೧೬ x೨' ಹೊರ ಅಳತೆಗಳು ಬೀಗಗಳು ಮತ್ತು ಬೀಗದ ಕೈಗಳನ್ನು ಸೇರಿಸಿಕೊಂಡು ಕೆಳಗಡೆ ೩ ಖಾನೆಗಳು ಅಥವಾ ಭಾಗಗಳು (Compartments) ೨ ವಿಭಾಗಗಳೊಡನೆ (Portions) ಮಧ್ಯದಲ್ಲಿ ೩ ವಿಭಾಗಗಳೂ, ಮೇಲುಗಡೆ ೫ ವಿಭಾಗಗಳಿಂದಲೂ ಕೂಡಿರಬೇಕು ... ಉಪಯೋಗಿಸುವ ಮರವು ಉತ್ತಮ ತರದ್ದಾಗಿರಬೇಕು, ನಾಲ್ಕು ... ಕೂಡಿಂತಿರಬೇಕು ಅತ್ಯಂತ ತೃಪ್ತಿಕರವಾಗಿ ಒಪ್ಪುವಂತೆ ಮಾಡಿಕೊಡುವ ೧೦x೧ = ೧೦

೧೧ ತೇಗದ ಮರದ ನೋಟೀಸ್ ಬೋರ್ಡ್ — ಅಳತೆ ೩'x೨' ೧೦x೧ = ೧೦ ಅತ್ಯಂತ ತೃಪ್ತಿಕರವಾಗಿ ಒಪ್ಪುವಂತೆ ಮಾಡಿಕೊಡುವುದು

ಎಚ್. ಎಂ ಚನ್ನಬಸಪ್ಪ
ಅಧ್ಯಕ್ಷರು, ಜಿಲ್ಲಾ ಬೋರ್ಡ್, ಮೈಸೂರು

ರೆಜಿ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೨-೭-೧೯೫೩ [ಸಂಚಿಕೆ ೪೫

ಪ್ರೊ. ಬರ್ಲಿನ್ನಲ್ಲಿ ಸ್ಟೀವರ್ಸನ್ ಬಂಧನ - ಬಿಡುಗಡೆ

ಮೈಸೂರು ಸರ್ಕಾರದ ೩ ಕೋಟಿ ರೂ. ಸಾಲ

ಬೆಂಗಳೂರು ೧೧

ಮೈಸೂರು ಸರ್ಕಾರದವರು ಶೇ|| ೪ ರಂತೆ ಬಡ್ಡಿ ದೊರೆಯುವ ೩ ಕೋಟಿ ರೂ ಗಳನ್ನು ಈ ತಿಂಗಳು ೧೫ ರಿಂದ ಸಾಲ ತೆಗೆಯುವುದು. ೯೯|| ರೂ ಗಳಿಗೆ ಅದನ್ನು ಕೊಡಲಾಗುವುದು ಪಂಚವಾರ್ಷಿಕ ಯೋಜನೆಯ ಕೆಲಸಗಳಿಗೆ ಮಾತ್ರ ಅದನ್ನು ಉಪಯೋಗಿಸಲಾಗುವುದು ಸಾಲವನ್ನು ೨೫ರ ವರೆಗೂ ತೆರೆದಿರಲಾಗುವುದು ೧೦ ವರ್ಷಗಳ ನಂತರ ಸಾಲವು ತೀರ್ಪೆಯಾಗುವುದು

ಯೋಜನೆ ಸಾಲಕ್ಕಾಗಿ ಮೈಸೂರು ಬ್ಯಾಂಕಿನವರ ಸಹಾಯ

ಮೈಸೂರು ಸರ್ಕಾರದ ಅಭಿವೃದ್ಧಿ ಯೋಜನೆಗಾಗಿ ಸರ್ಕಾರದವರು ತೆಗೆಯುವ ಸಾಲಕ್ಕೆ ಹಣ ಕೊಡಲು ಸಾಧ್ಯವಿಲ್ಲದಿರುವ ಜನರಿಗೆ ಸಹಾಯ ಮಾಡಲು ಮೈಸೂರು ಬ್ಯಾಂಕಿನವರು ಮುಂದೆ ಬಂದಿರುತ್ತಾರೆ ೫ ರೂ ಕೊಟ್ಟರೆ ೯೫ ರೂ ವ. ಂಗಡ ಕೊಡಲಾಗುವುದು

ಆಫ್ರಿಕದಲ್ಲಿ ಪಾಕಿಸ್ತಾನ್ ಉಪನ್ಯಾಧಿಯ ಭೀಕರ ಕೊಲೆ

ಭಾರತ, ಪಾಕಿಸ್ತಾನ ಮತ್ತು ಪೂರ್ವ ಆಫ್ರಿಕಗಳಲ್ಲಿ ಪ್ರಖ್ಯಾತಿ ಗಳಿಸಿದ ಭಾರಿ ಪೈಲ್ವಾನನೂ, ಪಾಕಿಸ್ತಾನದ ಕುಸ್ತಿ ಟೀಮಿನ ವ್ಯವಸ್ಥಾಪಕರೂ ಆದ ಮಹಮದ್ ರಹ್ಮ್‌ಜಾನ್ ಎಂಬವನು ನೈರೊಬಿಯಲ್ಲಿ ಒಂದು ಬಸ್ಸು ಸ್ಟಾಪ್ ಬಳಿ ನಿಂತಿದ್ದಾಗ ಒಬ್ಬ ಆಫ್ರಿಕನನು ಗದೆಯಿಂದ ಅವನನ್ನು ಅಪ್ಪಳಿಸಿ ಕೊಂದನೆಂದು ವರದಿಯಾಗಿದೆ

ಇಂಗ್ಲೆಂಡಿನಲ್ಲಿ ಮೂಗುತಿ ಚಟ

ಲಂಡನ್ನಿನಲ್ಲಿ ಬ್ರಿಟಿಷ್ ಸ್ತ್ರೀಯರು ಮೂಗಿಗೆ ಮೂಗುತಿಯಂತೆ ದುಂಡಾಗಿರುವ ಉಂಗುರವನ್ನು ಹಾಕಿಕೊಳ್ಳಲು ಇಚ್ಛೆ ಪಡುತ್ತಿರುವರೆಂದು ಹೇಳಲಾಗಿದೆ. ಬ್ರಿಟಿಷ್ ರಾಣಿಯವರ ಕಿವಿಯಲ್ಲಿ ಆಭರಣ ಹಾಕಲು ತೂತು ಮಾಡಿದ ಸಿರಿಲ್ ಫಿಲ್ಲಿಪ್ಸ್ ಎಂಬಾತನ ಬಳಿಗೆ ಅನೇಕರು ಬಂದು ತಮ್ಮ ಮೂಗುಗಳನ್ನೂ ಚುಚ್ಚಬೇಕೆಂದು ಒತ್ತಾಯ ಮಾಡುತ್ತಿರುವರೆಂದು ಹೇಳಲಾಗಿದೆ ಮೂಗನ್ನು ಚುಚ್ಚಿದರೆ, ರೋಗವೇನಾದರೂ ಬರಬಹುದೆಂದು ಆತನು ಹೆದರುತ್ತಿರುವನೆಂದೂ, ಹೆಚ್ಚಾಗಿ ಒತ್ತಾಯ ಮಾಡುವವರಿಗೆ ಕ್ಲಿಪ್ಪಿರುವ ಚಿನ್ನದ ಉಂಗುರಗಳನ್ನು ಆತನು ಕೊಡುತ್ತಿರುವನೆಂದೂ ಹೇಳಲಾಗಿದೆ

ಆರು ಸರ್ಕಾರಗಳ ಸಾಲ

ಮದ್ರಾಸು ಸರ್ಕಾರದವರು ೧೦ ವರ್ಷದ ಅವಧಿಯ ಮತ್ತು ಶೇ|| ೪ ರಂತೆ ಬಡ್ಡಿಯುಳ್ಳ ೫ ಕೋಟಿ ರೂ ಗಳ ಸಾಲವನ್ನು ಇದೇ ೧೫ ನೇ ತಾ|| ಎತ್ತುವರು ಬೊಂಬಾಯಿ ಮತ್ತು ಉತ್ತರ ಪ್ರದೇಶದವರು ತಲಾ ೫ ಕೋಟಿ, ತಿರುವಾಂಕೂರು ಮತ್ತು ಪಶ್ಚಿಮ ಬಂಗಾಳದವರು ತಲಾ ೩ ಕೋಟಿ ಮತ್ತು ಮಧ್ಯಭಾರತದವರು ೧ ಕೋಟಿ ರೂ ಸಾಲವನ್ನು ಎತ್ತುವರು

ರಷ್ಯಾದ ಉಪಪ್ರಧಾನಿ ಬೆರಿಯಾರವರ ದಸ್ತಗಿರಿ

ರಷ್ಯಾದ ಉಪ ಪ್ರಧಾನಿ ಮತ್ತು ಒಳಾಡಳಿತ ಮಂತ್ರಿ ಲಾವ್ರೆಂಟಿ ಬೆರಿಯಾರವರನ್ನು ವಜಾ ಮಾಡಲಾಗಿರುವುದಲ್ಲದೆ ಅವರನ್ನು ಈಗ ದಸ್ತಗಿರಿ ಮಾಡಲಾಗಿದೆ ರಷ್ಯಾದ ವಿದ್ಯಮಾನಗಳ ಬಗ್ಗೆ ಅಮೆರಿಕದಲ್ಲಿ ಕುತೂಹಲವುಂಟಾಗಿದೆ ರಷ್ಯಾವನ್ನು ಆಳುವ ಅಧಿಕಾರಕ್ಕಾಗಿ ನಡೆಯುತ್ತಿರುವ ಹೋರಾಟದ ಪ್ರಥಮ ಚಿಹ್ನೆ ಇದಾಗಿರುವುದೆಂದು ಅಮೆರಿಕದವರ ಭಾವನೆಯಾಗಿದೆ ಬ್ರಿಟನ್ ಅಮೆರಿಕ ಮತ್ತು ಫ್ರಾನ್ಸ್ ವಿದೇಶಾಂಗ ಮಂತ್ರಿಗಳ ಸಭೆಯು ನಡೆದು ರಷ್ಯಾದಲ್ಲಿ ಇತ್ತೀಚಿನ ಘಟನೆಗಳಿಗಾಗಿ, ಆ ದೇಶದ ಬಗ್ಗೆ ತಮ್ಮ ನೀತಿಯನ್ನು ಬದಲಾಯಿಸಬೇಕಾದ ಕಾರಣವಿಲ್ಲವೆಂದೂ, ಅಲ್ಲಿನ ವಿದ್ಯಮಾನಗಳಿಗೆ ಪಶ್ಚಿಮ ರಾಷ್ಟ್ರಗಳ ನೀತಿಯೂ ಕಾರಣವೆಂದೂ ಸಮಾಧಾನಪಟ್ಟುಕೊಳ್ಳಲಾಗಿದೆ

ಪಂಜಾಬಿನಲ್ಲಿ ಚಳುವಳಿಗಾರರ ಬಿಡುಗಡೆಗೆ ಆಜ್ಞೆ

ಜಮ್ಮುವಿನಲ್ಲಿ ಪ್ರಜಾ ಪರಿಷತ್ತಿನವರು ನಡೆಸುತ್ತಿದ್ದ ಸತ್ಯಾಗ್ರಹಕ್ಕೆ ಬೆಂಬಲ ಕೊಡಲು ಪಂಜಾಬಿನಲ್ಲಿ ನಡೆದ ಚಳುವಳಿಯಲ್ಲಿ ದಸ್ತಗಿರಿಯಾದವರನ್ನು ಅಲ್ಲಿನ ಸರ್ಕಾರದವರು ಬಿಡುಗಡೆ ಮಾಡಲು ಆಜ್ಞೆ ಮಾಡಿರುತ್ತಾರೆ ಈಗ ಅಲ್ಲಿನ ಜೈಲಿನಲ್ಲಿ ೫೦೦ ಜನ ಸತ್ಯಾಗ್ರಹಿಗಳಿರುವರು

ಪ್ರವಾಹದಿಂದ ಶೀತ ಹಿಡಿದು ಆನೆಯ ಮರಣ

ತಿರುವಾಂಕೂರಿನ ಪೆರಿಯಾರ್ ಅರಣ್ಯದಲ್ಲಿ ಇತ್ತೀಚೆಗೆ ಭಾರಿ ಪ್ರವಾಹವು ಬಂದು, ಶೈತ್ಯವು ವಿಪರೀತವಾಗಿ ಒಂದು ಆನೆಯು ಮಡಿದಿರುವುದೆಂದು ಗೊತ್ತಾಗಿದೆ

ಲಾಲಾ ಕಾಲೇಲ್ಕರ್‌ರವರ ಕಾರ್ಯಕ್ರಮ

ಹಿಂದುಳಿದ ಪಂಗಡಗಳ ಕಮಿಷನ್ನಿನ ಅಧ್ಯಕ್ಷರಾದ ಶ್ರೀ ಕಾಕಾ ಸಾಹೇಬ್ ಕಾಲೇಲ್ಕರ್‌ರವರು ಮೊನ್ನೆ ಸಂಜೆ ಹಲವಾರು ಹಿಂದುಳಿದ ಪಂಗಡದ ಪ್ರತಿನಿಧಿಗಳ ಭೇಟಿ ಕೊಟ್ಟರು ಅನಂತರ ಇಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಹೋಗಿದ್ದರು

ಜೀಪು ಮರಕ್ಕೆ ಡಿಕ್ಕಿ ಹೊಡೆದು ಇಬ್ಬರ ಮರಣ

ಚೀಫ್ ಇಂಜನಿಯರಿಗೆ ಸ್ವಲ್ಪ ಪೆಟ್ಟು

ಬೆಂಗಳೂರು ೧೨

ಕೃಷ್ಣರಾಜಸಾಗರಕ್ಕೆ ಭೇಟಿ ಕೊಡಲು ಚೀಫ್ ಇಂಜನಿಯರ್, ಶ್ರೀ ಕೆ ಎಸ್ ಗಂಗಾಧರ್ ರವರು ಜೀಪಿನಲ್ಲಿ ಹೋಗುತ್ತಿದ್ದಾಗ ನೆನ್ನೆ ಹೊರಟಾಗ ಕೆಂಗೇರಿ ಬಳಿ ರಸ್ತೆ ಪಕ್ಕದ ಒಂದು ಮರಕ್ಕೆ ಜೀಪು ಡಿಕ್ಕಿ ಹೊಡೆದು ಸ್ಥಳದಲ್ಲೇ ಡ್ರೈವರ್ ಮತ್ತು ಇಂಜನಿಯರ ಅಡಿಗೆಯವನು ಸತ್ತರು ಗುಮಾಸ್ತೆಯೊಬ್ಬರಿಗೆ ತೀವ್ರ ಗಾಯವಾಗಿದೆ ಚೀಫ್ ಇಂಜನಿಯರಿಗೂ ಅವರ ಮಗನಿಗೂ ಸ್ವಲ್ಪ ಗಾಯವಾಗಿದೆ ಗುಮಾಸ್ತೆ ಮತ್ತು ಇಂಜನಿಯರ ಮಗನಿಗೆ ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲಾಯಿತು

೧ ಕೋಟಿ ರೂ. ಉಳಿತಾಯದ ಬದಲು ೬೦ ಲಕ್ಷ ಉಳಿತಾಯ

೧೯೫೨-೫೩ ರಲ್ಲಿ ಸರ್ಕಾರದ ಖರ್ಚು ವ್ಯಯದಲ್ಲಿ ೧ ಕೋಟಿ ರೂ ಉಳಿತಾಯ ಆಗ ಬಹುದೆಂದು ಅಂದಾಜಾಗಿದ್ದಿತೆಂದೂ, ಆದರೆ ಸರ್ಕಾರವು ಆಹಾರದ ಹತೋಟಿಯನ್ನು ತೆಗೆದು ನಾನಾ ಬಾಬುಗಳಲ್ಲಿ ಮಿತವ್ಯಯವನ್ನು ಮಾಡಿದುದಕ್ಕಾಗಿ ಉಳಿತಾಯವು ಹೋಗಿ ೬೦ ಲಕ್ಷ ರೂ ಉಳಿತಾಯವಾಗಿರುವುದಾಗಿ, ಸಂಸ್ಥಾನದ ಅಕೌಂಟೆಂಟ್ ಜನರಲ್ ರವರು ಹೇಳಿರುವರೆಂದೂ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ

ಅಡ್ಲೈ ಸ್ಟೀವರ್ಸನ್ನರ ಬಂಧನ ಮತ್ತು ಬಿಡುಗಡೆ

ಅಮೆರಿಕದ ಡೆಮೊಕ್ರಾಟ್ ಪಕ್ಷದ ಮುಖಂಡರಾದ ಅಡ್ಲೈ ಸ್ಟೀವರ್ಸನ್‌ರವರು ಪೂರ್ವ ಬರ್ಲಿನ್ ನಗರಕ್ಕೆ ನೆನ್ನೆ ಭೇಟಿಯಿತ್ತಾಗ, ಪೂರ್ವ ಬರ್ಲಿನ್ ಪೋಲೀಸರು ಅವರನ್ನು ಬಂಧಿಸಿ ೩೦ ನಿಮಿಷಗಳ ನಂತರ ಬಿಟ್ಟರೆಂದು ವರದಿಯಾಗಿದೆ. ವಿಶ್ವ ಪರ್ಯಟನಕ್ಕಾಗಿ ಹೊರಟಿದ್ದ ಅವರು ಬರ್ಲಿನ್ ನಗರದಲ್ಲಿ ಎರಡು ದಿನಗಳಿಂದ ಇದ್ದರು ಹಿಟ್ಲರನ ಕಡೆಯ ಕಾಲದ ನಿವಾಸವನ್ನು ನೋಡುವುದಕ್ಕಾಗಿ ಸ್ಟೀವರ್ಸನ್ನರು ಹೋಗಿದ್ದಾಗ ಈ ಪ್ರಸಂಗವು ನಡೆಯಿತೆಂದು ಗೊತ್ತಾಗಿದೆ

ಕ್ರಾಂತಿಯನ್ನು ಶಾಂತಿಯುತವಾಗಿ ಮಾಡಬೇಕು

ಕಾಂಗ್ರೆಸ್ಸಿನವರ ಜವಾಬ್ದಾರಿ ಬಗ್ಗೆ ಕಾಕಾ ಕಾಲೇಲ್ಕರ್‌ರವರ ಹೇಳಿಕೆ

ಮೈಸೂರು ೧೨

ಹಿಂದುಳಿದ ಪಂಗಡಗಳ ಸಮಿತಿಯ ಅಧ್ಯಕ್ಷರಾದ ಶ್ರೀ ಕಾಕಾ ಸಾಹೇಬ್ ಕಾಲೇಲ್ಕರ್‌ರವರು ನೆನ್ನೆ ಸಮಿತಿಯವರ ಗೌರವಾರ್ಥವಾಗಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಶ್ರೀ ಎಸ್. ಚನ್ನಯ್ಯನವರು ತಮ್ಮ ಗೃಹದಲ್ಲಿ ಇತ್ತ ಸತ್ಕಾರ ಕೂಟದಲ್ಲಿ ಭಾಷಣ ಮಾಡಿ, ಸ್ವಾತಂತ್ರ್ಯದ ಸುಖವು ಪ್ರತಿಯೊಬ್ಬ ಭಾರತೀಯನಿಗೂ ದೊರಕುವಂತೆ ಕಾಂಗ್ರೆಸ್ಸಿನವರು ಮಾಡುವುದು ಅವರ ಕರ್ತವ್ಯವೆಂದೂ, ದೇಶದಲ್ಲಿ ಉಂಟಾಗಬಹುದಾದ ಕ್ರಾಂತಿಯನ್ನು ಶಾಂತಿಯಿಂದ ಎದುರಿಸಲು ಸಿದ್ಧವಾಗಿರಬೇಕೆಂದೂ ಹೇಳಿದರು

ಉಪಾಹಾರಾನಂತರ ಶ್ರೀ ಎಸ್ ಚನ್ನಯ್ಯನವರು ಮಾತನಾಡಿ, ದಕ್ಷಿಣ ಭಾರತದಲ್ಲಿ ಹಿಂದುಳಿದ ಪಂಗಡಗಳವರು ಹೆಚ್ಚಿನ ಸಂಖ್ಯೆಯಲ್ಲಿರುವರೆಂದೂ, ಸಮಿತಿಯವರ ಶ್ರಮದ ಫಲವು ದೇಶಕ್ಕೆ ಒಂದಲ್ಲ ಒಂದು ವಿಧದಲ್ಲಿ ದೊರೆಯುಬೇಕೆಂದೂ ತಿಳಿಸಿದರು.

ಕಾಲೇಲ್ಕರ್‌ರವರು ಉತ್ತರವಿತ್ತು, ವಯಸ್ಕರೆಲ್ಲರಿಗೂ ಓಟಿನ ಹಕ್ಕು ಬಂದಿರುವ ಈ ಸಮಯದಲ್ಲಿ ಮೇಲು ಕೀಳುಗಳೆಂಬ ಭಾವನೆಯು ತಪ್ಪಲು ಎಲ್ಲರೂ ಶ್ರಮ ಕೈಗೊಳ್ಳುವುದು ಅಗತ್ಯವೆಂದು ತಿಳಿಸಿದರು. ಭಾರತೀಯರು ಎಲ್ಲ ಮತಗಳ ಸಾರವೂ ಒಂದೇ ಎಂದು ಭಾವಿಸಿರುವುದರಿಂದ ಆದರ್ಶಮಗನಾಗಿ ನಡೆದು ಉಚ್ಚ ನೀಚ ಭಾವನೆಗಳನ್ನು ತೊಡೆಯಬೇಕೆಂದು ಹೇಳಿದರು ಗಾಂಧಿಜಿಯವರು ತೋರಿಸಿಕೊಟ್ಟಿರುವ ಅಹಿಂಸೆ ಮತ್ತು ಸಹೋದರತ್ವ ಭಾವನೆಗಳಿಂದ ಪ್ರತಿಯೊಬ್ಬನೂ ತನ್ನ ಜೀವನವನ್ನು ಹರಿಸಿ ದೇಶೋನ್ನತಿಗೆ ಕಾರಣನಾಗಬೇಕೆಂದು ಅವರು ತಿಳಿಸಿದರು ರಕ್ತಪಾತದ ಬದಲು ಬೆವರು ಹರಿಸಿ ಸೇವೆ ಸಲ್ಲಿಸುವುದು ಉತ್ತಮವೆಂದು ಅವರು ಅಭಿಪ್ರಾಯಪಟ್ಟರು

ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿಯನ್ನು ಕುರಿತು ಪ್ರಸ್ತಾಪಿಸಿ, ಅಲ್ಲಿ ಐರೋಪ್ಯರು ಬಹು ಕಾಲದಿಂದಲೂ ಗುಲಾಮ ವ್ಯಾಪಾರದಲ್ಲಿ ತೊಡಗಿದ್ದುದರ ಫಲವು ಈಗ ಒದಗುತ್ತಿರುವುದೆಂದೂ, ಪ್ರಪಂಚದ ನಾನಾ ವಿರುದ್ಧ ಭಾವನೆಗಳ ಘರ್ಷಣೆಯು ಆಫ್ರಿಕದಲ್ಲೇ ನಡೆಯುವುದೆಂದೂ ತಿಳಿಸಿದರು ಭಾರತೀಯರು ಅದನ್ನು ಮನಗಂಡು ತಮ್ಮಲ್ಲಿ ಸಹೋದರತ್ವವನ್ನು ಈಗಲೇ ಬೆಳೆಸಿಕೊಳ್ಳುವುದು ಉತ್ತಮವೆಂದು ಸೂಚಿಸಿದರು.

ಕಿಂಗ್‌ಕಾಂಗ್ ಕುಸ್ತಿಗೆ ಅನರ್ಹನೆಂಬ ತೀರ್ಪು

ಅಂತರ ರಾಷ್ಟ್ರೀಯ ಕುಸ್ತಿ ಸಂಘದ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಪ್ರತಿಸ್ಪರ್ಧಿಯನ್ನು ಉದ್ದೇಶ ಪೂರ್ವಕವಾಗಿ ಅಪಾಯದಿಂದ ಹೊರಗೆಸೆದರೆಂದು ಕಿಂಗ್‌ಕಾಂಗರನ್ನು ಅನರ್ಹಗೊಳಿಸಲಾಗಿದೆ ಅವರ ಪ್ರತಿಸ್ಪರ್ಧಿ ಜೋಗಿಂದ್ರಸಿಂಗರು ಗೆದ್ದರೆಂದು ಘೋಷಿಸಲಾಗಿದೆ.

ವಾರ ಭವಿಷ್ಯ

೧೨-೭-೫೩ ರಿಂದ ೧೮-೭-೫೩ ರ ವರೆಗೆ

ಮೇಷ — ಮಹತ್ವ ಕಾರ್ಯ ಪೂರೈಸಲು ಈ ವಾರವೇ ತಕ್ಕದ್ದು, ಆರೋಗ್ಯ ನೆಟ್ಟಗೆ, ಮನಸ್ಸು ಚಂಚಲ, ಆರ್ಥಿಕ ಸ್ಥಿತಿ ಉತ್ತಮ, ವ್ಯಾಪಾರಾದಿಗಳಲ್ಲಿ ಸ್ಥಿತಿ ತಗ್ಗುಮುಟ್ಟಿಗೆ ಉತ್ತಮ ತಾ|| ೧೨, ೧೩ ವೃಥ ಸಾಹಯ, ಉದ್ಯೋಗಗಳಲ್ಲಿ ಚಿಂತೆ

ವೃಷಭ — ಆರೋಗ್ಯ ನೆಟ್ಟಗೆ, ಸಮಾಜ ಸೇವೆ, ಮಾನವ ಮರ್ಯಾದೆ ಪ್ರಾಪ್ತಿ, ಆರ್ಥಿಕ ತೊಂದರೆ ಇಲ್ಲ, ವ್ಯಾಪಾರ ಪ್ರವಾಸ, ಉದ್ಯೋಗಗಳಲ್ಲಿ ತೊಂದರೆ ದೂರ ತಾ|| ೧೨, ೧೩ ಸ್ತ್ರೀ ಸೌಖ್ಯ, ಮಿತ್ರ ಭೇಟಿ

ಮಿಥುನ — ಈ ವಾರ ಆರೋಗ್ಯ, ಆರ್ಥಿಕ, ಮಾನಸಿಕ, ವ್ಯಾಪಾರ, ನೌಕರಿಗಳಲ್ಲಿ ತೊಂದರೆ ದೂರಾಗುವ ಚಿಹ್ನೆ ತಾ|| ೧೪, ೧೫ ಮಹತ್ವದ ಪತ್ರ, ಪ್ರಿಯಜನ ಭೇಟಿ

ಕರ್ಕ — ಆರೋಗ್ಯ, ಆರ್ಥಿಕ ಸ್ಥಿತಿ ನೆಟ್ಟಗಿಲ್ಲ, ನೇತ್ರ ಬಾಧೆ, ಕೆಲಸಕ್ಕೆ ವಿಘ್ನ, ವ್ಯಾಪಾರ, ಪ್ರವಾಸ, ನೌಕರಿಗಳಲ್ಲಿ ಹಿತ ಶತ್ರು ಬಾಧೆ ತಾ|| ೧೪, ೧೫ ಮಿತ್ರ ಸಹಾಯ, ಚಿಂತಾ ನಾಶ

ಸಿಂಹ — ಮಾನ ಮರ್ಯಾದೆ, ಮಾನಸಿಕ ಸಂತೋಷ, ಆರೋಗ್ಯ ತೃಪ್ತಿಕರ, ಆರ್ಥಿಕ ಸ್ಥಿತಿ ನೆಟ್ಟಗೆ ವ್ಯಾಪಾರಾದಿಗಳಲ್ಲಿ ವಿಘ್ನವಿಲ್ಲ ತಾ|| ೧೨, ೧೩ ಗಲಾಟೆ, ಖರ್ಚು

ಕನ್ಯಾ — ಆರೋಗ್ಯ, ಆರ್ಥಿಕ ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ತೃಪ್ತಿಕರ ಸ್ಥಿತಿ ತಾ|| ೧೪, ೧೫ ಖರ್ಚು, ಗಲಾಟೆ

ತುಲಾ — ವ್ಯಾಪಾರ, ಉದ್ಯೋಗ ನೌಕರಿ, ಆರ್ಥಿಕ, ಆರೋಗ್ಯ ಸ್ಥಿತಿ ಶುಭಕರ ತಾ|| ೧೪, ೧೫ ಹೊಸ ಪರಿಚಯ, ಶುಭವಾರ್ತೆ

ವೃಶ್ಚಿಕ — ಬಂದ ಸಂಕಟ ಪರಿಹಾರ, ಆರೋಗ್ಯದ ಕಡೆಗೆ ಲಕ್ಷ ಕೊಡಿರಿ, ವಾಹನದಿಂದ ಜೋಕೆಯಿಂದಿರಿ, ವ್ಯಾಪಾರಾದಿಗಳಲ್ಲಿ ..., ... ತಾ|| ೧೨, ೧೩ ... ಪತ್ರಾಗಮನ, ಮಾನ ರಕ್ಷಣೆ

ಧನು — ಆರೋಗ್ಯ ನೆಟ್ಟಗಿಲ್ಲ, ಸಂಪತ್ತು ... ಸಾಧಾರಣ, ವ್ಯಾಪಾರಾದಿಗಳಲ್ಲಿ ... ತಾ|| ೧೪, ೧೫ ಮಿತ್ರ ಸಹಾಯ, ಆರ್ಥಿಕ ತೊಂದರೆ ದೂರ

ಮಕರ — ... ಉತ್ತಮ, ... ವ್ಯಾಪಾರಗಳಲ್ಲಿ ತೃಪ್ತಿಕರ ಸ್ಥಿತಿ ತಾ|| ೧೪, ೧೫ ಖರ್ಚು ಹೆಚ್ಚು, ಅಸ್ವಸ್ಥತೆ

ಕುಂಭ — ಆರೋಗ್ಯ ಉತ್ತಮ, ಸಂತತಿ ..., ವ್ಯಾಪಾರಾದಿಗಳಲ್ಲಿ ತೊಂದರೆ ದೂರ, ... ಕಾರ್ಯ ... ಅಪ್ತರ ಭೇಟಿ ತಾ|| ೧೨, ೧೩ ವಾಹನದ ಕಡೆ ಎಚ್ಚರ, ಅಲಕ್ಷ

ಮೀನ — ... ಮಾನಸಿಕ ಸ್ಥಿತಿ, ಆರ್ಥಿಕ ತೊಂದರೆ ಮಿತಿಮೀರುವುದು, ವ್ಯಾಪಾರಾದಿಗಳಲ್ಲಿ ಶತ್ರು ಬಾಧೆ ಪ್ರವಾಸದಲ್ಲಿ ಭಯ, ಅಪಘಾತ ಸಂಭವ ತಾ|| ೧೪, ೧೫ ಮಾನಹಾನಿ, ಅಶುಭ ವಾರ್ತೆ

ಗಫಾರ್ ಖಾನರ ಬಿಡುಗಡೆಗಾಗಿ ವಿಶ್ವಸಂಸ್ಥೆಗೆ ದೂರು

ಗಡಿನಾಡಿನ ಕೆಂಪು ಅಂಗಿ ದಳದ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಸಹೋದರ ಡಾ|| ಖಾನ್ ಸಾಹೇಬರನ್ನು ಖುಲಾಸೆ ಮಾಡುವುದಕ್ಕೆ ಒತ್ತಾಯಮಾಡಲು ವಿಶ್ವಸಂಸ್ಥೆಗೆ ಒಂದು ಸ್ವತಂತ್ರ ರಾಜ್ಯವು ದೂರು ಕೊಡಲಿರುವುದೆಂದು ವರದಿಯಾಗಿದೆ

ಸಂಬಳಕ್ಕಾಗಿ ಇಟ್ಟ ಹಣದ ಅಪಹಾರ

ಕಡೂರಿನ ಸರ್ಕಾರಿ ವ್ಯವಸಾಯ ಇಲಾಖಾ ಕಛೇರಿಯಲ್ಲಿಡಲಾಗಿದ್ದ ೬೩೨ ರೂಪಾಯಿ ಗಳನ್ನು ಕಳ್ಳರು ಕಛೇರಿಯ ಬೀಗ ತೆಗೆದು ಕಳೆದ ಸೋಮವಾರ ರಾತ್ರಿ ಅಪಹರಿಸಿರುವರೆಂದು ವರದಿಯಾಗಿದೆ ಸಿಬ್ಬಂದಿಗೆ ಕೊಡಬೇಕಾಗಿದ್ದ ಸಂಬಳ ಮತ್ತು ಬಿತ್ತನೆ ಬೀಜದ ಹಣವನ್ನು ಅಲ್ಮೇರಾದಲ್ಲಿಡಲಾಗಿತ್ತೆಂದು ಹೇಳಲಾಗಿದೆ ಕಛೇರಿಯ ಬೀಗದ ಕೈಗಳು ಅಲ್ಲಿನ ವೀರಶೈವ ವಿದ್ಯಾರ್ಥಿ ನಿಲಯದ ಒಳ ದೊರೆತುವೆಂದು ಹೇಳಲಾಗಿದೆ

ಬಿಸಿಲಿನ ತಾಪದಿಂದ ೧೪೦೦ ಮರಣಗಳು

ಬಿಸಿಲಿನ ತಾಪದಿಂದ ಗಡಿನಾಡು ಪ್ರಾಂತ್ಯದ ಅಟಕ್ ನಗರದಲ್ಲಿ ೩ ದಿನಗಳಲ್ಲಿಯೇ ೫೦೦ ಜನರು ಸಾಯಿದಿರುವರೆಂದು ವರದಿಯಾಗಿದೆ. ಪೆಷಾವರ್ ಜಿಲ್ಲೆಯಲ್ಲಿ ಇದೇ ಕಾರಣಕ್ಕಾಗಿ ೧ ವಾರದಲ್ಲಿ ೯೦೦ ಜನರು ಸತ್ತರೆಂದು ಹೇಳಲಾಗಿದೆ

ಗುರು ಪೂರ್ಣಿಮಾ ಉತ್ಸವ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಪ್ರಸನ್ನ ಶ್ರೀ ಸಾಯಿ ಮಂದಿರದಲ್ಲಿ ಇದೇ ತಿಂಗಳು ೨೬ನೇ ತಾ|| ನಿಂದ ಆಗಸ್ಟ್ ೨ನೇ ತಾ|| ವರೆಗೆ ಬಾಬಾರವರ ೧೫ನೇ ವರ್ಷದ ಗುರು ಪೂರ್ಣಿಮಾ ಮಹೋತ್ಸವವನ್ನು ನೆರವೇರಿಸಲಾಗುವುದು. ಮಾಮೂಲಿನಂತೆ ಬಡವರಿಗೆ ಅನ್ನದಾನ ಮತ್ತಾದ ಸೇವಾ ಕಾರ್ಯಗಳು ನಡೆಯುವುವು ಆಸ್ತಿಕ ಶಿರೋಮಣಿಗಳ ಸೇವೆಗಾಗಿ ಧನ ಧಾನ್ಯಗಳನ್ನು ಉದಾರವಾಗಿ ಕೊಡಬೇಕೆಂದು ಮಂದಿರದವರು ಪ್ರಾರ್ಥಿಸಿರುತ್ತಾರೆ.

ಭಾರತ ವಾಚನ

ಮೈಸೂರು ಹಳೇ ಅಗ್ರಹಾರದಲ್ಲಿ ವೇದ ಭವನ ರಂಗರಾಯರ ಮನೆ ಶ್ರೀಗಳಿಂದ ಬಿ ಎಸ್ ಎಸ್ ಕೌಶಿಕ್ ಮತ್ತು ಕೆ ವೆಂಕಟಸುಬ್ಬಯ್ಯನವರಿಂದ ನಿತ್ಯವೂ ಸಂಜೆ ೬|| ಗಂಟೆಯಿಂದ ೭|| ರ ವರೆಗೆ ಭಾರತವಾಚನವು ನಡೆಯುವುದು. ಸರ್ವರೂ ದಯಮಾಡಬೇಕೆಂದು ಕೋರಲಾಗಿದೆ ಇದರ ಸಂಬಂಧವಾಗಿ ಮೊನ್ನೆ ಆರಂಭೋತ್ಸವವು ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸುಪ್ರಸಿದ್ಧ ಗಮಕ ವಿದ್ವಾಂಸರಾದ ಶ್ರೀ ಕೃಷ್ಣಗಿರಿ ಕೃಷ್ಣರಾಯರೂ ವೇ|| ಬ್ರ|| ನಂಜುಂಡ ಶಾಸ್ತ್ರಿಯವರೂ ಭಾಷಣಮಾಡಿ ಅವರುಗಳ ಉದ್ಯಮಕ್ಕೆ ಯಶಸ್ಸನ್ನು ಕೋರಿದರು

ಆಂಧ್ರ ಪ್ರಾಂತ್ಯದ ಮಸೂದೆ

ಬರುವ ಅಕ್ಟೋಬರ್ ೧ ರಿಂದ ಆಂಧ್ರ ಸಂಸ್ಥಾನವು ಸ್ಥಾಪಿತವಾಗುವ ಬಗ್ಗೆ ಮಸೂದೆಯೊಂದು ತಯಾರಾಗಿದೆ. ಅದರಂತೆ ಹೊಸ ಪ್ರಾಂತದ ಆಸ್ತಿ ಮತ್ತು ಜವಾಬ್ದಾರಿಗಳನ್ನು ಮದ್ರಾಸು, ಆಂಧ್ರ ಮತ್ತು ಮೈಸೂರು ಸಂಸ್ಥಾನಗಳಿಗೆ ಲ ೬೫, ೩೭, ೧೮ ರಂತೆ ವಿಂಗಡಿಸಲಾಗುವುದು ಹೊಸ ಹೈಕೋರ್ಟ್ ಸ್ಥಾಪನೆಯಾಗುವ ವರೆಗೆ ಮದ್ರಾಸು ಹೈಕೋರ್ಟಿಗೆ ಆಂಧ್ರಕ್ಕೂ ಇರುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೦೫ ಸಂಗೀತ, ಆರ್ ಕೆ. ಶ್ರೀಕಂಠನ್ ೭-೩೦ ನಾಗಸ್ವರ, ವೆಂಕಟಸ್ವಾಮಯ್ಯ. ಮಧ್ಯಾಹ್ನ ೧-೩೦ ಹೀರಾಬಾಯಿ ಬರೋಡೇಕರ್, ರಿಕಾರ್ಡು ... ಮತ್ತು ಸಂಜೆ ೫-೩೦ ಎ ವಿ ನಾರಣಪ್ಪ, ಮುಖವೀಣೆ ಸಂಜೆ ೫-೩೦ ನಾಗಸ್ವರ, ವೆಂಕಟಸ್ವಾಮಿ ಜ್ಯು ೬ ... ಹಿಂದಿ ಗೀತೆಗಳು ೭-೩೦ ಮಾನವ ಮತ್ತು ದೈವ- ಕನ್ನಡವಲ್ಲಿ ಎಂ ಯಾಮುನಾಚಾರ್ಯರ ಭಾಷಣ ೮ ವಚನ ಗಾನ, ಮಲ್ಲಿಕಾರ್ಜುನಪ್ಪ. ೮-೧೫ ಮತ್ತು ೯-೩೦ ಸಂಗೀತ, ಶೆಟ್ಟಿ ಕೃಷ್ಣಯ್ಯಂಗಾರ್ ೯-೧೫ ಚರ್ಚಿಲ್ ಜೋನ್‌ರೊಡನೆ ಸಂಭಾಷಣೆ

NOW WORKING

Coaching Class For The

S. S. L. C. Examn of 1954

Separate Class for Boys

Separate Class for Girls

(Even V form co... enough)

MADRAS MATRICULATION Classes

CITY TUTORIAL COLLEGE,

Near Vanivilas Market

ತುಂಗಭದ್ರಾ ಯೋಜನೆಗೆ ೩ ಸರ್ಕಾರಗಳ ಸಮಿತಿ

ಆಂಧ್ರ ಪ್ರಾಂತವು ಸ್ಥಾಪನೆಯಾದ ನಂತರ, ತುಂಗಭದ್ರಾ ಯೋಜನೆ ಸಂಬಂಧಿಸಿದಂತೆ ನೀರಾವರಿ ಕಾರ್ಯವನ್ನು ಪೂರೈಸಲು ಮೈಸೂರು, ಹೈದರಾಬಾದು ಮತ್ತು ಆಂಧ್ರ ಸಂಸ್ಥಾನಗಳ ಪ್ರತಿನಿಧಿಗಳುಳ್ಳ ಒಂದು ಸಮಿತಿಯನ್ನೇರ್ಪಡಿಸುವ ಬಗ್ಗೆ ಕೇಂದ್ರ ಸರ್ಕಾರ ಮತ್ತು ಆಯಾ ಸಂಸ್ಥಾನಗಳ ಸರ್ಕಾರಗಳ ಪ್ರತಿನಿಧಿಗಳ ಸಭೆಯಲ್ಲಿ ಇತ್ಯರ್ಥವಾಗಿದೆ ಅದರಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯೂ ಇರುವರು

ವಿಶ್ವ ವಿದ್ಯಾಲಯಗಳ ಸೇವಾ ಗೋಷ್ಠಿಯ ಮುಕ್ತಾಯ

ಪ್ರಪಂಚದ ವಿಶ್ವ ವಿದ್ಯಾಲಯಗಳ ಸೇವಾ ಗೋಷ್ಠಿಯು ಕಳೆದ ಜೂನ್ ೮ನೇ ತಾ|| ನಿಂದ ಮೊನ್ನೆ ವರೆಗೆ ನಡೆದು ಮುಕ್ತಾಯವಾಯಿತು ಸಂಸ್ಥಾನದ ವಿದ್ಯಾಮಂತ್ರಿ, ಶ್ರೀ ಎ ಜಿ ರಾಮಚಂದ್ರರಾಯರು ಸಮಾರೋಪ ಭಾಷಣ ಮಾಡಿದರು

ರಾಜಕಮಲ್, ಮೈಸೂರ

11-7-53 ರಿಂದ ಅಮೋಘ 6ನೇ ವಾರ

ಪ್ರತಿದಿನ ೩ ಆಟಗಳು

ಮಹಾಕ್ಕಾಗರದ ...

ಸೌಭಾಗ್ಯ ಲಕ್ಷ್ಮಿ

Edited, Printed and Published by A R Nagarajan at Sadhvi Press D Subbiah Road, Mysore

* ಬೆಲೆ ಇಳಿಸಿದೆ! *



25 ರ ಕಟ್ಟಿಗೆ 2 ಆಣೆ

1000 ಬೀಡಿಗೆ 4-8-0 ರೂ.

★

ಮಂಗಳೂರು

ಗಣೇಶ ಬೀಡಿ ವರ್ಕ್ಸ್

ಸಂತೇಪೇಟೆ, ಮೈಸೂರು.

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೩-೭-೧೯೫೩ [ಸಂಚಿಕೆ ೨೮೪

ಸಿದ್ಧಲಿಂಗಯ್ಯನವರ ಬಗ್ಗೆ ರಾಜಪ್ರಮುಖರ ತೀರ್ಪು

ಗ್ರಾಮ ಕೈಗಾರಿಕೆಗಳಿಂದಲೇ ಹಿಂದುಳಿದವರ ಅಭಿವೃದ್ಧಿ

ಪತ್ರಿಕಾ ಗೋಷ್ಠಿಯಲ್ಲಿ ಕಾಕಾ ಕಾಲೇಲ್ಕರ ಹೇಳಿಕೆ

ಮೈಸೂರು ೧೩

ನಮ್ಮ ದೇಶದ ಹಿಂದುಳಿದವರ ಅವನತಿಗೆ ಗ್ರಾಮ ಕೈಗಾರಿಕೆಗಳ ವಿಚಾರದಲ್ಲಿ ನಾವು ತೋರಿಸಿರುವ ಅನಾದಾರಣೆಯೇ ಮುಖ್ಯ ಕಾರಣ, ಪಾಶ್ಚಿಮಾತ್ಯ ನಾಗರಿಕತೆಯ ಧಾಳಿಯಿಂದ ಹಳ್ಳಿಯ ಕೈಗಾರಿಕೆಗಳು ಹಿಂದೆ ಬಿದ್ದುವು. ಅವುಗಳನ್ನು ಪುನರುಜ್ಜೀವನಗೊಳಿಸುವುದರಿಂದಲೇ ಹಿಂದುಳಿದವರ ಏಳಿಗೆಯನ್ನು ಸಾಧಿಸಲು ಸಾಧ್ಯ ಎಂಬುದಾಗಿ ಹಿಂದುಳಿದ ಜನಾಂಗಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿ ಮಾಡಲು ನೇಮಕವಾಗಿರುವ ಸಮಿತಿಯ ಅಧ್ಯಕ್ಷರಾದ ಆಚಾರ್ಯ ಕಾಕಾ ಕಾಲೇಲ್ಕರರು ಮೊನ್ನೆ ಪತ್ರಿಕಾ ಗೋಷ್ಠಿಯಲ್ಲಿ ನುಡಿದರು.

ನಮ್ಮ ದೇಶದ ಪ್ರತಿಯೊಂದು ಕೋಮಿನವರೂ ತಮ್ಮತಮ್ಮ ಅಭ್ಯುದಯವನ್ನು ಸಾಧಿಸುವುದರಲ್ಲಿ ಕಟ್ಟಕಡೆಯ ದರ್ಜೆಯವರ ಕಡೆ ಗಮನವನ್ನೇ ಕೊಡದೆ ಅನೇಕ ಗುಂಪಿನವರು ಬಹಳ ಹೀನಸ್ಥಿತಿಯಲ್ಲಿರಲು ಅವಕಾಶವಾಯಿತು. ಇದರ ಜೊತೆಗೆ ಪರಸ್ಪರ ವೈಮನಸ್ಯ, ಸಂಶಯ ಮತ್ತು ವೈಷಮ್ಯಗಳೂ, ಸಹಸ್ರಾರು ಜಾತಿ ಭಿನ್ನತೆಗಳನ್ನು ಬೆಳೆಸಲು ಕಾರಣವಾದುವು. ಕಮ್ಯೂನಿಸ್ಟರೇ ಮುಂತಾದ ಪಂಗಡಗಳವರು ರಾಜಕೀಯ ಕಾರಣಗಳಿಗಾಗಿ ಈ ಪರಿಸ್ಥಿತಿಯನ್ನು ಉಪಯೋಗಿಸಿ ಅಲ್ಲೋಲಕಲ್ಲೋಲವನ್ನುಂಟುಮಾಡಲು ತೊಡಗಿದರು. ಜಾತಿ ಮತ್ತು ಕೋಮುಗಳಲ್ಲಿರುವ ಭಿನ್ನಭಾವಗಳನ್ನು ಸರಿಯಾಗಿ ಅರಿತು, ಅವುಗಳನ್ನು ನಿವಾರಿಸಲು ವಿದ್ಯಾವಂತರೆಲ್ಲರೂ ಪ್ರಯತ್ನಿಸಬೇಕು. ಮೈಸೂರು ಸಂಸ್ಥಾನದಲ್ಲಿ ರಾಜರೂ, ಪ್ರಜೆಗಳೂ ಈ ವಿಷಯಕ್ಕೆ ವಿಶೇಷ ಗಮನ ಕೊಟ್ಟು, ಹಿಂದುಳಿದವರ ಅಭಿವೃದ್ಧಿಗೆ ಬಹಳ ಸಹಾಯಕರಾಗಿರುತ್ತಾರೆ. ಕೋಮುವಾರು ಭಾವನೆಗೆ ಅವಕಾಶ ಕೊಡದೆ ರಾಷ್ಟ್ರೀಯ ಐಕ್ಯತೆಯನ್ನು ಬೆಳೆಸಿಕೊಂಡು ಬಂದಿರುತ್ತಾರೆ-ಎಂಬುದಾಗಿಯೂ ಸಹ ಅವರು ತಿಳಿಸಿದರು.

ಆರ್ಥಿಕ ಮತ್ತು ಸಾಮಾಜಿಕ ಉನ್ನತಿಯು ಏಕ ಕಾಲದಲ್ಲಿ ಆಗಬೇಕೆಂದು ಅವರು ಹೇಳಿದರು.

ಕೇವಲ ಸಮಾನತೆಯ ಭಾವಕ್ಕಿಂತಲೂ ಪ್ರೀತಿವಿಶ್ವಾಸಗಳು ಬೆಳೆಯಬೇಕೆಂದೂ ಸೂಚಿಸಿದರು.

ಹಿಂದುಳಿದವರು ಅಥವಾ ಮುಂದರಿದವರು ಎಂಬುದನ್ನು ನಿರ್ಧರಿಸಲು ಯಾವ ಆಧಾರವನ್ನು ಇಟ್ಟುಕೊಂಡಿರುವಿರೆಂದು ಪ್ರಶ್ನಿಸಲಾಗಿ ಇದೇ ಪ್ರಶ್ನೆಯನ್ನೇ ನಾವು ಎಲ್ಲ ಕಡೆಯೂ ಕೇಳುತ್ತಿರುವುದಾಗಿ ಅವರು ತಿಳಿಸಿದರು. ತಮ್ಮ ಉದ್ಯಮದಲ್ಲಿ ಸಕಲರೂ ಸಹಕರಿಸಬೇಕೆಂದು ಪ್ರಾರ್ಥಿಸಿದರು.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಈ ದಿನ ೧೧೩.೭೩ ಅಡಿಗಳಿದ್ದಿತು.

ಚೀಫ್ ಇಂಜನಿಯರರ ಜೀಪಿನ ಅಪಘಾತ

ಇಬ್ಬರ ಮರಣ, ನಾಲ್ವರಿಗೆ ಗಾಯ

ಬೆಂಗಳೂರು ೧೩

ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ ಕೆ ಎಸ್ ಗಂಗಾಧರರವರು ನೆನ್ನೆ ಸಂಜೆ ಕೃಷ್ಣರಾಜಸಾಗರದ ಪರಿಶೀಲನೆಗಾಗಿ ಇಲ್ಲಿಂದ ಒಂದು ಜೀಪ್ ಕಾರಿನಲ್ಲಿ ಹೊರಡಲು ಹೊರಟು ಕೆಂಗೇರಿ ಬಳಿ ಇದು ೧ ಮರಕ್ಕೆ ಡಿಕ್ಕಿ ಹೊಡೆದು ಡ್ರೈವರನೂ ಮತ್ತು ಅಡಿಗೆಯವನೂ ಮೃತಪಟ್ಟರೆಂದು ತಿಳಿದು ಬಂದಿದೆ. ಕಾರಿನಲ್ಲಿದ್ದ ಚೀಫ್ ಇಂಜನಿಯರ್, ಅವರ ಮಗ, ಕಛೇರಿಯ ಗುಮಾಸ್ತರೊಬ್ಬರು ಮತ್ತು ಒಬ್ಬ ದವಾನೆ ಈ ನಾಲ್ಕು ಮಂದಿಗೂ ಪೆಟ್ಟು ಬಿದ್ದು ಗುಮಾಸ್ತೆ ಶ್ರೀ ರಾಮಯ್ಯನವರ ಸ್ಥಿತಿ ಚಿಂತಾಜನಕವಾಗಿರುವುದೆಂದು ಹೇಳಲಾಗಿದೆ. ಗಾಯಗೊಂಡವರನ್ನು ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತು.

○ ಅಂಡರ್ ಸೆಕ್ರೆಟರಿ ಶ್ರೀ ಆರ್ ಟಿ ವಾಸುದೇವ್‌ರವರನ್ನು ಮೈಸೂರು ಹೈಕೋರ್ಟು ರಿಜಿಸ್ಟ್ರಾರರಾಗಿ ನೇಮಿಸಲಾಗಿದೆ.

ಪಶ್ಚಿಮ ಪಾಕಿಸ್ತಾನದ ನದಿಗಳಲ್ಲಿ ಪ್ರವಾಹ

ಪಶ್ಚಿಮ ಪಾಕಿಸ್ತಾನದ ಹಲವು ಕಡೆಗಳಲ್ಲಿ ವಿಪರೀತ ಬಿಸಿಲಿನ ಬೇಗೆಯಿಂದ ೫೦೦-೬೦೦ ಮಂದಿ ಮೃತಪಟ್ಟ ವರದಿಗಳು ಬಂದಿದ್ದುವಷ್ಟೆ. ಕಳೆದ ನಾಲ್ಕು ದಿನಗಳಿಂದ ಅಲ್ಲಿ ಭಾರಿ ಮಳೆಯಾಗಿ ಸಿಂಧು, ಜೀಲಂ, ಚೀನಾಬ್ ಮತ್ತು ರಾವಿ ನದಿಗಳಲ್ಲಿ ಪ್ರವಾಹವು ಬಂದಕ್ಕೆರಡರಷ್ಟು ಬಂದಿರುವುದೆಂದು ಗೊತ್ತಾಗಿದೆ. ಲಾಹೋರಿನಲ್ಲಿ ಮಳೆಯಿಂದ ಬಹಳ ನಷ್ಟವಾಗಿ, ಎರಡು ಸಾವಿರ ಸಂಸಾರಗಳು ತೊಂದರೆಗೀಡಾಗಿರುವರು.

ಕಾಂಬೋಡಿಯದಲ್ಲಿ ೧½ ಲಕ್ಷ ಸೈನಿಕರ ಸಂಗ್ರಹಣೆ

ಕಾಂಬೋಡಿಯದ ರಾಜರು ಇನ್ನು ಮೂರು ತಿಂಗಳೊಳಗೆ ೧½ ಲಕ್ಷ ಸೈನಿಕರಿಂದ ಕೂಡಿದ ಒಂದು ದಳವನ್ನು ಸಿದ್ಧಪಡಿಸಲಿರುವರೆಂದು ಫ್ರೆಂಚ್ ವಾರ್ತಾ ಸಂಸ್ಥೆಯೊಂದು ತಿಳಿಸಿದೆ.

ಮೈಸೂರಿಗೆ ಹೈದ್ರಾಬಾದಿನ ೨ ಲಕ್ಷ ಪಲ್ಲಾ ಜೋಳ

ಬೆಂಗಳೂರು ೧೩

ಹೈದರಾಬಾದಿನ ಸರ್ಕಾರದವರೂ ಮತ್ತು ವರ್ತಕರೂ ಮೈಸೂರಿಗೆ ಕಲಾ ಒಂದು ಲಕ್ಷ ಪಲ್ಲಾ ಜೋಳವನ್ನು ಕಳುಹಿಸಲು ಒಪ್ಪಿರುವರೆಂದೂ, ಅಲ್ಲದೆ ಅಲ್ಲಿಂದ ೭೦,೦೦೦ ಪಲ್ಲಾ ರಾಗಿಯನ್ನೂ ತರಿಸಲು ವ್ಯವಸ್ಥೆಯಾಗಿದೆಯೆಂದೂ ತಿಳಿದುಬಂದಿದೆ. ಸಂಸ್ಥಾನದಲ್ಲಿ ಈಗ ಇರುವ ೩,೨೦,೦೦೦ ಪಲ್ಲಾ ಧಾನ್ಯದೊಡನೆ ಮೇಲ್ಕಂಡ ೨,೬೦,೦೦೦ ಪಲ್ಲವೂ ಸೇರಿ ಇನ್ನು ೬ ರಿಂದ ೮ ತಿಂಗಳ ಬಳಕೆಗೆ ಸಾಕಾಗುವುದೆಂದು ಹೇಳಲಾಗಿದೆ.

ಸ್ಥಳೀಯ ಸಂಸ್ಥೆಗಳ ಶಾಲಾ ಶುಲ್ಕ ಏರುವುದೇ ?

ಸದ್ಯದ ಪರಿಸ್ಥಿತಿಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸವು ಅಭಿವೃದ್ಧಿಗೊಳ್ಳಬೇಕಾದರೆ ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳ ಅಧಿಕಾರಕ್ಕೆ ಒಳಪಟ್ಟ ಹೈಸ್ಕೂಲುಗಳಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸುವುದು, ಅಥವಾ ಆ ಶಾಲೆಗಳನ್ನು ಪ್ರವೇಶಿಸುವ ಪ್ರತಿ ವಿದ್ಯಾರ್ಥಿಯಿಂದಲೂ ಒಂದು ನಿಗದಿಯಾದ ಚಂದಾ ಹಣವನ್ನು ಒಟ್ಟಾಗಿಯಾಗಲೀ ಇಲ್ಲವೇ ಕಂತುಗಳಲ್ಲಾಗಲೀ ವಸೂಲು ಮಾಡುವ ಬಗ್ಗೆ ಸರ್ಕಾರದವರು ಸ್ಥಳೀಯ ಸಂಸ್ಥೆಗಳಿಗೆ ಒಂದು ಸೂಚನೆಯನ್ನು ಕಳುಹಿಸಿ ಅವರ ಅಭಿಪ್ರಾಯಗಳನ್ನು ಕೇಳಿರುವರು. ಸಾಧ್ಯವಾದಲ್ಲಿ ಮೇಲ್ಕಂಡ ಎರಡು ಅಂಶಗಳನ್ನೂ ಜಾರಿಗೆ ತರಲು ಸರ್ಕಾರದವರು ಆಲೋಚಿಸುತ್ತಿರುವುದಾಗಿಯೂ ಗೊತ್ತಾಗಿದೆ. ಹಲವು ಪೌರಸಭಾ ಹೈಸ್ಕೂಲುಗಳ ಪರಿಸ್ಥಿತಿಯು ಸಮರ್ಪಕವಾಗಿಲ್ಲದೆ ಅವನ್ನು ಸರ್ಕಾರಕ್ಕೆ ವಹಿಸಿಕೊಳ್ಳಬೇಕೆಂದು ಬಂದ ಮನವಿಗೆ ಸಂಬಂಧಪಟ್ಟಂತೆ ಮೇಲ್ಕಂಡ ಸರ್ಕಾರಿ ಪ್ರಕಟಣೆಯು ಹೊರಬಿದ್ದಿರುವುದೆಂದು ಗೊತ್ತಾಗಿದೆ.

○ ಬೆಂಗಳೂರಿನಿಂದ ನೆನ್ನೆ ಸಂಜೆ ೬ ಗಂಟೆಗೆ ಹೊರಟು ರಾಜಧಾನಿಯನ್ನು ರಾತ್ರಿ ೯-೪೫ಕ್ಕೆ ತಲಪಬೇಕಾಗಿದ್ದ ಬಾಂಬೆ ಮುಂಬಯಿ ಎಕ್ಸ್‌ಪ್ರೆಸ್ ರೈಲು ಮದ್ದೂರಿನ ಬಳಿ ಇಂಜಿನ್ ತೊಂದರೆಯ ಪರಿಣಾಮವಾಗಿ, ರಾತ್ರಿ ೧-೩೦ ಘಂಟೆಗೆ ಬಂದಿತು.

ಸಿದ್ಧಲಿಂಗಯ್ಯನವರ ಅರ್ಹತೆ ಬಗ್ಗೆ ರಾಜಪ್ರಮುಖರ ಘೋಷಣೆ

ಶಾಸನ ಸಭೆಯಲ್ಲಿ ಪ್ರಕಟಣೆ

ಸ್ವಂ ಸು ಫೋ] ಬೆಂಗಳೂರು ೧೩

ಈ ದಿನ ಕರಿಯ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳಾದನಂತರ ಸಭಾಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯನವರು ದೂರು ಸಚಿವ ಶ್ರೀ ಸಿದ್ಧಲಿಂಗಯ್ಯನವರು ಶಾಸನ ಸಭೆಯಲ್ಲಿ ಸದಸ್ಯರಾಗಿರಲು ಅನರ್ಹರೆಂಬ ಬಗ್ಗೆ ಬಂದಿದ್ದ ಆಪಾದನೆಗಳ ವಿಷಯದಲ್ಲಿ ರಾಜಪ್ರಮುಖರ ನಿರ್ಣಯವಾದ ತೀರ್ಪನ್ನು ಓದಿ, ಅವರಿಗೆ ಯಾವ ಅನರ್ಹತೆಯೂ ಉಂಟಾಗಿರುವುದಿಲ್ಲವೆಂದು ರಾಜಪ್ರಮುಖರು ನಿರ್ಧರಿಸಿದ ಅಂಶವನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರಾದ ಶ್ರೀ ಕೆ ವಿ ಕೆ ಸುಂದರಂರವರು ನಡೆಸಿದ ವಿಚಾರಣೆಯ ವಿವರಗಳನ್ನೂ ಸಹಾ ತಿಳಿಸಿದರು.

ಪ್ರವಾಹಗಳ ಬಗ್ಗೆ ಅವಸರದ ನಿರ್ಣಯ

ಕಾವೇರಿ, ಕಪಿಲ ಮುಂತಾದ ನದಿಗಳ ಪ್ರವಾಹದಿಂದ ಆಗಿರುವ ಅನರ್ಥಗಳನ್ನು ಪರಿಶೀಲಿಸಲು ಶ್ರೀಗಳಾದ ಹೆಚ್ಚ ಲಿಂಗಣ್ಣ, ಯು ಎಂ. ಮಾದಪ್ಪ ಮತ್ತು ಡಿ ರಾಚಯ್ಯನವರು ಕಳುಹಿಸಿರುವ ನಿಲುವಳಿ ನಿರ್ಣಯದ ಚರ್ಚೆ ಈ ಸಂಜೆ ನಡೆಯಲಿದೆ.

ಪಶ್ಚಿಮ ಕನ್ನಡದಲ್ಲಿ ಮುಖ್ಯಮಂತ್ರಿಗಳವರು ಇತ್ತೀಚೆಗೆ ಕೈಗೊಂಡ ಪ್ರವಾಸವನ್ನು ಮದರಾಸು ಸರ್ಕಾರದ ಆಹ್ವಾನದ ಮೇಲೆ ಮಾಡಿದ್ದರಿಂದ ಅದಕ್ಕಾಗಿ ರೂ ೪೧೮-೫ ೦ ಮಾತ್ರ ಸರ್ಕಾರಕ್ಕೆ ಖರ್ಚು ಬಿದ್ದಿದೆಯೆಂದು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಲಾಯಿತು.

ಕನ್ಯಾಪಹಾರ ಆಪಾದನೆ, ೪ ಜನರಿಗೆ ಶಿಕ್ಷೆ

ಮೈಸೂರು ೧೩

ಕೃಷ್ಣರಾಜನಗರದ ತಾಲ್ಲೂಕು ಕಾರಗಳ್ಳಿ ಕೊಪ್ಪಲು ದೊಡ್ಡ ವೀರಪ್ಪನವರ ಮಗಳು ಲಲಿತಮ್ಮನನ್ನು ಬಲವಂತದಿಂದ ಎತ್ತಿಕೊಂಡುಹೋಗಿ ಎ. ಸಿದ್ಧಲಿಂಗಪ್ಪ ಎಂಬುವರಿಗೆ ಮದುವೆ ಮಾಡಲು ಪ್ರಯತ್ನಪಟ್ಟರೆಂದು ಹೆಚ್ ಜಿ ಶಿವಲಿಂಗಪ್ಪ, ಹೆಚ್ ವೀರಪ್ಪಪ್ಪ, ಹೆಚ್ ಬಸಪ್ಪ, ಎ ಸಿದ್ಧಲಿಂಗಪ್ಪ ಮತ್ತು ಅಂಗಡಿ ವೀರಪ್ಪ ಎಂಬುವರ ಮೇಲೆ ಕೆ ಆರ್ ನಗರದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಸಿಸ್ಟೆಂಟ್ ಸೆಷನ್ಸ್ ಜಡ್ಜ್ ಶ್ರೀ ಟಿ ಗುರುನಂಜಯ್ಯನವರು ಈ ದಿನ ತೀರ್ಪಿತ್ತು, ೩ನೇ ಅಪರಾಧಿ ಹೆಚ್ ಬಸಪ್ಪನನ್ನು ಖುಲಾಸೆ ಮಾಡಿರುತ್ತಾರೆ.

೧, ೨ ಮತ್ತು ೫ನೇ ಅಪರಾಧಿಗಳಿಗೆ ೪೫೪ನೇ ಸೆಕ್ಷನ್ ಪ್ರಕಾರ ೩ ತಿಂಗಳು ಕಠಿಣ ಸಜ ಮತ್ತು ೧೦೦ ರೂ ಜುಲ್ಮಾನೆ, ತಪ್ಪಿದರೆ ೧ ತಿಂಗಳು ಕಠಿಣ ಸಜವನ್ನೂ ೧, ೨ ೪ ಮತ್ತು ೫ನೇ ಅಪರಾಧಿಗಳಿಗೆ ೩೪೨ನೇ ಸೆಕ್ಷನ್ ಪ್ರಕಾರ ೨೦೦ ರೂ, ಜುಲ್ಮಾನೆ ತಪ್ಪಿದರೆ ೧ ತಿಂಗಳು ಕಠಿಣ ಸಜ, ೩೬೬ನೇ ಸೆಕ್ಷನ್ ಪ್ರಕಾರ ೩ ತಿಂಗಳು ಕಠಿಣ ಸಜಾ ಮತ್ತು ೫೦೦ ರೂ ಜುಲ್ಮಾನೆ ತಪ್ಪಿದರೆ ೧ ತಿಂಗಳು ಕಠಿಣ ಸಜಾ ಶಿಕ್ಷೆಯನ್ನೂ ವಿಧಿಸಿ, ಶಿಕ್ಷೆಗಳೆಲ್ಲವನ್ನು ಏಕ ಕಾಲದಲ್ಲಿ ಅನುಭವಿಸತಕ್ಕದ್ದೆಂದು ಆಜ್ಞೆ ಮಾಡಿರುತ್ತಾರೆ.

ಮೈಸೂರು ಲ್ಯಾನ್ಸರ್ಸಿನ ವಿಸರ್ಜನೆ

ಬೆಂಗಳೂರು ೧೩

ಕಳೆದ ೧೫೪ ವರ್ಷಗಳಿಂದ ಇದ್ದ ಮೈಸೂರು ಲ್ಯಾನ್ಸರ್ಸ್ ದಳವನ್ನು ನೆನ್ನೆ ಇಲ್ಲಿನ ರೇಸ್ ಕೋರ್ಸಿನಲ್ಲಿ ಅಧಿಕೃತವಾಗಿ ವಿಸರ್ಜನೆಗೊಳಿಸುವ ಸಮಾರಂಭವು ಜರುಗಿತು. ಮದರಾಸಿನ ಜಿ ಓ ಸಿ ಯವರಿಂದ ಶ್ರೀ ಎಚ್ ಎಂ ಮೊಹಿತೆಯವರು ಸೆಲ್ಯೂಟ್ ಸ್ವೀಕರಿಸಿದರು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಟಿಪ್ಪು ಸುಲ್ತಾನರ ವಿಳ್ಯಕೆಯು ನಾಶವಾಯಿತುಗೊಂಡ ನಂತರ ಶ್ರೀರಂಗಪಟ್ಟಣದಲ್ಲಿ ಉಳಿದುಳಿದ ಸೈನಿಕರನ್ನು ಕೂಡಿಸಿ, ಮೈಸೂರಿನ ಪದಾತಿ ದಳವನ್ನು ೧೭೯೯ರಲ್ಲಿ ರಚಿಸಲಾಯಿತು. ತರುವಾಯ ೧೯೩೦ರಲ್ಲಿ ಅದಕ್ಕೆ ಮೈಸೂರು ಲ್ಯಾನ್ಸರ್ಸ್ ಎಂದು ನಾಮಕರಣ ಮಾಡಲಾಯಿತು. ಕಳೆದ ಪ್ರಥಮ ಮತ್ತು ದ್ವಿತೀಯ ಮಹಾ ಯುದ್ಧಗಳಲ್ಲೂ ಮತ್ತು ಹೈದರಾಬಾದ್ ಕಾರ್ಯಾಚರಣೆಯಲ್ಲೂ ಮೇಲ್ಮಟ್ಟದ ದವ ವಿಶೇಷ ಸೇವೆ ಸಲ್ಲಿಸಿ ಖ್ಯಾತಿಗಳಿಸಿದೆ.

ಯೋಜನೆ ಸಾಲಕ್ಕೆ ನೆರವಾಗಲು ಪ್ರಾರ್ಥನೆ

ಪಂಚ ವಾರ್ಷಿಕ ಯೋಜನೆ ಬಗ್ಗೆ ಸರ್ಕಾರದವರು ಎತ್ತಿರುವ ೩ ಕೋಟಿ ರೂಗಳ ಸಾಲದ ಸಂಬಂಧವಾಗಿ ಮುಖ್ಯಮಂತ್ರಿಯವರು ನೆನ್ನೆ ಪತ್ರಕರ್ತರು ಮತ್ತು ಇತರರ ಸಮ್ಮೇಳನವನ್ನು ಕರೆದು ಸಾಲವನ್ನು ಜಯಪ್ರದಗೊಳಿಸುವಂತೆ ಪ್ರಾರ್ಥಿಸಿದರು. ದೇಶದ ಎಲ್ಲಾ ಖಜಾನೆಗಳಲ್ಲೂ, ಮೈಸೂರು ಬ್ಯಾಂಕಿನ ಶಾಖೆಗಳಲ್ಲೂ, ರಿಸರ್ವ್ ಬ್ಯಾಂಕ್ ಶಾಖೆಗಳಲ್ಲೂ ಹಣವನ್ನು ತೆಗೆದುಕೊಳ್ಳಲಾಗುತ್ತದೆ.

ಅಮೆರಿಕದ ಆಹಾರ ದಾನಕ್ಕೆ ಪೂರ್ವ ಜರ್ಮನಿ ಒಪ್ಪಲಿಲ್ಲ

ಪೂರ್ವ ಜರ್ಮನಿ ಜನರಿಗೆ ಅಮೆರಿಕಾ ಸರ್ಕಾರದವರು ೧½ ಕೋಟಿ ಡಾಲರಿನ ಆಹಾರವನ್ನು ಒದಗಿಸುವುದಾಗಿ ಇತ್ತ ಸಲಹೆಯನ್ನು ಜರ್ಮನಿ ಸರ್ಕಾರದವರು ನಿರಾಕರಿಸಿರುತ್ತಾರೆ. ಈ ದಾನವನ್ನು ರಷ್ಯ ಸರ್ಕಾರದ ಮೂಲಕ ಮಾಡಲಾಗಿದ್ದಿತು.

೧ ಅಂಗುಲ ಸ್ಥಳ ಬಿಡುವುದಿಲ್ಲವೆಂದು ಪೋರ್ಚುಗೀಸರು

ಪೋರ್ಚುಗೀಸ್ ಭಾರತದ ಒಂದಂಗುಲ ಸ್ಥಳವನ್ನು ಸಹ ಭಾರತಕ್ಕೆ ಬಿಟ್ಟುಕೊಡುವುದಿಲ್ಲವೆಂದು ಪೋರ್ಚುಗೀಸ ಪ್ರಧಾನಿ, ಡಾ॥ ಸಾಲಜಾರ್‌ರವರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಜಿ ಎ ಬಾಲಕೃಷ್ಣಯ್ಯಂ ರಿಕಾರ್ಡ [illegible] ೧-೩೦ [illegible] ವಿಹಾರ ಎರವಲು. ಕನ್ನಡ [illegible] ೫.೩೦ ಮತ್ತು ೭-೫ ಆರ್ ಅಂಬುಜಮ್ಮ ವೀಣೆ ೬ ೧೫ ಬೆಂಗಳೂರು [illegible] ಗೋಪಾಲರಾವ ಸ್ವಾಮಿ ಅಯ್ಯಂಗಾರ್ ರಥೆ. ೭.೩೦ ಭಕ್ತಿ ಗೀತೆಗಳು ೮ ಮತ್ತು ೯.೩೦ ಹೆಚ್ ಆರ್ ಸೀತಾರಾಮಶಾಸ್ತ್ರಿ, ಸಂಗೀತ. ೮-೩೦ ಸಾಮುದಾಯಿಕ ಅಭಿವೃದ್ಧಿ ಯೋಜನೆ

ವಿದ್ಯಾ ಸಂಸ್ಥೆಗಳ ಸಹಾಯಾರ್ಥವಾಗಿ ಲಾಟರಿ

ಮಹಾಜನರ ಪ್ರೋತ್ಸಾಹಕ್ಕಾಗಿ ಮನವಿ

ಸ್ವಂ ವ.] ಟಿ. ನರಸೀಪುರ ೧೩

ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯ ಮತ್ತು ಇಲ್ಲಿನ ವಿದ್ಯೋದಯ ಹೈಸ್ಕೂಲುಗಳ ವ್ಯವಸ್ಥಾಪಕರಾದ ಶ್ರೀ ಶಿವಾನಂದ ಶರ್ಮರವರು ನೆನ್ನೆ ರಾಜಧಾನಿಯ ಪತ್ರಿಕೋದ್ಯೋಗಿಗಳನ್ನು ಇಲ್ಲಿಗೆ ಬರಮಾಡಿಕೊಂಡು ತಮ್ಮ ವಿದ್ಯಾ ಸಂಸ್ಥೆಗಳ ಕಾರ್ಯಕಲಾಪಗಳನ್ನು ವಿವರಿಸಿದರು. ಈ ಊರಿನ ಪ್ರೌಢ ಶಾಲೆಯು ೧೯೪೭ನೇ ಇಸವಿಯಲ್ಲಿ, ಮಹಾಜನರಿಂದ ವಸೂಲಾದ ಕೇವಲ ೮ ಸಾವಿರ ರೂಪಾಯಿಗಳಿಂದ ಆರಂಭವಾಗಿ, ಈಗ ೫೩,೦೦೦ ರೂ.ನ ಕಟ್ಟಡವನ್ನು ಹೊಂದಿ, ಅಲ್ಲಿ ೫೦೦ ವಿದ್ಯಾರ್ಥಿಗಳಿಗೆ ಪಾಠಗಳು ನಡೆಯುತ್ತಿವೆಯೆಂದು ಹೇಳಿದರು. ಸ್ಥಳ ಸಂಕೋಚದಿಂದ ಮತ್ತೊಂದು ಬಾಡಿಗೆ ಮನೆಯನ್ನು ಸಹ ಮಾಡಿಕೊಳ್ಳಲಾಗಿದೆಯೆಂದು ಅವರು ತಿಳಿಸಿದರು.

ಮುಂದುವರಿದು ಅವರು ಈ ರೀತಿ ತಿಳಿಸಿದರು — ಶಾಲಾ ಕಟ್ಟಡಕ್ಕಾಗಿ ಸರ್ಕಾರದಿಂದ ಕೇವಲ ೨೩,೦೦೦ ರೂ ಒಂದಿದೆ. ಜಿಲ್ಲಾ ಬೋರ್ಡಿನವರು ೮,೦೦೦ ರೂ ಕೊಟ್ಟಿರುತ್ತಾರೆ. ಈ ಶಾಲೆಗೆ ೧೦ ಗ್ರಾಮಗಳಿಂದ ೩೦೦ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಅವರುಗಳ ಉಪಾಹಾರಕ್ಕಾಗಿ ವಿಶೇಷ ಏರ್ಪಾಡು ಮಾಡಿದೆ. ೧೦೦ ಕಲ್ಲ ಬತ್ತವನ್ನು ಸಂಗ್ರಹಿಸಲಾಗಿದೆ.

ಶಾಲೆಯಲ್ಲಿ ವೃತ್ತಿ ಶಿಕ್ಷಣವನ್ನೂ ವ್ಯವಸಾಯ ಶಿಕ್ಷಣವನ್ನೂ ಕೊಡಲು ಆಲೋಚಿಸಲಾಗಿದೆ. ೧೫ ಎಕರೆ ಜಮೀನನ್ನು ಇದಕ್ಕಾಗಿ ತೆಗೆದುಕೊಂಡಿರುತ್ತದೆ. ಆದರೆ ಈ ಕೆಲಸಗಳಿಗೆಲ್ಲಾ ಬೇಕಾಗುವಷ್ಟು ಧನ ಸಹಾಯವು ಬರುತ್ತಿಲ್ಲ. ಉಪಾಧ್ಯಾಯರುಗಳಿಗೆ ಸರಿಯಾದ ವೇತನ ಸಾರಿಯರ್ಗಳಲ್ಲಿ ಸರ್ಕಾರದಿಂದ ವರ್ಷಕ್ಕೆ ೧,೫೭೯ ರೂ. ಮಾತ್ರ ಗ್ರಾಂಟು ಬರುತ್ತಿದೆ, ಇದು ಸಾಲದು. ಪೌರಸಭೆಯಿಂದ ಧನ ಸಹಾಯವು ಬರುತ್ತಿಲ್ಲ. ಆದರೂ ಸಹ ರಾಜಕೀಯ ಅಥವಾ ಮತದ ಮನೋಭಾವವನ್ನು ಬಿಟ್ಟು, ಸಹಕರಿಸಬೇಕು ಮತ್ತು ಸಾರ್ವಜನಿಕರು ವಿಶೇಷವಾಗಿ ಸಹಾಯ ಮಾಡಬೇಕು. ಇದಕ್ಕಾಗಿ ಒಂದು ಲಾಟರಿಯನ್ನು ಏರ್ಪಡಿಸಿದೆ. ಮಹಾ ಜನರು ಹೆಚ್ಚುಹೆಚ್ಚಾಗಿ ಅದರಲ್ಲಿ ಭಾಗವಹಿಸಿ, ಆ ಮೂಲಕ ತಮಗೂ ವಿದ್ಯಾ ಸಂಸ್ಥೆಗೂ ಸಹಾಯ ಮಾಡಬೇಕು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ ಜಿ ಸತ್ಯನಾರಾಯಣರವರು ಹೈಸ್ಕೂಲಿನ ಕೆಲಸ ಕಾರ್ಯಗಳನ್ನು ವಿವರಿಸಿ, ಪತ್ರಿಕೋದ್ಯೋಗಿಗಳಿಗೆ ಧನ್ಯವಾದವನ್ನು ಸಲ್ಲಿಸಿದರು.

ಶ್ರೀಚಂದ್ರಿಕಾಚಾರ್ಯರ ಆರಾಧನೆ

ತಿರುಮಕೂಡಲು ಕ್ಷೇತ್ರದಲ್ಲಿ ಶ್ರೀ ಶ್ರೀಚಂದ್ರಿಕಾಚಾರ್ಯರ ಆರಾಧನೋತ್ಸವವನ್ನು ಈ ದಿನವೂ, ನಾಳೆಯೂ ಮತ್ತು ನಾಳಿದ್ದೂ ಸೋಸಲೆ ಶ್ರೀ ವ್ಯಾಸರಾಯ ಮಠದ ಶ್ರೀ ಸ್ವಾಮಿಗಳವರು ಏರ್ಪಡಿಸಿರುವರು.

ಹೈದರಾಬಾದ್ ಜೋಳದ ಬಗ್ಗೆ ಮೈಸೂರಿನ ಆಕ್ಷೇಪ

ಹೈದರಾಬಾದು ಮೈಸೂರಿಗೆ ಒದಗಿಸುವ ೩೦ ಸಾವಿರ ಟನ್ ಜೋಳವು ಉತ್ತಮವಾಗಿಲ್ಲವೆಂದು ಮೈಸೂರು ಸರ್ಕಾರದವರು ತಿಳಿಸಿರುವ ವಿಷಯವಾಗಿ ಅಲ್ಲಿನ ಸರ್ಕಾರದೊಡನೆ ಕೇಂದ್ರದ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಚರ್ಚೆ ನಡೆಸುತ್ತಿರುವರೆಂದು ಗೊತ್ತಾಗಿದೆ. ಧಾನ್ಯದ ಸಾಗಾಣಿಕೆ ಬಗ್ಗೆಯೂ ದೂರು ಕೊಡಲಾಗಿದೆ.

ಸ್ವಾತಂತ್ರ್ಯ ಕೇಳಲು ಜೈಲು ಟೋಪಿಧರಿಸಿ ಸಭೆಗೆ ಪ್ರಧಾನಿ

ಪಶ್ಚಿಮ ಆಫ್ರಿಕದಲ್ಲಿರುವ ಗೋಲ್ಡ್ ಕೋಸ್ಟ್ ಪ್ರದೇಶವನ್ನು ಕಾಮನ್‌ವೆಲ್ತಿನಲ್ಲಿರುವ ಸ್ವತಂತ್ರ ರಾಷ್ಟ್ರವೆಂದು ಬ್ರಿಟನ್ನು ಘೋಷಿಸಬೇಕೆಂದು ಕೇಳಲು ಅಲ್ಲಿನ ಪ್ರಧಾನಿಯವರು ದೇಶೀಯ ಉಡುಪು ಮತ್ತು ಜೈಲು ಖೈದಿ ಟೋಪಿಯನ್ನು ಧರಿಸಿ ಅಲ್ಲಿನ ಶಾಸನ ಸಭೆಗೆ ಹೋಗಿದ್ದರೆಂದು ಹೇಳಲಾಗಿದೆ.

ಅಮೆರಿಕಾ ಅಧ್ಯಕ್ಷರೊಡನೆ ತ್ರಿರಾಷ್ಟ್ರ ಮಂತ್ರಿಗಳ ಭೇಟಿ

ಅಮೆರಿಕದ ಅಧ್ಯಕ್ಷರಾದ ಐಸೆನ್‌ಹೋವರರೊಡನೆ ನೆನ್ನೆ ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸ್‌ಗಳ ವಿದೇಶಾಂಗ ಮಂತ್ರಿಗಳು ಭೇಟಿ ನಡೆಸಿ ರಷ್ಯದಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಬಗ್ಗೆ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ಒಪ್ಪಂದ

ಪರಸ್ಪರ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಲು ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ಸರ್ಕಾರಗಳು ಒಪ್ಪಿಕೊಂಡಿರುವುದಾಗಿ ವರದಿಯಾಗಿದೆ.

ಹರಿಕಥಾ ಕಾಲಕ್ಷೇಪ

ರಾಜಧಾನಿಯ ಬನುಮಯ್ಯನವರ ರಸ್ತೆಯಲ್ಲಿರುವ ಕುಂಚಿಟಿಗರ ಶ್ರೀರಾಮಮಂದಿರದಲ್ಲಿ ಪ್ರತಿನಿತ್ಯ ಸಂಜೆ ೫ ಗಂಟೆಗೆ ವೇ॥ ಬ್ರಂ॥ ಶ್ರೀ ಹರಿಸರ್ವೋತ್ತಮದಾಸರಿಂದ ಹರಿಕಥಾ ಕಾಲಕ್ಷೇಪವು ನಡೆಯುವುದು. ಸರ್ವರಿಗೂ ಆಹ್ವಾನವಿದೆ.

ಗಫಾರ್‌ಖಾನ್ ಬಿಡುಗಡೆ ಪತ್ರಕ್ಕೆ ಸಹಿ ಪಡೆಯುತ್ತಿದ್ದವರ ಬಂಧನ

ಪಾಕಿಸ್ತಾನದಲ್ಲಿ ಬಂಧನದಲ್ಲಿರುವ ಖಾನ್ ಅಬ್ದುಲ್ ಗಫಾರ್‌ಖಾನರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸುವ ಮನವಿ ಪತ್ರವೊಂದಕ್ಕೆ ಲಾಹೋರಿನ ಹಾಜಿ ಮಹಮದ್ ಹಯಾತ್ ಗುಲ್ ಎಂಬುವರು ರುಜುಗಳನ್ನು ಸಂಗ್ರಹಿಸುತ್ತಿದ್ದರೆಂಬ ಕಾರಣಕ್ಕಾಗಿ ಅವರನ್ನು ಗಡಿನಾಡು ಸರ್ಕಾರದವರು ಬಂಧಿಸಿರುವರು.

ಪೂರ್ವ ಬರ್ಲಿನ್ನಿನಲ್ಲಿ ಮಾರ್ಷಲ್ ಲಾ ರದ್ದು

ಪೂರ್ವ ಬರ್ಲಿನ್ನಿನಲ್ಲಿ ಇತ್ತೀಚೆಗೆ ವಿಧಿಸಲಾಗಿದ್ದ ಮಾರ್ಷಲ್ ಲಾವನ್ನು ರಷ್ಯ ಮಿಲಿಟರಿ ಅಧಿಕಾರಿ ಡಿಬ್ರೋವಾರವರು ತೆಗೆದುಹಾಕಿರುತ್ತಾರೆ.

SRI GANESHA

TALKIES

From 14 7 53 · For 2 days

Columbia's

THE SWORDSMAN

(In Technicolor)

Featuring :- [illegible] Parks and Ell[illegible]n [illegible]

ಮನೆ ಮಾರಾಟಕ್ಕಿದೆ

ಮೈಸೂರು ಸಿಟಿ ಅಗ್ರಹಾರ ಹೊಸಹಳ್ಳಿ ಪಳ್ಳದಕೇರಿ ಗಡಿಯೂರು [illegible] ನವರ ಬೀದಿಯಲ್ಲಿರುವ ನಂ 2870 ಮನೆ. ಕೂಡಲೇ ಶುದ್ಧ ಸ್ವಾಧೀನಕ್ಕೆ ಕೊಡಲಾಗುತ್ತದೆ. ವಿಸ್ತಾರವಾದ ಹಿತ್ತಿಲು, ನಲ್ಲಿ ದೀಪ, ಫ್ಲಷ್ ಕಕ್ಕಸು ಮತ್ತು ಬಾವಿ ಇವುಗಳನ್ನೊಳಗೊಂಡಿರುವ ಮನೆ. [illegible] ಕೇವಲ ಸಮೀಪವಾಗಿ ವರ್ತಕರಿಗೂ, ಫ್ಯಾಕ್ಟರಿ ಅಥವಾ ವಿದ್ಯಾರ್ಥಿಗಳಿಗೂ ಅನುಕೂಲವಾದ ಮನೆ. ಹೆಚ್ಚಿನ ವಿವರಗಳಿಗೆ ಮನೆಯಲ್ಲಿ ವಿಚಾರಿಸಿ

Edited, Printed and Published by A R Nagarajan at Sadhvi Press, D Subbiah Road, Mysore.

ESTD 1917

THE CHAMPION METROPOLITAN COLLEGE OF COMMERCE,

Co-operators' Home, 100 Feet Road MYSORE

Principal **P Subbaraya Sastry,** *M.A. M.A. (Com) C.E.T D (Lon) P C T. (Lon)*

Vice Principal **M S Puttanna** *B Sc., N D. Com.(GOI) F I.B. (Lon)*

NOTIFICATION

ADMISSIONS to the several certificate and diploma courses in

Commerce, Typewriting Shorthand, Accountancy Banking Etc

are now being received in the Mornings & Evenings on all working days

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ಪಾಠದ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡ್. ಇತರ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಫೋನ್ ನಂ. 792 || ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೪-೭-೧೯೫೩ [ಸಂಚಿಕೆ ೨೮೫

ಚೀಣಾ ದಿಗ್ಬಂಧನದ ಬಗ್ಗೆ ತ್ರಿರಾಷ್ಟ್ರ ನಿರ್ಧಾರ

ಪ್ರವಾಹದಿಂದ ಆದ ನಷ್ಟ

ಶಾಸನ ಸಭೆಯಲ್ಲಿ ಸದಸ್ಯರ ಟೀಕೆ: ಮುಖ್ಯ ಮಂತ್ರಿಗಳ ಉತ್ತರ

ಬೆಂಗಳೂರು ೧೩

ನೆನ್ನೆ ಹಿರಿಯ ಮತ್ತು ಕಿರಿಯ ಶಾಸನ ಸಭೆಗಳಲ್ಲಿ, ಇತ್ತೀಚೆಗೆ ಸಂಸ್ಥಾನದ ಹಲವು ಕಡೆ ಪ್ರವಾಹ ಬಂದು, ಜನರಿಗೆ ತೊಂದರೆಯಾದ ವಿಷಯವನ್ನು ಚರ್ಚಿಸಲಾಯಿತು.

ಕಿರಿಯ ಸಭೆಯಲ್ಲಿ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡಾಗ, ವಿರೋಧ ಪಕ್ಷದ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಮಾತನಾಡಿ ತಿರುಮಕೂಡಲು ಎರಡು ದಿನಗಳ ವರೆಗೆ ಪ್ರವಾಹದಿಂದ ಆವೃತವಾಗಿ ಪ್ರತ್ಯೇಕಿಸಲ್ಪಟ್ಟಿತ್ತೆಂದೂ, ಅಲ್ಲಿನ ಜನರನ್ನು ಪಾರುಮಾಡಲು ಅಧಿಕಾರಿಗಳ ಹತ್ತಿರ ರಕ್ಷಣಾ ದೋಣಿಗಳಿಲ್ಲದೆ, ಖಾಸಗಿಯವರ ಸಹಾಯವು ದೊರೆಯಿತೆಂದೂ, ಸರ್ಕಾರದವರು ೧೯೫೧, ೫೨, ೫೩ ನೇ ಇಸವಿಗಳಲ್ಲಿ ಪ್ರವಾಹಗಳು ಬಂದಿದ್ದರೂ ಅಪಾಯದ ಬಗ್ಗೆ ಇನ್ನೂ ಅನುಭವ ಪಡೆದುಕೊಳ್ಳಬೇಕಾಗಿರುವುದೆಂದೂ ತಿಳಿಸಿದರು

ಆ ತಾಲ್ಲೂಕಿನಲ್ಲಿ ೨ ಸಾವಿರ ಎಕರೆ ಜಮೀನಿನಲ್ಲಿ ಪೈರು ನಾಶವಾಗಿ ೨ ಲಕ್ಷ ರೂ. ಗಳಷ್ಟು ನಷ್ಟ ಸಂಭವಿಸಿರುವುದಾಗಿ ಅವರು ಅಂದಾಜು ಮಾಡಿದರು ೫ ಲಕ್ಷ ರೂ.ಗಳಷ್ಟು ಸಹಾಯ ಒದಗಿಸುವಂತೆ ಅವರು ಕೋರಿದರು

ಹೆಜ್ಜಿಗೆ ಶ್ರೀ ಎಂ. ಲಿಂಗಣ್ಣನವರು ಮಾತನಾಡಿ, ನಂಜನಗೂಡು ತಾಲ್ಲೂಕಿನಲ್ಲಿ ೫೦ ಸಾವಿರ ರೂ. ನಷ್ಟ ನಷ್ಟವಾಗಿರುವುದಾಗಿ ಹೇಳಿದರು.

ಶ್ರೀ ಕೆ ಪುಟ್ಟಸ್ವಾಮಿಯವರು ಮಾತನಾಡಿ, ಕೃಷ್ಣರಾಜಸಾಗರದಲ್ಲಿ ನೀರನ್ನು ಅಧಿಕವಾಗಿ ಅಧಿಕಾರಿಗಳು ಶೇಖರಿಸಿದ್ದರೆಂದು ತಿಳಿಸಿ, ಹವಾಗುಣದ ಎಚ್ಚರಿಕೆಯನ್ನು ಅಧಿಕಾರಿಗಳು ಮನಗಾಣದೆ ಇರುವುದು ಅವರ ಲೋಪವೆಂದು ಹೇಳಿದರು.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಉತ್ತರವಿತ್ತು ತಾವೂ, ಇತರ ಮಂತ್ರಿಗಳೂ ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗಿದ್ದುದಾಗಿಯೂ, ಅಲ್ಲಿನ ಜನರು ಮಳೆಯಾದ ಬಗ್ಗೆ ಹರ್ಷ ವ್ಯಕ್ತಪಡಿಸಿದರೆಂದೂ ತಿಳಿಸಿದರು ಅಧಿಕಾರಿಗಳ ಕರ್ತವ್ಯ ದೃಷ್ಟಿಯನ್ನು ಅವರು ಪ್ರಶಂಸಿಸಿದರು ಕೃಷ್ಣರಾಜಸಾಗರದಲ್ಲಿ ಕಳೆದ ೬ನೇ ತಾ|| ಹೆಚ್ಚು ನೀರು ಶೇಖರಿಸಲ್ಪಟ್ಟಿದ್ದಿತೆಂಬ ಆಪಾದನೆಯನ್ನು ತನಿಖೆ ಮಾಡುವುದಾಗಿ ತಿಳಿಸಿದರು ನಷ್ಟವು ಎಷ್ಟಾಗಿರುವುದೆಂಬುದನ್ನು ಈಗಲೇ ನಿಖರವಾಗಿ ಹೇಳಲು ಸಾಧ್ಯವಿಲ್ಲವೆಂದರು.

ಮುಖ್ಯ ಮಂತ್ರಿಗಳ ಭರವಸೆಯ ಮೇಲೆ ನಿಲುವಳಿ ಸೂಚನೆಯು ವಾಪಸು ತೆಗೆದುಕೊಳ್ಳಲ್ಪಟ್ಟಿತು

ಹಿರಿಯ ಸಭೆಯಲ್ಲಿ ಚರ್ಚೆಯಾಗಿ, ರೆವಿನ್ಯೂ ಮಂತ್ರಿಗಳು ಉತ್ತರವೀಯುತ್ತ, ಮಂತ್ರಿಗಳು ಪ್ರವಾಹ ಪೀಡಿತ ಪ್ರದೇಶಗಳಿಗೆ ನೋಟ ನೋಡಲು ಹೋಗಿಲ್ಲವೆಂದೂ ಕೃಷ್ಣರಾಜಸಾಗರದ ಕೆಳಗಡೆಯುಂಟಾದ ಪ್ರವಾಹವು ಮನುಷ್ಯಕೃತವಾದುದಲ್ಲವೆಂದೂ ತಿಳಿಸಿದರು

ಚೀಣದ ಮೇಲೆ ದಿಗ್ಬಂಧನ ಮುಂದುವರಿಸಲು ನಿರ್ಧಾರ

ಕೊರಿಯದಲ್ಲಿ ಶಾಂತಿಯು ಸ್ಥಾಪನೆಯಾದರೂ ಸಹ, ಕಮ್ಯೂನಿಸ್ಟ್ ಚೀಣಕ್ಕೆ ಮಿಲಿಟರಿ ಸಂಬಂಧವಾದ ಪದಾರ್ಥಗಳನ್ನು ಕಳುಹಿಸುವುದಕ್ಕೆ ದಿಗ್ಬಂಧನವನ್ನು ಮುಂದುವರಿಸಬೇಕೆಂದು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸ್ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ನಿರ್ಧಾರವಾಗಿದೆ

ರಕ್ತ ಪಾತಕ್ಕೆ ಸಿದ್ಧವೆಂದು ಈಜಿಪ್ಟ್ ಮಂತ್ರಿ ಹೇಳಿಕೆ

ಇಸ್ಮೇಲಿಯದಲ್ಲಿ ಕಳೆದ ೯ ನೇ ತಾ|| ಪತ್ತೆಯಿಲ್ಲವಾದ ಬ್ರಿಟಿಷ್ ವೈಮಾನಿಕನನ್ನು ಹಿಂದಕ್ಕೆ ಕಳುಹಿಸುವಂತೆ ಈಜಿಪ್ಟ್ ಸರ್ಕಾರಕ್ಕೆ ಬ್ರಿಟಿಷ್ ಮಿಲಿಟರಿಯವರು ಸಲ್ಲಿಸಿದ್ದ ಅಂತ್ಯ ಎಚ್ಚರಿಕೆಯನ್ನು ತಿರಸ್ಕರಿಸಲಾಗಿದೆಯೆಂದು ಈಜಿಪ್ಟಿನ ಮಂತ್ರಿ ಸಾಲೇಹ್ ಸಲೀಂರವರು ತಿಳಿಸಿ, ಈ ಬಗ್ಗೆ ಬ್ರಿಟಿಷರು ಏನು ಪ್ರತೀಕಾರ ಮಾಡುವರೋ ಎಂಬುದನ್ನು ತಾವು ಇದಿರು ನೋಡುತ್ತಿರುವುದಾಗಿ ಹೇಳಿದರು ರಕ್ತ ಪಾತಕ್ಕೆ ಈಜಿಪ್ಟಿನವರು ಸಿದ್ಧರಾಗಿರುವುದಾಗಿಯೂ, ಅಲ್ಲಿನ ನಾಗರಿಕರ ಮೇಲೆ ಬ್ರಿಟಿಷರು ಕ್ರಮ ಕೈಗೊಂಡರೆ, ೬-೭ ವರ್ಷಗಳ ಹಿಂದೆ ಯಹೂದ್ಯರು ಪ್ಯಾಲಸ್ಟೈನಿನಲ್ಲಿ ನಡೆಸಿದ ಹಿಂಸಾಕೃತ್ಯಗಳನ್ನು ತಾವು ಅನುಸರಿಸುವುದಾಗಿಯೂ ಅವರು ಹೇಳಿದರು. ರಕ್ತ ಹರಿಯುವುದನ್ನು ನೋಡಲು ತಾವು ಕಾತುರರಾಗಿರುವುದಾಗಿ ಅವರು ತಿಳಿಸಿದರು

ಸ್ವಾತಂತ್ರ್ಯದ ಹೋರಾಟವನ್ನು ಒಂದು ಕ್ಷಣಕಾಲ ಮಾತ್ರವೂ ತಾವು ಮರೆಯುವುದಿಲ್ಲವೆಂದೂ, ಕದನಕ್ಕಾಗಿಯೇ ಕಳೆದ ೮ ತಿಂಗಳಿಂದ ಹಗಲಿರುಳು ಸಿದ್ಧತೆ ಮಾಡಿಕೊಳ್ಳಲಾಗುತ್ತಿರುವುದೆಂದೂ, ಯುದ್ಧ ರಂಗವನ್ನು ತಾವು ಪ್ರವೇಶಿಸುವ ಕಾಲವನ್ನು ಜನರು ತಾಳ್ಮೆಯಿಂದ ಕಾಯಬೇಕೆಂದೂ ಮಂತ್ರಿಗಳು ತಿಳಿಸಿ, ಕಾಲ ಬಂದಾಗ, ಅನೇಕರು ಬಲಿದಾನಕ್ಕೆ ಸಿದ್ಧವಾಗಿರುವುದಾಗಿಯೂ ಹೇಳಿದರು ಬ್ರಿಟಿಷರ ಎಚ್ಚರಿಕೆಗೆ ಅಂಜುವುದಿಲ್ಲವೆಂದೂ, ಹೋರಾಟದ ಸಮಯದಲ್ಲಿ ಮಂತ್ರಿಗಳೇ ಕದನಕ್ಕೆ ಮುನ್ನುಗ್ಗುವರೆಂದೂ ಅವರು ತಿಳಿಸಿದರು.

ನಾಳೆ ನಗರದಲ್ಲಿ ಪ್ರಾರ್ಥನಾ ದಿನಾಚರಣೆ

ಮೈಸೂರು ೧೩

ಈ ಸಾರಿ ಸಂಸ್ಥಾನದಲ್ಲಿ ಮಳೆಯು ಚೆನ್ನಾಗಿ ಆದುದಕ್ಕಾಗಿ ಭಗವಂತನಿಗೆ ಕೃತಜ್ಞತೆ ಸೂಚಿಸುವಂತೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುವ ಪ್ರಕಾರ, ನಾಳೆ ನಗರದ ಎಲ್ಲಾ ದೇವಾಲಯ, ಚರ್ಚು ಮತ್ತು ಮಸೀದಿಗಳಲ್ಲಿ ಪ್ರಾರ್ಥನೆಯನ್ನು ನಡೆಸಬೇಕೆಂದು ನಗರದ ಪೌರ ಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ನಾಗರಿಕರನ್ನು ಪ್ರಾರ್ಥಿಸಿರುತ್ತಾರೆ

ವೇದಾಂತ ಹೆಮ್ಮಿಗೆಯವರ ಬಂಧನ ಮತ್ತು ಬಿಡುಗಡೆ

ರಾಜಧಾನಿಯ ಸರ್ಕಾರಿ ಬೀಡಿ ಕಾರ್ಖಾನೆಯಲ್ಲಿ ಕಳೆದ ತಿಂಗಳು ನಡೆದ ಸತ್ಯಾಗ್ರಹದ ಸಂಬಂಧವಾಗಿ ನಗರದ ಪ್ರಜಾ ಸೋಷಲಿಸ್ಟ್ ಕಾರ್ಯಕರ್ತರಾದ ಶ್ರೀ ವೇದಾಂತ ಹೆಮ್ಮಿಗೆಯವರನ್ನು ಮಂಡಿ ಪೋಲೀಸರು ನೆನ್ನೆ ದಸ್ತಗಿರಿ ಮಾಡಿ, ನ್ಯಾಯಾಧೀಶರ ಮುಂದೆ ಹಾಜರ್ ಪಡಿಸಿದರು ನಂತರ ಜಾಮೀನು ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು ಅವರ ಮೇಲಿನ ಮೊಕದ್ದಮೆಯನ್ನು ೧೬ ನೇ ತಾ ಗೆ ಹಾಕಲಾಗಿದೆ.

ಇಸ್ಮೇಲಿಯಾ ಪ್ರದೇಶದ ಸುತ್ತಲೂ ಸರ್ಪಗಾವಲು

ಬ್ರಿಟಿಷ್ ವೈಮಾನಿಕನೊಬ್ಬನ ಅಪಹರಣವಾದಾಗಿನಿಂದ ಈಜಿಪ್ಟಿನ ಇಸ್ಮೇಲಿಯಾ ಪ್ರದೇಶದ ಸುತ್ತಲೂ ಬ್ರಿಟಿಷ್ ಸೈನ್ಯಗಳು ಸರ್ಪಗಾವಲು ನಿಂತಿವೆ ಸಂಚಾರ ಮಾಡುವ ಪ್ರತಿಯೊಬ್ಬನನ್ನೂ ಶೋಧಿಸಲಾಗುತ್ತಿದೆ ಈಜಿಪ್ಟ್ ಪೋಲೀಸರು ಹಲವರನ್ನು ಮುನ್ನೆಚ್ಚರಿಕೆಗಾಗಿ ದಸ್ತಗಿರಿ ಮಾಡಿದ್ದಾರೆ.

ಡಾ|| ಮುಖರ್ಜಿಯವರ ನಿಧನದ ಬಗ್ಗೆ ಸಂತಾಪ

ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ನಿಧನಕ್ಕಾಗಿ ನೆನ್ನೆ ಹಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳು ನಿರ್ಣಯವನ್ನು ಮಂಡಿಸಿ, ಡಾ|| ಮುಖರ್ಜಿಯವರು "ಸಿಂಹದ ಗರ್ಭದಲ್ಲಿ ಜನಿಸಿದ ಸಿಂಹ" ವೆಂದು ಹೇಳಿ, ಅವರ ಹೆಸರು ಜನರ ಮನಸ್ಸಿನಲ್ಲಿ ಸದಾ ನೆಲೆಸಿರುವುದೆಂದು ತಿಳಿಸಿದರು ಇದು ಒಪ್ಪಲ್ಪಟ್ಟಿತು.

ಗ್ರಾಮಾಧಿಕಾರಿಗಳಿಗೆ ವೇತನ ಕೊಡುವ ವಿಚಾರ

ಪರಿಶೀಲನೆಯಲ್ಲಿರುವುದೆಂದು ಸಚಿವರ ಹೇಳಿಕೆ

ಸ್ವಂ ಸು ಫೋ[ನ್] ಬೆಂಗಳೂರು ೧೩

ಕಿರಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಇಂದು, ಮದ್ರಾಸಿನಂತೆ ಇಲ್ಲಿಯೂ ಸಹ ಗ್ರಾಮಾಧಿಕಾರಿಗಳಿಗೆ ವೇತನ ಕೊಡುವ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಆಲೋಚಿಸಲಾಗುತ್ತಿದೆಯೆಂದು ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ಬಿ ಎಸ್. ರಾಮೇಗೌಡರ ಪ್ರಶ್ನೆಗೆ ಉತ್ತರವಿತ್ತರು ಹಿರಿಯ ಸಭೆಯಲ್ಲಿ ಮುಖ್ಯ ಮಂತ್ರಿಯವರು ಎಸ್. ಶಿವಪ್ಪನವರಿಗೆ ಉತ್ತರವಿತ್ತು, ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರಿಗೆ ಸೇರುವ ಬಗ್ಗೆ ಅಲ್ಲಿನ ಶಾಸನ ಸಭಾಸದಸ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಯಿತೆಂದು ತಿಳಿಸಿದರು.

ಕರ್ನಾಟಕ ಏಕೀಕರಣದ ವಿಷಯವಾಗಿ ಮುಖ್ಯ ಮಂತ್ರಿಯವರು ಹೇಳುವ ಹೇಳಿಕೆಗಳನ್ನು ಕುರಿತು ಶ್ರೀ ಎಸ್. ಗೋಪಾಲಗೌಡರೂ, ಶ್ರೀ ಟಿ ಪಿ. [illegible] ಪ್ರಶ್ನೆ ಮಾಡಲಾಗಿ ಶ್ರೀ ಹನುಮಂತಯ್ಯನವರು ಉತ್ತರವಿತ್ತು, ಅದು ತಮ್ಮ ಸ್ವಂತ ಅಭಿಪ್ರಾಯವೆಂದು ತಿಳಿಸಿದರು. ಕರ್ನಾಟಕ ಏಕೀಕರಣದ ಬಗ್ಗೆ ದೆಹಲಿಗೆ ಹೋದ ನಿಯೋಗಕ್ಕೂ ತಮಗೂ ಯಾವ ಸಂಬಂಧವೂ ಇಲ್ಲವೆಂದು ಅವರು ಹೇಳಿದರು

ಹಿರಿಯ ಶಾಸನ ಸಭೆಯಲ್ಲಿ ಇಂದು ಶ್ರೀ ಗಾಂಜ ವೀರಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ಮುಖ್ಯ ಮಂತ್ರಿಯವರು ಸಂಸ್ಥಾನದಲ್ಲಿ ೪೫ ಮಂದಿ ಐ ಎ ಎಸ್. ಅಧಿಕಾರಿಗಳಿರುವುದಾಗಿಯೂ ಇನ್ನೂ ಆ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಪ್ರಯತ್ನ ನಡೆಸಲಾಗುತ್ತಿದೆಯೆಂದೂ ತಿಳಿಸಿದರು ಈ ಹುದ್ದೆಗಳಿಗೆ ಆರಿಸುವುದಕ್ಕಾಗಿ ಒಂದು ಸಮಿತಿಯು ಇರುವುದೆಂದೂ ತಿಳಿಸಲಾಯಿತು.

ಶಾಸನ ಸಭೆಯಲ್ಲಿ [illegible] ನಿಲುವಳಿ ಸೂಚನೆಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಇಲ್ಲದೆ ಬೆಳೆಗಳು ಹಾಳಾಗಿರುವ ವಿಷಯವಾಗಿ ಜ|| ಮಹಮದ್ ಇಮಾಂರವರೂ, ತುಂಗಾ ನದಿಯಲ್ಲಿ ಪ್ರವಾಹ ಬಂದು ನಷ್ಟವಾಗಿರುವ ಬಗ್ಗೆ ಶ್ರೀ ಎಸ್. ಗೋಪಾಲಗೌಡರೂ ಒಂದೊಂದು ನಿಲುವಳಿ ಸೂಚನೆಯನ್ನು ತಂದಿದ್ದರು. ಶ್ರೀ ಇಮಾಂರವರ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು ಮತ್ತೊಂದನ್ನು ತಿರಸ್ಕರಿಸಲಾಗಿದೆ.

ರಾಜಧಾನಿಯಲ್ಲಿ ಫಲಪುಷ್ಪ ಪ್ರದರ್ಶನ

ಬರುವ ತಿಂಗಳು ೮ ಮತ್ತು ೯ನೇ ತಾರೀಖುಗಳಲ್ಲಿ ರಾಜಧಾನಿಯ ಮೃಗಾಲಯದಲ್ಲಿ ಒಂದು ಫಲಪುಷ್ಪ ಪ್ರದರ್ಶನವನ್ನು ಏರ್ಪಡಿಸಲು ನಗರದ ಹಾರ್ಟಿಕಲ್ಚರಲ್ ಸೊಸೈಟಿಯವರು ನಿರ್ಧರಿಸಿ ಅದಕ್ಕಾಗಿ ಶ್ರೀಗಳಾದ ಟಿ ವೆಂಕಟೇಶಯ್ಯ, ಕೆ ಎಸ್ ಸತ್ಯನಾರಾಯಣರಾವ್ ಮತ್ತು ಎಸ್. ರಾಮರಾಯರಿಂದ ಕೂಡಿದ ಉಪ ಸಮಿತಿಯೊಂದನ್ನು ರಚಿಸಿರುವರು.

ನಂಜನಗೂಡು ತಾಲ್ಲೂಕಿಗೆ ೧೦ ಸಾವಿರ ರೂ. ಪರಿಹಾರ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೧೪

ಶಿಬಿಂ ಶಾಸನ ಸಭೆಯಲ್ಲಿ ನೆನ್ನೆ ಶ್ರೀಗಳಾದ ಬಿ ರಾಜಯ್ಯ ಮತ್ತು ಯು ಎಂ ಮಾದಪ್ಪನವರು ಮೈಸೂರು ಜಿಲ್ಲೆಯ ಪ್ರವಾಹದಿಂದ ಉಂಟಾದ ತೊಂದರೆ ಬಗ್ಗೆ ಪರಿಹಾರ ಒದಗಿಸುವ ಸಂಬಂಧವಾಗಿ ನಿಲುವಳಿ ಸೂಚನೆಯೊಂದನ್ನು ತಂದಾಗ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು, ಪ್ರವಾಹಗಳಿಂದ ಮನೆಗಳು ಕುಸಿದು ಬಿದ್ದು ನಿರ್ಗತಿಕರಾದವರಿಗಾಗಿ ೧೦,೦೦೦ ರೂ ಪರಿಹಾರ ನೀಡಲಾಗುವುದೆಂದು ತಿಳಿಸಿದರು ಪ್ರವಾಹ ಪೀಡಿತ ಪ್ರದೇಶಗಳಿಗೆ ಎಲ್ಲ ಸಹಾಯವನ್ನು ಸರ್ಕಾರವು ಒದಗಿಸುವುದೆಂದೂ ನಂಜನಗೂಡು ಮತ್ತು ಟಿ ನರಸೀಪುರ ತಾಲ್ಲೂಕುಗಳ ಬಗ್ಗೆ ಸಲಹೆ ಕೊಟ್ಟಲ್ಲಿ ಕ್ರಮ ಕೈಗೊಳ್ಳಲಾಗುವುದೆಂದೂ ಅವರು ಹೇಳಿದರು

ನಾಗಪುರದಲ್ಲಿ ಉರ್ದು ಶಾಲೆಗಳ ಬಂದ್

ನಾಗಪುರದ ಪೌರಸಭೆಯವರು ಇನ್ನು ಮುಂದೆ ಹೊಸ ಉರ್ದು ಶಾಲೆಗಳನ್ನು ತೆರೆಯಲಾಗದೆಂದು ನಿರ್ಧರಿಸಿ ಈಗ ಇರುವವುಗಳನ್ನು ಇನ್ನು ನಾಲ್ಕು ವರ್ಷಗಳಲ್ಲಿ ಮುಚ್ಚಲು ತೀರ್ಮಾನಿಸಿರುವರೆಂದು ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೦೫ ಸಂಗೀತ ಎಂ ಎಸ್ ಶಿಲ್ಪಪುಳ್ಳೆ ಅಯ್ಯಂಗಾರ್ ೭ ೩೦ ಶಹನಾಯ್ ಸಿ ಗುರುವಯ್ಯ, ಮಧ್ಯಾಹ್ನ ೧-೩೦ ಪಿ ಕಾಳಿಂಗರಾವ್ ಮತ್ತು ಬಿ ಎಸ್ ರಾಮಯ್ಯರ್, ರಿಕಾರ್ಡು ೧ ೫೦ ಟಿ ಎಸ್ ರಾಜರತ್ನಂ ಪಿಳ್ಳೈ, ನಾಗಸ್ವರ, ರಿಕಾರ್ಡು ೨ ಮತ್ತು ಸಂಜೆ ೫ ೩೦ ಸಂಗೀತ, ಟಿ ಎಸ್ ಸ್ವರ್ಣಲತಾ ೭ ೧೫ ಎಂ ಎಸ್ ಶಿಲ್ಪಪುಳ್ಳೆ ಅಯ್ಯಂಗಾರ್, ಕನ್ನಡ ಗೀತೆಗಳು ೭ ೦೫ ಶಹನಾಯ್ ಸಿ ಗುರುವಯ್ಯ ೭-೩೦ ನಮ್ಮ ಪತ್ರಿಕಾ ಪ್ರಪಂಚ, ಕನ್ನಡದಲ್ಲಿ ಭಾಷಣ ೮ ಸಂಗೀತ ಬಿ ಎಸ್ ರಾಜಯ್ಯಂಗಾರ್ ೮ ೩೦ ದಾಮೋದರ ಕಣಿವೆ ಯೋಜನೆ ಬಗ್ಗೆ ದೆಹಲಿಯಿಂದ ಭಾಷಣ ೯-೩೦ ರಿಕಾರ್ಡುಗಳು ೯-೪೫ 'ಸಾಹಿತ್ಯ ಸಿಂತಿಂಪು' ಎಸ್ ಬಾಲುರಾವ್ ರ ಕನ್ನಡ ನಾಟಕ

ಖಾದರಲ್ಲಿಗಳ ಕಳುವು

ಹಿಂದೆ ಇದ್ದ ಸಂಗಡಿಗಳವರ ಜಾಗೃತಿ ಬಗ್ಗೆ ಪ್ರಕಟವಾಗಿರುವ ರಾಜಧಾನಿಗೆ ಬಂದಿರುವ ಹಿಂದಿನ ಸಂಗಡಿಗ ಅವರಾಮನ ದಸ್ತಾವೇಜುಗಳ ಪೆಟ್ಟಿಗೆಯನ್ನು ಸಂಟಿ ಸ್ ಎಂಬುವವರು ಮೋಟಾರಿನಲ್ಲಿಟ್ಟು ದಾಗ ಯಾರೋ ತೆಗೆದುಕೊಂಡು ಹೋದರೆಂದು ಮೌಲ್ವಿಯು ಪ್ರಸಿದ್ಧವಾದ ಹಣ್ಣು ಮತ್ತು ಅಬ್ದುಲ್ ಖುದ್ದೂಸ್ ಎಂಬುವರಿಗೆ ಜೊತೆ ಒಪ್ಪಿಸಿದ್ದ ರೂ ೧-೭-೦ ಯಂತೆ ಕಾಪಿಗಳನ್ನು ದೇವರಾಜ ಪೊಲೀಸರ ಪತ್ತೆ ಹಚ್ಚಿದ್ದಾರೆ

ನೆಹರೂರೊಡನೆ ಡೋಗ್ರಾ ಮತ್ತು ಚಟರ್ಜಿ ಭೇಟಿ

ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ಎನ್ ಸಿ ಚಟರ್ಜಿಯವರೂ, ಜಮ್ಮು ಪ್ರಜಾಪರಿಷತ್ತಿನ ಅಧ್ಯಕ್ಷ ಶ್ರೀ ಪ್ರೇಮನಾಥ ಡೋಗ್ರಾರವರು ಕಳೆದ ಶನಿವಾರ ದೆಹಲಿಯಲ್ಲಿ ಪ್ರಧಾನಿ ನೆಹರೂರವರೊಡನೆ ಮುಕ್ಕಾಲು ಘಂಟೆ ಕಾಲ ಮಾತುಕತೆ ನಡೆಸಿ ಕಾಶ್ಮೀರದ ಪರಿಸ್ಥಿತಿ, ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳ ನಡುವೆ ನಡೆಯಲಿರುವ ಸಮ್ಮೇಳನ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿದರೆಂದು ಹೇಳಲಾಗಿದೆ ಶ್ರೀಗಳಾದ ಚಟರ್ಜಿ ಮತ್ತು ಡೋಗ್ರಾರವರು ಗೃಹ ಸಚಿವ ಶ್ರೀ ಕೆ ಎನ್ ಕಟ್ಜುರವರನ್ನೂ ಭೇಟಿ ಮಾಡಿ ಕಾಶ್ಮೀರದ ಪರಿಸ್ಥಿತಿಯನ್ನು ಪ್ರಸ್ತಾಪಿಸಿ, ಅಲ್ಲಿ ಶ್ಯಾಮಪ್ರಸಾದ ಮುಖರ್ಜಿಯವರು ಬಂಧನದಲ್ಲಿದ್ದಾಗ ಮೃತಪಟ್ಟ ಬಗ್ಗೆ ವಿಚಾರಣೆ ನಡೆಸಲು ನಿಷ್ಪಕ್ಷಪಾತವಾದ ಸಮಿತಿಯನ್ನು ರಚಿಸಬೇಕೆಂದು ಒತ್ತಾಯ ಮಾಡಿದರೆಂದೂ ಗೊತ್ತಾಗಿದೆ

ಉದ್ಯೋಗಕ್ಕಾಗಿ ೧೮೮೧ ಜನರ ಅರ್ಜಿಗಳು

ಕಳೆದ ತಿಂಗಳು ಉದ್ಯೋಗಕ್ಕಾಗಿ ಸಂಸ್ಥಾನದ ಉದ್ಯೋಗ ವಿನಿಮಯ ಸಂಸ್ಥೆಗೆ ೧೮೮೧ ಜನರ ಅರ್ಜಿಗಳು ಬಂದಿದ್ದುವೆಂದೂ ಅವುಗಳ ಪೈಕಿ ೧೬೩ ಅರ್ಜಿಗಳು ವಿಸರ್ಜಿತ ಸೈನಿಕರದೆಂದೂ ಹೇಳಲಾಗಿದೆ ೯೧ ಮಂದಿ ಸ್ತ್ರೀಯರು ಉದ್ಯೋಗಕ್ಕಾಗಿ ಅರ್ಜಿಗಳನ್ನು ಸಲ್ಲಿಸಿದ್ದರು ಅವರ ಪೈಕಿ ೭೦ ಜನರಿಗೆ ಕಲ್ಪಿಸಲಾಗಿದೆ

ಶತಮಾನೋತ್ಸವದ ಪ್ರದರ್ಶನದ ರೈಲುಗಳು

ಭಾರತದ ರೈಲ್ವೆಗಳ ಶತಮಾನೋತ್ಸವದ ಸಂಬಂಧದಲ್ಲಿ ಕಳೆದ ಶುಕ್ರವಾರ ಎರಡು ಪ್ರದರ್ಶನದ ರೈಲುಗಳು ದೆಹಲಿಯಿಂದ ಎರಡು ದಿಕ್ಕಿಗೂ ಪ್ರಯಾಣ ಬೆಳಸಿದುವು ಪ್ರಧಾನಿ ನೆಹರೂರವರು ಈ ಸಮಾರಂಭವನ್ನು ಉದ್ಘಾಟಿಸಿ ವಿದ್ಯುಚ್ಛಕ್ತಿ ಗುಂಡಿಯನ್ನು ಒತ್ತಿದಾಗ ಹಸುರು ಸಿಗ್ನಲ್ ಬಿದ್ದು ರೈಲುಗಳು ಹೊರಟುವು ಅವು ದೇಶದ ಹಲವಾರು ಕಡೆಗಳಲ್ಲಿ ಸಂಚರಿಸಿ ಪ್ರಮುಖ ನಗರಗಳಿಗೆ ಭೇಟಿ ಕೊಡುವುವು

ಪತ್ರಿಕೆಯಿಂದ ಕ್ಷಮಾಪಣೆಗಾಗಿ ಸೂಚನೆ

ಹಿರಿಯ ಶಾಸನ ಸಭೆಯು ನೆನ್ನೆ ಸೇರಿದ್ದಾಗ ಬೆಂಗಳೂರಿನ ಸತ್ಯ, ಡೆಕ್ಕನ್ ಹೆರಾಲ್ಡ್ ಮತ್ತು ಡೈಲಿ ಪೋಸ್ಟ್ ಪತ್ರಿಕೆಗಳಲ್ಲಿ ಆರ್ ಎಂ ಡಿ ಸಿ ಸ್ಪರ್ಧೆಗಳ ಬಗ್ಗೆ ಸಭೆಯಲ್ಲಿ ಹಿಂದೆ ಬಂದಿದ್ದ ಪ್ರಶ್ನೋತ್ತರಗಳ ಸಂಬಂಧವಾಗಿ ಒದಗಿದ ಲೋಪ ಲೇಖನಗಳಿಗಾಗಿ ಸತ್ಯ ಪತ್ರಿಕೆಯು ಕ್ಷಮಾಪಣೆ ಸಲ್ಲಿಸಬೇಕೆಂದೂ ಇತರ ಎರಡು ಪತ್ರಿಕೆಗಳಿಗೆ ಎಚ್ಚರಿಕೆಯನ್ನು ಕೊಡುವಂತೆಯೂ ಸಭೆಯ ಹಕ್ಕು ಬಾಧ್ಯತಾ ಸಮಿತಿಯು ನಿರ್ಧರಿಸಿದ ವಿಷಯಗಳನ್ನು ತಿಳಿಸಲಾಯಿತು

ಮೈಸೂರಿನಲ್ಲಿ ಫೋಟೋ ಫಿಲಂ ಕಾರ್ಖಾನೆ

ಜರ್ಮನಿಯ ಪರಿಣತರ ತಾಂತ್ರಿಕ ಸಹಾಯ ಪಡೆದು ಮೈಸೂರಿನಲ್ಲಿ ಫೋಟೋ ಫಿಲಂ ಮತ್ತು ಕಾಗದದ ಕಾರ್ಖಾನೆಯೊಂದನ್ನು ಸ್ಥಾಪಿಸುವ ಬಗ್ಗೆ ಸಂಸ್ಥಾನ ಸರ್ಕಾರದವರು ಜರ್ಮನಿಯ ಸಂಸ್ಥೆಯೊಂದರೊಡನೆ ಸಂಧಾನ ನಡೆಸುತ್ತಿರುವರೆಂದು ವರದಿಯಾಗಿದೆ ಆದರೆ ಸರ್ಕಾರವು ಕಾರ್ಖಾನೆಯ ಸ್ಥಾಪನೆಗೆ ಬಂಡವಾಳವನ್ನು ಹಾಕುವುದಾಗಿ ಭರವಸೆ ನೀಡಿದೆಯೆಂದೂ ಹೇಳಲಾಗಿದೆ

ಮುಸದ್ದಿಕ್ ಆಡಳಿತದ ಬಗ್ಗೆ ಜನಮತ ಗಣನೆ

ಪರ್ಷಿಯದ ಪ್ರಧಾನಿ ಡಾ॥ ಮುಸದ್ದಿಕ್‌ರವರು ತಮ್ಮ ಸರ್ಕಾರಕ್ಕೆ ಜನರ ಬೆಂಬಲವಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಜನಮತ ಗಣನೆಯನ್ನು ಏರ್ಪಡಿಸಲು ಆಲೋಚಿಸಿರುವರೆಂದು ಗೊತ್ತಾಗಿದೆ ಆದರೆ ಇದಕ್ಕೆ ಮುಂಚೆ ಪ್ರಧಾನಿಯವರು ರಾಜೀನಾಮೆ ಕೊಡಬೇಕೆಂದೂ, ಇಲ್ಲವಾದರೆ ನ್ಯಾಯಬದ್ಧವಾದ ಜನಮತಗಣನೆ ನಡೆಯಲಾರದೆಂದೂ ಹಲವರು ಅಭಿಪ್ರಾಯಪಟ್ಟಿರುವುದಾಗಿ ಗೊತ್ತಾಗಿದೆ

ಗಂಡನ ಮರಣಕ್ಕಾಗಿ ಆತ್ಮಹತ್ಯೆ

ಬರೋಡದ ಒಬ್ಬ ದಾದಿಯು ಕಳೆದ ೯ನೇ ತಾರೀಖು ತನ್ನ ಗಂಡನ ಮೃತಪಟ್ಟ ಬಗ್ಗೆ ದುಃಖ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ, ಹೆಚ್ಚಿನ ಪ್ರಮಾಣದ ಮಾರ್ಫಿಯಾ ಇಂಜೆಕ್ಷನ್ನನ್ನು ತೆಗೆದುಕೊಂಡು ಪ್ರಾಣ ನೀಗಿದಳೆಂದು ಗೊತ್ತಾಗಿದೆ

ಸತ್ಕಾರ ಕೂಟ

ಮೈಸೂರು ಸೌತ್ ರೈಲ್ವೆ ವರ್ಕ್ ಷಾಪಿನ ವಿಭಾಗ ಛಾರ್ಜ್ ಮನ್‌ಗಳಾದ ಶ್ರೀ ಗೋವಿಂದರಾಜ ಮೊದಲಿಯಾರ್ ಮತ್ತು ಶ್ರೀ ದೊರೆಸ್ವಾಮಿ ಮೊದಲಿಯಾರ್‌ರವರುಗಳು ನಿವೃತ್ತರಾದ ಬಗ್ಗೆ ಅವರ ಗೌರವಾರ್ಥವಾಗಿ ಅದೇ ಶಾಖೆಯ ಕೆಲಸಗಾರರು ಮೊನ್ನೆ ಬೊಂಬಾಯಿ ಇಂದ್ರ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ೨೦೦ ಮಂದಿ ಕೆಲಸಗಾರರು ಅದರಲ್ಲಿ ಭಾಗವಹಿಸಿದ್ದರು

ಉಂಗುರ ಸಿಕ್ಕಿದೆ

ಮಹಾರಾಣಿ ಕಾಲೇಜ್ ಹಾಸ್ಟಲ್ ಪೂರ್ವ ದಿಕ್ಕಿನ ರಸ್ತೆಯಲ್ಲಿ ಒಂದು ಚಿನ್ನದ ಉಂಗುರ ಸಿಕ್ಕಿದೆ ಕಳೆದುಕೊಂಡವರು ಕೆಳಗೆ ಕಾಣಿಸಿರುವವರಲ್ಲಿ ವಿವರಗಳನ್ನು ಕೊಟ್ಟು ತಾ। 20-7 53 ನೇ ಸೋಮವಾರದ ಒಳಗಾಗಿ ಪಡೆಯಬಹುದು ತಪ್ಪಿದಲ್ಲಿ ಇದರ ಮಾರಾಟದಿಂದ ಬರುವ ಹಣವನ್ನು 'ಐದು ವರ್ಷದ ಯೋಜನೆ'ಗಾಗಿ ಕಳುಹಿಸಿಕೊಡಲಾಗುವುದು

ಟಿ ವೆಂಕಟೇಶ ರೆಡ್ಡಿ,
ರೂ ನಂ 84
ಮಹಾರಾಣಿಯರವರ ಕಾಲೇಜ್ ಹಾಸ್ಟಲ್
ಮೈಸೂರು

ನೆಹರೂ ಮನವಿಗೆ ವಿಶ್ವ ಸಂಸ್ಥೆ ಅಧ್ಯಕ್ಷರ ಮನ್ನಣೆಯಿಲ್ಲ

ವಿಶ್ವ ಸಂಸ್ಥೆಯ ಸಾಧಾರಣ ಸಭೆಯನ್ನು ಕೂಡಲೇ ಸೇರಿಸಿ, ಕೊರಿಯಾ ಪ್ರಶ್ನೆಯನ್ನು ಚರ್ಚಿಸುವಂತೆ ಪ್ರಧಾನಿ ನೆಹರೂರವರು ತಮಗೆ ಅನೇಕ ಬಾರಿ ತಂತಿ ಕಳುಹಿಸಿದ್ದುದಾಗಿಯೂ, ಆದರೆ ಕೊರಿಯದಲ್ಲಿ ಯುದ್ಧ ಸ್ತಂಭನಕ್ಕಾಗಿ ಆಗುವ ಒಪ್ಪಂದಕ್ಕೆ ರುಜು ಬಿದ್ದನಂತರ ಸಭೆಯನ್ನು ಕರೆಸಬೇಕೆಂಬುದೇ ತಮ್ಮ ಆಶಯವೆಂದೂ, ಸಂಸ್ಥೆಯ ಅಧ್ಯಕ್ಷರಾದ ಲೆಸ್ಟರ್ ಪಿಯರ್ಸನ್ನರು ತಿಳಿಸಿದ್ದಾರೆ

ನದಿಯಲ್ಲಿ ಜಾರಿ ಬಿದ್ದು ದಂಪತಿಗಳ ಮರಣ

ಸೇಲಂ ಕೋಟ್ಟಾಯಿಗೆ ವಿವಾಹಕ್ಕಾಗಿ ತೆರಳಿದ್ದ ರಾಮಸ್ವಾಮಿ ಅಯ್ಯರ್ ಮತ್ತು ಅವರ ಪತ್ನಿಯವರು, ಕೊಳ್ಳೇಗಾಲದಲ್ಲಿ ನದಿಯ ನೀರು ಪ್ರವಾಹವನ್ನು ನೋಡಲು ಹೋಗಿ, ಮೆಲ್ಲಗೆ ನದಿಯನ್ನು ದಾಟುತ್ತಿದ್ದಾಗ, ಪತ್ನಿಯು ಜಾರಿ ಧುಮುಕುವ ನೀರಿಗೆ ಬಿದ್ದಳೆಂದೂ, ಆಕೆಯನ್ನು ಉಳಿಸಲು ಹೋದ ಗಂಡನೂ ಸಹ ಜಾರಿ ಬಿದ್ದರೆಂದೂ, ಅವರ ದೇಹಗಳು ಇನ್ನೂ ದೊರೆತಿಲ್ಲವೆಂದೂ ವರದಿಯಾಗಿದೆ

ಸಮಾಜವಾದಿ ಪಕ್ಷದಲ್ಲಿ ಫಾರ್ವರ್ಡ್ ಬ್ಲಾಕಿನ ಐಕ್ಯ

ಸುಭಾಷ್ ಬೋಸರ ಪಕ್ಷವಾದ ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಸಂಸ್ಥೆಯು ಭಾರತದ ಪ್ರಜಾ ಸಮಾಜವಾದಿ ಪಕ್ಷದಲ್ಲಿ ಐಕ್ಯವಾಗಲು ನಿರ್ಧರಿಸಿರುತ್ತದೆ ಈ ನಿರ್ಧಾರವನ್ನು ಕುರಿತು ಪ್ರಜಾ ಸಮಾಜವಾದಿ ನಾಯಕರಾದ ಜೈಪ್ರಕಾಶ ನಾರಾಯಣ್‌ರವರು ಪ್ರಶಂಸೆ ಮಾಡಿ ಕಳೆದ ಚುನಾವಣೆಯ ನಂತರ ಈ ರಾಜಕೀಯ ಸಂಘಟನೆಯು ಅಗತ್ಯವಾಗಿದ್ದಿತೆಂದು ಹೇಳಿರುವರು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಆಣೆ	ರೂ ಗೆ
ಕಡಲೆಕಾಯಿ	೧೦ ೬-೦	೩೧-೨ ೦
ಎಳ್ಳು	೫೦ ೦ ೦	೮೦ ೨ ೦
ಹರಳುಬೀಜ	೪೩-೧೦-೦	೪೮ ೦ ೦
ಕುಸುಮೆ	೪೯-೧೪-೦	೫೦ ೦ ೦
ಜೋಳ	೪೪-೩-೦	೩೦ ೧೨-೦
ಅವರೆ	೪೯ ೧೪-೦	೫೬-೦-೦
ಉದ್ದು	೩೦-೭-೦	೩೦ ೪ ೦
ಹುರಳಿ	೪೧ ೮ ೦	೩೧-೮ ೦
ಹೀಗೆಕಾಯಿ	೬-೦-೦	
ಕೊಬ್ಬರಿ	೩-೪-೦	೪-೧-೦
ತೆಂಗಿನಕಾಯಿ	೧೪೩ ೦ ೦	೨೪೬-೦-೦

NOW WORKING

Coaching Class For The

S. S L C. Exam of 1954

Separate Class for Boys

Separate Class for Girls

(Even V form course enough)

MADRAS MATRICULATION Classes

CITY TUTORIAL COLLEGE,

New Vanivilas Mohalla

Edited, Printed and Published by A K Nagaraj an at Sadhvi Press D Subbiah Road, Mysore.

ನೋಂ. ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೯-೮-೧೯೫೩ [ಸಂಚಿಕೆ ೨೮೬

ಸಿದ್ದಲಿಂಗಯ್ಯನವರಿಗೆ ಪುನಃ ಮಂತ್ರಿ ಪದವಿ

ಮದ್ರಾಸು ಮುಖ್ಯ ಮಂತ್ರಿ ಭವನದ ಮುಂದೆ ಪ್ರದರ್ಶನ

೧೨೫ ಜನ ದ್ರಾವಿಡ ಕಾರ್ಯಕರ ದಸ್ತಗಿರಿ

ಮದ್ರಾಸಿನಲ್ಲಿ ಹೊಸದಾಗಿ ಜಾರಿಗೆ ತಂದಿರುವ ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣೆಯನ್ನು ವಿರೋಧಿಸಿ, ಅಲ್ಲಿನ ದ್ರಾವಿಡ ಮುನ್ನೇತ್ರ ಸಂಘದವರು ನೆನ್ನೆ ಮುಖ್ಯ ಮಂತ್ರಿ, ರಾಜಾಜಿಯವರ ನಿವಾಸದ ಎದುರಿಗೆ ಪ್ರದರ್ಶನ ನಡೆಸಲು ಪ್ರಯತ್ನಿಸಿ ದಸ್ತಗಿರಿಯಾದರು. ಇದುವರೆಗೆ ೧೨೫ ಮಂದಿ ಬಂಧಿಸಲ್ಪಟ್ಟಿರುವರು. ಮೊನ್ನೆ ಅವರುಗಳ ಮುಖಂಡರಾದ ಅಣ್ಣಾದುರೈ ಮತ್ತು ಇತರ ನಾಲ್ವರು ಹಿಡಿಯಲ್ಪಟ್ಟಿದ್ದರು. ಇದೇ ಮೇರೆ ಇ. ವಿ. ರಾಮಸ್ವಾಮಿನಾಯಕರ ಮುಖಂಡತ್ವದಲ್ಲಿ ದ್ರಾವಿಡ ಸಂಘದವರೂ ಶಾಸನ ಸಭಾ ಭವನದ ಮುಂದೆ ಪ್ರದರ್ಶನ ನಡೆಸಬೇಕೆಂದು ನಿರ್ಧರಿಸಿದ್ದರು. ಆದರೆ ಅಲ್ಲಿ ಪ್ರದರ್ಶನವು ನಡೆಯಲಿಲ್ಲ. ಸಭೆಯ ಸುತ್ತಲೂ ಬಲವಾದ ಪೋಲೀಸು ಕಾವಲು ಇದ್ದಿತು.

ಶಿಕ್ಷಣ ಸುಧಾರಣೆಯನ್ನು ಶಾಸನ ಸಭೆಯ ಒಪ್ಪಿಗೆ ಇಲ್ಲದೆಯೇ ಜಾರಿಗೆ ತಂದುದಕ್ಕಾಗಿ ಪ್ರತಿಭಟಿಸಿ ಸಭೆಯ ಕಮ್ಯೂನಿಸ್ಟ್ ಸದಸ್ಯರು ನೆನ್ನೆ ಕೊಂಚ ಕಾಲ ಸಭೆಯಿಂದ ಹೊರಕ್ಕೆ ಹೋಗಿದ್ದರು.

ಕೂಡಿಟ್ಟ ೧,೬೦೦ ರೂ. ನೋಟು ಗೆದ್ದಲು ಪಾಲು

ಮದ್ರಾಸಿನ ಶಂಕರನ್‌ಕೋವಿಲ್ ತಾಲ್ಲೂಕಿನ ಸುಬ್ರಹ್ಮಣ್ಯಪುರದ ಒಬ್ಬ ಹರಿಜನ ಸ್ತ್ರೀ ಮತ್ತು ಆಕೆಯ ಮಗಳು ತಮ್ಮ ವರಮಾನ ಮತ್ತು ಕೊಲೊಂಬೊವಿನಲ್ಲಿರುವ ಮಗನು ಕಳುಹಿಸಿದ್ದ ಹಣ ಇವನ್ನು ನೋಟು ರೂಪದಲ್ಲಿ ಒಂದು ಗಡಿಗೆಯಲ್ಲಿಟ್ಟು ನೆಲದಲ್ಲಿ ಹೂತಿಟ್ಟಿದ್ದನ್ನು ಗೆದ್ದಲು ಪೂರ್ತಿಯಾಗಿ ತಿಂದುಹಾಕಿರುವುದಾಗಿ ಗೊತ್ತಾಗಿದೆ. ಪ್ರತಿ ತಿಂಗಳೂ ಅವರು ಗಡಿಗೆಯನ್ನು ತೆಗೆದುನೋಡಿ ಪರೀಕ್ಷಿಸುತ್ತಿದ್ದರು. ಕಳೆದ ೫ನೇ ತಾ|| ಹಾಗೆಯೇ ತೆಗೆದು ಪರೀಕ್ಷಿಸಲಾಗಿ, ಅವರ ಧನವು ಹಾಳಾಗಿಹೋದುದು ತಿಳಿಯಿತು. ಅಂದಿನಿಂದಲೂ ಅವರು ಸಾಕಷ್ಟು ಆಹಾರಾದಿಗಳನ್ನು ಸೇವಿಸದೆ ರೋದಿಸುತ್ತಿರುವರೆಂದು ಹೇಳಲಾಗಿದೆ.

ಸಿ. ಅನಂತರಾಮರಾಯರು ಕೇಂದ್ರದ ಹುದ್ದೆಗೆ

ರಾಜಧಾನಿಯ ಪುರಸಭೆಯ ಆರೋಗ್ಯ ಶಾಖೆಯಲ್ಲಿ ಕಳೆದ ೧೫ ವರ್ಷಗಳಿಂದಲೂ ಕೆಮಿಸ್ಟ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸಿ. ಅನಂತರಾಮರಾವ್, ಅವರನ್ನು ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಯ ಹುದ್ದೆಗೆ ನೇಮಿಸಲಾಗಿದೆ. ಅವರು ಶೀಘ್ರದಲ್ಲೇ ತಮ್ಮ ಹೊಸ ಹುದ್ದೆಯನ್ನು ಸೇರಲು ದೆಹಲಿಗೆ ತೆರಳುವರು. ಶ್ರೀ ರಾಯರು ಸುಪ್ರಸಿದ್ಧ ಭಾರತದ ವಿಜ್ಞಾನಿ ಡಾಕ್ಟರ್ ಸರ್ ಜೆ. ಸಿ. ಘೋಷ್‌ರವರ ಶಿಷ್ಯಂದಿರು. ಇವರು ಉತ್ತರ ಪ್ರದೇಶದಲ್ಲಿ ಅಕೌಂಟೆಂಟ್ ಜನರಲ್ ಆಗಿರುವ ಶ್ರೀ ಸಿ. ಸುಂದರರಾಮರಾಯರ ತಮ್ಮಂದಿರೂ ಮತ್ತು ರಾಜಧಾನಿಯ ಪ್ರಸಿದ್ಧ ಅಡ್ವೊಕೇಟ್ ಶ್ರೀ ವಿ. ಲಿಂಗಪ್ಪಯ್ಯನವರ ಅಳಿಯಂದಿರೂ ಆಗಿರುವರು.

ಫಿಲಿಪ್ಪೈನ್ ಮಂತ್ರಿ ಕೊಲೆ ಯತ್ನಕ್ಕಾಗಿ ಬಂಧನ

ಫಿಲಿಪ್ಪೈನ್ ದ್ವೀಪದಲ್ಲಿ ದಂಗೆಯೆಬ್ಬಿಸಿ, ಅಲ್ಲಿನ ರಕ್ಷಣಾ ಮಂತ್ರಿಯನ್ನು ಕೊಲೆ ಮಾಡಲು ಪಿತೂರಿ ನಡೆಸಿದ್ದರೆಂದು ಮನಿಲಾ ನಗರದ ಮೇಯರ್ ಅರ್ಸೆನಿಯೊ ಲಾಕ್ಸನ್‌ರವರ ಬಂಧನಕ್ಕೆ ಆಜ್ಞೆಯಾಗಿದೆ.

ಬೊಂಬಾಯಿಯಲ್ಲಿ ಪುನಃ ಭಾರಿ ಮಳೆ

ಬೊಂಬಾಯಿ ನಗರದಲ್ಲಿ ಮೊನ್ನೆ ರಾತ್ರಿಯೆಲ್ಲಾ ಭಾರಿ ಮಳೆ ಬಂದು ವಿಮಾನ, ರೈಲು ಮತ್ತು ವಾಹನ ಸಂಚಾರಗಳಿಗೆ ಅಡ್ಡಿಯಾಯಿತು. ೧೫ ಗಂಟೆಗಳಲ್ಲಿ ಒಟ್ಟು ಆರು ಅಂಗುಲದಷ್ಟು ಮಳೆ ಬಿದ್ದಿದೆ. ಲಾಲ್‌ಬಾಗ್ ಪ್ರದೇಶದ ಬಳಿ ೪ ಅಡಿಯಷ್ಟು ನೀರು ನಿಂತಿದ್ದಿತು. ಅಂಗಡಿಗಳಿಗೆ ನೀರು ನುಗ್ಗದಂತೆ ತಡೆಯಲು ವಿಶೇಷ ಶ್ರಮ ಪಡಬೇಕಾಯಿತು. ಒಂದು ಕಡೆ ರೈಲು ಮಾರ್ಗದ ಮೇಲೆ ಎರಡು ಅಡಿ ನೀರು ಹರಿಯಿತು.

ಸ್ಮಶಾನಕ್ಕೆ ಕೊಂಡೊಯ್ದಾಗ ಜೀವ ಬಂದಿತು

ಕಲ್ಲಿಕೋಟೆ ಬಳಿ ಪಾರ್ಲಿ ಎಂಬ ಹಳ್ಳಿಯಲ್ಲಿ ಕಾಯಿಲೆಯಿಂದ ನರಳಿ ಕಳೆದ ೧೧ನೇ ತಾ|| ಸತ್ತ ಹರಿಜನನೊಬ್ಬನನ್ನು ಅಂತ್ಯಕ್ರಿಯೆಗಾಗಿ ಸ್ಮಶಾನಕ್ಕೆ ಸಾಗಿಸುತ್ತಿದ್ದಾಗ, ಶವದ ಅಂಗಾಂಗಗಳು ಅಲುಗಾಡಲು ಪ್ರಾರಂಭಿಸಿ, ಕ್ರಮೇಣ ಅವನು ಕಣ್ತೆರೆದು ಮಾತನಾಡಿದನೆಂದೂ, ಅವನಿಗೆ ಜೀವ ಬಂದಿತೆಂದೂ ವರದಿಯಾಗಿದೆ.

ಚೀಫ್ ಇಂಜನಿಯರ ಮೇಲೆ ಮೊಕದ್ದಮೆ

ಕಳೆದ ಶನಿವಾರ ಕೃಷ್ಣರಾಜಸಾಗರಕ್ಕೆಂದು ಜೀಪಿನಲ್ಲಿ ಹೊರಟಿದ್ದ ಚೀಫ್ ಇಂಜನಿಯರ್ ಶ್ರೀ ಕೆ. ಎಸ್ ಗಂಗಾಧರ್‌ರವರ ಮೇಲೆ ಐ ಪಿ ಸಿ ೩೦೪ನೇ ನಿಬಂಧನೆ ಪ್ರಕಾರ ಮೊಕದ್ದಮೆಯನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿನ ಪೋಲೀಸರು ರಿಜಿಸ್ಟರ್ ಮಾಡಿಕೊಂಡು ತನಿಖೆ ನಡೆಸುತ್ತಿರುವರೆಂದು ವರದಿಯಾಗಿದೆ. ಕೆಂಗೇರಿ ಬಳಿ ಜೀಪು ಅಪಘಾತದಲ್ಲಿ ಇಬ್ಬರು ಮಡಿದರು. ಅದನ್ನು ಇಂಜನಿಯರೇ ನಡೆಸುತ್ತಿದ್ದರೆಂದು ಹೇಳಲಾಗಿದೆ.

ಟಿ. ಸಿದ್ದಲಿಂಗಯ್ಯನವರು ಪುನಃ ಸಚಿವರು

ಸ್ವಂ ಸು ಫೋ॥] ಬೆಂಗಳೂರು ೧೫

ಮಾಜಿ ಕೈಗಾರಿಕಾ ಮಂತ್ರಿಗಳಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಪುನಃ ಮಂತ್ರಿಮಂಡಲದ ಸದಸ್ಯರಾಗುವರೆಂದು ತಿಳಿದುಬಂದಿದೆ. ತಾಮ್ರದ ತಂತಿ ಪ್ರಕರಣದ ಸಂಬಂಧವಾಗಿ ರಾಜೀನಾಮೆ ಸಲ್ಲಿಸಿದ್ದರು.

ಮದ್ರಾಸ್ ನಗರದ ಬಗ್ಗೆ ಕೇಂದ್ರಸರ್ಕಾರಕ್ಕೆ ನೋಟೀಸು

ಮದ್ರಾಸು ನಗರವು ತೆಲುಗರದೆಂದಾಗಲಿ ಅಥವಾ ಮೂಲ ನಗರದ ಪ್ರದೇಶವು ತೆಲುಗರಿಗೇ ಸೇರಿದ್ದೆಂದಾಗಲಿ ಘೋಷಿಸುವಂತೆ ಕೋರ್ಟೊಂದರಲ್ಲಿ ದಾವೆ ಹೂಡುವುದಾಗಿ, ತೆಲುಗರ ಪರವಾಗಿ ಕಾಳಹಸ್ತಿ ರಾಜರು ಮತ್ತು ಇನ್ನೊಬ್ಬರು ಕೇಂದ್ರ ಮತ್ತು ಮದ್ರಾಸ್ ಸರ್ಕಾರಗಳಿಗೆ ನೋಟೀಸು ಕೊಟ್ಟಿರುತ್ತಾರೆ. ನಗರವನ್ನು ಖಾಯಂ ಆಗಿ ಆಂಧ್ರ ಸಂಸ್ಥಾನದಲ್ಲಿ ಸೇರಿಸುವಂತೆಯೂ ಅವರು ಪ್ರಾರ್ಥಿಸಲಿರುವರೆಂದು ಹೇಳಲಾಗಿದೆ.

ಮೂರು ಮಕ್ಕಳ ಜನನ

ದಾವಣಗೆರೆ ಬಳಿ ಈಚಗಟ್ಟ ಗ್ರಾಮದ ಬಸಮ್ಮ ಎಂಬ ೨೬ ವರ್ಷದ ಹೆಂಗಸೊಬ್ಬಳು ಕಳೆದ ಶನಿವಾರ ಏಕಕಾಲದಲ್ಲಿ ೩ ಹೆಣ್ಣು ಮಕ್ಕಳಿಗೆ ಜನ್ಮವಿತ್ತಳೆಂದು ವರದಿಯಾಗಿದೆ. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿರುವರು.

ಕೃತಜ್ಞತಾ ದಿನಾಚರಣೆ

ಸುವೃಷ್ಟಿಯಾದುದಕ್ಕಾಗಿ ದೇವರಿಗೆ ಭಕ್ತಿಪುರಸ್ಸರವಾಗಿ ಕೃತಜ್ಞತೆಯನ್ನು ಸೂಚಿಸಲು ತಿಳಿಸಲಾಗಿದ್ದಂತೆ ನಗರದ ನಾನಾ ದೇವಸ್ಥಾನ ಮಸೀದಿ ಮತ್ತು ಚರ್ಚುಗಳಲ್ಲಿ ಇಂದು ವಿಶೇಷ ಪೂಜೆ ಪ್ರಾರ್ಥನಾದಿಗಳು ನಡೆಸಲ್ಪಟ್ಟವು. ಸಂತೇಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಯು ನಡೆಯಿತು. ಪೌರ ಸಭಾಧ್ಯಕ್ಷರು, ಕಮಿಷನರ್ ಮುಂತಾದವರು ಆಗಮಿಸಿದ್ದರು. ಪರಕಾಲ ಸ್ವಾಮಿಗಳವರ ಮಠದಲ್ಲೂ ಪೂಜಾದಿಗಳಾದುವು. ಜುಮ್ಮಾ ಮಸೀದಿ ಮತ್ತು ಸೇಂಟ್ ಫಿಲೋಮಿನಾ ಚರ್ಚಿನಲ್ಲೂ ಪ್ರಾರ್ಥನೆ ನಡೆದುವು.

ಬೆಂಗಳೂರು ಖಜಾನೆಯಲ್ಲಿ ೧೫೦೦೦ ರೂ. ಧಪಾವಣೆ

ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಸ್ವಂ ಸು ಫೋ॥] ಬೆಂಗಳೂರು ೧೫

ಕಳೆದ ೪೯ನೇ ಆಗಸ್ಟ್ ೩ರಿಂದ ೫೧ನೇ ಆಗಸ್ಟ್‌ವರೆಗೆ ಇಲ್ಲಿನ ಜಿಲ್ಲಾ ಖಜಾನೆಯಲ್ಲಿ ೧೫,೦೦೦ ರೂ. ಗಳಷ್ಟು ಧಪಾವಣೆಯಾಗಿರುವುದಾಗಿಯೂ, ಕೈಗಾರಿಕಾ ಕಾಲದ ಸಂಬಂಧವಾಗಿ ಹಲ ಫೋರ್ಜರಿಗಳು ನಡೆದುವೆಂದೂ, ಈ ಪೈಕಿ ೧೪,೩೫೫ ರೂ ಗಳನ್ನು ವಜಾ ಮಾಡಲಾಯಿತೆಂದೂ, ೬೦೦ ರೂ.ಗಳನ್ನು ಅಧಿಕಾರಿಗಳಿಗೆ ದಂಡ ವಿಧಿಸಿ ವಸೂಲು ಮಾಡಲಾಯಿತೆಂದೂ, ಈ ದಿನ ಹಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳು ಶ್ರೀ ವೀರಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಉಪಪ್ರಶ್ನೆಗಳಿಗೆ ಉತ್ತರವಿತ್ತು, ಮುಖ್ಯ ಮಂತ್ರಿಯವರು ಈಗ ವಿಧಿಸಿರುವ ಶಿಕ್ಷೆಯು ಸಾಲದೆಂದೂ, ಇನ್ನೂ ಉಗ್ರ ಕ್ರಮ ಕೈಗೊಳ್ಳಲು ಆಲೋಚಿಸಲಾಗುವುದೆಂದೂ ಹೇಳಿದರು.

೪೫ ತಾಲ್ಲೂಕುಗಳಲ್ಲಿ ಅಭಾವ

ಸಂಸ್ಥಾನದ ೪೫ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಇದ್ದುದಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಈ ದಿನ ಶಾಸನ ಸಭೆಯಲ್ಲಿ ತಿಳಿಸಿದರು.

ಕಾಫಿ ಬೋರ್ಡಿನಂತೆಯೇ ಏಲಕ್ಕಿ ಬೋರ್ಡನ್ನು ರಚಿಸಲು ಕೇಂದ್ರ ಸರ್ಕಾರವು ಆಲೋಚಿಸುತ್ತಿರುವುದಾಗಿ ಶ್ರೀ ಸಿದ್ದವೀರಪ್ಪನವರು ತಿಳಿಸಿರುವರು.

ಕಡಿಮೆ ವಯಸ್ಸು ಕೊಟ್ಟ ಅಧಿಕಾರಿಗಳ ಬಗ್ಗೆ ಕ್ರಮ

ಹಿರಿಯ ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಬೆಂಗಳೂರು ೧೫

ಹಿರಿಯ ಶಾಸನ ಸಭೆಯಲ್ಲಿ ನಿನ್ನೆ ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರು ಪ್ರಶ್ನಿಸಲಾಗಿ ಮುಖ್ಯ ಮಂತ್ರಿಯವರು ಉತ್ತರಿಸುತ್ತಾ ಕಳೆದ ೪ ವರ್ಷಗಳಲ್ಲಿ ೨೭ ಅಧಿಕಾರಿಗಳನ್ನು ಹುಟ್ಟಿದ ತಾರೀಖು ಬಗ್ಗೆ ಹೇಳಿಕೆಯಲ್ಲಿ ವ್ಯತ್ಯಾಸಕ್ಕಾಗಿ ನಿವೃತ್ತಿಗೊಳಿಸಲಾಯಿತೆಂದು ತಿಳಿಸಿದರು. ಅಧಿಕಾರಿಗಳ ನಿವೃತ್ತಿಯ ವಯಸ್ಸು ೫೫ ಎಂದು ಅವರು ತಿಳಿಸಿದರು.

ಬಳ್ಳಾರಿ ವಿದ್ಯಾರ್ಥಿಗಳಿಗೆ ರಿಯಾಯಿತಿ

ಬಳ್ಳಾರಿಯ ಏಳು ತಾಲ್ಲೂಕುಗಳು ಅಕ್ಟೋಬರ್ ೧ನೇ ತಾ|| ಮೈಸೂರಿಗೆ ಸೇರಲಿರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೂ ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಎಲ್ಲ ಸೌಲಭ್ಯಗಳನ್ನೂ ಈಗಲೇ ದೊರಕಿಸಿಕೊಡಲಾಗುವುದೆಂದೂ, ಆ ವಿದ್ಯಾರ್ಥಿಗಳು ಇಲ್ಲಿನ ಕಾರ್ಯಕ್ರಮಗಳಿಗೆ ಸಿದ್ಧವಾಗಬೇಕೆಂದೂ ಮುಖ್ಯ ಮಂತ್ರಿ, ಶ್ರೀ ಹನುಮಂತಯ್ಯನವರು ತಿಳಿಸಿದರು.

ಪ್ರವಾಹಗಳ ಬಗ್ಗೆ ಈ ದಿನವೂ ಬಂದಿದ್ದ ೩ ನಿಲುವಳಿ ಸೂಚನೆಗಳನ್ನು ಅಧ್ಯಕ್ಷರು ತಳ್ಳಿಹಾಕಿದರು.

○ ಇದೇ ಆಗಸ್ಟ್ ೧ ಮತ್ತು ೨ನೇ ತಾ|| ರಾಬರ್ಟ್‌ಸನ್‌ಪೇಟೆಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ ನಡೆಯುವುದು.

ಕಾಲೇಜು ಮುಂದೆ ವಿದ್ಯಾರ್ಥಿಗಳ ಉಪವಾಸವೇ?

ಮೈಸೂರು ೧೫

ಜೂನಿಯರ್ ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೂ, ತರಗತಿಯಲ್ಲಿ ಹಾಜರಾದ ದಿನಗಳ ಕಡಿಮೆಯಾಗಿದ್ದು ದೆಂದು ಮುಂದಿನ ತರಗತಿಗೆ ತಳ್ಳದೆ ನಿಲ್ಲಿಸಲ್ಪಟ್ಟ ವಿದ್ಯಾರ್ಥಿಗಳ ಸಭೆಯು ಇಲ್ಲಿನ ಮಹಾರಾಜಾ ಕಾಲೇಜು ಮುಂದೆ ನೆನ್ನೆ ನಡೆದು, ವಿದ್ಯಾರ್ಥಿಗಳನ್ನು ಮೇಲಿನ ತರಗತಿಗಳಿಗೆ ಕಳುಹಿಸುವ ಬಗ್ಗೆ ವಿಶ್ವವಿದ್ಯಾಲಯದವರು ನಿರ್ದಿಷ್ಟವಾದ ತೀರ್ಮಾನಕ್ಕೆ ಬರದಿದ್ದರೆ ಇದೇ ೨೧ನೇ ತಾ|| ನಿಂದ ಮಹಾರಾಜಾ ಕಾಲೇಜು ಹೊರಾಂಗಣದಲ್ಲಿ ಕುಳಿತು ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹವನ್ನು ನಡೆಸುವಂತೆ ನಿರ್ಧರಿಸಲಾಯಿತು

ಹಿಂದಿನಿಂದಲೂ ಹಾಜರಾತಿ ನಿಯಮವನ್ನು ಕ್ರಮಪ್ರಕಾರ ನಡೆಸದೆ ಪರೀಕ್ಷೆಗೆ ಮೊದಲು ಹಾಜರಾತಿ ಕಡಿಮೆಯಾಗಿರುವುದೆಂದು ಸೂಚ ವಿದ್ಯಾರ್ಥಿಗೂ ಸೂಚನೆ ಕೊಡದೆ, ಈ ವರ್ಷ ಅನೇಕರನ್ನು ತಡೆದು ನಿಲ್ಲಿಸಿರುವುದಕ್ಕಾಗಿ ವಿದ್ಯಾರ್ಥಿಗಳು ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ

ಬ್ರಿಟನ್ನಿನಲ್ಲೂ ವರ್ಣಭೇದ ನೀತಿಯೇ ?

ಬ್ರಿಟನ್ನಿನ ಪ್ರಮುಖ ಕೈಗಾರಿಕಾ ನಗರವಾದ ಬರ್ಮಿಂಗ್‌ಹ್ಯಾಮಿನಲ್ಲಿ ವರ್ಣಭೇದ ನೀತಿಯನ್ನು ಜಾರಿಗೆ ತರುವ ಸಂಭವವಿದೆಯೆಂದು ಲಂಡನ್ನಿನ ಸಂಡೆ ಕ್ರಾನಿಕಲ್ ಪತ್ರಿಕೆಯು ವರದಿ ಮಾಡಿದೆ ಈಗಾಗಲೇ ಅಲ್ಲಿ ಈ ಕ್ರಮವು ಜಾರಿಯಲ್ಲಿದ್ದು, ದಕ್ಷಿಣ ಆಫ್ರಿಕದ ಒಬ್ಬ ವೈದ್ಯರನ್ನು ಆ ನಗರದ ಕೆಲವು ಹೊಟೇಲುಗಳು, ಕ್ಲಬ್ಬುಗಳು ಮತ್ತು ಸಾರ್ವಜನಿಕ ಭವನಗಳಿಗೆ ಪ್ರವೇಶಿಸದಂತೆ ನಿಷೇಧಿಸಲಾಗಿರುವುದೆಂದೂ, ಮತ್ತು ಅಲ್ಲಿ ವರ್ಣೀಯರಿಗೂ ಮತ್ತು ಬಿಳಿಯರಿಗೂ ಸಂಭವಿಸಬಹುದಾದ ವಿವಾದಗಳಲ್ಲೆಲ್ಲ ಪೊಲೀಸರು ಬಿಳಿಯರ ಪಕ್ಷವಹಿಸುತ್ತಾರೆಂದೂ ಹೇಳಲಾಗಿದೆ

ಕಾಫಿಪುಡಿಗೆ ಬೆರಿಕೆ ತಪ್ಪಿಸಲು ಕ್ರಮ

ಕಾಫಿಪುಡಿಗೆ ಇತರ ಪದಾರ್ಥಗಳ ಬೆರಿಕೆ ಮಾಡಿ ಜನರನ್ನು ವಂಚಿಸುವುದನ್ನು ತಡೆಗಟ್ಟಲು ಭಾರತ ಸರ್ಕಾರದವರು ಶಾಸನವೊಂದನ್ನು ತರಲಿರುವುದಾಗಿ ಹಿರಿಯ ಶಾಸನ ಸಭೆಯಲ್ಲಿ ಗೃಹಮಂತ್ರಿ ಶ್ರೀ ಮಹ ಸಿದ್ದವೀರಪ್ಪನವರು ಮೊನ್ನೆ ತಿಳಿಸಿದರು

ಶಿಶು ಸಾಹಿತ್ಯ ಸಂಘಕ್ಕೆ ದಾನ

ಮೈಸೂರಿನ ಪೌರ ಸಭೆಯ ಸದಸ್ಯರಾದ ಡಾ|| ಪಿ ಡಿ ಕೃಷ್ಣಸ್ವಾಮಿಯವರು (ತಮ್ಮ ಮಾತೋಶ್ರೀಯವರ ಹೆಸರಿನಲ್ಲಿ) ಹೆಂಗಸರು ಮತ್ತು ಹೆಣ್ಣು ಮಕ್ಕಳು ಹಿಂದಿ ಭಾಷೆಯಲ್ಲಿ ಶ್ರದ್ಧೆ ವಹಿಸಬೇಕೆಂಬ ಅಭಿಪ್ರಾಯದಿಂದ ಪ್ರತಿ ವರ್ಷವೂ ಹೆಣ್ಣು ಮಕ್ಕಳಿಗಾಗಿ ಒಂದು ಸ್ಪರ್ಧೆ ಏರ್ಪಡಿಸಬೇಕೆಂದು ಜಯನಗರದಲ್ಲಿರುವ ಶಿಶು ಸಾಹಿತ್ಯ ಸಂಘದವರನ್ನು ಕೋರಿ, ಒಂದು ರೋಲಿಂಗ್ ಷೀಲ್ಡನ್ನೂ, ಮೂರು ಬಹುಮಾನಗಳನ್ನೂ ದಾನ ಮಾಡಿರುತ್ತಾರೆ ಈ ಸ್ಪರ್ಧೆಯು ಪ್ರತಿ ನವೆಂಬರ್ ತಿಂಗಳಲ್ಲಿ ಶಿಶು ಸಾಹಿತ್ಯ ಸಂಘದವರಿಂದ ಆಚರಿಸಲ್ಪಡುವುದೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಡಾ|| ಎಂ ವಿ ಗೋಪಾಲಸ್ವಾಮಿಯವರು ಸಂಘದ ಅಂತರ ಸ್ತ್ರೀ ಪುಸ್ತಕ ಭಂಡಾರಕ್ಕೆ ಒಳ ಉಪಯುಕ್ತವಾದ [illegible] ಪುಸ್ತಕಗಳನ್ನು ದಾನವಾಗಿ ಕೊಟ್ಟಿರುತ್ತಾರೆ ಇವರಲ್ಲಿ ಉಪಾಧ್ಯಾಯರಿಗೆ ನೆರವಾಗಬಹುದಾದ ಕೆಲವು ಪುಸ್ತಕಗಳಿವೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ತೆಗೆದುಕೊಂಡು ಓದಿ ಉಪಯೋಗ ಹೊಂದಬಹುದೆಂದು ತಿಳಿಸಲಾಗಿದೆ

ಸಿ. ಚೆಲುವಾಚಾರ್ಯರಿಗೆ ಪತ್ನಿ ವಿಯೋಗ

ರಾಜಧಾನಿಯ ಅರಮನೆ ಕಂಟ್ರಾಕ್ಟರರೂ, ಗಾಯತ್ರಿ ಮೋಟಾರು ಸರ್ವಿಸ್ಸಿನ ಮಾಲೀಕರೂ ಮತ್ತು ಶ್ರೀ ಗಾಯತ್ರಿ ಚಿತ್ರ ಮಂದಿರದ ಮಾಲೀಕರ ಕಿರಿಯ ಸಹೋದರರೂ ಆದ ಶ್ರೀ ಸಿ ಚಲುವಾಚಾರ್ಯರ ಧರ್ಮ ಪತ್ನಿಯವರು ಈ ದಿನ ಬೆಳಗಿನ ಜಾವ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೫೦ ವರ್ಷ ವಯಸ್ಸಾಗಿತ್ತು ಅವರಿಗೆ ಏಳು ಮಂದಿ ಗಂಡು ಮಕ್ಕಳೂ ಮತ್ತು ಮೂರು ಮಂದಿ ಹೆಣ್ಣು ಮಕ್ಕಳೂ ಇರುವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಲುವಾಗಿ ಈ ದಿನ ಶ್ರೀ ಗಾಯತ್ರಿ ಚಿತ್ರ ಮಂದಿರದಲ್ಲಿ ಚಿತ್ರ ಪ್ರದರ್ಶನಗಳನ್ನು ರದ್ದು ಮಾಡಲಾಗಿದೆ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ.

Edited, Printed and Published by A K Nagarajan at Sadhvi Press, D Subbiah Road, Mysore

ಕೊರಿಯಕ್ಕೆ ಮೇ|| ಜ|| ತಿಮ್ಮಯ್ಯ

ಕೊರಿಯಕ್ಕೆ ಕಳುಹಿಸಲ್ಪಡುವ ಭಾರತೀಯ ಶಾಂತಿ ಸೈನ್ಯ ಪಡೆಯ ನಾಯಕರಾಗಿ ಮೇ|| ಜ|| ತಿಮ್ಮಯ್ಯನವರನ್ನು ನೇಮಿಸಲಾಗಿದೆ ಅವರು ಪಶ್ಚಿಮ ಕಮ್ಯಾಂಡಿನ ಸೇನಾನಿಗಳಾಗಿರುತ್ತಾರೆ

ಭಾರತದಲ್ಲಿ ಈ ವರ್ಷ ಅಧಿಕ ಭತ್ತದ ಬೆಳೆ

ಕಳೆದ ವರ್ಷ ಭಾರತದಲ್ಲಿ ಆಗಿದ್ದ ೩೦,೬೦,೦೦೦ ಟನ್ ಭತ್ತಕ್ಕಿಂತಲೂ ಈ ಸಾರಿ ೨೭ ಲಕ್ಷ ಟನ್ ಜಾಸ್ತಿಯಾಗಿ ಬೆಳೆ ಬಂದಿರುವುದೆಂದು ಕೇಂದ್ರ ಆಹಾರ ಇಲಾಖೆಯವರಿಂದ ತಿಳಿದುಬಂದಿದೆ ಹೊಸ ವರ್ಷದಲ್ಲಿ ಹೊರಗಿನಿಂದ ಅಕ್ಕಿಯನ್ನು ಆಮದು ಮಾಡುವ ಅವಶ್ಯಕತೆಯೂ ಇರುವುದಿಲ್ಲವೆಂದು ಹೇಳಲಾಗಿದೆ.

ಸಂಸ್ಥಾನಕ್ಕೊಂದು ರೆವಿನ್ಯೂ ಬೋರ್ಡ್

ಸಂಸ್ಥಾನದಲ್ಲಿ ರೆವಿನ್ಯೂ ಬೋರ್ಡೊಂದನ್ನು ರಚಿಸುವ ಬಗ್ಗೆ, ಸರ್ಕಾರದವರು ತೀವ್ರ ಪರ್ಯಾಲೋಚನೆ ನಡೆಸುತ್ತಿರುವುದಾಗಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ

ಒಂಟಿಕೊಪ್ಪಲಿನಲ್ಲಿ ವಿಚಿತ್ರ ರೀತಿಯ ಮೋಸ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ಇತ್ತೀಚಿಗೆ ಕೆಲವರು ಮನೆಮನೆಗೆ ಬಂದು, ಮನೆಯವರ ಹೆಸರುಗಳನ್ನು ಹೇಳಿಕೊಂಡು ಧನ ಸಹಾಯ ಕೇಳುತ್ತಿರುವರು ಅವರುಗಳು ಇಂಗ್ಲಿಷ್, ಕನ್ನಡ, ತಮಿಳು ಮುಂತಾದ ಭಾಷೆಗಳನ್ನು ಬಲ್ಲವರಾಗಿರುತ್ತಾರೆ ದೊಡ್ಡ ಮನುಷ್ಯರ ಸಂಬಂಧಿಕರು ತಾವೆಂದೂ, ಹೇಳಿಕೊಳ್ಳುತ್ತಿರುವ ಇವರ ನಿಜಸ್ಥಿತಿಯೇನೆಂಬುದೂ ಮತ್ತೆ ಯಾವ ಸ್ಥಳದವರೆಂಬುದೂ ಗೊತ್ತಾಗಿಲ್ಲ ತಮಗೆ ಪರಿಚಯವಿಲ್ಲದಿದ್ದರೂ, ಅಂತಹ ಮನೆಯವರ ಹೆಸರುಗಳನ್ನು ಅವರು ಹೇಗೋ ತಿಳಿದುಕೊಂಡಿರುವರು ಒಬ್ಬನು ಕೆಲವು ದಿನಗಳ ಹಿಂದೆ ತಾನು ಕೋಲಾರದವನೆಂದೂ, ರೈಲ್ವೆ ನೌಕರರೊಬ್ಬರು ತನ್ನ ಬಂಧುಗಳೆಂದೂ ಹೇಳಿಕೊಂಡು ಮತ್ತೊಬ್ಬ ರೈಲ್ವೆ ನೌಕರರ ಮನೆಗೆ ಹೋಗಿ ಅವರನ್ನು ಪೀಡಿಸಿ, ಸೀರೆ, ವಸ್ತ್ರ ಮುಂತಾದುವನ್ನು ಕೊಡಿಸಿಕೊಳ್ಳುವಂತೆ ಒತ್ತಾಯಪಡಿಸಿದನು ಈ ರೀತಿಯ ಜನರ ಬಗ್ಗೆ ಜಾಗರೂಕರಾಗಿರಬೇಕೆಂಬ ದಾಗಿ ಒಂಟಿಕೊಪ್ಪಲಿನ ನಿವಾಸಿಯೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ವಿಶ್ವದ ಜನಸಂಖ್ಯೆ ದಿನಕ್ಕೆ ೬೦ ಸಾವಿರ ಹೆಚ್ಚುತ್ತಿದೆ !

ಅಮೆರಿಕದಲ್ಲಿ ಗಂಟೆಗೆ ೨೦೦ ರಂತೆ ಪ್ರಜಾಸಂಖ್ಯೆಯು ಹೆಚ್ಚುತ್ತಿರುವುದೆಂದೂ, ಇನ್ನು ೪೭ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆಯು ದ್ವಿಗುಣವಾಗುವುದೆಂದೂ, ಈಗ ದಿನಕ್ಕೆ ೬೦ ಸಾವಿರದಂತೆ ಸಂಖ್ಯೆಯು ಹೆಚ್ಚುತ್ತಿರುವುದೆಂದೂ, ಅಮೆರಿಕದ ಸಂಸ್ಥೆಯೊಂದು ಲೆಕ್ಕ ಹಾಕಿ, ಜನನ ಮರಣಗಳ ಸಂಖ್ಯೆಯು ಮೇಲೆ ವೈಜ್ಞಾನಿಕ ಹತೋಟಿಯುಳ್ಳ ಹಾಕಬೇಕೆಂದು ಸಲಹೆ ಮಾಡಿದೆ

ವಿಷ ಬೆರಸಿದ್ದ ಹೆಂಡ ಕುಡಿದು ಮರಣ

ಕೊಳ್ಳೇಗಾಲದ ಬಳಿ ಅಂತಿಕೊಳಂಬುವಿನಲ್ಲಿ ಕಂದ ಎಂಬ ಹರಿಜನನೊಬ್ಬನು ವಿಷ ಬೆರೆತ ಹೆಂಡವನ್ನು ಕುಡಿದು ಮೃತಪಟ್ಟಿರುವನು ಅವನ ಪತ್ನಿ, ಇಬ್ಬರು ಮಕ್ಕಳು ಮತ್ತು ಸಹೋದರ ಇವರೂ ಅದೇ ಕಾರಣಕ್ಕಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟು ತೀವ್ರಾವಸ್ಥೆಯಲ್ಲಿರುವರು ಪೊಲೀಸರು ಕೊಲೆ ಸಂಬಂಧವಾಗಿ ಒಂದು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ ಮುತ್ತ ಎಂಬವನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ

ಮೈಸೂರು ಪೇಟೆ ಧಾರಣೆ

[illegible]	ರೂ ಆಣೆ	[illegible]
ಕಡಲೇಕಾಯಿ	[illegible]	[illegible]
ಎಳ್ಳು	[illegible]	[illegible]
ಕುಸುಬೆ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	
ಕೊಬ್ಬರಿಕಾಯಿ	[illegible]	
ಹುಣಸೇಹಣ್ಣು	[illegible]	[illegible]
ಹೊಗೆಸೊಪ್ಪು	[illegible]	[illegible]
ತೆಂಗಿನಕಾಯಿ	[illegible]	[illegible]

SRI GANESHA
TALKIES
From 16 7 53 · For 2 days
Columbia's
THE PRINCE OF THIEVES
Featuring :- John Hall and Patricia Morrison

FROM 18-7-53
GALA RELEASE OF
AGAINST ALL FLAGS
(Technicolor)

ಚಾಮುಂಡೇಶ್ವರಿ ಟಾಕೀಸ್

17-7-53 ರಿಂದ :: ಅನೋಘ ಪ್ರದರ್ಶನಾರಂಭ

[illegible]

ತಿರುಂಬಿ ಪಾರ್

(LOOK BACK)

[illegible] ಶಿವಾಜಿ ಗಣೇಶನ್, ಪಂಡರಿಬಾಯಿ, ಗಿರಿಜ, ಕೃಷ್ಣಕುಮಾರಿ ನರಸಿಂಹ ಭಾರತಿ ಮುಂತಾದವರು

ಕಥೆ ಸಂಭಾಷಣೆ ಕರುಣಾನಿಧಿ ನಿರ್ದೇಶನ ಟಿ. ಆರ್ ಸುಂದರಂ

ಮೋತಿಲಾಲ್ ಟಾಕೀಸ್

ಮೈಸೂರು

ತಾ|| 17-7-53 ರಿಂದ ಪ್ರತಿ ದಿನ ಮ್ಯಾಟಿನಿ 3-15 ಕ್ಕೆ ಇರುತ್ತದೆ

ಜೆಂಪರ್ ಪಿಕ್ಚರ್ಸ್‌ರವರ [illegible] ★ **ಜಿನೋವ** ★

ಮುಖ್ಯ ಪಾತ್ರ ಎಂ ಜಿ ರಾಮಚಂದ್ರನ್, ಬಿ. ಎಸ್ ಸರೋಜ, ಟಿ ಎಸ್ ದೊರೈರಾಜ್, ಚಕ್ರಪಾಣಿ

ಸೂಚನೆ [illegible]

ಫೋನ್ ನಂ. 792 ‖ ವಂದೇ ಮಾತರಂ ‖ ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೬-೭-೧೯೫೬ [ಸಂಚಿಕೆ ೨೦೭

ಸತ್ಯ ಸಂಪಾದಕರ ದಸ್ತಗಿರಿಗೆ ವಾರಂಟ್

ಕಲ್ಕತ್ತದಲ್ಲಿ ಗುಂಡಿನಿಂದ ಇಬ್ಬರ ಮರಣ

ಟ್ರಾಂ ದರದ ಏರಿಕೆ ಬಗ್ಗೆ ಮತ್ತೆ ಪ್ರತಿಭಟನೆ

ಕಲ್ಕತ್ತಾದಲ್ಲಿ ೨ ನೇ ತರಗತಿ ಟ್ರಾಂ ಪ್ರಯಾಣದ ದರವನ್ನು ಹೆಚ್ಚಿಸಿರುವುದರ ವಿರುದ್ಧವಾಗಿ ನೆನ್ನೆ ಮತ್ತೆ ಹರತಾಳ, ಪ್ರತಿಭಟನಾ ಪ್ರದರ್ಶನಗಳು ನಡೆದುವು. ಈ ಚಳುವಳಿಗೆ ಹಲವು ಉಗ್ರವಾದಿಗಳು ಪ್ರೋತ್ಸಾಹವಿತ್ತರು. ಆದರೆ ಕಾಂಗ್ರೆಸ್ಸಿನವರು ಅದನ್ನು ವಿರೋಧಿಸಿದರು. ನೆನ್ನೆ ಬೆಳಗಿನ ಜಾವದಿಂದ ಸಂಚಾರ ವ್ಯವಸ್ಥೆಯ ಕಾರ್ಮಿಕರ ಮುಷ್ಕರವು ಆರಂಭವಾಗಿದ್ದರೂ ನಗರದಲ್ಲಿ ನೆನ್ನೆ ಬೆಳಗಿನ ನಂತರ ಹಲವು ಟ್ರಾಮುಗಳೂ, ಸರ್ಕಾರೀ ಮತ್ತು ಖಾಸಗೀ ಬಸ್ಸುಗಳೂ ಖಾಲಿಯಾಗಿ ಓಡಾಡಿದುವು. ಸಬರ್ಬನ್ ರೈಲ್ವೆ ಲೈನುಗಳ ಕಂಬಿಗಳ ಮೇಲೆ ಜನರು ಕುಳಿತು ರೈಲು ಸಂಚಾರಕ್ಕೆ ಅಡ್ಡಿ ಪಡಿಸಿದರು.

ಡಂಡಂ ಜಂಕ್ಷನ್ನಿನಲ್ಲಿ ಗಲಭೆಕೋರರು ರೈಲು ಗಾಡಿಯೊಂದಕ್ಕೆ ಬೆಂಕಿ ಹಚ್ಚಿಸಿದುದನ್ನು ಪೊಲೀಸರು ಆರಿಸಿದರು. ಆ ಲ್ಲಿ ರಸ್ತೆಗಳ ಅಡ್ಡಲಾಗಿ ಮರದ ದಿಮ್ಮಿಗಳನ್ನು ಉರುಳಿಸಿ ಬಸ್ಸು ಸಂಚಾರಕ್ಕೂ ಅಡ್ಡಿ ಪಡಿಸಿದರು. ಹಲವು ಕಡೆ ವಾಹನಗಳ ಮೇಲೆ ಬಾಂಬುಗಳನ್ನೂ ಎಸೆಯಲಾಯಿತು. ನೆನ್ನೆ ನಾನೂರು ಮಂದಿಗೂ ಮೇಲ್ಪಟ್ಟು ಗಲಭೆಕೋರರನ್ನು ಬಂಧಿಸಲಾಯಿತು.

ಉದ್ರಿಕ್ತ ಜನರಮೇಲೆ ಪೊಲೀಸರು ಅಶ್ರು ವಾಯು ಮತ್ತು ಲಾಠಿ ಪ್ರಯೋಗ ಮಾಡಿ, ನಂತರ ಗುಂಡನ್ನು ಹಾರಿಸಿದರು. ಇಬ್ಬರು ಸತ್ತಿದ್ದು, ೧೨ ಮಂದಿಗೆ ಗಾಯವಾಗಿದೆ. ಕಲ್ಕತ್ತಾ ಮತ್ತು ಹೌರಾಗಳಲ್ಲಿ ನಡೆದ ಈ ಘಟನೆಗಳು ನಡೆದು ೧೦೦ ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದೆ. ೩೩ ಬಸ್ಸುಗಳಿಗೆ ಕಲ್ಲೇಟು ಬಿದ್ದಿದೆ. ೫ ಅಗ್ನಿ ಕಾರ್ಯಗಳು ಬೆಂಕಿಗೆ ತುತ್ತಾಗಿವೆ.

ಕೀನ್ಯಾ ಮುಖಂಡರ ಶಿಕ್ಷೆ ರದ್ದು

ಆಫ್ರಿಕನ್ನರ ಮುಖಂಡರಾದ ಜೊಮೊ ಕೆನ್ಯಾಟಾ ಮತ್ತು ಇತರ ಐದು ಜನರ ಮೇಲೆ ವಿಧಿಸಲಾಗಿರುವ ೭ ವರ್ಷದ ಸಜಾ ಶಿಕ್ಷೆಯನ್ನು ಅಲ್ಲಿನ ಸುಪ್ರೀಂ ಕೋರ್ಟಿನವರು ರದ್ದುಗೊಳಿಸಿ, ಅವರ ಪುನರ್ವಿಚಾರಣೆ ನಡೆಸುವಂತೆ ಸೂಚಿಸಿರುತ್ತಾರೆ. ಮೌ ಮೌ ಚಳುವಳಿಗೆ ಸಹಾಯ ಮಾಡಿದರೆಂಬುದೇ ಅವರ ಮೇಲೆ ಇರುವ ಅಪಾದನೆ. ಕೆನ್ಯಾಟಾರವರನ್ನು ಬಂಧಿಸುವ ಅಥವಾ ಬಿಡುವ ಬಗ್ಗೆ ಕೋರ್ಟಿನವರು ಏನನ್ನೂ ಹೇಳಿಲ್ಲ.

ಬರ್ಮಾ ದಂಗೆಕೋರರಿಂದ ರೈಲಿನ ಸಿಡಿತ

ಬರ್ಮಾ ದಂಗೆಕೋರರು ಪ್ರಯಾಣಿಕರ ಎರಡು ರೈಲುಗಳನ್ನು ಸಿಡಿಸಿ ನಾಶ ಪಡಿಸಿರುವುದಾಗಿಯೂ, ಅದರಿಂದ ೧೫ ಮಂದಿ ಮಡಿದು, ೫೦ ಜನರಿಗೆ ಗಾಯವಾಗಿರುವುದಾಗಿಯೂ ವರದಿಯಾಗಿದೆ.

ರಷ್ಯದ ಮಂತ್ರಿಯೊಬ್ಬರ ಪದಚ್ಯುತಿ

ರಷ್ಯದ ವಾಣಿಜ್ಯ ಸಂಸ್ಥಾನದ ಉಪ-ಮಂತ್ರಿ ಎಂ. ಎಚ್ಚಾಮೊವ್‌ರವರನ್ನು ವಜಾ ಮಾಡಲಾಗಿದೆ

೯ ಜನ ದ್ರಾವಿಡ ಚಳುವಳಿಗಾರರು ಗುಂಡಿಗೆ ಬಲಿ

ಮದರಾಸಿನ ತುತ್ತುಕುಡಿ ಬಳಿ, ದ್ರಾವಿಡ ಮುನ್ನೇತ್ರ ಸಂಘದವರು ನೆನ್ನೆ ಗಲಭೆ ಮತ್ತು ಪ್ರದರ್ಶನ ನಡೆಸಿದುದರಿಂದ, ಪೊಲೀಸರು ಎರಡು ಕಡೆ ಗುಂಡು ಹಾರಿಸಿದ ಪರಿಣಾಮವಾಗಿ ನಾಲ್ಕು ಜನರು ಮಡಿದರೆಂದೂ, ೧೮ ಕ್ಕಿಂತಲೂ ಹೆಚ್ಚು ಮಂದಿ ಗಾಯಗೊಂಡರೆಂದೂ ವರದಿಯಾಗಿದೆ. ಮೇಳವಟ್ಟಿ ಎಂಬಲ್ಲಿ ಒಂದು ಗುಂಪಿನವರು ಒಂದು ರೈಲ್ವೆ ಸ್ಟೇಷನ್ನಿಗೆ ಬೆಂಕಿಯಿಟ್ಟರೆಂದೂ, ಮತ್ತೊಂದು ಕಡೆ ಕಂಬಿಯ ಮೇಲೆ ಕುಳಿತು ಪ್ರಯಾಣಕ್ಕೆ ಅಡ್ಡಿ ಪಡಿಸಲಾಯಿತೆಂದೂ ಹೇಳಲಾಗಿದೆ. ತಿರುಚಿರಾಪಳ್ಳಿ ಬಳಿ ದಾಲ್ಮಿಯಾಪುರದಲ್ಲಿ ರೈಲ್ವೆ ಸಿಬ್ಬಂದಿ ಬಳಿ ಹಠಕೋಟಿ ವಿರೋಧ ವರ್ತಿಸಿದ ಪ್ರದರ್ಶನಕಾರರ ಮೇಲೆ ಗುಂಡು ಹಾರಿಸಲ್ಪಟ್ಟು ಐವರು ಮಡಿದರು. ೩೫ ಮಂದಿಗೆ ಗಾಯಗಳಾದುವು. ಈ ಚಳುವಳಿ ಸಂಬಂಧವಾಗಿ ಒಟ್ಟು ೧ ಸಾವಿರ ಜನರನ್ನು ದಸ್ತಗಿರಿ ಮಾಡಲಾಗಿದೆ.

ಸಂಸ್ಥಾನದಲ್ಲಿ ನಿರುದ್ಯೋಗದ ಸರ್ವೆ

ಸಂಸ್ಥಾನದಲ್ಲಿ ನಿರುದ್ಯೋಗದ ಬಗ್ಗೆ ಸರ್ವೆಯೊಂದನ್ನು ನಡೆಸಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ವಿದ್ಯಾಮಂತ್ರಿಗಳು ಶಾಸನ ಸಭೆಯಲ್ಲಿ ತಿಳಿಸಿರುವರು. ಈ ಕಾರ್ಯವು ಅಗಾಧವಾದುದೆಂದೂ ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ಮಂತ್ರಿ ಮಂಡಲದ ವಿಸ್ತರಣೆಯಿಲ್ಲ

ಸದ್ಯಕ್ಕೆ ಮಂತ್ರಿಮಂಡಲದ ವಿಸ್ತರಣೆಯಿಲ್ಲವೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶ್ರೀ ಪಿ. ಎಂ. ಸ್ವಾಮಿ ಮೊರೆಯವರ ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು. ಹೊಸದಾಗಿ ಕೆರೆಯು ಆಗುವ ಸಾಲದ ಹಣವನ್ನು ತುಂಗಾ, ಭದ್ರಾ ಜಲಾಶಯಗಳ ಕಾಲುವೆ ಕೆಲಸಕ್ಕೆ ವಿನಿಯೋಗಿಸಲಾಗುವುದೆಂದೂ ಶಾಸನ ಸಭೆಯಲ್ಲಿ ಉತ್ತರವೀಯಲಾಗಿದೆ.

ಶ್ರೀ ಪಿ. ಚಾಂಡಿಯವರನ್ನು ಕೆಳಗಿನ ಜನವರಿ ೨ ನೇ ತಾ॥ ನಿಂದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾಗಿ ಖಾಯಂ ಮಾಡಲಾಗಿದೆ

ಭಾರತದಲ್ಲಿ ಸೇರ್ಪಡೆಯಿಲ್ಲವೆಂದು ಕಾಶ್ಮೀರ್ ಪ್ರಧಾನಿ

ಭಾರತದಲ್ಲಿ ಐಕ್ಯ ಹೊಂದುವ ವಿಷಯಕ್ಕೆ ತಾವು ವಿರೋಧವಾಗಿರುವುದಾಗಿಯೂ ಅದನ್ನು ಪ್ರತಿಭಟಿಸುವುದಾಗಿಯೂ ಕಾಶ್ಮೀರದ ಪ್ರಧಾನಿ ಶೇಖ್ ಅಬ್ದುಲ್ಲಾರವರು ತಿಳಿಸಿರುತ್ತಾರೆ. ಭಾರತದೊಡನೆ ಕಾಶ್ಮೀರವು ಮಾಡಿಕೊಂಡಿರುವ ಒಪ್ಪಂದದ ಪರತ್ತು ಮತ್ತು ಪ್ರಧಾನಿ ನೆಹರೂ ಮತ್ತು ಸರ್ದಾರ್ ಪಟೇಲ್‌ರವರೊಡನೆ ಆದ ಒಡಂಬಡಿಕೆಗಳಿಗೆ ಅನುಸಾರವಾಗಿ ಕಾಶ್ಮೀರವು ಭಾರತದೊಡನೆ ಸಂಬಂಧ ಹೊಂದಿರುವುದಾಗಿ ಅವರು ಹೇಳಿರುವರು.

ಗಂಡು ಮೊಸಳೆಯೂ ಮೊಟ್ಟೆ ಇಟ್ಟ ಪ್ರಸಂಗ

ಲಂಡನ್ ಮೃಗಾಲಯದಲ್ಲಿರುವ ಪೀಟರ್ ಎಂಬ ಹೆಸರಿನ ಗಂಡು ಮೊಸಳೆಯೊಂದು ೨೦ ಮೊಟ್ಟೆಗಳನ್ನು ಇಟ್ಟಿರುವುದಾಗಿ ವರದಿಯಾಗಿದೆ. ೨೦ ವರ್ಷಗಳಿಂದಲೂ ಅದು ಅಲ್ಲಿದೆ. ಅದಕ್ಕೆ ಫಾರ್ ಎಂಬ ಶ್ರೀ ಹೆಸರನ್ನೂ ಇಡಲಾಗಿದೆ.

ಮಂತ್ರಿಗಳಿಲ್ಲದ ಶಾಸನ ಸಭೆ

ಹಿರಿಯ ಶಾಸನ ಸಭೆಯು ನೆನ್ನೆ ಸೇರಿದಾಗ ಮಂತ್ರಿಗಳು ಬರದೆ, ಸರ್ಕಾರಿ ಕುರ್ಚಿಗಳು ಖಾಲಿಯಾಗಿದ್ದುದನ್ನು ನೋಡಿ, ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂ ರವರು ಟೀಕಿಸಿ, ಅಧಿಕಾರಿ ಸದಸ್ಯರು ಹಾಜರಿರದೆ ಇರುವುದು ನ್ಯಾಯವಲ್ಲವೆಂದು ಹೇಳಿದರು. ತಾವು ಸಭೆಯನ್ನು ೧ ಗಂಟೆ ಕಾಲ ಮುಂದುವರಿಸಲು ಯೋಚಿಸಿದ್ದುದಾಗಿ ಅವರು ನುಡಿದರು.

ಗೂಂಡಗಳ ದಸ್ತಗಿರಿ ಮತ್ತು ಬಿಡುಗಡೆ

ಕಲ್ಕತ್ತದಲ್ಲಿ ನೆನ್ನೆ ಹರತಾಳ ಆಚರಿಸುವಂತೆ ಸೂಚಿಸುವ ದೊಂಬಿಗಳನ್ನು ೧೨ ಗೂಂಡಗಳನ್ನು ಕಟ್ಟೆ ಬೀದಿಗಳಲ್ಲಿ ಕರೆದೊಯ್ಯಲಾಯಿತೆಂದೂ, ಅ ನಂತರ ೬ ಎತ್ತುಗಳನ್ನು ಪೊಲೀಸರು ಬಂಧಿಸಿ, ನಂತರ ಬಿಟ್ಟುಬಿಟ್ಟರೆಂದೂ ಹೇಳಲಾಗಿದೆ. ವಿ. ರವಣಿಗೆಗಳಲ್ಲಿ ಅವುಗಳನ್ನು ಕರೆದೊಯ್ಯಲಾಗಿತ್ತು. ಒಂದು ಕಡೆ ರೈಲ್ವೆ ರಸ್ತೆ ಮೇಲೆ ಗೂಂಡಗಳನ್ನು ಅಡ್ಡಲಾಗಿ ನಿಲ್ಲಿಸಲಾಗಿದ್ದಿತು

ಡೈಲಿ ಪೋಸ್ಟ್ ಪತ್ರಿಕೆಯಿಂದ ಕ್ಷಮಾಪಣೆ

ಹಿರಿಯ ಶಾಸನ ಸಭೆಯಲ್ಲಿ ಸಂಪಾದಕರುಗಳ ಹೇಳಿಕೆಗಳು

ಸ್ವಂ ಸು ಪೋ] ಬೆಂಗಳೂರು ೧೬. ಹಿರಿಯ ಶಾಸನ ಸಭೆಯ ಅಧ್ಯಕ್ಷರ ಸೂಚನೆಯಂತೆ ಇಂದು ಸತ್ಯ ಪತ್ರಿಕೆಯ ಶ್ರೀ ಸಿ. ಗಿಲ್ಲೆಸ್ಪಿ, ಡೈಲಿ ಪೋಸ್ಟ್ ಪತ್ರಿಕೆ ಸಂಪಾದಕ, ಶ್ರೀ ಪೋರ್ಜ ಜೋಸೆಫ್, ಮುದ್ರಕ ಮತ್ತು ಪ್ರಕಟಣಕಾರರಾದ ಶ್ರೀ ಪಿ. ಕೆ. ಬಿ. ಮೆನನ್ ಮತ್ತು ಡೈಲಿ ಪೋಸ್ಟ್ ಪತ್ರಿಕೆಯ ಮುದ್ರಣಕಾರರಾದ ಶ್ರೀ ಗೋವಿಂದರಾಜುರವರು ಸಭೆಯ ಮುಂದೆ ಹಾಜರಾಗಿ, ಹೇಳಿಕೆ ಕಳಿಸಿದ್ದರು. ಸತ್ಯ ಪತ್ರಿಕೆಯ ಸಂಪಾದಕ ಶ್ರೀ ಜಮದ್‌ಭಾಗ್ವಾಸಾರವರು ಮಾತ್ರ ಬಂದಿರಲಿಲ್ಲ.

ಶ್ರೀ ಗಿಲ್ಲೆಸ್ಪಿಯವರು ತಮ್ಮ ಹೇಳಿಕೆಯಲ್ಲಿ, ಹಿಂದೆ ಸಭೆಯ ಹಕ್ಕು ಬಾಧ್ಯತಾ ಸಮಿತಿಯಲ್ಲಿ ತಾವು ಕೊಟ್ಟ ಹೇಳಿಕೆಗಿಂತ ಹೆಚ್ಚಾಗಿ ಹೇಳಬೇಕಾದುದು ಇಲ್ಲವೆಂದು ತಿಳಿಸಿದರು. ಸತ್ಯ ಪತ್ರಿಕೆಯ ಸಂಪಾದಕ ಶ್ರೀ ಜಮದ್‌ಭಾಗ್ವಾಸಾರವರು ಬೊಂಬಾಯಿಗೆ ಹೋಗಿರುವರೆಂದೂ, ಈ ತಿಂಗಳು ಅಷ್ಟರು ವರೆಗೂ ಹಿಂತಿರುಗುವುದಿಲ್ಲವಾಗಿಯೂ ಅವರು ಅರಿಕೆ ಮಾಡಿದರು.

ನಂತರ ಶ್ರೀ ಪೋರ್ಜ ಜೋಸೆಫ್‌ರವರು ಹೇಳಿಕೆಯನ್ನಿತ್ತು, ತಾವು ಸದುದ್ದೇಶದಿಂದಲೇ ಎಲ್ಲ ವಿಷಯಗಳನ್ನೂ ಪ್ರಕಟಿಸಿದ್ದುದಾಗಿಯೂ, ರಾಜ್ಯಾಂಗದ ಮೂಲಭೂತ ಹಕ್ಕಿನ ಪ್ರಕಾರ ತಾವು ನಡೆದಿರುವುದಾಗಿಯೂ, ತಮ್ಮನ್ನು ದೋಷಮುಕ್ತರನ್ನಾಗಿ ಮಾಡಬೇಕೆಂದೂ ತಿಳಿಸಿದರು.

ಶ್ರೀ ಪಿ. ಕೆ. ಬಿ. ಮೆನನ್ನರು ತಮ್ಮ ಹೇಳಿಕೆಯಲ್ಲಿ ಶ್ರೀ ಜೋಸೆಫ್‌ರವರು ಹೇಳುವುದಕ್ಕಿಂತ ಹೆಚ್ಚೇನೂ ಹೇಳುವುದಿರುವುದಿಲ್ಲವೆಂದು ತಿಳಿಸಿದರು.

ಸತ್ಯ ಪತ್ರಿಕೆ ಸಂಪಾದಕರ ದಸ್ತಗಿರಿಗೆ ವಾರಂಟು

ಪತ್ರಿಕೆಯವರು ತಪ್ಪಿತಸ್ಥರೆಂದು ಶಾಸನ ಸಭೆ ತೀರ್ಮಾನ

ಸ್ವಂ. ಸ. ಪೋ] ಬೆಂಗಳೂರು ೧೬. ಈ ಮಧ್ಯಾಹ್ನ ಹಿರಿಯ ಶಾಸನ ಸಭೆಯು ಪುನಃ ಸೇರಿ, ಸಭಾ ನಾಯಕ, ಶ್ರೀ ಎ. ಜಿ. ರಾಮಚಂದ್ರರಾಯರ ಸೂಚನೆ ಮೇಲೆ ಸತ್ಯ ಪತ್ರಿಕೆಯ ಸಂಪಾದಕ ಶ್ರೀ ಜಮದ್‌ಭಾಗ್ವಾಸಾ ರವರನ್ನು ದಸ್ತಗಿರಿ ಮಾಡಿ, ಸ್ವಂತ ಖರ್ಚಿನ ಮೇಲೆ ಕರೆತಂದು ಸಭೆಯ ಮುಂದೆ ಹಾಜರು ಪಡಿಸುವಂತೆ ವಾರಂಟ್ ಹೊರಡಿಸಲು ನಿರ್ಧರಿಸಲಾಯಿತು. ಶ್ರೀ ಆರ್. ಪಿ. ರೇವಣ್ಣನವರು ಸೂಚನೆಗೆ ಅದಕ್ಕೆ ಒಪ್ಪಲಿಲ್ಲ. ಡೈಲಿ ಪೋಸ್ಟ್ ಪತ್ರಿಕೆಯ ಶ್ರೀ ಗೋವಿಂದರಾಜುಲುರವರನ್ನು ಬಿಡುಗಡೆ ಮಾಡಲಾಯಿತು.

ಸಂಪಾದಕರು ಮತ್ತು ಮುದ್ರಣಕಾರರು ಸಭೆಯ ಹಕ್ಕುಬಾಧ್ಯತೆ ಬಗ್ಗೆ ಗುರುತರವಾದ ಅವಹೇಳನ ಮಾಡಿರುವರೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಶ್ರೀಗಳಾದ ಗಿಲ್ಲೆಸ್ಪಿ, ಪೋರ್ಜ ಜೋಸೆಫ್ ಮತ್ತು ಮೆನನ್‌ರವರನ್ನೂ ಕರೆಸಿ, ಮುಂದೆ ಸೂಚಿಸಲ್ಪಟ್ಟಾಗ ಶಿಕ್ಷೆ ತಿಳಿಸಲು ಹಾಜರಾಗುವಂತೆ ತಿಳಿಸಲಾಯಿತು.

ಎ. ಆರ್. ಮೊದಲಿಯಾರರಿಗೆ ಡಾಕ್ಟರೇಟ್ ಗೌರವ

ಮೈಸೂರಿನ ಮಾಜಿ ದಿವಾನರೂ ತಿರುವಾಂಕೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ ಆದ ... ರಾಮಸ್ವಾಮಿ ಮೊದಲಿಯಾರರಿಗೆ ... ವಿಶ್ವವಿದ್ಯಾನಿಲಯದವರು ಡಾಕ್ಟರ್ ಆಫ್ ಸಿವಿಲ್ ಲಾ ಗೌರವ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ.

ಸ್ಕೌಟ್ ಕೌನ್ಸಿಲ್ ಸಭೆ

ಮೈಸೂರು ನಗರದ ಸ್ಕೌಟ್ ಕೌನ್ಸಿಲಿನ ವಾರ್ಷಿಕ ಅಧಿವೇಶನವು ಕಳೆದ ... ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ... ಶ್ರೀ ಎಂ. ರಾಮಸ್ವಾಮಿಯವರು ... ಜಮಾ ಖರ್ಚು ಪಟ್ಟಿಯನ್ನು ... ಹೊಸ ವರ್ಷದ ಆಯ ವ್ಯಯ ಪಟ್ಟಿ ... ಶ್ರೀ ನಂದಿ... [illegible]

ಶ್ರೀ ನೃತ್ಯಕಲಾ ಮಂದಿರದ ವಾರ್ಷಿಕೋತ್ಸವ

ರಾಜನರ್ತಕಿಯ ಶ್ರೀ ಕೆ. ಎಸ್. ರಾಜಗೋಪಾಲರವರ ಶ್ರೀ ನೃತ್ಯಕಲಾ ಮಂದಿರದ ವಾರ್ಷಿಕೋತ್ಸವವು ನಾಳೆ ಸಂಜೆ ... ಟೌನ್ ಹಾಲಿನಲ್ಲಿ ... ಶ್ರೀ ಎನ್. ಲಕ್ಷ್ಮೀನಾರಾಯಣ ... ನಡೆಯಲಿದೆ. [illegible]

ಎಲ್. ಎಸ್. ತರಗತಿಗಳು

[illegible]

ತಿರುವಾಂಕೂರಿನಲ್ಲಿ ೧೪೬ ಸಿನಿಮಾಗಳು ಬಂದ್

ತಿರುವಾಂಕೂರು ಕೊಚ್ಚಿ ಸರ್ಕಾರದವರು ಲೈಸೆನ್ಸುಗಳನ್ನು ರದ್ದು ಮಾಡಿದುದರಿಂದಾಗಿ ಆ ಸಂಸ್ಥಾನದಲ್ಲಿ ೧೪೬ ಸಿನಿಮಾ ಮಂದಿರಗಳು ಮುಚ್ಚಲ್ಪಟ್ಟಿವೆ. ಸುಲಭವಾಗಿ ಹತ್ತಿಕೊಳ್ಳುವ ಎಲೆಗಳು, ಬೊಂಬುಗಳು ಮುಂತಾದ ಸಾಧನಗಳನ್ನು ಉಪಯೋಗಿಸಿ ಹಂಗಾಮಿ ಷೆಡ್ಡುಗಳ ... ನಿರ್ಮಿಸಬೇಕೆಂದು ಸರ್ಕಾರದವರು ಇತ್ತ ಸೂಚನೆಯನ್ನು ಮಂದಿರಗಳ ಮಾಲೀಕರು ಪಾಲಿಸದಿದ್ದುದೇ ಲೈಸೆನ್ಸು ರದ್ದಿಗೆ ಕಾರಣವಾಗಿದೆ.

ಬಂದೂಕದಿಂದ ಆತ್ಮಹತ್ಯೆ

ಬೇಲೂರು ಕೋಟೆಯಲ್ಲಿ ಸಾಮಿಲ್ಲಿನವರು ಇಟ್ಟಿದ್ದ ... ಎಂಬುವನು ಮೊನ್ನೆ ಬೆಳಗ್ಗೆ ಬಂದೂಕದಿಂದ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಿರುವುದಾಗಿ ವರದಿಯಾಗಿದೆ.

ಚೀಣದಲ್ಲಿ ವಿಮಾನ ಹಾವಳಿ ತಪ್ಪಿಸಲು ರಷ್ಯ ತಜ್ಞರು

... ಚೀಣಾದ ... ಪ್ರದೇಶದಲ್ಲಿ ... ರಷ್ಯದ ... ವಿಮಾನ ... ಕಳುಹಿಸಲಾಗಿದೆಯೆಂದು ಗೊತ್ತಾಗಿದೆ.

ಕೋತಿಗಳ ಕೊಲೆಗಾಗಿ ಮದ್ದುಗುಂಡು

ಪೈರುಗಳನ್ನು ಮತ್ತು ಹಣ್ಣುಹಂಪಲನ್ನು ನಾಶಪಡಿಸುವ ಕೋತಿಗಳು, ... ಮೃಗಗಳನ್ನು ಕೊಲ್ಲಲು ... ಬಂದೂಕ ಹೊಂದಿರುವವರಿಗೆ ಉಚಿತವಾಗಿ ಮದ್ದುಗುಂಡನ್ನು ಕೊಡುವಂತೆ ... ಪ್ರದೇಶ ಸರ್ಕಾರದವರು ನಿರ್ಧರಿಸಿರುತ್ತಾರೆ.

ಮನೆ ಮಾರಾಟಕ್ಕಿದೆ

ಮೈಸೂರು ... ಗೂರೂರು ... ನಂ 2870 ಮನೆ ... ಸ್ವಾಧೀನಕ್ಕೆ ... ಸ್ಥಳ ... ಬಾವಿ ... ಮನೆ ... ಆಫೀಸಿಗೆ ... ವಿದ್ಯಾರ್ಥಿ ನಿಲಯಕ್ಕಾಗಲೀ ... ಮನೆಯಲ್ಲಿ ವಿಚಾರಿಸಿ.

Edited, Printed and Published by A. N. Nagarajan ... Sadhvi Pr... [illegible]

ವಿಮಾನ ಸಮುದ್ರದ ಪಾಲು

೧೧ ಜನರು ಕುಳಿತಿದ್ದ ಅಮೇರಿಕದ ನೌಕಾ ವಿಮಾನವೊಂದು ಅಟ್ಲಾಂಟಿಕ್ ಸಾಗರದಲ್ಲಿ ಮೊನ್ನೆ ಅಕಸ್ಮಾತ್ತಾಗಿ ಸಮುದ್ರಕ್ಕೆ ಬಿದ್ದು ಮುಳುಗಿತೆಂದು ವರದಿಯಾಗಿದೆ. ಇದಾದ ಒಂದು ಗಂಟೆ ತರುವಾಯ ... ೪ ಜನರು ... ಅಲ್ಲಿ ... ಬೇಳಲಾಗಿದೆ.

ಚಿನ್ನದ ಗಣಿ ಡೈರೆಕ್ಟರಾಗಿ ಹುಚ್ಚಮಾಸ್ತಿಗೌಡರ ನೇಮಕ

ಸಂಸ್ಥಾನದ ಹಿರಿಯ ಶಾಸನ ಸಭಾ ಸದಸ್ಯರೂ ಮತ್ತು ಕಾಂಗ್ರೆಸ್ ಪಕ್ಷದ ವಿಪ್ಪರೂ ಆದ ಶ್ರೀ ಎಚ್. ಹುಚ್ಚಮಾಸ್ತಿಗೌಡರನ್ನು ಸರ್ಕಾರದವರು ಕೋಲಾರದ ಚಿನ್ನದ ಗಣಿಗಳ ಸಮಿತಿಯ ಡೈರೆಕ್ಟರಾಗಿ ನೇಮಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಒಲಿಂಪಿಯ ಟಾಕೀಸ್

17-7-53 ರಿಂದ ... ದಿನ ... ಆಟಗಳು

★ ಮೂನ್ ಲೈಟ್ ★ [illegible]

ಬೆಳಗಿನ ಪ್ರದರ್ಶನ ... ಪ್ರಭಾತ ... [illegible]

ಚರಖಾ ಉಪಯೋಗಿಸಲು ಈಜಿಪ್ಟಿನ ನಗೀಬ್ ಮನವಿ

[illegible] ... ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ರವರು ... ಕೇಳಿಕೊಂಡಿದ್ದಾರೆ.

ಮೈಸೂರು ಪೇಟೆ ಧಾರಣೆ

	[illegible]	[illegible]
[illegible]	[illegible]	[illegible]
ಎಳ್ಳು	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಉಪ್ಪು	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	
[illegible]	[illegible]	[illegible]
[illegible]	[illegible]	[illegible]

SRI GAYATHRI TALKIES

From 17.7.53 For 2 days

Warner s

THE CHARGE OF THE LIGHT BRIGADE

With Errol Flynn, Olivia De Havilland

[illegible]

COMING — KING KONG

ಪ್ರಭಾ ★ ಇಂದಿನಿಂದ ಅಮೋಘ ಪ್ರಾರಂಭ ದಿನವೂ ಮೂರು ಪ್ರದರ್ಶನಗಳು

* ಸನ್ ಸ್ಟಾರ್ *

ಬೆಳಗಿನ ಪ್ರದರ್ಶನ 17-7-53 ರಿಂದ ... [illegible]

ಚಾಮುಂಡೇಶ್ವರಿ ಟಾಕೀಸ್

17—7—53 ರಿಂದ :: ಅಮೋಘ ಪ್ರದರ್ಶನಾರಂಭ

ತಿರುಂಬಿ ಪಾರ್

(LOOK BACK)

[illegible]

ಈ ದಿನ 16-7-53 ... [illegible]

ಮೋತಿಲಾಲ್ ಟಾಕೀಸ್

ತಾ॥ 17-7-53 ರಿಂದ ಪ್ರತಿ ದಿನ ಮ್ಯಾಟಿನಿ 3-15 ಕ್ಕೆ ಆರಂಭವಿದೆ

★ ಜಿನೋವ ★

[illegible]

ಫೋನ್ ನಂ. 792 || ವಂದೇ ಮಾತರಂ || ಅಂಚೆಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೭-೭-೧೯೫೩ [ಸಂಚಿಕೆ ೨೮೦

ಕೊರಿಯದಲ್ಲಿ ವಿಶ್ವ ಸೈನ್ಯಗಳ ಪ್ರಬಲ ಧಾಳಿ

ತಾಲ್ಲೂಕು ಯೋಜನಾ ಸಲಹಾ ಸಮಿತಿಗಳ ಸ್ಥಾಪನೆ

ಬೆಂಗಳೂರು ೧೭

ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಸಾರ್ವಜನಿಕರ ಸಹಕಾರವನ್ನು ಪಡೆಯುವ ಸಲುವಾಗಿ ಸರ್ಕಾರದವರು ತಾಲ್ಲೂಕು ಯೋಜನಾ ಸಲಹಾ ಸಮಿತಿಗಳನ್ನು ಸ್ಥಾಪಿಸಲು ನಿರ್ಧರಿಸಿರುತ್ತಾರೆ ೧೧ ಜನರ ಈ ಸಮಿತಿಗಳಲ್ಲಿ, ಆಯಾ ಪ್ರದೇಶದ ಶಾಸನ ಸಭೆಗಳ ಮತ್ತು, ಜಿಲ್ಲಾ ಬೋರ್ಡುಗಳ ಸದಸ್ಯರುಗಳು ಇರುವರು ಉಳಿದವರನ್ನೂ ಮತ್ತು ಸಮಿತಿ ಅಧ್ಯಕ್ಷರನ್ನೂ ಸರ್ಕಾರದವರು ನಾಮಕರಣ ಮಾಡುವರು ತಾಲ್ಲೂಕು ಅಮಲ್ದಾರರು ಸಮಿತಿಯ ಸಂಚಾಲಕರಾಗುವರು ಸಮಿತಿಯವರು ಕಲ್ಯಾಣ ಎಳಗೆ, ಸಂಸ್ಕೃತಿ ಪ್ರಸಾರ ಕೆಲಸಗಳ ಮತ್ತು ವಿದ್ಯಾ ಸುಧಾರಣೆ ಬಗ್ಗೆಯೂ ಸಲಹೆ ನೀಡುವರು

ಕಾಲೇಜುಗಳಿಗೆ ಸಾವಿರ ವಿದ್ಯಾರ್ಥಿಗಳ ಬಹಿಷ್ಕಾರ

ಇಲ್ಲಿನ ಸೆಂಟ್ರಲ್, ಇಂಟರ್‌ಮೀಡಿಯೆಟ್ ಮತ್ತು ಕಾಮರ್ಸ್ ಕಾಲೇಜುಗಳ ಸುಮಾರು ಸಾವಿರ ವಿದ್ಯಾರ್ಥಿಗಳು ತರಗತಿಗಳಿಗೆ ನೆನ್ನೆ ಹೋಗದೆ ಬಹಿಷ್ಕಾರ ಹಾಕಿದರು "ವಿದ್ಯಾಭ್ಯಾಸದ ಮಟ್ಟವನ್ನು ಕಾಪಾಡುವ" ಸಲುವಾಗಿ ೨ ಸಾವಿರ ಜೂನಿಯರ್ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡದಿದ್ದುದಕ್ಕಾಗಿ ಅವರು ತರಗತಿಗಳಿಗೆ ಹೋಗಲಿಲ್ಲ ವಿದ್ಯಾರ್ಥಿಗಳು ನಂತರ ವಿದ್ಯಾ ಸಚಿವರನ್ನು ಕಾಣಲು ಅಠಾರಾ ಕಛೇರಿಗೆ ತೆರಳಿದರು ಅವರನ್ನು ಸರ್ಕಾರಿ ಮುದ್ರಣಾಲಯದ ಬಳಿ ಪೊಲೀಸರು ತಡೆದರು

ಪೋತನ್ ಜೋಸೆಫ್‌ರವರಿಗೆ ಖಾಗ್ದಂಡ

ನೆನ್ನೆ ಹಿರಿಯ ಶಾಸನ ಸಭೆಯಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕ ಶ್ರೀ ಪೋತನ್ ಜೋಸೆಫ್‌ರವರನ್ನು ಕರೆಸಿ ಅವರು ಸಭೆಯನ್ನು ಅಪಮಾನಗೊಳಿಸಿದ ಬಗ್ಗೆ ಅವರನ್ನು ವಾಗ್ದಂಡನೆಗೆ ಗುರಿಪಡಿಸಲಾಯಿತು

ಸಟ್ಟಾ ಆಡುವವರಿಗೆ ಶಿಕ್ಷೆ

ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕುದುರೆ ಜೂಜುಗಳಿಂದ ೧,೯೫,೦೦೦ ರೂ., ಅಂತರ್ರಾಷ್ಟ್ರೀಯ ಕುಸ್ತಿಯಿಂದ ಕಂಟ್ರಾಕ್ಟರುಗಳಿಗೆ ೧½ ಲಕ್ಷ ರೂ ವರಮಾನ ಬಂದು, ಸರ್ಕಾರಕ್ಕೆ ೧೫,೭೩೮ ರೂ ತೆರಿಗೆ ಬಂದಿರುವುದಾಗಿಯೂ, ನ್ಯೂಯಾರ್ಕ್ ಹತ್ತಿ ದರದ ಬಗ್ಗೆ ಸಟ್ಟಾ ಆಡುತ್ತಿದ್ದರೆಂದು ೩೧೦ ಜನರ ಮೇಲೆ ಮೊಕದ್ದಮೆ ಹೂಡಲಾಗಿ, ೨೮೩ ಜನರಿಗೆ ಶಿಕ್ಷೆಯಾಯಿತೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಹುಚ್ಚು ಹಿಡಿದ ಪೊಲೀಸನಿಂದ ಇಬ್ಬರ ಕೊಲೆ ಮತ್ತು ಆತ್ಮಹತ್ಯೆ

ಬೆಂಗಳೂರು ಸಿವಿಲ್ ಪ್ರದೇಶದ ಸಶಸ್ತ್ರ ಪೊಲೀಸ ಪಡೆಗೆ ಸೇರಿದ ಗೌಸ್ ಖಾನ್ ಎಂಬುವನಿಗೆ ನೆನ್ನೆ ಹಠಾತ್ತಾಗಿ ಹುಚ್ಚು ಹಿಡಿದು, ಆತನು ತನ್ನ ಬಂದೂಕಿನಿಂದ ನೆರೆಯಲ್ಲಿದ್ದ ದಂಪತಿಗಳಿಗೆ ಗುಂಡು ಹೊಡೆದು ಕೊಂದನೆಂದೂ, ಒಬ್ಬ ಬಾಲಕನಿಗೆ ಪೆಟ್ಟು ಬಿದ್ದಿತೆಂದೂ, ನಂತರ ತಾನೇ ಗುಂಡು ಹೊಡೆದುಕೊಂಡು ಮಡಿದನೆಂದೂ ವರದಿಯಾಗಿದೆ

ಕೊರಿಯದಲ್ಲಿ ವಿಶ್ವ ಸಂಸ್ಥೆಯ ಭಾರಿ ಧಾಳಿ

ಕೊರಿಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಂದೂ ಆಗದಂತಹ ಭಾರಿ ಧಾಳಿಯನ್ನು ವಿಶ್ವ ಸಂಸ್ಥೆ ಸೈನಿಕರು ಆರಂಭಿಸಿ, ಬಹು ದೂರ ಮುಂದುವರಿದಿರುವರೆಂದು ವರದಿಯಾಗಿದೆ ಭೂ ಸೈನ್ಯಗಳ ಸಹಾಯಕ್ಕೆ ೧೨ ಸಾವಿರ ವಿಮಾನ ಬಲವನ್ನು ಕಳುಹಿಸಿ, ೨೦ ಲಕ್ಷ ಪೌಂಡು ಬಾಂಬುಗಳನ್ನು ಹಾಕಿವೆ

ತ್ರಿವೇದಿಯವರು ಆಂಧ್ರದ ಗವರ್ನರ್?

ಆಂಧ್ರ ಪ್ರಾಂತ್ಯದ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿಶೇಷಾಧಿಕಾರಿಗಳಾಗಿ ಸರ್ ಚಂದೂಲಾಲ್ ತ್ರಿವೇದಿಯವರನ್ನು ನೇಮಿಸಲಾಗುವುದೆಂದು ಪ್ರಕಟಿಸಲಾಗಿದೆ ಅವರು ಆಂಧ್ರದ ಗೌರ್ನರ್ ಆಗುವ ಸಂಭವವೂ ಇದೆ

ಯುವತಿ ಪತ್ತೆಯಿಲ್ಲ

ರಾಜಧಾನಿಯ ಗೀತಾ ರಸ್ತೆಯಲ್ಲಿರುವ ನಿವೃತ್ತ ಇಂಜನಿಯರ್ ಶ್ರೀ ತಿರುಮಲಾಚಾರ್‌ರವರ ಮಗಳು ೨೪ ವರ್ಷದ ಸೀತಾ ಎಂಬ ಯುವತಿಯು ೧೫ ದಿನಗಳ ಹಿಂದೆ ಸಮಾಜಕ್ಕೆ ಹೋಗುವುದಾಗಿ ಹೇಳಿ, ಹೊರಟವರು ಇನ್ನೂ ಮನೆಗೆ ಹಿಂತಿರುಗಿಲ್ಲವೆಂದೂ, ಈ ಬಗ್ಗೆ ಲಕ್ಷ್ಮೀಪುರದ ಪೊಲೀಸರಿಗೆ ದೂರು ಕೊಡಲಾಗಿದೆಯೆಂದೂ ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೨೦ ಕೆ ಎಸ್ ರಾಮಚಂದ್ರನ್, ದೇವರ ನಾಮಗಳು ಮಧ್ಯಾಹ್ನ ೧-೩೦ ಟಿ ಆರ್ ಮಹಾಲಿಂಗಂ ಮತ್ತು ಕೆ ಸುಬ್ರಹ್ಮಣ್ಯಂ ರಿಕಾರ್ಡು ೨. ಬಾಲಜಗತ್- ಶ್ರೀ ರಾಮ ಕೀರ್ತನರಿಂದ ಕ್ವಿಜ್ ಕಾರ್ಯಕ್ರಮ ಸಂಜೆ ೫-೩೦ ಎಸ್ ಸಿ. ಚೇಲೂರಯ್ಯ ನಾಗಸ್ವರ ೬-೧೫ ರತ್ನಮ್ಮ ಕೃಷ್ಣನ್ ವೀಣ ಕನ್ನಡ ಗೀತೆ ೭ ೫ ಕೆ ಎಸ್. ರಾಮಚಂದ್ರನ್ ಸಂಗೀತ ೭-೩೦ ಜೆ. ಪಿ ಹನುಮಯ್ಯಶೆಟ್ಟಿ ಭೂ ಸೇನೆ ಬಗ್ಗೆ ಕನ್ನಡದಲ್ಲಿ ಭಾಷಣ, ೮ ಜೆ. ಟಿ ರಾಮಲಿಂಗ-ಕೃಷ್ಣ ಗಾರುಡಿ ಕಥಾ ಕಾಲಕ್ಷೇಪ ೯-೧೫ ತಾಳವಾದ್ಯ ೯ ೩೦ ನಾಡಿಗೇರ್ ಕೃಷ್ಣರಾವ್, ಪುಸ್ತಕದ ಹುಳು

ಕಲ್ಕತ್ತಾದಲ್ಲಿ ನೆನ್ನೆ ಪುನಃ ಗುಂಡು

ಕಲ್ಕತ್ತದಲ್ಲಿ ನೆನ್ನೆ ಪೊಲೀಸರು ಗುಂಪುಗಳ ಮೇಲೆ ಎರಡು ಸಲ ಗುಂಡು ಹಾರಿಸಿದರೆಂದು ವರದಿಯಾಗಿದೆ ಅದಕ್ಕೆ ಮುಂಚೆ ಅಶ್ರು ವಾಯು ಮತ್ತು ಲಾಠಿಪ್ರಯೋಗ ಮಾಡಲಾಯಿತು, ಗುಂಪುಗಳು ಬಸ್ಸುಗಳನ್ನು ಹಿಡಿದು ಮನೆಮನೆಗೆ ಹೋಗಿ ಶೋಧನೆ ನಡೆಸಲು ಪ್ರಯತ್ನಿಸಿದಾಗ ಜನರು ಅಡ್ಡಿ ಬಂದರು ಈ ಪ್ರಸಂಗಗಳಲ್ಲಿ ೫೦ ಜನರಿಗೆ ಗಾಯವಾಗಿದೆ ನೆನ್ನೆ ಸುಮಾರು ೧೩೦೦ ಸೈನಿಕರು ಪೊಲೀಸರಿಗೆ ಸಹಾಯ ಮಾಡಲು ಗಸ್ತು ತಿರುಗಿದರು ಸರ್ಕಾರಿ ಕಛೇರಿ ಮತ್ತು ಪೊಲೀಸು ಕೇಂದ್ರದ ಬಳಿ ಎರಡು ಬಾಂಬುಗಳು ಸಿಡಿದುವು ಅಲ್ಲಿ ಕಟ್ಟುನಿಟ್ಟಿನ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ. ೨೨೦ ಜನರ ದಸ್ತಗಿರಿ ಆಗಿದೆ

ಗ್ರಾಮಾಧಿಕಾರಿಗಳಿಂದ ಠೇವಣಿ ಕೇಳಲು ಅಧಿಕಾರ

ಗ್ರಾಮಾಧಿಕಾರಿಗಳು ಹಣವನ್ನು ದುರುಪಯೋಗ ಮಾಡಿದರಾಗಲಿ ಅಥವಾ ದುರ್ನಡವಳಿಕೆಯಿಂದ ವರ್ತಿಸಿದರಾಗಲಿ ಅವರನ್ನು ಸಸ್ಪೆಂಡ್ ಮಾಡಲು ಜಿಲ್ಲಾಧಿಕಾರಿಗಳು ಅಥವಾ ಅಸಿಸ್ಟೆಂಟ್ ಕಮಿಷನರರು ಅಧಿಕಾರ ಹೊಂದಬೇಕೆಂಬ ತಿದ್ದುಪಡಿಯನ್ನು ಈ ಸಂಬಂಧವಾದ ಮಸೂದೆಯಲ್ಲಿ ಶಾಸನ ಸಭೆಗಳ ಜುನಾಯಿತ ಸಮಿತಿಯು ಸೂಚಿಸಿರುತ್ತದೆ ಇದಲ್ಲದೆ, ಸ್ಥಿರ ಆಸ್ತಿ ಇಲ್ಲದಿರುವ ಗ್ರಾಮಾಧಿಕಾರಿಗಳಿಂದ ಆಯಾ ಹಳ್ಳಿಯ ವಾರ್ಷಿಕ ಜಮಾಬಂದಿಯಲ್ಲಿ ನಾಲ್ಕು ಭಾಗದಷ್ಟು ಹಣವನ್ನು ಠೇವಣಿಯಾಗಿ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿರಬೇಕೆಂದೂ, ನೋಟೀಸು ಕೊಟ್ಟ ೩ ತಿಂಗಳೊಳಗೆ ಅದನ್ನು ಕೊಡದಿದ್ದರೆ ಅಂತಹ ನೌಕರರನ್ನು ಅವರು ವಜಾಮಾಡಬಹುದೆಂದೂ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ರಾಮಣ್ಣ ನಗರಿ ಬೀದಿಯಲ್ಲಿರುವ ಶ್ರೀ ಜ್ಞಾನೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಬ್ರ॥ ಶ್ರೀ ಹರಿಸರ್ವೋತ್ತಮ ದಾಸರಿಂದ "ಸತ್ಯವಾನ-ಸಾವಿತ್ರಿ" ಎಂಬ ಹರಿಕಥೆಯು ನಡೆಯುವುದು. ಆಸ್ತಿಕರಿಗೆ ಲಕ್ಷ್ಮಿ ಅಲಂಕಾರವನ್ನು ಮಾಡಲಾಗುವುದು

'ಸತ್ಯ' ಪತ್ರಿಕೆ ಸಂಪಾದಕರ ದಸ್ತಗಿರಿ ವಾರಂಟಿಗೆ ರುಜು

ಬೊಂಬಾಯಿಗೆ ಇಬ್ಬರು ವಿಶೇಷ ಅಧಿಕಾರಿಗಳ ಪ್ರಯಾಣ

ಸ್ವಂ ನು ಫೋ॥] ಬೆಂಗಳೂರು ೧೭

'ಸತ್ಯ' ಪತ್ರಿಕೆಯ ಸಂಪಾದಕ ಶ್ರೀ ಚತುರ್‌ಭುಜ್‌ವಾಲಾರವರನ್ನು ದಸ್ತಗಿರಿ ಮಾಡುವ ವಾರಂಟಿಗೆ ಹಿರಿಯ ಶಾಸನ ಸಭಾ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂರವರು ಇಂದು ರುಜು ಹಾಕಿರುತ್ತಾರೆ ಶಾಸನ ಸಭೆಯ ವಾಚ್ ಅಂಡ್ ವಾರ್ಡ್ ಅಧಿಕಾರಿಗಳ ಪೈಕಿ ಶ್ರೀ ಕೃಷ್ಣಪ್ಪ ಮತ್ತು ಇನ್ನೊಬ್ಬರು ಅವರನ್ನು ವಶಕ್ಕೆ ತೆಗೆದುಕೊಳ್ಳಲು ಬೊಂಬಾಯಿಗೆ ವಿಮಾನದಲ್ಲಿ ತೆರಳಿರುವರು

ಆರ್.ಎಂ.ಡಿ.ಸಿ ಸ್ಪರ್ಧೆ ಬಗ್ಗೆ ಪ್ರಶ್ನೆ

ಈ ದಿನ ಕೆಳಗಿನ ಶಾಸನ ಸಭೆಯಲ್ಲಿ ಆರ್. ಎಂ ಡಿ ಸಿ ಸ್ಪರ್ಧೆ ಬಗ್ಗೆ ಪ್ರಶ್ನೆಗಳಿಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರಿಸುತ್ತ ಕಳೆದ ೫೨-೫೩ ನೇ ಸಾಲಿಗೆ ಸರ್ಕಾರಕ್ಕೆ ಸದರಿ ಸ್ಪರ್ಧೆಯಿಂದ ತೆರಿಗೆ ರೂಪದಲ್ಲಿ ೪,೩೦,೨೦೮ ರೂ ಗಳು ಬಂದಿರುವುದಾಗಿ ತಿಳಿಸಿದರು ಬೊಂಬಾಯಿಯಲ್ಲಿ ಇಂದೇ ಸ್ಪರ್ಧೆಯು ನಡೆಯುತ್ತಿದ್ದು, ಅಲ್ಲಿ ನಿಷೇಧಿಸಲ್ಪಟ್ಟ ಮೇಲೆ ಸಂಸ್ಥಾನಕ್ಕೆ ಬಂದಿರುವ ವಿಷಯವು ತಮಗೆ ಜ್ಞಾಪಕದಲ್ಲಿಲ್ಲವೆಂದು ಅವರು ತಿಳಿಸಿದರು ಈ ಸ್ಪರ್ಧೆಯ ಬಹುಮಾನ ವಿನಿಯೋಗದ ಸಂಬಂಧವಾಗಿ ಸರ್ಕಾರಕ್ಕೆ ದೂರುಗಳು ಬಂದಿವೆಯೆಂದೂ, ಸರ್ಕಾರಕ್ಕೆ ಸ್ಪರ್ಧೆಯಿಂದ ಇನ್ನೂ ಹಣ ಬಾಕಿ ಬರುವ ವಿಷಯವನ್ನು ಕುರಿತು ಲೆಕ್ಕವನ್ನು ಆಡಿಟ್ ಮಾಡಲಾಗುತ್ತಿರುವುದೆಂದೂ ಅವರು ಹೇಳಿದರು

ಅಂತರ್ರಾಷ್ಟ್ರೀಯ ಕುಸ್ತಿ ಬಗ್ಗೆ ಪ್ರಶ್ನೆ

ಇಲ್ಲಿ ನಡೆಯುತ್ತಿರುವ ಅಂತರ್ರಾಷ್ಟ್ರೀಯ ಕುಸ್ತಿ ಬಗ್ಗೆ ಪ್ರಶ್ನೋತ್ತರಗಳಾದುವು ಕುಸ್ತಿ ನಿಬಂಧನೆ ಪ್ರಕಾರ ನಡೆಯುತ್ತಿಲ್ಲವೇ ಎಂದು ಕೇಳಿದಾಗ, ಸತ್ಯದಲ್ಲೇ ಕುಸ್ತಿಗೆ ಸಂಬಂಧಪಟ್ಟವರು ನೋಡಿಕೊಳ್ಳುವರೆಂದು ತಿಳಿಸಲಾಯಿತು.

ಸಾವಿರ ರೂ. ನೋಟಿನ ಮಾರಾಟದಲ್ಲಿ ೬ ಜನರ ಬಂಧನ

ಬೊಂಬಾಯಿಯ ವ್ಯಾಪಾರಿ, ಹೇಮರಾಜ್ ಮೂರ್ತಿ ಮತ್ತು ಇತರ ಐದರನ್ನು ಇಲ್ಲಿನ ಪೊಲೀಸರು ಕಳೆದ ರಾತ್ರಿ ಹೆಚ್ಚು ಮೊತ್ತದ ನೋಟುಗಳ ಡಿಮಾನಿಟೈಸ್ ಶಾಸನದ ಉಲ್ಲಂಘನೆಗೆ ದಸ್ತಗಿರಿ ಮಾಡಿರುತ್ತಾರೆ. ಅವರು ೧೦೦೦ ರೂ ಬೆಲೆಯ ೧೦ ನೋಟುಗಳನ್ನು ಒಂದೊಂದಕ್ಕೆ ೮೦೦ ರೂ. ಬೆಲೆ ಮಾರಾಟ ಮಾಡುವ ಪ್ರಯತ್ನದಲ್ಲಿದ್ದರೆಂದೂ, ಮೂರ್ತಿಯವರ ಕಛೇರಿಯಲ್ಲಿ ಬೇರೆ ೨೩ ಸಾವಿರ ರೂ ನೋಟುಗಳು ಸಿಕ್ಕಿದುವೆಂದೂ ಹೇಳಲಾಗಿದೆ ಮೂರ್ತಿಯವರನ್ನು ೨೦ ಸಾವಿರ ರೂ ಜಾಮೀನು ಮೇಲೆ ಬಿಡಲಾಗಿದೆ ಇತರರು ಸಾವಿರ ರೂ. ಜಾಮೀನು ಕೊಡಬೇಕೆಂದು ಸೂಚಿಸಲಾಗಿದೆ

○ ಸೂಚನೆ ಕೊಡದೆ ಕಮ್ಯುನಿಸ್ಟರನ್ನು ಬಿಟ್ಟು ಹೋದರೆಂದು ನೇಪಾಳದ ಒಂದು ಜಿಲ್ಲೆಯ ಗೌರ್ನರ್ ಭೂಪೇಂದ್ರ ವಿಕ್ರಮ ಷಾರವರನ್ನು ಸಸ್ಪೆಂಡ್ ಮಾಡಲಾಗಿದೆ.

ದೇವಾಲಯ ದಲ್ಲಿ ಪ್ರಾರ್ಥನೆ

ವೃಷ್ಟಿಯಾದ ಬಗ್ಗೆ ದೇವರಿಗೆ ಕೃತಜ್ಞತೆಯನ್ನು ಸೂಚಿಸಲು ಮೊನ್ನೆ ನಗರದ ... ಗುಡಿಯಲ್ಲಿ ವಿಶೇಷ ಪೂಜೆಯು ನಡೆಯಿತು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್ ರಾಚಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀರಾಮಮಂದಿರದವರ ಸಂಸ್ಕೃತ ಪಾಠಶಾಲೆಯ ... ಮೊನ್ನೆ ಸಭಾ ... ನಡೆದು ಸಂಸ್ಥೆಯವರು ಸುವೃಷ್ಟಿಯಾದ ಬಗ್ಗೆ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲಾಯಿತು ... ಶ್ರೀ ಎಂ ವಿಜಯೇಂದ್ರಾಚಾರ್ಯರವರು ... ಮಹಾಪಾಠಶಾಲೆಯ ... ಶ್ರೀ ... ಸಿದ್ಧಪ್ಪಾರಾಧ್ಯರವರು ... ಶ್ರೀ ಎನ್ ವೆಂಕಟನರಸಿಂಹಾಚಾರ್ಯರಿಂದ ... ರಾಮಚಂದ್ರಾಚಾರ್ಯ ರಿಂದ ... ಶ್ರೀ ಹೆಚ್ ... ಸಂಸ್ಕೃತ ... ಉಪನ್ಯಾಸ

ಒಂದು ಸಿಗರೇಟು ಕದ್ದವನಿಗೆ ೩ ತಿಂಗಳು ಸಜಾ

ಒಂದೇ ಒಂದು ಸಿಗರೇಟನ್ನು ಕದ್ದ ಅಪರಾಧಕ್ಕಾಗಿ ... ನ್ಯಾಯಾಧೀಶರು ... ಮೂರು ತಿಂಗಳು ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆಂದು ವರದಿಯಾಗಿದೆ

ಪ್ರಭುಗಳ ಪರ್ಯಟನೆ

ಶ್ರೀಮನ್ಮಹಾರಾಜರವರು ... ಪರ್ಯಟನ ... ತಿಂಗಳು ... ಶ್ರೀಮನ್ಮಹಾರಾಜರವರು ... ಇನ್ನೂ ನಿರ್ಧರಿಸಲ್ಪಟ್ಟಿಲ್ಲವೆಂದು ತಿಳಿದುಬಂದಿದೆ

ಅನ್ನಪೂರ್ಣೇಶ್ವರಿ ಅಲಂಕಾರ

ರಾಜಧಾನಿಯ ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಅಮ್ಮನವರಿಗೆ, ಆಷಾಢ ಶುಕ್ರವಾರದ ಪ್ರಯುಕ್ತ, ಈ ದಿನ ಅನ್ನಪೂರ್ಣೇಶ್ವರಿ ಅಲಂಕಾರವನ್ನು ಮಾಡಲಾಗುವುದು

... ಗಳಾದುದು ಸಂದರ್ಭದಲ್ಲಿ ವಿದ್ಯಾಗಳ ... ಮಂಗಳಾರತಿ ಮತ್ತು ... ವಾದಗಳು ನಡೆದುವು

ಬ್ರಿಟನ್ನಿನೊಡನೆ ಕಾದಾಟಕ್ಕೆ ಈಜಿಪ್ಟಿನವರ ಕಾತುರ

ಸೂಯೆಜ್ ಕಾಲುವೆ ಪ್ರಶ್ನೆ ಬಗ್ಗೆ ಬ್ರಿಟನ್ನಿಗೂ ಮತ್ತು ಈಜಿಪ್ಟಿಗೂ ... ವೈಮನಸ್ಯದಿಂದ ... ವಿಶೇಷ ಉದ್ರೇಕವಾಗಿ ... ಒಂದು ಅಲ್ಟಿಮೇಟಮ್ಮನ್ನು ... "ಸೂಯೆಜ್ ಪ್ರದೇಶಕ್ಕೆ ... " ಎಂಬುದಾಗಿ ... ದೊಡ್ಡದಾಗುತ್ತಿದ್ದ ... ಹೊರಡಿಸದೇಕಾಯಿತು

ಮೈಸೂರು ಪೇಟೆ ಧಾರಣೆ

ವಸ್ತು		
[illegible]	[illegible]	[illegible]

ಒಲಂಪಿಯಾ ಟಾಕೀಸ್

ಜನಪ್ರಿಯವಾದ 2 ನೇ ವಾರ

17 7-53 ರಿಂದ ಪ್ರತಿದಿನ 3 ಆಟಗಳು

★ ಮಾಲ್ತಿ ನ್ ★

Edited, Printed and Published by A R Nagarajan at Sadhvi Press D Subbiah Road Mysore

ಪಾನ ನಿರೋಧ ಶಾಸನದ ಪ್ರಕಾರ ಆಂಗ್ಲ ಸ್ತ್ರೀಯೊಬ್ಬಳಿಗೆ ...

... ಆಂಗ್ಲ ಸ್ತ್ರೀ ... ಮನೆಯ ಮೇಲೆ ... ಶಿಕ್ಷೆ ...

ಸಮ್ಮೇಳನಕ್ಕೆ ...

ರಾಜಧಾನಿಯ ... ದಾಖಲು ... "ಆಟಸಾಮಾನುಗಳ" ಎಂದು ... ಮನೆಯ ಮೇಲೆ ... ಪ್ರಯೋಗಾರ್ಥವಾಗಿ ... ಬಗ್ಗೆ ... ತಿಳಿದುಬಂದಿದೆ

SRI GANESHA TALKIES

Grand Gala Release on 18-7-53

... International's Latest Master Piece In Technicolor

AGAINST ALL FLAGS

... Maureen O Hara, Anthony Quinn

... Programme a Full length Technicolor Feature

THE WORLD'S MOST BEAUTIFUL GIRLS"

Will Also Be Shown

... please be present in time for the Show

DAILY at 3 45, 6-30 and 9 45 P.M

ಮೋತಿಲಾಲ್ ಟಾಕೀಸ್

ಮೈಸೂರು

ತಾ॥ 17—7—53 ರಿಂದ ಪ್ರತಿ ದಿನ ಮ್ಯಾಟಿನಿ 3-15 ಕ್ಕೆ ಆರಂಭ

★ ಜಿನೋವ ★

SRI GAYATHRI TALKIES

GRAND GALA RELEASE FROM 17 7-53

THE CHARGE OF THE LIGHT BRIGADE

With Errol Flynn, Olivia De Havilland

HERE IS ANOTHER GOOD AUCTION

KEEP THE DATE FREE

Under instructions from Sri Bellappa & others we shall sell FURNITURE, English JHONSON's Crockery China & glassware, E P N S WARE, PHILIPS CYCLE, 6 x2½' Door frames Carrum Boards, Portable double spring SONAT Swiss make Gramaphone Records, Kodak Camera Alarm Table Time Piece Motor car Battery, Flower vases, Ice Cream Machines Primus stove Spring Cushion Sofa Suites Almirah Curio Cabinet Teapoys, Tables Single & double cots arm & armless chairs many more things too many to mention

ON SUNDAY the 19th JULY 1953 at 10 A. M. at Showroom

COME & INSPECT THEM ON SATURDAY During Business Hours

Messrs ABIDS,

Auctioneers & House Furnishers Mysore

ಚಾಮುಂಡೇಶ್ವರಿ ಟಾಕೀಸ್

17 7 53 ರಿಂದ .. ಅನೇಕ ಪ್ರದರ್ಶನಾರಂಭ

ತಿರುಂಬಿ ಪಾರ್

(LOOK BACK)

ಪ್ರಭುದೇವಾ ಥಿಯೇಟರ್

17 7 53ನೇ ಶುಕ್ರವಾರದಿಂದ ಅನೇಕ 2 ನೇ ವಾರ

ಪ್ರತಿ ದಿನ 3 ಆಟಗಳು

• ... ವಿಕ್ರಮ •

ಫೋನ್ ನಂ. 792 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೮-೭-೧೯೫೩ [ಸಂಚಿಕೆ ೨೮೯

ಭಾಷ್ಯಂರಿಗೆ ಮುಂಬೈ ಹೈಕೋರ್ಟಿನ ಸಮನ್ಸ್

ಸರ್ಕಾರದ ೩ ಕೋಟಿ ರೂ. ಸಾಲ

ಸಾರ್ವಜನಿಕರ ಬೆಂಬಲಕ್ಕಾಗಿ ಜಿಲ್ಲಾಧಿಕಾರಿಗಳ ಪ್ರಾರ್ಥನೆ

ಮೈಸೂರು ೧೭

ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಅಧಿಕಾರ ಕಛೇರಿಯಲ್ಲಿ ಈ ದಿನ ವರ್ತಕರನ್ನೂ ಪುರ ಪ್ರಮುಖರನ್ನೂ ಪತ್ರಿಕೋದ್ಯೋಗಿಗಳನ್ನೂ ಬರಮಾಡಿಕೊಂಡು ಸಂಸ್ಥಾನ ಸರ್ಕಾರದವರು ಎತ್ತುತ್ತಿರುವ ಮೂರು ಕೋಟಿ ರೂ ಗಳ ಸಾಲಕ್ಕೆ ಎಲ್ಲರೂ ಉದಾರವಾಗಿ ಸಹಾಯಮಾಡುವಂತೆ ಕೋರಿದರು ರಾಷ್ಟ್ರೀಯ ಯೋಜನೆಯಂತೆ ಪುನರ್ರಚನಾ ಕಾರ್ಯಕ್ಕಾಗಿ ಸಾಲವನ್ನು ತೆಗೆಯಲಿರುವುದರಿಂದ ಪ್ರತಿಯೊಬ್ಬರೂ ದೇಶಾಭಿಮಾನದಿಂದ ಅದಕ್ಕೆ ನೆರವು ನೀಡಬೇಕೆಂದು ಅವರು ತಿಳಿಸಿದರು

ಮೈಸೂರು ಬ್ಯಾಂಕು ಶಾಖೆ ಮ್ಯಾನೇಜರಾದ ಶ್ರೀ ವೀರಭದ್ರಶೆಟ್ಟರು ಮಾತನಾಡಿ, ಸಾಲವನ್ನು ಭರ್ತಿ ಮಾಡುವ ಬಗ್ಗೆ ಸಾರ್ವಜನಿಕರಿಗೆ ತಮ್ಮ ಬ್ಯಾಂಕಿನವರು ನೀಡುವ ಸಹಾಯದ ಕ್ರಮವನ್ನು ವಿವರಿಸಿದರು

ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯ ಮತ್ತು ಶ್ರೀ ಎಂ ರಾಮಸ್ವಾಮಿಯವರು ಮಾತನಾಡಿ, ಈ ಕಾರ್ಯದಲ್ಲಿ ಪ್ರಜೆಗಳು ಭಾಗವಹಿಸಬೇಕೆಂದು ಸೂಚಿಸಿದರು ಅಲ್ಲಿ ನೆರೆದಿದ್ದವರು ಸಾಲವು ಯಶಸ್ವಿಯಾಗಲು ತಮ್ಮ ಸಹಾಯವನ್ನು ನೀಡುವ ಸೂಚನೆಯಿತ್ತರು

ಕಾಶ್ಮೀರದ ಪ್ರಶ್ನೆ ಬಗ್ಗೆ ಪಾಕ್ ಪ್ರಧಾನಿ ಭರವಸೆ

ಕಾಶ್ಮೀರದ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳಿಗೆ ಒಪ್ಪಂದವಾಗುವುದೆಂದು ತಾವು ಭಾವಿಸಿರುವುದಾಗಿ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ತಿಳಿಸಿರುವರು. ಕರಾಚಿಗೆ ಭಾರತದ ಪ್ರಧಾನಿಯವರು ಭೇಟಿ ಕೊಡುವಾಗ ಇನ್ನೂ ಹೆಚ್ಚು ದಿನ ಅಲ್ಲಿ ಅವರು ಇರುವಂತೆ ತಾವು ನೆಹರೂರವರನ್ನು ಪ್ರಾರ್ಥಿಸಿರುವುದಾಗಿ ಮಹಮದ್ ಅಲಿಯವರು ಹೇಳಿರುವರು

ಇಟಲಿಯಲ್ಲಿ ಹೊಸ ಸರ್ಕಾರ

ಸೀನರ್ ಅಲ್ಸಿಡ್ ಗ್ಯಾಸ್ಪರಿಯವರು ಇಟಲಿಯಲ್ಲಿ ಹೊಸ ಸರ್ಕಾರವನ್ನು ರಚಿಸುತ್ತಾರೆ ತಮ್ಮ ಕ್ರಿಶ್ಚಿಯನ್ ಡೆಮೋಕ್ರಾಟ್ ಪಕ್ಷದ ಸದಸ್ಯರನ್ನು ಮಾತ್ರ ಅವರು ಮಂತ್ರಿಮಂಡಲಕ್ಕೆ ತೆಗೆದುಕೊಂಡಿರುವರು ಇತ್ತೀಚಿನ ಚುನಾವಣೆಗಳಲ್ಲಿ ಅವರ ಪಕ್ಷಕ್ಕೆ ಹೆಚ್ಚಿನ ಬಹುಮತವು ದೊರೆಯದೆ ಅವರು ಮಂತ್ರಿಮಂಡಲವನ್ನು ರಚಿಸಲು ಮೊದಲು ನಿರಾಕರಿಸಿದ್ದರು ಅಲ್ಲಿನ ಅಧ್ಯಕ್ಷರ ಒತ್ತಾಯದ ಮೇಲೆ ಈಗ ಅವರು ಸರ್ಕಾರವನ್ನು ಸ್ಥಾಪಿಸಿರುತ್ತಾರೆ

ಕೊರಿಯಾ ಒಪ್ಪಂದಕ್ಕೆ ರುಜು ಹಾಕಲು ಕರೆ

ಕೊರಿಯಾ ಯುದ್ಧ ಮುಕ್ತಾಯದ ಒಪ್ಪಂದಕ್ಕೆ ರುಜು ಮಾಡುವ ಸಲುವಾಗಿ ಪ್ರತಿನಿಧಿಗಳನ್ನು ಕೂಡಲೇ ಕಳುಹಿಸುವಂತೆ ಕಮ್ಯೂನಿಸ್ಟ್ ಸಂಧಾನ ಪ್ರತಿನಿಧಿಗಳನ್ನು ವಿಶ್ವಸಂಸ್ಥೆಯ ಸೈನ್ಯಾಧಿಕಾರಿಗಳು ಒತ್ತಾಯ ಮಾಡಿರುತ್ತಾರೆ

ಸತ್ಯ ಪತ್ರಿಕೆ ಸಂಪಾದಕರ ಬಂಧನಕ್ಕೆ ತಡೆ

ಮೈಸೂರ ಹಿರಿಯ ಶಾಸನ ಸಭೆ ಅಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂರವರು ಮೈಸೂರು ಆರ್ ಎಂ ಡಿ ಸಿ ಲಿಮಿಟೆಡ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸತ್ಯ ಪತ್ರಿಕೆ ಸಂಪಾದಕ ಶ್ರೀ ಚಮನ್‍ಲಾಲ್ ಬಾಗ್‍ವಾಲಾರವರನ್ನು ಬಂಧಿಸಿ ಬೆಂಗಳೂರಿಗೆ ಕರೆತರುವಂತೆ ಹೊರಡಿಸಿದ ದಸ್ತಗಿರಿ ವಾರಂಟನ್ನು ಜಾರಿ ಮಾಡದಿರುವಂತೆ ತಡೆಯಾಜ್ಞೆಯಾಗಬೇಕೆಂದು ಕೋರಿ ಶ್ರೀ ಚಮನ್‍ಲಾಲ್ ಬಾಗ್‍ವಾಲಾರವರು ಬೊಂಬಾಯಿ ಹೈಕೋರ್ಟಿಗೆ ಅರ್ಜಿಯೊಂದನ್ನು ಸಲ್ಲಿಸಿದರ ಮೇಲೆ ನ್ಯಾಯಾಧೀಶ ಶ್ರೀ ದೇಸಾಯ್‍ರವರು ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರನ್ನು ದಸ್ತಗಿರಿ ಮಾಡಿ ಬೊಂಬಾಯಿಯಿಂದ ಕರೆದುಕೊಂಡು ಹೋಗದಂತೆ ತಾತ್ಕಾಲಿಕ ತಡೆ ಆಜ್ಞೆಯನ್ನು ಮಾಡಿರುತ್ತಾರೆ ಈ ವ್ಯವಹಾರದಲ್ಲಿ ಶ್ರೀ ಕೆ ಟಿ ಭಾಷ್ಯಂ, ಮೈಸೂರು ಮತ್ತು ಬೊಂಬಾಯಿ ಸರ್ಕಾರಗಳು, ಬೊಂಬಾಯಿ ಪೋಲೀಸು ಕಮಿಷನರ್ ಮತ್ತು ಮೈಸೂರು ಶಾಸನ ಸಭೆ ವಾಚ್ ಅಂಡ್ ವಾರ್ಡಿನ ಶ್ರೀ ಹೆಚ್ ವಿ ಕೃಷ್ಣಪ್ಪ ಇವರುಗಳು ಪ್ರತಿವಾದಿಗಳಾಗಿರುವರು

ಸಭೆಗೆ ೨೦ನೇ ತಾ|| ಹಾಜರಾಗುವುದಕ್ಕಾಗಿ ಸಂಪಾದಕರ ತಂತಿ

ಶ್ರೀ ಚಮನ್‍ಲಾಲ್ ಬಾಗ್‍ವಾಲಾರವರು ನಾಳಿದ್ದು ಹಿರಿಯ ಶಾಸನ ಸಭೆಯ ಮುಂದೆ ತಾವು ಹಾಜರಾಗುವುದಾಗಿ ಸಭೆಯ ಅಧ್ಯಕ್ಷ ಶ್ರೀ ಕೆ ಟಿ ಭಾಷ್ಯಂರವರಿಗೆ ತಂತಿ ಕಳುಹಿಸಿರುತ್ತಾರೆ ಶ್ರೀ ಭಾಷ್ಯಂರವರು ಇದಕ್ಕೆ ಮೊದಲು ೨೦ನೇ ತಾ|| ಹಾಜರಾಗುವಂತೆ ತಂತಿ ಕಳುಹಿಸಿದ್ದರು ಬೊಂಬಾಯಿಯಿಂದ ಅವರ ಮಗನು ವಿದೇಶಕ್ಕೆ ೨೦ನೇ ತಾ|| ಪ್ರಯಾಣ ಮಾಡಬೇಕಾಗಿರುವುದರಿಂದ ಅಲ್ಲಿಯವರೆಗೆ ಬೆಂಗಳೂರಿಗೆ ಶ್ರೀಯುತರು ಹಿಂತಿರುಗಲು ಸಾಧ್ಯವಿಲ್ಲವೆಂದು ಅವರ ವಕೀಲರು ಮೊದಲು ಶ್ರೀ ಭಾಷ್ಯಂರವರಿಗೆ ತಂತಿ ಕಳುಹಿಸಿದ್ದರು

○ ಕಮ್ಯೂನಿಸ್ಟ್ ಪಕ್ಷದ ನೀರಿನ ಮುಷ್ಕರ ಈ ದಿನ ಗೂಡ ಅದಿಗಳಿಷ್ಟಿದ್ದಿತು

ಭಾಷ್ಯಂ ಮತ್ತು ಮೈಸೂರು ಸರ್ಕಾರಕ್ಕೆ ಸಮನ್ಸ್

ಬೊಂಬಾಯಿ ಹೈಕೋರ್ಟಿನಿಂದ

ಸ್ವಂ ಸು ಫೋ] ಬೆಂಗಳೂರು ೧೭

ನಿನ್ನೆ ದಿನ ಹೈಕೋರ್ಟಿನವರು ಸತ್ಯ ಪತ್ರಿಕೆಯ ಸಂಪಾದಕ ಶ್ರೀ ಚಮನ್‍ಲಾಲ್ ಬಾಗ್‍ವಾಲಾರವರ ಅರ್ಜಿಯನ್ನು ಸ್ವೀಕರಿಸಿ ಅದನ್ನು ಪರಿಶೀಲನೆಗಾಗಿ ಇದೇ ಆಗಸ್ಟ್ ೫ ನೇ ತಾರೀಗೆ ಗೊತ್ತುಪಡಿಸಿ ಮತ್ತು ಅಂದು ಶ್ರೀ ಕೆ ಟಿ ಭಾಷ್ಯಂ ಮೈಸೂರು ಸರ್ಕಾರದ ಪ್ರತಿನಿಧಿ ಮೈಸೂರು ಶಾಸನ ಸಭೆಯ ವಾಚ್ ಅಂಡ್ ವಾರ್ಡ್ ಅಧಿಕಾರಿ ಶ್ರೀ ಕೃಷ್ಣಪ್ಪನವರು ಹಾಜರಾಗಬೇಕೆಂದು ಸಮನ್ಸ್ ಕಳುಹಿಸಲಾಗಿದೆಯೆಂದೂ ಗೊತ್ತಾಗಿದೆ

ಕಲ್ಕತ್ತೆಯಲ್ಲಿ ಪುನಃ ಗಲಭೆ

ಪ್ರದರ್ಶನಕಾರರಿಂದ ಬಾಂಬು ಪ್ರಯೋಗ

ಕಲ್ಕತ್ತದಲ್ಲಿ ನೆನ್ನೆ ಹಗಲೆಲ್ಲಾ ಪರಿಸ್ಥಿತಿಯು ಶಾಂತವಾಗಿದ್ದು ಸಂಜೆ ಸುಮಾರು ೧,೦೦೦ ಮಂದಿ ಪ್ರದರ್ಶಕರು ೧೪೪ನೇ ವಿಧಿಯನ್ನು ಉಲ್ಲಂಘಿಸಿ ಸಭೆ ನಡೆಸಲೆತ್ನಿಸಿದಾಗ ಪೋಲೀಸರು ಲಾಠಿ ಮತ್ತು ಅಶ್ರುವಾಯು ಪ್ರಯೋಗ ಮಾಡಿದ ಪರಿಣಾಮವಾಗಿ ಗಲಭೆಯು ಮತ್ತೆ ಆರಂಭವಾಯಿತು ಪ್ರದರ್ಶನಕಾರರು ಬೀದಿ ದೀಪಗಳನ್ನೆಲ್ಲಾ ಒಡೆದು ಓಡಾಡುತ್ತಿದ್ದ ವಾಹನಗಳನ್ನು ನಿಲ್ಲಿಸುತ್ತಿದ್ದರು ಗಲಭೆ ನಡೆಯುತ್ತಿದ್ದ ಪ್ರದೇಶದ ಸುತ್ತಮುತ್ತಲೂ ಬಾಂಬುಗಳ ಸಿಡಿತದ ಸದ್ದು ರಾತ್ರಿ ಬಹಳ ಹೊತ್ತಿನವರೆಗೂ ಕೇಳಿಬರುತ್ತಿತ್ತು ಪ್ರದರ್ಶನಕಾರರ ಮೇಲೆ ಪೋಲೀಸರು ಗುಂಡನ್ನು ಹಾರಿಸಿದ ಪರಿಣಾಮವಾಗಿ ಒಬ್ಬನಿಗೆ ತೀವ್ರ ಗಾಯಗಳಾಗಿವೆ

ಮಂತ್ರಿಗಳ ಸಂಬಳ ಮತ್ತು ಸದಸ್ಯರ ವೇತನ

ಶಾಸನ ಸಭೆಯಲ್ಲಿ ಮಸೂದೆಗಳ ಅಂಗೀಕಾರ

ಸ್ವಂ ಸು ಫೋ] ಬೆಂಗಳೂರು ೧೭

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರಿಂದ ಮಂಡಿಸಲ್ಪಟ್ಟ, ಸಚಿವರುಗಳ ಸಂಬಳ ಸಾರಿಗೆ ಮುಂತಾದುವಕ್ಕೆ ಸಂಬಂಧಿಸಿದ ಮಸೂದೆಯು ಅಂಗೀಕರಿಸಲ್ಪಟ್ಟಿತು

ಶಾಸನ ಸಭಾ ಸದಸ್ಯರುಗಳ ಸಂಭಾವನೆಯ ಮಸೂದೆಯನ್ನು ನ್ಯಾಯಾಂಗ ಮಂತ್ರಿಗಳು ಮಂಡಿಸಿದರು ಅದೂ ಅಂಗೀಕೃತವಾಯಿತು

ಬ್ಲಿಟ್ಸ್ ಪತ್ರಿಕೆ ಮೇಲೆ ಹೈದ್ರಾಬಾದ್ ಮೊಕದ್ದಮೆ

ಹನುಮಂತಯ್ಯನವರ ಪ್ರವೇಶವೇ

ಸಂಪಾದಕರ ಸಂಬಂಧವಾಗಿ ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ಸು ಫೋ] ಬೆಂಗಳೂರು ೧೭

ಈ ದಿನ ಕಿರಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಕೆ ಪುಟ್ಟಸ್ವಾಮಿ ಮತ್ತು ಎಚ್ ಸಿ ನಾಗಯ್ಯ ರೆಡ್ಡಿಯವರು ಬೊಂಬಾಯಿಯ ಬ್ಲಿಟ್ಸ್ ಪತ್ರಿಕೆ ಸಂಪಾದಕ ಶ್ರೀ ಆರ್ ಕೆ ಕರಂಜಿಯಾರವರನ್ನು ಸರ್ಕಾರಿ ಅತಿಥಿಗಳನ್ನಾಗಿ ಮಾಡಿಕೊಂಡ ಬಗ್ಗೆ ಹಾಕಿದ ಪ್ರಶ್ನೆಗಳಿಗೆ ಮುಖ್ಯ ಮಂತ್ರಿಗಳು ಉತ್ತರವಿತ್ತು, ಕಳೆದ ಮೇ ೨೫ ರಿಂದ ಜೂನ್ ೧೭ರ ವರೆಗೆ ಕರಂಜಿಯಾ, ಅ ಸ ರ ಪತ್ನಿ, ಮಗು ಮತ್ತು ದಾದಿ ಸರ್ಕಾರಿ ಅತಿಥಿಗಳಾಗಿದ್ದರೆಂದೂ ಅವರುಗಳ ಬಗ್ಗೆ ಆದ ವೆಚ್ಚದ ಪ್ರಶ್ನೆಯ ಲೆಕ್ಕವನ್ನು ಒಪ್ಪಿಸಲಿಲ್ಲವೆಂದೂ ತಿಳಿಸಿದರು. ಉಪಚುನಾವಣೆಯ ಕಾಲದಲ್ಲೂ ಅವರು ಸರ್ಕಾರಿ ಅತಿಥಿಗಳಾಗಿದ್ದರೆಂದೂ, ಅಲ್ಲಿಗೆ ಆರ್ ಎಂ ಡಿ ಸಿ ಚಮನ್‍ಲಾಲ್ ಬಾಗ್‍ವಾಲಾರವರು ಬಂದಿದ್ದರೆಂದೂ ತಿಳಿಸಲಾಯಿತು

ಮುಖ್ಯ ಮಂತ್ರಿಗಳು ಬೊಂಬಾಯಿಯಲ್ಲಿ ಶ್ರೀ ಕರಂಜಿಯಾರವರಿತ್ತ ಸತ್ಕಾರ ಕೂಟದಲ್ಲಿ ಭಾಗವಹಿಸಿದ್ದರೆಂದೂ, ಶ್ರೀ ಕರಂಜಿಯಾರವರು ನೆರೆ ಸಂಸ್ಥಾನಗಳನ್ನೂ, ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನೆಹರೂರವರನ್ನೂ ನಿಂದಿಸುತ್ತಿರುವರೆಂದು ಹೇಳುವುದು ಅಥವಾ ಯಾವ ಮಾತೇದೂ, ಕೇಂದ್ರ ಸರ್ಕಾರದ ಬಗ್ಗೆ ಪತ್ರಿಕೆಯು ಜನರಲ್ಲಿ ಅಸಮಾಧಾನವನ್ನುಂಟುಮಾಡುತ್ತಿರುವುದೆಂದು ಗೊತ್ತಿಲ್ಲವೆಂಬುದೂ ಹೇಳಲಾಯಿತು.

ಹೈದರಾಬಾದು ಮುಖ್ಯಮಂತ್ರಿಗಳಿಗೆ ಶ್ರೀ ಹನುಮಂತಯ್ಯನವರು ನೀಲಗಿರಿಯಿಂದ ಫೋನ್ ಮಾಡಿ ಪತ್ರಿಕೆಯ ಮೇಲಿನ ಮೊಕದ್ದಮೆಯೊಂದರ ಸಂಬಂಧವಾಗಿ ತಮ್ಮ ಪ್ರಭಾವವನ್ನು ಬೀರಲಿಲ್ಲವೇ ಎಂದು ಕೇಳಲಾಗಿ, ಅಧ್ಯಕ್ಷರು ಆ ಪ್ರಶ್ನೆಯನ್ನು ತಳ್ಳಿ ಹಾಕಿದರು

ಕೇಂದ್ರ ಮಂತ್ರಿ ಶ್ರೀ ವಿ ವಿ ಗಿರಿಯವರಿಗೆ ಮಾತ್ರ ಸರ್ಕಾರಿ ಅತಿಥಿಗಳಾಗಲು ಅವಕಾಶವಿತ್ತು ಅವರ ಹೆಚ್ಚು ಮಕ್ಕಳಿಗೆ ನಿರಾಕರಿಸಿದ ಬಗ್ಗೆ ಗಿರಿಯವರು ಅಸಮಾಧಾನಪಟ್ಟುಕೊಳ್ಳಲಿಲ್ಲವೇ ಎಂಬ ಕೇಳದುದಕ್ಕೆ ಉತ್ತರ ಬರಲಿಲ್ಲ

ಕರಂಜಿಯಾರವರು ಯಾವ ಪಕ್ಷದ ರಾಜಕೀಯಕ್ಕೆ ಬಂದಿದ್ದರೆಂದು ಕೇಳಲಾಗಿ, ಅದಕ್ಕೂ ಉತ್ತರ ಬರಲಿಲ್ಲ ಅವರು "ತಿನ್ನೋದಕ್ಕೆ ಮಾತ್ರ ಬಂದಿದ್ದರೇ" ಎಂದು ಶ್ರೀ ನಾಗಯ್ಯ ರೆಡ್ಡಿಯವರು ಕೇಳಿದರು ಅದಕ್ಕೂ ಉತ್ತರ ಬರಲಿಲ್ಲ

ಶ್ರೀ ಎಂ ವಿ. ರಾಮರಾಯರು ಪ್ರಶ್ನೆ ಮಾಡಿ ಮುಖ್ಯಮಂತ್ರಿಗಳು ತಮಗೆ ಬೇಕಾದವರನ್ನು ಸರ್ಕಾರಿ ಅತಿಥಿಗಳಾಗಿ ತೆಗೆದುಕೊಳ್ಳುತ್ತಿರುವರೇ ಎಂದೂ, ಸರ್ವರಿಗೂ ಮುಖ್ಯರಾದಂತಹ ಜಲವರನ್ನು ಅತಿಥಿಗಳಾಗಿ ತೆಗೆದುಕೊಳ್ಳಲು ನಿರಾಕರಿಸಲಿಲ್ಲವೇ ಎಂದೂ ಕೇಳಿದರು ಸರ್ವರಿಗೂ ಮುಖ್ಯರಾದವರು ಯಾರು ಯಾರೆಂದು ಮುಖ್ಯ ಮಂತ್ರಿಯವರು ಕೇಳಿದರು.

ನೃತ್ಯಕಲಾ ಮಂಡಲಿಯ ವಾರ್ಷಿಕೋತ್ಸವ

ಮೈಸೂರು ೧೮

ಶ್ರೀ ಕೆ ಎಸ್ ರಾಜಗೋಪಾಲ್‌ರವರ ನಡೆಸುತ್ತಿರುವ ಶ್ರೀ ನೃತ್ಯಕಲಾ ಮಂದಿರದ ಐದನೇ ವಾರ್ಷಿಕೋತ್ಸವವು ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ನಡೆಯಿತು. ಪೌರಸಭಾ ಅಧ್ಯಕ್ಷರಾದ ಶ್ರೀ ಎನ್ ಲಕ್ಷ್ಮಣರಾವ್‌ರವರ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಎಸ್ ಮಹದೇವಪ್ಪನವರಿಂದ ಪಿಟೀಲು ವಾದ್ಯ, ಶ್ರೀ ಕೆ ಬಾಬುಸ್ವಾಮಿರವರ ತಬಲ, ಶ್ರೀ ಕಂಗಮಣಿಯವರಿಂದ ದೇವರನಾಮ, ಅಮರಕಲಾ ಸಂಗೀತ ಮಿತ್ರಮಂಡಲಿಯವರಿಂದ ಆರ್ಕೆಸ್ಟ್ರಾ, ಕಲಾಮಂದಿರದ ವಿದ್ಯಾರ್ಥಿಗಳಿಂದ ನೃತ್ಯ, ಶ್ರೀಮತಿ ಶಾಂತಮ್ಮನವರಿಂದ ಸಂಗೀತ ಮತ್ತು ಶ್ರೀಮತಿ ಗಂಗಮ್ಮನವರಿಂದ ಪಿಟೀಲು ವಾದನಗಳಾದನಂತರ ಅಧ್ಯಕ್ಷರು ಭಾಷಣ ಮಾಡಿದರು. ಪ್ರಾಚೀನ ಕಾಲದಲ್ಲಿ ನೃತ್ಯಕಲೆಗೆ ಉನ್ನತ ಸ್ಥಾನವಿದ್ದಿತೆಂದೂ ಅಲಕ್ಷ್ಯತೆಯಿಂದ ವಿವಿಧ ಕಾರಣಗಳಿಂದ ಪ್ರೋತ್ಸಾಹವು ಕಡಿಮೆಯಾಗಿ ಹೀನಸ್ಥಿತಿಗೆ ಬಂದಿತೆಂದೂ ಈಗ ಕಲೆಯು ಪುನರುಜ್ಜೀವನಗೊಳ್ಳುತ್ತಿರುವುದೆಂದೂ ಅಧ್ಯಕ್ಷರು ತಿಳಿಸಿದರು. ನೃತ್ಯಕಲೆಯ ಮಹತ್ವವನ್ನು ಅವರು ವಿವರಿಸಿದರು.

ಶ್ರೀ ಕೆ ಎಸ್ ರಾಜಗೋಪಾಲ್‌ರವರಿಗೆ ಭರತನಾಟ್ಯವನ್ನು ಕಲಿಸಿದ ಅವರ ಗುರುಗಳಾದ ನಾಗಭೂಷಣರಾವ್ ಮತ್ತು ಶ್ರೀಮತಿ ಸುಂದರಮ್ಮನವರಿಗೆ ಬಂಗಾರದ ಉಂಗುರಗಳನ್ನು ಅರ್ಪಿಸಲಾಯಿತು. ನೃತ್ಯ, ಗೀತ ಮುಂತಾದುವುಗಳಲ್ಲಿ ಸಹಾಯ ಮಾಡಿದವರಿಗೂ ಬೆಳ್ಳಿ ಬಟ್ಟಲು ಮತ್ತು ಜರತಾರಿ ವಸ್ತ್ರಗಳನ್ನು ಬಹುಮಾನವಾಗಿ ಕೊಡಲಾಯಿತು. ನೃತ್ಯ ಕಲಾಚಾರ್ಯ, ಕೆ ಎಸ್ ರಾಜಗೋಪಾಲ್ ಉಡುಪಿಕರ್‌ರವರು ವಂದನಾರ್ಪಣೆ ಸಲ್ಲಿಸಿದ ಮೇಲೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ರಾಷ್ಟ್ರೀಯ ಚೀಣರಿಂದ ದ್ವೀಪದ ಆಕ್ರಮಣ

ಚೀಣದ ಪೂರ್ವ ಪ್ರಾಂತಕ್ಕೆ ಹತ್ತಿರದಲ್ಲಿರುವ ಟುಂಗ್‌ಶಾನ್ ದ್ವೀಪವನ್ನು ರಾಷ್ಟ್ರೀಯ ಚೀಣರ ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ.

ದಾಹವನ್ನು ಅಡಗಿಸಲು ನಿಷಿದ್ಧವೆ ಮದ್ಯದ ಸೇವನೆ

ಎಡಿನ್‌ಬರೋದಿಂದ ವಿಮಾನವೊಂದರಲ್ಲಿ ಬೊಂಬಾಯಿಗೆ ಹಿಂತಿರುಗಿ ಬರುತ್ತಿದ್ದಾಗ ದಾರಿಯಲ್ಲಿ ಸೈಪ್ರಸ್ ದ್ವೀಪದ ನಿಕೋಸಿಯಾ ನಗರದ ನಿಲ್ದಾಣದಲ್ಲಿ ೩೯ ಜನ ಭಾರತೀಯ ನಾವಿಕರು ದಾಹವನ್ನು ಅಡಗಿಸಿಕೊಳ್ಳಲು ನೀರು ದೊರೆಯದೆ, ಉಚಿತವಾಗಿ ಸರಬರಾಜಾದ ಬೀರ್ ಎಂಬ ಮಾದಕ ದ್ರವ್ಯವನ್ನು ಕುಡಿಯಬೇಕಾಯಿತು. ಅಲ್ಲಿ ಬಿಸಿಲಿನ ತಾಪ ವಿಪರೀತವಾಗಿದ್ದಿತು. ಇತರರು ಅದನ್ನು ಸೇವಿಸಲಿಚ್ಛಿಸದೆ, ನೀರಡಿಕೆಯನ್ನು ತಡೆದುಕೊಂಡು ಇದ್ದರು. ಅವರಿಗಾಗಿ ನೀರನ್ನು ಕೊಡುವ ವಿಶೇಷ ಏರ್ಪಾಡನ್ನು ಮಾಡಲಾಯಿತು.

ಗ್ರಾಮಾಧಿಕಾರಿಗಳಿಂದ ರೇವಣಿ ಇಲ್ಲ

ಶಾಸನ ಸಭೆಯಲ್ಲಿ, ಗ್ರಾಮಾಧಿಕಾರಿಗಳಿಗೆ ಸಂಬಂಧಿಸಿದಂತೆ ತಯಾರಿಸಲ್ಪಟ್ಟ ವರದಿಯನ್ನು ಅಂಗೀಕರಿಸಲಾಯಿತು. ಗ್ರಾಮಾಧಿಕಾರಿಗಳ ರೇವಣಿ ಕೇಳುವ ಬಗ್ಗೆ ಚುನಾಯಿತ ಸಮಿತಿಯ ತೀರ್ಮಾನವನ್ನು ಕೈಬಿಡುತ್ತಾಗಿ ಸಚಿವರು ತಿಳಿಸಿದರು.

ಸಂಸ್ಕೃತಾಭ್ಯಾಸಕ್ಕಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಸೌಕರ್ಯ

ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಕಲಿಯಲು ಅನುಕೂಲವಾಗುವಂತೆ ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪಾಠ ಪ್ರವಚನದ ಕಾಲವನ್ನು ಬೆಳಿಗ್ಗೆ ೭-೩೦ ರಿಂದ ೧೦ರ ವರೆಗೂ, ಮಧ್ಯಾಹ್ನ ೩ ರಿಂದ ೫-೩೦ ರವರೆಗೂ ಏರ್ಪಡಿಸಲಾಗಿದೆ. ಅಲಂಕಾರ ತರ್ಕ, ವ್ಯಾಕರಣ, ವೇದಾಂತ, ಮೀಮಾಂಸೆ, ಧರ್ಮಶಾಸ್ತ್ರ ಮುಂತಾದ ಶಾಸ್ತ್ರಗಳನ್ನೂ ಋಗ್ಯಜುಸ್ಸಾಮ ವೇದಗಳನ್ನೂ, ಶ್ರೀವೈಖಾನಸ, ಪಾಂಚರಾತ್ರಾಗಮ ಇವುಗಳನ್ನೂ ಎಲ್ಲಾ ವಿದ್ಯಾರ್ಥಿಗಳಿಗೂ ಅವರವರಿಗೆ ಇಷ್ಟವಾದ ಭಾಗದಲ್ಲಿ ಎರಡು ಹೊತ್ತು ಹೇಳಿಕೊಡಲು ವ್ಯವಸ್ಥೆಯಾಗಿದೆ. ಅಲ್ಲದೆ ಯೋಗಾಸನದ ತರಗತಿಗಳೂ ನಡೆಯುತ್ತಿವೆ. ಸಂಜೆ ೫-೩೦ ರಿಂದ ೧ ಗಂಟೆ ಕಾಲ ವೇದಪ್ರಯೋಗದ ತರಗತಿಯೂ ಇದೆ. ವಿದ್ಯಾರ್ಥಿಗಳಿಗೆ ಅತಿವಸತಿಗಳ ಸೌಕರ್ಯವನ್ನು ಶ್ರೀ ಸುತ್ತೂರು ಮಠದ ಸ್ವಾಮಿಯವರು ಏರ್ಪಡಿಸಿರುವರು.

ನೇಪಾಳದ ಗಡಿ ಪಟ್ಟಣ ದಂಗೆಕೋರರ ವಶ

ನೇಪಾಳದಿಂದ ಓಡಿಹೋಗಿರುವ ದಂಗೆಕೋರ ಮುಖಂಡ ಡಾ॥ ಕೆ ಐ ಸಿಂಗರ ಅನುಯಾಯಿಗಳು ಪಶ್ಚಿಮ ನೇಪಾಳದ ಬಿಲ್ಹಾರಿ ಎಂಬ ವ್ಯಾಪಾರಿ ನಗರವನ್ನು ವಶಪಡಿಸಿಕೊಂಡಿರುವರೆಂದೂ, ಪೊಲೀಸ್ ಅಧಿಕಾರಿಗಳಿಬ್ಬರನ್ನು ಕೊಂದು ಹಾಕಿರುವರೆಂದೂ ವರದಿಯಾಗಿದೆ.

ಇನ್ನೂ ೫ ವರ್ಷ ಕಾಲ ಮನೆ ಬಾಡಿಗೆ ಹತೋಟಿ

ಮನೆ ಬಾಡಿಗೆ ಹತೋಟಿ ತಿದ್ದುಪಡಿ ಶಾಸನದ ಮಸೂದೆಯನ್ನು ಬುಧವಾರ ಶಾಸನ ಸಭೆಯಲ್ಲಿ ಚರ್ಚಿಸಿ, ಚುನಾಯಿತ ಸಮಿತಿ ಪರಿಶೀಲನೆಗೆ ಒಪ್ಪಿಸಲಾಯಿತು. ಇಂದಿನ ಪರಿಸ್ಥಿತಿಯಲ್ಲಿ ಈ ಕಾನೂನು ೫ ವರ್ಷ ಕಾಲ ಮುಂದೆ ವರಿಯ ಬೇಕಾಗುವುದೆಂದು ನ್ಯಾಯಾಂಗ ಮಂತ್ರಿಗಳು ತಿಳಿಸಿದರು.

ನ್ಯೂಯಾರ್ಕ್ ಹತ್ತಿ ದರದ ಬಗ್ಗೆ ಸಟ್ಟಾ ನಿಷೇಧಕ್ಕೆ ಕಾನೂನು

ನ್ಯೂಯಾರ್ಕ್ ಹತ್ತಿ ಮಾರ್ಕೆಟ್ಟಿನ ಪ್ರಾರಂಭ ಮತ್ತು ಮುಚ್ಚುವ ಕಾಲದ ದರದ ಬಗ್ಗೆ ಸಂಸ್ಥಾನದಲ್ಲಿ ನಡೆಯುವ ಜೂಜನ್ನು ಅಪರಾಧವಾಗಿ ಪರಿಗಣಿಸಲು ಸರ್ಕಾರದವರು ಶಾಸನವೊಂದನ್ನು ತರಲಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ರಿಂದ ೮ ಪಟ್ಟಮ್ಮಾಳ್‌ರ ಕಾರ್ಡ್, ಮಧ್ಯಾಹ್ನ ೧೨-೧೦ ಪಿಟೀಲು, ೨ ಸಿನಿಮಾ ಮೆಚ್ಚಿನ ಗೀತೆಗಳು, ಸಂಜೆ ೫-೩೦ ಮತ್ತು ೮ ರಿಂದ ಕೃಷ್ಣನ್ ಉತ್ತರ ಸಂಗೀತ ೬ ಗಾನವಿಹಾರ ೬-೩೦ ನಾವು ಮತ್ತು ನಮ್ಮವರು ೭-೫ ಮತ್ತು ೮-೩೦ ಎ ವೆಂಕಟಸುಬ್ಬರಾವ್, ವೀಣೆ ೭-೩೦ ಪಕ್ಷಿನೋಟ ೯-೧೫ ಉದಯರಾಗ - ಎರಡನೇ ಭಾಗ ಎ ಎನ್ ಕೃಷ್ಣರಾವ್ ೯-೪೫ ರಾಷ್ಟ್ರೀಯ ಕಾರ್ಯಕ್ರಮದ ವಾರ್ಷಿಕೋತ್ಸವ

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ರುಚಿರುಚಿಯಾದ ಸಾ ಸಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪತ್ರಿಕದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೀಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ, ಮೈಸೂರು

Edited, Printed and Published by A R Nagarajan at Sadhvi Press D Subbiah R d Mysore

ಸಿಂಹಳದಲ್ಲಿ ೫೦೦ ಜನ ಭಾರತೀಯ ಬೆಸ್ತರ ಬಂಧನ

ಸಿಂಹಳ ದ್ವೀಪದಲ್ಲಿ ಅವಕಾಶಕೊಡಲ್ಪಟ್ಟ ಕಾಲಕ್ಕಿಂತಲೂ ಹೆಚ್ಚು ದಿನ ಇದ್ದರೆಂದು ತಲೈಮನ್ನಾರ್ ನಗರದಲ್ಲಿ ೫೦೦ ಜನ ಭಾರತೀಯ ಬೆಸ್ತರನ್ನು ದಸ್ತಗಿರಿ ಮಾಡಲಾಗಿದೆ. ಇನ್ನೂ ಅನೇಕರನ್ನು ಬಂಧಿಸಲಾಗುವುದೆಂದೂ ಅವರೆಲ್ಲರನ್ನೂ ಭಾರತಕ್ಕೆ ರವಾನಿಸಲಾಗುವುದೆಂದೂ ವರದಿಯಾಗಿದೆ.

ದೋಣಿ ಮುಳುಗಿ ೬೦ ಜನ ನೀರಿನ ಪಾಲು

ಅಂಬಾಲಾ ಬಳಿ ಶತದ್ರು ನದಿಯಲ್ಲಿ ದೋಣಿಯೊಂದು ಮುಳುಗಿ, ೬೦ ಮಂದಿ ನೀರಿನ ಪಾಲಾದರೆಂದೂ, ಹತ್ತು ಜನ ಮಾತ್ರ ಈಜಿ ದಡವನ್ನು ಸೇರಿದರೆಂದೂ ವರದಿಯಾಗಿದೆ.

ಕ್ರಿಯಾ ಸಮಿತಿ ಕಛೇರಿ

ಅಖಂಡ ಕರ್ನಾಟಕದ ರಾಜ್ಯ ಸಂಸ್ಥಾಪನ ಕ್ರಿಯಾ ಸಮಿತಿಯ ಕೇಂದ್ರ ಕಛೇರಿಯನ್ನು ಬೆಂಗಳೂರು ನಗರದ ಮಿನರ್ವಾ ಸರ್ಕಲ್‌ನಲ್ಲಿ ತೆರೆಯಲಾಗಿದೆ. ಪತ್ರವ್ಯವಹಾರವನ್ನು ಅಲ್ಲಿನ ವಿಳಾಸಕ್ಕೆ ಮಾಡಬಹುದೆಂದು ತಿಳಿಸಲಾಗಿದೆ.

ಮೈಸೂರು ದಸರಾ ವಸ್ತು ಪ್ರದರ್ಶನ, 1953

(೧೯೫೩ನೇ ಅಕ್ಟೋಬರ್ 8 ರಿಂದ ಅಕ್ಟೋಬರ್ 25 ರವರೆಗೆ, ಎರಡೂ ದಿನಗಳೂ ಸೇರಿ)

1953 ನೇ ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಸಂಬಂಧಿಸಿದ ಪ್ರಾಸ್ಪೆಕ್ಟಸ್ಸು ಈಗ ಮುದ್ರಣವಾಗುತ್ತಲಿದ್ದು, ಭಾರತದ ಜಿಲ್ಲಾ ವ್ಯಾಪಾರಿ ವರ್ಗದಲ್ಲೂ ಮತ್ತು ಸಾರ್ವಜನಿಕವಾಗಿಯೂ ಬಹುಮಟ್ಟಿಗೆ ಹಂಚಲ್ಪಡುತ್ತದೆ. ಅದರ ಹಲವು ಪುಟಗಳು ಈ ಕೆಳಗೆ ಕಂಡ ದರದಲ್ಲಿ ಜಾಹಿರಾತಿಗಾಗಿ ಕಾಯ್ದಿರಿಸಲ್ಪಟ್ಟಿವೆ.

1 ಸಾಮಾನ್ಯ ಪುಟಗಳು 15 ರೂ ಪ್ರತಿಯೊಂದಕ್ಕೂ

2 ,, ಅರ್ಧ ಪುಟ 8 ರೂ. ,,

ಜಾಹಿರಾತು ಮಾಡುವವರು ಜಾಹಿರಾತಿನ ಪ್ರೂಫು ಮೊಬಲಗು ಸಹ ಈ ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿಯ ಕಾರ್ಯದರ್ಶಿಯವರಿಗೆ ನೇರವಾಗಿ ಕಳ್ಳು ಜಾಹಿರಾತನ್ನು 1953 ನೇ ಜುಲೈ 31 ನೇ ತಾರೀಖಿನೊಳಗೆ ಕಳುಹಿಸಬೇಕು. ಜಾಹಿರಾತುಗಳನ್ನು ಸ್ವೀಕರಿಸಲು ಅದೇ ಕಡೆಯ ದಿನ. ಚೆಕ್ಕುಗಳ ಮೂಲಕ ಬರುವ ಹಣಕ್ಕೆ ಕ್ಲಿಯರೆನ್ಸ್ ಚಾರ್ಜು ಸೇರಿಸಿ ಕಳುಹಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಬರೆಯಿರಿ:—

ಕಾರ್ಯದರ್ಶಿ

ದಸರಾ ವಸ್ತು ಪ್ರದರ್ಶನದ ಸಮಿತಿ

ಮೈಸೂರು



ಚಾಮುಂಡೇಶ್ವರಿ ಟಾಕೀಸ್

17-7-53 ರಿಂದ

ಎಲ್ಲೆಡೆಯೂ ಪ್ರದರ್ಶನಾರಂಭ

ತಿರುಂಬಿ ಪಾರ್

(LOOK BACK)

A VALUABLE FLOUR MILL

Complete with 5 H P Kirloskar Elect Motor POLISHER TOOLS & spares now in daily use at No. 2027 OLT R gt M n b Mandi Market Road Mysore yielding a good monthly income is being sold under instructions from the owner by

PUBLIC AUCTION SALE

ON MONDAY the 20th JULY 1953 at 11 A M Sharp

For further particulars & Conditions of sale apply

Messrs A B I D & Co.,

AUCTIONEERS, Statue Square, Mysore

ರಿಜಿ ನಂ. 792 WEEKLY EDITION ಬಿಡಿಯ ಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೭] ಶನಿವಾರ ೧೯-೩-೧೯೫೩ [ಸಂಚಿಕೆ ೪೬

ಪುನಃ ಜಪಾನ್ ಪ್ರವಾಹ; ೨೦೦ ಜನರ ಮರಣ

ನಾಳೆ ನೀರಿನ ಕೆಲಸಗಾರರ ಮುಷ್ಕರವಿಲ್ಲ

ಮೈಸೂರು ೧೯

ನಾಳೆ ನಡೆಯಬೇಕಾಗಿದ್ದ ನೀರಿನ ಕೆಲಸಗಾರರ ಮುಷ್ಕರವನ್ನು ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಸಮ್ಮುಖದಲ್ಲಿ ನೆನ್ನೆ ನಡೆದ ಸಂಧಾನದ ಫಲವಾಗಿ ಸದ್ಯಕ್ಕೆ ನಿಲ್ಲಿಸಲಾಗಿದೆಯೆಂದು ಗೊತ್ತಾಗಿದೆ. ಸಂಧಾನದ ಸಭೆಯಲ್ಲಿ ಎಕ್ಸಿಕ್ಯುಟಿವ್ ಇಂಜನಿಯರ್, ಮಾಣಿಪಾಲಾಸ ವಾಟರ್ ವರ್ಕ್ಸಿನ ಸೂಪರಿಂಟೆಂಡೆಂಟರು, ಕೆಲಸಗಾರರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಭಾಗವಹಿಸಿದ್ದರೆಂದೂ, ಕೆಲಸಗಾರರ ಬೇಡಿಕೆಗಳನ್ನು ಮುಂದಿನ ತಿಂಗಳು ೧೫ನೇ ತಾರೀಖಿನೊಳಗೆ ಈಡೇರಿಸಿಕೊಡುವುದಾಗಿ ಅಧಿಕಾರಿಗಳು ಭರವಸೆಯಿತ್ತರೆಂದೂ ಗೊತ್ತಾಗಿದೆ.

೫೦೦೦ ರೂ. ನಗದು ಮತ್ತು ಆಭರಣಗಳ ಕಳುವು

ರಾಜಧಾನಿಯ ಇಂದ್ರಭವನದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಶಂಕರಲಾಲ್ ಎಂಬುವರ ಮನೆಗೆ ನೆನ್ನೆ ರಾತ್ರಿ ಕಳ್ಳರು ನುಗ್ಗಿ, ಕಬ್ಬಿಣದ ಪೆಟ್ಟಿಗೆಯಲ್ಲಿಡಲಾಗಿದ್ದ ೩,೫೫೫ ರೂ ನಗದು ಮತ್ತು ೧,೪೯೦ ರೂ ಬೆಲೆಯ ಆಭರಣಗಳನ್ನು ಅಪಹರಿಸಿರುವರೆಂದು ವರದಿಯಾಗಿದೆ ಅವರು ಮಲಗಿದ್ದಾಗ ಜೇಬಿನಲ್ಲಿದ್ದ ಬೀಗದಕೈಯನ್ನು ಅಪಹರಿಸಿ, ಕಳ್ಳತನ ಮಾಡಲಾಯಿತೆಂದು ಹೇಳಲಾಗಿದೆ ಪೋಲೀಸರಿಗೆ ದೂರು ಕೊಡಲಾಗಿದೆ

ಗಡಿ ಉಲ್ಲಂಘಿಸಿದುದಾಗಿ ಇರಾನ್ ಮೇಲೆ ಆಪಾದನೆ

ಇರಾನ್ ಮತ್ತು ಇರಾಕ್ ಗಡಿ ದಾಟಿ, ಇರಾಕಿನಲ್ಲಿರುವ ಶಾಂತಿ ಪ್ರಿಯ ಜನರನ್ನು ಪರ್ಷಿಯಾ ಸೈನಿಕರು ಹಿಂಸಿಸಿರುವರೆಂದು ಇರಾಕ್ ಸರ್ಕಾರದ ಪ್ರಚಾರ ಸಂಸ್ಥೆ ಡೈರೆಕ್ಟರರು ತಿಳಿಸಿರುತ್ತಾರೆ ಅವರುಗಳು ೭೧೫ ದನಗಳನ್ನು ಕದ್ದು ಸಾಗಿಸಿರುವುದಾಗಿಯೂ ತಿಳಿದುಬಂದಿದೆ

ಕತ್ತೆಯ ಮೇಲೆ ಕಳ್ಳರ ಮೆರವಣಿಗೆ

ನಂದಿಯಲ್ಲಿ ಬಹುದಿನಗಳಿಂದಲೂ ತೆಂಗಿನಕಾಯಿಗಳನ್ನು ಕಳುವು ಮಾಡುತ್ತಿದ್ದರೆಂಬ ಕಾರಣಕ್ಕಾಗಿ ವೆಂಕಟಸ್ವಾಮಿ ಮತ್ತು ಪ್ಯಾರೀ ಎಂಬುವರನ್ನು ಆ ಊರಿನ ಜನರು ಕತ್ತೆಯ ಮೇಲೆ ಕೂಳ್ಳಿರಿಸಿ ಮೆರವಣಿಗೆ ಮಾಡಿರುವರೆಂದು ವರದಿಯಾಗಿದೆ ಇನ್ನು ಮುಂದೆ ಕಳ್ಳತನ ಮಾಡುವುದಿಲ್ಲವೆಂದು ಅವರುಗಳು ಅನಂತರ ತಿಳಿಸಿದರೆಂದೂ ಹೇಳಲಾಗಿದೆ

ವಿದೇಶೀ ರಾಯಭಾರಿಗಳಿಗೆ ರಾಜಕೀಯ ಸುದ್ದಿ ಇಲ್ಲ

ಭಾರತದಲ್ಲಿರುವ ವಿದೇಶೀ ರಾಯಭಾರಿಗಳಿಗೆ ದೇಶದ ಒಳ ರಾಜಕೀಯಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ವಿಚಾರವಾಗಿ ಯಾವ ಸುದ್ದಿಯನ್ನೂ ಒದಗಿಸಿಲ್ಲವೆಂದು ನೆನ್ನೆ ರಾಜಾಜಿಯವರು ಮದ್ರಾಸು ಶಾಸನ ಸಭೆಯಲ್ಲಿ ತಿಳಿಸಿ, ಆ ತಹ ಸುದ್ದಿಗಳನ್ನ ಸಂಗ್ರಹಿಸಲು ಅವರು ಪ್ರಯತ್ನ ಪಟ್ಟರೆ ಪ್ರತಿಭಟಿಸಲಾಗುವುದೆಂದು ಹೇಳಿರುವರು.

ಹೈಕೋರ್ಟ್ ಜಡ್ಜರಿಗೆ ಹೆಚ್ಚು ಸಂಬಳ

ಬೆಂಗಳೂರು ೧೯

ಮೈಸೂರು ಹೈಕೋರ್ಟಿನ ಶ್ರೇಷ್ಠ ಮತ್ತು ಇತರ ನ್ಯಾಯಾಧೀಶರ ಸಂಬಳವನ್ನು ತಲಾ ೫೦೦ ರೂ ಏನಷ್ಟು ಹೆಚ್ಚಿಸಲು ರಾಷ್ಟ್ರಾಧ್ಯಕ್ಷರ ಸಮ್ಮತಿಸಿರುವರೆಂದು ವರದಿಯಾಗಿದೆ ಕಳೆದ ನವೆಂಬರ್ ತಿಂಗಳಿಂದ ಇದ ಜಾರಿಗೆ ಬರುವುದು ಈಗ ಶ್ರೇಷ್ಠ ನ್ಯಾಯಾಧೀಶರಿಗೆ ೨,೦೦೦ ಮತ್ತು ಇತರರಿಗೆ ೧,೫೦೦ ರೂ ವೇತನ ಬರುತ್ತಿದೆ

ಪತ್ರ ಸಂಪಾದಕರ ದಸ್ತಗಿರಿ ವಾರಂಟಿನ ಅನಾಪತ್ತು

ಪತ್ರಿಕೆ ಸಂಪಾದಕ ಶ್ರೀ ಜನಾರ್ಬಾಗ್ ವಾಲಾರವರನ್ನು ದಸ್ತಗಿರಿ ಮಾಡಿಕೊಳ್ಳುವ ಬಗ್ಗೆ ಹಿರಿಯ ಶಾಸನ ಸಭಾ ಅಧ್ಯಕ್ಷರು ಹೊರಡಿಸಿರುವ ವಾರಂಟನ್ನು ಅವರು ಅವಮಾನಿಸಿ ನಿಲ್ಲಿಸಿರುವರು. ಸಂಪಾದಕರು ೨೦ನೇ ತಾ|| ಸಭೆ ಮುಂದೆ ಬರುವುದಾಗಿ ಅವರ ಪರ ವಕೀಲರು ಇತ್ತ ಭರವಸೆ ಮೇಲೆ ಈ ರೀತಿ ಮಾಡಲಾಗಿದೆಯೆಂದು ಗೊತ್ತಾಗಿದೆ

ಬೆರಿಯಾರವರಿಗೆ ಚಿತ್ರಹಿಂಸೆ

ರಷ್ಯದಲ್ಲಿ ಇತ್ತೀಚೆಗೆ ಉಪ ಪ್ರಧಾನ ಪಟ್ಟದಿಂದ ಪದಚ್ಯುತಿಯಾದ ಲಾವೆಂಟ್ರಿ ಬೆರಿಯಾರವರು ಈವೇಳೆಗಾಗಲೇ ಮೃತರಾಗಿರಬಹುದೆಂದೂ, ಇಲ್ಲವೇ ಭಯಂಕರ ಚಿತ್ರಹಿಂಸೆಗೆ ಒಳಪಟ್ಟಿರುವರೆಂದೂ ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ತಿಳಿಸಿರುತ್ತಾರೆ

ವಿಮಾನಾಪಘಾತದಲ್ಲಿ ೪೧ ಜನರ ಪ್ರಾಣಹಾನಿ

ಅಮೆರಿಕದ ತೀರ ಪ್ರದೇಶದಲ್ಲಿರುವ ವೈಟಿಂಗ್ ಫೀಲ್ಡ್ ಎಂಬಲ್ಲಿಂದ ನೆನ್ನೆ ಹೊರಟ ನೌಕಾ ವಿಮಾನವೊಂದು ಹಾರುತ್ತಿದ್ದಾಗಲೇ ಮರಗಳಿಗೆ ತಗುಲಿ, ಕೆಳಕ್ಕೆ ಉರುಳಿ, ಸಿಡಿದುದರ ಪರಿಣಾಮವಾಗಿ ಅದರಲ್ಲಿದ್ದ ೪೧ ಜನರು ಮೃತಪಟ್ಟರೆಂದು ವರದಿಯಾಗಿದೆ ೫ ಜನರ ಸ್ಥಿತಿ ತೀವ್ರವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು ರಕ್ಷಿಸಲ್ಪಟ್ಟ ೭ ಜನರಲ್ಲಿ ಒಬ್ಬನು ನಂತರ ಮಡಿದನು ವಿಮಾನವು ನೆಲಕ್ಕೆ ಬೀಳುವಾಗ ೩ ಮೋಟಾರು ಕಾರುಗಳನ್ನು ಪುಡಿ ಪುಡಿ ಮಾಡಿತು.

ಸಟ್ಟಾ ಜೂಜು ನಿಲ್ಲಿಸಲು ಮಸೂದೆ ಮಂಡನೆ

ಶಾಸನ ಸಭೆಯಲ್ಲಿ ಚರ್ಚೆ

ಬೆಂಗಳೂರು ೧೯

ಗೃಹ ಮಂತ್ರಿ ಶ್ರೀ ಹೆಚ್ ಸಿದ್ಧವೀರಪ್ಪನವರು ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ನ್ಯೂಯಾರ್ಕ್ ಹತ್ತಿ ದರದ ಬಗ್ಗೆ ನಡೆಯುತ್ತಿರುವ ಸಟ್ಟಾ ಜೂಜನ್ನು ನಿಷೇಧಿಸುವ ಸಂಬಂಧವಾಗಿ ಪೋಲೀಸು ಶಾಸನದ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಮಂತ್ರಿಗಳು ಮಾತನಾಡಿ ಇತ್ತೀಚೆಗೆ ಹೈಕೋರ್ಟಿನವರು ಕೊಟ್ಟ ತೀರ್ಪಿನಲ್ಲಿ ಈ ತರಹದ ಶಾಸನವು ಅಗತ್ಯವೆಂದು ತಿಳಿಸಿದ್ದರೆಂದು ಎಂದರು ಈಗಿರುವ ಈ ಶಾಸನದ ವಿಧಿಗಳು ಕ್ಲಬ್ಬುಗಳಿಗೆ ಅವಲಂಬಿಸುವುದೇ ಎಂಬ ತಮಗೆ ನಿಖರವಾಗಿಲ್ಲವೆಂದು ಅವರು ಅಭಿಪ್ರಾಯಪಟ್ಟರು

ಶ್ರೀ ಬಿ ನಾರಾಯಣಸ್ವಾಮಿಯವರು ಮಾತನಾಡಿ ಮೈಸೂರು ನಗರದಲ್ಲಿ ಗೇಮ್ಸ್ ಆಫ್ ಚಾನ್ಸ್ ಕ್ರೀಡೆಯಲ್ಲಿ ತೊಡಗಿರುವ ಒಂದು ಕ್ಲಬ್ಬು ಇರುವುದಾಗಿ ಹೇಳಿದರು ಅನೇಕ ಅಧಿಕಾರಿಗಳು ಬಹುಕಾಲ ಅಲ್ಲಿ ಇರುವುದಾಗಿ ಅವರು ಹೇಳಿದರು

ಶ್ರೀ ಎಂ ವಿ ರಾಮರಾಯರು ಮಾತನಾಡಿ, ಮಸೂದೆಗೆ ಜರೂರಾತಿ ಕಾಣಬರಲಿಲ್ಲವೆಂದರು, ಚುನಾಯಿತ ಸಮಿತಿಗೆ ಅದನ್ನು ಒಪ್ಪಿಸುವಂತೆ ಶ್ರೀ ಎ ಭೀಮಪ್ಪನಾಯಕರು ಸೂಚಿಸಿದರು. ಚರ್ಚೆ ಮುಂದುವರೆಸಲ್ಪಟ್ಟಿತು

ಹಿರಿಯ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತದ ಮಸೂದೆಯು ಚರ್ಚೆಯಾಗಿ ಎಲ್ಲ ಸದಸ್ಯರೂ ತಮ್ಮ ಅಭಿಪ್ರಾಯವಿತ್ತರು. ಬಳ್ಳಾರಿಯು ಮೈಸೂರಿಗೆ ಸೇರುವುದರಿಂದ ಮೈಸೂರು ಬಿ ದರ್ಜೆಯಿಂದ 'ಎ' ದರ್ಜೆ ಸಂಸ್ಥಾನವಾಗುವುದೆಂದು ಅವರು ಭಾವಿಸಿದರು. ಆದರೆ ಈರೀತಿ ಸೇರ್ಪಡೆಯಿಂದ ಭಾಷಾ ಪ್ರಾಂತರಚನೆಗಾಗಿ ದೇಶವನ್ನು ವಿಂಗಡಿಸಲಾಗುವುದೆಂಬ ತತ್ವವನ್ನು ಅಂಗೀಕರಿಸಿದಂತಾಗಲಿಲ್ಲವೆಂದೂ ಅವರು ಹೇಳಿದರು

೧ ಗಂಟೆಗೆ ೧೫ ಸಾವಿರ ಮೈಲಿ ವೇಗದಲ್ಲಿ ಸಾಗುವ ರಾಕೆಟ್ಟನ್ನು ಅಮೆರಿಕದ ವೈಜ್ಞಾನಿಕರು ಕಂಡುಹಿಡಿದಿರುವರು

ಪ್ರವಾಹದಿಂದ ಪುನಃ ಜಪಾನಿನಲ್ಲಿ ೨೦೦ ಮರಣ

ಜಪಾನಿನ ಆರಿಟಾ ಮತ್ತು ಹಿಡಾಕಾ ನದಿಗಳಲ್ಲಿ ಏಕಾಏಕಿ ಪ್ರಚಂಡ ಪ್ರವಾಹವು ಬಂದು ಹಲವು ಊರುಗಳಲ್ಲಿ ನೂರಾರು ಮನೆಗಳು ಕೊಚ್ಚಿ ಹೋಗಿ, ೨೦೦ ಜನರು ಮಡಿದು, ಸಾವಿರ ಮಂದಿ ಪತ್ತೆಯಿಲ್ಲವೆಂದು ವರದಿಯಾಗಿದೆ ೩ ವಾರಗಳ ಹಿಂದೆ ಆ ದ್ವೀಪದಲ್ಲಿ ಭಾರಿ ಪ್ರವಾಹ ಬಂದು ಅನೇಕರು ಮಡಿದಿದ್ದರು

ಬೇಗಂ ಆಗಾಖಾನ್ ದರೋಡೆಗಾರರಿಗೆ ಕ್ರೂರ ಶಿಕ್ಷೆ

ಬೇಗಂ ಆಗಾಖಾನರ ೨ ಲಕ್ಷ ಪೌಂಡ್ ಬೆಲೆಯ ಒಡವೆಗಳನ್ನು ಅಪಹರಿಸಿದ ಸಂಬಂಧವಾಗಿ ಫ್ರಾನ್ಸಿನ ನ್ಯಾಯಾಸ್ಥಾನವೊಂದು ೭ ಜನರಿಗೆ ೪ ವರ್ಷಗಳಿಂದ ೧೦ ವರ್ಷ ಕಠಿಣಸಜಾ ವಿಧಿಸಿದೆ ಆದರೆ ಯುದ್ಧದಲ್ಲಿ ಖ್ಯಾತಿಗಳಿಸಿದ್ದ ಕರ್ನಲ್ ಲಿಂಡೈವಾಟ್ಸನ್ ಮತ್ತು ಇತರ ಮೂವರನ್ನು ಖುಲಾಸೆ ಮಾಡಲಾಗಿದೆ.

ಮಕ್ಕಳನ್ನು ಭಾವಿಗೆಸೆದು ತಂದೆ ಆತ್ಮಹತ್ಯ ಯತ್ನ

ದಾರುಣವಾದ ಬಡತನ ತಾಳಲಾರದೆ, ಕೊಟ್ಟಾಯಂ ಬಳಿ ಕೊತ್ತಮಂಗಲದ ಒಬ್ಬನು ತನ್ನ ಮಕ್ಕಳನ್ನು ಒಂದಾಗುತ್ತಲೊಂದರಂತೆ ತುಂಬಿದ ಭಾವಿಯೊಂದಕ್ಕೆ ಎತ್ತಿ ಹಾಕಿದನೆಂದೂ, ಅನಂತರ ತಾನೂ ಆತ್ಮಹತ್ಯ ಮಾಡಿಕೊಳ್ಳಲೆತ್ನಿಸುತ್ತಿದ್ದಾಗ ಬಂಧಿಸಲ್ಪಟ್ಟನೆಂದೂ ವರದಿಯಾಗಿದೆ

ಆಸ್ಟ್ರೇಲಿಯಕ್ಕೆ ಕಾರಿಯಪ್ಪನವರ ಪ್ರಯಾಣ

ಆಸ್ಟ್ರೇಲಿಯದಲ್ಲಿ ಭಾರತದ ರಾಯಭಾರಿಯಾಗಿ ನೇಮಕವಾಗಿರುವ ಜನರಲ್ ಕೆ ಎಂ ಕಾರಿಯಪ್ಪನವರು ನೆನ್ನೆ ಬೊಂಬಾಯಿಯಲ್ಲಿ ಹಡಗು ಹತ್ತಿ ಸಿಡ್ನಿಗೆ ಪ್ರಯಾಣ ಬೆಳಸಿದರು. ಅವರೊಡನೆ ಅವರ ಪುತ್ರಿ ಮತ್ತು ಸೋದರ ಸೊಸೆ ಇದ್ದರು

ಅಲಹಾಬಾದ್ ವಿದ್ಯಾರ್ಥಿಗಳ ಪ್ರದರ್ಶನ

ವಿಶ್ವವಿದ್ಯಾಲಯ ಸಂಘದಲ್ಲಿ ಎಕ್ಸ್ ಅಫಿಸಿಯೊ ಸದಸ್ಯ ಪದ್ಧತಿಯನ್ನು ಜಾರಿಗೆ ತಂದಿರುವುದಕ್ಕಾಗಿ ಅಲಹಾಬಾದ್ ಕಾಲೇಜಿನ ೩೦೦ ವಿದ್ಯಾರ್ಥಿಗಳು ನೆನ್ನೆ ಪ್ರಧಾನ ನೆಹರೂರವರ ಸ್ವಂತ ಭವನ ಆನಂದ ಭವನದ ಎದುರಿನಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಕಿಂಗ್‌ಕಾಂಗ್ ಕುಸ್ತಿ ಪ್ರೇಕ್ಷಕರ ಮರಣ

ನೆನ್ನೆ ಸಂಜೆ ಬೆಂಗಳೂರಿನಲ್ಲಿ ದಲ್ಬಾರ್‌ಸಿಂಗ್ ಮತ್ತು ಕಿಂಗ್‌ಕಾಂಗ್‌ರವರ ಕುಸ್ತಿಯನ್ನು ಮರದ ಮೇಲೆ ಕುಳಿತು ನೋಡುತ್ತಿದ್ದಾಗ ೩ ಜನರಿಗೆ ವಿದ್ಯುಚ್ಛಕ್ತಿ ತಂತಿಯು ತಗುಲಿ ಅವರು ಮೃತಪಟ್ಟರೆಂದು ವರದಿಯಾಗಿದೆ.

ರಾಘವೇಂದ್ರ ಸ್ವಾಮಿಗಳ ಮಠ

ಮೈಸೂರು ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಐದನೇ ವರ್ಷದ ಮಹೋತ್ಸವವು ನಾಳೆ ಮಾಮೂಲಿನಂತೆ ನಡೆಯುವುದು.

ವಾರ ಭವಿಷ್ಯ

ತಾ|| ೧೯-೭ ರಿಂದ ೨೫-೭ ರ ವರೆಗೆ

ಮೇಷ — ಚಿತ್ತದ ಅಸ್ವಸ್ಥತೆ, ಆರೋಗ್ಯ ನೆಟ್ಟಗಿರದ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ತೊಂದರೆ, ಜಗಳ ಕಾಸಿನ ತೊಂದರೆ ಗೃಹ ಕಲಹ ತಾ|| ೨೧, ೨೩ ಅಪಘಾತ ಭಯ ಪ್ರವಾಸದಲ್ಲಿ ಹಾನಿ

ವೃಷಭ — ಆರೋಗ್ಯ, ಆರ್ಥಿಕ ಸ್ಥಿತಿಗಳು ಲಾಭಕರ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಭಯ ದೂರ, ಸುಖ ಪ್ರವಾಸ, ಮಾನ ಸನ್ಮಾನ ತಾ|| ೧೯, ೨೦ ಖರ್ಚು ಗಲಾಟೆ

ಮಿಥುನ — ಆರೋಗ್ಯ ನೆಟ್ಟಗೆ, ದೊಡ್ಡ ಜವಾಬ್ದಾರಿ ಕೆಲಸದಿಂದ ಮುಕ್ತಿ, ಆರ್ಥಿಕ ಸ್ಥಿತಿ ಉತ್ತಮ, ಸಂಸಾರ ಕ್ಕಾಗಿ ವಿಪರೀತ ಖರ್ಚು ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಹಾನಿ ಇಲ್ಲ ಪ್ರವಾಸದಲ್ಲಿ ಎಚ್ಚರ ಬೇಕು ತಾ|| ೨೧, ೨೩ ಮಕ್ಕಳಿಗೆ ಕ್ಲೇಶ ಖರ್ಚು ಹೆಚ್ಚು

ಕಟಕ — ವ್ಯಾಪಾರ ಉದ್ಯೋಗಗಳಲ್ಲಿ ಹಾನಿ, ನೌಕರಿಯಲ್ಲಿ ಅಧಿಕಾರಿಗಳಿಂದ ಕ್ಲೇಶ ಪ್ರವಾಸಕ್ಕೆ ವಿಘ್ನ, ಆರೋಗ್ಯ, ಆರ್ಥಿಕ ಸ್ಥಿತಿ ತೃಪ್ತಿಕರವಲ್ಲ, ಜಬಾಬ್ದಾರಿ ಹೆಚ್ಚಳ ಮತ್ತು ವಾಹನಗಳಿಂದ ಅಪಘಾತ ತಾ|| ೧೯, ೨೦ ಶತ್ರು ಕ್ಲೇಶ, ಬಂಧು ವಿರೋಧ

ಸಿಂಹ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ವಿರದು, ವ್ಯಾಪಾರ ಉದ್ಯೋಗ, ನೌಕರಿಗಳಲ್ಲಿ ಸಾಧಾರಣ ಸ್ಥಿತಿ ತಾ|| ೨೧, ೨೩ ಕಲಹ ವಿದ್ಯುಚ್ಛಕ್ತಿ ಭಯ

ಕನ್ಯಾ — ಮಹತ್ಕಾರ್ಯದಲ್ಲಿ ಜಯ, ಆರೋಗ್ಯ ತೃಪ್ತಿಕರ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ ತಾ|| ೨೪, ೨೫ ಖರ್ಚು, ಆಪ್ತ ಬಂಧು ಮಿತ್ರ ರ ಭೇಟಿ

ತುಲಾ — ಸಾಧುಜನರ ಸೇವೆ ಲಭ್ಯ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ತೊಂದರೆ ಹೋಗುವುದು, ಮೇಲಧಿಕಾರಿ ಪ್ರೀತಿ, ಆರೋಗ್ಯ ಉತ್ತಮ, ಪ್ರವಾಸದಲ್ಲಿ ಸುಖ ತಾ|| ೨೩, ೨೪ ಮಿತ್ರ ಭೇಟಿ, ಸ್ತ್ರೀ ಸುಖ

ವೃಶ್ಚಿಕ — ಆರೋಗ್ಯದಲ್ಲಿ ಸ್ವಲ್ಪ ಏರುಪೇರು ಆರ್ಥಿಕ ಚಿಂತೆ ದೂರ ಪ್ರವಾಸದ ದೃಷ್ಟಿ ಸಂಭ್ರಮ ಪ್ರಸನ್ನ ವಿಘ್ನ ಯೋಗಿಸುವುದು ತಾ|| ೧೯, ೨೦ ಅಧಿಕಾರಿಗಳ ಅನುಗ್ರಹ, ಪ್ರಯತ್ನ ಕಾರ್ಯದಲ್ಲಿ ವಿಘ್ನ

ಧನು — ಆರೋಗ್ಯ ಕೆಡಬಹುದು ಕೆಲಸ ಕಾರ್ಯಕ್ಕೆ ಸ್ವಲ್ಪ ಹಿತ ಆರ್ಥಿಕ ಸ್ಥಿತಿ ತೃಪ್ತಿಕರ, ಮಾನಸಿಕ ಕ್ಲೇಶ ವ್ಯಾಪಾರಿಗಳಿಗೆ ನಷ್ಟ ಕೆಲ ಪೀಡೆ ತಾ|| ೨೧, ಪ್ರವಾಸದಲ್ಲಿ ಭಯ ಅಂಗ ಭಯ ಹಾನಿ

ಮಕರ — ರಾಜರ ಹಾಲೆರೆದಂತೆ ಎಂಬ ಸನ್ನಿವೇಶ ಬಗ್ಗೆ ನಿಷ್ಠೆ ವಿಷಯ ಪಾಲು ವಿದ್ಯಾ ಪ್ರಗತಿ ಬೇಳ ವರಿ ವಿದ್ಯಾ ಕಾರಣ ರಾಗುವರು, ಪ್ರವಾಸ ಗಿರಿ ತಾ|| ೨೩, ೨೪ ವಿಪ್ರ ಹಾನಿ ಇಲ್ಲ.

ಕುಂಭ — ಆರೋಗ್ಯ, ಆರ್ಥಿಕ ಸ್ಥಿತಿ ಸಮಾಧಾನಕರ, ವ್ಯಾಪಾರಾದಿಗಳಲ್ಲಿ

ಈ ವರ್ಷ ಚಿಡ್ಡಿ ವಿಸರ್ಜನೆ

ಮೈಸೂರು ೧೯

ಕಾಡು ಪ್ರದೇಶಗಳ ಸಮೀಪದಲ್ಲಿಯ ಜಮೀನುಗಳ ಬೈರಿಗೆ ಆನೆಗಳಿಂದ ಉಂಟಾಗುವ ನಷ್ಟ ತಪ್ಪಿಸಲು ಸರ್ಕಾರದವರು ಈ ವರ್ಷ ಚಿಡ್ಡಿ ವಿಸರ್ಜನೆಯನ್ನು ಮಾಡಲು ಯೋಚಿಸುತ್ತಿರುವರೆಂದು ವರದಿಯಾಗಿದೆ ಈ ಕೆಲಸ ಸಾಲಿಗೆ ಸರ್ಕಾರದವರು ಈ ಬಗ್ಗೆ ೯೦ ಸಾವಿರ ರೂ ಗಳನ್ನು ತೆಗೆದಿಟ್ಟಿರುವರು

ಹೂವಿನ ಪಲ್ಲಕ್ಕಿ ಉತ್ಸವ

ಮೈಸೂರು ಶಿವರಾಂಪೇಟೆ ಶ್ರೀ ಆರ್ಯ ವೈಶ್ಯ ಬಾಲಕ ಭಕ್ತಮಂಡಲಿಯವರು ಶ್ರೀ ರಾಮೋತ್ಸವದ ಅಂಗವಾಗಿ ಹೂವಿನ ಪಲ್ಲಕ್ಕಿ ಉತ್ಸವವನ್ನು ಇಂದು ಸಂಜೆ ೭ ಗಂಟೆಗೆ ಏರ್ಪಡಿಸಿರುತ್ತಾರೆ ಕೊತ್ವಾಲರಾಮಯ್ಯ, ಸಯ್ಯಾಜಿರಾವ್ ಅಶೋಕಾ, ಚಾಮುಲ್ ಸುದ ಕಾಳಮ್ಮನಗುಡಿ ಬೀದಿಗಳಲ್ಲಿ ಮೆರವಣಿಗೆ ಹೋಗಿ ಬರವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಂಗ್ಳೂರು ೭ ೩೦ ಎ ಎ ನಾರಾಯಣ ಪ್ರಿ ಸಾಂಗಸ್ವರ ಮ ಧ್ಯಾಹ್ನ ೧-೩೦ ಎಸ್ ರಾಜೇಶ್ವರರಾವ್ ರೆಕಾರ್ಡ್ ಎಸ್ ರಾಮಚಂದ್ರರಾವ್ ಸಂಗೀತ ಸಂಜೆ ೬ ೩೦ ಎ ವಿ ಸ ರಾಮಚಂದ್ರನ್ ಗಸ್ವರ ೭ ಗಾನವಿಹಾರ ೭ ೧೫ ಹಿಂದಿ ಗೀತೆಗಳು ೭ ೪೫ ಸ್ತ್ರೀ ೮ ೧೫ ಎಚ್ ಚನ್ನಕೇಶವಯ್ಯ ಸಂಗೀತ ೮-೩೦ ಕನ್ನಡದಲ್ಲಿ ವಾರ್ತೆ ೯-೧೫ ಕೆ ಗುರುದತ್ ಇಂಗ್ಲಿಷ್ ಭಾಷಣ ೯ ೩೦ ಕರ್ನಾಟಕ ಸಂಗೀತ

ಪೊಲೀಸು ಠಾಣೆ ಪಕ್ಕದಲ್ಲೇ ಅಕ್ಕಿ ಕಳುವು

ಲಕ್ಷ್ಮವಳ್ಳಿ ಯೋಜನೆಯ ರೇಷನ್ ಡಿಪೋವಿಗೆ ಸೇರಿದ ೧೧ನೇ ತಾ|| ಕಳ್ಳರು ನುಗ್ಗಿ ೩೭ ಮೂಟೆ ಸಕ್ಕರೆಯನ್ನು ಕದ್ದಿರುತ್ತಾರೆ ಡಿಪೋವಿಗೆ ಸೇರಿದ ಪೆಟ್ಟಿಗೆಯಲ್ಲೂ ೫೦ ರೂಪಾಯಿಗಳು ಮತ್ತು ೧೦೦ ಪೀಸ ಸಕ್ಕರೆಯೂ ಕಳುವಾಗಿದೆ ಈ ಕಟ್ಟಡವು ಪೊಲೀಸು ಠಾಣೆಯಬಳಿಯಲ್ಲಿಯೇ ಇದೆ

ಲಾಭ, ಕೋರ್ಟು ಕಾರ್ಯ ಜಯ ತಾ|| ೧೯, ೨೦ ಅಲ್ಪ ಪ್ರವಾಸ, ಸಜ್ಜನರ, ಸಹವಾಸ

ಮೀನ — ಸ್ವೀಕೃತ ಕಾರ್ಯ ಜಯ ಆರೋಗ್ಯ ಉತ್ತಮ, ಸಾಂಪತ್ತಿಕ ಸ್ಥಿತಿ ತೃಪ್ತಿಕರ ವಾಗುವುದು ವ್ಯಾಪಾರಾದಿಗಳಲ್ಲಿ ಕಷ್ಟ ಪೀಡೆ ದೂರ ತಾ|| ೧೯, ೨೦ ಖರ್ಚು, ಮಿತ್ರಭೇಟಿ

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ಪಥ್ಯಕ್ಕೂ, ಗೃಹಕ್ಕೂ, ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಶುಚಿರುಚಿಯಾದ ನಾ ನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ಮೊದಲಿನ ಸಪ್ಪರದ ಸ್ಮರಣಾರ್ಥ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೀಶ್ವರ ಬಿಲ್ಡಿಂಗ್)

ಡಿ ಸುಬ್ಬಯ್ಯ ರಸ್ತೆ ಮೈಸೂರು

೮ ವರ್ಷಗಳಿಂದ ಆಹಾರ, ನೀರು ಸೇವಿಸದ ತರುಣಿ

ಹೈದರಾಬಾದಿನ ಸಿದ್ಧೇಶ್ವರದ ಬಳಿ ಯಾನಗರ ಎಂಬಲ್ಲಿರುವ ಮಾಣಿಕ್ಯ ವ್ವ ಎಂಬ ೨೪ ವರ್ಷದ ತರುಣಿಯು ಕಳೆದ ೮ ವರ್ಷಗಳಿಂದ ಆಹಾರವನ್ನಾಗಲಿ ನೀರನ್ನಾಗಲಿ ಸೇವಿಸುತ್ತಿಲ್ಲವೆಂದು ವರದಿಯಾಗಿದೆ ಆಕೆಗೆ ಜಲ ಮಲಬಾಧೆಯೂ ಇರುವುದಿಲ್ಲ ಮಧ್ಯರಾತ್ರಿ ಪ್ರಾರ್ಥನೆಯನ್ನು ಮುಗಿಸಿ, ಆಕೆಯು ಗುಡ್ಡದ ಮೇಲಿನ ದೇವಾಲಯದ ಶಿವಲಿಂಗದ ಬಳಿ ನೆಲದ ಮೇಲೆ ಬಟ್ಟೆ ಹಾಸಿ ನಿದ್ರೆಯೂ ಮಲಗುವಳು ಮುಂಜಾನೆ ಎದ್ದು ಗುಡ್ಡದಿಂದ ಕೆಳಗೆ ಹರಿಯುವ ನದಿಯಲ್ಲಿ ಸ್ನಾನ ಮಾಡಿ ದೇವಾಲಯಕ್ಕೆ ಪ್ರಾರ್ಥನೆಗಾಗಿ ಹಿಂದಿರುಗುವಳು ದಿನವೆಲ್ಲಾ ಧ್ಯಾನಾಸಕ್ತಳಾಗಿರುವಳು ಐಹಿಕ ಮತ್ತು ಪಾರಮಾರ್ಥಿಕ ವಿಷಯಗಳ ಬಗ್ಗೆ ಜನರು ಆಕೆಯನ್ನು ಸಲಹೆ ಕೇಳಲು ಬರುವರು ಯಾರಾದರೂ ಆಕಸ್ಮಾತ್ ತನ್ನ ಶರೀರವನ್ನು ಸ್ಪರ್ಶಿಸಿದರೆ ಆಕೆಗೆ ಹಲವಾರು ದಿನಗಳ ತನಕ ದುಃಖವಾಗುತ್ತದೆ

೧೩ನೇ ವಯಸ್ಸಿನಲ್ಲಿ ಆಕೆಯ ವಿವಾಹವಾಗಿದ್ದಿತು ೧೫ ವರ್ಷವಾಗ ವರಗೂ ಸಾಮಾನ್ಯರಂತೆ ಇದ್ದಳು ನಂತರ ಆಹಾರ ಸೇವನೆಯನ್ನು ಬಿಟ್ಟಳು ಪ್ರಾಪ್ತ ವಯಸ್ಸಾದ ನಂತರ ಗಂಡನೊಡನೆ ಇರಲು ಆಕೆಯು ಒಪ್ಪಲಿಲ್ಲ ಇದನ್ನು ಕಂಡ ಮೊದಲಿಗರು ಆಕೆಯ ಆರೋಗ್ಯಕ್ಕೆ ಮಂತ್ರವಾದಿ ... ಶೀಲ ಶ್ರಮ ... ಆಕೆಯ ... ರವವು ಹುಟ್ಟಿತು ದೇವರ ಹೆಸರಿನಲ್ಲಿ ಪ್ರಾಣಿ ಬಲಿ ಕೊಡಕೂಡದೆಂದು ತನ್ನಲ್ಲಿಗೆ ಬರುವವರನ್ನೆಲ್ಲಾ ಆಕೆಯು ಪ್ರಾರ್ಥಿಸುತ್ತಿರುವಳು

ಪ್ರವಾಹದಿಂದ ಗದ್ದೆಗಳಿಗೆ ಮರಳು

ಸ್ವಂ ಸು] ಟಿ ನರಸೀಪುರ ೧೮

ಇತ್ತೀಚೆಗೆ ಬಂದ ಪ್ರವಾಹದಿಂದ ತಿರುಮಕೂಡ್ಲಿನಲ್ಲಿ ಹಾವುಗಳ ಕಾಟ ವಿಪರೀತವಾಗಿರುತ್ತದೆ ಗದ್ದೆಗಳಲ್ಲಿ ಮರಳು ಬಂದು, ಅನೇಕ ಜಮೀನುಗಳಲ್ಲಿ ನಾಟಿ ಮಾಡಲು ಅವಕಾಶವಿಲ್ಲವಾಗಿದೆ ಅಧಿಕಾರಿಗಳು ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಏರ್ಪಡಿಸಲಿರುವರೆಂದು ಗೊತ್ತಾಗಿದೆ ಹಳೆಯ ಊರಿನ ರೈತರಿಗೆ ಹೊಸ ಊರಿನಲ್ಲಿ ಮನೆ ಕಟ್ಟಲು ನಿವೇಶನ ಕೊಡಲಾಗಿದೆ

ರಾಜಕಮಲ್, ಮೈಸೂರು

17-7 53ರಿಂದ : ಅನೋಖಿ ಪ್ರಾರಂಭ

ಪ್ರತಿ ದಿನ 3 ಆಟಗಳು

ಜೆಮಿನಿಯವರ

ವಯ್ಯಾರಿ ಭಾಮ

(ತೆಲುಗು)

ಪಾತ್ರ ಎಸ್ ವರಲಕ್ಷ್ಮಿ, ಟಿ ಎಸ್ ಆರ್ ಸುಲೋಚನಾದೇವಿ, ನಾಗೇಶ್ವರರಾವ್

ಹುಡುಗಿಯು ಹುಡುಗನಾದ ಪ್ರಸಂಗ

ಉತ್ತರ ಪ್ರದೇಶದ ಬರ್ಲಿ ಆಸ್ಪತ್ರೆಯಲ್ಲಿ ೧೯ ವರ್ಷದ ಯುವತಿಯೊಬ್ಬಳು ಯುವಕನಾಗಿ ಪರಿವರ್ತನೆಯಾದ ಸುದ್ದಿಯು ವರದಿಯಾಗಿದೆ ಆಕೆಯು ಒಂದು ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಳು. ಪ್ರಾಪ್ತ ವಯಸ್ಸಾದ ನಂತರ ಮಾತಾಪಿತೃಗಳು ಆಕೆಯ ವಿವಾಹವನ್ನು ಗೊತ್ತುಪಡಿಸಬೇಕೆಂದು ಯೋಚಿಸಿ, ಆಕೆಯ ದೇಹದಲ್ಲಿ ಸರಿಯಾಗಿಲ್ಲದ ಬಗ್ಗೆ ಕಾತರಪಟ್ಟು, ಆಸ್ಪತ್ರೆಗೆ ಆಕೆಯನ್ನು ಸೇರಿಸಿದ್ದರು ಹಲವಾರು ದಿನಗಳ ಪರೀಕ್ಷೆಯ ನಂತರ ಶಸ್ತ್ರ ಚಿಕಿತ್ಸೆ ಮೂಲಕ ಅವಳು ಪುರುಷನಾಗಿ ಪರಿವರ್ತನೆಯಾಗುವ ಚಿಹ್ನೆಗಳು ಕಂಡು ಬಂದ ಮೇಲೆ ಡಾ|| ಸಿ ವಿ ಪಿಂಲ್ ರವರು ಶಸ್ತ್ರ ಚಿಕಿತ್ಸೆ ನಡೆಸಿದರು ಆಕೆಯ ಹೆಸರು ಮೊದಲು ಚನ್ನೋರಿ ದೇವಿ ಎಂದು ಇತ್ತು ಚಂದ್ರ ಪ್ರಕಾಶ್ ಎಂದು ಈಗ ಬದಲಾಯಿಸಲ್ಪಟ್ಟಿರುವುದು

ಆಂಧ್ರದ ಮುಸೂದೆಯ ಚರ್ಚೆ

ಮೊನ್ನೆ ಹಿರಿಯ ಶಾಸನಸಭೆಯಲ್ಲಿ ಆಂಧ್ರಪ್ರಾಂತ ನಿರ್ಮಾಣಕ್ಕೆ ಸಂಬಂಧಿಸಿದ ಮುಸೂದೆಯು ಚರ್ಚಿಸಲ್ಪಟ್ಟಿತು ಕಿರಿಯ ಸಭೆಯಲ್ಲಿ ಈ ವಿಷಯವು ಮೊನ್ನೆ ಬಂದಿದ್ದಾಗ ಮುಖ್ಯಮಂತ್ರಿಯವರು ಮಾತನಾಡಿ, ಬಳ್ಳಾರಿ ತಾಲ್ಲೂಕಿನ ಸಮಸ್ಯೆಯನ್ನು ಸರಿ ಪಡಿಸಿ ಮುಂದೆ ಆಂಧ್ರ ಮುಖಂಡರು ತರಲೆತ್ತ ಸುವುದು ಸರಿಯಲ್ಲವೆಂದು ಹೇಳಿದರು

ಪ್ರೈಮರಿ ಶಾಲಾ ಆರಂಭೋತ್ಸವ

ಪಿರಿಯಾಪಟ್ಟಣದ ತಾಲ್ಲೂಕು ಬಸವಾಪುರದ ಹೊಸ ಪ್ರೈಮರಿ ಶಾಲೆಯ ಆರಂಭೋತ್ಸವವನ್ನು ಮೊನ್ನೆ ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳು ನೆರವೇರಿಸಿದರು ಜಿಲ್ಲಾಬೋರ್ಡು ಅಧ್ಯಕ್ಷರಾದ ಶ್ರೀ ಎಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಕೆನಡಾಕ್ಕೆ ಕಾಮೇಶ್ವರಮ್ಮನವರ ಪ್ರಯಾಣ

ಕೆನಡಾದಲ್ಲಿ ನಡೆಯುವ ವಿಶ್ವದ ಮಹಿಳೆಯರ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿರುವ ಶ್ರೀಮತಿ ಬಿ ಕಾಮೇಶ್ವರಮ್ಮನವರು ನೆನ್ನೆ ಬೆಂಗಳೂರುಮಾರ್ಗವಾಗಿ ದೆಹಲಿಗೆ ಪ್ರಯಾಣ ಮಾಡಿದರು

SRI GAYATHRI TALKIES

From 19-7-53 · For 2 days

Warner Bros

ABOUT FACE

(Technicolor)

Starring - Gordon McCrae and Eddie Bracken

NEXT CHANGE

R K O s

A DANGER OF PROFESSION

Edited, Printed and Published by A R Nagarajan at Sadhvi Press, D Subbaiah Road, Mysore.

ಫೋನ್ ನಂ 792 || ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೦-೬-೧೯೫೩ [ಸಂಚಿಕೆ ೩೪೦

ಈ ವಾರದಲ್ಲಿ ಕೊರಿಯ ಯುದ್ಧದ ಮುಕ್ತಾಯ?

ನ್ಯಾಯಾಧೀಶರ ಹುಟ್ಟಿದ ತಾರೀಖಿನ ತನಿಖೆ

ಮಟ್ಟಿದೊಡ್ಡಿ ಪ್ರಕರಣಕ್ಕೆ ಸಂಬಂಧವಿಲ್ಲವೆಂದು ಹೇಳಿಕೆ

ಬೆಂಗಳೂರು ೨೦

ರಾಮನಗರ ತಾಲ್ಲೂಕು ಮಟ್ಟಿದೊಡ್ಡಿ ಗ್ರಾಮದಲ್ಲಿ ಬೆಂಕಿ ಇಟ್ಟ ಆಪಾದನೆಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ತೀರ್ಪು ಕೊಡಬೇಕಾಗಿದ್ದ ದಿನವೇ, ಅಂದರೆ ೨೮-೫-೫೩ ರಂದ ಬೆಂಗಳೂರಿನ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶ ಶ್ರೀ ಗೋವಿಂದ ಶರ್ಮರಿಗೆ ಪತ್ರ ಬರೆದು ಅವರು ಹುಟ್ಟಿದ ತಾರೀಖನ್ನು ಕೇಳಲಾಯಿತೇ, ಎಂಬುದಾಗಿ ಕಿರಿಯ ಶಾಸನ ಸಭೆಯಲ್ಲಿ ಮೊನ್ನೆ ಶ್ರೀ ಎಂ ವಿ ರಾಮರಾಯರು ಮಾಡಿದ ಪ್ರಶ್ನೆಗೆ ಉತ್ತರವೀಯುತ್ತಾ, ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಆ ದೇ ಈ ವಿಷಯವಾಗಿ ಹೈಕೋರ್ಟಿನ ರಿಜಿಸ್ಟ್ರಾರ್‌ರವರನ್ನು ಕೇಳಲಾಯಿತೆಂದೂ, ಸದರಿ ಪ್ರಶ್ನೆಯು ಬಹುದಿನಗಳಿಂದಲೂ ಇತ್ಯರ್ಥವಾಗದೆ ತನಿಖೆಯಲ್ಲಿದ್ದುದಾಗಿಯೂ ಹೇಳಿದರು ದಿನಚರಿ ವ್ಯವಹಾರಕ್ಕೆ ಸಂಬಂಧಿಸಿದ ಕಾರ್ಯವಿಧಾನದ ದಿನ ಮಟ್ಟಿದೊಡ್ಡಿ ಪ್ರಕರಣದ ಮೊಕದ್ದಮೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಮಂತ್ರಿಗಳು ಹೇಳಿದರು

ಉಪ ಪ್ರಶ್ನೆಗಳಿಗೆ ರೆವಿನ್ಯೂ ಮಂತ್ರಿಗಳು ಉತ್ತರವಿತ್ತು ಶ್ರೀ ಶರ್ಮರ ಸರಿಯಾದ ಹುಟ್ಟಿದ ತಾರೀಖನ್ನು ತಿಳಿಸಲು ಮದ್ರಾಸು ಲಾ ಕಾಲೇಜು, ಮೈಸೂರು ಇನ್ಷೂರೆನ್ಸ್ ಇಲಾಖೆ ಮತ್ತು ತಿರುವಾಂಕೂರು ವಿಶ್ವ ವಿದ್ಯಾಲಯಗಳಿಗೆ ಬರೆಯಲಾಗಿತ್ತೆಂದು ಹೇಳಿದರು ನ್ಯಾಯಾಧೀಶರು ಕಾಲೇಜಿಗೆ ಸೇರಿದಾಗ ಹುಟ್ಟಿದ ತಾರೀಖು ೧೫-೬-೧೮೯೮ ಎಂದೂ, ಸರ್ವಿಸ್ಸಿಗೆ ಬಂದಾಗ ೧೫-೬-೧೮೯೧ ಎಂದೂ ತಿಳಿಸಿದ್ದದ್ದಾಗಿಯೂ, ಇವೆರಡರಲ್ಲಿ ವ್ಯತ್ಯಾಸವಿದ್ದುದರಿಂದ ಸನ ಜಾಯಿಷಿ ಕೇಳಲಾಯಿತೆಂದೂ, ಸರ್ಕಾರದವರು ಇಂತಹ ಸಂದರ್ಭಗಳಲ್ಲಿ ನ್ಯಾಯವಾದುದನ್ನು ಒಪ್ಪುವುದಾಗಿಯೂ ಹೇಳಿದರು

ಶ್ರೀ ಎಂ ವಿ ರಾಮರಾಯರು ಸರ್ಕಾರದ ಮನೋಗತಕ್ಕಾಗಿ ಅವರನ್ನು ಶ್ಲಾಘಿಸಿದರು ಮುಖ್ಯ ಮಂತ್ರಿಗಳು ಅದನ್ನು ಪಂಥಾಹ್ವನವೆಂದು ಕರೆದರು

ಕಟ್ಟಡ ಬಿದ್ದು ೫ ಮರಣ

ಹಳೇ ದಿಹಲಿಯ ಜನ ನಿಬಿಡ ಪ್ರದೇಶವೊಂದರಲ್ಲಿ ೩ ಅಂತಸ್ತಿನ ಕಟ್ಟಡವೊಂದು ನೆನ್ನೆ ಕುಸಿದು ಬಿದ್ದು ಮೂವರು ಹೆಂಗಸರು, ಇಬ್ಬರು ಮಕ್ಕಳು ಮಡಿದರು ೨೨ ಜನರಿಗೆ ಗಾಯವಾಗಿ, ಆ ಪೈಕಿ ೫ ಮಂದಿಯ ಸ್ಥಿತಿ ತೀವ್ರವಾಗಿದೆ

ವಿದ್ಯಾರ್ಥಿಗಳ ಉಪವಾಸ ಎರಡು ದಿನಗಳು ಮುಂದಕ್ಕೆ

ಸಂಸ್ಥಾನದ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಇತ್ತಿರುವ ಭರವಸೆಯ ಮೇಲೆ ಇಲ್ಲಿನ ಮಹಾರಾಜಾ ಕಾಲೇಜಿನ ... ಉಪವಾಸ ಮಾಡುವ ಕಾರ್ಯಕ್ರಮವನ್ನು ಶೀಘ್ರ ... ಜೂನಿಯರ್ ವಿದ್ಯಾರ್ಥಿಗಳು ೨ ದಿನಗಳಿಗೆ ಮುಂದುವರಿಸಿರುತ್ತಾರೆ

ಆಸ್ಪತ್ರೆ ಹಣದುರ್ವ್ಯಯದ ಆಪಾದನೆಯಿಂದ ಖುಲಾಸೆ

ಮೈಸೂರು ೨೦

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಇನ್‌ಪೇಷಂಟಾಗಿ ಸೇರಿಸಿಕೊಳ್ಳಲು ರೋಗಿಗಳಿಂದ ವಸೂಲಾದ ರುಸುಂ ೫೦೦ ರೂ ಗಳನ್ನು ದುರ್ವ್ಯಯ ಪಡಿಸಿದರೆಂದು ಆಸ್ಪತ್ರೆ ನೌಕರರಾದ ಶ್ರೀ ಕೆ ಎಸ್ ವರದರಾಜ್ ಮತ್ತು ಶ್ರೀ ಬಿ ಜಿ ಸುಬ್ರಹ್ಮಣ್ಯರವರ ಮೇಲೆ ದೇವರಾಜ ಪೊಲೀಸರು ನಗರದ ೧ನೇ ನ್ಯಾಯಾಸ್ಥಾನದಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ನ್ಯಾಯಾಧೀಶರ ಇಂದು ತೀರ್ಪಿತ್ತು ಆವರಿಬ್ಬರನ್ನೂ ಖುಲಾಸೆ ಮಾಡಿದರು

ಪ್ರಖ್ಯಾತ ಕಲಾವಿದರಿಂದ ಸಂಗೀತ ಮತ್ತು ನೃತ್ಯ

ರಾಜಧಾನಿಯ ಮಂಡಿಮೊಹಲ್ಲೆಯ ಬೆಂಕಿನವಾಬರ ರಸ್ತೆಯಲ್ಲಿರುವ ಗಫಾರ್ ಮತ್ತು ಜಹಾಂಗೀರ್ ಬೀಡಿ ಕಾರ್ಖಾನೆಗಳ ಆಫೀಸಿನಲ್ಲಿ ನೆನ್ನೆ ಸಂಜೆ ಭಾರತದ ಪ್ರಖ್ಯಾತ ಸಂಗೀತ ಕಲಾವಿದ ನಾನಾಸಾಹೇಬ್ ಪಾನ್ಸೆಮನೆತನಕ್ಕೆ ಸೇರಿದ ಶ್ರೀ ಪಂಡಿತ ಮಾಧವರಾವ್‌ಜಿ ಅಲ್ಯಕ್ಕರ್‌ರವರ ಮಧುರ ಗಾಯನವೂ ಮತ್ತು ಶ್ರೀ ಬೈರಾಬ್ ದತ್ ಜೋಷಿಯವರಿಂದ ಅಮೋಘ ಕಥಕ್ ನೃತ್ಯವೂ ನಡೆದವು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರು ಅಧ್ಯಕ್ಷತೆ ವಹಿಸಿದ್ದರು

ಕೋರ್ಟಿಗೆ ಟ್ರಾಂ ದರ ಏರಿಕೆ ಪ್ರಶ್ನೆ ಒಪ್ಪಿಸಲು ನಿರಾಕರಣೆ

ಕಲ್ಕತ್ತದಲ್ಲಿ ದ್ವಿತೀಯ ದರ್ಜೆ ಟ್ರಾಂಗಳ ದರವನ್ನು ಹೆಚ್ಚಿಸಿರುವ ವಿಷಯವನ್ನು ಒಂದು ನ್ಯಾಯಾಸ್ಥಾನದ ವಿಮರ್ಶೆಗೆ ಒಪ್ಪಿಸಬೇಕೆಂದು ಬಂಗಾಳಾ ಸರ್ಕಾರದವರು ಮಾಡಿರುವ ಸಲಹೆಯನ್ನು, ದಂಗೆಗಳ ವಿರುದ್ಧದ ಸಮಿತಿಯು ತಿರಸ್ಕರಿಸಿರುತ್ತದೆ. ಟ್ರಾಂ ಕಂಪೆನಿಯವರು ಸಲಹೆಯನ್ನು ಒಪ್ಪಿರುತ್ತಾರೆ

ಜಪಾನ್ ಪ್ರವಾಹದಲ್ಲಿ ೬೦೦ ಮರಣಗಳು

ಜಪಾನಿನ ಮೂರು ನದಿಗಳಲ್ಲಿ ಇತ್ತೀಚಿಗೆ ಸಂಭವಿಸಿದ ಪ್ರವಾಹದಿಂದ ಮರಣಗಳ ಸಂಖ್ಯೆಯು ಆರು ನೂರಕ್ಕೂ ಹೆಚ್ಚು, ೫೦೦೦ ಮಂದಿ ಪತ್ತೆಯಿಲ್ಲವಾಗಿರುವರು ಮಾಸ್‌ಸು ದ್ವೀಪದಲ್ಲಿ ೧೨ ಸಾವಿರ ಜನರು ನಿರಾಶ್ರಿತರಾಗಿರುವರು

ಒಂದು ವಾರದಲ್ಲಿ ಕೊರಿಯಾ ಯುದ್ಧದ ಮುಕ್ತಾಯ

ಕೊರಿಯಾದಲ್ಲಿ ಕದನವು ಇನ್ನು ಒಂದು ವಾರದಲ್ಲಿ ಪರಿಸಮಾಪ್ತಿಗೊಳ್ಳುವುದೆಂದು ಅಮೆರಿಕದ ಅಧಿಕಾರಿಗಳು ತಿಳಿಸಿರುತ್ತಾರೆ ಕಮ್ಯೂನಿಸ್ಟರು ಶಾಂತಿ ಶಾಲೆಗೆ ರುಜುಮಾಡಲು ಮುಂದೆ ಬಂದಿರುವುದರಿಂದ ಈ ಸಂಭಾವನೆಯು ಮೂಡಿದೆ

ಕೊರಿಯಕ್ಕೆ ಭಾರತ ಸೈನ್ಯ ಹೋಗಲು ಅವಕಾಶವಿಲ್ಲ?

ಕೊರಿಯಾದಲ್ಲಿಯ ಯುದ್ಧ ಕೈದಿಗಳ ವಿನಿಮಯದ ಸಂಬಂಧವಾಗಿ ಭಾರತದ ಸೈನ್ಯ ಅಥವಾ ಪೋಲೀಸ್ ಇಲ್ಲವೇ ಬೇರೆ ಯಾವುದೇ ಜನರನ್ನಾಗಲಿ, ಸದರಿ ಮೂರು ರಾಜ್ಯಗಳ ಪ್ರತಿನಿಧಿಗಳನ್ನಾಗಲಿ ದಕ್ಷಿಣ ಕೊರಿಯಕ್ಕೆ ಬರಲು ಅವಕಾಶವೀಯಕೂಡದೆಂದು ಅಲ್ಲಿನ ಅಧ್ಯಕ್ಷ ಸಿಂಗ್ಮನ್‌ರೀಯವರು ಬೇಡಿಕೆಯನ್ನಿಟ್ಟಿರುವರೆಂದೂ, ಅವನ್ನು ಅಮೆರಿಕದ ಪ್ರತಿನಿಧಿ ವಾಲ್ಟರ್ ರಾಬರ್ಟ್‌ಸನ್ನರು ಒಪ್ಪಿರುವರೆಂದೂ ವರದಿಯಾಗಿದೆ

ಜಪಾನಿನಲ್ಲಿ ಜ್ವಾಲಾಮುಖಿ

ಜಪಾನಿನ ಬಹು ದಕ್ಷಿಣದ ದ್ವೀಪದಲ್ಲಿ ಜ್ವಾಲಾಮುಖಿಯು ಘೋರವಾಗಿ ಆಸ್ಫೋಟಗೊಂಡಿರುವುದೆಂದೂ, ಮನುಷ್ಯನ ತಲೆಯ ಗಾತ್ರದ ಕಲ್ಲು ಗುಂಡುಗಳನ್ನು ಅದು ನೂರಾರು ಅಡಿ ಎತ್ತರಕ್ಕೆ ಎಸೆಯುತ್ತಿರುವುದಾಗಿಯೂ ಹೇಳಲಾಗಿದೆ. ಅಲ್ಲಿ ಭೂಕಂಪವೂ ಉಂಟಾಯಿತಲ್ಲದೆ, ೨ ಸಾವಿರ ಅಡಿ ಎತ್ತರಕ್ಕೆ ಹೊಗೆ ಮತ್ತು ಬೂದಿಯು ಆಗ ಕಲ್ಪಿಟ್ಟವು

ಭಾರತ ಸೈನ್ಯದ ಬಗ್ಗೆ ವಿಶ್ವ ಸಂಸ್ಥೆಗೆ ಕಮ್ಯೂನಿಸ್ಟ್ ಪ್ರಶ್ನೆ

ಕೊರಿಯದಲ್ಲಿ ಯುದ್ಧ ಕೈದಿಗಳನ್ನು ವಾಪಸು ಕಳುಹುವ ಮುಂಚೆ ಭಾರತ ಸೈನ್ಯಗಳ ಹತೋಟಿಗೆ ಅವರನ್ನು ಒಳಪಡಿಸುವ ವಿಷಯವಾಗಿ ದಕ್ಷಿಣ ಕೊರಿಯಾದ ಆಕ್ಷೇಪಣೆಗಳ ಬಗ್ಗೆ ಹೆಚ್ಚಿನ ವಿವರಗಳು ಬೇಕೆಂದು ಕೊರಿಯಾ ಸಂಧಾನದಲ್ಲಿ ಪಾತ್ರವಹಿಸಿರುವ ಕಮ್ಯೂನಿಸ್ಟ್ ಪ್ರತಿನಿಧಿಗಳು ವಿಶ್ವ ಸಂಸ್ಥೆಯವರನ್ನು ಕೇಳಿರುತ್ತಾರೆ

ಬಿ. ಎಂ. ಶ್ರೀನಿವಾಸಯ್ಯನವರಿಗೆ ೧ ಲಕ್ಷ ರೂ. ಸಾಲ

ಬಡ್ಡಿ ಇಲ್ಲದೇ ಕೊಟ್ಟಿರುವ ಬಗ್ಗೆ ಪ್ರಶ್ನೆ

ಸ್ವಂ ಸು ಪ್ರೋ] ಬೆಂಗಳೂರು ೨೦

ಈ ದಿನ ಕಿರಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಎಂ ವಿ. ರಾಮರಾಯರು ಪ್ರಶ್ನೆಮಾಡಿ, ಬಿ ಎಂ ಶ್ರೀನಿವಾಸಯ್ಯನವರಿಗೆ ೧ ಲಕ್ಷ ರೂ ಗಳನ್ನು ಬಡ್ಡಿಯಿಲ್ಲದೆ ಕೊಡಲಾಗಿರುವುದೇ ಎಂದು ಕೇಳಲಾಗಿ, ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಉತ್ತರವಿತ್ತು, ಬಿ ಎಂ ಎಸ್. ಇಂಜನಿಯರಿಂಗ್ ಕಾಲೇಜಿಗಾಗಿ ಹಣವನ್ನು ಕೊಡಲಾಯಿತೆಂದು ತಿಳಿಸಿದರು, ಶ್ರೀ ಶ್ರೀನಿವಾಸಯ್ಯನವರ ವ್ಯಕ್ತಿತ್ವವನ್ನೂ ಕಾಲೇಜಿನ ಘನ ಉದ್ದೇಶವನ್ನೂ ನೋಡಿ, ಸರ್ಕಾರದವರು ಸಾಲವನ್ನು ಕೊಟ್ಟಿರುವರೆಂದೂ, ಶ್ರೀ ಶ್ರೀನಿವಾಸಯ್ಯನವರ ಆಸ್ತಿಪಾಸ್ತಿಗಳ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಭದ್ರತೆಯಿರುವುದೆಂದೂ ಅವರು ಹೇಳಿದರು

ಶ್ರೀ ಶ್ರೀನಿವಾಸಯ್ಯನವರು ಹೊಸ ಸಾಲವನ್ನು ಎತ್ತುವ ಮೊದಲು ಸರ್ಕಾರಕ್ಕೆ ತಿಳಿಸುವಂತೆಯೂ, ಕಾಲೇಜನ್ನು ನಡೆಸಲು ದುಸ್ತರವಾದರೆ ಅದನ್ನು ಸರ್ಕಾರಕ್ಕೆ ವಹಿಸಬೇಕೆಂದೂ ಅವರನ್ನು ಕಡ್ಡಾಯ ಪಡಿಸಲಾಗಿರುವುದೆಂದೂ ಅವರು ಹೇಳಿದರು ಸಾವಿರ ರೂ.ಗಳನ್ನು ಕೊಟ್ಟವರ ಮಕ್ಕಳಿಗೇ ಸದರಿ ಕಾಲೇಜಿನಲ್ಲಿ ಸ್ಥಾನ ಕೊಡಲಾಗುವುದೆಂಬುದನ್ನು ತಾವು ಒಪ್ಪುವುದಿಲ್ಲವೆಂದು ಮಂತ್ರಿಗಳು ತಿಳಿಸಿದರು ಹಿಂದಿನ ಸರ್ಕಾರದವರು ಅವರಿಗೆ ಬಡ್ಡಿಯ ಮೇಲೆ ಸಾಲವನ್ನು ಕೊಟ್ಟಿದ್ದರೆಂದು ತಿಳಿಸಿದರು

ಪ್ರಕಟಣಾ ಶಾಖೆಯಲ್ಲಿ ಕಳೆದ ವರ್ಷ ೧,೪೦,೦೦೦ ರೂ ವೆಚ್ಚವಾಯಿತೆಂದೂ, ಪತ್ರಿಕೆಗಳಲ್ಲಿ ಜಾಹಿರಾತಿಗಾಗಿ ಇದರಲ್ಲಿಯೂ ಮೂಲಕ ೧,೬೦,೦೦೦ ರೂ ಗಳನ್ನು ಕೊಡಲಾಯಿತೆಂದೂ ತಿಳಿಸಲಾಯಿತು

ಹಿರಿಯ ಶಾಸನ ಸಭೆಯಲ್ಲಿ ಪತ್ರ ಸಂಪಾದಕರ ಹಾಜರಿ

ಹಿರಿಯ ಶಾಸನ ಸಭೆಯಲ್ಲಿ ಈ ದಿನ ಶ್ರೀ ಹೆಚ್. ಆರ್ ಅಬ್ದುಲ್ ಗಫಾರ್‌ರವರ ಪ್ರಶ್ನೆಗೆ ಉತ್ತರವಾಗಿ, ಪತ್ರಿಕೆ ಸಂಪಾದಕ ಶ್ರೀ ಅಮರ್‌ದಾಸ್‌ವಾಲಾರವರು ಇಂದು ವಿಮಾನದಲ್ಲಿ ಆಗಮಿಸುವುದಾಗಿಯೂ ಅವರು ನಾಲ್ಕು ಗಂಟೆಗೆ ಸಭೆ ಮುಂದೆ ಹಾಜರಾಗುವರೆಂದೂ ಅಧ್ಯಕ್ಷ ಶ್ರೀ ಭಾಷ್ಯಂರವರು ತಿಳಿಸಿದರು

ವಿದ್ಯಾ ಮಂತ್ರಿಗಳಲ್ಲಿ ನಿಯೋಗ

ಉತ್ತೀರ್ಣರಾಗದ ಇಂಟರ್‌ಮೀಡಿಯಟ್ ವಿದ್ಯಾರ್ಥಿಗಳ ಪರವಾಗಿ ವಿದ್ಯಾ ಮಂತ್ರಿಗಳ ಬಳಿ ಕಳೆದ ೧೭ ನೇ ತಾ ನಿಯೋಗವೊಂದು ಹೋಗಿ ... ಮೊನ್ನೆ ವಿದ್ಯಾರ್ಥಿಗಳ ಪ್ರತಿಭಟನೆಯು ... ಇಂಟರ್‌ಮೀಡಿಯಟ್ ವಿದ್ಯಾರ್ಥಿಗಳಿಗೆ ... ; ... ಪರೀಕ್ಷೆಗೆ ... ಅವಕಾಶವನ್ನು ಕಲ್ಪಿಸುವುದು; ಅಥವಾ ... ಪರೀಕ್ಷೆಯಲ್ಲಿ ಉತ್ತೀರ್ಣರಾದವರ ... ಪರಿಶೀಲಿಸುವುದು ಮತ್ತು ... ಪರಿಶೀಲಿಸುತ್ತ ... ಗಳ ಬಗ್ಗೆ ನಿಯೋಗದವರು ಮಂತ್ರಿಗಳಿಂದ ಭರವಸೆ ಹೊಂದಿರುವರೆಂದು ಗೊತ್ತಾಗಿದೆ.

ತಾಲ್ಲೂಕು ನೌಕರರಿಗೆ ಎಲ್ಲ ಬಾಬುಗಳಲ್ಲೂ ಶಿಕ್ಷಣ

ಸಂಚ ವಾರ್ಷಿಕ ಯೋಜನೆಯ ಕೆಲಸವು ಶೀಘ್ರತೆಯಾಗಿ ಸಾಧಿಸಲ್ಪಡುವುದಕ್ಕಾಗಿ ಹಳ್ಳಿಗಳ ಮೇಲ್ವಿಚಾರಣಾಧಿಕಾರಿಗಳ ಕೆಲಸವನ್ನು ಒಂದುಗೂಡಿಸಿ, ಪರಸ್ಪರ ಸಹಾಯವಾಗುವಂತೆ ಏರ್ಪಡಿಸಬೇಕೆಂದೂ, ಹಳ್ಳಿಯ ಜನರು ಯಾವುದಾದರೂ ಕೆಲಸಕ್ಕೆ ಬಂದರೆ ಅವರ ಕಾರ್ಯವು ನಿಧಾನವಾಗಲು ನಾನಾ ಶಾಖೆಗಳು ಪ್ರತ್ಯೇಕವಾಗಿ ಕೆಲಸ ಮಾಡುತ್ತಿರುವುದೇ ಕಾರಣವೆಂದೂ ಕೇಂದ್ರ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ತಿಳಿಸಿ, ತಾಲ್ಲೂಕುಗಳಲ್ಲಿರುವ ರೆವಿನ್ಯೂ ವ್ಯವಸಾಯ ಸಹಕಾರ ಮತ್ತು ಇತರ ಇಲಾಖೆಯ ನೌಕರರುಗಳಿಗೆ ಎಲ್ಲಾ ಬಾಬುಗಳಲ್ಲೂ ಶಿಕ್ಷಣವನ್ನು ಕೊಡಲು ಸಾಧಕವಾಗುವ ಒಂದು ಯೋಜನೆಯನ್ನು ಪ್ರಾಂತ ಸರ್ಕಾರಗಳಿಗೆ ಕಳುಹಿಸಿರುತ್ತಾರೆ. ಈಗಿರುವಂತೆ ಒಬ್ಬೊಬ್ಬ ಇಲಾಖಾ ಅಧಿಕಾರಿಗಳೂ ಸರಾಸರಿ ೩೦ ಹಳ್ಳಿಗಳನ್ನು ನೋಡಿಕೊಳ್ಳುತ್ತಿರುವುದರಿಂದ ಈ ಯೋಜನೆ ಪ್ರಕಾರ ಶಿಕ್ಷಣ ಪಡೆದ ಅಧಿಕಾರಿಯು ೧೦ ಹಳ್ಳಿಗಳನ್ನು ನೋಡಿಕೊಳ್ಳಲು ಸಾಧ್ಯವಾಗಿ ರೈತರುಗಳ ಹಲವು ಇಲಾಖೆಗಳ ತೊಡಕುಗಳಿಲ್ಲದೆ ಶೀಘ್ರವಾಗಿ ನಡೆಯುವುದೆಂದೂ ಹೇಳಲಾಗಿದೆ. ಇದನ್ನು ಉತ್ತರ ಪ್ರದೇಶ ಸರ್ಕಾರದವರು ಜಾರಿಗೆ ತಂದಿರುವರು. ಮೊಂಬಾಯಿಯಲ್ಲೂ ಪರಿಶೀಲನೆಯಾಗಿದೆ.

ಭಾರತದಲ್ಲಿ ಹೆಚ್ಚು ಕೋಟ್ಯಾಧೀಶರು

ಭಾರತದಲ್ಲಿ ಅಮೇರಿಕದಲ್ಲಿರುವುದಕ್ಕಿಂತಲೂ ಹೆಚ್ಚು ಜನ ಕೋಟ್ಯಾಧೀಶರಿರುವರೆಂದೂ, ಆದರೆ ಅಮೇರಿಕೆಯ ಜನರ ಆದಾಯದ ವರಮಾನದ ತೆರಿಗೆಯ ಭಾಗವನ್ನು ಸರ್ಕಾರಕ್ಕೆ ಕೊಡಲು ಸಿದ್ಧವಿರುವಾಗ ಭಾರತೀಯರ ಟ್ರಾಂ ಅಥವಾ ಬಸ್ಸು ದರಗಳು ಸ್ವಲ್ಪ ಹೆಚ್ಚಿದರೆ ಚಳುವಳಿಗಳನ್ನೆಬ್ಬಿಸುವರೆಂದೂ ಅಮೇರಿಕೆಗೆ ಹೋಗಿ ಹಿಂತಿರುಗಿ ಬಂದ ಪತ್ರಿಕೋದ್ಯೋಗಿ ರಣಧೀರ್ ಎಂಬುವರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎ. ವಿ. ಕೃಷ್ಣಮಾಚಾರ್ ... ಮಧ್ಯಾಹ್ನ ೧ ... [illegible] ... ಸಹೋದರಿಯರ ... ಬಗ್ಗೆ ಚರ್ಚೆ ... ಸಂಜೆ ... ಶ್ರೀ ... [illegible]

ಸ್ವರ್ಣ ... ಕಾರ್ಯಕ್ರಮ ... ಭಕ್ತಿ ಗೀತೆಗಳು ... ಶ್ರೀ ... ಸಂಗೀತ ... [illegible]

ಸಿಡಿಲಿನಿಂದ ೧ ಮರಣ

ಕಳೆದ ೧೬ನೇ ... ಮಧ್ಯಾಹ್ನ ... ರಾಜಧಾನಿಯಲ್ಲಿ ... ಸಿಡಿಲು ಬಡಿದು ಒಬ್ಬನು ಮೃತಪಟ್ಟಿರುವುದಾಗಿ ಪ್ರಕಟಿಸಲಾಗಿದೆ.

ಚಿತ್ರದ ಅವಹೇಳನಕ್ಕಾಗಿ ಪತ್ರಿಕೆ ಮೇಲೆ ದಾವಾ

ಬೊಂಬಾಯಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಂದ ಹುಚ್ಚಿ ಎಂಬ ಚಿತ್ರದ ವಿಮರ್ಶೆಯಲ್ಲಿ ಮಾನನಷ್ಟಕರವಾದ ವಿಷಯಗಳು ಅಡಗಿರುವೆಂದೂ, ಅದರಿಂದ ಆ ಚಿತ್ರವು ಸಾರ್ವಜನಿಕರ ಅವಹೇಳನಕ್ಕೆ ಗುರಿಯಾಗಿ ತನ್ನ ವ್ಯಾಪಾರವನ್ನು ಕಳೆದುಕೊಂಡುದಾಗಿಯೂ ಚಿತ್ರ ತಯಾರಿಸುವುದಕ್ಕಾಗಿ ೯ ಲಕ್ಷ ರೂ ವೆಚ್ಚವಾಗಿ, ತಮಗೆ ಈಗ ೫ ಲಕ್ಷ ರೂ ನಷ್ಟವಾಗಿರುವುದೆಂದೂ ತಿಳಿಸಿ ಪತ್ರಿಕೆಯ ಮೇಲೆ ಚಿತ್ರದ ತಯಾರಕರಾದ ಆನಂದ್ ಮತ್ತು ಅರವಿಂದ್‌ರವರು ಬೊಂಬಾಯಿ ಹೈಕೋರ್ಟಿನಲ್ಲಿ ದಾವಾ ಹೂಡಿರುತ್ತಾರೆ. ಪ್ರತಿವಾದಿಗಳು ತಮ್ಮ ಹೇಳಿಕೆಯಲ್ಲಿ, ಚಿತ್ರವನ್ನು ಮದ್ರಾಸು ಬಿಹಾರ್ ಮತ್ತು ಉತ್ತರಪ್ರದೇಶಗಳಲ್ಲಿ ಪ್ರತಿಬಂಧಿಸಲಾಗಿದ್ದಿತೆಂದು ತಮಗೆ ತಿಳಿದುಬಂದುದಾಗಿ ಹೇಳಿದರು. ಅದರಲ್ಲಿ ಮಹಾತ್ಮಾ ಗಾಂಧಿಯವರ ಹೆಸರನ್ನು ದುರ್ಬಳಕೆ ಮಾಡಲಾಗಿರುವುದೆಂದೂ, ಭಿವಂಡಿಯ ಸೆನ್ಸಾರ್ ಅಧಿಕಾರಿಗಳು ಅದನ್ನು ಒಪ್ಪುವುದಕ್ಕೆ ತಕ್ಕಂತೆ ಇಲ್ಲದೆ ತುಂಬಾ ಕೆಳದರ್ಜೆಯದಾಗಿರುವುದೆಂದೂ ಪತ್ರಿಕೆಯಲ್ಲಿ ತಿಳಿಸಲಾಗಿದ್ದಿತೆಂದು ಹೇಳಲಾಗಿದೆ. ತೀರ್ಪು ಕೊಡುವ ಮುನ್ನ ನ್ಯಾಯಾಧೀಶರು ಚಿತ್ರವನ್ನು ಸ್ವತಃ ನೋಡಲು ಒಪ್ಪಿರುತ್ತಾರೆ.

ಸೈಕಲ್ ಟ್ಯೂಬಿನಲ್ಲಿ ಕಳ್ಳ ಸರಾಬ್ ಪತ್ತೆ

ಮದ್ರಾಸು ವಾಷರ್‌ಮನ್ ಪೇಟೆಯ ಸುಬ್ರಹ್ಮಣ್ಯಂ ಎಂಬುವನು ೮ ಸೈಕಲ್ ಟ್ಯೂಬುಗಳಲ್ಲಿ ಸರಾಬನ್ನು ತುಂಬಿ, ಹೊಟ್ಟೆಗೆ ಸುತ್ತಿಕೊಂಡು ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ಅಲ್ಲಿನ ಸೆಂಟ್ರಲ್ ರೈಲ್ವೆ ಸ್ಟೇಷನ್ ಪೋಲೀಸರು ಕಳೆದ ವಾರ ಪತ್ತೆ ಹಚ್ಚಿರುತ್ತಾರೆ.

ಇಟ್ಟಿಗೆಗೂಡು ಯುವಕರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಇಟ್ಟಿಗೆಗೂಡಿನಲ್ಲಿರುವ ಯುವಕರ ಸಂಘದ ಸಾಮಾನ್ಯ ಸದಸ್ಯರ ಸಭೆಯು ಕಳೆದ ಶುಕ್ರವಾರ ನಡೆದು ೧೯೫೩-೫೪ನೇ ಸಾಲಿನ ಅಧಿಕಾರ ವರ್ಗಕ್ಕೆ ಶ್ರೀ ಎನ್ ರಾಮಯ್ಯನವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೆ ನಂಜಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಕೆ ಸಿದ್ದಪ್ಪನವರನ್ನು ಖಜಾಂಚಿಯನ್ನಾಗಿಯೂ ಶ್ರೀಗಳಾದ ಎಂ. ಆರ್ ಗೋವಿಂದರಾಜ್ ಮತ್ತು ಎಂ ಎಸ್ ಶಂಕರ್‌ರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ.

ವಿವಾಹ ಮಹೋತ್ಸವ

ರಾಜಧಾನಿಯ ಆಸ್ಥಾನ ವಿದ್ವಾನ್, ಜ್ಯೋತಿಷ್ಯರತ್ನಂ ಟಿ ವಿ ನರಸಿಂಹಾಚಾರ್ಯರ ಪುತ್ರರಾದ ಶ್ರೀ ರಂಗನಾಥಾಚಾರ್ಯರಿಗೆ ತಿರುಪ್ಪೂರಿನ ಪೋಸ್ಟ್ ಮಾಸ್ಟರ್ ಶ್ರೀ ಪೀ. ನಾಗರಾಜ ಅಯ್ಯಂಗಾರರ ಪುತ್ರಿ ಸೌ॥ ಪದ್ಮಾವತಿಯವರನ್ನು ಕೊಟ್ಟು ಕಳೆದ ೧೩ನೇ ತಾರೀಖು ಕರೂರಿನ ಬಳಿ ತಾಂದೋನಿ ಬೆಟ್ಟದಲ್ಲಿ ವಿವಾಹವು ಜರುಗಿತು.

ಪೂರ್ವ ಬರ್ಲಿನ್ನಿನಲ್ಲಿ ರಷ್ಯದ ಟ್ಯಾಂಕುಗಳ ಗಸ್ತು

ಪೂರ್ವ ಬರ್ಲಿನ್ ನಗರದಲ್ಲಿ ಕಳೆದ ಶುಕ್ರವಾರ ರಷ್ಯದ ೨೦೦ ಟ್ಯಾಂಕುಗಳು ರಸ್ತೆಯಲ್ಲೆಲ್ಲಾ ಗಸ್ತು ತಿರುಗಿದುವೆಂದು ವರದಿಯಾಗಿದೆ. ಆ ನಗರದಲ್ಲೂ ಪೂರ್ವ ಜರ್ಮನಿಯಲ್ಲೂ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಿಟ್ ಡೌನ್ ಸ್ಟ್ರೈಕ್ ಮುಷ್ಕರ ನಡೆಸುತ್ತಿರುವರೆಂದೂ, ಕಳೆದ ತಿಂಗಳು ಅಲ್ಲಿ ನಡೆದ ಗಲಭೆಗಳ ಅಂಗವಾಗಿ ದಸ್ತಗಿರಿಯಾದವರನ್ನು ಬಿಡುವಂತೆ ಒತ್ತಾಯಪಡಿಸಲಾಗಿರುವುದೆಂದೂ ವರದಿಯಾಗಿದೆ.

ಅಮೃತಶಿಲೆಯ ಮೇಲೆ ರಾಮಾಯಣ

ತುಳಸೀದಾಸರು ರಚಿಸಿರುವ ರಾಮಾಯಣವನ್ನು ಅಮೃತಶಿಲೆಯ ಮೇಲೆ ಬರೆದು ಕಾಶಿಯಲ್ಲಿ ಕಟ್ಟಲಾಗುವ ರಾಮ ಚರಿತ ಮಾನಸ ದೇವಾಲಯದಲ್ಲಿ ಇಡಲಾಗುವುದೆಂದು ವರದಿಯಾಗಿದೆ. ಪ್ರಸಿದ್ಧ ಕೋಟ್ಯಧೀಶ್ವರರಾದ ಬಿರ್ಲಾರವರು ಇದಕ್ಕೆ ತಗಲುವ ವೆಚ್ಚವನ್ನು ವಹಿಸಲಿದ್ದಾರೆ.

೧೭೭ ವರ್ಷದ ವೃದ್ಧ

ಕಾಶ್ಮೀರದ ಪಠಾಣ್‌ಕೋಟೆಯಲ್ಲಿ ಬಾಬಾ ನಾರಾಯಣಸಿಂಗ್ ಎಂಬ ೧೭೭ ವರ್ಷ ವಯಸ್ಸಿನ ವೃದ್ಧರೊಬ್ಬರಿರುವರು. ತಾವು ಇನ್ನೂ ೨೫ ವರ್ಷಗಳು ಜೀವಿಸುವುದಾಗಿ ಅವರು ಭರವಸೆ ತೋರಿರುವರು. ಇಡೀ ಪ್ರಪಂಚದಲ್ಲೇ ಅತ್ಯಂತ ವಯಸ್ಸಾಗಿರುವರೆಂದು ಹೇಳಲಾಗಿದೆ. ಅವರು ಎಲ್ಲರಂತೆ ಚೆನ್ನಾಗಿ ನಡೆಯಬಲ್ಲರು. ಅವರ ಬಳಿಯ ಕೂದಲು ಈಗ ಕಪ್ಪಾಗುತ್ತಿದೆ.

ಸಿಡಿಲಿನಿಂದ ಐವರ ಮರಣ

ಮುಸ್ತಫಾನಗರ ತಾಲ್ಲೂಕಿನ ೨ ಹಳ್ಳಿಗಳಲ್ಲಿ ಸಿಡಿಲು ಬಡಿದು ಒಟ್ಟು ೫ ಮಂದಿ ಮಡಿದಿರುವರೆಂದು ವರದಿಯಾಗಿದೆ.

ಪ್ರಾಂತ ಸರ್ಕಾರಗಳ ಸಾಲ ಭರ್ತಿ

ಮದ್ರಾಸು ಪ್ರಾಂತದಲ್ಲಿ ಅಭಿವೃದ್ಧಿ ಯೋಜನೆ ಬಗ್ಗೆ ಇತ್ತೀಚೆಗೆ ಎತ್ತಲಾದ ೫ ಕೋಟಿ ರೂ ಸಾಲವು ೮ ದಿನಗಳಲ್ಲಿ ಭರ್ತಿಯಾಗಿದೆ. ಆದರೆ ಈ ತಿಂಗಳು ೨೫ರವರೆಗೂ ಅವಧಿಯು ಇರುವುದು. ಬೊಂಬಾಯಿಯ ಸಾಲವೂ ತುಂಬಿದೆ. ಸೌರಾಷ್ಟ್ರ ಪ್ರಾಂತದ ಸಾಲವೂ ಭರ್ತಿಯಾಗಿದೆ.

ಸಂತೋಷ್ ಫುಟ್‌ಬಾಲ್ ಪಂದ್ಯ

ಮುಂದಿನ ತಿಂಗಳು ಕಲ್ಕತ್ತದಲ್ಲಿ ನಡೆಯುವ ಸಂತೋಷ್ ರಾಷ್ಟ್ರೀಯ ಫುಟ್‌ಬಾಲ್ ಪಂದ್ಯದಲ್ಲಿ ಭಾಗವಹಿಸಲು ಹೋಗುವ ಮೈಸೂರು ಸಂಸ್ಥಾನದ ಟೀಮಿನ ಮ್ಯಾನೇಜರಾಗಿ ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರನ್ನು ನೇಮಿಸಲಾಗಿದೆ.

ಶ್ರೀನಗರದಲ್ಲಿ ಪಾಕಿಸ್ತಾನ ಪರ ಕೂಗು

ಶ್ರೀನಗರ ಜಿಲ್ಲೆಯಲ್ಲಿ ವಾರವಾರವೂ ಸೇರುತ್ತಿರುವ ಮಸೀದಿ ಸಭೆಗಳಲ್ಲಿ ಪಾಕಿಸ್ತಾನದ ಪರ ಕೂಗುಗಳು ಕೇಳಬರುತ್ತಿವೆಯೆಂದು ವರದಿಯಾಗಿದೆ. ಕಾಶ್ಮೀರದೊಳಗೆ ಪಾಕಿಸ್ತಾನಿಗಳು ನುಸುಳಿಕೊಂಡು ಬರುತ್ತಿರುವುದಾಗಿ ಜಮ್ಮು ಪ್ರಜಾ ಪರಿಷತ್ತಿನ ಪ್ರೇಮನಾಥ್ ಡೋಗ್ರಾರವರು ತಿಳಿಸಿರುವರು.

ಜಮ್ಮುವಿಗೆ ಶ್ಯಾಮ ಪ್ರಸಾದ್ ಮುಖರ್ಜಿ ಅಸ್ಥಿ

ದಿವಂಗತ ಶ್ಯಾಮಪ್ರಸಾದ ಮುಖರ್ಜಿಯವರ ಅಸ್ಥಿಯ ಸ್ವಲ್ಪ ಭಾಗವನ್ನು ಜಮ್ಮುವಿಗೆ ತರಲಾಗಿದೆ. ಅಲ್ಲಿನ ಜನರು ಸ್ವಾಗತಿಸಿ, ಅದನ್ನಿಟ್ಟಿದ್ದ ಪಾತ್ರೆಗೆ ಹೂವನ್ನು ಅರ್ಪಿಸಿದರು.

ರಹಸ್ಯ ಶಾಸನದ ಪ್ರಕಾರ ಅಧಿಕಾರಿಗಳ ದಸ್ತಗಿರಿ

ಭಾರತ ಸರ್ಕಾರದ ವಿದೇಶಾಂಗ ಇಲಾಖೆಯ ನೌಕರರಾದ ಗಂಗಾರಾಂ ಸೂರಿ ಮತ್ತು ಕೇವಲ್ ಸಿಂಗ್ ಛತಿಯಾರವರನ್ನು ದೆಹಲಿ ಪೋಲೀಸರು, ಅಧಿಕಾರಿ ರಹಸ್ಯ ಶಾಸನದ ಪ್ರಕಾರ ದಸ್ತಗಿರಿ ಮಾಡಿ, ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿರುತ್ತಾರೆ. ಅವರಿಬ್ಬರೂ ಕರಾಚಿಯಲ್ಲಿರುವ ಭಾರತದ ರಾಯಭಾರಿ ಕಛೇರಿಯಲ್ಲಿದ್ದರು. ಅವರನ್ನು ಈಚೆಗೆ ದೆಹಲಿಗೆ ಕರೆಸಲಾಗಿದ್ದಿತು.

ಕರಣ್ ಸಿಂಗರಿಗೆ ದೆಹಲಿ ಕರೆ

ಕಾಶ್ಮೀರದ ಸಾದರ್-ಎ ರಿಯಾಸತ್‌ರವರಾದ ಯುವರಾಜಾ ಕರಣ್ ಸಿಂಗ್‌ರವರನ್ನು ದೆಹಲಿಗೆ ಬರಮಾಡಿಕೊಳ್ಳಲಾಗಿದೆ. ಅವರು ಪ್ರಧಾನಿ ನೆಹರೂ ಮತ್ತು ಗೃಹ ಮಂತ್ರಿ ಡಾ॥ ಕಟ್ಜೂರವರೊಡನೆ, ಆ ಸಂಸ್ಥಾನದಲ್ಲಿ ಆಗಿರುವ ಇತ್ತೀಚಿನ ರಾಜಕೀಯ ಘಟನೆಗಳನ್ನು ಕುರಿತು ಚರ್ಚಿಸುವರು.

ಮನೆ ಕ್ರಯಕ್ಕಿದೆ

ಡೋರ್ ನಂ. 2671

೮ನೇ ಕ್ರಾಸ್ ರಸ್ತೆ (ಬ್ಲಾಕ್ ರಸ್ತೆ)

ಕಾಳಿದಾಸ ಮೊಹಲ್ಲ

ವಿಶಾಲವಾದ ಸ್ಥಳದಲ್ಲಿ ಕಟ್ಟಿರುವ ಈ ಮನೆ ಕ್ರಯಕ್ಕಿದೆ. ವಿವರಗಳಿಗೆ—

ಜಯ ಅಂಡ್ ಕಂಪೆನಿ,

ಮನೆ, ಜಮೀನು, ಸಾಲಕೊಡಿಸುವ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ

ಫೋನ್ 520

Edited, Printed and Published by A R Nagarajan at Sadhvi Press, D Subbaiah Road, Mysore

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ನಾಮಧರಿ ಮನೆ ನಕ್ಷೆ, ಡೀಡು, ಪ್ಲಾನ್ ಮತ್ತು ಕಾಂಪೌಂಡ್ ಇವೆ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಹನುಮಂತಯ್ಯನವರ ನಾಯಕತ್ವದಲ್ಲಿ ಅವಿಶ್ವಾಸ?

ಮಂತ್ರಿಮಂಡಲದ ಬದಲಾವಣೆಗೆ ಪ್ರಮುಖ ಕಾಂಗ್ರೆಸ್ಸಿಗರ ಒತ್ತಾಯ

ಬೆಂಗಳೂರು ೨೧

ಸಂಸ್ಥಾನದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ನೆನ್ನೆ ರಾತ್ರಿ ೫ ಘಂಟೆಯ ಪ್ರಭಾವ್ಯ ಘಟನದಲ್ಲಿ, ನಾಯಕರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ತಮ್ಮ ನಾಯಕತ್ವದಲ್ಲಿ ರಚಿತವಾಗಿರುವ ಸರ್ಕಾರದ ಬಗ್ಗೆ ಪ್ರಜೆಗಳಿಗೂ ಮತ್ತು ಕಾಂಗ್ರೆಸ್ ಪಕ್ಷದವರಿಗೂ ಅಸಂತೃಪ್ತಿಯುಂಟಾಗಿರುವುದರಿಂದ ಮಂತ್ರಿಮಂಡಲದ ಬದಲಾವಣೆಯಾಗಬೇಕೆಂದು ತಾವು ಭಾವಿಸುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರೂ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎಸ್. ಚೆನ್ನಯ್ಯನವರೂ ಸಭೆಗೆ ತಿಳಿಸಿದುದಾಗಿ ಶ್ರೀ ಹನುಮಂತಯ್ಯನವರು ಸಭೆಯಲ್ಲಿ ವ್ಯಕ್ತಪಡಿಸಿದುದಾಗಿ ತಿಳಿದುಬಂದಿದೆ. ಕಳೆದ ಗುರುವಾರ ನಡೆದ ಸಭೆಯಲ್ಲಿ ಶ್ರೀಗಳು ವೀರಣ್ಣಗೌಡ ಮತ್ತು ಎಸ್. ಚನ್ನಯ್ಯನವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮೇಲ್ಕಂಡ ಅಭಿಪ್ರಾಯವನ್ನು ಅವರಿಗೆ ತಿಳಿಸಿದರೆಂದು ಹೇಳಲಾಗಿದೆ. ಕಾಂಗ್ರೆಸ್ಸಿನವರಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ನಡೆಸಿದ ಸಂಧಾನಗಳಲ್ಲಿ ಯಾವ ಅಂತ್ಯ ನಿರ್ಧಾರವೂ ಬರಲಾಗಿಲ್ಲವೆಂದು ಶ್ರೀ ಹನುಮಂತಯ್ಯನವರು ತಿಳಿಸಿರುವುದಾಗಿ ಹೇಳಲಾಗಿದೆ.

ತರುವಾಯ ನಡೆದ ಚರ್ಚೆಯಲ್ಲಿ ನಾಯಕರಾದ ಶ್ರೀ ಹನುಮಂತಯ್ಯನವರು ಪಕ್ಷದ ವಿಶ್ವಾಸವನ್ನು ಗಳಿಸಲು ಓಟು ಪಡೆಯಬೇಕೆಂದು ಸಲಹೆ ಮಾಡಲಾಯಿತೆಂದೂ ತಿಳಿದುಬಂದಿದೆ.

ಈ ಕಾರಣದಿಂದ ನೆನ್ನೆ ನಡೆಯಬೇಕಾಗಿದ್ದ ಪಕ್ಷದ ಕಾರ್ಯಕಾರಿ ಮಂಡಲಿಯ ಸಭೆಯನ್ನು ಮುಂದೆ ಹಾಕಲಾಯಿತು.

ರೈಲು ಕಂಬಿ ಕದಿಯಲು ವಿಫಲ ಪ್ರಯತ್ನ

ಜಾಲಹಳ್ಳಿ-ಕೃಷ್ಣರಾಜಪುರ ರೈಲು ಮಾರ್ಗದಲ್ಲಿ ಕಾಡುಗೊಂಡನಹಳ್ಳಿ ಬಳಿ ಹಲವರು ೧೧-೧೨ ಅಡಿ ಉದ್ದದ ರೈಲು ಕಂಬಿಗಳನ್ನು ಕಿತ್ತು ಲಾರಿಯಲ್ಲಿ ಸಾಗಿಸುವ ಪ್ರಯತ್ನದಲ್ಲಿದ್ದಾಗ ನೆನ್ನೆ ಬೆಳಗಿನ ಜಾವ ಸಿಕ್ಕಿಬಿದ್ದರೆಂದು ವರದಿಯಾಗಿದೆ. ಪೊಲೀಸರು ಮೂವರನ್ನು ಬಂಧಿಸಿರುತ್ತಾರೆ. ಐದಾರು ಮಂದಿ ತಪ್ಪಿಸಿಕೊಂಡು ಓಡಿಹೋಗಿರುವರೆಂದು ಹೇಳಲಾಗಿದೆ.

ಮಕ್ಕಳು ರಸ್ತೆಯಲ್ಲಿ ಹೇಸಿಗೆ ಮಾಡಿದ್ದಕ್ಕೆ ಪೋಷಕರಿಗೆ ಶಿಕ್ಷೆ

ರಾಜಧಾನಿಯ ಬೀದಿ ಫುಟ್‌ಪಾತು ಗಳಲ್ಲಿ ಮಕ್ಕಳನ್ನು ಮಲಮೂತ್ರ ಬಾಧೆಗಾಗಿ ಕೂಡಿಸಿದ್ದ ಲಕ್ಷ್ಮಮ್ಮ ಮತ್ತು ಮಾದಯ್ಯ ಎಂಬುವರ ಮೇಲೆ ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಲಕ್ಷ್ಮಮ್ಮನಿಗೆ ೩ ರೂ ಮತ್ತು ಮಾದಯ್ಯನಿಗೆ ೫ ರೂ ಜುಲ್ಮಾನೆ ವಿಧಿಸಲಾಯಿತು. ಪಾದಚಾರಿಗಳಿಗಾಗಿ ಏರ್ಪಡಿಸಲಾಗಿರುವ ಫುಟ್‌ಪಾತ್ ಮತ್ತು ರಸ್ತೆಗಳಲ್ಲಿ ಮಕ್ಕಳು ಹೇಸಿಗೆ ಮಾಡಲು ಅವಕಾಶ ಕೊಡಬಾರದೆಂದು ಪೌರಸಭೆಯವರು ಸಾರ್ವಜನಿಕರಿಗೆ ತಿಳುವಳಿಕೆ ಕೊಟ್ಟಿರುವರು. ಇದನ್ನು ಎಲ್ಲರೂ ಗಮನಿಸಿ, ನಗರ ನೈರ್ಮಲ್ಯ ಮತ್ತು ನಗರಾರೋಗ್ಯಗಳನ್ನು ಕಾಪಾಡಬೇಕೆಂದು ಕೋರಲಾಗಿದೆ.

ಫೋನ್ ನಂ. 792 ‖ ವಂದೇ ಮಾತರಂ ‖ ಅಧಿಕ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೧-೩-೧೯೬೩ [ಸಂಚಿಕೆ ೨೯೦

ಮಂತ್ರಿಮಂಡಲ ಬದಲಾಗಲು ಒತ್ತಾಯ

ಟಿ ಮುರ್ ಬಾಗ್ವಾಲಾರವರಿಗೂ ವಾಗ್ದಂಡ

ಸತ್ಯ ಪತ್ರಿಕೆಯಲ್ಲಿ ಕ್ಷಮಾಪಣೆ ಪ್ರಕಟಿಸಲು ಸೂಚನೆ

ಬೆಂಗಳೂರು ೨೧

ಶಾಸನ ಸಭೆಗೆ ಅಪಮಾನ ಮಾಡಿದ ಆಪಾದನೆ ಬಗ್ಗೆ ತಮ್ಮ ಹೇಳಿಕೆಯನ್ನು ಕೊಡಲು ಸತ್ಯಪತ್ರಿಕೆಯ ಸಂಪಾದಕ ಶ್ರೀ ಟಿಮುರ್‌ಬಾಗ್‌ವಾಲಾರವರು ನೆನ್ನೆ ಸಭೆಯಲ್ಲಿ ಹಾಜರಾಗಿ ಒಂದು ಲಿಖಿತ ಹೇಳಿಕೆಯನ್ನು ಓದಿ, ತಾವು ಕ್ಷಮೆ ಬೇಡುವಂತಹ ಅಪರಾಧವನ್ನೇನೂ ಮಾಡಿಲ್ಲವೆಂದು ತಿಳಿಸಿದರು. ಅವರಿಗೆ ವಾಗ್ದಂಡವನ್ನು ವಿಧಿಸುವ ಬಗ್ಗೆ ನ್ಯಾಯಾಂಗ ಸಚಿವ ಶ್ರೀ ಎ. ಟಿ. ರಾಮಚಂದ್ರರಾಯರು ಮಂಡಿಸಿದ ನಿರ್ಣಯವೊಂದನ್ನು ಸಭೆಯು ಅಂಗೀಕರಿಸಿದ ನಂತರ ಸಭಾಧ್ಯಕ್ಷರು ಅವರನ್ನು ಮತ್ತೆ ಕರೆಸಿ ಬುದ್ಧಿವಾದ ಪೂರ್ವಕವಾದ ಎಚ್ಚರಿಕೆಯಿತ್ತರು. ಶ್ರೀ ಟಿಮುರ್‌ಬಾಗ್‌ವಾಲಾರವರೂ ಮತ್ತು ಸತ್ಯಪತ್ರಿಕೆಯ ಪ್ರಕಾಶಕರಾದ ಶ್ರೀ ಗಿಲ್ಲೆಸ್ಪಿಯವರೂ ತಮ್ಮ ಪತ್ರಿಕೆಯ ಎರಡು ಸಂಚಿಕೆಗಳಲ್ಲಿ ಕ್ಷಮಾಪಣೆಯನ್ನು ಪ್ರಕಟಿಸಬೇಕೆಂದು ನಿರ್ದೇಶಿಸಲಾಯಿತು. ಇಲ್ಲವಾದಲ್ಲಿ ಸಭೆಯ ಎರಡು ಅಧಿವೇಶನಗಳ ಕಾಲಕ್ಕೆ, ಆ ಪತ್ರಿಕೆಗೆ ಕೊಡಲಾಗಿರುವ ಸೌಲಭ್ಯಗಳನ್ನು ರದ್ದುಗೊಳಿಸುವುದಾಗಿಯೂ ತಿಳಿಸಲಾಯಿತು.

ಜಿಲ್ಲಾ ವಿದ್ಯಾಧಿಕಾರಿಗಳ ನಿವೃತ್ತಿ

ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್. ಕಾಳಪ್ಪನವರು ನಿವೃತ್ತರಾದುದರಿಂದ ಅವರ ಸ್ಥಾನಕ್ಕೆ ಬೆಂಗಳೂರು ಸಿವಿಲ್ ಪ್ರದೇಶದ ಶ್ರೀ ಎಲ್ ತಿಮ್ಮಯ್ಯನವರನ್ನು ನೇಮಿಸಲಾಗಿದೆ.

ಪತ್ರಿಕೆಗಳ ಮೇಲೆ ಕ್ರಮ

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ನ್ಯಾಯಾಂಗ ಮಂತ್ರಿಗಳು ಶ್ರೀ ಕೆ. ಎಸ್. ನಾಗರಾಜರವರ ಪ್ರಶ್ನೆಗೆ ಉತ್ತರವಿತ್ತು ಕಿತಿ, ಸತ್ಯ, ಮೈಸೂರು ಪತ್ರಿಕೆ ಮತ್ತು ಕಾಮಕಲಾ ಪತ್ರಿಕೆಗಳ ಮೇಲೆ ಪತ್ರಿಕಾ ಶಾಸನದ ಪ್ರಕಾರ ಕ್ರಮ ಕೈಗೊಳ್ಳಲಾಗಿರುವುದೆಂದು ತಿಳಿಸಿದರು. ಈ ಬಗ್ಗೆ ಪತ್ರಿಕಾ ಸಲಹಾ ಸಮಿತಿಯ ಅಭಿಪ್ರಾಯವನ್ನು ಪಡೆಯಲಿಲ್ಲವೆಂದೂ ಅವರು ಹೇಳಿದರು.

ನೇಪಾಳದಲ್ಲಿ ಖಜಾನೆ ಲೂಟಿ

ಮಹಿಳೆಯನ್ನು ಚಿತ್ರಹಿಂಸೆ ಮಾಡಿ ಮರವಣಿಗೆ

ದೆಹಲಿಯಲ್ಲಿರುವ ನೇಪಾಳ ರಾಯಭಾರಿಯು ಹೇಳಿಕೆಯೊಂದನ್ನಿತ್ತು, ನೇಪಾಳದ ಜೈಲಿನಿಂದ ಕೆಲವು ದಿನಗಳ ಹಿಂದೆ ತಪ್ಪಿಸಿಕೊಂಡು ಹೋದ ಭೀಮದತ್ ಎಂಬುವನು ತನ್ನ ತಂಡದವರನ್ನು ಕೂಡಿಕೊಂಡು, ಒಂದು ಊರಿನ ಪೊಲೀಸು ಠಾಣೆಗೆ ನುಗ್ಗಿ, ಬಂದೂಕಗಳನ್ನು ಅಪಹರಿಸಿರುವುದಲ್ಲದೆ, ಸರ್ಕಾರಿ ಖಜಾನೆ ಮತ್ತು ಅಂಗಡಿಗಳನ್ನು ಲೂಟಿ ಮಾಡಿ, ಇಬ್ಬರು ಅಧಿಕಾರಿಗಳನ್ನು ಹೊಡೆದು ನದಿಗೆ ಎಸೆದು ಬಿಟ್ಟರೆಂದು ತಿಳಿಸಿರುತ್ತಾರೆ. ಆದಾದ ಮೇಲೆ ಮತ್ತೊಂದು ಊರಿನಲ್ಲಿ ಒಬ್ಬ ಪೊಲೀಸು ಅಧಿಕಾರಿಯ ಪತ್ನಿಯನ್ನು ಚಿತ್ರಹಿಂಸೆ ಮಾಡಿ, ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತೆಂದೂ ಅವರು ಹೇಳಿರುವರು.

ನಾಲ್ಕು ಕೈ, ನಾಲ್ಕು ಕಾಲು ಉಳ್ಳ ಶಿಶು

ಕೋಲಾರದ ಮಿಷನ್ ಆಸ್ಪತ್ರೆಯಲ್ಲಿ ಕಳೆದ ಶನಿವಾರ ಒಬ್ಬ ಹೆಂಗಸು, ನಾಲ್ಕು ಕೈ, ನಾಲ್ಕು ಕಾಲುಗಳು ಮತ್ತು ಎದೆ ಭಾಗದಲ್ಲಿ ಕೂಡಿಕೊಂಡಿರುವ ಎರಡು ಶರೀರಗಳುಳ್ಳ ಮಗುವನ್ನು ಹಡೆದಳೆಂದೂ, ಅದಕ್ಕೆ ತಲೆಯು ಮಾತ್ರ ಒಂದೇ ಇದ್ದು ಮಗುವು ಇರಲಿಲ್ಲವೆಂದೂ ವರದಿಯಾಗಿದೆ. ಮಗುವು ಹುಟ್ಟುವಾಗಲೇ ಮೃತಪಟ್ಟಿತ್ತು.

ಕುದುರೆ ಜೂಜಿನ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೆ

ಸಂಸ್ಥಾನದಲ್ಲಿ ಕುದುರೆ ಜೂಜನ್ನು ನಡೆಸುತ್ತಿರುವ ಬಗ್ಗೆ ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದು ಸಭೆಯ ನಿರ್ದೇಶನ ಬಂದ ಕೂಡಲೇ ಜೂಜನ್ನು ರದ್ದುಗೊಳಿಸಲು ಸರ್ಕಾರದವರು ಸಿದ್ಧವಿರುವುದಾಗಿ ಸಚಿವ ಶ್ರೀ ಸಿದ್ಧವೀರಪ್ಪನವರು ತಿಳಿಸಿದರು.

೦ ಮೈಸೂರು ಸರ್ಕಾರದವರು ಎತ್ತುತ್ತಿರುವ ಸಾಲಕ್ಕೆ ಇನ್ನೂ ಪೂರ್ಣವಾಗಿ ಹಣವು ಬಂದಿಲ್ಲವಾದುದರಿಂದ ಮುದ್ರಾಂಕಿತ ಬ್ಯಾಂಕುಗಳೂ ಮತ್ತು ಇನ್ಶೂರೆನ್ಸ್ ಕಂಪೆನಿಗಳೂ ಮುಂದೆ ಬಂದು ಸಹಾಯ ಮಾಡಬೇಕೆಂದು ರಾಜಾಜಿಯವರು ಮನವಿ ಮಾಡಿಕೊಂಡಿದ್ದಾರೆ.

ಕೈಮಗ್ಗದ ಅಭಿವೃದ್ಧಿಗಾಗಿ ೪೫ ಲಕ್ಷ ರೂ. ಯೋಜನೆ

ಸ್ವಂ ಸು. ಫೋ॥] ಬೆಂಗಳೂರು ೨೧

ಹಿರಿಯ ಶಾಸನ ಸಭೆಯಲ್ಲಿ ಇಂದು ಶ್ರೀ ಎಂ. ಶಂಕರಯ್ಯನವರ ಪ್ರಶ್ನೆಗೆ ಉತ್ತರವಾಗಿ ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಕೈಮಗ್ಗದ ಕೈಗಾರಿಕೆ ಅಭಿವೃದ್ಧಿಗಾಗಿ ೪೫ ಲಕ್ಷ ರೂ ವಿನ ಯೋಜನೆಯೊಂದನ್ನು ತಯಾರಿಸಿರುವುದಾಗಿಯೂ, ಇದಕ್ಕೆ ಕೇಂದ್ರ ಸರ್ಕಾರದವರು ಸಹಾಯ ನೀಡುವರೆಂದು ನಿರೀಕ್ಷೆ ಇರುವುದೆಂದೂ ಹೇಳಿದರು.

ಹಿರಿಯ ಸಭೆಯಲ್ಲಿ ಮುಖ್ಯ ಮಂತ್ರಿಗಳು ಅಪ್ರೋಪ್ರಿಯೇಷನ್ ಮಸೂದೆಯನ್ನು ಮಂಡಿಸಿ, ಸರ್ಕಾರದವರು ಹೊರಡಿಸಿರುವ ಸಾಲಕ್ಕೆ ಬೆಂಬಲವನ್ನು ಕೋರಿದರು.

ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವರದಿಯನ್ನೂ ಸಹ ಮುಖ್ಯ ಮಂತ್ರಿಗಳು ಸಭೆ ಮುಂದೆ ಮಂಡಿಸಿದರು.

ಬಳ್ಳಾರಿ ಪ್ರಶ್ನೆಯನ್ನು ಪುನಃ ಪ್ರಸ್ತಾಪಿಸ ಬೇಕಾಗಿಲ್ಲ

ಬಳ್ಳಾರಿಯ ವಿವಾದವನ್ನು ಸಹಿತ ನಿರ್ಧಾರದ ಸಮಿತಿಗೆ ವಹಿಸುವುದು ಸರಿಯಲ್ಲವೆಂದೂ ಅದರ ಪುನರ್‌ಪರಿಶೀಲನೆಗೆ ಅವಕಾಶ ಕೊಡುವುದು ಬೇಕೆಂದೂ ಭಾರತದ ಸರ್ಕಾರವನ್ನು ಕೋರುವ ವಿಶೇಷ ನಿರ್ಣಯವೊಂದನ್ನು ಸಂಸ್ಥಾನದ ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ಮಂಡಿಸಿದ್ದರು. ಅದು ಅಂಗೀಕೃತವಾಯಿತು.

ದೆಹಲಿಗೆ ವೀರಣ್ಣಗೌಡರು

ಸ್ವಂ ಸು. ಫೋ॥] ಬೆಂಗಳೂರು ೨೧

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಶಾಸನ ಸಭಾಧಿವೇಶನವನ್ನು ಮುಗಿಸಿಕೊಂಡು ಈ ತಿಂಗಳು ಅಂತ್ಯದಲ್ಲಿ ದೆಹಲಿಗೆ ತೆರಳಿ, ಮೈಸೂರಿನ ರಾಜಕೀಯವನ್ನು ಕಾಂಗ್ರೆಸ್ ಹೈ ಕಮ್ಯಾಂಡಿನವರೊಡನೆ ಪ್ರಸ್ತಾಪಿಸುವರೆಂದು ತಿಳಿದುಬಂದಿದೆ.

ನೆನ್ನೆ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಶ್ರೀ ಬಿ. ವೈ. ನೀಲೇಗೌಡರು ಮಾಜಿಪಾಡಿ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸುವಂತೆ ನಿರ್ಣಯ ತರಲು ಒತ್ತಾಯ ಪಡಿಸಿದರೆಂದು ಹೇಳಲಾಗಿದೆ.

ಬಳ್ಳಾರಿ ಜಿಲ್ಲೆಯ ಗಣಿಗೆ ೨೧ ಲಕ್ಷ ರೂ. ಬಂಡವಾಳ

ತುಮಕೂರಿನ ಬಳ್ಳಾರಿಯ ಜಿಲ್ಲೆಯ ಗಣಿಗೆ ಇದುವರೆಗೆ ೨೧ ಲಕ್ಷ ರೂ ಬಂಡವಾಳವನ್ನು ಹಾಕಲಾಗಿದೆಯೆಂದು ಈ ದಿನ ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಯುವರಾಜರವರ ಷಷ್ಟ್ಯಬ್ದಪೂರ್ತಿ ಶಾಂತಿ

ಶ್ರೀಮನ್ಮಹಾರಾಜರವರ ತಂದೆಯವರಾದ ಶ್ರೀ ನರಸಿಂಹರಾಜ ಒಡೆಯರವರ ೬೦ನೇ ವರ್ಷದ ವರ್ಧಂತಿ ಉತ್ಸವ, ಷಷ್ಟ್ಯಬ್ದ ಪೂರ್ತಿ ಶಾಂತಿಯು ಇಂದು ನೆರವೇರಿತು. ಈ ಸಂಜೆ ಅರಮನೆಯಲ್ಲಿ ದೀಪೋತ್ಸವ ನಡೆಯುವುದು.

ದಕ್ಷಿಣ ಕೊರಿಯದ ಸೈನ್ಯವನ್ನು ಹೆಚ್ಚಿಸಲು ಹಂಚಿಕೆ

ಕೊರಿಯಾ ಕದನದ ವಿರಾಮದನಂತರ, ಅದರ ಒಪ್ಪಂದದ ಪ್ರಕಾರ ದಕ್ಷಿಣ ಕೊರಿಯದ ಸೈನ್ಯ ಬಲವನ್ನು ಹೆಚ್ಚಿಸಿಕೊಳ್ಳಲು ನಿಷೇಧವಾಗುವುದರಿಂದ [illegible] ಒಪ್ಪಂದವಾಗುವುದಕ್ಕೆ ಮುಂಚೆ ದಕ್ಷಿಣ ಕೊರಿಯದ ಸೈನ್ಯವನ್ನು ೨೦ ಡಿವಿಷನ್ನುಗಳಿಗೆ ಹೆಚ್ಚಿಸಿಕೊಳ್ಳಲು ಪ್ರಯತ್ನ [illegible] ಹೇಳಲಾಗಿದೆ. ಅಧ್ಯಕ್ಷ [illegible] ಈ ಮುಂದಿನ [illegible] ದೇಶದ [illegible] ರಕ್ಷಣಾ ಯೋಜನೆಯ ಅಂಗವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಗೊತ್ತಾಗಿದೆ

ಹರಿಕಥೆ

ರಾಜಧಾನಿಯ ಕೆ ಆರ್ ಆಸ್ಪತ್ರೆಯಲ್ಲಿರುವ [illegible] ಸೈಕಲ್ ಷಾಪ್ ಮುಂಭಾಗದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ನಾಳೆ ರಾತ್ರಿ ೯-೩೦ ಘಂಟೆಗೆ ವಿ|| [illegible] ಭಾಗವತರಿಂದ "ಚಂದ್ರಹಾಸ" ಎಂಬ ಹರಿಕಥೆ ನಡೆಯುತ್ತದೆ

ವಿಮಾನದ ಮೂಲಕ ಕಾಡುಮರಗಳ ಬೀಜದ ಬಿತ್ತನೆ

ರಾಜಸ್ತಾನದಲ್ಲಿ ಭೂಮಿ ಆರಣ್ಯವನ್ನಾಗಿ [illegible] ಮರ ಭೂಮಿಯು [illegible] ವಿಮಾನದ ಮೂಲಕ ಬೀಜಗಳನ್ನು ಬಿತ್ತುವ ಕಾರ್ಯವು ಉಪಕ್ರಮವಾಗಿದೆ ಅಲ್ಲಿನ ಪ್ರಧಾನಿ ಶ್ರೀ ಜಯನಾರಾಯಣವ್ಯಾಸ್‌ರವರು ಅದರ ಆರಂಭೋತ್ಸವವನ್ನು ನೆರವೇರಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕರ್ನಾಟಕ ಸಂಗೀತ [illegible]

ಅಮೆರಿಕನ್ನರ ೨ ಠಾಣ್ಯಗಳು ಕಮ್ಯೂನಿಸ್ಟರ ವಶ

ಕೊರಿಯಾದ ಪಶ್ಚಿಮ ರಣಕ್ಷೇತ್ರದಲ್ಲಿ ನೆನ್ನೆ ಕಮ್ಯೂನಿಸ್ಟರು [illegible] ಪ್ರಬಲವಾದ [illegible] ಮೂಲಕ ಅಮೆರಿಕದ [illegible] ಸೈನಿಕರನ್ನು [illegible], ಹಠಾತ್ತನೆ ಧಾಳಿ ನಡೆಸಿ ಅವರ ಎರಡು ಠಾಣ್ಯಗಳನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ

ಕಲ್ಕತ್ತಾ ಟ್ರಾಂ ದರಗಳ ಏರಿಕೆಗೆ ತಡೆ

ಎರಡನೇ ದರ್ಜೆ ಟ್ರಾಂಗಳ ದರವನ್ನು ಏರಿಸ [illegible] ಕಲ್ಕತ್ತಾ ಟ್ರಾಂ ಕಂಪೆನಿಯವರು [illegible] ರದ್ದುಗೊಳಿಸಿರುತ್ತಾರೆ. ಅವರು ತಮ್ಮ ವ್ಯಾಜ್ಯವನ್ನು [illegible] ಒಪ್ಪಿಸಲು ಸಿದ್ಧರಾಗಿರುವರು.

ಮನೆ ಕ್ರಯಕ್ಕಿದೆ

ಡೋರ್ ನಂ. 2671

[illegible] ರಸ್ತೆ (ಬಸ್ ರಸ್ತೆ)

[illegible]

[illegible]

ಜಯ ಅಂಡ್ ಕಂಪೆನಿ,

[illegible]

[illegible]

[illegible] ಫೋನ್ 520

SRI GAYATHRI

TALKIES

From 21 7-53 [illegible]

R K O's

A DANGEROUS PROFESSION

[illegible]

NEXT CHANGE —

KING KONG

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ನಮಾದರಿಯಾದ ಗುಣವುಳ್ಳವು ?

ಬಹುಕಾಲ ಬಾಳಿಕೆ ಬರುವುವು "

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ

ರೀತಿಯಲ್ಲಿ ತಯಾರಾಗುವುವು

ಮೈಸೂರು ಉಕ್ಕಿನ ಸಾಮಾನುಗಳು

★ ಗಾಡಿ ಪಟ್ಟಿ ಅಥವ ಹಾಳೆಗಳು (Flats)

★ ದುಂಡು ಮತ್ತು ಚದರ ಸಲಾಕಿಗಳು (Rounds & Squares)

★ ಕೋನ ಕಂಬಿಗಳು (Angles)

★ ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು (Reinforcing Rods)

★ ಮತ್ತು ಬೇಲು ಪಟ್ಟಿಗಳು (Hoops)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಪಟ್ಟಿಯ ವಿವರಗಳಿಗೆ ದಯವಿಟ್ಟು ಬರೆಯಿರಿ

★

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ

Office of the President, District Board, Mysore

1 Sealed tenders will be received at the Office of the President, District Board, Mysore at 4 P M on 30th July 1953 for the works noted below

2 The works have to be completed by the end of December 1953

3 Tenders should be given on percentage basis, either above or below the sanctioned estimate

4 Items not provided in the sanctioned estimate will be paid on the approved schedule of rates in force, or data worked out during the executing of the work

5 Each tender must be accompanied by a treasury chellan for having credited into Treasury the earnest deposit of the amount noted against each work

6 Adequate progress should be shown from the very commencement that is, from the date of agreement, failing which the earnest money will be forfeited, contract cancelled without further notice, and the balance work will be carried out at his risk.

7 Controlled articles required for the work will be supplied departmentally and the cost thereof will be adjusted in the bills that come for payment.

8 The successful tenderer will be required to produce an Income tax clearance or verification certificate before executing the work

9 The President reserves the right of accepting or rejecting the tender without assigning any reasons

10 The decision of the District Board in respect of any dispute regarding rates or other matters arising will be final

11 Plans, estimates and other details connected with the work can be seen in the office on any working day during the office hours

Sl No	Particulars of Work	Estimate	Earnest Money
1	Constructing a dispensary building at Mikodu Periyapatna Taluk	7,400	370
2	Constructing a Low Level cause way at 8/8 in Begur Terukanambi road	[illegible]00	100
3	Converting the northern half of Kadakola Travellers Bungalow to Dispensary Building	1 300	65
4	Improvements to District Board High School at Periyapatna	1 380	70
5	Providing water supply to Shandy Maidan at Terakanamb	3,000	150
6	Forming Plat-form in Madahalli Shandy	1 050	50
7	Construction of a Kitchen Block and wards to Bettadapura Dispensary	4 900	250

H M CHANNABASAPPA,
President,
Mysore District Board

Edited, Printed and Published by A R. Nagarajan at Sadhvi Press, D. Subbiah Road, Mysore.

ಫೋನ್ ನಂ. 792 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೨-೭-೧೯೫೩ [ಸಂಚಿಕೆ ೨೯೩

ಕೊರಿಯ ರಾಜಕೀಯ ಸಭೆಗೆ ರಷ್ಯಕ್ಕೆ ಕರೆ

ಅಠಾರಾ ಕಛೇರಿ ಖಜಾನೆಯಲ್ಲಿ ೧೧ ಲಕ್ಷ ಭಷಾವಣೆ ?

ಬೆಂಗಳೂರು ೨೨

ಇಲ್ಲಿನ ಅಠಾರಾ ಕಛೇರಿಯಲ್ಲಿರುವ ಸ್ಟೇಟ್ ಹುಜೂರ್ ಖಜಾನೆಯಲ್ಲಿ ೧೧ ಲಕ್ಷ ರೂ ಗಳಷ್ಟು ಲೆಕ್ಕ ವ್ಯತ್ಯಾಸವು ಕಂಡುಬಂದಿರುವುದೆಂದು ಖಜಾನೆಯ ಅಧಿಕಾರಿಗಳು ಪೋಲೀಸರಿಗೆ ದೂರು ಕೊಟ್ಟಿರುವರೆಂದು ವರದಿಯಾಗಿದೆ. ಸದರಿ ಹಣವು ದುರುಪಯೋಗವಾಗಿರಬಹುದೆಂದೂ, ಖಜಾನೆ ನೌಕರರಾದ ಶ್ರೀ ಕೃಷ್ಣಮೂರ್ತಿಯವರು ಪತ್ತೆಯಿಲ್ಲವೆಂದೂ ಗೊತ್ತಾಗಿದೆ

೩ ನೇ ತಾ|| ವರೆಗೆ ಶಾಸನ ಸಭೆ

ಬರುವ ತಿಂಗಳು ೩ ನೇ ತಾ|| ವರೆಗೆ ಕಿರಿಯ ಶಾಸನ ಸಭೆಯು ನಡೆಯುವುದೆಂದು ತಿಳಿದುಬಂದಿದೆ.

೩ ತಿಂಗಳು ಬಸ್ ಓಡಿಸದಿದ್ದರೆ ರಹದಾರಿ ರದ್ದು

ಅನೇಕರು ಪ್ರಭಾವ ಬೀರಿ ತಮ್ಮಲ್ಲಿ ಬಸ್ಸುಗಳಿಲ್ಲದಿದ್ದರೂ ರಹದಾರಿಯನ್ನು ಪಡೆದು, ಅದನ್ನು ಬಸ್ಸು ಇದ್ದವರಿಗೆ ವಹಿಸಿ ತಾವು ಪ್ರಯೋಜನ ಪಡೆಯುತ್ತಿರುವರೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿರುವುದೇ ಎಂದು, ಹಿರಿಯ ಶಾಸನ ಸಭೆಯಲ್ಲಿ ಶ್ರೀ ಶಿವಪ್ಪನವರು ನೆನ್ನೆ ಪ್ರಶ್ನೆ ಮಾಡಲಾಗಿ, ಗೃಹ ಮಂತ್ರಿಗಳು ಉತ್ತರವಿತ್ತು ಈ ರೀತಿಯ ಪ್ರಭಾವವನ್ನು ಬೀರದಿರಲೆಂದು ಸರ್ಕಾರದವರು ಬಸ್ಸು ಇರುವವರಿಗೆ ಮಾತ್ರ ರಹದಾರಿಯನ್ನು ಕೊಡುವಂತೆ ಏರ್ಪಡಿಸಲಿರುವರೆಂದು ತಿಳಿಸಿದರು. ಅದಕ್ಕಾಗಿಯೇ ಆ ಕೆಲಸವನ್ನು ಸಮಿತಿಗಳಿಗೆ ವಹಿಸಲಾಗಿರುವುದೆಂದೂ ಅವರು ಹೇಳಿದರು. ಬಸ್ಸು ಇಲ್ಲದಿದ್ದರೂ ರಹದಾರಿ ಪಡೆದ ನಿದರ್ಶನಗಳು ಕಂಡುಬಂದಾಗ ಸಂಬಂಧಪಟ್ಟವರನ್ನೂ ಲಂಚ ನಿರೋಧ ಶಾಖೆಯ ತನಿಖೆಗೆ ಒಳಪಡಿಸಲಾಗುವುದೇ ಎಂದು ಸದಸ್ಯರು ಪ್ರಶ್ನೆ ಮಾಡಲು, ಪರಿಶೀಲನೆ ನಡೆಸಿ ಕೂಡಲೇ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. ಪರ್ಮಿಟ್ ಪಡೆದವರ ಪೈಕಿ ೧೭೩ ಜನರು ಬಸ್ಸುಗಳನ್ನು ಓಡಿಸುತ್ತಿಲ್ಲವೆಂದೂ, ೩ ತಿಂಗಳ ಒಳಗೆ ಅವನ್ನು ಓಡಿಸದಿದ್ದರೆ ರಹದಾರಿಯನ್ನು ರದ್ದು ಪಡಿಸುವಂತೆ ಆಜ್ಞೆ ಮಾಡಲಾಗಿದೆಯೆಂದೂ ಸಚಿವರು ತಿಳಿಸಿರುತ್ತಾರೆ

ಮೆಡಿಕಲ್ ಕಾಲೇಜು ಸೆಲೆಕ್ಷನ್‌ಗಾಗಿ ಭೇಟಿ ತಾ|| ಮುಂದಕ್ಕೆ

ರಾಜಧಾನಿಯಲ್ಲಿರುವ ಮೆಡಿಕಲ್ ಕಾಲೇಜಿಗೆ ಈ ವರ್ಷ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಪೂರ್ವಭಾವಿಯಾಗಿ ವಿದ್ಯಾರ್ಥಿಗಳನ್ನು ಕರೆಸಿ ಭೇಟಿ ಮಾಡುವ ತಾರೀಖು ಈ ತಿಂಗಳು ೨೭ ನೇ ತಾ|| ಇದ್ದುದನ್ನು ಮುಂದುವರಿಸಲಾಗಿದೆ

ಮಹಿಳಾ ಅಡ್ವೋಕೇಟರು

ಮೊನ್ನೆ ದಿನ ಹೈಕೋರ್ಟಿನಲ್ಲಿ ಶ್ರೀಮತಿ ಎಸ್. ಕೆ ರಾಜೇಶ್ವರಿ ಎಂಬ ಮಹಿಳೆಯೊಬ್ಬರು ಅಡ್ವೋಕೇಟ್ ಆಗಿ ತೆಗೆದುಕೊಳ್ಳಲ್ಪಟ್ಟರು. ಲಾ ಕಾಲೇಜಿನ ಪ್ರೊಫೆಸರ್ ಶ್ರೀ ಓ ಕೃಷ್ಣಪ್ಪನವರು ಆಕೆಯನ್ನು ನ್ಯಾಯಾಧೀಶರಿಗೆ ಪರಿಚಯ ಮಾಡಿಸಿದರು

ಎಂ. ಪಿ. ಸಿ. ಸಿ. ಅಧಿವೇಶನ ಮುಂದೆ ಹೋಯಿತು

ಬೆಂಗಳೂರು ೨೨

ಶಾಸನ ಸಭೆಯು ಬರುವ ತಿಂಗಳು ೮ ರವರೆಗೂ ನಡೆಯುವ ಸಂಭವವಿರುವುದರಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಆಗಸ್ಟ್ ೧ ಮತ್ತು ೨ ನೇ ತಾ|| ಸೇರಬೇಕಾಗಿದ್ದು ಈಗ ೨೨ ನೇ ಮತ್ತು ೨೩ ನೇ ತಾರೀಖುಗಳಿಗೆ ಮುಂದುವರಿಸಲ್ಪಟ್ಟಿದೆ

ವಿಶೇಷ ರೆವಿನ್ಯೂ ಇನ್ಸ್‌ಪೆಕ್ಟರ ಹುದ್ದೆ ರದ್ದಾದ ಬಗ್ಗೆ ಪ್ರಶ್ನೆ

ನಿಮ್ನ ವರ್ಗದವರ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಲು ೮೧ ಜನ ವಿಶೇಷ ರೆವಿನ್ಯೂ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ೧೯೫೦ ರಲ್ಲಿ ಏರ್ಪಡಿಸಲಾಗಿದ್ದಿತೆಂದೂ, ಅವರುಗಳು ತಾಲ್ಲೂಕು ಅಮಲ್ದಾರರುಗಳಿಗೆ ನೆರವಾಗಬೇಕಾಗಿದ್ದುದು ಅವರ ಕೆಲಸವಾಗಿದ್ದಿತೆಂದೂ, ಆ ಪೈಕಿ ೬೧ ಹುದ್ದೆಗಳನ್ನು ರದ್ದು ಮಾಡಲಾಯಿತೆಂದೂ ಮುಖ್ಯ ಮಂತ್ರಿ ಶ್ರೀ ದುಗ್ಗಪ್ಪನವರ ಪ್ರಶ್ನೆಗೆ ಉತ್ತರವಾಗಿ ಶಾಸನ ಸಭೆಯಲ್ಲಿ ತಿಳಿಸುತ್ತಾರೆ. ಪ್ರತಿ ತಾಲ್ಲೂಕಿನಲ್ಲೂ ಒಬ್ಬೊಬ್ಬ ವಿಶೇಷ ರೆವಿನ್ಯೂ ಇನ್ಸ್‌ಪೆಕ್ಟರ್‌ಅನ್ನು ನೇಮಿಸುವಷ್ಟು ಕೆಲಸವು ಅವರುಗಳಿಗೆ ಇರುವುದಿಲ್ಲವೆಂದು ಮೇಲ್ಪಟ್ಟ ಅಧಿಕಾರಿಗಳು ಕೊಟ್ಟ ಅಭಿಪ್ರಾಯವನ್ನು ಮನ್ನಿಸಿ ಹುದ್ದೆಗಳನ್ನು ರದ್ದುಮಾಡಲಾಯಿತೆಂದೂ, ಆದರೆ ಈಚೆಗೆ ವಿಶೇಷ ರೆವಿನ್ಯೂ ಇನ್ಸ್‌ಪೆಕ್ಟರುಗಳು ಇರಬೇಕೆಂದು ಮನವಿಗಳು ಬಂದಿರುವುವೆಂದೂ ಅವರು ಹೇಳಿ ಈ ಪ್ರಶ್ನೆಯು ನಿಮ್ನ ವರ್ಗದವರ ಬಗ್ಗೆ ನೀತಿ ನಿರ್ಧಾರಕ ಸಮಿತಿಯ ಪರಿಶೀಲನೆಯಲ್ಲಿದೆಯೆಂದೂ ಅವರು ತಿಳಿಸಿದರು

ತಿಪಟೂರು ಬಳಿ ಗೂಡ್ಸ್ ರೈಲು ಅಪಘಾತ

ತಿಪಟೂರು ಮತ್ತು ಗುಬ್ಬಿ ನಡುವೆ ಗೂಡ್ಸ್ ರೈಲೊಂದು ನೆನ್ನೆ ಕಂಬಿ ತಪ್ಪಿ ೨೨ ಗಾಡಿಗಳು ಉರುಳಿದುವೆಂದೂ, ಆದ್ದರಿಂದ ಬೆಂಗಳೂರಿನಿಂದ ಪೂನಾಕ್ಕೆ ಹೋಗುವ ರೈಲು ಮೈಸೂರು ಮಾರ್ಗವಾಗಿ ಅರಸೀಕೆರೆಗೆ ಹೋಯಿತೆಂದೂ ವರದಿಯಾಗಿದೆ ಆ ರಸ್ತೆಯನ್ನು ಸಂಚಾರಕ್ಕೆ ಅನುಕೂಲಪಡಿಸಲಾಗುತ್ತಿದೆ

ಮೆಡಿಕಲ್ ಕಾಲೇಜು ವಿದ್ಯಾರ್ಥಿನಿಯರ ನಿಯೋಗ

ಫೀಜು ಹೆಚ್ಚಿಸಿದ ಬಗ್ಗೆ ಮಂತ್ರಿಗಳ ಉತ್ತರ

ಸ್ವಂ ಸು. ಫೋ.] ಬೆಂಗಳೂರು ೨೨

ಈ ದಿನ ಶ್ರೀಮತಿ ಸುನಂದಮ್ಮನವರ ನೇತೃತ್ವದಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಸುಮಾರು ೭೦ ಮಂದಿ ವಿದ್ಯಾರ್ಥಿನಿಯರು ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಬಳಿ ನಿಯೋಗ ಬಂದಿದ್ದರು

ಈ ವರ್ಷದಿಂದ ತಿಂಗಳಿಗೆ ೨೫ ರೂ ನಂತೆ ವಿದ್ಯಾ ಶುಲ್ಕವನ್ನು ವಿಧಿಸಿರುವುದರಿಂದ ತಮಗೆ ಆದ ತೊಂದರೆಯನ್ನು ವಿವರಿಸಿ ಹೊಸಬರಲ್ಲದೆ, ಮಧ್ಯ ಕೋರ್ಸಿನ ವಿದ್ಯಾರ್ಥಿನಿಯರಿಗೂ ಈ ಶುಲ್ಕ ಹಾಕಿರುವುದರಿಂದ ಅವರು ವಿದ್ಯಾಭ್ಯಾಸವನ್ನು ಮುಂದುವರಿಸದೆ ನಿಲ್ಲಿಸಬೇಕಾಗುವ ಸ್ಥಿತಿ ಒದಗಿರುವುದೆಂದು ಅರಿಕೆ ಮಾಡಿಕೊಳ್ಳಲಾಯಿತು

ಮಂತ್ರಿಗಳು ಉತ್ತರವಿತ್ತು, ಈ ವಿಷಯವು ಸರ್ಕಾರದ ನೀತಿಗೆ ಸಂಬಂಧಿಸಿದ್ದುದರಿಂದ ಮುಖ್ಯ ಮಂತ್ರಿಯವರಿಗೆ ತಿಳಿಸುವುದಾಗಿ ಹೇಳಿದರು ಇಲ್ಲಿನ ವಿದ್ಯಾರ್ಥಿನಿಯರಿಗಾಗಿರುವ ಈಗಿನ ವಸತಿಗೃಹವು ಸಾಲದೆ ಬೇರೆ ಭವನವನ್ನು ಏರ್ಪಡಿಸುವಂತೆ ಕೋರಲಾಯಿತು

ಸೂಚನೆ

ಪ್ರಥಮೈಕಾದಶಿ ಪಾರಣೆ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಚುಂಬಿಸಿದರೆ ವಿದ್ಯುಚ್ಛಕ್ತಿ ಷಾಕ್ ?

ದಕ್ಷಿಣ ಆಫ್ರಿಕದ ಜೊಹಾನ್ಸ್‌ಬರ್ಗ್ ನಗರದಲ್ಲಿ ಹಿಮವಿಲ್ಲದ ಚಳಿಗಾಲವು ಪ್ರಾಪ್ತವಾಗಿ ಅದರಿಂದ ಸ್ಥಿರ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಅವಕಾಶವಾಗಿದೆ ಸತಿ ಪತಿಯರು ಪರಸ್ಪರ ಚುಂಬನ ಮಾಡಿದರೆ ಷಾಕ್ ಹೊಡೆದ ಪ್ರಸಂಗವೊಂದು ವರದಿಯಾಗಿದೆ. ಒಬ್ಬನು ಬೆಕ್ಕಿನ ಮೈ ಮೇಲೆ ಕೈ ಸವರಿದಾಗಲೂ ಕೈಗೆ ಷಾಕ್ ಹೊಡೆಯಿತೆಂದೂ, ಮತ್ತೊಂದು ಕಡೆ ಗೆಳೆಯರು ಪರಸ್ಪರ ಕೈ ಕುಲುಕಿದಾಗಲೂ ಹಾಗೆಯೇ ಆಯಿತೆಂದೂ ಹೇಳಲಾಗಿದೆ

ಆಂಧ್ರ ಪ್ರಾಂತ ರಚನೆ ಮಸೂದೆ

ಕಿರಿಯ ಶಾಸನ ಸಭೆಯಲ್ಲಿ ಪರಿಶೀಲನೆ

ಸ್ವಂ ಸು ಫೋ.] ಬೆಂಗಳೂರು ೨೨

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಆಂಧ್ರ ಪ್ರಾಂತದ ಮಸೂದೆಯ ಬಗ್ಗೆ ನಿರ್ಣಯವನ್ನು ಮಂಡಿಸಿದರು ಶ್ರೀ ಹೆಚ್ ಕೆ ವೀರಣ್ಣಗೌಡರು ಭಾಷಣಮಾಡಿ, ಮಸೂದೆಯ ತತ್ವವನ್ನು ಸ್ವಾಗತಿಸಿದರು

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ರಷ್ಯಕ್ಕೆ ಕರೆ

ಕೊರಿಯದಲ್ಲಿ ಶಾಂತಿ ಸಂಧಾನವು ಜಯಪ್ರದವಾಗಿ ಆ ಬಗ್ಗೆ ಒಪ್ಪಂದವಾದ ನಂತರ ಸೇರುವ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸುವಂತೆ ರಷ್ಯವನ್ನು ಆಹ್ವಾನಿಸಲಾಗುವುದೆಂದು ತಿಳಿದು ಬಂದಿದೆ ರಷ್ಯವು ಈ ಸಮ್ಮೇಳನದಲ್ಲಿ ಪಾತ್ರವಹಿಸಬೇಕೆಂದು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕತ್ತರಿಸಿದ ಕೈ ಬೆರಳುಗಳ ಗೊಂಚಲು ಪತ್ತೆ

ಕೋಲಾರದ ಬಳಿ ಕಳೆದ ಭಾನುವಾರ ದಾರದಲ್ಲಿ ಒಟ್ಟಿಗೆ ಕಟ್ಟಲಾಗಿದ್ದ ಕತ್ತರಿಸಿದ ಐದು ಬೆರಳುಗಳು ಪತ್ತೆಯಾಗಿರುವುದಾಗಿ ವರದಿಯಾಗಿದೆ

ಕೊಲೆ ಅಪಾದನೆಯಲ್ಲಿ ಶಿಕ್ಷೆ

ಮೈಸೂರು ೨೨

ಚಾಮರಾಜನಗರದ ತಾಲ್ಲೂಕು ಜನ್ನೂರು ಗ್ರಾಮದ ಆದಿಕರ್ನಾಟಕರ ಜಾತಿಯ ನಂಜ, ಅವನ ಮಗ ಮರಿಯ ಕಾಳನಿದ್ದ ಪಕ್ಕದೂರಿನ ಕುಳ್ಳ ಉರುಫ್ ಸಿದ್ದ ಮತ್ತು ಚಿಕ್ಕ ಎಂಬುವರು, ೧೯೫೨ ರ ಅಕ್ಟೋಬರ್ ೧೭ ರಂದು ಅದೇ ಊರಿನ ಮಾರನ ಮಗ ಕುಳ್ಳ ಎಂಬುವನನ್ನು ದೊಣ್ಣೆಯಿಂದ ಹೊಡೆದು ಸಾಯಿಸಿದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಅಡಿಷನಲ್ ಸೆಷನ್ಸ್ ಜಡ್ಜ್ ರಾದ ಶ್ರೀ ಕೆ ವಿಶ್ವೇಶ್ವರಯ್ಯನವರು ಈ ದಿನ ತೀರ್ಪಿತ್ತು ೨ ಮತ್ತು ೩ ನೇ ಅಪಾದಿತರಾದ ಮರಿಯ ಮತ್ತು ಕಾಳನಿದ್ದ ಎಂಬುವರಿಗೆ ಐ ಪಿ ಸಿ ೩೦೪ ನೇ ಕಲಮಿನ ಪ್ರಕಾರ ಐದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿ ಉಳಿದವರನ್ನು ಬಿಡುಗಡೆ ಮಾಡಿರುತ್ತಾರೆ

ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಜಿ ಶಂಕರಶೆಟ್ಟರೂ, ಅಪರಾಧಿಗಳ ಪರ ಶ್ರೀ ಎಸ್ ಕೆ ಶಂಗಿರಿ ರಂಗಯ್ಯನವರೂ ವಕಾಲತ್ತು ವಹಿಸಿದ್ದರು.

ಸರಗೂರು ಅಂಚೆ ನೌಕರನಿಗೆ ೩ ತಿಂಗಳು ಸಜಾ

ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನ ಏಲೇಡ್ ಪೋಸ್ಟ್‌ಮಾಸ್ಟರ್ ಹೆಚ್ ಎಸ್ ರಾಮರಾವ್ ಎಂಬುವನು, ರಿಜಿಸ್ಟರ್ಡ್ ಕಾಗದಗಳು ಮತ್ತು ಅಕ್ನಾಲೆಡ್ಜ್‌ಮೆಂಟ್‌ಗಳನ್ನು ವಿಳಾಸದಾರರಿಗೆ ತಲುಪಿಸದೆ ಮೋಸ ಮಾಡುತ್ತಿದ್ದನೆಂದು ಪೋಸ್ಟ್ ಆಫೀಸ್ ಆಕ್ಟಿನ ೫೨ ನೇ ಕಲಮಿನ ಮೇರೆ ಹೂಡಿದ್ದ ಮೊಕದ್ದಮೆಯಲ್ಲಿ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ ಗುರುಸಂಗಯ್ಯನವರು ಈ ದಿನ ತೀರ್ಪಿತ್ತು ಆಪಾದಿತನಿಗೆ ೩ ತಿಂಗಳು ಕಠಿಣ ಸಜಾ ಮತ್ತು ೧೦೦ ರೂ ಜುಲ್ಮಾನೆ, ತಪ್ಪಿದರೆ ೧ ವಾರ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

ಕಪ್ಪು ಸಮುದ್ರಕ್ಕೆ ಪಶ್ಚಿಮ ರಾಷ್ಟ್ರಗಳ ನೌಕೆಗಳು

ಕಪ್ಪು ಸಮುದ್ರದಲ್ಲಿ ತುರ್ಕಿಗೆ ಸೇರಿದ ರೇವುಗಳಿಗೆ ಇತ್ತೀಚೆಗೆ ಬ್ರಿಟಿಷ್ ಮತ್ತು ಅಮೆರಿಕಾ ಯುದ್ಧ ನೌಕೆಗಳು ಭೇಟಿ ಕೊಡುತ್ತಿರುವುದರ ಬಗ್ಗೆ ರಷ್ಯದಲ್ಲಿ ಕಳವಳ ಕಂಡಿದೆ. ಈ ಬಗ್ಗೆ ರಷ್ಯ ಪತ್ರಿಕೆಯು ದ ವಿವರವನ್ನು ಕೇಳಿರುತ್ತದೆ. ಇದೊಂದು ರಾಜಕೀಯ ಪಾಲಿಟಿಕ್ಸ್ ಪ್ರದರ್ಶನವೆಂದು ರಷ್ಯವು ಭಾವಿಸಿರುವುದಾಗಿಯೂ ಹೇಳಲಾಗಿದೆ

ಪಶ್ಚಿಮ ಭಾರತ ಸಂಸ್ಥಾನದ ನಿರ್ಮಾಣ

ಸೌರಾಷ್ಟ್ರ, ಕಚ್, ಗುಜರಾತ್, ರಾಜಸ್ಥಾನ ಮತ್ತು ಮಧ್ಯ ಭಾರತ ಈ ಪ್ರಾಂತಗಳನ್ನು ಒಂದುಗೂಡಿಸಿ ಪಶ್ಚಿಮ ಭಾರತ ಎಂಬ ಒಂದು ಪ್ರಾಂತವನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ. ಈ ಬಗ್ಗೆ ಇತ್ತೀಚೆಗೆ ಆಯಾ ಪ್ರದೇಶಗಳ ಪ್ರಮುಖರ ಸಭೆಯನ್ನು ನವ ದೆಹಲಿಯಲ್ಲಿ ನಡೆಸಲಾಯಿತೆಂದೂ ಹೇಳಲಾಗಿದೆ. ಎಲ್ಲಾ ಪ್ರಾಂತಗಳಿಗೂ ಒಂದೇ ಭಾಷೆ ಮತ್ತು ಸಂಸ್ಕೃತಿ ಇರುವುದರಿಂದಲೂ ಪಾಕಿಸ್ತಾನದ ಗಡಿ ಪ್ರದೇಶವನ್ನು ಭದ್ರಗೊಳಿಸುವುದಕ್ಕಾಗಿಯೂ ಹೊಸ ವ್ಯವಸ್ಥೆಯಾಗಲಿರುವುದಾಗಿ ಗೊತ್ತಾಗಿದೆ

ಸರ್ಕಾರಿ ಸಾಲಕ್ಕೆ ೧ ಕೋಟಿ ರೂ

ಮೈಸೂರು ಸರ್ಕಾರದ ೩ ಕೋಟಿ ರೂ ಸಾಲಕ್ಕೆ ಇದುವರೆಗೆ ೧ ಕೋಟಿ ರೂ ಬಂದಿರುವುದು. ಮುಖ್ಯ ಮಂತ್ರಿಯವರು ೨|| ಸಾವಿರ, ನ್ಯಾಯಾಂಗ ಮಂತ್ರಿಗಳು ೧೦ ಸಾವಿರ ರೂಗಳನ್ನು ಕೊಟ್ಟಿರುತ್ತಾರೆ

ಅರಮನೆಗಳು ಯಾರದೆಂಬ ಬಗ್ಗೆ ಪತ್ರ ವ್ಯವಹಾರ

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರ ಪೌರ ಸಭಾ ಕಾನೂನು ತಿದ್ದುಪಡಿ ಮಸೂದೆಯು ಚರ್ಚೆಗೆ ಬಂದಾಗ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಾತನಾಡಿ, ಮೈಸೂರು ಮತ್ತು ಬೆಂಗಳೂರು ಅರಮನೆಗಳು ಸರ್ಕಾರಕ್ಕೆ ಸೇರಿದುವೇ ಅಥವಾ ಖಾಸಗಿ ಆಸ್ತಿಗಳೇ ಎಂಬ ವಿಷಯವಾಗಿ ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರವನ್ನು ನಡೆಸಲಾಗುತ್ತಿರುವುದೆಂದೂ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವವರೆಗೂ ಅರಮನೆಗಳ ವಿಷಯಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸದೆ ಇಟ್ಟಿರಬೇಕೆಂದೂ ಸಲಹೆ ಮಾಡಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಜಯಲಕ್ಷ್ಮಿ [illegible] [illegible] ಭಾರತ [illegible] ಸಂಗೀತ [illegible] ಕನ್ನಡದಲ್ಲಿ [illegible] ಗಳು.

ಪ್ರವಾಹ ಪೀಡಿತರಿಗೆ ವಸ್ತ್ರ ದಾನ

ನಂಜನಗೂಡು ೨೦

ಸಂಸ್ಥಾನದ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿನಿಯವರಾದ ಶ್ರೀಮತಿ ಲಕ್ಷ್ಮಿ ಕೃಷ್ಣಪ್ಪನವರು ಈ ದಿನ ಪೌರಸಭಾ ಕಟ್ಟಡದಲ್ಲಿ ಬಡವರು ಮತ್ತು ಪ್ರವಾಹದಲ್ಲಿ ನೊಂದವರಿಗೆ ೭೪ ಸೀರೆಗಳನ್ನೂ ಮತ್ತು ೧೪ ಜೊತೆ ಪಂಚೆಗಳನ್ನೂ ಹಂಚಿದರು. ಜಿಲ್ಲಾಧಿಕಾರಿಗಳಾದ ಶ್ರೀ ಸ್ವಾಮಿನಾಥನ್‌ರವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿಗಳು ರೆಡ್ ಕ್ರಾಸ್ ಸಂಸ್ಥೆಯ ಕೆಲಸ ಕಾರ್ಯಗಳನ್ನು ವಿವರಿಸಿ, ಕ್ಷಾಮ ಪೀಡಿತರಿಗಾಗಿ ಆದರ ಮುಖಾಂತರ ಗಂಜಿ ಕೇಂದ್ರಗಳನ್ನು ತೆರೆದು ಪರಿಹಾರ ಕಾರ್ಯಗಳನ್ನು ನಡೆಸಲಾಗುತ್ತಿದೆಯೆಂದು ತಿಳಿಸಿ ಅದಕ್ಕೆ ಎಲ್ಲರ ಸಹಕಾರಗಳನ್ನೂ ಕೋರಿದರು. ಪೌರಸಭಾಧ್ಯಕ್ಷ ಶ್ರೀ ಎಂ. ಮರಿಕೆಂಪಯ್ಯನವರು ವಂದನಾರ್ಪಣೆ ಮಾಡಿದರು.

ಅನಂತರ ಶ್ರೀ ಗೋಪಾಲ ಬಿ ವಿ ಬಾಲಸುಬ್ರಹ್ಮಣ್ಯ ಮತ್ತು ಶ್ರೀ ವೆಂಕಟಸುಬ್ಬನ್‌ರವರು ಬಡವರಿಗಾಗಿ ಕೊಟ್ಟಿದ್ದ ೨೦ ಸೀರೆಗಳನ್ನು ಮಹಿಳಾ ಸೇವಾ ಸಮಾಜದಲ್ಲಿ ಹಂಚಲಾಯಿತು. ಸ್ಥಳದ ಸಬ್ ಡಿವಿಜನ್ ಅಧಿಕಾರಿಗಳೂ ಮತ್ತು ಇತರ ಪ್ರಮುಖರು ಈ ಸಮಾರಂಭಗಳಲ್ಲಿ ಹಾಜರಿದ್ದರು

೨ ತಾಲ್ಲೂಕುಗಳಲ್ಲಿ ಕಾಲರಾದಿಂದ ೧೫೦ ಮರಣ

ಮದ್ರಾಸಿನ ತಿರುಚೆಂದೂರು ಮತ್ತು ಶ್ರೀವೈಕುಂಠಂ ತಾಲ್ಲೂಕುಗಳಲ್ಲಿ ಕಾಲರಾದಿಂದ ಕಳೆದ ೧೫ ದಿನಗಳಲ್ಲಿ ೧೫೦ ಮಂದಿ ಮಡಿದಿರುವರೆಂದು ವರದಿಯಾಗಿದೆ

ಅಂಗಡಿ ಕಾನೂನು ಉಲ್ಲಂಘನೆಗೆ ದಂಡ

ನಗರದ ಎರಡನೇ ನ್ಯಾಯಾಧೀಶರ ಕೋರ್ಟಿನಲ್ಲಿ ಇಲ್ಲಿನ ಅಂಗಡಿ ಮತ್ತು ಸಿಬ್ಬಂದಿ ಇನ್ಸ್‌ಪೆಕ್ಟರರು ಹೂಡಿದ್ದ ಮೊಕದ್ದಮೆಯಲ್ಲಿ ಸದರಿ ಕಾನೂನಿನ ಉಲ್ಲಂಘನೆಗಾಗಿ ಜಗನ್ಮೋಹನ ಭವನದ ಬಳಿ ಇರುವ ಶ್ರೀ ರಾಮಚಂದ್ರ ಭವನದ ಮಾಲೀಕರಾದ ಶ್ರೀ ಪಿ ಕೆ ವೆಂಕಟರಾಮಯ್ಯರವರಿಗೆ ೫ ಕೇಸುಗಳಲ್ಲಿ ಒಟ್ಟು ೩೫ ರೂ ದಂಡವನ್ನು ವಿಧಿಸಲಾಗಿದೆ. ಇರ್ವಿನ್ ರಸ್ತೆಯ ಜಯಲಕ್ಷ್ಮಿ ಚಹಾ ಅಂಗಡಿಯ ಮಾಲೀಕ, ಶ್ರೀ ಒ. ಸವಯ್ಯ ಮತ್ತು ಲ್ಯಾನ್ಸ್‌ಡೌನ್ ಭವನದಲ್ಲಿರುವ ಕಿಟ್ಟೀಸ್ ಸೋಡಾ ಫ್ಯಾಕ್ಟರಿಯ ಶ್ರೀ ಗುಂಡಪ್ಪನವರಿಗೆ ತಲಾ ೧೫ ರೂ ಜುಲ್ಮಾನೆಯನ್ನು ನ್ಯಾಯಾಧೀಶರು ವಿಧಿಸಿರುತ್ತಾರೆ

ಜೈ ಪ್ರಕಾಶ್ ನಾರಾಯಣರಿಂದ ರೇಡಿಯೋ ಭಾಷಣ

ಪ್ರಜಾಸತ್ತೆಗೆ ಸವಾಲು ಎಂಬ ವಿಷಯವಾಗಿ ದೆಹಲಿ ರೇಡಿಯೋದವರು ಏರ್ಪಡಿಸಿರುವ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಈ ರಾತ್ರಿ ೮|| ಗಂಟೆಗೆ ಸಮಾಜವಾದಿ ನಾಯಕರಾದ ಶ್ರೀ ಜೈಪ್ರಕಾಶ್ ನಾರಾಯಣರವರು ಪ್ರಸಾರ ಭಾಷಣ ಮಾಡುವರು. ಅದನ್ನು ಮೈಸೂರಿನ ರೇಡಿಯೋವಿನಲ್ಲೂ ಅದೇ ಕಾಲದಲ್ಲಿ ಕೇಳಬಹುದು

ಪ್ರವಾಹದಲ್ಲಿ ನೊಂದವರಿಗೆ ಸಹಾಯ

ಕೊಳ್ಳೇಗಾಲ ೧೭

ಕಳೆದ ೭ ಮತ್ತು ೮ ನೇ ತಾ|| ಕಾವೇರಿಯಲ್ಲಿ ಬಂದ ಪ್ರವಾಹದಿಂದ ಕಷ್ಟನಷ್ಟಗಳಿಗೆ ಒಳಗಾದ ಇಲ್ಲಿನ ಉಪ್ಪಾರಗೇರಿಯ ೩೫ ಮನೆಗಳಿಗೆ ತಲಾ ೧೪ ರೂ. ಪರಿಹಾರ ಕೊಡಲು ಇಲ್ಲಿನ ಪಂಚಾಯಿತಿಯವರು ನಿರ್ಧರಿಸಿರುತ್ತಾರೆ.

ಹಾವನ್ನು ನುಂಗಿದ ಕಪ್ಪೆ

ಹಾಸನ ಜಿಲ್ಲೆಯ ಶಾಂತಿ ಗ್ರಾಮದಲ್ಲಿ ಭಾರಿ ಕಪ್ಪೆಯೊಂದು ನೀರು ಹಾವನ್ನು ನುಂಗಿದುದಾಗಿ ವರದಿಯಾಗಿದೆ. ಇದನ್ನು ಅನೇಕರು ನೋಡಿದರು. ಅದಾದ ನಂತರ ಕಪ್ಪೆಯು ಪೊಟರೆಯನ್ನು ಸೇರಿತು

ಕಲ್ಕತ್ತಾ ಬಾಂಬ್ ಪ್ರಕರಣದಲ್ಲಿ ೧ ಮರಣ

ಉತ್ತರ ಕಲ್ಕತ್ತೆಯಲ್ಲಿ ನೆನ್ನೆ ಬಾಂಬ್ ಪ್ರಕರಣವು ನಡೆದು ಒಬ್ಬನು ಮಡಿದಿರುತ್ತಾನೆ. ಇಬ್ಬರಿಗೆ ಗಾಯಗಳಾಗಿವೆ. ಅಲ್ಲಿನ ಸರ್ಕಾರಿ ಬಸ್ಸುಗಳ ಮೇಲೆ ಜನರು ಬಾಂಬು ಮತ್ತು ಪಟಾಕಿಗಳನ್ನು ಮೊನ್ನೆ ಎಸೆದರು. ಇದರಿಂದಲೂ ಹಲವರಿಗೆ ಗಾಯವಾಗಿದೆ. ೫೧ ಜನರ ದಸ್ತಗಿರಿಗಳಾಗಿವೆ

ಡೋಲೋತ್ಸವ

ರಾಜಧಾನಿಯ ಸಂತೇಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನದಲ್ಲಿ ಸ್ಥಾಪಿತವಾಗಿರುವ ಶ್ರೀ ಸತ್ಯನಾರಾಯಣ ಸ್ವಾಮಿಯವರ ಉತ್ಸವ ಮೂರ್ತಿಗೆ ಇಂದಿನಿಂದ ೨೦ ದಿನಗಳ ಪ್ರತಿದಿನ ರಾತ್ರಿ ೮ ರಿಂದ ೯ ಘಂಟೆವರೆಗೆ ಡೋಲೋತ್ಸವವು ನಡೆಯಲೇರ್ಪಾಡಾಗಿದೆ. ಭಕ್ತಾದಿಗಳೆಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ

ಹರಿಕಥೆ

ಮೈಸೂರು ಮಂಡಿಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರಥಮವೈಕಾದಶಿ ಪ್ರಯುಕ್ತ ಈ ಸಂಜೆ ೭ ಘಂಟೆಗೆ ವೇ|| ಬ್ರ|| ಶ್ರೀ ಹರಿಸರ್ವೋತ್ತಮ ದಾಸರಿಂದ ಭಕ್ತ 'ಪುಂಡಲೀಕ' ಎಂಬ ಹರಿಕಥೆ ಮತ್ತು ಅವನವರಿಗೆ ಶ್ರೀ ಪಾಂಡುರಂಗ ಸ್ವಾಮಿ ಅಲಂಕಾರ ಸಹಾ ಏರ್ಪಾಡಾಗಿದೆ

ಪ್ರಭಾ ಅಮೋಘ ಪ್ರಾರಂಭ ೨೩-7-53 ರಿಂದ

ಪ್ರತಿ ದಿನ 3 ಆಟಗಳು

ಮಾರ್ಡ್ನ್ ಅಂಡ್ ಮೂವಿಕ್ರಾಫರ್ಟರ ಇಂಪಾದ ಸಂಗೀತದಿಂದ ಕೂಡಿದ ಅತ್ಯುತ್ತಮ ಹಿಂದಿ ಚಿತ್ರ

* ದಾಗ್ *

ಪಾತ್ರ ದಿಲೀಪ್ ಕುಮಾರ್, ನಿಮ್ಮಿ, ಲಲಿತಾ ಪವಾರ್, ಉಷಾ ಕಿರಣ್

ಸಂಗೀತ ಶಂಕರ್ ಜೈಕಿಷನ್

ದಿಗ್ದರ್ಶನ ಅಮಿಯಾ ಚಕ್ರವರ್ತಿ

— ಬೆಳಗಿನ ಪ್ರದರ್ಶನ —

24 7 53 ರಿಂದ 3 ದಿನಗಳು

ಪೃಥ್ವಿರಾಜ್, ರಾಗಿಣಿ ನಟಿಸಿರುವ

" ಇನ್ಸಾಫ್ "

ಪಾನ ನಿರೋಧ ಶಾಸನದ ಉಲ್ಲಂಘನೆಗೆ ಗಡೀಪಾರು

ಪದೇಪದೆ ಪಾನ ನಿರೋಧದ ಶಾಸನವನ್ನು ಉಲ್ಲಂಘಿಸಿದರೆಂದು ಬುಲ್ಸಾರಿನ ಇಬ್ಬರನ್ನು ಸೂರತ್ ಜಿಲ್ಲಾ ಮ್ಯಾಜಿಸ್ಟ್ರೇಟರು ಜಿಲ್ಲೆಯಿಂದ ಗಡಿಪಾರು ಮಾಡಿರುತ್ತಾರೆ

ಮೈಸೂರು ಪೇಟೆ ಧಾರಣೆ

ಅಕ್ಕಿ	ರೂ ಆಣೆ	ರೂ ಆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ತೊಗರಿಬೇಳೆ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಉದ್ದು	[illegible]	[illegible]
ಅಲಸಂದೆ	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ಸೀಗೆಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ದುರ್ಗಾಂಬಾ ಸಹಕಾರ ಸಂಘದ ಅಧಿಕಾರ ವರ್ಗ

ಮೈಸೂರು ಜಲಪುರಿ ಆದಿ ಜಾಂಬವ ಕಾಲೋನಿಯಲ್ಲಿರುವ ಶ್ರೀ ದುರ್ಗಾಂಬಾ ಕೋ-ಆಪರೇಟಿವ್ ಸೊಸೈಟಿಯ ಚುನಾವಣೆಯು ಕಳೆದ ಭಾನುವಾರ ಶ್ರೀ ಎಂ. ಬಸವಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಡಿ ಮರಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಆರ್ ಪುಟ್ಟರಂಗಯ್ಯನವರ ಉಪಾಧ್ಯಕ್ಷರಾಗಿಯೂ, ಶ್ರೀ ಸಿ ಚಿಕ್ಕ ರಂಗಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀ ಟಿ ಜವರಯ್ಯ ಮತ್ತು ಸಿ ಪುಟ್ಟಸ್ವಾಮಿಯವರು ಪಂಚಾಯ್ತಿಗಳಾಗಿಯೂ ಆಯ್ಕೆಯಾದರು

ರೈಲ್ವೆ ವರ್ಕ್‌ಷಾಪಿನ ಕ್ಯಾಂಟೀನ್ ಕೆಲಸಗಾರರ ನೋಟೀಸು

ರಾಜಧಾನಿಯ ರೈಲ್ವೆ ವರ್ಕ್‌ಷಾಪ್ ಕ್ಯಾಂಟೀನಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಬಾಲಕೃಷ್ಣ ಎಂಬುವನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳದಿದ್ದಲ್ಲಿ ೨೮ನೇ ತಾ|| ನಿಂದ ಸತ್ಯಾಗ್ರಹ ಹೂಡುವುದಾಗಿ ಕ್ಯಾಂಟೀನ್ ಅಧ್ಯಕ್ಷರಿಗೆ ಕಾರ್ಮಿಕರು ನೋಟೀಸು ಕೊಟ್ಟಿರುತ್ತಾರೆ

ಜಲಪುರಿ ಯುವಕ ಸಂಘ

ರಾಜಧಾನಿಯ ಜಲಪುರಿ ಯುವಕ ಸಂಘದ ಸಭೆಯು ನಾಳೆ ಬೆಳಗ್ಗೆ ೯-೩೦ ಘಂಟೆಗೆ ಪೌರಸಭಾ ಕಮೀಷನರ್ ಶ್ರೀ ಎನ್ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ನಡೆಯಲೇರ್ಪಾಡಾಗಿದೆ

ಮನೆ ಕ್ರಯಕ್ಕಿದೆ

ಡೋರ್ ನಂ. 2671

6ನೇ ಮೇನ್ ರಸ್ತೆ (ಬಸ್ ರಸ್ತೆ)

ವಾಣಿವಿಲಾಸ ಮೊಹಲ್ಲ

ವಿಶಾಲವಾದ ಸೈಟಿನಲ್ಲಿ ಕಟ್ಟಿರುವ ಈ ಹಾರ್ ತಾರಸಿ ಮನೆ ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಮನೆ, ಜಮೀನು, ಮಾರಾಟದ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ

ಫೋನ್ 520

Edited, Printed and Published by A R Nagarajan at Sadhvi Press, D Subbiah Road, Mysore

ಫೋನ್ ನಂ. 792 ‖ ವಂದೇ ಮಾತರಂ ‖ ಬಿಡಿಪ್ರತಿಗೆ 3 ಪೈಸೆ

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೮-೭-೧೯೬೪ [ಸಂಚಿಕೆ ೨೯೭

ಕೊಲಂಬೋ ಜನರ ಮೇಲೆ ಬೆತ್ತದ ಪ್ರಹಾರ

ಚಂದ್ರ ಗ್ರಹಣಕ್ಕಾಗಿ ನೀರು ಸರಬರಾಜು

ಮೈಸೂರು ೨೮

ಇಲ್ಲಿನ ಪೌರ ಸಭಾಧ್ಯಕ್ಷರಾದ ಶ್ರೀ ಟಿ ವೆಂಕಟೇಶಯ್ಯನವರು ಇಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ಹೇಳಿ, ನಾಳೆದ್ದು ಸಂಭವಿಸುವ ಚಂದ್ರ ಗ್ರಹಣ ದಲ್ಲಿ ಜನರಿಗೆ ಅನುಕೂಲವಾಗುವಂತೆ ನಲ್ಲಿ ನೀರಿನ ಸರಬರಾಜು ಮಾಡಲಾಗು ವುದೆಂದೂ, ಕಾರಂಜಿ ಮತ್ತು ಕುಕ್ಕರ ಹಳ್ಳಿ ಕೆರೆಗಳಲ್ಲಿ ಆ ದಿನ ರಾತ್ರಿ ರಜನೀ ಕಾಂತ ದೀಪಗಳನ್ನಿಡುವ ವ್ಯವಸ್ಥೆ ಮಾ ಡಲಾಗುವುದೆಂದೂ ತಿಳಿಸಿದರು.

ಜೂಜಾಡುತ್ತಿದ್ದವರಿಗೆ ಶಿಕ್ಷೆ

ರಾಜಧಾನಿಯ ಕಲಾಸಗೇರಿಯ ಬಸ ವಯ್ಯ ಎಂಬುವರ ಮನೆಯಲ್ಲಿ ನೆನ್ನೆ ಸಂ ಜೆ ಜೂಜಾಡುತ್ತಿದ್ದ ಬಸವಯ್ಯ ಮತ್ತು ಇತರ ಐದು ಜನರ ಮೇಲೆ ಮಂಡಿ ಮೊ ಹಲ್ಲಾ ಪೊಲೀಸರು ಹೂಡಿದ್ದ ಮೊಕದ್ದ ಮೆಯಲ್ಲಿ ೨ ನೇ ನಗರ ನ್ಯಾಯಾಧೀಶ ರು ಈ ದಿನ ಅಪಾದಿತರೆಲ್ಲರಿಗೂ ತಲಾ ೧೦ ರೂಪಾಯಿ ಜುಲ್ಮಾನೆಯನ್ನೂ, ಮ ನೆ ಮಾಲೀಕ ಬಸವಯ್ಯನಿಗೆ ಹೆಚ್ಚಿಗೆ ೧೫ ರೂ ಜುಲ್ಮಾನೆಯನ್ನೂ ವಿಧಿಸಿದರು

ಬಟ್ಟೆ ಕದಿಯುತ್ತಿದ್ದ ಕಳ್ಳ ಬಂಧನ

ರಾಜಧಾನಿಯ ನಜರ್‌ಬಾದಿನಲ್ಲಿರು ವ ಕೇಶ ಕರಿಯ ಎಂಬುವನು, ಮೊನ್ನೆ ಮಧ್ಯಾಹ್ನ ನಡು ಹಗಲಿನಲ್ಲಿ ತಿ ಮುಬ್ಬ ಯ್ಯ ರಸ್ತೆಯ ೩೧೦ನೇ ನಂಬರು ಮನೆ ಯಲ್ಲಿ ಬಟ್ಟೆಗಳನ್ನು ಕಳವು ಮಾಡುತ್ತಿ ದ್ದಾಗ ನೆರೆಹೊರೆಯ ನಿವಾಸಿಗಳು ಅವ ನನ್ನು ಹಿಡಿದು ಲಕ್ಷ್ಮೀಪುರಂ ಪೊಲೀಸರ ವಶಪಡಿಸಿದರು ಅವನ ಮೇಲೆ ಮೊಕ ದ್ದಮೆ ಹೂಡಲಾಗಿದೆ

ಹರಿಕಥೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿ ಶ್ರೀ ರಾಮಲಿಂಗ ಚೌಡೇಶ್ವರಿ ದೇ ವಾಲಯದಲ್ಲಿ ಆಷಾಢ ಶುಕ್ರವಾರದ ಪ್ರ ಯುಕ್ತ ಈ ಸಂಜೆ ೭ ಗಂಟೆಗೆ ವೇ‖ಬ್ರ‖ ಶ್ರೀ ಪುರುಷೋತ್ತಮದಾಸರಿಂದ ಗಜ ಗೌರಿ ಅಥವಾ ಐರಾವತ ಎಂಬ ಹರಿಕ ಥೆಯೂ, ನಾಳೆ ಸಂಜೆ ೭ ಗಂಟೆಗೆ ಶನಿ ಮಹಾತ್ಮೆಯೂ ನಡೆಯುವುವು ಇಂದು ಅಮ್ಮನವರಿಗೆ ಅನ್ನ ಪೂಜಾ ಅಲಂಕಾರ ವು ಇದೆ

೧೦೮ ವರ್ಷದ ಮಹಿಳೆಯ ಮರಣ

ರಾಜಧಾನಿಯ ವಕೀಲರಾದ ಶ್ರೀ ಎಸ್ ಆರ್ ಸಂಪತ್ತಯ್ಯಂಗಾರ್ಯರ ಅ ಜ್ಜಿಯವರಾದ ಶ್ರೀಮತಿ ಲಕ್ಷ್ಮಮ್ಮನವ ರು ಕಳೆದ ೧೩ನೇ ತಾ‖ ನಿಧನ ಹೊಂದಿ ದರು ಅವರಿಗೆ ೧೦೮ ವರ್ಷ ವಯಸ್ಸಾ ಗಿದ್ದಿತು

೧೦೦ ರೂ. ನೋಟು ಸಿಕ್ಕಿದೆ

ರಾಜಧಾನಿಯ ನಜರ್‌ಬಾದಿನ ಫ ಯೊಬಾಲ್ಡ್ ರಸ್ತೆಯಲ್ಲಿರುವ ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಗೆ ಒಗೆಯುವುದಕ್ಕಾ ಗಿ ಕೊಟ್ಟ ಬಟ್ಟೆಗಳ ರಾಶಿಯಲ್ಲಿ ಈ ದಿ ನ ೧೦೦ ರೂ ನ ಒಂದು ನೋಟು ಸಿಕ್ಕಿ ದ್ದು ವಾರಸುದಾರರು ಸರಿಯಾದ ರುಜು ವಾತು ಮತ್ತು ಈ ಜಾಹಿರಾತಿನ ಛಾ ರ್ಜನ್ನು ಕೊಟ್ಟು ನ್ಯೂ ಲ್ಯಾಂಡ್ ಲಾಂಡ್ರಿ ಯಲ್ಲಿ ಪಡೆಯಬಹುದೆಂದು ಸೂಚಿಸಲಾ ಗಿದೆ

ಕಲ್ಕತ್ತಾ ಪತ್ರಿಕಾಕರ್ತರ ಮೇಲೆ ಲಾಠಿ ಪ್ರಹಾರ

ಕಲ್ಕತ್ತದಲ್ಲಿ ಅಕ್ರಮ ಕೂಟವೆಂದು ಪರಿಗಣಿತವಾದ ಒಂದು ಸಭೆಯಲ್ಲಿದ್ದ ಪತ್ರಿಕೋದ್ಯಮಿಗಳ ಮೇಲೆ ಮೊನ್ನೆ ಸಂ ಜೆ ಪೊಲೀಸರು ಲಾಠಿ ಪ್ರಹಾರ ಮಾಡಿ ದ ಪರಿಣಾಮವಾಗಿ ೧೮ ಮಂದಿಗೆ ಗಾ ಯಗಳಾದುವು ಇಬ್ಬರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಒಬ್ಬನ ಸ್ಥಿತಿ ಚಿಂತಾ ಜನಕವಾಗಿದೆ ಒಬ್ಬ ಮಹಿಳೆಯೂ ಸೇ ರಿ, ೧೫ ಜನ ಪತ್ರಿಕೋದ್ಯಮಿಗಳನ್ನು ದಸ್ತಗಿರಿ ಮಾಡಲಾಗಿತ್ತು ಆ ಪೈಕಿ ೧೦ ಜನರನ್ನು ಬಿಡುಗಡೆ ಮಾಡಲಾಯಿತು ಅವರುಗಳ ಕ್ಯಾಮರಾಗಳನ್ನು ಪೊಲೀಸ ರು ಕಿತ್ತು ಒಡೆದುಹಾಕಿದರು ಆದಾದ ನಂತರ ಪೊಲೀಸು ಕಮಿಷನರನ್ನು ಇ ತರ ಪತ್ರಿಕೋದ್ಯಮಿಗಳು ಭೇಟಿ ಮಾ ಡಲಾಗಿ, ಅಕ್ರಮ ಸಭೆಯಲ್ಲಿದ್ದರೆ ಲಾಠಿ ಹೊಡೆತಕ್ಕೆ ಸಿಕ್ಕಬೇಕಾಗುವುದೆಂದು ಅ ವರು ತಿಳಿಸಿದರೆಂದು ವರದಿಯಾಗಿದೆ ಈ ಘಟನೆ ಬಗ್ಗೆ ಪ್ರಧಾನಿ ನೆಹರೂರವರಿಗೆ ಪ್ರತಿಭಟನಾ ತಂತಿಗಳನ್ನು ಕಳುಹಲಾ ಗಿದೆ ತಿರುವಾಂಕೂರು, ಬೊಂಬಾಯಿ ಪತ್ರಿಕೋದ್ಯಮಿಗಳು ಈ ಬಗ್ಗೆ ಪ್ರತಿಭ ಟಿಸಿರುತ್ತಾರೆ.

ಕೋರ್ಟ್ ಅಪ್ಪಣೆ ಪೋರ್ಜರಿ ಮಾಡಿ ಖೈದಿಗಳ ಪರಾರಿ

ಕೋರ್ಟು ಅಪ್ಪಣೆಯನ್ನು ಫೋರ್ಜರಿ ಮಾಡಿ, ಹೈದರಾಬಾದ್ ಸೆಂಟ್ರಲ್ ಜೈ ಲಿನಲ್ಲಿ ಮೂರು ವರ್ಷಗಳ ಕಠಿಣ ಶಿಕ್ಷೆ ಅನುಭವಿಸುತ್ತಿದ್ದ ಇಬ್ಬರು ಖೈದಿಗಳು ತಪ್ಪಿಸಿಕೊಂಡು ಪರಾರಿಯಾಗಿರುವರೆಂ ದೂ, ಪೊಲೀಸರು ಪತ್ತೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ಗಂಡ ಮಲಗಿದ್ದಾಗ ಹಣ ಅಪಹರಿಸಿ ಪರಾರಿ

ಶಾಂತಿ ಗ್ರಾಮದ ಬಳಿ ದಂಡಿಗನ ಹ ಳ್ಳಿಯಲ್ಲಿ ಕೊತ್ವಾಲು ಕರಿಯಪ್ಪ ಎಂಬು ವನು ರಾತ್ರಿ ಮಲಗಿದ್ದಾಗ ಅವನ ಹೆಂಡ ತಿ ಕಾಳಮ್ಮನು ಅವನ ಉಡಿದಾರವನ್ನು ಕುಯ್ದು ಅದರಲ್ಲಿದ್ದ ಬೀಗದ ಕೈಗಳನ್ನು ತೆಗೆದುಕೊಂಡು ಪೆಟ್ಟಿಗೆಯಲ್ಲಿಡಲಾ ಗಿದ್ದ ನಗದು ಮತ್ತು ಚಿನ್ನದ ಒಡವೆಗ ಳನ್ನು ಅಪಹರಿಸಿ ಪರಾರಿಯಾಗಿರುವಳೆಂ ದು ದೂರು ಕೊಡಲಾಗಿದೆ.

ಕೊಲಂಬೊ ಪ್ರದರ್ಶಕರ ಮೇಲೆ ಬೆತ್ತದ ಏಟು

ಸಿಂಹಳದ ಪ್ರತಿನಿಧಿ ಸಭೆಯ ಮೇ ಲೆ ನೆನ್ನೆ ಕಲ್ಲುಗಳನ್ನು ಎಸೆದ ಜನರ ಗುಂಪಿನವರನ್ನು ಪೊಲೀಸರು ಬೆತ್ತದಿಂ ದ ಹೊಡೆದರು ಏಟಿನಿಂದ ತಪ್ಪಿಸಿಕೊಂ ಡು ಚೆಲ್ಲಾಪಿಲ್ಲಿಯಾಗಿ ಓಡುವಾಗ ಹಲ ವರು ಕೊಳವೊಂದಕ್ಕೆ ಬಿದ್ದರು ಜನರು ಪುನಃ ಗುಂಪು ಸೇರಿ ಪೊಲೀಸರ ಮೇಲೆ ಕಲ್ಲುಗಳನ್ನು ಎಸೆಯಲು ಅವರು ಅಶ್ರು ವಾಯು ಪ್ರಯೋಗಿಸಿದರು ಅನಂತರ ನಡೆದ ಬಹಿರಂಗ ಸಭೆಯಲ್ಲಿ ಪ್ರತಿನಿಧಿ ಸಭೆಯ ವಿರೋಧ ಪಕ್ಷದವರು ಭಾಷಣ ಮಾಡಿ ಅಕ್ಕಿ ಬೆಲೆ ಹೆಚ್ಚಿಸಿದುದಕ್ಕಾಗಿ ಸರ್ಕಾರವನ್ನು ಖಂಡಿಸಿದರು

ಕಲ್ಕತ್ತಾ ಟ್ರಾಂ ಚಳುವಳಿ ಮುಖಂಡರ ಬಿಡುಗಡೆ

ಕಲ್ಕತ್ತದಲ್ಲಿ ಕಳೆದ ೧೬ ನೇ ತಾ‖ ನಿಂದ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆ ಯನ್ನು ವಾಪಸು ತೆಗೆದುಕೊಳ್ಳಲಾಗಿದೆ. ಪರಿಸ್ಥಿತಿಯು ಸುಮುಖವಾಗಲು, ಟ್ರಾಂ ದರಗಳ ಏರಿಕೆ ವಿರುದ್ಧದ ಚಳುವಳಿಯ ೫ ಜನ ಮುಖಂಡರನ್ನು ಬಂಧನದಿಂ ದ ಬಿಡಲಾಗಿದೆ

ಚತುರ್ರಾಷ್ಟ್ರ ಸಮ್ಮೇಳನಕ್ಕೆ ರಷ್ಯದ ಬಹಿಷ್ಕಾರ

ಬರುವ ಸೆಪ್ಟೆಂಬರ್ ತಿಂಗಳಲ್ಲಿ, ಜ ರ್ಮನಿ ಮತ್ತು ಆಸ್ಟ್ರಿಯಾಗಳ ಸಮಸ್ಯೆ ಯನ್ನು ಕುರಿತು ಚರ್ಚಿಸಲು ಸೇರುವ ಚತುರ್ರಾಷ್ಟ್ರ ವಿದೇಶಾಂಗ ಸಚಿವರುಗಳ ಸಮ್ಮೇಳನಕ್ಕೆ ಬರುವಂತೆ ಬ್ರಿಟನ್, ಅ ಮೆರಿಕ ಮತ್ತು ಫ್ರಾನ್ಸುಗಳು ರಷ್ಯಕ್ಕೆ ಇತ್ತ ಆಹ್ವಾನವನ್ನು ಅದು ನಿರಾಕರಿಸಿದೆ

ಗುಂಡಿನಿಂದ ಪೊಲೀಸ್ ಅಧಿಕಾರಿಯ ಆತ್ಮಹತ್ಯೆ

ಬೊಂಬಾಯಿನ ಪೊಲೀಸ್ ಶಾಲೆಯ ಅಧಿಕಾರಿಯಾದ ಶ್ರೀ ಎ ಡಿ ದೇಸಾ ಯಿಯವರು ಅಕ್ರಮ ಸಂಭಾವನೆ ಪಡೆ ದಿದ್ದುದನ್ನು ಕಳೆದ ಮಂಗಳವಾರ ಅಲ್ಲಿ ಲಂಚ ನಿರೋಧ ಶಾಖೆಯವರು ಪತ್ತೆ ಹ ಚ್ಚಿದರೆಂದೂ, ಈ ಕಾರಣಕ್ಕಾಗಿ ದೇಸಾ ಯಿಯವರು ಮಾರನೇ ದಿನ ಬೆಳಗ್ಗೆ ರಿವಾಲ್ವ ರಿನಿಂದ ತಲೆಗೆ ಗುಂಡು ಹೊಡೆದುಕೊಂ ಡು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃ ತಪಟ್ಟರೆಂದೂ ವರದಿಯಾಗಿದೆ

ಪಟ್ಟಾ ಜೂಜಿನ ನಿಷೇಧ

ಶಾಸನ ಸಭೆಯಲ್ಲಿ ಮಸೂದೆಗೆ ಅಂಗೀಕಾರ

ಸ್ವಂ ಮ ಪೋ] ಬೆಂಗಳೂರು ೨೮

ಇಂದು ಕೆಳಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ರೆವಿನ್ಯೂ ಮಂ ತ್ರಿಗಳು ಶ್ರೀ ಎಸ್ ಕರಿಯಪ್ಪನವರಿಗೆ ಉತ್ತರವಿತ್ತು, ಮೈಸೂರು ಮತ್ತು ಬೆಂಗ ಳೂರುಗಳಲ್ಲಿ ೫ ಸಾವಿರ ರೂ ಗಿಂತ ಹೆಚ್ಚು ಮಾಂಬಳ ತೆರಿಗೆ ಕೊಡಬೇಕಾ ಗಿರುವವರಲ್ಲಿ ಕೊಡದೆ ಇರುವವರು ೪೦ ಮಂದಿ ಇರುವರೆಂದು ತಿಳಿಸಿದರು

ಸೆಪ್ಟೆಂಬರ್ ಪರೀಕ್ಷೆಗೆ ಕುಳಿತುಕೊ ಳ್ಳುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ವನ್ನು ಕಟ್ಟಲು ೧ ದಿನ ನಿಧಾನವಾದ ಬಗ್ಗೆ ವಿಧಿಸಲಾಗುವ ದಂಡದ ವಿಷಯ ವನ್ನು ಪರಿಶೀಲಿಸಲಾಗುವುದೆಂದೂ, ಈ ಸಾರಿ ಕಾಲೇಜುಗಳಿಗೆ ೮ ಜನ ಪ್ರೊಫೆ ಸರ್ ಮತ್ತು ೪೧ ಜನ ಅಧ್ಯಾಪಕರ ನ್ನು ಹೊಸದಾಗಿ ತೆಗೆದುಕೊಳ್ಳಲಾಗು ವುದೆಂದೂ ಹೇಳಿದರು. ಕಾರ್ಮಿಕ ಮ ಸೂದೆ ಶಾಸನರಲು ದಕ್ಷರಾದುದರಿಂದ ಅದರ ಗೆ ಜೀವದಾನವೀಯಲಾಯಿತೆಂದೂ ತಿಳಿಸಲಾಯಿತು.

೧೯೪೮ ರಿಂದ ಇದುವರೆಗೆ ಭೂಮಿ ಉಳಲು ಟ್ರಾಕ್ಟರನ್ನು ತೆಗೆದುಕೊಂಡು ಅದರ ಬಾಕಿಗೆ ಬಾಕಿಯನ್ನು ಉಳಿಸಿ ಕೊಂಡಿರುವವರು ೬೬೦ ಮಂದಿ ಇರುವ ರೆಂದೂ, ಲೆಕ್ಕಾಚಾರವಾದನಂತರ ಬಾ ಕಿಯನ್ನು ವಸೂಲು ಮಾಡಲು ರೆವಿನ್ಯೂ ಇಲಾಖೆಯ ಸಹಾಯವನ್ನು ಕೇಳಲಾ ಗುವುದೆಂದೂ ಶ್ರೀ ಸಿದ್ಧವೀರಪ್ಪನವ ರು ತಿಳಿಸಿದರು. ಶಾಸನ ಸಭೆಯ ಒಬ್ಬ ಸದಸ್ಯರೂ ಬಾಕಿದಾರರೆಂದೂ ತಿಳಿಸ ಲಾಯಿತು

ನಂತರ ಶ್ರೀ ಸಿದ್ಧವೀರಪ್ಪನವರು ಪ ಟ್ಟಾ ಜೂಜು ತಪ್ಪಿಸಲು ಪೊಲೀಸು ಶಾ ಸನದ ತಿದ್ದುಪಡಿ ಬಗ್ಗೆ ಜಂಟಿ ಸ ಮಿತಿಯ ವರದಿಯನ್ನು ಒಪ್ಪಿಸಿದರು ಅದರ ಮೇಲೆ ಶ್ರೀಗಳಾದ ಮೂಲ್ಕಾ ಗೋವಿಂದ ರೆಡ್ಡಿ, ಎಂ ಎ ರಾಮರಾ ವ್, ಕೆ ಪಟ್ಟಾಭಿರಾಮ ಮತ್ತು ಡಿ ದೇವರಾಜ ಅರಸ್‌ರವರು ಮಾತನಾಡಿ ಮಸೂದೆಯನ್ನು ಸ್ವಾಗತಿಸಿದರು ಮ ಸೂದೆಯು ಅಂಗೀಕೃತವಾಯಿತು

ಸರ್ಕಾರಿ ಪಾಯ್ಲೆಟ್ ಸಾಬೂನು ಮಾರಲು ೧೧ ಜನ ಏಜೆಂಟರು

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಟಾ ಯ್ಲೆಟ್ ಸಾಬೂನುಗಳನ್ನು ಮಾರುವ ಬಗ್ಗೆ ಭಾರತದಲ್ಲಿ ಐದು ಜೋನುಗಳ ನ್ನು ಏರ್ಪಡಿಸಿ ಏಜೆಂಟರುಗಳಿಗೆ ಕಮಿಷ ನ್ ಕೊಡಲಾಗುತ್ತಿರುವುದೆಂದೂ, ವ್ಯಾ ಪಾರವು ಚೆನ್ನಾಗಿ ನಡೆಯಲು ೫ ಜೋ ನುಗಳ ಬದಲು ೧೧ ಜನ ಏಜೆಂಟರನ್ನು ನೇಮಿಸಲು ಯೋಚನೆ ಮಾಡಲಾಗು ತ್ತಿರುವುದೆಂದೂ, ಶಾಸನ ಸಭೆಯಲ್ಲಿ ತಿಳಿಸಲಾಗಿದೆ

ಇಸ್ರೇಲ್ ಮಹಿಳೆಯರು ಸೈನ್ಯಕ್ಕೆ

ಮಹಿಳೆಯರನ್ನು ಸೈನ್ಯಕ್ಕೆ ತೆಗೆದು ಕೊಳ್ಳಲು ಇಸ್ರೇಲ್ ಸರ್ಕಾರವು ನಿರ್ಧ ರಿಸಿ, ಈ ಬಗ್ಗೆ ಅಲ್ಲಿನ ಪಾರ್ಲಿಮೆಂಟಿನ ಲ್ಲಿ ಮಸೂದೆಯನ್ನು ಮಂಡಿಸಲಿದೆ.

ರಷ್ಯದಲ್ಲಿ ಅವಿವಾಹಿತ ಸ್ತ್ರೀಯರ ಮೇಲೆ ತೆರಿಗೆ

ರಷ್ಯದಲ್ಲಿ ಅವಿವಾಹಿತ ಸ್ತ್ರೀಯರ ಮೇಲೆ ತೆರಿಗೆಯನ್ನು ಹಾಕಲಾಗಿದೆ ಆ ದೇಶಕ್ಕೆ ತೆರಳಿದ್ದ ಭಾರತದ ಪಾರ್ಲಿಮೆಂಟಿನ ತಿರುವಾಂಕೂರು ಸದಸ್ಯೆ ಅನಿ ಮಸ್ಕರೀನ್‌ರವರು ಈ ವಿಷಯವನ್ನು ಹೇಳುತ್ತಾರೆ ಈ ಕಾರಣಕ್ಕಾಗಿಯೇ ಅವರು ರಷ್ಯಾದಿಂದ ಶೀಘ್ರ ಹಾಗ್ರತೆ ಹಿಂತಿರುಗಬೇಕಾಯಿತೆಂದೂ ಅವರು ತಿಳಿಸಿರುವುದಾಗಿ ವರದಿಯಾಗಿದೆ

ಮಗಳನ್ನು ಬಲಿ ಕೊಟ್ಟವನಿಗೆ ಮರಣ ದಂಡನೆ

ಕಾಳಿ ದೇವತೆಯನ್ನು ತೃಪ್ತಿಪಡಿಸುವ ಸಲುವಾಗಿ ತನ್ನ ೨ ವರ್ಷದ ಹೆಣ್ಣು ಮಗಳನ್ನು ಬಲಿ ಕೊಟ್ಟ ಹಿಂದು ಎಂಬ ಥೀಸೂರ್ ಜಾತಿ ಯುವಕನಿಗೆ ಚಿಟ್ಟಲ್ಪುರದ ನ್ಯಾಯಾಧೀಶರು ಮರಣ ದಂಡನೆಯನ್ನು ವಿಧಿಸಿರುತ್ತಾರೆ ಕಾಳಿಯಲ್ಲಿ ಅವನಿಗೆ ಬಹಳ ಭಕ್ತಿಯಿದ್ದಿತೆಂದೂ ದೇವತೆಯ ಅನುಗ್ರಹವನ್ನು ಸಂಪಾದಿಸಲು ನರಬಲಿ ಕೊಡುವುದಕ್ಕೆ ಅವನು ಹವಣಿಸುತ್ತಿದ್ದನೆಂದೂ, ಯಾರೂ ಸಿಗದ ಕಡೆಗೆ ಒಂದು ದಿನ ಅವನ ಹೆಂಡತಿಯು ಮನೆಯಲ್ಲಿಲ್ಲದಿದ್ದಾಗ, ತನ್ನ ೨ ವರ್ಷದ ಮಗಳನ್ನು ಅವನು ಬಲಿ ಕೊಟ್ಟನೆಂದೂ ಹೇಳಲಾಗಿದೆ ಹೆಂಡತಿಯು ಮನೆಗೆ ಬಂದ ಮೇಲೆ ನರಬಲಿಯನ್ನು ನೋಡಿದ ಇತರ ಬಾಲಕರು ತಿಳಿಸಲಾಗಿ, ಆಕೆಯು ಪೋಲೀಸರಿಗೆ ದೂರು ಕೊಟ್ಟಿದ್ದಳು

ಸರಗೂರಿನಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ

ಹೆಗ್ಗಡದೇವನಕೋಟೆ ತಾಲ್ಲೂಕಿನ ಸರಗೂರಿನಲ್ಲಿ ರಾಜಧಾನಿಯಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದ ಶಾಖೆಯೊಂದನ್ನು ಸ್ಥಾಪಿಸಲಾಗಿದೆ ಶ್ರೀ ಚಾಮರಾಗರಾಜಯ್ಯನವರು ಅದರ ಅಧ್ಯಕ್ಷರಾಗಿಯೂ, ಶ್ರೀ ಎಸ್ ಎಂ ಅನಂತರಾವ್ ಮತ್ತು ಶ್ರೀ ಟಿ ಎಸ್ ಸುಬ್ಬಣ್ಣನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಸಂಸ್ಥಾನದಲ್ಲೆಲ್ಲಾ ಇರುವ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಕೆರಿಯುವುದ ತಮ್ಮ ಗುರಿಯೆಂದು ಆ ಸಮಯದಲ್ಲಿ ಭಾಷಣ ಮಾಡಿದ ಶ್ರೀ ಕೆ ಬಿ ಶಿವಯ್ಯ ಮತ್ತು ಶ್ರೀ ಟಿ ಎಸ್ ಸುಬ್ಬಣ್ಣನವರುಗಳು ತಿಳಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಆರ್ ಪರಮಶಿವ ಸಂಗೀತ ಮುಖ್ಯಾಂಶ ೧೧-೩೦ ರಿಕಾರ್ಡು ಸಂಗೀತ, ೨ ಬಾಲಜಗತ್, ಸಾಕ್ಷರ [illegible] ವೃಕ್ಷದ [illegible] ಅಯ್ಯನಾರ್ ಕಲಾಶಾಲೆಯ ವರ ಗಾನಗೋಷ್ಠಿ ಮುಂತಾದುವು ಸಂಜೆ ೫-೩೦ ಮತ್ತು [illegible] ಎ. ವಿ. ಶಾ ರಾಯಣಪ್ಪ [illegible] ೬ ೧೫ ಆರ್ ಕ ಶ್ರೀಕಂಠ [illegible] ಕನ್ನಡ ಗೀತೆ ೭-೩೦ [illegible] ಪರಮಶಿವನ ಗೀತ ೭-೩೦ ಕನ್ನಡ ಪದ್ಯ ಭಾಷಣ ಎ ಟಿ. ಕೆ ವೇಣುಗೋಪಾಲದಾಸ್, ಮ್ಯಾಸೂರಿನ ಚ ಶೆಂ-ಹ [illegible] ೯ ೩೦ ಹೆಚ್ ಎ [illegible] ಕನ್ನಡದಲ್ಲಿ ಸಣ್ಣ ಕಥೆ ತಿಪ್ಪಣ್ಣ ಧಾರವಾಡ

ಫರೂಕರು ಅಕ್ರಮ ಮನ್ನವರಾರದಲ್ಲಿದ್ದರೆಂದು ಅಪಾದನೆ

ಈಜಿಪ್ಟ್ ಮತ್ತು ಪ್ಯಾಲಸ್ಟೈನ್‌ಗಳ ನಡುವೆ ಯುದ್ಧವಾಗುತ್ತಿದ್ದಾಗ ದೊರೆಯಾಗಿದ್ದ ಫರೂಕರು ಅಕ್ರಮವಾಗಿ ಶಸ್ತ್ರಾಸ್ತ್ರಗಳ ವ್ಯವಹಾರದಲ್ಲಿ ತೊಡಗಿದ್ದರೆಂದು ಅಪಾದನೆ ಮಾಡಲಾಗಿದೆ ಅದರ ಮೇಲೆ ಅವರನ್ನು ಅವರ ಗೈರು ಹಾಜರಿಯಲ್ಲಿ ವಿಚಾರಣೆಗೆ ಗುರಿಪಡಿಸಲಾಗುವುದು.

ಹೆಬ್ಬಾವು ಮತ್ತೊಂದು ಹೆಬ್ಬಾವನ್ನು ನುಂಗಿತು

ಬೊಂಬಾಯಿಯ ಮೃಗಾಲಯದಲ್ಲಿರುವ ೧೧ ಅಡಿಯ ಒಂದು ಹೆಬ್ಬಾವು ೮ ಅಡಿಯ ಮತ್ತೊಂದು ಹೆಬ್ಬಾವು ಮತ್ತು ಬಾತು ಕೋಳಿಗಳನ್ನು ಒಟ್ಟಿಗೆ ನುಂಗಿದ ಸುದ್ದಿಯ ವರದಿಯಾಗಿದೆ ಎರಡು ಪ್ರಾಣಿಗಳೂ ಒಂದೇ ಕೋಣೆಯಲ್ಲಿದ್ದು ಎರಡಕ್ಕೂ ಆಹಾರವನ್ನು ಕೊಟ್ಟು ಹೋದ ಮೇಲೆ ೮ ದ ರಾತ್ರಿ ದೊಡ್ಡ ಹಾವು ತನ್ನ ಆಹಾರವನ್ನು ತಿಂದು ಜೊತೆಗೆ ತನ್ನ ಸಹವಾಸಿಯನ್ನೂ ಅದರ ಆಹಾರವನ್ನೂ ನುಂಗಿತೆಂದೂ,ಮಾರನೇ ದಿನ ಮೃಗಾಲಯದವರು ನೋಡಲಾಗಿ ಒಂದು ಹಾವು ಇಲ್ಲದೆ ಅವರು ಗಾಬರಿಗೊಂಡರೆಂದೂ, ಅನಂತರ ತಾನು ನುಂಗಿದ ಹಾವನ್ನೂ ಬಾತನ್ನೂ ದೊಡ್ಡ ಹಾವು ವಾಂತಿ ಮಾಡಿತೆಂದೂ ವರದಿಯಾಗಿದೆ

ಮೈಸೂರು ಸರ್ಕಾರದ ಸಾಲದ ಅವಧಿ

ಮೈಸೂರು ಸರ್ಕಾರದವರು ಎತ್ತುತ್ತಿರುವ ೩ ಕೋಟಿ ರೂ ವಿನ ಸಾಲದ ಅವಧಿಯನ್ನು ಇದೇ ೨೮ನೇ ತಾ|| ವರೆಗೆ ಹೆಚ್ಚಿಸಲಾಗಿದೆ ಈಗಾಗಲೇ ೨ ಕೋಟಿ ರೂ ಗಳಷ್ಟು ಹಣ ಬಂದಿರುವುದಾಗಿ ಗೊತ್ತಾಗಿದೆ

ಎ ವಿಶ್ವನಾಥ್‌ರವರು ಬಸ್ ಸಂಚಾರದ ಇಲಾಖೆ ಮ್ಯಾನೇಜರ್

ಮುಂಬಯಿ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎ ವಿಶ್ವನಾಥ್‌ರವರನ್ನು ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಜನರಲ್ ಮ್ಯಾನೇಜರಾಗಿ ನೇಮಿಸಲಾಗಿದೆ. ಆ ಸ್ಥಾನದಲ್ಲಿದ್ದ ಶ್ರೀ ಎ ಎನ್ ಅನಂತರಾವ್ ಯವರಿಗೆ ವಿಶ್ರಾಂತಿಗೆ ಮುಂಚೆ ಆರು ತಿಂಗಳ ರಜಾ ಕೊಡಲಾಗಿದೆ.

ಒಲಿಂಪಿಯಾ ಟಾಕೀಸ್

24 7 53ರಿಂದ : ಅಪೂರ್ವ ಪ್ರಾರಂಭ ಪ್ರತಿ ದಿನ 3 ಆಟಗಳು

ಶ್ರೀ ಅಮರನಾಥರ, ಉತ್ತಮ ಸಂಗೀತ ಮತ್ತು ಅದ್ಭುತ ಮಂತ್ರ ಚಮತ್ಕಾರದಿಂದ ಕೂಡಿದ ಹಿಂದಿ ಚಿತ್ರ

★ ಅಲಿಫ್ ಲೈಲಾ ★

ತಾರಾಗಣ: ನಿಮ್ಮಿ, ಆಶಾ ಮಾಥೂರ್, ಪ್ರಾಣ್, ವಿಜಯಕುಮಾರ್ ಗೋಪ್ ಸಂಗೀತ: ಶ್ಯಾಮಸುಂದರ್ ನಿರ್ದೇಶನ: ಕೆ ಅಮರನಾಥ್

ಬಳಿಗೆ ಪ್ರದರ್ಶನ— ಅಂದಾಜ್

ಮೈಸೂರು ಸಾಬು ಮೇಲಿನ ದಾವೆಯಲ್ಲಿ ಒಪ್ಪಂದ

ಡಬ್ಲಿನ್‌ನಲ್ಲಿ ಬ್ರಿಟಿಷ್ ನರ್ತಕಿ ಶ್ರೀಮತಿ ಮೇರಿಯಾ ಜೂಲಿಯರ್ ಎಂಬ ೨೬ ವರ್ಷದ ಮಹಿಳೆಗೆ ಜನಿಸಿದ ೫ ವರ್ಷದ ಬಾಲಕನ ತಂದೆ ಸಿನಿಮಾ ನಟ ಮೈಸೂರಿನ ಸಾಬುವೆಂದೂ, ಆತನು ಮಗುವಿನ ಪಾಲನೆಗಾಗಿ ದ್ರವ್ಯವನ್ನು ಕೊಡುವಂತೆಯೂ ಲಾಸ್ ಏಂಜಲ್ಸ್ ನ್ಯಾಯಾಸ್ಥಾನದಲ್ಲಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಎರಡು ಪಕ್ಷಗಳೂ ಕೋರ್ಟ್ ಹೊರಗಡೆ ಒಪ್ಪಂದವಾಗಿ, ಅದನ್ನು ನ್ಯಾಯಾಧೀಶರು ಅಂಗೀಕರಿಸಿರುತ್ತಾರೆ ಅದರ ಪ್ರಕಾರ ಸಾಬುವು ಬಾಲಕನಿಗೆ ತಿಂಗಳಿಗೆ ೮೦೫ ರೂ ಗಳನ್ನು ಕೊಡುವನು ಅಲ್ಲದೆ ಅವನ ತಾಯಿಗೆ ೨೩,೮೦೦ ರೂ. ಮತ್ತು ಆಕೆಯ ವಕೀಲರಿಗೆ ೩೫,೦೦೦ ರೂ ಗಳನ್ನು ಕೊಡುವಂತೆಯೂ ಒಪ್ಪಂದವಾಗಿದೆ ತಾನು ಮಗುವಿನ ತಂದೆಯಲ್ಲವೆಂದು ಸಾಬುವು ಮೊದಲು ವಾದ ಮಾಡಿದನು.

ಚಾತುರ್ಮಾಸ್ಯ ಸಂಕಲ್ಪ

ರಾಜಧಾನಿಯ ಬ್ರಹ್ಮತಂತ್ರ ಸ್ವತಂತ್ರ ಶ್ರೀ ಪರಕಾಲ ಮಠದ ಸ್ವಾಮಿಗಳವರು ನಾಳಿದ್ದಿನಿಂದ ಚಾತುರ್ಮಾಸ್ಯ ಸಂಕಲ್ಪವನ್ನು ಬೆಳೆಸುವರು

ಮೈಸೂರು ಸಾಲಕ್ಕೆ ಮದ್ರಾಸ್ ಸರ್ಕಾರದ ೫ ಲಕ್ಷ ರೂ

ಮೈಸೂರು ಸರ್ಕಾರದ ಸಾಲಕ್ಕೆ ಮದ್ರಾಸು ಸರ್ಕಾರದವರು ೫ ಲಕ್ಷ ರೂ ಗಳನ್ನು ಕೊಟ್ಟಿರುತ್ತಾರೆ

ಕೋಟೆ ಸೋಮೇಶ್ವರ ದೇವಾಲಯದಲ್ಲಿ ಅಲಂಕಾರ

ರಾಜಧಾನಿಯ ಅರಮನೆ ಕೋಟೆ ಒಳಗಿರುವ ಶ್ರೀ ಕೋಟೆ ಸೋಮೇಶ್ವರ ಸ್ವಾಮಿ (ನವಗ್ರಹ) ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ಇಂದು ಸಂಜೆ ೬ ಗಂಟೆಗೆ ದೇವರಿಗೆ ಪುಷ್ಪಾದಿ ಅಲಂಕಾರವನ್ನು ಮಾಡಲಾಗುವುದು

SRI GANESHA TALKIES

From 25-7-53 : For 3 days

CATTLE DRIVE

(Technicolor)

With-Chillwill and Dean Stockwell (Sensational Young star of KIM)

To-day : Last Day

AGAINST ALL FLAGS

&

WORLD'S MOST BEAUTIFUL GIRLS

ಮೈಸೂರು ಮಹಿಳೆಗೆ ಅಮೆರಿಕಾ ಪದವಿ

ಅಮೆರಿಕದ ಯೇಲ್ ವಿಶ್ವ ವಿದ್ಯಾಲಯ ಪದವಿಗಳನ್ನು ಪಡೆದ ೧,೯೦೦ ಜನರ ಪೈಕಿ ಏಳು ಮಂದಿ ಭಾರತೀಯರು ಇರುವರು. ಅವರ ಪೈಕಿ ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಎಂ. ಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೈಸೂರಿನ ಶ್ರೀಮತಿ ನಾಗಮಣಿ ಸಿ. ರಾವ್‌ರವರು ಇರುವರು.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆಣೆ	ರೂ ಗ
ಕಡಲೆಕಾಯಿ	೯ ೦-೦	೩೨.೪.೦
ಎಳ್ಳು	೩೦ ೩ ೦	೫೯.೦.೦
ತೊಗರಿ	೪೯_೧೦_೦	೫೦.೩.೦
ಹೆಸರು	೩೦-೬-೦	೩೦ ೧೪.೦
ಅವರೆ	೪೬_೪_೦	೫೧_೧೦_೦
ಉದ್ದು	೩೪-೧೦.೦	
ಹುರುಳಿ	೪೨.೦ ೦	೩೮.೧೪ ೦
ಹುಣಸೇಹಣ್ಣು	೯_೫.೦	
ಸೀಗೆಕಾಯಿ	೭_೦.೦	
ತೆಂಗಿನಕಾಯಿ	೧೬೦.೦ ೦	೨೦೦-೩.೦

ಗುರು ಪೂರ್ಣಿಮೆ

ರಾಜಧಾನಿಯ ದೊಡ್ಡಕೆರೆ ಏರಿ ಬಳಿ ನೆಲೆಸಿರುವ ಶ್ರೀ ಶ್ರೀ ಜಗದ್ಗುರು ಶ್ರೀ ಬ್ರಹ್ಮವಿದ್ಯಾನಂದನಾಥ ಭಾರತೀ ಸ್ವಾಮಿಗಳವರು ನಾಳಿದ್ದಿನಿಂದ ಚಾತುರ್ಮಾಸ್ಯಕ್ಕೆ ಕುಳಿತುಕೊಳ್ಳುವರು ಅಂದು ಗುರು ಪೂರ್ಣಿಮೆಯ ದಿನವಾಗಿರುವುದರಿಂದ ಭಕ್ತ ವೃಂದವು ಆ ದಿನದ ಮಹತ್ವವನ್ನು ಅರಿತು, ಶ್ರೀ ಸ್ವಾಮಿಗಳವರಿಗೆ ಪಾದ್ಯ ಭಕ್ತಿ ಕಾಣಿಕೆಯನ್ನು ಅರ್ಪಿಸುವಂತೆ, ಶ್ರೀ ಎ ಎಸ್ ವೆಂಕಟಸುಬ್ಬಯ್ಯ ಶರ್ಮರವರು ತಿಳಿಸುತ್ತಾರೆ.

ಸಿಲ್ಕ್ ಕಾರ್ಮಿಕರ ಸಭೆ

ರಾಜಧಾನಿಯ ಸರ್ಕಾರಿ ರೇಷ್ಮೆ ಫ್ಯಾಕ್ಟರಿ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯು ಕಾರ್ಖಾನೆಯ ಆವರಣದಲ್ಲಿ ನಾಳೆ ಸಂಜೆ ೫ ಗಂಟೆಗೆ ಸೇರುವುದು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಆರ್ ಪ್ರಸಾದ್‌ರವರು ಅಧ್ಯಕ್ಷತೆ ವಹಿಸುವರು ಎಲ್ಲ ಸದಸ್ಯರೂ ಬರಬೇಕೆಂದು ತಿಳಿಸಲಾಗಿದೆ.

ಚಾಮುಂಡೇಶ್ವರಿ

ಟಾಕೀಸ್

24-7 53 ರಿಂದ

ಪ್ರತಿದಿನ 2 ನೇ ವಾರ

ತಿರುಂಬಿ - ಪಾರ್

(ತಮಿಳು)

Edited, Printed and Published by A R. Nagarajan at Sadhvi Press, D Subbiah Road, Mysore

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

24-7-53 ನೇ :: ಶುಕ್ರವಾರದಿಂದ :: ದಿನವೂ 3 ಆಟಗಳು

★ ವನ ಸುಂದರಿ ★ (ತಮಿಳು)

ಪಾತ್ರ: ಟಿ ಆರ್ ರಾಜಕುಮಾರಿ, ಪಿ. ಯು ಚಿನ್ನಪ್ಪ, ಟಿ. ಎಸ್ ಬಾಲಯ್ಯ, ಎನ್ ಎಸ್ ಕೃಷ್ಣನ್ ಟಿ ಎ ಮಧುರಂ, ಲಲಿತ ಪದ್ಮಿನಿ ಮುಂತಾದವರು

ಫೋನ್ ನಂ. 793 || ವಂದೇ ಮಾತರಂ || ಬಿಡಿಯ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೫-೭-೧೯೫೩ [ಸಂಚಿಕೆ ೨೯೪

ನಾಳೆ ದಿನ ಕೊರಿಯಾ ಶಾಂತಿ ಕೌಲಿಗೆ ರುಜು?

ಬೆಂಕಿಕಡ್ಡಿ ಕಾರ್ಖಾನೆಯಲ್ಲಿ ಆಸ್ಫೋಟನೆ

ನಾಲ್ವರ ಮರಣ, ಇಬ್ಬರಿಗೆ ಗಾಯ

ಮೈಸೂರು ೨೫

ರಾಜಧಾನಿಯ ನಿರಂಜನ ಗಾರ್ಡನ್ನಿನಲ್ಲಿರುವ, ಶ್ರೀ ಟಿ ಸಿ ಪೊನ್ನಪ್ಪನವರ, ಶ್ರೀ ಗಣೇಶಾ ಬೆಂಕಿಕಡ್ಡಿ ಕಾರ್ಖಾನೆಯಲ್ಲಿ ನೆನ್ನೆ ಸಂಜೆ ಕಡ್ಡಿಗಳನ್ನು ಪೆಟ್ಟಿಗೆಗೆ ತುಂಬುತ್ತಿದ್ದಾಗ ಆಕಸ್ಮಾತ್ ಆಸ್ಫೋಟನೆಯು ಸಂಭವಿಸಿ ನಾಲ್ಕು ಮಂದಿ ಸ್ತ್ರೀ ಕಾರ್ಮಿಕರು ಬೆಂಕಿಗೆ ಆಹುತಿಯಾದರು. ವಾಚ್‌ಮನ್ ಲಕ್ಷ್ಮಣರಾವ್ ಮತ್ತು ಶ್ರೀ ಪೊನ್ನಪ್ಪನವರ ಮಗ ಶಿವಶಂಕರಪ್ಪನಿಗೂ ಬೆನ್ನು ಮತ್ತು ಮೈ ಬೆಂದು ತೀವ್ರ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ಅಗ್ನಿ ಶಾಮಕ ದಳದವರು ಕೂಡಲೇ ಸ್ಥಳಕ್ಕೆ ಬಂದು ಬೆಂಕಿಯನ್ನು ಆರಿಸಿದರು. ಬೆಂಕಿಯಿಂದ ಸುಮಾರು ೩ಸಾವಿರ ರೂ ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ

ಪ್ರಭಾಕರ್ ಎಂ ಬಿ, ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯೊಬ್ಬನು ಧೈರ್ಯದಿಂದ ಕಾರ್ಖಾನೆ ಕಟ್ಟಡದ ಮೇಲೆ ಹತ್ತಿ, ಕಾರ್ಖಾನೆಯ ಬಾಗಿಲ ಚಿಲಕವನ್ನು ತೆಗೆದು, ಕಾರ್ಮಿಕರನ್ನು ರಕ್ಷಿಸಲು ಸಹಾಯ ಮಾಡಿದುದಾಗಿ ಗೊತ್ತಾಗಿದೆ

ನವಚೀಣದ ಬಗ್ಗೆ ವಿಚಾರ ಗೋಷ್ಠಿ

ರಾಜಧಾನಿಯ ಇಂಡಿಯಾ-ಚೀನಾ ಸ್ನೇಹ ಸಂಘದ ಆಶ್ರಯದಲ್ಲಿ ಇಂದಿನಿಂದ ಪ್ರತಿ ಶನಿವಾರ ಸಂಜೆ ೬ ಘಂಟೆಗೆ, ನವಚೀಣದ ಜನಜೀವನ, ಇತಿಹಾಸ, ಆರ್ಥಿಕ ಪ್ರಗತಿ ಮುಂತಾದುವುಗಳ ಬಗ್ಗೆ ಸಾರ್ವಜನಿಕ ವಿಚಾರ ಗೋಷ್ಠಿಯು ಜಗನ್ಮೋಹನ ಅರಮನೆ ಬಳಿ ಇರುವ ಮಾದರಿ ಶಾಲೆಯಲ್ಲಿ ನಡೆಯುತ್ತದೆ.

ರೇಡಿಯೋವಿನಲ್ಲಿ ವಿಶೇಷ ಕಾರ್ಯಕ್ರಮ

ಮೈಸೂರಿನ ರೇಡಿಯೋ ಕೇಂದ್ರದಲ್ಲಿ ಈ ಸಂಜೆ ೭|| ಗಂಟೆಗೆ ಆರೋಗ್ಯ ಮಂತ್ರಿ ಶ್ರೀ ಟಿ ಚೆನ್ನಯ್ಯನವರು ಆದಿವಾಸಿಗಳ ಹಿತ ರಕ್ಷಣೆ ಎಂಬ ವಿಷಯವಾಗಿ ಭಾಷಣ ಮಾಡುವರು ರಾತ್ರಿ ೯-೪೫ಕ್ಕೆ ಬೊಂಬಾಯಿಯ ಶ್ರೀಧರ್ ಪಾರ್ಸೇಕರ್ ರವರ ಪಿಟೀಲು ವಾದನದ ಪುನಃಪ್ರಸಾರವಿದೆ

ಕೊರಿಯಾ ಶಾಂತಿ ಕೌಲಿಗೆ ನಾಳೆ ರುಜು

ಕೊರಿಯಾ ಯುದ್ಧ ಮುಕ್ತಾಯ ಒಪ್ಪಂದಕ್ಕೆ ನಾಳೆ ದಿನ ರುಜುವಾಗುವುದೆಂದು ನ್ಯೂಯಾರ್ಕ್ ರೇಡಿಯೊ ತಿಳಿಸಿರುತ್ತದೆ. ವಿಶ್ವ ಸಂಸ್ಥೆಯ ಪರವಾಗಿ ಜನರಲ್ ಮಾರ್ಕ್ ಕ್ಲಾರ್ಕರು ರುಜು ಮಾಡುವರು

ಮೋಟಾರು ಕಾರಿನ ಅಪಹಾರ?

ನೆನ್ನೆ ಮಧ್ಯಾಹ್ನ ಬೆಂಗಳೂರಿನಲ್ಲಿ ಶ್ರೀಮತಿ ಲಾಂಗ್ ಎಂಬುವರು ತಮ್ಮ ಮೋಟಾರು ಕಾರನ್ನು ಒಂದು ಕಡೆ ನಿಲ್ಲಿಸಿ ಅಂಗಡಿಯೊಂದಕ್ಕೆ ಹೋದರೆಂದೂ, ಅಪರಿಚಿತ ಸೈಕಲ್ ಸವಾರನೊಬ್ಬನು ಕ್ಷಣ ಮಾತ್ರದಲ್ಲಿ ಕಾರನ್ನು ಚಲಿಸಿಕೊಂಡು ಹೊರಟುಹೋದನೆಂದೂ ವರದಿಯಾಗಿದೆ. ಕಾರಿನಲ್ಲಿ ಶ್ರೀಮತಿ ಲಾಂಗ್‌ರವರ ನಾಯಿಯೊಂದಿತ್ತು

ರೆವಿನ್ಯೂ ಇನ್ಸ್‌ಪೆಕ್ಟರಿಬ್ಬರ ದಸ್ತಗಿರಿ

ಬೆಂಗಳೂರು ೨೫

ಇಲ್ಲಿಗೆ ೮ ಮೈಲಿ ದೂರವಿರುವ ಕೃಷ್ಣರಾಜಪುರದ ಬಳಿ ಬೀಜ ಮತ್ತು ಕೆಂಪು ಜೋಳವನ್ನು ಶೇಖರಿಸಿರುವ ಹಲವು ಸರ್ಕಾರಿ ಗೋಡೌನುಗಳಲ್ಲಿ ಮೂಟೆಗಳು ಮಾಯವಾಗಿವೆಯೆಂದೂ, ಶ್ರೀಗಳಾದ ರಾಮಯ್ಯ ಮತ್ತು ಸುಬ್ರಹ್ಮಣ್ಯಂ ಎಂಬ ಇಬ್ಬರು ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ಈ ಬಗ್ಗೆ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡಲಾಗಿರುವುದೆಂದೂ ವರದಿಯಾಗಿದೆ ಶ್ರೀ ರೇವಣ್ಣ ಎಂಬ ಮತ್ತೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರನ್ನು ಪೋಲೀಸರು ಕರೆಸಿ ಪ್ರಶ್ನೆ ಮಾಡಿರುತ್ತಾರೆ ಒಂದು ಗೋಡೌನಿನಲ್ಲಿ ೫೮ ಮೂಟೆಗಳು ಪತ್ತೆಯಿಲ್ಲವೆಂದು ಹೇಳಲಾಗಿದೆ ೪೦ ಗೆ ಆರು ಸೇರಿನಂತೆ ಜೋಳವನ್ನು ಮಾರಲಾಯಿತೆಂದೂ ತಿಳಿದುಬಂದಿದೆ

ಕಿಡಿ ಪತ್ರಿಕೆ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಬೆಂಗಳೂರು ಕಿಡಿ ಪತ್ರಿಕೆಯ ಕಳೆದ ಏಪ್ರಿಲ್ ೫ನೇ ತಾ|| ನ ಸಂಚಿಕೆಯಲ್ಲಿ ಬರೆಯಲಾದ ಒಂದು ಲೇಖನವು ಕಂಟೆಂಪ್ಟ್ ಆಫ್ ಕೋರ್ಟ್ ಆಗಿದೆಯೆಂದೂ ಈ ಬಗ್ಗೆ ಪತ್ರಿಕೆ ಪ್ರಕಾಶಕ ಶ್ರೀ ಪಿ ಕೇಶವಪ್ಪ ಮತ್ತು ಮುದ್ರಣಕಾರ ಶ್ರೀ ಎಂ ಎಸ್ ಚಿಂತಾಮಣಿಯವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹೈಕೋರ್ಟನ್ನು ಕೋರಬೇಕೆಂದೂ ಸರ್ಕಾರದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ. ಎಸ್ ನರಸಿಂಹಮೂರ್ತಿಯವರು ಮುಖ್ಯ ಸೆಷನ್ಸ್ ನ್ಯಾಯಾಧೀಶರ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದು ಅದು ನೆನ್ನೆ ಪರಿಶೀಲನೆಗೆ ಬಂದಿತ್ತು ಪ್ರತಿವಾದಿಗಳಿಗೆ ನೋಟೀಸು ಕೊಡಲು ಆಜ್ಞೆಯಾಯಿತು ೨೭ನೇ ತಾ|| ಗೆ ವಿಚಾರಣೆಯು ಮುಂದುವರಿಯಿತು.

ಬಿಡಾರಂ ಕೃಷ್ಣಪ್ಪನವರ ಆರಾಧನೆ

ರಾಜಧಾನಿಯ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಬಿಡಾರಂ ಕೃಷ್ಣಪ್ಪನವರ ಆರಾಧನೆ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಅವರ ಶಿಷ್ಯ ಮಂಡಲಿಯವರಿಂದ ಸಂಗೀತವು ಏರ್ಪಾಡಾಗಿದೆ. ಸರ್ವರಿಗೂ ಆಹ್ವಾನವಿದೆ.

ಮಂತ್ರಿಗಳ ನೀಲಗಿರಿ ಭೇಟಿ ಬಗ್ಗೆ ಪ್ರಶ್ನೆ

ಶಾಸನ ಸಭೆಯಲ್ಲಿ ಸಚಿವರ ಉತ್ತರ

ಸ್ವಂ ಸು ಫೋ] ಬೆಂಗಳೂರು ೨೫

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಮೂಲ್ಕಾ ಗೋವಿಂದರೆಡ್ಡಿಯವರು ನಿಲುವಳಿ ಸೂಚನೆಯನ್ನು ತಂದು ಕುಸ್ತಿ ಪಂದ್ಯದ ಸಮಯದಲ್ಲಿ ೩ ಜನರು ವಿದ್ಯುಚ್ಛಕ್ತಿಯಿಂದ ಮರಣ ಹೊಂದಿದ ವಿಷಯವನ್ನು ಪ್ರಸ್ತಾಪಿಸಿದರು ಅಧ್ಯಕ್ಷರು ನಿಲುವಳಿ ಸೂಚನೆಯನ್ನು ತಳ್ಳಿಹಾಕಿದರು

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಇನಾಂದಾರರವರು, ಮಂತ್ರಿಗಳು ನೀಲಗಿರಿಗೆ ಭೇಟಿ ಕೊಟ್ಟುದೇಕೆಂದು ಪ್ರಶ್ನಿಸಿದರು. ಅವಶ್ಯಕತೆ ಬಿದ್ದಾಗ ಸಚಿವರು ಎಲ್ಲಾ ಕಡೆಗಳಿಗೂ ಹೋಗಬೇಕಾಗುವುದೆಂದೂ ಅವರು ಲಂಡನ್ನಿಗೆ ಹೋದರೂ ಅವರೊಡನೆ ಫೈಲುಗಳು ಬರುವುವೆಂದೂ ಮುಖ್ಯ ಮಂತ್ರಿಗಳು ಹೇಳಿದರು

ತುಂಗಭದ್ರಾ ಯೋಜನೆಯ ಸಂಬಂಧವಾಗಿ ೨೭-೭೮ ಕೋಟಿ ರೂ ವೆಚ್ಚವಾಗುವುದೆಂದೂ, ಯೋಜನೆಯ ಜವಾಬ್ದಾರಿಯ ಬಗ್ಗೆ ಕೈಗೊಳ್ಳಲಾಗಿರುವ ನಿರ್ಧಾರವು ಎಲ್ಲಾ ಸರ್ಕಾರಗಳನ್ನೂ ಬದ್ಧಗೊಳಿಸುವುದೆಂದೂ ತಿಳಿಸಲಾಯಿತು

ಹಿರಿಯ ಶಾಸನ ಸಭೆಯಲ್ಲಿ ಸಭಾ ಪರಿತ್ಯಾಗ

ಬೆಂಗಳೂರು ೨೫

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಲೌಡ್‌ಸ್ಪೀಕರುಗಳಿಗೆ ರಹದಾರಿ ಕೊಡುವ ಬಗ್ಗೆ ಪೋಲೀಸು ಶಾಸನದ ತಿದ್ದುಪಡಿ ಮಸೂದೆಯ ಚರ್ಚೆಯಾಗುತ್ತಿದ್ದಾಗ ಸರ್ಕಾರದವರ "ಪೂರ್ಣ ಅಸಹಕಾರ ವರ್ತನೆ" ಯನ್ನು ಪ್ರತಿಭಟಿಸಿ ವಿರೋಧ ಪಕ್ಷದ ಸದಸ್ಯರಾದ ಶ್ರೀಗಳು ಡಿ. ವೆಂಕಟರಾಮಯ್ಯ, ಎಸ್. ವಿ ಗೋವಿಂದ ಗೌಡ, ಬಿ ಟಿ ರಾಮಯ್ಯ, ಎಸ್ ಶಿವಪ್ಪ ಮತ್ತು ಆರ್. ಪಿ. ರೇವಣ್ಣನವರು ಸಭಾ ಪರಿತ್ಯಾಗ ಮಾಡಿದರು. ಅಧಿಕಾರಿಗಳಲ್ಲದೆ ಮ್ಯಾಜಿಸ್ಟ್ರೇಟರುಗಳೂ ರಹದಾರಿ ಕೊಡಲು ಅವಕಾಶವನ್ನು ಕಲ್ಪಿಸದಿರುವ ಬಗ್ಗೆ ಅವರುಗಳು ಪ್ರತಿಭಟನೆ ಸೂಚಿಸಿದರು.

ಬೆಂಗಳೂರಿನಲ್ಲಿ ಕಾಲರಾ ಇಲ್ಲ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ ಸು ಫೋ] ಬೆಂಗಳೂರು ೨೫

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಮೂಲ್ಕಾ ಗೋವಿಂದ ರೆಡ್ಡಿಯವರು ನಿಲುವಳಿ ಸೂಚನೆಯೊಂದನ್ನು ತಂದು ಬೆಂಗಳೂರು ನಗರದಲ್ಲಿ ಕಾಲರಾ ಇರುವ ಬಗ್ಗೆ ರೋಗ ಪ್ರತಿಬಂಧಕ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಆರೋಗ್ಯ ಮಂತ್ರಿ ಶ್ರೀ ಟಿ. ಚೆನ್ನಯ್ಯನವರು ಉತ್ತರಿಸುತ್ತ ಕಾಲರಾ ರೋಗವು ನಗರದಲ್ಲಿಲ್ಲವೆಂದೂ, ಆದರೂ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿರುವುದೆಂದೂ ತಿಳಿಸಿದ ನಂತರ ಸೂಚನೆಯನ್ನು ತಳ್ಳಿಹಾಕಲಾಯಿತು

ಅಂತ್ಯದ ಮುಸೋದೆಯ ಬಂಡಲ ಚರ್ಚೆಗೆ ಉಂಡು ಶ್ರೀಗಳಾದ ಡಿ ರಾಜಶೇಖರ ಮೂರ್ತಿ, ಕೆಂಗಲ್ ಹನುಮಂತಯ್ಯ, ಆರ್. ಅನಂತರಾಮನ್, ಡಿ. ಎ. ಎಲ್ ಶೆಟ್ಟಿ, ಶಿವನಂಜೇಗೌಡ ಮತ್ತು ಕೆ. ಪುಟ್ಟಸ್ವಾಮಯ್ಯನವರು ಮಾತನಾಡಿದರು.

ಹೊಟೇಲು ಮಸ್ಕಿಟೋ ಕಂಟ್ರೋಲ್ ಬಗ್ಗೆ ಪ್ರಶ್ನೆ

ಮೈಸೂರು ಮಸ್ಕಿಟೋ ಕಂಟ್ರೋಲ್ ಹೊಟೇಲಿನವರು ಅಲ್ಲಿ ತಂಗಿದ್ದ ಹಿಂದುಳಿದ ವರ್ಗಗಳ ಸಮಿತಿಯವರಿಗೆ ಭಾರತೀಯ ಆಹಾರವನ್ನು ಒದಗಿಸಲು ನಿರಾಕರಿಸಿದರೇ-ಎಂದು ಕಿರಿಯ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ನೆನ್ನೆ ಶ್ರೀ ಬಿ ರಾಚಯ್ಯನವರು ಕೇಳಲಾಗಿ, ಮುಖ್ಯ ಮಂತ್ರಿಗಳು ಈ ವಿಷಯವೂ, ಹೊಟೇಲಿನ ವ್ಯವಸ್ಥಾಪಕರು ಸಮಿತಿ ಸದಸ್ಯರೊಡನೆ ಸೌಜನ್ಯದಿಂದ ನಡೆದುಕೊಳ್ಳಲಿಲ್ಲವೆಂಬ ವಿಷಯವೂ ತಿಳಿಯದೆಂದು ಹೇಳಿ, ಅವು ಸರ್ಕಾರದ ಗಮನಕ್ಕೆ ಬಂದರೆ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

ನಂದಿ ಬೆಟ್ಟದ ಬಳಿ ಭಾರಿ ಸರಾಯಿ ದಾಸ್ತಾನು ಪತ್ತೆ

ಬೆಂಗಳೂರು ಜಿಲ್ಲೆ ನಂದಿಬೆಟ್ಟದ ಬಳಿ ಹಲುಗುರುಕಿ ಗ್ರಾಮಕ್ಕೆ ಕಳೆದ ೨೨ ನೇ ತಾ|| ದೊಡ್ಡಬಳ್ಳಾಪುರದ ಅಬ್ಕಾರಿ ಇನ್ಸ್‌ಪೆಕ್ಟರ್ ಶ್ರೀ ಬಿ ಎಂ ಅಪ್ಪಯ್ಯನವರು ಭೇಟಿ ಕೊಟ್ಟು, ಪೋಲೀಸರ ಸಹಾಯದಿಂದ ಗ್ರಾಮದ ಹಬೀಬುನ್ನಿಸಾ, ಚೋಟೇಸಾಬ್, ಇಮಾಂಬಿ, ಮಹಮದ್‌ಸಾಬ್, ಯಾಕೂಬ್ ಸಾಬ್, ಚೋಟೇ ಸಾಬ್ ಉರುಫ್ ಸಾಲಾರ್ ಸಾಬ್ ರವರುಗಳ ಮನೆಗಳನ್ನು ಶೋಧಿಸಿ ಸರಾಯಿ ದಾಸ್ತಾನನ್ನು ಪತ್ತೆಹಚ್ಚಿ ೧ ಲಾರಿ ತುಂಬುವಷ್ಟು ಸಾಮಗ್ರಿಗಳನ್ನು ಅಮಾನತ್ತು ಪಡಿಸಿದರು. ಮಾರನೇ ದಿನ ಬೆಂಗಳೂರು ೧ ನೇ ನ್ಯಾಯಾಸ್ಥಾನದಲ್ಲಿ ಮಹಮದ್‌ಸಾಬ್ ಮತ್ತು ಯಾಕೂಬ್ ಸಾಬ್‌ರವರುಗಳಿಗೆ ತಲಾ ೫ ದಿನಗಳ ಸಜಾ ೨೦೦ ರೂ ದಂಡ ತಪ್ಪಿದರೆ ಮತ್ತೆ ೧೫ ದಿನಗಳ ಸಜಾ ವಿಧಿಸಲಾಯಿತು ಇತರರ ಮೇಲಿನ ಮೊಕದ್ದಮೆಯು ೨೭ ನೇ ತಾ|| ಗೆ ಇದೆ ಶ್ರೀ ಅಪ್ಪಯ್ಯನವರ ಸಾಹಸವನ್ನು ನ್ಯಾಯಾಧೀಶರು ಪ್ರಶಂಸಿಸಿ, ಅವರಿಗೆ ಬಹುಮಾನವನ್ನು ನೀಡುತ್ತಾರೆ

○ ಮೈಸೂರು ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸುವ ಬಗ್ಗೆ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವವರ ಪೈಕಿ ಭೇಟಿಗೆ ಕರೆಯಲ್ಪಟ್ಟಿರುವವರು ಸಮಿತಿಯವರನ್ನು ಆಗಸ್ಟ್ ೫, ೬, ಮತ್ತು ೭ ನೇ ತಾ|| ಭೇಟಿ ಮಾಡಲು ಏರ್ಪಾಡಾಗಿದೆ.

ನಗರಕ್ಕೆ ಹೆಚ್ಚು ನೀರನ್ನು ಒದಗಿಸುವ ವ್ಯವಸ್ಥೆ

ಪತ್ರಿಕಾ ಸಮ್ಮೇಳನದಲ್ಲಿ ಪೌರ ಸಭಾಧ್ಯಕ್ಷರ ವಿವರಣೆ

ಮೈಸೂರು ೨೫

ನಗರದ ಪೌರ ಸಭಾಧ್ಯಕ್ಷ, ಶ್ರೀ ಟಿ ವೆಂಕಟಸುಬ್ಬಯ್ಯನವರು ನೆನ್ನೆ ಪತ್ರಿಕಾ ಸಮ್ಮೇಳನ ನಡೆಸಿ, ನಗರದಲ್ಲಿ ನೀರಿನ ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸುವ ಬಗ್ಗೆ ಸಮಿತಿಯ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುವುದೆಂದೂ, ಈಗ ದಿನಕ್ಕೆ ೫೨ ಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿರುವುದನ್ನು ೭೨ ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿರುವುದೆಂದೂ, ಈ ಬಗ್ಗೆ ಇದುವರೆಗೆ ಪಡೆಕ್ಕೆ ೨ ಲಕ್ಷ ರೂ ವೆಚ್ಚವಾಗುತ್ತಿದ್ದು ಮುಂದೆ ೩ ಲಕ್ಷವಾಗುವುದೆಂದೂ ತಿಳಿಸಿದರು

ಕಳೆದ ಮೂರು ತಿಂಗಳುಗಳಲ್ಲಿ ಪೌರ ಸಭೆಯವರು ನಡೆಸಿರುವ ಕಾರ್ಯಗಳನ್ನು ವಿವರಿಸಿ, ಧನ್ವಂತರಿ ಮತ್ತು ಒನು ಮಬ್ಬು ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಹಾಕಲು ೯೫,೯೫೦ ರೂ ಯೋಜನೆಗೆ ಸರ್ಕಾರದ ಅನುಮತಿ ದೊರೆತಿರುವುದಾಗಿಯೂ, ಈ ವೆಚ್ಚದಲ್ಲಿ ಒಂದು ಭಾಗವನ್ನು ಸರ್ಕಾರದವರು ವಹಿಸಬೇಕೆಂದು ಕೋರಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು

ಸೂಯೆಜ್ ಫಾರಮ್ ನೀರಿನಿಂದ ವ್ಯವಸಾಯ ಮಾಡಲು ೧೬೫ ಲಕ್ಷ ರೂ ಯೋಜನೆಯು ಸರ್ಕಾರದ ಮುಂದಿದ್ದು, ಕೇಂದ್ರವವರು ಈ ಕಾರ್ಯಕ್ಕಾಗಿ ೮೦ ಸಾವಿರ ರೂ ಕೊಡುವರು ಈ ವರ್ಷ ಒಳಚರಂಡಿ ವ್ಯವಸ್ಥೆಗಾಗಿ ೧ ಲಕ್ಷ ರೂ ತೆಗೆದಿಟ್ಟು, ಸರ್ಕಾರದೊಡನೆ ಕೆಲಸದ ಬಗ್ಗೆ ವ್ಯವಹರಿಸಲಾಗುತ್ತಿದೆ ನಗರದಲ್ಲಿ ಆರೋಗ್ಯವು ತೃಪ್ತಿಕರವಾಗಿದೆ—ಎಂಬುದಾಗಿ ಅವರು ನುಡಿದರು

ಖಿಲ್ಲೆ ಮೊಹಲ್ಲಾದಿಂದ ಎಲೆ ತೋಟ ತೆಗೆಯಲು ಸರ್ಕಾರದ ಸೂಚನೆಯನ್ನು ಕಾಯಲಾಗುತ್ತಿರುವುದೆಂದೂ, ಭಿಕ್ಷುಕರ ಸಮಸ್ಯೆಯನ್ನು ಪರಿಹರಿಸಲು ಹೆಚ್ಚು ಶ್ರಮವಹಿಸಲಾಗುವುದೆಂದೂ ಅಧ್ಯಕ್ಷರ ಪ್ರಶ್ನೆಗಳಿಗೆ ಉತ್ತರವಿತ್ತರು

ಮೋಟಾರು ಕೆಲಸಗಾರರ ಸಂಘದ ವಾರ್ಷಿಕೋತ್ಸವ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ಸೋಮವಾರ ಸೇರಿ ಸಂಘದ ಏಳನೇ ವಾರ್ಷಿಕೋತ್ಸವಕ್ಕಾಗಿ ಹಲವು ಏರ್ಪಾಡುಗಳನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಯಿತು ಸದಸ್ಯರುಗಳನ್ನು ಮೂರು ವಿಭಾಗವಾಗಿ ವಿಂಗಡಿಸಿ, ಪ್ರತಿಯೊಂದು ಭಾಗದವರೂ ಉತ್ಸವಕ್ಕಾಗಿ ಹಣ ವರಿಗೆ ವಿಧಿಸಲಾಗು ವ ೨ ಮತ್ತು ೧ ರೂ ಚಂದವನ್ನು ಕೊಡಬೇಕೆಂದು ಗೊತ್ತುಪಡಿಸಲಾಯಿತು ಶ್ರೀ ಕೆ ವೌಲೀಂದ್ರಯರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು ವಾರ್ಷಿಕೋತ್ಸವದ ದಿವಸ ಬಸ್ಸುಗಳ ಮಾಲೀಕರು ವಿನೋದಗಳಲ್ಲಿ ರಗೂ ಭಾಗ ಕೊಡಬೇಕೆಂದು ಪ್ರಾರ್ಥಿಸಲಾಯಿತು

ಕೃಷ್ಣರಾಜೇಂದ್ರ ಆಸ್ಪತ್ರೆ ವೈದ್ಯಾಧಿಕಾರಿ ಬಗ್ಗೆ ಪ್ರಶ್ನೆ

ಅಪವಾದನೆಗೆ ಬುಡವಿಲ್ಲವೆಂದು ಸಚಿವರ ಹೇಳಿಕೆ

ಬೆಂಗಳೂರು ೨೪

ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಕೆ ಪುಟ್ಟಸ್ವಾಮಿ ಮುಖರ ಪ್ರಶ್ನೆಗೆ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ಉತ್ತರವಿತ್ತು, ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯಾಧಿಕಾರಿ ಮತ್ತು ಆಸ್ಪತ್ರೆಯ ಪ್ರೇಕ್ಷಕರ ಗಳ ಸಮಿತಿಯಿಂದ ಅಲ್ಲಿನ ಶಿವಿ, ಹುಡುಗು ಮತ್ತು ಗಂಟಲು ವೈದ್ಯ ಪ್ರವೀಣರ ವಿರುದ್ಧವಾಗಿ ವರದಿಬಂದಿದ್ದುದಾಗಿ ತಿಳಿಸಿದರು ಅಲ್ಲದೆ ಡಾ|| ಪಿ ಡಿ ಕೃಷ್ಣಸ್ವಾಮಿಯವರೂ ದೂರು ಕೊಟ್ಟು ಸದರಿ ಅಧಿಕಾರಿಗಳು ರೋಗಿಗಳ ಬಗ್ಗೆ ಸರಿಯಾಗಿ ವರ್ತಿಸುತ್ತಿಲ್ಲವೆಂದು ತಿಳಿಸಿದ್ದುದಾಗಿಯೂ, ಸಾರ್ವಜನಿಕರಿಂದಾಗಲಿ, ಪ್ರೇಕ್ಷಕರ ಸಮಿತಿಯ ಅಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರಿಂದಾಗಲಿ ದೂರು ಬಂದಿಲ್ಲವೆಂದೂ, ಅಪವಾದನೆಗಳು ಆಧಾರವಿಲ್ಲವಾದ್ದರಿಂದ ಅವರ ಮೇಲೆ ಯಾವ ಕ್ರಮವನ್ನೂ ಜರುಗಿಸಲಿಲ್ಲವೆಂದೂ ತಿಳಿಸಿದರು ಮೆಡಿಕಲ್ ಸರ್ವಿಸ್ಸಿನ ಡೈರೆಕ್ಟರರು ಸದರಿ ಅಧಿಕಾರಿಯನ್ನು ಬದಲಾಯಿಸಬೇಕಾಗಿಲ್ಲವೆಂದು ತಿಳಿಸಿರುವುದಾಗಿಯೂ, ಅವರ ಕೆಲಸದ ಬಗ್ಗೆ ತೃಪ್ತಿಯನ್ನು ಸೂಚಿಸಿರುವರೆಂದೂ ಸಚಿವರು ಹೇಳಿದರು ಹೆಚ್ಚಿನ ತನಿಖೆಯಿಂದ ಅಪವಾದನೆಗಳು ಸ್ಥಿರಪಟ್ಟರೆ ಕ್ರಮ ಜರುಗಿಸುವುದಾಗಿ ಭರವಸೆಯಿತ್ತರು

ಕಟಿಲಾ ಟೆಕ್ಸ್‌ಟೈಲ್ ಗಿರಣಿಗೆ ೧೦ ಲಕ್ಷ ರೂ ಸಾಲ

ಹಿರಿಯ ಶಾಸನ ಸಭೆಯಲ್ಲಿ ಮೊನ್ನೆ ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಶ್ರೀ ಬಿ ಎಸ್ ರಾಜಗೋಪಾಲಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ, ಕಟಿಲಾ ಟೆಕ್ಸ್‌ಟೈಲ್ ಮಿಲ್ಲಿಗೆ ೧೦ ಲಕ್ಷ ರೂ ಸಾಲ ಕೊಡಲಾಗಿದೆಯೆಂದೂ, ಮಿಲ್ಲಿನಲ್ಲಿ ಕೆಲಸವು ಈಗ ತಾನೆ ಆರಂಭವಾಗಿರುವುದರಿಂದ ಲಾಭನಷ್ಟಗಳ ವಿವರವನ್ನು ಈಗಲೇ ತಿಳಿಸಲು ಸಾಧ್ಯವಿಲ್ಲವೆಂದೂ ಹೇಳಿದರು ಮೇ ೧ನೇ ತಾ|| ಸಾಲದ ಮೊದಲನೇ ಕಂತು ೫|| ಲಕ್ಷ ರೂ ಬರಬೇಕಾದ ಬಗ್ಗೆ ಕಂಪೆನಿಗೆ ಮೈಸೂರು ಬ್ಯಾಂಕಿನವರು ನೋಟೀಸು ಕೊಟ್ಟಿರುವರೆಂದೂ, ಕೇಂದ್ರ ಹಣಕಾಸು ಕಾರ್ಪೊರೇಷನ್ನಿನಿಂದ ಸಹಾಯ ಪಡೆಯಲು ಕಂಪೆನಿಯವರು ಪ್ರಯತ್ನಿಸುತ್ತಿರುವರೆಂದೂ ಸಚಿವರು ಹೇಳಿದರು

ತಿರುವಾಂಕೂರಿನಿಂದ ಮೈಸೂರಿಗೆ ೫ ಲಕ್ಷ ರೂ. ಸಾಲ

ಮೈಸೂರು ಸರ್ಕಾರದ ಸಾಲದಲ್ಲಿ ತಿರುವಾಂಕೂರು ಸರ್ಕಾರದವರು ೫ ಲಕ್ಷ ರೂ ಹಾಕಲು ನಿರ್ಧರಿಸಿರುತ್ತಾರೆ

ಫುಟ್‌ಬಾಲ್ ಪಂದ್ಯ

ರಾಜಧಾನಿಯ ದೊಡ್ಡಕೆರೆ ಮೈದಾನದಲ್ಲಿ, ಪರ್ಧಾಂತ ಫುಟ್‌ಬಾಲ್ ಪಂದ್ಯದಲ್ಲಿ ನೆನ್ನೆ ಮೈಸೂರು ಬ್ಲೂಸ್ ಕ್ಲಬ್ಬಿಗೂ, ರೈಲ್ವೆ ಇನ್ಸ್ಟಿಟ್ಯೂಟ್ ಕ್ಲಬ್ಬಿಗೂ ನಡೆದು ರೈಲ್ವೆ ಇನ್ಸ್ಟಿಟ್ಯೂಟಿನವರು ೨-೧ ಗೋಲುಗಳಿಂದ ಜಯಗಳಿಸಿದರು

ಚಂದ್ರ ಗ್ರಹಣ ವಿಚಾರ

ಬೆಂಗಳೂರಿನ ಸೈಂಟಿಫಿಕ್ ಅಸ್ಟ್ರೋಲಾಜಿಸ್ಟರಾದ ಶ್ರೀ ಎಂ ವಿ. ವಾಸುದೇವರಾಯರು ಹೀಗೆ ತಿಳಿಸುತ್ತಾರೆ—

ನಾಳೆ ಸಂಜೆ ರಾಹು ಗ್ರಸ್ತ ಚಂದ್ರಗ್ರಹಣವು ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್ ಪ್ರಕಾರ ಸ್ಪರ್ಶಕಾಲ ೪ ಘಂಟೆ ೨ ನಿಮಿಷಕ್ಕೆ ಪ್ರಾರಂಭವಾಗಿ, ೭ ಘಂಟೆ ೪೦ ನಿಮಿಷಕ್ಕೆ ಸಂಪೂರ್ಣ ಬಿಡುಗಡೆಯಾಗುವುದು ಮಧ್ಯ ಕಾಲದಲ್ಲಿ, ಅಂದರೆ ೫ ೫೦ ಕ್ಕೆ ಗ್ರಹಣವು ಚೆನ್ನಾಗಿ ಕಾಣಿಸಿಕೊಳ್ಳುವುದು ಆ ದಿನ ಪೂರ್ಣಿಮಾ ಶ್ರಾದ್ಧಕ್ಕೆ ಅವಕಾಶವಿಲ್ಲ ಗ್ರಹಣಾನಂತರ ಭೋಜನಕ್ಕೆ ಅವಕಾಶವುಂಟು ಉತ್ತರಾಷಾಢ ೨, ೩, ೪, ಶ್ರವಣ ಪೂರ್ತಿ ಮತ್ತು ಧನಿಷ್ಠ ೧, ೨ ನೇ ಪಾದದವರು ಶಾಂತಿಯನ್ನು ಮಾಡಿಕೊಳ್ಳುವುದು ಈ ಗ್ರಹಣದಿಂದ ಮೈಸೂರು ದೇಶದ ಪ್ರಜೆಗಳಿಗೆ ಯಾವ ತೊಂದರೆಯೂ ಆಗಲಾರದು ಪುಳಿಂದ, ಕುರು ಕಾಂಭೋಜ, ಚೀಣ ದೇಶದ ಜನಗಳಿಗೆ ಪೀಡೆ ಮಳೆಗೆ ತೊಂದರೆಯುಂಟು ಗ್ರಹಣವಾದ ಮಾರನೆ ದಿನ ಶ್ರೀಮಂತರು ಬಡಬಗ್ಗರಿಗೆ ಅನ್ನದಾನ ಮಾಡಿದರೆ ಶ್ರೇಯಸ್ಸುಂಟಾಗುವುದು

ಕಾಲುಗಳಿಲ್ಲದ ಕರು

೧ ಡಿಬಂಡೆಯ ಶ್ರಿ ನಾಮಗೊಂಡ್ಲು ನಾರಾಯಣಪ್ಪನವರ ಮನೆಯಲ್ಲಿ ಕಳೆದ ೧೯ನೇ ತಾ|| ಒಂದ ಹಸವು ಈದ ಕರುವಿಗೆ ಕಾಲುಗಳೇ ಇರಲಿಲ್ಲ ಉಳಿದ ಭಾಗಗಳೆಲ್ಲವೂ ಸರಿಯಾಗಿದ್ದುವು ಅದು ಮಾರನೇ ದಿನ ಮೃತಪಟ್ಟಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೨೨ ಎಂ ಎಸ್ ಸುಬ್ಬಲಕ್ಷ್ಮಿ ಕರ್ನಾಟಕ ಸಂಗೀತ ಮಧ್ಯಾಹ್ನ ೧ ೩೦ ಪಿ ಟೀಲು ೫ ನಿಮ್ಮ ಮೆಚ್ಚಿನ ಗೀತಗಳು ೫೦ ಕೆ ೫-೩೦ ಮತ್ತು ೬ ಪಿ ಆರ್ ಕೇಶವ ಮೂರ್ತಿ ಸಂಗೀತ ೬ ಗಾನವಿಹಾರ ೬-೧೫ ನಾವು ಮತ್ತು ನಮ್ಮವರು ೭-೫ ಮತ್ತು ೮-೩೦ ಕೃಷ್ಣಮಾಚಾರ್ ಪಿಟೀಲು ೯ ೧೫ ಕರ್ನಾಟಕ ಸಂಗೀತ ೯-೪೦ ಹೆಚ್ ದೇವಿರಪ್ಪ—ಗಿರಿಜಾ ಕಲ್ಯಾಣದ ಕಥೆ ನಾಟಕ

SRI GAYATHRI

TALKIES

FROM 26 7-53

AFRICAN QUEEN

(Technscolor)

Famous Forest Scenes of Africa With Wild Animals

Edited, Printed and Published by A R Nagarajan at Sadhvi Press D Subbiah Road, Mysore

ಮಾಗರೆಟ್ಟರಿಗೆ ರಾಜಪ್ರತಿನಿಧಿತ್ವ ಇಲ್ಲ

ಬ್ರಿಟನ್ನಿನ ರಾಣಿಯು ಮರಣಹೊಂದಿದರೆ ಅಥವಾ ರಾಜ್ಯಭಾರ ನಡೆಸುವ ಸ್ಥಿತಿಯಲ್ಲಿಲ್ಲದಿದ್ದರೆ, ಮತ್ತು ಅವರ ಮಗ ಸಿಂಹಾಸನಕ್ಕೆ ಬರಲು ವಯಸ್ಸಾಗದಿದ್ದರೆ, ಆಗ ರಾಜ್ಯಭಾರವನ್ನು ನೋಡಿಕೊಳ್ಳಲು ರಾಣಿಯವರ ತಂಗಿ ರಾಜಕುಮಾರಿ ಮಾಗರೆಟ್ಟರವರು ರಾಜಪ್ರತಿನಿಧಿಯಾಗಬೇಕೆಂದಿರುವ ರಾಜ್ಯ ಶಾಸನವನ್ನು ಬದಲಾಯಿಸುವುದಾಗಿ ಬ್ರಿಟನ್ನಿನ ಹಂಗಾಮಿ ಮುಖ್ಯ ಮಂತ್ರಿ ಆರ್ ಎ ಬಟ್ಲರವರು ತಿಳಿಸಿರುತ್ತಾರೆ. ಆ ಸ್ಥಾನಕ್ಕೆ ತಮ್ಮ ಪತಿಯನ್ನು ನೇಮಿಸಬಹುದೆಂದು ರಾಣಿ ಎಲಿಜಬೆತ್ತರು ಸೂಚಿಸಿರುತ್ತಾರೆ

ಫ್ರಾನ್ಸ್ ಮಂತ್ರಿಮಂಡಲದ ಬದಲಾವಣೆಗಳಿಗೆ ತಡೆ

ಫ್ರಾನ್ಸಿನಲ್ಲಿ ಮಂತ್ರಿಮಂಡಲಗಳು ಪದೇಪದೇ ಬದಲಾವಣೆಯಾಗುವುದನ್ನು ತಪ್ಪಿಸಲು ಅಲ್ಲಿನ ರಾಷ್ಟ್ರೀಯ ಸಭೆಯು ರಾಜ್ಯಾಂಗದಲ್ಲಿ ಮಾರ್ಪಾಡನ್ನು ಮಾಡಿ ಅಲ್ಪ ಬಹುಮತ ಪಡೆದವರು ಇನ್ನು ಮುಂದೆ ಮಂತ್ರಿಮಂಡಲ ರಚಿಸಲು ಅವಕಾಶವಿರಬೇಕೆಂದು ಈಗ ಗೊತ್ತುಮಾಡಲಾಗಿದೆ ಹಿಂದೆ ಸಭೆಯ ಒಳಗಿನ ಮಂದಿ ಸದಸ್ಯರು ಪ್ರಧಾನಿಯಾಗುವವರಿಗೆ ಬೆಂಬಲನೀಡಬೇಕೆಂಬ ವಿಧಿ ಇದ್ದಿತು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೆಕಾಯಿ	೨೦-೦	೩೧ ೦ ೦
ಎಳ್ಳು	೩೦ ೦ ೦	೪೫ ೦ ೦
ಹರಳುಬೀಜ	೪೪-೮-೦	
ಹುರುಳಿ	೫೦-೨-೦	೫೧ ೪-೦
ಹೆಸರು	೪೧-೧೫-೦	೩೩ ೮-೦
ಅವರೆ	೫೪-೪-೦	
ಉದ್ದು	೪೮-೦-೦	೩೯ ೩ ೦
ಹಲಸಂದೆ	೩೯ ೨ ೦	೪೪ ೦ ೦
ಮೆಣಸಿನಕಾಯಿ	೨೫-೦-೦	
ಹುಣಸೇಹಣ್ಣು	೬-೧೨-೦	
ಸೀಗೆಕಾಯಿ	೯-೮-೦	೬ ೧೨-೦
ತೆಂಗಿನಕಾಯಿ	೧೪೭ ೦ ೦	೨೧೭-೦-೦

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ ದೇಹಾರೋಗ್ಯಕ್ಕೂ, ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ಪುಷ್ಟಿದಾಯಕವಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಪತ್ರಿಕದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೇಶ್ವರ ದೇವಸ್ಥಾನದ ಬಳಿ)

ಡಿ ಸುಬ್ಬಯ್ಯ ರಸ್ತೆ ಮೈಸೂರು.

ಪ್ರಭುದೇವಾ ಥಿಯೇಟರ್

(ಸದ್ವಾ ಟಾಕೀಸ್)

24-7-53 ನೇ :: ಶುಕ್ರವಾರದಿಂದ :: ದಿನವಹಿ 3 ಆಟಗಳು

✱ ವನ ಸುಂದರಿ ✱ (ತಮಿಳು)

ತಾರೆ: ಪಿ ಆರ್ ರಾಜಕುಮಾರಿ, ಕೆ. ಎ ತಂಗವೇಲು, ಟಿ. ಎಸ್ ಬಾಲಯ್ಯ ಎನ್ ಎಸ್ ಕೃಷ್ಣನ್ ಟಿ ಎ ಮಧುರಂ, ಲಲಿತಾ ಪದ್ಮಿನಿ ಮುಂತಾದವರು

ಪೋಸ್ಟ್ No. 792 WEEKLY EDITION ಒಂದು ಪ್ರತಿಗೆ 6 ಪೈಸೆ

ಸಾಧ್ವಿ

ಸಂಪುಟ ೧೭] ಭಾನುವಾರ ೨೬-೭-೧೯೫೩ [ಸಂಚಿಕೆ ೪೭

ಭಾರತ-ಪಾಕಿಸ್ತಾನ್ - ಪ್ರಧಾನಿಗಳ ಭೇಟಿ -

ಕಲ್ಕತ್ತಾ ಪತ್ರಿಕೆಗಳ ಹರತಾಳ

ಕಲ್ಕತ್ತಾ ಪತ್ರಿಕೋದ್ಯೋಗಿಗಳ ಮೇಲೆ ಪೊಲೀಸರು ಉದ್ದೇಶಪೂರ್ವಕವಾಗಿ ಥಳಿಸಿ ಮಾಡಿದರೆಂದು ಪ್ರತಿಭಟನೆ ಸೂಚಿಸಲು ಸಾಲಿದ್ದು ಅಲ್ಲಿನ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸಲಾಗುವುದು ಪ್ರಧಾನಿ ನೆಹರೂರವರು ಪತ್ರಿಕೆಗಳವರಿಗೆ ಪೆಟ್ಟು ಬಿದ್ದ ಬಗ್ಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ

ಬ್ಲಿಟ್ಸ್ ಪತ್ರಿಕೆ ಮೇಲೆ ಸರ್ಕಾರಿ ಅಪೀಲು ವಜಾ

ಬೊಂಬಾಯಿಯ ಬ್ಲಿಟ್ಸ್ ಪತ್ರಿಕೆಯ ಸಂಪಾದಕರು ಒಂದು ರಿಕಾರ್ಡನ್ನು ಫೋರ್ಜರಿ ಮಾಡಲು ಸಹಾಯ ಮಾಡಿದರೆಂಬ ಆಪಾದನೆಯಿಂದ ವಿಮುಕ್ತಮಾಡಲ್ಪಟ್ಟ ಬಗ್ಗೆ ಬೊಂಬಾಯಿ ಸರ್ಕಾರದವರು ಹೈ ಕೋರ್ಟಿನಲ್ಲಿ ಹೂಡಿದ್ದ ಅಪೀಲನ್ನು ತಳ್ಳಿಹಾಕಲಾಗಿದೆ

ಜ್ವಾಲಾಮುಖಿಯಿಂದ ಕಪ್ಪು ಬೂದಿಯ ಸುರಿಮಳೆ

ಜಪಾನಿನ ಆಸೊ ಜ್ವಾಲಾಮುಖಿಯು ಕಪ್ಪುಬೂದಿಯನ್ನು ಮಳೆಹನಿಯಂತೆ ಸುತ್ತಲೂ ಇರುವ ಪ್ರದೇಶಗಳ ಮೇಲೆ ಚೆಲ್ಲಿದುದರಿಂದ ಕುಮಾಮೊಟೊ ನಗರದ ಜನರು ಮನೆಗಳಿಂದ ಹೊರಗೆ ಹೋಗಲು ಕೊಡೆಗಳನ್ನು ಉಪಯೋಗಿಸಬೇಕಾಯಿತು ಮನೆಗಳಲ್ಲಿ ಒಗೆದ ಬಟ್ಟೆಗಳನ್ನು ಹೊರಗಡೆ ಒಣಗಿಹಾಕಲು ಸಧ್ಯವಾಗಲಿಲ್ಲ ಬೂದಿಯಿಂದ ಪೈರುಗಳಿಗೂ ಬಹಳ ನಷ್ಟವಾಗಿದೆ

ಜಪಾನ್ ಪ್ರವಾಹಪೀಡಿತರಿಗೆ ನೆಹರೂ ಸಹಾಯ

ದಕ್ಷಿಣ ಮತ್ತು ಮಧ್ಯ ಜಪಾನುಗಳಲ್ಲಿ ಇತ್ತೀಚೆಗೆ ಆದ ಪ್ರವಾಹಗಳಿಂದ ನಷ್ಟಪಟ್ಟವರಿಗೆ ಪರಿಹಾರ ನೀಡಲು ಭಾರತದ ಪ್ರಧಾನಿ ನೆಹರೂರವರು ೫೦ ಸಾವಿರ ರೂ ಗಳನ್ನು ದಾನ ಮಾಡಿರುತ್ತಾರೆ

ಸತ್ತ ನಾಯಿಗೆ ಜೀವದಾನ

ಸತ್ತುಹೋದ ನಾಯಿಯೊಂದಕ್ಕೆ ೧೦ ನಿಮಿಷಗಳನಂತರ ಶಸ್ತ್ರ ಚಿಕಿತ್ಸೆ ಮೂಲಕ ರಷ್ಯದ ವೈಜ್ಞಾನಿಕರೊಬ್ಬರು ಜೀವದಾನ ಮಾಡಿರುವ ಸುದ್ದಿಯು ವರದಿಯಾಗಿದೆ.

ಡಿಪೋಗಳಲ್ಲಿ ಜೋಳ ಒದಗಿಸುತ್ತಿಲ್ಲ

ಆಹಾರ ಧಾನ್ಯಗಳ ಮೇಲಿನ ಹತೋಟಿಗಳನ್ನು ತೆಗೆದು ಜನರಿಗೆ ಧಾರಾಳವಾಗಿ ಪದಾರ್ಥಗಳು ದೊರೆಯುವಂತೆ ಸರ್ಕಾರದವರು ಏರ್ಪಡಿಸಿರುವುದರ ಜೊತೆಗೆ ಹಿಂದೆ ಇದ್ದ ರೇಷನ್ ಡಿಪೋಗಳನ್ನು ಫೇರ್ ಪ್ರೈಸ್ ಡಿಪೋಗಳಾಗಿ ಮಾಡಿ ಅವುಗಳಿಗೆ ಮಾಮೂಲಿನಂತೆ ಧಾನ್ಯವನ್ನು ಒದಗಿಸುತ್ತಿದ್ದರೂ, ಅವುಗಳ ಪೈಕಿ ಕೆಲವು ಡಿಪೋಗಳವರು ಸರ್ಕಾರದಿಂದ ಜೋಳದ ಪೂರ್ತಾ ಕೋಟಾವನ್ನು ಪಡೆದು ಕಾರ್ಡುದಾರರಿಗೆ ಅದನ್ನು ಒದಗಿಸುತ್ತಿಲ್ಲವೆಂದೂ ಇದರಿಂದ ತುಂಬಾ ತೊಂದರೆಯಾಗಿರುವುದೆಂದೂ, ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತಕ್ಷಣ ಸೂಕ್ತ ಕ್ರಮ ಕೈಗೊಂಡು ಸಹಾಯ ಮಾಡಬೇಕೆಂದೂ ರಾಜಧಾನಿಯ ನಿವಾಸಿಗಳೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಕರಾಚಿಯಲ್ಲಿ ನೆಹರೂ ಮತ್ತು ಮಹಮದಾಲಿ ಚರ್ಚೆ

ಭಾರತದ ಪ್ರಧಾನಿ ನೆಹರೂರವರು ನೆನ್ನೆ ಪಾಕಿಸ್ತಾನದ ರಾಜಧಾನಿ ಕರಾಚಿಗೆ ತೆರಳಿದರು ಅಲ್ಲಿ ಅವರು ಪಾಕಿಸ್ತಾನ್ ಪ್ರಧಾನಿ ಮಹಮದ್ ಅಲಿಯವರೊಡನೆ ಹಲವು ಸಮಸ್ಯೆಗಳನ್ನು ಕುರಿತು ೨ ಗಂಟೆ ಕಾಲ ಚರ್ಚಿಸಿದರು ವಿಮಾನ ನಿಲ್ದಾಣದಿಂದ ಅಲ್ಲಿನ ಗೌರ್ನರ್ ಜನರಲ್ಲರ ಭವನಕ್ಕೆ ನೆಹರೂರವರು ಹೋದಾಗ ೨೧ ಮೈಲಿ ಉದ್ದಕ್ಕೂ ಜನರು ನೆರೆದು ಜಯಕಾರ ಮಾಡಿದರು ಅವರಿಬ್ಬರಿಗೂ ೩ ದಿನಗಳ ಚರ್ಚೆ ನಡೆಯುವುದು ಭಾರತದೊಡನೆ ಆರ್ಥಿಕ ಮತ್ತು ರಾಜಕೀಯವಾಗಿ ನಿಕಟ ಸಂಬಂಧ ಹೊಂದಬೇಕೆಂದು ಪಾಕಿಸ್ತಾನ ಆಶಿಸಿರುವುದಾಗಿಯೂ ಹೇಳಲಾಗಿದೆ

ಖಾನ್ ಸಹೋದರರ ಬಿಡುಗಡೆಯ ನಿರೀಕ್ಷೆ

ಭಾರತ ಮತ್ತು ಪಾಕಿಸ್ತಾನ್ ಪ್ರಧಾನಿಗಳ ಮಾತುಕತೆಗಳ ಪರಿಣಾಮವಾಗಿ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಡಾ|| ಖಾನ್ ಸಾಹೇಬ್‌ರವರು ಪರಸ್ಪರ ಬಿಡುಗಡೆಯಾಗುವ ನಿರೀಕ್ಷೆಯಿರುವುದಾಗಿ ಗೊತ್ತಾಗಿದೆ ಪಾಕಿಸ್ತಾನ ರಾಜ್ಯವು ಸ್ಥಾಪನೆಯಾದಂದಿನಿಂದಲೂ ಅವರಿಬ್ಬರೂ ಬಂಧನದಲ್ಲಿರುವರು ಶೀಘ್ರದಲ್ಲೇ ಬಿಡುಗಡೆ ಬಗ್ಗೆ ಆಜ್ಞೆಯು ಹೊರಬೀಳುವುದೆಂದೂ ಭಾವಿಸಲಾಗಿದೆ

ರಾಜಿ ಹಾಕಲು ಶಾಂತಿ ಕೌಲು ಸಿದ್ಧ

ಕೊರಿಯಾ ಯುದ್ಧ ಮುಕ್ತಾಯವಾಗುವ ಬಗ್ಗೆ ಶಾಂತಿಯ ಒಪ್ಪಂದವು ತಯಾರಾಗಿ ಅದಕ್ಕೆ ರುಜು ಹಾಕಲು ಸಿದ್ಧವಾಗಿರುವುದೆಂದೂ, ರುಜುವಿನ ದಿನವನ್ನು ಇನ್ನೂ ಗೊತ್ತುಪಡಿಸಿಲ್ಲವೆಂದೂ ಉತ್ತರ ಕೊರಿಯಾ ರಾಜಧಾನಿ ಪ್ಯೋಂಗ್ಯಾಂಗಿನ ರೇಡಿಯೊವು ತಿಳಿಸಿರುತ್ತದೆ

ಐದು ಮಕ್ಕಳ ಜನನ

ಬೆಲೂಚಿಸ್ತಾನದ ಕ್ವೆಟ್ಟಾ ಸಂಸ್ಥಾನದ ಒಂದು ಊರಿನಲ್ಲಿ ಒಬ್ಬ ಹೆಂಗಸಿಗೆ ಏಕ ಕಾಲದಲ್ಲಿ ಐದು ಮಕ್ಕಳು ಜನಿಸಿವೆ. ತಾಯಿಯೂ ಮತ್ತು ಎಲ್ಲಾ ಮಕ್ಕಳೂ ಆರೋಗ್ಯವಾಗಿರುತ್ತಾರೆ

ಕೊರಿಯಕ್ಕೆ ೨ ನೌಕೆಗಳಲ್ಲಿ ಭಾರತದ ಸೈನ್ಯ

ಕೊರಿಯಾ ಯುದ್ಧ ಖೈದಿಗಳನ್ನು ಅವರವರ ದೇಶಕ್ಕೆ ವಾಪಸು ಕಳುಹಿಸುವ ಕಾರ್ಯದಲ್ಲಿ ಸಹಾಯ ಮಾಡಲು ಕೊರಿಯಕ್ಕೆ ತೆರಳಲಿರುವ ಭಾರತದ ಸೈನ್ಯವನ್ನು ಕರೆದೊಯ್ಯಲು ಎರಡು ಹಡಗುಗಳನ್ನು ಭಾರತ ಸರ್ಕಾರದವರು ಏರ್ಪಡಿಸಿರುವುದಾಗಿ ವರದಿಯಾಗಿದೆ ಒಂದು ಬ್ರಿಟಿಷ್ ಹಡಗೆಂದೂ, ಮತ್ತೊಂದು ಭಾರತೀಯ ಧ್ವಜವನ್ನುಳ್ಳದ್ದೆಂದೂ ಹೇಳಲಾಗಿದೆ ೫,೦೦೦ ಸೈನಿಕರನ್ನು ಕಳುಹಲು ಏರ್ಪಾಡಾಗುತ್ತಿದೆ

ಪೋಲೆಂಡ್ ಜನರ ದಂಗೆ

ಪೋಲೆಂಡಿನ ಒಂದು ಭಾಗದಲ್ಲಿ ಜನರು ದಂಗೆಯೆದ್ದಿರುವರೆಂದೂ ರಷ್ಯದ ಟ್ಯಾಂಕುಗಳು ಮತ್ತು ಸೈನಿಕರು ದಂಗೆಕೋರರನ್ನು ಸುತ್ತುವರಿದು ನಿಂತಿರುವರೆಂದೂ ವರದಿಯಾಗಿದೆ ದಂಗೆಕೋರರು ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವರು ಅವರುಗಳು ಐದು ನಗರಗಳನ್ನು ಆಕ್ರಮಿಸಿರುವರು ಅವರ ಬಳ ೧೦ ಸಾವಿರ ಸೈನ್ಯಗಳಿವೆಯೆಂದು ಹೇಳಲಾಗಿದೆ

ಪಾಕಿಸ್ತಾನದಲ್ಲಿ ಭೂದಾನ

ಭಾರತದಲ್ಲಿ ನಡೆಯುತ್ತಿರುವಂತೆಯೇ ಪಾಕಿಸ್ತಾನದಲ್ಲೂ ಭೂದಾನ ಕಾರ್ಯಾರಂಭ ಮಾಡಲಾಗುವುದೆಂದೂ, ಅದಕ್ಕಾಗಿ ಅಲ್ಲಿನ ಹಲವು ಕಾರ್ಯಕರ್ತರು ಆಚಾರ್ಯ ವಿನೋಬಾ ಭಾವೆಯವರನ್ನು ನೋಡಿಕೊಂಡು ಹೋಗಲಿರುವರೆಂದೂ ವರದಿಯಾಗಿದೆ

ವಿದ್ಯಾ ಸುಧಾರಣೆ ಸಮ್ಮೇಳನಗಳಿಗಾಗಿ ವೆಚ್ಚ

ವಿದ್ಯಾ ಸುಧಾರಣೆಗಳ ಸಂಬಂಧವಾಗಿ ನಡೆದ ಸಮ್ಮೇಳನಗಳಿಗೆ ೨೧,೦೦೦ ರೂ ಗಳು ವೆಚ್ಚವಾದುವೆಂದು ವಿದ್ಯಾಮಂತ್ರಿ, ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸುತ್ತಾರೆ ಈ ಸಮ್ಮೇಳನಗಳಲ್ಲಿ ಉಪಾಧ್ಯಾಯರುಗಳು ಹೆಚ್ಚಿನ ಆಸಕ್ತಿ ವಹಿಸಿದ್ದರೆಂದೂ, ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಅವರಿಗೂ ಇತರರಂತೆ ಪೂರ್ಣ ಸ್ವಾತಂತ್ರ್ಯವಿದ್ದಿತೆಂದೂ ಅವರು ಹೇಳಿರುತ್ತಾರೆ.

ನೀಲಗಿರಿಯಲ್ಲಿ ಮಂತ್ರಿಗಳ ಪ್ರವಾಸ

ಶಾಸನ ಸಭೆಯಲ್ಲಿ ದೀರ್ಘ ಪ್ರಶ್ನೋತ್ತರ

ಬೆಂಗಳೂರು ೨೬

ನೆನ್ನೆ ಹಿರಿಯ ಶಾಸನ ಸಭೆಯಲ್ಲಿ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಉತ್ತರವಿತ್ತು, ತಾವು ೧೦ ದಿನ, ರೆವಿನ್ಯೂ ಮಂತ್ರಿಗಳು ೬ ದಿನ ಮತ್ತು ನ್ಯಾಯಶಾಂಗ ಮಂತ್ರಿಗಳು ಹಲವು ಗಂಟೆಗಳ ಕಾಲ ನೀಲಗಿರಿಯಲ್ಲಿದ್ದುದಾಗಿ ತಿಳಿಸಿದರು. ಮಂತ್ರಿಗಳು ಯಾವಾಗಲೂ ಕೆಲಸದ ಮೇಲಿರುವುದರಿಂದ ಅವರಿಗೆ ರಜಾ ಕೊಡಬೇಕೆಂಬ ನಿಯಮವಿಲ್ಲವೆಂದು ತಿಳಿಸಲಾಯಿತು ಮಂತ್ರಿಗಳೊಡನೆ ಆಪ್ತೆಯ. ಅಧಿಕಾರಿಗಳು ಪ್ರವಾಸ ಹೋಗುವುದರಿಂದ ಸರ್ಕಾರಿ ಕೆಲಸಕ್ಕೆ ಅಡಚಣೆಯಾಗುವುದಿಲ್ಲವೆಂದು ಅವರು ಹೇಳಿದರು ತಮ್ಮನ್ನು ಮದ್ರಾಸು ಗೌರ್ನರರು ಆಹ್ವಾನಿಸಿದ್ದುದಾಗಿ ಅವರು ತಿಳಿಸಿದರು

ಈಗ ರಾಜ್ಯಾಂಗವು ಬದಲಾವಣೆಯಾಗಿ, ಮಂತ್ರಿಗಳು ಸಮಾನಸ್ಕಂಧರಾಗಿದ್ದು ಮುಖ್ಯ ಮಂತ್ರಿಗಳಿಗೆ ಅಧೀನರಾಗಿಲ್ಲವೆಂದೂ, ಯೂರೋಪಿಗಾಗಲಿ, ಅಥವಾ ಮತ್ತೆಲ್ಲಿಗಾಗಲಿ ಹೋಗಲು ಇಚ್ಛಿಸಿದರೂ ಹಾಗೆ ಮಾಡಲು ಅವರಿಗೆ ಸ್ವಾತಂತ್ರ್ಯವಿರುವುದಾಗಿಯೂ ಮುಖ್ಯ ಮಂತ್ರಿಗಳು ಉತ್ತರವಿತ್ತರು

ಮೈಸೂರು ಜಿಲ್ಲಾಧಿಕಾರಿಗಳ ಕಛೇರಿ ನೌಕರರ ಬಗ್ಗೆ ಪ್ರಶ್ನೆ

೫ ರಿಂದ ೧೦ ವರ್ಷಗಳ ಅವಧಿಯ ಮೂವರು, ೧೦ ವರ್ಷಕ್ಕೆ ಮೇಲ್ಪಟ್ಟ ಅವಧಿಯ ಇಬ್ಬರು ನೌಕರರು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೆಲಸ ಮಾಡುತ್ತಿರುವರೆಂದು ರೆವಿನ್ಯೂ ಮಂತ್ರಿಗಳು ಮೊನ್ನೆ ಶ್ರೀ ಎಸ್ ಎಚ್ ತಮ್ಮಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಉಪ ಪ್ರಶ್ನೆ ಕಾಲದಲ್ಲಿ ಶ್ರೀ ಶಿವರುದ್ರಪ್ಪನವರು ವರ್ಗಾವಣೆ ಎಂಬ ಪದದ ಅರ್ಥವನ್ನು ಕೇಳಿ ಒಂದು ಕುರ್ಚಿಯಿಂದ ಮತ್ತೊಂದಕ್ಕೆ ಹೋದರೂ ಅದು ವರ್ಗಾವಣೆಯಾಗುವುದೇ ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರ ಬರಲಿಲ್ಲ. ಅನೇಕರ ದಕ್ಷತೆಯನ್ನು ಕಂಡು ಮತ್ತು ಆಡಳಿತ ಸೌಕರ್ಯಕ್ಕಾಗಿ ಅವರನ್ನು ಅಲ್ಲಿಯೇ ಇಟ್ಟುಕೊಳ್ಳಲಾಗಿದೆಯೆಂದು ಸಚಿವರು ತಿಳಿಸಿದರು ಐದು ವರ್ಷಗಳಿಗೊಮ್ಮೆ ನೌಕರರನ್ನು ವರ್ಗಾಯಿಸಬೇಕೆಂಬುದಾಗಿ ಸರ್ಕಾರದವರು ಇತ್ತ ಸೂಚನೆಯನ್ನು ಸಭಿಕರ ಗಮನಕ್ಕೆ ತರಲಾಯಿತು

ಬಳ್ಳಾರಿ ತಾಲ್ಲೂಕುಗಳ ಸೇರಣೆಯಿಂದ ೮೩ ಲಕ್ಷ ರೂ. ವರಮಾನ

ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರಿಗೆ ಸೇರುವುದರಿಂದ ವರ್ಷಕ್ಕೆ ೮೩ ಲಕ್ಷ ರೂ. ಹೆಚ್ಚು ವರಮಾನವು ಬರುವುದಾಗಿಯೂ ೭೬,೦೦೦ ಜನಸಂಖ್ಯೆಯುಳ್ಳ ೩,೮೭೦ ಚದರ ಮೈಲಿಯಷ್ಟು ಪ್ರದೇಶವು ಸಂಸ್ಥಾನಕ್ಕೆ ಸೇರಿದಂತಾಗುವುದೆಂದೂ ಮುಖ್ಯ ಮಂತ್ರಿಯವರು ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತಾಗ ತಿಳಿಸಿದರು.

ವಾರ ಭವಿಷ್ಯ

೨೬-೭-೫೫ ರಿಂದ ೨-೮-೫೫ ರ ವರೆಗೆ

ಮೇಷ — ಆರೋಗ್ಯ ಆರ್ಥಿಕ, ಮಾನಸಿಕ ಸ್ಥಿತಿ ತೃಪ್ತಿಕರವಿಲ್ಲ, ವ್ಯಾಪಾರಾದಿಗಳಲ್ಲಿ ಶತ್ರು ಪೀಡೆ ಕಾರ್ಯಕ್ಕೆ ವಿಘ್ನ. ತಾ|| ೩೦ ೩೧ ವಿಯೋಗ ವಾರ್ತೆ, ನಿದ್ರಾ ನಾಶ

ವೃಷಭ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮವಿದ್ದು, ಮಾನಸಿಕ ಸ್ಥಿತಿ ಮಾತ್ರ ಚಂಚಲವಾಗುವ ಸಂಭವ ಕೋರ್ಟು ಕಾರ್ಯ ಮತ್ತು ಪ್ರವಾಸಗಳಲ್ಲಿ ಜಯ. ತಾ|| ೩೦. ೩೧ ಮಿತ್ರ ಭೇಟಿ, ಖರ್ಚು ಹೆಚ್ಚು.

ಮಿಥುನ — ಸಾಂಪತ್ತಿಕ ಸ್ಥಿತಿ ಲಾಭದಾಯಕ, ಆರೋಗ್ಯ ಸಾಮಾನ್ಯ ಮಾನಸಿಕ ಸ್ಥಿತಿಯು ನಿರಾಶೆ, ವ್ಯಾಪಾರ, ಉದ್ಯೋಗವಲ್ಲಿ ವಿಘ್ನ. ಪ್ರವಾಸ ಶುಭಕರ ತಾ|| ೩೦, ೩೧ ಮಹತ್ವದ ಪತ್ರ, ಗುಪ್ತ ಚಿಂತೆ

ಕರ್ಕ — ಆರೋಗ್ಯ ನೆಟ್ಟಗಿರದು ಸಾಂಪತ್ತಿಕ ಸ್ಥಿತಿ ಸಾಮಾನ್ಯ, ವ್ಯಾಪಾರಾದಿಗಳಲ್ಲಿ ಶತ್ರು ಪೀಡೆ, ಖರ್ಚು ಹೆಚ್ಚು, ತಾ|| ೩೦, ೩೧ ಪತ್ನಿ ಕ್ಲೇಶ, ವಿಯೋಗ ವಾರ್ತೆ

ಸಿಂಹ — ಆರೋಗ್ಯ, ಆರ್ಥಿಕ ಸ್ಥಿತಿ ನೆಟ್ಟಗಿಲ್ಲ, ಮೇಲ್ಪಟ್ಟವರಿಂದ ನಿಂದನೆ, ವ್ಯಾಪಾರ, ಉದ್ಯೋಗದಲ್ಲಿ ಪ್ರತಿಸ್ಪರ್ಧಿಗಳ ಕಾಟ ತಾ|| ೩೦, ೩೧ ವಾಹನ ಭಯ, ವಿಯೋಗ.

ಕನ್ಯಾ — ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ, ವಾದವಿವಾದದಲ್ಲಿ ಜಯ, ವ್ಯಾಪಾರಾದಿಗಳಲ್ಲಿ ಲಾಭ, ಸ್ತ್ರೀ ಸುಖ ಉತ್ತಮ, ಸರ್ಕಾರಿ ಕಾರ್ಯ ಜಯ. ತಾ|| ೩೦, ೩೧ ಮೃಷ್ಟಾನ್ನ ಭೋಜನ, ಶುಭ ವಾರ್ತೆ

ತುಲಾ — ಆರೋಗ್ಯ, ಮಾನಸಿಕ, ಸಾಂಪತ್ತಿಕ ಸ್ಥಿತಿ ಪ್ರಗತಿಕರ, ವ್ಯಾಪಾರಾದಿಗಳಲ್ಲಿ ತೊಂದರೆ ಪರಿಹಾರ, ಪ್ರವಾಸದಲ್ಲಿ ಜಯ ತಾ|| ೩೦, ೩೧ ಖರ್ಚು ಹೆಚ್ಚು, ಬಂಧು ಸಹಾಯ

ವೃಶ್ಚಿಕ — ಆರೋಗ್ಯ, ಆರ್ಥಿಕ ಸ್ಥಿತಿ, ತೃಪ್ತಿದಾಯಕವಿಲ್ಲ, ಸಾಧು ಜನರ ಸಹವಾಸ, ವ್ಯಾಪಾರಾದಿಗಳಲ್ಲಿ ತೊಂದರೆ ಆದೀತು ತಾ|| ೩೦, ೩೧ ದ್ರವ್ಯ ಲಾಭ, ಮಹತ್ವದ ಪತ್ರ

ಧನು — ವ್ಯಾಪಾರ, ಉದ್ಯೋಗ, ಆರ್ಥಿಕ ಸ್ಥಿತಿ ನಿರಾಶಾದಾಯಕ, ಆರೋಗ್ಯ ನೆಟ್ಟಗಿಲ್ಲ ತಾ|| ೩೦, ೩೧ ವಾಹನ ಅಗ್ನಿ ಭಯ, ಖರ್ಚು

ಮಕರ — ಆರೋಗ್ಯ, ವ್ಯಾಪಾರ, ಉದ್ಯೋಗಗಳಲ್ಲಿ ಅಡಚಣೆ, ಗ್ರಹಸ್ಥೋದಯ ಚಂದ್ರ ಗ್ರಹಣವಿರುವುದು, [illegible] ಮಾಡಿ ಕಾರ್ಯ ತಾ|| ೩೦, ೩೧ ವಿತ್ತ ನಾಶ, ಖರ್ಚು ಹೆಚ್ಚು

ಕುಂಭ — ಆರೋಗ್ಯ, ವ್ಯಾಪಾರ ಉದ್ಯೋಗ, ಸಾಂಸಾರಿಕ ತೃಪ್ತಿ, ಆರ್ಥಿಕ ಸ್ಥಿತಿ ನೆಟ್ಟಗೆ ತಾ|| ೩೦, ೩೧ ಖರ್ಚು, ಮನೋವ್ಯಥೆ

ಮೀನ — ಆರೋಗ್ಯ, ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸ ಮುಂತಾದವು ಉತ್ತಮ ತಾ|| ೩೦, ೩೧ ಸಂತತಿ ಕ್ಲೇಶ, ಖರ್ಚು ಜಾಸ್ತಿ

ಪತ್ರಿಕಾಕರ್ತರ ಮೇಲೆ ನಡೆದ ಧಾಳಿ ಬಗ್ಗೆ ವಿಚಾರಣೆ

ಕಲ್ಕತ್ತ, ಪತ್ರಿಕೋದ್ಯಮಿಗಳ ಮೇಲೆ ಪೊಲೀಸರು ಕಳೆದ ೨೨ನೇ ತಾ|| ಮಾಡಿದ ಧಾಳಿ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ಹೈಕೋರ್ಟು ನ್ಯಾಯಾಧೀಶ ಎಸ್ ಕೆ ಘೋಷರನ್ನು ನೇಮಿಸಲಾಗಿದೆ

ಕಾಂಗ್ರೆಸ್ ಸ್ವಯಂಸೇವಕ ಸಮಿತಿ

ಮೈಸೂರು ಪ್ರದೇಶ ಕಾಂಗ್ರೆಸ್ಸಿನವರು ಪ್ರಾಂತೀಯ ಸೇವಾದಳವನ್ನು ಏರ್ಪಡಿಸುತ್ತಾರೆ ಸರ್ದಾರ್ ಪಟೇಲರ ಸ್ಮಾರಕ ನಿಧಿಯನ್ನು ಕೂಡಿಸಲು ೫ ಜನರ ಸಮಿತಿಯೊಂದನ್ನು ರಚಿಸಲಾಗಿದೆ

ಪ್ರವಾಹ ಪ್ರದೇಶಗಳಲ್ಲಿ ರೆಡ್ ಕ್ರಾಸ್ ಕಾರ್ಯದರ್ಶಿನಿಯ ಪ್ರವಾಸ

ಮೈಸೂರು ಸಂಸ್ಥಾನದ ರೆಡ್‌ಕ್ರಾಸ್ ಸಂಘದ ವ್ಯವಸ್ಥಾ ಕಾರ್ಯದರ್ಶಿನಿಯವರಾದ ಶ್ರೀಮತಿ ಲಕ್ಷ್ಮಿ ಕೃಷ್ಣಪ್ಪನವರು [illegible] ಟಿ. ನರಸೀಪುರ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳ ಪ್ರದೇಶಗಳಿಗೆ ಭೇಟಿಯಿತ್ತು, ಪ್ರವಾಹ ಪೀಡಿತ ಜನರಿಗೂ, ಗುಡ್ಡಗಾಡಿನವರಿಗೂ ಸಹಾಯವನ್ನು ಒದಗಿಸಿದರು ಅವರೊಡನೆ ಜಿಲ್ಲಾಧಿಕಾರಿಗಳೂ, ಸಬ್ ಡಿವಿಜನ್ ಅಧಿಕಾರಿಗಳೂ ಪ್ರವಾಸ ಮಾಡಿದರು. ನೊಂದವರಿಗೆ ಹಂಚಲು ಮಹಾಜನರು ಅವರಿಗೆ ೪೦ ಸೀರೆಗಳನ್ನು ಕೊಟ್ಟರು ರೆಡ್‌ಕ್ರಾಸ್ ಸಂಸ್ಥೆಯ ಕೊಟ್ಟ ಜೊತೆಗೆ ಅವನ್ನೂ ಹಂಚಲಾಯಿತು. ಗುಡಿಸಲುಗಳಿಗೂ ಮತ್ತು ವಲ್ಲೂರುಗಳಿಗೂ ಭೇಟಿಯಿತ್ತು ಅಲ್ಲಿಯೂ ಬಟ್ಟೆಗಳನ್ನು ಅವರು ಹಂಚಿದರು ಉಡಿಗಾಲ ಮತ್ತು ಚಾಮರಾಜನಗರಗಳ ಗಂಜಿ ಕೇಂದ್ರಗಳನ್ನೂ ಸಂದರ್ಶಿಸಿದರು ನಾಲ್ಕು ದಿನಗಳ ಪ್ರವಾಸದಲ್ಲಿ ೩ ಸಾವಿರ ರೂ ಬೆಲೆಯ ವಸ್ತ್ರಗಳನ್ನು ಹಂಚಲಾಯಿತು

ಗುರು ಪೂರ್ಣಿಮಾ ಉತ್ಸವ

ರಾಜಧಾನಿಯ ಸಾಯಿ ಮಂದಿರದವರು ಇಂದಿನಿಂದ ಆಗಸ್ಟ್ ೩ ನೇ ತಾ|| ವರೆಗೆ ಶ್ರೀ ಸಾಯಿಬಾಬಾರವರ ೧೫ ನೇ ಗುರು ಪೂರ್ಣಿಮಾ ಮಹೋತ್ಸವವನ್ನು ಏರ್ಪಡಿಸಿರುತ್ತಾರೆ ಅದರ ಅಂಗವಾಗಿ ಬಡವರಿಗೆ ಅನ್ನದಾನ ಮುಂತಾದ ಸೇವಾ ಕಾರ್ಯಗಳು ನಡೆಸುವುದಾದುದರಿಂದ ಆಸ್ತಿಕ ಮಹನೀಯರು ಧನ ಧಾನ್ಯಾದಿಗಳನ್ನು ಕೊಡುವಂತೆಯೂ, ಸೇವಾ ಕಾರ್ಯಗಳಲ್ಲಿ ಭಾಗವಹಿಸುವಂತೆಯೂ ಕೋರಲಾಗಿದೆ ಎಲ್ಲಾ ಸೇವಾ ಕಾರ್ಯಗಳೂ ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಚಂದ್ರಗಿರಿ ಚಲುವರಾಯ ಶೆಟ್ಟರ ಛತ್ರದಲ್ಲಿ ನಡೆಯುವುವು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಕೆ. ನಾದಮುನಿ ನಾಗಸ್ವರ ಮಧ್ಯಾಹ್ನ ೧-೪೦ ಲಕ್ಷ್ಮಿ ಲೋಕಸುಬ್ರಹ್ಮಣ್ಯಂ [illegible] ಕರ್ನಾಟಕ ಸಂಗೀತ ೩ ಎಸ್ [illegible] ಚಂದ್ರರಾವ್ ಗಾಯನ. ಸಂಜೆ ೫-೪೦ ಕ್ಕೆ ನಾದಮುನಿ ನಾಗಸ್ವರ ೬ ಗಾನವಿಹಾರ ೭-೫ ಎಸ್ ರಾಮಚಂದ್ರರಾವ್ ಗಾಯನ ೭-೩೦ ಡಾ|| ಎಲ್ ಶ್ರೀಕಂಠಯ್ಯ [illegible] ಭಾಷಣ [illegible] ಭಾರತ [illegible] ೮-೧೫ ಮತ್ತು ೯-೪೦ ಕ್ಕೆ [illegible] ಇಂಗ್ಲಿಷ್ ಭಾಷಣ.

ಶಾಲಾ ಕಟ್ಟಡ ಕುಸಿದು ಬಾಲಕಿಯ ಮರಣ

ಮದ್ರಾಸಿನ ಒಂದು ಶಾಲೆಯ ಮೇಲ್ಛಾವಣಿಯು ಮೊನ್ನೆ ಕುಸಿದುಬಿದ್ದು ೬ ವರ್ಷದ ನಳಿನಿ ಎಂಬ ಬಾಲಕಿಯು ಮೃತಪಟ್ಟಳು. ಇತರ ೧೩ ಮಕ್ಕಳಿಗೆ ತೀವ್ರವಾಗಿ ಪೆಟ್ಟು ಬಿದ್ದು ಆಸ್ಪತ್ರೆಗೆ ಸಾಗಿಸಲಾಗಿದೆ.

ಪ್ರೊಫೆಸರ್ ಹುದ್ದೆಗಳಲ್ಲಿ ಹಿಂದುಳಿದವರಿಗೆ ಪ್ರಾಶಸ್ತ್ಯ

ವಿಶ್ವವಿದ್ಯಾಲಯದ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ಸಾಕಷ್ಟು ಅರ್ಹತೆ ಇರುವ ಹಿಂದುಳಿದ ಪಂಗಡದವರು ಇದ್ದರೆ ಅವರುಗಳಿಗೆ ಪ್ರಾಶಸ್ತ್ಯ ನೀಯಲಾಗುವುದೆಂದು ಮೊನ್ನೆ ಕಿರಿಯ ಶಾಸನ ಸಭೆಯಲ್ಲಿ ತಿಳಿಸಲಾಯಿತು

ಆದಿ ಜಾಂಬವರ ಕುಂದುಕೊರತೆಗಳು

ರಾಜಧಾನಿಯ ಜಲಪುರಿ ಆದಿ ಜಾಂಬವಾ ಯುವಕ ಸಂಘದ ಆಶ್ರಯದಲ್ಲಿ ಹರಿಜನರ ಸಭೆಯೊಂದು ಕಳೆದ ೨೨ನೇ ತಾ|| ಪೌರಸಭಾ ಕಮಿಷನರರಾದ ಶ್ರೀ ಎನ್ ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ ಮತ್ತು ಸ್ವಾಗತಗಳಾದ ನಂತರ ಶ್ರೀ ಕೆ ನಾರಾಯಣರವರು ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು ಸಂಘದ ಕಾರ್ಯದರ್ಶಿ ಶ್ರೀ ಎನ್ ಬಸಪ್ಪನವರು ಹರಿಜನರ ಕುಂದುಕೊರತೆಗಳನ್ನು ವಿವರಿಸಿದರು ಶ್ರೀ ರಾಮಮಂದಿರದ ಕಟ್ಟಡವನ್ನು ಪೂರ್ತಿ ಮಾಡಲು ಹಣ ಸಹಾಯಕ್ಕಾಗಿಯೂ, ಕೇರಿಯಲ್ಲಿ ನಲ್ಲಿ ನೀರಿನ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿಯೂ, ರಸ್ತೆ ರಿಪೇರಿ ಮತ್ತು ಮಕ್ಕಳಿಗೆ ಆಟದ ಮೈದಾನಗಳನ್ನು ಏರ್ಪಡಿಸುವುದಕ್ಕಾಗಿಯೂ ಅರಿಕೆ ಸಲ್ಲಿಸಲಾಯಿತು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಭಾಷಣ ಮಾಡಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು ಅಧ್ಯಕ್ಷರು ಹಿತೋಕ್ತಿಗಳನ್ನು ನುಡಿದ ನಂತರ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

CAR FOR SALE

One Austin Tourer car 1936 Model, 15.9 H P, 6 Cylinder in good running condition Please enquire for particulars, BoxNo 20 C/o SADHVI, Mysore.

ಜೈಲಿನಿಂದ ಖೈದಿಗಳ ಪರಾರಿ

ಹುಣಸೂರು ಲಾಕಪ್ಪಿನಿಂದ ೬ ಜನ ಗುಮಾನಿ ಖೈದಿಗಳು ಪರಾರಿಯಾಗಿರುವರೆಂದು ವರದಿಯಾಗಿದೆ ಲಾಕಪ್ಪಿನ ಮೇಲ್ಭಾಗದ ಕಿಟಕಿ ಸರಳುಗಳನ್ನು ಅವರು ಮುರಿದು ತಪ್ಪಿಸಿಕೊಂಡು ಹೋದರೆಂದು ಹೇಳಲಾಗಿದೆ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಕೆ ಎಸ್ ಕೃಷ್ಣಮೂರ್ತಿಯವರು ಸ್ಥಳಕ್ಕೆ ಭೇಟಿಯಿತ್ತಿದ್ದರು

ನೂರು ರೂ. ನೋಟಿನ ಬಗ್ಗೆ ಕೃತಜ್ಞತೆ

ರಾಜಧಾನಿಯ [illegible]ಬಾದಿನಲ್ಲಿರುವ ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಯಲ್ಲಿ ಒಗೆಯಲು ಕೊಟ್ಟ ಒಂದು ಬಟ್ಟೆಯಲ್ಲಿ ಸಿಕ್ಕಿದ ನೂರು ರೂಪಾಯಿನ ನೋಟನ್ನು ಅದರ ಮಾಲೀಕರಾದ ಶ್ರೀ ಬಿ ಎಸ್ ನಾರಾಯಣ್‌ರವರಿಗೆ ಹಿಂದಿರುಗಿಸಿದುದಕ್ಕಾಗಿ ಶ್ರೀಯುತರು ಲಾಂಡ್ರಿಯವರ ಪ್ರಾಮಾಣಿಕತೆಯನ್ನು ಪ್ರಶಂಸಿಸಿ ಕೃತಜ್ಞತೆಯನ್ನು ಸೂಚಿಸುತ್ತಾರೆ

ಇದು ನಿಮಗೆ ಗೊತ್ತೇ?

ಬೆಳಗಿನ ತಿಂಡಿಗೂ, ರೋಗಿಗಳ [illegible] ಪ್ರತಿದಿನವೂ ಅವಶ್ಯಕವಾಗಿ ಬೇಕಾಗುವ ರುಚಿಕರವಾದ ನಾನಾ ತರಹದ

ಬಿಸ್ಕತ್ತುಗಳೂ, ಬನ್ನು ಮತ್ತು ಬ್ರೆಡ್ಡುಗಳೂ

ದೊರೆಯುವ ಹತ್ತಿರದ ಸ್ಥಳವೆಂದರೆ

ಶ್ರೀ ಕೃಷ್ಣಾ ರೊಟ್ಟಿ ಅಂಗಡಿ,

(ಚಂದ್ರಮೌಳೇಶ್ವರ ಸರ್ಕಲ್)

ಡಿ ಸುಬ್ಬಯ್ಯ ರಸ್ತೆ ಮೈಸೂರು.

|| ಶ್ರೀ ||

ಜಗದಂಬಾ ಶಿಶುವಿಹಾರ

೨೫೫. ದಿವಾನ್ಸ್ ರಸ್ತೆ ಮೈಸೂರು

ಮೇಲ್ಕಂಡ ಶಿಶುವಿಹಾರದ ಕಟ್ಟಡದಲ್ಲಿ ಈ ವರ್ಷ ಎಂ. ಎಸ್ [illegible] ಕ್ಲಾಸಿಗೆ ಓದುತ್ತಿರುವ ಬಾಲಕಬಾಲಿಕೆಯರಿಗೆ ಸಾಯಂಕಾಲ 6 ರಿಂದ 8 ರ ವರೆಗೆ, ಅನುಭವಶಾಲಿಗಳಾದ ಉಪಾಧ್ಯಾಯರುಗಳಿಂದ ಶಿಕ್ಷಣ ಕೊಡಲ್ಪಡುತ್ತದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ ಪ್ರವೇಶಧನ ೧ ರೂ ಮತ್ತು ಮಾಸೆಯಾನ ಶಿಕ್ಷಣ ಶುಲ್ಕ 3 ರೂ ಮುಂಗಡವಾಗಿ ಕೊಡಬೇಕು

ಡಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

Edited, Printed and Published by A R Nagarajan at Sadhvi Press, D Subbaiah Road, Mysore

ರಾಜಕಮಲ್, ಮೈಸೂರು

25-7-55 ರಿಂದ . ಅಮೋಘ ಪ್ರಾರಂಭ :: ದಿನವಹಿ 3 ಆಟಗಳು

ಪಕ್ಷಿರಾಜಾ ರವರ ತಮಿಳು ಚಿತ್ರ ★ **ಪೊನ್ನಿ** ★

[illegible]-ಲಲಿತ-ಪದ್ಮಿನಿ ಶ್ರೀರಾಮ್, ಬಾಲಸುಬ್ರಹ್ಮಣ್ಯಂ, ದೊರೆರಾಜ್ ಮತ್ತು ತಂಗವೇಲು

ಕಿಂಗ್‌ಕಾಂಗ್ ಮತ್ತು ದಾರಾಸಿಂಗ್‌ರವರ ಕುಸ್ತಿಯನ್ನೂ ಸಹ ಇದರಲ್ಲಿ ನೋಡಬಹುದು

ಫೋನ್ ನಂ. 792 ॥ ವಂದೇ ಮಾತರಂ ॥ ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೭-೭-೧೯೫೩ [ಸಂಚಿಕೆ ...

- ಕೊರಿಯಾ ಯುದ್ಧ - ಇಂದು ಮುಕ್ತಾಯ

ಗುಡ್ಡಗಾಡಿನವರ ಅಭಿವೃದ್ಧಿಗಾಗಿ ೧ ಲಕ್ಷ ರೂ.

ಮೈಸೂರು ೨೭

ಈ ಜಿಲ್ಲೆಯ, ಪಟ್ಟಿ ಮಾಡಲ್ಪಟ್ಟ ಗುಡ್ಡ ಪ್ರದೇಶಗಳ ಜನರ ಪುರೋಭಿವೃದ್ಧಿಗಾಗಿ ಸರ್ಕಾರದವರು ೧ ಲಕ್ಷ ರೂಪಾಯಿಗಳನ್ನು ಒದಗಿಸಿರುತ್ತಾರೆ ಚಾಮರಾಜನಗರ ತಾಲ್ಲೂಕಿನ ಬೂದಿಪಡಗ, ಹೆಗ್ಗಡದೇವನಕೋಟೆ ತಾಲ್ಲೂಕಿನ ಪಣಜರಹಳ್ಳಿ ಮತ್ತು ಗುಂಡ್ಲುಪೇಟೆ ತಾ॥ ಮದ್ದೂರುಗಳಲ್ಲಿ ಶಾಲೆ ಮತ್ತು ವಸತಿ ಗೃಹಗಳನ್ನೂ, ನಿಸನೆ ಗ್ರಾಮದಲ್ಲಿ ಆರೋಗ್ಯ ಕೇಂದ್ರವೊಂದನ್ನೂ ಏರ್ಪಡಿಸಲಾಗುವುದು ಈ ಕಾರ್ಯಗಳನ್ನು ಇಲ್ಲಿನ ಜಿಲ್ಲಾ ಬೋರ್ಡ್ ಅಧ್ಯಕ್ಷರು, ಮೈಸೂರು ಮತ್ತು ನಂಜನಗೂಡಿನ ಎಕ್ಸಿಕ್ಯೂಟಿವ್ ಇಂಜನಿಯರುಗಳಿಗೆ ವಹಿಸಲಾಗಿದೆ

ಮೋಸದ ಪ್ರಯುಕ್ತ ಅವ್ಯಗಿ ದಸ್ತಗಿರಿ

ಬೊಂಬಾಯಿನ ಹಲವರು ಮೈಸೂರು ನಗರದ ಪ್ರಮುಖ ವರ್ತಕರೊಬ್ಬರಿಗೆ ಸಾಲ ಕೊಡುವುದಾಗಿ ಹೇಳಿ ಅವರಿಂದ ಹಣ ಪಡೆದು ಮೋಸ ಮಾಡಿದರೆಂದು ದಸ್ತಗಿರಿಯಾದವರಲ್ಲದೆ ಈಗ ಮೈಸೂರಿನ ಅಪ್ಪು ಎಂಬವನನ್ನೂ ಬಂಧಿಸಲಾಗಿದೆ ಈ ಸಂಬಂಧವಾಗಿ ಬೊಂಬಾಯಿನ ಬೊಮ್ಮಾಜಿ ಮಾಂ ತಾದವರ ಮೇಲೆ ಮೊನ್ನೆ ಮೊಕದ್ದಮೆಯು ಇದ್ದು ಒರುವ ತಿಂಗಳ ೭ನೇ ತಾ॥ ಗೆ ಮುಂದುವರಿಸಲ್ಪಟ್ಟಿದೆ

ಪರ್ಷಿಯದ ಷಹಾರಿಂದ ಸಹೋದರಿಯ ಗಡೀಪಾರು

ಪರ್ಷಿಯದಿಂದ ಆದಷ್ಟು ಜಾಗ್ರತೆ ಹೊರಕ್ಕೆ ಹೋಗುವಂತೆ ಅಲ್ಲಿನ ಷಹಾರವರು ತಮ್ಮ ಸಹೋದರಿ ಅಷ್ರಫರಿಗೆ ಸೂಚಿಸಿರುತ್ತಾರೆ ಷಹಾರವರಿಗೆ ತಿಳಿಯದಂತೆ ಮೊನ್ನೆ ತಾನೆ ಆಕೆಯು ಯೂರೋಪಿನಿಂದ ಟೆಹರಾನಿಗೆ ಹಿಂತಿರುಗಿದಳೆಂದೂ, ಇದರಿಂದ ರಾಜರ ಘನತೆಗೆ ಕುಂದು ಬರುವುದೆಂದು ಭಾವಿಸಿ ಆಕೆಯನ್ನು ಹೊರಗೆ ಕಳುಹಲಾಗುವುದೆಂದೂ ಹೇಳಲಾಗಿದೆ. ಆಕೆಯು ವಿಮಾನವನ್ನು ಹತ್ತಿ ಬಂದಾಗ, ತನ್ನ ಹೆಸರನ್ನು ಷಾಂಗ್ ಎಂದು ಬದಲಾಯಿಸಿಕೊಂಡಿದ್ದಳೆಂದು ಹೇಳಲಾಗಿದೆ.

ದೋಣಿ ಅಪಘಾತದಿಂದ ೬ ಜನರ ಮರಣ

ಕಲ್ಕತ್ತಾ ಬಳಿ ಹೂಗ್ಲಿ ನದಿಯಲ್ಲಿ ಒಂದು ದೋಣಿಯು ನೆನ್ನೆ ಹಡಗೊಂದಕ್ಕೆ ಡಿಕ್ಕಿ ಹೊಡೆದುದರಿಂದ ೩ ಜನ ಅಂಬಿಗರು ಮತ್ತು ಮೂವರು ವಿದ್ಯಾರ್ಥಿಗಳು ನೀರಿನ ಪಾಲಾದರು ಇನ್ನೊಬ್ಬ ದೋಣಿ ನಡೆಸುವವನು ಮತ್ತು ಇತರ ಮೂವರು ವಿದ್ಯಾರ್ಥಿಗಳು ಈಜಿಕೊಂಡು ದಡ ಸೇರಿದರು

ಫಿಲಿಪ್ಪೈನ್ ನಗರದಲ್ಲಿ ಬೆಂಕಿಯಿಂದ ೧೭ ಜನರ ಹತ

ಫಿಲಿಪ್ಪೈನ್ ದ್ವೀಪದ ಸೆಬು ನಗರದಲ್ಲಿ ಒಂದುಕಡೆ ಭಾರಿ ಬೆಂಕಿ ಅನಾಹುತವಾಗಿ ೧೭ ಜನರು ಮೃತಪಟ್ಟಿರುತ್ತಾರೆ ಬೆಂಕಿ ಹತ್ತಿಸಲು ಕಾರಣರಾರೆಂಬ ಸಂಶಯದ ಮೇಲೆ ೧೨ ಜನ ಫಿಲಿಪ್ಪೈನ್ ಮತ್ತು ಚೀಣೀಯರನ್ನು ಬಂಧಿಸಲಾಗಿದೆ

ಇಂದು ಸಂಜೆಯಿಂದ ಕೊರಿಯಾ ಯುದ್ಧ ಆಖೈರು

ಕೊರಿಯಾ ಯುದ್ಧವು ಇಂದು ಸಂಜೆ ೭॥ ಗಂಟೆಯಿಂದ ಮುಕ್ತಾಯವಾಗುವುದು ವಿಶ್ವಸಂಸ್ಥೆ ಪ್ರತಿನಿಧಿಗಳೂ ಕೊರಿಯಾ ಕಮ್ಯೂನಿಸ್ಟರೂ ಈ ಬೆಳಗ್ಗೆ ೭॥ ಗಂಟೆಗೆ ಒಪ್ಪಂದ ಮಾಡಿಕೊಂಡ ಬಗ್ಗೆ ಕಾಗದಕ್ಕೆ ರುಜು ಹಾಕಿದರೆಂದು ಹೇಳಲಾಗಿದೆ. ವಿಶ್ವಸಂಸ್ಥೆ ಪರವಾಗಿ ಮಾರ್ಕ್‌-ಕ್ಲಾರ್ಕರು ರುಜು ಹಾಕುವಂತೆ ಗೊತ್ತಾಗಿದ್ದಿತು

ವಿಶ್ವ ಸಂಸ್ಥೆ ಪರವಾಗಿ ಜನರಲ್ ಹ್ಯಾರಿಸನ್‌ರವರೂ, ಕಮ್ಯೂನಿಸ್ಟರ ಪರವಾಗಿ ಜನರಲ್ ನಾಮ್ ಇಲ್‌ರವರೂ ರುಜು ಹಾಕಿದರು ರುಜುವಾದ ೩ ದಿನಗಳಿಗೆ ಸರಿಯಾಗಿ ಎರಡು ಸೈನ್ಯಗಳೂ ಶಾಂತಿ ರೇಖೆಯಿಂದ ೧॥ ಮೈಲಿಯಷ್ಟು ದೂರ ಹಿಂದಕ್ಕೆ ಸರಿಯಬೇಕೆಂದು ಗೊತ್ತುಮಾಡಲ್ಪಟ್ಟಿದೆ. ಕೊರಿಯಾ ಯುದ್ಧವು ಮೂರು ವರ್ಷಗಳ ಹಿಂದೆ ಪ್ರಾರಂಭವಾಗಿ, ಶಾಂತಿಸಂಧಾನಗಳು ಎರಡು ವರ್ಷಗಳಿಂದ ನಡೆಯುತ್ತಿದ್ದುವು.

ಕಾಂಬೋಡಿಯಾಕ್ಕೆ ಪೂರ್ಣ ಸ್ವಾತಂತ್ರ್ಯ

ಫ್ರೆಂಚ್ ಸರ್ಕಾರದವರು ಇಂಡೋ ಚೀಣದಲ್ಲಿರುವ ಕಾಂಬೋಡಿಯಾ ದೇಶಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಲಿರುವರೆಂದೂ, ಈ ಬಗ್ಗೆ ಅವರು ಯೋಜನೆಯೊಂದನ್ನು ಕಾಂಬೋಡಿಯಾ ದೊರೆ ನರೋತ್ತಮ ಸಿನೌಕರಿಗೆ ಕಳುಹಿಸಿರುವರೆಂದೂ ವರದಿಯಾಗಿದೆ ಇಂಡೋ ಚೀಣದ ಯೂನಿಯನ್ನಿನಲ್ಲಿರುವಂತೆ ಸಾಧಕವಾಗುವ ಸ್ವಾತಂತ್ರ್ಯ ನೀಡಲಾಗುವುದೆಂದು ಹೇಳಲಾಗಿದೆ

ಕೋರ್ಟಿನಲ್ಲಿ ಇನ್ಸ್‌ಪೆಕ್ಟರ ಕೆನ್ನೆಗೆ ಏಟು

ಪೂನಾ ನ್ಯಾಯಾಸ್ಥಾನವೊಂದರಲ್ಲಿ ಕಳೆದ ಶುಕ್ರವಾರ ತುಕಾರಾಂ ಮಾರುತಿ ದಳ್ವಿ ಎಂಬ ಅಪರಾಧಿಯು ಸಬ್ ಇನ್ಸ್‌ಪೆಕ್ಟರರೊಬ್ಬರನ್ನು ಪಾಟೀಸವಾಲು ಮಾಡುತ್ತಾ ಇದ್ದಾಗ, ಅಧಿಕಾರಿಯ ಉತ್ತರಗಳನ್ನು ಕೇಳಿ ರೋಷಗೊಂಡು ಅವರ ಕೆನ್ನೆಗೆ ಹೊಡೆದನೆಂದು ಹೇಳಲಾಗಿದೆ. ಇದಕ್ಕಾಗಿ ನ್ಯಾಯಾಧೀಶರು ಅವನಿಗೆ ೨೦೦ ರೂ ದಂಡ, ತಪ್ಪಿದರೆ ೧ ತಿಂಗಳು ಸಜಾ ವಿಧಿಸಿದರು

ನೇಣುಹಾಕಿಕೊಂಡು ಜೈಲಿನಲ್ಲಿ ಆತ್ಮಹತ್ಯೆ

ಮೈಸೂರು ೨೭

ವಿಚಾರಣೆಗೆ ಗುರಿಯಾಗಿದ್ದ ಖೈದಿ ಲಿಂಗಪ್ಪ ಎಂಬುವನು ಇಲ್ಲಿನ ಸಬ್ ಜೈಲಿನಲ್ಲಿ ಮೊನ್ನೆ ನೇಣು ಹಾಕಿಕೊಂಡು ಮೃತಪಟ್ಟನೆಂದು ವರದಿಯಾಗಿದೆ. ನೆನ್ನೆ ನಗರದ ನ್ಯಾಯಾಧೀಶರು ಜೈಲಿಗೆ ಹೋಗಿ ಮಹಜರು ಕ್ರಮ ನಡೆಸಿದರು ಲಲಿತಾದ್ರಿಪುರದ ಖೂನಿ ಮೊಕದ್ದಮೆಯೊಂದರಲ್ಲಿ ಅವನು ಬಂಧಿಸಲ್ಪಟ್ಟಿದ್ದನು

ಮೂರು ರೈಲುಗಳಿಗೆ ಡಿಕ್ಕಿಯಿಂದ ೮ ಮರಣ

ಸ್ಪೇನಿನ ಬಾರ್ಸಿಲೋನಾ ನಗರದ ಬಳಿ ಇಳಿಜಾರಿನಲ್ಲಿ ಹೋಗುವ ಮೂರು ರೈಲುಗಳಿಗೆ ಮೊನ್ನೆ ಡಿಕ್ಕಿಯಾಗಿ ೮ ಮಂದಿ ಮಡಿದರೆಂದೂ,೧೦೦ ಜನರಿಗೂ ಹೆಚ್ಚಾಗಿ ಗಾಯಗೊಂಡರೆಂದೂ ವರದಿಯಾಗಿದೆ. ೨೨ ಮಂದಿಗೆ ತೀವ್ರವಾದ ಪೆಟ್ಟು ಬಿದ್ದಿದೆ ಮಾನಿಸ್ಟ್ರೊಲ್ ಎಂಬಲ್ಲಿಂದ ಮಾನ್ಸಿಸ್ಸೆರೇಟ್ ಎಂಬ ಬೆಟ್ಟದ ಊರಿಗೆ ಹೋಗುತ್ತಿದ್ದ ರೈಲೊಂದರ ಬ್ರೇಕು ಸರಿಯಾಗಿ ಕೆಲಸ ಮಾಡದೆ, ಅದು ಕೆಳಗಡೆ ಹರಿದು,ಮತ್ತೊಂದು ಹತ್ತುತ್ತಿರುವ ರೈಲಿಗೆ ಡಿಕ್ಕಿಯಾಗಲು, ಅದು ಇನ್ನೊಂದನ್ನು ಅಪ್ಪಳಿಸಿತೆಂದು ಹೇಳಲಾಗಿದೆ.

ಬಿಹಾರಿನ ೨೦೦ ಹಳ್ಳಿಗಳಿಗೆ ಪ್ರವಾಹದ ನೀರು

ಬಿಹಾರಿನ ದಾರ್ಭಾಂಗ ಜಿಲ್ಲೆಯಲ್ಲಿ ಹರಿಯುವ ಕಮಲಾಬಾಲನ್ ಮತ್ತು ಬೇಲಾಚ್ ನದಿಗಳಲ್ಲಿ ಅತಿಯಾದ ಪ್ರವಾಹವು ಬಂದು, ೨೦೦ ಹಳ್ಳಿಗಳಿಗೆ ನೀರು ನುಗ್ಗಿರುತ್ತದೆ ಮನೆಗಳಲ್ಲಿ ಮಂಡಿಯುಂದ ಸೊಂಟದುದ್ದ ನೀರು ನಿಂತಿರುವುದೆಂದೂ, ೧॥ ಲಕ್ಷ ಜನರಿಗೆ ಪ್ರವಾಹದಿಂದ ತೊಂದರೆಯಾಗಿರುವುದೆಂದೂ ವರದಿಯಾಗಿದೆ ದೋಣಿಗಳು ಮಾತ್ರ ಸಂಚಾರ ವಾಹನಗಳಾಗಿವೆ ೭೨,೩೭೫ ಎಕರೆ ಪ್ರದೇಶದಲ್ಲಿ ಭತ್ತ, ಮೆಣಸಿನಕಾಯಿ, ಕಬ್ಬು ಮತ್ತು ಹೊಗೆಸೊಪ್ಪಿನ ಬೆಳೆಗಳು ನೀರಿನಿಂದ ಮುಳುಗಿಹೋಗಿವೆ. ಫಾರ್ಮೋಸಾ ದ್ವೀಪದ ಬಳಿ ಇಂಚ್ ಕಿಲ್ನಾ ಎಂಬ ಬ್ರಿಟಿಷ್ ನೌಕೆಯಮೇಲೆ ಮೂರು ಗನ್ ಬೋಟುಗಳು ಧಾಳಿ ನಡೆಸಿದುದಾಗಿ ವರದಿಯಾಗಿದೆ

ಸಂಸ್ಥಾನದ ಹೋಟೇಲುಗಳ ಸಂಖ್ಯೆಯ ಮಿತಿ

ಸರಾಯಿ ಹಾವಳಿ: ಸರ್ಕಾರದ ಆಲೋಚನೆಯೆಂದು ಹೇಳಿಕೆ

ಸ್ವಂ.ಸು.ಪ್ರ॥] ಬೆಂಗಳೂರು ೨೭

ಈ ದಿನ ತಿಳಿಯ ಶಾಸನ ಸಭೆಯಲ್ಲಿ ಶ್ರೀ ಹನುಮಯ್ಯನವರು ಹಾಕಿದ ಪ್ರಶ್ನೆಗೆ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಉತ್ತರವಿತ್ತು ಸಂಸ್ಥಾನದಲ್ಲಿ ಹೋಟೇಲುಗಳ ಸಂಖ್ಯೆಯನ್ನು ಮಿತಿಗೊಳಿಸುವ,ವ.ತ್ತು ಅವನ್ನು ಸರಾಯಿ ಹಾಕುವ ವಿಷಯಗಳನ್ನು ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು

ಮತ್ತೊಂದು ಪ್ರಶ್ನೆಗೆ ಸಚಿವರು ಉತ್ತರವಿತ್ತು, ಸಂಸ್ಥಾನದಲ್ಲಿ ನಡೆದ ವನಮಹೋತ್ಸವಗಳ ಅಂಗವಾಗಿ ನೆಡಲಾದ ಗಿಡಗಳಲ್ಲಿ ಶೇ॥ ಎಷ್ಟು ಬೆಳೆದಿಲ್ಲವೆಂದೂ, ಮಳೆಯಾಗದೆ ಇರುವುದೇ ಅದಕ್ಕೆ ಕಾರಣವೆಂದೂ ತಿಳಿಸಿದರು ಪ್ರತಿವರ್ಷವೂ ವನಮಹೋತ್ಸವವನ್ನು ನಡೆಸಬೇಕೆಂಬ ನಿಯಮವೇನೂ ಇರುವುದಿಲ್ಲವಾಗಿಯೂ ಅವರು ಸ್ಪಷ್ಟಪಡಿಸಿದರು.

ಶ್ರೀ ಯು. ಎಂ ಮಾದಪ್ಪನವರು ಹಾಕಿದ ಪ್ರಶ್ನೆಗೆ ವಿದ್ಯಾ ಮಂತ್ರಿಗಳು ಉತ್ತರ ಕೊಟ್ಟು, ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಿಗೆ ಪ್ರವೇಶದ ಬಗ್ಗೆ ನೇಮಕವಾಗಿರುವ ಸಮಿತಿಗಳ ಅವಧಿಯು ೨ ವರ್ಷಗಳೆಂದೂ, ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ಸರ್ಕಾರದ ಸಲಹೆ ಪಡೆದು ಅದನ್ನು ನೇಮಿಸುವರೆಂದೂ ತಿಳಿಸಿದರು

ಶ್ರೀ ಪಿ ಆರ್ ರಾಮಯ್ಯನವರು ಕಾಲೇಜುಗಳ ಜೂನಿಯರ್ ವಿದ್ಯಾರ್ಥಿಗಳು ಹೆಚ್ಚಾಗಿ ಫೇಲ್ ಆಗುತ್ತಿರುವ ವಿಷಯವಾಗಿ ಪ್ರಶ್ನೆಮಾಡಲು, ವಿದ್ಯಾ ಮಂತ್ರಿಗಳು ಉತ್ತರವಿತ್ತು, ಹೀಗೆ ಫೇಲಾದ ವಿದ್ಯಾರ್ಥಿಗಳ ನಿಯೋಗವೊಂದು ತಮ್ಮಲ್ಲಿಗೆ ಬಂದಿದ್ದುದಾಗಿಯೂ, ಅವರಿಗೆ ಯಾವ ಭರವಸೆಯನ್ನೂ ಕಾಡ ಕೊಡಲಿಲ್ಲವೆಂದೂ, ಆದರೆ ಅವರ ವಿಷಯವನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವರೆಂದೂ ಹೇಳಿದರು.

ಭಿಕ್ಷುಕಳಿಂದ ಮಗನ ಕೊಲೆ

ಎರ್ನಾಕುಲದ ಬಳಿ ಮತ್ತಂಚೇರಿಯಲ್ಲಿ ಅಬೂಬೇಕರ್ ಎಂಬ ಭಿಕ್ಷುಕಳು ದಾರಿದ್ರ್ಯವನ್ನು ತಾಳಲಾರದೆ ತನ್ನ ೩ ವರ್ಷದ ಮಗನನ್ನು ಮೊನ್ನೆ ಇಂದು ಕೊಂದಳೆಂದು ವರದಿಯಾಗಿದೆ.

ವಿಶ್ವದ ಆಹಾರ ಸಂಸ್ಥೆ ಆರಂಭೋತ್ಸವ

ಶ್ರೀಮನ್ಮಹಾರಾಜರು ಇಂದು ಬೆಂಗಳೂರಿನಲ್ಲಿ ವಿಶ್ವದ ಆಹಾರ ಮತ್ತು ವ್ಯವಸಾಯ ಸಂಘದ ಆರಂಭೋತ್ಸವವನ್ನು ನೆರವೇರಿಸಿದರು ಕೇಂದ್ರ ವ್ಯವಸಾಯ ಮಂತ್ರಿ ಪಿ. ಆರ್. ದೇಶಮುಖ್‌ರವರು ಸ್ವಾಗತ ಭಾಷಣ ಮಾಡಿದರು

ಭದ್ರಾವತಿಗೆ ಕೇಂದ್ರ ಮಂತ್ರಿಯ ಭೇಟಿ

ಕೇಂದ್ರ ಕೈಗಾರಿಕೆ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ನೆನ್ನೆ ಬೆಂಗಳೂರಿಗೆ ಆಗಮಿಸಿದರು. ಅವರು ಭದ್ರಾವತಿಗೆ ತೆರಳಿ, ಅಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಕೆಲಸವನ್ನು ಖುದ್ದಾಗಿ ಪರಿಶೀಲಿಸುವರು.

ಸಂಸ್ಥಾನದ ಎಲ್ಲೆಕಟ್ಟುಗಳ ವಿಚಾರ

ಜನಮತಗಣನೆಗಾಗಿ ಶಾಸನ ಸಭೆಯಲ್ಲಿ ಒತ್ತಾಯ

ಬೆಂಗಳೂರು ೨೬

ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತದ ಮಸೂದೆಯು ಚರ್ಚೆಗೆ ಬಂದಾಗ ಶ್ರೀ ಬಿ ವಿ ನಾರಾಯಣ ರೆಡ್ಡಿಯವರು ಮಾತನಾಡಿ ಮೈಸೂರು ಸಂಸ್ಥಾನಕ್ಕೆ ಹಲವು ಪ್ರದೇಶಗಳನ್ನು ಸೇರಿಸಿಕೊಳ್ಳುವಾಗಲೂ, ಸಂಸ್ಥಾನದ ಭಾಗಗಳನ್ನು ಬಿಟ್ಟುಕೊಡುವ ಬಗ್ಗೆಯೂ ಅನುಸರಿಸುತ್ತಿರುವ ನೀತಿಯಿಂದ ದೇಶದಲ್ಲಿ ಅಹಿತವೂ, ಪ್ರಜಾ ಸ್ವಾತಂತ್ರ್ಯ ರಹಿತವೂ ಆದ ವಾತಾವರಣವುಂಟಾಗಲು ಕಾರಣವಾಗಿದೆಯೆಂದೂ ಮೈಸೂರು ಸಾಂಸ್ಕೃತಿಕ ಅಥವಾ ಭಾಷಾ ಐಕ್ಯತೆಯುಳ್ಳದ್ದಾಗಿಲ್ಲವೆಂದೂ, ಮೈಸೂರು ಸರ್ಕಾರದ ಬಗ್ಗೆ ನಿಷ್ಠೆಯೆಂಬುದು ಅವ್ಯಕ್ತವಾದ ಕಟ್ಟುಕಥೆಯಾಗಿದ್ದು ಇದು ಜಹಗೀರ್ದಾರಿಯಲ್ಲಿ ಆಸಕ್ತಿಯುಳ್ಳವರ ಕೂಗೆಂದೂ ತಿಳಿಸಿದರು

ಸಂಸ್ಥಾನದ ತೆಲುಗು ಪ್ರದೇಶದ ಜನರು ವಿಶಾಲ ಆಂಧ್ರವನ್ನು ಸೇರಲು ಕನ್ನಡದವರ ವಿರೋಧವಿರುವುದು ಸರಿಯಲ್ಲವೆಂದು ತಿಳಿಸಿ ಭಾಷಾವಾರು ಪ್ರಾಂತಗಳ ಗಡಿಗಳ ಬಗ್ಗೆ ಜನರ ಜನಗಣನೆ ಮೂಲಕ ನಿರ್ಧಾರವಾಗಬೇಕೆಂದು ಹೇಳಿದರು

ಶ್ರೀ ಎಲ್ ಸಿದ್ದಪ್ಪನವರು ಮಾತನಾಡಿ ಬಳ್ಳಾರಿಯ ತಾಲ್ಲೂಕುಗಳು ಸೇರಿದ ಮೇಲೆ ಒಟ್ಟು ಸಂಸ್ಥಾನದ ಆಸ್ತಿ ಮತ್ತು ಜವಾಬ್ದಾರಿಗಳ ಪಟ್ಟಿಮಾಡಲು ಒಂದು ಸಮಿತಿಯಾಗಬೇಕೆಂದರು.

ಶ್ರೀ ಮೂಲ್ಕಾ ಗೋವಿಂದ ರೆಡ್ಡಿಯವರು ಮದರಾಸು, ಮೈಸೂರು ಮತ್ತು ಆಂಧ್ರ ಸಂಸ್ಥಾನಗಳಲ್ಲಿ ಒಂದೇ ಶಾಸನ ಸಭೆ ಇರುವಂತೆ ವಿಚಾರಿಸಬೇಕಾಗಿತ್ತೆಂದು ಹೇಳಿದರು

ಇಂಗ್ಲೀಷ್-ಕನ್ನಡ ಪ್ರಬಂಧ ಸ್ಪರ್ಧೆ

ರಾಮನಗರಂ ತಾಲ್ಲೂಕಿನ ಬೈರಮಂಗಲದ ಕಲ್ಚರಲ್ ಫೋರಮ್ಮಿನ ಆಶ್ರಯದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಬಂಧ ಸ್ಪರ್ಧೆಗಳು ನಡೆಯುವುವು ಅದರಲ್ಲಿ ಭಾಗವಹಿಸಲು ಆಗಸ್ಟ್ ೧೫ನೇ ತಾ|| ಕಡೆಯ ದಿನ ಪ್ರವೇಶಧನ ಪ್ರತಿಯೊಂದು ಪ್ರಬಂಧಕ್ಕೂ ೮ ಆಣೆ ವಿವರಗಳನ್ನು ಸಂಚಾಲಕರಿಂದ ತಿಳಿದುಕೊಳ್ಳಬಹುದು

ಮತ್ತೊಬ್ಬರಿಗಾಗಿ ಸಮಾಧಿ ತೆಗೆಯುತ್ತಿದ್ದವನ ಮರಣ

ಮಹಮದಾಬಾದಿನಲ್ಲಿ ಮೃತಪಟ್ಟ ಮುಸ್ಲಿಂ ಸ್ತ್ರೀಯೊಬ್ಬಳಿಗಾಗಿ ಸಮಾಧಿಯನ್ನು ತೋಡುತ್ತಿದ್ದವನೊಬ್ಬನು ಹಾಗೆಯೇ ಪ್ರಜ್ಞೆ ತಪ್ಪಿ ತಾನು ತೋಡುತ್ತಿದ್ದ ಗುಂಡಿಯೊಳಗೆ ಬಿದ್ದು ಮೃತಪಟ್ಟ ಸಂಗತಿ ವರದಿಯಾಗಿದೆ

ಮದ್ರಾಸು ಸರ್ಕಾರಿ ಕಛೇರಿಯಲ್ಲಿ ೧೦೫ ಸ್ತ್ರೀಯರು

ಮದ್ರಾಸ್ ಸೆಕ್ರೆಟೇರಿಯಟ್ಟಿನಲ್ಲಿ ೬೬ ಹಿಂದೂ ಮತ್ತು ೩೮ ಕ್ರಿಶ್ಚಿಯನ್ ಸ್ತ್ರೀಯರು ಇರುವರಾಗಿ ರಾಜಾಜಿ ಯವರು ತಿಳಿಸಿರುತ್ತಾರೆ

ಮಾಂತ್ರಿಕನಿಂದ ಬಾಲಕನ ಘೋರ ಕೊಲೆ

ಕಣ್ಣು, ಕಿವಿಗಳಿಂದ ವಶೀಕರಣ ಭಸ್ಮ

ತಿರುವಾಂಕೂರಿನ ತಿರುವಲ್ಲಾದ ಪೋಲೀಸರು ಶ್ರೀಧರ್ ಎಂಬ ಮಾಂತ್ರಿಕನೊಬ್ಬನನ್ನು ೧೦ ವರ್ಷದ ಸಹದೇವನ್ ಎಂಬ ಬಾಲಕನ ಘೋರ ಕೊಲೆಗಾಗಿ ದಸ್ತಗಿರಿ ಮಾಡಿದ್ದಾರೆ ಬಾಲಕನ ಕಣ್ಣು ಕಿವಿ ಹೃದಯ ಪಿತ್ತಕೋಶ ಮತ್ತು ಮೂತ್ರ ವಿಸರ್ಜನಾಂಗಗಳನ್ನು ಅವನು ಕತ್ತರಿಸಿ ಉಳಿದ ದೇಹವನ್ನು ಒಂದು ಭಾವಿಗೆ ಹಾಕಿ ಅದು ಮೇಲೆದ್ದು ಬರದಂತೆ ಭಾರಿ ಕಲ್ಲುಗಳನ್ನು ಅವನು ಕಟ್ಟಿದ್ದನೆಂದೂ, ಕತ್ತರಿಸಿದ ಅಂಗಾಂಗಗಳನ್ನು ಸುಟ್ಟು ವಶೀಕರಣ ಭಸ್ಮವನ್ನು ತಯಾರಿಸಿದ್ದನೆಂದೂ ಅದನ್ನೂ ಪೋಲಿಸರು ವಶಪಡಿಸಿಕೊಂಡಿರುವರೆಂದೂ ಹೇಳಲಾಗಿದೆ ಬಾಲಕನ ಕೊಲೆಗಾಗಿ ಉಪಯೋಗವಾದ ಕೊಡಲಿ ಮಂತ್ರತಂತ್ರಗಳ ಸಾಧನಗಳೂ ಪೋಲೀಸರಿಗೆ ಸಿಕ್ಕಿವೆ

ನ್ಯಾಯಾಧೀಶರ ಮುಂದೆ ಆಪಾದಿತನು ಒಂದು ಹೇಳಿಕೆ ಕೊಟ್ಟು ಭಸ್ಮದ ಮಹತ್ವವನ್ನು ವಿವರಿಸಿದನು ಅದನ್ನು ಉಪಯೋಗಿಸಿದರೆ ಎಂತಹ ಕಠಿಣ ಹೃದಯವುಳ್ಳ ಪುರುಷ ಅಥವಾ ಸ್ತ್ರೀಯಾದರೂ ವಶವಾಗುವರೆಂದು ಆತನು ತಿಳಿಸಿರುತ್ತಾನೆ ಅಂತಹ ಭಸ್ಮವನ್ನು ಮಾಡಲು ಹುಡುಗನಲ್ಲಿ ಹಲವು ಗುಣಗಳಿರಬೇಕೆಂದೂ ಅವನು ೧೦ ವರ್ಷಕ್ಕೆ ಹೆಚ್ಚು ಅಥವಾ ಕಡಿಮೆ ಇಲ್ಲದವನಾಗಿದ್ದು ಜೀವಂತ ಮಾತಾಪಿತೃಗಳ ಜ್ಯೇಷ್ಠ ಕುಮಾರನಾಗಿರಬೇಕೆಂದೂ ಅವನ ಹುಟ್ಟಿದ ದಿನ ಅವನನ್ನು ಒಂದು ಗೊತ್ತಾದ ದಿನ ಅಂದರೆ, ಚಂದ್ರನು ಬಲವಿರುವ ವೃದ್ಧರಾತ್ರಿಯಲ್ಲಿ ಕೊಲ್ಲಬೇಕೆಂದೂ ಈ ಕೃತ್ಯವನ್ನು ಒಂದು ಕೋಣೆಯಲ್ಲಿ ಕತ್ತಲು ಮತ್ತು ನಿಶ್ಶಬ್ದತೆ ಇರುವಾಗ ಬೆತ್ತಲೆಯಾಗಿ ನಡೆಸಬೇಕೆಂದೂ ಬಾಲಕನು ಸಾವಿನ ಸಂಕಟದಿಂದ ಕೂಗಕೂಡದೆಂದೂ ಆಪಾದಿತನು ವಿವರಿಸಿದನು

ಒಂದು ದಿನ ಬಾಲಕನನ್ನು ಕರೆದುಕೊಂಡು, ಬಂದು, ಮಂತ್ರ ಮುಗ್ಧನನ್ನಾಗಿ ಮಾಡಿ, ಆ ಊರಿನ ನಿರ್ಜನ ಪ್ರದೇಶವೊಂದರಲ್ಲಿದ್ದ ಶಾಲೆಯಲ್ಲಿ ಕೂಡಿಟ್ಟು ನಿದ್ರೆ ಬರುವ ಗುಳಿಗೆಯನ್ನು ಕೊಟ್ಟು ತನ್ನ ಕಾರ್ಯವನ್ನು ನೆರವೇರಿಸಿದುದಾಗಿ ಅವನು ಹೇಳಿದನು ನಂತರ ರಕ್ತವನ್ನು ಕರಟದಲ್ಲಿ ಹಿಡಿದು ಮಂತ್ರವನ್ನುಚ್ಚರಿಸುತ್ತ ತಾನು ಅದನ್ನು ಕುಡಿದುದಾಗಿಯೂ ಬೇಕಾದ ಅಂಗಾಂಗಗಳನ್ನು ಕತ್ತರಿಸಿ ಬೆಂಕಿಯನ್ನು ಹತ್ತಿಸಿ ಬೆಳಗಾಗುವುದರೊಳಗೆ ಭಸ್ಮವನ್ನು ತಯಾರಿಸಿದುದಾಗಿಯೂ ಅವನು ತಿಳಿಸಿದನು

ಉಳಿದ ಶರೀರದ ಭಾಗವು ಭಾವಿಯೊಳಗೆ ಇಳಿದ ಹಲವು ಕಾರ್ಮಿಕರಿಂದ ಪತ್ತೆಯಾಗಿ ಪೋಲೀಸರು ತನಿಖೆ ನಡೆಸಿದರೆಂದು ಹೇಳಲಾಗಿದೆ ಈ ಮಂತ್ರ ವಿದ್ಯೆಯನ್ನು ಹೇಳಿಕೊಟ್ಟ ರಾಮಕೃಷ್ಣಪಿಳ್ಳೆ ಎಂಬ ಮತ್ತೊಬ್ಬ ಮಾಂತ್ರಿಕನ ದಸ್ತಗಿರಿಯೂ ಆಗಿದೆ

|| ಶ್ರೀ ||

ಜಗದಂಬಾ ಶಿಶುವಿಹಾರ

585 ದಿವಾನ್ಸ್ ರಸ್ತೆ ಮೈಸೂರು

ಮೇಲ್ಕಂಡ ಶಿಶುವಿಹಾರದ ಕಟ್ಟಡದಲ್ಲಿ ಈ ವರ್ಷ ಎಂ ಎಸ್ ಸಿ ಪರೀಕ್ಷೆಗೆ ಕೂಡತಕ್ಕ ಬಾಲಕಬಾಲಕಿಯರಿಗೆ ಸಾಯಂಕಾಲ 6 ರಿಂದ 8 ರ ವರೆಗೆ, ಅನುಭವಶಾಲಿಗಳಾದ ಉಪಾಧ್ಯಾಯರುಗಳಿಂದ ಶಿಕ್ಷಣ ಕೊಡಲ್ಪಡುತ್ತದೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ ಪ್ರವೇಶಧನ ೧ ರೂ ಮತ್ತು ಮಾಹೆಯಾನ ಶಿಕ್ಷಣ ಶುಲ್ಕ 3 ರೂ ಮುಂಗಡವಾಗಿ ಕೊಡಬೇಕು

ಬಿ ಕೃಷ್ಣಮೂರ್ತಿ
ವ್ಯವಸ್ಥಾಪಕ

ಭಾರತಸ್ವಾತಂತ್ರ್ಯ ಚರಿತ್ರೆಗೆ ರಾಕ್‌ಫೆಲ್ಲರ್ ನಿಧಿ ಸಹಾಯ

ಭಾರತದಲ್ಲಿ ನಡೆದ ಸ್ವಾತಂತ್ರ್ಯದ ಚಳುವಳಿ ಮತ್ತು ಅನಂತರದ ರಾಜಕೀಯ ಐಕ್ಯತೆ ಇವುಗಳ ಬಗ್ಗೆ ಚರಿತ್ರೆಯನ್ನು ಬರೆಯಲು ದೆಹಲಿಯಲ್ಲಿರುವ ಭಾರತೀಯ ಮಂಡಲಿಗೆ ೪೩,೮೦೦ ಡಾಲರುಗಳನ್ನು ರಾಕ್‌ಫೆಲ್ಲರ್ ನಿಧಿಯಿಂದ ಕೊಡಲಾಗುವುದು ವಿ ಪಿ ಮೆನನ್ನರು ಇತಿಹಾಸ ಬರೆಯಲು ಮಾರ್ಗದರ್ಶಿಗಳಾಗುವರು

ಸಹಗಮನ ಪ್ರಯತ್ನಕ್ಕಾಗಿ ದಸ್ತಗಿರಿ

ಜಬ್ಬಲ್ಪುರದಲ್ಲಿ ಒಬ್ಬ ನೆಯ್ಗೆಯವನು ಮಡಿದು ಅವನನ್ನು ಸ್ಮಶಾನದಲ್ಲಿ ಚಿತೆಯ ಮೇಲೆ ಏರಿಸಿದಾಗ, ಗಂಡನೊಡನೆ ತಾನೂ ಪರಲೋಕಯಾತ್ರೆ ಮಾಡಲು ಚಿತೆಗೆ ಹಾರಲೆತ್ನಿಸಿದ ಅವನ ಪತ್ನಿಯನ್ನು ಪೋಲೀಸರು ದಸ್ತಗಿರಿ ಮಾಡಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸುತ್ತಾರೆ

To

The Editor

SADHVI Mysore

Sir,

I write to express my appreciation through your valuable paper about the integrity of the JYOTHI ELECTRIC LAUNDRY. Their honesty is really impressive & I feel sure that such an exemplary conduct requires a worthy and suitable expression through your press.

Thanking you

B S Narayan,
C/o Sri B K Ramanna
Asst Engineer
Buildings Division Mysore

ಗಣಿ ಅಪಘಾತದಲ್ಲಿ ಮೂವರ ಮರಣ

ಕೊತ್ತಗುಡೆಮ್ಮಿನ ಕಲ್ಲಿದ್ದಲು ಗಣಿಯಲ್ಲಿ ಒಂದು ಕಡೆ ಮೇಲ್ಛಾವಣಿಯು ಕಳಚಿ ಬಿದ್ದುದರ ಪರಿಣಾಮವಾಗಿ ೩ ಜನ ಕಾರ್ಮಿಕರು ಮಡಿದು, ಇನ್ನಿಬ್ಬರಿಗೆ ಗಾಯಗಳಾಗಿವೆ ಗಣಿಯ ಮತ್ತೊಂದು ಭಾಗದಲ್ಲಿ ಕಬ್ಬಿಣದ ಸಲಿಕೆಯೊಂದು ಕಳಚಿ ಒಬ್ಬ ಇನ್ಸ್‌ಪೆಕ್ಟರಿಗೆ ಗಾಯವಾಗಿದೆ ಅವರುಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ಹಣ ಅಪಹರಿಸಿದರೂ ಅನುಭವಿಸುವ ಅದೃಷ್ಟವಿಲ್ಲ

ಅಲ್ಲೆಪ್ಪಿಯ ಒಬ್ಬ ಧನಿಕನ ಅಂಗಡಿಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಗಳಲ್ಲಿ ಒಂದನ್ನು ಸಂಪಾದಿಸಿ ಒಬ್ಬ ಕಳ್ಳನು ಪೆಟ್ಟಿಗೆಯ ಬಾಗಿಲನ್ನು ತೆರೆದು ೧೦ ಸಾವಿರ ರೂ ಗಳ ನೋಟುಗಳನ್ನು ಅಪಹರಿಸಿದನೆಂದೂ ಅದನ್ನು ಉಪಯೋಗಿಸುವುದರೊಳಗೆ ಪೋಲೀಸರು ಅವನನ್ನು ದಸ್ತಗಿರಿ ಮಾಡಿದರೆಂದೂ ವರದಿಯಾಗಿದೆ

ಬಿ ಕಾಂ ತರಗತಿ ತೆರೆಯಲವಕಾಶ

ರಾಜಧಾನಿಯ ಡಿ. ಬನುಮಯ್ಯನವರ ಕಾಮರ್ಸ್ ಕಾಲೇಜಿನಲ್ಲಿ ಈ ವರ್ಷದಿಂದ ಬಿ ಕಾಂ ತರಗತಿಯನ್ನು ತೆರೆಯಲು ಅವಕಾಶ ಕೊಡಲಾಗಿರುವುದೆಂದೂ, ಬರುವ ತಿಂಗಳ ೧೦ ರಿಂದ ತರಗತಿಯನ್ನು ತೆರೆಯಲಾಗುವುದೆಂದೂ ತಿಳಿದುಬಂದಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಅರಿಯಕುಡಿ ರಾಮಾನುಜಯ್ಯಂಗಾರ್ ರಿಕಾರ್ಡ್ ಮಧ್ಯಾಹ್ನ ೧ ೪೦ ಕೇಳಲು ೨ ವಚನಕಾರರ ಕನ್ನಡ ನಾಟಕ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಉಷಾ ಸಂಜೆ ೫ ೪೦ ಮತ್ತು ೬ ೧೫ ಎಸ್ ಸುಬ್ಬರಾಜ ಅರಸ್ ವೀಣೆ ೬ ೧೫ ಬಾಲಜಗತ್ ಮಹಿಳಾ ಸದನದವರಿಂದ ಮುಖ್ಯ ಕಾರ್ಯಕ್ರಮ ೭ ೪೦ ಮತ್ತು ೮ ೪೦ ಎಸ್ ಬಿ ಕೇಶವಮೂರ್ತಿ ಸಂಗೀತ ೯ ನವವಿಧ ಭಕ್ತಿ ೯ ೧೫ ಇಂಗ್ಲಿಷಿನಲ್ಲಿ ರೇಡಿಯೋ ಫೀಚರ್

SRI GANESHA

TALKIES

FROM TO DAY

For 3 days

THE PRINCE WHO WAS A THIEF

With Piper Laurie

Tony Curtis

NEXT CHANGE

THE RAGING TIDE

Edited, Printed and Published by A R Nagarajan at Sadhvi Press, D Subbiah Road, Mysore

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ತಾರಸಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಫೋನ್ ನಂ. 792 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೮-೭-೧೯೫೩ [ಸಂಚಿಕೆ ೨೫೬

ಕರ್ನಾಟಕ ಪ್ರಾಂತಕ್ಕಾಗಿ ಆಗಸ್ಟ್ ೯ಕ್ಕೆ ಸತ್ಯಾಗ್ರಹ

ಕಾರ್ಮಿಕರ ಬಗ್ಗೆ ಪಕ್ಷಪಾತ ಕೂಡದು

ರೇಷ್ಮೆ ಕಾರಖಾನೆ ಕೆಲಸಗಾರರ ಸಭೆಯಲ್ಲಿ ತೀರ್ಮಾನ

ಮೈಸೂರು ೨೮

ಇಲ್ಲಿನ ಸರ್ಕಾರಿ ರೇಷ್ಮೆ ಕಾರಖಾನೆಯ ಕೆಲಸಗಾರರ ಸಂಘದ ಜನರಲ್ ಸದಸ್ಯರ ಸಭೆಯು ಕಳೆದ ಶನಿವಾರ ನಡೆದು ಕೆಲಸಗಾರರ ಬಗ್ಗೆ ಅಧಿಕಾರಿವರ್ಗದವರು ಪಕ್ಷಪಾತ ತೋರುತ್ತಿರುವುದನ್ನು ಕುರಿತು ವಿಷಾದ ವ್ಯಕ್ತಪಡಿಸಲಾಯಿತು. ಕಾರ್ಮಿಕರ ಸಂಘವನ್ನು ಹೀಯಾಳಿಸುವವರಿಗೆ ಪೂರ್ತಿ ಕೆಲಸವಿತ್ತು ಇತರರಿಗೆ ಅರ್ಧ ದಿನದ ಕೆಲಸ ಕೊಡುವುದರಿಂದ ಕಾರ್ಮಿಕರ ವರ್ಗದಲ್ಲಿ ಪರಸ್ಪರ ಅಸಮಾಧಾನವು ಮೂಡಲು ಕಾರಣವಾಗುವುದರಿಂದ ಇಂತಹ ಪದ್ಧತಿಯು ತಪ್ಪುವಂತೆ ಅಧಿಕಾರವರ್ಗದವರಿಗೆ ಸರ್ಕಾರದವರು ಸೂಕ್ತ ತಿಳುವಳಿಕೆ ಕೊಡಬೇಕೆಂದು ಕೋರಲಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್ ರಂಗಯ್ಯನವರು ಕೆಲಸಗಾರರಲ್ಲಿ ಒಡಕು ಹುಟ್ಟಿಸುವುದಕ್ಕಾಗಿ ಕೈಗೊಂಡಿರುವ ಅಪಪ್ರಚಾರವನ್ನು ಸಭೆಯಲ್ಲಿ ಖಂಡಿಸಿ, ಅವರನ್ನು ಸಂಘದ ಉಪಾಧ್ಯಕ್ಷಸ್ಥಾನ ಮತ್ತು ಸದಸ್ಯತನದಿಂದ ವಜಾ ಮಾಡಲಾಯಿತು. ಸಂಘದ ಅಧಿಕಾರವರ್ಗದವರ ಮೇಲೆ ಅವಿಶ್ವಾಸ ನಿರ್ಣಯಗಳನ್ನು ತಂದರೆ ಮೊದಲು ಅದನ್ನು ಸರ್ವಸದಸ್ಯರ ಸಭೆಯೇ ಪರಿಶೀಲಿಸಬೇಕೆಂದೂ ನಿರ್ಧರಿಸಲಾಯಿತು. ಶ್ರೀ ಕೆ ಆರ್ ಪ್ರಸಾದ್‌ರವರ ಅಧ್ಯಕ್ಷತೆ ವಹಿಸಿದ್ದರು.

ಜೋಳದ ತೆನೆ ಕುಯ್ದುದಕ್ಕೆ ಸಜಾ

ಮೈಸೂರು ತಾಲ್ಲೂಕು ಯ... ಗ್ರಾಮದ ಹಳ್ಳಿಯಲ್ಲಿ ಸಿದ್ದ ಎಂಬುವನು ಬೇರೆಯವರ ಹೊಲದಲ್ಲಿ ಬೆಳೆದಿದ್ದ ಜೋಳದ ತೆನೆಗಳನ್ನು ಕುಯ್ಯುತ್ತಿದ್ದನೆಂದು ತಾಲ್ಲೂಕು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪಾದಿತನಿಗೆ ೧ ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

ಕ್ಯೂಬಾ ದ್ವೀಪದಲ್ಲಿ ಕ್ರಾಂತಿ

ಅಟ್ಲಾಂಟಿಕ್ ಸಾಗರದ ಪಶ್ಚಿಮ ಭಾಗದಲ್ಲಿರುವ ಕ್ಯೂಬಾ ದ್ವೀಪದ ಸ್ಯಾಂಟಿಯಾಗೋ ನಗರದಲ್ಲಿ ಸರ್ಕಾರದ ವಿರುದ್ಧವಾಗಿ ದಂಗೆ ನಡೆದಿರುವುದೆಂದು ಅಲ್ಲಿನ ರಾಷ್ಟ್ರಾಧ್ಯಕ್ಷರಾದ ಬಾಟಿಸ್ಟಾರವರು ತಿಳಿಸುತ್ತಾರೆ. ಅಧಿಕಾರದಿಂದ ಪದಚ್ಯುತಿ ಹೊಂದಿದ ಕಾರ್ಲೋಸ್ ಪ್ರಿಯೊ ಸಾಕರಾಸ್‌ರವರ ಹಿಂಬಾಲಕರು ಪುನಃ ಅಧಿಕಾರಕ್ಕೆ ಬರಲು ಹವಣಿಸುವರೆಂದು ಅವರು ಹೇಳುತ್ತಾರೆ. ಕ್ರಾಂತಿಯಲ್ಲಿ ಭಾಗವಹಿಸಿದ್ದ ಅನೇಕರ ಪ್ರಾಣಹಾನಿಯಾಗಿರುವುದಾಗಿ ಹೇಳಲಾಗಿದೆ.

ಮದ್ರಾಸು ಶಾಸನ ಸಭೆಯಲ್ಲಿ ಆಂಧ್ರರ ಸಭಾ ಪರಿತ್ಯಾಗ

ಮದ್ರಾಸು ಶಾಸನ ಸಭೆಯಲ್ಲಿ ಆಂಧ್ರ ಸಂಸ್ಥಾನದ ಭವನಗಳಿಗೆ ಸಂಬಂಧಪಟ್ಟಂತೆ ಪರಿಹಾರವನ್ನು ಕಲ್ಪಿಸುವ ವಿಷಯ ನಿನ್ನೆ ಚರ್ಚೆಯಾಗುತ್ತಿದ್ದಾಗ ಆಂಧ್ರ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರೆಂದು ವರದಿಯಾಗಿದೆ. ಅವರೊಡನೆ ... ಮತ್ತು ಕೇರಳದ ಸದಸ್ಯರೂ ಹೊರಗೆ ಎದ್ದುಹೋದರು.

ಕುಡುಗೋಲಿನಿಂದ ಗಾಯ

ಮೈಸೂರು ೨೮

ರಾಜಧಾನಿಯ ಈರಪಗೆರೆ ನಿವಾಸಿಗಳಾದ ಮಾದಯ್ಯ ಮತ್ತು ಮಂಚ ನಾಯಕ ಎಂಬುವರಿಗೆ ಸೇರಿದ್ದ ಒಂದು ಹೊಲದ ಬಗ್ಗೆ ಮೊನ್ನೆ ವ್ಯಾಜ್ಯವಾಗಿ ಮಾದಯ್ಯನು ಮಂಚನಾಯಕನನ್ನು ಕುಡುಗೋಲಿನಿಂದ ಹೊಡೆದು ಗಾಯಪಡಿಸಿದನೆಂದೂ ಗಾಯಗೊಂಡವನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ.

ದಲಿತ ವಿದ್ಯಾರ್ಥಿ ನಿಲಯ

ರಾಜಧಾನಿಯ ... ದಲಿತ ವಿದ್ಯಾರ್ಥಿ ನಿಲಯವನ್ನು ತೆರೆಯುವ ಸಂಬಂಧವಾಗಿ ಕಳೆದ ೨೮ ನೇ ತಾ|| ಸಭೆಯೊಂದು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್ ರಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ನಿಲಯದ ಅಧಿಕಾರವರ್ಗ ಮತ್ತು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಶ್ರೀ ಎನ್ ರಾಚಯ್ಯನವರನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಶ್ರೀ ಎಂ ಎನ್ ಲಿಂಗಯ್ಯ ಮತ್ತು ಎನ್ ಎಂ ಮಹದೇವನ್‌ರವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು. ಬಡ ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಒದಗಿಸಲೇಬೇಕಾಗಿದೆ.

ನೂರು ರೂ. ನೋಟಿನ ನಂಬರಿನ ಬಣ್ಣದಲ್ಲಿ ಬದಲಾವಣೆ

ಇದೇ ಆಗಸ್ಟಿನಿಂದ ನೂರು ರೂಪಾಯಿ ನೋಟುಗಳ ಸಂಖ್ಯೆಯನ್ನು ಕೆಂಪು ಬಣ್ಣದಲ್ಲಿ ಮುದ್ರಿಸಲಾಗುವುದೆಂದು ರಿಸರ್ವ್ ಬ್ಯಾಂಕಿನವರು ತಿಳಿಸಿರುತ್ತಾರೆ. ಇದುವರೆಗೆ ಕಪ್ಪು ಬಣ್ಣದಲ್ಲಿ ಸಂಖ್ಯೆಯನ್ನು ಮುದ್ರಿಸಲಾಗುತ್ತಿದ್ದಿತು. ಇದು ಬ್ಯಾಂಕಿನವರು ಏರ್ಪಡಿಸಿರುವ ಸಾಮಾನ್ಯ ಬದಲಾವಣೆಯೆಂದು ಹೇಳಲಾಗಿದೆ.

ಕಿಡಿ ಪತ್ರಿಕೆ ಮೇಲಿನ ಮೊಕದ್ದಮೆ

ಬೆಂಗಳೂರು ಕಿಡಿ ಪತ್ರಿಕೆಯ ಮೇಲೆ ಪತ್ರಿಕಾ ಶಾಸನದ ಪ್ರಕಾರ ಹೂಡಿರುವ ಮೊಕದ್ದಮೆಗಳಲ್ಲಿ ವಾದವಿವಾದಗಳು ನಡೆದು ಆಗಸ್ಟ್ ೫ ನೇ ತಾ|| ತೀರ್ಮಾನಕ್ಕಾಗಿ ಮುಂದುವರಿದಿದೆ. ಪತ್ರಿಕೆ ಬಗ್ಗೆ ಸೆಂಟ್ರಲ್ ... ಪರಿಶೀಲನೆಯನ್ನು ೧೦ ನೇ ತಾ|| ಗೆ ಹಾಕಲಾಗಿದೆ.

ಕರ್ನಾಟಕ ರಾಜ್ಯಕ್ಕಾಗಿ ೯ನೇ ತಾ|| ನಿಂದ ಸತ್ಯಾಗ್ರಹ

ಕರ್ನಾಟಕ ಪ್ರಾಂತ ನಿರ್ಮಾಣವಾಗಬೇಕೆಂದು ಒತ್ತಾಯಪಡಿಸಲು ಬರುವ ತಿಂಗಳು ೯ ನೇ ತಾ|| ಅಹಿಂಸಾಯುತ ಸತ್ಯಾಗ್ರಹವನ್ನು ನಡೆಸಲು ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯು ನಿರ್ಧರಿಸಿರುತ್ತದೆ.

ಕೊರಿಯಾದಲ್ಲಿ ಯುದ್ಧದ ಪರಿಸಮಾಪ್ತಿ

ನಿನ್ನೆ ಸಂಜೆ ೬|| (ಇಲ್ಲಿನ) ಗಂಟೆಯಿಂದ ಕೊರಿಯಾ ಯುದ್ಧವು ಪರಿಸಮಾಪ್ತಿಯಾಯಿತು. ೩ ವರ್ಷ ೩೩ ದಿನಗಳ ಕದನವು ಮುಕ್ತಾಯವಾದ ವಿಷಯವನ್ನು ಕದನ ಕ್ಷೇತ್ರದ ಉದ್ದಕ್ಕೂ ಕಹಳೆಗಳನ್ನೂದುವ ಮೂಲಕ ತಿಳಿಸಲಾಯಿತು. ಈ ಧ್ವನಿಯನ್ನು ಕೇಳುತ್ತಲೇ ಪಹರೆಯವರು ಬಂದೂಕಗಳಲ್ಲಿದ್ದ ಗುಂಡುಗಳನ್ನು ತೆಗೆದಿಟ್ಟರು ಮತ್ತು ತಮ್ಮ ಕಾವಲುಗಾರಿಕೆಯ ಸ್ಥಾನಗಳಿಂದ ಹಿಂದಕ್ಕೆ ಹೊರಡಲು ಅನುವಾದರು. ೨ ವರ್ಷಗಳ ಹಿಂದೆ ನಿರ್ಮಿಸಲಾದ ರಕ್ಷಣಾ ಸ್ಥಳಗಳನ್ನು ಧ್ವಂಸ ಮಾಡಲಾರಂಭವಾಗಿದೆ. ವಾಪಸು ಹೋಗುವ ಸೈನಿಕರು ತಮ್ಮ ಎಲ್ಲೆಗಳಲ್ಲಿರುವ ಸಾಧನ ಸಾಮಗ್ರಿಗಳೆಲ್ಲವನ್ನೂ ಹಿಂದಕ್ಕೆ ಸಾಗಿಸಬೇಕಿರುವರು. ಮೊನ್ನೆ ಬಹಳ ಹೊತ್ತಿನವರೆಗೂ ಒಪ್ಪಂದವಾಗುವ ಬಗ್ಗೆ ಸೈನಿಕರಿಗೆ ಸಂಶಯವಿತ್ತು.

ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್ಮನ್ ರೀಯವರು ಹೇಳಿಕೆಯೊಂದನ್ನಿತ್ತು ಸಧ್ಯದಲ್ಲೇ ಕೊರಿಯಾ ರಾಜಕೀಯ ಸಮ್ಮೇಳನವು ಸೇರಲಿರುವುದರಿಂದ ಶಾಂತಿ ಒಪ್ಪಂದಕ್ಕೆ ದಕ್ಷಿಣ ಕೊರಿಯವು ಅಡ್ಡಿಪಡಿಸುವುದಿಲ್ಲವೆಂದು ಹೇಳಿರುತ್ತಾರೆ.

ಯುದ್ಧ ವಿರಾಮದ ಕಾಗದಕ್ಕೆ ರುಜು ಹಾಕಿದ ಸಮಯದಲ್ಲಿ ನಿಶ್ಶಬ್ದತೆ ಇದ್ದಿತು. ಜಯಾಪಜಯ ಹೊಂದದ ಉಭಯ ಪಕ್ಷಗಳ ಪ್ರಧಾನ ಸೇನಾನಿಗಳ ರುಜುವಿಗಾಗಿ ಅವರ ಬಳಿಗೆ ಕಾಗದ ಪತ್ರಗಳನ್ನು ಕಳುಹಲಾಯಿತು. ವಿಶ್ವಸಂಸ್ಥೆ ಪ್ರಧಾನ ಸೇನಾನಿ, ಜನರಲ್ ಮಾರ್ಕ್ ಕ್ಲಾರ್ಕರು ಹೇಳಿಕೆಯೊಂದನ್ನಿತ್ತು, ಕದನವನ್ನು ನಿಲ್ಲಿಸಿರುವುದಾಗಿ ತಿಳಿಸಿದರು.

ಸರ್ಕಾರದಿಂದ ಸಾಲ ಪಡೆದಿರುವವರು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಪ್ರೋ|] ಬೆಂಗಳೂರು ೨೮

ಈ ದಿನ ಕಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಸರ್ಕಾರದವರು ಶ್ರೀಗಳಾದ ಎಸ್ ರಂಗರಾಮಯ್ಯನವರಿಗೆ ೬೦ ಸಾವಿರ, ಕೆ ಎಸ್. ರಾಮಯ್ಯನವರಿಗೆ ೫೦೦೦, ದೇವರಾಜೇಅರಸುರವರಿಗೆ ೫ ಸಾವಿರ, ಜೆ ಎಂ ಚನ್ನಬಸಪ್ಪನವರಿಗೆ ೧೫೦೦೦, ರೂ ಗಳನ್ನು ಸಾಲವಾಗಿ ಕೊಟ್ಟಿರುವರೆಂದು ತಿಳಿಸಿದರು. ಶ್ರೀ ಚನ್ನಬಸಪ್ಪನವರಿಂದ ಕಂತಿನ ಬಾಕಿಯು ಬರಬೇಕಾಗಿರುವುದೆಂದೂ ತಿಳಿಸಲಾಯಿತು. ಇವರಲ್ಲದೆ ಇನ್ನೂ ಹಲವರಿಗೂ ಸಾಲವನ್ನು ಕೊಟ್ಟಿರುವುದಾಗಿಯೂ ಹೇಳಲಾಯಿತು.

ಇದಲ್ಲದೆ, ಶ್ರೀ ಕೆ ಪುಟ್ಟಸ್ವಾಮಿಯವರು ಪತ್ರಿಕೆಗಳಿಗೆ ಜಾಹಿರಾತು ಕೊಡುವ ವಿಷಯವಾಗಿಯೂ, ಶ್ರೀ ಭೀಮಪ್ಪ ನಾಯಕರು ವಿದ್ಯಾ ಸುಧಾರಣೆ ಬಗ್ಗೆ ಬೇಕಾಗುವ ಹಣಕಾಸಿನ ವಿಷಯವಾಗಿಯೂ ಪ್ರಶ್ನೆ ಮಾಡಿದಾಗ ಸಂಬಂಧಪಟ್ಟ ಸಚಿವರು ಇಲ್ಲದಿದ್ದುದರಿಂದ ಬೇರೆ ಮಂತ್ರಿಗಳು ಉತ್ತರವಿತ್ತರು. ಉಪಪ್ರಶ್ನೆಗಳಿಗೆಲ್ಲಾ ಅವರು ನೋಟೀಸು ಬೇಕೆಂದು ಕೇಳಲಾಗಿ, ಸದಸ್ಯರು ಈ ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತಂದರು. ಅಧ್ಯಕ್ಷರು ಮಾತನಾಡಿ ಇದೇ ವಿಷಯವಾಗಿ ಪುನಃ ಪ್ರಶ್ನೆಯನ್ನು ಮಾಡಲು ಮತ್ತೊಂದು ದಿನಕ್ಕೆ ಹಾಕುವುದಾಗಿ ಹೇಳಿ, ಅಂದು ಸಚಿವರು ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಬೇಕೆಂದು ಸೂಚಿಸಿದರು.

ಆಂಧ್ರ ಮಸೂದೆಗೆ ಒಪ್ಪಿಗೆ

ಮೈಸೂರಿನ ಹಿರಿಯ ಶಾಸನ ಸಭೆಯು ಆಂಧ್ರ ಮಸೂದೆಯನ್ನು ಸಲಹೆ ತಿದ್ದುಪಡಿಗಳ ಸಮೇತ ಒಪ್ಪಿರುತ್ತದೆ.

○ ಕಳೆದ ೧೩ ನೇ ತಾ|| ಆರಂಭವಾದ ಹಿರಿಯ ಶಾಸನ ಸಭೆಯು ನಿನ್ನೆ ಮುಕ್ತಾಯವಾಯಿತು.

ನೆಹರೂ-ಮಹಮದಾಲಿ ಸಂಭಾಷಣೆ ಮುಕ್ತಾಯ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳಿಗೆ ಕಳೆದ ಮೂರು ದಿನಗಳಿಂದಲೂ ಕರಾಚಿಯಲ್ಲಿ ನಡೆಯುತ್ತಿದ್ದ ಸಂಭಾಷಣೆಗಳು ಮುಕ್ತಾಯವಾದುವು. ಹೆಚ್ಚಿನ ಮಾತುಕತೆಗಳು ದೆಹಲಿಯಲ್ಲಿ ಮುಂದುವರಿಯುವುವು. ಕಾಶ್ಮೀರದ ವಿಷಯವಾಗಿ ವಿಶೇಷವಾದ ಮಾತುಕತೆಗಳು ಜರುಗಿದುವು. ಕಾಲುವೆ ನೀರು, ನಿರಾಶ್ರಿತರ ಆಸ್ತಿಪಾಸ್ತಿಗಳ ಪೂರ್ವ ಮತ್ತು ಪಶ್ಚಿಮ ಬಂಗಾಳದ ಸಮಸ್ಯೆಗಳನ್ನು ಪರಿಶೀಲಿಸಲಾಯಿತು.

ಗೂಡ್ಸ್ ಗಾಡಿ ಕಂಬಿ ತಪ್ಪಿ ಇಬ್ಬರ ಮರಣ

ಕಾನ್ಪುರದ ಬಳಿ ಜಂಕ್ಷನ್ ರೈಲ್ವೆ ನಿಲ್ದಾಣದಲ್ಲಿ ಒಂದು ಗೂಡ್ಸ್ ರೈಲು ನಿನ್ನೆ ಕಂಬಿ ತಪ್ಪಿದ ಪರಿಣಾಮವಾಗಿ ರೈಲಿನ ಇಬ್ಬರು ಸಿಬ್ಬಂದಿ ಕಾವಲುಗಾರರು ಮಡಿದರು. ಇಬ್ಬರು ಡ್ರೈವರ್‌ಗಳಿಗೆ ಗಾಯವಾಗಿದೆ.

ಕ್ಷುದ್ಬಾಧೆಯ ನಿವಾರಣೆಗೆ ಅಂತರರಾಷ್ಟ್ರ ಹೋರಾಟ

ವಿಶ್ವ ಆಹಾರ ಸಂಸ್ಥೆ ಅಧಿವೇಶನದಲ್ಲಿ ಮಹಾರಾಜರ ಭಾಷಣ

ಬೆಂಗಳೂರು ೨೮

ವಿಶ್ವ ಆಹಾರ ಮತ್ತು ವ್ಯವಸಾಯ ಪ್ರಾದೇಶಿಕ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆನ್ನೆ ನೆರವೇರಿಸುತ್ತಾ, ಶ್ರೀ ವರ್ ಮಹಾರಾಜರು ಕ್ಷುದ್ಬಾಧೆಯ ನಿವಾರಣೆಯೇ ನಾಗರೀಕತೆಯ ರಕ್ಷಣೆಗೆ ಮಾರ್ಗವೆಂದು ತಿಳಿಸಿದರು. ಮಾನವನ ಅತ್ಯಂತ ಪ್ರಬಲವಾದ ಶತ್ರುವಾದ ಮತ್ತು ಜಗತ್ತಿನ ಎಲ್ಲ ದೌರ್ಬಲ್ಯಗಳಿಗೂ ಮೂಲವಾದ ಹಸಿವಿನ ಬಿಸುಸು ಹೆಚ್ಚಲು ಅವಕಾಶವಾದಲ್ಲಿ ಅಶಾಂತಿಯು ತಲೆದೋರಿ, ಕ್ರಾಂತಿ ಮತ್ತು ಯುದ್ಧಗಳಿಗೆ ಕಾರಣವಾಗುವುದೆಂದು ಅವರು ಹೇಳಿದರು. ಹಸಿವಿನಿಂದಲೇ ಜನಸಂಖ್ಯೆಯು ವಿಪರೀತವಾಗಲು ಕಾರಣವೆಂದೂ, ಅದು ಸಂತಾನೋತ್ಪತ್ತಿಗೆ ಶಕ್ತಿಯನ್ನು ಹೆಚ್ಚಿಸುವುದೆಂದೂ ಹಠಲಾಗಿರುವ ಅಭಿಪ್ರಾಯವನ್ನು ಶ್ರೀಮನ್ ಮಹಾರಾಜರು ಸಭಿಕರ ಜ್ಞಾಪಕಕ್ಕೆ ತಂದರು. ಅದರ ನಿವಾರಣೆಗೆ ಹೋರಾಟ ಅಗತ್ಯವೆಂದರು.

ಈ ಸಮಸ್ಯೆಯನ್ನು ನಿವಾರಿಸಲು ಜನ್ಮತಾಳಿದ ವಿಶ್ವ ಸಂಸ್ಥೆಯು ಕಳೆದ ೧೦ ವರ್ಷಗಳಲ್ಲಿ ಸಾಧಿಸಿರುವ ಕಾರ್ಯಗಳನ್ನು ಅವರು ಪ್ರಶಂಸಿಸಿದರು.

ಕೇಂದ್ರ ಆಹಾರ ಮಂತ್ರಿ ಶ್ರೀ ಪಂಜಾಬರಾವ ದೇಶಮುಖ್‌ರವರು ಸ್ವಾಗತ ಭಾಷಣ ಮಾಡಿ, ಭಾರತದಲ್ಲಿನ ದಾರಿದ್ರ್ಯವನ್ನು ನಿವಾರಿಸಿ ಪ್ರಪಂಚ ಆಹಾರ ಸಂಸ್ಥೆಯು ಭಾರತಕ್ಕೆ ಒದಗಿಸಿರುವ ಸಹಾಯವನ್ನು ಪ್ರಶಂಸಿಸಿದರು.

ಸಂಸ್ಥೆಯ ಡೈರೆಕ್ಟರ್ ಜನರಲ್ಲರ ಪ್ರತಿನಿಧಿ, ಶ್ರೀ ಕಮ್ಮಿಂಗ್ಸ್‌ರವರ ಭಾಷಣವಾದನಂತರ ಸಮ್ಮೇಳನದ ಅಧ್ಯಕ್ಷರ ಚುನಾವಣೆ ನಡೆದು, ಶ್ರೀ ದೇಶಮುಖ್‌ರವರು ಆ ಸ್ಥಾನಕ್ಕೆ ಆರಿಸಲ್ಪಟ್ಟರು. ಸಿಂಹಳದ ರುಕನಾರಸ್ವಾಮಿಯವರ ಜಪಾನಿನ ಇಷಿಗಾರೊ ಮತ್ತು ಇಂಡೋನೆಷ್ಯದ ಎಲ್ ಎ ಪಾಲಾರ್‌ರವರ ಉಪಾಧ್ಯಕ್ಷರುಗಳಾಗಿ ಚುನಾಯಿತರಾದರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ. ಸಿ. ನಾಗಪ್ಪರವರಿಂದ [illegible] ಸಂಗೀತ [illegible] ಕರ್ನಾಟಕ ಸಂಗೀತ [illegible] ಸಂಜೆ ೫-೪೦ ಆರ್. [illegible] ಗಾಯನ [illegible] ಶಿಕ್ಷಣ [illegible] ಎಂ. ಪಿ. ನಾಗಮ್ಮ [illegible] ಸಂಗೀತ ೭-೪೦ [illegible] ಎಸ್. [illegible] ವಿಶ್ವವಾರ್ತಾವಳೋಕನ [illegible] ಗೀತ

ಯುದ್ಧಕ್ಕೆ ಹೋದ ಗಂಡನ ವಾಪಸಿಗೆ ಪತ್ನಿಯ ತಂತ್ರ

ಕೊರಿಯಾ ಯುದ್ಧಕ್ಕೆ ಹೋಗಿರುವ ಸಾರ್ಜೆಂಟ್ ಜೋಸೆಫ್ ಕರ್ಕ್ ಪಾಟ್ರಿಕ್ ಎಂಬುವನನ್ನು ವಾಪಸು ಅಮೆರಿಕಕ್ಕೆ ಕರೆಸಿಕೊಳ್ಳಲು ಅವನ ಪತ್ನಿ ರೀಟಾ ಎಂಬುವಳು ತನ್ನ ಮೂವರು ಮಕ್ಕಳ ಪೈಕಿ ಸುಂಟರಾದ ಇಬ್ಬರನ್ನು ಸ್ಥಳೀಯ ವೆಲ್‌ಫೇರ್ ಅಧಿಕಾರಿಯ ತೊಡೆಯ ಮೇಲೆ ಕುಳ್ಳಿರಿಸಿ, ತನ್ನ ಗಂಡನನ್ನು ಯುದ್ಧಕ್ಕೆ ಕಳುಹಿಸಿರುವುದರಿಂದ ಮಕ್ಕಳ ಪಾಲನೆ ಜವಾಬ್ದಾರಿಯನ್ನು ಅಧಿಕಾರಿಯು ವಹಿಸಬೇಕೆಂದು ತಿಳಿಸಿ ಹೊರಟು ಹೋದಳೆಂದು ವರದಿಯಾಗಿದೆ. ಮೊನ್ನೆ ಆಕೆಯನ್ನು ನ್ಯಾಯಾಂಗ ಅಧಿಕಾರಿಯೊಬ್ಬರು ಕರೆಸಿ, ಮಕ್ಕಳನ್ನು ಕೈಬಿಟ್ಟು ಹೋದ ಬಗ್ಗೆ ಆಕೆಯ ಮೇಲೆ ಕ್ರಮವನ್ನೇಕೆ ಜರುಗಿಸಬಾರದೆಂದು ಕೇಳಲಾಗಿ, ತನ್ನ ಗಂಡನನ್ನು ಆ ಮಕ್ಕಳಿಗಾಗಿಯೇ ವಾಪಸು ಕಳುಹಿಸಲು ಹಲವು ತಿಂಗಳುಗಳಿಂದ ಬೇಡುತ್ತಿದ್ದುದಾಗಿ ಆಕೆಯು ತಿಳಿಸಿದಳು.

ಪೊಲೀಸರ ವರ್ತನೆ ಬಗ್ಗೆ ಸರ್ಕಾರದ ಸೂಚನೆ

ಸಾರ್ವಜನಿಕರೊಡನೆ ಪೊಲೀಸರು ಹೇಗೆ ವರ್ತಿಸಬೇಕೆಂಬ ಬಗ್ಗೆ ಒಂದು ಸೂಚನೆಯನ್ನು ಕೇಂದ್ರ ಸರ್ಕಾರದವರು ಕಳುಹಿಸಿರುವುದಾಗಿ ಶ್ರೀ ಹೆಚ್. ಸಿದ್ದವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ. ನಾಗರೀಕರ ಸ್ನೇಹಿತರಂತೆ ಪೊಲೀಸರು ವರ್ತಿಸುವಂತೆಯೂ, ಅವರೊಡನೆ ಸೌಜನ್ಯದಿಂದ ನಡೆದುಕೊಳ್ಳಬೇಕೆಂದೂ ತಿಳಿಸಲಾಗಿರುವುದೆಂದು ಅವರು ಹೇಳಿರುತ್ತಾರೆ.

|| ಶ್ರೀ ||

ಜಗದಂಬಾ ಶಿಶುವಿಹಾರ

385, ದಿವಾನ್ಸ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರದ ಕಟ್ಟಡದಲ್ಲಿ ಈ ವರ್ಷ ಎಂ. ಎಸ್. ಪರೀಕ್ಷೆಗೆ ಕೂಡತಕ್ಕ ಬಾಲಕಬಾಲಕಿಯರಿಗೆ ಸಾಯಂಕಾಲ 6 ರಿಂದ 8 ರ ವರೆಗೆ, ಅನುಭವಶಾಲಿಗಳಾದ ಉಪಾಧ್ಯಾಯರುಗಳಿಂದ ಶಿಕ್ಷಣ ಕೊಡಲ್ಪಡುತ್ತದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ. ಪ್ರವೇಶಧನ ೧ ರೂ ಮತ್ತು ಮಾಹೆಯಾನ ಶಿಕ್ಷಣ ಶುಲ್ಕ 3 ರೂ ಮುಂಗಡವಾಗಿ ಕೊಡಬೇಕು.

ಡಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

Edited, Printed and Published by A. R. Nagarajan at Sadhvi Press, D. Subbiah Road, Mysore

ಹಂಗೆರಿಯ ರಾಜಕೀಯ ಜೈಲುಗಳ ಖಾಲಿ

ಹಂಗೆರಿಯಲ್ಲಿ ರಾಜಕೀಯ ಖೈದಿಗಳಿರುವ ಜೈಲುಗಳೆಲ್ಲವನ್ನೂ ಖಾಲಿ ಮಾಡಲಾಗಿದೆ. ಪೊಲೀಸರ ಅಧಿಕಾರವನ್ನು ಮೊಟಕು ಮಾಡಲಾಗಿದೆ. ರಾಜಕೀಯ ಖೈದಿಗಳಿಗೆ ಕ್ಷಮೆ ಕೊಡಲಾಗಿದೆ. ೨ ವರ್ಷ ಶಿಕ್ಷೆಯಾದವರ ಖುಲಾಸೆಯಾಗಿದೆ. ಇತರರ ಶಿಕ್ಷೆಗಳನ್ನು ಮೂರನೇ ಒಂದು ಭಾಗದಷ್ಟು ಇಳಿಸಲಾಗಿದೆ. ದೇಶದ್ರೋಹ ಅಥವಾ ಕಮ್ಯೂನಿಸ್ಟ್ ಆಡಳಿತದ ಬಗ್ಗೆ ವಿರೋಧಿಗಳಿಗೆ ಈ ರಿಯಾಯಿತಿಯು ದೊರೆತಿಲ್ಲ.

೮೦ ದಿನಗಳ ಉಪವಾಸ

ವಿಲ್ಲಿಸ್ಮಿಟ್ಸ್ ಎಂಬ ಜರ್ಮನನೊಬ್ಬನು ಗಾಜಿನ ಪೆಟ್ಟಿಗೆಯಲ್ಲಿ ಕುಳಿತು ೮೦ ದಿನ ಮತ್ತು ೧ ಗಂಟೆಕಾಲ ಉಪವಾಸ ಮಾಡಿ ರಿಕಾರ್ಡನ್ನು ಸ್ಥಾಪಿಸಿರುತ್ತಾನೆ.

'ಕೊಡಗಿನಾ ಸುರಕನ್ಯೆ'

ಕೃಷ್ಣರಾಜಸಾಗರ ಮತ್ತು ಬೃಂದಾವನದ ಸೊಬಗಿನ ದೃಶ್ಯಗಳನ್ನೂ, ಕಾವೇರಿಯ ರಮ್ಯ ನೋಟವನ್ನೂ ಹೃದಯಂಗಮವಾಗಿ ಚಿತ್ರಿಸುವ ಒಂದು ಕವನವನ್ನು ಮೇಲ್ಕಂಡ ಶಿರೋನಾಮೆಯ ಕ್ಲಿಬೆಳಗುಳದ ಶ್ರೀ ಹೆಚ್. ಡಿ. ನಾರಾಯಣರಾಯರು ಮುದ್ರಿಸಿ ಪ್ರಕಟಪಡಿಸಿರುತ್ತಾರೆ. ಬೆಲೆ ಎರಡಾಣೆ.

SRI GAYATHRI

TALKIES

From 28-7-53 [illegible] 2 [illegible]

Paramount's T[illegible]

THE BLAZING FOREST

With John Payne, William Demarest

NEXT CHANGE
On 30th Only

M G M's

THE BELLE OF NEW YORK
(Technicolor)

ಮನುಷ್ಯರ ರಕ್ತ ಶೇಖರಿಸುತ್ತಿದ್ದವಳ ಬಂಧನ

ನಾಗರಹಾವಿನ ಆರಾಧನೆಗೆಂದು ಮನುಷ್ಯರ ರಕ್ತ, ಕೂದಲು ಮತ್ತು ಉಗುರುಗಳನ್ನು ಶೇಖರಿಸುತ್ತಿದ್ದ ಒಬ್ಬ ಮುದ್ಗ ಗಾಡಿನ ಸ್ತ್ರೀಯನ್ನು ಅಸ್ಸಾಮಿನ ಶಿಲಾಂಗ್ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಆಕೆಯು ಉಪವನಗಳಲ್ಲಿ ಆಡುತ್ತಿದ್ದ ಮಕ್ಕಳನ್ನು ಕೊಲ್ಲುತ್ತಿದ್ದಳೆಂದು ಹೇಳಲಾಗಿದೆ.

ವಿಶ್ವಸಂಸ್ಥೆಯ ಅಧಿವೇಶನ ೧೭ ನೇ ತಾ॥

ಕೊರಿಯಾ ಯುದ್ಧ ವಿರಾಮದ ಒಪ್ಪಂದಕ್ಕೆ ನೆನ್ನೆ ರುಜು ಬಿದ್ದ ಕೂಡಲೇ ವಿಶ್ವಸಂಸ್ಥೆ ಅಧ್ಯಕ್ಷರಾದ ಲೆಸ್ಟರ್ ಪಿಯರ್ಸನ್ನರು ಸಂಸ್ಥೆಯ ಸಾಧಾರಣ ಸಭೆಯನ್ನು ಆಗಸ್ಟ್ ೧೭ ನೇ ತಾ॥ ಗೆ ಕರೆದಿರುತ್ತಾರೆ. ಕೊರಿಯಾದಲ್ಲಿ ಪ್ರಸ್ತುತ ಪರಿಸ್ಥಿತಿಯನ್ನು ಅಲ್ಲಿ ಚರ್ಚಿಸಲಾಗುವುದು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ಕಡಲೇಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ	[illegible]	
ಸೀಗೆಕಾಯಿ	[illegible]	
ತೆಂಗಿನಕಾಯಿ	[illegible]	[illegible]

ಮೈಸೂರು ಸಾಲಕ್ಕೆ ಬಿರ್ಲಾರಿಂದ ೧೦ ಲಕ್ಷ ರೂ.

ಭಾರತದ ಸುಪ್ರಸಿದ್ಧ ಕೈಗಾರಿಕೋದ್ಯಮಿಗಳಾದ ಶ್ರೀ ಜಿ. ಡಿ. ಬಿರ್ಲಾರವರು ೧೦ ಲಕ್ಷ ರೂ ಗಳನ್ನು ಮೈಸೂರು ಸರ್ಕಾರದ ಸಾಲಕ್ಕೆ ಕೊಟ್ಟಿರುತ್ತಾರೆ. ಮದ್ರಾಸಿನ ತಮಿಳು ವಾರಪತ್ರಿಕೆ ಕಲ್ಕಿಯ ಡೈರೆಕ್ಟರು ತಮ್ಮ ಪತ್ರಿಕಾ ಕಛೇರಿಯ ನೌಕರರಿಗಾಗಿ ಏರ್ಪಡಿಸಿರುವ ಪ್ರಾವಿಡೆಂಟ್ ನಿಧಿಯಿಂದ ೧೦ ಸಾವಿರ ರೂ.ಗಳನ್ನು ಈ ಸಾಲಕ್ಕೆ ಕಳುಹಿಸಿರುತ್ತಾರೆ.

ನಿಮ್ಮ ಬಟ್ಟೆಗಳನ್ನು ಜಾಗ್ರತೆ ಶುಭ್ರ ಮಾಡುವ

'ಕೀರ್ತಿ' ಮತ್ತು 108

ಬಾರ್ ಸಾಬೂನುಗಳನ್ನೇ

ಉಪಯೋಗಿಸಿ; ಕೊಳ್ಳಲು ಬಹಳ ಸುಲಭ

ದಿ ಕೀರ್ತಿ ಸೋಪ್ ಫ್ಯಾಕ್ಟರಿ, ಮೈಸೂರು

ಶ್ರೀ ವೆಂಕಟೇಶ್ವರ ಯಾತ್ರಾ ಸ್ಪೆಷಲ್,

ತಿ ರು ಪ ತಿ

14-8-53 ನೇ ತಾ॥ ತಿರುಪತಿಯಿಂದ ಹೊರಟು

ಹಿ ಮಾ ಚ ಲ ಪ ರ್ಯಂ ತ

ಕಾಶಿ ಯಾತ್ರೆ ಸ್ಪೆಷಲ್ ಕ್ಯಾರೇಜು

—:O:—

ಮುಖ್ಯ ಕ್ಷೇತ್ರಗಳು – ತಿರುಪತಿ, ತುಂಗಭದ್ರ, ಪಂಢರಾಪುರ, ಬೊಂಬಾಯಿ (ದ್ವಾರಕ), ನಾಸಿಕ್, ಷಿರ್ಡಿ ಸಾಯಿಬಾಬಾ, ಆಗ್ರಾ, ಮಥುರ, ಡೆಲ್ಲಿ, ಕುರುಕ್ಷೇತ್ರ, ಅಮೃತಸರ, ಹರಿದ್ವಾರ, ಹೃಷೀಕೇಶ, ಬದರಿನಾಥ, ಲಕ್ನೊ, ಅಯೋಧ್ಯಾ, ಪ್ರಯಾಗ, ಕಾಶಿ, ಗಯಾ, ಸೋನಾಮುಖಿ ಕುಸುಮ್ಮಹರನಾಥ, ಕಲ್ಕತ್ತಾ, ಪೂರಿ ಜಗನ್ನಾಥ, ವಾಲ್ಟೇರ್, ಸಿಂಹಾಚಲ, ಭದ್ರಾಚಲ ಮದ್ರಾಸು, ಮೊದಲಾದ 55 ಕ್ಷೇತ್ರಗಳು. 55 ದಿವಸಗಳು. ಶ್ರೀ ಕಥಕ ವಾಚಸ್ಪತಿ ಜಗನ್ನಾಥ ಭಾಗವತರ ಹರಿಕಥೆಯ ಯಾತ್ರಾಕಾಲದಲ್ಲಿ ಜರಗುತ್ತದೆ. 3 ನೇ ಕ್ಲಾಸ್ ಟಿಕೆಟ್ ಊಟ ಕಾಫಿ ಸಹಾ ರೂ 325 2 ನೇ ಕ್ಲಾಸ್ ಟಿಕೆಟ್ ರೂ 550

ಪೂರ್ತಿ ವಿವರಗಳಿಗೆ ಬರೆಯಿರಿ

ಎ. ಎಸ್. ರೆಡ್ಡಿ, ಆರ್ಗನೈಸರ್,

38 ತೊಲಾವೀಧಿ, ತಿರುಪತಿ (ಚಿತ್ತೂರು ಜಿಲ್ಲೆ)

ಫೋನ್ ನಂ. 792 ॥ ವಂದೇ ಮಾತರಂ ॥ ಬೆಲೆ ಪ್ರತಿ 3 ನಯೆ ಪೈಸೆ

ಸಾಧ್ವಿ

ಸಂಪುಟ ೧೧] ಬುಧವಾರ ೨೪-೬-೧೯೫೯ [ಸಂಚಿಕೆ ೨೯೭

— ಇಟಲಿ ಸರ್ಕಾರಕ್ಕೆ — ವಿಶ್ವಾಸದ ಓಟಿಲ್ಲ

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ

ಮೈಸೂರು ೨೩

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತ್ಯುತ್ಸವವು ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ನಡೆಯಿತು. ರಾಜಧಾನಿಯ ಸುಪ್ರಸಿದ್ಧ ಗ್ರಂಥಕರ್ತರಾದ ಶ್ರೀ ಜಿ. ಆರ್. ಜೋಸ್ಯೆರ್‌ರವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ನಂತರ, ಜಯಂತ್ಯುತ್ಸವದ ಸಮಿತಿ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಭಾಷಣಮಾಡಿ ಮುಮ್ಮಡಿ ಕೃಷ್ಣರಾಜಒಡೆಯರವರು ಮೈಸೂರಿಗೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ಶ್ರೀ ಜಿ. ಆರ್. ಜೋಸ್ಯೆರ್‌ರವರು ಭಾಷಣಮಾಡಿ ಮೈಸೂರು ಪ್ರವೃದ್ಧಮಾನಕ್ಕೆ ಬರಲು ರಾಜಮನೆತನದವರು ತೆಗೆದುಕೊಂಡ ಆಸಕ್ತಿಯನ್ನು ಕುರಿತು ಪ್ರಶಂಸಿಸಿದರು.

ಬ್ರಿಟಿಷ್ ಅಧಿಕಾರಿಗಳಾಗಿದ್ದ ಮಾರ್ಕ್ ಕಬ್ಬನ್, ಗಾರ್ಡನ್ ಮುಂತಾದವರ ಮೈಸೂರಿಗೆ ಅನ್ಯಾಯ ಮಾಡಿದ ದಾಗಿಯೂ, ಅವರುಗಳ ಪ್ರತಿಮೆಗಳನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆದುಹಾಕಬೇಕೆಂದೂ ಅವರು ಸೂಚಿಸಿದರು.

ರಾವ್ ಬಹದ್ದೂರ್ ಬಕ್ಷಿ ನರಸಪ್ಪನವರ ಮೊಮ್ಮಕ್ಕಳಾದ ಶ್ರೀಮತಿಗಳ ಚಂಚಲ ಕುಮಾರಿ, ಲೀಲಾವತಿ, ಶಕುಂತಲಾ ಮತ್ತು ಪ್ರಭಾರವರಿಂದ ಭರತ ನಾಟ್ಯವಾಯಿತು. ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ, ಮೈಸೂರು ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪ, ಹಿರಿಯ ಶಾಸನ ಸಭಾಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂ, ಮಾಜಿ ಮಂತ್ರಿ ಶ್ರೀ ಎಂ. ಎ. ಶ್ರೀನಿವಾಸನ್ ಮುಂತಾದವರಿಂದ ಶುಭ ಸಂದೇಶಗಳು ಬಂದಿದ್ದುವು.

ಸಮಿತಿ ಕಾರ್ಯದರ್ಶಿ ಶ್ರೀ ಎಫ್. ಸಿ. ದೇವರಾಜ ಅರಸಿನವರು ವಂದನಾರ್ಪಣೆ ಮಾಡಿದ ನಂತರ ಸಮಾರಂಭವು ಮುಕ್ತಾಯವಾಯಿತು.

೭೫ ಲಕ್ಷ ರೂ. ಮೋಸಕ್ಕಾಗಿ ಬ್ರೋಕರರಿಗೆ ೪ ವರ್ಷ ಸಜಾ

ಕೃಷ್ಣಾಜಿ ಸದಾಶಿವ ಎಂಬ ಬೊಂಬಾಯಿ ಷೇರುಗಳ ಬ್ರೋಕರೊಬ್ಬರ ೭॥ ಲಕ್ಷ ರೂ. ಸೆಕ್ಯೂರಿಟಿಗಳ ಬಗ್ಗೆ ಗಿರಾಕಿಗಳಿಗೆ ಮೋಸ ಮಾಡಿದರೆಂದು ಅವರಿಗೆ ೪ ವರ್ಷ ಕಠಿಣ ಸಜಾ ವಿಧಿಸಲಾಗಿದೆ.

ಫೇಲಾದ ವಿದ್ಯಾರ್ಥಿಗಳಿಗೆ ರಿಯಾಯತಿ

ಸಂಸ್ಥಾನದ ಕಾಲೇಜುಗಳ ಜ್ಯೂನಿಯರ್ ತರಗತಿಗಳಲ್ಲಿ ಉತ್ತೀರ್ಣರಾಗಲು ಸಾಕಾದಷ್ಟು ನಂಬರುಗಳನ್ನು ಪಡೆದು, ಹಾಜರಾತಿ ದಿನಗಳು ಕಡಿಮೆಯಾಗಿ ಫೇಲಾದ ವಿದ್ಯಾರ್ಥಿಗಳಿಗೆ ಸೂಕ್ತ ರೀತಿಯ ಪರಿಹಾರವನ್ನು ಒದಗಿಸಲು ಕಾಲೇಜುಗಳ ಪ್ರಿನ್ಸಿಪಾಲರಿಗೆ ಅಧಿಕಾರ ಕೊಡಲಾಗಿರುವುದೆಂದು ತಿಳಿದು ಬಂದಿದೆ. ಜೂಲೈ ೧ನೇ ತಾರೀಖಿನೊಳಗೆ ಕಾಲೇಜಿಗೆ ಸೇರಲು ಅರ್ಜಿಗಳನ್ನು ಹಾಕಿಕೊಳ್ಳದಿದ್ದವರು ಈಗ ಸೇರಿಕೊಳ್ಳಲು ಅವಕಾಶ ಕಲ್ಪಿಸಲಾಗಿರುವುದೆಂದೂ ವರದಿಯಾಗಿದೆ.

ಭಾರಿ ಕೇಡಿಯ ದಸ್ತಗಿರಿ

ಮೈಸೂರು ೨೩

ರಾಜಧಾನಿಯ ಕ್ರೈಂ ಬ್ರಾಂಚ್ ಪೊಲೀಸರು ರಾಮಸಮುದ್ರದ ನಾಗಪ್ಪ ಎಂಬ ಭಾರಿ ಕೇಡಿಯೊಬ್ಬನನ್ನು ದಸ್ತಗಿರಿ ಮಾಡಿರುತ್ತಾರೆ. ಅವನ ಬಳಿ ೫೦೦ ರೂ. ಬೆಲೆಯ ಮಾಲನ್ನು ವಶಪಡಿಸಿಕೊಳ್ಳಲಾಗಿದೆ. ಅವನಿಗೆ ಹಿಂದೆ ೧೮ ಭಾರಿ ಶಿಕ್ಷೆಗಳಾಗಿವೆ.

ಪೀರ್ ಬೀಡಿ ಕಾರ್ಖಾನೆಯ ೬೦ ಕಾರ್ಮಿಕರ ವಜಾ

ರಾಜಧಾನಿಯ ಪಿರ್ ಬೀಡಿ ಕಾರ್ಖಾನೆಯವರು ೬೦ ಮಂದಿ ಕಾರ್ಮಿಕರನ್ನು ವಜಾ ಮಾಡಿರುವರೆಂದು ನಗರದ ಬೀಡಿ ಕಾರ್ಮಿಕರ ಸಂಘದವರು ತಿಳಿಸಿರುತ್ತಾರೆ. ಅಸಿಸ್ಟೆಂಟ್ ಲೇಬರ್ ಕಮೀಷನರರು ಕೆಲಸಗಾರರನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ್ದರೂ ಅದಕ್ಕೆ ಕಾರ್ಖಾನೆಯ ಮಾಲೀಕರು ಗಮನಕೊಟ್ಟಿಲ್ಲವೆಂದೂ ಹೇಳಲಾಗಿದೆ.

ಇಟಲಿ ಮಂತ್ರಿಮಂಡಲದಲ್ಲಿ ಅವಿಶ್ವಾಸ

ಇಟಲಿಯ ಸಿನೋರ್ ಅಂಟೋನಿಯೋ ಸೆಗ್ನಿಯವರ ಮಂತ್ರಿ ಮಂಡಲದಲ್ಲಿ ವಿಶ್ವಾಸ ಸೂಚಿಸುವ ಓಟನ್ನು ಕೊಡಲು ಅಲ್ಲಿನ ಪಾರ್ಲಿಮೆಂಟ್ ೨೮೩-೨೬೩ ಓಟುಗಳಿಂದ ನಿರಾಕರಿಸಿರುತ್ತದೆ. ಇದರ ಪರಿಣಾಮವಾಗಿ ಪ್ರಧಾನಿ ಗ್ಯಾಸ್ಪಾರಿಯವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಸಲ್ಲಿಸಲಿರುವರು. ಆದರೆ ಅಲ್ಲಿನ ಅಧ್ಯಕ್ಷರು ಪುನಃ ಗ್ಯಾಸ್ಪಾರಿಯವರನ್ನು ಕರೆಕಳುಹಿಸಿ, ನಾಲ್ಕು ಪಕ್ಷಗಳ ಮಿಶ್ರ ಮಂತ್ರಿ ಮಂಡಲವನ್ನು ರಚಿಸುವಂತೆ ತಿಳಿಸುವರೆಂದೂ ವರದಿಯಾಗಿದೆ.

೧೦೧ ವರ್ಷದವನಿಗೆ ದಂತೋತ್ಪತ್ತಿ!

ಬೊಂಬಾಯಿ ಪ್ರಾಂತದ ಬ್ರೋಚ್ ಜಿಲ್ಲೆಯ ಕಾವಿ ಎಂಬ ಗ್ರಾಮದಲ್ಲಿ ೧೦೧ ವರ್ಷ ವಯಸ್ಸಿನ ಧನಕೇಶವ್ ಎಂಬುವನಿಗೆ ಈಗ ಹೊಸದಾಗಿ ೪ ಹಲ್ಲುಗಳು ಹುಟ್ಟಿವೆ. ಇನ್ನು ಎರಡು ಮೊಳಕೆಯಾಗುತ್ತಿವೆ. ಆತನು ಆರೋಗ್ಯದಿಂದ ಇದ್ದು, ಸುಖ ಜೀವನ ನಡೆಸುತ್ತಿರುವನೆಂದು ಹೇಳಲಾಗಿದೆ.

ಗುರುಸ್ವಾಮಿಯವರ ಅರ್ಜಿ ಬಗ್ಗೆ ತೀರ್ಪು ಕಾದಿಡಲಾಗಿದೆ

ಸ್ವಂ. ಸು. ಪ್ರೋ.] ಬೆಂಗಳೂರು ೨೩

ಅಬ್ಕಾರಿ ಕಂಟ್ರಾಕ್ಟ್ ವಜಾ ಆದ ಬಗ್ಗೆ ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾ ಮಾಡಿದುದರ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಹೋಗಲು ಅನುಮತಿ ಬೇಡಿ ಶ್ರೀ ಕೆ. ಎಗ. ಗುರುಸ್ವಾಮಿಯವರು ಸಲ್ಲಿಸಿದ್ದ ಅರ್ಜಿಯ ಬಗ್ಗೆ ಈ ದಿನ ಹೈಕೋರ್ಟಿನಲ್ಲಿ ವಾದವಿವಾದಗಳಾದುವು. ಆಜ್ಞೆಗಾಗಿ ಇದನ್ನು ಕಾದಿಡಲಾಗಿದೆ.

ಮಹಿಳಾ ನೌಕರರ ಬಗ್ಗೆ ಟೆಲಿಫೋನ್ ಕಾರ್ಖಾನೆ ನಿಬಂಧನೆ

ಬೆಂಗಳೂರು ಬಳಿ ದೂರವಾಣಿ ನಗರದಲ್ಲಿರುವ ಇಂಡಿಯನ್ ಟೆಲಿಫೋನ್ ಕಾರ್ಖಾನೆಯಲ್ಲಿರುವ ೩೦೦ ಮಂದಿ ಯುವತಿಯರಿಗೆ ಸಮಸ್ಯೆಯೊಂದು ಈಗ ಹುಟ್ಟಿಕೊಂಡಿರುತ್ತದೆ. ಕಾರ್ಖಾನೆಯ ಆಜ್ಞೆಯೊಂದರಲ್ಲಿ ವಿಧವೆಯರನ್ನಾಗಲಿ ಅಥವಾ ಅವಿವಾಹಿತ ತರುಣಿಯರನ್ನಾಗಲಿ ಮಾತ್ರ ನೌಕರಿಗೆ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಗಿದೆ. ಈಗ ಕೆಲಸದಲ್ಲಿರುವವರು ವಿವಾಹವಾಗ ಬಯಸಿದರೆ ತಮ್ಮ ನೌಕರಿಗಳನ್ನು ಬಿಡಬೇಕಾಗಿ ಬರುವ ತೊಂದರೆಯು ಉದ್ಭವವಾಗಿದೆ. ಈ ವಿಷಯವನ್ನು ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ ಗಮನಕ್ಕೆ ತಂದು ಆಜ್ಞೆಯಲ್ಲಿರುವ ನ್ಯೂನತೆಯನ್ನು ಸರಿಪಡಿಸುವಂತೆ ಕೋರಲಾಗಿದೆ.

ಶಾಸನ ಸಭೆಯಲ್ಲಿ ಟೆಲಿಫೋನ್ ಉಪಯೋಗಕ್ಕೆ ಆಕ್ಷೇಪ

ಮುಖ್ಯ ಮಂತ್ರಿಯವರು ಶಾಸನ ಸಭೆಯಲ್ಲಿ ತಮ್ಮ ಆಸನದಲ್ಲಿ ಕುಳಿತು ಇಂಟರ್ನಲ್ ಟೆಲಿಫೋನ್ ಮೂಲಕ ಅಧಿಕಾರಿಗಳೊಡನೆ ವ್ಯವಹರಿಸುವುದು ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ತರುವುದೆಂದು ಶ್ರೀ ಮೂಲ್ಕಾ ಗೋವಿಂದ ರೆಡ್ಡಿಯವರು ನೆನ್ನೆ ಆಕ್ಷೇಪಿಸಿದರು. ಈ ಬಗ್ಗೆ ನಾಳೆ ಅಧ್ಯಕ್ಷರು ರೂಲಿಂಗ್ ಕೊಡಲಿರುವರು.

೧ ಕೋಲಾರದ ಚಿನ್ನದ ಗಣಿಯಲ್ಲಿ ಸೇರಲಿರುವ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಆಗಸ್ಟ್ ೨೭ ಮತ್ತು ೨೮ರ ಬದಲು ೨೩ ಮತ್ತು ೨೪ನೇ ತಾರೀಖುಗಳಲ್ಲಿ ಸೇರುವುದೆಂದು ಪ್ರಕಟಿಸಲಾಗಿದೆ.

ಮದ್ರಾಸಿನ ಎಲ್ಲ ಕನ್ನಡ ಭಾಗಗಳೂ ಮೈಸೂರಿಗೆ ಸೇರಲಿ

ಆಂಧ್ರ ಮಸೂದೆಗೆ ಹನುಮಂತಯ್ಯ ತಿದ್ದುಪಡಿ

ಸ್ವಂ. ಸು. ಪ್ರೋ.] ಬೆಂಗಳೂರು ೨೩

ಈ ದಿನ ಕೆಳಗಿನ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತದ ಮಸೂದೆಯು ಚರ್ಚಿಸಲ್ಪಟ್ಟಾಗ ಶ್ರೀ ಹನುಮಂತಯ್ಯ ತಿದ್ದುಪಡಿಯೊಂದನ್ನು ಸೂಚಿಸಿ, ಬಳ್ಳಾರಿ ಜಿಲ್ಲೆ, ಮಂಗಳೂರು, ಕೊಳ್ಳೇಗಾಲ, ಮಡಕಶಿರಾ, ನೀಲಗಿರಿ ಮುಂತಾದ ಎಲ್ಲ ಕನ್ನಡ ಪ್ರದೇಶಗಳೂ ಮೈಸೂರಿಗೆ ಸೇರುವಂತೆ ಆಗಬೇಕೆಂದು ತಿಳಿಸಿದರು. ಮುಖ್ಯ ಮಂತ್ರಿಯವರು ತಿದ್ದುಪಡಿಯ ತತ್ವವನ್ನು ಒಪ್ಪಿದರೂ, ಪ್ರಸ್ತುತದ ಮಸೂದೆಗೆ ಅದು ಸಂಬಂಧಿಸಿಲ್ಲವೆಂದು ಹೇಳಿದರು. ಭಾಷಾ ಪ್ರಾಂತದ ಬಗ್ಗೆ ನೆಹರೂರವರ ನಿಲುವನ್ನು ಅವರು ಟೀಕಿಸಿದರು. ತಿದ್ದುಪಡಿಯನ್ನು ಒತ್ತಾಯಪಡಿಸಲಿಲ್ಲ.

ರಾಜಾಜಿಯವರಿಗೆ ಮುಖ್ಯ ಮಂತ್ರಿಯವರ ಕೃತಜ್ಞತೆ

ಈ ದಿನ ಕೆಳಗಿನ ಶಾಸನ ಸಭೆಯಲ್ಲಿ ಸರ್ಕಾರದ ೩ ಕೋಟಿ ರೂ. ಸಾಲಪತ್ರ ಕರಡಾದ ವಿಷಯವು ಪ್ರಸ್ತಾಪಿಸಲ್ಪಟ್ಟು, ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಸಾಲದ ಬಗ್ಗೆ ತುಂಬಾ ಸಹಾಯಮಾಡಿದರೆಂದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿ ಅವರಿಗೆ ಕೃತಜ್ಞತೆಯನ್ನು ಸೂಚಿಸಿದರು.

ಕರ್ನಾಟಕ ಪ್ರಾಂತಕ್ಕಾಗಿ ಸತ್ಯಾಗ್ರಹ ಕಾರ್ಯಕ್ರಮ

ಅಸಹಕಾರ ಮತ್ತು ಕಪ್ಪು ಧ್ವಜ ಪ್ರದರ್ಶನಗಳಿಗಾಗಿ ಪ್ರಾರ್ಥನೆ

ಕರ್ನಾಟಕ ಪ್ರಾಂತ ನಿರ್ಮಾಣವಾಗಬೇಕೆಂದು ಒತ್ತಾಯಪಡಿಸಲು ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನವರು ಹಾಕಿರುವ ಸತ್ಯಾಗ್ರಹದ ಕಾರ್ಯಕ್ರಮದ ಅಂಗವಾಗಿ ಬರುವ ೯ನೇ ತಾ|| ನಿಂದ ಪ್ರಭಾತ್ ಫೇರಿ, ಸಭೆಗಳನ್ನು ಏರ್ಪಡಿಸಿ ೧೫ರಿಂದು ಕರ್ನಾಟಕ ವಾರವನ್ನು ಆಚರಿಸುವಂತೆ ಕ್ರಿಯಾ ಸಮಿತಿಯು ನಿರ್ಧರಿಸಿರುತ್ತದೆ. ಚಳುವಳಿಯನ್ನು ಯಶಸ್ವಿಗೊಳಿಸಲು ಶ್ರೀಗಳಾದ ಹೊಸಮನಿ ಸಿದ್ದಪ್ಪ, ಕೆ. ಆರ್. ಕಾರಂತ್ ಮತ್ತು ಶಿವಮೂರ್ತಿ ಸ್ವಾಮಿಗಳವರ ಉಪಸಮಿತಿಯೊಂದನ್ನು ರಚಿಸಲಾಗಿದೆ. ದಾವಣಗೆರೆಯಲ್ಲಿ ನಡೆದ ಪರಿಷತ್ತಿನ ಸಮ್ಮೇಳನದ ಬಗ್ಗೆ ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಲಾಗಿದೆ.

೧೫ನೇ ತಾ|| ಎಲ್ಲಾ ಕನ್ನಡ ಪ್ರದೇಶಗಳಲ್ಲೂ ಸಾರ್ವಜನಿಕ ಮತ್ತು ಖಾಸಗಿ ಭವನಗಳ ಮೇಲೆ ಕಪ್ಪು ಬಾವುಟಗಳನ್ನು ಹಾರಿಸಿ, ವಿಶಾಲ ಕರ್ನಾಟಕದ ಅಂತಳತದ ಬಗ್ಗೆ ಅತೃಪ್ತಿಯನ್ನು ಸೂಚಿಸಬೇಕೆಂದೂ, ಅನಂತರ ಪರಿಷತ್ತಿನ ಚಳುವಳಿ ಬಗ್ಗೆ ಉಪಸಮಿತಿಯವರು ಯೋಜನೆ ಹಾಕುವರೆಂದೂ, ಕನ್ನಡಿಗರೆಲ್ಲರೂ ಸರ್ಕಾರದೊಡನೆ ಶಾಂತಿಯುತವಾದ ಅಸಹಕಾರವನ್ನು ನಡೆಸಬೇಕೆಂದೂ ಕ್ರಿಯಾ ಸಮಿತಿಯವರು ತಿಳಿಸಿರುತ್ತಾರೆ.

ಚಿತ್ರದುರ್ಗದಲ್ಲಿ ಕ್ಷಾಮ ನಿವಾರಣೆಗೆ ರೈಲು ರಸ್ತೆ

ನಿಜಲಿಂಗಪ್ಪನವರ ಮನವಿ

ಚಿತ್ರದುರ್ಗದ ಕ್ಷಾಮ ಪರಿಸ್ಥಿತಿಯ ಬಗ್ಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ದೀರ್ಘ ಪತ್ರವೊಂದನ್ನು ಬರೆದಿರುತ್ತಾರೆ. ಅದರ ಪ್ರತಿಗಳನ್ನು ಭಾರತದ ಪ್ರಧಾನಿ, ರೈಲ್ವೆ, ಹಣಕಾಸು, ಆಹಾರ ಮತ್ತು ಇತರ ಮಂತ್ರಿಗಳಿಗೆ ಅವರು ಕಳುಹಿಸಿರುತ್ತಾರೆ. ಅದರಲ್ಲಿ ಅವರು ಜನರಿಗೆ ಪರಿಹಾರ ಒದಗಿಸಲು ಬಳ್ಳಾರಿ ಜಿಲ್ಲೆಯ ರಾಯದುರ್ಗ ಮತ್ತು ಚಿತ್ರದುರ್ಗಗಳ ನಡುವೆ ರೈಲು ರಸ್ತೆ ನಿರ್ಮಾಣ, ಲಕ್ಕವಳ್ಳಿ ಯೋಜನೆಯ ಅಂಗವಾಗಿ ಕಾಲುವೆಗಳನ್ನು ತೋಡುವುದು ಈ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡಿರುತ್ತಾರೆ.

ಜನರು ಕತ್ತಾಳೆ, ಆಲೆಸೊಪ್ಪು, [illegible] ಸೊಪ್ಪು, [illegible] ಸೊಪ್ಪು [illegible] ಉಪ್ಪಿನ ಜೊತೆ [illegible] ತಿನ್ನುತ್ತಿರುವರೆಂದು [illegible] ಗೊತ್ತು ಉಪವಾಸ ವರೆಂದೂ ಅವರು ಹೇಳಿರುತ್ತಾರೆ.

ಯುದ್ಧದಿಂದ ಮಿತ್ರ ಪಕ್ಷದವರಿಗೆ ಆದ ನಷ್ಟ

ಕೊರಿಯಾ ಯುದ್ಧದಲ್ಲಿ ಇದುವರೆಗೆ ಅಮೆರಿಕದವರ ಪೈಕಿ [illegible] ಮಂದಿ ಮಡಿದಿರುವರು [illegible] ಮಂದಿ [illegible] ಗೊಂಡು ಬಿದ್ದರು, [illegible] ಅವರ ಬಳಿಗ್ಗೆ [illegible] ಮಂದಿ ಶತ್ರುಗಳಲ್ಲಿ ಬಂಧಿತರಾಗಿ [illegible] ಜನರು [illegible] ಮಂದಿಗೆ ಗಾಯವಾಗಿದೆ. [illegible] ಮಂದಿ ಪತ್ತೆಯಿಲ್ಲ. ಕಾಮನ್‌ವೆಲ್ತ್ ಸೈನ್ಯಗಳಲ್ಲಿ [illegible] ಜನರು [illegible] ಮಂದಿಗೆ ಗಾಯವಾಗಿದೆ.

ಕುಡುಗೋಲು ಗಾಯದ ಬಗ್ಗೆ ದಸ್ತಗಿರಿ

ಮೈಸೂರು ತಾಲ್ಲೂಕು ಕೆಸರೆ ಗ್ರಾಮದ ಜಮೀನೊಂದರ ಸಂಬಂಧವಾಗಿ ಕದನ ನಡೆಯಿತು. [illegible] ಎಂಬುವನನ್ನು [illegible] ಕುಡುಗೋಲಿನಿಂದ ಹೊಡೆದು ಗಾಯಗೊಳಿಸಿದನೆಂದು ತಿಳಿದಿದೆ. ಪೋಲೀಸರು [illegible] ದಸ್ತಗಿರಿ ಮಾಡಿ [illegible] ಬಿಡುಗಡೆ ಮಾಡಲಾಗಿದೆ.

ಆನಂದರಾಮ್‌ಗೆ ಸಿಗಲಿ

[illegible] ನಗರದ [illegible] ಕಳೆದ ಶನಿವಾರ [illegible] ಇಲ್ಲಿನ [illegible] ಶ್ರೀ ಟಿ. [illegible] ವ್ಯಕ್ತಿತ್ವ [illegible]

ನೌಕರಿ ಬಡ್ತಿಯಲ್ಲಿ ವಿನಾಯಿತಿಯಿಲ್ಲವೆಂದು ರಾಜಾಜಿ

ಹಿಂದುಳಿದ ವರ್ಗದವರಿಗೆ ಶೇ|| [illegible] ನಿಮ್ನ ವರ್ಗದವರಿಗೆ ಶೇ|| [illegible] ಸ್ಥಾನಗಳನ್ನು ನೌಕರಿಗಳಿಗೆ ಸೇರಿಸುವಾಗ ವಿನಾಯಿತಿ ಮಾಡಲಾಗುವುದೆಂದೂ, ಆದರೆ ಬಡ್ತಿ ಬಗ್ಗೆ ಇರುವ ನಿಬಂಧನೆಯನ್ನು ನೌಕರರ ಬಡ್ತಿ ವಿಷಯಕ್ಕೆ ಅನ್ವಯಿಸುವುದಿಲ್ಲವೆಂದೂ ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ತಿಳಿಸಿರುವರು.

ದೆಹಲಿಗೆ ಸೆಪ್ಟೆಂಬರಿನಲ್ಲಿ ಪಾಕಿಸ್ತಾನ್ ಪ್ರಧಾನಿ

ಪ್ರಧಾನಿ ನೆಹರೂರವರು ಕರಾಚಿಯಿಂದ ಬಂದನಂತರ ದೆಹಲಿಗೆ ವಾಪಸು ಬಂದರು. ಪಾಕಿಸ್ತಾನ ಪ್ರಧಾನಿ ಮಹಮದ್ ಅಲಿಯವರ ಜೊತೆಗೆ ಸಂಭಾಷಣೆಗೆ [illegible] ಸೆಪ್ಟೆಂಬರ್ [illegible] ದೆಹಲಿಗೆ [illegible]

ನಟರಾಜ ನಾಟ್ಯಕಲಾ ಮಂಡಲಿಯ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ನಟರಾಜ ನಾಟ್ಯಕಲಾ ಮಂಡಲಿಯ ಹನ್ನೊಂದನೇ ವಾರ್ಷಿಕೋತ್ಸವವೂ ಮತ್ತು ಶ್ರೀ ಭರತ [illegible] ಜಯಂತ್ಯುತ್ಸವವೂ ನಾಳೆ ಸಂಜೆ [illegible] ಗಂಟೆಗೆ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಹಾಲಿನಲ್ಲಿ ನೆರವೇರುವುದು.

ಅಖಿಲ ಕರ್ನಾಟಕ ಸಾಹಿತ್ಯ ಸ್ಪರ್ಧೆ

ನಂಜನಗೂಡಿನ ಕರ್ನಾಟಕ ಸಂಘದವರು [illegible] ಅಖಿಲ ಕರ್ನಾಟಕ ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸಿದ್ದಾರೆ. [illegible] ಲೇಖಕರಿಗೆ ಪ್ರೋತ್ಸಾಹಕೊಡುವುದೇ ಇದರ ಉದ್ದೇಶವಾಗಿದೆ. ಕನ್ನಡ ಕವಿತೆ, ಸಣ್ಣ ಕತೆ, ಮತ್ತು ಪ್ರಬಂಧಗಳನ್ನು ಸ್ಪರ್ಧೆಯು ಒಳಗೊಂಡಿದೆ. ಪ್ರತಿ ಸ್ಪರ್ಧೆಗೂ ೩ ಬಹುಮಾನಗಳನ್ನು ಕೊಡಲಾಗುವುದು. ಪ್ರವೇಶ ಧನ ಒಂದು ರೂಪಾಯಿ. ಆಗಸ್ಟ್ ೨೨ನೇ ತಾ|| ರೊಳಗೆ ಲೇಖನಗಳನ್ನು ಶ್ರೀ ಟಿ. ಎಲ್. ಗೋವಿಂದರಾಜು, ಪಾಠಶಾಲಾ ಬೀದಿ ನಂಜನಗೂಡು — ಈ ವಿಳಾಸಕ್ಕೆ ಕಳುಹಿಸಬೇಕು "ಮೈಸೂರು ಅರಸರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ" ಎಂಬ ವಿಷಯವಾಗಿ ಪ್ರಬಂಧ ಬರೆಯಬೇಕು.

SRI GANESHA TALKIES

From 30-7-53 Daily 2 Shows

THE RAGING TIDE

Featuring Shelly Winters, Stephen McNally, Alex Nicol

NEXT CHANGE FROM 1—8—53

LORNA DOONE

(In Technicolor)

Edited, Printed and Published by A R Nagarajan at Sadhvi Press, J Subbaiah Road, Mysore

ಮೈಸೂರು ಸರ್ಕಾರದ ಸಾಲ ಭರ್ತಿ

ಬೆಂಗಳೂರು ೨೮

ಪಂಚವಾರ್ಷಿಕ ಯೋಜನೆಯ ಅಂಗವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಸಲುವಾಗಿ ಮೈಸೂರು ಸರ್ಕಾರದವರು ಎತ್ತಿದ ಶೇ|| ೪ ರೂ. ಬಡ್ಡಿಯ ೩ ಕೋಟಿ ರೂ. ಸಾಲವು ನೆನ್ನೆ ಮಧ್ಯಾಹ್ನದ ಹೊತ್ತಿಗೆ ಭರ್ತಿಯಾಯಿತೆಂದು ವರದಿಯಾಗಿದೆ.

ಕೊರಿಯಾ ಯುದ್ಧ ನಿಂತು ಬೆಲೆ ಇಳಿತಾಯ

ಕೊರಿಯಾ ಯುದ್ಧ ಮುಕ್ತಾಯದ ವಾರ್ತೆಯಿಂದ ತಿರುವಾಂಕೂರಿನ ಆಲೆಪ್ಪಿ ಮಾರು ಕಟ್ಟೆಯಲ್ಲಿ ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವುದೇ ಅಲ್ಲದೆ ನೇಕರಿಗೆ ತುಂಬಾ ನಷ್ಟವಾಗಿರುವುದೆಂದೂ ಹೇಳಲಾಗಿದೆ. ಎಣ್ಣೆ, ಕೊಬ್ಬರಿ, ಹುರಿ, ಪತ್ತಾವೆ ಇವುಗಳಿಗೆ ಅಲ್ಲಿ ಮಾರುಕಟ್ಟೆಯು ಹೇರಳವಾಗಿದೆ.

ಮೈಸೂರು ಪೇಟೆ ಧಾರಣೆ

ದಿಲ್ಲಿ	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	
ತೆಂಗಿನಕಾಯಿ	[illegible]	[illegible]

ಹರಿಕಥೆ ಮತ್ತು ಸಂಗೀತ

ರಾಜಧಾನಿಯ ಇಟ್ಟಿಗೆಗೂಡು ವಿನಾಯಕ ಸ್ವಾಮಿಯವರ ಮಠದಲ್ಲಿ ನಾಳೆ ಸಂಜೆ ೭|| ಗಂಟೆಗೆ ಶ್ರೀ ಪಿ. [illegible] ರಾವ ಸ್ವಾಮಿನಾಯ್ಡು ಮತ್ತು ಶ್ರೀ ಗುರುರಾಜುಲು ನಾಯ್ಡುರವರಿಂದ ಹರಿಶ್ಚಂದ್ರ ವಿಶ್ವಾಮಿತ್ರ ಸಂವಾದ ಎಂಬ ವಿಷಯ ವಾಗಿ ಹರಿಕಥೆಯೂ, ಆಗಸ್ಟ್ ೨ನೇ ತಾ|| ಸಂಜೆ ೭|| ಗಂಟೆಗೆ ಶ್ರೀಮತಿ ರತ್ನಮ್ಮ [illegible] ಕೃಷ್ಣಮೂರ್ತಿಯವರ ಗಾಯನವೂ ನಡೆಯುವುವು

ಸುಸಮಯ ! ವಿಚಾರಿಸಿ !

ಬೆಲೆಗಳು ಇಳಿದಿವೆ !!

ನಮ್ಮಲ್ಲಿ ಎಲ್ಲಾ ವಿಧವಾದ ಪೊ ಮತ್ತು ಚಪ್ಪಲಿಗಳ ಬೆಲೆಯನ್ನು ಇಳಿಸಲಾಗಿದೆ

ನಿಮ್ಮ ಅವಶ್ಯಕತೆಗಳಿಗೆ ಕೆಳಗೆ ಕಂಡವರಲ್ಲಿ ವಿಚಾರಿಸಿ

ಸಿ. ದಾಸಪ್ಪ ಅಂಡ್ ಸನ್ಸ್,

182 ದೇವರಾಜ ಮಾರ್ಕೆಟ್ ಹಿಂಭಾಗ, ಮೈಸೂರು

ಯುದ್ಧ ಖೈದಿಗಳ ವಿನಿಮಯ ಇಂದಿನಿಂದ ಆರಂಭ

ಕೊರಿಯಾ ಯುದ್ಧ ಖೈದಿಗಳನ್ನು ಅವರವರ ದೇಶಕ್ಕೆ ಹಿಂತಿರುಗಿಸುವ ಕೆಲಸವು ಆಗಸ್ಟ್ ೫ ರಿಂದ ಆರಂಭವಾಗುವ ಬಗ್ಗೆ ಎರಡು ಪಕ್ಷಗಳವರೂ ಒಪ್ಪಿರುತ್ತಾರೆ. ೩ ಸಾವಿರ ಕಮ್ಯೂನಿಸ್ಟ್ ಖೈದಿಗಳನ್ನು ಮೊದಲನೇತಂಡದಲ್ಲಿ ವಾಪಸು ಕಳುಹಿಸುವ ಪೂರ್ವ ಭಾವಿಯಾಗಿ ಅವರನ್ನು ಕೋಜೆ ದ್ವೀಪದಿಂದ ದಕ್ಷಿಣ ಕೊರಿಯಾ ರಾಜಧಾನಿ ಬಳಿ ಇರುವ ಇಂಚಾನ್ ರೇವಿಗೆ ಕರೆತರಲಾಗುವುದು.

ಕಲ್ಕತ್ತಾ ಪತ್ರಿಕೆಗಳ ಹರತಾಳ

ಕಳೆದ ೨೨ನೇ ತಾ|| ಕಲ್ಕತ್ತಾ ಪೋಲೀಸರು ಅಲ್ಲಿನ ಪತ್ರಿಕೋದ್ಯೋಗಿಗಳ ಮೇಲೆ ಧಾಳಿ ಮಾಡಿದುದಕ್ಕೆ ಪ್ರತಿಭಟನೆ ಸೂಚಿಸಲು ಅಲ್ಲಿನ ೨೦ ದಿನಪತ್ರಿಕೆಗಳೂ ನೆನ್ನೆ ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿ ಹರತಾಳವನ್ನು ಆಚರಿಸಿದುವು. ಬ್ರಿಟಿಷ್ ಪತ್ರಿಕೆ ಸ್ಟೇಟ್ಸ್‌ಮನ್ ಮತ್ತು ಕಾಂಗ್ರೆಸ್ ಪಕ್ಷದ ಅಧಿಕೃತ ಪತ್ರಿಕೆ, ಜನಸೇವಕ್ ಇವುಗಳೂ ಹರತಾಳದಲ್ಲಿ ಭಾಗವಹಿಸಿದ್ದುವು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೩೦ ಅರ್ ಆನಂತಕೃಷ್ಣರ ದೇವರ ನಾಮಗಳು ಮಧ್ಯಾಹ್ನ ೧-೩೦ ಜ್ಯೂಬಿಲೀ ನೆಟ್. ೨-೦ [illegible] ಸಂಜೆ ೫-೩೦ ಅರ್ ಅನಂತಕೃಷ್ಣ ಸಂಗೀತ ೬ ಹಿಂದಿ ಚಿತ್ರ [illegible] ಸುಬ್ಬಯ್ಯ ಕೌಶಿಕ ಭಾರತ ವಾಚನ [illegible] ಕರ್ನಾಟಕ ಸಂಗೀತ [illegible] ಹಿಂದಿ ಭಜನ [illegible] ನಾರಾಯಣ [illegible] [illegible] ಕನ್ನಡ ಪತ್ರಿಕೆ [illegible] ಪೈಕಿ ಇಂಗ್ಲೀಷ್ ವಾರ್ತೆ [illegible] ೯-೩೦ ಹಿಮ್ಮ ಮೆಚ್ಚಿನ ಗೀತೆಗಳು ★ರಾಷ್ಟ್ರೀಯ ಯೋಜನೆಯ ಅಂಗವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಮೈಸೂರು ಸರ್ಕಾರದವರು ೫ ಕೋಟಿ ರೂ. ಗಳ ಸಾಲವನ್ನು ಎತ್ತುವರು ಅದ್ದರಿಂದ ಸರ್ಕಾರದವರು ೩ ಕೋಟಿ ರೂ. ಸಾಲವನ್ನು ಅವಶ್ಯಾಗಿಯೇ ತೆಗೆಯುವರು.

ಪ್ರಭಾ ಅನೋಖಿ ಪ್ರಾರಂಭ 31-7 53 ರಿಂದ

ಪ್ರತಿ ದಿನ 3 ಆಟಗಳು

ಫಿಲ್ಮಿಸ್ತಾನ್‌ರವರ **ಫರೆಬ್** (ಹಿಂದಿ)

ಪಾತ್ರ: ಕಿಶೋರಕುಮಾರ್ [illegible]

— ಬೆಳಗಿನ ಪ್ರದರ್ಶನ —

31-7-53 ರಿಂದ 3 ದಿನಗಳು

ಮೈಸೂರು ಸಾಬು ನಟಿಸಿರುವ

ಬಾಂಬಾಯ್ ದಿ ಚೋರ್

(ಇಂಗ್ಲೀಷ್ ಚಿತ್ರ)

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

30-7-53ನೇ ಗುರುವಾರದಿಂದ : ಅನೋಖಿ ಪ್ರಾರಂಭ

ದಿನವಹಿ 3 ಆಟಗಳು

★ ನನ್ನ ತಂಗಿ ★ (ತಮಿಳು)

ಪಾತ್ರ: ಎಂ. ಕೆ. ರಾಧಾ, [illegible], [illegible], ನಾಗಮಣಿ, [illegible]

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೩೦-೭-೧೯೫೩ [ಸಂಚಿಕೆ ೨೯೮

ವಿಶ್ವ ಸಂಸ್ಥೆಯವರಿಂದ ಒಪ್ಪಂದದ ಉಲ್ಲಂಘನೆ?

ಕೃಷ್ಣರಾಜೇಂದ್ರ ಗಿರಣಿ ಕಾರ್ಯದರ್ಶಿ ಕೊಲೆ ಯತ್ನ ?

ಮಾಜಿ ನೌಕರನೊಬ್ಬನ ದಸ್ತಗಿರಿ

ಮೈಸೂರು ೩೦

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕಾರ್ಯದರ್ಶಿಯವರಾದ ಶ್ರೀ ಬಿ ಎಸ್ ವಿಶ್ವೇಶ್ವರಯ್ಯನವರನ್ನು ಚಾಕುವಿನಿಂದ ಇರಿದು ಕೊಲೆ ಮಾಡುವ ಪ್ರಯತ್ನವೊಂದು ನೆನ್ನೆ ಸಂಜೆ ೬ ಗಂಟೆಗೆ ಮಿಲ್ಲಿನ ಸೊಸೈಟಿ ಬಳಿ ನಡೆಯಿತೆಂದು ವರದಿಯಾಗಿದೆ ಈ ಸಂಬಂಧವಾಗಿ ಮಾಜಿ ಸಿಪಾಯಿಯೂ, ನೌಕರನಾಗಿದ್ದವನೂ ಆದ ಎಂ ಶಾಮಯ್ಯನಾಯ್ಡು ಎಂಬುವನನ್ನು ತಾಲ್ಲೂಕು ಪೋಲೀಸರು ದಸ್ತಗಿರಿ ಮಾಡಿರುವರು.

ಗಿರಣಿಯ ಸೊಸೈಟಿಯನ್ನು ಪರಿಶೀಲಿಸಿ ನಡೆಯಲು ಶ್ರೀ ವಿಶ್ವೇಶ್ವರಯ್ಯನವರು ಹೋಗುತ್ತಿದ್ದರೆಂದೂ ಆಗ ಆಪಾದಿತನು ಹೊಂಚು ಹಾಕಿ, ಅವರು ಏಕಾಂಗಿಯಾಗಿರುವುದನ್ನು ಕಂಡು ಅವರ ಮೇಲೆ ಬಿದ್ದು ಚಾಕುವಿನಿಂದ ಇರಿದನೆಂದೂ ಆದರೆ ಅದೃಷ್ಟವಶಾತ್ ಅವರ ಶರೀರಕ್ಕೆ ಚಾಕುವಿನ ಪೆಟ್ಟು ಬೀಳದೆ ಅವರ ಅಂಗಿ ಮತ್ತು ಷರಟುಗಳು ಹರಿದುವೆಂದೂ ಹೇಳಲಾಗಿದೆ ಶ್ರೀಯುತರು ಸೊಸೈಟಿಯಲ್ಲಿ ಆಶ್ರಯ ಪಡೆದರೆ ಪೂ, ನಂತರ ಗಿರಣಿಯ ಕೆಲಸಗಾರರೂ ಇತರರೂ ಗದ್ದಿಗೆಗಳನ್ನು ಹಾಕಿ ಓಡುತ್ತಿದ್ದ ಶಾಮಯ್ಯನಾಯ್ಡುನನ್ನು ಹಿಡಿದರೆಂದೂ ಆ ವ್ಯಕ್ತಿ ಕೆಂಪಯ್ಯ ಎಂಬುವನನ್ನು ಅದೇ ರೀತಿ ಆಪಾದಿತನು ಇರಿದನೆಂದೂ, ಅವನಿಗೆ ಕತ್ತಿನ ಬಳಿ ಸ್ವಲ್ಪ ಗಾಯವಾಗಿ ಅವನ ಅಂಗಿಯು ಹರಿಯಿತೆಂದೂ ಹೇಳಲಾಗಿದೆ

ಆಪಾದಿತನು ಉದ್ಯೋಗಕ್ಕಾಗಿ ಗಿರಣಿ ಕಾರ್ಯದರ್ಶಿಯವರಲ್ಲಿ ಪದೇ ಪದೇ ಹೋಗುತ್ತಿದ್ದನೆಂದೂ ನೌಕರಿ ದೊರೆಯದೆ ನಿರಾಶನಾಗಿದ್ದನೆಂದೂ ಹೇಳಲಾಗಿದೆ

ಅವನ ಮೇಲೆ ತಾಲ್ಲೂಕು ಪೋಲೀಸರು ಕೊಲೆ ಪ್ರಯತ್ನ ಮತ್ತು ಗಾಯಪಡಿಸಿದ ಬಗ್ಗೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುತ್ತಾರೆ

ವರ್ಧಂತಿಗಾಗಿ ದೇವರ ಉತ್ಸವ

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ದೇವಾಲಯಗಳಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತಿ ಪ್ರಯುಕ್ತ ನಾಳೆ ಸಂಜೆ ೮॥ ಗಂಟೆಗೆ ಸಕಲ ರಾಜ ಮರ್ಯಾದೆಗಳಿಂದ ಉತ್ಸವಗಳು ಜರುಗುವುವು ಅವನ್ನು ನೋಡಲು ಸಕಲರಿಗೂ ಅವಕಾಶವನ್ನು ಕಲ್ಪಿಸಲಾಗಿದೆ.

ಶಿ ವ ಕ ಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯ ದಲ್ಲಿ ನಾಳೆ ಸಂಜೆ ೫ ಗಂಟೆಗೆ ಪ್ರದೋಷದ ಪ್ರಯುಕ್ತ ವೇ॥ ಬ್ರ॥ ಶ್ರೀ ಶಿವಪೂರ್ಣೇತ್ತುಂಗದಾಸರಿಂದ ಭಕ್ತ ಮಾರ್ಕಂಡೇಯ ಎಂಬ ಶಿವಕಥೆಯೂ, ೭ ಗಂಟೆಯಿಂದ ಶ್ರೀಗಳು ಪಿ ರಾಮಸ್ವಾಮಿನಾಯ್ಡು ಮತ್ತು ಗುರುರಾಜನಾಯ್ಡುರವರಿಂದ ಇಂದ್ರ ಕೀಲ ಎಂಬ ಹರಿಕಥೆಯೂ ನಡೆಯುವುವು ಅಮ್ಮನವರಿಗೆ ಚಾಮುಂಡೇಶ್ವರಿ ಅಲಂಕಾರವನ್ನೇರ್ಪಡಿಸಲಾಗಿದೆ

ಮಹಾಭಿಷೇಕ ಮತ್ತು ಹೂವಿನ ಸೀರೆ ಅಲಂಕಾರ

ರಾಜಧಾನಿಯ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ಕಮಠೇಶ್ವರಿ ಅಮ್ಮನವರ ದೇವಾಲಯ ದಲ್ಲಿ ನಾಳೆ ಆಷಾಢ ಶುಕ್ರವಾರದ ಪ್ರಯುಕ್ತ ಅಮ್ಮನವರಿಗೆ ಮಹಾಭಿಷೇಕವೂ, ಹೂವಿನ ಸೀರೆ ಅಲಂಕಾರವೂ ನಡೆಯುವುದು

ನಿಮ್ನ ಮತ್ತು ಗುಡ್ಡಗಾಡಿನವರಿಗೆ ಸರ್ಕಾರಿ ನೌಕರಿ

ಶೀಘ್ರದಲ್ಲೇ ಸರ್ಕಾರಿ ಆಜ್ಞೆಯ ಪ್ರಕಟಣೆ

ಬೆಂಗಳೂರು ೩

ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ಟಿ ಹನುಮಂತಯ್ಯನವರ ಪ್ರಶ್ನೆಗೆ ಉತ್ತರವಾಗಿ ನಿಮ್ನ ವರ್ಗ ಮತ್ತು ಗುಡ್ಡಗಾಡಿನ ಜನರನ್ನು ಯಾವ ಪ್ರಮಾಣದಲ್ಲಿ ಸರ್ಕಾರಿ ನೌಕರಿಗೆ ತೆಗೆದುಕೊಳ್ಳಬೇಕೆಂಬುದನ್ನು ಕುರಿತು ಶೀಘ್ರದಲ್ಲಿಯೇ ಆಜ್ಞೆಯು ಹೊರಬೀಳುವುದೆಂದು ತಿಳಿಸಿದರು ಹಲವು ನೌಕರಿಗಳಿಗೆ ನೇರವಾಗಿ ಈ ವರ್ಗಗಳ ಜನರನ್ನು ತೆಗೆದುಕೊಳ್ಳುವಂತೆಯೂ ಸೂಚಿಸಲಾಗಿರುವುದೆಂದೂ ಅವರು ತಿಳಿಸಿದರು

ಪೋಲೀಸನ ಕಣ್ಣಿಗೆ ಮೆಣಸಿನ ಪುಡಿ ಚೆಲ್ಲಿ ಕೈದಿಯ ಪರಾರಿ ಪ್ರಯತ್ನ

ಬೆಂಗಳೂರು ನಗರ ನ್ಯಾಯಾಧೀಶ ಕೋರ್ಟಿನಲ್ಲಿ ವಿಚಾರಣೆಗಾಗಿ ನೆನ್ನೆ ಕರೆತರಲ್ಪಡುತ್ತಿದ್ದ ಎಸ್ ಆರ್ ಸಿ ನಯರ್ ಎಂಬ ಆಪಾದಿತನೊಬ್ಬನು ಕೋರ್ಟಿನ ಬಳಿ ಕಕ್ಕಸಿಗೆ ಹೋಗಿದ್ದು, ಕಾವಲುಇದ್ದ ಪೋಲೀಸನ ಕಣ್ಣಿಗೆ ಮೆಣಸಿನ ಪುಡಿ ಎರಚಿ ಕೋರ್ಟ್ ಕಾಂಪೌಂಡ್ ಹಾರಿ ಪರಾರಿಯಾಗಲೆತ್ನಿಸಿದನೆಂದೂ, ಆದರೆ ಬೇರೆ ಪೋಲೀಸರೂ ಮತ್ತು ಇತರರೂ ಅವನನ್ನು ಬಂಧಿಸಿದರೆಂದೂ ಹೇಳಲಾಗಿದೆ ಸರ್ಕಾರಿ ನೌಕರರ ಮೇಲೆ ಕೈ ಮಾಡಿದನೆಂದು ಅವನ ಮೇಲೆ ಬೇರೊಂದು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಳ್ಳಲಾಗಿದೆ

ಪ್ರವಾಹದಿಂದ ಕಾಡು ಪ್ರಾಣಿಗಳಿಗೆ ಭೀತಿ

ಉತ್ತರ ಅಸ್ಸಾಮಿನ ಸುಬನ್ಸಿರಿ ನದಿಯಲ್ಲಿ ಉಗ್ರ ಪ್ರವಾಹವು ಬಂದು ಕಾಡುಗಳಿಗೆ ನೀರು ನುಗ್ಗಿರುವುದರಿಂದ ಹುಲಿ, ಕರಡಿ ಮುಂತಾದ ಕ್ರೂರ ಮೃಗಗಳು ತಮ್ಮ ವನ ವಾಸಸ್ಥಳಗಳಿಂದ ಹೊರದೂಡಲ್ಪಟ್ಟವೆಯೆಂದೂ, ಮನುಷ್ಯರು ವಾಸವಿರುವ ಪ್ರದೇಶಗಳಲ್ಲಿ ಅವು ಆಶ್ರಯ ಪಡೆಯುತ್ತಿರುವುವೆಂದೂ ವರದಿಯಾಗಿದೆ.

ಕೊರಿಯಾ ಯುದ್ಧ ವಿರಾಮ ಕೌಲಿನ ಉಲ್ಲಂಘನೆಯೇ ?

ಎಂಟು ಸಾರಿ ಯುದ್ಧ ವಿರಾಮ ಒಪ್ಪಂದ ನಿಯಮಗಳನ್ನು ವಿಶ್ವಸಂಸ್ಥೆಯವರು ಉಲ್ಲಂಘಿಸಿರುವುದಾಗಿ ಕಮ್ಯೂನಿಸ್ಟ್ ಅಧಿಕಾರಿಗಳು ನೆನ್ನೆ ನಡೆದ ಉಭಯ ಮಿಲಿಟರಿ ಅಧಿಕಾರಿಗಳ ಸಭೆಯಲ್ಲಿ ಆಪಾದನೆ ಮಾಡಿದರು ವಿಶ್ವಸಂಸ್ಥೆ ಅಧಿಕಾರಿಗಳು ಇದನ್ನು ನಿರಾಕರಿಸಿದರು

ಹೈದರಾಬಾದು ಶಾಸನ ಸಭಾಸದರ ರಾಜೀನಾಮೆ ?

ಹೈದರಾಬಾದಿನಲ್ಲಿ ಅಧಿಕೃತವು ದಿನ ದಿನವೂ ಕೆಡುತ್ತಿರುವುದರಿಂದಲೂ, ಜನಸಾಮಾನ್ಯರಲ್ಲಿ ಕಾಂಗ್ರೆಸ್ಸಿನ ಹೆಸರು ಕೆಟ್ಟುಹೋಗುತ್ತಿರುವುದೆಂದೂ, ಅದನ್ನು ಸರಿಪಡಿಸದಿದ್ದರೆ ತಾವು ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಮತ್ತು ಸಭಾ ಸದಸ್ಯಸ್ಥಾನಗಳಿಗೆ ರಾಜೀನಾಮೆಯನ್ನು ಕೊಟ್ಟು ಬೇರೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗಾಗಿ ದುಡಿಯುವುದಾಗಿಯೂ ಸೂಚಿಸಿ, ಅಲ್ಲಿನ ೨೦ ಜನ ಶಾಸನ ಸಭಾ ಸದಸ್ಯರು ಕಾಂಗ್ರೆಸ್ ಅಧ್ಯಕ್ಷರಾದ ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುತ್ತಾರೆ.

ಸಿಂಹಳದಲ್ಲಿ ಸಾರ್ವತ್ರಿಕ ಮುಷ್ಕರ ತಡೆಯಲು ಕ್ರಮ

ಸಿಂಹಳ ಸರ್ಕಾರದ ವಿರೋಧಿಗಳು ನಡೆಸಬೇಕೆಂದಿರುವ ಸಾರ್ವತ್ರಿಕ ಮುಷ್ಕರವನ್ನು ತಡೆಗಟ್ಟಲು ಸಾವಿರ ಸೈನಿಕರನ್ನು ಕೊಲೊಂಬೊ ನಗರದ ಪೂರ್ತಿ ನಿಲ್ಲಿಸಲಾಗಿದೆ ನೌಕಾ ಸೈನ್ಯವು ರೇವಿನಲ್ಲಿ ಕಾವಲು ನಿಂತಿದೆ ಚಹಾ, ರಬ್ಬರ್ ಮತ್ತು ತೆಂಗಿನ ತೋಟಗಳಲ್ಲಿ ಮುಷ್ಕರವನ್ನು ನಡೆಸಲಾಗುವುದು

ಕುಡುಗೋಲು ಗಾಯದ ಪ್ರಕರಣದಲ್ಲಿ ಮತ್ತೊಬ್ಬನ ಬಂಧನ

ಮೈಸೂರು ತಾಲ್ಲೂಕು ಕೆಸರೆ ಗ್ರಾಮದ ಜಮೀನೊಂದರ ಬಗ್ಗೆ ಆದ ವ್ಯಾಜ್ಯದ ಪರಿಣಾಮವಾಗಿ ಈರನಗೆರೆಯ ನಿವಾಸಿ ಮಂಚನಾಯಕ ಎಂಬುವನನ್ನು ಕುಡುಗೋಲಿನಿಂದ ಗಾಯಪಡಿಸಿದ ಸಂಬಂಧವಾಗಿ ಈಗ ಚಾಮಯ್ಯ ಎಂಬ ಮತ್ತೊಬ್ಬನನ್ನು ದಸ್ತಗಿರಿ ಮಾಡಲಾಗಿದೆ

ಶಾಸನ ಸಭಾ ಕಲಾಪಗಳ ಬಗ್ಗೆ ಬ್ಲಿಟ್ಸ್ ಲೇಖನ

ಸಭೆಯಲ್ಲಿ ಸದಸ್ಯರ ಹಕ್ಕುಬಾಧ್ಯತಾ ಪ್ರಶ್ನೆ

ಸ್ವಂ ಸು. ಪ್ರೋ] ಬೆಂಗಳೂರು ೩೦

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಕೆ ಪುಟ್ಟಸ್ವಾಮಿಯವರು ಬೊಂಬಾಯಿನ ಬ್ಲಿಟ್ಸ್ ಪತ್ರಿಕೆಯಲ್ಲಿ ೨೫ನೇ ತಾ॥ ನ ಸಂಚಿಕೆಯ ಮೈಸೂರು ಶಾಸನ ಸಭೆಯ ನಡವಳಿಕೆ ಬಗ್ಗೆ ಬಂದ ಲೇಖನವು ಸಭೆಯ ಹಕ್ಕು ಬಾಧ್ಯತೆಗೆ ಕುಂದನ್ನು ತಂದಿರುವುದಾಗಿ ತಿಳಿಸಿದರು ಅಧ್ಯಕ್ಷರು ಉತ್ತರವಿತ್ತು, ಊಟಾಹಾರಾನಂತರ ಈ ವಿಷಯವಾಗಿ ತಮ್ಮ ನಿರ್ಧಾರವನ್ನು ತಿಳಿಸುವುದಾಗಿ ಹೇಳಿದರು

ತುಂಗಭದ್ರಾ ಯೋಜನೆಯ ಮೇಲೆ ಅಧಿಕಾರವನ್ನು ಮೈಸೂರು ಪಡೆಯುವ ಸಂಬಂಧವಾಗಿ ಶಾಸನ ಒಂದು ನಿರ್ಣಯವನ್ನು ತರುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು

ಮೈಸೂರು ಶಾಲಕ್ಕೆ ಹಣ

ಮೈಸೂರಿನ ಸಾಲಕ್ಕೆ ಬೊಂಬಾಯಿ, ಹೈದರಾಬಾದು, ತಿರುವಾಂಕೂರು ಸರ್ಕಾರಗಳು ಸಹಾಯ ಮಾಡಿವೆ ಡಾ॥ ವಿಶ್ವೇಶ್ವರಯ್ಯನವರೂ ಸಹಾಯ ಮಾಡಿರುತ್ತಾರೆ ನ್ಯೂ ಇಂಡಿಯಾ ಇನ್ಷೂರೆನ್ಸ್ ಕಂಪೆನಿಯವರು ೮ ಲಕ್ಷ ರೂ ಕೊಟ್ಟಿರುತ್ತಾರೆ ಎಲ್ಲರಿಗೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕೃತಜ್ಞತೆ ಸೂಚಿಸಿರುತ್ತಾರೆ ೩ ಕೋಟಿ ರೂಗಳ ಮೇಲೆ ೩೦ ಲಕ್ಷ ರೂ ಹೆಚ್ಚಾಗಿ ಬಂದಿರುವುದಾಗಿಯೂ ಹೇಳಲಾಗಿದೆ.

ಬಿಹಾರಿನಲ್ಲಿ ಪ್ರವಾಹದಿಂದ ೨ ಲಕ್ಷ ಜನರಿಗೆ ತೊಂದರೆ

ಬಿಹಾರಿನ ಮುಜಫರಪುರ ಜಿಲ್ಲೆಯ ೪೦೦ ಹಳ್ಳಿಗಳಿಗೆ ಪ್ರವಾಹದ ನೀರು ನುಗ್ಗಿ ೨ ಲಕ್ಷ ಜನರು ಪರಿತಪಿಸುತ್ತಿರುವರೆಂದೂ, ಇಂತಹ ಘೋರವಾದ ಪ್ರವಾಹವು ೧೫ ವರ್ಷಗಳಿಂದಲೂ ಅಲ್ಲಿ ಆಗಿರಲಿಲ್ಲವೆಂದೂ ಹೇಳಲಾಗಿದೆ ಅಲ್ಲಿನ ಗಂಡಕ್, ಬಾಗಮತಿ ಮತ್ತು ಶಾಂತಿ ನದಿ ಉಕ್ಕಿಹರಿದು, ರಸ್ತೆ ಸಂಚಾರವು ನಿಂತುಹೋಗಿದೆ ಭತ್ತದ ಬೆಳೆಯು ಪೂರ್ತಿ ಹಾಳಾಗಿದೆ ಪರಿಹಾರ ಒದಗಿಸಲು ಸರ್ಕಾರದವರು ೨೭೦ ದೋಣಿಗಳನ್ನು ಕೊಟ್ಟಿರುವರು ಪ್ರವಾಹವು ಇನ್ನೂ ಏರುವ ಸೂಚನೆಯಿದೆ

ಎರಡು ತಲೆ ಮತ್ತು ನಾಲ್ಕು ಕೈಗಳ ಮಗು

ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಕಳೆದ ಸೋಮವಾರ ಎರಡು ತಲೆ ಮತ್ತು ನಾಲ್ಕು ಕೈಗಳ ಶಿಶುವೊಂದನ್ನು ಹಳ್ಳಿಯ ಹೆಂಗಸೊಬ್ಬಳು ಪ್ರಸವಿಸಿದುದಾಗಿಯೂ, ಅದು ಹುಟ್ಟುವಾಗಲೇ ಸತ್ತಿತ್ತೆಂದೂ ಹೇಳಲಾಗಿದೆ. ನಂತರ ತಾಯಿಯೂ ಮಡಿದಳು. ಮಗುವನ್ನು ನೋಡಲು ಟಿಕೆಟ್ ವ್ಯವಸ್ಥೆಯಾಗಿದ್ದಿತು.

ಚಾಮುಂಡೇಶ್ವರಿ ಅಲಂಕಾರ

ರಾಜಧಾನಿಯ ಕೋಟೆ ಶ್ರೀ ಕೋಡಿ ಸೋಮೇಶ್ವರ ಸ್ವಾಮಿ (ನವಗ್ರಹ) ದೇವಸ್ಥಾನದಲ್ಲಿ ನಾಳೆ ಆಷಾಢ ಶುಕ್ರವಾರದ ಪ್ರಯುಕ್ತ ಅಮ್ಮನವರಿಗೆ ಚಾಮುಂಡೇಶ್ವರಿ ಅಲಂಕಾರ ಮಾಡಲ್ಪಡುತ್ತದೆ.

ಕೊಳ್ಳೇಗಾಲವು ಮೈಸೂರಿಗೆ ಸೇರಬೇಕು

ಕೊಯಮುತ್ತೂರು ಕನ್ನಡಿಗರ ಸಮ್ಮೇಳನದಲ್ಲಿ ನಿರ್ಣಯ

ಕೊಳ್ಳೇಗಾಲ [illegible]

ಕೊಯಮತ್ತೂರು ಜಿಲ್ಲೆಯ ಕನ್ನಡಿಗರ ಎರಡನೇ ಸಮ್ಮೇಳನವು ಕಳೆದ ಭಾನುವಾರ ಇಲ್ಲಿ ಬೆಂಗಳೂರಿನ ನ್ಯಾಯ[illegible] ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ [illegible] ನೆರವೇರಿತು. [illegible] ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಸಿ. ವಿರೂಪಾಕ್ಷಯ್ಯನವರು ಸ್ವಾಗತ ಭಾಷಣ ಮಾಡಿ ಕರ್ನಾಟಕ ಪ್ರಾಂತ ರಚನೆಯಾಗುವ ವರೆಗೆ ಕೊಳ್ಳೇಗಾಲವು ಮೈಸೂರಿನೊಡನೆ ಸೇರಬೇಕೆಂದು ತಿಳಿಸಿದರು.

ಬಳ್ಳಾರಿಯ ತಾಲ್ಲೂಕುಗಳು ಮೈಸೂರಿನಲ್ಲಿ ಐಕ್ಯವಾಗುವ ಕಾಲದಲ್ಲೇ ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸಲು ಬೇಕಾದ ಕಾರ್ಯಕ್ರಮ ಕೈಗೊಳ್ಳುವಂತೆ ನಿರ್ಣಯವನ್ನು ಮಾಡಲಾಯಿತು. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್, ಬೊಂಬಾಯಿ ಪ್ರಾಂತದ ಶಾಸನ ಸಭಾಸದರ ಶ್ರೀ ಹಳ್ಳಿಕೇರಿ ಗುದ್ಲೆಪ್ಪ, ಕರ್ನಾಟಕ ಪ್ರಾಂತಕ್ಕಾಗಿ ಉಪವಾಸ ಮಾಡಿದ ಶ್ರೀ ಶಂಕರಗೌಡ ಪಾಟೀಲ, ಮೈಸೂರ ಮಾಜಿ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯ ಮುಂತಾದವರ ಭಾಷಣ ಮಾಡಿದರು.

ವಿದ್ಯಾ ಸುಧಾರಣೆಗಾಗಿ ಹೊಸ ತೆರಿಗೆ

ವಿದ್ಯಾ ಸುಧಾರಣೆ ಜಾರಿ ಬಗ್ಗೆ ಅವಶ್ಯವಿದ್ದರೆ ಹೊಸ ತೆರಿಗೆಯನ್ನು ಹಾಕಬೇಕಾಗುವುದೆಂದು ಕಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳು ತಿಳಿಸಿರುತ್ತಾರೆ.

ಭಾರತ ಮತ್ತು ಪಾಕಿಸ್ತಾನ ಸಮಸ್ಯೆಗಳ ಪರಿಹಾರ

ಭಾರತ ಮತ್ತು ಪಾಕಿಸ್ತಾನ ಸಮಸ್ಯೆಗಳು ಪರಿಹಾರವಾಗುವ ಸೂಚನೆಗಳಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸಿದ್ದಾರೆ. ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ನಡುವೆ ದ್ರವ್ಯಗಳನ್ನು ವಿನಿಮಯ ಮಾಡುವ ಮತ್ತು ಎರಡು ಪ್ರಾಂತಗಳ ನಡುವೆ ಸುಮುಖವಾಗಿ ಸಂಚರಿಸಲು ಸಾಧಕವಾಗುವ ಮತ್ತು ಪಾಕಿಸ್ತಾನದಲ್ಲಿ [illegible] ಗುರುದ್ವಾರಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಒಪ್ಪಂದವಾಗಿರುವುದೆಂದೂ ಅವರು ಹೇಳಿದ್ದಾರೆ.

ವೈಯಕ್ತಿಕವಾಗಿ ಹಣ ಸಂಗ್ರಹಿಸದಂತೆ ಕಾಂಗ್ರೆಸ್ಸಿನವರಿಗೆ ಸೂಚನೆ

ಕಾಂಗ್ರೆಸ್ಸಿನ ಉದ್ದೇಶಗಳ ಸಾಧನೆಗಾಗಿ ವೈಯಕ್ತಿಕವಾಗಿ ಚಂದಾವನ್ನು ಸಾರ್ವಜನಿಕರಿಂದ ಎತ್ತಿ ಅದನ್ನು ತಾವೇ ಹಂಚಕೂಡದೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸೂಚನೆಯಿತ್ತಿರುತ್ತದೆ. ಕಾಂಗ್ರೆಸ್ ಸಮಿತಿಗಳ ಅನುಮತಿ ಪಡೆದು ಹಣವನ್ನು ವಸೂಲು ಮಾಡಿದವರು ಅದನ್ನು ಸಮಿತಿಗೆ ಒಪ್ಪಿಸಿ [illegible] ಲೆಕ್ಕ ಪತ್ರಗಳನ್ನಿಡಬೇಕೆಂದೂ ತಿಳಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಕರ್ನಾಟಕ ಸಂಗೀತ. ಮಧ್ಯಾಹ್ನ ೧೨-೦ [illegible] ವನಿತಾ ವಿಹಾರ [illegible] ಸಂಜೆ [illegible] ಮತ್ತು [illegible] ಎಂ. ಎಸ್. [illegible] ಸಂಗೀತ [illegible] ಹಿಂದಿಯಲ್ಲಿ ವಿವಿಧ ಕಾರ್ಯಕ್ರಮ.

ಐಮಂಗಲದ ಖಾದಿ ಕೇಂದ್ರ ಬಂದ್

ಚಿತ್ರದುರ್ಗದ ಬಳಿ ಐಮಂಗಲದ ಖಾದಿ ಕೇಂದ್ರದಲ್ಲಿ ಕೆಲಸವನ್ನು ನಿಲ್ಲಿಸಲಾಗಿರುವುದು ಸರ್ಕಾರದಿಂದ ಹಣ ಸಹಾಯವು ದೊರೆಯದಿರುವುದರಿಂದ ಎಂದು ಅಲ್ಲಿನ [illegible] ಬೋರ್ಡ್ ಅಧ್ಯಕ್ಷರು ತಿಳಿಸಿರುತ್ತಾರೆ. [illegible] ಸಾವಿರ ಜನರಿಗೆ ಕೇಂದ್ರದವರು ಉದ್ಯೋಗ ಕಲ್ಪಿಸಿದ್ದರು.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಆ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಳುಕೆಂಡೆ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

SRI GAYATHRI
TALKIES
TO DAY ONLY
BELLE OF NEW YORK
(In Techn color)
— FROM TO MORROW —
ANDROCLES & THE LION
With Victor Mature
Jean Simmons

ಚಾಮುಂಡೇಶ್ವರಿ
ಟಾಕೀಸ್
31-7-53 ರಿಂದ
ಶುಕ್ರವಾರದ 3 ನೇ ವಾರ
ತಿರುಂಬಿ - ಪಾರ್
(ತಮಿಳು)

Edited, Printed and Published by A R Nagarajan at Sadhvi Press D Subbiah Road Mysore

ಪ್ರಭುದೇವಾ ಥಿಯೇಟರ್
(ಸದ್ದಾ ಟಾಕೀಸ್)
30-7-53ನೇ ಗುರುವಾರದಿಂದ ಅನೋಖ ಪ್ರಾರಂಭ
ದಿನವಹಿ 3 ಆಟಗಳು
ನನ್ನ ತಂಗಿ (ತಮಿಳ್)
ಪಾತ್ರ ಎಂ ಜಿ ರಾಮಚಂದ್ರ, ಚಕ್ರಪಾಣಿ, ಮಾಧುರಿ ದೇವಿ, ಶಾರಂಗಪಾಣಿ, ಮುಂತಾದವರು

ಶುಚಿ! ರುಚಿ!! ವಿಶ್ರಾಂತಿ!!!
ಸುಸ್ವಾಗತ
ಶ್ರೀ ಚಾಮುಂಡೇಶ್ವರಿ ಭವನ
ಇರ್ವಿನ್ ರಸ್ತೆ, ಮೈಸೂರು
ತಾ॥ 1ನೇ ಆಗಸ್ಟ್ 1953 ರಿಂದ ಸ್ಪೆಷಲ್ ತಯಾರಿಕೆಗಳು
ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0—1—6
(ತಾರೀಖು 1—8—53 ರಿಂದ ದರ ಇಳಿಸಲಾಗಿದೆ)

ಸೆಟ್ ದೋಸೆಗಳು,
(ಚಟ್ನಿ, ಪಲ್ಯ ಮತ್ತು ಸ್ಪೆಷಲ್ ಚಟ್ನಿ ಸಹ)
ಮಸಾಲ್ ದೋಸೆ,
ಈರುಳ್ಳಿ ಮಸಾಲೆ ದೋಸೆ,
ಬೋಂಡಾ ಸಾಂಬಾರ್,

ಮಸಾಲೆ ಇಡ್ಲಿ,
ಮಸಾಲೆ ಖಾರಾ ಭಾತ್,
ಸ್ಪೆಷಲ್ ಕೇಸರಿ ಭಾತ್,
ಆಂಬೊಡೆ,
ತೈರ್ ವಡೆ

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ಸೆಟ್ ದೋಸೆ ಸ್ಪೆಷಲಿಸ್ಟರಿಂದ ತಯಾರಿಸಿ, ಶುಚಿಯಾದ ಬಾಳೆ ಎಲೆ ಮತ್ತು ಕಮುಲದೆಲೆಗಳ ಮೇಲೆ ಒದಗಿಸಲಾಗುತ್ತದೆ.
ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯು ನಮ್ಮ ಅಭಿಮಾನಿ ವೃಂದಕ್ಕೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ರೀ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೩೧-೭-೧೯೫೩ [ಸಂಚಿಕೆ ೨೯೯

ಡೆಲ್ಲಿಯಲ್ಲಿ ಕೊರಿಯಾ ರಾಜಕೀಯ ಸಮ್ಮೇಳನ?

ಶ್ರೀಮನ್ಮಹಾರಾಜರವರ ವರ್ಧಂತಿ

ಮೈಸೂರು ೩೧

ಶ್ರೀಮನ್ ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರ್ ರವರ ೩೫ನೇ ವರ್ಷ ವರ್ಧಂತಿಯು ಇಂದು ಅರಮನೆಯಲ್ಲಿ ಖಾಸಗಿಯಾಗಿಯೂ ನಿರಾಡಂಬರವಾಗಿಯೂ ನೆರವೇರಿತು ಮೊದಲು ಶಾಸ್ತ್ರೋಕ್ತ ವಿಧಿಗಳು ನಡೆದವು ಶ್ರೀ ಪರಕಾಲಸ್ವಾಮಿಗಳವರಿಗೆ ರಾಜಪ್ರಮುಖರು ಪಾದಪೂಜೆ ಸಲ್ಲಿಸಿ ಅವರಿಂದ ಆಶೀರ್ವಾದಗಳನ್ನು ಪಡೆದರು ಅನಂತರ ಅರಸುಗಳೂ ಸರ್ದಾರರೂ ಅರಮನೆ ಅಧಿಕಾರಿಗಳೂ ಅವರಿಗೆ ಮರ್ಯಾದೆ ಒಪ್ಪಿಸಿದರು ಈ ಬೆಳಿಗ್ಗೆ ಒತ್ತೇರಿಯಿಂದ ೩೫ ಕುಶಾಲು ತೋಪುಗಳನ್ನು ಹಾರಿಸಲಾಯಿತು

ಪ್ರಾಂತಾಧ್ಯಕ್ಷರು, ಜಿಲ್ಲಾಧಿಕಾರಿಗಳು, ಪೌರಸಭಾ ಕಮಿಷನರು, ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟರೂ ಶ್ರೀ ಹೆಚ್ ಸಿ ದಾಸಪ್ಪನವರೂ ಅರಮನೆಗೆ ತೆರಳಿ, ಮಹಾರಾಜರಿಗೆ ಶುಭಾಶಯಗಳನ್ನು ಕೋರಿದರು

ಇಂದು ಅರಮನೆ ಕಟ್ಟಡಗಳ ಮೇಲೆ ಮೈಸೂರು ಧ್ವಜವನ್ನು ಹಾರಿಸಲಾಯಿತು ಶಾಲಾ ಕಾಲೇಜುಗಳಿಗೂ, ಸರ್ಕಾರಿ ಕಛೇರಿಗಳಿಗೂ ರಜಾ ಕೊಡಲಾಗಿದ್ದಿತು ರಾತ್ರಿ ಅರಮನೆ ದೀಪೋತ್ಸವವು ನಡೆಯುವುದು

ನದಿಗಳಲ್ಲಿ ಪ್ರವಾಹದ ಬಗ್ಗೆ ಎಚ್ಚರಿಕೆ

ಕಾವೇರಿಯಲ್ಲಿ ೩೫ ಸಾವಿರ ಹೇಮಾವತಿಯಲ್ಲಿ ೨೫,೦೦೦, ಕಪಿನಿಯಲ್ಲಿ ೧೫,೦೦೦ ಕ್ಯೂಸೆಕ್‌ಗಳಷ್ಟು ಈಗ ನೀರ ಬರುತ್ತಿರುವುದಾಗಿಯೂ, ಇನ್ನೆರಡು ಮೂರು ದಿನಗಳಲ್ಲಿ ಪ್ರವಾಹವು ಹೆಚ್ಚುವುದೆಂದೂ ತಿಳಿದು ಬಂದಿದೆ ಟಿ ನರಸೀಪುರ ಮುಂತಾದ ಕಡೆಗಳಲ್ಲಿರುವ ನದೀ ತೀರಪ್ರದೇಶದ ಜನರು ಎಚ್ಚರಿಕೆಯಿಂದಿರುವಂತೆ ಸೂಕ್ತ ತಿಳುವಳಿಕೆಯನ್ನು ಅಧಿಕಾರಿಗಳು ಕೊಟ್ಟಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೨೦ ಕೆ ಎಸ್ ದೇಶಿಕಾಚಾರ್ ದೇವರ ನಾಮಗಳು ಮಧ್ಯಾಹ್ನ ೧ ೩೦ ವಾದ್ಯ ಸಂಗೀತ ೨ ಬಾಲಜಗತ್ ಮಕ್ಕಳ ಕಾರ್ಯಕ್ರಮ. ಸಂಜೆ ೫ ೩೦ ಕೆ ಎಸ್ ದೇಶಿಕಾಚಾರ್ ಸಂಗೀತ ೭-೫ ಟಿ ನಾಗಪ್ಪ ಭಕ್ತಿಗೀತೆ ೭ ೫ ಎಸ್ ಸಿ ಬೇಲೂರಯ್ಯ ನಾಗಸ್ವರ ೭ ೩೦ ಕೆ ವಿ ಪುಟ್ಟಪ್ಪ, ಧರ್ಮಪರೀಕ್ಷೆ ೮ ಎಲ್ ಲಕ್ಷ್ಮೀಪತಿ ಕದಾ ಕಾ ೯-೧೫ ತಾಳವಾದ್ಯ ೯-೩೦ ಚದರಂಗರವರಿಂದ ಕನ್ನಡ ಕಥೆ

ವಿಶಾಲಾಂಧ್ರ ಪ್ರಾಂತದ ಚಳುವಳಿಗಾಗಿ ಸಮಿತಿ

ವಿಶಾಲಾಂಧ್ರ ಪ್ರಾಂತ ನಿರ್ಮಾಣದ ಸಂಬಂಧವಾಗಿ ಚಳವಳಿ ನಡೆಸಲು ಕಮ್ಯೂನಿಸ್ಟರು ಬಿಟ್ಟು ವಿ ಕ್ಕೆಲ್ಲ ಪಕ್ಷಗಳ ಸಮಿತಿಯೊಂದನ್ನು ರಚಿಸಲಾಗಿದೆ ಕಾರ್ಯ ಸಮಿತಿಯಲ್ಲಿ ೪೦ ಮಂದಿ ಸದಸ್ಯರಿರುವರು ಹೈದರಾಬಾದು, ಒರಿಸ್ಸಾ ಮಧ್ಯಪ್ರದೇಶ, ಮೈಸೂರು ನ ಸ್ತ್ರ ಮದ್ರಾಸಿನ ಇತರ ಭಾಗಗಳಿಂದ ೨೫೦ ಜನ ಪ್ರತಿನಿಧಿ ವಿ ತಿ ವನ್ನೂ ಏರ್ಪಡಿಸಲಾಗಿದೆ

ಭಿಕ್ಷುಕರ ಸಮಸ್ಯೆ ನಿವಾರಣೆಗೆ ಪ್ರಯತ್ನ

ಪೌರಸಭೆಯಲ್ಲಿ ಅಧ್ಯಕ್ಷರ ಭರವಸೆ

ಮೈಸೂರು ೩೧

ನಗರದ ಪೌರಸಭೆಯ ಮಾಸಿಕಯಾನ ಅಧಿವೇಶನವು ನೆನ್ನೆ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಜನರಿಗೆ ಸುಂಕದ ಕಛೇರಿಯಲ್ಲಿ ಹೆಚ್ಚು ಸೌಕರ್ಯವು ದೊರೆಯುವಂತಾಗಲು ಷಿಫ್ಟ್ ಪದ್ಧತಿ ೭ ನವು ನೌಕರರು ಹೆಚ್ಚು ಕಾಲದ ಕೆಲಸವನ್ನು ಮಾಡುವಂತೆ ಏರ್ಪಡಿಸುವ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವುದಾಗಿ ಅಧ್ಯಕ್ಷರು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು

ನೀರಿನ ಸರಬರಾಜಿನ ವ್ಯವಸ್ಥೆಯನ್ನು ಉತ್ತಮಗೊಳಿಸಲು ಜರೂರಾಗಿಯೂ ಏರ್ಪಾಟು ಮಾಡಲಾಗುವುದೆಂದೂ ಅವರು ತಿಳಿಸಿದರು

ನಗರದಲ್ಲಿ ಭಿಕ್ಷುಕರ ಉಪಟಳವು ಹೆಚ್ಚಿರುವುದೆಂದೂ, ಅದನ್ನು ತಪ್ಪಿಸಬೇಕೆಂದೂ ಡಾ॥ ಬಿ ಜಿ ದಾಸರು ಸಭೆಯ ಗಮನಕ್ಕೆ ತಂದರು ಈ ಸಮಸ್ಯೆಯನ್ನು ನಿವಾರಣೆ ಮಾಡಲು ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡೆಸುವುದಾಗಿ ಅಧ್ಯಕ್ಷರು ಭರವಸೆಯಿತ್ತರು

ರಸ್ತೆಗಳಲ್ಲಿ ಜನರ ಮತ್ತು ವಾಹನಗಳ ಸಂಚಾರದ ಬಗ್ಗೆ ಹತೋಟಿ ಇಡುವ ವಿಷಯವನ್ನು ಸದಸ್ಯರು ಪ್ರಸ್ತಾಪಿಸಿದಾಗ, ಈ ಸಂಬಂಧವಾಗಿ ಮೊದಲು ಶಕ್ಯ ಸೂಚನೆಗಳನ್ನು ಪ್ರಕಟಿಸಲಾಗುವುದೆಂದೂ, ಅನಂತರ ಟ್ರಾಫಿಕ್ ನಿಯಮಗಳ ಉಲ್ಲಂಘನೆ ಬಗ್ಗೆ ಕ್ರಮ ಜರುಗಿಸಲಾಗುವುದೆಂದೂ ಪೌರಸಭಾ ಕಮಿಷನರರು ತಿಳಿಸಿದರು

ದೆಹಲಿಯಲ್ಲಿ ಕೊರಿಯಾ ರಾಜಕೀಯ ಸಮ್ಮೇಳನ ?

ಕೊರಿಯದ ಬಗ್ಗೆ ನಡೆಯಬೇಕಾಗಿರುವ ರಾಜಕೀಯ ಸಮ್ಮೇಳನವು ದೆಹಲಿಯಲ್ಲಿ ಸೇರಬೇಕೆಂದು ಬ್ರಿಟಿಷ್ ಸರ್ಕಾರದವರು ಸಲಹೆ ಮಾಡಿರುವರೆಂದು ಹೇಳಲಾಗಿದೆ ಆದರೆ ಅಮೇರಿಕದವರ ಅಭಿಪ್ರಾಯದಲ್ಲಿ ಟೋಕಿಯೋ ಅಥವಾ ಜಿನೀವಾದಲ್ಲಿ ಅದನ್ನು ಸೇರಿಸಬೇಕೆಂಬುದಾಗಿರುವುದಾಗಿ ಗೊತ್ತಾಗಿದೆ

॥ ವಂದೇ ಮಾತರಂ ॥

ಸಾಧ್ವಿ

ಹನ್ನೊಂದನೆಯ ವಾರ್ಷಿಕೋತ್ಸವ

ತಾ॥ ೧ ೮ ೫೩ನೇ ಶನಿವಾರ ಸಂಜೆ ೬ ಗಂಟೆಗೆ ಮೈಸೂರು ಡಿ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀ ರಾಮ ಪ್ರೆಸ್ಸಿನಲ್ಲಿ ಸಾಧ್ವಿ ಪತ್ರಿಕೆಯ ಹನ್ನೊಂದನೆಯ ವಾರ್ಷಿಕೋತ್ಸವವು ನಡೆಯುವುದು

ಕೊಡಗು ಸಂಸ್ಥಾನದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಸಿ ಎಂ ಪೂಣಾಚಾರರವರು ಅಧ್ಯಕ್ಷತೆ ವಹಿಸುವರು

ಚಂದಾದಾರರು ಇದನ್ನೇ ಆಹ್ವಾನವೆಂದು ಅಂಗೀಕರಿಸಿ ದಯಮಾಡಿಸಬೇಕಾಗಿ ವಿನಂತಿ

— ಕಾರ್ಯಕ್ರಮ —

೧ ಮಂಗಳಾಚರಣ ಕುಮಾರಿಯರು ಟಿ ವಸಂತ ಮತ್ತು ಮಾಲತಿ
೨ ಪ್ರಾರ್ಥನಾ ವಾಚನ ಶ್ರೀ ಬಂಗಲೆ ರಾಮರಾಯರು ಲಾಯರು
೩ ಸ್ವಾಗತ
೪ ಅಧ್ಯಕ್ಷರ ಭಾಷಣ
೫ ಗಾನ ಗೋಷ್ಠಿ
ವಿದ್ವಾನ್ ಬೆಂಗಳೂರು ಎಸ ಸುಬ್ರಮಣ್ಯ ಗಾನ ವಿ ಅರುಣಾಚಲಯ್ಯನವರು
ಹಾರ್ಮೋನಿಯಂ
ಟಿ ಎಸ್ ತಾತಾಚಾರ್ ಪಿಟೀಲು
ಆಸ್ಥಾನ ವಿದ್ವಾನ್ ಟಿ ಎಂ ವೆಂಕಟೇಶದೇವರು ಮೃದಂಗ
ವಿದ್ವಾನ್ ವಿ ನಾಗಭೂಷಣಾಚಾರ್ ಡೋಲಕ್
ವಿದ್ವಾನ್ ಬಾಬು ರೈ ಖಂಜರಿ
೬ ವಂದನಾರ್ಪಣೆ

ಅಗರಂ ರಂಗಯ್ಯ,
ಸಂಪಾದಕ

ಉತ್ತರ ಕೊರಿಯಾ ಖೈದಿಗಳಿಗೆ ಕ್ಷಮೆ

ಕೊರಿಯಾ ಕದನ ವಿರಾಮ ಒಪ್ಪಂದವನ್ನು ಮಾಡಿಕೊಂಡ ಬಗ್ಗೆ ಹರ್ಷವನ್ನು ವ್ಯಕ್ತಪಡಿಸಲು, ಉತ್ತರ ಕೊರಿಯಾ ಸರ್ಕಾರದವರು ಅಲ್ಲಿನ ಖೈದಿಗಳಿಗೆ ಸಾರ್ವತ್ರಿಕ ಕ್ಷಮೆಯನ್ನು ಘೋಷಿಸಿರುತ್ತಾರೆ ೩ ವರ್ಷಕ್ಕೆ ಕಡಿಮೆ ಶಿಕ್ಷೆಯಾಗಿರುವವರು, ಮಿಲಿಟರಿ ತಪ್ಪುಗಳಿಗೆ ಸಾಮಾನ್ಯ ಶಿಕ್ಷೆ ಪಡೆದವರು, ಗರ್ಭಿಣಿಯರು, ಹತ್ತು ವರ್ಷಗಳಿಗೆ ಕಡಿಮೆ ವಯಸ್ಸಿನ ಮಕ್ಕಳಿರುವ ಹೆಂಗಸರು ಇವರುಗಳನ್ನು ಬಿಡುಗಡೆ ಮಾಡಲಾಗುವುದು.

ಕುರುಡ ಬಾಲಿಕೆಗೆ ಕಣ್ಣು ಬಂತು

ತಂಜಾವೂರು ದೇವಾಲಯದಲ್ಲಿ ಅದ್ಭುತ ಪ್ರಸಂಗ

ತಂಜಾವೂರಿನ ವೈದ್ಯೇಶ್ವರ ದೇವಾಲಯದಲ್ಲಿರುವ ಬಾಲಾ ಬಿಕೆ ಅಮ್ಮನವರಿಗೆ ಸೇವೆ ಸಲ್ಲಿಸಿದ ೧೭ ವರ್ಷದ ಕುರುಡ ಬಾಲಿಕೆಗೆ ಕಣ್ಣು ಬಂದ ಸಮಾಚಾರವು ವರದಿಯಾಗಿದೆ ತಂದೆಯು ಆಕೆಯನ್ನು ಕೈ ಹಿಡಿದು ದೇವಸ್ಥಾನಕ್ಕೆ ಕರೆದೊಯ್ದು, ಅಲ್ಲಿ ಆಕೆಯು ಹಲವು ವಿಶೇಷ ಪೂಜೆಗಳನ್ನು ನಡೆಸಿ, ಮನೆಗೆ ಹಿಂತಿರುಗುತ್ತಿದ್ದಾಗಲೇ ಆಕೆಯ ಕುರುಡತನವು ಹೋಗಿ, ಸಂಪೂರ್ಣವಾಗಿ ದೃಷ್ಟಿಯು ವಾಪಸು ಬಂದಿತೆಂದೂ ಹೇಳಲಾಗಿದೆ ಇಂತಹ ಆಶ್ಚರ್ಯಕಾರಕ ಘಟನೆಗಳು ಅದೇ ದೇವಾಲಯದಲ್ಲಿ ಹಿಂದೆ ಅನೇಕ ಬಾರಿ ನಡೆದಿವೆ

ಮೈಸೂರು ಮಂತ್ರಿಮಂಡಲ ವಿಸ್ತರಣೆ ಸಂಭವ

ಹೈದರಾಬಾದಿಗೆ ತೆರಳಿರುವ ಸಂಸ್ಥಾನದ ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ ರಾಮಚಂದ್ರರಾಯರು ಅಲ್ಲಿನ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಬಳ್ಳಾರಿ ಪ್ರದೇಶದ ಜನಸಂಖ್ಯೆಯನ್ನು ನೋಡಿಕೊಂಡು ಮೈಸೂರಿನ ಮಂತ್ರಿಮಂಡಲಕ್ಕೆ ಒಬ್ಬರು ಅಥವಾ ಇಬ್ಬರನ್ನು ಹೆಚ್ಚಾಗಿ ತೆಗೆದುಕೊಳ್ಳುವ ಸಂಭವವಿರುವುದಾಗಿ ಹೇಳಿರುತ್ತಾರೆ ಮೈಸೂರನ್ನು ಭಾಷಾವಾರಾಗಿ ವಿಂಗಡಿಸುವುದಕ್ಕೆ ಅವರು ವಿರೋಧವನ್ನು ಸೂಚಿಸಿರುವರು

ಅರಗು ಮತ್ತು ಬಣ್ಣದ ತಯಾರಿಕೆ ಬಗ್ಗೆ ರೇಡಿಯೋ ಸಂಭಾಷಣೆ

ರಾಜಧಾನಿಯ ಅರಗು ಮತ್ತು ಬಣ್ಣದ ಕಾರ್ಖಾನೆ ಚೇರ್ಮನ್ನರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರಿಂದ ನಾಳೆ ಸಂಜೆ ೬ ೩೦ ಕ್ಕೆ ಮೈಸೂರು ರೇಡಿಯೋ ಕೇಂದ್ರದಲ್ಲಿ ಅರಗು ಮತ್ತು ಬಣ್ಣದ ತಯಾರಿಕೆ ಎಂಬ ವಿಷಯವಾಗಿ ಸಂಭಾಷಣೆಯು ಏರ್ಪಡಾಗಿದೆ

ಎಮ್ಮೆ ಮತ್ತು ಕರುಗಳ ಕಳುವಿಗಾಗಿ ದಸ್ತಗಿರಿ

ಮೈಸೂರು ರೈಲ್ವೆ ವರ್ಕ್ ಷಾಪಿನ ನೌಕರ ಶ್ರೀ ಲಿಂಗಯ್ಯ ಎಂಬುವರಿಗೆ ಸೇರಿದ ಒಂದು ಎಮ್ಮೆ ಮತ್ತು ಎರಡು ಕರುಗಳನ್ನು ಅಪಹರಿಸಿ, ನಗರದ ಕಸಾಯಿಗೇರಿಯಲ್ಲಿ ಮಾರುತ್ತಿದ್ದನೆಂದು ರಂಗಯ್ಯ ಎಂಬುವನನ್ನು ಲಷ್ಕರ್ ಪೋಲೀಸರು ದಸ್ತಗಿರಿ ಮಾಡಿರುವರು

SRI GANESHA
TALKIES
GRAND RELEASE
ON 1-8-1953
Much Awaited Columbia's
Immortal Adventure Spectacle
LORNA DOONE
(Technicolor)
Featuring Barbara Hale
& Richard Greene
A Unique Opportunity For
Cine Fans

ದ್ರಾವಿಡರ ಚಳುವಳಿಯಿಂದ ಪ್ರಜಾಸತ್ತೆಗೆ ಧಕ್ಕೆ

ತಮಿಳುನಾಡು ಕಮ್ಯೂನಿಸ್ಟ್ ಪಕ್ಷದವರು ಒಂದು ಹೇಳಿಕೆಯನ್ನಿತ್ತು ಮದ್ರಾಸು ಪ್ರಾಂತದಲ್ಲಿ ದ್ರಾವಿಡ ಸಂಘದವರು ನಡೆಸುತ್ತಿರುವ ಚಳುವಳಿಯು ಪ್ರಜಾಸತ್ತೆಗೆ ಅಪಾಯವನ್ನು ತಂದೊಡ್ಡುತ್ತದೆ ಎಂದಿದ್ದಾರೆ.

ಪ್ರಸಾರ ಭಾಷಣ

ಮೈಸೂರು: ಆಲ್ ಇಂಡಿಯಾ ರೇಡಿಯೊ ನಿಲಯದಿಂದ ರಾತ್ರಿ ಗಂಟೆಗೆ ಇಂದ್ರ ಧನುಸ್ ಎಂಬ ವಿಷಯವಾಗಿ ಶ್ರೀ ಎಂ. ರಾಜೇಶ್ವರಯ್ಯನವರು ಹಿಂದಿಯಲ್ಲಿ ಪ್ರಸಾರ ಭಾಷಣ ಮಾಡುವರು

ASTRO PALMISTRY

(ಜಾತಕ-ಪ್ರಶ್ನೆ-ಹಸ್ತ ಸಾಮುದ್ರಿಕ)

H S ವೆಂಕಟರಾವ್, B.A., B.L

" ಪ್ರತಿಭಾ ಮಂದಿರ್ "

1329, ಕೃಷ್ಣಮೂರ್ತಿಪುರಂ ಮೈಸೂರು

31—7—53 :: ಇಂದಿನಿಂದ ಪ್ರಾರಂಭ

ಮೈಸೂರು - ಆಪೇರಾ

ಬೆಂಗಳೂರು-ಶಿವಾಜಿ, ವಿಜಯಲಕ್ಷ್ಮಿ (ಸಿಟಿ ಏರಿಯ)

ಲಕ್ಷ್ಮಿ (ಸಿವಿಲ್ ಏರಿಯ)

ಪ್ರತಿ ದಿನ ಮೂರು ಆಟಗಳು

ಜ್ಯುಪಿಟರ್ಸ್‌ರವರ ತಮಿಳು ಚಿತ್ರ ★ ಇನ್ಸ್‌ಪೆಕ್ಟರ್ ★

(INSPECTOR)

ಭೂಮಿಕೆ:—ಅಂಜಲಿದೇವಿ, ಟಿ. ಕೆ. ಸರಸ್ವತಿ, ಎಂ. ಎನ್. ದ್ರೌಪದಿ, ಬಾಲಚಂದರ್ ಮುಂತಾದವರು

—: 31—7—53 ರಿಂದ :—

ಸೆಂಟ್ರಲ್ ಟಾಕೀಸ್— ಚಿತ್ರದುರ್ಗ :: ವಿನೋದ— ತುಮಕೂರು

(ತೆಲುಗು ಭಾಷೆಯಲ್ಲಿ)

[A CHAMRIA TALKIE RELEASE

ABIDS OUTRIGHT AUCTION

On SUNDAY the 2nd AUGUST 1953 at 10 A. M. at the Show-Room

Consisting of R W. CHEST OF DRAWERS, UPHOLSTERED SPRING SOFA SUITE, ALMIRAHS, TABLES, ARM & ARMLESS CHAIRS, HARMONIUM, Car Battery, Carpet, GRAMAPHONE, Electric Stoves, Table Lamps, Mandasana, BABY'S PUSH CHAIR, HERCULES CYCLE, complete with Dynamo, gasecase, stand and carrier as good as new, KODAK Folding Camera and several other useful articles, which can be inspected on SATURDAY the 1st.

Office of the President, District Board, Mysore

NOTIFICATION — Dated 30th JULY 1953

Applications are invited to the following vacancies in the District Board High Schools. The Posts are temporary.

Sl. No	Name of the Post	Qualifications Required	Remarks
1.	Head Master	B.A. or B.Sc., B.T.	Only retired people and those who have got experience of not less than 10 years, need apply
2.	Assistant Masters	B.Sc. (P.C.M.)	
3.	Do	B.A. (Geography or History, Economics & Politics)	People who have passed Kannada or Hindi as optional need apply (Kannada (Hons) Graduates are preferred).
4.	Kannada Pandits	Mysore Kannada Pandit's Examn.	
5.	Hindi Teachers	Rashtrabhasha Visharad & S.S.L.C.	

The applications should reach this office on or before 5th August 53.

(Sd) H. M. CHANNABASAPPA.
President.

ಶುಚಿ ! ರುಚಿ !! ವಿಶ್ರಾಂತಿ !!!

ಸುಸ್ವಾಗತ

ಶ್ರೀ ಚಾಮುಂಡೇಶ್ವರಿ ಭವನ

ಇಲವಾಲ ರಸ್ತೆ, ಮೈಸೂರು.

ತಾ|| 1ನೇ ಆಗಸ್ಟ್ 1953 ರಿಂದ ಸ್ಪೆಷಲ್ ತಯಾರಿಕೆಗಳು

ಶ್ರೇಷ್ಠವಾದ 'ಎ' ಕ್ವಾಲಿಟಿ ಕಾಫಿ ಅರ್ಧ ಕಪ್ 0—1—6

(ತಾರೀಖು 1—8—53 ರಿಂದ ದರ ಇಳಿಸಲಾಗಿದೆ)

ಸೆಟ್ ದೋಸೆಗಳು,
(ಚಿಕ್ಕ, ಹಲ್ಲ, ಮತ್ತು, ಸ್ಪೆಷಲ್ ಚಿಕ್ಕ, ಹಚ)
ಮಸಾಲ್ ದೋಸೆ,
ಈರುಳ್ಳಿ ಮಸಾಲೆ ದೋಸೆ,
ಬೋಂಡಾ ಸಾಂಬಾರ್,

ಮಸಾಲೆ ಇಡ್ಲಿ,
ಮಸಾಲೆ ಖಾರಾ ಭಾತ್,
ಸ್ಪೆಷಲ್ ಕೇಸರಿ ಭಾತ್,
ಆಂಬೊಡೆ,
ಕ್ರೈರ್ ವಡೆ

ಮೇಲ್ಕಂಡ ರುಚಿಕರವಾದ ಪದಾರ್ಥಗಳನ್ನು ಶ್ರೇಷ್ಠ ರೀತಿಯಲ್ಲಿ ಎಕ್ಸ್‌ಪರ್ಟ್ ಸೆಟ್ ದೋಸೆ ಸ್ಪೆಷಲಿಸ್ಟರಿಂದ ತಯಾರಿಸಿ, ಶುಚಿಯಾದ ಬಾಳೆ ಎಲೆ ಮತ್ತು ಕಮಲದೆಲೆಗಳ ಮೇಲೆ ಒದಗಿಸಲಾಗುತ್ತದೆ.

ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯು ನಮ್ಮ ಅಭಿಮಾನಿ ವೃಂದಕ್ಕೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

Edited, Printed and Published by A. R. Nagarajan at Sadhvi Press, D. Subbiah Road, Mysore.